



ಗಮಕ ಶಾರದೆ

ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗ ರಾವ್
ಅಭಿನಂದನ ಗ್ರಂಥ



ಕುಮಾರವ್ಯಾಸನಿಗೇ ಮೀಸಲಾದ ಗುರುವರ್ಯ
ಭಾರತವಾಚನ ಪ್ರವೀಣ ಸಂ. ಗೋ. ಬಿಂದೂರಾಯರು

ಎಂಬತ್ತು ರೂಪಾಯಿ

ಸಹೋದರ ಸಮಾನರಾದ ಶ್ರೀ|ಚಂದ್ರಮೌಳಿ
ಅವರಿಗೆ ವಿಶ್ವಾಸಪೂರ್ವಕವಾಗಿ

ಶ್ರೀಕಂಠ ಬಾಲಪಾಂಡುರಂಗರಾವ್
೨.೩.೨೦೦೪ ೧.

ಕೆ. ಚಂದ್ರಮೌಳಿ
೧೬-೨-೨೦೦೧
ಕೊಯಮತ್ತೂರು



ಶಕುಂತಲಾಬಾಯಿ ಪಾಂಡುರಂಗರಾವ್ ಅಭಿನಂದನ ಗ್ರಂಥ

ಗಮಕ ಶಾರದೆ

ಸಂಪಾದಕರು

ಕೆ. ಸಚ್ಚಿದಾನಂದಯ್ಯ (ಚಿರಂತನ)

ಹರಿಹರಪ್ರಿಯ

ಪ್ರಕಾಶಕರು

ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾವ್ ಅಭಿನಂದನ ಸಮಿತಿ

ಚಾಮರಾಜ ಪೇಟೆ ಬೆಂಗಳೂರು 560 018

GAMAKA SHARADE—Felicitation Volume, Presented to Smt. Shakuntala Bai Panduranga Rao ; Editors : K. Sachidanandaya and Harihara Priya ; Publishers : Smt. Shakuntala Bai Panduranga Rao Abhinandana Samithi, Bangalore. First Edition 1982. pp. xvi + 33 illustrations + 659

ಪ್ರಥಮ ಮುದ್ರಣ 1982

ರಕ್ಷಾಪತ್ರ ವಿನ್ಯಾಸ
ಕಮಲೇಶ್

ಮುಖಚಿತ್ರ–ಭಾವಚಿತ್ರ
ಡಾ॥ ಎಸ್. ಹರಿನಾರಾಯಣ್

ಪಡಿಯಚ್ಚುಗಳು
ಪಿ. ಹರಿರಾವ್
ಸೂಪರ್ ಪ್ರೋಸೆಸ್ ಸ್ಟುಡಿಯೊ
ಚಿಕ್ಕಪೇಟೆ, ಬೆಂಗಳೂರು

ಅಧಿಕೃತ ಮಾರಾಟಗಾರರು
825, ಕುಮಾರವ್ಯಾಸ ಕೃಪ
'ಇ' ಬ್ಲಾಕ್, 3ನೇ ಮುಖ್ಯ ರಸ್ತೆ
2ನೇ ಸ್ಟೇಜ್, ರಾಜಾಜಿನಗರ
ಬೆಂಗಳೂರು–560 010

ಮುದ್ರಕರು
ಶ್ರೀ ಸದ್ಗುರು ಪ್ರಿಂಟರ್ಸ್
ರಾಮಾನುಜ ರಸ್ತೆ, ಮೈಸೂರು 570 004

ಎರಡು ಮಾತು

ಕರ್ನಾಟಕ ಗಮುಕಕಲಾ ಪ್ರಪಂಚದಲ್ಲಿ ಗಮುಕವಿದುಷಿ, ಗಮುಕಕೋವಿದೆ, ಗಮುಕಕಲೆಯ ಧ್ರುವತಾರೆ, ಕಾವ್ಯವಾಚನ ಕಲಾ ಪ್ರವೀಣೆ ಎಂದು ಹೆಸರು ಪಡೆದು ಕರ್ನಾಟಕ ಜನತೆಯ ಮೆಚ್ಚುಗೆಗೆ ಪಾತ್ರರಾಗಿರುವವರು ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾವ್ ಅವರು. ಇವರು ಗಮುಕ ಕ್ಷೇತ್ರಕ್ಕೆ ಪದಾರ್ಪಣೆ ಮಾಡಿದುದು 1937ರಲ್ಲಿ. ಅಲ್ಲಿಂದ ಇಲ್ಲಿಯವರೆಗೆ ಎಂದರೆ, ನಲವತ್ತೈದು ವರ್ಷಗಳ ಕಾಲ ಅಖಂಡ ವಾಗಿ ಗಮುಕ ಸೇವೆಗೆ ತಮ್ಮನ್ನು ತಾವು ಅರ್ಪಿಸಿಕೊಂಡಿರುವ ಪ್ರಥಮ ಮಹಿಳೆ ಕರ್ನಾಟಕದಲ್ಲಿ ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾವ್ ಒಬ್ಬರೇ ಎಂದರೆ ತಪ್ಪಾಗಲಾರದು. ಇವರ ಗುರುಗಳು ವಿಖ್ಯಾತವಾದ "ಭಾರತವಾಚನ ಪ್ರವೀಣ" ಬಿಂದೂ ರಾಯರು. ದೈವದತ್ತವಾದ ಪ್ರತಿಭೆ, ಸುಮಧುರ ಕಂಠ, ಗುರುಗಳ ಆಶೀರ್ವಾದಪೂರ್ವಕ ಶಿಕ್ಷಣ, ಪತಿ ಪಾಂಡುರಂಗರಾಯರ ಸಂಪೂರ್ಣ ಸಹಕಾರ ಇವುಗಳಿಂದ ಶಕುಂತಲಾ ಬಾಯಿಯವರು ಕರ್ನಾಟಕದ ಸುಪ್ರಸಿದ್ಧ ಗಮುಕಿಗಳಾಗಿದ್ದಾರೆ. ಇವರು ಅನೇಕ ಸಾರಿ ಕರ್ನಾಟಕವನ್ನು ಸುತ್ತಿ ಕಾವ್ಯವಾಚನದ ಮೂಲಕ ಜನರಲ್ಲಿ ಕಾವ್ಯಾಸಕ್ತಿಯನ್ನು ಬೆಳೆ ಸಿದ್ದಾರೆ. ಸಭಿಕರ ಅಭಿರುಚಿಯನ್ನು ಮನಗಂಡು ಪಂಪನ ಆದಿಪುರಾಣ, ರನ್ನನ ಗದಾಯುದ್ಧ, ಹರಿಹರನ ರಗಳೆ, ರಾಘವಾಂಕನ ಹರಿಶ್ಚಂದ್ರಕಾವ್ಯ, ಚಾಮರಸನ ಪ್ರಭುಲಿಂಗಲೀಲೆ, ಕುಮಾರವ್ಯಾಸ ಭಾರತ, ಲಕ್ಷ್ಮೀಶನ ಜೈಮಿನಿ ಭಾರತ ಇತ್ಯಾದಿ ಕಾವ್ಯಗಳನ್ನು ಗಮುಕ ರೂಪದಲ್ಲಿ ಹಾಡಿ ಕಾವ್ಯ ಪ್ರೇಮಿಗಳಿಗೆ ರಸದೌತಣ ನೀಡಿದ್ದಾರೆ.

ರಾಷ್ಟ್ರಕವಿ ಕುವೆಂಪು ಅವರ "ಶ್ರೀರಾಮಾಯಣ ದರ್ಶನಂ" ಎಂಬ ಮಹಾ ಛಂದಸ್ಸಿನ ಮಹಾಕಾವ್ಯ ಕೆಲವರಿಗೆ ಕಬ್ಬಿಣದ ಕಡಲೆ ಆಗಿತ್ತು. ಅಂತಹ ಮಹಾಕಾವ್ಯ ವನ್ನು ಶಕುಂತಲಾಬಾಯಿಯವರು ಆಳವಾಗಿ ಅಭ್ಯಾಸಮಾಡಿ ಅರಗಿಸಿಕೊಂಡು ಕವಿ ಕುವೆಂಪುವೇ ಆದಿಯಾಗಿ ಎಲ್ಲರೂ ಮೆಚ್ಚುವಂತೆ ಭಾವಪೂರಿತವಾಗಿ, ಸುಶ್ರಾವ್ಯವಾಗಿ ಹಾಡಿ ತೋರಿಸಿದ್ದಾರೆ. ಶ್ರೀರಾಮಾಯಣ ದರ್ಶನಂ ಮಹಾಕಾವ್ಯದ ವಾಚನವೆಂದರೆ ಅದು ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾವ್ ಅವರಿಗೇ ಮೀಸಲು ಎಂದು ಎಷ್ಟೋ ಗಮುಕಿಗಳು ಇಂದಿಗೂ ಹೇಳುತ್ತಾರೆ. ಕವಿ ಪುಟ್ಟಪ್ಪನವರೇ ತಮ್ಮ ಕಾವ್ಯವನ್ನು ಇಷ್ಟು ಅರ್ಥಪೂರ್ಣವಾಗಿ ಭಾವಪೂರ್ಣವಾಗಿ ಹಾಡಿರುವುದನ್ನು ಕೇಳಿ ಆತ್ಮ ತೃಪ್ತಿ ಯಿಂದ ಶ್ರೀಮತಿಯವರ ವಾಣಿಯನ್ನು ಧ್ವನಿಮುದ್ರಿಸಿಟ್ಟುಕೊಂಡಿದ್ದಾರೆ. ಈಚೆಗೆ ಡಾ|| ಮಾಸ್ತಿ ಅವರ "ಶ್ರೀರಾಮಪಟ್ಟಾಭಿಷೇಕ" ಕಾವ್ಯವನ್ನು ಹಲವಾರುಕಡೆ ವಾಚಿಸಿ ಕೇಳುಗರಿಗೂ ಸಂತೋಷವನ್ನುಂಟು ಮಾಡಿದ್ದಾರೆ.

ಆಕಾಶವಾಣಿಯಲ್ಲಿ, ದೊಡ್ಡ ದೊಡ್ಡ ಸಮಾರಂಭಗಳಲ್ಲಿ ಇವರು ಹೇಳುವ ಪ್ರಾರ್ಥನೆ, ಭಾವಗೀತೆ, ಕಾವ್ಯವಾಚನಗಳನ್ನು ಕೇಳಿ ಮಣಿಯದವರಿಲ್ಲ. ಪಂಡಿತ

ನೆಹರೂ ಆದಿಯಾಗಿ ಅನೇಕ ದೊಡ್ಡ ದೊಡ್ಡ ರಾಜಕಾರಣಿಗಳು, ಕವಿಗಳು, ಸಾಹಿತಿಗಳು ಶಕುಂತಲಾಬಾಯಿಯವರ ವಾಚನವನ್ನು ಕೇಳಿ ಆನಂದಿಸಿದ್ದಾರೆ.

ಕಾವ್ಯವಾಚನ ಕೇವಲ ಒಬ್ಬರ ಸ್ವತ್ತಾಗಬಾರದು ; ಕಾವ್ಯಗಳ ಪರಿಚಯ ಲಾಭ ಎಲ್ಲರಿಗು ಎಲ್ಲಕಾಲಕ್ಕು ಆಗಬೇಕು ಎನ್ನುವ ಘನ ಉದ್ದೇಶವನ್ನಿಟ್ಟುಕೊಂಡು ಶಕುಂತಲಾಬಾಯಿಯವರು ನೂರಾರು ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಗಮಕ ಪಾಠ ಹೇಳಿ, ಅವರು ಉತ್ತಮ ಗಮಕಿಗಳಾಗಲು ತರಬೇತಿ ನೀಡಿ ಗಮಕ ಕಲೆಯು ಮುಂದೆಯೂ ಜೀವಂತವಾಗಿ ಉಳಿಯಲು ಹಗಲಿರುಳು ಶ್ರಮಿಸಿದ್ದಾರೆ. ಗಮಕ ವಿದ್ಯಾರ್ಥಿಗಳ ಅನುಕೂಲಕ್ಕಾಗಿ "ಗಮಕ ರಸಾಯನ", "ಗಮಕ ಕಲೆ ಮತ್ತು ಮಹಿಳೆ" ಮೊದಲಾದ ಪುಸ್ತಕಗಳನ್ನು ರಚಿಸಿದ್ದಾರೆ. ಇವರ ವಿದ್ವತ್ತನ್ನು ಪರಿಗಣಿಸಿ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಕರ್ನಾಟಕದಲ್ಲಿ ಹಾಗೂ ಭಾರತದ ಇತರ ಪ್ರಾಂತಗಳಲ್ಲಿರುವ ಎಷ್ಟೋ ಮಠ ಮಾನ್ಯಗಳು, ಸಂಘ ಸಂಸ್ಥೆಗಳು ಶ್ರೀಮತಿಯವರಿಗೆ ಸಭೆ ಸಮಾರಂಭಗಳನ್ನು ಏರ್ಪಡಿಸಿ ಸನ್ಮಾನಿಸಿವೆ. ಮೈಸೂರಿನಲ್ಲಿ ನಡೆದ ದ್ವಿತೀಯ ಅಖಿಲ ಕರ್ನಾಟಕ ಗಮಕ ಸಮ್ಮೇಳನದ ಅಧ್ಯಕ್ಷರನ್ನಾಗಿ ಆರಿಸಿ ಕನ್ನಡಿಗರು ಅವರನ್ನು ಗೌರವಿಸಿದ್ದಾರೆ.

ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾವ್ ಅವರು ಈಗ 60 ವರ್ಷವನ್ನು ದಾಟಿದ್ದಾರೆ. ಈ ಸಂದರ್ಭದಲ್ಲಿ ಕನ್ನಡ ನಾಡಿನ ಸಾಹಿತಿಗಳು, ಕವಿಗಳು, ಕಲಾವಿದರು, ಗಮಕಿಗಳು, ಅಭಿಮಾನಿಗಳು ಇವರ ಸೇವೆಯನ್ನು ಸ್ಮರಿಸಿ ಶ್ರೀಮತಿಯವರಿಗೆ ರಾಜ್ಯ ಮಟ್ಟದಲ್ಲಿ ಒಂದು ಅಭಿನಂದನಾ ಸಮಾರಂಭವನ್ನು ಏರ್ಪಡಿಸಬೇಕೆಂದು ನಿಶ್ಚಯಿಸಿ ಅದಕ್ಕಾಗಿ **ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾವ್ ಅಭಿನಂದನಾ ಸಮಿತಿಯನ್ನು** ರಚಿಸಿದ್ದಾರೆ. ನಾನು ಈ ಸಮಿತಿಯ ಅಧ್ಯಕ್ಷನಾಗಿರುವುದು ನನ್ನ ಭಾಗ್ಯವೆಂದೇ ಭಾವಿಸಿದ್ದೇನೆ. ಸಮಿತಿಯು ತೀರ್ಮಾನಿಸಿದಂತೆ ಈ ತಿಂಗಳು 24ನೆಯ ತಾರೀಖು ಬೆಂಗಳೂರು ನಗರದಲ್ಲಿ ಕರ್ನಾಟಕದ ಹಿರಿಯ ಸಾಹಿತಿಗಳಾದ ಡಾ|| ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಅಧ್ಯಕ್ಷತೆಯಲ್ಲಿ ಅಭಿನಂದನಾ ಸಮಾರಂಭ ನಡೆಯುವುದು, ಯುವಕ ಸಾಹಿತಿಗಳೂ ಉತ್ಸಾಹಿ ತರುಣರೂ ಶ್ರೀಮತಿ ಶಕುಂತಲಾಬಾಯಿಯವರ ಗಮಕ ಸೇವೆಯನ್ನು ಮೆಚ್ಚಿದವರೂ ಆದ ಶ್ರೀ ಕೆ. ಸಚ್ಚಿದಾನಂದಯ್ಯ (ಚಿರಂತನ) ಮತ್ತು ಶ್ರೀ ಹರಿಹಂಪ್ರಿಯ ಅವರು ಸಂಪಾದಿಸಿರುವ "ಗಮಕಶಾರದೆ" ಅಭಿನಂದನಾ ಗ್ರಂಥವನ್ನು ಈ ಸಮಿತಿ ಪ್ರಕಟಿಸಿದೆ. ಸಮಾರಂಭದ ಕಾರ್ಯಕ್ರಮದ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾದ ಡಾ. ಹಾ. ಮಾ. ನಾಯಕರು "ಗಮಕ ಶಾರದೆ"ಯನ್ನು ಬಿಡುಗಡೆ ಮಾಡುವರು. ಈ ಅಪೂರ್ವ ಸಮಾರಂಭದಲ್ಲಿ ನಾಡಿನ ಹಿರಿಯ ಸಾಹಿತಿಗಳೂ ಕವಿಗಳೂ ವಿಮರ್ಶಕರೂ ಗಮಕಿಗಳೂ ಭಾಗವಹಿಸಲಿದ್ದಾರೆ. ಈ ಎಲ್ಲ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆಯಲು ಸಹಕಾರವಿತ್ತ ಸಮಿತಿಯ ಎಲ್ಲ ಸದಸ್ಯರಿಗೂ ಅಭಿಮಾನಿಗಳಿಗೂ ಸಂಭಾವನಾ ಗ್ರಂಥದ

ಸಂಪಾದಕ-ಲೇಖಕವರ್ಗಕ್ಕೂ ಅಭಿನಂದನಾ ಸಮಿತಿಯ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಶ್ರೀಮತಿ ಶಕುಂತಲಾಬಾಯಿ ಎಂದಕೂಡಲೆ ಅವರ ಜೊತೆ ಅವರ ಪತಿ ಶ್ರೀ ಪಾಂಡುರಂಗರಾಯರೂ ಇದ್ದೇ ಇರುತ್ತಾರೆ. ಇಜೊಂದು ಅಪೂರ್ವ ಜೋಡಿ. ಯಾವುದೇ ಸಭೆ ಸಮಾರಂಭಗಳಲ್ಲಿ ಭಾಗವಹಿಸುವಾಗಲೂ ಒಬ್ಬರನ್ನು ಬಿಟ್ಟು ಒಬ್ಬರಿರದೆ ಜೊತೆ ಜೊತೆಯಾಗಿಯೇ ಇರುತ್ತಾರೆ. ಈ ಜೊತೆ ಸಾಹಿತ್ಯ ಸಂಗೀತದ ಜೊತೆಯಿದ್ದಂತೆ. ಶ್ರೀ ಪಾಂಡುರಂಗರಾಯರು ಸಾಹಿತಿಗಳು, ಗಮಕವನ್ನು ಬಲ್ಲವರು; ಶ್ರೀಮತಿಯವರು ಗಮಕಿಗಳು. ಹೀಗೆ ಒಂದಕ್ಕೊಂದು ಪೂರಕವಾದಂತೆ ಈ ಜೋಡಿ ಗಮಕಕ್ಕೆ ಸಾರ್ಥಕ ಸೇವೆ ಸಲ್ಲಿಸುತ್ತಿದೆ.

ನಾಡಿನ ಹಿರಿಯ ವಿದ್ವಾಂಸರಾಗಿದ್ದ ದಿವಂಗತ ಎಂ. ಆರ್. ಶ್ರೀ ಅವರು ಒಮ್ಮೆ ಶ್ರೀ ಪಾಂಡುರಂಗರಾಯರ ಬೆನ್ನಮೇಲೆ ತಮ್ಮ ಕೈಯಿಟ್ಟು "ಪಾಂಡುರಂಗರಾವ್ ಶಕುಂತಲಾಬಾಯಿ ನಿಮ್ಮ ಧರ್ಮಪತ್ನಿ ನಿಜ, ಆದರೆ ಆಕೆ ಶ್ರೇಷ್ಠ ಗಮಕ ಕಲಾವಿದೆ; ಕರ್ನಾಟಕದ ಆಸ್ತಿ; ನೀವು ಆಕೆಗೆ ಟ್ರಸ್ಟಿಯಂತೆ ನಡೆದುಕೊಳ್ಳಬೇಕು" ಎಂದಿದ್ದರಂತೆ. ಶ್ರೀ ಪಾಂಡುರಂಗರಾಯರು ಆ ಹಿರಿಯರ ಮಾತನ್ನು ಚಾಚೂ ತಪ್ಪದೆ ನಡೆಸಿಕೊಂಡು ಬಂದಿದ್ದಾರೆ. ಇಂಥ ಆದರ್ಶ ಪತಿಯನ್ನು ಪಡೆದ ಶ್ರೀಮತಿ ಶಕುಂತಲಾಬಾಯಿಯವರೂ ಇಂಥ ಆದರ್ಶ ಪತ್ನಿಯನ್ನು ಪಡೆದ ಶ್ರೀ ಪಾಂಡುರಂಗರಾಯರೂ ಇವರಿಬ್ಬರೂ ಪುಣ್ಯವಂತರು. ಈ ಪುಣ್ಯವಂತ ದಂಪತಿಗಳು ಸಮಿತಿಯ ಪ್ರಾರ್ಥನೆಯನ್ನು ಮನ್ನಿಸಿ ಅಭಿನಂದನಾ ಸಮಾರಂಭದಲ್ಲಿ ಭಾಗವಹಿಸುತ್ತಿರುವುದು ನಮ್ಮೆಲ್ಲರಿಗೂ ಅತ್ಯಂತ ಸಂತೋಷದ ವಿಷಯ. ದೇವರು ಇವರಿಗೆ ಆಯುರಾರೋಗ್ಯ ಐಶ್ವರ್ಯಾದಿಗಳನ್ನು ನೀಡಿ ಬಹುಕಾಲ ಈ ನಾಡು ನುಡಿಯ ಸೇವೆ ಸಲ್ಲಿಸಲು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ.

ಜಿ. ನಾರಾಯಣ
ಅಧ್ಯಕ್ಷ

ಬೆಂಗಳೂರು
12-10-1982

ಸಂಪಾದಕರ ಲೇಖನಿಯಿಂದ

ಶ್ರೀವನಿತೆಯರಸ ಗದುಗಿನ ವೀರನಾರಾಯಣನನ್ನು ಕೊಂಡಾಡಿ ಶ್ರೀ ರಾಮಾಯಣ ದರ್ಶನದ ಕವಿವಿಭೂತಿಯನ್ನು ನೆನೆದು ಲಕ್ಷ್ಮೀರಮಣನಾಸ್ಯ ಚಂದ್ರಾನಂದದ ಬೆಳಕಲ್ಲಿ ಕರ್ನಾಟಕದ ಮೂಲೆ ಮೂಲೆಯಲ್ಲೂ ಗಮಕ ಸುಧಾರಸವನ್ನು ಹರಿಸಿ, ಹೆಸರ್ಗೊಂಡ ಗಮಕ ವಿದುಷಿ ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾವ್ ಅವರಿಗೆ ಅರುವತ್ತು ವರುಷಗಳು ದಾಟಿದುವು ಎಂಬುದು ಸತ್ಯಸ್ಯ ಸತ್ಯ. ಆದರೆ ಆ ಗಮಕ ಕೋಗಿಲೆಯ ಕಂಠ ಮಾಧುರ್ಯದ ಸ್ರೋತದಲ್ಲಿ ತೇಲುವ ಶ್ರೋತೃಗಳಿಗೆ ಇದು ಆಶ್ಚರ್ಯಕರ ಸತ್ಯ. ಕನ್ನಡದ ಜನ ಅವರ ಗಮಕ ವಾಚನವನ್ನು ಕೇಳುತ್ತಲೇ ಇದೆ· ಮೈಮರೆಯುತ್ತಲೇ ಇದೆ. ಅದರ ನಡುವೆಯೇ ತನ್ನ ಸಂತಸವನ್ನು ವ್ಯಕ್ತಪಡಿಸಿ ಕೃತಜ್ಞತೆಯನ್ನು ಸಲ್ಲಿಸುವ ಕರ್ತವ್ಯವನ್ನೂ ಮಾಡಿ ತನ್ನನ್ನು ಧನ್ಯಗೊಳಿಸಿಕೊಂಡಿದೆ. ಅಂತಹುದರಲ್ಲಿ ಈ ಅಭಿನಂದನ ಗ್ರಂಥದ ನುಡಿಗಾಣಿಕೆಯೂ ಒಂದು.

ಕುಸುಮ ಸೌರಭದ ಆನಂದಾನುಭವ ಅದನ್ನು ಸಾಗಿಸಿ ಎಲ್ಲರ ನಾಸಿಕಾಗ್ರಕ್ಕೂ ಮುಟ್ಟಿಸುವ ಮಂದಮಾರುತನಿಂದ, ಹಾಗೆಯೇ ಕವಿಯ ಕಾವ್ಯ ಪ್ರತಿಭೆ ಎಲ್ಲರ ಮನ ಮುಟ್ಟುವುದು ಸುಶ್ರಾವ್ಯ ಕಂಠದ ಗಮಕಿಗಳಿಂದ. ಕವಿ ಚಿರನೂತನನಾಗಿ ಉಳಿಯುವುದು ಅವರಿಂದ. ಕೆಲವೊಮ್ಮೆ ಕವಿಯ ಮುಂದೆಯೇ ಅವನ ಕಾವ್ಯವಾಚನ ಮಾಡಿ, ಕವಿಯನ್ನು ಸಹೃದಯನನ್ನಾಗಿಸಿ ಮೈಮರೆಯಿಸಿಬಿಡುವುದು ಗಮಕಿಗಳ ಕೈವಾಡ. ಶ್ರೀಮತಿ ಶಕುಂತಲಾಬಾಯಿಯವರು ಈ ಎಲ್ಲ ಸೌಭಾಗ್ಯಗಳನ್ನು ಒದಗಿಸಿಕೊಂಡ ಗಮಕ ಕಲಾವಿದೆ. ಕಾವ್ಯ ಶರೀರಿಗಳಾಗಿ ಉಳಿದಿರುವ ಕುಮಾರವ್ಯಾಸ, ಲಕ್ಷ್ಮೀಶ, ಪಂಪ, ರನ್ನರಿಗೆ ನಾಲಿಗೆಯಾದುದು ಮಾತ್ರವಲ್ಲ ಈ ಗಮಕ ವಿದುಷಿ, ಮಹಾಕವಿ ಕುವೆಂಪು, ವರಕವಿ ಬೇಂದ್ರೆ, ಹಿರಿಯ ಕವಿ ಮಾಸ್ತಿ, ಸಮರಸ ಕವಿ ಗೋಕಾಕ್ ಮೊದಲಾದ ಉತ್ತುಂಗ ಚೇತನಗಳ ಮುಂದೆಯೇ ಅವರ ಕಾವ್ಯ—ಕೃತಿಗಳನ್ನು ವಾಚಿಸಿ ಅವರನ್ನೇ ತಲ್ಲೀನ ಶ್ರೋತೃಗಳನ್ನಾಗಿ ಮಾಡಿದ್ದಾರೆ. ಆದುದರಿಂದ ಶ್ರೀಮತಿಯವರಿಗೆ ಸಲ್ಲುವ ಅಭಿನಂದನೆ ಸಾಮಾನ್ಯ ಕೇಳುಗ ಅಭಿಮಾನಿಗಳಿಂದ ಮಾತ್ರವಲ್ಲ— "ಹಾಡೋಕೆ, ಆಡೋಕೆ, ಅನುಕರಣೆ ಕರಕಷ್ಟ" ಎಂಬ ಎತ್ತರಕ್ಕೇರಿದ ಚೇತನಗಳಿಂದಲೂ ಆಶೀರ್ವಾದಪೂರ್ವಕ ಸಲ್ಲುವಂತಹುದು. ಇದೊಂದು ಅಪೂರ್ವ ಭಾಗ್ಯ.

ಅರುವತ್ತರ ಹರಯ ಜೀವನದಲ್ಲಿ ಒಂದು ಮಹತ್ವದ ಘಟ್ಟ. ಭಾರತೀಯ ಸಂಪ್ರದಾಯದಲ್ಲಿ ಸಂವತ್ಸರ ಚಕ್ರದ ಒಂದು ಉರುಳುವಿಕೆ ಮುಗಿದು ಮತ್ತೊಂದರ ಪ್ರಾರಂಭ· ಅಂದರೆ ಹೊಸ ಜೀವನದ ಕುಡಿಯೊಡೆತ. ಹಿಂದಿನ ಅನುಭವದ ಮೇಲೆ ಮುಂದಿನದನ್ನು ರೂಪಿಸಬೇಕಾದ ಸನ್ನಿವೇಶ. ಗಗನ ಚುಂಬಿಯಾಗಿ ನಿಂತು ತಾನು ನಡೆದ ದಾರಿಯನ್ನು ಈಕ್ಷಿಸಿ ಚಿಂತಿಸುವ ಸಮಯ ಆಗಬೇಕಾಗುತ್ತದೆ. ಹಿರಿಯರ ಆಶೀರ್ವಾದ, ಕಿರಿಯರ ಅಭಿ

ವಂದನೆ, ಆತ್ಮೀಯರ ಪ್ರಶಂಸೆ—ಕೆಲವೊಮ್ಮೆ ವಿರೋಧಿಗಳ ಟೀಕೆಯೂ ಕೂಡ. ಈ ದೃಷ್ಟಿಯಿಂದಲೇ ಅಭಿನಂದನ ಗ್ರಂಥಗಳು ಅಗತ್ಯವಾಗುತ್ತವೆ. ವ್ಯಕ್ತಿ ನಡೆದು ಬಂದ ದಾರಿಯನ್ನು ನಿಚ್ಚಳವಾಗಿ ರೂಪಿಸಿ ಮುಂದಿನ ಪೀಳಿಗೆಗೆ ಅದು ಉಳಿಯುವಂತೆ ಮಾಡುವುದು ಇದರ ಉದ್ದೇಶ. ಕನ್ನಡ ನಾಡು ಈ ವಿಚಾರದಲ್ಲಿಯೂ ಮುಂದಾಗಿದೆ. ಆದರ್ಶವಾಗಿದೆ.

ಶ್ರೀಮತಿ ಶಕುಂತಲಾಬಾಯಿಯವರಿಗೆ ಷಷ್ಟ್ಯಬ್ದಪೂರ್ತಿಯ ಸಂದರ್ಭದಲ್ಲಿ ಅಭಿನಂದನೆ ಸಲ್ಲಿಸಬೇಕು, ಅದು ಗ್ರಂಥರೂಪದಲ್ಲಿಯೂ ಹೊರಹೊಮ್ಮಬೇಕು ಎಂಬ ಬಯಕೆ ಒಂದು ಸೀಮಿತ ಜನರದ್ದಲ್ಲ—ಕನ್ನಡ ಜನತೆಯದು, ಗಮಕ ಕಲಾಭಿಮಾನಿಗಳದು. ಕಾರ್ಯರೂಪಕ್ಕಿಳಿಸುವ ಸಾಧನ ಮಾತ್ರ ಶ್ರೀ ಜಿ. ನಾರಾಯಣ ಅವರ ಅಧ್ಯಕ್ಷತೆಯ ಅಭಿನಂದನ ಸಮಿತಿ.

ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾವ್ ಅವರ ಅಭಿಮಾನಿ ಬಳಗ ಬಹಳ ದೊಡ್ಡದು ಎಂಬುದನ್ನು ನಾವು ಪ್ರತ್ಯೇಕ ಹೇಳಬೇಕಿಲ್ಲ. ಅದರಲ್ಲಿ ಬಹಳ ಜನ ಕರ್ನಾಟಕದಲ್ಲೇ ಸುಪ್ರಸಿದ್ಧರು, ರಾಷ್ಟ್ರೀಯ ಮಹತ್ವದ ವ್ಯಕ್ತಿತ್ವವನ್ನು ಪಡೆದವರು. ಆದುದರಿಂದಲೇ ಈ ಅಭಿನಂದನ ಗ್ರಂಥಕ್ಕೆ ಜೀವಾಳವಾದ ಲೇಖನಗಳು ಸಂಖ್ಯೆಯಲ್ಲಿ, ಮೌಲ್ಯದಲ್ಲಿ, ಮಹತ್ವದಲ್ಲಿ, ಉನ್ನತವಾದವುಗಳೆಂದೇ ನಮ್ಮ ಅಭಿಪ್ರಾಯ. ಈ ರಾಜ್ಯದ ಮಾತ್ರವಲ್ಲ ಈ ರಾಷ್ಟ್ರದ ಅಮೂಲ್ಯ ಆಸ್ತಿಯಾದ ಶಕುಂತಲಾಬಾಯಿಯವರನ್ನು ಕುರಿತ ಈ ಹಲವು ಲೇಖನಗಳೂ ಅತ್ಯಮೂಲ್ಯವಾದುವು. ಪರಿಣಾಮವಾಗಿ ಈ ಅಭಿನಂದನ ಗ್ರಂಥವೂ ಸಂಗ್ರಾಹ್ಯವಾಗಿ ಪರಿಣಮಿಸಿದೆಯೆನ್ನುವುದರಲ್ಲಿ ಸಂಶಯವಿಲ್ಲ. ಅಲ್ಲದೆ ಇದು ಶಕುಂತಲಾಬಾಯಿಯವರ ಗಮಕ ಕಲೆಗೆ ನೀರೆರೆದು ಬೆಳೆಸಿದ ಅವರ ಪತಿ ಸಾಹಿತಿ ಶ್ರೀ ಪಾಂಡುರಂಗರಾಯರು ಬರೆದ ಆತ್ಮಚರಿತ್ರೆಯ ಭಾಗದಿಂದಾಗಿ ಅತ್ಯಂತ ವಿಶಿಷ್ಟವಾದುದಾಗಿದೆ. ಈ ದಂಪತಿಗಳು ಗಮಕ ಕೈಂಕರ್ಯಕ್ಕಾಗಿ ಕೈಕೊಂಡ ದೀಕ್ಷೆ, ಗಮಕ ಸೇವೆಗಾಗಿ ಮಾಡಿದ ಪ್ರವಾಸದಲ್ಲಿ ಕಂಡುಂಡ ಹಲವು ಅನುಭವಗಳು, ಅನುಭವಿಸಿದ ನೋವುನಲಿವುಗಳು, ಅವರ ಜೀವನದಲ್ಲಿ ಒದಗಿಬಂದ ಮಹಾನ್ ಚೇತನಗಳ ಸಹವಾಸ ಇವೆಲ್ಲವೂ ಆ ಸುದೀರ್ಘ ಲೇಖನದಲ್ಲಿ ವರ್ಣಿತವಾಗಿ ಈ ಗ್ರಂಥಕ್ಕೊಂದು ಭೂಷಣವಾಗಿದೆ, ಗ್ರಂಥದ ಮೌಲ್ಯವನ್ನು ಹೆಚ್ಚಿಸಿದೆ. ಸಂಪಾದಕರಾಗಿ ಈ ಎಲ್ಲ ಹಿರಿಯರಿಗೆ ನಾವು ಕೃತಜ್ಞತೆಯನ್ನು ಅರ್ಪಿಸುತ್ತೇವೆ.

ಹೂಗಳ ರಾಶಿಯ ಮುಂದೆ ಕುಳ್ಳಿರಿಸಿ ಮಾಲೆ ಪೋಣಿಸಲು ಅವಕಾಶ ಕಲ್ಪಿಸಿದರೆ ಯಾವ ಮಾಲೆಗಾರ ಆ ಕೆಲಸವನ್ನು ಮಾಡದಿರಲಾರ ? ಇಲ್ಲಿ ಸಂಪಾದಕರ ಕಾರ್ಯವೂ ಅಷ್ಟೇ. ಶ್ರೀಮತಿ ಶಕುಂತಲಾಬಾಯಿ ಮತ್ತು ಶ್ರೀ ಪಾಂಡುರಂಗರಾಯರ ವಿಶಾಲ ಪರಿಚಯದ ವ್ಯಕ್ತಿತ್ವದ ಪ್ರಭಾವವೇ ಈ ಲೇಖನಗಳನ್ನೆಲ್ಲ ನಮಗೊದಗಿಸಿದೆ. ಹಿರಿಯರಾದ ಶ್ರೀ ಬಿ. ಶ್ರೀ. ಪಾಂಡುರಂಗರಾಯರ ಶ್ರಮವನ್ನು ನಾವು ಮರೆಯುವುದಕ್ಕೆ ಸಾಧ್ಯವಿಲ್ಲ. ತನ್ನ ಷಷ್ಟ್ಯಬ್ದಿ ಪೂರ್ತಿಯನ್ನು 'ಎಳೆಯರ ಭಾರತ' ಬರೆದು ಸಾರ್ಥಕ

ಗೊಳಿಸಿ ಸರಳವಾಗಿ ಆಚರಿಸಿದ ಅವರು ತಮ್ಮ ಪತ್ನಿಯನ್ನು ಗಮಕ ಕಲೆಗೆ ಮುಡಿಪಾಗಿ ರೂಪಿಸಿದ್ದು ಮಾತ್ರವಲ್ಲದೆ ಅವರ ಅರುವತ್ತರ ಹುಟ್ಟುಹಬ್ಬವನ್ನು ಸುದೀರ್ಘ, ಸರಸ, ಪರಿಚಯಾತ್ಮಕ, ಬೋಧಪ್ರದ ಲೇಖನದ ಉಡುಗೊರೆಯಿತ್ತು ಅಭಿನಂದಿಸಿರುವುದು ಒಂದು ಆದರ್ಶವೇ ಆಗಿದೆ. ಸಂಪಾದಕರ ನೆಲೆಯಲ್ಲಿ ನಿಂತು ನಾವು ಅವರನ್ನು ಎಷ್ಟು ನೆನೆದರೂ ಸಾಲದು. ಕನ್ನಡ ಜನಕೋಟಿ ಅವರನ್ನು ಕೃತಜ್ಞತೆಯಿಂದ ಸ್ಮರಿಸುತ್ತಿರುವುದೆಂಬ ದೃಢ ವಿಶ್ವಾಸ ನಮ್ಮದು.

ಸಂಪಾದಕರನ್ನಾಗಿ ನಮ್ಮನ್ನು ಆಯ್ಕೆ ಮಾಡಿದ ಅಭಿನಂದನ ಸಮಿತಿಗೆ, ಒಪ್ಪಿದ ಪಾಂಡುರಂಗರಾವ್ ದಂಪತಿಗಳಿಗೆ ನಾವು ಋಣಿಗಳು. ಆದರೆ ಸಂಪಾದನ ಕಾರ್ಯದಲ್ಲಿ ದೋಷಗಳು ನುಸುಳಿಲ್ಲವೆಂದು ನಾವು ಹೇಳುವಂತಿಲ್ಲ, ಅಕ್ಷರ ಸ್ಖಾಲಿತ್ಯಗಳು ಉಳಿದು ಕೊಂಡಿವೆ. ಸಹೃದಯರು ಇದನ್ನು ಮನ್ನಿಸುತ್ತಾರೆ ಎಂಬುದು ನಮ್ಮ ನಂಬುಗೆ. ಲೇಸಿಂಗೆ ತಲೆದೂಗಿ' ಸ್ವಾಗತಿಸುತ್ತಾರೆ ಈ ಗ್ರಂಥವನ್ನು ಎಂಬುದಾಗಿ ನಾವು ನಂಬಿದ್ದೇವೆ.

ಕರ್ನಾಟಕದಲ್ಲಿ 'ಗಮಕ ಅಕಾಡೆಮಿ' ಸ್ಥಾಪಿತವಾಗಬೇಕು. ಕನ್ನಡದ ಮಹಾ ಕಾವ್ಯಗಳನ್ನು ಕಂಠಶ್ರೀಮಂತರು ಹಾಡಿ ಜನಾನುರಾಗಗೊಳಿಸಬೇಕು. ಅದರಿಂದ 'ಕವಿ ಬದುಕಬೇಕು, ಜನ ಬಾಳಬೇಕು' ಕಲೆಗಳ ಆಗರವಾದ ಕರ್ನಾಟಕದಲ್ಲಿ ಗಮಕ ಕಲೆಯೂ ವಿಜೃಂಭಿಸಬೇಕು. ಇದು ಈ ನಾಡ ಜನರ ಅಪೇಕ್ಷೆಯಾಗಿದ್ದರೆ ಆಶ್ಚರ್ಯವಿಲ್ಲ—ಅಂತಹ ಒಂದು ಮಹತ್ಕಾರ್ಯಕ್ಕೆ ಈ ಅಭಿನಂದನ ಗ್ರಂಥವು ಒಂದು ಅಡಿಗಲ್ಲಾಗಿ ಪರಿಣಮಿಸ ಬಹುದೆಂದು ನಮ್ಮ ಭಾವನೆ ; ಆಗಲೆಂದು ನಮ್ಮ ಪ್ರಾರ್ಥನೆ.

ಇದರಲ್ಲಿರುವ ಬಹು ಅಮೂಲ್ಯವಾದ ಭಾವಚಿತ್ರಗಳನ್ನು ಸಂಗ್ರಹಿಸಿ, ಕಾದಿಟ್ಟು, ಒದಗಿಸಿಕೊಟ್ಟವರು ಶ್ರೀ ಬಿ. ಶ್ರೀ. ಪಾಂಡುರಂಗರಾಯರು. ಸಂದರ್ಭ, ಸಮಾರಂಭ ಗಳ ಸವಿನೆನಪನ್ನು ಕಣ್ಣಮುಂದೆ ಹಸಿರಾಗಿ ಉಳಿಸುವ ಈ ಚಿತ್ರಗಳು ಬಹಳ ಉಪಯುಕ್ತವಾದುವು. ಅವರನ್ನು ಕೃತಜ್ಞತೆಯಿಂದ ಸ್ಮರಿಸುವುದು ಕರ್ತವ್ಯವಷ್ಟೆ ಶಕುಂತಲಾಬಾಯಿಯವರ, ಪಾಂಡುರಂಗರಾಯರ ಹಾಗೂ ಅವರ ಮಿತ್ರರುಗಳನ್ನು ಭಾವಚಿತ್ರಗಳಲ್ಲಿ ಸೆರೆಹಿಡಿದ ಸುಪ್ರಸಿದ್ಧ ಭಾವಚಿತ್ರ ಕಲಾವಿದರಾದ ಡಾ|| ಎಸ್. ಹರಿನಾರಾಯಣ್, ಎಸ್. ರಾಮದಾಸ್, ಕೆ. ಬಿ. ಸದಾನಂದ ಮತ್ತು ರಮಾನಂದ ಇವರುಗಳಿಗೆ ನಮ್ಮ ಕೃತಜ್ಞತೆಗಳು. ರಕ್ಷಾಕವಚದ ಚಿತ್ರ ವಿನ್ಯಾಸವನ್ನು ರಚಿಸಿದ ಸುಪ್ರಸಿದ್ಧ ಕಲಾವಿದ ಕಮಲೇಶ ಅವರಿಗೆ ವಂದನೆಗಳು.

ಈ ಗ್ರಂಥದ ಅಂದವಾದ ಮುದ್ರಣದ ಹೊರೆ ಹೊತ್ತವರು ಮೈಸೂರಿನ ಶ್ರೀ ಸದ್ಗುರು ಪ್ರಿಂಟರ್ಸ್, ಮಾಲೀಕರಾದ ಶ್ರೀ ವಾಸು ಅವರು. ಚಿತ್ರಗಳ ಪಡಿಯಚ್ಚು ಮಾಡಿಕೊಟ್ಟವರು ಸುಪ್ರಸಿದ್ಧ ಅಭಿನಯ ಕೋವಿದ ಪಿ. ಹರಿರಾವ್, ಸೂಪರ್ ಪ್ರೋಸೆಸ್ ಸ್ಟುಡಿಯೋ ಚಿಕ್ಕಪೇಟೆ, ಬೆಂಗಳೂರು. ಅವರಿಗೂ ನಮ್ಮ ವಂದನೆಗಳು.

18-10-82

—ಸಂಪಾದಕರು

ಅಭಿನಂದನಾ ಸಮಿತಿ

ಅಧ್ಯಕ್ಷರು

ಜಿ. ನಾರಾಯಣ

ಮಾಜಿ ಅಧ್ಯಕ್ಷ, ಕನ್ನಡ ಸಾಹಿತ್ಯ ಪರಿಷತ್ತು

ಕಾರ್ಯದರ್ಶಿ

ಆರ್. ಎಚ್. ರಾಜು

ಪತ್ರಿಕೋದ್ಯಮಿ

ಖಜಾಂಚಿ

ಹೆಚ್. ಪಿ. ವಾಸುದೇವರಾವ್

ಸಿವಿಲ್ ಇಂಜನಿಯರ್, ಗೌ|| ಕಾರ್ಯದರ್ಶಿ, ಕುವೆಂಪು ಅಧ್ಯಯನ ಕೇಂದ್ರ, ಬೆಂಗಳೂರು.

ಸಂಪಾದಕರು-ಸಂಭಾವನಾ ಗ್ರಂಥ

ಕೆ. ಸಚ್ಚಿದಾನಂದಯ್ಯ

ಸಾಹಿತಿ

ಹರಿಹರ ಪ್ರಿಯ

ಅಂಕಣ ಬರಹಗಾರ

ಸದಸ್ಯರು

ನಿಟ್ಟೂರು ಶ್ರೀನಿವಾಸರಾವ್
ನಿವೃತ್ತ ಶ್ರೇಷ್ಠ ನ್ಯಾಯಾಧೀಶರು. ಗೋಖಲೆ ಸಾರ್ವಜನಿಕ ಸಂಸ್ಥೆಯ ಅಧ್ಯಕ್ಷರು.

ಡಾ|| ಡಿ. ಜವರೇಗೌಡ
ನಿವೃತ್ತ ಕುಲಪತಿ, ಮೈಸೂರು ವಿಶ್ವವಿದ್ಯಾನಿಲಯ.

ಡಾ|| ರಂ.ಶ್ರೀ. ಮುಗಳಿ
ಕವಿ, ವಿಮರ್ಶಕ, ರಾಷ್ಟ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತರು.

ಹಂಪ. ನಾಗರಾಜಯ್ಯ
ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು.

ಡಾ|| ಗೊ. ರಾಮಸ್ವಾಮಿ ಅಯ್ಯಂಗಾರ್
ಹಾಸ್ಯ ಸಾಹಿತಿ, ರಾಷ್ಟ್ರಸಾಹಿತ್ಯ ಅಕಾಡೆಮಿಯ ವಿಜೇತರು.

ಡಾ|| ಸಿದ್ದಯ್ಯ ಪುರಾಣಿಕ
ಕವಿ, ಕಾದಂಬರಿಕಾರ ಬಂಗಾಳ ಸಾಹಿತ್ಯ ಸಂಸ್ಥೆಯ ಪ್ರಶಸ್ತಿ ವಿಜೇತರು.

ವಿ.ಎಸ್. ಕೃಷ್ಣಯ್ಯರ್
ಮಾಜಿ ಮೇಯರ್, ನಿವೃತ್ತ ಉಪಸಭಾಪತಿ.

ಎಚ್.ಎಲ್. ನಾಗೇಗೌಡ
ಅಧ್ಯಕ್ಷರು, ರಾಜ್ಯದ ಜಾನಪದ ಸಾಹಿತ್ಯ ಅಕಾಡೆಮಿ.

ಆರ್. ಮಾಸ್ತೀ ವೀರಣ್ಣ
ಗಾಂಧೀನಗರ ಆರ್ಯವಿದ್ಯಾಶಾಲಾ ಕಾರ್ಯಕಾರಿ ಸಮಿತಿಯ ನಿವೃತ್ತ ಅಧ್ಯಕ್ಷರು.

ಜೋಳದರಾಶಿ ದೊಡ್ಡನಗೌಡ
ಗಮಕ ಕಲಾವಿದ, ಸಂಗೀತ, ನಾಟಕ ಅಕಾಡೆಮಿ ವಿಜೇತ.

ಕೃಷ್ಣಮೂರ್ತಿ ಪುರಾಣಿಕ
ಕವಿ, ಕಾದಂಬರಿಕಾರ ರಾಜ್ಯ ಸಾಹಿತ್ಯ ಪ್ರಶಸ್ತಿ ವಿಜೇತ.

ಪ್ರೊ|| ಎಲ್.ಎಸ್. ಶೇಷಗಿರಿರಾವ್
ಸಾಹಿತಿ ವಿಮರ್ಶಕ

ಪ್ರೊ|| ಜಿ. ವೆಂಕಟಸುಬ್ಬಯ್ಯ
ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರು.

ಎನ್. ರಾಜಶೇಖರಯ್ಯ
ಉಪಾಧ್ಯಕ್ಷ, ಉದಯಭಾನು ಕಲಾಸಂಘ.

ಕೆ. ಟಿ. ರಾಮಸ್ವಾಮೈಯ್ಯಂಗಾರ್
ಗಮಕ ವಿದ್ವಾಂಸ ಲೇಖಕ. ರಾಜ್ಯ ಸಾಹಿತ್ಯ ಅಕಾದೆಮಿ ಪ್ರಶಸ್ತಿ ವಿಜೇತ.

ಕೋ. ಚನ್ನಬಸಪ್ಪ
ನಿವೃತ್ತ ನ್ಯಾಯಾಧೀಶ, ರಾಜ್ಯ ಸಾಹಿತ್ಯ ಅಕಾದೆಮಿ ಪ್ರಶಸ್ತಿ ವಿಜೇತ.

ಹೆಚ್. ಬಿ. ಜ್ವಾಲನಯ್ಯ
ಮಾಜಿ ಪುರಸಭಾಧ್ಯಕ್ಷ, ಹಾಸನ.

ಕೆ. ಸುಬ್ಬರಾಯನ್
ಸಮಾಜ ಸೇವಾ ಕರ್ತ.

ಆರ್. ಎಸ್. ಆರಾಧ್ಯ
ಪತ್ರಿಕೋದ್ಯಮಿ.

ಎಂ. ಜೆ. ಕೋದಂಡರಾಮಶೆಟ್ಟಿ
ಕಾಫಿ ಪ್ಲಾಂಟರ್.

ಹಿ. ಮ. ನಾಗಯ್ಯ
ಕವಿ, ಪತ್ರಿಕೋದ್ಯಮಿ.

ಎನ್. ಕೆ. ಕುಲಕರ್ಣಿ
ಆಕಾಶವಾಣಿಯ ನಿವೃತ್ತ ಕಲಾವಿದ, ಸಾಹಿತಿ, ವಿಮರ್ಶಕ. ರಾಜ್ಯ ಸಾಹಿತ್ಯ ಅಕಾದೆಮಿ ಪ್ರಶಸ್ತಿ ವಿಜೇತ.

ಚಿ. ನ. ಮಂಗಳ
ಸಾಹಿತಿ, ಮಹಿಳಾ ರಾಷ್ಟ್ರೀಯ ವಿದ್ಯಾಲಯದ ಪ್ರಾಧ್ಯಾಪಕಿ.

ಹೊ. ಶ್ರೀನಿವಾಸಯ್ಯ
ಪ್ರವಾಸ ಸಾಹಿತ್ಯ ಲೇಖಕ, ಗಾಂಧಿ ಸಾಹಿತ್ಯ ಸಂಘದ ಕಾರ್ಯಕರ್ತ

ಕೆ. ಟಿ. ಬನಶಂಕರಮ್ಮ
ಪ್ರಾಧ್ಯಾಪಕಿ, ಅಶೋಕ ಶಿಶುವಿಹಾರ, ಬೆಂಗಳೂರು.

ವೈ. ವಿ. ತಿಮ್ಮಯ್ಯ
ಧರ್ಮದರ್ಶಿ, ಓಣಿ ಆಂಜನೇಯಸ್ವಾಮಿ ದೇವಸ್ಥಾನ-ವೈ. ಎಚ್. ವೆಂಕಟರಮಣಪ್ಪ ಕಲ್ಯಾಣ ಮಂಟಪ.

ಉಷಾದೇವಿ
ಲೇಖಕಿ

ವಿಜಯಲಕ್ಷ್ಮಿ ರಾಘವೇಂದ್ರರಾವ್
ಗಮಕ ವಿದುಷಿ, ಕಾದಂಬರಿಗಾರ್ತಿ.

ಎ. ಎಸ್. ಚಂದ್ರಶೇಖರ್
ಶ್ರೀ ಎರ್ರಿಸ್ವಾಮಿ ಜೀವ ಸಮಾಧಿ, ಚೇಳ್ಳಗುರ್ಕಿ, ಕಾರ್ಯಕರ್ತರು.

ಹೇಮಲತಾ ಮಹಿಷಿ
ಲೇಖಕಿ, ವಕೀಲರು.

ನಿರುಪಮ
ಸಾಹಿತಿ.

ಜಿ. ಕೆ. ಗುಂಡೂರಾವ್
ಕನ್ನಡ ಸಾಹಿತ್ಯ ಪರಿಷತ್ತಿನ ನಿವೃತ್ತ ಕಾರ್ಯದರ್ಶಿ, ಶಶಿಕಲಾವಿದರು

ಪ್ರೊ. ಕೆ. ವೆಂಕಟರಾಮಪ್ಪ
ವಿಶ್ರಾಂತ ಕನ್ನಡ ಪ್ರಾಧ್ಯಾಪಕರು.

ತಲ್ಲಂ ಎನ್. ಸುಭದ್ರಮ್ಮ
ಗಮಕ ವಿದುಷಿ

ಹೊಸಬಾಳೆ ಸೀತಾರಾಮರಾವ್
ಕಾಫಿಪ್ಲಾಂಟರ್, ಗಮಕ ವಿದ್ವಾನ್, ಸಾಹಿತಿ.

ಎಸ್. ಎರ್. ಮೂರ್ತಿ
ಸಮಾಜ ಕಾರ್ಯಕರ್ತ, ರೀಜಿನಲ್ ಮ್ಯಾನೇಜರ್, ರೊಥಾಸ್ ಇಂಡಸ್ಟ್ರೀಸ್, ಪಾಟ್ನ,

ಎಚ್. ಎಸ್. ಪಾರ್ವತಿ

ಆಕಾಶವಾಣಿ ಕಲಾವಿದೆ, ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷಿಣಿ.

ಎ. ಪಂಕಜ

ಕಾದಂಬರಿಗಾರ್ತಿ.

ಎ. ಎಸ್. ನಾಗಭೂಷಣರಾವ್

ವಕೀಲರು, ಸಮಾಜ ಕಾರ್ಯಕರ್ತರು.

ಬಿ. ಪಿ. ಸಂಪಂಗಿರಾಮ್

ಅಧ್ಯಕ್ಷ ಶ್ರೀರಾಮ ಸೇವಾ ಮಂಡಲಿ, ರಾಜಾಜಿನಗರ, ಬೆಂಗಳೂರು.

ಬಸವೇಶ್ವರ ಶಿವಪ್ಪ ತುಪ್ಪದ

ಕವಿ.

ಟಿ. ಸುನಂದಮ್ಮ

ಹಾಸ್ಯ ಸಾಹಿತಿ, ಕರ್ನಾಟಕ ಲೇಖಕಿಯರ ಸಂಘದ ಮಾಜಿ ಅಧ್ಯಕ್ಷರು.

ನೀಳಾದೇವಿ

ಲೇಖಕಿ.

ಎಚ್. ಎಸ್. ರೇಣುಕಾಪ್ರಸಾದ್

ವಕೀಲರು. ಸಮಾಜ ಕಾರ್ಯಕರ್ತ

ಮುಲ್ಲರ್ ಪೇಟನ್ ರತ್ನಾಕರ

ರಾಜಾಜಿನಗರದ ಲಯನ್ಸ್ ಕ್ಲಬ್ ಅಧ್ಯಕ್ಷರು.

ನಾಗಮಣಿ ಎಸ್. ರಾವ್

ಆಕಾಶವಾಣಿ ಸುದ್ದಿ ಪ್ರಸಾರ ಕಲಾವಿದೆ

ಕೆ. ಎನ್. ಶ್ರೀಹರಿ

ಕಾರ್ಯದರ್ಶಿ, ವಿದ್ಯಾವರ್ಧಕ ಸಂಘ, ಮಾರುತಿ ಮಹಾ ಗಣಪತಿ ಸೇವಾ ಸಂಘ ರಾಜಾಜಿನಗರ.

ಪದ್ಮಾ ಗುರುರಾಜ್

ಲೇಖಕಿ.

ಗೀತಾ ದೇಸಾಯಿ

ಲೇಖಕಿ.

ನೀ. ಕಸ್ತೂರಿ

ಸಾಹಿತಿ, ಗಾಂಧೀ ಸಾಹಿತ್ಯ ಸಂಘದ ಕಾರ್ಯಕರ್ತರು.

ಒಳನೋಟ


ಆಶೀಃ

ಸಹೃದಯ ಶ್ರೀ

ಗಮಕ ಶ್ರೀ

ಒಂದು

ಅಶ್ರೀಃ



ರಕ್ಷೆಯಾಗಲಿ ರಾಮಚಂದ್ರನ ರುದ್ರ ಕೋದಂಡ !
ರಕ್ಷೆಯಾಗಲಿ ಆಂಜನೇಯನ ವಜ್ರ ದೋರ್ದಂಡ !
ಕೋಂಟೆ ನಿಲ್ಲಲಿ ಕೃಷ್ಣಚಕ್ರದ ಭೀಷ್ಮಲಯಕೋಪ !
ಕೋಂಟೆ ನಿಲ್ಲಲಿ ಭೀಮಸೇನನ ಭುಜ ಗದಾಟೋಪ !
ಕಾವಲಾಗಲಿ ಕಲಿ ಧನಂಜಯ ಚಾಪ ಗಾಂಡೀವ ।
ಕಾವಲಾಗಲಿ ರುಂದ್ರ ಬಲರಾ ವಾಲಿ ಸುಗ್ರೀವ ।
ರಕ್ಷೆಯಾಗಲಿ ದಕ್ಷಿಣೇಶ್ವರ ಪರಮ ಗುರುದೇವ !
ರಕ್ಷೆಯಾಗಲಿ ಸಕಲ ರಕ್ಷಕನಾ ಮಹಾದೇವ ।
ಓಂ ಶಾಂತಿಃ ಶಾಂತಿಃ ಶಾಂತಿಃ

—ಕುವೆಂಪು



ಕುಮಾರವ್ಯಾಸನಿಗೆ ಒಲಿದ
ಗಮಕಿಗಳ ಆರಾಧ್ಯ ದೈವ

ಗದುಗಿನ ವೀರನಾರಾಯಣ



“ಇದು ಕಿವಿಗೆ ಸೊದೆ ! ಮನಕೆ ಸಂತರ್ಪಣಂ ! ಪೇಳಾ
ಇದು ನಿನಗೆ ಸಮನಿಸಿದುದೆಂತಮ್ಮ”

—ಸಾಲಿ ರಾಮಚಂದ್ರರಾವ್


ಚಿತ್ರ—ಡಾ॥ ಎಸ್. ಹರಿನಾರಾಯಣ್



ಅರವತ್ತೆಂಟರ_ಅರವತ್ತೊಂದರ ಹರೆಯದಲ್ಲಿ_1931

ಒಂದೆ ನೊಗ ವೃಷಭವೆರಡವ
ದೊಂದೆ ರಥ ಚಕ್ರವೆರಡನೊಂದಾಗಿಪವೊಲ್
ದ್ವಂದತ್ವ ಜೀವಂಗಳಂ ಧೃಢ-
ವೊಂದಾಗಿಪ ಕುಶಲಸಾಧನಂ ದಾಂಪತ್ಯಂ
_ಡಿ. ವಿ. ಜಿ.

ಸಂಸಾರವೆಂಬ ಹಕ್ಕಿಗೆರೆಡು ರೆಕ್ಕೆಗಳು
ಗಂಡ ಹೆಂಡಿರು ; ಒಂದೂನವಾದರೂ
ಹಾರಲಾದೀತೆ ತೆರೆದ ಆಕಾಶದಲ್ಲಿ ?
ಇದರಲಾವುದು ಬಲ ? ಯಾವುದಬಲ ?
—ವಿ. ಸೀ.



"ಬೆಚ್ಚನಾ ಮನೆಯಾಗಿ ಇಚ್ಛೆಯನರಿವ ಸತಿಯಾಗೆ
ವೆಚ್ಚಕ್ಕೆ ತಕ್ಕ ಹೊನ್ನಾಗೆ ಸ್ವರ್ಗಕ್ಕೆ
ಕಿಚ್ಚ ಹಚ್ಚೆಂದ ಸರ್ವಜ್ಞ"

ಕುಳಿತಿರುವವರು—ವತ್ಸಲ ಸುಧೀಂದ್ರ, ವನಜಕೋಟೇಶ್ವರ, ಶಕುಂತಲಾಬಾಯಿ, (ಅತ್ತೆ) ಬಿ. ಶ್ರೀ. ಪಾಂಡುರಂಗರಾವ್, ಸುಶೀಲ ಮೋಹನ್ (ಸೊಸೆ) ವಿಕಾಸ್,* ಅರ್ಜುನ್

ನಿಂತಿರುವವರು—ಬಿ. ಎನ್. ಸುಧೀಂದ್ರ, ಡಾ|| ಎಸ್. ಕೆ. ಕೋಟೇಶ್ವರ, ಬಿ. ಪಿ. ವಸಂತ, ಗೌತಮ್ ಕೋಟೇಶ್ವರ,* ಮೀರ ಕೋಟೇಶ್ವರ,* ಬಿ. ಪಿ. ಮೋಹನ್

*ಮೊಮ್ಮಕ್ಕಳು



“ಎಳೆಯು ಭಾರತ” ಬಿಡುಗಡೆ ಸಮಾರಂಭದಲ್ಲಿ ಶ್ರೀ ಪೇಜಾವರ ಮಠಾಧೀಶರಾದ
ಶ್ರೀ ಶ್ರೀ ಶ್ರೀ ವಿಶ್ವೇಶತೀರ್ಥ ಪಾದಂಗಳವರ ಸನ್ನಿಧಿಯಲ್ಲಿ 9-10-74



ಬೆಂಗಳೂರು ಗಾಯನ ಸಮಾಜದ 11ನೆಯ ಸಂಗೀತ ಸಮ್ಮೇಳನದಲ್ಲಿ ಸಿದ್ಧಗಂಗಾ
ಮಠಧೀಶರಾದ ಶ್ರೀ ಶ್ರೀ ಶ್ರೀ ಡಾ|| ಶಿವಕುಮಾರ ಸ್ವಾಮಿಜಿಯವರಿಂದ ಪ್ರಶಸ್ತಿ ಸ್ವೀಕಾರ 4-11-79



ರಾಜ್ಯಸಾಹಿತ್ಯ ಅಕಾದೆಮಿ—ಗಮಕ ಪ್ರಶಸ್ತಿ ಸ್ವೀಕಾರ
1970 ರಾಜ್ಯಪಾಲ ಧರ್ಮವೀರ ಅವರಿಂದ



ರಾಜ್ಯ ಸಾಹಿತ್ಯ ಅಕಾದೆಮಿಯ ಪ್ರಶಸ್ತಿ ವಿಜೇತರು.
ಗೋರೂರು ರಾಮಸ್ವಾಮಿ ಅಯ್ಯಂಗಾರ್, ಭೂಸನೂರ ಮಠ, ಮಿರ್ಜಿ ಅಣ್ಣಾರಾಯ,
ಶಕುಂತಲಾಬಾಯಿ, ಕೈಯ್ಯಾರ ರೈ



ಅಖಿಲ ಕರ್ಣಾಟಕ ದ್ವಿತೀಯ ಗಮಕ ಸಮ್ಮೇಳನ, ಮೈಸೂರು—ಮೆರವಣಿಗೆ



ಅಧ್ಯಕ್ಷ ಭಾಷಣ.




ಗಮಕ ಸಮ್ಮೇಳನ—ಕೆ. ಎಸ್. ನರಸಿಂಹಸ್ವಾಮಿ, ಶಕುಂತಲಾಬಾಯಿ, ಕೆಂಗಲ್ ಹನುಮಂತಯ್ಯ

ಚಿತ್ರ—ರಮಾನಂದ



ಕಾರ್ತೀಕದ ಲಕ್ಷದೀಪೋತ್ಸವ ಸಮಯದಲ್ಲಿ ಧರ್ಮಸ್ಥಳದಲ್ಲಿ ಸಾಹಿತ್ಯ ಸಾಂಸ್ಕೃತಿಕ ಸಮಾರಂಭ
ಎಡದಿಂದ : ನೆಲದ ಮೇಲೆ —, —, ಶಕುಂತಲಾಬಾಯಿ, ಅನ್ನಪೂರ್ಣಮ್ಮ ರಘುಪತಿಶಾಸ್ತ್ರಿ, ಗಂಗಾಬಾಯಿ ಪುರಾಣಿಕ. ಕುರ್ಚಿಯಮೇಲೆ —, —, ಕೃಷ್ಣಮೂರ್ತಿ ಪುರಾಣಿಕ, ಬಿ. ಎಚ್. ಶ್ರೀಧರ, ಕಾ. ಸು. ಧರಣೇಂದ್ರಯ್ಯ (ವ್ಯವಸ್ಥಾಪಕ)



ಲಕ್ಷ್ಮೀಶನ ಜೈಮಿನಿ ಭಾರತಕ್ಕೆ ನಮನ

ವೇದಿಕೆಯ ಮೇಲೆ ಗಮಕಿ ದಂಪತಿಗಳು. ಪಕ್ಕದಲ್ಲಿ ಅಧ್ಯಕ್ಷರು — ಶಿಕ್ಷಣಜಿಲ್ಲಾಧಿಕಾರಿ ಗುರುರಾವ್, ಅಭಿನಂದಿಸುತ್ತಿರುವವರು ಡಾ. ಬಿ. ಎಸ್. ಜಗನ್ನಾಥ ಅವರ ಪಕ್ಕದಲ್ಲಿ ಗಮಕಿ ಗೋಪಾಲಕೃಷ್ಣ.



“ಶ್ರೀರಾಮ ಪಟ್ಟಾಭಿಷೇಕ” ಕಾವ್ಯಕ್ಕೆ ಕವಿವರ್ಯರಿಗೆ ನಮನ

ತೊಂಬತ್ತು ವರ್ಷ ತುಂಬದ ಪೂಜ್ಯ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರಿಗೆ ಕನ್ನಡ ಸಾಹಿತ್ಯ ಪರಿಷತ್ತು ಡಾ|| ವಿ. ಕೃ. ಗೋಕಾಕ್ ಅವರ ಅಧ್ಯಕ್ಷತೆಯಲ್ಲಿ ಅಭಿನಂದನ ಸಲ್ಲಿಸಿದಾಗ ಶ್ರೀರಾಮ ಪಟ್ಟಾಭಿಷೇಕ ವಾಚನ ಶಕುಂತಲಾಬಾಯಿಯಿಂದ, ಪೂಜ್ಯ ಮಾಸ್ತಿಯವರು, ವಿ. ಕೃ. ಗೋಕಾಕರು, ಕ. ಸಾ. ಪರಿಷತ್ತಿನ ಅಧ್ಯಕ್ಷ ಹಂಪ ನಾಗರಾಜಯ್ಯ ಕಾವ್ಯವಾಚನ ತನ್ಮಯಿತೆಯಲ್ಲಿ. 8-6-1981



29–11–1981 ರಂದು ಶ್ರೀ ಮಾರುತಿ ಮಹಾಗಣಪತಿ ಸೇವಾಸಂಘ ಪುಣ್ಯಧಾಮದಲ್ಲಿ ನಡೆದ ಶ್ರೀರಾಮ ಪಟ್ಟಾಭಿಷೇಕ ಕಾವ್ಯವಾಚನ ಸಂಭ್ರಮದಲ್ಲಿ ಡಾ॥ ರಂ. ಶ್ರೀ. ಮುಗಳಿ ಡಾ॥ ಮಾಸ್ತಿಯವರಿಗೆ, ಶಕುಂತಲಾಬಾಯಿಯವರಿಗೆ ಶುಭಶೇಚನ ಸಲ್ಲಿಸುತ್ತಿದ್ದಾರೆ



ಶ್ರೀರಾಮಪಟ್ಟಾಭಿಷೇಕ ಕಾವ್ಯವಾಚನದ ಮಹಾಮಂಗಳ ಸಮಾರಂಭ 13–12–1981
ಡಾ॥ ಗೋರೂರು ರಾಮಸ್ವಾಮಿ ಅಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ



ಉದಯರವಿಯಲ್ಲಿ ಕುವೆಂಪು ದಂಪತಿಗಳೊಡನೆ



"ಶ್ರೀರಾಮಯಣ ದರ್ಶನಂ" ಚಿಂತನೆಯಲ್ಲಿ

(ಛಾಯಾಚಿತ್ರ—ಎಸ್. ರಾಮಪ್ರಸಾದ್)



ದೆಹಲಿಯಲ್ಲಿ ವಿ. ಸೀ ಮತ್ತು ಎಚ್. ಎಸ್. ಪಾಟೀಲರೊಂದಿಗೆ (1968)



ಬೇಂದ್ರೆಯವರ "ಶ್ರೀಮಾತ" ಗೃಹದಲ್ಲಿ ಶಕುಂತಲಾಬಾಯಿ, ಪಾಂಡುರಂಗರಾವ್,
ಅಂಬಿಕಾತನಯದತ್ತ, ವಾಮನ ಬೇಂದ್ರೆ ಮತ್ತು ಪಿ. ಆರ್. ಭಾಗವತರೊಂದಿಗೆ

ಶ್ರೀ ವಿಶ್ವೇಶತೀರ್ಥ ಸ್ವಾಮೀಜಿ

ಶ್ರೀ ಪೇಜಾವರ ಮಠ
ಜಗದ್ಗುರು ಮಧ್ವಾಚಾರ್ಯ ಸಂಸ್ಥಾನ,
ಉಡುಪಿ 576 101

ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾವ್ ಇವರ 60 ವರ್ಷ ತುಂಬುವ ಸಂದರ್ಭದಲ್ಲಿ ಅವರನ್ನು ಅಭಿನಂದಿಸಿ ಗ್ರಂಥವನ್ನು ಪ್ರಕಾಶನಗೊಳಿಸುತ್ತಿರುವುದು ತುಂಬ ಸ್ತುತ್ಯವಾಗಿದೆ. ಶ್ರೀಮತಿ ಶಕುಂತಲಾಬಾಯಿಯವರನ್ನು ನಾವು ಅನೇಕ ವರ್ಷಗಳಿಂದ ಬಲ್ಲೆವು. ಅವರ ವಾಚನಕಲೆಯನ್ನು ನಾವು ಮೆಚ್ಚಿಕೊಂಡಿದ್ದೇವೆ. ತಮ್ಮ ಸುಮಧುರ ಗಮಕ ಕಲೆಯಿಂದ ಕನ್ನಡ ಕಾವ್ಯಗಳ ಸೌಂದರ್ಯವನ್ನು ಹೆಚ್ಚು ಅಭಿವ್ಯಕ್ತಗೊಳಿಸಿ ನಾಡುನುಡಿಗಳ ಸೇವೆಯನ್ನು ವಿಶೇಷ ರೀತಿಯಿಂದ ಸಲ್ಲಿಸಿದ ಶ್ರೀಮತಿ ಶಕುಂತಲಾಬಾಯಿಯವರು ಕನ್ನಡಿಗರ ಅಭಿನಂದನೆಗೆ ಪಾತ್ರರಾಗಿದ್ದಾರೆ. ಶ್ರೀಕೃಷ್ಣನು ಅವರಿಂದ ಈ ಸೇವೆಯನ್ನು ಬಹುಕಾಲ ನಡೆಸಲಿ.

ಇತಿ ಸಪ್ರೇಮ ನಾರಾಯಣ ಸ್ಮರಣೆಗಳು

(ಸಹಿ)

ಆಪ್ತ ಕಾರ್ಯದರ್ಶಿ
ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ
ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠಮ್
ಶೃಂಗೇರಿ 577 139

ಮಹಾಭಾರತ, ರಾಮಾಯಣಗಳೂ, ಅನೇಕ ಕಾವ್ಯಗಳೂ ನಮ್ಮ ಜೀವನದಲ್ಲಿ ಹಾಸುಹೊಕ್ಕಾಗಿ ಬೆರೆತಿವೆ. ಯಾವ ಹಳ್ಳಿಗನೇ ಆಗಲಿ ಶ್ರೀರಾಮಚಂದ್ರ ಪ್ರಭುವಿನ ಪಾಂಡವ-ಕೌರವರ ಕಥೆಯನ್ನು ಅರಿಯದೇ ಇಲ್ಲ. ಈ ಕಾವ್ಯಗಳಲ್ಲಿ ಚಿತ್ರಿತವಾಗಿರುವ ಭಾವಪೂರ್ಣ ಸನ್ನಿವೇಶಗಳ ವೈಶಿಷ್ಟ್ಯ, ಕವಿಯ ಚಮತ್ಕಾರ, ರಸೋತ್ಕರ್ಷ ಇವು ಗಳನ್ನು ಜನರಿಗೆ ಮನವರಿಕೆ ಮಾಡಿಕೊಡುವ ಅತ್ಯುತ್ತಮ ಸಾಧನ ಗಮಕ. ಈ ಕಲೆ ಬಹಳ ಪ್ರಸಿದ್ಧವೂ, ಜನಾದರಣೀಯವೂ ಆದುದು.

ಕರ್ನಾಟಕದಲ್ಲಿ ಈ ಕಲೆ ಬೆಳೆದು ಬರಲೂ, ವಿದ್ವಾಂಸರಿಗೂ ಸಾಮಾನ್ಯ ಜನರಿಗೂ ಹೃದಯಂಗಮವೆನಿಸಲೂ, ಕನ್ನಡ ಕವಿಗಳು ಸಾರ್ಥಕ್ಯ ಭಾವವನ್ನು ಪಡೆಯಲೂ ಅನೇಕ ಜನರು ಶ್ರಮಿಸಿದ್ದಾರೆ.

ಅಂತಹ ಪರಂಪರೆಗೆ ಸೇರಿದವರು ಶ್ರೀಮತಿ ಶಕುಂತಲಾ ಬಾಯಿ ಪಾಂಡುರಂಗ ರಾವ್ ಅವರು. ಶ್ರೀಮತಿಯವರ ಸಾಧನೆ ಅಗಾಧವಾದುದು. ಅವರ ಅಭಿಮಾನಿಗಳು ಅಭಿನಂದನಾಗ್ರಂಥವೊಂದನ್ನು ಪ್ರಕಟಿಸುವ ವಿಷಯವನ್ನು ತಿಳಿದು ಶ್ರೀ ಶ್ರೀ ಜಗದ್ಗುರು ಮಹಾಸ್ವಾಮಿಗಳವರು ಬಹಳ ಸಂತೋಷಿಸಿದರು.

ಗ್ರಂಥ ಉತ್ತಮವಾಗಿ ಮೂಡಿಬರಲೂ, ಶ್ರೀಮತಿ ಶಕುಂತಲಾ ಬಾಯಿಯವರು ದೀರ್ಘಾಯುರಾರೋಗ್ಯ ಭಾಗ್ಯಯುತರಾಗಿ ಕನ್ನಡ ಸರಸ್ವತಿಯ ಸೇವೆ ಮುಂದುವರಿಸಿ ಕೊಂಡು ಬರುವ ಶಕ್ತಿಯುಳ್ಳವರಾಗಲೂ ಶ್ರೀ ಶಾರದಾ ಚಂದ್ರಮೌಳೀಶ್ವರ ಪರಮಾನುಗ್ರಹ ಲಭ್ಯವಾಗಲೆಂದು ಶ್ರೀ ಶ್ರೀ ಜಗದ್ಗುರು ಮಹಾಸ್ವಾಮಿಗಳವರು ಆಶೀರ್ವದಿಸಿರುತ್ತಾರೆ.

(ಸಹಿ)

ಆಪ್ತ ಕಾರ್ಯದರ್ಶಿ

॥ ಶ್ರೀ ಗುರು ಶಿವರಾತ್ರಿಸ್ವಾಮಿನೇ ನಮಃ ॥

ಜಗದ್ಗುರು ಶ್ರೀ ಶಿವರಾತ್ರಿರಾಜೇಂದ್ರ ಮಹಾಸ್ವಾಮಿಗಳು

ಶ್ರೀ ವೀರಸಿಂಹಾಸನ ಮಠ, ಸುತ್ತೂರು ಸಂಸ್ಥಾನ
ನಂಜನಗೂಡು ತಾಲ್ಲೂಕು

ಶ್ರೀ ಪಾಂಡುರಂಗರಾವ್‌ರವರೇ,

ನಿಮ್ಮ ಸಹಧರ್ಮಿಣಿ ವಿದುಷಿ ಸೌ. ಶಕುಂತಲಾ ಬಾಯಿಯವರಿಗೆ ತಾ|| 25-4-81 ರಂದು ಅರವತ್ತು ವರ್ಷಗಳು ತುಂಬಿ, ಅವರಿಗೆ ಅರವತ್ತು ವರ್ಷಗಳು ತುಂಬಿದ ನೆನಪಿಗಾಗಿಯೂ ಹಾಗೂ ಗಮಕ ಕಲೆಗೆ ಸಲ್ಲಿಸಿರುವ ನಾಲ್ಕೂವರೆ ದಶಕಗಳ ಸೇವೆಯನ್ನು ಗುರುತಿಸಿ ಅಭಿಮಾನಿಗಳು ಅವರಿಗೆ ಅಭಿನಂದನಾ ಗ್ರಂಥವನ್ನು ಹೊರತರುವ ಪ್ರಯತ್ನ ನಡೆಸಿರುವುದು ತುಂಬಾ ಸಂತೋಷದ ಸಂಗತಿಯಾಗಿದೆ. ಶ್ರೀಮತಿ ಶಕುಂತಲಾಬಾಯಿಯವರು ಕಾವ್ಯ ವಾಚನ ಕ್ಷೇತ್ರದಲ್ಲಿ ಸುಪ್ರಸಿದ್ಧರಾಗಿದ್ದಾರೆ. ಚಾಮರಸನ ಪ್ರಭುಲಿಂಗಲೀಲೆ, ಬಸವರಾಜದೇವರ ರಗಳೆ, ಗಿರಿಜಾ ಕಲ್ಯಾಣ ಕಾವ್ಯಗಳನ್ನು ಸುಶ್ರಾವ್ಯವಾಗಿ ಹಾಡುವುದರಲ್ಲಿ ಪರಿಣತರೇ ಆಗಿದ್ದಾರೆ. ಅನೇಕ ಮಠಾಧಿಪತಿಗಳ ಹೆಗ್ಗಳಿಕೆಗೆ ಇವರು ಪಾತ್ರರಾಗಿರುವುದು ಈ ಪರಿಣತಿಯಿಂದಲೇ ಎಂಬುದನ್ನು ನಾವು ಮನಗಂಡಿದ್ದೇವೆ.

ಇವರ ಸೇವೆಯು ದೀರ್ಘಕಾಲ ಲಭಿಸಲೆಂದು ಹಾರೈಸಿ ಶ್ರೀಮತಿಯವರಿಗೆ ಪರಮಾತ್ಮನು ಆಯುರಾರೋಗ್ಯಗಳನ್ನು ಕರುಣಿಸಲೆಂದು ಹಾರೈಸುತ್ತೇವೆ.

ಇತ್ಯಾಶಿಷಃ

(ಸಹಿ)

ಅನಾಥಸೇವಾಶ್ರಮ ವಿಶ್ವಸ್ತ ಸಮಿತಿ, ಮಲ್ಲಾಡಿಹಳ್ಳಿ-೫೭೭೫೩೧

ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲಾ. (ಕರ್ನಾಟಕ ಸಂಸ್ಥಾನ)

ಸಂಸ್ಥಾಪಕ - ಅಧ್ಯಕ್ಷರು:
ಶ್ರೀ ಶ್ರೀ ರಾಘವೇಂದ್ರಸ್ವಾಮೀಜಿ

ಸಂಸ್ಥಾಪಕ - ಕಾರ್ಯದರ್ಶಿ
ಶ್ರೀ ಸೂರುದಾಸ್‌ಜಿ

‘ಕೋಗಿಲೆಯದನಿಯಲ್ಲಿಪೆ ರಸಿಕ ಕಾಗೆಯದನಿಯನಾಲಿಸನೇ’. ಸಂಗೀತಕಲೆಯಲ್ಲಿ ಗಮಕಕ್ಕೊಂದು ಉನ್ನತ ಸ್ಥಾನವಿದೆ. ಕಾವ್ಯದ ಜೊತೆಯಲ್ಲಿ ಗಮಕವು ಸೇರಿದಾಗ ಅದು ಬಂಗಾರದ ಹುವ್ವಿಗೆ ಸುವಾಸನೆ ಬೆರತಂತೆ ಆಗುತ್ತದೆ. ಶ್ರೋತೃಗಳನ್ನು ಕಾವ್ಯ, ಸಾಹಿತ್ಯಗಳ ಸಾಮ್ರಾಜ್ಯಕ್ಕೊಯ್ದು ಅವರನ್ನು ರಸಗಂಗೆಯಲ್ಲಿ ಅದ್ದಿ ಆನಂದ ಪರವಶರನ್ನಾಗಿಸುವ ಮಹಾಕಾರ್ಯವನ್ನು ಗಮಕ ಕಲೆಯು ಮಾಡುತ್ತದೆ, ಆನಂದವೇ ಕಲೆಯ ಗುರಿಯಲ್ಲವೇ? ಅಂತೆಯೇ ಗಮಕಕಲೆಯು ಇಂದು ನಿನ್ನೆಯದಲ್ಲ....ಅದಕ್ಕೆ ಅತಿ ಪ್ರಾಚೀನತೆ ಇದೆ. ವಾಲ್ಮೀಕಿ ಮಹರ್ಷಿಗಳು ಬರೆದ ರಾಮಾಯಣ ಮಹಾಕಾವ್ಯವನ್ನು ಲವಕುಶರು ಶ್ರೀರಾಮನ ಸಭೆಯಲ್ಲಿ ಸುಶ್ರಾವ್ಯವಾಗಿ ಹಾಡಿ ಶ್ರೋತೃಗಳ ಮನಸ್ಸನ್ನು ಸೆರೆಹಿಡಿದಿರುವ ವಿಚಾರವನ್ನು ನಾವು ಕೇಳಿದ್ದೇವೆ....ಅಂದರೆ ಅದಕ್ಕಿಂತಲೂ ಪೂರ್ವದಲ್ಲಿಯೇ ಗಮಕ ಕಲೆಯು ರೂಢಿಯಲ್ಲಿತ್ತು ಎಂಬುದಂತೂ ಸತ್ಯ.

ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾವ್‌ರವರು ಗಮಕ ಕಲೆಯಲ್ಲಿ ಮಹಾಸಾಧನೆಯನ್ನು ಮಾಡಿದ ತಪಸ್ವಿನಿಯರು; ಯಾಕೆಂದರೆ ಅವರ ಪೀಳಿಗೆಯೇ ಅಂತಹುದು. ಗಮಕಕಲಾ ಪ್ರವೀಣರಾದ ಭಾರತದ ಬಿಂದೂರಾಯರೆಂದು ಪ್ರಖ್ಯಾತರಾದ ಮಹಾವ್ಯಕ್ತಿಗಳ ಶಿಷ್ಯರು ಇವರು. ಶ್ರೀಮತಿ ಶಕುಂತಲಾಬಾಯಿಯವರನ್ನು ನಾನು ಬಹುವರ್ಷಗಳಿಂದ ಬಲ್ಲೆ. ಅವರ ಕಾವ್ಯವಾಚನಗಳನ್ನು ನಾನು ಅನೇಕಬಾರಿಕೇಳಿ ಆನಂದ ಪಟ್ಟಿದ್ದೇನೆ; ಅವರೂ ಹಲವು ಬಾರಿ ಆಶ್ರಮಕ್ಕೆ ಬಂದಿದ್ದಾರೆ. ದೈವದತ್ತವಾಗಿ ಬಂದ ಅವರ ಸ್ವರ ಸಂಪತ್ತು, ಭಾವಪೂರ್ವಕವಾಗಿ ಹಾಡುವ ಅವರ ಶೈಲಿ ಗಮಕ ಕಲೆಗೆ ಹೇಳಿಮಾಡಿಸಿದಂತಿದೆ. ಹೀಗಾಗಿ ಅವರು ‘ಶಿಷ್ಯಾದಿಚ್ಛೇತ್ ಪರಾಭವಂ’ ಎನ್ನುವಂತೆ ಗುರುಗಳನ್ನೇ ಮೀರಿನಿಂತು ಸಾರ್ಥಕ ಶಿಷ್ಯೆ ಎನಿಸಿಕೊಂಡಿದ್ದಾರೆ. ಅವರೀ ನಾಲ್ಕು ದಶವರ್ಷಗಳ ಗಮಕ ಕಲಾಸೇವೆಯನ್ನು ಗುರುತಿಸಿದ ರಸಿಕರು, ಮತ್ತು ಹಿತೈಷಿಗಳು ಅವರಿಗೊಂದು ಅಭಿನಂದನ ಗ್ರಂಥವನ್ನಿತ್ತು ಸನ್ಮಾನಿಸಲಿರುವುದನ್ನು ಕೇಳಿ ನನಗೆ ಅತ್ಯಂತಾನಂದವಾಗಿದೆ. ನಿಜವಾಗಿಯೂ ಇದು ಎಂದೋ ನಡೆಯಬೇಕಾಗಿದ್ದ ಕಾರ್ಯ. ಆದರೂ ಇಂದೀ ಅವರ ಅರವತ್ತನೆಯ ವರುಷದ ಶುಭಾವಸರದಲ್ಲಿ ಈ ಕಾರ್ಯ ಕೈಗೊಂಡಿರುವುದು ಸಮಯೋಚಿತವಾಗಿಯೇ ಇದೆ. ಶ್ರೀಗುರುಕೃಪೆಯಿಂದ ಈ ಮಹಾಕಾರ್ಯ ನಿರ್ವಿಘ್ನವಾಗಿ ನೆರವೇರಲಿ; ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾವ್‌ರವರ ಗಮಕ ಕಲಾಸೇವೆ ಚಿರಕಾಲ ನಾಡಿಗೆ ಲಭಿಸಲಿ ಎಂದು ಹಾರೈಸುವೆ.

ನಿಮ್ಮೆಲ್ಲರ ನಮ್ರಬಂಧು
ಬಾ. ರಾಘವೇಂದ್ರ

ಶ್ರೀ. ಡಿ. ವೀರೇಂದ್ರ ಹೆಗ್ಗಡೆಯವರು

ಶ್ರೀ ಧರ್ಮಸ್ಥಳ-574 216
(ದಕ್ಷಿಣ ಕನ್ನಡ)

ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾವ್ ಅವರು ಗಮಕ ವಾಚನದಿಂದ ಪುರಾಣ ಗ್ರಂಥಗಳನ್ನೂ ಇಂದಿನ ಕಾವ್ಯಗಳನ್ನೂ ಜನತೆಗೆ ಆಕರ್ಷಕವಾಗಿಮಾಡಿ, ಆದರ್ಶ ಮಧುರ ದಿವ್ಯ ಜೀವನದ ಕಾರ್ಯ ಭಾವಲೋಕದಲ್ಲಿ ಸಾನಂದವಾಗಿ ವಿಹರಿಸಿ ಆ ಮೂಲಕ ಧರ್ಮನಿಷ್ಠರಾಗುವಂತೆ ಪ್ರೇರೇಪಿಸಿದುದಕ್ಕಾಗಿ ಅವರ ಇಳಿವಯಸ್ಸಿಗೆ ಅವರ ಗೌರವಕ್ಕೆ ತಕ್ಕ ಸಂಭಾವನೆ, ಸತ್ಕಾರ ನಡೆಯುವಂತೆ ಶ್ರೀಸ್ವಾಮಿಯು ಅನುಗ್ರಹಿಸಲಿ.

ಡಿ. ವೀರೇಂದ್ರ ಹೆಗ್ಗಡೆ

ಶ್ರೀ ಎರ್ರಿಸ್ವಾಮಿ ಜೀವಸಮಾಧಿ, ಚೇಳ್ಳಗುರ್ಕಿ, (ಪೋಸ್ಟು)
ಟ್ರಸ್ಟ್ ಕಮಿಟಿ (ಕರ್ನಾಟಕ) ಬಳ್ಳಾರಿ ತಾಲೂಕು.

ಪ್ರಿಯ ಆತ್ಮೀಯರೇ

‘ಗಮಕವಿದುಷಿ’ ಸೌಭಾಗ್ಯವತಿ ಶಕುಂತಲಾಬಾಯಿಯವರಿಗೆ 25-4-81ಕ್ಕೆ ಅರವತ್ತು ವರ್ಷಗಳು ತುಂಬಿದ ವಿಷಯ ತಿಳಿದು ಸಂತೋಷವಾಗಿದೆ. ಅರುವಿನ ಅರವತ್ತು ವರ್ಷಗಳು ಗಮಕ ಸೇವೆಯಲ್ಲಿ ಸವೆದು ಅದರಫಲವೆ ತುಂಬುಜೀವನವಾಗಿ ಪರಿಣಮಿಸಿದೆ. ಗಮಕಕಲಾಭಿಮಾನಿಗಳು ಹಿತೈಷಿಗಳು ಒಂದು ಅಭಿನಂದನಾಗ್ರಂಥ ಅರ್ಪಿಸುತ್ತಿರುವುದು ಶ್ರೀಮತಿಯವರ ಗಮಕಸೇವೆಗೆ ನಿದರ್ಶನವಾಗಿದೆ.

ನಮ್ಮ ಧರ್ಮಸಂಸ್ಥೆಯು 1965ರಲ್ಲಿ ಧ್ವನಿಮುದ್ರಿಕೆಗಳನ್ನು ಮಾಡಿದಾಗ ಶ್ರೀ ಜೋಳದರಾಶಿ ದೊಡ್ಡನಗೌಡರ ‘ಬಯಲಗಳಿಕೆ’ಯ ಧ್ವನಿಮುದ್ರಿಕೆಗಳೊಂದಿಗೆ ಶ್ರೀಮತಿ ಶಕುಂತಲಾಬಾಯಿಯವರ ಪ್ರಭುಲಿಂಗಲೀಲೆಯಿಂದ ಆರಿಸಿಕೊಂಡ ‘ಮಹದೇವಿ ಅಕ್ಕ’ನ ಭಾಗವನ್ನು ಧ್ವನಿಮುದ್ರಿಸಿಕೊಟ್ಟು ನಮ್ಮ ಧರ್ಮಸಂಸ್ಥೆಯು ಕೈಕೊಂಡ ಶಿವಾನುಭವ ಪ್ರಚಾರ ಕಾರ್ಯದಲ್ಲಿ ತುಂಬುಹೃದಯದಿಂದ ಸಹಕಾರ ನೀಡಿದ್ದೀರಿ. ಅಲ್ಲದೆ ನಮ್ಮ ಶ್ರೀಮಠದ ಜಾತ್ರಾಮಹೋತ್ಸವ ಸಂದರ್ಭದಲ್ಲಿ ನಡೆಯುವ ಶಿವಾನುಭವ ಕಾರ್ಯಕ್ರಮದಲ್ಲಿ ದಂಪತಿಗಳು ಭಾಗವಹಿಸಿ, ‘ಪ್ರಭುಲಿಂಗಲೀಲೆ’ ಪ್ರವಚನಮಾಡಿ ಈ ಪ್ರಾಂತ್ಯದ ಭಕ್ತ ಜನರಿಗೆ ಭಕ್ತಿಯ ಜೊತೆಗೆ ಗಮಕದ ಮಾಧುರ್ಯವನ್ನು ಉಣಬಡಿಸಿ ಶ್ರೀ ಎರ್ರಿಸ್ವಾಮಿಗಳ ಕೃಪಾಶೀರ್ವಾದಕ್ಕೆ ಪಾತ್ರರಾಗಿರುವಿರಿ. ಶ್ರೀ ಮಹಾತ್ಮಾ ಎರ್ರಿಸ್ವಾಮಿ ಕಲಾದಂಪತಿಗಳಿಗೆ ಆರೋಗ್ಯವನ್ನು-ಆಯುಷ್ಯವನ್ನು ಭಾಗ್ಯವನ್ನು ಕರುಣಿಸಲೆಂದು ಶ್ರೀಮತಿಯವರ ಗಮಕಸೇವೆ ನಾಡಿಗೆ ಇನ್ನೂ ಹೆಚ್ಚಾಗಿ ಆಗುವಂತೆ ಶ್ರೀ ಎರ್ರಿಸ್ವಾಮಿಗಳು ಕೃಪೆಮಾಡಲೆಂದು ಕೋರುತ್ತೇವೆ.

ತಮ್ಮವರು

ನಾ. ಭೈರವಗೌಡ

ಧರ್ಮದರ್ಶಿಗಳು

ಮಾಸ್ತಿ ವೆಂಕಟೇಶ ಅಯ್ಯಂಗಾರ್

ಬೆಂಗಳೂರು

ಕಾವ್ಯವಾಚನ ಕಲಾ ಪ್ರವೀಣೆ ಸೌಭಾಗ್ಯವತಿ ಶಕುಂತಲಾ ಬಾಯಿಯವರ ಷಷ್ಟ್ಯಬ್ದಿ ಪೂರ್ತಿ ಉತ್ಸವದ ಪ್ರಯುಕ್ತ ಕಲಾಭಿಮಾನಿ ಮಿತ್ರರು ಒಂದು ಅಭಿನಂದನ ಗ್ರಂಥವನ್ನು ಪ್ರಕಟಿಸಲು ಯೋಚಿಸಿರುವುದು ತುಂಬ ಉಚಿತ, ಹಾಗೆಯೇ ತುಂಬ ಸಂತೋಷದ ವಿಷಯ. ಶ್ರೀಮತಿಯವರು ಈಗ ನಲವತ್ತು ವರ್ಷಗಳಿಗೂ ಹೆಚ್ಚಿನ ಕಾಲ ಗಮಕ ಕಲೆಯ ಉಪಾಸನೆಯನ್ನು ನಡೆಸಿದ್ದಾರೆ. ನೂರಾರು ಸಭೆಗಳನ್ನು ಸಂತೋಷ ಪಡಿಸಿದ್ದಾರೆ. ನೂರಾರು ಹಿರಿಯರನ್ನು ಮೆಚ್ಚಿಸಿ ಸಾವಿರಾರು ಜನರಲ್ಲಿ ಕಾವ್ಯಪ್ರೇಮ ವನ್ನೂ ಕಾವ್ಯಾಭಿರುಚಿಯನ್ನೂ ಬೆಳೆಸಿದ್ದಾರೆ. ಜನತೆಯ ಮರ್ಯಾದೆಯ ಸಂಕೇತವಾಗಿ ಸರಕಾರ ಇವರಿಗೆ ಒಂದು ಗೌರವ ವೇತನವನ್ನು ನೀಡಿದೆ. ನಮ್ಮ ರಾಜ್ಯದ ಸಾಹಿತ್ಯ ಅಕಾಡೆಮಿ ಗಮಕ ಕಲಾಸೇವೆಗಾಗಿ ರಾಜ್ಯಪ್ರಶಸ್ತಿ ನೀಡಿ ಗೌರವಿಸಿದೆ. ಶ್ರೀಮತಿಯವರು ಇನ್ನೂ ಬಹುಕಾಲ ಇದೇರೀತಿ ಸಾಹಿತ್ಯಸೇವೆ ಸಲ್ಲಿಸುವಂತೆ ಭಗವಂತನು ಅನುಗ್ರಹಿಸಲಿ ಎಂದು ಎಲ್ಲರೊಡನೆ ನಾನೂ ಪ್ರಾರ್ಥಿಸುತ್ತೇನೆ.

ಮಾಸ್ತಿ

ಕುವೆಂಪು

ಉದಯರವಿ
ವಾಣೀವಿಲಾಸಪುರಂ
ಮೈಸೂರು_೫೭೦ ೦೦೨

ಶ್ರೀ ಕೃಷ್ಣಗಿರಿ ಕೃಷ್ಣರಾಯರು ಮತ್ತು ಶ್ರೀ ಬಿಂದೂರಾಯರು ಸುಪ್ರಸಿದ್ಧರಾಗಿ ಕನ್ನಡ ನಾಡಿನಲ್ಲಿ ಎಲ್ಲೆಲ್ಲಿಯೂ ಗಮಕ ಕಲೆಯ ರಸಮೋಹಕತೆಯನ್ನು ಹರಡಿ ದಿವಂಗತರಾದ ತರುವಾಯದಲ್ಲಿ ಆ ಜಾಗವನ್ನು ತುಂಬಿದವರೆಂದರೆ ಶ್ರೀಮತಿ ಶಕುಂತಲಾ ಬಾಯಿ ಪಾಂಡುರಂಗರಾವ್ ಅವರು. ಹಿಂದಿನ ಆ ಅವರ ಗಮಕಕಲೆ ವಿಶೇಷವಾಗಿ ಮೆರೆದದ್ದು ಕುಮಾರವ್ಯಾಸನ ಗದುಗಿನ ಭಾರತ ವಾಚನದಲ್ಲಿ. ಇಂದಿನ ಈ ಇವರ ಗಮಕವಾಣಿ ವಿಶೇಷವಾಗಿ ಮೆರೆದಿರುವುದು 'ಶ್ರೀರಾಮಾಯಣದರ್ಶನಂ' ಮಹಾಕಾವ್ಯದ ಮಹಾಛಂದಸ್ಸಿನ ಮಹಾಶೈಲಿಯ ಗಾನಸ್ರೋತದಲ್ಲಿ. ಶ್ರೀರಾಮಾಯಣದರ್ಶನಂ ಜನಪ್ರಿಯವಾಗಿ ಸರ್ವಕನ್ನಡಿಗರಿಗೂ ಆದರಣೀಯವಾದದ್ದಕ್ಕೆ ಗಮಕವಿದುಷಿ ಶ್ರೀಮತಿ ಶಕುಂತಲಾಬಾಯಿಯವರೂ ತಮ್ಮ ಕಂಠದ ಕಾಣಿಕೆಯನ್ನು ನಿವೇದಿಸಿದ್ದಾರೆ! ಅವರಿಗೆ ನನ್ನ ಹೃತ್ಪೂರ್ವಕ ಧನ್ಯವಾದಗಳು.

ಅರುವತ್ತು ತುಂಬಿದ ಈ ಸಂದರ್ಭದಲ್ಲಿ ಅವರನ್ನು ಯೋಗ್ಯರೀತಿಯಲ್ಲಿ ಸನ್ಮಾನಿಸುತ್ತಿರುವುದು ನನಗೊಂದು ವೈಯಕ್ತಿಕವಾದ ಹೆಮ್ಮೆಯ ವಿಷಯ. ಶ್ರೀ ಶಕುಂತಲಾ ಬಾಯಿಯವರ ಗಮಕಪ್ರತಿಭೆ ಭಾರತಾದಿ ಮಹಾಕಾವ್ಯಗಳಲ್ಲಿ ಮಾತ್ರ ಪರ್ಯವಸಾನವಾಗಿದೆ ಎಂದು ಸಾಮಾನ್ಯರು ತಿಳಿದಿರುತ್ತಾರೆ. ಅವರು ನನ್ನ 'ಸ್ವಾತಂತ್ರ್ಯೋದಯ ಮಹಾಪ್ರಗಾಥಾ' 'ಗಣೇಶ ಗಾಥಾ' ಮುಂತಾದುವುಗಳನ್ನೂ 'ಸ್ವಾಮಿ ವಿವೇಕಾನಂದ', 'ಶ್ರೀರಾಮಕೃಷ್ಣ ಪರಮಹಂಸ', 'ಶ್ರೀಮಹಾಮಾತೆ' ಮತ್ತು 'ಋತಚಿನ್ಮಯೀ ಜಗನ್ಮಾತೆಗೆ' ಮುಂತಾದ ಭಾವಗೀತೆಗಳನ್ನೂ ಅಷ್ಟೇ ಸುಮಧುರವಾಗಿ ವಾಚನ ಮಾಡಬಲ್ಲರು ಎಂಬ ವಿಷಯ ಅನೇಕರಿಗೆ ಬಹಿರಂಗವಾಗಿಲ್ಲ.

ನನ್ನ ನಿವೃತ್ತಜೀವನ, ಗುಂಪುಗಲಾಟೆಯ ತೊಂದರೆಯಿಲ್ಲದೆ, ಶ್ರೀರಾಮಾಯಣ ದರ್ಶನಂ ಮತ್ತು ಇತರ ನನ್ನ ಭಾವಗೀತೆಗಳನ್ನು ಅವರು ಹಾಡಿಕೊಟ್ಟಿರುವ ಕ್ಯಾಸೆಟ್ಟುಗಳ ಗಾನ ಘನಸಾನ್ನಿಧ್ಯದಲ್ಲಿ ಆಲಿಸುತ್ತಾ ಕಾಲ ಕಳೆಯುತ್ತಾ ಪ್ರಶಾಂತವಾಗಿದೆ. ಅವರ ಈ ಗಮಕಸೇವೆ ಸರಾಯುವನ್ನೂ ಮೀರಿ ನಾಡಿನ ಹೃದಯವನ್ನು ಚಿರಾಯುವಾಗಿ ತಣಿಸುತ್ತಿರಲಿ.

ಕುವೆಂಪು

ತಿ. ತಾ. ಶರ್ಮ

೫೪, ರಂಗರಾವ್ ರಸ್ತೆ, ಬೆಂಗಳೂರು-೪

ಗಮಕಕಲೆ ಮನೆಮನೆಯಲ್ಲೂ ಬಳಕೆಗೆ ಬಂದು ಸಂಗೀತ ಸಾಹಿತ್ಯಗಳ ಸಮ್ಮಿಶ್ರಿತ ಕಲೆಯಾಗಿದೆ. ಇದನ್ನು ಕಾವ್ಯಗಾನವೆಂದೂ ಹೇಳುತ್ತಾರೆ. ದೇವಪೂಜಾ ಮಂತ್ರಗಳನ್ನು ಪುರಾಣವಾಚನವನ್ನು ಕೂಡಾ ಯಾವುದೋ ಒಂದು ರಾಗದ ಛಾಯೆಯಲ್ಲೇ ಹೇಳುವುದುಂಟು. ಮಂತ್ರೋಚ್ಚಾರಣೆಗೇ ಸ್ವರ, ರಾಗಗಳ ಸಂಬಂಧ ಅಗತ್ಯವಿರುವಾಗ ವಿಸ್ತಾರವಾದ ಕಾವ್ಯ ಜಗತ್ತಿಗೆ ಅದರ ಅಗತ್ಯವೆಷ್ಟಿರಬಹುದು. ಸಂಗೀತ ಶಿಕ್ಷಣ ರಾಗಜ್ಞಾನ ಇದನ್ನು ಹೊಂದಿದವರಲ್ಲೇ ಕಲೆ ಶಾಸ್ತ್ರೀಯವಾಗಿ ಒಂದು ನೈಪುಣ್ಯತೆಯಿಂದ ಪ್ರಕಾಶವಾಗುತ್ತದೆ. ಇದಕ್ಕೆ ಉದಾಹರಣೆಗಳನೇಕ. ಪ್ರತ್ಯಕ್ಷ ಸಾಕ್ಷಿಯಾಗಿ ನಮ್ಮನಾಡಿನಲ್ಲಿ ಪ್ರಖ್ಯಾತರಾದವರು ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾವ್ ಅವರು. ಈ ವಿದುಷೀಮಣಿ ಕ್ರಮವಾಗಿ ಸದ್ಗುರುಗಳಿಂದ ಗಮಕಕಲೆಯಲ್ಲಿ ಪರಿಶ್ರಮ ಹೊಂದಿ ಉತ್ತಮ ಸಾಧನೆಯಿಂದಲೂ ಸ್ವಂತ ಪ್ರಯೋಗಗಳಿಂದಲೂ ಹಿತವಾದ, ಮಿತವಾದ, ಸಂಗೀತ ಸಾಹಿತ್ಯ ಸಂಬಂಧವನ್ನು ಕಾವ್ಯಗಾನ ಪದ್ಧತಿಗೆ ಹೊಂದಿಸಿ ತನ್ನದೇ ಆದ ಒಂದು ರೀತಿಯನ್ನು ಬಳಕೆಗೆ ತಂದಿದ್ದಾರೆ. ಆ ರೀತಿ ಬಹುಜನರ ಮೆಚ್ಚಿಗೆ ಪಡೆದಿದೆ. ಈ ಖ್ಯಾತಿಗೆ ಮೂಲಶಕ್ತಿ ಯಾವುದು? ಅನುಕೂಲದಾಂಪತ್ಯ, ಶ್ರೀ ಪಾಂಡುರಂಗರಾಯರು ತನ್ನ ಸತಿಯ ಹಿರಿಮೆಗೆ ಹೆಮ್ಮೆಪಡುತ್ತಾ ಪೂರ್ಣ ಸಹಕಾರ ನೀಡುವಂತಹ ಆದರ್ಶಪತಿ. ಅವರ ನೈಜಪ್ರೇಮ, ಉತ್ತೇಜನಗಳಿಂದಲೂ ಶ್ರೀಮತಿಯವರ ಕಲಾ ಪ್ರಸನ್ನತೆಗೆ ಸಹಾಯವಾಗಿ ನಿಜವಾದ ದಾಂಪತ್ಯಧರ್ಮ ನೆಲೆಗೊಂಡಿದೆ. ಅವರ ಜೀವನ ಸರಳ, ಸುಂದರ, ಅವರೇನು ಶ್ರೀಮಂತ ವರ್ಗಕ್ಕೆ ಸೇರಿದವರಲ್ಲ, ಆದರೂ ಕಲಾಭಿಮಾನ, ಆ ಪರಿಶ್ರಮ, ಜನರಂಗದಲ್ಲಿನ ಮರ್ಯಾದೆ, ಸೌಜನ್ಯ, ಸೌಶೀಲ್ಯಗಳಿಂದ ಭಾಗ್ಯವಂತರು. ಅವರು ಹೀಗೆಯೇ ಬಾಳುತ್ತ ಕಲೋಪಾಸನೆಯ ದಿವ್ಯತೆಯನ್ನು ಕಾಣುತ್ತ ಆ ದೀಪ್ತಿಯನ್ನು ಬೆಳಗಿಸುತ್ತಾ ದೀರ್ಘಕಾಲ ನಿರಾತಂಕದ ನೆಮ್ಮದಿಯ ಬಾಳನ್ನು ಸಾಗಿಸುತ್ತಾ ಕೀರ್ತಿವಂತರಾಗುವಂತೆ ಭಗವದನುಗ್ರಹವಾಗಲಿ. ಅರವತ್ತುವರ್ಷಗಳ ಮಹಾಘಟ್ಟವನ್ನು ದಾಟುತ್ತಿರುವ ಸಂದರ್ಭದಲ್ಲಿ ಹಿರಿಯರ ಆಶೀರ್ವಾದವನ್ನು ಬಯಸುತ್ತಿರುವ ಅವರ ಸೌಜನ್ಯತೆಗೆ ಅಭಿಮಾನಿಸದವರಾರು? ವಿದ್ಯಾವಿನಯ ಸಂಪನ್ನರಾದ ಈ ದಂಪತಿಗಳು ಕಲಾಭಿವೃದ್ಧಿಗೆ ತಮ್ಮ ಜೀವಿತವನ್ನು ಅರ್ಪಿಸುವರಾಗಿ ದೀರ್ಘಾಯುರಾರೋಗ್ಯ ಭಾಗ್ಯವನ್ನೊಂದಿ ಸುಖಸಂತೋಷಗಳಲ್ಲಿ ರಮಿಸುವಂತೆ ಕಲಾಭಿಮಾನದೇವತೆಯೇ ಅವರನ್ನು ಆಶೀರ್ವದಿಸಬೇಕೆಂಬುದೇ ನನ್ನ ಹಾರೈಕೆಯಾಗಿದೆ. ಶುಭಮಸ್ತು.

ಇಂತು ಆದರ್ಶದಂಪತಿಗಳ ಹಿರಿಯಬಂಧು

ಭಾರತಿ

ವಿ. ಸೀತಾರಾಮಯ್ಯ, ಎಂ. ಎ.,

ನಂ. 1. ಚಾಮರಾಜಪೇಟೆ
ಬೆಂಗಳೂರು-560 018

ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾವ್ ಅವರಿಗೆ

ನೀವು ನಿಮ್ಮ ಅರವತ್ತನೆಯ ವರ್ಷಕ್ಕೆ ಕಾಲಿರಿಸುತ್ತಿರುವಿರೆಂದು ಕೇಳಿ ಹರ್ಷಿಸುತ್ತಿದ್ದೇನೆ. 1937ರಲ್ಲಿ ಗಮಕ ಕಲಾಭ್ಯಾಸಕ್ಕೆ ತೊಡಗಿದಂದಿನಿಂದ ಈವರೆಗೆ ಗಮಕ ಕಲಾಕ್ಷೇತ್ರದಲ್ಲಿ ನೀವು ನಿರಂತರವಾಗಿ ಬೆಳೆದು ಬಂದಿರುವುದನ್ನು ನಾನು ಸಂತೋಷದಿಂದ ಕಾಣುತ್ತಿದ್ದೇನೆ. ನಾರಣಪ್ಪನ ಭಾರತ ಒಂದನ್ನೇ ಅಲ್ಲದೆ ಚಂಪೂ ಮತ್ತು ಷಟ್ಪದಿ ಕಾವ್ಯಗಳಲ್ಲಿಯೂ ಹೊಸಗನ್ನಡ ಗಮಕದಲ್ಲಿಯೂ ನೀವು ವಿಚಕ್ಷಣೆಯಿಂದ ಬೆಳೆದು ನಡಸಿಕೊಂಡು ಬಂದಿದ್ದೀರಿ. ಈ ಸ್ಗಿಯನ್ನು ನೀವು ವಿಶೇಷ ಉತ್ಸಾಹದಿಂದ, ಗಮಕ ಕಲಾ ಹಿರಿಮೆಯಿಂದ ಸಾಧಿಸಿ ನೆರವೇರಿಸಿದ್ದೀರಿ. ಇದಕ್ಕಾಗಿ ಪರಮೇಶ್ವರನು ನಿಮಗೆ ಸಂಪೂರ್ಣವಾದ ಆರೋಗ್ಯವನ್ನೂ ನಿಷ್ಠೆಯನ್ನೂ ಕೊಡಲೆಂದು ಹಾರೈಸುತ್ತೇನೆ. ಹೆಚ್ಚಾಗಿ ಬರೆಯುವುದಕ್ಕೆ ಶಕ್ತವಿಲ್ಲದ್ದರಿಂದ ಇಷ್ಟರಲ್ಲಿ ಪರಿಸಮಾಪ್ತಿಗೊಳ್ಳುತ್ತಿದ್ದೇನೆ. ನಿಮ್ಮ ದಾಂಪತ್ಯ ಸುಖವಾಗಿ, ತುಂಬು ಪ್ರೀತಿಯಿಂದ ಸುಲಲಿತವಾಗಿ ನಡೆದುಕೊಂಡು ಬಂದಿದೆ. ಭಗವಂತನು ಇದನ್ನು ಹೀಗೇ ಮುಂದುವರೆಸಿಕೊಂಡು ಬರಲೆಂದು ಪ್ರಾರ್ಥಿಸುತ್ತೇನೆ.

ಅರವತ್ತರ ಅಭಿನಂದನೆಗಳು.

ವಿಶ್ವಾಸ ಪೂರ್ವಕ
ವಿ. ಸೀತಾರಾಮಯ್ಯ

ಡಾ. ಬೆಟಗೇರಿ ಕೃಷ್ಣಶರ್ಮಾ, ಡಿ. ಲಿಟ್.

ಮಾಳಮಡ್ಡಿ, ಧಾರವಾಡ-೭

ಪ್ರಿಯ ಸೋದರಿ

ಶಕುಂತಲಾಬಾಯಿ ಪಾಂಡುರಂಗರಾವ್ ಅವರೆ,

ತಮ್ಮದು ಆದರ್ಶ ದಾಂಪತ್ಯ. ನೀವಿಬ್ಬರೂ ಸ್ವಂತದಬಾಳನ್ನು ಸಾರ್ಥಕಗೊಳಿಸಿಕೊಂಡಿರುವಿರಿ. ಅಲ್ಲದೆ ದೇಶದ ಜನರನ್ನು ಸುಸಂಸ್ಕೃತಗೊಳಿಸುವ ಕಾರ್ಯವನ್ನು ಮಾಡಿದ್ದೀರಿ. ಕನ್ನಡ ಸಾಹಿತ್ಯವೂ ನಿಮ್ಮ ಗಮಕ ಚಾತುರ್ಯದಿಂದ ತನ್ನ ಮೇಲ್ಮೆಯನ್ನು ಹೆಚ್ಚಿಸಿಕೊಂಡಿದೆ. ನಾನು ನೋಡಿದ ಶಕುಂತಲಾಬಾಯಿಯವರು ಇನ್ನು ಹಚ್ಚಹಸುರಾಗಿದ್ದರು. ಈಗ ತಾವು ಅರವತ್ತು ವರುಷಗಳನ್ನು ಕಳೆದು ಪರಿಪಕ್ವ ಹೃದಯವನ್ನು ಪಡೆದುದು ನನಗೆ ತುಂಬ ಸಂತೋಷ. ತಮ್ಮ ಪರಿಪಕ್ವಹೊಂದಿದ ಗಮಕ ಕಲೆಗಳಿಂದ ಕರ್ನಾಟಕದ ರಸಿಕತನವನ್ನು ಹೆಚ್ಚಿಸಲಿ. ತಾವು ನೂರು ವರುಷ ಬದುಕಿ ಕನ್ನಡದ ಕಾರ್ಯ ಮಾಡಬೇಕೆಂದು ನನ್ನ ಹಾರೈಕೆ.

ಬೆಟಗೇರಿ ಕೃಷ್ಣಶರ್ಮಾ

ಡಾ. ವಿನಾಯಕ ಕೃಷ್ಣ ಗೋಕಾಕ್

ಮೀರಾಕುಟೀರ

525 ರಾಜಮಹಲ್ ವಿಲಾಸ ವಿಸ್ತೀರ್ಣ
ಬೆಂಗಳೂರು 560 080

ಸಪ್ರೇಮ ವಂದನೆಗಳು.

ತಮ್ಮ ಕಾಗದ ತಲುಪಿ ಸಂತೋಷವಾಯಿತು.

ಸೋದರಿ ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾವ್ ಅವರ ಷಷ್ಟ್ಯಬ್ದಿ ಪೂರ್ತಿಯ ಸಂದರ್ಭದಲ್ಲಿ ಒಂದು ಅಭಿನಂದನ ಗ್ರಂಥ ಪ್ರಕಟವಾಗುತ್ತಿರುವದನ್ನು ತಿಳಿದು ಅತ್ಯಂತ ಸಂತೋಷವಾಯಿತು.

ಶ್ರೀಮತಿ ಶಕುಂತಲಾಬಾಯಿಯವರ ಗಮಕ ಕಲಾಸೇವೆ ನಾಡಿಗೆಲ್ಲ ಸುಪರಿಚಿತವಾಗಿದೆ. ಗಮಕಿಗಳಿಗೆ ಪ್ರಥಮತಃ ಸಾಹಿತ್ಯ ಅಕಾಡಮಿಯಿಂದ ದೊರೆತ ರಾಜ್ಯಪ್ರಶಸ್ತಿ ದ್ವಿತೀಯ ಅಖಿಲ ಕರ್ನಾಟಕ ಗಮಕ ಸಮ್ಮೇಳನದ ಅಧ್ಯಕ್ಷಸ್ಥಾನ ಗೌರವ,—ಹೀಗೆ ಅನೇಕ ಸನ್ಮಾನಗಳು ಅವರನ್ನು ಆಯ್ದುಕೊಂಡು ಬಂದಿವೆ. ಎಲ್ಲ ಕನ್ನಡ ಪ್ರೇಮಿಗಳು ಅಭಿಮಾನ ಪಡಬೇಕಾದ ಸಂಗತಿ ಇದು.

ಅವರ ಈ ಅಸಾಧಾರಣ ಯಶಸ್ಸಿಗೆ ಕಾರಣ ಯಾವುದು? ಅವರ ವ್ಯಕ್ತಿತ್ವದಲ್ಲಿಯೇ ಅದರ ಮೂಲ ರಹಸ್ಯವಿದೆ. ಗೃಹಿಣಿಯಾಗಿ ಮನೆಯನ್ನೆಲ್ಲ ನೋಡಿಕೊಂಡು ಅವರು ಗಮಕ ಕಲೆಯ ಸಾಧನೆಯನ್ನೂ ತಮ್ಮದನ್ನಾಗಿ ಮಾಡಿಕೊಂಡರು. ಗಮಕದಲ್ಲಿ ಅವರ ದೃಷ್ಟಿ ಕರ್ನಾಟಕದ ಇತಿಹಾಸ ಭೂಗೋಳಗಳ ವೈಶಾಲ್ಯವನ್ನು ಹೊಂದಿತು. ಪಂಪನೊಡನೆ ಕುಮಾರವ್ಯಾಸ, ರನ್ನನೊಡನೆ ಚಾಮರಸ, ಶರಣರ ವಚನಗಳೊಡನೆ ದಾಸರ ಗೀತೆಗಳು: ಹೀಗೆ ಸಂದರ್ಭೋಚಿತವಾಗಿ ಅವರ ಗಮಕಕಲೆ ಚಲ್ಲವರಿಯಿತು. ಅಲ್ಲದೆ ಅವರು ಆಯ್ದುಕೊಂಡ ರಸಮಂಜರಿಗಳಲ್ಲಿ ಭಕ್ತಿ-ಕರುಣೆ ಮೊದಲಾದ ಉದಾತ್ತ ರಸಗಳು ಸಮೃದ್ಧವಾಗಿರುತ್ತಿದ್ದವು. ಸಹೃದಯತೆಯೂ ಗಮಕಿಯ ಸಿದ್ಧಿಗೆ ತಾಳ ಹಾಕಿತು. ಶ್ರೀ ರಾಮಾಯಣದರ್ಶನವನ್ನೂ ಅವರು ಸುಂದರವಾಗಿ ಪಠಿಸುತ್ತಾರೆ.

ಶ್ರೀಮತಿ ಶಕುಂತಲಾಬಾಯಿಯವರಿಗೆ ತಕ್ಕ ದಾಂಪತ್ಯ ಸುಖವಿದೆ. ಅವರ ಆರ್ಥಿಕ ಸ್ಥಿತಿ ಇನ್ನೂ ಸ್ವಲ್ಪ ತೃಪ್ತಿಕರವಾಗಬಹುದಾಗಿತ್ತು. ಆದರೆ ಅದರಲ್ಲಿಯೇ ಅವರು ಪರಮಾರ್ಥವನ್ನು ಕಂಡಿದ್ದಾರೆ. ಅವರ ಶಾಂತ, ಸರಳ, ನಿರಾಡಂಬರ, ಗಂಭೀರ ಸ್ವಭಾವ ಅವರ ಬಗ್ಗೆ ಆದರವನ್ನು ಹುಟ್ಟಿಸುತ್ತದೆ.

ಅವರಿಗೆ ಹಾಗೂ ಪಾಂಡುರಂಗರಾಯರಿಗೆ ದೀರ್ಘಾಯುಷ್ಯ, ಸುಖ ಶಾಂತಿ-ತುಷ್ಟಿಯನ್ನು ಕೋರಿ ಈ ಚಿಕ್ಕ ನುಡಿಗಾಣಿಕೆಯನ್ನು ಮುಗಿಸುತ್ತೇನೆ.

ವಿ.ಕೃ. ಗೋಕಾಕ್

ಬಿ. ಡಿ. ಜತ್ತಿ

ಮಾಜಿ ಉಪರಾಷ್ಟ್ರಪತಿಗಳು **ಬೆಂಗಳೂರು**

ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾವ್ ಇವರು 25-4-1981ಕ್ಕೆ ಅರವತ್ತು ವರ್ಷಗಳನ್ನು ಮುಗಿಸಿದ್ದಾರೆ. ಇವರ ಅರವತ್ತು ವರ್ಷಗಳ ಸಾರ್ಥಕ ಕಲಾ ತುಂಬು ಜೀವನವನ್ನು ಗುರುತಿಸುವದಕ್ಕಾಗಿ ಒಂದು ಕಿರುಹೊತ್ತಿಗೆಯನ್ನು ತರಲು ನಿರ್ಣಯಿಸಿದುದನ್ನು ಕೇಳಿ ಬಹಳ ಸಂತೋಷವಾಯಿತು. ನಾನು ಅವರನ್ನು 1958ರಿಂದ ಬಲ್ಲೆ. ಶ್ರೀಮತಿ ಶಕುಂತಲಾಬಾಯಿ ತಮ್ಮ 16ನೇ ವಯಸ್ಸಿನಲ್ಲಿಯೇ ಚಾಮರಸನ ಪ್ರಭುಲಿಂಗ ಲೀಲೆಯನ್ನು ಗಮಕಕ್ಕೆ ಅಳವಡಿಸಿ ಪ್ರಚಾರಕ್ಕೆ ತಂದರು. ಈ ಕಾವ್ಯಕ್ಕೆ ಶಿವಶರಣರ ವಚನಗಳನ್ನು ಸಂದರ್ಭಕ್ಕೆ ತಕ್ಕಂತೆ ಅಳವಡಿಸಿ ನೂತನ ಪ್ರಯೋಗ ಮಾಡಿ ವೀರಶೈವ ಬಾಂಧವರ ಮತ್ತು ಕನ್ನಡ ಸಾಹಿತಿಗಳ ಅಭಿಮಾನಕ್ಕೆ ಪಾತ್ರರಾಗಿದ್ದಾರೆ. ಹರಿಹರನ ಬಸವರಾಜ ದೇವರ ರಗಳೆ, ರಾಘವಾಂಕನ ಹರಿಶ್ಚಂದ್ರಕಾವ್ಯ, ಶಿವಶರಣರ ವಚನಗಳನ್ನು ಗಮಕಕ್ಕೆ ಒಗ್ಗಿಸಿ ಪ್ರಚಾರ ಮಾಡಿದವರಲ್ಲಿ ಇವರು ಮೊದಲಿಗರೆಂದು ಕನ್ನಡಜನ ನಂಬಿದ್ದಾರೆ.

1957ರಲ್ಲಿ ದೆಹಲಿಯಲ್ಲಿನ ಆಕಾಶವಾಣಿ ಮೂಲಕ ರಾಷ್ಟ್ರೀಯ ಕಾರ್ಯಕ್ರಮ ದಲ್ಲಿ ಕರ್ನಾಟವನ್ನು ಪ್ರತಿನಿಧಿಸಿ ಭಾರತ ವಾಚನ ಮಾಡಿದ್ದಾರೆ.

1969ರಲ್ಲಿ ನಮ್ಮ ರಾಜ್ಯದ ಸಾಹಿತ್ಯ ಅಕಾಡಮಿಯ ರಾಜ್ಯಪ್ರಶಸ್ತಿಯನ್ನು ಗಮಕ ಕಲೆಗಾಗಿ ಪಡೆದ ಮೊಟ್ಟ ಮೊದಲ ಗಮಕ ವಿದೂಷಿಯನ್ನಿಸಿಕೊಂಡರು ಶ್ರೀಮತಿ ಶಕುಂತಲಾಬಾಯಿಯವರು.

1979ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಮೈಸೂರಿನಲ್ಲಿ ನಡೆದ ಅಖಿಲ ಕರ್ನಾಟಕ ಎರಡನೆ ಗಮಕ ಸಮ್ಮೇಳನದ ಅಧ್ಯಕ್ಷಿಣಿಯಾಗಿ ಗೌರವ ಪಡೆ ದಿದ್ದಾರೆ.

ರಾಷ್ಟ್ರಕವಿ ಕುವೆಂಪು "ಶ್ರೀ ರಾಮಾಯಣ ದರ್ಶನಂ" ಮಹಾಕಾವ್ಯವಾಚನದಲ್ಲಿ ಶ್ರೀಮತಿ ಶಕುಂತಲಾಬಾಯಿಯವರು ನಿಷ್ಣಾತರೆಂಬುದು ಸರ್ವರಿಗೂ ಗೊತ್ತಿದ್ದ ವಿಷಯ.

ಇವರಿಗೆ ದೇವರು ಆಯುರಾರೋಗ್ಯವನ್ನು ಕೊಟ್ಟು ಬಹುಕಾಲ ಇವರ ಸಾಹಿತ್ಯ ಸೇವೆಯು ಕನ್ನಡಿಗರಿಗೆ ಲಭಿಸುವಂತೆ ಮಾಡಲಿ ಎಂದು ಹಾರೈಸುವೆ.

ಬಿ. ಡಿ. ಜತ್ತಿ

ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ

ಬೆಂಗಳೂರು-೫೬೦ ೦೧೯

ಅಭಿನಂದನೆ

ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾವ್ ಅವರಿಗೆ ಅರವತ್ತು ವರ್ಷಗಳು ತುಂಬಿ ಅರವತ್ತೊಂದರಲ್ಲಿ ಕಾಲಿಡುವ ಸಂದರ್ಭದಲ್ಲಿ ಅವರ ಅಭಿಮಾನಿಗಳು, ಹಿತೈಷಿಗಳು, ಮಿತ್ರರು, ಗಮಕಕಲಾಭಿಮಾನಿಗಳು ಅವರನ್ನು ಕುರಿತ ಅಭಿನಂದನ ಗ್ರಂಥವೊಂದನ್ನು ಪ್ರಕಟಿಸುವ ಕಾರ್ಯವನ್ನು ಕೈಗೊಂಡಿರುವುದು ಅತ್ಯಂತ ಉಚಿತವೂ ಸಂತೋಷದಾಯಕವೂ ಆಗಿದೆಯೆಂದು ಹೇಳಬೇಕಾದ್ದಿಲ್ಲ.

ಅವರಿಗೆ ಪ್ರಕೃತಿದತ್ತವಾದ ದಿವ್ಯಕಂಠ, ಸಂಗೀತದಲ್ಲಿ—ಅದರಲ್ಲೂ ಗಮಕ ಕಲೆಯಲ್ಲಿ ಸ್ವಾಭಾವಿಕವಾದ ಒಲವು ಒದಗಿ ಬಂದಿವೆ. ಇವುಗಳನ್ನುಪಯೋಗಿಸಿಕೊಂಡು ಅವಿರತ, ಶ್ರದ್ಧಾಪೂರ್ವಕ ಅಭ್ಯಾಸದಿಂದ, ಅವರ ಗುರುಗಳಾದ ದಿ. ಎಸ್.ಜಿ. ಬಿಂದೂರಾಯರ ಆಶೀರ್ವಾದ ಬಲದಿಂದ, ಅವರು ಈ ನಾಡಿನ ಅತ್ಯಂತ ಪ್ರಮುಖ ಗಮಕಿಗಳಾಗಿ ನಾಡಿನ ಸಹಸ್ರಾರು ಮಂದಿಯನ್ನು ತಮ್ಮ ಅಮೋಘವಾದ ಕಾವ್ಯವಾಚನದಿಂದ ಮೂರು ನಾಲ್ಕು ದಶಕಗಳ ಕಾಲ ಆನಂದ ಪರವಶರನ್ನಾಗಿ ಮಾಡಿಕೊಂಡು ಬಂದಿದ್ದಾರೆ.

ಅವರನ್ನೂ ಅವರ ಯಜಮಾನರಾದ ಶ್ರೀ ಬಿ. ಪಾಂಡುರಂಗರಾಯರನ್ನೂ ಅವರುಗಳ ಚಿಕ್ಕ ವಯಸ್ಸಿನಿಂದ ನಿಕಟ ಸಂಪರ್ಕ ಹೊಂದಿರುವ ಅಪೂರ್ವ ಸೌಭಾಗ್ಯ ನನ್ನದು. ಅವರು ಸೌಜನ್ಯ ಮೂರ್ತಿಗಳು, ಆದರ್ಶ ದಂಪತಿಗಳು. ಇವರಿಬ್ಬರೂ ಶ್ರೀ ಬಿಂದೂರಾಯರ ಪ್ರಥಮ ಸಂದರ್ಶನ ಪಡೆದ ಸನ್ನಿವೇಶದಲ್ಲಿ ನಾನು ಭಾಗಿಯಿದ್ದೆನೆಂಬುದನ್ನು ನಾನೆಂದೂ ಮರೆಯಲಾರೆ. ಶ್ರೀಮತಿ ಶಕುಂತಲಾಬಾಯಿಯವರ ಪ್ರತಿಭೆಯು ಅರಳಿ ಸಮೃದ್ಧಿ ಪಡೆದು ಅತ್ಯಂತ ಪ್ರಭಾವಯುತವಾಗಿ ಬೆಳೆದುದನ್ನು ಕಂಡು ಹರ್ಷಗೊಂಡಿದ್ದೇನೆ. ಈ ಬೆಳವಣಿಗೆಯಲ್ಲಿ ಶ್ರೀ ಪಾಂಡುರಂಗರಾಯರ ಉತ್ತೇಜನ ಮತ್ತು ಸಹಕಾರದ ಪಾತ್ರ ಮಹತ್ವವುಳ್ಳದ್ದು. ಶ್ರೀಮತಿಯವರ ಕಾವ್ಯವಾಚನವನ್ನು ಆಲಿಸಲು ಸಾಧ್ಯವಾದ ಯಾವ ಅವಕಾಶವನ್ನೂ ನಾನು ಕಳೆದುಕೊಂಡಿಲ್ಲವೆಂದು ನನ್ನ ಭಾವನೆ. ಅವರ ಕಾವ್ಯವಾಚನ ಗದುಗಿನ ಭಾರತದಿಂದ ಪ್ರಾರಂಭವಾಯಿತಾದರೂ ಕ್ರಮೇಣ ಜೈಮಿನಿ ಭಾರತವಲ್ಲದೆ, ಇತರ ಕಾವ್ಯಗಳಿಗೂ ಹರಡಿ, ಅವುಗಳ ಸೊಬಗನ್ನು ಶ್ರೋತೃಗಳು ಆಸ್ವಾದಿಸಲು ಅವಕಾಶವುಂಟಾಯಿತು. ಕುವೆಂಪು ಅವರ 'ರಾಮಾಯಣ ದರ್ಶನಂ' ಮಹಾಕಾವ್ಯವನ್ನು ಹೃದಯಂಗಮವಾಗಿ ವಾಚನಮಾಡುವುದರಲ್ಲಿ ಶ್ರೀಮತಿಯವರು ಅದ್ವಿತೀಯರೆಂಬುದು ಪ್ರಸಿದ್ಧವೇ ಆಗಿದೆ. ಇತ್ತೀಚೆಗೆ ಇವರು ಪೂಜ್ಯ ಮಾಸ್ತಿಯವರ ರಾಮಾಯಣ ಕಾವ್ಯದ ವಾಚನವನ್ನೂ ಮಾಡಿ ಆ ವಾಚನವು ಟೇಪ್ ರೆಕಾರ್ಡ್ ಆಗಿದೆಯೆಂದು ಕೇಳಿ ಸಂತೋಷ ಪಟ್ಟಿದ್ದೇನೆ.

ಈ ಶುಭ ಸಂದರ್ಭದಲ್ಲಿ ಅವರ ಅಸದೃಶ ಸಂಸ್ಕೃತಿ ಸೇವಾ ಕಾರ್ಯವು ಬಹು ಕಾಲ ಮುಂದುವರೆಯಲೆಂದು ಅವರಿಗೂ ಶ್ರೀ ಪಾಂಡುರಂಗರಾಯರಿಗೂ ಅವರ ಕುಟುಂಬ ವರ್ಗಕ್ಕೂ ಸುಖಶಾಂತಿ ಸದಾ ದೊರೆಯಲೆಂದೂ ಮನಸಾರೆ ಹಾರೈಸುತ್ತೇನೆ.

ನಿಟ್ಟೂರು ಶ್ರೀನಿವಾಸರಾವ್

ಬೆಂಗಳೂರು ಗಾಯನ ಸಮಾಜ

ಶ್ರೀಕೃಷ್ಣರಾಜೇಂದ್ರ ರಸ್ತೆ ಬೆಂಗಳೂರು 560 004

'ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾಯರಿಗೆ, ಅವರ ಅರವತ್ತನೆಯ ವರ್ಷದ ಹುಟ್ಟಿದ ಹಬ್ಬದ ಸಂದರ್ಭದಲ್ಲಿ ಸನ್ಮಾನಸಭೆ ನಡೆಸಿ, ಅವರಿಗೆ ಅಭಿನಂದನಾ ಗ್ರಂಥವನ್ನು ಅರ್ಪಿಸಲಿರುವ ಸುದ್ದಿ ಕೇಳಿ ನಮಗೆ ಅತಿ ಆನಂದವಾಗಿದೆ.

ಕಳೆದ ಐದು ಶತಕಗಳಿಂದ ಅವರು ಗಮಕ ಕಲೆಗೆ ಮಾಡಿರುವ ಸೇವೆ ಅತಿ ಸ್ತುತ್ಯರ್ಹವಾದದ್ದು. ಕರ್ನಾಟಕದ ಜನತೆ ಹೆಮ್ಮೆಪಡುವಂತಹುದು, ಅವರು ಇದುವರೆವಿಗೂ ನಡೆಸಿಕೊಟ್ಟಿರುವ ಗಮಕವಾಚನ, ಗಮಕಕಲೆಯಲ್ಲಿ ಅನೇಕ ಶಿಷ್ಯರನ್ನು ತಯಾರುಮಾಡಿರುವುದು, ಬರೆದು ಪ್ರಕಟಿಸಿರುವ ಪುಸ್ತಕಗಳು, ಎಲ್ಲರ ಮನಸನ್ನೂ ಸೆಳೆದಿದೆ; ಆಕರ್ಷಿಸಿದೆ.

ಶ್ರೀಮತಿಯವರ ಕಲಾಸೇವೆ ಇದೇ ರೀತಿ ಇನ್ನು ಮುಂದೆಯೂ ಅವ್ಯಾಹತವಾಗಿ ನಡೆದುಬರಲಿ ಎಂದು ಆಶಿಸುತ್ತೇನೆ.

ಎನ್. ನಾಗರಾಜರಾವ್

ಅಧ್ಯಕ್ಷ

ಇಂಚರ

ಇದು ಕಿವಿಗೆ ಸೊದೆ ! ಮನಕೆ ಸಂತರ್ಪಣಂ ! ಪೇಳ
ಇದು ನಿನಗೆ ಸಮನಿಸಿದುದೆಂತಮ್ಮ ? ನೋಂಪಿಯಾ
ಪ್ರವನೆಸಗಿ ಪಡೆದೆಯೋ ಸವಿಗೊರಲನೆನಿಸಿಕೊಂಡು ಮೋಹನವೊ ಈ ದಿಸೆಯೊಳು |

ಮುದಮಿಲ್ಲಿ | ಮುದಮಲ್ಲಿ | ಮುದಮೆತ್ತಲುಂ ನಾದ
ಮಿದು ತುಂಬಿದೆಡೆಯಲ್ಲಿ ! ನವಸುಮಂಗಳ ಮೆಲ್ಪು |
ಮೃದು ಸಮೀರದ ತಣ್ಪು | ಬೆಳ್ದಿಂಗಳೊಳ್ಪೆಲ್ಲಿ ಸೊಗಸಾಗೆ ಕೂಡಿದಪುವು ||೧||

ಬಗೆಯಂಚೆಯಿಂಚರದ ತಿಳಿಗೊಳದ ತೆರೆಗಳೊಳ್
ಪುಗುತಂದು ತಲ್ಲೀನಮಾದಪುದು ! ಸಂಸ್ಕೃತಿಯ
ಬಿಗಿವು ಸಡಿಲಾದಪುದು ! ಸಂತತದೊಳಿಂತಿರಲ್ಲೀಕಲೇ ! ಹಾಡುತಾಯಿ ! ||೨||

ತಂಗಿ, ನೀ ತಣಿಸಿದೌ ಗೀತದಿಂದೆನ್ನಂತ—
ರಂಗಮಂ ! ನಿನ್ನನಾನೇನೆಂದು ಪರಸುವೆಂ ?
ಹೆಂಗಸಿಗೆ ಕೂರ್ಪ ನಲ್ಲನೆ ಸಕಲ ಸಂಪತ್ತು ! ಪೂರ್ವಕೃತದಿಂದೆ
ತಂಗದಿರನಂ ಪೋಲ್ವ ಮೃದಲ ಸ್ವಭಾವನಂ
ನೀಂ ಗಡ ಪಡೆದೆಯುಯ್ ಇನಿಯನಂ ! ನಿನಗಿನ್ನು
ಮಂಗಳಮೆ | “ಈಪ್ಸಿತಂ ಸಂಪ್ರಾಪ್ತಮಸ್ತು ತೇ” ಎಂಬುದೇ ಎನ್ನ ಪರಕೆ !

—ಸಾಲಿ ರಾಮಚಂದ್ರರಾವ್

ಎರಡು

ಸಹೃದಯ ಶ್ರೀ

ಅರಸರ್ ಕುಡುವಾ ಕಾರ್ತ
ಸ್ವರ ಕಂಕಣಮಿರ್ಕೆ ಸರಸರಾಸ್ವಾದಿಸಿ ಕಾ
ವ್ಯರಸವ ಸೂಸುವ ಸುಖಭಾ
ಸ್ವರಾಸುಕಂಕಣಮೆ ಕವಿಗೆ ಕಂಕಣಮಲ್ತೆ

ಬಸಪ್ಪಶಾಸ್ತ್ರಿ

ವಾಗರ್ಥ ರಥವೇರಿ, ಭಾವದಗ್ನಿಯ ಪಥಂ
ಬಿಡಿದು ಬನ್ನಿಂ, ಸಚ್ಚಿದಾನಂದ ಪೂಜೆಯಂ
ಸಹೃದಯ ಹೃದಯ ಭಕ್ತಿ ನೈವೇದ್ಯಮಂಕೊಂಡು
ಓದುವರ್ಗಾಲಿಪರ್ಗೊಲಿದೀಯೆ ಚಿತ್ಕಾಂತಿಯಂ

ಕುವೆಂಪು
(ರಾಮಯಣ ದರ್ಶನಂ)

ದಿವ್ಯಕಲೆಯೆಲ್ಲಿರ್ದೊಡಲ್ಲಿಗೈತಹರಲ್ತೆ ದಲ್
ಪಗಲಿರುಳ್ ವಿಶ್ವಮಂ ಸಂಚರಿಸಿ ರಕ್ಷಿಸುವ
ಸತ್‌ಶಕ್ತಿಗಳ್ ದೇವತಾತ್ಮಗಳ್

ಕುವೆಂಪು
(ರಾಮಾಯಣ ದರ್ಶನಂ)

ನಮೋಽಸ್ತ್ವನಂತಾಯ ಸಹಸ್ರಮೂರ್ತಯೇ
ಸಹಸ್ರಪಾದಾಕ್ಷಿ ಶಿರೋಽರು ಬಾಹವೇ
ಸಹಸ್ರ ನಾಮ್ನೇ ಪುರುಷಾಯ ಶಾಶ್ವತೇ
ಸಹಸ್ರ ಕೋಟಿ ಯುಗಧಾರಿಣೇ ನಮಃ

ಗಾನಕೋಕಿಲೆ

—ಗೊರೂರು ರಾಮಸ್ವಾಮಿ ಅಯ್ಯಂಗಾರ್

ಕನ್ನಡನಾಡಿನ ಗಮಕಿಗಳ ಪಂಕ್ತಿಯಲ್ಲಿ, ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾವ್ ಅಗ್ರಮಾನ್ಯ ಸ್ಥಾನಕ್ಕೆ ಸೇರಿದವರು. ಇವರದು ದೀರ್ಘಕಾಲದ ಕಾವ್ಯಗಾಯನ ಸೇವೆ. ಉನ್ನತ ಮಟ್ಟದ ಗಾಯನ ಪ್ರೌಢಿಮೆ ಪರಿಶ್ರಮದಿಂದ ಹದಗೊಳಿಸಿದ ಸುಮಧುರ ಕಂಠ, ಆತ್ಮಪ್ರತ್ಯಯ, ಹಾಡುಗಾರಿಕೆಯನ್ನು ಅಲೌಕಿಕವಾದ ಕುತೂಹಲ ಲವಲವಿಕೆ, ಇವು ಇವರ ಹಾಡುಗಾರಿಕೆಗೆ ವಿದ್ವಾಂಸರ ಮೆಚ್ಚಿಕೆಯನ್ನೂ ಸರ್ವರ ಪ್ರೀತಿಯನ್ನೂ ತಂದುಕೊಟ್ಟಿವೆ. ಇವರು ಯಾವ ಸಂಗೀತ ವಿದ್ವತ್‌ಗೋಷ್ಠಿಯಲ್ಲಿಯೂ ಪ್ರಥಮಶ್ರೇಣಿಯ ಶಾಸ್ತ್ರೀಯಗಾಯಕರಾಗಿ ವಿರಾಜಿಸಬಲ್ಲವರು. ಇವರು ಕನ್ನಡ ಕಾವ್ಯಗಳ ಗಮಕವನ್ನು ಕೈಗೆತ್ತಿಕೊಂಡದ್ದು, ಕನ್ನಡ ಕಾವ್ಯಗಳಿಗೆ ದೊರಕಿದ ಒಂದು ಅವಮೌಲ್ಯ ಅಭರಣ ಮತ್ತು ಸುಯೋಗ ಎಂದು ಹೇಳಬಹುದು.

ಉತ್ತಮ ಕಾವ್ಯಕ್ಕೆ, ಗಾಯನವು ಸಹಕಾರಿ. ಕವಿ ಗಮಕಿ ವಾದಿ ವಾಗ್ಮಿ ಎಲ್ಲರೂ ಸಾಹಿತ್ಯ ಪ್ರಚಾರಕ್ಕೆ ಅಂಗಗಳು. ಪ್ರಾಚೀನ ಕಾಲದಿಂದ ಕಾವ್ಯ ಪ್ರಚಾರಕ್ಕೆ ಗಮಕ ಒಂದು ಅನಿವಾರ್ಯ ಸಾಧನವೆಂದೇ ಪರಿಗಣಿಸಲ್ಪಟ್ಟಿದೆ. ಆದಿಕವಿ ವಾಲ್ಮೀಕಿ ಸಹ ತನ್ನ ಕಾವ್ಯವನ್ನು ಹಾಡುಗಬ್ಬವಾಗಿ ಬರೆದು, ಲವಕುಶರಿಂದ ಅದನ್ನು ಹಾಡಿಸಿದನು. 'ಮಧುರವಾಗಿ ಲಯಬದ್ಧವಾಗಿ ವೀಣೆಯನಾದದೊಡನೆ ಹಾಡಿದ ಪ್ರಸಿದ್ಧವಾದ ಅರ್ಥವುಳ್ಳ ಆ ಕಾವ್ಯ, ಶ್ರೋತೃಗಳ ಸಮಸ್ತ ಅವಯವಗಳನ್ನೂ ಮನಸ್ಸನ್ನೂ ಹೃದಯಗಳನ್ನೂ ಸುಖದಲ್ಲಿ ಅದ್ದಿತು' ಶ್ರೀಮತಿ, ಶಕುಂತಲಾಬಾಯಿಯವರ ಕಾವ್ಯವಾಚನವನ್ನು ಕೇಳಿದಾಗ ನಮ್ಮ ಮನಸ್ಸು ಅಂಥ ಸುಖಸ್ಥಾಯಿಯಲ್ಲಿ ನಿಲ್ಲುತ್ತದೆ. ಅದೊಂದು ಅಪೂರ್ವ ಅನುಭವ,

ಗಮಕದಿಂದ ಕಾವ್ಯವು ಹೆಚ್ಚುಪ್ರಿಯವಾಗುವಂತೆ, ಅದೇ ಗಮಕದಲ್ಲಿ ಸಂಗೀತ ಹೆಚ್ಚಾದರೆ, ಕಾವ್ಯದಲ್ಲಿಯೇ ಬೇಸರಿಕೆ ಬರುವುದುಂಟು. ಸಂಗೀತ ಎಲ್ಲಿಲ್ಲಿ ಎಷ್ಟು ಇರಬೇಕು ಎಂಬುದನ್ನು ಅರಿಯುವುದರಲ್ಲಿಯೇ ಇರುವುದು ಗಮಕಿಯ ರಸಿಕತೆ ಮತ್ತು ಔಚಿತ್ಯಪ್ರಜ್ಞೆ. ಈ ಪ್ರಜ್ಞೆಯನ್ನು ಶಕುಂತಲಾಬಾಯಿ ಅಪ್ರಯತ್ನದಿಂದಲೋ ಎಂಬಷ್ಟು ಸ್ವಾಭಾವಿಕವಾಗಿ-ಸಾಧಿಸಿಕೊಂಡಿದ್ದಾರೆ. ದೀರ್ಘವ್ಯಾಸಂಗದ, ಕಾವ್ಯಗಳ ಏಕಾಂತ ಅಧ್ಯಯನದ ಪರಿಣಾಮವಾಗಿ, ಅದು ಅವರಿಗೆ ಲಭಿಸಿದೆ. ಯಾವ ರಸಕ್ಕೆ ಯಾವ ರಾಗ, ಎಲ್ಲಿ ಕಂಠದ ಏರು ಇಳಿತ, ಯಾವ ಪದದ ಮೇಲೆ ಪಂಕ್ತಿಯಮೇಲೆ, ಸ್ವಲ್ಪ ಹೆಚ್ಚು ಒತ್ತಡ, ಒಂದೇ ರಾಗವಾದರೂ ಅಲ್ಪಸ್ವಲ್ಪ ವೈವಿಧ್ಯ, ಒಳತಿರುವು, ತತ್‌ಕ್ಷಣ ಹೊಳೆದ ಒಂದು ಅಪೂರ್ವವಾದ ಮಿಂಚು, ಇವೆಲ್ಲ ಶಕುಂತಲಾಬಾಯಿಯವರ ಗಮಕಕ್ಕೆ ಇತರ ಕಡೆ ಅಲಭ್ಯವಾದ ಅನನ್ಯಸಾಧಾರಣವಾದ ಮೆರಗನ್ನು

ಕೊಡುತ್ತವೆ. ಅವರ ಗಮಕವನ್ನು ಎಷ್ಟು ಕೇಳಿದರೂ, ಇನ್ನೂ ಇನ್ನೂ ಕೇಳಬೇಕೆಂಬ ಕುತೂಹಲವುಂಟಾಗುತ್ತದೆ. ಅವರು ಆಕಾಶವಾಣಿಯಲ್ಲಿ ಚಂಪೂಕಾವ್ಯ ವಾಚನವನ್ನು ಮಾಡಿದಾಗ-ಆಕಾಶವಾಣಿಯವರ ದೃಷ್ಟಿಯಿಂದ ಅದೊಂದು ಹೊಸ ಪ್ರಯೋಗವೇ ಆದರೂ-ಅದು ಬಹು ಸೊಗಸಾಗಿ ಬಂತು. ಚಂಪೂ ಕಾವ್ಯಗಳನ್ನು ಹಾಗೆ ವಾಚನ ಮಾಡಿದರೆ, ಅದನ್ನು ಇನ್ನಷ್ಟು ಕೇಳಬಹುದೆಂದು ನನಗೆ ಅನಿಸಿತು.

ನಮ್ಮ ಗಮಕಿಗಳು ಸಾಮಾನ್ಯವಾಗಿ ಕುಮಾರವ್ಯಾಸ ಭಾರತವನ್ನೇ ಗಮಕಕ್ಕೆ ಆರಿಸಿಕೊಳ್ಳುತ್ತಿದ್ದರು. ಕುಮಾರವ್ಯಾಸ ಗಮಕಕ್ಕೆ ಬಹು ಚೆನ್ನಾಗಿ ಅಳವಡುವ ಕಾವ್ಯ. ಸಮುದ್ರದ ಘರ್ಜನೆಯಂತೆ ಮಳೆಗಾಲದ ಗಂಭೀರವಾದ ಮೇಘರವದಂತೆ ನವರಸಗಳಲ್ಲಿ ತಾನೇ ಕೊಚ್ಚಿಕೊಂಡು ಹೋಗುವುದನ್ನೂ ಕಾಣದೆ ಭಕ್ತಿ ವೈರಾಗ್ಯ ಕೃಷ್ಣನ ಮಹಿಮೆ ಪವಾಡಗಳನ್ನೊಳಗೊಂಡ ಗದುಗಿನ ಭಾರತ; ಅದನ್ನು ಗಮಕಕ್ಕೆ ಅಳವಡಿಸುವ ಕಂಠಶ್ರೀ ಯಾರಿಗಾದರೂ ಇದ್ದಿತು ಎಂದರೆ ಅದು ಬಿಂದುರಾಯರಿಗೆ. ಶ್ರೀಮಾನ್ ಸಂಪತ್ಕುಮಾರಾಚಾರ್ಯರೂ ಸಹ ಕುಮಾರವ್ಯಾಸಭಾರತವನ್ನೂ ಜೈಮಿನಿ ಭಾರತವನ್ನೂ ಬಹಳ ಸೊಗಸಾಗಿ ವಾಚಿಸುತ್ತಿದ್ದರು. ಒಂದು ಸಂದರ್ಭದಲ್ಲಿ ನಾನು, ಬಿಂದುರಾಯರಿಂದ ಕುಮಾರವ್ಯಾಸ ಭಾರತವಾಚನವನ್ನು ಕೇಳಿದೆ. ಅದರ ಪರಿಣಾಮವಾಗಿ ನನ್ನಲ್ಲಿದ್ದ ನಿರುತ್ಸಾಹ ಬೇಸರಿಕೆಗಳು ಮಾಯವಾಗಿ ಒಂದು "ಟಾನಿಕ್" ಕುಡಿದಂತೆ ಹೊಸಲವಲವಿಕೆಯುಂಟಾಯಿತು. ಅದು ಕೊಟ್ಟ ಆನಂದ ಅನಿರ್ವಚನೀಯವೂ ಇಂದ್ರಿಯಗಳ ಕಾಮಲೋಲುಪತೆಯನ್ನು ಮೀರಿದ ಅಲೌಕಿಕವೂ ಆದ ಆನಂದವಾಗಿತ್ತು. ಆಗ ನಾನು ಬಿಂದುರಾಯರಿಗೆ 'ಇಂಥ ನಿಮ್ಮ ಒಂದು ಅಮೋಘವಾದ ಶಕ್ತಿ, ನಿಮ್ಮೊಂದಿಗೆ ಹೋಗಿಬಿಡುವುದಲ್ಲ. ನಿಮ್ಮನಂತರ ನಾವು ಯಾರನ್ನು ಭಾರತವಾಚನಕ್ಕೆ ತರೋಣ' ಎಂದೆ. ಅವರು 'ಆ ಭಯ ನಿಮಗೆ ಬೇಡ. ನನ್ನ ಪ್ರಥಮಶಿಷ್ಯೆ, ಶಕುಂತಲಾಬಾಯಿ, ನನ್ನ ಸ್ಥಾನವನ್ನು ತುಂಬುತ್ತಾಳೆ" ಎಂದರು. ಆಗ ಶಕುಂತಲಾಬಾಯಿಯ ಹೆಸರು ಇನ್ನೂ ಅಷ್ಟಾಗಿ ಪ್ರಸಿದ್ಧವಾಗಿರಲಿಲ್ಲ.

ಶಕುಂತಲಾಬಾಯಿ, ತಾವು ನಿರ್ವಹಿಸಬೇಕಾದ ಪಾತ್ರಕ್ಕೆ, ತುಂಬ ಶ್ರದ್ಧೆಯಿಂದ ತಯಾರಿ ತೆಗೆದುಕೊಂಡರು. ಕನ್ನಡಸಾಹಿತ್ಯದ ಅನೇಕ ಕಾವ್ಯಗಳನ್ನು ಅವರು-ಗಮಕಕ್ಕಾಗಿಯೇ ಅಲ್ಲ ಗಮಕಿಗೆ ಒಳ್ಳೆ ಸಾಹಿತ್ಯಾಭ್ಯಾಸ ಇರಬೇಕೆಂಬ ಕಾರಣಕ್ಕಾಗಿ ವ್ಯಾಸಂಗಮಾಡಿದ್ದಾರೆ. ಯಾವ ಕಾವ್ಯವನ್ನು ಓದುವುದಕ್ಕೂ ಅವರಿಗೆ ಹೆಚ್ಚು ಸಿದ್ಧತೆ ಬೇಕಾಗುವುದಿಲ್ಲ. ವೀರಶೈವ ವಚನಗಳು ಜಾನಪದ ಎಲ್ಲವನ್ನೂ ಅಭ್ಯಾಸ ಮಾಡಿದ್ದಾರೆ. ಹೊಸಹೊಸ ಕವಿಗಳ ರಚನೆಗಳನ್ನೆಲ್ಲ ಓದುತ್ತಾರೆ. ಹೊಸದು ಯಾವುದರಲ್ಲಿಯೂ ಅವರಿಗೆ ತಾತ್ಸಾರವಿಲ್ಲ. ಕುವೆಂಪುರವರ ರಾಮಾಯಣದರ್ಶನವನ್ನು ಪ್ರಾರಂಭದಿಂದಲೂ ಪ್ರಚಾರಮಾಡಿದವರು ಅವರು-ಅದರ ಶೈಲಿ ಛಂದಸ್ಸು ಗೊಂಚಲು ಗೊಂಚಲಾಗಿ ಗಮಕಕ್ಕೆ ಅಳವಡುವ ಅದರ ಶಬ್ದ ಸೌಂದರ್ಯ ಇವೆಲ್ಲ ಅವರಿಗೆ ಪ್ರಿಯ. ರಾಮಾಯಣದರ್ಶನವನ್ನು ಅನೇಕರು ಓದುವುದಕ್ಕೆ ಮುಂಚೆಯೇ ಇವರು ಅದನ್ನು ಶ್ರೋತೃಗಳಿಗೆ ವಾಚಿಸಿ ಅದರಲ್ಲಿ ಅವರಿಗೆ ಅಭಿರುಚಿಯುಂಟಾಗುವಂತೆ ಮಾಡಿದವರು.

ಒಂದು ಸಂದರ್ಭದಲ್ಲಿ ಅವರು ಅನೇಕ ಗಂಟೆಗಳ ಕಾಲ ರಾಮಾಯಣದರ್ಶನವನ್ನು ವಾಚಿಸಿದರು. ಕಾಲವು ಸ್ವಲ್ಪ ಹೆಚ್ಚಾದರೂ ಸಹ ಅವರು ಆರಿಸಿಕೊಂಡ ಸ್ವಾರಸ್ಯ ಭಾಗಗಳು, ಗಮಕದಲ್ಲಿ ಬಳಸಿದ ಆಕರ್ಷಣೀಯ ವೈವಿಧ್ಯ ಇವುಗಳಿಂದ ಶ್ರೋತೃಗಳಿಗೆ ಕಾವ್ಯದ ಸ್ವಾರಸ್ಯವನ್ನು ಸವಿಯುವುದರಲ್ಲಿ ಬೇಸರಿಕೆ ಬರಲಿಲ್ಲ.

ಶ್ರೀಮತಿ ಶಕುಂತಲಾಬಾಯಿಯವರ ಗಮಕ ಪ್ರಿಯವಾಗಿರುವುದಕ್ಕೆ ಕಾರಣ ಗಳು ಇವು 1) ಅವರು ಗಮಕವನ್ನು ಶ್ರದ್ಧೆಯಿಂದಲೂ ಪ್ರೀತಿಯಿಂದಲೂ ಅಂಗೀ ಕರಿಸಿ ತದೇಕ ಧ್ಯಾನದಿಂದ ನಿರ್ವಹಿಸುವುದು 2) ಸಾಹಿತ್ಯದ ಸ್ವಾರಸ್ಯವನ್ನು ಮೊಟಕುಗೊಳಿಸದೆ, ರಾಗವನ್ನೇ ಮೊಟಕುಗೊಳಿಸಿ ಶ್ರೋತೃಗಳಿಗೆ ನಿಜವಾದ ಆನಂದ ನನ್ನು ಒದಗಿಸುವುದು 3) ತಮ್ಮ ಶಾರೀರವನ್ನು ಸರಿಯಾದ ಹದದಲ್ಲಿ–ಸ್ರುತಿ ಮಾಡಿಟ್ಟ ತಂಬೂರಿಯಂತೆ-ಇಟ್ಟುಕೊಂಡು ಹಾಡಿನಲ್ಲಿ ಲವಲವಿಕೆಯನ್ನು ಬೆರೆಸುವುದು. 4) ಕವಿಯ ಆಶಯವನ್ನೂ ಸ್ಪಷ್ಟಪಡಿಸಲು ಸ್ವಾರಸ್ಯವಾದ ಭಾಗಗಳಿಗೆ ಒತ್ತುಕೊಟ್ಟು ದ್ವಿರುಕ್ತಿಯಿಂದ ವಾಚಿಸುವುದು; ಹೀಗೆ ಸಾಹಿತ್ಯ, ಸಂಗೀತ, ಭಾವಪ್ರಕಾಶನ ಇವುಗಳ ಸಾಮರಸ್ಯ; ಈ ಕಾರಣದಿಂದ ಶಕುಂತಲಾಬಾಯಿಯವರ ಗಮಕ ಎಂದಿಗೂ ನೀರಸ ವಾಗದೆ ಕ್ಷಣ ಕ್ಷಣವೂ ಹೊಸ ಹೊಸದಾಗಿ ರಮಣೀಯವಾಗುತ್ತ ಹೋಗುವುದು. ಈಚಿನ ದಿನಗಳಲ್ಲಿ ಅವರು ನಮ್ಮ ಕಾಲದ ಅನೇಕ ಪ್ರಸಿದ್ಧ ಕವಿಗಳ ಕೃತಿಗಳನ್ನು ಧ್ವನಿಮುದ್ರಣ ಸಹ ಮಾಡುತ್ತಿದ್ದಾರೆ. ಈ ಕಾರಣದಿಂದ ಸಹ, ಜನತೆಯಲ್ಲಿ ಉತ್ತಮ ಸಾಹಿತ್ಯ ಪ್ರಚಾರ ಮತ್ತು ಅಭಿರುಚಿ ಬೆಳೆಯಲು ಸಹಾಯಕವಾಗುತ್ತದೆ.

ಒಂದು ಸಂದರ್ಭದಲ್ಲಿ ಅವರು ಪಾಂಡುರಂಗರಾಯರ ಜೊತೆ ಗೊರೂರಿಗೂ ಬಂದರು. ಮೊದಲು ಕುಮಾರವ್ಯಾಸಭಾರತದ–ಒಂದು ಪ್ರಸಂಗ ವಾಚನವಾಯಿತು. ಶ್ರೋತ್ರಗಳು ಅಷ್ಟಕ್ಕೆ ಬಿಡಲಿಲ್ಲ. ಅನಂತರ ಜೈಮಿನಿಭಾರತದ ಒಂದು ಪ್ರಕರಣದ ವಾಚನವಾಯಿತು. ಮುಂದೆ ಹರಿಶ್ಚಂದ್ರ ಕಾವ್ಯದ ಒಂದು ಭಾಗವನ್ನೂ ವಾಚಿಸಿದರು. ಶ್ರೋತೃಗಳಿಗೆ ಇನ್ನೂ ಬೇಕು. ಆದರೆ ಸಮಯದ ಪ್ರಜ್ಞೆಯೂ ಬೇಕಲ್ಲ. ಶಕುಂತಲಾ ಬಾಯಿಯವರು ಮತ್ತೊಮ್ಮೆ ಬರುವುದಾಗಿ ಹೇಳಿ ವಾಚನವನ್ನು ಮುಕ್ತಾಯ ಗೊಳಿಸಿದರು.

ಸಂಸಾರ ನಿರ್ವಹಣೆ ನಡೆಸಿಕೊಂಡು, ಸಾಹಿತ್ಯಪ್ರಚಾರಕ್ಕಾಗಿ ಕನ್ನಡನಾಡಿನಲ್ಲಿ ಶ್ರೀಮತಿ ಶಕುಂತಲಾಬಾಯಿಯವರಷ್ಟು ಸಂಚಾರಮಾಡಿದವರು ಬಹಳ ಜನರಿಲ್ಲ. ಅವರು ನಾಡಿನ ಮೂಲೆ ಮೂಲೆಗೂ ಹೋಗಿ ಕಾವ್ಯವಾಚನ ಮಾಡಿದ್ದಾರೆ. ಅನೇಕ ಗಮಕಿಗಳ ಗೋಷ್ಠಿಗಳು ಮತ್ತು ಸಮ್ಮೇಳನಗಳಿಗೆ ಅಧ್ಯಕ್ಷರಾಗಿದ್ದಾರೆ. ಹೊಸ ಕವಿತೆಗಳ ವ್ಯಾಸಂಗ, ಅವುಗಳನ್ನು ಗಮಕಕ್ಕೆ ಅಳವಡಿಸುವ ತಂತ್ರಗಳನ್ನು ಇಂದೂ ಅಭ್ಯಾಸ ಮಾಡುತ್ತಾರೆ.

ಈಚಿನ ದಿನಗಳಲ್ಲಿ, ಶ್ರೀಮಾನ್ ಪಾಂಡುರಂಗರಾಯರೂ, ಪತ್ನಿಯವರ ವಾಚನಕ್ಕೆ ವ್ಯಾಖ್ಯಾನ ಮಾಡುವ ಧೈರ್ಯವನ್ನು ಗಳಿಸಿದ್ದಾರೆ. ಶ್ರೀಮಾನ್ ಪಾಂಡು ರಂಗರಾಯರು ತಮ್ಮ ಸ್ವಶಕ್ತಿಯಿಂದಲೂ ಪ್ರತಿಭಾನ್ವಿತರು. ಉತ್ತಮ ಲೇಖಕರು.

ಮಕ್ಕಳ ಸಾಹಿತ್ಯಕ್ಕೆ ಗಣನೀಯವಾದ ಸೇವೆಸಲ್ಲಿಸಿದ್ದಾರೆ. ಆದರ್ಶಶಿಕ್ಷಕರಾಗಿ ಪ್ರಶಸ್ತಿಯನ್ನೂ ಗಳಿಸಿದ್ದಾರೆ. ಹೆಂಡತಿಗೂ ಪ್ರಶಸ್ತಿ, ಗಂಡನಿಗೂ ಪ್ರಶಸ್ತಿ. ಹೀಗೆ ಇದೂ ಒಂದು ಅಪೂರ್ವ ಸುಯೋಗ. ನಮ್ಮನಾಡಿನ ಹಿರಿಯ ಸಾಹಿತಿ, ವಿದ್ವಾಂಸ, ಸಾಹಿತ್ಯ ಭೀಷ್ಮರು (ಡಿ.ವಿ.ಜಿ) ಶಕುಂತಲಾಬಾಯಿಯವರ ಕಂಠಮಾಧುರ್ಯವನ್ನೂ ಗಾಯನ ಕೌಶಲವನ್ನೂ ಸಾಹಿತ್ಯಾಭ್ಯಾಸವನ್ನೂ ಪದೇ ಪದೆ ಪ್ರಶಂಸಿಸುತ್ತಿದ್ದರು.

ಈ ಸಾಹಿತ್ಯಪರಸ್ಪರಾವಲಂಬಿ ದಂಪತಿಗಳು ದೀರ್ಘಕಾಲ ನಮ್ಮ ನಡುವೆ ದೃಢಕಾಯರಾಗಿ ಬಾಳುತ್ತ, ತಮ್ಮ ಕಂಠಶ್ರೀಯಿಂದ ನಮ್ಮ ಸಂತೋಷವನ್ನು ಹೆಚ್ಚಿಸುತ್ತಿರಲಿ.

ಉಭಯ ವಿದ್ಯಾ ಪರಿಣತೆ

ಪು. ತಿ. ನರಸಿಂಹಾಚಾರ್

ಮೊನ್ನೆ ಮೊನ್ನೆ ಶ್ರೀಮತಿ ಶಕುಂತಲಾಬಾಯಿ ಅವರ ಗಮಕವನ್ನು ಕೇಳಿದಾಗ ಅವರ ಕಂಠಗುಣ ನನ್ನನ್ನು ಬೆರಗುಪಡಿಸಿತು. ಅದು ತನ್ನ ಎಳೆ ಹರೆಯದ ಕಾಂತಿಯನ್ನು ಕಳೆದುಕೊಂಡಿಲ್ಲ. ಇದೇನೂ ಸಾಮಾನ್ಯವಾದ ವರವಲ್ಲ. ದೈವಾನುಗ್ರಹದಿಂದ ಪ್ರಾಪ್ತವಾಗತಕ್ಕದ್ದು. ಆ ಸ್ವರಗಳ ರೇಕು ಮತ್ತು ರವೆ ನನ್ನನ್ನು ನಲವತ್ತ ನಾಲ್ಕು ವರ್ಷಗಳ ಹಿಂದಕ್ಕೊಯ್ಯುತ್ತವೆ. ದಿ|| ಶ್ರೀಮಾನ್ ಬಿಂದೂರಾಯರು ಕನ್ನಡ ಸಾಹಿತ್ಯ ಪರಿಷನ್ಮಂದಿರದಲ್ಲಿ ಗಮಕ ಕಲಾ ಶಿಕ್ಷಣವನ್ನು ಪ್ರಾರಂಭಿಸಿದ್ದರು. ಶ್ರೀಮತಿಯವರು ಅವರ ಮೊದಲ ಶಿಷ್ಯ ವರ್ಗಕ್ಕೆ ಸೇರಿದವರೆಂದು ನನಗೆ ನೆನಪು. ಶ್ರೀಮಾನ್ ಪಾಂಡುರಂಗರಾಯರಿಗೆ ಶ್ರೀಮತಿ ಶಕುಂತಲಾಬಾಯಿಯವರು ದೊರೆತದ್ದು ಅವರ ಮಹಾಭಾಗ್ಯ. ಅವರಿಬ್ಬರದೂ ಅನುಕೂಲ ದಾಂಪತ್ಯ. ಇಬ್ಬರೂ ಸಜ್ಜನರು, ಆದುದರಿಂದಲೇ ಈ ಸಂತೋಷ ಜನಕರು. ಸಹಜವಿನಯ, ಸೌಜನ್ಯ ಹಾಗೂ ರಸಿಕತೆ ಇಬ್ಬರಲ್ಲೂ ಮನೆಮಾಡಿಕೊಂಡಿವೆ. ಅನೇಕ ಕಷ್ಟನಷ್ಟಗಳಿಗೆ ಒಳಗಾದರೂ ಅವರ ಅಂತಃಕರಣವೂ ಹಸನ್ಮುಖವೂ ನಲುಗಿಲ್ಲ. ಕಂದದ ಸಂತೋಷ ಅವರಲ್ಲಿ ಮನೆಮಾಡಿಕೊಂಡಿದೆ. ಇಬ್ಬರೂ ಅತಿಥಿಪ್ರಿಯರು. ಗೃಹಿಣಿಯಾಗಿ ಮನೆಯನ್ನೂ ಕಲಾಧರೆಯಾಗಿ ಕಲೆಯನ್ನೂ ಬೆಳಗುವುದು ಕಡುಕಷ್ಟದ ಕೆಲಸ. ಶ್ರೀಮತಿಯವರು ಈ ತಪಸ್ಸುಗಳಲ್ಲಿ ಸಿದ್ಧಿಗಳನ್ನು ಪಡೆದಿದ್ದಾರೆ. ಇದು ಸಾಮಾನ್ಯವಾದ ವಿಜಯವಲ್ಲ. ನನ್ನನ್ನು ಇವರಿಬ್ಬರೂ ತಮ್ಮ ಆತ್ಮೀಯ ಬಳಗಕ್ಕೆ ಸೇರಿಸಿಕೊಂಡಿರುವುದು ನನಗೆ ಬಹು ಸಂತೋಷವನ್ನು ತಂದಿದೆ. ಅವರ ಮನೆಯಲ್ಲಿ ಆಗಾಗ ಸೇರುತ್ತಿದ್ದ ಸರಸಗೋಷ್ಠಿಗಳಲ್ಲಿ ನಾನು ಪಾಲುಗೊಂಡಿದ್ದೇನೆ. ಮಲ್ಲೇಶ್ವರದ ಗಾಂಧಿ ಸಾಹಿತ್ಯ ಸಂಘದವರು ನನಗೆ ಅರವತ್ತು ತುಂಬಿದಾಗ ಒಂದು ಅಭಿನಂದನ ಸಮಾರಂಭವನ್ನು ಏರ್ಪಡಿಸಿದ್ದರು. ಆ ಸಭೆಯಲ್ಲಿ ಶ್ರೀಮತಿಯವರು ನನ್ನ ಕೆಲವು ಕವನಗಳನ್ನು ಹಾಡಿದರಲ್ಲದೆ ಒಂದು ಗಂಧದ ಕರಂಡೆಯನ್ನೂ ಕೊಟ್ಟರು. ಈ ಪ್ರೀತಿಯ ಕುರುಹು ನನಗೆ ಪದೇ ಪದೇ ಈ ದಂಪತಿಗಳ ಆದರವನ್ನು ನೆನಪಿಗೆ ತಂದು ಉಲ್ಲಾಸಗೊಳಿಸುತ್ತದೆ. ಶ್ರೀಮಾನ್ ಪಾಂಡುರಂಗರಾಯರು ಕೆಲವು ಕಾಲ ಒಂದು ಮಾಸಪತ್ರಿಕೆಯನ್ನು ನಡೆಸುತ್ತಿದ್ದರು. ಅದರ ಒಂದು ಸಂಚಿಕೆಯಲ್ಲಿ ಗಾಂಧೀಜಿಯವರನ್ನು ಪ್ರತೀಕಿಸುವ ನನ್ನ 'ನೆರಳು' ಎಂಬ ಪದ್ಯ ಮೊದಲು ಪ್ರಕಟವಾಗಿ ಆಮೇಲೆ ಸಹೃದಯರ ಮೆಚ್ಚುಗೆಯನ್ನು ಪಡೆಯಿತು. ಈ ಮೆಚ್ಚುಗೆಯ ಜತೆಗೆ ಇವರ ಮಮತೆ ಬೆರೆತಿದೆ.

ಶ್ರೀಮತಿಯವರು ಬಹುಶ್ರೇಷ್ಠ ಮಟ್ಟದ ಗಮಕಿಗಳು. ಈ ಕಾಲದ ಗಮಕಿಗಳೆಂದರೆ ಶ್ರೀಮಾನ್ ಬಿಂದೂರಾಯರು, ಕೃಷ್ಣಗಿರಿ ಕೃಷ್ಣರಾಯರು ಮತ್ತು ಕಳಲೆ ಸಂಪತ್ಕುಮಾರಾಚಾರ್ಯರು ತಟ್ಟನೆ ನೆನಪಿಗೆ ಬರುತ್ತಾರೆ. ಅವರ ಅನಂತರ ಶ್ರೀ ಕೆ.ಟಿ.

ರಾಮಸ್ವಾಮಯ್ಯಂಗಾರ್,ಶ್ರೀ ಬಿ.ಎಸ್.ಕೌಶಿಕ್, ಶ್ರೀ ರಾಘವೇಂದ್ರರಾಯರು ಮತ್ತು ಶ್ರೀಮತಿ ಶಕುಂತಲಾಬಾಯಿ ಇವರು ನೆನಪಿಗೆ ಬರುತ್ತಾರೆ. ಒಬ್ಬೊಬ್ಬರದು ಒಂದೊಂದು ವೈಶಿಷ್ಟ್ಯ. ಇವರ ಪೈಕಿ ದಿ|| ಕಳಲೆ ಸಂಪತ್ಕುಮಾರಾಚಾರ್ಯರದು ಅದ್ಭುತ ಕಂಠ. ಅವರು ಶಾಸ್ತ್ರೀಯ ಸಂಗೀತವನ್ನು ಕಲಿಯದೇ ಇದ್ದುದು ನಾಡಿಗೆ ಒಂದು ತರಹದಲ್ಲಿ ನಷ್ಟ ಎನ್ನಬೇಕು. ಅವರು ಪ್ರತಿಪದ್ಯಕ್ಕೂ ಒಂದೊಂದು ರಾಗವನ್ನು ಹಾಕಿ ಹಾಡುತ್ತಿದ್ದರು. ಅದು ಈಗ ಬಹುವಾಗಿ ಪ್ರಚಲಿತವಾಗಿದೆ. ನನ್ನ ದೃಷ್ಟಿಯಲ್ಲಿ ಇದು ಒಂದು ರಾಗದ ವಿಶಿಷ್ಟ ಸಂಚಾರಗಳನ್ನು ನಿರ್ವಹಿಸಲಾಗದ ದೌರ್ಬಲ್ಯವನ್ನು ಸೂಚಿಸುತ್ತದೆ. ಒಂದು ರಾಗದಲ್ಲಿ ಐದಾರು ಪದ್ಯಗಳನ್ನಾದರೂ ಪುನರಾವರ್ತನವಿಲ್ಲದೆ ಹಾಡಬೇಕು. ಅದಕ್ಕೆ ಆ ರಾಗದ ಮಧ್ಯಮ ಕಾಲದ 'ತಾನಂ' ನಿಂದ ಗಮಕದ ಕಲೆಯ ಜ್ಞಾನ ಬೇಕಾಗುತ್ತದೆ. ಈ ಕಲೆ ಸುಲಭವಾಗಿ ಕರಗತವಾಗುವುದಿಲ್ಲ. ಸಂಗೀತ ಮತ್ತು ಸಾಹಿತ್ಯ ಎರಡರಲ್ಲೂ ಪರಿಶ್ರಮ ಹೊಂದಿರುವವರಿಂದ ಗಮಕ ಕಲೆಗೆ ತುಂಬ ಕಳೆ ಬರುತ್ತದೆ. ಶ್ರೀಮತಿಯವರ ಗಮಕಕಲೆ ಈ ಕಳೆಯನ್ನು ಪಡೆದಿರುವುದರಿಂದಲೇ ಅದು ಅತ್ಯಾಕರ್ಷಕವಾಗಿದೆ. ಈಗ ನಮ್ಮ ಜನದ ಮನಸ್ಸಿನಿಂದ ದೂರವಾಗುತ್ತಿರುವ ಪ್ರಾಚೀನ ಕಾವ್ಯಗಳು ಉಳಿಯಬೇಕಾದರೆ ದೈವದತ್ತವಾದ ಕಂಠಶ್ರೀಯುಳ್ಳ ಉಭಯ ವಿದ್ಯಾಪರಿಣತರಾದ ಗಮಕಿಗಳಿಂದ ಮಾತ್ರ ಅದು ಸಾಧ್ಯ. ಈ ದಿಸೆಯಲ್ಲಿ ಶ್ರೀಮತಿಯವರ ಸೇವೆ ಪ್ರಾಚೀನ ಹಾಗೂ ಅರ್ವಾಚೀನ ಕಾವ್ಯಗಳಿಗೆ ದೊರೆತಿರುವುದು ತುಂಬ ಅಭಿಮಾನಾಸ್ಪದವಾದ ಸಂಗತಿ. ಅವರ ಈ ಸಾರಸ್ವತಕೈಂಕರ್ಯ ತುಂಬ ದೊಡ್ಡದು. ವಯಸ್ಸು ಹೆಚ್ಚಾಗುವುದರಿಂದ ಶರೀರಕ್ಕೊದಗುವ ದೌರ್ಬಲ್ಯ ಅವರ ಕಂಠದ ಮಾಧುರ್ಯಕ್ಕೂ ಗಮಕಕಲೆಗೂ, ಅದನ್ನು ಪ್ರಕಾಶಪಡಿಸುವ ಉತ್ಸಾಹಕ್ಕೂ ತಗುಲದಿರಲೆಂದು ನಾನು ಮನಃಪೂರ್ವಕವಾಗಿ ಹಾರೈಸುತ್ತೇನೆ.

ಶ್ರೀಮತಿಯವರಿಗೂ ಅವರ ರಸಿಕ ಸಹೃದಯಪತಿ ಪಾಂಡುರಂಗರಾಯರಿಗೂ ಅವರ ಕುಟುಂಬಕ್ಕೂ ದೇವರು ಯಾವಾಗಲೂ ಒಲಿದಿರಲಿ. ಶ್ರೀಮತಿಯವರಿಗೆ ನನ್ನ ಹಾರ್ದಿಕ ಅಭಿನಂದನೆಗಳು.

ಆದರ್ಶ ದಂಪತಿ

ಕೆ. ವೆಂಕಟರಾಮಪ್ಪ

ಕನ್ನಡ ಕಾವ್ಯವಾಚನಕಲೆಯಲ್ಲಿ ನಿಷ್ಣಾತರಾಗಿ ಆ ಕಲೆಯ ಸೇವೆಯನ್ನೇ ಜೀವನ ಧ್ಯೇಯವಾಗಿಸಿಕೊಂಡು ನಿರಂತರವಾಗಿ ತಮ್ಮ ಕಲಾಕೃಷಿಯನ್ನು ನಿಷ್ಠೆಯಿಂದ ನಡೆಸಿ ಕೀರ್ತಿವಂತರಾದ ಕೆಲವೇ ಮಂದಿಯಲ್ಲಿ ಶ್ರೀಮತಿ ಶಕುಂತಲಾಬಾಯಿಯವರು ಒಬ್ಬರು. ಸಾಂಪ್ರದಾಯಿಕವಾದ ಶೈಲಿಯಲ್ಲಿ ಭಾರತವಾಚನಮಾಡುವುದನ್ನು ಇವರ ಆಚಾರ್ಯ ರಾದ ಶ್ರೀಬಿಂದೂರಾಯರಿಂದ ಇವರು ಕಲಿತುಕೊಂಡರು. ಗುರುಗಳ ಉಪದೇಶ ಒಂದು ಅಂಶವಾದರೆ ಶಿಷ್ಯರು ಸ್ವಂತ ಚಿಂತನೆ, ಸಾಧನೆಗಳಿಂದ ಬೆಳೆಸಿಕೊಳ್ಳುವುದು ನಾಲ್ಕು ಪಾಲೆಂದು ಹೇಳುವುದು ವಾಡಿಕೆ. ಆ ವಾಡಿಕೆಯ ಮಾತು ಶ್ರೀಮತಿಯವರ ಸಾರ್ಥಕ ಜೀವನದಲ್ಲಿ ಬಹಳ ಚೆನ್ನಾಗಿ ನಿದರ್ಶನಕ್ಕೆ ಬಂದಿದೆ. ಕನ್ನಡ ಭಾರತವನ್ನು ಮಾತ್ರ ವಲ್ಲದೆ ಇತರ ಷಟ್ಪದಿ ಕಾವ್ಯಗಳನ್ನೂ ಇವರು ಸ್ವಾಧೀನಪಡಿಸಿಕೊಂಡು ನಾಡಿನ ನಾನಾಭಾಗಗಳಲ್ಲಿ ವಾಚನಮಾಡಿ ವಿಶಿಷ್ಟವಾದ ಜನಮನ್ನಣೆಗಳಿಸಿಕೊಂಡರು. ಅಷ್ಟ ರಿಂದ ತೃಪ್ತರಾಗದೆ ಶ್ರೀಮತಿಯವರು ಚಂಪೂಕಾವ್ಯಗಳನ್ನೂ ಸಾಂಗತ್ಯ ಕೃತಿಗಳನ್ನೂ ಕ್ರಮವಾಗಿ ಅಭ್ಯಾಸಮಾಡಿ ವಾಚನಮಾಡಿ ಕಾವ್ಯರಸಿಕರ ಪ್ರಶಂಸೆಗೆ ಪಾತ್ರರಾದರು.

ಈಗ ಕವಿ ಕುವೆಂಪುರವರ ಶ್ರೀ ರಾಮಾಯಣ ದರ್ಶನಂ ಎಂಬ ಮಹಾಛಂದಸ್ಸಿನ ಆಧುನಿಕ ಕಾವ್ಯ ರತ್ನವನ್ನು ಶ್ರೋತೃಗಳೇ ಅಲ್ಲದೆ ಕುವೆಂಪುರವರೇ ಹಾರ್ದಿಕವಾಗಿ ಮೆಚ್ಚಿಕೊಳ್ಳುವಂತೆ ವಾಚನ ಮಾಡಿದ ಯಶಸ್ಸು ಶ್ರೀಮತಿಯವರದು. ಇಂಥ ವಿವಿಧ ಕಾವ್ಯಗಳ ವಾಚನ ಮಾಡಿ ವಿದ್ವಜ್ಜನರ ಮೆಚ್ಚುಗೆ ಮನ್ನಣೆಗಳನ್ನು ಪಡೆದ ಶ್ರೀಮತಿಯ ವರಿಗೆ ಕರ್ನಾಟಕ ಸರ್ಕಾರದವರೂ ಸಾಹಿತ್ಯ ಅಕಾಡೆಮಿಯವರೂ ಪ್ರಶಸ್ತಿ ನೀಡಿದ್ದು ಆಶ್ಚರ್ಯವೇನೂ ಅಲ್ಲ.

ಶ್ರೀಮತಿ ಶಕುಂತಲಾಬಾಯಿಯವರ ಈ ಕಲಾ ಸಾಧನೆ, ಸಿದ್ಧಿ, ಸೇವೆಗಳು ಈ ಉನ್ನತಸ್ಥಾಯಿಗೇರುವುದಕ್ಕೆ ಅವರ ಜೀವನಭಾಗಸ್ವಾಮಿಗಳಾದ ಶ್ರೀ ಬಿ. ಎಸ್. ಪಾಂಡುರಂಗರಾಯರ ಸೌಹಾರ್ದ ಸಹಕಾರ ಬೆಂಬಲಗಳೂ ಕಾರಣವೆಂದು ಹೇಳಿದರೆ ತಪ್ಪಲ್ಲವಷ್ಟೆ. ಸಾಮಾನ್ಯವಾಗಿ 'ಶಕುಂತಲಾಬಾಯಿ ಪಾಂಡುರಂಗರಾಯರು' ಎಂದು ಹೇಳುವುದೇ ವಾಡಿಕೆ. ಈ ಇಬ್ಬರಲ್ಲಿ ಯಾರೊಬ್ಬರ ಹೆಸರನ್ನೂ ಪ್ರತ್ಯೇಕವಾಗಿ ಹೇಳುವ ಪದ್ಧತಿಯಿಲ್ಲ. ಹಾಗೆ ಹೇಳಿದರೆ ನಮ್ಮೆಲ್ಲನೇಕರಿಗೆ ವ್ಯಕ್ತಿ ಪರಿಚಯವೇ ಸರಿ ಯಾಗಿ ನೆನಪಾಗುವುದಿಲ್ಲ. ಕಾವ್ಯಪ್ರಚಾರ, ಗಮಕ ಕಲಾಸೇವೆ. 'ಮಕ್ಕಳಮಂಟಪ' ವನ್ನು ನಿರ್ವಹಿಸುವ ಕೆಲಸ–ಇವೆಲ್ಲವುಗಳಲ್ಲಿಯೂ ಈ ದಂಪತಿಗಳಿಬ್ಬರೂ ಜತೆಜತೆಯಾಗಿ ಕೆಲಸಮಾಡಿ 'ತನುವೆರಡು ಮನವೊಂದು' ಎಂಬುದನ್ನು ನಮ್ಮೆಲ್ಲರಿಗೂ ಮನವರಿಕೆ ಮಾಡಿಕೊಟ್ಟಿದ್ದಾರೆ. ಈ ಇಬ್ಬರೂ ಸೇರಿ 'ಅರ್ಧನಾರೀಶ್ವರ'ರಾಗಿದ್ದಾರೆಂದು ಹೇಳಿದರೆ

ಅತಿಶಯೋಕ್ತಿಯೇನೂ ಆಗದು. ಈ ಆದರ್ಶ ದಂಪತಿಗಳ ಕಲಾಮಯ ಜೀವನ ಸುಖಮಯವಾಗಲೆಂದು ಹಾರೈಸುತ್ತೇನೆ.

ಇಂದು ಶ್ರೀಮತಿ ಶಕುಂತಲಾಬಾಯಿಯವರಿಗೆ ಷಷ್ಟಿಪೂರ್ತಿಮಹೋತ್ಸವ ನಡೆಯುತ್ತಿದೆ. ಶ್ರೀಪಾಂಡುರಂಗರಾಯರು ತಮ್ಮ ಷಷ್ಟಿಪೂರ್ತಿಯಾದುದನ್ನು ನನಗೆ ತಿಳಿಸಿದ ಹಾಗೆ ನೆನಪಿಲ್ಲ. ಅವರು ಈಗ ಶ್ರೀಮತಿಯವರೊಡನೆ ಷಷ್ಟಿಪೂರ್ತಿಯನ್ನು ಮಾಡಿಕೊಳ್ಳುತ್ತಿರುವುದು ಬಹಳ ಸಂತೋಷದ ಸಂಗತಿ. ಶ್ರೀಮತಿಶಕುಂತಲಾಬಾಯಿಯವರಿಗೆ ಆಯುರಾರೋಗ್ಯಭಾಗ್ಯಗಳನ್ನೂ ಅಕ್ಷಯವಾದ ಸೌಭಾಗ್ಯವನ್ನೂ ಕರುಣಿಸಲೆಂದು ಶ್ರೀ ಗದುಗಿನ ವೀರನಾರಾಯಣಸ್ವಾಮಿಯನ್ನು ಪ್ರಾರ್ಥಿಸಿಕೊಳ್ಳುತ್ತೇನೆ.

ಗಮಕ ಕೋವಿದೆ

ರಂ. ಶ್ರೀ. ಮುಗಳಿ

ವಾಲ್ಮೀಕಿ ರಾಮಾಯಣವನ್ನು ಕುಶಲವರು ಹೃದಯಂಗಮವಾಗಿ ಹಾಡಿದ ಕಾಲದಿಂದ ಈವರೆಗೆ ಕಾವ್ಯಗಾಯನ ಕಲೆ ನಮ್ಮ ದೇಶದಲ್ಲಿ ಪರಂಪರೆಯಾಗಿ ನಡೆದು ಬಂದಿದೆ. ಕುಶಲವರು ಇದನ್ನು ಪ್ರಾರಂಭ ಮಾಡಿದವರೆಂಬುದನ್ನು ಸೂಚಿಸಲೋ ಏನೋ ಕುಶೀಲವ ಅಂದರೆ ಕಾವ್ಯಗಾಯಕ ಎಂಬ ಪದವು ರೂಢಿಯಲ್ಲಿದೆ. ಕನ್ನಡನಾಡಿನಲ್ಲಿ ಸಾವಿರಾರು ವರ್ಷದಿಂದ ಒಂದು ವಿಶಿಷ್ಟ ರೀತಿಯಲ್ಲಿ ವಿಶಿಷ್ಟ ಪರಿಭಾಷೆಯಿಂದ ಈ ಪರಂಪರೆ ಹರಿಗೆಡದೆ ಉಳಿದುಕೊಂಡಿದೆ, ಜನಮನದಲ್ಲಿ ಉತ್ತಮ ಸಂಸ್ಕಾರಗಳನ್ನು ಬಿತ್ತಿದೆ. ಕಾವ್ಯವಾಚನ ಅಥವಾ ಗಾಯನದ ವಿಶಿಷ್ಟ ರೀತಿಗೆ ಗಮಕ ಎಂಬ ಪದವು ಕನ್ನಡದಲ್ಲಿ ರೂಢವಾಗಿದೆ, ಗಮಕವನ್ನು ಮಾಡುವವರು ಗಮಕಿಗಳು ಎಂಬ ಪದವು ಸಹ ಪ್ರಾಚೀನವಾದದ್ದು. ಉದಾಹರಣೆಗೆ ಪಂಪಭಾರತದಲ್ಲಿ 'ಕವಿ ಗಮಕಿ ವಾದಿವಾಗ್ಮಿ| ಪ್ರವರರ ಪಂಡಿತರ ನೆಗಳ್ದ ಮಾತಱಿವರಸ|| ಬ್ಬವದವರೊಡನಂತೊಸೆದ| ನ್ನವಾಸದೋಲಗದೊಳಿರ್ದ ನಾಗಳ್ ಹರಿಗಂ' || (೩-೮೦) ಎಂದು 'ಮುಂದೆ ಮೋನಕೆ ಸರಸ್ವತಿ ಬಾಯ್ದೆಱೆದಂತೆ ಪಾಡಿದಳ್' (೭-೮೮) ಎಂದೂ ಬಣ್ಣಿಸಲಾಗಿದೆ. ಪಂಪನಿಂದ ತಿರುಮಲಾರ್ಯನವರೆಗೆ ಕನ್ನಡ ಕಾವ್ಯಗಳಲ್ಲಿ, ಶಿಲಾಶಾಸನಗಳಲ್ಲಿ ಗಮಕಕಲೆಯ ಮತ್ತು ಗಮಕಿಗಳ ವರ್ಣನೆಗಳು ಹೇರಳವಾಗಿ ದೊರೆಯುತ್ತವೆ.

ಇಂಥ ಈ ಪರಂಪರೆಗೆ ಆಧುನಿಕ ಕಾಲದಲ್ಲಿ ತಮ್ಮ ಕೊಡುಗೆಯನ್ನು ನೀಡಿ ಹೆಸರಾದವರಲ್ಲಿ ಶ್ರೀಯುತ ಪಾಂಡುರಂಗರಾಯರ ಧರ್ಮಪತ್ನಿಯಾದ ಶ್ರೀಮತಿ ಶಕುಂತಲಾಬಾಯಿಯವರು ಒಬ್ಬರು. ಗಮಕಕಲೆಯಲ್ಲಿ ಪರಿಣತರಾಗಲು ಸಂಗೀತಸಾಧನೆ, ಸಾಹಿತ್ಯ ಸಂಸ್ಕಾರ ಮತ್ತು ಸಂಗೀತ-ಸಾಹಿತ್ಯಗಳಲ್ಲಿ ಸಮತೋಲನಭಾವ ಇವು ಅವಶ್ಯಕ ಗುಣಗಳು. ಇವನ್ನು ಅವರು ಭಾರತ ಬಿಂದುರಾಯರ ಶಿಷ್ಯೆಯಾಗಿ ನಿಷ್ಠೆಯಿಂದ ವ್ಯಾಸಂಗ ಮಾಡಿ ಸಂಪಾದಿಸಿರು. ಕಳೆದ ನಾಲ್ಕೈದು ದಶಕಗಳಲ್ಲಿ ಕರ್ನಾಟಕದ ಎಲ್ಲ ಭಾಗಗಳ ಸಭೆ-ಸಮ್ಮೇಳನಗಳಲ್ಲಿ ತಮ್ಮ ಸುಸ್ವರ ಕಂಠದಿಂದ ಕನ್ನಡ ಕಾವ್ಯಗಳನ್ನು ಗಮಕ ಪದ್ಧತಿಯಿಂದ ಓದಿ ಕನ್ನಡಿಗರನ್ನು ತಣಿಸಿದ್ದಾರೆ, ಕಾವ್ಯಾಭಿರುಚಿಯನ್ನು ಬೆಳಸಿದ್ದಾರೆ. ಕುಮಾರವ್ಯಾಸ ಭಾರತವನ್ನು ರಸಾನುಗುಣವಾಗಿ ರಾಗಸಂಯೋಜನೆ ಮಾಡಿ ಜನಕ್ಕೆ ಅರ್ಥವಾಗುವಂತೆ ರುಚಿಯಾಗುವಂತೆ ಅದೆಷ್ಟೋ ಸಲ ಓದಿದ್ದಾರೆ, ಕುಮಾರವ್ಯಾಸನ ಅದ್ಭುತ ಪ್ರತಿಭೆಯ ಮತ್ತು ಪ್ರಾಸಾದಿಕವಾಣಿಯ ದರ್ಶನವನ್ನು ಮಾಡಿಸಿಕೊಟ್ಟಿದ್ದಾರೆ. ಹಳಗನ್ನಡ-ನಡುಗನ್ನಡಗಳಲ್ಲಿಯ ಇತರ ಕೆಲವು ಪ್ರಸಿದ್ಧ ಕೃತಿಗಳಿಂದ ಆಯ್ದ ಭಾಗಗಳನ್ನು ಅಷ್ಟೇ ತನ್ಮಯತೆಯಿಂದ ಓದಿದ್ದಾರೆ. ಹೊಸಕಾವ್ಯದ ವಾಚನವನ್ನೂ ಕೂಡ ಶ್ರೀಮತಿ ಶಕುಂತಲಾಬಾಯಿಯವರು ಆಸಕ್ತಿಯಿಂದ ಮಾಡಿದ್ದಾರೆ. ವಿಶೇಷತಃ

ಅವರು ಮಾಡಿರುವ ಕುವೆಂಪು ಅವರ 'ಶ್ರೀರಾಮಾಯಣದರ್ಶನಂ' ಎಂಬ ಮಹಾಕಾವ್ಯದ ವಾಚನವು ಕನ್ನಡ ಜನಕ್ಕೆ ಸುಪರಿಚಿತವಾಗಿದ್ದು ಮನ್ನಣೆಯನ್ನೂ ಮೆಚ್ಚುಗೆಯನ್ನೂ ಪಡೆದಿದೆ.

ಶ್ರೀಮತಿ ಶಕುಂತಲಾಬಾಯಿಯವರ ಪತಿಯಾದ ಶ್ರೀಪಾಂಡುರಂಗರಾಯರು ಸ್ವತಃ ಶಿಕ್ಷಕರೂ ಲೇಖಕರೂ ಆಗಿರುವುದಲ್ಲದೆ ಶಕುಂತಲಾಬಾಯಿಯವರ ಗಮಕಕಲೆಯ ಸಾಧನೆಗೆ ಉದ್ದಕ್ಕೂ ಉತ್ತೇಜನವೀಯುತ್ತ ಬಂದಿದ್ದಾರೆ. ಕೆಲವು ಸಲ ಅವರ ಕಾವ್ಯವಾಚನಕ್ಕೆ ಪೂರಕವಾಗುವಂತೆ ವ್ಯಾಖ್ಯಾನಗಳನ್ನು ಮಾಡಿದ್ದಾರೆ. ಹೀಗಾಗಿ ಇವರಿಬ್ಬರ ಸಂಮಿಳನವು ಕನ್ನಡಿಗರ ಸಾಂಸ್ಕೃತಿಕ ಜೀವನದಲ್ಲಿ ಹೆಮ್ಮೆಯಿಂದ ನೆನೆಯುವಂಥದಾಗಿದೆ. ಸಂಸಾರದಲ್ಲಿಯೂ ಸಾಹಿತ್ಯ ಪ್ರಚಾರದಲ್ಲಿಯೂ ಇವರು ಒಂದು ಅವಿಭಾಜ್ಯ ದಾಂಪತ್ಯವಾಗಿ ನಮ್ಮೆಲ್ಲರ ಚಿರಕೃತಜ್ಞತೆಗೆ ಪಾತ್ರರಾಗಿದ್ದಾರೆ. ತಮ್ಮ ಆಯುಷ್ಯದ ಅರುವತ್ತು ವರ್ಷಗಳು ತುಂಬಿ ಕೃತಾರ್ಥರಾಗಿರುವ ಶ್ರೀಮತಿ ಶಕುಂತಲಾಬಾಯಿಯವರಿಗೆ ಉದಂಡ ಆಯುರಾರೋಗ್ಯಗಳನ್ನು ನಾನು ಹೃತ್ಪೂರ್ವಕವಾಗಿ ಹಾರೈಸುತ್ತೇನೆ. ಅವರ ಜೀವನದ ಜತೆಗಾರರಾಗಿ ಅವರ ಜೀವನ ಸಂಗೀತಕ್ಕೆ ಗಮಕಸಾಧನೆಗೆ ಶ್ರುತಿ-ಸ್ಥಾನದಲ್ಲಿದ್ದು ಸಮರಸದ ಸಂಕೇತವಾಗಿರುವ ಶ್ರೀಪಾಂಡುರಂಗರಾಯರಿಗೂ ನನ್ನ ಶುಭಾಕಾಂಕ್ಷೆಗಳನ್ನು ಸಲ್ಲಿಸುತ್ತೇನೆ.

ನಾಗವರ್ಮನ 'ಕಾವ್ಯಾವಲೋಕನ'ದಲ್ಲಿ ಸಾರಾಲಂಕಾರಕ್ಕೆ ಉದಾಹರಣೆಯಾಗಿ ಕೆಳಗಿನ ಪದ್ಯ ಬಂದಿದೆ :

ಸಾರಂ ಸಂಸಾರದೊಳಬ।
ಲಾರತ್ನಂ ಸಾರಮಲ್ಲಿ ಜವ್ವನಮದಱಿಂದೊಳ್ ॥
ಸಾರಂ ಮಧುರಾಕಾರಂ।
ಸಾರಂ ಮತ್ತಂತವಕ್ಕಮನುಕೂಲರಸಂ ॥ ಪದ್ಯ ೬೬೦

ಸಂಸಾರದಲ್ಲಿ ಅಬಲಾರತ್ನವು ಸಾರವಾದದ್ದು ಅಂದರೆ ಅತಿಶಯಗುಣವುಳ್ಳದ್ದು. ಅದರಲ್ಲಿ ಯೌವನವು ಸಾರವಾದದ್ದು, ಅದರಲ್ಲಿಯೂ ಮಧುರಾಕಾರವು ಸಾರವಾದದ್ದು, ಅವೆಲ್ಲಕ್ಕಿಂತ ಅನುಕೂಲರಸವು ಸಾರವಾದದ್ದು ಎಂದು ಈ ಪದ್ಯದ ಅರ್ಥ.

ಸತಿಪತಿಯರ ಜೀವನದಲ್ಲಿ ಎಲ್ಲ ಉತ್ತಮವಾದದ್ದನ್ನು ಅಪೇಕ್ಷಿಸುವುದು ಸಹಜ. ಅದೆಲ್ಲವೂ ದೊರೆತು ಅದಕ್ಕೆ ಸಾರಭೂತವಾದ ಅನುಕೂಲರಸವು ದೊರೆಯದಿದ್ದರೆ ಸಂಸಾರವು ನಿಸ್ಸಾರವಾಗುತ್ತದೆ. ಅದೆಲ್ಲದರಲ್ಲಿ ಏನಾದರೂ ಕೊರತೆಯಿದ್ದು ಅನುಕೂಲ ರಸವಿದ್ದರೆ ಸಂಸಾರವು ಸಸಾರವಾಗುತ್ತದೆ, ಸುಗಮವಾಗುತ್ತದೆ. ಇಂಥ ಅನುಕೂಲರಸದಿಂದ ಕೂಡಿದವರಾಗಿ ತಮ್ಮ ಸಂಸಾರವನ್ನು ಸಮರಸವಾಗಿ ಮಾಡಿಕೊಂಡಿರುವ ಶ್ರೀಮತಿ ಶಕುಂತಲಾಬಾಯಿ ಮತ್ತು ಶ್ರೀ ಪಾಡುರಂಗರಾವ್ ಈ ದಂಪತಿಗಳಿಗೆ ಯಾವಾಗಲೂ ಒಳ್ಳೆಯದಾಗಲಿ ಎಂದು ಪ್ರಾರ್ಥಿಸುತ್ತೇನೆ.

ಪ್ರಯೋಗಶೀಲಗಮಕಿ

ರಾವ್‌ಬಹದ್ದೂರ್

ತನ್ನ ಭಾವನೆಗಳ ಅಭಿವ್ಯಕ್ತಿಗೆ ಕವಿಯು ಶಬ್ದಾಲಂಕಾರಗಳನ್ನು ಬಳಸಿಕೊಳ್ಳು ವನು. ಪದಸಮುಚ್ಚಯವು ಕವಿಯ ಭಾವನೆಗಳ ವಾಹಕಗಳಾಗಿ ಕವಿಯ ಮನೋ ಗತವನ್ನು ರಸಿಕನಿಗೆ ತಲುಪಿಸುವವು. ಆದರೆ ಸಂಗೀತವನ್ನು ಕವಿಯ ಭಾವನೆಗಳ ವಾಹಕವನ್ನಾಗಿ ಬಳಸುವ ಮೂಲಕ ಗಮಕಿಯು ಕಾವ್ಯದ ರಸಾನುಭವಕ್ಕೆಡೆ ಮಾಡಿ ಕೊಡುವನು. ಒಳ್ಳೇ ಗಮಕಿಯ ಬಾಯಿಗೆ ಸಿಕ್ಕ ಕಾವ್ಯವು ಕರ್ಣಾಮೃತವಾಗಿ ರಸಿಕನಿಗೆ ಕಾವ್ಯಾಮೃತ ಪಾನದ ಆನಂದಾನುಭವವನ್ನು ಒದಗಿಸುವದು.

ಒಂದು ಕಾವ್ಯವನ್ನು ನಾವು ಓದುವಾಗ ಆಗುವ ಆನಂದ ಬುದ್ಧಿಗಮ್ಯ. ಆದರೆ ಅದೇ ಕಾವ್ಯವನ್ನು ಗಮಕಿಯು ಹಾಡಿದ್ದು ಕೇಳಿದಾಗ ಆಗುವ ಆನಂದ ಹೃದಯಂಗಮ. ಅಂತಃಕರಣವನ್ನು ಅರಳಿಸಿ ಕಾವ್ಯದ ರಸಾನುಭವದಲ್ಲಿ ಮೈಮರೆಯಲು ಹಚ್ಚುವ ಅದ್ಭುತ ಶಕ್ತಿ ಸಂಗೀತದಲ್ಲಿರುವದನ್ನು ಗಮಕಿ ಅನುಭವಕ್ಕೆ ತಂದು ಕೊಡುವನು.

ಕವಿಯು ಬಳಸುವ ಶಬ್ದಗಳನ್ನು ಗಮಕಿಯು ರಾಗರಸದಲ್ಲಿ ಅದ್ದಿ ರಸಪಾಕವನ್ನಾ ಗಿಸಿ ಶ್ರೋತೃಗಳಿಗೆ ಕರ್ಣೇಂದ್ರಿಯದ ಮೂಲಕ ಅವನ ಭಾವಜೀವನವನ್ನು ತಟ್ಟುವ ಮೂಲಕ ಕಾವ್ಯದ ರಸಾನುಭವವು ಜನಸಾಮಾನ್ಯರಿಗೂ ಆಗುವಂತೆ ಮಾಡಬಲ್ಲನು. ಅಂತೆಯೇ ಕವಿ ಬಾಣಸಿಗನಾದರೆ ಗಮಕಿ ರಸಾಮೃತವಿಕ್ಕುವ ರಸಿಕರ ಸೇವಾನಿರತ ಸ್ವಯಂ ಸೇವಕನೆಂದು ಹೇಳಬಹುದು.

ರಸಿಕನಿಗೆ ಕವಿಯ ಭಾವ ತರಂಗಗಳನ್ನು ಅನುಭವಿಸುವ ಅವಕಾಶ ಕಲ್ಪಿಸಿ ಕೊಡುವ ಗಮಕಿಯ ಸ್ಥಾನ ಕವಿಗಿಂತ ಕೆಳಮಟ್ಟದ್ದು ಎಂದು ಹೇಳುವದು ಅವನ ಕಾರ್ಯದ ಮಹತಿಯನ್ನು ಕಡೆಗಣಿಸುವಂತಹದು.

ಕುಮಾರವ್ಯಾಸನ ಭಾರತವನ್ನು ಕನ್ನಡ ಗಮಕಿಗಳು ಕೈಗೆತ್ತಿಕೊಂಡು ಅದರ ರಸಾನುಭವದ ಅವಕಾಶವನ್ನು ಕನ್ನಡ ಬಲ್ಲ ಜನಸಾಮಾನ್ಯರಿಗೂ ಒದಗಿಸಿದ್ದು ಕನ್ನಡ ಸಾಹಿತ್ಯಕ್ಕೆ ಗಮಕಿಗಳು ಸಲ್ಲಿಸಿದ ಅಮೋಘ ಸೇವೆಯೇ ಸರಿ.

ಗಮಕ ಕಲೆಯು ಇತಿಹಾಸ ಕಾವ್ಯದ ಇತಿಹಾಸದೊಂದಿಗೆ ಹಾಸು ಹೊಕ್ಕಾಗಿರುವ ದೆಂದು ಹೇಳಬಹುದು. ೨೦ನೇ ಶತಮಾನದಲ್ಲಿ ನಾವು ಕಂಡಂತೆ ಭಾರತ ಬಿಂದೂರಾಯರು ಗಮಕ ಕಲೆಯ ಪ್ರಚಾರದ ಅಧ್ವರ್ಯುಗಳಾಗಿ ಈ ಕಲೆಯ ಪ್ರಸಾರಕ್ಕೆ ತಮ್ಮ ಜೀವನ ವನ್ನೇ ಮುಡಿಪು ಇಟ್ಟ ಮಹನೀಯರು. ಅವರ ಶಿಷ್ಯಗಣದಲ್ಲಿ ಶ್ರೀಮತಿ ಶಕುಂತಲಾ ಬಾಯಿ ಪಾಂಡುರಂಗರಾವ್ ಇವರು ತಮ್ಮ ಗುರುವಿನ ಆದರ್ಶವನ್ನು ಜನಪ್ರಿಯ ಗೊಳಿಸಲು ವಿಶೇಷ ಆಸ್ಥೆಯಿಂದ ದುಡಿದವರೆಂದು ಅಭಿಮಾನಪೂರ್ವಕ ಸ್ಮರಿಸಬಹು ದಾಗಿದೆ.

ಅವರು ಗಮಕ ಕಲೆಯನ್ನು ಕುಮಾರವ್ಯಾಸನ ಭಾರತ ವಾಚನಕ್ಕೆ ಬಳಸಿ ಕೊಂಡಂತೆ ತೊರವೆ ರಾಮಾಯಣ, ಕುವೆಂಪುರವರ ರಾಮಾಯಣ ದರ್ಶನಂ ಅಲ್ಲದೆ ಹಲವಾರು ಆಧುನಿಕ ಕವಿಗಳ ಕಾವ್ಯವಾಚನದಲ್ಲಿಯೂ ಬಳಸಿ ಕಾವ್ಯವಾಚನವು ಸಾರ್ಥಕವೆನಿಸಲು ಕಾವ್ಯಕ್ಕೆ ಗಮಕವು ಅನಿವಾರ್ಯ ಅಂಗವಾಗಿರಬೇಕೆಂಬುದನ್ನು ತಮ್ಮ ಸುಶ್ರಾವ್ಯ ಕಾವ್ಯವಾಚನದಿಂದ ಮನವಟ್ಟು ಮಾಡಿ ಕೊಟ್ಟಿರುವದು ಗಮಕ ಕಲೆಗೆ ಅವರು ಸಲ್ಲಿಸಿದ ವಿಶಿಷ್ಟ ಸೇವೆಯಾಗಿದೆ.

ದೇವರು ಅವರಿಗೆ ಒಳ್ಳೇ ಶಾರೀರವನ್ನು ದಯಪಾಲಿಸಿದ್ದು ಅವರ ಗಮಕ ಕಲಾಭಿವ್ಯಕ್ತಿಗೆ ಹೆಚ್ಚಿನ ಕಳೆಕಟ್ಟಲು ಕಾರಣವೆಂದು ಹೇಳಬಹುದು.

ಇನ್ನುಳಿದವರು ಮಾಡುವ ಕಾವ್ಯವಾಚನಕ್ಕೂ ಶ್ರೀಮತಿ ಶಕುಂತಲಾಬಾಯಿಯವರು ಮಾಡುವ ಕಾವ್ಯವಾಚನಕ್ಕೂ ಇರುವ ವ್ಯತ್ಯಾಸವನ್ನು ಅವರ ಗಡಸು ಶಾರೀರದಲ್ಲಿ ಕಂಡುಕೊಳ್ಳಬಹುದು.

ಅವರು ನಿಷ್ಣಾತ ಗಮಕಿಗಳಿರುವದಂತೂ ಸರಿ. ಅವರಿಗೆ ತಮ್ಮ ಕಲೆಯ ಮಟ್ಟ ಇನ್ನೂ ಉತ್ತಮ ಮಟ್ಟದ್ದಾಗಬೇಕೆಂಬ ಕಳಕಳಿ ಅವರನ್ನು ಸತತ ಪ್ರಯತ್ನಶೀಲರನ್ನಾಗಿ ಸುವದಲ್ಲದೆ ಪ್ರಯೋಗಶೀಲತೆಯತ್ತ ಅವರ ಗಮನವನ್ನು ಸೆಳೆಯುತ್ತಿರುವದು. ಅಂತೆಯೇ ಅವರು ಕಾವ್ಯವಾಚನಮಾಡಿದ್ದು ಒಂದಲ್ಲ ಹಲವುಸಲ ಕೇಳಿದರೂ ಪ್ರತಿಸಲ ಹೊಸದಾಗಿ ಕೇಳಿದ ಅನುಭವವಾಗುವದು. ಇದು ಅವರ ಗಮಕ ಕಲೆ ಮಲೆತು ನಿಂತ ನೀರಾಗಿರದೆ ಹರಿಯುವ ತಿಳಿನೀರಿನ ಪ್ರವಾಹದಂತಿರುವದೆಂಬುದಕ್ಕೆ ಒಂದು ನಿದರ್ಶನ.

ಗಮಕ ಕಲೆಯಲ್ಲಿ ಆಸಕ್ತಿಯುಳ್ಳವರೆಲ್ಲರಲ್ಲಿಯೂ ಅವರಿಗೆ ಪೂಜ್ಯ ಭಾವನೆ. ಅವರು ತಮ್ಮ ಗುರುಗಳಾದ ಸಂ. ಗೋ. ಬಿಂದೂರಾಯರನ್ನು ಆಮಂತ್ರಿಸಿ ಅವರನ್ನು ಸತ್ಕರಿಸಿ ಅವರಿಗೆ ತಾವು ಗಮಕದಲ್ಲಿ ಸಾಧಿಸಿದ ಪ್ರಗತಿಯ ಪರಿಚಯ ಮಾಡಿಕೊಡುವ ಸಂದರ್ಭದಲ್ಲಿಯೇ ಕೃಷ್ಣಗಿರಿ ಕೃಷ್ಣರಾಯರನ್ನು ಕರೆಸಿಕೊಂಡು ಅವರ ಗಮಕ ಕಲೆಯ ವೈಶಿಷ್ಟ್ಯವನ್ನು ಶ್ರೋತೃಗಳಿಗೆ ತಿಳಿಯ ಪಡಿಸುವ ಯೋಜನೆ ಮಾಡಿದ್ದು ಈ ಸಂದರ್ಭದಲ್ಲಿ ಹಾಜರಿದ್ದು ಕಾವ್ಯರಸಾನುಭವ ಪಡೆದವರಲ್ಲಿ ನಾನೂ ಒಬ್ಬನಾಗಿದ್ದುದನ್ನು ಇಪ್ಪತ್ತು ವರ್ಷಗಳು ಗತಿಸಿದ್ದರೂ ಇಂದಿಗೂ ನಿನ್ನೆ ಮೊನ್ನೆ ಆದ ಘಟನೆಯಂತೆ ಅಚ್ಚಳಿಯದೆ ನೆನಪಿನಲ್ಲಿ ಉಳಿಯುವಷ್ಟು ಅಂದಿನ ಕಾವ್ಯವಾಚನ ಕಾರ್ಯಕ್ರಮ ಯಶಸ್ವಿಯಾಗಿತ್ತು.

ತಮ್ಮಲ್ಲಿ ಗಮಕಿಗಳನ್ನು ಕರೆಸಿ ಅವರ ಕಾವ್ಯವಾಚನ ಕಾರ್ಯಕ್ರಮವನ್ನು ನಡೆಸುವುದು ಗಮಕಕಲಾವಿದರ ಪರಿಚಯ ಮಾಡಿಕೊಡುವ ಅವರ ಹಾಗೂ ಅವರ ಪತಿಗಳಾದ ಶ್ರೀ ಪಾಂಡುರಂಗರಾಯರಿಗೆ ಪ್ರೀತಿಯ ಕೆಲಸ. ಇತ್ತೀಚೆಗೆ ಅವರು ತಮ್ಮ ಮನೆಯಲ್ಲಿ ಗಮಕಕಲಾವಿದ ಭಾಗೀರಥಮ್ಮನವರ ಕಾವ್ಯವಾಚನ ಕಾರ್ಯಕ್ರಮವನ್ನು ಏರ್ಪಡಿಸಿದ್ದನ್ನು ನಾನು ಕಂಡಿರುವೆ. ಅವರ ಕಾವ್ಯವಾಚನವನ್ನು ಕೇಳಿ ಆನಂದಪಟ್ಟವರಲ್ಲಿ ನಾನೂ ಒಬ್ಬ. ಗಮಕ ಕಲಾವಿದರ ಪರಿಚಯ ಜನರಿಗೆ ಆಗಬೇಕು ಎಂಬ ಅವರ ಸದಿಚ್ಛೆಗೆ ಇದೊಂದು ನಿದರ್ಶನ.

ಗಮಕಕಲೆಯು ವಿವಿಧ ಸ್ವರೂಪದ ಕಾವ್ಯಗಳ ವಾಚನಕ್ಕೆ ಅಳವಡಿಸುವ

ಪ್ರಯೋಗದಲ್ಲಿ ಶ್ರೀಮತಿ ಶಕುಂತಲಾಬಾಯಿಯವರಿಗೆ ಆಸ್ಥೆ. ಕನ್ನಡ ಕಾವ್ಯಪರಂಪರೆಯೆಂಬ ಒಂದು ಧ್ವನಿಮುದ್ರಿತ ಕಾರ್ಯಕ್ರಮವನ್ನು ಇತ್ತೀಚೆಗೆ ಏರ್ಪಡಿಸಿದ್ದರು.

ಆದಿಕವಿ ಪಂಪ, ಕರ್ನಾಟಕದ ಬಗ್ಗೆ ಅಭಿಮಾನಪಟ್ಟುಕೊಂಡ ಪದ್ಯಗಳನ್ನು ಶಾಂತಕವಿಯವರು ರಕ್ಷಿಸುಕರ್ನಾಟಕಮಾತೆ ಎಂದು ಕರ್ನಾಟಕಮಾತೆಗೆ ಪ್ರಾರ್ಥಿಸಿಕೊಂಡ ಪದ್ಯವನ್ನು ಗೋವಿಂದಪೈಯವರು ಬಾರೆತಾಯೆ ಮುಖವ ತೋರೆ ಎಂಬ ಕವನವನ್ನು ಹಾಡಿದ್ದನ್ನು ಧ್ವನಿಮುದ್ರಿಸಿಕೊಂಡದ್ದುಂಟು. ಈ ಪದ್ಯಗಳನ್ನು ನಾವೇ ಹಲವಾರುಸಲ ಓದಿದಾಗ ಮನಸ್ಸಿನಲ್ಲಿ ಮೂಡಿದ ಭಾವನೆಗಳಿಗೂ ಈ ಪದ್ಯಗಳನ್ನು ಶಕುಂತಲಾಬಾಯಿಯವರು ಗಮಕ ಪದ್ಧತಿಯಿಂದ ಹಾಡಿದ್ದನ್ನು ಕೇಳಿದಾಗ ಉಂಟಾಗುವ ಭಾವನೆಗಳನ್ನೂ ಕೇಳಿಯೆ ಅನುಭವಿಸಬೇಕು. ಬರಡು ಶಬ್ದಗಳಿಂದ ವಿವರಿಸಿ ಮನಸ್ಸಿನ ಮೇಲಾದ ಅನುಭವ ಹೇಳುವುದು ಕಷ್ಟ

ನಮ್ಮ ಸುದೈವದಿಂದ ಓರ್ವ ಶ್ರೇಷ್ಠ ಗಮಕ ಕಲಾವಿದೆ ನಮ್ಮ ಮಧ್ಯೆ ಇದ್ದು ಕನ್ನಡ ಕಾವ್ಯಸಾಹಿತ್ಯದ ಬಗ್ಗೆ ಜನರಲ್ಲಿ ಪ್ರಚಾರ ಮಾಡುತ್ತಿರುವರು. ದೇವರು ಅವರಿಗೆ ದೀರ್ಘ ಆಯುರಾರೋಗ್ಯ ಕರುಣಿಸಿ ಗಮಕ ಕಲೆಗೆ ಅವರಿಂದ ಇನ್ನೂ ಹೆಚ್ಚಿನ ಸೇವೆ ಸಲ್ಲಿಸುವಂತೆ ಮಾಡಲಿ ಎಂದು ಆ ದಯಾಮಯನಲ್ಲಿ ಪ್ರಾರ್ಥಿಸುವೆ.

ಅಗ್ರಗಣ್ಯ ಗಮಕಿ

ಎಸ್. ವಿ. ಪರಮೇಶ್ವರಭಟ್ಟ

ಕನ್ನಡದ ಗಮಕ ಪ್ರಪಂಚದಲ್ಲಿ ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾವ್ ಅವರದು ಬಹಳ ಹಳೆಯ ಹೆಸರು, ಬಹಳ ದೊಡ್ಡ ಹೆಸರು. ಪ್ರಸಿದ್ಧ ಗಮಕ ವಿದ್ವಾಂಸರೂ ಅದ್ವಿತೀಯ ಕಾವ್ಯರಸದರ್ಶಿಗಳೂ ಆದ ಶ್ರೀ ಬಿಂದೂರಾಯರ ಪ್ರಥಮ ಶಿಷ್ಯೆಯಾಗಿ 1937 ರಲ್ಲಿ ಗಮಕ ಕಲಾಪ್ರಪಂಚಕ್ಕೆ ಪ್ರವೇಶಿಸಿದ ಶ್ರೀಮತಿಯವರು ಅಂದಿನಿಂದ ಇಂದಿನವರೆಗೆ ಏಕಪ್ರಕಾರವಾಗಿ ತಮ್ಮ ಕಲೆಯನ್ನು ಒಂದು ತಪಸ್ಸು ಎಂಬಂತೆ ಸಾಧಿಸಿ ಕೊಂಡು ಬಂದು ಅದರಲ್ಲಿ ಸಂಪೂರ್ಣವಾದ ಪರಿಣತಿಯನ್ನು ಪಡೆದಿದ್ದಾರೆ. ಗಮಕ ಕಲೆಯ ಶಾಸ್ತ್ರಭಾಗಕ್ಕೆ ಸಂಬಂಧಿಸಿದ ವಿವರಗಳನ್ನು ಸಾಂಗೋಪಾಂಗವಾಗಿ ತಿಳಿದು ಕೊಂಡಿರುವುದರ ಜೊತೆಗೆ ದೇವದತ್ತವಾದ ಕಂಠಶ್ರೀಯನ್ನು ಉಳಿಸಿಕೊಂಡು ಬಂದಿರುವು ದರಿಂದ ಶ್ರೀಮತಿಯವರ ಕಲೆಗಾರಿಕೆಗೆ ಲೋಕಮಾನ್ಯತೆ ಬಂದಿದೆ.

ಶ್ರೀಮತಿಯವರು ತಮ್ಮ ಗುರುಗಳ ಸ್ಥಾನಮಾನಗಳಿಗೆ ಚ್ಯುತಿಬಾರದ ಹಾಗೆ, ಅವರು ಪರಮ ಸುಪ್ರೀತರಾಗುವ ಹಾಗೆ ಅವರ ಕಾಲದಲ್ಲಿ ಕಾವ್ಯವಾಚನ ಮಾಡುತ್ತಿದ್ದರು.ಆ ಗುರುವಿನ ಬಳಿಕ ತಮ್ಮ ಕಲೆಗಾರಿಕೆಯಿಂದ ಗುರುವಿನ ಹೆಸರು ಗಮಕ ಪ್ರಪಂಚದಲ್ಲಿ ಹಸುರಾಗಿ ಉಳಿಯುವ ಹಾಗೆ ಈ ಶಿಷ್ಯೆ ಕಾವ್ಯವಾಚನ ಮಾಡುತ್ತಿದ್ದಾರೆ. ಹಳಗನ್ನಡ ನಡುಗನ್ನಡ, ಹೊಸಗನ್ನಡ ಕಾವ್ಯಗಳಿಂದ ರಸಘಟ್ಟಗಳನ್ನು ಆಯ್ದುಕೊಂಡು ಶ್ರೀಮತಿಯವರು ವಾಚನ ಮಾಡುತ್ತಿರುವುದೊಂದು ವಿಶೇಷ. ಕವಿಯ ಆಶಯಗಳಿಗೆ ಭಂಗಬಾರದ ಹಾಗೆ ಕಾವ್ಯದ ರಸಭಾಗಗಳು ಸುಪ್ರಕಾಶವಾಗಿ ಮೈದೋರುವ ಹಾಗೆ ಇವರು ಕಾವ್ಯ ವಾಚನ ಮಾಡುವುದರಲ್ಲಿ ಅಗ್ರಗಣ್ಯರು. ನಮ್ಮ ಈ ದಿನದ ಸಮಕಾಲೀನ ಗಮಕಿಗಳಲ್ಲಿ ಹಿರಿಯರೆಂದು ಪರಿಗಣಿಸಬೇಕಾದ ನಾಲ್ಕಾರು ಗಮಕಿಗಳಲ್ಲಿ ಶಕುಂತಲಾಬಾಯಿಯವರ ಹೆಸರೂ ಸೇರಿಕೊಂಡೇ ಇರುತ್ತದೆ.

ನಮ್ಮ ಕಾಲದ ಕವಿಗಳ ಕೃತಿಗಳನ್ನು ಅವರ ಸಮ್ಮುಖದಲ್ಲಿಯೇ ದೊಡ್ಡ ದೊಡ್ಡ ಸಭೆಗಳಲ್ಲಿ ವಾಚನ ಮಾಡಿ ಆಯಾ ಕಾವ್ಯಗಳ ಕರ್ತೃಗಳಿಂದ ಪ್ರಶಂಸೆಯನ್ನು ಗಳಿಸಿ ಕೊಂಡ ಕೀರ್ತಿ ಇವರದಾಗಿದೆ. ವಿಶೇಷತಃ ಶ್ರೀ ಕುವೆಂಪು ಅವರ ಶ್ರೀರಾಮಾಯಣ ದರ್ಶನಂ ಮಹಾಕಾವ್ಯದ ವಾಚನದಿಂದ ಶ್ರೀ ಕುವೆಂಪು ಅವರ ಮೆಚ್ಚಿಗೆಯನ್ನು ಗಳಿಸಿ ಕೊಂಡುದನ್ನು ಇಲ್ಲಿ ಸ್ಮರಿಸಬೇಕು. ವಿಹಿತವಾದ ಪದಚ್ಛೇದ, ಸ್ಪಷ್ಟವಾದ ಉಚ್ಚಾರಣೆ, ಪದಗಳ ಮೇಲೆ ಹೇರುವ ಸಂದರ್ಭೋಚಿತವಾದ ಸ್ವರಭಾರ, ಸಮಂಜಸವಾದ ರಾಗ, ಉಚಿತವಾದ ರಾಗವಿನ್ಯಾಸ ಇವುಗಳನ್ನೆಲ್ಲಾ ಶ್ರೀಮತಿಯವರ ಗಮಕದಿಂದ ನೋಡಿ ಕಲಿಯಬೇಕಾದ್ದು.

ಶ್ರೀ ಬಿ. ಪಾಂಡುರಂಗರಾಯರು ನನ್ನ ಇಂಟರ್‌ಮೀಡಿಯೆಟ್ ದಿನಗಳಲ್ಲಿ ನನ್ನ

ಸಾಹಿತ್ಯಬಂಧುವಾಗಿ ಒದಗಿಬಂದವರು. ಶ್ರೀ ಪಾಂಡುರಂಗರಾಯರ ಮತ್ತು ನನ್ನ ಸ್ನೇಹವು ನಮ್ಮಿಬ್ಬರಿಗೆ ಸಮಾನವಾಗಿದ್ದ ಸಾಹಿತ್ಯ ವ್ಯಸನದಿಂದ ಗಟ್ಟಿಗೊಂಡಿತು. ಮುಂದೆ ಶ್ರೀ ಪಾಂಡುರಂಗರಾಯರು ತಮ್ಮ ಓದು ಮುಗಿಸಿ ಜೀವನದಲ್ಲಿ ಒಂದು ನೆಲೆಗೆ ನಿಂತಮೇಲೆ ಶ್ರೀಮತಿ ಶಕುಂತಲಾಬಾಯಿಯವರು ಇವರ ಸಹಧರ್ಮಿಣಿಯಾಗಿ ರಾಯರ ಜೀವನ ದಲ್ಲಿ ರಂಗಪ್ರವೇಶ ಮಾಡಿದರು. ಇದರಿಂದ ಇವರಿಬ್ಬರಿಗೂ ವಿಶೇಷವಾದ ಪ್ರಯೋಜನ ವಾಯಿತು. ಶ್ರೀ ಪಾಂಡುರಂಗರಾಯರ ಸಾಹಿತ್ಯಾಸಕ್ತಿಯಿಂದ ಅವರ ಶ್ರೀಮತಿಯವರ ಪ್ರಯೋಜನ ಪಡೆದರು. ಶ್ರೀಮತಿಯವರ ಗಾನಕಲಾಸಕ್ತಿಯಿಂದ ರಾಯರ ಸಾಹಿತ್ಯ ಕೃಷಿ ಸೊಂಪಾಗಿ ಮುಂದುವರಿಯಿತು. ಇವರಿಬ್ಬರ ಈ ಎರಡು ಆಸಕ್ತಿಗಳ ಪರಿಣಾಮ ಫಲವಾಗಿ ಕನ್ನಡ ಸಾರಸ್ವತ ಲೋಕಕ್ಕೆ ಒಬ್ಬ ಗಮಕಿ, ಒಬ್ಬ ವ್ಯಾಖ್ಯಾನಕಾರ ದೊರೆ ತಂತಾಯಿತು. ಶ್ರೀಮತಿ ಶಕುಂತಲಾಬಾಯಿ ಅವರ ಗಮಕ ಮತ್ತು ಶ್ರೀ ಪಾಂಡುರಂಗ ರಾಯರ ವ್ಯಾಖ್ಯಾನ ಈ ಯುಗಳ ಕಾರ್ಯಕ್ರಮ ಕನ್ನಡನಾಡಿನಲ್ಲಿ ಮನೆಮಾತಾಯಿತು.

ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾಯರಿಗೆ ಈಗ ಅರವತ್ತು ತುಂಬಿತು. ಈಗ ಸಹ ಅವರ ಕಾವ್ಯವಾಚನ ಎಂದರೆ ಜನ ಕುತೂಹಲಾವಿಷ್ಟರಾಗಿ ಬಂದು ಸೇರು ತ್ತಾರೆ. ಶ್ರೀಮತಿಯವರು ಆಸ್ಥಾನವನ್ನು ಕೌತುಕರಸದಲ್ಲಿ ಕರುವಿಟ್ಟಂತೆ ಇರಿಸುವ ಸಾಮರ್ಥ್ಯವನ್ನು ಒಳಕೊಂಡವರು.

ಶ್ರೀಮತಿ ಶಕುಂತಲಾಬಾಯಿಯವರೂ, ಶ್ರೀ ಪಾಂಡುರಂಗರಾಯರೂ ದೀರ್ಘಾ ಯುಷಿಗಳಾಗಿ ಬಾಳಿ ರಸೇಪ್ಸುಗಳಾದ ಕನ್ನಡಿಗರನ್ನು ತಣಿಸುತ್ತಿರಲಿ ಎಂದು ಹಾರೈಸು ತ್ತೇನೆ.

ಅಶರೀರವಾಣಿ

ಎನ್ಕೆ

ಸುಮಾರು ಇಪ್ಪತ್ತೈದು ವರ್ಷಗಳ ಹಿಂದಿನ ಮಾತು. ನಾನು ಧಾರವಾಡದಿಂದ ಬೆಂಗಳೂರು ಆಕಾಶವಾಣಿ ಕೇಂದ್ರಕ್ಕೆ ವರ್ಗಾಯಿಸಲ್ಪಟ್ಟಿದ್ದೆ. ನನ್ನ ಚಿಕ್ಕ ಚಿರಂಜೀವಿ ರವಿಯನ್ನು ಪ್ರಾಥಮಿಕ ಶಾಲೆಗೆ ಸೇರಿಸುವುದಿತ್ತು. ನೆಹರೂ ನಗರದ ನಮ್ಮ ಮನೆಯ ಹಿಂದಿನ ಬೀದಿಯಲ್ಲಿ 'ಮಕ್ಕಳ ಮಂಟಪ'. ಮಿತ್ರರ ಸಲಹೆಯ ಮೇರೆಗೆ ನನ್ನ ಚಿರಂಜೀವನ 'ಶ್ರೀಗಣೇಶಾಯ ನಮಃ' ಪ್ರಾರಂಭವಾಯಿತು. 'ನಮೋ ಅರ್ಭಕೇಭ್ಯಃ' ಎಂಬ ಮಂಟಪದ ಧ್ಯೇಯ ವಾಕ್ಯ ನನ್ನ ಗಮನ ಸೆಳೆದು ನನ್ನ ಮನಸ್ಸನ್ನು ಆಕರ್ಷಿಸಿತು. 'ಮಕ್ಕಳ ಮಂಟಪದ' ಪ್ರಾಚಾರ್ಯರಾದ ಪಾಂಡುರಂಗರಾಯರು ಮಕ್ಕಳಲ್ಲಿ ಹುದುಗಿದ ಮಹಾಸತ್ವಕ್ಕೆ ನಮಸ್ಕರಿಸುವಂತಹ ಆದರ್ಶ ಗುರುಗಳು ಎಂದ ಮೇಲೆ ಮಕ್ಕಳನ್ನು ಛಡಿಯ ಬೆದರಿಕೆಯಿಂದ ಕಲಿಸುವ 'ಕೇನೋಪನಿಷತ್ತು' ಇಲ್ಲಿಲ್ಲ ಎಂಬ ಅಭಯದಿಂದ ನಮ್ಮ ಚಿರಂಜೀವನನ್ನು 'ಎಮ್ಮ ಮನೆಯಂಗಳದಿ' ಎಂದು ಹಾಡಿ ಕೂಸೊಪ್ಪಿಸುವಂತೆ ಮಕ್ಕಳ ಮಂಟಪಕ್ಕೆ ಒಪ್ಪಿಸಿಬಂದೆ. ಆ ಮಕ್ಕಳ ಮಂಟಪದ ಮೇಲೆ ಹಬ್ಬಿರುವುದು ಮಲ್ಲಿಗೆಯ ಬಳ್ಳಿಯಲ್ಲ, ವಾತ್ಸಲ್ಯಗಂಧಿಯಾದ ಬಳ್ಳಿ ಎಂದು ತಿಳಿಯಲು ನನಗೆ ಬಹಳ ದಿನ ಬೇಕಾಗಲಿಲ್ಲ.

ಪಾಂಡುರಂಗರಾಯರು ನನ್ನ ಚಿರಂಜೀವನ ಮೇಲೆ ತಾಳಿದ ವಾತ್ಸಲ್ಯಭಾವ ನನ್ನ ಮೇಲಿನ ಸೋದರ್ಯ ಭಾವವಾಗಿಯೂ ಹಾಂಗುಡಿಬಿಟ್ಟಿತು. ಅವರ ಮನೆಯೆ ನಮಗೊಂದು ಮಮತೆಯ ಮಂಟಪವಾಯಿತು. ಈ ಆತ್ಮೀಯತೆ ಹೆಚ್ಚಿಸುವುದಕ್ಕೆ ಒಂದು ವಿಶೇಷ ಕಾರಣವೆಂದರೆ ಕುಮಾರವ್ಯಾಸನ ಭಕ್ತನಾದ ನನಗೆ ಅವರೂ ಕುಮಾರವ್ಯಾಸನ ಬಳಗದವರೆ ಆಗಿರುವುದು. ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾವ್ ಅವರು ಪ್ರಖ್ಯಾತ ಗಮಕಿ. ಶ್ರೀ ಭಾರತ ಬಿಂದೂರಾಯರ ಗರಡಿಯಲ್ಲಿ ಪಳಗಿ ಆಗಲೆ ಕನ್ನಡ ನಾಡಿನ ಮೂಲೆಮೂಲೆಯಲ್ಲಿ ತಮ್ಮ ಕೀರ್ತಿಯನ್ನು ಹರಡಿದ್ದರು. ಶ್ರೀಪಾಂಡುರಂಗ ರಾಯರು ಕುಮಾರವ್ಯಾಸನ ಅಭ್ಯಾಸಿಯಾಗಿದ್ದರಲ್ಲದೆ ತಮ್ಮ ಧರ್ಮಪತ್ನಿಯವರಿಗೆ ಯೋಗ್ಯ ಪ್ರೋತ್ಸಾಹಕರೂ ಮಾರ್ಗದರ್ಶಕರೂ ಆಗಿ, ಆಗಾಗ ತಮ್ಮ ಶ್ರೀಮತಿಯವರ ಗಮಕ ವಾಚನಕ್ಕೆ ಸೂಕ್ತ ವಿವರಣೆಯನ್ನೂ ನೀಡುತ್ತಿದ್ದರು. ಶ್ರೀ ಪಾಂಡುರಂಗರಾಯರ ಮನೆಯಲ್ಲಿ ಅವರ ಶ್ರೀಮತಿಯವರ ಗಮಕ ಕಾರ್ಯಕ್ರಮ ಇದ್ದಾಗಲೆಲ್ಲ ನನಗೆ ಆಮಂತ್ರಣವಿದ್ದೇ ಇರುತ್ತಿತ್ತು.

ಶ್ರೀಮತಿ ಶಕುಂತಲಾಬಾಯಿಯವರ ನಾಲಗೆಯ ಮೇಲೆ ಗದುಗಿನ ವೀರನಾರಾಯಣನು ನಲಿದಾಡಿ, ಅವರ ಮುಖದಿಂದ ಕುಮಾರವ್ಯಾಸನವಾಣಿ ಕರ್ಣರಸಾಯನವಾಗಿ 'ನಿರ್ಮಳ ಮಹಾಭಾರತ ಕಥಾಮೃತ' ವಾಹಕವಾಗಿ ಹೊರಹೊಮ್ಮುವುದು. ನನಗೆ ಸ್ಪಷ್ಟವಾಗದಿದ್ದ ಎಷ್ಟೋ ಪದ್ಯಗಳು ಅವರ ರಸಾಲಕಂಠದಿಂದ ವಾಙ್ಮಯವಾದ

ಗಮಕದಲ್ಲಿ ಹೊರಹೊಮ್ಮಿ ಅರ್ಥಮಯುವಾಗಿ ಕಿವಿದೆರೆಯನ್ನೂ ಸೇರಿ ಕವಿ ಭಾವವನ್ನು, ತೊಳೆತೊಳೆಯಾಗಿ ಸ್ಪಷ್ಟವಾಗಿಸಿ ರಸಾನಂದವನ್ನುಂಟುಮಾಡಿದವು.

ಶಕುಂತಲಾಬಾಯಿಯವರ ಗಮಕ ಕಾರ್ಯಕ್ರಮ ಕೇಳುವ ಅವಕಾಶವನ್ನು ನಾನು ತಪ್ಪಿಸಿಕೊಳ್ಳುತ್ತಿರಲಿಲ್ಲ. ಭಾರತ ಬಿಂದೂರಾಯರಿಂದ ಭಾರತವಾಚನದ ದೀಕ್ಷೆ ಪಡೆದ ಸುವಿಖ್ಯಾತ ಹಿಂದೂಸ್ಥಾನೀ ಗವಯಿಗಳಾದ, ನನಗೆ ಆಪ್ತಬಂಧುಗಳಾದ ಶ್ರೀ ದೇಶಪಾಂಡೆ ಗುರುರಾಯರು 1943 ರಲ್ಲಿ ಮಿರ್ಜಿಯಲ್ಲಿ ಅವರ ಮನೆಯಲ್ಲಿ ಕುಮಾರ ವ್ಯಾಸನ ದಶಪರ್ವಗಳ ಗಮಕ ಸತ್ರವೊಂದನ್ನು ನಡೆಸಿದಾಗ ನಾನು ಶ್ರದ್ಧೆಯ ಶ್ರೋತೃ ವಾಗಿ ಅಲ್ಲಿಗೆ ಹೋಗಿ ಬರುತ್ತಿದ್ದೆ. ಕುಮಾರವ್ಯಾಸನ ಬಗ್ಗೆ ಅಧಿಕಾರವಾಣಿಯಿಂದ ಮಾತನಾಡಬಲ್ಲ ಶ್ರೀ ಬೆಟಗೇರಿ ಕೃಷ್ಣಶರ್ಮರಿಂದ ನಿತ್ಯ ಅರ್ಥವಿವರಣೆ, ವ್ಯಾಖ್ಯಾನ ಪ್ರತಿಪದ್ಯಕ್ಕೆ. ಹೀಗಾಗಿ ಕುಮಾರವ್ಯಾಸನ ಕಾವ್ಯಾಭ್ಯಾಸ, ಗಮಕದ ರಸೋಪಾಸನೆ ಜೊತೆ ಜೊತೆಯಾಗಿಯೆ ಶ್ರೋತೃವೃಂದಕ್ಕೆ ದೊರೆಕೊಂಡಿದ್ದುವು. ಈಗ ಸೋದರಿ ಶಕುಂತಲಾಬಾಯಿಯವರ ಗಮಕ ಶ್ರವಣದಿಂದಾಗಿ ಮತ್ತೊಮ್ಮೆ ಕುಮಾರವ್ಯಾಸನ ರಸದರ್ಶನವಾದಂತಾಯಿತು.

ಶಕುಂತಲಾಬಾಯಿಯವರು ಯಾವುದೆ ಒಂದು ಪ್ರಸಂಗವನ್ನು ಆಯ್ದುಕೊಳ್ಳಲಿ ಅದು ಒಂದು ದೃಶ್ಯಕಾವ್ಯವಾಗಿ ಶ್ರೋತೃಗಳ ಕಣ್ಮುಂದೆ ಪುನಃಸೃಷ್ಟಿಯಾಗುವುದು. 'ದೂರ್ವಾಸಾತಿಥ್ಯ'ವಿದ್ದರೆ ತಮ್ಮ 'ಅಷ್ಟಾಶೀತಿಸಾವಿರ' (೮800೦) ಮುನಿ ಶಿಷ್ಯರೊಂದಿಗೆ ದೂರ್ವಾಸರು ಧರ್ಮರಾಯನ ಬಾಗಿಲಿಗೆ ಬಂದು ಇಷ್ಟು ಜನರ ಕ್ಷುಧಾ ಪೀಡಾಪರಿಹಾರ ಚಿಕಿತ್ಸೆಯನ್ನು ಬೇಡಿದಾಗ, ಅರಸಿ ದ್ರೌಪದಿ ಆರೋಗಿಸಿದ ಹದನವನು ತಿಳಿದು ಅಕ್ಷಯ ಪಾತ್ರೆಯು ಈಗ ಕಾರ್ಯಮಾಡದೆಂಬ ಪ್ರತಿಜ್ಞೆ ಮಾಡಿದಾಗ ಧರ್ಮರಾಯನ ಚಿಂತಾ ತುರದ ಚಿತ್ರ ಕಣ್ಮುಂದೆ ಸುಳಿದು ಹೋಗುವುದು. ದ್ರೌಪದಿ ಆಪದ್ಬಂಧುವಾದ ಶ್ರೀ ಯಾದವನನ್ನು ಧ್ಯಾನಿಸಲು ಹರಿಯು ಮೈದೋರಿ, ಮಾನಿನಿಯು ಮೈದಡಹಿ 'ಚಿಂತೆಯ ದೇನು ತಂಗಿ, ಲತಾಂಗಿ' ಎಂದು ಕೇಳಿದಾಗ ಆ ತಂಗಿ ಪರಮಾತ್ಮನಾದ ತನ್ನಣ್ಣನ ಪದ ಪಯೋಜದಲಿ ಕಾಯುವನೀಡಾಡಿದ ಚಿತ್ರವೆಲ್ಲ ಕಣ್ಮುಂದೆ ಸುಳಿದು ಹೋಯಿತು. ಅದ ರಲ್ಲೂ ದ್ರೌಪದಿಯು ಹರಿಪದವ ಕೊಂಡಾಡಿದ ಪದ್ಯವಂತೂ ಶಕುಂತಲಾಬಾಯಿಯವರ ಬಾಯಿಯಲ್ಲಿ ಭಕ್ತಿಪ್ರವಾಹವಾಗಿ ಸೂಸಿತ್ತು,

ಧರಣಿಯನು ಬಿಡದಳೆದು ಹೆಚ್ಚಿದ
ಚರಣವಿದು, ಕಾಳಿಂಗಮರ್ದನ
ಚರಣವಿದು, ಹರಳಾದಹಲ್ಯೆಯ ಶಾಪ ಹರಣವಿದು
ಚರಣವಿದು, ಸುರನದಿಯ ಸೃಜಿಸಿದ
ಚರಣವಿದು, ಶಕಟಪ್ರಭಂಜನ
ಚರಣವಿದು, ಎನುತ ಕೊಂಡಾಡಿದಳು ಹರಿಪದವ||

ಎಂಬ ಪದ್ಯವನ್ನು ಹೇಳುವಾಗಲಂತೂ 'ಚರಣವಿದು, ಚರಣವಿದು' ಎಂದು ಹೇಳುತ್ತ ಒಂದೊಂದು ಬಾರಿಗೆ ಅದು ಎಂಥ ಚರಣ ಎಂದು ವರ್ಣಿಸಿ, ವಿಶ್ಲೇಷಿಸಿ, ವಿಸ್ತರಿಸಿ

ಹೇಳುವ ರೀತಿಯಲ್ಲಿ ಸೋದರಿ ಶಕುಂತಲಾಬಾಯಿ ಅವರು ಗಮಕ ಕಲೆ ಎಂದರೇನು ಎಂಬುದಕ್ಕೆ ಒಂದು ನಿದರ್ಶನವನ್ನೇ ನೀಡಿದಂತಿತ್ತು.

ಗಮಕ ಎಂದರೇನು ಎಂಬುದನ್ನೂ ಭಾರತ ಬಿಂದೂರಾಯರು ಹೇಳುತ್ತಾರೆ:–

“ಭಾವ ಸಮನ್ವಯ ಕ್ರಮದಲ್ಲಿ ಪದ್ಯವನ್ನೂ ರಾಗದಲ್ಲಿ ಹಿತಮಿತವಾಗಿ ಹಾಡುವುದು. (ಇದಕ್ಕಾಗಿ) ಅನ್ವಯಕ್ರಮ, ಪುನರಾವರ್ತನೆ, ಧಾಟಿ, ಉಚಿತ ಪದಕ್ಕೆ ಅರ್ಥ ಸೃಷ್ಟಿ, ಕ್ಲಿಷ್ಟ ಪದಗಳಿಗೆ ಸಮಾನಾರ್ಥ ಕೊಡುವ ಸುಲಭ ಪದದ ಬಳಕೆ ಇವುಗಳನ್ನೂ ಗಮಕಿ ತಿಳಿದಿರಬೇಕು.”[1]

ಶಕುಂತಲಾಬಾಯಿ ಅವರ ಮುಖದಿಂದ ಕಾವ್ಯ ಸಾಹಿತ್ಯ ಹದವಾಗಿ ಸುರಿತು ಹೊರ ಹೊಮ್ಮುತ್ತದೆ. ಆಯಾ ಸನ್ನಿವೇಶ, ರಸ, ಭಾವಕ್ಕೆ ಅನುಗುಣವಾದ ರಾಗದಲ್ಲಿ ಇಂಪಾದ ದನಿಯಲ್ಲಿ ಸ್ವರಬದ್ಧವಾಗಿ ಸಂಗೀತವು ಆ ಸಾಹಿತ್ಯಕ್ಕೆ ಪೋಷಕವಾಗಿ ಹೊರ ಸೂಸಿದಾಗ ಕೇಳುಗ ರೋಮಾಂಚಿತನಾಗುತ್ತಾನೆ. ಗಮಕ ಎಂದರೇನು ಎಂದು ವ್ಯಾಖ್ಯಾನಿಸಬೇಕಾದರೆ ‘ಶ್ರೀಮತಿ ಶಕುಂತಲಾಬಾಯಿ ಅವರು ಕಾವ್ಯವಾಚನ ಮಾಡುವ ಪದ್ಧತಿ’ ಎಂದು ಹೇಳಿದರೆ ತಪ್ಪಿಲ್ಲ. ಗಮಕ ಗುರುಗಳಾದ ಶ್ರೀ ಬಿಂದೂರಾಯರೆ ತಮ್ಮ ಈ ಶಿಷ್ಯೆಯ ಗಮಕ ವೈಶಿಷ್ಟ್ಯವನ್ನು ಕುರಿತು ಪತ್ರ ಬರೆದು ಅದರಲ್ಲಿ ‘ಶಿಷ್ಯಾದಿಚ್ಛೇತ್ ಪರಾಜಯಂ’ ಎಂಬ ಔದಾರ್ಯದ ಮಾತನ್ನೂ ಹೇಳುತ್ತಾರೆ. ತಮ್ಮ ಈ ಶಿಷ್ಯೆಯ ಗಮಕದಲ್ಲಿ ಭಾವದ್ಯೋತಕವಾಗುವಷ್ಟು ರಾಗಗಳ ಯೋಜನೆ ಇದ್ದು ಕಾವ್ಯದ ರಸ, ಕಾವ್ಯಾರ್ಥಗಳು ತದ್ವಾಚನದಿಂದ ಸ್ಫುರಿಸಿ ಬರುತ್ತವೆಯೆಂದೂ ತಿಳಿಸುತ್ತಾರೆ ೨೮–೯–೧೯೬೭ ರಂದು ಚಿತ್ರದುರ್ಗದಿಂದ ಬರೆದ ಪತ್ರವೊಂದರಲ್ಲಿ ಹೀಗೆ ಬರೆಯುತ್ತಾರೆ

……..ಶ್ರೀಮತಿ ಶಕುಂತಲಾಬಾಯಿಯವರು ಸ್ವತಃ ಪ್ರತಿಭಾಶಾಲಿಗಳಾಗಿ ನನ್ನನ್ನೂ ಗುರುಸ್ಥಾನದಲ್ಲಿಟ್ಟುಕೊಂಡು ಕೀರ್ತಿಕೊಟ್ಟಿರುವುದಕ್ಕೆ ತುಂಬ ಕೃತಜ್ಞನಾಗಿರುತ್ತೇನೆ. ಅವರ ವಾಚನದಲ್ಲಿ ಕಾವ್ಯದಲ್ಲಿನ ಪದಗಳ ಭಾಗವನ್ನೂ ಹೊಮ್ಮಿಸುವಷ್ಟು ರಾಗ ಕಾಣಿಸುತ್ತದಲ್ಲದೆ ರಾಗ ಪ್ರಾಧಾನ್ಯ ಕಾಣಿಸುವುದಿಲ್ಲ–ಅದೆ ಗಮಕ. ಅವರ ಪ್ರತಿಭಾಯುತ ವಾಚನಕ್ಕೆ ನಾನು ಸೋತಿದ್ದೇನೆ “ಶಿಷ್ಯಾದಿಚ್ಛೇತ್ ಪರಾಜಯಂ” ಗುರುವಿಗೆ ಭೂಷಣ[2]

ಇದು ಬಿಂದೂರಾಯರು ಕೊಟ್ಟ ಜಯಪತ್ರವಲ್ಲ. ಶಿಷ್ಯೆಯ ಗಮಕ ಗುಣಮಟ್ಟದ ಶಿಫಾರಸಿನ ಸರ್ಟಿಫಿಕೆಟ್ಟು. ತಮ್ಮ ಮಹತಿಯನ್ನೂ ಮರೆತು ಮೆಚ್ಚುಗೆಯನ್ನು ವ್ಯಕ್ತಮಾಡುವಲ್ಲಿ ಗುರುಗಳ ತೆರೆದ ಮನಸ್ಸಿನ ಔದಾರ್ಯದ ದ್ಯೋತಕ. ಶಕುಂತಲಾ ಬಾಯಿ ಅವರ ಪತಿಗಳಾದ ಶ್ರೀಪಾಂಡುರಂಗರಾಯರ ಪ್ರೋತ್ಸಾಹ, ಉತ್ತೇಜನಗಳಿಲ್ಲದಿದ್ದರೆ ಶ್ರೀಮತಿಯವರ ಪ್ರತಿಭೆ ಬೆಳೆಯಲು ಅವಕಾಶವಿರುತ್ತಿರಲಿಲ್ಲ ಎಂಬ ಮಾತನ್ನು ಬಿಂದೂರಾಯರು ಸ್ಪಷ್ಟಪಡಿಸಿದ್ದಾರೆ. ಇದು ಹದಿನಾರಾಣೆ ಸತ್ಯ.

---

1 ಗಮಕ ಭಗೀರಥರು ಬಿ. ಶ್ರೀ ಪಾಂಡುರಂಗರಾಯರು ಪು. 119–120

2 ಅದೇ—ಪು 26

ಶ್ರೀಮತಿ ಶಕುಂತಲಾಬಾಯಿಯವರ ಪ್ರತಿಭೆ ಅಂಕುರಿಸಿ ಬೆಳೆಯಲಿಕ್ಕೆ ನೀರು, ಬೆಳಕನಿತ್ತವರು ಗುರು ಬಿಂದೂರಾಯರೆಂಬ ಮಾತನ್ನು ಮುಖ್ಯವಾಗಿ ಗಮನಿಸಬೇಕು. ಆಮೇಲೆ ಪಾಂಡುರಂಗರಾಯರ ಉತ್ತೇಜನದ 'ಫರ್ಟಿಲೈಜರ್'. ೧೯೩೫ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಗಮಕ ವರ್ಗಗಳನ್ನು ಆರಂಭಿಸಲು ಆಗಿನ ಉಪಾಧ್ಯಕ್ಷರಾಗಿದ್ದ ಡಿ.ವಿ.ಜಿ. ಅವರು ಭಾರತ ಬಿಂದೂರಾಯರನ್ನು ವಿನಂತಿಸಿದರು, ಬಲವಂತ ಪಡಿಸಿದರು ಸತ್ಯಾಗ್ರಹದ ಮಾತನಾಡಿದರು. ಡಿ.ವಿ.ಜಿ. ವರ್ಚಸ್ಸಿನ ವ್ಯಕ್ತಿತ್ವಕ್ಕೆ ಬಿಂದೂರಾಯರು ಮಣಿದರು. ಪರಿಷತ್ತಿನಲ್ಲಿ ಗಮಕ ವರ್ಗಗಳು ೧೯೩೫ ರಿಂದ ೧೯೩೭ರ ವರೆಗೆ ನಡೆದವು. ಕೊನೆಯ ವರ್ಷದ ವರ್ಗದಲ್ಲಿ ಇಬ್ಬರು ವಿದ್ಯಾರ್ಥಿನಿಯರು. ಹದಿನೆದು ವರ್ಷದ ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾವ್ ಮತ್ತು ಅವರ ಓರಗೆಯ ಶ್ರೀರಾಜಾ ಮಣಿ ನಾಗರಾಜರಾವ್. ಉಭಯತ್ರರು ಗುರುಗಳ ಹೆಸರಿಗೆ ಕೀರ್ತಿತಂದರು.

ಅಂದಿನಿಂದ ಇಂದಿನವರೆಗೆ ಸುಮಾರು ನಲ್ವತ್ತೈದು ವರ್ಷಕಾಲ ಶಕುಂತಲಾ ಬಾಯಿಯವರು ಪತಿಯ ಪ್ರೋತ್ಸಾಹದಿಂದ ಕುಮಾರವ್ಯಾಸನ ಕಾವ್ಯ ಸರಸ್ವತಿಯನ್ನು ಶಿರೋಭೂಷಣವಾಗಿ ತಲೆಯ ಮೇಲೆ ಹೊತ್ತು ಕಂಠಾಭರಣವಾಗಿ ಧರಿಸಿ ವಾಙ್ಮಯತಪವನ್ನು ಆಚರಿಸುತ್ತ ಬಂದಿದ್ದಾರೆ.

ವೇದ ಪಾರಾಯಣದ ಫಲ ಗಂ
ಗಾದಿ ತೀರ್ಥಸ್ನಾನ ಫಲ ಕೃ
ಚ್ಛ್ರಾದಿ ತಪಸಿನ ಫಲವು, ಜ್ಯೋತಿಷ್ಟೋಮಯಾಗ ಫಲ।
ಮೇದಿನಿಯನೊಲಿದಿತ್ತ ಫಲವ
ಸ್ತ್ರಾದಿ ಕನ್ಯಾದಾನ ಫಲವಹು
ದಾದರಿಸಿ ಭಾರತದೊಳೊಂದಕ್ಷರವ ಕೇಳ್ದರಿಗೆ॥

ಭಾರತದ ಒಂದಕ್ಷರವನ್ನು ಕೇಳಿದವರಿಗೆ ಮೇಲಿನ ಫಲಗಳು ದೊರಕೋಣವಾಗ ಆ ಭಾರತವನ್ನು ಸುತ್ತಿ, ಅರ್ಧ ಶತಮಾನಕ್ಕೆ ಸಮೀಪ ತಲೆಯ ಮೇಲೆ ಹೊತ್ತು ಕನ್ನಡ ನಾಡನ್ನು ಸುತ್ತಿ, ಲಕ್ಷಾವಧಿ ಕನ್ನಡಿಗರಿಗೆ ಭಾರತ ಶ್ರವಣ ಪುಣ್ಯವನ್ನು ಒದಗಿಸಿ 'ಭಾರತ ದೊಳೊಂದಕ್ಷರವ' ಬಿಡದೆ ಕೇಳಿಸಿದವರಿಗೆ ಆ ಪುಣ್ಯಾತ್ಮ ಕವಿ ಅದೆಂಥ ಫಲವನ್ನು ಒದಗಿ ಸುತ್ತಿದ್ದನೊ ನಮ್ಮ ಈ ಸೋದರಿಯ ಗಮಕೋಪಾಸನೆಯನ್ನು ಒಂದು ವೇಳೆ ಕಂಡಿ ದ್ದರೆ! ಕೇಳಿದ್ದರೆ! ಗದುಗಿನವನೆ ಆದ ನಾನು ನಾರಣಪ್ಪನ ಹೆಸರನ್ನೆ ಹೊತ್ತವನಾಗಿ ಕಳೆದ ಕಾಲು ಶತಮಾನದಷ್ಟಾದರೂ ಅವಧಿಯವರೆಗೆ ಶ್ರೀಮತಿ ಶಕುಂತಲಾಬಾಯಿಯವರ ಬಾಯಿಂದ ವಿಧವಿಧದ ರಸಘಟ್ಟೆಯ ಘಟ್ಟಗಳನ್ನೂ ಕಿವಿದಾರೆ ಕೇಳಿ ಧನ್ಯತೆಯನ್ನು ಪಡೆದವನಾಗಿ, ನಾನೂ ಕವಿ ಕುಮಾರವ್ಯಾಸನ ಸೇವಕನೆ ಆಗಿ ಇಷ್ಟು ಹೇಳಬಲ್ಲೆ: ನಮ್ಮ ನಾರಾಯಣಪ್ಪನೇನಾದರೂ ತನ್ನ ಕಾವ್ಯವನ್ನು ಸೋದರಿ ಶಕುಂತಲಾಬಾಯಿಯವರ ಬಾಯಿಂದ ಕೇಳಿದ್ದರೆ 'ನಿನ್ನ ಜನ್ಮ ಸಾರ್ಥಕವಾಯಿತು ತಾಯೀ' ಎಂದು ಹರಸುತ್ತಿದ್ದ. ಈ ಮಾತು ಶತಶಃ ಸತ್ಯ ಎಂಬುದರ ಪ್ರತ್ಯಯ ಇಂದು ಶಕುಂತಲಾಬಾಯಿಯವರು ಪಡೆದಿರುವ ಜೀವನ ಸಾರ್ಥಕ್ಯದಲ್ಲಿದೆ.

ಶಕುಂತಲಾಬಾಯಿಯವರ ಗಮಕವಾಚನದ ಆ ಪ್ರಸಂಗಗಳನ್ನು ನೆನೆದುಕೊಂಡರೆ ಇನ್ನೂ ಇಂದಿಗೂ ಕಲಿಯುಗ ದ್ವಾಪರವಾಗಿ ಭಾರತ ಕಣ್ಣ ಮುಂದೆ ಕುಣಿದು ಮೈಯಲ್ಲಿ ಮಿಂಚಿನ ಹೊಳೆಯನ್ನು ತುಳುಕಾಡಿಸುವುದು. ಕೀಚಕವಧೆಯ ಪ್ರಸಂಗ ತನ್ನ ಹಿರಿತಕ್ಕೆ ಯಾರೂ ಇಲ್ಲವೆ ಕೊನೆಗೆ ಭೀಮನೆ ಮಿದುಕುಳ್ಳಗಂಡನೆಂದು ತನ್ನ ಮರ್ಯಾದೆಯ ಸೆರಗನ್ನೂ ಮತ್ತೊಮ್ಮೆ ಕಾಪಾಡಿಕೊಳ್ಳಲು ನೆರವಾದನೆಂದು ಮೊರೆ ಹೊಕ್ಕರೆ ಆತನು ನಪುಂಸಕನಂತೆ ನಡೆದುಕೊಳ್ಳಬೇಕೆ ? ಆಗ—

ಹೆಂಡತಿಯು ಹರಿಬದಲಿ ಒಬ್ಬನೆ
ಗಂಡನಾದೊಡೆ ವೈರಿಯನುಕಡಿ
ಖಂಡನೆಯ ಮಾಡುವನು ಮೇಣ್ ತನ್ನೊಡಲನಿಕ್ಕುವನು ||
ಗಂಡರೈವರು ಮೂರು ಲೋಕದ
ಗಂಡರೊಬ್ಬಳನಾಳಲಾರಿರಿ
ಗಂಡರೊನೀವ್ ಷಂಡರೊ ಹೇಳೆಂದಳಿಂದು ಮುಖಿ ||

ಅಬ್ಬ ! ಸೋದರಿ ಶಕುಂತಲಾಬಾಯಿಯವರ ಬಾಯಿಂದ ಒಂದೊಂದು ನುಡಿಯೂ ಕಿಡಿಯಾಗಿ ಸೂಸಿತ್ತು ; ಕೇಳುಗನ ಮೈ ರೋಮಾಂಚಮಯ ! ಮತ್ತೊಂದು ಪ್ರಸಂಗ ದ್ಯೂತಪರ್ವ. ಎಲ್ಲಿಯದು ದುಷ್ಟ ಕ್ಷೈಮರುಮಾತೆಲ್ಲಿಯದು ? ಎಂಬ ದುಶ್ಶಾಸನನ ದುಷ್ಟ ಮಾತುಗಳು ! ಕೌರವ ಸಭೆಯಲ್ಲಿ ಆಕೆಯ ವಸ್ತ್ರಾಪಹರಣ. ಆಕೆ ಶ್ರೀಕೃಷ್ಣನಲ್ಲಿ ಮೊರೆಯಿಟ್ಟು ಪ್ರಾರ್ಥಿಸುವ ಪದ್ಯಗಳು ನೇರವಾಗಿ ಅಂತಃಕರಣಕ್ಕೆ ತಾಗುವ ಹೃದ್ಯನುಡಿಗಳು. ಕೇಳುಗನು ಕಣ್ಮುಚ್ಚಿ, ಕಣ್ಣೀರಿಡಬೇಕು. 'ಸುಲಿವರೂರೊಳಗುಟ್ಟ ಸೀರೆಯನೆಳೆ ಮುರಾಂತಕ ರಕ್ಷಿಸೈ' ಎಂದು ಆರ್ತಭಾವದಿಂದ ಒಂದೊಂದೇ ಪದ್ಯದ ಪದಪದವನ್ನೂ ಹದವಾಗಿ, ಮಿದುವಾಗಿ ರಸಭಾವಗಳ ಹದುವನ್ನೂ ಎತ್ತಿ ಕಿವಿವೆರೆಗಳಿಗೆ ನೀಡಿದಾಗ ಕೇಳುಗ ಕಿವಿಯನ್ನೇ ನಾಲಗೆಮಾಡಿ ಆ ಕರುಣಾರಸದ ರುಚಿಯನ್ನು ಸವಿಯಬೇಕು.

ಶಿವನನ್ನೂ ಮೆಚ್ಚಿಸಿ ಅವನಿಂದ ಅಸ್ತ್ರವನ್ನು ಪಡೆಯಲು

ಇಂದ್ರಕೀಲ ಪರ್ವತಕ್ಕೆ ತೆರಳುವ ಮುನ್ನ ಅರ್ಜುನನಿಗೆ ಧರ್ಮರಾಯನು ವೇದವ್ಯಾಸನಿತ್ತುಪದೇಶ ವಿಸ್ತರವ ನರ ಹೊತ್ತ. ಮುಗ್ಗದಿರು ಮಾಯೆಯಲಿ, ಮದದಲಿ ನೆಗ್ಗದಿರು ಎಂಬೆಲ್ಲ ಎಚ್ಚರನೀಡಿ,

ಏಳು ನೀ ಪ್ರತ್ಯಕ್ಷದಲಿ ಶಶಿ
ಮೌಳಿ ಮೈದೋರಲಿ ತದೀಯಶ–
–ರಾಳಿಗಳು ಸಿದ್ಧಿಸಲಿ, ಸೇರಲಿ ಶಿವನಕೃಪೆ ನಿನಗೆ ||

ಎಂದು ಆಶೀರ್ವದಿಸಿ ಕಳಿಸುವಾಗಿನ ಜ್ಞಾನಾಮೃತದ ಮಾತುಗಳನ್ನೂ ನಮ್ಮ ಸೋದರಿಯ ಕಂಠದ್ವಾರ ಕೇಳಿದಾಗ ಕುಮಾರವ್ಯಾಸನ ಕಾವ್ಯಾಮೃತದ ಹನಿ ಹನಿಯನ್ನು ಸವಿದು, ಅನುಭವಿಸಿ, ಅರಿತುಕೊಂಡು ಅದನ್ನು ಶ್ರೋತೃವಿನ ಶ್ರುತಿಯಲ್ಲಿ ಹನಿ ಹನಿಯಾಗಿಯೆ ಹಣಿಸುತ್ತಿರುವಂತೆ ಎನಿಸುವುದು.

ಶಕುಂತಲಾಬಾಯಿ ಅವರಿಗೆ ಗುರುಕರುಣೆ ಪೂರ್ಣವಾಗಿ ಸಂದಾಯವಾಗಿದೆ. ೧೯೬೧ರಲ್ಲಿ ಬಿಂದೂರಾಯರು ವಿಜಾಪುರದಲ್ಲಿ ಕುಮಾರವ್ಯಾಸನ ಗಮಕ ಸತ್ರವನ್ನು ಜರುಗಿಸಿದಾಗ ಮಂಗಳದ ಮೆರವಣಿಗೆಯ ಕಾಲಕ್ಕೆ ಶಿಷ್ಯೆ ಶಕುಂತಲಾಬಾಯಿ ಗುರುವಿನ ತಂಬೂರಿ ಹೊತ್ತು ಕಾವ್ಯ ಗ್ರಂಥವನ್ನು ಶಿರದಲ್ಲಿ ಧರಿಸಿ ಪಾದಯಾತ್ರೆ ಮಾಡಿದ ತಪಸ್ಸು ಫಲಿಸಿತೆಂದು ತೋರುತ್ತದೆ. ಭಾರತ ಬಿಂದೂರಾಯರ ಕೊನೆ ೨ ದಿನಗಳಲ್ಲಿ ಕೆಲಕಾಲ ಪಾಂಡುರಂಗರಾಯರ ಮನೆಯಲ್ಲಿದ್ದುಕೊಂಡು ದಂಪತಿಗಳಿಂದ ಸುಶ್ರೂಷೆ ಯನ್ನೂ ಪಡೆದು ತುಂಬಿದ ಹೃದಯದಿಂದ ಅವರ ಸೇವೆಯಿಂದ ಸಂತುಷ್ಟರಾಗಿ ಕಣ್ಣಿಸಂತೆ ಈ ಸಾಕು ಮಗಳು ಶಕುಂತಲಾಬಾಯಿಯವರನ್ನು ಅವರ ಪತಿಯನ್ನು ಹಾಡಿಹರಸಿದರು. ಅವರ ಆ ಕೊನೆಯ ಹರಕೆಯೆ ಇಂದು ಸೋದರಿ ಶಕುಂತಲಾಬಾಯಿಯವರ ಕೀರ್ತಿ ಪತಾಕೆಯನ್ನು ಹಾರಾಡಿಸಿದೆ. ಅವರಿಗೆ ರಾಜ್ಯದ ಅಕಾಡೆಮಿ ಪ್ರಶಸ್ತಿ 1969ರಲ್ಲಿ ದೊರಕುವಂತೆ ಅನುಗ್ರಹಿಸಿದೆ. ಮೈಸೂರಿನಲ್ಲಿ 1979ರಲ್ಲಿ ನಡೆದ ಅಖಿಲ ಕರ್ನಾಟಕ ಸಮ್ಮೇಳನದ ಅಧ್ಯಕ್ಷಿಣಿಯನ್ನಾಗಿ ಮಾಡಿದೆ.

ನಾನು ಬೆಂಗಳೂರು ಆಕಾಶವಾಣಿಯಲ್ಲಿದ್ದಾಗ ಪ್ರಾಚೀನ ಕವಿವಾಣಿ ಎಂಬ ಶೀರ್ಷಿಕೆಯಲ್ಲಿ ನಮ್ಮ ಕುಮಾರವ್ಯಾಸನ ದಶಪರ್ವಗಳ ನಾಟ್ಯ ಪೂರ್ಣ ಸನ್ನಿವೇಶ ಗಳನ್ನಷ್ಟೆ ಆಯ್ದುಕೊಂಡು ಕುಮಾರವ್ಯಾಸನ ವಾಣಿಯಲ್ಲಿಯೆ ಸಂಭಾಷಣೆಗಳನ್ನು ಹೆಣೆದು ಗಮಕರೂಪದ ಮೂಲಕವಾಗಿ ಪ್ರಸಾರ ಮಾಡಿದೆವು. ಈ ಕಾರ್ಯಕ್ರಮದ ಯೋಜಕ ನಾನಾಗಿ ಶ್ರೀಮತಿ ಶಕುಂತಲಾಬಾಯಿ,ಶ್ರೀಮತಿ ಗೌರಮ್ಮನಾಗರಾಜರಾವ್, ಶ್ರೀಮತಿ ಬಿ. ವಿ. ಇಂದಿರಮ್ಮ, ಶ್ರೀಮತಿ ಅನ್ನಪೂರ್ಣಮ್ಮ, ಶ್ರೀ ಬಿ. ಎಸ್. ಎಸ್. ಕೌಶಿಕ್, ಶ್ರೀ ಆನೂರು ಸೂರ್ಯನಾರಾಯಣ, ಶ್ರೀ ಎಸ್. ಶ್ರೀಕಂಠಮೂರ್ತಿ, ಮೂಗೂರು ಸುಬ್ಬರಾವ್, ಮಳವಳ್ಳಿ ಸುಂದರಮ್ಮ ಮೊದಲಾದ ಪ್ರಖ್ಯಾತ ಗಮಕ ಕಲಾವಿದರು ಮತ್ತು ಪ್ರಸಿದ್ಧ ನಟನಟಿಯರು ನೀಡಿದ ಸಹಕಾರ ಮೊದಲಾದ ಸಹಾಯ ಗಳನ್ನು ನೆನೆದಾಗಲೆಲ್ಲಾ ಹೃದಯ ಕೃತಜ್ಞತೆಯಿಂದ ತುಂಬಿಬರುತ್ತದೆ. ಅದನ್ನೆಲ್ಲಾ ನೆನೆದಾಗ ಪ್ರತಿಗಮಕದ ಆರಂಭಕ್ಕೆ 'ಶ್ರೀವನಿತೆಯರಸನೆ'ಎಂಬ ಪ್ರಾರ್ಥನೆ 'ಅರಸುಗಳಿ ಗಿದುವೀರ'ಎಂಬ ಲಕ್ಷಣ ಪದ್ಯ ಕೊನೆಯಲ್ಲಿ 'ವೇದ ಪುರುಷನಸುತನ' ಎಂಬ ಪದ್ಯದ ಪ್ರತಿ ಪದಾರ್ಥದ ತೊಳೆ ತೊಳೆಯಾದ ವಿವರಣೆ ನೀಡುವ ಸೋದರಿ ಶಕುಂತಲಾಬಾಯಿಯವ ವರಪ್ರಸಾರ ಅಶರೀರವಾಣಿ ಇಂದಿಗೂ ಮೈನವಿರೇಳಿಸುತ್ತದೆ.

ಕಲಾಜೀವಿ

ದೇಜಗೌ

ನಟರಿಂದ ನಾಟಕಕ್ಕೆ ಕಳೆಕಟ್ಟುವಂತೆ, ಜೀವ ಬರುವಂತೆ, ಗಮಕಿಗಳಿಂದ ಕಾವ್ಯಕ್ಕೆ ಸಾರ್ಥಕತೆಯೊದಗುತ್ತದೆ, ಶೋಭೆಯುಂಟಾಗುತ್ತದೆ. ಕಾವ್ಯರಥಕ್ಕೆ ಗಮಕವೇ ಅಶ್ವಶಕ್ತಿ. ಗಮಕದ ಸಂಬಂಧವಿಲ್ಲದ ಕಾವ್ಯ ಪೂಜೆಯಿಲ್ಲದ ದೇವಾಲಯದಂತೆ ಅಸಾರ್ಥಕವಾಗುತ್ತದೆ. ಕವಿ ಸಹೃದಯರ ನಡುವಣ ಸೇತುವೆಯೇ **ಗಮಕಿ**. ಕಾವ್ಯಶಕ್ತಿಯನ್ನು ನಾಡಿನಲ್ಲೆಲ್ಲ ಹರಿಸುವ, ಜನಮನಕ್ಕೆ ನಾಲೆ ತೋಡುವ ಸಂಪರ್ಕಶಕ್ತಿಯವನು. ವಿಮರ್ಶನ ಸಾಮರ್ಥ್ಯ ವ್ಯಾಖ್ಯಾನ ಕೌಶಲ ಮತ್ತು ಸಂಗೀತಕಲೆ ಸಮರಸವಾಗಿ ಮೇಳೈಸಿ ಹೆಪ್ಪುಗಟ್ಟಿದ ವ್ಯಕ್ತಿಯೇ ಗಮಕಿ. ಓದುವ ಗತ್ತು ಗೈರತ್ತುಗಳಿಂದಲೇ ಅವನ ವ್ಯಾಖ್ಯಾನ ಕೌಶಲವೂ ಅಭಿವ್ಯಕ್ತವಾಗುತ್ತದೆ. ಕಾವ್ಯಜೀವನವನ್ನು ಜನರ ಬದುಕಿಗೆ ಮುಟ್ಟಿಸುವ ನೀರುಗಂಟಿಯೆಂದರೂ ಸರಿಯೇ, ಜಂಗಮಶಕ್ತಿ ಎಂದರೂ ಸರಿಯೆ, ಅವನೊಬ್ಬ ಚಲನ ಪ್ರಸಾರಗಾಯಕನೆಂಬುದಂತು ನಿಜ.

ನಿರಕ್ಷರಿಗಳ ನಾಡಿನಲ್ಲಿಯೂ ಭಾರತೀಯ ಸಂಸ್ಕೃತಿ ಅಜೇಯವಾಗಿ ಹೈಮಾಚಲ ಸ್ಥಿರತೆಯಿಂದ ನಿಲ್ಲಬೇಕಾದರೆ ಜನಪದ ವೃತ್ತಿಗಾಯಕರೇ ಮುಖ್ಯಕಾರಣರು. ವಿಶಾಲವಾದ ಅರ್ಥದಲ್ಲಿ ಗಮಕಿಯೂ ಒಬ್ಬ ವೃತ್ತಿಗಾಯಕ. ಗಮಕಿಗಳಿಲ್ಲದಿದ್ದರೆ ರಾಮಾಯಣ ಭಾರತಗಳು ಸರ್ವರ ಆಸ್ತಿಯಾಗಿ, ರಾಷ್ಟ್ರೀಯತೆಯನ್ನು ಸಂರಕ್ಷಿಸುವ ಶಕ್ತಿಪುಂಜಗಳಾಗಿ ವಿರಾಜಿಸುವಂತಿರಲಿಲ್ಲ. ಗ್ರಾಮೀಣಜನರಿಗೆ ವ್ಯಾಸ ವಾಲ್ಮೀಕಿ ಕುಮಾರವ್ಯಾಸರು ಗೊತ್ತಿಲ್ಲದಿರಬಹುದು; ಗಮಕಿಗಳಿಂದಾಗಿ ಅವರ ಕೃತಿಗಳು ಚಿರಪರಿಚಿತ. ಅವರಿಲ್ಲದಿದ್ದರೆ ಆ ಮಹಾಕಾವ್ಯಗಳು ಪಂಡಿತರ ಸ್ವತ್ತಾಗಿ, ಅವರ ಹೃದಯಗುಹೆಯ ಕಗ್ಗತ್ತಲಲ್ಲಿ **ನವೆಯು** ಬೇಕಾಗಿತ್ತೆಂದು ತೋರುತ್ತದೆ. ಏಕಕಾಲದಲ್ಲಿ ಪಂಡಿತಪಾಮರರ ಕಾಮಧೇನುವಾಗಿ ರಂಜಿಸಬಲ್ಲ ಕೀರ್ತಿ ಗಮಕಿಗಳಿಗೆ ಮಾತ್ರ ಸಲ್ಲತಕ್ಕದ್ದಾಗಿದೆ. ಎಲ್ಲ ಕಾಲಗಳಲ್ಲಿಯೂ ಪ್ರಬಲ ಸಂಪರ್ಕಮಾಧ್ಯಮವೆನಿಸಿಕೊಂಡ ಗಮಕಕಲೆ ಆಧುನಿಕ ನಾಗರಿಕತೆಯ **ಕಬಂಧ** ಬಂಧನಕ್ಕೆ ಸಿಕ್ಕಿ ಸೊಪ್ಪಾಗುತ್ತಿರುವುದು ದುರ್ದೈವದ ಸಂಗತಿ.

ಕಾಲುಶತಮಾನದ ಹಿಂದೆ ಕರ್ಣಾಟಕದ ಮೂಲೆಮೂಲೆಗಳಿಂದ ಗಿರಿಕಂದರಗಳಿಂದ ಅನುರಣಿತವಾಗುತ್ತಿದ್ದ ಗಮಕಿಗಳ ಶ್ರೀಕಂಠವಾಣಿ ಇಂದು ರಾಹುಗ್ರಸ್ತವಾದಂತಿದೆ. ಈಗಲೂ ಬಿಂದೂರಾಯರು, ಕೃಷ್ಣಗಿರಿ ಕೃಷ್ಣರಾಯರು, ಮಾಯಿಗೌಡರು, ಸಂಪತ್ಕುಮಾರಾಚಾರ್ಯರನ್ನು ನೆನೆದರೆ ರೋಮಾಂಚನವಾಗುತ್ತದೆ. ಅವರಷ್ಟೇ ಪ್ರಖ್ಯಾತರಾಗಿ, ಹಿರಿಯ ತಲೆಮಾರಿನವರಾಗಿರುವ ಜೋಳದರಾಶಿ ದೊಡ್ಡನಗೌಡ ಮತ್ತು ಶಕುಂತಳಾಬಾಯಿ ಪಾಂಡುರಂಗರಾಯರು ಇಳಿವಯಸ್ಸಿನಲ್ಲಿಯೂ ಗಮಕ ಕಲೆಯ

ಕೀರ್ತಿಶಿಖರಗಳಾಗಿ, ಸೀಮಾಶಕ್ತಿಗಳಾಗಿ ಇಂದಿಗೂ ನಮ್ಮ ಮಧ್ಯೆ ಇರುವುದೊಂದು ಸುದೈವ. ಕಿರಿಯ ಪೀಳಿಗೆಯಲ್ಲಿ ಪ್ರತಿಭಾವಂತರಾದ ಗಮಕಿಯರಿಲ್ಲದಿಲ್ಲ ; ಪ್ರೋತ್ಸಾಹ ವಿಲ್ಲದೆ ಅವರು ಬೆಳಕಿಗೆ ಬಂದಿಲ್ಲವೆಂಬುದಂತು ಸತ್ಯ.

ಕೃಷ್ಣಗಿರಿ ಕೃಷ್ಣರಾಯರು ಚಿತ್ರಾಂಗದಾಕಾವ್ಯವನ್ನು ಗಮಕಕಲೆಯ ಚೌಕಟ್ಟಿನಲ್ಲಿ ವಾಚಿಸಿ, ಜನಮನವನ್ನು ಆಕರ್ಷಿಸಿ ಯಶಸ್ವಿಯಾಗಿದ್ದರು. ಶ್ರೀರಾಮಾಯಣದರ್ಶನಂ ಮಹಾಕಾವ್ಯ ಪ್ರಕಟವಾದೊಡನೆಯೇ ಗಮಕಕಲೆಯ ತತ್ವಗಳನ್ನು ಅದಕ್ಕಳವಡಿಸಿ, ದೀರ್ಘವ್ಯವಸಾಯದ ಪರಿಣಾಮವಾಗಿ, ಪರಿಣತಿಯನ್ನು ಸಂಪಾದಿಸಿ ಕವಿಯ ಮಾತ್ರ ವಲ್ಲ, ಶ್ರೋತೃವೃಂದದ ಮನ್ನಣೆಗೆ ಪಾತ್ರರಾದವರಲ್ಲಿ **ಗಮಕಿವರೇಣ್ಯೆಯರಾದ** ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾಯರು ಅಪ್ರಬುದ್ಧ ಸಂಪ್ರದಾಯವಾದಿ ಗಳ ಪ್ರತಿಭಟನೆಯನ್ನು ಸಹ ಲೆಕ್ಕಿಸದೆ, ಆ ಮಹಾಕಾವ್ಯವನ್ನು ಸಾರ್ವಜನಿಕವಾಗಿ ಪಾರಾಯಣಮಾಡಿ, ಅದರ ಅಪೂರ್ವ ಸೌಂದರ್ಯವನ್ನು ಸ್ವಾರಸ್ಯವನ್ನೂ ಕನ್ನಡಿಗರಿಗೆ ಮನದಟ್ಟು ಮಾಡಿಕೊಟ್ಟ ಮಹಾಸಾಹಸಿಯವರು. ಮಹಾಛಂದಸ್ಸಿನ ಬೀಸುಹಾಸು ಗಳನ್ನು ಅದರ ದಾಪುವೋಪುಗಳನ್ನು ಬಿತ್ತರೆತ್ತರಗಳನ್ನು ಸಂಪೂರ್ಣವಾಗಿ ಗ್ರಹಿಸಿ ಕೊಂಡು, ಅರ್ಥಯತಿ ಭಾವಯತಿಗಳನ್ನು ಮನನಮಾಡಿಕೊಂಡು, ಅರ್ಥಕ್ಕೆ ಭಂಗ ಬಾರದ ರೀತಿಯಲ್ಲಿ ಭಾವಪೂರ್ಣವಾಗಿ ಗಮಕಿಸುವ ರಸಜ್ಞೆಯವರು. ಇತರ ಹೃದಯ ವಂತಿಕೆಯ ವ್ಯಾಖ್ಯಾನಕಾರರಂತೆ, ಅವರಿಗಿಂತ ಒಂದು ಕೈ ಮಿಗಿಲಾಗಿ ಆ ಮಹಾಕಾವ್ಯ ಪ್ರಸಾರಕ್ಕೆ ತ್ರಿಕರಣಶುದ್ಧಿಯಾಗಿ, ಸಮರ್ಪಣ ಮನೋಭಾವದಿಂದ, ಕಲಾಭ್ಯುದಯದ ದೃಷ್ಟಿಯಿಂದ, ರಾಮಕಾರ್ಯವೆಂಬಂತೆ ತಿಳಿದು, ಶ್ರಮಿಸಿದ ಕಾವ್ಯೋಪಾಸಕರ ಅಗ್ರಪಂಕ್ತಿ ಯಲ್ಲಿ ಸ್ಥಾನಪಡೆದ ಮಹಾಗಮಕಿಯವರು. ಅವರಿಂದ ಶ್ರೀರಾಮಾಯಣದರ್ಶನಂ ಮಹಾಕಾವ್ಯದ ಪ್ರಸಾರವಾಯಿತು ; ಆ ಮಹಾಕಾವ್ಯದ ಪಾರಾಯಣದಿಂದ ಅವರೂ ದೊಡ್ಡವರಾಗಿ ಬೆಳೆದರು; ಕನ್ನಡಿಗರ ಗೌರವ ಕೃತಜ್ಞತೆಗಳಿಗೆ ಪಾತ್ರರಾದರು; ಕನ್ನಡ ನುಡಿಯ ಸೇವೆಗೆ ಬದ್ಧಕಂಕಣರಾದ ಕಲಾವಿದೆಯೆಂಬ ಸನ್ಮಾನಕ್ಕೆ ಭಾಜನರಾದರು.

1953ನೆಯ ಇಸವಿಯೆಂದು ನನಗೆ ನೆನಪು. ಒಂದು ದಿನ ಬಸುಮಯ್ಯ ಪ್ರೌಢ ಶಾಲೆಯ ಸಭಾಂಗಣದಲ್ಲಿ ಸಾರ್ವಜನಿಕರ ಪರವಾಗಿ ಅವರಿಗೊಂದು ಸನ್ಮಾನ ಸಮಾ ರಂಭ ಏರ್ಪಾಡಾಗಿತ್ತು. ಆ ಹೊತ್ತಿಗಾಗಲೇ ಮುಂಬೈ, ಬೆಂಗಳೂರು, ಮೈಸೂರು ಗಳಲ್ಲಿ ನಡೆಸಿದ ಗಮಕ ಸಮಾರಂಭಗಳಲ್ಲಿ ಭಾಗವಹಿಸಿ, ಶ್ರೇಷ್ಠಕಲಾವಿದೆಯೆಂದು ಹೆಸರುಗಳಿಸಿದ್ದರು. ಆ ದಿನ ಸುಮಾರು ಒಂದೂವರೆಗಂಟೆಗಳಕಾಲ 'ಶಬರಿಗಾದನು ಅತಿಥಿ ದಾಶರಥಿ' ಎಂಬ ಭಾಗವನ್ನು ಹಾಡಿ ಕಿಕ್ಕಿರಿದ ಸಭೆಯನ್ನು ತ್ರೇತಾಯುಗಕ್ಕೆ ಕೊಂಡೊಯ್ದಿದ್ದರು. ಆ ಸಂದರ್ಭದಲ್ಲಿ ಹಾಜರಿದ್ದ ದೇವುಡು ನರಸಿಂಹಶಾಸ್ತ್ರಿ ಭಾವ ಪರವಶರಾಗಿಬಿಟ್ಟರು; ಅವರ ಕಣ್ಣುಗಳಿಂದ ಕರುಣಾರಸ ಧಾರೆಧಾರೆಯಾಗಿ ಪ್ರವಹಿಸು ತ್ತಿತ್ತು, ತಮ್ಮ ರೊಂಮಾಂಚ **ಕಂಚುಕಿತ** ಗಾತ್ರವನ್ನು ಹತ್ತಿರ ಕುಳಿತಿದ್ದ ನನಗೆ ತೋರಿಸಿದರು. ಭಾವಪ್ರಶಮನಕ್ಕಾಗಿ ಅವರು ಹೊರಗೆ ಹೋದರು ; ತುಸು ಹೊತ್ತಿನ ನಂತರ ಮರಳಿದರು; ಮತ್ತೆ ಹೊರಗೆ ಹೋದರು. 'ಇವಳು ಮಾನವಿಯಲ್ಲ, ಮಾತಾಯಿ

ಸರಸ್ವತಿ' ಎಂದರು. ಸಭೆಗೆ ಸಭೆಯೇ ಭಾವಪರವಶವಾಗಿ, ರಾಮಕಥಾ ರಸಸ್ರೋತ ದಲ್ಲಿ ನಿಮಜ್ಜನಗೊಂಡಿತ್ತೆಂದು ಹೇಳಬೇಕಾಗಿಲ್ಲ. ಇಂಥ ಎಷ್ಟೋ ಅಮೃತಕ್ಷಣಗಳನ್ನು ನಾನು ಅನುಭವಿಸಿದ್ದೇನೆ. ಗಮಕದ ಮೂಲಕ ಅವರು ಬಡಿಸುತ್ತಿದ್ದ ರಸದೌತಣ ನನ್ನ ಚೇತನಕ್ಕೊಂದು ಸಂಜೀವಿನೀ ಶಕ್ತಿಯಾಗಿತ್ತೆಂಬುದರಲ್ಲಿ ಸಂದೇಹವಿಲ್ಲ.

ಶಕುಂತಲಾಬಾಯಿಯವರಿಗೆ ದೇವರು ಪ್ರತಿಭೆಮಾತ್ರವಲ್ಲ, ಶ್ರೀಕಂಠಶಕ್ತಿಯನ್ನು ಸಹ ಕರುಣಿಸಿದ್ದಾನೆ; ಅವರ ಕಂಚಿನ ಕಂಠಕ್ಕೆ ಮೋಹಕವಾದ ಶಾರೀರವನ್ನು ಸಹ ಅನುಗ್ರಹಿಸಿದ್ದಾನೆ. ಶ್ರೀರಾಮಾಯಣದರ್ಶನದಂಥ ಮಹಾಛಂದಸ್ಸಿನ ಕೃತಿಯನ್ನು ಗಂಟೆಗಟ್ಟಳೆ ಪಠಿಸಬೇಕಾದರೆ ಸಾಕಷ್ಟು ಶಾರೀರಕ ಶಕ್ತಿಯೂ ಬೇಕು. ಈ ಎಲ್ಲ ಶಕ್ತಿಗಳ ಸಮ್ಮಿಲನದಿಂದಾಗಿ ಅವರ ಹಾಡುಗಾರಿಕೆಯಲ್ಲಿ ಅಪೂರ್ವವಾದ ಮಾಂತ್ರಿಕತೆ ಇದೆ; ಅನನುಕರಣೀಯವಾದ ಗತ್ತು ಗೈರತ್ತು ಬೆಡಗು ಬಿನ್ನಾಣ, ಚೆಲುವೊಡ್ಡವಗಳಿವೆ.

> ಗಮಕಿವರ್ಯನ ವೇಣುವಾಣಿಗೆ ಕಲಾರಮಣಿ
> ವರ್ಣಲಯ ರಾಗಮಯ ನವರಸಾವೇಶದಿಂ
> ಮಮಕಾವ್ಯವೇದಿಕೆಯನೇರಿ ನರ್ತಿಸುವಂತೆ
> ನಲಿದುದಾ, ಪೊನ್ನಿಗಂ. ಸೀತಾಮನಂ ಮುಳುಗೆ
> ಮೋಹದೋಕುಳಿಗೆ.

ಎಂಬ ಮಹಾಕವಿವಾಣಿ ಶಕುಂತಲಾಬಾಯಿಯವರಂಥವರನ್ನು ಕುರಿತದ್ದೇ ಎಂದು ಸ್ಪಷ್ಟ ವಾಗಿ ಹೇಳಬಹುದಾಗಿದೆ. ಅವರು ಹಾಡಿದರೆಂದರೆ ಚೇತನಾಚೇತನಸ್ವರೂಪದ ಇಡೀ ಜಗತ್ತೇ ರಸಮೂರ್ಛೆಗೆ ವಶವಾಗುತ್ತದೆ. ಕುವೆಂಪು ಅವರ 'ಹಾಡಿದನು ಗಮಕಿ' ಎಂಬ ಕವನದ ಪುಲ್ಲಿಂಗ ಪ್ರತ್ಯಯವನ್ನೆ ಸ್ತ್ರೀಲಿಂಗಕ್ಕೆ ತಿರುಗಿಸಿದರೆ, ಅದು ಪೂರ್ಣವಾಗಿ ಶಕುಂತಲಾಬಾಯಿಯವರಿಗೆ ಅನ್ವಯವಾಗುತ್ತದೆ; ಹಾಗೆ ಅನ್ವಯಿಸುವುದರಲ್ಲಿ ಕವಿ ಸಮ್ಮತಿಯೂ ಸಂಪೂರ್ಣವಾಗಿದೆಯೆನ್ನುವುದನ್ನು ನಾನು ಬಲ್ಲೆ.

> ಹಾಡಿದಳು ಗಮಕಿ ;
> ನಾಡು ನಲಿದುದು ರಸದ ಕಡಲಿನಲಿ ದುಮುಕಿ.

ಶಕುಂತಲಾಬಾಯಿಯವರು ನೂರು ವಸಂತಗಳ ಸುಖವನ್ನು ಸವಿಯುವಂತಾಗಲಿ; ಕನ್ನಡನಾಡಿನಲ್ಲಿ ಅವರ ಪೀಳಿಗೆ ಗಮಕಕಲೆಯ ಯಶೋವಿತಾನವನ್ನು ನಭಕ್ಕೆತ್ತಿ ಮೆರೆಯುವಂತಾಗಲಿ.

ಸೌಭಾಗ್ಯ-ತಂಬೂರಿ

ಕೃಷ್ಣಮೂರ್ತಿ ಪುರಾಣಿಕ

ತಂಬೂರಿಯ ನಾದ ಮಣಿಪಾಲ ಸಾಹಿತ್ಯ ಸಮ್ಮೇಳನದ ಮಂಟಪವನ್ನು ತುಂಬಿ ಹೊರಸೂಸುತ್ತಿತ್ತು. ಸಾಂಪ್ರದಾಯಿಕ ವಸ್ತ್ರಾಲಂಕಾರಗಳಿಂದ ಶೋಭಿತಳಾದ ಗಾನ ವಿದುಷಿಯ ಕೈ ಬೆರಳು ನಾದ ತರಂಗಗಳನ್ನು ಹರವುತ್ತಿತ್ತು. ಸಭಾ ಮಂಟಪ ಸ್ತಬ್ಧ ವಾದಾಗ, ಈ ನಾದ ಲಹರಿಯಲ್ಲಿ ಮುಳುಗಿದಾಗ ಕಂಠಶ್ರೀ ಶ್ರೀಮಂತ ಧ್ವನಿಯಲ್ಲಿ ಕಾವ್ಯ ಗಮಕದಲ್ಲಿ ರಸವಂತಿಕೆಯನ್ನು ತುಂಬಿಕೊಂಡು 'ತೊಂಬುಚ್ಚಿದ ರಸದೊರತೆ'ಯಂತೆ ಜೇನುಹನಿಯ ರಸಮಾಧುರ್ಯವನ್ನು ಸೂಸತೊಡಗಿತು.

ಈ ದನಿಯ ಒಡತಿಯೇ ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾವ್. ಪತಿ ಪಾಂಡುರಂಗರಾವ್ ಅವರನ್ನು ಕರೆಯುವದು ಸತಿಯ ಹೆಸರಿನೊಡನೆಯೆ. ಅಷ್ಟು ಏಕೀಭಾವ. ಜೀವಮಾಧುರ್ಯಬೀರುವ ಎರಡು ರಸದುಂಬಿಗಳು ಝೇಂಕರಿಸುವಂತೆ ಈ ಜೋಡಿ.

ತಂಗಿ ಶಕುಂತಲಾಬಾಯಿಯದು ಭಕ್ತಿಪೂರ್ಣ ವ್ಯಕ್ತಿತ್ವ. ಸಂಗೀತದಲ್ಲಿ ಭಗವಂತ ನನ್ನು ಕಾಣುವ ದಿವ್ಯ ತಲ್ಲೀನತೆ ಅವರದು. ಈ ತಲ್ಲೀನತೆ ಅವರ ಜೀವನಕ್ಕೊಂದು ಮೆರಗು. ಅದೊಂದು ಸಂಸ್ಕೃತಿ ಸಂಕೇತ. ಇಲ್ಲಿ ಜೀವನ ಧರ್ಮದ, ಮಾನವ ಧರ್ಮದ, ನೀತಿಗಳ ಅನುಷ್ಠಾನ ನಿರಂತರ ಸಾಧನೆಯಾಗಿ ಪರಿಣಮಿಸಿದೆ.

'ಆ ಪರಮ ಕವಿ ಪ್ರಧಾನರಾ ಕಾವ್ಯಂಗಳ್' ಪಾಪಮಿದು, ಪುಣ್ಯಮಿದು, ಹಿತ ರೂಪ ಮಿದು, ಅಹಿತ ಪ್ರಕಾರವಿದು, ಸುಖಮಿದು, ದುಃಖೋಪಾತ್ತಮಿದು' ಎಂದು' ಅರಿಪುಗುಂ'.

ಈ ಅರಿವನ್ನು, ಕಾವ್ಯ ಗುರುವಿನ ಅಭಿಪ್ರಾಯಗಳನ್ನೂ, ತನ್ನ ಗಮಕ ಕಲೆ ಯಿಂದ ಹೃದಯಂಬುಗುವಂತೆ ನಿರೂಪಿಸುವ ಶಕ್ತಿಯನ್ನು ಪಡೆದ ಶಕುಂತಲಾಬಾಯಿ ಕನ್ನಡ ರಸಿಕರಿಗೆ ಕಾವ್ಯ ಸ್ವಾದವನ್ನು ಉಣಬಡಿಸಿ ಕೃತಾರ್ಥಳಾಗಿದ್ದಾರೆ.

ಸಂಸ್ಕೃತಿಯು ಹೊರಗಿನ ಬಣ್ಣವಲ್ಲ; ಮೇಲು ಹೊದಿಕೆಯ ಸಂಪಿಗೆಯ ಹೂವೂ ಅಲ್ಲ. ಅದು ಅಂತರಂಗದ ಪರಿಶುದ್ಧತೆ. ಈ ಪರಿಶುದ್ಧ ಜೀವನವೇ ಶ್ರೀಮತಿ ಶಕುಂತಲಾ ಬಾಯಿಯವರ ಅರವತ್ತು ವರುಷಗಳ ಸಾಧನೆ.

ಈ ಗಾನ ವಿದುಷಿ ಪ್ರಚಾರದಿಂದ ಬಹುದೂರ. ಕಾವ್ಯವಾಚನದಿಂದ ಹೃದಯ ಸಂಸ್ಕಾರ. ಈ ಸಂಸ್ಕಾರವೇ ಸಂಸ್ಕೃತಿ ಎಂಬುದನ್ನರಿತವರು ಇವರು.

ಮಣಿಪಾಲ ಸಮ್ಮೇಳನದಲ್ಲಿ ಗುರುವರ್ಯ ಡಾ. ದ. ರಾ. ಬೇಂದ್ರೆ ಅವರ ಪತ್ನಿ, ನನ್ನ ದಿವಂಗತ ಸೌಭಾಗ್ಯವತಿ ಗಂಗಾ ಹಾಗೂ ತಂಗಿ ಶಕುಂತಲಾಬಾಯಿ ಜತೆ ಜತೆ ಯಾಗಿಯೇ ಸಮ್ಮೇಳನದಲ್ಲಿ ಕಾಣುತ್ತಿದ್ದರು. ಉಡುಪಿಗೆ ಹೋಗಲಿ, ಬೇರೆ ದೇವಸ್ಥಾನ ಗಳಿಗೆ ಹೋಗಲಿ ಒಟ್ಟಾರೆ ಹೋಗುವವರು. ಈ ಆತ್ಮೀಯತೆಯೇ ಜೀವನದ ಸಿದ್ಧಿ ಸ್ವರೂಪವಾಗಿತ್ತು. ಈ ಸಮ್ಮೇಳನದಲ್ಲಿಯೇ ನಾನು ಶಕುಂತಲಾಬಾಯಿಯವರಿಗೆ

'ಅಣ್ಣ'ನಾಗಿ ಆಶೀರ್ವದಿಸಿದ್ದು. ಆಶೀರ್ವಾದವೆಂದರೇನು? ಅವರ ಸಂಸ್ಕೃತಿಗೆ ತಲೆ ಬಾಗಿದ್ದು. ಮಾತುಸರಳ; ಯಾವ ಬಿಂಕವೂ ಇಲ್ಲದ ಮುಗ್ಧ ಮಧುರತೆ ಇವರದು. ಈ ಮಧುರ ಜೀವನವೇ ಜೀವ ಮಾಧುರ್ಯವನ್ನು ನೀಡುವ ದಿವ್ಯನಿಧಿ.

ಧರ್ಮಸ್ಥಳದಲ್ಲಿ ನಾವೆಲ್ಲ ಮತ್ತೊಮ್ಮೆ ಒಟ್ಟುಗೂಡಿದಾಗ ನಮ್ಮದೇ ಒಂದು —ಸಾಹಿತ್ಯ ಸಂಸ್ಕೃತಿ ಸಮ್ಮೇಳನವಾಗಿತ್ತು. ಅಚ್ಚಳಿಯದ ಹಸನ್ಮುಖ, ಇನ್ನೂ ನಾಗಿದ ದನಿ ಸಂಪತ್ತು. ಕಾವ್ಯಾಸಕ್ತಿ ಅವರ ಪರಿಪಕ್ವತೆಯನ್ನು ಸೂಸುತ್ತಿದ್ದವು. ಈ ನಿರಾಡಂಬರ ವ್ಯಕ್ತಿ ನನ್ನ ಪತ್ನಿ ದಿ. ಗಂಗಾ. ಬೆರಗಿನ ಮುತ್ತೈದೆಯಾಗಿ ಪರಿಣಮಿಸಿದ್ದಳು. ಧರ್ಮಸ್ಥಳದಿಂದ ಬೆಂಗಳೂರಿಗೆ ಬಂದಾಗ ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾವ್ ಅವರ 'ಮಕ್ಕಳ ಮಂಟಪ'ದ ಮನೆಯಲ್ಲಿ ನಾವು ಪಡೆದುಕೊಂಡ ಆತಿಥ್ಯವನ್ನು ನಾನು ಇನ್ನೂ ನೆನೆಯುತ್ತಿದ್ದೇನೆ. ಇವರ ಕಡೆಯ ಮಗಳು ಚಿ. ವಸಂತಾ (ಈಗ ದೊಡ್ಡವಳಾಗಿದ್ದಾಳೆ) ನಮ್ಮ ಮಾತನ್ನು ಕೇಳುತ್ತಿದ್ದಾಳೇ ವಿನಾ ಅವಳು ಮಾತಾಡುತ್ತಿರಲಿಲ್ಲ. ಅವಳಿಗೆ ಅಂದು ನಾನು ಕೊಟ್ಟ ಬಿರುದು 'ಮೌನ ಗಂಭೀರೆ' ಈ ಭೇಟಿ ರಸನಿಮಿಷಗಳ ರಸದೌತಣವಾಗಿತ್ತು. ಅಂದು ಶಕುಂತಲಾಬಾಯಿ ತೋರಿದ ಆತ್ಮೀಯತೆಯನ್ನು ನಾನು ಇಂದಿಗೂ ನೆನೆಯುತ್ತೇನೆ.

ಶಕುಂತಲಾಬಾಯಿ ಆರ್ಥಿಕ ಲಾಭಕ್ಕಾಗಿ ತಂಬೂರಿಯನ್ನು ಮಿಡಿಯಲಿಲ್ಲ, ಅವರಿಗೆ ಡಿ.ವಿ.ಜಿ. ಹೇಳುವ,

> ಸಂಗೀತ ತಾಂ ದೂಗಿಪುದು, ಹೊಟ್ಟೆ ತುಂಬೀತೇ ?!
> ತಂಗದಿರನೆಸಕ ಕಣ್ಗಮೃತ, ಕಣಜಕದೇಂ ? ||
> ಅಂಗಡಿಯ ಮಾಡದಿರು, ಸುಕೃತಪ್ರಸಕ್ತಿಯಲಿ |
> ಪೊಂಗುವಾತ್ಮವೆ ಲಾಭ—ಮಂಕುತಿಮ್ಮ || (ಮಂತಿ. 498)

ಡಿ.ವಿ.ಜಿ. ಯವರಈ ವಾಕ್ಯಗಳ ಅರಿವಿತ್ತು. ಅಲ್ಲದೆ 'ಕಲೆಗಳಲಿ ಪರಮಕಲೆ ಜೀವನದ ಲಲಿತ ಕಲೆ'ಇದನ್ನು 'ಒಳಹದದಿಂದ' ತಿಳಿದು ಕೊಂಡ ಸಾಧ್ವಿ ಇವರು. 'ಮಂಗಳೋನ್ನತ ಕಲೆಯೇ'ಇವರ ಜೀವದುಸಿರು. ಈ ಉಸಿರನ್ನು ಶಕುಂತಲಾ ಬಾಯಿ ತಮ್ಮ' ತಾರಕ ತಂಬೂರಿ'ಯ ಆಶ್ರಯದಲ್ಲಿ ಸೂಸುತ್ತಲೇ ಇದ್ದಾರೆ.

ಶಕುಂತಲಾ–ಪಾಂಡುರಂಗರಾವ್ ಅವರದು ಆದರ್ಶದಾಂಪತ್ಯ. ಆದರ್ಶವನ್ನು ಕಟ್ಟಿಕೊಂಡ ಕನ್ನಡ ಮಾಧ್ಯಮದ ಮಕ್ಕಳ ಮಂಟಪ'ವನ್ನು ಕಟ್ಟಿದ ಪಾಂಡುರಂಗ ರಾಯರು ಪತ್ನಿಯ ದನಿ ಪೂರ್ವ ಪೀಠಿಕೆಯಾಗಿ ಅರ್ಥಸ್ವಾರಸ್ಯವನ್ನು ಹೆಚ್ಚಿಸುವ ಮಹಾನುಭಾವರು. ಜೀವನದಿ ಹರಿಯುತ್ತಲೇ ಇರುತ್ತದೆ.

ಸಂಗೀತ ಸುಧಾಜಲದಲ್ಲಿ ಶ್ರೀಮತಿ ಶಕುಂತಲಾಬಾಯಿ ಮುಳುಗಿ ಎದ್ದು ಪಾವನರಾಗಿದ್ದಾರೆ. ಅರವತ್ತು ವರುಷ ಜೀವನದಲ್ಲಿ ಬರುವ ಒಂದು ಘಟ್ಟ. ಇದು ಪರಿಪಕ್ವದೆಶೆಗೆ ನಾಂದಿಯೆಂದೂ ಹೇಳುತ್ತಾರೆ.

ಈ ತಾಯಿ ತನ್ನ ಗಮುಕಕಲೆಯ 'ಸೌಭಾಗ್ಯ ತಂಬೂರಿ'ಯಾಗಿ ನಾದಲೋಕಕ್ಕೆಲ್ಲ ನಾದ ಮಾಧುರ್ಯವನ್ನು ಸೂಸಲೆಂದು ಹಾರೈಸುತ್ತೇನೆ.

ಜೇನುಧಾರೆ

ಎಂ. ಕೆ. ಇಂದಿರಾ

ಕೋಗಿಲೆಗೆ ವಯಸ್ಸು ಮಾಗಿದಷ್ಟೂ ಕಂಠಮಾಧುರ್ಯ ಸೂರ್ಮಡಿಯಾಗುವು ದಂತೆ. ಅಂತೆಯೇ ಸೌಭಾಗ್ಯವತಿ, ಶಕುಂತಲಾಬಾಯಿ ಪಾಂಡುರಂಗರಾವ್ ಅವರ ಕೊರಳುಲಿ ಆರುದಶಕ ದಾಟಿದರೂ ದಿನದಿನಕ್ಕೂ ಜೇನುಧಾರೆಯುಂಟಾಗುತ್ತದೆ.

ಸುಮಾರು ಹತ್ತುವರ್ಷಗಳ ಹಿಂದೆ ಮೊದಲಬಾರಿಗೆ ಅವರು ನಮ್ಮ ವಿಲ್ಸನ್ ಗಾರ್ಡನ್ನಿನ ಶ್ರೀರಾಮಮಂಡಲಿಯಲ್ಲಿ 'ರಾಮಾಯಣದರ್ಶನದ' ಅರಣ್ಯಕಾಂಡದ 'ಓ ಲಕ್ಷ್ಮಣಾ' ಎಂಬ ಭಾಗವನ್ನು ತಂಬೂರಿಯ ಶ್ರುತಿಯಲ್ಲಿ ಭಕ್ತಿ-ಭಾವಪರವಶರಾಗಿ ಹಾಡಿದ್ದನ್ನು ಕೇಳಿದೆ. ಎಳೆತನದಲ್ಲಿಯೇ ನಾಲ್ಕಾರು ರಾಮಾಯಣವನ್ನು ಓದಿ ಮುಗಿಸಿಯಾಗಿತ್ತು, ನಾನು ಇತ್ತೀಚೆ 'ರಾಮಾಯಣದರ್ಶನ'ವನ್ನು ಓದಿದ್ದೆ. ಕವಿ ಕುವೆಂಪು ಅವರ ಕಾವ್ಯ ಶಿಲ್ಪಕ್ಕೆ ಶ್ರೀಮತಿ ಶಕುಂತಲಾಬಾಯಿಯವರ ಭಾವ-ರಾಗ ರಸ ಮಾಧುರ್ಯವೂ ಸೇರಿ ಶ್ರಾವಕರು ಮೈಮರೆಯುವಂತಿತ್ತು.

'ರಾಗರಸ, ಸಾಹಿತ್ಯಸಪ್ಪೆ' ಅನ್ನುವಂತೆ ಎಂತಹ ನೀರಸ ಕವಿತೆಯನ್ನಾದರೂ ರಸತುಂಬಿ ಹಾಡುವ ದೈವೀಕ ವರ ಕೆಲವರಿಗೆ ಮಾತ್ರವಿದೆ. ಅವರಲ್ಲಿ ಭಕ್ತಿ, ಭಾವ, ತನ್ಮಯತೆ, ಶ್ರದ್ಧೆ, ನಿರ್ಮಲತೆಯಿಂದ ಭಾರತೀಯ ಸಂಗೀತಶಾಸ್ತ್ರಕ್ಕೆ ಒಂದಿಷ್ಟೂ ಅಪಚಾರವಾಗದಂತೆ ಎಚ್ಚರಿಕೆಯಿಂದ ಹಾಡುವವರು ನಮ್ಮ ಶಕುಂತಲಾಬಾಯಿಯವರು. ಎಲ್ಲ ಗೃಹಿಣಿಯರಿಗೂ ಇರುವಂತೆ ಸಾಂಸಾರಿಕವಾದ ನಾನಾ ಬಗೆಯ ತೊಂದರೆಗಳು ಇದ್ದರೂ ಅವರ ಪತಿ ಶ್ರೀಯುತ ಪಾಂಡುರಂಗರಾವ್ ಅವರ ನಿರಂತರ ಪ್ರೋತ್ಸಾಹದಿಂದ ಈ ಗಾನ ತಪಸ್ಸನ್ನು ಅವ್ಯಾಹತವಾಗಿ ನಡೆಸಿಕೊಂಡು ಬಂದಿದ್ದಾರೆ ಸೋದರಿ ಶಕುಂತಲಾ ಬಾಯಿಯವರು. ಅಸಂಖ್ಯ ಪ್ರಶಸ್ತಿಗಳು, ಸನ್ಮಾನಗಳನ್ನು ಪಡೆದಿದ್ದರೂ ತಮ್ಮ ಮಾಧ್ವ ಮನೆತನದ ಲಾಂಛನಗಳಾದ ಹದಿನೆಂಟು ಮೊಳದ ಕಚ್ಚೆಸೀರೆ, ಬುಚಡ, ಗುಂಡು ಕುಂಕುಮ ಇವುಗಳನ್ನು ಧರಿಸಿ ಉತ್ತರ ಕರ್ನಾಟಕದ ಪೇಶ್ವೆಮನೆತನ, ದೇಸಾಯಿ ಮನೆ ತನಗಳ ನೆನಪುಮಾಡಿಕೊಡುತ್ತಾರೆ ಈ ತಾಯಿ. ಇಪ್ಪತ್ತನೇ ಶತಮಾನದ ಯಾವ ಹೊರಹೊಳಪುಗಳಿಗೂ ಮಾರುಹೋಗದ ಸಂಪ್ರದಾಯಶೀಲ ಮಹಿಳೆ ಈ ಗೃಹಿಣಿ. ಈಕೆಯ ಸಕಲೈಶ್ವರ್ಯವೂ ಈ ಗಾನಸಂಪತ್ತು. ಸಭೆ-ಸಮಾರಂಭ, ಆಕಾಶವಾಣಿ, ದೈವ ಸನ್ನಿಧಿಗಳಲ್ಲಿ; ಕರ್ನಾಟಕದ ಬನಬನಗಳಲ್ಲಿ ಕೊರಳೆತ್ತಿಹಾಡುವ ಈ ಕನ್ನಡ ಕೋಗಿಲೆಗೆ ಇದೀಗ ಅರವತ್ತು ಸಂವತ್ಸರಗಳು ತುಂಬಿವೆ. ಈ ಸಕಲ ಸೌಭಾಗ್ಯಗ ಳೊಂದಿಗೆ 'ಶಕುಂತಲಾಬಾಯಿ ಪಾಂಡುರಂಗರಾವ್' ಎಂಬ ಪವಿತ್ರನಾಮ ನಿರಂತರ ವಾಗಿಯೂ ಬೆಳಗುತ್ತಿರಲಿ; ಉಲಿಯುತ್ತಿರಲಿ-ಎಂದು ಹೃದಯತುಂಬಿ ಹಾರೈಸುತ್ತೇನೆ.

ಸಮಾಜ-ಶಿಕ್ಷಣ ಕೈಕೊಂಡ ಸಮರ್ಥದಂಪತಿ

ಎಚ್. ಎಸ್. ಪಾಟೀಲ

ಶ್ರೀಮತಿ ಶಕುಂತಲಾಬಾಯಿ ಮತ್ತು ಶ್ರೀ ಪಾಂಡುರಂಗರಾಯರದು ಒಂದು ಅನುಪಮವಾದ 'ಯುಗಲಬಂದಿ'. ಇದು ಶ್ರೀಮತಿ ಶಕುಂತಲಾಬಾಯಿಯವರನ್ನು ಗೌರವಿಸುವ ಸಂದರ್ಭವಾಗಿದ್ದರೂ, ಈ ದಂಪತಿಯಲ್ಲಿ ಒಬ್ಬರನ್ನು ಬಿಟ್ಟು ಇನ್ನೊಬ್ಬರ ಬಗ್ಗೆ ಮಾತನಾಡುವದಾಗಲಿ, ಬರೆಯುವದಾಗಲಿ ಉಚಿತವಲ್ಲ, ಅದೇಕೆ ಸಾಧ್ಯವೇ ಇಲ್ಲ. ಅವರ ಪ್ರಾಪಂಚಿಕ ಜೀವನವು ಅಷ್ಟು ಪರಸ್ಪರ ಪೂರಕವಾಗಿದೆ. ಅವರ ಸಾಮಾಜಿಕ ಜೀವನದಲ್ಲಿ ಒಬ್ಬರು ಕೈಕೊಂಡ ಕಾರ್ಯವೂ ಇನ್ನೊಬ್ಬರು ಮಾಡುತ್ತಿರುವ ಕೆಲಸಕ್ಕೆ ಅಷ್ಟು ಪೋಷಕವಾಗಿರುತ್ತದೆ.

ಶ್ರೀಮತಿ ಶಕುಂತಲಾಬಾಯಿ ಮತ್ತು ಶ್ರೀ ಪಾಂಡುರಂಗರಾಯರ ಜೀವನವು ತನ್ನ ಮಟ್ಟದಲ್ಲಿಯೇ ಅತ್ಯಂತ ಸಂತೃಪ್ತವಾದುದು. ಒಬ್ಬರಿಗೊಬ್ಬರ ಸಂಪೂರ್ಣ ಮತ್ತು ಅಷ್ಟೇ ಸಾರ್ಥಕವಾದ ಸಹಕಾರದಿಂದ ಯಶಸ್ವಿಯಾಗಿ ಸಾಗಿದ ಇವರ ಸಂಸಾರದ ಶ್ರೇಯಸ್ಸಿಗೆ ಅವರಿಬ್ಬರ ತಿಳಿವಳಿಕೆ ಮತ್ತು ಸಮಭಾವದ ಆಚರಣೆಗಳು ಕಾರಣವಾಗಿವೆ.

ಶ್ರೀಮತಿ ಶಕುಂತಲಾಬಾಯಿಯವರು ಗಮಕಕಲೆಯ ಕಣ್ವ ಎನ್ನಬಹುದಾದ ಆ ಮಹಾಪುರುಷ ದಿವಂಗತ ಸಂತೇಬೆನ್ನೂರ ಬಿಂದೂರಾಯರ ಪಟ್ಟಶಿಷ್ಯೆಯಾಗಿ ವಿಜೃಂಭಿಸಿದುದೊಂದು ಕರ್ಣಾಟಕದ ಸುದೈವವೆಂದೇ ಹೇಳಬಹುದು. ಕನ್ನಡದ ಕಣ್ವವೆನಿಸಿಕೊಂಡು ಕಣ್ಮರೆಯಾದ ಶ್ರೀ ಬಿ. ಎಂ. ಶ್ರೀಕಂಠಯ್ಯ ಅವರು ಕರ್ನಾಟಕದ ಗಮಕಕಲೆಯ ಐತಿಹಾಸಿಕ ಮಹತ್ವವನ್ನು ಮತ್ತು ಇಂದಿನ ಪರಿಸ್ಥಿತಿಯಲ್ಲಿ ಸಮಾಜಶಿಕ್ಷಣದ ಕ್ಷೇತ್ರದಲ್ಲಿ ಅದು ವಹಿಸಬಹುದಾದ ಮಹತ್ತರವಾದ ಪಾತ್ರವನ್ನು ಅರಿತು ಕನ್ನಡ ಸಾಹಿತ್ಯ ಪರಿಷತ್ತಿನ ಮೂಲಕ ಗಮಕಕಲೆಯ ಶಿಕ್ಷಣವನ್ನು ಹೊಸಪೀಳಿಗೆಯ ಯುವಕ ಯುವತಿಯರಿಗೆ ಕೊಡಿಸಬೇಕೆಂಬ ಕನಸನ್ನು ಕಂಡಾಗ ಅವರ ಈ ಕನಸನ್ನು ನೆನಸನ್ನಾಗಿ ಪರಿವರ್ತಿಸಲಿಕ್ಕೆ ದಿ. ಸಂ. ಗೋ. ಬಿಂದೂರಾಯರಂತಹ ಯೋಗ್ಯ ಸಹಕಾರಿಯು ಸಿಕ್ಕಿದುದು ಅಪೂರ್ವ ಲಾಭವೆಂದೇ ಹೇಳಬಹುದು. ಈ ಶತಮಾನದ ಮೂರನೆಯ ದಶಕದಲ್ಲಿ ಆರಂಭವಾದ ಈ ಯೋಜನೆಯಲ್ಲಿ ತರಬೇತಿಯನ್ನು ಪಡೆದ ಮೊದಲ ವಿದ್ಯಾರ್ಥಿಗಳಲ್ಲಿ ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾಯರು ಇದ್ದುದು ಗಮನೀಯವಾದ ಅಂಶವಾಗಿದೆ. ಅಂದಿನಿಂದ ಇಂದಿನವರೆಗೆ ಶ್ರೀಮತಿಯವರು ರನ್ನ, ಗದುಗಿನ ನಾರಣಪ್ಪ, ಜೈಮಿನಿ, ರತ್ನಾಕರವರ್ಣಿ, ಹರಿಹರ, ರಾಘವಾಂಕರೇ ಮೊದಲಾದ ಪ್ರಾಚೀನ ಮಧ್ಯಕಾಲೀನ ಕವಿಗಳ ಕಾವ್ಯಗಳನ್ನಲ್ಲದೆ ಕುವೆಂಪು, ಪುತಿನರಂತಹ ಅರ್ವಾಚೀನ ಕವಿಗಳ ರಚನೆಗಳನ್ನು ಕೂಡ ತಮ್ಮ ಸುಶ್ರಾವ್ಯವಾದ ಕಂಠದಲ್ಲಿ ಹಾಡಿ ಇಡಿಯ ಕರ್ನಾಟಕದ ತುಂಬೆಲ್ಲ, ಅದೇಕೆ ಹೊರನಾಡಿನ ಪ್ರಮುಖ ಕೇಂದ್ರಗಳೆನಿಸಿದ ಮುಂಬಯಿ, ಹೈದರಾ

ಬಾದು, ದಿಲ್ಲಿಗಳಲ್ಲಿ ಕೂಡ ಕನ್ನಡಕಾವ್ಯವನ್ನು ಲೋಕಪ್ರಿಯಗೊಳಿಸಿದ್ದಾರೆ, ಕರ್ನಾಟಕದ ಸಂಸ್ಕೃತಿಯನ್ನು ಸಂವರ್ಧಿಸಿದ್ದಾರೆ.

ಅಷ್ಟರಲ್ಲಿ ಶ್ರೀ ಪಾಂಡುರಂಗರಾಯರು ಶಿಕ್ಷಕರೆಂದು ತರಬೇತಿಯನ್ನು ಪಡೆದು, ಒಂದೆರಡು ಸರಕಾರೀ ಮತ್ತು ಖಾಸಗೀ ಸಂಸ್ಥೆಗಳಲ್ಲಿ ಸೇವೆಯನ್ನು ಸಲ್ಲಿಸಿ ಅನುಭವವನ್ನು ಪಡೆದು ತಮ್ಮದೇ ಆದ ಮಕ್ಕಳ ಮಂಟಪ ಎಂಬ ಶಿಶುವಿದ್ಯಾಲಯವನ್ನು ಮತ್ತು ಬಾಲಸಾಹಿತ್ಯದ ಪ್ರಕಾಶನಸಂಸ್ಥೆಯನ್ನು ಆರಂಭಿಸಿದ್ದರು. ಶ್ರೀಯುತರು ಅಂತು ಪಾಠ ಪ್ರವಚನಗಳಿಂದ ಲೋಕಶಿಕ್ಷಣವನ್ನು ಕೈಕೊಂಡರೆ ಶ್ರೀಮತಿಯವರು ಆ ಕಾರ್ಯದಲ್ಲಿ ಪತಿಯೊಡನೆ ಸಕ್ರಿಯವಾದ ಸಹಕಾರವನ್ನು ನೀಡಿದರು ಮತ್ತು ಅದಕ್ಕೆ ಪೂರಕವಾಗಿ ಗಮಕದ ಮಾಧ್ಯಮದಿಂದ ತಾವು ಸಮಾಜ ಶಿಕ್ಷಣವನ್ನು ಪ್ರಚುರಗೊಳಿಸಿದರು. ಈಚೆಗೆ ಸಂಸ್ಕೃತಿ ಪ್ರಸಾರ ಎಂಬ ಹೆಸರಿನಲ್ಲಿ ನಡೆದ ಕಾರ್ಯಕ್ರಮವನ್ನು ಈ ದಂಪತಿಯು ಯಾವ ಸಂಸ್ಥೆ ಸಂಘಟನೆಗಳ ಸಂಪರ್ಕ-ಸದಸ್ಯತ್ವವನ್ನು ಪಡೆಯದೇ ಕೇವಲ ತಮ್ಮ ವ್ಯಕ್ತಿಗತ ಪ್ರಯತ್ನದಲ್ಲಿ ಕೈಕೊಂಡು ಲೋಕಶಿಕ್ಷಣದಂತಹ ವ್ಯಾಪಕವಾದ ಮತ್ತು ಪವಿತ್ರವಾದ ಕಾರ್ಯವನ್ನು-ಸಾಕಷ್ಟು ಭದ್ರವಾದ ತಳಹದಿಯ ಮೇಲೆ ಸ್ಥಾಪಿತವಾಗಿ, ಸುವ್ಯವಸ್ಥಿತವಾದ ಯೋಜನೆಯ ಮೇರೆಗೆ ಕಾರ್ಯಮಾಡುತ್ತಿದ್ದ ಸಂಘಸಂಸ್ಥೆಗಳಿಗಿಂತ ಹೆಚ್ಚಿನ ಪರಿಣಾಮವನ್ನುಂಟುಮಾಡುವಂತೆ ಮತ್ತು ದೀರ್ಘಕಾಲ ಪ್ರಭಾವವನ್ನು ಬೀರುವಂತೆ ಮಾಡಿದ್ದಾರೆ, ಎಂಬ ಕಾರಣದಿಂದಲೇ ಅವರಿಬ್ಬರ ಹೆಸರುಗಳು ಕರ್ನಾಟಕದಲ್ಲೆಲ್ಲ ಈಗ ಮನೆಮನೆಗಳಲ್ಲಿ ಪರಿಚಿತವಾಗಿವೆ.

ಈ ಪತಿಪತ್ನಿಯರ ಪರಿಚಯವು ನಮಗಾಗಿ ಈಗ ಅಯ್ದು ದಶಕಗಳಷ್ಟಾಗಿದ್ದರೂ ಅವರ ನಿಕಟಸಂಪರ್ಕವು ನನಗಾದುದು ಅವರು ದಿಲ್ಲಿಗೆ ಮೊದಲನೆಯ ಬಾರಿ ಬಂದಾಗ್ಗೆ. ಭಾರತಕ್ಕೆ ಸ್ವಾತಂತ್ರ್ಯವು ದೊರೆತ ಸಂಧಿಕಾಲದಲ್ಲಿ ನಾನು ಮುಂಬಯಿಯಿಂದ ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಸಮಿತಿಯ ಸದಸ್ಯನೆಂದು ಆ ಸಮಿತಿಯ ಸಭೆಗೆಂದು, ಬೇರೆ ಸಮಾರಂಭಗಳಿಗೆಂದು ಬೆಂಗಳೂರಿಗೆ ಬಂದಾಗ್ಗೆ ಈ ಅಸಾದೃಶವಾದ ಜೋಡಿಯ ಪರಿಚಯವಾಗಿದ್ದರೂ, ಅವರು ರಾಷ್ಟ್ರ ಗೌರವರನ್ನು ಸ್ವೀಕರಿಸಲಿಕ್ಕೆಂದು ರಾಜಧಾನಿಗೆ ಬಂದಾಗ್ಗೆ ಅವರಿಗೆ ಅಲ್ಪಾವಧಿಯ ಆತಿಥ್ಯವನ್ನು ಒದಗಿಸುವ ಸದವಕಾಶವು ನಮಗೆ ಲಭಿಸಿತ್ತು. ನಾನು ದಿಲ್ಲಿಗೆ ಕೆಲಸಕ್ಕೆಂದು ಹೋಗಿ ಅದೇ ನಾಲ್ಕಾರು ವರ್ಷಗಳಾಗಿದ್ದವು. ಅಲ್ಲಿ ದೆಹಲಿ ವಿಶ್ವವಿದ್ಯಾಲಯ ಕನ್ನಡ ಸಾಹಿತ್ಯ ಸಮಿತಿ, ದಿಲ್ಲಿ ಕರ್ನಾಟಕ ಸಂಘ, ದಿಲ್ಲಿ ಕನ್ನಡಪಾಠಶಾಲೆಯೆ ಮೊದಲಾದ ಸಂಸ್ಥೆಗಳ ಆಶ್ರಯದಲ್ಲಿ ಕನ್ನಡದ ಕೆಲಸವನ್ನು ಕೈಕೊಂಡು ಭಾಷಣ, ನಾಟಕ, ಕಾವ್ಯಗಾಮನಗಳೇ ಮೊದಲಾದ ಕಾರ್ಯಕ್ರಮಗಳ ಮೂಲಕ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ನಾವು ತೊಡಗಿದಾಗ್ಗೆ ಶ್ರೀಮತಿ ಶಕುಂತಲಾಬಾಯಿಯವರ ಗಮಕಕಾರ್ಯಕ್ರಮವೊಂದನ್ನು ಗೊತ್ತುಪಡಿಸಿದುದು ಅಲ್ಲಿಯ ಕನ್ನಡಿಗರಿಗೆ ವಿಶಿಷ್ಟವಾದ ರಸದೂಟವಾಗಿ ಪರಿಣಯಿಸಿತು. ಅಂದು ಶ್ರೀಮತಿಯವರು ಕುಮಾರವ್ಯಾಸನಿಂದ ಹಾಡಿ ತೋರಿಸಿದ ಭಾಗದಿಂದ ಸಭಾಸದರೆಲ್ಲ ಸಂತೋಷ ಅಭಿಮಾನಗಳಿಂದ ಪುಳಕಿತರಾಗಿದ್ದರು. ಗಮಕದಂತಹ ಪ್ರಭಾವಶಾಲಿ

ಯಾದ ಸಾಧನದಿಂದ ಸಂಗೀತದ ಅಭಿರುಚಿಯನ್ನು ಹೆಚ್ಚುಗೊಳಿಸಿ ಸಾಹಿತ್ಯದ ಸವಿಯನ್ನು ಮತ್ತು ತಿರುಳನ್ನು ಸಭಿಕರಿಗೆ ನೀಡಿದ ಆ ಕಾರ್ಯಕ್ರಮವು ದಿಲ್ಲಿಯ ಕನ್ನಡಿಗರಿಗೆ ನವೋನವವೆನಿಸಿದಂತೆಯೇ ಆಕರ್ಷಕವೂ ಆಯಿತು.

ಅದು ಶ್ರೀಮತಿ ಶಕುಂತಲಾಬಾಯಿಯವರ ವೈಶಿಷ್ಟ್ಯ ಎನ್ನಬಹುದು. ಅವರ ಗುರುಗಳು ಅವರಿಗೆ ಹೇಳಿದಂತೆ ವಿವಿಧರಾಗಗಳನ್ನು ಆ ಆ ಸಂದರ್ಭ ಸನ್ನಿವೇಶಗಳಿಗೆ ಅನುರೂಪವಾಗಿ ಬಳಸಬೇಕೆಂಬುದಷ್ಟೇ ಅಲ್ಲದೆ ಸಾಹಿತ್ಯಕೃತಿಯು ತನ್ನ ಶುಚಿಯನ್ನು ಕೂಡ ಕಾಯ್ದುಕೊಳ್ಳಬೇಕು ಎಂಬುದಾಗಿತ್ತು. ಗಾಯಕರು ಸಾಮಾನ್ಯವಾಗಿ ಗಾಯನದಲ್ಲಿ, ಅದರ ವಿವಿಧ ವಿನ್ಯಾಸಗಳಲ್ಲಿ ತಲ್ಲೀನರಾದಾಗ್ಗೆ ರಾಗ ರಸ ಆದರೆ ಪದ ಕಸ ಎಂಬ ಅಭಿಪ್ರಾಯವನ್ನು ತಳೆದಿರುತ್ತಾರೆ. ಅಂತೆಯೇ ಆ ರಾಗದ ವಿಸ್ತಾರಕ್ಕೆ, ಆಣಿಮಾಡಿಕೊಂಡ ಹಾಡಿನ ಬೇರೆಬೇರೆ ಶಬ್ದ ಮತ್ತು ಪದಪುಂಜಗಳ ಅರ್ಥಕ್ಕೆ, ಅವುಗಳ ಉಚ್ಚಾರಕ್ಕೆ ಮತ್ತು ಸ್ಥಾನಕ್ಕೆ ಅವರು ಗಮನಕೊಡುವದಿಲ್ಲ. ಅವರಂತೆಯೇ ಅನೇಕ ಗಮಕಿಗಳು ಸಾಹಿತ್ಯಕೃತಿಯ ವೈಶಿಷ್ಟ್ಯಕ್ಕೆ ಕೃತಿಕಾರನು ಬಳಸಿದ ಶಬ್ದಗಳ ಗಾಂಭೀರ್ಯಕ್ಕೆ, ಪಾವಿತ್ರ್ಯಕ್ಕೆ ಮತ್ತು ಅವುಗಳಅರ್ಥವೈವಿಧ್ಯಕ್ಕೆ ಹೆಚ್ಚು ಲಕ್ಷ್ಯಕೊಡದವರೂ ಇರುತ್ತಾರೆ. ಆದರೆ ಶ್ರೀಮತಿ ಶಕುಂತಲಾಬಾಯಿಯವರ ಹಿರಿಮೆ ವ್ಯಕ್ತಿತ್ವವು ಅವರ ಶುದ್ಧವಾದ ವಾಣಿಯಲ್ಲಿದೆ. ಸಾಹಿತ್ಯಕೃತಿಯಲ್ಲಿ ಉಪಯೋಗಕ್ಕೆ ಬಂದಿರುವ ತರತರದ ಶಬ್ದಗಳು, ಪದಪುಂಜಗಳು, ಶಬ್ದಸಂಪುಟಗಳು ಮತ್ತು ಶಬ್ದ ಸಮುದಾಯಗಳು ತನ್ನ ಅರ್ಥವನ್ನು ಕಳೆದುಕೊಳ್ಳುವಂತೆ ಅವುಗಳನ್ನು ಉಚ್ಚರಿಸುವುದಾಗಲಿ ಪರಿಚ್ಛೇದಗೊಳಿಸುವದಾಗಲಿ ಅವುಗಳಲ್ಲಿ ಅಡಕವಾಗಿರುವ ವಿಚಾರಪ್ರಣಾಲಿಯನ್ನುರೂಪಗೆಡುವಂತೆ ಭಂಗಗೊಳಿಸುವುದಾಗಲಿ ಇವರ ಕೈಯಿಂದ ಆಗುವುದಿಲ್ಲ. ಅಷ್ಟೇ ಅಲ್ಲದೆ ಪ್ರತಿಯೊಂದು ಶಬ್ದವು ತನ್ನ ಅರ್ಥವನ್ನು ಸರಿಯಾಗಿ, ಸಮರ್ಪಕವಾಗಿ ಸಂಪೂರ್ಣವಾಗಿ ವ್ಯಕ್ತಗೊಳಿಸುವಂತೆ ಒಂದೊಂದು ಶಬ್ದಯೋಜನೆಯಲ್ಲಿ ಅದು ತನ್ನ ಧ್ವನಿಯನ್ನು ವಿದ್ರೂಪಗೊಳಿಸದೇ ವೈಶಿಷ್ಟ್ಯವನ್ನು ಉಳಿಸಿಕೊಂಡು, ಅದನ್ನು ಅಭಿವ್ಯಕ್ತಗೊಳಿಸುವ ವೈಶಿಷ್ಟ್ಯ ಶ್ರೀಮತಿ ಶಕುಂತಲಾಬಾಯಿಯವರದಾಗಿದೆ, ಅಂತೆಯೇ ಅವರ ವಾಣಿಯಲ್ಲಿ ರಾಗರಸವಾಗಿರುವಂತೆಯೇ ಪದ ಸಹ ಆಗಿರುತ್ತದೆ. ಇದು ಅವರ ಗುಣಗಳಿಂದ ಪಡೆದ ಹಿರಿಯ ಗುಣಗಳೆಲ್ಲ ಒಂದಾಗಿರುವಂತೆಯೆ ಕೃತಿಯಲ್ಲಿ ಕಂಡುಬರುವ ಬೇರೆಬೇರೆ ಭಾವಗಳಿಗೆ ತಕ್ಕಂತೆ ರಾಗವನ್ನಾಗಲಿ, ತಾಳಗಳನ್ನಾಗಲಿ ಆಲಾಪವನ್ನಾಗಲಿ ಬಳಸಿಕೊಳ್ಳುವದೂ ಅವರು ಅವರ ಗುರುಗಳಿಂದ ಪಡೆದ ಲಾಭವಿಶೇಷವಾಗಿದೆ.

ಶ್ರೀಮತಿ ಶಕುಂತಲಾಬಾಯಿಯವರು ಮತ್ತು ಶ್ರೀಪಾಂಡುರಂಗರಾಯರು ನಮ್ಮ ಅತಿಥಿಗಳಾಗಿ ದಿಲ್ಲಿಗೆ ಬಂದ ಇನ್ನೊಂದು ಸನ್ನಿವೇಶವು ಅವರ ವೈಯಕ್ತಿಕ ಸುಸ್ವಭಾವದ ಮತ್ತು ಸ್ತ್ರೀ ಸಹಜವಾದ ಸೌಜನ್ಯದ ಪ್ರತೀಕವಾಗಿದೆ. ಅವರು ಹೀಗೆಯೆ ಒಂದು ರಾಷ್ಟ್ರೀಯ ಉತ್ಸವದಲ್ಲಿ ಭಾಗವಹಿಸಲಿಕ್ಕೆಂದು ಬಂದಾಗ್ಗೆ ಕಾರಣಾಂತರದಿಂದ ನನ್ನ ಮಡದಿಯು ಊರಲ್ಲಿ ಇರಲಿಲ್ಲ. ಮನೆಗೆಬಂದಾಗ್ಗೆ ಅದು ತಿಳಿದಕೂಡಲೇ ಎಳ್ಳಷ್ಟು ಅನುಮಾನಿಸದೇ, ಅನಾನುಕೂಲತೆಯ ಯಾವ ಬೇಸರವನ್ನು ವ್ಯಕ್ತಗೊಳಿಸದೇ ನೆಟ್ಟಗೆ

ಅಡುಗೆಯ ಮನೆಗೆ ಹೋಗಿ ಅವರು ಅದನ್ನು ತಮ್ಮ ಕೈವಶ ಮಾಡಿಕೊಂಡರು. ತುಂಬಿದ ಮನೆಯನ್ನೇ ಬಿಟ್ಟು ನನ್ನ ಅರ್ಧಾಂಗಿಯು ಊರಿಗೆ ಹೋಗಬೇಕಾಗಿದ್ದುದರಿಂದ ಅವರಿಗೇನೂ ತೊಂದರೆಯಾಗಲಿಲ್ಲ. ಆ ಮಾತು ಬೇರೆ! ಆದರೆ ಕಲಾಕೋವಿದರಾಗಿ ಸಕಲ ಸನ್ಮಾನಗಳನ್ನು ಪಡೆಯಲಿಕ್ಕೆಂದು ರಾಜಧಾನಿಗೆ ಬಂದ ತಾವು ಮತ್ತೆ ಇಲ್ಲಿ ಸಟ್ಟುಗವನ್ನು ಹಿಡಿಯಬೇಕಾಯಿತಲ್ಲ ಎಂಬ ಅಳುಕು ಅವರಲ್ಲಿ ಎಷ್ಟೆಷ್ಟೂ ಕಂಡುಬರಲಿಲ್ಲ. ಅದಲ್ಲದೇ ಅದೇ ಸಂದರ್ಭದಲ್ಲಿ ಅತಿಥಿಯಾಗಿ ನಮ್ಮಲ್ಲಿಗೆ ಬಂದಿದ್ದ ಹಿರಿಯಣ್ಣ ಶ್ರೀ ವಿ.ಸೀ. ಅವರು ನಮ್ಮ ಜೊತೆಗಿದ್ದರು. ಅಂತಹ ಹಿರಿಯ ಸಾಹಿತಿಯನ್ನು ತುಂಬಾ ಗೌರವದಿಂದ ಮತ್ತು ನನ್ನನ್ನು ಒಡಹುಟ್ಟಿದವರ ಆತ್ಮೀಯತೆಯಿಂದ ಅವರಿಬ್ಬರು ನಮ್ಮ ಮನೆಯ ಆಡಳಿತದಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸಿ ನೋಡಿಕೊಂಡರು.

ಶ್ರೀಮತಿ ಶಕುಂತಲಾಬಾಯಿ ಮತ್ತು ಅವರ ಸಹಧರ್ಮಚರರು ಈಗ ಎವತ್ತ ಲರು, ಮೂವರು 'ವ'ಕಾರದ ಹೆಸರುಗಳನ್ನು (ವನಜಾ, ವತ್ಸಲಾ, ಮತ್ತು ವಸಂತಾ) ಪಡೆದ ಹೆಣ್ಮಕ್ಕಳು, ಮಮತೆಯ ಮೂರ್ತಿಯಾಗಿದ್ದ ತಾಯಿ, ಅಚ್ಚುಮೆಚ್ಚಿನ ನಾಲ್ಕು ಜನ ಮೊಮ್ಮಕ್ಕಳು, ವಿಧೇಯನೂ ಗುಣಗ್ರಾಹಿಯೂ ಆದ ಮಗ ಇವರೊಡನೆ ತುಂಬಿದ ಪ್ರಪಂಚದಲ್ಲಿ ಅವರು ಸಂತುಷ್ಟ ಜೀವನವನ್ನು ನಡೆಸುತ್ತಿದ್ದಾರೆ. ಸ್ನೇಹಜೀವಿಗಳಾಗಿ ಸಮಾಜದ ಹಿತವನ್ನು ಸಾಧಿಸುತ್ತಿರುವ ಅವರಿಗೆ ಇದಕ್ಕೂ ಹೆಚ್ಚಿನ ಶ್ರೇಯಸ್ಸು ದೊರೆಯಲಿ ಎಂದು ಹಾರೈಸುವವೇ ಈ ಪುಟ್ಟ ಲೇಖನದ ಉದ್ದೇಶವಾಗಿದೆ.

ಗಮಕಕಲೆಗೆ ಗೌರವತಂದ ಸೋದರಿ

ಸಿದ್ಧಯ್ಯ ಪುರಾಣಿಕ

ನಾನು ಸಹೋದರಿ ಶಕುಂತಲಾಬಾಯಿ ಪಾಂಡುರಂಗರಾವ್ ಅವರ ಕಾವ್ಯಗಾಯನವನ್ನು ಮೊದಲ ಸಲ ಕೇಳಿದುದು ಯಾವಾಗ? ನೆನಪಿಸಿ ಹೇಳುವುದು ಕಷ್ಟ. ಆ ಅಮೃತಾನುಭವದ ಬೆಳ್ಳಿಯ ಹಬ್ಬವನ್ನು ಆಚರಿಸಬಹುದೇನೋ! ಅದುವರೆಗೆ 'ಕಾವ್ಯ ಚಂದ್ರಾಪೀಡನ ಕಳೇಬರವಾದರೆ ಗಮಕ ಮಹಾಶ್ವೇತೆಯ ತಪಸ್ಸು' ಇತ್ಯಾದಿ ಉಕ್ತಿಗಳನ್ನು ಕೇಳಿದ್ದೆನಾಗಲಿ ಮೈನವಿರೆಬ್ಬಿಸುವ ಗಮಕ ಕಲೆಯ ಸೊದೆಯ ಸೆಲೆಯನ್ನು ಸವಿದು ನೋಡಿರಲಿಲ್ಲ. ಅಂದು, ಮೈಸೂರಿನ ಕನ್ನಡ ಸಾಹಿತ್ಯ ಸಮ್ಮೇಳನ ಕಾರಣವಾಗಿ, ಸೋದರಿ ಶಕುಂತಲಾ ಬಾಯಿಯವರು ನನ್ನ ಅತ್ಯಂತ ಪ್ರಿಯ ಮಹಾಕಾವ್ಯವಾದ 'ರಾಮಾಯಣ ದರ್ಶನಂ'ದ ಕೆಲವು ಭಾಗಗಳನ್ನು ಗಮಕಕಲೆಗೇ ಗೌರವ ಬರುವ ರೀತಿಯಲ್ಲಿ ಹಾಡಿತೋರಿಸಿದಾಗ ಗಮಕದ ಘನತೆ ನನ್ನ ಗಮನಕ್ಕೆ ಬಂದಿತು. ಅದೊಂದು ಅವಿಸ್ಮರಣೀಯ ಅನುಭವ.

ಆಮೇಲೆ ಕುಮಾರ ಪಾರ್ಕ್ ಬಡಾವಣೆಯಲ್ಲಿ ಈ ಸಹೃದಯ ದಂಪತಿಗಳ ಮನೆಗೆ ಸಮೀಪದಲ್ಲಿಯೇ ಇರುವ ಸುಯೋಗ ನನಗೆ ಸಿಕ್ಕಿತು. ಮೂರು ಬಗೆಯ ಸಂಬಂಧಗಳು ಮುಪ್ಪುರಿಯಾಗಿ ನನ್ನನ್ನು ಈ ಕುಟುಂಬದತ್ತ ಸೆಳೆದುವು. ಮೊದಲನೆಯದಾಗಿ ಪ್ರಾಚೀನ ಕಾವ್ಯಗಳಿಂದ ಆಧುನಿಕ ಭಾವಗೀತೆಗಳವರೆಗೆ ಎಲ್ಲವನ್ನೂ ಗಮಕಕ್ಕೆ ಅಳವಡಿಸಿ ತಮ್ಮ ಕಂಚಿನ ಕಂಠದ ಕಾವ್ಯಗಾಯನದಿಂದ ನನ್ನ ಕಾವ್ಯಾನುಭವಕ್ಕೇ ಹೊಸ ದಿಶೆಯನ್ನು ತೋರಿಸುತ್ತಿದ್ದ ಸೋದರಿ ಶಕುಂತಲಾಬಾಯಿಯವರು; ಎರಡನೆಯದಾಗಿ ನನಗೆ ಪ್ರಿಯ ವಿಷಯವಾದ ಮಕ್ಕಳ ಸಾಹಿತ್ಯವನ್ನು ಬರೆದೂ, ಬರೆಸಿಯೂ, ಸಂಗ್ರಹಿಸಿಯೂ, ಪ್ರಕಟಿಸಿಯೂ ಗಣನೀಯ ಸೇವೆಗೈಯುತ್ತಲಿದ್ದ ಸ್ನೇಹನಿಧಿ ಬಿ. ಶ್ರೀ ಪಾಂಡುರಂಗರಾಯರು; ಮೂರನೆಯದಾಗಿ ನನ್ನ ಚಿಕ್ಕ ಮಗಳಿಗೆ ತಕ್ಕ ಶಾಲೆಯಾಗಿ ಪರಿಣಮಿಸಿದ್ದ ಇವರಿಬ್ಬರ ಶ್ರದ್ಧೆಯ–ಸಾಹಸದ–ಸೇವೆಯ ಶಿಶು 'ಮಕ್ಕಳ ಮಂಟಪ.' ನನ್ನ ಮಕ್ಕಳೆಲ್ಲ ಕನ್ನಡ ಮಾಧ್ಯಮದ ಮೂಲಕ ಪ್ರಾಥಮಿಕ ಶಿಕ್ಷಣ ಪಡೆಯುವಂತಾದುದು ಈ 'ಮಕ್ಕಳ ಮಂಟಪ'ದ ಮೂಲಕ. ಇಂಥ ಕನ್ನಡ ಶಾಲೆ ಮುಂದೆ ಕನ್ನಡ ಮಾಧ್ಯಮ ಬೇಡುವ ಮಕ್ಕಳು ಸಿಕ್ಕದೆ, ಅದನ್ನು ಇಂಗ್ಲಿಷ್ ಮಾಧ್ಯಮದ ಶಾಲೆಯನ್ನಾಗಿ ಪರಿವರ್ತಿಸಲು ಈ ಹದಿನಾರಾಣೆ ಕನ್ನಡಿಗರು ಒಪ್ಪದೆ ನಿಂತು ಹೋಯಿತೆಂಬ ಸುದ್ದಿ ತಿಳಿದಾಗ ಬೆಂಗಳೂರಿನಲ್ಲಿಯೇ ಕನ್ನಡದ ಕೊಲೆಯಾಗುತ್ತಿರುವ ಬಗ್ಗೆ ಸಾತ್ವಿಕ ಸಂತಾಪವೂ, ನಷ್ಟವನ್ನು ಸೋಸಿಯಾದರೂ ಕನ್ನಡ ಮಾಧ್ಯಮಶಾಲೆಯನ್ನೇ ನಡೆಸುವೆವಾಗಲಿ ಇಂಗ್ಲಿಷ್ ಮಾಧ್ಯಮವನ್ನು ಸ್ವಾಗತಿಸಿ ಹಣಹದ್ದುಗಳಾಗಲಾರೆವೆಂಬ ಛಲ ಬಿಡದ ಈ ದಂಪತಿಗಳ ಅವರ್ಣನೀಯವಾದ ಆದರವೂ ಉದ್ಭವಿಸಿದುವು.

ನನ್ನಲ್ಲಿ! ಕನ್ನಡ ಮಾಧ್ಯಮದ ಉಳಿವಿಗಾಗಿ ಇವರು ತೋರಿದ ತ್ಯಾಗ ಅದೆಷ್ಟು ಅದ್ಭುತವಾದುದು! ಇವರಿಬ್ಬರೂ 'ಮಕ್ಕಳ ಮಂಟಪ'ವನ್ನು ಮುಚ್ಚಲು ಕಾರಣವಾದ ಘಟನೆಗಳನ್ನು ಬರೆಯಬೇಕೆಂದೂ ಅದನ್ನು ಕನ್ನಡ ಪತ್ರಿಕೆಗಳಲ್ಲಿ ಪ್ರಮುಖವಾಗಿ ಪ್ರಕಟಿಸಬೇಕೆಂದೂ ನನಗೆನಿಸುತ್ತದೆ! ಇವರದು ವಿರಳ, ಉಜ್ವಲ ಕನ್ನಡ ಅಭಿಮಾನ.

1937ರಿಂದ ಇಲ್ಲಿಯವರೆಗೆ ಶಕುಂತಲಾಬಾಯಿಯವರು ಕಾವ್ಯಗಾಯನ ಮಾಡಿದ ಸಭೆಗಳೆಷ್ಟು? ತಣಿಸಿದ ಶ್ರೋತೃಗಳ ಸಂಖ್ಯೆಯೆಷ್ಟು? ಯಾರು ಲೆಕ್ಕ ಮಾಡಬೇಕಿದನ್ನು? ಎಷ್ಟು ಜನ ಕವಿಗಳಿಗೆ ಜನಮನದಲ್ಲಿ ಸಗೌರವ ಸ್ಥಾನ ದೊರಕಿಸಿ ಕೊಟ್ಟಿದ್ದಾರೆ ಇವರು? ಕುಮಾರ ವ್ಯಾಸ, ಲಕ್ಷ್ಮೀಶ, ಹರಿಹರ–ರಾಘವಾಂಕ-ಚಾಮರಸ, ಪಂಪ-ರನ್ನ-ರತ್ನಾಕರ ವರ್ಣಿ, ಶಿವಶರಣರ ವಚನಗಳು, ಹರಿದಾಸರ ಹಾಡುಗಬ್ಬಗಳು, ಕುವೆಂಪು, ಬೇಂದ್ರೆ ಪುತಿನ, ಅಡಿಗ, ನರಸಿಂಹಸ್ವಾಮಿ, ಶಿವರುದ್ರಪ್ಪ–ಕಣವಿ–ಕಾವ್ಯಾನಂದ–ಹನರಿಸುತ್ತ ಹೋದರೆ ಹನುಮನ ಬಾಲವಾದೀತು ಈ ಯಾದಿ! ಇಷ್ಟು ಜನ ಶ್ರೇಷ್ಠ ಕವಿಗಳ ಕಾವ್ಯಭಾಗಗಳಿಗೆ, ವಚನ ಹಾಗೂ ದೇವರ ನಾಮಗಳಿಗೆ, ಭಾವಗೀತೆಗಳಿಗೆ ಗಮಕದ ಗೇಯತೆಯನ್ನಿತ್ತುದಲ್ಲದೆ ಮಹಾಛಂದಸ್ಸಿನ ಮೇರುಕೃತಿಯೆಂದು ನೆಗಳ್ತೆವಡೆದಿರುವ 'ರಾಮಾಯಣ ದರ್ಶನಂ' ಮಹಾಕಾವ್ಯ, ಪ್ರಕಟನಪೂರ್ವದಲ್ಲಿಯೇ ಪ್ರಸಿದ್ಧಿಯನ್ನು ಪಡೆದಿರುವ 'ವಿನಾಯಕ'ರ 'ಭಾರತಸಿಂಧುರಶ್ಮಿ', ಬಸವೇಶ್ವರ ಕುರಿತ ಅವರ 'ಬಸವ ದರ್ಶನಂ', ಸಮೇತನ ಹಳ್ಳಿ ರಾಮರಾಯರ 'ಶಾಕುಂತಲ' ಇತ್ಯಾದಿಗಳನ್ನೂ ತಮ್ಮ ಗಮಕಶ್ರೀಯಿಂದ ಜನಪ್ರಿಯಗೊಳಿಸಿದ ಧನ್ಯತೆ ಇವರದು.

ಅರುವತ್ತರ ಅಂಚನ್ನು ಮುಟ್ಟಿದ್ದರೂ ಇವರ ಕಂಠಶ್ರೀ ಕುಂಠಿತವಾಗಿಲ್ಲ. ಕಳೆದ ಕಾಲುಶತಮಾನದಿಂದ ಕೇಳುತ್ತಲೇ ಇದ್ದೇನೆ ಇವರ ಕಾವ್ಯಗಾಯನವನ್ನು; ಕಂಠದ ಮಾರ್ದವ ಮಾಧುರ್ಯಗಳು ಕಡಮೆಯಾಗಿಲ್ಲ: ಅತಿಪರಿಚಯ ಅವಜ್ಞೆಗೆ ಕಾರಣವಾಗಿಲ್ಲ; ಬದುಕಿನ ಬೆಂಕಿಯಲ್ಲಿ 'ಸುಟ್ಟು ಹಪ್ಪಳ'ವಾಗಿರುವ ಇವರ ಗಮಕ ಸಾಧನೆ ಇತ್ತೀಚೆಗೆ ಮಧುರವೇದನೆಯುಳ್ಳಿ ದಾಗಿ, ಸಮರ್ಪಣ ಭಾವದಲ್ಲಿ ಪರಿಪಕ್ವವಾಗಿ ಪರಿಮಳಿಸುತ್ತಲಿದೆ. ಅವರ ಪರಿಶುದ್ಧ ಜೀವನ, ಅದಕ್ಕೆ ತಕ್ಕ ಅವ್ಯಾಹತ ಸಾಧನೆ, ಅದಕ್ಕೆ ಒಪ್ಪುವ ನಿರಪೇಕ್ಷ ಚಿತ್ತ, ಅದಕ್ಕೆ ಶೋಭೆಯನ್ನು ನೀಡುತ್ತಿರುವ ಭಾವದರ್ಪಣ ಬುದ್ಧಿ–ಎಲ್ಲ ಚೆನ್ನ, ಎಲ್ಲ ಚಿನ್ನ!

ಕಲಾವಿದರ ಬಗ್ಗೆ ಉದಾಸೀನ ಮನೋಭಾವದ ಕನ್ನಡಿಗರೂ ಸೋದರಿ ಶಕುಂತಲಾಬಾಯಿಯವರನ್ನು ಅಷ್ಟಿಷ್ಟು ಸನ್ಮಾನಿಸಿ ಸತ್ಕರಿಸಿರುವುದು ಸಂತೋಷದ ಸಂಗತಿ. 1957ರಲ್ಲಿ ಇವರನ್ನು ಗಮಕದ ಪ್ರತಿನಿಧಿಯಾಗಿ ತನ್ನ ರಾಷ್ಟ್ರೀಯ ಕಾರ್ಯಕ್ರಮಕ್ಕೆ ಆಹ್ವಾನಿಸಿ ಕೇಂದ್ರ ಆಕಾಶವಾಣಿ ಇವರಿಗೆ ಮನ್ನಣೆಯನ್ನು ನೀಡಿದೆ; 1969ರಲ್ಲಿ ನಮ್ಮ ರಾಜ್ಯದ ಸಾಹಿತ್ಯ ಅಕಾಡೆಮಿಯು ಇವರಿಗೆ ಗಮಕ ಕಲೆಗಾಗಿಯೇ ಪ್ರಪ್ರಥಮ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ; 1979ರಲ್ಲಿ ಮೈಸೂರು ನಗರದಲ್ಲಿ ನಡೆದ ಅಖಿಲ ಕರ್ನಾಟಕ ದ್ವಿತೀಯ ಗಮಕ ಸಮ್ಮೇಳನಕ್ಕೆ ಇವರನ್ನು ಅಧ್ಯಕ್ಷರನ್ನಾಗಿ ಆರಿಸಿ ಕನ್ನಡ ಕುಲ ಇವರಿಗೆ ತಮ್ಮ ಅಭಿಮಾನದ ಆರತಿಯನ್ನು ಬೆಳಗಿದೆ; ಅದೇ ವರ್ಷ ಬೆಂಗಳೂರಿನ

ಗಾಯನ ಸಮಾಜವು ತನ್ನ ಹನ್ನೊಂದನೆಯ ಸಂಗೀತ ಸಮ್ಮೇಳನದ ವಿದ್ವತ್ಸಭೆಯಲ್ಲಿ ಸಂಗೀತರತ್ನ ಡಾ. ಮಲ್ಲಿಕಾರ್ಜುನ ಮನ್ಸೂರರ ಅಧ್ಯಕ್ಷತೆಯಲ್ಲಿ, ಡಾ. ಶಿವರಾಮ ಕಾರಂತರ ಶುಭಹಸ್ತದಿಂದ ಪ್ರಶಸ್ತಿ ಪತ್ರಕೊಟ್ಟು ಶಾಲು ಹೊದಿಸಿ ಸನ್ಮಾನಿಸಿದೆ. ಇನ್ನೂ ಅನೇಕ ಸ್ಥಳಗಳಲ್ಲಿ ಗಮಕ ಕಲಾರಸಿಕರು ಇವರ ಕಾವ್ಯಗಾಯನವನ್ನು ಮೆಚ್ಚಿ ಹರ್ಷೋದ್ಗಾರಗಳ ಮೂಲಕ ಅಚ್ಚಾಗದ ಮೆಚ್ಚೋಲೆಗಳನ್ನು ನೀಡಿ ಗೌರವಿಸಿದ್ದಾರೆ. ರಾಜ್ಯ ಸರಕಾರವೂ ಮಾಸಾಶನವನ್ನಿತ್ತು ತನ್ನ ಕರ್ತವ್ಯ ನಿರ್ವಹಿಸಿದೆ.

ಇದು ಸಾಲದು. ಇನ್ನು ವೈಯಕ್ತಿಕವಾಗಿ ಅವರನ್ನು ಗೌರವಿಸಲಿ ಬಿಡಲಿ, ಅವರ ಕಲೆಯನ್ನು ಗೌರವಿಸುವುದು ವ್ಯಾಪಕವಾಗಿ ನಡೆಯಬೇಕು. ವೈಯಕ್ತಿಕವಾಗಿ ಗೌರವಿಸುವುದು ನಿಲ್ಲಲಿ–ಎಂದು ಇದರ ಅರ್ಥವಲ್ಲ. ಅದು ಮುಂದುವರಿದರೆ ಸಂತೋಷವೇ. ಆದರೆ ಇದಕ್ಕೂ ಹೆಚ್ಚಾಗಿ ನಡೆಯಬೇಕಾಗಿರುವುದು ಅವರ ಕಾವ್ಯಗಾಯನದ ಧ್ವನಿ ಮುದ್ರಿಕೆಗಳ ಸಾರ್ವತ್ರಿಕ ಪ್ರಸಾರ. ಅವರನ್ನೇ ಆಹ್ವಾನಿಸಿ ಮೌಖಿಕವಾಗಿ ಅವರ ಕಾವ್ಯಗಾಯನವನ್ನು ಕೇಳುವುದು ಕೇಳಿಸುವುದು ಎಲ್ಲೆಲ್ಲಿ ಸಾಧ್ಯವಿದೆಯೋ ಅಲ್ಲಲ್ಲಿ ಆ ಕಾರ್ಯ ಅಗತ್ಯವಾಗಿ ನಡೆಯಲಿ. ಅದರ ಜೊತೆಗೆ, ಪಂಪನಿಂದ ಕುವೆಂಪುವರೆಗೆ ನಮ್ಮ ಶ್ರೇಷ್ಠ ಪರಂಪರೆಯ ನಾಯಕಮಣಿಗಳ ಆಯ್ದ ಭಾಗಗಳನ್ನು ಅವರಿಂದ ಹಾಡಿಸಿ, ಧ್ವನಿಮುದ್ರಿಸಿಕೊಂಡು, ಅವುಗಳು ನಮ್ಮ ಮಾಧ್ಯಮಿಕ ಶಾಲೆಗಳಿಗೆ, ಪ್ರೌಢಶಾಲೆಗಳಿಗೆ, ಕರ್ನಾಟಕ ಸಂಘಗಳಿಗೆ, ವಾರ್ತಾ ಕೇಂದ್ರಗಳಿಗೆ, ತಾಲೂಕು ಅಭಿವೃದ್ಧಿ ಮಂಡಳಿಗಳಿಗೆ ಒದಗುವಂತೆ ಮಾಡುವುದು ಅತ್ಯಗತ್ಯವಾದುದು.

ಅಕ್ಕ ಶಕುಂತಲಾಬಾಯಿಯವರು ಅರುವತ್ತನ್ನು ದಾಟುತ್ತಲಿರುವ ಈ ಶುಭ ಸಂದರ್ಭದಲ್ಲಿ, ನಾನೂ ನನ್ನ ಕುಟುಂಬವೂ ಅವರು ನೂರು ವರ್ಷ ಮುತ್ತೈದೆಯಾಗಿ ಬಾಳಿ ಬೆಳಗಲಿ, ಇನ್ನೂ ಅನೇಕ ಕವಿಗಳ ಕೃತಿಗಳನ್ನು ಜನಪ್ರಿಯಗೊಳಿಸಲಿ, ಹಳ್ಳಿ ಹಳ್ಳಿಗೆ ಅವರ ಧ್ವನಿಮುದ್ರಿಕೆಗಳು ಮುಟ್ಟಿ ಎಲ್ಲ ಕಡೆಗೂ ಮನೆಮಾತಾಗಲಿ–ಎಂದು ಹಾರೈಸುತ್ತೇವೆ.

ಆದರ್ಶಗಮಕಿ

ಟಿ. ಸುನಂದಮ್ಮ

'ಆಲ್ಬಮ್ಮಿ'ನ ಹಾಳೆಗಳನ್ನು ತಿರುಗಿಸುತ್ತಿದ್ದೆ ; ಭಾಗವಹಿಸಿದ ಎಷ್ಟೋ ಕಾರ್ಯಕ್ರಮಗಳ ಪ್ರತಿಬಿಂಬ, ಸಮಾರಂಭಗಳ ಸೊಗಡು, ಅಲ್ಲಿನ ಭಾವಚಿತ್ರಗಳಲ್ಲಿ ಮೂಡಿದ್ದು ನೆನಪಿನ ಮೀಟುಗೋಲನ್ನು ಎತ್ತಿಹಾಕಿತು !

ಅಂತಹದೊಂದು ಹಾಳೆಯಲ್ಲಿ ಮಿಂಚಿದ್ದು, ತುಂಬುನಗೆಯ ಎರಡು ಮುಖಗಳು ; ನಡುವೆ ದೊಡ್ಡದೊಬ್ಬ 'ಮೈಕಾಸುರ' !

ಆ ಮುಖಗಳು, ಶ್ರೀಮತಿ ಶಕುಂತಳಾಬಾಯಿ ಪಾಂಡುರಂಗರಾಯರದು ಮತ್ತು ಶ್ರೀಮತಿ ಟಿ. ಸುನಂದಮ್ಮನವರದು. ರಾಜ್ಯ ಸಾಹಿತ್ಯ ಅಕಾಡಮಿ ಸಾವಿರದ ಒಂಬೈನೂರ ಅರವತ್ತೊಂಭತ್ತರಲ್ಲಿ ಗಮಕ ಕಲಾವಿದೆ ಶ್ರೀಮತಿ ಶಕುಂತಲಾಬಾಯಿಯವರಿಗೆ ಪ್ರಶಸ್ತಿ ನೀಡಿ ಗೌರವಿಸಿತು ; ಆಕೆಯನ್ನು ಸಂದರ್ಶಿಸುವ ಗೌರವವನ್ನು ಬೆಂಗಳೂರು ಆಕಾಶವಾಣಿ ನನಗೆ ಕೊಟ್ಟಿತು. ಆ ಸಂದರ್ಭದಲ್ಲಿ ತೆಗೆದ ಭಾವಚಿತ್ರ, ಅದು !

ನನಗೆ ಹೆಚ್ಚಿನ ಪರಿಚಯವಿಲ್ಲದ ಕ್ಷೇತ್ರದಲ್ಲಿ ಪರಿಣತರಾದವರನ್ನು ಸಂದರ್ಶಿಸುವುದು ಹೇಗೆ ಎಂದು ಅಳುಕಿದ ನನ್ನ ಪ್ರಶ್ನೆಗಳಿಗೆ ನೇರವಾದ, ಸರಳವಾದ, ಉತ್ತರಗಳನ್ನು ಕೊಟ್ಟು ನನ್ನ ಕಾರ್ಯವನ್ನು ಸುಗಮಗೊಳಿಸಿದ್ದಲ್ಲದೆ, ಅದು ಶ್ರೋತೃಗಳ ಮೆಚ್ಚುಗೆಯ ಕಾರ್ಯಕ್ರಮವಾಗುವಂತೆ ಮಾಡಿದ ಹೊಣೆಗಾರಿಕೆ ಶ್ರೀಮತಿ ಶಕುಂತಳಾಬಾಯಿಯವರದು.

ಗಮಕ ಕಲೆ ಕನ್ನಡನಾಡಿನಲ್ಲಿ ಹತ್ತು ಶತಮಾನಗಳ ಹಿಂದೆಯೇ ಪ್ರಸಿದ್ಧವಾಗಿದ್ದ ಕಲೆ ; ಕಾವ್ಯದ ಸೌಂದರ್ಯವನ್ನು ಸಹೃದಯನ ಅಂತರಂಗಕ್ಕೆ ಮುಟ್ಟಿಸಬೇಕಾದರೆ ಅದು ಗಮಕಿಯಿಂದಲೇ ಸಾಧ್ಯ. ಪ್ರಾಚೀನ ಕಾಲದಲ್ಲಿ ಬಹುವಾಗಿ ಪ್ರಚಲಿತವಾಗಿದ್ದ ಗಮಕಕಲೆ ಮಧ್ಯಂತರದಲ್ಲಿ ಮೂಲೆಗುಂಪಾಗಿದ್ದು, ಈಗ ಕನ್ನಡಿಗರ ಸಾಹಿತ್ಯ ಪ್ರೇಮದಿಂದ ಪುನಶ್ಚೇತನಗೊಂಡಿದೆ.

ಈ ಕ್ಷೇತ್ರದಲ್ಲಿ ಕೆಲಸಮಾಡುತ್ತಿರುವ ತಜ್ಞರು ಬಹುಸಂಖ್ಯೆಯಲ್ಲಿದ್ದಾರೆ ; ಜನರ ಹೃನ್ಮನಗಳನ್ನು ತಣಿಸುತ್ತಿದ್ದಾರೆ. ಕೆಲವೇ ಮಹಿಳೆಯರು ಶ್ರಮವಹಿಸಿ ಈ ಕಲೆಯನ್ನು ತಮ್ಮದಾಗಿ ಮಾಡಿಕೊಂಡಿದ್ದಾರೆ. ಅವರಲ್ಲಿ ಅಗ್ರಸ್ಥಾನ ಪಡೆದಿರುವವರು ಶ್ರೀಮತಿ ಶಕುಂತಳಾಬಾಯಿ ಪಾಂಡುರಂಗರಾಯರು.

ದೈವದತ್ತವಾದ ಶಾರೀರಕ್ಕೆ ಪ್ರೋತ್ಸಾಹದ ಪೋಷಣೆ ನೀಡಿದ ಉದಾರಿ, ಶ್ರೀ ಪಾಂಡುರಂಗರಾಯರದು. ಆಧುನಿಕ ಯುಗದಲ್ಲಿ ಮದುವೆ ಮಾಡಿಕೊಂಡವರ, ಹೆಂಡತಿಯ ಮನರಂಜನೆಗಾಗಿ ಪಾರ್ಕು–ಫಲಾಹಾರ ಮಂದಿರ–ಪಿಕ್ಚರು–ಪಿಕ್ನಿಕ್ಕು–ಕರೆದೊಯ್ಯುತ್ತಾರೆ, ಒಂಬತ್ತು ವರ್ಷದ ಪುಟ್ಟ ಕನ್ಯೆಯ ಕೈಹಿಡಿದ ಹುಡುಗ ಆಕೆಯನ್ನು ಕರೆದೊಯ್ದುದ್ದು ಕಾವ್ಯವಾಚನ ಪಾಠಕ್ಕೆ ! ಉರುಟಣೆ ಹಾಡುಗಳನ್ನು ಹಾಡಿದ ಕಂಚು

ಕಂಠವನ್ನು ಗುರುತಿಸಿ ಆ ಪ್ರತಿಭೆ ಬೆಳಕಾಗುವ ಸೂಕ್ತ ಮಾರ್ಗ ಕಂಡುಕೊಂಡ ಸ್ವಯಂ ಪ್ರತಿಭಾವಂತ!

ತರಗತಿಗಳು ನಡೆಯುತ್ತಿದ್ದುದು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ; ನಸುಕಿನಲ್ಲಿದ್ದು ನಡೆಯುತ್ತಿದ್ದರು ಈ ದಂಪತಿಗಳು. ಒಂದು ದಿನ, ಪಾಂಡುರಂಗಾಪುರ ಮನೆಯ ಗಡಿಯಾರದ ದೋಷವೋ, ಗಮಕ ಪಾಠದ ಆತುರವೋ, ಅಂತೂ ಮೂರುತಾಸಿನ ಕಗ್ಗತ್ತಲಲ್ಲಿ ಬೆಳಗಾಯಿತೆಂದು ಬಂದುಬಿಟ್ಟ ಹುಡುಗರು ಹೆದರಿದ್ದು ಸಂದರ್ಶನದಲ್ಲಿ ನನಗೆ ತಿಳಿದುಬಂದ ಮೋಜಿನ ಸಂಗತಿ.

ಶ್ರೀಮತಿ ಶಕುಂತಲಾಬಾಯಿಯವರು ಹದಿನೇಳನೇ ವಯಸ್ಸಿನಲ್ಲಿ 'ಪ್ರಭುಲಿಂಗ ಲೀಲೆ'ಯನ್ನು ಸಾರ್ವಜನಿಕರೆದುರು ವಾಚನಮಾಡಿ ತಮ್ಮ ಮೊದಲನೆಯ ಕಾರ್ಯಕ್ರಮ ಆರಂಭಿಸಿದರು. ಅಂದಿನಿಂದ ಇಂದಿನವರೆಗೆ ಅವರು ನಡೆಸಿಕೊಟ್ಟಿರುವ ಕಾವ್ಯ ವಾಚನ ಕಾರ್ಯಕ್ರಮಗಳು ಅಸಂಖ್ಯಾತ. ಸಾಂಪ್ರದಾಯಿಕವಾದ ಕುಮಾರವ್ಯಾಸ ಭಾರತ ವಾಚನವಲ್ಲದೆ, ಶ್ರೀಮತಿಯವರು ಆಚಾರ್ಯ ಬಿ. ಎಂ. ಶ್ರೀ. ಯವರ 'ಕನ್ನಡ ತಾಯ್ ನೋಟ' ಮತ್ತು ಕುವೆಂಪುರವರ 'ರಾಮಾಯಣದರ್ಶನಂ'ದ ಆಯ್ದ ಭಾಗಗಳು ಇವನ್ನು ಬಹು ಪರಿಣಾಮಕಾರಿಯಾಗಿ ಓದುತ್ತಾರೆ. ಜೈನಮತದ, ವೀರಶೈವ ಮತದ ಕಾವ್ಯವಾಚನ ಈಕೆಗೆ ಕರಗತವಾದ ಕಲೆ.

ಶ್ರೀಮತಿ ಶಕುಂತಳಾಬಾಯಿ ಎಂತಹ ಉತ್ತಮ ಕಲಾವಿದೆಯೋ ಅಷ್ಟೇ ಉತ್ತಮ ಸುಸಂಸ್ಕೃತ ಗೃಹಿಣಿ. ಹಳೆಯ ಸಂಪ್ರದಾಯದ ಮೇಲುಗಚ್ಚೆ ಹಾಕಿದ ಸೀರೆ ಉಟ್ಟ ಈ ಸುಮಂಗಲಿ ತುಂಬಿದ ಸಂಸಾರವನ್ನು ತೂಗಿ ಅತ್ತೆಯ ಸೇವೆ, ಮಕ್ಕಳ ಅಭಿವೃದ್ಧಿ, ಪತಿಯ ಶ್ರೇಯಸ್ಸಿಗೆ ಶ್ರಮಿಸಿರುವ ಸದಾಚಾರಿಣಿ. ಹಾಲುಜೇನಿನಂತಿರುವ ಇವರ ದಾಂಪತ್ಯ ಭಾರತೀಯ ಸಂಸ್ಕೃತಿಯ ಪ್ರತೀಕ!

ಸರಳತೆಯ ಮೂರ್ತಿಯಂದ ಶ್ರೀಮತಿ ಶಕುಂತಳಾಬಾಯಿಯವರು ಅಷ್ಟೇ ಸಹನಾಶೀಲೆ. ಕಾರ್ಯಕ್ರಮಗಳ ಒಂದು ಅಂಶವಾಗಿ ಅವರ ಕಾವ್ಯವಾಚನವನ್ನು ಹಲವು ನಿಯೋಜಿಸಿರುತ್ತಾರೆ. ಹದಿನೈದು ಅಥವಾ ಇಪ್ಪತ್ತು ನಿಮಿಷಗಳ ಕಾಲಾವಕಾಶವನ್ನು ಅವರಿಗೆ ಕೊಟ್ಟಿರುತ್ತಾರೆ. ಆದರೆ ಕಾರ್ಯಕ್ರಮ ಪ್ರಾರಂಭವಾಗುವ ವೇಳೆಯಲ್ಲಿ ಆ ಕಾಲಾವಕಾಶಕ್ಕೆ ಕತ್ತರಿ ಪ್ರಯೋಗವಾಗುವುದುಂಟು. ಅಂತಹ ಸಂದಿಗ್ಧದಲ್ಲಿ ಆಕೆ ತಾಳ್ಮೆ ಕಳೆದುಕೊಳ್ಳುವುದಿಲ್ಲ. ವೈಶಿಷ್ಟ್ಯವೇನೆಂದರೆ, ಸಮಯಸ್ಫೂರ್ತಿಯಿಂದ ಕಾವ್ಯಭಾಗದಲ್ಲಿ ಸೂಕ್ತ ಕತ್ತರಿ ಪ್ರಯೋಗ ಮಾಡಿ, ಕಥಾಭಾಗಕ್ಕೆ ಕೊಂಚವೂ ಲೋಪಬರದಂತೆ ವಾಚನ ಮಾಡಿಬಿಡುತ್ತಾರೆ!

"ಎಗರದೆ ತೊಗರದೆ ತಳ್ಳಿಯಂ ಕೊಡಹದೆ
ಕಗುವಹಿಲ ಜಾಡ್ಯವೆನಿಸದೆ ರಸಮಂ ಕೆಡಿಸದೆ
ಸರ್ವರ ಚಿತ್ತಕ್ಕೊಡಂಬಡಲೋದುವನೆ
ಗಮಕಿ ಚೂಡಾರತ್ನಾ ||"

ಗಮಕಿಯನ್ನು ಸುಭಾಷಿತ ಹೀಗೆ ವರ್ಣಿಸಿದೆ; ಅದೇ ತುಂಬು ಗಾಂಭೀರ್ಯದಿಂದ

ವಾಚಿಸುವ ಶ್ರೀಮತಿ ಶಕುಂತಳಾಬಾಯಿ, ಆದರ್ಶ ಗಮಕಿಯೇ ಸರಿ.

ಮನುಷ್ಯ ಏನನ್ನಾದರೂ ಸಾಧಿಸಿದಾಗ, ಬೆನ್ನುತಟ್ಟಿದರೆ ಸಂತೋಷ, ತೃಪ್ತಿ ಆಗುವುದು ಸ್ವಾಭಾವಿಕ. ಈ ಭಾಗ್ಯ ಶ್ರೀಮತಿಯವರಿಗೆ ಲಭಿಸಿದೆ. ರಾಜ್ಯ ಸಾಹಿತ್ಯ ಅಕಾಡಮಿಯಲ್ಲದೆ ಗಾಯನ ಸಮಾಜ ಆಕೆಯನ್ನು ಸನ್ಮಾನಿಸಿದೆ. ಎಪ್ಪತ್ತೊಂಭತ್ತ ನೇ ಇಸವಿಯಲ್ಲಿ ಮೈಸೂರಿನಲ್ಲಿ ಜರುಗಿದ ಗಮಕ ಸಮ್ಮೇಳನಕ್ಕೆ ಶ್ರೀಮತಿ ಶಕುಂತಳಾಬಾಯಿಯವರು ಅಧ್ಯಕ್ಷೆಯಾಗಿ ಆಯ್ಕೆಯಾಗಿದ್ದದ್ದು ಅವರಿಗೂ ನಮಗೂ ಹೆಮ್ಮೆಯ ವಿಚಾರ.

ಈ ಪ್ರತಿಭಾನ್ವಿತ ಸೋದರಿಗೆ ಇದೀಗ ಅರವತ್ತು ತುಂಬಿದೆ. ಭಗವಂತ ಈಕೆಗೆ ದೀರ್ಘಾಯುಷ್ಯ ಕರುಣಿಸಲಿ, ಕನ್ನಡಿಗರಿಗೆ ಕಾವ್ಯಾನಂದವನ್ನು ಹಂಚುತ್ತಿರಲಿ ಎಂದು ಹಾರೈಸುತ್ತೇನೆ.

ಗಮಕ ಕಲೋಪಾಸಕಿ

ಜಿ. ವರದರಾಜರಾವ್

ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾಯರು ಕರ್ನಾಟಕದ ಅಗ್ರಗಣ್ಯ ಗಮಕಿಗಳಲ್ಲಿ ಒಬ್ಬರು ಎನ್ನುವುದು ನಿರ್ವಿವಾದವಾದ ಸಂಗತಿ. ಅವರು ಈ ಶ್ರೇಷ್ಠ ಪದವಿಯನ್ನು ಕೇವಲ ಒಂದೆರಡು ವರ್ಷಗಳಲ್ಲಿ ಗಳಿಸಿದವರಲ್ಲ. ಗುರುಹಿರಿಯರ ನೆರವಿಲ್ಲದೆ ಸಾಧಿಸಿದವರಲ್ಲ, ಗಮಕ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಪ್ರಶಸ್ತಿ ಪತ್ರಗಳನ್ನು ಪಡೆಯುವಷ್ಟರಲ್ಲಿಯೇ ತೃಪ್ತರಾದವರಲ್ಲ. ಹೆಚ್ಚು ವಿದ್ಯಾಭ್ಯಾಸವನ್ನು ಮಾಡಲು ಅವಕಾಶವಾಗದಿದ್ದರೂ, ಆ ಕೊರತೆಯನ್ನು ತಮ್ಮ ಗಮಕ ಕಲೋಪಾಸನೆಯಿಂದ ನಿವಾರಿಸಿಕೊಂಡು ಈ ಕ್ಷೇತ್ರದಲ್ಲಿ ತಮ್ಮದೇ ಆದ ಒಂದು ಸ್ಥಾನವನ್ನು ಗಳಿಸಿರುತ್ತಾರೆ. ಬಾಲ್ಯದಿಂದಲೂ ಸಂಗೀತದಲ್ಲಿ ಅಭಿರುಚಿಯಿದ್ದುದರಿಂದ ಆ ದೈವದತ್ತ ಶಕ್ತಿಯನ್ನು ಗಮಕ ಕಲೆಯನ್ನು ಬೆಳೆಸಿಕೊಳ್ಳಲು ವಿನಿಯೋಗಿಸಿದರು. ಇದಕ್ಕೆ ಮುಖ್ಯ ಕಾರಣಗಳೆಂದರೆ, ಅವರ ನಿಜ ಮಾರ್ಗರಾದ ಶ್ರೀಮಾನ್ ಪಾಂಡುರಂಗರಾಯರ ಸಾಹಿತ್ಯಾಭಿರುಚಿ; ಡಿ. ವಿ. ಜಿ. ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದಾಗ, ಗಮಕ ಕಲೆಯನ್ನು ಕಲಿಯುವವರ ಸಲುವಾಗಿ ಏರ್ಪಡಿಸಿದ ತರಗತಿಗಳು. ಈ ತರಗತಿಗಳನ್ನು ಮೊದಲು ನಡೆಸಿದವರಾದರೋ, ಕರ್ನಾಟಕ ಗಮಕ ಕಲಾಪ್ರಪಂಚಕ್ಕೇ ಭೀಷ್ಮಾಚಾರ್ಯರಂತಿದ್ದ ಶ್ರೀ ಎಸ್. ಬಿಂದೂರಾಯರು. ಇವುಗಳನ್ನೆಲ್ಲ ಪರಿಶೀಲಿಸಿದರೆ, ಯಾವ ಪ್ರತಿಭಾವಂತರಿಗೇ ಆಗಲಿ ಅದು ವಿಕಸಿಸಿ ಪ್ರವರ್ಧಮಾನಕ್ಕೆ ಬರಲು ತಕ್ಕ ಪರಿಸರ ಮತ್ತು ಅವಕಾಶಗಳು ಒದಗಬೇಕು. ನಾಗವರ್ಮನು ಕವಿಯಾಗಲು ಕೆಲವು ಲಕ್ಷಣಗಳನ್ನು ಸೂಚಿಸಿರುತ್ತಾನೆ. ಪ್ರತಿಭಾನಂ ಕಾವ್ಯವಿದ್ಯಾಪ್ರಚಯ ಪರಿಚಯಂ ವೃದ್ಧಸೇವಾನುರಾಗಂ, ಸತತಾಭ್ಯಾಸ ಪ್ರಯತ್ನಂ ಕವಿಗೆ ನಿಯತಂ ಕಾರಣಂ' ಎಂಬುದಾಗಿ ಒಂದೊಂದು ಅಂಶವನ್ನೂ ಬಹಳ ಚೆನ್ನಾಗಿ ಹೇಳಿರುತ್ತಾನೆ. ಇಲ್ಲಿ 'ಕವಿತೆಗೆ' ಎನ್ನುವಲ್ಲಿ 'ಕಲಿಕೆಗೆ' ಎಂಬ ನಡುಗನ್ನಡ ಶಬ್ದವನ್ನು ಪರ್ಯಾಯವಾಗಿ ಇಟ್ಟುಕೊಂಡು ನೋಡಿದರೆ, ಪ್ರತಿಯೊಂದು ಅಧ್ಯಯನಕ್ಕೂ ಈ ವಿವಿಧ ನೆರವುಗಳು ಅನಿವಾರ್ಯವೆನ್ನಬಹುದು. ಶ್ರೀಮತಿ ಶಕುಂತಲಾಬಾಯಿಯವರಲ್ಲಿ ಹುದುಗಿದ್ದ ಗಮಕ ಕಲಾಭಿರುಚಿಗೆ, ಅವರಲ್ಲಿದ್ದ ಸಂಗೀತ ಮತ್ತು ಸಾಹಿತ್ಯಜ್ಞಾನಗಳ ಪರಿಚಯ, ಶ್ರೀ ಬಿಂದೂರಾಯರಂತಹ ಶ್ರೇಷ್ಠ ಗುರುಗಳ ಮಾರ್ಗದರ್ಶನ, ಗುರುವಿನ ಮೂಲಕ ಕಲಿತುದನ್ನು ಸತತವಾದ ಅಭ್ಯಾಸದಿಂದ ಬೆಳೆಸಿಕೊಂಡಿದ್ದು ಮೊದಲಾದುವು ಅವರ ಗಮಕ ಕಲೆಗೆ ಕಾಂತಿಯನ್ನು ತಂದುಕೊಟ್ಟವು.

ಈ ದಂಪತಿಗಳನ್ನು ನಾನು ನನ್ನ ವಿದ್ಯಾರ್ಥಿ ದೆಸೆಯಿಂದಲೂ ತಿಳಿದಿರುವೆನಾದ್ದರಿಂದ, ಶ್ರೀಮತಿಯವರು ಈ ಗಮಕವನ್ನು ಕಲಿಯಲು ಎಷ್ಟು ಶ್ರಮಿಸಿದರು ಎನ್ನುವುದನ್ನು ನಾನು ಚೆನ್ನಾಗಿ ಬಲ್ಲೆ. ಮನೆಯಲ್ಲಿ ಗೃಹಿಣಿಯಾಗಿ ತಮ್ಮ ಕೆಲಸ ಕಾರ್ಯಗಳನ್ನೆಲ್ಲ ನಿರ್ವಹಿಸಿಕೊಂಡು, ಬೆಂಗಳೂರಿನಲ್ಲಿರುವ ಅಲಸೂರುಪೇಟೆಯಿಂದ ಚಾಮರಾಜಪೇಟೆ

ಯಲ್ಲಿರುವ ಕನ್ನಡ ಸಾಹಿತ್ಯ ಪರಿಷತ್ತಿಗೆ ಪ್ರತಿದಿನವೂ ಹೋಗಿ ಬರಬೇಕಾಗಿತ್ತು. ಆಗಿನ ಕಾಲದಲ್ಲಿ ಸಿಟಿ ಬಸ್ಸಿನ ಸೌಕರ್ಯವೂ ಇರಲಿಲ್ಲ. ಶ್ರೀ ಬಿಂದೂರಾಯರಾದರೋ ಬಹಳ ಕಟ್ಟುನಿಟ್ಟಿನ ಮನುಷ್ಯರು. ಸಕಾಲದಲ್ಲಿ ತಮ್ಮ ತರಗತಿಗಳನ್ನು ಪ್ರಾರಂಭಿಸುತ್ತಿದ್ದರು. ಅಂಥವರ ನೇತೃತ್ವ ಸಿಕ್ಕುವುದು ಎಷ್ಟು ಕಷ್ಟವೋ ಅವರಿಂದ ಮೆಚ್ಚುಗೆಯನ್ನು ಪಡೆಯುವುದು ಅಷ್ಟೇ ಕಷ್ಟವೆನ್ನಿಸಿತ್ತು. ಇಂಥ ಕಷ್ಟ ನಿಷ್ಠುರಗಳೇನೇ ಇರಲಿ ; ಸಹಜವಾಗಿ ಕಲಾಭಿರುಚಿಯುಳ್ಳವರು ಇವುಗಳು ಯಾವುದನ್ನೂ ಲೆಕ್ಕಿಸುವುದಿಲ್ಲ. ಅಭೀಪ್ಸೆ ಅಚಲವಾಗಿದ್ದಲ್ಲಿ ಯಾವ ಅಡ್ಡಿ ಆತಂಕಗಳೂ ಕಲೋಪಾಸಕರಿಗೆ ಪ್ರತಿಯಾಗಿ ನಿಲ್ಲುವುದಿಲ್ಲ.

ಶ್ರೀಮತಿ ಶಕುಂತಲಾಬಾಯಿಯವರು ಗುರುವಿನಿಂದ ತಾವು ಗಳಿಸಿದ್ದ ವಿದ್ಯೆಯನ್ನು ತಮ್ಮ ಪರಿಶ್ರಮದಿಂದ ಬೆಳಸಿಕೊಂಡರು. ಸಾಧಾರಣವಾಗಿ ಗಮಕಿಗಳಿಗೆ ಕುಮಾರ ವ್ಯಾಸ ಭಾರತ, ಜೈಮಿನಿ ಭಾರತ, ತೊರವೆ ರಾಮಾಯಣ, ಹರಿಶ್ಚಂದ್ರ ಕಾವ್ಯ ಮೊದಲಾದ ಷಟ್ಪದೀಗ್ರಂಥಗಳಲ್ಲಿ ತುಂಬ ಅಭಿಮಾನ. ಆದರೆ ಗಮಕ ಕಲೆಯ ರಹಸ್ಯವನ್ನು ಬಲ್ಲವರಿಗೆ ಯಾವ ಒಳ್ಳೆಯ ಕಾವ್ಯವೂ ತಮ್ಮ ಪರಿಧಿಯಿಂದ ಹೊರತೆನ್ನಿಸುವುದಿಲ್ಲ. ಚಂಪೂ ಕಾವ್ಯಗಳ ವಾಚನಕ್ಕೆ ಹಳಗನ್ನಡದ ಪರಿಜ್ಞಾನ ಅಗತ್ಯ. ಯಾವ ಒಳ್ಳೆಯ ಕಾವ್ಯವನ್ನೇ ತೆಗೆದುಕೊಂಡರೂ, ಅದರಲ್ಲಿ ರಸಸ್ಯಂದಿಯಾದ ಭಾಗವನ್ನು ಆರಿಸಿಕೊಳ್ಳುವ ಜಾಣ್ಮೆ ಗಮಕಿಗೆ ಅಗತ್ಯ. ಚಾಮರಸನ ಪ್ರಭುಲಿಂಗ ಲೀಲೆಯಲ್ಲಿ ವರ್ಣಿತವಾಗಿರುವ ಮಾಯಾದೇವಿಯ ಬಾಲ್ಯ, ಹರಿಹರನ ಬಸವರಾಜದೇವರ ರಗಳೆಯಲ್ಲಿ ನಿರೂಪಿತವಾಗಿರುವ ಬಸವಣ್ಣನವರ ಭಕ್ತಿಯ ಪ್ರವಾಹ, ಪಂಪಭಾರತ, ಗದಾಯುದ್ಧಗಳಲ್ಲಿ ಹೆಜ್ಜೆ ಹೆಜ್ಜೆಗೂ ಕಂಡು ಬರುವ ಸ್ವಾರಸ್ಯವಾದ ಪ್ರಸಂಗಗಳು, ಇವೆ ಮೊದಲಾದ ಕನ್ನಡದ ಕಾವ್ಯಗಳನ್ನು ವಾಚನ ಮಾಡಲು ಗಮಕಿಯಾದವರಿಗೆ ಸಂಗೀತ ಮತ್ತು ಸಾಹಿತ್ಯ ಜ್ಞಾನಗಳೆರಡೂ ಸರಿಸಮವಾಗಿ ಅಗತ್ಯವೆನ್ನಿಸುತ್ತದೆ. ಶ್ರೀಮತಿ ಶಕುಂತಲಾಬಾಯಿಯವರ ವಾಚನವನ್ನು ಆಲಿಸಿದವರಿಗೆ ಅವರಲ್ಲಿ ಈ ಎರಡು ಗುಣಗಳೂ ಹೇಗೆ ಹೊಂದಿಕೊಂಡು ಬಂದಿವೆ ಎನ್ನುವುದು ಮನವರಿಕೆಯಾಗುತ್ತದೆ. ಅವರು ಗಮಕ ಕ್ಷೇತ್ರದಲ್ಲಿ ಹೆಸರು ಗಳಿಸಿಕೊಳ್ಳುತ್ತಿರುವ ಕಾಲದಲ್ಲಿ, ಈ ಕಲೆಗಾಗಿ ತಮ್ಮ ಜೀವನವನ್ನೇ ಮೀಸಲಾಗಿಟ್ಟಿದ್ದ ಶ್ರೀಮಾನ್ ಕೃಷ್ಣಗಿರಿ ಕೃಷ್ಣರಾಯರೂ, ಶ್ರೀಮಾನ್ ಕಳಲೆ ಸಂಪತ್ಕುಮಾರಚಾರ್ಯರೂ ಇತರರಲ್ಲಿ ಪ್ರಮುಖರಾಗಿದ್ದರು. ಶ್ರೀಮಾನ್ ಕೃಷ್ಣಗಿರಿ ಕೃಷ್ಣರಾಯರಂತೂ ಶ್ರೀಮತಿ ಶಕುಂತಲಾಬಾಯಿಯವರ ವಾಚನಗಳನ್ನು ಕೇಳಿ ಮನಸಾರೆ ಮೆಚ್ಚಿಕೊಂಡಿದ್ದ ಅನೇಕ ಸಂದರ್ಭಗಳನ್ನು ನಾನು ಬಲ್ಲೆ. ಶ್ರೀಮಾನ್ ಕೃಷ್ಣಗಿರಿ ಕೃಷ್ಣರಾಯರು, ಆ ಕಾಲದ ಪರಿಸರಕ್ಕೆ ತಕ್ಕಂತೆ ಸಂಗೀತದಲ್ಲಿ ಒಳ್ಳೆಯ ಜ್ಞಾನವನ್ನು ಪಡೆದಿದ್ದರು. ಅವರು ಉದ್ಯೋಗದಲ್ಲಿದ್ದ ವಾತಾವರಣವಂತೂ ಪರಿಣತರು ಹಾಗೂ ಪ್ರತಿಭಾವಂತರ ಆಡುಂಬೊಲವಾಗಿತ್ತು. ಆದ್ದರಿಂದ ಅವರು ಉತ್ತಮ ಗಮಕಿಗಳು ಮಾತ್ರವೇ ಆಗಿದ್ದುದಲ್ಲದೆ, ಒಳ್ಳೆಯ ವ್ಯಾಖ್ಯಾನಕಾರರೂ ಆಗಿದ್ದರು. ಈ ಉಭಯ ಗುಣಗಳು ಒಬ್ಬರಲ್ಲಿಯೇ ಇರುವುದು ವಿರಳ. ಆದ್ದರಿಂದ ಶ್ರೀ ಕೃಷ್ಣಗಿರಿ ಕೃಷ್ಣರಾಯರ ವಾಚನ ಪಂಡಿತ ಮತ್ತು ಪಾಮರರಿಬ್ಬರಿಗೂ ಬಹು ಪ್ರಿಯವೆನ್ನಿಸಿತ್ತು. ಶ್ರೀಮಾನ್ ಕಳಲೆ ಸಂಪತ್ಕುಮಾರಾಚಾರ್ಯರು ಅಂದಿನ ಹಿರಿಯ ಗಮಕಿಗಳ ಸಾಲಿನಲ್ಲಿಯೇ

ಮುಂದುವರಿದವರಾದರೂ, ಅವರಲ್ಲಿ ಪ್ರಯೋಗಶೀಲತೆ ವಿಶೇಷ ಗುಣವಾಗಿ ತೋರಿಬರು ತ್ತಿತ್ತು. ನಮ್ಮ ಪುರಾತನ ಕವಿಗಳ ಕಾವ್ಯಗಳ ವಾಚನದಲ್ಲಿಯೇ ಅವರ ಮನಸ್ಸು ತೃಪ್ತ ವಾಗದೆ, ಅಂದಿನ ಕವಿಗಳು ರಚಿಸಿದ ಭಾವಗೀತೆಗಳನ್ನು ಸಹ ಅಷ್ಟೇ ಭಾವಪೂರ್ಣವಾಗಿ ಹಾಡುತ್ತಿದ್ದರು. ಶ್ರೀಯುತರುಗಳಾದ ಬಿ.ಎಂ.ಶ್ರೀ, ಮಾಸ್ತಿ,ವಿ.ಸೀ. ಮತ್ತು ಡಿ.ವಿಜಿ. ವಿರಚಿತ ಕವನಗಳನ್ನು ಹಾಡಿ ಸಭಿಕರನ್ನು ಸ್ತಬ್ಧಗೊಳಿಸುತ್ತಿದ್ದರು. ಗಮಕ ಕಲಾ ಕ್ಷೇತ್ರದಲ್ಲಿ ಹೊಸದಾಗಿ ಪ್ರವೇಶಿಸುತ್ತಿದ್ದ ಶ್ರೀಮತಿ ಶಕುಂತಳಾಬಾಯಿ ಅವರಿಗೆ ಈ ಪ್ರಯೋಗಗಳು ಪ್ರಭಾವವನ್ನು ಬೀರಿದುವು ಎನ್ನಬಹುದು.

ಪುರಾತನ ಕಾವ್ಯಗಳ ರಸವತ್ತಾದ ಭಾಗಗಳನ್ನು ಓದಿ, ರಸಿಕರಿಗೆ ಆನಂದವನ್ನು ನೀಡುತ್ತಿದ್ದ ಶ್ರೀಮತಿ ಶಕುಂತಳಾಬಾಯಿಯವರ ಗಮನ, ಆಗ ತಾನೆ ರಚಿತವಾಗಿದ್ದ 'ಕನ್ನಡ ತಾಯ್ ನೋಟ' ವೆಂಬ 'ಶ್ರೀ' ಅವರ ಪ್ರಗಾಥದ ಕಡೆ ಹರಿದಿದ್ದು ಸಹಜವೇ ಸರಿ. ಶ್ರೀಮತಿಯವರು ಇದನ್ನು ಹೇಳುವುದರಲ್ಲಿ ಪರಿಣತರೆನ್ನಿಸಿದರೆ, ಇದಕ್ಕೆ ವ್ಯಾಖ್ಯಾನ ಮಾಡುವುದರಲ್ಲಿ ಶ್ರೀ. ಬಿ. ಶ್ರೀ. ಪಾಂಡುರಂಗ ರಾಯರು ಅಷ್ಟೇ ನೈಪುಣ್ಯವನ್ನು ಗಳಿಸಿ ದರು. ಶ್ರೀಮತಿಯವರು ಈ ಪ್ರಗಾಥವನ್ನು ಓದಿದಾಗ, ಅದರ ಕರ್ತೃಗಳಾದ 'ಶ್ರೀ' ಅವರು ಮೊದಲ್ಗೊಂಡು ಎಲ್ಲರೂ ಚಕಿತರಾದ ಸಂದರ್ಭಗಳು ನನಗೆ ನೆನಪಿವೆ. ಇದೇ ಬಗೆಯಾಗಿ, ಸಹೃದಯ ಶೀಲರಾದ ಶ್ರೀಮತಿ ಶಕುಂತಳಾಬಾಯಿಯವರು ಆಧುನಿಕ ಭಾವ ಗೀತೆಗಳನ್ನು ಹಾಡುವುದರಲ್ಲಿಯೂ ಹೆಸರುವಾಸಿಯಾದರು.

ಆಧುನಿಕ ಕನ್ನಡ ಕಾವ್ಯ ಪ್ರಪಂಚ ಪ್ರವರ್ಧಿಸಿದಂತೆಲ್ಲ, ಅಲ್ಲಿಯೂ ಖಂಡ ಕಾವ್ಯ ಗಳೂ, ಮಹಾಕಾವ್ಯಗಳೂ ಉದಯವಾದವು. ಶ್ರೀ ಕುವೆಂಪು ಅವರು ಸರಳರಗಳೆಯಲ್ಲಿ ಬರೆದ 'ಚಿತ್ರಾಂಗದಾ' ಎಂಬ ಖಂಡಕಾವ್ಯವನ್ನು, ಸಂಪ್ರದಾಯಶೀಲರಾಗಿದ್ದ ಶ್ರೀ ಕೃಷ್ಣಗಿರಿ ಕೃಷ್ಣರಾಯರು ಆಗಿಂದಾಗ್ಗೆ ಓದಿ, ಕವಿಗೆ ಆನಂದಪಡಿಸಿದರೆಂಬ ಸಂಗತಿಯನ್ನು ಕುವೆಂಪು ಅವರೇ ಹೇಳಿರುತ್ತಾರೆ. ಈ ಕವಿ ಮತ್ತು ಗಮಕಿಗಳ ಸ್ನೇಹ, ಪರಿಚಯ ಒಂದೆರಡು ದಿನಗಳದ್ದಲ್ಲ. ಪ್ರತಿವರ್ಷವೂ ಶ್ರೀಮಾನ್ ಕೃಷ್ಣಗಿರಿ ಕೃಷ್ಣರಾಯರನ್ನು ಬೇಸಿಗೆಯ ರಜಾದಿನಗಳಲ್ಲಿ ಕುವೆಂಪು ಅವರು ತಮ್ಮ ಮಲೆನಾಡಿಗೆ ಬರಮಾಡಿಕೊಂಡು, ಅಲ್ಲಿ ಅವರ ವಾಚನವನ್ನು ಏರ್ಪಡಿಸಿ ತಾವು ಮತ್ತು ಇತರರೂ ಹೇಗೆ ಆನಂದ ಪಡುತ್ತಿದ್ದರು ಎನ್ನುವುದನ್ನು ತಮ್ಮ ಕವನವೊಂದರಲ್ಲಿ ಸ್ಪಷ್ಟಪಡಿಸಿರುತ್ತಾರೆ.

ಶ್ರೀ ಕುವೆಂಪು ಅವರು ರಚಿಸಿದ 'ಶ್ರೀ ರಾಮಾಯಣದರ್ಶನಂ' ಎಂಬ ಮಹಾ ಕಾವ್ಯ ಆಧುನಿಕ ಕನ್ನಡ ಕಾವ್ಯ ಪ್ರಪಂಚದಲ್ಲಿ ಮೇರುಕೃತಿಯಾಗಿ ಮೆರೆಯ ಲಾರಂಭಿಸಿದ್ದು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಒಂದು ಸುವರ್ಣ ಪ್ರಕರಣವೇ ಸರಿ. ಇಂಥ ಮಹಾಕಾವ್ಯದ ರಸಘಟ್ಟಗಳನ್ನು ಅಧ್ಯಯನ ಮಾಡಿ, ಅದನ್ನು ಸಭೆ ಸಮಾರಂಭ ಗಳಲ್ಲಿ ಓದಲು ತೊಡಗಿದ ಶ್ರೀಮತಿ ಶಕುಂತಳಾಬಾಯಿಯವರ ಸಾಧನೆ-ನಮ್ಮ ಗಮಕ ಕ್ಷೇತ್ರದಲ್ಲಿ ಒಂದು ಹೊಸ ಪರ್ವವನ್ನೇ ಪ್ರಾರಂಭಿಸಿತು ಎನ್ನಬಹುದು. ಪ್ರಾಚೀನ ಕವಿಗಳ ಕಾವ್ಯಗಳನ್ನು ಎಷ್ಟು ಹೃದಯಂಗಮವಾಗಿ ಓದಬಲ್ಲವರಾಗಿದ್ದರೋ, ಅದೇ ರೀತಿಯಲ್ಲಿ ಶ್ರೀ ರಾಮಾಯಣದರ್ಶನದ ಯಾವ ಸಂಪುಟವನ್ನಾದರೂ ಅಷ್ಟೇ

ರಸಸ್ಯಂದಿಯಾಗಿ ವಾಚನಮಾಡಬಲ್ಲ ಅವರ ಪ್ರಾವೀಣ್ಯ,ಶ್ರೀ ಕುವೆಂಪು ಮೊದಲ್ಗೊಂಡು ಪ್ರತಿಯೊಬ್ಬರಿಗೂ ಇಂದು ಆನಂದವನ್ನು ಉಂಟುಮಾಡಿದೆ. ಸಹಜ ಪ್ರತಿಭಾಶಾಲಿಗಳು ಯಾವ ಕ್ಷೇತ್ರದಲ್ಲಿಯೇ ಇರಲಿ, ಅವರಲ್ಲಿ ಪ್ರಯೋಗಶೀಲತೆ ಇದ್ದಲ್ಲಿ ಅದಕ್ಕೆ ಎಂದೆಂದಿಗೂ ಪುರಸ್ಕಾರನುಂಟು ಎನ್ನುವುದಕ್ಕೆ ಇದೊಂದು ದೊಡ್ಡ ಉದಾಹರಣೆ.

ಶ್ರೀಮತಿ ಶಕುಂತಲಾಬಾಯಿಯವರು ಇಂದು ಅನೇಕ ಗಮಕಿಗಳನ್ನು ತರಬೇತಿ ಮಾಡಿರುತ್ತಾರೆ. ಕರ್ಣಾಟಕದ ಮೂಲೆ ಮೂಲೆಗಳನ್ನು ಸಂಚರಿಸಿ ನಮ್ಮ ಮಹಾಕವಿಗಳ ರಸವಾಣಿಯ ಸವಿಯನ್ನು ದೊಡ್ಡ ದೊಡ್ಡ ಸಭೆ, ಸಮಾರಂಭಗಳಲ್ಲಿನ ಸಭಿಕರಿಗೆ ಉಣಬಡಿಸಿದ್ದಾರೆ. ಅವರ ಈ ಸಾಹಿತ್ಯ ಪ್ರಚಾರ ಕಾರ್ಯವನ್ನು ಮೆಚ್ಚಿ ನಮ್ಮ ಸರ್ಕಾರದವರು ಅವರಿಗೆ ಪ್ರಶಸ್ತಿಯನ್ನು ನೀಡಿರುವುದಷ್ಟೇ ಅಲ್ಲದೆ, ಪ್ರತಿ ತಿಂಗಳೂ ಅವರಿಗೆ ಗೌರವ ಸಂಭಾವನೆಯನ್ನೂ ನೀಡಿ ಪ್ರೋತ್ಸಾಹವಿತ್ತಿದ್ದಾರೆ. ಇತ್ತೀಚೆಗೆ ಮೈಸೂರಿನಲ್ಲಿ ನಡೆದ ಗಮಕಿಗಳ ಪರಿಷತ್ತಿಗೆ ಅವರನ್ನು ಅಧ್ಯಕ್ಷರನ್ನಾಗಿ ಆಯ್ಕೆಮಾಡಿ, ಜನತೆ ಅವರ ಗಮಕ ಕಲೋಪಾಸನೆಗೆ ತಕ್ಕ ಗೌರವವನ್ನೂ ಸಲ್ಲಿಸಿರುತ್ತದೆ. ಅಂದು ಅವರು ಮಾಡಿದ ಅಧ್ಯಕ್ಷ ಭಾಷಣವನ್ನು ಕೇಳಿದವರಿಗೆ ಅವರಿಗೆ ಕಲಾಭಿಮಾನಿ ದೇವತೆ ಹೇಗೆ ಅನುಗ್ರಹಿಸಿರುತ್ತಾಳೆ ಎನ್ನುವುದು ಯಾರಿಗಾದರೂ ವೇದ್ಯವಾಗುವಂತಿತ್ತು. ಇಂಥ ಗಮಕಕಲೋಪಾಸಕಿಗೆ ಈಗ ಅರವತ್ತು ವರ್ಷಗಳು ತುಂಬಿದುವು ಎಂದು ಕೇಳಿದಲ್ಲಿ, ಇದರಲ್ಲಿ ಅವರು ತಮ್ಮ ಗಮಕಕಲೆಗಾಗಿ ಸುಮಾರು ನಲವತ್ತು ವರ್ಷಗಳ ಕಾಲ ಹೇಗೆ ಶ್ರಮಿಸಿರುವರು ಎಂದು ತಿಳಿದುಬರುತ್ತದೆ. ಆದ್ದರಿಂದ, ಅವರಿಗೆ ವಯೋಮಾನದ ದೃಷ್ಟಿಯಿಂದ ಅರುವತ್ತು ವರ್ಷಗಳಾದರೂ ಅವರ ಗಮಕಕಲೋಪಾಸನೆಯ ದೃಷ್ಟಿಯಿಂದ ಅವರು ಇನ್ನೂ ಮಧ್ಯವಯಸ್ಕರು ಎಂದೇ ಹೇಳಬೇಕು. ಈ ವಯಸ್ಸಿನಲ್ಲಿಯೂ ಅವರ ಕಂಠಶ್ರೀಯ ಮಾಧುರ್ಯವನ್ನು ಕೇಳಿದವರಿಗೆ ಈ ಮಾತು ಉತ್ಪ್ರೇಕ್ಷೆಯೆನ್ನಿಸುವುದಿಲ್ಲ. ಅವರು ಕನ್ನಡಿಗರ ಮನವನ್ನು, ತಮ್ಮ ನಿರಂತರವಾದ ಗಮಕಕಲೆಯಿಂದ ಏಕಪ್ರಕಾರವಾಗಿ ತಣಿಸಿ, ಕನ್ನಡ ದೇವಿಯ ಅನಂತವಾದ ಅನುಗ್ರಹಕ್ಕೆ ಪಾತ್ರರಾಗಲೆಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

ಭಾವಪೂರ್ಣ ಗಮಕಿ

ಶಾಂತಾದೇವಿ ಮಾಳವಾಡ

ಕೀ.ಶೇ.ಬಿ.ಎಂ. ಶ್ರೀಕಂಠಯ್ಯನವರ ಕಾಲದಿಂದ ನಾನು ಶಕುಂತಲಾಬಾಯಿಯವರ ಪರಿಚಯಪಡೆದಿದ್ದೇನೆ, ಮಕ್ಕಳ ಕೂಟದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಅವರ ಕಾವ್ಯವಾಚನದ ಸೊಬಗನ್ನು ಸವಿದಿದ್ದೇನೆ. ಕುಮಾರವ್ಯಾಸ ಭಾರತ, ಹರಿಶ್ಚಂದ್ರ ಕಾವ್ಯ,ಹರಿಹರನ ಬಸವರಾಜದೇವರ ರಗಳೆ,ಕುವೆಂಪು ಕಾವ್ಯ—ಇವುಗಳನ್ನು ಶಕುಂತಲಾ ಬಾಯಿಯವರಕಂಠಶ್ರೀಯಿಂದ ಕೇಳಿದಾಗ,ಆ ಕಾವ್ಯಗಳಲ್ಲಿಯ ಪಾತ್ರಗಳು,ಸಂದರ್ಭಗಳು ಜೀವದಳೆದು ಕೇಳುಗರ ಕಣ್ಮುಂದೆ ಸುಳಿದಂತೆ ಭಾಸವಾಗುವದು. ಕೇಳುಗರಲ್ಲಿ ಏಕಾಗ್ರ ತೆಯನ್ನುಂಟುಮಾಡುವ ಕಾವ್ಯವಾಚನ ಶಕ್ತಿಯನ್ನು ಶ್ರೀಮತಿಯವರು ಪಡೆದಿದ್ದಾರೆ.

ಶಕುಂತಲಾಬಾಯಿಯವರದು ಎತ್ತರದ ನಿಲುವು. ನಿಲುವಿಗೆ ತಕ್ಕನೈಮಾಟ, ಗೌರವರ್ಣ, ನಗುಮುಖ, ಸ್ನೇಹಸೂಸುವ ಕಣ್ಣುಗಳು, ವೇಷಭೂಷಣದಲ್ಲಿ ಸರಳತೆ ಅಚ್ಚುಕಟ್ಟುತನ ಎದ್ದುತೋರುವದು. ಶಕುಂತಲಾಬಾಯಿ-ಶ್ರೀ ಪಾಂಡುರಂಗರಾಯರದು ಆದರ್ಶ ದಾಂಪತ್ಯ. ಸಾಹಿತ್ಯ—ಸಂಗೀತಕ್ಕೊಲಿಯಿತೋ ? ಸಂಗೀತ ಸಾಹಿತ್ಯಕ್ಕೊಲಿ ಯಿತೋ ? ಎಂಬುದು ಅವರಿಬ್ಬರಲ್ಲಿ ರಹಸ್ಯವಾಗಿ ಉಳಿದಿದೆ. ದಂಪತಿಗಳಿಬ್ಬರೂ ಅನೇಕ ವರುಷಗಳವರೆಗೆ ಮಕ್ಕಳಕೂಟ ನಡೆಸಿದರು. ಮಕ್ಕಳೊಂದಿಗೆ ಹೆಚ್ಚುಕಾಲ ಕಳೆದುದರಿಂದ ಮಕ್ಕಳ ಸರಳತೆ ಅವರ ಜೀವನದಲ್ಲಿ ಹಾಸು ಹೊಕ್ಕಾಗಿದೆ. ಬೆಂಗಳೂರಿನ ರಾಜಕೀಯ ವಾತಾವರಣದ ಸೋಂಕು ತಗಲದಂತೆ ಸಾಹಿತ್ಯ, ಸಂಗೀತ, ಮಕ್ಕಳ ಒಡನಾಟ ದಲ್ಲಿ ತ್ರಿವೇಣಿ ಸಂಗಮದ ಪಾವಿತ್ರ್ಯವನ್ನು ಈ ದಂಪತಿಗಳು ಉಳಿಸಿಕೊಂಡಿದ್ದಾರೆ.

1981 ಡಿಸೆಂಬರ್ 28ರಂದು ರೇಣುಕಾಚಾರ್ಯ ಕಾಲೇಜ ಮಂದಿರದಲ್ಲಿ ಪ್ರೊ. ಮಾಳವಾಡರ 70ನೇ ವರುಷದ ಹುಟ್ಟುಹಬ್ಬದ ಸತ್ಕಾರಸಮಾರಂಭವನ್ನು ಆತ್ಮೀಯ ಸೋದರ ಸೋದರಿಯರು ಕೂಡಿ ಏರ್ಪಡಿಸಿದ್ದರು. ಆ ಸಂದರ್ಭದಲ್ಲಿ ಸೋದರಿ ಶಕುಂತಲಾ ಬಾಯಿ ಪಾಂಡುರಂಗರಾವ ಅವರು ಹರಿಹರನ ಬಸವರಾಜದೇವರ ರಗಳೆಯಲ್ಲಿಯ ಕೆಲವು ಪದ್ಯಗಳನ್ನು ಭಾವಪೂರ್ಣವಾಗಿ, ಅರ್ಥವತ್ತಾಗಿ ಕಾವ್ಯವಾಚನ ಮಾಡಿದರು. ಅವರ ಕಾವ್ಯವಾಚನದ ರಸಸಾಗರದಲ್ಲಿ ನಾವೆಲ್ಲ ಓಲಾಡಿದೆವು. ಕಾವ್ಯವಾಚನವು ಅಂತರಂಗ ದಿಂದ ಹೊರಹೊಮ್ಮಿದಾಗ, ಕೇಳುಗರಲ್ಲಿ ತನ್ಮಯತೆ ತಲೆದೋರುವದು. ಅಂಥ ಕಾವ್ಯ ವಾಚನ ಶಕ್ತಿ ಶಕುಂತಲಾಬಾಯಿಯವರಲ್ಲಿದೆ. ಕಾವ್ಯದ ಭಾವವನ್ನು ಸರಿಯಾಗಿಗ್ರಹಿಸಿ, ಅದರ ಸೊಬಗನ್ನು ಹೃದಯಾಂತರಾಳದಲ್ಲಿ ಅನುಭವಿಸಿ ಅವರು ಕಾವ್ಯವಾಚನ ಮಾಡುವಾಗ ಕೇಳುಗರಲ್ಲಿ ಏಕಾಗ್ರತೆ, ತನ್ಮಯತೆ ತಾನೇ ತಾನಾಗಿ ತಲೆದೋರುವವು.

ಸೋದರಿ ಶಕುಂತಲಾಬಾಯಿ ಹಾಗೂ ಸೋದರ ಪಾಂಡುರಂಗರಾಯರಿಗೆ ದೇವರು ಆಯುರಾರೋಗ್ಯ ದಯಪಾಲಿಸಲಿ. ಅವರ ಸಾಹಿತ್ಯ ಸಂಗೀತದ ರಸದೌತಣ ಕನ್ನಡಿಗ ರಿಗೆ ಬಹುಕಾಲ ದೊರೆಯುವಂತಾಗಲಿ.

ಸಾಹಿತ್ಯಕ್ಕೆ ಸಂಗೀತದ ರೆಕ್ಕೆ

ಎಚ್ಚೆಸ್ಕೆ

ಇವರಿಗೆ ಸಂಗೀತ ತುಂಬಾ ಪ್ರಿಯ. ಸಾಹಿತ್ಯವೂ ಅಷ್ಟೇ ಪ್ರೀತಿ. ಸಾಹಿತ್ಯವನ್ನು ಸಂಗೀತಮಯವಾಗಿ ಮಾಡುವುದೆಂದರೆ ಬಹಳ ಇಷ್ಟ.

ಸಾಹಿತ್ಯ ಎಲ್ಲರಿಗಿಲ್ಲ–ಎಂದು ಹೇಳಿದ ಸರ್ವಜ್ಞ. ಒಂದು ಅರ್ಥದಲ್ಲಿ ಆ ಮಾತು ನಿಜ. ಆದರೆ ಸಾಹಿತ್ಯ ಎಲ್ಲರಿಗಾಗಿ–ಎನ್ನುವುದು ಇವರ ನಂಬಿಕೆ. ಸಾಹಿತ್ಯಕ್ಕೆ ಸಂಗೀತದ ರೆಕ್ಕೆ ತೊಡಿಸುವುದರಲ್ಲೇ ಇವರಿಗೆ ತೃಪ್ತಿ. ಸಂತೋಷ.

ಈಗಿನ ಕಾಲದಲ್ಲಿ ಸಾಹಿತ್ಯ ನಮ್ಮ ಅಂತರಂಗವನ್ನು ಹೊಗುವುದು ಕಣ್ಣಿನ ಮೂಲಕ. ಮುದ್ರಣಕ್ರಾಂತಿ, ಪುಸ್ತಕ ಕ್ರಾಂತಿ, ಪತ್ರಿಕಾ ಕ್ರಾಂತಿ– ಇವು ಕಾರಣ. ಇಂದು ವಾಚನ ಬಹುತೇಕ ಮೌನ.

ಒಂದು ಕಾಲದಲ್ಲಿ ಹೀಗಿರಲಿಲ್ಲ. ಕವಿಗಳು ಹಾಡುತ್ತಲೇ ಕಾವ್ಯ ಸೃಷ್ಟಿಸುತ್ತಿದ್ದ ಕಾಲವದು. ಹಾಡಾಗಿಯೇ ಸಹೃದಯರ ಮನಸ್ಸಿಗೆ ಅಪರ ಪ್ರವೇಶ. ಹಾಡುವವ ಕವಿಯಾದರೆ, ಸಹೃದಯನೇ ಕಿವಿ. ಕವಿಗೂ ಕಿವಿಗೂ ನೇರ ಸಂಬಂಧ.

ಲಕ್ಷ್ಮೀಶ, ಕುಮಾರವ್ಯಾಸ, ತೊರವೆ ನರಹರಿ ಮುಂತಾದವರ ಕಾವ್ಯಗಳನ್ನು ಸುಶ್ರಾವ್ಯವಾಗಿ ಹಾಡಬಲ್ಲವರು ನಮ್ಮಲ್ಲಿ ಧಾರಾಳವಾಗಿದ್ದ ಕಾಲವೊಂದಿತ್ತು. ಗಮಕಿಗಳೇ, ಹಾಡುಗಾರರೇ ನಮ್ಮ ಸಾಹಿತ್ಯ ಸಂಸ್ಕೃತಿಗಳ ರಕ್ಷಕರು. 'ಸಾಹಿತ್ಯ ಎಲ್ಲರಿಗಾಗಿ' ಎಂಬ ಮಾತಿಗೆ ಅರ್ಥವಿದ್ದದ್ದು ಗಮಕಿಗಳಿಂದಾಗಿ. ಜನತಾ ವಿಶ್ವವಿದ್ಯಾಲಯದ 'ಪ್ರವಾಚಕರು' ಗಮಕಿಗಳು.

ಇದೀಗ ಅರವತ್ತು ತುಂಬಿದ ಶಕುಂತಲಾಬಾಯಿ ಪಾಂಡುರಂಗರಾವ್ ಅವರದು ಈ ಹಳೆಯ ಪರಂಪರೆ. ಲಕ್ಷ್ಮೀಶ–ಕುಮಾರವ್ಯಾಸರಿಂದ ಹಿಡಿದು ಬೇಂದ್ರೆ–ಕುವೆಂಪುಗಳ ವರೆಗೆ ಎಲ್ಲ ಶ್ರೀಮಂತ ಕವಿಗಳ ಕೃತಿಗಳೂ ಬಾಯಿಯವರಿಗೆ ವಾಚೋವಿಧೇಯ, ಕಾವ್ಯ ರಸವನ್ನೆಲ್ಲ ಸುಮಧುರ ಕಂಠದಲ್ಲಿ ಧಾರೆಯಾಗಿ ಹೊಮ್ಮಿಸುವ ಕಲೆಗಾರ್ತಿ ಶಕುಂತಲಾ ಬಾಯಿ. 1937ರಷ್ಟು ಹಿಂದೆ ಗಮಕವಾಚನ ಪ್ರವೀಣ ಬಿಂದೂರಾಯರಲ್ಲಿ ಕಲಿತದ್ದು ಇವರ ಕಲೆ.

ಶಕುಂತಲಾಬಾಯಿಯವರದು ಸಾರ್ಥಕ ಜೀವನ. ಪತಿ ಪಾಂಡುರಂಗರಾವ್ ಸಾಹಿತಿ, ಶಿಕ್ಷಕ, ಮೇಲಾಗಿ ಸಾಹಸಿ. ಪತ್ರಿಕೋದ್ಯಮದಲ್ಲಿ ಕೈಸುಟ್ಟುಕೊಂಡವರು. ಪುಸ್ತಕ ಬರೆದು ಬಡವರಾದರು. ಪಾಂಡುರಂಗರಾಯರೇ ಶಕುಂತಲಾಬಾಯಿಯವರ ಮೊದಲ ಕಿವಿ, ಪ್ರಥಮ ಅಭಿಮಾನಿ. ಗಂಡ–ಹೆಂಡತಿ ಹೀಗಿರಬೇಕು–ಎಂಬುದು ಈ ದಂಪತಿಗಳ ಮಾದರಿ.

ಈ ದಂಪತಿಗಳ ಎಲ್ಲಕ್ಕಿಂತ ದೊಡ್ಡ ಸಾಹಸವೆಂದರೆ 'ಮಕ್ಕಳ ಮಂಟಪ'. ಮೂರು ದಶಕಗಳಿಗೂ ಹಿಂದೆ (1948) ಇವರು ಬೆಂಗಳೂರಿನಲ್ಲಿ ಕೇವಲ ಏಳು ಮಕ್ಕ

ಳಿಂದ ಮಂಟಪವನ್ನಾರಂಭಿಸಿದರು. ಅವರಲ್ಲಿ ಒಬ್ಬ ಹುಡುಗ ಇವರ ಮಗನೇ.

'ಮಕ್ಕಳ ಮಂಟಪ'ವನ್ನಿವರು ಆದರ್ಶ ರೀತಿಯಿಂದ ನಡೆಸಿಕೊಂಡು ಬಂದರು. ಪಾಂಡುರಂಗರಾವ್ ಭಾರತ ಸರಕಾರದ ಆದರ್ಶ ಶಿಕ್ಷಕ ಪ್ರಶಸ್ತಿ ಪಡೆದವರು.

ಪಾಂಡುರಂಗರಾವ್ ದಂಪತಿಗಳು ತಮ್ಮ ಶಾಲೆಯ ಕೆಲಸವನ್ನು ವ್ಯಾಪಾರವೆಂದು ಪರಿಗಣಿಸಲಿಲ್ಲ. ಆದ್ದರಿಂದ ಇವರು ಭೌತಿಕವಾಗಿ ಶ್ರೀಮಂತರಾಗಲಿಲ್ಲ. ಇವರ ಶ್ರೀಮಂತಿಕೆಯೆಲ್ಲ ಹೃದಯದ ಸೀಮೆಯದು.

ತುಂಬು ಬಾಳಿನ ನಗೆಮೊಗದ ಈ ದಂಪತಿಗಳು ಮರೆಯಾಗುತ್ತಿರುವ ಭವ್ಯ ಪರಂಪರೆಯೊಂದರ ಪ್ರತಿನಿಧಿಗಳು. ಶಕುಂತಲಾಬಾಯಿಯವರ ಸಾಹಿತ್ಯಕ–ಸಂಗೀತ ಅಮರ್ತ್ಯವಾದ್ದು.

ನಾನು ಕಂಡಂತೆ ಶಕುಂತಲಾಬಾಯಿ

ಸಮೇತನಹಳ್ಳಿ ರಾಮರಾಯ

ವ್ಯಕ್ತಿಯೊಂದರ ಆಂತರಿಕಜ್ಞಾನ ಮತ್ತು ಸೌಂದರ್ಯಗಳ ಸರ್ವದರ್ಶನವೇ ಕಲೆಯಾಗುತ್ತದೆ. ಅಂತಸ್ಥವಾದ ಈ ರಸನಿರ್ಝರಿಣಿ,ಜೀವನಾನುಭವದಿಂದ ಮತ್ತು ಬಾಹ್ಯ ಜಗತ್ತಿನ ವ್ಯಾಪಾರ ವಿಶಿಷ್ಟಗಳಿಂದ ಬೆಳೆದೋ ಪ್ರಕ್ಷುಬ್ಧಗೊಂಡೋ, ಅಥವಾ ರಸಾನುಭೂತಿಯ ದಿವ್ಯಲೀಲೆಯಿಂದ ಪ್ರಭಾವಿತವಾಗಿಯೋ, ಪರ್ವತದ ಗರ್ಭಗುಹೆಯಿಂದ ನಿರಂತರವಾಗಿ ಹರಿದು ಧುಮ್ಮಿಕ್ಕುವ ಅಬ್ಬಿಯಂತ ಸ್ವಚ್ಛಂದವಾಗಿ ಪ್ರಸ್ಫುಟರೂಪದಿಂದ ಆವಿಷ್ಕಾರಗೊಳ್ಳುತ್ತದೆ. ಅದು ಧ್ವನಿರೂಪದ ರಸರಾಗವಾಗಬಹುದು ಅಥವಾ ಬರವಣಿಗೆಯ ರೂಪದಲ್ಲಿ ಮೂಡಿಬಂದ ಹಾಡಾಗಬಹುದು. ಗೆರೆ ಅಥವಾ ಬಣ್ಣಗಳಲ್ಲಿ ಆ ಕಲೆ ಹೊರಕ್ಕೆ ಹರಿದು ಬಂದಾಗಲೂ, ಕೆತ್ತನೆಯ ರೂಪಗಳನ್ನು ತಳೆದು ಬಂದಾಗಲೂ, ಅದರ ಬನಿ ಬೆಡಗು ಚೆಲುವುಗಳನ್ನು ಆಸ್ವಾದಿಸುವ ಮನಸ್ಸು, ಅದನ್ನು ಒಂದು ಧ್ವನಿಯಾಗಿಯೇ ಮಾರ್ಪಡಿಸಿಕೊಂಡು, ಅದರಿಂದುತ್ಪತ್ತಿಯಾಗುವ ದಿವ್ಯ ರಸಾನುಭವದಿಂದ ಸೊಗಸಡುತ್ತದೆ; ಹೆಚ್ಚಾದರೆ ಆನಂದದಿಂದ ಮೈಮರೆಯುತ್ತದೆ. ಅದು ಭೌತಿಕಸೃಷ್ಟಿಯ ವಸ್ತುವಿನಿಂದಾಗಬಹುದಾದ ಸಂತೋಷಕ್ಕಿಂತ ವಿಭಿನ್ನವಾದುದು. ಆ ಆನಂದದ ಮುಂದೆ ಮತ್ತೆಲ್ಲವೂ ತೀರಸಣ್ಣದಾಗಿ ಕಾಣುತ್ತದೆ; ಅಥವಾ ಅಳಿಸಿ ಹೋಗಿಬಿಡುತ್ತದೆ.

ಮಾನವನ ಆಂತರಿಕ ಸೌಂದರ್ಯ ವಿಶಿಷ್ಟವನೆಲ್ಲವೂ ಒಂದು ಧ್ವನಿಯಾಗಿ ಮಾರ್ಪಟ್ಟು, ವಿವಿಧ ತರಂಗಗಳಲ್ಲಿ ಸಂಚರಿಸಿ, ಪರುಸಗಲ್ಲು ತನ್ನ ದಿವ್ಯಶಕ್ತಿಯಿಂದ ಮುಟ್ಟಿದುದಲ್ಲವನ್ನೂ ಹೊನ್ನಾಗಿಸುವಂತೆ, ಈ ಭಾವ ಸಮುಚ್ಚಯವು ಕೂಡ ತಾನು ಸಂದರ್ಶಿಸಿದುದೆಲ್ಲವನ್ನೂ ಸಂಸ್ಕರಣಗೊಳಿಸುವ ಮಹಾಕಲ್ಪವಾಗುತ್ತದೆಂಬುಧನ್ನು ಹೇಳುವುದಕ್ಕಾಗಿ ಈ ಮಾತನ್ನು ಎತ್ತಿದ್ದೇನೆ. ಆ ದಿವ್ಯಶಕ್ತಿ, ಕಲೆ ಮೂಡಿಬರುವ ವ್ಯಕ್ತಿಯ ಜೀವನ ಸೌಂದರ್ಯದ ವ್ಯಾಪ್ತಿ ವಿಸ್ತಾರ ಹಾಗೂ ಶಕ್ತಿ ವೈಶಿಷ್ಟ್ಯಗಳನ್ನು ಅವಲಂಬಿಸಿರುತ್ತಿದೆ.

ಜೀವನ ಸೌಂದರ್ಯವೆಂದರೆ, ವ್ಯಕ್ತಿ ಇಲ್ಲಿ ಬಾಳುತ್ತಿರುವಾಗ ರೂಢಿಸಿಕೊಂಡು ಅಭ್ಯಸಿಸುತ್ತಿರುವ ಪ್ರಾಮಾಣಿಕತೆ, ನಯ, ನೈರ್ಮಲ್ಯ, ನೆರೆಯ ಮನಮನಗಳ ಸಂಪರ್ಕಕ್ಕೆ ಸಿಕ್ಕಿದಾಗ ಹೂವಿನೆಸಳನ್ನು ಮುಟ್ಟುವಂತೆ ತಳೆಯುವ ಆ ಕೋಮಲತೆ, ಸೃಷ್ಟಿ ಶಕ್ತಿಯಲ್ಲಿ ತಾಳುವ ಆ ಪರಮಗೌರವ, ಅನುಕಂಪ, ತಾನು ಬಾಳುತ್ತ ತನ್ನ ಪಕ್ಕದವರನ್ನೂ ಅಂತೆಯೇ ಬಾಳಗೊಡುವ ಔದಾರ್ಯ, ಇತರ ಸದ್ಭಾವನೆಗಳನ್ನು ಸ್ವೀಕರಿಸುವ ಮನಸ್ಸಿನ ಆ ಪರಿಪಾಕ, ಒಳಿತನ್ನುಕಂಡು ಮೆಚ್ಚುವ ಸಹೃದಯತೆಯೇ ಮುಂತಾದ ಕಲ್ಯಾಣಕಾರಕ ಶಕ್ತಿ ಸಂಚಯನವಲ್ಲದೆ ಬೇರೇನೂ ಆಗಲಾರದು. ಈ ಜೀವನ

ಸೌಂದರ್ಯ ತನ್ನ ಪ್ರತೀಕವೆನ್ನುವಂತೆ ಕಲೆಯನ್ನೂ, ಆ ಕಲೆ ಧ್ವನಿಯನ್ನೂ ಮೂಡಿಸುತ್ತದೆ. ಗಮಕ ಆ ದಿವ್ಯ ಸೌಂದರ್ಯದ ಒಂದು ಭಿನ್ನ ಆವಿಷ್ಕಾರವಷ್ಟೆ.

ಸೋದರಿ ಶಕುಂತಲಾಬಾಯಿ ಇಂದಿನ ಗಮಕದಲ್ಲಿ ಒಂದು ಮಹಾಸಾಧನೆಯನ್ನು ಮಾಡಿದ್ದಾರೆ. ಕಲೆಯನ್ನು ಬೆಳೆಯಿಸಿಕೊಂಡಿದ್ದಾರೆ ಎಂದಾಗ, ಅವರು ಜೀವನದ ಈ ಸೌಂದರ್ಯವನ್ನು ಅಭಿವೃದ್ಧಿಪಡಿಸಿಕೊಳ್ಳುವ ದಿಸೆಯತ್ತ ದಿಟ್ಟ ಹೆಜ್ಜೆಯನ್ನಿಟ್ಟಿರುವರೆಂದೇ ಅದರ ಅರ್ಥ. ಇಲ್ಲಿ ನಾನು ಮೊಟ್ಟಮೊದಲಿಗೆ ಶಕುಂತಲಾಬಾಯಿಯವರೊಬ್ಬರ ಹೆಸರನ್ನು ಮಾತ್ರ ಹೇಳಿದೆನಷ್ಟೆ. ಆದರೆ ಅದನ್ನು ಶ್ರೀಪಾಂಡುರಂಗರಾಯರಿಲ್ಲದೆ ಯಾರೂ ನೆನೆಯಲಾರರು. ಆ ಎರಡೂ ಹೆಸರುಗಳು ಅವಿಭಾಜ್ಯವಾದವುಗಳು. ಹೂವಿನೊಡನೆ ಅದರ ಪರಿಮಳವನ್ನು ನೇಸರಿನೊಡನೆ ಅದರ ಬೆಳಕನ್ನು, ಹಣ್ಣಿನೊಡನೆ ಅದರ ಮಧುರ ರಸವನ್ನು ನೆನೆದಂತೆ ಶಕುಂತಲಾಬಾಯಿಯವರೊಡನೆ ಪಾಂಡುರಂಗರಾಯರನ್ನು ನೆನೆವುದು ಅಷ್ಟೇ ಸ್ವಾಭಾವಿಕವಾದುದು. ಅವರ ಜೀವನಸೌರಭಗಳೆರಡೂ ಅಭೇದ್ಯವೆನ್ನುವಂತೆ ಬೆಸೆದು ಕೊಂಡಿರುವಾಗ, ಶಕುಂತಲಾಬಾಯಿ ಎಂದಾಗ, ಶಕುಂತಲಾಬಾಯಿ ಪಾಂಡುರಂಗರಾವ್ ಎಂದೇ ಅದರ ಅರ್ಥ.

ಇಲ್ಲಿ ಮಿತ್ರರಾದ ಶ್ರೀಪಾಂಡುರಂಗರಾಯರ ವಿಷಯವಾಗಿ ನಾನು ಒಂದು ಮಾತನ್ನು ಹೇಳಲೇಬೇಕಾದುದು ಅನಿವಾರ್ಯ. ನನ್ನ ಮತ್ತು ಅವರ ಪ್ರತ್ಯಕ್ಷ ಮೈತ್ರಿ ಕೇವಲ ಹತ್ತು ವರುಷಗಳಿಂದ ಮಾತ್ರವೇ ಆದರೂ, ನಾನು ಅವರನ್ನು ಸ್ವಾತಂತ್ರ್ಯ ಪೂರ್ವದ ದಿನಗಳಿಂದಲೂ ಚೆನ್ನಾಗಿ ಬಲ್ಲೆನು. ಕನ್ನಡ ಸಾಹಿತ್ಯಪರಿಷತ್ತಿನ ಚಟುವಟಿಕೆಗಳಲ್ಲಿ ಅವರು ಕಾರ್ಯನಿರತರಾಗಿರುತ್ತಿದ್ದರು. ಖಾದಿಯ ಬಿಳಿಯ ಜುಬ್ಬ ಮತ್ತು ಪೈಜಾಮುಗಳು, ಅವುಗಳ ಮೇಲೊಂದು ಬೂದಿಯ ಬಣ್ಣದ ತೋಳಿಲ್ಲದ ಮೋಟಂಗಿಯನ್ನು ಧರಿಸಿರುತ್ತಿದ್ದ ಬೆಳ್ಳನೆಯ ಈ ಆಕರ್ಷಕ ವ್ಯಕ್ತಿ ಯಾರ ಕಣ್ಣನ್ನಾದರೂ ಸೆಳೆಯುತ್ತಿದ್ದರು. ನಾನು ಅವರನ್ನು ಕಂಡ ಈ ಮೂವತ್ತೈದು–ನಲವತ್ತು ವರುಷಗಳಲ್ಲಿ ಬಹುಮಂದಿ ವ್ಯಕ್ತಿಗಳಲ್ಲಿ ಧರಿಸುವ ವಸ್ತ್ರಗಳ ಹಲವಾರು ಬದಲಾವಣೆಗಳನ್ನು ಕಂಡಿದ್ದೇನೆ. ಆದರೆ ನನ್ನ ಈ ಮಿತ್ರರ ಉಡುಪು ರವೆಯಷ್ಟಾದರೂ ಬದಲಾವಣೆಯಾಗಿಲ್ಲ. ಅದೇ ಬಿಳಿಯ ಬಣ್ಣದ ಜುಬ್ಬ ಪಾಯಿಜಾಮುಗಳು ಮತ್ತು ಅದೇ ಆ ಬಿಗಿಯಾಗಿ ಅವರ ನಿರ್ಮಲ ಮನಸ್ಸಿನ ಪ್ರತೀಕದಂತಿರುವ ಈ ಬಿಳಿಯುಡುಪು ಲೋಕವೇ ಬದಲಾಗಬಹುದಾದರೂ ಬದಲಾಗುವಂತಿಲ್ಲ. ನಿಜ. ಅದು ಬದಲಾಗುವಂತಿಲ್ಲ. ಅಂದು ಮಹಾತ್ಮ ಗಾಂಧಿಯವರ ಕರೆಗೆ ಓಗೊಟ್ಟು ಸತ್ಯ ಧರ್ಮ ಮತ್ತು ಅಹಿಂಸೆಗಳ ಸಂಕೇತದಂತೆ ಖಾದಿಯನ್ನು ಧರಿಸಬೇಕೆಂಬ ಪಣತೊಟ್ಟು ಈ ಉಡುಪನ್ನು ಧರಿಸಿದ ರಾಯರು ತಮ್ಮ ಸಂಕಲ್ಪವನ್ನು ಮಾರ್ಪಡಿಸಲಿಲ್ಲ. ಅದನ್ನೇ ನೆಚ್ಚಿ ನಡೆದರು ; ಬಾಳಿದರು. ಖಾದಿ ಅವರ ಮೈಮೇಲೆ ಸಾರ್ಥಕ್ಯವನ್ನು ಕಂಡಿತು. ಅದು ಇಂದಿನ ಯಾವುದೇ ಕರೆಯಿಂದ ಮಾಸಲಿಲ್ಲ. ನಾನು ಅದನ್ನೊಂದು ತಪಸ್ಸೆಂದೇ ಕರೆಯುತ್ತೇನೆ.

ರಾಯರು ಸ್ನೇಹಮಯಿ. ಅವರದು ಹಸುಗೂಸಿನಂತಹ ನಿರ್ಮಲವಾದ ಮನಸ್ಸು. ಈ ಕಠಿಣವ್ರತಾಚರಣೆಯಿಂದ ಹದಗೊಂಡ ಮನಸ್ಸಿನ ಪರಿಪಾಕವನ್ನು ಅವರ ಮಾತಿ

ನಲ್ಲಿ ನಾವು ಕಾಣಬಹುದು. ಹತ್ತು ವರುಷಗಳ ಕೆಳಗೆ ಕೋಟೆಯ ಪ್ರೌಢಶಾಲೆಯ ಆವರಣದಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ಸುವರ್ಣ ಮಹೋತ್ಸವದಲ್ಲಿ ನನ್ನ ಬಹು ಹಳೆಯ ವಿದ್ವಾಂಸ ಮಿತ್ರರಾದ ಡಾ|| ವರದರಾಜರಾಯರು ನನ್ನನ್ನು ಈ ಮಿತ್ರರಿಗೆ ಪರಿಚಯ ಮಾಡಿಕೊಟ್ಟರು. ಪಾಂಡುರಂಗರಾಯರು ನನ್ನನ್ನು ಒಬ್ಬ ಅಜನ್ಮ ಬಂಧುವಿನಂತೆ ಆತ್ಮೀಯತೆಯಿಂದ ಕಂಡರು. ಇಂತಹ ಹಿರಿಯ ಗುಣವನ್ನು ಅಪರೂಪವಾಗಿ ಅಲ್ಲೊಮ್ಮೆ ಇಲ್ಲೊಮ್ಮೆ ಕಾಣಬಹುದು. ಹೃದಯ ಹೃದಯವನ್ನು ಬೆಸೆವ ಮೋಡಿ ರಾಯರದು. ಸಾಹಿತ್ಯಕ್ಷೇತ್ರದಲ್ಲಿ ದುಡಿಯುವ ವ್ಯಕ್ತಿಗಳಲ್ಲಿ ವಿರಳವಾದ ಈ ಮಹಾಶಕ್ತಿಯನ್ನು ನಾನು ಇವರಲ್ಲಿ ಗುರುತಿಸಿದ್ದೇನೆ; ಸಂತೋಷಿಸಿದ್ದೇನೆ. ನಮ್ಮ ಮೈತ್ರಿ ಗಾಢವಾಗಿದೆ; ದೃಢವಾಗಿದೆ. ನಿರಪೇಕ್ಷತೆಯ ಇಂತಹ ನಿಸ್ಪೃಹ ಮಿತ್ರರಿದ್ದರೂ ಸಾಕು ಬಾಳು ಸಹನೀಯ ಮತ್ತು ಮಧುರ ಆದೀತು.

ಶ್ರೀಮತಿ ಶಕುಂತಲಾಬಾಯಿಯವರ ಅಭಿನಂದನ ಲೇಖನದಲ್ಲಿ ಶ್ರೀ ಪಾಂಡುರಂಗರಾಯರ ಅಭಿನಂದನೆಯೇ ಹೆಚ್ಚಾದಂತೆ ಕಂಡಿತೇನೋ! ಇಲ್ಲ. ಅದು ಹಾಗಾಗುವುದಿಲ್ಲ. ಇವರಲ್ಲಿ ಹೃದಯವೊಂದೇ ದೇಹವೆರಡಷ್ಟೆ. ಈ ಒಂದು ಹೃದಯ ಚಿಮ್ಮುವ ರಕ್ತ ದೇಹವೆರಡಕ್ಕೂ ಸಮನಾಗಿ ಹಂಚಿಕೆಯಾಗುತ್ತದೆ. ಆ ಹೃದಯಕ್ಕೆ ಸಲ್ಲಿಸುವ ಅಭಿನಂದನೆ ಕೂಡ ತನಗೆ ತಾನಾಗಿಯೇ ಸ್ವಾಭಾವಿಕವಾಗಿ ದೇಹಗಳೆರಡರಲ್ಲಿಯೂ ಸಮನಾಗಿ ಹರಡಿಕೊಳ್ಳುತ್ತದೆ. ಮೊದಲೇ ಹೇಳಿದ್ದೇನೆ, ಈ ದಂಪತಿಗಳ ಮಧುರ ಬಾಂಧವ್ಯ ಇಂತಹ ದಿವ್ಯವಾದುದ ಎಂದು. ಮಲ್ಲಿಗೆಯ ಎರಡು ಬಳ್ಳಿಗಳು ಹೆಣೆದುಕೊಂಡು ಬಲಿತು ದಪ್ಪ ಕಾಂಡಗಳಾದ ಮೇಲೆ ಯಾವುದು ಯಾವುದಕ್ಕೆ ಆಸರೆಯೆಂದು ಹೇಳುವುದೇ ಕಷ್ಟವಾಗುತ್ತದೆ. ಈ ಇಬ್ಬರ ಜೀವನವೂ ಹಾಗೆ ಬೆಳೆದು ದೃಢಗೊಂಡಿರುವಾಗ ಒಂದು ಇನ್ನೊಂದಕ್ಕೆ ಆಸರೆಯಾಗಿ ನಿಂತಿವೆ.

ಈ ಮಲ್ಲಿಗೆಯ ಚಪ್ಪರ ಹರಡಿರುವ ವಿಸ್ತಾರ, ಅದು ಕೆಳಕ್ಕೆ ಚೆಲ್ಲುವ ಬಿಡಿಹೂಗಳ ಸುಗಂಧದ ವ್ಯಾಪ್ತಿಯನ್ನು ಕನ್ನಡ ಜನತೆ ನಾಲ್ಕು ದಶಕದಿಂದ ಬಲ್ಲುದು. ಇಂದು ಶಕುಂತಲಾಬಾಯಿ ಪಾಂಡುರಂಗರಾಯರ ಹೆಸರು ಕನ್ನಡಿಗರ ಮನೆ ಮಾತಾಗಿವೆ. ತಮ್ಮ ದಿವ್ಯ ತಪಸ್ಸಿನಿಂದ ಅತ್ಯುಚ್ಚಮಟ್ಟದ ವಿದುಷಿಯಾಗಿ ಮೆರೆಯುತ್ತಿರುವ ಈ ಸೋದರಿ ಶಕುಂತಲಾಬಾಯಿ ನಾಡಿನ ಹೆಮ್ಮೆಯ ಕುವರಿ; ಎಲ್ಲ ಗೌರವಕ್ಕೂ ಅರ್ಹರು.

ಕಾವ್ಯವಾಚನದ ಗುರಿ ಮತ್ತು ಉದ್ದೇಶಗಳ ಸರ್ವಾಂಗೀಣ ಉನ್ನತಿಯನ್ನು ಮುಟ್ಟಬಲ್ಲ ಶ್ರೀಮತಿ ಶಕುಂತಲಾಬಾಯಿಯವರ ಸ್ಪರ್ಶದಿಂದ ಯಾವುದೇ ಮಹಾಕವಿಯ ಯಾವುದೇ ಕೃತಿ ಸರ್ವಚೇತನದಿಂದ ಮೆರೆದಾಡಬಲ್ಲುದು. ಆ ಕಾವ್ಯದ ಪಾತ್ರಗಳ ಮತ್ತು ಸನ್ನಿವೇಶಗಳ ಜೀವನಾಡಿಯನ್ನು ಹಿಡಿದು ನೋಡಿ, ಅವುಗಳಾಂತರ್ಯವನ್ನು ಹೊಕ್ಕು ತಮ್ಮ ವಿದ್ವಚ್ಚಕ್ಷುವಿನ ತೀಕ್ಷ್ಣ ಅವಲೋಕನಕ್ಕೆ ಸಿಕ್ಕಿಸಿಕೊಂಡು, ಅರಿತು, ಅವುಗಳ ವಿದ್ಯುತ್ ಚೇತನವನ್ನು ರಸಸ್ರೋತವಾಗಿ ಹೊರಗೆಡಹಿ ಕೇಳುಗರನ್ನು ಆನಂದಲೋಕಕ್ಕೆ ಕೊಂಡೊಯ್ಯುವ ಕೌಶಲ್ಯ ಅವರದು.

ಸಾಮಾನ್ಯನೂ ಕೂಡ ಕಾವ್ಯದ ರಸಾಸ್ವಾದನೆಯಿಂದ ಸಂತುಷ್ಟಿಗೊಳ್ಳುವಂತೆ

ಕವಿ ಭಾವಗಳನ್ನು ಬಿಡಿಸಿಡುವುದೇ ಗಮಕ ಕಲೆಯ ಪರಮಗುರಿ. ಅದನ್ನು ಶಕುಂತಲಾ ಬಾಯಿಯವರು ವ್ಯಾಖ್ಯಾನಕಾರರಿಲ್ಲದೆ ಯಶಸ್ವಿಯಾಗಿ ನಿರ್ವಹಿಸಬಲ್ಲರು. ಹೆಣ್ಣಿನ ಕೋಮಲತೆಯನ್ನು, ವನ್ಯಶ್ರೀ ಸುಭಗತೆಯ ಲಲಿತಲಾವಣ್ಯವನ್ನು ಸ್ವಚ್ಛಂದ ಲೀಲೆಯಿಂದ ಬಿಡಿಸಿಡುವ ಜಾಣ್ಮೆಯಂತೆಯೇ, ಗಂಡಿನ ಧೈರ್ಯೋತ್ಸಾಹಗಳನ್ನು, ವೀರ್ಯ ಪರಾಕ್ರಮಗಳನ್ನು, ಬೆಟ್ಟ ಕಾಡು ಕಿಬ್ಬಿಗಳ ರುದ್ರಮಾಧುರ್ಯವನ್ನು ಇವರು ಹರಡಿ ತೋರಬಲ್ಲರು. ಪಂಪ ರನ್ನ ಲಕ್ಷ್ಮೀಶ ನಾರಣಪ್ಪ ರಾಘವಾಂಕಾದಿ ಮಹಾಕವಿ ಕೃತಿಗಳನ್ನು ಇವರು ತಮ್ಮ ರಕ್ತಗತವಾಗಿಸಿಕೊಂಡಿದ್ದಾರೆ. ಕವಿಸತ್ವಾನುಗುಣವಾಗಿ ಅಲ್ಲಿನ ವ್ಯಕ್ತಿಗಳು ತಮ್ಮ ವಿಭಿನ್ನರೂಪಗಳಲ್ಲಿ ಕಾಣಿಸಿಕೊಳ್ಳುವರಾದರೂ, ಅವುಗಳ ಜೀವಾಳವನ್ನು ಪರಿಸ್ಫುಟವಾಗಿ ಅರಿತುಕೊಂಡ ಶಕುಂತಲಾಬಾಯಿಯವರು ಅವವುಗಳನ್ನು ಅವವುಗಳ ದೃಷ್ಟಿಕೋನದಿಂದಲೇ ಗುರುತಿಸಿ ಹೆಚ್ಚು ಸಿರಿವಂತಿಕೆಯಿಂದ ಮೆರೆಯಿಸುವ ಕಲಾವಿದೆಯೆಂಬ ಮಾತು ಸರ್ವವಿದಿತವಾದುದು. ಇದರ ವಾಚನದಿಂದ ಕಾವ್ಯೋದ್ದೇಶ ಸರ್ವಸಮೃದ್ಧಿಯನ್ನು ಸಾಧಿಸುತ್ತದೆ.

ಎಲ್ಲಿಯಾದರೂ ಸ್ವಲ್ಪ ಒಳ್ಳೆಯದನ್ನು ಕಂಡಾಗ, ಕೇಳಿದಾಗ, ಅದನ್ನು ಗುರುತಿಸಿ ಹುಡುಕಿಕೊಂಡು ಹೋಗುವ ಮಹಾಸಹೃದಯರು ಈ ದಂಪತಿಗಳೆಂಬುದನ್ನು ನನ್ನ ಅನುಭವದ ಒಂದು ಸನ್ನಿವೇಶವನ್ನು ಇಲ್ಲಿ ಹೇಳಬಯಸಿದರೆ ಅಪ್ರಕೃತವಾಗಲಾರದು.

'ಶಾಕುಂತಲಾ' ಕಾವ್ಯ ಪ್ರಕಟವಾಗಿದ್ದ ಹೊಸ ದಿನಗಳು ಅವು. ನಾನು ಆಗ ಮಂಡ್ಯದಲ್ಲಿದ್ದೆನು. ಅಲ್ಲಿನ ಕಾರ್ಯಕ್ರಮವೊಂದಕ್ಕಾಗಿ ಬಂದಿದ್ದ ಈ ದಂಪತಿಗಳು ಮನೆಗೆ ಬಂದರು. ಮಿತ್ರದಂಪತಿಗಳ ಈ ಪರಮಾದರ ನನಗೆ ತುಂಬ ಸಂತೋಷವನ್ನು ಕೊಟ್ಟಿತು. ನಮ್ಮ ಮಾತು ಸಾಹಿತ್ಯಕ್ಷೇತ್ರದ ಎಲ್ಲ ದಿಕ್ಕುಗಳಲ್ಲಿಯೂ ಸ್ವಚ್ಛಂದವಾಗಿ ಹರಿದಾಡಿತು. ಶ್ರೀಪಾಂಡುರಂಗರಾಯರು ಕೊನೆಯಲ್ಲಿ ಹೇಳಿದರು:

'ರಾಯರೆ, ನಾವು ಬಂದ ಉದ್ದೇಶ ಬೇರೆ. ಅದನ್ನು ನೀವು ನಡೆಯಿಸಿಕೊಡಬೇಕು.'

'ಈ ಪೀಠಿಕೆ ಅದೇಕೆ ರಾವ್‌ಜಿ?'

'ಹೇಳುತ್ತೇನೆ'

'ಹೇಳಿ. ಅದನ್ನು ಅಗತ್ಯವಾಗಿ ಮಾಡೋಣ.'

'ಶಕುಂತಲಾಬಾಯಿ ಶಾಕುಂತಲಾ ಕಾವ್ಯವಾಚನಕ್ಕೆ ಅಣಿಮಾಡಿಕೊಂಡಿದ್ದಾರೆ ಅದನ್ನು ಹೊರಗೆ ವಾಚನಮಾಡುವ ಮುನ್ನ, ಇಲ್ಲಿ, ನಿಮ್ಮ ಮನೆಯಲ್ಲಿ, ನಿಮ್ಮ ಮುಂದೆ ವಾಚನಮಾಡಿ ಒಪ್ಪಿಸಬಯಸುತ್ತಾರೆ. ಅದನ್ನು ನೀವು ನಡೆಯಿಸಿಕೊಡಬೇಕು.'

ಬಾಯಾರಿದ ಪಥಿಕನೊಬ್ಬನು ತಿಳಿನೀರಿನ ಊಟೆಯೊಂದನ್ನು ಕಂಡಷ್ಟೇ ಸಂತಸ ನನ್ನದಾಗಿದ್ದಿತು. ನನಗೆ ಉಪಕಾರವನ್ನು ಮಾಡಬಂದ ಈ ದಂಪತಿಗಳ ಈ ಮಹೌದಾರ್ಯದಿಂದ ನಾನು ತುಂಬಿ ಹೋಗಿದ್ದೆನು. ಅವರ ಮಾತಿನ ನಯ ನವುರುಗಳ ಈ ಸಿರಿವಂತಿಕೆ ನನ್ನನ್ನು ಮತ್ತಷ್ಟು ವಿಸ್ಮಯಕ್ಕೆ ದೂಡಿತು. ಈ ಅಭಿಲಾಷೆ ನನಗೇನೂ ಇಲ್ಲದಿರಲಿಲ್ಲ. ಪಾಂಡುರಂಗರಾಯರು ನನ್ನ ಪರಮಮಿತ್ರರು ನಿಜ. ಆದರೂ ನನ್ನ ಈ ಆಸೆಯನ್ನು ನಾನು ಒಂದು ದಿನವಾದರೂ ಅವರ ಮುಂದೆ ತೋರಿಸುವ ಧೈರ್ಯವನ್ನು

ಮಾಡಿರಲಿಲ್ಲ. ನನ್ನ ಮನಸ್ಸನ್ನು ಅವರು ಹೇಗೆ ಅರಿತರೆಂಬುದು ನನಗೂ ಸೋಜಿಗ ವಾಗಿದ್ದಿತು. ಆಗ ನಾನವರಿಗೆ ನನ್ನ ಕೃತಜ್ಞತೆಗಳನ್ನು ಅರ್ಪಿಸುವುದೊಂದನ್ನುಳಿದರೆ ಮತ್ತೇನಿದ್ದೀತು?

ಈ ದಂಪತಿಗಳು ಎರಡು ದಿವಸ ನನ್ನ ಕುಟುಂಬನೊಡನಿದ್ದು ನಮಗೆಲ್ಲ ಸಮ್ಮೊ ದವನ್ನು ಕೊಟ್ಟರು. 'ಶಾಕುಂತಲಾ' ಕಾವ್ಯವಾಚನಕ್ಕೆ ನಾನು ನನ್ನ ಹತ್ತು ಜನ ಸ್ನೇಹಿತರನ್ನು ಕರೆದಿದ್ದೆನು. ಅವರು ಬಂದಿದ್ದರು. 'ತಪದ ಪರ್ಣಕಣ್ವರಾಶ್ರಮಕೆ' ಎಂಬ ಭಾಗವನ್ನು ಶಕುಂತಲಾಬಾಯಿಯವರು ಆರಿಸಿಕೊಂಗರು.

ಮೊದಲು ಮಂಗಲಾಚರಣವನ್ನು ವಾಚನ ಮಾಡಿದರು. ಅದರ ಇಂಪಿನಿಂದ ನನ್ನ ಹೃದಯ ತುಂಬಿ ಬಂದಿತ್ತು. ಶಕುಂತಲಾಬಾಯಿ ಆರಿಸಿಕೊಂಡಿದ್ದ ಭಾಗಕ್ಕೆ ಬಂದರು. ದಿವದಿಂದ ದೇವೇಂದ್ರನಾಣತಿಯಂತೆ ಭವಕ್ಕೆ ಬಂದ ಮೇನಕೆ ವಿಶ್ವಾಮಿತ್ರ ನೊಡನೆ ಕಳೆದ ಹೂ ದಿನಗಳು ಮುಗಿದಿದ್ದುವು. ಅವರಿಬ್ಬರ ತಪಸ್ಸಿನ ಫಲವಾದ ಹೆಣ್ಣೂಸಿನ ಹೊಕ್ಕುಳಿನ ಬಳ್ಳಿ ಬೀಳುವ ಮುನ್ನವೇ ವಿಶ್ವಾಮಿತ್ರನು ನಲ್ಲೆಯನ್ನೂ ಶಿಸುವನ್ನೂ ತ್ಯಜಿಸಿಬಿಟ್ಟದ್ದಾನೆ. ಅವನು ಹುಟ್ಟಿದ ಮಗುವಿಗಾದರೂ ಏನಾದರೊಂದು ವ್ಯವಸ್ಥೆಯನ್ನೂ ಮಾಡದೆ ಗಂಡಿನ ಹೊಣೆಗಾರಿಕೆಯನ್ನೂ ಮರೆತು, ಇನ್ನೂ ಹೆಚ್ಚಿನ ತಪಸ್ಸಿಗೆಂದು ಕಾನಿನಂತರಾಳಕ್ಕೆ ಹೊರಟು ಹೋಗಿ ಬಿಟ್ಟಿದ್ದಾನೆ. ನಿಸ್ಸಹಾಯಳಾದ ಹೆಣ್ಣು ಮೇನಕಾ ದಿಕ್ಕು ತೋಚದೆ ತತ್ತರಿಸಿ ಹೋಗಿದ್ದಾಳೆ. ಮಗುವಿಗಾಗಿ ಅವಳ ಮಾತೃ ಹೃದಯ ಗೋಳಿಡುತ್ತದೆ. ಸ್ವರ್ಗಮರ್ತ್ಯಗಳೆರಡನ್ನೂ ಬೆಸೆಯುವ ದಿವ್ಯ ಸಂಬಂಧದಿಂದ ಹುಟ್ಟಿದ ಕಂದನನ್ನು ಜೋಪಾನ ಮಾಡುವ ಮಹದಾಕಾಂಕ್ಷೆ ಮೇನಕೆ ಯದು. ಮರ್ತ್ಯದ ಶಿಸುವನ್ನು ಅಮರ್ತ್ಯಕ್ಕೊಯ್ಯುವುದಂತೂ ಸೃಷ್ಟಿನಿಯಮದಂತೆ ಅಸಾಧ್ಯವಾದುದು. ಮಗುವಿಗಾಗಿ ಅವಳಲ್ಲಿಯೇ ಒದುಕಿಯಾಳು. ಆದರ ತನ್ನ ಕೆಲಸ ಮುಗಿದೊಡನೆಯೇ ಹಿಂದಿರುಗಬೇಕೆಂಬ ದಿವಿಜಪತಿಯ ಕಟ್ಟಾಜ್ಞೆಯನ್ನೂ ಅವಳು ಕಡೆಗಣಿಸುವಂತಿರಲಿಲ್ಲ. ಆಗತಾನೆ ಹುಟ್ಟಿದ ಶಿಶುವನ್ನು ಕಾಡಿಗೆಸೆದು ದೇವಲೋಕಕ್ಕೆ ಹಾರಿಹೋಗಿಬಿಡುವ ಕಠಿಣಾತ್ಮಳವಳೇನೂ ಆಗಿರಲಿಲ್ಲ. ಅದನ್ನಾರ ರಕ್ಷಣೆಯಲ್ಲಿರಿಸಿ ಹೋಗುವುದೆಂದು ಪರಿಪರಿಯಾಗಿ ಚಿಂತಿಸಿ, ಕಣ್ವಾಶ್ರಮ ಪ್ರಶಸ್ತವಾದ ತಾಣವೆಂದು ಅಲ್ಲಿಗೆ ಬರುತ್ತಾಳೆ. ಮಾತೆ ಕಾತ್ಯಾಯನಿಯನ್ನು ಆಶ್ರಮದ ಆವರಣದಲ್ಲಿ ಮಂಜು ದುರುತ್ತಿರುವ ಉದಯದಲ್ಲಿ ಕಾಣುತ್ತಾಳೆ. ಈ ಹೆಣ್ಣನ್ನು ಆ ಹೆಣ್ಣು ಅರಿತುಕೊಳ್ಳು ತ್ತದೆ; ಸಂತವಿಡುತ್ತದೆ. ಆದರೂ ಮೇನಕೆಯ ಸಹಜ ಮಾತೃಪ್ರೇಮ ಮಗುವಿನ ಕ್ಷೇಮಕ್ಕಾಗಿ ಕಾತರಿಸುತ್ತದೆ. ಅಗಲಿ ಹೋಗಲಾಗದೆ ಒದ್ದಾಡಿ ಸಂಕಟಪಡುತ್ತದೆ.

ಈ ಭಾಗವನ್ನು ವಾಚನ ಮಾಡುವಾಗ, ಒಂದು ಹೆಣ್ಣೇ ಆದ ಶ್ರೀಮತಿ ಶಕುಂತಲಾಬಾಯಿ ಆ ಎರಡೂ ಹೆಣ್ಣುಗಳ ತುಡಿತ ಮಿಡಿತಗಳನ್ನು ಏನೆಷ್ಟು ಸ್ಪಷ್ಟವಾಗಿ ಅರಿತು, ಅನುಭವಿಸಿ ಬಿಡಿಸಿಟ್ಟರೆಂದರೆ, ಅದು ನಿಜವಾಗಿಯೂ ಅನುಪಮ; ಅಲೌಕಿಕ ! ಈ ಕಾವ್ಯದ ರಸಘಟ್ಟಗಳ ಸಾಲುಗಳನ್ನು ಕಟ್ಟುವಾಗ ನನಗೆ ನಾನೇ ಕರಗಿ ಹೋಗಿ ಕಣ್ಣಿನಲ್ಲಿ ನೀರು ತುಂಬಿ ಬಂದುದುಂಟು. ಮೇನಕೆಯ ಅಗಲಲಾಗದ ಆ ಸಂಕಟ

ನೋವು ನಿರಾಸೆ ಮತ್ತು ತಳಮಳಗಳನ್ನು ಈ ತಾಯಿ ನೈಜವಾಗಿ ಹರಡಿ ತೋರಿದಾಗ ನಾನೇನಾಗಿದ್ದೆನೆಂಬುದು ನನಗೇ ತಿಳಿಯಲಿಲ್ಲ. ಇವರು ಅಷ್ಟೇ ಪರಿಸ್ಫುಟವಾಗಿ ಕಾತ್ಯಾಯನೀ ಮಾತೆಯ ಸಾಂತ್ವನ ಮತ್ತು ಸಂರಕ್ಷಣೆಯ ಅಭಯಗಳನ್ನು ಪರಿಣಾಮ ಪೂರ್ಣವಾಗಿ ಮೂಡಿಸಿದರು.

ಕೊನೆಯಲ್ಲಿ ನಾನು ಹೇಳಿದೆನು: 'ತಾಯಿ, ಕಾವ್ಯವನ್ನು ಬರೆದಾಗ ನಾನು ಏನನ್ನು ಅನುಭವಿಸಿದೆನೋ, ಏನನ್ನು ಬಿಟ್ಟೆನೋ! ಆದರೆ ನಿಮ್ಮ ವಾಚನ ಎಲ್ಲ ಕೊರತೆಗಳನ್ನೂ ತುಂಬಿಕೊಟ್ಟಿದೆ. ಕಾವ್ಯಸಾರ್ಥಕ್ಯ ಇಂತಹ ವಾಚನದಿಂದಲೇ. ಅದು ಸತ್ಯ.'

ಈ ಘಟನೆ ನಡೆದು ಹತ್ತು ವರುಷಗಳೇ ಸಂದು ಹೋದುವು. ಆದರೂ ಆ ರಸ ಸ್ರೋತದಲ್ಲಿ ಮಿಂದ ನಾನು ಅದನ್ನು ನೆನೆದಾಗಲೆಲ್ಲ ಈಗಲೂ ಅಷ್ಟೇ ತೀವ್ರತರವಾದ ಅನುಭವವನ್ನೂ ಸಮ್ಮೋದವನ್ನೂ ಪಡೆಯುತ್ತೇನೆ.

ಈಗ ಕೆಲವು ದಿನಗಳ ಹಿಂದೆ ಈ ಮಿತ್ರ ಪಾಂಡುರಂಗರಾಯರು ಎಂದಿನಂತೆ ಕುಶಲ ಸಂದರ್ಶನಾರ್ಥವಾಗಿ ಮನೆಗೆ ಬಂದರು. ಮಾತು ಎಂದಿನಂತೆ ಸಾಗಿತ್ತು. ಈ ನಡುವೆ ಅವರು ಹೇಳಿದರು: 'ಅಂದು ಮುಂಬೈದಲ್ಲಿ ವಾಚನಮಾಡಿದುದನ್ನು ನೀವು ತುಂಬ ಮೆಚ್ಚಿಕೊಂಡಿರಿ. ಅದನ್ನು ಧ್ವನಿಮುದ್ರಿಸಿ ಕೊಡುತ್ತೇವೆ. ನೆನಪಾಗಿ ಇಟ್ಟುಕೊಳ್ಳಿ' ಎಂದರು ನಾನು ತುಂಬ ಸಂತೋಷದಿಂದ ಸ್ವಾಗತಿಸಿದೆನು. ಬೆಂಗಳೂರಿಗೆ ಮರಳಿದಮೇಲೆ ಪಾಂಡುರಂಗರಾಯರು ನನಗೊಂದು ಮಹತ್ವದ ಪತ್ರವನ್ನು ಬರೆದರು. ಅದರಲ್ಲಿ ಅವರು 'ಶಾಕುಂತಲಾ' ಕಾವ್ಯದ ಪ್ರಮುಖ ಸನ್ನಿವೇಶಗಳನ್ನಾಯ್ದು, ಶಕುಂತಲಾಬಾಯಿಯವರು ವಾಚನಮಾಡಿ ಅದನ್ನು ಧ್ವನಿಮುದ್ರಿಸುದಾಗಿಯೂ ಬರೆದರು. ಈ ಮಹದಾಸೆ ನನಗೇನೂ ಇಲ್ಲದಿರಲಿಲ್ಲ. ಆದರೆ ನಾನು ತೋಡಿಕೊಂಡಿರಲಿಲ್ಲವಷ್ಟೆ. ಉಚ್ಚಮಟ್ಟದ ಹೆಸರಾಂತ ವಿದುಷಿ ಶ್ರೀಮತಿ ಶಕುಂತಲಾಬಾಯಿಯವರು ಅದನ್ನು ವಾಚನ ಮಾಡಿ ಸುಶ್ರಾವ್ಯವಾದ ಅದರ ಧ್ವನಿಸಂಪುಟಗಳನ್ನು ಸಂಗ್ರಹಿಸಿಡುವುದು ಏನೆಂತಹ ಅಮೂಲ್ಯವಾದ ಐಶ್ವರ್ಯ!

ತಮ್ಮ ಈ ಸಂಕಲ್ಪವನ್ನು ಶಕುಂತಲಾಬಾಯಿಯವರೂ ಪಾಂಡುರಂಗರಾಯರೂ ಒಡನೆಯೇ ಕಾರ್ಯರೂಪಕ್ಕೆ ತಂದರು. ಕೆಲಸ ಈ ದಿಸೆಯತ್ತ ಸ್ವಲ್ಪಸಾಗಿದೆ. ಅದರೊಡನೆ ಅವರು ತಮ್ಮ ಸರ್ವೋಚ್ಚ ವಾಚನಗಳನ್ನೂ ಹಾಡುಗಳನ್ನೂ, ಭಾವಗೀತೆಗಳನ್ನೂ ಧ್ವನಿಮುದ್ರಿಸಿ ಸಂಗ್ರಹಿಸಿಡುವ ಒಂದು ಕಾರ್ಯಕ್ರಮವನ್ನೂ ಹಾಕಿಕೊಂಡಿದ್ದಾರೆ. ಇದೆಲ್ಲ ದಿಟವು ನಾಡಿನ ಭಾವೈಶ್ವರ್ಯಕ್ಕೆ ಮತ್ತೊಂದು ಹಿರಿಯನಿಧಿಯಾಗಿ ಕೊಡುತ್ತದೆ. ಇದಕ್ಕಾಗಿ ನಾನವರಿಗೆ ತುಂಬ ಕೃತಜ್ಞನು.

ಶಕುಂತಲಾಬಾಯಿ ದಂಪತಿಗಳ ಜೀವನದ ಪರಿಮಳದಂತೆ ಅವರ ಕಾವ್ಯವಾಚನದ ಪರಿಮಳವೂ ಇನ್ನೂ ಹೆಚ್ಚಾಗಿ ಬೆಳೆಯುತ್ತ ಬಹುಕಾಲ ಮೆರೆಯಲಿ, ಕನ್ನಡ ನಾಡಿನ ದಿವ್ಯಸಂಸ್ಕೃತಿ ಮತ್ತಷ್ಟು ಹುಲುಸಾಗಿ ಹರಡುತ್ತ ಹಸಿರು, ಹೂ, ಹಣ್ಣುಗಳನ್ನು ಕೊಡಲಿ ಎಂದು ಭಗವಂತನನ್ನು ಪ್ರಾರ್ಥಿಸುತ್ತೇನೆ.

ಗಮಕದ ಸಿಹಿ

ಕಯ್ಯಾರ ಕಿಞ್ಞಣ್ಣ ರೈ

ಮಿತ್ರರಾದ ಶ್ರೀ ಬಿ. ಎಸ್. ಪಾಂಡುರಂಗರಾಯರ ಸೌಭಾಗ್ಯವತಿಯರಾದ ಶ್ರೀಮತಿ ಶಕುಂತಲಾಬಾಯಿ ಅವರಿಗೆ ಅರುವತ್ತು ವರುಷ ಪ್ರಾಯ ತುಂಬಿದ ಕೃತಾರ್ಥ ಜೀವನದ ಸ್ಮರಣೆಗಾಗಿ ಒಂದು ಅಭಿನಂದನ ಗ್ರಂಥ ಪ್ರಕಟವಾಗಲಿದೆಯೆಂಬ ಸುದ್ದಿ ನನಗೆ ಅತೀವ ಸಂತಸ ತಂದಿದೆ. ಈ ದಂಪತಿಗಳು ಇಬ್ಬರೂ ಕನ್ನಡ ನಾಡು ನುಡಿಗಳಿಗೆ ತಮ್ಮದೇ ರೀತಿಯ ವಿಶಿಷ್ಟವೂ ಅಪೂರ್ವವೂ ಆದ ಕೊಡುಗೆ ನೀಡಿದರು. ದಾಂಪತ್ಯ ಜೀವನದಲ್ಲಿ ಎಂತೋ ಅಂತೆ ಸಾಹಿತ್ಯ ಜೀವನದಲ್ಲಿಯೂ ಪರಸ್ಪರ ಸಹಕಾರದ ಜೊತೆ ಬಾಳ್ವೆ ಬೆಳಗಿಸಿದ ಆದರ್ಶರು. ಪತಿಯ ಹಿನ್ನೆಲೆಯಲ್ಲಿ ನೆರಳಾಗಿ ನಿಂತಿದ್ದರೂ, ತನ್ನ ಕಲೆಯ ಉನ್ನತಿಯ ಯೋಗ್ಯತೆಯಿಂದ ನಾಡಿನಾದ್ಯಂತ ಸರಿ ಸಾಟಿಯಿಲ್ಲದ ವ್ಯಕ್ತಿತ್ವದ ಮುದ್ರೆಯನ್ನು ಒತ್ತಿದ ಶ್ರೀಮತಿ ಶಕುಂತಲಾಬಾಯಿ ಅವರನ್ನು ನಾವಿಂದು ಮನಸಾರೆ ಕೊಂಡಾಡಬೇಕಾಗಿದೆ.

ನಾನು ಪಾಂಡುರಂಗರಾಯರನ್ನು ಸುಮಾರು ಮೂವತ್ತು ವರ್ಷಗಳಿಂದಲೂ ಬಲ್ಲವನು ; ಈ ರಾಯರನ್ನು ಬಲ್ಲೆನೆಂಬಾಗ ಶ್ರೀಮತಿ ಶಕುಂತಲಾಬಾಯಿ ಸದಾ ಅವರ ಜೀವನದಲ್ಲಿ ನೆರಳಾಗಿ ನಿಂತ ಉನ್ನತ ವ್ಯಕ್ತಿತ್ವದ ಮಹಿಳೆ ಎಂಬುದರಿಂದ ಅವರನ್ನೂ ಗೌರವ ಪೂರ್ವಕ ಕಂಡವನು. ಕಾಸರಗೋಡಿನಲ್ಲಿ 1947ರ ಕೊನೆಗೆ ಸಾಹಿತ್ಯ ಸಮ್ಮೇಳನವಾದಾಗ ನಾವು ಮತ್ತು ಇವರು ಪರಿಚಯಗೊಂಡೆವು. ಮತ್ತೆ ಮಣಿಪಾಲ ಸಾಹಿತ್ಯ ಸಮ್ಮೇಳನದಲ್ಲಿ ಇಂತಾ ಹಲವಾರು ಸಭೆ ಸಂಮೇಳನಗಳಲ್ಲಿ ಮಾತ್ರವಲ್ಲ, ಬೆಂಗಳೂರಿಗೆಹೋದಾಗ ನಾನು ಸಂದರ್ಶಿಸತಕ್ಕ ಆತ್ಮೀಯ ವ್ಯಕ್ತಿಗಳಲ್ಲಿ ಇವರೂ ಆಗಿರುವುದು ನನ್ನ ಭಾಗ್ಯವೆಂದು ತಿಳಿದಿದ್ದೇನೆ. ಬೆಂಗಳೂರಿನ ನೆಹರೂ ನಗರದ ಅವರ 'ಮಕ್ಕಳ ಮಂಟಪ'ದ ಮನೆಗೂ ಕೆಲವು ಸಲ ಹೋಗಿದ್ದೇನೆ ; ಆತಿಥ್ಯದ ಸವಿಯೊಂದಿಗೆ ಸಾಹಿತ್ಯದ ಗಮಕದ ಸಿಹಿಯನ್ನೂ ಉಂಡಿದ್ದೇನೆ. 1969ರಲ್ಲಿ ರಾಜ್ಯದ ಅಕಾಡಮಿ ಪ್ರಶಸ್ತಿಯನ್ನು ಶ್ರೀಮತಿ ಶಕುಂತಲಾಬಾಯಿಯವರೂ, ನಾನೂ ಒಂದೇ ದಿನ ಸ್ವೀಕರಿಸಿದೆವೆಂಬ ನೆನಪೂ ಮಧುರವಾಗಿದೆ.

"ಮಾಳಿಗಾರನ ಪೊಸಬಾಸಿಗಂ ಮುಡಿವ ಭೋಗಿಗಳಿಲ್ಲವೆ ಬಾಡಿಹೋಗದೆ ?" ಎಂದು ಕನ್ನಡದ ಮಹಾಕವಿ ಹೇಳಿದ್ದು ತ್ರಿಸತ್ಯ. ಕಾವ್ಯ ಎಷ್ಟೇ ಮಹತ್ವದ್ದಾದರೂ ಅದರ ಮಹತ್ತನ್ನು ಜನತೆಗೆ ತಿಳಿಸುವ ಕಲೆ ಎಲ್ಲರಿಗೂ ಬರಲಾರದು. ಅಂತಹ ಉತ್ತಮ ಗಮಕ ಕಲೆಯನ್ನು ಶ್ರೀಮತಿಯವರು ಕರಗತಮಾಡಿಕೊಂಡಿದ್ದಾರೆ. ಕನ್ನಡದ ಪ್ರಾಚೀನ ಕಾವ್ಯಗಳಿಂದ ತೊಡಗಿ ಅರ್ವಾಚೀನ ಕಾವ್ಯ ಕೃತಿಗಳವರೆಗೆ ಅಲ್ಲಿರುವ ಉತ್ತಮಾಂಶಗಳನ್ನು ತಿಳಿದು ಜನತೆ ತಲೆದೂಗುವಂತೆ ಹಾಡಿ ತನ್ನ ಹಾಡುಗಾರಿಕೆಯಿಂದ ಸಭಾರಂಗವನ್ನು ತಲ್ಲೀನತೆಯಲ್ಲಿ ತೇಲಾಡಿಸಿದವರು ಅವರು. ಹರಿಶ್ಚಂದ್ರ ಕಾವ್ಯವೋ, ಜೈಮಿನಿ

ಭಾರತವೋ, ಕುಮಾರವ್ಯಾಸಭಾರತವೋ, ರಾಮಾಯಣ ದರ್ಶನವೋ ಇಂತಹ ಕನ್ನಡದ ಅಪೂರ್ವ ಕೃತಿಗಳ ಸ್ವಾರಸ್ಯವನ್ನು ಜನ ಸಾಮಾನ್ಯರ ಹೃದಯಗಳಿಗೆ ಮುಟ್ಟುವಂತೆ ಮಾಡಿದ ಕನ್ನಡನಾಡಿನ ಮಹಾ ಕಲಾವಿದೆ ಶ್ರೀಮತಿ ಶಕುಂತಲಾಬಾಯಿ ಅವರು. 'ಗಾಂಧೀದರ್ಶನ' ಎಂಬೊಂದು ವಿಶೇಷ ರೂಪಕದಲ್ಲಿ ಶ್ರೀಮತಿಯವರು ನನ್ನ 'ಹೇರಾಮ' ಕವನವನ್ನು ಉಪಯೋಗಿಸಿಕೊಂಡುದು ನನ್ನ ಕೃತಿಯ ಕುರಿತು ಅವರು ತೋರಿಸಿದ ಅಭಿಮಾನವೆಂದು ನಾನು ನಂಬಿದ್ದೇನೆ. ತನ್ನ ಜೀವಮಾನದ ಅಮೂಲ್ಯ ಸಮಯವನ್ನು 'ಮಾಲೆಗಾರರ ಪೊಸಬಾಸಿಗಗಳನ್ನು ಜನತೆ ಸದಾ ಮುಡಿಯುತ್ತಿರಲಿ' ಎಂದು ತನ್ನ ಗಮಕ ಕಲೆಯ ಮೂಲಕ ನಾಡು ನುಡಿಗಳ ವಿಶೇಷ ಪ್ರೀತಿಯಿಂದ ದುಡಿದ ಸನ್ಮಾನ್ಯ ಮಹಿಳೆಯೊಬ್ಬರ ಕುರಿತು ಒಂದು ಅಭಿನಂದನ ಗ್ರಂಥ ಹೊರಬರುವ ಸಂದರ್ಭದಲ್ಲಿ, ನಾನು, ಕನ್ನಡನಾಡಿಂದ ರಾಜಕೀಯವಾಗಿ ದೂರವಾಗಿದ್ದರೂ–ನೈತಿಕವಾಗಿ ಹತ್ತಿರವೇ ಇರುವ ಕಾಸರಗೋಡಿನಿಂದ ಈ ಶುಭ ಹಾರೈಕೆಯನ್ನು ಕಳುಹಿಸಲು ಸಂತೋಷ ಪಡುತ್ತೇನೆ.

ಶಕುಂತಲಾಬಾಯಿ ಪಾಂಡುರಂಗರಾವ್ ಅವರನ್ನು ಕುರಿತು

ಎ. ಪಂಕಜ

ಇದೀಗತಾನೆ 60ರ ಗಡಿಯನ್ನು ದಾಟಿದ ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾವ್ ಅವರ ಹೆಸರ ಪರಿಚಯ ಇಲ್ಲದವರು ಕರ್ನಾಟಕದಲ್ಲಿ ಅತಿ ವಿರಳ. ಅತ್ಯಂತ ಸರಳರೂ, ಹೃದಯ ಶ್ರೀಮಂತಿಕೆ ಉಳ್ಳವರೂ, ಗಮಕಿಯೂ ಆದ ಶಕುಂತಲಾಬಾಯಿ ಅವರು 25-4-1921ರಲ್ಲಿ ಬೆಂಗಳೂರಿನಲ್ಲಿ ಜನಿಸಿದರು. ಬೆಳೆಯುವ ಪೈರು ಮೊಳಕೆಯಲ್ಲೇ ಎನ್ನುವಂತೆ ಇವರು ಪ್ರಾಥಮಿಕ ಶಿಕ್ಷಣ ಕಾಲದಲ್ಲೇ ಶಾಲೆಯ ನಾಟಕಗಳಲ್ಲಿ ಪಾತ್ರವಹಿಸಿ, ಹಾಡುವುದರ ಮೂಲಕ ಅಂದಿನ ಜನರೆಲ್ಲರಿಂದಲೂ ಮೆಚ್ಚಿಗೆಗೆ ಪಾತ್ರರಾದರು. ಇವರ ತಂದೆತಾಯಿಗಳಿಂದ ಇವರಿಗೆ ದೈವದತ್ತವಾಗಿ ಬಂದಂತಹ ಕಂಠಶ್ರೀ ಸುಮಧುರ. ಆ ನಾದದೊಂದಿಗೆ ಹಾಡುವಾಗ ಅದರಲ್ಲಿ ತಲ್ಲೀನತೆಯೂ ಇರುವುದರಿಂದ ಎಂತಹ ಪಾಮರರಿಗೂ ಇವರ ಹಾಡುಗಾರಿಕೆ ಕರ್ಣಾನಂದವನ್ನುಂಟು ಮಾಡಿ ಮನಮುಟ್ಟುವಂತಹದು.

ಈಗಿನ ಸುಪ್ರಸಿದ್ಧ ಚಲನಚಿತ್ರತಾರೆ ಎಂ. ವಿ. ರಾಜಮ್ಮ, ಆಕಾಶವಾಣಿಯ ಕಲಾವಿದೆ ಎಸ್. ಕೆ. ಪದ್ಮಾವತಿ ಇವರುಗಳೊಂದಿಗೆ ಬಾಲ್ಯದಲ್ಲಿ ಶಾಲಾನಾಟಕಗಳಲ್ಲಿ ನಾರದನ ಪಾತ್ರವನ್ನು ಧರಿಸಿ ಸೈ ಎನಿಸಿಕೊಂಡಿದ್ದರು. ಬಾಲ್ಯದಲ್ಲಿಯೇ ಅತ್ಯಂತ ಚುರುಕಾದ ಹುಡುಗಿ ಎನ್ನುವುದಕ್ಕೆ ಇವೆಲ್ಲಾ ಸಾಕ್ಷ್ಯಾಧಾರಗಳು.

ಶಕುಂತಲಾಬಾಯಿಯವರಿಗೆ ಕೇವಲ 9 ವರ್ಷ ವಯಸ್ಸಿನಲ್ಲೇ ಶ್ರೀಯುತ ಪಾಂಡುರಂಗರಾಯರೊಂದಿಗೆ ವಿವಾಹವಾಯಿತು. ಸೋದರ ಸಂಬಂಧಿಕರಾಗಿದ್ದ ಪಾಂಡುರಂಗರಾಯರು 5-5-1930ರಲ್ಲಿ ಶಕುಂತಲಾಬಾಯಿಯವರನ್ನು ವಿವಾಹ ಮಂಟಪದಲ್ಲಿ ಪಾಣಿಗ್ರಹಣ ಮಾಡಿದಾಗಲೇ ಈಕೆಯಲ್ಲಿ ಸುಪ್ತವಾಗಿ ಅಡಗಿದ್ದ ಪ್ರತಿಭೆಯನ್ನು ಗುರುತಿಸಿ ಅದನ್ನು ಬೆಳಕಿಗೆ ತರಬೇಕೆಂದು ಬಯಸಿದಂತೆ ಕಾಣುತ್ತೆ. ವಿವಾಹದ ಹಸೆಮಣೆಯಲ್ಲಿ ಬಾಲಕಿ ಉರುಟಣೆ ಹಾಡನ್ನು ಪಂಚಮ, ಷಡ್ಜಗಳನ್ನು ಅತ್ಯಂತ ಸುಲಭವಾಗಿ ಮುಟ್ಟಿ ಲೀಲಾಜಾಲವಾಗಿ ತಾರಕ ಸ್ಥಾಯಿಗೆ ಏರಿದಾಗ ಈ ದೈವದತ್ತ ಕಂಠದಿಂದ ಹೊಮ್ಮುವ ಇಂಪು ದನಿಯಲ್ಲಿ ಹಾಡಿದಾಗ ಮದುವೆ ಮನೆಗೆ ಮದುವೆ ಮನೆಯೇ ಬೆಬ್ಬರಗಾಗಿ ಆಲಿಸುತ್ತಿತ್ತಂತೆ. ಪಾಂಡುಂಡುರಂಗರಾಯರು ತಮ್ಮ ಶ್ರೀಮತಿಯನ್ನು ಮುಂದೆ ಸಂಗೀತ ವಿದುಷಿಯನ್ನಾಗಿಮಾಡಲು ನಿರ್ಧರಿಸಿದರಂತೆ.ಅಂದಿನ ಅವರ ಆ ನಿರ್ಧಾರದಿಂದಾಗಿಯೇ ಇಂದು ಶಕುಂತಲಾಬಾಯಿಯವರು ಗಮಕ ಕಲೆಯಲ್ಲಿ ಅದ್ವಿತೀಯರಾಗಿ ಶೋಭಿಸುತ್ತಿದ್ದಾರೆ.

ಸುಲ್ತಾನ್‌ಪೇಟೆಯ ಆರ್ಯಬಾಲಿಕಾ ಶಾಲೆಯಲ್ಲಿ ಪ್ರಾಥಮಿಕ ಮಾಧ್ಯಮಿಕ ಶಿಕ್ಷಣವನ್ನು ಪಡೆದ ಶಕುಂತಲಾಬಾಯಿಯವರು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಡಿ.ವಿ.ಜಿ. ಯವರ ಕಾಲದಲ್ಲಿ ಪ್ರಾರಂಭವಾದ ಗಮಕ ತರಗತಿಗೆ 1937ರಲ್ಲಿ ಪ್ರಥಮ ವಿದ್ಯಾರ್ಥಿನಿಯಾಗಿ ಸೇರಿದರು. ಅದಕ್ಕೂ ಮೊದಲು ಪೂರ್ವಭಾವಿಯಾಗಿ ಶ್ರೀ ಹೆಚ್. ವಿ. ವರದರಾಜ

ಐಯ್ಯಂಗಾರ್ ಅವರ ಪತ್ನಿ ಶ್ರೀಮತಿ ಸುಶೀಲಮ್ಮನವರಿಂದ ಹಾರ್ಮೋನಿಯಂ ಸಂಗೀತ ಪಾಠ ಒಂಬತ್ತು ವರ್ಷಗಳವರೆಗೆ ಸತತವಾಗಿ ಆಗಿದ್ದುದರಿಂದ ಇವರಿಗೆ ಗಮಕ ಕಲಿಯುವಾಗ ಯಾವ ಕಷ್ಟವೂ ತೋರಲಿಲ್ಲ. ಗಮಕ ಕಲೆಯನ್ನುದ್ಧರಿಸಿದ ಭಾರತವಾಚನ ಪ್ರವೀಣ ಬಿಂದೂರಾಯರು ಶ್ರೀಮತಿಯವರಿಗೆ ಗಮಕವಾಚನ ಕಲಿಸಿದ ಗುರುಗಳು.

ತಮ್ಮ ಮನೆಯಿಂದ ನಾಲ್ಕು ಮೈಲಿ ದೂರ ಇದ್ದ ಪರಿಷತ್ತಿಗೆ ಪಾಂಡುರಂಗ ರಾಯರು ತಮ್ಮ ಹೆಂಡತಿಯನ್ನು ಪ್ರತಿದಿನವೂ ಬೆಳಗ್ಗೆ ಮತ್ತು ಮಧ್ಯಾಹ್ನ ಎರಡು ಹೊತ್ತು ಕರೆದುಕೊಂಡು ಹೋಗಿ ಬರುತ್ತಿದ್ದರು; ಎಂದ ಮೇಲೆ ಸತಿಪತಿಗಳಿಗೆ ಗಮಕ ಕಲೆಯ ಬಗೆಗೆ ಇದ್ದ ಆಸಕ್ತಿ ಎಷ್ಟೆಂದು ಹೇಳಿದರೂ ಸಾಲದು. ಹಲಸೂರುಪೇಟೆ ಮತ್ತು ಚಾಮರಾಜಪೇಟೆಗಳ ನಡುವೆ ಇದ್ದ ಅಂತರ ಪ್ರಾಯಶಃ ಅವರಿಗೆ ನೆರೆಹೊರೆಯಂತಾಗಿತ್ತೇನೋ! ಶ್ರೀಮತಿಯವರು ಮುಂದೆ ಸಂಗೀತ ವಿದ್ವಾನ್ ಚಿಂತನಪಳ್ಳಿ ಕೃಷ್ಣಮೂರ್ತಿಯವರಿಂದ ಕೆಲವು ವರ್ಷ ಸಂಗೀತಪಾಠ, ಕರ್ನಾಟಕ ಸಂಗೀತದ ಪ್ರೌಢ ಪರೀಕ್ಷೆಯಲ್ಲೂ ತೇರ್ಗಡೆಯಾದರು. ಅವರ ಸಂಗೀತ ಪ್ರೌಢಿಮೆ ಕೇಳ್ಮೆಯಿಂದ ಬಹಳಷ್ಟು ಮೇಲ್ಸರಿಯಿತು. ಗಮಕವಾಚನಕ್ಕೆ ಪುಷ್ಟಿಕೊಟ್ಟಿತು.

ತಮ್ಮ 18ನೇ ವಯಸ್ಸಿನಲ್ಲಿ ಪ್ರಥಮವಾಗಿ ಶ್ರೀಮತಿ ಶಕುಂತಲಾಬಾಯಿಯವರ ಕಾವ್ಯವಾಚನವು, ಶ್ರೀಮತಿ ಕಲ್ಯಾಣಮ್ಮನವರ ಅಧ್ಯಕ್ಷತೆಯಲ್ಲಿ ನಾರ್ಮಲ್ ಸ್ಕೂಲಿನಲ್ಲಿ ನಡೆಯಿತು. ಗಮಕವಾಚನ ಮಾಡುವ ಮಹಿಳೆಯರೇ ಹೆಚ್ಚಾಗಿ ಇಲ್ಲದ ಆ ಕಾಲದಲ್ಲಿ ಅತ್ಯಂತ ಸುಶ್ರಾವ್ಯವಾಗಿ ಇಂಪಾಗಿ ಗಮಕವಾಚನ ಮಾಡುವ ಒಬ್ಬ ಪ್ರತಿಭಾವಂತ ಮಹಿಳೆ ಶಕುಂತಲಾಬಾಯಿಯವರ ಕಾರ್ಯಕ್ರಮ ಯಶಸ್ವಿಯಾಗಿ ಮೇಲಿಂದ ಮೇಲೆ ಆಕೆಗೆ ಕರೆ ಬರುವುದು ಅನಿವಾರ್ಯವಾಯಿತು.

ಹಾಗೆ ಆರಂಭವಾದ ಶಕುಂತಲಾಬಾಯಿ ಅವರ ಕಾವ್ಯವನ್ನು ಜನತೆ ಮೆಚ್ಚಿಕೊಂಡಿದ್ದಾರೆ. ಎಲ್ಲರ ಮನಮುಟ್ಟುವಂತೆ ಹಾಡುವ ಶಕ್ತಿ ಇವರಿಗಿದೆ. ಸಾಮಾನ್ಯವಾಗಿ ಕಾವ್ಯವಾಚನವೆಂದರೆ ಬರೀ ಕುಮಾರವ್ಯಾಸನ ಭಾರತಕ್ಕೆ ಮೀಸಲಾಗಿದ್ದ ಕಾಲದಲ್ಲಿ ಅವರ ಕಂಠ ಮಾಸ್ತಿ, ಬೇಂದ್ರೆ, ಕುವೆಂಪು, ಡಿ.ವಿ.ಜಿ, ಬಿ.ಎಂ.ಶ್ರೀ, ಪು.ತಿ.ನ, ಮುಂತಾದ ಕವಿಪುಂಗವರ ಕವನಗಳನ್ನು ಹಾಡುವುದನ್ನೂ ಒಗ್ಗಿ ಅವರುಗಳ ಕವನಗಳನ್ನು ಹಾಡಿ, ಕವಿಗಳ ಮತ್ತು ಜನರ ಆದರಕ್ಕೆ ಶ್ರೀಮತಿ ಶಕುಂತಲಾಬಾಯಿ ಪಾತ್ರರಾದರು.

ಕುವೆಂಪು ತಮ್ಮ ರಾಮಾಯಣವನ್ನು ಶಕುಂತಲಾಬಾಯಿ ಅವರಿಂದ ಕೇಳಿ ಅವರೇ ಆನಂದಬಾಷ್ಪ ಸುರಿಸಿದ್ದಾರೆ. ಕರ್ನಾಟಕ ಮಾತ್ರವಲ್ಲದೆ ಹೊರಗೂ ಸುತ್ತಾಡಿ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಜನರಿಗೆ ಆನಂದವನ್ನುಂಟುಮಾಡಿದ ಶ್ರೀಮತಿ ಶಕುಂತಲಾಬಾಯಿಯವರಿಗೆ 1969ರಲ್ಲಿ ನಮ್ಮ ರಾಜ್ಯಸರ್ಕಾರದ ಸಾಹಿತ್ಯ ಅಕಾಡೆಮಿಯು ಗಮಕ ಪ್ರಶಸ್ತಿ ದೊರಕಿದುದು ಆಶ್ಚರ್ಯವಲ್ಲ. ಇವರು ಗಮಕಶಾಸ್ತ್ರದ ಬಗ್ಗೆ "ಗಮಕ ರಸಾಯನ" ಎಂಬ ಗ್ರಂಥವನ್ನು ಕರ್ನಾಟಕದ ಗಮಕ ವಿದುಷಿಯರ ಬಗೆಗೆ "ಗಮಕ ಕಲಾಮಹಿಳೆ" ಎಂಬ ವ್ಯಕ್ತಿ ಪರಿಚಯ ಗ್ರಂಥವನ್ನು ಬರೆದಿದ್ದಾರೆ.

ಹೀಗೆ ಸಾಹಿತ್ಯ, ಸಂಗೀತಗಳ ಸಂಗಮವಾಗಿರುವ ಶ್ರೀಮತಿ ಶಕುಂತಲಾಬಾಯಿ

ಯುವರು 60 ವರ್ಷಗಳ ತುಂಬು ಜೀವನ ನಡೆಸಿ ಅರವತ್ತೊಂದನೆಯ ವರ್ಷಕ್ಕೆ ಮುನ್ನಡೆದಿದ್ದಾರೆ. ಅವರನ್ನು ಕುರಿತು ಅವರ ಪತಿ ಪಾಂಡುರಂಗರಾಯರು ಒಂದು ಸಂದರ್ಭದಲ್ಲಿ "She is verysincierad good woman" (ಆಕೆ ಬಹಳ ನಿಷ್ಕಪಟೆಯಾದ ಸಜ್ಜನ ಮಹಿಳೆ) ಎಂದು ಹೇಳಿದಾಗ ಸ್ತ್ರೀ ಕುಲವೇ ಸಂತೋಷ ಪಡುವಂತೆನ್ನಿಸಿತು. ನನಗೆ ಒಬ್ಬ ಸದ್ಗೃಹಿಣಿ ಮಹಿಳೆಗೆ ಇದಕ್ಕಿಂತ ಹೆಚ್ಚಾಗಿ ಇನ್ನೇನಾಗಬೇಕಾಗಿದೆ. ಶಕುಂತಲಾಬಾಯಿಯ ಕೀರ್ತಿ ಇನ್ನೂ ಹೆಚ್ಚು ಹೆಚ್ಚಾಗಿ ಬೆಳಗಲಿ. ಈ ದಂಪತಿಗಳು ಶತಾಯುಗಳಾಗಿ ಜನತಾ ಸೇವೆಮಾಡಲಿ, ಎಂದು ದೇವರಲ್ಲಿ ಪ್ರಾರ್ಥಿಸಿ ಈ ಲೇಖನ ಮುಗಿಸುತ್ತೇನೆ.

ಕವಿಗೆ ಕಂಠ

ಹಾ ಮಾ ನಾಯಕ

ಕೆಲವು ವರ್ಷಗಳ ಹಿಂದೆ ಲಂಡನ್ ವಿಶ್ವವಿದ್ಯಾನಿಲಯದ ಶ್ರೀಮತಿ ವ್ಹಿಟ್ಲೆ ಎನ್ನುವವರು ಒಂದೆರಡು ದಿನ ನನ್ನ ಅತಿಥಿಯಾಗಿದ್ದರು. ಅವರ ಯಜಮಾನರೂ ಅವರ ಜೊತೆಗಿದ್ದರು. ಹೆಂಡತಿ ವಿಶ್ವವಿದ್ಯಾನಿಲಯದಲ್ಲಿ ಧ್ವನಿ ವಿಜ್ಞಾನ ಪ್ರಾಧ್ಯಾಪಕಿ; ಗಂಡ ಖಾಸಗಿ ಎಂಜನಿಯರ್, ಸಾಹಿತ್ಯ ಪ್ರೇಮಿ, ಸುಸಂಸ್ಕೃತ. ಮೈಸೂರಿಗೆ ಬರುವ ಮೊದಲು ಅವರಿಗೆ ಯಾರೋ ಕುವೆಂಪು ಅವರ ಹೆಸರು ಹೇಳಿದ್ದರು; ಸಾಧ್ಯವಾದರೆ ಅವರನ್ನು ಭೇಟಿಯಾಗಬೇಕೆಂದೂ ಸೂಚಿಸಿದ್ದರು. ಶ್ರೀ ವ್ಹಿಟ್ಲೆ ತಮ್ಮ ಅಪೇಕ್ಷೆಯನ್ನು ನನಗೆ ತಿಳಿಸಿದರು. ಒಂದು ಮುಂಜಾನೆ ನಾನು ದಂಪತಿಗಳನ್ನು ಕುವೆಂಪು ಮನೆಗೆ ಕರೆದುಕೊಂಡು ಹೋದೆ. ಮಾತಿನ ಮಧ್ಯೆ ಶ್ರೀ ವ್ಹಿಟ್ಲೆ ಕವಿಯನ್ನು 'ಶ್ರೀರಾಮಾಯಣ ದರ್ಶನಮ್' ಮಹಾ ಕಾವ್ಯದ ಕೆಲವು ಭಾಗಗಳನ್ನು ಓದುವಂತೆ ಕೇಳಿಕೊಂಡರು. ಕುವೆಂಪು ಅವರಿಗೆ ನಮ್ಮಲ್ಲಿ ಕಾವ್ಯವನ್ನು ಕವಿ ಓದುವುದಷ್ಟೇ ಅಲ್ಲದೆ, ಗಮಕಿಗಳು ಕಾವ್ಯವನ್ನು ವಾಚಿಸುವ ಒಂದು ಸಂಪ್ರದಾಯವೇ ಇದೆಯೆಂದೂ, ತಮ್ಮ ಕಾವ್ಯವನ್ನು ಅನೇಕರು ಹಾಗೇ ವಾಚಿಸಿದ್ದಾರೆಂದೂ ವಿವರಿಸಿದರು. ಅತಿಥಿಗಳಿಗೆ ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾಯರ ಧ್ವನಿಯಲ್ಲಿ ರಾಮಾಯಣದರ್ಶನದ ಕೆಲವು ಭಾಗಗಳನ್ನು ಕೇಳಿಸಿದರು.

ವ್ಹಿಟ್ಲೆ ದಂಪತಿಗಳು ಆ ಧ್ವನಿಮುದ್ರಿತ ವಾಚನವನ್ನು ತುಂಬ ಆಸಕ್ತಿಯಿಂದ ಕೇಳಿದರು. ಅವರಿಗೆ ಕನ್ನಡ ಭಾಷೆ ಏನೂ ತಿಳಿಯದು. ನಡುನಡುವೆ ಕುವೆಂಪು "ನಿಮಗೆ ಏನಾದರೂ ಗ್ರಹಿಕೆಯಾಗುತ್ತದೆಯೇ?" ಎಂದು ಶ್ರೀ ವ್ಹಿಟ್ಲೆಯವರನ್ನು ಕೇಳುತ್ತಿದ್ದರು. ಅವರು "ಇಲ್ಲ" ಎನ್ನುತ್ತಿದ್ದರು. ಆದರೆ ವಿವಿಧ ಸಂದರ್ಭಗಳಲ್ಲಿ ಇದು ಸಂತೋಷದ ಪ್ರಸಂಗ, ಇದು ದುಃಖದ ಸಂದರ್ಭ, ಇದು ಮೇಲೇರುವುದೇನನ್ನೋ ಸೂಚಿಸುತ್ತದೆ ಎಂದು ಮುಂತಾಗಿ ತಮ್ಮ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುತ್ತಿದ್ದರು. ಕುವೆಂಪು "ನೋಡಿ, ಇದು ನಾದ ಮಾಡುವ ಕೆಲಸ" ಎಂದು ವಿವರಿಸುತ್ತಿದ್ದರು.

ವ್ಹಿಟ್ಲೆ ದಂಪತಿಗಳು ಶಕುಂತಲಾಬಾಯಿಯವರ ವಾಚನವನ್ನು ಬಹುವಾಗಿ ಮೆಚ್ಚಿಕೊಂಡರು: ಅವರ ಬಗ್ಗೆ ಅನೇಕ ವಿಷಯಗಳನ್ನು ಕುವೆಂಪು ಅವರಿಂದ ತಿಳಿದುಕೊಂಡರು. ಶಕುಂತಲಾಬಾಯಿ ತಮ್ಮ ಕಾವ್ಯವನ್ನು ಜನರ ಬಳಿಗೆ ತೆಗೆದುಕೊಂಡು ಹೋಗುವ ಮಹತ್ಕಾರ್ಯ ಮಾಡಿದ್ದಾರೆಂದು ಕುವೆಂಪು ಪ್ರಶಂಸೆಯ ಮಾತು ಆಡಿದರು. ನಾದ ಸಾಹಿತ್ಯವನ್ನ ಭಾಷೆಯ ವಲಯದಿಂದ ಹೊರಗೆ ಎಷ್ಟು ಪರಿಣಾಮಕಾರಿಯಾಗಿ ತೆಗೆದುಕೊಂಡು ಹೋಗಬಹುದೆಂಬುದಕ್ಕೆ ಆ ಮುಂಜಾನೆಯ ಪ್ರಸಂಗ ಒಂದು ಸಾಕ್ಷಿಯಾಗಿತ್ತು. ಶಕುಂತಲಾಬಾಯಿಯವರ ವಾಚನ ಕವಿಗೆ ಕಂಠವನ್ನು ಕೊಟ್ಟು ಮಾತುಗಳಿಗೆ ಜೀವತರುವ ಒಂದು ಕಲೆ.

ಎಷ್ಟೋ ವರ್ಷಗಳ ಹಿಂದೆ ರಾಷ್ಟ್ರಕವಿ ಗೋವಿಂದ ಪೈಗಳಿಗೆ ಬೆಂಗಳೂರಿನಲ್ಲಿ ಅಭಿನಂದನ ಸಮಾರಂಭವೊಂದು ಏರ್ಪಟ್ಟಾಗ ಶಕುಂತಲಾಬಾಯಿಯವರು 'ಗೊಲ್ಗೊಥಾ' ಕಾವ್ಯದ ಏಸುವಿನ ವರ್ಣನೆಯ ಭಾಗವನ್ನು ವಾಚಿಸಿದರು. ಅವರ ಓದುಗಾರಿಕೆ ಎಷ್ಟು ಹೃದಯಸ್ಪರ್ಶಿಯಾಗಿತ್ತು ಎಂದರೆ ಗೋವಿಂದ ಪೈಗಳೇ ತಮ್ಮ ಭಾಷಣದಲ್ಲಿ "ಶಕುಂತಲಾಬಾಯಿಯವರು ನನ್ನ ಕಾವ್ಯಕ್ಕೆ ಧ್ವನಿ ಕೊಟ್ಟಿದ್ದಾರೆ" ಎಂದು ಬಹಿರಂಗ ಮೆಚ್ಚುಗೆಯನ್ನು ಸೂಚಿಸಿದರು. ಇಂಥದೇ ಮೆಚ್ಚುಗೆ ಹಿಂದೆ ಬಿ. ಎಂ. ಶ್ರೀಕಂಠಯ್ಯನವರಿಂದಲೂ ಪ್ರಾಪ್ತವಾಗಿತ್ತು. ಆಗಿನ್ನೂ ಶಕುಂತಲಾಬಾಯಿ ಹದಿಹರೆಯದ ಹುಡುಗಿ. ಬಿ. ಎಂ. ಶ್ರೀ ಅವರಿಗೆ ಮಹಾರಾಜರಿಂದ 'ರಾಜಸೇವಾಸಕ್ತ' ಬಿರುದು ಬಂದಾಗ ಸಂತೋಷ ಸಭೆಯೊಂದು ಏರ್ಪಟ್ಟಿತ್ತು. ಅದರಲ್ಲಿ 'ಕನ್ನಡ ತಾಯನೋಟ' ಎಂಬ ಶ್ರೀಯವರ ಕವಿತೆಯನ್ನು ಶಕುಂತಲಾಬಾಯಿ ವಾಚಿಸಿದರು. ಆ ಓದಿನ ಧಾಟಿ ಶ್ರೀಯವರಿಗೆ ತುಂಬ ಇಷ್ಟವಾಯಿತು. "ನನ್ನ ಈ ನೀಳ್ಗವನದ ಛಂದಸ್ಸು ಗಮಕಕ್ಕೆ ಅಳವಡುತ್ತದೆಂದು ನಾನು ತಿಳಿದಿರಲಿಲ್ಲ. ನೀವು ಇದನ್ನು ಗಮಕಕ್ಕೆ ಹೊಂದಿಸಿ ನನಗೆ ಸಂತೋಷವನ್ನುಂಟು ಮಾಡಿದ್ದೀರಿ" ಎಂದು ಪ್ರಶಂಸಿಸಿದರು.

ಹಿರಿಯರ ಇಂಥ ಮೆಚ್ಚುಗೆಗಳೇ ಶಕುಂತಲಾಬಾಯಿಯವರಿಗೆ ಸ್ಫೂರ್ತಿಯೂ ಶಕ್ತಿಯೂ ಆಗಿ ಪರಿಣಮಿಸಿದವು. ಹತ್ತು ಹನ್ನೆರಡು ವರ್ಷಗಳ ಬಾಲೆಯಾಗಿದ್ದಾಗಲೆ ಗಮಕ ಕ್ಷೇತ್ರಕ್ಕೆ ಪ್ರವೇಶಿಸಿದ ಅವರಿಗೆ ಈಗ ಅರವತ್ತು ತುಂಬಿತು (ಜನನ : ಮೇ 25, 1921). ಬೆಂಗಳೂರಿನಲ್ಲಿಯೇ ಹುಟ್ಟಿ ಬೆಳೆದ ಶಕುಂತಲಾಬಾಯಿಯವರಿಗೆ ಮಧುರ ಕಂಠ ತಂದೆ ತಾಯಿಗಳಿಂದ ದತ್ತವಾದದ್ದು. ಅವರಿಬ್ಬರೂ ತಮ್ಮ ಕಂಠಶ್ರೀಗೆ ಹೆಸರಾಗಿದ್ದರು. ಬೆಂಗಳೂರಿನ ಸುಲ್ತಾನ ಪೇಟೆಯಲ್ಲಿ ಆರ್ಯಬಾಲಿಕಾ ಶಿಕ್ಷಣ ಶಾಲೆಯ ವಿದ್ಯಾರ್ಥಿನಿಯಾಗಿ ಶಕುಂತಲಾಬಾಯಿ ತಮ್ಮ ಪ್ರಾಥಮಿಕ ಮಾಧ್ಯಮಿಕ ಶಿಕ್ಷಣ ಪಡೆದರು. ಶಾಲೆಯ ಅನೇಕ ಕಾರ್ಯಕ್ರಮಗಳಲ್ಲಿ ಹಾಡಿ, ಬಾಲ ಪಾತ್ರಗಳನ್ನು ತೊಟ್ಟು ಅವರು ಹಿರಿಯರ, ಅಧ್ಯಾಪಕರ ಮೆಚ್ಚುಗೆಗೆ ಪಾತ್ರರಾಗಿದ್ದರು; ಅನೇಕ ಬಹುಮಾನಗಳನ್ನೂ ಪಡೆದಿದ್ದರು.

ಡಿ. ವಿ. ಗುಂಡಪ್ಪನವರು ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿದ್ದ ಅವಧಿಯಲ್ಲಿ (1934–37) ಗಮಕ ಕಲಾ ತರಗತಿಗಳನ್ನು ಆರಂಭಿಸಿದರು. ಸಾಹಿತ್ಯಕ್ಷೇತ್ರದ ಬಗೆ ಬಗೆಯ ಚಟುವಟಿಕೆಗಳಲ್ಲಿ ಪಾಲುದಾರರಾಗಿ ಹಿರಿಯ ಸಾಹಿತಿಗಳ ಸಂಪರ್ಕಕ್ಕೆ ಬಂದಿದ್ದ ಪತಿ ಪಾಂಡುರಂಗರಾಯರ ಪ್ರೇರಣೆಯಿಂದ ಶಕುಂತಲಾಬಾಯಿ ಗಮಕ ತರಗತಿಗಳಿಗೆ ಸೇರಿದರು. ಭಾರತವಾಚನ ಪ್ರವೀಣರೆಂದು ಹೆಸರಾಗಿದ್ದ ಎಸ್. ಜಿ. ಬಿಂದೂರಾಯರ ನೇತೃತ್ವದಲ್ಲಿ ಶಿಕ್ಷಣ ಪಡೆದರು. ಮಧುರ ಕಂಠ, ಸಂಗೀತ ಜ್ಞಾನ, ಸ್ಪಷ್ಟ ಉಚ್ಚಾರ, ಸಾಹಿತ್ಯಪ್ರೀತಿ–ಇಂಥ ಗುಣಗಳಿಂದ ಅವರು ಗುರುಗಳ ಆದರಕ್ಕೆ ಪಾತ್ರರಾದರು. ಇದೇ ಕಾಲಕ್ಕೆ ಅಂದಿನ ಪ್ರಸಿದ್ಧರೆನಿಸಿದ ಬಿ ಎಂ ಶ್ರೀ, ಡಿವಿಜಿ, ವೆಂಕಣ್ಣಯ್ಯ, ಪಂಜೆ ಮಂಗೇಶರಾವ್, ವಿ. ಸೀ., ಮುಗಳಿ, ಕಡೆಂಗೋಡ್ಲು ಶಂಕರಭಟ್ಟ ಮೊದಲಾದವರ ಪರಿಚಯ ಪ್ರೋತ್ಸಾಹಗಳಿಗೆ ಒಳಗಾದರು. ಪರಿಷತ್ತಿನ ಗಮಕ ತರಗತಿಗೆ ಸೇರಿದ ಮೊದಲ ಮಹಿಳೆ ಶಕುಂತಲಾಬಾಯಿ.

ಗಮಕ ಎಂದರೆ ಆ ಕಾಲದಲ್ಲಿ ಹೆಚ್ಚು ಕಡಮೆ ಕುಮಾರವ್ಯಾಸಭಾರತದ ವಾಚನ ಒಂದೇ. ಗಮಕವನ್ನು ಕಾವ್ಯವಾಚನವಾಗಿ ಮಾರ್ಪಡಿಸಿದವರಲ್ಲಿ ಶಕುಂತಲಾಬಾಯಿ ಪಾಂಡುರಂಗರಾಯರ ಪಾತ್ರ ದೊಡ್ಡದು. ಪ್ರಾಚೀನ ಕವಿಗಳಾದ ಪಂಪ, ರನ್ನ, ಹರಿಹರ, ರಾಘವಾಂಕ, ಭೀಮಕವಿ, ಲಕ್ಷ್ಮೀಶ ಮೊದಲಾದವರ ಕೃತಿಗಳ ವಾಚನ ದೊಂದಿಗೆ ಅವರು ಆಧುನಿಕ ಕೃತಿಗಳನ್ನೂ ಅಭ್ಯಸಿಸಿ, ಹಾಡತೊಡಗಿದರು. ಬಿ. ಎಂ. ಶ್ರೀ., ಗೋವಿಂದ ಪೈ ಮೊದಲಾದವರ ಕೃತಿಗಳಿಗೆ ಅವರು ಬಾಯಿಕೊಟ್ಟಿದ್ದಾರೆ. ಕುವೆಂಪು ಅವರ 'ಸ್ವಾತಂತ್ರ್ಯೋದಯ ಮಹಾಪ್ರಗಾಥ', 'ಗಣೇಶಗಾಥ' ಮುಂತಾದ ಕೃತಿಗಳನ್ನು ಹಾಡುತ್ತಾರೆ. 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯಕ್ಕೆ ಅವರು ತಮ್ಮ ಸಾಧನೆ ಎಲ್ಲವನ್ನೂ ವಿನಿಯೋಗಿಸಿದ್ದಾರೆ. ಇಡೀ ಕಾವ್ಯವನ್ನು ಅವರು ಹಾಡು ತ್ತಾರೆ. ಕವಿಯ ದರ್ಶನ ಶಕುಂತಲಾಬಾಯಿಯವರ ಕಂಠಶ್ರೀಯಲ್ಲಿ ಕೇಳುವವರ ಕಣ್ಣಿಗೆ ಕಟ್ಟುತ್ತದೆ. "ರಾಮಾಯಣ ದರ್ಶನವನ್ನು ನಾನು ಬೇಕಾದಷ್ಟು ಸಲ ಓದಿದ್ದೇನೆ. ಕವಿ ಗಳೊಡನೆ, ವಿದ್ವಾಂಸರೊಡನೆ ಅದರ ಬಗೆಗೆ ಚರ್ಚೆ ಮಾಡಿದ್ದೇನೆ. ಆದರೆ ಶಕುಂತಲಾ ಬಾಯಿ ಹಾಡುವುದನ್ನು ಕೇಳಿದಾಗಲೆಲ್ಲ ನನಗೆ ಅದು ಹೊಸಹೊಸದಾಗಿಯೇ ತೋರು ತ್ತದೆ" ಎಂದು ನ್ಯಾಯಮೂರ್ತಿ ಹೊಂಬೇಗೌಡರು ನನಗೊಮ್ಮೆ ಹೇಳಿದ್ದರು. ಇದಕ್ಕಿಂತ ಹೆಚ್ಚಿನ ಶಿಫಾರಸ್ ಏನು ಬೇಕು ? ಕುವೆಂಪು ಕಾವ್ಯದ ಮೇಲೆ ಶಕುಂತಲಾಬಾಯಿ ಯವರಿಗೆ ಎಷ್ಟು ಪ್ರೇಮವೆಂದರೆ ಯಾವುದೋ ರಾಮಮಂದಿರದಲ್ಲಿ ಈ ಕಾವ್ಯವನ್ನು ಓದುವುದಾಗಿ ಹೇಳಿ ವ್ಯವಸ್ಥಾಪಕರ ತಿರಸ್ಕಾರಕ್ಕೆ ಗುರಿಯಾಗಬೇಕಾಯಿತು!

ಕನ್ನಡ ನಾಡಿನಾದ್ಯಂತ ಅವರು ಸುತ್ತಾಡಿದ್ದಾರೆ ; ಸಹಸ್ರ ಸಹಸ್ರ ಜನರಿಗೆ ತಮ್ಮ ಸುಮಧುರ ವಾಚನದಿಂದ ಸಂತೋಷವನ್ನೂ ತೃಪ್ತಿಯನ್ನೂ ತಂದುಕೊಟ್ಟಿ ದ್ದಾರೆ ; ಕಾವ್ಯ ಪ್ರೇಮವನ್ನು ಬೆಳೆಸಿದ್ದಾರೆ. ನಾಡಿನ ಹೊರಗೂ ದೆಹಲಿ, ಜಮ್ಮು, ಕಲ್ಕತ್ತ, ಪ್ರಯಾಗ, ಹೈದರಾಬಾದು, ವಿಜಯವಾಡ ಮೊದಲಾದ ಅನೇಕ ನಗರಗಳಲ್ಲಿ ಅವರು ಕನ್ನಡದ ದನಿಯನ್ನೂ ಕೇಳಿಸಿದ್ದಾರೆ. ಪ್ರಾಸಂಗಿಕ ನಿರೂಪಣೆ ಪತಿ ಪಾಂಡುರಂಗ ರಾಯರದು ; ವಾಚನ ಸತಿ ಶಕುಂತಲಾಬಾಯಿಯವರದು ; ವಸ್ತು ಕುವೆಂಪು ವಿರಚಿತ ಶ್ರೀ ರಾಮಾಯಣದರ್ಶನಂ ಕಾವ್ಯಭಾಗ–ಇದು ರಸಿಕರಿಗೆ ಆಹ್ಲಾದ ತರುವ ಅಪೂರ್ವ ಸಂಗಮ ;

ಶಕುಂತಲಾಬಾಯಿಯವರಿಗೆ ಅನೇಕ ಗೌರವಗಳು, ಪ್ರಶಸ್ತಿಗಳು, ಬಹುಮಾನ ಗಳು ಬಂದಿವೆ. ಹತ್ತು ವರ್ಷಗಳ ಹಿಂದೆಯೇ ಅವರಿಗೆ ರಾಜ್ಯ ಸಾಹಿತ್ಯ ಅಕಾಡೆಮಿಯ ಗಮಕ ಪ್ರಶಸ್ತಿ ಸಂದಿವೆ (1971). ಅವರು ಕೆಲವು ಲೇಖನಗಳನ್ನೂ, ಪುಸ್ತಕಗಳನ್ನೂ ಪ್ರಕಟಿಸಿದ್ದಾರೆ. ಅವರ ಎರಡು ಪುಸ್ತಕಗಳಲ್ಲಿ ಒಂದು ಗಮಕ ವ್ಯಾಸಂಗಕ್ಕೆ ಉಪ ಯುಕ್ತವಾದ ಪಠ್ಯಪುಸ್ತಕ ('ಗಮಕ ರಸಾಯನ') ; ಇನ್ನೊಂದು ಕೆಲವು ಗಮಕ ವಿದುಷಿಯರ ಪರಿಚಯ ಚಿತ್ರಗಳ ಸಂಗ್ರಹ' ('ಗಮಕ ಕಲಿ–ಮಹಿಳೆ').

ಶಕುಂತಲಾಬಾಯಿಯವರ ವಿಚಾರ ಹೇಳುವಾಗ ಅವರ ಪತಿ ಬಿ. ಶ್ರೀ. ಪಾಂಡು ರಂಗರಾಯರ ವಿಚಾರ ಒಂದೆರಡು ಮಾತುಗಳನ್ನಾದರೂ ಹೇಳದಿರುವುದು ಅಸಾಧ್ಯ.

ನಮ್ಮನಾಡಿನ ಸಾಂಸ್ಕೃತಿಕ ಜೀವನದಲ್ಲಿ ಇವರಸೊಂದು ಅಪೂರ್ವ ಜೋಡಿ. ದಾಂಪತ್ಯ ಜೀವನದ ಸ್ವರ್ಣೋತ್ಸವವನ್ನು ಮುಗಿಸಿರುವ ಇವರು ಎಳೆತನದಲ್ಲಿ ಮದುವೆಯಾದರು. ಆಗ ಶಕುಂತಲಾಬಾಯಿಯವರಿಗೆ ಕೇವಲ ಒಂಬತ್ತು ವರ್ಷ ವಯಸ್ಸು. (1930) ; ಪಾಂಡುರಂಗರಾಯರು ಎಂಟುವರ್ಷ ದೊಡ್ಡವರು. ಹೆಂಡತಿಯ ಆಸಕ್ತಿಗಳಿಗೆ ಗಂಡ ನೀರೆರೆದು ಪೋಷಿಸಿದ್ದಾರೆ. ಗಂಡನ ವಿವಿಧ ಚಟುವಟಿಕೆಗಳಲ್ಲಿ ಹೆಂಡತಿ ಸಂಪೂರ್ಣ ಸಹಕಾರ ನೀಡಿದ್ದಾರೆ. ಫಲವಾಗಿ ಅವರು ಮಕ್ಕಳ ಮಂಟಪದಂಥ ಸಂಸ್ಥೆಗಳನ್ನು ನಡೆಸುವುದು ಸಾಧ್ಯವಾಯಿತು. ಪಾಂಡುರಂಗರಾಯರು ಒಮ್ಮೆ ನನಗೆ ಹೇಳಿದರು—"ನಾನು ಶಕುಂತಲಾಬಾಯಿಯವರಿಗೆ ಟ್ರಸ್ಟಿಯಾಗಿದ್ದೇನೆ." ದಿವಂಗತ ಎಂ. ಆರ್. ಶ್ರೀನಿವಾಸ ಮೂರ್ತಿಯವರು ಅವರಿಗೆ ಹಾಗಿರಬೇಕೆಂದು ಹೇಳಿದ್ದರಂತೆ. ಸದಾ ಒಂದಲ್ಲೊಂದು ಚಟುವಟಿಕೆಯಲ್ಲಿ ತೊಡಗಿರುವ ಈ ದಂಪತಿಗಳನ್ನು ನೋಡುವುದೇ ಒಂದು ಸಂತೋಷ. ಪರಸ್ಪರ ಆಸಕ್ತಿಗಳ ಪೋಷಣೆ, ಹೊಂದಾಣಿಕೆ ಅನ್ಯೋನ್ಯತೆಗಳು ಹೀಗೆ ಕೂಡಿಕೊಂಡಿರುವ ದಾಂಪತ್ಯಗಳು ವಿರಳ.

"ಕಲೆಯನ್ನಲ್ಲದೆ ಶಿಲ್ಪಿ ಶಿಲೆಯನೇಂ ಸೃಷ್ಟಿಪನೆ" ಎನ್ನುವುದು ಪಾಂಡುರಂಗರಾವ್ ದಂಪತಿಗಳಿಗೆ ಪ್ರಿಯವಾದ ಒಂದು ಮಾತು. ತಮ್ಮ ಗಾನ ಮಾಧುರ್ಯದಿಂದ ಕಾವ್ಯಕ್ಕೆ ಧ್ವನಿಕೊಟ್ಟು ಕಲಾ ಲೋಕವನ್ನೇ ನಿರ್ಮಿಸುವ ಶಕುಂತಲಾಬಾಯಿಯವರಿಗೆ ಈಗ ಅರುವತ್ತು. ಅವರಿಗೆ ನೂರಾಗಲಿ ಎಂಬುದು ನಾಡವರ ಹಾರೈಕೆ.

ಗಮಕ ಕಲೆಯ ಧ್ರುವತಾರೆ

ಹಂಪನಾ

ಕನ್ನಡನಾಡಿನಲ್ಲಿ ಗಮಕ ಕಲೆಗೆ ಸುಮಾರು ಒಂದು ಸಾವಿರ ವರ್ಷಗಳ ನಿರಂತರವಾದ ಇತಿಹಾಸವಿದೆ. ಇಷ್ಟು ಭವ್ಯ ಪರಂಪರೆಯನ್ನು ಪಡೆದಿರುವ ಗಮಕ ಕಲೆಗೆ ಕನ್ನಡ ಸಾಹಿತ್ಯ ಪರಿಷತ್ತು ಅರ್ಧ ಶತಮಾನಕ್ಕೂ ಹೆಚ್ಚು ಕಾಲದಿಂದ ವಿಶೇಷವಾದ ಪ್ರೋತ್ಸಾಹವನ್ನು ಕೊಡುತ್ತಾ ಬಂದಿದೆ. ಇತ್ತೀಚಿನ ವರ್ಷಗಳಲ್ಲಿ ಗಮಕ ಕಲೆ ತುಂಬಾ ವ್ಯಾಪಕವಾಗಿ ಹಬ್ಬುತ್ತಿದೆ.

ನಮ್ಮ ಸಮಕಾಲೀನ ಹಿರಿಯ ಗಮಕಿಗಳಲ್ಲಿ ಒಬ್ಬರಾದ ಸೋದರಿ ಶಕುಂತಲಾಬಾಯಿ ಪಾಂಡುರಂಗರಾವ್ ಅವರು ಅಗ್ರಗಣ್ಯರಾಗಿದ್ದಾರೆ. ಅವರ ಕಂಠ ಶ್ರೀ ಮಾಧುರ್ಯವನ್ನು ಕನ್ನಡಿಗರು ಸುಮಾರು 30 ವರ್ಷಗಳಿಂದ ಆನಂದದಿಂದ ಸವಿಯುತ್ತಾ ಬಂದಿದ್ದಾರೆ. ಚಂಪೂ ಕಾವ್ಯವಾಗಲಿ, ಷಟ್ಪದಿ ಕಾವ್ಯವಾಗಲಿ, ಭಾವಗೀತೆಯಾಗಲಿ—ಶಕುಂತಲಾಬಾಯಿಯವರು ಹಾಡಲು ತೊಡಗಿದರೆ ಸಾಹಿತ್ಯ ಪ್ರಿಯರಾದ ರಸಿಕರಿಗೆ ತನ್ಮಯತೆ ಉಂಟಾಗುತ್ತದೆ. ಅವರ ಇಷ್ಟು ವರ್ಷಗಳ ಸೇವೆಗೆ ಮಕುಟಪ್ರಾಯವಾಗಿ ಮೈಸೂರಿನಲ್ಲಿ 1979ರಲ್ಲಿ ನಡೆದ ಅಖಿಲ ಕರ್ನಾಟಕ ಎರಡನೆ ಗಮಕ ಸಮ್ಮೇಳದ ಅಧ್ಯಕ್ಷಸ್ಥಾನ ದೊರೆತದ್ದು, ಆ ಸಂದರ್ಭದಲ್ಲಿ ಅವರು ಮಾಡಿದ ಭಾಷಣ, ಗಮಕ ರೂಪದಲ್ಲಿ ಹಾಡಿದ ಹಾಡುಗಾರಿಕೆಯ ರೀತಿ ಇನ್ನೂ ನನ್ನ ಕಣ್ಣಿನ ಮುಂದೆ ಕಟ್ಟಿದಂತಿದೆ; ಕಿವಿಯಲ್ಲಿ ಅನುರಣನವಾಗುತ್ತಿದೆ. ಸೋದರಿ ಶಕುಂತಲಾಬಾಯಿಯವರು ಇನ್ನೂ ಬಹುಕಾಲ ಬದುಕಿದ್ದು ಗಮಕ ಕಲೆಗೆ ಚೈತನ್ಯಧಾರೆ ಎರೆಯುವಂತಾಗಲೆಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ. ಇವರ ಎಲ್ಲಾ ಕಲೋಪಾಸನೆಗೆ ಉದ್ದಕ್ಕೂ ನೆರವು ನೀಡುತ್ತಾ ಪ್ರೋತ್ಸಾಹಿಸುತ್ತಿರುವ ಅವರ ಪತಿ ನನ್ನ ಪ್ರಿಯ ಮಿತ್ರರಾದ ಶ್ರೀ ಬಿ. ಪಾಂಡುರಂಗರಾಯರಿಗೂ ಈ ಸಂದರ್ಭದಲ್ಲಿ ಸಂತೋಷದಿಂದ ಶುಭ ಕೋರುತ್ತಿದ್ದೇನೆ. ಅನುರೂಪ ದಾಂಪತ್ಯದ ಒಂದು ಉತ್ತಮ ಮಾದರಿಯಾಗಿದೆ.

ಸುಬ್ಬಣ್ಣ ರಂಗನಾಥ ಎಕ್ಕುಂಡಿ

ಕಳೆದ ವರ್ಷ ಡಾ|| ವಿ. ಕೆ. ಗೋಕಾಕ ಅವರ ಮನೆಯಲ್ಲಿ ನನಗೊಂದು ವಿಶೇಷ ಸಂತೋಷದ ಅವಕಾಶ ದೊರಕಿತು. ಎಂದಿನಂತೆ, ಕಾವ್ಯಾಸಕ್ತ ಸ್ನೇಹಿತರು ಹಲವರು ಡಾ|| ಗೋಕಾಕರ ಈಚಿನ ಬೃಹತ್ಕೃತಿ, ಭಾರತ ಸಿಂಧು ರಶ್ಮಿಯನ್ನು ವಾಚನ ಮಾಡುತ್ತಿರುವುದನ್ನು ಕೇಳಲು ನಾವೆಲ್ಲರೂ ಅವರಲ್ಲಿ ಸೇರಿದ್ದೆವು. ಆದಿನ ಶ್ರೀಮತಿ ಶಕುಂತಲಾ ಬಾಯಿ ಪಾಂಡುರಂಗರಾವ್ ಆಕಾವ್ಯದಿಂದ ಪ್ರಾರ್ಥನಾಭಾಗವನ್ನು ಸುಶ್ರಾವ್ಯವಾಗಿ ಹಾಡಿದರು. ಡಾ|| ಗೋಕಾಕ ಅವರ ಮಗ ಅನಿಲ ಅದನ್ನು ಅಂದು ಟೇಪ ಮಾಡಿಕೊಂಡರು. ಶ್ರೀಮತಿ ಶಕುಂತಲಾಬಾಯಿ ಅವರ ಗಮಕವು ನಮಗೆಲ್ಲ ತುಂಬಾ ಸಂತೋಷವುಂಟುಮಾಡಿತು. ಅವರ ಗಮಕವನ್ನು ಆಲಿಸಿದಮೇಲೆ, ಕಾವ್ಯದಿಂದ ಗಮಕಕ್ಕೂ ಗಮಕದಿಂದ ಕಾವ್ಯಕ್ಕೂ ಇನ್ನಿಲ್ಲದ ಸೊಬಗು ಸೇರಿದಂತೆ ಅನಿಸಿತು. ಶ್ರೀಮತಿ ಶಕುಂತಲಾ ಬಾಯಿ ಅವರು ಕಾವ್ಯ ಮತ್ತು ಗಮಕ ಎರಡನ್ನೂ ತಮ್ಮ ಪ್ರತಿಭೆಯಿಂದ ಹುರಿಗೂಡಿಸಿ ಕರ್ನಾಟಕದಲ್ಲಿ ಜನಮನವನ್ನು ಸಂತೋಷಗೊಳಿಸಿದ್ದಾರೆ. ಆಮೇಲಿನ ದಿನಗಳಲ್ಲಿ ಕೂಡ ಅವರ ಗಮಕ ಶ್ರೀಯನ್ನು ಸವಿಯುವ ಭಾಗ್ಯ ನನಗೆ ದೊರಕಿದೆ. ರಾಜಾಜಿ ನಗರದಲ್ಲಿ ನಡೆದ ಶ್ರೀಪೇಜಾವರ ಶ್ರೀಗಳ ಶ್ರೀರಾಮಾಯಣದ ಪ್ರವಚನದ ಕಾಲದಲ್ಲಿ ಮಂಗಳದ ದಿನದಂದುಕೂಡ ಅವರು ಶ್ರೀಗುರುವಂದನೆಯನ್ನು ಸಮರ್ಪಿಸಿ ಹಾಡಿದರು. ಮಿಕ್ಕ ಅಪ್ರತಿಮ ಕಲಾವಿದರ ಕಲೆಯನ್ನು ಸವಿಯುವ ಹಾಗೆಯೆ,—ಶ್ರೀಮತಿ ಶಕುಂತಲಾ ಬಾಯಿಯವರ ಗಮಕವನ್ನು ಕೇಳುವದೇ ಒಂದು ಅಪೂರ್ವ ರಸಾನುಭವ. ವೆಂಕಟಪ್ಪನವರ ಒಂದು ಚೆಲುವಿನ ನಿಸರ್ಗಚಿತ್ರ ನೋಡಿದಂತೆ, ರವಿಶಂಕರ ಅವರ ಸಿತಾರವಾದನ ಆಲಿಸಿದಂತೆ—ಅನ್ನಬಹುದೇನೊ!

ಹಿಂದೊಮ್ಮೆ ಪಂಪಕವಿ ಹೆಮ್ಮೆಯಿಂದ ಹೇಳಿದನು, 'ತೆಂಕಣಗಾಳಿ ಸೋಕಿದಾಗ, ಒಳ್ಳೆಯ ಮಾತು ಕೇಳಿದಾಗ, ಇಂಪಾದ ಹಾಡು ಕಿವಿಗೆ ಬಿದ್ದಾಗ, ಬಿರಿದ ಮಲ್ಲಿಗೆಯನ್ನು ಕಂಡಾಗ ನನಗೆ ನಮ್ಮನಾಡಿನ ನೆನಪು ಉಕ್ಕಿಬರುತ್ತದೆ' ಎಂದು. ಶ್ರೀಮತಿ ಶಕುಂತಲಾ ಬಾಯಿಯವರ ಗಮಕದಲ್ಲಿ ಕಾವ್ಯವು ತೆಂಕಣಗಾಳಿಯಂತೆ ಸೋಂಕುತ್ತದೆ. ಸಮುದಾಯದ ಹಿಗ್ಗಿನ ಸಂಸ್ಕೃತಿಯು ಮಲ್ಲಿಗೆಯಂತೇ ಬಿರಿಯುತ್ತದೆ. ಅವರ ಗಮಕದಿಂದ ಕಾವ್ಯ ಶ್ರೀಮಂತವಾಗುತ್ತದೆ. ಅವರ ಗುರುಗಳಾದ ಭಾರತ ಬಿಂದೂರಾಯರಂತೆ ಅವರೂ ಕಾವ್ಯದ ಮಂಗಲಕಲಶವನ್ನು ಹೃದಯದಿಂದ ಹೃದಯಕ್ಕೆ ತಲುಪಿಸಿದರು. ಮಹೋನ್ನತ ಕಾವ್ಯವನ್ನು ಜನತೆಗೆ ತಲುಪಿಸುವದರಲ್ಲಿ ಈ ಗುರು ಶಿಷ್ಯರು ಹಾಗೆಯೆ ಇನ್ನೂ ಅನೇಕ ಪ್ರತಿಭಾವಂತ ಗಮಕಿಗಳು ವಿಶೇಷವಾಗಿ ಶ್ರಮಿಸಿದ್ದಾರೆ. ಕವಿ, ಗಮಕಿ ಇಬ್ಬರೂ ಒಂದು ಜನಾಂಗದ ಸಂಸ್ಕೃತಿಯ ಶ್ವಾಸಕೋಶಗಳಿದ್ದಂತೆ. ಇಬ್ಬರೂ ಜನರ ಬದುಕಿಗೆ ಸಂತೋಷವನ್ನೂ ಸೊಬಗನ್ನೂ ನೀಡುತ್ತಾರೆ. ಒಬ್ಬರು ಬೆರಳಿನಿಂದ ಇನ್ನೊಬ್ಬರು ಕೊರಳಿನಿಂದ

ಬದುಕನ್ನು ಶ್ರೀಮಂತಗೊಳಿಸುತ್ತಾರೆ. ಉನ್ನತಗೊಳಿಸುತ್ತಾರೆ. ಕರ್ನಾಟಕದ ಸಂಸ್ಕೃತಿಯ ಸೇವೆಯಲ್ಲಿ ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾವ್ ಕಳೆದ 45ವರ್ಷಗಳಿಂದಲೂ ತಮ್ಮ ಕೊರಳನ್ನು ಮುಡುಪಾಗಿಟ್ಟವರು. ನಾವು ಕೇಳಿದ ಅವರ ಗಮಕಗಳು ಸವಿಯಾಗಿಯೆ ಇವೆ. ಕೇಳಬೇಕಾದವಂತೂ ಇನ್ನೆಷ್ಟು ಸವಿಯಾಗಿವೆ. ಇಂಥ ಪ್ರತಿಭಾವಂತ ಗಮಕಿಯನ್ನು ಪಡೆದ ಕರ್ನಾಟಕದಲ್ಲಿ ಜನರು, "ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿ"ಗಳಾಗಿದ್ದರೆ ಏನಾಶ್ಚರ್ಯ !

ಬದುಕಿನಲ್ಲಿ ಸಂತೋಷದ ಅವಕಾಶಗಳೂ ಸಾಧನಗಳೂ ವಿರಳವಾಗುತ್ತಿರುವ ದಿನಗಳಲ್ಲಿ ಶ್ರೀಮತಿ ಶಕುಂತಲಾಬಾಯಿಯವರು ಭರವಸೆಯ ಧ್ವನಿಯಾಗಿದ್ದಾರೆ. ಅವರ ಗಮಕದ ಅಲೆಗಳು ನಾಡಿನೆಲ್ಲೆಲ್ಲ ಪ್ರತಿಧ್ವನಿಸಿವೆ. ಅವು ಕಾವ್ಯದ ಸೊಬಗನ್ನೂ ಸಂಗೀತದ ಸಂತೋಷವನ್ನು ಹಾಲು ಸಕ್ಕರೆಗಳಂತೆ ಬೆರೆಸಿ ಕರ್ನಾಟಕದ ಜನಮನವನ್ನು ತಣಿಸಿವೆ. ಅಷ್ಟಕ್ಕೆ ನಿಲ್ಲದೆ ಇತಿಹಾಸದುದ್ದಕ್ಕೂ ಕರ್ನಾಟಕವು ಕಂಡ ಬದುಕಿನ ಚದುರನ್ನೂ ಹೃದಯದ ಸಂಪತ್ತನ್ನು ಎಲ್ಲರಿಗೂ ನೀಡಲು ಹವಣಿಸಿವೆ. ಅವರ ಈ ಸಾರ್ಥಕ ಶ್ರಮದಲ್ಲಿ ಸಂತೋಷದ ಸೇವೆಯಲ್ಲಿ ಅವರ ಪತಿ ಸಾಹಿತಿ ಶ್ರೀ ಬಿ. ಎಸ್. ಪಾಂಡುರಂಗರಾಯರು ಹೆಮ್ಮೆಯ ಪಾಲುಗಾರರಾಗಿದ್ದಾರೆ. ಪೊಲೊನಿಯಸ್ ಹೇಳಿದಂತೆ, ಪ್ರತಿಯೊಬ್ಬನಿಗೂ ನಮ್ಮ ಕಿವಿಗೊಡುವುದು ಸಾಧ್ಯವಾಗದೆ ಹೋಗಬಹುದು. ಆದರೆ ಶ್ರೀಮತಿ ಶಕುಂತಲಾಬಾಯಿಯವರಿಗೆ ಕಿವಿಗೊಡುವುದು ಕರ್ನಾಟಕದ ಅಪರೂಪ ಭಾಗ್ಯವಾಗಿದೆ.

ಹಿಂದೊಮ್ಮೆ ಬೆಂಗಳೂರಿನ ಜನರು ಗೋವಿಂದ ಪೈಗಳಿಗೆ ಸತ್ಕಾರ ಸಮಾರಂಭವೊಂದನ್ನು ಏರ್ಪಡಿಸಿದ್ದರು—ಅವರು ರಾಷ್ಟ್ರಕವಿ ಪದವಿ ಪಡೆದ ಸಂದರ್ಭದಲ್ಲಿ. ಆಗ ಶ್ರೀಮತಿ ಶಕುಂತಲಾಬಾಯಿ, ಕವಿಗಳ ಗೊಲ್ಗೊಥಾದಿಂದ ಕೆಲಭಾಗವನ್ನು ಇಂಪಾಗಿ ಹಾಡಿದರು. ಸಮಾರಂಭ ಮುಗಿದ ಮೇಲೆ ಶ್ರೀ ಗೋವಿಂದ ಪೈಗಳು ಶ್ರೀಮತಿ ಶಕುಂತಲಾಬಾಯಿಯವರಿಗೆ, "ನನ್ನ ಕಾವ್ಯಕ್ಕೆ ನೀವು ಧ್ವನಿಕೊಟ್ಟಿರಿ" ಎಂದು ನುಡಿದು ತಮ್ಮ ಸಂತೋಷ ವ್ಯಕ್ತಪಡಿಸಿದರು. ಕಳೆದ 45 ವರ್ಷಗಳಿಂದಲೂ ಶ್ರೀಮತಿ ಶಕುಂತಲಾಬಾಯಿ ಅನೇಕರ ಕಾವ್ಯಕ್ಕೆ ತಮ್ಮ ಧ್ವನಿ ಕೊಟ್ಟಿದ್ದಾರೆ. ಬರಿಯ ಧ್ವನಿಯನ್ನಲ್ಲ ಇಂಪಾದ ಅರ್ಥಪೂರ್ಣ, ಭಾವಪೂರ್ಣ, ರಸಪೂರ್ಣ ಧ್ವನಿಯನ್ನು, ತಂಬೂರಿಯ ಸಮಶ್ರುತಿಗೆ ಆ ಧ್ವನಿ ಹರಿಯತೊಡಗಿದರೆ, ಆ ಭಾಗ್ಯವೇ ಭಾಗ್ಯ ಆ ಸಂತೋಷವೇ ಸಂತೋಷ.

ತಮ್ಮ ಶಿಷ್ಯಳ ಕಾವ್ಯವಾಚನವನ್ನು ಮೆಚ್ಚಿ ಅವರ ಗುರು ಶ್ರೀ ಭಾರತ ಬಿಂದೂರಾಯರು ತಮ್ಮ ಕಾಗದವೊಂದರಲ್ಲಿ ಹೀಗೆ ಬರೆದಿದ್ದಾರೆ. "ಸ್ವತಃ ಪ್ರತಿಭಾಶಾಲಿಗಳಾಗಿ ನನ್ನನ್ನು ಗುರುಸ್ಥಾನದಲ್ಲಿಟ್ಟುಕೊಂಡು ಕೀರ್ತಿ ಕೊಟ್ಟಿರುವದಕ್ಕೆ ತುಂಬಾ ಕೃತಜ್ಞನಾಗಿರುತ್ತೇನೆ. ಗಮಕದಲ್ಲಿ ಪದ್ಯದ ಭಾವೋದ್ಯೋತಕವಾಗುವಷ್ಟು ರಾಗಬೇಕು. ರಾಗದ ಏರು ಇಳಿತ ಪದಗಳಲ್ಲಿಯೆ ಕಾಣಬೇಕು. ಪದ್ಯ ಬಿಟ್ಟು ರಾಗ ಇರಬಾರದು. ಅವರ ಪ್ರತಿಭಾವಂತ ವಾಚನಕ್ಕೆ ನಾನು ಸೋತಿದ್ದೇನೆ. ದೇವರು ಅವರಿಗೆ ಪೂರ್ಣ ಆಯುರಾರೋಗ್ಯ ಭಾಗ್ಯಗಳನ್ನು ದಯಪಾಲಿಸಿ ಕಾಪಾಡಲಿ ಎಂದು ಹರಸುತ್ತೇನೆ." ಆ ಹಿರಿಯನ ಹರಕೆಯಲ್ಲಿಯೇ ನಮ್ಮೆಲ್ಲರ ಹಾರೈಕೆಯೂ ಆಗಿದೆ.

ಬೆಳಗುವ ಸೇತುವೆಯ ಸೃಷ್ಟಿ

ಎಲ್. ಎಸ್. ಶೇಷಗಿರಿರಾವ್

ಹಲವು ವರ್ಷಗಳ ಹಿಂದೆ ನಾನು ಕೋಲಾರದ ಸರ್ಕಾರಿ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದೆ. ಕಾಲೇಜಿನ ಕೇಂದ್ರ ವಿದ್ಯಾರ್ಥಿ ಸಂಘದ ಅಧ್ಯಕ್ಷರು, ಒಬ್ಬ ಕಾರ್ಯದರ್ಶಿಗಳು, ಕೋಶಾಧಿಕಾರಿಗಳು ಅಧ್ಯಾಪಕ ವರ್ಗದವರು. ಇವರ ಎಲ್ಲ ಸಂಘಗಳು ಕೇಂದ್ರ ಸಂಘದ ಆಶ್ರಯದಲ್ಲಿ ಕಾರ್ಯಕ್ರಮ ನಡೆಸುತ್ತಿದ್ದವು. ನಾನು ಅಧ್ಯಕ್ಷನಾಗಿದ್ದ ವರ್ಷ ಕನ್ನಡದ ವಿದ್ಯಾರ್ಥಿಗಳು ಹೊಸ ಬಗೆಯ ಯಾವುದಾದರೊಂದು ಕಾರ್ಯಕ್ರಮವನ್ನು ವೈಭವದಿಂದ ಆಚರಿಸಬೇಕೆಂಬ ಉತ್ಸಾಹದಲ್ಲಿದ್ದರು. ನಾನೂ ಕನ್ನಡ ವಿಭಾಗದ ಅಧ್ಯಾಪಕರೂ ಸಮಾಲೋಚಿಸಿ ಒಂದು ಕಾರ್ಯಕ್ರಮವನ್ನು ರೂಪಿಸಿದೆವು. ಕನ್ನಡದ ಹಿರಿಯ ಸಾಹಿತಿಗಳೊಬ್ಬರನ್ನು ಬರಮಾಡಿಕೊಂಡು ಸನ್ಮಾನಿಸುವುದು, ವಿದ್ಯಾರ್ಥಿ ಉಪಾಧ್ಯಕ್ಷರೇ ಮಾನಪತ್ರ ಓದಿ ಒಪ್ಪಿಸುವುದು, ಅವರ ಸಾಹಿತ್ಯವನ್ನು ಕುರಿತ ಒಂದು ಭಾಷಣ. ಕಾರ್ಯಕ್ರಮವನ್ನು 'ಕವಿವಂದನೆ' ಎಂದು ಕರೆದೆವು. ಹಿರಿಯ ಸಾಹಿತಿಗಳು ಶ್ರೀ ವಿ. ಸೀ. ಕಾರ್ಯಕ್ರಮಕ್ಕೆ ಬರಲು ಒಪ್ಪಿದರು. ವಿದ್ಯಾರ್ಥಿಗಳು ಸಂತೋಷದಿಂದ ಸಿದ್ಧತೆ ಪ್ರಾರಂಭಿಸಿದರು. ಅವರಿಗೆ ಒಂದು ಯೋಚನೆ–ಕಾರ್ಯಕ್ರಮ ತೀರ ಗಂಭೀರ ಆಗುತ್ತದೆ, 'ಹವಿ' ಆಗುತ್ತದೆ ಎಂದು. ಆಗಿನ ದಿನಗಳಲ್ಲಿ ಕಾಲೇಜಿನ ಇಂತಹ ಕಾರ್ಯಕ್ರಮಕ್ಕೆ ಊರಿನ ಹಿರಿಯರು ಮಾತ್ರವಲ್ಲದೆ ನೂರಾರು ಮಂದಿ ಬರುತ್ತಿದ್ದರು. ಆದುದರಿಂದ 'ವಿವಿಧ ವಿನೋದಾವಳಿ' ಇರಬೇಕು. ಅವರು ನಮ್ಮ ಬಳಿ ಬಂದು ಈ ಅಂಶ ಸೂಚಿಸಿದರು. ವಿನೋದಾವಳಿ ಏನಿರಬಹುದು ಎಂದು ನಮ್ಮ ಪ್ರಶ್ನೆ. 'ಫ್ಯಾನ್ಸಿ ಡ್ರೆಸ್ ಸೇರಿಸಬಹುದು' ಎಂದು ಒಬ್ಬರ ಸಲಹೆ. 'ಚಲನಚಿತ್ರಗಳ ಲಘು ಸಂಗೀತ' ಮತ್ತೊಬ್ಬರ ಸಲಹೆ. ಕೊನೆಗೆ ನಾವು ಹೇಳಿದೆವು: "ಕವಿವಂದನೆಯ ಕಾರ್ಯಕ್ರಮವೆಲ್ಲ ಆಹ್ವಾನಿತ ಕವಿಗಳಿಗೇ ಸಂಬಂಧಿಸಿರಬಹುದು. ವಿ. ಸೀ. ಅವರ ಕವನಗಳ ವಾಚನ ಇಟ್ಟುಕೊಳ್ಳೋಣ" ಹುಡುಗರಿಗೆ ಅಷ್ಟು ಒಪ್ಪಿಗೆ ಆಗಲಿಲ್ಲ. ನಾವು ಸೂಚಿಸಿದಂತಹ ಕಾವ್ಯವಾಚನ ವಿದ್ಯಾರ್ಥಿಗಳಲ್ಲಿ ಬಹುಮಂದಿಗೂ ಇತರರಲ್ಲಿ ಹಲವು ಮಂದಿಗೂ ರುಚಿಸದೆ ಹೋದೀತು ಎಂದು ಅವರ ಆತಂಕ. ಕಡೆಗೆ ನಾನು ಹೇಳಿದೆ, "ಈ ವರ್ಷ ಈ ಪ್ರಯೋಗ ಮಾಡಿ ನೋಡೋಣ, ಅಗತ್ಯ ಕಂಡರೆ ಮುಂದಿನ ವರ್ಷ ಮಾರ್ಪಾಡು ಮಾಡೋಣ." ಅರೆಮನಸ್ಸಿನಿಂದ ವಿದ್ಯಾರ್ಥಿಗಳು ಒಪ್ಪಿದರು. ಅಗತ್ಯ ಕಂಡರೆ, ಕಾರ್ಯಕ್ರಮದ ಕಡೆಯಲ್ಲಿ ಕೆಲವರು ವಿದ್ಯಾರ್ಥಿಗಳು 'ಫಿಲ್ಮ್ ಹಿಟ್ಸ್' ಹಾಡಲು ಅವಕಾಶ ಕೊಡಬೇಕೆಂದು ಸೂಚಿಸಿದರು. ನಾವೂ ಒಪ್ಪಿದೆವು. ಶ್ರೀಮತಿ ಸೌ. ಶಕುಂತಲಾಬಾಯಿಯವರು ಕಾರ್ಯಕ್ರಮಕ್ಕೆ ಬರಲು ಒಪ್ಪಿದರು. ಸುಮಾರು ಒಂದು ಗಂಟೆ ಕಾಲ ವಿ. ಸೀ. ಅವರ ಕವನಗಳನ್ನು ಹಾಡಿದರು. ಒಂದು ಒಂದೂವರೆ ಸಾವಿರ ಜನರ ಸಭೆ–ಪ್ರಿಯೂನಿವರ್ಸಿಟಿ

ವಿದ್ಯಾರ್ಥಿಗಳಿಂದ ಹಿಡಿದು ಸಂಗೀತ ವಿದ್ವಾಂಸರು, ಸಾಹಿತಿಗಳು, ಊರಿನ ಪ್ರಮುಖರ ವರೆಗೆ ಹಲವಾರು ವರ್ಗಗಳವರು ಸೇರಿದ ಸಭೆ. ಇಡೀ ಸಭೆ ಸಂತೋಷದಿಂದ ಆಲಿಸಿತು. ವಿದ್ಯಾರ್ಥಿಗಳು ತಮ್ಮ ಕವನ ವಾಚನದ ಯೋಚನೆ ಕೈಬಿಟ್ಟರು. ಮರುದಿನ ಅವರೇ ಹೇಳಿದ ಮಾತು : "ಒಂದು ಕಾರ್ಯಕ್ರಮ, ವಿನೋದಾವಳಿಯ ಭಾಗವಿಲ್ಲದೆ, ಇಷ್ಟು ಚೆನ್ನಾಗಿ ನಡೆಯಬಲ್ಲುದು ಸಾಧ್ಯ ಅಂತ ನಾವು ಭಾವಿಸಿಯೇ ಇರಲಿಲ್ಲ."

ಹಲವು ವರ್ಷಗಳ ಕಾಲ 'ಕವಿವಂದನೆ' ಕೋಲಾರ ಕಾಲೇಜಿನ ಸಂಘದ ಒಂದು ಅಪೂರ್ವ ಕಾರ್ಯಕ್ರಮವಾಗಿ ಬೆಳಗಿತು.

ಶಕುಂತಲಾಬಾಯಿಯವರ ಕಾವ್ಯವಾಚನ ಹೀಗೆ ಕಾವ್ಯಗಂಗೆಯನ್ನು ಸಾಮಾನ್ಯ ವಾಗಿ ಕಾವ್ಯದಿಂದ ದೂರ ಉಳಿಯುವ ಸಾವಿರಾರು ಮಂದಿಯ ಬಳಿಗೆ ಕೊಂಡೊಯ್ದಿದೆ. ಇದಕ್ಕೆ, ದೈವದತ್ತವಾದ ಇಂಪಾದ ಮತ್ತು ವಿಶೇಷ 'ರೇಂಜ್' ಇರುವ ಅವರ ಶಾರೀರ ಜೊಂದಿಗೆ ಇನ್ನೂ ಹಲವು ಕಾರಣಗಳಿವೆ. ಒಂದು, ಅವರು ತಾವು ಯಾವಾಗಲೂ ಹಿಂದೆ ನಿಂತು ತಾವು ವಾಚಿಸುವ ಕಾವ್ಯವನ್ನು ಕೇಳುವವರ ಮುಂದೆ ನಿಲ್ಲಿಸುತ್ತಾರೆ ಎನ್ನುವುದು. ಮತ್ತೊಂದು, ಕವನದ ಭಾವದ ಅಭಿವ್ಯಕ್ತಿಯಲ್ಲಿ ಕೇಳುವವರ ಕರುಳು ಹಿಂಡುವುದು ಅಥವಾ ಭಕ್ತಿಯನ್ನುಕ್ಕಿಸುವುದು ಇಂತಹ ಉದ್ದೇಶಕ್ಕೆ ಮುಡಿಪಾಗದೆ, ಸಂಯಮವನ್ನು ಪಾಲಿಸುತ್ತಾರೆ ಎನ್ನುವುದು. ಮಹಾಕಾವ್ಯಗಳ ಭವ್ಯಪಾತ್ರಗಳ ಪುನಸ್ಸೃಷ್ಟಿಯಲ್ಲಂತೂ ಇದು ಬಹುಮುಖ್ಯ. ಕುಂತೀ-ಕರ್ಣ ಸಂವಾದ, ಕರ್ಣಾವಸಾನ, ವಿಶ್ವೇಶ್ವರ ಸಾಕ್ಷಾತ್ಕಾರ ಇಂತಹ ಭಾಗಗಳನ್ನು ವಾಚಿಸುವಾಗ ಅವರು ತೋರುವ ಸಂಯಮ ವಿಶಿಷ್ಟವಾದುದು. ಮೂರನೆಯದಾಗಿ, ಸಂಗೀತಕ್ಕೆ ಎಷ್ಟು ಪ್ರಾಧಾನ್ಯ, ಸಲ್ಲ ಬೇಕೋ ಅಷ್ಟನ್ನೆ ಸಲ್ಲಿಸಿ ಸಾಹಿತ್ಯವನ್ನು ಸ್ಫುಟವಾಗಿ ಕಿವಿಗೆ ಕೇಳಿಸಿ ಸಂಗೀತವನ್ನು ಕವನದ ಸಾರ್ಥಕ್ಯಕ್ಕೆ ಪೋಷಕವನ್ನಾಗಿ ಮಾಡುತ್ತಾರೆ ಎನ್ನುವುದು. ಇದರಿಂದ ಕವಿಯ ಭಾಷೆ ಸಾಧಿಸಬಲ್ಲ ಪರಿಣಾಮಕ್ಕೆಲ್ಲ ಅವರು ಅವಕಾಶ ಮಾಡಿಕೊಡುತ್ತಾರೆ. ನಾಲ್ಕನೆ ಯದು, ಅವರು ಕವಿಗೆ, ಕಾವ್ಯಕ್ಕೆ, ಶ್ರೋತೃಗಳಿಗೆ ಗೌರವವನ್ನು ಕೊಡುತ್ತಾರೆ ಎನ್ನು ವುದು. ಐದು ನಿಮಿಷದ ಕಾವ್ಯವಾಚನವಾಗಲಿ, ಒಂದು ಪ್ರಾರ್ಥನೆಯಷ್ಟೇ ಆಗಲಿ, ಕಾವ್ಯವಾಚನವೇ ಮುಖ್ಯವಾದ ಕಾರ್ಯಕ್ರಮವಾಗಲಿ ಅವರು ಕಾವ್ಯವನ್ನು ಅತ್ಯಂತ ಪೂಜ್ಯಭಾವದಿಂದ ಶ್ರೋತೃಗಳ ಹೃದಯಕ್ಕೆ ಮುಟ್ಟಿಸಲು ಗಂಭೀರವಾಗಿ ಶ್ರಮಿಸು ತ್ತಾರೆ; ದೊಡ್ಡ ಪಟ್ಟಣದ ವಿದ್ವಾಂಸರ ಕೂಟವಾಗಲಿ, ಹಳ್ಳಿಯ ಅನಕ್ಷರಸ್ಥರ ಸಭೆ ಯಾಗಲಿ, ಐದು ಸಾವಿರ ಜನದ ಸಭೆಯಾಗಲಿ, ಐವರ ಸಭೆಯಾಗಲಿ ಒಂದೇ ಶ್ರದ್ಧೆ ಯಿಂದ ಕಾರ್ಯಕ್ರಮ ನಡೆಸಿಕೊಡುತ್ತಾರೆ; ಹಿಂದಿನ ಮಹಾ ಕವಿಗಳ ಕೃತಿಗಳನ್ನು ಅಭ್ಯಾಸ ಮಾಡಿದಷ್ಟೇ, ಶ್ರದ್ಧೆಯಿಂದ ತಾವು ಆರಿಸಿಕೊಂಡ ಆಧುನಿಕ ಕವಿಗಳ ಕೃತಿ ಗಳನ್ನು ಅಭ್ಯಾಸಮಾಡುತ್ತಾರೆ. 1951ರಲ್ಲಿ ನನಗಾದ ಅನುಭವ ಚೆನ್ನಾಗಿ ನೆನಪಿದೆ. ಮಾಸ್ತಿಯವರಿಗೆ ಅರವತ್ತು ವರ್ಷವಾದ ಸಂದರ್ಭದಲ್ಲಿ ನಡೆದ ಸಮಾರಂಭ ಒಂದರಲ್ಲಿ ಅವರು ಮಾಸ್ತಿಯವರ 'ಸಂಗಾತಿ' ಹಾಡನ್ನು ("ನೀನೆನ್ನ ಜೊತೆಯಬೇ ಎಡೆ ಬಿಡದೆ ನಡೆದುದನು, ನಾನಿನ್ನ ಮರವಲಿಂದೆಸನ್ನು") ಹಾಡಿದರು, "ತಿರುಗಿ ನೋಡಲು ಮಳಲ

ಮೇಲೆ ನಾ ನಡೆದಡಿಯ ಗುರುತಿನೊಡನಿಹುದು ನಿನ್ನಡಿಯ ಗುರುತು" ಎಂಬ ಪಂಕ್ತಿಗಳನ್ನು ಅವರು ಹಾಡಿದಾಗ, ಬೆರಗು–ಕೃತಜ್ಞತೆ–ಸಂತೋಷ ಎಲ್ಲ ಉಕ್ಕಿ ಬಂದವು. ಅವರ ನಿರೂಪಣೆಯಲ್ಲಿ ಆವರೆಗೆ ಆ ಕೃತಿಯನ್ನು ಓದದಿದ್ದ ನಾನು (ದೇವರಲ್ಲಿ ನನಗೆ ನಂಬಿಕೆಯೇ ಇಲ್ಲದಿದ್ದ ಆ ದಿನಗಳಲ್ಲಿ), ಅದನ್ನು ಹುಡುಕಿ ತಂದು ಓದಿದ ನೆನಪಿದೆ.

ಶ್ರೀಮತಿ ಶಕುಂತಲಾಬಾಯಿಯವರ ವಾಚನದಿಂದ ಸಂತೊಷಪಟ್ಟ ಪ್ರಸಂಗಗಳಲ್ಲದೆ ಕೆಲವು ಕವನಗಳಲ್ಲಿ ಭಾಷೆಯ ಬಳಕೆ, ಅವುಗಳ ಪರಿಣಾಮ ಏನನ್ನು ಕುರಿತು ನಾನು ಯೋಚಿಸುವಂತಾದ ಹಲವು ಸಂದರ್ಭಗಳನ್ನು ಸ್ಮರಿಸಿಕೊಳ್ಳಬಲ್ಲೆ. ಮೈಸೂರಿನಲ್ಲಿ ಸಾಹಿತ್ಯ ಸಮ್ಮೇಳನವಾದಾಗ, ಪ್ರಾರ್ಥನೆಗೆ ಕುವೆಂಪು ಅವರ ಶ್ರೀ ರಾಮಾಯಣ ದರ್ಶನದಿಂದ ಪ್ರಾರಂಭದ ಪಂಕ್ತಿಗಳನ್ನು ಆರಿಸಿ, ಆ ವಿಭಾಗದ ಭಾಷೆಯ ವೈವಿಧ್ಯ ಮತ್ತು ಔಚಿತ್ಯಗಳನ್ನು ನನಗೆ ಕಾಣಿಸಿದ ಶ್ರೀಮತಿ ಶಕುಂತಲಾಬಾಯಿಯವರ ವಾಚನ ನನಗೆ ಇಂದಿಗೂ ನೆನಪಿದೆ. ಭವ್ಯರಥವನ್ನೇರಿ ಆಭರಣಾಳಿಂದ ರಾರಾಜಿಸುತ್ತ ಹೊರಟ ದುಷ್ಯಂತ ರಥವಿಳಿದು ನಿರಾಭರಣನಾಗಿ ಮುಂಗಳ ಕಣ್ವಕ್ಷೇತ್ರ ತಲಪಿದಂತೆ ವೈಭವದ ಭಾಷೆಯಿಂದ ಸಾಗಿದ ಕಾವ್ಯ, "ಮುಡಿ ಬಾಗಿ ಕೈ ಜೋಡಿಸುವೆ ನಾಂ ಲೋಕ ಗುರುಕೃಪೆಯಿರಲಿ" ಎಂಬ ಸರಳ ಗಂಭೀರ ಭಾಷೆಯಿಂದ ಜಗದ ಶ್ರೇಯಸ್ಸಿನ ಚಿಂತನೆಯನ್ನು ಮುಟ್ಟುವ ಭಾಗದ ಸೊಗಸು ನನ್ನ ಅಂತಃಕರಣಕ್ಕೆ ಮುಟ್ಟಿದ್ದು ಅಂದು ಎಂದರೆ ಸಂತೋಷದಿಂದ ಸ್ಮರಿಸುತ್ತೇನೆ.

ಶ್ರೀಮತಿ ಶಕುಂತಲಾಬಾಯಿಯವರು ನನ್ನಂತಹ ಸಾವಿರಾರು ಮಂದಿಗೆ ಕಾವ್ಯದ ಸಂತೋಷವನ್ನು ತಂದುಕೊಟ್ಟಿದ್ದಾರೆ. ಕಾವ್ಯ–ಶ್ರೋತೃಗಳ ನಡುವೆ ಬೆಳಗುವ ಸೇತುವೆಯನ್ನು ನಿರ್ಮಿಸುವ ಅವರಿಗೆ ನಮ್ಮೆಲ್ಲರ ಕೃತಜ್ಞತೆ ಸಲ್ಲುತ್ತದೆ. ಬಹು ಕಾಲ ಅವರ ಸೇವೆ ಕನ್ನಡನಾಡಿಗೆ ಲಭ್ಯವಾಗಲಿ ಎಂದು ಸಾವಿರಾರು ಮಂದಿ ಕಾವ್ಯ ಪ್ರೇಮಿಗಳೊಂದಿಗೆ ನಾನೂ ಹಾರೈಸುತ್ತೇನೆ. ಶಿಕ್ಷಣ ಕ್ಷೇತ್ರಕ್ಕೆ ಶ್ರೀ ಪಾಂಡುರಂಗರಾಯರು ಸಲ್ಲಿಸಿರುವ ಸೇವೆ ಇನ್ನೂ ಸಾಕಷ್ಟು ಜನದ ಕಣ್ಣನ್ನು ಸೆಳೆದಿಲ್ಲ. ಅವರು ಬಾಲ ಸಾಹಿತ್ಯಕ್ಕಾಗಿ ಮಾಡಿರುವ ಕೆಲಸ ಕಡಮೆಯಲ್ಲ. ಈ ದಂಪತಿಗಳಿಗೆ ಎಲ್ಲ ಶುಭವಾಗಲಿ.

ಜನ ಬದುಕಬೇಕೆನ್ನುವವರು

ಕೋ. ಚನ್ನಬಸಪ್ಪ

ಅಷ್ಟೇನೂ ಹಿಂದಿನ ಕಾಲದ ಮಾತಲ್ಲ. ಇನ್ನೂ ಇತ್ತೀಚೆಗೆ ಐವತ್ತು ಅರವತ್ತು ವರ್ಷಗಳಷ್ಟೇ ಹಿಂದೆ ನಾವು ಕಂಡ ಹಾಗೆ ಸ್ವಲ್ಪ ಹೆಚ್ಚು ಕಡಮೆ ಪ್ರತಿ ಹಳ್ಳಿಯಲ್ಲೂ ಗದುಗಿನ ಭಾರತ, ಜೈಮಿನಿ ಭಾರತ, ಶಬರಶಂಕರವಿಳಾಸ, ಚೆನ್ನಬಸವ ಪುರಾಣ, ಶರಣ ಲೀಲಾಮೃತ ಮುಂತಾದ ಕಾವ್ಯಗಳನ್ನು ಜನ ಓದಿಸಿ ಕೇಳುತ್ತಿದ್ದರು. ಹಾಗೆ ಓದಿ ಹೇಳುತ್ತಿದ್ದವರು ಪ್ರಸಿದ್ಧ ಗಮಕಿಗಳಲ್ಲದಿದ್ದರೂ, ಆಯಾ ಕಾವ್ಯದ ಸ್ಥೂಲ ಪರಿಚಯವಿದ್ದು, ತಕ್ಕಮಟ್ಟಿಗೆ ರಾಗಬದ್ಧವಾಗಿ ಓದುತ್ತಿದ್ದ ಸಾಧಾರಣ ಗಮಕಿಗಳು. ನಮ್ಮ ಹಳ್ಳಿಯ ಜನರಿಗೆ ಅದು ಸಾಕಾಗಿತ್ತು.

ಹಳ್ಳಿಯ ಜನರಾದರೂ ಬಹುಜನ ಅನಕ್ಷರಸ್ಥರು. ಈಗಲೂ ಹಳ್ಳಿಯ ಜನರಲ್ಲಿ ನೂರಕ್ಕೆ ಎಪ್ಪತ್ತೈದು ಜನರೂ ವಿದ್ಯಾವಂತರಲ್ಲ. ಹಿಂದಿನ ಕಾಲದಲ್ಲಿ ನೂರಕ್ಕೊಬ್ಬರು ಇಬ್ಬರು ಓದು ಬರಹ ಬಲ್ಲವರಿದ್ದರೆ ಹೆಚ್ಚಾಯಿತು. ಹೀಗೆ ಹೆಚ್ಚು ಜನರಿಗೆ ಓದು ಬರಹ ಹೆಚ್ಚು ಬಾರದಿದ್ದರೂ ಸ್ವಲ್ಪ ಹೆಚ್ಚು ಕಡಮೆ ರಾಮಾಯಣ, ಮಹಾಭಾರತ, ಶರಣ ಲೀಲಾಮೃತ, ಶಬರ ಶಂಕರ ವಿಲಾಸ ಮುಂತಾದ ಕಾವ್ಯಗಳ ತಿರುಳು ತಿಳಿದಿರುತ್ತಿತ್ತು. ಕಾವ್ಯವನ್ನು ಓದಿದಾಗ ಪ್ರತಿ ಪದಾರ್ಥವನ್ನು ಹೇಳುವಷ್ಟು ಪಾಂಡಿತ್ಯ ಕಾವ್ಯ ಓದುವವರಿಗೂ ಇರುತ್ತಿರಲಿಲ್ಲ. ಕೇಳುವವರಿಗಂತೂ ವಾಕ್ಯಾರ್ಥದ ಗಂಧವೂ ಇರುತ್ತಿರಲಿಲ್ಲ. ಆದರೂ ಅವರಿಗೆ ಕಾವ್ಯ ಗೊತ್ತಿತ್ತು. ಅದರ ರಸಾಸ್ವಾದನೆ ಸಾಧ್ಯವಾಗಿತ್ತು. ಅವರ ಬಾಳಿನಲ್ಲಿ ಈಗ ಇರುವುದಕ್ಕಿಂತಲೂ ಹೆಚ್ಚು ನೆಮ್ಮದಿ, ಹೆಚ್ಚು ನೀತಿ ಇರುತ್ತಿತ್ತು. ಬಾಳನ್ನು ಬದುಕುವ ಕಲೆ ಗೊತ್ತಿತ್ತು. ಅನಕ್ಷರಸ್ಥರಾದರೂ 'ಕಾವ್ಯ ಪರಿಣತ ಮತಿಗಳ್' ಆಗಿದ್ದರು. ಓದುಬಾರದೆ ಇದ್ದರೂ 'ವಿದ್ಯಾ'ವಂತರಾಗಿದ್ದರು. ಅಕ್ಷರ ವಿದ್ಯೆಯಿಂದ ವಂಚಿತರಾಗಿದ್ದರೂ ಆತ್ಮವಿದ್ಯೆಯನ್ನು ಸಾಧಿಸಿದ್ದರು.

ಭಾಗವತರೊಬ್ಬರು ಭಗವದ್ಗೀತೆಯ ಪ್ರವಚನ ಮಾಡುತ್ತಿದ್ದರು. ಗೀತೆಯ ಸಂಸ್ಕೃತ ಶ್ಲೋಕಗಳ ಅರ್ಥವನ್ನು ವಿದ್ವತ್ ಪೂರ್ಣವಾಗಿ ವಿವರಿಸುತ್ತಿದ್ದರು. ಜನ ಭಾವಪರವಶರಾಗಿ ಕೇಳುತ್ತಿದ್ದರು. ಅವರಲ್ಲೊಬ್ಬ ಹಳ್ಳಿಯ 'ಹುಂಬ' ಗೀತಾ ಪ್ರವಚನವನ್ನು ಕೇಳುತ್ತ ಕೇಳುತ್ತ ಭಾವಪರವಶನಾಗಿ ಆನಂದಾಶ್ರುಗಳನ್ನು ಧಾರಾಕಾರವಾಗಿ ಸುರಿಸುತ್ತಿದ್ದ. ಭಾಗವತರಿಗೆ ಪರಮಾನಂದವಾಯಿತು. ತಮ್ಮ ವಿದ್ವತ್ ಪೂರ್ಣ ವ್ಯಾಖ್ಯಾನವನ್ನು ಅರ್ಥಮಾಡಿಕೊಳ್ಳುವ ಇಂಗಿತಜ್ಞ ಒಬ್ಬನಾದರೂ ಇದ್ದಾನಲ್ಲ ಎಂದು! ಪ್ರವಚನ ಮುಗಿದ ಮೇಲೆ ಭಾಗವತರು :

'ಸಂಸ್ಕೃತ ಚೆನ್ನಾಗಿ ಬರುತ್ತದೆಯೆ ?' ಎಂದು ಕೇಳಿದರು.

'ಇಲ್ಲ ಸ್ವಾಮಿ'

'ಹಾಗಾದರೆ ನಿನಗೇನು ಅರ್ಥವಾಯಿತು ?'

'ಅರ್ಥವಾಗಲಿಲ್ಲ ಸ್ವಾಮಿ. ಕಣ್ಣಿಗೆ ಕಾಣಿಸುತ್ತಿತ್ತು'

'ಅದು ಹೇಗೇ ? ಗೀತಾಪ್ರವಚನ ಕಣ್ಣಿಗೆ ಕಾಣಿಸುತ್ತದೆಯೆ ?'

'ತಮ್ಮ ವ್ಯಾಖ್ಯಾನ ಅರ್ಥವಾಗಲಿಲ್ಲ ಸ್ವಾಮಿ. ನೀವು 'ಅರ್ಜುನ ಉವಾಚ' ಎಂದಾಗ ಅರ್ಜುನ ಕಾಣಿಸುತ್ತಿದ್ದ. 'ಭಗವಾನ್ ಉವಾಚ' ಎಂದಾಗ ಸ್ವಾಮಿ ಕಾಣಿಸುತ್ತಿದ್ದ. ಇನ್ನೇನು ಬೇಕು ಸ್ವಾಮಿ ?'—ಎಂದು ಮುಂದೆ ಮಾತನಾಡಲಾರದೆ ಮತ್ತೆ ಆನಂದಬಾಷ್ಪ ಸುರಿಸತೊಡಗಿದ.

ಹಿಂದೆ ಕಾವ್ಯವಾಚನ ಮಾಡಿದಾಗ, ನಮ್ಮ ಹಳ್ಳಿಯ ಅನಕ್ಷರಸ್ಥ ಜನರಿಗೆ ಆಗುತ್ತಿದ್ದ ಅನುಭವವೂ ಇಂಥಾದ್ದೇ ಇರಬೇಕು. ಕೇವಲ ಅಕ್ಷರಗಳಲ್ಲಿ ಕಾಗದದ ಮೇಲೆ ಮೂಡಿದ್ದ ಶ್ರೀಕೃಷ್ಣಾರ್ಜುನರು, ಕೇಳುಗರ ಕಣ್ಮುಂದೆ ಜೀವಂತ ನಿಲ್ಲುವಂತೆ ಮಾಡಿದವರು ಕಾವ್ಯವಾಚನ ಮಾಡಿದ ಗಮಕಿಗಳು. ನಿರ್ಜೀವ ಶಬ್ದಗಳಿಗೆ ಜೀವ ತುಂಬಿದ ಬ್ರಹ್ಮನೆ ಗಮಕಿ. ಅವನು ತನ್ನ ಕಂಠದಿಂದ ಕಾವ್ಯಕ್ಕೆ ಜೀವ ತುಂಬಿ ನಾಡಿನ ಮೇಗೆ ನಡೆಯುವಂತೆ ಮಾಡಿದ ದೈವಜ್ಞನೇ ಎನ್ನಬೇಕು. ಕಾವ್ಯಕ್ಕೆ ಗಮಕಿಯ ನೆರವು ಇಲ್ಲವೆ ಹೋಗಿಿದ್ದರೆ ಬಹು ಜನರ ಪಾಲಿಗೆ ಆ ಕಾವ್ಯ ಇದ್ದರೂ ಇಲ್ಲದಂತಾಗುತ್ತಿತ್ತು. ಮೂಲೆಯಲ್ಲಿ ಕುಳಿತು ಕಾಡಿಗೆ ಹಿಡಿಯುವ ತಾಡ ಓಲೆಯ ಗ್ರಂಥವೆನಿಸುತ್ತಿತ್ತು. ಕಾವ್ಯಕ್ಕೆ ಒದಗಬಹುದಾದ ಅಂಥ ದುಃಸ್ಥಿತಿಯಿಂದ ಪಾರುಮಾಡಿದ ಪುಣ್ಯ ಮತ್ತು ಸಾಹಸ ಗಮಕಿಯದು.

ಭಾರತೀಯ ಕಾವ್ಯ ಮೀಮಾಂಸೆಯಲ್ಲಿ ಗಮಕಿಗೆ ಬಹುಮಹತ್ವದ ಸ್ಥಾನವನ್ನ ಕೊಡಲಾಗಿದೆ. ಗಮಕಿ ಕಾವ್ಯ ಸೃಷ್ಟಿಯ ಒಂದು ಅಂಗ ಎಂಬುದಾಗಿ ಭಾವಿಸಲಾಗಿತ್ತು. ಕವಿ, ಲಿಪಿಕಾರ, ಗಮಕಿ, ಸಹೃದಯ—ಎಲ್ಲರೂ ಸೇರಿದರೆ ಕಾವ್ಯ ರಚನೆಯಾಗುತ್ತದೆ ಎಂಬುದಾಗಿ ಶಾಸ್ತ್ರವನ್ನು ಸಾರಿದರು. ಕವಿ ರಚಿಸಿದ ಕಾವ್ಯ ತನ್ನ ಹಸ್ತಪ್ರತಿಯಲ್ಲಿ ಮಾತ್ರ ಉಳಿದರೆ ಕಾವ್ಯಸೃಷ್ಟಿ ಆಗಲಿಲ್ಲ. ಅದನ್ನು ಪ್ರತಿಮಾಡಿ ಲೋಕದ ಮುಂದೆ ಬೆಳಕಿಗೆ ತರಬೇಕು. ಹಾಗೆ ಬೆಳಕಿಗೆ ಬಂದ ಕಾವ್ಯವನ್ನು ಓದಿ ಸವಿಯದಿದ್ದರೆ ಏನು ಪ್ರಯೋಜನ? ಸಹೃದಯರಿಲ್ಲದ ಕಾವ್ಯ ಮುಡಿಯುವವರಿಲ್ಲದ ಮಾಲೆ ಎಂಬುದಾಗಿ ಲಾಕ್ಷಣಿಕರು ಹೇಳುತ್ತಾರೆ. ಈ ಹಿಂದೆ ಗಮನಿಸಿದಂತೆ ಅಕ್ಷರವಿದ್ಯೆ ಎಲ್ಲರಿಗೂ ಲಭ್ಯವಲ್ಲ. ಅದ್ದರಿಂದಲೇ ಕಾವ್ಯವನ್ನು ಓದಿ ಹೇಳುವ ಗಮಕಿಗಳು ಬೇಕೇ ಬೇಕು. ಅವರಿಲ್ಲದಿದ್ದರೆ ಕಾವ್ಯ ಬಹು ಜನರಪಾಲಿಗೆ ನಿರರ್ಥಕವೇ ಸರಿ!

ಗಮಕಿಗಳ ಸ್ಥಾನ ಇಷ್ಟು ದೊಡ್ಡದು. ಮಾಡಿಟ್ಟ ವೀಣೆಯನ್ನು ನುಡಿಸುವ ವೈಣಿಕನಂತೆ ಗಮಕಿ. ವೀಣೆ ಬಹು ಸುಂದರವಾಗಿರಬಹುದು. ದಂತದ ಹಿಡಿಕೆ, ಬಂಗಾರದ ಹೊಳಪು ಕೊಟ್ಟಿರಬಹುದು. ಆದರೆ ಅದನ್ನು ನುಡಿಸಿದಾಗಲೇ ಅದರ ಸಾರ್ಥಕತೆ. ಹಾಗೆಯೇ ಕಾವ್ಯ ಮಹಾಕಾವ್ಯವೇ ಆಗಿರಬಹುದು. ಬಹು ರಸಭರಿತವಾಗಿರಬಹುದು. ಉನ್ನತ ದರ್ಶನ ಸತ್ವದಿಂದ ಕೂಡಿರಬಹುದು. ಆದರೆ ಸಹೃದಯನಿಲ್ಲದಿದ್ದರೆ ಅದೆಲ್ಲ ಕೇವಲ ನಿರರ್ಥಕ. ಅದು ಸಾರ್ಥಕವಾಗಬೇಕಾದರೆ ಅದಕ್ಕೆ ಜೀವ ತುಂಬಿ ಓದುಗರ ಮುಂದೆ ಎಬ್ಬಿಸಿ ನಿಲ್ಲಿಸಬೇಕು. ಹೀಗೆ ಕಾವ್ಯಕ್ಕೆ ಜೀವ ತುಂಬಿದ ಗಮಕ ಸರಸ್ವತಿ

ಸೋದರಿ ಶಕುಂತಲಾಬಾಯಿ ಪಾಂಡುರಂಗರಾಯರು. ಶ್ರೀಮತಿ ಶಕುಂತಲಾಬಾಯಿ ಕನ್ನಡ ಕಾವ್ಯ ಸಂಪತ್ತನ್ನು ತಮ್ಮ ಕಂಠಶ್ರೀಯಿಂದ ಲೋಕಕ್ಕೆಲ್ಲ ಸಾರಿ ಹೇಳಿದ ಹರಿಕಾರಿಣಿ. ಕವಿ ಜನಬದುಕಬೇಕೆಂದು ಅನಪೇಕ್ಷೆಯಿಂದ ಕಾವ್ಯ ಮುಖದಿಂದ ರಚಿಸಿದ ಕಥೆ ನಾಡಿನ ಜನತೆಯ ಮನದಲ್ಲಿ ಮೂಡುವಂತೆ ಮಾಡಿದ ಧನ್ಯ ಜೀವನ ಅವರದು. ಕವಿ ಸೃಷ್ಟಿಸಿದ ಕಾವ್ಯ ಪೂಜಾ ವಿಗ್ರಹದಂತೆ ಸ್ಥಾವರ. ಗಮಕಿ ಆ ಕಾವ್ಯವನ್ನು ಜನಜಾತ್ರೆಯ ಮುಂದೆ ಮೆರೆಸುವ ಉತ್ಸವ ಮೂರ್ತಿ. ಕಾವ್ಯದ ಪೂರ್ಣ ಪ್ರಯೋಜನ ಆಗಬೇಕಾದರೆ ಕವಿ ಏರಿದ ಮಟ್ಟಕ್ಕೆ ಸಹೃದಯನೂ ಏರಬೇಕು. ಆ ಸಹೃದಯ ಸೃಷ್ಟಿ ಕಾರ್ಯಕ್ಕೆ ಗಮಕಿ ನೆರವಾಗಬೇಕು. ಗಮಕಿಯೂ ಕವಿಯ ಎತ್ತರಕ್ಕೇ ಏರಬೇಕಾಗುತ್ತದೆ. ಆ ಸಾಮರ್ಥ್ಯ ಇಲ್ಲದಿದ್ದರೆ ಕಾವ್ಯದ ಹೃದಯ ಸಹೃದಯನಿಗೆ ವೇದ್ಯವಾಗದು.

ಶ್ರೀಮತಿ ಶಕುಂತಲಾಬಾಯಿ ಅವರು ಚೆನ್ನಾಗಿ ಹಾಡಬಲ್ಲ ಕೇವಲ ಸಂಗೀತ ವಿದುಷಿಯಲ್ಲ. ಕವಿಯ ಆಶಯವನ್ನು ಆದರ್ಶವನ್ನು ದರ್ಶನವನ್ನು ಕಂಡು ಕವಿಯೊಡನೆ ತಾದಾತ್ಮ್ಯ ಹೊಂದಿದ ಸಹೃದಯ ಸಾಧಕಿ. ಕವಿಯ ಕಾವ್ಯದಲ್ಲಿ ಪರಕಾಯ ಪ್ರವೇಶ ಮಾಡುವ ಸಾಹಸ ಅವರದು. ಅದರಲ್ಲೂ ಶ್ರೀ ಕುವೆಂಪುವಿರಚಿತ 'ಶ್ರೀರಾಮಾಯಣ ದರ್ಶನಂ' ಮಹಾ ಛಂದಸ್ಸಿನ ಮಹಾಕಾವ್ಯವನ್ನು ಬಹುಜನರ ಕಿವಿಯ ಮೇಲೆ ಬೀಳುವಂತೆಮಾಡಿ, ಆ ಮಹಾಕಾವ್ಯದ ಮಾಧುರ್ಯವನ್ನು ನಾಡಿನ ದಿಕ್ಕುದಿಕ್ಕುಗಳಿಗೆ ಹರಡಿದ ಶ್ರೇಯಸ್ಸು ಅವರದು. ಗದುಗಿನ ಭಾರತ, ಜೈಮಿನಿ ಭಾರತ, ಪ್ರಭುಲಿಂಗಲೀಲೆ,ಹರಿಶ್ಚಂದ್ರ ಕಾವ್ಯ ಮುಂತಾದ ಷಟ್ಪದಿ ಕಾವ್ಯಗಳನ್ನು ವಾಚನ ಮಾಡುವುದರಲ್ಲಿ ಬಹುಜನ ಗಮಕಿಗಳು ಕೃಷಿಮಾಡಿ ಪಥನಿರ್ಮಾಣವಾಗಿದೆ. ಅವುಗಳನ್ನು ಬಸವಪ್ಪಶಾಸ್ತ್ರಿ, ಸಂಪದ್ಗಿರಿರಾವ್,ಬಿಂದೂರಾವ್, ಮುಂತಾದವರು ವಾಚನಮಾಡಿ ದಾರಿ ತೋರಿಸಿದ್ದರು. ಗಮಕ ತರಗತಿಗಳು ನಡೆದು ಅವುಗಳನ್ನು ವಾಚಿಸುವ ಪದ್ಧತಿ ಗಮಕಿಗಳಿಗೆ ಚೆನ್ನಾಗಿಯೆ ಗೊತ್ತಿತ್ತು. ಆದರೆ ಮಹಾ ಛಂದಸ್ಸಿನ ಶ್ರೀರಾಮಾಯಣದರ್ಶನಂ ಮಹಾಕಾವ್ಯವನ್ನು ಪ್ರಪ್ರಥಮ ಗಮಕಕ್ಕೆ ಅಳವಡಿಸಿದ ಶ್ರೇಯಸ್ಸು ಶ್ರೀಮತಿ ಶಕುಂತಲಾಬಾಯಿ ಮತ್ತು ಗಮಕಕಲಾ ನಿಧಿ ಶ್ರೀ ಕೆ. ಬೊಮ್ಮನಗೌಡರಿಗೆ ಮಾತ್ರ ಸಲ್ಲುತ್ತದೆ.

ಶ್ರೀರಾಮಾಯಣದರ್ಶನಂ ಮಹಾಕಾವ್ಯದ ಛಂದಸ್ಸು ಇದುವರೆಗೆ ಪ್ರಚಲಿತವಿದ್ದ ಛಂದಸ್ಸುಗಳಂತೆ ಅಲ್ಲ. ಷಟ್ಪದಿ ಛಂದಸ್ಸು—ಅದರಲ್ಲೂ ಗದುಗಿನ ಭಾರತ—ಗಮಕಕ್ಕಾಗಿಯೆ ಹೇಳಿ ಬರೆಸಿದಂತೆ ಇದೆ. ಅದರಲ್ಲೂ ಅದು ಅತಿ ಸರಳ ಮತ್ತು ಸುಲಭವಾಗಿರುವುದರಿಂದ, ಸಾಹಿತ್ಯ ಜ್ಞಾನ ವಿಶೇಷವಾಗಿಲ್ಲದವರೂ ಸುಲಭವಾಗಿ ಓದಬಹುದು. ವಾರ್ಧಕ ಷಟ್ಪದಿಯ ಹರಿಶ್ಚಂದ್ರ ಕಾವ್ಯವಾಚನ ಅದಕ್ಕಿಂತ ಸ್ವಲ್ಪ ಕಷ್ಟ. ಅದರಲ್ಲೂ ರಾಘವಾಂಕನ ನಾಟಕೀಯ ರಚನೆ ಗಮಕಿಗಳಿಗೊಂದು ಸವಾಲಿನಂತಿವೆ. ಒಂದೇ ಪದ್ಯದಲ್ಲಿ ಒಂದೇ ಪಾದದಲ್ಲಿ ಸಂಭಾಷಣೆಗಳು ಬರುವುದರಿಂದ ಗಮಕಿ ಉದ್ದಕ್ಕೂ ರಾಗವಾಗಿ ಎಳೆದುಕೊಂಡು ಹೋದರೆ ಕಾವ್ಯದ ರಸ ಸಂಭಾಷಣೆಯ ಸೊಬಗು, ಪಾತ್ರಗಳ ಭಾವ ಮುಂತಾದವುಗಳನ್ನು ವ್ಯಕ್ತಪಡಿಸುವುದು ಸಾಧ್ಯವಿಲ್ಲ.

ಹರಿಶ್ಚಂದ್ರ ಕಾವ್ಯದಲ್ಲಿ 'ವಸಿಷ್ಠ ವಿಶ್ವಾಮಿತ್ರರ ವಿವಾದ' ಸಂಧಿಯಲ್ಲಿ ಬರುವ ಈ

ಕೆಳಗಿನ ಪದ್ಯದಲ್ಲಿ ಬರುವ ಸಂವಾದವನ್ನು ಗಮನಿಸಬಹುದು :

ಎಂದು ಭೂವರನಂ ಪರೀಕ್ಷಿಸುವೆಯೆನ್ನ ಮನ
ಬಂದ ದಿನವನಿತು ಸೂಳಾತನೀ ಧರೆಯೊಳಿ
ಪ್ಪಂದುತನಕಾವಾವ ಪರಿಯೊಳು ಸಹಸ್ರ ವಿಧದೊಳು ದಿಟವೆದಿಟವೆಂದೆನೆ

ಈ ಪದ್ಯದ ಮೇಲಿನ ಮೂರು ಪಾದಗಳ ಸಂಭಾಷಣೆ ವಸಿಷ್ಠ ವಿಶ್ವಾಮಿತ್ರರ ನಡುವೆ ಆದದ್ದು. ಈ ಸಂವಾದ ಹೀಗಿದೆ :

ವಶಿಷ್ಠ : ಎಂದು ಭೂವರನಂ ಪರೀಕ್ಷಿಸುವೆ ?
ವಿಶ್ವಾ : ಎನ್ನ ಮನಬಂದ ದಿನ.
ವಶಿಷ್ಠ : ಎನಿತುಸೂಳ್ ?
ವಿಶ್ವಾ : ಆತನೀ ಧರೆಯೊಳಿಪ್ಪಂದು ತನಕ.
ವಶಿಷ್ಠ : ಆವಾವ ಪರಿಯೊಳು ?
ವಿಶ್ವಾ : ಸಹಸ್ರ ವಿಧದೊಳು.
ವಶಿಷ್ಠ : ದಿಟವೆ ?
ವಿಶ್ವಾ : ದಿಟ.

ಈ ಸಂಭಾಷಣೆಯನ್ನು ಗಮಕ ಕಾವ್ಯವಾಚನ ಮಾಡುವಾಗ ವಶಿಷ್ಠ ವಿಶ್ವಾಮಿತ್ರರ ಮಾತುಗಳನ್ನು ಅವರವರ ಸ್ವಭಾವ, ಭಾವ, ಸನ್ನಿವೇಶಕ್ಕೆ ತಕ್ಕಂತೆ ಹಾಡಿತೋರಿಸ ಬೇಕಾಗುತ್ತದೆ. ಧ್ವನಿಯನ್ನು ಬದಲಾಯಿಸಿ ಭಾವಕ್ಕೆ ತಕ್ಕಂತೆ ಕೋಪವನ್ನು, ಸಂತೋಷ ವನ್ನೂ,ಸಮಾಧಾನವನ್ನೂ ಧ್ವನಿಯಲ್ಲಿ ತೋರಿಸುವುದು ಸುಲಭವಲ್ಲ. ಗಮಕಿಯಾದವನು ಕಾವ್ಯದ ಹೃದಯವನ್ನು ಹೃದ್ಗತಮಾಡಿಕೊಳ್ಳದೆ ಆ ವ್ಯತ್ಯಾಸವನ್ನು ಧ್ವನಿಯಲ್ಲಿ ಹೊರಡಿ ಸುವುದು ಸಾಧ್ಯವೇ ಇಲ್ಲ. ಹಾಗೆ ಕಾವ್ಯದಲ್ಲಿ ಪರಕಾಯ ಪ್ರವೇಶ ಮಾಡದಿದ್ದರೆ ಗಮಕಿ ಮುಗ್ಗರಿಸಿ ಬೀಳುತ್ತಾನೆ. ರಸಾಭಾಸವಾಗುತ್ತದೆ. ಕಾವ್ಯರಸಾಸ್ವಾಧನೆಗೆ ಭಂಗಬರುತ್ತದೆ.

ವಾರ್ಧಕ ಷಟ್ಪದಿಯ ಹರಿಶ್ಚಂದ್ರ ಕಾವ್ಯವಾಚನದಲ್ಲಿ ಇಂಥ ಕಷ್ಟ ಇರುವಾಗ ಮಹಾಛಂದಸ್ಸಿನ ಶ್ರೀರಾಮಾಯಣದರ್ಶನ ಮಹಾಕಾವ್ಯವನ್ನು ವಾಚನ ಮಾಡು ವುದು ಇನ್ನೂ ಕಷ್ಟಕರ. 'ಶಬರಿಗಾದನು ಅತಿಥಿ ದಾಶರಥಿ' ಸಂಚಿಕೆಯಲ್ಲಿ ಶಬರಿ ರಾಮ ಲಕ್ಷ್ಮಣರೊಳಗೆ ಆಗುವ ಸಂಭಾಷಣೆಯನ್ನು ಗಮಕಿ ವಾಚನಮಾಡಿ ತೋರಿಸುವ ಪೀಕ ಲಾಟ ಅವನಿಗೇ ಗೊತ್ತು !

ಇಂಥ ಕಷ್ಟಕರವಾದ ಕೆಲಸವನ್ನು ಶ್ರೀಮತಿ ಶಕುಂತಲಾಬಾಯಿ ಅವರು ನಿರ್ವಿಘ್ನ ವಾಗಿಯೂ ನಿರಾಯಾಸವಾಗಿಯೂ ಮಾಡುವುದನ್ನು ನಾನು ಕೇಳಿ ಪುಲಕಿತನಾಗಿದ್ದೇನೆ. ಅದರಲ್ಲೂ ವೀರರೌದ್ರರಸಪ್ರಧಾನವಾದ ರಾಕ್ಷಸನ ಮಾತುಗಳನ್ನು ನುಡಿಯುವಾಗ ಶ್ರೀಮತಿಯವರು ನಿಶ್ಚಯವಾಗಿ ಆಯಾ ಪಾತ್ರಗಳೇ ಆಗಿ ಹೋಗುತ್ತಾರೆ. ಹೆಣ್ಣಾಗಿ ಹುಟ್ಟಿದ ಅವರ ಧ್ವನಿ ವೀರಾವೇಶವನ್ನೂ, ಕ್ರೋಧವನ್ನೂ, ರೌದ್ರವನ್ನೂ ವ್ಯಕ್ತ ಪಡಿಸುವಾಗ ಪ್ರಚಂಡ ಚಂಡ ಮದ್ದಳೆಯಂತೆ ಗುಡುಗುತ್ತದೆ. ಇದು ದೈವದತ್ತ ಶಕ್ತಿಯೆ ಹೊರತು ಮಾನವನ ಪರಿಮಿತ ಶಕ್ತಿಗೆ ಸಾಧ್ಯವಲ್ಲ.

ಶ್ರೀರಾಮಾಯಣದರ್ಶನಂ ಹಿಂದಿನ ಯಾವ ಕಾವ್ಯಕ್ಕಿಂತಲೂ ಭಾಷೆ, ಭಾವ, ವರ್ಣನೆ, ಛಂದಸ್ಸು ಮುಂತಾದವುಗಳಲ್ಲಿ ಹೊಸದು. ಹೊಸದು ಎಂಬುದೇ ಜನರಲ್ಲಿ ತಾತ್ಸಾರವನ್ನೂ ಭೀತಿಯನ್ನೂ ಹುಟ್ಟಿಸಲು ಸಾಧ್ಯ. ಕೆಲವರಿಗೆ ಕುತೂಹಲ ಉಂಟಾಗಬಹುದು. ಆದರೂ ಕಾವ್ಯಪ್ರವೇಶ ಸುಲಭ ಸಾಧ್ಯವಲ್ಲ. ಆಗ ಗಮಕಿಯ ಸಹಾಯ ಅತ್ಯಗತ್ಯವಾಗಿ ಬೇಕಾಗುತ್ತದೆ. ಇಂಥ ಅತ್ಯಗತ್ಯ ಸಹಾಯವನ್ನು ಅಕ್ಷರಶಃ ಲಕ್ಷಾಂತರ ಸಹೃದಯರಿಗೆ ಒದಗಿಸಿದ ಶ್ರೇಯಸ್ಸು ಶ್ರೀಮತಿ ಶಕುಂತಲಾಬಾಯಿ ಅವರದು.

ಶ್ರೀಮತಿ ಅವರು ನಾಡಿನ ಮೂಲೆ ಮೂಲೆಗೆ ಹೋಗಿ ಕಾವ್ಯವಾಚನಮಾಡಿದ್ದಾರೆ. ಲಕ್ಷಾಂತರ ಸಹೃದಯರಿಗೆ ಕಾವ್ಯದ ಆತ್ಮವನ್ನು ತೆರೆದಿಟ್ಟು ತೋರಿಸಿದ್ದಾರೆ (ಕೇಳಿಸಿದ್ದಾರೆ ಎನ್ನೋಣವೆ?) ಅದರಲ್ಲೂ ಶ್ರೀರಾಮಾಯಣದರ್ಶನಂ ಮಹಾಕಾವ್ಯ ಸಾಮಾನ್ಯ ಓದುಗನಿಗೆ—ಅದರಲ್ಲೂ ಅವಸರದ ಬಾಳಿನ ಓದುಗರಿಗೆ—ಸುಲಭವಾಗಿ ಅರ್ಥವಾಗುವ ಕಾವ್ಯವಲ್ಲ. ಆದರೆ ಓದಿಹೇಳಿದರೆ ರಾಮಾಯಣದ ಕಥೆಯು ಸ್ವಲ್ಪ ಹೆಚ್ಚು ಕಡಿಮೆ ಗೊತ್ತಿರುವುದರಿಂದ, ಇದೂ ಅರ್ಥವಾಗುತ್ತದೆ. ಕಾವ್ಯದ ರಸಾಸ್ವಾದನೆಗೆ ಪ್ರತಿಪದವೂ ಅರ್ಥವಾಗಬೇಕಾದ ಅಗತ್ಯವೂ ಇಲ್ಲ. ರಸಾನುಭವ ಹೃದಯಕ್ಕೆ ಸಂಬಂಧಿಸಿದ್ದು. ಅರ್ಥಗ್ರಹಿಕೆ ಬುದ್ಧಿಯ ಕೆಲಸ. ಕಾವ್ಯವಾಚನ ಬುದ್ಧಿಗೆ ವೇದ್ಯವಾಗುವುದಕ್ಕಿಂತ ಹೆಚ್ಚಾಗಿ ಹೃದಯಕ್ಕೆ ಮುಟ್ಟುತ್ತದೆ. ಶ್ರೀರಾಮಾಯಣದರ್ಶನಂ ಮಹಾಕಾವ್ಯವನ್ನು ಸಹೃದಯರ ಹೃದಯಕ್ಕೆ ಕೊಂಡೊಯ್ದು ಅವರ ಆತ್ಮವನ್ನು ಬೆಳಗಿಸಿ ಉದ್ಧಾರದ ಪಥದಲ್ಲಿ ನಡೆಸಿಕೊಂಡು ಹೋಗುತ್ತಿರುವ ರಸವಾಹಿನಿ ಶ್ರೀಮತಿ ಶಕುಂತಲಾಬಾಯಿ ಅವರದು.

ಕರೆದಲ್ಲಿಗೆ ಹೋಗಿ, ದೈಹಿಕ ಶ್ರಮವನ್ನು ಲೆಕ್ಕಿಸದೆ, ಮನೆಯ ಕೆಲಸ ಕೆಡಿಸಿಕೊಂಡು ಈ ಕಾವ್ಯವಾಚನಮಾಡಿದ್ದರಿಂದ ಅವರಿಗೆ ಬಂದದ್ದೇನು? ಕಾವ್ಯವಾಚನ ಕಾರ್ಯಕ್ರಮಗಳನ್ನು ಏರ್ಪಡಿಸುವವರು ಸಾಧಾರಣವಾಗಿ ಕರ್ನಾಟಕಸಂಘ ಮುಂತಾದ ಸ್ಥಳೀಯ ಬಡ ಸಂಘ ಸಂಸ್ಥೆಗಳು. ಆ ಸಂಘಗಳು ಪಟ್ಟಿಎತ್ತಿ ಪಡಿಪಾಟಲು ಬಿದ್ದು ಕಾರ್ಯಕ್ರಮಗಳನ್ನು ಏರ್ಪಡಿಸುತ್ತವೆ. ಬೆಂಗಳೂರಿನಿಂದ ಬಂದು ಹೋಗುವವರಿಗೆ ಗಾಡಿವೆಚ್ಚ ಕೊಟ್ಟರೆ ದೊಡ್ಡ ಉಪಕಾರ. ಹೀಗಿರುವಾಗ ಗಮಕಿಗಳಿಗೆ ಸಂಭಾವನೆ ಕೊಡುವಷ್ಟು ತ್ರಾಣ ಆ ಸಂಘಗಳಿಗೆ ಇರುವುದಿಲ್ಲ. ಒಂದುವೇಳೆ ಹೇರಳವಾಗಿ ಹಣ ಕೂಡಿಸಿದರೂ ಗಮಕಿಗಳಿಗೆ ಸಂಭಾವನಾ ರೂಪದಲ್ಲಿ ಹಮ್ಮಿಣಿ ಅರ್ಪಿಸುವುದು ಅಪರೂಪ. ಕಾವ್ಯವಾಚನಕ್ಕೆ ಹಣ ಕೇಳುವುದೂ ಭಾರತೀಯರು ಅವಮಾನವೆಂದು ಬಗೆಯುತ್ತಾರೆ. ಹೀಗಿರುವಾಗ, ಶ್ರೀಮತಿಯವರು ಕಾವ್ಯವಾಚನ ಕಾರ್ಯಕ್ರಮಗಳಿಗೆ ಹೋಗುವಾಗ ಸಂಭಾವನೆಯ ವಿಚಾರವಾಗಿ ಮಾತನಾಡುವುದೇ ಇಲ್ಲ. ಅದು ನಮ್ಮ ಸಂಸ್ಕೃತಿ. ಅವರ ಸಂಸ್ಕಾರಕೆ ತಗದಮಾತು. ಕರಾರು ಮಾಡಿಕೊಳ್ಳುವುದಂತೂ ಕನಸಿನಲ್ಲೂ ಆಗಲಾರದು.

ಅವರು ಕರೆದಲ್ಲಿಗೆ ಹೋಗಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಕಾವ್ಯ ವಾಚನ ಮಾಡುವುದನ್ನು ನಾಡು ಕಂಡಿದೆ. ಆದರೆ ಅವರ ಆರ್ಥಿಕ ಸ್ಥಿತಿಗತಿ ಏನು? ಜೀವನದಲ್ಲಿ ನೆಮ್ಮದಿ ನೆಲೆಸುವಂತೆ ಈ ನಾಡು ಅವರಿಗೇನು ಮಾಡಿದೆ? ಅವರೇನೂ ಶ್ರೀಮಂತರಲ್ಲ.

ಶ್ರೀ ಪಾಂಡುರಂಗ ರಾಯರು ನಡೆಸುತ್ತಿದ್ದ ಮಕ್ಕಳ ಮಂಟಪದಿಂದ ಜೀವನ ರಥ ಸಾಗಬೇಕು. ಆದರೆ ಬೆಂಗಳೂರಿನ ಗಾಂಧೀನಗರ, ಶೇಷಾದ್ರಿಪುರ, ಮಲ್ಲೇಶ್ವರಂ, ಕುಮಾರಕೃಪ ಬಡಾವಣೆಗಳಲ್ಲಿ ಸಿಂಧಿ, ಗುಜರಾತಿ, ತಮಿಳು, ಮಲೆಯಾಳಿ, ತೆಲುಗರು ಬೀಡು ಬಿಟ್ಟು ಕನ್ನಡಿಗರನ್ನು ಓಡಿಸಿದಮೇಲೆ ಪಾಂಡುರಂಗರಾಯರ ಮಕ್ಕಳ ಮಂಟಪವನ್ನು ಯಾರು ಸೇರುತ್ತಾರೆ? ಕನ್ನಡಿಗರಿದ್ದರೂ, ಇಂಗ್ಲಿಷ್ ವ್ಯಾಮೋಹಕ್ಕೆ ಬಿದ್ದು ಕನ್ನಡ ಮಕ್ಕಳ ಮಂಟಪಕ್ಕೆ ಮಕ್ಕಳನ್ನು ಕಳಿಸಲು ಅವರೇನು ಮೂರ್ಖರೆ? ಅಂತೂ ಮಕ್ಕಳ ಮಂಟಪ ಮುರುಕು ಮಂಟಪವಾಯಿತು. ಪಾಂಡುರಂಗರಾಯರ ಜೀವನ ಮಂಟಪವೂ ಕತ್ತಲೆಯಿಂದ ತುಂಬಿಹೋಯಿತು. ಪತ್ರಿಕೆ ನಡೆಸಿ ಕೈಸುಟ್ಟುಕೊಂಡರು. ಗ್ರಂಥ ಪ್ರಕಾಶನ ಮಾಡಿ ಮತ್ತಷ್ಟು ಆಳಕ್ಕೆ ಮುಳುಗಿದರು. ಕಾವ್ಯವಾಚನದ ವಿಲಾಸವನ್ನು ಹಿಂಬಾಲಿಸುವಷ್ಟು ನೆಮ್ಮದಿ ಅವರಿಗಿರಲಿಲ್ಲ.

ಆದರೂ ಕರೆದಲ್ಲಿಗೆ ಹೋಗಿ ಕಾವ್ಯ ವಾಚನ ಏಕೆ ಮಾಡಿದರು? ಕಾರ್ಯಕ್ರಮ ಏರ್ಪಡಿಸಿದ ಕೆಲವರು ಮಾತ್ರ ವಂದನಾರ್ಪಣೆಯ ಕಾಲಕ್ಕೆ ಹೂಮಾಲೆ ಅರ್ಪಿಸುವಾಗ ಅವರಿಗಾಗಿ ತಿಳಿದರೆ ಏನೊ ಒಂದಿಷ್ಟು ಸಂಭಾವನೆ ಕೊಡುತ್ತಿರಬಹುದು. ಅದರಿಂದ ಎಷ್ಟು ನೆರವಾದೀತು? ಇಂಥಾ ಲಾಭವಿಲ್ಲದ 'ಉಸಾಬರಿ' ಹಚ್ಚಿಕೊಂಡು ಇವರು ಹೀಗೆ ಊರೂರಿಗೆ ಅಲೆದು ಮೈದಣಿದು ಕೊಂಡದ್ದು ಅವರಿಗೆ ಕಾವ್ಯದಲ್ಲಿರುವ ಶ್ರದ್ಧೆಯ ಜೊತೆಗೆ 'ಜನ ಬದುಕ ಬೇಕೆಂಬ' ಅಪೇಕ್ಷೆ. ಜನ ಬದುಕಲೆಂದು ತಮ್ಮ ಬದುಕನ್ನು ಕಷ್ಟಕ್ಕೆ ಗುರಿಮಾಡಿಕೊಂಡ ತ್ಯಾಗ ಜೀವನ ಶ್ರೀಮತಿ ಶಕುಂತಲಾಬಾಯಿ ಅವರದು. ಅವರಿಗೆ ಏನನ್ನು ಕೊಟ್ಟು ಈ ನಾಡು ಅವರ ಋಣ ತೀರಿಸೀತು? ನಾಲ್ಕು ದಿನ ಇದ್ದು ಬಿದ್ದು ಹೋಗುವ ಮಂತ್ರಿ ಮಂಡಲದ ಸದಸ್ಯರಿಗೆ, ಎಂಎಲ್ಎ ಗಳಿಗೆ ತಿಂಗಳಿಗೆ ಇಂತಿಷ್ಟು ಎಂದು ಸಂಭಾವನೆಯನ್ನು ಗೊತ್ತುಪಡಿಸಿಕೊಂಡಿರುವುದಲ್ಲದೆ, ನಿವೃತ್ತಿ ವೇತನವನ್ನೂ ಗೊತ್ತುಮಾಡಿಕೊಂಡಿದ್ದಾರೆ. ಆ ನಿವೃತ್ತಿ ವೇತನವನ್ನು ವಂಶ ಪಾರಂಪರ್ಯವಾಗಿ ಕೊಡಬೇಕೆಂದು ಠರಾಯಿಸಿದರೂ ಆಶ್ಚರ್ಯಪಡಬೇಕಾಗಿಲ್ಲ.ರಾಜಕೀಯದಲ್ಲಿದ್ದು, ಅಥವಾ ಸಾಹಿತ್ಯ ರಂಗದಲ್ಲಿದ್ದು, ರಾಜಕೀಯ ಮಾಡಿದವರು ಸಾರ್ವಜನಿಕ ದುಡ್ಡು ಸಮಾಜದ ಫಂಡು ನುಂಗಿ ನೀರು ಕುಡಿದು, ಮನೆ ಮಹಡಿ ಕಟ್ಟಿಸಿಕೊಂಡು ಮೆರೆದಾಡುತ್ತಿದ್ದಾರೆ. ಆದರೆ ಶ್ರೀ ಪಾಂಡುರಂಗರಾಯರು ಕನ್ನಡ ಕರ್ನಾಟಕದ ಗೀಳು ಹಚ್ಚಿಕೊಂಡು ಇದ್ದೊಂದು ಮನೆಮಾರಿ ಮತ್ತೊಂದು ಕುಟೀರಕೊಂಡಿದ್ದಾರೆ.

ಶ್ರೀಮತಿ ಶಕುಂತಲಾಬಾಯಿ ಅವರು ತಮ್ಮ ಶ್ರೀಕಂಠದಿಂದ ಕನ್ನಡ ಸಾಹಿತ್ಯ ಭಂಡಾರವನ್ನು ದಟ್ಟದರಿದ್ರ ಕನ್ನಡಿಗನಿಗೂ ದಕ್ಕುವಂತೆ ಮಾಡಿದ್ದಾರೆ. ಸಾಹಿತ್ಯದಿಂದ ಆಗಬೇಕಾದ ಕೆಲಸವನ್ನು ತಕ್ಕಷ್ಟು ವ್ಯಾಪಕವಾಗಿಯೆ ಮಾಡಿದ್ದಾರೆ. ಅದರಿಂದ ಕನ್ನಡಿಗರ ಮನ ಬೆಳಗಲು ನೆರವಾಗಿದ್ದಾರೆ. ಸರ್ಕಾರವೇನೊ ಐದುನೂರು ರೂ. ಮಾಸಾಶನ ಕೊಡುತ್ತಿದೆ. ಹಾಗಾದರೆ ಅವರಿಗೆ ಜನತೆ ಏನುಮಾಡಿದೆ? ಇದಕ್ಕೆ ನಾಡು ಉತ್ತರ ಕೊಡಬೇಕು. ನಾಡಿಗಾಗಿ ದುಡಿದವರು ಮುಪ್ಪಿನಲ್ಲಿ ಆದರೂ ನೆಮ್ಮದಿಯಾಗಿ ಬಾಳುವ ವ್ಯವಸ್ಥೆ ಮಾಡಬೇಕು. ಇಂಥ ವ್ಯವಸ್ಥೆ ಸೋವಿಯತ್ ರಷ್ಯಾ ದೇಶದಲ್ಲಿದೆ ಎಂಬುದಾಗಿ

ನಾನು ಕೇಳಿದ್ದೇನೆ. ಅಲ್ಲಿ ಸಾಹಿತಿ, ಶಬ್ದಶಿಲ್ಪಿಯಾಗಿ ಆಳುವವರ ಧ್ಯೇಯ ಧೋರಣೆಗಳ ಪ್ರಚಾರಕನಾಗಿರಬೇಕೆಂದು ವ್ಯವಸ್ಥೆ ಅಪೇಕ್ಷಿಸುತ್ತದೆ. ಇಲ್ಲಿಯೂ ಆರ್ಷೇಯ ಕಾಲದಿಂದಲೂ ಅದೇ ಪ್ರವೃತ್ತಿಯೆ ಇದೆ. ಇಲ್ಲಿ ಆಳುವವರು ಹಾಗೆ ಆಜ್ಞೆಮಾಡಿ ವಿಧೇಯತೆಯನ್ನು ಪಡೆದವರಲ್ಲ. ಆದರೆ ಕವಿಗಳೂ ಕಲೆಗಾರರೂ ತಾವಾಗಿಯೇ ಹೋಗಿ ರಾಜಾಶ್ರಯಪಡೆದು ಕುನ್ನಿಗಳಾಗಿ ಬದುಕಿದರು. ರಾಜಾಶ್ರಯ ಬೇಡದವರು ಯಾವಾಗಲೂ ದಟ್ಟದರಿದ್ರರಾಗಿ ಬಾಳಿದರು. ಅಂದರೆ, ಸ್ವತಂತ್ರವಾಗಿ ಬಾಳಬೇಕೆಂದು ಬಯಸಿದ ಕಲೆಗಾರ ಎಂದೂ ಯಾರ ಆಶ್ರಯವನ್ನೂ ಅಪೇಕ್ಷಿಸಲಿಲ್ಲ. ಆಳುವವರು ಎಂದೂ ತಾವಾಗಿಯೆ ಕಲೆಗಾರರನ್ನು ಪೋಷಿಸಿದವರಲ್ಲ. ಆದ್ದರಿಂದ ಶ್ರೀಮತಿ ಶಕುಂತಲಾಬಾಯಿ ಅವರು ಸ್ವತಂತ್ರವಾಗಿರಬೇಕೆಂದು ಬಯಸಿದರೆ ಯಾರ ಆಶ್ರಯಕ್ಕೂ ಜೋತುಬೀಳದಿರುವುದೇ ನ್ಯಾಯವೇನೊ ?

ಆದರೆ ಜನತೆಯೆ ಈ ಪ್ರಶ್ನೆಯನ್ನು ಎತ್ತಿಕೊಂಡು ಅವರ ಸ್ವಾತಂತ್ರ್ಯಕ್ಕೆ ಧಕ್ಕೆ ಬಾರದಂತೆ ಬಾಳುವ ದಾರಿಬುತ್ತಿಯನ್ನು ಕಟ್ಟಿಕೊಡಬೇಕು.

ಗಮಕದ ತಾಯಿ

ನೀಲತ್ತಹಳ್ಳಿ ಕಸ್ತೂರಿ

ಪಿಟೀಲು ಚೌಡಯ್ಯ, ವೀಣೆ ದೊರೆಸ್ವಾಮಿ ಅಯ್ಯಂಗಾರ್, ಗೋಟುವಾದ್ಯಂ ನಾರಾಯಣ ಅಯ್ಯಂಗಾರ್ ಎಂದ ಹಾಗೆಯೆ ಗಮಕದ ಶಕುಂತಳಾಬಾಯಿ ಎನ್ನುವುದು ಪ್ರಸಿದ್ಧ. ಆ ವ್ಯಕ್ತಿಗೂ ಆಯಾ ಕಲೆಗೂ ಅಂಟು ನೆಂಟು ಗಂಟು. ಆ ವ್ಯಕ್ತಿ ಆಯಾ ಕಲೆಯ ಸಂಕೇತ, ಸ್ವರೂಪ.

ಗಮಕ ಸಾಮಾನ್ಯವಾಗಿ ಗಂಡಸರ ಕಲೆ ಎನ್ನುವ ಅಭಿಪ್ರಾಯ ಉಂಟು. ಅಂದರೆ ಹೆಣ್ಣುಮಕ್ಕಳಿಗೆ ಕೂಡದು ಎಂದಲ್ಲ, ಅಸಾಧ್ಯ ಎಂದಲ್ಲ. ಗಮಕಕ್ಕೆ ಶಾರೀರದ ದೃಢತೆ ಅತ್ಯವಶ್ಯ. ಲಾಲಿತ್ಯಕ್ಕಿಂತಲೂ ದೃಢತೆ ಮುಖ್ಯ. ಜೊತೆಗೆ ಪ್ರಾಚೀನ ಕಾವ್ಯಗಳ ಅರಿವು ಸಾಹಿತ್ಯ ಪ್ರಜ್ಞೆ ಎಲ್ಲ ಬೇಕು. ಸಂಗೀತದ ಅರಿವಷ್ಟೆ ಸಾಲದು. ದೃಢಶಾರೀರ, ಸಾಹಿತ್ಯ ಜ್ಞಾನ (ಮುಖ್ಯವಾಗಿ ಕಾವ್ಯಜ್ಞಾನ) ಬಹುಮಟ್ಟಿಗೆ ಗಂಡಸರಲ್ಲಿ ಹೆಚ್ಚು. ಅಂತೆಯೆ ಗಮಕ ಅವರಿಗೆ ಸಲೀಸು. ಹೆಂಗಸರದು ಸಾಮಾನ್ಯವಾಗಿ ಲಲಿತವಾದ ಮಧುರವಾದ ಕಂಠ. ಅದರಲ್ಲಿ ರೌದ್ರ, ಭೀಭತ್ಸ, ಭಯಾನಕ ರಸಗಳೂ, ಕೋಪತಾಪ, ವಿಡಂಬನೆ, ಕಟಕಿಗಳೂ ಅಭಿವ್ಯಕ್ತವಾಗುವುದು ಕಡಮೆ. ಶೃಂಗಾರ, ಭಕ್ತಿ, ಕರುಣೆಗಳಿಗೆ ಅವರ ಕೊರಲು ಹೇಳಿಮಾಡಿಸಿದ್ದು. ಜೊತೆಗೆ ಈಚೀಚಿನವರೆಗೂ ಹಳೆಗನ್ನಡ ಕಾವ್ಯಪರಿಚಯ ಹೆಣ್ಣುಮಕ್ಕಳಿಗೆ ಇದ್ದದ್ದು ಕಡಮೆಯೆ. ಅವರ ಲೋಕ ಏನಿದ್ದರೂ ಸಂಪ್ರದಾಯದ ಹಾಡುಗಳು, ಶಾಸ್ತ್ರದ ಹಾಡುಗಳು, ದೇವರನಾಮಗಳು, ಹೆಚ್ಚೆಂದರೆ ಭಾವಗೀತೆಗಳು, ಹೀಗಾಗಿ ಹೆಣ್ಣುಮಕ್ಕಳಲ್ಲಿ ಗಮಕಿಗಳು ಕಡಮೆ. ಈ ಕೊರತೆ ಈಚೀಚೆಗೆ ನೀಗುತ್ತಿದೆ, ಈಗೀಗ ಗಂಡಸರಿಗಿಂತ ಹೆಣ್ಣುಮಕ್ಕಳೇ ಕಾವ್ಯವಾಚನದತ್ತ ಒಲವು ತೋರಿಸುತ್ತಾರೆ.

ಹಿಂದಿನ ತಲೆಮೊರೆಯ ಪ್ರಮುಖ ಗಮಕಿಗಳಲ್ಲಿ ನಮಗೆ ಎದ್ದುಕಾಣುವ ಇಬ್ಬರು ವಿದುಷಿಯರೆಂದರೆ ಶಕುಂತಳಾಬಾಯಿ ಪಾಂಡುರಂಗರಾಯರು ಹಾಗೂ ಅನ್ನಪೂರ್ಣಮ್ಮ ರಘುಪತಿಶಾಸ್ತ್ರಿಗಳು.

ಈ ಇಬ್ಬರೂ ಸುಮಾರು 20–30 ವರ್ಷಗಳಿಂದ ಕನ್ನಡ ನಾಡಿನಲ್ಲಿ ಗಮಕದ ಬೆಳಕನ್ನು ಜೀವಂತವಾಗಿ ಇರಿಸಿಕೊಂಡು ಬಂದಿರುವ ತಾಯಂದಿರು.

ಶಕುಂತಳಾಬಾಯಿಯವರಿಗೆ ದೃಢವಾದ ಶಾರೀರ ಇದೆ. ಗಂಡಸರ ಹಾಗೆಯೇ ದೃಢ. ಸಾಹಿತ್ಯದ ಜ್ಞಾನವೂ ಬೇಕಾದಷ್ಟಿದೆ. ಅಂತೆಯೆ ಆಕೆಗೆ ಗಮಕಕ್ಕೆ ಬೇಕಾದ ಅಗತ್ಯಗಳು ತುಂಬಿಬಂದವು. ಜೊತೆಗೇ ಹಿರಿಯ ಗಮಕ ಗುರುಗಳ ಪಾಠವೂ ಆಯಿತು. ಇದೆಲ್ಲಕ್ಕೂ ಕೋಡು ಇದ್ದಂತೆ ಸಾಹಿತ್ಯಪ್ರೇಮಿಯೂ ಆಸಕ್ತರೂ, ನುಡಿಸೇವಕರು ಆದ ಪತಿ ದೊರಕಿದರು. ಶಕುಂತಲಾಬಾಯಿ–ಪಾಂಡುರಂಗರಾಯರದು ಅಪೂರ್ವ ಜೋಡಿ. ಸಮಾನಾಸಕ್ತ ದಂಪತಿಗಳು ಅಪರೂಪವೇ. ಷಷ್ಟಾಷ್ಟಕವೇ ಎಷ್ಟೋ ಸಲ ಹೆಚ್ಚು. ಕವಿಯ ಹೆಂಡತಿಗೆ ಸಾಮಾನ್ಯವಾಗಿ ಗಂಡಸ ಮೇಲೆ ಕೋಪವೇ! ಹೀಗೆ ಇಬ್ಬರೂ ಸಮಾನಾಸಕ್ತ

ರಾಗಿ ಕಲಿಗೆ ಸಾಹಿತ್ಯಕ್ಕೆ ಒಲಿಯುವುದು, ದುಡಿಯುವುದು ವಿಶೇಷ. ಶಕುಂತಲಾಬಾಯಿಯವರೂ, ಪಾಂಡುರಂಗರಾಯರೂ ಈ ವಿಷಯದಲ್ಲಿ ಧನ್ಯರು.

ಗಮಕ ಕಾವ್ಯವಾಚನ ಎಂದೊಡನೆ ನಮ್ಮ ಗಮಕಿಗಳ ಕೈ ಹೋಗುವುದು, ಮೊದಲು ಗದುಗಿನ ಭಾರತದತ್ತ. ಬಹುಮಂದಿಯ ನಿಲುಗಡೆ ಅಲ್ಲಿ. ಕೆಲವರೇನೊ ತೊರವೆ ರಾಮಾಯಣ, ಪ್ರಭುಲಿಂಗಲೀಲೆ, ನಳ ಚರಿತ್ರೆಗಳತ್ತ ದೃಷ್ಟಿ ಹರಿಸುತ್ತಾರೆ. ಎಲ್ಲವೂ ಭಾಮಿನಿ ಷಟ್ಪದಿಗಳೇ. ಸುಲಿದ ಬಾಳೆಯ ಹಣ್ಣು. ನಾರಿಕೇಳಗಳಾದ ಹರಿಶ್ಚಂದ್ರಕಾವ್ಯ, ಜೈಮಿನಿ ಭಾರತ, ಚೆನ್ನಬಸವ ಪುರಾಣ ಮೊದಲಾದವುಗಳನ್ನು ಕೆಲವು ಸಾಹಸಿಗರು ಮಿಸುಕುವುದುಂಟು. ಆದರೆ ಕಬ್ಬಿಣದ ಕಡಲೆಗಳಾದ ಚಂಪೂಕಾವ್ಯಗಳ ಹತ್ತಿರ ಹೋಗುವ ಗಟ್ಟಿಗರು ತೀರ ಕಡಮೆ. ಆಶ್ಚರ್ಯವೆಂದರೆ ಹರಿಹರನ ರಗಳೆಯೂ ಅಷ್ಟಾಗಿ ಗಮಕಿಗಳ ಗಮನವನ್ನು ಸೆಳೆದಿಲ್ಲ.

ಇನ್ನು ಆಧುನಿಕ ಕಾವ್ಯಗಳನ್ನು ಗಮಕಕ್ಕೆ ಅಳವಡಿಸಿಕೊಂಡು ಹಾಡುವವರು ಎಷ್ಟೊ ಕೆಲವರು. ಸಂಗೀತಗಾರರು ಸಾಮಾನ್ಯವಾಗಿ ತ್ಯಾಗರಾಜ, ದೀಕ್ಷಿತರುಗಳಿಗೆ ಜೋಲು ಬೀಳುವುದಿಲ್ಲವೆ? ಆಧುನಿಕ ಗೇಯ ಕೃತಿಗಳನ್ನು ಗಂಭೀರವಾಗಿ ಪರಿಗಣಿಸುವುದು ಕಡಮೆ ಅಲ್ಲವೆ? ಹಾಗೆಯೆ ಗಮಕಿಗಳು ಹಿಂದಿನ ಯುಗದ ಕಾವ್ಯಕ್ಕೆ ಅವರ ಪ್ರತಿಕ್ರಿಯೆ ತೆಳುವಾದುದು. ಇದಕ್ಕೆ ಆ ಕಾವ್ಯದ ಬಂಧ, ಛಂದ, ತೂಕಗಳೂ ಕಾರಣವಲ್ಲದಿಲ್ಲ. ಬಹುಪಾಲು ಭಾವಗೀತೆಗಳು ಅವು. ಚುಟುಕಗಳು ಅಚ್ಚುಕಟ್ಟಾಗಿ ಪೊಗದಸ್ತಾಗಿ ಹಾಡಲು ಸಾಲವೇನೊ! ಆದರೆ ಕೆಲವಾದರೂ ದೀರ್ಘಕಾವ್ಯಗಳು ಬಂದಿವೆ. ಉದಾಹರಣೆಗೆ ಕುವೆಂಪು ಅವರ ರಾಮಾಯಣದರ್ಶನ, ಚಿತ್ರಾಂಗದಾ, ಗೋವಿಂದ ಪೈಗಳ ವೈಶಾಖಿ, ಶ್ರೀನಿವಾಸರ ಕಥನ ಕವನಗಳು, ಡಿವಿಜಿಯವರ ಪ್ರಗಾಥಗಳು, ಸಾಲಿ ರಾಮಚಂದ್ರರಾಯರ ರಾಮಾಯಣ, ಪುತಿನ ಅವರ ಗಣೇಶದರ್ಶನ ಇತ್ಯಾದಿ. ಇವು ಗಮಕಕ್ಕೆ ಒದಗಿ ಬರುತ್ತವೆ ಎನಿಸುತ್ತದೆ. ಇವುಗಳತ್ತ ನಮ್ಮ ಗಮಕಿಗಳು ಕಣ್ತೆರೆಯಬೇಕು.

ಶಕುಂತಲಾಬಾಯಿಯವರು ಈ ವಿಚಾರದಲ್ಲಿ ಅನ್ವೇಷಕ ಸ್ವಭಾವದವರು. ಅವರ ಗಮಕ ಭಾರತ ರಾಮಾಯಣ ವಾಚನಗಳಿಗಷ್ಟೆ ಮಿತಿಗೊಂಡಿಲ್ಲ. ಅವರು ಹಳಗನ್ನಡ ಚಂಪೂ ಕಾವ್ಯಗಳನ್ನೂ ಅಲ್ಲಾಡಿಸಿ ನೋಡಿದ್ದಾರೆ. ಭಾಮಿನಿ ಅಲ್ಲದೆ ಇತರ ಷಟ್ಪದಿಗಳನ್ನು ಸಲೀಸಾಗಿ ಹಾಡಿದ್ದಾರೆ. ಅಷ್ಟು ಸಾಲದು ಎಂಬಂತೆ ಆಧುನಿಕ ಕಾವ್ಯಗಳನ್ನು ತಮ್ಮ ಕಂಠದಿಂದ ಕುಣಿಸಿದ್ದಾರೆ.

ಕುವೆಂಪು ಅವರ ರಾಮಾಯಣ ದರ್ಶನವನ್ನು ಗಮಕಕ್ಕೆ ಅಳವಡಿಸಿ, ಪ್ರಚಾರ ಮಾಡಿ, ಅಭಿರುಚಿ ಬೆಳೆಸುವುದರಲ್ಲಿ ಶಕುಂತಲಾಬಾಯಿಯವರ ಪಾತ್ರ ತುಂಬ ಹಿರಿದು. ನಾರಣಪ್ಪನ ಕಾವ್ಯದಂತೆಯೇ ಕುವೆಂಪು ಕಾವ್ಯವನ್ನು ನಮ್ಮ ಜನರ ಮುಂದೆ ಇಟ್ಟು ಅದರ ಸೊಗಸನ್ನು ತೋರಿಕೊಟ್ಟಿದ್ದಾರೆ. ಅದೇ ರೀತಿ ಗೋವಿಂದ ಪೈಗಳ 'ವೈಶಾಖಿ'ಯನ್ನು ವಾಚಿಸಿದ್ದಾರೆ. ಪೈಗಳ ಕಾವ್ಯ ಪಾಂಡಿತ್ಯಪೂರ್ಣ, ಕ್ಲಿಷ್ಟ. ಆದರೆ ಅದೆಲ್ಲ ಶಕುಂತಲಾಬಾಯಿಯವರಿಗೆ ಅಡ್ಡಿಯೇನಲ್ಲ. ಅಲ್ಲೂ ಅವರ ಹಾದಿ ಸಲೀಸು. "ವೈಶಾಖಿ"ಯ

ಅವರ ವಾಚನ, ಜಿ. ಪಿ. ರಾಜರತ್ನಂ ಅವರ ವಿವರಣೆ–ಈ ಅಪೂರ್ವ ಕಾರ್ಯಕ್ರಮ ಒಂದು ಮಲ್ಲೇಶ್ವರದ ನಮ್ಮ ಗಾಂಧೀಸಾಹಿತ್ಯ ಸಂಘದಲ್ಲಿ ನಡೆದಿದೆ ಕೆಲವು ವರ್ಷದ ಹಿಂದೆ. ಅದೊಂದು ವಿಶಿಷ್ಟ ರಸಪಾಕ. ಬೇಂದ್ರೆಯವರ ನರಸಿಂಹಸ್ತೋತ್ರ, ಜಿ. ಪಿ. ರಾಜರತ್ನಂ ಅವರ "ಶಾಂತಿ"ಯ ಪದ್ಯಗಳು, ಡಿ.ವಿ.ಜಿ.ಯವರ "ಸ್ವತಂತ್ರ ಭಾರತ ಅಭಿನಂದನಸ್ತವ" ಇವುಗಳನ್ನು ಹಾಡಿದ್ದಾರೆ. ಇವೆಲ್ಲವೂ ಗಾಂಧೀ ಸಾಹಿತ್ಯ ಸಂಘದಲ್ಲಿ ನಡೆದಿವೆ, ರಾಜಾಜಿನಗರದ ಕುಮಾರವ್ಯಾಸ ಮಂಟಪದಲ್ಲಿ ನಡೆದಿವೆ. ಡಿವಿಜಿ ಅವರ ಕಾವ್ಯವಾಚನಕ್ಕೂ ಜಿ. ಪಿ. ರಾಜರತ್ನಂ ಅವರ ವ್ಯಾಖ್ಯಾನದ ಸೌಭಾಗ್ಯ ಕೂಡಿ ಬಂದಿತ್ತು.

ಶಕುಂತಲಾಬಾಯಿ, ಪಾಂಡುರಂಗರಾವ್ ದಂಪತಿಗಳು ಕಾವ್ಯಪ್ರಿಯರು ಹೇಗೊ ಹಾಗೆಯೆ ರಾಷ್ಟ್ರಪ್ರಿಯರು, ಸೇವಾಪ್ರಿಯರು. ಅಂತೆಯೆ ಅವರಿಗೆ ಗಾಂಧೀಸಾಹಿತ್ಯ ಸಂಘದ ಮೇಲೆ ತುಂಬ ಅಭಿಮಾನ, ಅಕ್ಕರೆ. ನಾವು ಕರೆದಾಗ ಎಂದೂ ಅವರು ಬಾರದೆ ಇಲ್ಲ. ತುಂಬ ಸಲಿಗೆಯಿಂದ, ಸಂತೋಷದಿಂದ ಭಕ್ತಿಯಿಂದ ನಮ್ಮ ವೇದಿಕೆಗೆ ಬಂದು, ಹಾಡಿ ತಮ್ಮ ಸೇವೆಯನ್ನು ಸಲ್ಲಿಸಿದ್ದಾರೆ. ಆ ವೇದಿಕೆಗೆ ಘನತೆಯನ್ನು ಒದಗಿಸಿದ್ದಾರೆ.

ರಾಜರತ್ನಂ ತಮ್ಮನ್ನು ಸಾಹಿತ್ಯ ಪರಿಚಾರಕರು ಎಂದುಕೊಂಡರು. ಅಟ್ಟು ಸಿದ್ಧವಾಗಿರುವ ಸಾಹಿತ್ಯದ ಅಡುಗೆಯನ್ನು, ಅದಕ್ಕಾಗಿ ಹಸಿದಿರುವ ಅಶನಾರ್ಥಿಗಳಿಗೆ ಬಡಿಸುವುದು ತಮ್ಮ ಕೆಲಸ ಎಂದುಕೊಂಡು ದುಡಿದರು. ಪಾಂಡುರಂಗರಾವ್ ದಂಪತಿಗಳು ಇಂಥವೇ ಪರಿಚಾರಿಕೆಗೆ ತಮ್ಮನ್ನು ತಾವು ಅರ್ಪಿಸಿಕೊಂಡಿದ್ದಾರೆ, ಮುಡಿಪು ಆಗಿದ್ದಾರೆ. ಹಿಂದಿನ ಹಾಗೂ ಇಂದಿನ ಕವಿಕೃತಿಗಳನ್ನು ಗಮಕದ ಮೂಲಕ ಜನಮಾನಸಕ್ಕೆ ಉಣಬಡಿಸುತ್ತಿದ್ದಾರೆ. ಅವರ ಸೇವೆ ಕಾವ್ಯಕ್ಕೂ ಸಂದಿದೆ, ಗಮಕಕ್ಕೂ ಸಂದಿದೆ. ಕರ್ನಾಟಕದಲ್ಲಿ ಕನ್ನಡ ಕಾವ್ಯದ ಸೊಗಡು ಮಾಸದಂತೆ ಉಳಿಯಲು, ಕಾವ್ಯದ ದೀಪ ಆರದಂತೆ ಉಳಿಯಲು ಈ ಇಬ್ಬರೂ ಶ್ರಮಿಸಿದ್ದಾರೆ, ಶ್ರಮಿಸುತ್ತಿದ್ದಾರೆ.

ಶಕುಂತಲಾಬಾಯಿಯವರಿಗೆ ಅರವತ್ತರ ಪರಿಪಕ್ವತೆ ಬಂದಿದೆ. ವಯಸ್ಸು ಆಯಿತೆಂದು ನಂಬುವುದು ಕಷ್ಟ. ಅವರ ಹುರುಪು, ಎಳೆಯದಾಗಿಯೆ ಇದೆ. ಆದರೂ ಕಾಲನ ಮುನ್ನಡೆಗೆ ತಡೆ ಎಲ್ಲಿ? ಈ ಹಿರಿಯರು ಇನ್ನೂ ಬಹುಕಾಲ ಬಾಳಬೇಕು, ಸ್ವಸ್ಥಚಿತ್ತರಾಗಿ, ಸ್ವಸ್ಥದೇಹಿಗಳಾಗಿ ಇರಬೇಕು, ಅವರ ಸೇವೆ, ಕಲೆ, ಮಾರ್ಗದರ್ಶನ ನಮ್ಮ ನಾಡಿಗೆ ದೊರಕುತ್ತಿರಬೇಕು, ಕಿರಿಯರಿಗೆ ಮೇಲುಸಂಕ್ತಿ ಆಗಿರಬೇಕು, ಎನ್ನುವ ಜನಸ್ತೋಮದ ಹಾರೈಕೆಗೆ ನಾನು ನಮ್ರನಾಗಿ "ತಥಾಸ್ತು" ಎಂದು ಹೇಳಿ ಮಣಿಯುತ್ತೇನೆ.

ಪ್ರಜ್ಞಾವಂತ ಮಹಿಳೆ

ಶಾಂತಾ ಎ. ದಿವಾಕರ

'ಮಕ್ಕಳ ಮಂಟಪ'ಕ್ಕೆ ಶ್ರೀಮತಿ ಶಕುಂತಲಾಬಾಯಿಯವರ ಭೇಟಿಗೆ ಹೋದಾಗ ಅವರು ಅಡಿಗೆ ಮನೆಯಲ್ಲಿ ಕೆಲಸದಲ್ಲಿದ್ದರು. ಹೊರಗೆ ಅವರ ಪತಿಯು ನಡೆಸುತ್ತಿರುವ ಮಕ್ಕಳ ಮಂಟಪದ ಶಾಲೆಯ ಮಕ್ಕಳು ಆಡುತ್ತಿದ್ದರು. ಶ್ರೀಮತಿ ಶಕುಂತಲಾಬಾಯಿಯವರು ಅಡಿಗೆ ಕೆಲಸಗಳಲ್ಲಿ ತಮ್ಮ ಅತ್ತೆಯವರಿಗೆ ಸಹಾಯಕರಾಗಿದ್ದುಕೊಂಡೇ ಇತರ ಕೆಲಸ ಕಾರ್ಯಗಳ ನಿರ್ವಹಣೆಯ ಹೊಣೆಯನ್ನೂ ಹೊತ್ತಿದ್ದಾರೆಂದು ತಿಳಿದುಬಂತು.

ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾವ್ ಕನ್ನಡ ಸಾಹಿತ್ಯಾಭಿಮಾನಿಗಳಿಗೆಲ್ಲ ಚಿರಪರಿಚಿತರು. ಅವರ ವಿಶಿಷ್ಟವಾದ ಗೌಳ ಶಾರೀರ, ರಸಭಾವಗಳನ್ನು ತುಂಬ ಪರಿಣಾಮಕಾರೀ ರೀತಿಯಲ್ಲಿ ವ್ಯಕ್ತಪಡಿಸುವ ರೀತಿ ಜನ ಮೆಚ್ಚುಗೆ ಗಳಿಸಿವೆ. ಕುಮಾರವ್ಯಾಸನ ಭಾರತದ ವಾಚನದಿಂದ ಕರ್ನಾಟಕದಲ್ಲಿ ಗಮಕ ಕಲೆಯಲ್ಲಿ ಪ್ರವೀಣರಾಗಿದ್ದ ಶ್ರೀ ಬಿಂದೂರಾಯರ ಪಟ್ಟ ಶಿಷ್ಯೆಯಾಗಿ ಶ್ರೀಮತಿ ಶಕುಂತಲಾಬಾಯಿಯವರು ಆ ಕಲೆಯನ್ನು ಕರಗತಮಾಡಿಕೊಂಡರು. ಪ್ರಸಿದ್ಧ ಸಂಗೀತಜ್ಞರಾದ ಚಿಂತನಪಲ್ಲಿ ಕೃಷ್ಣಮೂರ್ತಿಯವರಿಂದ ಕರ್ನಾಟಕ ಸಂಗೀತಾಭ್ಯಾಸವನ್ನು ಮಾಡಿದರು. ಸಂಗೀತ ಶಾಸ್ತ್ರದ ತಳಹದಿಯ ಮೇಲೆ ತಮ್ಮಲ್ಲಿ ಸುಪ್ತವಾಗಿದ್ದ ಗಮಕ ವಾಚನ ಕಲೆಯನ್ನು ಪರಿಶ್ರಮದಿಂದ, ಯೋಗ್ಯ ಗುರುವಿನ ಆಶೀರ್ವಾದದಿಂದ ವಿಕಾಸ ಮಾಡಿಕೊಂಡರು.

1938ರಿಂದ ಇಂದಿನವರೆಗೆ ಸತತವಾಗಿ ಕನ್ನಡಿಗರಿಗೆ ತಮ್ಮ ಅಪರೂಪವಾದ ಕಲೆಯ ಪರಿಚಯ ಮಾಡಿಕೊಡುತ್ತಾ ಬಂದಿದ್ದಾರೆ.

ಶ್ರೀಮತಿ ಶಕುಂತಲಾಬಾಯಿಯವರು ಪ್ರಯೋಗ ಶೀಲೆಯೆಂದೂ ಎನಿಸಿಕೊಂಡಿದ್ದಾರೆ. ಕಾವ್ಯವಾಚನವೆಂದರೆ ಕುಮಾರವ್ಯಾಸ ಭಾರತವೆಂದೇ ತಿಳಿದಿದ್ದ ಕಾಲದಲ್ಲಿ ಪ್ರಾಚೀನ ಕಾವ್ಯಗಳಾದ ಪಂಪ ಮಹಾಕವಿಯ ಆದಿಪುರಾಣ, ಚಾಮರಸನ ಪ್ರಭುಲಿಂಗ ಲೀಲೆ, ರಾಘವಾಂಕನ ಹರಿಶ್ಚಂದ್ರಕಾವ್ಯ, ಹರಿಹರನ ಬಸವರಾಜ ರಗಳೆ, ಲಕ್ಷ್ಮೀಶನ ಜೈಮಿನಿ ಭಾರತ ಮೊದಲಾದ ಕಾವ್ಯಗಳಿಂದ ಅನೇಕ ರಸಘಟ್ಟಗಳನ್ನು ವಾಚನಮಾಡುವುದರಲ್ಲಿ ಯಶಸ್ವಿಯಾಗಿದ್ದಾರೆ.

ಆಧುನಿಕ ಕವಿಗಳ ಕಾವ್ಯಗಳ ಹಿರಿಮೆಯನ್ನೂ ಮರೆಯದೆ ಇಂದಿನ ಆಧುನಿಕ ಕನ್ನಡ ಕವಿಗಳ ಕಾವ್ಯಗಳನ್ನೂ ರಸಬದ್ಧವಾಗಿ ಹಾಡಿ, ಕವಿಗಳಿಂದಲೇ ಭೇಷ್ ಎನ್ನಿಸಿಕೊಂಡ ಗೌರವ ಶ್ರೀಮತಿ ಶಕುಂತಲಾಬಾಯಿಯವರಿಗೆ ಸೇರಿದೆ.

ಇಂದಿನ ವಿದ್ಯಾರ್ಥಿನಿಯರಲ್ಲಿ ಗಮಕ ಕಲೆಯಲ್ಲಿ ಅಭಿರುಚಿಯ ಬಗ್ಗೆ ಕೇಳಿದಾಗ "ಸತತವಾಗಿ ಪೂರ್ಣ ಅಭ್ಯಾಸ ಮಾಡಲು ಮುಂದೆಬರುವವರು ಇಲ್ಲವೇ ಇಲ್ಲ" ಎಂದರು.

ಆದರೆ ಇಂದಿಗೂ, ಯಾರು ಬಂದು "ಹೇಳಿಕೊಡಿ" ಎಂದರೂ ಶ್ರದ್ಧೆಯಿಂದ ಹೇಳಿಕೊಡುವ ಮನೋವೈಶಾಲ್ಯ ಶ್ರೀಮತಿ ಶಕುಂತಲಾಬಾಯಿಯವರಿಗೆ ಇದೆ.

ನೆಹರೂ ನಗರದಲ್ಲಿ ಶ್ರೀ ಪಾಂಡುರಂಗರಾಯರ ಮಕ್ಕಳ ವ್ಯಕ್ತಿತ್ವ ವಿಕಾಸಕ್ಕಾಗಿ ಉನ್ನತ ಆದರ್ಶಗಳನ್ನಿಟ್ಟುಕೊಂಡು ನಡೆಸುತ್ತಿದ್ದ "ಮಕ್ಕಳ ಮಂಟಪ"ಕ್ಕೆ ತಮ್ಮ ಸೇವೆಯನ್ನೂ ಶಕುಂತಲಾಬಾಯಿಯವರು ಮಾಡುತ್ತಾ ಬಂದಿದ್ದಾರೆ.

ಮಕ್ಕಳಿಂದ ಆಡಿಸುವ ನಾಟಕಗಳಲ್ಲಿ ಉತ್ತಮ ರೀತಿಯಲ್ಲಿ, ಪಾತ್ರಗಳಲ್ಲಿ ತನ್ಮಯರಾಗಿ ಅಭಿನಯ ಮಾಡಲು ಮಕ್ಕಳಿಗೆ ನಿರ್ದೇಶನ ಕೊಡಲು ಶ್ರೀಮತಿ ಶಕುಂತಲಾಬಾಯಿಯವರು ಸುರಿತಿದ್ದಾರೆ.

ಸರಳ ಸಾದಾ ವ್ಯಕ್ತಿತ್ವ, ಮಿತಭಾಷಿಣಿ ಹಾಗೂ ಗಂಭೀರೆಯಾಗಿರುವ ಶ್ರೀಮತಿ ಶಕುಂತಲಾಬಾಯಿಯವರ ಕಲಾಭಿಮಾನ ಜಾಗೃತಗೊಳ್ಳಲು ಹಾಗೂ ಕಲೆಯ ಅಭ್ಯಾಸ ಸಾಗಲು, ಅವರ ಪತಿಯ ಹಾಗೂ ಅತ್ತೆಮನೆಯವರ ಔದಾರ್ಯವೂ ಕಾರಣವೆಂದು ನೆನೆಸಿಕೊಳ್ಳಲು ಆಕೆ ಮರೆಯಲಿಲ್ಲ.

ನಾಲ್ಕು ಮಕ್ಕಳ ತಾಯಿ ಹಾಗೂ ಪತಿಯ ಕಾರ್ಯದಲ್ಲಿ ಸಹಕಾರಿಯಾಗಿರುವುದಲ್ಲದೆ ಕನ್ನಡ ಸಾಹಿತ್ಯ ಸೇವೆಯನ್ನೂ ಕ್ರಿಯಾತ್ಮಕವಾಗಿ ತಮ್ಮದೇ ಆದ ರೀತಿಯಲ್ಲಿ ಮಾಡುತ್ತಿರುವ ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾವ್ ಅಭಿನಂದನಾರ್ಹರಾಗಿದ್ದಾರೆ.

ಗಮಕ ವಿದುಷಿ-ಗಮಕ ಕಲಾ ಪ್ರವೀಣೆ

ಕಟ್ಟೆಯ ಬಸವೇಶ್ವರ

ಸಂಗೀತ ಸಾಹಿತ್ಯಗಳ ಗಮಕದೊಳು ಅಳವಡಿಸಿ, ತನು ಮನ ಹೃದಯಗಳ ವಿಕಸನಕೆ ಎಡೆಮಾಳ್ಪ ಕಲೆಯ ಸಾಧಿಸಿ, ಗುರುವಿನಂತೆ ನಿಂದು, ಲಿಂಗದಂತೆ ಹೊಳೆದು, ಜಂಗಮದಂತೆ ಸುಳಿದು, ಪಂಪ, ರನ್ನ, ಹರಿಹರ, ರಾಘವಾಂಕ, ಲಕ್ಷ್ಮೀಶ, ನಾರಣಪ್ಪ, ಕುವೆಂಪು, ಬೇಂದ್ರೆ–ಮೊದಲಾದ ಮಹಾಕವಿಗಳ ಮೇರು ಕೃತಿಗಳ ಗಮಕದೊಳು ಹಾಡಿ, ಹರುಷವನು ನೀಡಿ, ಜನಮನಕೆ ಸಂತಸವ ನೀವ-ವೆಂಕೋಬರಾಯರ ಸುತೆ,–ಪಾಂಡುರಂಗರಾಯರ ಸತಿ–ಶಕುಂತಲಾಬಾಯಿಯರ್ಗೆ–ಇತೋಪ್ಯತಿಶಯ– ಶಕ್ತಿ ಸಾಮರ್ಥ್ಯಗಳ, ಆಯುರಾರೋಗ್ಯಗಳ, ಸಂಪದ ಸೌಭಾಗ್ಯಗಳ ಕರುಣಿಸಲಿ ಬಸವಲಿಂಗಪ್ರಿಯ ಕಟ್ಟೆಯ ಬಸವೇಶ್ವರನು.

ಬಾಲ್ಯದೊಳೆ ದಿವ್ಯ ದೇವರ ನಾಮಗಳ ಭಾವುಕತೆಯಿಂ ಹಾಡುತಾ ಶಾಲಾ ಸ್ಪರ್ಧೆಗಳೊಳು ಪ್ರಶಸ್ತಿಗಳ ಗಳಿಸಿ, ಸಾಹಿತಿ ಪಾಂಡುರಂಗರಾಯನ ಕೈಹಿಡಿದು ಸಾಹಿತ್ಯದತ್ತ ಮನವ ನಿಲಿಸಿ, ಭಾರತದ ಬಿಂದೂರಾಯ ಗುರುವಿನಿಂ ಗಮಕ ಕಲೆಯ ಕಲಿತು, ಚಿಂತಲಪಲ್ಲಿ ಕೃಷ್ಣಮೂರ್ತಿ ಗುರುವಿನಿಂ–ಸಂಗೀತ ಶಾಸ್ತ್ರವ ಅರಿತು, ಬಿ. ಎಂ. ಶ್ರೀ, ವೆಂಕಣ್ಣ, ಮಾಸ್ತಿ, ಪಂಜೆ, ವಿ. ಸಿ, ಕುವೆಂಪು,ದೇ. ಜ. ಗೌ,ಜೀ. ಶ.ಪ ಮೊದಲಾದ ಪಂಡಿತರಿಂ–ಪ್ರೋತ್ಸಾಹಿತೆಯಾಗಿ, ದೆಹಲಿ, ಕಲಕತ್ತ, ಮುಂಬಯಿ, ಮದರಾಸು–ಮೊದಲಾದ ಭಾರತದ ಪ್ರಸಿದ್ಧ ನಗರಗಳೊಳು ಗಮಕವಾಚನ ಮಾಡಿ,–ಪಡೆದ ಅನುಭವದಿಂ ಗಮಕ ಗುರುವೆನಿಸಿ, ಕನ್ನಡ ಸಾಹಿತ್ಯ ಪರಿಷತ್ತಿನೊಳು–ಶಿಷ್ಯರ್ಗೆ ಗಮಕ ವಿದ್ಯೆಯ ಕಲಿಸಿ ರಾಷ್ಟ್ರದ ಪ್ರಸಿದ್ಧ ಧರ್ಮಗುರುಗಳ ವಿಖ್ಯಾತ ಲೋಕ ನಾಯಕರ ಅಧ್ಯಕ್ಷತೆಯೊಳು ಮನ್ನಣೆಯ ಕೊಂಡು, ಗಮಕ ಕಲೆಯ ಕುರಿತು “ಗಮಕ ರಸಾಯನ”, “ಗಮಕಕಲಾ-ಮಹಿಳೆ”–ಎಂಬ ಗ್ರಂಥಗಳ ರಚಿಸಿ, ಮಹಿಶೂರೊಳು ಎರಡನೆಯ ಅಖಿಲ ಕರ್ಣಾಟಕ-ಗಮಕ ಸಮ್ಮೇಳನದ ಅಧ್ಯಕ್ಷತೆಯ ವಹಿಸಿ, ತಿರುಪತಿ ದೇವಸ್ಥಾನದ ಬೆಂಗಳೂರು ವಾರ್ತಾ ಕೇಂದ್ರದ ಹದಿನೈದನೆಯ ವಾರ್ಷಿಕೋತ್ಸವದೊಳು “ಕಾವ್ಯವಾಚನ ಪ್ರವೀಣೆ” ಎಂಬ ಬಿರುದ ಹೊಂದಿ, ಈ ಪರಿಯ ಗಮಕಕಲಾ ಸೇವೆಗಾಗಿ ಕರ್ನಾಟಕ ರಾಜ್ಯ ಪ್ರಶಸ್ತಿಯ ಸ್ವೀಕರಿಸಿ, ಗಮಕಕಲಾ ಪ್ರಪಂಚದೊಳು ಗಣ್ಯಸ್ಥಾನವ ಆರ್ಜಿಸಿಹ ಶಕುಂತಲಾಬಾಯಿಯವರ ಕಂಡು ಬಸವಲಿಂಗಪ್ರಿಯ ಕಟ್ಟೆಯ ಬಸವೇಶ್ವರಂಗೆ ಪರಮಾನಂದವಾಯಿತು.

ಜೀವನ ಮತ್ತು ಜೀವಿತ*

ಶಂ. ಬಾ. ಜೋಶಿ

ಈ ಬಾಳಿನಲ್ಲಿ **ಜೀವನ** ಮತ್ತು **ಜೀವಿತ** ಎಂಬ ಎರಡು ವಿಭಿನ್ನ ಪಾತಳಿಗಳು ಉಂಟು, ಎಂಬ ಪ್ರಜ್ಞೆ ನಷ್ಟವಾಗಿದೆ-ಇಂದಿನ ಸಾಮಾಜಿಕ ಶೈಥಿಲ್ಯಕ್ಕೆ, ಭ್ರಷ್ಟಾಚಾರ, ಅನಾಚಾರಾದಿಗಳಿಗೆ, ಈ ಅಜ್ಞಾನವೇ ಮುಖ್ಯ ಕಾರಣ ಎಂದು ನನಗೆ ಕಾಣುತ್ತಿದೆ.

ಜೀವಿತವು ಕೇವಲ ವೈಯಕ್ತಿಕ. ಆ ವ್ಯಕ್ತಿಯ ಆಯುರ್ಮಾನಕ್ಕೇ ಸೀಮಿತ. ಆದರೆ, ಜೀವನವು ಸಾಮಾಜಿಕ, ಈ ಜೀವನದ ಪಾತಳಿಯ ಮೇಲಣ ಕಾರ್ಯಗಳು, ಸಾಮಾಜಿಕ ಸ್ವರೂಪದುವು ಆಗುವುದರಿಂದ, ಇವು, ಆ ವ್ಯಕ್ತಿಯ ಆಯುರ್ಮಾನಕ್ಕೇ ಸೀಮಿತವಾಗಿ ಉಳಿಯುವೆ, ಇಂತಹ ಕಾರ್ಯಗಳು, ಅವುಗಳ ಬೆಲೆಯುಂದಾಗಿ, ಆ ವ್ಯಕ್ತಿಯ ತರುವಾಯದಲ್ಲಿಯೂ ತಲೆಮಾರಿನಿಂದ ತಲೆಮಾರಿಗೆ, ಮುಂದುವರೆಯುತ್ತಾ ಅವು ಉಳಿಯುವ ಶಕ್ಯತೆಯು ವಿಶೇಷವಿದೆ.

ಜೀವಿತವು ಅಸ್ತಿತ್ವದ (ಪ್ರಾಣಲಿಂಗ) ಪಾತಳಿಗೇ ಸಂಬದ್ಧವಾಗಿರುತ್ತದೆ. ಆದ ಕಾರಣ, ಇದು ಹುಟ್ಟು-ಸಾವುಗಳ ನಡುವಣ ಅವಧಿಯ ಆಚೆಗೆ ಹೋಗಲಾರದು-ಆದರೆ **ತಾನು ತನ್ನ ಭಾಷಿಕ-ಸಮುದಾಯ-ಸಮಾಜದ ಅಂಗ,** ಎಂಬ **ಜಾಗೃತ** ಪ್ರಜ್ಞೆ ಇರುವವರು, ತಮ್ಮ ನಡೆವಳಿ-ನುಡಿವಳಿ, ಸಾಮಾಜಿಕ-ಸಂದರ್ಭದ **ಬಾಳಿಗೆ ಪೋಷಕ**, ಪ್ರೇರಕವಾಗುವಂತೆ, ತಮ್ಮನ್ನು ರೂಪಿಸಿಕೊಳ್ಳುತ್ತಾರೆ.

ಪುರಾತನರು '(ಸಂ)ಭವಚಕ್ರ' ಎಂದದ್ದು ಈ ಜೀವಿತವನ್ನು ಉದ್ದೇಶಿಸಿ. 'ಕಾಲ (ಮೃತ್ಯು) ಚಕ್ರ' ಎಂದರೂ ಜೀವಿತದ= ಅಂತರ್ ವಿಸಂಗತ, ಪ್ರೇರಣಾ ದ್ವಂದ್ವಾತ್ಮಕ ನಡೆವಳಿ-ನುಡಿವಳಿಯ ಬಾಳಿನ ಬಗೆಯ ಚಿತ್ರವೇ ಇಲ್ಲಿ ಅಭಿಪ್ರೇತವಿದೆ. ಇದು ಅ-ಭಾವಾತ್ಮಕ ಅಸ್ತಿತ್ವದ ಹಂತ, ಈ ಪಾತಳಿಯ ಮೇಲಣ ಜನಕ್ಕೆ 'ಅ-ಮೃತ'ದ ಆಕರ್ಷಣವೆ ಹೆಚ್ಚು. **ಅ-ಮೃತ=** ಮೃತವಲ್ಲದ್ದು ! ಇಲ್ಲಿ ಅಭಾವವೇ ಸ್ಥಾಯಿ ಇದೆ !

ಜೀವನವು, 'ಅಭಾವಾತ್ಮಕ'-'ಅಮೃತ'ದ ಬೆಂಬತ್ತಿದವರ ಪಾಲಿಗೆ ಇಲ್ಲ ! ಇದು ಭಾವಾತ್ಮಕವಿದೆ, ಎಂದರೆ ಭಾವಿಸಿ, ಗ್ರಹಿಸಿಕೊಂಡು ಅರಿಯಲು ಶಕ್ಯವಿರುವ ಪಾತಳಿ, ಭಾವಾತ್ಮಕವಿರುವುದರಿಂದ ಇದು ಅನುಭವಾತ್ಮಕವಾಗಿದೆ. ಅಂತಃಸಂಗತಿ ಯುಕ್ತ ಅರ್ಥ= ವಿಚಾರರೂಪ ತಾತ್ತ್ವಿಕ ಪ್ರಕಾಶವು, ಈ ಜೀವನದ ಪಾತಳಿಯ ಮೇಲಣ ಒಳದಾರಿಯ ಬೆಳಕಾಗಿ ಲಭಿಸುತ್ತದೆ. ಜೀವನದ ಪಾತಳಿ, **ಮನು-**ಜರ ಅಸ್ತಿತ್ವದ ಪಾತಳಿ.

ಜೀವಿತ ಪಾತಳಿ, ನವ(ಳ) ಪ್ರಾಣಿಗಳ ಅಸ್ತಿತ್ವದ ಪಾತಳಿ. ಈ ಮಾನವನಿಗೆ

---

*ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾವ ಇವರು ತಮ್ಮ ಬಾಳಿನುದ್ದಕ್ಕೂ, ಸಾಮಾಜಿಕ-ಸಂದರ್ಭದ ಜೀವನದ ಪಾತಳಿಯ ಮೇಲೆಯೇ ಬಾಳಲು ಹೋರಾಟ ನಡಸಿ, ಇನ್ನುಳಿದವರಿಗೆ ಮೇಲ್ಪಂಕ್ತಿಯಾಗಿದ್ದಾರೆ. ಇವರ 'ಅಭಿನಂದನ' ಗ್ರಂಥಕ್ಕೆ ನನ್ನ **ಅಲ್ಪ ಕಾಣಿಕೆ.**

ದತ್ತ ಸ್ವಾತಂತ್ರ್ಯದಿಂದಾಗಿ, ಮಾನವನಾಗಿ ಬಾಳಬಹುದು; ಮಾನವನಾಗಿ ಉಳಿಯ ಬೇಕಿದ್ದರೆ, ನಡೆವಳಿ–ನುಡಿವಳಿಯಲ್ಲಿ ಅಂತಃಸಂಗತಿಯು ಅತ್ಯಂತ ಅವಶ್ಯವಿದೆ–ಸಾಮಾಜಿಕ ಪ್ರಜ್ಞೆಯ ಬೆಳಕಿನಲ್ಲಿ ಜೀವನ ಮೌಲ್ಯಗಳಿಗಾಗಿ ಬಾಳುವ ತನ್ನ ಜೀವನ ಕ್ರಮವನ್ನು ರೂಪಿಸುವುದು ಮಾನವನ ಕರ್ತವ್ಯವಾಗುತ್ತದೆ.

'ಹೊತ್ತು ಬಂದಂತೆ ಕೊಡೆ ಹಿಡಿಯುವವ' 'ಗಸ್ತಿನ ಬಾಲ ಹಿಡಿದು ಬದುಕ ಬಯಸುವವ, 'ಯುಕ್ತ' ಮಾತಿಗಿಂತ ಅನಿವಾರ್ಯ–ತುರ್ತನ್ನೇ ಸ್ವೀಕರಿಸುವವ ಇವರೆಲ್ಲ ಪ್ರವಾಹ–ಪತಿತ ಕರ್ಮಿಗಳು ಆಗದಿರಲು ಶಕ್ಯವಿಲ್ಲ.

ಸಹಯೋಗ ವ್ಯವಸಾಯ

ಕೆ. ಎನ್. ಶ್ರೀಹರಿ

"ಬಾಳುವುದೇತಕೆ ? ನುಡಿ ಎಲೆ ಜೀವ
ಸಿರಿಗನ್ನಡದಲಿ ಕವಿತೆಯ ಹಾಡೆ
ಸಿರಿಗನ್ನಡದೇಳಿಗೆಯನು ನೋಡೆ
ಕನ್ನಡ ತಾಯಿಯ ಸೇವೆಯ ಮಾಡೆ."

—ಶ್ರೀ ಕುವೆಂಪು

ಕನ್ನಡದ ಸುಪ್ರಸಿದ್ಧ ಗಮಕ ವಿದುಷಿ, ಗಮಕ ಶಾರದೆ, ಶ್ರೀ ವಾಣೀ ಪಾದಾರವಿಂದ ಮಧುಕರಾಯಿತಚಿತ್ತೆಯಾಗಿರುವ ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗ ರಾವ್ ಅವರಿಗೆ ಇದೀಗ ತಾನೆ ಅರವತ್ತು ತುಂಬಿತು. ಸಹೃದಯ ಸಾಹಿತ್ಯಾಭಿಮಾನಿಗಳು, ಕಾವ್ಯಾಭ್ಯಾಸಿಗಳು ಮತ್ತು ಸಂಘ ಸಂಸ್ಥೆಗಳು ಶ್ರೀಮತಿಯವರ ಅರವತ್ತನೆ ಹುಟ್ಟುಹಬ್ಬದ ಉತ್ಸವವನ್ನು ನಾಡಿನ ನಾನಾ ಕಡೆ, ಪ್ರೀತಿಯಿಂದ ಸಂಭ್ರಮದಿಂದ ಆಚರಿಸುತ್ತಿದ್ದಾರೆ. ಇವರ ನುಡಿಸೇವೆಯನ್ನು ಗುರುತಿಸಿ ಒಂದು ಅಭಿನಂದನ ಗ್ರಂಥವನ್ನೂ ಪ್ರಕಟಿಸಬಯಸಿದ್ದಾರೆ. ಇದೊಂದು ಸಂತೋಷದ ಸಂಗತಿ. 'ಮಾಡಿದ್ದನ್ನು ನೆನೆಸಿಕೊ. ಮಾಡಿದವರನ್ನು ನೆನೆಸಿಕೊ' ಎಂಬಂತೆ ನಾಡು ಶ್ರೀಮತಿಯವರ ಗಮಕ ಸೇವೆಯನ್ನು ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತ ಅವರಿಗೆ ಕೃತಜ್ಞತೆಯ ಸಮನ ಸಲ್ಲಿಸುತ್ತಿದೆ: ಇದೊಂದು ಶುಭ ಸೂಚನೆ.

ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾವ್ ಅವರಿಗೆ ಅರವತ್ತು ತುಂಬಿದ್ದು ಅಂಥ ಮಹತ್ವದ ಸಂಗತಿಯೇನೂ ಅಲ್ಲ. ವಯಸ್ಸು ತಾನಾಗೇ ತುಂಬುತ್ತ ಹೋಗುತ್ತದೆ. ಆದರೆ ಎಷ್ಟು ವರ್ಷ ಬದುಕಿದರು ಎಂಬುದು ಮುಖ್ಯವಲ್ಲ ; ಹೇಗೆ ಬದುಕಿದರು ಎಂಬುದು ಮುಖ್ಯ. ಶ್ರೀಮತಿ ಶಕುಂತಲಾಬಾಯಿಯವರು ಈ ಅರವತ್ತು ವಸಂತಗಳನ್ನು ಹೇಗೆ ಬದುಕಿದರು ಎಂಬುದು ಸಾಹಿತ್ಯ ಹಾಗೂ ಗಮಕ ಕ್ಷೇತ್ರಗಳಲ್ಲಿ ಇರುವವರಿಗೆಲ್ಲ ಗೊತ್ತು. ಆದರಿಂದಲೆ ಅವರ ನಾಲ್ಕೈದು ದಶಕಗಳ ಕಾಲದ ಕನ್ನಡ ನಾಡ ನುಡಿಯ ಸಾರ್ಥಕ ಸೇವೆಯನ್ನು ಗುರುತಿಸಿ ಈ ನಮನ ಪೂರ್ವಕ ಅಭಿನಂದನ ಗ್ರಂಥ ಸಮರ್ಪಣೆ, ಸತ್ಕಾರ, ಸನ್ಮಾನಗಳು ಅವರಿಗೆ. ಸುಮಾರು 20–22 ವರ್ಷಗಳ ಹಿಂದಿನ ಮಾತು. ಆಗ ನಾನು ಸೆಂಟ್ರಲ್ ಕಾಲೇಜಿನಲ್ಲಿ ಓದುತ್ತಿದ್ದೆ. ಮಲ್ಲೇಶ್ವರದ ಗಾಂಧೀ ಸಾಹಿತ್ಯ ಸಂಘದ ಸಂಸ್ಥಾಪಕರೂ, ಸುಪ್ರಸಿದ್ಧ ಗಾಂಧೀವಾದಿಗಳೂ, ಸಿದ್ಧಹಸ್ತರೂ ಆಗಿದ್ದ ಕೀರ್ತಿಶೇಷ ಪೂಜ್ಯ ಶ್ರೀ ಸಿದ್ಧವನಹಳ್ಳಿ ಕೃಷ್ಣಶರ್ಮರು, ಮಲ್ಲೇಶ್ವರದ ಶ್ರೀರಾಮ ಮಂದಿರದ ಸಭಾಂಗಣದಲ್ಲಿ, ಗಾಂಧೀಜಯಂತಿ ಪ್ರಯುಕ್ತ ಶ್ರೀಮತಿ ಶಕುಂತಲಾಬಾಯಿಯವರ ಗಮಕವಾಚನ, ಶ್ರೀ ಬಿ. ಶ್ರೀ ಪಾಂಡುರಂಗರಾಯರ ವ್ಯಾಖ್ಯಾನ ಕಾರ್ಯಕ್ರಮ ಏರ್ಪಡಿಸಿದ್ದರು. ಅಂದಿನ ಸಭೆ ಕಿಕ್ಕಿರಿದು ತುಂಬಿತ್ತು.

ಸಾಹಿತ್ಯಾಭಿಮಾನಿಗಳಿಂದ ಮತ್ತು ರಸಿಕರಿಂದ. ರಾಷ್ಟ್ರಕವಿ ಶ್ರೀ ಕುವೆಂಪು ಅವರ 'ಶ್ರೀರಾಮಾಯಣದರ್ಶನಂ' ಮಹಾಕಾವ್ಯದಲ್ಲಿನ, 'ಮಮತೆಯ ಸುಳಿ ಮಂಥರೆ' ಭಾಗವನ್ನು ಸುಶ್ರಾವ್ಯವಾಗಿ ಗಮಕವಾಚನ ಮಾಡಿದರು. ಅಂದಿನ ಸಭೆ ಶ್ರೀಮತಿಯವರ ಸುಮಧುರ ಕಂಠದ ಸುಶ್ರಾವ್ಯ ಗಮಕವಾಚನ ಕೇಳಿ ಮಂತ್ರಮುಗ್ಧರಾಗಿ ಕುಳಿತಿದ್ದರು, ಸುಮಾರು ಎರಡು ಗಂಟೆಗಳ ಕಾಲ. ಶ್ರೀಸಿದ್ಧವನಹಳ್ಳಿ ಕೃಷ್ಣಶರ್ಮರು ಇವರ ದೈವದತ್ತ ವಾಣಿಯನ್ನು ಓದುವ ಶೈಲಿಯನ್ನು, ಗಮಕದ ರೀತಿಯನ್ನು ಮುಕ್ತ ಕಂಠದಿಂದ ಹೊಗಳಿ ಹರಸಿದರು. ಅಂದು ಈ ಇವರುಗಳ ವಾಚನ ವ್ಯಾಖ್ಯಾನ ಕೇಳಿ ಮಂತ್ರ ಮುಗ್ಧರಾದವರಲ್ಲಿ ನಾನೂ ಒಬ್ಬ.

ಈ ದಂಪತಿಗಳು ವೇದಿಕೆಯ ಮೇಲೆ ಕುಳಿತು ವಾಚನ–ವ್ಯಾಖ್ಯಾನ ಮಾಡುವುದನ್ನು ಕೇಳಿದಾಗಲೆಲ್ಲ, ಕಂಡಾಗಲೆಲ್ಲ, ನನಗೆ, ಕಾಳಿದಾಸ ಮಹಾಕವಿಯ 'ವಾಗರ್ಥಾವಿವ ಸಂಪೃಕ್ತೌ ವಾಗರ್ಥ ಪ್ರತಿಪತ್ತಯೆ | ಜಗತಃ ಪಿತರೌ ವಂದೇ ಪಾರ್ವತೀ ಪರಮೇಶ್ವರೌ |' ಎಂಬ ಈ ಸಾಲುಗಳು ನೆನಪಿಗೆ ಬರುತ್ತವೆ. ವಾಕ್ ಮತ್ತು ಅರ್ಥಗಳಂತೆ, ಶ್ರೀಮತಿ ಶಕುಂತಲಾಬಾಯಿ ಮತ್ತು ಶ್ರೀ ಪಾಂಡುರಂಗರಾವ್ ಅವರುಗಳು ಇದ್ದಾರೆ ಎಂದರೆ ಅತಿಶಯೋಕ್ತಿಯೇನಲ್ಲ. ಇದೊಂದು '**ಸಹಯೋಗ ವ್ಯವಸಾಯ**'ದ ಆದರ್ಶ ದಾಂಪತ್ಯಕ್ಕೆ ಜೀವಂತ ಉದಾಹರಣೆ.

ಈ ಸಂದರ್ಭದ ಎಲ್ಲ ರಸಿಕರ ಅಭಿನಂದನೆಗಳು, ಕೇವಲ ಶ್ರೀಮತಿ ಶಕುಂತಲಾಬಾಯಿಯವರಿಗೊಬ್ಬರಿಗೇ ಸಲ್ಲುವುದಿಲ್ಲ ; ಅದರೊಂದಿಗೆ ಶ್ರೀ ಬಿ. ಶ್ರೀ ಪಾಂಡುರಂಗರಾಯರಿಗೂ ಸಲ್ಲುತ್ತದೆ ಎಂದು ನನ್ನ ನಂಬಿಕೆ. ಶ್ರೀಯುತರಿಗೂ ಸಹೃದಯರು ಕೃತಜ್ಞರಾಗಿರಬೇಕು. ಕಾರಣ : ಶ್ರೀ ಬಿ. ಶ್ರೀಪಾಂಡುರಂಗರಾಯರು, ತಮ್ಮ ಧರ್ಮಪತ್ನಿಯವರಿಗೆ ಆರಂಭದಿಂದಲೂ, ಈ ಗಮಕ ವ್ಯವಸಾಯಕ್ಕೆ ಹಜ್ಜೆ ಹಜ್ಜೆಗೂ ಪ್ರೋತ್ಸಾಹ ಕೊಡುತ್ತ, ಈಕೆಯ ಶ್ರೀಕಂಠಕ್ಕೆ, ಸಾಹಿತ್ಯದ ರಸವನ್ನು ಕುಡಿಸುತ್ತ, ತನ್ಮೂಲಕ ಪಂಡಿತ ಪಾಮರರಿಗೂ, ಆಬಾಲ ಗೋಪಾಲಸ್ತ್ರೀವೃದ್ಧರಿಗೂ, ನಾಡತುಂಬೆಲ್ಲ, ಗಮಕ–ಸಾಹಿತ್ಯಗಳೆರಡನ್ನೂ ಪರಿಚಯ ಮಾಡಿಕೊಡುತ್ತ, ಎಲ್ಲರನ್ನೂ ಸಂತೋಷಪಡಿಸುತ್ತ '**ಗಮಕ ಪರಿಚಾರಕ**'ರೇ ಆಗಿದ್ದಾರೆ. ಇದು ಇವರಿಬ್ಬರ ಗಮಕ–ಸಾಹಿತ್ಯಗಳ ಪರಿಚರ್ಯ, ಸಾಹಿತ್ಯ ಸೇವೆ.

ಹೀಗೆ, ಈ ಇಬ್ಬರೂ ಸಹಯೋಗ ವ್ಯವಸಾಯದಿಂದ, ಸಾಹಿತ್ಯದ ಮೂಲಕ ಸಮಾಜಕ್ಕೆ ತಮ್ಮ ಬದುಕನ್ನು ಮುಡಿಪಾಗಿಟ್ಟು ಸಾರ್ಥಕ ಸೇವೆ ಸಲ್ಲಿಸುತ್ತ ಬಂದಿದಾರೆ. ನಾಡಿನ, ರಾಷ್ಟ್ರದ ಕೃತಜ್ಞತೆಗೆ ಪಾತ್ರರಾಗಿ, ಅರಮನೆ, ಗುರುಮನೆ, ಸರಕಾರ, ಸಂಗೀತ–ಸಾಹಿತ್ಯ ಅಕಾಡಮಿಗಳಿಂದ ಪುರಸ್ಕೃತರಾಗಿ, ನಾಡಿನ ಮನ್ನಣೆಗೆ ಪಾತ್ರರಾಗಿದ್ದಾರೆ.

ಗಮಕ–ಸಾಹಿತ್ಯಗಳ ಪರಿಚಾರಿಕೆಯ ಅಗತ್ಯವನ್ನು ಕುರಿತು ಪೂಜ್ಯ ಕೀರ್ತಿಶೇಷರಾದ ಡಾ|| ಜಿ.ಪಿ. ರಾಜರತ್ನಂ ಅವರು ಹೇಳಿರುವ ಮಾತನ್ನು ಈ ದಂಪತಿಗಳು ಅಕ್ಷರಶಃ ಹೀಗೆ ಪಾಲಿಸುತ್ತ ಸಾರ್ಥಕ ಬದುಕನ್ನು ಬಾಳುತ್ತಿದ್ದಾರೆ ಎಂಬುದು ಸ್ತುತ್ಯರ್ಹ.

"ನಮ್ಮ ದೇಶದ ಜನರಲ್ಲಿ ಎಲ್ಲರೂ ಓದಲು ಬಲ್ಲವರಿಲ್ಲ. ಓದಿಕೊಳ್ಳಬಲ್ಲವರಲ್ಲಿ

ಹಲವರಿಗೆ ಓದಿದ್ದೂ ಅರ್ಥವಾಗುವುದಿಲ್ಲ ; ಇನ್ನೊಮ್ಮೆ ಓದೋಣವೆಂದರೆ ಪುಸ್ತಕ ಹತ್ತಿರ ಇರುವುದಿಲ್ಲ ; ಅದಕ್ಕೆ ಕಾರಣ ಅವರಿಗೆ ಪುಸ್ತಕ ಕೊಳ್ಳುವ ಅಭ್ಯಾಸ ಇಲ್ಲ. ಪುಸ್ತಕವನ್ನು ಕೊಂಗು, ಓದಿ, ಅರ್ಥಮಾಡಿಕೊಂಡವರು ದರೂ ತಾವು ತಿಳಿದಿದ್ದನ್ನು, ತಮ್ಮಷ್ಟು ಭಾಗ್ಯವಿಲ್ಲದವರಿಗೆ ತಿಳಿಸಲು ಮುಂದೆ ಬರುತ್ತಿಲ್ಲ. ಈ ವಿಚಿತ್ರ ಪರಿಸ್ಥಿತಿಯಿಂದಾಗಿ, ಸೃಷ್ಟಿಯಾದ ಸಾಹಿತ್ಯ ಬಡಕಲು, ಅದರಿಂದ ಪ್ರಯೋಜನ ಪಡೆಯುವ ಜನ ಬಡಕಲು. ರಾಘವಾಂಕ ಹೇಳಿದ ಹಾಗೆ - ಕೃತಿರಚನೆಯ ಮುಖ್ಯೋದ್ದೇಶ : 'ಜನ ಬದುಕಬೇಕೆಂದು'. ಸೃಷ್ಟಿಯಾದದ್ದು ಸಾರ್ಥಕವಾಗಬೇಕಾದರೆ, ಅದನ್ನು ಪ್ರಾಕೃತರ ಹತ್ತಿರಕ್ಕೆ ಕೊಂಡೊಯ್ದು ಬಡಿಸುವ ಸಾಹಿತ್ಯ ಪರಿಚಾರಕರು ಎಷ್ಟು ಸಾವಿರ ಸಂಖ್ಯೆಯಲ್ಲಿ ಬಂದರೂ ಸಾಲದು.

ಹೀಗೆ, ಈ ದಂಪತಿಗಳೀರ್ವರೂ ಕನ್ನಡ ಪ್ರಾಚೀನ ಕಾವ್ಯ, ಆಧುನಿಕ ಕಾವ್ಯ (ಹಳಗನ್ನಡ, ಹೊಸಗನ್ನಡ, ಚಂಪೂ, ಷಟ್ಪದಿ, ರಗಳೆ, ಸಾಂಗತ್ಯ, ತ್ರಿಪದಿ, ಚೌಪದಿ, ಸಂಸ್ಕೃತ ಶ್ಲೋಕಗಳು, ಆಧುನಿಕ ಕವಿತೆಗಳು) ಹೀಗೆ ಕನ್ನಡ ಕಾವ್ಯ ವಾಹಿನಿಯನ್ನು ಕನ್ನಡ ನಾಡಿನ ಎಲ್ಲ ಮನೆ ಮನೆಗೂ, ಮನಮನಕ್ಕೂ ಕೊಂಡೊಯ್ಯುತ್ತಿದ್ದಾರೆ. ಅಕ್ಷರ ಬಾರದವರಿಗೂ ಕಾವ್ಯದ ರಸಾವೇಶದ ರುಚಿಯನ್ನು ಮುದ್ದಣಿಯು ಹಂಚುತ್ತ ಬರುತ್ತಿದಾರೆ. ಅಮೃತ ಸುಖದ ವಿತರಣೆ ಮಾಡುತ್ತ ಬರುತ್ತಿದಾರೆ. ಕನ್ನಡ ನಾಡಿನ ತುಂಬೆಲ್ಲ ತಮ್ಮ ಸಾಹಿತ್ಯ ಸೇವೆಯಿಂದ ಎಲ್ಲರ ಹೃನ್ಮನಗಳನ್ನು ತಣಿಸುತ್ತಿರುವ ಈ ಗಮಕ–ಸಾಹಿತ್ಯ ಪರಿಚಾರಕ ದಂಪತಿಗೆ ನಮ್ಮ ಕೃತಜ್ಞತೆಯ ನಮನಗಳು– ಇವರ ನುಡಿ ಪರಿಚಾರಿಕೆ ಹೀಗೆ ಮುಂದುವರಿದು ಕನ್ನಡ ತಾಯ ಸೇವೆ ಸಾಗಲಿ. ನೂರ್ಕಾಲ ಈ ದಂಪತಿಗಳು ನಮ್ಮ ಮಧ್ಯೆ ಇದ್ದು ನಮಗೆ ಮುದಕೊಡಲಿ. ದಯಾಮಯೀ ಸರ್ವ ಭಾಷಾಮಯೀ ವಾಣೀ ಸರಸ್ವತಿಯು, ಇವರೀರ್ವರಿಗೂ, ಇವರ ಕುಟುಂಬ ವರ್ಗಕ್ಕೂ ಸಕಲ ಸನ್ಮಂಗಳಗಳನ್ನು ಉಂಟುಮಾಡಲಿ ಎಂದು ಶ್ರೀ ಭಗವತಿಯಲ್ಲಿ ಪ್ರಾರ್ಥಿಸುತ್ತೇನೆ

ಶುಭಂ ಭೂಯಾತ್

ಶ್ರೀ ಶ್ರೀ ವನಿತೆ

ಪಿ. ಆರ್. ಭಾಗವತ

ಕಲಾವಿದನ ತಪಶ್ಚರ್ಯೆಯ ಸಾಧನೆಯ ಬಗೆಯನ್ನು ಅಥವಾ ಮಹಾತ್ಮ್ಯವನ್ನು ಕೆಲವೇ ಪಂಕ್ತಿಗಳಲ್ಲಿಯಾಗಲೀ ಅವಧಿಯಲ್ಲಿಯಾಗಲೀ ಬಣ್ಣಿಸುವುದು ಲೇಖಕನ ಸಾತ್ರುಗಾರಸ ಪ್ರಯತ್ನ ಬಡ ಪ್ರಯತ್ನ ಎನ್ನಬೇಕು. ಕಲಾವಿದನಿಗೆ ಗೌರವ ತೋರುವ ಸಂದರ್ಭದಲ್ಲಿ ಈ ಬಡ ಪದವನ್ನ ಹೃದಯದಸಿರಿವಂತಿಕೆ ಮುಂದೆ ಅಡಗಿ ಹೋಗುವುದು.

ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾವ್ ಇವರ ಬಗ್ಗೆ ಬರೆಯುವಾಗ ನನಗೆ ತೋರುತ್ತಿರುವದು ಭಾಷೆಯ, ಶಬ್ದಗಳ ಕೊರತೆ ಅಷ್ಟೆ.

ಶ್ರೀಮತಿ ಶಕುಂತಲಾಬಾಯಿ ಅವರು ಭಾರತ ಬಿಂದುರಾಯರ ಪರಂಪರೆಯನ್ನು ನಿಷ್ಠೆಯಿಂದ, ಪರಿಶ್ರಮದಿಂದ ಸಾಧಿಸಿ ಇಂದಿನ ಪೀಳಿಗೆಗೆ ಅದನ್ನು ಬೋಧಿಸುವ ವ್ರತ ಕೈಕೊಂಡವರಲ್ಲಿ ಒಬ್ಬರು.

ಶ್ರೀಮಾನ್ ಪಾಂಡುರಂಗರಾಯರ ಮಾತಿಗೆ ಪೂರ್ವರಂಗ ಸಿದ್ಧತೆಗಾಗಿ ಶ್ರೀಮತಿಯವರು ಹಾಡುತ್ತಾರೆ. ಶ್ರೀಯುತರ ಹಿನ್ನೆಲೆಯ ಗದ್ಯಕ್ಕೆ ಪೋಷಕವಾದ ಪದ್ಯ ಶ್ರೀಮತಿಯವರು ಹಾಡುತ್ತಾರೆ. ಒಬ್ಬರಿಗೊಬ್ಬರು ವಾದ ಸಂವಾದದಲ್ಲಿ ಶಕುಂತಲಾಬಾಯಿಯವರ ಹಾಡುಗಾರಿಕೆಯ, ಗಮಕದ ರಸವಾಹಿನಿ ಹರಿದದ್ದು ಕೇಳಿ ಆನಂದಿಸಿದ್ದೇನೆ.

ಕಲಾವಂತನು ತನ್ನ ಕಲಾ ಪ್ರತಿಭೆಯನ್ನು ತೋರಿಸುವ ಕೇಳಿಸುವ ಉತ್ಸಾಹದಿಂದಲೋ ಹಟದಿಂದಲೋ ಬೇರೆಯವರ ಕಲೆಯ ಆಸ್ವಾದವನ್ನು ಪಡೆಯುವ ಸಂಧಿಯನ್ನು ಕಳೆದುಕೊಳ್ಳುವದುಂಟು. ಆದಕ್ಕೆ ಶ್ರೀಮತಿ ಶಕುಂತಲಾಬಾಯಿಯವರು ಅಪವಾದ. ಹಿರಿಯ ಕಲಾವಿದರಂತೆ ಕಿರಿಯವರ ಸಂಗೀತ, ಗಮಕವನ್ನು ಕೇಳಿ ಆನಂದಪಡುವ ದುರ್ಲಭ ದೊಡ್ಡ ಗುಣ ಇವರಲ್ಲಿ ಕಂಡಿದ್ದೇನೆ.

ಸಾಹಿತ್ಯ ಸಂಗೀತ ಸುಧಾರಸವನ್ನು ಕಿವಿತುಂಬ ಉಣ್ಣಿಸುವ ಈ ವನಿತೆ ಹೊಟ್ಟೆತುಂಬ ಅನ್ನರಸಪಾಕವನ್ನು ಉಣ್ಣಿಸುವ ಅನ್ನಪೂರ್ಣೆಯೂ ಅಹುದು. ಮನೆಗೆ ಬರುವವರ ಆತಿಥ್ಯಕ್ಕೆ ಸದಾಕಾಲವು ತೆರೆದ ಹೃದಯ ಈ ದಂಪತಿಗಳದು.

ಉತ್ಸವಪ್ರಿಯ ಈ ದಂಪತಿ ನಿಮಂತ್ರಣ ಬಂದ ಎಲ್ಲ ಕಾರ್ಯ ಸಮಾರಂಭದಲ್ಲಿ ಪಾಲುಗೊಳ್ಳಲು ಆತುರ. ಹೊರಗಡೆ ಸಮಾರಂಭವಿಲ್ಲದಾಗ ಮನೆಯಲ್ಲಿಯೇ ಸಂತೋಷ ಕೂಟವೋ! ಗೌರವ ಸಮಾರಂಭವೋ ಏರ್ಪಡಿರುವದರಲ್ಲಿ ಇವರದು ಮೇಲಿನದು ಉತ್ಸುಕವ ಉತ್ಸಾಹ!

ಪ್ರಸಿದ್ಧಿಯೇ ಸಿದ್ಧಿ ಅಲ್ಲ ಅನುಭವವನ್ನು ತಿಳಿದು ಅರ್ಥದ ದಾಸನಾಗದೇ ಕನ್ನಡ ಸಾಹಿತ್ಯದ ಅರ್ಥವನ್ನು ಅರಿತು, ಅದು ಅದರ ಮಥನದಿಂದ ಬಂದ ನವನೀತವನ್ನು ರಸಿಕರಿಗೆ ಉಣಿಸುತ್ತಿದ್ದಾರೆ ಶಕುಂತಲಾಬಾಯಿಯವರು.

ಶಕುಂತಲಾ ಬಾಯಿಯವರೇ ಅಲ್ಲ ಶಕುಂತಲಾ ಅಮ್ಮನವರೇ ಜೀವೇಮ ಶರದಃ ಶತಂ”

ಅಪೂರ್ವ ಕಂಠಶ್ರೀ ಹೊಂದಿದ ಗಮಕ ವಿದುಷಿ

ಸಗರ ಕೃಷ್ಣಾಚಾರ್ಯ

ಅದೊಂದುಕಾಲ. ಕರ್ನಾಟಕದ ತುಂಬೆಲ್ಲ ಕನ್ನಡದ ಕೆಲಸ ಉತ್ಸಾಹದಿಂದ ಸಾಗಿತ್ತು. ಮೈಸೂರು, ಬೆಂಗಳೂರು, ಧಾರವಾಡ, ವಿಜಾಪುರ ಮುಂತಾದ ಕಡೆಗಳಿಂದ ಅನೇಕ ಹಿರಿಯ ಸಾಹಿತಿಗಳು, ಕವಿಗಳು ಕರ್ನಾಟಕದ ಆದ್ಯಂತ ತಿರುಗಾಡಿ ಸಾಹಿತ್ಯ ಪ್ರೇಮದ ಚಿಲುಮೆ ಚಿಮ್ಮಿಸಿದರು; ಕರ್ನಾಟಕ ಏಕೀಕರಣದ ಹುಚ್ಚು ಹಿಡಿಸಿದರು. ಆಗ ಯಾರಲ್ಲಿಯೂ ನಾವು ಮೈಸೂರು ಕನ್ನಡಿಗರು, ನಾವು ಉತ್ತರ ಕರ್ನಾಟಕದವರು, ನಾವು ಹೈದರಾಬಾದ್ ಕನ್ನಡಿಗರು ಎಂಬ ಸಂಕುಚಿತ ಮನೋವೃತ್ತಿ ಇರಲಿಲ್ಲ. ಎಲ್ಲರ ಮನೋಮಂದಿರದಲ್ಲಿ ನಾವು ಒಂದು, ನಮ್ಮ ನಾಡು ಒಂದು, ಎಂಬ ಉದಾತ್ತ ಭಾವನೆ ಬೇರೂರಿ ಚಿಗುರಿತ್ತು. ಅದು ಹೆಮ್ಮರವಾಗುವಷ್ಟು ಚೈತನ್ಯಹೊಂದಿತ್ತು. ನಾವು ಆಗ ಎಲ್ಲ ಕನ್ನಡಿಗರನ್ನೂ ಆತ್ಮೀಯತೆಯಿಂದ ಒಡಮಾಡಿಕೊಳ್ಳುತ್ತಿದ್ದೆವು. ತಬ್ಬಿಕೊಂಡು ನಲಿಯುತ್ತಿದ್ದೆವು. ಸಾಂಸ್ಕೃತಿಕ ಭಾವೈಕ್ಯ ಸಾಧಿಸಿದ್ದೆವು. ಆದರೆ ಮೈಸೂರು ರಾಜ್ಯ ಆದನಂತರ ಗಾಳಿ ವಿರುದ್ಧದೆಶೆಗೆ ಬೀಸತೊಡಗಿತು. ಕರ್ನಾಟಕ ಆದಮೇಲಂತೂ ವಿಪರೀತದಿಶೆಗೆ ಬೀಸಿ ಏನನ್ನೋ ಕಾಣ ಬಯಸಿದ ನಮಗೆ ಏನೋಸಿಕ್ಕು ಒದ್ದಾಡುತ್ತಲಿದ್ದೇವೆ. ಕಾಲಮಹಿಮೆ ಅದು 'ತೇಹಿನೋದಿವಸಾಗತಾಃ' ಅನ್ನದೇ ವಿಧಿಯಿಲ್ಲ.

ಆಗ ಗಮಕಕಲಾ ಪ್ರಾವೀಣ್ಯತೆಯಲ್ಲಿ ಭಾರತ ಬಿಂದೂರಾಯರ ಖ್ಯಾತಿ ಕರ್ನಾಟಕದ ತುಂಬೆಲ್ಲ ಹಬ್ಬಿತ್ತು. ಎಲ್ಲರ ಬಾಯಲ್ಲೂ ಅವರ ಹೆಸರು. ಯಾವ ಪತ್ರಿಕೆಯಲ್ಲಿಯೂ ಅವರ ಖ್ಯಾತಿ. ಹೈದರಾಬಾದಿನಲ್ಲಿ ನಾನವರ ಭಾರತವಾಚನ ಕೇಳಿ ಆನಂದಿಸಿದ್ದೆ.

ಅದೇ ಸಮಯದಲ್ಲಿ, 'ಹೆಂಗಸರಲ್ಲಿಯೂ ಒಬ್ಬ ಗಮಕ ವಿದುಷಿ ಇದ್ದಾರೆ. ಅವರು ಗಮಕ ಕಲೆಯಲ್ಲಿ ಚೆನ್ನಾಗಿ ಪಳಗಿದ್ದಾರೆ' ಎಂಬ ಖ್ಯಾತಿ ಹರಡಿತು. ಯಾರವರು ಎಂಬುದು ಪ್ರಶ್ನಾರ್ಥಕ ಚಿಹ್ನೆಯಂತೆ ನಮ್ಮ ಮುಂದೆ ನಿಂತಿತು. ನಾನಾಗ ರಂಗಂಪೇಟೆಯ ಕನ್ನಡ ಸಾಹಿತ್ಯ ಸಂಘವನ್ನು ಸ್ಥಾಪಿಸಿ ಕೆಲ ಉತ್ಸಾಹೀ ತರುಣರ ತಂಡದೊಡನೆ ಕನ್ನಡದ ಕೈಂಕರ್ಯವನ್ನು ಕೈಗೆತ್ತಿಕೊಂಡಿದ್ದೆ. ಪ್ರತಿವರುಷವೂ ನಾಡಹಬ್ಬವನ್ನು ಸಂಭ್ರಮದಿಂದ ಆಚರಿಸುತ್ತಿದ್ದೆವು. ವರುವರುಷವೂ ಹೊಸ ಹೊಸ ಸಾಹಿತಿಗಳನ್ನೂ, ಕವಿಗಳನ್ನೂ, ಗಮಕಿಗಳನ್ನೂ ಆಹ್ವಾನಿಸಿ, ಅವರ ನಿಕಟ ಪರಿಚಯ, ಸಂಬಂಧ ಹೊಂದಿ ಅವರ ಸಾಹಿತ್ಯ ಸೇವೆಯ ತನಿರಸವನ್ನು ಆಸ್ವಾದಿಸಿ ತೃಪ್ತಿಹೊಂದುವ ಸಂಕಲ್ಪ ಹೊಂದಿದ್ದೆವು.

ಆ ಸಮಯದಲ್ಲಿ ಮೊಟ್ಟಮೊದಲು ನಮಗೆ ಪತ್ರಿಕೆಗಳ ಮುಖಾಂತರ ಶ್ರೀಮತಿ ಶಕುಂತಲಾಬಾಯಿಯವರ ಪರಿಚಯದ ಸೌಭಾಗ್ಯ ಲಭಿಸಿತು. ಕೇವಲ ಶಕುಂತಲಾಬಾಯಿ ಅಂದರೆ ಸಾಲದು. ಬಹುಶಃ ಈಗ ಇಷ್ಟೇ ಹೆಸರು ಸಾಕಾದೀತು. ಆಗ ಮಾತ್ರ

ಶಕುಂತಲಾಬಾಯಿ ಪಾಂಡುರಂಗರಾವ್ ಅಂದರೇನೇ ದಟ್ಟ ಪರಿಚಯದ ಸವಿನೆನಪು. ಅಂಥ ಆದರ್ಶ ದಾಂಪತ್ಯ ಅವರದು. ಎಲ್ಲ ವಿಷಯಗಳಲ್ಲಿಯೂ ಅವರು ಅರ್ಧನಾರೀ ನಟೇಶ್ವರ ಇದ್ದಹಾಗೆ. ಒಂದು ಪಾರ್ಶ್ವ ಒಬ್ಬರದಾದರೆ ಇನ್ನೊಂದು ಪಾರ್ಶ್ವ ಇನ್ನೊಬ್ಬರದು. ಒಬ್ಬರು ಗಮಕ ಕಲೆಯಲ್ಲಿ ತಮ್ಮ ಪ್ರಾವೀಣ್ಯತೆಯನ್ನು ಎತ್ತಿ ತೋರಿಸಿದರೆ, ಇನ್ನೊಬ್ಬರು ವ್ಯಾಖ್ಯಾನ ಕೌಶಲದಲ್ಲಿ ನೈಪುಣ್ಯತೆಯನ್ನು ಮೆರೆದವರು. ಒಬ್ಬರ ಕಂಠಶ್ರೀಯಿಂದ ಸುಶ್ರಾವ್ಯವಾಗಿ ಹಾಡಿದರೆ ಇನ್ನೊಬ್ಬರು ವಾಕ್ ಶ್ರೀಯಿಂದ ಅವರ ಕೃತಿಗೆ ದಿವ್ಯ ಭಾಷ್ಯವನ್ನು ಬರೆದವರು. ಅಂತೆಯೇ ಅವರ ಅನ್ಯೋನ್ಯತೆ ಒಂದು ವಿಚಿತ್ರ ಮಾದರಿ. ಇನ್ನೊಬ್ಬರಲ್ಲಿ ಅದು ಸಿಗುವುದು ಅಪರೂಪ ಮಾತ್ರವಲ್ಲ, ಅಸಾಧ್ಯ. ನಾನಿದನ್ನು ನನ್ನ ಅನುಭವದಿಂದ ಹೇಳುವ ಮಾತು.

ಒಮ್ಮೆ ಬಿ. ಶ್ರೀ. ದಂಪತಿಗಳು ಹೈದರಾಬಾದ್ ಕರ್ನಾಟಕದ ಪ್ರವಾಸ ಕೈಕೊಂಡರು. ಅನೇಕ ಕಡೆಗಳಲ್ಲಿ ಅವರ ಕಾವ್ಯವಾಚನದ ಕಾರ್ಯಕ್ರಮಗಳು ಏರ್ಪಟ್ಟಿದ್ದುವು. ಸುಗಂಧ ಪುಷ್ಪ ಎಲ್ಲಿ ಅರಳಿದರೇನು, ಪರಿಮಳ ಸೂಸದೇ ಇದ್ದೀತೇ? ಆಗಲೆ ಹೈದರಾಬಾದ್ ಕರ್ನಾಟಕದ ತುಂಬೆಲ್ಲ ಅವರ ಪ್ರಖ್ಯಾತಿ ಹರಡಿತು. ಸಾಹಿತ್ಯ ಸಮ್ಮೇಳನಗಳಲ್ಲಿ ಶಕುಂತಲಾಬಾಯಿಯವರ ಸುಶ್ರಾವ್ಯ ಕಂಠವನ್ನು ಪಾಂಡುರಂಗರಾಯರ ಸುಮಧುರ ಮಾತುಗಾರಿಕೆಯನ್ನೂ ಕಂಡವರಂತೂ ಅವರ ಕಾರ್ಯಕ್ರಮಕ್ಕೆ ಮಾರುಹೋಗಿದ್ದರು. ಹೀಗಾಗಿ ಹೈದರಾಬಾದ್ ಕರ್ನಾಟಕ ಅವರನ್ನು ಹೃತ್ಪೂರ್ವಕ ಸ್ವಾಗತಿಸಿತ್ತು. ಶಹಪುರದ ನಾಡಹಬ್ಬವೂ ನನ್ನ ನೇತೃತ್ವದಲ್ಲಿಯೇ ನಡೆಯುತ್ತಿತ್ತು. ಒಮ್ಮೆ ಸನ್ಮಿತ್ರ ಹೋಳಿ ಶೇಷಗಿರಿರಾಯರೂ, ಇನ್ನಿತರರೂ ಪಾಂಡುರಂಗರಾಯ ದಂಪತಿಗಳನ್ನು ಶಹಪುರಕ್ಕೂ ಆಹ್ವಾನಿಸಲು ನನ್ನನ್ನು ಒತ್ತಾಯಿಸಿದರು. ರಂಗಂಪೇಟೆಯಿಂದ ಮಿರಿಯೂಲ ಬುದ್ಧಿವಂತ ಶೆಟ್ಟಿಯದೂ, ಅವರನ್ನು ರಂಗಂಪೇಟೆಗೂ ಕರೆತರಬೇಕೆಂದು ಆಗ್ರಹ. ಸರಿ ಅವರನ್ನು ಸಂಧಿಸಿ ಕಾರ್ಯಕ್ರಮ ಗೊತ್ತುಪಡಿಸಿಕೊಂಡೆ. ಅದೇ ಮೊದಲ ಪರಿಚಯ, ಮೊದಲ ಭೆಟ್ಟಿ. ಅವರ ನಿರ್ಮಲ ವಿದ್ಯಾಂತಃಕರಣ, ಸೌಜನ್ಯ ಮತ್ತು ಸ್ನಿಗ್ಧ ಮುಗುಳುನಗೆಗೆ ನಾನು ಮಾರುಹೋದೆ. 'ನಿಮ್ಮಲ್ಲಿಗೆ ಬರಬೇಕೇ? ಬಾರದೇ ಏನು ಕೃಷ್ಣಾಚಾರ್!' ಎಂದು ಒಂದೇ ಮಾತಿನಲ್ಲಿ ನನ್ನ ದುಗುಡ ದೂರಗೊಳಿಸಿ, ಸಂತಸದ ವಾರಿಧಿಯಲ್ಲಿ ಮುಳುಮುಳುಗಿಸಿ ತೇಲಿಸಿದರು. ಅಂದು ನನಗೆ ಅಭ್ಯಂಗಸ್ನಾನ ಮಾಡಿದಷ್ಟು ತೃಪ್ತಿ. ಆಂಜನೇಯ ಸಂಜೀವಿನಿ ಪರ್ವತವನ್ನು ಹೊತ್ತು ತಂದಷ್ಟು ಅಭಿಮಾನ. ಇದು 1956ರ ಮಾತು.

ಮಾತುಕೊಟ್ಟಂತೆ ಬಂದೇ ಬಂದರು. ಕಾರ್ಯಕ್ರಮಗಳು ಯಶಸ್ವಿಯಾಗಿ ಸಾಂಗವಾದುವು. ರಂಗಂಪೇಟೆ ಯಲ್ಲಂತೂ ಅವರ ಕಾರ್ಯಕ್ರಮಕ್ಕೆ ಅದ್ವಿತೀಯ ಕಳೆ ಬಂತು. ಸುರಪುರ–ರಂಗಂಪೇಟೆ ರಸಿಕರ ತವರೂರು. ಸಾಹಿತಿಗಳ, ಸಾಹಿತ್ಯಪ್ರೇಮಿಗಳ, ಗಮಕಿ, ವಾಗ್ಮಿ ಮತ್ತು ಸಂಗೀತಜ್ಞರ ಆಡುಂಬೊಲ ಅದು. ಆಗ ಶಕುಂತಲಾಬಾಯಿಯವರು ನನ್ನ ಎರಡು ಕವನಗಳನ್ನೂ ಹಾಡಿದರು. ಆ ಧ್ವನಿ, ಆ ಕಂಠ, ಆ ರಾಗ ಕೇಳಿ ನಾನೇ ಮೂಕನಂತಾಗಿದ್ದೆ. ನನ್ನ ಕವನಗಳು ಇಷ್ಟು ಅರ್ಥಪೂರ್ಣವಾಗಿವೆಯೇ? ಎಂದು ನನ್ನ ಬೆನ್ನು ನಾನೇ ಚಪ್ಪರಿಸಿಕೊಳ್ಳುವಂತಾಗಿತ್ತು. ಕವಿಯ ಕವಿತೆಗೆ ಮೆರಗು, ಕೀರ್ತಿ,

ತಂದು ಕೊಡುವವರು ಗಮಕಿಗಳಲ್ಲವೆ? ನನ್ನ, 'ಸಗರನಾಡಿಗೆ ಬಾ !' ಎಂಬ ಕವಿತೆಯನ್ನು ಹಾಡುವಾಗಲಂತೂ ಕಿಕ್ಕಿರಿದ ಜನಸ್ತೋಮ ಮೈಮರೆತು ಆಲಿಸುತ್ತಿತ್ತು. ರಸಲೋಕದಲ್ಲಿ ವಿಹರಿಸುತ್ತಿತ್ತು.

ಶಹಪುರ ರಂಗಂಪೇಟೆಗಳಲ್ಲಿದ್ದಾಗ ನನಗೂ, ನನ್ನ ಧರ್ಮಪತ್ನಿಗೂ ಅವರಿಗಾಗಿ ಆತಿಥ್ಯನೀಡುವ ಸೌಭಾಗ್ಯ ಲಭಿಸಿತ್ತು. ಅದೆಂಥ ಆತ್ಮೀಯತೆಯಿಂದ ಅವರು ಅದನ್ನು ಸ್ವೀಕರಿಸಿದರು, ನಮ್ಮನ್ನು ಕೃತಾರ್ಥಗೊಳಿಸಿದರು.

ಒಮ್ಮೆ ನಾನು ಬೆಂಗಳೂರಿಗೆ ಹೋದಾಗ ಅವರ ಮಕ್ಕಳ ಮಂಟಪಕ್ಕೆ ಹೋಗಿದ್ದೆ. ಅದು ನಿಜವಾಗಿಯೂ ಮಕ್ಕಳ ಮಂಟಪವೇ ಆಗಿತ್ತು. ಮಕ್ಕಳ ಶಿಕ್ಷಣ, ನೀತಿ ಅವರ ಕೈಯಲ್ಲಿ ಸುರಕ್ಷಿತವಾಗಿತ್ತು, ಭದ್ರವೂ ಆಗಿತ್ತು.

ನಾನು ಬೆಂಗಳೂರು ವಿಭಾಗದ, ಶಿಕ್ಷಣ ಇಲಾಖೆಯಲ್ಲಿ ಕನ್ನಡ ವಿಷಯ ವೀಕ್ಷಣಾಧಿಕಾರಿಯಾಗಿದ್ದಾಗ ಅವರನ್ನು ಆಗಾಗ ಕಾಣುವ, ಆತಿಥ್ಯವನ್ನು ಸ್ವೀಕರಿಸುವ ಸುಸಂಧಿ ಲಭಿಸುತ್ತಿತ್ತು. ಅವರ ಆತಿಥ್ಯದಲ್ಲಿ ಆತ್ಮೀಯತೆಯ ಅನುರಾಗದ ಸವಿರಾದ ಎಳೆಗಳು ಹಾಸುಹೊಕ್ಕಾಗಿರುತ್ತಿದ್ದುವು. ಪತಿ-ಪತ್ನಿಯರಿಬ್ಬರೂ ಬಾಯಿತುಂಬ ಮಾತನಾಡಿದಾಗ ಮಲ್ಲಿಗೆ ಜಿಲ್ಲಿವರಿದಂತಹ ಅನುಭವ. ಗುಲಾಬಿ ತನ್ನ ತನಿಗಂಪನ್ನು ಸೂಸಿದ ಸಂಭ್ರಮ.

ಪುನಃ ಹೋದ ವರ್ಷ ಪಂಡಿತ ಕೆ. ಪಿ. ಶಿವಲಿಂಗಯ್ಯನವರ ಐವತ್ತನೆಯ ಹುಟ್ಟುಹಬ್ಬದ ನಿಮಿತ್ತ ಜರುಗಿದ ಸನ್ಮಾನ ಸಮಾರಂಭದ ಸಮಯದಲ್ಲಿ ಶಕುಂತಲಾ ಬಾಯಿಯವರ ಕಂಠಶ್ರೀಯನ್ನು ಆಲಿಸುವ ಸುಯೋಗ ಲಭಿಸಿತ್ತು. ಬೆಂಗಳೂರಿನ ನಗರ ಭವನದಲ್ಲಿ ಅದ್ದೂರಿಯ ಸತ್ಕಾರ ಸಮಾರಂಭ. ಮಾತೆ ಮಹಾದೇವಿಯವರೂ, ಮಾನ್ಯ ಶ್ರೀ ಜೆ. ಬಿ. ಶಂಕರರಾಯರೂ (ಶಿಕ್ಷಣ ಮಂತ್ರಿ) ಆ ಸಭೆಯಲ್ಲಿ ಉಪಸ್ಥಿತರಿದ್ದರು. ಡಾ|| ರಂ. ಶ್ರೀ ಮುಗಳಿ, ಎಸ್. ಆರ್. ಮಳಗಿ ಮುಂತಾದ ಸಾಹಿತಿಗಳೂ ಆ ಸಭೆಯಲ್ಲಿ ಭಾಗವಹಿಸಿದ್ದರು. ನಮ್ಮೆಲ್ಲರ ಭಾಷಣಗಳು ಒಂದು ತೂಕವಾದರೆ ಶ್ರೀಮತಿ ಶಕುಂತಲಾಬಾಯಿಯವರ ಕಾವ್ಯವಾಚನ ಇನ್ನೊಂದು ತೂಕ. ವಯಸ್ಸಾದರೂ ಆ ಕಂಚಿನ ಕಂಠದಿಂದ ಸುಶ್ರಾವ್ಯವಾಗಿ ಹಾಡುತ್ತಿದ್ದಾಗ ಜನಸ್ತೋಮ ಮೂಕವಿಸ್ಮಿತವಾಗಿ ಆಲಿಸುತ್ತಿತ್ತು. ನಾನಾಗ 'ಧನ್ಯ' ಎಂದುಕೊಂಡೆ.

ಶಕುಂತಲಾಬಾಯಿಯವರ ಅರವತ್ತು ವರ್ಷದ ಸವಿಬಾಳಿನ ನೆನಪಿಗಾಗಿ ಹೊರಡಿಸುವ ಅಭಿನಂದನ ಗ್ರಂಥಕ್ಕಾಗಿ ನನ್ನ ನಾಲ್ಕು ಮಾತು ಬಯಸಿದರು. ಬರೆದೆ. ಹಿಡಿಸಿದರೆ ಅದು ಅವರ ಕೀರ್ತಿ ಕಲಶಕ್ಕೆ ಸುವರ್ಣ ಲೇಪ.

'ಗಮಕವಿದುಷಿ, ಕುಂ. ಸೌ. ಶಕುಂತಲಾಬಾಯಿ ಪಾಂಡುರಂಗರಾಯರು ಇನ್ನೂ ಬಹುಕಾಲ ಬಾಳಲಿ ! ತಮ್ಮ ದಿವ್ಯಕಂಠದಿಂದ ಕನ್ನಡದ ಜನತೆಗೆ ಶ್ರೇಷ್ಠ ಕಾವ್ಯಗಳ ಸಾರಸರ್ವಸ್ವವನ್ನು ಉಣಿಸುತ್ತಿರಲಿ !' ಎಂದು ಪರಮಾತ್ಮನಲ್ಲಿ ಪ್ರಾರ್ಥಿಸುತ್ತೇನೆ.

ಜೀವೇಮ ಶರದಃಶತಂ

ಜನತೆಯನ್ನು ಕೃತಜ್ಞತೆಗೆ ಒಳಮಾಡಿದ ಜೀವ

ಹರಿಹರಪ್ರಿಯ

1977ರ ಪ್ರಾರಂಭದ ದಿನಗಳು. ಬೆಂಗಳೂರಿನಿಂದ ಮಿತ್ರರೊಬ್ಬರನ್ನು ಕರೆದುಕೊಂಡು ಮೈಸೂರಿಗೆ ಕುವೆಂಪು ಬಳಿಗೆ ಹೋದೆ. ಬಿಸಿಲಿನ ಝಳ ತಗ್ಗಿ ಸಂಜೆಯ ತಂಪು ಸಮೀಪಿಸುತ್ತಿತ್ತು. ವರಾಂಡದ ಚಿತ್ರದ ಕುರ್ಚಿಗಳಲ್ಲಿ ಕೂರುವಾಗಲೇ, ಮಧ್ಯಸ್ಥಾಯಿಯಲ್ಲಿ ಕಾವ್ಯವಾಚನ ಕೇಳಿಸಿತು ಒಳಗಿನಿಂದ. ಗೌಳಶಾರೀರ ಮೆಲುಸೊಲ್ಲಿನೆ ತಾರಸ್ಥಾಯಿ ಮುಟ್ಟಿತು ಎನ್ನುತ್ತಿದ್ದಂತೆಯೇ ಮಂದ್ರ ಮುಟ್ಟಿ ಮತ್ತೆ ಮಧ್ಯಸ್ಥಾಯಿಯಲ್ಲಿ ಗಂಭೀರವಾಗಿ ಹರಿಯುತ್ತಿತ್ತು ಕಾವ್ಯವಾಚನ. ವಾತಾವರಣದಷ್ಟೇ ತಿಳಿಯಾಗಿತ್ತು ನಾದ. ಒಳಕ್ಕೆ ಹೋಗಿ ನೋಡುವ ಮನಸ್ಸಾಯಿತು. ಅಷ್ಟರಲ್ಲಿ ಕಾವ್ಯವಾಚನ ನಿಂತಿತು. ಕುವೆಂಪು ತೆರೆಬಾಗಿಲು ಸರಿಸಿ ಕಣ್ತುಂಬಿ(ಸಿ)ದರು. ಎದ್ದು ನಿಂತು ನಮಸ್ಕಾರ ಕ್ರಿಯಾಉವಾಚ ನಡೆಯುವಾಗಲೇ, ಕಣ್ಣು ಕವಿಯುಕಂಠ(ಡಾ|| ಹಾ ಮಾ ನಾಯಕರ ನುಡಿಗಟ್ಟು)ಕ್ಕಾಗಿ ತವಕಿಸಿದನು. "ಶಕುಂತಲಾಬಾಯಿ ಪಾಂಡುರಂಗರಾವ್ ಅವರು ಶ್ರೀರಾಮಾಯಣದರ್ಶನಂನ ಕೆಲವು ಭಾಗಗಳನ್ನು ಟೇಪ್‌ಮಾಡಿ ಕಳಿಸಿಕೊಟ್ಟಿದ್ದಾರೆ. ನೀವೂ ಒಮ್ಮೆ ಅವರ ಕಾವ್ಯವಾಚನ ಕೇಳಿ. ಬೆಂಗಳೂರಿನಲ್ಲೇ ಇದ್ದಾರೆ. ಶ್ರೀರಾಮಾಯಣದರ್ಶನಂ ಅನ್ನು ಕಾವ್ಯವಾಚನಕ್ಕೆ ತುಂಬಾ ಚೆನ್ನಾಗಿ ಅಳವಡಿಸಿಕೊಂಡು, ಈಗಾಗಲೇ ಬಹಳಕಡೆ ಹಾಡಿದ್ದಾರೆ. ಅಲ್ಲೆಲ್ಲಾ ಕೇಳಿದ ಜನ ವೈಯಕ್ತಿಕವಾಗಿ ನನಗೆ ಪತ್ರಗಳು ಬರೆದು, ಸ್ವತಃ ಓದುವಾಗ ಕಾಣದ–ಕೇಳದ ಕಾವ್ಯದ ಧ್ವನಿ–ರಸ–ದರ್ಶನಗಳು ಶಕುಂತಲಾಬಾಯಿಯವರ ಕಾವ್ಯವಾಚನದಿಂದ ತಮಗೆ ಲಭ್ಯವಾಯಿತೆಂದು ಸಂತೋಷಪಟ್ಟಿದ್ದಾರೆ." ಹೀಗೆಂದು ನುಡಿದ ಕುವೆಂಪು, ಕಾವ್ಯವಾಚನ ಮಹತ್ವ, ಅದರ ಹುಟ್ಟು ಬೆಳವಣಿಗೆ, ಇವತ್ತು ಆ ಮಾಧ್ಯಮದ ಸ್ಥಿತಿಗತಿ, ಮುಂದಾದರೂ ಅದರ ಪುನರುತ್ಥಾನಕ್ಕಾಗಿ ಯುವಕರು—ಸಂಘಸಂಸ್ಥೆಗಳು ಮಾಡಬೇಕಾದ ಕೆಲಸ, ಕರ್ತವ್ಯ ಕುರಿತು ಸುದೀರ್ಘವಾಗಿ ಮಾತಾಡಿದರು.

ಬೆಂಗಳೂರಿಗೆ ಬರುವಾಗ, ಬಂದಮೇಲೂ ಶಕುಂತಲಾಬಾಯಿ ಪಾಂಡುರಂಗರಾವ್ ಅವರನ್ನು ಕಾಣಬೇಕು, ಕಾವ್ಯವಾಚನ ಸಾಕಷ್ಟುಕಾಲ ಕೇಳಬೇಕು ಎಂದು ಮನಸ್ಸು ಚಡಪಡಿಸುತ್ತಿತ್ತು. ಅದರ ಜೊತೆಗೆ ಅವರ ಬಗ್ಗೆ ಹಿರಿಯರು ಮಿತ್ರರ ಬಳಿ ಕೇಳಿತಿಳಿಯುವ ಪ್ರಯತ್ನಕೂಡ ನಡೆಸಿದ್ದೆ. ಒಂದೆರಡುಬಾರಿ ಕನ್ನಡ ಸಾಹಿತ್ಯ ಪರಿಷತ್ತಿನ ಭಾರಿ ಸಮಾರಂಭಗಳಲ್ಲಿ ಶಕುಂತಲಾಬಾಯಿಯವರು ಪ್ರಾರ್ಥನೆ ನಡೆಸಿಕೊಟ್ಟದ್ದನ್ನು ಕೇಳಿದೆ. ಆದರೂ ಪರಿಚಯ-ಸ್ನೇಹ-ಬಂಧುತ್ವ ಉಂಟಾಗುವಂತಹ ಸಂದರ್ಭ ಒದಗಿಬಂದಿರಲಿಲ್ಲ.

ಗೃಹಸ್ಥನಾದಮೇಲೆ ರಾಜಾಜಿನಗರದಲ್ಲೇ ಬಾಡಿಗೆಗೆ ಮನೆಹಿಡಿದಿದ್ದೆ. ಒಂದೆರಡು ಸಾರಿ ಬಿ. ಎಸ್. ಪಾಂಡುರಂಗರಾವ್ ಅವರ ಭೇಟಿಯಾಯಿತು. "ಪುಣ್ಯಧಾಮ"ದ ಸನ್ನಿಧಿಯಲ್ಲಿರುವ ನಾವೆಲ್ಲಾ ಆಗಾಗ್ಗೆ ವಿದ್ಯಾವರ್ಧಕ ಸಂಘದಲ್ಲಿ ಕೊಡುತ್ತಿದ್ದೇವೆ,

ಡಾ|| ಹ. ನಾ. ಕಟ್ಟಿ—ಶ್ರೀಹರಿಯವರ ಕೃಪೆಯಿಂದ. ಕಂಡಾಗೆಲ್ಲಾ ಪಾಂಡುರಂಗ ರಾವ್, "ಕುವೆಂಪು ಒಲವು ನಿಲವು" ಬಗ್ಗೆ ಮಾತಾಡುತ್ತಿದ್ದರು. ಕುವೆಂಪು, ಸಾಹಿತ್ಯ ಎಂದರೆ ಅವರಿಗೆ ಪ್ರೀತಿ–ವಿಶ್ವಾಸ–ಗೌರವ. ಆ ವ್ಯಕ್ತಿ–ಕೃತಿಗಳ ಪರಿಚಯದಿಂದ ನನಗೂ ನನ್ನ ಮೇಲೂ ಇವರ ಸಹೃದಯ ರಸವಿನಿಯೋಗ.

ಡಾ|| ಗೊರೂರು ರಾಮಸ್ವಾಮಿಅಯ್ಯಂಗಾರ್ ಅವರಿಗೆ ಭಾರತದ ಕೇಂದ್ರ ಸಾಹಿತ್ಯ ಅಕಾಡಮಿ ಬಹುಮಾನ ಪ್ರಕಟವಾದ ಮಾರನೆಯ ದಿನ. ನಾನು ಗೊರೂರು ಮನೆಯಲ್ಲಿ ಮಾತಾಡುತ್ತಾ ಕುಳಿತಿದ್ದೆ. ಕೈ ತೋಟದ ತೆಂಗಿನ ಗರಿಗಳ ಸರಬರದೊಂದಿಗೆ ಮಾತು–ಮನೆ ನಕ್ಕು ನಲಿಯುತ್ತಿತ್ತು. ಮಧ್ಯೆ ಮಧ್ಯೆ ಫೋನು–ಕಾಲುಗಳ ಅಡೆತಡೆ. ತಂಗಾಳಿಯ ಇಂಪು–ಕಂಪಿನೊಂದಿಗೆ ಪಾಂಡುರಂಗರಾವ್ ಹಾಗೂ ಶಕುಂತಲಾಬಾಯಿ ಅವರು ಪ್ರತ್ಯಕ್ಷವಾದರು. ಅಕಾಡಮಿ ಬಹುಮಾನ ಬಂದದ್ದಕ್ಕೆ ಶೇಷಮ್ಮ ಗೊರೂರರನ್ನು ಅಭಿನಂದಿಸಿದರು. ಬಹಳ ಹೊತ್ತು ಮಾತಾಡಿದೆವು. ಶೇಷಮ್ಮ ಅವರು ಶಕುಂತಲಾ ಬಾಯಿಯವರಿಗೆ, "ನೋಡಿ ನಿಮ್ಮ ಕಾವ್ಯವಾಚನ ಕೇಳಿ ಬಹಳಕಾಲ ಆಯಿತು, ಗೊರೂರಿಗೆ ಬಂದಿದ್ದಾಗ ಇರಬೇಕು. ಮತ್ತೆ ಈಗ ಹತ್ತಿರದಲ್ಲೆಲ್ಲಾದರೂ ನಡೆದರೆ ತಿಳಿಸಿ" ಎಂದರು. "ಅದೇತಕ್ಕೆ ಹೇಳಿ. ನೀವು ಯಾವದಿನ ಕೇಳಬೇಕೆಂದು ಬಯಸುತ್ತೀರೋ ಹೇಳಿ. ನಿಮ್ಮ ಮನೆಗೇ ಬಂದು, ನಿಮ್ಮ ಎದುರಿಗೇ ಹಾಡುತ್ತೇನೆ." ಎಂದರು ಶಕುಂತಲಾ ಬಾಯಿಯವರು. "ಓ ಹಾಗೇ ಆಗಲಿ. ಇನ್ನೂ ಎಂಟುಹತ್ತು ಜನರನ್ನು ಇಲ್ಲಿಯೇ ಸೇರಿಸಿ ನಡೆಸೋಣ. ಅಲ್ಲವೇ" ಸಮಾಧಾನ ಶಕುಂತಲಾಬಾಯಿಯವರಿಗಾದರೆ, ಪ್ರಶ್ನೆ ಅಥವಾ ಒಪ್ಪಿಗೆಗಾಗಿ ಗೊರೂರರತ್ತ ಕೇಳಿದಂತಿತ್ತು ಶೇಷಮ್ಮ ಅವರು.

ನಿಮ್ಮ ಕಾವ್ಯವಾಚನ ಕೇಳಬೇಕು ಎಂದು ಹಂಬಲಿಸುವ ಹಿರಿಯ ಸಹೃದಯೆ, ಹೇಳಿದಾಗ ಬೇಕು ನಿಮ್ಮಲ್ಲಿಗೇ ಬಂದು ವಾಚಿಸುತ್ತೇನೆ ಎನ್ನುವ ಕಲೋಪಾಸಕಿ ಇವರಲ್ಲಿ ಯಾರು ದೊಡ್ಡವರೆಂದು ನಿರ್ಧರಿಸಲಾರದೇ ಹೋದೆ. ವೀಣೆಶೇಷಣ್ಣನವರ "ಯುಗ"ದಲ್ಲಿದ್ದೇನೋ ಎಂಬ ಭ್ರಮೆಯಾಯಿತು ನನಗೆ.

ಅಂತೂ ಕೆಲವೇ ತಿಂಗಳಲ್ಲಿ ಶೇಷಮ್ಮ ಗೊರೂರರ ಅಭೀಪ್ಸೆ ಈಡೇರಿತು. "ಪುಣ್ಯ ಧಾಮ"ದಡಿಯ ಎಲ್ಲರಿಗೂ ಅದರ ಫಲಲಭಿಸಿತು. ಇದೂ ಕೂಡ ಶ್ರೀಹರಿಯ ಕೃಪೆ. ಪೂಜ್ಯರಾದ ಡಾ|| ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ 'ಶ್ರೀರಾಮಪಟ್ಟಾಭಿಷೇಕ' ಕಾವ್ಯವನ್ನು ಶಕುಂತಲಾಬಾಯಿಯವರು ಪಾಂಡುರಂಗರಾವ್ ಅವರ ವ್ಯಾಖ್ಯಾನ ಸಮೇತ ಸತತವಾಗಿ 55 ದಿನಗಳು ವಾಚನ ಕೈಗೊಂಡರು. ಸಂಪೂರ್ಣ ಇರಲಿ ಒಂದು ಅಧ್ಯಾಯವನ್ನಾದರು ಬೇರಾರಾದರೂ ಈವರೆಗೆ ವಾಚಿಸಿದ್ದಾರೋ ಇಲ್ಲವೋ ನನ್ನ ತಿಳುವಳಿಕೆಗೆ ಬಂದಿಲ್ಲ. ಪ್ರಪ್ರಥಮವಾಗಿ ಇಡೀ ಕಾವ್ಯವನ್ನು ಶಕುಂತಲಾಬಾಯಿಯವರು ವಾಚಿಸುವ ಹಾಗೂ ಕವಿ ಬದುಕಿರುವಾಗಲೇ ಅದಕ್ಕೂ ಮುಖ್ಯ ಕವಿಯ ಮುಂದೆಯೇ ಹಾಡಿ ತೋರಿಸುವ ಸುಯೋಗ ಪಡೆದವರಾಗಿದ್ದಾರೆ. ಇವೆಲ್ಲಕ್ಕೂ ಕಳಶವಿಟ್ಟಂತೆ ಪಟ್ಟಾಭಿಷೇಕದ ದಿನ 90 ತುಂಬಿದ ಕವಿ (ಮಾಸ್ತಿಜಿ), 60 ತುಂಬಿದ ಗಮಕಿ (ಶಕುಂತಲಾಬಾಯಿ), ಈರ್ವರಿಗೂ ಪುಣ್ಯಧಾಮದವರು ನಾಡಿನ ಪರವಾಗಿ ಏಕ

ಕಾಲದಲ್ಲಿ ಸನ್ಮಾನಿಸಿದ್ದು. ಇಂಥ ಒಂದು ಅನಿರ್ವಚನೀಯ ಸನ್ನಿವೇಶವನ್ನು ನೋಡುವ, ಅದರಲ್ಲಿ ಭಾಗಿಯಾಗುವ ಅವಕಾಶ ಸಿಕ್ಕಿತಲ್ಲಾ ಎಂಬುದಷ್ಟೇ ನಮ್ಮ ಪಾಲಿನ ಆನಂದ.

ಆ ದಿನ ಪಾಂಡುರಂಗರಾವ್ ದಂಪತಿಗಳಿಗೆ ಮನೆಗೆ ಬಂದೇ ಬರುತ್ತೇನೆ, ಮಡದಿ ಮಗುವಿನೊಂದಿಗೆ ಬರುತ್ತೇನೆ ಎಂದು ಆಶ್ವಾಸನೆ ನೀಡಿವೆ. ಅದನ್ನು ಪರಿಪಾಲಿಸಿದೆ. ಅವತ್ತಿನಿಂದ ಇವತ್ತಿನವರೆಗೂ (ಇನ್ನೂ ಕೂಡ) ಪಾಂಡುರಂಗರಾವ್ ಮನೆಗೆ ಹೋಗಿ ಬರುತ್ತಿದ್ದೇನೆ. ಅವರೂ ಕೂಡಾ ನನ್ನ ಮೇಲಿನ ಅಭಿಮಾನದಿಂದ ನಮ್ಮ ಮನೆಗೂ ಬಂದು ಹೋಗುತ್ತಿದ್ದಾರೆ. ಅವರು ನಮ್ಮ ಮನೆಯ ಹಿರಿಯರೊಬ್ಬರಂತೆ, ನಾನು ಅವರ ಮನೆಯ ಹುಡುಗನಂತೆ ಈವರೆಗೂ ನಡೆದುಕೊಂಡಿದ್ದೇವೆ.

ಈ ಬೆಸುಗೆಯಿಂದ, ನನ್ನಿಂದ ಅವರಿಗಾದ ಸಹಕಾರ ಏನೋ, ಎಷ್ಟೋ ನಾನರಿಯೆ. ಆದರೆ ಪಾಂಡುರಂಗರಾವ್ ಹಾಗೂ ಶಕುಂತಲಾಬಾಯಿ ಅವರಿಂದ ಆದ ಉಪಕಾರ ನನ್ನ ಪಾಲಿಗೆ ಹಿರಿದು, ಸ್ಮರಣೀಯವಾದುದು.

ನಾನು ಗಮಕ ಕಲೆಯ ಬಗ್ಗೆ ಆಲೋಚಿಸುವಂತೆ ಆದುದು ಶಕುಂತಲಾಬಾಯಿಯವರಿಂದ. ಇನ್ನೂ ನನಗೆ ಚೆನ್ನಾಗಿ ನೆನಪಿದೆ. ಅವರ ಚಿಕ್ಕತ್ತೆ, ಅಂಬೂಬಾಯಿಯವರ ಜಯಂತಿಯನ್ನು (ಪಾಂಡುರಂಗರಾವ್ ಅವರ ಚಿಕ್ಕಮ್ಮ), ರಾಯರು ಒಂದು ವಿಶಿಷ್ಟ ರೀತಿಯಲ್ಲಿ ಆಚರಿಸಲು ನಿರ್ಧರಿಸಿದರು. ಅದರಂತೆ ಇನ್ನೊಬ್ಬ ಕಲಾವಿದರಿಂದ ಆ ದಿನ ಕಾವ್ಯವಾಚನ ಏರ್ಪಡಿಸಿ, ಕೆಲ ಆತ್ಮೀಯರನ್ನು ಆಮಂತ್ರಿಸಿದ್ದರು. ಆ ಗುಂಪಿನಲ್ಲಿ ನಾನೂ ಒಬ್ಬ. ಕಾವ್ಯವಾಚನವಾದ ಮೇಲೆ, ವಂದನಾರ್ಪಣೆ ಮಾಡುವಾಗ ಶಕುಂತಲಾಬಾಯಿಯವರು, "ಈ ದಿನ ವಾಚಿಸಿದ ಕಾವ್ಯಭಾಗ (ಕುಮಾರವ್ಯಾಸನ ಭಾರತದಲ್ಲಿ **ಕಾಮ್ಯಕವನದಲ್ಲಿ ಪಾಂಡವರಿಗೆ ಶ್ರೀಕೃಷ್ಣ ಸಂದರ್ಶನ**) ನಮ್ಮ ಗುರುಗಳಾದ ಬಿಂದೂರಾಯರಿಗೂ ತುಂಬಾ ಇಷ್ಟವಾದದ್ದು. ಅದರಲ್ಲೂ ದ್ರೌಪದಿ ಕೃಷ್ಣನಲ್ಲಿ ಮೊರೆಯಿಟ್ಟ ಪದ್ಯವಂತೂ ಅವರಿಗೆ ಎಷ್ಟು ಸಲ ಹೇಗೆ ಹೇಗೆ ಹೇಳಿದರೂ ತೀರದು." ಎಂದು ಆ ಪದ್ಯ ಅದರಲ್ಲೂ ಆ ಸಾಲು ಅದರಲ್ಲೂ ಆ ಪದವನ್ನು ಬಿಂದೂರಾಯರು ಹೇಳುತ್ತಿದ್ದುದನ್ನು ಚಿತ್ರವತ್ತಾಗಿಸಿದರು. ನನಗೆ ಆ ದಿನದ ಕಾವ್ಯವಾಚನದಲ್ಲಿ ಇವತ್ತಿಗೂ ನೆನಪಿರುವುದು ಆ ಸಂದರ್ಭವೇ. "ಕಾವ್ಯವಾಚನದಲ್ಲಿ ಬಹು ಮುಖ್ಯವಾದ ಕ್ರಿಯೆ ಭಾವಸೃಷ್ಟಿ" ಎನ್ನುತ್ತಾರೆ ಶಕುಂತಲಾಬಾಯಿಯವರು. "ಸಂಗೀತ ಇರಬಾರದೆಂದಲ್ಲ, ಇರದಿದ್ದರೆ ಸಾಧ್ಯವೇ ಇಲ್ಲ; ಹಾಗೆಂದು ಸಂಗೀತ ಕಛೇರಿ ಆಗಬಾರದಲ್ಲಾ ಕಾವ್ಯವಾಚನ ! ಪದ್ಯಕ್ಕೆ ಒಂದು ರಾಗ ಎಂದು ಪೂರ್ವ ನಿರ್ಧಾರದಿಂದ ಹೊರಟರೆ ರಾಗಕ್ಕೆ ಒಂದು ಪದ್ಯವಾಗಿ, ಇಡೀ ರಾಗದ ಪ್ರತಿಷ್ಠಾಪನೆಯೇ ಆಗಿಹೋದೀತು ಕಾವ್ಯವಾಚನ. ಹಾಗೆಂದು ಸಂಗೀತದ ತಿಳುವಳಿಕೆಯೇ ಇಲ್ಲದಿದ್ದರೆ ಅದು ಖಂಡಿತಾ ಕಾವ್ಯವಾಚನವಾಗುವುದಿಲ್ಲ. ಈವತ್ತಿನ ಸ್ಥಿತಿ ಇರುವುದೇ ಹಾಗೆ. ಆದರಿಂದಲೇ ಕಾವ್ಯವಾಚನದ ಕಲೆ ಬೆಳೆಯದೇ ಇರುವುದು" ಎಂದು ಉದಾಹರಣೆಗಳ ಸಮೇತ ಒಮ್ಮೆ ವಿವರಿಸಿದರು.

ನಾನೂ, ಪಾಂಡುರಂಗರಾವ್ ಅವರು ಒಮ್ಮೆ ಕುವೆಂಪು ಬಳಿಗೆ ಹೋಗಿದ್ದಾಗ ಇದೇ ಅಭಿಪ್ರಾಯವನ್ನು ಅವರೂ ತಿಳಿಸಿದರು. "ಕಾವ್ಯವಾಚನದಲ್ಲಿ ಸಂಗೀತ

ಕತ್ತೆಯಾಗಿ (ತಕ್ಷಣ ಒರಟು ಅನ್ನಿಸಿ, ಕುದುರೆ ಎಂದರು) ಕಾವ್ಯ ಸವಾರನಾಗಬೇಕೇ ಹೊರತು, ಕಾವ್ಯ ಕುದುರೆಯಾಗಿ ಸಂಗೀತ ಸವಾರನಾದರೆ ಕಾವ್ಯವೂ ಹಾಳು ವಾಚನವೂ ಹಾಳು. ಇವತ್ತಿನ ಬಹಳಷ್ಟು ಗಮಕಿಗಳು ಮಾಡುತ್ತಿರುವ ತಪ್ಪು ಇದು.ಆ ದೃಷ್ಟಿಯಿಂದ ಶಕುಂತಲಾಬಾಯಿ ಪಾಂಡುರಂಗರಾವ್ ಅವರು ಪರವಾಗಿಲ್ಲ. ಸಂಗೀತ ಎಷ್ಟು ಬೇಕೊ ಅಷ್ಟು. ಕಾವ್ಯಕ್ಕೇ ಅವರು ಪ್ರಾಧಾನ್ಯತೆ ನೀಡುತ್ತಾರೆ" ಎಂದರು ಕುವೆಂಪು.

ಹಾಗೆಂದಾಕ್ಷಣ ಶಕುಂತಲಾಬಾಯಿಯವರಿಗೆ ಸಂಗೀತದ ಪರಿಜ್ಞಾನವಿಲ್ಲ ಎಂದು ಅರ್ಥವಲ್ಲ. ಹಾಗೆ ನೋಡಿದರೆ ಅವರ ಬಾಲ್ಯದಿಂದಲೇ ಅವರಿಗೆ ಸಂಗೀತದ ಅಭ್ಯಾಸವಾಗಿದೆ. ತಂದೆ ರೈಲ್ವೆ ಛೀಫ್ ಗಾರ್ಡ್ ಬಾಪು ಎನ್. ವೆಂಕೋಬರಾವ್ ಅವರು, ಉದ್ಯೋಗ ಮುಗಿಸಿಕೊಂಡು ಮನೆಗೆ ಬಂದಾಗ ವರದಾಚಾರ್ಯರ ಕಂಪನಿ ನಾಟಕಗಳ ಮಟ್ಟುಗಳನ್ನು ಗಟ್ಟಿಯಾಗಿ ಹಾಡುವುದು ರೂಢಿ. ("ಕಂಪನಿ ನಾಟಕಗಳನ್ನು ನೋಡುವ ಗೀಳು ಒಂದೇ ತಂದೆಯವರಿಗೆ.") ಇದು ಶಕುಂತಲಾಬಾಯಿಯವರಿಗೆ ಹೇಳಿಕೊಡದೆ ಪ್ರಭಾವ ಬೀರಿದ ಪಾಠ. ತಾಯಿ ಸುಂದರಾಬಾಯಿಯವರನ್ನು ಸಾಕಿಕೊಂಡಿದ್ದ ಮುಲಕನಾಡು ಬ್ರಾಹ್ಮಣ ರಾಮಕೃಷ್ಣಪ್ಪನವರ ಪಕ್ಕದ ಮನೆ, ವಿದುಷಿ ಸುಶೀಲ ಅಯ್ಯಂಗಾರ್ ಅವರದು. ಸುಶೀಲಾ ಅವರು ಆಗಿನ್ನೂ ಬಿ. ಎಸ್. ರಾಜೈಯಂಗಾರ್ (ಜಗದೋದ್ಧಾರನಾ)ಅವರಲ್ಲಿ ಸಂಗೀತ ಕಲಿಯುತ್ತಿದ್ದರು. ಅವರ ಮನೆಯಲ್ಲಿ ಹಾರ್ಮೋನಿಯಂ ಒಂದಿತ್ತು. ಅದರ ಮೇಲೆ ಶಕುಂತಲಾ ಅವರಿಗೆ ಸುಶೀಲ ಅವರು ಪಾಠ ಹೇಳಿಕೊಡುತ್ತಿದ್ದರಂತೆ 5-6ನೇ ವರ್ಷದಲ್ಲೇ.

ಆಮೇಲೆ ಸುಲ್ತಾನಪೇಟೆ ಆರ್ಯಬಾಲಿಕಾ ಪಾಠಶಾಲೆಗೆ ಶಕುಂತಲಾ ಅವರು ಸೇರಿದಾಗ ಎ. ಸುಂದರಮ್ಮ ಅವರು ಕನ್ನಡ ಪಂಡಿತೆಯಾಗಿದ್ದರು. ಆಗಿನ ಮಹಾರಾಜ ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರ್ ಅವರ ಪತ್ನಿಯವರಿಗೆ ಸುಂದರಮ್ಮ ಅವರು ತುಂಬಾ ಬೇಕಾದವರು. ಹಾಗಾಗಿ ಅವರ ಮನರಂಜನೆಗಾಗಿ ತಮ್ಮ ವಿದ್ಯಾರ್ಥಿನಿಯರಿಂದ ನಾಟಕಗಳ ತರಬೇತಿ ಮಾಡಿಸಿ ಆಡಿಸುತ್ತಿದ್ದರಂತೆ. ಅವರ ಕೈಕೆಳಗೆ ತಯಾರಾದವರು ಶಕುಂತಲಾಬಾಯಿ, ಇಂದು ಚಲನಚಿತ್ರದ ನಟಿ ಎನಿಸಿದ ಎಂ, ವಿ. ರಾಜಮ್ಮ, ಆಕಾಶವಾಣಿಯಲ್ಲಿರುವ ಎಸ್. ಕೆ. ಪದ್ಮಾದೇವಿ–ಇವರುಗಳು ಮುಖ್ಯರು. ಈ ಮೂವರೂ ಸಹಾಧ್ಯಾಯಿಗಳೂ ಕೂಡ. ಸುಂದರಮ್ಮನವರಿಗೆ ನಾಟಕದ ಗೀಳು, ಆದರೆ ಉಡುಪಿ ಲಕ್ಷ್ಮೀಬಾಯಿಯವರಿಗೆ ಉದ್ಯೋಗವೇ ಸಂಗೀತ ಅಧ್ಯಾಪಕಿಯಾಗಿ. ಶಾಲೆಯಲ್ಲಿ ಹಾರ್ಮೋನಿಯಂ ಇಟ್ಟುಕೊಂಡು ಸಂಗೀತ ಪಾಠ. ಶಕುಂತಲಾಬಾಯಿಯವರ ಎರಡನೇ ಮೇಡಂ ಇವರು. ಆಮೇಲೆ ಲಕ್ಷ್ಮೀಬಾಯಿಯವರು "ನಾನೇಕೆ ಪರದೇಶಿ, ಸಹಜ ಗುಣರಾಮಾ" ಎಂಬ ಗ್ರಾಮಫೋನ್ ರಿಕಾರ್ಡುಗಳ ಮೂಲಕ ನಾಡಿನೆಲ್ಲೆಲ್ಲಾ ಪ್ರಸಿದ್ಧರಾದರು. ಇವರ ಜೊತೆಗೆ ಭಾರತದ ಲಲಿತಮ್ಮ ಸುಬ್ರಹ್ಮಣ್ಯಶಾಸ್ತ್ರಿ ಎಂಬುವರು, ಪ್ರತಿ ಸೋಮವಾರ ಸಂಜೆ 4–30 ರಿಂದ 5–30ವರೆಗೆ ಶಾಲೆಗೆ ಬಂದು ಭಾರತ ಓದುತ್ತಿದ್ದರಂತೆ. ಇದನ್ನು ಶಕುಂತಲಾ ಅವರು ತಪ್ಪದೇ ಕೇಳುತ್ತಿದ್ದರಂತೆ ಇತರ ಗೆಳತಿಯರಜೊತೆಗೆ.

ಇಂಥ ವಾತಾವರಣ ಇಂದು ಯಾವ ಶಾಲೆಯಲ್ಲಿದೆಯೋ ನಾನಂತೂ ಕಾಣೆ.

ಏನೇ ಇರಲಿ, ಅದರ ಫಲ ಮಾತ್ರ ಇಂದು ಕನ್ನಡನಾಡಿಗೆ ಶಕುಂತಲಾಬಾಯಿಯವರನ್ನು ಕೊಟ್ಟಿತೆಂದು ಮೆಚ್ಚಬೇಕು. ಅವರನ್ನೆಲ್ಲಾ ಅಭಿನಂದಿಸಬೇಕು. ಆಮೇಲೆ ಕೆಲವು ವರ್ಷಗಳು ಚಿಂತನಪಲ್ಲಿ ಕೃಷ್ಣಮೂರ್ತಿಗಳಿಂದ ಸಂಗೀತ ಪಾಠವಾಗಿ, ಪರೀಕ್ಷೆಗಳನ್ನು ಪಾಸುಮಾಡಿದರು. ಇವತ್ತಿನ ಲೋಕದಲ್ಲಿ ಪದವಿ, ಅಧಿಕಾರ, ಶ್ರೀಮಂತಿಕೆ ಇಂಥ ಅಪಮೌಲ್ಯಗಳಿಂದ ನಿಜವಾದ ಯೋಗ್ಯತೆಗೆ ತಕ್ಕ ಮಾನಮನ್ನಣೆ ಸಿಗದಿರುವ ನೋವು ಅಲ್ಪ ಸಂಖ್ಯಾತ ಒಳ್ಳೆಯವರನ್ನೆಲ್ಲಾ ಕಾಡುತ್ತಿದೆ. ಆದರೂ ಅಪರೂಪಕ್ಕೆ ಅವರ ಪ್ರತಿಭೆ-ಹಿರಿಮೆ ಪ್ರಕಾಶಕ್ಕೆ ಬರುವುದುಂಟು. ಶಕುಂತಲಾಬಾಯಿಯವರು ಓದಿದ್ದು 7ನೇ ತರಗತಿಯವರೆಗೆ. ಮದುವೆಯಾಗಿ (5 ಮೇ 1930) ಕೂಡ ಕೆಲವು ಕಾಲ ಶಾಲೆಗೆ ಹೋದರಂತೆ. ಆದರೂ ಸರ್ಕಾರಿ ವಿದ್ಯಾಭ್ಯಾಸ ಅಷ್ಟಕಷ್ಟೆ. ಮತ್ತೆ ಪತಿ ಪಾಂಡುರಂಗ ರಾವ್ ಅವರ ಬೆಂಬಲದಿಂದ 1937 ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಬಿಂದೂ ರಾಯರ ಮಾರ್ಗದರ್ಶನದಲ್ಲಿ ನಡೆಯುತ್ತಿದ್ದ ಕಾವ್ಯವಾಚನ ತರಗತಿಗೆ ಸೇರಿದರು. ಈವರೆಗೆ ಸಂಗೀತ ಕೇಳಿ, ಅಲ್ಪ ಸ್ವಲ್ಪ ಕಲಿತು, ಕಾವ್ಯವಾಚನ ಅಲ್ಲಿ ಇಲ್ಲಿ ನೋಡಿ ತಿಳಿದಿದ್ದರೂ, ಅದೂ ಒಂದು ಕಲೆ, ಅದರಲ್ಲಿ ಏನೆಲ್ಲಾ ಅದ್ಭುತ ಸ್ವಾರಸ್ಯವಿದೆ, ಅದನ್ನು ಹೇಗೆ ಸವಿಯಬೇಕು, ಅದರ ನಿಜವಾದ ಅಂತಸ್ಸತ್ವವೇನು ಎಂಬಿತ್ಯಾದಿ ಮರ್ಮವನ್ನು ಅರಿತಿದ್ದು ಗುರುಗಳಾದ ಬಿಂದೂರಾಯರಿಂದ ಎಂದು ಒಮ್ಮೆ ನನ್ನೊಡನೆ ಶಕುಂತಲಾ ಬಾಯಿಯವರು ವಿವರಿಸಿದರು.

ಅವರು ನೀಡುತ್ತಿದ್ದ ಶಿಕ್ಷಣವೇ ವಿಶಿಷ್ಟವಾದದ್ದಂತೆ. ಒಂದು ಪದ್ಯವನ್ನು ಬಂದಿರುವ ಎಲ್ಲ ವಿದ್ಯಾರ್ಥಿಗಳಿಂದ ಒಂದು ಸುತ್ತು ಹೇಳಿಸುವುದು. ಆಮೇಲೆ ಅದರ ಅರ್ಥ, ಭಾವ, ಸ್ವಾರಸ್ಯ, ದರ್ಶನ ಎಲ್ಲವನ್ನು ವಿವರಿಸಿ ತಾವು ಹೇಳಿ ಮತ್ತೊಮ್ಮೆ ಹೇಳಿಸುವುದು. ಹೀಗೆ ಬೆಳಗ್ಗೆ 8 ರಿಂದ 10–30 ವರೆಗೆ, 5 ರಿಂದ 7 ರವರೆಗೆ ಅವರಿಂದ ತರಬೇತಿ. ಇಷ್ಟಾಗಿ ತುಂಬಾ ಕರ್ಮಠರಾದ ಬಿಂದೂರಾಯರು ದಿನವೆಲ್ಲಾ ಪರಿಷತ್ತಿನಲ್ಲೇ ಇದ್ದು, ಮಧ್ಯಾಹ್ನ ಕೂಡಾ ಯಾರಾದರೂ ವಿದ್ಯಾರ್ಥಿಗಳು ಬಂದರೆ ಪಾಠ ಹೇಳಿಕೊಡುತ್ತಿದ್ದರಂತೆ. ಇದಕ್ಕೆ ಭದ್ರಬುನಾದಿಹಾಕಿದವರು ಮಹಾತ್ಮ ಡಾ|| ಡಿ. ವಿ. ಗುಂಡಪ್ಪನವರು. ಅಂತೂ ಮೂರನೇ ಬ್ಯಾಚಿನಲ್ಲಿ ಶಕುಂತಲಾಬಾಯಿಯವರು ತರಬೇತಿ ಪಡೆದು, ಮೊಟ್ಟಮೊದಲ ಸಾರ್ವಜನಿಕವಾಚನಮಾಡಿದ್ದು: 1938ರಲ್ಲಿ, ಹೆಸರಾಂತ ಸಮಾಜ ಸೇವಕಿ ಆರ್. ಕಲ್ಯಾಣಮ್ಮನವರ ಪ್ರೋತ್ಸಾಹದಿಂದ, ಮಲ್ಲೇಶ್ವರಂನ ನಾರ್ಮಲ್ ಸ್ಕೂಲಿನಲ್ಲಿ ಕಲಿತಿದ್ದು ಭಾರತ. ಆದರೆ ಆದಿನ ವಾಚಿಸಿದ್ದು ಚಾಮರಸ ಕವಿಯ ಪ್ರಭುಲಿಂಗಲೀಲೆ. ಈ ಬದಲಾವಣೆಗೆ ಪ್ರಯೋಗಕ್ಕೆ ಪತಿ ಪಾಂಡುರಂಗರಾವ್ ಅವರೇ ಕಾರಣರು. ಈ ಮಾರ್ಗದರ್ಶನ ಇಂದಿನವರೆಗೂ ಶಕುಂತಲಾಬಾಯಿಯವರಿಗೆ ಲಭಿಸಿದೆ ಎಂದಷ್ಟೇ ಹೇಳಿದರೆಸಾಕು. (ಏಕೆಂದರೆ ಶಿಕ್ಷಕ, ಲೇಖಕ, ಸಮಾಜ ಸೇವಕ, ಪತ್ರಿಕೋದ್ಯಮಿ–ಹೀಗೆ ಹತ್ತಾರು ರಂಗಗಳ ಒಡನಾಟವುಳ್ಳ ಪಾಂಡುರಂಗರಾವ್ ಅವರ ಅವರ ಬಗ್ಗೆ ಕೂಡಾ ಇದೇ ಲೇಖನದಲ್ಲಿ ಬರೆದು ಮುಗಿಸುವ ಇಚ್ಛೆ ನನಗಿಲ್ಲ.)

ಅಂದಿನಿಂದ ಇಂದಿನವರೆಗೆ (ಪಂಪನ ಭಾರತದಿಂದ ಸಮೇತನಹಳ್ಳಿ ರಾಮರಾಯರ

ಶಾಕುಂತಲಾದವರೆಗೆ) ಸರಿಸುಮಾರು 20–25 ಕಾವ್ಯಗಳನ್ನು ಇದು ಚಂಪೂ, ಇದು ರಗಳೆ ಇದು ಷಟ್ಪದಿ, ಇದು ಸಾಂಗತ್ಯ, ಇದು ಕವನ ಎನ್ನದೇ ಕರ್ನಾಟಕಾದ್ಯಂತ ಅಷ್ಟೇಕೆ ಭಾರತದ ಅನೇಕ ಎಡೆಗಳಲ್ಲಿ ವಾಚಿಸಿದ್ದಾರೆ. ಜನತೆಯ ಮನಸ್ಸನ್ನು ಸೂರೆಗೊಂಡಿದ್ದಾರೆ. ದಿನದಿಂದ ದಿನಕ್ಕೆ ಶಾರೀರ ಕುಗ್ಗದ ಸುಪುಷ್ಟಗೊಳ್ಳುತ್ತಿರುವುದೇ ಅವರ ಜೀವಂತಿಕೆಗೆ ಪರಮ ಸಾಕ್ಷಿ ಎನ್ನಿಸುತ್ತದೆ ನನಗೆ.

ಕನ್ನಡ ಜನತೆ ಶಕುಂತಲಾಬಾಯಿಯವರಿಂದ ಪಡೆದುಕೊಂಡದ್ದೇ ಹೆಚ್ಚು ಕೊಟ್ಟದ್ದಕ್ಕಿಂತ. 1969ರಲ್ಲಿ ರಾಜ್ಯದಸಾಹಿತ್ಯ ಅಕಾಡಮಿ ಪ್ರಶಸ್ತಿ ನೀಡಿತು. 1979ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಎರಡನೆಯ ಅಖಿಲ ಕರ್ನಾಟಕ ಗಮಕ ಸಮ್ಮೇಳನದ ಅಧ್ಯಕ್ಷರನ್ನಾಗಿ ಗೌರವಿಸಿತು. ಆದರೆ ಇವು ಏನೇನೂ ಸಾಲದು, ಅವರ ದುಡಿಮೆ, ಸೇವೆ, ಉಪಕಾರದ ಮುಂದೆ.

1938ರಲ್ಲಿ ಕಾವ್ಯವಾಚನ ಮಾಡತೊಡಗಿದ ಶಕುಂತಲಾಬಾಯಿಯವರಿಗೆ ಸಂಭಾವನೆಯೆಂದು ಸಿಕ್ಕದ್ದು ಮೊಟ್ಟಮೊದಲು 1953ರಲ್ಲಿ, ಅದೂ 12 ವಾರ ಓದಿದ್ದಕ್ಕೆ. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ. ಸಾಂಸ್ಕೃತಿಕ ಹಿರಿಯ ಜೀವಿ ಕೆಂಗಲ್ ಹನುಮಂತಯ್ಯನವರು ಗಮಕ ಪ್ರಚಾರಕ್ಕಾಗಿ ಪರಿಷತ್ತಿಗೆ ಎರಡು ಸಾವಿರ ನೀಡಿದರಂತೆ. ಅದು ಎಂ. ಆರ್. ಶ್ರೀನಿವಾಸಮೂರ್ತಿಗಳ ಕಾಲ. ಮೊಟ್ಟ ಮೊದಲ ಕಾವ್ಯ ಕುವೆಂಪು ಅವರ "ಶ್ರೀ ರಾಮಾಯಣದರ್ಶನಂ". ಓದಿದವರು ಶಕುಂತಲಾಬಾಯಿ ಪಾಂಡುರಂಗರಾವ್.

ಆಮೇಲೂ ಅಷ್ಟೆ, ಹೋಗಿ ಬರುವ ಪ್ರಯಾಣವೆಚ್ಚ ಕೊಟ್ಟಾರೆಯೇ ಹೊರತು, ಸಂಭಾವನೆ, ಗೌರವಧನ ಇವೆಲ್ಲಾ ಅಪರೂಪ ಎನ್ನುತ್ತಾರೆ ಪಾಂಡುರಂಗರಾವ್. ಹೀಗೆ ದುಡ್ಡಿನ ಮುಖ ನೋಡದೆ ದುಡಿದ ಜೀವಗಳು ಇವು. ಇವರ ಋಣಭಾರ ಈ ಜನತೆಯನ್ನು ಸದಾ ಕೃತಜ್ಞತೆಗೆ ಒಳಮಾಡಿದೆ ಎಂಬುದನ್ನು ಯಾರೂ ಮರೆಯಬಾರದು.

ತಾವೇ ಸ್ವತಃ ಕಲಾವಿದರಾಗಿದ್ದು ಸಹ ಕಲಾವಿದರ ಬಗ್ಗೆ ಇಟ್ಟುಕೊಂಡ ಪ್ರೀತಿ ವಿಶ್ವಾಸವನ್ನು ನಾನಾ ಬಾರಿ ಕಂಡಿದ್ದೇನೆ. ಇವೆಲ್ಲಾ ಇನ್ನು ಮುಂದ ಕಾಣದಾಗುತ್ತಿರುವ ಮೌಲ್ಯಗಳು. ಅವುಗಳಿಂದ ಏನು ಪ್ರಯೋಜನ ಎನ್ನುವವರಿಗೆ ಅವು ಬದುಕಿನಲ್ಲಿ ಎಷ್ಟು ನೆಮ್ಮದಿ ಕೊಡುತ್ತವೆ ಎಂಥ ಬಾಳು ಬದುಕಬಹುದು ಎಂಬ ನಿದರ್ಶನಕ್ಕಾಗಿ ಪಾಂಡುರಂಗರಾವ್ ದಂಪತಿಗಳಿದ್ದಾರೆ ಎಂದು ನಾನು ನಂಬಿದ್ದೇನೆ.


ಹೀಗೆ ಆದ ಅನುಭವವನ್ನೆಲ್ಲಾ ಕೂಡಿಸುತ್ತಾ ಹೋದರೆ ಪುಸ್ತಕವಾಗುವ ಭಯ ನನಗೆ. ಅವರು ನನ್ನ ಮೇಲೆ ಇಟ್ಟ ಪ್ರೀತಿ ವಿಶ್ವಾಸದ ದ್ಯೋತಕವಾಗಿ ಈ ಲೇಖನವನ್ನು ಕಾಣಿಕೆಯಾಗಿ ಅರ್ಪಿಸುತ್ತಿದ್ದೇನೆ. ಹಾಗೂ ಇನ್ನೂ ಕೆಲವು ಕೆಲಕಾಲ ನಮ್ಮೊಡನಿದ್ದು ಮಾನವೀಯ ಮೌಲ್ಯಗಳಿಗೆ ಉಸಿರು ಕೊಟ್ಟಾರೆಂದೂ, ತಾವು ಉಪಾಸನೆ ಮಾಡುತ್ತಿರುವ ಕಲೆಗೆ ಪ್ರಾಣ ನೀಡಿಯಾರೆಂದೂ ಆಶಿಸುತ್ತೇನೆ.

ಕವಿ ಹೃದಯವನ್ನರಿತ ಗಮಕಿ

ಜಿ. ವೆಂಕಟಸುಬ್ಬಯ್ಯ

ಗಮಕ ಪ್ರಪಂಚದಲ್ಲಿ ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾವ್ ಅವರು ಸಲ್ಲಿಸಿರುವ ಸೇವೆ ಅಪಾರವಾದುದು. ಸುಮಾರು ಮೂವತ್ತು ವರ್ಷಗಳಕಾಲ ಅವರ ಗಮಕವಾಚನವನ್ನು ನಾನು ಕೇಳಿ ಸಂತೋಷಪಟ್ಟಿದ್ದೇನೆ. ಕವಿ ಹೃದಯವನ್ನು ಅರಿತು ಅದರ ಸ್ವಾರಸ್ಯವನ್ನೆಲ್ಲ ಕೇಳುಗರಿಗೆ ಮುಟ್ಟಿಸುವ ಅವರ ಚೈತನ್ಯ ಅಗಾಧವಾದುದು. ದೈವದತ್ತವಾದ ಅವರ ಶಾರೀರವು ಅವರಿಗೆ ಅತ್ಯಧಿಕವಾದ ಸಂಪತ್ತಾಗಿದ್ದು ಗಮಕ ಕ್ರಿಯೆಯಲ್ಲಿ ಅದು ತುಂಬ ಮನೋಹಾರಿಯಾಗಿ ಪರಿಣಾಮಗೊಳ್ಳುತ್ತಿತ್ತು. ಇಂದೂ ಅವರ ಚೈತನ್ಯ ಹಿಂದಿನಂತೆಯೇ ಯುವಕ ಗುಣವನ್ನು ಪಡೆದಿರುವುದು ನಮಗೆಲ್ಲ ಹರ್ಷದಾಯಕವಾಗಿದೆ.

ರಸಿಕರಿಗೆ ಅವರ ಗಮಕದ ಸುಖ ಬಹುಕಾಲ ಸಂತೋಷವನ್ನೊದಗಿಸುತ್ತಿರಲಿ.



"ಪಾಪಚ್ಚಿ ಪೊಬ್ಲಿಕೇಷನ್ಸ್" ಅವರ ಮಕ್ಕಳ ಮತ್ತು ಮಹಿಳೆಯರ ಸಾಹಿತ್ಯ ಅಕಾದೆಮಿಯ ಆಶ್ರಯದಲ್ಲಿ
ಮಕ್ಕಳ ಪುಸ್ತಕ ಬಿಡುಗಡೆ ಸಮಾರಂಭ 1–5–1976

ಎಡಗಡೆಯಿಂದ—ಡಾ|| ಹೆಚ್. ಎಸ್. ಶಾರದಮ್ಮ, ಶಾಂತ ಮಹದೇವಯ್ಯ, ನಳಿನೀ ಸಕ್ರೋಜಿ ಭೌನ್ಸ್ಲೆ, ಶಾರದಾಬಾಯಿ ಮಾಧೋಜಿರಾವ್, ರಿಟ ಫ್ರಾನ್ಸಿಸ್, ಶಕುಂತಲಾಬಾಯಿ ಪಾಂಡುರಂಗರಾವ್, ಎ. ಪಂಕಜ, ಲೀಲಾವತಿ ಪ್ರಸಾದ್, ನಾಗರತ್ನಮ್ಮ ಅರಕೇರಿ ಮತ್ತು ವಿಜಯಲಕ್ಷ್ಮಿ ರಾಘವೇಂದ್ರರಾವ್

ಪಡಿಯಚ್ಚು ಪಾಪಚ್ಚಿ ಪ್ರಕಾಶನದ ಕೃಪೆ



ಲೇಖಕರ ಸಂಘದ ಆಶ್ರಯದಲ್ಲಿ ಎಂ. ಎನ್ ಕಾಮತ್ ಅವರ ಅಧ್ಯಕ್ಷತೆಯಲ್ಲಿ ನಡೆದ ಕತೆಗಾರರ ಸಮ್ಮೇಳನದಲ್ಲಿ
ಗಮಕ ವಿದುಷಿ ಶಕುಂತಲಂಬಾಯಿ ಪಾಂಡುರಂಗರಾವ್ ಮಾಸ್ತಿಯವರ ಕೃತಿ "ಅಭಿನುನು" ಕಾವ್ಯವಾಚನ ಮಾಡಿದಾಗ—20-1-1940

ಎಡದಿಂದ ಬಲಕ್ಕೆ—

ಕೆಳಗೆ ಕುಳಿತಿರುವವರು—ಕೈವಾರ ರಾಜಾರಾವ್, ಸಿ. ಕೆ. ನಾಗರಾಜರಾವ್, ಕೆ. ಎನ್. ದೊರೆಸ್ವಾಮಿ, ದ. ಕೃ. ಭಾರದ್ವಾಜ್, ಎಂ ವಿ. ಸೀತಾರಾಮಯ್ಯ, ಕೆ. ಗೋಪಾಲಕೃಷ್ಣರಾವ್ (ಕಾರ್ಯದರ್ಶಿ), ಬಿ. ವೆಂಕೋಬರಾವ್, ಎಸ್. ವೆಂಕಟರಾವ್, ಮ. ನ. ಮೂರ್ತಿ, ಎಸ್. ವೆಂಕಟಾಚಲಪತಿ, —, —,


ಕುರ್ಚಿಯಲ್ಲಿ ಕುಳಿತಿರುವವರು— —, ಶಕುಂತಲಾಬಾಯಿ ಪಾಂಡುರಂಗರಾವ್, ಆರ್. ಕಲ್ಯಾಣಮ್ಮ, ಎಸ್. ನಾಗಪ್ಪ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಎಂ. ಎನ್. ಕಾಮತ್ (ಅಧ್ಯಕ್ಷ), ಬಿ. ಎಂ. ಶ್ರೀಕಂಠಯ್ಯ, ಬೆನಗಲ್ ರಾಮರಾವ್, ಎಲ್. ರಾಮರಾವ್, ಸಿ. ಕೆ. ವೆಂಕಟರಾಮಯ್ಯ ಮತ್ತು ಡಿ. ಸಿ. ಸುಬ್ಬರಾಯಪ್ಪ.

ಕುರ್ಚಿಯ ಹಿಂದೆ ನಿಂತಿರುವವರು ಮೊದಲ ಸಾಲು—ಮಧುಗಿರಿ ವಾಸುದೇವಮೂರ್ತಿ, ಎಂ. ಎನ್. ಗೋಪಾಲರಾವ್, ಬಿ. ಶ್ರೀ. ಪಾಂಡುರಂಗರಾವ್, ಎಸ್. ವೆಂಕಟರಾವ್ (ಭಾರತೀಪ್ರಿಯ) ಹೆಚ್. ಎಸ್. ದೊರೆಸ್ವಾಮಿ, ಎಂ. ಆರ್. ಶ್ರೀನಿವಾಸಮೂರ್ತಿ (ಎಂ. ಆರ್. ಶ್ರೀ) —, ಬಿ. ಎಸ್. ವೆಂಕಟರಾವ್, ಎ. ಸೀತಾರಾಂ (ಆನಂದ), ತ್ರಿವಿಕ್ರಮ, —, —, ಶ್ಲೋಕ ಸಂಗೀತ ಕಳಲೆ ಸಂಪತ್ಕುಮಾರಾಚಾರ್, ಎಸ್. ನಾಗೇಶರಾವ್, —, ಎನ್. ಸಿ. ವರಸಿಂಹ ಮೂರ್ತಿ, ಕೃಷ್ಣಮೂರ್ತಿ

ಎರಡನೇ ಸಾಲು—ತಿಪ್ಪಯ್ಯ, ಜಿ. ಪಿ. ರಾಜರತ್ನಂ, —, —, ಜಿ. ವರದರಾಜರಾವ್, ಮತಿಘಟ್ಟ ಕೃಷ್ಣಮೂರ್ತಿ, ಜಿ. ನರಸಪ್ಪ, ರಾಮಕೃಷ್ಣಾಚಾರ್, —, ಎಲ್. ಗುಂಡಪ್ಪ, —, ಪಂಡಿತ ಕೆ. ಹನುಮಂತರಾವ್ (ಬಿ. ಶ್ರೀ. ಪಾಂ. ಅವರ ಕನ್ನಡ ದೀಕ್ಷಾ ಗುರು), —,

ಮೂರನೆ ಸಾಲು—ಹನುಮಯ್ಯ, ಕಾಳಪ್ಪ, —, ಟಿ. ಎಸ್. ಶಾಮರಾವ್, ನಾ. ಕಸ್ತೂರಿ, ಕೆ. ನರಸಿಂಹ ಮೂರ್ತಿ, ಕಡೂರು ಶ್ರೀಪಾದರಾವ್, ಎಚ್. ಸುಬ್ಬರಾವ್

ನಾಲ್ಕನೆ ಸಾಲು—ಮ. ನಾ. ಚೌಡಪ್ಪ, ಜಿ. ವಾಸುದೇವರಾವ್, ದ. ರಾ. ಬೇಂದ್ರೆ, —, —, ಗೋಪಾಲಕೃಷ್ಣ ಅಯ್ಯಂಗಾರ್, ನಾಡಿಗ್ ಗೋವಿಂದರಾವ್ ಮತ್ತು ಕೆ. ವೆಂಕಟರಾಮಪ್ಪ.



ಲೇಖಕರ ಸಂಘದ ಆಶ್ರಯದಲ್ಲಿ ನಡೆದ ಕತೆಗಾರರ ಕಾದಂಬರಿ ಕಾರರ ಸಮ್ಮೇಳನ 1946

ಕೆಳಗೆ ಕುಳಿತಿರುವವರು—ಸತ್ಯನಾರಾಯಣರಾವ್, ಕೆ. ಗೋಪಾಲಕೃಷ್ಣರಾವ್, ಬೈಕಾಡಿ ವೆಂಕಟಕೃಷ್ಣರಾವ್.

ಕುರ್ಚಿಯ ಮೇಲೆ ಕುಳಿತಿರುವವರು—ಶಕುಂತಲಾಬಾಯಿ ಪಾಂಡುರಂಗರಾವ್, ಬಿ. ಶ್ರೀ. ಪಾಂಡುರಂಗರಾವ್, ದೇವುಡು ನರಸಿಂಹಶಾಸ್ತ್ರೀ (ಕಾದಂಬರಿಕಾರರ ಅಧ್ಯಕ್ಷ) ಮಾಸ್ತಿ ವೆಂಕಟೇಶ ಅಯ್ಯಂಗಾರ್, ಬೆಟಗೇರಿ ಕೃಷ್ಣಶರ್ಮ (ಆನಂದ ಕಂದ—ಕತೆಗಾರರ ಅಧ್ಯಕ್ಷ), ಡಿ. ಆರ್. ರಾಮಯ್ಯ.

ಕುರ್ಚಿಯ ಹಿಂದೆ ನಿಂತಿರುವವರು—ಹನುಮಯ್ಯ, ಎ. ಎನ್. ಮೂರ್ತಿರಾವ್, ತ್ರಿವಿಕ್ರಮ, ಕೊರಟಿ ಶ್ರೀನಿವಾಸರಾವ್, ಸಿ. ಕೆ. ನಾಗರಾಜರಾವ್. ಆರ್. ಎಸ್. ರಾಮರಾವ್, ಕೆ. ನರಸಿಂಹಮೂರ್ತಿ, ಆರ್. ಎಲ್. ನರಸಿಂಹಯ್ಯ, ಜಿ. ವೆಂಕಟಸುಬ್ಬಯ್ಯ.


ನಿಂತಿರುವ ಎರಡನೆಯ ಸಾಲು—ಸಂಗೀತ ವಿದ್ವಾನ್ ಎ. ಸುಬ್ಬರಾವ್, ರೇಣುಕ ಪ್ರಸಾದ್; ಜಿ. ಎ. ನರಸಿಂಹಮೂರ್ತಿ, ನಾಡಿಗ ಕೃಷ್ಣಮೂರ್ತಿ, ಡಿ. ಎನ್. ರಾಮು, ಎಲ್. ಗುಂಡಪ್ಪ, ಎಲ್. ಎಸ್. ಶೇಷಗಿರಿರಾವ್, ಎಂ. ಎಸ್. ಭಾರದ್ವಾಜ್, ನಿರಂಜನ, ವೈಣಿಕ ವಿದ್ವಾನ್ ಆನೂರು ರಾಮಣ್ಣ.

ನಿಂತಿರುವ ಮೂರನೆ ಸಾಲು—ಕೈವಾರ ರಾಜರಾವ್, ಮಧುಗಿರಿ ಮಧುಸೂದನ್, ಮಧುಗಿರಿ ವಾಸುದೇವ ಮೂರ್ತಿ, —, —, ನಿಟ್ಟೂರು ಶ್ರೀನಿವಾಸರಾವ್, ಅರ್ಚಕ ವೆಂಕಟೇಶ್, ವೋಟಗಾನಹಳ್ಳಿ ಸುಬ್ರಹ್ಮಣ್ಯಶಾಸ್ತ್ರಿ, ಕೆ. ಎನ್. ದೊರೆಸ್ವಾಮಿ, ಎಂ. ಎನ್. ಜಯಶೀಲರಾವ್, ಭುವನಸಿಂಗ್, ಹೆಚ್. ಎಸ್. ದಾಸೂರಾವ್ (ಧನ್ವಂತ, 13) ದ. ಕೃ. ಭಾರದ್ವಾಜ.



ಭಾರತ ವಾಚನ ಪ್ರವೀಣ ಸಂ. ಗೋ. ಬಿಂದೂರಾಯರಿಗೆ ಶ್ರೀ ಕೆ. ವೆಂಕಟರಾಮಪ್ಪನವರ ಅಧ್ಯಕ್ಷತೆಯಲ್ಲಿ ಮಕ್ಕಳ ಮಂಟಪದ ಗಮಕ ತರಗತಿಯ ವಿದ್ಯಾರ್ಥಿ ವಿದ್ಯಾರ್ಥಿನಿಯರು ಏರ್ಪಡಿಸಿದ ಅಭಿನಂದನ ಸಮಾರಂಭ–11-9-1956

ಕುರ್ಚಿಯಮೇಲೆ—ರಾಘವೇಂದ್ರ ಇಟಗಿ, ಓ. ವೆಂಕೋಬಾಚಾರ್, ಎಂ. ವಿ. ಚಕ್ರವರ್ತಿ, ಭಾರತವಾಚನ ಪ್ರವೀಣ ಬಿಂದೂರಾವ್, ಕೆ. ವೆಂಕಟರಾಮಪ್ಪ, ಬಿ. ಶ್ರೀ. ಪಾಂಡುರಂಗರಾವ್, ಶಕುಂತಲಾಬಾಯಿ ಪಾಂಡುರಂಗರಾವ್.



ಗಮಕ ವಿದ್ವಾನ್ ಭಾರತ ಶ್ರೀ ಕೃಷ್ಣಗಿರಿ ಕೃಷ್ಣರಾಯರಿಗೆ "ಭಾರತವಾಚನ ಪ್ರವೀಣ" ಸಂ. ಗೋ. ಬಿಂದೂರಾಯರ ಅಧ್ಯಕ್ಷತೆಯಲ್ಲಿ ಮಕ್ಕಳ ಮಂಟಪದ ಆಶ್ರಯದಲ್ಲಿ ಗಮಕ ವಿದುಷಿ ಶಕುಂತಲಾ ಬಾಯಿಯ ಶಿಷ್ಯೆಯರು ಮತ್ತು ಅಭಿಮಾನಿಗಳು ಏರ್ಪಡಿಸಿದ್ದ ಸತ್ಕಾರ ಸಮಾರಂಭ. 9–8–1959



ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಶ್ರೀ ಜಿ. ನಾರಾಯಣ ಅವರ ಕಾಲದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಗಮಕ ಸಮಿತಿಯ ಆಶ್ರಯದಲ್ಲಿ ನಡೆದ ಎರಡನೆಯ ಗಮಕ ಶಿಕ್ಷಣ ಶಿಬಿರ, 1974 (?)

ಕುರ್ಚಿಯ ಮೇಲೆ ಕುಳಿತಿರುವ ಶಿಬಿರದ ಅಧ್ಯಾಪಕವರ್ಗ—ಸಂಗೀತ ವಿದುಷಿ ಇ. ಪಿ. ಅಲಮೇಲು, ಗಮಕ ವಿದುಷಿ ಶಕುಂತಲಾಬಾಯಿ ಪಾಂಡುರಂಗರಾವ್, ಸುಶೀಲ ರಂಗನಾಥರಾವ್ (ವಿದ್ಯಾರ್ಥಿ ಅಧ್ಯಕ್ಷಿಣೆ), ಹಿರಿಯ ಗಮಕ ವಿದ್ವಾಂಸ ಎಂ. ಜಿ. ವೆಂಕಟೇಶಯ್ಯ, ಜಿ. ನಾರಾಯಣ (ಕ. ಸಾ. ಪರಿಷತ್ತಿನ ಅಧ್ಯಕ್ಷ) ಪ್ರೊ|| ಜಿ. ವೆಂಕಟಸುಬ್ಬಯ್ಯ, ಗಮಕ ವಿದ್ವಾನ್ ಎನ್. ಎಸ್. ರಾಮಸ್ವಾಮಿ ಅಯ್ಯರ್, ಗಮಕ ವಿದ್ವಾನ್ ಎಂ. ರಾಘವೇಂದ್ರರಾವ್ (ಗಮಕ ಸಮಿತಿಯ ವ್ಯವಸ್ಥಾಪಕ), ಬಿ. ಎನ್. ಅನಂತರಾವ್ (ವಿದ್ಯಾರ್ಥಿಕಾರ್ಯದರ್ಶಿ)

ಮೂರು

ಗಮಕ ಶ್ರೀ

‘ಎನಿತನೊಱಿಲ್ದು ಪೇೞ್ವ ಕವಿಯೇವನದನ್ ಪೆಸರಿಟ್ಟು ಮೆಚ್ಚಬ ।
ಲ್ಲನನಱಿಸಲ್ಕೆ ವೇೞ್ವುದವನಂ ಜಗದೊಳ್ ಪಡೆಯಲ್ಕೆ ಬಾರದಾ ।
ತನಮುಖದಿಂದಮಲ್ಲಿದದು ಸಲ್ಲದು ಕಟ್ಟಿಯುಮೇನೊ ಮಾಲೆಗಾ ।
ಱಿನ ಪೊಸಬಾಸಿಗಂ ಮುಡಿವ ಭೋಗಿಗಳಿಲ್ಲದೆ ಬಾಡಿಪೋಗದೇ ॥

‘ಜನ್ನ’

ಬೌಗದ ಭೋಗದಕ್ಕರದ ಗೇಯದಗೊಟ್ಟಿಯಲಂಪಿಸಿಂಪುಗ
ಳ್ಗಾಗರಮಾದ ಮಾನಿಸರೆ ಮಾನಿಸರ್........

(ಪಂಪ)

ಸಿದ್ಧಿ ಕಾಲಾನುವಶಿ ಕಣಾ
ಲೀಲಾಜಗದೊಳದಾರ್ಗಾದೊಡಂ

—ಕುವೆಂಪು

ಬಳ್ಳಿ ಬಾಯ್ದೆರೆಯದೆ ಭ್ರಾಂತುಗೊಂಡಂತೆ ಮೈ
ಯೆಲ್ಲ ತೂಗಾಡದೊಂದಿನಿಸು
ಅಲ್ಲಾಟವುಂಟೋಜೆವಿಡಿದು ಬಾಯ್ದೆರೆಯುಂಟು
ಸಲ್ಲಲಿತದೊಳು ಹಾಡಿದರು

ನಾಲಿಗೆ ಕುಡುಹು ಶರೀರವೆ ವಾದ್ಯ ನಿ
ರಾಳಾತ್ಮನೇ ವಾದ್ಯಕಾರ

—ರತ್ನಾಕರವರ್ಣಿ

ಗಮಕ ಕಲಾ ಸರಸ್ವತಿ

ಮೈ. ಶೇ. ಅನಂತಪದ್ಮನಾಭರಾವ್

ಕಂ॥ ಅರ್ಥಾಭಾಸದಿನಕ್ಷರ
ಸಾರ್ಥಮನುಚ್ಚರಿಸೆ ಕಾವ್ಯವೆಂತೆಸೆಗುಂ ತ
ತ್ಸಾರ್ಥಮನರಿಯದ ಮುನ್ನಮೆ
ಸಾರ್ಥಂ ರಂಜಿಸದ ಪಣಿಕು ಮಣರಿವೊಲಿರದೇ॥
—ರುದ್ರಭಟ್ಟ

ಗಮಕ ಕಲೆ ಬಹು ಪ್ರಾಚೀನವಾದುದು. ಚತುಷ್ಷಷ್ಟಿ ಕಲೆಗಳಲ್ಲಿ ಗಮಕವೂ ಸೇರಿದೆ. ಸಾಹಿತ್ಯ-ಸಂಗೀತ ಇವೆರಡರ ಸಮ್ಮಿಳನ ಗಮಕ ಸಂಗೀತ ಗಮಕ ಪ್ರಭೇದಗಳೂ ಒಂದೇ ಬಗೆಯವು. ಆದರೆ ಪ್ರಯೋಗದಲ್ಲಿ ಕೆಲಮಟ್ಟಿನ ಭೇದವಿದೆ. ಗಮಕಿಗೆ ಸಾಹಿತ್ಯ ಸಂಗೀತ ಇವೆರಡರ ಜ್ಞಾನ ಚೆನ್ನಾಗಿರಬೇಕು. ಗಮಕ ಸಾಹಿತ್ಯ ಪ್ರಧಾನವಾದುದು. ಸಂಗೀತಕ್ಕೆ ಎರಡನೆಯ ಸ್ಥಾನ. ರಾಗ, ಶ್ರುತಿ, ಗತಿ ಇವೆಲ್ಲದರ ಮಾಹಿತಿ ಗಮಕಿಗೆ ಆವಶ್ಯ. ಜೊತೆಗೆ ಕಂಠಮಾಧುರ್ಯ ಅತ್ಯವಶ್ಯ. ಇಷ್ಟಿದ್ದರೆ ಗಮಕಗಾಯನ ಅತಿ ಸುಶ್ರಾವ್ಯ. ಸುಶ್ರವಣದಲಿ ಕುಡಿ ಕುಡಿದು ಪದವಿಯ ಪಡೆವುದೀ ಲೋಕ ಎಂದು ಕುಮಾರವ್ಯಾಸ ನುಡಿದಿದ್ದಾನೆ. ನಮ್ಮ ಪುರಾತನ ಕವಿ ಶ್ರೇಷ್ಠರಾದ ಕುಮಾರವ್ಯಾಸ, ಲಕ್ಷ್ಮೀಶ, ಕನಕದಾಸರು, ಪುರಂದರದಾಸರು ಇವರೆಲ್ಲ ಉತ್ತಮ ಶ್ರೇಷ್ಠ ಗಮಕಿಗಳೆಂದೇ ಹೇಳಬಹುದು. ದಾಸವರ್ಯರು ಶ್ರೇಷ್ಠ ವಾಗ್ಗೇಯಕಾರರು.

ಸಾವಿರದ ಒಂಬೈನೂರ ಮೂವತ್ತರ ಪೂರ್ವದಲ್ಲಿ ಕರ್ನಾಟಕದಲ್ಲಿ ಗಮಕಕಲೆ ಪ್ರಚಾರದಲ್ಲಿ ಇರಲಿಲ್ಲವೆಂದೇ ತೋರುತ್ತದೆ. ಗಮಕಿಗಳೇನೋ ಇದ್ದರು. ಆದರೆ ಸಾಹಿತಿಗಳ ಬಳಗದವರಾಗಿರಲಿಲ್ಲ. ಸಾಹಿತಿಗಳು ಅವರನ್ನ ಗಮನಿಸಿಯೂ ಇರಲಿಲ್ಲ. ಆದ್ದರಿಂದ ಸಮಾಜದಲ್ಲಿ ಇವರಿಗೆ ಗಣ್ಯಸ್ಥಾನ ದೊರೆಯಲಿಲ್ಲ. ರಾಮೋತ್ಸವ ಗಣೇಶೋತ್ಸವ ಮುಂತಾದ ಕಾರ್ಯಕ್ರಮಗಳಲ್ಲಿ ಗಮಕಗಾಯನ ಮಾಡುವುದು ಇವರದಾಗಿತ್ತು. ಇನ್ನು ಕಲವು ಗಮಕಿಗಳು ಈ ಕಲೆಯನ್ನು ದ್ರವ್ಯಸಂಪಾದನೆಯ ಸಾಧನವನ್ನಾಗಿ ಮಾಡಿಕೊಂಡಿದ್ದರು. 1932ನೆಯ ಇಸವಿ ಡಿಸೆಂಬರ್ ತಿಂಗಳಲ್ಲಿ ಮಡಿಕೇರಿಯಲ್ಲಿ ಜರುಗಿದ 18ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಪೂಜ್ಯ ಡಿ. ವಿ. ಜಿ. ಯವರು, ಸಮ್ಮೇಳನ ನಡೆದ ಮೂರು ದಿನಗಳಲ್ಲೂ ಗಮಕ ವಿದ್ವಾನ್ ಕೆಳಲೆ ಸಂಪತ್ಕುಮಾರಾಚಾರ್ಯರವರಿಂದ ಭಾರತವಾಚನ ಮಾಡಿಸಿದರು. ಅನಂತರ ಡಿ.ವಿ.ಜಿ ಯವರು ಪರಿಷತ್ತಿನ ಅಧ್ಯಕ್ಷರಾದರು. ಡಿ. ವಿ. ಜಿ. ಯವರು ಗಮಕ ಪ್ರಿಯರು, ಆ ಸಮಯದಲ್ಲಿ ಗಮಕ ಕಲೆಯಲ್ಲಿ ನುರಿತ ಭಾರತವಾಚನ ಪ್ರವೀಣ ಬಿಂದೂರಾಯರ ಪರಿಚಯವಿದ್ದ ಕಾರಣ ಅವರನ್ನು ಪರಿಷತ್ತಿಗೆ ಕರೆತಂದರು. ಅವರ ಮೂಲಕ ಪರಿಷತ್ತಿನಲ್ಲಿ

ಗಮಕ ತರಗತಿಗಳನ್ನು ಆರಂಭಿಸಿದರು. ಕುಮಾರವ್ಯಾಸ ಭಾರತದಿಂದ ಆಯ್ದ ಮೂರು ನಾಲ್ಕು ಸಂಧಿಗಳನ್ನು ವಿದ್ಯಾರ್ಥಿಗಳು ಅಭ್ಯಾಸ ಮಾಡಬೇಕಾಗಿತ್ತು. ಗಮಕ ಪರೀಕ್ಷೆಯ ಏರ್ಪಾಡೂ ಆಯಿತು.

ವಿದ್ವಾನ್ ಬಿಂದೂರಾಯರ ನೇತೃತ್ವದಲ್ಲಿ ಪ್ರಾರಂಭವಾದ ಈ ಮೊದಲನೆಯ ತರಗತಿಯಲ್ಲಿ ಗಮಕ ಅಭ್ಯಾಸ ಮಾಡಿದವರಲ್ಲಿ ಶ್ರೀಮತಿ ಶಕುಂತಲಾಬಾಯಿಯವರೂ ಒಬ್ಬರು. ಆಗ ಅವರಿಗೆ ಹದಿನಾರು ವರ್ಷ. ಬಿಂದೂರಾಯರ ಶಿಕ್ಷಣ ಬಹು ಕಠಿಣ. ಶಿಸ್ತು ಅವರದು. ರಾಯರು ಜೊತೆಗೆ ಶೀಘ್ರಕೋಪಿ. ಇವರ ಅಂಕೆಯಲ್ಲಿ ತಯಾರಾದವರು ಶಕುಂತಲಾಬಾಯಿಯವರು. ನಿರಂತರ ಅಭ್ಯಾಸ ಬಲದಿಂದ ಕನ್ನಡದ ಹಲವಾರು ಕಾವ್ಯಗಳ ಅಭ್ಯಾಸದಲ್ಲಿ ತೊಡಗಿ ಫಲಪಡೆದಿದ್ದಾರೆ. ಬಿಂದೂರಾಯರ ಪಟ್ಟ ಶಿಷ್ಯರಾದರು. ಶ್ರೀಮತಿಯವರು ಈ ಮೊದಲೇ ಸಂಗೀತ ಶಾಸ್ತ್ರಾಭ್ಯಾಸವನ್ನೂ ಮಾಡಿ ಹಲವು ರಾಗಗಳ ಬಳಕೆ ಮಾಡಿಕೊಂಡಿದ್ದರು. ಒಳ್ಳೆ ಇಂಪಾದ ಮಂಜುಳವಾದ ಗೌಳ ಶಾರೀರ. ಇವರ ಧ್ವನಿ ತಾರಸ್ಥಾಯಿಯನ್ನು ಸುಲಭವಾಗಿ ಸ್ವಲ್ಪವೂ ಶ್ರಮವಿಲ್ಲದೆ ಮುಟ್ಟುತ್ತಿದೆ. ಇವರಿಗೆ ಧ್ವನಿವರ್ಧಕದ ಅವಶ್ಯವಿಲ್ಲವೆಂದೇ ಹೇಳಬಹುದು. ಸುಮಾರು ಒಂದೂವರೆ ಎರಡು ಗಂಟೆ ಕಾಲ ಆಯಾಸವಿಲ್ಲದೆ ಹಾಡುವ ಸಾಮರ್ಥ್ಯ ಇವರದು. ಇವರು ಕಾವ್ಯಗಾಯನ ಮಾಡುವಾಗ ಕಾವ್ಯದ ವ್ಯಾಖ್ಯಾನದ ಅವಶ್ಯಕತೆಯೇ ತೋರಿಬರುವುದಿಲ್ಲ. ಅರ್ಥವತ್ತಾಗಿ ಸ್ಪಷ್ಟವಾಗಿ. ಅಸ್ವಯ ಪೂರ್ವಕವಾಗಿ ಹಾಡುವ ಶಕ್ತಿಗಳಿಸಿದ್ದಾರೆ. ಯಾವಬಗೆಯ ಅಂಗಚೇಷ್ಟೆ ವಿಕಾರ ಮುಂತಾದವುಗಳಿಲ್ಲದೆ ಲೀಲಾಜಾಲವಾಗಿ ಹಾಡುವ ರೀತಿ ಇವರದು. ಷಟ್ಪದಿಕಾವ್ಯ, ಚಂಪೂಕಾವ್ಯ, ಸಾಂಗತ್ಯ ಹಾಗೂ ಇನ್ನಿತರ ಕಾವ್ಯಗಳ ಪರಿಚಯ ಅನ್ಯಾದೃಶವಾಗಿದೆ. ಕರ್ನಾಟಕದ ಗಮಕಿಗಳ ಸಾಲಿನಲ್ಲಿ ಇವರಿಗೆ ಅಗ್ರಸ್ಥಾನವೆಂದರೆ ಅತಿಶಯೋಕ್ತಿಯಲ್ಲ. ಕವಿವರ್ಯ ಕುವೆಂಪುರವರ ಮಹಾಕೃತಿಯಾದ 'ಶ್ರೀರಾಮಾಯಣದರ್ಶನಂ' ಕಾವ್ಯ ಇವರಿಗೆ ಕರತಲಾಮಲಕ. ಈ ಕಾವ್ಯ ಕಂಠಗತ. ಕವಿ ಕುವೆಂಪುರವರು ಇವರಿಗೆ ಅತ್ಯಂತ ಪ್ರಿಯಕವಿ. ಕುವೆಂಪುರವರು ಇವರನ್ನು ತಮ್ಮ ಮನೆಗೆ ಕರೆಯಿಸಿಕೊಂಡು ಪುರಸ್ಕರಿಸಿದ್ದಾರೆ. ಶ್ರೀಮತಿಯವರಿಗೆ ಎಲ್ಲ ಕಾವ್ಯಗಳೂ ಕನ್ನಡಿಯಂತೆ. ಇವರೇನಾದರೂ ಬರೀ ಸಂಗೀತ ವಿದೂಷಿಯಾಗಿರುತ್ತಿದ್ದರೆ ಭಾರತದೇಶದಲ್ಲಿ ಜಯಶಾಲಿಗಳಾಗಿ, ಕೀರ್ತಿಶಾಲಿಗಳಾಗಿ ಬೆಳಗುತ್ತಿದ್ದರು. ಅದನ್ನು ತೊರೆದು ತಮ್ಮ ಜೀವನವನ್ನು ಗಮಕಗಾಯನಕ್ಕೆ ಮುಡಿಪಾಗಿಸಿದರು. ಗಮಕವನ್ನು ಜೀವನದುಸಿರಾಗಿ ಮಾಡಿಕೊಂಡರು.

ಶ್ರೀಮತಿ ಶಕುಂತಳಾಬಾಯಿಯವರು ತಮ್ಮ ತಾಯಿಯ ಸಹೋದರರಾದ ಶ್ರೀಮಾನ್ ಪಾಂಡುರಂಗರಾಯರನ್ನು ವಿವಾಹವಾಗಿದ್ದಾರೆ. ಮೂವರು ಪುತ್ರಿಯರು, ಒಬ್ಬ ಪುತ್ರ, ಮೊಮ್ಮಕ್ಕಳು. ಇವರು ಸಂಸಾರ ನಿರ್ವಹಣೆಯಲ್ಲಿ ಹಲವು ಬಗೆಯ ಕಷ್ಟ ಕಾರ್ಪಣ್ಯಗಳನ್ನು ಕಂಡವರು. ಕಂಡು ಶಾಂತ ಚಿತ್ತದಿಂದ ಸಹಿಸಿದವರು. ಸಂಸಾರದ ಪೂರ್ಣ ಹೊಣೆ ಹೊತ್ತಿದ್ದಾರೆ ಶಕುಂತಳಾಬಾಯಿಯವರು. ಶ್ರೀಮಾನ್ ಪಾಂಡುರಂಗರಾಯರು ಆದರ್ಶ ಉಪಾಧ್ಯಾಯರೆಂದು ರಾಷ್ಟ್ರ ಪ್ರಶಸ್ತಿ ಪಡೆದಿದ್ದಾರೆ. ಶ್ರೀಮತಿ

ಶಕುಂತಳಾಬಾಯಿಯವರ ಗಮಕ ಕಲೆಗೆ ಎಲ್ಲಾ ಬಗೆಯ ಪ್ರೋತ್ಸಾಹ ಪಾಂಡುರಂಗ ರಾಯರಿಂದ. ಶ್ರೀಮತಿಯರು ಸೇರಿದ ಮನೆಯವರೂ ಇವರ ಕಲಾಭ್ಯಾಸಕ್ಕೂ, ಕಲಾ ಪ್ರಚಾರಕ್ಕೂ ಅತಿಶಯವಾದ ಆಸ್ಪದ ಕಲ್ಪಿಸಿ ಕೊಟ್ಟು ಒಳ್ಳೆಯ ಶ್ರೇಷ್ಠ ಗಮಕ ವಿದುಷಿಯನ್ನು, ಒಂದು ರತ್ನವನ್ನೇ ನೀಡಿ ಮಹೋಪಕಾರ ಮಾಡಿದ್ದಾರೆ.

ಶಕುಂತಳಾಬಾಯಿಯವರು ಹಲವು ಕಾಲ ಗಮಕ ತರಗತಿಗಳನ್ನು ನಡೆಸಿ ಅನೇಕ ಶಿಷ್ಯರನ್ನು ತಯಾರಿಸಿರುತ್ತಾರೆ.ಇದರಿಂದ ಇವರ ನಾಡು ನುಡಿಗಳ ಸೇವೆ ಪ್ರಕಾಶವಾಗಿದೆ. ಸಾಹಿತ್ಯ ಸಮ್ಮೇಳನ, ವಿವಿಧ ಪ್ರದೇಶಗಳ ಸಾಹಿತ್ಯೋತ್ಸವಗಳಲ್ಲಿ ಭಾಗವಹಿಸಿ ಬೆಳಗಿದ್ದಾರೆ. ಕೊಲಂಬಿಯಾ ಗ್ರಾಮಾಫೋನ್ ಕಂಪನಿಯವರು ಇವರ ರಾಘವೇಂದ್ರ ಗುರೂಜಿ ಎಂಬ ಪದ್ಯಮಾಲಿಕೆಯನ್ನು ಧ್ವನಿಮುದ್ರಿಕೆ ಮಾಡಿಕೊಂಡಿರುವರು. ಇತ್ತೀಚೆಗೆ ಇವರು ಬರೆದು ಪ್ರಕಟಿಸಿರುವ 'ಗಮಕ ಕಲೆ ಮತ್ತು ಮಹಿಳೆ' ಎಂಬ ಗ್ರಂಥವು ಕನ್ನಡ ಸಾಹಿತ್ಯ ಭಂಡಾರಕ್ಕೆ ಒಂದು ಶ್ರೇಷ್ಠ ಕೊಡುಗೆಯಾಗಿದೆ. ಗಮಕ ಶಿಕ್ಷಣ ಸಮಿತಿಯಲ್ಲಿ ಪ್ರಮುಖ ಕ್ರಿಯಾಶೀಲ ಸದಸ್ಯರು. ಶೇಷಾದ್ರಿಪುರಂನ ನೆಹರೂ ನಗರದಲ್ಲಿ 'ಮಕ್ಕಳ ಮಂಟಪ' ವೆಂಬ ವಿದ್ಯಾ ಸಂಸ್ಥೆಯನ್ನು ಸ್ಥಾಪಿಸಿ, ಅನೇಕ ವರ್ಷಗಳ ಕಾಲ ಅದನ್ನು ನಡೆಸಿ ಚಿಕ್ಕಮಕ್ಕಳ ವಿದ್ಯಾಭ್ಯಾಸದಲ್ಲಿ ಆಸಕ್ತಿವಹಿಸಿರುವರು. ಮೈಸೂರು ಜಿಲ್ಲಾ ಸಾಹಿತ್ಯ ಪರಿಷತ್ತಿನವರು ಏರ್ಪಡಿಸಿದ್ದ ಗಮಕಕಲಾ ಸಮ್ಮೇಳನದ ಅಧ್ಯಕ್ಷಸ್ಥಾನವನ್ನಲಂಕರಿಸಿದ್ದರು. ಶ್ರೀಮತಿಯರು ರಾಷ್ಟ್ರಮಟ್ಟದಲ್ಲಿ ನವದೆಹಲಿ ಆಕಾಶವಾಣಿ ಕೇಂದ್ರದಿಂದ ಗಮಕ ಗಾಯನ ಮಾಡಿದ ಏಕೈಕ ಗಮಕಿ. ಅನೇಕ ಸಂಘ ಸಂಸ್ಥೆಗಳು ಶ್ರೀಮತಿಯವರನ್ನು ಆಹ್ವಾನಿಸಿ ಗೌರವಿಸಿವೆ. ಕರ್ನಾಟಕ ರಾಜ್ಯ ಪ್ರಶಸ್ತಿ ಪಡೆದ ಗಮಕಿಗಳಲ್ಲಿ ಇವರು ಮೊದಲನೆಯವರು. ಪ್ರಸಿದ್ಧ ಚಿತ್ರಕಲಾ ನಟಿಯಾದ ಎಂ. ವಿ. ರಾಜಮ್ಮನವರು ಇವರ ಸಹಪಾಠಿ. ಕರ್ನಾಟಕದ ಒಳಗೂ ಹೊರಗೂ ಇವರು ಸಂಚಾರ ಮಾಡಿ ಕಾವ್ಯಗಾಯನದಿಂದ ತಣಿಸದ ಸ್ಥಳವಿಲ್ಲ.

ಭಾರತವಾಚನ ಪ್ರವೀಣ ಸಂ. ಗೋ. ಬಿಂದೂರಾಯರು, ಗಮಕ ಕಲಾವಿಶಾರದ ಕೃಷ್ಣಗಿರಿ ಕೃಷ್ಣರಾಯರು ಇವರಿಬ್ಬರನ್ನೂ ತಮ್ಮ ಮನೆಗೆ ಬರಮಾಡಿಕೊಂಡು ಗೌರವಿಸಿದ್ದಾರೆ. ತಾವು, ಅಗ್ರಮಾನ್ಯ ಗಮಕ ವಿದುಷಿಯಾಗಿದ್ದರೂ, ಇತರ ಗಮಕಿಗಳ ವಿಷಯದಲ್ಲಿ ಲೇಶವೂ ಅಸೂಯೆಯೆಂಬುದಿಲ್ಲ. ಇತರ ಗಮಕಿಗಳು ಹಾಡುವಾಗ ಮನಸ್ಸಿಟ್ಟು ಕೇಳಿ ಪ್ರೋತ್ಸಾಹಿಸುತ್ತಾರೆ. ತಾವು ಸಂಸಾರಿಗಳಾಗಿದ್ದು, ಮಕ್ಕಳ ತಾಯಿಯಾಗಿ, ಮೊಮ್ಮಕ್ಕಳ ಅಜ್ಜಿಯಾಗಿ ಸದಾ ನಗುನಗುತ್ತಾ ಸುಖ ತೃಪ್ತ ಜೀವನ ಸಾಗಿಸುತ್ತಿದ್ದಾರೆ. ಯಾವ ಬಗೆಯ ಚಿಂತೆ ಅಸರೆಗಳಿಗೂ ಅಂಟಿಕೊಳ್ಳದೆ, ನಿರ್ಲಿಪ್ತರಾಗಿ ಈ ಸಾಹಿತ್ಯ ಸೇವೆಯನ್ನು ಅವ್ಯಾಹತವಾಗಿ ಮಾಡುತ್ತಿದ್ದಾರೆ. ಇವರಿಗೆ ಗಮಕಿ ಳೇ ಬಳಗದವರು. ಅತಿಥಿ ಅಭ್ಯಾಗತರ ಸೇವೆಯಲ್ಲಿ ಎತ್ತಿದ ಕೈ. ಮೃದುವಾದ, ಹದವಾದ ಮಾತು. ಕೊಂಕು ಮಾತುಗಳನ್ನು ಇವರರಿಯರು. ಮನೆಗೆ ಯಾರು ಬಂದರೂ ಆದರದ ಸ್ವಾಗತ ಬಯಸುತ್ತಾರೆ. ಸರಳವಾದ ನಡೆ–ನುಡಿ. ಅನೇಕ ವರ್ಷಗಳ ಕಾವ್ಯಾಭ್ಯಾಸದಿಂದ ತಮ್ಮ ಜೀವನವನ್ನೇ ಸಾತ್ವಿಕಮಯವನ್ನಾಗಿ ಮಾಡಿಕೊಂಡಿದ್ದಾರೆ.

ಒಬ್ಬರಲ್ಲಿ ಹೆಚ್ಚು ವಿಶ್ವಾಸ, ಇನ್ನೊಬ್ಬರಲ್ಲಿ ಕಡಮೆಯೆಂಬುದಿಲ್ಲ. ಎಲ್ಲರನ್ನೂ ಸಮ ದೃಷ್ಟಿಯಿಂದ ನೋಡುವ ಗುಣ ಶಕುಂತಲಾಬಾಯಿಯವರದು. ಅರುವತ್ತು ತುಂಬಿದರೂ ಅವರ ಕಂಠ ಮಾಧುರ್ಯಕ್ಕೆ ಅರುವತ್ತಾಗಿಲ್ಲವೆಂದೇ ಹೇಳಬೇಕು. ಪ್ರಾರಂಭದಿಂದ ಇದುವರೆಗೆ ತಮ್ಮ ಕಂಠಶ್ರೀಯನ್ನು ಒಂದೇ ರೀತಿಯಾಗಿ ಕಾಪಾಡಿಕೊಂಡು ಬಂದಿದ್ದಾರೆ. ಕಾವ್ಯಗಾಯನ ಸರಸ್ವತಿಯ ಪೂರ್ಣಾನುಗ್ರಹ ಇವರಿಗಿದೆ.

ಹೀಗೆ ಗಮಕ ಕಲೆಯ ಜೊತೆಗೆ ಹಲವು ಉತ್ತಮ ಗುಣಗಳನ್ನು ಹೊಂದಿರುವ ಶ್ರೀಮತಿ ಶಕುಂತಲಾಬಾಯಿಯವರು ನೂರುಕಾಲ ಬಾಳಿ ನಾಡುನುಡಿಯ, ಗಮಕ ಕಲೆಯ ಸೇವೆ ಮಾಡಿ ಕೃತಕೃತ್ಯರಾಗುವಂತಾಗಲಿ, ಗಮಕಕಲಾ ಸರಸ್ವತಿಯ ಪೂರ್ಣಾನುಗ್ರಹವಿರಲಿ. ಭಗವಂತನೂ ಸಂಪೂರ್ಣ ಕೃಪಾವರ್ಷ ಕರೆಯಲಿ.

ಯಃ ಸರ್ವಗುಣ ಸಂಪೂರ್ಣಃ ಸರ್ವದೋಷವಿವರ್ಜಿತಃ
ಪ್ರೀಯತಾಂ ಪ್ರೀತ ಏವಾಲಂ ವಿಷ್ಣುರ್ಮೇ ಪರಮಃ ಸುಹೃತ್ ।

(ಮಹಾಭಾರತ ತಾತ್ಪರ್ಯನಿರ್ಣಯ)

ಶುದ್ಧ ಓದುಗಾರಿಕೆಯ ಗಮಕಿ

ಕೆ. ಟಿ. ರಾಮಸ್ವಾಮಯ್ಯಂಗಾರ್

ಶ್ರೀಮಾನ್ ಪಾಂಡುರಂಗರಾಯರನ್ನು ನಾನು ಬಹು ಕಾಲದಿಂದ ಬಲ್ಲೆ, ಶೇಷಾದ್ರಿಪುರದಲ್ಲಿ ಮಕ್ಕಳಕೂಟವನ್ನು ಸ್ಥಾಪಿಸಿ ಈ ವರೆಗೂ ಅದನ್ನು ನಡೆಸುತ್ತಿದ್ದವರು, ಹಾಗೂ ಮಕ್ಕಳ ಸಾಹಿತ್ಯವನ್ನು ಬೇಕಾದಷ್ಟು ಬರೆದಿದ್ದಾರೆ. ಅವರ ಮನೆಗೆ ನಾನು ಹೋಗುತ್ತಿದ್ದುದು ಕೇಯ ಸೆಳೆತದಿಂದ. ಅವರ ಭಾರ್ಯೆ ಶಕುಂತಲಾಬಾಯಿಯವರು ಗಮಕದಲ್ಲಿಪ್ರಸಿದ್ಧಿ ಸಂಪಾದಿಸಿದವರು.ಆಕಾಶವಾಣಿಯ ಕಲಾವಿದೆ.ನಾನು ಆಕಾಶವಾಣಿಯಲ್ಲಿಆಗಾಗ ವಾಚನ ಮಾಡುತ್ತಿದ್ದೆ. ತತ್ಕಾರಣ ಅವರ ಪರಿಚಯವಾಗಿ ಬೆಂಗಳೂರಿಗೆ ಹೋದಾಗ ಈ ದಂಪತಿಗಳನ್ನು ನೋಡಿ ಬರುತ್ತಿದ್ದೆ. ಅವರ ಸೌಜನ್ಯ ಹೇಳತೀರದು.

ಶ್ರೀಮತಿ ಶಕುಂತಲಾಬಾಯಿಯವರು ಕೇವಲ 15 ವರ್ಷದವರಾಗಿದ್ದಾಗ ಕನ್ನಡ ಪರಿಷತ್ತಿನ ಗಮಕ ತರಗತಿಗೆ ಸೇರಿದರು. ಶ್ರೀ ಬಿಂದೂರಾಯರ ಶಿಷ್ಯರಾದರು. ಆಗಲೇ ಇವರಿಗೆ ಸಂಗೀತ ತಕ್ಕಮಟ್ಟಿಗೆ ಪರಿಚಯವಿದ್ದುದರಿಂದ ಕಾವ್ಯವಾಚನ ಸುಲಭವಾಯಿತು. ಆ ಕಾಲ, ಕನ್ನಡದ ಕುಡಿ ಹಬ್ಬಿ ಹೂ ಬಿಡುತ್ತಿದ್ದಕಾಲ. ಕುಮಾರವ್ಯಾಸರ ಭಾರತವನ್ನು ಎಲ್ಲೆಲ್ಲೂ ಓದಿಸುತ್ತಿದ್ದರು. ಶ್ರೀ ಬಿಂದೂರಾಯರು, ಶ್ರೀಕೃಷ್ಣರಾಯರು ಶ್ರೀ ಸಂಪತ್ಕುಮಾರಾಚಾರ್ಯರು ಪ್ರಮುಖ ಗಮಕಿಗಳಾಗಿದ್ದರು. ಕನ್ನಡ ಪರಿಷತ್ತು ಗಮಕ ತರಗತಿಗಳನ್ನು ಶ್ರೀ ಡಿ. ವಿ. ಗುಂಡಪ್ಪನವರ ಪ್ರೋತ್ಸಾಹದಿಂದ ತೆರೆದು ಶ್ರೀ ಬಿಂದೂರಾಯರನ್ನು ಅಧ್ಯಾಪಕರಾಗಿ ನೇಮಿಸಿತ್ತು. ಶ್ರೀ ಶಕುಂತಲಾರವರು ಬಿಂದೂರಾಯರ ಮಹಿಳಾ ಶಿಷ್ಯರ ಪೈಕಿ ಮೊದಲಿಗರು. ಶ್ರೀ ಬಿಂದೂರಾಯರು ಭಾರತವನ್ನು ಓದಿ ಕರ್ನಾಟಕದಲ್ಲಿ ಪ್ರಸಿದ್ಧಿ ಪಡೆದವರು. ಇವರ ಪರಿಚಯ ನನಗೆ 1929 ರಿಂದ ಉಂಟು. ಶ್ರೀ ಎಂ. ಆರ್. ಶ್ರೀಯವರು ಕನ್ನಡ ಪರಿಷತ್ತಿನ ಅಧ್ಯಕ್ಷರಾಗಿದ್ದುದು ಸರಿ. ಅದಕ್ಕೆ ಮುಂಚೆ ತುಮಕೂರಿನಲ್ಲಿ ಹೈಸ್ಕೂಲಿನಲ್ಲಿ ಅವರು ಭೌತಶಾಸ್ತ್ರದ ಮೇಷ್ಟ್ರು, ನಾನು ಗಣಿತದ ಮೇಷ್ಟ್ರು ಹಾಗೂ ನಾವಿಬ್ಬರೂ ಇಸ್ಪೀಟಿನ ಸ್ನೇಹಿತರು.ನಾನೂ ಅವರೂ ತೀರ ಹತ್ತಿರ ಇದ್ದೆವು. ಒಂದು ದಿನ 'ಭಾರತದ ಬಿಂದೂರಾಯರು ಬಂದಿದ್ದಾರೆ. ಒಂದು ವಾರ ನಿತ್ಯ ಸಾಯಂಕಾಲ ನಮ್ಮ ಮನೆಯಲ್ಲಿ ಭಾರತ ಓದುತ್ತಾರೆ. ನೀವು ಬಂದು ಕೇಳಿ' ಎಂದರು. ನಾನು ಹೋಗಿ ಕೇಳಿದೆ, ಓದು ಚೆನ್ನಾಗಿತ್ತು. ಅದಕ್ಕಾಗಿ ಅವರು ತಮ್ಮ ಜೀವವನ್ನೇ ತೇದಿದ್ದರು. ಭಾರತವನ್ನು ಕರತಲಾಮಲಕ ಮಾಡಿಕೊಂಡಿದ್ದರು. ತಂಬೂರಿ ಶ್ರುತಿಗೆ ಒಂದು ಗಂಟೆಕಾಲ ಅವರಿಗೆ ವಶವಾಗಿದ್ದ ಒಂದು ಧಾಟಿಯಲ್ಲಿ, ಸಾಹಿತ್ಯ ಶುದ್ಧವಾಗಿ, ಹಾಡುತ್ತಿದ್ದರು. ಅಲ್ಲಲ್ಲಿ ವಿನ್ಯಾಸ ಮಾಡುತ್ತಾ ವ್ಯಾಖ್ಯಾನ ವಿಲ್ಲವೆ ಓದುತ್ತಿದ್ದರು. ನನಗೂ ಅನ್ನಿಸಿತು, ಕಾವ್ಯವಾಚನ ಕಲಿತರೆ ಒಳ್ಳೆಯದೆಂದು. ಅದಾದ 13 ವರ್ಷಗಳ ತರುವಾಯ ಸಂಗೀತವನ್ನು ಅಭ್ಯಾಸ ಮಾಡಿ ಸಂಪತ್ಕುಮಾರಚಾರ್ಯರಿಂದ ಈ ಕಲೆಯನ್ನು ಕಲಿತೆ.

ಶ್ರೀಮತಿ ಶಕುಂತಲಾಬಾಯಿಗೆ ಬಿಂದೂರಾಯರಿಂದ ಕಲಿಯುವ ಒಂದು ಸುಯೋಗ ಸಿಕ್ಕಿತು. ಕಂಠ ಶ್ರೀ ಚೆನ್ನಾಗಿತ್ತು. ಕಲಿಯುವ ಉತ್ಕಟೇಚ್ಛೆಯಿತ್ತು. ಹೇಳಿದ್ದನ್ನು ಕಲಿತು ಒಪ್ಪಿಸಿ ಗುರುಗಳ ಕೃಪೆಗೆ ಪಾತ್ರರಾದರು. ಹಾಗೂ ಶ್ರೀ ಬಿ. ಎಂ. ಶ್ರೀ, ವೆಂಕಣ್ಣಯ್ಯ, ಶ್ರೀ ಕೆ. ವಿ. ಪುಟ್ಟಪ್ಪ ಮುಂತಾದವರ ಪ್ರೋತ್ಸಾಹವೂ ಸಿಕ್ಕಿತು. ಸಭೆಗಳಲ್ಲಿ ಭಾರತ ವಾಚನ ವೊಂದೇ ಅಲ್ಲ ಇತರ ಕಾವ್ಯಗಳನ್ನೂ ಓದಿ ಪ್ರಖ್ಯಾತ ರಾದರು. ಒಂದು ವಿಷಯವನ್ನು ಗಮನಿಸಬೇಕು, ಇವರ ಓದುಗಾರಿಕೆಯುಲ್ಲಿ ಬಿಂದೂ ರಾಯರ ಶೈಲಿ ಇವರ ವಾಚನದಲ್ಲಿ ಕಾಣುತ್ತದೆ. ಭಾಮಿನಿ ಷಟ್ಪದಿಯು 14, 14, 23, 14,14,23 ಮಾತ್ರೆಗುಳುಳ್ಳದ್ದು. 3+4 ಮಾತ್ರೆಗಳ, 2 ಅವರ್ತ, 1, 2,4,5ನೇ ಸಾಲು ಗಳಲ್ಲಿ 3+4 ಮಾತ್ರೆಗಳ 3ಆವರ್ತಗಳು 3 ಮತ್ತು 6ನೇ ಸಾಲಿನಲ್ಲಿ +1 ಅಕ್ಷರ, ಎಂದರೆ 23ಮಾತ್ರೆ. ಈ ಛಂದಸ್ಸು ಅಭ್ಯಾಸವಾದಾಗ ಒಂದು ನಡೆ ಅದರಲ್ಲಿ ಕಾಣಿಸುತ್ತವೆ.ಅದು ಬಿಂದೂರಾಯರಿಗೆ ಸಿಕ್ಕಿತ್ತು. ಶ್ರೀಮತಿ ಶಕುಂತಲಾಬಾಯಿಯವರ ವಾಚನದಲ್ಲಿ ಇದನ್ನು ಗಮನಿಸಬಹುದು.

ಶ್ರೀಮತಿಯವರಿಗೆ ಸಂಗೀತ ಪರಿಚಯವಿತ್ತು ಎಂದೆವು. ಸುಮಾರು 15 ವರ್ಣಗಳು 40 ಕೀರ್ತನೆಗಳು ಪಾಠವಾಗಿತ್ತು. ತತ್ಕಾರಣ ಬಳಕೆಯಲ್ಲಿರುವ ಅತಿ ಮುಖ್ಯವಾದ ರಾಗಗಳು ಇವರಿಗೆ ತಿಳಿದಿತ್ತು. ಆದುದರಿಂದ ಸಾಹಿತ್ಯಕ್ಕೆ ತಕ್ಕಂತೆ, ಅದರ ರಸಕ್ಕೆ ಭಾವಕ್ಕೆ ತಕ್ಕಂತೆ, ರಾಗಗಳನ್ನು ಜೋಡಿಸಿ ಹಾಡುವುದು ಇವರಿಗೆ ಸುಲಭವಾಗಿತ್ತು. ಸಂಗೀತ ತಕ್ಕ ಮಟ್ಟಿಗೆ ತಿಳಿಯದಿದ್ದರೆ ಸಂಗೀತವನ್ನು ಒಂದು ರಾಗದಲ್ಲಿ ಆರಂಭಿಸಿ ಇನ್ನೊಂದು ರಾಗ ದಲ್ಲಿ ಮುಗಿಸುವುದು ಸಹಜವೇ. ಸಾಹಿತ್ಯದ ವಿಚಾರದಲ್ಲಿ ಗುರುವಿನಂತೆ ಶಿಷ್ಯೆ ಎಂದರೆ ತಪ್ಪಲ್ಲ. ಬಿಂದೂರಾಯರು ಕುಮಾರವ್ಯಾಸ ಭಾರತವನ್ನು ವಶಮಾಡಿಕೊಂಡಿದ್ದರು. ಎಂದರೆ ಸಾಹಿತ್ಯದ ಶುದ್ಧಿ ಅವರಲ್ಲಿತ್ತು. ಓದುವವರಿಗೆ ಸಾಹಿತ್ಯದ ಭಾವ ಹೇಗೆ?, ಎಲ್ಲಿ ನಿಲ್ಲಿಸಿ ಓದಬೇಕೆಂಬುದು ಗೊತ್ತಿಲ್ಲದಿದ್ದರೆ ಆಭಾಸವಾದೀತು. ಅದಕ್ಕಾಗಿ ಸಾಹಿತ್ಯವನ್ನು ಶೋಧಿಸಿ, ಸರಿಮಾಡಿಕೊಂಡು ಓದುವ ಅಭ್ಯಾಸವಾಗಬೇಕು. ಈ ಮನೋಧರ್ಮ ಬಿಂದೂರಾಯರಿಂದ ಸಿಕ್ಕಿ ಶ್ರೀ ಪಾಂಡುರಂಗರಾಯರಿಂದ ಹದಗೊಂಡು ಶಕುಂತಲಾ ಬಾಯಿಯವರ ಓದುಗಾರಿಕೆ ಶುದ್ಧವಾಗಿರುತ್ತಿತ್ತು. ಈ ರೀತಿಯ ಸಾಹಿತ್ಯದ ತಿಳುವಳಿಕೆ ಯಿಂದ ಓದಿನಲ್ಲಿ ಭಾವ ಪುಷ್ಟಿ ಏರ್ಪಡಲೇಬೇಕು.

ಹೀಗೆ, ಕಂಠ ಶ್ರೀ, ಶುದ್ಧ ಸಾಹಿತ್ಯ, ಸಂಗೀತ, ಭಾವರಸಗಳಿಂದ ಕೂಡಿದ ಅವರ ವಾಚನವು ಜನರಿಗೆ ಪ್ರಿಯವಾಗಿ ಪರಿಣಮಿಸಿದುದರಲ್ಲಿ ಏನಾಶ್ಚರ್ಯ? ಮತ್ತೊಂದು ವಿಷಯ, ಮಹಿಳೆಯರು ಹಿಂದಿನಿಂದಲೂ ಗಮಕ ವಾಚನ ಮಾಡಿದ್ದಾರೆ. ರತ್ನಾಕರ ವರ್ಣಿ ವರ್ಣಿಸಿರುವ ಗಮಕ ವಿದುಷಿ, ಓಸಗರಿಯು ಗ್ರಂಥವನ್ನು ಮುಂದಿಟ್ಟುಕೊಂಡು, ತಂಬೂರಿಯನ್ನು ಮೀಟುತ್ತಾ ವಾಚನ ಮಾಡಿದಳಂತೆ, ಆಮೇಲೆ 1553ರಲ್ಲಿ ಹಂಪೆಯ ರಾಜನಾಗಿದ್ದ ಅಚ್ಯುತರಾಯನ ಕಾಲದ ಒಂದು ಶಾಸನದಿಂದ ತಿರುವಲಮ್ಮ ಎಂಬುವಳು ಸ್ವತಃ ಕವಿಯಾಗಿದ್ದುದಲ್ಲದೆ ಪ್ರಸಿದ್ಧ ಗಮಕಿಯೂ ಆಗಿದ್ದಳೆಂದು ತಿಳಿದುಬರುತ್ತದೆ. ಸುಕುಮಾರ ಚರಿತೆಯಲ್ಲಿ ನಾಗಶ್ರೀ ಎಂಬುವಳು ಅರ್ಥವೂ ರಾಗವೂ ರಂಜನೆಯಾಗು

ನಂತೆ ಓದಿದಳು ಎಂದು ಕಂಡುಬರುತ್ತದೆ. ಎಂದಮೇಲೆ ಹಿಂದಿನಿಂದಲೂ ಮಹಿಳೆಯರು ಕಾವ್ಯವಾಚನಮಾಡಿದ್ದಾರೆ. ಮಹಿಳೆಯರಿಗೆ ಕಂಠಶ್ರೀ ಸಾಧಾರಣವಾಗಿ ಚೆನ್ನಾಗಿರುವುದರಿಂದ, ಪುರುಷರ ಓದಿಗಿಂತ ಅವರ ಓದು ಚೆನ್ನವೇನೊ. ಅಂತೂ ಈಚೆಗೆ ವಾಚನ ಮಾಡುವವರೂ,ಕಲಿಯುವವರೂ ಹೆಚ್ಚಾಗಿ ಮಹಿಳೆಯರೇ ಆಗಿದ್ದಾರೆ. ನನಗೆ ತಿಳಿದಂತೆ ಹಳ್ಳಿಗಳಲ್ಲಿ ಓದುತಿಳಿದ ಹೆಣ್ಣುಮಕ್ಕಳು ಕುಮಾರವ್ಯಾಸ, ಲಕ್ಷ್ಮೀಶರ ಕಾವ್ಯಗಳನ್ನು ಇತರ ಮಹಿಳೆಯರನ್ನು ಕೂರಿಸಿಕೊಂಡು ಓದುತ್ತಿದ್ದರು.ಮಹಿಳೆಯರಿಗೆ ಈ ಕಾವ್ಯಗಳು ರೂಢಿಯಾದರೆ ದೇಶಕ್ಕೆ ಹೆಚ್ಚು ಲಾಭ, ಭಾಷೆಯೂ ಧರ್ಮವೂ ತಾನೇ ಪ್ರಚಾರವಾಗುತ್ತದೆ.

ಶ್ರೀಮತಿ ಶಕುಂತಲಾಬಾಯಿಯವರಿಗೆ ಸಾಹಿತ್ಯ ಅಕಾಡಮಿ ಪ್ರಶಸ್ತಿ ಬಂದಿದೆ. 1979ರಲ್ಲಿ ಮೈಸೂರಿನಲ್ಲಿ ನಡೆದ ಗಮಕ ಸಮ್ಮೇಳನಕ್ಕೆ ಅಧ್ಯಕ್ಷಿಣಿಯಾಗಿದ್ದರು, ಅವರ ಸೇವೆಯನ್ನು ಮೆಚ್ಚಿ ಬಂದವು ಈ ಮರ್ಯಾದೆಗಳು. ಈಗ ಅವರಿಗೆ 60 ತುಂಬುತ್ತದೆ. ಈ ಸಂದರ್ಭದಲ್ಲಿ ಅವರಿಗೂ, ಶ್ರೀ ಪಾಂಡುರಂಗರಾಯರಿಗೂ ಭಗವಂತನು ಆಯುರಾರೋಗ್ಯವನ್ನು ದಯಪಾಲಿಸಲಿ, ಅವರಿಂದ ಸಾಹಿತ್ಯಕ್ಕೂ ಗಮಕ ಕಲೆಗೂ ಇನ್ನೂ ಹೆಚ್ಚು ಸೇವೆ ದೊರಕಲಿ, ಎಂಬುದೇ ನನ್ನ ಆಸೆ.

ಜನಾನುರಾಗಿ

ಸರೋಜಮ್ಮ ಅನಂತರಾಮಯ್ಯ

ಗಮಕ ಪ್ರಪಂಚದಲ್ಲಿ ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾವ್‌ರವರ ಹೆಸರನ್ನು ಕೇಳದಿರುವವರು ವಿರಳವೆಂದು ಹೇಳಬೇಕಾಗುತ್ತವೆ. ಗಮಕ ಅಥವಾ ಕಾವ್ಯ ವಾಚನವೆಂದರೆ 'ಶಕುಂತಲಾಬಾಯಿಯವರ ವಾಚನ ಕೇಳಿದ್ದೀರಾ ?' ಎಂಬ ಮಾತು ಉದ್ಭವಿಸುತ್ತದೆ.

ಶಕುಂತಲಾಬಾಯಿಯವರ ಧವಳ ಸ್ವರ ಹಾಗೂ ಸ್ಪಷ್ಟವಾದ ಉಚ್ಚಾರಣೆ ನಡೆಯಲ್ಲಿ ಸಂದರ್ಭೋಚಿತ ಬದಲಾವಣೆ ಅವು ಆಕೆಯ ವಾಚನದಲ್ಲಿರುವ ವಿಶೇಷ ಗುಣಗಳು.

ನವರಸಭರಿತವಾದ ಕಾವ್ಯವನ್ನು ಶ್ರೋತೃಗಳ ಮನ ಸೆಳೆಯುವಂತೆ ಅತ್ಯಂತ ಭಾವಪೂರಿತವಾಗಿ ಶ್ರೀಮತಿಯವರು ವಾಚನ ಮಾಡಿ ಯಶಸ್ಸನ್ನು ಗಳಿಸಿರುತ್ತಾರೆ. ರಸಗಳನ್ನು ಸಂದರ್ಭಾನುಸಾರ ಅರಿತು ಶ್ರೋತೃಗಳ ಮನ ಸೆಳೆಯುವುದರಲ್ಲಿ ಶ್ರೀಮತಿಯವರು ಎತ್ತಿದ ಕೈ. ವೀರರಸವನ್ನು ಪ್ರತಿಪಾದನೆ ಮಾಡುವುದರಲ್ಲಿಯೂ ಕರುಣಾರಸವನ್ನು ಹೊರ ಹೊಮ್ಮಿಸುವಾಗಲೂ ಆಕೆ ಪಾತ್ರಗಳ ವೈಶಿಷ್ಟ್ಯವನ್ನು ಅರಿತು ಅನುಭವಿಸಿ ಹಾಡುತ್ತಾರೆ.

ಕಳೆದ ನಲವತ್ತುಮೂರು ವರ್ಷಗಳಿಂದಲೂ ಸಹ ಅವರು ಗಮಕ ಪ್ರಪಂಚದಲ್ಲಿ ಇದ್ದಾರೆ. 1937ನೇ ಇಸವಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ನಡೆದ ಗಮಕ ತರಗತಿಗೆ ಅವರು ವಿದ್ಯಾರ್ಥಿನಿಯಾಗಿ ಸೇರಿದರು. ಅವರ ಜೊತೆ ಗಮಕ ವಿದ್ವಾಂಸ ಶ್ರೀ ಬಿಂದೂರಾಯರ ನೇತೃತ್ವದಲ್ಲಿ ನಡೆದ ಆ ತರಗತಿಗೆ ಸುಪ್ರಸಿದ್ಧ ಗಮಕ ವಿದ್ವಾಂಸ ಶ್ರೀ ಎಸ್. ನಾಗೇಶರಾವ್ ಮೊದಲಾದ ಇತರರೂ ಸೇರಿ ಕಲಿತರು.

ಮುಂದಕ್ಕೆ ಈಕೆಯ ಶಂಕತ್ರೀಗೆ ಮಾರುಹೋದ ಶ್ರೀ ಬಿಂದೂರಾಯರು ಶ್ರೀಮತಿಯವರ ಮನೆಗೇ ಹೋಗಿ ಭಾರತದ ಕೆಲವು ಭಾಗಗಳನ್ನು ಆಕೆಗೆ ಕಲಿಸಿದರಂತೆ!

ಅಂದಿನಿಂದಲೂ ಇಂದಿನವರೆವಿಗೂ ಶ್ರೀಮತಿಯವರು ಗಮಕವನ್ನು ಹೇಳಿಕೊಂಡೇ ಬರುತ್ತಲಿದ್ದಾರೆ.

ಅವರ ವಾಚನ ವಿಸ್ತರಣೆಗೆ ಅವರ ಯಜಮಾನರಾದ (ಕನ್ನಡ ಸಾಹಿತಿ) ಶ್ರೀ ಬಿ. ಪಾಂಡುರಂಗರಾಯರು ತುಂಬಾ ವಿಧದಲ್ಲಿ ಕಾರಣಕರ್ತರಾಗಿದ್ದಾರೆ. ಅವರ ಉತ್ತೇಜನ ಶ್ರೀಮತಿಯವರ ಏಳಿಗೆಗೆ ಕಾರಣವಾಗಿವೆ.

ಶ್ರೀ ಪಾಂಡುರಂಗರಾಯರು ಅವರು ವಾಚನ ಮಾಡುವ ಸಭೆಗಳಲ್ಲಿ ಸೂಕ್ತ ವ್ಯಾಖ್ಯಾನ ನೀಡುವವರಲ್ಲವೆ, ಆಕೆಗೆ ಉತ್ತಮವಾದ ಕಾವ್ಯಗಳ ಪರಿಚಯವನ್ನು ಹಸನಾಗಿ ಮಾಡಿ ಕೊಡುವವರಾಗಿದ್ದಾರೆ.

ಸಾಹಿತ್ಯವನ್ನು ಚೆನ್ನಾಗಿ ಮನದಟ್ಟು ಮಾಡಿಕೊಂಡು ಹಾಡಲು ತಮ್ಮ ಯಜಮಾನರ ಮಾರ್ಗದರ್ಶನ ಶಕುಂತಲಾಬಾಯಿಯವರಿಗೆ ಅನುಕೂಲವಾಗಿ ಪರಿಣಮಿಸಿವೆ.

ಉತ್ತಮ ಕವಿಗಳಾದ, ಶ್ರೀಗಳಾದ, ಬೇಂದ್ರೆ, ಪುತಿನ, ನರಸಿಂಹಸ್ವಾಮಿ, ಗೋವಿಂದಪೈ ಡಿ. ವಿ. ಜಿ. ಮೊದಲಾದ ಆಧುನಿಕ ಕವಿಗಳ ಕವಿತೆಗಳನ್ನು ರಸವತ್ತಾಗಿ ಹಾಡಲು ಆಕೆಗೆ ಶ್ರೀ ಪಾಂಡುರಂಗರಾಯರು ಮಾರ್ಗದರ್ಶನ ನೀಡಿರುತ್ತಾರೆ.

ಶ್ರೀ ಕು.ವೆಂ.ಪು.ರವರ ರಾಮಾಯಣದರ್ಶನವನ್ನು ಹಾಡುವುದನ್ನು ಶಕುಂತಲಾ ಬಾಯಿಯವರು ಕರತಲಾಮಲಕ ಮಾಡಿಕೊಂಡಿದ್ದಾರೆಂದರೆ ಅತಿಶಯೋಕ್ತಿಯಾಗ ಲಾರದು. ಅಲ್ಲದೇ ಶ್ರೀಮತಿಯವರು, ಕನ್ನಡ ಕಾವ್ಯಗಳಾದ ಗದುಗಿನ ಭಾರತ, ಜೈಮಿನಿ ಭಾರತ, ತೊರವೆಯ ರಾಮಾಯಣ ಇವುಗಳನ್ನೂ ಇನ್ನೂ ಕನ್ನಡದ ಉತ್ತಮ ಕೃತಿ ಗಳನ್ನೂ ಸಹ ಮಧುರವಾಗಿಯೂ ಸ್ಪಷ್ಟವಾಗಿಯೂ ಹಾಡುತ್ತಾರೆ.

ಎಷ್ಟೋ ಬಾರಿ ನಾಲ್ಕಾರು ವಾರಗಳು, ತಿಂಗಳುಗಳಗಟ್ಲೆ ಶ್ರೀಮತಿಯವರು ಪರಸ್ಥಳಗಳಿಗೆ ಹೋಗಿ ಓದಿ ಹಾಡಿ ಜನಾನುರಾಗ ಪಡೆದಿರುತ್ತಾರೆ. ಕಾವ್ಯವಾಚನ ಕಲೆಯೇ ಇವರಿಂದ ವಿಸ್ತರಿಸಿದೆ.

ಕಾವ್ಯವಾಚನವೆಂದರೆ ಬರಿಯ ಮಾಧುರ್ಯವಲ್ಲ. ಸ್ಪಷ್ಟವೂ ಅಲ್ಲ. ಎಲ್ಲವೂ ಸಮ್ಮಿ ಶ್ರಣವಾಗಿ ಇರಬೇಕು. ಅಲ್ಲದೆ ಸಂದರ್ಭಕ್ಕೆ ತಕ್ಕ ರಾಗ ಅಳವಡಿಸಬೇಕು. ಭಾವವೇ ವಾಚನದ ಜೀವಾಳವೆಂಬುದನ್ನು ಮರೆಯಬಾರದು.

ಕವಿಯ ಹೃದಯವನ್ನು ಅರಿತು ಹಾಡುವ ಗಮಕಿ ಯನ್ನು ಉತ್ತಮ ಗಮಕಿ ಎಂದು ಕರೆಯಲಾಗುತ್ತದೆ. ಈ ಗಮಕ ವಾಚನ ಕಲೆಯು ಅತ್ಯಂತ ಶ್ರೇಷ್ಠವೂ ಪವಿತ್ರವೂ ಆದ ಕಲೆಯಾಗಿರುತ್ತದೆ. ಈ ಗಮಕ ಕಲೆಯು ಶ್ರೀಮದ್ವಾಲ್ಮೀಕಿ ಮುನಿಗಳ ಕಾಲದಿಂದಲೂ ಸಹ ಪ್ರರಚಾವಾಗಿದೆ.

ಲವಕುಶರ ಬಾಯಿಂದ ಈ ಕಲೆಯನ್ನು ವಾಲ್ಮೀಕಿಗಳು ರಾಮಾಯಣ ಹಾಡಿಸಿ ಅತ್ಯಂತ ಪವಿತ್ರ ಕಲೆಯನ್ನಾಗಿ ಮಾಡಿದ್ದಾರೆ.

ಇದು ಇನ್ನೂ ಮುಂದುವರೆದು ಕನ್ನಡ ತಾಯಿಯ ಸೇವೆ ನಡೆಯಬೇಕಾಗಿದೆ. ಇಂತಹ ಪವಿತ್ರ ಕಲೆಯನ್ನು ಅಭ್ಯಾಸಮಾಡಿ ಶ್ರೀಮತಿ ಶಕುಂತಲಾಬಾಯಿಯವರು ಕೃತಾರ್ಥರಾಗಿದ್ದಾರೆ.

1969ರಲ್ಲಿ ನಡೆದ ರಾಜ್ಯದ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಶ್ರೀಮತಿ ಯವರು ಪಡೆದಿದ್ದಾರೆ. ಅರಮನೆ ಗುರುಮನೆಗಳಲ್ಲಿ ಹಾಡಿ ಲೆಕ್ಕವಿಲ್ಲದಷ್ಟು ಸನ್ಮಾನ ಗಳನ್ನೂ ಬಿರುದುಬಾವಲಿಗಳನ್ನೂ ಸಹ ಪಡೆದಿದ್ದಾರೆ. ಕಳೆದ ಎರಡು ವರ್ಷಗಳ ಹಿಂದೆ ನಡೆದ ಗಮಕ ಸಮ್ಮೇಳನದ ಅಧ್ಯಕ್ಷಿಣಿಯಾಗಿಯೂ ಇದ್ದರು. ತಾನೂ ಒಬ್ಬ ರಾಗಿ ಅನೇಕ ಗಮಕ ರೂಪಕಗಳಲ್ಲಿ ಹಾಡಿದ್ದಾರೆ.

ಈ ಪಾಂಡುರಂಗರಾವ್ ದಂಪತಿಗಳು ಕನ್ನಡ ಸಾಹಿತ್ಯಲೋಕದಲ್ಲಿ ಆದರ್ಶ ಅನ್ಯೋನ್ಯ ಪ್ರಾಯರಾಗಿದ್ದಾರೆ.

ಇದೀಗ ಶ್ರೀಮತಿ ಶಕುಂತಲಾಬಾಯಿಯವರು ಅರುವತ್ತರಲ್ಲಿ ಹೆಜ್ಜೆ ಇಟ್ಟಿದ್ದಾರೆ. ಅವರು ಇನ್ನೂ ಅನೇಕ ಕಾಲ ಕನ್ನಡ ಸೇವೆಗೈಯುವಂತಾಗಲೆಂದು ಹಾರೈಸೋಣ.

ಅಣ್ಣನ ಅರವತ್ತರೊಸಗೆ

ಕೆ. ದೊಡ್ಡಣ್ಣ

ಸೋದರಿ ಶಕುಂತಲಾಬಾಯಿ ಉತ್ತಮ ಗಮಕಿಯೆಂದು ಹೇಳಿದಾಗ ಮಾತ್ಸರ್ಯ ಮಮಕಾರಿಗಳು ಇದು ಸೋದರ ವಾತ್ಸಲ್ಯದ ಪಕ್ಷಪಾತವೆಂದಾರೆಂಬ ಅಂಜಿಕೆ. ಆದರೆ ಅಷ್ಟೇನು ಹೇಳುವುದಿಲ್ಲವೆಂದಾಗ ಆಕೆಯ ಅಭಿಮಾನಿಗಳು ನನ್ನನ್ನೇ ಮಾತ್ಸರ್ಯಕ್ಕೆ ಗುರಿಮಾಡಿಯಾರೆಂಬ ಪಕ್ಷ ಭಯ. ಈಯೆರಡು ರೀತಿಯ ಅಂಜಿಕೆಯಿದ್ದವನು ಹೇಳಲಿಕ್ಕಾದರೂ ಏಕೆ ಬಂದ? ಉಭಯ ಪಕ್ಷಗಳು ಏಕಪಕ್ಷವಾಗಿ ಕೆಣಕಿ ಕೇಳಬಹುದು.

ಹೇಳಲಿಕ್ಕಾದರೂ ಏನಿದೇಯಂತ? ಸುಪ್ರಸಿದ್ಧ ಬಿಂದೂರಾಯರ ಮುಖ್ಯ ಶಿಷ್ಯೆಯೆಂದರಾಗದೆ. ಅವರ ಸಂಪ್ರದಾಯವನ್ನು ಬೆಳೆಯಿಸಿಕೊಂಡು ಗಮಕ ಕಲಾಕ್ಷೇತ್ರದಲ್ಲಿ ಕೀರ್ತಿಯ ಗುರುಕಾಣಿಯಿತ್ತು ವಿವಿಧಕಾವ್ಯ ರಸಾನಂದಮಗ್ನತೆಯಲ್ಲಿ ಕನ್ನಡಿಗರನ್ನು ತಣಿಸಿದ ಕಲಾಸಂಪನ್ನೆ ಎಂದರೇನು ತಪ್ಪಾದೀತೆ?

ಸಾಧಾರಣವಾಗಿ ಹೆಣ್ಣುಮಕ್ಕಳಿಗೆ ಗೌಳಶಾರೀರವಿರುವುದಲ್ಲ. ಅದು ಶಕುಂತಲಾಬಾಯಿಗಿದೆ ಎಂದರೆ 'ಗಂಡುಬೀರಿ', ಎಂದವರು ಮೂರ್ಖರಾದಾರು. ಶಾರೀರ ಸಂಪತ್ತಿನಲ್ಲಿ ಗೌಳಶಾರೀರವೇ ಶ್ರೇಷ್ಠವಾದುದು. ಆ ಶಾರೀರ ಗಂಡುತನದ ಒರಟುತನದಿಂದ ಪಾರಾಗಿ ಶುದ್ಧಮಧುರತೆಯಾಂತು, ದನಿಎತ್ತಿದ ಕೂಡಲೇ ಮುಗ್ಧರಾಗುತ್ತಾರೆಂದರೆ ಯಾರೇನೆಂದರೂ ಅಂಗನೆಯರೇ ಅಣಕಿಸಿದರೂ ಅವರಿಗೆ ಲಭ್ಯವಾಗದ್ದು. ಆಕೆ ಹುಟ್ಟಿನೊಂದಿಗೇನೆ ತಂದುಕೊಂಡಿದ್ದಾಳೆ. ಹುಟ್ಟಿದ ಮೇಲೆ ಯಾರಿಂದಲು ಕೊಂಡುದಲ್ಲ. ಅದಕ್ಕೆ ಆಕೆಯ ಭಾಗ್ಯವೆಂದರೆ ಯಾರದೇನು ಆಕ್ಷೇಪ.

ಅಹುದು, ಸಂಗೀತನಾಟಕ ಅಕಾಡಮಿಯಿಂದ ಯಾರು ಪಡೆಯದ ಗಮಕ ಪ್ರಶಸ್ತಿ ಪಡೆದಳು. ಪಡೆಯುವ ಯೋಗ್ಯತೆಯಿತ್ತು ಪಡೆದಳು. ಅದಕ್ಕೆ ಆಕ್ಷೇಪವೆ? ಆಕೆ ಆದರಣೆಯನ್ನು ಸ್ವೀಕರಿಸಿ ಅಕಡಮಿಯಿತ್ತ ಪ್ರಶಸ್ತಿ ಕಾಣಿಕೆಯ ಧನಕ್ಕೆ ತನ್ನ ಕಾಣಿಕೆಯನ್ನು ಕೂಡಿಸಿ ಕನ್ನಡ ಪರಿಷತ್ತಿನಲ್ಲಿ ಗಮಕ ಕಲಾಭಿವೃದ್ಧಿಗಾಗಿಯೇ ದತ್ತಿನಿಧಿಯಾಗಿಟ್ಟುದು ಚಿಕ್ಕೋದೇ ಆಯಿತಲ್ಲ. ಅಕಡಮಿಗೂ ಗೌರವ ನೀಡಿದಂತಾಯಿತಲ್ಲಾ.

ಪರಿಷತ್ತಿನಲ್ಲಿ ಗಮಕ ತರಗತಿಗಳ ಶಿಕ್ಷಕಿಯಾಗಿ ಬಹುಕಾಲದಿಂದ ಕೆಲಸಮಾಡಿಲ್ಲವೆ? ಆಕೆಗೇನು ಸಂಸಾರವಿಲ್ಲವೇ? ಶ್ರೀಮಂತರೇ? ತನ್ನಂತೆ ಗಂಡ ಪಾಂಡುರಂಗರಾಯನೊಬ್ಬ ಹುಚ್ಚ. ಮಕ್ಕಳಮುಂಟಸ ಕಟ್ಟಿಕೊಂಡು ಕೈಯೆಲ್ಲ ಮೈಸುಟ್ಟುಕೊಂಡ ಸೇವಾಧುರೀಣ. ಇದಕ್ಕಾಗಿ ಕೇಂದ್ರ ಸರಕಾರದ ಪ್ರಶಂಸಾಪತ್ರ. ಈ ಸೌಭಾಗ್ಯದಲ್ಲಿ ನಡೆದಿವೆ ಸೌ. ಶಕುಂತಲಾಬಾಯಿಯವರ ಗಮಕಕಲಾಸೇವೆ. ಈ ಸೇವೆಗೆ ದೊರೆತುವೇನು? ಮುಪ್ಪು. ಅರವತ್ತುವರುಷ ಕಾಲನಿತ್ತಕಾಣಿಕೆ. ಯಾರೇನಿತ್ತರೆಂದು ಕೇಳಿದರೆ ನನ್ನ ಕೇಳಿಕೆಯು ಅಪ್ರಸಂಗವೆನಲಾದೀತೆ?

ಬರೆಮಾತುಗಳಿಂದ ಲೇಖನಗಳಿಂದ ಹೊಗಳಿದರೆ ಆ ಹೊಗಳಿಕೆಯ ಹೊತ್ತಿಗೆ

ಯನ್ನು ಅಚ್ಚುಮಾಡಿಸಲು ಹಣ ಯಾರು ಕೊಡುತ್ತಾರೆಂದರೆ ಯಾಕಿಷ್ಟು ಬಿರುಸುಮಾತೆಂದು ಕೋಪಗೊಳ್ಳಬಹುದೆ ?

ವಾಸ್ತವಾಂಶಗಳಿಗೆ ದೂರಾಗಿ ನಮ್ಮ ನಾಡಿನ ಕನ್ನಡ ಜನಾಂಗ ದೌಲತ್ತನ್ನು ದೌಲತ್ತಿನಿಂದ ಮೆರವಣಿಗೆಮಾಡಿ ಅವರನ್ನು ಮೆರೆಸುವುದಕ್ಕಿಂತ ತಾವೇ ಮೆರೀತಾರೆಂದರೆ ಅಂಥವರ ಕಣ್ಣು ಕೆಂಪಗಾದರೂ ನಡೆಯುತ್ತಿರುವುದು ಸುಳ್ಳಾದೀತೆ.

ಮುಖ್ಯವಾಗಿ ಅಣ್ಣನಾದ ನಾನು ತಂಗಿಯ ಬಗ್ಗೆ ಬರೆಯುವುವೇನಿಲ್ಲ. ಆಕೆ ನನ್ನ ಮನೆಯಾಕೆ ಮಾತ್ರವಾಗಿದ್ದರೆ ಹೇಳಬಹುದಿತ್ತು. ಕಲಾವಿದೆಯಾಗಿ ಕನ್ನಡನಾಡೆಲ್ಲಾ ತನ್ನ ಪತಿ ಪಾಂಡುರಂಗರಾಯರೊಂದಿಗೆ ಸಂಚರಿಸಿ ಕಾವ್ಯಪ್ರಪಂಚದಲ್ಲಿ ತನ್ನದೇ ಆದ ಗಮಕಲಾಮಂದಿರವನ್ನೂ ಕಟ್ಟಿದ್ದಾಳೆಂದರೆ ನಾನೇನು ಹೇಳುವುದಿದೆ.

ನೋಡಿದ ಕನ್ನಡನಾಡಿಗೆ ಕಣ್ಣಿಲ್ಲವೆ ? ಕಾವ್ಯಾಲಾಪವನ್ನು ಕೇಳಿದ ನಾಡಿಗೆ ಕಿವಿಯಿಲ್ಲವೆ? ಆನಂದಗೊಂಡ ಹೃದಯವಿಲ್ಲವೆ ? ನನ್ನ ಸೋದರಿಯೆಂದು ನಾನು ಹೇಳುವುದಲ್ಲ. ಆಕೆ ಸೌಭಾಗ್ಯವತಿ ಶೀಲವತಿ ಗುಣವತಿ ಆಕೆ ಬರೀ ಕಲಾವಿದಳಲ್ಲ.

ಅರವತ್ತುವರುಷ ದೇಹಕ್ಕೆ ಮುಪ್ಪು ತರಬಹುದು. ಆದರೆ ಈಶ್ವರ ದತ್ತ ಶಾರೀರಕ್ಕೆ ಮಾತ್ರ ಮುಪ್ಪುಸೋಂಕದು. ಒಂದು ಮಾತು, ಇವರು ದಂಪತಿಗಳಂತಿದ್ದಾರೆಯೇ........ ಇಲ್ಲ ನಲ್ಮೆಯ ಮಿತ್ರರಂತಿದ್ದಾರೆ.

ಬಯಸುವುದು ಇಷ್ಟೆ.ಬಿ. ಶ್ರೀ ಪಾಂಡುರಂಗರಾಯರು ಶಕುಂತಲಾಬಾಯಿಯವರು ಇಂದಿನಂತೆಯೇ ತಮ್ಮ ಕುಟುಂಬವೇ ಸ್ನೇಹ ಕುಟುಂಬವಾಗಿ ಕಲಾಕುಟುಂಬವಾಗಿ ನಾಡಿನ ಸೇವಾ ಕುಟುಂಬವಾಗಿ ಬಾಳಲೆಂದು ಬಯಸುವೆ.

ಸಹಪಾಠಿ

ಎಸ್. ನಾಗೇಶರಾಯರು

ಕಲಾರಾಧನೆಯು ಬಹಳ ಕಷ್ಟತರವಾದ ಕೆಲಸ. ಕಲಾಧಿದೇವತೆಯಾದ ಸರಸ್ವತೀ ಮಾತೆಯು ಸುಮ್ಮನೆ ಒಲಿಯುವವಳಲ್ಲ. ಸತ್ಯ ಸಂಕಲ್ಪ, ಮನೋದಾರ್ಢ್ಯ, ಗುರುಸೇವೆ, ಕಠಿಣವಾದ ತಪಸ್ಸು, ಇವುಗಳಿಲ್ಲದೇ ಆ ದೇವಿಯ ಅನುಗ್ರಹವನ್ನು ಪಡೆಯಲು ಸಾಧ್ಯವೇ ಇಲ್ಲ. ನಮ್ಮನಾಡಿನಲ್ಲಿ ಕಲೆಗಾಗಿಯೇ ಜೀವನವನ್ನು ಮುಡುಪಾಗಿಡುವವರು ವಿರಳ. ಕಲೆಯಲ್ಲಿ ನಿಜವಾದ ಆಸಕ್ತಿ, ಕಲೆಯನ್ನು ಬೆಳೆಯಿಸಿಕೊಳ್ಳಬೇಕೆಂಬ ಪ್ರಬಲ ಆಕಾಂಕ್ಷೆ ಮತ್ತು ದಕ್ಷನಾದ ಗುರು ಇವು ಕೇಳಿದವರಿಗೆಲ್ಲಾ ಲಭಿಸುವ ವಸ್ತುಗಳಲ್ಲ. ಒಂದುವೇಳೆ ಇವೆಲ್ಲವೂ ದೊರೆತರೂ ಶರೀರದ ದೌರ್ಬಲ್ಯ, ದಾರಿದ್ರ್ಯ, ಮನೆಯಲ್ಲಿ ಪ್ರತಿಕೂಲ ವಾತಾವರಣ ಇವುಗಳ ಪರಿಣಾಮವಾಗಿ ಕೆಲವರಿಗೆ ಕಲಾರಾಧನೆಯಲ್ಲಿ ಮುಂದುವರಿಯಲು ಸಾಧ್ಯವಾಗುವುದಿಲ್ಲ. ಮೇಲೆ ಹೇಳಿದ ಯಾವುದಾದರೂ ಅಡಚಣೆಗಳಿದ್ದರೂ ಸಹ ಅವನ್ನು ಗಮನಿಸದೇ ಕಲೆಯನ್ನು ಏಕಾಗ್ರತೆಯಿಂದ ಆರಾಧಿಸಿ ಸರಸ್ವತಿಯ ಕೃಪೆಯನ್ನು ಪಡೆಯುವವರು ಬಹುವಿರಳ. ಇಂತಹವರಲ್ಲಿ ಶ್ರೀಮತಿ ಶಕುಂತಲಾಬಾಯಿಯವರೊಬ್ಬರು.

ನಾನು ಇವರನ್ನು ಮೊಟ್ಟಮೊದಲು ನೋಡಿದುದು 1937ರಲ್ಲಿ, ಕನ್ನಡ ಸಾಹಿತ್ಯ ಪರಿಷನ್ಮಂದಿರದಲ್ಲಿ ಆಗ ಪೂಜ್ಯ ಡಿ. ವಿ. ಗುಂಡಪ್ಪನವರು ಪರಿಷತ್ತಿನ ಅಧ್ಯಕ್ಷರಾಗಿದ್ದರು. ದಿವ್ಯವಾದ ಕನ್ನಡ ಕಾವ್ಯರತ್ನಗಳ ಪರಿಚಯ ನಾಡಿನ ಮೂಲೆಮೂಲೆಯಲ್ಲಿರುವ ಜನತೆಗೆ ಆಗಬೇಕೆಂದೂ, ಸಾಹಿತ್ಯಗಂಗೆಯಲ್ಲಿ ಎಲ್ಲರೂ ಮಿಂದು ಧನ್ಯರಾಗುವಂತೆ ಮಾಡಬೇಕೆಂದೂ ಆ ಮಹನೀಯರು ಹಲವಾರು ಕಾರ್ಯಕ್ರಮಗಳನ್ನು ರೂಪಿಸಿ ಆಚರಣೆಗೆ ತರಲು ಬಹಳ ಶ್ರಮಿಸುತ್ತಿದ್ದರು. ಪರಿಷತ್ತಿನ ಆಶ್ರಯದಲ್ಲಿ ನಾಲ್ಕಾರು ಮಂದಿಗೆ ಗಮಕ ಕಲೆಯಲ್ಲಿ ಶಿಕ್ಷಣ ಸೌಕರ್ಯವನ್ನೇರ್ಪಡಿಸುವುದು ಅವರು ರೂಪಿಸಿದ್ದ ಕಾರ್ಯಕ್ರಮಗಳಲ್ಲೊಂದಾಗಿತ್ತು. ಇನ್ನೇನು ನಶಿಸಿಯೇ ಹೋಗುತ್ತದೆಯೋ ಏನೋ ಎನ್ನುವ ಸ್ಥಿತಿಯಲ್ಲಿದ್ದ ಗಮಕಕಲೆಯನ್ನು ಉಳಿಸಿ ಅದನ್ನು ಬೆಳೆಯಿಸಿಕೊಂಡು ಬರುತ್ತಿದ್ದ ಭಾರತದ ಬಿಂದೂರಾಯರ ಮನವೊಲಿಸಿ ಅವರ ನೇತೃತ್ವದಲ್ಲಿ ಗಮಕ ಶಿಕ್ಷಣ ತರಗತಿಯನ್ನೂ ಆರಂಭಿಸಿದರು. ಶ್ರೀ ಬಿಂದೂರಾಯರು ಇದಕ್ಕೆ ಒಪ್ಪಿದುದು ನಮ್ಮೆಲ್ಲರ ಪುಣ್ಯವಿಶೇಷ. ಬಿಂದೂರಾಯರು ಗಮಕವನ್ನು ಹೇಳಿಕೊಡುತ್ತಾರೆಂಬ ವಿಷಯವನ್ನು ತಿಳಿದಾಗ ನನಗಂತೂ ತುಂಬಾ ಸಂತೋಷವಾಯಿತು. ನನ್ನ ತಂದೆಯವರೂ ಅವರೂ ಬಾಲ್ಯಸ್ನೇಹಿತರು. ಅವರ ವಾಚನವನ್ನು ನಮ್ಮ ಮನೆಯಲ್ಲೂ ಇತರಕಡೆಗಳಲ್ಲೂ ಕೇಳಿ ರೋಮಾಂಚಿತನಾಗಿದ್ದೆ. ಸ್ವಲ್ಪ ಶ್ರಮಪಟ್ಟರೆ ನೀನೂ ಒಬ್ಬ ಗಮಕಿಯಾಗಬಹುದು ಎಂದು ನನ್ನ ತಂದೆಯವರು ಆಗಾಗ ಹೇಳುತ್ತಿದ್ದುದೂ ನೆನಪಿಗೆ ಬಂದಿತು. ಅಂತೂ ಏನೋ ತಮಾಷೆ ನೋಡೋಣ ಎನ್ನುವ ಹುಡುಗ ಬುದ್ಧಿಯಿಂದಲೇ ಈ ತರಗತಿಗೆ ಸೇರಿದೆ. ಪರಿಷದ್ಭವನದ ಪೂರ್ವದಿಕ್ಕಿನ ಕೊಠಡಿಯಲ್ಲೂ ಒಮ್ಮೊಮ್ಮೆ ಮಧ್ಯದ ಸಭಾಂಗಣದಲ್ಲೂ ಪಾಠವಾಗುತ್ತಿತ್ತು.

ನಮ್ಮ ತರಗತಿಯಲ್ಲಿ ಸುಮಾರು ಎಂಟುಹತ್ತು ಮಂದಿ ವಿದ್ಯಾರ್ಥಿಗಳಿದ್ದೆವು. ವಿದ್ಯಾರ್ಥಿನಿ ಒಬ್ಬರೇ. ಅವರೇ ಶ್ರೀಮತಿ ಶಕುಂತಲಾಬಾಯಿಯವರು. ಕೆಲವು ದಿನಗಳ ನಂತರ ಶ್ರೀಮತಿ ರಾಜಾಮಣಿ ನಾಗರಾಜರಾಯರೂ ತರಗತಿಗೆ ಸೇರಿದರು. ವಿದ್ಯಾರ್ಥಿಗಳಲ್ಲಿ ನನ್ನ ಊರಿನವರಾದ ನನ್ನ ಪ್ರಿಯಮಿತ್ರ ಶ್ರೀ ಹರಿನಾರಾಯಣ ಮತ್ತು ಶ್ರೀ ಬಾಳಗಂಚಿ ನಂಜುಂಡಯ್ಯನವರ ಹೆಸರುಗಳು ನೆನಪಿವೆ. ಉಳಿದವರ ಹೆಸರು ಸ್ಮೃತಿಯಲ್ಲಿಲ್ಲ. ನಾವು ತೀರ ಸುಸಂಸ್ಕೃತರಾಗಿರಲಿಲ್ಲ. ಮಹಿಳಾ ಸಹಪಾಠಿಗಳೊಡನೆ ಬಹಳ ಮರ್ಯಾದೆಯಿಂದ ನಡೆದುಕೊಳ್ಳುತ್ತಿದ್ದೆವು. ಶ್ರೀಮತಿ ಶಕುಂತಲಾಬಾಯಿಯವರಿಗೆ ಆಗ ಸುಮಾರು ಹದಿನೆಂಟು ವರ್ಷ ಇರಬಹುದೆಂದು ನಂಬಿಕೆ. ಆಗತಾನೆ ದಾಂಪತ್ಯ ಜೀವನಕ್ಕೆ ಕಾಲಿಟ್ಟಿರಬಹುದೆಂದು ತೋರುತ್ತಿತ್ತು. ಸಾತ್ವಿಕ ಸೌಂದರ್ಯ. ಬಹಳ ಗಂಭೀರವಾದ ನಡೆವಳಿಕೆ. ಆ ಕಡೆ ಈ ಕಡೆ ಕತ್ತೆತ್ತಿ ಕೂಡ ನೋಡುತ್ತಿರಲಿಲ್ಲ. ಒಂದು ದಿನವೂ ತಪ್ಪದೆ, ಒಂದು ನಿಮಿಷವೂ ಸಹ ತಡಮಾಡದೆ ತರಗತಿಗಳಿಗೆ ಬರುತ್ತಿದ್ದರು. ಪಾಠ ನಡೆಯುವಾಗ ಏಕಾಗ್ರತೆಯಿಂದ ಗುರುಗಳು ಹೇಳುವುದನ್ನು ನಟ್ಟಕಣ್ಣುಗಳಿಂದ ಗಮನಿಸುತ್ತಿದ್ದರು. ನಮ್ಮ ಗುರುಗಳು ಒಂದು ಪದ್ಯವನ್ನು ಒಂದು ರಾಗದಲ್ಲಿ ಹಾಡಿ ಅದನ್ನು ನಮ್ಮೆಲ್ಲರ ಕೈಯಲ್ಲೂ ಹಾಡಿಸಿ ತಪ್ಪುಗಳನ್ನು ತಿದ್ದುತ್ತಿದ್ದರು. ನಮ್ಮೆದುರಿಗೆ ಹಾಡಲು ಶ್ರೀಮತಿಯವರು ಒಂದೆರಡು ದಿನ ಮಾತ್ರ ನಾಚಿಕೆ ಪಟ್ಟುಕೊಂಡರೂ, ಕೆಲವು ದಿನಗಳಾದ ಮೇಲೆ ಗುರು ಹೇಳಿದ ಕ್ರಮದಲ್ಲೇ ಚಾಚೂ ತಪ್ಪದೆ ಹಾಡುತ್ತಿದ್ದರು. ಆ ಪದ್ಯಗಳು ಅವರಿಗೆ ಬಹು ಬೇಗನೇ ಬಾಯಿಗೆ ಬಂದು ಬಿಡುತ್ತಿದ್ದುವು. ನಾವಾದರೋ ಪುಸ್ತಕವನ್ನೇ ನೋಡಿಕೊಂಡು ಓದುತ್ತಿದ್ದುದೂ ಅಲ್ಲದೆ, ರಾಗ ವಿನ್ಯಾಸ ಮಾಡುವಾಗ ಸ್ವಲ್ಪ ಕಪಿಚೇಷ್ಟೆ ಮಾಡಿ ಜೈಸಿಕೊಳ್ಳುತ್ತಿದ್ದೆವು.

ಶ್ರೀ ಪಾಂಡುರಂಗರಾಯರು ಆಗ ಮಾವಳ್ಳಿಯ ಒಂದು ಗಲ್ಲಿಯಲ್ಲಿ ವಾಸಿಸುತ್ತಿದ್ದರು. ದಂಪತಿಗಳಿಬ್ಬರೂ ಸಹೃದಯರು. ಅವರ ಮೇಲೆ ನನಗೆ ತುಂಬಾ ಗೌರವವು ಬೆಳೆಯಿತು. ಮೂರು ನಾಲ್ಕು ಬಾರಿ ಅವರ ಮನೆಗೂ ಕರೆದುಕೊಂಡು ಹೋಗಿ ಬಹಳ ಪ್ರೀತಿಯಿಂದ ಸತ್ಕರಿಸಿದ್ದರು. ಅವರ ಆರ್ಥಿಕ ಸ್ಥಿತಿ ಅಂತಹ ಹೆಚ್ಚಿನ ಮಜಲಿನಲ್ಲಿದ್ದಂತೆ ತೋರುತ್ತಿರಲಿಲ್ಲ. ಆಗ ಈಗಿನಂತೆ ಸಂಚಾರ ಸೌಕರ್ಯಗಳಿರಲಿಲ್ಲ. ನಿತ್ಯವೂ ಇಬ್ಬರೂ ತರಗತಿಗೆ ನಡೆದೇ ಬರುತ್ತಿದ್ದರು. ಒಂದು ದಿನವಾದರೂ ತಡವಾಗಿ ಬಂದದ್ದು ನನಗಂತೂ ನೆನಪಿಲ್ಲ. ಹೇಳಿಕೊಟ್ಟ ಪಾಠವನ್ನು ಬಲು ಚೆನ್ನಾಗಿ ಮನದಟ್ಟು ಮಾಡಿಕೊಂಡು, ಚೆನ್ನಾಗಿ ಅಭ್ಯಾಸಮಾಡಿಕೊಂಡು ತರಗತಿಗಳಲ್ಲಿ ಸೊಗಸಾಗಿ ಪಾಠ ಒಪ್ಪಿಸುತ್ತಿದ್ದರು. ಮನೆಯ ಕೆಲಸಗಳನ್ನು ಮಾಡಿಕೊಂಡು ಇಷ್ಟು ಚೆನ್ನಾಗಿ ಪಾಠವನ್ನು ಒಪ್ಪಿಸುವುದಕ್ಕೆ ಇವರಿಗೆ ಹೇಗೆ ಸಾಧ್ಯವಾಗಿದೆ ಎಂದು ನಾನು ಆಶ್ಚರ್ಯಪಡುತ್ತಿದ್ದೆ. ಅವರು ಗಮಕವನ್ನು ಬಹಳ "ಸೀರಿಯಸ್" ಆಗಿ ತೆಗೆದುಕೊಂಡಿದ್ದರು. ಒಟ್ಟಿನಲ್ಲಿ ಅವರ ಗಂಭೀರವಾದ ನಡೆವಳಿಕೆ, ಗಮಕದಲ್ಲಿ ಅವರಿಗಿದ್ದ ತೀವ್ರಾಸಕ್ತಿ, ವ್ಯಾಸಂಗದಲ್ಲಿ ಶ್ರದ್ಧೆ ಇವುಗಳು ನಿಜವಾಗಿಯೂ ಪ್ರಶಂಸಾರ್ಹವಾಗಿದ್ದುವು. ನಾರಣಪ್ಪ, ಪಂಪ, ಲಕ್ಷ್ಮೀಶ, ರಾಘವಾಂಕ ಇವರೇ ಮೊದಲಾದ ಮಹಾಕವಿಗಳ ಕಾವ್ಯದ ಕೆಲವು ಭಾಗಗಳು ಶ್ರೀಮತಿಯವರಿಗೆ

ವ್ಯಾಸಂಗದ ಅವಧಿಯಲ್ಲೇ ಕಂಠಗತವಾದುವು. ಸ್ಪಷ್ಟವಾಗಿ, ಮಧುರವಾಗಿ, ಅದನ್ನು ಓದುವುದು ಅವರಿಗೆ ಆಗಲೇ ರೂಢಿಯಾಗಿಹೋಗಿತ್ತು. ನಾನು ಮಾತ್ರ ಗುರುಗಳೆದುರಿಗೆ ಪೂರ್ವಕಾಲದ ಮದುವೆಯಲ್ಲಿ ಉರುಟಣೆ ಹಾಡು ಹೇಳುವ ಹುಡುಗಿಯರಂತೆ ಪಾಠ ಒಪ್ಪಿಸುತ್ತಿದ್ದೆ. "ಮನಸ್ಸು ಮಾಡಿದರೆ ಚನ್ನಾಗಿ ಓದುತ್ತಿ. ನಿನಗೆ ಕಾನ್‌ಸೆಂಟ್ರೇಷನ್ ಸಾಲದು" ಎಂದು ಗುರುಗಳಿಂದ ಬೈಸಿಕೊಳ್ಳುತ್ತಿದ್ದೆ. ವ್ಯಾಸಂಗವು ಮುಗಿಯಿತು. ದೊಡ್ಡ ಸಮಾರಂಭವೊಂದರಲ್ಲಿ ನಮಗೆಲ್ಲಾ ಪ್ರಶಸ್ತಿ ಪತ್ರಗಳನ್ನು ಕೊಡಲಾಯಿತು. ಆದಿನ ನಾವೆಲ್ಲ ಸಭೆಯಲ್ಲಿ ಒಂದೆರಡು ಪದ್ಯಗಳನ್ನು ಹಾಡಿದೆವು. ಶ್ರೀಮತಿಯವರು ಹಾಡಿದಾಗ ಶ್ರೀ ಡಿ. ವಿ. ಜಿ.ಯವರಿಗಾದ ಸಂತೋಷ ಅಷ್ಟಿಷ್ಟಲ್ಲ. ತಮ್ಮ ಭಾಷಣದಲ್ಲಿ ಶ್ರೀಮತಿ ಶಕುಂತಲಾಬಾಯಿಯವರು ತೇರ್ಗಡೆಯಾದ ವಿಷಯವನ್ನು ಪ್ರಸ್ತಾಪಿಸಿ ಹೆಣ್ಣುಮಕ್ಕಳು ಗಮಕ ಕಲೆಯನ್ನು ವ್ಯಾಸಂಗ ಮಾಡಬೇಕೆಂದು ಕರೆಯಿತ್ತರು.

ಅಂತೂ ನಮ್ಮ ಮೂರು ತಿಂಗಳ ಗಮಕ ವ್ಯಾಸಂಗವು ಮುಗಿಯಿತು. ನನ್ನ ಮಟ್ಟಿಗೆ ಹೇಳುವುದಾದರೆ, ಗೃಹಕೃತ್ಯದ ತೊಂದರೆಗಳಿಂದ ನನ್ನ ಗಮಕ ವ್ಯಾಸಂಗವೂ ಸಹ ಅಲ್ಲಿಗೇ ಮುಕ್ತಾಯವಾಯಿತು. ನನ್ನ ಇತರ ಗಮಕ ಸಹಪಾಠಿಗಳ ವಿಷಯವೂ ಹಾಗೆಯೇ ಆಯಿತೆಂದರೆ ತಪ್ಪಾಗಲಾರದು. ಬಹುಮಧುರವಾಗಿ ಹಾಡುತ್ತಿದ್ದ ಶ್ರೀಹರಿನಾರಾಯಣರೂ, ಬಾಳಗಂಚಿಯ ಸಂಜುಂಡಯ್ಯನವರೂ ಆಗಾಗ ವಾಚನ ಮಾಡುತ್ತಿದ್ದರು. ಶ್ರೀಮತಿಯವರಿಗೆ ಮಾತ್ರ ಅವರ ಗಮಕ ವ್ಯಾಸಂಗದ ಎರಡನೇ ಘಟ್ಟವು ಆರಂಭವಾಯಿತೆನ್ನಬಹುದು. ಅವರು ಕನ್ನಡ ಕಾವ್ಯಗಳನ್ನೂ ಆಳವಾಗಿ ವ್ಯಾಸಂಗ ಮಾಡಿ ಕವಿ ಹೃದಯವನ್ನು ತಿಳಿಯುವ ಪ್ರಯತ್ನಮಾಡಿ, ಆ ಕಾವ್ಯಗಳನ್ನು ಸಂಗೀತಕ್ಕೆ ಅಳವಡಿಸಿಕೊಳ್ಳುವ ಪ್ರಯತ್ನ ಮಾಡುತ್ತಲೇ ಬಂದರು. ರಾಷ್ಟ್ರಕವಿ ಪುಟ್ಟಪ್ಪನವರ ರಾಮಾಯಣದರ್ಶನದ ವಾಚನವನ್ನು ಬಲು ಚೆನ್ನಾಗಿ ಅಭ್ಯಾಸ ಮಾಡಿಕೊಂಡು ಹಲವಾರು ಕಡೆ ವಾಚನಮಾಡಿ ಎಲ್ಲರ ಮೆಚ್ಚುಗೆಯನ್ನು ಪಡೆದರು. ಪಾಂಡುರಂಗರಾಯರನ್ನು ಆಗಾಗ ಸಾಹಿತ್ಯ ಸಮಾರಂಭಗಳಲ್ಲಿ ಭೇಟಿಯಾಗುತ್ತಿದ್ದೆ. ಒಮ್ಮೊಮ್ಮೆ ಶ್ರೀಮತಿಯವರೂ ಜತೆಯಲ್ಲಿ ಬಂದಿರುತ್ತಿದ್ದರು. ಯೋಗಕ್ಷೇಮ ವಿಚಾರಣೆಯೊಂದಿಗೆ ನಾನು ಅವರ ಮನೆಗೆ ಬರಬೇಕೆಂದು ಆಗ್ರಹ ಪೂರ್ವಕವಾದ ಆಹ್ವಾನ ಇವು ಆಗುತ್ತಿದ್ದುವು. ಪಾಂಡುರಂಗರಾಯರ ಕುಟುಂಬವು ಬೆಳೆದು ಗೃಹಕೃತ್ಯದ ಲಕಾಟಿಯ ಸಾಲಿಗೆ ಎಲ್ಲರೂ ಸಿಕ್ಕಿದಂತೆ ಅವರೂ ಸಿಕ್ಕಿ ನರಳಿದರು. ದಂಪತಿಗಳಿಬ್ಬರೂ ಮಕ್ಕಳ ಮಂಟಪವೆಂಬ ಸಂಸ್ಥೆಯನ್ನು ಕಟ್ಟಿ ಬಹುಕಷ್ಟದಿಂದ ಬೆಳೆಯಿಸಿದರು. ಇಂದಿನ ಪರಿಸ್ಥಿತಿಗೆ ಹೊಂದಿಕೊಳ್ಳುವ ವ್ಯವಹಾರ ಜ್ಞಾನವಿಲ್ಲದೆ ಬಹಳ ಕಷ್ಟನಷ್ಟಗಳನ್ನನುಭವಿಸುತ್ತಿದ್ದರೆಂಬ ವಿಷಯವು ನನ್ನ ಕಿವಿಗೂ ಬೀಳುತ್ತಿತ್ತು. ಆದರೆ ಶ್ರೀಮತಿಯವರ ಕಾವ್ಯವಾಚನಗಳು ನಿಂತಂತೆ ತೋರಲೇ ಇಲ್ಲ, ಅವು ನಡೆಯುತ್ತಲೇ ಇದ್ದವು. ಕುಮಾರವ್ಯಾಸಮಂಟಪ, ರಾಜಾಜಿನಗರದ ರಾಮಮಂದಿರ, ಕನ್ನಡ ಸಾಹಿತ್ಯ ಪರಿಷತ್ ಇವೇ ಮೊದಲಾದ ಕಡೆಗಳಲ್ಲಿ ಇವರ ಕಾವ್ಯವಾಚನಗಳು ನಡೆಯುತ್ತಲೇ ಇದ್ದವು. ನಾನು ಒಂದೆರಡು ಬಾರಿ ಅವರ ಮನೆಗೆ ಹೋಗಿ ಯೋಗಕ್ಷೇಮ ವಿಚಾರಿಸಿದ್ದೆ. ನಾನು ಹೋದಾಗ ಅವರ ಗೃಹ

ಕೃತ್ಯದ ಸಮಸ್ಯೆಗಳು ಗಂಭೀರವಾಗಿದ್ದವು. ಪರಿಸ್ಥಿತಿ ಕಷ್ಟಕರವಾಗಿಯೇ ಇದ್ದವು, ಆದರೂ ನನಗೆ ಮಾತ್ರ ಪ್ರೀತಿಯ ಆದರ ಸತ್ಕಾರಗಳು ಎಂದಿನಂತೆಯೇ ಇದ್ದವು. ಮಾತುಕತೆಗಳೆಲ್ಲ ಗಮಕದ ವಿಚಾರವಾಗಿಯೇ! ಶ್ರೀಮತಿಯವರ ಗೃಹಕೃತ್ಯದ ತೊಂದರೆ, ಹಣಕಾಸಿನ ಮುಗ್ಗಟ್ಟು, ಮಕ್ಕಳ ವಿದ್ಯಾಭ್ಯಾಸ, ಶಾಲೆಯ ಮಕ್ಕಳ ವಿದ್ಯಾಭ್ಯಾಸದ ಚಿಂತೆ, ಮಕ್ಕಳಮಂಟಪದ ಆದಾಯಕ್ಕೆ ಮೀರಿದ ಖರ್ಚು, ಇದರಿಂದ ಆಗುವ ಚಿಂತೆ, ಇವುಗಳೆಲ್ಲವನ್ನೂ ಬದಿಗೊತ್ತಿ ಗಮಕ ಕಲೆಯ ಆರಾಧನೆಯನ್ನು ಮುಂದುವರಿಸಿಕೊಂಡೇ ಹೋಗುತ್ತಿದ್ದರು. ಈಗ ಶ್ರೀಮತಿಯವರು ಸುಪ್ರಸಿದ್ಧ ಗಮಕಿಗಳು. ಅಷ್ಟೇ ಅಲ್ಲ ಅವರು ಸುಪ್ರಸಿದ್ಧ ಗಮಕಿಗಳೆಂದು ಜನತೆಯೂ ಒಪ್ಪಿದೆ. ಅವರಿಗೆ ಹಲವಾರು ಗೌರವಗಳು ಅಕಡೆಮಿ ಪ್ರಶಸ್ತಿ ಇವೆಲ್ಲಾ ದೊರೆತಿವೆ. ಅವರು ಬೆಂಗಳೂರು ನಗರ ಮಾತ್ರವೇ ಅಲ್ಲವೆ ಕರ್ನಾಟಕದ ಎಲ್ಲಾ ಭಾಗಗಳಲ್ಲೂ ಸಂಚರಿಸಿ ಕಾವ್ಯವಾಚನ ಮಾಡಿರುತ್ತಾರೆ. ಹೈದರಾಬಾದ, ದೆಹಲಿ, ಕಡೆಗೆ ಕಾಶ್ಮೀರದವರೆಗೂ ಹೋಗಿ ಕಾವ್ಯವಾಚನ ಮಾಡಿ ನುಡಿಯ ಸೇವೆಯನ್ನು ಮಾಡಿರುತ್ತಾರೆ.

ಮೈಸೂರು ಜಿಲ್ಲಾ ಸಮ್ಮೇಳನದ ಅಧ್ಯಕ್ಷರಾಗಿ ಗಮಕ ಕಲೆಯ ಬಗ್ಗೆ ವಿಚಾರ ಪರಿಪ್ಲುತವಾದ ಭಾಷಣ ಮಾಡಿದರು. ಇಷ್ಟೆಲ್ಲಾ ಆದರೂ ಎಂದಿನಂತೆ ಸರಳ ಮತ್ತು ಶುದ್ಧವಾದ ಜೀವನವನ್ನು ನಡೆಯಿಸುತ್ತಾ ಇದ್ದಾರೆ. ಇದು ಎಲ್ಲರಿಗೆ ಸಂತೋಷದ ಸಂಗತಿ. ಗಮಕದ ಗತಿಯಲ್ಲಿ ಇವರ ಸಹಪಾಠಿಯಾಗಿದ್ದ ನನಗೆ ಹೆಮ್ಮೆಯ ಸಂಗತಿ.

ಈ ಸಂಬಂಧದಲ್ಲಿ ಇವರ ಪತಿ ಶ್ರೀಪಾಂಡುರಂಗರಾಯರ ವಿಷಯವನ್ನು ಪ್ರಸ್ತಾಪಿಸದಿರಲು ಸಾಧ್ಯವೇ ಇಲ್ಲ. ಹೆಣ್ಣು ಮಕ್ಕಳು ಸಾರ್ವಜನಿಕ ಸಭೆಗಳಲ್ಲಿ ಭಾಷಣ ಮಾಡುವುದು ಅಥವಾ ಕಾವ್ಯವಾಚನ ಮಾಡುವುದು ಅತ್ಯಂತ ಬೇಜವಾಬ್ದಾರಿಯ ವರ್ತನೆ ಎಂದು ಸಮಾಜ ಭಾವಿಸಿದ್ದ ಯುಗದಲ್ಲಿ ಆಗತಾನೆ ಮನೆಗೆ ಬಂದಿದ್ದ ಪತ್ನಿಗೆ ಗಮಕ ತರಗತಿಗೆ ಸೇರಲು ಪ್ರೋತ್ಸಾಹವಿತ್ತು, ಶ್ರೀಮತಿಯವರ ಕಲಾರಾಧನೆಯು ಸುಲಲಿತವಾಗಿ ನಡೆಯಲು ತಕ್ಕ ವಾತಾವರಣವನ್ನು ಶ್ರೀಪಾಂಡುರಂಗರಾಯರು ಕಲ್ಪಿಸದಿದ್ದಲ್ಲಿ ಶ್ರೀಮತಿಯವರು ಇಂತಹ ಕೀರ್ತಿಗೌರವವನ್ನು ಪಡೆಯಲು ಸಾಧ್ಯವಾಗುತ್ತಿರಲಿಲ್ಲವೆಂದು ಹೇಳಿದರೆ ಶ್ರೀಮತಿಯವರು ನನ್ನನ್ನು ಕ್ಷಮಿಸುವರೆಂದು ನಂಬಿರುತ್ತೇನೆ. ಪಾಂಡುರಂಗರಾಯರು ಒಳ್ಳೆಯ ಸಾಹಿತಿಗಳು, ಸಹೃದಯರು, ಸ್ನೇಹಪರರು; ಅತಿಥಿ ಸತ್ಕಾರದಲ್ಲಿ ಎತ್ತಿದಕೈ.

ಶ್ರೀಮತಿಯವರಿಗೆ 60 ವರ್ಷ ತುಂಬಲಿದೆ. ಇಷ್ಟು ಬೇಗ ವರ್ಷಗಳುರುಳಿದುವಲ್ಲಾ ಎಂದೆನಿಸುವುದು ಸ್ವಾಭಾವಿಕ. ಶ್ರೀಮತಿಯವರು ತಮ್ಮ ಜೀವನದ ಮುಖ್ಯ ಭಾಗವನ್ನು ಗಮಕಕಲಾ ಸೇವೆಯಲ್ಲಿಯೇ ಕಳೆದು ಕೃತಕೃತ್ಯರಾಗಿರುತ್ತಾರೆ. ಭಗವಂತನು ಗಮಕಕಲೆಗೆ ಇವರ ಸೇವೆಯು ಇನ್ನೂ ಹಲವಾರು ವರ್ಷಗಳ ಕಾಲ ಲಭಿಸುವಂತೆ ಹರಸಲಿ ಎಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

ನನ್ನ ಹಿರಿಯ ಅಕ್ಕ

ಅನ್ನಪೂರ್ಣಮ್ಮ ರಘುಪತಿ ಶಾಸ್ತ್ರಿ

ಕರ್ನಾಟಕದಲ್ಲಿ ಗಮಕ ಕಲೆಯಲ್ಲಿ ಪ್ರಖ್ಯಾತಿ ಪಡೆದ ಮಹಿಳೆಯರಲ್ಲಿ ಮೊಟ್ಟ ಮೊದಲನೆಯವರೆಂದರೆ ನನ್ನ ಹಿರಿಯ ಅಕ್ಕ ಸೌಭಾಗ್ಯವತಿ ಶಕುಂತಲಾಬಾಯಿ ಪಾಂಡುರಂಗರಾವ್. ಅವರೂ ಅವರ ಪತಿ ಪಾಂಡುರಂಗರಾವ್ ಜಕ್ಕವಕ್ಕಿಗಳಂತೆ ಜತೆಯಾಗಿ ಇಡಿ ಕರ್ನಾಟಕವಷ್ಟೇ ಅಲ್ಲದೆ ಭಾರತ ರಾಷ್ಟ್ರದ ಮುಖ್ಯ ಪಟ್ಟಣಗಳು ಸೇರಿ ಕಾಶ್ಮೀರದ ಬೆಸಗೆ ರಾಜಧಾನಿ ಜಮ್ಮೂವರೆಗೂ ಗಮಕದ ಸೌರಭವನ್ನು ಹರಡಿ ಬಂದಿದ್ದಾರೆ. ಸಂಸಾರದಲ್ಲಿದ್ದು ಒಂದು ಕಲೆಯನ್ನು ಕಲಿತು, ಅದನ್ನು ಜೀವನಮಾನದಲ್ಲಿ ಸಾಧಿಸಿ, ಕಲಾಭಿಮಾನಿಗಳಿಗೆ, ರಸಿಕರಿಗೆ ಪ್ರಸಾರ ಪಡಿಸುವುದು ಸುಲಭ ಕೆಲಸವಲ್ಲ.

ಶಕುಂತಲಾಬಾಯಿ, ತಾವು ಗಮಕ ವಿದುಷಿಯಾಗಿರುವುದರ ಜತೆಗೆ, ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ, ತಮ್ಮ ಮಕ್ಕಳ ಮಂಟಪದಲ್ಲಿ ಗಮಕ ತರಗತಿಗಳನ್ನು ಬಹಳ ವರ್ಷಗಳು ನಡೆಸಿ, ನೂರಾರು ಶಿಷ್ಯರುಗಳನ್ನು ಗಮಕ ಕಲೆಗೆ ಕಾಣಿಕೆಯಾಗಿ ಅರ್ಪಿಸಿದ್ದಾರೆ. ಅವರುಗಳಲ್ಲಿ ಶ್ರೀಮತಿಗಳಾದ ತಲ್ಲಂ ಸುಭದ್ರಮ್ಮ, ಜೊಕ್ಕಮ್ಮ, ನರಸಿಂಹ ಅಯ್ಯಂಗಾರ್, ಜಯಮ್ಮ ಮೊದಲಾದವರು ಈಗಲೂ ಗಮಕವಾಚನ ಮಾಡುತ್ತ ಜನಪ್ರಿಯರಾಗಿದ್ದಾರೆ. ಸುಪ್ರಸಿದ್ಧ ಸಂಗೀತ ವಿದುಷಿಯೂ, ಲಘು ಸಂಗೀತ ಹಾಗೂ ಭಾವಗೀತಗಳಲ್ಲಿ ಹೆಸರಾಂತವರೂ ಆಕಾಶವಾಣಿಯ ಜನಪ್ರಿಯ ಗಾಯಕಿಯೂ ಆದ ಶ್ರೀಮತಿ ಎಂ. ಎನ್. ರತ್ನ ಕೆಲವು ಕಾಲ ಶಕುಂತಲಾಬಾಯಿಯವರಿಂದ ಗಮಕ ವಾಚನಾಭ್ಯಾಸ ಮಾಡುತ್ತಿದ್ದರೆಂದು ಕೇಳಿದ್ದೇನೆ. ಹೀಗೆ ಅವರ ಶಿಷ್ಯ ಸಂಪತ್ತು ಚೆನ್ನಾಗಿದೆ.

ನನಗೂ ಶಕುಂತಲಾಬಾಯಿಯವರಿಗೂ ಸ್ನೇಹ ಸುಮಾರು ಮೂವತ್ತು ವರ್ಷಗಳಿಂದಲೂ ಇದೆ. ಅವರನ್ನು ನಾನು ನನ್ನ ಗಮಕದ ಹಿರಿಯಕ್ಕನೆಂದು ಹೇಳಿಕೊಳ್ಳಲು ಹೆಮ್ಮೆ ಪಡುತ್ತೇನೆ. 1959ರಲ್ಲಿ ಮಕ್ಕಳ ಮಂಟಪದ ಗಮಕ ತರಗತಿಯ ವಿದ್ಯಾರ್ಥಿ ವಿದ್ಯಾರ್ಥಿನಿಯರು ಸೇರಿ ಭಾರತವಾಚನ ಪ್ರವೀಣ ಬಿಂದೂರಾಯರ ಅಧ್ಯಕ್ಷತೆಯಲ್ಲಿ ನನ್ನ ಗುರುಗಳಾದ ಭಾರತದ ಶ್ರೀ ಕೃಷ್ಣಗಿರಿ ಕೃಷ್ಣರಾಯರಿಗೆ ಒಂದು ಸನ್ಮಾನ ಸಮಾರಂಭವನ್ನು ಏರ್ಪಡಿಸಿದರು. ಭಾರತವಾಚನ ಪ್ರವೀಣರ ಶಿಷ್ಯರಂತೆ ನನ್ನ ಗುರುಗಳು. ಶಕುಂತಲಾಬಾಯಿ ಬಿಂದೂರಾಯರ ಶಿಷ್ಯರು. ಹೀಗೆ ಅವರು ನಾನು ಒಂದೇ ಗುರು ಪರಂಪರೆಗೆ ಸೇರಿದಂತಾಯಿತಲ್ಲವೆ ಒಂದು ವಿಧದಲ್ಲಿ. ಆದುದರಿಂದ ನಾನು ಶಕುಂತಲಾಬಾಯಿಯನ್ನು ನನ್ನ ಗಮಕದ ಹಿರಿಯಕ್ಕ ಎಂದು ಕರೆಯುವುದರಲ್ಲಿ ಔಚಿತ್ಯವಿದೆ. ಆ ದಿನ ನನ್ನ ಅಣ್ಣ ಪಾಂಡುರಂಗರಾಯರು, ಅಕ್ಕ ಶಕುಂತಲಾಬಾಯಿಯವರು ನನ್ನ ಭಾರತವಾಚನವನ್ನೂ ಇತರ ಗಮಕಿಗಳ ಜತೆಗೆ ಸೇರಿಸಿದ್ದರು ಕಾರ್ಯಕ್ರಮದಲ್ಲಿ. ಆ ದಿನ ಈ ದಂಪತಿಗಳು ನನ್ನೊಡನೆ ನಡೆದುಕೊಂಡ ರೀತಿಯಿಂದ ನನ್ನ ಮತ್ತು ಪಾಂಡು

ರಂಗರಾವ್, ಶಕುಂತಲಾಬಾಯಿಯ ಸಹೋದರ ಸಹೋದರಿ ಬಂಧುತ್ವ ನಿಕಟವಾಯಿತು. ಅದು ತುಂಬ ಹೃದಯಸ್ಪರ್ಶಿಯಾಗಿ ಇಂದಿನವರೆಗೂ ಉಳಿದುಕೊಂಡು ಬಂದಿದೆ.

ನನ್ನ ಹಿರಿಯಕ್ಕ ಶಕುಂತಲಾಬಾಯಿ ಅದೃಷ್ಟವಂತೆ ಗಮಕ ಕಲಾವಿದೆಯೆಂದರೆ ತಪ್ಪಾಗಲಾರದು. ನಮ್ಮ ರಾಷ್ಟ್ರದ ದೆಹಲಿ ಕೇಂದ್ರದ ಆಕಾಶವಾಣಿ 1957ರಲ್ಲಿ ಕರ್ನಾಟಕ ಸಾಹಿತ್ಯ ಸಂಸ್ಕೃತಿ, ಕಾರ್ಯಕ್ರಮವನ್ನು ಬಿತ್ತರಿಸಿದಾಗ ಶಕುಂತಲಾಬಾಯಿ ಗಮಕದ ಪ್ರಾತಿನಿಧ್ಯವಹಿಸಿದ ಮೊಟ್ಟಮೊದಲ ಮಹಿಳೆ. ನಮ್ಮ ರಾಜ್ಯದ ಸಾಹಿತ್ಯ ಅಕಾಡೆಮಿ ಗಮಕ ಪ್ರಶಸ್ತಿಯನ್ನು 1969 ರಲ್ಲಿ ಪ್ರಾರಂಭಿಸಿದಾಗ, ಗಮಕ ಕಲೆಗಾಗಿ ರಾಜ್ಯ ಪ್ರಶಸ್ತಿ ಪಡೆದ ಮೊಟ್ಟಮೊದಲ ಗಮಕ ವಿದುಷಿಯೂ ಶಕುಂತಲಾ ಬಾಯಿ ಅವರೆ. ಗಮಕ ಕಲಾ ಸೇವೆಗಾಗಿ ರಾಜ್ಯದ ಗೌರವಧನ ಐನೂರು ರೂಪಾಯಿಗೆ ಮಾಸಾಶನ ಪಡೆದ ಅದೃಷ್ಟವಂತೆ ಗಮಕ ವಿದುಷಿಯೂ ನನ್ನ ಹಿರಿಯಕ್ಕ ಶಕುಂತಲಾ ಬಾಯಿಯೇ. ರಾಜ್ಯ ಪ್ರಶಸ್ತಿ ವಿಜೇತರಾಗಿ ಪಡೆದ ಗೌರವಧನವನ್ನು ಶಕುಂತಲಾಬಾಯಿ ತಮಗಾಗಿ ಉಳಿಸಿಕೊಂಡರೇನು? ಅದನ್ನು ತಾನು ಎಲ್ಲಿ ಗಮಕಾಭ್ಯಾಸಮಾಡಿದರೋ ಆ ಗುರುಕುಲ ನಾದ ಸಾಹಿತ್ಯ ಪರಿಷತ್ತಿಗೇ ದತ್ತಿಯಾಗಿ ಕೊಟ್ಟುಬಿಟ್ಟರು. 750ರೂಪಾಯಿ ಗಳ ಜೊತೆಗೆ 251 ರೂಪಾಯಿ ಸೇರಿಸಿ 1001 ರೂಪಾಯಿಗಳ ಇಡುಗಂಟನ್ನು ಒಪ್ಪಿಸಿ ದರು. 1979 ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಮೈಸೂರು ಜಿಲ್ಲಾ ಸಾಹಿತ್ಯ ಸಮಿತಿ ನಡೆಸಿದ ಅಖಿಲ ಕರ್ನಾಟಕ ದ್ವಿತೀಯ ಗಮಕ ಸಮ್ಮೇಳನದ ಅಧ್ಯಕ್ಷಣಿ ಯಾಗುವ ಗೌರವವು ಶಕುಂತಲಾಬಾಯಿ ಅವರಿಗೆ ಲಭ್ಯವಾಯಿತು. ಆ ಸಮಯದಲ್ಲಿ ಮಕ್ಕಳ ಮಂಟಪ ಪ್ರಕಾಶನದ ಆಶ್ರಯದಲ್ಲಿ ಪ್ರಕಟವಾದ "ಗಮಕ ಭಗೀರಥರು" ಎಂಬ ಗ್ರಂಥದಿಂದ ಬಂದ ಲಾಭಾಂಶ 500 ರೂಪಾಯಿಗಳನ್ನು, ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಹಿಂದೆ ಇಟ್ಟಿದ್ದ ಇಡುಗಂಟು 1001 ರೂಪಾಯಿಗಳಿಗೆ ಸೇರ್ಪಡೆಯಾಗಿ ಅರ್ಪಿಸಿದರು. ಈ ಇಡುಗಂಟನ್ನು ಕನ್ನಡ ಸಾಹಿತ್ಯ ಪರಿಷತ್ತು, ದತ್ತಿಯಾಗಿ ಸ್ವೀಕರಿಸಿ, ಅದರಿಂದ ಬರುವ ಬಡ್ಡಿಯಿಂದ ಪ್ರತಿ ವರ್ಷವೂ ಗಮಕಿಗಳಿಂದ ಕಾವ್ಯ ವಾಚನ ಕಾರ್ಯ ಕ್ರಮವನ್ನು ಏರ್ಪಡಿಸಿ ಗಮಕ ಕಲೆಗೆ ಪ್ರೋತ್ಸಾಹಕೊಡುತ್ತಿರುವುದನ್ನು ಇಲ್ಲಿ ನೆನೆಸಿ ಕೊಳ್ಳುವುದು ನನಗೆ ತುಂಬ ಸಂತೋಷದ ವಿಷಯ. ಈಗಾಗಲೆ ಎರಡು ಗಮಕ ರೂಪಕ ಕಾರ್ಯಕ್ರಮಗಳೂ, ಗಮಕ ವಿದ್ವಾನ್ ಶ್ರೀ ಎಸ್. ನಾಗೇಶರಾವ್, ಗಮಕ ವಿದುಷಿ ಗಳಾದ ಇಂದಿರಾ ವೆಂಕಟೇಶ್ ಮತ್ತು ಗೌರಮ್ಮ ನಾಗರಾಜ್ ಹೀಗೆ ಮೂವರು ಸುಪ್ರಸಿದ್ಧ ಗಮಕಿಗಳ ಕಾವ್ಯವಾಚನ ಕಾರ್ಯಕ್ರಮಗಳೂ ಶಕುಂತಲಾಬಾಯಿ ಅವರ ದತ್ತಿ ಕಾರ್ಯಕ್ರಮಗಳಾಗಿ ನಡೆದಿವೆ. ಶಕುಂತಲಾಬಾಯಿಯವರ ಪ್ರೋತ್ಸಾಹ ನನಗೂ ಸಿಕ್ಕಿದೆ. ನನ್ನ ಅಣ್ಣ ಪಾಂಡುರಂಗರಾವ್ ಈ ವರ್ಷ, ಅವರ ಚಿಕ್ಕಮ್ಮ ದಿ|| ಅಂಬೂ ಬಾಯಿಯವರ ವರ್ಷಾಬ್ದಿಕ ಶ್ರಾದ್ಧಕಾರ್ಯಾಚರಣೆಗೆ ಒಂದು ಹೊಸ ತಿರುವು ಕೊಟ್ಟರು. ಆ ದಿನ ಸಂಜೆ ಡಾ|| ರಂ. ಶ್ರೀ ಮುಗಳಿ ಅವರ ಅಧ್ಯಕ್ಷತೆಯಲ್ಲಿ ನಾರಣಪ್ಪನ ಗದುಗಿನ ಭಾರತವಾಚನವನ್ನು ನನ್ನಿಂದ ಏರ್ಪಡಿಸಿದ್ದರು. ಡಾ|| ಗೋರೂರು ರಾಮಸ್ವಾಮಿ ಅಯ್ಯಂಗಾರ, ರಾವ್‌ಬಹದ್ದೂರ್, ಹೆಚ್. ಎಸ್. ಪಾಟೀಲ್, ಹರಿಹರಪ್ರಿಯ

ಮೊದಲಾದ ಗಣ್ಯ ಸಾಹಿತಿಗಳು,ಮಹಿಳೆಯರು ಬಂದಿದ್ದರು. ಇನ್ನು ಮುಂದೆ ದಿ|| ಅಂಬೂಬಾಯಿಯವರ ಶ್ರಾದ್ಧದಿನವನ್ನು ಗಮಕವಾಚನ ಕಾರ್ಯಕ್ರಮದಿಂದ ಆಚರಿಸಿ, ಶ್ರಾದ್ಧಕರ್ಮಕ್ಕೆ ತಗಲುವ ವೆಚ್ಚವನ್ನು ಗಮಕ ಕಲಾವಿದರಿಗೆ ಕಾಣಿಕೆಯಾಗಿ ಅರ್ಪಿಸುವುದಾಗಿ ಅಕ್ಕ ಶಕುಂತಲಾಬಾಯಿ ಬಿನ್ನವಿಸಿಕೊಂಡರು.

ಅಣ್ಣ ಪಾಂಡುರಂಗರಾಯರು, ಅಕ್ಕ ಶಕುಂತಲಾಬಾಯಿ ಮಕ್ಕಳ ಮಂಟಪದ ಆಶ್ರಯದಲ್ಲಿ ನಡೆಸಿರುವ ಗಮಕ ವಾಚನ ಕಾರ್ಯಕ್ರಮಗಳು ಹಲವಾರು. ಕರ್ಣಾಟಕದ ಗಮಕಿಗಳೆಲ್ಲ ಒಂದಲ್ಲ ಒಂದು ಸಂದರ್ಭದಲ್ಲಿ ತಮ್ಮ ಕಾವ್ಯವಾಚನ ಕಾರ್ಯಕ್ರಮವನ್ನು ಮಕ್ಕಳ ಮಂಟಪದಲ್ಲಿ ನಡೆಸಿದವರೇ. ಗಮಕವಾಚನ ಕಾರ್ಯಕ್ರಮಗಳು ಕಿವಿಗಳಿಗೆ ಮಾತ್ರ ರಸಾಸ್ವಾದನೆ ಮಾಡಿಸುತ್ತಿರಲಿಲ್ಲ. ಶ್ರೋತೃಗಳಿಗೆಲ್ಲ ತಿಂಡಿತೀರ್ಥ ಕೊಟ್ಟು ತಣಿಸಿದಮೇಲೆ ವಾಚನಾರಂಭವಾಗುತ್ತಿದ್ದಿತು. ಈಗಲೂ ಅಷ್ಟೆ.

ಅರವತ್ತು ವರ್ಷಗಳ ಸಾರ್ಥಕ ತುಂಬ ಜೀವನ ನಡೆಸಿ ಅರವತ್ತೊಂದನೆಯ ವರ್ಷಕ್ಕೆ ಮುನ್ನಡೆದಿರುವ ಗಮಕದ ನನ್ನ ಹಿರಿಯಕ್ಕ ಶಕುಂತಲಾಬಾಯಿಗೆ, ಅರವತ್ತೊಂಭತ್ತರ ವರ್ಷದಲ್ಲಿ ನಡೆದಿರುವ ಅಣ್ಣ ಪಾಂಡುರಂಗರಾಯರಿಗೆ, ನಾನು ತುಂಬಾಯುಸ್ಸು ಅನುಗ್ರಹಿಸಿ, ಸಂಸಾರದಲ್ಲಿ ಕಷ್ಟಕಾರ್ಪಣ್ಯ ರೋಗರುಜನಗಳಿಲ್ಲದಂತೆ ಕಾಪಾಡಲೆಂದು, ಗದುಗಿನ ವೀರನಾರಾಯಣನನ್ನು ಅವರ ಕಿಂಕರನಾದ ಕುಮಾರವ್ಯಾಸನನ್ನು ಪ್ರಾರ್ಥಿಸಿ ಕೊಳ್ಳುತ್ತೇನೆ.

ಸಾರ್ಥಕ ಜೀವನ

ಡಿ. ಎಸ್. ಶ್ರೀನಿವಾಸರಾವ್

ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾಯರಿಗೆ ಗಮಕ ಕಲೆಗೆ ಸಲ್ಲಿಸಿದ, ಸಲ್ಲಿಸುತ್ತಿರುವ, ಸೇವೆಗಾಗಿ ರಾಜ್ಯ ಅಕಾಡೆಮಿಯ ಪ್ರಶಸ್ತಿ ದೊರೆತಾಗ ನಾಡಿನ ಗಮಕಿಗಳೆಲ್ಲರಿಗೂ ಸಂತೋಷವಾಯಿತು. ಒಂದು ಕಾರಣ, ಗಮಕ ಕಲೆಯನ್ನು ಅಕಾಡೆಮಿಯವರು ಗಮನಕ್ಕೆ ತಂದುಕೊಡರಲ್ಲಾ ಎಂಬುದು ; ಮತ್ತೊಂದು ಕಾರಣ. ಶ್ರೀಮತಿ ಶಕುಂತಲಾಬಾಯಿಯವರಿಗೆ ದೊರೆತ ಪ್ರಶಸ್ತಿ ಸರ್ವವಿಧದಲ್ಲಿಯೂ ಯೋಗ್ಯವಾದ ಆಯ್ಕೆ ಎಂಬುದು. ಗಮಕ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ್ದ ಇತರ ಹಿರಿಯ ವಿದ್ವಾಂಸರಿದ್ದರು. ಅವರಲ್ಲಿ ಅನೇಕರು ನನ್ನ ಮಿತ್ರರೂ ಆಗಿರುವರು ; ಅವರೆಲ್ಲರಿಗೂ ಸಹ ಪ್ರಶಸ್ತಿಯು ಶ್ರೀಮತಿಯವರಿಗೆ ದೊರೆತದ್ದು ಸಂತೋಷದ ವಿಷಯವೇ ಆಗಿದ್ದಿತು. ಆ ಸಂದರ್ಭದಲ್ಲಿ ಅವರುಗಳ ಪ್ರಶಂಸೆಗೆ ಮುಖ್ಯ ಕಾರಣ, ಶ್ರೀಮತಿಯವರು ಅಗ್ರಮಾನ್ಯ ಗಮಕಿಗಳೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ಅವರು ವಿಶೇಷವಾಗಿ ಕಲೆಗಾಗಿ ದುಡಿದಿರುವರು ; ಶಿಷ್ಯ ಸಂಪತ್ತನ್ನೂ ಬೆಳಸಿಕೊಂಡಿರುವುದಷ್ಟೇ ಅಲ್ಲದೆ, ಕನ್ನಡನಾಡಿನ ಅನೇಕ ನಗರಗಳಲ್ಲಿಯೂ, ಭಾರತದ ಇತರ ಮುಖ್ಯ ನಗರಗಳಲ್ಲಿಯೂ ಗಮಕ ಕಲೆಯನ್ನು ಎತ್ತಿ ಹಿಡಿದು, ವಾಚನಗಳನ್ನು ನಡೆಸಿ ಎಲ್ಲರ ಮೆಚ್ಚುಗೆಯನ್ನು ಗಳಿಸಿರುವರು. ಎಲ್ಲಾದರೂ ಗಮಕದ ಮಾತು ಬಂದರೆ, ಯಾರಿಗಾದರೂ ನೆನಪಿಗೆ ಬರುವ ಹೆಸರು ಶ್ರೀಮತಿ ಶಕುಂತಲಾಬಾಯಿಯವರದೇ. ಅಂತೂ ಗಮಕ ಕಲೆಯನ್ನು ಅಕಾಡೆಮಿಯವರು ಪರಿಗಣಿಸುವಂತಾಯಿತಲ್ಲಾ, ಅದೇ ಶುಭ ಸಂಕೇತ. ಮುಂಬರುವ ವರ್ಷಗಳಲ್ಲಿ ಇತರ ಹಿರಿಯ ಗಮಕಿಗಳಿಗೆ ಮಾನ್ಯತೆ ದೊರೆಯಬಹುದು. ಒಟ್ಟಿನಲ್ಲಿ ಅಕಾಡೆಮಿಯವರು ಗಮಕ ಕಲೆಗೆ ಮಾನ್ಯತೆ ಕೊಡಲು "ಶ್ರೀ"ಕಾರವನ್ನು ಹಾಕಿದರಲ್ಲಾ ಅದು ಸಂತೋಷದ ಸಂಗತಿ ಎಂದು.

ಆ ಸಂದರ್ಭದಲ್ಲಿ "ಕಾವ್ಯ ಪ್ರಚಾರ ಮಂಡಳಿ"ಯು, ಅಕಾಡೆಮಿಯಿಂದ ರಾಜ್ಯ ಪ್ರಶಸ್ತಿಯನ್ನು ಪಡೆದ ಗಮಕಿಗಳನ್ನು ಮಂಡಳಿಗೆ ಬರಮಾಡಿಕೊಂಡು, ಅವರನ್ನು ಗೌರವಿಸಿ, ಸತ್ಕರಿಸುವ ಪರಿಪಾಟಿಯನ್ನು ನೆಮ್ಮಿಕೊಂಡಿತು. ಆ ದಿನ ನಗರದಲ್ಲಿರುವ ಅನೇಕ ಹಿರಿಯ ಗಮಕಿಗಳೂ, ಅಭಿಮಾನಿಗಳೂ, ಅಭ್ಯಾಸಿಗಳೂ ಉಪಸ್ಥಿತರಿದ್ದರು. ಆಗ ಶ್ರೀಮತಿ ಶಕುಂತಲಾಬಾಯಿಯವರನ್ನು ಅಭಿನಂದಿಸಿ ಮಾತನಾಡುವ ಸಂದರ್ಭದಲ್ಲಿ, ನನಗೆ 'ರಾಜಶೇಖರವಿಳಾಸ'ದಲ್ಲಿನ ಈ ಪದ್ಯ ಜ್ಞಾಪಕಕ್ಕೆ ಬಂದಿತು.

"ನುಡಿಯೆಮಗೊಂದೆ ನೋಟವೆಮಗೊಂದೆ ವಿಳಾಸಮದೊಂದೆ ಜೆಲ್ವನಿ
ರ್ಮಡಿಸುವ ಸಾರಯೌವನಮುವೊಂದೆ ಗುಣೋನ್ನತಿಯೊಂದೆಕೂರ್ಪಬೇ||

ಪ್ರಡಿಸದ ಜೇಟವೊಂದೆ ರತಿಯೊಂದೆ ಮನಸಿಕ್ಕಿಯೊಂದೆ ಸೌಖ್ಯಮುಂ
ವಡಿವೆಸೆವಾವಗಂ ಕೆಳದಿ ಕೇಳದರಿಂಪೆಮಗಾಸ್ಪರ್ಶಮಾಸರೇ ||

ಏಕಾದಶಾಶ್ವಾಸಂ–131ನೇ ಪದ್ಯ

ಮೇಲಿನ ಪದ್ಯದ ಭಾವನೆ ಶ್ರೀಮತಿ ಶಕುಂತಲಾಬಾಯಿ ಮತ್ತು ಶ್ರೀಯುತ ಪಾಂಡುರಂಗರಾಯರ ಬಾಂಧವ್ಯಕ್ಕೆ ಸರಿಯಾಗಿ ಹೊಂದುವುದೆಂದು ಅಂದು ನನಗನಿಸಿತ್ತು. ಈ ಅಭಿಪ್ರಾಯವು ಈಚಿನ ದಿನಗಳಲ್ಲಿ ಹೆಚ್ಚು ಸ್ಪಷ್ಟವಾಗಿದೆ. ಈ ಜೋಡಿ ಅಷ್ಟೆ ನಿಕಟವಾದುದು ಮತ್ತು ಘನಿಷ್ಟವಾದುದು, ಇವರಿಬ್ಬರ ಕಾರ್ಯಕ್ಷೇತ್ರವೂ ಸಹ ಪರಸ್ಪರ ಪೋಷಕವೆ. ಶ್ರೀಮತಿಯವರದು ಕಾವ್ಯವಾಚನ ಕಲೆಯಾದರೆ, ಪಾಂಡುರಂಗರಾಯರದು ಶಿಕ್ಷಣ ಕ್ಷೇತ್ರ, ಸಾಹಿತ್ಯ ಕ್ಷೇತ್ರ. ಇವರಿಬ್ಬರೂ ತಮ್ಮ ತಮ್ಮ ಕ್ಷೇತ್ರಗಳಲ್ಲಿ ವಿಶಿಷ್ಟ ಸೇವೆಯನ್ನು ಸಲ್ಲಿಸಿರುವವರೇ, ಹೆಸರನ್ನು ಗಳಿಸಿರುವವರೇ, ಅಕಾಡೆಮಿ ಪ್ರಶಸ್ತಿಗಳನ್ನು ಪಡೆದವರೇ.

ಶ್ರೀಮತಿ ಶಕುಂತಲಾಬಾಯಿಯವರದು ಉತ್ತಮವಾದ ಶಾರೀರ, ತುಂಬುಧ್ವನಿ, ಧ್ವನಿವರ್ಧಕವಿಲ್ಲದಿದ್ದರೂ ಸಹ, ಯಾವ ಊನವೂ ಕಾಣಿಸುವುದಿಲ್ಲ. ರಾಗವು ತ್ರಿಸ್ಥಾಯಿಯಲ್ಲಿಯೂ ಲೀಲಾಜಾಲವಾಗಿ ಸಂಚರಿಸಬಲ್ಲುದು. ರಾಗದ ಬಳಕೆಯೂ ಸಹ ಸಾಹಿತ್ಯ ಭಾವಕ್ಕೆ ಒಪ್ಪುವಷ್ಟು ಮಿತವಾಗಿ, ಹಿತವಾಗಿ ಭಾವದ ಆವೇಶ ವೇಗವಿದ್ದರೆ ರಾಗ ಸಂಚಾರವೂ ಲಯವಿನ್ಯಾಸಗಳೊಂದಿಗೆ ಕುಣಿಯುತ್ತಾ, ದ್ರುತಗತಿಯಲ್ಲಿ ನಡೆಯುವುದು. ಇತರ ಗಮಕಿಗಳು ವಾಚನದಲ್ಲಿ ಇವುಗಳನ್ನು ಅನುಸರಿಸಲು ಅಪೇಕ್ಷಿಸಿದರೆ, ಸುಲಭ ಸಾಧ್ಯವಲ್ಲ, ಸಂಗೀತದಲ್ಲಿ ವಿಶೇಷ ಪರಿಶ್ರಮವಿದ್ದವರಿಗೆ, ಶುದ್ಧವಾದ ರಾಗಜ್ಞಾನ, ಅದರ ನಾನಾ ಸಂಚಾರಗಳ ಬಳಕೆಗಳು ರೂಢಿಯಲ್ಲಿದ್ದರೆ ಪ್ರಯತ್ನಿಸಬಹುದೇನೋ ಎನ್ನಿಸುತ್ತದೆ. ಓದುತ್ತಿರುವವರು ಶ್ರೀಮತಿ ಶಕುಂತಲಾಬಾಯಿಯವರೇ ಎಂಬುದು ದೂರದಿಂದ ವಾಚನ ಕಿವಿಗೆ ಬಿದ್ದರೂ ಗುರುತಿಸುವಷ್ಟರ ಮಟ್ಟಿಗೆ ಇವರ ವಾಚನ ಕ್ರಮವೂ, ಧ್ವನಿಯೂ ನಾಡಿನ ಶ್ರೋತೃವರ್ಗಕ್ಕೆ ಪರಿಚಯವಾಗಿದೆ ಎಂಬುದು ಅತಿಶಯದ ಮಾತೇನೂ ಅಲ್ಲ.

ಶ್ರೀಮತಿಯವರ ಕಾವ್ಯವಾಚನವನ್ನು ನಾನು ಅನೇಕ ಸಲ ಕೇಳಿದ್ದೇನೆ. ಉಚ್ಚಾರಣೆಯು ಸ್ಪಷ್ಟವಾಗಿಯೂ, ಭಾವಸ್ಫುರಣೆಯಾಗುವಂತೆಯೂ ಇರುವುದು. ಸನ್ನಿವೇಶಕ್ಕೆ ತಕ್ಕಂತೆಯೂ, ಪಾತ್ರಗಳ ಸ್ವಭಾವಕ್ಕೆ ಅನುಗುಣವಾಗಿಯೂ, ವ್ಯಂಗ್ಯ, ಕಾಕುಗಳಿಂದ ಕೂಡಿಯೂ ಇರುವುದು. ಅದನ್ನು ನಾನು ಗಮನಿಸುವುದು, ಮೆಚ್ಚುವುದು, ವಾಚನವು ಮುಗಿದ ಮೇಲೆಯೆ. ವಾಚನ ಕಾಲದಲ್ಲಿ ಶ್ರೋತೃಗಳು ಬೇರೊಂದು ಲೋಕದಲ್ಲಿಯೇ ಇರುತ್ತಾರೆ. ಅವರು ಯಾವಾಗ ರಸದ ಮಡುವಿನಲ್ಲಿ ಆನಂದದಲ್ಲಿ ಮುಳುಗಿದರೆಂಬುದೇ ಯಾರಿಗೂ ಅರಿವಿರುವುದಿಲ್ಲ.

ಸಾಹಿತ್ಯ ಕ್ಷೇತ್ರದಲ್ಲಿ ಪ್ರತಿಷ್ಠಿತರಾಗಿರುವ ಹಿರಿಯರು, ಗಮಕಿಗಳು ಷಟ್ಪದೀ ಕಾವ್ಯವಾಚನ ಮಾಡುವಂತೆಯೇ, ಚಂಪೂ ಕಾವ್ಯಗಳನ್ನು ವಾಚನ ಮಾಡಬೇಕೆಂದು

ಅಪೇಕ್ಷಿಸುತ್ತಾರೆ. ಅವರ ಅಭಿಪ್ರಾಯದಲ್ಲಿ ಚಂಪೂ ಉದ್ಗ್ರಂಥಗಳನ್ನು ವಾಚನ ಮಾಡುವುದು ಕಷ್ಟತರವೆಂದೂ, ಚಂಪೂ ಕಾವ್ಯವಾಚನವೇ ಗಮಕಿಯಾದವರ ಸಾಮರ್ಥ್ಯವನ್ನು ಒರೆ ಹಚ್ಚುವ ನಿಕಷವೆಂಬುದಾಗಿಯೂ ಇದೆ. ಇದು ಒಪ್ಪತಕ್ಕ ವಿಚಾರವೇ. ಈ ಅಭಿಪ್ರಾಯದ ಹಿಂದೆ ಅಡಗಿರುವ ಒಂದು ಸಂಶಯವೇನೆಂದರೆ ಗಮಕಿಗಳ ಪರಿಶ್ರಮವೂ ಷಟ್ಪದೀ ಕಾವ್ಯಗಳಿಗೆ ಮಾತ್ರ ಸೀಮಿತವೆಂದೂ, ಚಂಪೂ ಕಾವ್ಯವಾಚನ ಸಾಮರ್ಥ್ಯವು ಸಾಲದೆಂದೂ, ಅಥವಾ ಇಲ್ಲವೆಂಬುವೇ ಆಗಿದೆ. ಆದರೆ ಶಕುಂತಲಾ ಬಾಯಿಯವರ ವಿಷಯವನ್ನು ಹೇಳುವಾಗ ಮಾತ್ರ ಈ ಸಂಶಯಕ್ಕೆ ಸ್ವಲ್ಪವೂ ಅವ ಕಾಶವಿಲ್ಲ. ಅವರು ಷಟ್ಪದಿ ಕಾವ್ಯಗಳನ್ನು ಎಷ್ಟು ಲೀಲಾಜಾಲವಾಗಿ, ಯಶಸ್ವಿಯಾಗಿ ವಾಚನ ಮಾಡುವರೋ, ಅಷ್ಟೇ ಸುಲಲಿತವಾಗಿ ಸಾಂಗತ್ಯಗಳನ್ನು ಚಂಪೂ ಕಾವ್ಯ ಗಳನ್ನು ಸಹ ವಾಚನ ಮಾಡುತ್ತಿರುವರು.

ಮಹಾ ಛಂದಸ್ಸಿನಲ್ಲಿ ರಚಿತವಾಗಿರುವ, ರಾಷ್ಟ್ರಕವಿ 'ಕುವೆಂಪು'ರವರ 'ರಾಮಾ ಯಣದರ್ಶನ' ಮಹಾಕಾವ್ಯವನ್ನು ವಾಚನಮಾಡಲು ಮೊದಲು ಪ್ರಾರಂಭಮಾಡಿ ದವರು ಶಕುಂತಲಾಬಾಯಿಯವರೇ. ಇವರು ಇದುವರೆಗೆ 'ರಾಮಾಯಣದರ್ಶನ'ವ ನ್ನು ಹತ್ತಾರುಸಲ, ನೂರಾರು ಕಡೆಗಳಲ್ಲಿ ವಾಚನ ನಡೆಸಿರುವರು. ಇವರ ವಾಚನ ಗಳಿಗೆ ಶ್ರೀಯುತ ಪಾಂಡುರಂಗರಾಯರೇ ಸರಳವಾದ ನಿರೂಪಣೆಗಳನ್ನಿತ್ತು ಕಾರ್ಯ ಕ್ರಮಗಳ ಯಶಸ್ಸಿಗೆ ಕಾರಣರಾಗಿರುವರು. ಇವತ್ತು 'ರಾಮಾಯಣದರ್ಶನ' ಕಾವ್ಯ ವನ್ನು ಸ್ವಯಂವಾಚನಮಾಡಿದ ಓದುಗರಿಗಿಂತ, ಇವರ ಕಾವ್ಯವಾಚನಗಳನ್ನು ಕೇಳಿ ಆ ಕಾವ್ಯದ ಪೂರ್ಣ ಪ್ರಯೋಜನವನ್ನು ಪಡೆದಿರುವವರ ಸಂಖ್ಯೆಯೇ ಅಧಿಕವೆನ್ನ ಬಹುದು.

ಶ್ರೀಮತಿ ಶಕುಂತಲಾಬಾಯಿಯವರಿಗೆ ಗಮಕ ಕಲೆಯು ಒಲಿದು ಬಂದಿದೆ. ಪಂಪ ಮಹಾಕವಿಯು ತಿಳಿಸಿರುವಂತೆ 'ಪೂಜೆ, ನೆಗಟ್ತ್ತು, ಲಾಭ'ಗಳನ್ನು ದಯಪಾಲಿಸಿದೆ. ನಾಡಿನ ಒಳಗೂ, ಹೊರಗೂ, ಅಗ್ರಮಾನ್ಯ ಗಮಕಿಯೆಂಬ ಖ್ಯಾತಿ, ರಾಜ್ಯದ ಅಕಾಡೆಮಿಯ ಪ್ರಶಸ್ತಿ, ಮೈಸೂರು ಜಿಲ್ಲಾ ಪರಿಷತ್ತಿನ ಸಮ್ಮೇಳನದ ಅಧ್ಯಕ್ಷತೆ, ಹಾಗೂ ಗೌರವ ಮಾಸಾಶನಗಳು ಈಕೆಯ ಕಲಾರಾಧನೆಯನ್ನು ನಾಡು ಜನ ಮೆಚ್ಚಿರುವುದರ ಸಂಕೇತವೆನ್ನಬಹುದು.

ಇವರಿಗೆ ಗಮಕಕಲೆಯು ಒಲಿದು ಬಂದಿತೋ, ಅಥವಾ ಈಕೆಯು ಗಮಕಕಲೆ ಯನ್ನು ನಿಷ್ಠೆ, ಶ್ರದ್ಧೆಯಿಂದ ಅಭ್ಯಸಿಸಿದರೋ ಅಥವಾ ಇವರ ಗಮಕ ಗುರುಗಳಾದ ಶ್ರೀಯುತ ಸಂ. ಗೋ. ಬಿಂದೂರಾಯರು ಕಲಿಸಿದ್ದು ಇವರಲ್ಲಿ ಸಾರ್ಥಕತೆಯನ್ನು ಪಡೆಯಿತೋ, ಹಾಗಲ್ಲದೆ ಇವುಗಳೆಲ್ಲ ಮುಪ್ಪುರಿಗೊಂಡು ಈಕೆ ಯ ವಿದ್ಯಾಸಂಪನ್ನತೆಗೆ ಕಾರಣವಾಯಿತೋ ಹೇಳಲಾಗುವುದಿಲ್ಲ. ಇದೆಲ್ಲಕ್ಕೂ ಅತಿಶಯವಾಗಿ ಇವರಿಗೆ (ಪಾಂಡು ರಂಗರಾಯರಿಗೂ ಸಹ) ಬಿಂದೂರಾಯರಲ್ಲಿದ್ದ ಗೌರವ, ಭಕ್ತಿಗಳು, ಪೂಜ್ಯಭಾವನೆ ಗಳೇ ಇವರಿಗೆ ಕಲೆಯ ವಿಷಯವಾಗಿ ಧನ್ಯತೆಯನ್ನಿತ್ತಿವೆ.

ಶ್ರೀಯುತ ಪಾಂಡುರಂಗರಾಯರು ಮಧ್ಯಮವರ್ಗದವರೇ ಹೊರತು ಶ್ರೀಮಂತರಲ್ಲ.

ಇವರಲ್ಲಿರುವ ಸಾಹಿತ್ಯ ಸೇವೆ, ದೇಶಸೇವೆಯ ಉತ್ಸಾಹವು ಅನೇಕ ಸಲ ಇವರನ್ನು ನಷ್ಟಕ್ಕೆ ಗುರಿಮಾಡಿ, ಕಷ್ಟಗಳಿಗೆ ಈಡುಮಾಡಿವೆ. ಅದಕ್ಕೆ ಕಾರಣ ರಾಯರ ಸರಳ ಸ್ವಭಾವ. ಇವರು ಯಾರನ್ನಾದರೂ ಆತ್ಮೀಯರಂತೆಯೇ ನಂಬುವವರು, ವ್ಯವಹರಿಸುವವರು. ಆ ಗುಣದ (ಈಗ ನಾಜೂಕಿನ ಕಾಲದಲ್ಲಿ ಅದನ್ನು ಗುಣವೆನ್ನಬಹುದೇ) ದುಷ್ಪ್ರಯೋಜನ ಪಡೆದ ಕಪಟಿಗಳೂ, ಧೂರ್ತರೂ ಇವರಿಗೆ ಗಂಟುಬಿದ್ದುದು ನಿಜಕ್ಕೂ ಶೋಚನೀಯ. ಇಷ್ಟಾದರೂ ರಾಯರಾಗಲೀ, ಶ್ರೀಮತಿಯವರಾಗಲೀ ಮಾನವ ದ್ವೇಷಿಗಳಾಗಿಲ್ಲ. ಅವರಿಗೆ ಇನ್ನೂ ಮನುಷ್ಯನ ಒಳ್ಳೇತನದಲ್ಲಿ ನಂಬಿಕೆಯಿದೆ. ಶ್ರೀಹರಿಯು ಹೇಗೋ ತನ್ನನ್ನು ನಂಬಿದವರನ್ನು ಕೈಹಿಡಿದೆತ್ತುವನೆಂಬ ದೃಢವಿಶ್ವಾಸವಿದೆ. ಅವರ ದೈವಭಕ್ತಿಯೇ, ಸಚ್ಚರಿತ್ರೆಯೇ ಅವರನ್ನು ಕಾಪಾಡುತ್ತದೆ.

ಶ್ರೀಮತಿ ಶಕುಂತಲಾಬಾಯಿಯವರ ಅರವತ್ತು ವರ್ಷಗಳ ಸಾರ್ಥಕ ಜೀವನವನ್ನು ಮೆಚ್ಚುವುದು, ಅವರ ಕಲಾರಾಧನೆಯನ್ನು ಸಂಭಾವಿಸುವುದು, ಗಮಕಿಗಳೆಲ್ಲರ ಶಿಷ್ಟ ಸಂಪ್ರದಾಯ ಮಾತ್ರವಲ್ಲ, ಅವರ ಕರ್ತವ್ಯ. ಈ ದಂಪತಿಗಳಿಗೆ ಶ್ರೀ ಹರಿಯ ಕೃಪಾವಿಶೇಷವು ಸದಾಕಾಲವೂ ಇರಲಿ.

ಗಮಕ ಕಲಾ ಪಂಡಿತೆ

ಶ್ರೀಮತಿ ಗೌರಮ್ಮ ನಾಗರಾಜ್

ಶ್ರೀಮತಿ ಶಕುಂತಲಾಬಾಯಿಯುವರು ದಿವ್ಯ ಸಾಂಸ್ಕೃತಿಕ ಹಿನ್ನೆಲೆ, ಸುಶಾರೀರ ಹಾಗೂ ಗಮಕ ಕಲಾ ಪಾಂಡಿತ್ಯವನ್ನು ಹೊಂದಿದ್ದಾರೆ. ಸುಮಾರು ನನಗೆ ತಿಳಿದಂತೆಯೇ ಮೂವತ್ತು ವರ್ಷಗಳಿಂದಲೂ ಈ ಕಾವ್ಯವಾಚನ ಕ್ಷೇತ್ರದಲ್ಲಿ ಅಮೋಘ ಸೇವೆ ಸಲ್ಲಿಸಿ ಖ್ಯಾತನಾಮರಾಗಿದ್ದಾರೆ. ನಾನು ಅವರ ಕಾರ್ಯಕ್ರಮವನ್ನು ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆ ಪ್ರತ್ಯಕ್ಷವಾಗಿಕೇಳಿ ಸಂತೋಷಪಟ್ಟದ್ದು, ಮೈಸೂರಿನ ಹಾರ್ಡ್ವಿಕ್ ಹೈಸ್ಕೂಲಿನಲ್ಲಿ ಏರ್ಪಡಿಸಿದ್ದ ಒಂದು ಸಮಾರಂಭದಲ್ಲಿ, ಆಗ ನಾನಿನ್ನು ಗಮಕ ಪರೀಕ್ಷೆ ಯಲ್ಲಿ ತೇರ್ಗಡೆ ಹೊಂದಿ ಈ ಕ್ಷೇತ್ರಕ್ಕೆ ಆಗತಾನೇ ಕಾಲಿಟ್ಟದ್ದೆ. ಅಂದು ಅವರು ನೀಡಿದ ಕಾವ್ಯವಾಚನವೇ ನಾನು ಈ ಗಮಕ ಕ್ಷೇತ್ರಕ್ಕೆ ಮುನ್ನುಗ್ಗಲು ನೀಡಿದ ಸ್ಫೂರ್ತಿ ಎಂದು ಹೇಳಿದರೆ ತಪ್ಪಾಗಲಾರದು

ಶ್ರೀಮತಿಯವರ ಈ ಅಮೋಘ ಸೇವೆಯನ್ನು ಪರಿಗಣಿಸಿ ಕರ್ನಾಟಕ ರಾಜ್ಯ ಪ್ರಶಸ್ತಿ ನೀಡಿರುವುದು ನಮ್ಮ ಈ ಗಮಕ ಕ್ಷೇತ್ರದ ಸ್ತ್ರೀ ವರ್ಗಕ್ಕೆ ಒಂದು ಹೆಮ್ಮೆಯ ವಿಷಯ. ಕು. ವೆಂ. ಪು.ರವರ "ಶ್ರೀರಾಮಾಯಣದರ್ಶನಂ" ಕಾವ್ಯವನ್ನು ಮೊಟ್ಟ ಮೊದಲುವಾಚನ ಮಾಡಿ ಅನೇಕ ಗಮಕಿಗಳಿಗೆ ಆ ಕಾವ್ಯದ ಮೇಲೆ ಒಲವುಂಟಾಗು ವಂತೆ ಮಾಡಿದ್ದಾರೆ. 1979ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಮೈಸೂರಿನಲ್ಲಿ ನಡೆದ ಗಮಕ ಸಮ್ಮೇಳನದ ಅಧ್ಯಕ್ಷಸ್ಥಾನ ವಹಿಸಿ ಅವರು ಆ ಸಮ್ಮೇಳನವನ್ನು ಯಶಸ್ವಿ ಯಾಗಿ ನಡೆಸಿಕೊಟ್ಟದ್ದು ನನಗೆ ಅತ್ಯಂತ ಸಂತೋಷದಾಯಕವಾಗಿದೆ.

ನಾನು ಕಿರಿಯವಳಾಗಿ ಅವರ ಪ್ರಾವೀಣ್ಯತೆಯ ಬಗ್ಗೆ ಹೆಚ್ಚಿಗೆ ಬರೆಯಲು ಶಕ್ತ ಳಲ್ಲ. ನನಗೆ ತಿಳಿದಮಟ್ಟಿಗೆ ಬರೆದಿದ್ದೇನೆ. ಲೋಪದೋಷಗಳಿದ್ದರೆ ಕ್ಷಮಿಸಿ. ಶ್ರೀಮತಿ ಶಕುಂತಲಾಬಾಯಿಯವರ ಈ ಅರವತ್ತನೇ ಹುಟ್ಟು ಹಬ್ಬದ ವರುಷ ಹಾಗೂ ಮುಂಬರುವ ವರುಷಗಳು ಆನಂದಮಯ ವಾಗಿರಲೆಂದೂ, ಅವರ ಕುಟುಂಬ ವರ್ಗದವ ರಿಗೂ ಆ ಪರಮಾತ್ಮನು ಸನ್ಮಂಗಳವನ್ನೂ, ಶ್ರೇಯಸ್ಸನ್ನೂ, ದಯಪಾಲಿಸಲೆಂದು ನಾನು ಪ್ರಾರ್ಥಿಸುತ್ತೇನೆ. ಅವರ ಕೀರ್ತಿ ಪತಾಕೆ ಚಿರಕಾಲ ಹಾರಿ ಗಗನ ಚುಂಬಿಯಾಗಿರಲಿ.

ಗಮಕ ಕಲಾರಾಧಕಿ

ಹೊಸಬಾಳೆ ಸೀತಾರಾಮರಾವ್

ಮಲೆನಾಡಿನ ಮಹಾಕವಿ ಶ್ರೀ ಕುವೆಂಪು ಅವರು ಮೂವತ್ತು ವರ್ಷಗಳಿಗೂ ಮೊದಲು 'ಶ್ರೀರಾಮಾಯಣದರ್ಶನಂ' ಮಹಾಕಾವ್ಯವನ್ನು ಬರೆದು ಪ್ರಕಟಿಸಿದರು. ಆಗ ಎಷ್ಟು ಜನರು ಆ ಕಾವ್ಯವನ್ನು ಓದಿ ಅರ್ಥಮಾಡಿಕೊಂಡರೋ ತಿಳಿಯದು. ಶ್ರೀ ಕುವೆಂಪು ಅವರು ರಾಷ್ಟ್ರಕವಿಗಳಾದರು ; ಅವರ ಮಹಾಕೃತಿಗೆ ರಾಜ್ಯದ, ರಾಷ್ಟ್ರದ ಎಲ್ಲಾ ಗೌರವಗಳೂ ದೊರೆತು, ಜ್ಞಾನಪೀಠ ಪ್ರಶಸ್ತಿಯೂ ಲಭಿಸಿತು. ಈ ಮಹಾ ಛಂದಸ್ಸಿನ ನೂತನ ಕಾವ್ಯವನ್ನು ವಾಚನಮಾಡುವುದು ಹೇಗೆ ಎಂದು ಕಾವ್ಯ ಪ್ರಕಟನೆ ಆದಾಗಲೇ ಅನೇಕರಿಗೆ ಅನಿಸಿರಬೇಕು. ಅಂತಹ ಕ್ಲಿಷ್ಟವಾದ ಪದ್ಯಗಳನ್ನು, ಬೇರೆ ಕಾವ್ಯಗಳನ್ನು ಸರಾಗವಾಗಿ ಓದುವಂತೆ, ರಾಗಭಾವಬದ್ಧವಾಗಿ ವಾಚನಮಾಡಬಹುದು ಎಂದು ತೋರಿಸಿಕೊಟ್ಟವರಲ್ಲಿ ಶ್ರೀಮತಿ ಶಕುಂತಲಾಬಾಯಿ ಅವರು ಮೊದಲಿಗರು. ಅವರ ವಾಚನಕ್ರಮದಿಂದ ರಾಜ್ಯಾದ್ಯಂತ ಈ ಮಹಾಕಾವ್ಯದ ಪ್ರಚಾರ ಆಯಿತು. ಕಾವ್ಯಕರ್ತೃ ವರಕವಿ ಶ್ರೀ ಕುವೆಂಪು ಅವರೇ ಶ್ರೀಮತಿಯವರ ವಾಚನಕ್ರಮವನ್ನು ಮೆಚ್ಚಿ ಪ್ರೋತ್ಸಾಹಿಸಿದರು ಎಂದಾಗ ಅವರ ಕಲಾಪ್ರೌಢಿಮೆಯ ಬಗ್ಗೆ ಇನ್ನೇನು ಹೆಚ್ಚಿಗೆ ಹೇಳುವುದು ? ಹೀಗೆ ಗಮಕ ಕಲೆಯನ್ನು ತಮ್ಮದೇ ಆದ ರೀತಿಯಲ್ಲಿ ಬೆಳಸಿ ಕೊಂಡು ಬಂದವರು ಶ್ರೀಮತಿ ಶಕುಂತಲಾಬಾಯಿ ಅವರು.

ಕಾವ್ಯವಾಚನ ಸುಲಭ ಎಂದು ತೋರುವ ಕಷ್ಟವಾದ ಕಲೆ. ಈ ಕಲಾಭ್ಯಾಸಿಗೆ ಸಾಹಿತ್ಯ–ಸಂಗೀತಗಳ ಸರಿಯಾದ ತಿಳಿವಳಿಕೆ ಇರಬೇಕು. ಗುರುಮುಖದಿಂದ ಅಭ್ಯಾಸ ಮಾಡಿ, ಸರಾಗಭಾವ ವಾಚನದಿಂದ ಸಾಹಿತ್ಯ ರಸಾಸ್ವಾದನೆಯನ್ನು ತಾನು ಅನು ಭವಿಸಿ, ಸಹೃದಯರಿಗೆ ಉಣಬಡಿಸುವುದೇ ಈ ಕಲಾಭ್ಯಾಸಿಯು ಮಾಡಬೇಕಾದ ಕೆಲಸ. ಇದಕ್ಕೆ ತುಂಬಾ ಪರಿಶ್ರಮಬೇಕು.

ಕಲಾಭ್ಯಾಸಿಗಳು ಅನೇಕ ದೃಷ್ಟಿಗಳನ್ನು ಇಟ್ಟುಕೊಂಡು ಅಭ್ಯಾಸಮಾಡುತ್ತಾರೆ. ಅದರ ಸಿದ್ಧಿಗಾಗಿ, ಜೀವನೋಪಾಯಕ್ಕಾಗಿ, ಕೀರ್ತಿಗಾಗಿ, ಬೇರೆಯವರನ್ನು ಮೆಚ್ಚಿ ಸುವುದಕ್ಕಾಗಿ, ಹೀಗೆ ಅನೇಕ ಉದ್ದೇಶಗಳಿಂದ ಅಭ್ಯಾಸಮಾಡುತ್ತಾರೆ. ಆದರೆ ಶ್ರೀಮತಿ ಯವರದೇ ಒಂದು ಮಾರ್ಗ, ಉದ್ದೇಶ. ಪ್ರಸಿದ್ಧ ಗಮಕಿಗಳಾದ ಭಾರತ ಬಿಂದೂರಾಯರ ಗುರುಸಾನ್ನಿಧ್ಯದಲ್ಲಿ ಅಭ್ಯಾಸ ಸಾಧನೆಗಳನ್ನು ಮಾಡಿ, ಗಮಕ ಕಲೆಯ ಆರಾಧನೆ ಗಾಗಿಯೇ ಜೀವ ಸವೆಸಿದ ಮಹನೀಯರು. ಶ್ರೀಮತಿಯವರು ಯಾವ ಪ್ರತಿಫಲಾ ಪೇಕ್ಷೆಯೂ ಇಲ್ಲದ ಕೇವಲ ಕಲೆಯ ಆರಾಧಕರು. ತಮ್ಮ ಮನಸ್ಸಿಗೆ ತೃಪ್ತಿ ಯಾಗಿ, ಸಹೃದಯರು ಸಂತೋಷಪಟ್ಟರೆ ಸಾಕು ಎಂಬ ಸದಭಿಪ್ರಾಯದಿಂದ ಈ ಕಲೆಯನ್ನು ಬೆಳೆಸಿ, ಉಳಿಸಿಕೊಂಡು ಬಂದವರು ಅವರು.

ಶ್ರೀಮತಿ ಶಕುಂತಲಾಬಾಯಿ ಹಾಗೂ ಅವರ ಯಜಮಾನರು ಶ್ರೀ ಪಾಂಡುರಂಗ

ರಾವ್ ಅವರನ್ನು ನಾನು ಹಲವಾರು ವರ್ಷಗಳಿಂದ ಬಲ್ಲೆ. ನಾನು ಗಮಕ ಪರೀಕ್ಷೆಗೆ ಕುಳಿತಾಗ ವಾಚನ ವಿಭಾಗಕ್ಕೆ ಪರೀಕ್ಷಕರಾಗಿ ಅವರಿಬ್ಬರೂ ಬಂದಿದ್ದರು. ಅಂದಿನಿಂದ ಅವರ ಮೇಲೆ ನನಗೆ ಅತ್ಯಂತ ಪೂಜ್ಯ ಭಾವನೆ ಇದೆ. ಅವರ ವಾಚನಗಳನ್ನು ಅನೇಕ ಬಾರಿ ಕೇಳಿದ್ದೇನೆ. 'ಶ್ರೀರಾಮಾಯಣದರ್ಶನಂ' ವಾಚನದಿಂದ ಮಾರ್ಗದರ್ಶನ ಪಡೆದಿದ್ದೇನೆ. ನಿಧಾನವಾಗಿ ಸಾಹಿತ್ಯಾರ್ಥವು ಸ್ಫುಟವಾಗುವ ರೀತಿಯಲ್ಲಿ, ರಾಗಾಡಂಬರ ವಿಲ್ಲದೆ ವಾಚನ ಮಾಡುವುದು ಅವರ ಶೈಲಿ, ಅವೇ ಪದ್ಧತಿ.

ಶ್ರೀಮತಿ ಶಕುಂತಲಾಬಾಯಿಯವರು ಗಮಕ ಕಲಾರಾಧಕರಾಗಿ ಆ ಕಲೆಯನ್ನು ಮೈಗೂಡಿಸಿಕೊಂಡು ಬಂದವರು. ಅವರ ಕಲೆಯನ್ನು ಮೆಚ್ಚಿ ಸಹೃದಯ ಕನ್ನಡಿಗರು ಸಾಕಷ್ಟು ಪ್ರೋತ್ಸಾಹ ನೀಡಿದ್ದಾರೆ. ರಾಜ್ಯ ಸರ್ಕಾರವು ಅವರನ್ನು ಗೌರವಿಸಿದೆ. 1979 ರಲ್ಲು ಮೈಸೂರಿನಲ್ಲಿ ನಡೆದ ಅಖಿಲ ಕರ್ನಾಟಕ ಗಮಕ ಸಮ್ಮೇಳನದ ಅಧ್ಯಕ್ಷತೆಯನ್ನು ನೀಡಿ, ಕನ್ನಡ ಸಾಹಿತ್ಯ ಪರಿಷತ್ತು ಅವರನ್ನು ಗೌರವಿಸಿದೆ. ಗಮಕ ಕಲಾ ಸರಸ್ವತಿಯ ಮೂರ್ತಿಸ್ವರೂಪದಂತಿರುವ ಅವರನ್ನು ಮೈಸೂರು ನಗರದ ಮುಖ್ಯ ಬೀದಿಗಳಲ್ಲಿ ಮೆರ ವಣಿಗೆ ಮಾಡಿದ್ದು ಒಂದು ಅಪೂರ್ವ, ಅನುಪಮ ಸಂದರ್ಭ. ಆ ಮೆರವಣಿಗೆಯಲ್ಲಿ, ಸಹೃದಯಿಗಳೊಡನೆ ಹೆಮ್ಮೆ ಸಂತೋಷಗಳಿಂದ ನಾನೂ ಭಾಗವಹಿಸಿದ್ದೆನು.

ಶ್ರೀ ಪಾಂಡುರಂಗರಾವ್ ದಂಪತಿಗಳದು ತುಂಬು ಸಂಸಾರ. ಶ್ರೀಯುತರು ಸಾಹಿತಿ ಗಳು, ಶಿಕ್ಷಕರು, ಲೇಖಕರು. ಶ್ರೀಮತಿಯವರು ಸಂಗೀತ–ಸಾಹಿತ್ಯಗಳೆರಡನ್ನು ಬಲ್ಲವರು. ಹೀಗೆ ಅವರದ್ದು ಸಮನ್ವಯ ಕುಟುಂಬ. ಸುಸಂಸ್ಕೃತ ಮನೆತನದಲ್ಲಿ ಜನಿಸಿ, ಕಾವ್ಯ ವಾಚನ ಕಲೆಯನ್ನು ಅಭ್ಯಾಸಮಾಡಿ, ರಾಮಾಯಣ–ಮಹಾಭಾರತಾದಿ ಗ್ರಂಥಗಳನ್ನು ವಾಚನ ಮಾಡುತ್ತಿರುವ ಶ್ರೀಮತಿಯವರು 'ಭಾರತೀಯ ಆದರ್ಶ ನಾರೀಮಣಿ'ಯರ ಪಂಕ್ತಿಯಲ್ಲಿ ಸೇರುತ್ತಾರೆ. ಕಲಾರಾಧನೆಯ ಸಾತ್ವಿಕ ವರ್ಚಸ್ಸನ್ನು, ತೇಜಸ್ಸನ್ನು ನಾವು ಅವರಲ್ಲಿ ಕಾಣಬಹುದು.

ಶ್ರೀಮತಿ ಶಕುಂತಲಾಬಾಯಿ ಅವರಿಗೆ ಅರವತ್ತು ವರ್ಷಗಳು ತುಂಬಿತು ಎಂದರೆ ನಂಬುವುದು ಕಷ್ಟ. ಅವರ ಸುಶ್ರಾವ್ಯವಾಚನ ಈಗಲೂ ಸರ್ವರನ್ನು ಸಂತೋಷಗೊಳಿಸು ತ್ತದೆ.

ಕವಿ ವಿಬುಧರ ಕಿವಿಯೊಳ್ ಸೂ
ಸುವ ನವರಸಮಿಳಿದು ತನುವಂ ಮನವಂ ||
ಕವಿದು ಪೊರಸೂಸಿಕೆನೆ ಪೊ
ಣ್ಮುವ ಸುಖಬಾಷ್ಪಂ ತುಳುಂಕೆ ಪೇಳ್ವುದು ಕೃತಿಯ ||

ಹೀಗೆ ಮಹಾಕವಿ ಷಡಕ್ಷರಿಯು ಹೇಳುವಂತೆ ಶ್ರೀಮತಿಯವರ ವಾಚನ ಹೃದಯಂಗಮವಾದದ್ದು. ತಮ್ಮ ಮಧುರವಾದ ಕಂಠಶ್ರೀಯಿಂದ ಕಾವ್ಯದೃಶ್ಯವನ್ನು ಪ್ರಕಟಿಸುತ್ತಾರೆ.

ಗಮಕ ಕಲೆಗೆ ವಿಶೇಷವಾದ ಗೌರವವನ್ನು ತಂದುಕೊಟ್ಟ, ಕಲಾಸರಸ್ವತಿಯ

ಮೂರ್ತಿಸ್ವರೂಪದಂತಿರುವ ಶ್ರೀಮತಿ ಶಕುಂತಲಾಬಾಯಿ ಅವರನ್ನು ನಮ್ಮ ರಾಜ್ಯದ ಜನತೆ ಇನ್ನೂ ಹೆಚ್ಚಿನ ರೀತಿಯಲ್ಲಿ ಗೌರವಿಸಬೇಕು. ಅವರ ಕಲಾರಾಧನೆಯನ್ನು ಮೆಚ್ಚಿ ಕೊಳ್ಳಬೇಕು. ಆಗಲೇ ಕೇಂದ್ರ ಸರ್ಕಾರವೂ ಅವರ ಕಲಾಪರಿಣತೆಯನ್ನು ಅರಿತು ಸನ್ಮಾನಿಸುವುದರಲ್ಲಿ ಸಂದೇಹವಿಲ್ಲ, ಇತರೇ ಲಲಿತಕಲೆಗಳಂತೆ ಗಮಕಕಲೆಗೂ ರಾಷ್ಟ್ರ ಮಟ್ಟದ ಗೌರವ ದೊರಕುವಂತಾಗುತ್ತದೆ.

ಶ್ರೀಮತಿ ಶಕುಂತಲಾಬಾಯಿ ಅವರು ತಮ್ಮ ಸುಶ್ರಾವ್ಯವಾಚನದಿಂದ ಇನ್ನೂ ಬಹುಕಾಲ ನಮ್ಮ ರಾಜ್ಯದಲ್ಲಿ, ರಾಷ್ಟ್ರದಲ್ಲಿ ಸಹೃದಯರನ್ನು ಸಂತೋಷಗೊಳಿಸಬೇಕು. ಕಿರಿಯರಿಗೆ ವಾಚನ ಪದ್ಧತಿಯಲ್ಲಿ ಮಾರ್ಗದರ್ಶನ ನೀಡಬೇಕು. ಇಂತಹ ಸಾತ್ವಿಕ ಕಲಾವಂತರು ನಮ್ಮ ರಾಷ್ಟ್ರದ ಅಮೂಲ್ಯ ಆಸ್ತಿ. ಅವರಿಂದಲೇ ಮುಂದಿನವರಿಗೆ ಸ್ಫೂರ್ತಿ. ಅವರ ಆದರ್ಶವೇ ದಾರಿದೀಪ.

ಭಗವಂತನು ಶ್ರೀ ಪಾಂಡುರಂಗರಾಯರಿಗೆ, ಶ್ರೀಮತಿ ಶಕುಂತಲಾಬಾಯಿ ಅವರಿಗೆ ಸರ್ವಮಂಗಳವನ್ನು ಅನುಗ್ರಹಿಸಲಿ ಎಂದು ಸಹೃದಯಿಗಳ ಪರವಾಗಿ ನನ್ನ ವಿನಮ್ರ ಪ್ರಾರ್ಥನೆ.

"ಕಲಕಂಠೀ ಲಲಿತ ಸ್ವರೇ"

ವಿಜಯಲಕ್ಷ್ಮೀ ರಾಘವೇಂದ್ರರಾವ್

ಕಲ್ಯಾಣಮಂಟಪ ಮಂಗಳವಾದ್ಯದ ಸುಮಧುರ ನಾದದಿಂದ ತುಂಬಿತ್ತು. ಸುಮಂಗಲಿಯರು ಉಟ್ಟ ಹೊಸ ರೇಶಿಮೆ ಸೀರೆ, ಇಟ್ಟ ಕುಂಕುಮ, ಮುಡಿದ ಮಲ್ಲಿಗೆಯ ಕಂಪಿನಿಂದ ಮದುವೆಯ ಮನೆ ಶೋಭಿಸುತ್ತಿತ್ತು. ಪುರೋಹಿತರ ಮಂತ್ರ, ಅಲ್ಲಿ ನೆರೆದಿದ್ದ ಜನರ ಗಜಿ-ಬಿಜಿ ಗಲಾಟೆ, ನಾಗಸ್ವರದ 'ಬಿಲಹರಿ'ಯ ಕನಕೊಂಟನಿ–ಎಲ್ಲವೂ ಸೇರಿ, ವಾತಾವರಣ ಏನೋ ಆಪ್ಯಾಯಮಾನ ; ಮನಸ್ಸಿಗೆ ಏನೋ ಹರ್ಷ.

ಹಿರಿಯರೊಬ್ಬರು ನಾಗಸ್ವರದವನ ಕಡೆ ಕೈಬೀಸಿ ನಿಲ್ಲಿಸುವಂತೆ ಕೂಗಿದರು. ಒಂದೇ ಕ್ಷಣದಲ್ಲಿ ಸದ್ದುಗದ್ದಲವನ್ನೆಲ್ಲಾ ಅಡಗಿಸಿ ಸುಶ್ರಾವ್ಯವಾದ ವಾಣಿಯೊಂದು ತೇಲಿಬಂದು ಅಲ್ಲಿ ಸೇರಿದ್ದ ಎಲ್ಲರನ್ನೂ ಮಂತ್ರಮುಗ್ಧರನ್ನಾಗಿ ಮಾಡಿತು.

"ಅಬ್ಬ ! ಎಂತಹ ಶ್ರೀಮಂತವಾದ ಕಂಠ ! ! ಎಲ್ಲಿಯೋ ಕೇಳಿದಂತಿದೆಯಲ್ಲಾ ಯಾರಿರಬಹುದು" ? ನನ್ನಲ್ಲೇ ನಾನು ಪ್ರಶ್ನಿಸಿಕೊಂಡೆ.

"ಶಕುಂತಲಾಬಾಯಿ ಪಾಂಡುರಂಗರಾಯರ ರೆಕಾರ್ಡು ಕಣ್ರೀ"

—ನನ್ನ ಪಕ್ಕದಲ್ಲಿ ಕುಳಿತಿದ್ದ ಮಹಿಳೆಯರಿಬ್ಬರು ಮಾತನಾಡಿಕೊಳ್ಳುತ್ತಿದ್ದರು.

"ಗೊತ್ತು. ನಾನೂ ಕೇಳಿದೀನಿ ಈ ರೆಕಾರ್ಡು. ಅವರ ಕಾವ್ಯವಾಚನ ಕೇಳ ದವರೂ ಇದಾರ್‍ಯೆ ? ಕಾವ್ಯವಾಚನ ಅಂದರೆ ಮೊದಲು ಜ್ಞಾಪಕ ಬರೋದು ಶಕುಂತಲಾ ಬಾಯಿ ಪಾಂಡುರಂಗರಾಯರು ಅಲ್ವೇ ? ಅವರೂ ಬಂದಿದಾರೇನು ಮದುವೆಗೆ" ?

ನಾನು ನನ್ನ ಕುತೂಹಲವನ್ನು ಅದುಮಿಡಲಾರದೆ ಅವರ ಸಂಭಾಷಣೆಯನ್ನು ಆಲಿಸತೊಡಗಿದೆ.

"ಹೂ ಕಣ್ರಿ. ಇಷ್ಟೊತ್ತು ಹಸೆಮಣೆ ಪಕ್ಕದಲ್ಲೇ ಇದ್ರಲ್ಲ. ಈಗೆಲ್ಲೋ ಒಳ ಗ್ಹೋಗಿದಾರೆ ಅಂತ ಕಾಣುತ್ತೆ."

'ಶಕುಂತಲಾಬಾಯಿಯವರು ಎಲ್ಲಿರಬಹುದು' ಎಂದು ಅಲ್ಲಿದ್ದ ಹೆಂಗಸರನ್ನೆಲ್ಲಾ ನೋಡಿದೆ. ಬಾನುಲಿಯಲ್ಲಿ ತೇಲಿ ಬರುವ ಅವರ ವಾಣಿಯಿಂದ ನಾನು ಪ್ರಭಾವಿತಳಾ ಗಿದ್ದೆ. ಈಗ ಅವರು ಸಾಕಾರವಾಗಿ ನಮ್ಮ ಮಧ್ಯೆಯೇ ಇದ್ದಾರೆಂದು ಕೇಳಿ ಅವರನ್ನು ಕಾಣುವ ಆತುರ ಇಮ್ಮಡಿಯಾಯಿತು.

"ಮದುವೆ ಹುಡುಗಿಗೆ ನೆಂಟರೇ ಅವರು" ?–ಆಕೆ ಕೇಳುತ್ತಿದ್ದರು. "ಹೌದರೀ, ಉಮಾನ ಚಿಕ್ಕಮ್ಮ ಕಣ್ರಿ ಅವರು."

ನನ್ನ ಆನಂದಕ್ಕೆ ಪಾರವೇ ಇಲ್ಲವಾಯಿತು. ಹಲವು ವರ್ಷಗಳಿಂದ ಆಗಾಗ್ಗೆ ರೇಡಿಯೋದಲ್ಲಿ ಅವರ ಕವಿತಾವಾಚನವನ್ನು ಕೇಳಿ ತೃಪ್ತಿಪಡುತ್ತಿದ್ದ ನನಗೆ ಅವರನ್ನು ಕಾಣುವ ಸುಯೋಗ ಬಂದದ್ದಲ್ಲದೆ, ಅವರು ನನ್ನ ಹತ್ತಿರದ ನೆಂಟರೂ ಆಗಲಿದ್ದಾರೆಂದು ತಿಳಿದು, ಈ ಅನಿರೀಕ್ಷಿತ ಸೌಭಾಗ್ಯದಿಂದ ಪುಲಕಿತಳಾದೆ.

"ನೋಡಿ, ಈಗ ಮದುವೆ ಹುಡುಗಿ ಹಿಂದೆ ನಿಂತಿದಾರೆ ನೋಡಿ, ಅವರೇ ಶಕುಂತಲಾಬಾಯಿ"–ನನ್ನ ಪಕ್ಕದಲ್ಲಿದ್ದ ಮಹಿಳೆ ಹೇಳುತ್ತಿದ್ದರು.

ಅರಿಶಿನ-ಕುಂಕುಮ, ಹೂವು, ಪನ್ನೀರು ತುಂಬಿದ್ದ ಬೆಳ್ಳಿಯ ತಟ್ಟೆಯನ್ನು ಹಿಡಿದು ನಿಂತಿದ್ದ ವ್ಯಕ್ತಿಯನ್ನು ನೋಡಿದೆ. ಒಳ್ಳೆಯ ಬಣ್ಣ, ಎತ್ತರದ ನಿಲುವು, ಹಸನ್ಮುಖ, ಹಣೆಯಲ್ಲಿ ರಾರಾಜಿಸುವ ಮುತ್ತೈದೆ ಕುಂಕುಮ, ಜೀವನದ ನೆಳಲು-ಬೆಳಕುಗಳ ಛಾಯೆಯನ್ನು ಮುಡಿಯಲ್ಲಿ ಪಡೆದ ಮಲ್ಲಿಗೆ, ಕೈತುಂಬ ಬಳೆ, ಮಾಧ್ವ ಸಂಪ್ರದಾಯದ ಒಂಭತ್ತು ಗಜದ ಸೀರೆಯುಟ್ಟು ಸರಸ್ವತಿಯ ತೇಜಸ್ಸಿನಲ್ಲಿ ಶೋಭಿಸುತ್ತಿದ್ದ ಶಕುಂತಲಾಬಾಯಿಯವರನ್ನು ನೋಡಿದೆ.

"ಅವರ ಪಕ್ಕದಲ್ಲಿ ನಿಂತಿರೋರೇ ಅವರ ಯಜಮಾನ್ರು."

ಆ ಸರಸ್ವತೀ ಸಾನ್ನಿಧ್ಯದಲ್ಲಿ ಅವ್ಯಕ್ತ ಭಕ್ತಿ–ಗೌರವಗಳ ಮಿಲನದಿಂದ ನನ್ನ ಹೃದಯ ತುಂಬಿಬಂದಿತು.

ನನ್ನ ಅಕ್ಕನ ಮಗ ವಾಸು, ವಧು ಉಮಾಗೆ ಮಂಗಲಸೂತ್ರವನ್ನು ಕಟ್ಟುತ್ತಿದ್ದ. ಮಂತ್ರ, ನಾಗಸ್ವರ, ಡೋಲಿನ ಶಬ್ದ ಮತ್ತೆ ಜೋರಾಯಿತು.

ಧಾರವಾಡದಿಂದ ಬಂದಿದ್ದ ನನ್ನ ಮತ್ತು ಬೆಂಗಳೂರಿನಿಂದ ಚಿಂತಾಮಣಿಗೆ ಬಂದಿದ್ದ ಶಕುಂತಲಾಬಾಯಿ ಪಾಂಡುರಂಗರಾಯರ ಮೊದಲ ಭೇಟಿಯಾದದ್ದು ಹೀಗೆ.

ಸಿದ್ಧಹಸ್ತೆ–ಅನ್ನಪೂರ್ಣೆ–ಕಲಾಪ್ರವೀಣೆ

ದೈವವಶಾತ್ ನಮಗೆ ಬೆಂಗಳೂರಿಗೇ ವರ್ಗವಾಗಿ ಕುಮಾರಾಪಾರ್ಕ್‌ನಲ್ಲಿ ಶಕುಂತಲಾಬಾಯಿಯವರ ಮನೆಯ ಸಮೀಪದಲ್ಲಿಯೇ ಮನೆಸಿಕ್ಕಿದ್ದು ಅವರ–ನಮ್ಮ ಬಾಂಧವ್ಯದ ಬೆಸುಗೆ ಹೊಸೆದುಕೊಳ್ಳಲು ಕಾರಣವಾಯಿತು. ನಮ್ಮಿಬ್ಬರ ಮನೆಯಲ್ಲಿ ಯಾವ ಸಂಭ್ರಮ ಸಮಾರಂಭವಿರಲಿ ಪರಸ್ಪರರ ಉಪಸ್ಥಿತಿ ಅನಿವಾರ್ಯ.

ಶಕುಂತಲಾಬಾಯಿಯವರು ಹೇಗೆ ಕಾವ್ಯವಾಚನ ಪ್ರವೀಣೆಯೋ ಹಾಗೆಯೇ ಅನ್ನಪೂರ್ಣೆ ಕೂಡ. ಅವರ ಸುಶ್ರಾವ್ಯ ಕಂಠದಿಂದ ವಾಚನವನ್ನು ಕೇಳಿ, ಅವರ ಸಿದ್ಧಹಸ್ತದಿಂದ ತಯಾರಾದ ತಿಂಡಿ–ಊಟಗಳನ್ನು ಸವಿದ ನಾವೇ ಧನ್ಯರು. ನಾವು ಅವರ ಮನೆಗೆ ಹೋದಾಗಲೆಲ್ಲಾ ಕಾಫಿ–ಉಪಾಹಾರದ ವ್ಯವಸ್ಥೆ ; ದಂಪತಿಗಳ ಆದರದ, ಸವಿ ಮಾತಿನ ಆತಿಥ್ಯ ನಮಗೆ ಸದಾಸಿದ್ಧ.

ಒಮ್ಮೆ ನಮ್ಮ ಪುಟ್ಟ ಹುಡುಗನಿಗೆ ಶ್ರಾವಣ ಮಾಸದಲ್ಲಿ ಕೃಷ್ಣನ ವೇಷವನ್ನು ಹಾಕಿ ಫೋಟೋ ತೆಗೆಸುವ ಮನಸ್ಸಾಯಿತು. ಅದಕ್ಕೆ ಬೇಕಾಗುವ ಸಾಮಾನುಗಳು ಬೆಂಗಳೂರಿನಲ್ಲಿ ಎಲ್ಲಿ ಸಿಕ್ಕುವುದೋ ನನಗೆ ತಿಳಿಯದು. ಶಕುಂತಲಾಬಾಯಿಯವರ ಹತ್ತಿರ ಹೇಳಿಕೊಂಡೆ.

"ನಮ್ಮ ಪ್ರೇರಣ್‌ಗೆ ಕೃಷ್ಣನ ವೇಷ ಹಾಕಿ ಶ್ರಾವಣ ಸೋಮವಾರ ಐದುಮನೆಗೆ ಗೋಪಾಳಕ್ಕೆ ಕರೆದುಕೊಂಡು ಹೋಗಬೇಕು ಅಂತ ಆಸೆ ಇದೆ. ಹಾಗೆ ಫೋಟೋ ಕೂಡ

ತೆಗೆಸೋಣ ಅಂತಿದೀನಿ. ಅದಕ್ಕೆ ಬೇಕಾದ ನಾಟಕದ ಆಭರಣಗಳೆಲ್ಲಾ ಎಲ್ಲಿ ಸಿಗುತ್ತೆ ಹೇಳ್ತೀರಾ" ?

"ಅದಕ್ಕೇಕೆ ಚಿಂತೆ ಮಾಡ್ತೀರಿ. ನಮ್ಮ 'ಮಕ್ಕಳ ಮಂಟಪ'ದಲ್ಲೇ ಇದೆ. ನೀವು ತೊಗೊಂಡು ಹೋಗ್ಬಹುದು." !

ಕೂಡಲೇ ಎದ್ದುಹೋಗಿ ನನಗೆ ಬೇಕಾದ ಸಾಮಾನುಗಳನ್ನೆಲ್ಲಾ ಹೊಂದಿಸಿ ಕೊಂಡು ಬಂದರು. ಅದರ ಫಲವಾಗಿ ನಮ್ಮ ಮುದ್ದು ಪ್ರೇರಣ್‌ಕುಮಾರನ ಕೃಷ್ಣನ ವೇಷದ ಫೋಟೋ ಈಗ ಅವನ ಮನೆಯಲ್ಲಿಯೂ ಇದೆ.

ಹಿರಿಯ ಕಲಾವಿದ ತನ್ನಲ್ಲಿರುವ ಕಲೆಯನ್ನು ಉಳಿಸಿ-ಬೆಳಸಿಕೊಳ್ಳಲು ಅಹರ್ನಿಶಿ ಪ್ರಯತ್ನಪಟ್ಟು, ಕಲೆಯ ರಸಾಸ್ವಾದನೆ ಮಾಡಿ, ಆನಂದಪಡುವುದೇ ಅಲ್ಲದೆ, ಅರಳುವ ಪ್ರತಿಭೆಯ ಕಿರಿಯ ಕಲಾವಿದನ ಕಲೆಯ ಗುಣವನ್ನು ಗ್ರಹಿಸಿ ಬೆನ್ನುತಟ್ಟಿ ಪ್ರೋತ್ಸಾಹಿ ಸುವ ಘನತೆಯನ್ನು ಪಡೆದಾಗ ಕಲಾವಿದನ ಕಲೆಗೆ ಪೂರ್ಣತ್ವ ಬರುತ್ತದೆ.

"ನನ್ನದೊಂದು ಕಾವ್ಯವಾಚನ ಕಾರ್ಯಕ್ರಮವಿದೆ. ಸ್ವಲ್ಪ ನನ್ನ ವಾಚನವನ್ನು ಕೇಳಿ ಎಲ್ಲಿಯಾದರೂ ತಿದ್ದುವುದಿದ್ದರೆ ಸರಿಪಡಿಸಿ ಹೇಳಿಕೊಡಬೇಕು ನೀವು."

"ಓ, ಅದಕ್ಕೇನಂತೆ. ನೀವು ಯಾವಾಗ ಬೇಕಾದರೂ ಬನ್ನಿ, ನೀವು ಚೆನ್ನಾಗಿ ಹಾಡ್ತೀರಿ. ತಿದ್ದುವುದಕ್ಕೆ ಏನೂ ಇರಲಾರದು."

ತಮ್ಮ ವಿದ್ವತ್ತಿನ ಹಿರಿಮೆಯನ್ನು ಬದಿಗಿಟ್ಟು ಕಿರಿಯ ಕಲಾವಿದರನ್ನು ಹುರಿ ದುಂಬಿಸಿ ಮುಂದೆ ತರುವ ಗುಣ ಈ ಕಲಾವಿದೆಯದು. ನನ್ನಿಂದ ಹಾಡಿಸಿ, ಕೇಳಿ ತಿದ್ದಿ ಕೊಟ್ಟು ಸಂತೋಷಪಡುವ ಇವರ ಹೃದಯದ ಹರವು ಸೀಮಾತೀತ.

ಈಗ ಎರಡು ವರ್ಷಗಳ ಹಿಂದೆ ಹುಬ್ಬಳ್ಳಿಯಲ್ಲಿ ಗಮಕ ಸಮ್ಮೇಳನದಲ್ಲಿ ಭಾಗ ವಹಿಸಿದ್ದೆವು. ಅದೇ ಆಗ ಪ್ರಯಾಣ ಮುಗಿಸಿ ಬಂದ ಆಯಾಸದಲ್ಲಿದ್ದ ಶಕುಂತಲಾ ಬಾಯಿಯವರು ಸ್ವಲ್ಪವೂ ಹಿಂದೆ ಮುಂದೆ ನೋಡದೆ ಕಾರ್ಯಕ್ರಮವನ್ನು ನಡೆಸಿ ಕೊಟ್ಟರು. ನನ್ನ ವಾಚನವನ್ನು ಕೇಳಿ, "ವಿಜಯಲಕ್ಷ್ಮೀ, ನೀವು ರಸಘಟ್ಟಗಳಲ್ಲಿ ಭಾವ ಪೂರಿತರಾಗಿ ಹಾಡುವಾಗ ಕೆಲವು ಕಡೆ ರಾಗದ touches ಕೊಡ್ತೀರಿ ನೋಡಿ, ಅದನ್ನ ನಾನು ಜನ್ಮದಲ್ಲಿ ಮರೆಯೋದಿಲ್ಲ"–ಎಂದಾಗ, ಈ ಹಿರಿಯ ಘನ ಕಲಾವಿದೆಯ ಬಿಚ್ಚು ಮನಸ್ಸಿನ ಮೆಚ್ಚುಗೆಯ ನುಡಿ ಕೇಳಿ, ಅವರ ಆತ್ಮೀಯ ವಿಶ್ವಾಸದಲ್ಲಿ ಮಿಂದ ನನ್ನ ಸ್ಥಿತಿ ಹೇಗಾಗಿರಬೇಡ !

ಶಕುಂತಲಾಬಾಯಿಯವರು ತಾವೂ ಸ್ವತಃ ವಾಚನ ಮಾಡುವಾಗಲಂತೂ ಸರಿಯೇ. ಇನ್ನೊಬ್ಬರ ಕಾರ್ಯಕ್ರಮವನ್ನೂ ಅಷ್ಟೆ ಶ್ರದ್ಧೆಯಿಂದ ಕೇಳಿ ರಸಾನುಭವ ವನ್ನು ಅನುಭವಿಸುತ್ತಾ ಕಣ್ಣೊರೆಸಿಕೊಳ್ಳುವ ದೃಶ್ಯವನ್ನು ನಾನು ಕಂಡಿದ್ದೇನೆ.

ಕಲೆ ಎಲ್ಲಿದ್ದರೇನು ? ಯಾವ ರೂಪದಲ್ಲಿದ್ದರೇನು ? ಕಲಾವಿದನ, ರಸಿಕನ ಹೃದಯವನ್ನು ಮುಟ್ಟಿ ನೇವರಿಸುವ ಕಲಾರೂಪಿ ಭಗವಂತನ ಮಹಿಮೆ ಅಪಾರ.

ಕುಮಾರವ್ಯಾಸನ ಮಹಾಕಾವ್ಯ ರಸಿಕರ ರಸದೌತಣ ; ಭಕ್ತರ ಶರಣಾಗಾರ ; ಗಮಕ ಮಕರಂದಗಳ ಮಧುಪಾನದ ತಾಣ. ಹಲವು ಛಂದಸ್ಸುಗಳಲ್ಲಿ ಚೆನ್ನಾದ ಕಾವ್ಯ

ಗಳನ್ನು ರಚಿಸಿದ ಪಂಪ, ರನ್ನ, ಹರಿಹರ, ಕುವೆಂಪು ಮೊದಲಾದ ಅನೇಕ ಕವಿಗಳು ಕರ್ಣಾಟಕದ ಕಾವ್ಯ ಶ್ರೀಮಂತಿಕೆಯನ್ನು ಬೆಳಗಿದ್ದಾರೆ. ಗಮಕಿಗಳಿಗೆ ಆಶ್ರಯದಾತರಾಗಿದ್ದಾರೆ. ಈ ಎಲ್ಲ ಛಂದಸ್ಸಿನ, ಕವಿಗಳ ಕಾವ್ಯಗಳನ್ನೂ ಹಾಡಿ, ತಣಿದು, ತಣಿಸಿದ ಕೀರ್ತಿ ಗಮಕ ಕಲಾ ಪ್ರವೀಣೆ ಸೌಭಾಗ್ಯವತಿ ಶಕುಂತಲಾಬಾಯಿಯವರದು. ದೇವರಂತಹ ಪತಿಯ ಸಾನಿಧ್ಯದಲ್ಲಿ ಅರವತ್ತರ ಅರಸೊತ್ತಿಗೆಯ ಹೊಸ್ತಿಲಲ್ಲಿ ಕಾಲಿಡುತ್ತಿರುವ ಈ ಅನುಭವಿ, ಅನುಭಾವಿ ಕಲಾವಿದೆಯ ಜನ್ಮ ಸಾರ್ಥಕವಾಗಿದೆ. ಇವರ ಜೀವನ ಶೈಲಿ ಇತರರಿಗೆ ದಾರಿದೀಪವಾಗಿದೆ. ವಶಿಷ್ಠ-ಅರುಘಂತಿಯರ ಜೋಡಿಯಂತಿರುವ ಶಕುಂತಲಾಬಾಯಿ ಪಾಂಡುರಂಗರಾಯರ ದಾಂಪತ್ಯ ಕುಸುಮ ಕಲಾಶಾರದೆಯ ಅಡಿದಾವರೆಗಳಲ್ಲಿ ನೂರುಕಾಲ ನಳನಳಿಸಲಿ!

ಸೌಜನ್ಯ ಶೀಲೆ

ಇಂದಿರಾ ವೆಂಕಟೇಶ್

ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾವ್‌ರವರ ಕಾವ್ಯವಾಚನವನ್ನು ಬಹಳ ಚಿಕ್ಕವಯಸ್ಸಿನಲ್ಲೇ ಅಂದರೆ ನಾನು 8-10 ವರ್ಷಗಳ ಹುಡುಗಿಯಾಗಿದ್ದಾಗಲೇ ಒಮ್ಮೆ ಕೇಳಿ ಸಂತೋಷಗೊಂಡಿದ್ದೆ. ಆ ಸಮಯದಲ್ಲಿ ನನಗೆ ಸಂಗೀತದ ಬಗ್ಗೆಯಾಗಲಿ ಗಮಕದ ಬಗ್ಗೆಯಾಗಲಿ ಏನೂ ಗೊತ್ತಿರಲಿಲ್ಲ. ಆದರೆ ಆ ಎಳೇ ವಯಸ್ಸಿನಲ್ಲೇ ಇವರ ವಾಚನವನ್ನು ಕೇಳಿ ಪ್ರಭಾವಿತಳಾಗಿದ್ದೆ. ಅನಂತರ ಅನೇಕ ವರ್ಷಗಳು ಓದು, ಮದುವೆ, ಸಂಸಾರಗಳಲ್ಲಿ ಅದರ ಕಡೆ ಗಮನ ಹರಿಸಲು ಸಾಧ್ಯವಾಗಲಿಲ್ಲ. ಅನಂತರ ನನ್ನ ಇಪ್ಪತ್ತನೆ ವಯಸ್ಸಿನಲ್ಲಿ ಕಾವ್ಯವಾಚನವನ್ನು ಕಲಿತು ಅದರ ವೈಶಿಷ್ಟ್ಯವನ್ನು ಅರಿತೆ. ಶ್ರೀಗುರುಕೃಪಾ ಗಮಕಮಂಡಲಿಯೆಂಬ ಸಂಸ್ಥೆಯನ್ನು, ನನ್ನ ಗೆಳತಿಯರ ನೆರವಿನಿಂದ ಪ್ರಾರಂಭಿಸಿ, ಪ್ರತಿ ಶನಿವಾರ ಕುಮಾರವ್ಯಾಸ ಭಾರತವನ್ನು, ಅನೇಕ ಹಿರಿಯ, ಮತ್ತು ಕಿರಿಯ ಗಮಕಿಗಳಿಂದ ವಾಚನ ಮಾಡಿಸಿದೆ. ಆ ಸಮಯದಲ್ಲಿ ಶ್ರೀಮತಿ ಶಕುಂತಲಾ ಬಾಯಿಯವರಿಗೆ ಒಮ್ಮೆ ಬಂದು ನಮ್ಮ ಮಂಡಲಿಯಲ್ಲಿ ಕಾರ್ಯಕ್ರಮ ನಡೆಸಿಕೊಡ ಬೇಕೆಂದು ಪ್ರಾರ್ಥಿಸಿ ಕಾಗದ ಬರೆದೆ. ಅವರು ಕಿರಿಯಳಾದ ನನ್ನ ಪತ್ರಕ್ಕೆ ಉತ್ತರವನ್ನು ಬರೆಯುತ್ತಾರೋ ಇಲ್ಲವೋ ಎನ್ನುವ ಅನುಮಾನವಿತ್ತು, ಆದರೆ ನನ್ನ ಎಣಿಕೆ ತಪ್ಪಾಯಿತು. ನನ್ನ ಪತ್ರ ತಲುಪಿದ ಮೂರನೇ ದಿನವೇ ನಮ್ಮ ಮಂಡಲಿಗೆ ಬಂದು ಕಾರ್ಯಕ್ರಮ ನಡೆಸಿಕೊಡುವುದಾಗಿ ಅವರಿಂದ ಪತ್ರ ಬಂತು. ಇದು ಅವರ ಸೌಜನ್ಯ ಶೀಲತೆಯನ್ನು, ಕಿರಿಯರಲ್ಲಿಟ್ಟಿರುವ ವಿಶ್ವಾಸವನ್ನು, ಗಮಕ ಕಲೆಯಲ್ಲಿರುವ ಗೌರವವನ್ನು ಎತ್ತಿ ತೋರಿಸುವಂತಿದೆ. ದಂಪತಿಗಳು ಬಂದು ಕಾರ್ಯಕ್ರಮ ನಡೆಸಿ ಕೊಟ್ಟಾಗ ನಮ್ಮ ಮಂಡಲಿಯಲ್ಲಿ ಎಲ್ಲರಿಗಾದ ಸಂತೋಷ ಅಪಾರ. ಹೀಗೆ ನಮ್ಮ ಗಮಕದನಂಟು ಆರಂಭವಾಗಿ ಹನ್ನೆರಡು ವರ್ಷಗಳಾಯಿತು. ಅವರ ವಾಚನದ ವೈಶಿಷ್ಟ್ಯ, ಗಾಂಭೀರ್ಯ ಮತ್ತು ಎಡೆತಡೆಯಿಲ್ಲದೆ ಸರಾಗವಾಗಿ ಹಾದುಹೋಗುವ ಅವರ ಕಂಠಶ್ರೀಯನ್ನು ಕಂಡು ಸಂತೋಷಗೊಂಡಿದ್ದೇನೆ. ಕಾರ್ಯಕ್ರಮ ನಡೆಸಿಕೊಡ ಬೇಕಾಗಿ ಕೋರಿ ಕಾಗದ ಬರೆದಾಗ, ಒಮ್ಮೆಯಾದರೂ ಆಗುವುದಿಲ್ಲವೆಂದು ತಿಳಿಸಿದ್ದು ನೆನಪಿಲ್ಲ. ಕುಮಾರವ್ಯಾಸ ಭಾರತದ ಮಂಗಳ ಸಮಾರಂಭ, ಮಂಡಲಿಯ ಹತ್ತನೆ ವಾರ್ಷಿಕೋತ್ಸವ ಇನ್ನೂ ಅನೇಕ ಕಾರ್ಯಕ್ರಮಗಳಲ್ಲಿ ಬಂದು ವಾಚನ ಕಾರ್ಯಕ್ರಮವನ್ನು ನಡೆಸಿಕೊಟ್ಟು, ಹಿತವಚನ ಹೇಳಿ, ಮಂಡಲಿಯ ಪುರೋಭಿವೃದ್ಧಿಗೆ ಆಶೀರ್ವದಿಸಿದ್ದಾರೆ.

ಶ್ರೀ ಪಾಂಡುರಂಗರಾವ್ ದಂಪತಿಗಳಿಗೆ ಭಗವಂತನಕೃಪೆ ಸದಾ ಇದ್ದು ಜೀವನದ ಉತ್ತಮ ಫಲಗಳೆಲ್ಲಾ ಅವರಿಗೆ ಲಭಿಸಲಿ, ಅವರು ಚೈತನ್ಯಭರಿತ ಜೀವನನಡೆಸಿ, ನೂರನೆಯ ವರ್ಷದಹುಟ್ಟುಹಬ್ಬವನ್ನು ಆಚರಿಸುವಂತಾಗಲಿ ಎಂದು ಬೇಡುತ್ತೇನೆ.

ಸುಭದ್ರಮ್ಮ

ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾಯರ ಪರಿಚಯವಾದದ್ದು ಒಂದು ಅಪೂರ್ವ ಘಟನೆ ಮತ್ತು ಅನಿರೀಕ್ಷಿತ. ಕಲಾಭಿಮಾನಿಗಳೂ, ಸಾಹಿತ್ಯಾಭಿಮಾನಿಗಳೂ ಆದ ನಮ್ಮ ತಂದೆಯವರಾದ ಭೂಪಾಳಂ ಪುಟ್ಟಸಂಜಪ್ಪನವರ ಮಾರ್ಗದರ್ಶನದಲ್ಲಿ ಚಿಕ್ಕಂದಿನಿಂದಲೂ ನನ್ನಲ್ಲಿ ಕಲಾಸಕ್ತಿ ಬೆಳೆದುಬಂದಿತ್ತು. ಅದನ್ನು ಪೋಷಿಸಿ ನೀರೆರೆಯುತ್ತಾ ಬಂದ ನಮ್ಮ ತಂದೆಯವರು ನನಗೆ ಗಮಕ ಕಲೆಯನ್ನೂ ಕಲಿಸುವ ಅಭಿಲಾಷೆಯನ್ನು ಹೊಂದಿದವರಾಗಿದ್ದರು. ಒಂದು ವಿದ್ಯೆಯು ಸಿದ್ಧಿಯಾಗಬೇಕಾದರೆ ಅದಕ್ಕೆ ಸಮರ್ಥ ಗುರುಗಳ ಮಾರ್ಗದರ್ಶನ ಅಗತ್ಯ. 'ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ' ಎನ್ನುವಂತೆ ಶಿಷ್ಯನ ಶ್ರೇಯೋಭಿವೃದ್ಧಿಗೆ ಗುರುವೇ ಮೂಲಕಾರಣ. ಇಂತಹ ಗುರುವಿನ ಅನ್ವೇಷಣೆಯಲ್ಲಿದ್ದ ನಮ್ಮ ತಂದೆಯವರು ಒಂದು ದಿನ ಅಂದರೆ ಸುಮಾರು 30 ವರ್ಷಗಳ ಕೆಳಗೆ ದಿ|| ಕೆಂಗಲ್ ಹನುಮಂತಯ್ಯನವರು ಮಂತ್ರಿಗಳಾದಾಗ, ನಮ್ಮ ಮನೆಯ ಔತಣಕೂಟಕ್ಕೆ ಆಗಮಿಸಿದ ಸಂದರ್ಭದಲ್ಲಿ ಶ್ರೀ ಪಾಂಡುರಂಗರಾಯರು ದಂಪತಿಗಳನ್ನು ಸಹ ಆಹ್ವಾನಿಸಿದ್ದರು. ಮೊಟ್ಟಮೊದಲನೇ ಬಾರಿಯ ಗುರುವಿನ ಸಂದರ್ಶನ, ಅದುವರೆವಿಗೂ ಒಂದೆರಡು ಬಾರಿ ಶ್ರೀಮತಿ ಶಕುಂತಲಾಬಾಯಿಯವರ ಹೆಸರನ್ನು ಕೇಳಿದ್ದೆನೇ ಹೊರತು ಪ್ರತ್ಯಕ್ಷವಾಗಿ ಕಂಡಿರಲಿಲ್ಲ. ನೋಡ ನೋಡುತ್ತಲೇ ಪೂಜ್ಯಭಾವನೆ ಬಂದು ಗೌರವ ಉದ್ಭವಿಸುವಂತಹ ವ್ಯಕ್ತಿತ್ವ. ಎಷ್ಟು ನೋಡಿದರೂ ನೋಡುತ್ತಲೇ ಇರಬೇಕೆನ್ನಿಸುವ ಆಕರ್ಷಕ ರೂಪು, ಸಂತೋಷ ಸಂಭ್ರಮಗಳಿಂದ ಆ ಪೂಜ್ಯ ಬ್ರಾಹ್ಮಣ ದಂಪತಿಗಳನ್ನು ಇದಿರುಗೊಂಡು ಸತ್ಕಾರಮಾಡಿದೆವು. ತಂದೆಯವರ ಮನೋಭಿಪ್ರಾಯವನ್ನು ಲೇಶಮಾತ್ರವೂ ಅರಿಯದ ನಾನು ಅವರನ್ನು ನಮ್ಮ ಮನೆಯ ಅತಿಥಿಗಳಂತೆ ಬರಮಾಡಿಕೊಂಡು ಆದರಿಸಿದೆನು. ಯಥಾಪ್ರಕಾರ ಊಟವಾದನಂತರ ಶ್ರೀಮತಿ ಶಕುಂತಲಾಬಾಯಿಯವರ ವಾಚನ ಕಾರ್ಯಕ್ರಮವಿತ್ತು. ವಾಚಿಸಿದ ಭಾಗವು ಅಷ್ಟಾಗಿ ನನ್ನ ನೆನಪಿನಲ್ಲಿಲ್ಲದಿದ್ದರೂ ವಾಚನ ಪ್ರಾರಂಭವಾಗುತ್ತಲೇ, ಅವರ ಆ ಕಂಠಶ್ರೀಯಿಂದ ಭಾವಪೂರ್ಣವಾಗಿ ಹೊರಹೊಮ್ಮಿದ ನಾದಶಬ್ದವು ಇಂದಿಗೂ ನನ್ನ ಮನಸ್ಸಿನಲ್ಲಿ ಅಚ್ಚೊತ್ತಿದಂತಿದೆ. ಆ ನಾದಶಬ್ದವು ನವಿರುನವಿರಾಗಿ, ಎಳೆಎಳೆಯಾಗಿ, ಅಲೆಅಲೆಯಾಗಿ ನಮ್ಮ ಮನೆಯನ್ನೆಲ್ಲ ಪಸರಿಸಿ, ಕೆಲಸಗಳ ಗಡಿಬಿಡಿಯಲ್ಲಿದ್ದ ನಮ್ಮೆಲ್ಲರನ್ನೂ ತನ್ನೆಡೆಗೆ ಆಕರ್ಷಿಸಿಕೊಂಡುಬಿಟ್ಟಿತು. ಬಿಟ್ಟಕೆಲಸ ಬಿಟ್ಟಂತೆ ನಾವೆಲ್ಲರೂ ಬಂದು ಕುಳಿತು ಅವರ ವಾಚನ ವೈಖರಿಯನ್ನು ತನ್ಮಯತೆಯಿಂದ ಆಲಿಸುತ್ತಾ ಕುಳಿತೆವು. ನಾನಂತೂ ಆಲಿಸುತ್ತಾ ಆಲಿಸುತ್ತಾ ಮೈಮರೆತು ಅವರ ವಾಚನದಲ್ಲಿಯೇ ಲೀನಳಾದಂತಾದೆನು. ಲಕ್ಷಣವಾದ ಮುತ್ತೈದೆಯನ್ನು, ಎದುರಿನಲ್ಲಿ ನೋಡನೋಡುತ್ತಲೇ ಏನೋ ಒಂದು ಪೂಜ್ಯಭಾವನೆ ಅಂಕುರಿಸಿ,

ಅವರಲ್ಲಿ ಗೌರವವುಂಟಾಯಿತು. ಅವರ ವಾಚನವನ್ನು ಶ್ರದ್ಧಾಸಕ್ತಿಗಳಿಂದ ಆಲಿಸುತ್ತಾ ಕುಳಿತಿದ್ದ ನನ್ನನ್ನು ಗಮನಿಸಿದ ನಮ್ಮ ತಂದೆಯವರು, ಈ ಒಂದು ಸಂದರ್ಭಕ್ಕಾಗಿಯೇ ಕಾಯುತ್ತಿದ್ದರೇನೋ ಎನ್ನುವಂತೆ, ಶ್ರೀಮತಿ ಶಕುಂತಲಾಬಾಯಿಯವರಲ್ಲಿ ನನ್ನನ್ನು ತಮ್ಮ ಶಿಷ್ಯಳನ್ನಾಗಿ ಸ್ವೀಕರಿಸಲು ಪ್ರಾರ್ಥಿಸಿಕೊಂಡು, ನನ್ನ ಗಮಕಕಲೆಯ ಅಭ್ಯಾಸಕ್ಕೆ ಅಡಿಗಲ್ಲಾದರು. ಹೀಗೆ ಒಂದು ಶುಭ ಸಂದರ್ಭದಲ್ಲಿ ಪ್ರಾರಂಭವಾದ ನನ್ನ ಮತ್ತು ಅವರ ಪರಿಚಯ ಮುಂದೆ ಅವ್ಯಾಹತವಾಗಿ ಗುರುಶಿಷ್ಯೆಯರ ಸಂಬಂಧದಲ್ಲಿ ಇದುವರೆವಿಗೂ ನಡೆದುಬಂದಿದೆ. ಅಂದು ಅವರ ವಾಚನದಿಂದುಂಟಾದ ಸ್ಫೂರ್ತಿಯೇ ನನ್ನ ಗಮಕ ಕಲೆಗೆ ನಾಂದಿಯಾಗಿ, ನನ್ನ ಜೀವನದಲ್ಲಿ ಈ ಕಲೆ ಹಾಸು ಹೊಕ್ಕಾಗಿ ಇಹಪರಗಳೆರಡಕ್ಕೂ ಸಾಧನ ಸೋಪಾನದಂತಿದೆ.

ಶ್ರೀಮತಿ ಶಕುಂತಲಾಬಾಯಿಯವರು ನನ್ನನ್ನು ತಮ್ಮ ಶಿಷ್ಯಳನ್ನಾಗಿ ಸ್ವೀಕರಿಸಿ, ವಿದ್ಯಾದಾನ ಮಾಡಿ ಗಮಕ ಕಲೆಗೆ ನೀರೆರೆದು ಪೋಷಿಸಿದರು. ಗುರುವಿನ ಶ್ರದ್ಧಾಸಕ್ತಿಗಳೇ ಶಿಷ್ಯನ ಊರ್ಜಿತತ್ವಕ್ಕೆ ಮೂಲ ಕಾರಣ. ಅದೇ ರೀತಿ ಗುರುಗಳಾದ ಶಕುಂತಲಾಬಾಯಿಯವರು ತಮ್ಮ ಬಿಡುವಿಲ್ಲದ ಕಾರ್ಯಕ್ರಮಗಳ ಮಧ್ಯೆ, ಪ್ರತಿದಿನವೂ ನಮ್ಮ ಮನೆಗೇ ಬಂದು ನನಗೆ ಗಮಕ ಪಾಠವನ್ನು ಹೇಳಿಕೊಟ್ಟರು.

'ಕರ್ಣಾಟಕ ಭಾರತ ಕಥಾಮಂಜರಿ'ಯ ಕೆಲವು ಭಾಗಗಳನ್ನೂ ರಾಷ್ಟ್ರಕವಿ ಕುವೆಂಪುರವರ 'ಶ್ರೀ ರಾಮಾಯಣದರ್ಶನಂ'ನ್ನೂ ಆಮೂಲಾಗ್ರವಾಗಿ ನನಗೆ ಹೇಳಿಕೊಟ್ಟು ನನ್ನ ಜೀವನವನ್ನು ಸಾರ್ಥಕಗೊಳಿಸಿದ್ದಾರೆ. ಅವರ ಕೃಪೆಯಿಂದ ನಮ್ಮ ಭಾರತ ಸಂಸ್ಕೃತಿಯ ಭವ್ಯಕಾವ್ಯಗಳಾದ ರಾಮಾಯಣ, ಮಹಾಭಾರತ ಮುಂತಾದ ಮಹಾಕಾವ್ಯಗಳನ್ನು ವಾಚನ ಮಾಡುತ್ತಾ ಸ್ವಲ್ಪ ಕಾಲವಾದರೂ ಸಂಸಾರದ ಕಷ್ಟ ಕೋಟಲೆಗಳಿಂದ ದೂರವಾಗಿ ಭಗವತ್ಕೃಪೆಗೆ ಪಾತ್ರಳಾಗುವ ಪುಣ್ಯವಿಶೇಷ ನನ್ನದಾಯಿತು.

'ಶ್ರೀ ರಾಮಾಯಣದರ್ಶನಂ' ಮಹಾಕಾವ್ಯವನ್ನು ಕರತಲಾಮಲಕ ಮಾಡಿಕೊಂಡಿರುವ ಅವರು. ನಾವಾಗಿ ಓದಿದಾಗ ಕ್ಲಿಷ್ಟವೆನಿಸಿದ ಆ ಕಾವ್ಯ ಭಾಗವನ್ನು ಸುಲಲಿತವಾಗಿ ಓದಿ ನಮಗೆ ಹೃದಯಂಗಮವಾಗುವಂತೆ ವರ್ಣಿಸಿ ಮನದಟ್ಟುಮಾಡಿಕೊಡುತ್ತಿದ್ದರು. ಒಂದೊಂದು ಆ ಭಾಗವನ್ನು ಅವರು ವಾಚನಮಾಡಿ ಹೇಳಿಕೊಡುತ್ತಿದ್ದಾಗಲೂ ನನಗೆ ಆ ದೃಶ್ಯವೇ ಕಣ್ಮುಂದೆ ನಿಂತಂತಾಗಿ ಮೈ ರೋಮಾಂಚಗೊಳ್ಳುತ್ತಿತ್ತು. ಪ್ರತಿಬಾರಿ ಓದಿದಾಗಲೂ ಹೊಸ ಹೊಸ ಭಾವಸ್ಫುರಣೆಯ ಭಾಸವಾಗುತ್ತಿತ್ತು.

ಪೂಜ್ಯಗುರುಗಳ 60ನೇ ವರ್ಷದ ಸವಿ ನೆನಪಿನ ಅಭಿನಂದನಾಗ್ರಂಥಕ್ಕೆ ನೆನಪಿನ ಈ ಲೇಖನ ಒಂದು ಕಿರುಗಾಣಿಕೆ

ಗುರುದಂಪತಿಗಳಿಗೆ ಆಯುರಾರೋಗ್ಯ ಐಶ್ವರ್ಯಾಭಿವೃದ್ಧಿಯಾಗಿ, ಅವರು ಶತಾಯುಷಿಗಳಾಗಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತಾ ಈ ಕಿರುಲೇಖನವನ್ನು ಮುಗಿಸುತ್ತಿದ್ದೇನೆ.

ಗುರುವಂದನೆ

ಚೊಕ್ಕಮ್ಮ ನರಸಿಂಹಯ್ಯಂಗಾರ್

ನಮ್ಮ ಪೂಜ್ಯ ಗುರುಗಳಾದ ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾವ್ ಅವರು ಅರವತ್ತು ವರ್ಷಗಳ ಸದುಪಯೋಗ ಜೀವನ ಸಾಫಲ್ಯವನ್ನು ಪಡೆದು ಮುಂದಿನ ವರ್ಷಕ್ಕೆ ಹೆಜ್ಜೆಯಿಟ್ಟಿದ್ದಾರೆಂಬ ಶುಭಸಂಗತಿ, ಅವರ ಶಿಷ್ಯವರ್ಗಕ್ಕೆಲ್ಲ ಹೆಮ್ಮೆಯ ವಿಷಯವಾಗಿದೆ.

1955ರ ಸಾಲಿನಲ್ಲಿ, ನಾನು ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ನೆಹರೂ ನಗರ ಕೇಂದ್ರದ "ಮಕ್ಕಳ ಮಂಟಪ"ದಲ್ಲಿ ನಡೆಯುತ್ತಿದ್ದ ಗಮಕ ತರಗತಿಗೆ ಗಮಕ ಕಲಾಭ್ಯಾಸಿಯಾಗಿ ಸೇರಿಕೊಂಡೆ. ಆಗ ಶಕುಂತಲಾಬಾಯಿ, ಮನೆಯ ಹಿರಿಯರಾದ ಅತ್ತೆ ಚಿಕ್ಕತ್ತೆಯರ ಬೇಕು ಬೇಡಗಳನ್ನು ನೋಡಿಕೊಂಡು, ತಮ್ಮ ಮೂರು ಮಕ್ಕಳನ್ನು ಆದರಿಸುತ್ತ, ಪತಿಯ ಸೌಕರ್ಯದ ಕಡೆಗೆ ಗಮನವಿತ್ತು, "ಮಕ್ಕಳ ಮಂಟಪ"ದ ಕೆಲಸದಲ್ಲೂ ಶ್ರದ್ಧೆವಹಿಸಿ, ಸಂಜೆ, ನಮ್ಮ ತರಗತಿಯನ್ನು ನಡೆಸುತ್ತಿದ್ದ ಚಾಕಚಕ್ಯತೆ ನನ್ನ ಕಣ್ಣು ಮುಂದೆ ಈ ಹೊತ್ತು ನಡೆದಂತೆ ಇದೆ. ನಾವು ತರಗತಿಯ ಮೇಲೆಯೇ ಅಲ್ಲ, ಯಾವ ಘಳಿಗೆಯಲ್ಲಿ ಹೋದರೂ ಆ ವೇಳೆಯಲ್ಲಿ ಕೂಡ ನಮಗೆ ಗಮಕಾಭ್ಯಾಸ ಮಾಡಿಸುತ್ತಿದ್ದರು. ಆ ಸಮಯದಲ್ಲಿ ಅವರು ಅಶ್ರದ್ಧೆಯನ್ನಾಗಲಿ, ಅಸಹನೆಯನ್ನಾಗಲಿ, ಬೇಸರವನ್ನಾಗಲಿ, ತೋರಿದುದನ್ನು ನಾನು ಕಾಣೆ. ಅವರ ಶಿಷ್ಯರೂ ಅರಿಯರು. ಅವರ ಪಾಠದಲ್ಲಿ ರಾಗಸಂಚಾರ. ಅದನ್ನು ಪದ್ಯಗಳ ಅರ್ಥಭಾವಗಳಿಗೆ ಹೊಂದಿಸುತ್ತಿದ್ದ ರೀತಿ, ಸಾಹಿತ್ಯಸೌಲ್ಯ ಗಮನೀಯ ಗುಣಗಳು. ಅವರ ಶಿಷ್ಯರುಗಳಲ್ಲೂ ನಾವು ಈ ಗುಣಗಳನ್ನು ಕಾಣಬಹುದು. ನಾನು ಅವರ ವಿಶ್ವಾಸಕ್ಕೆ ಪಾತ್ರರಾದ ಅನೇಕ ಶಿಷ್ಯೆಯರಲ್ಲಿ ಒಬ್ಬಳು. ನನಗೆ ಇದು ಬಹು ಹೆಮ್ಮೆ.

ಶಕುಂತಲಾಬಾಯಿಗೆ ಅವರ ಪತಿ ಪಾಂಡುರಂಗರಾಯರು ಅಪೂರ್ವಜೋಡಿ. ಮದುವೆಯಾದ ದಿನದಿಂದ ಈವರೆಗೆ ಪಾಂಡುರಂಗರಾಯರು ನಮ್ಮ ಗುರುಗಳಿಗೆ ಕೊಟ್ಟಿರುವ ಪ್ರೋತ್ಸಾಹ ಸಹಕಾರ ಅತಿಶಯವಾಗಿದೆ. ನಮ್ಮ ಗುರುಗಳ ಪ್ರತಿಭೆಯನ್ನು ಗುರುತಿಸಿ, ಅದು ಕಮರದಂತೆ ಬಿಡದೆ, ಹೆಚ್ಚು ಅಭಿವೃದ್ಧಿಯನ್ನು-ಪ್ರಗತಿಯನ್ನು ಸಾಧಿಸುವಂತೆ ಯಾವಾಗಲೂ ಸಹಕಾರ ಕೊಡುತ್ತಿರುವ ಪಾಂಡುರಂಗರಾಯರ ನಿಲುವು, ಕಲಾವಿದ ದಂಪತಿಗಳಿಗೆ ಮಾರ್ಗದರ್ಶನವಾಗಿದೆ. ನಮ್ಮ ಗುರುವಾದ ಶಕುಂತಲಾಬಾಯಿ ಕಾವ್ಯವಾಚನ ಮಾಡುವಾಗ, ಅವರ ಪತಿ ಕಾವ್ಯದ ಪ್ರಸ್ತಾವನೆ ಕೊಡುವರು. ಕಾವ್ಯವಾಚನಕ್ಕೆ ಪ್ರಾಸಂಗಿಕ ನಿರೂಪಣೆ ನೀಡುವುದು ನಮ್ಮ ಜನ ಕಂಡಿದ್ದಾರೆ. ಇಂಥ ಭಾಗ್ಯ ನಮ್ಮ ಗಮಕಕಲಾ ಮಹಿಳೆಯರಿಗೆ ಎಷ್ಟು ಮಂದಿಗೆ ಇದೆ ? ಶಕುಂತಲಾಬಾಯಿ ಕಾವ್ಯವಾಚನದಲ್ಲಿ ಎದ್ದು ಕಾಣುವ ಸಾಹಿತ್ಯ ಪೋಷಣೆಯ ವೈಶಿಷ್ಟ್ಯ ಪಾಂಡುರಂಗ ರಾಯರ ಮಾರ್ಗದರ್ಶನದಿಂದ ಅವರಿಗೆ ಲಭ್ಯವಾದದ್ದು ಎಂದರೆ ತಪ್ಪಲ್ಲ. ಏಕೆಂದರೆ

ಪಾಂಡುರಂಗರಾಯರು ಸಾಹಿತಿಗಳು. ಪ್ರಾಚೀನ ಮತ್ತು ಆಧುನಿಕ ಕಾವ್ಯಗಳನ್ನು ಚೆನ್ನಾಗಿ ಬಲ್ಲವರು. ಮಕ್ಕಳ ಸಾಹಿತ್ಯದಲ್ಲಿ ಪ್ರಸಿದ್ಧರಾದವರು. ಆದರ್ಶ ಶಿಕ್ಷಕರೆಂದು ಭಾರತ ರಾಷ್ಟ್ರಪ್ರಶಸ್ತಿ ವಿಜೇತರು. ಅವರು ನಮ್ಮ ಗಮಕ ತರಗತಿಯಲ್ಲಿ ಭಾಗವಹಿಸು ತ್ತಿದ್ದುದು ನಾವೆಲ್ಲ ಕಂಡ ಸಂಗತಿ.

ನಮ್ಮ ಗುರುಗಳಾದ ಶಕುಂತಲಾಬಾಯಿಗೆ ಭಾರತವಾಚನ ಪಾಠ ಹೇಳಿದ ಗುರುಗಳು ಸಾಮಾನ್ಯರಲ್ಲ; ಗಮಕಕಲೆಗೆ ಭೀಷ್ಮಾಚಾರ್ಯರಂತಿದ್ದ ಭಾರತವಾಚನ ಪ್ರವೀಣ ಬಿಂದೂರಾಯರು. ಆದುದರಿಂದಲೇ ನಮ್ಮ ಗುರುಗಳಿಗೆ ಅವರ ಗುರುಗಳ ಆಶೀರ್ವಾದ ಸಂಪೂರ್ಣವಾಗಿ ಅದರ ಫಲವೇ ಕರ್ಣಾಟಕದಲ್ಲೆಲ್ಲ ವ್ಯಾಪಿಸಿ, ಕೀರ್ತಿ ಬರುವುದಕ್ಕೆ ಕಾರಣವಾಗಿದೆ ಎಂದು ನಾನು ತಿಳಿದಿದ್ದೇನೆ. ನಾವು ಶಕುಂತಲಾಬಾಯಿಯ ಶಿಷ್ಯರಾಗಿ ಭಾರತದ ಬಿಂದೂರಾಯರ ಶಿಷ್ಯ ಪೀಳಿಗೆಗೆ ಸೇರಿದೆವಲ್ಲ ಎಂಬ ಹೆಮ್ಮೆ ನಮಗೆಲ್ಲ ಇದೆ. ಶಕುಂತಲಾಬಾಯಿಯವರ ಶಿಷ್ಯರೆಲ್ಲ ಸೇರಿ 11-9-1956ರಲ್ಲಿ ಕರ್ಣಾಟಕದ ಸುಪ್ರಸಿದ್ಧ ಸಾಹಿತಿಗಳೂ, ಶ್ರೇಷ್ಠವರ್ಗದ ಉಪಾಧ್ಯಾಯರೂ ಅನ್ನಿಸಿಕೊಂಡಿರುವ ಪೂಜ್ಯ ಶ್ರೀ ಕೆ. ವೆಂಕಟರಾಮಪ್ಪನವರ ಅಧ್ಯಕ್ಷತೆಯಲ್ಲಿ ವಯೋವೃದ್ಧರೂ ಜ್ಞಾನ ವೃದ್ಧರೂ, ಕುಮಾರವ್ಯಾಸನ ಪರಮಭಕ್ತರೂ ಆದ ನಮ್ಮ ಗುರುಗಳ ಗುರುಗಳಾದ ಭಾರತದ ಬಿಂದೂರಾಯರಿಗೆ ಏರ್ಪಡಿಸಿದ್ದ ಸತ್ಕಾರ ಸಮಾರಂಭ ನನಗೆ ಜ್ಞಾಪಕಕ್ಕೆ ಬರುತ್ತದೆ ಇನ್ನೊಮ್ಮೆ 9-8-1959ರಲ್ಲಿ ಶಕುಂತಲಾಬಾಯಿ ಶಿಷ್ಯರೆಲ್ಲ ಸೇರಿ, ಭಾರತದ ಕೃಷ್ಣರಾಯರನ್ನು ಮೈಸೂರಿನಿಂದ ಕರೆಸಿಕೊಂಡು, ಅವರಿಗೆ ಭಾರತ ವಾಚನ ಪ್ರವೀಣ ಬಿಂದೂರಾಯರ ಅಧ್ಯಕ್ಷತೆಯಲ್ಲಿ ಸನ್ಮಾನ ಮಾಡಿದರು. ಕೃಷ್ಣಗಿರಿ ಕೃಷ್ಣರಾಯರು ಬಿಂದೂರಾಯರ ಶಿಷ್ಯರಂತೆ. ಈ ಉತ್ಸವಗಳಲ್ಲಿ ನಾನು ಪಾಲ್ಗೊಂಡುದು ನನ್ನ ಪುಣ್ಯವೆಂದು ಎಣಿಸಿದ್ದೇನೆ. ಇದಕ್ಕೆ ಕಾರಣ ನನ್ನ ಗುರುಗಳಾದ ಶಕುಂತಲಾಬಾಯಿ. ಅವರು ಗುಣಗ್ರಾಹಿಗಳು. ಎಷ್ಟೋ ಮಂದಿ ಗಮಕ ವಿದ್ವಾಂಸರುಗಳನ್ನು ಕರೆಸಿಕೊಂಡು "ಮಕ್ಕಳ ಮಂಟಪ"ದ ತಮ್ಮ ಮನೆಯಲ್ಲಿ ಕಾವ್ಯವಾಚನ ಮಾಡಿಸಿದ್ದಾರೆ. ನಮಗೆಲ್ಲ ಕೇಳುವಂತೆ ಮಾಡಿದ್ದಾರೆ. ನಮ್ಮ ಗುರುಗಳು ಗಮಕ ಪ್ರಪಂಚದಲ್ಲಿ ಧ್ರುವತಾರೆಯಂತೆ ಪ್ರಕಾಶಿಸುತ್ತಿದ್ದರೂ ನಾವೇ ಮಹಾಶ್ರೇಷ್ಠ ಗಮಕವಿದುಷಿಯೆಂಬ ಬಿಗುವಿಲ್ಲ, ಜಾತಿ ಮತ್ಸರವಿಲ್ಲ, ಅತಿ ಸಾಧಾರಣ ಗಮಕಿಗಳಾದರೂ ಅವರಿಗೆ ಸಮಯ ಬಂದರೆ ತಂಬೂರಿ ಶ್ರುತಿ ಹಾಕುವುದಕ್ಕೂ ಹಿಂದೆಗೆಯುವುದಿಲ್ಲ. ಅವರು ಅಷ್ಟು ನಿಗರ್ವಿಗಳು.

ನಮ್ಮ ಗುರುಗಳಾದ ಶಕುಂತಲಾಬಾಯಿಯವರ ಕೀರ್ತಿ ರಾಷ್ಟ್ರಕವಿ ಕುವೆಂಪು ಅವರ "ಶ್ರೀರಾಮಾಯಣದರ್ಶನಂ" ಕಾವ್ಯವಾಚನದಿಂದ ಗಮಕ ಪ್ರಪಂಚದಲ್ಲಿ ಶಾಶ್ವತ ವಾಯಿತು. 1969ರಲ್ಲಿ ಅವರಿಗೆ ಮೊಟ್ಟ ಮೊದಲ ಗಮಕಪ್ರಶಸ್ತಿ ನಮ್ಮ ರಾಜ್ಯದ ಸಾಹಿತ್ಯ ಅಕಾಡೆಮಿಯಿಂದ ಪ್ರಾಪ್ತವಾಯಿತು. 1979ರಲ್ಲಿ ನಡೆದ 2ನೇ ಅಖಿಲ ಕರ್ಣಾಟಕ ಗಮಕ ಸಮ್ಮೇಳನದ ಅಧ್ಯಕ್ಷ ಪದವಿ ಸಂದಿತು. ಅದೇ ವರ್ಷ ಬೆಂಗಳೂರಿನ ಗಾಯನ ಸಮಾಜ ನಡೆಸಿದ 11ನೇ ಸಂಗೀತ ಸಮ್ಮೇಳನದಲ್ಲಿ ಸನ್ಮಾನವಾಯಿತು.

ಭಾರತದ ರಾಜಧಾನಿ ದೆಹಲಿಯಲ್ಲೂ ಕೂಡ ನಮ್ಮ ಗುರುಗಳು ಗಮಕದ ಬಾವುಟ ಹಾರಿಸಿಬಂದಿದ್ದಾರೆ.

ಇಂಥ ಮಹಾಗುರುವನ್ನು ಪಡೆದ ನಾನು ಭಾಗ್ಯವಂತೆಯಲ್ಲವೇ. ನನಗೆ ತಾಯಿ ಸಮಾನರಾದ ಶಕುಂತಲಾಬಾಯಿಗೆ, ತಂದೆ ಸಮಾನರಾದ ಪಾಂಡುರಂಗರಾಯರಿಗೆ, ಭಗವಂತ ಆಯುರಾರೋಗ್ಯ ಐಶ್ವರ್ಯಾದಿ ಸಂಪತ್ತುಗಳನ್ನು ಕರುಣಿಸಲೆಂದು ಪ್ರಾರ್ಥನೆ ಸಲ್ಲಿಸುತ್ತೇನೆ. ನನ್ನ ಗುರುವರ್ಯ ದಂಪತಿಗಳಿಗೆ ನಮನ.

ಶ್ರೀರಸ್ತು-ಶುಭಮಸ್ತು-ಸನ್ಮಂಗಳಮಸ್ತು.

ಬೈಕಾಡಿ ವೆಂಕಟಕೃಷ್ಣರಾಯ

ಶ್ರಾವ್ಯವಾದ ರೀತಿಯಲ್ಲಿ ಓದುವುದೇ ಒಂದು ದೊಡ್ಡ ಕಲೆ. ಅದೇ ಗಮಕಕಲೆ. ಪ್ರಾಚೀನಕಾಲದಿಂದಲೂ ಈ ಕಲೆಯ ವ್ಯವಸಾಯಕ್ಕೆ ಹೆಚ್ಚಿನ ಗಮನ ಕೊಡುತ್ತಿದ್ದರು. ಲವಕುಶರೇ ಮೊತ್ತಮೊದಲ ಗಮಕಿಗಳು ಎಂದೂ ಪ್ರತೀತಿ ಇದೆ. ಕವಿಲಕ್ಷ್ಮೀಶ ಗಮಕಿಗಳಾದ ಲವಕುಶರ ಗಮಕವಾಚನದ ಕುರಿತು ತನ್ನ ಜೈಮಿನಿಭಾರತದಲ್ಲಿ ಬಹು ಸೊಗಸಾಗಿ ಹೀಗೆ ಹೇಳಿದ್ದಾನೆ.

ವೀಣೆಯಂ ಕೈಗಿತ್ತು ಬಾಲಕರ ವದನದೋಳ್ |
ವಾಣಿ ತಾಂ ನೆಲೆಸಿದಳೋ ಗಾನ ದೇವತೆಯು ಮೈ |
ಗಾಣಿಕೆಯೋ ಮೋಹನದ ತನಿರಸವೋ ಸೊಗಯಿಸುವ ಕರ್ಣಾಮೃತವೋ ಹೇಳೆನೆ ||
ಜಾಣಿಣ್ಮೆ ಜೋಕೆಯಿಂ ಜತಿ ರೀತಿ ತಾಳ ಪ್ರ |
ಮಾಣ ಕಂಪಿತ ಮೂರ್ಛೆ ರಸ ಪಾಡು ಬೆಡಗು ಬಿ |
ನ್ನಾಣ ಲಯಮಾಹತ ಪ್ರತ್ಯಾಹತ ವ್ಯಾಪ್ತಿಯರಿದು ಕೇಳಿಸಿದರಿವರು|
ಸ್ಥಾಯಿ ಸಂಚಾರಿಗಳ ಸರಿಗಮಪಧನಿಯ ಸರ |
ದಾಯತದ ಶುದ್ಧ ಸಂಕೀರ್ಣ ಸಾಳಗದ ಪೂ |
ರಾಯತ ಸುತಾನಳುಗಳಂ ತಾರ ಮಧ್ಯ ಮಂದ್ರಗಳಿಂದ ಸೊಗಸುಗೊಳಿಸಿ ||
ಗೇಯ ರಸಮಾಸರೆ ಪಾಡಿದರವರ್ ವಿನುತ ರಾ |
ಮಾಯಣದ ಸುಶ್ಲೋಕಮಾಲೆಯಂ ಕೇಳ್ದು ರಘು |
ರಾಯನುರೆ ಮೆಚ್ಚಿ ಕೊಂಡಾಡಿ ನಸುನಗೆಯಿಂದ ಸೌಮಿತ್ರಿಗಿಂತೆಂದನು ||

ಮೇಲಿನ ಪದ್ಯಗಳಿಂದ ಲಕ್ಷ್ಮೀಶನೂ ಓರ್ವ ಗಮಕಿ ಎಂದ ಹಾಗಾಯ್ತು. ಇದೇ ರೀತಿಯ ಉದಾಹರಣೆಗಳು ನಮಗೆ ಭರತೇಶ ವೈಭವದಲ್ಲೂ ದೊರಕುತ್ತವೆ. ನಮ್ಮ ಹಿಂದಿನ ಶಿಕ್ಷಣ ಕ್ರಮದಲ್ಲಿ ಅಂದರೆ ಅಂದಿನ ಐಗಳ ಶಾಲೆಗಳಲ್ಲಿ ಭಾರತ, ರಾಮಾಯಣಾದಿ ಕಾವ್ಯಗಳ ಪಠನವೇ ಪ್ರಧಾನವಾಗಿತ್ತು. ನಮ್ಮ ಯಕ್ಷಗಾನದ ಭಾಗವತರುಗಳು ಹಾಡುವ ಭಾಮಿನಿ, ಕಂದ ಪದ್ಯಗಳ ರೀತಿ ಗಮಕವಲ್ಲದೆ ಮತ್ತಾವುದು?

ನನ್ನ ಚಿಕ್ಕಂದಿನಲ್ಲಿ "ಹಿಸ್ ಮಾಸ್ಟರ್ಸ್ ವಾಯ್ಸ್" ನವರ ಗ್ರಾಮಫೋನ್ ರೆಕಾರ್ಡ್‌ಗಳಲ್ಲಿ ಮೈಸೂರು ನಾಗಮ್ಮನವರ ಕುಮಾರವ್ಯಾಸ ಭಾರತ-ಜೈಮಿನಿ ಭಾರತಗಳ ಗಮಕ ವಾಚನ, ಶೋಭಾನೆಹಾಡುಗಳು ಮುಂತಾದವುಗಳನ್ನು ಕೇಳಿ ಆನಂದಿಸಿದ್ದು ನೆನಪಿದೆ.

ಹೀಗೆ ಒಂದು ಕಾಲದಲ್ಲಿ ಜನಜನಿತವಾಗಿದ್ದ "ಗಮಕಕಲೆ"ಯ ಪ್ರಚಾರವನ್ನು ಮತ್ತೆ ನಾಡಿನಾದ್ಯಂತ ನಡೆಸಿದವರು ಕನ್ನಡ ಸಾಹಿತ್ಯ ಪರಿಷತ್ತಿನವರು.ಹಿರಿಯ ಸಾಹಿತಿ

ಶ್ರೀ ಡಿ. ವಿ. ಗುಂಡಪ್ಪನವರು ಪರಿಷತ್ತಿನ ಉಪಾಧ್ಯಕ್ಷರಾಗಿದ್ದಾಗ ಅಂದರೆ ಸುಮಾರ 1934ರಲ್ಲಿ ಪರಿಷತ್ತಿನ ಆಶ್ರಯದಲ್ಲಿ ಗಮಕತರಗತಿಯನ್ನು ಪ್ರಾರಂಭಿಸಿದರು. ಕನ್ನಡ ಕಲಿಸುವ ಪಂಡಿತರು ಒಳ್ಳೆಯ ಗಮಕಿಗಳಾಗಿರಬೇಕು. ಗದ್ಯಪದ್ಯಗಳನ್ನು ಸುಶ್ರಾವ್ಯ ವಾಗಿ ಓದಬೇಕು. ಕಾವ್ಯದ ಪ್ರಥಮ ಸೌಂದರ್ಯ ಪ್ರದರ್ಶಕವೇ ಗಮಕಕಲೆ. ಅದನ್ನು ಚಿಕ್ಕಂದಿನಿಂದಲೇ ಅಭ್ಯಾಸ ಮಾಡಬೇಕೆನ್ನುವುದು ಡಿ.ವಿ.ಜಿ. ಯವರ ಅಭಿಪ್ರಾಯ. ಈ ಕಾರಣದಿಂದಲೇ ಅವರು ಅಧ್ಯಕ್ಷರಾಗಿದ್ದ ಕಾಲದಲ್ಲಿ ಪರಿಷತ್ತಿನಲ್ಲಿ ಗಮಕಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಿದರು.

ಸುಮಾರಾಗಿ ಅದೇ ಕಾಲದಲ್ಲಿ ಅಂದರೆ ಸರಿಸುಮಾರು 1937ರಲ್ಲಿ ಪರಿಷತ್ತಿನ ಗಮಕ ತರಗತಿಗೆ ಸೇರಿ ಬಿಂದುರಾಯರ ಶಿಷ್ಯೆಯರಾದರು. ಪರಿಷತ್ತು ಮಹಿಳೆಯರಿಗಾಗಿ ನಡೆಸುತ್ತಿದ್ದ ಗಮಕತರಗತಿಯ ಪ್ರಥಮ ಮಹಿಳಾ ವಿದ್ಯಾರ್ಥಿಯೇ ಶ್ರೀ ಶಕುಂತಲಾ ಬಾಯಿಯವರು.

ಭಾರತದ ಬಿಂದುರಾಯರೆಂದೇ ಕರೆಯಲ್ಪಡುತ್ತಿದ್ದ ಬಿಂದುರಾಯರು ಗಮಕ ಕಲೆಯ ಪ್ರಸಿದ್ಧರು. ಸ್ವತಃ ಅವರೇ “ಭಾರತ ಸಾರೋದ್ಧಾರ” ಎಂಬ ಗ್ರಂಥವನ್ನು ರಚಿಸಿದ್ದರು.ಅವರ ಪಾಂಡಿತ್ಯ, ಪ್ರತಿಭೆ ಮತ್ತು ಕಂಚಿನ ಕಂಠದ ಕುರಿತು ನಾನೇ ತಿಳಿದ ಒಂದು ಉದಾಹರಣೆ ಹೀಗಿದೆ.

ಕೆಲವು ವರ್ಷಗಳ ಹಿಂದೆ ನಾನೊಮ್ಮೆ ಗದಗಿಗೆ ಹೋದಾಗ ಗದುಗಿನ ವೀರ ನಾರಾಯಣಸ್ವಾಮಿಯ ದರ್ಶನಕ್ಕಾಗಿ ದೇವಾಲಯಕ್ಕೆ ಹೋದೆ. ಅಲ್ಲಿ ದೇವಸ್ಥಾನದ ಪಾಟಾಳಿಯೋರ್ವ ನಿರರ್ಗಳವಾಗಿ ಗಮಕ ಶೈಲಿಯಲ್ಲಿ ಕುಮಾರವ್ಯಾಸ ಭಾರತದ ಪದ್ಯ ಗಳನ್ನು ಹಾಡುತ್ತಿದ್ದುದನ್ನು ಕೇಳಿದೆ. ನಿನ್ನ ಗುರು ಯಾರು ಎಂದು ಕೇಳಿದಾಗ ಆತ ಬಿಂದುರಾಯರು ಆಗಾಗ್ಗೆ ಅಲ್ಲಿಗೆ ಬರುತ್ತಿದ್ದರೆಂತಲೂ ಅವರು ಹಾಡಿದ್ದನ್ನು ಕೇಳಿಯೇ ತಾನು ಕಲಿತೆ ಎಂದ. ಬಿಂದುರಾಯರ ಭಾರತ ವಾಚನದ ಶ್ರೀಮಂತಿಕೆ ಎಷ್ಟೆಂಬುದು ಆಗ ನಾನು ತಿಳಿದೆ.

ಪರಿಷತ್ತು ನಡೆಸುತ್ತಿದ್ದ ಗಮಕತರಗತಿಗೆ ಬಿಂದುರಾಯರೇ ಪ್ರಪ್ರಥಮದ ಅಧ್ಯಾಪಕರು. ಶಕುಂತಲಾಬಾಯಿಯವರು ತರಗತಿಯಲ್ಲಿ ಮಾತ್ರವಲ್ಲ ಬಿಂದುರಾಯ ರಿಂದ ಖಾಸಗಿಯಾಗಿ ತನ್ನ ಮನೆಯಲ್ಲಿಯೂ ಪಾಠ ಹೇಳಿಸಿಕೊಂಡಿದ್ದರು. ಅಲ್ಲದೆ ಬಿಂದೂರಾಯರ ಕಂಠವನ್ನೇ ಅಪಹರಿಸಿದರೇ ಎನ್ನುವಷ್ಟರಮಟ್ಟಿಗೆ ಸುಶ್ರಾವ್ಯವಾಗಿ ಅನಂತರದಲ್ಲಿ ಶಕುಂತಲಾ ವಾಚನ ಮಾಡುತ್ತಿದ್ದರು.

ಕೇವಲ ಭಾರತ, ರಾಮಾಯಣವೇ ಮುಂತಾದ ಷಟ್ಪದಿ ಕಾವ್ಯಗಳು ಮಾತ್ರವಲ್ಲ ತನ್ನ ಮಧುರವಾದ ಕಂಠಶ್ರೀಯಿಂದ ಹೊಸ ಕನ್ನಡ ಕಾವ್ಯಗಳನ್ನು ಹಾಡುವುದರ ಮೂಲಕ ಶಕುಂತಲಾಬಾಯಿ ಕನ್ನಡದ ಹಿರಿಯ ಕವಿಗಳ ಮೆಚ್ಚುಗೆಗೂ ಪಾತ್ರರಾದರು. ಬಿ. ಎಂ. ಶ್ರೀ. ಯವರ “ಕನ್ನಡ ತಾಯ ನೋಡ” ಪದ್ಯವನ್ನು ಅವರ ಸಮ್ಮುಖದಲ್ಲೀ ಹಾಡಿದಾಗ ಶ್ರೀಕಂಠಯ್ಯನವರೇ ಇದರ ಛಂದಸ್ಸು ಗಮಕಕ್ಕೆ ಒಗ್ಗುವುದೆಂದು ತೋರಿಸಿ

ನನಗೆ ಆಶ್ಚರ್ಯವನ್ನುಂಟುಮಾಡಿದಿರಿ' ಎಂದು ಹೇಳಿ ಅವರ ವಾಚನದ ಬಗೆಗೆ ಮೆಚ್ಚುಗೆ ವ್ಯಕ್ತಪಡಿಸಿದ್ದರು.

ಶ್ರೀಮತಿ ಶಕುಂತಲಾಬಾಯಿಯವರು ಚಂಪೂಗ್ರಂಥಗಳು, ಹರಿಹರನ ಬಸವರಾಜ ದೇವರ ರಗಳೆ, ಗೋವಿಂದಪೈಗಳ "ಗೊಲ್ಗೊಥಾ", "ವೈಶಾಖಿ" ಮುಂತಾದ ಕಾವ್ಯಗಳನ್ನು ಗಮಕಕ್ಕೆ ಅಳವಡಿಸಿ ಹಾಡುವುದರ ಮೂಲಕ ಭಾರತವಾಚನವೇ ಕಾವ್ಯವಾಚನಕ್ಕೆ ಎಡೆಕೊಟ್ಟಿತು ಎಂಬುದನ್ನೂ ಶ್ರುತಪಡಿಸಿದ್ದಾರೆ.

"ಶ್ರೀ ರಾಮಾಯಣದರ್ಶನಂ" ಕಾವ್ಯದ ಕರ್ತೃ ಕವಿ ಶ್ರೀ ಪುಟ್ಟಪ್ಪನವರಾದರೆ ಆ ಕಾವ್ಯವನ್ನು ಜನಪ್ರಿಯಗೊಳಿಸಿದ ಕೀರ್ತಿ ಶಕುಂತಲಾಬಾಯಿಯುವರಿಗೆ ಸಲ್ಲಬೇಕು. ರಾಮಾಯಣದರ್ಶನ ಕಾವ್ಯವನ್ನು ಗಮಕಕ್ಕೆ ಒಗ್ಗಿಸಿದ್ದೇ ಒಂದು ಆಶ್ಚರ್ಯ. ಅದು ಗಮಕಕ್ಕೆ ಒಗ್ಗದು ಎಂಬ ಒಂದು ವಾದವೂ ಇತ್ತು. ಪರಿಷತ್ತಿನ ಒಂದು ವಸಂತ ಸಾಹಿತ್ಯೋತ್ಸವದ ಸಂದರ್ಭದಲ್ಲಿ ರಾಮಾಯಣದರ್ಶನದ ಶಿಲಾತಪಸ್ವಿನಿ ಭಾಗದಲ್ಲಿ ಅಹಲ್ಯೋದ್ಧಾರ ಸೀತಾಕಲ್ಯಾಣ ಭಾಗಗಳನ್ನು ಶ್ರೀಮತಿಯವರು ವಾಚಿಸಿದಾಗ, ಸಭೆಯಲ್ಲಿದ್ದ ಪುಟ್ಟಪ್ಪನವರೇ ಆನಂದಪರವಶರಾಗಿ ಈಕೆಗೆ ಫಲ ತಾಂಬೂಲ ನೀಡುವುದರ ಮೂಲಕ ತನ್ನ ಕೃತಜ್ಞತೆ ವ್ಯಕ್ತಪಡಿಸಿದರು. ಸಭಿಕರಲ್ಲಿ ಕೆಲವರು ಈ ವಾಚನವನ್ನು ಅಂದು ಧ್ವನಿ ಮುದ್ರಿಸಿಕೊಂಡಿದ್ದರು.

1950, ಗೋವಿಂದಪೈಗಳು ಆ ವರ್ಷದ ಸಮ್ಮೇಳನಾಧ್ಯಕ್ಷರು. ಅದೇ ವರ್ಷ ಅವರಿಗೆ ಮದ್ರಾಸ್ ಸರಕಾರ "ಕವಿಸಾರ್ವಭೌಮ" ಪ್ರಶಸ್ತಿ ನೀಡಿ ಗೌರವಿಸಿತ್ತು. ಬೆಂಗಳೂರಿನವರು ಅವರನ್ನು ಸನ್ಮಾನಿಸಲು ಬರಮಾಡಿಕೊಂಡಿದ್ದರು. ಆ ಒಂದು ಸಂದರ್ಭದಲ್ಲಿ ಶ್ರೀಮತಿಯವರು ಕವಿಸಮ್ಮುಖದಲ್ಲಿಯೇ "ಗೊಲ್ಗೊಥಾ" ಹಾಡಿದಾಗ "ನನ್ನ ಕಾವ್ಯಕ್ಕೆ ನೀವು ಧ್ವನಿ ಕೊಟ್ಟಿರಿ" ಎಂಬ ಮೆಚ್ಚುಗೆ ಮಾತನ್ನು ಪೈಗಳು ನುಡಿದಿದ್ದರು.

1957ರಲ್ಲಿ ಆಕಾಶವಾಣಿಯ ರಾಷ್ಟ್ರೀಯ ಸಂಗೀತಕಾರ್ಯಕ್ರಮದಲ್ಲಿ ಭಾಗವಹಿಸಿ ದೆಹಲಿಯಿಂದ ಕುಮಾರವ್ಯಾಸಭಾರತವನ್ನು ಪ್ರಚಾರ ಮಾಡಿದ ಮೊತ್ತಮೊದಲ ಕೀರ್ತಿ ಶಕುಂತಲಾಬಾಯಿಯವರದ್ದು. ಶ್ರೀಮತಿ ಶಕುಂತಲಾಬಾಯಿ ಗಮಕವಿದುಷಿ ಮಾತ್ರವೇ ಅಲ್ಲದೆ ಸಂಗೀತ ವಿದುಷಿಯೂ ಆಗಿದ್ದಾರೆ. ಕರ್ನಾಟಕ ಸಂಗೀತದಲ್ಲಿ ಪ್ರಸಿದ್ಧ ಮನೆತನಕ್ಕೆ ಸೇರಿದ ಚಿಂತನಪಲ್ಲಿ ಕೃಷ್ಣಮೂರ್ತಿಯವರಲ್ಲಿ ದೀರ್ಘಕಾಲ ಸಂಗೀತಾಭ್ಯಾಸ ಮಾಡಿದ್ದಾರೆ. ಅದರಿಂದಲೇ ಅವರ ಕಾವ್ಯವಾಚನ ಸಾಹಿತ್ಯ ಸಂಗೀತ ವೈಶಿಷ್ಟ್ಯ ಪೂರ್ಣವಾಗಿರುತ್ತದೆ.

1969ರಲ್ಲಿ ರಾಜ್ಯದ ಸಾಹಿತ್ಯ ಆಕಾಡೆಮಿ ಇವರಿಗೆ ರಾಜ್ಯಪ್ರಶಸ್ತಿ ನೀಡಿ ಗೌರವಿಸಿತ್ತು.

ಸಂಗೀತವನ್ನು ಹಿತಮಿತವಾಗಿ ಸಾಹಿತ್ಯಕ್ಕೆ ಅಳವಡಿಸಿಕೊಂಡು ಕವಿಯ ಭಾವವನ್ನು ಸ್ಫುಟವಾಗಿ ಪ್ರದರ್ಶಿಸುವಲ್ಲಿ ಶ್ರೀಮತಿಯವರು ಶ್ರೇಷ್ಠರು. ಸಂಗೀತದಲ್ಲಿ ಎಂ. ಎಸ್. ಹೇಗೋ ಹಾಗೆಯೇ ಗಮಕದಲ್ಲಿ ಶಕುಂತಲಾಬಾಯಿಯವರು ಎಂದರೆ ಅದು

ಉಪ್ರೇಕ್ಷೆಯಾಗದು. ನಾಡಿನಾದ್ಯಂತ ಅರಮನೆ, ಗುರುಮನೆ, ಸಾಹಿತ್ಯಸಮ್ಮೇಳನಗಳು, ಸಂಗೀತಸಮ್ಮೇಳನ ಮುಂತಾಗಿ ಹಲವೆಡೆಗಳಲ್ಲಿ ವಾಚನ ನಡೆಸಿ ಶ್ರೋತೃಗಳ ಮೆಚ್ಚುಗೆಗೆ ಪಾತ್ರರಾಗಿ 'ಗಾನಸರಸ್ವತಿ' ಎನ್ನಿಸಿಕೊಂಡಿದ್ದಾರೆ ಶಕುಂತಲಾಬಾಯಿ.

ಶಕುಂತಲಾಬಾಯಿಯವರ ಪತಿ ಶ್ರೀ ಪಾಂಡುರಂಗರಾಯರೂ ಓರ್ವ ಸಾಹಿತಿ. ಪತ್ರಿಕೋದ್ಯಮಿ, ಅಲ್ಲದೆ ನುರಿತ ಅಧ್ಯಾಪಕರಾಗಿ ಅಧ್ಯಾಪಕರ ರಾಷ್ಟ್ರಪ್ರಶಸ್ತಿ ವಿಜೇತರೂ ಆಗಿದ್ದಾರೆ. ಶಿಸುಸಾಹಿತ್ಯಗಳನ್ನು ರಚಿಸಿದ ಪಾಂಡುರಂಗರಾಯರು ಒಂದು ಮಕ್ಕಳ ಮಂಟಪವನ್ನೇ ನಡೆಸುತ್ತಿದ್ದರು. ಈ ಮಕ್ಕಳಮಂಟಪದ ಆಶ್ರಯದಲ್ಲೂ ಮತ್ತು ಪರಿಷತ್ತಿನ ಆಶ್ರಯದಲ್ಲೂ ಶಕುಂತಲಾಬಾಯಿಯವರು ಗಮಕ ತರಗತಿಗಳನ್ನು ನಡೆಸಿದ್ದಾರೆ, ಅಲ್ಲದೆ ಹಲವು ಶಿಷ್ಯರನ್ನೂ ಹೊಂದಿದ್ದಾರೆ. ಗಮಕದ ಅಭಿವೃದ್ಧಿಗಾಗಿ ಸಾಹಿತ್ಯ ಪರಿಷತ್ತಿಗೆ ಈಕೆ ಸಾವಿರಪೈನೂರು ರೂಪಾಯಿಯ ನಿಧಿಯೊಂದನ್ನು ನೀಡಿದ್ದಾರೆ.

ಈಗ್ಗೆ ಕೆಲವು ವರ್ಷಗಳ ಹಿಂದೆ ಒಂದು ದಸರೆಯ ಕಾಲಕ್ಕೆ ಗಮಕಕಲೆಯ ಪ್ರಚಾರದ ದೃಷ್ಟಿಯಿಂದ ನಮ್ಮ ಕರ್ಣಾಟಕಸಂಘದ ವತಿಯಿಂದ ಇವರನ್ನು ನಮ್ಮ ಜಿಲ್ಲೆಗೆ ಬರಮಾಡಿಕೊಂಡು ನಾಲ್ಕಾರು ಕಡೆ ಕಾರ್ಯಕ್ರಮಗಳನ್ನು ಏರ್ಪಡಿಸಿದ್ದೆವು. ಮಣಿಪಾಲದ ಸಾಹಿತ್ಯಸಮ್ಮೇಳನ, ಕಾಸರಗೋಡು ಸಾಹಿತ್ಯಸಮ್ಮೇಳನಗಳಲ್ಲೂ ಈಕೆ ಭಾಗಿಯಾಗಿದ್ದರು. ಧರ್ಮಸ್ಥಳದ ಸಾಹಿತ್ಯಸಮ್ಮೇಳನದಲ್ಲೂ ಈಕೆಯ ಕಾರ್ಯಕ್ರಮವಿತ್ತು.

ದುಃಖದ ಸಂಗತಿ ಎಂದರೆ ಇಂದು ಪ್ರಾಚೀನ ಕಾವ್ಯಗಳ ವಾಚನಕ್ಕಿಂತ ಆಧುನಿಕ ಕಾವ್ಯಗಳ ವಾಚನಕ್ಕೇ ಪ್ರಾಶಸ್ತ್ಯ ಹೆಚ್ಚಿದೆ. ನಮ್ಮ ಮಂಗಳೂರು ಆಕಾಶವಾಣಿಯವರೂ ಭಾರತ ವಾಚನದ ಕಾರ್ಯಕ್ರಮ ಪ್ರಸಾರ ಮಾಡಿದ್ದು ನನಗೆ ತಿಳಿಯದು.

ಇದೇ 1981ರ ಏಪ್ರಿಲ್ 25ರಂದು ಶಕುಂತಲಾಬಾಯಿಯವರು ಅರವತ್ತು ತುಂಬಿ ಅರವತ್ತೊಂದರಲ್ಲಿ ಕಾಲಿಟ್ಟಿದ್ದಾರೆ.

ಆ ವೇದಪುರುಷನ ಸುತನಾದ ಆದಿಮೂರುತಿ ಗದುಗಿನ ವೀರನಾರಾಯಣನು ತನ್ನ ಕಾವ್ಯವನ್ನು ಮೆರೆಸಿದ ಶಕುಂತಲಾಬಾಯಿಯವರನ್ನು ಸಲಹಲಿ.

ಗಮಕಾನಂದಮಯಿ

ಬಸವೇಶ್ವರ ಶಿವಪ್ಪ ತುಪ್ಪದ ಗದಗ

ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾವ್ ಅವರ ಹೆಸರನ್ನು ಅವರ ಗಮಕ ಶೈಲಿಯನ್ನು ನಾನು ಹಲವು ವರ್ಷಗಳಿಂದ ಅನೇಕರ ಮುಖದಿಂದ ಪತ್ರಿಕೆಯ ವರದಿಯಿಂದ ಕೇಳಿ ತಿಳಿದಿದ್ದೆ, ಪ್ರತ್ಯಕ್ಷ ಕಂಡಿರಲಿಲ್ಲಾ. ಹತ್ತು ವರುಷಗಳ ಕೆಳಗೆ ಶ್ರೀ ಸರ್ಪಭೂಷಣ ಶಿವಯೋಗೀಶ್ವರರ ಮಠದಲ್ಲಿ ಚಾಮರಸನ ಪ್ರಭುಲಿಂಗಲೀಲೆಯನ್ನು ಕೇಳುವ ಸುಯೋಗ ಒದಗಿದಾಗ್ಗೆ, ಬ್ರಾಹ್ಮಣರಾದ ಇವರು ವೀರಶೈವ ಸಾಹಿತ್ಯವನ್ನು ಸಹ ಅಷ್ಟೇ ಸರಾಗವಾಗಿ ಸರಳವಾಗಿ ಗಮಕ ಶೈಲಿಯಿಂದ ಓದುವದನ್ನು ಕೇಳಿ ಆಶ್ಚರ್ಯವಾಯಿತು. ಈಗ ಒಂದು ವರುಷದ ಕೆಳಗೆ ಯುಗಾದಿಯ ಸಮಯದಲ್ಲಿ ಅದೇ ಮಠದಲ್ಲಿ ನನಗೆ ಸನ್ಮಾನವನ್ನು ಇಟ್ಟುಕೊಂಡ ಸಮಯದಲ್ಲಿ ನಾನು ಬರೆದ ಶ್ರೀ ಬಸವದರ್ಶನಂ ಮಹಾಕಾವ್ಯದ ವಾಚನವನ್ನು ಇವರು ಮಾಡುತ್ತಾರೆಂದು ತಿಳಿಯಿತು. ಇಳಿ ವಯಸ್ಸಿನವರೂ, ಈ ಬಸವದರ್ಶನದ ಅಭ್ಯಾಸವಿಲ್ಲದವರೂ ಆದ ಇವರು ಹೇಗೆ ಓದಬಲ್ಲರೆಂದು ಅನುಮಾನವಾಯಿತು. ಆದರೂ, ವಾಣಿಯ ಮಧುರತೆಯುಳ್ಳ ಇವರು ಹೇಗಾದರೂ ಓದಲಿ, ತುಂಬಿಕೊಳ್ಳುತ್ತದೆ ಎಂದು ಭಾವಿಸಿದೆ. ಈ ಕಾವ್ಯವನ್ನು ಜೋಳದರಾಶಿ ಶ್ರೀ ದೊಡ್ಡಣ್ಣಗೌಡರು ತಮ್ಮ ಊರಲ್ಲಿ ಒಂದು ವಾರ ಪ್ರವಚನ ನಡೆಸಿದ್ದು ಕೇಳಿದ್ದೇನೆ. ಅಷ್ಟು ಸಮರ್ಥರೇ ಇವರು ಎಂದು ಶಂಕಿಸಿದೆ. ಆದರೆ ಆದದ್ದೇ ಬೇರೆ.

ಕವಿಗಳ ಪರೋಕ್ಷದಲ್ಲಿ ಕಾವ್ಯವನ್ನು ಓದುವುದಕ್ಕಿಂತಲೂ ಕವಿಗಳ ಪ್ರತ್ಯಕ್ಷದಲ್ಲಿ ಅವರದೇ ಕೃತಿಗಳನ್ನು ಪರಕಾಯ ಪ್ರವೇಶದಂತೆ ತಮ್ಮ ಭಾವಕ್ಕೆ ತಂದು, ರಾಗಕ್ಕೆ ಅಳವಡಿಸಿಕೊಂಡು ವಾಚನ ಮಾಡಿದ್ದನ್ನು ಈ ಬಸವದರ್ಶನದ ಮುಖಾಂತರ ಕೇಳಿ ಮುಗ್ಧನಾದೆನು. ನನಗೆ ನಾನೇ ತಿಳಿಯದಷ್ಟು ವಿಸ್ಮಿತನಾದೆ. ಸಾಹಿತ್ಯ ಸಂಗೀತ ಕಲೋಪಾಸಕರಿಗೆ ಜಾತಿ ಮತ ಪಂಥಗಳು ಕೀಳೆಂಬುವ ಅನುಭವವು ದಿಟವಾಯಿತು. ಗಮಕವೆಂದರೇನೆಂಬುದನ್ನು ಅರಿಯದ ವಯಸ್ಸಿನಲ್ಲಿ ಭಾರತ ಬಿಂದೂರಾಯರ ವಾಚನವನ್ನು ಕೇಳಿದ್ದೆ. ಈಗ ಅವರ ಶಿಷ್ಯೆಯರಾದ ಶ್ರೀಮತಿ ಶಕುಂತಲಾಬಾಯಿಯವರಿಂದ ಕಾವ್ಯವಾಚನವನ್ನು ಕೇಳಿ ಆನಂದಿಸುತ್ತಿದ್ದೇವೆ.

ಶ್ರೀಮತಿಯವರಿಗೆ ಯಾವುದೇ ಕಾವ್ಯವು ಛಂದೋಬದ್ಧವಾಗಿಯೂ ಪ್ರೌಢವಾಗಿಯೂ, ವಿಷಯಭರಿತವಾಗಿಯೂ ಇದ್ದರೆ ಆಯಿತು, ಇವರ ಶ್ರೀಕಂಠದಲ್ಲಿ ಲಲಿತವಾಗಿ ಸಾಗುತ್ತದೆ. ತಂಬೂರಿಯ ಶ್ರುತಿಯಲ್ಲಿ ಇವರ ಕಂಠಮಾಧುರ್ಯವು ಒಂದಾಗಿ ತಾನ ಸಂತಾನ ತೆರೆಗಳು ತಾವಾಗಿ ನರ್ತಿಸುತ್ತವೆ. ಕಾವ್ಯ-ವಿಷಯಾರ್ಥ ಪದವಿನ್ಯಾಸ ವೈಖರಿಯ ಗತಿಯನ್ನು ಕಾಣುವದು, ಕೇಳುವದು, ಅನುಭವಿಸುವದು ಆನಂದಿಸುವದು. ಈ ಸ್ಪಂದನಾವಸೆಯ ಸುಖವನ್ನು ಅರಿಯದವರು ಸಹ ಅರಿತು ಮೋದಿಸುತ್ತಾರೆ. ಈ

ದೈವದತ್ತ ಗಮಕ ಮೋಡಿಯನ್ನು ಶ್ರೀಮತಿ ಶಕುಂತಲಾಬಾಯಿಯವರಲ್ಲಿ ಕಂಡು ನಲಿದಿದ್ದೇನೆ. ಈಗ ಇವರಿಗೆ ಅರುವತ್ತು ವರುಷಗಳಾಗಿದ್ದರೂ ಧ್ವನಿಯು ಇಂಪಾಗಿಯೇ ಇದೆ. ಶೈಲಿ ಗಂಭೀರವಾಗಿಯೇ ಇದೆ. ಸದಾ ಹಸನ್ಮುಖಿಯಾದ ಇವರಿಗೆ ತಕ್ಕ ಪತಿ ಶ್ರೀ ಪಾಂಡುರಂಗರಾಯರು, ವಿದ್ಯಾವಂತರೂ ಸಾಹಿತ್ಯಾನುಭವಿಗಳಾಗಿದ್ದು, ಶ್ರೀಮತಿ ಯವರ ವಾಚನಗಳಲ್ಲಿ ಅಲ್ಲಲ್ಲಿ ವಿವರಣೆ ಕೊಡುತ್ತಾ ಹೋಗುವ ಅಭ್ಯಾಸಪೂರ್ಣ ಮಾದರಿಯು ಸರ್ವಗ್ರಾಹ್ಯವಾಗಿದೆ.

ಪ್ರಾಚೀನ ಅರ್ವಾಚೀನ ಕಾವ್ಯಗಳೆರಡನ್ನೂ ಸಮರ್ಥ ರೀತಿಯಿಂದ ವಾಚಿಸುವ ಇವರಿಗೆ ಪರಮಾತ್ಮನು ಹೆಚ್ಚಿನ ಆಯುರಾರೋಗ್ಯ ಭಾಗ್ಯವನ್ನು ಕೊಟ್ಟು ಕನ್ನಡ ನಾಡಿಗೆ ಕೀರ್ತಿ ತರಲೆಂದು ಪ್ರಾರ್ಥಿಸುತ್ತೇನೆ.

ಗಮಕ ರಂಗದ ಹಿರಿಯಕ್ಕ

ಎಚ್. ಎಸ್. ಪಾರ್ವತಿ

ಕರ್ನಾಟಕದ ಒಂದು ಹಳ್ಳಿಯ ಜನಕ್ಕೂ ಗದುಗಿನಭಾರತ, ಜೈಮಿನೀಭಾರತಗಳ ಕಥೆ ಗೊತ್ತು, ಹಿಂದೂ ಧರ್ಮದ ಮೂಲ ತತ್ವಗಳು ಅವರಿಗೇ ಅರಿವಿಲ್ಲದಂತೆ ಅವರ ರಕ್ತದಲ್ಲಿ ಬೆರೆತು ಹೋಗಿವೆ. ಆಶ್ಚರ್ಯದ ಸಂಗತಿಯೆಂದರೆ, ಈ ಜನರಲ್ಲಿ ಶೇಕಡಾ ಎಪ್ಪತ್ತೈದು ಭಾಗ ಓದುಬರಹ ಅರಿಯದವರು. ಆದರೂ ಇಂಥ ಶ್ರೇಷ್ಠ ಕಾವ್ಯಗಳ ಪರಿಚಯ ಇವರಿಗೆ ಆಗಿದ್ದಾದರೂ ಹೇಗೆ ? ನಿಜ, ಈ ಕಾವ್ಯಗಳನ್ನವರು ತಾವಾಗಿಯೇ ಓದಿಕೊಂಡವರಲ್ಲ. ಆದರೆ ಹತ್ತಾರು ಬಾರಿ ಬೇರೆಯವರ ಬಾಯಿಂದ ಕೇಳಿದ್ದರಿಂದ, ತಾವೇ ಓದಿದ್ದಕ್ಕಿಂತ ಹೆಚ್ಚಾಗಿ ಆ ಜನರಿಗೆ ಈ ಕಾವ್ಯಗಳ ಪರಿಚಯವಾಗಿದೆ. ಹೀಗೆ ಕವಿ ಮತ್ತು ಜನತೆಯ ಮಧ್ಯೆ ಕಾವ್ಯವಾಹಕನಾದವನು ಗಮಕಿ.

ನಮ್ಮ ನಾಡಿಗೇ ವಿಶಿಷ್ಟವಾದ ಈ ಗಮಕಕಲೆ ಆರಂಭವಾದದ್ದು ಎಂದೋ ನಿರ್ದಿಷ್ಟವಾಗಿ ತಿಳಿಯದು. ಆದರೆ ನಮ್ಮ ಕನ್ನಡದ ಒಂದು ಅತಿ ಪ್ರಾಚೀನ ಶಾಸನದಲ್ಲಿಯೇ ಗಮಕಿಯ ಪ್ರಸ್ತಾಪವಿದೆ.

'ಕವಿ ಗಮಕಿ ವಾದಿ ವಾಗ್ಮಿ ಸಂಸ್ತೂಯಮಾನ'–ಎಂದು ಆ ಶಾಸನ ಕವಿ,ಗಮಕಿಯನ್ನೂ ಕವಿಯ ಸಾಲಿನಲ್ಲೇ ನಿಲ್ಲಿಸಿ ಗೌರವಿಸಿದ್ದಾನೆ. ವಿದ್ಯೆ ಇಲ್ಲದವರಿಗೂ ಕಾವ್ಯಾನಂದವನ್ನು ನೀಡಬಲ್ಲ ಗಮಕಿಗೆ ಆ ಸ್ಥಾನ ದೊರಕಿರುವುದು ಉಚಿತವಾಗಿಯೇ ಇದೆ. ನಮ್ಮ ಕಾವ್ಯಗಳಲ್ಲೂ ಅಲ್ಲಲ್ಲಿ ಗಮಕಿಗಳ ಪ್ರಸ್ತಾಪ ಬರುತ್ತದೆ (ಆದರೆ ಮೈಸೂರೊಡೆಯರ ಕಾಲದವರೆಗೆ ಯಾವ ಕವಿಯೂ, ಯಾವ ಖ್ಯಾತ ಗಮಕಿಯ ಹೆಸರನ್ನೂ ಹೇಳಿಲ್ಲವೇಕೆ ಎನ್ನುವುದೇ ಆಶ್ಚರ್ಯ).

ಗಮಕ ವಿದ್ವಾಂಸರಂತೆ ಹಿಂದಿನಿಂದಲೂ ಗಮಕ ವಿದುಷಿಯರು ಇದ್ದರೆಂಬುದು ಭರತೇಶ ವೈಭವ–ಮುಂತಾದ ಕಾವ್ಯಗಳಿಂದ ವ್ಯಕ್ತವಾಗುತ್ತದೆ.

ಏನಾದರಾಗಲಿ, ಗಮಕ ಸಾಹಿತ್ಯ, ಸಂಗೀತ ಎರಡನ್ನೂ ಅರಗಿಸಿಕೊಂಡ ವಿಶಿಷ್ಟ ಹಾಗೂ ಉಪಯುಕ್ತ ಕಲೆ. ಇಂತಹ ಕಲೆಯ ಆರಾಧಕರಲ್ಲಿ ಕನ್ನಡದಲ್ಲಿ ಬಹು ಜನ ಪ್ರಿಯವಾದ ಹೆಸರು ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾವ್ ಅವರದು. ಈ ವರ್ಷ ಅವರಿಗೆ ಅರವತ್ತು ತುಂಬಿತಂತೆ ; ಆದರೆ ಅವರ ಧ್ವನಿಗೆ ಆ ವಯಸ್ಸಿನ ಝಳ ಕೂಡಾ ಸೋಂಕಿಲ್ಲ. ಇಪ್ಪತ್ತು ವರ್ಷಗಳ ಹಿಂದೆ ಹಾಡಿದಷ್ಟೇ ಸಲೀಸಾಗಿ, ನಿರಾಯಾಸವಾಗಿ ಇಂದೂ, ಆಕೆ ಕಾವ್ಯವಾಚನ ಮಾಡುತ್ತಾರೆ.

ಸುಶ್ರಾವ್ಯ ಕಂಠವನ್ನು ಹುಟ್ಟಿನಿಂದಲೇ ಪಡೆದಿರುವ ಶಕುಂತಲಾಬಾಯಿಯವರು ತುಂಬಾ ಚಿಕ್ಕಂದಿನಿಂದಲೇ ಬೇರೆಯವರ ಮನ ತಣಿಸುವಂತೆ ಹಾಡಬಲ್ಲವರಾಗಿದ್ದರು ಶಾಲೆಯಲ್ಲಿ ಓದುತ್ತಿದ್ದಾಗಲೇ ನಾಟಕಗಳಲ್ಲಿ ಭಾಗವಹಿಸುತ್ತಿದ್ದರು. ಬೆಂಗಳೂರಿನ ಅರಮನೆಯಲ್ಲಿ ನಾಟಕವಾಡಿ ಮಹಾರಾಣಿಯವರಿಂದ ಬಹುಮಾನವನ್ನು ಪಡೆದಿದ್ದರು.

ವಿವಾಹಾನಂತರ ಪತಿ ಪಾಂಡುರಂಗರಾಯರ ಪ್ರೋತ್ಸಾಹದಿಂದಾಗಿ 'ಭಾರತ ವಾಚನ ಪ್ರವೀಣ' ಎನ್ನಿಸಿಕೊಂಡಿದ್ದ ಪೂಜ್ಯ ಬಿಂದುರಾಯರಲ್ಲಿ ಶಕುಂತಲಾಬಾಯಿಯವರಿಗೆ ಗಮಕಕಲೆಯ ಪಾಠವಾಯಿತು. ನಾಲ್ಕಾರು ವರ್ಷ ಕರ್ನಾಟಕ ಸಂಗೀತವನ್ನು ಅಭ್ಯಾಸ ಮಾಡಿದರು.

ಈಗ ಕರ್ನಾಟಕದಲ್ಲಿ ಅನೇಕ ಜನ ಗಮಕಿಗಳಿದ್ದಾರೆ. ಅನೇಕ ಜನ ಮಹಿಳೆಯರೂ ಈ ರಂಗದಲ್ಲಿ ಹೆಸರು ಗಳಿಸಿದ್ದಾರೆ. ಆದರೂ ಗಮಕ ಎಂದಕೂಡಲೇ ಮೊದಲು ನಮ್ಮ ಕಣ್ಣಮುಂದೆ ಬಂದು ನಿಲ್ಲುವ ಚಿತ್ರ ಶಕುಂತಲಾಬಾಯಿಯವರದು. ವಚನ ಕಾರ್ತಿಯರಲ್ಲಿ ಮಹಾದೇವಿ ಅಕ್ಕ ಎನ್ನಿಸಿಕೊಂಡಂತೆ, ಗಮಕರಂಗದಲ್ಲಿ ಈಕೆ ಎಲ್ಲರ ಹಿರಿಯಕ್ಕ. ಇದಕ್ಕೇನು ಕಾರಣ? ಅನೇಕ ವರ್ಷಗಳಿಂದ ಈ ರಂಗದಲ್ಲಿ ದುಡಿಯುತ್ತಿರುವುದಷ್ಟೇ ಅಲ್ಲದೆ ಶಕುಂತಲಾಬಾಯಿಯವರಲ್ಲಿ ಮಿಕ್ಕವರನ್ನು ಮೀರಿಸುವ ಹಲವು ವಿಶೇಷತೆಗಳಿವೆ.

ಮೊದಲನೆಯದಾಗಿ ಶಕುಂತಲಾಬಾಯಿ ಪ್ರಯೋಗಶೀಲೆ. ಹಿಂದೆ ಗಮಕವಾಚನ ಎಂದರೆ ಜನ ಅರ್ಥ ಮಾಡಿಕೊಳ್ಳುತ್ತಿದ್ದುದು ಭಾರತವಾಚನವೆಂದೇ. ಅದರೊಂದಿಗೆ ಜೈಮಿನಿಭಾರತ, ತೊರವೆರಾಮಾಯಣ ಬಹಳ ಹೆಚ್ಚೆಂದರೆ ರಾಘವಾಂಕನ ಹರಿಶ್ಚಂದ್ರಕಾವ್ಯ. ಒಟ್ಟಿನಲ್ಲಿ ಷಟ್ಪದಿ ಕಾವ್ಯಗಳು ಮಾತ್ರವೇ ಗಮಕಕ್ಕೆ ಒಗ್ಗುವುದೆಂಬ ನಂಬಿಕೆ ಗಮಕಿಗಳಿಗಿತ್ತು. ಇದರಲ್ಲಿ ಬದಲಾವಣೆಯನ್ನು ಮಾಡಿಕೊಳ್ಳುವ ಎದೆಗಾರಿಕೆಯನ್ನು ತೋರಿಸಿದವರು ಶಕುಂತಲಾಬಾಯಿಯವರು ಎಂದರೆ ತಪ್ಪಲ್ಲ. ೧೯೩೮ರ ಹೊತ್ತಿಗೇ ಚಾಮರಸನ ಪ್ರಭುಲಿಂಗಲೀಲೆಯ ವಾಚನ ಮಾಡಿದ್ದಲ್ಲದೆ, ಸಂದರ್ಭೋಚಿತವಾಗಿ ಅಲ್ಲಲ್ಲಿ ಬಸವಣ್ಣ, ಚೆನ್ನಬಸವಣ್ಣ, ಅಕ್ಕಮಹಾದೇವಿ ಮುಂತಾದವರ ವಚನಗಳನ್ನೂ ಸೇರಿಸಿಕೊಂಡು ಗಮಕವಾಚನದಲ್ಲಿ ಹೊಸ ಪ್ರಯೋಗವನ್ನೇ ಮಾಡಿದರು. ಅದೇ ವರ್ಷ ಬಿ.ಎಂ.ಶ್ರೀಯವರ 'ಕನ್ನಡ ತಾಯನೋಟ'ವನ್ನು ವಾಚಿಸಿ ಸ್ವತಃ ಬಿ.ಎಂ.ಶ್ರೀಯವರಿಗೆ ಆಶ್ಚರ್ಯವನ್ನುಂಟು ಮಾಡಿದರು. ಚಂಪೂಕಾವ್ಯಗಳು, ರಗಳೆಗಳು ಹೀಗೆ ಎಲ್ಲ ಛಂದಸ್ಸಿನ ಹಳೆಯ ಕಾವ್ಯಗಳನ್ನು ಮಾತ್ರವಲ್ಲದೆ ಗೋವಿಂದ ಪೈಗಳ ಗೋಲ್ಗೊಥ, ವೈಶಾಖಿ, ಕುವೆಂಪುರವರ ರಾಮಾಯಣದರ್ಶನ, ತುಳಸೀ ರಾಮಾಯಣದ ಅನುವಾದ, ಮಾಸ್ತಿಯವರ 'ಶ್ರೀರಾಮಪಟ್ಟಾಭಿಷೇಕ.' ಹೀಗೆ ಆಧುನಿಕ ಯುಗದಲ್ಲಿ ರಚಿತವಾದ ಕಾವ್ಯಗಳನ್ನೂ ಓದಿ ಕವಿಗಳಿಂದಲೇ ಮೆಚ್ಚುಗೆ ಪಡೆದಿರುವ ಸಾಹಸಿ ಈಕೆ. ಕನ್ನಡದ ಯಾವ ಕಾವ್ಯವನ್ನಾದರೂ ಶಕುಂತಲಾಬಾಯಿ ಅರ್ಥವತ್ತಾಗಿ ವಾಚನ ಮಾಡಬಲ್ಲರು ಎಂದು ಧೈರ್ಯವಾಗಿ ಹೇಳಬಹುದು. ಇಷ್ಟೇ ಅಲ್ಲ, ಒಂದೇ ವಸ್ತುವಿನ ಮೇಲೆ ವಿವಿಧ ಕವಿಗಳು ಮಾಡಿರುವ ವರ್ಣನೆಗಳನ್ನು ಸಂಗ್ರಹಿಸಿ ಕವಿಕಾವ್ಯ ಪರಂಪರೆ ಎನ್ನುವ ಶೀರ್ಷಿಕೆಯಡಿಯಲ್ಲಿ ಕಾರ್ಯಗಳನ್ನು ನಡೆಸಿದ್ದಾರೆ. ಒಟ್ಟಿನಲ್ಲಿ ಯಾವುದಾದರೊಂದು ಪ್ರಯೋಗವನ್ನು ನಡೆಸುತ್ತಿರುವುದರಲ್ಲಿ ಶ್ರೀಮತಿಯವರಿಗೆ ವಿಶೇಷ ಆಸಕ್ತಿ.

ಕಲೆಯ ಪ್ರಯೋಗದಲ್ಲಿ ಪರಿಣತರಾಗಿದ್ದರೂ ಅನೇಕ ಜನ ಕಲಾವಿದರಿಗೆ ತಾವು ಪ್ರಯೋಗಿಸುತ್ತಿರುವ ಕಲೆಯ ಬಗ್ಗೆ ಸರಿಯಾದ ತಿಳುವಳಿಕೆ ಇರುವುದಿಲ್ಲ. ಆದರೆ

ಶಕುಂತಲಾಬಾಯಿ ಈ ಮಾತಿಗೆ ಹೊರತಾದವರು. ಅವರಿಗೆ ಗಮಕಕಲೆಯ ಬಗ್ಗೆ ಸ್ಪಷ್ಟ ನಿಲುವಿದೆ.

"ಗಮಕ, ಸಂಗೀತ ಸಾಹಿತ್ಯಗಳೆರಡನ್ನು ಆಧರಿಸಿ ನಿಂತಿರುವ ಕಲೆ. ಈ ಎರಡೂ ಕಲೆಗಳ ಜ್ಞಾನ ಗಮಕ ವಿದ್ಯಾರ್ಥಿಗೆ ಎಷ್ಟರಮಟ್ಟಿಗೆ ಇರಬೇಕು" ಎನ್ನುವ ಪ್ರಶ್ನೆಗೆ ಶಕುಂತಲಾಬಾಯಿಯವರ ಉತ್ತರ ಇದು.

"ಗಮಕ ಕಲಿಯುವವರಿಗೆ ಸಂಗೀತದಲ್ಲಿ ತಕ್ಕಮಟ್ಟಿಗಾದರೂ ಜ್ಞಾನ ಇರಲೇ ಬೇಕು. ಅಂದರೆ ರಾಗಗಳನ್ನು ಗುರುತಿಸಿ ಭಾವಕ್ಕೆ ತಕ್ಕಂತೆ ಅದನ್ನು ಉಪಯೋಗಿಸಿ ಕೊಳ್ಳಬಲ್ಲ ಸಾಮರ್ಥ್ಯ ಇರಬೇಕು. ಈ ಸಂದರ್ಭದಲ್ಲಿ ಗಮಕಿಗಳು ನೆನಪಿನಲ್ಲಿಡ ಬೇಕಾದ ಒಂದು ಅಂಶವೆಂದರೆ ಸಂಗೀತ ಹಿನ್ನೆಲೆಯಲ್ಲಿ ಇರಬೇಕೇ ಹೊರತು ಅದೇ ಪ್ರಧಾನವಾಗಿ ಸಾಹಿತ್ಯದ ಭಾಗವನ್ನು ಕುಂದಿಸುವಂತೆ ಆಗಬಾರದು. ಆಲಾಪನೆ, ರಾಗಪ್ರಸ್ತಾರ ಇವುಗಳಂತೂ ಗಮಕವಾಚನದಲ್ಲಿ ನಿಷಿದ್ಧವೇ ಸರಿ.

"ಇನ್ನು ಸಾಹಿತ್ಯಜ್ಞಾನ ಗಮಕಿಗೆ ಎಷ್ಟಿದ್ದರೂ ಒಳ್ಳೆಯದೇ. ಕಡಿಮೆಯೆಂದರೆ ಸಮಾಸ ಪದಗಳನ್ನು ಒಡೆದು ಅನ್ವಯಾನುಕ್ರಮದಲ್ಲಿ ವಾಚಿಸಿ ಅರ್ಥ ಹೇಳುವ ಮಟ್ಟಿ ಗಾದರೂ ಸಾಹಿತ್ಯಜ್ಞಾನ ಬೇಕೇಬೇಕು. ಇಷ್ಟಲ್ಲದೆ ರಸ, ಭಾವಗಳ, ವ್ಯಾಕರಣ–ಛಂದಸ್ಸುಗಳ ಪರಿಚಯವಿದ್ದರೆ ವಾಚನ ಸುಲಭವಾಗುತ್ತದೆ."

"ಉತ್ತಮ ಗಮಕಿಗೆ ಇರಬೇಕಾದ ಲಕ್ಷಣಗಳೇನು?"

"ಮೊದಲನೆಯದಾಗಿ ಇಂಪಾದ ಶಾರೀರ, ಏರಿಸಲು ಇಳಿಸಲು ಅನುಕೂಲವಾದ ಶಾರೀರ. ಇದರ ಜೊತೆಗೆ ರಸಭಾವಕ್ಕೆ ತಕ್ಕಂತೆ ಧ್ವನಿಯಲ್ಲಿ ಮಾರ್ಪಾಡು ಮಾಡಿ ಕೊಳ್ಳುವ ಶಕ್ತಿಬೇಕು. ಶಬ್ದಗಳ ಉಚ್ಚಾರಣೆಯಲ್ಲಿ ಶುದ್ಧತೆಬೇಕು. ಅಲ್ಪಪ್ರಾಣ, ಮಹಾಪ್ರಾಣ, ಅಕಾರ, ಹಕಾರಗಳು ಸ್ಪಷ್ಟವಾಗಿರಬೇಕು."

ಕವಿ ಶ್ರಮವಹಿಸಿ ರಚಿಸಿದ ಕಾವ್ಯದ ರಸಭಾವಗಳು ಕೆಡದಂತೆ, ಓದುಬಾರ ದವರೂ, ಕಾವ್ಯವನ್ನು ಓದುವಶಕ್ತಿ ಇಲ್ಲದವರೂ, ಅದರ ಸೊಬಗನ್ನು ಸವಿಯಲು ನೆರವಾಗಬಲ್ಲ ಗಮಕಿಗಳು, ಕವಿಗಳಿಗೂ ಜನತೆಗೂ ಸಂಬಂಧ ಕಲ್ಪಿಸುವ ಸೇತುವೆಯಂತೆ. ಇಂಥದೊಂದು ಶ್ರೇಷ್ಠ ಕಲೆಯ ಆರಾಧಕಿಯಾಗಿ ಸೇವೆಸಲ್ಲಿಸುತ್ತಿರುವ ಶಕುಂತಳಾಬಾಯಿ ಯವರನ್ನು ಜನ ಗುರುತಿಸಿದ್ದಾರೆ ಎನ್ನುವುದೊಂದು ಸಂತೋಷದ ವಿಚಾರ. ಸ್ವತಃ ಕವಿಗಳೇ ತಮ್ಮ ಕಾವ್ಯವನ್ನು ಈಕೆಯ ಬಾಯಿಯಿಂದ ಕೇಳಿ ಮೆಚ್ಚುವುದಕ್ಕಿಂತ ಹೆಚ್ಚಿನ ಪ್ರಶಸ್ತಿ ಗಮಕಿಗೆ ಮತ್ತೇನು ಬೇಕು? ಅಂಥ ಪ್ರಶಸ್ತಿಯನ್ನಂತೂ ಶಕುಂತಳಾಬಾಯಿ ಯವರು ಧಾರಾಳವಾಗಿ ಪಡೆದಿದ್ದರೆ. ಇದಲ್ಲದೆ ಅನೇಕ ಸಂಸ್ಥೆಗಳೂ ಇವರಿಂದ ಕಾವ್ಯ ವಾಚನ ಮಾಡಿಸಿ ಮಂಗಳದ ದಿನ ಅಭಿನಂದನಾ ಪತ್ರಗಳನ್ನು ಅರ್ಪಿಸಿವೆ. 'ಗಾನ ಸರಸ್ವತಿ' "ಕಾವ್ಯವಾಚನಪ್ರವೀಣೆ" ಇತ್ಯಾದಿ ಪ್ರಶಸ್ತಿಗಳನ್ನೂ ಇತ್ತು ಗೌರವಿಸಿವೆ. 1969ರಲ್ಲಿ ಮೊದಲಬಾರಿಗೆ ಕರ್ನಾಟಕ ರಾಜ್ಯ ಸರ್ಕಾರ ಗಮಕಕಲೆಗೆ ಪ್ರಶಸ್ತಿ ನೀಡ ಲಾರಂಭಿಸಿತು. ಆ ವರ್ಷ ಮೊಟ್ಟಮೊದಲು ಈ ಪ್ರಶಸ್ತಿ ಪಡೆದವರು ಶಕುಂತಳಾಬಾಯಿ ಯವರು.

ಖ್ಯಾತ ಗಮಕಿಯಾಗಿರುವುದರ ಜೊತೆಗೆ ಈಕೆ ಉತ್ತಮ ಗೃಹಿಣಿ, ಅತಿಥಿ ಸತ್ಕಾರದಲ್ಲಿ ಆಸಕ್ತಿ. ಇಷ್ಟರ ಜೊತೆಗೆ ಗಮಕಕಲೆ–ಮಹಿಳೆ ಎನ್ನುವ ಪುಸ್ತಕವನ್ನು ಬರೆದಿದ್ದಾರೆ. ನಾಡಿನ ಕಿರು ಪರಿಚಯದೊಂದಿಗೆ ಮಹಿಳಾ ಗಮಕಿಗಳ ಪರಿಚಯವನ್ನು ಮಾಡಿಕೊಡುವ ಈ ಬರವಣಿಗೆಯಲ್ಲಿ ಶಕುಂತಳಾಬಾಯಿಯವರ ಸಹೃದಯತೆ ಎದ್ದು ಕಾಣುತ್ತದೆ.

ಒಂದು ವಿಚಾರದಲ್ಲಂತೂ ಶಕುಂತಳಾಬಾಯಿಯವರು ತುಂಬಾ ಅದೃಷ್ಟವಂತರು. ಅವರ ಪತಿ ಶ್ರೀ ಪಾಂಡುರಂಗರಾಯರಿಗೆ ಪತ್ನಿಯ ಕಲೆಯ ಬಗ್ಗೆ, ಅವರ ಯಶಸ್ಸಿನ ಬಗ್ಗೆ ಹಾರ್ದಿಕ ಅಭಿಮಾನ, ಮೆಚ್ಚುಗೆ. ಅದಕ್ಕಾಗಿ ತಮ್ಮಿಂದ ಸಾಧ್ಯವಾಗಬಲ್ಲ ಎಲ್ಲ ಪ್ರೋತ್ಸಾಹಗಳನ್ನು ಕೊಡುವ ಉತ್ಸಾಹ. ಪ್ರೋತ್ಸಾಹವೆಂದರೆ ಕೇವಲ ಬಾಯಿಮಾತಿನ ಪ್ರೋತ್ಸಾಹವಲ್ಲ. ಚಿಕ್ಕಂದಿನಿಂದ ಶಕುಂತಳಾಬಾಯಿಯವರ ಕಲೆಯ ಸಸಿಗೆ ನೀರೆರೆದು ಅದಿಂದು ಹೆಮ್ಮರವಾಗಿ ಬೆಳೆಯಲು ಕಾರಣರಾಗಿರುವವರೇ ಪಾಂಡುರಂಗರಾಯರು. ಇನ್ನು ಬಹುಕಾಲ ಈ ಕಲಾರಾಧಕ ದಂಪತಿಯಿಂದ ಕನ್ನಡ ಸರಸ್ವತಿಯ ಸೇವೆ ಸಲ್ಲುತ್ತಿರಲೆಂಬುದೇ ನನ್ನ ಹಾರೈಕೆ.

ವಾತ್ಸಲ್ಯಮಯಿ

ಚಿರಂತನ

ತೊಲಗಿತಾ ಓ ಲಕ್ಷ್ಮಣಾದಿನಂ; ಕಳೆದುದಾ
ಓ ಲಕ್ಷ್ಮಣಾ ರಾತ್ರಿ, ಮರುದಿನಂ ಬಿಟ್ಟರಾ
ಓ ಲಕ್ಷ್ಮಣಾ ಸ್ಮೃತಿಯ ಪಂಚವಟಿ ಧಾತ್ರಿಯಂ

ಪಂಚವಟಿಯನ್ನು ಬಿಟ್ಟು ಶಬರಿಯಲ್ಲಿಗೆ ನಡೆತಂದ ರಾಮಲಕ್ಷ್ಮಣರ ನಡೆ ನುಡಿಯ ನಡೆ ಸಾಗಿತ್ತು ಸುಮಧುರಕಂಠನಾದದಿಂದ. ಕರುಣರಸದ ಪ್ರವಾಹ ಕೇಳುಗರ ಮೈಮರೆಸಿತ್ತು. ಆ ಸ್ಪಷ್ಟವಾದ ಉಚ್ಚಾರಣೆ, ಏರಿಳಿತಗಳ-ಭಾವಗರ್ಭಿತವಾದ ಓದು, ರಾಗಲಯ ಬದ್ಧವಾದ ವಾಚನ-ಕೇಳುಗರನ್ನು ಶಬರಿಯಾಶ್ರಮಕ್ಕೆ ಕರೆದೊಯ್ದು 'ಆರಸಂಸದವಾರ್ಗೊ ನಿಮ್ಮ ಸಯ್ಪಿದನವರಿಗಾಂ ಬಡಿಸಲೇನಳವೆ !' ಎಂದು ಪ್ರಶ್ನಿಸುವಂತಿತ್ತು. ತಮ್ಮ 'ಸಯ್ಪಿ'ಗಾಗಿ ಕೇಳುಗರು ಧನ್ಯತೆಯ ತೃಪ್ತಿಯನ್ನನುಭವಿಸಿದ್ದರು.

ಈ ಅನುಭವ ನನಗಾದದ್ದು ಸುಮಾರು ಇಪ್ಪತ್ತು ವರುಷಗಳ ಹಿಂದಿನ ಒಂದು ದಿನ. ನೆಹರೂ ನಗರದ ಮಕ್ಕಳಮಂಟಪದ ಕೊಠಡಿಯೊಂದರಲ್ಲಿ ತಾಯಿ ಶಕುಂತಳಾ ಬಾಯಿಯವರ ಮಧುರ ಧ್ವನಿಯ ಗಮಕ ವಾಚನದ ಮೊದಲ 'ದರ್ಶನ'ವಾದುದು ಅಂದು. ಮಕ್ಕಳ ಸಾಹಿತ್ಯ ರಚನಾಲಯದಲ್ಲಿ ಭಾಗವಹಿಸಲು ಹೋಗಿದ್ದ ನನಗೆ ಹಿರಿಯರಾದ ಭಾರತೀಸುತ ಹಾಗೂ ಮಿರ್ಜಿ ಅಣ್ಣಾರಾಯರ ಸಹವಾಸದಿಂದ ಈ ಭಾಗ್ಯ ಅಂದು ದೊರೆಯಿತು. ಅಂದೇ ಶ್ರೀಮತಿ ಶಕುಂತಲಾಬಾಯಿಯವರಿಗೆ ಹಾಗೂ ಅವರ ಪತಿ ಶ್ರೀ ಪಾಂಡುರಂಗರಾಯರಿಗೆ ನನ್ನ ಶಿರಬಾಗಿತು.

ಅಂದಿನಿಂದಲೇ ಮಕ್ಕಳ ಮಂಟಪವು ಬೆಂಗಳೂರಿಗೆ ಹೋದಾಗಿನ ಸಂದರ್ಶನ ಸ್ಥಳವಾಗಿ ಪರಿಣಮಿಸಿತು. ಭಾರತೀಸುತರ ಜತೆಯಲ್ಲಿ ಪಾಂಡುರಂಗರಾಯರ ಮನೆಗೆ ಹೋಗುವುದು ಸರ್ವಸಾಮಾನ್ಯವಾದ ಮಾತಾಯಿತು. ನಾವೂ ಪ್ರಾಯಶಃ ಅವರ ಮನೆಯವರೇ ಆದಂತಾದೆವು ಎಂದರೆ ತಪ್ಪಾಗದು. ಇಷ್ಟೊಂದು ಗೌರವ ಪೂರ್ಣ ಆತ್ಮೀಯತೆ ಅಲ್ಲಿ ಬೆಳೆಯುವುದಕ್ಕೆ ಪಾಂಡುರಂಗರಾಯರ ನಿಷ್ಕಪಟ ಹೃದಯ ಹೇಗೋ ಹಾಗೆಯೇ ತಾಯಿ ಶಕುಂತಲಾಬಾಯಿಯವರ ಆದರ-ವಾತ್ಸಲ್ಯಗಳೂ ಕಾರಣವಾದುವು.

ಶಕುಂತಲಾಬಾಯಿಯವರು ಸುಮಧುರಕಂಠದ ಸಮರ್ಥಗಮಕ ಪ್ರವೀಣೆ ಯೆಂಬುದು ಕರ್ನಾಟಕಕ್ಕೇ ಪರಿಚಿತವಾದದ್ದು. ಆದರೆ ಆ ಕಂಠದ ಹಿನ್ನೆಲೆಯಲ್ಲಿರುವ ಆರ್ದ್ರಸಹೃದಯತೆಯನ್ನು ಬಲ್ಲವರು ಬಹಳಿಲ್ಲವೆಂದರೆ ಅಹಂಕಾರದ ಮಾತಾದೀತೆಂಬ ಹೆದರಿಕೆಯೂ ಇದೆ ನನಗೆ. ಆದರೂ ಅದು ಸತ್ಯ. ಅವರು ಮನೆಗೆ ಬಂದ ಅತಿಥಿಗಳಿಗೆ ಅನ್ನಪೂರ್ಣೆ. ಅವರದು ನಳಪಾಕವೆಂದರೆ ತಪ್ಪಲ್ಲ. ಭಾರತೀಸುತರೂ ನಾನೂ ಅವರ ಅಡುಗೆಯ ರುಚಿಯನ್ನು ಹಲವು ಬಾರಿ ಸವಿದಿದ್ದೇವೆ. ಭಾರತೀಸುತರು ಒಮ್ಮೆ ನನ್ನಲ್ಲಿ

ಹೇಳಿದ್ದುಂಟು "ಶಕುಂತಲಾಬಾಯಿಯವರ ಕಾವ್ಯವಾಚನವನ್ನು ಕೇಳಿದಾಗ ಕಾವ್ಯ ಸ್ರೋತದಲ್ಲಿ ನಾವು ಮೈಮರೆಯುವಂತೆ ಅವರು ಬಡಿಸಿದ ಊಟದಲ್ಲಿ ರಸಸ್ರೋತವಿರುತ್ತದೆ. ಆತ್ಮ ತೃಪ್ತಿಯಿರುತ್ತದೆ." ಭಾರತೀಸುತರ ಬಗ್ಗೆ ಶಕುಂತಳಾಬಾಯಿಯವರಿಗೆ ಆದರ ಅಭಿಮಾನ. ಭಾರತೀಸುತರಿಗೆ ಪಾಂಡುರಂಗರಾವ್ ದಂಪತಿಗಳ ಸಹವಾಸದಲ್ಲಿ ಸಂತೋಷ. ಪರೀಕ್ಷೆಯ ಕೆಲಸಕ್ಕೆ ಹೋದಾಗ–ರಚನಾಲಯಗಳಲ್ಲಿ ಭಾಗವಹಿಸಲು ಹೋದಾಗ ಬೆಂಗಳೂರಿನಲ್ಲಿ 'ಮಕ್ಕಳ ಮಂಟಪ' ನಮಗಾಸರೆ. ಪಾಂಡುರಂಗರಾವ್ ದಂಪತಿಗಳ ಆದರಾತಿಥ್ಯ ನಮಗೆ ನಿತ್ಯಚೇತನ.

ಪಾಂಡುರಂಗರಾಯರ ಜತೆ ನಡೆಯುತ್ತಿದ್ದುದು ಸಾಹಿತ್ಯ ಸಲ್ಲಾಪ. ಮಕ್ಕಳ ಸಾಹಿತ್ಯದ ಕುರಿತಾದ ಗಾಢವಾದ ಚಿಂತನೆ–ವಿಮರ್ಶೆ–ಟೀಕೆ–ಟಿಪ್ಪಣಿ. ಇವು ಭಾರತೀಸುತರು ಮಿರ್ಜಿಯವರು ಮಕ್ಕಳ ಮಂಟಪದಲ್ಲಿ ಕಲೆತಾಗ ನಡೆಯುತ್ತಿದ್ದ ಸಂಪ್ರದಾಯ. ಸುಮಾರು ಸಮವಯಸ್ಕರೇ ಆದ ಭಾರತೀಸುತ ಮತ್ತು ರಾಯರು ಸಾಹಿತ್ಯದ ಬಗೆಗೆ ತಮ್ಮ ತಮ್ಮ ವಾದಗಳನ್ನು ಮಂಡಿಸುತ್ತಿದ್ದರು–ಅನುಭವವನ್ನು ಹೇಳುತ್ತಿದ್ದರು. ರಾಯರಿಗೆ ಮಕ್ಕಳ ನಾಟಕದಲ್ಲಿ ಆಸಕ್ತಿ- ಪಾಪಚ್ಚಿಯನ್ನು ರಂಗಭೂಮಿಯಲ್ಲಿ ಕುಣಿಸಿದರೆ ಅವರಿಗೆ ಆನಂದ. ಅದಕ್ಕಾಗಿ ಅವರದು ಹಲವು ಯೋಜನೆಗಳು. ಅದನ್ನವರು ಹೇಳುತ್ತಿದ್ದಂತೆ ಮಕ್ಕಳ ಮಂಟಪದ ಹಲವು ಕಾರ್ಯಕ್ರಮಗಳೂ ನಮ್ಮ ಕಣ್ಣ ಮುಂದೆ ಬಂದು ನಿಲ್ಲುತ್ತಿದ್ದುವು. ಶಕುಂತಲಾಬಾಯಿಯವರೂ ಈ ಸಮಯವಲ್ಲಿ ಆಗಾಗ ಬಂದು ಸೇರುತ್ತಿದ್ದುದುಂಟು. ಸಾಹಿತ್ಯದಲ್ಲೂ ಅವರಿಗೆ ಅಪಾರ ಆಸಕ್ತಿ. ಆದರೆ ಅವರ ಚಿಂತನೆ ಕಾವ್ಯವನ್ನು ಅರ್ಥೈಸುವ ಬಗ್ಗೆ–ಅವಕ್ಕೆ ರಾಗವನ್ನಳವಡಿಸಿ ರಸಪೂರ್ಣಗೊಳಿಸುವ ಬಗ್ಗೆ. ಜತೆಗೆ ವಾದವಿವಾದಲ್ಲಿ ಮುಳುಗಿರುವ ನಮಗೆ ರಸಗವಳವನ್ನು ನೀಡುವ ಬಗ್ಗೆ. ಸಾಹಿತ್ಯ ಗಮಕ ಚಿಂತನೆಯ ಮಧ್ಯದಲ್ಲೂ ಮನೆಗೆಲಸ–ಅಡುಗೆ–ತಿಂಡಿತಿನಿಸುಗಳ ತಯಾರಿಕೆ. ಆದರಲ್ಲೂ ಅವರಿಗೆ ಬೇಸರ ವಿಲ್ಲ. ನಮ್ಮಂತಹ ನಾಲ್ಕಾರು ಜನ ಬಂದರೂ ಅವರ ಆತಿಥ್ಯ ಪ್ರೀತಿ ವಾತ್ಸಲ್ಯಗಳ ಆದರ ಇದ್ದೇ ಇದೆ. ಈ ಯಾವ ಸಂದರ್ಭಗಳೇ ಆಗಲಿ ಶಕುಂತಲಾಬಾಯಿಯವರು ಉದಾಸೀನ ತೋರಲಿಲ್ಲ. ಅತಿ ಪರಿಚಯ ಅವಜ್ಞೆಗೆಡೆ ಮಾಡುತ್ತದೆಯೆಂಬ ಮಾತು ಅವರಲ್ಲಿ ಸುಳ್ಳಾಗುತ್ತದೆ.

ತಮ್ಮ ಮನೆಗೆ ಬಂದಾಗ ಆದರಿಸುವ ಶಕುಂತಳಾಬಾಯಿಯವರು ಗೆಳೆಯರ ಮನೆಗೆ ಹೋದಾಗ ಬಿಗುಮಾನ ತೋರುವವರಲ್ಲ. ಮನೆಯವರೊಡನೆ ಮನೆಯವರಾಗಿ ಪರಿಣಮಿಸುವವರು. ಗಮಕ ವಾಚನಕ್ಕೆಂದು ಸೋಮವಾರ ಪೇಟೆಗೆ ನಾನೊಮ್ಮೆ ಈ ದಂಪತಿಗಳನ್ನು ಕರೆದಿದ್ದೆ. ಅವರು ನಮ್ಮ ಮನೆಯಲ್ಲೇ ತಂಗಬೇಕೆಂದು ಶರತವನ್ನೂ ಹಾಕಿದ್ದೆ. ಅವರದನ್ನೊಪ್ಪಿ ಆಗಮಿಸಿದರು. ದುರ್ದೈವ, ಆಗ ನಮ್ಮ ಮನೆಯಲ್ಲಿ ಮಕ್ಕಳಿಗೆ ತೀವ್ರ ಅನಾರೋಗ್ಯ. ನಮಗೆ ಸಂಕೋಚ, ಮನೆಗೆ ಬಂದ ಹಿರಿಯರನ್ನು ಆದರಿಸುವುದಾದರೂ ಎಂತು? ಜತೆಗೆ ಶಾಲೆಯ ಸಮಾರಂಭದ ವ್ಯವಸ್ಥೆಯ ಹೊಣೆ ಬೇರೆ. ತುಂಬ ಮುಜುಗರವೆನಿಸಿತು ಮನಸ್ಸಿಗೆ. ಆದರೆ ತಾಯಿ ಶಕುಂತಳಾಬಾಯಿಯವರು ಮನೆಗೆ ಬಂದು ಬರಿಯ ಅತಿಥಿಯಾಗಲಿಲ್ಲ. ಮನೆಯ ಮಕ್ಕಳನ್ನು ಸುಧಾರಿಸುವ

ಅಜ್ಜಿಯಾದರು ಅವರ ಪಾಲಿಗೆ. ಅನಾರೋಗ್ಯದಿಂದಿದ್ದ ಮಕ್ಕಳನ್ನು ಪ್ರೀತಿಯಿಂದ ಆಡಿಸಿದರು, ಧೈರ್ಯ ತುಂಬಿದರು. ಇದನ್ನು ಕಂಡಾಗ ನಾವು ದಂಗಾದೆವು. ಅವರಿದ್ದ ಎರಡು ದಿನ ನಮಗೆ ಸಂಕೋಚದ ಮಧ್ಯೆಯೂ ಶಾಂತಿ ದೊರಕಿಸಿತು. ಶಾಲೆಯಲ್ಲಿ-ಊರಿನಲ್ಲಿ ಶ್ರೀಮತಿಯವರ ಕಾವ್ಯವಾಚನ ಕೇಳಿ ಜನ ತೃಪ್ತರಾದರೆ ನಾವು ಅವರ ಮಾತೃಹೃದಯಕ್ಕಾಗಿ ಅನಂತ ನಮನಗಳನ್ನು ಸಲ್ಲಿಸುವಂತಾಯಿತು. ನಮ್ಮನ್ನು ಅವರ ತೀರ ಸನಿಹಕ್ಕೆ ಎಳೆದೊಯ್ದಂತಾಯಿತು. ಅವರನ್ನು ನಾವು ಹತ್ತಿರದಿಂದ ಕಾಣುವುದು ಸಾಧ್ಯವಾಯಿತು.

ಶ್ರೀಮತಿ ಶಕುಂತಳಾಬಾಯಿಯವರಾಗಲಿ-ಶ್ರೀ ಪಾಂಡುರಂಗರಾಯರಾಗಲಿ ಗಮಕವನ್ನು ಹಣಸಂಪಾದನೆಗಾಗಿ ವೃತ್ತಿ ಮಾಡಿಕೊಂಡವರಲ್ಲ-ಹಣಕ್ಕಾಗಿ ಅದನ್ನು ಮಾರಿಕೊಂಡವರಲ್ಲ. ಆತ್ಮೀಯರು-ಸ್ನೇಹಿತರು-ಅಭಿಮಾನಿಗಳು ಕರೆದಾಗ ಅಲ್ಲಿಗೆ ಹೋಗುವ-ಆತ್ಮ ತೃಪ್ತಿಯಿಂದ ಕಾವ್ಯವಾಚನ ಮಾಡುವ ಅವರು ಯಾವ ಪ್ರತಿ ಫಲಾಪೇಕ್ಷೆಯನ್ನು ಮುಂದು ಮಾಡಿಕೊಂಡವರಲ್ಲ. ಸ್ನೇಹಕ್ಕಾಗಿ ಅವರ ಪಯಣ. ಕೇಳುಗರ ಅಪೇಕ್ಷೆಗಾಗಿ ಅವರ ವಾಚನ. ಆತ್ಮ ತೃಪ್ತಿಗಾಗಿ ಅವರ ಕಲೋಪಾಸನೆ ನಾಲ್ಕೇ ಜನ ಸಹೃದಯರಿರಲಿ ಅವರು ಬಯಸಿದರೆ ಆ ತಾಯಿಯ ಕಂಠಶ್ರೀ ಅಲ್ಲಿ ಹೊಮ್ಮುವುದು. 'ಜನ ಬದುಕಬೇಕೆಂದು' ಕಾವ್ಯ ಮುಖದಿಂದ ಹೇಳಿರುವೆನೆಂದು ರಾಘವಾಂಕ ಹೇಳಿಕೊಂಡದ್ದು ಇವರಲ್ಲಿ ಸಾರ್ಥಕ. ಜನ ಬದುಕಬೇಕೆಂದೇ ಇವರು ಮಹಾ ಕವಿಗಳ ಕಾವ್ಯವನ್ನು ಜನರತ್ತ ಕೊಂಡೊಯ್ಯುತ್ತಿದ್ದಾರೆ. ಜನರು ಅದರ ಸವಿಯನುಣಲೆಂದು ಆ ರಸದೌತಣವನ್ನು ನೀಡುತ್ತಿದ್ದಾರೆ. ಇದರಿಂದ ಅವರ ಈ ಸೇವೆ ಜನ ಬದುಕಬೇಕೆಂದು ಮಾತ್ರವಲ್ಲ-ಕವಿ ಉಳಿಯಬೇಕು-ಕಲೆ ಮೆರೆಯಬೇಕು ಎಂಬುದಕ್ಕಾಗಿ. ಹಲವು ಪ್ರಶಸ್ತಿಗಳ ಸರಮಾಲೆಯನ್ನು ಹೊತ್ತ ಈ ದಂಪತಿಗಳು ಅಹಂಕಾರದಿಂದ ಮೆರೆಯುವುದಿಲ್ಲ ಪ್ರತಿಷ್ಠೆಯ ಜಂಭದಿಂದ ಮೆರೆದಾಡುವುದಿಲ್ಲ. ಕವಿವರ್ಯ ಡಿ.ವಿ.ಜಿ. ಯವರ-

ಹುಲ್ಲಾಗು ಬೆಟ್ಟದಡಿ ಮನೆಗೆ ಮಲ್ಲಿಗೆಯಾಗು,
ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ,
ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ
ಎಲ್ಲರೊಳಗೊಂದಾಗು-ಮಂಕುತಿಮ್ಮ

ಈ ಮಾತು ಈ ದಂಪತಿಗಳಲ್ಲಿ ಸಾರ್ಥಕಗೊಂಡಿದೆಯೆನಿಸುತ್ತದೆ. ಶಕುಂತಲಾ ಬಾಯಿಯವರಿಗೆ ಅರುವತ್ತು ದಾಟಿದೆ-ಪಾಂಡುರಂಗರಾಯರಿಗೆ ಎಪ್ಪತ್ತು ಸಮೀಪಿಸಿದೆ. ಆದರೂ ಅವರು ಇಂದೂ ಉತ್ಸಾಹದ ಚಿಲುಮೆಗಳೇ. ಶ್ರೀಮತಿಯವರ ಕಂಠಕ್ಕೆ ಮುಪ್ಪು ಬರಲಿಲ್ಲ. ರಾಯರ ಉತ್ಸಾಹಕ್ಕೆ ಚ್ಯುತಿಬರಲಿಲ್ಲ. ಕಲೆ ಆನಂದವನ್ನು ನೀಡುತ್ತದೆ-ಆನಂದವು ಬಾಳನ್ನು ಹಸನುಗೊಳಿಸುತ್ತದೆ—ಎಂಬ ಸಿದ್ಧಾಂತವನ್ನು ಈ ದಂಪತಿಗಳಲ್ಲಿ ಪ್ರತ್ಯಕ್ಷ ಕಾಣಬಹುದು. ಈ ಎಣೆವಕ್ಕಿಗಳ ಜೀವನ ಆದರ್ಶವಾದುದು-ಬಯಸಲು ಯೋಗ್ಯವಾದುದು-ಅನುಕರಣೀಯವಾದುದು.

ಒಬ್ಬ ಗಂಡು ಮಗ ಮತ್ತು ಮೂವರು ಹೆಣ್ಣುಮಕ್ಕಳನ್ನು ಪಡೆದ ಈ ದಂಪತಿಗಳು ಅಲ್ಲಿಯೂ ಒಂದು ಬಗೆಯ ಭಾಗ್ಯವಂತರೇ. ಸದ್ಗುಣಿಗಳಾದ ಮಕ್ಕಳು. ಸತ್–ವಿದ್ಯಾ ಬುದ್ಧಿ ಸಂಪನ್ನರು. ಕಿರಿಯ ಮಗಳೊಬ್ಬಳ ವಿವಾಹದ ಕರ್ತವ್ಯವೊಂದನ್ನು ತೀರಿಸಿದರೆ ಈ ದಂಪತಿಗಳ ಸಾಂಸಾರಿಕ ಕರ್ತವ್ಯಗಳು ಪೂರ್ಣವಾದಂತೆಯೇ ಆಗುತ್ತವೆ. –ಅದನ್ನು ಅವರು ನಿರ್ವಹಿಸುತ್ತಾರೆ ತಡೆಯಿಲ್ಲ–ಹೀಗೆ ಈ ದಂಪತಿಗಳು ಹಲವು ವಿಧದಲ್ಲಿ ಪೂರ್ಣರು–ಸಂಪೂರ್ಣರು ಎನ್ನುವುದು ಅಭಿಮಾನದ ಸಂಗತಿ.

ಪಾಂಡುರಂಗರಾವ್ ದಂಪತಿಗಳು ಈಗ ಯಾರ ಸ್ವಂತ ವ್ಯಕ್ತಿಗಳಲ್ಲ. ಅವರು ರಾಷ್ಟ್ರೀಯ ಸಂಪತ್ತು–ಸೊತ್ತು. ಶಕುಂತಲಾಬಾಯಿಯವರ ಕಂಠಮಾಧುರ್ಯ ಒಂದೆಡೆಗೆ ಸೀಮಿತವಲ್ಲ. ಒಂದು ಕಾವ್ಯಕ್ಕಾಗಲಿ–ಒಂದು ಪಂಗಡಕ್ಕಾಗಲಿ ಸೀಮಿತವಲ್ಲ. ಅದು ಸಾರ್ವಜನಿಕ ಸಂಪತ್ತು. ರಾಷ್ಟ್ರೀಯ ಸಂಪತ್ತನ್ನು ರಕ್ಷಿಸುವುದು–ಸರಕಾರದ ಜನರ ಹೊಣೆಯಲ್ಲವೆ? ಹಾಗೆಯೇ ಈ ಕಂಠದ ಸೊಗಸನ್ನೂ ಉಳಿಸುವುದು ಅಗತ್ಯ. ಸರಕಾರ–ಸಾರ್ವಜನಿಕ ಸಂಸ್ಥೆಗಳು ಮುಂದೆ ಬಂದು ಶ್ರೀಮತಿಯವರ ಗಮಕವಾಚನದ ಗಾನ ಮುದ್ರಿಕೆಗಳನ್ನು ಹೆಚ್ಚು ಹೆಚ್ಚಾಗಿ ತಯಾರಿಸಿ ಪ್ರಚುರಗೊಳಿಸಬೇಕಾದುದು ಅಗತ್ಯವೆಂದು ನನ್ನ ಭಾವನೆ. ಶ್ರೀಮತಿಯವರು ಮುತ್ತೈದೆಯಾಗಿ ಶತಾಯುವಾಗಿ ಬಾಳಬೇಕು ಅವರ ಕಂಠಶ್ರೀ ಚಿರಕಾಲ ಉಳಿಯಬೇಕು ಮುಂದಿನ ಪೀಳಿಗೆಗೆ ಆದರ್ಶವಾಗಬೇಕು ಅನುಕರಣೀಯವಾಗಬೇಕು–ಕೋಟಿ–ಕೋಟಿ ಕನ್ನಡಿಗರ ಹೃದಯದ ಆಸೆಯಿದು. ಕಲಾದೇವತೆಯಾದ ಭಗವಂತನು ಈ ಪ್ರಾರ್ಥನೆಯನ್ನು ಮನ್ನಿಸಬೇಕು–ಎಂಬುದೇ ಎಲ್ಲರ ಬಯಕೆ.

ಅಸಮಕಂಠಶ್ರೀ

ಬಿ. ಎಸ್. ಎಸ್. ಕೌಶಿಕ್

ಶ್ರೀನಾಥ ಭವಪೋತ ಭಕ್ತ ಜನ ಸಂಪ್ರೀತ
ಮೌನಿಮನೋಲ್ಲಾಸ ಗೋಪಾಂಗನಾಮೋಕ್ಷ
ಜ್ಞಾನ ಪ್ರದಾತ, ವರ ವೈಕುಂಠಪತಿ
ಸರ್ವಸುರಮೌಳಿ ಮಂಡಿತಾಂಘ್ರಿ ।
ವೈನತೇಯಾರೂಢನಾಗಮನಿಗೂಢ ತಾ
ದೀನರಹ ಮಾನವರನುದ್ಧರಿಸಿ ಸಕಲರನು
ಸಾನುರಾಗದಿ ದೇವನೂರ ಲಕ್ಷ್ಮೀಕಾಂತ
ಸನ್ಮತಿಯನಿತ್ತು ಪೊರೆಗೆ ॥ ೧ ॥

ಕುಶಲವರ ಮುಖದಿಂದೆ ಪ್ರಾರಂಭವಾದಂಥ
ಕುಶಲಕಲೆ ಗಮಕಕ್ಕೆ ತೊಡವೆನಿಸಿ ಕರುನಾಡ
ರಸಿಕರಿಗೆ, ಸಹೃದಯಂಗಳ್ಗದೆಲೆ ಆಸ್ತಿಕ
ಮಹಾಜನಕೆ ಬಹುವರ್ಷದಿಂ ।
ರಸವ ಷಟ್ಪದಿಗ್ರಂಥ ಗಾನದಿ ಕುಡಿಸುತ್ತಿರುವ
ಅಸಮ ಕಂಠಶ್ರೀಯ ಹೊಂದಿರುವ ಗಮಕಿಯಹ
ಕುಸುಮನಾಭನ ಭಕ್ತೆಯಾಗಿಹ ಶಕುಂತಲಾ
ಬಾಯಿಯುವರ್ಗಕ್ಕೆ ಶುಭವು ॥ ೨ ॥

ಅವರಿಗೀಗರುವತ್ತು ವರ್ಷ ತುಂಬಿಹ ಕುರುಹ
ಸವಿನೆನಹಿನಭಿನಂದನ ಗ್ರಂಥವೊಂದನ್ನು
ಅವರ ವಾಚನಕಲೆಯ ಮೆಚ್ಚಿರುವ ಸಹೃದಯರು ಹೊರತರುವುದು
ಸೂಕ್ತವೆನಿಕುಂ
ಅವನಿಯಲಿ ನಾಕಂಡ ತೆರದಂತೆ ಗಮಕಿಗಳ
ಸವಿಕಂಠ ಮಾಧುರ್ಯವರವತ್ತರಲ್ಲೂ ಸಹ
ಇವರಂತೆ ಗೌಳಮೇಣಿಂಪಾಗಿಹ ವಿರಳವದುದಿಟಕೂ
ಪೂರ್ವಸುಕೃತ ॥ ೩ ॥

ನಾನು ಮೊದಲಾಗಿ ಗಮಕಿಗಳಪ್ಪ ಬಹುಜನ
ವೈನವೆನ್ನಿಸಿ ವಿವಿಧ ಕಾವ್ಯ ಪ್ರಬಂಧಗಳ
ಸಾನುರಾಗದೊಳಿವರವೊಲು ವಾಚನವಗೈಯೆ ಉತ್ಸಾಹಹರಹಿತರಹರು

ಮಾನಿನೀಮಣಿಯಹ ಶಕುಂತಲಾಬಾಯಿಯವ
ರೂನ ಬರದೊಲು ಹಲವು ಛಂದಸಿನ ಕಾವ್ಯಗಳ
ಶಾನೆ ಸೊಬಗೆನಿಸಿ ವಾಚನಗೈವ ಪರಿಶ್ರಮ ಪಡೆದಿರ್ಪ
ಶ್ರೇಷ್ಠ ಗಮಕಿ ॥ ೪ ॥

ಮರೆಯುತಿವರರವತ್ತೊಂದ ಶಾಂತಿಯಂದಿಂದು
ಸರುವ ಸಹೃದಯ ಗಮಕಿಗಳ ಮೇಣು ಬಾಂಧವರ
ಹರಕೆಗಳ ಫಲವಾಗಿ, ಮುಂದಿವರು ಸೊಗಬಾಳಿ ಭೀಮರಥಿ
ಶಾಂತಿತಾಳುತ
ತರುವ ಕಾಲವು ಲಭಿಸಿ ನೂರಬ್ದ ಪರಿಯಂತ
ಹರಿ ಕೃಪೆಯೊಳಿವರಿರ್ದು ಸರ್ವತೋಮುಖ ಸುಖಂ
ತಿರೆಗೆ ಮಾನಿತೆಯಾಗಿ ಬಾಳ್ವಂತನುಗ್ರಹ ವೀರನಾರಯಣನು
ಕೊಡುಗೆ ॥ ೫ ॥

ನಾಲ್ಕು

ಬಂಧು ಶ್ರೀ

ಎಲ್ಲರಿಗಮಾಗಿ ತಾನೆ, ಎಲ್ಲರುಂ ತನಗಾಗಿ
ನಿಲ್ಲುವೇಕಾತ್ಮತೆಯ ಬಾಳ್ವೆಯಿಂ ಕಲಿಯಲ್
ಸಲ್ಲುವುಪಕರಣಗಳು ಮನೆರಾಜ್ಯ ಸಂಸಾರ
ವಲ್ಲಗಳೆಯದಿರಿವನು_ಮಂಕುತಿಮ್ಮ

ಡಿ.ವಿ.ಜಿ.

ಮುಂದೆ ಗುರುವನು ಬಂಧುಜನವನು
ಹಿಂದೆ ಕಾರ್‍ಯಾಂತದಲಿ ಸೇವಕ
ನೃಪವನು ಕೊಂಡಾಡುವುದು ಸಾಹಿತ್ಯಭಾವವಿದು ॥

—ಕುಮಾರವ್ಯಾಸ.

ಪೆರರಿಂ ಪುಚೋದಿತಂ ತನ್ನತಾನರಿಯದಯ್
ನಿಜಮಹಿಮೆ—

—ಕುವೆಂಪು
(ರಾಮಾಯಣದರ್ಶನಂ)

ಸತ್ಯರಾನುಡಿ ತೀರ್ಥ, ನಿತ್ಯರಾನಡೆ ತೀರ್ಥ

—ಸರ್ವಜ್ಞ

ನನ್ನ ಬೀಗಿತ್ತಿ

ಎಲ್. ರಾಜಾರಾವ್

ನಾನು ಒಬ್ಬ ಪುಸ್ತಕದ ವ್ಯಾಪಾರಿಯೇ ಹೊರತು ಲೇಖಕನಲ್ಲ. ಶ್ರೀಮತಿ ಶಕುಂತಲಾಬಾಯಿಯವರು ನನ್ನ ಬೀಗಿತ್ತಿ ; ನನ್ನ ಮಗಳು ಶೀಲಳಿಗೆ ಅತ್ತೆ. ಅವರಿಗೆ ಅರುವತ್ತು ವರ್ಷ ತುಂಬಿದ ಸವಿನೆನಪಿಗಾಗಿ, ಅವರನ್ನು ಅಭಿನಂದಿಸುವ ಹೊತ್ತಿಗೆಯಲ್ಲಿ ಅವರನ್ನು ಕುರಿತು ಎರಡುಮಾತುಗಳನ್ನು ನನಗೂ ಬರೆಯಬೇಕೆನ್ನಿಸಿತು.

ಅಂದು 1973ರಲ್ಲಿ ನಮ್ಮ ಮನೆಯಲ್ಲಿ ನನ್ನ ಮಗಳು ಶೀಲಳ ಲಗ್ನಪತ್ರಿಕೆಯ ಸಂಭ್ರಮ. ಬೆಂಗಳೂರಿನಿಂದ ಮೈಸೂರಿಗೆ ಬಸ್ಸಿನಲ್ಲಿ ಬೀಗರಾಗುವವರು ಬರುವವರಿದ್ದರು. ಸ್ವಾಗತಿಸಲು ನಾನು ಬಸ್ ನಿಲ್ದಾಣಕ್ಕೆ ಹೋಗಿದ್ದೆ. 10–15 ಜನ ಬೀಗರ ಮನೆಯವರು ಬಂದರು. ಬಸ್ ನಿಲ್ದಾಣದಿಂದ ಮನೆಗೆ ಅವರೆಲ್ಲರನ್ನು ರಿಕ್ಷಾ, ಟಾಂಗಾದಲ್ಲಿ ಕರೆದೊಯ್ಯುವ ವಿಚಾರವಿತ್ತು. ಆದರೆ ಬೀಗಿತ್ತಿ ಶಕುಂತಲಾಬಾಯಿಯವರು "ಮನೆಹತ್ತಿರವೇ ಎನ್ನುವಿರಿ. ಬೇಕಾದಷ್ಟು ಬಸ್‌ಗಳಿವೆ ಎನ್ನುವಿರಿ. ಅದರಲ್ಲೇ ಹೋದರಾಯಿತು. ಯಾಕೆ ನಿಮಗೆ ಅನಾವಶ್ಯಕ ಖರ್ಚು" ಎಂದರು. ನನಗೆ ಆಶ್ಚರ್ಯವಾಯಿತು. ಎಲ್ಲರೂ ಬಸ್ ಹತ್ತಿದೆವು. ಆದರೆ ಬಸ್‌ಲಿ ಬಹಳ ಗದ್ದಲವಿದ್ದ ಕಾರಣ ನನ್ನ ಬೀಗಿತ್ತಿಯೇ ನಿಂತು ಬರಬೇಕಾಯಿತು. ಆಗ ನನ್ನ ಮನಸ್ಸಿಗೆ ಬಹಳವೇ ಮುಜುಗರವಾಯಿತು. ಎಷ್ಟೆಷ್ಟೋ ಚೆನ್ನಾಗಿ ನೋಡಿಕೊಂಡು,ಉಪಚರಿಸಿದರೂ ಬೀಗರನ್ನು ಸಂತುಷ್ಟಿಗೊಳಿಸುವುದು ಕಷ್ಟದ ಕೆಲಸ. ದಿನನಿತ್ಯ ಅನೇಕ ತರಹದ ಮಾತುಗಳನ್ನು ಕೇಳುತ್ತಿರುತ್ತೇವೆ. 'ಗಂಡಿನ ತಾಯಿ' ಎನಿಸಿಕೊಂಡು ಬಿಟ್ಟರಂತೂ ತೀರಿತು. ಅವರ ಬಿಂಕವೇನು ? ಅವರ 'ಬೇಕು' ಪಟ್ಟಿಗಳೇನು? ಆದರೆ ನನಗೆ ಎಂಥ ಸೌಭಾಗ್ಯ. ಒಳ್ಳೆ ಸುಸಂಸ್ಕೃತ ನಗುಮೊಗದ ಬೀಗಿತ್ತಿ ಸಿಕ್ಕಿರುವರು! ಎಷ್ಟು ಸರಳರು ! ಇಂಥ ಬೀಗಿತ್ತಿಯನ್ನು ಬಸ್‌ನಲ್ಲಿ ನಿಲ್ಲಿಸಿಕೊಂಡು ಮನೆಗೆ ಕರೆದುಕೊಂಡು ಹೋಗುತ್ತಿರುವೆನಲ್ಲಾ ಎನ್ನಿಸಿತು. ಇವರು ತಾನು 'ಗಂಡಿನ ತಾಯಿ' ಎಂಬುದನ್ನು ಮರೆತುಬಿಟ್ಟರುವರಲ್ಲಾ ! ಎಲ್ಲ ಗಂಡಿನ ತಾಯಿಗಳೂ ಹೀಗೆಯೇ ಆಗಿಬಿಟ್ಟರೆ ಹೆಣ್ಣಿನವರಿಗೆ ಯಾವ ಕೊರಗೂ ಇಲ್ಲ ಎಂದೂ ಅನ್ನಿಸಿತು. ಅವರ ಹೃದಯದ ಸಿರಿವಂತಿಕೆಗೆ ತಲೆಬಾಗುವಂತಾಯಿತು.

ಮನೆ ಸಿಕ್ಕಿತು. ಎಲ್ಲರನ್ನೂ ಆದರದಿಂದ ಬರಮಾಡಿಕೊಂಡು ಊಟ ಉಪಚಾರಗಳಿಂದ ಸತ್ಕರಿಸಲಾಯಿತು. ನನ್ನಾಕೆ ಬೀಗಿತ್ತಿಗೆ ಮನೆಯೆಲ್ಲಾ ತೋರಿಸಿದರು. ಅವರ ಹಿಂದೆ ಮುಂದೆ ಯಾವಾಗಲೂ ಯಾರಾದರೂ ಉಪಚಾರಕ್ಕೆ ಇರುತ್ತಿದ್ದರು. ಇದು ನಮ್ಮ ಬೀಗಿತ್ತಿಗೆ ಅನಾವಶ್ಯಕವೆಂದೆನಿಸಿತು. ಅವರು ನನ್ನಾಕೆಗೆ "ನೋಡಿ ನನಗೆ ಈಗ ನಿಮ್ಮ ಮನೆಯ ಪರಿಚಯ ಆಗಿದೆ. ಯಾವುದು ಹಿತ್ತಿಲು, ಯಾವುದು ಬಾಗಿಲು ಎಂತ ಗೊತ್ತಾಗಿದೆ. ಸಲಸಲಕ್ಕೂ ಟವೆಲ್ ಹಿಡಿದು ನನ್ನ ಹಿಂದೆ ಬರಬೇಕಾಗಿಲ್ಲ. ಇದು ನನ್ನ ಮನೆ. ನಾವು ನಾವು ಅಕ್ಕತಂಗಿಯರಂತೆ ಇರೋಣ"—ಎಂದು ಹೇಳಿದರು.

ಇದು ಅವರ ಹಿರಿಯತನವನ್ನು ತೋರಿಸುತ್ತದೆ. ಅಂದು ಅವರು ಹೇಳಿದಂತೆಯೇ ಇಂದಿಗೂ ನಡೆದುಕೊಳ್ಳುತ್ತಿರುವರು. ನನ್ನ ಮಗಳಿಗೆ ಅವರು ಅತ್ತೆಯಾಗದೆ ತಾಯಿಯೇ ಆಗಿರುವರು. ನಮಗೆ ಅವರ ಮನೆ ಎಂದು ಅನಿಸುವುದೇ ಇಲ್ಲ. ಎರಡು ಮನೆಯೂ ಒಂದೇ ಮನೆಯಂತೆ ಅನಿಸುತ್ತದೆ. ಪರಸ್ಪರರಲ್ಲಿ ಪ್ರೀತಿ, ವಿಶ್ವಾಸ, ಸ್ನೇಹ ಸೌಹಾರ್ದಗಳು ತುಂಬಿ ತುಳುಕುತ್ತಿವೆ. ಬೀಗಬೀಗರಲ್ಲಿ ಇರಬೇಕಾದ ಶ್ರೀಮದ್ಗಾಂಭೀರ್ಯ, ಉಸಿರುಹಿಡಿಯುವಂಥ ವಾತಾವರಣ, ಏನು ಮಾತಾಡಿದರೆ ಕಡಿಮೆಯೋ ಎಂಬ ಅಳುಕು ನಮ್ಮಲ್ಲಿ ಇಲ್ಲವೇ ಇಲ್ಲ. ಒಬ್ಬರಿಗೊಬ್ಬರು ತಮಾಷೆ ಮಾಡಿಕೊಂಡಿರುತ್ತೇವೆ. ಅದಕ್ಕೆ ಒಂದು ಉದಾಹರಣೆಯನ್ನು ಕೊಡುವೆ.

ಲಗ್ನ ಪತ್ರಿಕೆಗೆ ಅವರೆಲ್ಲಾ ನಮ್ಮಲ್ಲಿಗೆ ಬಂದಾಗಲೇ ಒಮ್ಮೆ ಕಿತ್ತಳೆಹಣ್ಣುಗಳನ್ನು ತಿನ್ನಲು ಎಲ್ಲರಿಗೂ ಕೊಟ್ಟಿದ್ದೆವು. ಶ್ರೀಮತಿ ಶಕುಂತಲಾಬಾಯಿಯವರು ಹಣ್ಣನ್ನು ಸುಲಿದು, ತೊಳೆಯನ್ನು ಬಿಡಿಸಿ ಕುಸುಮಗಳನ್ನು ತಟ್ಟೆಗೆ ಹಾಕಿ ತಮ್ಮ ಪತಿಗೆ ತಿನ್ನಲು ಕೊಟ್ಟರು. ಅವರ ತಾಳ್ಮೆ ಮತ್ತು ಸೇವಾಪ್ರವೃತ್ತಿಗೆ ನಾನು ಬೆರಗಾದೆ. ಶ್ರೀ ಪಾಂಡು ರಂಗರಾಯರು ಎಷ್ಟು ಪುಣ್ಯವಂತರಪ್ಪಾ ಎಂದೂ ಅನಿಸದಿರಲಿಲ್ಲ. ಬೀಗಿತ್ತಿಯತ್ತ ತಿರುಗಿ "ರಾಯರೇನು ಎಳೇ ಮಗುವೇ? ಇಷ್ಟೊಂದು ಮಾಡುವಿರಲ್ಲಾ ? ಹಣ್ಣನ್ನು ಹಾಗೆಯೇ ಅವರಿಗೆ ಕೊಡಿ. ಸುಲಕೊಂಡು ತಿನ್ನಲಿ"ಎಂದೆ. ಎಲ್ಲರೂ ಜೋರಾಗಿ ನಕ್ಕರು. ಶ್ರೀ ಪಾಂಡುರಂಗರಾಯರೂ ನಗುತ್ತ ಹೇಳಿದರು–'ಅದಕ್ಕೆ ನಾನು ಹೇಳುವದು ಶಕುಂಲಾಬಾಯಿ ನನ್ನ ಬಾಳಿನ ಭಾಗ್ಯ ಎಂದು.' ಶಕುಂತಲಾಬಾಯಿ ಮುಗುಳುನಗೆ ಬೀರಿದರು.

ಭಗವಂತನಲ್ಲಿ ಶಕುಂತಲಾಬಾಯಿ ಪಾಂಡುರಂಗರಾವ್ ದಂಪತಿಗಳನ್ನು ನೂರಾರು ವರ್ಷಕಾಲ ಚೆನ್ನಾಗಿಟ್ಟು, ಸಕಲಸನ್ಮಂಗಳವನ್ನುಂಟುಮಾಡಿ ರಕ್ಷಿಸು ಎಂದು ಪ್ರಾರ್ಥಿಸಿ ಈ ಕಿರುಲೇಖನವನ್ನು ಮುಗಿಸುತ್ತೇನೆ.

ನನ್ನ ಪತ್ನಿಯ ಚಿಕ್ಕಮ್ಮ

ಎಂ. ಕೆ. ಗೋಪೀನಾಥ್

ನಾಲ್ಕೈದು ವರ್ಷಗಳ ಹಿಂದಕ್ಕೆ ನನ್ನ ನೆನಪು ಹೋಗುತ್ತಿದೆ. ನನ್ನ ಪತ್ನಿ ಸುಂದರಾಬಾಯಿಯ ಚಿಕ್ಕಮ್ಮ ಗಮಕ ವಿದುಷಿ ಶಕುಂತಲಾಬಾಯಿ, ಅವರ ಪತಿ ಸಾಹಿತಿ ಬಿ. ಶ್ರೀ ಪಾಂಡುರಂಗರಾವ್ ಮದರಾಸಿಗೆ ಬಂದು ನಮ್ಮ ಅತಿಥಿಗಳಾದರು. ಕೊಲಂಬಿಯಾ ಗ್ರಾಮಾಫೋನ್ ಕಂಪನಿಯವರು **ರಾಘವೇಂದ್ರ ಗುರೂಜಿ** ಎಂಬ ಧ್ವನಿಮುದ್ರಿಕೆಯನ್ನು ಅವರಿಂದ ಮಾಡಿಸುವ ಸಂದರ್ಭ. ಧ್ವನಿಮುದ್ರಿಕೆ ಕಾರ್ಯಕ್ರಮ ಮುಗಿದ ಮೇಲೆ ನಮ್ಮ ಮನೆಯಲ್ಲಿ ಶಕುಂತಲಾಬಾಯಿಯ ಕಾವ್ಯವಾಚನ ಕಾರ್ಯಕ್ರಮ ಪಾಂಡುರಂಗರಾಯರ ಪ್ರಾಸಂಗಿಕ ನಿರೂಪಣೆಯೊಡನೆ. ವಾದಿರಾಜ್, ಆರ್. ಎಸ್. ಗೋಪಾಲ್ ಮೊದಲಾದ ಚಲನಚಿತ್ರ ಕಲಾವಿದರು; ವೆಂಕಟರಾಜ ಪಾನಸೆ, ಎಸ್. ಆರ್. ಮಹೇಶ್ ಮೊದಲಾದ ಸಾಹಿತಿಗಳು, ಮದರಾಸಿನಲ್ಲಿರುವ ಕನ್ನಡ ಅಭಿಮಾನಿಗಳು, ಆಗಮಿಸಿದ್ದರು. ಚೊಕ್ಕವಾದ ಒಂದು ಸಣ್ಣ ವಿದ್ವಾಂಸ ಗೋಷ್ಠಿಯಂತಿತ್ತು "ಕರ್ಣಾಟಕ ಕವಿ ಕಾವ್ಯ ಪರಂಪರೆ" ಕಾವ್ಯವಾಚನದ ವಿಷಯ. ಪಂಪ, ರನ್ನ, ಹರಿಹರ, ರಾಘವಾಂಕ, ಕುಮಾರವ್ಯಾಸ, ಲಕ್ಷ್ಮೀಶ, ಬಸವಣ್ಣ, ಮಹಾದೇವಿಯಕ್ಕ, ಪುರಂದರ ಕನಕದಾಸ, ಕುವೆಂಪು, ಮಾಸ್ತಿ, ಬೇಂದ್ರೆ ಹೀಗೆ ನಮ್ಮ ಕವಿಗಳ ಒಂದು ಮೆರವಣಿಗೆಯೇ ಬಂದು ಹೋಯಿತು ಸಾಲು ಹಿಡಿದು ನಮ್ಮ ಕಣ್ಣು ಮುಂದೆ. ಕಾರ್ಯಕ್ರಮ ಸುಮಾರು ಒಂದು ಒಂದೂವರೆ ಗಂಟೆ ನಡೆದಿರಬೇಕು. ಗಡಿಯಾರದ ಕಡೆ ಯಾರಿಗೂ ಗಮನವೇ ಇರಲಿಲ್ಲ ಕಾರ್ಯಕ್ರಮ ಮುಗಿಯುವವರೆಗೆ.

ನನ್ನ ಪತ್ನಿಯ ತಾಯಿಗೆ ಶಕುಂತಲಾಬಾಯಿ ಮಲತಂಗಿಯಾಗಬೇಕು. ನನ್ನ ಪತ್ನಿ ತಂದೆ ತಾಯಿಗಳನ್ನು ಚಿಕ್ಕಂದಿನಲ್ಲೇ ಕಳೆದುಕೊಂಡರು. ಚಿಕ್ಕಪ್ಪ, ನನ್ನ ಪತ್ನಿಗೆ ತಾಯಿತಂದೆ ಇಲ್ಲ ಎನ್ನಿಸಿಲ್ಲ. 1963, 1968, 1972ರಲ್ಲಿ ದಂಪತಿಗಳು ದೆಲ್ಲಿ ಕಾರ್ಯಕ್ರಮಗಳಿಗಾಗಿ ಪ್ರವಾಸ ಕೈಗೊಂಡಾಗ, ಮದರಾಸಿನಲ್ಲಿ ನಮ್ಮ ಅತಿಥಿಗಳಾಗಿದ್ದು ನನ್ನ ಪತ್ನಿಗೆ ಆಕೆಯ ತಾಯಿತಂದೆಗಳಷ್ಟೇ ಪ್ರೀತಿ ವಿಶ್ವಾಸಗಳನ್ನು ಕೊಟ್ಟು ಸಂತೋಷಪಡಿಸಿದ್ದಾರೆ. ಶಕುಂತಲಾಬಾಯಿ, ತಾನು ಕರ್ಣಾಟಕದ ಸುಪ್ರಸಿದ್ಧ ಗಮಕಕಲಾವಿದೆ ಎಂಬ ಹಮ್ಮು ಬಿಮ್ಮುಗಳನ್ನು ಕಿಂಚಿತ್ತೂ ತೋರಿಸದೆ, ಮನೆಯ ಕೆಲಸದಲ್ಲಿ ತೊಡಗಿ, ನಮ್ಮ ಮನೆಗೆ ಬಂದ ಅತಿಥಿಗಳನ್ನು ಉಪಚರಿಸಿ ನಡೆದುಕೊಂಡ ರೀತಿ ನಮಗೆ ವಿಸ್ಮಯ ತಂದಿದೆ.

ಶಕುಂತಲಾಬಾಯಿ ನಮ್ಮೊಡನೆ ಆತ್ಮೀಯ ಬಾಂಧವ್ಯ ನೆಲೆಸಿದ್ದು ನಾನು ಸುಂದರಾಬಾಯಿಯನ್ನು ಮದುವೆಯಾಗಿ ಮದರಾಸಿನಲ್ಲಿ ಸಂಸಾರ ಹೂಡಿದ ಬಹಳ ವರ್ಷಗಳ ಮೇಲೆ. ನಮ್ಮ ಮದುವೆಯ ಕಾಲದಲ್ಲಿ ಪಾಂಡುರಂಗರಾವ್ ದಂಪತಿಗಳು ಇದ್ದುದು ಕೆಲವು ಗಂಟೆಗಳು ಮಾತ್ರ. ಪರಿಚಯ, ಮದುವೆಯ ಜನದ ಭರಭರಾಟೆಯ ಗದ್ದಲದಲ್ಲಿ ತೆರೆಮರೆಯ ಜ್ಞಾಪಕವಾಗಿ ಉಳಿದಿದೆ. ನಿಕಟ ಪರಿಚಯವಾದದ್ದು 1963ರಲ್ಲಿ. ಪಾಂಡು

ರಂಗರಾವ್ ಸದರ್ನ್ ಇಂಡಿಯನ್ ಬುಕ್ ಟ್ರಸ್ಟ್ ಮದರಾಸಿನಲ್ಲಿ ನಡೆಸಿದ ಮಕ್ಕಳ ಸಾಹಿತ್ಯ ಕಾರ್ಯಾಗಾರದ ಕಾರ್ಯಕ್ರಮದಲ್ಲಿ ಭಾಗವಹಿಸಲು ಮದರಾಸಿಗೆ ಬಂದರು. ಆ ಸಮಯದಲ್ಲಿ ನಮ್ಮೊಡನೆ ಅರ್ಧದಿನ ಇದ್ದು ಹೋದರು. ಆ ಅರ್ಧದಿವಸದಲ್ಲೇ ಅವರು ಎಷ್ಟು ವಿನಯ ಸಂಪನ್ನರು, ಸ್ನೇಹಪರರು, ಎಂದು ನಮಗೆ ಮನದಟ್ಟು ಮಾಡಿಸಿದರು.

ಪಾಂಡುರಂಗರಾವ್ ದಂಪತಿಗಳು 1968ರಲ್ಲಿ ಪ್ರವಾಸವನ್ನು ಕೈಕೊಂಡಾಗ ಮದರಾಸಿಗೆ ಬಂದು ನಮ್ಮ ಅತಿಥಿಗಳಾದರು. ಪಾಂಡುರಂಗರಾವ್ ತಾವು ಮಕ್ಕಳಿಗೆ ಸಲ್ಲಿಸಿದ ಶಿಕ್ಷಣ ಸೇವೆಗಾಗಿ ರಾಷ್ಟ್ರಮಟ್ಟದ ಆದರ್ಶ ಶಿಕ್ಷಕ ಪ್ರಶಸ್ತಿಯನ್ನು ಉಪರಾಷ್ಟ್ರಪತಿಗಳ ಹಸ್ತದಿಂದ ದೆಹಲಿಯಲ್ಲಿ ಸ್ವೀಕರಿಸಿದ ಸಂದರ್ಭ. ನಮ್ಮೊಡನೆ ಒಂದು ವಾರ ವಿದ್ದರು. ಕನ್ನಡದ ಸುಪ್ರಸಿದ್ಧ ವಿದ್ವಾಂಸರೂ ಮದರಾಸ್ ಪ್ರೆಸಿಡೆನ್ಸಿ ಕಾಲೇಜಿನ ಕನ್ನಡ ಪ್ರಾಧ್ಯಾಪಕರೂ ಅಯ್ಯನಾರ್ ಕನ್ನಡ ಸಂಘದ ಅಧ್ಯಕ್ಷರೂ ಆಗಿದ್ದ ಮದರಾಸಿನ ಹಿರಿಯ ಕನ್ನಡಿಗ ಪ್ರೊ|| ಮರಿಯಪ್ಪ ಭಟ್ಟರು ಶಕುಂತಲಾಬಾಯಿ, ಪಾಂಡುರಂಗರಾವ್ ಕಾರ್ಯಕ್ರಮವನ್ನು ತಮ್ಮ ಸಂಘದಲ್ಲಿ ಏರ್ಪಡಿಸಿದರು. "ಕರ್ಣಾಟಕ ಕವಿ ಕಾವ್ಯ ಪರಂಪರೆ"ಯನ್ನೇ ಕಾವ್ಯವಾಚನದ ವಿಷಯವಾಗಿ ಇಟ್ಟುಕೊಂಡಿದ್ದರು ಅವರೊಡನೆ ನಾವೂ ಕಾರ್ಯಕ್ರಮಕ್ಕೆ ಹೋದೆವು. ಪ್ರೊ|| ಮರಿಯಪ್ಪಭಟ್ಟರು· ಮದರಾಸಿನ ಕನ್ನಡಿಗರೂ ಪಾಂಡುರಂಗರಾವ್ ದಂಪತಿಗಳೊಡನೆ ನಡೆದುಕೊಂಡ ರೀತಿಯನ್ನು ನೋಡಿ ನನಗೆ, ಸುಂದರಾಬಾಯಿಗೆ, ತುಂಬ ಅಚ್ಚರಿಯಾಯಿತು. ಶಕುಂತಲಾಬಾಯಿ ಕಾವ್ಯವಾಚನವನ್ನು ನಾನು ಕೇಳಿದ್ದು ಇದೇ ಮೊದಲು. ಕೋಕಿಲ ಕಂಠದ ಕಾವ್ಯವಾಚನ ಕೇಳಿ ನನ್ನ ಮನಸ್ಸು ರಸಲೋಕದಲ್ಲಿ ವಿಹರಿಸಿತು. ನನ್ನ ಪತ್ನಿ ಸುಂದರಾಬಾಯಿಗಂತೂ ತನ್ನ ಚಿಕ್ಕಮ್ಮ, ಎಂಥ ಶ್ರೇಷ್ಠ ಕಲಾವಿದೆ. ಆಕೆಯನು ಚಿಕ್ಕಮ್ಮನನ್ನಾಗಿ ಪಡೆದಿರುವುದು ತನ್ನ ಭಾಗ್ಯವೆಂದು ಹಿರಿಹಿರಿ ಹಿಗ್ಗು. ನಾನು ಸಹ ಪಾಂಡುರಂಗರಾವ್ ದಂಪತಿಗಳು ನಮ್ಮ ಆತ್ಮೀಯ ಬಂಧುಗಳಾಗಿರುವುದು ನಮಗೆ ಹೆಮ್ಮೆಯೆಂದು ಭಾವಿಸಿದ್ದೇನೆ.

೧೯೭೨ರಲ್ಲಿ ಶಕುಂತಲಾಬಾಯಿ ಮದರಾಸಿಗೆ ಬಂದ ವಿಷಯವನ್ನು ಈ ಲೇಖನದ ಪ್ರಾರಂಭದಲ್ಲಿಯೆ ವಿವರಿಸಿದ್ದೇನೆ. "ಕರ್ಣಾಟಕ ಕವಿ ಕಾವ್ಯ ಪರಂಪರೆ"ಯ ವಿಷಯವನ್ನು ಪ್ರಸ್ತಾಪಿಸಿದ್ದೇನೆ. ಈ ಸಂದರ್ಭದಲ್ಲಿ ನಾನು ಕಂಡುಕೊಂಡ ಒಂದು ಸ್ವಾರಸ್ಯವೆಂದರೆ, ೧೯೬೮ರಲ್ಲಿ ಅಯ್ಯನಾರ್ ಕನ್ನಡ ಸಂಘದಲ್ಲಿ ಕೊಟ್ಟ ಕಾರ್ಯಕ್ರಮವೇ ನಮ್ಮ ಮನೆಯ ಕಾರ್ಯಕ್ರಮವಾದರೂ ಕವಿಗಳು ಅವರೇ ಆದರೂ ಕವಿಗಳ ಕೃತಿಗಳ ವಾಚನ ಬೇರೆಬೇರೆ. ನಮ್ಮ ಮನೆಯಲ್ಲಿ ನಡೆದ ಕರ್ಣಾಟಕ ಕವಿ ಕಾವ್ಯ ಪರಂಪರೆ ನವನವೀನ.

ಶಕುಂತಲಾಬಾಯಿಗೆ ಕಲಾವಿದರನ್ನು ಕಂಡರೆ ತುಂಬ ಮನ್ನಣೆ. ನನ್ನ ಪತ್ನಿ ಸುಂದರಾಬಾಯಿ ಬಟ್ಟೆಯ ಗೊಂಬೆಗಳನ್ನು ನಿರ್ಮಿಸುವುದರಲ್ಲಿ ಕೌಶಲ್ಯ ಪಡೆದಿದ್ದಾಳೆ. ಮದರಾಸಿನಲ್ಲಿ ನಡೆದ ಮಹಿಳೆಯರ ಕುಶಲ ಕಲಾ ಪ್ರದರ್ಶನಗಳಲ್ಲಿ ಬಹುಮಾನಗಳನ್ನು

ಪಡೆದಿದ್ದಾಳೆ. ಶಕುಂತಲಾಬಾಯಿಗೆ ತಮ್ಮ ಮಗಳು ಕುಶಲ ಕಲೆಯಲ್ಲಿ ಪಡೆದಿರುವ ಪ್ರಾವೀಣ್ಯವನ್ನು ಕಂಡು ತುಂಬ ಸಂತೋಷವಾಯಿತು.ಅವುಗಳನ್ನು ಜೋಡಿಸಿ ಛಾಯಾ ಚಿತ್ರ ತಗೆದರು. ಸೊಗಸಾಗಿ ಮೂಡಿ ಬಂತು ಛಾಯಾಚಿತ್ರ. ನಾವು ಈವರೆಗೆ ಗೊಂಬೆಗಳ ಛಾಯಾಚಿತ್ರ ತಗೆದದ್ದೇ ಇಲ್ಲ.ಶಕುಂತಲಾಬಾಯಿ ಛಾಯಾಚಿತ್ರಗಳನ್ನು ತೆಗೆಯುವುದ ರಲ್ಲೂ ನಿಪುಣೆ ಎಂದು ನಾವು ಸಂತೋಷಪಟ್ಟು ಅವರಿಗೆ ಕೃತಜ್ಞತೆ ಅರ್ಪಿಸಿದೆವು.

"ರಾಘವೇಂದ್ರ ಗುರೂಜಿ" ಧ್ವನಿಮುದ್ರಿಕೆ ಮಾಡಿಕೊಳ್ಳುವ ಸಮಯದಲ್ಲಿ ಶಕುಂತಲಾಬಾಯಿ ನನ್ನ ಪತ್ನಿ ಸುಂದರಾಬಾಯಿಯನ್ನು ಜತೆಗೆ ಕರೆದುಕೊಂಡು ಹೋಗಿದ್ದರು. ಆ ಸಮಯದಲ್ಲಿ ಸುಪ್ರಸಿದ್ಧ ಚಲನಚಿತ್ರ ಹಿನ್ನೆಲೆ ಗಾಯಕಿಯರಾದ ಪಿ. ಸುಶೀಲ, ಎಸ್. ಜಾನಕಿಯವರುಗಳನ್ನು ಕಾಣುವ ಯೋಗ ನನ್ನ ಪತ್ನಿಗೆ ಲಭಿಸಿತು. "ನನ್ನ ಚಿಕ್ಕಮ್ಮನ ಜತೆಯಲ್ಲಿದ್ದರೆ, ಅಪರೂಪದ ವ್ಯಕ್ತಿಗಳನ್ನು ಸಹ ಸುಲಭವಾಗಿ ನೋಡಬಹುದು" ಎಂದು ಸುಂದರಾಬಾಯಿಗೆ ಹಿಗ್ಗು.

ನನ ಚಿಕ್ಕತ್ತೆ ಗಮಕ ವಿದುಷಿ ಶಕುಂತಲಾಬಾಯಿ. ನನ್ನ ಚಿಕ್ಕ ಮಾವ ಸಾಹಿತಿ ಪಾಂಡುರಂಗರಾವ್. ಇಬ್ಬರೂ ಹೇಳಿ ಮಾಡಿಸಿದ ಜೋಡಿ. ಈ ದಂಪತಿಗಳ ಸರಳತೆ, ಶುದ್ಧ ನಡೆ ನುಡಿಗಳು ನನ್ನನ್ನು, ನನ್ನ ಪತ್ನಿಯನ್ನು ಮುಗ್ಧಗೊಳಿಸಿವೆ. ಈ ಇಬ್ಬರು ಹಿರಿಯರಿಗೂ ಭಗವಂತನು ಆಯುರಾರೋಗ್ಯ, ಸುಖ ಸಂಪತ್ತುಗಳನ್ನು ಕೊಟ್ಟು ದೀರ್ಘ ಕಾಲ ಕಾಪಾಡಲೆಂದು ಆಶಿಸುತ್ತೇವೆ.

ಗೃಹಿಣೀ ಗೃಹಮುಚ್ಯತೆ

ಬಿ. ಎನ್. ಸುಧೀಂದ್ರ

ಈ ಜನಪ್ರಿಯ ಸೂಕ್ತಿ ನನ್ನ ಅತ್ತೆಯವರಿಗೆ ಸರಿಹೊಂದುತ್ತದೆ. ನಾನು ನನ್ನ ಅತ್ತೆಮಾವಂದಿರನ್ನು "ಅಮ್ಮ" "ಅಣ್ಣ" ಎಂದು ಪ್ರೀತಿಯಿಂದ ಕರೆಯುತ್ತೇನೆ. ನಾನು ಅವರುಗಳಿಗೆ ಎರಡನೆಯ ಅಳಿಯ.

ನನಗೆ ಮಾತೋಶ್ರೀ ಸಮಾನರಾದ ಶಕುಂತಲಾಬಾಯಿ ಒಂಬತ್ತು ವರ್ಷದ ಬಾಲಕಿಯಾಗಿದ್ದಾಗ ಪಾಂಡುರಂಗರಾಯರನ್ನು ಮದುವೆಯಾಗಿ ಹದಿನೇಳು ವರ್ಷ ಪ್ರಾರಂಭವಾದಾಗ ಅತ್ತೆಮನೆಗೆ ಬಂದರೆಂದು ಕೇಳಿದ್ದೇನೆ. ನಮ್ಮ ಮಾವನವರ ಹಡೆದಮ್ಮ, ಸಾಕಿದ ಚಿಕ್ಕಮ್ಮ, ಇಬ್ಬರೂ ತಾಯಿಯರಿಗೂ ಅಚ್ಚುಮೆಚ್ಚಿನ ಸೊಸೆಯಾಗಿ, ವಿಧೇಯರಾಗಿ ಇದ್ದುಕೊಂಡು, ತಮ್ಮ ಪತಿಯ ಬೇಕು ಬೇಡಗಳನ್ನು ಪ್ರೀತಿಯಿಂದ ನೋಡಿಕೊಳ್ಳುತ್ತ, ಮನೆಗೆ ಬಂದ ನೆಂಟರನ್ನು ಸತ್ಕರಿಸುತ್ತ ಸಂಸಾರವನ್ನು ಜಾಣತನದಿಂದ ನಡೆಸಿಕೊಂಡು ಬರುತ್ತಿರುವ ವಿಧಾನವನ್ನು ನಾನು ಮದುವೆಯಾದ ಐದು ವರ್ಷಗಳಿಂದ ಕಂಡುಕೊಂಡಿದ್ದೇನೆ. ಅವರು ತಮ್ಮ ಪತಿಯ ವಿಷಯದಲ್ಲಿ ನಡೆದುಕೊಳ್ಳುವ ರೀತಿಯಂತೂ ನನಗೆ ಈ ಕೆಳಗಿನ ಶ್ಲೋಕವನ್ನು ನೆನಪಿಗೆ ತರುತ್ತದೆ.

"ಕಾರ್ಯೇಷು ದಾಸೀ ಕರಣೇಷು ಮಂತ್ರೀ
ರೂಪೇಚ ಲಕ್ಷ್ಮೀ ಕ್ಷಮಯಾ ಧರಿತ್ರೀ
ಭೋಜ್ಯೇಷು ಮಾತಾ ಶಯನೇಷು ವೇಶ್ಯಾ
ಷಡ್ಧರ್ಮಯುಕ್ತಾ ಸಹಧರ್ಮಪತ್ನೀ ॥"

ನಮ್ಮ ಮಾವನವರು ತಮಗೆ ಸರಿಯೆನಿಸಿದುದನ್ನು ಆಗಲೇ ಕಾರ್ಯರೂಪಕ್ಕೆ ತರುವ ಸ್ವಭಾವದವರು. ಆಟಂಬಾಂಬ್ ಸಿಡಿಯುವಂತೆ, ಅವರು ತಮ್ಮ ಅನಿಸಿಕೆಗಳನ್ನು ನನ್ನ ಅತ್ತೆಯವರ ಮುಂದೆ ಸಿಡಿಸುತ್ತಾರೆ. ಅವರೊಡನೆ ಸಂಸಾರವನ್ನು ತೂಗಿಸುವುದು ಸುಲಭವಲ್ಲ. "ನನ್ನ ಗೆಳೆಯರು ಸಾಹಿತಿ ಮಿತ್ರರು ಬೆಳಗ್ಗೆಯೋ ಸಂಜೆಯಲ್ಲಿಯೋ ಬರುತ್ತಾರೆ" ಎಂದು ಮುಂಚಿತವಾಗಿ ತಿಳಿಸಿದರೂ ತಿಳಿಸಿದರೇ. ಇಲ್ಲಾ ಆ ಘಳಿಗೆಯವರೆಗೆ ಸುಮ್ಮನಿದ್ದರೂ ಇದ್ದರೇ. ಅವರ ಆ ಸಂದರ್ಭದ ಮನಸ್ಥಿತಿಯನ್ನು ಅರಿತುಕೊಂಡು, ಯಾರಿಗೂ ಯಾವ ಸುಳಿವು ಕೊಡದೆ ಅತಿಥಿ ಸತ್ಕಾರ ಮಾಡುವ ಅತ್ತೆಯ ರೀತಿ ನನ್ನನ್ನು ಬೆರಗುಗೊಳಿಸಿದೆ. ಶಕುಂತಲಾಬಾಯಿ, ತಮ್ಮ ಮನೆಯಲ್ಲಿ ಆಗಾಗ ಏರ್ಪಡಿಸುವ ಸಂತೋಷ ಕೂಟಗಳಲ್ಲಿ ಭಾಗಗೊಳ್ಳುವಾಗ, ಅವರಿಗೆ ಮೂವತ್ತು ಮೂವತ್ತೈದು ವರ್ಷಗಳ ಲವಲವಿಕೆ ಬಂದು ಅರವತ್ತು ವರ್ಷಗಳ ಮುಪ್ಪು ಮಾಯವಾಗಿರುತ್ತದೆ.

ಶಕುಂತಲಾಬಾಯಿ ನೋವುನಲಿವುಗಳನ್ನು ತುಟಿಪಿಟಕ್ಕೆನ್ನದೆ ಸಹಿಸಿಕೊಳ್ಳುವ ರೀತಿ ಎಂಥವರನ್ನೂ ಬೆರಗುಗೊಳಿಸುತ್ತದೆ. ನಾನೇ ಕಣ್ಣಾರ ಕಂಡ ನನ್ನ ಅನುಭವವನ್ನು ನನ್ನ ಜೀವನದಲ್ಲಿ ಎಂದೂ ಮರೆಯುವಂತಿಲ್ಲ. ೧೫-೧೦-೧೯೭೬ರಲ್ಲಿ ನಾನು

ಪಾಂಡುರಂಗರಾವ ದಂಪತಿಗಳ ಎರಡನೆಯ ಮಗಳು ಸೌ|| ವತ್ಸಲಳನ್ನು ಮದುವೆಯಾದೆ. ನಮ್ಮ ಮದುವೆ ಮಲ್ಲೇಶ್ವರದ ಶ್ರೀನಿವಾಸ ಕಲ್ಯಾಣಮಂಟಪದಲ್ಲಿ ಏರ್ಪಾಡಾಗಿತ್ತು. ನಮ್ಮದು ಒಂದು ದಿನದ ಮದುವೆ.ಬೆಳಗ್ಗೆ ಸೋಲದೇವನಹಳ್ಳಿಯಿಂದ ಬಂದು, ಮದುವೆ ಯನ್ನು ಮುಗಿಸಿಕೊಂಡು ರಾತ್ರಿಯೇ ಹಳ್ಳಿಗೆ ಹಿಂದಿರುಗುವುದೆಂದು ನನ್ನ ತಂದೆತಾಯಿ ಬೀಗಿತ್ತಿಗೆ ತಿಳಿಸಿದ್ದರು. ಮುಂಚೆಯೇ ನಿರ್ಧರಿಸಿದ್ದಂತೆ ನಾವು ಬೆಳಗ್ಗೆ ಆರುವರೆಗಂಟೆಗೆ ಕಲ್ಯಾಣಮಂಟಪಕ್ಕೆ ಬಂದುಬಿಟ್ಟೆವು. ಸುಮಾರು ನಲ್ವತ್ತು ಮಂದಿ. ನಮಗೆ ಸ್ನಾನಕ್ಕೆ ಸಿದ್ಧತೆಯಾಗಬೇಕಲ್ಲ. ಶಕುಂತಲಾಬಾಯಿ ಮುಂಜಾವದಲ್ಲೇ ಎದ್ದು ಬಚ್ಚಲುಮನೆಗೆ ಹೋದರು. ನೀರು ಕಾದಿದೆಯೇ ಇಲ್ಲವೇ ಎಂದು ನೋಡುವುದಕ್ಕೆ. ಕಾರಣ ತಿಳಿಯದು. ಹಂಡೆಯ ನೀರು ಕಾದಿರಲಿಲ್ಲ. ಒಲೆಯುರಿ ಸಣ್ಣಗೆ ಮಿಣುಕುತ್ತಿತ್ತು. ಉರಿ ಜ್ವಲಿಸಲೆಂದು ಅದಕ್ಕೆ ಸೀಮೆಎಣ್ಣೆ ಸುರಿದರು. ಉರಿ ಧಗ್ಗೆಂದಿತು. ಹಬ್ಬೆ ಒಲೆಯಿಂದ ಈಚೆಗೆ ತಟ್ಟಿತು. ಕೈಗೆ ಬಡಿದು ಎರಡುಗಜ್ಜುಗಗಳಷ್ಟು ಬೊಬ್ಬೆ ಬುರುಬುರು ಉಬ್ಬಿತು. ನೋವು ತಡೆದು ಕೊಂಡು ಒಲೆಯುರಿಸಿ, ಸೆರಗಿನಿಂದ ಬೊಬ್ಬೆಗಳನ್ನು ಮುಚ್ಚಿಕೊಂಡು ಹೊರನಡೆದರು. ಯಾರಿಗೂ ಸುಳಿವು ಕೊಡದೆ ನಗುಮುಖದಿಂದ ಮದುವೆಯನ್ನು ಸಾಂಗವಾಗಿ ನೆರವೇರಿ ಸಿದರು. ಮಾರನೆಯ ದಿನ ಬೆಳಗ್ಗೆ ಸೋಲಪೇವನ ಹಳ್ಳಿಯಲ್ಲಿ ನಮ್ಮ ಕಡೆಯಿಂದ ಹೆಣ್ಣಿನವರಿಗೆ ಬೀಗರ ಔತಣ. ಆಗಲೆ ನಮಗೆ ತಿಳಿದದ್ದು ಶಕುಂತಲಾಬಾಯಿ ಹಬೆಯಿಂದ ಕೈಸುಟ್ಟುಕೊಂಡಿದ್ದು.

ಪಾಂಡುರಂಗರಾವ್ ದಂಪತಿಗಳು ಮಕ್ಕಳ ಮಂಟಪವನ್ನು ಕನ್ನಡ ಮಾಧ್ಯಮ ಶಿಕ್ಷಣ ಶಾಲೆಯನ್ನಾಗಿಯೇ ನಡೆಸಬೇಕೆಂಬ ಸಂಕಲ್ಪದಿಂದ ಆರ್ಥಿಕ ಮುಗ್ಗಟ್ಟಿನಿಂದ ಕಷ್ಟಪಟ್ಟರೂ ದಿಟ್ಟತನದಿಂದ ನಡೆಸಿಕೊಂಡು ಬಂದ ರೀತಿ, ಅವರನ್ನು ಹತ್ತಿರ ದಿಂದ ಬಲ್ಲವರೆಲ್ಲ ಚೆನ್ನಾಗಿ ಅರಿತೆಯದ್ದಾರೆ. ಬಾಡಿಗೆದಾರರು ಸತಿಪತಿಗಳ ಸಾತ್ವಿಕ ನಡತೆಯನ್ನು ದುರುಪಯೋಗಪದಿಸಿಕೊಂಡು ಪಾಂಡುರಂಗರಾಯರನ್ನು ನ್ಯಾಯಸ್ಥಾನದ ಹೊಸ್ತಿಲು ಹತ್ತಿಸಿ, ಕಡೆಗೆ ಮನೆಮಾರಿ ಕೊಡುವುದಕ್ಕೂ ಕಾರಣರಾದುದನ್ನು ಜನ ತಿಳಿದ ಸಂಗತಿಯೇ ಆಗಿದೆ. ಈ ಸಮಯದಲ್ಲಿ ನನ್ನ ಅತ್ತೆ ನಡೆದುಕೊಂಡ ರೀತಿ. ಆವರ ಸಹನೆ ಸಂಯಮಗಳು ಶ್ಲಾಘನೀಯವಾಗಿತ್ತು. ಆ ಕಷ್ಟಕಾಲದಲ್ಲಿ ನನ್ನ ಅತ್ತೆಯವರು ಸಂತೋಷವನ್ನು ಕಂಡರು. 1979ರಲ್ಲಿ ಅವರಿಗೆ ನಮ್ಮ ರಾಜ್ಯ ಸರ್ಕಾರ ಐನೂರು ರೂಪಾಯಿಗಳ ಗೌರವಧನ ಮಾಸಾಶನವನ್ನು ದಯಪಾಲಿಸಿತು. ಗಮಕ ಸೇವೆಗೆ ಈ ಗೌರವಧನ ಪಡೆದ ಗಮಕಿಗಳಲ್ಲಿ ನನ್ನತ್ತೆಯೇ ಮೊದಲಿಗರು. ಅದೇ ವರ್ಷ ಅವರಿಗೆ ಅಖಿಲ ಕರ್ನಾಟಕ ಎರಡನೆಯ ಗಮಕ ಸಮ್ಮೇಳನದ ಅಧ್ಯಕ್ಷಿಣಿ ಪದವಿ ಲಭ್ಯವಾಯಿತು. ಅದೇ ಕಾಲದಲ್ಲಿ ಬೆಂಗಳೂರು ಗಾಯನ ಸಮಾಜ ನಡೆಸಿದ ಹನ್ನೊಂದನೆ ಸಂಗೀತ ಸಮ್ಮೇಳನದಲ್ಲಿ ಗಮಕ ಸೇವೆಗಾಗಿ ಶಕುಂತಲಾಬಾಯಿಗೆ ವಿದ್ವತ್ ಸಭೆಯಲ್ಲಿ ಸನ್ಮಾ ನವೂ ನಡೆಯಿತು. ನಮ್ಮ ರಾಜ್ಯ ಸಾಹಿತ್ಯ ಅಕಾಡೆಮಿಯಿಂದ 1969ರಲ್ಲಿ ಗಮಕ ಸೇವೆ ಗಾಗಿ ರಾಜ್ಯಪ್ರಶಸ್ತಿ ಪಡೆದ ಮೊಟ್ಟಮೊದಲ ಗಮಕ ವಿದುಷಿ ಶಕುಂತಲಾಬಾಯಿ. ಆದರೂ ಅವರಿಗೆ ತಾನು ಇಷ್ಟು ಪ್ರಸಿದ್ಧ ಮಹಿಳೆಯೆಂಬ ಹಮ್ಮುಬಿಮ್ಮುಗಳಿಲ್ಲ. ಹಬೆ ಬಡಿದು ಕೈಬೊಬ್ಬೆಯೆದ್ದಾಗ ಸಹಿಸಿಕೊಂಡ ನೋವಂತೆ, ಸುಖಸಂತೋಷಗಳನ್ನು ಬರ

ಮಾಡಿಕೊಂಡಾಗಲೂ ಹಿಗ್ಗದೆ ನಿರಾಡಂಬರ ಮಹಿಳೆಯಾಗಿ ನಡೆದುಕೊಳ್ಳುವ ಗುಣ ನನ್ನತ್ತೆಯವರಿಗೆ ಹುಟ್ಟುಗುಣವಾಗಿ ಬಂದಿದೆ.

ಶಕುಂತಲಾಬಾಯಿಯ ಗುರುಗಳಾದ ಭಾರತವಾಚನ ಪ್ರವೀಣ ಬಿಂದೂರಾಯರು ಶಿಷ್ಯಗೆ ಪ್ರತಿಫಲಾಪೇಕ್ಷೆಯಿಲ್ಲದೆ ಅನಪೇಕ್ಷೆಯಿಂದ ಕಾವ್ಯವಾಚನ ನಡೆಸಬೇಕೆಂದು ಉಪದೇಶಿಸಿದ್ದಾರೆ. ಕಾಲಕ್ಕೆ ಸರಿಯಾಗಿ ಕರೆದೆಡೆ ಹೋಗಿ ಕಾವ್ಯವಾಚನ ಮಾಡಬೇಕೆಂದು ಬೋಧಿಸಿದ್ದಾರೆ. ಗುರು ಹಾಕಿಕೊಟ್ಟ ಮೇಲ್ಪಂಕ್ತಿಯನ್ನು ಅನುಸರಿಸುವುದರಲ್ಲಿ ನನ್ನತ್ತೆಯವರು ಹಿಂಪೆಬಿದ್ದಿಲ್ಲ. ಅರವತ್ತರ ಇಳಿವಯಸ್ಸಿನಲ್ಲಿಯೂ ಶಕುಂತಲಾಬಾಯಿಯ ಕಂಠಶ್ರೀ ಹದಿನಾರುವರುಷಗಳ ಬಾಲೆಗಿರುವಂತೆ ಇದೆ. ಕುಮಾರವ್ಯಾಸ ಭಾರತವಾಚನವನ್ನು "ವೇದ ಪುರುಷನ ಸುತನ ಸುತನ" ಪದ್ಯದಿಂದ ಅವರು ಮುಕ್ತಾಯ ಮಾಡುವಾಗ ಪ್ರತಿಪದಕ್ಕೂ ಅರ್ಥ ಬಿಡಿಸಿ, "ಅನಾದಿ ಮೂರುತಿ" ಕೃಷ್ಣಾ, ಕೃಷ್ಣಾ, ಕೃಷ್ಣಾ ಎಂದು "ಸಲಹೋಗದುಗಿನ ವೀರನಾರಾಯಣ" ನಿಲುಗಡೆಗೆ ಬಂದಾಗ, ನಮ್ಮ ಮುಂದೆ ಸಾಕ್ಷಾತ್ ಶ್ರೀಕೃಷ್ಣ ಮೂರುತಿಯೇ ಪ್ರತ್ಯಕ್ಷನಾಗಿರುವಂತೆ ಭಾಸವಾಗುತ್ತದೆ.

"Charity begins at home" ಎಂಬ ಗಾದೆಯೊಂದುಂಟು ಇಂಗ್ಲಿಷ್ ಭಾಷೆಯಲ್ಲಿ. ಅದು ಶಕುಂತಲಾಬಾಯಿಯ ಮನೆಗೆ ಸರಿಯಾಗಿ ಅನ್ವಯಿಸುತ್ತದೆ. ಅವರ ಗಮಕಕಲಾ ಪ್ರತಿಭೆಯನ್ನು ಸರಿಯಾಗಿ ಗುರುತಿಸಿ ಅದಕ್ಕೆ ಬೆಂಬಲಕೊಟ್ಟವರು ಅವರ ಪತಿ ಪಾಂಡುರಂಗರಾಯರು. ಅನುಕೂಲಗಳನ್ನು ಕಲ್ಪಿಸಿ ಪ್ರೋತ್ಸಾಹ ನೀಡಿ ಸಹಕರಿಸಿದವರು ಅವರ ಅತ್ತೆಯರುಗಳಾದ ಭಾಗೀರಥೀಬಾಯಿ ಮತ್ತು ಅಂಬಾಬಾಯಿ. ಕಲಾವಿದೆ ಎಷ್ಟೇ ಪ್ರತಿಭಾನ್ವಿತಳಾದರೂ ಅತ್ತೆಮನೆಯಲ್ಲಿ ಅನುಕೂಲಗಳಿಲ್ಲದಿದ್ದರೆ ಪ್ರೋತ್ಸಾಹ ಕೊಡದಿದ್ದರೆ, ಆಕೆಯ ಕಲಾ ಪ್ರತಿಭೆ ಕಮರಿಹೋಗುತ್ತದೆ. ಶಕುಂತಲಾಬಾಯಿ ಈ ವಿಷಯದಲ್ಲಿ ಭಾಗ್ಯಶಾಲಿಗಳು, ಅವರಿಗೆ ಅತ್ತೆಮನೆ ಸಕಲ ಸೌಕರ್ಯಗಳನ್ನು ನೀಡಿತು. ಅವರು ಅದನ್ನು ಸಾರ್ಥಕಪಡಿಸಿಕೊಂಡರು.

ನನ್ನತ್ತೆ ಮಾವಂದಿರಾದ ಶಕುಂತಲಾಬಾಯಿ ಮತ್ತು ಪಾಂಡುರಂಗರಾಯರಿಗೆ ಭಗವಂತನು ಆಯುರಾರೋಗ್ಯ ಸುಖಸಂಪತ್ತುಗಳನ್ನು ಕರುಣಿಸಿ, ಈ ದಂಪತಿಗಳಿಂದ ಇನ್ನೂ ಹೆಚ್ಚಾಗಿ ಕನ್ನಡನಾಡಿನ ಸೇವೆ ಮಾಡಿಸಲೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ನನ್ನ ಹಿರಿಯಕ್ಕ

ಎನ್. ಸತ್ಯನಾರಾಯಣರಾವ್

ನನ್ನ ತಾಯಿ ಸಮಾನರಾದ ಹಿರಿಯಕ್ಕ ಶಕುಂತಲಾಬಾಯಿಗೆ ಅರವತ್ತು ವರ್ಷ ತುಂಬಿತೆಂಬ ಶುಭದಾಯಕ ವಿಷಯವನ್ನು ಕೇಳಿ ನನಗೆ ಆನಂದವಾಗಿದೆ. ಅವರಿಗೆ ತೊದಲುನುಡಿಗಳ ಪ್ರೀತಿಯ ಕಾಣಿಕೆಯನ್ನು ಅರ್ಪಿಸಬೇಕೆಂದು ಮನಸ್ಸು ತುಡಿಯುತ್ತಿದೆ.

ನನ್ನ ತಂದೆ ಗಾರ್ಡ್ ನಾರಾಯಣಕೆರೆ ವೆಂಕೋಬರಾಯರಿಗೆ ಮೊದಲ ಹೆಂಡತಿಯಲ್ಲಿ ಬಾಲಾಜಿರಾವ್, ಕಮಲಾಬಾಯಿ ಎಂಬವರು ಇಬ್ಬರು ಮಕ್ಕಳು. ಎರಡನೆಯ ಹೆಂಡಿತಿ ನಮ್ಮ ತಾಯಿ ಸುಂದರಾಬಾಯಿಯಲ್ಲಿ ಶಕುಂತಲಾಬಾಯಿ, ನಾನು ಸೇರಿ ನಾಲ್ಕು ಹೆಣ್ಣು, ಎರಡು ಗಂಡು ಮಕ್ಕಳು ; ನಾನೆ ಕಿರಿಯವನು. ಶಕುಂತಲಾಬಾಯಿ ಹಿರಿಯವರು. ನನ್ನ ಮಲಕ್ಕ ಈಗಿಲ್ಲ. ನನ್ನ ಮಲಣ್ಣ ಬಾಲಾಜಿರಾಯರು ಮನೆಯ ಹಿರಿಯರಾಗಿ ಮನೆತನದ ಕಾರ್ಯಗಳಲ್ಲಿ ಭಾಗವಹಿಸಿ ನಮಗೆ ಸದಾ ಮಂಗಳ ಕೋರುತ್ತಿದ್ದಾರೆ.

ನನ್ನಕ್ಕ ಶಕುಂತಲಾಬಾಯಿಗೆ ಅನೇಕ ಹುಟ್ಟುಗುಣಗಳು ನಮ್ಮ ತಂದೆತಾಯಿಗಳಿಂದ ದೈವದತ್ತವಾಗಿ ಬಂದಿವೆ. ನಮ್ಮ ತಂದೆ ಆರಡಿ ಎತ್ತರದ ತಿಳಿಬಿಳುಪು ವರ್ಣದ ಸುಂದರ ಪುರುಷ. ನನ್ನ ತಾಯಿಯೂ ಅಷ್ಟೇ ಮಟ್ಟಸ ಎತ್ತರದ ಗೋದಿ ಬಣ್ಣದ ಸುಂದರ ರಮಣಿ. ನನ್ನಕ್ಕ ತಂದೆತಾಯಿಗಳಿಂದ ಈ ಚೆಲುವು ಪಡೆದುಕೊಂಡಿದ್ದಾರೆ. ನನ್ನ ತಂದೆಗೆ ಮಧುರಕಂಠವಿತ್ತು. ವರದಾಚಾರ್ಯರ ನಾಟಕಗಳನ್ನು ನೋಡಿ, ಅವರು ಹಾಡುತ್ತಿದ್ದ ಕಂದವೃತ್ತಗಳನ್ನು ಕೇಳಿ, ಅವುಗಳನ್ನು ಮನೆಯಲ್ಲಿ ಹಾಡುತ್ತಿದ್ದರು. ಚಿಂತಲಪಲ್ಲಿ ವೆಂಕಟರಾಯರ ಸಂಗೀತ ಕೇಳಿ, ಅವರ ದೇವರ ನಾಮಗಳನ್ನು ತಾವೂ ಮನೆಯಲ್ಲಿ ಹಾಡಿಕೊಳ್ಳುತ್ತಿದ್ದರು. ನನ್ನ ತಾಯಿಗೂ ಕೋಮಲ ಕಂಠ. ತ್ಯಾಗರಾಜರ ಕೀರ್ತನೆಗಳ ರಾಗಗಳನ್ನು ಗುರುತಿಸುವಷ್ಟು ಸಂಗೀತಜ್ಞಾನ. ಆದುದರಿಂದ ನನ್ನಕ್ಕನಿಗೆ ಇರುವ ಕೋಕಿಲ ಕಂಠ, ಸಂಗೀತಜ್ಞಾನ ತಂದೆತಾಯಿಗಳಿಂದ ವರವಾಗಿ ಬಂದಿವೆ. ನನ್ನ ತಂದೆತಾಯಿಗಳು "ದೇಹಿ" ಎಂದು ಬೇಡಿದವರಿಗೆ "ನಾಸ್ತಿ" ಎಂದವರಲ್ಲ. ನನ್ನಕ್ಕ ಧಾರಾಳವಂತೆ, ಕೈ ಹಿಡಿತವರಿಯರು. ತಮ್ಮ ಮನೆಯಲ್ಲಿ ನಮ್ಮ ಭಾವ ಪಾಂಡುರಂಗ ರಾಯರು ಕೂಡಿಸುವ ಸಂತೋಷಕೂಟಗಳಿಗೆ ತಿಂಡಿತೀರ್ಥ ಒದಗಿಸುವಾಗ ನನ್ನಕ್ಕ ಅನ್ನಪೂರ್ಣೆಯಾಗಿರುತ್ತಾರೆ.. ಭಾನುವಾರಗಳು ಬಂತೆಂದರೆ ತಂಗಿಯರು ತಮ್ಮಂದಿರು ಅವರುಗಳ ಮಕ್ಕಳು ಹೀಗೆ ಸಮಸ್ತ ಬಂಧುಗಳು ನೆಹರೂ ನಗರದಲ್ಲಿದ್ದ ಮಕ್ಕಳ ಮಂಟಪದ ಮನೆಯಲ್ಲಿ ಸೇರುತ್ತಿದ್ದೆವು. ನನ್ನಣ್ಣ ಶ್ರೀನಿವಾಸರಾವ್ ಪಿಟೀಲು ನುಡಿಸುತ್ತಿದ್ದರು. ನನ್ನ ಕಿರಿಯಕ್ಕ ಸುಶೀಲವಾಮನರಾವ್ ತನ್ನ ಮಗಳು ಸುಮಿತ್ರಳೊಂದಿಗೆ ತ್ಯಾಗರಾಜರ ಕೀರ್ತನೆಗಳನ್ನು ಪುರಂದರದಾಸರ ದೇವರ ನಾಮಗಳನ್ನು ಸೊಗಸಾಗಿ ಹಾಡುತ್ತಿದ್ದರು. ನಾನು ಕನ್ನಡ ಭಾವಗೀತೆಗಳನ್ನು ಹಾಡುತ್ತಿದ್ದೆ. ಶಕುಂತಲಾಬಾಯಿ

ಕುಮಾರವ್ಯಾಸ, ಲಕ್ಷ್ಮೀಶ, ರಾಘವಾಂಕ, ಕುವೆಂಪು ಕಾವ್ಯಗಳಿಂದ ಯಾವುದಾದರೊಂದು ರಸಘಟ್ಟವನ್ನು ವಾಚನ ಮಾಡುತ್ತಿದ್ದರು. ನನ್ನ ಭಾವ ಪಾಂಡುರಂಗ ರಾಯರು ತಾವು ರಚಿಸಿದ ಮಕ್ಕಳ ನಾಟಕಗಳನ್ನು ಮಕ್ಕಳ ಮಂಟಪದ ಮಕ್ಕಳಿಗೆ ಅಭ್ಯಾಸ ಮಾಡಿಸುತ್ತಿದ್ದರು. ಈ ಮಧ್ಯೆ ನನ್ನಕ್ಕನ ಅಭಿಮಾನಿಗಳು, ನನ್ನ ಭಾವನ ಮಿತ್ರರು ಬಂದು ಹೋಗುತ್ತಿದ್ದರು. ಭಾನುವಾರಗಳಲ್ಲಿ ಮಕ್ಕಳ ಮಂಟಪ ಕಲಾರಾಧಕರ ಮಂಟಪವಾಗುತ್ತಿತ್ತು. ತಿಂಡಿ ಕಾಫಿಯು ಅರವಟ್ಟಿಗೆಯಾಗಿ ಮಾರ್ಪಡುತ್ತಿತ್ತು.

ನಾನು ಹದಿಮೂರು ವರ್ಷದ ಬಾಲಕನಾಗಿರುವಾಗಲೇ ನನ್ನ ತಂದೆಯನ್ನು ಕಳೆದುಕೊಂಡ ದುರ್ದೈವಿ. ನನ್ನ ತಂದೆ ನಿವೃತ್ತರಾದಾಗ ಈಗಿನ ಕಾಲದಂತೆ ಅವರಿಗೆ ನಿವೃತ್ತ ಮಾಸಾಶನ ಸಿಗಲಿಲ್ಲ. ಮಿತವ್ಯಯದ ಉಳಿತಾಯದ ಹಣ ಅಷ್ಟೋ ಇಷ್ಟೋ ಕೊಟ್ಟು ರೈಲ್ವೆ ಇಲಾಖೆ ಕೈತೊಳೆದುಕೊಂಡುಬಿಟ್ಟಿತು. ನಿವೃತ್ತರಾದ ಹೊಸದರಲ್ಲೇ ನನ್ನ ತಂದೆ ಕಿರಿಯಣ್ಣನ ಮದುವೆ ಮಾಡಿದರು. ಮದುವೆಯ ಖರ್ಚಾಗಿ ಉಳಿದ ಹಣವನ್ನು ಭೋಗ್ಯಕ್ಕೆ ಹಾಕಿ ಒಂದು ಮನೆ ಪಡೆದರು. ಅದು ಅವರಿಗೆ ಸ್ವಾಧೀನಕ್ಕೆ ಬರಲೇ ಇಲ್ಲ. ಇಷ್ಟರೊಳಗೆ ಕಾಯಿಲೆ ಬಿದ್ದು ಸತ್ತುಹೋದರು. ನನ್ನ ತಂದೆ ಗಾರ್ಡಾಗಿದ್ದರೂ ಬೇಕುಬಿಟ್ಟಿಯೆಂದು ಯಾರನ್ನೂ ಹಿಂಸಿಸಿದವರಲ್ಲ. ತಾವೇ ಇನ್ನೊಬ್ಬರ ಕಷ್ಟಕ್ಕೆ ಅಯ್ಯೋಪಾಪವೆಂದು ಕನಿಕರಿಸುವ ಧಾರಾಳಿ. ಆದುದರಿಂದ ಮಿತವ್ಯಯ ಉಳಿತಾಯದ ಹಣವುಳಿದು ಅವರಲ್ಲಿ ಬೇರೆ ಹಣವಿರಲಿಲ್ಲ. ಹೀಗಾಗಿ ಅವರು ಸತ್ತಕಾಲದಲ್ಲಿ ನಾವು ಆರ್ಥಿಕ ಮುಗ್ಗಟ್ಟನ್ನು ಎದುರಿಸಬೇಕಾಯಿತು. ನಮ್ಮ ತಾಯಿ ಎದೆಗೆಡದೆ ತುಂಬು ಸಂಸಾರವನ್ನು ನಿಭಾಯಿಸಿದರು.

ನಾನು ನನ್ನ ತಂದೆ ಸತ್ತ ಕಾಲದಲ್ಲಿ ಪ್ರೌಢಶಾಲಾ ವಿದ್ಯಾರ್ಥಿಯಾಗಿದ್ದೆ. ಹಾಗೂ ಹೀಗೂ ಕಷ್ಟಪಟ್ಟು ಪ್ರೌಢಶಾಲಾಭ್ಯಾಸ ಮುಗಿಸಿ ಕಾಲೇಜು ಹೊಸಿಲು ಹತ್ತಿದೆ. ಕಾಲೇಜು ವಿದ್ಯಾಭ್ಯಾಸಕ್ಕೆ ಹಣ ಒದಗಿಸುವುದಕ್ಕೆ ನಮ್ಮ ತಾಯಿಗೆ ಕಷ್ಟವಾಗಿತ್ತು. ಅಂಥ ಒಂದು ಸಂದರ್ಭದಲ್ಲಿ ಒಂದು ದಿನ ನನ್ನ ಹಿರಿಯಕ್ಕ ಶಕುಂತಲಾಬಾಯಿ "ಸತ್ಯ, ನೀನೇಕೆ ಟೈಪ್‌ರೈಟಿಂಗ್ ಷಾರ್ಟ್‌ಹ್ಯಾಂಡ್ ತರಗತಿಗಳಿಗೆ ಸೇರಿಕೊಳ್ಳಬಾರದು" ಎಂದು ಕೇಳಿದರು. ಆಗ ನಾನು "ಅಮ್ಮಣ್ಣಿ, ಕಾಲೇಜು ವಿದ್ಯಾಭ್ಯಾಸ ತೂಗಿಸುವುದೇ ಕಷ್ಟವಾಗಿದೆ. ಇನ್ನು ಟೈಪ್‌ರೈಟಿಂಗ್ ಷಾರ್ಟ್‌ಹ್ಯಾಂಡ್ ತರಗತಿಗಳಿಗೆ ಹಣವೆಲ್ಲಿಂದ ತರಲಿ" ಎಂದೆ. ನನ್ನಕ್ಕ ಮರುಮಾತಾಡದೆ ಒಂದು ಘಳಿಗೆ ಆಲೋಚನಾಪರರಾದರು. ಆಮೇಲೆ "ಸತ್ಯ ನಾನು ಕೊಡುತ್ತೇನೆ. ಕಾಮರ್ಸ್ ಇನ್ಸ್ಟಿಟ್ಯೂಟಿಗೆ ಹೋಗಿ ಸೇರಿಕೊ" ಎಂದರು. ಅವರ ಅಭಿಪ್ರಾಯದಂತೆ ನಾನು ಕಾಮರ್ಸ್ ಇನ್ಸ್ಟಿಟ್ಯೂಟಿಗೆ ಸೇರಿ ಟೈಪ್‌ರೈಟಿಂಗ್ ಷಾರ್ಟ್‌ಹ್ಯಾಂಡ್ ಪರೀಕ್ಷೆ ಕಟ್ಟಿ ಉತ್ತಮ ದರ್ಜೆಯಲ್ಲಿ ಉತ್ತೀರ್ಣನಾದೆ. ಅದರವರೆಗೂ ಅವರು ಒಂದು ತಿಂಗಳೂ ತಪ್ಪಿಸದೆ ಫೀಸ್ ಕೊಡುತ್ತಿದ್ದರು. ಮುಂದೆ ನನಗೆ ಕಿರ್ಲೋಸ್ಕರ್ ಫ್ಯಾಕ್ಟರಿಯಲ್ಲಿ ಸ್ಟೆನೊ ಟೈಪಿಸ್ಟ್ ಕೆಲಸ ಸಿಕ್ಕಿತು. ಈಗ ನಾನೊಂದು ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಉತ್ತಮ ದರ್ಜೆಯ ಉದ್ಯೋಗದಲ್ಲಿದ್ದೇನೆ. ನನ್ನಕ್ಕನ ಕೃಪೆಯಿಂದ ನಾನೊಬ್ಬ ಮನುಷ್ಯನಾದೆ ಎಂದು ಆಕೆಯನ್ನು

ನಿತ್ಯವೂ ನೆನೆದುಕೊಳ್ಳುತ್ತೇನೆ. ಇಲ್ಲಿ ಒಂದು ಮಾತು ಹೇಳಬೇಕು, ನನ್ನ ಭಾವ ಯಾವುದಕ್ಕೂ ನನ್ನಕ್ಕನ ಕೈ ತಡೆದವರಲ್ಲ.

ನನ್ನನ್ನು ಗೃಹಸ್ಥನನ್ನಾಗಿ ಮಾಡುವುದಕ್ಕೂ ನನ್ನಕ್ಕ ಭಾವನೇ ಕಾರಣ. ಗಮಕ ಸಾಹಿತ್ಯ ಚಟುವಟಿಕೆಗಳಿಂದ ಪಾಂಡುರಂಗರಾವ್ ದಂಪತಿಗಳಿಗೆ ದೇಶದ ತುಂಬ ಅಭಿಮಾನಿ ಆಪ್ತರುಗಳಿದ್ದಾರೆ. ಅಂಥವರಲ್ಲಿ ಎಸ್. ಎನ್. ಮೂರ್ತಿ, 'ಪದಕಿ ಎಂಟರ್‌ಪ್ರೈಸ'ಸಿನ ವೆಂಕಟೇಶಮೂರ್ತಿ ಪದಕಿ ಗಣ್ಯರು. ಎಸ್. ಎನ್. ಮೂರ್ತಿ ಕಿರ್ಲೋಸ್ಕರ್ ಫ್ಯಾಕ್ಟರಿಯಲ್ಲಿರುವಾಗ ನನ್ನ ಭಾವನವರ ಮೆಹನತ್ತಿನಿಂದ ನನಗೆ ಅಲ್ಲಿ ಕೆಲಸ ಸಿಕ್ಕಿತು. ಮೂರ್ತಿಯವರ ಮೂಲಕ ವೆಂಕಟೇಶ ಮೂರ್ತಿ ಪದಕಿ ನನ್ನಕ್ಕಭಾವನವರ ಮನೆಯಲ್ಲಿ ಒಬ್ಬರಾಗಿದ್ದರು. ವೆಂಕಟೇಶ ಮೂರ್ತಿಯವರಿಗೆ ಕಿರಿಯ ತಂಗಿಯೊಬ್ಬಳು ಮದುವೆಗೆ ಬಂದವಳಿದ್ದಳು. ಆಕೆಯನ್ನು ನನಗೇಕೆ ತರಬಾರದೆಂದು ನನ್ನಕ್ಕ ಭಾವ ಲೆಕ್ಕಹಾಕಿದರು. ವೆಂಕಟೇಶ ಮೂರ್ತಿಯವರಲ್ಲಿ ಪ್ರಸ್ತಾಪಿಸಿದರು. ಸಂಬಂಧ ಕುದುರಿತು. 1960ರ ಸೆಪ್ಟಂಬರ್ 30ರಂದು ವಿಜಯದಶಮಿಯ ದಿನ ಮೈಸೂರಿನಲ್ಲಿ ನನ್ನ ಮದುವೆ ವಿಜೃಂಭಣೆಯಿಂದ ನಡೆದೇ ಹೋಯಿತು. ಸೌಭಾಗ್ಯವತಿ ರಮಾಮಣಿ ನನ್ನ ಗೃಹಲಕ್ಷ್ಮಿಯಾಗಿ ಬಂದಳು. ನನಗೆ ಹರೀಶ್ ಕೀರ್ತಿಗೊಬ್ಬ ಮಗನಾಗಿ, ಪದ್ಮಿನಿ ಆರತಿಗೊಬ್ಬ ಮಗಳಾಗಿ ನಮ್ಮ ಸಂಸಾರ ಪುಟ್ಟದಾಗಿ ಚೊಕ್ಕವಾಗಿವೆ.

ನನ್ನಕ್ಕ ಕರ್ಣಾಟಕದ ಶ್ರೇಷ್ಠಗಮಕಿಗಳಲ್ಲಿ ಅಗ್ರ ಪಂಕ್ತಿಯಲ್ಲಿದ್ದರೂ ಅವರಲ್ಲಿ ಸ್ವಜಾತಿ ಮತ್ಸರವಿಲ್ಲ. ನಾಡಿನ ಶ್ರೇಷ್ಠ ಗಮಕಿಗಳನ್ನು ಕರೆಸಿಕೊಂಡು ತಮ್ಮ ಮನೆಯಲ್ಲಿ ಕಾವ್ಯವಾಚನ ಕಾರ್ಯಕ್ರಮಗಳನ್ನು ಏರ್ಪಡಿಸಿ, ಸಂತೋಷಪಡುತ್ತಾರೆ. ನನ್ನನ್ನು ಭಾವಗೀತೆ ಗಾಯಕನನ್ನಾಗಿ ಮಾಡುವುದಕ್ಕೂ ನನ್ನಕ್ಕನೇ ಕಾರಣ. ಕುವೆಂಪು, ಬೇಂದ್ರೆ, ಮುಗಳಿ, ಗೋಕಾಕ್ ಮೊದಲಾದ ಕವಿವರ್ಯರ ಕವನಗಳನ್ನು ಆರಿಸಿಕೊಟ್ಟು, ಹಾಡಿಸಿ, ತಿದ್ದಿ, ಸಾರ್ವಜನಿಕ ವೇದಿಕೆಯ ಮೇಲೆ ತಂದಿದ್ದಾರೆ. ನನ್ನಣ್ಣ ಶ್ರೀನಿವಾಸರಾಯರನ್ನು ಕುವೆಂಪುರವರ "ಶ್ರೀರಾಮಾಯಣ ದರ್ಶನಂ" ಕಾವ್ಯದ "ಶಬರಿಗಾದನು ಅತಿಥಿ ದಾಶರಥಿ" ವಾಕ್ಚಿತ್ರದಲ್ಲಿ ಶ್ರೀರಾಮನ ಪಾತ್ರಧಾರಿಯಾಗಿ ಮಾಡುವುದಕ್ಕೂ ನನ್ನಕ್ಕನೇ ಕಾರಣ. ಭಾರತದ ಲಲಿತಮ್ಮನವರು ಶಬರಿಯಾಗಿ ಪಾತ್ರ ನಿರ್ವಹಿಸಿದ್ದಾರೆ ಈ ವಾಕ್ಚಿತ್ರದಲ್ಲಿ ಶಬರಿ ರಾಮಲಕ್ಷ್ಮಣ ಪಾತ್ರಗಳಿಗೆ ಹಿನ್ನೆಲೆ ಗಾಯಕಿಯಾಗಿ ನನ್ನಕ್ಕ ಶಕುಂತಲಾಬಾಯಿ ಕಂಠದಾನ ಮಾಡಿದ್ದಾರೆ.

ನನ್ನ ಹಿರಿಯಕ್ಕ ಶಕುಂತಲಾಬಾಯಿ ತಮ್ಮ ಗಮಕ ಕಲಾ ವೈಭವವನ್ನು ದೇಶಾದ್ಯಂತ ಮೆರೆಸಿದ್ದರೂ ಅವರು ಅತಿ ವಿನಯ ಸರಳ ಗುಣಗಳಿಂದ ಕಲಾಭಿಮಾನಿಗಳ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿದ್ದಾರೆ. ನನ್ನಕ್ಕ ಭಾವನವರು ಪ್ರವಾಸ ಮಾಡಿದೆಡೆಯಲ್ಲೆಲ್ಲ ಅವರನ್ನು ಆತಿಥ್ಯದಿಂದ ತಣಿಸುವ ಮಹಾಜನ ತೋರುವ ಸೌಜನ್ಯ ಮನೋಭಾವ ಅಚ್ಚರಿಯನ್ನುಂಟುಮಾಡುತ್ತದೆ. ನನ್ನಕ್ಕಭಾವನವರೂ ಅಷ್ಟೆ, ತಾವು ಇಳಿದುಕೊಂಡ ಮನೆಗಳಲ್ಲಿ, ಮನೆಯವರಲ್ಲಿ ಮನೆಯವರಾಗಿ ನಡೆದುಕೊಳ್ಳುವ ರೀತಿ ತುಂಬ ಸೌಜನ್ಯಪೂರ್ಣ. ನನ್ನಕ್ಕ ತುಂಬ ಸಂಕೋಚ ಸ್ವಭಾವದವರು. ಆತ್ಮ

ಪ್ರಶಂಸೆ, ಅಹಂಕಾರಗಳಿಂದ ಹೊರಗಾದವರು. ಉಡುಗೆ ತೊಡುಗೆಗಳಲ್ಲಿ ನಿರಾಡಂಬರ ಪ್ರಿಯರು. ಮಹಾಸಭಾಕಾರ್ಯಕ್ರಮಗಳಿಗೆ ಕೂಡ ಅತಿ ಸರಳರೀತಿಯಲ್ಲಿ ಹೋಗು ತ್ತಾರೆ. ಹೊಂದಿಕೊಂಡು ಕಾರ್ಯ ನಿರ್ವಹಿಸುತ್ತಾರೆ. ನನ್ನ ಭಾವನವರೂ ಅಷ್ಟೆ. ಇಂಥ ಅಪೂರ್ವ ಜೋಡಿ ನನ್ನಕ್ಕ ಭಾವನವರನ್ನು ನಾನು ಪಡೆದಿರುವೆನಲ್ಲ ಎಂಬ ಹೆಮ್ಮೆ ನನಗಿದೆ. ಪಾಂಡುರಂಗರಾವ್ ದಂಪತಿಗಳಿಗೆ ದೀರ್ಘಾಯಸ್ಸನ್ನೂ ನನ್ನಕ್ಕನಿಗೆ ಸೌಮಾಂಗಲ್ಯ ಭಾಗ್ಯವನ್ನು ಭಗವಂತ ಕರುಣಿಸಲೆಂದು ಆತನಲ್ಲಿ ನನ್ನ ಪ್ರಾರ್ಥನೆ. ನನ್ನಕ್ಕ ಭಾವನವರಿಗೆ ಸಾಷ್ಟಾಂಗ ಪ್ರಣಾಮಗಳು.

ನನ್ನ ಅಮ್ಮ

ಶ್ರೀಮತಿ ವನಜಾ ಕೋಟೀಶ್ವರ

"ನಮೋ, ಮಾತೃದೇವೋಭವ"

ತಾಯಿಗೆ ಅರವತ್ತು ವರ್ಷ ತುಂಬಿದ ಈ ಸುಸಮಯದಲ್ಲಿ ಮಕ್ಕಳಾದ ನಾವು ಇದಕ್ಕಿಂತ ಹೆಚ್ಚಿಗೆ ಏನುತಾನೇ ಮಾಡಬಲ್ಲೆವು ! ಗದುಗಿನ ವೀರನಾರಯಣನು ತಂದೆ ತಾಯಿಗಳನ್ನು ಎಂದೆಂದಿಗೂ ಚೆನ್ನಾಗಿಟ್ಟಿರಲಿ ! ಅವರು ಶತಾಯುಗಳಾಗಲಿ .! ಅವರಿಗೆ ಪ್ರೀತಿಯಿಂದ ನಮಸ್ಕರಿಸಿ ಅವರಿಂದ ಆಶೀರ್ವಾದ ಪಡೆಯುವ ಭಾಗ್ಯ ಎಂದೆಂದಿಗೂ ನಮ್ಮದಾಗಿರಲಿ ಎಂದು ಆ ದೇವನಲ್ಲಿ ಮೊರೆಯಿಡುವೆ. ಎಲ್ಲೇ ಹೋಗಲಿ ಮಾತಾಡುತ್ತಾ ಆಡುತ್ತಾ ನಾನು ಇಂಥವರ ಮಗಳೆಂದು ಹೇಳಿದಾಗ ಜನ "ಓ ಅವರೆ! ಶಕುಂತಲಾ ಬಾಯಿಯವರ ಕಾವ್ಯವಾಚನ ಕೇಳಿರುವೆವು. ಬಹಳ ಚೆನ್ನಾಗಿ ಹೇಳುತ್ತಾರಪ್ಪಾ" ಎಂದಾಗ ನನ್ನ ಎದೆ ಸಂತಸದಿಂದ ಉಬ್ಬುವುದು.

ಇಂಥ ಶ್ರೇಷ್ಠ ಕಲಾವಿದೆಯಾಗಿದ್ದರೂ ಸಹ ನನ್ನ ತಾಯಿ ಬಹಳ ಸರಳ ಜೀವಿ, ನಿಗರ್ವಿ, ಒಳ್ಳೆಯ ಗೃಹಿಣಿ, ತ್ಯಾಗಮಯಿ. ಪತಿ, ಮಕ್ಕಳ ಸುಖಕ್ಕಾಗಿ ಏನೂ ಮಾಡಲು ತಯಾರು ! ತಮ್ಮ ಶಕ್ತಿ ಮೀರಿ ತಮ್ಮ ಸಂಸಾರವನ್ನು ಸುಖವಾಗಿಡಲು ಪ್ರಯತ್ನಿಸುವರು. ದೊಡ್ಡ ಕಲಾವಿದೆಎಂಬ ಗರ್ವ ಎಳ್ಳಷ್ಟೂ ಇಲ್ಲ. ನ್ಯಾಯವಾದ ವಿಷಯವಿದ್ದಲ್ಲಿ ಎಳ್ಳಷ್ಟೂ ಹೆದರದೆ ಕೆಚ್ಚೆದೆಯಿಂದ, ಬಿಚ್ಚು ಮನಸ್ಸಿನಿಂದ ಹೇಳಿಬಿಡುವರು.

ಬಹಳ ಹಿಂದಿನಮಾತು. ಪೋರ್ಸ್‌ಲೈನ್ ಫ್ಯಾಕ್ಟರಿಯಲ್ಲಿ ಒಂದು ಉದ್ಘಾಟನಾ ಸಮಾರಂಭಕ್ಕೆ ಪ್ರಧಾನಮಂತ್ರಿಯಾಗಿದ್ದ ಶ್ರೀ ಪಂಡಿತ್ ಜವಹರಲಾಲ್ ನೆಹರೂರವರು ಆಗಮಿಸಿದ್ದರು ಕಾರ್ಯಕ್ರಮದಲ್ಲಿ ಮೂರು ನಿಮಿಷಗಳ ಕಾಲ ನನ್ನ ತಾಯಿಯವರ ಪ್ರಾರ್ಥನೆಯಿತ್ತು. ಆಗ ಕಾಲೇಜಿನಲ್ಲಿ ಓದುತ್ತಿದ್ದ ನಾನೇ ತಾಯಿಯವರಿಗೆ ಸಮಾರಂಭಗಳಲ್ಲಿ ತಂಬೂರಿ ಶ್ರುತಿ ಹಾಕುತ್ತಿದ್ದೆ. ಮುಖ್ಯ ಅತಿಥಿಗಳ ವೇದಿಕೆಗೆ ಪಕ್ಕದಲ್ಲಿ ಸುಮಾರು ಐವತ್ತು ಗಜ ದೂರದಲ್ಲಿ ನಮ್ಮ ವೇದಿಕೆಯಿತ್ತು. ಆಮಂತ್ರಿತರೆಲ್ಲಾ ಕುರ್ಚಿಗಳ ಮೇಲೆ ಕೂತಿದ್ದರು ನಮ್ಮ ವೇದಿಕೆ ಅದಕ್ಕಿಂತ ಸ್ವಲ್ಪ ಎತ್ತರದಲ್ಲಿತ್ತು. ನಮ್ಮ ತಾಯಿಯವರ ಪ್ರಾರ್ಥನೆಯಾದಮೇಲೆ ಸ್ವಾಗತ, ಅನಂತರ ನೆಹರೂಜಿಯವರ ಉದ್ಘಾಟನಾ ಭಾಷಣ, ವಂದನಾರ್ಪಣೆ, ಅನಂತರ ರಾಷ್ಟ್ರಗೀತೆ. ರಾಷ್ಟ್ರಗೀತೆಯನ್ನು ವಾದ್ಯಗೋಷ್ಠಿಗೆ ಒಪ್ಪಿಸುತ್ತಾ ಅವರು ಪ್ರಾರಂಭಿಸುತ್ತಲೆ ರಾಷ್ಟ್ರಗೀತೆಗೆ ಗೌರವ ಸೂಚಿಸುವುದಕ್ಕೆ ನಾವು ಎದ್ದುನಿಂತೆವು. ನಮ್ಮನ್ನು ನೋಡಿ ಉಳಿದವರೆಲ್ಲರೂ ಎದ್ದುನಿಂತರು. ಆಸಮಯದಲ್ಲಿ ಏನಾಯಿತೋ ದೇವರೇ ಬಲ್ಲ. ಬಹುಶಃ ವಿದ್ಯುಚ್ಛಕ್ತಿಯ ತೊಂದರೆ ಇರಬಹುದು. ಧ್ವನಿವರ್ಧಕ ಕೆಲಸ ಮಾಡಲಿಲ್ಲ. ಯಾವ ಸದ್ದೂ ಕೇಳಿಸಲಿಲ್ಲ. ನೆಹರೂಜಿ ಒಂದು ನಿಮಿಷಕಾಲ ನಾವೇ ರಾಷ್ಟ್ರಗೀತೆ

ಹಾಡುತ್ತಿದ್ದೇವೆ ಎಂಬ ಊಹೆಯಿಂದ ಸುಮ್ಮನೆ ನಿಂತಿದ್ದರು. ಯಾರೂ ಕದಲಲಿಲ್ಲ. ಏಕೆ ರಾಷ್ಟ್ರಗೀತೆ ಹಾಡುತ್ತಿಲ್ಲ ಎಂದು ಕೇಳಿದರು. ಪಕ್ಕದಲ್ಲಿದ್ದವರು ಆಗಿ ಹೋಯಿತು ಎಂದರು. ನೆಹರೂಜಿಯವರಿಗೆ ಬಹಳ ಕೋಪ ಬಂದಿತ್ತು. ವೇದಿಕೆಯಿಂದ ಇಳಿದು ಹೋಗುವಾಗ ನಮ್ಮನ್ನುದ್ದೇಶಿಸಿ "ನೀವು ಯಾಕೆ ಹಾಡಲಿಲ್ಲ ?" ಎಂದು ಗುಡುಗಿದರು. ನನಗೆ ಏನು ಹೇಳಬೇಕೆಂದೋ ತೋಚಲಿಲ್ಲ. ಆದರೆ ತಕ್ಷಣವೇ ತಾಯಿಯವರು ಧೈರ್ಯದಿಂದ ಹಿಂದಿಯಲ್ಲಿ 'ನಮಗೆ ಹಾಡೆಂದು ಹೇಳಲಿಲ್ಲ' ಎಂದರು. ಪ್ರಧಾನಿಯವರು ತಮ್ಮ ಪಕ್ಕದಲ್ಲಿದ್ದ ಸಮಾರಂಭದ ವ್ಯವಸ್ಥಾಪಕರಿಗೆ 'ರಾಷ್ಟ್ರಗೀತೆಯನ್ನು ಇವರಿಗೆ ಹಾಡೆಂದು ಯಾಕೆ ಹೇಳಲಿಲ್ಲ' ಎಂದು ಬುಸುಗುಟ್ಟುತ್ತಾ ಹೊರಟುಹೋದರು. ಮಾರನೆಯ ದಿನ ಪತ್ರಿಕೆಗಳೆಲ್ಲ ವ್ಯವಸ್ಥಾಪಕರನ್ನು ತರಾಟೆಗೆ ತೆಗೆದುಕೊಂಡಿದ್ದುವು.

ನಮ್ಮ ತಾಯಿಯವರು ಶ್ರಮಜೀವಿ. 'ಕಾಯಕವೇ ಕೈಲಾಸ' ಎಂಬ ಉಕ್ತಿಗೆ ಉದಾಹರಣೆಯಂತಿದ್ದಾರೆ. ಪತಿಯನ್ನು ನೆರಳಿನಂತೆ ಹಿಂಬಾಲಿಸುವವರು. ಪತಿಯ ಎಲ್ಲಕಾರ್ಯಗಳಲ್ಲೂ ಇವರ ಸಹಕಾರವಿದ್ದೇ ಇದೆ. ತಂದೆಯವರು ತಮ್ಮ ಜೀವನವನ್ನೇ ಮಕ್ಕಳಿಗಾಗಿ ತೇದಿದ್ದಾರೆ ಎಂದರೆ ಅತಿಶಯೋಕ್ತಿಯಾಗಲಾರದು. ಮಕ್ಕಳ ಸಾಹಿತ್ಯ ರಚಿಸಿ ಸಾಹಿತ್ಯದ ಕ್ಷೇತ್ರದಲ್ಲಿ ಪ್ರಸಿದ್ಧರಾಗಿರುವರು 'ನಮೋ ಅರ್ಭಕೇಭ್ಯಃ' ಎಂಬುದನ್ನೇ ಗುರಿಯಾಗಿಟ್ಟುಕೊಂಡು ಮಕ್ಕಳಿಗಾಗಿ ಶಾಲೆಯೊಂದನ್ನು ಸ್ಥಾಪಿಸಿ ಆದರ್ಶಕ್ಕಾಗಿ ಹೋರಾಡಿದವರು. ಸಾಮಾನ್ಯವಾಗಿ ಲಕ್ಷ್ಮಿ-ಸರಸ್ವತಿಯರು ಒಂದೆಡೆ ಸೇರುವುದು ಅಪರೂಪ. ತಂದೆತಾಯಿಯರಿಬ್ಬರೂ ಸರಸ್ವತೀದೇವಿಯ ಕೃಪೆಗೆ ಪಾತ್ರರಾಗಿರುವುದರಿಂದ ಲಕ್ಷ್ಮಿಗೆ ಇವರುಗಳ ಮೇಲೆ ಮುನಿಸು. ಆದರೆ ತಾಯಿಯವರು ಲಕ್ಷ್ಮಿ ತಮಗೆ ಒಲಿಯಲಿಲ್ಲವೆಂದು ಬೇಸರಿಸಿದವರಲ್ಲ. ಎಂದೂ ಅವರು ಜೀವನದಲ್ಲಿ 'ಇದು ಬೇಕು, ಅದು ಬೇಕು, ಹೀಗಿರಬೇಕು, ಹಾಗಿರಬೇಕು' ಎಂದದ್ದನ್ನು ಕಂಡೇ ಇಲ್ಲ, ನಿತ್ಯತೃಪ್ತರು. ಸದಾ ನಗುವ ಮುಖ ಬೆಳಗ್ಗೆಯಿಂದ ಒಳಗೆ ಗೃಹಿಣಿಯಾಗಿ ದುಡಿದು, ಎಲ್ಲಾದರೂ ಕಾರ್ಯಕ್ರಮವಿದ್ದಲ್ಲಿ ಸಂಜೆಯ ವೇಳೆಗೆ ತಯಾರಾಗಿ ಕಲಾವಿದೆಯಾಗಿ ಹೊರಟೇ ಬಿಡುವರು. ನನಗೆ ಎಷ್ಟೋ ಸಲ 'ತಾಯಿಯವರು ಈ ದ್ವಿ-ಪಾತ್ರವನ್ನು ಇಷ್ಟು ಯಶಸ್ವಿಯಾಗಿ ಹೇಗೆ ನಿಭಾಯಿಸುವರಪ್ಪ ? '-ಎಂದು ಆಶ್ಚರ್ಯವಾಗಿದೆ.

ನಮ್ಮದು ತುಂಬು ಸಂಸಾರ, ಹೀಗಾಗಿ ಬಂಧುಬಳಗ ಅಪಾರ. ತಂದೆ ತಾಯಿಯರ ಹೃದಯ ಸಿರಿವಂತಿಕೆ ಹಾಗೂ ಪ್ರೇಮದ ಕಾರಣದಿಂದಾಗಿ ಸಾಹಿತ್ಯ ಬಳಗವೂ ಹೆಚ್ಚು. ಬೆಳಗಿನಿಂದ ದುಡಿದು ಮಧ್ಯಾಹ್ನ ಇನ್ನೇನು ಸ್ವಲ್ಪ ವಿರಾಮ ತೆಗೆದು ಕೊಳ್ಳೋಣ ಎನ್ನುವ ವೇಳೆಯಲ್ಲಿಸಹ ಯಾರಾದರೂ ಅತಿಥಿಗಳು ಬಂದಲ್ಲಿ, ತಕ್ಷಣವೇ ಎದ್ದು ಸೆರಗು ಕಟ್ಟಿ ಆತಿಥ್ಯ ನೀಡಲು ತಯಾರಾಗಿ ಬಿಡುವರು. 60 ದಾಟಿದರೂ ಸಹ ಅವರ ಚಟುವಟಿಕೆಗಳು ಹಿಂದಿನಂತೆಯೇ ಇವೆ. ಹದಿನಾರರ ಯುವತಿಯೂ ನಾಚುವಂತಿದೆ.

ಹೀಗಾಗಿ ನಮ್ಮ ದೊಡ್ಡಜ್ಜಿಯ ಮಗ ಶ್ರೀ ಮಾಧವರಾಯರಿಗೆ, ನಾದಿನಿಯನ್ನು ಕಂಡರೆ ಬಹಳ ಪ್ರೇಮ ಹಾಗೂ ಹೆಮ್ಮೆ. ಅವರು ಮನೆಗೆ ಬಂದಾಗಲೆಲ್ಲ—"ಇದು

ಸೊಗಸಾಗಿ ಅಡಿಗೆ, ತಿಂಡಿ, ತೀರ್ಥಮಾಡಿ ಹೊಟ್ಟೆ ತುಂಬಿಸುವಿರಿ, ಕರ್ಣಾಮೃತವಾಗಿ ವಾಚನಮಾಡಿ ಬುದ್ಧಿಯನ್ನು ಮೆಚ್ಚಿಸುವಿರಿ, ಯಾವ ಬಳಗದ ಮನೆಯಲ್ಲೇ ಮದುವೆ ಮುಂಜಿಗಳಾಗಲಿ, ನೇತೃತ್ವ ವಹಿಸಿ, ಮುನ್ನುಗ್ಗಿ ಕೆಲಸಮಾಡಿ ಚಾಚೂ ತಪ್ಪಿಲ್ಲದಂತೆ ಎಲ್ಲರ ಕೈನಿಂದಲೂ ಸೈ ಎನ್ನಿಸಿಕೊಳ್ಳುವಿರಿ,—ಇವಿಷ್ಟೂ ಒಬ್ಬರಿಂದಲೇ ಹೇಗೆ ಸಾಧ್ಯ? ಇದರ ಗುಟ್ಟೇನು ? ಬೇರೆಯವರಿಗೂ ಸ್ವಲ್ಪ ಹೇಳಿಕೊಡಿ"—ಎನ್ನುತ್ತಾರೆ.

ಮೈದುನ ದಿವಂಗತ ಶ್ರೀ ವಾಮನರಾಯರಿಗಂತೂ ಈ ವೈನಿ ಎಂದರೆ ಬಹಳ ಅಚ್ಚುಮೆಚ್ಚು, ಇವರು ಎರಡು ಕಡೆಯಿಂದಲೂ ನಮಗೆ ಸಂಬಂಧ. ಒಂದು ತಂದೆಯ ದೊಡ್ಡಮ್ಮನ ಮಗ, ಎರಡನೆಯದು ತಾಯಿಯ ತಂಗಿಯನ್ನೇ ಮದುವೆಯಾಗಿ ಚಿಕ್ಕಪ್ಪ. ಹೀಗಾಗಿ ಬಹಳ ಸಲಿಗೆ. 'ನಿಮ್ಮ ಹಾಗೆ ಬಿಸಿಬೇಳೆಭಾತ್ ಯಾರೂ ಮಾಡೊಲ್ಲ' ವೈನಿ'—ಎಂದು ಮಾತು ಮಾತಿಗೆ ವೈನಿ, ವೈನಿ ಎಂದುಕೊಂಡು ಸಂತೋಷದಿಂದಿರುತ್ತಿದ್ದರು.

ತಂದೆಯವರ ಸಾಹಿತ್ಯ ಬಳಗದ ಸಹೃದಯ ಗೋಷ್ಠಿಗಳು ಆಗಾಗ ಮನೆಯಲ್ಲಿ ನಡೆಯುತ್ತಲಿರುತ್ತಿತ್ತು. ಸುಮಾರು 40-50 ಜನಕ್ಕೆ ಪಾನಕ, ಕೋಸುಂಬರಿ, ಬಾದಾಮಿ ಹಾಲು ಇತ್ಯಾದಿಗಳಿಂದ ಸತ್ಕರಿಸಲು ಅಣಿ ಮಾಡಿ, ಮನೆಯಲ್ಲಿ ಎಲ್ಲರ ಕುಶಲಗಳನ್ನೂ ವಿಚಾರಿಸಿಕೊಂಡು ನಂತರ ಸಭೆಯ ಮಧ್ಯದಲ್ಲಿ ತಂಬೂರಿ ಹಿಡಿದು ಕೂತು ಎಲ್ಲರ ಮನದಣಿಸಿ ಮೆಚ್ಚುಗೆ ಗಳಿಸುತ್ತಿದ್ದರು ತಾಯಿಯವರು.

ಕೊಡಗಿನಿಂದ ದಿ|| ಶ್ರೀ ಭಾರತೀಸುತರು ಮತ್ತು ಚೆನ್ನರಾಯಪಟ್ಟಣದಿಂದ ಶ್ರೀ ವೀರಭದ್ರಶೆಟ್ಟರು ಯಾವುದಾದರೂ ಕೆಲಸದ ಮೇಲೆ ಬೆಂಗಳೂರಿಗೆ ಬಂದರೆ ಮೈತ್ರಿಯ ಬೆಸುಗೆಯಿಂದಾಗಿ ನಮ್ಮಲ್ಲೇ ಇಳಿದುಕೊಳ್ಳುತ್ತಿದ್ದರು ನಮ್ಮ ಮನೆಯವರಲ್ಲೊಬ್ಬರಂತೆ ಹೊಂದಿಕೊಂಡುಬಿಡುತ್ತಿದ್ದರು. ಅವರುಗಳನ್ನೂ ತಾಯಿಯವರು ಬಹಳ ಆದರದಿಂದ ನೋಡಿಕೊಳ್ಳುತ್ತಿದ್ದರು.

ನನ್ನ ಅಜ್ಜಿಯವರಿಗೆ ನಮ್ಮ ತಾಯಿಯವರು ಹಿರೀ ಮಗಳು. ತಾಯಿಮನೆಯಲ್ಲಿ ಅವರನ್ನು 'ಅಮ್ಮಣ್ಣಿ' ಎಂದು ಕರೆಯುತ್ತಾರೆ. ಅಜ್ಜಿಯವರಿಗೆ ಇವರು ಬಹು ಅಚ್ಚುಮೆಚ್ಚಿನ ಮಗಳು. ನನಗೆ ಅಮ್ಮಣ್ಣಿ ಬಲಗೈ ಇದ್ದಂತೆ ಎಂದು ಅಜ್ಜಿಯವರು ಹೇಳುತ್ತಿರುತ್ತಾರೆ. ಮನೆಯಲ್ಲಿ ಏನೇ ಸಮಾರಂಭಗಳಾದರೂ 'ಅಮ್ಮಣ್ಣಿ ಇದ್ದರೆ ಎಲ್ಲದಕ್ಕೂ ಮುನ್ನುಗ್ಗಿ ಎಲ್ಲ ಕೆಲಸ ಕಾರ್ಯಗಳನ್ನೂ ಸುಲಲಿತವಾಗಿ ನಿಭಾಯಿಸಿಬಿಡುತ್ತಾಳೆ' ಎಂದು ಅಜ್ಜಿ ಹೆಮ್ಮೆಯಿಂದ ಅನ್ನುವರು.

ನನ್ನ ತಾಯಿಗೆ ಮೂರು ಜನ ತಂಗಿಯರು, ಇಬ್ಬರು ತಮ್ಮಂದಿರು, ಒಬ್ಬ ಅಕ್ಕ, ಒಬ್ಬ ಅಣ್ಣ. ಎಲ್ಲರಿಗೂ ಸಂಗೀತವೆಂದರೆ ಬಹಳ ಒಲವು. ನನ್ನ ತಾಯಿ ಚಿಕ್ಕವರಿದ್ದಾಗಲಿಂದ ಶಾಲಾ ಉತ್ಸವಗಳಲ್ಲಿ ಭಾಗವಹಿಸಿ ಹಾಡಿ ಅನೇಕ ಬಹುಮಾನ ಗಳಿಸಿದ್ದಾರಂತೆ. ನಾನು ಸಣ್ಣವಳಿದ್ದಾಗ ಪ್ರತಿ ಭಾನುವಾರ ನಾವೆಲ್ಲಾ ಅಜ್ಜಿ ಮನೆಗೆ ಹೋಗುತ್ತಿದ್ದೆವು. ಎಲ್ಲರೂ ಬೆಂಗಳೂರಲ್ಲೇ ಇದ್ದ ಕಾರಣ ಎಲ್ಲ ಚಿಕ್ಕಮ್ಮ ಮಾವಂದಿರು

ಅಲ್ಲಿಗೆ ಬಂದು ಮದುವೆ ಮನೆಯಂತೆ ಆಗಿಹೋಗುತ್ತಿತ್ತು. ಬೆಳಿಗ್ಗೆ ಊಟ ತಿಂಡಿಯಾದ ಮೇಲೆ ಸಂಜೆ ಸಂಗೀತದ ಕಾರ್ಯಕ್ರಮ. ನನ್ನ ಮಾವ ಶ್ರೀನಿವಾಸರಾವ್ ಎಂಬುವರು ಪಿಟೀಲು ನುಡಿಸುತ್ತಿದ್ದರು. ನಮ್ಮ ತಾಯಿ, ಚಿಕ್ಕಮ್ಮ ಸುಶೀಲ ವಾಮನರಾವ್, ಚಿಕ್ಕಮಾವ ಸತ್ಯನಾರಾಯಣರಾವ್ ಸಂಗೀತವನ್ನು ಹೇಳುತ್ತಿದ್ದರು. ಈ ಸಣ್ಣ ಸಭೆ ರಾತ್ರಿ 9 ಗಂಟೆಯ ಮೇಲೆ ಮುಕ್ತಾಯವಾಗುತ್ತಿತ್ತು. ಆಗ ಕಳೆದ ರಸನಿಮಿಷಗಳು ಈಗಲೂ ನನ್ನ ನೆನಪಿನಲ್ಲಿ ಹಚ್ಚ ಹಸುರಾಗಿವೆ. ನನ್ನ ಚಿಕ್ಕಮ್ಮ ನನ್ನ ತಾಯಿಯವ ರಿಂದಲೇ ಗಮಕವನ್ನೂ ಕಲಿತರು. ಈಗಲೂ ಬ್ಯಾಂಕೊಂದರ ಕೆಲಸ ಮಾಡುತ್ತಿರುವ ನನ್ನ ಚಿಕ್ಕಮಾವ ಆಗಾಗ ಭಾವಗೀತೆಗಳ ಕಾರ್ಯಕ್ರಮವನ್ನು ನಡೆಸಿಕೊಡುವರು. ಎಲ್ಲ ಅಣ್ಣ ತಮ್ಮಂದಿರು, ಅಕ್ಕತಂಗಿಯರಿಗೆ ಹಿರಿಯ ಅಕ್ಕ ಅಮ್ಮಣ್ಣಿ ಎಂದರೆ ಅಪಾರ ವಿಶ್ವಾಸ. ನಮ್ಮ ಸರಸಚಿಕ್ಕಮ್ಮನಂತೂ ಯಾವಾಗಲೂ—'ಅಮಣ್ಣಿ ಅಷ್ಟು ದೊಡ್ಡ ಮನೆಯನ್ನೂ ನೋಡಿಕೊಂಡು, ಇಷ್ಟೊಂದು ಸಾರ್ವಜನಿಕ ಸಮಾರಂಭಗಳಲ್ಲೂ ಏಕ ಕಾಲದಲ್ಲಿ ಹೇಗೆ ಭಾಗವಹಿಸುವರೋ'—ಎಂದು ತಮ್ಮ ಅಭಿಮಾನವನ್ನು ವ್ಯಕ್ತಪಡಿಸುತ್ತಾರೆ. ಅಷ್ಟೇ ಅಲ್ಲ ನಮ್ಮ ತಾಯಿ ತಮ್ಮ ನಡೆನುಡಿಯಿಂದ ಅಕ್ಕ ತಂಗಿಯರ ಮಕ್ಕಳ ಒಲವನ್ನೂ ಸಂಪಾದಿಸಿದ್ದಾರೆ. ನನ್ನ ಇಂದ್ರ ಚಿಕ್ಕಮ್ಮನ ಮಗ ಚಿ|| ರಾಜುವಿಗಂತೂ ಈ ದೊಡ್ಡಮ್ಮ ಎಂದರೆ ಬಹಳ ಪ್ರೀತಿ. ದೊಡ್ಡಮ್ಮ ಏನೇ ಹೇಳಲಿ ಶಿರಸಾವಹಿಸಿ ನಡೆಸಿಕೊಡುತ್ತಾನೆ.

ಚಿಕ್ಕವಳಿದ್ದಾಗ ನಾನು ನನ್ನ ತಾಯಿ ತಂದೆಯರ ಜೊತೆ, ಅವರು ಕಾರ್ಯ ಕ್ರಮದ ಸಲುವಾಗಿ ಹೊರಟಾಗ ಅನೇಕ ಊರುಗಳನ್ನು ಸುತ್ತಿದ್ದೇನೆ. ಧರ್ಮಸ್ಥಳದ ಸಾಹಿತ್ಯ ಸಮ್ಮೇಳನದಲ್ಲೂ ಭಾಗವಹಿಸಿರುವೆ. 1954–55ರಲ್ಲಿ ಊಟಿಯಲ್ಲಿ ಶ್ರೀ ಕುವೆಂಪುರವರನ್ನು ಗೌರವಿಸಿದಾಗ ತಾಯಿಯ ಸಂಗಡ ನಾನೂ ಹೋಗಿದ್ದೆ. ಅವೆಲ್ಲಾ ನನ್ನ ಜೀವನದಲ್ಲಿನ ಮಹತ್ವದ ದಿನಗಳು. ಅಲ್ಲಿಯ ವಾತಾವರಣವನ್ನು ನೆನೆಸಿ ಕೊಂಡಾಗ ಈಗಲೂ ಮನಸ್ಸು ಪುಲಕಿತಗೊಳ್ಳುತ್ತದೆ. ನನ್ನ ತಂದೆತಾಯಿಯರನ್ನು ಜನ ಹೇಗೆ ಗೌರವಿಸುತ್ತಾರೆ! ಎಷ್ಟು ಆದರದಿಂದ ನೋಡಿಕೊಳ್ಳುತ್ತಾರೆ! ಎಂಬುದ ನ್ನೆಲ್ಲಾ ನೆನೆಸಿಕೊಂಡಾಗ, ನಾನು ಇಂತಹವರ ಮಗಳಾಗುವ ಭಾಗ್ಯ ದೊರಕಿತಲ್ಲಾ ಎಂಬ ಸಂತೋಷದಿಂದ ಮೈ ರೋಮಾಂಚನಗೊಳ್ಳುತ್ತದೆ.

ಹೀಗೆಯೇ ಒಮ್ಮೆ ನಾವು ಹರಿಹರದ ಹತ್ತಿರವಿರುವ ಹರಪನಹಳ್ಳಿಗೂ ಹೋಗಿ ದ್ದೆವು. ನಮ್ಮ ತಂದೆಗೂ, ಹರಪನಹಳ್ಳಿ ರಾಮರಾಯರಿಗೂ ಮೊದಲಿನಿಂದಲೂ ಬಹಳ ಸ್ನೇಹ. ಈ ಸ್ನೇಹ ಇಂದು ನಿನ್ನೆಯದಲ್ಲ, 30–40 ವರ್ಷಗಳಿಂದಲೂ ನಡೆದು ಕೊಂಡು ಬಂದಿದೆ. ಇಂದಿಗೂ ಹಾಗೆಯೇ ನಡೆದುಕೊಂಡು ಹೋಗುತ್ತಿದೆ. ಶ್ರೀ ರಾಮ ರಾಯರ ಮಾವನವರಾದ ಶ್ರೀ ಉಪೇಂದ್ರರಾಯರು ಮತ್ತು ಶ್ರೀ ರಾಮರಾಯರ ಚಿಕ್ಕಪ್ಪಂದಿರಾದ ಶ್ರೀ ಅನಂತಗಿರಿಯವರು ನಮ್ಮನ್ನು ಅಲ್ಲಿಗೆ ಹೋದಾಗ ಬಹಳ ಚೆನ್ನಾಗಿ ಉಪಚರಿಸಿದರು. ಶ್ರೀ ಅನಂತಗಿರಿಯವರ ಮನೆಯಲ್ಲೇ ಇಳಿದುಕೊಂಡಿದ್ದೆವು.

ಅವರೂ ಗಮಕಿಗಳು. ಅಲ್ಲಿಯ ಜನ ಬಹಳ ಪ್ರೀತಿಯಿಂದ ನಮ್ಮನ್ನು ನೋಡಿ ಕೊಂಡರು. ದಿನ ಬೆಳಗ್ಗೆ ಸಂಜೆ ಒಂದೊಂದು ಕಡೆ ನಮ್ಮ ತಾಯಿಯ ಕಾರ್ಯಕ್ರಮ ವಿರುತ್ತಿತ್ತು. ಅಲ್ಲಿಯ ಹೆಂಗಸರಿಗಂತೂ ನಮ್ಮ ತಾಯಿ ಎಂದರೆ ದೇವರ ಸಮಾನವಾಗಿ ಹೋಗಿತ್ತು. ಇದಕ್ಕೆ ಕಾರಣ ಭಾರತದ ಅನೇಕ ಭಕ್ತಿ ಪ್ರಸಂಗಗಳ ರಸದೌತಣವನ್ನು ನಮ್ಮ ತಾಯಿ ಅವರಿಗೆಲ್ಲಾ ಉಣಬಡಿಸಿದ್ದರು. ಅದಕ್ಕೆ ಬದಲಾಗಿ ಎಲ್ಲರೂ ನಾಮುಂದು ತಾಮುಂದು ಎಂದು ತಮ್ಮ ಮನೆಗೆ ನಮ್ಮಗಳನ್ನು ಪ್ರೀತಿಯಿಂದ ಆಹ್ವಾನಿಸಿ ಭರ್ಜರಿ ಭೋಜನವನ್ನು ಉಣಬಡಿಸುತ್ತಿದ್ದರು. ಎರಡು ದಿನಗಳಲ್ಲಿ ಬರ ಬೇಕೆಂದವರು ಅಲ್ಲಿಯವರ ಒತ್ತಾಯಕ್ಕೆ ಮಣಿದು ಅವರ ಆದರಾತಿಥ್ಯಗಳನ್ನು ಸ್ವೀಕರಿ ಸಲು 8 ದಿನಗಳೇ ಉಳಿಯಬೇಕಾಯಿತು. ಆದರೂ ಎಷ್ಟೋ ಜನಗಳ ಮನೆಗೆ ಹೋಗ ಲಾಗದೆ ಅವರಿಗೆ ನಿರಾಸೆಯುಂಟುಮಾಡಬೇಕಾಯಿತು. ಇದನ್ನೆಲ್ಲಾ ನೆನೆಸಿದಾಗ ನನ್ನ ತಾಯಿ-ತಂದೆಯರ ಬಗ್ಗೆ ಜನಕ್ಕೆ ಎಷ್ಟು ಅಂತಃಕರಣವಿದೆ ಎಂದು ಗೊತ್ತಾಗುತ್ತದೆ.

ನಮ್ಮ ತಂದೆಯವರು ಆರಂಭಿಸಿದ ಮಕ್ಕಳ ಮಂಟಪದಲ್ಲಿ ಹುಡುಗರಿಗೆ ಶಿಶು ಗೀತೆಗಳನ್ನು ಹೇಳಿಕೊಡುತ್ತಿದ್ದುದು ನಮ್ಮ ತಾಯಿಯವರೇ. ಶಾಲಾ ವಾರ್ಷಿ ಕೋತ್ಸವದ ಸಮಾರಂಭ ಬಂದಿತೆಂದರೆ ತಂದೆಯವರು ಬರೆದ ನಾಟಕಗಳ ತರಬೇತಿ ಕೊಡುತ್ತಿದ್ದುದು ತಾಯಿಯವರೇ. ಅದರೊಳಗಿನ ಸಂಗೀತದ ವಿಭಾಗಕ್ಕೆ ರಾಗ ಹಾಕಿ ಹೇಳಿಕೊಡುತ್ತಿದ್ದುದು ತಾಯಿಯವರೇ. ಪಾತ್ರಗಳಿಗೆ ವೇಷಭೂಷಣಗಳನ್ನು ತೊಡಿಸುತ್ತಿದ್ದವರೂ ತಾಯಿಯವರೇ. ನಮ್ಮ ತಾಯಿಯದು ಬಹುಮುಖ ಪ್ರತಿಭೆ. ಈಗಲೂ ದಿ| ಜಿ. ಪಿ. ರಾಜರತ್ನಂರವರು ಬರೆದ ಶಿಶುಗೀತೆ 'ಹಾವು ಬಂತು ಹಾವು ಬಂತು ರಂಗನಾಥ' 'ಹೊಯಿಸಳರ', 'ಸಂತಮ್ಮಣ್ಣ', ಟಿ. ಎಂ. ಆರ್. ಸ್ವಾಮಿಯ 'ಬಾಬಾ ಬಸವಣ್ಣ', ನನ್ನ ಕಿವಿಯಲ್ಲಿ ಗುಯ್‌ಗುಟ್ಟುತ್ತಿದೆ. ಜೊತೆಗೆ ಹಾರ್ಮೋನಿಯಂ ಬಾರಿಸಿ ಕೊಂಡು, ಅದಕ್ಕೆ ಸರಿಯಾದ ಅಭಿನಯ ಕಲಿಸಿ ಮಕ್ಕಳಿಗೆ ಹೇಳಿಕೊಡುತ್ತಿದ್ದರು. ಪುಟ್ಟ ಪುಟ್ಟ ಮಕ್ಕಳಂತೂ ಬಹಳ ತನ್ಮಯರಾಗಿ ಸಂತೋಷದಿಂದ ಹಾಡುತ್ತಿದ್ದರು. ಈಗ ಜನತೆ ತಾಯಿಯ ಕಾವ್ಯವಾಚನ ಆಲಿಸಿದಾಗ ಹೇಗೆ ತಮ್ಮನ್ನು ತಾವೇ ಮರೆಯು ತ್ತಾರೋ ಅದೇ ರೀತಿ ಮಕ್ಕಳೂ ಶಿಶುಗೀತೆ ಹಾಡುತ್ತಾ ತಮ್ಮನ್ನು ತಾವೇ ಮರೆಯು ತ್ತಿದ್ದರು. 4 ವರ್ಷದ ನನ್ನ ತಂಗಿ ವತ್ಸಲಳ ಮಗ ಚಿ| ವಿಕಾಸ್‌ನೂ ಅವನ ಮನೆ ಹತ್ತಿರದ ಒಳ್ಳೇ ಶಿಶುವಿಹಾರಕ್ಕೆ ಹೋಗುತ್ತಿರುವನು. ಮೊನ್ನೆ ಅವರ ಮನೆಗೆ ಹೋಗಿ ದ್ದಾಗ 'ಪುಟಾಣಿ ಕೃಷ್ಣ ಪುಟ್ಟ ಪುಟ್ಟ ಅಂಗ್ಗೆ' ಎಂಬ ಜಿ. ಪಿ. ಅವರ ಶಿಶುಗೀತೆ ಹಾಡಿ ತೋರಿಸಿದ. ತಕ್ಷಣವೇ ನನ್ನ ಸ್ಮೃತಿಪಟಲದ ಮೇಲೆ ಝೇಂಕರಿಸುವ ಧ್ವನಿಯಿಂದ ನಮ್ಮ ತಾಯಿ ಅದನ್ನು ಹೇಳಿಕೊಡುತ್ತಿದ್ದುದು ಹಾದು ಹೋಗಿ ಶ್ರೀ ಕೃಷ್ಣನ ಬಾಲ ಲೀಲೆಯ ಚಿತ್ರ ಕಣ್ಣಮುಂದೆ ಸುಳಿಯಿತು.

ಈಗ 20 ವರ್ಷಗಳಿಂದ ನಾನು ಮದುವೆಯಾಗಿ ಉತ್ತರಭಾರತದಲ್ಲಿ ಇರುವುದ ರಿಂದ ತಾಯಿಯವರ ಕಾವ್ಯವಾಚನ ಮೊದಲಿನಷ್ಟು ಕೇಳಲಾಗುವುದಿಲ್ಲ. ಕಾವ್ಯವಾಚನ

ಕೇಳಿ ಆನಂದಿಸಲು ತಪೇಕ ಚಿತ್ತ ಬಹು ಮುಖ್ಯ. ನಾ ಸಣ್ಣವಳಿದ್ದಾಗ ತಾಯಿಯವರ ವಾಚನ ಕೇಳುವ ಅವಕಾಶ ಬಹಳವಿತ್ತು. ಆದರೆ ಅಷ್ಟು ಹೊತ್ತು ಮನಸ್ಸಿನ ಏಕಾಗ್ರತೆ ಸಾಧ್ಯವಿಲ್ಲವಾದ್ದರಿಂದ ಪೂರ್ತಿ ರಸಾಸ್ವಾದನೆ ಮಾಡಲಾಗುತ್ತಿರಲಿಲ್ಲ. 10–15 ನಿಮಿಷ ಕೇಳಿದರೆ ಇನ್ನು ಹತ್ತು ನಿಮಿಷ ಆ ಏಕಾಗ್ರತೆ ಇಲ್ಲದ ಕಾರಣ ಕಥೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲಾರದೇ ಕಾವ್ಯದ ಸೊಬಗನ್ನು ಪೂರ್ತಿಯಾಗಿ ಅರಿತುಕೊಳ್ಳಲಾಗುತ್ತಿರಲಿಲ್ಲ. ಈಗ ಅನ್ಯಾಯವಾಗಿ ಅವಾಗ ಒಳ್ಳೆ ಸುಸಮಯವನ್ನು ತಪ್ಪಿಸಿಕೊಂಡೆನಲ್ಲಾ, ಈಗ ಮನಸ್ಸಿದ್ದರೂ ಹೆಚ್ಚು ಕಾಲಾವಕಾಶವಿಲ್ಲದ ಕಾರಣ ಆ ಸುಸಮಯ ಹೆಚ್ಚು ಸಿಗುವುದಿಲ್ಲವಲ್ಲಾ ಎನಿಸುತ್ತೆ. ಒಮ್ಮೆ ನನ್ನ ತಾಯಿಯವರು ಶ್ರೀ ರಾಮಾಯಣ ದರ್ಶನದಿಂದ 'ಓ ಲಕ್ಷ್ಮಣ' ಎಂಬ ಭಾಗದ ವಾಚನ ಮಾಡುತ್ತಿದ್ದರು. ನಾನು ಶ್ರುತಿ ಹಾಕುತ್ತಿದ್ದೆ. ಆಗ 'ಓ ಲಕ್ಷ್ಮಣ' ಎಂಬ ಶಬ್ದವನ್ನೇ ಎಷ್ಟು ರೀತಿಯಲ್ಲಿ, ಎಷ್ಟು ಸೊಗಸಾಗಿ ಭಾವಕ್ಕೆ ತಕ್ಕಂತೆ ಹಾಡುತ್ತಿದ್ದರು. ಏನೋ ಯೋಚಿಸುತ್ತಿದ್ದವರನ್ನೂ ಸಹ ಹೊಡೆದೆಬ್ಬಿಸಿ ವಾಚನದಲ್ಲಿ ಮನಸ್ಸು ನಾಟುವಂತೆ ಮಾಡುತ್ತಿತ್ತು ಅವರು ಅದನ್ನು ಹೇಳುತ್ತಿದ್ದ ಧಾಟಿ', ಅವರು ಅಳವಡಿಸಿಕೊಂಡಿದ್ದ ರಾಗದ ರೀತಿ !! ಈಗಲೂ ಅದನ್ನು ನೆನೆಸಿದಾಗ ಮೈ ಜುಂ....ಎನ್ನುತ್ತದೆ.

ಮತ್ತೊಂದು ನೆನಪು. ನಮ್ಮ ತಾಯಿಯವರು ಮನೆಯಲ್ಲೇ ಕನ್ನಡ ಸಾಹಿತ್ಯ ಪರಿಷತ್ತಿನ ಗಮಕ ತರಗತಿಗಳನ್ನು ನಡೆಸುತ್ತಿದ್ದರು. ಆಗ 20–25 ಜನ ವಿದ್ಯಾರ್ಥಿಗಳಿದ್ದರು. ಪರೀಕ್ಷೆಗೆ 'ದೂರ್ವಾಸರ ಆತಿಥ್ಯ' ಎಂಬ ಭಾಗವಿತ್ತು. 'ಮಗಳೇ ಬಾ ಕೊಳ್ಳಿ' ಎಂದು ದೂರ್ವಾಸರು ಕುಂತಿಯ ಸೇವೆಯಿಂದ ಸುಪ್ರೀತರಾಗಿ ಅವಳಿಗೆ ಐದು ಮಂತ್ರಗಳನ್ನು ಉಪದೇಶಿಸುತ್ತಿದ್ದರು. ಆಗ ನಾನಿನ್ನೂ ಸಣ್ಣವಳು. ಹಾಲಿನಲ್ಲಿ ತಂಗಿ ವತ್ಸಲ, ತಮ್ಮ ಮೋಹನನೊಡನೆ ಆಡಿಕೊಂಡಿರುತ್ತಿದ್ದೆ. ನಮ್ಮ ತಾಯಿಯವರು ಮುಂದಿನ ರೂಮಿನಲ್ಲಿ ಗಮಕ ಹೇಳಿಕೊಡುತ್ತಿದ್ದರೂ ಮೇಲಿನ ಪದ್ಯ ಹೇಳಿಕೊಡುತ್ತಿದ್ದಾಗ ಎಲ್ಲೋ ಇದ್ದ ನನ್ನ ಮನಸ್ಸನ್ನು ತಕ್ಷಣವೇ ಅವರ ಧ್ವನಿ ಗಂಗಾ ನದಿಯ ತೀರಕ್ಕೆ ಕರೆದೊಯ್ದಿತು. ಎದುರಿಗೇ ದೂರ್ವಾಸರು ಕುಂತಿ ಇಬ್ಬರೂ ನಿಂತಿರುವರೇನೋ ಎಂದು ಭಾಸವಾಗುತ್ತಿತ್ತು.

ಈಗ ನಮ್ಮ ತಾಯಿಯವರ ಕಾವ್ಯ ವಾಚನ ಶೈಲಿ ಇನ್ನೂ ಮನಮೋಹಕವಾಗಿದೆ. ಅವರು ಹಾಡಿರುವ ಅನೇಕ ಭಾಗಗಳು ಧ್ವನಿ ಮುದ್ರಿತವಾಗಿವೆ. ಎಲ್ಲವನ್ನೂ ಅವರು ಬಹಳ ಸೊಗಸಾಗಿ ಹಾಡುವುದರಿಂದ ಯಾವುದನ್ನು ಬಿಡಲು ಮನಸ್ಸು ಬರುವುದಿಲ್ಲ. ಸಾವಿರಾರು Casset ಗಳಾದರೂ ಸಾಲದೇನೋ ಎನಿಸುತ್ತೆ. ನಮ್ಮ ತಂದೆಯವರಿಗೆ "ಅವರ Casset ಗಳನ್ನು ಮಾಡಿಸಣ್ಣ ಬೇರೆ ಸಂಗೀತಗಾರರ, ವಾದ್ಯಗಾರರ Casset ಗಳನ್ನು ಕೊಳ್ಳುವಂತೆ ಜನತೆ ಇವರದನ್ನೂ ಇಷ್ಟಪಡುತ್ತಾರೆ ಅದರಿಂದ ಈ ಸಿನಿಮಾ ಯುಗದಲ್ಲಿ, ಈಗಿನ ಪೀಳಿಗೆಗೆ ನಮ್ಮ ಸಂಸ್ಕೃತಿಯ ಅರಿವೂ

ಸ್ವಲ್ಪವಾದರೂ ಆಗುತ್ತದೆ" ಎಂದು ನಾವು ಹೇಳುವುದುಂಟು. ತಂದೆಯವರು 'ಆಗಲಮ್ಮ ನೋಡೋಣ' ಎಂಬ ಆಶ್ವಾಸನೆಯಿತ್ತಿರುವರು.

ಇಷ್ಟು ದೊಡ್ಡ ಕಲಾ ವಿದೆಯಾದರೂ ನಮ್ಮ ತಾಯಿಗೆ ಕೊಂಚವೂಗರ್ವವಿಲ್ಲ. ಏನು ಮಹಾ! 'ಎಂದುರೋ ಮಹಾನುಭಾವಲು' ಎಂಬ ಭಾವನೆ. ಮೊಮ್ಮಕ್ಕಳು ಅವರನ್ನು ರೇಗಿಸಿದಾಗಲೆಲ್ಲಾ ನಗುಮುಖದಿಂದಿರುತ್ತಾರೆ. ಬೆಳಗ್ಗೆ ಎಲ್ಲಾ ದುಡಿದು ರಾತ್ರಿ ಕಣ್ಣೆಳೆಯುತ್ತಿರುತ್ತದೆ. ಆದರೂ ಮೊಮ್ಮಕ್ಕಳು ಕಥೆ ಹೇಳಜ್ಜಿ ಎಂದರೆ ಸಾಕು. ಉತ್ಸಾಹದಿಂದ ಭಾರತದಿಂದ ಪ್ರಸಂಗಗಳನ್ನು ಆಯ್ದುಕೊಂಡು ಮಕ್ಕಳ ಮನಸ್ಸಿನಲ್ಲಿ ನಾಟುವಂತೆ ಸ್ವಾರಸ್ಯವಾಗಿ ಕಥೆ ಹೇಳುತ್ತಾರೆ. ಚಿಕ್ಕವರಾದ ನಮಗೆ ಅಷ್ಟು ತಾಳ್ಮೆ ಇರುವುದಿಲ್ಲ.

ನನ್ನ ತಂಗಿಯ ಮಗ ವಿಕಾಸ್, ತಮ್ಮ ಮೋಹನನ ಮಗ ವಿವೇಕ್ ಒಂದೇ ವಯಸ್ಸಿನವರು. ಕೇವಲ 4 ದಿನ ಹೆಚ್ಚು ಕಡಿಮೆ. ಇಬ್ಬರಿಗೂ ಅಜ್ಜಿಯ ತೊಡೆ ಏರ ಬೇಕೆಂಬ ಪೈಪೋಟಿ. ಆಗ ಯಾರನ್ನೂ ನೋಯಿಸದೆ ಇಬ್ಬರನ್ನೂ ಒಂದೊಂದು ತೊಡೆಯ ಮೇಲೆ ಕೂರಿಸಿಕೊಂಡು, ಒಬ್ಬೊಬ್ಬರನ್ನು ಒಂದೊಂದು ಕೈಲಿ ಎತ್ತಿಕೊಂಡು ಸುಧಾರಿಸುವರು. ಒಬ್ಬ 'ಬಾ, ಬಾ, ಚಂದು ಮಾಮ' ಹೇಳಿಕೊಡು ಎನ್ನುವನು. ಮತ್ತೊಬ್ಬ 'ಬಣ್ಣದ ತಗಡಿನ ತುತ್ತೂರಿ' ಹೇಳಿಕೊಡೆನ್ನುವನು. ಇಬ್ಬರನ್ನೂ ಖುಷಿ ಪಡಿಸುವ ಹೊತ್ತಿಗೆ ತಗಡಿನ ತುತ್ತೂರಿಯ ಗಂಟಲಿಗಾದ ಗತಿಯೇ—'ಗಂಟಲು ಕಟ್ಟಿತು ನಿರೂರಿ'—ನಮ್ಮ ತಾಯಿಯ ಗಂಟಲಿಗೂ ಆಗುತ್ತದೆ.

ನಮ್ಮ ತಾಯಿ ಸೊಸೆ ಶೀಲಳಿಗೂ ಸಹ ಹೇಗೆ ತಾಯಿಯಾಗಿರುವರೋ ಅದೇ ರೀತಿ ತಮ್ಮ ಅತ್ತೆಯವರಿಗೂ ಮಗಳಾಗಿರುವರು. 86 ವರ್ಷದ ನಮ್ಮ ಅಜ್ಜಿಗೆ ಹೊತ್ತಿಗೆ ಸರಿಯಾಗಿ ಕೂತಲ್ಲೇ ಉಣಬಡಿಸಿ ಅವರ ಸೇವೆಯನ್ನು ಶ್ರದ್ಧೆಯಿಂದಮಾಡಿ ಅವರ ಒಲವನ್ನೂ ಸಂಪಾದಿಸಿಕೊಂಡಿರುವರು.

ನಮ್ಮ ತಾಯಿಯ ಗುರುಗಳಾದ ಶ್ರೀ ಬಿಂದೂರಾಯರು ಬಹಳ ಕಟ್ಟುನಿಟ್ಟಾದ ಆಸಾಮಿ. ಒಂದೆರಡು ಸಲ ಬಂದು ನಮ್ಮ ತಂದೆತಾಯಿಯ ಒತ್ತಾಯಕ್ಕೆ ಮಣಿದು ನಾಲ್ಕಾರುದಿನ ನಮ್ಮಮನೆಯಲ್ಲಿದ್ದು ಆತಿಥ್ಯ ಸ್ವೀಕರಿಸಿ ಸಂತೋಷಪಟ್ಟಿರುವರು. ಅವರಿಗೆ ಬೆಳಗ್ಗೆ 5 ಗಂಟೆಗೆಲ್ಲಾ ಹೊಗೆಯಾಡುವ ಕಾಫಿ ಕೊಡಬೇಕು. 10–30 ಗಂಟೆಗೆಲ್ಲಾ ಊಟ ತಯಾರಿರಬೇಕು. ಮಧ್ಯಾಹ್ನ 2 ಗಂಟೆಗೆ ಪುನಃ ಕಾಫಿ. ಸಂಜೆ 8 ಗಂಟೆಗೆ ಫಲಾಹಾರ. ಇದರಲ್ಲಿ ಚಾಚೂ ತಪ್ಪಬಾರದು. ಇಷ್ಟು ದೊಡ್ಡ ಸಂಸಾರದಲ್ಲಿ ಕಟ್ಟು ನಿಟ್ಟಾಗಿ ಇದನ್ನು ಆಚರಿಸುವುದು ಕಷ್ಟ. ಆದರೆ ತಾಯಿಯವರು ಇನ್ನೂ ೫ ನಿಮಿಷ ಮುಂಚೆಯೇ ಅವರಿಗೆ ಸಕಲ ಸೌಲಭ್ಯಗಳನ್ನೂ ಕಲ್ಪಿಸಿಕೊಟ್ಟು ಗುರುಗಳಿಂದ ಶಹಭಾಷ್ ಗಿರಿ ಪಡೆದಿರುವರು. ಅವರಿಗಾಗಿಷ್ಟವಾದ ಬಿಸಿಬೇಳೆ ಭಾತನ್ನೂ ಸಮಯಕ್ಕೆ ಸರಿಯಾಗಿ ತಯಾರಿಸಿ ಬಡಿಸಿದಾಗ ಸಂತೋಷದಿಂದ ಶ್ರೀ ಬಿಂದೂರಾಯರು—'ನೀನು ನನ್ನ ಮಗಳು ಕಾಣಮ್ಮ'—ಎಂದು ಅನ್ನುತ್ತಿದ್ದರು. ಆಗ ಅವರ ಕಂಗಳು ಆನಂದಾಶ್ರು

ಗಳಿಂದ ತುಂಬಿರುತ್ತಿತ್ತು. ಸಂಜೆಯ ಹೊತ್ತು ತಾವು ಕಲಿತದ್ದನ್ನು ಹೇಗೆ ಬೆಳೆಸಿ ಕೊಂಡಿರುವೆವು ಎಂಬುನ್ನು ತೋರಿಸಲು ತಾಯಿಯವರು ಗುರುಗಳ ಮುಂದೆ ವಾಚನ ಮಾಡುತ್ತಿದ್ದರು. ಅದನ್ನು ಕೇಳಲು ಕೆಲವು ಸಹೃದಯರೂ ಬರುತ್ತಿದ್ದರು. ನಿಮಿಷ ಕ್ಕೊಮ್ಮೆ ಶ್ರೀ ಬಿಂದೂರಾಯರ ಬಾಯಿಂದ 'ಭೇಷ್' 'ಭೇಷ್' ಎಂಬ ಉದ್ಗಾರ ಬರು ತ್ತಿತ್ತು. ಎಲ್ಲ ಆದಮೇಲೆ ಕೊನೆಯಲ್ಲಿ ಸಂತೋಷದಿಂದ—'ನೀನು ನನ್ನನ್ನೂ ಮೀರಿಸಿ ಬಿಟ್ಟಿರುವಿ ಕಣಮ್ಮಾ, ತುಂಬಾ ಸಂತೋಷವಾಯಿತು'—ಎಂದು ಬಿಚ್ಚು ಮನಸ್ಸಿಂದ ಎಲ್ಲರೆದುರಿಗೂ ಹೊಗಳುತ್ತಿದ್ದರು. ಹೀಗೆ ಗುರುಗಳ ಅನುಗ್ರಹವನ್ನೂ ತಾಯಿಯವರು ಸಂಪಾದಿಸಿಕೊಂಡಿರುವರು.

'ಮನೆಗೆದ್ದು ಮಾರುಗೆಲ್ಲು' ಎಂಬ ನಾಣ್ನುಡಿಗೆ ನಮ್ಮ ತಾಯಿ ಹೊರತಲ್ಲ. ಮೊದಲು ಮನೆಯ ಕಡೆಗೆ ಪೂರ್ಣ ಗಮನ. ಅವೆಲ್ಲಾ ಮುಗಿದ ನಂತರ ಕಲಾದೇವಿಯ ಸೇವೆ. ಸಾಮಾನ್ಯವಾಗಿ ಎಲ್ಲಿಗೆ ಹೊರಡಬೇಕಾದರು ಹೆಣ್ಣು ನೂರೆಂಟು ಕಡೆ ಗಮನ ಕೊಡಬೇಕಾಗುತ್ತದೆ. ಆದರೆ ಗಂಡಿಗೆ ಹಾಗಲ್ಲ. ಹೊರಡಬೇಕೆನಿಸಿದ ತಕ್ಷಣ ಚಲ್ಲಣ ವೇರಿಸಿ ಚಪ್ಪಲಿ ತೊಟ್ಟರೆ ಮುಗಿಯಿತು. ನಮ್ಮ ತಂದೆಯವರು ಎಷ್ಟೋ ಸಲ ಆಯ್ತಾ ಶಕುಂತಲಾ, ಹೊತ್ತಾಯ್ತು. ಬೇಗ ಹೊರಡಬೇಕು' ಎಂದು ಅವಸರಿಸುವು ದುಂಟು. ಆಗಲೂ ಸಹ ತಾಳ್ಮೆ ಕಳೆದುಕೊಳ್ಳದೆ ಬೇಗ ಬೇಗ ಮಾಡಬೇಕಾದ ಕೆಲಸ ವೆಲ್ಲವನ್ನೂ ಮುಗಿಸಿ, ಯಾವುದೂ ಲೋಪವಾಗದಂತೆ ಎಲ್ಲೆಡೆ ಗಮನ ಹರಿಸಿ, ನಿಮಿಷ ದಲ್ಲಿ ತಯಾರಾಗಿ ತಂದೆಯವರಿಗಿಂತ ಮುಂಚೆ ಚಪ್ಪಲಿಹಾಕಿಕೊಂಡು ಕೂತುಬಿಡು ತ್ತಾರೆ. ಇದನ್ನು ನೋಡಿ ನಮಗೆ ಆಶ್ಚರ್ಯವೋ ಆಶ್ಚರ್ಯ. ನನ್ನ ಮಗನಂತೂ ಏನಜ್ಜಿ Magic ಮಾಡಿಬಿಟ್ಟೆಯಾ ? ಎನ್ನುವನು.

ನಮ್ಮ ತಂದೆಯವರದು ಬಹಳ ಉದಾರ ಸ್ವಭಾವ. ಮನೆಗೆ ಬಂದವರು ಯಾರೇ ಆಗಲಿ, ಯಾವ ಹೊತ್ತೇ ಆಗಲಿ ಸತ್ಕರಿಸದೆ ಬೀಳ್ಕೊಡರು. ಇದನ್ನರಿತ ನಮ್ಮ ತಾಯಿ ಯಾವಾಗಲೂ ಮುಂಜಾಗರೂಕತೆಯಿಂದ ೪ ಲೋಟ ಕಾಫಿ ಡಿಕಾಕ್ಷನ್ 'ದಿಢೀರ್' ಎಂದು ಕಾಫಿಯೊದಗಿಸಲು ಇಟ್ಟೇ ಇರುತ್ತಾರೆ.

ನನ್ನ ಮದುವೆಯ ಸಮಯದಲ್ಲಿ ಮಾತುಕಥೆಯಾಡುವಾಗ ನಮ್ಮ ಅತ್ತೆಯವರು ಏನೇ ಹೇಳಿದರೂ, ನಮ್ಮ ತಾಯಿಯವರು ಸಂತೋಷದಿಂದ—'ಹೂಂ. ಅದಕ್ಕೇನಂತೆ, ಹಾಗೇ ಆಗಲಿ ಹಾಗೇ ಮಾಡೋಣ'—ಎಂದು ಉತ್ತರಿಸುತ್ತಿದ್ದರಂತೆ. ನಮ್ಮ ಅತ್ತೆ ಯವರು ಇರುವ ತನಕ ಅದನ್ನು ಜ್ಞಾಪಿಸಿಕೊಂಡು ಬೀಗಿತ್ತಿಯನ್ನು ಬಾಯಿ ತುಂಬಾ ಹೊಗಳುತ್ತಿದ್ದರು.

ಕಾವ್ಯವಾಚನವನ್ನು ಕೇಳಬೇಕೆಂದು ಯಾರೇ ಆಗಲಿ ಶ್ರದ್ಧೆಯಿಂದ ತಮ್ಮಿಚ್ಛೆ ಯನ್ನು ವ್ಯಕ್ತಪಡಿಸಿದರೆ, ಅವರಿಗೆ ನಿರಾಸೆ ಇಲ್ಲವೇ ಇಲ್ಲ. ಎಷ್ಟೋ ಸಲ ಈ ವಿಷಯ ವಾಗಿ ನಾವು ಮಕ್ಕಳು ತಂದೆಯೊಡನೆ ಜಗಳವಾಡಿರುವೆವು.

"ಏನಣ್ಣ ಅಮ್ಮ ಯಾರಿಗೆ ಕಡಿಮೆ ? ಯಾವ ಸಂಗೀತಗಾರರಿಗೆ ಕಡಿಮೆ ? ಅವರ

ಕ್ಷೇತ್ರದಲ್ಲಿ ಅವರ ಸಮ ಯಾರಿದ್ದಾರೆ ? ನೀವು ಎಲ್ಲ ಕಡೆ ಸುಲಭವಾಗಿ ಒಪ್ಪಿಕೊಂಡು ಬಿಡುವಿರಿ. ನೀವೂ ಏನಾದರೂ ನಿಬಂಧನೆ, ನಿಯಮಗಳನ್ನು ಹಾಕಿ" ಎನ್ನುವುದುಂಟು.

ಆಗ ತಂದೆಯವರ ಉತ್ತರ—"ಕಲೆ ಎನ್ನುವುದು ವ್ಯಾಪಾರವಲ್ಲಮ್ಮ. ನಾವಿರುವುದೇ ಕಲಾಸೇವೆಗಾಗಿ. ನಮ್ಮನ್ನು ಗೌರವಿಸುವ, ಆದರಿಸುವ ನೋಡಿಕೊಳ್ಳುವ ಎಲ್ಲ ಜವಾಬ್ದಾರಿಗಳನ್ನೂ ನಾವು ಜನತೆಗೇ ಬಿಟ್ಟಿರುವೆವು. ನಿಜವಾಗಿಯೂ ಕಲೆಯ ರಸಾಸ್ವಾದ ಮಾಡಬೇಕೆಂಬುವರನ್ನು ತೃಪ್ತಿಪಡಿಸುವುದರಲ್ಲೇ ನಮಗೆ ಆನಂದ'—ಎಂದು.

ಆಗ ನಮಗೆ ತಂದೆ ತಾಯಿಯ ಉದಾತ್ತ ಧ್ಯೇಯದೆದುರು ನಮ್ಮ ಸಣ್ಣತನದ ಅರಿವಾಗುತ್ತದೆ. ಇಂಥ ತಂದೆ ತಾಯನ್ನು ಪಡೆದ ನಾವೇ ಧನ್ಯರೆನಿಸುತ್ತದೆ ! ಗದುಗಿನ ವೀರನಾರಯಣನಲ್ಲಿ ತಂದೆ ತಾಯಿಗಳು ಶತಾಯುಗಳಾಗಿ ಕಲಾಸೇವೆ ಮಾಡುವಂತೆ ಅನುಗ್ರಹಿಸು ಎಂದು ಬೇಡಿಕೊಳ್ಳುವೆ. ನಮೋ ಮಾತೃದೇವೋಭವ ! ನಮೋ ಪಿತೃದೇವೋಭವ !

ನನ್ನ ಬಾಲ್ಯದ ಸವಿನೆನಪು

ಬಿ. ಪಿ. ಮೋಹನ್

"ನಿಮ್ಮಮ್ಮನಿಗೆ ಅರವತ್ತು ವರ್ಷ ತುಂಬಿತು" ಎಂದರು ನಮ್ಮ ತಂದೆ. ನಮ್ಮ ತಂದೆಗೆ ಅರವತ್ತು ವರ್ಷ ತುಂಬಿದ ವಿಷಯ ನಮಗೆ ಯಾರೂ ತಿಳಿಸಲೇ ಇಲ್ಲ. "ಎಳೆಯರ ಭಾರತ"ವನ್ನು ವಿಶ್ವ ಹಿಂದೂ ಪರಿಷತ್ತು ಪ್ರಕಟಿಸಿದಾಗಲೇ ನಮಗೆ ಗೊತ್ತಾದದ್ದು ನಮ್ಮ ತಂದೆಗೆ ಅರವತ್ತೆರಡು ವರ್ಷ ತುಂಬಿತ್ತೆಂದು. ನಮ್ಮ ತಾಯಿಗೆ ಅರವತ್ತು ವರ್ಷ ತುಂಬಿದ ಸಂತೋಷಕ್ಕೆ ಅವರ ಗಮಕ ಕಲಾಭಿಮಾನಿಗಳು, ನೆಂಟರಿಷ್ಟರು ಅಭಿನಂದನ ಗ್ರಂಥಕ್ಕೆ ತಮ್ಮ ಲೇಖನಗಳನ್ನು ಬರೆಯುತ್ತಿದ್ದಾರೆಂದು ನನಗೆ ತಿಳಿದ ಮೇಲೆ ನಾನು ನಮ್ಮ ತಾಯಿಯನ್ನು ಕುರಿತು ಒಂದು ನಮನ ಲೇಖನವನ್ನೂ ಬರೆಯಬೇಕು ಎನ್ನಿಸಿತು. ಅದರೊಡನೆ ಕನ್ನಡ ನಾಡನ್ನು ಸುತ್ತಿದಾಗ ನಾನು ಅನುಭವಿಸಿದ ಸುಖ ಸಂತೋಷಗಳನ್ನು ಕುರಿತು ನಾಲ್ಕಾರು ಮಾತುಗಳನ್ನು ಇಲ್ಲಿ ಪ್ರಸ್ತಾಪಿಸಬೇಕೆನ್ನಿಸಿದೆ.

ನಾನು ಮಗುವಾಗಿದ್ದಾಗ ಗಟ್ಟಿಮುಟ್ಟಾಗಿರಲಿಲ್ಲ. ಯಾವುದೋ ಕಾಯಿಲೆಯಿಂದ ನರಳುತ್ತಿರುತ್ತಿದ್ದೆ. ಅತ್ತುದೇ ಅಪರೂಪವಂತೆ, ಅದುಬೇಕು ಇದುಬೇಕು ಎಂದು ನಮ್ಮ ತಾಯಿಯನ್ನು ಕಾಡಿದುದೇ ಇಲ್ಲವಂತೆ. ನಮ್ಮ ತಾಯಿ ನನ್ನನ್ನು ಹೆಗಲ ಮೇಲೇರಿಸಿಕೊಂಡು ನೆಹರೂನಗರದಿಂದ ಬಳೇಪೇಟೆಯಲ್ಲಿದ್ದ ಡಾ|| ಎಂ. ಶಿವರಾಮ್ ಅವರ ಡಿಸ್ಪೆನ್ಸರಿಯ ಮೆಟ್ಟಲು ಹತ್ತುತ್ತಿದ್ದುದು ನನಗೆ ತಿಳಿಮುಳಿಯ ಜ್ಞಾಪಕ.

ನನಗೆ ನಾಲ್ಕು ವರುಷವಾದಾಗ ನನಗೆ ಒಬ್ಬ ತಮ್ಮ ಹುಟ್ಟಿದ. ಹುಟ್ಟಿದ ಎರಡು ವರ್ಷಗಳಲ್ಲೇ ಕೂಸು ಸತ್ತುಹೋಯಿತಂತೆ. ಅದೂ ನನಗೆ ಅಷ್ಟು ಜ್ಞಾಪಕವಿಲ್ಲ. ಆ ಮಗುವಿನ ನೆನಪಿಗಾಗಿ "ಮಕ್ಕಳ ಮಂಟಪ" ಆರಂಭವಾಯಿತಂತೆ. ನಾನೂ ಮಕ್ಕಳ ಮಂಟಪದಲ್ಲೇ ಪ್ರಾಥಮಿಕ ಶಿಕ್ಷಣ ಪಡೆದೆ. ನಮ್ಮ ತಾಯಿ ತಂದೆಗಳೇ ನನ್ನ ಪ್ರಾಥಮಿಕ ಶಿಕ್ಷಣದ ಗುರುಗಳು. ಮನೆಯಲ್ಲಿ ನಾನು ಮುದ್ದು ಮಗು. ಶಾಲೆಯಲ್ಲಿ ಹತ್ತರಲ್ಲಿ ಹನ್ನೊಂದನೆಯವನು. ಮಂಟಪದ ಮಕ್ಕಳಿಗೆ ದೊರೆಯುವ ಸೌಲಭ್ಯಗಳೇ ನನಗೂ. ನಮ್ಮ ತಾಯಿ ತಂದೆಗಳು, ಶ್ರೀಮಂತರು ಬಡವರು ಎಂದು ತಾರತಮ್ಯ ತೋರಿದವರಲ್ಲ. ಎಲ್ಲರಿಗೂ ಒಂದೇ ಮಣೆ. ಮುಖ ನೋಡಿ ಮಣೆ ಹಾಕುವುದನ್ನು ಅರಿಯರು. ಶಾಲೆಯಲ್ಲಿ ನಿಷ್ಠುರದಿಂದ ನನ್ನನ್ನೂ ನಡೆಸಿಕೊಂಡರು.

ನನ್ನ ತಾಯಿ ತಂದೆಗಳು ಕಾವ್ಯವಾಚನ-ಉಪನ್ಯಾಸಗಳಿಗೆ ಹೊರಗೆ ಪ್ರವಾಸ ಹೋದಾಗ ನನ್ನನ್ನು ನನ್ನಕ್ಕ ವನಜನನ್ನು ಕರೆದುಕೊಂಡು ಹೋಗುತ್ತಿದ್ದರು. ಅವರಿಬ್ಬರಿಗೆ ಕಾವ್ಯವಾಚನ ಉಪನ್ಯಾಸಗಳ ಕಾರ್ಯಕ್ರಮ. ನಮಗೆ ತಿಂಡಿ ತೀರ್ಥ ಗಿಟ್ಟಿಸಿ ಖುಷಿ ಪಡುವ ಕಾರ್ಯಕ್ರಮ. ಹರಪನಹಳ್ಳಿಗೆ ಹೋದೆವು. ನಾರಾಯಣ ದೇವರ ಕೆರೆಗೆ

ಹೋದೆವು. ಅಲ್ಲಿ ನಮ್ಮ ತಾಯಿತಂದೆಗಳಿಗೆ ತೋರಿಸಿದ ಗೌರವ ರಾಜ ವೈಭೋಗಕ್ಕೆ ಸಮ. ನಮ್ಮ ತಾಯಿತಂದೆಗಳನ್ನು ಅಲ್ಲಿಯ ಜನ ನೋಡಿಕೊಂಡ ರೀತಿಯನ್ನೂ ನಾನೀಗ ನೆನೆಸಿಕೊಂಡರೆ ಎಂಥ ತಂದೆತಾಯಿಗಳನ್ನು ಪಡೆದಿದ್ದೇನೆ, ನನ್ನ ಭಾಗ್ಯ ಎಷ್ಟು ಮಕ್ಕಳಿಗೆ ಲಭಿಸುತ್ತದೆ ? ಎಂದು ನನಗೇ ಆಶ್ಚರ್ಯವಾಗುತ್ತದೆ. ಹಂಪೆಯನ್ನು ನೋಡಿದೆವು. ಆಗ ನನಗೆ ಐದು ವರ್ಷ.

ಕನಕಪುರದಿಂದ "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನ ಮಾಡ ಬೇಕೆಂದು ಕರೆ ಬಂತು. ನನ್ನ ತಾಯಿ ತಂದೆಗಳ ಜೊತೆಗೆ ನಾನೂ ನನ್ನಕ್ಕನೂ ಹೊರಟೆವು. ಸಬ್‌ರಿಜಿಸ್ಟ್ರಾರ್ ಹೆಚ್. ನಂಜಯ್ಯನವರು ನಮಗೆ ಮನೆಯವರೇ ಆಗಿ ಹೋದರು. ಟ್ರಾವಲರ್ಸ್ ಬಂಗಲೆಯಲ್ಲಿ ಇಳಿಸಿದರು. ಏನು ತರಿಸಲಿ ? ಎಂದರು ನನ್ನನ್ನು. ನಾನು "ಮಸಾಲೆ ದೋಸೆ, ಜಾಮೂನ್" ಎಂದು ಬಿಟ್ಟೆ. ನನ್ನ ತಾಯಿ ತಂದೆ ಮುಖಮುಖ ನೋಡಿಕೊಂಡರು. ನಂಜಯ್ಯನವರು ನಗುತ್ತ ನನ್ನ ತಲೆ ಸವರಿ "ಮೋಹನ, ನಾನು ನೀನು ಸ್ನೇಹಿತರು ; ಅಲ್ಲವೇನೋ" ಎಂದರು. "ಹೌದು" ಎಂದೆ. "ನಂಜಯ್ಯ ನನ್ನ ಸ್ನೇಹಿತರಾದರಲ್ಲ" ಎಂದು ನನಗೆ ಹೆಮ್ಮೆ. ಅವರು ಈಗಿಲ್ಲ. ಅವರ ಹೆಸರು ನೆನೆದರೆ ಕಣ್ಣು ಹನಿಗೂಡುತ್ತದೆ. ನಮ್ಮ ಮನೆಗೆ ಬಂದಾಗಲೆಲ್ಲ ನಂಜಯ್ಯ "ಮೋಹನ್, ನನ್ನ ಸ್ನೇಹಿತ ಹೇಗಿದ್ದೀಯ ?" ಎಂದೇ ಮಾತಾಡಿಸುವರು. ನಮ್ಮ ತಾಯಿಯ ಕಾವ್ಯವಾಚನವನ್ನು ತುಂಬ ಜನ ಟ್ರಾವಲರ್ಸ್ ಬಂಗಲೆಯ ಮುಂದೆ ಬಯಲಲ್ಲಿ ಕುಳಿತು ಕೇಳಿದರು. ಅಷ್ಟೇ ನನ್ನ ನೆನಪಿನಲ್ಲಿ ಉಳಿದಿರುವುದು. ಆಗ ನಾನು ಆರೇಳು ವರ್ಷದವನಿರಬೇಕು.

ಕೊಳ್ಳೇಗಾಲದಲ್ಲಿ ಮೂರು ದಿವಸಗಳ ಕಾವ್ಯವಾಚನ ಕಾರ್ಯಕ್ರಮವಿತ್ತು. ಸಿ. ಕೆ. ನಾಗರಾಜರಾಯರು, ರಾಜಾಮಣಿ ನಾಗರಾಜರಾವ್, ಅವರ ಮಕ್ಕಳು ನಮ್ಮ ತಾಯಿ ತಂದೆ, ನಾನು ನನ್ನಕ್ಕ ಹೋಗಿದ್ದೆವು. ನಾವು ಸಭೆಯಲ್ಲಿ ಕುಳಿತಿದ್ದೆವು. ನಮ್ಮ ತಂದೆ ಉಪನ್ಯಾಸ ಕೊಟ್ಟಾಗ, ನಮ್ಮ ತಾಯಿ ಕಾವ್ಯವಾಚನ ಮಾಡಿದಾಗ, ಸಭೆ ಯಿಂದ ಅವರುಗಳು ಹೇಳಿದ ಹಾಗೆ ಅಣಕಿಸುತ್ತಿದ್ದೆವು. ಸಭೆ ನಮ್ಮ ಹುಡುಗಾಟಿಕೆ ಗಳನ್ನು ಸಹಿಸಿಕೊಳ್ಳುತ್ತಿತ್ತು ತಾಳ್ಮೆಯಿಂದ.

ನಮ್ಮ ತಾಯಿ ತಂದೆಗಳು ಚಿತ್ತವಾಡಿಗೆಯ ಕಲ್ಮೇಶ್ವರ ಜಾತ್ರೆಗೆ ಹೋದರು. ನಾವೂ ಅಕ್ಕ ತಮ್ಮ ಅವರುಗಳ ಜೆನ್ನುಬಿದ್ದೆವು. ಗದುಗಿನ ವೀರನಾರಾಯಣಸ್ವಾಮಿಯ ದರ್ಶನವಾಯಿತು. ಧಾರವಾಡ ಹುಬ್ಬಳ್ಳಿಗಳಿಗೆ ಹೋದೆವು. ಪಂಚಾಂಗಂ ವೆಂಕೋಬಾ ಚಾರ್ಯರ ಅತಿಥಿಗಳಾದೆವು. ಊಟದ ಕೊನೆಯಲ್ಲಿ ಗಟ್ಟಿ ಮೊಸರು ಹಾಕುತ್ತಿದ್ದರು. ಬೆಂಗಳೂರಿನಲ್ಲಿ ಹಾಲು ಕೊಂಡು ಹೆಪ್ಪುಹಾಕಿ ಗಟ್ಟಿಮೊಸರೂಟ ಮಾಡುವುದು ನಮಗೆ ಅಪರೂಪವಾಗಿತ್ತು. ಗಡ್ಡೆ ಮೊಸರು ತಿಂದುದೇ ನನಗೆ ಪರಮಾನಂದವಾಯಿತು. ಪಂಚಾಂಗಂ ವೆಂಕೋಬಾಚಾರ್ಯರು ನಿಷ್ಕಲ್ಮಶ ಹೃದಯರು. ಅವರು ನಮ್ಮ ತಾಯಿ ತಂದೆಗಳಿಗೆ ಒಬ್ಬ ಸೋದರರೇ ಆಗಿ ಹೋದರು. ಬೆಂಗಳೂರಿಗೆ ಬಂದಾಗಲೆಲ್ಲ ನಮ್ಮ

ಮನೆಯಲ್ಲಿ ಉಳಿದುಕೊಳ್ಳುತ್ತಿದ್ದರು. ಅವರು ಹುಬ್ಬಳ್ಳಿ ಧಾರವಾಡಗಳಲ್ಲಿ ನಮ್ಮ ತಾಯಿ ತಂದೆಗಳ ಕಾರ್ಯಕ್ರಮಗಳನ್ನು ಇಡಿಸಿ, ಜೊತೆಗಿದ್ದು ತುಂಬ ಸಹಾಯ ಮಾಡಿದರು. ಶ್ರೀರಂಗರು, ವಿ. ಬಿ. ನಾಯಕರು ನಮ್ಮ ತಾಯಿ ತಂದೆಗಳಿಗೆ ಪರಿಚಯವಾದರು. ಶ್ರೀರಂಗರು, ವಿ. ಬಿ. ನಾಯಕರು ಬೆಂಗಳೂರಿಗೆ ಬಂದಾಗ ನಮ್ಮ ಮನೆಗೆ ಬಂದು ಹೋಗುವ ಪರಿಪಾಟವಾಯಿತು. ಈ ವೇಳೆಗೆ ನನಗೆ ಸುಮಾರು ಹತ್ತು ವರ್ಷ.

ನಮ್ಮ ತಾಯಿ ತಂದೆಗಳ ಜೊತೆ ನಾನು ವೀರರಾಜಪೇಟೆ, ಮಡಿಕೇರಿಗಳಿಗೆ ಹೋದುದು ನೆನಪಿಗೆ ಬರುತ್ತದೆ. ಮಡಕೇರಿಯಲ್ಲಿ ಎಲ್. ಎಸ್. ಶೇಷಗಿರಿರಾಯರ, ಶಾಂತಮ್ಮನ ಅತಿಥಿಗಳಾಗಿದ್ದೆವು. ಕ್ರಿಸ್‌ಮಸ್ ದಿನಗಳು. ವೀರರಾಜಪೇಟೆಯಲ್ಲಿ ನನ್ನ ತಾಯಿಯ ಕಾವ್ಯವಾಚನ ನಡೆಯಿತು. ನಮ್ಮ ತಂದೆ ಉಪನ್ಯಾಸ ಮಾಡಿದರು. ಕರ್ನಾಟಕ ಸಂಘ ಕಾರ್ಯಕ್ರಮ ವೇರ್ಪಡಿಸಿತ್ತು. ಮಾರನೆಯ ದಿವಸ ನಮ್ಮ ತಾಯಿ ತಂದೆಗಳಿಗೆ ಮನೆ ಮನೆಯಲ್ಲೂ ಆದರಾತಿಥ್ಯ. ನಮ್ಮ ತಾಯಿಯ ಕೋಕಿಲ ಕಂಠವನ್ನು ಹೊಗಳಿದ್ದೂ ಹೊಗಳಿದ್ದೆ. ಪಂಜೆ ಮಂಗೇಶರಾಯರ "ಎಲ್ಲಿ ಭೂರಮೆ ದೇವ ಸನ್ನಿಧಿ ಬಯಸಿ ಬಿಮ್ಮನೆ ಬಂದಳೋ" ಎಂದು ಪ್ರಾರಂಭವಾಗುವ ಹುತ್ತರಿ ಹಾಡನ್ನು ನಮ್ಮ ನಮ್ಮ ತಾಯಿ ಹೇಳಿದಾಗ ಮೈ ಜುಮ್ಮೆನ್ನುತ್ತಿತ್ತು ಎಂದು ಮನೆಮನೆಯಲ್ಲೂ ಜನ ನೆನಸಿಕೊಳ್ಳುತ್ತಿದ್ದರು. ನಮ್ಮ ತಾಯಿತಂದೆಗಳಿಗೆ ವೀರರಾಜಪೇಟೆಯಲ್ಲಿ ಭಾರತೀ ಸುತರ ಪರಿಚಯವಾಯಿತು. ಅವರು ಮುಂದೆ—ನಮ್ಮ ತಾಯಿತಂದೆಗಳ ಬಳಗದಲ್ಲಿ ಆತ್ಮೀಯರಾಗಿ ಸೇರಿ ಒಬ್ಬ ಸಹೋದರರಂತೆ ನಡೆದುಕೊಂಡರು. ನಮ್ಮ ಮಕ್ಕಳ ಮಂಟಪ ಮನೆಯಲ್ಲಿ ಒಂದೆರಡು ಕಾದಂಬರಿಗಳನ್ನು ಪ್ರಾರಂಭಿಸಿದರೋ ಮುಗಿಸಿದರೋ ನನಗೆ ನೆನಪಿಲ್ಲ. ಅವರು "ನಮ್ಮೊಡನೆ ಇಲ್ಲವಲ್ಲ" ಎಂದು ಅವರನ್ನು ನೆನಸಿಕೊಂಡಾಗ ಲೆಲ್ಲ ನನಗೆ ದುಃಖವಾಗುತ್ತದೆ.

ನಮ್ಮ ತಾಯಿಯಿತಂದೆಗಳೊಡನೆ ನಾನು, ನನ್ನಕ್ಕ ವನಜ, ನನ್ನ ತಂಗಿ ವತ್ಸಲ ನೀಲಗಿರಿಗೆ ಹೋಗಿದ್ದುದೇ ನನ್ನ ಬಾಲ್ಯ ಜೀವನದಲ್ಲಿ ಕಡೆಯದೆಂದು ನನಗೆ ಚೆನ್ನಾಗಿ ನೆನಪಿದೆ. ಆಗ ನನಗೆ ಹನ್ನೆರಡು ವರ್ಷ ತುಂಬಿತ್ತು. ಶ್ರೇಷ್ಠ ನ್ಯಾಯ ಮೂರ್ತಿ ಶ್ರೀ ಹೆಚ್. ಹೊಂಬೇಗೌಡರ ಕಾರಿನಲ್ಲಿ ಅವರ ಜೊತೆ ಕುಳಿತು ಬೆಳಗ್ಗೆ ಅಷ್ಟು ಹೊತ್ತಿಗೇ ಹೊರಟೆವು. ಮೈಸೂರಿನಲ್ಲಿನ ಭದ್ರಯ್ಯನವರ ಮನೆಯಲ್ಲಿ ತಿಂಡಿ ಕಾಫಿಯ ಆತಿಥ್ಯ ವಾಯಿತು. ಅಲ್ಲಿಂದ ನೀಲಗಿರಿಗೆ ಪ್ರಯಾಣ. ನಾವು ಹಿಂದೆ ಧರ್ಮಸ್ಥಳಕ್ಕೂ ನಮ್ಮ ತಾಯಿತಂದೆಗಳೊಡನೆ ಹೋಗಿದ್ದೆವು. ಆ ಘಟ್ಟವನ್ನು ಏರಿಳಿದು ಪ್ರಕೃತಿಯನ್ನು ನೋಡಿ ಸಂತೋಷಪಟ್ಟ ದಿನಗಳ ಜ್ಞಾಪಕವಾಗುತ್ತಿತ್ತು. ಕುವೆಂಪುರವರ ದರ್ಶನವಾಯಿತು. ಚೌಡಯ್ಯನವರ ಪಿಟೀಲುವಾದನ ಕೇಳಿದ್ದೆವು. ಹೊಂಬೇಗೌಡರು ಕುವೆಂಪು ಅವರುಗಳ ಉಪನ್ಯಾಸ ಕೇಳಿದೆವು, ನೀಲಗಿರಿಯ ಸೃಷ್ಟಿಯ ಬೆಡಗನ್ನು ನೋಡಿ ಬೆರಗಾದೆವು. ಮೈಸೂರಿನಲ್ಲಿ ಚೌಡಯ್ಯನವರ ಅತಿಥಿಗಳಾಗಿದ್ದು ಬೆಂಗಳೂರಿಗೆ ಬಂದೆವು.

ನಾನು ನನ್ನ ತಾಯಿಯವರ ಕಾವ್ಯವಾಚನದ ಹಿರಿಮೆಯನ್ನು ಇಲ್ಲಿ ವರ್ಣಿಸಿಲ್ಲ.

ಆ ವಿಷಯ ಬೇಕಾದಷ್ಟು ಮಂದಿ ಹೇಳಿದ್ದಾರೆ. ನಮ್ಮ ತಾಯಿ ತಂದೆಗಳ ಮಗನಾಗಿ ಹುಟ್ಟಿದ ಭಾಗ್ಯದಿಂದ ನಾನು ಬಾಲಕನಾಗಿದ್ದಾಗಲೇ ಅನುಭವಿಸಿದ ಪ್ರವಾಸ ಸೌಖ್ಯ ವನ್ನು, ನಾನು ನೋಡಿದ ಕರ್ನಾಟಕದ ಪ್ರಸಿದ್ಧ ಸ್ಥಾನಗಳ ನೆನಪನ್ನು ಈ ಲೇಖನದಲ್ಲಿ ಮೆಲುಕು ಹಾಕಿದ್ದೇನೆ.

ನಮ್ಮ ಮಕ್ಕಳ ಮಂಟಪದ ಮನೆ ನಮಗೆಲ್ಲ ಪವಿತ್ರವಾದ ಸಾಹಿತ್ಯ ಕ್ಷೇತ್ರ ವಾಗಿತ್ತು. ಪೂಜ್ಯರಾದ ಮಾಸ್ತಿ ವೆಂಕಟೇಶ ಅಯ್ಯಂಗಾರ್, ಗೋವಿಂದಪೈ, ತಿರುಮಲೆ ತಾತಾಚಾರ್ಯ, ರಾಜಮ್ಮ ದಂಪತಿಗಳು, ವಿ. ಕೃ. ಗೋಕಾಕ್ ದಂಪತಿಗಳು, ಆದ್ಯ ರಂಗಾಚಾರ್ಯರ ದಂಪತಿಗಳು, ರಂ. ಶ್ರೀ. ಮುಗಳಿ ದಂಪತಿಗಳು, ಶಂ. ಬಾ. ಜೋಷಿ, ಪು.ತಿ.ನ., ಗೋರೂರು, ಜೋಳದರಾಶಿ ದೊಡ್ಡನಗೌಡ, ಸಾಲಿ ರಾಮಚಂದ್ರರಾಯರು, ಬೇಂದ್ರೆ ಅವರು, ಹುಯಿಲಗೋಳ ನಾರಾಯಣರಾಯರು, ಬೆಟಗೇರಿ ಕೃಷ್ಣಶರ್ಮ, ಗೋಪಾಲಕೃಷ್ಣ ಅಡಿಗ, ಅ. ನ. ಕೃ., ಎಸ್. ಕೆ. ಪಿ. ಆರ್. ಭಾಗವತ್, ಬಿ. ಶಿವ ಮೂರ್ತಿಶಾಸ್ತ್ರಿ, ಹೀಗೆ ಬಹು ಶ್ರೇಷ್ಠ ಸಾಹಿತಿಗಳು ಮಕ್ಕಳ ಮಂಟಪದ ಮನೆಗೆ ಬಂದಿ ದ್ದಾರೆ. ಅನೇಕ ಸಂದರ್ಭಗಳಲ್ಲಿ ಭಾಗವಹಿಸಿದ್ದಾರೆ. ಆ ದಿನಗಳನ್ನು ನೆನೆಸಿಕೊಂಡರೆ ನನಗೆ ಮೈ ಪುಳುಕಿತವಾಗುತ್ತದೆ. ನನ್ನ ತಾಯಿ ತಂದೆಗಳ ನಡೆನುಡಿಗಳು ಈಗ ನನಗೆ ಮಾರ್ಗ ದರ್ಶನವಾಗಿವೆ. ನಾನು ಬಾಲ್ಯದಲ್ಲಿ ಕಂಡ ಹಿರಿಯರು ನನ್ನ ಜೀವನದ ಮೇಲೆ ಮಹಾ ಪರಿಣಾಮವೆಸಗಿದ್ದಾರೆ. ಅದಕ್ಕಾಗಿ ನಾನು ನನ್ನ ತಾಯಿತಂದೆಗಳಿಗೆ ಸದಾ ಋಣಿ ಯಾಗಿದ್ದೇನೆ.

ನನ್ನತ್ತೆ

ಶೀಲಶ್ರೀ

ನಮ್ಮ ಹಿಂದೂ ಕುಟುಂಬ ಜೀವನದಲ್ಲಿ ಮಹಿಳೆ ತಾಯಿಯಾಗಿ ಮತ್ತು ಅತ್ತೆಯಾಗಿ ವಹಿಸುವ ಪಾತ್ರ ತುಂಬ ಜವಾಬ್ದಾರಿಯದ್ದಾಗಿದೆ. ಶಿಶುತನದಿಂದ ಯೌವನಾವಸ್ಥೆಗೆ ಬರುವ ವರೆಗೆ ಮಗನನ್ನು ಕಾಲಕಾಲಕ್ಕೆ ತಕ್ಕ ರೀತಿಯಲ್ಲಿ ಅವನಿಗೆ ಅಗತ್ಯವಾದ ಸೌಕರ್ಯಗಳನ್ನೆಲ್ಲ ಒದಗಿಸಿ, ಸರಿಯಾದ ವಿದ್ಯಾಭ್ಯಾಸ ಕೊಡಿಸಿ, ಸಮಾಜದ ಜೀವನಕ್ಕೆ ಹೊಂದುವಂತೆ ಮಾಡುವುದರಲ್ಲಿ ಮುತವರ್ಜಿವಹಿಸುತ್ತಾಳೆ. ಆತ ಉದ್ಯೋಗಸ್ಥನಾದ ಮೇಲೆ ಅವನು ಸಂಸಾರಿಯಾಗಲು ಹೆಣ್ಣು ಹುಡುಕಿ ತಂದು ಮದುವೆ ಮಾಡಿ ಒಂದು ನೆಲೆ ಕಾಣಿಸುತ್ತಾಳೆ. ಇಲ್ಲಿಗೆ ತಾಯಿಯ ಹೊಣೆ ಒಂದು ರೀತಿಯಲ್ಲಿ ತೀರಿತು. ಮನೆಗೆ ಸೊಸೆ ಬಂದಮೇಲೆ ತಾಯಿಯ ಹೊಣೆ ಬೇರೆ ರೀತಿಯಲ್ಲಿ ಆಗಬೇಕಾಗುತ್ತದೆ. ನನ್ನ ಅತ್ತೆ ಮಾತೋಶ್ರೀ ಶಕುಂತಲಾಬಾಯಿ ಸೊಸೆಯನ್ನು ನಡೆಸಿಕೊಳ್ಳುವ ರೀತಿಯನ್ನು ಕುರಿತು ನನ್ನ ಅನುಭವವನ್ನು ಹೇಳಲು ನನಗೆ ಮನಸ್ಸಾಗುತ್ತಿದೆ.

ನನ್ನ ಅತ್ತೆ ಕರ್ಣಾಟಕದಲ್ಲಿ ಹೆಸರುವಾಸಿಯಾದ ಶ್ರೇಷ್ಠ ಗಮಕ ವಿದುಷಿಯೆಂದೂ ನನ್ನ ಮಾವ ಪ್ರಸಿದ್ಧ ಮಕ್ಕಳ ಸಾಹಿತಿಯೆಂದೂ ನಾನು ಮದುವೆಯಾಗುವ ಮೊದಲೇ ಕೇಳಿದ್ದೆ. ಹೀಗೆ ಗಂಡ ಹೆಂಡತಿ ಪ್ರಸಿದ್ಧರಾಗಿರುವ ಮನೆಯಲ್ಲಿ ನಾನು ಸೊಸೆಯಾಗಿ ಹೋದರೆ ಹೇಗೆ ನಡೆದುಕೊಳ್ಳಬೇಕೊ ಎಂಬ ಭಯವಿತ್ತು ಮನಸ್ಸಿನಲ್ಲಿ. ನಮ್ಮ ತಂದೆ ತಾಯಿಗಳು ನನ್ನನ್ನು ನಮ್ಮ ಅತ್ತೆಯ ಮನೆಗೆ ನನ್ನನ್ನು ತೋರಿಸುವುದಕ್ಕೆ ಕರೆದು ಕೊಂಡು ಹೋಗುವವರೆಗೂ ನನಗಿದ್ದ ಭಯ ನನ್ನತ್ತೆ ಮಾವನವರು ನಯವಾಗಿ ಮಾತಾಡಿಸಿ ನಡೆಸಿಕೊಂಡ ರೀತಿಯಿಂದ ಮಾಯವಾಯಿತು.

ನನ್ನ ಮದುವೆಯಾಗುವುದಕ್ಕೆ ಮುಂಚೆಯೇ ನನ್ನತ್ತೆ ಮಾವ, ನನ್ನನ್ನು ನನ್ನ ತಂದೆ ತಾಯಿಗಳೊಡನೆ ಜವಳಿ ಅಂಗಡಿಗೆ ಕರೆದುಕೊಂಡು ಹೋದರು. ಜವಳಿ ಅಂಗಡಿಯವರು ಸೀರೆಗಳ ಹೊರೆಯನ್ನೇ ನಮ್ಮ ಮುಂದೆ ರಾಶಿ ಹಾಕಿದರು. ನಮ್ಮತ್ತೆ ನಿನಗೆ ಯಾವ ಸೀರೆಯಿಷ್ಟವೋ ಅದನ್ನು ಆರಿಸಿಕೊ ಎಂದರು. ನಾನು ಒಡಲೆಲ್ಲ ಜರತಾರಿಯಿಂದ ಜಗಜಗಿಸುವ ಒಂದು ಭಾರಿ ಸೀರೆಯನ್ನು ಆರಿಸಿದೆ. ನಮ್ಮ ತಂದೆ ಅದಕ್ಕೆ ಸ್ವಲ್ಪ ಕಡಮೆ ವ್ಯತ್ಯಾಸದ ಸೀರೆಯೊಂದನ್ನು ಆರಿಸಿದರು. ಅವರ ಮನಸ್ಸಿನಲ್ಲಿ ನಾನು ಮೊದಲು ಆರಿಸಿದ ಸೀರೆಯನ್ನು ಬಿಟ್ಟು ಎರಡನೆಯದನ್ನು ಆರಿಸಿಕೊಳ್ಳಲೆಂದು ಇಷ್ಟ. ನನಗೆ ಒಳಗಿನ ಗುಟ್ಟು ತಿಳಿಯದು. ಬೆಲೆ ವಿಚಾರಿಸಿದಾಗ ಮೊದಲ ಸೀರೆಯ ಬೆಲೆ ಸುಮಾರು ಏಳುನೂರು ರೂಪಾಯಿಗಳು ಎರಡನೆಯ ಸೀರೆಯ ಬೆಲೆ ನಾಲ್ಕು ನೂರು ರೂಪಾಯಿಗಳು ಎಂದು ತಿಳಿಯಿತು. ನಾನು ಹೇಳುತ್ತಿರುವುದು ಈಗ ಏಳೆಂಟು ವರ್ಷಗಳ ಮಾತು. ಆಗಲೇ ಎಲ್ಲ ಪದಾರ್ಥಗಳ ಬೆಲೆ ಗಗನಕ್ಕೇರಿತ್ತೆಂದು ಜನ ಆಡಿಕೊಳ್ಳುತ್ತಿ

ದ್ದರು. ನಮ್ಮ ತಂದೆ ಎರಡನೆಯ ಆಯ್ಕೆಯನ್ನು ತೆಗೆದುಕೊಳ್ಳುವುದೆಂದು ನನಗೆ ಸೂಚಿಸಿದರು. ನಮ್ಮತ್ತೆ ನಡುವೆ ಬಾಯಿಹಾಕಿ ಅಂಗಡಿಯವರಿಗೆ ಮೊದಲ ಆಯ್ಕೆಯೇ ಇರಲೆಂದರು. ನಮ್ಮ ಮಾವ ನಸುನಗುತ್ತ ಮೊದಲ ಸೀರೆಯನ್ನೇ ಬೆಲೆಕೊಟ್ಟು ಕೊಂಡರು.

ಮದುವೆಯಾದ ಮೇಲೆ ನಾನು ಅತ್ತೆ ಮನೆಗೆ ಬಂದೆ. ತೌರು ಮನೆಯಂತೆಯೇ ನಮ್ಮತ್ತೆ ಮನೆಗೆ ಬರುವವರು ಹೋಗುವವರು ಬಹಳ. ಬಂಧು ಬಳಗಕ್ಕಿಂತಲೂ ಆಪ್ತರು ಮಿತ್ರರೇ ಹೆಚ್ಚು. ಸಾಹಿತಿಗಳು, ಗಮಕಿಗಳು, ಅತ್ತೆಮಾವಂದಿರ ಅಭಿಮಾನಿಗಳು, ದಿನವೆಲ್ಲಾ ಬರುತ್ತಿರುತ್ತಾರೆ. ನಮ್ಮ ಮಾವನವರಿಗೆ ಒಳ ಸುಳಿವೇ ತಿಳಿದಿರುವುದಿಲ್ಲ. ನಮ್ಮತ್ತೆ ತುಂಬಾ ಜಾಣತನದಿಂದ ಅತಿಥಿ ಸತ್ಕಾರ ಮಾಡುತ್ತಾರೆ. ತಾವೇ ಅಡುಗೆ ಮನೆಯ ಯಜಮಾನಿಕೆ ನಿರ್ವಹಿಸಿ ಬೇಕುಬೇಕಾದ ತಿಂಡಿತೀರ್ಥ ಒದಗಿಸುತ್ತಾರೆ. ನಾವು ನೋಡುತ್ತಿರುತ್ತೇವೆ. ಅವರ ಮುಖದಲ್ಲಿ ಅಲಸಿಕೆಯಾಗಲಿ, ದುಮುದುಮು ಆಗಲಿ ಕಾಣುವುದಿಲ್ಲ. ಮಾತು ಕಡಮೆ. ಕೆಲಸಗಳಲ್ಲಿ ಚಟುವಟಿಕೆ ಬಗ್ಗೆ.

ನಾನು ಮನೆಯಲ್ಲಿ ಸೊಸೆಯಾಗಿ, ಹೊರಗಿನಿಂದ ಬಂದ ಹುಡುಗಿಯಂತೆ ನಡೆದ್ದುಕೊಂಡಿರುವುದು ಗೊತ್ತೇಯಿಲ್ಲ. ಅವರ ಹೆಣ್ಣು ಮಕ್ಕಳಲ್ಲಿ ನಾನೂ ಒಬ್ಬಳು. ಅವರ ಕೆಲಸ ಕಾರ್ಯಗಳಲ್ಲಿ ಒಂದು ಅಚ್ಚುಕಟ್ಟಿದೆ, ಒಪ್ಪವಿದೆ. ನಮ್ಮ ಕೆಲಸ ಕಾರ್ಯಗಳಲ್ಲಿ ಅದು ಕಾಣದಾದಾಗ ಸೂಕ್ಷ್ಮವಾಗಿ "ಇದು ಹೀಗೆ, ಅದು ಹಾಗಲ್ಲ" ಎಂದು ತಿಳಿಸುತ್ತಾರೆ. ನನ್ನ ಮಗ ನನ್ನ ನಾದಿನಿಯ ಮಗ ಇಬ್ಬರೂ ತುಂಟರು. ನನ್ನ ಮಗ ನಾಲ್ಕು ದಿವಸ ದೊಡ್ಡವನು. ಇಬ್ಬರೂ ಏಕಕಾಲದಲ್ಲಿ ಅಜ್ಜಿಯ ತೊಡೆಯೇರಬೇಕು ಎಂದು ಪೈಪೋಟಿ ನಡೆಸುತ್ತಾರೆ. ಅಜ್ಜಿಯ ಎರಡೂ ತೊಡೆಗಳನ್ನೂ ಏರಿ ಕುಳಿತುಬಿಡುತ್ತಾರೆ. ಇಬ್ಬರಿಗೂ ನಮ್ಮತ್ತೆ ಹೇಳುವ ಕಥೆಗಳು ಸೊಗಸೇಸೊಗಸು. ಅವರಿಗೆ ಹೇಳಿಕೊಡುವ ರಾಜರತ್ನಂ, ಹೊಯಿಸಳ, ಟಿ. ಎಂ. ಆರ್. ಸ್ವಾಮಿಯವರ ಪದ್ಯಗಳ ಗತ್ತೆ ಗತ್ತು. ನಮ್ಮತ್ತೆ ಮಕ್ಕಳ ಪದ್ಯಗಳಿಗೆ ಮೇಳವಾಗುವ ರಾಗಗಳನ್ನು ಜೋಡಿಸಿ, ಕಂಠದಲ್ಲಿ ಭಾವ ಹೊಮ್ಮಿಸಿ, ಅಭಿನಯ ವ್ಯಕ್ತಪಡಿಸಿ ಮೊಮ್ಮಕ್ಕಳನ್ನು ಮುಂದೆ ನಿಲ್ಲಿಸಿಕೊಂಡೇ ಅವರ ವಯಸ್ಸಿಗೆ ತಾವೂ ಇಳಿದು ಮೊಮ್ಮಕ್ಕಳೊಡನೆ ಬೆರೆತಿರುವಾಗ ನಮ್ಮತ್ತೆ ಮುಪ್ಪಿಗೆ ಕಾಲಿಡುತ್ತಿರುವರೋ ಎಂದು ನಮಗೆ ತೋರುವುದೇ ಇಲ್ಲ, ಆಗ ಅವರೂ ಒಂದು ಶಿಶು. ನನ್ನನ್ನು ನನ್ನ ತುಂಟ ಮಗ ಕಾಡುವ ಹಾಗೆ ಅಜ್ಜಿಯನ್ನೂ ಕಾಡುತ್ತಾನೆ. ದಾವಣಗೆರೆಯಲ್ಲಿ ಮಹಿಳಾ ಲೇಖಕಿಯರ ಸಮ್ಮೇಳನವಾಯಿತಲ್ಲ ; ಆಗ ನಾವು ಅಲ್ಲಿಯೇ ಇದ್ದೆವು. ನನ್ನ ಪತಿಗೆ ಅಲ್ಲಿಗೆ ತಾನೇ ವರ್ಗವಾಗಿದೆ. ನನ್ನತ್ತೆಯನ್ನು ಕುವೆಂಪು "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನ ಮಾಡುವುದಕ್ಕೆ ದಾವಣಗೆರೆಯ ಮಹಿಳಾ ಸಂಘ ಕರೆಸಿಕೊಂಡಿತ್ತು. ಅವರು ಹಾಡುವುದಕ್ಕೆ ವೇದಿಕೆ ಹತ್ತಿದಾಗ ನನ್ನ ಮಗನೂ ಅಜ್ಜಿಯನ್ನುಬಿಡದೆ ವೇದಿಕೆ ಹತ್ತಿ ಅವರ ಪಕ್ಕದಲ್ಲಿ ಕೂತುಬಿಡುತ್ತಿದ್ದ. ಸಭೆಯ ಕಣ್ಣೆಲ್ಲ ಅವನ ಮೇಲೆಯೇ. ಆಗ ನಮ್ಮತ್ತೆ ಸಭೆಯನ್ನು ತಮ್ಮ ಕಂಠದಿಂದ

ಸೆರೆಹಿಡಿದು ತಮ್ಮ ಕಡೆಗೆ ಗಮನ ಕೊಡುವಂತೆ ಮಾಡುತ್ತಿದ್ದ ಜಾಣತನ ನನಗೆ ಆಶ್ಚರ್ಯವುಂಟುಮಾಡುತ್ತಿತ್ತು. ಸಂಸಾರ ನಿರ್ವಹಣೆಯಲ್ಲಿ ಅವರಿಗಿರುವ ಸಹನೆ ತಾಳ್ಮೆಗಳೇ ಇಂಥ ಕಡೆಗಳಲ್ಲೂ ಅವರಿಗಿರುವುದು ನನಗೆ ತುಂಬ ಆಶ್ಚರ್ಯವನ್ನುಂಟುಮಾಡಿದೆ. ಜನಮನವನ್ನು ಗೆಲ್ಲುವ ಜಾಣತನ ಅವರಿಗೆ ಗಮಕ ಕಲೆಯಂತೆಯೇ ಸಿದ್ಧಿಸಿದೆ.

ನನ್ನ ತವರು ಮನೆಯವರನ್ನೆಲ್ಲ ನಮ್ಮತ್ತೆ ನಡೆಸಿಕೊಳ್ಳುವ ರೀತಿ ತುಂಬ ಹೃದಯ ಮುಟ್ಟುವಂತೆ. ಅವರು ಬೀಗರ ಮನೆಗೆ ಬಂದಾಗ "ಬೀಗಿತ್ತಿ ಬಂದರಲ್ಲ!" ಎಂದು ನಮಗೆ ಅನ್ನಿಸುವುದೇ ಇಲ್ಲ. ಮನೆಯವರೊಡನೆ ಮನೆಯವರಾಗಿ ಕಲೆತು ಹೋಗುತ್ತಾರೆ. ನನ್ನಣ್ಣಂದಿರು ಶ್ರೀಧರ, ಕೃಷ್ಣರೊಡನೆ ಕುಳಿತು ಮಾತುಕಥೆ ಯಾಡುತ್ತ ತೋರುವ ಸಲಿಗೆ, ನನ್ನಜ್ಜಿಯೊಡನೆ ನಡೆದುಕೊಳ್ಳುವ ವಯೋಧರ್ಮದ ಅಂತಸ್ತು, ನನ್ನ ತಂದೆತಾಯಿಯರೊಡನೆ ನಡೆದುಕೊಳ್ಳುವಾಗ ತೋರಿಸುವ ಸಮಾನತೆ ಅವರಿಗಿಂತ ಚಿಕ್ಕವರಾದ ನನ್ನನ್ನು ನನ್ನ ತಂಗಿಯನ್ನು ನಡೆಸಿಕೊಳ್ಳುವ ಹಿರಿತನ ಅದು ಅವರಿಗೇ ಹೋಲಿಸುವುದಕ್ಕೆ ಶಕ್ಯ.

ಇಂಥ ಗುಣವತಿಯಾದ ಅತ್ತೆಯನ್ನು ನಾನು ಪಡೆದಿದ್ದೇನೆ. ನನ್ನಂತೆ ಸೊಸೆಯಾಗಿ ಅತ್ತೆಯ ಮನೆಗೆ ಹೋಗುವವರಿಗೆ ಮಾತೋಶ್ರೀ ಶಕುಂತಲಾಬಾಯಿಯವರಂಥ ಅತ್ತೆಯೇ ದೊರೆಯಲಿ ಎಂದು ಭಗವಂತನಲ್ಲಿ ನನ್ನ ಪ್ರಾರ್ಥನೆ.

ನನ್ನ ದೊಡ್ಡಮ್ಮ

ಎಸ್. ನಾಗರಾಜ (ರಾಜು)

ಗಾರ್ಡ್ ವೆಂಕೋಬರಾವ್ ಮತ್ತು ಸುಂದರಾಬಾಯಿಗೆ ನಮ್ಮ ದೊಡ್ಡಮ್ಮ ಶಕುಂತಲಾಬಾಯಿ ಪಾಂಡುರಂಗರಾವ್ ಹಿರಿಯ ಮಗಳು. ನಮ್ಮ ತಾಯಿ ಇಂದಿರಾ ಬಾಯಿ ಎರಡನೇ ಮಗಳು. ನಮ್ಮ ದೊಡ್ಡಮ್ಮ ಹೊರಗಿನವರಿಗೆ ಗಮಕ ವಿದುಷಿ ಶಕುಂತಲಾಬಾಯಿ, ಮನೆಯ ಬಂಧು-ಬಳಗಕ್ಕೆ "ಅಮ್ಮಣ್ಣಿ". ನಮಗೆಲ್ಲ ಪ್ರೀತಿಯ ಅಮ್ಮಣ್ಣಿ. ಅವರು ಗಮಕ ಕಲಾವಿದೆಯೆಂದು ಎಂದೂ ಬಿಗುಮಾನದಿಂದ ಬೀಗಿದವರಲ್ಲ. ಸರಳರು, ವಿನಯಪರರು, ಎಲ್ಲರಿಗೂ ಸುಲಭರು.

ನಮ್ಮ ದೊಡ್ಡಮ್ಮ ಗಮಕ ಕಲೆಯಲ್ಲಿ ಮಾತ್ರ ನೈಪುಣ್ಯ ಪಡೆದಿಲ್ಲ, ಪಾಕಶಾಸ್ತ್ರ ದಲ್ಲೂ ಅಷ್ಟೇ ನಿಪುಣರು. ಅವರ ಗುರುಗಳಾದ ಭಾರತವಾಚನ ಪ್ರವೀಣ ಬಿಂದೂ ರಾಯರು, ಶಿಷ್ಯೆಯ ತಿಳಿಸಾರು, ಬಿಸಿಬೇಳೆ ಹುಳಿಯನ್ನಗಳನ್ನು ಬಹಳವಾಗಿ ಮೆಚ್ಚಿ ಕೊಂಡಿದ್ದರು. ಜೊತೆಗೆ ನಾನು ನಮ್ಮ ದೊಡ್ಡಮ್ಮ ಮಾಡುವ ಅಕ್ಕಿ ಕಡಲೇಬೇಳೆ ಪಾಯಸವನ್ನು ಸೇರಿಸುವುದಕ್ಕೆ ಇಷ್ಟಪಡುತ್ತೇನೆ.

ನಮ್ಮ ದೊಡ್ಡಮ್ಮನ ಮಗ ಮೋಹನ್, ನನಗಿಂತ ಒಂದು ವರ್ಷ ದೊಡ್ಡವನು. ನನ್ನ ಚಿಕ್ಕಮ್ಮನ ಮಗ ಶ್ರೀನಿವಾಸ ನನಗಿಂತ ಒಂದು ವರ್ಷ ಚಿಕ್ಕವನು. ಮೂವರೂ ನಮ್ಮ ದೊಡ್ಡಮ್ಮನ ಮನೆ ನೆಹರೂ ನಗರದ ಮಕ್ಕಳ ಮಂಟಪದಿಂದ 5 ನಿಮಿಷಗಳ ದಾರಿಯಷ್ಟು ಸಮೀಪದಲ್ಲಿರುವ ಕುಮಾರಪಾರ್ಕಿನಲ್ಲಿರುವ ಗಾಂಧಿನಗರದ ಹೈಸ್ಕೂಲಿನಲ್ಲಿ ಓದುತ್ತಿದ್ದೆವು. ಮೂವರು ಮಧ್ಯಾಹ್ನದ ಹೊತ್ತು ಶಾಲೆಯಿಂದ ಮನೆಗೆ ಬಂದು ನಮ್ಮ ದೊಡ್ಡಮ್ಮನ ಕೈಯಿಂದ ಕೈತುತ್ತು ಉಂಡಿದ್ದೇವೆ. ಮೂರು ವರ್ಷಗಳು ಎಡಬಿಡದೆ ಸಂಜೆಯೂ ಶಾಲೆಯಿಂದ ಬಂದು ತಿಂಡಿ, ಕಾಫಿ ಗಿಟ್ಟಿಸಿದ್ದೇವೆ. ಆ ಸಮಯಗಳಲ್ಲಿ ಕಂಡ ನಮ್ಮ ದೊಡ್ಡಮ್ಮನ ನಗು ಮುಖವನ್ನು ಎಂದೆಂದಿಗೂ ನಾನು ಮರೆಯು ವಂತಿಲ್ಲ. ಆ ಮುಖದಲ್ಲಿ ಕಾಣುತ್ತಿದ್ದ. ತಂಗಿಯರ ಮಕ್ಕಳ ಮೇಲಿನ ಪ್ರೀತಿ ವಿಶ್ವಾಸ ಗಳು, ನನ್ನ ಮೇಲೆ ಎಸಗಿರುವ ಪರಿಣಾಮ ಬಹಳ. ದೊಡ್ಡಮ್ಮನ ನಾಲ್ಕು ಮಕ್ಕಳಲ್ಲಿ ನಾನು ಐದನೆಯವನಾಗಿ ಹೋಗಿದ್ದೇನೆ.

ನಮ್ಮ ದೊಡ್ಡಮ್ಮನ ಮನೆ ಯಾವಾಗಲೂ ಒಂದು ಧರ್ಮಛತ್ರವಿದ್ದಹಾಗೆ. ಅತಿಥಿಗಳು ಬಂದವರು ಬಂದಹಾಗೆ ಹೋದವರು ಹೋದ ಹಾಗೆ. ಭಾರತೀಸುತರು ನಮ್ಮ ದೊಡ್ಡಮ್ಮನ ಮನೆಗೆ ಆಗಾಗ ಬರುತ್ತಿದ್ದರು. ಅವರು ಮನೆಯವರಂತೆಯೇ ಇರುತ್ತಿದ್ದರು. ಒಂದೆರಡು ಕಾದಂಬರಿಗಳ ಪ್ರಾರಂಭವೋ ಮುಕ್ತಾಯವೋ ನಮ ದೊಡ್ಡಮ್ಮನ ಮನೆಯಲ್ಲೇ ಆಗಿರಬೇಕೆಂದು ನನ್ನ ನೆನೆವು. ಪ್ರಸಿದ್ಧ ಸಾಹಿತಿ ಮಿರ್ಜಿ ಅಣ್ಣಾರಾಯರು, ಚಿರಂತನರೆಂದು ಪ್ರಸಿದ್ಧರಾದ ಸಚ್ಚಿದಾನಂದಯ್ಯ ಮತ್ತು ಮಕ್ಕಳ

ಸಾಹಿತಿ ಸೀತಾರಾಮ ಭಟ್ಟರು ನಮ್ಮ ದೊಡ್ಡಮ್ಮನವರ ಅತಿಥಿಗಳಾಗಿ ಮನೆಯವ ರಂತೆಯೇ ಇರುತ್ತಿದ್ದ ವಿಷಯ ಈ ಸಮಯದಲ್ಲಿ ನನಗೆ ಜ್ಞಾಪಕಕ್ಕೆ ಬರುತ್ತದೆ.

ನಮ್ಮ ದೊಡ್ಡಮ್ಮನ ಮನೆ ಇದ್ದಕ್ಕಿದ್ದ ಹಾಗೆ ಸಾಹಿತ್ಯ ಸಂಸ್ಕೃತಿಗಳ ಕೇಂದ್ರ ವಾಗಿ ಒದಲಾಯ್ತು. ಗಮಕಿಗಳ ಕಾವ್ಯ ವಾಚನಗಳು, ಹೆಸರಾಂತ ಸಾಹಿತಿಗಳ ಅರವತ್ತು ವರ್ಷಗಳ ಶಾಂತಿ ಸಮಾರಂಭಗಳು ನಡೆದಿವೆ. ತಿಂಡಿ ತೀರ್ಥಗಳ ಸಮಾರಾಧನೆಯಿಲ್ಲದೆ, ಒಣ ಸಭೆಗಳು ನಡೆದುದೇ ಇಲ್ಲ. ನಮ್ಮ ದೊಡ್ಡಮ್ಮ ಯಾವ ಸಮಯದಲ್ಲಿಯೋ ತಿಂಡಿ ತೀರ್ಥಗಳನ್ನು ತಾವೇ ಪಾಕಯಿಳಿಸಿ ಒದಗಿಸಿ, ಸಭೆಗಳ ಕಾರ್ಯಕ್ರಮಗಳಲ್ಲಿ ಭಾಗಿಗಳಾಗುತ್ತಿದ್ದರು. ಬೇಂದ್ರೆ, ಮುಗಳಿ, ವಿ. ಕೃ. ಗೋಕಾಕ್, ಅ. ನ. ಕೃ., ಶ್ರೀರಂಗ, ಮಾಸ್ತಿ, ಜೋಳದ ರಾಶಿ ದೊಡ್ಡನಗೌಡ ಮೊದಲಾದ ಪ್ರಸಿದ್ಧ ಪುರುಷರುಗಳ ದರ್ಶನ ಪಡೆಯುವ ಭಾಗ್ಯ ನನಗೆ ಲಭಿಸಿದ್ದು ನನ್ನ ದೊಡ್ಡಪ್ಪ ದೊಡ್ಡಮ್ಮನ ಕೃಪೆಯಿಂದ.

ನನ್ನ ದೊಡ್ಡಮ್ಮ ಮಕ್ಕಳ ಮಂಟಪದ ವಾರ್ಷಿಕೋತ್ಸವ ಸಮಯದಲ್ಲಿ ಪಾದ ರಸದಂತೆ ಇರುತ್ತಿದ್ದರು. ಮಕ್ಕಳ ಮಂಟಪದ ವಾರ್ಷಿಕೋತ್ಸವದ ಸಡಗರ ಮದುವೆ ಮನೆಯಂತೆ ಇರುತ್ತಿತ್ತು. ಎರಡು ಮೂರು ದಿವಸಗಳ ಕಾರ್ಯಕ್ರಮ. ಉಪಾಹಾರ ಮನೆಯಲ್ಲಿ ತಯಾರಾಗುತ್ತಿತ್ತು. ಅದನ್ನೂ ಪಾಕ ಇಳಿಸುವ ಅನ್ನಪೂರ್ಣೆ ನಮ್ಮ ದೊಡ್ಡಮ್ಮನೇ. ಶಾಲೆಯ ಮಕ್ಕಳಿಗೆ, ವಾರ್ಷಿಕೋತ್ಸವಕ್ಕೆ ಬರುವ ಅತಿಥಿಗಳಿಗೆ, ಸ್ವಯಂಸೇವಕರುಗಳಿಗೆ, ಉಪಾಹಾರ ಹಂಚಿ, ಮಕ್ಕಳ ಮಂಟಪದ ವಾರ್ಷಿಕೋತ್ಸವ ನಡೆಯುತ್ತಿದ್ದ ಗಾಂಧಿನಗರ ಹೈಸ್ಕೂಲ್ ಸಭಾಂಗಣಕ್ಕೆ ಯಾವ ನಿಮಿಷದಲ್ಲಿಯೋ ಹಾಜರಾಗುತ್ತಿದ್ದರು. ಅಲ್ಲಿಯೂ ಬಂದ ಬಂದ ಅತಿಥಿಗಳಿಗೆ ಕಾಫಿ ತಿಂಡಿ ಸರಬರಾಜಿನ ಮೇಲ್ವಿಚಾರಣೆ ನಮ್ಮ ದೊಡ್ಡಮ್ಮನದೇ. ಎರಡು ಅಗ್ಗಿಷ್ಟಿಕೆಗಳು ಧಗ ಧಗ ಉರಿಯು ತ್ತಿದ್ದವು. ಒಂದರ ಮೇಲೆ ಕಾಫಿ ಪಾತ್ರೆ ಇನ್ನೊಂದರ ಮೇಲೆ ತಿಂಡಿಯ ಡಬರಿ. ವಾರ್ಷಿಕೋತ್ಸವದ ಕಾರ್ಯಕ್ರಮ ಪ್ರಾರಂಭವಾಯಿತೋ ಕೂಡಲೆ ನನ್ನ ದೊಡ್ಡಮ್ಮನ ಕೋಕಿಲ ಕಂಠ ಅವರ ಹಾರ್ಮೋನಿಯಂ ನುಡಿತದೊಂದಿಗೆ, ಮಕ್ಕಳ ಕಂಠದೊಡನೆ ಬೆರೆಯುತ್ತಿತ್ತು. ದೊಡ್ಡಪ್ಪ ಪಾಂಡುರಂಗರಾವ್ ಬರೆದ ಮಕ್ಕಳ ನಾಟಕದ ಪಾತ್ರಧಾರಿ ಗಳ ವೇಷಭೂಷಣಗಳ ಕಡೆಗೂ ನಮ್ಮ ದೊಡ್ಡಮ್ಮನವೇ ಉಸ್ತುವಾರಿ. ನಮ್ಮ ದೊಡ್ಡ ಮ್ಮನ ಪಾದರಸದಂಥ ಚಲನವಲನವನ್ನು ಅತಿಥಿಗಳು ಗಮನಿಸಿ ವಿಸ್ಮಿತರಾಗುತ್ತಿದ್ದರು.

ನನ್ನ ದೊಡ್ಡಮ್ಮನಿಗೆ ತಾನು ಕರ್ನಾಟಕದ ಸುಪ್ರಸಿದ್ಧ ಗಮಕ ವಿದುಷಿಯೆಂದು ಹೆಮ್ಮೆ ಎಳ್ಳಷ್ಟೂ ಇಲ್ಲ. ಅವರು ತನ್ನ ಬಂಧು, ಬಳಗ, ಇಷ್ಟ-ಮಿತ್ರರುಗಳ ಮದುವೆ ಮನೆಗಳಲ್ಲಿ, ಹಬ್ಬ-ಹುಣ್ಣಿಮೆಗಳಲ್ಲಿ ನಡೆದುಕೊಳ್ಳುವ ರೀತಿ, ಅವರ ಸರಳತೆಯನ್ನು ಎತ್ತಿ ತೋರಿಸುತ್ತದೆ. ನಮ್ಮ ಮನೆಗಳಲ್ಲಿ ನಡೆಯುವ ಮದುವೆ ಮುಂಜಿ ಮನೆಗಳಲ್ಲಿ ಅಂದದ ಗೌರಮ್ಮನಾಗಿ ಕೂಡದೆ ದೊಡ್ಡಮ್ಮ ಟೊಂಕಕ್ಕೆ ಸೆರಗು ಸಿಗಿಸಿ, ಮುಂದುಗಚ್ಚೆ ಹಾಕಿ ಕೆಲಸಕ್ಕೆ ತೊಡಗುತ್ತಾರೆ. ಅವರು ಯಾವ ಕಾರ್ಯಕ್ಕೂ ಹಿಂಜರಿಯದೆ,

ಸ್ವಯಂ ಸೇವಕಿಯಂತೆ ವರ್ತಿಸುತ್ತಾರೆ. ಬಂಧು ಬಳಗ "ಬೇಡ ಅಮ್ಮಣ್ಣಿ" ಎಂದು ಗೋಗರೆದರೂ ಕೇಳುವುದಿಲ್ಲ. ಚಟ ಚಟ ಕಾರ್ಯತತ್ಪರರಾಗುತ್ತಾರೆ. ಆಗ ನಾವೆಲ್ಲ ಅವರ ಹಿಂದೆ ಓಡುತ್ತೇವೆ ಕೆಲಸಕ್ಕೆ.

ನನ್ನ ದೊಡ್ಡಮ್ಮ ಪಾದರಸದಂತೆ ಚಟುವಟಿಕೆಗಳಲ್ಲಿ ಅಂದೆ. ಭಗವಂತನ ಕೃಪೆಯೇ ಇದಕ್ಕೆ ಕಾರಣವೆಂದು ನನ್ನ ಭಾವನೆ. ಆದರೆ ಅವರ ಆರೋಗ್ಯ ಬಹಳ ಸೂಕ್ಷ್ಮ. ಒಂದು ಹೊತ್ತು ಊಟ ಮಾಡಿದರೆ, ಇನ್ನೊಂದು ಹೊತ್ತು ನಿರಾಹಾರ. ಜೀರ್ಣಶಕ್ತಿ ಕಡಿಮೆ. ಆದರೆ ಕಾವ್ಯವಾಚನ ಮಾಡುವಾಗ ಅವರ ಶ್ರೀಕಂಠಶಕ್ತಿ ಅದ್ಭುತವಾಗಿರುತ್ತದೆ. "ಅಮ್ಮಣ್ಣಿ, ನಿನಗೆ ಈ ಕಂಠತ್ರಾಣ ಎಲ್ಲಿಂದ ಬರುತ್ತದೆ, ಕಾವ್ಯವಾಚನ ಮಾಡುವಾಗ" ಎಂದು ಕೇಳಿದರೆ ಅವರ ಉತ್ತರ ಭಗವಂತನ ಕೃಪೆ, ಹಾಗೂ ನನ್ನ ನಿದ್ದೆ, ತಿಂಡಿ ಊಟದಲ್ಲಿ ಮಿತಿ, ಆಯಾಸವಾಗದಷ್ಟು ಓಡಾಟ, ಇವುಗಳು ಹಿಡಿತದಲ್ಲಿದೆ" ಎನ್ನುತ್ತಾರೆ. "ನನ್ನ ಕಾವ್ಯವಾಚನ ಅಧ್ವಾನವಾಗಬೇಕಾದರೆ, ನನ್ನನ್ನು ತುಂಬಾ ಓಡಾಡಿಸಿ, ಬಲವಂತ ಮಾಡಿ ತಿನ್ನಿಸಿ, ನಿದ್ರೆಗೆ ಭಂಗ ತನ್ನಿ." ಎನ್ನುತ್ತಾರೆ. ನೆಂಟರಿಷ್ಟರಲ್ಲೇ ಆಗಲಿ, ಆಹ್ವಾನಿತರ ಮನೆಗಳಲ್ಲೇ ಆಗಲಿ ಅವರು ಬಹಳ ವಿನಯ ನಿಷ್ಠೂರದಿಂದ ತಿಂಡಿತೀರ್ಥ, ಊಟೋಪಚಾರವನ್ನು ತಿರಸ್ಕರಿಸುತ್ತಾರೆ. ನಮ್ಮ ದೊಡ್ಡಮ್ಮನದು ತುಂಬು ಸಂಸಾರ, ಅವರು ನಾಲ್ಕು ಮಕ್ಕಳ ತಾಯಿ, ನಾಲ್ಕು ಮೊಮ್ಮಕ್ಕಳ ಅಜ್ಜಿ, ಹಿರಿಯ ಮಗಳು ವನಜ ಕೋಟೀಶ್ವರ. ಸಣ್ಣಕಥೆಗಳನ್ನು ಹಿಂದೆ ಬರಿಯುತ್ತಿದ್ದರು. ಒಂದೆರಡು ಕಥೆಗಳಿಗೆ ಬಹುಮಾನಗಳೂ ಬಂದಿದ್ದವು. ಎರಡನೆಯವನೇ ಮೋಹನ್ "ಆಗ್ರೊ ಇಂಡಸ್ಟ್ರೀಸ್ ಕಾರ್ಪೊರೇಷನ್‌ನಲ್ಲಿದ್ದಾರೆ." ಕುಶಲ ಕಲೆಗಳಲ್ಲಿ ಆಸಕ್ತಿಯಿದೆ. ಮೂರನೆಯವಳು ವತ್ಸಲ ಸುಧೀಂದ್ರ, ವೀಣೆ ನುಡಿಸುತ್ತಾಳೆ. ಕಡೆಯ ಮಗಳು ವಸಂತ ಚಿತ್ರ ಬಿಡಿಸುತ್ತಾಳೆ. ಸಂಗೀತದ ಗೀಳು ಬಹಳ. ತನ್ನ ತಾಯಿಯ ಧ್ವನಿ ಮುದ್ರಿಸಿಕೊಳ್ಳುವುದರಲ್ಲಿ ನಿಪುಣೆ. ನನ್ನ ದೊಡ್ಡಮ್ಮನ ಹಿರಿಯ ಅಳಿಯ ಡಾ|| ಎಸ್. ಕೆ. ಕೋಟೀಶ್ವರ್ ಡಾ|| ಡಿ. ಹೆಚ್. ಲಾರೆನ್ಸ್ ಮೇಲೆ ಪ್ರಬಂಧ ಬರೆದು ಪಿಹೆಚ್.ಡಿ. ಪ್ರಶಸ್ತಿ ಸಂಪಾದಿಸಿದ್ದಾರೆ. ಜಮ್‌ಷಡ್‌ಪುರ ದಲ್ಲಿ R. I. T. ಯಲ್ಲಿ ಇಂಗ್ಲೀಷ್ ಭಾಷೆ ಕಲಿಸುತ್ತಾರೆ. ಎರಡನೆ ಅಳಿಯ ಬಿ. ಎನ್. ಸುಧೀಂದ್ರ, ಬಿ.ಕಾಂ., ಚಾರ್ಟರ್ಡ್ ಅಕೌಂಟೆಂಟ್, ವಿಜಯಾ ಬ್ಯಾಂಕ್ ನಲ್ಲಿ ಒಳ್ಳೆಯ ಹುದ್ದೆಯಲ್ಲಿದ್ದಾರೆ. ಒಳ್ಳೆಯ ನಟರು.

ನನ್ನ ದೊಡ್ಡಮ್ಮ "ಅಮ್ಮಣ್ಣಿ"ಯ ಮೇಲೆ ನನಗೆಷ್ಟು ಪ್ರೀತಿ ವಿಶ್ವಾಸವೋ, ಅಷ್ಟೇ ಪ್ರೀತಿ, ವಿಶ್ವಾಸ ಅವರು ನನ್ನ ಮೇಲೆಯೂ ಹಾಗೂ ನನ್ನ ಕುಟುಂಬದವರ ಮೇಲೂ ಇಟ್ಟಿದ್ದಾರೆ. ಇದಕ್ಕಾಗಿ ನಾನು ಚಿರಋಣಿ. ಭಗವಂತನು ನನ್ನ ದೊಡ್ಡಮ್ಮನವರ ಪ್ರತಿಭೆಯನ್ನು ಇನ್ನೂ ಹೆಚ್ಚಿಸಲಿ, ಹಾಗೂ ಅವರಿಗೆ ಒಳ್ಳೆಯ ಆರೋಗ್ಯ ಸದಾ ಕರುಣಿಸಲಿ, ಮತ್ತು ಅವರ ಕೋಕಿಲ ಕಂಠದ ಶಕ್ತಿಯು ಎಂದೂ ಕಮ್ಮಿಯಾಗದಿರಲಿ ಎಂದು ನಾನು ಮತ್ತು ನನ್ನ ಧರ್ಮ ಪತ್ನಿ ವೀಣಾ ಭಗವಂತನನ್ನು ಪ್ರಾರ್ಥಿಸುತ್ತೇವೆ.

ಕಿರಿಮಗಳ ತಾಯಿ

ಬಿ. ಪಿ. ವಸಂತ

ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾವ್ ಅವರ ಮಗಳೆಂದು ಹೇಳಿಕೊಳ್ಳಲು ನನಗೆ ಬಹಳ ಹೆಮ್ಮೆ. ಅವರ ಕಡೆಯ ಮಗಳೇ ನಾನು. ನನಗೆ ಇಬ್ಬರು ಅಕ್ಕಂದಿರು ಮತ್ತು ಒಬ್ಬ ಅಣ್ಣ ಇರುವರು. ಇವರೆಲ್ಲರೂ ಸಹ ಶ್ರೀಮತಿಯವರ ಮಕ್ಕಳೆಂದು ಹೇಳಿಕೊಳ್ಳಲು ಬಹಳ ಹೆಮ್ಮೆ ಪಡುತ್ತಾರೆ. ನಾನು ಲೇಖಕಿಯಲ್ಲ, ಗಮಕಿಯೂ ಅಲ್ಲ. ಆದರೂ ಸಹ ನನ್ನ ತಾಯಿಯವರ ಮೇಲೆ ಬರೆಯಬೇಕೆಂದು ಆಸೆಯಾಯಿತು. ಧೈರ್ಯಮಾಡಿ ಲೇಖನಿಯನ್ನು ಹಿಡಿದು ಬಿಳಿ ಹಾಳೆಯ ಮೇಲೆ ಅಕ್ಷರಗಳನ್ನು ಮೂಡಿಸಲು ಒಂದು ಸಣ್ಣ ಪ್ರಯತ್ನ ಮಾಡಿದ್ದೇನೆ. ನನಗೆ ನನ್ನ ತಾಯಿಯವರ ವಾಚನವೆಂದರೆ ಕೇಳಲು ಬಹಳ ಇಷ್ಟ. ಒಂದು ಒಳ್ಳೆಯ ಸಂಗೀತವನ್ನು ಕೇಳಿದರೆ ಮನಸ್ಸಿಗೆ ಯಾವ ನೆಮ್ಮದಿ, ಆನಂದ ಉಂಟಾಗುತ್ತದೋ ಆ ಅನುಭವ ನನಗೆ ನನ್ನ ತಾಯಿಯವರ ವಾಚನದಿಂದ ಉಂಟಾಗುತ್ತದೆ. ಅವರ ಧ್ವನಿ ವೀಣೆಯಿದ್ದಂತೆ. ಯಾವ ರಾಗಕ್ಕಾದರೂ ಬಹಳ ಬೇಗ ವರ್ಗಾವಣೆಯನ್ನು ಪಡೆಯುತ್ತದೆ.

ನಮ್ಮ ತಾಯಿ ನಿರಾಡಂಬರ ಸುಂದರಿ. ಸಹನೆ, ಶಾಂತಿ, ನಗುಮುಖ ಇವೇ ಮುಂತಾದ ಗುಣಗಳು ಆಕೆಯ ಆಭರಣಗಳು. ಇವುಗಳಿಂದ ನಮ್ಮ ತಾಯಿಯವರು ಯಾವಾಗಲೂ ಶೋಭಿಸಿರುತ್ತಾರೆ. ಯಾವ ಸಮಯದಲ್ಲೇ ಆಗಲಿ ನಮ್ಮ ತಾಯಿಯವರು ನಗು ಮುಖದಿಂದಿರುವುದನ್ನು ಕಾಣಬಹುದು. ಕೋಪವೆಂಬುದು ಅವರಿಂದ ಬಹು ದೂರವಿರುವ ವಸ್ತು. ಕೋಪವನ್ನು ತಾಳ್ಮೆಯಿಂದ ಗೆಲ್ಲು ಎಂಬ ಉಕ್ತಿಗೆ ನಮ್ಮ ತಾಯಿ ಸರಿಯಾದ ಉದಾಹರಣೆ.

ನಮ್ಮ ಮನೆಗೆ ಬಂದು ಹೋಗುವವರು ಬಹಳ. ಕೆಲವೊಮ್ಮೆ ಬೆಳಿಗ್ಗೆ 8 ಗಂಟೆಗೆ ಅತಿಥಿಗಳು ಬರಲು ಆರಂಭಿಸಿದರೆ ಸಾಯಂಕಾಲವೋ, ರಾತ್ರಿಯೋ ಕೊನೆಗೊಳ್ಳುತ್ತದೆ. ಅಂತಹ ಸಮಯದಲ್ಲಿ ಹುಡುಕಿದರೂ ಸಹ ಐದು ನಿಮಿಷವೂ ವಿರಾಮ ಸಿಗುವುದಿಲ್ಲ ನಮ್ಮ ತಾಯಿಗೆ. ಆದರೂ ಸಹ ನಗುಮುಖದಿಂದ ಬಂದ ಅತಿಥಿಗಳ ಕ್ಷೇಮವನ್ನು ವಿಚಾರಿಸಿ, ಅವರನ್ನು ಸತ್ಕರಿಸಿ ಬೀಳ್ಕೊಡುತ್ತಾರೆ. ನಾವು ಈ ಗುಣವನ್ನು ಅವರಿಂದ ಕಲಿಯಬೇಕಾದ್ದು.

ನಮ್ಮ ತಾಯಿಯವರು ತಮ್ಮ ಕ್ಷೇತ್ರದಲ್ಲಿ ಹೆಸರುವಾಸಿಯಾಗಿದ್ದರೂ ತಾವು ದೊಡ್ಡವರೆಂಬ ಜಂಭವಿಲ್ಲ. ಆ ಜಂಭವೆಲ್ಲಾ ಅವರ ಮಕ್ಕಳಾದ ನಮಗೇ ಇದೆ. ವಾಚನ ಮಾಡಲು ಬರದಿದ್ದರೂ ಸಹ. ನಮ್ಮ ತಂದೆಯವರ ಸ್ನೇಹಿತರು ಕೆಲವೊಮ್ಮೆ ಬಂದು ನಮ್ಮ ತಾಯಿಯವರಿಗೆ ಅವರ ವಾಚನವನ್ನು ಕೇಳಬೇಕೆಂಬ ಆಸೆಯನ್ನು

ವ್ಯಕ್ತಪಡಿಸುತ್ತಾರೆ. ಆಗ ಯಾವ ಸಮಯವೇ ಇರಲಿ ನಮ್ಮ ತಾಯಿಯವರು ಎರಡು ಮಾತಾಡದೆ ತಂಬೂರಿಯನ್ನು ತಂದು ವಾಚನ ಮಾಡಿ ಬಂದವರಿಗೆ ಸಂತೋಷವನ್ನುಂಟು ಮಾಡುತ್ತಾರೆ.

ಹೂವಿನಿಂದ ನಾರೂ ಸಹ ದೇವರ ಪಾದ ಸೇರಿ ಮುಕ್ತಿ ಹೊಂದುವಂತೆ ನಮ್ಮ ತಂದೆ, ತಾಯಿಯರ ಹೆಸರಿನಿಂದ ನಾನು ಅನೇಕ ಖ್ಯಾತ ಸಾಹಿತಿಗಳ ಪರಿಚಯವನ್ನು ಹೊಂದಿದ್ದೇನೆ. ಇಲ್ಲಿ ಕೆಲವು ಅಂತಹ ಸಂದರ್ಭಗಳನ್ನು ಹೇಳಬಯಸುತ್ತೇನೆ. ಹಿಂದೆ ಒಂದು ಸಮಾರಂಭದಲ್ಲಿ ಪೂಜ್ಯರಾದ ಮಾಸ್ತಿಯವರು, ಡಾ|| ಶಿವರಾಮ ಕಾರಂತರು ಬಂದಿದ್ದರು. ನನಗೆ ಅವರ ಹಸ್ತಾಕ್ಷರವನ್ನು ಪಡೆಯಬೇಕೆಂಬ ಆಸೆ. ಆದರೆ ಹತ್ತಿರ ಹೋಗಲು ಅಳುಕು. ಕೊನೆಗೆ ಅವರುಗಳ ಹತ್ತಿರ ಹೋಗಿ ನಾನು ಇಂತಹವರ ಮಗಳು ಎಂದು ಹೇಳಿಕೊಂಡೆ. ಕೂಡಲೇ ಮೂಡಿತು ಆ ಹಿರಿಯ ಸಾಹಿತಿಗಳ ಹಸ್ತಾಕ್ಷರ ನನ್ನ ಪುಸ್ತಕದಲ್ಲಿ ಮತ್ತು ಆ ಮಧುರ ನೆನಪು ಶಾಶ್ವತವಾಗಿ ಉಳಿಯಿತು ನನ್ನ ನೆನಪಿನಲ್ಲಿ. ನಾನು ಒಮ್ಮೆ ನನ್ನ ತಂದೆ, ತಾಯರ ಜೊತೆ ಮಾಸ್ತಿಯವರನ್ನು ಕಾಣಲು ಅವರ ಮನೆಗೆ ಹೋಗಿದ್ದೆ. ಆಗ ಆ ಹಿರಿಯರು ನನ್ನನ್ನೂ ಬಹಳ ವಿಶ್ವಾಸದಿಂದ ಮಾತನಾಡಿಸಿದರು ಮತ್ತು ಅವರು ಬರೆದ 'ಶೇಷಮ್ಮ' ಎಂಬ ಕಾದಂಬರಿಯನ್ನು ನನ್ನ ತಂದೆ, ತಾಯಿಯರಿಗೆ ಬರೆದುಕೊಟ್ಟು ನನಗೂ ಓದಲು ಹೇಳಿದರು. ನನಗೆ ಬಹಳ ದಿನದಿಂದಲೂ ರಾಷ್ಟ್ರಕವಿ ಕುವೆಂಪುರವರನ್ನು ನೋಡಬೇಕೆಂಬ ಆಸೆಯಿತ್ತು. ಅದು ಈಡೇರಿದ್ದು ಎರಡು ತಿಂಗಳ ಹಿಂದೆ. ನಮ್ಮ ತಾಯಿಯವರು ಕವಿವರ್ಯರಿಗೆ ಅವರ ಕಾವ್ಯಗಳನ್ನು ಧ್ವನಿಮುದ್ರಿಸಿ ಕೊಡುತ್ತಿದ್ದಾರೆ. ನಾನು ನನ್ನ ತಂದೆಯವರ ಜೊತೆ ಧ್ವನಿಮುದ್ರಿಕೆಗಳನ್ನು ಕವಿವರ್ಯರಿಗೆ ಕೊಡುವ ಸಲುವಾಗಿ ಅವರ'ಉದಯರವಿ'ಗೆ ಹೋದೆ. ಕವಿವರ್ಯರು ಮತ್ತು ಅವರ ಕುಟುಂಬ ವರ್ಗದವರು ನಮ್ಮನ್ನು ಬಹಳ ಪ್ರೀತ್ಯಾದರದಿಂದ ಸ್ವಾಗತಿಸಿದರು. ಕವಿವರ್ಯರು ನನ್ನ ಜೊತೆಯಲ್ಲಿಯೂ ಸಹ ಕೆಲವು ಮಾತುಗಳನ್ನಾಡಿದರು. ಅವರ ಸಹಧರ್ಮಿಣಿಯವರು ಮತ್ತು ಅವರ ಮಗಳೂ ಸಹ ನಮ್ಮನ್ನು ಆದರದಿಂದ ಕಂಡರು. ಕಣ್ತುಂಬ ಕವಿವರ್ಯರನ್ನು ನೋಡಿದೆ, ಕಿವಿ ತುಂಬಾ ಅವರ ಮಧುರ ವಾಣಿಯನ್ನು ಹೊತ್ತು ಬೆಂಗಳೂರಿಗೆ ಬಂದೆ. ಆ ದಿನ ನನ್ನ ಜೀವನದಲ್ಲಿ ಒಂದು ಪುಣ್ಯೋದಯ ದಿನ.

ಹೀಗೆ ನಾನು ಡಾ|| ಜಿ. ಪಿ. ರಾಜರತ್ನಂ, ಡಿ. ವಿ. ಜಿ., ಡಾ|| ಗೋರೂರು ರಾಮಸ್ವಾಮಿ ಅಯ್ಯಂಗಾರ್ ಮುಂತಾದ ಹಿರಿಯ ಸಾಹಿತಿಗಳ ಪರಿಚಯವನ್ನು ಮಾಡಿಕೊಂಡೆ. ನಾನು ಸಣ್ಣವಳಾಗಿದ್ದಾಗ ಡಾ||ಜಿ. ಪಿ. ರಾಜರತ್ನಂ ತಮ್ಮ ಅನೇಕ ಮಕ್ಕಳ ಪುಸ್ತಕಗಳನ್ನು ನನ್ನ ಹೆಸರು ಬರೆದು ನನಗೆ ಕೊಟ್ಟರು. ಸುಮಾರು ಹತ್ತು ವರ್ಷಗಳ ಹಿಂದೆ ನಾನು ನನ್ನ ತಂದೆ, ತಾಯಿಯವರ ಜೊತೆ ಡಾ|| ಗೊರೂರರ ಊರಾದ ಹೇಮಾವತಿಗೆ ಹೋಗಿದ್ದೆ. ಅಲ್ಲಿ ಗೊರೂರರು ನಮ್ಮ ತಾಯಿಯವರ ವಾಚನವನ್ನು ಏರ್ಪಡಿಸಿದ್ದರು. ಅಲ್ಲಿಯ ಜನಕ್ಕೆ ಕಾರ್ಯಕ್ರಮವನ್ನು ತಿಳಿಯಪಡಿಸುವ ಸಲುವಾಗಿ

ಗೊರೂರರೇ ಸ್ವತಃ ಜಾಗಟೆಯನ್ನು ಹಿಡಿದು ಗಲ್ಲಿಗಲ್ಲಿಗೆ ಹೋಗಿ ಜನರಿಗೆ ಆಮಂತ್ರಣ ವನ್ನಿತ್ತರು. ಆಗ ನಾನು ಅವರಿಗೆ ಕೊಟ್ಟ ಬಿರುದು "ಜಾಗಟೆ ಮಾವಯ್ಯ"ನೆಂದು.

ನಮ್ಮ ತಾಯಿಯವರು ಅರವತ್ತು ವಸಂತಗಳನ್ನು ಕಂಡರು. ಅವರ ಚಟುವಟಿಕೆ ಗಳಲ್ಲಿ ಮತ್ತು ಕಾರ್ಯನಿರ್ವಹಣೆಯಲ್ಲಿ ವಯಸ್ಸು ಕಾಣುವುದಿಲ್ಲ. ಕೆಲವೊಮ್ಮೆ ಅವರ ಚಟುವಟಿಕೆಯನ್ನು ಕಂಡರೆ ನಾವು ನಾಚುವಂತೆ ಆಗುತ್ತದೆ. ನಮ್ಮ ತಾಯಿಯವರು ಮಿತಭಾಷಿಣಿ. ಮೂರು, ನಾಲ್ಕು ಜನ ಕುಳಿತು ಮಾತನಾಡುತ್ತಿದ್ದಾಗ ಅಥವಾ ಯಾವ ವಿಷಯವನ್ನಾದರೂ ಚರ್ಚಿಸುತ್ತಿದ್ದರೆ ಮೌನವಾಗಿ ಎಲ್ಲ ವಿಷಯಗಳನ್ನು ಶಾಯಿ ಹೀರುವ ಕಾಗದದಂತೆ ಹೀರಿಕೊಳ್ಳುತ್ತಾರೆ. ಕೆಲವು ಸಲ ಅವರ ಬಗ್ಗೆ ಪೇಪರ್ ನಲ್ಲಿ ಬಂದಿದ್ದರೂ ಸಹ ಓದುವುದಿಲ್ಲ. ನಾವೇ ಓದಿ ಹೇಳುತ್ತೇವೆ ಬಲವಂತವಾಗಿ. ನನಗೆ ತಿಳಿದ ಮಟ್ಟಿಗೆ ಅವರು ಇದು ನನಗೆ ಆಸೆ, ಅದು ಬೇಕು ಎಂದು ಕೇಳಿದ್ದೇ ಗೊತ್ತಿಲ್ಲ. ಅಷ್ಟು ನಿರ್ಲಿಪ್ತ ಅವರು. ಸಾಮಾನ್ಯವಾಗಿ ಸ್ತ್ರೀವರ್ಗಕ್ಕೆ ಆಸೆಗಳಿರುತ್ತವೆ. ಅದರಿಂದ ಹೊರತು ನಮ್ಮ ತಾಯಿಯವರು. ದೇವರು ನನ್ನ ತಂದೆ, ತಾಯಿಗೆ ಇನ್ನೂ ಹೆಚ್ಚಿನ ಶಕ್ತಿಯನ್ನು, ಆರೋಗ್ಯವನ್ನು ಕೊಟ್ಟು ಕನ್ನಡ ಕಲಾದೇವಿ ಅವರಿಬ್ಬರಿಂದ ಇನ್ನೂ ಹೆಚ್ಚಿನ ಸೇವೆಯನ್ನು ಪಡೆದು ಅವರು ಎಂದೆಂದಿಗೂ ನಮಗೆ ಮಾರ್ಗದರ್ಶಕರಾಗಿರ ಲೆಂದು ಗದುಗಿನವೀರನಾರಾಯಣನಲ್ಲಿ ಪ್ರಾರ್ಥಿಸುತ್ತೇನೆ.

ಮಕ್ಕಳ ಮಂಟಪದ ನನ್ನ ಅಕ್ಕ

ಜಿ. ಜಯಲಕ್ಷಮ್ಮ

1958 ಜೂನ್ ತಿಂಗಳ ಒಂದು ದಿನ ನಾನು ಬೆಂಗಳೂರಿನ ಶೇಷಾದ್ರಿಪುರದಲ್ಲಿದ್ದ "ಮಕ್ಕಳ ಮಂಟಪ"ಕ್ಕೆ ಕಾಲಿರಿಸಿದೆ. ಬಾಗಿಲಲ್ಲೇ ನಿಂತಿದ್ದ ಶ್ರೀ ಪಾಡುರಂಗರಾಯರು

"ಬನ್ನಿಯಮ್ಮ ಏನು ಬೇಕು ? ಎಂದರು.

ನಾನು,

"ನಿಮ್ಮ ಶಾಲೆಯಲ್ಲಿ ಒಂದು ಉಪಾಧ್ಯಾಯಿನಿಯ ಕೆಲಸ ಖಾಲಿ ಇದೆ ಎಂದು ತಿಳಿಯಿತು. ನನಗೆ T. C. H. thcory ಪರೀಕ್ಷೆ ಆಗಿ ಅದರಲ್ಲಿ ಉತ್ತೀರ್ಣಳಾಗಿದ್ದೀನೆ. ಆದರೆ ಪ್ರಾಕ್ಟಿಕಲ್ ಪರೀಕ್ಷೆ ಸೆಪ್ಟೆಂಬರ್ ತಿಂಗಳಿನಲ್ಲಿ ನಡೆಯಲಿದೆ. ಅಲ್ಲಿವರೆಗೆ ಎಲ್ಲೂ ನಾನು ಕೆಲಸ ಮಾಡದಿದ್ರೆ teaching practice ಹೊರಟೇ ಹೋಗುತ್ತೆ. ಅದಕ್ಕೇ ನಿಮ್ಮಲ್ಲಿ ಖಾಲಿ ಇರುವ ಕೆಲಸಕ್ಕೆ ನನ್ನನ್ನು ದಯವಿಟ್ಟು ತೆಗೆದ್ಕೊಳ್ಳಿ ಸಾರ್" ಎಂದೆ.

ಆಗ ಪಾಂಡುರಂಗರಾಯರು ಹಿಂದೆ ಮುಂದೆ ನೋಡದೆ,

"ಆಗಲಿ, ನಾಳೆಯಿಂದಲೇ ಕೆಲಸಕ್ಕೆ ಬನ್ನಿ" ಎಂದರು. ನಾನು, "ಇಲ್ಲ ಸಾರ್, ನಾಳೆಯಿಂದ ಮೂರು ದಿನ ನಮ್ಮ ತಂದೆಯವರ ಮೊದಲ ವರ್ಷಾಬ್ದಿಕ ಇದೆ. ಆದ್ದರಿಂದ ಇನ್ನೂ ಮೂರು ದಿನ ಬಿಟ್ಟುಬರ್ತೀನಿ" ಎಂದೆ. ಅದಕ್ಕೆ ಅವರು,

"ಸರಿ ಹಾಗೇ ಆಗಲಮ್ಮ, ಮೂರು ದಿನ ಬಿಟ್ಟೇ ಕೆಲಸಕ್ಕೆ ಬನ್ನಿ" ಎಂದರು.

ಮೇಲಿನ ಸಂಭಾಷಣೆ ಓದುವ ನಿಮಗೆ, ಇದು ಬರೀ ಸುಳ್ಳು, ಇಷ್ಟು ಸುಲಭವಾಗಿ ಕೆಲಸ ಕೊಟ್ಟಿರುತ್ತಾರೆಯೇ ! ಬರೇ ಉತ್ಪ್ರೇಕ್ಷೆ! ಎನ್ನಿಸಬಹುದು. ಆದರೆ ಇದು ನೂರಕ್ಕೆ ನೂರರಷ್ಟು ಸತ್ಯವಾದ ಮಾತು !

ಶ್ರೀ ಪಾಂಡುರಂಗರಾಯರು ನನ್ನನ್ನು ಅರ್ಜಿ ಬರೆದು ಕೊಡಿ, ಸರ್ಟಿಫಿಕೇಟುಗಳನ್ನು ತನ್ನಿ, ಸಂದರ್ಶನಕ್ಕೆ ಹಾಜರಾಗಿ, ಎಂದು ಯಾವ ಕೊಕ್ಕೆಗೂ ಒಳಪಡಿಸಲಿಲ್ಲ. ಈಗಲೂ ಬಹುಶಃ ನನ್ನ "ಕೆಲಸಕ್ಕಾಗಿ ಕೇಳಿರುವ" ಅರ್ಜಿ ಅವರ ಶಾಲೆಯಲ್ಲಿ ಇದೆಯೋ ಇಲ್ಲವೋ ತಿಳಿಯದು. ಕೆಲಸಕ್ಕೆ ಸೇರಿದನಂತರವೂ ನನ್ನಿಂದ ಅರ್ಜಿ ಬರೆಸಿಕೊಂಡ ನೆನಪಿಲ್ಲ. ನನಗೆ ಹೇಳಲಾಗದಷ್ಟು ಸಂತೋಷವಾಯ್ತು. ಮನೆಗೆ ಬಂದು ತಿಳಿಸಿದಾಗ ಮನೆಯವರೂ ನಾನು ಹೇಳಿದ್ದನ್ನು ಸಂಶಯದಿಂದಲೇ ನಂಬಿದ್ದರು. ನಾನು ನಿಜಕ್ಕೂ ಕೆಲಸಕ್ಕೆ ಹೋಗಿ ಒಂದು ತಿಂಗಳ ಸಂಬಳ ತಂದನಂತರವೇ ಮನೆಯವರಿಗೆ, ನನಗೆ ಕೆಲಸ ಸಿಕ್ಕಿದೆ ಎಂದು ಖಚಿತವಾದದ್ದು.

ಏಕೆಂದರೆ ಈಗಿನ ಕಾಲದ ಕೆಲವು ಖಾಸಗಿ ಶಾಲೆಗಳಲ್ಲಿ ಉಪಾಧ್ಯಾಯಿನಿಯಾಗಿ

ಸೇರಬೇಕೆಂದರೆ ಪಡಬೇಕಾದ ಬವಣೆ ಎಲ್ಲರಿಗೂ ತಿಳಿದ ವಿಷಯ. ಜೊತೆಗೆ ಶಾಲೆಯ ಕೆಲಸಕ್ಕೆ ಸೇರಿದನಂತರ ಅನುಭವಿಸಬೇಕಾದ ಕಿರುಕುಳ ಅಸದಳ!

ಇಷ್ಟು ವಿಷಯ ಏಕೆ ಹೇಳುತ್ತಿದ್ದೇನೆಂದರೆ ಶ್ರೀ ಪಾಂಡುರಂಗರಾಯರ ಸರಳತೆ, ಸೌಜನ್ಯತೆ ಎಂತಹವರನ್ನೂ ಸೆಳೆಯುವಂತಹದ್ದು. ಇವರಿಗೆ ತಕ್ಕ ಧರ್ಮಪತ್ನಿ ಶ್ರೀಮತಿ ಶಕುಂತಲಾಬಾಯಿ.

ಶಕುಂತಲಾಬಾಯಿಯವರು "ಕಾರ್ಯೇಷು ದಾಸಿ, ಕರ್ಥನೇಷು ಮಂತ್ರಿ, ಭೋಜನೇಷು ಮಾತ್ರ, ಕ್ಷಮೇಷು ಧರಿತ್ರಿ" ಎಂಬ ಉಕ್ತಿಗೆ ಸರಿಯಾಗಿ ಪತಿಗನುಕೂಲೆಯಾದ ಸತಿಯಾಗಿದ್ದಾರೆ. "ಗೃಹಿಣೀ ಗೃಹಮುಚ್ಯತೇ" ಎಂಬ ನುಡಿಗಟ್ಟು ಇವರಿಗಾಗಿಯೇ ಬರೆದಿದೆಯೋ ಎಂಬಂತಿದೆ.

ನಾನು ಮೊದಲು ಬರೀ ಶಾಲೆಯ ಕೆಲಸಕ್ಕೆಂದು ಹೊರಟವಳು. ಆದರೆ ಅವರಲ್ಲಿ ನನಗೆ ಸಿಕ್ಕ ಸ್ವಾಗತ ಬರೀ ಶಾಲೆಯ ಉಪಾಧ್ಯಾಯಿನಿಗೆ ಸಿಕ್ಕಬೇಕಾದ ಔಪಚಾರಿಕ ಸ್ವಾಗತವಲ್ಲ-ಆತ್ಮೀಯವಾದ ಸ್ವಾಗತ! ಆ ಆತ್ಮೀಯತೆ ಅವರ ಮಕ್ಕಳಲ್ಲಿ ನಾನೂ ಒಬ್ಬಳು ಎಂಬ ಭಾವನೆಯನ್ನು ತಂದು ಕೊಟ್ಟಿದೆ. ಅವರ ಹಿರಿಯ ಮಗಳು ವನಜಾ ಕೋಟೀಶ್ವರ್ ಆಗತಾನೇ ಬಿ.ಎ. ಮುಗಿಸಿ, ತಂದೆಯ ಶಾಲೆಯಲ್ಲಿಯೇ ಉಪಾಧ್ಯಾಯಿನಿಯಾಗಿದ್ದರು. ಬಿ. ಶ್ರೀ. ಪಾಂ. ರಾಯರು ನನಗೆ ಶಾಲೆಯ ಕೆಲಸಗಳನ್ನೂ ಉಪಾಧ್ಯಾಯಿನಿಯರನ್ನೂ ಶಾಲೆಯ ಮಕ್ಕಳನ್ನೂ ಪರಿಚಯ ಮಾಡಿಕೊಟ್ಟರು. ಮಗಳಿಗೂ ಸಹೋಪಾಧ್ಯಾಯಿನಿಯರಿಗೂ ಒಂದೇ ಸಮವಾದ.

ನಾನು ಶಾಲೆಗೆ ಸೇರಿದ ಒಂದು ತಿಂಗಳ ನಂತರ ತವರು ಮನೆಗೆ ಹೋಗಿದ್ದ ಶ್ರೀಮತಿ ಶಕುಂತಲಾಬಾಯಿಯವರು ಪತಿಯ ಮನೆಗೆ ಬಂದರು. ಆಕೆಯನ್ನು ಕಂಡೊಡನೇ ನನಗೆ ನನ್ನ ತಾಯಿಯನ್ನೇ ಕಂಡಷ್ಟು ಸಂತೋಷವಾಯ್ತು. (ಆ ವೇಳೆಗೆ ನಾನು ತಾಯಿಯನ್ನು ಕಳೆದುಕೊಂಡಿದ್ದೆ). ಶಾಲೆಯ ಆವರಣದಲ್ಲಿಯೇ ಅವರ ಮನೆ.

ಅಂದು ಸಾಯಂಕಾಲ ಅವರ ಮನೆಯಲ್ಲಿ ಶಾಲೆಯ ಉಪಾಧ್ಯಾಯಿನಿಯರಿಗೆಲ್ಲಾ ಆಕೆಯೇ ಸ್ವತಃ ತಯಾರಿಸಿದ ಉಪಾಹಾರದ ಸಮಾರಾಧನೆ. ಆ ಒಂದು ದಿನವೇನು, ಅವರ ಮನೆಗೆ ಬಂಧುಗಳು ಬರಲಿ, ಅತಿಥಿಗಳು ಬರಲಿ, ಹಬ್ಬಗಳು ಆಗಲಿ ಏನೇ ಸಮಾರಂಭನಾಗಲಿ ಜೋಳಿಯಲ್ಲಿ ಬೆಲ್ಲಬಿದ್ದರೆ ಸಾಕು ಉಪಾಧ್ಯಾಯಿನಿಯರಿಗೆಲ್ಲಾ ಅವರ ಮನೆಯಲ್ಲಿ ಆಮಂತ್ರಣ ಸಿದ್ಧವಾಗಿರುತ್ತಿತ್ತು. ಈಗಲೂ ನನಗೆ ಬೇರೆ ಶಾಲೆಯಲ್ಲಿದ್ದರೂ ಆಮಂತ್ರಣ ತಪ್ಪದೇ ಬರುತ್ತದೆ.

ಶ್ರೀಮತಿ ಶಕುಂತಲಾಬಾಯಿಯವರು ನಮ್ಮ ಉಪಾಧ್ಯಾಯಿನಿಯರಿಗೆಲ್ಲಾ ಹಿರಿಯಕ್ಕನಂತೆ ನಡೆದುಕೊಂಡವರು. ನಾವು ಅವರನ್ನು ಈಗಲೂ "ಅಕ್ಕಾ" ಎಂದೇ ಕರೆಯುವುದು. ನಮ್ಮಲ್ಲಿ ಯಾರಿಗೂ, ಎಂದೂ ಯಾವ ವಿಷಯದಲ್ಲೂ ಮನನೋಯುವಂತೆ ನಡೆದುಕೊಂಡವರೇ ಅಲ್ಲ. ಶಾಲೆಯ ಎಲ್ಲಾ ಕೆಲಸ ಕಾರ್ಯಗಳಲ್ಲೂ ಆಕೆಯು ಪ್ರತ್ಯಕ್ಷವಾಗಿಯೂ, ಹಾಗೂ ಪರೋಕ್ಷವಾಗಿಯೂ ದುಡಿಯುತ್ತಿದ್ದರು. ಅವರಲ್ಲೂ

ಏಪ್ರಿಲ್ ತಿಂಗಳು ಬಂದರೆ ಸಾಕು, ಶಾಲೆಯ ವಾರ್ಷಿಕೋತ್ಸವಕ್ಕಾಗಿ ತಿಂಗಳಾನು ಗಟ್ಟಲೆ ಮಕ್ಕಳಿಗೆ ನಾಟಕ, ಹಾಡು, ನೃತ್ಯ ಇವುಗಳ ತರಬೇತಿಯನ್ನು ಶಾಲೆಯಾದ ನಂತರ ಕೊಡುತ್ತಿದ್ದರು. ಸಣ್ಣಮಕ್ಕಳಿಗೆ ತರಬೇತಿ ನೀಡುವ ಕಲೆ ಆಕೆಗೆ ಕರಗತವಾ ಗಿತ್ತು. ಹಾಗಾಗಿ ಶಕುಂತಲಾ ಅಕ್ಕ ತರಬೇತಿ ನೀಡುತ್ತಾರೆಂದರೆ ಮಕ್ಕಳುಗಳೆಲ್ಲಾ ಬಲು ಚುರುಕಾಗುತ್ತಿದ್ದರು.

ಹಾಗೆಂದು ಮನೆಗೆಲಸ ಕಡೆಗಣಿಸುವಂತಿರಲಿಲ್ಲ ಆಕೆ. ಅವರಿಗೆ ಇಬ್ಬರು ವಯಸ್ಸಾದ ಅತ್ತೆಯರು. ಒಬ್ಬರು ಸ್ವಂತ ಅತ್ತೆ, ಇನ್ನೊಬ್ಬರು ಚಿಕ್ಕತ್ತೆ. ಅವರಿಬ್ಬರೂ ಶಿಸ್ತಿನ ಸಿಪಾಯಿಗಳು. ಅವರಿಗೆ ಚಾಚೂ ತಪ್ಪದೆ ನಡೆದುಕೊಳ್ಳಬೇಕಾಗಿತ್ತು. ಇನ್ನು ಸಣ್ಣ ಮಕ್ಕಳಿದ್ದ ಸಂಸಾರ. ಮನೆಗೆ ಬರುವ, ಹೋಗುವ ಅತಿಥಿಗಳಿಗಂತೂ ಲೆಕ್ಕವೇ ಇರಲಿಲ್ಲ. ಬಂದ ಅತಿಥಿಗಳನ್ನೆಲ್ಲಾ ಆಕೆ ಖುದ್ದಾಗಿ ಗಮನಿಸದಿದ್ದರೆ ರಾಯರಿಗೆ ಸರಿ ಬೀಳುತ್ತಿರಲಿಲ್ಲ. ಹಾಗಾಗಿ ಎಂತಹ ಕೆಲಸವೇ ಅವರು ಮಾಡುತ್ತಿರಲಿ ಅದನ್ನು ಬಿಟ್ಟುಬಂದು ಅತಿಥಿ, ಅಭ್ಯಾಗತರನ್ನು ತಾವೇ ಖುದ್ದಾಗಿ ಉಪಚರಿಸುತ್ತಿದ್ದರು. ಈಗಲೂ ಉಪಚರಿಸು ತ್ತಾರೆ. ನನಗೆ ಎಷ್ಟೋ ಬಾರಿ ಈ ವಿಷಯಕ್ಕಾಗಿ ಕೋಪಬಂದು ಅವರ ಪತಿಯಲ್ಲಿ ಹುಸಿ ಜಗಳವಾಡಿದ್ದೇನೆ.

"ಸರ್, ನಿಮಗೆ ಅಕ್ಕನವರ ಕಷ್ಟವೇ ಅರಿವಾಗುವುದಿಲ್ಲ. ಅವರ ಕಷ್ಟ ಸುಖಗಳು ನಿಮಗೆ ಬೇಕಿಲ್ಲ. ಎಂತಹ ಹೊತ್ತಿನಲ್ಲೂ ನಿಮ್ಮಂತೆಯೇ ನಡೆಯಬೇಕೆಂದು ಹೇಳು ತ್ತೀರಿ. ಸ್ವಲ್ಪವಾದರೂ ಅವರ ಬಗ್ಗೆ ಚಿಂತಿಸುವುದಿಲ್ಲ, ನಿಮ್ಮ ದಾರಿಯೇ ನಿಮಗೆ" ಎಂದು ನಾನು ನಿಷ್ಠೂರವಾಗಿ ಮಾತನಾಡಿದಾಗೆಲ್ಲಾ ಅವರ ಉತ್ತರ ಒಂದೇ.

"ಏನು ಮಾಡೋದು, ನನಗೆ ಶಕುಂತಲಾನ ಹಾಗೇ ನಡೆಸಿಕೊಂಡು ರೂಢಿಯಾ ಗ್ಬಿಟ್ಟಿದೆ. ಅಕ್ಕ ಯಾವ ಕೆಲಸಕ್ಕಾದ್ರೂ ನನ್ನ ಜೊತೆಗೆ ಇಲ್ಲದಿದ್ರೆ ನನಗೆ ಏನೂ ತೋಚೋದೇ ಇಲ್ಲ."

ಇಂತಹವರ ಮುಂದೆ "ನಾನು ಜಗಳವಾಡಿ ಪ್ರಯೋಜನ ಏನು ?" ಎಂದು ಸುಮ್ಮನಾಗಿದ್ದೇನೆ. ಆದರೆ ಅವರಿಬ್ಬರ ದಾಂಪತ್ಯಜೀವನ ಹಾಲು ಸಕ್ಕರೆ ಬೆರೆತಂತೆ!

ರಾಯರು ಎಷ್ಟೋ ಸಲ ಪತ್ನಿಯ ಅಭಿಪ್ರಾಯವನ್ನು ಕೇಳದೆಯೇ, ಊರಿನದೇ ಆಗಲೀ ಅಥವಾ ಬೇರೆ ಊರಿನದೇ ಆಗಲಿ ಆಕೆಯ ಗಮಕವಾಚನದ ಕಾರ್ಯಕ್ರಮ ವನ್ನು ಒಪ್ಪಿಕೊಂಡು ಬಿಡುತ್ತಿದ್ದರು. ಅಂತಹ ಹೊತ್ತಿನಲ್ಲೆಲ್ಲಾ ಆಕೆ ತಮಗೆ ಕಾಹಿ ಲೆಯೇ ಆಗಿರಲಿ, ಬೇರೇನೇ ಕೆಲಸವಿರಲಿ ಕೊಟ್ಟ ಮಾತಿಗೆ ತಪ್ಪದೇ ಸಂತೋಷದಿಂದ ಪತಿಯೊಂದಿಗೆ ಹೋಗಿ ಕಾರ್ಯಕ್ರಮವನ್ನು ನಡೆಸಿಕೊಟ್ಟು ಬರುತ್ತಿದ್ದರು. ಆಕೆಯ ಸಹನೆಯನ್ನು ಕಂಡ ನಾವುಗಳು ಮೂಗಿನ ಮೇಲೆ ಬೆರಳಿಟ್ಟಿದ್ದೇವೆ. ಈಗಲೂ ಅವರು ಅದೇ ರೀತಿ ನಡೆದುಕೊಳ್ಳುತ್ತಿದ್ದಾರೆ. ಇಷ್ಟು ಕಷ್ಟಪಟ್ಟು ದುಡಿದ ಸಂಭಾವನೆಯನ್ನೆಲ್ಲಾ 'ಮಕ್ಕಳ ಮಂಟಪ'ವೇ ನುಂಗಿಬಿಟ್ಟಿದೆ. ಆಕೆ ಮಾತ್ರ ಅಂದಿಗೂ ಇಂದಿಗೂ ನಿರಾಭರಣ ಸುಂದರಿಯೇ!

'ಮಕ್ಕಳ ಮಂಟಪ' ಅವರಿಬ್ಬರ ಶ್ರಮದ ಫಲ. ಅವರೇ ನೆಟ್ಟ ಬೀಜ, ಚಿಗುರೊಡೆದು, ಗಿಡವಾಗಿ, ಹೂ ಬಿಟ್ಟು ಫಲಬಿಟ್ಟ ಮರ ಬಹಳ ಮಂದಿಗೆ ಜೀವನ ಕೊಟ್ಟ ಕಲ್ಪವೃಕ್ಷ.

ಆ ಕಾಲಕ್ಕೆ ಆ ಸುತ್ತಮುತ್ತಲಿನಲ್ಲಿ ಯಾವ ಶಾಲೆಯೂ ಅಷ್ಟು ಅಚ್ಚುಕಟ್ಟಾಗಿ, ಶಿಸ್ತು ಸಂಯಮ, ಸಂತೋಷಗಳಿಂದ ನಡೆಯುತ್ತಿರಲಿಲ್ಲ. ಅದಕ್ಕೆ ಅದೇ ಸಾಟಿಯಾಗಿತ್ತು. ಮಕ್ಕಳ ಮಂಟಪದಲ್ಲಿ ಶಾಲೆಯ ಮಕ್ಕಳಿಗಾಗಿಯೇ ಹೇಳಿ ಮಾಡಿಸಿದ ಸ್ಟೀಲ್ ಕುರ್ಚಿಗಳೂ, ಡೆಸ್ಕುಗಳೂ ಎಲ್ಲಾ ಮಕ್ಕಳಿಗೂ ಇತ್ತು, ಯಾವ ಮಗುವೂ ನೆಲದ ಮೇಲೆ ಕುಳಿತುಕೊಳ್ಳುತ್ತಿರಲಿಲ್ಲ. ಆ ಪೀಠೋಪಕರಣಗಳನ್ನು ನೋಡುವುದಕ್ಕೆ ಸಂತೋಷವಾಗುತ್ತಿತ್ತು. ಮಕ್ಕಳಂತೂ ಖುಷಿಯಾಗಿ ಶಾಲೆಗೆ ಬರುತ್ತಿದ್ದರು. ಈಗ ಹೆಸರಾಂತ ಹಾಡುಗಾರ್ತಿಯಾಗಿರುವ ಶ್ರೀಮತಿ ಎಂ. ಎಸ್. ಶೀಲಾ, ಕಾವ್ಯಾನಂದರ ಮಗಳು ಭಾರತ ಜ್ಯೋತಿ, ಮಾಜಿ ಮೇಯರ್ ಲಿಂಗಯ್ಯನವರ ಮಕ್ಕಳು ಹೇಮಾ ಶಕುಂತಳಾ ಇವರೆಲ್ಲಾ ಅದೇ ಶಾಲೆಯಲ್ಲಿ ಓದಿ ಮುಂದೆ ಬಂದವರು. ಆ ಶಾಲೆಯ ಮಕ್ಕಳಲ್ಲಿ ಓದಿದವರು ಇಂದು ಕೆಲವರು ಪ್ರಸಿದ್ಧರಾದ ವೈದ್ಯರು, ಉಪಾಧ್ಯಾಯರು ಇಂಜಿನಿಯರುಗಳಾಗಿ ದೇಶ ಸೇವೆ ಸಲ್ಲಿಸುತ್ತಿದ್ದಾರೆ.

ನಾವು ಮಕ್ಕಳ ಮಂಟಪದಲ್ಲಿ ಮಾಂಟಿಸೋರಿ ಮತ್ತು ಇತರ ಪ್ರಸಿದ್ಧ ಶಿಶು ಶಿಕ್ಷಣ ಪದ್ಧತಿಗಳನ್ನು ಅನುಸರಿಸುತ್ತಿದ್ದೆವು. ಹಾಗಾಗಿ ಆಟದ ಮೂಲಕವೇ ಮಕ್ಕಳ, ಕಲಿಯಲು ಅನುವಾಗುವಂತೆ ಬೇಕಾದಷ್ಟು ಶೈಕ್ಷಣಿಕ ಆಟದ ಸಾಮಾನುಗಳು ಆ ಶಾಲೆಯಲ್ಲಿತ್ತು. ಪಾಂಡುರಂಗರಾಯರೇ ಹೇಳಿ ಮಾಡಿಸಿದ್ದರು. ಆದ್ದರಿಂದ ಉಪಾಧ್ಯಾಯಿನಿಯರಿಗೆ ಶಾಲೆಯ ಕೆಲಸ ಬೇಜಾರು ತರಿಸದೆ, ಹೊರೆಯಾಗದೆ ಮಕ್ಕಳೊಂದಿಗೆ ಮಕ್ಕಳಾಗಿ ಬೆರೆತು ಜೀವನದ ಕಷ್ಟಗಳನ್ನು ಮರೆಯುತ್ತಿದ್ದೆವು. ಇನ್ನಂಥ ಶಾಲೆ ನನ್ನ ಜೀವನದಲ್ಲಿ ಕನಸೇ ಸರಿ!

ಪಾಂಡುರಂಗರಾಯರು ಶಾಲೆಯನ್ನು ಅಭಿವೃದ್ಧಿಪಡಿಸುವ ವಿಷಯದಲ್ಲಿ ಯಾವ ಉಪಾಧ್ಯಾಯಿನಿಯೇ ಆಗಲಿ, ಎಷ್ಟೇ ಖರ್ಚಿನ ಬಾಬ್ತಿನ ವಿಷಯವನ್ನೇ ಆಗಲಿ, ಕೇಳಿದರೂ ಚಕಾರವೆತ್ತದೆ ಪೂರೈಸುತ್ತಿದ್ದರು. ಅಷ್ಟೇ ಅಲ್ಲದೆ ಶಾಲಾಭಿವೃದ್ಧಿಯ ಸಲಹೆಗಳನ್ನು ಯಾರು ಕೊಟ್ಟರೂ ಸ್ವೀಕರಿಸುತ್ತಿದ್ದರು. ಅಷ್ಟೇ ಜಾಗ್ರತೆ ಕಾರ್ಯಗತ ಮಾಡುತ್ತಿದ್ದರು. ರಾಷ್ಟ್ರೀಯ ಹಬ್ಬಗಳನ್ನು ಶಾಲೆಯಲ್ಲಿ ಬಹಳ ವೈಭವದಿಂದ ಆಚರಿಸುತ್ತಿದ್ದೆವು. ಎಲ್ಲಾ ಮಕ್ಕಳಿಗೂ ಸಿಹಿ ಹಂಚಿಯೇ ಕಳುಹಿಸುತ್ತಿದ್ದೆವು.

ಸಣ್ಣ ತರಗತಿಯಿಂದಲೇ ಮಕ್ಕಳಿಗೆ ನಮ್ಮ ಸಂಸ್ಕೃತಿಯ ಪ್ರತೀಕವಾದ ರಾಮಾಯಣ ಮತ್ತು ಮಹಾಭಾರತದ ಕಥೆಗಳ ಪರಿಚಯವಾಗಬೇಕೆಂದು ಪ್ರತಿದಿನವೂ ಸ್ವಲ್ಪ ಭಾಗವನ್ನು ಹಿರಿಯ ಮಕ್ಕಳು ಹೇಳುತ್ತಿದ್ದರು. ಅದರ ಜೊತೆಗೆ ಪಂಚತಂತ್ರದ ಕತೆಗಳು ಸಾಗುತ್ತಿತ್ತು. ಬರೀ ಪಾಠಗಳನ್ನೇ ಮಕ್ಕಳಿಗೆ ಬಲವಂತವಾಗಿ ತುಂಬದೇ ಆಟದೊಡನೆ

ಪಾಠ, ನೃತ್ಯ, ಸಂಗೀತ ಎಲ್ಲವೂ ತರಗತಿಯಲ್ಲಿ ನಡೆಯುತ್ತಿತ್ತು. ದಿನಪತ್ರಿಕೆ ಓದುವ ಓದಿಸುವ ಪರಿಪಾಠವೂ ಇತ್ತು.

ಹಗಲಿನ ಶಾಲೆಯ ಕೆಲಸಗಳಿವಾದರೆ, ವರ್ಷದಲ್ಲಿ ಎಷ್ಟೋ ಸಂಜೆಗಳು, ಅನೇಕ ಸಾಹಿತಿಗಳ ಭಾಷಣ ಕಾರ್ಯಕ್ರಮಗಳು ಸನ್ಮಾನ ಸಮಾರಂಭಗಳೂ, ಗಮಕಿಗಳ ವಾಚನ ಕಾರ್ಯಕ್ರಮಗಳೂ ಅವರ ಮನೆಯಲ್ಲಿ ಏರ್ಪಾಟಾಗುತ್ತಿತ್ತು. ಆಗೆಲ್ಲಾ ನಾನೂ ಆ ಕಾರ್ಯಕ್ರಮದಲ್ಲಿ ಹಾಜರಿರುತ್ತಿದ್ದೆ. ಅದರಿಂದಾಗಿ ನಾಡಿನ ಅನೇಕ ಸಾಹಿತಿಗಳನ್ನು ನಾನಲ್ಲಿ ಕಂಡೆ. ಅವರ ವಿಚಾರ ಧಾರೆಗಳನ್ನು ಕೇಳಿ ಸ್ಫೂರ್ತಿಗೊಂಡು ಕನ್ನಡ ಸಾಹಿತ್ಯ ಅಭ್ಯಾಸಕ್ಕೆ ತೊಡಗಿದೆ. ಇಂದೇನಾದರೂ ನಾನು ನಾಲ್ಕಾರು ಪುಸ್ತಕಗಳನ್ನು ಓದುವ ಗೀಳಿಗೆ ಅಂಟಿಕೊಂಡಿದ್ದರೆ ಅದಕ್ಕೆ ಕಾರಣ 'ಮಕ್ಕಳ ಮಂಟಪ' ಮತ್ತು 'ಆ ದಂಪತಿಗಳು'.

ಅಕ್ಕನವರ ಷಷ್ಟ್ಯಬ್ದಿಗೂ ಮಕ್ಕಳ ಮಂಟಪಕ್ಕೂ ಏನು ಸಂಬಂಧ ಎಂದರೆ, ಹೂವಿಗೂ ಪರಿಮಳಕ್ಕೂ ಇರುವಷ್ಟೇ ಸಂಬಂಧ ಎಂದು ನನ್ನ ಭಾವನೆ. ಅಕ್ಕನವರ ಅರವತ್ತು ವರ್ಷಗಳಲ್ಲಿ ನಲವತ್ತು ವರ್ಷಗಳಿಗೂ ಮಿಕ್ಕು ಆ ಶಾಲೆಗೆ ದುಡಿಯುತ್ತಲೇ ಬಂದಿದ್ದಾರೆ, ಶಕುಂತಲಾ ಅಕ್ಕ !

ಮಹದೇವಿಯಕ್ಕ ಸಂಸಾರವನ್ನೇ ತ್ಯಜಿಸಿ ವೈರಾಗ್ಯ ನಿಧಿಯಾದರೆ, ಈ ನಮ್ಮ ಶಕುಂತಲಾ ಅಕ್ಕ ಸಂಸಾರದಲ್ಲಿದ್ದೂ ವೈರಾಗ್ಯನಿಧಿಯಾಗಿದ್ದಾರೆ. ಆಕೆ ಮಿತಭಾಷಿಣಿಯೂ, ಪದ್ಮಪತ್ರಮಿವಾಂಭಸಿಯೂ ಆಗಿದ್ದಾರೆ. ಕರ್ತವ್ಯಶ್ರದ್ಧೆಯನ್ನು ಅವರಲ್ಲಿ ಕಲಿಯಬೇಕು. "ಕರ್ಮಣ್ಯೇವಾಧಿಕಾರಸ್ತೇ ಮಾಫಲೇಷು ಕದಾಚನ" ಎನ್ನುವುದೇ ಅವರ ಜೀವನದ ಸೂತ್ರ !

ಶ್ರೀಮತಿ ಶಕುಂತಲಾ ಅಕ್ಕನವರಿಗೆ ನೂರು ವರ್ಷಗಳನ್ನೂ, ಅವರ ಪತಿಗೆ ನೂರ ಹತ್ತು ವರ್ಷಗಳನ್ನೂ ಭಗವಂತನು ಅನುಗ್ರಹಿಸಿ, ಅವರಿಬ್ಬರನ್ನೂ ಆರೋಗ್ಯವಾಗಿಟ್ಟು, ಕನ್ನಡ ಸಾಹಿತ್ಯ ಸೇವೆಯನ್ನು ಮಾಡಿಸಲೆಂದು ಅನನ್ಯ ಭಕ್ತಿಯಿಂದ ಆ ದೇವದೇವನಲ್ಲಿ ಪ್ರಾರ್ಥಿಸುತ್ತೇನೆ.

ಈ ತಾಯಿ

ಚಂದ್ರಶ್ರೀ

ಈ ತಾಯಿ
“ಗಮಕ ಕಲಾ ಜ್ಯೋತಿ” ತಾಯಿ
ಕೋಕಿಲ ಕಂಠೆ, ಮಧುರ ವಚನೋಲ್ಲಾಸೆ,
ಆತ್ಮೀಯ ಬಂಧು
ಯಾರಿಗಲ್ಲ?
ಕನ್ನಡಕ್ಕೆ
ನಾಡುನುಡಿಗೋಗೊಡುವ ಸಾಮಾನ್ಯನಿಗೆ
ಕವಿಗೆ
ಕಾವ್ಯರಸಕೋವಿದ ಸಹೃದಯನಿಗೆ
ಮಕ್ಕಳಿಗೆ, ಶಿಷ್ಯರಿಗೆ
ರಸಿಕರಿಗೆ, ಅಜ್ಞರಿಗೆ, ಪ್ರಾಜ್ಞರಿಗೆ
ಎಲ್ಲರಿಗೆ ತಾಯಿ ಈ ತಾಯಿ
ಬಂಧುಗಳ ಬಂಧು
ಗಮಕ ಕಲಾ ಸಿಂಧು

ಪುಲಿಕೇಶಿ

ಇಲ್ಲೊಂದು 'ಪಕ್ಷಿ'ಯಿದೆ ನೋಡಬನ್ನಿ
ಹಾಡುತಿದೆ ನೀವೆಲ್ಲ ಕೇಳಬನ್ನಿ ॥ ಪಲ್ಲವಿ ॥

ಶುಕವಲ್ಲ, ಪಿಕವಲ್ಲ, ಮತ್ತೇನದು ?
ರಾಷ್ಟ್ರಪಕ್ಷಿಯ ಹೆಸರು ಹೊಂದಿರುವುದು ॥ ಅನುಪಲ್ಲವಿ ॥

ತಾರಕಾರಿಯ ಹೊತ್ತು ಅಮರವಾಗಿಹ ಪಕ್ಷಿ
ಭಾರತದ ಹೆಸರನ್ನು ಚೆಂದಗೊಳಿಸಿದ ಪಕ್ಷಿ ॥ ೧ ॥

ಆಚಾರ–ಧರ್ಮವನೆ ಒದುಕುತಿಹ ಪಕ್ಷಿ
ವೈಚಾರಿಕತೆಯನ್ನೆ ಬಾಳುತಿಹ ಪಕ್ಷಿ ॥ ೨ ॥

ತಾಯಿ–ತಂದೆಯರನ್ನು ಚಿರವಾಗಿಸಿದ ಪಕ್ಷಿ
ತಾಯಿ–ಭಾರತಿ ಮಕುಟ ರತ್ನವೆನಿಸಿದ ಪಕ್ಷಿ ॥ ೩ ॥

ಗುರುಹಿರಿಯರೊಳಗೆಲ್ಲ ಶುಭನಾಮದೀಪಕ್ಷಿ
ನರಹರಿಯನನವರತ ನೆನೆಯುತಿಹ ಪಕ್ಷಿ ॥ ೪ ॥

ಪತಿವ್ರತೆಯರಿರುವಿಕೆಗೆ ಸಾಕ್ಷಿಯೆನಿಸಿದ ಪಕ್ಷಿ
ಪತಿ–ಪಾಂಡುರಂಗರಾಯರ ನಲ್ಮೆ–ಪಕ್ಷಿ ॥ ೫ ॥

ಮಕ್ಕಳಲಿ ಸಂಸ್ಕೃತಿಯನೆರಕ ಹೊಯಿದಾ ಪಕ್ಷಿ
ಅಕ್ಕರೆಯ ಶಬುದವೇ ರೂಪನಾಂತಿಹ ಪಕ್ಷಿ ॥ ೬ ॥

ಗಮಕಕಲೆಯೇನೆಂದು ಹಾಡಿ ತೋರಿದ ಪಕ್ಷಿ
ಗಮಕಿಗಳೆಲ್ಲರಿಗು 'ಅಕ್ಕ'ನಾಗಿಹ ಪಕ್ಷಿ ॥ ೭ ॥

ಕವಿಗೆ ಕಂಠವ ಕೊಟ್ಟ–ಕವಿ ಮೆಚ್ಚಿದಾಪಕ್ಷಿ
ಕವಿ–ಪುಂಗವರ ಕಾವ್ಯ ಪ್ರಚುರ ಪಡಿಸಿದ ಪಕ್ಷಿ ॥ ೮ ॥

ಪಂಪ–ಕುಮಾರವ್ಯಾಸರನು ಓದಿದಾ ಪಕ್ಷಿ
ಪೆಂಪಿನಿಂ ಹರಿಹರನ ಕೃತಿವಾಚಿಸಿದ ಪಕ್ಷಿ ॥ ೯ ॥


ಹಿರಿಯ ಗಮಕಿಗಳೆಲ್ಲ ಹೊಗಳಿರುವ ಪಕ್ಷಿ
ಗುರುಕರುಣೆಯನು ಪಡೆದ ಪುಣ್ಯತಮ ಪಕ್ಷಿ ॥ ೧೦ ॥

ರಾಮರಾಮಾಯೆಂದು 'ತ್ರೇತೆ' ಗೊಯ್ಯುವ ಪಕ್ಷಿ
ರಾಮಾಯಣವನಿಂದು ದರ್ಶಿಸುವ ಪಕ್ಷಿ ॥ ೧೧ ॥

ಶಿವಶಿವಾಯೆಂದೊಮ್ಮೆ ಶಿವನನೋಡುವ ಪಕ್ಷಿ
'ಶಿವಲಿಂಗ–ವ್ಯಾಖ್ಯಾನ' ಸ್ಫೂರ್ತಿದಾತಾಪಕ್ಷಿ ॥ ೧೨ ॥

ಕೀರ್ತಿಯಾಕಾಶದಲ್ಲಿ ಸಿರಿ 'ಗಮಕ–ಶಕುಂತ' !
ಮೂರ್ತಿ ತಾ ಕಾಣಿಸಲಹುದು ಗೀತ–ವಸಂತ ॥ ೧೩ ॥

ಮದುವೆಯ ಮಂಗಳ ಸಂಭ್ರಮದಲ್ಲಿ 1930



ಮದುಮಗ_ಪಾಂಡುರಂಗರಾವ್



ಮದುಮಗಳು_ಶಕುಂತಲಾಬಾಯಿ



ಮದುಕ್ಕಳು ಅವರ ತಾಯಿಯರೊಂದಿಗೆ



ಭಾಗೀರಥಿಬಾಯಿ



ಅಂಬೂಬಾಯಿ

ಶಕುಂತಲಾಬಾಯಿಗೆ ಗಮಕ ಕಲೋಪಾಸನೆಗೆ ಪ್ರೋತ್ಸಾಹಕೊಟ್ಟ ಪುಣ್ಯ ಜೀವಗಳು




ಪಾಂಡುರಂಗರಾವ್ ದಂಪತಿಗಳು ತಮ್ಮ
ತಾಯಂದಿರಾದ ಸುಂದರಾಬಾಯಿ
ಬಾಗೀರಥಿಬಾಯಿ ಯವರೊಂದಿಗೆ



ದೇಶಬಂಧು ಕರ್ನಾಟಕ ಸಂಘ – 1930

ಕೆಳಗೆ ಕುಳಿತಿರುವವರು – ಕೃಷ್ಣಸ್ವಾಮಿ, ಬಿ.ವಿ. ವಿಶ್ವನಾಥರಾವ್ ಮತ್ತು ಬಿ.ಟಿ. ಪೀತಾಂಬರರಾವ್
ನಿಂತಿರುವವರು — ಬಿ. ಹನುಮಂತಪ್ಪ, ಎಂ. ವೆಂಕಟಸ್ವಾಮಿ ಕುಳಿತಿರುವವರು — ಇ. ಎ. ಭಾಸ್ಕರರಾವ್ (ಸಂಘದ ಅಧ್ಯಕ್ಷ) ಬಿ. ಶ್ರೀ. ಪಾಂಡುರಂಗರಾವ್ (ಸಂಘದ ಕಾರ್ಯದರ್ಶಿ) ಮತ್ತು ಬಿ. ವಿ. ಸುಬ್ಬರಾವ್ (ಸಂಘದ ಉಪಾಧ್ಯಕ್ಷ ಹಾಗೂ ಗಮಕಿ)



ಗುರುವರ್ಯ ಕೋಲಾರ ಸಂಪದ್ಗಿರಿರಾವ್ ಅವರ ಎಪ್ಪತ್ತು ವರ್ಷದ ಹುಟ್ಟುಹಬ್ಬದ ಸಂಭ್ರಮದಲ್ಲಿ

ಎಡದಿಂದ — –, ಭೋಲನಾಥಪಂತ್, ಸುಬ್ಬರಾವ್, (ಛಾಯಚಿತ್ರ ಕಲಾವಿದ), ಬಿ ಶ್ರೀ. ಪಾಂಡುರಂಗರಾವ್, ಸಿಟ್ಟೂರು ಶ್ರೀನಿವಾಸರಾವ್, ಕೆ. ಸಂಪದ್ಗಿರಿರಾವ್ ಮತ್ತು ಸುಬ್ಬನರಸಿಂಹಶಾಸ್ತ್ರಿ




ಗಮಕ ವಿದ್ಯಾಭ್ಯಾಸ ಕಾಲದಲ್ಲಿ 1937

ಬಿ. ಶ್ರೀ. ಪಾಂಡುರಂಗರಾವ್, ಶಕುಂತಲಾಬಾಯಿ, ಭಾರತವಾಚನ ಪ್ರವೀಣ
ಬಿಂದೂರಾಯರು, ನಾಗಮಣಿ ನಾಗರಾಜರಾವ್, ಸಿ. ಕೆ. ನಾಗರಾಜರಾವ್.




ಬಿಜಾಪುರದಲ್ಲಿ ಕುಮಾರವ್ಯಾಸ ಕಾವ್ಯವಾಚನ ಮಂಗಳೋತ್ಸವ 1961
—, ಪಾಂಡುರಂಗರಾವ್, ಶಕುಂತಲಾಬಾಯಿ, ಬಿಂದೂರಾವ್, 'ಸಂದರ್ಶನ'
ಸಂಪಾದಕರಾದ ವಿ. ಬಿ. ನಾಯಕರು.




ಪೂಜ್ಯರಾದ ನವನೀತ ರಾಮಾಯಣದ ಕವಿವರ್ಯರಾದ ಸಾಲಿ ರಾಮಚಂದ್ರರಾಯರ ಜೊತೆಯಲ್ಲಿ ಶಕುಂತಲಾಬಾಯಿ, ಪಾಂಡುರಂಗರಾವ್



"ಉದಯವಾಗಲಿ ಚಲುವು ಕನ್ನಡ ನಾಡು" ರಾಷ್ಟ್ರಗೀತೆ ಕವಿ ಪೂಜ್ಯ ಹುಯಿಲಗೋಳ ನಾರಾಯಣರ ಜೊತೆಯಲ್ಲಿ



"ರಾಘವೇಂದ್ರ ಗುರೂಜಿ" ಕವಿ ಜಿ. ಬಿ. ಆಚಾರ್ಯ (ಭೀಮಕವಿ) ಬಿ. ಶ್ರೀ.ಪಾಂಡುರಂಗರಾವ್,ಶಕುಂತಲಾ ಬಾಯಿ, ಸುಪ್ರಸಿದ್ಧ ಚಲನ ಚಿತ್ರ ಗಾಯಕಿ ಎಸ್. ಜಾನಕಿ ಮತ್ತು ಆಕೆಯ ಪತಿವರ್ಯರು.



ಉದಕಮಂಡಲದಲ್ಲಿ ಕುವೆಂಪು ಮತ್ತು ನ್ಯಾಯಮೂರ್ತಿ
ಹೊಂಬೇಗೌಡರ ಸನ್ಮಾನ ಸಮಾರಂಭ
ಕುಳಿತಿರುವವರು : ಗಿರಿಯಪ್ಪಗೌಡರು, ಸಂಗೀತರತ್ನ ಟಿ. ಚೌಡಯ್ಯ,
ಕುವೆಂಪು, ಹೊಂಬೇಗೌಡರು, ಶಕುಂತಲಾಬಾಯಿ.




ಶ್ರೀರಾಮಾಯಣ ದರ್ಶನಂ ಕಾವ್ಯವಾಚನ ಸಮಾರಂಭ
ಶ್ರೇಷ್ಠ ನ್ಯಾಯಮೂರ್ತಿ ಹೊಂಬೇಗೌಡರೊಡನೆ ನ್ಯಾಯಮೂರ್ತಿ ಗೋಪೀವಲ್ಲಭ
ಅಯ್ಯಂಗಾರ್ಯರ ಸಮುಖದಲ್ಲಿ
ಅಭಿನಂದನೆ "ದೀನಬಂಧು" ವಿ. ಆರ್. ನಾಯಿಡು ಅವರಿಂದ



ಗಮಕ ಕಲಾನಿಧಿ ಜೋಳದರಾಶಿ ದೊಡ್ಡನ ಗೌಡರ ತಂಬೂರಿಶ್ರುತಿಗೆ
ಶಕುಂತಲಾಬಾಯಿಯ ಕಲಕಂಠ



ಪಾಂಡುರಂಗರಾವ್ ದಂಪತಿಗಳು ಗಮಕ ವಿದ್ವಾನ್ ಮೈ. ಶೇ. ಅನಂತಪದ್ಮನಾಭರಾವ್
ದಂಪತಿಗಳೊಡನೆ



ಶಕುಂತಲಾಬಾಯಿ ಪಾಂಡುರಂಗರಾವ್, ಜಿ. ವರದರಾಜರಾವ್, ಸಮೇತನಹಳ್ಳಿ
ರಾಮರಾವ್, ವಿ. ಜಿ. ಕೃಷ್ಣಮೂರ್ತಿ ಮತ್ತು ಛಾಯಚಿತ್ರಕರಾದ ಎಸ್. ರಾಮಪ್ರಸಾದ್
–ಚಿತ್ರ ಕೆ. ಬಿ. ಸದಾನಂದ



ಆರ್ಯವಿದ್ಯಾಶಾಲೆ ಪ್ರಾಧ್ಯಾಪಕ ಟಿ. ಆರ್. ಆನಂದಮೂರ್ತಿಯವರಿಗೆ ಪ್ರೊ॥ ಎಲ್. ಎಸ್. ಶೇಷಗಿರಿರಾವ್ ಅಧ್ಯಕ್ಷತೆಯಲ್ಲಿ ಗುರುಪೂಜೆ (1975)


ಮೇಲಿನಸಾಲಿನಲ್ಲಿ—ಟಿ. ಆರ್. ಆನಂದಮೂರ್ತಿ, ಪ್ರೊ॥ ಎಲ್. ಎಸ್. ಶೇಷಗಿರಿರಾವ್–ಶಾಂತ ಶೇಷಗಿರಿರಾವ್, ಬಿ. ಶ್ರೀ. ಪಾಂಡುರಂಗರಾವ್. ಮಧ್ಯಸಾಲಿನಲ್ಲಿ–ರಾಜಮ್ಮ ಆನಂದಮೂರ್ತಿ, ಶಕುಂತಲಾಬಾಯಿ. ಕಡೆಯಸಾಲು–ಛಾಯಾಲಕ್ಷ್ಮಿ, ಬಾಯಮ್ಮ, ಟಿ. ಆರ್. ಶಾರದಾಂಬ, ಲಕ್ಷಮ್ಮ, ಎಂ. ಜಿ. ಇಂದಿರ



ಕರ್ನಾಟಕ ರಾಜ್ಯ ಸಾಹಿತ್ಯ ಅಕಾದೆಮಿಯಿಂದ ಗಮಕ ಸೇವೆಗಾಗಿ
ಶಕುಂತಲಾಬಾಯಿ ರಾಜ್ಯ ಪ್ರಶಸ್ತಿ ವಿಜೇತೆಯಾದಾಗ, ಹಾಸ್ಯ ಸಾಹಿತಿ
ಟಿ. ಸುನಂದಮ್ಮನವರಿಂದ ಆಕಾಶವಾಣಿ ಸಂದರ್ಶನ 1969.



ಶಕುಂತಲಾಬಾಯಿಯ ಷಷ್ಠಿ ಪೂರ್ತಿಯ ಅಭಿನಂದನೆ. ಲೇಖಕಿಯರ
ಸಂಘದ ಅಧ್ಯಕ್ಷಿಣಿ, ಹೆಚ್. ಎಸ್. ಪಾರ್ವತಿಯವರಿಂದ_1981




ಆಧುನಿಕ ವಚನಕಾರ "ಕಟ್ಟಿಯ ಬಸವೇಶ್ವರ" ಜೀರಿಗೆ ಕಟ್ಟೆಬಸಪ್ಪ ಪಾಂಡುರಂಗರಾವ್ ದಂಪತಿಗಳೊಂದಿಗೆ



ಪಾಂಡುರಂಗರಾವ್ ದಂಪತಿಗಳು, ಕೆ. ಸಚ್ಚಿದಾನಂದಯ್ಯ (ಚಿರಂತನ) ಕುಟುಂಬದೊಂದಿಗೆ



ಎಲ್. ರಾಜಾರಾಯರು, ತಾರಾಬಾಯಿ, ಶಕುಂತಲಾಬಾಯಿ, ಪಾಂಡುರಂಗರಾವ್
ಗಮಕಿ ತಲಕಾಡು ಮಾಯಿಗೌಡರು ಮತ್ತು ಎನ್ಕೆಯವರು



ಶಕುಂತಲಾಬಾಯಿಯ ಷಷ್ಟಿಪೂರ್ತಿ ಸಂಭ್ರಮದಲ್ಲಿ
ಸುಪ್ರಸಿದ್ಧ ಛಾಯಾಚಿತ್ರ ಕಲಾವಿದರಾದ ಡಾ॥ ಎಸ್. ಹರಿನಾರಾಯಣ್
ಉಷಾ ಹರಿನಾರಾಯಣ ದಂಪತಿಗಳು ಮತ್ತು ಅವರ ಪುತ್ರ ಪುತ್ರಿಯೊರೊಂದಿಗೆ. 1981



ಪಾಂಡುರಂಗರಾವ್ ದಂಪತಿಗಳು, ಅಕ್ಕ ದಿ॥ ಕಮಲಾಬಾಯಿಯ
ಅಳಿಯ, ಮಗಳು ಎಂ ಕೆ. ಗೋಪೀನಾಥ್
ಸುಂದರಾಬಾಯಿ ಗೋಪೀನಾಥ್ ಅವರೊಂದಿಗೆ



ಪಾಂಡುರಂಗರಾವ್ ದಂಪತಿಗಳು ಬೀಗರು ಬೀಗಿತ್ತಿ
ನಾಗರಾಜರಾವ್, ಪದ್ಮ ಅವರು ಮತ್ತು
ಅಳಿಯ ಮಗಳೊಂದಿಗೆ

ಐದು

ಆತ್ಮ ಶ್ರೀ

ಸಂಸಾರವೆಂಬ ಹಕ್ಕಿಗೆರಡು ರೆಕ್ಕೆಗಳು,
ಗಂಡ ಹೆಂಡಿರು : ಒಂದೂನವಾದರೂ
ಹಾರಲಾದೀತೆ ತೆರೆದ ಆಕಾಶದಲ್ಲಿ ?
ಇದರಲಾವುದು ಬಲ ? ಯಾವುದಬಲ ?

—ವಿ. ಸೀ.

ಒಲುಮೆ ಒಂದು ದಿವ್ಯರಕ್ಷೆ
ಇಹಸಮಸ್ಯೆಗೆ,
ಮದುವೆ ಅದಕೆ ಮಧುರದೀಕ್ಷೆ
ಗೃಹತಪಸ್ಯೆಗೆ

—ಕುವೆಂಪು.

ಬಾಳ ಸಂಪುಟದ ಪುಟಗಳಲ್ಲಿ ರಸಭಾಗ ತುಂಬಮೆಚ್ಚು
ಇಲ್ಲೆ ಸುಖದ ಸಂಸಾರ ಕಂಡವಗೆ ಸ್ವರ್ಗವೇನು ಹೆಚ್ಚು?

—ಅಂಬಿಕಾತನಯದತ್ತ

ಬೆಚ್ಚನಾ ಮನೆಯಾಗೆ ಇಚ್ಛೆಯನರಿವ ಸತಿಯಾಗೆ
ವೆಚ್ಚಕ್ಕೆತಕ್ಕ ಹೊನ್ನಾಗೆ, ಸ್ವರ್ಗಕ್ಕೆ
ಕಿಚ್ಚುಹಚ್ಚೆಂದ ಸರ್ವಜ್ಞ.

—ಸರ್ವಜ್ಞ

ಜಾಣೆ ಜಾಣನು ಕೂಡಲದು ತಂತಿಗೂಡಿದ
ವೀಣೆಯ ನುಡಿಸಿದಂತಿಹುದು

ಮನಮೆಚ್ಚಿದೆಡೆಯಲ್ಲಿ ತನುಮೆಚ್ಚುವುದು ನುಡಿ
ಯನುಕೂಲನಹುದದರಿಂದ.

—ರತ್ನಾಕರವರ್ಣಿ

ಯತ್ರ ನಾರ್ಯಸ್ತು ಪೂಜ್ಯಂತೇರಮಂತೇ ತತ್ರದೇವತಾಃ

—ಮನು

ಬಿ. ಶ್ರೀ. ಪಾಂಡುರಂಗರಾವ್

೧. ನಮ್ಮದು ಬಾಲ್ಯ ವಿವಾಹ

ನಮ್ಮದು ಬಾಲ್ಯವಿವಾಹ. ನಮ್ಮ ಮದುವೆಯಾದಾಗ ಸೌಭಾಗ್ಯವತಿ ಶಕುಂತಲಾ ಬಾಯಿಗೆ ಎಂಟು ವರ್ಷ ತುಂಬಿ ಹತ್ತು ದಿವಸಗಳಾಗಿತ್ತು. ನನಗೆ ಆವೊತ್ತೇ ಹದಿನೇಳು ವರ್ಷ ತುಂಬಿತ್ತು. ಪ್ರೌಢಶಾಲಾ ವಿದ್ಯಾಭ್ಯಾಸ ಮುಗಿಸಿದ್ದೆ. ಹನ್ನೆರಡು ರೂಪಾಯಿಗಳ ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಕುಳಿತು ಫಲಿತಾಂಶವನ್ನು ಎದುರುನೋಡುತ್ತಿದ್ದೆ. 1929ರಲ್ಲಿ 'ಹರ ಬಿಲಾಸ್ ಶಾರದಾ' 14 ವರ್ಷಗಳ ಕೆಳಗಿನ ವಯಸ್ಸಿನ ಬಾಲಕಿಯರಿಗೆ ಮದುವೆ ಮಾಡಬಾರದೆಂದೂ, ಆ ವಯಸ್ಸಿನ ಕೆಳಗಿನ ಬಾಲಕಿಯರನ್ನು ಮದುವೆಯಾಗುವವರು, ಮಾಡಿಸುವವರು ಶಿಕ್ಷಾರ್ಹರೆಂದೂ ಬಾಲ್ಯ ವಿವಾಹ ನಿಷೇಧ ಮಸೂದೆ ತಂದು ಸರಕಾರದಿಂದ ಕಾನೂನು ಮಾಡಿಸಿದ್ದರು. ಆದರೂ ನಮ್ಮ ಹಿರಿಯರು ಕಾನೂನನ್ನು ಅಲಕ್ಷಿಸಿ ನಮ್ಮ ಮದುವೆಯನ್ನು ಎಂಟಾನೆಂಟು ದಿವಸಗಳವರೆಗೆ ಮಾಡಿ ಮುಗಿಸಿದರು. ನನ್ನತ್ತೆಮಾವ ಬೀಗರುಬಿಜಾನರನ್ನು ಹಾಲು ತುಪ್ಪಗಳಲ್ಲಿ ಕೈತೊಳೆಸಿ, ಭೂರಿ ಭೋಜನಗಳಿಂದ ಸಂತೃಪ್ತಿಗೊಳಿಸಿ ಖುಷಿಪಟ್ಟರು.

ನಾನು ಏಕೆ ಬಾಲ್ಯ ವಿವಾಹಕ್ಕೆ ಬಲಿಯಾದೆ ?

"ಬಾಲ್ಯ ವಿವಾಹ" ಸಲ್ಲದೆಂಬ ತಿಳಿವಳಿಕೆಯ ಪ್ರಾಯ ನನಗೆ ಬಂದಿದ್ದರೂ ಮದುವೆಗೆ ನಾನು ಒಪ್ಪಿದೆ. 1918ರಲ್ಲಿ ದೇಶಾದ್ಯಂತ ವ್ಯಾಪಿಸಿದ ಇನ್ಫ್ಲುಯಂಜಾ ಮಾರಿಬೇನೆ ಮಹಾಪಿಡುಗಾಗಿ ಉಲ್ಬಣಿಸಿ, ಹಳ್ಳಿದಿಲ್ಲಿಗಳನ್ನು ಬಿಡದೆ ಜನರನ್ನು ತಿಗಣೆಗಳ ಹಾಗೆ ಹೊಸಕಿ ಲಕ್ಷ ಲಕ್ಷಗಟ್ಟಲೆ ಜೀವಗಳನ್ನು ನುಂಗಿ ನೊಣೆಯಿತು. ಎಪ್ಪತ್ತೊಂದು ವರ್ಷ ಮುಪ್ಪಿನ ನನ್ನ ಅಜ್ಜ ಅಣ್ಣಿಗೇರಿ ರಾಮರಾಯರು ಒಂದು ವಾರದದೊಳಗೆ ಇಬ್ಬರು ಅಳಿಯಂದಿರನ್ನು ಕಳೆದುಕೊಂಡರು. ನನ್ನ ಚಿಕ್ಕಮ್ಮನ ಗಂಡ ಸತ್ತ ಒಂದು ವಾರದಲ್ಲಿ ನನ್ನ ತಂದೆ ಬಿಂಗೀಪುರದ ಶ್ರೀನಿವಾಸರಾಯರು ಸತ್ತರು. ಆಗ ನನ್ನ ಚಿಕ್ಕಮ್ಮ ಅಂಬೂಬಾಯಿಗೆ ಹದಿನೈದು ವರ್ಷ, ನನ್ನ ತಾಯಿ ಭಾಗೀರಥಿಬಾಯಿಗೆ ಇಪ್ಪತ್ತೊಂದು ವರ್ಷ, ನನಗೆ ಐದು ತುಂಬಿ ಆರನೆಯ ವರ್ಷ. ನನ್ನ ಅಜ್ಜನಿಗೆ ಗಂಡು ಸಂತಾನವಿಲ್ಲದೆ ಸಾಲಾಗಿ ನಾಲ್ಕು ಹೆಣ್ಣು ಮಕ್ಕಳು. ಹಿರಿಯ ಮಗಳು ಗಂಗಾಬಾಯಿ ಪರಸ್ಥಳಲ್ಲಿ ಗಂಡನೊಂದಿಗೆ ಒಗೆತನ ಮಾಡುತ್ತಿದ್ದರು. ಎರಡನೆಯ ಮೂರನೆಯ ಮಕ್ಕಳೇ ನನ್ನ ತಾಯಿ ಮತ್ತು ಚಿಕ್ಕಮ್ಮ. ಕಡೆಯ ಮಗಳು ರತ್ನಾಬಾಯಿಗೆ ಹನ್ನೆರಡು ವರ್ಷ, ಮದುವೆಗೆ ಎದವಿದ್ದರು. ಒಮ್ಮೆಗೇ ಇಬ್ಬರು ಮಕ್ಕಳು ವಿಧವೆಯರಾಗಿ ಮನೆ

ತಪ್ಪಿದುದನ್ನು ಸಹಿಸದೆ ಅಜ್ಜ ಎದೆ ಕುಸಿದರು. ಮನೋರೋಗಕ್ಕೆ ಪಕ್ಕಾದರು. ಅದೇ ವರ್ಷ ಜೀವ ಕೈಯಲ್ಲಿ ಹಿಡಿದುಕೊಂಡು ಕಡೆ ಮಗಳ ಮದುವೆ ಮಾಡಿದರು, ಸಾಲದ ಹೊರೆ ಹೊತ್ತರು. ಮಾರನೆಯ ವರ್ಷವೇ ಅಸುನೀಗಿದರು. ಆ ಸಮಯದಲ್ಲಿ ಒಬ್ಬ ಅಳಿಯಂದಿರೂ ಹತ್ತಿರವಿರಲಿಲ್ಲ. ಹಿರಿಯ ಮಗಳು ಕೂಡಲೆ ಬರಲು ಸಾಧ್ಯವಾಗಲಿಲ್ಲ. ಅಜ್ಜ ಸಾಯುವ ಸಮಯದಲ್ಲಿ ನನ್ನ ತಾಯಿಯನ್ನು ಹತ್ತಿರ ಕೂಡಿಸಿಕೊಂಡು "ಭಾಗು, ನಾನು ಕಡೆಯ ಮಗಳ ಮದುವೆಗೆ ಮಾಡಿರುವ ಸಾಲವನ್ನು ತೀರಿಸಿ ನನ್ನನ್ನು ಋಣ ಮುಕ್ತನನ್ನಾಗಿ ಮಾಡು. ಆಸ್ತಿ ಉಳಿಸಿಕೋ. ಮನೆಯ ವಹಿವಾಟ ವಹಿಸಿಕೊ" ಎಂದರು. ಭಾಷೆ ತೆಗೆದುಕೊಂಡು ಪ್ರಾಣ ಬಿಟ್ಟರು. ಕೂಡಲೆ ನನ್ನ ತಾಯಿ ಮನೆಯಾಳ್ತನವನ್ನು ವಹಿಸಿಕೊಂಡರು. ಚಿಕ್ಕಮ್ಮ ಅಕ್ಕನ ಬೆಂಬಲಕ್ಕೆ ನಿಂತರು. ಇಳಿವಯಸ್ಸಿನಲ್ಲಿ ಗಂಡನನ್ನು ಕಳೆದುಕೊಂಡು, ತನ್ನಿಬ್ಬರು ಮಕ್ಕಳು ಗಂಡಂದಿರ ಮನೆಗಳಲ್ಲಿ ಸುಖವಾಗಿ ಸಂಸಾರ ಮಾಡಿಕೊಂಡು ಇರಬೇಕಾದ ವಯಸ್ಸಿನಲ್ಲಿ ತನ್ನ ಮನೆಯ ವಹಿವಾಟಕ್ಕೆ ಗಂಡಾಳಾಗಿ, ದುಡಿತಕ್ಕೆ ಹೆಣ್ಣಾಳಾಗಿ, ಗಾಣದ ಎತ್ತುಗಳಂತೆ ಅಹರ್ನಿಶಿ ದುಡಿಯುತ್ತಿರುವುದನ್ನು ನೋಡಲಾರದೆ ಕಡು ದುಃಖದಲ್ಲಿ ಅದ್ದಿ, ಕುದಿಕುದಿದು ನವೆದು, ನನ್ನಜ್ಜಿ ಸೀತಾಬಾಯಿ 1923 ರಲ್ಲಿ ಅಸುನೀಗಿದರು. ಹೀಗೆ ನನ್ನ ಅಜ್ಜನ ಮನೆ ಐದು ವರ್ಷಗಳಲ್ಲಿ ನಾಲ್ಕು ಸಾವುಗಳನ್ನು ಕಂಡಿತು. ನನ್ನ ತಾಯಿ, ಚಿಕ್ಕಮ್ಮ, ಪ್ರಾಥಮಿಕ ಪಾಠಶಾಲೆಯ ಒಂದೆರಡು ತರಗತಿಗಳನ್ನು ಮುಗಿಸಿದ್ದರೋ ಏನೋ ? ಅವರ ಕಾಲದಲ್ಲಿ ಸರಕಾರಿ ಪಾಠಶಾಲೆಗಳು ನೆಗಳಿರಲಿಲ್ಲ. ಸ್ತ್ರೀ ವಿದ್ಯಾಭ್ಯಾಸ ಆಗಿನ ಜನಕ್ಕೆ ಅಷ್ಟಾಗಿ ಬೇಕಾಗಿಯೂ ಇರಲಿಲ್ಲ. ಪರದೇಶಗಳಿಂದ ತಮ್ಮ ಮತಪ್ರಚಾರಕ್ಕೆಂದು ನಮ್ಮ ದೇಶಕ್ಕೆ ಬಂದ ಕ್ರೈಸ್ತ ಪಾದ್ರಿಗಳು ಅಲ್ಲಲ್ಲಿ ಪಾಠಶಾಲೆಗಳನ್ನು ತೆಗೆದಿದ್ದರು. ನನ್ನ ಅಜ್ಜ, ತಮ್ಮ ಮಕ್ಕಳು ಕ್ರೈಸ್ತ ಪಾಠ ಶಾಲೆಗಳಲ್ಲಿ ಓದಿದರೆ, ಜಾತಿಕೆಟ್ಟು ಕ್ರಿಸ್ತಾನರಾಗಿಬಿಡುವರೆಂಬ ಭಯದಿಂದ ತಮಗೆ ಸನಿಹದಲ್ಲಿದ್ದರೂ ಪಾದ್ರಿಗಳ ಶಾಲೆಗಳಿಗೆ ಕಳಿಸಲಿಲ್ಲ. ಆದರೆ ನನ್ನ ತಾಯಿ–ಚಿಕ್ಕಮ್ಮ ಮನೆಯ ಸಂಸ್ಕಾರದಿಂದ ಓದು ಬರಹ ಕಲಿತಿದ್ದರು. ನನ್ನ ತಾಯಿ, ಗಂಡನ ಮನೆಯಲ್ಲಿದ್ದ ಬಿ. ವೆಂಕಟಾಚಾರ್ಯರು, ಗಳಗನಾಥರು ಬರೆದ ಕಾದಂಬರಿಗಳನ್ನು ಓದಿದ್ದರು. ದೇವಶಿಖಾಮಣಿ ಅಳಸಿಂಗಾಚಾರ್ಯರ ರಾಮಾಯಣ ಭಾಗವತಗಳನ್ನು ವ್ಯಾಸಂಗಮಾಡಿ ಚೆನ್ನಾಗಿ ಜೀರ್ಣಿಸಿಕೊಂಡಿದ್ದರು. ನನ್ನ ಚಿಕ್ಕಮ್ಮ ಕನ್ನಡ ದಿನ ಪತ್ರಿಕೆಗಳನ್ನು ಓದಿ, ಸುದ್ದಿಗಳನ್ನು ವಿಮರ್ಶಿಸಿ, ವಿಶ್ಲೇಷಿಸಿ, ಟೀಕಿಸಿ, ಅಕ್ಕನಿಗೆ ದೈನಂದಿನ ಸಮಾಚಾರಗಳನ್ನು ತಿಳಿಸುತ್ತಿದ್ದರು. ಈ ಸಹೋದರಿಯರಿಬ್ಬರಿಗೂ ನೆರೆಹೊರೆ ಮನೆಗಳ ಅನುಭವಗಳು ಪಾಠಶಾಲೆಯಾಗಿ ಸುತ್ತಮುತ್ತಲ ವಾತಾವರಣ ಸ್ವಾನುಭವಗಳ ಮಂಟಪವಾಗಿ ಜೀವನ ನಿರ್ವಹಣೆಯ ಕಣ್ಬೆಳಕಾದವು. ಸಹೋದರಿಯರಿಬ್ಬರೂ ಸಾಲ ತೀರಿಸಿ ಆಸ್ತಿ ಉಳಿಸಿಕೊಂಡರು, ಅಕ್ಕತಂಗಿಯರುಗಳಿಗೆ ಒಮ್ಮನಸ್ಸಿನಿಂದ ಆಸ್ತಿಯನ್ನು ಹಂಚಿಕೊಟ್ಟರು. ಕಡೆ ತಂಗಿಗೆ "ತೌರು ಇಲ್ಲ" ಅನ್ನಿಸದೆ ಆರೇಳು ಬಾಣಂತನ ಮಾಡಿದರು. ಅಕ್ಕತಂಗಿಯರ ಮಕ್ಕಳನ್ನು ಅವಕಾಶವಾದಾಗಲೆಲ್ಲ ತಮ್ಮ

ಹತ್ತಿರ ಇಟ್ಟುಕೊಂಡು ಅವರುಗಳ ಅಭ್ಯುದಯವನ್ನು ಕೋರಿದ್ದರು. ನನ್ನನ್ನು ಅವಿಭಕ್ತ ಕುಟುಂಬದ ಶಿಶುವನ್ನಾಗಿ ಬೆಳೆಸಿದರು. ನನ್ನನ್ನು ತಂದೆಯಿಲ್ಲದ ಮಗನೆಂಬ ರೀತಿಯಲ್ಲಿ ಬಿಡದೆ, ಕಾಲ ಕಾಲಕ್ಕೆ ಬೇಕಾದ ಆವಶ್ಯಕತೆಗಳನ್ನು ಒದಗಿಸಿ ಸಕಾಲದಲ್ಲಿ ಹತ್ತಿರವಿದ್ದ ಲಂಡನ್ ಮಿಷನ್ ಸ್ಕೂಲಿಗೆ ಸೇರಿಸಿ ಉತ್ತಮ ವಿದ್ಯಾಭ್ಯಾಸ ಕೊಡಿಸಿ, ತಾವೂ ಉಸ್ತುವಾರಿ ತೆಗೆದುಕೊಂಡು, ಸಮಾಜದ ಒಬ್ಬ ನಾಗರಿಕನನ್ನಾಗಿ ಮಾಡಿದರು. ನನಗೆ ಹೆತ್ತಮ್ಮ ಒಬ್ಬ ತಾಯಿಯಾದರೆ, ಸಾಕಿದ ಚಿಕ್ಕಮ್ಮ ಇನ್ನೊಬ್ಬ ತಾಯಿ, ಒಟ್ಟಿನಲ್ಲಿ ನಾನು ಇಬ್ಬರು ತಾಯಿಯರ ಮಡಿಲಿನಲ್ಲಿ ಒಬ್ಬ ಮಗನಾಗಿ ಬೆಳೆದು ಪ್ರಾಯಕ್ಕೆ ಬಂದೆ. ಇವರಿಬ್ಬರೂ ನನಗೆ ಹದಿನಾರು ವರ್ಷ ತುಂಬುವುದನ್ನೇ ಜಾತಕಪಕ್ಷಿಗಳಂತೆ ಕಾದರು. ನನಗೆ ಹದಿನಾರು ವರ್ಷ ತುಂಬಿತೋ ಇಲ್ಲವೋ ಆ ವರ್ಷದೊಳಗೆ ನನ್ನ ಮದುವೆಯನ್ನು ಮಾಡಿಬಿಡಬೇಕೆಂದು ನಿರ್ಧರಿಸಿದರು. ಅಕ್ಕನ ಗಂಡ ಮುಪ್ಪಿಗೆ ಬಂದಿದ್ದಾರೆ. ಅಕ್ಕ ಮುತ್ತೈದೆಯಾಗಿರುವಾಗಲೇ, ಅಕ್ಕ ಭಾವನವರುಗಳನ್ನು ಹಸೆ ಮಣೆಯ ಮೇಲೆ ಕೂರಿಸಿ, ಅವರುಗಳ ಕೈಯಲ್ಲಿ ಸೊಸೆಯನ್ನು ಧಾರೆಯೆರೆಸಿಕೊಂಡು ತಮ್ಮ ಮನೆ ತುಂಬಿಸಿಕೊಳ್ಳಬೇಕೆಂಬ ಅಪೇಕ್ಷೆ ತರಾತುರಿ ನಿರ್ಧಾರಕ್ಕೆ ಕಾರಣವಾಯಿತು. ನನ್ನಮ್ಮ ಸೊಸೆಗಾಗಿ ಹೊರಗೆ ಹುಡುಕಬೇಕಾಗಿರಲಿಲ್ಲ. ಆಕೆ ತವರೂರಿನಲ್ಲಿ ತಮ್ಮ ಕಣ್ಣು ಮುಂದೆಯೇ ಬೆಳೆಯುತ್ತಿದ್ದಳು. ದೂರದವಳಲ್ಲ, ತನ್ನ ಮಲಮಗಳ ಮಗಳು. ಸೋದರ ಸಂಬಂಧದಲ್ಲಿ ಬಂಧುತ್ವ ಬೆಳೆಸುವುದರಿಂದ ಜಾತಕಪಾತಕಗಳು ಕೂಡಿರಬೇಕೆಂಬ ಅಡೆ ತಡೆಗಳಿಲ್ಲ. ಕರುಳು ಬಾಂಧವ್ಯವಾದುದರಿಂದ ಅವಿಭಕ್ತ ಕುಟುಂಬಕ್ಕೆ ಹೊಂದಿಕೊಳ್ಳುವಂತೆ ಸೊಸೆಯನ್ನು ತಿದ್ದಿಕೊಳ್ಳಬಹುದು. ಚಿಕ್ಕವಯಸ್ಸಿನಲ್ಲಿರುವುದರಿಂದ ಬುದ್ಧಿ ಬರುವ ಹೊತ್ತಿಗೆ ತಮ್ಮ ಮನೆ ಬಗೆತನಕ್ಕೆ ಸರಿಹೊಂದಿಸಿಕೊಳ್ಳಬಹುದು. ಇಷ್ಟು ಸಾಧಕ ಬಾಧಕಗಳನ್ನು ಯೋಚಿಸಿ ನನ್ನಮ್ಮ ಆ ವರ್ಷದಲ್ಲಿ ಆದಷ್ಟು ಬೇಗ ನನ್ನ ಮದುವೆಯನ್ನು ಮಾಡಿ ಮುಗಿಸಬೇಕೆಂದು ತೀರ್ಮಾನಿಸಿದರು. ಮಗಳು ಅಳಿಯನನ್ನು ಕರೆಸಿಕೊಂಡರು. ನನ್ನಕ್ಕ ಸುಂದರಾಬಾಯಿ, ನನ್ನ ಭಾವ ಗಾರ್ಡ್ ನಾರಾಯಣಕೆರೆ ವೆಂಕೋಬರಾವ್ ಧಾವಿಸಿಬಂದರು. ನನ್ನಮ್ಮ ತಮ್ಮ ಅಭಿಪ್ರಾಯವನ್ನು ಸುತ್ತು ಬಳಸದೆ ನೇರವಾಗಿ "ಪಾಂಡಣ್ಣನಿಗೆ ಈ ವರ್ಷದೊಳಗಾಗಿ ಮದುವೆ ಮಾಡಬೇಕೆಂದು ಹರಿವಾಯುಗಳ ಪ್ರೇರಣೆಯಂತೆ ನಿರ್ಧರಿಸಿದ್ದೇವೆ. ನಿಮ್ಮ ಮಗಳನ್ನು ಕೊಟ್ಟು ವಂಶ ಬೆಳೆಸಬೇಕು" ಎಂದು ಸ್ಪಷ್ಟಪಡಿಸಿದರು. ನನ್ನಕ್ಕ ಭಾವನವರಿಗೆ ಇಷ್ಟು ಬೇಡಿಕೆ ಸಾಕಾಯಿತು. ದಂಪತಿಗಳು ತಮಗೆ ಚೊಚ್ಚಲು ಹೆಣ್ಣು ಹುಟ್ಟುತ್ತಲೇ ನನಗೇ ಕೊಟ್ಟು ಮದುವೆ ಮಾಡಬೇಕೆಂದು ತೊಟ್ಟಿಲಿಗೇ ಬಾಸಿಂಗ ಕಟ್ಟಿದ್ದರಂತೆ. ನನ್ನ ತಾಯಿಯರಿಬ್ಬರಿಂದಲೂ ಭಾಷೆ ತೆಗೆದುಕೊಂಡಿದ್ದರಂತೆ. ಆದರೂ ನನ್ನಕ್ಕ ಭಾವನವರಿಗೆ ಮನಸ್ಸಿನಲ್ಲಿ ಅಳುಕು ಇದ್ದೇಯಿತ್ತು. ಹುಡುಗ ಪ್ರಾಯಕ್ಕೆ ಬಂದು, ಸ್ವಬುದ್ಧಿ ಜಾಗೃತವಾಗಿ ತಿಳಿವಳಿಕಸ್ತನಾದರೆ, ಅವರಿವರ ಮಾತು ಕೇಳಿ ತಮ್ಮ ಮಗಳನ್ನು "ಒಲ್ಲೆ" ನೆಂದರೆ, ಮಾಡಬೇಕೇನು ? ಆದುದರಿಂದ ಗಂಡಹೆಂಡಿರಿಬ್ಬರೂ ತಮ್ಮ ಮಗಳದು ಬಾಲ್ಯವಿವಾಹ

ವಾದರೂ "ಚಿಂತೆಯಿಲ್ಲ"ವೆಂದು ಮೀನಾಮೇಷ ನೋಡದೆ ಒಪ್ಪಿಕೊಂಡರು. ಮದುವೆಗೆ ಏರ್ಪಾಡು ಎರಡು ಕಡೆಗಳಿಂದಲೂ ಪ್ರಾರಂಭವಾಯಿತು. ನನ್ನಮ್ಮ ತನ್ನ ಅಕ್ಕ ಭಾವನವರಿಗೆ ಕರೆಯೋಲೆ ಅಟ್ಟಿದರು. ನನ್ನ ದೊಡ್ಡಮ್ಮ ದೊಡ್ಡಪ್ಪ ತಿಂಗಳು ಮುಂಚೆಯೇ ಬಂದರು. ಮದುವೆ ದಿಬ್ಬಣದ ಚಪ್ಪರ ಪ್ರಾರಂಭವಾಗಿಯೇ ಹೋಯಿತು. ನನ್ನ ಮುಂದೆ ನನ್ನ ಮದುವೆಯ ಸಂಧಾನ ನಡೆಯುತ್ತಿದ್ದರೂ ನಾನು ಕಣ್ಣಿದ್ದರೂ ಕುರುಡನಂತೆ, ಕಿವಿಯಿದ್ದರೂ ಕಿವುಡನಂತೆ ನಿಸ್ಸಹಾಯಕನಾಗಿದ್ದೆ. "ಪಾಂಡಣ್ಣ, ಮದುವೆಯಾಗುವೆಯಾ ?" ಎಂದು ಒಬ್ಬರಾದರೂ ಕೇಳಲಿಲ್ಲ. ನನ್ನ ತಾಯಿಯರಿಬ್ಬರೂ ಒಂದು ತೀರ್ಮಾನ ತೆಗೆದುಕೊಂಡರಾಯಿತು. ಅದು ಶಾಸನ. ಅದನ್ನು ಎದುರಾಡಿ ಅಳಿಸಿದವರಿಲ್ಲ. "ಭಾಗಮ್ಮ, ಅಂಬಮ್ಮ ಚಿಕ್ಕವರಾದರೂ ವಿವೇಕಿಗಳು. ತಂದೆಯ ಸಂಸಾರವನ್ನು ನೇರ್ಪಿನಿಂದ ನಡೆಸುತ್ತಿದ್ದಾರೆ. ಸಾಲ ಸೋಲಗಳನ್ನು ತೀರಿಸಿ ಆಸ್ತಿಯುಳಿಸಿಕೊಂಡು, ನಾಲ್ಕು ಸಹೋದರಿಯರೂ ಅವಿಭಕ್ತ ಕುಟುಂಬದಂತೆ ಬಾಳುತ್ತಿದ್ದಾರೆ. ಮಗನನ್ನು ಯೋಗ್ಯನನ್ನಾಗಿ ಸಾಕಿದ್ದಾರೆ" ಎಂದು ನನ್ನ ತಾಯಿಯರಿಬ್ಬರನ್ನೂ ಸ್ವಕೀಯರೂ ಪರಕೀಯರೂ ಬಹಳ ಗೌರವಗಳಿಂದ ನೋಡುತ್ತಿದ್ದರು. ಮನೆಯಲ್ಲಿದ್ದ ಒಕ್ಕಲುಗಳೂ ಅಷ್ಟೆ, ನನ್ನ ತಾಯಿಯರನ್ನು ತಮ್ಮ ಮನೆಗಳ ಹಿರಿಯರನ್ನು ಕಾಣುವಂತೆ ಕಾಣುತ್ತಿದ್ದರು. ಹೀಗಿರುವಾಗ ನಾನೆಷ್ಟರವನು ? ಪ್ರಗತಿಶೀಲ ಮನೋಭಾವಗಳನ್ನು ಅದುಮಿ ಬಾಲ್ಯವಿವಾಹಕ್ಕೆ ಒಪ್ಪಿಕೊಂಡೆ. ಹಾಲುಗಲ್ಲದ ಮುಗ್ಧ ಬಾಲಿಕೆಯನ್ನು ಮದುವೆಯಾಗಲು ಮನಸ್ಸಿನಲ್ಲಿ ಸಂಕಲ್ಪಿಸಿದೆ. ನಮ್ಮಿಬ್ಬರ ಕಂಕಣಬಲ ಕೂಡಿಬಂದಿತ್ತು. 1930ರ ಮೇ ತಿಂಗಳ 5ನೆಯ ದಿನಾಂಕದಂದು ನಮ್ಮ ವಿವಾಹ ಯಾವ ಕಾಟಕಿರಿಕಿರಿಗಳೂ ಇಲ್ಲದೆ ಹೂಸರವೆತ್ತಿದಷ್ಟು ಸಲೀಸಾಗಿ ನಡೆದು ಹೋಯಿತು.

ಮದುವೆ ಮಂಟಪದಲ್ಲಿ ನನ್ನ ಸಂಕಟ

ನಮ್ಮ ವಿವಾಹ ನೆಂಟರಿಷ್ಟರಿಗೆ ಇಷ್ಟಮಿತ್ರರಿಗೆ ಸಂಭ್ರಮವಾಗಿದ್ದರೂ ನನ್ನ ಪಾಲಿಗೆ ವಿವಾಹ ವಿಭ್ರಮಗೊಳಿಸಿತ್ತು. ನಮ್ಮ ಮದುವೆ ಮೇ ತಿಂಗಳ 5ನೆಯ ದಿನಾಂಕದಂದು ನಡೆಯಿತು ಎಂದೆನಲ್ಲವೇ, ಆ ದಿನ ಬೆಳಗಾಗುತ್ತಿರುವಾಗಲೇ ನಮ್ಮ ರಾಷ್ಟ್ರಪಿತ ಪೂಜ್ಯ ಗಾಂಧೀಜಿ, ಹಿಂದಿನ ದಿನದ ಮಧ್ಯ ರಾತ್ರಿಯಲ್ಲಿ ದಂಡಿ ಸಮುದ್ರ ತೀರದಲ್ಲಿ ಉಪ್ಪಿನ ಕಾನೂನು ಮುರಿದು ಉಪ್ಪು ತಯಾರಿಸಿದ ತಪ್ಪಿಗಾಗಿ ಬ್ರಿಟೀಷ್ ಸರಕಾರದ ಪೋಲೀಸರಿಂದ ಬಂಧಿತರಾದರೆಂಬ ವಾರ್ತೆ ಬಿರುಗಾಳಿಯಂತೆ ದೇಶಾದ್ಯಂತ ಹಬ್ಬಿ, ಬೆಂಗಳೂರನ್ನು ವ್ಯಾಪಿಸಿ, ಅರಳೇಪೇಟೆಯ ಕೊಟ್ಟಿಗೆ ಗಲ್ಲಿಯಲ್ಲಿದ್ದ ನಮ್ಮ ಮದುವೆಯ ಮನೆಯನ್ನು ಹೊಕ್ಕು ನನ್ನ ಹೃದಯವನ್ನು ತಲ್ಲಣಗೊಳಿಸಿತು. ಮದುವೆಯ ಮನೆಯಲ್ಲಿ ಗಾಂಧೀಜಿ ಬಂಧಿತರಾದ ಸುದ್ದಿ ಬಹಳ ಮಂದಿಗೆ ಹಾಳು ಹರಟೆಗೆ ಮೂಳ ಪ್ರಸಂಗಕ್ಕೆ ಗ್ರಾಸ ಒದಗಿಸಿದರೆ, ನನಗೆ ಮಾತ್ರ ಈ ಸುದ್ದಿ ಮತಿಭ್ರಮೆಗೆಡಿಸಿತು.

ಚಿಕ್ಕಂದಿನಿಂದಲೇ ನನ್ನ ಚಿತ್ತ ದೇಶಸೇವೆ, ಭಾಷಾಸೇವೆಗಳ ಬಗೆಗೆ, ಸಂಗೀತ ಸಾಹಿತ್ಯ ಲಲಿತಕಲೆಗಳ ಬಗೆಗೆ ಜಾಗೃತವಾಗಿತ್ತು. ಮನಸ್ಸು ಅರಳಿತ್ತು. ಒಂಬತ್ತು ವರ್ಷದವ ನಾಗಿದ್ದಾಗಲೆ ಕಥೆ ಬರೆದಿದ್ದೆ. ರಾಮೋತ್ಸವಗಳ ಸಂಗೀತ, ದೇವಸ್ಥಾನಗಳಲ್ಲಿ ನಡೆಯುತ್ತಿದ್ದ ಭಾರತ ವಾಚನ ಪ್ರವಚನಗಳನ್ನು ಕೇಳುತ್ತಿದ್ದೆ. ವರ್ಣಚಿತ್ರ ಗಳನ್ನು ಬಿಡಿಸುತ್ತಿದ್ದೆ. ರಟ್ಟು, ಬಣ್ಣದ ಕಾಗದ ಕಾಗೆ ಬಂಗಾರ ಉಪಯೋಗಿಸಿ ಸೊಗಸಾಗಿ ಮಂಟಪಗಳನ್ನು ರಚಿಸುತ್ತಿದ್ದೆ. ಲಂಡನ್ ಮಿಷನ್ ಹೈಸ್ಕೂಲಿನಲ್ಲಿ ಮಾಧ್ಯಮಿಕ ಶಾಲಾ ವಿದ್ಯಾಭ್ಯಾಸ ಮುಗಿಸಿ ಪ್ರೌಢಶಾಲಾ ವಿದ್ಯಾಭ್ಯಾಸಕ್ಕೆ ತೊಡಗಲು ಪ್ರೌಢಶಾಲೆಯನ್ನು ಪ್ರವೇಶಿಸುತ್ತಿದ್ದಾಗಲೆ 1927ರಲ್ಲಿ ಬೆಂಗಳೂರು ಸುಲ್ತಾನಪೇಟೆಯ ಸರಕಾರಿ ಮಾಧ್ಯಮಿಕಶಾಲೆಯ ಗಣಪತಿ ಚಳವಳಿ ಪ್ರಾರಂಭವಾಯಿತು. ಅದು ಕ್ರಮೇಣ ಮೈಸೂರು ಸಂಸ್ಥಾನವೆಲ್ಲ ವ್ಯಾಪಿಸಿ, ನಮ್ಮ ಜನಜೀವನದಲ್ಲಿ ರಾಜಕೀಯ ಪ್ರಜ್ಞೆ ಯನ್ನು ಹುಟ್ಟಿಸಿತು. ಬೆಂಗಳೂರಿನ ಸಮಸ್ತರ ಹೃದಯಗಳನ್ನು ಕಲಕಿತು. ಬೆಂಗಳೂರು ನಗರದ ವಿದ್ಯಾರ್ಥಿಗಳೆಲ್ಲ ರೋಷದಿಂದ ಉರಿದೆದ್ದರು. ಶಾಲೆಗಳನ್ನು ಬಹಿಷ್ಕರಿಸಿ ನಗರದ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ಹೊರಟರು. ಸುಲ್ತಾನಪೇಟೆ ಗಣಪತಿಯ ಮುಂದೆ ಧರಣಿ ಕುಳಿತರು. ನಾನೂ ಮೆರವಣಿಗೆಯಲ್ಲಿ ಭಾಗವಹಿಸಿದೆ. ಗಣಪತಿಯ ಮುಂದೆ ಧರಣಿ ಕುಳಿತೆ. ನಮ್ಮ ಮುಖಂಡರುಗಳು ಬಿಡುಗಡೆಯಾಗುವ ಕಡೆ ದಿವಸ, ದಿವಾನ್ ಸರ್ ಎಂ. ಮಿರ್ಜಾ ಇಸ್ಮೈಲ್ ಸಾಹೇಬರು ಸರಕಾರ ನಡೆಸುತ್ತಿದ್ದ ಅಠಾರ ಕಚೇರಿಯ ಮುಂದಿನ ಬಯಲಿನಲ್ಲಿ ಮಟಮಟ ಮಧ್ಯಾಹ್ನ ಉರಿಬಿಸಿಲಲ್ಲಿ ಧರಣಿ ಕುಳಿತ ಸಹಸ್ರಾರು ಮಂದಿ ವಿದ್ಯಾರ್ಥಿಗಳೊಡನೆ ನಾನೂ ನೆಲಕಚ್ಚಿ ಕುಳಿತೆ. ಕುದುರೆ ಸವಾರರ ಕುದುರೆಗಳ ಗೊರಸುಗಳ ತುಳಿತಕ್ಕೆ ಸಿಕ್ಕಿ ಜೀವಭಯದಿಂದ ದಿಕ್ಕಾಪಾಲಾಗಿ ಓಡಿದವರಲ್ಲಿ ನಾನೂ ಒಬ್ಬನಾಗಿದ್ದೆ. 1928ರಲ್ಲಿ ಬ್ರಿಟೀಷ್ ಸರಕಾರದ ಪರವಾಗಿ ಭಾರತಕ್ಕೆ ಸೈಮನ್ ಕಮೀಷನ್ ಆಗಮಿಸಿತು. ಅದರಲ್ಲಿ ಒಬ್ಬ ಭಾರತೀಯನೂ ಸಾಮಕಾವಾಸ್ತೆಯಾಗಿ ಪ್ರತಿನಿಧಿಯಾಗಿ ಕೂಡ ಇರಲಿಲ್ಲ. ಆದುದರಿಂದ ನ್ಯಾಷನಲ್ ಇಂಡಿಯನ್ ಕಾಂಗ್ರೆಸ್ ಸೈಮನ್ ಕಮೀಷನ್ನನ್ನು ಬಹಿಷ್ಕರಿಸಬೇಕೆಂದು ದೇಶಕ್ಕೆ ಕರೆಕೊಟ್ಟಿತು. ಸೈಮನ್ ಕಮಿಷನ್ ಭಾರತಕ್ಕೆ ಕಾಲಿಟ್ಟ ದಿನ, ಸಮಗ್ರ ಭಾರತ ರಾಷ್ಟ್ರ ಹರತಾಳವಾಚರಿಸಿತು. ವಿದ್ಯಾರ್ಥಿಗಳು ಪ್ರಚಂಡ ಮೆರವಣಿಗೆ ನಡೆಸಿದರು. ಬೆಂಗಳೂರಿನಲ್ಲೂ ವಿದ್ಯಾರ್ಥಿ ಮೆರ ವಣಿಗೆ ನಡೆಯಿತು. ಅದರಲ್ಲಿ ಪಾಲ್ಗೊಂಡ ವಿದ್ಯಾರ್ಥಿಗಳಲ್ಲಿ ನಾನೂ ಒಬ್ಬ. ಸೈಮನ್ ಕಮಿಷನ್ ಬೆಂಗಳೂರಿಗೂ ಭೇಟಿ ಕೊಟ್ಟಿತು. ಅದಿನ ನಡೆದ ವಿದ್ಯಾರ್ಥಿ ಮೆರವಣಿಗೆ ಯಲ್ಲಿ ನಾನು ಸಹಪಾಠಿಗಳೊಡನೆ ಕೂಡಿ, "ಬಾಯ್‌ಕಾಟ್ ಸೈಮನ್ ಕಮಿಷನ್" "ಬರ್ಕನ್ ಹೆಡ್ ಈಸ್ ಬ್ರೋಕನ್ ಹೆಡ್" "ಸೈಮನ್ ಕಮಿಷನ್‌ಗೆ ಧಿಕ್ಕಾರ" "ಸೈಮನರೇ ಭಾರತವನ್ನು ಬಿಟ್ಟು ತೊಲಗಿರಿ" ಎಂದು ಗಂಟಲು ನರ ಬಿಗಿದು ಅರಚುತ್ತ, ಕಪ್ಪು ಬಾವುಟ ಹಿಡಿದು ನಾಯಕನಂತೆ ಮೆರೆದಿದ್ದೆ. ಪರದೇಶಿ ವಸ್ತ್ರ ಬಹಿಷ್ಕಾರ ಆಂದೋಲನದಲ್ಲಿ ಭಾಗವಹಿಸಿ ಪರದೇಶಿ ವಸ್ತ್ರ ದಹನಮಾಡಿ ಖುಷಿ ಪಟ್ಟಿದ್ದೆ. ನನ್ನ

ಸಹಪಾಠಿಗಳನ್ನು ಕಟ್ಟಿಕೊಂಡು ದೇಶಬಂಧು ಕರ್ನಾಟಕ ಸಂಘ ಸ್ಥಾಪಿಸಿ, ಗೌ। ಕಾರ್ಯದರ್ಶಿಯಾಗಿ ಕನ್ನಡ ಸಾಹಿತ್ಯ ಪರಿಚಾರಿಕೆ ಮಾಡುತ್ತಿದ್ದೆ. ಗಾಂಧೀಜಿ ಉಪ್ಪಿನ ಸತ್ಯಾಗ್ರಹ ಘೋಷಿಸಿದಾಗ, ಬೆಂಗಳೂರಿನಲ್ಲಿ ನಡೆಯುತ್ತಿದ್ದ ಪ್ರಚಾರ ಸಭೆಗಳಲ್ಲಿ ನಾನೂ ಒಬ್ಬ ಸ್ವಯಂ ಸೇವಕನಾಗಿ ಭಾಗವಹಿಸುತ್ತಿದ್ದೆ. ಇಂಥ ನನ್ನನ್ನು ಮೇ 5ನೆಯ ದಿನಾಂಕದಂದು ಮದುವೆಯೆಂಬ ಅಬ್ಬರವೆದ್ದು "ಎಣ್ಣೆ ಬಂದಾಗ ಕಣ್ಣು ಮುಚ್ಚಿಕೊಂಡರು" ಎಂಬ ಗಾದೆಗೆ ಸರಿಯಾಗಿ, ರೆಕ್ಕೆ ಪುಕ್ಕಗಳನ್ನು ಕಿತ್ತು ಪಂಜರದಲ್ಲಿ ಸೆರೆಯಿಟ್ಟ ಪಕ್ಷಿಯಂತೆ ನನ್ನನ್ನು ಮದುವೆ ಮಂಟಪದಲ್ಲಿ ಬಂಧಿಸಿತ್ತು. ಆದರೆ ನನ್ನನ್ನು ಕೈಹಿಡಿದು ನನ್ನ ಗೃಹಲಕ್ಷ್ಮಿಯಾಗಲಿದ್ದ ಮುಗ್ಧ ಬಾಲಿಕೆ ? ಪ್ರಸಿದ್ಧ ಸಾಹಿತಿ ಡಿ. ವಿ. ಗುಂಡಪ್ಪನವರ ಅಧ್ಯಕ್ಷತೆಯಲ್ಲಿ ಸಂಜೆ ಪ್ರಚಂಡ ವಿರೋಧ ಸಭೆ ನಡಯಲಿದೆಯೆಂಬ ಸುದ್ದಿ ಮದುವೆ ಮನೆಯನ್ನು ಹೊಕ್ಕಿತು. ಆಗಂತೂ ನನ್ನ ಮನಸ್ಸಿನಲ್ಲಿ ಉಳಿದಿದ್ದ ಅಲ್ಪ ಸ್ವಲ್ಪ ಶಾಂತಿ ಸಂಪೂರ್ಣವಾಗಿ ಕದಡಿಹೋಯಿತು. ನನ್ನ ಮದುವೆ ಮನೆಗೆ ಸನಿಹದಲ್ಲಿಯೇ ಸುಭಾಷ್ ಸಾಗರ ಮೈದಾನವಿತ್ತು. ಧರ್ಮಾಂಬುಧಿ ಕೆರೆಯಂಗಳವೇ ಸುಭಾಷ್ ಸಾಗರ ಮೈದಾನ. ನನಗೆ ಅಲ್ಲಿಗೆ ಹೋಗುವುದಕ್ಕೆ ಐದು ಹತ್ತು ನಿಮಿಷಗಳುಸಾಕು. ಆದರೇನು? ನಾನು ಮದುವೆಯ ಬಂದಿಯಾಗಿದ್ದೆ. ದೇಹ ಮದುವೆಯ ಕಲಾಪಗಳಲ್ಲಿ ಯಂತ್ರದಂತೆ ಭಾಗವಹಿಸಿತ್ತು. ಚಿತ್ತ ಸುಭಾಷ್ ಸಾಗರ ಮೈದಾನದಲ್ಲಿ ಅಲೆಯುತ್ತಿತ್ತು. ರೋಮ್ ನಗರ ಬೆಂಕಿಯಲ್ಲಿ ಬೇಯುತ್ತಿದ್ದಾಗ, ನೀರೋ ಚಕ್ರವರ್ತಿ ಪಿಟೀಲು ನುಡಿಸುತ್ತ ಆನಂದ ಸಾಗರದಲ್ಲಿ ತೇಲಿ ಮುಳುಗುತ್ತಿದ್ದಂತೆ ಭಾಸವಾಗಿತ್ತು ಮದುವೆ ಮಂಟಪ.

ಮದುವೆಯ ಮೋಜು

ಮೇ ತಿಂಗಳ ಉರಿ ಬಿಸಿಲು. ನಮ್ಮ ಹಸೆ ಮಣೆಯ ಮುಂದೆ ಕೆನ್ನಾಲಗೆಗಳನ್ನು ಚಾಚಿ ಧಗಧಗಿಸುತ್ತಿದ್ದ ಅಗ್ನಿಪುರುಷ. ಅವನು ಇನ್ನೂ ಪ್ರಜ್ವಲಿಸಿ ಉರಿಯುವಂತೆ ಮಾಡಲು ಪುರೋಹಿತರು ಪುಳ್ಳೆಗೊಟ್ಟಿ, ಆಜ್ಯ ಹೊಯಿದು ಎಬ್ಬಿಸುತ್ತಿದ್ದ ಕಣ್ಣೀಡುಗು ಹೊಗೆ. ಮೈಗೆ ಮೈಯೊತ್ತಿ ಕುಳಿತ ಮುಗ್ಧ ಬಾಲಿಕೆ ಮದುವಳಿಗೆ. ಈ ತ್ರಿಕಾಟಗಳಿಂದ ತಪ್ಪಿಸಿಕೊಳ್ಳೋಣವೆಂದು ದೂರ ಸರಿದು ಕೂಡುತ್ತಿದ್ದೆ. ನಮ್ಮನ್ನು ಘೇರಾಯಿಸಿ ಸ್ವಲ್ಪವೂ ಗಾಳಿಬರದಂತೆ ಕೋಟೆಕಟ್ಟಿದ್ದ ಮಹಿಳಾ ಬಂಧುಗಳು "ಅಮ್ಮಣ್ಣಿ, ಸರಿದು ಗಂಡನ ಪಕ್ಕದಲ್ಲಿ ಕೂಡೆ" ಎನ್ನುತ್ತಿದ್ದರು. ಕಪಟವರಿಯದ ಮುಗ್ಧೆ ಕೂಡಲೆ ಸರಿದು ನನ್ನ ಮೈಗೆ ತನ್ನ ಮೈಯೊತ್ತಿ ಕೂತುಬಿಡುತ್ತಿದ್ದಳು. ಮಹಿಳಾಮಣಿಗಳು ಕೂಡಲೆ ಕೇಕೆ ಹಾಕಿ ಕೈಚಪ್ಪಾಳೆಯಿಕ್ಕಿ ಮದುವೆ ಮನೆಯನ್ನು ನಗೆಗಡಲಲ್ಲಿ ಮುಳುಗಿಸುತ್ತಿದ್ದರು. ನಾನು ಸಿಗ್ಗಿನಿಂದ ಕುಗ್ಗಿಹೋಗುತ್ತಿದ್ದೆ.

ನಮ್ಮ ಮದುವೆ ಎಂಟಾನೆಂಟು ದಿವಸಗಳ ಮದುವೆಯೆಂದೆನಲ್ಲವೆ ? ಇಷ್ಟು ದಿವಸಗಳನ್ನು ಮದುವೆ ಮನೆಯಲ್ಲಿ ಹೇಗೆ ಕಳೆಯುವುದು, ಬರಿ ಊಟ ಉಪಚಾರಗಳಷ್ಟರಿಂದಲೇ ಕಾಲ ಕಳೆಯುವುದಕ್ಕೆ ಆದೀತೆ ? ಮನಸ್ಸಿಗಷ್ಟು ಆಮೋದ ಪ್ರಮೋದಗಳು

ಬೇಡವೆ ? ಈಗಿನ ಹಾಗೆ ಮನಸ್ಸಿನ ಖುಷಿಗೆ ನಾಟಕ ಸಿನಿಮಾಗಳೇ ಯಾವ ಘಳಿಗೆಯಲ್ಲಾದರೂ ಎಲ್ಲಿಗೆಂದರೆ ಅಲ್ಲಿಗೆ ಹೋಗಿಬರುವುದಕ್ಕೆ ಆಟೋರಿಕ್ಷ ಬಸ್ ಸೌಕರ್ಯಗಳೇ ? ಇವೆಲ್ಲ ನೆಗಳದಿದ್ದ ಕಾಲ. ಆದುದರಿಂದ ಮದುವೆಗೆ ಬಂದ ಮಹಿಳೆಯರು ಮನಸಂಜನೆಯಿಂದ ಕಾಲ ಕಳೆಯಲು ಕೆಲವು ಅವಕಾಶಗಳನ್ನು ನಿಯೋಜಿಸಿಕೊಂಡರು. ಅವುಗಳಲ್ಲಿ ಒಂದು ಗುಬ್ಬಿ ಹೊಡೆಯುವುದು. ಮಧ್ಯಾಹ್ನಗಳಲ್ಲಿ ಚೊಕ್ಕ ಭೋಜನವಾದ ಮೇಲೆ ಒಂದೆರಡು ಗಂಟೆಗಳವರೆಗೆ ಗುಬ್ಬಿ ಹೊಡೆಯುವ ಕಾರ್ಯಕ್ರಮ. ಮೈದಾಹಿಟ್ಟು ತಂದು ನೀರಲ್ಲಿ ಕಲಸಿ ಗೋಲಿ ಗಜ್ಜುಗಗಳಷ್ಟು ಉಂಡೆ ಮಾಡಿಕೊಳ್ಳುತ್ತಿದ್ದರು. ಹಪ್ಪಳದಂತೆ ಅಂಗೈಯಗಲ ಲಟ್ಟಿಸಿ, ಅರ್ಧಚಂದ್ರಾಕಾರವಾಗಿ ಮಡಿಸಿ, ಬಾಯುಸಿರು ತುಂಬಿ ಉಬ್ಬಿಸುವಷ್ಟು ಸಂದು ಬಿಟ್ಟು ಅಂಟಿಸುತ್ತಿದ್ದರು ಅಂಚುಗಳ ಟೊಳ್ಳನ್ನು ಬಾಯುಸಿರಿಂದ ತುಂಬಿ ಕೊನೆಯಂಚಿನ ತೂತನ್ನು ಮುಚ್ಚುತ್ತಿದ್ದರು. ಈಗ ಅದು ಗುಬ್ಬಿಯಷ್ಟು ಆಕಾರದ ಒಂದು ಚಿಕ್ಕ ಕಡಬಾಗುತ್ತಿತ್ತು. ಇದೇ ಗುಬ್ಬಿ ಕಡಬು. ನವದಂಪತಿಗಳನ್ನು ಆರಿಸಿ ಅವರುಗಳ ಕೈಗಳಿಗೆ ಒಂದೊಂದು ಕಡಬು ಕೊಡುತ್ತಿದ್ದರು. ಪುರುಷರದು ಒಂದು ತಂಡ, ಮಹಿಳೆಯರದು ಒಂದು ತಂಡ. ನಲ್ಲನಲ್ಲೆಯರು ಸಮಯ ಕಾದು, ಒಬ್ಬರ ಬೆನ್ನಮೇಲೆ ಒಬ್ಬರು ಗುಬ್ಬಿ ಹೊಡೆದು ಮದುವೆಗೆಬಂದ ನೆಂಟರಿಷ್ಟರಿಗೆ ಮೋಜು ಕೊಡುತ್ತಿದ್ದರು. ಮುಗ್ಧ ಬಾಲಿಕೆ ಮದುವಳಿಗೆ ನನ್ನ ಸೌಭಾಗ್ಯವತಿ ಗುಬ್ಬಿ ಹೊಡೆಯುವ ಪ್ರಸಂಗದಲ್ಲಿ ಪ್ರಾಮುಖ್ಯ ಆಕರ್ಷಣೆ. ನಾನು ನನ್ನ ಗೆಳೆಯರ ಜೊತೆಯಲ್ಲಿ ಸಂಭಾಷಣೆಯಲ್ಲಿರುವಾಗ, ಮದುಮಗಳು ಮಿಂಚಿನಂತೆ ಹಾರಿಬಂದು ಗುಬ್ಬಿಯನ್ನು ನನ್ನ ಬೆನ್ನ ಮೇಲೆ ಚುರುಚುರುಗುಟ್ಟುವಂತೆ ಹೊಡೆದು, ಎಳೆ ಚಿಗರೆ ಮರಿಯಂತೆ ಚಂಗನೆ ಹಿಂದಕ್ಕೆ ಚಿಮ್ಮಿ ಮಹಿಳೆಯರ ತಂಡದಲ್ಲಿ ಸೇರಿಬಿಡುತ್ತಿದ್ದಳು. ನನ್ನ ಕೈಯಲ್ಲಿಯೂ ಒಂದು ಗುಬ್ಬಿ ಕಡಬು ಇರುತ್ತಿತ್ತು ನೆಪಕ್ಕೆ. ನಾನು ಸ್ವಾಭಾವಿಕವಾಗಿ ಗಂಭೀರ ವಾತಾವರಣದಲ್ಲೆ ಬಾಲ್ಯದಿಂದಲೂ ಬೆಳೆದು ಬಂದವನು. ಹಾಸ್ಯಪ್ರಿಯನಲ್ಲ, ನಗುವೂ ಮಿತವೇ. ಎರಡು ತುಟಿಗಳನ್ನು ಬಿಚ್ಚಿ ನಗಬೇಕಾದರೆ ಆ ಹಾಸ್ಯ ಪ್ರಸಂಗ ಯಾವ ಉಚ್ಚ ಶ್ರೇಣಿಯಲ್ಲಿರಬೇಕು ? ಊಹಿಸಿಕೊಳ್ಳಿ ! ಇಂಥ ನಾನು ಒಂಬತ್ತು ವರ್ಷದ ಪೋರಿಯನ್ನು ಅಟ್ಟಿಸಿಕೊಂಡು ಹೋಗಿ ಮಹಿಳಾ ತಂಡದ ಒಳಹೊಕ್ಕು ಆಕೆಯ ಮೇಲೆ ಗುಬ್ಬಿ ಹೊಡೆಯುವುದು ಸಾಧ್ಯವೇ ? ಅಂಥ ರಸಿಕ ದಾಷ್ಟಿಕ ಪೌರುಷ ನನಗೆಲ್ಲಿ ಬರಬೇಕು ? ಪ್ರತಿದಿನ ಮಧ್ಯಾಹ್ನಗಳಲ್ಲಿಯೂ ಎಳೆಯ ಗುಬ್ಬಿ ಏಟುಗಳನ್ನು ಬೆನ್ನಿನ ಮೇಲೆ ಹೊಡೆಸಿಕೊಂಡು ಮುಗುಳು ನಗೆ ಸೂಸಿ ತೆಪ್ಪಗಿರುತ್ತಿದ್ದೆ. ಮಹಿಳಾ ವೃಂದ ತಮ್ಮದೇ ಅಗಾಧ ವಿಜಯವೆಂದು "ಉಫೆ" ಘೋಷದ ಜಯಪತಾಕೆ ಹಾರಿಸಿ ನನ್ನನ್ನು ನಗೆಗಡಲಲ್ಲಿ ಸಿಗ್ಗಿನಿಂದ ಮುಳುಗಿಸಿ ಸಂತೋಷಪಡುತ್ತಿತ್ತು.

ಕಿನ್ನರಿಯ ರಸಲೋಕ

ಮದುವೆಯ ಮನೆಯಲ್ಲಿ ಎಂಟೂ ದಿವಸಗಳು ಪ್ರತಿ ಸಂಜೆ ನನ್ನ ಪಾಲಿಗೆ ರಸ

ಲೋಕವೇ ಸೃಷ್ಟಿಯಾಗುತ್ತಿತ್ತು ಮದುವಳಿಗೆಯಿಂದ. ನಾನೇ ಏನು ಮದುವೆ ಮನೆಗೆ
ಮದುವೆ ಮನೆಯೇ ರಸಲೋಕದಲ್ಲಿ ತೇಲುತ್ತಿತ್ತು. ಉರುಟಣೆ ಆರತಿಯಕ್ಷತೆ ಕಲಾಪದಲ್ಲಿ
ನನ್ನ ಸೌಭಾಗ್ಯವತಿಯೇ ರಸಲೋಕ ಸೃಷ್ಟಿಯ ಕಿನ್ನರಕನ್ನಿಕೆ. ನನ್ನ ಮದುವೆಯ ಕಾಲ
ದಲ್ಲಿ ಬಾಲ್ಯ ವಿವಾಹಗಳು ಸಾಕಷ್ಟು ಪ್ರಮಾಣದಲ್ಲಿ ನಡೆಯುತ್ತಿದ್ದುವು. ಮದುಮಕ್ಕಳು
ಇಬ್ಬರೂ ಬಾಲ್ಯ ವಯಸ್ಸಿನಲ್ಲಿಯೇ ಇರುತ್ತಿದ್ದುದರಿಂದ ಉರುಟಣೆ ಆರತಿಯಕ್ಷತೆಗಳಿಗೆ
ಅತಿ ಮಹತ್ವದಸ್ಥಾನ ದೊರೆತಿತ್ತು. ಈ ಕಲಾಪದಲ್ಲಿ ಯುವ ಸುಮಂಗಲಿಯರು ಮುಂದಾ
ಳಾಗಿ ನವ ಮದುಮಗಳಿಂದ ಉರುಟಣೆ ಮಾಡಿಸಿ ತಾವು ಸಂಭ್ರಮಗೊಳ್ಳುತ್ತಿದ್ದರು.
ಪುರುಷರು ಪ್ರೇಕ್ಷಕರಾಗಿ ಆಮೋದಗೊಳ್ಳುತ್ತಿದ್ದರು. ಉರುಟಣೆಯಲ್ಲಿ ನಾನು ನನ್ನ
ಸೌಭಾಗ್ಯವತಿ ಮಹಿಳೆಯರ ಕೈಗೊಂಬೆಗಳಾಗಿ ನಡೆದುಕೊಂಡೆವು. ಒಬ್ಬರಿಗೊಬ್ಬರು
ಗಲ್ಲ ಕೈಗಳಿಗೆ ಗಂಧ ಪೂಸಿದೆವು. ಅರಿಶಿನ ಕೆನ್ನೆಗಳಿಗೆ ಸವರಿ ಹಣೆಗೆ ಕುಂಕುಮ ಇಡಿಸಿ
ಕೊಂಡೆವು. ಒಬ್ಬರೊಬ್ಬರು ಕೊರಳುಗಳಿಗೆ ಹೂಮಾಲೆಗಳನ್ನು ಸೂಡಿಸಿಕೊಂಡೆವು
ವೀಳೆಯದೆಲೆ ತೆಂಗಿನಕಾಯಿಗಳ ಕೊಡುಕೊಳೆ ಮಾಡಿದೆವು. ಹೂಚೆಂಡಾಟವಾಡಿದೆವು.
ವೀಳೆಯದೆಲೆ ಮಡಚಿಕೊಡುವ ತಾಂಬೂಲ ಚರ್ವಣವಾದವು. ಇಲ್ಲಿ ಸ್ವಾರಸ್ಯವೆಂದರೆ
ಮದುಮಗಳು ಒಂದೊಂದು ಕಲಾಪವನ್ನು ಎಸಗುವಾಗಲೂ ಒಂದೊಂದು ಸಂದರ್ಭೋ
ಚಿತ ಹಾಡನ್ನು ಹಾಡುತ್ತಿದ್ದಳು "ಅಮ್ಮಣ್ಣಿ, ಹಾಡು ಹೇಳೆ" ಎಂದರೆ ತೀರಿತು. ಹಾಡು
ಗಳ ಸುರಿಮಳೆ ಸುರಿಸಿಬಿಡುತ್ತಿದ್ದಳು. ಬಿಂಕ ಬಿನ್ನಾಣಗಳಿಗೆ ಸ್ಥಾನವೇ ಇಲ್ಲ. ಈಗಲೂ
ಶಕುಂತಲಾಬಾಯಿಯಲ್ಲಿ ಅದೇ ಪ್ರವೃತ್ತಿ ಇದೆ. ಆಕೆಗೆ ಹೇಳಿಸಿಕೊಳ್ಳುವುದು ಬಲವಂತ,
ಪಡಿಸಿಕೊಳ್ಳುವುದು ಸಲ್ಲ. ಆ ಸರಳ ಸ್ವಭಾವ ಮಿತ್ರವೃಂದವನ್ನು ಗಳಿಸಿಕೊಟ್ಟಿದೆ.

ಶಕುಂತಲಾಬಾಯಿಗೆ ಹುಟ್ಟಿನಿಂದಲೂ ಮಧುರ ಕೋಕಿಲ ಕಂಠ ದೈವದತ್ತವಾಗಿ
ಬಂದಿದೆ ತಂದೆತಾಯಿಗಳಿಂದ. ಬಾಲಕಿಯಾಗಿದ್ದಾಗಲೆ ಸಾಕಷ್ಟು ವರ್ಣಗಳು, ತ್ಯಾಗ
ರಾಜರ ಕೀರ್ತನೆಗಳು, ಶಾಸ್ತ್ರೀಯ ಸಂಗೀತ ಪದ್ಧತಿಯಲ್ಲಿ ಪಾಠವಾಗಿತ್ತು. ಸುಲ್ತಾನ
ಪೇಟೆಯಲ್ಲಿದ್ದ ಆರ್ಯಬಾಲಿಕಾ ಪಾಠಶಾಲೆಯಲ್ಲಿ ಓದುತ್ತಿದ್ದಾಗ ನಾಟಕಗಳಲ್ಲಿ ಅಭಿ
ನಯಿಸುವ ಅವಕಾಶಗಳೂ ಸಾಕಷ್ಟು ಸಿಗುತ್ತಿದ್ದವು. ಕನ್ನಡ ಪಂಡಿತೆ ಎ. ಸುಂದರಮ್ಮ
ನವರು ಪ್ರತಿಭೆಯುಳ್ಳ, ಭಾವ ಪ್ರಧಾನವಾಗಿ ಹಾಡಬಲ್ಲ ಬಾಲಕಿಯರನ್ನು ಗುರುತಿಸಿ
ನಾಟಕಗಳಿಗೆ ಸೇರಿಸಿಕೊಂಡು ಅತ್ಯುತ್ತಮ ರೀತಿಯಲ್ಲಿ ರಂಗಶಿಕ್ಷಣ ಕೊಡುತ್ತಿದ್ದರು.
ಅವರುಗಳಲ್ಲಿ ಎಂ. ಪಿ. ರಾಜಮ್ಮ, ಎಸ್. ಕೆ. ಪದ್ಮಾದೇವಿ, ಶಕುಂತಲಾಬಾಯಿ
ಮುಖ್ಯರು. ಆರ್ಯಬಾಲಿಕ ಪಾಠಶಾಲೆ ಅಭಿನಯಿಸುತ್ತಿದ್ದ ನಾಟಕಗಳ ಕೀರ್ತಿ
ಅರಮನೆಯನ್ನು ಮುಟ್ಟಿತ್ತು. ನಾಲ್ವಡಿ ಕೃಷ್ಣರಾಜ ಒಡೆಯರ ಧರ್ಮಪತ್ನಿ ಮಹಾ
ಸನ್ನಿಧಾನದವರ ಸವಾರಿ ಬೆಂಗಳೂರಿಗೆ ದಯಮಾಡಿಸಿದಾಗ, ಬೆಂಗಳೂರು ಅರಮನೆ
ಯಲ್ಲಿ ಆರ್ಯಬಾಲಿಕ ಪಾಠಶಾಲೆಯ ಬಾಲಿಕೆಯರ ನಾಟಕಗಳು ತಪ್ಪದೆ ನಡೆಯುತ್ತಿತ್ತು.
ಪಂಡಿತೆ ಸುಂದರಮ್ಮನವರು ಬಾಲಿಕೆಯರನ್ನು ತಮ್ಮ ಶಾಲೆಯಲ್ಲೇ ವೇಷಭೂಷಣ
ಗಳಿಂದ ಸಿದ್ಧಮಾಡಿ, ಮೂರು ನಾಲ್ಕು ಜಟಕಾ ಬಂಡಿಗಳಲ್ಲಿ ಪಾತ್ರಧಾರಿಗಳನ್ನು ತುರುಕಿ

ಗಾಡಿಗಳನ್ನು ಗೋಷಾ ಪರದೆಗಳಿಂದ ಮುಚ್ಚಿ ಅರಮನೆಗೆ ಕರೆದೊಯ್ಯುತ್ತಿದ್ದರಂತೆ. ಮಹಾರಾಣಿಯವರು ಬಾಲಿಕೆಯರ ಕಲಾಪೂರ್ಣ ಅಭಿನಯವನ್ನು ಮೆಚ್ಚಿ ತಿಂಡಿ ತೀರ್ಥ ಗಳಿಂದ ಉಪಚರಿಸಿ ಮೆಚ್ಚುಕೊಟ್ಟು ಕಳಿಸುತ್ತಿದ್ದರಂತೆ. ಪಂಡಿತೆ ಸುಂದರಮ್ಮನವರು ಶಾಲಾ ತರಗತಿಗಳಲ್ಲಿ ಕಲಾ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸಿದ ಬಾಲಿಕೆಯರಲ್ಲಿ ಮುಂದೆ ಬಹು ಪ್ರಸಿದ್ಧಿಯ ಚಲನಚಿತ್ರ ತಾರೆಯಾಗಿ ಮೆರೆದವರಲ್ಲಿ ಒಬ್ಬರು ಎಂ. ವಿ. ರಾಜಮ್ಮನವರು. ಹಿಂದೊಮ್ಮೆ ಸುಪ್ರಸಿದ್ಧ ರಂಗಭೂಮಿಯ ನಟಿಯಾಗಿ, ಕೆಲವು ಕಾಲ ಚಲನಚಿತ್ರ ತಾರೆಯಾಗಿ, ಈಗಲೂ ಆಕಾಶವಾಣಿಯ ನಾಟಕಗಳಲ್ಲಿ ಅಭಿನಯಿಸಿ ಜನ ಪ್ರಿಯರಾಗಿರುವವರು ಇನ್ನೊಬ್ಬರು ಎಸ್. ಕೆ. ಪದ್ಮಾದೇವಿ. ಶಕುಂತಲಾಬಾಯಿಯ ಗಮಕಕಲಾ ಪರಿಚಾರಿಕೆಯೂ ಈ ಮುಪ್ಪುರಿ ಹೆಸರುಗಳಲ್ಲಿ ಸೇರಿಕೊಳ್ಳುತ್ತದೆ. ಇಂಪು ಕಂಠ, ಶಾಸ್ತ್ರೀಯ ಸಂಗೀತದ ಜ್ಞಾನ, ನಾಟಕವಾಡಿ ಗಳಿಸಿದ ಭಾವಾರ್ಥಸಿದ್ಧಿ ಮುಪ್ಪುರಿಗೊಂಡು ಬಾಲಿಕೆ ಮದುವಳಿಗೆ ಶಕುಂತಲಾಬಾಯಿ ಉರುಟಣೆಯ ಹಾಡು ಗಳನ್ನು ಹಾಡತೊಡಗಿದರೆ, ಮದುವೆಯ ಮನೆ ಮಂತ್ರಮುಗ್ಧವಾಗಿ ಕೇಳುತ್ತಿತ್ತು. ತ್ರಿಸ್ಥಾಯಿ ಸಂಚಾರಗಳಲ್ಲಿ ಹೇಗೆಂದರೆ ಹಾಗೆ ಹೊಮ್ಮುತ್ತಿದ್ದ ಇಂಪುನಾದ ಮದುವೆಯ ಮನೆಯನ್ನೆಲ್ಲ ತುಂಬುತ್ತಿತ್ತು. ಮದುವೆಗೆ ಮುಂಚೆ ನನ್ನ ಸೌಭಾಗ್ಯವತಿಯ ಹಾಡು ಗಾರಿಕೆಯನ್ನು ಕೇಳಿದ್ದೆನಾದರೂ ಮದುವೆಯ ಮನೆಯಲ್ಲಿ ಸಿಕ್ಕ ಸದವಕಾಶ ಹಿಂದೆ ನನಗೆ ಸಿಕ್ಕಿರಲಿಲ್ಲ. ಆಕೆಯಲ್ಲಿ ಸುಪ್ತವಾಗಿದ್ದ ಗಮಕಕಲಾ ಪ್ರತಿಭೆ ಗೋಚರವಾಗಿರಲಿಲ್ಲ. ಎಂಟು ದಿವಸ ಸಂಜೆಗಳೂ ಪಟ್ಟಾಗಿ ಉರುಟಣೆ ಹಾಡುಗಳನ್ನು ಕೇಳಿ ನನ್ನದೇ ರಸ ಲೋಕವನ್ನು ನಿರ್ಮಿಸಿಕೊಂಡೆ. ರಸಲೋಕದ ಕಿನ್ನರಿಯನ್ನು ಕೈಹಿಡಿದ ನಾನು ಭಾಗ್ಯ ವಂತನೆಂದು ಹೆಮ್ಮೆಪಟ್ಟೆ. ಶಕುಂತಲಾಬಾಯಿಯ ಗಮಕ ಪ್ರತಿಭೆ ಕಮರಿಹೋಗಲು ಬಿಡಬಾರದು ಎಂದು ಅಂದೇ ಮನಸ್ಸಿನಲ್ಲಿ ಸಂಕಲ್ಪಮಾಡಿಕೊಂಡೆ.

ನಾನೇಕೆ ರಾಜಕೀಯ ಬಿಟ್ಟೆ ?

ನಾನು ವಿದ್ಯಾರ್ಥಿ ದೆಸೆಯಲ್ಲೇ ಸಾಹಿತ್ಯಾಭಿರುಚಿಯ ಜೊತೆಗೆ ರಾಜಕೀಯದ ಒಲವನ್ನೂ ಬೆಳೆಸಿಕೊಂಡಿದ್ದೆ. ಮದುವೆ ಮನೆಯಲ್ಲಿ ನನ್ನ ರಾಜಕೀಯಾಸಕ್ತಿಯನ್ನು ಕಮರಿಸಿಬಿಟ್ಟರು ನನ್ನ ಭಾವ(ಮಾವ). ಎಂಟು ದಿವಸಗಳವರೆಗೆ ವಿಜೃಂಭಣೆಯಿಂದ ನಡೆದ ಮದುವೆ ಬೀಗರ ಔತಣದಲ್ಲಿ ಮುಕ್ತಾಯವಾಯಿತು. ಇನ್ನು ಬೀಗರನ್ನು ಉಡುಗೊರೆ ಉಪಚಾರಗಳಿಂದ ಗೌರವಿಸಿ ಅವರವರ ಮನೆಗಳಿಗೆ ಬೀಳ್ಕೊಡುವ ಕಾರ್ಯ ವೊಂದು ಉಳಿಯಿತು. ಬೀಗರನ್ನು ಬೀಳ್ಕೊಡಬೇಕು. ಆ ಸಮಯದಲ್ಲಿ ನನ್ನ ಭಾವ ನನ್ನೆಡೆಗೆ ಬಂದು "ಪಾಂಡಣ್ಣ, ಸ್ವಲ್ಪ ಹೀಗೆ ಬಾ ಮಾತಾಡುವುದಿದೆ" ಎಂದು ನನ್ನ ಕೈ ಹಿಡಿದು ಮದುವೆ ಮನೆಯಲ್ಲಿ ಬಿಡುಬೀಸಾಗಿದ್ದ ಒಂದು ಕೊಠಡಿಗೆ ಕರೆದೊಯ್ದರು. ನಮ್ಮ ಮಾತುಗಳನ್ನು ಯಾರೂ ಕೇಳದಂತೆ ಒಳತಾಪಾಳದಿಂದ ಬಾಗಿಲು ಭದ್ರಪಡಿ ಸಿದರು. ನನ್ನ ಬಲಗೈಯನ್ನು ಅವರ ಬಲಗೈಯಿಂದ ಮೃದುವಾಗಿ ಒತ್ತಿ "ಪಾಂಡಣ್ಣ,

ಭಾಷೆಕೊಡು, ನಾನು ಹೇಳಿದಂತೆ ಕೇಳು" ಎಂದು ಮಾತಿಗೆ ಪ್ರಾರಂಭಿಸಿದರು. ನಾನು ಈ ಮಾತುಗಳನ್ನು ಕೇಳಿ ಬೆಚ್ಚಿದೆ. ನಾನು ಹದ್ದುಮೀರಿ ಹೋಗದಂತೆ ಇಬ್ಬರು ತಾಯಿಯರುಗಳ ಎಚ್ಚರದಲ್ಲಿ ಬೆಳೆದವನು. ಇಂಥವನಲ್ಲಿ ನನ್ನಕ್ಕ ಭಾವ ಮದುವೆಯಾಗತ್ತಲೇ ಏನು ಊನ ಕಂಡರು ? ಎಂದು ನೊಂದುಕೊಂಡೆ. "ಭಾವಾಜಿ, ನನ್ನಿಂಪೇನಾಗಬೇಕು ? ಹೇಳಿ"ಎಂದೆ. "ಪಾಂಡಣ್ಣ ನೀನು ಹರತಾಳ ಸತ್ಯಾಗ್ರಹಗಳಿಂದು ಗಾಂಧಿ ಚಳುವಳಿಯಲ್ಲಿ ಭಾಗವಹಿಸುತ್ತಿದ್ದೀಯೆ ಇನ್ನು ಮುಂದೆ ಅವು ಕೂಡದು. ಮನೆಗೆ ನೀನೇ ಪ್ರಾಯಬಂದ ಗಂಡಸು. ಜೈಲಿಗೆ ಹೋದರೆ ನಿನ್ನ ತಾಯಿ ಚಿಕ್ಕಮ್ಮನ ಪಾಡೇನಾಗಬೇಕು ? ಅಮ್ಮಣ್ಣಿಯನ್ನು ಮುದ್ದಿನಿಂದ ಸಾಕಿದ್ದೇವೆ. ನಮ್ಮ ಗತಿಯೇನಾಗಬೇಕು ?" ಎಂದು ಉದ್ವೇಗದಿಂದ ನುಡಿದರು. "ಭಾಷೆ ಕೊಡು" ಎಂದು ಒತ್ತಾಯಿಸಿದರು. ಆರಡಿ ಎತ್ತರದ ಸ್ಫುರದ್ರೂಪಿ ಗಾರ್ಡ್ ವೆಂಕೋಬರಾವ್, ಲಂಚ ರುಷುವತ್ತಿಗೆ ಕೈಯೊಡ್ಡಿ ಅರಿಯದ ಶುದ್ಧ ಜೀವನದ ಗಾರ್ಡ್ ವೆಂಕೋಬರಾವ್ ರೈಲ್ವೆ ಇಲಾಖೆಯಲ್ಲಿ, ಸಾರ್ವಜನಿಕರಲ್ಲಿ ಸಜ್ಜನ ಎನ್ನಿಸಿಕೊಂಡ ಗಾರ್ಡ್ ವೆಂಕೋಬರಾವ್, ನನ್ನನ್ನು ದೈನ್ಯದಿಂದ ಕೇಳಿಕೊಳ್ಳುತ್ತಿದ್ದಾರೆ. ಗಂಡನಿಗೆ ತಕ್ಕ ಹೆಂಡತಿ ನನ್ನಕ್ಕ. ಸುಂದರ ರಮಣಿ, ಸದ್ಗೃಹಿಣಿ, ಕೊಡುಗೈ ತಾಯಿ, ಮನೆಯಾಳ್ತನದಲ್ಲಿ ಒಪ್ಪಗಾತಿ, ಯಜಮಾನಿ. ಆಕೆಯೂ ತನ್ನ ಪತಿಯ ಬಳಿ ನಿಂತು ನನ್ನನ್ನು ಕೇಳಿಕೊಳ್ಳುತ್ತಿರುವಂತೆ ಭಾಸವಾಯಿತು. ಸದ್ಗೃಹಸ್ತ ದಂಪತಿಗಳ ಮನ ನೋಯಿಸಬಾರದು ಎಂಬ ದೃಢ ನಿರ್ಧಾರಕ್ಕೆ ಬಂದೆ. "ಭಾವಾಜಿ ಎಲ್ಲರ ಕಣ್ಣು ನನ್ನ ಮೇಲೆ ಹಾಯುವ ಹಾಗೆ ಗಾಂಧೀಚಳವಳಿಯಲ್ಲಿ ಮುನ್ನುಗ್ಗುವುದಿಲ್ಲ, ನಿಶ್ಚಿಂತರಾಗಿ" ಎಂದು ಆಶ್ವಾಸನೆಕೊಟ್ಟೆ.

ನಾನು ರಾಜಕೀಯದಲ್ಲೂ ಪ್ರಸಿದ್ಧನಾಗಬೇಕೆಂಬ ಮನಸ್ಸಿನಲ್ಲಿ ಬಹುವರ್ಷಗಳಿಂದಲೂ ಕಟ್ಟಿದ್ದ ಆಶಾಗೋಪುರ ಕುಸಿದು ನೆಲದ ಹುಡಿಯಲ್ಲಿ ಹುಡಿಯಾಗಿ ಬೆರೆತು ನಾಮಾವಶೇಷವಾಗಿ ಹೋಗಿತ್ತು.

ಕಿನ್ನರಿಯ ರಸಲೋಕದಿಂದ ನಿತ್ಯ ಜೀವನದ ಲೋಕಕ್ಕೆ

ನನ್ನಕ್ಕ ಭಾವ ಸಂತಸದಿಂದ ಮದುವೆಗೆ ಬಂದಿದ್ದ ಸಮಸ್ತರನ್ನೂ ಉಪಚರಿಸಿ, ಬೀಗರನ್ನು ವಿಶೇಷವಾಗಿ ಗೌರವಿಸಿ ಉಡುಗೊರೆ ಉಪಚಾರಗಳಿಂದ ಸಂತೃಪ್ತಿಗೊಳಿಸಿ ಬೀಳ್ಕೊಟ್ಟರು. ನಾವು ಅರಳೇಪೇಟೆಯ ಕೊಟ್ಟಗೆಗಲ್ಲಿಯ ಮದುವೆ ಮನೆಯಿಂದ, ನಗರ್ತರ ಪೇಟೆಯ ಒಳಪೇಟೆಯ ಹಲಸೂರು ಪೇಟೆಯಲ್ಲಿದ್ದ ದಾಸೋಪಂತರ ಗಲ್ಲಿಯ ನಮ್ಮ ಮನೆಗೆ ಹಿಂತಿರುಗಿದೆವು.

ಮದುವೆಯ ಕಿನ್ನರ ರಸಲೋಕದಿಂದ ನಿತ್ಯಜೀವನದ ನಿಜಲೋಕಕ್ಕೆ ಹೊಂದಿಕೊಳ್ಳುವುದಕ್ಕೆ ನನ್ನ ಮನಸ್ಸು ತುಯಿಲಾಡುತ್ತಿತ್ತು.

೨. ನನ್ನ ಸೌಭಾಗ್ಯವತಿ ಗಮಕಕಲಾ ಪರಿಚಾರಿಕೆಯಾದರು

ಗಮಕ ಕಲಾಸಕ್ತಿ

ನಮ್ಮ ಮದುವೆಯಾದ ಏಳು ವರ್ಷಗಳ ಮೇಲೆ ನಮ್ಮ ಮದುವೆಯಾದ ದಿನಕ್ಕೆ ಸರಿಯಾಗಿ 1937ರ ಮೇ 5ನೆಯ ದಿನಾಂಕದಂದು ಶಾಸ್ತ್ರೋಕ್ತವಾಗಿ ನಾವು ಗೃಹಸ್ಥಾಶ್ರಮವನ್ನು ಸ್ವೀಕರಿಸಿದೆವು. ನಾವು ಸಂಸಾರ ಹೂಡಿ ಕೇವಲ ಎರಡು ವಾರಗಳಾಗಿತ್ತಷ್ಟೆ. ಕರ್ಣಾಟಕ ಪರಿಷತ್ತಿನ ಆಶ್ರಯದಲ್ಲಿ ಗಮಕ ತರಗತಿ ಪ್ರಾರಂಭವಾಗುವುದೆಂದೂ, ಭಾರತವಾಚನ ಪ್ರವೀಣ ಸಂ. ಗೋ. ಬಿಂದೂರಾಯರು ಅಧ್ಯಾಪಕರೆಂದೂ ಬೆಂಗಳೂರು ನಗರದ ದೈನಂದಿನ ಪತ್ರಿಕೆಗಳಲ್ಲಿ ಸುದ್ದಿ ಪ್ರಕಟವಾಗಿತ್ತು. ಓದಿದವನೇ ನನ್ನ ಸೌಭಾಗ್ಯವತಿಯನ್ನು ಗಮಕ ತರಗತಿಗೆ ಸೇರಿಸುವುದೆಂದು ನಿರ್ಧರಿಸಿದೆ.

ನಾನು ಬಾಲಕನಾಗಿದ್ದಾಗಿನಿಂದಲೂ ಗಮಕ ಕಲಾಭಿಮಾನಿಯಾಗಿದ್ದುದೇ ಸಕಾರಣವಾಗಿತ್ತು ಶಕುಂತಲಾಬಾಯಿಯನ್ನು ನಾನು ಗಮಕಕಲಾಭ್ಯಾಸಕ್ಕೆ ಕಳಿಸುವುದಕ್ಕೆ. ನಮ್ಮ ಹಲಸೂರುಪೇಟೆ ಮನೆಗೆ ಸುಮಾರು ಒಂದು ಮೈಲಿ ಫಾಸಲೆಯಲ್ಲಿದ್ದ ಬಳ್ಳಾಪುರಪೇಟೆ ರಂಗಸ್ವಾಮಿ ದೇವಸ್ಥಾನದಲ್ಲಿ ನಿತ್ಯವೂ ಕುಮಾರವ್ಯಾಸ ಭಾರತ ವಾಚನ-ಪ್ರವಚನ ನಡೆಯುತ್ತಿತ್ತು. ನಾನು ಲಂಡನ್ ಮಿಷನ್ ಹೈಸ್ಕೂಲಿನ ಮಾಧ್ಯಮಿಕ ಶಾಲೆಯ ಶಾಖೆಯಲ್ಲಿ ವಿದ್ಯಾರ್ಥಿಯಾಗಿದ್ದೆ. ಸಂಜೆ ಶಾಲೆ ಬಿಡುತ್ತಲೇ ಮನೆಗೆ ಹೋಗದೆ ನೇರ ರಂಗಸ್ವಾಮಿ ಗುಡಿಗೆ ಹೋಗಿ ಭಾರತ ವಾಚನ ಪ್ರವಚನ ಕೇಳಲು ಕೂಡುತ್ತಿದ್ದೆ. ಭಾರತ ವಾಚನ ಮಾಡುತ್ತಿದ್ದ ಗಮಕಿ ಸುಮಾರಾಗಿ ಓದುತ್ತಿದ್ದರು. ಆದರೆ ಪ್ರವಚನ ಮಾಡುತ್ತಿದ್ದ ವ್ಯಕ್ತಿ ತುಂಬ ಆಕರ್ಷಕರಾಗಿದ್ದರು. ಅವರ ವಾಕ್ಪಟುತ್ವ ಅದ್ಭುತವಾಗಿತ್ತು. ಭವ್ಯಾಕಾರದ ಸುಂದರ ಪುರುಷ, ತೇಜಸ್ವಿ, ಕಂಚುಗಂಟೆಯ ನಾದದಿಂದ ಶಬ್ದಾರ್ಥ ಬಿಡಿಸಿ, ನಿರರ್ಗಳವಾಗಿ ಅಸ್ಖಲಿತವಾಗಿ ವ್ಯಾಖ್ಯಾನ ಮಾಡುತ್ತಿದ್ದರು. ವ್ಯಾಖ್ಯಾನ ಮುಗಿಯಿತು ಎಂಬಲ್ಲಿ "ಆ ಸಮಯದಲ್ಲಿ" ಎಂದು ಗಮಕಿಗೆ ಮುಂದು ಪದ್ಯ ಓದುವುದಕ್ಕೆ ಸೂಚನೆ ಕೊಡುತ್ತಿದ್ದರು. ಗಮಕಿ ತಮ್ಮ ವಾಚನವನ್ನು ಪ್ರಾರಂಭಿಸುತ್ತಿದ್ದರು. ನನ್ನ ಬಾಲ್ಯ ಜೀವನದಲ್ಲಿ ಈ ಭಾರತ ವಾಚನ ಪ್ರವಚನದ ಕೇಳ್ಮೆ ತುಂಬ ಪರಿಣಾಮವನ್ನುಂಟುಮಾಡಿತು. ಸಾಹಿತ್ಯಾಸಕ್ತಿ ಹುಟ್ಟಿಸಿತು.

ನಾನು ಲಂಡನ್ ಮಿಷನ್ ಸ್ಕೂಲಿನಲ್ಲಿ ಮಾಧ್ಯಮಿಕ ವಿದ್ಯಾಭ್ಯಾಸ ಮುಗಿಸಿ ಅದೇ ಶಾಲೆಯಲ್ಲಿ ಪ್ರೌಢಶಾಲಾಭ್ಯಾಸಕ್ಕೆ ತೊಡಗಿದೆ. ಕನ್ನಡ ಪಂಡಿತರಾಗಿದ್ದ ಕೆ. ಹನುಮಂತರಾಯರು ಪ್ರೌಢಶಾಲಾ ವಿದ್ಯಾರ್ಥಿಗಳಲ್ಲಿ ಕನ್ನಡಾಭಿಮಾನ ಬೆಳೆಸುವುದಕ್ಕಾಗಿ ಕರ್ಣಾಟಕ ವಾಙ್ಮಯ ಸಂಘವನ್ನು ಸ್ಥಾಪಿಸಿದ್ದರು. ವಿದ್ಯಾರ್ಥಿಗಳಿಂದಲೇ ಕನ್ನಡದಲ್ಲಿದ್ದ ಉತ್ತಮ ಸಾಹಿತ್ಯ ಪುಸ್ತಕಗಳನ್ನು ಸಂಗ್ರಹಿಸಿ ಒಂದು ಸರಸ್ವತೀ ಭಂಡಾರವನ್ನು ತೆರೆದಿದ್ದರು. ವಿದ್ಯಾರ್ಥಿಗಳಿಂದ ತಿಂಗಳಿಗೆ ನಾಲ್ಕಾಣೆ ಚಂದ ಎತ್ತಿ

ಐವತ್ತು ಅರವತ್ತು ವಿದ್ಯಾರ್ಥಿ ಸದಸ್ಯರುಗಳನ್ನು ಕೂಡಿಸಿ ಪ್ರತಿವಾರವೂ ಕಾರ್ಯಕ್ರಮ ನಡೆಸುತ್ತಿದ್ದರು. ಶಾಲಾ ಮುಖ್ಯಾಧಿಕಾರಿಗಳಾಗಿದ್ದ ಎ. ಯಿ. ವಾಲ್ಟನ್ ಸಾಹೇಬರು ನಮ್ಮ ಸಂಘದ ಅಧ್ಯಕ್ಷರಾಗಿದ್ದುಕೊಂಡು ಕನ್ನಡ ಚಟುವಟಿಕೆಗಳಿಗೆ ತುಂಬ ಪ್ರೋತ್ಸಾಹ ಕೊಡುತ್ತಿದ್ದರು. ನಾನು ಪ್ರೌಢಶಾಲಾ ತರಗತಿಯ ಮೆಟ್ಟಲು ಹತ್ತುತ್ತಲೇ ಸಂಘದ ಸದಸ್ಯನಾದೆ, ಪುಸ್ತಕಭಂಡಾರಿಯಾದೆ, ಕಾರ್ಯದರ್ಶಿಯಾದೆ. ಸಂಘದಲ್ಲಿ ಪ್ರಾರ್ಥನೆ, ಗದ್ಯವಾಚನ, ಪದ್ಯವಾಚನ, ಚರ್ಚೆ ಅಥವಾ ಉಪನ್ಯಾಸ ಪ್ರತಿವಾರವೂ ತಪ್ಪದೆ ನಡೆಯುತ್ತಿತ್ತು. ಕಥೆ ಕಾದಂಬರಿಗಳಿಂದ ಆಧರಿಸಿದ ಸ್ವಾರಸ್ಯ ಭಾಗ ಗದ್ಯ ವಾಚನಕ್ಕೆ, ಗದುಗಿನ ಭಾರತದ ಪದ್ಯಗಳು ಪದ್ಯವಾಚನಕ್ಕೆ ಸರಕಾಗಿದ್ದವು. ಸಭೆಗಳಲ್ಲಿ ಗದ್ಯವನ್ನು ಹೇಗೆ ವಾಚಿಸಬೇಕು, ಪದ್ಯಗಳನ್ನು ಭಾವಾರ್ಥಪೂರ್ಣವಾಗಿ ಹೇಗೆ ಹೇಳಬೇಕು ಎಂದು ತೋರಿಸಿಕೊಡುತ್ತಿದ್ದರು ಹನುಮಂತರಾಯರು. ಬಿ. ವಿ. ಸುಬ್ಬರಾವ್ ಎಂಬ ಹಿರಿತರಗತಿಯ ವಿದ್ಯಾರ್ಥಿ ಸುಶ್ರಾವ್ಯವಾಗಿ ಭಾರತ ಓದುತ್ತಿದ್ದ ಪ್ರತಿ ಸಭೆಯಲ್ಲೂ ತಪ್ಪದೆ ರಂಗಸ್ವಾಮಿ ದೇವಸ್ಥಾನದಲ್ಲಿ ನಡೆಯುತ್ತಿದ್ದ ನೀರಸ ಭಾರತವಾಚನಕ್ಕೂ ಸುಬ್ಬರಾವ್ ಗಮುಕಿಸಿ ಮಾಡುತ್ತಿದ್ದ ಭಾರತವಾಚನಕ್ಕೂ ಅಜಗಜಾಂತರ. ಸುಬ್ಬರಾಯನ ಭಾರತವಾಚನ ನನ್ನ ಮನಸ್ಸಿನ ಮೇಲೆ ಅಗಾಧವಾದ ಪರಿಣಾಮವನ್ನುಂಟುಮಾಡಿತು. ನಾನು ಸುಬ್ಬರಾಯನ ಪರಮ ಮಿತ್ರನಾದೆ.

ಲಂಡನ್ ಮಿಷನ್ ಹೈಸ್ಕೂಲಿನ ಕರ್ಣಾಟಕ ವಾಙ್ಮಯ ಸಂಘದ ಸಂಪರ್ಕದಿಂದ ನನ್ನ ಕನ್ನಡಾಭಿಮಾನ ಕೊನರಿತು. ಪರಿಣಾಮ ಸುಬ್ಬರಾಯನನ್ನು ಕಟ್ಟಿಕೊಂಡು ದೇಶಬಂಧು ಕರ್ಣಾಟಕ ಸಂಘವನ್ನು ಸ್ಥಾಪಿಸಿದೆ. ಬಿ. ಟಿ. ಪೀತಾಂಬರರಾವ್, ಬಿ. ಹನುಮಂತಪ್ಪ ಸೇರಿ ನಾವು ನಾಲ್ಕು ಮಂದಿ ವಿದ್ಯಾರ್ಥಿಗಳು ದೇಶಬಂಧು ಕರ್ಣಾಟಕ ಸಂಘದ ಆಧಾರ ಕಂಬಗಳಾದೆವು. ಸುಬ್ಬರಾವ್ ತಮ್ಮ ಸದಾಶಿವರಾವ್ ನಟ್ಕಲ್ಲಪ್ಪನವರ ಬಂಧು ಕೃಷ್ಣಸ್ವಾಮಿ, ಇನ್ನೊಬ್ಬರು, ಇಷ್ಟು ಮಂದಿಗೆ ನಮ್ಮ ಸಂಘ ಸೀಮಿತವಾಗಿತ್ತು. ತರುಣ ಲೋಕದಲ್ಲಿ ಉತ್ತಮ ಕನ್ನಡ ಕತೆಗಾರರೆಂದು ಪ್ರಸಿದ್ಧರಾಗಿ, “ಕ್ಯಾಪ್ಟನ್ ಬಾಬಿ" ಕತೆಗೆ ಸೆಂಟ್ರಲ್ ಕಾಲಾಜಿನ ಕರ್ಣಾಟಕ ಸಂಘದಿಂದ ಮುದ್ದಣನ ಸ್ವರ್ಣ ಪದಕ ಪಡೆದಿದ್ದ ಈ. ಎ. ಭಾಸ್ಕರರಾಯರು ನಮ್ಮ ಸಂಘದ ಅಧ್ಯಕ್ಷರು. ತಪ್ಪದೆ ವಾರವಾರವೂ ಸುಬ್ಬರಾಯನ ಕೊಠಡಿಯಲ್ಲಿ ಸಂಘದ ಸಭೆ ಸೇರುತ್ತಿತ್ತು. ಸುಬ್ಬರಾಯನ ಭಾರತ ವಾಚನ ಪ್ರಬಲ ಆಕರ್ಷಣೆ. ಕುಮಾರ ವ್ಯಾಸ ನನ್ನ ಮನಸ್ಸಿನ ಮೇಲೆ ತನ್ನ ವರ್ಚಸ್ಸಿನ ಶಾಶ್ವತ ಮುದ್ರೆಯೊತ್ತಿದ ಸುಬ್ಬರಾಯನ ವಾಚನದಿಂದ.

ಮದುವೆಯಾಯಿತು, S S.L.C. ಪರೀಕ್ಷೆಯಲ್ಲಿ “ಫೇಲ್” ಎಂದು ಫಲಿತಾಂಶ ಬಂತು. ಮದುವೆಗೆ ಮೂರು ತಿಂಗಳಿದೆಯೆನ್ನುವಾಗ ನಾನು ವಿಷಮಶೀತಕ್ಕೆ ಬಲಿಯಾಗಿ ನನ್ನ ಆರೋಗ್ಯ ಕ್ಷೀಣಿಸಿ ನನ್ನ ಪರೀಕ್ಷೆಯ ಸಿದ್ಧತೆ ಕುಂಠಿತ್ತು. “ಅಮ್ಮಣ್ಣಿ ನಿನ್ನ ಗಂಡ ಪರೀಕ್ಷೆಯಲ್ಲಿ ಫೇಲಾದನಲ್ಲೇ !” ಎಂದರಂತೆ ಯಾರೋ. “ಆದರೆ ಆಯಿತು, ಮುಂದೆ

ಪಾಸು ಮಾಡುತ್ತಾರೆ." ಎಂದಳಂತೆ ಬಾಲೆ ಶಕುಂತಲಾಬಾಯಿ. ಲಂಡನ್ ಮಿಷನ್ ಹೈಸ್ಕೂಲಿನಲ್ಲಿ ಜಾಣನೆಂದು ಅನ್ನಿಸಿಕೊಂಡು ಇಡೀ ಶಾಲೆಯ ವಿದ್ಯಾರ್ಥಿಗಳ ಮನ ಸೆಳೆದಿದ್ದ ನಾನು ಅದೇ ಶಾಲೆಯಲ್ಲಿ ನನ್ನ ವಿದ್ಯಾಭ್ಯಾಸ ಇನ್ನೊಂದು ವರ್ಷ ಮುಂದು ವರಿಸುವುದು ಅವಮಾನವೆಂದು ನಿರ್ಧರಿಸಿದೆ. ವಾಲ್ಟನ್ ಸಾಹೇಬರು ನನಗಾಗಿ ಮರು ಗಿದರು. ನನ್ನ ಒತ್ತಾಯದ ಮೇಲೆ ಅಪ್ಪಣೆ ಚೀಟಿ ಕೊಟ್ಟು ಬೇರೆ ಶಾಲೆಗೆ ಕಳಿಸಿದರು. ನಾನು ಅಲಸೂರು ಪೇಟೆಯಿಂದ ನಾಲ್ಕೈದು ಮೈಲಿ ದೂರದಲ್ಲಿದ್ದ ಬಸವನಗುಡಿಯ ದೇಶೀಯ ವಿದ್ಯಾಶಾಲೆಗೆ ಹೋಗಿ ಸೇರಿಕೊಂಡೆ. ಅಲ್ಲಿ ಭಾರತವಾಚನ ಪ್ರವೀಣ ಸಂ. ಗೋ. ಬಿಂದೂರಾಯರ ಭಾರತವಾಚನ ಕೇಳುವ ಪ್ರಮೇಯ ಒದಗಿಬಂತು. ಶಕುಂತಲಾಬಾಯಿ ಭಾರತವಾಚನ ಪ್ರವೀಣರಿಂದಲೇ ಗಮಕ ಪಾಠ ಕಲಿಯುವುದಕ್ಕೆ ಇದು ಕಾರಣವಾಯಿತು.

ಒಂದು ಸಂಜೆ ಮುಖ್ಯೋಪಾಧ್ಯಾಯರಾಗಿದ್ದ ಕೋಲಾರದ ಸಂಪದ್ಗಿರಿರಾಯರ ಬಳಿ ಏನೋ ಮಾತಾಡುತ್ತ ನಿಂತಿದ್ದೆ, ನಿಟ್ಟೂರು ಶ್ರೀನಿವಾಸರಾಯರು ಅಲ್ಲಿಗೆ ಆಗಮಿಸಿ "ಸಂಪತ್, ನಮ್ಮ ಮನೆಯಲ್ಲಿ ಇವತ್ತು ಬಿಂದೂರಾಯರ ಭಾರತವಾಚನವಿದೆ ಬಾ" ಎಂದು ಕರೆದರು. ನಾನು ರಾಯರನ್ನು "ನಾನೂ ಬರಬಹುದೇ ?" ಎಂದು ಕೇಳಿದೆ. ಹದಿನೇಳು ವರ್ಷದ ಹುಡುಗನನ್ನು ಅವರು ಎಷ್ಟು ಮಟ್ಟಿಗೆ ಗೌರವಿಸಿದರೆಂದರೆ ಅದು ಅವರ ಸೌಜನ್ಯ ಗಾಂಭೀರ್ಯಗಳನ್ನು ತೋರಿಸುತ್ತದೆ. ನಗುತ್ತ "ಅಗತ್ಯವಾಗಿ ಬನ್ನಿ" ಎಂದು ತುಂಬು ವಿಶ್ವಾಸದಿಂದ ಕರೆದರು. ನನ್ನ ಗುರುವರ್ಯ ಸಂಪದ್ಗಿರಿರಾಯರ ಜೊತೆ ಯಲ್ಲಿ ನಿಟ್ಟೂರು ಶ್ರೀನಿವಾಸರಾಯರ ಮನೆಗೆ ಹೋದೆ. ಅಲ್ಲಿ ಸಿ. ಕೆ. ನಾಗರಾಜ ರಾಯರ ಪರಿಚಯವಾಯಿತು. ಆತ ಮುಂದೆ ನನಗೆ ಆಪ್ತಮಿತ್ರರಾದರು. ಬಿಂದೂ ರಾಯರು ಕುಮಾರವ್ಯಾಸ ಭಾರತದಿಂದ ಕೃಷ್ಣರಾಯಭಾರ ಪ್ರಕರಣವನ್ನು ಅದ್ಭುತ ವಾಗಿ ಒಂದು ಒಂದೂವರೆ ಗಂಟೆಗಳ ಕಾಲ ವಾಚನ ಮಾಡಿದರು. ಕೃಷ್ಣ ದುರ್ಯೋ ಧನ, ಭೀಷ್ಮ, ದ್ರೋಣ, ವಿದುರ, ಧೃತರಾಷ್ಟ್ರ, ಗಾಂಧಾರಿ, ನನ್ನ ಕಣ್ಣಮುಂದೆ ಜೀವಂತವಾಗಿ ಬಂದು ನಿಂತಂತೆ ಅನುಭವವಾಯಿತು. "ವೇದಪುರುಷನ ಸುತನ ಸುತನ" ಪದ್ಯದಿಂದ ಅವರು ತಮ್ಮ ವಾಚನವನ್ನು ಮುಕ್ತಾಯ ಮಾಡಿದಾಗ ನಾನು ದ್ವಾಪರ ಯುಗಕ್ಕೇ ಹೋಗಿದ್ದೆ. ಕುವೆಂಪು ಹಾಡಿದ್ದ

"ಕುಮಾರವ್ಯಾಸನು ಹಾಡಿದನೆಂದರೆ
ಕಲಿಯುಗ ದ್ವಾಪರವಾಗುವುದು
ಭಾರತ ಕಣ್ಣಲಿ ಕುಣಿಯುವುದು, ಮೈಯಲಿ
ಮಿಂಚಿನ ಹೊಳೆ ತುಳುಕಾಡುವುದು !"

ಕವನ "ಸತ್ಯ ಸತ್ಯ" ಎಂದಿತು ನನ್ನ ಮನಸ್ಸು. ಕೋಕಿಲ ಕಂಠದ, ಗೌಳ ಶಾರೀರದ ನನ್ನ ಸೌಭಾಗ್ಯವತಿ ನನ್ನ ಮನೆಗೆ ಬಂದ ಮೇಲೆ ಆಕೆಗೆ ಉತ್ತಮ ಗುರುಗಳಿಂದ ಭಾರತ

ವಾಚನ ಕಲಿಸಬೇಕೆಂದು ಮನಸ್ಸಿನಲ್ಲಿ ಆಸೆ ಕುದುರಿಸಿಕೊಂಡೆ! ಬಿಂದೂರಾಯರೇ ಆದರೆ ಮೇಲಲ್ಲ! ಎಂದಿತು ಮನಸ್ಸು.

ಬಹು ಬೇಗ ನನ್ನ ಮದುವೆಯಾದ ವರ್ಷದಲ್ಲೇ ಮೈಸೂರಿನಲ್ಲಿ ಭಾರತದ ಕೃಷ್ಣಗಿರಿ ಕೃಷ್ಣರಾಯರ ಭಾರತವಾಚನ ಕೇಳುವ ಸದವಕಾಶವನ್ನು ನಾನೇ ಮುಂಬಾಲು ಬಿದ್ದು ಪಡೆದುಕೊಂಡೆ. ಹಸೆಮಣೆಯ ಮೇಲೆ ಕೂತು ನನಗೆ ಶಕುಂತಲಾಬಾಯಿಯನ್ನು ಧಾರೆಯೆರೆಸಿಕೊಂಡ ನನ್ನ ದೊಡ್ಡಮ್ಮ ದೊಡ್ಡಪ್ಪನವರ ಮಗಳ ಮದುವೆಗೆ ಕೃಷ್ಣರಾಯರು ಬಂದಿದ್ದರು. ಮಧ್ಯಾಹ್ನ ಭೂರಿ ಭೋಜನವಾಗಿ ಫಲತಾಂಬೂಲ ಸ್ವೀಕರಿಸುವ ವೇಳೆ ಅತಿಥಿಗಳೆಲ್ಲ ಒಂದು ಕಡೆ ಸೇರಿದ್ದಾರೆ. ಆ ಸಮಯದಲ್ಲಿ ಒಬ್ಬರಿಬ್ಬರು ಪಿಸುಪಿಸು ಮಾತಾಡುತ್ತಿದ್ದಾರೆ. ದೂರದಲ್ಲಿ ಕುಳಿತ ಒಬ್ಬರನ್ನು ಬೆಟ್ಟು ತೋರಿಸಿ ಭಾರತದ ಕೃಷ್ಣರಾಯರು ಎಂದು ತಮ್ಮಲ್ಲಿ ಆಡಿಕೊಳ್ಳುತ್ತಿದ್ದಾರೆ. ನಾನು ಪಿಸುಮಾತು ಕೇಳಿ ಜಾಗೃತನಾದೆ. ರಾಯರ ಬಳಿ ಹೋಗಿ "ರಾಯರೆ, ನಿಮ್ಮ ಹೆಸರು ಕೇಳಿದ್ದೇನೆ. ನಿಮ್ಮ ಭಾರತ ಕೇಳಬೇಕಲ್ಲ?" ಎಂದು ವಿನಯದಿಂದ ನನ್ನ ಮನಸ್ಸನ್ನು ಬಿಚ್ಚಿ ನುಡಿದೆ. ರಾಯರು ನಗುತ್ತ "ನನ್ನ ಭಾರತ ಕೇಳಬೇಕೋ. ಒಂದು ಕಂಡಿಷನ್ನಿಗೆ ಒಪ್ಪಿದರೆ ಆಗಬಹುದು" ಎಂದರು. ನಾನು "ಏನಾಗಬೇಕು?" ಎಂದು ಕೇಳಿದೆ. ರಾಯರು "ಒಂದು ತಿರುಪಿನ ತಂಬಿಗೆ ತುಂಬ ಬಿಸಿಬಿಸಿ ಕಾಫಿ ತಂದಿಡಬೇಕು." ಎಂದರು. ನನಗೆ ಸ್ವರ್ಗ ತುದಿಗಾಲಿಗೆ ಎಟುಕಿದಷ್ಟು ಸಂತೋಷವಾಯಿತು. ಅಡಿಗೆ ಮನೆಗೆ ನುಗ್ಗಿ ತಿರುಪಿನ ತಂಬಿಗೆ ತುಂಬ ಕಾಫಿ ತುಂಬಿಸಿಕೊಂಡು ಬಂದೆ. ರಾಯರು ಮೇ ತಿಂಗಳ ಉರಿ ಬೇಸಗೆಯ ಬಿಸಿಲನ್ನು ಲೆಕ್ಕಿಸದೆ ಒಂದು ಗಂಟೆಯ ಕಾಲ ಕುಮಾರ ವ್ಯಾಸ ಭಾರತದಿಂದ ದೂರ್ವಾಸಾತಿಥ್ಯ ಭಾಗವನ್ನು, ಅವರ ಮಾತಿನಲ್ಲಿಯೇ ಹೇಳುವುದಾದರೆ **ಪೊಗದಸ್ತಾಗಿ,** ಓದಿದರು. ಬಿಂದೂರಾಯರ ಭಾರತವಾಚನ ಸಾಹಿತ್ಯ ಪ್ರಧಾನ ಕೃಷ್ಣರಾಯರ ವಾಚನ ಸಾಹಿತ್ಯ ಸಂಗೀತ ಎರಡರ ಎರಕ. ಇಬ್ಬರು ಹಿರಿಯರೂ ಕಲಾವಂತರು, ಗಮಕಕಲಾ ಸಿದ್ಧಪುರುಷರು, ಹೋಲಿಕೆಗೆ ಅತೀತರು. ಕೃಷ್ಣರಾಯರಲ್ಲಿ ಅಂದು ಪರಿಚಯ ಬೆಳೆಸಿಕೊಂಡ ನಾನು ಮುಂದೆ ಅವರ ಆತ್ಮೀಯರಲ್ಲಿ ಒಬ್ಬನಾದೆ. ಶಕುಂತಲಾಬಾಯಿ ಅವರ ಅತಿ ಮೆಚ್ಚುಗೆಯ ಗಮಕ ವಿದುಷಿಯಾದಳು. ಹೀಗೆ ನಾನು ಕರ್ನಾಟಕದ ಅತಿ ಶ್ರೇಷ್ಠ ಭಾರತವಾಚನ ಕಲಾವಿದದ್ವಯರ ಗಮಕ ಕೇಳಿ ಗಮಕ ಕಲೆಯಲ್ಲಿ ಅತಿ ಹೆಚ್ಚಿನ ವಿಶ್ವಾಸ ಬೆಳೆಸಿಕೊಂಡೆ. ಆ ಪರಿಣಾಮವೇ ಶಕುಂತಲಾಬಾಯಿ ಗಮಕ ಪ್ರಪಂಚವನ್ನು ಪ್ರವೇಶಿಸುವುದಕ್ಕೆ ಕಾರಣವಾಯಿತು.

ಈಗ ಕಾಲ ಕೂಡಿ ಬಂತು. ಕರ್ನಾಟಕ ಸಾಹಿತ್ಯ ಪರಿಷತ್ತಿನ ಪ್ರಕಟಣೆ ಸಕಾಲದಲ್ಲಿ ನನ್ನ ಗಮನ ಸೆಳೆಯಿತು. ಶಕುಂತಲಾಬಾಯಿಯನ್ನು "ಗಮಕ ಕಲಾಭ್ಯಾಸ ಮಾಡ್ತ್ಯವಿರಾ?" ಎಂದು ಕೇಳಿದೆ. ಅದರ ವೈಶಿಷ್ಟ್ಯ ವಿವರಿಸಿದೆ. "ನಾನು ಆರ್ಯಬಾಲಿಕಾ ಪಾಠಶಾಲೆಯಲ್ಲಿ ಓದುತ್ತಿದ್ದಾಗ ಲಲಿತಮ್ಮ ಎಂಬುವರು ವಾರದಲ್ಲಿ ಒಂದು ಗಂಟೆ ಪ್ರತಿ

ಸೋಮವಾರ ನಮ್ಮ ತರಗತಿಗೆ ಬಂದು ಭಾರತ ಓದುತ್ತಿದ್ದರು ಇಂಪು ದನಿಯಲ್ಲಿ ಚೆನ್ನಾಗಿ ಸ್ವಾರಸ್ಯವಾಗಿ ಓದುತ್ತಿದ್ದರು" ಎಂದರು. ಗಮಕಕಲಿಯಲು ಒಪ್ಪಿಕೊಂಡರು.

ಕರ್ಣಾಟಕ ಸಾಹಿತ್ಯ ಪರಿಷತ್ತಿನ ಕಚೇರಿಗೆ ಶಕುಂತಲಾಬಾಯಿ ಅಭ್ಯರ್ಥಿಯಾಗಿ ಒಪ್ಪಿ ಅರ್ಜಿಯನ್ನು ಸಕಾಲದಲ್ಲಿ ತಲುಪಿಸಿದರು. ಪರಿಷತ್ತಿನಿಂದ ಉತ್ತರವೂ ಬಂತು ಭಾನುವಾರ ಬೆಳಗ್ಗೆ 9 ಗಂಟೆಗೆ ಬರಬೇಕೆಂದು.

ಗುರು ದರ್ಶನ

ಕರ್ಣಾಟಕ ಸಾಹಿತ್ಯ ಪರಿಷತ್ತಿಗೆ ಹೋಗುವ ಬೆಳಗ್ಗೆ ನನಗೆ ಶಕುಂತಲಾಬಾಯಿಗೆ ಸಡಗರವೋ ಸಡಗರ. ಬೆಳಗ್ಗೆ ಐದು ಗಂಟೆಗೇ ಎದ್ದೆವು. ಪ್ರಾತರ್ವಿಧಿ ತೀರಿಸಿ, ಮುಖ ತೊಳೆದು ಸರಸರನೆ ಹೊರಟೇಬಿಟ್ಟೆವು. ಆರು ಗಂಟೆಯ ಹೊತ್ತಿಗೆ ಮಿಂಟೋ ವೃತ್ತ ತಲುಪಿದೆವು. ತಾಲ್ಲೂಕು ಕಚೇರಿಯ ಗಂಟೆ "ಠಣ್ ಠಣ್" ಎಂದು ಆರು ಸಲ ಹೊಡೆಯಿತು. ಅದೇ ಕ್ಷಣದಲ್ಲಿ ಹೊಸತರಗು ಪೇಟೆಯ ಮಾರ್ಗವಾಗಿ ಒಂದು ಜಟಕಾಬಂಡಿ ಮಿಂಟೋ ಆಸ್ಪತ್ರೆಯ ವೃತ್ತಕ್ಕೆ ಬಂದು, ನಮ್ಮನ್ನು ದಾಟಿ, ಕರ್ನಾಟಕ ಪರಿಷತ್ತಿನ ಕಟ್ಟಡದ ಮುಂದೆ ಹೋಗಿ ನಿಂತಿತು. ಜಟಕಾ ಗಾಡಿಯ ಹಿಂಬದಿಯಲ್ಲಿ ತಲೆಯ ಮೇಲೆ ಕೇಸರಿ ವರ್ಣದ ಖಾದಿ ಶಾಲು ಹೊದ್ದ ಅರವತ್ತು ಅರವತ್ತೈದು ವರ್ಷಗಳ ವಯೋವೃದ್ಧರು, ಕಾಲು ಇಳಿಬಿಟ್ಟು ಕೈಯಲ್ಲಿ ಒಂದು ಊರುಗೋಲು ಹಿಡಿದು ಕುಳಿತಿದ್ದರು. ಅವರು ನಮ್ಮನ್ನು ನೋಡಿದರು, ನಾವೂ ಅವರನ್ನು ನೋಡಿದೆವು ಅವರೇ ಭಾರತವಾಚನ ಪ್ರವೀಣ ಬಿಂದೂರಾಯರು. "ರಾಘವೇಂದ್ರ ಗುರುಗಳ ಸನ್ನಿಧಿಗೆ ಹೊರಟಿರುವಾಗಲೇ ಪ್ರತ್ಯಕ್ಷವಾಗಿ ಗುರುಗಳ ದರ್ಶನವೇ ಲಭಿಸಿತು. ಇದು ಶುಭ ಸೂಚಕ" ಎಂದೆ. "ಸಂಶೇಹವಿಲ್ಲ ಗಂಟೆಯೂ ಹೊಡೆಯಿತಲ್ಲ!" ಎಂದರು ಶಕುಂತಲಾಬಾಯಿ. ಪರಿಷತ್ತಿಗೆ ಹತ್ತಿರವೇ ಇರುವ ಸೀತಾಪತಿ ಅಗ್ರಹಾರದ ರಾಘವೇಂದ್ರ ಮಠಕ್ಕೆ ಹೋಗಿ, ತಲೆಯ ಮೇಲೆ ತಣ್ಣೀರು ಸ್ನಾನ ಮಾಡಿದೆವು. ಒದ್ದೆ ಬಟ್ಟೆಯಲ್ಲೇ ಗುರುರಾಯರ ಬೃಂದಾವನಕ್ಕೆ ಪ್ರದಕ್ಷಿಣೆ ನಮಸ್ಕಾರಗಳನ್ನು ಮಾಡಿ ಹೊರ ಹೊರಟೆವು. ಸನಿಹದಲ್ಲಿದ್ದ ಉಡುಪಿ ಹೋಟಲಿಗೆ ಹೋಗಿ ತಿಂಡಿ ಕಾಫಿ ಮುಗಿಸಿಕೊಂಡು ಪರಿಷತ್ತಿನ ಮೆಟ್ಟಲು ಹತ್ತುವಾಗ ಸರಿಯಾಗಿ ಒಂಬತ್ತು ಗಂಟೆಯಾಗಿತ್ತು. ಪರಿಷತ್ತಿನಲ್ಲಿ ಗಮಕ ತರಗತಿ ನಡೆದಷ್ಟು ತಿಂಗಳೂ ನಾವು ಸೀತಾಪತಿ ಅಗ್ರಹಾರದಲ್ಲಿರುವ ರಾಯರ ಮಠಕ್ಕೆ ಹೋಗಿ ತಣ್ಣೀರು ಸ್ನಾನಮಾಡಿ, ಗುರುಗಳ ಬೃಂದಾವನಕ್ಕೆ ಪ್ರದಕ್ಷಿಣೆ ನಮಸ್ಕಾರಗಳನ್ನು ಅರ್ಪಿಸಿಯೇ ಗಮಕ ಪಾಠ ಕಲಿಯುವುದೆಂದು ಮೊದಲ ದಿವಸ ಸಂಕಲ್ಪಿಸಿದೆವು. ಒಂದು ವ್ರತದಂತೆಯೇ ಸಾಧಿಸಿದೆವು ಪಟ್ಟಾಗಿ.

ಡಿ.ವಿ.ಜಿ ಅವರಿಂದ ಗಮಕ ಕಲೆಗೆ ಮನ್ನಣೆ

ಕರ್ಣಾಟಕ ಸಾಹಿತ್ಯ ಪರಿಷತ್ತಿನಲ್ಲಿ ಗಮಕ ತರಗತಿಯನ್ನು ಪ್ರಾರಂಭಿಸಿದವರು ಆ ಕಾಲದಲ್ಲಿ ಪರಿಷತ್ತಿನ ಉಪಾಧ್ಯಕ್ಷರಾಗಿದ್ದ ಡಿ. ವಿ. ಗುಂಡಪ್ಪನವರು. ಅವರು

ಜೊತೆಗೆ ವಸಂತ ಸಾಹಿತ್ಯೋತ್ಸವವನ್ನೂ ಪ್ರಾರಂಭಿಸಿದರು. ಈ ಎರಡು ಹೊಸ ಯೋಜನೆಗಳಿಂದ, ಆವರೆಗೆ ಪಂಡಿತರ ಗೋಷ್ಠಿಯಾಗಿ ನಾಲ್ಕು ಗೋಡೆಗಳ ಮಧ್ಯೆ ಕೆಲಸ ಮಾಡುತ್ತಿದ್ದ ಪರಿಷತ್ತು ಸಾರ್ವಜನಿಕರ ಕಿವಿಗೆ ಬೀಳುವಂತಾಯಿತು. ಡಿ.ವಿ.ಜಿ ಅವರು ತಮ್ಮ ಬಾಲ್ಯದಿಂದಲೂ ಗಮಕಕಲಾಭಿರುಚಿಯನ್ನು ಬೆಳೆಸಿಕೊಂಡು ಬಂದವರು. ಅದನ್ನು ಆವರು ತಮ್ಮ "ಜ್ಞಾಪಕ ಚಿತ್ರಶಾಲೆ"ಯ ಮೂರನೆಯ ಸಂಪುಟದಲ್ಲಿ ಸ್ಪಷ್ಟ ಪಡಿಸಿದ್ದಾರೆ.

> "ಗಮಕ ಕಲೆ ನನಗೆ ಬಾಲ್ಯದಿಂದಲೂ ಪ್ರಿಯವಾದದ್ದು. ಮುಳಬಾಗಿಲು, ಶ್ರೀನಿವಾಸಪುರ, ಚಿಂತಾಮಣಿ, ಮೊದಲಾದ ಊರುಗಳಲ್ಲಿ ಸಾಮಾನ್ಯವಾಗಿ ತೆಲುಗರಾದ ವೈಶ್ಯರು "ವಾಚಕ" ಅಭ್ಯಾಸವನ್ನು ನಡೆಸುತ್ತಿದ್ದುದನ್ನು ನಾನು ಕಂಡಿದ್ದೆ. ಆಂಧ್ರ ಭಾಗವತ, ಮನುಚರಿತ್ರೆ ಮೊದಲಾದ ಕಾವ್ಯಗಳನ್ನು ಒಬ್ಬ ವಿದ್ವಾಂಸನು ಹೇಳಿಕೊಡುತ್ತಿದ್ದ. ಯಾವ ಯಾವ ಕಥಾ ಸನ್ನಿವೇಶಕ್ಕೆ ಯಾವ ಯಾವ ರಾಗ ಉಚಿತವಾದದ್ದು, ಎಲ್ಲೆಲ್ಲಿ ರಾಗವನ್ನು ಹೇಗೆ ವಿನ್ಯಾಸ ಮಾಡತಕ್ಕದ್ದು. ಉಚ್ಚಾರಣೆ ಯಾವ ಮಟ್ಟದಲ್ಲಿರಬೇಕಾದದ್ದು ಪದಗಳನ್ನು ಬಿಡಿಸುವುದು ಹೇಗೆ, ಅವುಗಳ ಮೇಲೆ ಸ್ವರಭಾರವನ್ನು ಹಾಕುವುದು ಹೇಗೆ–ಇದನ್ನೆಲ್ಲ ಪಂಡಿತನು ಕಲಿಸುತ್ತಿದ್ದನು. ನನ್ನ ತಂದೆ ಒಳ್ಳೆಯ ವಾಚಕನೆಂದೆನಿಸಿಕೊಂಡಿದ್ದರು. ಹೀಗೆ ನನಗೆ ಒಳ್ಳೆಯ ಕಾವ್ಯವಾಚನದ ವಿಷಯದಲ್ಲಿ ಉತ್ಸಾಹ".

ಈ ಕಾರಣದಿಂದ ಅವರು ಪರಿಷತ್ತಿನ ಆಶ್ರಯದಲ್ಲಿ ಗಮಕ ತರಗತಿಯನ್ನು ಪ್ರಾರಂಭಿಸುವ ಬಗೆಗೆ ಕಳಕಳಿಪಟ್ಟದ್ದು ನ್ಯಾಯವಾಗಿಯೇ ಇದೆ. ಗಮಕ ತರಗತಿಯ ಅಧ್ಯಾಪಕರನ್ನು ಆರಿಸುವುದರಲ್ಲಿಯೂ ಅವರು ಎಚ್ಚರಬೆಚ್ಚರಗಳನ್ನು ವಹಿಸಿದರು. ಭಾರತವಾಚನ ಪ್ರವೀಣರಲ್ಲಿ ಅತ್ಯುತ್ತಮ ವಾಚಕನಿಗೆ ಬೇಕಾದ ಎಲ್ಲ ಗುಣಗಳೂ ಇದ್ದವು. ಪಾಠ ಹೇಳಬೇಕಾದ ಗುರುವಿಗೆ ಇರಬೇಕಾದ ಪಾಂಡಿತ್ಯವೂ ಇತ್ತು. ಘನತೆಯೂ ಇತ್ತು. ಬಿಂದೂರಾಯರು 1934 ರಿಂದ 1937ರವರೆಗೆ ಗಮಕ ತರಗತಿಯ ಅಧ್ಯಾಪಕರಾಗಿ ಅತ್ಯುತ್ತಮ ಸೇವೆ ಸಲ್ಲಿಸಿದರು. ಹೆಸರಾಂತ ಗಮಕಿಗಳನ್ನು ಕೊಟ್ಟರು ಗಮಕ ಪ್ರಪಂಚಕ್ಕೆ.

ಗಮಕ ತರಗತಿಗೆ ಆಯ್ಕೆ

ಡಿ. ವಿ. ಜಿ. ಅವರು ಗಮಕ ಕಲಿಯುವ ಅಭ್ಯರ್ಥಿಗಳನ್ನು ಕಾಲಕ್ಕೆ ಸರಿಯಾಗಿ ಈಗ ಪರಿಷತ್ತಿನ ಸಭೆ, ನಾಟಕ ಇತ್ಯಾದಿ ಕಾರ್ಯಕ್ರಮಗಳನ್ನು ನಡೆಸುವ ವೇದಿಕೆಯ ಮೇಲೆ ಒಟ್ಟಿಗೆ ಕೂಡಿಸಿದರು. ಡಿ. ವಿ. ಜಿ. ಕಾಲದಲ್ಲಿ ಈ ವೇದಿಕೆ ಉಪಾಧ್ಯಕ್ಷರ ಕೋಣೆಯಾಗಿ ಮಾರ್ಪಟ್ಟಿತ್ತು, ವೇದಿಕೆಯನ್ನು ಪೂರ್ತಿಯಾಗಿ ಸಭಾಂಗಣದಿಂದ

ಮರದ ಅಡ್ಡ ತೆರೆಗಳು ಪ್ರತ್ಯೇಕಿಸಿದ್ದವು. ಬೇಕಾದಾಗ ಅವುಗಳನ್ನು ಬೇರೆ ಮಾಡುವುದು, ಮತ್ತೆ ಜೋಡಿಸುವುದು ಹೀಗೆ ಏರ್ಪಾಡಿತ್ತು. ವಿ. ಸೀ., ಎಂ. ಆರ್. ಶ್ರೀ., ಎಸ್. ವಿ. ರಂಗಣ್ಣ, ನಿಟ್ಟೂರು ಶ್ರೀನಿವಾಸರಾವ್, ಬಿ. ವೆಂಕಟಕೃಷ್ಣಪ್ಪ, ತಿರುಮಲೆ ರಾಜಮ್ಮ ಮೊದಲಾದ ಪ್ರತಿಷ್ಠಿತ ಸಾಹಿತಿಗಳು, ಸಂಗೀತ ವಿದ್ವಾಂಸ-ವಿದುಷಿಯರು ಡಿ. ವಿ. ಜಿ. ಅವರಿಗೆ ಅಭ್ಯರ್ಥಿಗಳನ್ನು ಆರಿಸುವುದರಲ್ಲಿ ಸಹಾಯ ಸಹಕಾರಗಳನ್ನು ಕೊಡಲು ಅನುವಾಗಿದ್ದರು. ಶಕುಂತಲಾಬಾಯಿಯನ್ನು ಬಿಟ್ಟರೆ ಉಳಿದ ಹತ್ತು ಹನ್ನೊಂದು ಅಭ್ಯರ್ಥಿಗಳು ಎಲ್ಲರೂ ವಯಸ್ಸಿನಲ್ಲಿ ವಿದ್ಯಾರ್ಜನೆಯಲ್ಲಿ ಹೆಚ್ಚಿನವರೇ.

ಹರಿನಾರಾಯಣ, ಎಸ್. ನಾಗೇಶರಾವ್, ಪದವೀಧರರು. ಸಂಗೀತ ಸಾಹಿತ್ಯಗಳಲ್ಲಿ ಬಲ್ಲಿದರು. ಇಬ್ಬರೂ ಉತ್ತಮ ನಟರು. ಬಿ. ಎಂ. ಶ್ರೀ ನಾಟಕಕ್ಕೆ ತಿರುಗಿಸಿದ ರನ್ನನ ಗದಾಯುದ್ಧದಲ್ಲಿ ಪಾತ್ರವಹಿಸಿ ಜನಪ್ರಿಯರಾಗಿದ್ದವರು. ಚೆನ್ನರಾಯಪಟ್ಟಣದ ಕರ್ಣಾಟಕಸಂಘ ಅಶನ-ವಸನಗಳ ಖರ್ಚನ್ನುವಹಿಸಿಕೊಂಡು ಬಾಳದಂಚಿ ನಂಜುಂಡಯ್ಯನವರನ್ನು ಕಳಿಸಿತ್ತು. ಆಗಲೇ ಅವರು ಹರಿಕಥೆಯಲ್ಲಿ ಹೆಸರುಮಾಡಿದ್ದರು. ಇಂಥವರ ಮಧ್ಯೆ ಗಮಕ ಕಲಿಯಲು ಬಂದಿದ್ದ ಶಕುಂತಲಾಬಾಯಿಯನ್ನುನೋಡಿದವರೇ ಬಿಂದೂರಾಯರು ಹೌಹಾರಿದರು. ಡಿ. ವಿ. ಜಿ. ಯವರ ಕಿವಿಯಲ್ಲಿ, "ಈ ಹೆಣ್ಣುಮಗಳಿಗೆ ಮನೋಧರ್ಮವೇ ಇಲ್ಲವಲ್ಲ! ಹೇಗಪ್ಪ ಗಮಕ ಕಲಿಸುವುದು?"ಎಂದು ಗೊಣಗಿದರಂತೆ.

ಡಿ. ವಿ. ಜಿ. ಕುಮಾರವ್ಯಾಸ, ಲಕ್ಷ್ಮೀಶ, ಕುಮಾರವಾಲ್ಮೀಕಿ ಕಾವ್ಯಗಳನ್ನು ಕೊಟ್ಟು ಒಬ್ಬೊಬ್ಬರಿಂದಲೂ ಒಂದೊಂದು ಪದ್ಯ ಹೇಳಿಸಿದರು. ಅವರುಗಳ ವಿದ್ಯಾರ್ಜನೆಯ ವಿಷಯ ಕೇಳಿ ತಿಳಿದುಕೊಂಡರು. ಕಡೆಯಲ್ಲಿ ಶಕುಂತಲಾಬಾಯಿಯ ಸರದಿ ಬಂತು. ಕುಮಾರವಾಲ್ಮೀಕಿಯ ತೊರವೆ ರಾಮಾಯಣವನ್ನು ಕೊಟ್ಟು "ಮಂಗಲಾಚರಣ" ಪದ್ಯಗಳನ್ನು "ಓದಮ್ಮ" ಎಂದರು. ಶಂಕರಾಭರಣ ರಾಗದಲ್ಲಿ ಮೊದಲ ಮೂರು ಪದ್ಯಗಳನ್ನು ವಾಚಿಸಿದರು. ಆಕೆಯ ಕೋಕಿಲಕಂಠ ವೇದಿಕೆಯನ್ನು ತುಂಬಿತು. ನಾದ ಎಲ್ಲೆಡೆಗಳಲ್ಲಿಯೂ ಹರಡಿತು. ಡಿ. ವಿ. ಜಿ. ಬಿಂದೂರಾಯರ ಮುಖವನ್ನು ನೋಡಿದರು. ರಾಯರ ಮುಖದಲ್ಲಿ ವಿಸ್ಮಯ. ಇಪ್ಪತ್ತೇಳು ಇಪ್ಪತ್ತೆಂಟು ವರ್ಷಗಳ ಪುರುಷ ಅಭ್ಯರ್ಥಿಗಳ ಮಧ್ಯೆ ಗಮಕ ಕಲಿಯಲು ಬಂದ ಅತಿ ಚಿಕ್ಕ ವಯಸ್ಸಿನ ಮಹಿಳೆ ಈಕೆಯೊಬ್ಬಳೇ. ಅಷ್ಟೇ ಅಲ್ಲ, ಪರಿಷತ್ತಿನ ಗಮಕತರಗತಿ ಇತಿಹಾಸದಲ್ಲಿ ಗಮಕ ಕಲಿಯಲು ಬಂದ ಪ್ರಪ್ರಥಮ ಮಹಿಳೆಯೂ ಈಕೆಯೇ. ಅಭ್ಯರ್ಥಿಗಳೆಲ್ಲರೂ ಆಯ್ಕೆಯಾದರು.

ಎಂದೂ ಹಸಿರಾಗಿರುವ ಒಂದು ಘಟನೆ

1937ರ ವರೆಗೆ ನಡೆದ ಗಮಕ ತರಗತಿಗಳು ಬೆಳಗ್ಗೆ ಸಂಜೆ ಎರಡು ಹೊತ್ತೂ ನಡೆಯುತ್ತಿದ್ದವು. ಬೆಳಗ್ಗೆ 8 ಗಂಟೆಯಿಂದ 10 ಘಂಟೆವರೆಗೆ, ಸಂಜೆ 5-30 ಗಂಟೆಯಿಂದ 7-30 ಗಂಟೆಯವರೆಗೆ, ಹಲಸೂರು ಪೇಟೆಯಿಂದ ಚಾಮರಾಜಪೇಟೆಗೆ,

ಚಾಮರಾಜಪೇಟೆಯಿಂದ ಹಲಸೂರು ಪೇಟೆಗೆ, ಬೆಳಗ್ಗೆ ಮಧ್ಯಾಹ್ನ ಎರಡು ಸಲ ಬಂದು ಹೋಗಬೇಕಾಗಿತ್ತು. ಈಗಿನ ಹಾಗೆ ಆಟೋರಿಕ್ಷ ಬಸ್ ಸೌಕರ್ಯಗಳಿರಲಿಲ್ಲ. ಜಟಕಾ ಗಾಡಿಯಿತ್ತು. ನಿತ್ಯವೂ ಗಾಡಿಯಲ್ಲಿ ಬಂದು ಹೋಗುವುದು ಅಸಾಧ್ಯ. ಆದುದರಿಂದ ಕಾಲುನಡಿಗೆಯನ್ನೆ ನೆಚ್ಚಿಕೊಂಡೆವು. ಬೆಳಗ್ಗೆ 5 ಗಂಟೆಗೆ ಮನೆ ಬಿಡುತ್ತಿದ್ದೆವು. 10 ಗಂಟೆಗೆ ಪರಿಷತ್ತು ಬಿಟ್ಟು ಉರಿಬಿಸಿಲಲ್ಲಿ ಹನ್ನೊಂದು ಗಂಟೆಗೆ ಮನೆ ಸೇರುತ್ತಿದ್ದೆವು. ಮಧ್ಯಾಹ್ನ ನಾಲ್ಕು ಗಂಟೆಗೆ ಧಗಧಗ ಬಿಸಿಲಲ್ಲಿ ಮನೆ ಬಿಡುತ್ತಿದ್ದೆವು. ಸಾಯಂಕಾಲ ಏಳೂವರೆ ಗಂಟೆಯ ತಂಪಿನಲ್ಲಿ ನಡೆದು ಎಂಟೂವರೆಗೆ ಮನೆ ಸೇರುತ್ತಿದ್ದೆವು. ವಯಸ್ಸಿನ ರಕ್ತಬಲ, ಕಲಿಯುವ ಹುಮ್ಮಸ್ಸು ಶಕುಂತಲಾಬಾಯಿಗೆ ಉರಿಬಿಸಲೆಂದು ಗಣನೆಗೇ ಬರಲಿಲ್ಲ. ಆಕೆಗೆ ಬಿಸಲು ಹಾಲುಚೆಲ್ಲಿದ ಬೆಳದಿಂಗಳೇ ಆಗಿತ್ತು. ನಮ್ಮಿಬ್ಬರ ಉತ್ಸಾಹ ಎಲ್ಲಿಯವರೆಗೆ ವಿಪರೀತಕ್ಕೆ ಹೋಯಿತೆಂದರೆ, ಆ ದಿನವನ್ನು ನೆನೆಸಿಕೊಂಡರೆ ನಮಗೆ ಈಗಲೂ ಎದೆ ಝಲ್ಲೆನ್ನುತ್ತದೆ. ರಾತ್ರಿ ಮಲಗುವಾಗ ಅಲಾರಾಂ ಟೈಮ್‌ಪೀಸ್ ಇಟ್ಟುಕೊಂಡೇ ಮಲಗುತ್ತಿದ್ದೆವು. ಎಚ್ಚರಿಕೆಯ ಗಂಟೆ ಹೊಡೆದ ಕೂಡಲೆ ತಟ್ಟನೆ ಎದ್ದು ಹೊರಟುಬಿಡುತ್ತಿದ್ದೆವು. ಒಂದು ದಿನ ನಮ್ಮ ಟೈಂ ಪೀಸ್ ರಾತ್ರಿ ಮೂರು ಗಂಟೆಗೇ ನಿಂತು ಹೋಗಿದೆ. ಅಲಾರಾಂ ತಟಸ್ಥವಾಗಿದೆ. ಎದ್ದು ನೋಡಿದರೆ ಗಡಿಯಾರ ಕೈ ಕೊಟ್ಟಿರುವುದು ನಿಚ್ಚಳವಾಗಿ ಕಾಣುತ್ತಿದೆ. ಅವಸರವಸರವಾಗಿ ಎದ್ದೆವು. ಹೇಗೋ ಬೆಳಗಿನ ವಿಧಿ ಮುಗಿಸಿ ಬಿರಬಿರನೆ ಕಾಲು ಹಾಕುತ್ತ ಪರಿಷತ್ತಿನ ಕಡೆ ನಡೆದೇಬಿಟ್ಟೆವು. ಮುಂಜಾವದ ಗಡಿಯಾರ ಕೋಳಿ "ಕೊಕ್ಕೊಕ್ಕೊ" ಎನಲಿಲ್ಲ. ಮುಲ್ಲಾ ಸಾಹೇಬರು ಮುಂಜಾವದ ನಮಾಜು ಮಾಡಲಿಲ್ಲ. ಅಲ್ಲೊಂದು ಇಲ್ಲೊಂದು ಜಟಕಾ ಓಡಾಡುತ್ತಿದ್ದುದು ಕಾಣಲಿಲ್ಲ. ಮಾರುಕಟ್ಟೆಗೆ ತರಕಾರಿ ಬುಟ್ಟಿಗಳನ್ನು ತಲೆಯ ಮೇಲೆ ನಿತ್ಯವೂ ಹೊತ್ತು ನಡೆವ ದಾರಿಹೋಕರ ಸುಳಿವೇ ಇಲ್ಲ. ನಾವು ಮಾರ್ಕೆಟ್ಟಿನವರೆಗೆ ತಲೆಯಲ್ಲಿ ಯಾವ ಭಯದ ಭೂತವನ್ನೂ ಹೊಗಿಸದೆ ನಿರ್ಭೀತರಾಗಿ ಹೊರಟುಬಿಟ್ಟಿದ್ದೇವೆ. ಮಾರ್ಕೆಟ್ಟಿಗೆ ಬಂದೆವೋ ಇಲ್ಲವೋ ಮಾರ್ಕೆಟ್ಟಿನ ಗಡಿಯಾರ ಠಣ್ ಠಣ್ ಎಂದು ನಾಲ್ಕು ಗಂಟೆ ಹೊಡೆಯಿತು. ಗಂಟೆಯ ಒಂದೊಂದು ಶಬ್ದವೂ ನಮ್ಮ ಎದೆಯ ಮೇಲೆ ಸುತ್ತಿಗೆಪೆಟ್ಟು ಕೊಟ್ಟಂತೆ ಭಾಸವಾಯಿತು. "ಗುರುಗಳೇ ನಮಗೆ ಗತಿ", ಎಂದು ಜೀವ ಕೈಯಲ್ಲಿ ಹಿಡಿದುಕೊಂಡು ಸೀತಾಪತಿ ಅಗ್ರಹಾರವನ್ನು ಮುಟ್ಟಿ ರಾಯರ ಮಠದ ಬಾಗಿಲು ಕಾಯುತ್ತ ಕುಳಿತುಬಿಟ್ಟೆವು ಗುರುಗಳ ಧ್ಯಾನ ಮಾಡುತ್ತ. ಹೊರಬಾಗಿಲು ತೆಗೆದುದೇ ತಡ ಮೈಮೇಲೆ ಎಚ್ಚರ ತಪ್ಪಿದವರಂತೆ ಒಳನುಗ್ಗಿದೆವು. ಮುಂದಿನ ವಿಧಿಗಳು ಮಾಮೂಲಾಗಿ ನಡೆದವು.

ರಾಜಾಮಣಿ ನಾಗರಾಜರಾವ್ ಇನ್ನೊಬ್ಬ ವಿದ್ಯಾರ್ಥಿನಿ

ಪರಿಷತ್ತಿಗೆ ಹೋಗಿ ಬರುವಾಗ ಕೋಟೆಯಲ್ಲಿದ್ದ ಸತ್ಯಶೋಧನ ಪುಸ್ತಕ ಭಂಡಾರವನ್ನು ಹಾದು ಹೋಗಬೇಕಿತ್ತು. ಬರುವಾಗಲೂ ಅಷ್ಟೆ. ಸಿ. ಕೆ. ನಾಗರಾಜ

ರಾಯ ಸತ್ಯಶೋಧನ ಪುಸ್ತಕ ಭಂಡಾರದ ವ್ಯವಸ್ಥಾಪಕ. ನನಗೆ ದೇಶೀಯ ವಿದ್ಯಾಶಾಲೆಯಲ್ಲಿ ತರಗತಿಯ ಸಹಪಾಠಿ, ನಿಟ್ಟೂರ ಶ್ರೀನಿವಾಸರಾಯರ ಸೋದರಳಿಯ, ಅವರ ಮನೆಯಲ್ಲೇ ಪರಿಚಯವಾಗಿತ್ತು. ಆತ ನಾವು ಬೆಳಗ್ಗೆ ಸಂಜೆ ಪರಿಷತ್ತಿನಿಂದ ಬರುವಾಗ ಗಮನಿಸುತ್ತಿದ್ದ. ಒಂದು ದಿನ ನಮ್ಮನ್ನು ನಿಲ್ಲಿಸಿ ನಮ್ಮ ಹೋಗುಬರುವುದನ್ನು ವಿಚಾರಿಸಿದ. ಶಕುಂತಲಾಬಾಯಿ ಪರಿಷತ್ತಿನಲ್ಲಿ ಗಮಕ ಕಲಿಯುತ್ತಿರುವ ವಿಷಯ ತಿಳಿಸಿದೆ. ನನ್ನ ಪತ್ನಿಯನ್ನು ಗಮಕತರಗತಿಯನ್ನು ಸೇರಲು ಇನ್ನೂ ಅವಕಾಶ ವಿದೆಯೇ ಎಂದು ಕೇಳಿದ. "ಗಮಕ ತರಗತಿ ಪ್ರಾರಂಭವಾಗಿ ಎರಡು ವಾರಗಳಾಗಿವೆ. ಇನ್ನೂ ಪ್ರಾರಂಭದಲ್ಲಿಯೇ ಇದ್ದೇವೆ. ನಿಮ್ಮ ಪತ್ನಿ ಗಮಕ ತರಗತಿಯನ್ನು ಸೇರಿಕೊಂಡರೆ ನಾವು ಇಬ್ಬರು ಮಹಿಳೆಯರಾಗುತ್ತೇವೆ. ನನಗೆ ಜೊತೆಯಾಯಿತು"ಎಂದರು ಶಕುಂತಳಾಬಾಯಿ. ನಿಟ್ಟೂರು ಶ್ರೀನಿವಾಸರಾಯರ ಸೋದರಳಿಯ. ಡಿ.ವಿ.ಜಿ. ಅವರು ಸಂತೋಷದಿಂದ ರಾಜಮಣಿ ನಾಗರಾಜರಾಯರನ್ನು ಗಮಕತರಗತಿಗೆ ಸೇರಿಸಿಕೊಂಡರು.

ಬಿಂದೂರಾಯರು ಕಟ್ಟುನಿಟ್ಟು ಮನುಷ್ಯರು. ಶಿಸ್ತಿನ ಶಿಪಾಯಿ. ಗಡಿಯಾರದಂತೆ ಕರಾರುವಾಕ್ಕಾಗಿ ಕರ್ತವ್ಯ ನಿರ್ವಹಿಸುವರು. ಮುಂಜಾವದಲ್ಲಿ ಎದ್ದು ಸ್ನಾನ ಸಂಧ್ಯಾವಂದನೆ ಮುಗಿಸಿ, ತಾವೇ ತಯಾರಿಸಿದ ಕಾಫಿ ಕುಡಿದು, ತಂಬೂರಿಯ ಗೌಸು ತೆಗೆದು, ತಂಬೂರಿಯನ್ನು ಶ್ರುತಿಮಾಡಿ ಮೀಟುತ್ತ ಕುಳಿತಿರುವರು. ವಿದ್ಯಾರ್ಥಿಗಳನ್ನು ಸ್ವಾಗತಿಸುವ ಮೊದಲಿಗರೇ ಅವರು. ವಿದ್ಯಾರ್ಥಿಗಳು ಎಲ್ಲರೂ ಕಾಲಕ್ಕೆ ಸರಿಯಾಗಿ ತರಗತಿಯಲ್ಲಿ ಹಾಜರಿರಬೇಕು. ಒಂದು ಘಳಿಗೆ ಹೊತ್ತಾಗಿ ಬಂದರೂ ಸಹಿಸರು. ವಿದ್ಯಾರ್ಥಿಗಳ ವಯಸ್ಸು, ಪದವಿ, ಅಧಿಕಾರಗಳನ್ನೂ ಲಕ್ಷಿಸದೆ ಮುಖದ ಬೆವರು ಇಳಿಸಿಬಿಡುವರು. ಪಾಠ ಒಪ್ಪಿಸಲಿಲ್ಲ ಜನ್ಮ ಜಾಲಾಡಿಬಿಡುವರು ಬಿಂದೂರಾಯರು. "ಗುಂಪಿನಲ್ಲಿ ಗೋವಿಂದ" ಪಾಠಮಾಡಿ ಅರಿಯರು. ಪ್ರತಿಯೊಬ್ಬ ವಿದ್ಯಾರ್ಥಿಯಿಂದಲೂ ತನಿಯಾಗಿ ಪದ್ಯ ಹೇಳಿಸಿ, ತಿದ್ದಿ, ಹೊಸ ಪದ್ಯ ಹೇಳಿಕೊಟ್ಟು ಒರಲಿಸಿ, ಆ ವಿದ್ಯಾರ್ಥಿಯ ಕೆಬಿಡುವರು. ಪದ್ಯಕ್ಕೆ ಇಂಥುವೇ ರಾಗವೆಂದು ಗೊತ್ತಿಲ್ಲ. ಒಂದು ಪದ್ಯವನ್ನು ಹಲವಾರ್ರು ರಾಗಗಳಲ್ಲಿ ಹೇಳಿಸುವರು. ವೇದಿಕೆಯ ಮೇಲೆ ಕುಳಿತಾಗ, ಆಗಿನ ಮನೋಧರ್ಮಕ್ಕೆ ಯಾವ ರಾಗ ಸುಳಿದರೆ ಅದನ್ನೇ ಎತ್ತಿಕೊಂಡು ಅದರಲ್ಲೇ ಭಾವ ಮೂಡಿಸಬೇಕು ಎನ್ನುವ ಪಂಥದವರು ಅವರು. ಇಂಥ ಗುರು ಅಪರೂಪ. ಅವರಲ್ಲಿ ಕಲಿತವರು ಧನ್ಯರು. ಬಿಂದೂರಾಯರು ತರಗತಿಯ ಪಾಠ ಮುಗಿಸಿ ಹೊರಬಂದರೆ ತಮ್ಮ ಶಿಷ್ಯರ ಮೇಲೆ ವಾತ್ಸಲ್ಯದ ಮಳೆಗರೆಯುವರು.

ಈಗಿನ ಹಾಗೆ ಆಗ ಗಮಕ ತರಗತಿಗಳು "ಪ್ರವೇಶ", "ಪ್ರೌಢ", "ಪ್ರವೀಣ" ಎಂದು ಹಲವು ಮುಖವಾಗಿ ನಡೆಯುತ್ತಿರಲಿಲ್ಲ. ಗಮಕ ತರಗತಿಯೆಂದು ಒಂದೇ ಒಂದು ತರಗತಿ ಬೇಸಿಗೆ ಕಾಲದಲ್ಲಿ ಮೂರು ತಿಂಗಳು ನಡೆಯುತ್ತಿತ್ತು. ಭಾಮಿನಿ ಮತ್ತು ವಾರ್ಧಿಕ ಷಟ್ಪದಿ ಕಾವ್ಯಗಳ ಮಾತ್ರ ಅಭ್ಯಾಸಕ್ಕೆ ಸ್ವೀಕಾರವಾಗಿದ್ದವು. ಗಮಕಿಗಳು ಹೆಚ್ಚಾಗಿ ಬಳಸುತ್ತಿದ್ದ ಕುಮಾರವ್ಯಾಸ ಭಾರತ, ಲಕ್ಷ್ಮೀಶನ ಜೈಮಿನಿ

ಭಾರತ, ರಾಘವಾಂಕನ ಹರಿಶ್ಚಂದ್ರ ಕಾವ್ಯ ಪಠ್ಯಗ್ರಂಥಗಳು. ಶಕುಂತಲಾಬಾಯಿ ಗಮಕ ತರಗತಿಗೆ ಸೇರಿದ ವರ್ಷ ಕುಮಾರವ್ಯಾಸ ಭಾರತದಲ್ಲಿ ಉದ್ಯೋಗಪರ್ವದಲ್ಲಿನ ಮೊದಲನೆಯ ಸಂಧಿ ಕೃಷ್ಣ ಸಾರಥ್ಯ ಕಥಾಭಾಗ ಪೂರ್ತಿ 45 ಪದ್ಯಗಳು, ಜೈಮಿನಿ ಭಾರತದಿಂದ ಚಂದ್ರಹಾಸನ ಬಾಲ್ಯದಲ್ಲಿ ಪ್ರಾರಂಭದಿಂದ 12 ಪದ್ಯಗಳು. ಹರಿಶ್ಚಂದ್ರ ಕಾವ್ಯದಲ್ಲಿ ವಸಿಷ್ಠ ವಿಶ್ವಾಮಿತ್ರ ಸಂವಾದದ 12 ಪದ್ಯಗಳು. ಒಟ್ಟು ಕಾವ್ಯಗಳ ಮಂಗಳಾಚರಣ ಪದ್ಯಗಳನ್ನೂ ಸೇರಿಸಿಕೊಂಡು ನೂರಕ್ಕೂ ಕಡಮೆ ಪದ್ಯಗಳು. ಲಿಖಿತ ಪರೀಕ್ಷೆಯಿರಲಿಲ್ಲ. ಸಾಹಿತ್ಯ ಭಾಗವನ್ನು ಬಿಂದೂರಾಯರು ಪದ್ಯ ಹೇಳುವಾಗಲೇ ಅಲ್ಲಲ್ಲಿ ಪ್ರಸ್ತಾಪಿಸುತ್ತಿದ್ದರು. ಗಮಕ ವಾಚನಕ್ಕೆ ಪ್ರಾಧಾನ್ಯ, ಗಮಕ ಲಿಖಿತ ಪರೀಕ್ಷೆಯಲ್ಲಿ ವಾಚನ.

ಬಿಂದೂರಾಯರ ಅನುಕರಣೆ

ಶಕುಂತಲಾಬಾಯಿಗೆ ಬಿಂದೂರಾಯರ ಮಾರ್ಗವನ್ನು ಅನುಸರಿಸುವುದು ಕಷ್ಟವಾಗಲಿಲ್ಲ. ಶಂಕರಾಭರಣ, ಕಲ್ಯಾಣಿ, ಭೈರವಿ, ತೋಡಿ, ಹಂಸಧ್ವನಿ, ಸಿಂಹೇಂದ್ರ ಮಧ್ಯಮ, ಕರಹರಪ್ರಿಯ, ಕಾಂಬೋಜಿ, ಕಾನಡ, ಅಠಾಣ, ಹೀಗೆ ಸುಮಾರು ಇಪ್ಪತ್ತು ಇಪ್ಪತ್ತೈದು ರಾಗಗಳ ಪರಿಚಯವಾಗಿತ್ತು. ಮೂವತ್ತು ಮೂವತ್ತೈದು ತ್ಯಾಗರಾಜ ಕೃತಿಗಳ ಅಭ್ಯಾಸವಾಗಿತ್ತು. ಸಾಹಿತ್ಯ ಭಾಗವನ್ನು ನಾನು ಹೇಳಿಕೊಡುತ್ತಿದ್ದೆ. ಸಂಜೆಯ ಪಾಠ ಮುಗಿಸಿ ಮನೆಗೆ ಬರುತ್ತಲೆ ಊಟ ಮುಗಿಸಿ, ಒಂದು ಗಂಟೆ ಕಾಲ ಕಲಿತ ಪಾಠವನ್ನು ಹಾರ್ಮೋನಿಯಂವಾದ್ಯದ ಮೆಟ್ಟಲುಗಳ ಮೇಲೆ ನುಡಿಸುತ್ತ ಪಾಠಮಾಡುತ್ತಿದ್ದರು. ಬೆಳಗ್ಗೆ ತರಗತಿಯಲ್ಲಿ ಹಿಂದಲ ದಿನದ ಪಾಠವನ್ನು ತಪ್ಪಿಲ್ಲದ ಹಾಗೆ, ಧ್ವನಿಮುದ್ರಿಕೆ ಒಪ್ಪಿಸುವಂತೆ ಬಿಂದೂರಾಯರ ಧಾಟಿಯಲ್ಲಿ ಒಪ್ಪಿಸಿಬಿಡುತ್ತಿದ್ದರು. ಶಕುಂತಲಾಬಾಯಿಯ ಗ್ರಹಣ ಶಕ್ತಿ ಅದ್ಭುತವಾಗಿತ್ತು. ಈ ಕಾರಣ, ಬಿಂದೂರಾಯರ ವಾಚನದ ಎರಕ, ಆಕೆಯ ವಾಚನದಲ್ಲೂ ಸ್ಪಷ್ಟವಾಗಿ ಮೂಡಿ ಬರುತ್ತಿತ್ತು. ಬಿಂದೂರಾಯರಿಗೆ ತಮ್ಮ ಧಾಟಿಯನ್ನು ಜಾಚೂ ತಪ್ಪದೆ ಶಕುಂತಲಾ ಬಾಯಿ ಅನುಸರಿಸುತ್ತಿರುವುದನ್ನು ಕೇಳಿ ಪರಮಾಶ್ಚರ್ಯವಾಯಿತು. ತನ್ನ ಮಾರ್ಗವನ್ನು ಉಳಿಸುವುದಕ್ಕೆ ಒಬ್ಬ ಶಿಷ್ಯಳು ದೊರೆತಳಲ್ಲ ಎಂದು ಅವರು ಬಹಳ ಸಂತೋಷಪಟ್ಟುಕೊಂಡರು.

ಬಿಂದೂರಾಯರು ತರಗತಿ ನಡೆಸುತ್ತಿದ್ದಾಗ ಪ್ರಸಿದ್ಧ ಸಾಹಿತಿಗಳೆಲ್ಲ ಒಂದು ಕಾಲುಗಂಟೆಯೋ ಅರ್ಧಗಂಟೆಯೋ ಕೂಡುತ್ತಿದ್ದರು. ವೀ.ಸೀ. ಯವರಂತೂ ದಿನವೋ ದಿನಬಿಟ್ಟು ದಿನವೋ ಬಂದು ಕೂಡುತ್ತಿದ್ದರು. ಎಂ. ಆರ್. ಶ್ರೀ., ಎಸ್. ವಿ. ರಂಗಣ್ಣ ಡಿ. ವಿ. ಜಿ. ಬರುತ್ತಿದ್ದರು. ಒಂದು ದಿವಸ ಮೈಸೂರಿಂದ ಟಿ. ಎಸ್. ವೆಂಕಣ್ಣಯ್ಯನವರು ಪರಿಷತ್ತಿಗೆ ದಯಮಾಡಿಸಿದರು. ಅವರೂ ಬಿಂದೂರಾಯರೂ ತಕ್ಕಿನಲ್ಲಿ ಹುಟ್ಟಿದವರಂತೆ. ಇಬ್ಬರೂ ಪರಮ ಮಿತ್ರರು. ವೆಂಕಣ್ಣಯ್ಯ ತರಗತಿಗೂ ಬಂದು ಕುಳಿತರು. ವಿದ್ಯಾರ್ಥಿಗಳ ಪಾಠಗಳನ್ನು ಗಮನಿಸಿದರು. ಶಕುಂತಲಾಬಾಯಿಯ ವಾಚನವನ್ನು ಕೇಳಿದರು. ಸಂತೋಷಪಟ್ಟರು. "ಈ ಮಗುವಿಗೆ ಮನೋಧರ್ಮ

ಕುದುರಿದರೆ ಶ್ರೇಷ್ಠ ಗಮಕಿಯಾಗುವ ಲಕ್ಷಣಗಳಿವೆ" ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಸಾಹಿತಿ, ಕವಿ, ರಸ ಋಷಿಯಲ್ಲವೇ, ಅವರ ನುಡಿ ಋಷಿವಾಕ್ಯ ವಾಯಿತು. ಶಕುಂತಲಾಬಾಯಿ ಒಂದೆರಡು ವರ್ಷಗಳಲ್ಲೇ ಪ್ರಸಿದ್ಧ ಗಮಕಿಗಳ ಶ್ರೇಣಿ ಯನ್ನು ಅಲಂಕರಿಸಿದರು. ಆದರೆ ಪರಮ ಸಾತ್ವಿಕ ಋಷಿಸಮಾನರಾದ ಟಿ. ಎಸ್. ವೆಂಕಣ್ಣಯ್ಯನವರ ಮುಂದೆ ವಾಚನ ಮಾಡಿ ಅವರ ಆಶೀರ್ವಾದ ಪಡೆಯುವ ಪುಣ್ಯ ಶಕುಂತಲಾಬಾಯಿಗೆ ಲಭಿಸಲಿಲ್ಲ. ವೆಂಕಣ್ಣಯ್ಯನವರು 1938ರಲ್ಲಿ ತೀರಿಕೊಂಡರು.

ಪಂಜೆ ಮಂಗೇಶರಾಯರ ಹಾಸ್ಯ ಚಟಾಕಿ

ಡಿ. ವಿ. ಗುಂಡಪ್ಪನವರು 1934ರಲ್ಲಿ ಉಪಾಧ್ಯಕ್ಷರಾಗಿ ಪರಿಷತ್ತಿಗೆ ಬರುತ್ತಲೇ, ನಮ್ಮ ನಾಡಿನ ಉಪಾಧ್ಯಾಯರ ಜ್ಞಾನಾರ್ಜನೆಗಾಗಿ ವಸಂತಸಾಹಿತ್ಯೋತ್ಸವವನ್ನು ಪ್ರಾರಂಭಿಸಿದರು. ಅವರ ಕಾಲದಲ್ಲಿ ನಡೆದ ವಸಂತ ಸಾಹಿತ್ಯೋತ್ಸವಗಳು ನಭೂತೋನಭವಿಷ್ಯತಿ. ಅವರ ಜಾಡನ್ನೇ ಹಿಡಿದು ಅವರುಗಳ ನಂತರ ಬಂದ ಪರಿಷತ್ತಿನ ಉಪಾಧ್ಯಕ್ಷರುಗಳೂ ಹತ್ತು ಹದಿನೈದು ವರ್ಷಗಳು ವಸಂತ ಸಾಹಿತ್ಯೋತ್ಸವಗಳನ್ನು ವರ್ಷವರ್ಷವೂ ತಪ್ಪದೆ ವಸಂತ ಋತುವಿನಲ್ಲಿ ಮಹಾವೈಭವಗಳಿಂದಲೇ ನಡೆಸಿಕೊಂಡು ಬಂದರು. ಇತ್ತೀಚೆಗೆ ನಮ್ಮ ವಸಂತ ಸಾಹಿತ್ಯೋತ್ಸವಕ್ಕೆ ಬಾಲಗ್ರಹ ಬಡಿದಿದೆ. ಕಳೆಗೆಟ್ಟಿದೆ. ಬೇಕೋಬಿಟ್ಟಿಯಾಗಿ ಯಾವ ಶ್ರದ್ಧೆ, ವಿಶ್ವಾಸ ಹುರುಪುಗಳಿಲ್ಲದೆ "ಒಂದು ಕಾರ್ಯಕ್ರಮ ನಡೆಯಿತು." ಎಂಬ ಧೋರಣೆಯಲ್ಲಿ ನಡೆಯುತ್ತಿದೆ. ಹಿಂದಿನಿಂದ ಬಂದ ಒಂದು ಒಳ್ಳೆಯ ಸಂಪ್ರದಾಯವನ್ನು ಊರ್ಜಿತಗೊಳಿಸಿಕೊಂಡು ಹೋಗಬೇಕೆಂಬ ಸತ್ಸಂಪ್ರದಾಯ ಪರಿಷತ್ತಿನ ಅಧಿಕಾರಿಗಳಲ್ಲಿ ಕರಗಿರುವುದು ವಸಂತ ಸಾಹಿತ್ಯೋತ್ಸವ ತನ್ನ ಘನತೆ ಕಳೆದುಕೊಂಡಿರುವುದಕ್ಕೆ ಕಾರಣ. ನಾವೆಲ್ಲ ಈ ಧೋರಣೆಗೆ ಮರುಗ ಬೇಕಾಗಿದೆ. ಸಂತೋಷಪಡುವ ಸಂಗತಿ ವಸಂತ ಸಾಹಿತ್ಯೋತ್ಸವ ಬೆಂಗಳೂರಿನ ಗಡಿ ದಾಟಿ ಕರ್ನಾಟಕದ ವ್ಯಾಪ್ತಿಯಲ್ಲಿ ಹರಡಿರುವುದು.

1937ರಲ್ಲಿ ವಸಂತ ಸಾಹಿತ್ಯೋತ್ಸವ ಗಮಕ ತರಗತಿ ನಡೆಯುತ್ತಿದ್ದ ಕಾಲ ದಲ್ಲಿಯೇ ಪ್ರಾಪ್ತವಾಯಿತು. ಈಗ ರಂಗಮಂಟಪ ಎದ್ದಿರುವ ಬಲಭಾಗದ ಕೊಠಡಿ ಆ ಕಾಲದಲ್ಲಿ ಗಮಕ ತರಗತಿಯ ಕೊಠಡಿಯಾಗಿತ್ತು. ವಸಂತ ಸಾಹಿತ್ಯೋತ್ಸವಕ್ಕಾಗಿ ತಾತ್ಕಾಲಿಕವಾಗಿ ಆ ಕೊಠಡಿಯನ್ನು ಬಿಟ್ಟುಕೊಡಬೇಕಾಯಿತು. ಹತ್ತು ಹದಿನೈದು ದಿವಸಗಳವರೆಗೆ ಗಮಕ ತರಗತಿ ಪರಿಷತ್ತಿನ ಎದುರಿಗಿದ್ದ ಚಾಮರಾಜೇಂದ್ರ ಸಂಸ್ಕೃತ ಪಾಠಶಾಲೆಯ ಕೊಠಡಿಯೊಂದಕ್ಕೆ ಹೋಯಿತು. ಅಲ್ಲಿ ಗಮಕ ತರಗತಿಯ ಪಕ್ಕದ ಕೊಠಡಿ ಪಂಜೆ ಮಂಗೇಶರಾಯರು, ಕಡೇಂಗೋಡ್ಲು ಶಂಕರಭಟ್ಟರು ಮತ್ತು ರಂ. ಶ್ರೀ. ಮುಗಳಿಯವರ ಬಿಡದಿಯಾಗಿತ್ತು. ಮೈಸೂರಿನ ಹೊರಗಡೆಯಿಂದ ಬಂದ ವಸಂತ ಸಾಹಿತ್ಯೋತ್ಸವದ ಅತಿಥಿಗಳಲ್ಲಿ ಈ ಮೂವರು ಮಹನೀಯರುಗಳು ಪ್ರಮುಖ ರಾಗಿದ್ದರು. ಅವರುಗಳೂ ಗಮಕ ತರಗತಿಗೆ ಬಂದು ಗಮಕಾಭ್ಯಾಸಿಗಳ ಗಮಕ ಪ್ರಗತಿ

ಯನ್ನು ಈಗಾಗ ಗಮನಿಸುತ್ತಿದ್ದರು. ಶಕುಂತಲಾಬಾಯಿಯ ಗಮಕ ಬಾಲಪಾಠವನ್ನು ಕೇಳಿ ಆನಂದಿಸಿದವರಲ್ಲಿ ಪಂಜೆ, ಶಂಕರಭಟ್ಟ, ರಂ. ಶ್ರೀ. ಮುಗಳಿ ಗಮನಾರ್ಹರು ಆಗಿನ ಮೈಸೂರೇತರ ಕನ್ನಡಿಗರಲ್ಲಿ.

ಪಂಜೆ ಮಂಗೇಶರಾಯರು ಶ್ರೇಷ್ಠ ಸಾಹಿತಿಗಳಾಗಿದ್ದಷ್ಟೇ ಎತ್ತರದಲ್ಲಿ ಶ್ರೇಷ್ಠ ಸಜ್ಜನರಾಗಿದ್ದರು. ಅವರ ಹಾಸ್ಯ ಪ್ರವೃತ್ತಿಯಂತೂ ಮನೆಮಾತಾಗಿದೆ. ಒಂದು ದಿನ ಬೆಳಗ್ಗೆ, ಗಮಕ ತರಗತಿ ಕೊಠಡಿಯಲ್ಲಿ ನಾನು ಬಿಂದೂರಾಯರಿಗೆ ಸ್ವಲ್ಪ ದೂರದಲ್ಲಿ, ಶಕುಂತಲಾಬಾಯಿ ಬಿಂದೂರಾಯರಿಗೆ ಸ್ವಲ್ಪ ಹತ್ತಿರದಲ್ಲಿ ನಿಂತಿದ್ದೆವು. ಪಾಠವಿನ್ನೂ ಪ್ರಾರಂಭವಾಗಿರಲಿಲ್ಲ. ಪಂಜೆಯವರು ತಮ್ಮ ಸ್ನಾನ ಉಪಾಹಾರಗಳನ್ನು ತೀರಿಸಿಕೊಂಡು ಬಂದರು. ಧಡ ಧಡ ಗಮಕ ತರಗತಿಯ ಕೊಠಡಿಗೆ ನುಗ್ಗಿದರು. ನುಗ್ಗಿದವರೇ ನನ್ನೆಡೆಗೆ ಧಾವಿಸಿ, ನನ್ನ ಬೆನ್ನಿಗೆ ತಮ್ಮ ತಲೆಯನ್ನು ಅದುಮಿ ತಮ್ಮ ಎರಡು ಕೈಗಳಿಂದ ನನ್ನ ಕೈಗಳು ಅಲುಗದಂತೆ ಬಲವಾಗಿ ಹಿಡಿದು, ರಭಸವಾಗಿ ತಳ್ಳಿಕೊಂಡು ಬಿಂದುರಾಯರ ಬಳಿಗೆ ಹೋದರು. ನನ್ನನ್ನು ನನ್ನ ಸೌಭಾಗ್ಯವತಿಯ ಪಕ್ಕಕ್ಕೆ ನಿಲ್ಲಿಸಿ ಗರಕ್ಕನೆ ನನ್ನ ಮುಂದೆ ಬಂದು ನಿಂತು ಚಪ್ಪಾಳೆ ತಟ್ಟಿ ನಕ್ಕರು. ಆ ಸಮಯದಲ್ಲಿ ಡಿ. ವಿ. ಜಿ., ವೀ. ಸೀ., ಶಂಕರಭಟ್ಟ, ರಂ. ಶ್ರೀ. ಮುಗಳಿ ಪ್ರತ್ಯಕ್ಷ ರಾಗಿದ್ದರೆಂದು ನನ್ನ ನೆನಪು. "ಸತಿಪತಿಗಳ ಮದುವೆಯಲ್ಲಿ ನಾವಿರಲಿಲ್ಲ. ಅವರಿಬ್ಬರನ್ನು ಒಬ್ಬರ ಪಕ್ಕದಲ್ಲಿ ಒಬ್ಬರನ್ನು ನಿಲ್ಲಿಸಿ ಈಗ ನೋಡುತ್ತಿದ್ದೇವೆ" ಎಂದು ಪಂಜೆಯವರು ಹಾಸ್ಯದ ಚಟಾಕಿ ಹಾರಿಸಿದರು. ನಮ್ಮನ್ನು ಪ್ರೀತಿಯಿಂದ ಅವರು ಒಂದು ಮಧ್ಯಾಹ್ನ ತಮ್ಮ ಕೊಠಡಿಗೆ ಕರೆಸಿಕೊಂಡರು. ನಾನು ಬರೆದು ಪ್ರಕಟಿಸಿದ್ದ "ಸುಳ್ಳಿನ ಸೋಲು" ಸಣ್ಣವರ ನಾಟಕವನ್ನು ಶ್ರದ್ಧೆಯಿಂದ ಓದಿಸಿ ಕೇಳಿ ಸಂತೋಷಪಟ್ಟರು. "ಇಂಗ್ಲಿಷ್ ಭಾಷೆಯಲ್ಲಿ "ಪ್ಲೆಬಾಕ್ಸ್" ಎಂಬ ಶಿರೋನಾಮೆಯಲ್ಲಿ ಮಕ್ಕಳ ನಾಟಕಗಳು ಪ್ರಕಟ ವಾಗಿವೆ. ಆ ಮಾದರಿಯಲ್ಲಿ ಮಕ್ಕಳ ನಾಟಕಗಳನ್ನು ಬರೆ. ಬಾಲ ಸಾಹಿತ್ಯ ಮಂಡಲದ ಮಾಲೆಯಲ್ಲಿ ಪ್ರಕಟಿಸೋಣ" ಎಂದರು. ಕುಮಾರವ್ಯಾಸನ ಕರ್ಣನ ಮೇಲೆ ಪ್ರತ್ಯೇಕ ವಾಗಿ ವಸಂತ ಸಾಹಿತ್ಯೋತ್ಸವವಾದ ಕೆಲವು ದಿವಸಗಳಲ್ಲಿ ಒಂದು ಉಪನ್ಯಾಸವನ್ನು ಮಾಡಿದರು. "ಕರ್ಣ" ಎನ್ನುವ ಪದವನ್ನೇ ಹಿಡಿದು ಅವರು ವಿಶ್ಲೇಷಿಸಿದ ರೀತಿ ವಿಶೇಷವಾಗಿತ್ತು. ಬೆಂಗಳೂರಿನಿಂದ ಹೋದವರು. ಮತ್ತೆ ಬೆಂಗಳೂರಿಗೆ ಬರಲಿಲ್ಲ. ಶಕುಂತಲಾಬಾಯಿ ನಿರ್ಭಾಗ್ಯೆ. ಪಂಜೆಯವರಿಗೆ ತನ್ನ ಭಾರತ ವಾಚನ ಕೇಳಿಸುವ ಪುಣ್ಯ ಕೇಳಿಬಂದಿರಲಿಲ್ಲ. ಪಂಜೆಯವರು 1938ರಲ್ಲಿ ತೀರಿಕೊಂಡರು.

1937ರಲ್ಲಿ ಬೆಂಗಳೂರಿನಲ್ಲಿ ವಸಂತ ಸಾಹಿತ್ಯೋತ್ಸವದ ಸಮಯದಲ್ಲಿ ಪ್ರಥಮ ಬಾರಿ ಕಡೇಂಗೊಡ್ಲು ಶಂಕರಭಟ್ಟರನ್ನು ಕಂಡಿದ್ದ ಶಕುಂತಲಾಬಾಯಿಗೆ ಭದ್ರಾವತಿಯ ಪೇಪರ್ ಟೌನ್ ಕರ್ಣಾಟಕ ಸಂಘದ ವಾರ್ಷಿಕೋತ್ಸವದಲ್ಲಿ ಅವರ ಅಧ್ಯಕ್ಷತೆಯಲ್ಲಿ ಇಪ್ಪತ್ತು ವರ್ಷಗಳ ನಂತರ ಕುಮಾರವ್ಯಾಸ ಭಾರತ ವಾಚನ ಮಾಡುವ ಸಂದರ್ಭ ಒದಗಿಸಿತು. ನನ್ನ ಸೌಭಾಗ್ಯವತಿ ಒಂದು ಗಂಟೆಕಾಲ "ಕೃಷ್ಣರಾಯಭಾರ" ಕಥಾ

ಭಾಗವನ್ನು ವಾಚನ ಮಾಡಿದರು. ಭಟ್ಟರು ಕೇಳಿ ಬಹುವಾಗಿ ಸಂತೋಷಿಸಿದರು. "ಕುಮಾರವ್ಯಾಸನ ಅನುಗ್ರಹ ನಿಮ್ಮ ಮೇಲೆ ಸಂಪೂರ್ಣವಾಗಿದೆ" ಎಂದರು. ಕುಮಾರ ವ್ಯಾಸನನ್ನು ಕುರಿತು ಒಂದು ಗಂಟೆ ಕಾಲ ಅದ್ಭುತವಾಗಿ ವಿದ್ವತ್ಪೂರ್ಣ ಉಪನ್ಯಾಸ ಮಾಡಿದರು. ಅನಂತರದಲ್ಲಿ ವಿದ್ವನ್ಮಣಿ ಶಂಕರಭಟ್ಟರನ್ನು ಶಕುಂತಲಾಬಾಯಿ ನೋಡಲು ಅವಕಾಶ ಸಿಗಲಿಲ್ಲ. ಅವರು ಕಾಲನಾದ ಮೇಲೆ ಎರಡು ಮೂರು ಸಲ ಮಂಗಳೂರಿಗೆ ಪ್ರವಾಸ ಹೋಗಿದ್ದೇವೆ. ಕಡೇಂಗೊಡ್ಲು ಶಂಕರಭಟ್ಟರನ್ನು ಕಂಡೆವೇ, ಇಲ್ಲ, ಇಲ್ಲ. ಆ ಪುಣ್ಯ ನಮಗಿರಲಿಲ್ಲ.

1937 ರಿಂದ ಈವರೆಗೂ ಶಕುಂತಲಾಬಾಯಿ ಗಮಕಕಲೆಯಲ್ಲಿ ಸಾಧಿಸಿರುವ ಪ್ರಗತಿಯನ್ನು ಗಮನಿಸಿ ಅವರನ್ನು ಆಶೀರ್ವದಿಸುತ್ತಿರುವ ಹಿರಿಯರಲ್ಲಿ ರಂ. ಶ್ರೀ. ಮುಗಳಿ ಅವರು ಒಬ್ಬರು. ಅವರು ಅವರ ಸಹಧರ್ಮಿಣಿ ರಾಧಾಬಾಯಿ ನಮಗೆ ಮನೆಯವರೇ ಆಗಿ ಹೋಗಿದ್ದಾರೆ.

1937ರಲ್ಲೇ ಮೈಸೂರಿನ ಹೊರಗಡೆಯಿಂದ ವಸಂತಸಾಹಿತ್ಯೋತ್ಸವಕ್ಕೆ ಬಂದಿದ್ದ ಪಂಜೆ, ಶಂಕರಭಟ್ಟ. ರಂ. ಶ್ರೀ. ಮುಗಳಿಯವರಂಥ ಪ್ರಸಿದ್ಧ ಸಾಹಿತಿಗಳ ಕೃಪೆಗೆ ಪಾತ್ರರಾಗುವ ಅವಕಾಶ ದೊರೆತದ್ದು ಶಕುಂತಲಾಬಾಯಿಗೆ ಅನನ್ಯ ಲಾಭವಾಗಿತ್ತು.

ಶಕುಂತಲಾ ಬಾಯಿ ಗಮಕಿಯಾದರು

ಕರ್ನಾಟಕ ಸಾಹಿತ್ಯ ಪರಿಷತ್ತು ನಿಗದಿಸಿದ್ದ ಕಾಲಾವಧಿಯಲ್ಲಿ ಗಮಕ ತರಗತಿಯ ಪಾಠಗಳು ಮುಗಿದವು. ಪರೀಕ್ಷೆ ನಡೆಯಿತು. ಸಿ. ಕೆ. ವೆಂಕಟರಾಮಯ್ಯ, ವಿ. ಸೀ., ಸಾಹಿತ್ಯ ಭಾಗಕ್ಕೆ ಬಿ. ವೆಂಕಟಕೃಷ್ಣಪ್ಪ, ತಿರುಮಲೆ ರಾಜಮ್ಮನವರು ಸಂಗೀತಭಾಗಕ್ಕೆ ಪರೀಕ್ಷಕರಾಗಿದ್ದರು. ವೆಂಕಟರಾಮಯ್ಯ, ವೀ. ಸೀ. ಸುಪ್ರಸಿದ್ಧ ಸಾಹಿತಿಗಳು. ವೆಂಕಟ ಕೃಷ್ಣಪ್ಪನವರು ಸಂಗೀತ ಶಾಸ್ತ್ರಕ್ಕೆ ಉದ್ಗ್ರಂಥ ಬರೆದ ಸಂಗೀತ ವಿದ್ವಾಂಸರು. ತಿರುಮಲೆ ರಾಜಮ್ಮನವರೋ ಶ್ರೇಷ್ಠ ಕವಯಿತ್ರಿ, ವೈಣಿಕ ವಿದುಷಿ. ಹೀಗೆಂದ ಮೇಲೆ ಡಿ.ವಿ.ಜಿ. ಕಾಲದ ಗಮಕ ತರಗತಿಯ ಮಟ್ಟ ಎಷ್ಟು ಉನ್ನತ ಶಿಖರವನ್ನು ಮುಟ್ಟಿತ್ತು ಎಂದು ಊಹಿಸಬಹುದು. ಆ ಕಾಲದಲ್ಲಿ ಪರಿಷತ್ತಿನಿಂದ ಗಮಕಾಭ್ಯಾಸ ಪೂರಯಿಸಿ ಗಮಕಿಗಳಾಗಿ ಹೊರಬಂದವರಲ್ಲಿ ಕೆಲವರು ಇಂದಿನ ಗಮಕ ಪಂಕ್ತಿಯ ಮುಂಚೂಣಿಯಲ್ಲಿರುವುದನ್ನು ಕನ್ನಡ ನಾಡು ಚೆನ್ನಾಗಿ ಬಲ್ಲದು.

1937ರ ಆಗಸ್ಟ್ ತಿಂಗಳ 4ನೇ ದಿನಾಂಕದಂದು ಸಂಜೆ ಮೈಸೂರು ಸಂಸ್ಥಾನದ ಶ್ರೇಷ್ಠ ನ್ಯಾಯಾಲಯದ ಶ್ರೇಷ್ಠ ನ್ಯಾಯಮೂರ್ತಿಯಾಗಿದ್ದ ಕೆ. ಶಂಕರನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಗಮಕ ಪ್ರಶಸ್ತಿ ವಿತರಣೋತ್ಸವ ನಡೆಯಿತು. ಬೆಂಗಳೂರಿನ ಪ್ರಸಿದ್ಧ ಸಾಹಿತಿಗಳು, ವಿದ್ವಾಂಸರು, ಪುರಪ್ರಮುಖರು ಉತ್ಸವಕ್ಕೆ ದಯಮಾಡಿಸಿ ಅದು ವಿದ್ವತ್ಸಭೆಯ ಗರಿಮೆಗೇರಿತ್ತು. ಪರಿಷತ್ತಿನ ಸಭಾಂಗಣ ಕಿಕ್ಕಿರಿದಿತ್ತು. ಗಮಕ ಪ್ರಶಸ್ತಿ ಪಡೆದ ವಿದ್ಯಾರ್ಥಿ–ವಿದ್ಯಾರ್ಥಿನಿಯರುಗಳಿಂದ ಗಮಕ ವಾಚನ ಮಾಡಿಸಿ

ಪ್ರಶಸ್ತಿಪತ್ರಗಳನ್ನು ಸಭಾಧ್ಯಕ್ಷರಿಂದ ವಿತರಣೆ ಮಾಡಿಸಿದರು ಡಿ. ವಿ. ಜಿ. ಅವರು. ಆ ಸಮಯದಲ್ಲಿ ಅವರು ಆಡಿದ ಮಾತುಗಳು ಗಮನಾರ್ಹವಾಗಿವೆ :—

"ಬಿಂದೂರಾಯರು ಪ್ರತಿದಿನವೂ ಮೂರು ಹೊತ್ತು ಪಾಠವನ್ನು ಹೇಳಿದ್ದಾರೆ. ಕೆಲವು ವಿದ್ಯಾರ್ಥಿಗಳು ನಿಯಮಿತ ಕಾಲಕ್ಕಿಂತ ಹೆಚ್ಚು ಹೊತ್ತು ಬಂದು ಪಾಠ ಹೇಳಿಸಿಕೊಂಡಿದ್ದಾರೆ, ಇನ್ನೊಂದು ವಿಷಯ ವನ್ನು ಹೇಳಿದರೆ ಕ್ಷಮಿಸಬೇಕು. ಈ ಸಲ ಬರುತ್ತಿದ್ದ ಹೆಣ್ಣುಮಕ್ಕಳ ಗಂಡಂದಿರು ಸಪತ್ನೀಕರಾಗಿ ಬಂದು ತಮ್ಮ ಹೆಂಡತಿಯರಿಗೆ ಪಾಠ ಹೇಳಿಸಿ ಕೊಂಡು ಹೋಗುತ್ತಿದ್ದರು. ಇದು ಸ್ತೋತ್ರಾರ್ಹವಾದ ಸಂಗತಿ ಎಂದು ನಾನು ತಿಳಿದುಕೊಂಡಿರುತ್ತೇನೆ. ಇನ್ನೂ ಹೆಚ್ಚು ಮಂದಿ ನಮ್ಮ ಸಹೋದರರು ಹೀಗೆ ಮಾಡಬೇಕೆಂದು ನನ್ನ ಕೋರಿಕೆ."

ಗೌ|| ಕಾರ್ಯದರ್ಶಿಯಾಗಿದ್ದ ಎಸ್. ವಿ. ರಂಗಣ್ಣನವರು ಸಭೆಗೆ ಆ ವರ್ಷದ ಗಮಕ ತರಗತಿಯ ವರದಿ ಒಪ್ಪಿಸುತ್ತ ಪ್ರಸ್ತಾಪಿಸಿದ್ದ ವಿಷಯಗಳಲ್ಲಿ ಈ ಕೆಳಗಿನ **ಒಂದೆರಡು ಸಂಗತಿಗಳೂ ಗಮನಾರ್ಹವಾಗಿವೆ :—**

"ಈ ವರ್ಷ ತೇರ್ಗಡೆಯಾಗಿರುವ ನಮ್ಮ ಗಮಕಿಗಳ ಪೈಕಿ ಇಬ್ಬರು ಮಹಿಳೆಯರಿರುವುದು ಒಂದು ಹೆಮ್ಮೆಯ ವಿಷಯ. ಬರುವ ವರ್ಷದಿಂದ ಇನ್ನೂ ಹೆಚ್ಚು ಮಂದಿ ವಿದ್ಯಾರ್ಥಿನಿಯರು ಬಂದು ಗಮಕಾಭ್ಯಾಸ ಮಾಡಬೇಕೆಂದು ನನ್ನ ಹಿರಿಯಾಸೆ. ನಮ್ಮ ನಾಡಿನ ಮಹಿಳೆಯರಲ್ಲಿ ಕನ್ನಡ ಕಾವ್ಯಾಭಿರುಚಿ ಮೊಳೆತು ಬೆಳೆಯಬೇಕಾದರೆ ಹೆಚ್ಚು ಸಂಖ್ಯೆಯಲ್ಲಿ ಸ್ತ್ರೀ ಗಮಕಿಗಳು ತಯಾರಾಗಬೇಕಾಗುವುದು ಅವಶ್ಯಕ. ಸ್ತ್ರೀ ಗಮಕಿಗಳು ಮಹಿಳೆಯರ ಸಭೆಗಳಲ್ಲಿಯೂ, ಮಹಿಳಾ ಸಂಘಗಳಲ್ಲಿಯೂ ಕಾವ್ಯ ವಾಚನಗಳನ್ನು ಮಾಡಿ, ಹೆಣ್ಣುಮಕ್ಕಳಿಗೆ ಕಾವ್ಯವಾಚನವನ್ನು ಕಲಿಸಿ, ಹೆಂಗಸರು, ಮಕ್ಕಳಲ್ಲಿ ಸಾಹಿತ್ಯದ ಸವಿಯನ್ನೂ ಸೊಬಗನ್ನೂ ಹರಡ ಬೇಕಾಗಿದೆ. ಆ ಮೂಲಕ ನಮ್ಮ ಸಾಹಿತ್ಯವು ಸಮಾಜದೆಲ್ಲೆಡೆಯಲ್ಲಿಯೂ ಹರಡಲು ದೊಡ್ಡ ಸಹಾಯವಾಗುತ್ತದೆ."

ಎಸ್. ವಿ. ರಂಗಣ್ಣ ಆ ವರ್ಷದ ಗಮಕ ಪರೀಕ್ಷಾ ಫಲಿತಾಂಶವನ್ನು ಕುರಿತು ವರದಿಯಲ್ಲಿ ಉಲ್ಲೇಖಿಸಿರುವ ವಿಷಯವೂ ಗಮನಾರ್ಹವಾಗಿವೆ :—

"ಪರೀಕ್ಷೆಯಲ್ಲಿ (1) ಪದೋಚ್ಚಾರಣೆ (2) ರಾಗ ಪ್ರಯೋಗ (3) ಒಟ್ಟಿನ ಪರಿಣಾಮ—ಈ ಅಂಶಗಳನ್ನು ಗಮನದಲ್ಲಿ ಇರಿಸಿಕೊಳ್ಳ ಲಾಗಿತ್ತು. ಒಟ್ಟಿನ ಮೇಲೆ ಈ ಸಲದ ವಿದ್ಯಾರ್ಥಿಗಳ ದರ್ಜೆ ಕಳೆದ ಎರಡು ವರ್ಷಗಳ ವಿದ್ಯಾರ್ಥಿಗಳ ದರ್ಜೆಗಳಿಗಿಂತ ಉತ್ತಮವಾಗಿದೆ ಯೆಂದು ಪರೀಕ್ಷಕರು ಅಭಿಪ್ರಾಯಪಟ್ಟಿದ್ದಾರೆ."

ಡಿ. ವಿ. ಜಿ. 1935ರಲ್ಲಿ ಗಮಕ ತರಗತಿಯನ್ನು ಪ್ರಾರಂಭಿಸಿದರು. 1937ರಲ್ಲಿ (ಅವರ ಕಾಲದ ಮೂರು ವರ್ಷಗಳ ಉಪಾಧ್ಯಕ್ಷ ಪದವಿಯ ಕಾಲದಲ್ಲಿ) ಗಮಕ ತರಗತಿಯ ಭವಿಷ್ಯ ಉಜ್ವಲವಾಗುವ ಲಕ್ಷಣ ಸ್ಪಷ್ಟವಾಗಿ ಕಂಡಿತು. 1937ರಲ್ಲಿ ಕರ್ನಾಟಕ ಸಾಹಿತ್ಯ ಪರಿಷತ್ತಿನಿಂದ ಹೊರಬಿದ್ದ ಗಮಕಿಗಳಲ್ಲಿ ಇಬ್ಬರು ಮೂವರು ಕರ್ಣಾಟಕದ ಬಹು ಶ್ರೇಷ್ಠ ಗಮಕಿಗಳೆನಿಸಿ ಕನ್ನಡ ಗಮಕ ಪ್ರಪಂಚದ ಮುಂಚೂಣಿ ಯಲ್ಲಿರುವುದು ಅತಿಸ್ಪಷ್ಟವಾಗಿದೆ.

ಶಿಷ್ಯೆಯಲ್ಲಿ ಬಿಂದೂರಾಯ ಗಮಕ ವೈಶಿಷ್ಟ್ಯ

ಶಕುಂತಲಾಬಾಯಿ ಮುಖ್ಯವಾಗಿ ತಮ್ಮ ಗುರುವರ್ಯರಾದ ಭಾರತವಾಚನ ಪ್ರವೀಣ ಬಿಂದೂರಾಯರ ಸಂಪ್ರದಾಯವನ್ನು ತಮ್ಮ ಗಮಕಕ್ಕೆ ಬಳಸಿಕೊಳ್ಳುತ್ತಾರೆ. ಆ ಸಂಪ್ರದಾಯ ಎಂಥದು ?

ವೀ.ಸೀ. ತಮ್ಮ 'ಮಹನೀಯರು' ಎಂಬ ಗ್ರಂಥದಲ್ಲಿ ಬಿಂದೂರಾಯರ ವ್ಯಕ್ತಿಚಿತ್ರ ವನ್ನು ಕೊಟ್ಟಿದ್ದಾರೆ. ಅದರಲ್ಲಿ ಬಿಂದೂರಾಯರ ಗಮಕವನ್ನು ಕುರಿತು ಅವರು ಹೇಳು ವಾಗ ಗಮಕದಲ್ಲಿ ಸಂಗೀತದ ಬಳಕೆಯನ್ನು ಕುರಿತು ತಮ್ಮ ಅಭಿಪ್ರಾಯವನ್ನು ಸ್ಪಷ್ಟ ಪಡಿಸಿದ್ದಾರೆ.

> ವೃತ್ತಿಯಲ್ಲಿ ಸಂಗೀತಗಾರರಾಗಿರುವವರು ರಾಗ ವಿನ್ಯಾಸ ಮಾಡುವ ರೀತಿ ಒಂದು. ಅದು ತನಿಯಾದ ಸಂಗೀತ ಮಾರ್ಗ. ಮಾತು ಸಾಹಿತ್ಯ ಇಲ್ಲದೆಯೇ ಅದು ನಡೆಯಬಲ್ಲುದು. ಮಾತು ಸಂಗೀತಕ್ಕೆ ನಿರ್ಬಂಧ: ಅಡಚಣೆ. ಶುದ್ಧ ಸಂಗೀತವಿರುವುದು ರಾಗಾಲಾಪನೆಯಲ್ಲಿ. ಗಮಕದಲ್ಲಿ ಸಂಗೀತ ಒಂದು ಸಾಧನ, ನೆರವು ಮಾತ್ರ. ಅದರ ಕ್ರಿಯೆ ಆಯುಧವಾಗಿ ಮಾತ್ರ. ಗೀತಗಾಯನದಲ್ಲಿ ಅದರ ಬಳಕೆ ಬೇರೆ ರೀತಿಯದು. ಸಾಮಾನ್ಯ ಕವಿತೆಯ ಓದುಗಾರಿಕೆಯಲ್ಲಿ ಸಂಗೀತ ಹೆಚ್ಚಾಗಿ ಬೆರೆಯಬೇಕಿಲ್ಲ. ಕಥನ ಕಾವ್ಯಗಳಲ್ಲಿ ಗಮಕ ವಿದ್ಯೆಗೆ ಹೆಚ್ಚು ಅವಕಾಶವಿದೆ. ಒಂದು ಸೂತ್ರದ ಎಳೆಯಂತೆ ಉದ್ದಕ್ಕೆ ಯಾವುದೋ ನಡೆ ಇರುತ್ತದೆ. ಕಥೆಗೆ ಮೊದಲು, ಮಧ್ಯೆ, ಕೊನೆ ಎಂಬುದುಂಟು. ನಡುವೆ ವರ್ಣನೆ, ಸಂಭಾಷಣೆ, ನಾಟ ಕೀಯ ಸನ್ನಿವೇಶಗಳು ಬರುತ್ತವೆ. ಧರ್ಮ ತತ್ವಾದಿ ಪ್ರಸಂಗಗಳು ಬರು ತ್ತವೆ. ಭಾವ ಖಂಡಗಳೂ ಅತಿಶಯ. ಹೊಮ್ಮುಗೆಗಳೂ ಅಲ್ಲಲ್ಲಿ ಬರು ತ್ತವೆ. ಆವೇಶಗಳೊ ಶಾಂತವೊ ಸಹನೆ ದೃಢಗಳೊ ಪ್ರಕಾಶಗೊಳ್ಳುವ ಸಂದರ್ಭಗಳಿರುತ್ತವೆ. ಇವನ್ನೆಲ್ಲ ತೂಗಿ ನಡೆಸಬೇಕಾದ ಅಗತ್ಯ ಗಮಕಿಗೆ ಬೀಳುತ್ತದೆ.

ವೀ.ಸೀ. ತಮ್ಮ ಸ್ಪಷ್ಟತೆಗೆ ನಾಟಕ ಶಿರೋಮಣಿ ವರದಾಚಾರ್ಯರನ್ನೂ ಭಾರತ ವಾಚನ ಪ್ರವೀಣರನ್ನೂ ಉದಾಹರಿಸಿದ್ದಾರೆ.

"ವರದಾಚಾರ್ಯರು ಒಂದು ಕಂದವನ್ನು ತೆಗೆದುಕೊಂಡು ಅದರಲ್ಲಿ ಒಂದು ರಾಗದ ಆಕೃತಿಯನ್ನೂ ಭಾವಪುಷ್ಟಿಯನ್ನೂ ತೋರಿಸುತ್ತಿದ್ದ ರೀತಿ ಗಮಕಿಗಳಿಗೆ ಬಹು ದೊಡ್ಡ ಸಹಾಯವೂ ಮಾರ್ಗದರ್ಶನವೂ ಆಗುತ್ತಿತ್ತು. ಅಷ್ಟು ಖಚಿತವಾಗಿ, ಅಷ್ಟು ಅಲ್ಪ ಅವಕಾಶದಲ್ಲಿ ಒಂದು ರಾಗದ ಸಾರಗುಣವನ್ನು ಒಂದು ಕಂದದ ಸಾಹಿತ್ಯಕ್ಕೆ ಹೊಂದಿಸಿ ಸನ್ನಿವೇಶ ಸಾಧನೆ ಮಾಡುವುದು ಕಷ್ಟ. ಆ ದಾರಿ ರಾಯರಿಗೆ ಚೆನ್ನಾಗಿ ಹಿಡಿಸಿತ್ತು. ಅವರು ತಾವು ಓದುವ ಸಾಹಿತ್ಯಕ್ಕೆ ರಾಗವನ್ನು ದುಡಿಸುತ್ತಿದ್ದ ರೀತಿ ಅಂಥದು. ಆದರೆ ಗಮಕದ ಅಗತ್ಯ ನಾಲ್ಕಾರು ಹತ್ತಾರು ಪದ್ಯಗಳಲ್ಲಿ ಒಂದು ರಾಗವನ್ನು ದುಡಿಸುವ ಕೆಲಸಕ್ಕೆ ಒದಗಬೇಕಾಗಿತ್ತಾಗಿ ವಿಸ್ತಾರವಾದ, ರಾಗಸ್ವರೂಪ ವಿಸ್ತರಣದ ಅನುಭವ ಎಷ್ಟು ಚೆನ್ನಾಗಿದ್ದರೆ ಎಷ್ಟು ವಿಚಕ್ಷಣೆಯಿಂದ ಮಾಡಿದರೆ ಅಷ್ಟು ಚೆನ್ನಾಗಿ ಕಾವ್ಯದ ಓಟವನ್ನೂ ಆವರಣವನ್ನೂ ಅದು ಸುಲಭವಾಗಿ ಮಾಡಬಲ್ಲುದು. ಈ ಅಗತ್ಯಕ್ಕೆ ರಾಯರ ಸಂಗೀತಾನುಭವ ನೆರವಾಯಿತು."

ಶಕುಂತಲಾಬಾಯಿಗೆ ಮನೋಧರ್ಮ ಬೆಳೆಯುತ್ತಿದ್ದಂತೆ ತಾವೂ ಚಿಕ್ಕಂದಿನಲ್ಲಿ ಕಲಿತ ಸಂಗೀತ ಸಾಲದೆನ್ನಿಸಿತು. ಗಮಕಿಗೆ ಸಂಗೀತ ಜ್ಞಾನ ಆಳವಾಗಿರಬೇಕು. ಆದರೆ ಬಳಸುವ ಹದಣು ಹಿತಮಿತವಾಗಿ ಅರಿತಿರಬೇಕು ಎನ್ನಿಸಿತು. ಅನುಕ್ರಮವಾಗಿ ಕರ್ಣಾಟಕ ಸಂಗೀತವನ್ನು ರೂಢಿಸಿಕೊಂಡು ಬಂದ ಪ್ರಸಿದ್ಧ ಸಂಗೀತ ಮನೆತನದ ಸಂಗೀತ ವಿದ್ವಾಂಸರಾದ ಚಿಂತಲಪಲ್ಲಿ ಕೃಷ್ಣಮೂರ್ತಿಯವರಲ್ಲಿ ಸತತವಾಗಿ ಮೂರು ನಾಲ್ಕು ವರ್ಷಗಳ ಕಾಲ ಶಾಸ್ತ್ರೀಯ ಸಂಗೀತಪಾಠ ಮಾಡಿದರು.

ತಮ್ಮ ಶಿಷ್ಯೆ ಶಕುಂತಲಾಬಾಯಿ ತಮ್ಮ ಸಂಪ್ರದಾಯವನ್ನು ಗಮಕದಲ್ಲಿ ಅನುಸರಿಸಿಕೊಂಡು ಬರುತ್ತಿರುವುದನ್ನು ಕೇಳಿ ಬಿಂದೂರಾಯರಿಗೆ ಆದ ಸಂತೋಷ ಅಷ್ಟಿಷ್ಟಲ್ಲ. ಅವರು ನನಗೆ ಬರೆದ ಪತ್ರಗಳಲ್ಲಿ ಅದನ್ನು ವ್ಯಕ್ತಪಡಿಸಿದ್ದಾರೆ:

ಭಾರತ ಬಿಂದೂರಾವ್ ಕ್ಯಾಂಪ್ : ಚಿತ್ರದುರ್ಗ
ಚಿತ್ರದುರ್ಗ ದಿನಾಂಕ : 29–9–1967

ಶ್ರೀಮಾನ್ ಪಾಂಡುರಂಗರಾಯರ ಸ||ಕ್ಕೆ||

ಭಾರತ ಬಿಂದೂರಾಯನ ನಮಸ್ಕಾರಗಳು. ಉಭಯ ಕುಶಲ ತಮ್ಮ ಅಂತಃಕರಣಪೂರ್ವಕವಾದ ಪತ್ರ ಮತ್ತು ಶ್ರೀಮತಿ ಶಕುಂತಲಾ ಬಾಯಿಯವರಿಗೂ ನಿಮಗೂ 17–9–67ರಲ್ಲಿ ಬಸವನಗುಡಿ ಪುರನಿವಾಸಿಗಳ ಪ್ರತಿನಿಧಿಗಳಾದ ಶ್ರೀ ಕೆ. ಎಲ್. ನಾರಾಯಣ ಮತ್ತು ಸಹೋದರರು ಅರ್ಪಿಸಿದ ಅಭಿನಂದನಾ ಪತ್ರ ಇಂದು ತಲುಪಿತು. ಬಹಳ ಸಂತೋಷ

ನಾಯಿತು. ಶ್ರೀಮತಿ ಶಕುಂತಲಾಬಾಯಿಯವರು ಸ್ವತಃ ಪ್ರತಿಭಾಶಾಲಿಗಳಾಗಿ ನನ್ನನ್ನು ಗುರುಸ್ಥಾನದಲ್ಲಿಟ್ಟುಕೊಂಡು ಕೀರ್ತಿ ಕೊಟ್ಟಿರುವುದಕ್ಕೆ ತುಂಬ ಕೃತಜ್ಞನಾಗಿರುತ್ತೇನೆ. ಅವರ ವಾಚನದಲ್ಲಿನ ಪದಗಳ ಭಾವವನ್ನು ಹೊರಹೊಮ್ಮಿಸುವಷ್ಟು ರಾಗ ಕರುಣಿಸುತ್ತಲ್ಲವೆ–ರಾಗ ಪ್ರಾಧಾನ್ಯ ಕಾಣಿಸುವುದಿಲ್ಲ.–ಅದೇ ಗಮಕ. ಅವರ ಪ್ರತಿಭಾವಂತ ವಾಚನಕ್ಕೆ ನಾನು ಸೋತಿದ್ದೇನೆ—"ಶಿಷ್ಯಾದಿಚ್ಛೇತ್ ಪರಾಜಯಂ"—ಗುರುವಿಗೆ ಭೂಷಣ. ಶ್ರೀ ಹರಿವಾಯುಗಳು ಶ್ರೀಮತಿ ಶಕುಂತಲಾಬಾಯಿಯವರಿಗೂ ಅವರ ಪತಿಗಳಾದ ತಮಗೂ ಆಯುರಾರೋಗ್ಯಭಾಗ್ಯಗಳನ್ನು ದಯಪಾಲಿಸಬೇಕೆಂದು ಪ್ರಾರ್ಥಿಸುತ್ತೇನೆ. ತಮ್ಮ ಔದಾರ್ಯವಿಲ್ಲದಿದ್ದರೆ ಅವರ ಪ್ರತಿಭಾ ಬೆಳೆಯುತ್ತಿರಲಿಲ್ಲ. ಅದಕ್ಕಾಗಿ ತಮ್ಮನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ತಮ್ಮ ಮಾತೃಶ್ರೀಯವರಿಗೆ ನಮಸ್ಕಾರಗಳು ಮತ್ತು ಚಿ|| ಮೋಹನರಾವ್ ಮುಂತಾದವರಿಗೆ ಆಶೀರ್ವಾದಗಳನ್ನು ಹೇಳೋಣವಾಗಲಿ. ಮಮತವಿರಲಿ.

ಇತಿ ನಮಃ
ಭಾರತ ಬಿಂದೂರಾವ್

ಭಾರತ ವಾಚನ ಪ್ರವೀಣ ಬಿಂದೂರಾಯರು 1971ರಲ್ಲಿ ಬರೆದ ಇನ್ನೊಂದು ಪತ್ರದಲ್ಲಿ ಶಕುಂತಲಾಬಾಯಿಯ ಗಮಕ ವೈಶಿಷ್ಟ್ಯವನ್ನು ಹೀಗೆ ವ್ಯಕ್ತಪಡಿಸಿದ್ದಾರೆ.—

ಭಾರತ ಬಿಂದೂರಾವ್
ಚಿತ್ರದುರ್ಗ

ಕ್ಯಾಂಪ್ ಚಿತ್ರದುರ್ಗ
ದಿನಾಂಕ : 16–9–1971

ಶ್ರೀಮಾನ್ ಪಾಂಡುರಂಗರಾಯರ ಸ||ಕ್ಕೆ

ಭಾರತ ಬಿಂದೂರಾಯನ ನಮಸ್ಕಾರಗಳು—ಉಭಯ ಕುಶಲ ಹೋದ ಗುರುವಾರ ಶ್ರೀಮತಿ ಶಕುಂತಲಾಬಾಯಿಯವರ ವಾಚನ ಕೇಳಿದೆನು–ಬಹಳ ಆನಂದವಾಯಿತು. ಗಮಕ ಕಲೆಗೆ ರಾಗ ಬೇಕು. ಪದ್ಯದ ಭಾವೋದ್ಯೋತಕವಾಗುವಷ್ಟು ರಾಗ ಬೇಕು. ರಾಗದ ಏರು ಇಳಿತ ಪದಗಳಲ್ಲಿಯೇ ಕಾಣಬೇಕು. ಇವನ್ನೆಲ್ಲ ಶ್ರೀಮತಿಯವರ ವಾಚನದಲ್ಲಿ ಕಂಡಿದ್ದೇನೆ–ಕೇಳತಕ್ಕವರ ಮನಸ್ಸು ಪೂರ್ಣ ಆಕರ್ಷಿಸಲ್ಪಟ್ಟು ಆಯಾ ಪಾತ್ರಗಳಲ್ಲಿ ಲೀನವಾಗಿ ಆನಂದ ಪಡುತ್ತದೆ–ದೇವರು ಅವರಿಗೆ ಪೂರ್ಣ ಆಯುರಾರೋಗ್ಯ ಭಾಗ್ಯವನ್ನು ದಯಪಾಲಿಸಿ ಕಾಪಾಡಲಿ ಎಂದು ಹರಸುತ್ತೇನೆ. ಮಮತವಿರಲಿ.

ಇತಿ ನಮಃ
ಬಿಂದೂರಾವ್

ಭಾರತವಾಚನ ಪ್ರವೀಣ ಬಿಂದೂರಾಯರ ಭಾರತ ವಾಚನವನ್ನು ಕೇಳಿದ ಬಹುಮಂದಿ ವಯೋವೃದ್ಧರು ಇನ್ನೂ ಜೀವಂತರಾಗಿದ್ದಾರೆ. ಅವರುಗಳು ಶಕುಂತಲಾ ಬಾಯಿಯ ಭಾರತವಾಚನವನ್ನು ಕೇಳಿ ಸುಪ್ರೀತರಾಗಿದ್ದಾರೆ, ಆಕೆಯ ವಾಚನದಲ್ಲಿ ಬಿಂದೂರಾಯರ ವಾಚನದ ಜಾಡನ್ನೂ ಗುರುತಿಸಿ ಗುರುವಿಗೆ ತಕ್ಕ ಶಿಷ್ಯೆಯೆಂದು ಮನಗಂಡು ಸಂತೋಷಪಟ್ಟು ಆಶೀರ್ವದಿಸಿದ್ದಾರೆ.

ಕೊಡಗಿನ ಬ್ರಹ್ಮಗಿರಿಯ ತಲಕಾವೇರಿ ಉಗಮಸ್ಥಾನದಲ್ಲಿ ಬಲು ಸಣ್ಣ ತೊರೆಯಾಗಿ ಜನ್ಮ ತಳೆದ ಕಾವೇರಿ ನದಿ ಬರಬರುತ್ತ ಸಣ್ಣಪುಟ್ಟ ತೊರೆಗಳನ್ನು ಮೈಗೂಡಿಸಿಕೊಂಡು ಮಹಾಪೂರವಾಗಿ ಪ್ರವರ್ಧಿಸುವಂತೆ, ನಮ್ಮ ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಗಮಕ ಕಲೆಯೂ ಪ್ರವರ್ಧಮಾನಕ್ಕೆ ಬಂದಿದೆ. 1935ರಲ್ಲಿ ಪೂಜ್ಯ ಡಿ. ವಿ. ಜಿ. ಅವರು ಗಮಕ ತರಗತಿಯನ್ನು ಪ್ರಾರಂಭಿಸಿದರು. ಬಿ. ಎಂ. ಶ್ರೀ., ಮಾಸ್ತಿ, ತಿರುಮಲೆ ತಾತಾಚಾರ್ಯಶರ್ಮ, ಉತ್ತಂಗಿ ಚೆನ್ನಪ್ಪ, ಈ ಮಹಾಶಯರ ಕಾಲದಲ್ಲಿ ಗಮಕ ತರಗತಿ ವಿಚಕ್ಷಣೆಯಿಂದ ನಡೆದುಬಂತು. ಎಂ. ಆರ್. ಶ್ರೀನಿವಾಸ ಮೂರ್ತಿಯವರು 1950 ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಬಂದ ಮೇಲೆ ಗಮಕ ಕಲೆಗೆ ಗರಿಗಟ್ಟಿತು. ಗಮಕ ಪ್ರಾಥಮಿಕ ತರಗತಿ ಪ್ರೌಢ ತರಗತಿಯ ಮುನ್ಹೆಜ್ಜೆ ಇಟ್ಟಿತು. ಮೈಸೂರು ರಾಜ್ಯದ ಮುಖ್ಯ ಮಂತ್ರಿಯಾಗಿದ್ದ ಕೆಂಗಲ್ ಹನುಮಂತಯ್ಯನವರ ಉದಾರಾಶ್ರಯ ಪಡೆದು ಗಮಕ ಪ್ರಚಾರ ವಾರವಾರವೂ ಪರಿಷತ್ತಿನಲ್ಲಿ ನಡೆಯುವ ಏರ್ಪಾಡಾಯಿತು. ಕುವೆಂಪು “ಶ್ರೀ ರಾಮಾಯಣ ದರ್ಶನಂ” ಪಂಪನ “ಆದಿಪುರಾಣ” ರಾಘವಾಂಕನ “ಹರಿಶ್ಚಂದ್ರ ಕಾವ್ಯ”, ಚಾಮರಸನ “ಪ್ರಭುಲಿಂಗಲೀಲೆ”, ನರಹರಿಯ “ತೊರವೆ ರಾಮಾಯಣ”, ಷಡಕ್ಷರದೇವನ “ರಾಜಶೇಖರ ವಿಲಾಸ” ಮೊದಲಾದ ಪ್ರಾಚೀನ ಕಾವ್ಯಗಳ ವಾಚನಗಳು ಪ್ರತಿ ಶುಕ್ರವಾರವೂ ನಡೆಯುವ ಏರ್ಪಾಡಾಯಿತು. ಎ. ಎನ್. ಮೂರ್ತಿರಾಯರು, ಜಿ. ವೆಂಕಟಸುಬ್ಬಯ್ಯನವರು ಎಂ. ಆರ್. ಶ್ರೀಯವರ ಸಂಪ್ರದಾಯವನ್ನು ನಡೆಸಿಕೊಂಡು ಬಂದರು. ಬಿ. ಶಿವಮೂರ್ತಿ ಶಾಸ್ತ್ರಿಗಳೂ ಗಮಕ ಕಲೆಯನ್ನು ವಿಶೇಷವಾಗಿ ಪ್ರೋತ್ಸಾಹಿಸಿದರು. ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಗಮಕ ವಾಚನವಿದ್ದೇ ಇರುತ್ತಿತ್ತು. ಬಿ. ಶಿವಮೂರ್ತಿ ಶಾಸ್ತ್ರಿಗಳ ಕಾಲದವರೆಗೆ ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಗಮಕವಾಚನದ ಸ್ಥಾನ ಗಟ್ಟಿಯಾಗಿತ್ತು. ಭಾವ ಗೀತೆಗಳು ಗಮಕದ ಸ್ಥಾನವನ್ನು ಈಗ ಅತಿಕ್ರಮಿಸಿವೆ. ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಗಮಕ ವಾಚನ ಇಲ್ಲವೇ ಇಲ್ಲ. ಪ್ರಾಚೀನ ಕಾವ್ಯಗಳನ್ನು ಕೇಳುವ ಕಿವಿಗಳು ಇಲ್ಲವೋ, ನಮ್ಮ ಜನಕ್ಕೆ ಪ್ರಾಚೀನ ಕಾವ್ಯಗಳೇ ಬೇಡವೆನ್ನಿಸಿವೆಯೋ ಯಾರು ಹೇಳಬೇಕು ? ಎಂ. ಆರ್. ಶ್ರೀ ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಗಮಕಗೋಷ್ಠಿಗಳನ್ನೂ ಕೂಡಿಸಿದರು. ಅವರ ಕಾಲದಲ್ಲಿ ಸೋಲಾಪುರ, ಬೊಂಬಾಯಿ ಮತ್ತು ಬೇಲೂರು ಸಾಹಿತ್ಯ ಸಮ್ಮೇಳನಗಳಲ್ಲಿ ಗಮಕ ಗೋಷ್ಠಿಗಳು ವಿಜೃಂಭಿಸಿದವು.

1969ರಲ್ಲಿ ಜಿ. ನಾರಾಯಣ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ

ಬಂದರು. ಗಮಕ ಕಲೆಗೆ ಹಿರಿಮೆ ಗರಿಮೆಗಳು ಇನ್ನಷ್ಟು ಹೆಚ್ಚಾಯಿತು. ಕರ್ಣಾಟಕದ ಬಹುಭಾಗಗಳಲ್ಲಿ ಗಮಕ ತರಗತಿಗಳು. ಪ್ರಾರಂಭವಾದವು. ಗಮಕ ಶಿಷ್ಯರಿಗೆ ವಿಶೇಷ ತರಬೇತಿ ಶಿಬಿರಗಳನ್ನು ತೆರೆಯಲಾಯಿತು. ಗಮಕಿಗಳನ್ನು ಕರ್ಣಾಟಕದ ನಾನಾ ಭಾಗ ಗಳಿಗೆ ಕಳಿಸಿ ಗಮಕ ಪ್ರಚಾರ ಮಾಡಲಾಯಿತು. 1972ರಲ್ಲಿ ಗಮಕಕಲಾನಿಧಿ ಜೋಳದರಾಶಿ ದೊಡ್ಡನಗೌಡರ ಅಧ್ಯಕ್ಷತೆಯಲ್ಲಿ ಕರ್ಣಾಟಕ ಪ್ರಥಮ ಗಮಕ ಸಮ್ಮೇಳನ ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ನಡೆಯಿತು. ಗಮಕ ಕಲೆಯನ್ನು ಬಲ್ಲ ತಜ್ಞ ವಿದ್ವಾಂಸರನ್ನು ಹಿಡಿದು ಅವರುಗಳಿಂದ ಸೂಕ್ತ ಲೇಖನಗಳನ್ನು ಬರೆಸಿ, ಗಮಕ ಕಲೆಗೆ ಒಂದು ಶಾಸ್ತ್ರೀಯ ಗ್ರಂಥವನ್ನು ಕರ್ಣಾಟಕ ಗಮಕಕಲೆ ಎಂಬ ಹೆಸರಿನಲ್ಲಿ ಸಂಗ್ರಹಿಸಿ ಪ್ರಕಟಿಸಲಾಯಿತು. ಎಲೆಮರೆಯ ಕಾಯಂತೆ ಗಮಕಕಲಾ ಸೇವೆ ಮಾಡುತ್ತಿದ್ದ ಗಮಕಿಗಳನ್ನು ಗುರುತಿಸಿ ಅವರ ಪರಿಚಯ ಮಾಡಿಕೊಡುವ "ಕರ್ನಾಟಕದ ಗಮಕಿ ಗಳು" ಎಂಬ ಒಂದು ಗ್ರಂಥವನ್ನು ಬೆಳಕಿಗೆ ತಂದಿತು.

1977ರಲ್ಲಿ ಹಂ. ಪ. ನಾಗರಾಜಯ್ಯನವರು ಜಿ. ನಾರಾಯಣ ಅವರಿಂದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನವನ್ನು ವಹಿಸಿಕೊಂಡರು. 1979ರ ಜುಲೈ 7–8ರ ದಿನಾಂಕಗಳಲ್ಲಿ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಸಮಿತಿಯ ಅಧ್ಯಕ್ಷ ವಿ. ಎಚ್. ಗೌಡರ ಸಹಕಾರ ಪಡೆದು ಮೈಸೂರಿನಲ್ಲಿ ಅಖಿಲ ಕರ್ಣಾಟಕ ದ್ವಿತೀಯ ಗಮಕ ಸಮ್ಮೇಳನವನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಹಂ. ಪ. ನಾಗರಾಜಯ್ಯ ನಡೆಸಿದರು. ಶಕುಂತಲಾಬಾಯಿ ಈ ಸಮ್ಮೇಳನದ ಅಧ್ಯಕ್ಷಿಣಿ ಯಾಗಿದ್ದರು.

1937ರಲ್ಲಿ ಸಾಧಾರಣ ಗಮಕ ವಿದ್ಯಾರ್ಥಿನಿಯಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಸರಸ್ವತೀ ಮಂದಿರವನ್ನು ಪ್ರವೇಶಿಸಿದ ಶಕುಂತಲಾಬಾಯಿ, ತನ್ನ ತಾಯಿ ಮಂದಿರದ ಗಮಕ ಸರಸ್ವತಿಯ ಅನುಗ್ರಹಕ್ಕೆ ಪಾತ್ರರಾಗಿ 1979ರಲ್ಲಿ ಗಮಕ ಸಮ್ಮೇಳನದ ಅಧ್ಯಕ್ಷಿಣಿಯಾಗುವ ಗೌರವ ಪಡೆದರು.

ಶಕುಂತಲಾಬಾಯಿ ಗಮಕ ಸರಸ್ವತಿಗೆ ಸಲ್ಲಿಸಿದ ಪರಿಚಾರಿಕೆಯಲ್ಲಿ ನಡೆದು ಬಂದ ದಾರಿಯಿದು.

೩. ಪ್ರಯೋಗಶೀಲ ಗಮಕ ವಿದುಷಿಯಾಗಿ

೧. ಸಾರ್ವಜನಿಕ ವೇದಿಕೆಗೆ ಪ್ರವೇಶ

ಶಕುಂತಲಾಬಾಯಿಗೆ ಗಮಕ ಕಲಿತು ಸಾರ್ವಜನಿಕ ವೇದಿಕೆಯೇರಿ ಕಾವ್ಯವಾಚನ ಮಾಡುವ ಪ್ರಮೇಯ ಬರಬಹುದೆಂಬ ಕಲ್ಪನೆ ಕನಸುಮನಸುಗಳಲ್ಲಿಯೂ ಇರಲಿಲ್ಲ. ನನಗೂ ಆ ಅಪೇಕ್ಷೆಯಿರಲಿಲ್ಲ. ಪ್ರಾಚೀನ ಕನ್ನಡ ಕಾವ್ಯಗಳೆಲ್ಲ ಹಾಡುಗಬ್ಬಗಳು. ತಾವೇ ಓದಿಕೊಂಡು ರಸಾನುಭವ ಪಡೆಯುವುದು ಒಂದು ವಿಧ. ರಸಜ್ಞ ಗಮಕಿಗಳಿಂದ ವಾಚನಮಾಡಿಸಿ ರಸಾನುಭಾವ ಸುಖ ಅನುಭವಿಸುವುದೇ ಒಂದು ವಿಧ. ನಾನು ಬಾಲಕನಾಗಿದ್ದಾಗಿನಿಂದಲೂ ಗಮಕ ಕಲಾಭಿಮಾನಿ, ಕಾವ್ಯಪ್ರೇಮಿ. ನನ್ನ ಸೌಭಾಗ್ಯವತಿ ಗಮಕ ಕಲಿತರೆ ನನಗೆ ಪ್ರಯೋಜನ ಅಧಿಕ. ಮನೆಯಲ್ಲಿ ನಿತ್ಯವೂ ಸಂಜೆ ಒಂದು ಗಂಟೆ ತನ್ನ ಅತ್ತೆಯವರಿಗೆ ಸುಶ್ರಾವ್ಯವಾಗಿ ಕುಮಾರವ್ಯಾಸನನ್ನೋ, ಲಕ್ಷ್ಮೀಶನನ್ನೊ ಕುಮಾರ ವಾಲ್ಮೀಕಿಯನ್ನೊ ಓದಿ ಹೇಳಿದರೆ ಸೊಸೆ, ಸತ್ಕಾಲಕ್ಷೇಪವಾಯಿತು. ಸಾಹಿತ್ಯ ಸಂಸ್ಕೃತಿಗಳ ತಿಳಿವಿನ ಮಟ್ಟವೂ ಹೆಚ್ಚಿತು. ಹೀಗೆಲ್ಲ ಮನಸ್ಸಿನಲ್ಲಿ ಗುಣಿಸಿ ಕನ್ನಡ ಸಾಹಿತ್ಯ ಪರಿಷತ್ತಿನ ಗಮಕ ತರಗತಿಗೆ ನನ್ನ ಸೌಭಾಗ್ಯವತಿಯನ್ನು ಕಳಿಸಿ ಕೊಟ್ಟು ಗಮಕ ಕಲೆಯ ಪ್ರವೇಶ ಮಾಡಿಸಿದ್ದೆ. ಸಾರಾಂಶ, ನಮ್ಮೆಲ್ಲರ ಆತ್ಮಸಂತೋಷ ಮುಖ್ಯ. ಗಮಕಾಭ್ಯಾಸ ಮಾಡಿದ ಒಂದು ವರ್ಷದೊಳಗೇ ಶಕುಂತಲಾಬಾಯಿ ಸಾರ್ವಜನಿಕ ಗಮಕವೇದಿಕೆಯೇರಿ ಗಮಕವಿದುಷಿಯೆಂದು ಬೆಂಗಳೂರಿನ ಸಾಹಿತ್ಯಾಭಿಮಾನಿಗಳಿಗೆ ಪರಿಚಯವಾಗುವ ಅವಕಾಶ ತಾನಾಗಿ ಒದಗಿಬರುವುದೆಂದು ನಾನು ನಿರೀಕ್ಷಿಸಿರಲಿಲ್ಲ. ನಮ್ಮ ಉದ್ದೇಶವೇ ಒಂದು, ಆದದ್ದು ಇದ್ದೊಂದು. 1938ರಲ್ಲಿ ಸಾರ್ವಜನಿಕ ಗಮಕವೇದಿಕೆಯನ್ನೇರಿದ ಶಕುಂತಲಾಬಾಯಿ, ಆ ವೇದಿಕೆಯಿಂದ ಈ ಈ ಘಳಿಗೆಯವರೆಗೆ ಇಳಿದಿಲ್ಲ.

ಶಕುಂತಲಾಬಾಯಿ ಬೆಂಗಳೂರಿನ ಸಾರ್ವಜನಿಕ ಗಮಕವೇದಿಕೆಗೆ ಬರುವುದಕ್ಕೆ ಕಾರಣ "ಸರಸ್ವತೀ" ಮಾಸಪತ್ರಿಕೆಯ ಸಂಪಾದಕಿಯರಾಗಿದ್ದ ದಿವಂಗತ ಆರ್. ಕಲ್ಯಾಣಮ್ಮನವರು ಮತ್ತು ಕನ್ನಡ ಮಕ್ಕಳ ಸಾಹಿತಿಯಾಗಿದ್ದ ದಿವಂಗತ ಟಿ.ಎಂ.ಆರ್. ಸ್ವಾಮಿಯವರು. ನನಗೆ ತಾಯಿ ಸಮಾನರಾಗಿದ್ದ ಕಲ್ಯಾಣಮ್ಮನವರು ನನ್ನನ್ನು ವಿದ್ಯಾರ್ಥಿಯಾಗಿದ್ದಾಗಿನಿಂದಲೂ ಬಲ್ಲವರಾಗಿದ್ದರು. ನನ್ನ ಮೊಟ್ಟಮೊದಲ ಮಕ್ಕಳ ನಾಟಕ "ಸುಳ್ಳಿನ ಸೋಲು" ಸರಸ್ವತಿಯಲ್ಲಿ ಪ್ರಕಟವಾಗುವಂತೆ ಮಾಡಿ ಮಕ್ಕಳ ಸಾಹಿತ್ಯ ರಚನೆಯ ಕಡೆಗೆ ನನ್ನನ್ನು ತಿರುಗಿಸಿದವರು ಅವರೇ. ಸರಸ್ವತಿಯ ಮಕ್ಕಳ ಪುಟಗಳನ್ನು ನೋಡಿಕೊಳ್ಳುವಂತೆ ಅವಕಾಶ ಕಲ್ಪಿಸಿ, ಮುಂದೆ ನಾನು "ವಾಣಿ" ಮಾಸ ಪತ್ರಿಕೆಯ ಸಂಪಾದಕನಾಗಿ ಅನುಭವಗಳಿಸುವುದಕ್ಕೆ ಅನುವು ಮಾಡಿಕೊಟ್ಟವರೂ ಅವರೇ. ಅಖಿಲ ಕರ್ನಾಟಕ ಮಕ್ಕಳ ಕೂಟದ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ

ಮಾಡಿ, ಮುಂದೆ ನಾನು ಮಕ್ಕಳ ಸಾಮಾಜಿಕ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಸೇವೆ ಮಾಡುವುದಕ್ಕೆ ಪ್ರೇರಕ ಶಕ್ತಿಯಾಗಿ ನಿಂತವರೂ ಅವರೆ. ಈ ಕಲ್ಯಾಣಮ್ಮನವರೇ ನಾಲ್ಕು ಗೋಡೆಗಳ ಮಧ್ಯೆ ಮನೆಯ ಗೃಹಿಣಿಯಾಗಿ ಕಾಲಕಳೆಯಬೇಕಾಗಿದ್ದ ಶಕುಂತಲಾಬಾಯಿಯನ್ನು ಮನೆಯಿಂದ ಹೊರಹೊರಡಿಸಿ, ಸಾರ್ವಜನಿಕ ಸೇವಾಕ್ಷೇತ್ರಕ್ಕೆ ತಂದು ಗಮಕ ವೇದಿಕೆಯ ಮೇಲೆ ಕೂಡಿಸಿದರು. ಅವರಿಗೆ ಇಂಬುಗೊಟ್ಟವರು ಟಿ. ಎಂ. ಆರ್. ಸ್ವಾಮಿ. ಸ್ವಾಮಿ ಒಬ್ಬ ಪ್ರಾಥಮಿಕ ಶಾಲಾ ಮೇಷ್ಟ್ರು. ಬೆಂಗಳೂರಿನ ಮಲ್ಲೇಶ್ವರಂ ಬಡಾವಣೆಯಲ್ಲಿದ್ದ ಡಿಸ್ಟ್ರಿಕ್ಟ್ ನಾರ್ಮಲ್ ಸ್ಕೂಲಿನ ಶಿಕ್ಷಣ ಶಿಬಿರದಲ್ಲಿ ಶಿಕ್ಷಕ ವಿದ್ಯಾರ್ಥಿಯಾಗಿ ಶೈಕ್ಷಣಿಕ ತರಬೇತು ಪಡೆಯುತ್ತಿದ್ದರು. ಆ ಕಾಲಕ್ಕೇ ಅವರು ಮಕ್ಕಳ ಸಾಹಿತ್ಯ ರಚನೆಯಲ್ಲಿ ಹೆಸರು ಮಾಡಿದ್ದರು. ಚಟುವಟಿಕೆಯ ಬುಗ್ಗೆ ಕಲ್ಯಾಣಮ್ಮನವರ ಜೊತೆಯಲ್ಲಿ ಅಖಿಲ ಕರ್ಣಾಟಕ ಮಕ್ಕಳ ಕೂಟವನ್ನು ಕಟ್ಟಿ ಅದರ ಜೀವನಾಡಿಯಾಗಿದ್ದರು. ಅವರು ನಮ್ಮ ಮನೆಯ ನೆರಮನೆಯಲ್ಲಿ ಬಾಡಿಗೆಗೆ ಬಂದಿದ್ದರು. ನನಗೆ ಗೆಳೆಯರು. ದಂಪತಿಗಳು ನಿತ್ಯವೂ ಬೆಳಗ್ಗೆ ಸಂಜೆ ಪರಿಷತ್ತಿಗೆ ಹೋಗಿ ಗಮಕ ಕಲಿತುಬರುವುದನ್ನು ಗಮನಿಸುತ್ತಿದ್ದರು. ಶಕುಂತಲಾಬಾಯಿ ನಿತ್ಯವೂ ರಾತ್ರಿಯ ಕಾಲದಲ್ಲಿ ತಪ್ಪದೆ ಹಾರ್ಮೋನಿಯಂ ವಾದ್ಯ ನುಡಿಸಿಕೊಂಡು ಪರಿಷತ್ತಿನಲ್ಲಿ ಕಲಿತ ಗಮಕವನ್ನು ಒಲಿಸಿಕೊಳ್ಳುತ್ತಿದ್ದುದನ್ನು ಕೇಳುತ್ತಿದ್ದರು. ಸ್ವಾಮಿ ಒಂದು ದಿನ ನನ್ನ ಬಳಿ ಬಂದು "ಪಾಂಡುರಂಗರಾವ್ ನಾನು ನಾರ್ಮಲ್ ಸ್ಕೂಲಿನ ಶಿಕ್ಷಕ ಸಂಘದ ಕಾರ್ಯದರ್ಶಿ. ನಮ್ಮ ಸಂಘ ಶಕುಂತಲಾಬಾಯಿಯವರ ಭಾರತವಾಚನ ಕಾರ್ಯಕ್ರಮವನ್ನಿಟ್ಟುಕೊಳ್ಳಬೇಕೆಂದು ನಿರ್ಧರಿಸಿದೆ. ನೀವಿಬ್ಬರೂ ಬಂದು ನಡೆಸಿಕೊಡಬೇಕು" ಎಂದು ಕೇಳಿದರು. ಶಕುಂತಲಾಬಾಯಿ "ನಾನು,ನನ್ನ ಮನಸ್ಸಂತೋಷಕ್ಕಾಗಿ ಗಮಕ ಕಲಿತೆನೇ ಹೊರತು ಸಾರ್ವಜನಿಕ ರಂಗಕ್ಕೆ ಬಂದು ಗಮಕವಾಚನ ಮಾಡುವುದಕ್ಕಲ್ಲ. ನಾನು ಇನ್ನೂ ಅಭ್ಯಾಸಿಯಾಗಿದ್ದೇನೆಯೇ ವಿನಹ ಗಮಕದಲ್ಲಿ ಪರಿಣತೆಗೆ ಬಂದಿಲ್ಲ. ಸಾಧ್ಯವಿಲ್ಲ" ಎಂದು ಸ್ಪಷ್ಟವಾಗಿ ಸ್ವಾಮಿಯವರ ಬಿನ್ನಹವನ್ನು ನಿರಾಕರಿಸಿದರು. ನಾನೂ ಶಕುಂತಲಾಬಾಯಿಯ ಅಭಿಪ್ರಾಯವನ್ನೆ ಸಮರ್ಥಿಸಿದೆ, ಸ್ವಾಮಿ ಏನೂ ಹೇಳದೆ ಮುಸುಮುಸು ನಕ್ಕು ಹೊರಟು ಹೋದರು. ಅವರು ತಾವು ಹಿಡಿದ ಪಟ್ಟನ್ನು ಸುಲಭವಾಗಿ ಬಿಟ್ಟುಕೊಡುವವರಲ್ಲ. ಒಂದೆರಡು ದಿವಸಗಳು ಕಳೆಯಿತೋ ಇಲ್ಲವೋ ಕಲ್ಯಾಣಮ್ಮನವರನ್ನು ಕರೆದುಕೊಂಡು ನಮ್ಮ ಮನೆಗೆ ಚಿತ್ತೈಸಿದರು. ಕಲ್ಯಾಣಮ್ಮನವರು "ಶಕುಂತಲಾಬಾಯಿ, ನೀವು ಕಲಿತ ಗಮಕವನ್ನು ನಿಮ್ಮ ಮನೆಯ ನಾಲ್ಕು ಗೋಡೆಗಳೇ ಕೇಳಬೇಕೇನು ? ನಿಮ್ಮ ಭಾರತ ವಾಚನವನ್ನು ಹೊರಗಿನ ನಾಲ್ಕು ಮಂದಿ ಕೇಳಿದರೆ ನಿಮ್ಮ ಗಂಟು ಏನು ಹೋಗುತ್ತದೆ ? ಹೊರಗಿನ ನಾಲ್ಕು ಜನಕ್ಕೆ ರಾಮಾಯಣ ಭಾರತ ವಾಚನ ಕೇಳಿಸಿದರೆ ನಮ್ಮ ಸಾಹಿತ್ಯ ಸಂಸ್ಕೃತಿಗಳನ್ನು ಪ್ರಚಾರಮಾಡಿದಂತಾಗುತ್ತದೆಯಲ್ಲವೇ ? ನಿಮ್ಮಂಥ ಸುಸಂಸ್ಕೃತ ಹೆಣ್ಣುಮಕ್ಕಳು ಸಾಹಿತ್ಯ ಸಂಸ್ಕೃತಿಗಳ ಪ್ರಚಾರ

ಮಾಡಬೇಕು. ಹಾಡಿನ ನಾಗಮ್ಮನವರು, ಭಾರತದ ಲಲಿತಮ್ಮನವರು ನಿಮ್ಮ ಹಾಗೆ ಗೃಹಿಣಿಯರೇ ; ಅವರುಗಳು ನಮ್ಮ ನಾಡುನುಡಿಗಳಿಗೆ ಎಂಥ ಸೇವೆ ಸಲ್ಲಿಸುತ್ತಿದ್ದಾರೆ ; ಬಲ್ಲಿರಾ ? ಟಿ. ಎಂ. ಆರ್. ಸ್ವಾಮಿಯವರ ಆಹ್ವಾನವನ್ನು ಒಪ್ಪಿಕೊಳ್ಳಿ." ಎಂದು ಬಲವಂತಮಾಡಿದರು. ಶಕುಂತಲಾಬಾಯಿ, ತನ್ನ ಅತ್ತೆಯರಿಬ್ಬರೂ ಹಿಂದಿನ ಕಾಲದವರು. ಸಂಪ್ರದಾಯಶೀಲರು, ಸೊಸೆಯನ್ನು ಮನೆಯ ಹೊಸಿಲು ದಾಟಿಸುವವರಲ್ಲ, ಎಂಬ ನಂಬಿಕೆಯಿಂದ "ನಮ್ಮತ್ತೆ ಚಿಕ್ಕತ್ತೆಯವರು ಒಪ್ಪಿದರೆ ಆಗಬಹುದು" ಎಂದರು. ಕಲ್ಯಾಣಮ್ಮನವರು ನಮ್ಮ ತಾಯಿಯರಿಬ್ಬರನ್ನೂ ಕೇಳಿದರು. ನಾನು ನಮ್ಮ ತಾಯಿಯರಿಗೆ ಕಲ್ಯಾಣಮ್ಮನವರ ಪರಿಚಯವನ್ನು ಮೊದಲೇ ಮಾಡಿಸಿದ್ದೆ. ಕಲ್ಯಾಣಮ್ಮನವರಂತೆಯೇ ನನ್ನ ಚಿಕ್ಕಮ್ಮನವರೂ ಸ್ವಲ್ಪಹೆಚ್ಚು ಕಡಮೆ ಬಾಲವಿಧವೆಯೇ. ನನ್ನ ತಾಯಿ ಇನ್ನೂ ಯೌವನದಲ್ಲಿರುವಾಗಲೇ ಗಂಡನನ್ನು ಕಳೆದುಕೊಂಡವರು. ನನ್ನ ತಾಯಿಯರಿಬ್ಬರೂ ಸಂಪ್ರದಾಯದಲ್ಲಿ ಬೆಳೆದರೂ ಪ್ರಗತಿಪರ ಮನೋಭಾವದವರು. ಕಲ್ಯಾಣಮ್ಮನವರು ಶಕುಂತಲಾಬಾಯಿಗೆ ಮಾಡಿದ ಉಪದೇಶವನ್ನು ಎದುರಿಗೇ ಕುಳಿತು ಕೇಳುತ್ತಿದ್ದರು. ಈಗ ತಮ್ಮನ್ನು ಕೇಳಿದ ಕೂಡಲೆ "ನಮ್ಮ ಅಭ್ಯಂತರವಿಲ್ಲ" ಎಂದು ಸೊಸೆ ನಾರ್ಮಲ್ ಸ್ಕೂಲ್ ಸಂಘದಲ್ಲಿ ಭಾರತವಾಚನ ಮಾಡುವುದಕ್ಕೆ ಪರವಾನಿಗೆ ಕೊಟ್ಟರು. ಹೀಗಾಗಿ ಶಕುಂತಲಾಬಾಯಿ ಕಲ್ಯಾಣಮ್ಮನವರ ಅಧ್ಯಕ್ಷತೆಯಲ್ಲಿ ಡಿಸ್ಟ್ರಿಕ್ಟ್ ನಾರ್ಮಲ್ ಸ್ಕೂಲ್ ಶಿಕ್ಷಕ ಸಂಘದಲ್ಲಿ ಮೊಟ್ಟಮೊದಲು ಸಾರ್ವಜನಿಕ ವೇದಿಕೆಯಿಂದ "ಕಾವ್ಯವಾಚನ" ವೆಂಬ ಗಮಕ ಸೊಡರನ್ನು ಹಚ್ಚಿದರು. ಅದು ಮುಂದೆ ದೇದೀಪ್ಯಮಾನವಾಗಿ ನಾಡ ತುಂಬ ಪಸರಿಸಿ ಬೆಳಗಿದುದು ನಮ್ಮ ಜನ ಬಲ್ಲ ಸಂಗತಿಯಾಗಿದೆ :

೨. ಗಮಕಕ್ಕೆ ಪ್ರಭುಲಿಂಗಲೀಲೆ ಕಾವ್ಯದ ಪ್ರವೇಶ

ಶಕುಂತಲಾಬಾಯಿ ನಾರ್ಮಲ್ ಶಿಕ್ಷಕ ಸಂಘದಲ್ಲಿ ಮಾಡಿದ್ದು ಭಾರತವಾಚನವಲ್ಲ ; **ಪ್ರಭುಲಿಂಗಲೀಲೆ** ಕಾವ್ಯವಾಚನ. ಈ ಬದಲಾವಣೆಗೆ ನಾನು ಕಾರಣ. ಬಾಲ್ಯದಿಂದಲೂ ನನಗೆ ಹೊಸತು ಮಾಡಬೇಕು, ಹೊಸತು ಸಾಧಿಸಬೇಕು, ಎಂಬ ಗೀಳು ಅಂಟಿಕೊಂಡು ಬಂದಿದೆ. ಸಾಮಾನ್ಯವಾದ ಜಾಡನ್ನು ತಪ್ಪಿಸಿ ಹೊಸ ಜಾಡನ್ನು ಹಿಡಿಯುವ ಪ್ರವೃತ್ತಿ ಹುಟ್ಟು ಗುಣವಾಗಿದೆ. ಗದುಗಿನ ಭಾರತ ಪ್ರಧಾನವಾಗಿ, ಜೈಮಿನೀ ಭಾರತ ಸಾಧಾರಣವಾಗಿ, ಮಿಕ್ಕ ಕಾವ್ಯಗಳು ಅಪರೂಪವಾಗಿ, ಗಮಕವಾಚನ ಕೇಳಿಬರುತ್ತಿದ್ದ ಕಾಲ. ಗ್ರಾಮಾಂತರಗಳಲ್ಲಿ ಕೂಡ ಕುಮಾರವ್ಯಾಸನೇ ಪ್ರಧಾನವಾಗಿದ್ದ. ನಾನು ಬಾಲಕನಾಗಿದ್ದಾಗ ಕೇಳಿದ್ದು ಕುಮಾರವ್ಯಾಸನನ್ನೇ ಹೆಚ್ಚಾಗಿ. ವಯಸ್ಸಿಗೆ ಬಂದಾಗಲೂ ಕುಮಾರವ್ಯಾಸ ನನ್ನ ಕಿವಿಗಳಿಗೆ ಕೇಳಿಸಿದ ನಿತ್ಯ ಜಕಕೆಯ ಹೆಸರು. ಈಗಲೂ ಅವನೇ ಮೇಲುಗೈ. ಬೆಂಗಳೂರಿನ ರಾಜಾಜಿನಗರದ ಬಡಾವಣೆಯಲ್ಲಿ ಕುಮಾರವ್ಯಾಸ ಮಂಟಪವೇ ಪ್ರತಿಷ್ಠಾಪನೆಯಾಗಿಲ್ಲವೇ ! ನಮ್ಮ ಮನೆಯ ಹೆಸರೂ ಕುಮಾರವ್ಯಾಸ ಕೃಪಾ ! ಭಾರತವಾಚನ ಪ್ರವೀಣ "ಸಂ. ಗೋ. ಬಿಂದೂ

ರಾಯರು ಕುಮಾರವ್ಯಾಸ ಭಾರತವನ್ನು ಓದಿಯೇ **ಭಾರತದ ಬಿಂದೂರಾಯರು**ಎಂದು ಮನೆಮಾತಾದದ್ದು. ಅವರು ಕುಮಾರವ್ಯಾಸನನ್ನು ಬಿಟ್ಟು ಅನ್ಯಕಾವ್ಯಗಳನ್ನು ಓದಿದ್ದು ಯಾರೂ ಅರಿಯರು. ಕೃಷ್ಣಗಿರಿ ಕೃಷ್ಣರಾಯರು ಕುಮಾರವ್ಯಾಸನ ಜೊತೆಗೆ ಲಕ್ಷ್ಮೀಶ, ತೊರವೆಯ ನರಹರಿ, ಅಪರೂಪವಾಗಿ ಚಿತ್ರಾಂಗದ ರಾಮಾಯಣ ದರ್ಪಣಂ, ಕಾವ್ಯಗಳನ್ನು ಓದುತ್ತಿದ್ದರೂ, **ಭಾರತದ ಕೃಷ್ಣರಾಯರು**ಎಂದೇ ಜನಪ್ರಿಯರಾಗಿದ್ದುದು. "ಶ್ಲೋಕ ಸಂಗೀತ" ಕಳಲೆ ಸಂಪತ್ಕುಮಾರಾಚಾರ್ಯರು ಕುಮಾರವ್ಯಾಸನಷ್ಟೇ ಸೊಗಸಾಗಿ ಲಕ್ಷ್ಮೀಶ ರಾಘವಾಂಕರ ಜೈಮಿನೀ ಭಾರತ, ಹರಿಶ್ಚಂದ್ರಕಾವ್ಯಗಳನ್ನು ಓದುತ್ತಿದ್ದರೂ, ಅವರ "ಕರ್ಣ ಕುಂತೀ ಸಂವಾದ" "ದೂರ್ವಾಸಾತಿಥ್ಯ" ಕಥಾಭಾಗಗಳ ವಾಚನ ಪ್ರಸಿದ್ಧಿಯಿಂದ **ಭಾರತದ ಸಂಪತ್ಕುಮಾರಾಚಾರ್ಯರ**ರೆಂದೇ ಖ್ಯಾತನಾಮರಾಗಿದ್ದರು. ತಲಕಾಡಿನ ಮಾಯೀಗೌಡರು ಕೂಡ ಭಾರತದಿಂದಲೇ ಹೆಸರಾದವರು. ಮಹಿಳಾ ಗಮಕಿಗಳಲ್ಲಿ ಪ್ರಸಿದ್ಧರಾಗಿದ್ದ ಲಲಿತಮ್ಮನವರನ್ನು ನಮ್ಮ ಜನ ಗುರುತಿಸಿದುದು **ಭಾರತದಲಲಿತಮ್ಮ**ನವರೆಂದೇ. ಆದುದರಿಂದ ನಾನು ನಮ್ಮ ಜನ ಈವರೆಗೆ ಕೇಳರಿಯದ, ಜನ ಬಳಕೆಯಲ್ಲಿಲ್ಲದ ಒಂದು ನಡುಗನ್ನಡ ಭಾಮಿನೀ ಷಟ್ಪದಿ ಕಾವ್ಯವನ್ನು ನಾರ್ಮಲ್ ಸ್ಕೂಲ್ ಕಾರ್ಯ ಕ್ರಮಕ್ಕೆ ಆರಿಸಿಕೊಳ್ಳಬೇಕೆಂದು ಯೋಚಿಸಿದೆ. ನನ್ನ ಆಲೋಚನೆಯನು ಶಕುಂತಲಾಬಾಯಿಯ ಮುಂದಿಟ್ಟೆ. ಆಗಬಹುದೆಂದರು. ಮೈಸೂರು ವಿಶ್ವವಿದ್ಯಾ ನಿಲಯ ಕನ್ನಡ ಗ್ರಂಥ ಮಾಲೆಯಲ್ಲಿ ಎಂ. ಎಸ್. ಬಸವಲಿಂಗಯ್ಯ ಮತ್ತು ಶ್ರೀ ಎಂ. ಆರ್. ಶ್ರೀನಿವಾಸಮೂರ್ತಿಗಳು ಕೂಡಿ ಸಂಪಾದಿಸಿದ ಚಾಮರಸ ಕವಿಯ "ಪ್ರಭುಲಿಂಗ ಲೀಲೆ"ಯ ಸಂಗ್ರಹ ಪ್ರಕಟನೆ ನನ್ನ ಗಮನ ಸೆಳೆಯಿತು. ಕಾವ್ಯದ ಮೇಲೆ ಕಣ್ಣಾಡಿಸಿದೆ. ಮಹಾದೇವಿಯಕ್ಕನ ವಿರಕ್ತಿ ಭಾಗ ಪಾತ್ರಸೃಷ್ಟಿಯಿಂದ, ಸಂಭಾಷಣ ವೈಖರಿಯಿಂದ, ಜನಮೆಚ್ಚುಗೆ ಪಡೆಯಬಹುದೆಂಬ ಭರವಸೆ ಮೂಡಿತು. ಶಕುಂತಲಾ ಬಾಯಿ ನಾನು ಆರಿಸಿದ ಭಾಗವನ್ನು ಮನಸ್ಸಿನಲ್ಲೇ ಸಂದರ್ಭೋಚಿತ ರಾಗಗಳನ್ನು ಸಂಯೋಜಿಸಿ ಗುನುಗಿಕೊಂಡು "ವಾಚನಕ್ಕೆ ಮಹಾದೇವಿಯಕ್ಕನ ವಿರಕ್ತಿ ಭಾಗ ಹೊಂದಿಕೊಳ್ಳುತ್ತದೆ" ಎಂದು ಅಭಿಪ್ರಾಯವಿತ್ತರು. "ಸರಿ, ಅಭ್ಯಾಸಕ್ಕೆ ಪ್ರಾರಂಭಿಸಿ" ಎಂದೆ. ಇಬ್ಬರೂ ಕೂಡಿ ಮಹಾದೇವಿಯಕ್ಕನ ವಿರಕ್ತಿ ಭಾಗಕ್ಕೆ ಊನಬರದಂತೆ, ಕವಿಯ ಮೂಲೋದ್ದೇಶಕ್ಕೆ ಭಂಗಬರದಂತೆ ನಮಗೆ ಅವಶ್ಯಕವೆನ್ನಿಸಿದಷ್ಟು ಪದ್ಯ ಗಳನ್ನೂ ಸಂಗ್ರಹಿಸಿದೆವು.

ಪ್ರಭುಲಿಂಗಲೀಲೆಯ ಸಂಗ್ರಹ ಹದಿನೈದು ಗತಿಗಳಲ್ಲಿ ಸಂಗ್ರಹವಾಗಿದೆ. ಮೊದಲ ನೆಯ ಗತಿ **ಪಾರ್ವತಿ ಪ್ರತಿಜ್ಞೆ**. ಇದರಿಂದ "ಶ್ರೀಮದಮಲ ಜ್ಞಾನ ಭಕ್ತಿ ಪ್ರೇಮ ವೇದ ಪುರಾಣ ಶಾಸ್ತ್ರಸ್ತೋಮ ನುತ.."(೧), "ಅಲ್ಲಮಪ್ರಭು ಸಂಪ್ರದಾಯದ.."(೨), "ಸತ್ತವರ ಕಥೆಯಲ್ಲ...."(೫) ಮತ್ತು "ಕುಜೀಗಳೋಪಾದಿಯಲಿ...." (೬), ಈ ನಾಲ್ಕು ಪದ್ಯಗಳನ್ನು ಆರಿಸಿಕೊಂಡೆವು. ಕಾವ್ಯವಾಚನವನ್ನು ಪ್ರಾರ್ಥನೆ ಹಾಗೂ

ಪೀಠಿಕೆಯಾಗಿ ಪ್ರಾರಂಭಿಸುವುದಕ್ಕೆ ಈ ಪದ್ಯಗಳ ಆಯ್ಕೆ ಸರಿಹೋಯಿತು. ಮಹಾದೇವಿಯಕ್ಕನ ವಿಷಯ ಮೂರು ಗತಿಗಳಲ್ಲಿ ಬರುತ್ತದೆ. ಆರನೆಯ ಗತಿ "**ಬಸವಾದಿಗಳ ಅವತಾರ**"ದಲ್ಲಿ "ಇಳೆಯೊಳುಡುತಡಿಯೆಂಬ ಪಟ್ಟಣದೊಳಗೆ" (೧೯೭) "ತೀವಿ ತನುವಿನಲತಿಮಹತ್ತರ ದೇವತಾಕಳೆಯಿರಲು" (198) ಮತ್ತು "ಈಕೆ ಭಕ್ತಿಯ ಬಳ್ಳಿಯಂತೆ ಅನೇಕ ಪರಿಯಲಿ ಬೆಳೆವುತಿರ್ದಳು" (199) ಈ ಮೂರು ಪದ್ಯಗಳಲ್ಲಿ ಮಹಾದೇವಿಯಕ್ಕನ ಹುಟ್ಟು ಬಾಲ್ಯದ ಪ್ರಸ್ತಾಪವಿದೆ. ನಾವು ಈ ಮೂರು ಪದ್ಯಗಳನ್ನು ಆರಿಸಿಕೊಂಡೆವು. ಏಳನೆಯಗತಿ "**ಮಹಾದೇವಿಯಕ್ಕನ ವಿರಕ್ತಿ**" ಭಾಗ ಪೂರ್ತಿ, ಆಕೆಯ ವಿವಾಹ, ವಿರಕ್ತಿಗಳ ವಿಷಯಗಳನ್ನು ತಿಳಿಸುತ್ತದೆ. (214 233). ಅಷ್ಟನ್ನೂ "ಬಸವಾದಿಗಳ ಅವತಾರ" ಭಾಗದ ಮೂರು ಪದ್ಯಗಳಿಗೆ ಸೇರಿಸಿದೆವು. ಮಹಾದೇವಿಯಕ್ಕ ಕಾಣಿಸಿಕೊಳ್ಳುವುದು ಇನ್ನು ಹನ್ನೆರಡನೆಯ ಗತಿಯ "**ಪ್ರಾಣಲಿಂಗೋಪದೇಶ**"ದಲ್ಲಿನ ಪ್ರಾರಂಭದ ಒಂಭತ್ತು ಪದ್ಯಗಳಲ್ಲಿ (363 371). ಇಷ್ಟನ್ನೂ ಮಹಾದೇವಿಯಕ್ಕನ ವಿರಕ್ತಿ ಭಾಗಕ್ಕೆ ಸೇರಿಸಿಕೊಂಡೆವು. ಈಗ ಒಟ್ಟು ಮೂವತ್ತೆರಡು ಪದ್ಯಗಳಲ್ಲಿ ಅಕ್ಕಮಹಾದೇವಿಯ ಕಥಾಭಾಗ ಚೊಕ್ಕವಾಗಿ ವಿಂಗಡವಾಯಿತು ಒಂದು ಚೌಕಟ್ಟಿನಲ್ಲಿ. ಮುಕ್ತಾಯಕ್ಕೆ "**ಪಾರ್ವತಿಯ ಪ್ರಸನ್ನತೆ**" ಎಂಬ ಹದಿನೈದನೆಯ ಗತಿಯಲ್ಲಿ ಕಡೆಯ ಎರಡು ಪದ್ಯಗಳು "ಬಾಲರನು ವೃದ್ಧರನು" ಮತ್ತು "ಹಿರಿಯಂಗೆ ಕಿರಿಯಂಗೆ" ಒದಗಿಬಂದವು. (482–483) ಶಕುಂತಲಾಬಾಯಿ ನಿಷ್ಠೆಯಿಂದ ಅಭ್ಯಾಸಕ್ಕೆ ತೊಡಗಿದರು.

೩. ಕಾವ್ಯದಲ್ಲಿ ವಚನಗಳ ಬಳಕೆಯ ಪ್ರಯೋಗ

ಶಕುಂತಲಾಬಾಯಿ ಪ್ರಭುಲಿಂಗಲೀಲೆಯ ಗಮಕವಾಚನಾಭ್ಯಾಸವನ್ನು ಪ್ರಾರಂಭಿಸಿ ಒಂದೆರಡು ದಿವಸಗಳಾಗಿದ್ದವು. ಆ ಸಮಯದಲ್ಲಿ ನಾನು ಪ್ರಭುಲಿಂಗಲೀಲೆಯ "ಮಹಾದೇವಿಯಕ್ಕನ ವಿರಕ್ತಿ" ಕಥಾಭಾಗಕ್ಕೆ ಸೂಕ್ತ ಸಂದರ್ಭಗಳಲ್ಲಿ ಅಕ್ಕನ ವಚನಗಳನ್ನೇ ಸೇರಿಸಿಕೊಂಡರೆ ಕಾವ್ಯವಾಚನದ ವೈಶಿಷ್ಟ್ಯ ಗರಿಮುಟ್ಟಬಲ್ಲದಲ್ಲವೇ ? ಎಂದು ಯೋಚಿಸಿದೆ. ನನ್ನ ಯೋಚನೆಯನ್ನು ಸೌಭಾಗ್ಯವತಿಯ ಮುಂದಿಟ್ಟೆ. ಆಕೆಯೂ ನನ್ನಂತೆಯೇ ಪ್ರಯೋಗಶೀಲ ಮನೋಭಾವದವರು. ಆಗಬಹುದೆಂದರು. ಶಿವಶರಣರ ವಚನಗಳ ಹಾಡುಗಾರಿಕೆ ಈ ವೇಳೆಗಾಗಲೇ ಅ.ನ.ಕೃ. ಪ್ರಭಾವದಿಂದ ಸಾಕಷ್ಟು ಬಳಕೆಗೆ ಬಂದಿತ್ತು. ಉತ್ತರಾದಿ (ಹಿಂದೂಸ್ಥಾನಿ). ದಕ್ಷಿಣಾದಿ (ಕರ್ನಾಟಕ) ಸಂಗೀತ ಪದ್ಧತಿಗಳಲ್ಲಿ ಗವಾಯಿಗಳು, ಸಂಗೀತ ವಿದ್ವಾಂಸರು ವಚನಗಳ ಸಂಗೀತ ಕಚೇರಿ ಮಾಡುತ್ತಿದ್ದರು. ನನಗೆ ಸಾಹಿತ್ಯಕ್ಕಿಂತ ಸಂಗೀತ ಪ್ರಧಾನವಾಗಿ ತೋರಿದವು ವಚನಗಳ ಹಾಡುಗಾರಿಕೆ. ವಚನಗಳ ಅರ್ಥಭಾವಗಳಿಗೆ ಒತ್ತುಕೊಟ್ಟು, ರಾಗಗಳನ್ನು ವಚನಗಳ ಸಾಹಿತ್ಯಕ್ಕೆ ಪುಷ್ಟಿಕೊಡುವ ಹಾಗೆ ಹಿತಮಿತವಾಗಿ ಬಳಸಿಕೊಳ್ಳಬೇಕೆಂದು ಇಬ್ಬರೂ ನಿರ್ಧರಿಸಿದೆವು. "ಶ್ರೀ" (ಬಿ. ಎಂ. ಶ್ರೀ) ಅವರು ಕನ್ನಡ ಸಾಹಿತ್ಯ ಪರಿಷತ್ತಿಗಾಗಿ ಸಂಪಾದಿಸಿದ್ದ "**ಕನ್ನಡದ ಬಾವುಟ**"ದಲ್ಲಿದ್ದ ಅಕ್ಕಮಹಾದೇವಿಯ ವಚನಗಳ

ನಮಗೆ ಅವಶ್ಯಕವೆನಿಸಿದ ಆರು ವಚನಗಳನ್ನು ಆಯ್ದುಕೊಂಡೆವು. ಗಮಕಕ್ಕೆ ಒಗ್ಗಿಸಿದರು ಶಕುಂತಲಾಬಾಯಿ.

೪. ಮೊಟ್ಟಮೊದಲ ಕಾವ್ಯವಾಚನವೇ ಯಶಸ್ವಿಯಾಯಿತು

ನಿರ್ದಿಷ್ಟವಾಗಿದ್ದ ದಿನ, ನಾರ್ಮಲ್ ಸ್ಕೂಲ್ ಶಿಕ್ಷಕ ಸಂಘದಲ್ಲಿ ಶಕುಂತಲಾಬಾಯಿ, ಪ್ರಭುಲಿಂಗಲೀಲೆ ಕಾವ್ಯವಾಚನವನ್ನು ವಚನ ಬೆರೆಸಿ ಒಂದು ಪ್ರಯೋಗವನ್ನೇ ಮಾಡಿದರು. ಕಾರ್ಯಕ್ರಮ ತುಂಬು ಕಳೆಯಿಂದ ಕಲ್ಯಾಣಮ್ಮನವರ ಅಧ್ಯಕ್ಷತೆಯಲ್ಲಿ ನಡೆಯಿತು. ಮಹಾದೇವಿಯಕ್ಕನ ವಿರಕ್ತಿ ಕಥಾಭಾಗವೇ ಆ ದಿವಸದ ವಾಚನವೆಂದು ಹೇಳಬೇಕಾಗಿಲ್ಲ. ಒಂದು ಗಂಟೆಯಷ್ಟು ದೀರ್ಘಕಾಲ, ನಿರಾಯಾಸವಾಗಿ, ಎಲ್ಲೆಲ್ಲಿ ಯಾವ ಯಾವ ಸ್ಥಾಯಿಗಳಲ್ಲಿ ಹಾಡಬೇಕೋ ಹಾಗೆ ತ್ರಿಸ್ಥಾಯಿಗಳನ್ನು ಸಮಯೋಚಿತವಾಗಿ ಮುಟ್ಟಿ ಸಂಗೀತವನ್ನು ಹೆಚ್ಚುಮಾಡದೆ ಸಾಹಿತ್ಯ ಪೋಷಿಸಿ ಮಾಡಿದ ಮೊಟ್ಟಮೊದಲ ಕಾವ್ಯವಾಚನವಿದೇ.

ಶಕುಂತಲಾಬಾಯಿ "ಶ್ರೀಮದಮಲಜ್ಞಾನ ಭಕ್ತಪ್ರೇಮ ವೇದ ಪುರಾಣ ಶಾಸ್ತ್ರ ಸ್ತೋತ್ರಮನುತ" ಪದ್ಯದಿಂದ ಪ್ರಭುಲಿಂಗಲೀಲೆ ಕಾವ್ಯವಾಚನವನ್ನು ಪ್ರಾರಂಭಿಸಿದರು. "ಅಲ್ಲಮಪ್ರಭು ಸಂಪ್ರದಾಯದ", "ಸತ್ತ್ವರ ಕಥೆಯಲ್ಲ", "ಕುಜಂಗಳೋಪಾದಿಯಲಿ" ಪದ್ಯಗಳನ್ನು ವಾಚಿಸಿ ಮಹಾದೇವಿಯಕ್ಕನ ವಿರಕ್ತಿ ಕಥಾಭಾಗಕ್ಕೆ ಬಂದರು. ಆರನೆಯ ಗತಿಯಲ್ಲಿನ ಮೂರು ಪದ್ಯಗಳಿಂದ (197, 198, 199) ಏಳನೆಯ ಗತಿಯ ಪ್ರಾರಂಭದ "ಇತ್ತಲೀ ಮಹದೇವಿ ಮಿಗೆ ಬೆಳೆಯುತ್ತಲಿರ್ದಳು" ಪದ್ಯದಿಂದ "ಮೀಸಲಳಿಯಿತು ಬಳಕೆ" ಪದ್ಯಗಳವರೆಗೆ (214–230) ವಾಚಿಸಿದರು. ಈ ಸ್ಥಳದಲ್ಲಿ "ಹಿಡಿದ ಲಿಂಗ ವರವಿಭೂತಿಯ"ಪದ್ಯ ವಾಚಿಸುವ ಮೊದಲು "ಮಂಗಳವೆ ಮಜ್ಜನವೆನಗೆ, ವಿಭೂತಿಯೇ ಒಳಗುಂದದರಿಸಿನವೆನಗೆ" ಎಂಬ ಅಕ್ಕನ ವಚನವನ್ನು ಗಮಕ ರೀತಿಯಲ್ಲಿ ವಾಚಿಸಿದರು. "ಮೀಸಲಳಿಯಿತು...." ಪದ್ಯಪೂರ್ತಿ ಮಾಡಿ

"ತಂದೆತಾಯಗಳು ನೆಂಟರಿಷ್ಟರು
ಬಂಧುಬಳಗಗಳಿತರ ಜನಗಳು
ಬಂದು ನಿಂದೆಲೆ ಅಕ್ಕ ನಿನೇಕಕಟೇಕೆ ಮರುಳಾದೆ !
ಎಂದೆನಲು...."

ಅರ್ಧ ಪದ್ಯವಾಚಿಸಿ "ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವಂಗಾನೊಲಿದೆನವ್ವ" ಅಕ್ಕನ ವಚನವನ್ನು ಓದಿ ಉಳಿದಿದ್ದ ಉತ್ತರಾರ್ಧ ಪದ್ಯದ ಮೂರು ಸಾಲುಗಳು

"............ಶಿವಗರ್ಪಿಸಿದ ತನು
ಎಂದು ಮೊದಲಾಗೆನ್ನ ಹಂಬಲ
ನಿಂದು ಕಳೆವುದು ನೀವೆನುತ ಮಹದೇವಿ ಜಾಜಿಂದಳು

ಪೂರ್ತಿ ಮಾಡಿದರು. ಮತ್ತೆ "ವನವೆಲ್ಲ ನೀವೆ. ವನದೊಳಗಣ ದೇವ ತರುವೆಲ್ಲ ನೀವೇ" ಎಂಬ ಅಕ್ಕನ ವಚನವನ್ನು ಎತ್ತಿಕೊಂಡು ಓದಿ "ಎಲ್ಲಿ ಸಜ್ಜನವೆಲ್ಲಿ ನಿರ್ಜನವೆಲ್ಲಿ

ಗಿಡುಮರವೆಲ್ಲಿ ತರುಗಿರಿಯೆಲ್ಲಿ ಹೊಗೊಳನೆಲ್ಲಿ ಗಹ್ವರವೆಲ್ಲಿ ಲತೆ ಪುಳಿನ ಎಲ್ಲ ಎಡೆಯಲಿ ಪಾಡುತಾಡುತ"ವರೆಗೆ ಪದ್ಯ ಓದಿ ಈ ಸ್ಥಳದಲ್ಲಿ ಅಕ್ಕನ ಪ್ರಸಿದ್ಧ ವಚನ "ಚಿಲಿಮಿಲಿ ಎಂದೋದುವ ಗಿಳಿಗಳಿರಾ, ನೀವು ಕಾಣಿರೆ, ನೀವು ಕಾಣಿರೆ?" ಎತ್ತಿಕೊಂಡು ವಾಚಿಸಿ, ಬಿಟ್ಟಿದ್ದ ಪದ್ಯ "ಮೆಲ್ಲಮೆಲ್ಲನೆ ಅಡಿಸುತಿರ್ದಳು ಅಲ್ಲಮ ಪ್ರಭು ಗುರು ಗುಹೇಶ್ವರನನು ಮಹಾದೇವಿ" ಪೂರ್ತಿಮಾಡಿದರು.

ಮಹಾದೇವಿಯಕ್ಕನ ವಿರಕ್ತಿ ಭಾಗದಲ್ಲಿ ಕೌಶಿಕ ಮಹೀಪತಿಯ ಮತ್ತು ಮಹಾದೇವಿಯ ಪಾತ್ರಗಳು ಉಜ್ವಲವಾಗಿವೆ. ಕೌಶಿಕನು ಮಹಾದೇವಿಯ ಮನೆಗೆ ಬಂದು ಆಕೆಯೊಡನೆ ನಡೆಸುವ ಸಂಭಾಷಣೆ ರಸಪೂರ್ಣವಾಗಿದೆ. ಈ ಎರಡು ಪಾತ್ರಗಳ ವ್ಯಕ್ತಿತ್ವದ ಘನತೆ ಉನ್ನತಿಯ ಕಳಶ ಮುಟ್ಟುತ್ತದೆ. "ನಮಗೆ ನಿಮ್ಮಯ ಸಂಗವಳ ವಡದು ನಿಮಗೆ ನಾವಿನ್ನುತ್ತರಾಯಿಗಳು. ಎಮಗೆ ಬಂಧನ ಬಿಟ್ಟುದೆನುತಾಕ್ರಮದ ಲುಟ್ಟುಡುಗೊಱೆಯ ತೊಡಿಗೆಗಳ" ಹಿಂದಿರುಗಿಸುತ್ತಾಳೆ ಮಹಾದೇವಿ. ಕೂಡಲೆ ಆಕೆಯಲ್ಲಿ ವೈರಾಗ್ಯ ಉತ್ಪನ್ನವಾಗುತ್ತದೆ. ಸಾರಾಂಶ, ಎಂತಹವರನ್ನಾದರೂ ಆಕರ್ಷಿಸಿ ಮನವರಳಿಸಿ ಹೃದಯ ತಟ್ಟುವ ಬಹು ಸುಂದರ ಭಾಗ. ಮಹಾದೇವಿಯಕ್ಕನ ವಿರಕ್ತಿಯ ಏಳನೆಯ ಗತಿ. ಕೌಶಿಕ ಮಹಾದೇವಿಯರ ಸಂಭಾಷಣೆಗಳನ್ನು ನಾಟಕದ ಪಾತ್ರಗಳ ಸಂಭಾಷಣೆಯಂತೇ ಪ್ರದರ್ಶಿಸಿದರು ಶಕುಂತಲಾಬಾಯಿ.

ಹನ್ನೆರಡನೆಯ ಗತಿಯು **ಪ್ರಾಣಲಿಂಗೋಪದೇಶ**ದಲ್ಲಿ ಮೊದಲ ಒಂಬತ್ತು ಪದ್ಯಗಳು ಮಹಾದೇವಿಯಕ್ಕ ವಿರಕ್ತಿಭಾವ ತಳೆದ ಮೇಲೆ ಅಲ್ಲಮಪ್ರಭುವನ್ನು ಅರಸುತ್ತ ತೊಳಲಿ ಬಳಲಿ ಕಡೆಗೆ ಆ ಮಹಾಮಹಿಮನನ್ನು ಕಂಡು ಆತನೊಡನೆ ಸಂಭಾಷಿಸಿ, ಉಪದೇಶ ಪಡೆದು, ಅಲ್ಲಿಂದ ನಿರ್ಗಮಿಸುವ ವಿಷಯವನ್ನು ಹೇಳುತ್ತವೆ. ಇಲ್ಲಿ ಕೌಶಿಕ, ಮಹಾದೇವಿಯಕ್ಕ, ಆಕೆಯ ತಂದೆತಾಯ್ಗಳು ನಿರ್ಮಲ ಸುಮತಿಯರು, ಒಬ್ಬರೊಡನೊಬ್ಬರು ಸಂಭಾಷಿಸುವ ಚಮಕಿಲ್ಲ. ನಾಟಕೀಯ ಗತ್ತಿಲ್ಲ. ಆದರೆ ಅಲ್ಲಮ ಪ್ರಭುರಾಯನ ಘನ ಸನ್ನಿಧಿಯಲ್ಲಿ **ಬಸವಣ್ಣ ಮುಖ್ಯರು ತನುಲೋಭ ಮೋಹವ ನೂಕಿ ನಿಸ್ಪೃಹೆಯಾಗಿ ನಿಲುವವರಾರು ಧಾತ್ರಿಯಲಿ ಈಕೆಗಾರೆಣೆ ಶಿವಶಿವಾ ಎನುತಾಕೆಯನು** ಸ್ವಾಗತಿಸುವ ಸನ್ನಿವೇಶ ಗರಿಕಟ್ಟಿದೆ. ಅಲ್ಲಮ ಪ್ರಭುರಾಯನಿಂದ ಉಪದೇಶ ಪಡೆದು, ಅಲ್ಲಿಂದ ಬೀಳ್ಕೊಳ್ಳುವ ಸನ್ನಿವೇಶ ದಿವ್ಯವಾಗಿದೆ ; ಭವ್ಯವಾಗಿದೆ.

"ಗುರವನರಸುವೆನೆಂದು ತಿಟ್ಟನೆ ತಿರುಗಿದಳು...." ಪದ್ಯದಿಂದ "ಲೋಕದೊಳು ಸತಿ ಜನ್ಮವನು ತಾ ಸ್ವೀಕರಿಸಿ...." ಪದ್ಯಗಳನ್ನು (363–366) ವಾಚನ ಮಾಡಿ "ಬಸವಣ್ಣ ಮುಖ್ಯರನೇಕಪರಿಯಲಿ ಹೊಗಳುತಿರ್ದರು ಶರಣು ಶರಣೆನುತ" ಸಾಲು ಮುಗಿಸಿದ ಕ್ಷಣವೇ "ಕಾದುನಗೆಲಿದೆನು ಬಸವಾ ನಿಮ್ಮ ದಯದಿಂದ" ಎಂಬ ಅಕ್ಕನ ವಚನವನ್ನು ಎತ್ತಿಕೊಂಡು, ಅಕ್ಕಮಹಾದೇವಿ ಬಸವಣ್ಣ ಮುಖ್ಯರ ಹೊಗಳಿಕೆಗೆ ತನ್ನ ಪ್ರತಿಕ್ರಿಯೆಯನ್ನು ಹೇಗೆ ವ್ಯಕ್ತಪಡಿಸಿದಳು ಎಂದು ತೋರಿಸಿದರು. ಅಕ್ಕನ ವಿನಯಕ್ಕೆ ಪ್ರತಿಕ್ರಿಯೆ ಬಸವಣ್ಣ ಮುಖ್ಯರು ಪ್ರದರ್ಶಿಸುವ ಪದ್ಯ "ನಡೆತೆರಗಾಡಿದರಂ

ತನು ಜಜ್ಜರಿತವಾಗಿ...." ಎಂಬ ಪದ್ಯ (367). ಈ ಪದ್ಯದಿಂದ ಮಹಾದೇವಿಯಕ್ಕನಿಗೆ ಅನುಪಮೋಪಮ ಸಗುಣ ನಿರ್ಗುಣ ಗುರುಗುಹೇಶ್ವರ ಮಾಡಿದ ಉಪದೇಶದ ಪದ್ಯ "ಎನುತಲಾ ಮಹಾದೇವಿಯಕ್ಕಗೆ (370)" ಈ ಪದ್ಯಗಳನ್ನು ವಾಚಿಸಿದರು. ಉಪದೇಶ ಪಡೆದು "**ಎಲ್ಲರಲಿ ಶರಣಾರ್ಥಿಯೆಂದೆನುತೆಲ್ಲರಲಿ ಹರಕೆಯನು ಕೈಕೊಳುತ" ಅಲ್ಲಮ ಪ್ರಭುರಾಯನು ಬೀಳ್ಕೊಂಡಳರ್ತಿಯಲಿ** ಪದ್ಯವೇ ಕಡೆಯದು. ಮಹಾದೇವಿಯಕ್ಕನ ವಿರಕ್ತಿ ಕಥಾಭಾಗದಲ್ಲಿ, ಈ ಪದ್ಯವನ್ನು ವಾಚಿಸುವುದಕ್ಕೆ ಮುಂಚೆ ಶಕುಂತಲಾಬಾಯಿ "ಹೊಳೆವ ಕೆಂಜೆಡೆಗಳ, ಮಣಿಮಕುಟ ಒಪ್ಪುವ...." ಅಕ್ಕನ ವಚನಗಳನ್ನು ಓದಿದರು.

ಪ್ರಭುಲಿಂಗಲೀಲೆ ಕಾವ್ಯವಾಚನ "ಶ್ರೀಮದಮಲ ಜ್ಞಾನ ಭಕ್ತಿ ಪ್ರೇಮ ವೇದ ಪುರಾಣ ಶಾಸ್ತ್ರ ಸ್ತೋತ್ರಮನುತ" ಪ್ರಾರ್ಥನಾ ಪದ್ಯದಿಂದ ಪ್ರಾರಂಭವಾಗಿ "ಬಾಲರನು ವೃದ್ಧರನು....(482) ಮತ್ತು ಹಿರಿಯರಿಗೆ ಕಿರಿಯರಿಗೆ (483) ಎಂಬ ಹದಿನೈದನೇ ಗತಿಯ ಕಡೆಯ ಎರಡು ಪದ್ಯಗಳಿಂದ ಮುಕ್ತಾಯವಾಯಿತು.

ಅಧ್ಯಕ್ಷಿಣಿ ಕಲ್ಯಾಣಮ್ಮನವರು ತುಂಬು ಹೃದಯದಿಂದ ಶಕುಂತಲಾಬಾಯಿಯ ಕಾವ್ಯವಾಚನವನ್ನು ಪ್ರಶಂಸಿಸಿದರು. ಪ್ರಚಲಿತ ಕಾಲದಲ್ಲಿರುವ ಗಮಕ ಕಲಾವಿದರು ಗಳಲ್ಲಿ ಶಕುಂತಲಾಬಾಯಿಯೇ ಅತಿ ಕಿರಿ ವಯಸ್ಸಿನ ಗಮಕ ವಿದುಷಿಯೆಂದೂ, ಅವರ ನಿರರ್ಗಳ, ಸ್ಫುಟೋಚ್ಚಾರಣೆಯ, ಕೋಕಿಲ ಕಂಠದ ಕಾವ್ಯವಾಚನ ಕೇಳುವುದಕ್ಕೆ ಬಹಳ ಇಂಪೆಂದೂ, ಅತಿ ಶೀಘ್ರದಲ್ಲಿಯೇ ಅವರ ಕೀರ್ತಿ ಗಮಕ ಪ್ರಪಂಚದಲ್ಲಿ ಪಸರಿ ಸುವುದರಲ್ಲಿ ಸಂಶಯವಿಲ್ಲವೆಂದೂ ನುಡಿದರು.

ಟಿ. ಎಂ. ಆರ್. ಸ್ವಾಮಿಯವರ ಆನಂದಕ್ಕೆ ಪಾರವೇಯಿಲ್ಲ. ಮಾರನೆಯ ಸಂಜೆ "ತಾಯಿನಾಡು" ದಿನಪತ್ರಿಕೆಯಲ್ಲಿ ಶಕುಂತಲಾಬಾಯಿ, "**ಶಕುಂತಲಾಬಾಯಿ ಪಾಂಡುರಂಗರಾವ್**" ಆಗಿ ಪ್ರಸಿದ್ಧ ಗಮಕ ವಿದುಷಿಯೆಂದು ಸುದ್ದಿಮಾಡಿದರು.

೪. ಹೊಸ ಛಂದಸ್ಸಿನ “ಕನ್ನಡ ತಾಯ ನೋಟ” ಪ್ರಗಾಥ ಗಮಕ ಪ್ರಯೋಗ ಕ್ಷೇತ್ರ ಗದ್ದುಗೆಗೇರಿತು

ಬಿ. ಎಂ. ಶ್ರೀ. “ರಾಜಸೇವಾಸಕ್ತ” ಬಿರುದಾಂಕಿತರಾದರು

ಬೆಂಗಳೂರಿನ ನಾರ್ಮಲ್ ಸ್ಕೂಲ್ ಶಿಕ್ಷಕ ಸಂಘದಲ್ಲಿ ಶಕುಂತಲಾಬಾಯಿ ಮಾಡಿದ ಕಾವ್ಯವಾಚನದ ಸುದ್ದಿ “ತಾಯಿನಾಡು ದಿನಪತ್ರಿಕೆ”ಯಲ್ಲಿ ಪ್ರಕಟವಾಗಿ ಕನ್ನಡ ಕಾವ್ಯಾಭಿಮಾನಿಗಳ ಮನವನ್ನಾಕರ್ಷಿಸಿತು. ಒಂದೆರಡು ತಿಂಗಳುಗಳಲ್ಲಿಯೇ ಇನ್ನೊಂದು ಸಾರ್ವಜನಿಕ ಸಮಾರಂಭದಲ್ಲಿ ಇನ್ನೊಂದು ಆಧುನಿಕ ಕಾವ್ಯವಾಚನ ಮಾಡುವ ಸದವಕಾಶ ಶಕುಂತಲಾಬಾಯಿಗೆ ಪ್ರಾಪ್ತವಾಯಿತು. ಅದಕ್ಕೂ ಕಾರಣ ಕಲ್ಯಾಣಮ್ಮನವರೇ.

ಕರ್ಣಾಟಕ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿದ್ದ ಡಿ. ವಿ. ಜಿ. ಅವರು 1937ರ ಡಿಸೆಂಬರ್ ತಿಂಗಳಲ್ಲಿ ನಡೆದ ಜಮಖಂಡಿ ಸಾಹಿತ್ಯ ಸಮ್ಮೇಳನದಲ್ಲಿ ತಮ್ಮ ಉಪಾಧ್ಯಕ್ಷ ಸ್ಥಾನವನ್ನು ಆಧುನಿಕ ಕನ್ನಡ ಸಾಹಿತ್ಯಾಚಾರ್ಯರೆಂದು ಕೀರ್ತಿಪಡೆದಿದ್ದ ಬಿ. ಎಂ. ಶ್ರೀಕಂಠಯ್ಯನವರಿಗೆ ವಹಿಸಿಕೊಟ್ಟರು. ಬಿ. ಎಂ. ಶ್ರೀ. ಅವರು ಕರ್ಣಾಟಕ ಸಾಹಿತ್ಯ ಪರಿಷತ್ತನ್ನು **ಕನ್ನಡ ಸಾಹಿತ್ಯ ಪರಿಷತ್ತು** ಎಂಬ ಹೆಸರಿಗೆ ಬದಲಾಯಿಸಿ ಕೊಂಡುದು ಒಂದು ಮಹಾ ಸ್ವಾರಸ್ಯ ಸಂಗತಿ. 1938ರ ದಸರಾ ಕಾಲದಲ್ಲಿ ಮೈಸೂರು ಸಂಸ್ಥಾನದ ರತ್ನಸಿಂಹಾಸನಾಧೀಶ್ವರರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರು ಬಿ. ಎಂ. ಶ್ರೀ. ಅವರ ಕನ್ನಡ ಸೇವೆಯನ್ನು ಮನಗಂಡು, ವಿದ್ವತ್ಪ್ರತಿಭೆಯನ್ನು ಮೆಚ್ಚಿ, ಜೋಡಿ ಶಾಲು, ನವರತ್ನ ಖಚಿತ ಗಂಡಭೇರುಂಡ ಪದಕ ರತ್ನಹಾರ, ಖಿಲ್ಲತ್ತುಗಳ ರಾಜ ಮರ್ಯಾದೆಗಳೊಡನೆ “ರಾಜಸೇವಾಸಕ್ತ” ಎಂಬ ಬಿರುದನ್ನು ದಯಪಾಲಿಸಿದರು. ತನ್ನ ಸಂತೋಷವನ್ನು ವ್ಯಕ್ತಪಡಿಸುವುದಕ್ಕಾಗಿ ಅಖಿಲ ಕರ್ನಾಟಕ ಮಕ್ಕಳ ಕೂಟ ಬಿ. ಎಂ. ಶ್ರೀ. ಯವರಿಗೆ ಒಂದು ಸನ್ಮಾನ ಸಭೆಯನ್ನು ಏರ್ಪಡಿಸಿತು. ಮಕ್ಕಳಕೂಟದ ಅಧ್ಯಕ್ಷಿಣಿಯಾಗಿದ್ದ ಕಲ್ಯಾಣಮ್ಮನವರು ಶಕುಂತಲಾಬಾಯಿಗೆ ಭಾರತವಾಚನ ಮಾಡ ಬೇಕೆಂದು ಹೇಳಿಕಳಿಸಿದರು. ನಮಗೆ, ಕಲ್ಯಾಣಮ್ಮನವರ ಕರೆಯನ್ನು ಒಪ್ಪಿಕೊಳ್ಳದೆ ಬೇರೆ ವಿಧಿಯೇ ಇರಲಿಲ್ಲ. ಕಾರ್ಯಕ್ರಮವನ್ನು ಒಪ್ಪಿಕೊಂಡೆವು.

“ಕನ್ನಡ ತಾಯ ನೋಟ” ಪ್ರಗಾಥ ಗಮಕ ವಾಚನ

ನಾವು, ಬಿ. ಎಂ. ಶ್ರೀ. ಸನ್ಮಾನ ಸಭೆಯಲ್ಲಿ ಭಾರತವಾಚನ ಮಾಡುವುದೆ ಅಥವಾ ಪ್ರಭುಲಿಂಗಲೀಲೆಕಾವ್ಯವಾಚನ ಮಾಡುವುದೆ ಎಂಬ ಗೊಂದಲದಲ್ಲಿ ಸಿಲುಕಿದೆವು. ಎರಡೂ ಬೇಡ, ಬಿ. ಎಂ. ಶ್ರೀ ವಿರಚಿತ ಕವನಗಳನ್ನು ಹಾಡಿಬಿಡುವುದು ಎಂದು ತೀರ್ಮಾನಿಸಿದೆವು. ಈ ಹೊತ್ತಿಗಾಗಲೆ ಪ್ಲೋಕ ಸಂಗೀತ ಕಲೆ ಸಂಪತ್ಕುಮಾರಾ ಚಾರ್ಯರು, ಶ್ರೀಯವರ ಇಂಗ್ಲಿಷ್ ಕವನ “**ಲೀಡ್ ಕೈಂಡ್ಲಿ ಲೈಟ್**”ನ ಕನ್ನಡ

ಅನುವಾದ "ಕರುಣಾಳು ಬಾ ಬೆಳಕೆ" ಕವನವನ್ನು ಅನೇಕ ಬಾರಿ ಸಭೆಗಳಲ್ಲಿ ಹಾಡಿ ಜನಪ್ರಿಯಗೊಳಿಸಿದ್ದರು. ಶಕುಂತಲಾಬಾಯಿ, "ಶ್ಲೋಕ ಸಂಗೀತ"ರು ಹಾಡಿ ಜನಪ್ರಿಯಗೊಳಿಸಿದ್ದ ಬಿ. ಎಂ. ಶ್ರೀ. ಕವನಗಳನ್ನು ಬಿಟ್ಟು ಅವರ ಬೇರೆ ಕೃತಿಯನ್ನು ಹಾಡಬಯಸಿದರು. ಕಾರಣ ಒಬ್ಬ ಪ್ರಸಿದ್ಧ ಕಲಾವಿದ ಜನಪ್ರಿಯಗೊಳಿಸಿದ್ದ ಕವನಗಳನ್ನು ಇನ್ನೊಬ್ಬ ಕಲಾವಿದೆ ಅಷ್ಟೇ ಚೆನ್ನಾಗಿ ಓದಿದರೂ ರಸಿಕರು ಹೊಸ ಪ್ರತಿಭೆಯನ್ನು ಗುರುತಿಸಿ ಮೆಚ್ಚಿಕೊಳ್ಳುವುದು ಕಷ್ಟ. ಆದುದರಿಂದ ಶ್ರೀಯವರ ಬೇರೆ ಕವನಗಳನ್ನು ಆರಿಸಿಕೊಳ್ಳಬೇಕೆಂದು ಇಬ್ಬರೂ ಯೋಚಿಸಿದೆವು. ಶ್ರೀ ಯವರು ಸಂಪಾದಿಸಿದ್ದ "ಕನ್ನಡದ ಬಾವುಟ"ವೆಂಬ ಪ್ರಾಚೀನ ಹಾಗೂ ಆಧುನಿಕ ಕವಿಗಳ ಕವನ ಸಂಗ್ರಹ ನಮ್ಮ ದಿಕ್ಸೂಚಿಯಾಯಿತು. ಶ್ರೀಯವರು ರಚಿಸಿದ್ದ "ಕನ್ನಡ ತಾಯ ನೋಟ" ಮಹಾ ಪ್ರಗಾಥ ["ಕನ್ನಡ ಬಾವುಟ"ದಲ್ಲಿ ಪ್ರಕಟವಾಗಿತ್ತು. ಶ್ರೀಯವರ ಕನ್ನಡ ಪ್ರೇಮ ಹಾಸುಹೊಕ್ಕಾಗಿ ಸಾಲು ಸಾಲುಗಳಲ್ಲಿ ಹೊರಹೊಮ್ಮಿದ ಅತಿಯುಜ್ವಲ ಕನ್ನಡ ಭಕ್ತಿಯ ಮಹಾ ಪ್ರಗಾಥ] ನನ್ನ ಮನವನ್ನು ಆಕರ್ಷಿಸಿತು. ನಾನು "ಕನ್ನಡ ತಾಯ ನೋಟವನ್ನು ಶ್ರೀಯವರ ಸನ್ಮಾನ ಸಭೆಯಲ್ಲಿ ಓದಿದರೆ ಹೇಗೆ ?" ಎಂದೆ. ಶಕುಂತಲಾಬಾಯಿ "ಕನ್ನಡತಾಯ ನೋಟ"ವನ್ನು ಎರಡು ಮೂರು ಬಾರಿ ಓದಿ ಕೊಂಡರು. ರಾಗಗಳನ್ನು ಸಂಯೋಜಿಸಿ "ಗಮಕಕ್ಕೆ ಒಗ್ಗುತ್ತದೆ. ಇದನ್ನೇ ವಾಚನ ಮಾಡೋಣ" ಎಂದರು. ನಾನು "ಕನ್ನಡತಾಯ ನೋಟ"ವನ್ನು ಹದಿನೈದು ಇಪ್ಪತ್ತು ನಿಮಿಷಗಳ ಅವಧಿಗೆ ಸಂಕ್ಷಿಪ್ತಗೊಳಿಸಿದೆ. ಸನ್ಮಾನ ಸಭೆಯಲ್ಲಿ ಶಕುಂತಲಾಬಾಯಿ ಯಾವುದು ವಾಚನ ಮಾಡುವರೆಂಬ ವಿಷಯವನ್ನು ಕಡೆಯ ಘಳಿಗೆಯವರೆಗೆ ಕಾರ್ಯ ಕರ್ತರಿಗೂ ತಿಳಿಯದಂತೆ ಗೋಪ್ಯವಾಗಿಟ್ಟೆ. "ಕನ್ನಡತಾಯ ನೋಟ" ಈವರೆಗೆ ಯಾವ ಗಮಕಿಯನ್ನೂ ಆಕರ್ಷಿಸಿರಲಿಲ್ಲ. ಶ್ರೀ ಯವರ ಸನ್ಮಾನ ಸಭೆಯಲ್ಲಿ ಶಕುಂತಲಾಬಾಯಿ ಅಪರೂಪ ಛಂದಸ್ಸಿನ ಪ್ರಗಾಥವನ್ನು ಗಮಕ ಶೈಲಿಯಲ್ಲಿ ವಾಚನಮಾಡಿ ಸಭೆಯನ್ನು ಮೂಕವಿಸ್ಮಿತವನ್ನಾಗಿ ಮಾಡಬೇಕೆಂದು ನನ್ನ ಉದ್ದೇಶವಾಗಿತ್ತು.

'ಕನ್ನಡತಾಯ ನೋಟ'ವನ್ನು ಬಿ. ಎಂ. ಶ್ರೀ. ಅವರು 1936ರಲ್ಲಿ ರಚಿಸಿದರು. ಆ ವರ್ಷಕ್ಕೆ ಮರೆಯಲಾರದ ಸಾಮ್ರಾಜ್ಯವೆಂದು ದೇಶವಿದೇಶೀಯರುಗಳಿಂದ ಹೊಗಳಿಸಿ ಕೊಂಡ ಕನ್ನಡಿಗರ ಹೆಮ್ಮೆಯ ಮಹಾ ವೈಭವದ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾಗಿ ಆರುನೂರು ವರ್ಷಗಳಾಗಿತ್ತು. ಹಾಳುಕೊಂಪೆಯಾಗಿ ಮೂಲೆಗೊಂಪೆ ಯಾಗಿದ್ದ ಹಂಪೆಯಲ್ಲಿ ಹರಿದು ಹಂಚಿ ಹೋದ ಕನ್ನಡಿಗರೆಲ್ಲ ಒಮ್ಮನಸ್ಸಿಂದ ಒಂದಾಗಿ ಸೇರಿ, ವಿಜಯನಗರ ಸಾಮ್ರಾಜ್ಯದ ಗತವೈಭವವನ್ನು ಸ್ಮರಣೆಗೆ ತಂದುಕೊಂಡು ವಿಜೃಂಭಣೆಯಿಂದ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ದಿನಾಚರಣೆಯನ್ನು ನಡೆಸ ಬೇಕೆಂದು ತೀರ್ಮಾನಿಸಿದ್ದರು. ಅಂತೆಯೇ 1936ರಲ್ಲಿ ವಿಜಯನಗರ ಸಾಮ್ರಾಜ್ಯದ ಆರನೆಯ ಶತಮಾನೋತ್ಸವ ಹಂಪೆಯಲ್ಲಿ ನಡೆಯಿತು. ಅನೇಕ ಸಮ್ಮೇಳನಗಳು ಸಮಾರಂಭದಲ್ಲಿ ಸಮಾವೇಶಗೊಂಡವು. ಅವುಗಳಲ್ಲಿ ಗಣನೀಯವಾದುದು ಕನ್ನಡ

ಸಾಹಿತ್ಯ ಸಮ್ಮೇಳನ. ಸಾಹಿತ್ಯ ಸಮ್ಮೇಳನಾಧ್ಯಕ್ಷರು ಆಧುನಿಕ ಕನ್ನಡ ಸಾಹಿತ್ಯಾಚಾರ್ಯರೆನ್ನಿಸಿಕೊಂಡ ಬಿ. ಎಂ. ಶ್ರೀ. ಅವರು. ಅವರು ತಮ್ಮ ಅಧ್ಯಕ್ಷ ಭಾಷಣಕ್ಕೆ ಮುಂಚೆ, ಸಾಹಿತ್ಯ ಸಮ್ಮೇಳನಕ್ಕೆಂದೇ ವಿಶೇಷವಾಗಿ ರಚಿಸಿದ್ದ ಕನ್ನಡ ತಾಯ ನೋಟ ಪ್ರಗಾಥವನ್ನು ಓದಿ ಅಲಸಿಕನ್ನಡಿಗರನ್ನು ಹೊಡೆದೆಬ್ಬಿಸಿದರು. ಜಾಗೃತಿಗೊಳಿಸಿದರು. ಆದುದರಿಂದ "ಕನ್ನಡ ತಾಯ ನೋಟ"ವನ್ನೇ ಸನ್ಮಾನ ಸಭೆಯಲ್ಲಿ ವಾಚನಮಾಡಿ "ಶ್ರೀ" ಯವರಿಗೆ ನುಡಿಕಾಣಿಕೆಯಾಗಿ ಅರ್ಪಿಸುವುದು ನಮ್ಮ ಕರ್ತವ್ಯವೆಂದು ತೀರ್ಮಾನಿಸಿಸಿದೆವು.

ಸನ್ಮಾನ ಸಭೆಯಲ್ಲಿ "ಕನ್ನಡ ತಾಯ ನೋಟ" ಕಾವ್ಯ ವಾಚನ

ಬೆಂಗಳೂರಿನ ಪಿ. ಎಸ್. ಶಿವಶಂಕರ್‌ವೃತ್ತದಲ್ಲಿರುವ ಮೈಸೂರು ಸ್ಕೌಟ್ ಹೆಡ್ ಕ್ವಾರ್ಟರ್ಸ್ ಸಭಾಂಗಣದಲ್ಲಿ 26-10-38ರಂದು ಜನರಲ್ ರಾಮರಾಯರ ಅಧ್ಯಕ್ಷತೆಯಲ್ಲಿ ಬಿ. ಎಂ. ಶ್ರೀ. ಸನ್ಮಾನ ಸಭೆ. "ಶ್ರೀ" ಅಭಿಮಾನಿಗಳಿಂದ ಕಿಕ್ಕಿರಿದು ತುಂಬಿತ್ತು. ಬೆಂಗಳೂರಿನ ಪ್ರತಿಷ್ಠಿತ ಸಾಹಿತಿಗಳು, ವಿದ್ವಾಂಸರು, ಪುರಪ್ರಮುಖರು ಆಗಮಿಸಿ ಸನ್ಮಾನ ಸಭೆಯ ಗೌರವವನ್ನು ಮೇರು ಶಿಖರಕ್ಕೆ ಮುಟ್ಟಿಸಿದರು. ಪ್ರಾರ್ಥನೆ, ಸ್ವಾಗತ ಭಾಷಣ, ಆದಮೇಲೆ "ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾವ್ ಅವರಿಂದ **ಕಾವ್ಯ ವಾಚನ**"ವೆಂದು ಕರೆಬರುತ್ತಲೇ ಶಕುಂತಲಾಬಾಯಿ ತಂಬೂರಿ ಸಹಿತ ವೇದಿಕೆಯೇರಿ ಕುಳಿತರು. ತಂಬೂರಿಯನ್ನು ಐದನೇ ಮನೆಯ ಶ್ರುತಿಗೆ ಅಳವಡಿಸಿ, ಅದರ ನಾದಕ್ಕೆ ತಮ್ಮ ಕಂಠವನ್ನು ಮೇಳವಿಸಿ "ಕನ್ನಡತಾಯ ನೋಟ" ಪ್ರಗಾಥದ ವಾಚನವನ್ನು ಪ್ರಾರಂಭಿಸಿದರು.—

ಹಿರಿಯರಿರ, ಕೆಳೆಯರಿರ, ಅಕ್ಕತಂಗಿಯರಿರಾ, ಅಣ್ಣತಮ್ಮದಿರಾ,
ಒಸಗೆಯನುಡಿ ತಂದಿಹೆನು ನಾನೊಂದ, ತಾಯಿಂದ, ಸಿರಿಯ ತಾಯಿಂದ—
ಕೇಳುವಿರ ಕಿವಿಗೊಟ್ಟು, ತಾಳುವಿರ ಎದೆನಿಟ್ಟು, ತಾಳಿ ಬಾಳುವಿರ?

ಕಣ್ಣಾರ ಕಂಡೆನವಳನು—ಕಂಡು, ತಂದಿಹೆನು, ಕೇಳಿ.
ಅವಳೆನ್ನೊಳಾಡಿದುದನಾಡುವೆನು, ನಿಮ್ಮಲ್ಲಿ, ಕೇಳಿ.

ಈ ಸಾಲುಗಳನ್ನು ವಾಚಿಸಿ, ಸಭೆಗೆ ಹೊಸಕೃತಿ ಹಿಡಿಸಿತೋ ಎಂದು ತಿಳಿದುಕೊಳ್ಳುವುದಕ್ಕಾಗಿ ಶ್ರೋತೃಗಳನ್ನು ನೋಡಿದರು. ಶ್ರೋತೃಗಳು ನಿಬ್ಬೆರಗಾಗಿ ತದೇಕಚಿತ್ತರಾಗಿ ಆಲಿಸುತ್ತಿರುವರೆಂದು ಮನಗಂಡು "ಕನ್ನಡತಾಯ ನೋಟ" ಕಾವ್ಯ ವಾಚನವನ್ನು ಮುಂದುವರಿಸಿದರು.

"ಬಳಸಿ, ಬಂದೆನು ಸುತ್ತಿ ಕನ್ನಡದ ನಾಡುಗಳ ಸಿರಿಯ ನೋಡುತ್ತ!
ತಾಯಡಿಯ ಪುಡಿಯ ತಲೆಗಾನುತ್ತ, ಹರಕೆಯ ಪವಿತ್ರ ಯಾತ್ರೆಯಲಿ.
ಏನು ಚೆಲುವಿನ ನಾಡು! ಚೆಲುವು ಚೆಲ್ಲುವ ನಾಡು! ಕಸವರದ ನಾಡು!
ಏನು ಚಿನ್ನದ ನಾಡು! ನಮ್ಮೊಲುಮೆಯ ನಾಡು! ನಮ್ಮಿಂಪು ನಾಡು!

ಕಾವೇರಿಯಿಂದಮಾ ಗೋದಾವರಿಯುವರೆಗೆ ಚಾಚಿರುವ ನಾಡು !
ಬಳಸಿಹೆನು, ಸುತ್ತಿದೆನು, ಕಣ್ದಣಿಯೆ ನೋಡಿದೆನು, ಕುಣಿದು ಹಾಡಿದೆನು :"

ಇಷ್ಟು ಸಾಲುಗಳನ್ನು ವಾಚನಮಾಡಿ ಮೂರನೆಯ ಭಾಗಕ್ಕೆ ಹಾರಿ "ಇದೋ ಬಂದೆನೀ ಹಾಳುಹಂಪೆಗಿಂದರಸುತ್ತ"–ಸಾಲಿಗೆ ಬಂದರು ಇಲ್ಲಿಂದ

"ಇದೋ ಬಂದೆನಿ ಹಾಳು ಹಂಪೆಗಿಂದರಸುತ್ತ–ಬಳಗಿರ್ಪುದಿನ್ನುಂ–
ಬಳಗಿದ್ದು ಹೊರಗಣ್ಗೆ ಕಾಣಿಪುದು ಮತ್ತೊಮ್ಮೆ ಆ ತಾಯ ನೋಟಂ
. . . .
. . . .
ಕಣ್ಣಾರೆ ಕಂಡುದನು, ತಾಯೆನ್ನೊಳಾಡಿದುದನಾಡುವೆನು. ಕೇಳಿ

ಕಿವಿಗೊಟ್ಟು ಕೇಳಿ ;
ಎದೆಗೊಟ್ಟು ಕೇಳಿ ;
ಏಳಿ, ಎಚ್ಚರವಾಗಿ, ಅರಳಿ ಬಾಳಿ !

ವರೆಗೆ ಒಂದು ಸಾಲೂ ಬಿಡದೆ ವಾಚನ ಮಾಡಿ ನಾಲ್ಕನೆಯ ಭಾಗವನ್ನು ಪೂರ್ತಿ ವಾಚಿಸಿದರು.

"ಕೇಳಣ್ಣ, ನಾನೊಬ್ಬ ಹಳೆಯ ಮುತ್ತೈದೆ–ಹಿರಿದಾಗಿ ಬಾಳಿದವಳೊಮ್ಮೆ
ಈಗ ಬಡತನ, ಬಡವೆ, ಬಡವಾದೆ : ಬಡವಾದ ಮಕ್ಕಳನ. ನೋಡಿ,
. . . .
. . . .
ನನ್ನ ನಾಡಿನಲಿರುಳು : ನನ್ನ ತೋಟವನಗೆವ, ತೆಂಗಡಕೆಯಿಡುವ
ತಾವರೆಯ ಕಾಪಿಡುವ, ಮೊಲ್ಲೆ ಮಲ್ಲಿಗೆ ನೆಡುವ, ಆನಂದ ಕೊಡುವ
ಮಕ್ಕಳಿಲ್ಲಿಪರೆನಗೆ—ಹೇರೊತ್ತೆ ಗಡಿಬಿಡುತ ಹದುಗುತ್ತ, ನುಗ್ಗೆ ಕುಗ್ಗುತ್ತ,
ಹೆರರ ಕೈ ಕಾಯುತ್ತ ಸಾಯದೆಯೆ ಬದುಕದೆಯೆ ಬಾಳ ನೂಕುವೆನು."

ಈ ಭಾಗವನ್ನು ಓದುತ್ತಿರುವಾಗ ಶ್ರೋತೃಗಳು ಕಣ್ಣಲ್ಲಿ ಹನಿತುಂಬಿದ್ದರು.

ನಾಲ್ಕನೆಯ ಭಾಗದಲ್ಲಿ ಕನ್ನಡ ತಾಯಿ ತನ್ನ ಮಕ್ಕಳ ನಿಸ್ಸತ್ವವನ್ನು ಕವಿಗೆ ಬಣ್ಣಿಸಿ "**ಹೆರರ ಕೈ ಕಾಯುತ್ತ, ಸಾಯದೆಯೆ ಬದುಕದೆಯೆ ಬಾಳ ನೂಕುವೆನು**" ಎಂದು ಗೋಳುಕರೆಯುತ್ತಾಳೆ. ಐದನೆಯ ಭಾಗ, ಕನ್ನಡ ತಾಯಿಗೆ, ಆಕೆಯ ಅಚ್ಚುಮೆಚ್ಚಿನ ಕುವರ, ಕವಿ ದ್ರಷ್ಟಾರ ಕೊಡುವ ಆಶ್ವಾಸನ, ಬಹು ಮುಖ್ಯ ಭಾಗ. ಶಕುಂತಲಾಬಾಯಿ ಈ ಭಾಗವನ್ನು ಒಂದು ಸಾಲೂ ಬಿಡದೆ ವಾಚಿಸಿದರು. ಈ ಭಾಗದ ಕಡೆಯ ಮೂರು ಸಾಲುಗಳು

"ನಿನ್ನೊಂದು ಕರ್ನಾಟಕರತ್ನ ಸಿಂಹಾಸನಂ–ಬಾಳ್ಗೆ, ಅದು ಬೆಳಗೆ
ಕನ್ನಡದ ಮುಡಿಯಾಗಿ, ಕನ್ನಡದ ನುಡಿಯಾಗಿ, ಕನ್ನಡದ ಬಾಳ ಕುಡಿಯಾಗಿ !
—ಭಾರತಮ್ಮ ಹರಸು."

ಒತ್ತಿ ಒತ್ತಿ ತಿರುಗಿಸಿ ಮುರುಗಿಸಿ ಓದಿದಾಗ ಶ್ರೋತೃಗಳು ಚಪ್ಪಾಳೆ ತಟ್ಟಿ ಗಮಕ ವಿದುಷಿಗೆ ತಮ್ಮ ಸಂತೋಷ ವ್ಯಕ್ತಪಡಿಸಿದರು. ಶಕುಂತಲಾಬಾಯಿ ಆರನೆಯ ಭಾಗಕ್ಕೆ ಬಂದರು.

"ನಕ್ಕಳಾತಾಯಿ
ಮುದುಕಿ ಎಳೆಯುವಳಾಗಿ, ಮಾಸು ಮಿಂಚಿಳೆಯಾಗಿ ಸವೆದ ಮೈ ತುಂಬಿ,
. . . .
. . . .
ನೀನ್ ಬಾಳೆ, ಎನ್ ಬಾಳು, ನಿನ್ನ ಮಕ್ಕಳ ಮು-ಬಾನ್ ಬಾಳು, ತಾಯೆ—
ಬಾಳಮ್ಮ ಬಾಳು !"

ಅದನ್ನು ಪೂರ್ತಿ ಓದಿ ಕನ್ನಡ ತಾಯ ನೋಟ ಪ್ರಗಾಥದ ಮುಕ್ತಾಯದ ಏಳನೆಯ ಭಾಗದ ಸಾಲುಗಳನ್ನು ಎತ್ತಿಕೊಂಡರು—

"ಚೆಲುವೆಯರ, ಚೆನ್ನಿಗರ, ಓರಿಯ ತಾಯ್ ಮಕ್ಕಳಿರ, ಒಡಹುಟ್ಟಿದವರಾ,
ಒಸಗೆನುಡಿ ಕೇಳಿದಿರ, ತಾಳಿದಿರ ಎದೆಯಲ್ಲಿ, ತಾಳಿ ಬಾಳುವಿರಾ,
ನಾಡು ನುಡಿ ನಡೆಗಳನು ಮುನ್ನಡೆಗೆ ನಡೆಸುತ್ತ, ಮುಂದೆ ಸಾಗುವಿರಾ ?
ಬನ್ನಿ, ಓ ಮಕ್ಕಳಿರ,

ಒಕ್ಕೊರಲಲೆಲ್ಲರೂ ಕೂಗಿ ಈ ಒಕ್ಕೂಗ-ಈ ಹಿರಿಯ ಕೂಗ—
"ಸಿರಿಗನ್ನಡಂ ಗೆಲ್ಗೆ, ಹಿರಿಗನ್ನಡಂ ಗೆಲ್ಗೆ, ಸಿರಿಗನ್ನಡಂ ಗೆಲ್ಗೆ, ಬಾಳ್ಗೆ—
ಕನ್ನಡದ ತಾಯ್ ಗೆಲ್ಗೆ, ಬಾಳ್ಗೆ."

ವಾಚನ ಮುಗಿಯಿತು. ಹದಿನೈದು ಇಪ್ಪತ್ತು ನಿಮಿಷಗಳಿಗೆ ಅಳವಡಿಸಿದ್ದ ಪ್ರಗಾಥದ ವಾಚನ ಅರ್ಧಗಂಟೆ ತೆಗೆದುಕೊಂಡಿತು. ಶ್ರೋತೃಗಳ ಕಡೆಯಿಂದ ಬೇಸರದ ಸೋಂಕು ಒಂದಿಷ್ಟೂ ವ್ಯಕ್ತವಾಗಿರಲಿಲ್ಲ. ಬಿ. ಎಂ. ಶ್ರೀ. ಯವರಿಗೆ ಕೈಮುಗಿದು ಸಭೆಗೂ ಕೈಮುಗಿದು ಶಕುಂತಲಾಬಾಯಿ ವೇದಿಕೆಯಿಂದ ತನ್ನ ಸ್ಥಳ ಸೇರುವವರೆಗೂ ಶ್ರೋತೃಗಳು ಕರತಾಡನ ಮಾಡಿ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು. ಕಿವಿ ಕಿವುಡಾಗುವಂತೆ ಒಂದು ಕ್ಷಣಕಾಲ ಚಪ್ಪಾಳೆಯ ಸುರಿಮಳೆ ಸುರಿಯಿತು.

"ಕನ್ನಡ ತಾಯ ನೋಟ" ಗಮಕಕ್ಕೆ ಒಗ್ಗುವುದೆಂದು ತೋರಿಸಿಕೊಟ್ಟರಿ

ಸನ್ಮಾನಿತರಾದ ಬಿ. ಎಂ. ಶ್ರೀ. ಉತ್ತರ ಕೊಡಲು ಎದ್ದು ನಿಂತರು. ಕಾರ್ಯಕರ್ತರುಗಳನ್ನು ಕೃತಜ್ಞತೆಯಿಂದ ಸ್ಮರಿಸಿದರು. ಶಕುಂತಲಾಬಾಯಿ ಕುಳಿತಿದ್ದ ಕಡೆ ಕಣ್ಣು ಹಾಯಿಸಿ ಅಕೆಯನ್ನು ತಮ್ಮ ಮಗಳ ವಾತ್ಸಲ್ಯದಿಂದ ನೋಡಿದರು. "ನಾನ ಕನ್ನಡ ತಾಯ ನೋಟವನ್ನು ರಚಿಸಿದಾಗ, ಇದು ಗಮಕಕ್ಕೆ ಒಗ್ಗುವುದೆಂದು ಎಣಿಸಿರಲಿಲ್ಲ. ನೀವು ವಾಚನ ಮಾಡಿ, ಇದರ ಛಂದಸ್ಸು ಗಮಕಕ್ಕೆ ಒಗ್ಗುವುದೆಂದು ತೋರಿಸಿ

ಕೊಟ್ಟಿರಿ" ಎಂದು ತಮ್ಮ ಸಂತೋಷ ವ್ಯಕ್ತಪಡಿಸಿದರು. ಸಭೆ ಮುಗಿದ ಮೇಲೆ ಶಕುಂತಲಾಬಾಯಿ ಹತ್ತಿರಬಂದು ಇನ್ನೊಮ್ಮೆ ಕೃತಜ್ಞತೆ ಅರ್ಪಿಸಿದರು.

"ಕನ್ನಡ ತಾಯ ನೋಟ" ಆಧುನಿಕ ಕಾವ್ಯವಾಚನ ಕಾರ್ಯಕ್ರಮ ಪಟ್ಟಿಯಲ್ಲಿ ಒಂದು ಮೈಲಿಗಲ್ಲು ಸ್ಥಾಪಿಸಿತು. ಆ ವೇಳೆಗೆ ಬೆಂಗಳೂರಿನ ಮಲ್ಲೇಶ್ವರಂ ಬಡಾವಣೆಯ ಒಂದು ಮನೆಯಲ್ಲಿ ಸಣ್ಣದಾಗಿ ಒಂದು ಆಕಾಶವಾಣಿ ನಿಲಯ ಸ್ಥಾಪಿತವಾಗಿತ್ತು. ಯಾರು ಸ್ಥಾಪಿಸಿದ್ದರು ? ಮರೆತಿದ್ದೇನೆ. ಸ್ಥಳವೂ ನೆನಪಿನಿಂದ ಅಳಿಸಿದೆ. ಬಹುಶಃ ಬೆಂಗಳೂರು ನಗರದ ಮಟ್ಟಿಗೆ ಅದರ ಪ್ರಸಾರ ಇದ್ದಿರಬೇಕೆಂದು ನನ್ನ ತಿಳಿವು. ಶಕುಂತಲಾಬಾಯಿ ಬೆಂಗಳೂರಿನ ಆಕಾಶವಾಣಿಯಿಂದ ಕನ್ನಡ ತಾಯ ನೋಟ ಓದ ಬೇಕೆಂದು ಕರೆ ಬಂತು. ವಾಚನವಾಯಿತು. ಕೆಲವು ತಿಂಗಳುಗಳಲ್ಲಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘ ಶ್ರೀಮತಿಯವರ "ಕನ್ನಡ ತಾಯ ನೋಟ" ಕಾವ್ಯವಾಚನವನ್ನು ಏರ್ಪಡಿಸಿತು. ಬಿ. ಎಂ. ಶ್ರೀ. ಅಧ್ಯಕ್ಷರು, ಎ. ಆರ್. ಕೃಷ್ಣ ಶಾಸ್ತ್ರಿಗಳು ಜೊತೆಗಿದ್ದರು. 'ಕನ್ನಡ ತಾಯ ನೋಟ' ವಾಚನ ಮುಗಿಯುತ್ತಲೆ ಶ್ರೀ ಅವರು ಎದ್ದರು. ಶ್ರೀಗಂಧದ ಬೀಸಣಿಗೆಯನ್ನು ಮೆಚ್ಚು ಕಾಣಿಕೆಯಾಗಿತ್ತು ಕೃತಜ್ಞತೆ ಅರ್ಪಿಸಿದರು. 1940ರ ಜನವರಿ 20ರಂದು ಬೆಂಗಳೂರಿನ ಸಾಹಿತಿಗಳ ಸಂಘ ಮಂಗಳೂರಿನ ಎಂ. ಎನ್. ಕಾಮತರ ಅಧ್ಯಕ್ಷತೆಯಲ್ಲಿ ಅಖಿಲ ಕರ್ನಾಟಕ ಸಣ್ಣ ಕತೆ ಗಾರರ ಸಮ್ಮೇಳನ ನಡೆಸಿತು. ಶಕುಂತಲಾಬಾಯಿ "ಶ್ರೀನಿವಾಸ" ವಿರಚಿತ "ಅಭಿಮನ್ಯು" ವಾಚನ ಮಾಡಿದರು. ಸಭೆ ಮುಗಿಯಿತು. ಎಂ. ಎನ್. ಕಾಮತ್ ವೇದಿಕೆಯಿಂದ ಇಳಿದು ಬಂದವರೇ "ಮಂಗಳೂರು ಕಡೆಯ ಪಠ್ಯಪುಸ್ತಕಗಳೊಂದರಲ್ಲಿ ಮಾಸ್ತಿಯವರ "ಅಭಿಮನ್ಯು" ಪಾಠವಾಗಿ ಸೇರಿಸಿದೆ. ಹೇಗೆ ವಾಚನ ಮಾಡಬೇಕೆಂದು ತಿಳಿದಿರಲಿಲ್ಲ. ನೀವು ತೋರಿಸಿಕೊಟ್ಟಿರಿ" ಎಂದರು. ಅವರ ಪಕ್ಕದಲ್ಲಿಯೇ ಬಿ. ಎಂ. ಶ್ರೀ. ಇದ್ದರು. ಅವರು "ಹೌದು ಹೌದು" ಎಂದು ತಲೆದೂಗಿದರು. "ಕನ್ನಡದ ಬಾವುಟ"ದ ಒಂದು ಪ್ರತಿಯನ್ನು ಆಗಲೇ ತರಿಸಿಕೊಂಡರು. "ಶ್ರೀಮತಿ ಶಕುಂತಲಾಬಾಯಿ ಪಾಂಡು ರಂಗರಾವ್ ಅವರಿಗೆ ಕಾಣಿಕೆ—ಬಿ. ಎಂ. ಶ್ರೀಕಂಠಯ್ಯ 20–1–40" ಎಂದು ಸ್ವಹಸ್ತ ದಿಂದ ಬರೆದುಕೊಟ್ಟರು.

ಬಿ. ಎಂ. ಶ್ರೀ. ಅವರಿಗೆ ನಾವು ದಂಪತಿಗಳು ಅಚ್ಚುಮೆಚ್ಚಾದೆವು. ನನ್ನನ್ನು ಕಂಡಾಗಲೆಲ್ಲ ಪ್ರೀತಿಯಿಂದ ಹತ್ತಿರ ಕರೆದು ನನ್ನ ಹೆಗಲಮೇಲೆ ತಮ್ಮ ತೋಳು ಚಾಚಿ "ಪಾಂಡುರಂಗ್" ಅನ್ನುತ್ತಿದ್ದರು. "ನಾನು ಹತ್ತಿಸಿ ಹಿಡಿದಿರುವ ಕನ್ನಡ ಪಂಜು ಸದಾ ಉರಿಯುತ್ತಲೇ ಇರಬೇಕು. ಅದನ್ನು ನಿಮ್ಮಂಥ ಯುವಕರ ಕೈಗೆ ಒಪ್ಪಿಸಿದ್ದೇನೆ" ಎಂದು ಭಾವವಶರಾಗಿ ನುಡಿಯುತ್ತಿದ್ದರು.

ಬಿ. ಎಂ. ಶ್ರೀ. ನಿವೃತ್ತರಾಗಿ ಮನೆಯಲ್ಲಿ ವಿಶ್ರಾಂತರಾಗಿ ಕೂಡಲಿಲ್ಲ. ಧಾರವಾಡ ತಾಯಿ "ಶ್ರೀ" ಅವರ ಸೇವೆಯನ್ನು ಅಪೇಕ್ಷಿಸಿದಳು. ಕರ್ನಾಟಕ ಎಜುಕೇಷನ್ ಬೋರ್ಡ್ ಪ್ರಾರಂಭಿಸಿದ ಆರ್ಟ್ಸ್ ಕಾಲೇಜಿಗೆ ಪ್ರಿನ್ಸಿಪಾಲರಾಗಿ ಹೋದರು. ಆ

ಸಮಯದಲ್ಲಿ ಅವರ ಹಿತೈಷಿಗಳು "ಇಳಿವಯಸ್ಸಿನಲ್ಲಿ ನೀವು ದೂರ ಹೋಗಬಾರದು." ಎಂದರು. ಅದಕ್ಕೆ "ಶ್ರೀ"ಅವರು "ಕನ್ನಡ ಸೇವೆಗೆ ಮುಡಿಪಿಟ್ಟ ಈ ಮೈ ಬೆಂಗಳೂರಿನಲ್ಲಿ ಬಿದ್ದರೇನು, ಧಾರವಾಡದಲ್ಲಿ ಬಿದ್ದರೇನು ? ಎಲ್ಲೇ ಆಗಲಿ ಕನ್ನಡ ಮಣ್ಣುತಾನೆ" ಎಂದರು. ಧಾರವಾಡಕ್ಕೆ ಹೋದರು. ತಮ್ಮ ಸೇವೆ ಸಲ್ಲಿಸಿದರು.

1946ನೆಯ ಇಸವಿ ಜನವರಿ 5ನೆಯ ದಿನಾಂಕ. ಕನ್ನಡ ದ್ರಷ್ಟಾರನ ಮಾತು ದಿಟವಾಯಿತು. ಕನ್ನಡ ಸೇವೆಗೆ ಮುಡಿಪಿಟ್ಟ ಶ್ರೀ ಅವರ ಮೈ ಮೈಸೂರು ನೆಲದಲ್ಲಿ ಬೀಳಲಿಲ್ಲ. ಧಾರವಾಡ ನೆಲದಲ್ಲಿ ಬಿತ್ತು.

ನೆಲ ಯಾವುದೇ ಆಗಲಿ ಕನ್ನಡ ಮಣ್ಣು ತಾನೆ ಶ್ರೀಯವರಿಗೆ.

ಮುಂದೆ, ಇಂಡಿಯನ್ ಬುಕ್ ಹೌಸ್ (ಐ. ಬಿ. ಎಚ್) ಪ್ರಕಾಶನದವರು ಮಕ್ಕಳಿಗೆಂದು ಪ್ರಾರಂಭಿಸಿದ "ಕನ್ನಡ ನಾಡು ಮತ್ತು ಕನ್ನಡಿಗರ ಪರಂಪರೆ" ಮಾಲೆಯಲ್ಲಿ ನಾನು ಬರೆದ "ಬಿ. ಎಂ. ಶ್ರೀ" ಪುಸ್ತಕ ಪ್ರಕಟಿಸಿದರು. ಅದು ಆಚಾರ್ಯ ಬಿ.ಎಂ.ಶ್ರೀ. ಅವರಿಗೆ ನನ್ನ ನಮನ ಕಾಣಿಕೆ :—ನನ್ನ ಕಿರುಹೊತ್ತಿಗೆ ಬಿ. ಎಂ. ಶ್ರೀ.

ಚಿರಸ್ಮರಣೀಯರಾದ ಎಂ. ಎನ್. ಕಾಮತ್

ಇದೇ ಸಂದರ್ಭದಲ್ಲಿ ನನಗೆ ಎಂ. ಎನ್. ಕಾಮತರ ಬಗೆಗೆ ಎರಡು ಮಾತು ಹೇಳುವುದು ಸೂಕ್ತವೆನಿಸುತ್ತದೆ. ಅವರು ಪಂಜೆಯವರಂತೆ ಮಕ್ಕಳ ಸಾಹಿತ್ಯಕ್ಕೆ ಅಮೋಘ ಸೇವೆ ಸಲ್ಲಿಸಿ ಪ್ರಾತಃಸ್ಮರಣೀಯರಾಗಿದ್ದಾರೆ. ಮಕ್ಕಳ ನಾಟಕಗಳು ಅವರಿಂದ ನಮ್ಮ ಮಕ್ಕಳಿಗೆ ಸಂದ ಅಮೂಲ್ಯ ಕೊಡುಗೆ. ಅವರು ಆದರ್ಶ ಶಿಕ್ಷಕರು, ಬಹು ಶ್ರೇಷ್ಠ ದರ್ಜೆಯ ಉಪಾಧ್ಯಾಯರು. ನನಗೆ ಕಾಮತರಲ್ಲಿ ಅಪಾರ ಗೌರವ. ಕತೆಗಾರರ ಸಮ್ಮೇಳನಕ್ಕೆ ಅಧ್ಯಕ್ಷರಾಗಿ ಬಂದ ಅವರು ಬಿ. ಎಂ. ಶ್ರೀ. ಅವರ ಅತಿಥಿಗಳಾಗಿದ್ದರು. ನಾನು ಕಾಮತರನ್ನು "ನಮ್ಮ ಮನೆಗೆ ಒಂದು ಘಳಿಗೆ ದಯಮಾಡಿಸಬೇಕು" ಎಂದು ಪ್ರಾರ್ಥಿಸಿಕೊಂಡೆ. ಅವರು ಕೂಡಲೆ ಒಪ್ಪಿಕೊಂಡರು. ಮಾರನೆಯ ದಿನ ಬೆಳಗ್ಗೆ ಅವರನ್ನು ನಮ್ಮ ಮನೆಗೆ ಬರಮಾಡಿಕೊಳ್ಳುವುದೆಂದು ನಿರ್ಧಾರವಾಯಿತು.

ಬೆಳಗಾಯಿತು. ನಿಯಮಿತ ವೇಳೆಗೆ ಬಿ. ಎಂ. ಶ್ರೀ. ಅವರ ಮನೆಗೆ ಹೋದೆ. "ಶ್ರೀ" ಅವರು ನನ್ನನ್ನು ತುಂಬ ವಿಶ್ವಾಸದಿಂದ ಬರಮಾಡಿಕೊಂಡರು. ಒಳಗಿಂದ ಕಾಫಿ ತರಿಸಿಕೊಟ್ಟರು. "ಪಾಂಡುರಂಗ್ ಕಾಮತರನ್ನು ಹೇಗೆ ಕರೆದುಕೊಂಡು ಹೋಗುವಿರಿ?" ಎಂದು ಪ್ರಶ್ನಿಸಿದರು. "ವಾಣಿವಿಲಾಸ ವೃತ್ತದಲ್ಲಿ ಯಾವಾಗಲೂ ಒಂದು ಒಳ್ಳೆ ಮೆತ್ತೆಯಿಂದ ಸುಸಜ್ಜಿತವಾದ ಕುದುರೆಗಾಡಿ ನಿಂತಿರುತ್ತದಲ್ಲ! ಅದನ್ನು ಗೊತ್ತುಮಾಡಿದ್ದೇನೆ." ಎಂದೆ. "ಶ್ರೀ"ಅವರಿಗೆ ಸಮಾಧಾನವಾಯಿತು. "ಊಟದ ಹೊತ್ತಿಗೆ ಕರೆದುಕೊಂಡು ಬನ್ನಿ. ತಡಮಾಡಬೇಡಿ." ಎಂದು ಹೇಳಿ ಕಾಮತರನ್ನು ಕಳುಹಿಸಿಕೊಟ್ಟರು.

ಕಾಮತ್ ನಮ್ಮ ಮನೆಯಲ್ಲಿ ಒಂದು ಗಂಟೆ ಇದ್ದರು. ಮಕ್ಕಳ ನಾಟಕಗಳ ಪ್ರಸ್ತಾಪ ಬಂತು. ಶಾಲಾ ಮಕ್ಕಳ ಮನೋಧರ್ಮಕ್ಕೆ ತಕ್ಕಂತೆ ಬರೆದ ನಾಟಕಗಳ

ಪಟ್ಟಿಯ ಸುರುಳಿಯನ್ನೇ ಬಿಚ್ಚಿದರು. ಸುಮಾರು 70 ನಾಟಕಗಳ ಹೆಸರು ಹೇಳಿದರು. ಮಕ್ಕಳು ಕೇಳಿದ ಒಂದೆರಡು ದಿವಸಗಳಲ್ಲೆ ನಾಟಕ ಬರೆದುಕೊಡುತ್ತಿದ್ದರಂತೆ. ನಾನೂ "ನನ್ನ 'ಸುಳ್ಳಿನ ಸೋಲು' ನಾಟಕಕ್ಕೆ ನಿಮ್ಮ ಮುನ್ನುಡಿ ದಯಪಾಲಿಸಬೇಕು." ಎಂದು ಪ್ರಾರ್ಥಿಸಿಕೊಂಡೆ. "ಅಸ್ತು" ಅಂದರು. ಶಕುಂತಲಾಬಾಯಿ ಚೊಚ್ಚಲು ಬಸುರಿ. ಆಕೆಯನ್ನು ನೋಡಿ, "ಶಕುಂತಲಾಬಾಯಿ ನಿಮಗೆ ಗೋಪಾಲಕೃಷ್ಣ ಹುಟ್ಟುತ್ತಾನೆ" ಎಂದರು. "ನಾನೊಂದು ಕವನ ಬರೆದುಕೊಡುತ್ತೇನೆ. ನಿತ್ಯವೂ ಪೂಜಾ ಸಮಯದಲ್ಲಿ ನನ್ನ ಕವನವನ್ನು ದೇವರ ಮುಂದೆ ಓದಿ, ಫಲಿಸುತ್ತದೆ" ಎಂದು ಕೂಡಲೇ ಆ ಕವನವನ್ನು ತಮ್ಮ ಊದಾ ಶಾಯಿ ಪೆನ್ನಿನಿಂದ ಬರೆದುಕೊಟ್ಟರು. "ನೋಡಿ, ನಮಗೊಂದು ಎಳೆಯ ಕೂಸಿತ್ತು. ಅದು ಹುಟ್ಟಿದ ಕೆಲವು ತಿಂಗಳುಗಳಲ್ಲೆ ಸತ್ತಿತು. ನನ್ನಾಕೆ ತುಂಬ ದುಃಖದಲ್ಲಿ ಮುಳುಗಿ ಹೋದಳು. ಆಗ ನಾನು ಗೋಪಾಲಕೃಷ್ಣನ ಮೇಲೆ ಒಂದು ಕವನವನ್ನು ರಚಿಸಿ ನನ್ನಾಕೆಯ ಕೈಯಲ್ಲಿ ಕೊಟ್ಟು "ದುಃಖಿಸಬೇಡ. ನಿತ್ಯವೂ ಬೆಳಗ್ಗೆ ದೇವರ ಮುಂದೆ ಪದ್ಯ ಹೇಳಿಕೊ ಭಕ್ತಿಯಿಂದ. ದೇವರ ದಯದಿಂದ ನಿನಗೆ ಗೋಪಾಲಕೃಷ್ಣನೇ ಹುಟ್ಟುತ್ತಾನೆ" ಎಂದೆ. "ಗೋಪಾಲಕೃಷ್ಣನೇ ಹುಟ್ಟಿದ". ಎಂದರು. ಆ ಕವನವನ್ನು ನಾವು ಕೆಲವೇ ದಿವಸಗಳಲ್ಲಿ ಕಳೆದುಕೊಂಡೆವು. ಶಕುಂತಲಾಬಾಯಿಗೆ ಆ ಕವನ ಬಾಯಿಗೆ ಬರುವುದಿಲ್ಲ. ಈವರೆಗೆ ನಾನು ಎಲ್ಲೆಲ್ಲಿ ಹುಡುಕಿದರೂ ಸಿಕ್ಕಿಲ್ಲ. ಶಕುಂತಲಾಬಾಯಿಗೆ ಮುಂದೆ ಕೆಲವೇ ತಿಂಗಳುಗಳಲ್ಲಿ 13-1-1940ರಲ್ಲಿ ಹೆಣ್ಣು ಮಗುವಾಯಿತು. ಆಕೆಯೇ ನನ್ನ ಜ್ಯೇಷ್ಠಪುತ್ರಿ ಚಿ|| ವನಜ. ಮದುವೆಯಾದ ಮೇಲೆ ವನಜಾ ಕೋಟೇಶ್ವರ ಆಗಿದ್ದಾಳೆ. ಸಣ್ಣ ಕತೆ ಹರಟೆಗಳನ್ನು ಬರೆಯುತ್ತಿದ್ದಾಳೆ.

ಕಾಮತರನ್ನು ಕಾಲಕ್ಕೆ ಸರಿಯಾಗಿ ಬಿ. ಎಂ. ಶ್ರೀ.ಗಳ ಮನೆಗೆ ಬಿಟ್ಟು ಬಂದೆ. ಅದೇ ಸಂಜೆ, ಬೆಂಗಳೂರಿನ ಯುನೈಟೆಡ್ ಮಿಷನ್ ಹೈಸ್ಕೂಲಿನ ಕರ್ನಾಟಕ ವಾಙ್ಮಯ ಸಂಘದ ಆಶ್ರಯದಲ್ಲಿ ಕಾಮತರ ಅಧ್ಯಕ್ಷತೆಯಲ್ಲಿ ಒಂದು ಕಾರ್ಯಕ್ರಮವಿತ್ತು. ಅಲ್ಲಿಗೆ ನಾನೂ ಅತಿಥಿಯಾಗಿ ಹೋದೆ.

ಯುನೈಟೆಡ್ ಮಿಷನ್ ಹೈಸ್ಕೂಲು ಬಹಳ ಕಾಲದ ಹಿಂದೆಯೇ ಬಹು ಪ್ರಸಿದ್ಧಿ ಹೊಂದಿದ್ದ ಲಂಡನ್ ಮಿಷನ್ ಹೈಸ್ಕೂಲು ಮತ್ತು ವೆಸ್ಲಿಯನ್ ಮಿಷನ್ ಹೈಸ್ಕೂಲು ಜೊತೆಗೂಡಿಕೊಂಡು ಒಂದೇ ಆದ ಒಂದು ಪ್ರಾಮುಖ್ಯವಾದ ಹೈಸ್ಕೂಲು ಬೆಂಗಳೂರು ನಗರದಲ್ಲಿ. ನಾನು ಲಂಡನ್ ಮಿಷನ್ ಹೈಸ್ಕೂಲಿನಲ್ಲಿ ವಿದ್ಯಾರ್ಥಿಯಾಗಿದ್ದಾಗ ಕರ್ಣಾಟಕ ವಾಙ್ಮಯ ಸಂಘವಿತ್ತೆಂದು ಹೇಳಿದ್ದೆನಲ್ಲ! ಅದೇ ಸಂಘವೇ ಇಲ್ಲೂ ಕನ್ನಡ ಭಾಷಾ ಸೇವೆ ಮಾಡುತ್ತಿತ್ತು. ಅಲ್ಲಿ ನಮಗೆಲ್ಲ ಕನ್ನಡ ದೀಕ್ಷೆಕೊಟ್ಟ ಕನ್ನಡ ವಿದ್ಯಾಗುರು ಕೆ. ಹನುಮಂತರಾಯರೇ ಇಲ್ಲೂ ವಿದ್ಯಾರ್ಥಿಗಳಿಗೆ ಕನ್ನಡ ದೀಕ್ಷೆ ಕೊಟ್ಟು ಅವರಿಂದ ಕನ್ನಡ ಸೇವೆ ಮಾಡಿಸುತ್ತಿದ್ದರು. ಆ ದಿನ ಕಾರ್ಯಕ್ರಮದಲ್ಲಿ ನಾಟಕವೂ ಒಂದು. ಕರ್ನಾಟಕ ನಾಟಕ ಪ್ರಪಂಚದಲ್ಲಿ, ಕನ್ನಡ ಚಲನಚಿತ್ರ ಪ್ರಪಂಚದಲ್ಲಿ ಮುಂದೆ ಬಹು ಪ್ರಸಿದ್ಧಿಗೆ ಬಂದ ಕು. ರಾ. ಸಿ.ಶಾಸ್ತ್ರಿ ವಿದ್ಯಾರ್ಥಿ ದೆಸೆಯಲ್ಲೂ ನಾಟಕಗಳಲ್ಲಿ ಅಭಿನ

ಯಿಸಿ ಉತ್ತಮ ನಟರೆನ್ನಿಸಿದ್ದರು. ಅವರದೂ ಒಂದು ಪ್ರಾಮುಖ್ಯ ಪಾತ್ರ ಸಂಘದ ನಾಟಕದಲ್ಲಿ. ನಾಟಕ ಪ್ರದರ್ಶನವಾಯಿತು. ಕಡೆಯ ದೃಶ್ಯದೊಡನೆ ಸಂಘದ ಕಾರ್ಯ ಕ್ರಮಕ್ಕೆ ಮಂಗಳ. ಕಾಮತರನ್ನೂ ವೇದಿಕೆಗೆ ಕರೆದೊಯ್ದರು ಅತಿಥಿ ಭಾಷಣಕ್ಕೆ.

ಕಾಮತರೂ ಪಂಜೆ ಮಂಗೇಶರಂತೆಯೇ ಹಾಸ್ಯಗಾರ. ಅವರು ಕುರ್ಚಿಯಿಂದ ಎದ್ದರು. ಪಾದದಡಿಯಿದ್ದ ಪ್ರವಾಹದೀಪಗಳ ಮುಂದೆ ಬಂದರು. ಹಿಂದೆ ಸರಿದರು. ಅಕ್ಕಪಕ್ಕದಲ್ಲಿ ಓಡಾಡಿದರು. ಮೇಲೆ ತೂಗು ಹಾಕಿದ್ದ ಪ್ರವಾಹದೀಪಗಳ ಮುಂದೆ ನಿಂತರು ಹಿಂದೆ ಸರಿದರು. ಅವರ ಚಲನವಲನಗಳು ವಿಚಿತ್ರವಾಗಿತ್ತು. ನಮಗೋ ಕಾಮತರು ಘನವಾಗಿ ನಿಂತಲ್ಲಿ ನಿಲ್ಲದೆ ಯಾಕೆ ಹೀಗೆ ವಿಚಿತ್ರವಾಗಿ ವರ್ತಿಸುತ್ತಿದ್ದಾರೆ ಎಂದು ವಿಸ್ಮಯ ಭ್ರಮೆ. ಎರಡು ಮೂರು ನಿಮಿಷಗಳು ಹೀಗೆ ಮಾಡಿ ತಮ್ಮ ಸ್ವಸ್ಥಾನ ಸೇರಿ ಭಾಷಣಕ್ಕೆ ಪ್ರಾರಂಭಿಸಿದರು. ತಮ್ಮ ವಿಚಿತ್ರ ವರ್ತನೆಗೆ ತಾವೇ ನಕ್ಕು ನಮ್ಮನ್ನೂ ನಗಿಸಿ ಕಾರಣಹೇಳಿದರು. "ನೋಡಿ, ನಟರು ರಂಗಭೂಮಿಯ ಮೇಲೆ ಬಂದಾಗ, ಬೆಳಕಿನ ಮುಂದೆ ಹೇಗೆ ನಿಲ್ಲಬೇಕು, ಎಲ್ಲಿ ನಿಲ್ಲಬೇಕು, ಮುಖದ ಮೇಲೆ ಬೆಳಕು ಚೆಲ್ಲದಿದ್ದರೆ ನಮ್ಮ ಮುಖಭಾವ ಪ್ರೇಕ್ಷಕರಿಗೆ ಕಾಣುವುದಿಲ್ಲವಲ್ಲ! ಅದನ್ನು ಪ್ರದರ್ಶಿಸುವುದಕ್ಕೆ ನನ್ನನ್ನು ನಾನೇ ಪ್ರದರ್ಶಿಸಿಕೊಂಡೆ. ನಾನು ಮುಂದೆ ಬಂದಾಗ, ಹಿಂದೆ ಸರಿದಾಗ ಅಕ್ಕಪಕ್ಕಗಳಲ್ಲಿ ನಿಂತಾಗ, ಬೆಳಕು ನನ್ನ ಮೇಲೆ ಹೇಗೆ ಚೆಲ್ಲುತ್ತಿತ್ತು ? ಎಂಬುದನ್ನು ತೋರಿಸುವುದ ಕ್ಕಾಗಿ ಹಾಗೆ ಮಾಡಿದೆ" ಎಂದರು. ಮತ್ತೆ ಇನ್ನೊಂದು ಪ್ರದರ್ಶನ ಕೊಟ್ಟು ತಮ್ಮ ವರ್ತನೆಯನ್ನು ವಿವರಿಸಿದರು. ನಗೆಗಳ ಅಲೆಗಳು ಎದ್ದವು. ಪ್ರೇಕ್ಷಕರು ಹೊಟ್ಟೆ ಬಿರಿಯು ವಂತೆ ನಕ್ಕರು. ಅವರ ಭಾಷಣ ನಗೆಗಡಲಲ್ಲಿ ಸಮಸ್ತರನ್ನೂ ತೇಲಿಸಿ ಮುಳುಗಿಸಿ ಹುಚ್ಚೆಬ್ಬಿಸಿತು.

ಕಾಮತರು ಸ್ನೇಹಮಯಿ, ಹಾಸ್ಯಪ್ರಿಯರು ಎಂದೆ. ಮಂಗಳೂರಿಗೆ ಹೋದ ಮೇಲೆ ನನ್ನ ಪತ್ರಗಳಿಗೆ ಉತ್ತರವಿಲ್ಲ. "ಸುಳ್ಳಿನ ಸೋಲಿ"ಗೆ ಮುನ್ನುಡಿಯಿಲ್ಲ. ಏಕೆ ಹೀಗಾಯಿತು ? ದೊಡ್ಡವರ ಲಕ್ಷಣವೇ ಹೀಗೇನೋ ? ಎಂದು ತೆಪ್ಪಗಾದೆ. ಅಲ್ಲ ಅಲ್ಲ. ನಾನು ಹೀಗೆಂದರೆ ಕಾಮತರ ವಿಷಯದಲ್ಲಿ ಮಹಾಪರಾಧವಾಗುತ್ತದೆ. "ಶಕುಂತಲಾ ಬಾಯಿ, ಪಾಂಡುರಂಗರಾವ್ ನೀವು ಮಂಗಳೂರಿಗೆ ಬರಬೇಕು. ನಮ್ಮಲ್ಲಿ ಇಳಿದು ಕೊಳ್ಳಬೇಕು." ಎಂದು ವಿಶ್ವಾಸದ ಕರೆಯನ್ನು ಬೆಂಗಳೂರಿನಲ್ಲಿ ಕೊಟ್ಟ ಕಾಮತರು ಮಂಗಳೂರಿಗೆ ಹೋಗಿ ಹಾಸಿಗೆ ಹಿಡಿದವರು ಮೇಲೇಳಲಿಲ್ಲ.

ಒಂದು ಬೆಳಗ್ಗೆ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಸಾಹಿತಿಗಳ ಸಂಘದ ಆಶ್ರಯದಲ್ಲಿ ಕೆ. ವಿ. ಅಯ್ಯರ್ ಅವರಿಂದ ಟಿ. ಪಿ. ಕೈಲಾಸಂ ನಾಟಕ "ಹುತ್ತದಲ್ಲಿ ಹುತ್ತ"ದ ವಾಚನ. ನಾಟಕ ವಾಚನದ ಮಧ್ಯೆ ಒಬ್ಬ ಸಾಹಿತಿ ಸುಂಟರಗಾಳಿಯಂತೆ ನುಗ್ಗಿ ಬಂದರು. ಏದುಸಿರಿನಲ್ಲಿ "ಕಾಮತರು ಹೋದರಂತೆ. ಈಗತಾನೆ ಸುದ್ದಿ ಬಂದಿದೆ"ಎಂದರು. ನಾವೆಲ್ಲ ದುಃಖದಲ್ಲಿ ಅದ್ದಿಹೋದೆವು.

1946ರಲ್ಲಿ ನಾನು ಮಂಗಳೂರಿಗೆ ಹೋದೆ. ಕುಳಕುಂದ ಶಿವರಾವ್ ಆಗ-ಈಗ

“ನಿರಂಜನ”, ಅವರ ವಿಶ್ವಾಸದಿಂದ. ಕೆನರಾ ಹೈಸ್ಕೂಲಿನಲ್ಲಿ ಮಕ್ಕಳ ಸಮ್ಮೇಳನ. ಎರಡು ದಿವಸಗಳೂ ಹಮ್ಮಿದ ಕಾರ್ಯಕ್ರಮ. ಒಂದು ದಿನ ನಾನು ಅಧ್ಯಕ್ಷ. ನನ್ನ ಸಂತೋಷಕ್ಕಾಗಿ ಕಾಮತರ ಒಂದು ಮಕ್ಕಳ ನಾಟಕ “ಸೊಕ್ಕಿದ ಬೆಕ್ಕು” ಪ್ರದರ್ಶನ, ಜೊತೆಗೆ ನನ್ನ “ಸುಳ್ಳಿನ ಸೋಲು” ನಾಟಕ ಪ್ರದರ್ಶನ ಆ ರಾತ್ರಿಯ ಮನರಂಜನೆ ಕಾರ್ಯಕ್ರಮದಲ್ಲಿ. ಈ ಎರಡು ಮಕ್ಕಳ ನಾಟಕಗಳನ್ನೂ ನೋಡುತ್ತಿದ್ದಾಗ ನನಗೆ ಕಣ್ಣಲ್ಲಿ ಒಂದು ಘಳಿಗೆ ನೀರು ತುಂಬಿತು. ಕಾಮತರೂ ನನ್ನ ಮನಸ್ಸನ್ನು ತುಂಬಿ ಕೊಂಡು ನನ್ನ ಅಂತಃಕರಣವನ್ನು ಕಲಕಿಬಿಟ್ಟರು. ಎಂ. ಎಸ್. ಕಾಮತರು ನಮ್ಮ ಪಾಲಿಗೆ ಎಂದೆಂದಿಗೂ ಮರೆಯದ ಚಿರಸ್ಮರಣೀಯ ಕಾಮತರಾಗಿ ಉಳಿದಿದ್ದಾರೆ.

ಕನ್ನಡ ತಾಯ ನೋಟ ಜನಪ್ರಿಯವಾಯಿತು

ಕನ್ನಡ ತಾಯ ನೋಟವನ್ನು ಜನಪ್ರಿಯಗೊಳಿಸಿ ನಮ್ಮ ರಸಋಷಿ ಋಣವನ್ನು ಬಿ. ಎಂ. ಶ್ರೀ. ಅವರಿಗೆ ಸಲ್ಲಿಸಿ ಕೃತಾರ್ಥರಾಗಬೇಕೆಂದು ನಾನು ಮತ್ತು ಶಕುಂತಲಾ ಬಾಯಿ ಸಂಕಲ್ಪಿಸಿದೆವು. 1947ರ ವೇಳೆಗೆ ಶಕುಂತಲಾಬಾಯಿಯ ಹೆಸರು ಬೆಂಗಳೂರಿನ ಗಡಿ ದಾಟಿ ಕರ್ಣಾಟಕದ ನಾನಾ ಭಾಗಗಳಿಗೆ ಪಸರಿಸಿತ್ತು. ನಾಡಹಬ್ಬದ ಸಂದರ್ಭದಲ್ಲಿ ಶಕುಂತಲಾಬಾಯಿಗೆ ಸಮಗ್ರ ಕರ್ಣಾಟಕದಿಂದ ಕಾವ್ಯವಾಚನ ಮಾಡಬೇಕೆಂದು ಕರೆ ಬರತೊಡಗಿದವು. ಸಾಧಾರಣವಾಗಿ ನಮ್ಮ ಕಾರ್ಯಕ್ರಮ ಎರಡು ದಿವಸಗಳಿಗೆ ನಿಯೋಜಿತವಾಗಿರುತ್ತಿತ್ತು. ಒಂದು ದಿವಸ ಕುಮಾರವ್ಯಾಸನಿಗೆ ಮೀಸಲು; ಇನ್ನೊಂದು ದಿವಸ ಬೇರೆ ಕವಿಗಳಿಗೆ ಮೀಸಲು. ನಾವು ಪ್ರಾಚೀನ ಮತ್ತು ಆಧುನಿಕ ಕವಿಗಳನು ಸೇರಿಸಿ ಒಂದು ಹೊಸ ಪ್ರಯೋಗ ನಡೆಸಲು ಯೋಚಿಸಿದೆವು. ಆದಿಕವಿ ಪಂಪ, ರನ್ನ, ಹರಿಹರ, ರಾಘವಾಂಕ, ಬಸವಣ್ಣ, ಪುರಂದರ, ಕುಮಾರವ್ಯಾಸ, ಲಕ್ಷ್ಮೀಶ, ಇತ್ಯಾದಿ ಪ್ರಾಚೀನ ಕವಿಗಳ ಜೊತೆಗೆ ಮಾಸ್ತಿ, ವೀ. ಸೀ., ಮುಗಳಿ, ಬೇಂದ್ರೆ, ಕುವೆಂಪು, ‘ಶ್ರೀ’ ಇತ್ಯಾದಿ ಆಧುನಿಕ ಕವಿಪುಂಗವರುಗಳನ್ನು ಮೇಳವಿಸಿ “ಕನ್ನಡ ಕವಿ–ಕಾವ್ಯ ಪರಂಪರೆ” ಎಂಬ ಒಂದು ಕಾವ್ಯವಾಚನ ರೂಪಕವನ್ನು ಸಿದ್ಧಗೊಳಿಸಿದೆವು. ಅದರಲ್ಲಿ ಶ್ರೀಯವರ ಕನ್ನಡ ತಾಯ ನೋಟ ಮುಕ್ತಾಯದ ಸ್ಥಾನ ಪಡೆದಿತ್ತು. ಪಂಪಯುಗದಿಂದ ಆಧುನಿಕ ಕವಿಯುಗದವರೆಗೆ ನಮ್ಮ ಕವಿಗಳ ಒಂದು ಮೆರವಣಿಗೆಯೇ ಈ ಕಾರ್ಯಕ್ರಮದಲ್ಲಿ ಪ್ರದರ್ಶನವಾಗುತ್ತಿತ್ತು ಎನ್ನಬಹುದು. ಕನ್ನಡ ಕವಿ ಕಾವ್ಯ ಪರಂಪರೆ ಜನಪ್ರಿಯ ವಾಯಿತು. ಹರಪನಹಳ್ಳಿ, ಈಗ ಮುಳುಗಡೆಯಾಗಿರುವ ನಾರಾಯಣದೇವರ ಕೆರೆ, ಹೊಸಪೇಟೆ, ಹುಬ್ಬಳ್ಳಿ, ಧಾರವಾಡ, ರಾಯಚೂರು, ಯಾದಗಿರಿ, ಗುಲ್ಬರ್ಗ, ಹೈದರಾ ಬಾದು, ದೆಹಲಿ, ಮದರಾಸು ಹೀಗೆ ಕರ್ಣಾಟಕ–ಭಾರತದ ನಗರಗಳಲೆಲ್ಲ “ಕನ್ನಡ ತಾಯ ನೋಟ”ದ ಪ್ರಚಾರವಾಯಿತು.

1956ರಲ್ಲಿ ನವೆಂಬರ್ 1ರಂದು ಮೈಸೂರು ಹರಿದು ಹಂಚಿಹೋಗಿದ್ದ ಕನ್ನಡ ನೆಲದ ಭಾಗಗಳನ್ನು ಸೇರಿಸಿಕೊಂಡು ವಿಶಾಲ ಮೈಸೂರು ರಾಜ್ಯವಾಯಿತಲ್ಲ; ಆಗ

ಮೈಸೂರು ಶ್ರೇಷ್ಠ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ ನಿಟ್ಟೂರು ಶ್ರೀನಿವಾಸ ರಾಯರ ಅಧ್ಯಕ್ಷತೆಯಲ್ಲಿ ಮೈಸೂರು ರಂಗಾಚಾರ್ಲು ಸ್ಮಾರಕ ನಗರಭವನದಲ್ಲಿ ಒಂದು ಭಾರೀ ರಾಜ್ಯೋತ್ಸವ ಮಹಾ ಸಭೆ ನೆರೆದಿತ್ತು. ಎಸ್. ವಿ. ರಂಗಣ್ಣ, ಕೋಲಾರದ ಸಂಪದ್ಗಿರಿರಾವ್ ಮೊದಲಾದ ಕರ್ಣಾಟಕದ ಸುಪ್ರಸಿದ್ಧ ಪುತ್ರರು ಭಾಗ ವಹಿಸಿದ್ದರು. ಶಕುಂತಲಾಬಾಯಿಗೆ "ಶ್ರೀ" ಅವರ ಕನ್ನಡ ತಾಯಿ ನೋಟ ಪ್ರಗಾಥ ವಾಚನ ಮಾಡಬೇಕೆಂದು ಕರೆ ಬಂದಿತ್ತು. ಅರ್ಧ ಗಂಟೆಯ ವಾಚನ ಶಕುಂತಲಾ ಬಾಯಿಯದು. ಗಂಗಾಧಾರೆ ಪ್ರವಹಿಸಿದಂತೆ ಕನ್ನಡ ತಾಯಿ ನೋಟ ಕಾವ್ಯವಾಚನ ಸಾಗಿತು. ತುಂಬು ಸಭೆ ಉಸಿರು ಸುಯ್ದರೆ ಎಲ್ಲಿ ಕೇಳಿಸುವುದೋ ಎಂಬಷ್ಟು ನಿಶ್ಶಬ್ದ ದಿಂದ ಕಾವ್ಯವಾಚನ ಆಲಿಸಿತು. ಸಂಪದ್ಗಿರಿರಾಯರಿಗೆ ಹಿಗ್ಗೋ ಹಿಗ್ಗು. "ಶಕುಂತಲಾ ಬಾಯಿ ಈ ದಿನ ನಿಮ್ಮ ಮೇಲೆ "ಶ್ರೀ" ಯವರ ಆವೇಶವಾಗಿದ್ದಿತ್ತೆಂದು ತೋರುತ್ತದೆ. ನಿಮ್ಮ ಕನ್ನಡ ತಾಯಿ ನೋಟ ವಾಚನ ಅದ್ಭುತವಾಗಿತ್ತು" ಎಂದು ಪ್ರಶಂಸಿಸಿದರು.

ಕರ್ಣಾಟಕ ಕುಲಪುರೋಹಿತರೆನ್ನಿಸಿಕೊಂಡ ಆಲೂರು ವೆಂಕಟರಾಯರು ವೈಕುಂಠ ವಾಸಿಗಳಾಗುವುದಕ್ಕೆ ಒಂದೆರಡು ವರ್ಷಗಳ ಮುಂಚೆ ಬೆಂಗಳೂರಿಗೆ ದಯಮಾಡಿಸಿ ಕುಮಾರಾಪಾರ್ಕ್ ಪಶ್ಚಿಮ ಬಡಾವಣೆಯಲ್ಲಿ ಅವರ ಮಗನ ಮನೆಯಲ್ಲಿ ತಂಗಿದ್ದರು. ಕುಮಾರಾಪಾರ್ಕ್ ಬಡಾವಣೆಗೆ ಸನಿಹದಲ್ಲಿದ್ದ ನೆಹರೂ ನಗರದ ಮಕ್ಕಳ ಮಂಟಪ ಮಕ್ಕಳು ಕರ್ಣಾಟಕ ಕುಲಪುರೋಹಿತರ ಅಧ್ಯಕ್ಷತೆಯಲ್ಲಿ ನಾಡಹಬ್ಬ ಆಚರಿಸಿದರು. ಆಲೂರರು ಆ ಸಮಯದಲ್ಲಿ ಬಿ. ಎಂ. ಶ್ರೀ. ಅವರ ಭಾವಚಿತ್ರದ ಅನಾವರಣ ಮಾಡಿ ದರು. ಶಕುಂತಲಾ ಬಾಯಿಯನ್ನು ಕಾವ್ಯವಾಚನ ಮಾಡಬೇಕೆಂದು ಆಲೂರರು ಬಯ ಸಿದರು. ಶಕುಂತಲಾಬಾಯಿ "ಕನ್ನಡ ತಾಯಿ ನೋಟ"ವನ್ನು ಸುಮಾರು ಅರ್ಧ ಗಂಟೆ ಕಾಲ ವಾಚನ ಮಾಡಿದರು. ಪರಮಪೂಜ್ಯ ಆಲೂರರ ಕಣ್ಣುಗಳು ಆನಂದ ಬಾಷ್ಪ ಸುರಿಸಿದವು. ಹೃದಯಾಂತರಾಳದ ಕನ್ನಡ ಪ್ರೇಮ ಅವರ ಆನಂದ ಬಾಷ್ಪಗಳಲ್ಲಿ ಸ್ಫುರಿ ಸಿತ್ತು. ಕರ್ಣಾಟಕ ಕುಲಪುರೋಹಿತರ ದರ್ಶನ ನಮಗೆ ಅದೇ ಮೊದಲು ಅದೇ ಕಡೆಯಾಯಿತು. ಕನ್ನಡ ನಾಡನ್ನು ಒಂದಾಗಿಸುವ ಪ್ರಯತ್ನದಲ್ಲಿ ತನುಮನಗಳ ಶ್ರಮ ವನ್ನು ಕಡೆಗಾಣಿಸಿ ಶ್ರಮಿಸಿದ ಕರ್ಣಾಟಕ ಕುಲಪುರೋಹಿತರಿಗೆ, ಅವರಷ್ಟೇ ಕಳಕಳಿ ಯಿಂದ ಕನ್ನಡಿಗರ ಒಕ್ಕೂಟಕ್ಕೆ ತಮ್ಮ ಇಡೀ ಜೀವನವನ್ನೇ ಧಾರೆಯೆರೆದ ಆಧುನಿಕ ಕನ್ನಡ ಸಾಹಿತ್ಯಾಚಾರ್ಯರ "ಕನ್ನಡ ತಾಯಿ ನೋಟ" ಪ್ರಗಾಥ ವಾಚನ ಕೇಳಿಸುವ ಮಹಾಭಾಗ್ಯ ತನ್ನದಾಯಿತಲ್ಲ ಎಂದು ಶಕುಂತಲಾಬಾಯಿ ತೃಪ್ತಿಪಟ್ಟುಕೊಂಡರು.

ಶ್ರೀಯವರ "ಕನ್ನಡ ತಾಯಿ ನೋಟ" ವಾಚನದಿಂದ ಶಕುಂತಲಾಬಾಯಿಗೆ ಸಾಹಿತಿಗಳ ಅಭಿಪ್ರಾಯದಲ್ಲಿ ಒಂದು ಗೌರವಸ್ಥಾನ ಪ್ರಾಪ್ತವಾಯಿತು.

ಗೋಲ್ಗೊಥಾ ಕಾವ್ಯವಾಚನ–"ನೀವು ನನ್ನ ಕಾವ್ಯಕ್ಕೆ ಧ್ವನಿಕೊಟ್ಟರಿ"

ಶಕುಂತಲಾಬಾಯಿಯ ಕಾವ್ಯವಾಚನ ಕ್ಷೇತ್ರವು, ನೋಳಕೆಯಿಂದ ಪ್ರಾರಂಭ

ನಾಗಿ ಕಾಲಕ್ರಮದಲ್ಲಿ ಶಾಖೋಪಶಾಖೆಗಳಾಗಿ ಕೊಂಬೆಗಳನ್ನು ನಾನಾ ದಿಕ್ಕುಗಳಿಗೆ ಚಾಚುವ ಮಹಾವೃಕ್ಷದಂತೆ, ಲೋಕ ವಿಸ್ತಾರವಾಗಿ ಬೆಳೆಯಿತು. ಅವರ ಕಾವ್ಯವಾಚನ ಚಕ್ರದ ಅರೆಗಳ ಸಾಲಿನಲ್ಲಿ ಚಂಪೂ, ರಗಳೆ, ಷಟ್ಪದಿ, ಸಾಂಗತ್ಯ, ಸರಳರಗಳೆ, ಮಹಾ ಛಂದಸ್ಸು, ಹೀಗೆ ನಾನಾ ಬಗೆಯ ಛಂದಸ್ಸುಗಳ ಕಾವ್ಯಗಳು, ಪ್ರಾಚೀನ ಅರ್ವಾಚೀನ ಎಂಬ ಭೇದಭಾವದಿಂದ ಮುಕ್ತವಾಗಿ ಜಮಾಯಿಸಿದವು. ಕನ್ನಡ ಸಾಹಿತ್ಯಕ್ಕೆ ಹೊಸ ತಿರುವು ಕೊಟ್ಟ ಆಧುನಿಕ ಸಾಹಿತ್ಯಾಚಾರ್ಯರೆನ್ನಿಸಿಕೊಂಡ ಬಿ. ಎಂ. ಶ್ರೀ.ಯವರ "ಕನ್ನಡ ತಾಯ ನೋಟ"ವೆಂಬ ಆಧುನಿಕ ಛಂದಸ್ಸಿನ ಪ್ರಗಾಥ ಮುಂದೆ ಬರಲಿದ್ದ ಆಧುನಿಕ ಕಾವ್ಯವಾಚನಗಳಿಗೆ ಅಂಕುರಪ್ರಾಯವಾಯಿತು. ಶಕುಂತಲಾಬಾಯಿಗೆ "ಕನ್ನಡ ತಾಯ ನೋಟ"ವನ್ನು ವಾಚಿಸಿದ ಒಂದು ದಶಕದ ಅವಧಿಯಲ್ಲೇ ಗೋವಿಂದ ಪೈಗಳ "ಗೊಲ್ಗಥಾ" ಮತ್ತು "ವೈಶಾಖಿ" ಖಂಡ ಕಾವ್ಯಗಳನ್ನು ಗಮಕಕ್ಕೆ ಒಗ್ಗಿಸುವ ಅವಕಾಶ ಒದಗಿ ಬಂತು.

ಬ್ರಿಟಿಷ್ ಆಳರಸರ ಬಂಧನದಿಂದ ಬಿಡುಗಡೆ ಹೊಂದಿ ನಮ್ಮ ರಾಷ್ಟ್ರ ಸ್ವತಂತ್ರ ವಾಯಿತಷ್ಟೆ 1947ರ ಆಗಸ್ಟ್ 15ರಲ್ಲಿ. 1949ರಲ್ಲಿ ನಮ್ಮ ರಾಷ್ಟ್ರದ ಭಾಗಗಳಲ್ಲಿ ಒಂದಾಗಿದ್ದ ಮದರಾಸ್ ರಾಜ್ಯ ಗೋವಿಂದ ಪೈಗಳಿಗೆ "ರಾಷ್ಟ್ರ ಕವಿ" ಎಂಬ ಪ್ರಶಸ್ತಿಯಿತ್ತು ಗೌರವಿಸಿತು. ಹರಿದು ಹಂಚಿಹೋಗಿದ್ದ ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆ ಇನ್ನೂ ಮದರಾಸು ರಾಜ್ಯದಲ್ಲೇ ಉಳಿದಿದ್ದಿತು. ಆಗಿನ್ನೂ ಕರ್ನಾಟಕ ರಾಜ್ಯ ಉದಯವಾಗಿರಲಿಲ್ಲ. ಹುಟ್ಟಿದೂರು ಮಂಗಳೂರು, ಬಾಳಿ ಬದುಕಿದೂರು ಮಂಜೇಶ್ವರ (ಈಗ ಕೇರಳ) ಮದರಾಸು ರಾಜ್ಯದಲ್ಲೇ ಉಳಿದುಕೊಂಡಿದ್ದವು. ಆದುದರಿಂದ ಗೋವಿಂ ಪೈಗಳು ಮದರಾಸು ರಾಜ್ಯದ ಪ್ರಜೆಗಳಾಗಿದ್ದರು. ಅವರು ಪ್ರಸಿದ್ಧ ಸಂಶೋಧಕರು, ಶ್ರೇಷ್ಠ ಕವಿಗಳು, ಬಹುಭಾಷಾ ವಿಶಾರದರು, ಶುದ್ಧಚಾರಿತ್ರರು, ಕ್ರಮಬದ್ಧ ಜೀವನ ನಿಷ್ಠರು, ನಿರಾಡಂಬರ ಪ್ರಿಯರು, ಸ್ನೇಹಪರರು. ಸಾರಾಂಶ, "ರಾಷ್ಟ್ರಕವಿ" ಪದಕ್ಕೆ ಮದರಾಸು ರಾಜ್ಯದ ಕನ್ನಡದ ಪ್ರಾತಿನಿಧ್ಯದಲ್ಲಿ ಅವರಿಗಿಂತ ಶ್ರೇಷ್ಠರು ಇನ್ನಿಲ್ಲವೆಂಬ ಅಭಿಪ್ರಾಯ ನಿರ್ವಿವಾದವಾಗಿತ್ತು.

ರಾಷ್ಟ್ರಕವಿಯನ್ನು ಕರೆಸಿಕೊಂಡು ಸನ್ಮಾನಿಸಬೇಕೆಂದು ಬೆಂಗಳೂರಿನ ಸಾಹಿತಿಗಳ ಸಂಘ ನಿಶ್ಚಯಿಸಿತು. ಅಭಿನಂದನಾ ಸಮಿತಿ ಏರ್ಪಾಡಾಯಿತು. ಆ ಸಮಿತಿಯಲ್ಲಿ ನಾನೂ ಒಬ್ಬ ಸದಸ್ಯ. ಕನ್ನಡಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ಗೋವಿಂದಪೈಗಳಿಗೆ ಅದ್ದೂರಿಯಾಗಿ ಸನ್ಮಾನವಾಯಿತು. ಶಕುಂತಲಾಬಾಯಿ "ಗೊಲ್ಗೊಥಾ" ಖಂಡ ಕಾವ್ಯದಿಂದ ಏಸು ಸ್ವಾಮಿಯ ಭವ್ಯ ದಿವ್ಯ ವ್ಯಕ್ತಿತ್ವವನ್ನು ಚಿತ್ರಿಸುವ ಸಾಲುಗಳನ್ನು ವಾಚನ ಮಾಡಿದರು. ಈ ಸಾಲುಗಳನ್ನು ಜಿ. ಪಿ. ರಾಜರತ್ನಂ ಆರಿಸಿಕೊಟ್ಟಿದ್ದರು. ಅವರು ಸನ್ಮಾನ ಸಭೆ ನಡೆಯುವುದಕ್ಕೆ ಒಂದು ವಾರ ಮುಂಚಿತವಾಗಿ ನಮ್ಮ "ಮಕ್ಕಳ ಮಂಟಪ" ಮನೆಗೆ "ಗೊಲ್ಗೊಥಾ" ಕಾವ್ಯದ ಒಂದು ಪ್ರತಿ ಹಿಡಿದು ಬಂದರು.

"ಶಕುಂತಲಾಬಾಯಿ, ನೀವು ಏಸುಸ್ವಾಮಿಯ ವ್ಯಕ್ತಿತ್ವದ ವರ್ಣನೆ ಓದಬೇಕು" ಎಂದು ಸಾಲುಗಳನ್ನು ಗುರುತು ಮಾಡಿಕೊಟ್ಟು ಹೋದರು.

ಗೋವಿಂದ ಪೈಗಳ ಸನ್ಮಾನ ಸಭೆ ಕವಿವರ್ಯರ ಅಭಿಮಾನಿಗಳಿಂದ ತುಂಬಿ ಹೋಗಿತ್ತು. ಸಾಹಿತಿಗಳು, ವಿದ್ವಾಂಸರು, ಸಮಾಜಸೇವಾ ಧುರೀಣರು, ಸಕಲ ಕ್ಷೇತ್ರಗಳ ಪ್ರತಿನಿಧಿಗಳು ಆಗಮಿಸಿದ್ದರು. ಶಕುಂತಲಾಬಾಯಿ ತನ್ನ ಸರದಿ ಬಂದಾಗ ವೇದಿಕೆ ಏರಿದರು. ತಂಬೂರಿ ಶ್ರುತಿಮಾಡಿ ಕಾವ್ಯವಾಚನಕ್ಕೆ ಪ್ರಾರಂಭಿಸಿದರು—

"ಸಾಕೆನ್ನ ಮನಸೆ ನಮಗೇನಾತ್ಮತೃಪ್ತನಾ
ಶುಷ್ಕಹೃದಯನ ಬಗೆಯಗೊಡವೆ? ನೀನೆಮ ನೋಡ
ಲೋಕದುರುಪಾಪವಂ ಹೊತ್ತು ಕುರಿಮರಿಯಂತೆ,
ಗಿಡುಗಗಳ ನಡುವೆ ತೊಡರಿದ ಕಪೋತಕದಂತೆ
ನಿಂದಿರುವ ಮನುಜಸುತನಾ ಜಗದ್ರಕ್ಷನ !
. . . .
ಕಣ್ತುಂಬ ನೋಡೀಗಳಿದೋ
ಈ ಹರೆಯದೀ ಶೋಭೆಯೀ ಜಗತ್ಪ್ರೇಮದೀ
ಸುಜ್ಞಾನದೀ ಶಾಂತಿಯೀ ಮಹಿಮೆಯೀ ಜಿತಾ
ತ್ಮತೆಯೀ ತಪಃಶಕ್ತಿಯೀ ಧರ್ಮದೀ ಮನುಜ
ದೇವತ್ವಮೀ ಸುಧಾಸಿಂಧುಯೋರ್ದಣಿಸಂತೆ
ಸುರಿವುದಕಟಾ ಮೃತಸಮುದ್ರದಲಿ ನೋಡ!"

ಗೋವಿಂದ ಪೈಯಾದಿಯಾಗಿ ಸಭೆ ನಿಶ್ಶಬ್ದದಿಂದ ವಾಚನವನ್ನು ಆಲಿಸಿತು. ಕವಿವರ್ಯರು ತಮ್ಮ ಭಾಷಣದಲ್ಲಿ "ಶಕುಂತಲಾಬಾಯಿ ನನ್ನ ಕಾವ್ಯಕ್ಕೆ ಧ್ವನಿ ಕೊಟ್ಟರು" ಎಂದು ಒತ್ತಿ ಹೇಳಿದರು.

ಹಿರಿಯರೆಂತೋ ಅಂತೆ ಹಿರಿಯ ಗುಣಾನ್ವಿತರು ಗೋವಿಂದ ಪೈ

ನನಗೆ ಈ ಸಂದರ್ಭದಲ್ಲಿ ನನ್ನ ಹೃದಯಕ್ಕೆ ನೇರವಾಗಿ ತಾಗಿದ ಗೋವಿಂದ ಪೈಗಳ ಹಿರಿಯ ಗುಣವನ್ನು ಸ್ಮರಿಸಿಕೊಳ್ಳದಿದ್ದರೆ ಅಪರಾಧವೆನ್ನಿಸುತ್ತದೆ.

ನಾನು ಗೋವಿಂದ ಪೈ ಅಭಿನಂದನಾ ಸಮಿತಿಯ ಸದಸ್ಯನಾಗಿದ್ದುದರಿಂದ ನನ್ನ ಒಡಾವಣೆಯಲ್ಲಿ ಕವಿವರ್ಯರನ್ನು ಕರೆಸಿಕೊಂಡು ಗೌರವಿಸಬೇಕೆಂದು ಶೇಷಾದ್ರಿಪುರದ ಹಿರಿಯರು ಕೆಲವರು ಆಲೋಚಿಸಿದರು. ಅವರಲ್ಲಿ ಶೇಷಾದ್ರಿಪುರಂ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾಗಿದ್ದ ಕೆ. ಸುಬ್ಬಣ್ಣ ಪ್ರಮುಖರು. ಅವರು ನನ್ನ ಬಳಿಗೆ ಬಂದು "ಪಾಂಡುರಂಗರಾವ್, ಗೋವಿಂದ ಪೈಗಳನ್ನು ನಮ್ಮ ಒಡಾವಣೆಯವರು ಗೌರವಿಸಿದ್ದರೆ ಹೇಗೆ? ಅವರನ್ನು ಒಪ್ಪಿಸಿ, ಸನ್ಮಾನಿಸೋಣ" ಎಂದರು. ನನಗೂ ಅವರ ಸಲಹೆ ಸೂಕ್ತವೆನ್ನಿಸಿತು. "ಸುಬ್ಬಣ್ಣ, ನೀವು ಸಿದ್ಧಮಾಡಿಕೊಳ್ಳಿ. ಗೋವಿಂದ ಪೈಗಳನ್ನು ಕರೆತರುವ ಭಾರ ನನ್ನದು". ಗೋವಿಂದ ಪೈಗಳನ್ನು ಒಪ್ಪಿಸಿದೆ. ಶೇಷಾದ್ರಿಪುರಂ ಹೈಸ್ಕೂಲಿನಲ್ಲಿ ಗೋವಿಂದ ಪೈ ಸನ್ಮಾನ ಸಭೆ ಏರ್ಪಡಿಸುವುದೆಂದು ನಿರ್ಧಾರವಾಯಿತು.

ಗೋವಿಂದ ಪೈಗಳಿಗೆ ಬಿಡುವಿಲ್ಲದ ಕಾರ್ಯಕ್ರಮಗಳು. ಕೈಬಾಯಿಗಳಿಗೆ ಪುರಸತ್ತು ಇಲ್ಲದಷ್ಟು ಉಪಾಹಾರ ಊಟ ಸಂಭ್ರಮಗಳು. ನಮ್ಮ ಒಡಾವಣೆಗೆ ಬರುವ ಕವಿವರ್ಯರಿಗೆ ನಮ್ಮ ಮನೆಯಲ್ಲಿ ಆದರಾತಿಥ್ಯವನ್ನು ಮಾಡದಿದ್ದರೆ ನಡೆದೀತೆ ? ಈ ಸುಳಿವನ್ನರಿತಿದ್ದ ಪೈಗಳು ಮೊದಲೇ ನನ್ನಿಂದ ವಾಗ್ದಾನ ಪಡೆದಿದ್ದರು ತಿಂಡಿ ಕೂಡಲೇ ಕೂಡವೆಂದು, ಏನಾದರೂ ಬಾಯಾರಿಕೆಗೆ ಏರ್ಪಾಡಾದರೆ ಸಾಕೆಂದು. "ಕಾಫಿ, ಟೀ ಕೂಡ ಬೇಡ" ಎಂದಿದ್ದರು. ನಾನು "ನಿಂಬೇಹಣ್ಣಿನ ಪಾನಕ ಆಗಬಹುದಲ್ಲ ?" ಎಂದೆ. "ಪಸಂದಾಯಿತು" ಎಂದರು. ನಿಂಬೇ ಹಣ್ಣಿನ ಪಾನಕವನ್ನೇ ಅವರಿಗೆ ಕೊಟ್ಟೆ. "ಪೈಗಳೆ. ಈ ದಿನ ಶಕುಂತಲಾಬಾಯಿಯ ಕಾವ್ಯವಾಚನವಿಲ್ಲ. ಅವರು ಒಳಗೆ ಬರುವಂತಿಲ್ಲ. ಮೈಲಿಗೆಯಾಗುತ್ತದೆ "ವೈಶಾಖಿ"ಯಂಥ ಧರ್ಮಕಾವ್ಯವನ್ನು ಓದುವುದದಿಂದ, ಎಂಬ ಅಳುಕು ಆಕೆಗೆ" ಎಂಬೆ. "ಸ್ನಾನ ಮಾಡಿ ಬಂದರಾಯಿತು. ಬುದ್ಧನಿಗೆ ಎಲ್ಲ ಸಮ್ಮತ" ಎಂದರು. ನಾನು "ಶಕುಂತಲಾಬಾಯಿಗೆ ಬದಲು ಬೇರೊಬ್ಬ ಸಂಗೀತ ವಿದುಷಿ "ವೈಶಾಖಿ" ಕಾವ್ಯವಾಚನ ಮಾಡುವುಸೆಂದು ಏರ್ಪಾಡಾಗಿಸೆ." ಎಂದೆ. "ಸರಿ" ಎಂದರು. ಮಾತು ಕಥೆ ಅಲ್ಲಿಗೆ ಮುಗಿಯಿತು.

ಸನ್ಮಾನ ಸಭೆ ಸಂಜೆ ಆರು ಗಂಟೆಗೆಂದು ಮೊದಲೇ ನಿಶ್ಚಯವಾಗಿತ್ತು. ನಮ ಸಭೆ ಮುಗಿಯುತ್ತಲೇ ಪೈ ಮತ್ತು ಅವರ ಮಿತ್ರರು ಅ. ನ. ಕೃ. ಅವರ ಮನೆಯಲ್ಲಿ ರಾತ್ರಿಯ ಊಟಕ್ಕೆ ಎಂಟು ಗಂಟೆಗೆ ಇರಬೇಕಾಗಿತ್ತು. ಆದರೆ ನಮ್ಮ ಸಭೆ ಕಾಲಕ್ಕೆ ಸರಿಯಾಗಿ ಪ್ರಾರಂಭವಾಗಲೇ ಇಲ್ಲ. ಕೇವಲ ಒಂದು ಗಂಟೆ ತಡವಾಗಿ ಪ್ರಾರಂಭವಾಯಿತು. ಮುಕ್ಕಾಲು ಗಂಟೆಯ ಮಿತಿಯಲ್ಲಿ ಸಭೆಯ ಕಲಾಪಗಳೆಲ್ಲ ಮುಗಿಯಬೇಕೆಂದು ಎಂ. ಆರ್. ಶ್ರೀ ಖಂಡಿತವಾಗಿ ಹೇಳಿಬಿಟ್ಟರು. ನಿರ್ವಾಹವಿಲ್ಲದೆ ಕಾರ್ಯಕ್ರಮದಲ್ಲಿ ಕೆಲವು ವಿಷಯಗಳಿಗೆ ಕತ್ತರಿ ಬಿತ್ತು. ಅವುಗಳಲ್ಲಿ ಎದ್ದು ಕಾಣುತ್ತಿದ್ದುದು "ವೈಶಾಖಿ" ಕಾವ್ಯವಾಚನ.

ಶಕುಂತಲಾಬಾಯಿ "ವೈಶಾಖಿ" ಕಾವ್ಯವಾಚನ ಮಾಡುವಂತಿಲ್ಲವೆಂದು ಸ್ಪಷ್ಟವಾದ ಮೇಲೆ ಅದೇ ಕಾವ್ಯವಾಚನವನ್ನು ಬೇರೆಯವರಿಂದ ಪೈಗಳಿಗೆ ಕೇಳಿಸಬೇಕೆಂದು ವ್ಯವಸ್ಥೆಯಾಯಿತು. ಶೇಷಾದ್ರಿಪುರಂ ಶಾಲೆಯಲ್ಲಿದ್ದ ಸಂಗೀತ ಶಿಕ್ಷಕರನ್ನು "ವೈಶಾಖಿ" ಕಾವ್ಯವಾಚನ ಮಾಡಬೇಕೆಂದು ಬಲವಂತವಾಗಿ ಒಪ್ಪಿಸಿತ್ತು. ಸಂಗೀತ ವಿದುಷಿ "ನಾನು ಸಾಹಿತಿಯಲ್ಲ, ಗಮಕಿಯಲ್ಲ, ಸಂಗೀತ ಗೊತ್ತೇ ಹೊರತು ನನಗೆ ಕಾವ್ಯವಾಚನ ಮಾಡಲು ಬರುವುದಿಲ್ಲ" ಎಂದು ಗೋಗರೆದರೂ ಬಿಡಲಿಲ್ಲ. ಆಕೆಗೆ ಜೀವಂತ ಮಾಘಸ್ನಾನವಾಯಿತು. ಜೇಡನ ಬಲೆಗೆ ಬಿದ್ದ ಕೀಟದಂತಾಯಿತು ಆಕೆಯ ಸ್ಥಿತಿ. ನಿರ್ವಾಹವಿಲ್ಲದೆ ಬಂದು ಕೂತಿದ್ದರು. ಕಾರ್ಯಕ್ರಮದ ಪಟ್ಟಿಯಲ್ಲಿ ಆಕೆಯ ಹೆಸರಿತ್ತು. ಆತುರದಲ್ಲಿ ಕಾವ್ಯವಾಚನ ಬಿಟ್ಟು ಹೋಗಿ ಕಾರ್ಯಕ್ರಮ ಮುಕ್ಕಾಲು ಗಂಟೆಯಲ್ಲಿ ಮುಗಿದು ಹೋಯಿತು.

ಸಭೆ ಮುಗಿಸಿಕೊಂಡು ಅತಿಥಿಗಳೆಲ್ಲ ಕಾರಿನಲ್ಲಿಕೂತು ವಿಶ್ವೇಶ್ವರಪುರದ ಅ.ನ.ಕೃ.

ಅವರ "ಅನ್ನಪೂರ್ಣ" ಮನೆಗೆ ಹೊರಟು ಹೋದರು. ಸಂಗೀತ ವಿದುಷಿ ನನ್ನೆಡೆಗೆ ಬಂದು ಕೈಮುಗಿದು "ಸದ್ಯ ನನ್ನ ಗೌರವ ಉಳಿಸಿದಿರಿ. ನನಗೆ ಪೈಗಳ ಕಾವ್ಯ ಓದಲು ಬಂದು ಸಾಲೂ ಅರ್ಥವಾಗಿರಲಿಲ್ಲ. ಕಬ್ಬಿಣ ಕಡಲೆ. ಹೇಗಪ್ಪ ಓದಿ ಸೈಯೆನ್ನಿಸಿಕೊಳ್ಳುವುದು ಎಂದು ರಾತ್ರಿ ಹಗಲು ಚಿಂತೆಯಾಗಿತ್ತು. ಈ ರಾತ್ರಿ ಹಾಯಾಗಿ ನಿದ್ರೆ ಹೋಗುತ್ತೇನೆ". ಎಂದು ಸ್ಪಷ್ಟವಾಗಿ ಮನಬಿಚ್ಚಿ ನುಡಿದರು.

ಆದರೆ ಏನಾಯಿತು ಆ ರಾತ್ರಿ ? ಅ. ನ. ಕೃ. ಮನೆಯಲ್ಲಿ ಔತಣ ಮುಗಿಸಿಕೊಂಡು ಗೋವಿಂದ ಪೈ, ಎಂ. ಆರ್. ಶ್ರೀ. ಸಹೋದರದ್ವಯರು ಮಾಸ್ತಿಯವರ ಮನೆಗೆ ಹೋಗುತ್ತಿದ್ದಾರೆ. ಪೈಗಳ ಬಿಡಾರ ಮಾಸ್ತಿಯವರ ಮನೆಯಲ್ಲಿ ತಾನೆ. ಮಧ್ಯಮಾರ್ಗದಲ್ಲಿ ಮಹಾಬಲರಾಯರು "ಪೈಗಳೇ ನಮ್ಮ ಆತುರದಲ್ಲಿ "ವೈಶಾಖಿ" ಕಾವ್ಯವಾಚನಕ್ಕೆ ಕತ್ತರಿ ಪ್ರಯೋಗವಾಯಿತು. ಪಾಪ! ಹೆಣ್ಣು ಮಗಳು ಓದಲು ಸಿದ್ಧರಾಗಿ ಬಂದುಕುಳಿತಿದ್ದರು, ಆಕೆಗೆ ಅನ್ಯಾಯಮಾಡಿದೆವು, ಎಷ್ಟು ನೊಂದುಕೊಂಡಳೋ! ಎಂದು ಪಶ್ಚಾತ್ತಾಪ ವ್ಯಕ್ತಪಡಿಸಿದರು. ಕೂಡಲೆ ಪೈಗಳ ಕಿವಿಗಳು ಹಾವಿನ ಕಿವಿಯಷ್ಟು ಚುರುಕಾಯಿತು. "ಏನು ಏನು ? ಹೀಗುಂಟೋ ವಿಷಯ ! ಕಾರನ್ನು ಹಿಂದಿರುಗಿಸಿ, ಪಾಂಡುರಂಗರಾವ್ ಮನೆಗೆ ಹೋಗೋಣ. ಅವರನ್ನು ಕರೆದುಕೊಂಡು ಹೆಣ್ಣುಮಗಳ ಮನೆಗೆ ಹೋಗೋಣ. ನಾನು ಕ್ಷಮಾಪಣೆ ಬೇಡುತ್ತೇನೆ" ಎಂದರು. ಮಹಾಬಲರಾಯರು ಕ್ಷಣದಲ್ಲಿ ಹವಣು ಯೋಚಿಸಿದರು. "ಈಗ ಹೊತ್ತು ಮೀರಿದೆ. ಮಾಸ್ತಿಯವರು ನಿಮಗಾಗಿ ಕಾದಿರುತ್ತಾರೆ. ಬೇಕಾದರೆ ಪಾಂಡುರಂಗರಾವ್ ನಿಮ್ಮನ್ನು ಕಾಣಲು ಬಂದೇ ಬರುತ್ತಾರೆ. ಆಗ ಹೋದರಾಯಿತು ಅವರ ಕೂಡ." ಎಂದರು. ಪೈಗಳು ಒಪ್ಪಿಕೊಂಡರು. ಬೀಸೋದೊಣ್ಣೆಯನ್ನು ತಪ್ಪಿಸಿಕೊಂಡಂತಾಯಿತು.

ಹೀಗಾಯಿತು. ನಾನು ಚಾಮರಾಜಪೇಟೆಗೆ ಹೋದೆ. ಎಂ. ಆರ್. ಶ್ರೀ ಅವರ ದರ್ಶನ ಪಡೆದು ಮಾಸ್ತಿ ಅವರ ಮನೆಗೆ ಹೋಗಬೇಕಾಗಿತ್ತು. ಮಹಾಬಲರಾಯರು ನನ್ನನ್ನು ನೋಡುತ್ತಲೆ ರಾತ್ರಿ ನಡೆದ ವಿಷಯವನ್ನು ವಿವರಿಸಿದರು. "ಪೈಗಳನ್ನು ದಣಿಸುವುದು ಬೇಡ. ನೀವು ವ್ಯವಹಾರವನ್ನು ಸೂಕ್ಷ್ಮವಾಗಿ ಮುಗಿಸಿಬಿಡಿ" ಎಂದರು. ನಾನು "ಆಗಲಿ" ಎಂದೆ. ಹೀಗೆ ಪೈಗಳನ್ನು ನೋಡುವುದನ್ನು ತಪ್ಪಿಸಿಬಿಟ್ಟೆ. ಸಂಜೆ ಬೆಂಗಳೂರು ನಗರ ಪೌರ ಸಭೆ ಪೈಗಳಿಗೆ, ಪುರಸಭಾ ಕಟ್ಟಡ ಪಕ್ಕದಲ್ಲಿದ್ದ ಈಜುಕೊಳ ತಾಣದಲ್ಲಿ ಸಂತೋಷಕೂಟ ಏರ್ಪಡಿಸಿತ್ತು. ಆ ಕೂಟದಲ್ಲಿ ಪೈಗಳನ್ನು ಕಂಡೂ ಕಾಣದಂತೆ ನೆವ ಹೂಡಿ ಕೂಟದಲ್ಲಿ "ಗುಂಪಿನಲ್ಲಿ ಗೋವಿಂದ"ನಾಗಿ ಸೇರಿಕೊಂಡೆ. ಸಂತೋಷಕೂಟ ಮುಗಿಯುತ್ತಲೆ ಪೈಗಳಿಗೆ ಮುಖ ತೋರಿಸಿದಂತೆ ಮಾಡಿ ಗದ್ದಲದಿಂದ ಜಾರಿಕೊಂಡು ಮನೆಗೆ ಬಂದುಬಿಟ್ಟೆ.

ಹೀಗೆ ಪ್ರತಿ ದಿನವೂ ಗೋವಿಂದಪೈ ಸಂಜೆಯ ಸನ್ಮಾನ ಸಭೆಗಳಿಗೆ ಹಾಜರಾತಿ ಒಪ್ಪಿಸಿ, ಮುಖಾಮುಖಿ ದರ್ಶನ ದೂರದಿಂದಲೇ ಒಪ್ಪಿಸಿ, ಸಭೆ ಮುಗಿಯಬೇಕು ಆ ಹೊತ್ತಿನಲ್ಲಿ ಉಪಾಯವಾಗಿ ನುಣುಚಿಕೊಂಡು ಮನೆಗೆ ಬಂದುಬಿಡುತ್ತಿದ್ದೆ. ಉದ್ದೇಶ

ಗೋವಿಂದ ಪೈಗಳ ಮನಸ್ಸಿನ ಕ್ಲೇಶ ಕಡಮೆಯಾಗಲೆಂದು ಅಷ್ಟೆ. ನಾಲ್ಕೈದು ದಿವಸಗಳು ಕಳೆಯಿತು. ಒಂದು ದಿವಸ ಸಿಕ್ಕಿಬಿದ್ದೆ. "ನಾಳೆ ಬೆಳಗ್ಗೆ ಬನ್ನಿ, ನಿಮ್ಮೊಡನೆ ಮಾತಾಡುವುದಿದೆ" ಎಂದರು. "ಆಯಿತು" ಎಂದು ಮಾರನೆ ಬೆಳಗ್ಗೆ ಮಾಸ್ತಿಯವರ ಮನೆಯಲ್ಲಿ ಪೈಗಳನ್ನು ಸಂದರ್ಶಿಸಿದೆ. ಅವರು ನನ್ನನ್ನು ನೋಡುತ್ತಲೆ "ಪಾಂಡುರಂಗ ರಾವ್, ನಡೆಯಿರಿ, ಹೆಣ್ಣುಮಗಳ ಮನೆಗೆ ಹೋಗಿ ಕ್ಷಮಾಪಣೆಬೇಡೋಣ. ಅನ್ಯಾಯವಾಗಿ ಆಕೆಯ "ವೈಶಾಖಿ" ಕಾವ್ಯವಾಚನ ತಪ್ಪಿ ಹೋಯಿತು ಕಾರ್ಯಕ್ರಮದಲ್ಲಿ" ಎಂದರು. ನಾನು, "ನಾನು, ಶಕುಂತಲಾಬಾಯಿ ಆಕೆಯ ಮನೆಗೆ ಹೋಗಿ ಈಗಾಗಲೇ ಕ್ಷಮಾಪಣೆ ಕೇಳಿಕೊಂಡಿದ್ದೇವೆ" ಎಂದೆ. ನನಗೆ ಮಹಾಬಲರಾಯರು ವಿಷಯ ತಿಳಿಸಿದ ದಿವಸವೇ, ನಾವು ದಂಪತಿಗಳು ಸಂಗೀತ ವಿದುಷಿಯ ಮನೆಗೆಹೋಗಿ ಕ್ಷಮಾಪಣೆ ಬೇಡಿಯಾಗಿತ್ತು. ಪೈಗಳಿಗೆ ಸಂತೋಷವಾಯಿತು. ವಿಷಯ ಅಲ್ಲಿಗೆ ಪರಿಸಮಾಪ್ತವಾಯಿತು.

ಗೋವಿಂದ ಪೈಗಳು ನಮ್ಮನ್ನು ಮರೆಯಲಿಲ್ಲ. ನನ್ನ ಹಿರಿಮಗಳು ಚಿ|| ವನಜ ಕೋಟೀಶ್ವರಳ ಮದುವೆಯಕರೆಯೋಲೆ ಕಳಿಸಿದೆ 1960ರಲ್ಲಿ. ಕೈಬರಹದಲ್ಲಿ ಆಶೀರ್ವಾದ ಬರೆದು ಕಳಿಸಿದರು. ಗೋವಿಂದಪೈ ತಾರತಮ್ಯವಿಲ್ಲದೆ ಯುವಜನ ಲೇಖಕರುಗಳನ್ನು ಗೌರವಿಸುತ್ತಿದ್ದುದು, ಅತಿಥಿಗಳನ್ನು ಆದರಿಸುತ್ತಿದ್ದುದು, ಪತ್ರವ್ಯವಹಾರದಲ್ಲಿ ನಿಷ್ಠೆಯಿಂದ ನಡೆದುಕೊಳ್ಳುತ್ತಿದ್ದುದು ತಮ್ಮ ಧರ್ಮಪತ್ನಿಯ ವಿಷಯದಲ್ಲಿ ತೋರಿಸಿದ ಪತಿನೋಂಪಿ ನಮಗೆಲ್ಲ ಮಾರ್ಗದರ್ಶನವಾಗಿಲ್ಲವೇ ?

ರಸಋಷಿ ಸದೃಶ ಗೋವಿಂದಪೈಗಳ ಸಮ್ಮುಖದಲ್ಲಿ "ವೈಶಾಖಿ" ಕಾವ್ಯವಾಚನ ಮಾಡಲಿಲ್ಲವೆಂಬ ಕೊರಗು ನಮ್ಮಿಬ್ಬರಿಗೂ ಇತ್ತು. ಈ ಮಧ್ಯೆ ಗೋವಿಂದ ಪೈಗಳು 1963ರಲ್ಲಿ ದಿವಂಗತರಾಗಿ ಹೋದರು, ಕವಿ ಋಣ ಸಂದಾಯವಾಗಲಿಲ್ಲವೆಂಬ ಕೊರಗು ತಪ್ಪಲೇ ಇಲ್ಲ. ಜಿ. ಪಿ. ರಾಜರತ್ನಂ ನಮ್ಮ ಕೊರಗನ್ನು ತಪ್ಪಿಸಿದರು. ಗಾಂಧೀ ಸಾಹಿತ್ಯ ಸಂಘದಲ್ಲಿ ಒಂದು ವೈಶಾಖಿ ಪೂರ್ಣಿಮ ಕಾರ್ಯಕ್ರಮದಲ್ಲಿ "ವೈಶಾಖಿ" ಕಾವ್ಯ ವಾಚನದ ಏರ್ಪಾಡಾಯಿತು. ರಾಜರತ್ನಂ ನೇತಾರರಾಗಿದ್ದರು ಆ ಕಾರ್ಯಕ್ರಮಕ್ಕೆ. ಶಕುಂತಲಾಬಾಯಿಯ "ವೈಶಾಖಿ" ವಾಚನಕ್ಕೆ ನಾನು ಪ್ರಾಸಂಗಿಕ ನಿರೂಪಣೆ ನೀಡಿದೆ. ನಾನು ಬಿಟ್ಟ ವಿಷಯವನ್ನು ರಾಜರತ್ನಂ ತುಂಬಿದರು.

ಇದೇ ಸಂದರ್ಭದಲ್ಲಿ "ವೈಶಾಖಿ" ಕಾವ್ಯವಾಚನದ ಇನ್ನೊಂದು ಅಮೂಲ್ಯ ಸಂದರ್ಭ ನನ್ನ ನೆನಪಿನ ಸುರುಳಿಯಿಂದ ಹೊರ ಚಿಮ್ಮುತ್ತಿದೆ. ಅದನ್ನು ಇಲ್ಲಿಯೇ ಹೇಳಿಬಿಡುತ್ತೇನೆ.

"ನಾವು ಅಂಟಿಕೊಂಡಿರುವ ಸ್ಥಳಗಳಿಗೆ ನಾವು ಅರ್ಹರೆ?"

ಪೂಜ್ಯ ಸಿದ್ಧವನಹಳ್ಳಿ ನಿಜಲಿಂಗಪ್ಪನವರ ಮುಖ್ಯಮಂತ್ರಿ ರಾಜ್ಯಭಾರದ ಕಾಲ. ಭರತನು ತನ್ನ ಹದಿನಾಲ್ಕು ವರ್ಷಗಳ ಶ್ರೀರಾಮ ಪಾದುಕ ರಾಜ್ಯಭಾರವನ್ನು ಶ್ರೀ ರಾಮನಿಗೆ ಒಪ್ಪಿಸಿದಂತೆ, "ಆಧುನಿಕ ಭರತ" ಕಂಠಿಯುವರು ತಮ್ಮ ತಾತ್ಕಾಲಿಕ

ಮುಖ್ಯಮಂತ್ರಿ ಪದವಿಯನ್ನು ರಾಜಕೀಯದ ಅಣ್ಣ ನಿಜಲಿಂಗಪ್ಪನವರಿಗೆ ಒಪ್ಪಿಸಿ ಅವರ ಮಂತ್ರಿಮಂಡಲದಲ್ಲೇ ಶಿಕ್ಷಣ ಮಂತ್ರಿಗಳಾಗಿ ಉಳಿದುಕೊಂಡ ಕಾಲ. ಅವರು ಶಿಕ್ಷಕರ ದಿನಾಚರಣೆಯ ಸಲುವಾಗಿ ಶೇಷಾದ್ರಿಪುರಂ ಲಿಂಕ್ ರೋಡಿನಲ್ಲಿರುವ ಸರ್ಕಾರಿ ಗರ್ಲ್ಸ್ ಪ್ರೈಮರೀ ಸ್ಕೂಲಿನ ಸಭೆಗೆ ದಯಮಾಡಿಸಿದ್ದರು. ಶಕುಂತಲಾಬಾಯಿ ಕಾವ್ಯವಾಚನ ಮಾಡಬೇಕೆಂದು ಕೇಳಿಕೊಳ್ಳಲಾಗಿತ್ತು. ಶಕುಂತಲಾಬಾಯಿ "ವೈಶಾಖಿ"ಯಿಂದ ಬುದ್ಧ ಭಗವಂತನು ಸಾಲವನದಲ್ಲಿ ಮಲ್ಲರಿಗೆ ಮಾಡಿದ ಧರ್ಮೋಪದೇಶ–"ಬುದ್ಧರನುಶಾಸನ" ಭಾಗವನ್ನು ಆರಿಸಿಕೊಂಡಿದ್ದರು. ಆ ವಾಚನ ಭಾಗದ ಸಾಲುಗಳು ಇಂತಿವೆ—

"ವೀರರಿರ ವೀರಸೂರಿಗಳಿರ, ಕೇಳಿರಿ ನಿಮಗೆ
ಧರ್ಮದ ಸಮಾಸತಃ ಪೇಳ್ವೆ. ನೂರಾರ್ಗಳಂ
ರಣದಿ ಗೆದವಗಿಂತ ತನ್ನ ತಾಂ ಗೆದ್ದವನೆ
ಚೀತರೊಳಗುತ್ತಮಂ. ನಿರ್ವೈರದಿನೆ ವಿನಾ
ವೈರದಿಂದಾ ವೈರವಾರದ ಕ್ರೋಧದಿಂ
ಕ್ರೋಧವಂ, ಸಾಧುತನದಿಂದಲೆ ಅಸಾಧುವಂ
ದಾನದಿ ಕದರ್ಯವಂ, ಸತ್ಯದಿನಸತ್ಯವಂ
ಗೆಲಲಕ್ಕು . . . .
. . . . . . ಕೊನೆಗೆ ವಾಸಿಷ್ಠರಿರ ಕೇಳಿ
ತನ್ನೊಲನ್ಯರ ಬಗೆಯಿ ತನ್ನೊಳನ್ಯರೊಳಲಿಯಿ
ಎಲ್ಲರಲಿ ದಯೆದೋರಿ, ಯಾರನುಂ ಪಗೆಯದಿರಿ
ತಾನನ್ಯನೆಸಗಿದಾ ಕೆಡಕೆ ತನ್ನಯ ಕೆಡಕು,
ಒಳಿತೆ ತನ್ನಯ ಒಳಿತು. ಯಾವ ಪಾಪವನಾನು
ಮೆಸಗದಿರಿ, ಒಳ್ಳಿತನೆ ಎಸಗುತಿರಿ, ಚಿತ್ತವಂ
ಶುದ್ಧಿಸಿರಿ, ಇದೆ ಗಡಾ ಬುದ್ಧರನುಶಾಸನಂ !"

ಶಕುಂತಲಾಬಾಯಿ ಮುಖ್ಯ ಸಾಲುಗಳನ್ನು ಸಂದರ್ಭಾನುಸಾರವಾಗಿ ಎರಡು ಮೂರು ಸಲ ಪುನರಾವೃತ್ತಿ ಮಾಡಿ ಒತ್ತಿಯೊತ್ತಿ ವಾಚಿಸಿದರು. ಅದೇ ಶಕುಂತಲಾ ಬಾಯಿಯ ಗಮಕ ವಾಚನದ ವೈಶಿಷ್ಟ್ಯ; ಶ್ರೋತೃಗಳ ಮನಸ್ಸಿನ ಮೇಲೆ ಅಜ್ಜೊತ್ತುವ ಗಾರುಡಿಗ ಮಂತ್ರಶಕ್ತಿ. ಶ್ರೀ ಕಂಠಿಯವರು ಮಂತ್ರಮುಗ್ಧರಾಗಿ ಕೇಳಿದರು. ತಮ್ಮ ಭಾಷಣದಲ್ಲಿ, "ಶಕುಂತಲಾಬಾಯಿ ವಾಚಿಸಿದ ಸಾಲುಗಳು ಒಂದೊಂದನ್ನೂ ನಾವು ಅರ್ಥೈಸಿಕೊಂಡು ನಮ್ಮನ್ನು ನಾವು ಒರೆಹಚ್ಚಿಕೊಂಡರೆ, ನಾವು ಎಷ್ಟು ಅಲ್ಪರು ಎನ್ನಿಸುತ್ತದೆ. ನಾವು ಅಂಟಿಕೊಂಡಿರುವ ಸ್ಥಾನಗಳಿಗೆ ನಾವು ಅರ್ಹರೇ ? ಎಂದು ನಮ್ಮನ್ನು ನಾವೇ ಪ್ರಶ್ನೆಮಾಡಿಕೊಳ್ಳಬೇಕಾಗುತ್ತದೆ" ಎಂದು ಕಳಕಳಿಯಿಂದ ನುಡಿದರು.

"ವೈಶಾಖಿ" ಕಾವ್ಯದಲ್ಲಿ ಬುದ್ಧ ಭಗವಂತನು ಮಲ್ಲರಿಗೆ ಧರ್ಮೋಪದೇಶ ಮಾಡಿದಂತೆಯೇ ಇನ್ನೊಂದು ಸಂದರ್ಭದಲ್ಲಿ ಕುಶಿನಾರದಿಂದ ಪಾವೆಗೆ ಹೋಗುತ್ತಿದ್ದ ಪುಕ್ಕಸನೆಂಬ ಮಲ್ಲನಿಗೆ ಧರ್ಮೋಪದೇಶ ಮಾಡಿರುವುದೂ ಅಮೋಘವಾದ ಹೃದಯಸ್ಪರ್ಶಿ ಭಾಗ. ಅದು ಇಂತಿದೆ—

"ಕೇಳಾ ಪುಕ್ಕಸ, ಮೂರ್ಖರೊಡನಾಟವಂ ಪೂಜಿಸೆ
ಪಂಡಿತರ ಸೇರೆ, ಪೂಜಿಸೆ ಪೂಜ್ಯರನ್ನದುವೆ
ಉತ್ತಮಂ ಮಂಗಲಂ ಯೋಗ್ಯ ದೇಶದೆ ನೆಲಸೆ
ಗಳಿಸಿದಾ ಪುಣ್ಯಮೊಡನಿರೆ, ಮನವ ಸನ್ಮಾರ್ಗ
ದಲಿ ನಿಲಿಸಲದೆ ಕಣಾ ಉತ್ತಮಂ ಮಂಗಲಂ.
ನಿಂದಾಸ್ತವಂ, ಯಶೋಪಯಶ, ಸುಖದುಃಖ ಲಾ
ಭಾಲಾಭವೀ ಎಂಟು ಲೋಕಧರ್ಮದಿ ಸಿಲುಕಿ
ದೊಡಮಣಂ ಕಂಪಿಸದೆ ಶೋಕರಹಿತಂ ಸುಖ
ವಿರಜಮಿರೆ ಚಿತ್ತವದೆ ಉತ್ತಮಂ ಮಂಗಲಂ
ಮಂಗಲವನ್ನಾಚರಿಸುತ ಸರ್ವತ್ರಾಪ
ರಾಜಿತಂ ಮಾನವಂ ಸ್ವಸ್ತಿ ಸುಖವಡೆದಪನೊ
ಅದೆ ಆತನುತ್ತಮಂ ಮಂಗಲಂ ತಿಳಿಯಾ !"

ಶಕುಂತಲಾಬಾಯಿ "ವೈಶಾಖಿ"ಯಿಂದ ಪುಕ್ಕಸನಿಗೆ ಬುದ್ಧ ಭಗವಂತ ಅನುಗ್ರಹಿಸಿದ "ಉತ್ತಮ ಮಂಗಲ" ಸಂದೇಶ, ಮಲ್ಲರಿಗೆ ಅನುಗ್ರಹಿಸಿದ "ಬುದ್ಧರನುಶಾಸನ" ಸಂದೇಶ ಭಾಗಗಳನ್ನು 1948 ರಿಂದ ಈವರೆಗೆ "ಗಾಂಧಿ ಜಯಂತಿ" ಮತ್ತು "ಸರ್ವೋದಯ ದಿನಾಚರಣೆ" ಗಳಲ್ಲಿ ವಾಚನ ಮಾಡಿ ಡಿ|| ಗೋವಿಂದ ಪೈಗಳನ್ನು ನಮ್ಮ ಜನದ ಸ್ಮರಣೆಯಲ್ಲಿ ಇರುವ ಹಾಗೆ ಮಾಡಿದ್ದಾರೆ. ಶ್ರೋತೃಗಳ ಮನಸ್ಸುಗಳನ್ನು ಆ ಸಮಯದಲ್ಲಾದರೂ ಆದರ್ಶದ ಕಡೆಗೆ ಚಿಂತನೆ ಮಾಡುವಂತೆ ಪಲ್ಲಟಿಸಿದ್ದಾರೆ. ಹತ್ತು ಉಪನ್ಯಾಸಗಳನ್ನು ಬಿಗಿದು ಸಾಧಿಸುವ ಕೆಲಸವನ್ನು ಇಂಥ ದಿವ್ಯ ಕಾವ್ಯವಾಚನವೊಂದು ಸಾಧಿಸಬಲ್ಲುದೆಂಬ ನಂಬುಗೆ ನಮ್ಮ ಅನುಭವಕ್ಕೆ ಬಂದಿದೆ. "ವೈಶಾಖಿ" ಕಾವ್ಯವಾಚನ ಮಾಡುವ ಸಂದರ್ಭಗಳಲೆಲ್ಲ ಶಕುಂತಲಾಬಾಯಿಗೆ, ಜಿ. ಪಿ. ರಾಜರತ್ನಂ ಸ್ಮರಣೆ ಮರುಕಳಿಸುತ್ತದೆ. ಬೌದ್ಧ ಸಾಹಿತ್ಯ ಸೃಷ್ಟಿಗೆ, ಪ್ರಚಾರಕ್ಕೆ ತಮ್ಮ ತನುಮನಧನಗಳನ್ನರ್ಪಿಸಿ, ಇಡೀ ಜೀವನವನ್ನು ಬೌದ್ಧ ಭಿಕ್ಷುವಂತೆ ನಡೆಸಿ, ತನ್ನ ನೋಂಪಿಯಲ್ಲಿ ಸಾಫಲ್ಯ ಕಂಡ ರಾಜರತ್ನಂ ನಮಗೆ ಆತ್ಮೀಯ ಬಂಧುಗಳಾಗಿ ಹಿರಿಯಣ್ಣನಂತಿದ್ದರು. ಶಕುಂತಲಾಬಾಯಿಯ ಕಾವ್ಯವಾಚನದಲ್ಲಿ ಅವರಿಗೆ ಮಹಾ ಮಮತೆ. ರಾಷ್ಟ್ರಕವಿ ಗೋವಿಂದ ಪೈ ಸನ್ಮಾನ ಸಭೆಯಲ್ಲಿ ಶಕುಂತಲಾಬಾಯಿ "ಗೊಲ್ಗೊಥಾ"ದಂಥ ಉಕ್ಕಿನ ಕಡಲೆ ಕಾವ್ಯವನ್ನು ವಾಚನ ಮಾಡಬಲ್ಲರೆಂದು ತೋರಿಸಿಕೊಟ್ಟವರು ರಾಜರತ್ನಂ. ಗಾಂಧೀ ಸಾಹಿತ್ಯ ಸಂಘದಲ್ಲಿ "ವೈಶಾಖಿ"ಕಾವ್ಯ ವಾಚನಕ್ಕೆ ಪ್ರೇರಕರಾದವರೂ ಅವರೆ. ಡಿ. ವಿ. ಜಿ. ಅವರ "ಸ್ವತಂತ್ರ ಭಾರತ ಅಭಿನಂದನಸ್ತವ"ವೆಂಬ 24 ವೃತ್ತ ಪದ್ಯ ಪ್ರಬಂಧ ಕಾವ್ಯವಾಚನವನ್ನು ಗಾಂಧಿ ಸಾಹಿತ್ಯ ಸಂಘದಲ್ಲಿ "ರಿಪಬ್ಲಿಕ್ ಡೆ" ಸಂದರ್ಭಗಳಲ್ಲಿ ವಾಚನ ಮಾಡಿಸಿದವರೂ ಅವರೆ. ಬಿ. ಬಿ. ಡಿ. ಮುದ್ರಣಾಲಯ ಶತಮಾನೋತ್ಸವವನ್ನು ಆಚರಿಸಿತು. ಡಿ. ವಿ. ಜಿ. ಅಧ್ಯಕ್ಷರು. ಅವರ ಸಮ್ಮುಖದಲ್ಲಿ ಸ್ವತಂತ್ರ ಭಾರತ ಅಭಿನಂದನಸ್ತವ ಪದ್ಯ ಪ್ರಬಂಧದಿಂದ ಶಕುಂತಲಾಬಾಯಿ

ಪ್ರಾರ್ಥನೆ ಮಾಡುವುದಕ್ಕೆ ಎರಡು ವೃತ್ತಪದ್ಯಗಳನ್ನು ಆರಿಸಿಕೊಡುವ ಶ್ರದ್ಧೆ ವಹಿಸಿದ್ದವರೂ ನಮ್ಮ ರಾಜರತ್ನರು.

ರಾಜರತ್ನಂ ಅವರ "ವಿಚಾರ ರಶ್ಮಿ" ಪ್ರಥಮ ಸಂಪುಟ 1972ರ ಡಿಸೆಂಬರ್ 5ನೆಯ ದಿನಾಂಕದಂದು ಪ್ರಕಟವಾಯಿತು. ಅಂದು ಅವರ ಹುಟ್ಟು ಹಬ್ಬ. ಅದರ ಬಿಡುಗಡೆ ಸಮಾರಂಭ ನ್ಯಾಷನಲ್ ಕಾಲೇಜು ಸಭಾಂಗಣದಲ್ಲಿ ಸರಳ ಸಮಾರಂಭವಾಗಿ ಏರ್ಪಾಡಾಗಿತ್ತು. ನ್ಯಾಷನಲ್ ಕಾಲೇಜಿನ ಪ್ರಧಾನಾಚಾರ್ಯರಾಗಿ, ಬೆಂಗಳೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿ ವೈಚಾರಿಕ ವೈಜ್ಞಾನಿಕ ಮನೋಧರ್ಮಿಯೆಂದು ಪ್ರಸಿದ್ಧರಾಗಿರುವ ಎಚ್. ನರಸಿಂಹಯ್ಯ, ಕಾರ್ಕಳದ ಭುವನೇಂದ್ರ ಕಾಲೇಜಿನ ಕನ್ನಡ ಅಧ್ಯಾಪಕ ಹಾಗೂ ರಾಜರತ್ನಂ ಭಕ್ತ ಎಂ. ರಾಮಚಂದ್ರ ಬಿಡುಗಡೆ ಸಮಾರಂಭದಲ್ಲಿ ಭಾಗವಹಿಸಿದ್ದರು. ಆಗಲೂ ಶಕುಂತಲಾಬಾಯಿ ಡಿ. ವಿ. ಜಿ. ಅವರ "ಸ್ವತಂತ್ರ ಭಾರತ ಅಭಿನಂದನ ಸ್ತವ" ದಿಂದಲೇ ಆರಿಸಿದ ವೃತ್ತಪದ್ಯಗಳಿಂದ ಪ್ರಾರ್ಥನೆ ಮಾಡಿದರು. ಆಗಲೂ ಪ್ರಾರ್ಥನಾ ಪದ್ಯಗಳನ್ನು ಆರಿಸಿಕೊಟ್ಟಿದ್ದವರು ರಾಜರತ್ನಂರೇ.

ಇಷ್ಟಾದರೂ ರಾಜರತ್ನಂ ಒಂದು ಸಲವಾದರೂ ನನ್ನ ಕವನಗಳನ್ನು "ಓದಿ" ಎಂದು ಸೂಚಿಸಲಿಲ್ಲ. "ರತ್ನನ ಪದಗಳು", "ನಾಗನ ಪದಗಳು" ವಾಚನ ಮಾಡುವುದಕ್ಕೆ ಅವರೇ ತಕ್ಕವರಾಗಿದ್ದರು. ಮಿಕ್ಕವರು ಓದಿದರೂ "ರಾಜರತ್ನಂ" ಮುದ್ರೆ ಅವುಗಳಿಗೆ ಒತ್ತಲಾಗುತ್ತಿರಲಿಲ್ಲ. ತಮ್ಮ ಸ್ವಂತ ಕೃತಿಗಳನ್ನು ಸಾರ್ವಜನಿಕ ವೇದಿಕೆಯಿಂದ ತಾವೇ ಓದಿ ಶ್ರೋತೃಗಳ ಮೇಲೆ ಇಂದ್ರಜಾಲ ಮೋಡಿ ಪ್ರಯೋಗಿಸುವ ಮಹಾ ಮಾಂತ್ರಿಕಸಿದ್ಧಿ ಬೇಂದ್ರೆ, ರಾಜರತ್ನಂರುಗಳಿಗೆ ಮಾತ್ರ ಅದ್ಭುತ ವಶವಾಗಿತ್ತು. ನಮ್ಮ ಮಹಾಜನ ರಾಜರತ್ನಂ ಅವರನ್ನು "ರತ್ನನ ಪದಗಳು" ಮತ್ತು "ನಾಗನ ಪದಗಳು" ಕವನ ಸಂಗ್ರಹಗಳಿಂದ ಜಾನಪದ ಕವಿಗಳೆಂದು ಗುರುತಿಸಿರಬಹುದು. ಆದರೆ ರಾಜರತ್ನಂ ಸೃಜಿಸಿದ "ಶಾಂತಿ" ಮತ್ತು "ಜಪಾನಿನ ಹಿಮಗಿರಿ" ಕವನ ಸಂಗ್ರಹಗಳಲ್ಲಿರುವ ತುಂಬ ಶಕ್ತಿಯುತ ಕವನಗಳನ್ನು ಓದಿ ಸಂತೋಷಪಟ್ಟವರು ನಮ್ಮ ಕನ್ನಡ ರಸಿಕರುಗಳಲ್ಲಿ ಎಷ್ಟು ಮಂದಿ? ಶಕುಂತಲಾಬಾಯಿಗೆ ರಾಜರತ್ನಂ ಕವನಗಳನ್ನು ಅವರು ಬದುಕಿದ್ದಾಗ ಓದುವ ಸಂದರ್ಭಗಳು ಬರಲಿಲ್ಲ.

ರಾಜರತ್ನಂ 1979ರ ಮಾರ್ಚಿ 9 ರಂದು ಧರ್ಮಸ್ಥಳದಲ್ಲಿ ಪ್ರಾರಂಭವಾದ 51ನೆಯ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಿದರು. ಮೂರು ದಿನಗಳ ಸಂಭ್ರಮದಲ್ಲಿ ಎಲ್ಲಿ ನೋಡಿದರೂ ನಮ್ಮ ರಾಜರತ್ನಂ. ಶಿಶು ಸಾಹಿತ್ಯ ಗೋಷ್ಠಿಯಲ್ಲಿ ಭಾಗವಹಿಸಿ ಉಪಸಂಹಾರ ಭಾಷಣ ಮಾಡುವಾಗ ಒಂದು ಸಂದರ್ಭದಲ್ಲಿ ನನ್ನನ್ನು ಆತ್ಮೀಯವಾಗಿ "ನಮ್ಮ ಪಾಂಡುರಂಗರಾವ್" ಎಂದು ಸಂಬೋಧಿಸುವುದಕ್ಕೂ ಮರೆಯಲಿಲ್ಲ. ರಾಜರತ್ನಂ ಸಮ್ಮೇಳನವನ್ನು ಮುಗಿಸಿಕೊಂಡು ಕಾಸರಗೋಡಿಗೆ ಹೋಗಬೇಕಾಗಿತ್ತು, "ಒಲ್ಲೆ"ನೆಂದರು. ಬಹುಕಷ್ಟದಿಂದ ಧರ್ಮಸ್ಥಳದಲ್ಲಿ ಸ್ಥಾಪಿತವಾಗಲಿದ್ದ ಗೋಮಟೇಶ್ವರ

ನನ್ನು ಬೆಟ್ಟ ಹತ್ತಿ ನೋಡಿ ಬಂದರು. 11-3-1979ರ ದಿವಸವೇ ಹಿಂತಿರುಗಿದರು. ಈ ಮೂರು ದಿವಸಗಳೂ ನಾವು ರಾಜರತ್ನಂ ಜೊತೆ ಧರ್ಮಸ್ಥಳದಲ್ಲಿ ಒಂದೇ ಮೇಜಿನ ಮುಂದೆ ಕುಳಿತು ಊಟ ಮಾಡಿದ್ದ ನೆನಪು ಇನ್ನೂ ಹಸಿರಾಗಿದೆ.

13-3-79ರ ಸಂಜೆ ನಾನು ನರಸಿಂಹರಾಜ ಕಾಲೋನಿಯಲ್ಲಿ ನನ್ನ ಎರಡನೆಯ ಮಗಳು ಚಿ|| ವತ್ಸಲಾ ಮನೆಯಲ್ಲಿದ್ದೆ. ಅಲ್ಲಿಂದ ಸನ್ನಿಧಿ ರಸ್ತೆಗೆ ಬಂದು ನನ್ನ ಪ್ರಿಯ ಗೆಳೆಯ ಲಕ್ಷ್ಮೀನಾರಾಯಣರ ಮನೆ ಹೊಕ್ಕೆ ಕ್ಷೇಮ ಸಮಾಚಾರ ವಿನಿಮಯಕ್ಕಾಗಿ. ನಾನು ಇನ್ನೂ ಅವರ ಮನೆಯ ಹೊಸಲು ದಾಟಿ ಒಳಹೊಕ್ಕೆನೋ ಇಲ್ಲವೋ, ಲಕ್ಷ್ಮೀನಾರಾಯಣ್, "ಪಾಂಡುರಂಗರಾವ್, ಕೇಳಿದಿರಾ ಸುದ್ದಿ ? ರಾಜರತ್ನಂ ಹೋಗಿಬಿಟ್ಟರು" ಎಂದರು. ನನ್ನ ಕಣ್ಣು ಕತ್ತಲೆಯಿಟ್ಟಿತು. ಕುರ್ಚಿಯಲ್ಲಿ ಕುಸಿದೆ.

ಲಕ್ಷ್ಮೀನಾರಾಯಣರ ಮನೆಯಿಂದಧಾವಿಸಿದೆ. ಮಲ್ಲೇಶ್ವರದ 17ನೇ ಕ್ರಾಸಿನಲ್ಲಿದ್ದ "ವಿದೇಹ"ಗೃಹಕ್ಕೆ. ರಾಜರತ್ನಂ ಮನೆಯನ್ನು ಹೋಗುತ್ತಿದ್ದ ಹಾಗೇ ದುಃಖ ಉಮ್ಮಳಿಸಿತು. ಕಣ್ಣೀರು ಹರಿಯಿತು. ಸಾಹಿತ್ಯ ಅಕಾಡೆಮಿಯ ನಿರ್ದೇಶಕರಾಗಿದ್ದ ಜಯತೀರ್ಥ ರಾಜಪುರೋಹಿತರು ತಲೆ ಬಾಗಿಲ ಹತ್ತಿರ ನಿಂತಿದ್ದರು. ಅವರು ಹಿಡಿದುಕೊಳ್ಳದಿದ್ದರೆ ನಾನು ಧೊಪ್ಪನೆ ಬಿದ್ದುಬಿಡುತ್ತಿದ್ದೆ. ಕೆಲವು ನಿಮಿಷಗಳು ಅವರ ತೋಳತೆಕ್ಕೆಯಲ್ಲಿ ಶಿಶುವಾಗಿ ಬಿಕ್ಕಿಬಿಕ್ಕಿ ಅತ್ತೆ. ಸ್ವಭಾವತಃ ನಾನು ನನ್ನ ಸಂತೋಷವನ್ನು-ದುಃಖವನ್ನು ಒಳಗೆ ಅದುಮಿಕೊಳ್ಳುತ್ತೇನೆ. ಕಹಿನೋವುಗಳನ್ನು ಸಹಿಸಿಕೊಂಡು ಮನಸೊಳಗೇ ಮರುಗುತ್ತೇನೆ. ಹೊರಗೆ ತೋರಿಸಿಕೊಳ್ಳುವುದಿಲ್ಲ. ಆದರೆ ಆ ದಿವಸ ನನ್ನ ಸಂಯಮದ ಕಟ್ಟೆ ಒಡೆದಿತ್ತು.

ನನ್ನ ಮಕ್ಕಳ ಸಾಹಿತ್ಯ ಮಾರ್ಗದರ್ಶಕ, ರಸಋಷಿ ಸದೃಶ ಜಿ. ಪಿ. ರಾಜರತ್ನಂ ಎಚ್ಚರವಾಗದಂಥ ನಿದ್ರೆಯಲ್ಲಿ ಅದ್ದಿಹೋಗಿದ್ದರು. ಅವರ ಶವಕ್ಕೆ ಪ್ರದಕ್ಷಿಣೆ ಮಾಡಿ ಹಿಂದಿರುಗಿದೆ.

ಬೆಳಗಾಯಿತು. ಇನ್ನೊಮ್ಮೆ ಶಕುಂತಲಾಬಾಯಿಯೊಡನೆ ರಾಜರತ್ನಂ ಶವದ ದರ್ಶನವಾಯಿತು. ಸಂಜೆ ನಾನೊಬ್ಬನೆ ಇನ್ನೊಮ್ಮೆ ರಾಜರತ್ನಂ ಶವದ ದರ್ಶನಪಡೆದೆ. ದೂರದಿಂದ ಬರಬೇಕಾಗಿದ್ದ ಅವರ ಮಗ ಶ್ರೀಧರ ಇನ್ನೂ ಬಂದಿರಲಿಲ್ಲ. ಯಾವಾಗ ಬರುವರೆಂದು ಯಾರಿಗೂ ತಿಳಿಯದು. ಶ್ಮಶಾನ ಯಾತ್ರೆಯಲ್ಲಿ ಭಾಗವಹಿಸಬೇಕೆಂದು ಜೀವ ತುಡಿಯುತ್ತಿದ್ದರೂ ನನ್ನ ಹೆಬ್ಬೆಟ್ಟು ಇದ್ದಕ್ಕಿದ್ದ ಹಾಗೆ ಬಾತುಕೊಂಡು ನಿಲ್ಲಲೂ ತ್ರಾಣವಿಲ್ಲದಹಾಗಾಯಿತು. ವಿದ್ಯಾವರ್ಧಕ ಸಂಘದ ಕೆ. ಎಸ್. ಶ್ರೀಹರಿ ನನ್ನ ಗೋಳುಕರೆಯನ್ನು ನೋಡಿ ಮರುಗಿ ಸಾರ್, "ನೀವು ಶ್ಮಶಾನಯಾತ್ರೆಗೆ ಬರುವುದು ಬೇಡ. ಮನೆಗೆ ಹಿಂದಿರುಗಿ" ಎಂದು ಬಲವಂತವಾಗಿ ಕಳಿಸಿಕೊಟ್ಟರು ಮನೆಗೆ.

ರಾಜರತ್ನಂ ಶಿಷ್ಯರು ಒಂದೆರಡು ತಿಂಗಳುಗಳಲ್ಲಿ "**ಡಾ|| ಜಿ. ಪಿ. ರಾಜರತ್ನಂ ಸ್ಮಾರಕ ಸಮಿತಿ**"ಯನ್ನು ರಚಿಸಿಕೊಂಡರು. ಸ್ಮಾರಕ ಉಪನ್ಯಾಸ ಮಾಲೆ ಪ್ರಾರಂಭವಾಯಿತು. ಸ್ಮಾರಕ ಸಮಿತಿಯ ಅಧ್ಯಕ್ಷರಾದ ಕೆ. ಬಿ. ಮುನಿವೆಂಕಟರೆಡ್ಡಿ, ಸಂಚಾಲಕ

ರಾದ ವಿಶ್ವೇಶ್ವರಯ್ಯ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಬಿ. ಎಸ್. ಗುಂಡೂರಾಯರು ನನ್ನ ಹಾಗೂ ಶಕುಂತಲಾಬಾಯಿಯ ಮೇಲೆ ಅಪಾರ ದಯೆತೋರಿ ನಮ್ಮಿಬ್ಬರನ್ನೂ "ರಾಜರತ್ನಂ ಸ್ಮಾರಕೋಪನ್ಯಾಸಮಾಲೆ"ಯಲ್ಲಿ ಭಾಗಿಗಳಾಗುವಂತೆ ಮಾಡಿದರು.

ಬೆಂಗಳೂರು ರಾಜಾಜಿನಗರದ ಬಡಾವಣೆಯಲ್ಲಿರುವ ಕುಮಾರವ್ಯಾಸ ಮಂಟಪದಲ್ಲಿ 6-1-1980ರಲ್ಲಿ "ಜಿ. ಪಿ. ರಾಜರತ್ನಂ ಮಕ್ಕಳ ಕಥೆಗಳು" ಉಪನ್ಯಾಸ-ಶಕುಂತಲಾಬಾಯಿಯಿಂದ "ಶಾಂತಿ ಮತ್ತು ಜಪಾನಿನ ಹಿಮಗಿರಿ" ಕವನ ಸಂಗ್ರಹಗಳಿಂದ ಆರಿಸಿದ ಕೆಲವು ಕವನಗಳ ಹಾಡಿಕೆ ನಡೆಯಿತು. ರಾಜರತ್ನಂ ಯಾವುದರ ಸಲುವಾಗಿ ತಮ್ಮ ಜೀವನವನ್ನು ಮುಡಿಪಾಗಿಟ್ಟರೋ ಆ ಬೌದ್ಧ ಜೈನ ಧರ್ಮಗಳ ಜೀವತಂತುಗಳಾದ ಬುದ್ಧ ಮತ್ತು ಬಾಹುಬಲಿ ಸ್ವಾಮಿಗಳ ಮೇಲೆ ರಚಿತವಾಗಿದ್ದ ಕವನಗಳನ್ನೇ ವಾಚನಕ್ಕೆ ಆರಿಸಿಕೊಂಡಿತ್ತು "ಶಾಂತಿ" ಕವನ ಸಂಗ್ರಹದಲ್ಲಿರುವ **"ಗೋಮಟೇಶ್ವರ"** ಒಂದು ಸುಂದರ ಕವನ.

"ಕಲ್ಲು ಮೆಲ್ಲಿತು ಮಾಡಿ ಶಿಲ್ಪಿ ಕೂಗಿದ ಕರೆಗೆ"
ಭಕ್ತಿ ಲಂಪಟನಾಗಿ ಭುವಿಗೆ ಬಂದು
ಬೆಳುಗೊಳದ ಕುಟ್ಟುಟುಕು ಶಬ್ದಗಳ ಶಾಂತಿಯಂ
ಮಾಣದ್ದು ಮಳೆಯುಗ್ರದಲಿ ಬೀಡುಬಿಟ್ಟ
ರಾಕಾಸುಧಾಕರನ ಕಂಡರಿಸಿ ಸನೆದಂಥ
ರೂಪಕೂಪಾರವನು ಸುತ್ತ ಚೆಲ್ಲಿ
ಪರಮನೊಂದದ್ಭುತದ ಸುಳಿವ ತೋರಲು ಜಗಕೆ
ಗೋಮಟೇಶ್ವರನಾಗಿ ನಿಂದೆ ದೇವ

ಎಂದು ಪ್ರಾರಂಭವಾಗುತ್ತದೆ "ಗೋಮಟೇಶ್ವರ" ಕವನ. ಅದರ ಮುಕ್ತಾಯ ಹೀಗಿದೆ-

ಗುರುವರಾ ! ನಿನ್ನನಾ ಮರೆಯೆನೆಂದೆಂದುಂ !
ನೀಡೆನಗೆ ಘನಿಸಿದೀ ಸ್ಥೈರಣೆಯ ಲೇಶಮಾನುಂ ?
ಕರುಣಿಸಾ ನಿನ್ನ ಸಮ್ಯಗ್ ದೃಷ್ಟಿಯಿನಿತಾನುಂ !
ಅರಿಯುಲೆಮುಗಲಿಸುವುದು ನೀನೊರೆವ ವೇದಂಗಳಂ

"ಜಪಾನಿನ ಹಿಮಗಿರಿ" ಕವನ ಸಂಗ್ರಹದಲ್ಲಿರುವ "ಶರಣು ಶರಣು ಸಂಬುದ್ಧ ಗುರು" 1960ರಲ್ಲಿ ಬುದ್ಧಜೀವನ ಇಪ್ಪತ್ತೈದನೆಯ (2,500) ಶತಮಾನೋತ್ಸವ ನಡೆದಾಗ, ಆ ಸಂದರ್ಭದಲ್ಲಿ ಬರೆದದ್ದು. ಬುದ್ಧ ಜೀವನದ ಮತ್ತು ಆತನ ಬೋಧನೆಯ ಸಾರಸರ್ವಸ್ವ ಈ ಪದ್ಯಗಳಲ್ಲಿವೆ. 5 ಪಂಕ್ತಿಗಳ 32 ಪದ್ಯಗಳು. ಒಟ್ಟು ಪಂಕ್ತಿಗಳು 160. ಈ ಪದ್ಯಗಳಿಗೆ ತಸಿಯಾಗಿ 6 ಸಾಲುಗಳಲ್ಲಿ "ಶರಣು ಶರಣು ಸಂಬುದ್ಧ ಗುರು" ಕವನಕ್ಕೆ ಪ್ರಾರಂಭ ಮೀಟುವ ಪದ್ಯವಿದು—

ಆದಿಯಲಿ ಸಂಬುದ್ಧನ ಶ್ರೀ—
ಪಾದಪದ್ಮಕೆ ನಮಿಸಿ, ಹೃದಯದ
ವೇದಿಕೆಯ ಮಧ್ಯದಲಿ ಧರ್ಮದ ದೀಪವನು ಬೆಳಗಿ,
ಸಾದರದೀ ಬಹುಜನರ ಹಿತಸುಖ—
ಕಾ ದಯಾಘನ ಕಂಡು ತಿಳಿಸಿದ
ಮೋದದಾಯಕವಾರ್ಯಮಾರ್ಗಕೆ ಶರಣು ಶರಣೆಂಬೆ

ಅಂದಿನ ಕಾರ್ಯಕ್ರಮದಲ್ಲಿ ಪೂರ್ತಿ "ಶರಣು ಶರಣು ಸಂಬುದ್ಧ ಗುರು" ವಾಚಿಸುವುದಾಗಲಿಲ್ಲ. ಕವನವನ್ನು ಸಂಕ್ಷಿಪ್ತಗೊಳಿಸಿತ್ತು ಕಾಲಮಿತಿಯ ದೃಷ್ಟಿಯಿಂದ. ನಾವು ಆರಿಸಿಕೊಂಡಿದ್ದ ಪದ್ಯಗಳ ಪ್ರಾರಂಭದ ಸಾಲು ಇಂತಿದೆ—ಶರಣು ಶರಣು ಸಂಬಂಧ ಗುರು–ಜ್ಞಾನ (1), ಕಪಿಲ ವಸ್ತುವಿನ ಕಲ್ಪವೃಕ್ಷವೇ। (2), ದೇಶ, ಕೋಶ, ಮನೆ, ತಂದೆ, ಮಡದಿ, ಮಗು, (3) ಆರು ವರುಷದಲೆ ದಾಟುವ ಘೋರ ! (5), ಗೆದ್ದು ಬಂದು ನೀ ವಾರಣಾಸಿಯಲಿ (6), ದಯೆಯೆ ಮೂಲವ್ಮೆ ಸರ್ವಧರ್ಮಕ್ಕೂ ! (7), ಸತ್ತಮಗುವ ತಾನೆತ್ತಿಕೊಂಡು ಬರೆ (11), ಕಂಡಕಂಡವರ ಹಿಡಿದು, ಕಡಿದು , ಅವ– (13), ಮಡದಿಗಿಂತ ಮೇಲಲ್ಲ ಮಿತ್ರರು (20), ಹೆಣ್ಣಿನಿಂದೆ ಪ್ರಜೆ, ಕೋಸಲ ರಾಜಾ (21), ಸದಯಹೃದಯ ! ಪಶುಘಾತಕೆ ನೊಂದುಃ! (22), ದೇವರುಂಟು, ನಾನುಡಿಸಿಹೆ ನವರ (24) ಹೊಸದು ಹೇಳಲಿಕೆ ಬಂದವನಲ್ಲಿ (27) ಮೂವತ್ತೆರದೊಳವೃತವ ಕಂಡ (30) ಎರಡು ಸಾವಿರದ ಮೇಲ್ಮೈನೂರು (31) ಹೀಗೆ ಕಥಾ ಸರಣಿ ಕೆಡದಂತೆ ವಾಚನಮಾಡಿ ಮುಕ್ತಾಯದಲ್ಲಿ

ಶರಣು ಶರಣು ಸಂಬುದ್ಧಗುರು ! ಜ್ಞಾನ ಆರ್ತ
ದಯಾಸಮುದ್ರನೆ ! ಬುದ್ಧ ಗುರು !
ಲೋಕನಾಥ ಸಂಬುದ್ಧ ಗರು ! ಆರ್ತ
ತ್ರಾಣ ಪರಾಯಣ ಬುದ್ಧ ಗುರು
ಶರಣು ಶರಣು ಸಂಬುದ್ಧ ! ಗುರು (32)

ಪದ್ಯ ವಾಚಿಸಿ "ಶರಣು ಶರಣು ಸಂಬುದ್ಧ ಗುರು" ಕವನಕ್ಕೆ ಮಂಗಳಕೊಡಲಾಯಿತು.

"ಗೋದಾದೇವಿಯ ಕನಸು" "ಜಪಾನಿನ ಹಿಮಗಿರಿ" ಕವನ ಸಂಗ್ರಹದಲ್ಲಿ ಮನೋಹ್ಲಾದಕರ ಕವನ. ಶ್ರೀ ವೈಷ್ಣವ ಆಳ್ವಾರುಗಳಲ್ಲಿ ಒಬ್ಬರಾದ ಆಂಡಾಳ್, ಅವರೇ ಗೋದಾದೇವಿ. ಅವರು ಹಾಡಿರುವ 'ನಾಚ್ಚಿಯಾರ್ ತಿರುಮೊಳಿ' ಎಂಬ ದಿವ್ಯ ಪ್ರಬಂಧದಲ್ಲಿ 'ವಾರಣಮಾಯಿರಂ' ಎಂಬ ಒಂದು ದಶಕದ ಕನ್ನಡ ಪದ್ಯಾನುವಾದ "ಗೋದಾದೇವಿಯ ಕನಸು" ಎಂದಿದ್ದಾರೆ ರಾಜರತ್ನಂ. ಅನುವಾದದ ಬಿಗುವು, ಬಿಮ್ಮು ಹಮ್ಮು, ಪದ್ಯಪದ್ಯಗಳಲ್ಲೂ ರಾಜರತ್ನಂತನವನ್ನು ಪ್ರದರ್ಶಿಸಿದೆ. ನಾಲ್ಕು ಚರಣಗಳ ಹನ್ನೊಂದು ಪದ್ಯಗಳಲ್ಲಿ ಗೋದಾದೇವಿಯ ಕನಸು ಕಂಡಿದೆ. ಆದರೆ ನಾವು ಶ್ರೋತೃಗಳಿಗೆ ಗೋದಾದೇವಿಯ ಕನಸು ಕಾಣಿಸಿದುದು 6 ಪದ್ಯಗಳಲ್ಲಿ ಗೋದಾದೇವಿಯ ಕನಸು ಕಾಣಿ—

ಆನೆ ಸಾವಿರ ಸುತ್ತ ಬಳಸಿರಲು ಬಲವಂದು
ನಂಬಿ ನಾರಾಯಣನು ನಡೆದು ಬಹನೆಂದಿದಿರು
ತುಂಬುಪೊಂಗೊಡವಿರಿಸಿ ಪುರದಲೆಲ್ಲೆ ಡೆಗಳಲು
ತೋರಣವ ನೆಟ್ಟಂತೆ—ಕನಸನಾ ಕಂಡೆ ಕೆಳದೀ.

* * *

ನಾಳೆ ಕನ್ನೆಗೆ ಮದುವೆ ಎಂದು ದಿನನಿಶ್ಚಯಿಸಿ,
ಹೊಂಬಾಳೆಂಪಕೆಗಳ ಚೆಲುವುಚಪ್ಪರವಿಡಿಸಿ
ಸಿಂಹಬಲ ಮಾಧವನ್ ಗೋವಿಂದನೆಂದೊಬ್ಬ
ಯುವಕ ನಡೆತಂದಂತೆ—ಕನಸನಾ ಕಂಡೆ ಕೆಳದೀ.

* * *

ಮೈಗೆ ಕುಂಕುಮ, ಕೇಸರಿ ತಂಪು ಚಂದನ ಪೂಸಿ,
ಮಂಗಳದ ಬೀದಿಯಲಿ ಬಲವಂದು ಓಕುಳಿಗೆ
ಅಲ್ಲಿ ಆನೆಯ ಮೇಲೆ ಹೊರಟವನ ಜೊತೆಯಲ್ಲಿ
ಮಜ್ಜನವ ಮಾಡಿದೊಲು—ಕನಸನಾ ಕಂಡೆ ಕೆಳದೀ.

* * *

ಗೋಪಾಲಕನಿಗಾಗಿ ತಾನ್ ಕಂಡ ಕನಸಿನ
ಶ್ರೀ ವೈಷ್ಣವರ ಪೊಗೊಳ್ವ ವಿಲ್ಲಿಪುತ್ತೂರೊಡದೆ ಗೋದೆ ಪೇಳ್ದ
ಪಾವೆನ ತಮಿಳ್ ಮಾಲೆಯಿದೈದು ವಲ್ಲವರ್
ಇಷ್ಟರಹ ನಲ್ ಮಕ್ಕಳನು ಪಡೆದು ಆನಂದಿಸುವರು.

* * *

ಕಾಲದ ಪರಿಮಿತಿಗೆ ರಾಜರತ್ನಂ ಸ್ಮಾರಕಕಾರ್ಯಕ್ರಮ ಮುಗಿಯ ಬೇಕಾಗಿದ್ದ ಕಾರಣ "ಗೋದಾದೇವಿಯ ಕನಸು" ಆರು ಪದ್ಯಗಳನ್ನು ಮಾತ್ರ ಆರಿಸಿಕೊಳ್ಳುವುದು ಅನಿವಾರ್ಯವಾಗಿತ್ತು. ಆರಿಸಿಕೊಂಡಿದ್ದ ಸಾಹಿತ್ಯವೆಲ್ಲವೂ ಅಪರೂಪವಾದದ್ದು ಮತ್ತು ಈವರೆಗೆ ಪ್ರಸಾರಗೊಳ್ಳದ್ದು. ಆದುದರಿಂದ ಶ್ರೋತೃಗಳು ತನ್ಮಯಚಿತ್ತರಾಗಿ ಕೇಳಿದರು. ನಮ್ಮಿಬ್ಬರ ಕಾರ್ಯಕ್ರಮ ಯಶಸ್ಸಿನ ಶಿಖರ ಮುಟ್ಟಿತು.

ರಾಜರತ್ನಂ ಸ್ಮರಣೆ ಸ್ಫುರಿಸಿದಾಗಲೆಲ್ಲ ನನಗೆ ಅವರ ವಿಷಯದಲ್ಲಿ ಒಂದೊಂದೆ ಸ್ನೇಹ ಬೆಸುಗೆಯ ಬಾಂಧವ್ಯ ಮನಸ್ಸಿಗೆ ಹೊಳೆಯುತ್ತದೆ. 5–12–1968ರ ದಿವಸ ಅವರು ಹುಟ್ಟಿ 60 ವರ್ಷ ಸಂದಿತ್ತು. ನ್ಯಾಷನಲ್ ಹೈಸ್ಕೂಲ್ ಸಭಾಂಗಣದಲ್ಲಿ ಆ ದಿನ ಸಂಜೆ ಕನ್ನಡ ನಾಡಿನ ಅತ್ಯಂತ ಹಿರಿಯರುಗಳಾದ ಡಿ. ವಿ. ಜಿ. ಮತ್ತು ಮಾಸ್ತಿಯವರುಗಳ ಸಮಕ್ಷಮದಲ್ಲಿ ಸಂಭ್ರಮದ ಷಷ್ಟಿಪೂರ್ತಿ ಸಮಾರಂಭ ನಮ್ಮ ಸಾಹಿತಿ ಅಣ್ಣ ರಾಜರತ್ನಂಗೆ. ನಾನು, ಶಕುಂತಲಾಬಾಯಿ ಅಂದು ಸಂಭ್ರಮದಲ್ಲಿ ಪಾಲ್ಗೊಳ್ಳುವ ಹಾಗಿಲ್ಲ. 5ನೆಯ ದಿನಾಂಕದ ಬೆಳಗ್ಗೆಯೇ ಚಿಕ್ಕಮಗಳೂರಿನ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕು. ಆದುದರಿಂದ 4ನೆಯ ದಿನಾಂಕದ ರಾತ್ರಿಯೇ ಮಲ್ಲೇಶ್ವರದ "ವಿದೇಹ" ಗೃಹಕ್ಕೆ ದಂಪತಿಗಳು ಹೋದೆವು. ಶಕುಂತಲಾಬಾಯಿ ರಾಜರತ್ನಂಗೆ ಹಣೆಗೆ

ಕುಂಕುಮವಿಟ್ಟು ಶುಭ್ರಶ್ವೇತ ವರ್ಣದ ಖಾದಿ ಅಂಗವಸ್ತ್ರ ಹೊದಿಸಿ, ಪಾದ ಮುಟ್ಟಿ ನಮಸ್ಕರಿಸಿದರು. ನಾನೂ ಪಾದ ಮುಟ್ಟಿ ಕೈಮುಗಿದೆ. ರಾಜ ರತ್ನಂರ ಕಣ್ಣುಗಳಲ್ಲಿ ನೀರಾಡಿತು. "ನಾಳೆಯ ಸಂಭ್ರಮ ಉತ್ಸವಕ್ಕಿಂತ ಮಿಗಿಲಾದದ್ದು ಈ ಸರಳ ಸಮಾರಂಭ" ಎಂದು ನನ್ನ ಬೆನ್ನು ತಟ್ಟಿದರು. ಇಂಥ ಅಪರಂಜಿ ರಾಜರತ್ನಂರನ್ನು ಹೇಗೆ ಮರೆತೇವು ನಾವು.

ಬೌದ್ಧ ಸಾಹಿತ್ಯವನ್ನು ಕನ್ನಡಕ್ಕೆ ವಿಪುಲವಾಗಿ ಒದಗಿಸಿದ ಮಹಾ ಸಾಹಿತಿ ರಾಜರತ್ನಂ. ಆದರೆ ನನ್ನ ಬಾಲ್ಯಮಿತ್ರ ಎಸ್. ವಿ. ಪರಮೇಶ್ವರ ಭಟ್ಟರು ಅಶ್ವಘೋಷ ಕವಿಯ ಸಂಸ್ಕೃತ ಪದ್ಯದ ಸರಳ ಪದ್ಯಾನುವಾದ "ಕನ್ನಡ ಬುದ್ಧಚರಿತೆ"ಯನ್ನು ನಮಗೆ ಕೊಟ್ಟು ಉಪಕಾರ ಮಾಡಿದ್ದಾರೆ. ಈ ಕಾವ್ಯ ಕನ್ನಡಕ್ಕೆ ಬಂದುದು 1974ರಲ್ಲಿ. ವಿದ್ವಾಂಸರು "ಕನ್ನಡ ಬುದ್ಧ ಚರಿತೆ"ಯ ಮೇಲೆ ಕಣ್ಣಾಡಿಸಿರಬಹುದು. ಅತ್ಯುತ್ತಮ ಸಾಹಿತ್ಯವನ್ನು ಅಪೇಕ್ಷಿಸುವ ಕನ್ನಡಾಭಿಮಾನಿಗಳೂ ಅಶ್ವಘೋಷನ "ಕನ್ನಡ ಬುದ್ಧ ಚರಿತೆ"ಯನ್ನು ನೋಡಿರಬಹುದು. ಆದರೆ ಈ ಕಾವ್ಯ ಸಾರ್ವಜನಿಕ ಸಹೃದಯರನ್ನು ಮುಟ್ಟಬೇಕಲ್ಲ. ಆ ಪ್ರಯತ್ನ ಈ ಸಲ ನಡೆಯಿತು. ನಾನು ಕಾರಣಾಂತರದಿಂದ 19–4–81ರಲ್ಲಿ ಮೈಸೂರಲ್ಲಿದ್ದೆ. ಪರಮೇಶ್ವರ ಭಟ್ಟರನ್ನು ಸಂದರ್ಶಿಸಿದೆ. ನನ್ನ ಗಮಕಿ ಪ್ರವಚನಕಾರ ದಿಬ್ಬೂರು ಶ್ರೀನಿವಾಸರಾಯರಿಗೆ ಪರಮೇಶ್ವರ ಭಟ್ಟರ "ಕನ್ನಡ ಬುದ್ಧ ಚರಿತೆ"ಯ ಒಂದು ಪ್ರತಿ ಬೇಕಾಗಿತ್ತು. ಅದು ಭಟ್ಟರನ್ನು ಕಾಣುವುದಕ್ಕೆ ಒದಗಿಸಿದ ಸಂದರ್ಭ. ಶ್ರೀನಿವಾಸರಾಯರ ಪ್ರತಿ ಜೊತೆಗೆ ನನಗೂ ಭಟ್ಟರು "ಸ್ನೇಹದ ಕಾಣಿಕೆಯಾಗಿ" ಎಂದು ಬರೆದು "ಕನ್ನಡ ಬುದ್ಧ ಚರಿತೆ"ಯ ಪ್ರತಿ ದಯಪಾಲಿಸಿದರು. ಅಲ್ಲಿಯೇ ಅವರ ಮುಂದೆ ಕಣ್ಣಾಡಿಸಿದೆ. ಭಟ್ಟರು ಈ ಕಾವ್ಯವನ್ನು ಗಮಕದಲ್ಲಿ ತರಬಹುದು ಎಂಬ ಸೂಚನೆ ನೀಡಿದರು. ನಾನು "ಯಾಕಾಗಬಾರದು ?" ಎಂದೆ. ಯೋಗಾನುಯೋಗ. ಬೆಂಗಳೂರಲ್ಲಿ ಗಾಂಧೀನಗರದಲ್ಲಿ ಪ್ರತಿಷ್ಠಾಪನೆಯಾಗಿರುವ ಮಹಾಬೋಧಿ ಸೊಸೈಟಿ 2525 ವರ್ಷಗಳ ಬುದ್ಧ ಜಯಂತಿ ಕಾರ್ಯಕ್ರಮವನ್ನು 1978ರ ಮೇ ತಿಂಗಳ 12 ರಿಂದ 18ರ ವರೆಗೆ ಹಮ್ಮಿಕೊಂಡಿತ್ತು. ಕಡೆಯ ದಿನ ನಿವೃತ್ತ ಶ್ರೇಷ್ಠ ನ್ಯಾಯಮೂರ್ತಿ ಟಿ. ಕೆ. ತುಕೋಳ್ ಅಧ್ಯಕ್ಷರು ಪ್ರೊ. ಎಲ್. ಎಸ್. ಶೇಷಗಿರಿರಾವ್ ಡಾ|| ಎಂ. ಚಿದಾನಂದಮೂರ್ತಿ ಬೆಂಗಳೂರು ವಿಶ್ವವಿದ್ಯಾನಿಲಯದ ನಿವೃತ್ತ ಉಪಕುಲಪತಿ ಪ್ರೊ|| ಎಚ್. ನರಸಿಂಹಯ್ಯ ಕಾರ್ಯಕ್ರಮದಲ್ಲಿ ಭಾಗ ವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಭಾಗವಹಿಸಿ "ಕನ್ನಡ ಬುದ್ಧ ಚರಿತೆ"ಯಿಂದ ಒಂದು ಕಥಾ ಸಂದರ್ಭವನ್ನು ವಾಚನ ಮಾಡಬೇಕೆಂದು ಶಕುಂತಲಾಬಾಯಿಗೆ ಕರೆಬಂತು. 1956ರಲ್ಲಿ 2500 ವರ್ಷಗಳ ಬುದ್ಧ ಜಯಂತಿಯ ಆಚರಣೆಯನ್ನು ಬೆಂಗಳೂರಿನ ಮಹಾಬೋಧಿ ಸೊಸೈಟಿ ಆಚರಿಸಿದಾಗ ಶಕುಂತಲಾಬಾಯಿ ಪಂಡಿತ ಪಟ್ಟಾಭಿರಾಮಯ್ಯ ರಚಿಸಿದ್ದ "ಬುದ್ಧ ಚರಿತಾಮೃತ" ಕೃತಿಯನ್ನು ಮಹಾಬೌದ್ಧ ಭಿಕ್ಷುವೂ ಗಾಂಧಿನಗರದ ಮಹಾಬೋಧಿ ಸೊಸೈಟಿಯ ಅಧ್ಯಕ್ಷರೂ ಆದ ಬುದ್ಧ ರಕ್ಷಿತ

ತೀರಾ ಅವರ ಪುಣ್ಯ ಸನ್ನಿಧಿಯಲ್ಲಿ ವಾಚನ ಮಾಡಿದ್ದರು. ಈಗ 25 ವರ್ಷಗಳ ನಂತರ 'ಕನ್ನಡ ಬುದ್ಧ ಚರಿತೆ'ಯ ವಾಚನ ಮಾಡುವ ಸಂದರ್ಭ ಒದಗಿತ್ತು. 13ನೆಯ ಸರ್ಗ "ಮಾರಪರಾಜಯ" ಕಥಾ ಸಂದರ್ಭದಿಂದ 37 ಪದ್ಯಗಳನ್ನು ವಾಚನ ಮಾಡಿದರು ಈ ಸರ್ಗದಲ್ಲಿ ನಾಲ್ಕು ಚರಣಗಳ 72 ಪದ್ಯಗಳಿವೆ. ಭಗವತ್ಪ್ರಸೂತಿ ಮೊದಲನೆಯ ಸರ್ಗ. ಅದರ ಪ್ರಾರಂಭ ಹೀಗೆ—

"ಶ್ರೀಯಸುರೆ ಕುಡುದಂದು ಥಾತೃವನು ಗೆಲ್ದವನು
ಕತ್ತಲೆಯ ತೊಡೆವಂದು ರವಿಯ ಗೆಲ್ದಿವನು
ತಾಪವನು ಕಳೆವಂದು ಚಂದ್ರನನು ಗೆಲ್ದವನು
ವಂದಿತನು ಅನುಪಮನು ಅಂಥ ಅರ್ಹತನು"

ಬುದ್ಧಚರಿತೆಯ ಮುಕ್ತಾಯ 28ನೆಯ ಸರ್ಗ "ಧಾತು ವಿಭಜನೆ" ಯೆಂಬ ಸಂದರ್ಭದ್ದು.

"ಆರು ಓದುವರಾರು ಕೇಳುವರಿಂಥ ಮಹಿಮನ ಚರಿತೆಯ
ಅವರಿಗಿಲ್ಲವೊ ಮತ್ತೆ ಮರುಹುಟ್ಟೆಂಬ ದುಃಖ ನಿಶ್ಚಯ.
ಮುನಿಯ ಭಕ್ತಿಯನಿದನು ಪೇಳ್ದೆನು
ಶಾಸ್ತ್ರವನು ಅನುಸರಿಸಿ ಪೇಳ್ದೆನು
ಲೋಕಹಿತಕೆಂದಿದನು ಪೇಳ್ದೆನು
ಲೋಕಶಾಂತಿಯ ಬಯಸಿ ಪೇಳ್ದೆನು
ಕಾವ್ಯಕಲೆಯನು ತಿಳಿಯೆ ಪೇಳ್ದುದಿಲ್ಲವು
ಕೋವಿದತ್ವವ ಮೆರೆಯ ಪೇಳ್ದುದಿಲ್ಲವು"

ಪ್ರಾರಂಭದ ಹಾಗೂ ಅಂತ್ಯದ ಈ ಪದ್ಯಗಳನ್ನು ಪ್ರಾರಂಭಕ್ಕೆ ಮುಕ್ತಾಯಗಳಿಗೆ ಉಪಯೋಗಿಸಿಕೊಂಡಿತ್ತು. ವಾಚನ ಮತ್ತು ಪ್ರಾಸಂಗಿಕ ನಿರೂಪಣೆ ಜನಹೃದಯ ತಾಗಿತು.

ಕಾರ್ಯದರ್ಶಿಗಳು "ಪರಮೇಶ್ವರ ಭಟ್ಟರ ಕನ್ನಡ ಬುದ್ಧ ಚರಿತೆ" ಕಾವ್ಯ ವಾಚನ ತಮ್ಮ ಸಂಘದಲ್ಲಿ ಮತ್ತೆ ಮತ್ತೆ ಆಗಬೇಕೆಂದು ಆಶಿಸಿ, ಉತ್ತಮ ಕಾವ್ಯ ವಾಚನ ನಡೆಸಿಕೊಟ್ಟು ಸಂಘಕ್ಕೆ ತುಂಬ ಉಪಕಾರ ಮಾಡಿದರೆಂದು ಸಂಘಕ್ಕೆ ವಂದಿಸಿದರು.

ಬುದ್ಧ ಭಗವಾನನ ಬಗೆಗೆ ಒಂದು ಅತ್ಯುತ್ತಮ ಕೃತಿಯನ್ನು ನಮ್ಮ ಜನಕ್ಕೆ ಪರಿಚಯಿಸಿದ ತೃಪ್ತಿ ಶಕುಂತಲಾಬಾಯಿಗುಂಟಾಯಿತು. ನನಗಾದರೋ ನನ್ನ ಆತ್ಮೀಯ ಸಾಹಿತಿ ಗೆಳೆಯರಾದ ಪರಮೇಶ್ವರ ಭಟ್ಟರಿಗೆ ಒಂದು ಸ್ನೇಹ ಕಾಣಿಕೆ ಕಾವ್ಯ ವಾಚನ ರೂಪವಾಗಿ ಕೊಟ್ಟೆವಲ್ಲ ಎಂಬ ಸಂತೋಷ ತುಂಬಿ ಬಂದಿತ್ತು. ಹೊಸ ಛಂದಸ್ಸಿನ "ಕನ್ನಡ ತಾಯ ನೋಟ"ದಿಂದ ಪ್ರಾರಂಭವಾದ ಆಧುನಿಕ ಕಾವ್ಯವಾಚನ "ಗೊಲ್ಗೊಥಾ" "ವೈಶಾಖಿ"ಗಳಂಥ ಕಾವ್ಯಗಳಿಗೂ ಪಸರಿಸಿ ಕ್ರೈಸ್ತ ಬೌದ್ಧ ಸಾಹಿತ್ಯಗಳನ್ನು ನಮ್ಮ ಕನ್ನಡ ಸಾಹಿತ್ಯಾಭಿಮಾನಿಗಳಿಗೆ ಪರಿಚಯಿಸುವ ಗಮಕಕಲಾ ಕೈಂಕರ್ಯ ನಮಗೆ ಲಭ್ಯವಾದುದು ನಮ್ಮ ಸುಕೃತವಲ್ಲವೇ.

೫. ವೀರಶೈವ ಕಾವ್ಯಚಕ್ರ-ಗಮಕ ವಾಚನದಲ್ಲಿ

ಬೆಂಗಳೂರಿನ ಸರ್ಪಭೂಷಣ ಮಠಕ್ಕೆ ಗಮಕವಾಚನ ಸೇವೆ

ಅಖಿಲ ಕರ್ಣಾಟಕ ಮಕ್ಕಳ ಕೂಟದ ಬಿ. ಎಂ. ಶ್ರೀ. ಸನ್ಮಾನ ಸಭೆಗೆ ಬಂದಿದ್ದ ಸಾಹಿತಿ–ವಿದ್ವಾಂಸರುಗಳಲ್ಲಿ "ಕೀರ್ತನ ಕೇಸರಿ" ಬಿ. ಶಿವಮೂರ್ತಿಶಾಸ್ತ್ರಿಯೂ ಒಬ್ಬರು. ಅವರು "ಶರಣ ಸಾಹಿತ್ಯ" ಮಾಸಪತ್ರಿಕೆ, "ಸ್ವತಂತ್ರ ಕರ್ಣಾಟಕ"ದಿನ ಪತ್ರಿಕೆಗಳನ್ನು ಬೆಂಗಳೂರಿನಿಂದ ಹೊರಡಿಸಬೇಕೆಂದು ಯೋಚನೆಯಿಂದ ತುಮಕೂರು ಬಿಟ್ಟು ಬೆಂಗಳೂರಿಗೆ ಬಂದು ಇಲ್ಲಿಯೇ ನೆಲೆಸಿದ್ದರು. ನಾನು ವಿದ್ಯಾರ್ಥಿಯಾಗಿದ್ದಾ ಗಲೇ ಶಿವಮೂರ್ತಿ ಶಾಸ್ತ್ರಿಗಳ ಶಿವಕಥೆಗಳನ್ನು ಕೇಳಿ ಮೆಚ್ಚಿಕೊಂಡಿದ್ದೆ. 1930–31 ಇರಬಹುದು. ಶಾಸ್ತ್ರಿಗಳ ಶಿವಕಥೆಗಳು ಸುಮಾರು ಒಂದು ತಿಂಗಳು ಕಾಲ ಚಿಕ್ಕ ಪೇಟೆಯ ಮಹಂತ ಮಠದಲ್ಲಿ ನಡೆದವು. ಆಗ ಅಸಹಕಾರ ಚಳವಳಿಯ ದಿನಗಳು. ಶಾಸ್ತ್ರಿಗಳು ತಮ್ಮ ಕಥೆಗಳಲ್ಲಿ ರಾಜಕೀಯವನ್ನು ತಂದು ನಿರ್ಭಯವಾಗಿ ಸರಕಾರವನ್ನು ಟೀಕಿಸಿ ಹೇಳುತ್ತಿದ್ದ ಮಾತುಗಳು ಶ್ರೋತೃಗಳ ಮನಸ್ಸನ್ನು ಅಲುಗಾಡಿಸಿಬಿಡುತ್ತಿದ್ದವು "ಕೀರ್ತನ ಕೇಸರಿ ಗರ್ಜಿಸುತ್ತಿದೆ" ಎಂದು "ವಿಶ್ವ ಕರ್ಣಾಟಕ" ವಾರಪತ್ರಿಕೆಯ ಸಂಪಾದಕ ತಿರುಮಲೆ ತಾತಾಚಾರ್ಯಶರ್ಮ ತಮ್ಮ ಪತ್ರಿಕೆಯಲ್ಲಿ ಬರೆದಿದ್ದರು. ದೇಶ ಭಕ್ತಿಯ ಅಮಲಿನಲ್ಲಿದ್ದ ನನ್ನ ಎಳೆಯ ಮನಸ್ಸಿನ ಮೇಲೆ ಶಾಸ್ತ್ರಿಗಳ ಶಿವಕಥೆಗಳು ತುಂಬ ಪರಿಣಾಮವನ್ನುಂಟುಮಾಡಿದವು. ನಾನು ಅವರ ಪರಿಚಯ ಮಾಡಿಕೊಂಡೆ. ನಾವಿದ್ದ ಅಲಸೂರು ಪೇಟೆಯಲ್ಲಿ ನಡೆದ ಗಣೇಶೋತ್ಸವದಲ್ಲಿ ಶಾಸ್ತ್ರಿಗಳ ಶಿವಕಥೆ ನಡೆಯಿತು. ನಾನು ಕಥೆಯ ಕೊನೆಯಲ್ಲಿ ಶಾಸ್ತ್ರಿಗಳಿಗೆ ವಂದನಾರ್ಪಣೆ ಮಾಡಿದೆ. ನನ್ನ ವಂದನಾ ರ್ಪಣೆ ಶಿವಮೂರ್ತಿ ಶಾಸ್ತ್ರಿಗಳಿಗೆ ತುಂಬ ಮೆಚ್ಚಿಗೆಯಾಯಿತು. ಹೀಗೆ ನನ್ನ ಅವರ ಪರಿಚಯ 1931ರಲ್ಲೇ ಆಗಿತ್ತು. ಈಗ ಅವರು ಬಿ. ಎಂ. ಶ್ರೀ. ಸನ್ಮಾನ ಸಭೆ ಮುಗಿ ಯುತ್ತಲೇ ನಮ್ಮೆಡೆಗೆ ಧಾವಿಸಿದರು. "ಶಕುಂತಲಾಬಾಯಿ, ನಿಮ್ಮ ವಾಚನ ಅದ್ಭುತ ವಾಗಿತ್ತು. ನೀವು ಒಂದು ದಿನ ನಮ್ಮ ಮನೆಗೆ ಬಂದು ಕಾವ್ಯವಾಚನ ಮಾಡಬೇಕು ಪಾಂಡುರಂಗರಾವ್, ನೀವು ಒಪ್ಪಿಕೊಳ್ಳಬೇಕು" ಎಂದರು. ನಾವು ಶಾಸ್ತ್ರಿಯವರ ಆಹ್ವಾನವನ್ನು ಸ್ವೀಕರಿಸಿದೆವು.

ಶಿವಮೂರ್ತಿ ಶಾಸ್ತ್ರಿಗಳು ಮಲ್ಲೇಶ್ವರದಲ್ಲಿ ಶ್ರೀ ರಾಮಮಂದಿರದ ಬೀದಿ ಸಾಲಿನಲ್ಲಿ ಮನೆ ಮಾಡಿದ್ದರು. ಒಂದು ಭಾನುವಾರ ಸಂಜೆ ಅವರ ಮನೆಯಲ್ಲಿ ಶಕುಂತಲಾ ಬಾಯಿಯ ಕಾವ್ಯವಾಚನ ಏರ್ಪಾಡಾಯಿತು. ಬೆನಗಲ್ ರಾಮರಾವ್, ಎಂ. ಪಿ. ಎಲ್. ಶಾಸ್ತ್ರಿ, ಎಸ್. ಜಿ. ನರಸಿಂಹಯ್ಯ ಮೊದಲಾದ ಮಲ್ಲೇಶ್ವರ ಬಡಾವಣೆಯ ಪ್ರಮು ಖರು. ಶಾಸ್ತ್ರಿಗಳ ಮನೆಯಲ್ಲಿ ಸೇರಿದ್ದರು. ಶಕುಂತಲಾಬಾಯಿಯು "ಪ್ರಭುಲಿಂಗಲೀಲೆ" ಯಿಂದ "ಮಹಾದೇವಿಯಕ್ಕನ ವಿರಕ್ತಿ" ಭಾಗವನ್ನು ಒಂದು ಗಂಟೆಯಷ್ಟು ದೀರ್ಘಕಾಲ

ಓದಿದರು. ಶಾಸ್ತ್ರಿಗಳು ಸಂತೋಷದಿಂದ ಉಬ್ಬಿಹೋದರು. ವಾಚನ ಮೆಚ್ಚಿ ಭಾವ ಪರವಶರಾಗಿ ಚಪ್ಪಾಳೆ ತಟ್ಟಿದ್ದೂ ತಟ್ಟಿದ್ದೆ. ಕಾವ್ಯವಾಚನ ಮುಗಿಯಿತು. ಶ್ರೋತೃ ಗಳೆಲ್ಲರೂ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು. ಶಕುಂತಲಾಬಾಯಿ ಅಭಿಮಾನಿ ಗಳ ಮನೆಗಳಲ್ಲಿ ಕಾವ್ಯವಾಚನ ಮಾಡುವ ಪರಿಪಾಟ ಬೆಳೆಯುವುದಕ್ಕೆ ಶಾಸ್ತ್ರಿಗಳ ಮನೆ ಯಲ್ಲಿ ಮಾಡಿದ ಕಾವ್ಯವಾಚನ ಅಂಕುರಾರ್ಪಣವಾಯಿತು.

ಶಿವಮೂರ್ತಿ ಶಾಸ್ತ್ರಿಗಳು ಗುಣಗ್ರಾಹಿಗಳು. ಕೆಲವೇ ತಿಂಗಳುಗಳಲ್ಲಿ ಅವರು "ಶರಣಸಾಹಿತ್ಯ" ಮಾಸಪತ್ರಿಕೆಯನ್ನು ಪ್ರಾರಂಭಿಸಿದರು. ಪತ್ರಿಕೆಯ ಉದ್ಘಾಟನಾ ಸಮಾರಂಭದಲ್ಲಿ ಶಕುಂತಲಾಬಾಯಿಯ ಕಾವ್ಯವಾಚನದ ಕಾರ್ಯಕ್ರಮ ಏರ್ಪಾಡಾ ಯಿತು. ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರ ಅಧ್ಯಕ್ಷತೆ. ಕನ್ನಡ ಸಾಹಿತ್ಯ ಪರಿಷತ್ತಿ ನಲ್ಲಿ ಶರಣ ಸಾಹಿತ್ಯ ಮಾಸ ಪತ್ರಿಕೆಯ ಉದ್ಘಾಟನಾ ಸಮಾರಂಭ. "ಅಭಿನವ ಅಲ್ಲಮ" ರೆಂದು ಭಕ್ತಾದಿಗಳ ಭಕ್ತಿಗೆ ಪಾತ್ರರಾಗಿದ್ದ ಸರ್ಪಭೂಷಣ ಮಠದ ಮಹಾದೇವಸ್ವಾಮಿ ಗಳಾದಿಯಾಗಿ ನಗರದ ಪ್ರಖ್ಯಾತ ವೀರಶೈವ ಬಂಧುಗಳು ಬಂದಿದ್ದರು. ನಗರದ ಪ್ರಸಿದ್ಧ ಸಾಹಿತಿಗಳು ಆಗಮಿಸಿದ್ದರು. ಆ ದಿನದ ಸಭೆಗೆ ಸೂಕ್ತವಾಗಿರುವಂತೆ ನಾವು ಭೀಮ ಕವಿಯ "ಬಸವಪುರಾಣ"ದಿಂದ ಕೋಳೂರು ಕೊಡಗೂಸಿನ ಕಥಾಭಾಗವನ್ನು ಆರಿ ಸಿದ್ದೆವು. ಶಕುಂತಲಾಬಾಯಿಯ ಬಸವಪುರಾಣದ ವಾಚನ ಸುಮಾರು ಅರ್ಧ ಗಂಟೆಯ ಕಾಲ ನಡೆಯಿತು. ಜನಮೆಚ್ಚುಗೆಗೆ ಪಾತ್ರವಾಯಿತು. ಸ್ವತಂತ್ರ ಕರ್ಣಾಟಕ ದಿನ ಪತ್ರಿಕೆ ಪ್ರಾರಂಭವಾದಾಗ ಮುದವೀಡು ಕೃಷ್ಣರಾಯರು ದಯಮಾಡಿಸಿದ್ದರು. ಆಗಲೂ ಶಕುಂತಲಾಬಾಯಿಯ ವೀರಶೈವ ಕಾವ್ಯವಾಚನ ನಡೆಯಿತು.

ಸರ್ಪಭೂಷಣ ಮಠದಲ್ಲಿ ಮಹಾದೇವಸ್ವಾಮಿಗಳು ಯುಗಾದಿ ಹಬ್ಬದಲ್ಲಿ ಮೂರು ದಿವಸಗಳು ಕ್ರಮವಾಗಿ ಅಲ್ಲಮಪ್ರಭು, ನಿಜಗುಣಶಿವಯೋಗಿಗಳು ಮತ್ತು ಸರ್ಪ ಭೂಷಣ ಶಿವಯೋಗಿಗಳ ಜಯಂತಿಗಳನ್ನು ತಪ್ಪದೆ ಆಚರಿಸುತ್ತಿದ್ದರು. ಶಿವಮೂರ್ತಿ ಶಾಸ್ತ್ರಿಗಳು ವರ್ಷವೂ ತಪ್ಪದೆ ಈ ಮೂವರು ಮಹಾಪುರುಷರ ಮೇಲೆ ಉಪನ್ಯಾಸ ಮಾಡುತ್ತಿದ್ದರು. ಅವರು ಸ್ವಾಮಿಗಳಿಗೆ ಶಕುಂತಲಾಬಾಯಿಯಿಂದ "ಪ್ರಭುಲಿಂಗ ಲೀಲೆ"ಯ ವಾಚನವಿಡಿಸುವಂತೆ ಸಲಹೆ ಮಾಡಿದರು. ಸರ್ಪಭೂಷಣ ಮಠದಿಂದ ಕರೆ ಬಂತು. ಯುಗಾದಿ ಹಬ್ಬದ ಸಂಜೆ ಸರ್ಪಭೂಷಣ ಮಠದಲ್ಲಿ "ಪ್ರಭುಲಿಂಗಲೀಲೆ" ಕಾವ್ಯವಾಚನ ಮಾಡಲು ಒಪ್ಪಿಕೊಂಡೆವು. ಈ ಸಲ "ಮಹಾದೇವಿಯಕ್ಕನ ವಿರಕ್ತಿ" ಕಥಾಭಾಗವನ್ನು ಬಿಟ್ಟು ಪ್ರಭುಲಿಂಗಲೀಲೆ ಸಂಗ್ರಹದಲ್ಲಿನ ಹತ್ತನೆಯ ಗತಿಯ "ಸಿದ್ಧ ರಾಮಯ್ಯಗೆ ಉಪದೇಶ" ಕಥಾ ಭಾಗವನ್ನು ಆರಿಸಿಕೊಂಡೆವು. "ಮಹಾದೇವಿಯಕ್ಕನ ವಿರಕ್ತಿ" ಪದ್ಯಗಳಿಗೆ ಅಕ್ಕನ ವಚನಗಳನ್ನು ಸಂದರ್ಭೋಚಿತವಾಗಿ ಸೇರಿಸಿಕೊಂಡು ವಾಚನ ಮಾಡಿದಂತೆ ಈಗಲೂ ಸಿದ್ಧರಾಮಯ್ಯಗೆ ಉಪದೇಶ ಕಥಾಭಾಗದ ಪದ್ಯಗಳಿಗೆ ಸೂಕ್ತವಾಗಿ ಹೊಂದುವಂತೆ ಸಿದ್ಧರಾಮ ಅಲ್ಲಮಪ್ರಭುಗಳ ವಚನಗಳನ್ನೂ ಸೇರಿಸಿ ಕೊಂಡು ಶಕುಂತಲಾಬಾಯಿ ವಾಚನಮಾಡಿದರು. ಪ್ರಭುಲಿಂಗ ಲೀಲೆಯ ಪ್ರಯೋಗ

ಇಲ್ಲೂ ಯಶಸ್ವಿಯಾಯಿತು. ಶಕುಂತಲಾಬಾಯಿ ಸರ್ಪಭೂಷಣ ಮಠದಲ್ಲಿ ಪ್ರಭು ಜಯಂತಿಉತ್ಸವದಲ್ಲಿ ಪ್ರತಿವರ್ಷವೂ ತಪ್ಪದೆ ಪ್ರಭುಲಿಂಗಲೀಲೆ ಕಾವ್ಯವಾಚನ ಮಾಡು ವುದು ವಾಡಿಕೆಯಾಗಿ ಹೋಯಿತು. ಸರ್ಪಭೂಷಣ ಮಠ ಬಹಳ ವರ್ಷಗಳವರೆಗೆ ಆಹ್ವಾನ ತಪ್ಪಿಸದೆ ಶಕುಂತಲಾಬಾಯಿಯ ಪ್ರಭುಲಿಂಗಲೀಲೆ ಕಾವ್ಯವಾಚನದ ಸೇವೆ ಯನ್ನು ಸ್ವೀಕರಿಸುತ್ತಲೇ ಇತ್ತು. ಆ ಸಂದರ್ಭಗಳಲ್ಲಿ ನಮ್ಮ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಸನ್ಮಾನ್ಯರಾದ ಸಿದ್ದವ್ವನಹಳ್ಳಿ ನಿಜಲಿಂಗಪ್ಪ, ಬಿ. ಡಿ. ಜತ್ತಿ, ವೀರೇಂದ್ರ ಪಾಟೀಲ್ ಮೊದಲಾದವರು ಸಭಾಧ್ಯಕ್ಷರುಗಳಾಗಿ ಶಕುಂತಲಾಬಾಯಿಯ ಕಾವ್ಯವಾಚನಗಳನ್ನು ಕೇಳಿ ಆನಂದಪಟ್ಟಿದ್ದಾರೆ.

ಸರ್ಪಭೂಷಣ ಮಠದ ಪ್ರಭುಜಯಂತಿ ಕಾರ್ಯಕ್ರಮವನ್ನು ನೆನೆಸಿಕೊಂಡಾಗ ಒಂದು ಸಂಗತಿ ಜ್ಞಾಪಕಕ್ಕೆ ಬರುತ್ತದೆ. ಒಂದು ಸಲ ಎಂ. ಆರ್. ಶ್ರೀನಿವಾಸಮೂರ್ತಿ ಗಳ ಉಪನ್ಯಾಸ "ಅಲ್ಲಮ ಪ್ರಭು" ಶಕುಂತಲಾಬಾಯಿಯ "ಪ್ರಭುಲಿಂಗಲೀಲಾ"ಕಾವ್ಯ ವಾಚನ, ಎರಡೂ ಒಂದೇ ಕಾರ್ಯಕ್ರಮದಲ್ಲಿ ಏರ್ಪಾಡಾಗಿದ್ದವು. ಮಹಾದೇವ ಸ್ವಾಮಿಗಳು ಇನ್ನೂ ಕೈವಲ್ಯ ಸೇರಿರಲಿಲ್ಲ. ಎಂ. ಆರ್. ಶ್ರೀ.ಯವರು ವೀರಶೈವಧರ್ಮ ಸಾಹಿತ್ಯಗಳನ್ನು ಕುರಿತು ಅಧಿಕಾರವಾಣಿಯಿಂದ ನುಡಿಯುವ ಮಹಾ ವಿದ್ವಾಂಸರು. ಅವರು ಅಲ್ಲಮಪ್ರಭುವನ್ನು ಕುರಿತು ತಮ್ಮ ಉಪನ್ಯಾಸದಲ್ಲಿ "ಅಲ್ಲಮ ಪ್ರಭು ವೀರಶೈವ ಸಮಾಜಕ್ಕೆ ಮಾತ್ರ ಮೀಸಲಾದ ಮಹಾಪುರುಷನಲ್ಲ. ಆತ ವಿಶ್ವಮಾನವ ಸಮಾಜಕ್ಕೆ ಸೇರಿದ ವಿಶ್ವಮಾನವ ಕಾರಣಪುರುಷ. ಅದಕ್ಕೇ ವೀರ ವೈಷ್ಣವರಾದ ನಾನು ಮತ್ತು ಶಕುಂತಲಾಬಾಯಿ ವೀರಶೈವ ಮಠಕ್ಕೆ ಬಂದು ಲೋಕದ ಮಹಾ ಪುರುಷನಾದ ಅಲ್ಲಮ ಪ್ರಭುವಿಗೆ ಸೇವೆ ಸಲ್ಲಿಸುತ್ತಿದ್ದೇವೆ" ಎಂದು ಹಾಸ್ಯದ ಚಟಾಕಿ ಹಾರಿಸಿದರು.

ವೀರಶೈವ ಮಠಾಧೀಶರ ಸಮ್ಮುಖದಲ್ಲಿ ಕಾವ್ಯವಾಚನ

ಚಿತ್ರದುರ್ಗದ ಶ್ರೀ ಚಿನ್ಮೂಲಾದ್ರಿ ಶೂನ್ಯ ಸಿಂಹಾಸನಾಧೀಶ್ವರರಾದ ಜಗದ್ಗುರು ಜಯದೇವ ಮುರುಘರಾಜೇಂದ್ರ ಸ್ವಾಮಿಗಳು ಬೆಂಗಳೂರಿಗೆ ಬಿಜಯಮಾಡಿದರು. ಅವರು ಸರ್ಪಭೂಷಣ ಮಠದಲ್ಲಿ ಒಂದು ತಿಂಗಳ ಕಾಲ ಬಿಡಾರ ಮಾಡಿದರು. ಅವರ ಮಹಾ ಸನ್ನಿಧಿಯಲ್ಲಿ ಪ್ರತಿ ಸಂಜೆ ಸಾಹಿತ್ಯ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುವ ಏರ್ಪಾಡಾದುವು. ಶಕುಂತಲಾಬಾಯಿಗೂ ಕರೆಬಂತು. ಜಯದೇವ ಮಹಾಸ್ವಾಮಿಗಳ ಸಮ್ಮುಖದಲ್ಲಿ ಪ್ರಭುಲಿಂಗಲೀಲೆಯಿಂದ "ಸಿದ್ಧರಾಮಣ್ಣನಿಗೆ ಉಪದೇಶ" ಭಾಗದ ಕಾವ್ಯವಾಚನವಾಯಿತು. ಜಗದ್ಗುರುಗಳು ಶಕುಂತಲಾಬಾಯಿ ಗಂಧರ್ವಾಂಶರೆಂದು ಪ್ರಶಂಸಿಸಿದರು. "ಶಕುಂತಲಾಬಾಯಿ, ನೀವು ನಮ್ಮ ಸಂಸ್ಥಾನಕ್ಕೆ ಒಬ್ಬ ಮಗಳಿದ್ದಂತೆ ನಾವು ಇಲ್ಲಿ ಇರುವಷ್ಟು ದಿವಸಗಳೂ ನೀವು ತಪ್ಪದೆ ನಿಮ್ಮ ಪತಿಯೊಡನೆ ಬರುತ್ತಿರ ಬೇಕು" ಎಂದು ಅಪ್ಪಣೆ ಕೊಡಿಸಿದರು. ನಾವು ಸ್ವಾಮಿಗಳ ಅಪ್ಪಣೆಯನ್ನು ಅನುಗ್ರಹ

ವೆಂದು ಒಪ್ಪಿಕೊಂಡೆವು. ನಾವು ಅವರ ಜಾತ್ಯತೀತ ಹೃದಯ ವೈಶಾಲ್ಯವನ್ನೂ ಮಾನವೀಯ ಕರುಣೆಯನ್ನೂ ಕೇಳಿದ್ದೆವು. ಪ್ರತ್ಯಕ್ಷ ಪ್ರಮಾಣದಿಂದ ನಮ್ಮ ಭಕ್ತಿ ಜಯದೇವ ಸ್ವಾಮಿಗಳವರ ಬಗೆಗೆ ಅನಂತವಾಯಿತು.

ಚಿತ್ರದುರ್ಗದ ಜಗದ್ಗುರುಗಳ ಸಂಬಂಧ ಜಯದೇವಸ್ವಾಮಿಗಳ ತಲೆಗೇ ನಿಲ್ಲಲಿಲ್ಲ. ಅದು ಮುಂದುವರಿಯಿತು. ಜಗದ್ಗುರು ಜಯದೇವ ಸ್ವಾಮಿಗಳ ತರುವಾಯ ಅವರ ಪೀಠಕ್ಕೆ ಬಂದ ಜಗದ್ಗುರು ಜಯವಿಭವ ಸ್ವಾಮಿಗಳು ಬೆಂಗಳೂರಿಗೆ ದಯಮಾಡಿಸಿದರು. ನಗರದ ಶೇಷಾದ್ರಿ ರಸ್ತೆಯಲ್ಲಿರುವ ಜಯದೇವ ವಿದ್ಯಾರ್ಥಿನಿಲಯದ ಬಯಲಲ್ಲಿ ಭವ್ಯ ಮಂಟಪದ ನಿರ್ಮಾಣವಾಯಿತು. ಪ್ರತಿದಿನ ಸಂಜೆ ಜಯವಿಭವ ಸ್ವಾಮಿಗಳ ಘನ ಸನ್ನಿಧಿಯಲ್ಲಿ ಸಾಹಿತ್ಯ ಸಾಂಸ್ಕೃತಿಕ ಕಾರ್ಯಕ್ರಮಗಳು ಏರ್ಪಟ್ಟವು. ನನಗೂ ಶಕುಂತಲಾಬಾಯಿಗೂ ಕಾರ್ಯಕ್ರಮ ಕೊಡಬೇಕೆಂದು ಆಹ್ವಾನ ಬಂತು. ಈ ವೇಳೆಗೆ ನಾನು ಶಕುಂತಲಾಬಾಯಿಯ ಕಾವ್ಯವಾಚನಕ್ಕೆ ಪ್ರಾಸಂಗಿಕ ನಿರೂಪಣೆಯನ್ನು ಕೊಡಲು ಪ್ರಾರಂಭಿಸಿದ್ದೆ. ನಾವು ಜಗದ್ಗುರು ಸನ್ನಿಧಾನಕ್ಕೆ ತಕ್ಕಂತೆ ಘನವಾದ ಕಥಾಭಾಗವನ್ನು ಪ್ರಭುಲಿಂಗಲೀಲೆಯಿಂದ ಆರಿಸಿಕೊಳ್ಳಬೇಕೆಂದು ಆಶಿಸಿದೆವು. "ಶೂನ್ಯಸಿಂಹಾಸನಾರೋಹಣ" ಶ್ರೇಷ್ಠ ಪವಿತ್ರ ಕಥಾಭಾಗ ಸರಿಯೆಂದು ನಿರ್ಧಾರವಾಯಿತು. ಕಾವ್ಯದ ಕಥಾಭಾಗದ ಪದ್ಯಗಳಿಗೆ ಅಳವಡುವಂತೆ ಈಸಲ ಬಸವಣ್ಣ, ಚೆನ್ನಬಸವಣ್ಣ, ಪ್ರಭು ವಚನಗಳನ್ನು ಆಯ್ದುಕೊಂಡಿದ್ದೆವು. ನಮ್ಮ "ಪ್ರಭುಲಿಂಗಲೀಲೆ" ಕಾವ್ಯವಾಚನ ಸುಮಾರು ಮುಕ್ಕಾಲು ಗಂಟೆ ಕಾಲ ಜಗದ್ಗುರುಗಳ ಸನ್ನಿಧಿಯಲ್ಲಿ ನಡೆಯಿತು. ಸ್ವಾಮಿಗಳು ಕೇಳಿ ತುಂಬ ಸಂತೋಷಪಟ್ಟರು. ತಮ್ಮ ಅನುಗ್ರಹ ಭಾಷಣದಲ್ಲಿ ನಮ್ಮನ್ನು ನೆನೆಯಲು ಮರೆಯಲಿಲ್ಲ. "ಶಕುಂತಲಾಬಾಯಿ, ಪಾಂಡುರಂಗರಾವ್, ಅಪರೂಪ ದಂಪತಿಗಳು. ಇಂಥ ಆದರ್ಶ ದಂಪತಿಗಳನ್ನು ನಾವು ಇದುವರೆಗೆ ಕಂಡಿರಲಿಲ್ಲ." ಎಂದು ಶ್ಲಾಘಿಸಿದರು.

ಜಗದ್ಗುರು ಜಯವಿಭವ ಸ್ವಾಮಿಗಳು ಕೈವಲ್ಯ ಸೇರಿದ ಮೇಲೆ ಅವರ ಪೀಠಕ್ಕೆ ಈಗಿನ ಜಗದ್ಗುರು ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳು ಬಂದರು. ಅವರ ಪಟ್ಟಾಭಿಷೇಕ ಮಹೋತ್ಸವದಲ್ಲಿ ನಮ್ಮ ಕಾವ್ಯವಾಚನ ಕಾರ್ಯಕ್ರಮವಾಗಬೇಕೆಂದು ಮಠದಿಂದ ಆಹ್ವಾನ ಬಂತು. ಒಪ್ಪಿಕೊಂಡೆವು. ನಮ್ಮ ಕಾರ್ಯಕ್ರಮದ ಜೊತೆಗೆ ಪ್ರಸಿದ್ಧ ಜಾನಪದ ಗೀತ ಗಾಯಕ ಬಾಳಪ್ಪ ಹುಕ್ಕೇರಿಯವರ ಜಾನಪದ ಗೀತೆಗಳ ಕಾರ್ಯಕ್ರಮವೂ ಏರ್ಪಟ್ಟಿತ್ತು. ಅವರದು ಮೊದಲು. ಅನಂತರ ನಮ್ಮದು. ಬಾಳಪ್ಪ ಹುಕ್ಕೇರಿಯವರ ಜನಪ್ರಿಯ ಗೀತೆಗಳನ್ನು ಕೇಳಿದ ಮೇಲೆ ಕಾವ್ಯವಾಚನವನ್ನು ಕೇಳುವ ಕಿವಿಗಳಿರುವವೇ ಶ್ರೋತೃಗಳಿಗೆ ? ಎಂಬ ಅಳುಕಿನಿಂದಲೇ ವೇದಿಕೆ ಹತ್ತಿದೆವು. ಇಲ್ಲೂ ಪ್ರಭುಲಿಂಗಲೀಲೆಯಿಂದ "ಶೂನ್ಯಸಿಂಹಾಸನಾರೋಹಣ" ಭಾಗವನ್ನೇ ಆರಿಸಿಕೊಂಡಿದ್ದೆವು ; ಸನ್ನಿವೇಶಕ್ಕೆ ಹೊಂದುವಂತೆ. ನಮ್ಮ ಕಾವ್ಯವಾಚನ ಯಶಸ್ವಿಯಾಯಿತು. ಜಗದ್ಗುರುಗಳ ಮೆಚ್ಚುಗೆಗೆ ಪಾತ್ರವಾಯಿತು. ಆಮೇಲೆ ಜಗದ್ಗುರು

ಮಲ್ಲಿಕಾರ್ಜುನ ಮಹಾಸ್ವಾಮಿಗಳ ಸಮ್ಮುಖದಲ್ಲಿ, ಚಿತ್ರದುರ್ಗದಲ್ಲಿ, ಅಜ್ಜಂಪುರದಲ್ಲಿ, ಬೆಂಗಳೂರಿನಲ್ಲಿ, "ಪ್ರಭುಲಿಂಗಲೀಲೆ" ಕಾರ್ಯಕ್ರಮಗಳು ಅನೇಕ ಸಲ ನಡೆದಿವೆ.

ಶ್ರೀಶೈಲ ಸಂಸ್ಥಾನದ ಜಗದ್ಗುರು ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು, ತರಳಬಾಳು ಸಂಸ್ಥಾನದ ಜಗದ್ಗುರುಗಳು, ನಿಡುಮಾಮಡಿ ಮಠದ ಜಗದ್ಗುರುಗಳು, ರಂಭಾಪುರಿ ಮಠದ ಜಗದ್ಗುರುಗಳು, ಸಿದ್ಧಗಂಗಾ ಮಠದ ಡಾ|| ಶಿವ ಕುಮಾರಸ್ವಾಮಿಗಳು, ಹೀಗೆ ವೀರಶೈವ ಮಹಾಮಠಗಳ ಪೀಠಾಧೀಶರುಗಳು ಶಕುಂತಲಾ ಬಾಯಿಯ ವೀರಶೈವ ಕಾವ್ಯವಾಚನಗಳನ್ನು ಕೇಳಿ ಅನುಗ್ರಹಿಸಿ ಮಠಗಳ ಗೌರವ ತೋರಿಸಿದ್ದಾರೆ.

ಗಮಕ ಕಲಾನಿಧಿ ಜೋಳದರಾಶಿ ದೊಡ್ಡನಗೌಡರು

1946ರಲ್ಲಿ ಮದರಾಸಿನಲ್ಲಿ "ಕನ್ನಡಕ್ಕೊಬ್ಬನೇ ಕೈಲಾಸಂ" ಎಂಬ ಕೀರ್ತಿಭಾಜನ ರಾಗಿದ್ದ ಟಿ. ಪಿ. ಕೈಲಾಸಂ ಅಧ್ಯಕ್ಷತೆಯಲ್ಲಿ ಕನ್ನಡ ಪರಿಷತ್ತಿನ ಸಾಹಿತ್ಯ ಸಮ್ಮೇಳನ ನಡೆಯಿತು. ಗಮಕಿಗಳ ಪರವಾಗಿ "ಗಮಕ ಕಲಾನಿಧಿ" ಜೋಳದ ರಾಶಿ ದೊಡ್ಡನ ಗೌಡರು ಸಮ್ಮೇಳನಕ್ಕೆ ದಯಮಾಡಿಸಿದ್ದರು. ಅವರ ಜೊತೆಯಲ್ಲಿ ಹಾರ್ಮೋನಿಯಂ ನುಡಿಸುತ್ತಿದ್ದ ಕುಮಾರಸ್ವಾಮಿಯವರೂ ಇದ್ದರು. ಜೋಳದರಾಶಿಯವರು "ನಮ್ಮ ಹಂಪೆ" ಕಾವ್ಯವಾಚನ ಮಾಡಿದರು. ಅದು ಅವರದೇ ರಚನೆ. ಜೋಳದ ರಾಶಿಯವರ ಕಂಠ ಸಿರಿಕಂಠ. ನಾಟಕದ ಸಾಲ್ಕಾಣೆ ಪ್ರಭುಗಳ ಕಿವಿ ತಾಗಿ ಅವರುಗಳ ಹೃದಯ ತಟ್ಟಿ ಮೆಚ್ಚುಗೆಯ ಚಪ್ಪಾಳೆ ಸ್ವೀಕರಿಸುವ ನಾಟಕೀಯ ಗಮ್ಮತ್ತು ಬೇರೆ, ಕೇಳಬೇಕೆ ! ಅವರ "ನಮ್ಮ ಹಂಪೆ" ಶ್ರೋತೃಗಳ ಮನಮುಟ್ಟಿತು. ಶ್ಲೋಕ ಸಂಗೀತ ಸಂಪತ್ಕು ಮಾರಾಚಾರ್ಯರ ಸಿಂಹಕಂಠವನ್ನು ಕೇಳಿ ಮೆಚ್ಚಿದ್ದ ನನಗೆ ಜೋಳದರಾಶಿಯವರ ಕಂಠಶ್ರೀಯನ್ನು ಕೇಳಿ ಸಂತೋಷವುಕ್ಕಿತು. ಅವರ ಸ್ನೇಹ ಮದರಾಸಿನಲ್ಲಿ ಕಾರ್ಯಗಳ ಒತ್ತಡದಿಂದ ಸಾಧ್ಯವಾಗಲಿಲ್ಲ. ಬೆಂಗಳೂರಲ್ಲಿ ಲಭಿಸಿತು.

1947ರಲ್ಲಿ ಜೋಳದ ರಾಶಿಯವರು ಬಸವಜಯಂತಿಯ ಕಾರ್ಯಕ್ರಮಕ್ಕೆ ಬೆಂಗಳೂರಿಗೆ ದಯಮಾಡಿಸಿದರು. ಜೀರಗೆಕಟ್ಟಿ ಬಸಪ್ಪನವರು ಬಸವಜಯಂತಿ ಕಾರ್ಯ ಕ್ರಮಗಳನ್ನು ಗೌ|| ಕಾರ್ಯದರ್ಶಿಗಳಾಗಿ ಅದ್ದೂರಿಯಾಗಿ ನಡೆಸುತ್ತಿದ್ದ ಕಾಲವದು. ಗಾಂಧೀನಗರದಲ್ಲಿರುವ ಆರ್ಯ ವಿದ್ಯಾಶಾಲೆಯ ಹಿಂಭಾಗದಲ್ಲಿ ಕರ್ನಾಟಕ ನಾಟಕ ಸಾರ್ವಭೌಮ ಗುಬ್ಬಿ ವೀರಣ್ಣನವರ ನಾಟಕ ಮಂದಿರದಲ್ಲಿ ಆ ವರ್ಷ ಬಸವ ಜಯಂತಿ ಮೂರು ದಿವಸಗಳೂ ಅರಮನೆಯ ಪಂಚಗವೀಮಠಾಧ್ಯಕ್ಷರಾದ ಶ್ರೀ ಗೌರೀಶಂಕರ ಸ್ವಾಮಿಗಳ ಅಧ್ಯಕ್ಷತೆಯಲ್ಲಿ ನಡೆಯಿತು. ಮೂರು ದಿವಸಗಳೂ ಪ್ರಾರಂಭದಲ್ಲಿ ಸಣ್ಣ ಪುಟ್ಟವರಿಂದ ಶಿವಶರಣರ ವಚನಗಾಯನ, ಅನಂತರ ಒಂದು ಗಂಟೆಯಷ್ಟು ದೀರ್ಘ ಕಾಲ ಜೋಳದರಾಶಿ ದೊಡ್ಡನಗೌಡರ ಕಾವ್ಯವಾಚನ, ಮುಕ್ತಾಯದಲ್ಲಿ ಗೌರೀಶಂಕರ ಸ್ವಾಮಿಗಳ ಅನುಗ್ರಹ ಭಾಷಣ, ಇಂತಿತ್ತು ಸ್ಥೂಲವಾಗಿ ಕಾರ್ಯಕ್ರಮಗಳು.

ನಾನು ಮೊದಲ ದಿನದ ಕಾರ್ಯಕ್ರಮಕ್ಕೆ ಹೋಗಿದ್ದೆ. ರಾಘವಾಂಕನ "ಹರಿಶ್ಚಂದ್ರ ಕಾವ್ಯ"ವಾಚನ. ಕುಮಾರಸ್ವಾಮಿ ಕಾವ್ಯವಾಚನಕ್ಕೆ ಇಂಬುಗೊಡಲು ಹಾರ್ಮೋನಿಯಂ ನುಡಿಸುತ್ತಿದ್ದರು. ಮೈಸೂರ ಕಡೆ ತಂಬೂರಿ ಶ್ರುತಿಯೊಂದೇ ಗಮಕಿಗಳಿಗೆ ಆಸರೆ. ನಾನು ಪಕ್ಕ ವಾದ್ಯವಿಟ್ಟುಕೊಂಡು ಗಮಕವಾಚನ ಮಾಡುವ ಗಮಕ ವಿದ್ವಾಂಸರನ್ನು ಕಂಡದ್ದು ಕೇಳಿದ್ದು ಇದೇ ಮೊದಲು. ಜೋಳದರಾಶಿಯವರು "ಹರಿಶ್ಚಂದ್ರ ಕಾವ್ಯ"ವನ್ನು ಭರ್ಜರಿಯಾಗಿ ಓದಿದರು. "ಶ್ಲೋಕ ಸಂಗೀತ" ಸಂಪತ್ಕುಮಾರಾಚಾರ್ಯರೂ "ಹರಿಶ್ಚಂದ್ರ ಕಾವ್ಯ"ವನ್ನು ವಾಚನಮಾಡುವುದರಲ್ಲಿ ನಿಸ್ಸೀಮರು. ಅವರ "ಹರಿಶ್ಚಂದ್ರ-ಹೊಲತಿಯರ ಸಂವಾದ" ಮಾಸ್ಟರ್ ಪೀಸ್. ಸಂಪತ್ಕುಮಾರಾಚಾರ್ಯರೂ ನಟವರ್ಯರು. ಆದುದರಿಂದ "ಶ್ಲೋಕ ಸಂಗೀತ"ದ ಗಮಕದಲ್ಲಿ ಆಗಾಗ ನಾಟಕೀಯ ಧೋರಣೆಯೂ ಇಣುಕುತ್ತಿತ್ತು. ಎಂದರೆ ತಪ್ಪಲ್ಲ. ಜೋಳದರಾಶಿಯವರ ಗಮಕದಲ್ಲೂ ನಾಟಕೀಯತೆ ಇತ್ತು. "ಶ್ಲೋಕ ಸಂಗೀತ"ರು "ಗಮಕ ಕಲಾನಿಧಿ" ಗೌಡರು ಇಬ್ಬರೂ ಪಕ್ವಕಲಾವಿದರು. ಯಾರು ಮೇಲು? ಹೋಲಿಕೆಗೆಸಲ್ಲದವರು. ಹೋಲಿಕೆಯೂ ಸರಿಯೂ ಅಲ್ಲ. "ನವರತ್ನಗಳಲ್ಲಿ ಯಾವುದು ಮೇಲು ?" ಎಂದು ಕೇಳಿದ ಹಾಗೆ ಒಂದೊಂದೂ ಒಂದು ವಿಶಿಷ್ಟತೆಗಳುಳ್ಳದ್ದು. ಹಾಗೆಯೇ ಈ ಇಬ್ಬರು ಗಮಕಿವರ್ಯರು. ನಾನು ಇಬ್ಬರು ಗಮಕ ಕಲಾವಿದರುಗಳನ್ನೂ ಮೆಚ್ಚಿಕೊಂಡೆ. ಎರಡನೆಯ ದಿನ ಸಂಜೆ ಶಕುಂತಲಾ ಬಾಯಿಯನ್ನು ಕರೆದುಕೊಂಡು ಹೋದೆ ಜೋಳದರಾಶಿಯವರ ಗಮಕವನ್ನು ಕೇಳಿಸಲು.

"ಗಮಕ ಕಲಾನಿಧಿ"ಯ ಮುಂದೆ ಗಮಕ ವಾಚನ

ಗುಬ್ಬಿ ವೀರಣ್ಣನವರ ನಾಟಕ ಮಂದಿರವನ್ನು ಪ್ರವೇಶಿಸಿ ನಾಲ್ಕಾಣೆ ಪ್ರಭುಗಳ ಸ್ಥಳದಲ್ಲಿ ಅಪರಿಚಿತರಂತೆ ಕೂತೆವು. ಅಲ್ಲಿ ಕೂತಿದ್ದವರೆಲ್ಲರೂ ಅಪರಿಚಿತರೇ. "ಗಮಕ ಕಲಾನಿಧಿ"ಯ ಕಾವ್ಯವಾಚನ ಪ್ರಾರಂಭವಾಗುವುದಕ್ಕೆ ಮುಂಚೆ ನಾನು ಹೊರಗೆ ಹೋದೆ. ನಾನು ಹೊರಡುವುದಕ್ಕೂ ಜೀರಿಗೆ ಕಟ್ಟೆ ಬಸಪ್ಪನವರು ನನಗೆ ಎದುರಾಗುವುದಕ್ಕೂ ಸರಿಹೋಯಿತು. "ಓ ಪಾಂಡುರಂಗರಾವ್, ಅಮ್ಮಾವರೂ ಬಂದಿರುವರೇ ?" ಎಂದು ಕೇಳಿದರು ಬಸಪ್ಪ. ನಾನು ಇನ್ನು ಮರೆಮಾಚಿ ಪ್ರಯೋಜನವಿಲ್ಲವೆಂದು "ಬಂದಿದ್ದಾರೆ" ಎಂದೆ. "ಎಲ್ಲಿದ್ದಾರೆ ?" ಎಂದು ಪ್ರಶ್ನಿಸಿದರು. ನಾವು ಕೂತಿದ್ದ ಸ್ಥಳ ಹೇಳಿದೆ. ಬಸಪ್ಪನವರು ಶಕುಂತಲಾಬಾಯಿಯನ್ನು ಕಂಡು, ಆ ಸ್ಥಳದಿಂದ ಎಬ್ಬಿಸಿ, ನಮ್ಮಿಬ್ಬರನ್ನು ಕರೆದುಕೊಂಡು ಹೋಗಿ ಮುಂದೆ ಸೋಫಾದಲ್ಲಿ ಕೂಡಿಸಿದರು. "ಜೋಳದರಾಶಿಯವರ ಪರಿಚಯವಿದೆಯೋ ?" ಎಂದು ಪ್ರಶ್ನಿಸಿದರು. ನಾವು "ಇಲ್ಲ"ವೆಂದೆವು. "ಹಾಗಾದರೆ ಕಾರ್ಯಕ್ರಮವಾದಮೇಲೆ ಪರಿಚಯ ಮಾಡಿಕೊಳ್ಳುವಿರಂತೆ, ಮಾಡಿಸುತ್ತೇನೆ" ಎಂದು ವೇದಿಕೆಯತ್ತ ಸಾಗಿದರು.

ಜೋಳದರಾಶಿಯವರು ಹಿಂದಿನ ದಿವಸ ಬಿಟ್ಟಿದ್ದ ಕಥೆಯಿಂದ ಹರಿಶ್ಚಂದ್ರನ ಕಥೆಯನ್ನು ಮುಂದುವರಿಸಿದರು. ಒಂದು ಗಂಟೆಯ ಕಾಲ ಕುಮಾರಸ್ವಾಮಿಯವರ

ಹಾರ್ಮೋನಿಯಂ ಸಹಾಯದಿಂದ ಹರಿಶ್ಚಂದ್ರ ಕಾವ್ಯವಾಚನ ಮುಂದುವರಿಯಿತು. ಕಾವ್ಯ ಪೂರ್ತಿಯಾಗಲಿಲ್ಲ. ಅದು ಮೂರನೆಯ ದಿವಸಕ್ಕೆ ಮುಂದೆ ಹೋಯಿತು. ಗೌರೀ ಶಂಕರ ಸ್ವಾಮಿಯವರಿಗೆ "ಮಹಾಮನೆ" ಎಂಬ ಉಪನ್ಯಾಸಕ್ಕೆ ವೇದಿಕೆಯನ್ನು ಬಿಟ್ಟು ಕೊಟ್ಟು ಜೋಳದರಾಶಿ ನೇಪಥ್ಯ ಸೇರಿದರು. ಜೀರಗೆಕಟ್ಟಿ ಬಸಪ್ಪನವರು ಗೌರೀಶಂಕರ ಸ್ವಾಮಿಗಳ ಉಪನ್ಯಾಸವನ್ನು ಪ್ರಾರಂಭಮಾಡಿಸಿ ನಮ್ಮೆಡೆಗೆ ಬಂದರು. "ಜೋಳದರಾಶಿ ಗೌಡರು ನಿಮ್ಮ ಪರಿಚಯ ಮಾಡಿಕೊಳ್ಳಲು ಸಂತೋಷಪಟ್ಟಿದ್ದಾರೆ. ಬನ್ನಿ" ಎಂದು ಕರೆದುಕೊಂಡು ಹೋದರು ಒಳಗೆ. ದೊಡ್ಡನಗೌಡರಿಗೂ ನಮಗೂ ಪರಿಚಯವಾಯಿತು. ಕ್ಷೇಮ ಸಮಾಚಾರಗಳ ವಿನಿಮಯವಾಯಿತು. ಬಸಪ್ಪನವರು "ಶಕುಂತಲಾಬಾಯಿ ಯವರು ನಾಳೆ ಹದಿನೈದು ನಿಮಿಷಗಳು ಬಸವಣ್ಣನವರ ವಚನಗಳನ್ನು ಹಾಡಬಹುದಲ್ಲ; ಜೋಳದರಾಶಿಯವರೂ ಕೇಳಿದ ಹಾಗಾಯಿತು" ಎಂದರು. ಆ ಕಾಲದಲ್ಲಿ ಉಪ್ಪಿನ ಪಥ್ಯದಿಂದ ಶಕುಂತಲಾಬಾಯಿ ಸೊರಗಿದ್ದರು. "ಏನು ಹೇಳುವುದು ?" ಜೋಳದರಾಶಿ ದೊಡ್ಡನಗೌಡರು ಸುಪ್ರಸಿದ್ದ ಗಮಕಿಗಳೆಂದು ಹೆಸರಾಂತವರು. ಬಹು ಪ್ರಸಿದ್ಧ ನಟ ರೆಂದು ಪ್ರಖ್ಯಾತರಾದವರು. ಅವರ ಮುಂದೆ ಶಕುಂತಲಾಬಾಯಿ ವಚನ ಹಾಡಿ "ಸೈ" ಎನ್ನಿಸಿಕೊಳ್ಳುವುದು ಸಾಧ್ಯವೇ ? "ಪರೀಕ್ಷೆಗಿಟ್ಟುಕೊಂಡಿತು" ಎಂದು ಮನಸ್ಸಿನಲ್ಲಿ ಅಂದುಕೊಂಡು ನಾನು, "ಆಗಬಹುದು" ಎಂದು ಒಪ್ಪಿಗೆಯಿತ್ತೆ. ನಾವು ಗುಬ್ಬಿ ನಾಟಕ ಮಂದಿರದಿಂದ ಹೊರಬಿದ್ದವರೇ ಮನೆಗೆ ಧಾವಿಸಿದೆವು. ರಾತ್ರಿಯೆಲ್ಲ ಯೋಚನೆ ಯಾವ ವಚನವನ್ನು ಹಾಡಬೇಕೆಂದು! ಬೆಳಗಾಯಿತು, ಅಲ್ಲಿಗೆ ಯಾರೂ ಕೇಳರಿಯದ ಒಂದೆರಡು ಶಿವಶರಣರ ವಚನಗಳನ್ನು ಹಾಡಿ ನಮ್ಮ ಕಾರ್ಯ ಮುಗಿಸಬೇಕೆಂದು ನಿರ್ಧಾರಕ್ಕೆಬಂದೆವು. ವಚನಗಳನ್ನು ಹುಡುಕುವ ಭಾರ ನಾನು ಹೊತ್ತೆ. "ಶ್ರೀ"ಅವರು ಸಂಪಾದಿಸಿದ "ಕನ್ನಡದ ಬಾವುಟ" ಈಗಲೂ ನನಗೆ ಬೆಳಕು ಕಾಣಿಸಿತು. 45ನೆಯ ಪುಟ ದಲ್ಲಿದ್ದ **''ಹರಿಹರ ಕವಿಯ ಬಸವಣ್ಣನವರ ಗುಣ''** ವೆಂಬ ವಚನವನ್ನು ವಾಚನ ಮಾಡುವುದೆಂದು ಅದನ್ನೂ ಆರಿಸಿದೆ."**ಎಲೆಬಸವ ಬಸವಣ್ಣ, ಬಸವಯ್ಯ ಬಸವರಸ ಬಸವರಾಜ ಬಸವಿದೇವ, ಕೇಳಯ್ಯ''** ಸಾಲಿನಿಂದ ಪ್ರಾರಂಭಿಸಿ **''ಪಾಷಾಂಡಿ ಭೂಮಿಯೊಳು ಶಿವಭಕ್ತಿಯನಾರಂಭಿಸಿ ಸಾಮರ್ಥ್ಯಮಂ ಬಿತ್ತಿ ಪ್ರತ್ಯಕ್ಷಂ ಗಳಂ ಬೆಳೆದು ಗಣಪರ್ವಂಗಳಂ ಸುಫಲಂ ಮಾಡಲೆಂದು ಬಂದ ಕಾರಣಿಕ ಬಸವ ನಿನ್ನ ದೆಸೆಯಿಂದೆಮ್ಮ ಭಕ್ತಿ ಬಣ್ಣವೇಱತು**"ಸಾಲಿನವರೆಗೆ ಇಪ್ಪತ್ತೊಂದು ಸಾಲುಗಳನ್ನು ಶಕುಂತಲಾಬಾಯಿ ವಾಚನಕ್ಕೆಂದು ಆಯ್ದುಕೊಂಡರು. ರಾಗಮಾಲಿಕೆ ಯಲ್ಲಿ ಓದುವುದೆಂದು ನಿರ್ಧರಿಸಿದರು.

ಕಾಲಕ್ಕೆ ಸರಿಯಾಗಿ ಗುಬ್ಬಿ ನಾಟಕ ಮಂದಿರಕ್ಕೆ ಹೋದೆವು. ಕಾರ್ಯಕ್ರಮ ಪ್ರಾರಂಭವಾಯಿತು. ಜೀರಗೆಕಟ್ಟಿ ಬಸಪ್ಪನವರು ನಮಗೂ ಸ್ವಾಗತಕೋರಿ ಶಕುಂತಲಾ ಬಾಯಿಯನ್ನು ಸಭೆಗೆ ಪರಿಚಯಿಸಿ ಅವರದೂ ವಚನಗಾಯನವಿದೆಯೆಂದು ಪ್ರಕಟಿ ಸಿದರು. ಶಕುಂತಲಾಬಾಯಿ ಬೆಂಗಳೂರಿನ ಸುಸಂಸ್ಕೃತ ವೀರಶೈವ ಸಮಾಜಕ್ಕೆ ಈ

ವೇಳೆಗಾಗಲೆ ಸುಪರಿಚಿತರಾಗಿದ್ದರು. ಅವರು ವೇದಿಕೆಯನ್ನು ಏರಿದ ಕೂಡಲೆ ಶ್ರೋತೃಗಳು ಚಪ್ಪಾಳೆಯಿಂದ ಸ್ವಾಗತಿಸಿದರು. ಹರಿಹರನ ಬಸವರಾಜದೇವರ ರಗಳೆ ಕಾವ್ಯದಿಂದ ಸುಮಾರು ಇಪ್ಪತ್ತೊಂದು ಸಾಲುಗಳಷ್ಟು **ದೀರ್ಘವಾದ "ಬಸವಣ್ಣನವರ ಗುಣ"**ವೆಂಬ ವಚನವನ್ನು ಈವರೆಗೆ ಶ್ರೋತೃಗಳು ಕೇಳಿರಲಿಲ್ಲ. ಯಾವ ಗಮಕಿಯೂ ಈ ವಚನವನ್ನು ಗಮಕಕ್ಕೆ ಅಳವಡಿಸಿರಲಿಲ್ಲ. ಬಸವಜಯಂತಿಯ ಕಾರ್ಯಕರ್ತರುಗಳಿಗೂ ಈ ಕಾರ್ಯಕ್ರಮ ಅಪೂರ್ವ. ಶಕುಂತಲಾಬಾಯಿ ಬಸವಣ್ಣನವರ ಗುಣಗಳನ್ನು ರಾಗಮಾಲಿಕೆಯಲ್ಲಿ ಗಮಕಿಸುವುದಕ್ಕೆ ಅರ್ಧಗಂಟೆ ತೆಗೆದುಕೊಂಡರು. ಅರ್ಧಗಂಟೆಯಷ್ಟು ವೇಳೆಗೆ ಕೇವಲ ಒಂದೇ ಒಂದು ವಚನ. ಶಕುಂತಲಾಬಾಯಿ ತಮ್ಮ ವಾಚನ ಮುಗಿಸಿ ವೇದಿಕೆಯನ್ನು ಬಿಟ್ಟು ಕೆಳಗಿಳಿದು ಬಂದರು. ಚಪ್ಪಾಳೆಯ ಸುರಿಮಳೆ. "ಏನಮ್ಮ, ಎಷ್ಟು ಚೆನ್ನಾಗಿ ಓದಿಬಿಟ್ಟೆ" ಎಂದು ಜೋಳದರಾಶಿ ಶಕುಂತಲಾಬಾಯಿಗೆ ತಮ್ಮ ಹರ್ಷ ಸೂಚಿಸಿದರು. ಶಕುಂತಲಾಬಾಯಿಯನ್ನು ಜೋಳದರಾಶಿ ದೊಡ್ಡನಗೌಡರು ಅಂದಿನಿಂದ ಇಂದಿನವರೆಗೆ ತಮ್ಮ ಒಡಹುಟ್ಟಿದ ಒಬ್ಬ ಸಹೋದರಿಯಂತೆ ನಡೆಸಿಕೊಂಡು ಬಂದಿದ್ದಾರೆ.

"ಗಮಕ ಕಲಾನಿಧಿ"ಯ ಹೃದಯ ಶ್ರೀಮಂತಿಕೆ

ಗಮಕ ಕಲಾನಿಧಿ ಗೌಡರಲ್ಲಿ ತಾವೇ ಶ್ರೇಷ್ಠ ಕಲಾವಿದರು ಎಂಬ ಹಮ್ಮು ಬಿಮ್ಮುಗಳಿರುವುದನ್ನು ನಾನು ಕಂಡರಿಯೆ. ಬೇರೆ ಕಲಾವಿದರುಗಳಲ್ಲಿರುವ ಕಲಾವಂತಿಕೆಯನ್ನು ಗುರುತಿಸಿ ಶ್ಲಾಘಿಸಿ ಗೌರವಿಸುವ ಶ್ರೀಮಂತಿಕೆ ಅವರಲ್ಲಿದೆ.

ಧಾರವಾಡದ ಶ್ರೀ. ನಿ. ಪ್ರ. ಮೃತ್ಯುಂಜಯ ಸ್ವಾಮಿಗಳು ಜೋಳದರಾಶಿ ದೊಡ್ಡನಗೌಡರಲ್ಲಿ ಶೂನ್ಯ ಸಂಪಾದನೆಯ ಭಾಗಗಳನ್ನು ಧ್ವನಿ ಮುದ್ರಿಕೆಯಲ್ಲಿ ಕೇಳಬೇಕು ಎಂದು ಅಪೇಕ್ಷಿಸಿದ್ದರಂತೆ. ಈ ಕಾರ್ಯ ನೆರವೇರಬೇಕಾದರೆ ಸಾವಿರಾರು ರೂಪಾಯಿಗಳು ಬೇಕು. ಮೃತ್ಯುಂಜಯ ಸ್ವಾಮಿಗಳು ಧನಸಹಾಯ ಮಾಡಲು ಮುಂದೆ ಬಂದಿದ್ದರು. ಅಷ್ಟರಲ್ಲಿಯೇ ಅವರು ಲಿಂಗೈಕ್ಯರಾದರು. ಸ್ವಾಮಿಗಳು ಅಪೇಕ್ಷಿಸಿದ್ದ ಕಾರ್ಯ ಹೇಗೆ ಸಫಲವಾಗಬೇಕು? ಶೂನ್ಯ ಸಂಪಾದನೆಯ ಧ್ವನಿ ಮುದ್ರಿಕೆಗಳಲ್ಲಿ ಆಯ್ದಕ್ಕಿ ಮಾರಯ್ಯ, ಮಹಾದೇವಿಯಕ್ಕನ ಸಂಪಾದನೆಗಳು ಧ್ವನಿ ಮುದ್ರಿಕೆಗಳನ್ನು ಯೋಗ್ಯರಾದ ಹೆಣ್ಣುಮಕ್ಕಳ ಸಹಾಯವಿಲ್ಲದೆ ಮಾಡುವಂತಿರಲಿಲ್ಲ. ತಾವಿದ್ದಲ್ಲಿಗೆ ಕರೆಸಿಕೊಂಡು ಧ್ವನಿಮುದ್ರಿಸಿಕೊಳ್ಳೋಣವೆಂದರೆ ಹಣವಿಲ್ಲ. ಅಷ್ಟರಲ್ಲಿ ಮೈಸೂರು ರಾಜ್ಯದ ಸಂಗೀತ ಅಕಾಡೆಮಿ ಜೋಳದರಾಶಿ ದೊಡ್ಡನಗೌಡರನ್ನು ಒಬ್ಬ ಸದಸ್ಯನನ್ನಾಗಿ ಆರಿಸಿಕೊಂಡಿತ್ತು. ಅಕಾಡೆಮಿಯ ಸಮಾವೇಶ ಬೆಂಗಳೂರಿನಲ್ಲಿ ರವೀಂದ್ರ ಕಲಾಕ್ಷೇತ್ರದಲ್ಲಾಯಿತು. ಆಗ ಬೆಂಗಳೂರಿಗೆ ಬಂದ ಗೌಡರು ಕಲಾವಿದೆಯರಾದ ಮೂವರು ಮಹಿಳೆಯರ ಸಹಾಯದಿಂದ ಆಯ್ದಕ್ಕಿ ಮಾರಯ್ಯಗಳ ಸಂಪಾದನೆ, ಮಹಾದೇವಿ ಅಕ್ಕಗಳ ಸಂಪಾದನೆ, ಪ್ರಭುಲಿಂಗಲೀಲೆಯಲ್ಲಿನ ಅಕ್ಕಮಹಾದೇವಿಯ ಗತಿ (ಕಾವ್ಯವಾಚನ) ಗಳನ್ನು

ಧ್ವನಿಮುದ್ರಿಸಿಕೊಂಡರು. ಆ ವಿಷಯವನ್ನು ಕುರಿತು ಜೋಳದರಾಶಿ ಗೌಡರು "ನಂಜೇ ನಾನೋದಿದೆ" ಎಂಬ ತಮ್ಮ ಆತ್ಮ ಚರಿತ್ರೆಯಲ್ಲಿ ಹೀಗೆ ಪ್ರಸ್ತಾಪಿಸಿದ್ದಾರೆ.

> "ಒಂದು ವಾರದಲ್ಲಿ ಈ ಮೂರು ಸಂಪಾದನೆಗಳನ್ನು ಮುಗಿಸಿದೆ. ಸುಪ್ರಸಿದ್ಧ ರಂಗಭೂಮಿ-ಸಿನಿಮಾ ನಟೀಮಣಿಯರಾದ ಶ್ರೀಮತಿ ಜಯಮ್ಮನವರು ಭಕ್ತಿಯಿಂದ ಆಯ್ದಕ್ಕಿ ಮಾರಯ್ಯನ ಸಂಪಾದನೆಯಲ್ಲಿ 'ಲಕ್ಕಮ್ಮ'ನ ಪಾತ್ರ, ರಂಗಭೂಮಿಯ ನಟೀಮಣಿ ಶ್ರೀಮತಿ ಸ್ವರ್ಣಮ್ಮನವರು ಮಹಾದೇವಿ ಅಕ್ಕನ ಸಂಪಾದನೆಯಲ್ಲಿ 'ಅಕ್ಕನ' ಪಾತ್ರವನ್ನು ತಮ್ಮ ಧ್ವನಿಯ ವಿನ್ಯಾಸಗಳಿಂದ ಯಶಸ್ವಿಗೊಳಿಸಿದರು. ಪ್ರಸಿದ್ಧ ಗಮಕಿಯಾಗಿ ಕರ್ನಾಟಕದಲ್ಲಿ ಕೀರ್ತಿವೆತ್ತ ಶಕುಂತಲಾಬಾಯಿ ಪಾಂಡುರಂಗ ರಾಯರು ಅನೋಘವಾದ ತಮ್ಮ ಗೌಳ ಶಾರೀರದಿಂದ ಮಹಾದೇವಿ ಅಕ್ಕನ ಗತಿಯನ್ನು ವಾಚಿಸಿದರು. ಈ ಮೂವರೂ ನನ್ನ ಸಹೋದರಿಯರು. ಕಲಾರಂಗದಲ್ಲಿ ಇಂತಹ ಸಹೃದಯ ವಾತ್ಸಲ್ಯಪೂರಿತ ಸಹೋದರಿಯರನ್ನು ಪಡೆಯುವುದು ದುರ್ಲಭ. ಎಲ್ಲ ಭಾರವನ್ನು ಇವರು ಹೊತ್ತು ಸಮಾಜದ ಧರ್ಮಕಾರ್ಯ ಪ್ರಚಾರಕ್ಕಾಗಿ, ಸಹಕಾರವಿತ್ತುದನ್ನು ನಾನೆಂದೂ ಮರೆಯಲಾರೆ."

ಜೋಳದರಾಶಿ ದೊಡ್ಡನಗೌಡರು ಶ್ರೀಮಂತ ವೀರಶೈವ ರೈತ ಕುಟುಂಬಕ್ಕೆ ಸೇರಿದವರು. ಗಮಕ ನಾಟಕ ಕಲೆಗಳೆರಡನ್ನೂ ಬೆಳೆಸಿಕೊಂಡು ಬೆಳೆದ ಕಲಾವಿದರು. ಉತ್ತಮ ಕವಿಗಳೂ ಹೌದು. ತಮ್ಮ ಬದುಕನ್ನು ಈಗ ಅಧ್ಯಾತ್ಮದ ಕಡೆಗೆ ತಿರುಗಿಸಿದ್ದಾರೆ. ಜೇಳ್ಳಗುರಿಕೆಯ ಎರ್ರಿತಾತನಿಗೆ ಪೂರ್ತಿ ತಮ್ಮನ್ನು ಸಮರ್ಪಿಸಿಕೊಂಡಿದ್ದಾರೆ. ಗೌಡರು ಶಕುಂತಲಾಬಾಯಿ ಮತ್ತು ನಾನು ಜೇಳ್ಳಗುರಿಕೆಗೆ ಬಂದು ಎರ್ರಿತಾತನಿಗೆ ಗಮಕವಾಚನ ಸೇವೆ ಸಲ್ಲಿಸಬೇಕೆಂದು ಕರೆಕಳಿಸಿದರು. ಒಪ್ಪಿಕೊಂಡೆವು. ಬೆಂಗಳೂರಿನಿಂದ ರೈಲಿನಲ್ಲಿ ರಾತ್ರಿ ಪ್ರಯಾಣ ಮಾಡಿ ಬೆಳಗ್ಗೆ ಸುಮಾರು ಹತ್ತು ಗಂಟೆಯ (?) ಹೊತ್ತಿಗೆ ಬಳ್ಳಾರಿ ಹಿಂದಿನ ರೈಲು ನಿಲ್ದಾಣದಲ್ಲಿ ಇಳಿದೆವು. ಬಳ್ಳಾರಿಗೆ ಸುಮಾರು ಹನ್ನೆರಡು ಹದಿಮೂರು ಮೈಲಿಗಳ ಅಂತರದಲ್ಲಿದೆ ಜೇಳ್ಳಗುರಿಕೆ ಕ್ಷೇತ್ರ. ಗೌಡರು ತಮ್ಮ ಸ್ವಂತ ಜೋಡೆತ್ತಿನ ಕಮಾನು ಬಂಡಿ ಕಳಿಸಿದ್ದರು. ಮೆತ್ತೆಗಳಿಂದ ಸುಸಜ್ಜಿತವಾದ ಬಂಡಿ. ಕಾಲಕ್ಕೆ ಸರಿಯಾಗಿ ಜೇಳ್ಳಗುರಿಕೆ ಕ್ಷೇತ್ರವನ್ನು ಸೇರಿದೆವು. ಮಠದಿಂದ ಊಟ ಉಪಚಾರ ನಡೆಯಿತು. ಆ ಸಂಜೆಯೇ ಶಕುಂತಲಾಬಾಯಿಯ "ಪ್ರಭುಲಿಂಗಲೀಲೆ" ಕಾವ್ಯವಾಚನ ನನ್ನ ಪ್ರಾಸಂಗಿಕ ನಿರೂಪಣೆಯೊಡನೆ. "ಶೂನ್ಯಸಿಂಹಾಸನಾರೋಹಣ" ಕಥಾಭಾಗ. ಎರಡು ಮೈಲಿ ದೂರದ ತಮ್ಮ ಜೋಳದರಾಶಿ ಗ್ರಾಮದಿಂದ ದೊಡ್ಡನಗೌಡರು ದಯಮಾಡಿಸಿದ್ದರು. ಮಾರನೆಯ ದಿನ ತಮ್ಮ ಗ್ರಾಮಕ್ಕೆ ಬರಬೇಕೆಂದು ಔತಣ ಹೇಳಿ ಹೋದರು, ಬೆಳಗ್ಗೆ ಹೊತ್ತಿಗೆ ಸರಿಯಾಗಿ ಜೋಡೆತ್ತಿನ ಕಮಾನು ಬಂಡಿ ಬಂದು ನಿಂತಿತು. ಜೇಳ್ಳಗುರಿಕೆಯಿಂದ ಜೋಳದರಾಶಿಗೆ ಕರೆದುಕೊಂಡು ಹೋಯಿತು.

ಗೌಡರು ಮತ್ತು ಅವರ ಧರ್ಮಪತ್ನಿ ಹನುಮಕ್ಕ ಬಹು ಸಡಗರದಿಂದ ನಮ್ಮನ್ನು ಸ್ವಾಗತಿಸಿದರು. ಹೋಳಿಗೆ ತುಪ್ಪದೂಟದಿಂದ ತಣಿಸಿದರು. ಮಧ್ಯಾಹ್ನ ಸ್ವಲ್ಪ ಹೊತ್ತು ವಿಶ್ರಮಿಸಿಕೊಂಡಾದ ಮೇಲೆ ಗೌಡರು ಬಳ್ಳಾರಿಯ ವೈ. ನಾಗೇಶಶಾಸ್ತ್ರಿ ಸುಪ್ರಸಿದ್ಧ ಕವಿ ವಿರಚಿತ "ಲೀಲಾಮೃತ"ವೆಂಬ ಚೇಳ್ಳಗುರಿಕೆ ಎರ್ರಿತಾತನ ಜೀವನ ಚರಿತ್ರೆಯ ಭಾಮಿನಿ ಷಟ್ಪದಿ ಕಾವ್ಯವನ್ನು ಶಕುಂತಲಾಬಾಯಿಯ ಕೈಗಿತ್ತರು. "ತಂಗಿ, ಎರ್ರಿತಾತನ ಕ್ಷೇತ್ರದಲ್ಲಿ ಅವನ ಚರಿತ್ರೆಯ ಒಂದು ಭಾಗವನ್ನು ಲೀಲಾಮೃತದಿಂದ ಓದುವೆಯಾ ?" ಎಂದು ಕೇಳಿದರು. ಶಕುಂತಲಾಬಾಯಿ "ಆಗಬಹುದು" ಎಂದರು. ಅಲ್ಲಿಯೇ ನಾನು ಮತ್ತು ಶಕುಂತಬಾಯಿ"ಲೀಲಾಮೃತ"ದಿಂದ ಮೂರನೆಸಂಧಿಯಲ್ಲಿ"ಎರ್ರಿತಾತ ಮಂಜುಳೆ ಯೆಂಬ ಕನ್ಯೆಯನ್ನು ವಿವಾಹವಾಗಿ ದಂಪತಿಗಳಿಬ್ಬರೂ ಅನ್ಯೋನ್ಯವಾಗಿ ಸಂಸಾರ ಸುಖ ವನ್ನು ಅನುಭವಿಸುತ್ತ, ಎರ್ರಿ ತಾತ ಮಾತಾಪಿತೃಗಳಿಗೆ ವಿಧೇಯನಾಗಿ ಜೀವನ ನಡೆಸು ತ್ತಿದ್ದ" ಎಂಬ ಪದ್ಯಗಳ ವರೆಗೆ (16–32) ಹದಿನಾರು ಪದ್ಯಗಳನ್ನು ಆರಿಸಿಕೊಂಡೆವು. ಪೀಠಿಕಾ ಸಂಧಿಯಿಂದ ಪ್ರಾರಂಭಕ್ಕೆ ಮೊದಲೆರಡು ಪದ್ಯಗಳನ್ನು ಮುಕ್ತಾಯಕ್ಕೆ ಹದಿನೇಳನೆಯ ಸಂಧಿಯ ಕಡೆಯ ಪದ್ಯವನ್ನು ಇಟ್ಟುಕೊಂಡೆವು. ನನ್ನ ಪ್ರಾಸಂಗಿಕಾ ನಿರೂಪಣೆ ಶಕುಂತಲಾಬಾಯಿಯ ಕಾವ್ಯವಾಚನ ಎರಡೂ ಸೇರಿ ಸುಮಾರು ಅರ್ಧ ಗಂಟೆಯ ಮಿತಿಗೆ "ಲೀಲಾಮೃತ" ಕಾವ್ಯವಾಚನ ಅಳವಟ್ಟಿತು. ಜೋಳದರಾಶಿ ದೊಡ್ಡನಗೌಡರು ಜೋಳದರಾಶಿಯಿಂದ ಚೇಳ್ಳಗುರಿಕೆಗೆ ನಮ್ಮನ್ನು ತಲುಪಿಸುವು ದಕ್ಕೆ ತಮ್ಮ ಜೋಡೆತ್ತಿನ ಕಮಾನು ಬಂಡಿಯನ್ನು ಸಿದ್ಧಪಡಿಸಿದರು. ಗೌಡಿತಿ ಹನುಮಕ್ಕ ಮನೆಯ ಹೆಣ್ಣುಮಗಳನ್ನು ತೌರುಮನೆಯಿಂದ ಕಳಿಸುವ ಸಡಗರದಿಂದ ಶಕುಂತಲಾಬಾಯಿಗೆ ಕುಂಕುಮ ಹಚ್ಚಿ, ಭಾರಿ ಜರಿಯ ಕುಪ್ಪಸದ ಖಣ, ತೆಂಗಿನ ಕಾಯಿ ಫಲತಾಂಬೂಲ ಸಹಿತ ಉಡಿತುಂಬಿ ಬಂಡಿಯಲ್ಲಿ ಕೂಡಿಸಿದರು. ಗೌಡ ದಂಪತಿಗಳು ತಾವೂ ಕೂತರು. ಕಾರ್ಯಕ್ರಮದ ವೇಳೆಗೆ ಸರಿಯಾಗಿ ನಮ್ಮ ಬಂಡಿ ಚೇಳ್ಳಗುರಿಕೆ ಸೇರಿತು. ಹನುಮಕ್ಕನವರನ್ನು ನಾವು ನೋಡಿದ್ದು ಅದೇ ಪ್ರಥಮ ಹಾಗೂ ಅಂತ್ಯ ಭೇಟಿಯಾಯಿತು. ಹನುಮಕ್ಕ ಗೌಡಿತಿ ಗೌಡರನ್ನು ಒಬ್ಬಂಟಿಗರನ್ನಾಗಿ ಬಿಟ್ಟು ಶಿವನ ಸೀಮೆಗೆ ಹೊರಟುಹೋದರು. ಗೌಡರ ಒಂಟಿ ಬಾಳು ಕಷ್ಟಸಹ್ಯವಾಗಿದೆ.

ಚೇಳ್ಳಗುರಿಕೆಯ ಎರ್ರಿತಾತನಿಗೆ ಗಮಕವಾಚನ ಸೇವೆ

ಚೇಳ್ಳಗುರಿಕೆಯಲ್ಲಿ ಶಕುಂತಲಾಬಾಯಿಯ "ಲೀಲಾಮೃತ" ಕಾವ್ಯವಾಚನ ನನ್ನ ಪ್ರಾಸಂಗಿಕ ನಿರೂಪಣೆಯೊಡನೆ ಸುಮಾರು ಅರ್ಧ ಗಂಟೆ ನಡೆಯಿತು. ಸ್ಥಳ ಹೊಸದು, ಕಾವ್ಯ ಹೊಸದು, ಕೇಳುವ ಜನ ಹೊಸದು, ಕಾವ್ಯವಾಚನದ ಅಭ್ಯಾಸಕ್ಕೆ ಅವಧಿ ಸುತರಾಂ ಇಲ್ಲ. "ಎರ್ರಿತಾತನೇ ಕಾಪಾಡಬೇಕು" ಎಂದು ಶಕುಂಕಲಾಬಾಯಿ ಮನಸ್ಸಿ ನಲ್ಲಿ ಅಂದುಕೊಂಡು ವೇದಿಕೆ ಹತ್ತಿದರು. ದೈವಲೀಲೆ. ಕಾವ್ಯವಾಚನ ಕಳೆಗಟ್ಟಿತು. "ಲೀಲಾಮೃತ" ಕಾವ್ಯ ಹೊಸತೆನಿಸಲೇಯಿಲ್ಲ. ನನ್ನ ಪ್ರಾಸಂಗಿಕ ನಿರೂಪಣೆಯೂ ಹಿತ

ಮಿತವಾಗಿ ಶ್ರೋತೃಗಳ ಮೆಚ್ಚಿಗೆಗೆ ಪಾತ್ರವಾಯಿತು. ಗಮಕ ಕಲಾನಿಧಿ ಗೌಡರ ಆನಂದಕ್ಕೆ ಪಾರವಿಲ್ಲ. "ಹೊಸ ಕಾವ್ಯವನ್ನು ಎಷ್ಟು ಚೆನ್ನಾಗಿ ಓದಿಬಿಟ್ಟೆಯಮ್ಮ!" ಎಂದು ಮನಬಿಚ್ಚಿ ಹೊಗಳಿ ತಮ್ಮ ಹೃದಯ ಶ್ರೀಮಂತಿಕೆಯನ್ನು ಮೆರೆದರು.

ಚಂದ್ರಶೇಖರಪ್ಪನವರ ಸ್ನೇಹಗಳಿಕೆ

ಜೋಳದರಾಶಿ ದೊಡ್ಡನಗೌಡರು ಬೆಂಗಳೂರಿಗೆ ಬಂದಾಗ ಬೆಂಗಳೂರಿನ ಬಳ್ಳಾಪುರದ ಪೇಟೆ (ಜುಮ್ಮಾ ಮಸೀದಿ ರಸ್ತೆ) ಯಲ್ಲಿರುವ ಎಂ. ಎಸ್. ಚಂದ್ರಶೇಖರಪ್ಪನವರ ಮನೆಯಲ್ಲಿ ಬಿಡದಿ ಮಾಡುತ್ತಾರೆ. ನನಗೆ ಮುಂಚೆಯೇ ಪತ್ರ ಬಂದಿರುತ್ತದೆ. ನಾನು ಹೋಗಿ ಅವರನ್ನು ಭೇಟಿ ಮಾಡುತ್ತೇನೆ. ಇಬ್ಬರೂ ಕ್ಷೇಮ ಸಮಾಚಾರ ವಿನಿಮಯ ಮಾಡಿಯಾದ ಮೇಲೆ "ಗೌಡರೆ, ನಿಮ್ಮ ತಂಗಿ ಕರೆದಿದ್ದಾಳೆ, ಬರಬೇಕು" ಎಂದು ಆಹ್ವಾನಿಸುತ್ತೇನೆ. ಗೌಡರು ನನ್ನನ್ನು ಎಂದೂ ನಿರಾಸೆಗೊಳಿಸಿಲ್ಲ. ತಮಗೆ ಎಷ್ಟೇ ಕಾರ್ಯಗಳ ಒತ್ತಡವಿರಲಿ ಗಣಿಸದೆ ನಮ್ಮ ಮನೆಗೆ ಬಂದು **ವಿದುರಾತಿಥ್ಯವನ್ನು** ಸ್ವೀಕರಿಸಿ ಒಂದು ಮಧ್ಯಾಹ್ನವೆಲ್ಲ ಇದ್ದು ಹೋಗುವ ಔದಾರ್ಯವನ್ನು ತೋರಿಸಿದ್ದಾರೆ. ಗೌಡರ ನಮ್ಮ ಕಷ್ಟ ಸುಖಗಳನ್ನೆಲ್ಲ ಪ್ರಸ್ತಾಪಿಸುವ ಪತ್ರವ್ಯವಹಾರ ಸತತವಾಗಿ ನಡೆಯುತ್ತಲೇ ಇದೆ. ನನ್ನ ಪತ್ರ ಕೊಂಚ ಹಿಂದುಮುಂದಾದರೆ,"ಏಕಪ್ಪ ನನ್ನ ಮೇಲೆ ನಿನಗೆ ಕೋಪವೇ ?" ಎಂದು ಎಚ್ಚರದ ಪತ್ರ ಬಂದಿರುತ್ತದೆ. ಇದು ಗೌಡರ ಶ್ರೀಮಂತ ಗುಣ.

ಜೋಳದರಾಶಿ ದೊಡ್ಡನಗೌಡರ ಮೂಲಕ ನಮಗೆ ಎ. ಎಸ್. ಚಂದ್ರಶೇಖರಪ್ಪನವರ ಪರಿಚಯವಾಯಿತು. ಕ್ರಮೇಣ ಸ್ನೇಹಕ್ಕೆ ತಿರುಗಿತು. ಎರ್ರಿತಾತನ ಜೇಳ್ಳಗುರಿಕೆ ಕ್ಷೇತ್ರದಲ್ಲಿ ಶಕುಂತಲಾಬಾಯಿಗೆ "ಲೀಲಾಮೃತ" ಮತ್ತು "ಪ್ರಭುಲಿಂಗಲೀಲೆ" ಕಾವ್ಯ ವಾಚನ ಮಾಡುವ ಸೇವೆ ಲಭಿಸುವುದಕ್ಕೆ ಕಾರಣ ಚಂದ್ರಶೇಖರಪ್ಪ ಎಂದರೆ ತಪ್ಪಲ್ಲ. ಅವರ ತೀರ್ಥರೂಪರಾದ ದಿ|| ಶಾಮಣ್ಣನವರು ಎರ್ರಿತಾತನ ಪರಮಭಕ್ತರು. ಜೇಳ್ಳಗುರಿಕೆ ಕ್ಷೇತ್ರದ ಅಭಿವೃದ್ಧಿಯಲ್ಲಿ ಶಾಮಣ್ಣನವರದು ಸಿಂಹಪಾಲು. ಅವರನಂತರದಲ್ಲಿ ಚಂದ್ರಶೇಖರಪ್ಪನವರು ತಂದೆಯಷ್ಟೆ ನಿಷ್ಠೆಯಿಂದ ಎರ್ರಿತಾತನ ಕ್ಷೇತ್ರವನ್ನು ಅಭಿವೃದ್ಧಿಗೊಳಿಸುವುದರಲ್ಲಿ ತಮ್ಮ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಕಾವ್ಯಕಲಾಭಿಮಾನಿಗಳಾದ ಚಂದ್ರಶೇಖರಪ್ಪನವರ ಸ್ನೇಹ ಲಭಿಸಿರುವುದು ನಮ್ಮ ಭಾಗ್ಯವೆಂದು ನಾನು ಎಣಿಸಿದ್ದೇನೆ.

ಹರಿಹರನ "ಗಿರಿಜಾಕಲ್ಯಾಣ" ಗಮಕ ವೇದಿಕೆಯ ಮೇಲೆ ಮೆರೆಯಿತು

ಹರಿಹರ ಮಹಾಕವಿಯ ಚಂಪೂಕಾವ್ಯ "ಗಿರಿಜಾಕಲ್ಯಾಣ" ವಾಚನಕ್ಕೆ ಸ್ಫೂರ್ತಿಯಿತ್ತುದು ಮಲ್ಲೇಶ್ವರದ ಹಿಮಾಮ್ಸ್ ಶಿಶುವಿಹಾರ. ಅಮೆಚೂರ್ ಡ್ರಮಾಟಿಕ್ ಅಸೋಸಿಯೇಷನ್‌ನಲ್ಲಿ ಪ್ರಸಿದ್ಧ ನಟರೆನ್ನಿಸಿಕೊಂಡಿದ್ದ ಎಂ. ಎಲ್. ಎಸ್. ಶಾಸ್ತ್ರಿ (ಶ್ರೀನಿವಾಸ ಶಾಸ್ತ್ರಿ) ಯವರೂ ಅವರ ಧರ್ಮ ಪತ್ನಿ ಸುಂದರಮ್ಮನವರು ಶಕುಂತಲಾಬಾಯಿಗೆ ಮತ್ತು ನನಗೆ ಆತ್ಮೀಯರು. ದಂಪತಿಗಳಿಬ್ಬರೂ ನಮ್ಮಂತೆಯೇ ಕಲ್ಯಾಣಮ್ಮ,

ನವರಿಗೆ ಬೇಕಾದವರು. ಅಖಿಲ ಕರ್ಣಾಟಕ ಮಕ್ಕಳ ಕೂಟದ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದರು. ಮುಂದೆ 1945ರಲ್ಲಿ ಈ ದಂಪತಿಗಳು ಹಿಮಾಮ್ಶು ಶಿಶುವಿಹಾರವನ್ನು ಸ್ಥಾಪಿಸಿದರು. ಅದೇ ಬೆಂಗಳೂರಿಗೆ ಪ್ರಪ್ರಥಮ ಮಾಂಟೆಸೂರಿ ಶಿಶುವಿಹಾರವೆಂದು ನನ್ನ ತಿಳಿವಳಿಕೆ. ನೆಹರೂ ನಗರದಲ್ಲಿ 1948ರಲ್ಲಿ ಪ್ರಾರಂಭವಾದ ನಮ್ಮ "ಮಕ್ಕಳ ಮಂಟಪ" ಶಿಶುವಿಹಾರ ಎರಡನೆಯದೆಂದು ನನ್ನ ನಂಬಿಕೆ. ಎಮ್. ಎಲ್. ಎಸ್. ಶಾಸ್ತ್ರಿಗಳು ತಮ್ಮ ಶಿಶುವಿಹಾರದ ವಾರ್ಷಿಕೋತ್ಸವ ಸಂದರ್ಭಗಳ ವಿಶೇಷ ಕಾರ್ಯಕ್ರಮಗಳಲ್ಲಿ ಮಕ್ಕಳ ನಾಟಕಗಳನ್ನು ತಮ್ಮ ಶಾಲಾಮಕ್ಕಳುಗಳಿಂದ ರಂಗಭೂಮಿಯ ಮೇಲೆ ಆಡಿಸುತ್ತಿದ್ದರು. "ಕೃಷ್ಣಲೀಲೆ", "ಉತ್ತರ ಕುಮಾರ" ಇಂಥವು ಗೀತಾಪ್ರಧಾನ ಮಕ್ಕಳ ನಾಟಕಗಳಾಗಿದ್ದವು. ಅವುಗಳ ಜೊತೆಗೆ "ಗಿರಿಜಾಕಲ್ಯಾಣ"ವೂ ಸೇರಿಕೊಂಡಿತು. ಈ ನಾಟಕಗಳಿಗೆಲ್ಲ ಶಕುಂತಲಾಬಾಯಿ ಹಿನ್ನೆಲೆಯ ಗಾಯಕಿಯಾಗಿ ಹಿನ್ನೆಲೆ ಗಾಯನ ಕೊಡುತ್ತಿದ್ದರು. "ಗಿರಿಜಾಕಲ್ಯಾಣ"ದಲ್ಲಿ "ಮನ್ಮಥ ದಹನ" ಒಂದು ರಸಘಟ್ಟ. ಅದನ್ನು ರೋಮಾಂಚನಗೊಳಿಸುವಂತೆ ಸೂಕ್ತವಾದ ಗೀತವನ್ನು ಹಿನ್ನೆಲೆ ಗಾಯನಕ್ಕೆ ಅಳವಡಿಸಿಕೊಳ್ಳುವ ಆಲೋಚನೆ ಶಾಸ್ತ್ರಿಗಳ ಮನಸ್ಸು ಹೊಕ್ಕಿತು. ಹರಿಹರ ಮಹಾಕವಿಯ "ಗಿರಿಜಾಕಲ್ಯಾಣ" ಚಂಪು ಅವರ ಯೋಚನೆಗೆ ಇಂಬುಗೊಟ್ಟಿತು.

ಚಂ॥ ಪೊಗೆದುದು ಪೊತ್ತಿದತ್ತು ಕಿಡಿಯಟ್ಟುದು ನಾಳ್ದೆಸೆದೋಱಿದತ್ತು ಬಾನ್
ಗೊಗೆಪುದು ನಿಂಪು ಪೊಂಬೆಳಗುಮಂ ಪರಪುತ್ತದು ಧಂಧಗಿಲ್ ಧಗಿಲ್ ।
ಧಗಿಲೆನುತಟ್ಟಿದುದು ಮುಟ್ಟಿತು ಸುಟ್ಟಿತು ತಿಂದು ತೇಗಿದ
ತ್ತಗಿಯದೆ ನಿಂದ ಪೂಗಣೆಯನಂ ಪಣೆಗಣ್ಣುರಿ ಹಂಪೆಯಾಳ್ದನಾ ॥

ಈ ಚಂಪಕಮಾಲಿನೀ ವೃತ್ತವನ್ನು ಹಿನ್ನೆಲೆ ಗೀತೆಯನ್ನಾಗಿ ಮನ್ಮಥ ದಹನ ಸನ್ನಿವೇಶಕ್ಕೆ ಬಳಸಿಕೊಳ್ಳಬೇಕೆಂದು ಶಾಸ್ತ್ರಿ ದಂಪತಿಗಳು ಇಚ್ಛಿಸಿದರು. ಶಕುಂತಲಾಬಾಯಿಯೇ ಹಿನ್ನೆಲೆಯಲ್ಲಿ ಈ ವೃತ್ತವನ್ನು ಹಾಡಬೇಕೆಂದು ಆಶಿಸಿ ಅವರಿಗೆ ಕರೆಕಳುಹಿಸಿದರು. ಶಕುಂತಲಾಬಾಯಿ ಆ ವೃತ್ತದ ಜೊತೆಗೆ ಇನ್ನೊಂದು ಮಂದಾನಿಲರಗಳೆ ವೃತ್ತವನ್ನು ಸೇರಿಸಿದರು—

ಮ॥ ಅರರೇ ಭುಘುರ್ಘುಗು ಭಾಪುರೇ ಪ್ರಜ್ವಾಲೆ ಮುಚ್ಚಯ್ಯ ದೇ
ಪುರಮೇಘಾನಲ ವಿಸ್ಫುಲಿಂಗಮುಮಸು ಪ್ರದ್ಯೋತವಯ್ಯಯ್ಯ ಭೀ ।
ಕರಮಾಹಾ ಛಿಳಿಛಿಳಿಲ್ ಛಿಟಿಲ್ ಭಲರೆ ಭಾಳಾಭೀಳಮುದೆಂದು ನಿ
ರ್ಜರಲೋಕಂ ಬೆರಗಾಗೆ ಸುಟ್ಟುದು ವಿರೂಪಾಕ್ಷಾಕ್ಷಿ ಕಂದರ್ಪನಂ ॥

"ಗಿರಿಜಾಕಲ್ಯಾಣ" ರಂಗಭೂಮಿಯ ಮೇಲೆ ಪ್ರದರ್ಶನವಾಯಿತು. ಹಿಮಾಮ್ಶು ಶಿಶುವಿಹಾರದ ಮಕ್ಕಳು ಮಕ್ಕಳ ನಾಟಕಾಭಿನಯಗಳಲ್ಲಿ ಎತ್ತಿದ ಕೈ. ಸ್ವತಃ ನಟವರ್ಯರಾಗಿ ರಂಗಭೂಮಿಯ ಮೇಲೆ ಶೋಭಿಸಿದ ಶಾಸ್ತ್ರಿಗಳೇ ಮಕ್ಕಳಿಗೆ ಅಭಿನಯ ಕಲಿಸುವ ಗುರುಗಳಾಗಿದ್ದ ಮೇಲೆ ನಾಟಕ ಯಶಸ್ವಿಯಾಗಲೇಬೇಕಲ್ಲವೆ! ವಿರೂಪಾಕ್ಷನು ತನ್ನ ತಪೋಭಂಗ ಮಾಡಿದನಲ್ಲ ಎಂಬ ಉರಿಗೋಪದಿಂದ ಹಣೆಗಣ್ಣು ತೆರೆದು ಜ್ವಾಲೆ ಸುರಿಸಿ ಮನ್ಮಥನನ್ನು ಸುಟ್ಟು ಕರಕುಮಾಡಿದ. ಶಕುಂತಲಾಬಾಯಿ ಈ ಸನ್ನಿವೇಶಕ್ಕೆ ಹೊಂದು

ವಂತೆ ಮೋಹನರಾಗವನ್ನು ಬಳಸಿಕೊಂಡು ತಾರಕಸ್ಥಾಯಿಯಲ್ಲಿ ಎರಡೂ ವೃತ್ತಗಳನ್ನು ಗಮಕವೈಶಿಷ್ಟ್ಯದಿಂದ ಮಿಂಚುವೇಗದಲ್ಲಿ ಹಾಡಿದರು. ಪ್ರೇಕ್ಷಕರು ಮೈಪುಳಕಗೊಂಡರು. ಶಾಸ್ತ್ರಿ ದಂಪತಿಗಳು ಶಕುಂತಲಾಬಾಯಿಯನ್ನು ತುಂಬು ಹೃದಯದಿಂದ ಹೊಗಳಿದರು. ಹರಿಹರನ "ಗಿರಿಜಾಕಲ್ಯಾಣ" ಕಾವ್ಯವಾಚನ ಮಾಡಬೇಕೆಂಬ ಆಸೆಯು ಮೊಳಕೆ ಬೇರು ಬಿಟ್ಟಿತು ಶಕುಂತಲಾಬಾಯಿಗೆ. ಸಾರ್ವಜನಿಕ ವೇದಿಕೆಯ ಮೇಲೆ ಗಿರಿಜಾಕಲ್ಯಾಣ ಚಂಪೂಕಾವ್ಯವಾಚನ ಮಾಡುವುದಕ್ಕೆ 1967ರ ವರೆಗೆ ಅವಕಾಶ ಒದಗಲಿಲ್ಲ.

ಬೆಂಗಳೂರು ಬುಕ್ ಸೆಂಟರಿನ ಕೆ.ಎಲ್. ಲಕ್ಷ್ಮೀನಾರಾಯಣಅವರು ಶಕುಂತಲಾ ಬಾಯಿಯವರಿಂದ ಹರಿಹರನ ಗಿರಿಜಾಕಲ್ಯಾಣ ಕಾವ್ಯ ಸಪ್ತಾಹವನ್ನು ಬಸವನಗುಡಿಯ ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನದಲ್ಲಿ ಏರ್ಪಡಿಸುವುದಕ್ಕೆ ಸ್ಫೂರ್ತಿಯ ಸೆಲೆಯಾದರು. ಅದರ ಹಿನ್ನೆಲೆ ಹೀಗೆ—

''ಶ್ರೀ ರಾಮಚರಿತ ಮಾನಸ'' ಅಜ್ಞಾತವಾಸದಿಂದ ಗಮಕ ವೇದಿಕೆಗೆ

ವಯೋವೃದ್ಧರೂ ಜ್ಞಾನವೃದ್ಧರೂ ಆದ ಗಮಕ ವಿದ್ವಾನ್ ಎಂ. ಎಸ್. ಅನಂತಪದ್ಮನಾಭರಾಯರು ಭಾಮಿನಿ-ವಾರ್ಧಿಕ ಷಟ್ಪದಿ ಕಾವ್ಯರಚನೆಯಲ್ಲಿ ಸಿದ್ಧ ಹಸ್ತರು. ಅವರ ಕಾವ್ಯ ಕೃತಿಗಳಲ್ಲಿ "ಶ್ರೀ ರಾಮಚರಿತ ಮಾನಸ" (ತುಳಸೀದಾಸ ರಾಮಾಯಣ) "ಶ್ರೀ ಕೃಷ್ಣಚರಿತಾಮೃತಂ" ಮತ್ತು ಅಚ್ಚಾಗದಿರುವ ಹಸ್ತ ಪ್ರತಿ ಕುಮಾರವ್ಯಾಸ ಭಾರತದ ದಶಪರ್ವಗಳಿಗೆ ಪೂರಕವಾಗಿ ಮುಂದುವರಿಸಿರುವ ಎಂಟು ಪರ್ವಗಳ ಭಾರತ, ಮುಖ್ಯವಾದವು. "ಶ್ರೀ ರಾಮಚರಿತಮಾನಸ" ಕಾವ್ಯ 1946ಕ್ಕೆ ಮುಂಚಿತವಾಗಿಯೇ ರಚಿತವಾಗಿ ದೇವರಾಜಬಹದ್ದೂರು ಬಹುಮಾನವನ್ನು ಹಸ್ತ ಪ್ರತಿಯಲ್ಲಿರುವಾಗಲೇ ಪಡೆದಿತ್ತು. ಕಾಸರಗೋಡು ಸಾಹಿತ್ಯ ಸಮ್ಮೇಳನಕ್ಕೆ ಬಂದಿದ್ದ ಎ. ಎಲ್. ಲಕ್ಷ್ಮೀನಾರಾಯಣ ಅವರು, ಕಾಸರಗೋಡು ಸಾಹಿತ್ಯ ಸಮ್ಮೇಳನವನ್ನೂ ಮುಗಿಸಿಕೊಂಡು ಮಡಿಕೇರಿಗೆ ಬಂದರು. ಅನಂತಪದ್ಮನಾಭರಾಯರ ಅತಿಥಿಗಳಾಗಿ ಅವರ ಮನೆಯಲ್ಲಿ ಇಳಿದುಕೊಂಡರು. ಶ್ರೀಯುತರ ಕಣ್ಣು ಅನಂತಪದ್ಮನಾಭರಾಯರ ಮೇಜಿನ ಮೇಲಿದ್ದ "ಶ್ರೀ ರಾಮಚರಿತಮಾನಸ"ದ ಕಡೆಗೆ ಓಡಿತು. ಕೈಗೆ ತೆಗೆದು ಕೊಂಡರು. ಕಾವ್ಯದ ಒಳಪುಟಗಳನ್ನು ಅಲ್ಲಲ್ಲಿ ಹಣಕಿ ನೋಡಿದರು. ಕಾವ್ಯ ಚೆನ್ನಾಗಿತ್ತು. ತಾವೇಕೆ ಅದನ್ನು ಪ್ರಕಟಿಸಬಾರದೆಂದು ಯೋಚಿಸಿದರು. "ರಾಯರೆ, ತುಳಸೀದಾಸ ರಾಮಾಯಣವನ್ನು ಪ್ರಕಟಿಸುವ ಪುಣ್ಯ ನನಗೆ ಬರಲಿ. ಅದನ್ನು ನನಗೆ ಕೊಡಿ" ಎಂದರು. ರಾಯರು ಹಸ್ತಪ್ರತಿಯನ್ನು ಲಕ್ಷ್ಮೀನಾರಾಯಣರಾಯರಕೈಗಿತ್ತರು. ಅವರಲ್ಲಿ ಇದ್ದುದು ಇದೊಂದೇ ಪ್ರತಿ.

ಲಕ್ಷ್ಮೀನಾರಾಯಣ್ ಅನಂತಪದ್ಮನಾಭರಾಯರ ಶ್ರೀ ರಾಮಚರಿತ ಮಾನಸ ಕಾವ್ಯವನ್ನು ಎರಡು ಭಾಗಗಳಾಗಿ 1959-1967 ಇಸವಿಗಳಲ್ಲಿ ಪ್ರಕಟಿಸಿದರು. ಏನು ಕಾರಣವೋ "ಶ್ರೀ ರಾಮಚರಿತ ಮಾನಸ ಕಾವ್ಯ" 1967ರವರೆಗೆ ಈಚೆಗೆ ಬರದೆ ಒಳಗೇ

ಸೆರೆಯಾಗಿ ಉಳಿಯಿತು. ಲಕ್ಷ್ಮೀನಾರಾಯಣ್ ಈ ವೇಳೆಗೆ ತಮ್ಮ ತಂದೆಯನ್ನು ಕಳೆದುಕೊಂಡಿದ್ದರು. ತಾಯಿ, ಪತಿಯನ್ನು ಕಳೆದುಕೊಂಡ ವ್ಯಸನದಲ್ಲಿ ಸಂಸಾರ ನಿರ್ವಹಣೆಯ ಭಾರವನ್ನು ತಲೆಗೆ ಹಚ್ಚಿಕೊಳ್ಳಲಿಲ್ಲ. ಲಕ್ಷ್ಮೀನಾರಾಯಣರೇ ಹಿರಿಯ ಪುತ್ರ. ಮದುವೆಗೆ ಐವರು ಸಹೋದರಿಯರು ಎದುವಿದ್ದರು. ಹೀಗಿತ್ತು ಅವರ ಸ್ಥಿತಿ. ಈ ಎಲ್ಲ ದಂದುಗಗಳ ತಿಕ್ಕಾಟದಲ್ಲಿ ಅವರು "ಶ್ರೀ ರಾಮಚರಿತ ಮಾನಸ" ಕಾವ್ಯದ ಬಿಡುಗಡೆಯನ್ನು ಮುಂದುವರಿಸುತ್ತಲೇ ಹೋದರು. ಕಾವ್ಯಕರ್ತೃವಾದ ಅನಂತಪದ್ಮನಾಭರಾಯರಿಗೆ ತಮ್ಮಲ್ಲಿ ಹಸ್ತಪ್ರತಿಯೂ ಇಲ್ಲ, ಅಚ್ಚಾಯಿತೇ ಎಂಬ ಸುದ್ದಿಯೂ ಇಲ್ಲ, ಎಂಬ ವ್ಯಥೆ ಬಾಧಿಸತೊಡಗಿತು.

ಲಕ್ಷ್ಮೀನಾರಾಯಣ್ 1967ರಲ್ಲಿ ಒಂದು ದಿನ ಭಾನುವಾರ ಬೆಳಗ್ಗೆ ನಮ್ಮ ಮನೆಗೆ ಬಂದರು. "ಪಾಂಡುರಂಗರಾವ್, ನೀವು ಮತ್ತು ಅನಂತಪದ್ಮನಾಭರಾವ್, ತುಂಬ ಸ್ನೇಹಿತರು. ಈಗ ನಿಮ್ಮಿಂದ ಒಂದು ಉಪಕಾರವಾಗಬೇಕು. ರಾಯರ "ಶ್ರೀ ರಾಮಚರಿತ ಮಾನಸ" ಕಾವ್ಯದ ಬಿಡುಗಡೆ ಸಮಾರಂಭಕ್ಕೆ ಅವರನ್ನು ಬರಮಾಡಿಕೊಳ್ಳುವ ಸಂಧಾನ ನಿಮ್ಮದು. ಬಿಡುಗಡೆ ಸಮಾರಂಭವನ್ನು ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನದಲ್ಲಿ ವಿಜೃಂಭಣೆಯಿಂದ ಮಾಡೋಣ. ಶಕುಂತಲಾಬಾಯಿಯೇ "ಶ್ರೀ ರಾಮಚರಿತ ಮಾನಸ" ಕಾವ್ಯವಾಚನ ಸಪ್ತಾಹವನ್ನು ನಡೆಸಿಕೊಡಬೇಕು" ಎಂದು ಪ್ರಾರ್ಥಿಸಿಕೊಂಡರು. ನಾನು ಲಕ್ಷ್ಮೀನಾರಾಯಣ್ ಅವರನ್ನು ಬಾಲ್ಯದಿಂದಲೂ ಬಲ್ಲೆ. ತುಂಬ ಒಳ್ಳೆಯವರು. ಬಹಳ ಮೃದು ಸ್ವಭಾವದವರು. ಹಿರಿಯರಲ್ಲಿ ಬಹಳ ವಿನಯದಿಂದ ನಡೆದುಕೊಳ್ಳುತ್ತಿದ್ದರು. ಮಿತ್ರವೃಂದದಲ್ಲಿ ಬಹಳ ಸ್ನೇಹದಿಂದ ವರ್ತಿಸುತ್ತಿದ್ದರು. ಅವರ ತಂದೆ ದೈವಾಧೀನರಾದಾಗ ಆ ವರ್ಷ ಪೂರ್ತಿ ಪ್ರತಿ ಭಾನುವಾರ ಮಧ್ಯಾಹ್ನಗಳಲ್ಲಿ ಅವರ ಮನೆಯಲ್ಲಿ ಕುವೆಂಪು "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನ ಮಾಡಿಸಿ ಪತಿಯನ್ನು ಕಳೆದುಕೊಂಡು ಸದಾ ದುಃಖಿಸುತ್ತಿದ್ದ ತಾಯಿಗೆ ಸ್ವಲ್ಪ ಹೊತ್ತಾದರೂ ಮನಸ್ಸಿಗೆ ನೆಮ್ಮದಿ ಕೊಡುವ ಪ್ರಯತ್ನವನ್ನು ನಮ್ಮಿಂದ ನಡೆಸಿದ್ದರು. ಅವರ ತಂದೆ ತಾಯಿಗಳು ಲಕ್ಷ್ಮೀನಾರಾಯಣ್ ಅವರನ್ನು "ಮಗು" ಎಂದೇ ಕರೆಯುತ್ತಿದ್ದರು. ನಾನು ಶಕುಂತಲಾಬಾಯಿ "ಶ್ರೀ ರಾಮಚರಿತಮಾನಸ"ಕಾವ್ಯದ ಬಿಡುಗಡೆಯ ವಿಷಯ ಕೇಳಿ ತುಂಬ ಸಂತೋಷಪಟ್ಟೆವು. "ಕವಿಗೆ ತನ್ನ ಕಾವ್ಯ ಪ್ರಕಟವಾಗದೆ ಬಹಳ ವರ್ಷ ಮೂಲೆಗುಂಪಾಗಿ ಉಳಿದರೆ ಎಷ್ಟು ಸಂಕಟ! ಲಕ್ಷ್ಮೀನಾರಾಯಣ್, ನಿಮ್ಮ ಆಲೋಚನೆ ಚೆನ್ನಾಗಿದೆ. ನಾನು ಅನಂತಪದ್ಮನಾಭರಾಯರನ್ನು ಒಪ್ಪಿಸುತ್ತೇನೆ. ನೀವು ಬಿಡುಗಡೆ ಸಮಾರಂಭಕ್ಕೆ ಏರ್ಪಾಡು ಮಾಡಿಕೊಳ್ಳಿ" ಎಂದೆ. ಶಕುಂತಲಾಬಾಯಿ "ನನ್ನ ಮನೆಯ ಶುಭಕಾರ್ಯದಂತೆ "ಶ್ರೀ ರಾಮಚರಿತ" ಕಾವ್ಯವಾಚನ ಸಪ್ತಾಹವನ್ನು ನಡೆಸಿಕೊಡುತ್ತೇನೆ. ಅನಂತಪದ್ಮನಾಭರಾಯರ ಕಾವ್ಯ ಬಿಡುಗಡೆಯಾಗುತ್ತದೆಯಲ್ಲ! ಅದು ನನಗೆ ಪರಮ ಸಂತೋಷ" ಎಂದರು. ಲಕ್ಷ್ಮೀನಾರಾಯಣ್ ಹರ್ಷಿತರಾಗಿ ನಮ್ಮ ಮನೆಯಿಂದ ತೆರಳಿದರು. ಆ ದಿವಸವೇ ನಾನು ಅನಂತಪದ್ಮನಾಭರಾಯರಿಗೆ ಪತ್ರ ಬರೆದು ನಿಮ್ಮ

"ಶ್ರೀ ರಾಮ ಚರಿತ ಮಾನಸ" ಕಾವ್ಯದ ಅಜ್ಞಾತವಾಸ ಮುಕ್ತಾಯವಾಯಿತು. ಇಷ್ಟರಲ್ಲೇ ಶ್ರೀ ಲಕ್ಷ್ಮಿನಾರಾಯಣ್ ಕಾವ್ಯದ ಬಿಡುಗಡೆ ಸಮಾರಂಭವನ್ನು ಏರ್ಪಡಿಸುತ್ತಾರೆ. ನೀವು ದಯಮಾಡಿ ಬರಬೇಕು" ಎಂದು ಪ್ರಾರ್ಥಿಸಿಕೊಂಡೆ. ರಾಯರು ಸುಪ್ರೀತರಾಗಿ ನನ್ನ ಕರೆಯನ್ನು ಗೌರವಿಸಿ ತಮ್ಮ ಕಾವ್ಯ "ಶ್ರೀರಾಮ ಚರಿತ ಮಾನಸ"ದ ಬಿಡುಗಡೆಯ ಸಮಾರಂಭಕ್ಕೆ ಆಗಮಿಸಿದರು.

3ನೇ ಸೆಪ್ಟೆಂಬರ್ 1967ನೆಯ ದಿವಸ ಸಂಜೆ, ಸುಪ್ರಸಿದ್ಧ ಕವಿಗಳೂ ಕನ್ನಡ ಸಾಹಿತ್ಯ ಚರಿತ್ರೆಯ ಗ್ರಂಥಕರ್ತರೂ ಆದ ರಂ. ಶ್ರೀ. ಮುಗಳಿ ಅವರು ಅನಂತಪದ್ಮನಾಭರಾಯರ "ಶ್ರೀ ರಾಮಚರಿತ ಮಾನಸ"ಕಾವ್ಯವನ್ನು ಬಿಡುಗಡೆ ಮಾಡಿದರು. ಕವಿಗಳಿಗೆ ಶಾಲುಹೊದಿಸಿ, ಶ್ರೀರಾಮ ಸೀತಾಲಕ್ಷ್ಮಣ ಆಂಜನೇಯ ಸಮೇತವಿರುವ ದಂತದ ವಿಗ್ರಹವನ್ನು ನೆನಪಿನ ಕಾಣಿಕೆಯಾಗಿ ಕೊಟ್ಟು ಲಕ್ಷ್ಮೀನಾರಾಯಣ್ ದಂಪತಿಗಳು ತಮ್ಮ ಗೌರವಭಕ್ತಿಗಳನ್ನು ಅರ್ಪಿಸಿದರು.

ಮಾರನೆಯ ದಿನ ವಿಜಾಪುರದ "ಸಂದರ್ಶನ" ವಾರಪತ್ರಿಕೆಯ ಸಂಪಾದಕರಾದ ಶ್ರೀ ವಿ. ಬಿ. ನಾಯಕರ ಅಧ್ಯಕ್ಷತೆಯಲ್ಲಿ, ಕವಿವರ್ಯ ಅನಂತಪದ್ಮನಾಭರಾಯರ ಸಮ್ಮುಖದಲ್ಲಿ ಶಕುಂತಲಾಬಾಯಿ ಶ್ರೀ ರಾಮಚರಿತಮಾನಸ ಕಾವ್ಯವಾಚನ, ನನ್ನ ಪ್ರಾಸಂಗಿಕ ನಿರೂಪಣೆಯೊಂದಿಗೆ ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ಪ್ರಾರಂಭಿಸಿದರು. ವಿ. ಬಿ. ನಾಯಕರ ಬಲಪಕ್ಕದಲ್ಲಿ ಅನಂತಪದ್ಮನಾಭರಾಯರು. ಎಡಪಕ್ಕದಲ್ಲಿ ನಾನು ಮತ್ತು ಶಕುಂತಲಾಬಾಯಿ ಕೂತಿದ್ದೆವು. ನಾಯಕರು "ಅನಂತಪದ್ಮನಾಭರಾಯರು ನನಗೆ ಅಣ್ಣ ಬಲರಾಮನಿದ್ದಂತೆ. ಪಾಂಡುರಂಗರಾಯರು ನನಗೆ ಅರ್ಜುನನಿದ್ದಂತೆ. ಶಕುಂತಲಾಬಾಯಿ ನನಗೆ ತಂಗಿ ಸುಭದ್ರೆಯಿದ್ದಂತೆ" ಎಂದು ಹಾರ್ದಿಕವಾಗಿ ನುಡಿದು ಸಪ್ತಾಹ ಕಾವ್ಯವಾಚನ ಸಮಾರಂಭಕ್ಕೆ ಶುಭಹಾರೈಕೆ ಕೋರಿದರು.

4ನೇ ಸೆಪ್ಟೆಂಬರ್ 1967 ರಿಂದ ಪ್ರಾರಂಭವಾದ ತುಳಸೀದಾಸ ರಾಮಾಯಣ ಕಾವ್ಯವಾಚನ ಸಪ್ತಾಹ ಸಮಾರಂಭ 17ನೇ ದಿನಾಂಕ ಭಾನುವಾರ ಸಂಜೆ ಸುಪ್ರಸಿದ್ಧ ಗಾಂಧಿವಾದಿ, ಗಾಂಧಿ ಸಾಹಿತ್ಯ ಸಂಘದ ಪ್ರೇರಕ, ಗಾಂಧೀ ಸಾಹಿತ್ಯ ನಿರ್ಮಾಪಕ, ಸಿದ್ಧವ್ವನಹಳ್ಳಿ ಕೃಷ್ಣಶರ್ಮರ ಅಧ್ಯಕ್ಷತೆಯಲ್ಲಿ ಮಹಾ ಸಂಸ್ಕೃತ ವಿದ್ವಾಂಸ ಕಾಶಿ ಶ್ರೀಪಾದಾಚಾರ್ಯರ ಸಮ್ಮುಖದಲ್ಲಿ ಮಂಗಳಪ್ರದವಾಗಿ ಮುಕ್ತಾಯವಾಯಿತು. ಸುಪ್ರಸಿದ್ಧ ಸಣ್ಣ ಕತೆಗಾರರಾದ ಶ್ರೀ ಕೆ. ಗೋಪಾಲಕೃಷ್ಣರಾಯರು ತಾವೇ ವಿಶ್ವಾಸದಿಂದ ರಚಿಸಿಕೊಟ್ಟಿದ್ದ ಅಭಿನಂದನಾ ಪತ್ರಿಕೆಯನ್ನು ಬೆಂಗಳೂರಿನ ಬುಕ್ ಸೆಂಟರಿನ ಕೆ.ಎಲ್. ಲಕ್ಷ್ಮೀನಾರಾಯಣ್ ಮತ್ತು ಸಹೋದರರು, ಹಾಗೂ ಬೆಂಗಳೂರಿನ ಬಸವನಗುಡಿಯ ಮಹಾಜನದ ಪರವಾಗಿ ಸುಪ್ರಸಿದ್ಧ ಹರಿಕಥಾ ವಿದ್ವಾನ್ ಜಯಸಿಂಹದಾಸರು, ಸಭೆಯಲ್ಲಿ ಅರ್ಪಿಸಿದರು. ಬಸವನಗುಡಿಯ ಗಮಕ ಕಲಾಭಿಮಾನಿಗಳು ನಮಗೆ ತೋರಿಸಿದ ಆತ್ಮೀಯತೆ ಗೌರವ ಅತಿಶಯವಾಗಿತ್ತು. ನಮ್ಮ ಜೀವನದಲ್ಲಿ ಅದು ಚಿರಸ್ಮರಣೀಯವಾದ ದಿನ.

ಮಲ್ಲಿಕಾರ್ಜುನಸ್ವಾಮಿಯ ಭಕ್ತಾದಿಗಳು ಅಂಥೇ ಮುಂಗಡವಾಗಿ ಲಕ್ಷ್ಮೀ ನಾರಾಯಣರ ಮೂಲಕ ಕಾರ್ತೀಕ ಮಾಸದಲ್ಲಿ ನಾವು ಹರಿಹರ ಕವಿಯ ಗಿರಿಜಾಕಲ್ಯಾಣ ಕಾವ್ಯವಾಚನ ಸಪ್ತಾಹವನ್ನು ನಡೆಸಿಕೊಡಬೇಕೆಂದು ಕೇಳಿಕೊಂಡರು. ನಮಗೆ ಗಿರಿಜಾ ಕಲ್ಯಾಣ ಚಂಪೂಕಾವ್ಯವನ್ನು ಓದಬೇಕೆಂಬ ಬಯಕೆ ಬಹಳ ವರ್ಷಗಳಿಂದ ತಕ್ಕೃತ್ತ ಹೋಗಿ, ಈಗ, ಅದು ಮಲ್ಲಿಕಾರ್ಜುನಸ್ವಾಮಿಯ ಸಾನ್ನಿಧ್ಯದಲ್ಲಿ ಒದಗಿಬಂತಲ್ಲ ಎಂದು ನಮ್ಮ ಹೃದಯ ಭಕ್ತಿಪಾರವಶ್ಯತೆಯಲ್ಲಿ ಉಬ್ಬಿ ಹೋಯಿತು. ಕುಮಾರವ್ಯಾಸನ ಅಮರವಾಣಿಯಲ್ಲಿ ಹೇಳುವುದಾದರೆ **ಕಾಲ ಕೈಗೂಡುವೊಡೆ ಲೇಸಿನ ಮೇಲೆ ಲೇಸುಗಳೊದಗುವುವು.** ನಮಗೂ ಕಾಲ ಕೈಗೂಡಿ ಬಂದಿತ್ತು. ಲೇಸುಗಳ ಮೇಲೆ ಲೇಸುಗಳು ಒದಗುವುದಕ್ಕೆ ಪ್ರಾರಂಭವಾದುವು.

ಹರಿಹರನ ಗಿರಿಜಾಕಲ್ಯಾಣ ಕಾವ್ಯವಾಚನ ವೈಭವ

ಹರಿಹರ, ವೀರಶೈವ ಕಾವ್ಯಪ್ರಪಂಚದಲ್ಲಿ ಮಹಾಪ್ರತಿಷ್ಠ ಶ್ರೇಷ್ಠ ಕವಿ. ಕನ್ನಡ ಪ್ರಾಚೀನ ಕಾವ್ಯಗಳಿಗೇ ಹೊಸ ತಿರುವು ಕೊಟ್ಟ ಒಬ್ಬ ಕ್ರಾಂತಿಕವಿ. ಕರ್ಣಾಟಕ ಕವಿ ಕಾವ್ಯ ಪರಂಪರೆಯಲ್ಲೂ ಹರಿಹರನ ಸ್ಥಾನ ಮಹತ್ವಪೂರ್ಣವಾಗಿದೆ. ಆತನು ರಗಳೆ ಛಂದಸ್ಸನ್ನು ಹಿಡಿದು 'ಶಿವಶರಣರ ರಗಳೆ'ಗಳು ಪ್ರತ್ಯೇಕ ಸಾಹಿತ್ಯ ರಾಶಿಯನ್ನೇ ನಿರ್ಮಿಸಿದ ರಗಳೆ ಕವಿಯೆಂದು ಆತನ ಸಮಕಾಲೀನರಿಂದ ಹಾಸ್ಯಕ್ಕೂ ಈಡಾದ. ಹರಿಹರನ ರಗಳೆ ಕಾವ್ಯಗಳಲ್ಲಿ "**ಬಸವರಾಜ ದೇವರ ರಗಳೆ**" ಬಹಳ ಪ್ರಸಿದ್ಧವಾದ ಕಾವ್ಯ. ಜೋಳದರಾಶಿ ದೊಡ್ಡನಗೌಡರ ಸಮ್ಮುಖದಲ್ಲಿ ಬಸವ ಜಯಂತಿಯ ಸಂದರ್ಭದಲ್ಲಿ ಬಸವರಾಜ ದೇವರ ರಗಳೆಯಲ್ಲಿ ಬರುವ ವಚನಭಾಗದಿಂದ ಇಪ್ಪತ್ತೊಂದು ಪಂಕ್ತಿಗಳಷ್ಟು ದೀರ್ಘವಾದ ಒಂದು ವಚನ "ಬಸವಣ್ಣನವರ ಗುಣ"ವನ್ನು ವಾಚನ ಮಾಡುವಾಗ ಬಸವರಾಜದೇವರ ರಗಳೆಯನ್ನೂ ಸಂದರ್ಭೋಚಿತವಾಗಿ ಕಾವ್ಯ ವಾಚನಕ್ಕೆ ಉಪಯೋಗಿಸಿಕೊಳ್ಳಬಹುದು ಎಂದೆನಿಸಿತ್ತು. ಶಕುಂತಲಾಬಾಯಿಗ. ಶ್ರೀಯುವರ "ಶ್ರೀ" ಯವರ "ಕನ್ನಡ ತಾಯ ನೋಟ"ಪ್ರಗಾಥವನ್ನು ಗಮಕಕ್ಕೆ ಒಗ್ಗಿಸಿ ಕಾವ್ಯವಾಚನ ಮಾಡಿದಾಗಲೆ ಹರಿಹರನ ರಗಳೆ ಕಾವ್ಯಗಳನ್ನು ಗಮಕಕ್ಕೆ ತರಬಹು ದೆಂದು ಸುಳಿವು ಸಿಕ್ಕಿತು. ಆದರೆ ಹರಿಹರನು ಪಂಡಿತರನ್ನು ಮೆಚ್ಚಿಸಿ ತಾನೂ ಪಂಡಿತ ವರಕವಿ ಎನ್ನಿಸಿಕೊಳ್ಳುವುದಕ್ಕಾಗಿ ರಚಿಸಿದ ಒಂದೇ ಒಂದು ಚಂಪೂ ಕಾವ್ಯ "ಗಿರಿಜಾ ಕಲ್ಯಾಣ" ವನ್ನು ಕಾವ್ಯವಾಚನ ಮಾಡುವ ಸಂದರ್ಭ ಈಗ ಬಸವನಗುಡಿಯ ಮಲ್ಲಿ ಕಾರ್ಜುನ ಸ್ವಾಮಿಯ ಭಕ್ತಾದಿಗಳ ಭಕ್ತಿಶ್ರದ್ಧೆಗಳಿಂದ 1963ನೆಯ ಇಸವಿಯ ಕಾರ್ತಿಕ ಮಾಸದಲ್ಲಿ ಅವಕಾಶ ಒದಗಿತು. "ಗಿರಿಜಾ ಕಲ್ಯಾಣ" ಸಂಗ್ರಹವನ್ನು ಒಂದು ವಾರದ ಕಾರ್ಯಕ್ರಮಕ್ಕೆ ಅಳವಡಿಸಿಕೊಂಡೆವು, ಕಾರ್ತೀಕಮಾಸದ ಕಡೆಯವಾರದಲ್ಲಿ ಗಿರಿಜಾ ಕಲ್ಯಾಣ ಕಾವ್ಯವಾಚನ ಸಪ್ತಾಹ ವಿಜೃಂಭಣೆಯಿಂದ ನಡೆಯಿತು. ಸಪ್ತಾಹದ ಮಂಗಳ ಮಹೋತ್ಸವದಲ್ಲಿ ಕಾವ್ಯಾಭಿಮಾನಿಗಳು ಪ್ರದರ್ಶಿಸಿದ ಪ್ರೀತಿ ವಿಶ್ವಾಸಗಳು

ಶಕುಂತಲಾಬಾಯಿಯನ್ನೂ ನನ್ನನ್ನೂ "ಬಿನ್ನಹಕೆ ಬಾಯಿಲ್ಲವಯ್ಯ" ಎಂಬಂತೆ ವಿನೀತ ಭಾವದಲ್ಲಿ ಕುಗ್ಗಿಸಿಬಿಟ್ಟವು. ಕರ್ಣಾಟಕದ ಸುಪ್ರಸಿದ್ಧ ರಾಜಕೀಯ ಧುರೀಣರೂ, ಭಾರತ ಕೇಂದ್ರದಲ್ಲಿ ನಮ್ಮನ್ನು ಪ್ರತಿನಿಧಿಸುತ್ತಿರುವ ಎಂ. ಪಿ. ಗಳಾದ ಸಾತ್ವಿಕ ಗುಣ ಸಂಪನ್ನ ಟಿ. ಆರ್. ಶಾಮಣ್ಣ ಮೊದಲಾದ ಗಣ್ಯರು ಉತ್ಸವದಲ್ಲಿ ಭಾಗಿಗಳಾಗಿದ್ದರು.

ಮುಂದೆ ಅಣ್ಣಯ್ಯಪ್ಪ ಒಡಾವಣೆಯ ಕಾವ್ಯಪ್ರಚಾರ ಮಂಡಲಿ ಹರಿಹರನ ಗಿರಿಜಾಕಲ್ಯಾಣ ಇಡೀ ಕಾವ್ಯವನ್ನು ವಾರವಾರವೂ ಓದಿಸುವ ಒಂದು ಕಾರ್ಯಕ್ರಮ್ವ ವನ್ನು ಆಚರಣೆಗೆ ತಂದಿತು. ಶಕುಂತಲಾಬಾಯಿ ವಾರವಾರವೂ ನಾಲ್ಕು ವಾರಗಳ ಹರವಿ ನಲ್ಲಿ ಗಿರಿಜಾಕಲ್ಯಾಣದ ಒಂದು ಆಶ್ವಾಸವನ್ನು ನನ್ನ ಪ್ರಾಸಂಗಿಕ ನಿರೂಪಣೆಯೊಡನೆ ವಾಚನ ಮಾಡಿದರು.

1979ರ ಫೆಬ್ರುವರಿ 28 ರಿಂದ 4ನೇ ಮಾರ್ಚಿ 1979ರ ವರೆಗೆ ಐದು ದಿವಸಗಳ ವರೆಗೆ ಶಿವರಾತ್ರಿ ಉತ್ಸವ ಸಂದರ್ಭದಲ್ಲಿ ಬಸವನಗುಡಿಯ ಗೀತಾ ಸತ್ಸಂಗ ಹರಿಹರನ ಗಿರಿಜಾಕಲ್ಯಾಣ ಕಾವ್ಯವಾಚನವನ್ನು ಏರ್ಪಡಿಸಿತು. ಸಂಘದ ಸಂಚಾಲಕ ದಂಪತಿಗಳು ಕೆ. ಎಲ್. ಲಕ್ಷ್ಮೀನಾರಾಯಣ ಅವರನ್ನು ಮುಂದಿಟ್ಟುಕೊಂಡು ರಾಜಾಜಿನಗರದಲ್ಲಿ ರುವ ನಮ್ಮ ಮನೆ ಕುಮಾರವ್ಯಾಸ ಕೃಪಾಕ್ಕೆ ಬಂದರು. ಗಿರಿಜಾಕಲ್ಯಾಣ ಕಾವ್ಯ ವಾಚನವನ್ನು ನಡೆಸಿಕೊಡಬೇಕೆಂದು ಶಕುಂತಲಾಬಾಯಿಯನ್ನು, ನನ್ನನ್ನು ಕೇಳಿ ಕೊಂಡರು. ಗಿರಿಜಾಕಲ್ಯಾಣ ಕಾವ್ಯವಾಚನ ಉದ್ಘಾಟನೆಯನ್ನು ವಿಶಾಲ ಮೈಸೂರು ರಾಜ್ಯದ ಉಪಶಿಕ್ಷಣ ಸಚಿವರಾಗಿ ನಿವೃತ್ತರಾಗಿದ್ದ ಕೆ. ಎಂ. ಸೋಗಿ ಅವರು ನಡೆಸಿ ಕೊಟ್ಟರು. ಮಂಗಳ ಮಹೋತ್ಸವದ ಪ್ರಾತಃಕಾಲ ಗೀತಾಸತ್ಸಂಗದ ಸಭಾ ಮಂಟಪ ತಳಿರು ತೋರಣಗಳಿಂದ ಅಲಂಕೃತವಾಗಿತ್ತು. ಮಂಟಪ ಬಾಳೆಯ ಕಂದುಗಳಿಂದ ಶೋಭಿಸುತ್ತಿತ್ತು. ವಿವಾಹ ಮಂಟಪವೋ ಅನ್ನುವಷ್ಟು ಶೋಭಾಯಮಾನವಾಗಿತ್ತು. "ಗಿರಿಜಾಕಲ್ಯಾಣ" ಕಾವ್ಯವಾಚನ ಮಂಗಳಪ್ರದವಾಗಿ ಮುಕ್ತಾಯವಾಯಿತು. ಶಿವ ಗಿರಿಜೆಯ ವಿವಾಹ ಮಹೋತ್ಸವ ಭೂರಿಭೋಜನ ವಿಲ್ಲದೆ ನಡೆಯುವುದುಂಟೆ ? ನೂರಿ ನ್ನೂರು ಮಂದಿ ಸುಮಂಗಲಿಯರು, ಪುರುಷರು ಉಂಡು ಸಂತಸಗೊಂಡರು. ನಮ್ಮ ಕಾವ್ಯವಾಚನ ಕಾರ್ಯಕ್ರಮಗಳ ನೆನಹಿನಲ್ಲಿ ಈ "ಗಿರಿಜಾಕಲ್ಯಾಣ" ಕಾವ್ಯವಾಚನ ಎಂದೆಂದಿಗೂ ಹಚ್ಚಹಸಿರಾಗಿರುತ್ತದೆ.

ಲಕ್ಷ್ಮೀನಾರಾಯಣರ ಶ್ರೇಯಸ್ಸಿಗಾಗಿ ಧ್ವನಿಮುದ್ರಿಕೆ

ಇದೇ ಸಂದರ್ಭದಲ್ಲಿ ನನಗೆ ಕೆ. ಎಲ್. ಲಕ್ಷ್ಮೀನಾರಾಯಣ್ ಮತ್ತು ಅವರ ಸಹ ಧರ್ಮಿಣಿ ಲಲಿತಮ್ಮ ಕೂಡಿ 1981ರ ಜನವರಿ ತಿಂಗಳಲ್ಲಿ ಗಮಕ ವಿದ್ವಾನ್ ಎಂ. ರಾಘ ವೇಂದ್ರ ವಿರಚಿತ "ಸತ್ಯ ದೇವಚರಿತೆ" ಎಂಬ ಷಟ್ಪದಿ ಕಾವ್ಯವಾಚನವನ್ನು ಬಸವನ ಗುಡಿಯ ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನದಲ್ಲಿ ಶಕುಂತಲಾಬಾಯಿಯವರಿಂದ ಏರ್ಪಾಡು ಮಾಡಿದ್ದ ಸಂಗತಿ ಜ್ಞಾಪಕಕ್ಕೆ ಬರುತ್ತಿದೆ. ದಂಪತಿಗಳು ತುಂಬ ಸಾತ್ವಿಕರು,

ನನ್ನನ್ನು ಮತ್ತು ಶಕುಂತಲಾಬಾಯಿಯನ್ನು ತಮ್ಮ ತಂದೆತಾಯಿಗಳ ಸಮಾನವೆಂದ ತಿಳಿದು ಗೌರವಿಸುತ್ತಿದ್ದರು. ಕೆ. ಎಲ್. ಲಕ್ಷ್ಮೀನಾರಾಯಣ್ ನ್ಯಾಷನಲ್ ಗ್ರಿಂಡಲೆ ಬ್ಯಾಂಕಿನ ಅಧಿಕಾರಿಗಳಲ್ಲಿ ಒಬ್ಬರಾಗಿದ್ದು ನಿವೃತ್ತರಾಗಬೇಕು, ಆ ಸಮಯದಲ್ಲಿ ಅವರಿಗೆ ಪಾರ್ಶ್ವವಾಯು ರೋಗ ಅಂಟಿತು. ಪತ್ನಿಯ ಮತ್ತು ಮಕ್ಕಳ ಶುಶ್ರೂಷೆಯಿಂದ, ಉತ್ತಮ ವೈದ್ಯರ ಔಷಧೋಪಚಾರಗಳಿಂದ ಚೇತರಿಸಿಕೊಂಡರು. ಕೂಡಲೆ ನಮ್ಮಿಂದ ಸತ್ಯನಾರಾಯಣವ್ರತದ ಕಥಾಸಪ್ತಾಹ ಮಾಡಿಸಬೇಕೆಂದು ಪ್ರೇರಣೆಯಾಯಿತು. ದಂಪತಿಗಳು ಆಟೋರಿಕ್ಷ ಮಾಡಿಕೊಂಡು ಬಸವನಗುಡಿಯಿಂದ ರಾಜಾಜಿನಗರಕ್ಕೆ ಬಂದರು. "ನೀವು ಸತ್ಯನಾರಾಯಣವ್ರತ ಕಾವ್ಯವಾಚನ ಮಾಡಬೇಕು. ನಿಮ್ಮಿಂದಕೇಳಿ ಭಗವದನುಗ್ರಹಕ್ಕೆ ಪಾತ್ರರಾಗಬೇಕೆಂದು ನಮ್ಮ ಮನಸ್ಸಿಗೆ ಬಂದಿದೆ."ಎಂದು ಪ್ರಾರ್ಥನೆ ಮಾಡಿಕೊಂಡರು. ಆಗಲಿ"ಎಂದು ಒಪ್ಪಿ ಶಕುಂತಲಾಬಾಯಿ ನನ್ನ ಪ್ರಾಸಂಗಿಕ ನಿರೂಪಣೆಯೊಡನೆ ಏಳು ದಿವಸಗಳ ಕಾಲ "ಸತ್ಯದೇವನ ಚರಿತೆ" ಕಾವ್ಯವಾಚನ ಮಾಡಿದರು. ಭಕ್ತಾದಿಗಳು ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನದಲ್ಲೆಲ್ಲ ತುಂಬಿ, ಹೊರಗೂ ನಿಂತು ಕೇಳಿ ಭಗವದನುಗ್ರಹಕ್ಕೆ ಪಾತ್ರರಾದರು. ಮಂಗಳದ ದಿನ ಮಧ್ಯಾಹ್ನ ಭಕ್ತಾದಿಗಳನ್ನು ಕರೆದು ವೃಷ್ಟಾನ್ನ ಭೋಜನಮಾಡಿಸಿ ದಂಪತಿಗಳು ಸಂತೃಪ್ತರಾದರು. "ಶಕುಂತಲಾಬಾಯಿ, ನಾನು ನಿಮ್ಮ ಧ್ವನಿಯನ್ನು ನಿತ್ಯವೂ ಕೇಳಿದ ಹಾಗೆ ಮಾಡಬೇಕಲ್ಲ! ಎದ್ದು ಓಡಾಡಲಾರೆ" ಎಂದು ಪ್ರಾರ್ಥಿಸಿಕೊಂಡರು. ಏಳು ನುಡಿಗಳಲ್ಲಿ ಸಂಪೂರ್ಣವಾಗಿ ಕಥೆ ಬರುವ ಹಾಗಿವೆ ಒಂದು ಉತ್ತರ ಕರ್ಣಾಟಕದ ಕಡೆಯ ಜಾನಪದ ಧಾಟಿಯ ಸತ್ಯನಾರಾಯಣ ದೇವರ ಕಥೆ. ಅದನ್ನು ಮಂಗಳವೇಡೆ ಶ್ರೀನಿವಾಸರಾಯರು ಶಕುಂತಲಾಬಾಯಿಗೆ ತಂದಿತ್ತು, ಹಾಡಿಸಿ, ಧ್ವನಿ ಮುದ್ರಿಸಿಕೊಂಡಿದ್ದರು. ಈಗ ಶಕುಂತಲಾಬಾಯಿ ಅದನ್ನೆ ಕೆ. ಎಲ್. ಲಕ್ಷ್ಮೀನಾರಾಯಣರಿಗೆ ಧ್ವನಿಮುದ್ರಿಸಿಕೊಟ್ಟರು. ಅಷ್ಟೇ ಅಲ್ಲ, ಇತ್ತೀಚೆಗೆ ಜನಪ್ರಿಯಗೊಳಿಸುತ್ತಿರುವ ಕುವೆಂಪು ಅವರ "ಗಣೇಶ ಗಾಥ" ಪೂಜ್ಯ ಮಾಸ್ತಿಯವರ "ಯಾವ ರೂಪದೊಳು ನಿನ್ನನ್ನು ಪೂಜಿಸಿರೊಡೇನು" ಪುರಂದರದಾಸರ "ನಾರಾಯಣ ನಾರಾಯಣ" ಎಂಬ ದೇವರ ನಾಮವನ್ನು ಹಾಡಿ ಧ್ವನಿಮುದ್ರಿಸಿಕೊಟ್ಟರು. ಕೆ. ಎಲ್. ಲಕ್ಷ್ಮೀನಾರಾಯಣ್ ಶಕುಂತಲಾಬಾಯಿಯವರ ಧ್ವನಿಮುದ್ರಿಕೆಯನ್ನು ನಿತ್ಯವೂ ಕೇಳಿ ಭಕ್ತಿಯಿಂದ ಆನಂದಪರವಶರಾಗುತ್ತಿದ್ದರು. ನಾನು ಅವರನ್ನು ನೋಡಲು ಹೋದಾಗಲೆಲ್ಲ "ನನಗೆ ಕೈಮುಗಿದು, ಶಕುಂತಲಾಬಾಯಿಯವರನ್ನು ನಿತ್ಯವೂ ನೆನೆಸಿಕೊಳ್ಳುತ್ತೇನೆ ಕೃತಜ್ಞತೆಯಿಂದ" ಎಂದು ಹೇಳುತ್ತಿದ್ದರು.

ಕೆ. ಎಲ್. ಲಕ್ಷ್ಮೀನಾರಾಯಣರ ರೋಗ ಉಲ್ಬಣಿಸಿತು. 19-8-1981 ಪರಂಧಾಮಕ್ಕೆ ನಡೆದು ಬಿಟ್ಟರು. ಒಬ್ಬ ಸಾತ್ವಿಕ ಜೀವಿಯ ಸ್ನೇಹ ನಮಗಿಲ್ಲವಾಯಿತು.

ಮಹಾ ಛಂದಸ್ಸಿನ "ಬಸವದರ್ಶನಂ" ಕಾವ್ಯವಾಚನ

ಗದಗಿನ ತುಪ್ಪದ ಬಸವರಾಜರು, ಕುವೆಂಪು "ಶ್ರೀರಾಮಾಯಣದರ್ಶನಂ" ಮಹಾ ಛಂದಸ್ಸಿನ ಮಹಾ ಕಾವ್ಯದಂತೆ "ಬಸವ ದರ್ಶನಂ" ಎಂಬ ಕಾವ್ಯವನ್ನು ಮಹಾ ಛಂದಸ್ಸಿ

ಸಲ್ಲಿ ರಚಿಸಿದ್ದಾರೆ. ಅವರನ್ನು 1979ರ ಏಪ್ರಿಲ್ ತಿಂಗಳ ಚೈತ್ರಮಾಸದ ಯುಗಾದಿ ಸಂದರ್ಭದ ಪ್ರಭು ಜಯಂತಿ ಉತ್ಸವದಲ್ಲಿ ಸನ್ಮಾನಿಸುವ ಏರ್ಪಾಡು ಸರ್ಪಭೂಷಣ ಮಠದಲ್ಲಿ ನಡೆಯಿತು. ಕವಿಗಳ ಸನ್ಮಾನ ಸಮಾರಂಭದಲ್ಲಿ "ಗಮಕಕಲಾನಿಧಿ" ಜೋಳದ ರಾಶಿ ದೊಡ್ಡನಗೌಡರೇ ಬಂದು "ಬಸವದರ್ಶನಂ" ಕಾವ್ಯವಾಚನ ಮಾಡಬೇಕಾಗಿತ್ತು. ಅವರು ದೇಹಾಲಸ್ಯದಿಂದ ಬರಲಾಗಲಿಲ್ಲ. ಬಸವರಾಜ ತುಪ್ಪದ ಅವರ "ಬಸವದರ್ಶನಂ" ಕಾವ್ಯವಾಚನ ಮಾಡಬೇಕಾರು? ಕುವೆಂಪು ಅವರ "ಶ್ರೀ ರಾಮಾಯಣ ದರ್ಶನಂ" ಮಹಾ ಛಂದಸ್ಸಿನ ಮಹಾಕಾವ್ಯವನ್ನು ಜನಪ್ರಿಯಗೊಳಿಸಿರುವ ಶಕುಂತಲಾಬಾಯಿಯೇ "ಬಸವದರ್ಶನಂ" ಕಾವ್ಯವಾಚನ ಮಾಡುವುದುಚಿತವೆಂದು ಜೋಳದ ರಾಶಿಯವರು ಸರ್ಪಭೂಷಣ ಮಠಕ್ಕೆ ಹೇಳಿಕಳಿಸಿದರು. ಶಕುಂತಲಾಬಾಯಿಗೆ ಮಠದಿಂದ ನಿರೂಪ ಬಂತು.

ಬೆಂಗಳೂರು ನಗರದ ಬೇಲಿ ಮಠದ ಚರಮೂರ್ತಿ ಶ್ರೀ ಶ್ರೀ ಶಿವರುದ್ರಸ್ವಾಮಿಗಳು ಅಧ್ಯಕ್ಷರಾಗಿದ್ದರು. ಡಾ|| ಸಿದ್ಧಯ್ಯಪುರಾಣಿಕರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ತುಪ್ಪದ ಬಸವರಾಜರು ಸನ್ಮಾನಗೊಳ್ಳಲು ಬಂದಿದ್ದರು. ಶಕುಂತಲಾಬಾಯಿಯ ಕಾವ್ಯ ವಾಚನ ಮತ್ತು ನನ್ನ ಪ್ರಾಸಂಗಿಕ ನಿರೂಪಣೆಯನ್ನು ಧ್ವನಿಮುದ್ರಿಸಿಕೊಳ್ಳಲು ಟೇಪ್ ರೆಕಾರ್ಡರ್ ಸಜ್ಜಾಗಿತ್ತು. ಸರ್ಪಭೂಷಣಮಠದ ಹೊರಾಂಗಣದಲ್ಲಿ ಭವ್ಯ ಚಪ್ಪರವೆದ್ದು ಅದೆಲ್ಲ ಜನಸ್ತೋಮದಿಂದ ತುಂಬಿತ್ತು. ಗವೀ ಮಠದ ಸ್ವಾಮಿಗಳು, ತಮಗೆ ಕವಿಗಳು ಗೌರವಾರ್ಥವಾಗಿ ಕೊಟ್ಟಿದ್ದ ಪ್ರತಿಯನ್ನು ಕಾರ್ಯಕ್ರಮಕ್ಕೆ ಒಂದೆರಡು ದಿವಸಗಳ ಮುಂಚೆ ಅಭ್ಯಾಸಕ್ಕೆಂದು ಕಳಿಸಿಕೊಟ್ಟರು. ಕಾವ್ಯ ಹೊಸದು. ಶಕುಂತಲಾಬಾಯಿ ನನ್ನ ಪ್ರಾಸಂಗಿಕ ನಿರೂಪಣೆಯೊಡನೆ ಸುಮಾರು ಅರ್ಧಗಂಟೆ ಕಾವ್ಯವಾಚನ ಮಾಡಿದರು. ಸಭೆ ಹೊಸ ಕಾವ್ಯವನ್ನು ತುಂಬ ಆಸಕ್ತಿಯಿಂದ ಕೇಳಿತು. "ಬಸವದರ್ಶನಂ" ಕಾವ್ಯ ವಾಚನ ಶ್ರೋತೃವೃಂದಕ್ಕೆ ಮೆಚ್ಚಿಗೆಯಾಯಿತು.

ಸಭೆ ಮುಕ್ತಾಯವಾದ ಮೇಲೆ ತುಪ್ಪದ ಬಸವರಾಜರು ಕಾವ್ಯವಾಚನ ತುಂಬ ಅರ್ಥಪೂರ್ಣವಾಗಿತ್ತೆಂದು, ವಾಚನ ಅಮೋಘವಾಗಿ ಆಯಿತೆಂದು ತಮ್ಮ ಸಂತೋಷ ವ್ಯಕ್ತಪಡಿಸಿದರು. ತಮ್ಮ ಕಾರಿನಲ್ಲಿ ನಮ್ಮನ್ನು ಕೂಡಿಸಿಕೊಂಡು ನಮ್ಮ ಮನೆಗೆ ಬಂದರು. ಅರ್ಧ ಮುಕ್ಕಾಲ ಗಂಟೆಯಿದ್ದು ವಿಜಯನಗರ ಬಡಾವಣೆಯಲ್ಲಿರುವ ತಮ್ಮ ಮನೆಗೆ ತೆರಳಿದರು. "ಬಸವದರ್ಶನಂ" ಹೊಸ ಕಾವ್ಯವಾಚನವೂ ನಮ್ಮ ಜನಕ್ಕೆ ಹಿಡಿಯುವುದೆಂದು ನಮಗೆ ನಂಬಿಕೆ ಬಂತು.

ರಾಘವಾಂಕನ ಹರಿಶ್ಚಂದ್ರಕಾವ್ಯ ಗಮಕಕ್ಕೆ

ವೀರಶೈವ ಕಾವ್ಯಗಳಲ್ಲಿ ಪ್ರಸಿದ್ಧವಾದ ರಾಘವಾಂಕನ ಹರಿಶ್ಚಂದ್ರ ಕಾವ್ಯಕ್ಕೆ ಕನ್ನಡ ಕಾವ್ಯ ಪ್ರಪಂಚದಲ್ಲಿಯೂ ಗಣ್ಯಸ್ಥಾನವಿದೆ. ಗಮಕಿಗಳಿಗೆ ಒಳ್ಳೆಯ ಪೊಗದಸ್ತಾಗಿ ವಾಚನಕ್ಕೆ ಗ್ರಾಸ ಒದಗಿಸುವ, ಗುಣ ವಿಶೇಷವಿದೆ. ಮೈಸೂರ ಕಡೆ

"ಶ್ಲೋಕ ಸಂಗೀತ" ಕಳಲೆ ಸಂಪತ್ಕುಮಾರಾಚಾರ್ಯರು, ಬಳ್ಳಾರಿ ಕಡೆ "ಗಮಕ ಕಲಾ ನಿಧಿ" ಜೋಳದರಾಶಿ ದೊಡ್ಡನಗೌಡರು ಹರಿಶ್ಚಂದ್ರಕಾವ್ಯವನ್ನು ತಮ್ಮ ಗಮಕ ಕಲಾ ನೋಡಿಯಿಂದ ಜನಪ್ರಿಯಗೊಳಿಸಿದ್ದಾರೆ.

ಶಕುಂತಲಾಬಾಯಿಯೂ ಹರಿಶ್ಚಂದ್ರ ಕಾವ್ಯದ ಬಿಡಿ ಭಾಗಗಳನ್ನು ಅದ್ದೂರಿ ಸಭೆಗಳಲ್ಲಿ ವಾಚನ ಮಾಡಿ ಜನರನ್ನು ಮುಗ್ಧಗೊಳಿಸಿರುವುದುಂಟು. ನಾಗಮಂಗಲದ ರಾಮೋತ್ಸವದಲ್ಲಿ ಇಡೀ ಕಾವ್ಯವನ್ನು ಓದುವ ಪ್ರಸಂಗ ಒದಗಿತು. ಒಮ್ಮೆ ಹರಿಶ್ಚಂದ್ರ ಕಾವ್ಯ ಸಂಗ್ರಹವನ್ನು ಸುಮಾರು ಮೂರು ಗಂಟೆಗಳ ಸಮಯಕ್ಕೆ ಅಳವಡಿಸಿಕೊಳ್ಳ ಬೇಕಾಯಿತು. ಕಾರ್ಯಕ್ರಮದಲ್ಲಿ ಹರಿಶ್ಚಂದ್ರ ಕಾವ್ಯದ ಹೆಸರಿರಲಿಲ್ಲ. ವೇದಿಕೆಯನ್ನು ಹತ್ತುವ ಸಮಯದಲ್ಲಿ ರಾಮೋತ್ಸವದ ಕಾರ್ಯದರ್ಶಿ ರಾಮಕೃಷ್ಣರಿಂದ ಹರಿಶ್ಚಂದ್ರ ಕಾವ್ಯವಾಚನದ ಸೂಚನೆ ಬಂತು. ರಾಮಕೃಷ್ಣ, ಚೆನ್ನಕೇಶವ ಫಲಹಾರ ಮಂದಿರವನ್ನು ನಡೆಸುತ್ತಿದ್ದರು, ಉತ್ಕಟ ಗಮಕ ಕಲಾಭಿಮಾನಿಗಳು. "ಹರಿಶ್ಚಂದ್ರ ಕಾವ್ಯ"ದ ಮೇಲೆ ಪಂಚಪ್ರಾಣ. ನಾಗಮಂಗಲಕ್ಕೆ ಯಾವ ಗಮಕಿ ಬಂದರೂ ಅವರಿಂದ ಹರಿಶ್ಚಂದ್ರ ಕಾವ್ಯ ಓದಿಸಿ ಕೇಳದಿದ್ದರೆ ಅವರಿಗೆ ತೃಪ್ತಿಯಿಲ್ಲ. ನಮಗೆ ತಮ್ಮ ಮನೆಯಲ್ಲಿಯೆ ಬಿಡಾರ ಒದಗಿಸಿಕೊಟ್ಟಿದ್ದರು. ನಾವು ನಾಗಮಂಗಲಕ್ಕೆ ಹೋದಾಗಲೆಲ್ಲ ಅವರ ಮನೆ ಯಲ್ಲಿ ಇಳಿದುಕೊಳ್ಳುವುದು ಮಾಮೂಲಾಗಿ ಹೋಯಿತು. ಅವರ ಮನೆಯವರಲ್ಲಿ ನಾವೂ ಒಬ್ಬರಾಗಿ ಹೋದೆವು. ಇಂಥ ಕಾವ್ಯಪ್ರೇಮಿ ರಾಮಕೃಷ್ಣ, "ಹರಿಶ್ಚಂದ್ರ ಕಾವ್ಯ"ವನ್ನು ಕೇಳಬಯಸಿದರೆ "ಒಲ್ಲೆ"ಯೆನ್ನುವ ಮನಸ್ಸು ನಮಗೆ ಬರಲಿಲ್ಲ. "ಆಗಲಿ" ಎಂದು ವೇದಿಕೆಯೇರಿ ಹರಿಶ್ಚಂದ್ರ ಕಾವ್ಯವಾಚನ ಮಾಡಿದೆವು. ಎಷ್ಟೋ ಸಲ ಆ ಕಾವ್ಯವಾಚನ ಮಾಡಿದ್ದುದರಿಂದ ಶಕುಂತಲಾಬಾಯಿಗೆ ಈ ವಾಚನವು ಕಾಲು ತೊಡ ಕಾಗಲಿಲ್ಲ. ನಮ್ಮ ಕಾವ್ಯವಾಚನಗಳ ಅನುಭವದಲ್ಲಿ ಈ ಪ್ರಸಂಗ ಒಂದು ಮೈಲಿಗಲ್ಲಾ ಯಿತು.

''ಸಿದ್ಧಲಿಂಗೇಶ್ವರ ಪುರಾಣ'' ಗಮಕಕ್ಕೆ

1968ರ ಶ್ರಾವಣ ಮಾಸದಲ್ಲಿ ಒಂದು ತಿಂಗಳು ಪೂರ್ತಿ ಪ್ರತಿ ದಿನ ಸಂಜೆ ವಿರಕ್ತ ತೋಂಟದಾರ್ಯ ಕವಿ ವಿರಚಿತ "ಶ್ರೀ ಸಿದ್ಧಲಿಂಗೇಶ್ವರ ಪುರಾಣ" ಕಾವ್ಯವಾಚನ ಪ್ರವಚನ ಮಾಡಬೇಕೆಂದು "ವ್ಯಾಖ್ಯಾನ ವಿಭೂಷಣ"ರೆಂದು ಬಿರುದು ಪಡೆದಿರುವ ಪಂಡಿತ ಕೆ. ಸಿ. ಶಿವಲಿಂಗಯ್ಯನವರಿಗೆ ಸರ್ಪಭೂಷಣ ಮಠದ ವೇದಾಂತಾಚಾರ್ಯ ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳಿಂದ ನಿರೂಪ ಬಂತು. ಶಿವಲಿಂಗಯ್ಯ ನನ್ನ ಬಳಿಗೆ ಬಂದು "ನನಗೆ ಸರ್ಪಭೂಷಣ ಮಠದ ಸ್ವಾಮಿಗಳಿಂದ ಸಿದ್ಧಲಿಂಗೇಶ್ವರ ಪುರಾಣ ಕಾವ್ಯಕ್ಕೆ ಪ್ರವಚನ ನೀಡಬೇಕೆಂದು ಆದೇಶ ಬಂದಿದೆ. ಕಾವ್ಯವಾಚನಕ್ಕೆ ಗಮಕವೇ ಬೇಕೆಂದು ನನ್ನ ಅಪೇಕ್ಷೆ. ಶಕುಂತಲಕ್ಕ ಗಮಕ ಮಾಡಬೇಕು. ಇಬ್ಬರೂ ನನ್ನ ಪ್ರಾರ್ಥನೆಯನ್ನು ದಯವಿಟ್ಟು ಒಪ್ಪಿಕೊಳ್ಳಬೇಕು" ಎಂದು ಕೇಳಿಕೊಂಡರು.

ಶಿವಲಿಂಗಯ್ಯ ಸಜ್ಜನ, ಕವಿ, ಒಳ್ಳೆಯ ಶಿಕ್ಷಕ. ಪ್ರವರ್ಧಮಾನಕ್ಕೆ ಬರುತ್ತಿರುವ ತರುಣ ಸಾಹಿತಿ. ಅವರ ಪ್ರಾರ್ಥನೆಯನ್ನು ಒಪ್ಪಿಕೊಳ್ಳುವುದು ಸೂಕ್ತವೆಂದು ಇಬ್ಬರೂ ತೀರ್ಮಾನಿಸಿದೆವು. ಸ್ವಾಭಾವಿಕವಾಗಿ ಶಕುಂತಲಾಬಾಯಿ ತನ್ನ ಕಾವ್ಯವಾಚನಕ್ಕೆ ನನ್ನ ಪ್ರಾಸಂಗಿಕ ನಿರೂಪಣೆಯ ವಿನಃ ಇನ್ನೊಬ್ಬರ ಪ್ರವಚನವನ್ನು ಒಪ್ಪಿಕೊಳ್ಳುವು ದಿಲ್ಲ. ಇದಕ್ಕೆ ಕಾರಣವುಂಟು. ಪ್ರವಚನವೇ ಅಧಿಕವಾಗಿ ಗಮಕ ಕುಗ್ಗಿ ಹೋಗುತ್ತದೆ. ಪ್ರವಚನ ಹಿತಮಿತವಾಗಿ ಕಾವ್ಯಕ್ಕೆ ಪುಷ್ಟಿಕೊಡುವುದು ತಪ್ಪಿ ಗಮಕ ಪೇಲವ ವಾಗಿಬಿಡುತ್ತದೆ. ಈ ವಿಷಯವನ್ನು ಶಿವಲಿಂಗಯ್ಯನವರ ಗಮನಕ್ಕೆ ತಂದು ಒಪ್ಪಿ ಕೊಂಡೆವು.

"ಸಿದ್ಧಲಿಂಗೇಶ್ವರ ಪುರಾಣ" ಕಾವ್ಯವಾಚನ ಪ್ರವಚನ ಸರ್ಪ ಭೂಷಣ ಮಠದ ಕಾರ್ಯಗಳಲ್ಲಿ ಒಂದು ಮೈಲಿಗಲ್ಲಾಯಿತು. ಶಿವಲಿಂಗಯ್ಯ ಕಾವ್ಯವಾಚನವನ್ನು— ಪ್ರವಚನವನ್ನು ಸಮತೋಲನದಲ್ಲಿ ನಿರ್ವಹಿಸಿದರು. ಕಾವ್ಯದ ಮಂಗಳೋತ್ಸವ ಬೇಲಿ ಮಠದ ಚಿರಮೂರ್ತಿ ಶ್ರೀ ಶಿವರುದ್ರಸ್ವಾಮಿಗಳ ಅಧ್ಯಕ್ಷತೆಯಲ್ಲಿ ನಡೆಯಿತು. "ಪದ್ಮಭೂಷಣ"ರಾದ ಕೀರ್ತನ ಕೇಸರಿ ಬಿ. ಶಿವಮೂರ್ತಿಶಾಸ್ತ್ರಿಗಳು ಮುಖ್ಯ ಅತಿಥಿಗಳಾಗಿದ್ದು ಕಾವ್ಯವಾಚನ-ಪ್ರವಚನಗಳೆರಡೂ ಅದ್ಭುತವಾಗಿತ್ತೆಂದು ಪ್ರಶಂಸಿ ಸಿದರು.

ಶಿವಲಿಂಗಯ್ಯ ಇತ್ತೀಚೆಗೆ ತನ್ನ ಹಿರಿಯ ಮಗಳು ಗೀರ್ವಾಣಮ್ಮನನ್ನು ಕಳೆದು ಕೊಂಡು ತುಂಬ ನೊಂದಿದ್ದಾರೆ. ಅವರ ಉತ್ಸಾಹ; ಹುಮ್ಮಸ್ಸು ಕುಂದಿವೆ. ಆದರೂ ಅವರ ಸಾಹಿತ್ಯ ಕೈಂಕರ್ಯ ಕುಗ್ಗದೆ ಸಾಗಿದೆ. ಗಮಕಿಗಳನ್ನು ಪ್ರವಚನಕಾರರನು. ಗೌರವಿಸಿ ಸನ್ಮಾನ ಮಾಡುವ ಒಂದು ಆದರ್ಶ ಕಾರ್ಯವನ್ನೂ ಹಮ್ಮಿಕೊಂಡಿದ್ದಾರೆ. 1981ರ ವರ್ಷದಲ್ಲಿ ತಮ್ಮ 50 ವರ್ಷದ ಹುಟ್ಟಿದ ಹಬ್ಬ ಸಂದರ್ಭದಲ್ಲಿ ತಮ್ಮ ಉದ್ದೇಶ ವನ್ನು ಕಾರ್ಯಾಚರಣೆಗೂ ತಂದರು. ಹಿರಿಯ ಸಾಹಿತಿ ರಂ. ಶ್ರೀ. ಮುಗಳಿಯವರ ಅಧ್ಯಕ್ಷತೆಯ ಲ್ಲಿ ಗಮಕ ವಿದುಷಿ ಶಕುಂತಲಾಬಾಯಿಯನ್ನು, ಸುಪ್ರಸಿದ್ಧ ಪ್ರವಚನಕಾರ ಪಂಡಿತ ಎಂ. ಜಿ. ನಂಜುಂಡಾರಾಧ್ಯರನ್ನು ಸನ್ಮಾನಿಸಿ ಶಾಲು ಹೊದಿಸಿ ಗೌರವಿಸಿದರು. ತರುಣ ಸಾಹಿತಿ ಪಾವಗಡದ ಪ್ರಕಾಶರಾವ್ ಸನ್ಮಾನಿತರುಗಳನ್ನು ಅಭಿವಂದಿ ದರು. ಗಮಕಿ-ಪ್ರವಚನಕಾರರು ಇಬ್ಬರನ್ನೂ ಒಟ್ಟುಗೂಡಿಸಿ ಸನ್ಮಾನಿಸಿ ಗೌರವಿಸುವ ಶಿವ ಲಿಂಗಯ್ಯನವರ ಸಹೃದಯ ಶ್ರೀಮಂತಿಕೆ ಸ್ತುತ್ಯರ್ಹವಾದುದು.

ಷಡಕ್ಷರದೇವನೂ ಗಮಕ ವಿದುಷಿಯ ಕಂಠಶ್ರೀಯಲ್ಲಿ

ಸ್ವಲ್ಪ ಹೆಚ್ಚು ಕಡಮೆ ಶಕುಂತಲಾಬಾಯಿ ತಮ್ಮ ವೀರಶೈವ ಕಾವ್ಯವಾಚನ ಚಕ್ರಕ್ಕೆ ಪ್ರಮುಖ ವೀರಶೈವ ಕಾವ್ಯಗಳನ್ನೂ ಬಳಸಿಕೊಂಡಂತಾಯಿತು. ಷಡಕ್ಷರ ದೇವನ ಕಾವ್ಯಗಳು "ವೃಷಭೇಂದ್ರ ವಿಜಯ" ಮತ್ತು "ರಾಜಶೇಖರ ವಿಲಾಸ" ಗಮಕ ಕಾರ್ಯಕ್ರಮದಿಂದ ಹೇಗೋ ನುಣುಚಿಕೊಂಡಿದೆ. ಆದರೂ ಮಹಾಕವಿಯ ಎರಡೂ

ಕಾವ್ಯಗಳಿಂದ ಕ್ರಮವಾಗಿ "ಕೋಳೂರು ಕೊಡಗೂಸಿನ ಕಥೆ" ಮತ್ತು "ತಿರುಕೊಳವಿ ನಾಚಿಯ ಪ್ರಲಾಪ" ವಾಚನ ಮಾಡಿದ ಸಂದರ್ಭಗಳುಂಟು.

ಹರಿಹರನ ಪಂಪಾಶತಕದಿಂದ ಆಯ್ದ ವೃತ್ತ ಪದ್ಯಗಳನ್ನು ಶಕುಂತಲಾಬಾಯಿ ಬಹುಸಂಖ್ಯೆಯ ಸಭೆಗಳಲ್ಲಿ ಪ್ರಾರ್ಥನೆಗೆ ಉಪಯೋಗಿಸಿಕೊಂಡಿದ್ದಾರೆ; ಆಕಾಶವಾಣಿಯಲ್ಲೂ ಬಿತ್ತರಿಸಿದ್ದಾರೆ.

ಇಷ್ಟಾದರೂ ಶಕುಂತಲಾಬಾಯಿಯು ವಿರಶೈವ ಕಾವ್ಯವಾಚನ ಚಕ್ರವನ್ನು ಪೂರಯಿಸಿಲ್ಲ; ಅದು ಸಾಧ್ಯವೂ ಇಲ್ಲ. ಸಧ್ಯಕ್ಕೆ ವೀರಶೈವ ಸಮಾಜಕ್ಕೆ ಶಕುಂತಲಾಬಾಯಿ ಕೊಟ್ಟಿರುವ ಕಾಣಿಕೆ, ರಾಘವಾಂಕನ ದಿವ್ಯ ಅಮರವಾಣಿಯಲ್ಲಿ ಹೇಳುವುದಾದರೆ "**ನಮ್ಮ ಜನ ಬದುಕಬೇಕೆಂದು ಅನಪೇಕ್ಷೆಯಿಂದ**" ಸಲ್ಲಿಸಿರುವ ಕಾಣಿಕೆ ಇಷ್ಟು ಮಾತ್ರ, ಸಾಗರದಲ್ಲಿ ಒಂದು ಬೊಗಸೆ ನೀರನ್ನು ಹಿಡಿದ ಹಾಗೆ.

೬. ಗಮಕದಲ್ಲಿ ''ಶ್ರೀ ರಾಮಾಯಣ ದರ್ಶನಂ'' ಜಯಭೇರಿ

ಶ್ರೀ ''ರಾಮಾಯಣ ದರ್ಶನಂ'' ಮಹಾಕಾವ್ಯ

"ಬಹಿರ್ಘಟನೆಯಂ ಪ್ರತಿಕೃತಿಸುವಾ ಲೌಕಿಕ
ಚರಿತ್ರೆಯಲ್ತಿದು, ಅಲೌಕಿಕ ನಿತ್ಯಸತ್ಯಂಗಳಂ
ಪ್ರತಿಬಿಂಬಿಸುವ ಸತ್ಯಸ್ಯ ಸತ್ಯ ಕಥನಂ ಕಣಾ
ಶ್ರೀ ಕುವೆಂಪುವ ಸೃಜಿಸಿದೀ ಮಹಾಛಂದಸಿನ
ಮೇರುಕೃತಿ, ಮೇಣ್ ಜಗದ್ಭವ್ಯ ರಾಮಾಯಣಂ !

ಎನ್. ಎಸ್. ಚಂದ್ರಶೇಖರ್ ಅವರ ಪ್ರೇರಣೆ

ಕುವೆಂಪು ಅವರ ಶ್ರೀ "ರಾಮಾಯಣ ದರ್ಶನಂ" ರಚನೆಯಾಗುತ್ತಿರುವಾಗಲೆ ಅದರ ಕೆಲವು ಬಿಡಿಬಿಡಿ ಸಂಚಿಕೆಗಳು ಆಗಾಗ "ಪ್ರಬುದ್ಧ ಕರ್ಣಾಟಕ" ತ್ರೈಮಾಸಿಕ ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದವು. ಮಹಾಕಾವ್ಯದ ಒಂದನೆಯ ಮಹಾ ಸಂಪುಟ 1949 ರಲ್ಲೂ ಎರಡನೆಯ ಮಹಾ ಸಂಪುಟ 1951ರಲ್ಲೂ ಪ್ರಕಟವಾದ ಸಂಗತಿ ನನ್ನ ಗಮನಕ್ಕೆ ಬಂದಿರಲಿಲ್ಲ. ನಿಟ್ಟೂರು ಶ್ರೀನಿವಾಸರಾಯರ ಹಿರಿಯ ಮಗ ಎನ್. ಎಸ್. ಚಂದ್ರ ಶೇಖರ್ "ಶ್ರೀ ರಾಮಾಯಣ ದರ್ಶನಂ" ಎರಡು ಮಹಾ ಸಂಪುಟಗಳಲ್ಲಿ ಬಂದಿರುವ ವಿಷಯವನ್ನು 1951ರಲ್ಲಿ ನನ್ನ ಗಮನಕ್ಕೆ ತಂದು ಉಪಕಾರ ಮಾಡಿದರು.

ಚಂದ್ರಶೇಖರ್ ಕಾವ್ಯಪ್ರೇಮಿ. ನನ್ನಲ್ಲಿ, ಶಕುಂತಲಾಬಾಯಿಯಲ್ಲಿ ತುಂಬ ವಿಶ್ವಾಸಿ ಗಳು. ಅವರು ನಮ್ಮ ಕಣ್ಣು ಮುಂದೆ ಬೆಳೆದ ಚಿರಂಜೀವಿ. ನಾವು ಸತ್ಯಶೋಧನ ಪುಸ್ತಕ ಭಂಡಾರಕ್ಕೆ ಹೋದಾಗಲೆಲ್ಲ ಬಾಲಕ ಕೈಯಲ್ಲಿ ಒಂದು ಪುಸ್ತಕ ಹಿಡಿದು ತನ್ಮಯ ಚಿತ್ತನಾಗಿ ಓದುತ್ತ ಕುಳಿತಿರುವುದನ್ನು ನೋಡುತ್ತಿದ್ದೆ. ಮುಂದೆ, ನಾವು ದಂಪತಿಗಳು ನನ್ನ ಮಿತ್ರ ಸಿ. ಕೆ. ನಾಗರಾಜರಾಯರ ಮನೆಗೆ ಹೋದಾಗಲೆಲ್ಲ, ಚಂದ್ರಶೇಖರ್ ಅಲ್ಲಿಗೆ ಬಂದಿರುವರು. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಶಕುಂತಲಾಬಾಯಿಯ ಕಾವ್ಯವಾಚನ ನಡೆದಾಗಲೆಲ್ಲ, ಅಲ್ಲಿಗೆ ಬಂದು ವಾಚನವನ್ನು ಕೇಳಿ ಸಂತೋಷಪಡುವರು. ವಿಮರ್ಶೆ ಮಾಡುವರು. ಡಿ. ವಿ. ಜಿ. ಅವರ "ಶ್ರೀ ರಾಮ ಪರೀಕ್ಷಣಂ" ಕಾವ್ಯ ಪ್ರಕಟವಾದಾಗ ಶಕುಂತಲಾಬಾಯಿಯಿಂದಲೇ ಆ ಕಾವ್ಯವಾಚನ ಕೇಳಿ ಸಂತೋಷಪಡಬೇಕೆಂದ ಇಷ್ಟಪಟ್ಟರು. ಈಗ ಕುವೆಂಪು ಅವರ "ಶ್ರೀ ರಾಮಾಯಣ ದರ್ಶನಂ" ಕಾವ್ಯ ಪ್ರಕಟ ವಾಗುತ್ತಲೇ ಆ ಕಾವ್ಯವನ್ನು ಶಕುಂತಲಾಬಾಯಿಯಿಂದಲೇ ವಾಚನ ಮಾಡಿಸಿ ಕೇಳಿ ಆನಂದಪಡಬೇಕೆಂದು ಅಪೇಕ್ಷಿಸಿದರು.

ವಸಂತ ಸಾಹಿತ್ಯೋತ್ಸವದಲ್ಲಿ ''ಶ್ರೀ ರಾಮಪರೀಕ್ಷಣಂ'' ಕಾವ್ಯವಾಚನ

ಕನ್ನಡ ಸಾಹಿತ್ಯ ಪರಿಷತ್ತು ತಪ್ಪದೆ ವರ್ಷವರ್ಷವೂ ನಡೆಸುತ್ತಿದ್ದ ವಸಂತ

ಸಾಹಿತ್ಯೋತ್ಸವದಲ್ಲಿ ಶಕುಂತಲಾಬಾಯಿಯ ಕುಮಾರವ್ಯಾಸ ಭಾರತ, ಅಥವಾ ಲಕ್ಷ್ಮೀಶನ ಜೈಮಿನಿ ಭಾರತ ಕಾವ್ಯವಾಚನಗಳು ತಪ್ಪದೆ ಇರುತ್ತಿತ್ತು. ಚಂದ್ರಶೇಖರ್ 1950ರ ವಸಂತ ಸಾಹಿತ್ಯೋತ್ಸವದಲ್ಲಿ ಕುಮಾರವ್ಯಾಸ ಲಕ್ಷ್ಮೀಶರನ್ನು ತಪ್ಪಿಸಿ ಡಿ. ವಿ. ಜಿ.ಯ "ಶ್ರೀ ರಾಮಪರೀಕ್ಷಣಂ" ಕಾವ್ಯವಾಚನವನ್ನು ಶಕುಂತಲಾಬಾಯಿ ನಡೆಸುವುದಕ್ಕೆ ಪ್ರೇರಕರಾದರು. ಅದೂ ಸ್ವಾರಸ್ಯ ಸಂಗತಿ.

1950ರ ವಸಂತ ಸಾಹಿತ್ಯೋತ್ಸವದ ಕರೆಯೋಲೆಯಲ್ಲಿ ಪ್ರಾರಂಭದ ದಿನದ ಉದ್ಘಾಟನೆಯ ಸಮಾರಂಭಕ್ಕೆ ಮೈಸೂರು ರಾಜ್ಯದ ಶಿಕ್ಷಣ ಮಂತ್ರಿ ಟಿ. ಸಿದ್ಧಲಿಂಗಯ್ಯನವರೂ ಅಧ್ಯಕ್ಷತೆಗೆ ಡಿ. ವಿ. ಜಿ. ಅವರೂ ಆಮಂತ್ರಿತರಾಗಿದ್ದರು. ಶಕುಂತಲಾಬಾಯಿಯ ಕಾವ್ಯವಾಚನ ಏರ್ಪಾಡಾಗಿತ್ತು. ಚಂದ್ರಶೇಖರರ ಗಮನ ಕರೆಯೋಲೆಯ ಕಡೆ ಹೋಗುತ್ತಲೇ ಅವರು ನನಗೆ ಒಂದು ಕಾಗದ ಬರೆದರು. ನಾನು ಸತ್ಯಶೋಧನ ಪುಸ್ತಕ ಭಂಡಾರಕ್ಕೆ ಹೋಗಿ ಅವರನ್ನು ಕಂಡೆ. ಅವರು ನೇರವಾಗಿ, "ಪಾಂಡುರಂಗರಾವ್, ಈ ಸಲ ಶಕುಂತಲಾಬಾಯಿ ಡಿ. ವಿ. ಜಿ.ಯ "ಶ್ರೀ ರಾಮಪರೀಕ್ಷಣಂ" ಕಾವ್ಯವಾಚನ ಮಾಡಲಿ; ಹೊಸ ಕಾವ್ಯ ಚೆನ್ನಾಗಿದೆ. ನಮ್ಮ ಜನಕ್ಕೆ ಶ್ರೀ ರಾಮ ಪರೀಕ್ಷಣಂ ಕಾವ್ಯದ ಪರಿಚಯವಾಗಬೇಕು" ಎಂದರು. ನಾನು, "ಆಗಬಹುದು" ಎಂದೆ. ಅವರೇ ಡಿ. ವಿ. ಜಿ. ಕಾವ್ಯದಿಂದ ಕಥಾಭಾಗವನ್ನೂ ಆರಿಸಿಕೊಟ್ಟರು. "ಅಹಲ್ಯೆಯ ಪ್ರಶ್ನೆ" ವಾಚನ ಭಾಗ. "ಶ್ರೀ ರಾಮಪರೀಕ್ಷಣಂ" ಕಂದ, ಸೀಸಪದ್ಯ, ವೃತ್ತ ಹೀಗೆ ನಾನಾ ಛಂದಸ್ಸುಗಳಲ್ಲಿ ರಚಿತವಾಗಿರುವ ಕಾವ್ಯ.

ಶ್ರೀರಾಮ ಪರೀಕ್ಷಣಂ ಕಾವ್ಯವಾಚನ ಸಭೆಗೆ ಹಿಡಿಯಿತು. ಡಿ. ವಿ. ಜಿ. ಅವರ ಸಮ್ಮುಖದಲ್ಲಿ ಅವರವೇ ಕಾವ್ಯವನ್ನು ವಾಚನಮಾಡಿದುದು ಶಕುಂತಲಾಬಾಯಿಗೆ ಇದೇ ಮೊದಲು. ಅಷ್ಟೇ ಅಲ್ಲ, ಡಿ. ವಿ. ಜಿ. ಸಮ್ಮುಖದಲ್ಲಿ ಕುಮಾರವ್ಯಾಸ ಭಾರತ ವಾಚನ ಮಾಡಿಯೂ ಬಹಳ ವರ್ಷಗಳಾಗಿತ್ತು. ಡಿ. ವಿ. ಜಿ. ಅವರಿಗೆ ಶಕುಂತಲಾಬಾಯಿಯ ಪ್ರಗತಿಯನ್ನು ಕಂಡು ಪರಮ ಸಂತೋಷವಾಯಿತು. ಚಂದ್ರಶೇಖರರ ಆನಂದಕ್ಕೆ ಪಾರವೇಯಿಲ್ಲ.

ವಸಂತ ಸಾಹಿತ್ಯೋತ್ಸವದಲ್ಲಿ "ಶ್ರೀ ರಾಮಾಯಣದರ್ಶನಂ" ಕಾವ್ಯವಾಚನ

1951ನೆಯ ವರ್ಷದ ವಸಂತ ಸಾಹಿತ್ಯೋತ್ಸವದ ಹೊತ್ತಿಗೆ ಕುವೆಂಪು "ಶ್ರೀ ರಾಮಾಯಣದರ್ಶನಂ" 2ನೆಯ ಮಹಾ ಸಂಪುಟ ಪ್ರಕಟವಾಗಿತ್ತು. ಚಂದ್ರಶೇಖರ್ ಎರಡು ಮಹಾ ಸಂಪುಟಗಳನ್ನೂ ಓದಿ ಮುಗಿಸಿದ್ದರು. ಅವರಿಗೆ ಕಾವ್ಯ ಬಹು ಮೆಚ್ಚಿಗೆಯಾಗಿತ್ತು. ವಸಂತ ಸಾಹಿತ್ಯೋತ್ಸವದಲ್ಲಿ ಶಕುಂತಲಾಬಾಯಿ "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನ ಮಾಡಿ ಹೊಸ ಕಾವ್ಯದ ಪರಿಚಯವನ್ನು ಕನ್ನಡ ಸಾರಸ್ವತ ಲೋಕಕ್ಕೆ ಮಾಡಿಕೊಡಬೇಕೆಂದು ಚಂದ್ರಶೇಖರ್ ಅಪೇಕ್ಷಿಸಿ ತಮ್ಮ ಅಪೇಕ್ಷೆಯನ್ನು ನನಗೆ ತಿಳಿಸಿದರು. ನಾನು "ಆಗಬಹುದು" ಎಂದೆ. ಚಂದ್ರಶೇಖರರೇ ವಾಚನಭಾಗವನ್ನು

ನಿಷ್ಕರ್ಷಿಸಿದರು, "ಶಿಲಾತಪಸ್ವಿನೀ" ಭಾಗದಲ್ಲಿ "ಅಹಲ್ಯೋದ್ಧಾರ" ಮತ್ತು "ಸೀತಾ ಸ್ವಯಂವರ" ಕಥಾಭಾಗಗಳು. ಚಂದ್ರಶೇಖರರೇ ತಮ್ಮ ಸ್ವಂತ ಪ್ರತಿಯನ್ನು ವಾಚನ ಸಮಯಕ್ಕೆ ಒದಗಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ವಸಂತ ಸಾಹಿತ್ಯೋತ್ಸವದಲ್ಲಿ ಶಕುಂತಲಾಬಾಯಿ ಕುವೆಂಪು "ಶ್ರೀ ರಾಮಾಯಣ ದರ್ಶನಂ"ಕಾವ್ಯವಾಚನ ಮಾಡುತ್ತಾರೆಂಬ ಸುದ್ದಿ ಕೇಳುತ್ತಲೆ ಸಾಹಿತಿಗಳಲ್ಲಿ, ಗಮಕಿಗಳಲ್ಲಿ, ಕಾವ್ಯಾಭಿಮಾನಿಗಳಲ್ಲಿ, ಜಿಜ್ಞಾಸೆಗೆ ಪ್ರಾರಂಭವಾಯಿತು. ಇವರೆಲ್ಲರೂ ಗರಿಗಟ್ಟಿ ಚರ್ಚೆಗೆ ತೊಡಗಿದರು. ಗಮಕಕ್ಕೆ ಕುಮಾರವ್ಯಾಸ ಲಕ್ಷ್ಮೀಶರುಗಳನ್ನು ಬಿಟ್ಟರೆ ಇನ್ನಿಲ್ಲವೆಂದು ಕೆಲವರು, "ಶ್ರೀ ರಾಮಾಯಣದರ್ಶನಂ" ಕಾವ್ಯ ಕ್ಲಿಷ್ಟ, ಸಂಸ್ಕೃತಭೂಯಿಷ್ಠ, ಪಂಡಿತರು, ವಿದ್ವಾಂಸರು ಮನೆಗಳಲ್ಲಿ ಕುಳಿತು ತಾವೇ ಓದಿಕೊಳ್ಳಬೇಕಾದ ಕಾವ್ಯವೆಂದು ಇನ್ನು ಕೆಲವರು, ಗಮಕಕ್ಕೆ ಹೊಂದುವುದಿಲ್ಲವೆಂದು ಮತ್ತೆ ಕೆಲವರು, ಮಾತಾಡತೊಡಗಿದರು. ಗದ್ಯವನ್ನು ಗಮಕಿಸಿ ವಾಚನ ಮಾಡಬಹುದೆಂದರು ಹಲವರು. "ನೀನು ಶಕುಂತಲಾಬಾಯಿಯಿಂದ ವರ್ತಮಾನ ಪತ್ರಿಕೆಗಳ ಸುದ್ದಿಸಮಾಚಾರಗಳನ್ನೂ ವಾಚನ ಮಾಡಿಸಿಬಿಡುತ್ತೀಯೆ" ಎಂದು ನನ್ನ ಮಿತ್ರರು ಹುಬ್ಬು ಹಾರಿಸಿ ಹಾಸ್ಯದ ಚಟಾಕಿ ಸಿಡಿಸಿದರು. ಸಹೃದಯ ವಿಭೂತಿಗಳ ಸಂಗಡಕ್ಕೆ ಸೇರಿದ ವೇದಬ್ರಹ್ಮ ಶ್ರೀ ಮೋಟಗಾನಹಳ್ಳಿ ಸುಬ್ರಹ್ಮಣ್ಯಶಾಸ್ತ್ರಿಗಳು, "ಶಕುಂತಲಾಬಾಯಿ, ಸಾಹಸಕ್ಕೆ ಕೈಹಾಕಿದ್ದೀರಿ. ಶುಭಮಸ್ತು" ಎಂದು ಹರಸಿದರು.

ಚಂದ್ರಶೇಖರ್ "ಶ್ರೀ ರಾಮಪರೀಕ್ಷಣಂ" ಕಾವ್ಯದಿಂದ ಕಥಾಭಾಗವನ್ನು ಆರಿಸಿಕೊಟ್ಟಂತೆ "ಶ್ರೀ ರಾಮಾಯಣ ದರ್ಶನಂ" ಕಾವ್ಯದಿಂದಲೂ ಕಥಾಭಾಗವನ್ನು ಆರಿಸಿಕೊಟ್ಟಿದ್ದರು. "**ರಾಮಾಯಣದೊಳತಿ ಮನೋಜ್ಞತದ ಸಂಘಟನೆ ಸಂಭವಿಸಲಿರ್ಪ ತಾಣಂ ತಾನೆಂದರಿವರೇಂ**"ಎಂಬಸಾಲಿನಿಂದ "**ತಾಯಿ ಕೌಸಲ್ಯೆ ಗೋಳಿಡುತೆ ತನ್ನ ಪೆಸರಂ ಹಿಡಿದು ಕರೆದವೋಲ್ ಕಲ್ಗಳಿಂ ಪುಲ್ಗಳಿಂ ಮರಮರದ ಹೃದಯದಿಂ ಮೂಡಿ ಕೇಳ್ದುದು ಸಂಕಟಂ ರಾಮನೋರ್ವಂಗೆ**" (223–236) "**ಕೈವೆರಸಿ ನಡುಗಿದುದು ಪಿಡಿದಬಿಲ್**" ಸಾಲಿಂದ "**ರಘುನಂದನಂ ನರ್ತಿಸಲ್ ತೊಡಗಿದನು ಭಾವದ ಸಮಾಧಿಯಿಂ ಮಧುಮತ್ತನಂತೆ**" (240–248) "**ಮೆರೆದುದು ಮುಂದೆ ಪೞುವದೊಳ್**" ಸಾಲಿನಿಂದ "**ಪೇಳ್ವುದೇಂ ರಾಮಾನಂದನಮಂ? ಗೌತಮಾಲಿಂಗನದಿ ಮೈ ಮರೆದನಯ್, ಭಕ್ತಿಯುಪ್ಪುಗೆಗೆ ಭಗವಂತನೋಲ್**" (269–314) "ಶಿಲಾತಪಸ್ವಿನಿ" "ಕಥಾಭಾಗಕ್ಕೆ ಆಯ್ದಿತ್ತು. "ಸೀತಾಸ್ವಯಂವರ" ಕಥಾಭಾಗಕ್ಕೆ "**ಮಿಥಿಳೇಂದ್ರ ಧರಣಿಸಂಭೂತೆ ಊರ್ಮಿಳೆಯೊಡನೆ ಮಾತಾಡಿ ಮುಗಿವನಿತರೊಳ್ ಕೆಳದಿಯರ್ ಬಂದರೋಡೋಡಿ**" ಸಾಲಿನಿಂದ "**ಗಿರಿಜೇಶನಂ ಪೂಜಿಸಿದಳಾ ರಾತ್ರಿ, ನಿದ್ದೆ ನೈವೇದ್ಯಮಂ ಮಾಡಿ**" (457–485), "**ರಘುಕುಲಋಮಣಿ ಬಿಳಿಯಾನೆ ಸೊಂಡಿಲಂದದ ನೀಳ ತೋಳಿಂದೆ ತುಡುಕಿದನು ಕಲ್ಪಭೂರುಹ ಸದೃಶ ಚಾಪಮಂ**" ಸಾಲುಗಳಿಂದ

"ರಾಮಂಗೆ ಮಾಲೆಸೂಡಿದಳೊ ಸೀತಾ ಕನ್ಯೆ, ಭೂರಮೆ ಸಮುದ್ರಂಗೆ ಬೆಳ್ದೆರೆಗಳಂ ಕೋದು ಪೂದಂಡೆವೋಲ್ ಗೈದ ಬಾನ್ದೊರೆಯ ದಾಮಮಂ ಹಾಯ್ಕಿದಳೆನಲ್ಕೆ !" (577–608), ಆಯ್ದಿತ್ತು. ಒಟ್ಟು ಎರಡೂ ಕಥಾಭಾಗಗಳಿಂದ 125 ಪಂಕ್ತಿಗಳು, ಅರ್ಧ ಮುಕ್ಕಾಲು ಗಂಟೆಗೆ ಸಾಕಾಗುವಷ್ಟು.

ಭಾಮಿನೀ ಷಟ್ಪದಿ, ವಾರ್ಧಕ ಷಟ್ಪದಿ, ಚಂಪೂ ಕಾವ್ಯಗಳ ಛಂದಸ್ಸುಗಳಿಂದ ಭಿನ್ನವಾದುದು "ಶ್ರೀ ರಾಮಾಯಣ ದರ್ಶನಂ" ಮಹಾಕಾವ್ಯ. ಈ ಕಾವ್ಯದ ಛಂದಸ್ಸೇ ಬೇರೆ. ಮಹಾ ಛಂದಸ್ಸೆಂದು ಕುವೆಂಪು ನವ ನಾಮಕರಣವನ್ನೇ ಮಾಡಿದ್ದರು. ಷಟ್ಪದಿ ಕಾವ್ಯಗಳ ನಡಿಗೆಗೂ ಮಹಾಛಂದಸ್ಸಿನ ಕಾವ್ಯದ ನಡಿಗೆಗೂ ತುಂಬ ವ್ಯತ್ಯಾಸ. ಈಗಾಗಲೆ ಶಕುಂತಲಾಬಾಯಿ "ಶ್ರೀ"ಯವರ "ಕನ್ನಡ ತಾಯ ನೋಟ", ಹರಿಹರನ "ಬಸವರಾಜದೇವರ ರಗಳೆ" ಮತ್ತು ಗೋವಿಂದಪೈಗಳ "ಗೊಲ್ಗೋಥಾ" ಮತ್ತು "ವೈಶಾಖಿ" ಕಾವ್ಯಗಳ ಅಭ್ಯಾಸಮಾಡಿದ್ದುದರಿಂದ "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನ ಮಾಡುವುದಕ್ಕೆ ಕಷ್ಟಕಾಣಲಿಲ್ಲ.

"ಶ್ರೀ ರಾಮಾಯಣದರ್ಶನಂ" ಕಾವ್ಯವಾಚನ ಕನ್ನಡ ಸಾಹಿತ್ಯ ಪರಿಷತ್ತಿನ ವಸಂತ ಸಾಹಿತ್ಯೋತ್ಸವದಲ್ಲಿ ನಿರ್ದಿಷ್ಟವಾದ ದಿನ ಸಂಜೆ ಯಶಸ್ವಿಯಾಯಿತು. ಮಹಾ ಛಂದಸ್ಸಿನ ಬೀಸುಹಾಸು, ಅದರ ದಾಪು ಮೋಪು, ಬಿತ್ತರಿತ್ತರಗಳನ್ನು ಗಮನಿಸಿ, ಅರ್ಥ ಭಾವಗಳನ್ನು ಬಿಡಿಸಿ ಮಾಡಿದ ಕಾವ್ಯವಾಚನ ಶ್ರೋತೃಗಳ ಮನಸ್ಸನ್ನು ಮೋಡಿ ಹಿಡಿಯಿತು. ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣ ಭರ್ತಿಯಾಗಿತ್ತು. ಸಭಾಂಗಣದ ಹೊರಬಾಗಿಲುಗಳಲ್ಲೆಲ್ಲ ಜನ ನಿಂತಿತ್ತು. ಕನ್ನಡ ಸಾಹಿತ್ಯ ಪರಿಷತ್ತಿನ ಎದುರು ಇರುವ ಚಾಮರಾಜೇಂದ್ರ ಸಂಸ್ಕೃತ ಕಾಲೇಜಿನ ಪೌಳಿ ಗೋಡೆಯ ಮೇಲೆ ಸಹ ಜನ ಕುಳಿತು ಧ್ವನಿವರ್ಧಕದ ಮೂಲಕ ಕಾವ್ಯವಾಚನ ಕೇಳಿದರು.

ಮೋಟಗಾನಹಳ್ಳಿ ಸುಬ್ರಹ್ಮಣ್ಯಶಾಸ್ತ್ರಿಗಳು ಶಕುಂತಲಾಬಾಯಿಯನ್ನು ಅಭಿವಂದಿಸಿದವರಲ್ಲಿ ಮೊದಲಿಗರು. ಅನಂತರ ಅನೇಕ ಮಂದಿ ಸಾಹಿತಿಗಳು, ಗಮಕ ಕಲಾಭಿಮಾನಿಗಳು ಶ್ರೀಮತಿಯವರನ್ನು ತುಂಬು ಹೃದಯಗಳಿಂದ ಶ್ಲಾಘಿಸಿದರು. ಚಂದ್ರಶೇಖರರ ಸಂತೋಷಕ್ಕಂತೂ ಮಿತಿಯಿಲ್ಲ.

"ಉದಯರವಿ"ಯಲ್ಲಿ "ಶ್ರೀ ರಾಮಾಯಣದರ್ಶನಂ" ಕಾವ್ಯವಾಚನ

ಮೈಸೂರು ವಯಸ್ಕರ ಶಿಕ್ಷಣ ಸಮಿತಿಯಲ್ಲಿ ಜವಾಬ್ದಾರಿ ಹುದ್ದೆಯಲ್ಲಿದ್ದ ಸಿ. ವಿ. ರಾಜಗೋಪಾಲ್ ಅವರ ಕಿವಿಗೆ ಶಕುಂತಲಾಬಾಯಿ ಭಾರತವಾಚನ ಮಾಡುವುದು ತಿಳಿದಿತ್ತು. ಅವರು ಮೈಸೂರು ವಯಸ್ಕರ ಶಿಕ್ಷಣ ಸಮಿತಿಯಲ್ಲಿ ತಮ್ಮ ಒಡನಾಡಿಯಾಗಿದ್ದ ಎ. ಎಸ್. ಕೃಷ್ಣಮೂರ್ತಿರಾಯರನ್ನು ಕರೆದುಕೊಂಡು ನೆಹರೂ ನಗರದಲ್ಲಿದ್ದ ನಮ್ಮ 'ಮಕ್ಕಳ ಮಂಟಪ' ಮನೆಗೆ ಬಂದರು ಒಂದು ಸಂಜೆ. ಶಕುಂತಲಾಬಾಯಿಯ ಕುಮಾರವ್ಯಾಸ ಭಾರತ ವಾಚನ ಕೇಳಿ ಆನಂದಪಟ್ಟರು. ಮಾತಿಗೆ ಮಾತು

ಬಂದು "ಕುವೆಂಪು ಶ್ರೀ ರಾಮಾಯಣ ದರ್ಶನಂ ಕಾವ್ಯವನ್ನೂ ಗಮಕಿಗಳು ಕುಮಾರ ವ್ಯಾಸ ಭಾರತ, ಜೈಮಿನೀ ಭಾರತಗಳಂತೆ ಏಕೆ ವಾಚನ ಮಾಡಬಾರದು ?" ಎಂದು ಪ್ರಶ್ನಿಸಿದರು. "ಕನ್ನಡ ಸಾಹಿತ್ಯ ಪರಿಷತ್ತು ಆಚರಿಸಿದ ಈ ಸಲದ ವಸಂತ ಸಾಹಿತ್ಯೋತ್ಸವದಲ್ಲಿ ಶಕುಂತಲಾಬಾಯಿ "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನ ಮಾಡಿದ್ದಾರೆ"ಎಂದೆ ನಾನು. ರಾಜಗೋಪಾಲರಕಿವಿ ಚುರುಕಾಯಿತು. "ಏನು? ಏನು ? ಶಕುಂತಲಾಬಾಯಿ ಆಗಲೇ ರಾಮಾಯಣ ದರ್ಶನಂ ವಾಚನ ಮಾಡಿಯಾಯಿತೇ? ಈಗ ನಾನು ಕೇಳಬೇಕಲ್ಲ ? ಅದನ್ನೂ ಸ್ವಲ್ಪ ಓದಿಸಿ", ಎಂದು ಪ್ರಾರ್ಥಿಸಿದರು. ಶಕುಂತಲಾಬಾಯಿ ವಸಂತ ಸಾಹಿತ್ಯೋತ್ಸವದಲ್ಲಿ ವಾಚನಮಾಡಿದಷ್ಟು ಭಾಗವನ್ನೇ ವಾಚಿಸಿದರು. ರಾಜಗೋಪಾಲರ ಹರ್ಷ ಎಲ್ಲೆ ಮೀರಿತು. ಅವರಿಗೆ ಕುವೆಂಪು ಎಂದರೆ ಬಹಳ ಪ್ರೀತಿ. ಕವಿಗಳ ಸಹಪಾಠಿಗಳಾಗಿದ್ದರಂತೆ. ರಾಜಗೋಪಾಲ್ "ನೀವು ಕವಿವರ್ಯರ ಮುಂದೆ "ಶ್ರೀ ರಾಮಾಣದ ದರ್ಶನಂ" ಕಾವ್ಯವಾಚನ ಮಾಡಿದ್ದೀರ ?" ಎಂದು ಪ್ರಶ್ನಿಸಿದರು. "ಇಲ್ಲ" ಎಂದರು ಶ್ರೀಮತಿಯವರು. "ನಾನು ದೇ. ಜವರೇಗೌಡರಿಗೆ ಬರೆಯುತ್ತೇನೆ. ಅವರು ಕವಿಗಳ ಮನೆಯಲ್ಲಿ "ಶ್ರೀ ರಾಮಾಯಣದರ್ಶನಂ" ಕಾವ್ಯವಾಚವನ್ನು ಏರ್ಪಡಿಸುತ್ತಾರೆ, ಮೈಸೂರಿಗೆ ಹೋಗುತ್ತೀರ ?" ಎಂದು ಕೇಳಿದರು. "ನಾವು, ನಾಡದ್ದು ಮೈಸೂರಿಗೆ ಹೋಗುತ್ತಿದ್ದೇವೆ. ಆಕಾಶವಾಣಿಯಲ್ಲಿ ಭಾರತವಾಚನದ ಕಾರ್ಯಕ್ರಮವಿದೆ" ಎಂದೆ. "ಓ, ಹಾಗೇನು! ಹಾಗಾದರೆ ಈಗಲೇ ಜವರೇಗೌಡರಿಗೆ ಪತ್ರ ಬರೆಯುತ್ತೇನೆ" ಎಂದು ತಮ್ಮ ಕೈಚೀಲದಿಂದ ಪೋಸ್ಟ್ ಕಾರ್ಡ್ ತೆಗೆದು ಕಾಗದ ಬರೆದೇಬಿಟ್ಟರು. "ದೇ. ಜವರೇಗೌಡರನ್ನು ನಾನು ಬಲ್ಲೆ. ಜಿ. ವರದರಾಜರಾಯರು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಕನ್ನಡ-ಕನ್ನಡ ನಿಘಂಟು ಕಚೇರಿಯಲ್ಲಿ ಪರಿಚಯ ಮಾಡಿಸಿದ್ದಾರೆ" ಎಂದೆ. "ಹಾಗಿದ್ದಮೇಲೆ ನನ್ನ ಕಾರ್ಯ ಇನ್ನೂ ಸುಸೂತ್ರವಾಯಿತು" ಎಂದರು.

1951ರ ನವಂಬರ್ 23ನೇ ದಿನಾಂಕದ ಸಂಜೆ ಮೈಸೂರಿನ ವಾಣೀವಿಲಾಸ (ಒಂಟಿಕೊಪ್ಪಲು)ಪುರಂ ಬಡಾವಣೆಯಲ್ಲಿರುವ ಕವಿವರ್ಯ ಕುವೆಂಪು ಅವರ "ಉದಯ ರವಿ" ಮನೆಯಲ್ಲಿ ಶಕುಂತಲಾಬಾಯಿಯ "ಶ್ರೀ ರಾಮಾಯಣ ದರ್ಶನಂ" ಕಾವ್ಯ ವಾಚನವನ್ನು ಜವರೇಗೌಡರು ಏರ್ಪಾಡು ಮಾಡಿದ್ದರು. ಪ್ರಭು ಶಂಕರರು, ಎಸ್. ವಿ. ಪರಮೇಶ್ವರಭಟ್ಟರು, ಜವರೇಗೌಡರು, ಕುವೆಂಪು ಅವರು, ಇಷ್ಟೇ ಮಂದಿ ಶ್ರೋತೃಗಳು. ಶ್ರೀರಾಮಾಯಣ ದರ್ಶನಂ"ಕಾವ್ಯದಿಂದ ಹಸ್ತಪ್ರತಿ ಮಾಡಿಕೊಂಡಿದ್ದ"ಶಿಲಾತಪಸ್ವಿನಿ" ಸಂಚಿಕೆಯಿಂದ "ಅಹಲ್ಯೋದ್ಧಾರ" ಮತ್ತು "ಸೀತಾ ಕಲ್ಯಾಣ"ದ 125 ಪಂಕ್ತಿಗಳನ್ನು ಸುಮಾರು ಮುಕ್ಕಾಲು ಗಂಟೆ ಕಾಲ ಶಕುಂತಲಾಬಾಯಿ ವಾಚನಮಾಡಿದರು.

ಕುವೆಂಪು ಪದ್ಮಾಸನ ಹಾಕಿ ಕಣ್ಣುಮುಚ್ಚಿ ಕೇಳುತ್ತ ಕುಳಿತಿದ್ದರು. ಮುಖದಲ್ಲಿ ಯಾವ ಭಾವವನ್ನೂ ಸೂಚಿಸಲಿಲ್ಲ. ಕಾವ್ಯವಾಚನ ಮುಗಿಯುತ್ತಲೇ ಎದ್ದು ಒಳಗೆ ನಡೆದರು. ನನಗೆ ಮತ್ತು ಶಕುಂತಲಾಬಾಯಿಗೆ ಒಳಗೇ ಬೇಗುದಿ. ಕವಿವರ್ಯರಿಗೆ ತನ್ನ

ಓದು ಒಪ್ಪಿತೋ, ಇಲ್ಲವೋ ಎಂದು ಒಳತೋಟ ಶಕುಂತಲಾಬಾಯಿಗೆ. ಐದು ಹತ್ತು ನಿಮಿಷಗಳು ಕಳೆಯಿತು. ಕುವೆಂಪು ಮುದ್ರಿತವಾಗಿದ್ದ ಎರಡು ಮಹಾ ಸಂಪುಟಗಳ "ಶ್ರೀ ರಾಮಾಯಣ ದರ್ಶನಂ" ಪ್ರತಿಯನ್ನು ಹಿಡಿದು ಒಳಕೋಣೆಯಿಂದ ಹೊರ ಬಂದರು. "ನಿಮ್ಮ ವಾಚನ ನನಗೆ ಹಿಡಿಯಿತು. ನಾನು ದೇವರ ಮನೆಯಲ್ಲಿ ಕುಳಿತು ಒಂಬತ್ತು ವರ್ಷಗಳಷ್ಟು ದೀರ್ಘಕಾಲ ಕಾವ್ಯ ರಚನೆ ಮಾಡಿದ್ದೇನೆ. ನೀವೂ ಅಷ್ಟೆ, ದೇವರ ಮನೆಯಲ್ಲಿ ಶ್ರೀ ರಾಮಚಂದ್ರನ ಮುಂದೆ ಓದಿ ಪಾರಾಯಣ ಮಾಡಿ. ಸಭೆ ಕೇಳಿದರೆ ಕೇಳಲಿ ಬಿಟ್ಟರೆ ಬಿಡಲಿ ; ಜನವೂ ಅಷ್ಟೆ, ಮೆಚ್ಚಿದರೆ ಮೆಚ್ಚಲಿ, ಮೆಚ್ಚದಿದ್ದರೆ ಹೋಗಲಿ'' : ಎಂದು ಕೈಯಲ್ಲಿ ಹಿಡಿದಿದ್ದ "ಶ್ರೀ ರಾಮಾಯಣ ದರ್ಶನಂ" ಎರಡು ಸಂಪುಟಗಳನ್ನು ಶಕುಂತಲಾಬಾಯಿಗೆ ಕೊಟ್ಟರು. ಒಳಗಿಂದ ಬಂದ ಕಾಫಿಯನ್ನು ಕುಡಿದೆವು. ಹೇಮಾವತಿ ತಾಯಿ ತೆಂಗಿನ ಫಲತಾಂಬೂಲ ಹೂಗಳಿತ್ತು ಕುಂಕುಮಕೊಟ್ಟರು. ಕುವೆಂಪು ನಮ್ಮನ್ನು ಬೀಳ್ಕೊಡುವಾಗ—

''ನಿಮ್ಮ ಧರ್ಮಸತ್ರ ಹೇಗೆ ನಡೆಯುತ್ತಿದೆ ?"ಎಂದು ಹಾಸ್ಯದ ಚಟಾಕಿ ಹಾರಿಸಿ ಎಲ್ಲರನ್ನೂ ನಗೆಗಡಲಲ್ಲಿ ಮುಳುಗಿಸಿದರು. ಕುವೆಂಪು 1945–46ನೆಯ ವರ್ಷಗಳಲ್ಲಿ ಬೆಂಗಳೂರಿನ ಮಲ್ಲೇಶ್ವರಂ ಮುಖ್ಯ ರಸ್ತೆಯಲ್ಲಿ ''ಗಾನಕಲಾನಿಧಿ'' ಬಿ. ಎಸ್. ರಾಜ ಅಯ್ಯಂಗಾರ್‌ರವರ ಮನೆಯಲ್ಲಿ ಬಾಡಿಗೆಗಿದ್ದರು. ಹುಟ್ಟು ಉಪಾಧ್ಯಾಯನಾಗಿದ್ದ ನಾನು ಕಾರಣಾಂತರ ಮಾಡಲ್ ಮಿಡಲ್ ಸ್ಕೂಲಿನ ಮುಖ್ಯೋಪಾಧ್ಯಾಯ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಕುವೆಂಪು ಅವರ ಮನೆಯ ಸನಿಹದಲ್ಲಿ "ಯಶೋಭಂಡಾರ" ವೆಂಬ ಅಂಗಡಿಯನ್ನು ಕೆಲವು ತಿಂಗಳು ನಡೆಸಿ ಮುಚ್ಚಿದ್ದೆ. ಕವಿವರ್ಯರು ತಮ್ಮ ಮನೆಗೆ ಹೋಗಿ ಬರುವಾಗಲೆಲ್ಲ, ಯಶೋಭಂಡಾರವನ್ನು ದಾಟ ಹೋಗಬೇಕಾಗಿತ್ತು. ಆ ಸಮಯದಲ್ಲಿ ಕೆಲವು ನಿಮಿಷಗಳು ನನ್ನನ್ನು ಮಾತಾಡಿಸಿ ಹೋಗುತ್ತಿದ್ದರು. ನನ್ನ ವ್ಯಾಪಾರದ ಜೆಚ್ಚರವನ್ನು ಗಮನಿಸುತ್ತಿದ್ದರು. ನಾನು, ಕಾಫಿ ಪುಡಿಯನ್ನು ಗಿರಾಕಿ ಕೇಳಿದಷ್ಟು ಔನ್ಸ್ ತೂಗಿ, ಮೇಲೆ ಒಂದು ಟೇಬಲ್ ಸ್ಪೂನ್ ಕೊಸರು ಹಾಕಿ ಕೊಡುತ್ತಿದ್ದೆ. ಕಾರಣ, ಗಿರಾಕಿ ಎಲ್ಲಿ ನನ್ನನ್ನು ಮೋಸಗಾರನೆನ್ನುವನೋ ಎಂದು ಅಳುಕು. ಒಮ್ಮೆ ಪೂಜ್ಯ ಡಿ. ವಿ. ಜಿ. ಅವರು ಕೂಡ "ಯಶೋಭಂಡಾರ" ಹೆಸರು ಚೆನ್ನಾಗಿದೆ. ಎಷ್ಟು ಯಶಸ್ಸು ಬಂತು ?" ಎಂದು ಲೇವಡಿ ಮಾಡಿದ್ದರು. ನನ್ನ ಅಂಗಡಿ ಬಹುಬೇಗ ಎತ್ತಂಗಡಿಯಾಗಿ ಹೋಯಿತು. ನಾನು ವ್ಯವಹಾರಚತುರನಲ್ಲ ವೆಂದು ಹಣಕಳೆದುಕೊಂಡಮೇಲೆ ಎಚ್ಚತ್ತು ಅಂಗಡಿ ಮುಚ್ಚಿ ನನ್ನ ಗೀಳಿನ ವಿದ್ಯಾ ಕ್ಷೇತ್ರಕ್ಕೆ ತಿರುಗಿದೆ. "ಮಕ್ಕಳ ಮಂಟಪ" ಸ್ಥಾಪಿಸಿ, ನಾನು, ನನ್ನ ಸೌಭಾಗ್ಯವತಿ ಶಿಶು ಶಿಕ್ಷಣ–ಶಿಶು ಸಾಹಿತ್ಯ ನಿರ್ಮಾಣದ ಸೇವೆಗೆ ಕಂಕಣಕಟ್ಟಿ ನಿಂತೆವು. ಕುವೆಂಪು ನನ್ನ ಯಶೋಭಂಡಾರವನ್ನು ಧರ್ಮಸತ್ರವಾಗಿ ಮಾಡಿ "ನಿಮ್ಮ ಧರ್ಮ ಸತ್ರ ಹೇಗೆ ನಡೆಯುತ್ತಿದೆ ?" ಎಂದು ಕೇಳಲು ಮರೆಯಲಿಲ್ಲ. ನಾವು, ಮೈಸೂರಿನಲ್ಲಿ ಇಟ್ಟಿಗೆಗೂಡು ಬಡಾವಣೆಯಲ್ಲಿ ಬಂಗ್ಲೆ ಶಾಮರಾಯರ ಮನೆಯಲ್ಲಿ ಇಳಿದುಕೊಂಡಿದ್ದೆವು. ರಾಯರು

ಪ್ಲೀಡರ್. ಬಿಂದೂರಾಯರ ಆಪ್ತಗೆಳೆಯರು, ಗಮಕಿಗಳು. ನನ್ನ ದೊಡ್ಡಪ್ಪ ಬಂಗ್ಲೆ ಶ್ರೀನಿವಾಸಮೂರ್ತಿಯವರ ತಮ್ಮ (ಹಸೆಯ ಮೇಲೆ ಕುಳಿತು ಸೊಸೆಯನ್ನು ಧಾರೆ ಯೆರೆಸಿಕೊಂಡವರು.) ಶಾಮರಾಯರ ಮಗನೇ ನಮ್ಮ ಸುಪ್ರಸಿದ್ಧ ಚಲನಚಿತ್ರ ನಿರ್ಮಾಪಕ ಮತ್ತು ಜನಪ್ರಿಯ ಹಾಸ್ಯನಟ ದ್ವಾರಕೀಶ್. ಶಾಮರಾಯರ ಮನೆಗೆ ಹೋಗಿ "ಶ್ರೀ ರಾಮಾಯಣ ದರ್ಶನಂ" ಪ್ರತಿಯ ಎರಡು ಸಂಪುಟಗಳ ಮೊದಲ ಪುಟ ವನ್ನು ನೋಡಿದೆವು. "ಶ್ರೀ ರಾಮ ಸೇವಾರ್ಥವಾಗಿ, ಕುವೆಂಪು, 23-11-1951" ಎಂದು ಸ್ವಹಸ್ತದಲ್ಲಿ ಬರೆದಿತ್ತು. ಅವರ ಅಕ್ಕರೆಯ ಹಾರೈಕೆಯನ್ನು ಓದಿ ಸಂತೋಷವಾಯಿತು.

"ಕುವೆಂಪು "ಶ್ರೀ ರಾಮಸೇವಾರ್ಥವಾಗಿ" ಎಂದು ಅನುಗ್ರಹ ಮಾಡಿದ್ದಾರೆ. ನಾವೂ "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನವನ್ನು ನಮ್ಮ ಜನಕ್ಕೆ ಶ್ರೀ ರಾಮ ಸೇವಾರ್ಥವಾಗಿಯೇ ಕೇಳಿಸೋಣ" ಎಂದು ಸಂಕಲ್ಪ ಮಾಡಿಕೊಂಡೆವು.

ಕವಿವರ್ಯರ ಸಮ್ಮುಖದಲ್ಲಿ "ಮಮತೆಯ ಸುಳಿ ಮಂಥರೆ" ವಾಚನ

ಕವಿವರ್ಯ ಕುವೆಂಪು ಅವರ ಸಮ್ಮುಖದಲ್ಲಿ ಬೆಂಗಳೂರಿನಲ್ಲಿ "ಶ್ರೀ ರಾಮಾ ಯಣ ದರ್ಶನಂ" ಕಾವ್ಯವಾಚನವನ್ನು ಎರಡನೆಯ ಸಲ ಮಾಡುವ ಸದವಕಾಶ ಬಹು ಬೇಗ ಕೆಲವೇ ತಿಂಗಳುಗಳಲ್ಲಿ ಪ್ರಾಪ್ತವಾಯಿತು ಶಕುಂತಲಾಬಾಯಿಗೆ. ಅದಕ್ಕೆ ಕಾರಣ ಮೈಸೂರು ರಾಜ್ಯದ ಉದ್ಯಾನಗಳ ಮುಖ್ಯಾಧಿಕಾರಿಗಳಾಗಿದ್ದ ಹೆಚ್. ಮರೀಗೌಡರು, ಶ್ರೇಷ್ಠ ನ್ಯಾಯಮೂರ್ತಿ ಹೊಂಬೇಗೌಡರ ತಮ್ಮಂದಿರು. ಕುವೆಂಪು ಅವರು ಯಾವುದೋ ಕಾರ್ಯನಿಮಿತ್ತ ಬೆಂಗಳೂರಿಗೆ ಬಂದು ಲಾಲ್‌ಬಾಗ್‌ನಲ್ಲಿದ್ದ ಮರೀ ಗೌಡರ ಬಂಗಲೆಯಲ್ಲಿ ಇಳಿದುಕೊಂಡರು. ಕುವೆಂಪು ಅವರ ಸಮ್ಮುಖದಲ್ಲಿ ಶಕುಂತಲಾ ಬಾಯಿಗೆ "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನ ಮಾಡಬೇಕೆಂದು ಹೇಳಿ ಕಳಿಸಿದರು ಮರೀಗೌಡರು. ಈ ವೇಳೆಗೆ ಶ್ರೀಮತಿಯವರು "ಮಮತೆಯ ಸುಳಿ ಮಂಥರೆ" ಕಥಾಭಾಗವನ್ನು ಅಭ್ಯಾಸ ಮಾಡಿದ್ದರು.

ಮರೀಗೌಡರು ಕಾವ್ಯಾಭಿಮಾನಿಗಳನ್ನು ಆಹ್ವಾನಿಸಿದ್ದರು. ಕುವೆಂಪು ನಮಗೆ ಕಾಣದಂತೆ ನಾವು ಅವರಿಗೆ ಕಾಣುವಂತೆ ಪ್ರತ್ಯೇಕವಾಗಿದ್ದ ಒಂದು ಕೊಠಡಿಯಲ್ಲಿ ಕೂತಿದ್ದರು.

"ಮಮತೆಯ ಸುಳಿ ಮಂಥರೆ" 629 ಪಂಕ್ತಿಗಳಲ್ಲಿ ಹರಡಿಕೊಂಡಿದೆ. ನಾವು ಈ ವೇಳೆಗೆ "ಶ್ರೀ ರಾಮಾಯಣ ದರ್ಶನಂ"ಕಾವ್ಯವಾಚನಕ್ಕೆ **ಪ್ರಾರ್ಥನೆ, ಪೀಠಿಕೆ, ಮುಕ್ತಾಯ** ಹೀಗೆ ಮೂರು ಭಾಗಗಳ ಒಂದು ಚೌಕಟ್ಟು ಮಾಡಿಕೊಂಡಿದ್ದೆವು.

1) **ಪ್ರಾರ್ಥನೆಗೆ— "ರಯ್‌ಗೆ ಕರೆದೊಯ್ ಓ ಅಗ್ನಿ !"** ಸಂಚಿಕೆಯಲ್ಲಿ **"ಓಂ ನಮೋ ಸಚ್ಚಿದಾನಂದನೆ ನಮೋ ನಮೋ !"** ಪೂರ್ತಿ 20 ಸಾಲುಗಳು

2) **ಪೀಠಿಕೆಗೆ—"ಶ್ರೀ ವೆಂಕಣ್ಣಯ್ಯನವರಿಗೆ"** ಅರ್ಪಿತ ಭಾಗದಲ್ಲಿ **"ಇದೋ ಮುಗಿಸಿ ತಂದಿಹೆನ್ ಈ ಬೃಹದ್ ಗಾನಮಂ"** 11 ಸಾಲುಗಳು **"ಬಹಿರ್ಘ**

ಟನೆಯುಂ ಪ್ರತಿಕೃತಿಸುವಾ ಲೌಕಿಕ ಚರಿತ್ರೆಯಲ್ತಿದು" ಸಾಲಿನಿಂದ **"ಓದುವರ್ಗಲಿಪರ್ಗೊಲಿದೀಯೆ ಚಿತ್ಕಾಂತಿಯುಂ !"** 12 ಸಾಲುಗಳು **"ಕವಿಕ್ರತು ದರ್ಶನಂ"** ಸಂಚಿಕೆಯಲ್ಲಿ **"ಏರುವೆನು ವಾಗ್ದೇವಿಯಮೃತ ರಚನೆಯ ಲಸನ್ನಾವೆಯಂ .... ಓ ವಾಲ್ಮೀಕಿ ಕ್ರಮಿಸಲ್ಕಿದಂ ದಯೆಗೆಯ್ಯೆನಗೆ ವೈನತೇಯನ ವಜ್ರವೀರ್ಯಮಂ" "ಬಾಳು ವೀಣಾಪಾಣಿ ; ಬಾಳು, ಬ್ರಹ್ಮನರಾಣಿ....ಗಾನಗೆಯ್, ಹೇಳು, ಓ ಭಾವಗಂಗಾವೇಣಿ"** 7 ಪಂಕ್ತಿಗಳು, **"ಹೋಮರಗೆ ವರ್ಜಿಲಗೆ ಡಾಂಟೆ ಮೇಣ್ ಮಿಲ್ಟನಗೆ.... ದೊರೆಕೊಳುಗೆ ಚಿರಶಾಂತಿ, ಸಿರಿಗನ್ನಡಂ ಗೆಲ್ಗೆ!"** 15 ಪಂಕ್ತಿಗಳು, ಆಯ್ದುಕೊಂಡೆವು. 3) **ಮುಕ್ತಾಯಕ್ಕೆ—ಅಭಿಷೇಕ ವಿರಾಡ್‌ದರ್ಶನಂ** ಸಂಚಿಕೆಯಲ್ಲಿ **"ಕವಿವಿಭೂತಿಗೆ ನಮೋ ! ಕೃತಿವಿಭೂತಿಗೆ ನಮೋ !....ಓಂ ನಮೋ, ಓಂ ನಮೋ, ಓಂ ನಮಃ ! ಶಾಂತಿ ಶ್ಶಾಂತಿ ಶ್ಶಾಂತಿಃ !"** ಪೂರ್ತಿ 21 ಸಾಲುಗಳು ಇಟ್ಟುಕೊಂಡೆವು.

ಸಾರ್ವಜನಿಕ ಸಭೆಗಳಲ್ಲಿ ಶ್ರೋತೃಗಳು ಕೆಲವು ನಿಮಿಷ "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನವನ್ನು ಅಪೇಕ್ಷಿಸಿದಾಗ ಪ್ರಾರ್ಥನೆ, ಪೀಠಿಕೆ ಮತ್ತು ಮುಕ್ತಾಯದ ಸಾಲುಗಳನ್ನು ಓದಿ ಕಾರ್ಯಕ್ರಮ ಕೊಡುವ ಪರಿಪಾಠವನ್ನು ಬೆಳೆಸಿಕೊಂಡೆವು; ಈಗಲೂ ಆ ಪದ್ಧತಿಯನ್ನೇ ಅನುಸರಿಸುತ್ತಿದ್ದೇವೆ. "ಶ್ರೀ ರಾಮಾಯಣ ದರ್ಶನಂ" ಕಥಾಭಾಗವನ್ನು ಸಭೆ ಅಪೇಕ್ಷಿಸಿದಾಗ, ಪ್ರಾರ್ಥನೆ, ಪೀಠಿಕೆ, ಕಥಾಭಾಗ, ಮುಕ್ತಾಯಗಳ ಒಂದು ಅಚ್ಚುಕಟ್ಟಿನಲ್ಲಿ "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನ ಕೊಡುವ ವಾಡಿಕೆಯನ್ನೂ ರೂಢಿಗೆ ತಂದೆವು. ವ್ಯಾಖ್ಯಾನ ಅತಿಯಾದರೆ ಗಮಕಿಯ ಸ್ವಾತಂತ್ರ್ಯ ಕುಗ್ಗುತ್ತದೆ. ವ್ಯಾಖ್ಯಾನ ಎಲ್ಲೆಲ್ಲಿಗೋ ಒಯ್ದು ದಾರಿತಪ್ಪಿಸುತ್ತದೆ. ಕವಿಕಾವ್ಯಗಳಿಗೆ ಪ್ರಾಮುಖ್ಯತೆ ಕೊಟ್ಟು, ಹಿತಮಿತವಾಗಿರುವಂತೆ ನಾನು "ಪ್ರಾಸಂಗಿಕ ನಿರೂಪಣೆ" ಎಂಬ ಮಾಧ್ಯಮವನ್ನು ಕಂಡುಕೊಂಡೆ. ಗಮಕವೇ ಪ್ರಧಾನ. ಪ್ರಾಸಂಗಿಕ ನಿರೂಪಣೆ ಗೌಣ. ಶಕುಂತಲಾಬಾಯಿಯ ಪದ್ಯಗಳ ಗಮಕ ಹಲವಾರು ನಿಮಿಷಗಳನ್ನು ತೆಗೆದುಕೊಂಡರೆ ನನ್ನ ನಿರೂಪಣೆ ಕೇವಲ ಕೆಲವೇ ನಿಮಿಷಗಳಲ್ಲಿ ಮಿಂಚಿನಂತೆ ಮಿಂಚುತ್ತದೆ ಎಲ್ಲಿ ಅವಶ್ಯಕವೋ ಅಲ್ಲಿಮಾತ್ರ. ಶಕುಂತಲಾಬಾಯಿಯ ಕಾವ್ಯವಾಚನಕ್ಕೆ ವ್ಯಾಖ್ಯಾನ, ಪ್ರಾಸಂಗಿಕ ನಿರೂಪಣೆಗಳು ಅನವಶ್ಯಕವೆಂದು ಸಾರ್ವಜನಿಕ ಅಭಿಪ್ರಾಯವಾಗಿದೆ. ಅಂದರೆ ಏನಾಯಿತು? ಶಕುಂತಲಾಬಾಯಿಯ ಕಾವ್ಯವಾಚನದಲ್ಲಿ ಪಂಡಿತಪಾಮರರನ್ನು ಒಲಿಸಿಕೊಳ್ಳುವ ಮೋಡಿ ಇದೆ ಎಂದರ್ಥ.

ಮರೀಗೌಡರ ಮನೆಯಲ್ಲಿ ಕುವೆಂಪು ಸಮ್ಮುಖದಲ್ಲಿ ಶಕುಂತಲಾಬಾಯಿ ಮಾಡಿದ "ಮಮತೆಯ ಸುಳಿ ಮಂಥರೆ" ಕಾವ್ಯವಾಚನ ಒಂದೂವರೆ ಗಂಟೆಯಷ್ಟು ದೀರ್ಘಕಾಲ ತೆಗೆದುಕೊಂಡಿತು. ಮೈಸೂರು "ಉದಯ ರವಿ"ಯಲ್ಲಿ ಕೊಟ್ಟ ಕಾವ್ಯವಾಚನಕ್ಕೂ ಇಲ್ಲಿಯ ಕಾವ್ಯವಾಚನಕ್ಕೂ ಅಜಗಜಾಂತರ. ಕಾವ್ಯವಾಚನ ಮುಗಿದ ಮೇಲೆ

ಮರೀಗೌಡರು ಕೃತಜ್ಞತೆ ಅರ್ಪಿಸುತ್ತ "ಶಕುಂತಲಾಬಾಯಿಯವರ ವಾಚನ ಅದ್ಭುತವಾಗಿತ್ತು" ಎಂದರು.

"ಶ್ರೀರಾಮಾಯಣ ದರ್ಶನಂ" ವ್ಯಾಸಂಗಗೋಷ್ಠಿಗಳಲ್ಲಿ

"ಶ್ರೀ ರಾಮಾಯಣ ದರ್ಶನಂ" ಮಹಾಕಾವ್ಯದ ಅವತಾರವಾಗುತ್ತಲೆ ಕನ್ನಡ ಕಾವ್ಯಾಭಿಮಾನಿಗಳಲ್ಲಿ ಮಿಂಚು ಸಂಚಾರವಾಯಿತು. ನಮ್ಮ ಶತಮಾನದಲ್ಲಿ ಮೂಡಿ ಬಂದ ಮಹಾಛಂದಸ್ಸಿನ ಮಹಾಕಾವ್ಯ ಇದೊಂದೇ ಆಗಿದ್ದಿತು. ಕುವೆಂಪು ವ್ಯಾಸಂಗ ಗೋಷ್ಠಿಗಳು ಮೈಸೂರು ಭಾಗದಲ್ಲಿ (ಕರ್ಣಾಟಕ ರಾಜ್ಯ ಆಗಿನ್ನೂ ಉದಯವಾಗಿರಲಿಲ್ಲ) ಚಿಕ್ಕಬಳ್ಳಾಪುರ, ಕನಕಪುರ, ಚಿತ್ರದುರ್ಗ ಹೀಗೆ ನಾನಾ ಸ್ಥಳಗಳಲ್ಲಿ "ಶ್ರೀ ರಾಮಾಯಣ ದರ್ಶನಂ" ಅಧ್ಯಯನಕ್ಕಾಗಿಯೇ ಹುಟ್ಟಿಕೊಂಡಿದ್ದವು. ಚಿಕ್ಕಬಳ್ಳಾಪುರದಲ್ಲಿರುವ ಕನ್ನಡ, ಸಂಸ್ಕೃತ, ಹಿಂದಿ ವಿದ್ವಾಂಸರಾದ ಬ. ನ. ಗುಂಡೂರಾಯರು, "ಶ್ರೀ ರಾಮಾಯಣ ದರ್ಶನಂ" ಮಹಾ ಕಾವ್ಯವನ್ನು ಆಳವಾಗಿ ಅಭ್ಯಸಿಸಿ "ವಿಶ್ವ ಕರ್ಣಾಟಕ" ದಿನಪತ್ರಿಕೆಯಲ್ಲಿ ವಾರವಾರವೂ ತಪ್ಪದ ವಿಶ್ಲೇಷಣಾತ್ಮಕ ವಿಮರ್ಶಾ ಲೇಖನಗಳನ್ನು ಬರೆಯುತ್ತಿದ್ದರು. "ಶ್ರೀ ರಾಮಾಯಣ ದರ್ಶನಂ" ಪ್ರಕಟವಾದ ತರುಣದಲ್ಲಿ ಬ. ನ. ಗುಂಡೂರಾಯರೇ ಅಧ್ವರ್ಯುಗಳಾಗಿ ಚಿಕ್ಕಬಳ್ಳಾಪುರದ ವ್ಯಾಸಂಗ ಗೋಷ್ಠಿಯನ್ನು ಹಲವಾರು ಮಿತ್ರರ ಸಂಘಟನೆಯಿಂದ ನಡೆಸಿಕೊಂಡು ಹೋಗುತ್ತಿದ್ದರೆಂದು ನನ್ನ ತಿಳಿವಳಿಕೆ. ಕನಕಪುರದಲ್ಲಿ ಲಕ್ಷ್ಮೀನಾರಾಯಣ ಸೆಟ್ಟರು, ಎಲ್. ಲಕ್ಷ್ಮೀನಾರಾಯಣರಾವ್, ಸಬ್‌ರಿಜಿಸ್ಟ್ರಾರ್ ಹೆಚ್. ಬಿ. ನಂಜಯ್ಯ ಮೊದಲಾದ ಕುವೆಂಪು ಕಾವ್ಯಾಭಿಮಾನಿಗಳು ಕರ್ಣಾಟಕ ಸಂಘದಲ್ಲಿ ವಾರವಾರವೂ "ಶ್ರೀ ರಾಮಾಯಣ ದರ್ಶನಂ"ವ್ಯಾಸಂಗಗೋಷ್ಠಿ ನಡೆಸುತ್ತಿದ್ದರು. ಇದೇ ವೇಳೆಗೆ ಶಕುಂತಲಾ ಬಾಯಿ "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನ ಪ್ರಾರಂಭಿಸಿ ಕರ್ಣಾಟಕದ ದಿನಪತ್ರಿಕೆಗಳಲ್ಲಿ ಸುದ್ದಿಮಾಡಿದ್ದರು. ಚಿಕ್ಕಬಳ್ಳಾಪುರದ ಮತ್ತು ಕನಕಪುರದ ವ್ಯಾಸಂಗ ಗೋಷ್ಠಿಗಳು ಶಕುಂತಲಾಬಾಯಿಯನ್ನು ಕರೆಸಿಕೊಂಡು ಪದೇಪದೇ "ಶ್ರೀ ರಾಮಾಯಣದರ್ಶನಂ" ಕಾವ್ಯವಾಚನವನ್ನು ಏರ್ಪಡಿಸಿ ನಮಗೆ ಪ್ರೋತ್ಸಾಹ ನೀಡಿದವು. ಅನೇಕ ಬೇರೆಬೇರೆ ಊರುಗಳ ಕರ್ಣಾಟಕ ಸಂಘಗಳು ಕಾವ್ಯವಾಚನ ಮಾಡಿಸಿ ಕುವೆಂಪು ಮಹಾಕಾವ್ಯವನ್ನು ಜನಪ್ರಿಯ ಮಾಡುವ ಸಾಂಸ್ಕೃತಿಕ ಯಜ್ಞ ಕಾರ್ಯದಲ್ಲಿ ಭಾಗಿಗಳಾದವು.

ಸಾಹಿತ್ಯ ಸಮ್ಮೇಳನಗಳಲ್ಲಿ ಗಮಕ ಗೋಷ್ಠಿಗಳು

ಎಂ. ಆರ್. ಶ್ರೀನಿವಾಸಮೂರ್ತಿಯವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಬಂದ ಕಾಲ ಗಮಕ ಕಲೆಗೆ ಉಚ್ಛ್ರಾಯ ಸ್ಥಿತಿಯೆಂದು ನಿರ್ವಿವಾದವಾಗಿ ಹೇಳಬಹುದು. ಕನ್ನಡ ಸಾಹಿತ್ಯ ಪರಿಷತ್ತು ಗಮಕ ಕಲೆಗೆ ಪ್ರೋತ್ಸಾಹ ಕೊಟ್ಟುಕೊಂಡು ಬಂದಿತ್ತೇ ಹೊರತು ಸಾಹಿತ್ಯ ಸಮ್ಮೇಳನಗಳಲ್ಲಿ ಗಮಕ ಗೋಷ್ಠಿ ನಡೆಸುವವರೆಗೆ

ಮುಂದುವರಿದಿರಲಿಲ್ಲ. ಎಂ. ಆರ್. ಶ್ರೀ. ಅವರೇ ತಮ್ಮ ಅಧ್ಯಕ್ಷ ಪದವಿಯ ಕಾಲದಲ್ಲಿ ಮೂರು ಸಾಹಿತ್ಯ ಸಮ್ಮೇಳನಗಳನ್ನು ನಡೆಸಿ ಮೂರು ಸಮ್ಮೇಳನಗಳಲ್ಲಿಯೂ ಮೂರು ಗಮಕ ಗೋಷ್ಠಿಗಳನ್ನು ನಡೆಸಿದ ಧೀಮಂತ ಪುರುಷರು. ಸೊಲ್ಲಾಪುರದಲ್ಲಿ 1950ರಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ನಡೆದ ಗಮಕಗೋಷ್ಠಿಗೆ "ಗಮಕಕಲಾನಿಧಿ" ಜೋಳದರಾಶಿ ದೊಡ್ಡನಗೌಡರು, 1951 ರಲ್ಲಿ ಮುಂಬಯಿಯಲ್ಲಿ ಗೋವಿಂದಪೈ ಅಧ್ಯಕ್ಷತೆಯಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ನಡೆದ ಗಮಕಗೋಷ್ಠಿಗೆ "ಭಾರತ ವಾಚನ ಪ್ರವೀಣ" ಬಿಂದೂರಾಯರು ಮತ್ತು 1952 ರಲ್ಲಿ ಎನ್. ಸಿ. ನಂದೀಮಠರ ಅಧ್ಯಕ್ಷತೆಯಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಗಮಕ ಗೋಷ್ಠಿಗೆ ಭಾರತ ಕೃಷ್ಣಗಿರಿ ಕೃಷ್ಣರಾಯರು ಅಧ್ಯಕ್ಷ ಗೌರವ ಪಡೆದುದೇ ಎಂ. ಆರ್. ಶ್ರೀ.ಅವರ ಗಮಕ ಕಲೆಯ ಒಲವಿಗೆ ಸಾಕ್ಷಿ.

ಎಂ. ಆರ್. ಶ್ರೀ ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಗಮಕ ಗೋಷ್ಠಿಗಳಿಗೆ ಗೌರವಸ್ಥಾನ ಕೊಡುವಷ್ಟಕ್ಕೆ ನಿಲ್ಲಲಿಲ್ಲ. ಕನ್ನಡ ಸಾಹಿತ್ಯ ಪರಿಷತ್ತು ಗಮಕ ಕಲಾವಿದ ರನ್ನುಸನ್ಮಾನಿಸುವಷ್ಟು ದಿಟ್ಟಹೆಜ್ಜೆ ಯಿಡುವುದಕ್ಕೂ ಸಿದ್ಧರಾದರು. ಅವರು ಅಧ್ಯಕ್ಷರಾಗಿದ್ದ ಕಾಲದಲ್ಲೆ ಕನ್ನಡ ಸಾಹಿತ್ಯ ಪರಿಷತ್ತು "ಭಾರತವಾಚನ ಪ್ರವೀಣ" ಬಿಂದೂರಾಯ ರನ್ನು ಗಮಕಕಲಾ ಸೇವೆಗಾಗಿಯೂ "ರಾವ್ ಸಾಹೇಬ" ಹಳಕಟ್ಟಿಯವರನ್ನು ವಚನ ಸಾಹಿತ್ಯವನ್ನು ಸಂಪಾದಿಸಿಕೊಟ್ಟ ಹಿರಿಮೆಗಾಗಿಯೂ ಇಬ್ಬರನ್ನೂ ಒಟ್ಟಿಗೆ ಸೇರಿಸಿ, 1951ರಲ್ಲಿ ಶಾಲು ಜೋಡಿ ಹೊದಿಸಿ ಸನ್ಮಾನಿಸಿ ತನ್ನ ಹೃದಯ ಶ್ರೀಮಂತಿಕೆಯನ್ನು ಮೆರೆಯಿತು. **ಬಿಂದೂರಾಯರ ಪ್ರಪ್ರಥಮ ಮಹಿಳಾ ಶಿಷ್ಯೆಯರಾದ ಶಕುಂತಲಾ ಬಾಯಿ** ಅಂದು ಭಾರತವಾಚನ ಮಾಡಿ, ತಮ್ಮ ಗುರುವರ್ಯರಿಗೆ ಗುರು ಕಾಣಿಕೆ ಒಪ್ಪಿಸಿದರು. ಡಿ. ವಿ. ಜಿ. ಅಧ್ಯಕ್ಷರಾಗಿದ್ದರು.

ಎಂ. ಆರ್. ಶ್ರೀ.ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಕಾಲದಲ್ಲಿ **ಶಕುಂತಲಾ ಬಾಯಿಯ ಗಮಕಕಲಾಪ್ರೌಢಿಮೆಗೆ ಪರಿಷತ್ತಿನಿಂದಸರಿಯಾದ ಗೌರವ ಸಂದಿತು.** 1953ರ ಬೇಲೂರು ಸಾಹಿತ್ಯ ಸಮ್ಮೇಳನದಲ್ಲಿ ಶಕುಂತಲಾಬಾಯಿ "ಶ್ರೀ ರಾಮಾಯಣ ದರ್ಶನಂ" ಕಾವ್ಯವನ್ನು ಗಮಕ ಗೋಷ್ಠಿಯಲ್ಲಿ ವಾಚನ ಮಾಡ ಬೇಕೆಂದು ಕರೆ ಬಂತು. ಬೇಲೂರು ಸಾಹಿತ್ಯ ಸಮ್ಮೇಳನವನ್ನು ಮೈಸೂರು ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದ ಕೆಂಗಲ್ ಹನುಮಂತಯ್ಯನವರು ಉದ್ಘಾಟಿಸಿದರು. ಅವರು ಉಜ್ವಲ ಗಮಕಕಲಾಭಿಮಾನಿಗಳು. ಸಾಹಿತ್ಯ ಸಂಸ್ಕೃತಿಗಳ ಮಹಾಪೋಷಕರು. ದೇಶಸೇವೆಗಾಗಿ ಸೆರೆಮನೆವಾಸ ಅನುಭವಿಸಿದ್ದಾಗ ಅಲ್ಲಿ ಕುಮಾರವ್ಯಾಸ ಭಾರತವನ್ನು ಸಂಪೂರ್ಣವಾಗಿ ಓದಿ ಮುಗಿಸಿದ್ದರಂತೆ. ಕುಮಾರವ್ಯಾಸನ ಪದ್ಯಗಳು ಅವರಿಗೆ ಹೃದ್ಗತವಾಗಿದ್ದವು. ಅಂಥ ಹನುಮಂತಯ್ಯನವರು ಬೇಲೂರು ಸಾಹಿತ್ಯ ಸಮ್ಮೇಳನ ವನ್ನು ಉದ್ಘಾಟಿಸಲು ಆಹ್ವಾನಿತರಾಗಿದ್ದರು. ಅವರು ಕೆಲವೇ ತಿಂಗಳುಗಳಲ್ಲಿ ಗಮಕ ಕಲೆಗೆ ನೀಡಿದ ಪ್ರೋತ್ಸಾಹ ಸುವರ್ಣಾಕ್ಷರ ಉಲ್ಲೇಖಾರ್ಹವಾಗಿದೆ.

ಪರಿಷತ್ತಿನಲ್ಲಿ ೧೨ "ಶ್ರೀ ರಾಮಾಯಣ ದರ್ಶನಂ" ವಾಚನಗಳು

ಹನುಮಂತಯ್ಯನವರು ಬೇಲೂರು ಸಾಹಿತ್ಯ ಸಮ್ಮೇಳನ ನಡೆದ ಕೆಲವೇ ತಿಂಗಳು ಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿಗೆ ಎರಡು ಸಾವಿರ ರೂಪಾಯಿಗಳ ದ್ರವ್ಯ ಸಹಾಯ ಮಾಡಿ, ಆ ಹಣ ಗಮಕ ಪ್ರಚಾರಕ್ಕೆ ವಿನಿಯೋಗವಾಗಬೇಕೆಂದು ಆದೇಶ ನೀಡಿದರು. ಕೂಡಲೇ ಕನ್ನಡ ಸಾಹಿತ್ಯ ಪರಿಷತ್ತು ಗಮಕಕಲಾ ಪ್ರಚಾರಕ್ಕಾಗಿ ಒಂದು ಯೋಜನೆ ಯನ್ನು ಸಿದ್ಧಪಡಿಸಿ ಪ್ರಸಿದ್ಧ ಗಮಕಿಗಳನ್ನು ಕರೆಸಿಕೊಂಡು ವಾರವಾರವೂ ಮಹಾ ಕಾವ್ಯಗಳನ್ನು ವಾಚನಮಾಡಿಸಬೇಕೆಂದು ನಿರ್ಧರಿಸಿತು. ಈ ಕಾರ್ಯಕ್ರಮದಲ್ಲಿ ಮೊಟ್ಟ ಮೊದಲನೆಯದಾಗಿ "ಶ್ರೀ ರಾಮಾಯಣ ದರ್ಶನಂ" ಮಹಾಕಾವ್ಯವನ್ನು ಹನ್ನೆರಡು ವಾಚನಗಳಲ್ಲಿ ಗಮಕ ವಿದುಷಿ ಶಕುಂತಲಾಬಾಯಿ ಪಾಂಡುರಂಗರಾವ್ ನಡೆಸಿಕೊಡ ಬೇಕೆಂದು ಆಹ್ವಾನ ಬಂತು. ಶಕುಂತಲಾಬಾಯಿ, ನಾನು, ಇಡೀ "ರಾಮಾಯಣ ದರ್ಶನಂ" ಕಾವ್ಯವನ್ನು ಹನ್ನೆರಡು ವಾಚನಗಳಿಗೆ ಸಂಗ್ರಹಿಸಿದೆವು. ಅವು ಹೀಗಿವೆ—

1. ಶಿಲಾ ತಪಸ್ವಿನಿ
2. ಮಮತೆಯ ಸುಳಿ ಮಂಥರೆ
3. ಪಾದುಕಾ ಕಿರೀಟಿ
4. ಓ ಲಕ್ಷ್ಮಣಾ !
5. ಶಬರಿಗಾದನು ಅತಿಥಿ ದಾಶರಥಿ
6. "ನಾನಕ್ಕನೆನ್, ನೀನ್ ತಂಗೆ"
7. ಸಾಗರೊಲ್ಲಂಘನಂ
8. ಅಶ್ರು ಗಂಗೋತ್ರಿ
9. ಅತ್ತಲಾ ದೈತ್ಯ ಸಭೆಯೊಳ್
10. ದೈತ್ಯನೇರ್ದನ್ ಚೈತ್ಯ ಮಂಚಮಮ್
11. ರಯ್‌ಗೆ ಕರೆದೊಯ್ ಓ ಅಗ್ನಿ
12. ತಪಸ್ಸಿದ್ಧಿ

ಪ್ರತಿಯೊಂದು ವಾಚನವನ್ನು ಒಂದೂವರೆ ಗಂಟೆಗೆ ಕ್ಲುಪ್ತಗೊಳಿಸಿದೆವು. ಗಮಕವೇ ಪ್ರಧಾನ. ವಾರಕ್ಕೆ ಒಂದು ವಾಚನದಂತೆ ಹನ್ನೆರಡು ವಾರಗಳು (ಎರಡೂವರೆ ತಿಂಗಳು) ತಪ್ಪದೆ ಕಾವ್ಯವಾಚನ ನಡೆಯಿತು. ಎಂ. ಆರ್. ಶ್ರೀ. ಯವರೇ "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನ ಕಾರ್ಯಕ್ರಮವನ್ನು ಉದ್ಘಾಟಿಸಿದರು. ವಾರವಾರವೂ ತಪ್ಪದೆ ಕನ್ನಡ ಸಾಹಿತ್ಯ ಪರಿಷತ್ತು ಸಭಾಂಗಣ ಸುಮಾರು ಇನ್ನೂರು ಮುನ್ನೂರು ಗಮಕ ಕಲಾಭಿಮಾನಿಗಳಿಂದ ತುಂಬಿರುತ್ತಿತ್ತು. ಮಳೆಗಾಲ ಆದರೂ ಶ್ರೋತೃಗಳ ಕೊರತೆ ಕಾಣಲಿಲ್ಲ.

'ಕತೆಗಾರ' ಸಂಪಾದಕರಾಗಿದ್ದ ಜಿ. ಎ. ನರಸಿಂಹಮೂರ್ತಿ "ಓ ಲಕ್ಷ್ಮಣಾ"

ಕಾವ್ಯವಾಚನದ ದಿವಸ ಬಂದಿದ್ದರು. "ಓ ಲಕ್ಷ್ಮಣಾ" ಕಥಾಭಾಗ ಅವರ ಮನಸ್ಸನ್ನು ಸೂರೆಗೊಂಡಿತು. ಎರಡು ಮೂರು ದಿವಸಗಳಲ್ಲಿ "ತಾಯಿನಾಡು" ದಿನಪತ್ರಿಕೆಯಲ್ಲಿ ನರಸಿಂಹಮೂರ್ತಿಯವರ ಲೇಖನ "ಓ ಲಕ್ಷ್ಮಣಾ !" ಪ್ರಕಟವಾಯಿತು. ಮೂರ ನೆಯ ವಾರದಿಂದ ಶ್ರೋತೃಗಳ ಸಂಖ್ಯೆ ದ್ವಿಗುಣವಾಯಿತು.

"ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನವನ್ನು ಮೊದಲು ಪ್ರಾರಂಭ ಗೊಳಿಸುವುದಕ್ಕೆ ಕಾರಣವನ್ನು ನನಗೆ ಕಿವಿಮಾತಿನಲ್ಲಿ ಎಂ. ಆರ್. ಶ್ರೀ. ಹೇಳಿದರು— "ಕನ್ನಡ ಸಾಹಿತ್ಯ ಪರಿಷತ್ತು ಸರಸ್ವತೀ ಮಂದಿರ. ಆದುದರಿಂದ ಗಮಕಕಲಾ ಪ್ರಚಾರ ಕಾರ್ಯಕ್ರಮವನ್ನೂ ಒಬ್ಬ ಗಮಕ ವಿದುಷಿಯಿಂದಲೇ ಪ್ರಾರಂಭಿಸಬೇಕೆಂದು ಮನಸ್ಸಾ ಯಿತು. ಇಷ್ಟೇ ಅಲ್ಲ, ನಮ್ಮ ಕಾಲದಲ್ಲಿ ಒಂದು ಮಹಾ ಕಾವ್ಯ ರಚಿತವಾಗಿದೆ. ಶಕುಂತಲಾಬಾಯಿ ಧೈರ್ಯದಿಂದ ಅದನ್ನು ಗಮಕಕ್ಕೆ ಒಗ್ಗಿಸಿದ್ದಾರೆ. ಅವರಿಗೂ ಪ್ರೋತ್ಸಾಹ ಕೊಟ್ಟಹಾಗಾಯಿತು". ನಾಗರಿಕ ಎಂಬ ಕ್ರಾಂತಿಕಾರಕ ಸರಳ ರಗಳೆ ನಾಟಕದ ಕರ್ತೃ, "ಶ್ರೀ ರಾಮಾಯಣ ದರ್ಶನಂ" ದಂಥ ಸಾರ್ವಕಾಲಿಕ ಪ್ರಜ್ಞಾ ಪ್ರಚೋದಿತ ಕಾವ್ಯವನ್ನು ಪರಿಷತ್ತಿನ ಸರಸ್ವತೀ ಮಂದಿರಕ್ಕೆ ಬರಮಾಡಿಕೊಂಟದ್ದು ಹೀಗೆ.

"ಶ್ರೀ ರಾಮಾಯಣ ದರ್ಶನಂ"ಮಹಾಕಾವ್ಯವಾಚನ ಯಾವ ವಿಘ್ನವೂ ಇಲ್ಲದೆ ಹನ್ನೆರಡು ವಾರಗಳು ನಡೆದು ಮಂಗಳದ ದಿನ ಮುಟ್ಟಿತು. ಡಾ|| ಆರ್. ಎಸ್. ಪಂಚ ಮುಖಿ ರಚಿಸಿದ್ದ ಹರಿದಾಸ ದಾಸಸಾಹಿತ್ಯ ಗ್ರಂಥದ ಬಿಡುಗಡೆ ಮತ್ತು "ಶ್ರೀ ರಾಮಾ ಯಣ ದರ್ಶನಂ" ಕಾವ್ಯವಾಚನದ ಮಂಗಳ ಉತ್ಸವ ಸಮ್ಮಿಳಿತವಾಗಿ ನಡೆಯಿತು ವಿಜೃಂಭಣೆಯಿಂದ. ಶಕುಂತಲಾಬಾಯಿಗೆ ಕೃತಜ್ಞತೆ ಅರ್ಪಿಸಿ ಫಲತಾಂಬೂಲದೊಡನೆ ಹಾರದ ಅರ್ಪಣೆಯಾಯಿತು.

"ಶಕುಂತಲಾಬಾಯಿ ಕರ್ಣಾಟಕದ ಆಸ್ತಿ, ನೀವು ಆಕೆಗೆ ಟ್ರಸ್ಟಿ"

ಸಭೆ ಮುಗಿದ ಮೇಲೆ ಎಂ. ಆರ್. ಶ್ರೀ. ನನ್ನ ಕಡೆ ಬಂದರು. ನನ್ನನ್ನು ದೂರ ಕರೆದರು. "ಪಾಂಡುರಂಗರಾವ್, ಫಲತಾಬೂಲಗಳ ತಟ್ಟೆಯಲ್ಲಿ ಒಂದು ಕವರ್ ಇತ್ತು ತೆಗೆದುಕೊಂಡಿರಾ ?" ಎಂದು ಪ್ರಶ್ನಿಸಿದರು. ನಾನು ದಿಗ್ಮೂಢನಾದೆ. "ಏನ ಸಾರ್ ಈ ಮಾತು ! ಶಕುಂತಲಾಬಾಯಿಗೆ ಕನ್ನಡ ಸಾಹಿತ್ಯ ಪರಿಷತ್ತು ಗುರುಪೀಠ ವಿದ್ದಂತೆ. ಇಲ್ಲಿಯೂ ಸಂಭಾವನೆಯೇ ?" ಎಂದೆ.

ಎಂ. ಆರ್. ಶ್ರೀ. ಕೂಡಲೆ, "ಕನ್ನಡ ಸಾಹಿತ್ಯ ಪರಿಷತ್ತು ಕೈಯಿಂದ ಕೊಡ ತ್ತಿಲ್ಲಪ್ಪ. ಮುಖ್ಯ ಮಂತ್ರಿ ಹನುಮಂತಯ್ಯನವರ ಗಮಕ ಕಲಾಭಿಮಾನ. ಸರಕಾರ ಎರಡೂ ಸಾವಿರ ರೂಪಾಯಿಗಳನ್ನು ಗಮಕ ಕಲಾ ಪ್ರಚಾರಕ್ಕಾಗಿ ಕೊಟ್ಟಿದೆ." ಕವರಿ ನಲ್ಲಿ ನೂರು ರೂಪಾಯಿ ಸಂಭಾವನೆ ಪಡೆಯುದು ಇದೇ ಮೊದಲು ; ಅದೂ ತಾನು ಗಮಕ ಪಾಠ ಮಾಡಿ ಗುರುಕಾಣಿಕೆ ಅರ್ಪಿಸಬೇಕಾಗಿದ್ದ ಗುರುಕುಲದಿಂದ.

ಎಂ. ಆರ್. ಶ್ರೀ. ನನ್ನ ಬೆನ್ನಿನ ಮೇಲೆ ತಮ್ಮ ತೋಳು ಚಾಚಿ "ಪಾಂಡುರಂಗ ರಾವ್, ಶಕುಂತಲಾಬಾಯಿ ನಿಮ್ಮ ಧರ್ಮ ಪತ್ನಿ ನಿಜ, ಆದರೆ ಆಕೆ ಶ್ರೇಷ್ಠ ಗಮಕ ಕಲಾವಿದೆ. ಕರ್ಣಾಟಕದ ಆಸ್ತಿ, ನೀವು ಆಕೆಗೆ ಟ್ರಸ್ಟಿಯಂತೆ ನಡೆದುಕೊಳ್ಳಬೇಕು ; ಎಂದರು. ಅವರು ಹಾಗೆಂದುದೇ ತಡ, ನನ್ನ ಕಣ್ಣುಗಳಲ್ಲಿ ಹನಿಗೂಡಿತು. ಗಂಟಲು ಒತ್ತಿ ಬಂದಿತು.

"ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನದ ಮಂಗಳ ಉತ್ಸವ ಪರಿಷತ್ತಿನಲ್ಲೇನೋ ನಡೆಯಿತು. "ತಪಸ್ಸಿದ್ಧಿ" ಸಂಚಿಕೆಯ ವಾಚನದಿಂದ ಮುಕ್ತಾಯವಾಯಿತು. ನನಗೂ ಶಕುಂತಲಾಬಾಯಿಗೂ ಮನಸ್ಸಿನಲ್ಲಿ ಒಂದು ಕೊರತೆ ತುಂಬಿಕೊಂಡಿತು. ಪಟ್ಟಾಭಿಷೇಕವಾಗಲೇ ಇಲ್ಲವಲ್ಲ ಪರಿಷತ್ತಿನಲ್ಲಿ ಶ್ರೀಮಚಂದ್ರನಿಗೆ, ನಮ್ಮ ಮನೆಯಲ್ಲೇ ಏಕೆ ನಡೆಸಬಾರದು ? ಹೀಗೆ ಆಲೋಚಿಸಿ 'ಶ್ರೀ ರಾಮಾಯಣ ದರ್ಶನಂ' ಕೊನೆ ಸಂಚಿಕೆ 'ಅಭಿಷೇಕ ವಿರಾಡ್‌ದರ್ಶನಂ' ವಾಚನವನ್ನು ಮನೆಯಲ್ಲಿ ಒಂದು ಭಾನುವಾರ ಬೆಳಗ್ಗೆ ಇಟ್ಟುಕೊಂಡೆವು. ಎಂ. ಆರ್. ಶ್ರೀ., ಮೋಟಗಾನಹಳ್ಳಿ ಸುಬ್ರಹ್ಮಣ್ಯಶಾಸ್ತ್ರಿ, ಸಿ. ಕೆ. ನಾಗರಾಜರಾವ್, ವೈಣಿಕ ವಿದ್ವಾನ್ ಎಲ್. ರಾಜಾರಾವ್, ಗಮಕ ವಿದ್ವಾನ್ ಎಂ. ಎಸ್. ಚಂದ್ರಶೇಖರಯ್ಯ, ಹೀಗೆ ಆಪ್ತರು ದಯಮಾಡಿಸಿದ್ದರು. "ಅಭಿಷೇಕ ವಿರಾಡ್‌ದರ್ಶನಂ"ಭಾಗದ ವಾಚನಮಾಡಿ "ಶ್ರೀ ರಾಮಾಯಣ ದರ್ಶನಂ" ಕಾವ್ಯಕ್ಕೆ ಮಂಗಳಾರತಿ, ಪೂಜೆ ಸಲ್ಲಿಸಿದರು ಶಕುಂತಲಾಬಾಯಿ.

ಹೋಳಿಗೆ ತುಪ್ಪದ ಭೋಜನ. ಶಕುಂತಲಾಬಾಯಿ ಹೂರಣ ಕಟ್ಟಿನ ಸಾರು ತಂದರು ಬಡಿಸುವುದಕ್ಕೆ. ಆ ಸಮಯದಲ್ಲಿ ಎಂ. ಆರ್. ಶ್ರೀ. ಪಕ್ಕದಲ್ಲಿ ಊಟಕ್ಕೆ ಕುಳಿತಿದ್ದ ಮೋಟಗಾನಹಳ್ಳಿಯವರನ್ನು ತಿವಿದು ಹಾಸ್ಯದ ಚಟಾಕಿ ಹಾರಿಸಿದರು. "ಹೂರಣಕಟ್ಟಿನ ಸಾರು ಮಾಧ್ವರು ಮಾಡುವ ಹಾಗೆ ಸ್ಮಾರ್ತರಿಗೆ ಎಲ್ಲಿ ಬರುತ್ತಯ್ಯ ? ಹಾಕಿಸಿಕೊ"

ಭೋಜನಕ್ಕೆ ಕುಳಿತಿದ್ದವರೆಲ್ಲ "ಘೊಳ್" ಎಂದು ನಗೆಯ ಅಲೆ ಎಬ್ಬಿಸಿದರು.

ಮುಂದೆ ಕೆಲವೇ ತಿಂಗಳುಗಳಲ್ಲಿ 1953ರ ದೀಪಾವಳಿ ದಿವಸ ವತ್ಸಲಾಕುಮಾರಿಯ ಜನನವಾಯಿತು. "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನದ ಫಲ ಪ್ರಾಪ್ತಿಯೆಂದು ನನ್ನ ಸಾಹಿತಿ ಮಿತ್ರರುಗಳೆಲ್ಲ ಸಂತೋಷ ವ್ಯಕ್ತಪಡಿಸಿದರು.

ಎಂ. ಆರ್. ಶ್ರೀ. ಸತ್ತಾಗ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಪೂಜ್ಯ ಡಿ. ವಿ. ಜಿ. ಯವರ ಅಧ್ಯಕ್ಷತೆಯಲ್ಲಿ ಸಂತಾಪಸಭೆ ನಡೆಯಿತು. ಪರಿಷತ್ತಿನ ಸಭಾಂಗಣ ಎಂ. ಆರ್. ಶ್ರೀ. ಅಭಿಮಾನಿಗಳಿಂದ ಕಿಕ್ಕಿರಿದಿತ್ತು. ಡಿ. ವಿ. ಜಿ., ಎಂ. ಆರ್. ಶ್ರೀ. ಗುಣಗಾನ ಮಾಡುತ್ತ, "ನಮ್ಮ ಶ್ರೀನಿವಾಸಮೂರ್ತಿ ರೂಪಿನಲ್ಲಿ ಮನ್ಮಥನಂತೆ ಸುಂದರ ಪುರುಷ, ಗುಣದಲ್ಲಿ ದೇವತಾ ಮನುಷ್ಯ" ಡಿ. ವಿ. ಜಿ. ಅವರ ಮಾತು ಸತ್ಯ—ಎಂ. ಆರ್. ಶ್ರೀ. ರೂಪಿನಲ್ಲಿ ಮನ್ಮಥ, ಗುಣದಲ್ಲಿ ದೇವತಾ ಮನುಷ್ಯನೇ ಆಗಿದ್ದರು.

"ಇವಳು ಮಾನವಿಯಲ್ಲ ಮಾತಾಯಿ ಸರಸ್ವತಿ"

1953ನೆಯ ವರ್ಷ ಶಕುಂತಲಾಬಾಯಿಯ "ರಾಮಾಯಣ ದರ್ಶನಂ" ಕಾವ್ಯವಾಚನ ಜೀವನದಲ್ಲಿ ಒಂದು ಮೈಲಿಗಲ್ಲು. ಆಕೆಯ ಕಾವ್ಯವಾಚನ ಗಡಿ ಈವರೆಗೆ ಬೆಂಗಳೂರು ನಗರದ ಸುತ್ತಮುತ್ತ, ಮೈಸೂರು ರಾಜ್ಯದ ಹೊರಗೆ ಹರಪನಹಳ್ಳಿ, ಹೊಸಪೇಟೆಗಳನ್ನು ಮಾತ್ರ ಮುಟ್ಟಿತ್ತು. ಮೈಸೂರು ರಾಜ್ಯದ ಬೆಂಗಳೂರು ನಗರ ಉಳಿದು ಮೈಸೂರು ರಾಜಧಾನಿಯಲ್ಲಿ ಶಕುಂತಲಾಬಾಯಿ ಸಾರ್ವಜನಿಕ ವೇದಿಕೆಯಿಂದ ಮೊಟ್ಟಮೊದಲ ಕಾವ್ಯವಾಚನ ಮಾಡಿದುದೆಂದರೆ ಅದು "ಶ್ರೀರಾಮಾಯಣ ದರ್ಶನಂ" ಮಹಾಕಾವ್ಯ, 1953-54ರ ತುಂಬು ಸಭೆಯಲ್ಲಿ, ಬನುಮಯ್ಯ ಪ್ರೌಢಶಾಲಾ ವೇದಿಕೆಯ ಮೇಲೆ.

ಮೈಸೂರು ರಾಜ್ಯದ ವಯಸ್ಕರ ಶಿಕ್ಷಣ ಸಮಿತಿಗೆ ಈಗಾಗಲೇ ಶಕುಂತಲಾಬಾಯಿ "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನ ಮಾಡುವುದು ತಿಳಿದಿತ್ತು. ಮೈಸೂರಿನ ಬನುಮಯ್ಯ ಪ್ರೌಢಶಾಲೆಯ ಸಭಾಂಗಣದಲ್ಲಿ, ಅಗ ಕೆ. ಹನುಮಂತಯ್ಯನವರ ಮುಖ್ಯಮಂತ್ರಿ ಸಂಪುಟದಲ್ಲಿ ಶಿಕ್ಷಣ ಸಚಿವರಾಗಿದ್ದ ಎ. ಜಿ. ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ಶಕುಂತಲಾಬಾಯಿಗೆ ಸನ್ಮಾನವನ್ನು ಏರ್ಪಡಿಸಿತು ವಯಸ್ಕರ ಶಿಕ್ಷಣ ಸಮಿತಿ. ದೇವುಡು ನರಸಿಂಹಶಾಸ್ತ್ರಿಗಳು ಮುಖ್ಯ ಅತಿಥಿಯಾಗಿ ದಯಮಾಡಿಸಿದರು. ದೇ. ಜವರೇಗೌಡ, ನಾ. ಭದ್ರಯ್ಯ, ಮಾದೇಗೌಡ, ನ್ಯಾಯಮೂರ್ತಿ ಹೊಂಬೇಗೌಡ ಮೊದಲಾಗಿ "ಶ್ರೀ ರಾಮಾಯಣ ದರ್ಶನಂ" ಅಭಿಮಾನಿಗಳೂ ದಯಮಾಡಿಸಿದ್ದರು.

ದೇವುಡು ನರಸಿಂಹಶಾಸ್ತ್ರಿಗಳು ನನಗೆ ಮಕ್ಕಳ ಸಾಹಿತ್ಯ ರಚನೆಯಲ್ಲಿ ಗುರುಸ್ಥಾನದಲ್ಲಿದ್ದರು. ನಾನು ಮತ್ತು ಶಕುಂತಲಾಬಾಯಿಯೆಂದರೆ ಅವರಿಗೆ ಮನೆಮಕ್ಕಳಿದ್ದಂತೆ. "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನ ಮಾಡುವುದು ಅವರಿಗೆ ತಿಳಿದಿತ್ತು. ದೇವುಡು ಈಗಿನ್ನು "ಶ್ರೀ ರಾಮಾಯಣ ದರ್ಶನಂ" ಕಾವ್ಯವನ್ನು ಪೂರ್ತಿ ಅವಲೋಕಿಸಿದ್ದಾರೋ ಇಲ್ಲವೋ ತಿಳಿಯದು. ಈಗ ಅವರಿಗೆ ಬನುಮಯ್ಯ ಪ್ರೌಢಶಾಲೆಯಲ್ಲಿ ಶಕುಂತಲಾಬಾಯಿಯ "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನ ಕೇಳುವ ಅವಕಾಶ ದೊರೆಯಿತು.

ಶಕುಂತಲಾಬಾಯಿ "ಅಹಲ್ಯೋದ್ಧಾರ" ಮತ್ತು "ಸೀತಾಕಲ್ಯಾಣ" ಕಥಾಭಾಗಗಳನ್ನು ವಾಚನ ಮಾಡಿದರು. ಶ್ರೋತೃಗಳಿಗೆ ಕಾವ್ಯ ಹೊಸದು. ತನ್ಮಯರಾಗಿ ಕೇಳುತ್ತಿದ್ದರು. ದೇವುಡು ಭಾವೋದ್ರೇಕದ ಕಣ್ಣುಗಳಿಂದ ಧಾರಾಕಾರವಾಗಿ ಕಣ್ಣೀರು ಸುರಿಸುತ್ತಿದ್ದರು. ಅವರ ಕರವಸ್ತ್ರವೆಲ್ಲ ಒದ್ದೆಯಾಗಿತ್ತು. ಒಂದೆರಡು ಸಲ ಸಭೆಯಿಂದ ಹೊರಗೆದ್ದು ಹೋದರು, ಒಳಗೆ ಬಂದರು. ಜವರೇಗೌಡರ ಕಿವಿಯಲ್ಲಿ **'ಇವಳು ಮಾನವಿಯಲ್ಲ ಮಾತಾಯಿ ಸರಸ್ವತಿ'** ಎಂದು ಪಿಸುಗುಟ್ಟಿದರಂತೆ. ಜವರೇಗೌಡರು ನಮಗೆ ಈ ಸುದ್ದಿ ಮುಟ್ಟಿಸಿದರು.

ಸನ್ಮಾನ ಸಭೆಯಲ್ಲಿ ದೇವುಡು ಶಕುಂತಲಾಬಾಯಿಯನ್ನು ಮನಸಾರೆ ಹೊಗಳಿದರು. ಕುವೆಂಪು "ಶ್ರೀ ರಾಮಾಯಣ ದರ್ಶನಂ" ಮಹಾಕಾವ್ಯದ ಬಗೆಗೆ ಪ್ರಸ್ತಾಪಿಸಿ, ಕುವೆಂಪು ಮಹಾಕಾವ್ಯವನ್ನು "ಆನೆಯಂಬಾರಿಯಲ್ಲಿಟ್ಟು ಮೆರವಣಿಗೆ ಮಾಡಿ ಗೌರವಿಸಬೇಕು." ಎಂದರು. ಮಗುವಿನಂಥ ಸ್ವಚ್ಛ ಹೃದಯದ ನಿಷ್ಕಪಟ ಸ್ವಭಾವದವರು ದೇವುಡು.

ರಸಋಷಿ ಸದೃಶ ದೇವುಡು ನುಡಿದ ಋಷಿವಾಕ್ಯ ಗಾಳಿಯಲ್ಲಿ ತೇಲಿಹೋಗಲಿಲ್ಲ. 1955ರಲ್ಲಿ "ಶ್ರೀ ರಾಮಾಯಣ ದರ್ಶನಂ" ಕಾವ್ಯಕ್ಕೆ ರಾಷ್ಟ್ರೀಯ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಬಹುಮಾನ ಐದು ಸಾವಿರ ರೂಪಾಯಿ ದೊರೆಯಿತು. 1968ರಲ್ಲಿ ಭಾರತೀಯ ಜ್ಞಾನಪೀಠ ಪ್ರಶಸ್ತಿಯ ಗೌರವ ಬಂತು. "ಶ್ರೀ ರಾಮಾಯಣ ದರ್ಶನಂ" ಮಹಾಕಾವ್ಯಕ್ಕೆ ಸಂದ ಭಾರತ ಮಟ್ಟದ ಗೌರವವನ್ನು ಮನಗಂಡು ನಮ್ಮ ಜನ 1969ರಲ್ಲಿ ಬೆಂಗಳೂರಲ್ಲಿ ಆನೆಯಂಬಾರಿಯ ಮೇಲೆ ಮಹಾಕಾವ್ಯವನಿಟ್ಟು ಮೆರವಣಿಗೆ ಮಾಡಿತು.

ಮೈಸೂರು ವಯಸ್ಕರ ಶಿಕ್ಷಣ ಸಮಿತಿ ಶಕುಂತಲಾಬಾಯಿಗೆ ಶ್ರೀಗಂಧದ ಮರದ ಮಂಟಪದಲ್ಲಿ ಪ್ರತಿಷ್ಠಿತವಾದ ದಂತಕೆತ್ತನೆಯ ಸುಂದರ ರಾಧಾಕೃಷ್ಣರ ವಿಗ್ರಹವನ್ನಿತ್ತು ಒಂದುನೂರು ರೂಪಾಯಿಗಳ ನಿಧಿಯರ್ಪಿಸಿ ಸನ್ಮಾನ ನೀಡಿತು. ಈ ಸನ್ಮಾನಸಮಾರಂಭದಲ್ಲಿ ಕಾಣದ ಕೈಯೊಂದು ಮುಖ್ಯಪಾತ್ರ ವಹಿಸಿತ್ತು. ಮೈಸೂರು ಜಿಲ್ಲಾ ನ್ಯಾಯಾಧೀಶರಾಗಿದ್ದ ಎಚ್. ಹೊಂಬೇಗೌಡರೇ ಆ ಕಾಣದಕೈಯೆಂದು ಕ್ರಮೇಣ ತಿಳಿಯಿತು.

ಶಕುಂತಲಾಬಾಯಿಗೆ ಮೈಸೂರು ವಯಸ್ಕರ ಶಿಕ್ಷಣ ಸಮಿತಿ ಸನ್ಮಾನಿಸಿದ ಮಾರನೆಯ ದಿನವೇ ಮೈಸೂರು ವಿಶ್ವವಿದ್ಯಾನಿಲಯದ ಸಾಹಿತ್ಯ ವ್ಯಾಸಂಗಗೋಷ್ಠಿಯ ಆಶ್ರಯದಲ್ಲಿ ಕುವೆಂಪು "ಶ್ರೀರಾಮಾಯಣ ದರ್ಶನಂ" ಕಾವ್ಯಸಂಕೀರ್ಣ ಉಪನ್ಯಾಸಗಳ ಸಪ್ತಾಹ ಪ್ರಾರಂಭವಾಯಿತು. ಮೈಸೂರಿನ ಜಿಲ್ಲಾ ನ್ಯಾಯಾಧೀಶರಾಗಿದ್ದ ಹೊಂಬೇಗೌಡರು ಅಧ್ಯಕ್ಷರಾಗಿದ್ದರು. ಇಂಗ್ಲಿಷ್ ಭಾಷಾ ಉಪನ್ಯಾಸಕರಾಗಿದ್ದ ಕೆ. ನರಸಿಂಹಮೂರ್ತಿ "ಅತ್ತಲಾ ದೈತ್ಯ ಸಭೆಯೊಳ್" ಎಂಬ ವಿಷಯವಾಗಿ ವಿಮರ್ಶಾತ್ಮಕ ಉಪನ್ಯಾಸ ಕೊಟ್ಟರು. ಶಕುಂತಲಾಬಾಯಿ "ಶಬರಿಗಾದನು ಅತಿಥಿ ದಾಶರಥಿ" ಭಾಗವನ್ನು ಶ್ರೋತೃಗಳ ಕೋರಿಕೆಯಂತೆ ವಾಚನ ಮಾಡಿದರು. ಡಿ. ಎಲ್. ನರಸಿಂಹಾಚಾರ್, ಡಾ|| ಶೀಬಯ್ಯ, ಅನಂತರಂಗಾಚಾರ್, ಜೇ.ಜವರೇಗೌಡರು, ಹಾ.ಮಾ. ನಾಯಕರು, ಹೀಗೆ ಗಣ್ಯ ಮಹನೀಯರು ಸಭೆಯಲ್ಲಿ ಮಂಡಿಸಿದ್ದರು.

ಮಾರನೆಯ ದಿನ ಸಂಜೆ ಮೈಸೂರಿನ ಒಂಟಿಕೊಪ್ಪಲಿನಲ್ಲಿರುವ ಶ್ರೀ ರಾಮಕೃಷ್ಣ ವಿದ್ಯಾರ್ಥಿ ನಿಲಯದಲ್ಲಿ ದೇ. ಜವರೇಗೌಡರ ಶ್ರದ್ಧೆ ವಿಶ್ವಾಸಗಳಿಂದ ಕುವೆಂಪು ಸಾಹಿತ್ಯ ವಾಚನ ಕಾರ್ಯಕ್ರಮವೇರ್ಪಟ್ಟಿತು. ನಗುಮೊಗ್ಗುಗಳಂತೆ ಶೋಭಿಸುತ್ತಿದ್ದ ಎಳೆ ಕಂದಮ್ಮಗಳ ಸಭೆ ಶಿಸ್ತು ಸಂಯಮಗಳಿಂದ ಶಕುಂತಲಾಬಾಯಿಯ ಕುವೆಂಪು ಭಾವಗೀತೆಗಳ ವಾಚನ ಕೇಳಿ ತಣಿಯಿತು.

ಮೈಸೂರಿನಲ್ಲಿ ಬಿಡಾರಂ ಕೃಷ್ಣಪ್ಪನವರ ರಾಮಮಂದಿರದ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಮಹಿಳಾ ಸದನದಲ್ಲಿಯೂ ದತ್ತಿ ನಿಧಿ ಕಾರ್ಯಕ್ರಮದ ಅಂಗವಾಗಿ ಶಕುಂತಲಾಬಾಯಿಯ "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನ ನಡೆಯಿತು. ಸುತ್ತಮುತ್ತಲ ಮಹಿಳೆಯರು ಬಂದಿದ್ದರು. ಮದರಾಸು ರಾಜ್ಯದ ಶಿಕ್ಷಣ ಇಲಾಖೆಯಿಲ್ಲಿದ್ದು ನಿವೃತ್ತರಾಗಿ ಬಂದ ಡಿ. ಗೋಪಾಲಾಚಾರ್ಯರು ಸ್ಥಾಪಿಸಿದ ಮಹಿಳಾ ಸದನ ನಮ್ಮ ನಾಡಿನ ಮಹಿಳೆಯರ ಏಳಿಗೆಗಾಗಿ ತುಂಬ ಚೆನ್ನಾಗಿ ಸೇವೆ ಸಲ್ಲಿಸುತ್ತಿರುವ ಒಂದು ಹಳೆಯ ಸಂಸ್ಥೆ. ಹೊಲಿಗೆ, ಕಸೂತಿ, ಕುಶಲ ಕಲೆ, ಸಂಗೀತ, ಗಮಕ ಮೊದಲಾದ ನಾನಾ ಚಟುವಟಿಕೆಗಳನ್ನು ಹಮ್ಮಿಕೊಂಡಿದೆ. ದಿ||ಗೋಪಾಲಾಚಾರ್ಯರ ಸಹಧರ್ಮಿಣಿ ರಂಗನಾಯಕಿ ಅಮ್ಮನವರು ದಕ್ಷತೆಯಿಂದ ಮಹಿಳಾ ಸದನವನ್ನು ನಡೆಸುತ್ತಿರುವುದು ಸ್ತುತ್ಯಾರ್ಹವಾದ ವಿಷಯ. ಅವರು ಶಕುಂತಲಾಬಾಯಿಯನ್ನು ತುಂಬ ವಿಶ್ವಾಸದಿಂದ ಕರೆಸಿಕೊಂಡಿದ್ದರು. ನಮ್ಮನ್ನು ಎರಡು ದಿವಸ ಸದನದಲ್ಲೇ ಉಳಿಸಿಕೊಂಡು ಊಟ ಉಪಚಾರ, ವಸತಿ ಸೌಕರ್ಯ ಒದಗಿಸಿ, ನಮ್ಮನ್ನು ನಡೆಸಿಕೊಂಡ ಬಗೆ ಸದಾ ಜ್ಞಾಪಕದಲ್ಲಿ ಉಳಿದಿದೆ.

ಹೀಗೆ 1953ರಲ್ಲಿ ಶಕುಂತಲಾಬಾಯಿಯ ಹೆಸರು ಗಮಕ ಕಲೆಯ ಹುಟ್ಟೂರಾದ ಮೈಸೂರು ನಗರದಲ್ಲಿ ಸಾಕಷ್ಟು ಪ್ರಚಾರ ಪಡೆಯಿತು.

ಕುವೆಂಪು ಸನ್ಮಾನ ಸಭೆಯಲ್ಲಿ

"ಶ್ರೀ ರಾಮಾಯಣ ದರ್ಶನಂ" ಮಹಾಕಾವ್ಯ 1955 ರಲ್ಲಿ ಭಾರತ ರಾಷ್ಟ್ರದ ಗೌರವಕ್ಕೆ ಪಾತ್ರವಾಯಿತು. ನಮ್ಮ ರಾಷ್ಟ್ರ ಸಾಹಿತ್ಯ ಅಕಾಡೆಮಿ ರಾಷ್ಟ್ರಪ್ರಶಸ್ತಿಯಿತ್ತು 5000 ರೂಪಾಯಿಗಳ ಬಹುಮಾನ ನೀಡಿ ಪುರಸ್ಕರಿಸಿತು. ರಾಷ್ಟ್ರ ಸಾಹಿತ್ಯ ಅಕಾಡೆಮಿ ಸ್ಥಾಪಿತವಾದ ಮೊದಲಲ್ಲೇ ಕನ್ನಡ ಭಾಷೆಯಲ್ಲಿ ರಚಿತವಾದ ಮಹಾಕಾವ್ಯ "ಶ್ರೀ ರಾಮಾಯಣ ದರ್ಶನಂ" ರಾಷ್ಟ್ರಪ್ರಶಸ್ತಿ ಗೌರವ ಪಡೆದ ಮೊಟ್ಟಮೊದಲ ಕೃತಿಯೆಂದು ಗಣ್ಯವಾಯಿತು.

"ಶ್ರೀ ರಾಮಾಯಣ ದರ್ಶನಂ" ಮಹಾಕಾವ್ಯಕ್ಕೆ ಸಂದ ರಾಷ್ಟ್ರಪ್ರಶಸ್ತಿ ಗೌರವವನ್ನು ಕೇಳಿ ಸಂತೋಷಿಸಿ ಕನ್ನಡ ಸಾಹಿತ್ಯ ಪರಿಷತ್ತು ಮೈಸೂರಿನಿಂದ ಕುವೆಂಪು ಅವರನ್ನು ಬೆಂಗಳೂರಿಗೆ ಕರೆಸಿಕೊಂಡು ಅವರ ಪರಮ ಗುರುಗಳಲ್ಲಿ ಒಬ್ಬರಾದ ಎ. ಆರ್. ಕೃಷ್ಣಶಾಸ್ತ್ರಿಯವರ ಘನ ಅಧ್ಯಕ್ಷತೆಯಲ್ಲಿ ಸನ್ಮಾನ ನೀಡಿತು. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಎ. ಎನ್. ಮೂರ್ತಿರಾಯರು ಕುವೆಂಪು ಅವರಿಗೆ ಹಾರ್ದಿಕವಾದ ಸ್ವಾಗತ ನೀಡಿದರು.

ಶಕುಂತಲಾಬಾಯಿ "ಶ್ರೀ ರಾಮಾಯಣ ದರ್ಶನಂ" ಮಹಾಕಾವ್ಯದಿಂದ "ಇರ್ದುದು ಮಹೇಂದ್ರಾಚಲಂ" ಕಥಾಭಾಗದಿಂದ ಸನ್ಮಾನ ಸಭೆಯ ಸಂದರ್ಭಕ್ಕೆ ಉಚಿತವಾಗಿ ಜಾಂಬವಂತನಿಂದ ಪ್ರಚೋದಿತನಾಗಿ ಸಾಗರೋಲ್ಲಂಘನಕ್ಕೆ

ಮರುತ್ಸುತ ನಿಶ್ಚಯಿಸುವ ಭಾಗವನ್ನು ಸುಮಾರು ಇಪ್ಪತ್ತು ನಿಮಿಷಗಳ ಕಾಲ ವಾಚನ ಮಾಡಿದರು :—

"ಕಲ್ಲಾದೆಯೇಕಿಂತು, ಪೇಳ್,
ಓ ಕಪಿಧ್ವಜದೇವತಾ ಕೀರ್ತಿಮೂರ್ತಿ, ಅದೋ ಕಾಣ್,
ನಿನ್ನಾಲಯದ ಗೌರವದ ಗೋಪುರದ ಸುಧಾ
ಶುಭ್ರ ಕಲಶ ಗಭಸ್ತಿ ಕಿಲುಬುತಿದೆ ದುರ್ಯಶಃ
ಕಿಲ್ಬಿಷಂ ಪತ್ತಿ...."

ಹೀಗೆ ಅಂತರ್ಮುಖಿಯಾಗಿ ತನ್ನ ತಾನರಿಯದಿರ್ದ ಆಂಜನೇಯನಿಗೆ ಜಾಂಬವಂತ ಆತನ ನಿಜಮಹಿಮೆಯನ್ನು ತಿಳಿಸಿಕೊಡುವ ಸಾಲುಗಳಿಂದ ಪ್ರಾರಂಭಿಸಿ

"ಕೇಳನಂತರುದ್ಧಿ ಮರುತ್ಸುತಂ ಮನದೊಳಗೆ
ನಿಶ್ಚಯಿಸಿದನ್ ಸಾಗರೋಲ್ಲಂಘನಕೆ ಯೋಗಿ
ಪೂರಕರ ರೇಚಕರ ಕುಂಭಕ ಪ್ರಾಣದಿಂ
ಮೂಲದಿಂದೇಳ್ಚರಿಸಿದನ್ ಕುಂಡಲಿನಿಯಂ
ಸುಷುಮ್ನೆಯಿಂದಿರ್ದನ್ ಸಹಸ್ರಾರಕಲ್ಲಿಂದೆ ಮೇಣ್
ಮೀರ್ದನಿಂದ್ರಿಯ ಮಾನ್ಯ ಜಡಜಗನ್ಮಾಯೆಯಂ,
ಭೌತ ಸೃಷ್ಟಿಯ ಮಹನ್ನಿಯತಿಯಂ ! ಸಂಕಲ್ಪಚಿತ್
ತಾಳ್ದನಿಚ್ಛಾಸೂತ್ರದಿಂ ಕಪಿಗಾತ್ರಮಂ, ಕುಲದ
ಹಳವಿಗೆಯ ಚಿಹ್ನೆಯಾಕಾರಮಂ"

ಹೀಗೆ ಮುಂದುವರೆಸಿ, ಓಂಕಾರಸಂಗಿ ಸಂಭ್ರಮಿತ ಕಪಿ ಸೈನಿಕಂ

"ಜಯತು ಜಯತು ಹೇ
ಪವನ ಪಾವನ ಕಲಿ ಕುಮಾರ ! ಜಯತು ಜಯಹೇ
ವಾನರ ಕುಲದ ಕೀರ್ತಿಯುದ್ಧಾರ । ಜಯತು ಹೇ
ಕಪಿಕೇತನರ ಮಹಾಚೈತನ್ಯ ಜ್ಯೋತವನ
ಚೈತ್ರಾವತಾರ । ಉತ್ತಿಷ್ಠ, ಓ, ಧುರಧೀರ
ಯೋಗಾವತಾರ । ಉತ್ತಿಷ್ಠ, ಓ, ಉತ್ತಿಷ್ಠ,
ಸರ್ವಮಾನವ ಗರ್ವಮಾನ ಪಾರಾವಾರ ।
. . . . , ...
. . . .
ನಮೋ । ನಮೋ । ಕಲಿ, ನಮೋ । ಗುರು ನಮೋ, ಪುನರ್ನಮೋ,
ಮುಹುರ್ನಮೋ । ಓಂ ನಮೋ, ಹ್ರೀಂ ನಮೋ । ನಮೋ ನಮೋ
ನಮೋ ।"

ವಾಚನಮಾಡಿ "ಅಭಿಷೇಕ ವಿರಾಡ್ ದರ್ಶನಂ" ಭಾಗದಲ್ಲಿನ ಕಡೆಯ ಪಂಕ್ತಿಗಳಾದ

"ಕವಿ ವಿಭೂತಿಗೆ ನಮೋ । ಕೃತಿ ವಿಭೂತಿಗೆ ನಮೋ ।
. . . .
. . . .
ಕಡೆದು ಮೂಡಿಹ ನಿತ್ಯ ರಾಮಂಗೆ, ಓಂ ನಮೋ,
ಓಂ ನಮೋ, ಓಂ ನಮಃ । ಓಂ ಶಾಂತಿ. ಶಾಂತಿ ಶಾಂತಿಃ ।

ಭಾಗವನ್ನು ವಾಚಿಸಿ ಕಾವ್ಯವಾಚನ ಮುಗಿಸಿದರು. "ಜಯತು ಜಯತು ಹೇ" ಮೋಹನ ರಾಗದಲ್ಲಿ ಹಾಡಿದ್ದರು. "ಕವಿ ವಿಭೂತಿಗೆ ನಮೋ" ಗೌಳ ರಾಗದಲ್ಲಿ ಮುಗಿಸಿದ್ದರು. ಸಭೆ ರೋಮಾಂಚನಗೊಂಡಿತ್ತು ವಾಚನದಿಂದ. ಸಭಾಂಗಣದಲ್ಲಿ ತಂಬೂರಿ ನಾದ ಇಡಿಗಿ ರಾಗ ಸಂಚಾರ ವಾತಾವರಣವನ್ನೆಲ್ಲ ತುಂಬಿ ಮೋಡಿ ಬೀಸಿತ್ತು ಶ್ರೋತೃಗಳ ಮೇಲೆ. ತಾವರೆಯೆಲೆ, ತನಗೆ ನೀರು ಸೋಕಿದರೂ ಸೋಕದ ಹಾಗೆ ಇರುವಂತೆ ಕುವೆಂಪು ಸಭೆಯಲ್ಲಿ ಕಣ್ಮುಚ್ಚಿ ಭಾವಸಮಾಧಿಯಲ್ಲಿರುವರೋ ಎನ್ನುವ ಹಾಗೆ ಕುಳಿತಿದ್ದರು. ಕಾವ್ಯವಾಚನ ನಿಂತು, ಸಭೆ ಸಂತೋಷಿಸಿ ಕರತಾಡನ ಮಾಡಿದಾಗಲೇ ಕವಿವರ್ಯರಿಗೆ ಎಚ್ಚರ.

ಸನ್ಮಾನಿತರಾದ ಕುವೆಂಪು ಉತ್ತರ ಹೇಳಲು ಎದ್ದರು. ಒಂದು ನಿಮಿಷ ತಮ್ಮ ಸುತ್ತಲೂ ಅಕ್ಕಪಕ್ಕಗಳೆದುರು ಗೋಡೆಗಳ ಮೇಲೆ ಕಂಗೊಳಿಸುತ್ತಿದ್ದ ಕನ್ನಡ ಸಾಹಿತ್ಯ ಪ್ರಪಂಚದ ಮಹಾನ್ ಮಹಾನ್ ವಿಭೂತಿಪುರುಷರುಗಳ ಭಾವಚಿತ್ರಗಳ ಕಡೆಗೆ ತಮ್ಮ ಕಣ್ಣು ಹಾಯಿಸಿದರು. ಅಂತರ್ಯಾಮಿ ಸೂಕ್ಷ್ಮಶರೀರಿಗಳಾಗಿ ಸಭೆಯಲ್ಲಿ ಅವತರಿಸಿರುವರೆಂದು ಭಾವಚಿತ್ರಗಳನ್ನು ಸಂಬೋಧಿಸಿ ತಮ್ಮ ನಮನ ಸಲ್ಲಿಸಿದರು. ಆನಂತರ ತಾವು ಸನ್ಮಾನ ಪಡೆಯುವುದಕ್ಕೆ ಬಂದ ಉದ್ದೇಶವನ್ನು ಸಭೆಗೆ ಅರಿಕೆ ಮಾಡಿದರು. :—
1) ತಮ್ಮ ಗುರುವರ್ಯ ಎ. ಆರ್. ಕೃಷ್ಣಶಾಸ್ತ್ರಿಗಳನ್ನು ಸಂದರ್ಶಿಸುವುದು.
2) ಶಕುಂತಲಾಬಾಯಿ ಪಾಂಡುರಂಗರಾವ್ ಮಾಡುವ "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನವನ್ನು ಕೇಳುವ ಅವಕಾಶ ಕಳೆದುಕೊಳ್ಳದಿರುವುದು.

ಕುವೆಂಪು ಸಾರ್ವಜನಿಕ ವೇದಿಕೆಯಿಂದ ಶಕುಂತಲಾಬಾಯಿಯನ್ನು ಕುರಿತು ನುಡಿದ ಮೆಚ್ಚುಗೆಯ ಮಾತುಗಳು ಶ್ರೋತೃಗಳ ಮೇಲೆ ಮಹತ್ವವಾದ ಪರಿಣಾಮವನ್ನುಂಟುಮಾಡಿತು.

ಕುವೆಂಪು ಸನ್ಮಾನ ಸಭೆಯಲ್ಲಿ ವಾಚನ ಮಾಡಿದ್ದ "ಸಾಗರೋಲ್ಲಂಘನಂ" ಭಾಗವನ್ನೇ ವಿನೋಬಾಜಿಯವರ ಮುಂದೆ ವಾಚನ ಮಾಡುವ ಭಾಗ್ಯ ಶಕುಂತಲಾಬಾಯಿಗೆ ದೊರೆತುದು ಆಕೆಯ ಪುಣ್ಯ ವಿಶೇಷ. ವಿನೋಬಾಜಿ 1959ರಲ್ಲಿ ಭೂದಾನಯಜ್ಞ ಚಳವಳಿಯ ನಿಮಿತ್ತ ಪಾದಯಾತ್ರೆ ಕೈಗೊಂಡು ಮೈಸೂರು ರಾಜ್ಯಕ್ಕೆ ದಯಮಾಡಿಸಿದರು. ಆ ಸಂದರ್ಭದಲ್ಲಿ ಅವರು ಮೈಸೂರು ನಗರಕ್ಕೆ ಪಾದ ಸೋಕಿಸುತ್ತಲೆ ಮೊಟ್ಟ ಮೊದಲ ದರ್ಶನವನ್ನು "ಉದಯರವಿ"ಯಲ್ಲಿ ಕುವೆಂಪು ಅವರಿಗೆ ದಯಪಾಲಿಸಿದರು. ಪ್ರಚಲಿತ ಶತಮಾನದಲ್ಲಿ "ಶ್ರೀ ರಾಮಾಯಣ ದರ್ಶನಂ" ಮಹಾಕಾವ್ಯ ರಚಿಸಿದ ಮಹಾನ್ ಮಹಾಪುರುಷರೆಂದು ಕವಿವರ್ಯರನ್ನು ಶ್ಲಾಘಿಸಿ ಹರಸಿದರು. ವಿನೋಬಾಜಿ ಮೈಸೂರು ಬಿಟ್ಟು ಮಂಡ್ಯಕ್ಕೆ ಪ್ರವೇಶಿಸಿ ಒಂದೆರಡು ದಿನ ಅಲ್ಲಿ ತಂಗಿದರು. ಆ ಸಮಯದಲ್ಲಿ ಮೈಸೂರು ಮಹಾಸ್ಕರ ಶಿಕ್ಷಣ ಸಮಿತಿ, ಶಕುಂತಲಾಬಾಯಿಯ ಕೋಕಿಲ ಕಂಠದಾನ ಪಡೆದು ತಯಾರಿಸಿದ್ದ "ಶಬರಿಗಾದನು ಅತಿಥಿ ದಾಶರಥಿ" ಎಂಬ ಕಥಾನಕದ "ಶ್ರೀ ರಾಮಾಯಣ ದರ್ಶನಂ" ಕಾವ್ಯ ವಾಕ್ಚಿತ್ರವನ್ನು ನೋಡಿ ಆನಂದಪಟ್ಟರು.

ಮಂಡ್ಯದಿಂದ ಹೊರಟು ಮಧ್ಯೆ ಮಧ್ಯೆ ಕೆಲವು ಸ್ಥಳಗಳಲ್ಲಿ ತಂಗಿ, ತಮ್ಮ ಪಾದಯಾತ್ರೆ ಮುಂದುವರಿಸಿ ಎರಡು ಮೂರು ದಿವಸಗಳಲ್ಲಿ ಬೆಂಗಳೂರಿಗೆ ಬಂದರು. ಬೆಂಗಳೂರಿಗೆ ಐದಾರು ಮೈಲಿಗಳಷ್ಟು ಸನಿಹದಲ್ಲಿ ಮೈಸೂರು ರಸ್ತೆಯಲ್ಲಿರುವ ಸಿದ್ಧರೂಢಾಶ್ರಮದಲ್ಲಿ ಇಳಿದುಕೊಂಡರು. ಮೈಸೂರು ವಯಸ್ಕರ ಶಿಕ್ಷಣ ಸಮಿತಿ ಇರಬಹುದು—ನೆನಪು ಅಳಿಸಿದೆ—ಶಕುಂತಲಾಬಾಯಿಯಿಂದ "ಸಾಗರೋಲ್ಲಂಘನಂ" ಕಾವ್ಯವಾಚನವನು ವಿನೋಬಾಜಿ ಸಮ್ಮುಖದಲ್ಲಿ ಏರ್ಪಡಿಸಿತ್ತು ಒಂದು ಸಂಜೆ. ಓ! ಅದು ಎಂಥ ಪವಿತ್ರ ಸನ್ನಧಿ ! ವಿನೋಬಾಜಿ ಒಂದು ಚಾಪೆಯ ಮೇಲೆ ಕುಳಿತಿದ್ದರು. ಎದುರಿಗೆ ಸ್ವಲ್ಪ ದೂರ ದಲ್ಲಿ ಶಕುಂತಲಾಬಾಯಿ ವ್ಯಾಸಪೀಠದ ಮೇಲೆ "ಶ್ರೀ ರಾಮಾಯಣ ದರ್ಶನಂ" ಕಾವ್ಯ ವನ್ನು ಇಟ್ಟುಕೊಂಡು "ಸಾಗರೋಲ್ಲಂಘನಂ"ಕಥಾಭಾಗವನ್ನು ವಾಚನಮಾಡಲು ಸಿದ್ಧ ರಾದರು. ನಮ್ಮ ಹಿರಿ ಮಗಳು ಚಿ|| ವನಜಾ ಕೋಟೇಶ್ವರ ತಂಬೂರಿ ತಂತಿ ಮೀಟುತ್ತ ಶ್ರುತಿ ಕೊಡುತ್ತಿದ್ದಳು. ಶಕುಂತಲಾಬಾಯಿಗೆ ಸೀಮೆಯೆಣ್ಣೆಯ ದೀಪ ವಾಚನ ಮಾಡು ವುದಕ್ಕೆ ಬೆಳಕು ಚೆಲ್ಲಿತ್ತು. ಪಿ. ಹೆಚ್. ಕೃಷ್ಣರಾಯರು ಪುರಂದರದಾಸರ ದೇವರನಾಮ ಗಳನ್ನು ಹಾಡಲು ಸಜ್ಜಾಗಿ ಕುಳಿತಿದ್ದರು. ಕನ್ನಡ ಸಂಘದ ಸದಸ್ಯರು ಬಂದಿದ್ದರು. ಶಕುಂತಲಾಬಾಯಿ ಭಾವಪರವಶರಾಗಿ "ಸಾಗರೋಲ್ಲಂಘನಂ" ಕಥಾಭಾಗವನ್ನು ಸುಮಾರು ಇಪ್ಪತ್ತು ನಿಮಿಷಗಳ ಕಾಲ ವಾಚನ ಮಾಡಿದರು. ಜಾಂಬವಂತನು ಆಂಜನೇಯನನ್ನು ಸಾಗರೋಲ್ಲಂಘನಕ್ಕೆ ಪ್ರಚೋದಿಸುತ್ತಾನೆ. ಕಪಿಧ್ವಜನಿ ಆಂಜನೇಯ ನನ್ನು ಸ್ತೋತ್ರ ಮಾಡುತ್ತಲೆ ವಿನೋಬಾಜಿ ಆನಂದಬಾಷ್ಪ ಸುರಿಸಿದರು. ಕಾವ್ಯ ವಾಚನ ಮುಗಿಯಿತು. ಕನ್ನಡ ಸಂಘದ ರಾ. ಭೀಮು ಎದ್ದರು. ವಿನೋಬಾಜಿಯ ಮೇಲೆ ತಾವು ಕಟ್ಟಿದ್ದ ಕವನವನ್ನು ಶಕುಂತಲಾಬಾಯಿಯಿಂದ ಓದಿಸಬಹುದೇ ? ಎಂದು ಕೇಳಿದರು. ವಿನೋಬಾಜಿ, ತಟ್ಟನೆ, ಮಹಾನ್ ಪುರುಷ ಆಂಜನೇಯನ ಸಾಗರೋಲ್ಲಂ ಘನ ಕಥಾಭಾಗವನ್ನು ಕೇಳಿದ ಕಿವಿಗಳು ನರಸ್ತುತಿಯನ್ನು ಕೇಳುವುದಿಲ್ಲವೆಂದರು. ನಮ್ಮ ಮುಂದೆಯೇ ಒಂದು ಬಟ್ಟಲಲ್ಲಿ ತಂದಿತ್ತ ಜೇನುತುಪ್ಪವನ್ನು ಕೆಲವು ಚಮಚಗಳಷ್ಟು ತೆಗೆದುಕೊಂಡು ವಿಶ್ರಾಂತಿ ಪಡೆಯಲು ಎದ್ದರು.

ಶಕುಂತಲಾಬಾಯಿ, ನಾನು, ನಮ್ಮ ಹಿರಿಮಗಳು, ವಿನೋಬಾಜಿಯ ಪಾದಗಳಿ ಗೆರಗಿ, ಅವರ ಪಾದಧೂಳಿಯನ್ನು ನಮ್ಮ ತಲೆಗಳಿಗೆ ಸೋಕಿಸಿಕೊಂಡು ಹೊರಟೆವು.

ಕೇಂದ್ರ ಸರಕಾರದಲ್ಲಿ ಸಚಿವರಾಗಿದ್ದ ದತ್ತಾತ್ರೇಯ ಪರಶುರಾಮ ಕರಮರಕರ ಅವರ ಅಧ್ಯಕ್ಷತೆಯಲ್ಲಿ ರಾಮನಗರದಿಂದ ಚನ್ನಪಟ್ಟಣಕ್ಕೆ ಕೆಲವೇ ಮೈಲಿಗಳ ಫಾಸಲೆ ಯಲ್ಲಿ ರೇಷ್ಮೆ ಕೃಷಿ ಅಭಿವೃದ್ಧಿ ಕೇಂದ್ರ ಪ್ರಾರಂಭವಾದಾಗ ಶಕುಂತಲಾಬಾಯಿ "ಸಾಗ ರೋಲ್ಲಂಘನಂ" ಭಾಗವನ್ನೇ ಆರಿಸಿಕೊಂಡು ವಾಚನ ಮಾಡಿದರು. ಸಭೆ ಕೇಳಿ ತುಂಬ ಹರ್ಷಿಸಿತು. ಕಪಿಧ್ವಜನಿ ಆಂಜನೇಯನನ್ನು ಸ್ತುತಿಮಾಡುವ "ಜಯತು ಜಯತು ಹೇ ಪವನ ಪಾವನ ಕಲಿ ಕುಮಾರ" ಸಾಲುಗಳನ್ನು ವಾಚನ ಮಾಡಿದಾಗ, ಸಚಿವರು, ಶ್ರೋತೃಗಳು ಮೈಮರೆತಿದ್ದರು. ಸಚಿವರು ಸಭೆ ಮುಕ್ತಾಯವಾದ ಮೇಲೆ ಶಕುಂತಲಾ

ಬಾಯಿಯಿಂದ "ಶ್ರೀ ರಾಮಾಯಣ ದರ್ಶನಂ" ಕಾವ್ಯ ತರಿಸಿಕೊಂಡು ತಾವು ಕೇಳಿದ ಭಾಗವನ್ನು ತದೇಕಚಿತ್ತದಿಂದ ಅವಲೋಕಿಸಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು.

"ತಪಸ್ಸಿದ್ಧಿ" ವಾಚನದ ಪ್ರಭಾವ

"ಶ್ರೀ ರಾಮಾಯಣ ದರ್ಶನಂ" ಮಹಾಕಾವ್ಯಕ್ಕೆ ರಾಷ್ಟ್ರ ಸಾಹಿತ್ಯ ಅಕಾದೆಮಿ ಸಲ್ಲಿಸಿದ ಗೌರವವನ್ನು ನೆನೆದು ಸಂತೋಷಪಟ್ಟು ಅನೇಕ ಸಂಘ ಸಂಸ್ಥೆಗಳು ಕುವೆಂಪು ಅವರನ್ನು ಸನ್ಮಾನಿಸಲು ಮುಂದಾದವು. ಅಂಥವುಗಳಲ್ಲಿ ಒಂದು ಸನ್ಮಾನ ಸಭೆ ಮಂಡ್ಯ ದಲ್ಲಿ ಒಕ್ಕಲಿಗರ ಸಂಸ್ಥೆಯಿಂದ ನಡೆಯಿತೆಂದು ನೆನಪು. ಕುವೆಂಪು, ನ್ಯಾಯಮೂರ್ತಿ ಎಚ್. ಹೊಂಬೇಗೌಡರು ಆಗಮಿಸಿದ್ದರು. ಶಕುಂತಲಾಬಾಯಿಯ "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನವೇ ಆ ಸನ್ಮಾನ ಸಭೆಯಲ್ಲಿ ಪ್ರಾಮುಖ್ಯ ಕಾರ್ಯಕ್ರಮ. ಕುರ್ಚಿ ಮೇಜುಗಳ ಅಬ್ಬರವಿಲ್ಲ. ಶ್ರೋತೃಗಳಿಗೆ ಕುಳಿತುಕೊಳ್ಳುವುದಕ್ಕೆ ಜಮಖಾನೆ ಹಾಸಿತ್ತು. ಸನ್ಮಾನಿತರುಗಳನ್ನು ಸ್ವಲ್ಪ ಎತ್ತರದ ವೇದಿಕೆಯ ಮೇಲೆ ಒರಗು ದಿಂಬು ಇಟ್ಟು ಕೂಡಿಸಿದ್ದರು. ಇಬ್ಬರು ಮಹನೀಯರೂ ಪದ್ಮಾಸನ ಹಾಕಿ ಕೂತಿದ್ದರು. ಕುವೆಂಪು ಎಂದಿನಂತೆ ಕಣ್ಮುಚ್ಚಿ ಕುಳಿತು ಶಕುಂತಲಾಬಾಯಿಯ "ತಪಸ್ಸಿದ್ಧಿ" ಭಾಗದ ವಾಚನವನ್ನು ತನ್ಮಯರಾಗಿ ಕೇಳುತ್ತಿದ್ದರು.

ಶ್ರೀ ರಾಮಚಂದ್ರ ಸೀತಾಲಕ್ಷ್ಮಣ ಸಮೇತ ವನವಾಸ ಮುಗಿಸಿ ಅಯೋಧ್ಯಾಭಿ ಮುಖವಾದನೆಂಬ ಶುಭ ಸಮಾಚಾರ ಕೇಳಿ ನಾಲ್ಕು ಮಂದಿ ತಪಸ್ಸಿದ್ಧಿ ಪಡೆದರೆಂಬುದೇ ಕಥಾಭಾಗದ ಜೀವಾಳ. ಮಂಥರೆ, ಭರತ, ಊರ್ಮಿಳಾ ಮತ್ತು ಕೈಕೆ ಇವರೇ ತಪ ಸ್ಸಿದ್ಧಿ ಪಡೆದ ಸಿದ್ಧರು.

1) ಮೊದಲು ಮಂಥರೆಗೆ ತಪಸ್ಸಿದ್ಧಿ

. . . . . . ಕೊನೆಯಿರುಳ್ ಕಳೆಯುತಿರೆ, ಮರುವಗಲೆ
ಮಾಂಡವಿಯ ಮನದನ್ನನಗ್ನಿ ಪ್ರವೇಶನಮಂ
ಮನದಿ ನಿಶ್ಚಯಿಸುತಿರೆ, ಯಜ್ಞಕುಂಡಾಗ್ನಿಯಿಂ
ಜ್ವಾಲೆಯೊಳ್ವಂದದಿಂ ಜ್ವಾಲಾವಿಲೀನಮೆನೆ
ಮೈದೋರ್ದುದೊಂದಮರ ಸುಂದರ ಸೂಕ್ಷ್ಮ ತೇಜದ
ಸುರಾಂಗನಾ ಮೂರ್ತಿ :
"ಕಂದ, ನಿನ್ನಗ್ರಜಂ
ಇಂದೊ ನಾಳೆಯೊ ದಿಟಂ ಪಿಂತಿರುಗಿ ಬಂದಪನ್
ಮಾಣ್ ಮನದ ತರಿಸಲ್ಕೆಯಂ"
"ದೇವಿ, ನೀನಾರ್ ?
ಸುಧಾ ಸುಖನನೆರೆಯುತಿಹೆ ಬೆಂದೆದೆಗೆ!"
"ಮತ್ತಾರ್
ಸದಾ ನಿನ್ನ ಸುಕ್ಷೇಮ ಚಿಂತನೆಯೊಳಿರ್ಪರಾ
ಮಂಥರೆ ವಿನಾ?"

"ಬೇಡೆವೂ ಪೆಸರನೊರೆಯದಿರ್
ಪೂಜ್ಯೆ, ಆ ಗೂನಿ ಕಾರಣವಾಗೆ ನಾನಿಂತು
ಇಂದಿಲ್ಲಿ ಕೈಕೊಂಡೆನ್ನೆಸೆ ಕಡುಕಜ್ಜಮುಂ"
"ವತ್ಸ ಕಾರಣಮಲ್ತು : ಕರಣವಾ ಕುಬ್ಜೆ
ಮಂಥರಾ ಪ್ರೇಮದಂತಃಕರಣಮುಂ ಕಾಣೆ
ನೀಂ, ರಾಮನಂ ಮತ್ತೆ, ನಿನ್ನಭ್ಯುದಯಕಾಗಿ
ಪಿಂ ಮರಳ್ಚುವುದ್ಯೋಗದೊಳ್ ತೊಡಗಿರಲ್ಕವಳ್
ದಾವಾಗ್ನಿಗಾಹುತಿಯಾದಳಲ್ತೆ ? ಬಹಿರಂಗದೊಳ್
ಆ ಕುಬ್ಜೆ ವಿಕೃತಿಯೆಂತಂತೆ ಹೊರನೋಟಕಾ
ಗೂನಿ ಗೆಯ್ದುದು ಪಾಪದೇಹಿ. ನಾನೆಯೆ ನೋಡು,
ನಿನ್ನ ಮಂಥರೆಯಾತ್ಮದ ಪುಣ್ಯ ಲಕ್ಷ್ಮಿ !

ಮಂಥರೆಯಂತರಾತ್ಮ ಮತ್ತು ಭರತ ಗ್ಳ ಸಂಭಾಷಣೆಗಳ ವ್ಯತ್ಯಾಸವನ್ನು ತೋರಿಸಲು ಶಕುಂತಲಾಬಾಯಿ ಇಬ್ಬರ ಭಾವಾನುಗುಣಗಳಿಗೆ, ಆ ಸನ್ನಿವೇಶಕ್ಕೆ ತಕ್ಕಂತೆ ಭರತನ ಸಂಭಾಷಣೆಗೆ **ಬೇಗಡೆ,** ಮಂಥರೆಗೆ **ವರ್ಧಿನಿ** ರಾಗಗಳನ್ನು ಸಂಯೋಜಿಸಿದ್ದರು. ಗಮಕಿ ಮಿಂಚು ವೇಗದಲ್ಲಿ ರಾಗ ವ್ಯತ್ಯಾಸ ಮಾಡಿ ಸಂಭಾಷಣೆಯ ಭಾಗವನ್ನು ನಿರ್ವಹಿಸ ಬೇಕಾಗುತ್ತದೆ. ಶಕುಂತಲಾಬಾಯಿ ಗಮಕದಲ್ಲಿ ಇದನ್ನು ಅಭಿವ್ಯಕ್ತಗೊಳಿಸಿದರು.

". . . . . . ನಾನೆಯೆ ನೋಡು
ನಿನ್ನ ಮಂಥರೆಯಾತ್ಮದ ಪುಣ್ಯ ಲಕ್ಷ್ಮಿ !"

ಎಂದು ಮಂಥರೆಯಾತ್ಮ ಭರತನಿಗೆ ತನ್ನನ್ನು ಪರಿಚಯಿಸಿದರೆ, ಭರತ ಕೇಳುವುದು

"ದಿಟವೋ ? ಮೇಣೆನ್ನ ನಿರಶನದನ್ನರಸರಹಿತ
ಪಿತ್ತ ಚಿತ್ತದ ವಿಕಾರಮೊ ?"

ಅದಕ್ಕೆ ಉತ್ತರ ಅತಿಸೂಕ್ಷ್ಮವಾಗಿ ಮಂಥರೆಯ ಅಂತರಾತ್ಮದಿಂದ "ನಿರ್ಧರಿಸು ನೀನೆ"

"ಕಿಡಿಯೋ ? ಕಿರುನಗೆ ಮಿಂಚುಗೋ ? ಲಗ್ನವಾದುದು ಮೂರ್ತಿ
ಅಗ್ನಿಯುರಿಯಾಗಿ ತಳೆದೂಗಿ !"

ಮಮತೆಯ ಸುಳಿ ಮಂಥರೆಯ ಅಂತರಾತ್ಮ ಲಕ್ಷ್ಮಿಯ ತಪಸ್ಸಿದ್ಧಿಯಾಯಿತು.

"ನಿಬ್ಬೆರಗಾಗಿ
ಕೈಮುಗಿದನಾ ಕೈಕೆಯಣುಗಂ ಹುತಾಶನಿಗೆ
ರಾಮಾಗಮನದಾಶ್ವಾಸನದ ಕೃತಜ್ಞತೆಗೆ.

2) **ಇನ್ನು ಭರತನ ತಪಸ್ಸಿದ್ಧಿ**—ಈ ಘಟ್ಟದಲ್ಲಿ ಭರತ ಗುಹರ ಸಮಾಗಮ, ಭರತಾಂಜನೇಯರ ಸಮಾಗಮ, ಭರತ ಗುಹರ ಸಂಭಾಷಣೆ, ಭರತಾಂಜನೇಯರ ಸಂಭಾಷಣೆ, ಜಾನಕೀ ಚೋರನಂ ರಣಮುಖದಿ ಕೊಂದ ಕೋಸಲ ಧರಾನಾಥ ಮಹಿಮೆಯ ಕಥಾ ಕ್ಷೀರಮುಂ ಕುಡಿಯಲು ಸಮರ್ಥನಾದ ಭರತ, ಸ್ವಯಂ ಮುಖ್ಯ ಪಾತ್ರ ವಹಿಸಿದ್ದ ಅಂಜನೇಯನೇ ರಾಮಕಥಾಕ್ಷೀರ ಕುಡಿಸಲು ಸಿದ್ಧನಾದ ಸನ್ನಿವೇಶ, ಇವೆಲ್ಲ

"ತಪಸ್ಸಿದ್ಧಿ"ಕಥಾಭಾಗದಲ್ಲಿ ಅತ್ಯಂತ ಸುಂದರವಾದ ಮನೋಜ್ಞವಾದ, ರಸಘಟ್ಟ. ಭರತ ಗುಹ ಮತ್ತು ಆಂಜನೇಯನ ಸಂಭಾಷಣೆಗಳಿಗೆ ಕ್ರಮವಾಗಿ **ನೀಲಾಂಬರಿ, ಭೈರವಿ** ಮತ್ತು **ಶಹನಾ** ರಾಗಗಳನ್ನು ಬಳಸಿತ್ತು. ಆಂಜನೇಯ ನಂದೀಗ್ರಾಮ ಪ್ರವೇಶಮಾಡಿ ಭರತಾಶ್ರಮದ ಕುಟೀರವನ್ನು ಹೊಕ್ಕ ಸಂದರ್ಭಕ್ಕೆ **ತೋಡಿ** ರಾಗವನ್ನು ಸಂಯೋಜಿಸಿತ್ತು. ಭರತನಿಗೆ ಆಂಜನೇಯನು ಶ್ರೀ ರಾಮಚರಿತವನ್ನೊರೆದ ಸಂದರ್ಭಕ್ಕೆ **ಭೀಮ್ ಪಲಾಸ್** ರಾಗವನ್ನು ಹಾಕಿತ್ತು. ಭರತ, ಗುಹ ಮತ್ತು ಆಂಜನೇಯರ ಕಂಠವೈತ್ಯಾಸಗಳನ್ನು ತೋರಿಸುವುದಕ್ಕೆ ಬಳಸಿದ ರಾಗಗಳು ಆ ಪಾತ್ರಗಳಿಗೇ ಮೀಸಲಾಗಿತ್ತು.

"ಧ್ಯಾನಸ್ತಿಮಿತಲೋಚನಂ ಭರತನೊಯ್ಯನೆಯೆ
ಕಣ್ತೆರೆದು ನೋಡಿ, ಕಂಡನು ಮುಂದೆ ದಿಂಡುರುಳಿ
ದಂತ ಪ್ರಣಾಮಮಂ ಗೆಯ್ದಿರ್ದ ಗುಹನಂ
ನಿಷಾದನೃಪನಂ :"

ಇಲ್ಲಿಂದ ಸುಮಾರು ಒಂದೂಕಾಲು ಪುಟ ಭರತನ ಗುಹನ ಸಂಭಾಷಣೆಗಳಿಗೆ ಮೀಸಲಾಗಿವೆ. ಇವರ ಸಂಭಾಷಣೆಗಳು ಚುಟುಕ ಸಾಲಿನಿಂದ ಹಿಡಿದು ಮೂರು ನಾಲ್ಕು ಸಾಲುಗಳಷ್ಟು ಹರಡಿಕೊಳ್ಳುತ್ತದೆ. ಭರತನ ಉದ್ವೇಗ, ಗುಹನ ನಿಧಾನ ಮನೋಭಾವಗಳ ಪೂರಕಕ್ಕೆ ಹಿತಮಿತವಾಗಿ ರಾಗಸಂಚಾರ ಬಳಸಿ, ಧ್ವನಿ ಹಿಡಿತದಲ್ಲಿ ಶಕುಂತಲಾ ಬಾಯಿ ಭರತ ಗುಹರ ಸಂಭಾಷಣೆಗಳನ್ನು ಅಭಿವ್ಯಕ್ತಗೊಳಿಸಿದರು.

ಭರತಾಂಜನೇಯರ ಸಮಾಗಮ ಸಂಭಾಷಣೆಗಳು "ತಪಸ್ಸಿದ್ಧಿ"ಯಲ್ಲಿ ಮನೋಜ್ಞವಾಗಿ ಭಾವಗಳನ್ನು ಉಪ್ರೇಕಿಸುವ ಇನ್ನೊಂದು ಮಜಲು ಮುಟ್ಟುತ್ತದೆ. ಭರತನ ಉಪ್ರೇಕ, ಆಂಜನೇಯನ ಸಾಂತ್ವನ ಭಾವ ಇಲ್ಲಿ ಅಭಿವ್ಯಕ್ತವಾಗಬೇಕು. ಆಂಜನೇಯನು "ಗುರು ಹರಸಿ ಕೊಡುವನಿದೊ : ಕುಡಿ ಮೊದಲ್ ಫಲರಸದ ಪಾನೀಯಮಂ, ಪೂಜ್ಯ ! ಕುಡಿಯಲ್ ಸಮರ್ಥನಹೆ, ತದನಂತರಂ, ನಾನೊರೆಯಲಿರ್ಪ ಜಾನಕೀ ಚೋರನಂ ರಣಮುಖದಿ ಕೊಂದ ಕೋಸಲ ಧರಾನಾಥ ಮಹಿಮೆಯ ಕಥಾಕ್ಷೀರಮಂ!" ಎಂದು ಅಭಯ ನೀಡಿದ. ಭರತನು, ಪುರೋಹಿತನು ಕೊಟ್ಟ ಸ್ವಾದು ಫಲರಸ ಪೂರ್ಣಮಂ ಪೂರ್ಣಚಂದ್ರಿಕಾ ಚಾರು ಚಾಮೀಕರ ಸ್ಥಾಲಿಯಂ ಕೊಂಡನು ಕೈಗೆ :

"ರಾಮಚಂದ್ರಂ ಬಾಳ್ಗೆ ! ಗೆಲ್ಗೆ
ರಾಮಚರಿತಂ ! ಚಿರಂ ಜೀವಿಸುಗೆ ರಾಮಚರಿತಂ !"

ಎಂದು ಹಣ್ಣಿನ ರಸವನೀಂಟಿ ರಾಘವ ಕಥಾ ಕ್ಷೀರಸಾಗರವ ಕೇಳಲು ಸಿದ್ಧನಾದ.

"ಸ್ವಯಂ
ಮುಖ್ಯಪ್ರಾಣನೆ ಪೇಳ್ವನೆನೆ, ಕೇಳ್ದನೆನೆ ಭರತಂ
ದಿವ್ಯ ರಸ ಭರಿತಮಂ ಶ್ರೀ ರಾಮಚರಿತಮಂ
ಮತ್ತೆ ಕಬ್ಬಿಗನೊರೆವುದೇಂ ? ಮೊಗೆದನೀಂಟಿದನ್
ಮುಳುಗಿದನ್, ತೇಲ ನೀಜಿದನೇರಿ ದುಮುಕಿದನ್ !
ನೊರೆಯ ಐರಾವತಗಳೇರ್ದುವೆನೆ ತೆರೆತೆರೆಯ

ಕೈಲಾಸಗಿರಿಗಳಂ, ಕಲ್ಲೋಲಮುಯವಾಯ್ತು
ರಾಘವಕಥಾ ಕ್ಷೀರಸಾಗರಂ !

ಭರತನ ತಪಸ್ಸಿದ್ಧಿಯಾಯಿತು :

3) ಇನ್ನು **ಊರ್ಮಿಳೆಯ ತಪಸ್ಸಿದ್ಧಿ**ಯಾಗಬೇಕಲ್ಲ ! ಸರಯೂ ನದಿ ತಟದಲ್ಲಿ ಕುಟೀರ ಕಟ್ಟಿಕೊಂಡು ಊರ್ಮಿಳೆ ಹದಿನಾಲ್ಕು ವರ್ಷಗಳಿಂದ ಶ್ರೀ ರಾಮಸೀತಾ ಲಕ್ಷ್ಮಣರ ಸುಖಾಗಮನಕ್ಕಾಗಿ ತಪಸ್ಸು ಕೈಗೊಂಡಿದ್ದಾಳೆ. ಈವರೆಗೆ ಅಪೂರ್ವವಾಗಿದ್ದು, ಹದಿನಾಲ್ಕು ವರ್ಷಗಳ ಹಿಂದೆ ಸುಪರಿಚಿತವಾಗಿದ್ದ ಭೇರಿಯ **ಧಳಂಧಳಂಧಳಂ ಧಳಧ್ವನ** ಇದ್ದಕ್ಕಿದ್ದ ಹಾಗೆ ಮೊಳಗಿತು. ಕಿವಿಗೊಟ್ಟಳು ತಪಸ್ವಿನಿ ಊರ್ಮಿಳಾ ಸಂಭ್ರಮಕೆ. ಈ ಸನ್ನಿವೇಶಕ್ಕೆ **ಮಾಂಡ್** ರಾಗವನ್ನು ನಿಯೋಜಿಸಿತ್ತು.

"ಕಂಡಳೊಯ್ಯನೆಯೆ ತನ್ನ ತಂಗೆಯಂ
ಕರೆಕರೆಯತೋಡಿ ಬಂದಶ್ರುರುಚಿರಾಕ್ಷಿಯಂ
ಭರತಸತಿ ಮಾಂಡವಿಯನೂರ್ಮಿಳಾ ದೇವಿ:

ಇಲ್ಲಿಂದ ಮಾಂಡವಿಯೂರ್ಮಿಳಾದೇವಿಯರ ಸಂಭಾಷಣೆ ಹೃದಯಂಗಮವಾಗಿ ಮುಂದುವರಿಯುತ್ತದೆ. ಊರ್ಮಿಳೆಯ ಪಾತ್ರ ವೈಭವ ಸೃಷ್ಟಿ "ಶ್ರೀ ರಾಮಾಯಣ ದರ್ಶನಂ" ಮಹಾಕಾವ್ಯದಲ್ಲಿ ಕಳಶಕ್ಕೇರಿರುವುದು ಈ ಕೆಳಗಿನ ಸಾಲುಗಳಲ್ಲಿ ಸುಸ್ಪಷ್ಟವಾಗಿದೆ.

"ಏಳ್
ಏಳ್, ಅಕ್ಕ ! ಕೇಳ್, ಭೇರಿ ಚೀರುತಿದೆ ವಾರ್ತೆಯಂ"
ಸುಸ್ಥಿರೆ ತಪಸ್ವಿನಿಗೆ ಜೀವನುಸ್ಥಿರವಾಗಿ
ಗದ್ಗದಿಸಿದಳ್.
ದೇವರೈತಂದರೇನ್ ತಂಗೆ,
ವನವಾಸದಿಂ ?"
"ಬೇಗೆಮೇಳ್, ಪೋಗವೇಳ್ಕುಮಾ
ಸ್ವಾಮಿ ತಪಮಿರ್ಪ ನಂದೀಗ್ರಾಮುದಾಶ್ರಮಕೆ!"
"ಮೀಯದುಡದೆಯೆ ತೊಡದೆ ಪೋಪುದೇನವರೆಡೆಗೆ,
ತಂಗೆ ! ಮಂಗಳಮುಲ್ತು !"
"ನೋಡಬಾರದೇ ಅವರ್
ನಿನ್ನನಿಡುನೋಂಪಿಯಂ ?"
"ಚೀ! ಕಡಲ್ಗದಿರ್
ಪನಿಗೇಂ ಪ್ರದರ್ಶನಂ ? ದೇವರ ತಪಕ್ಕಿದಿರ್
ನಮ್ಮದೋರ್ ತೃಣಮಲ್ತೆ ! ಸಂತೋಷ ಸಮಯದೂಳ್
ತೋರ್ಪುದನುಚಿತವೆಮ್ಮ ಕಷ್ಟಮಂ ! ತನ್ನ ತಾನ್
ಇಲ್ಲಗೈವುದೆ ಎಲ್ಲ ಸಾಧನೆಗೆ ಕೊನೆಯ ಗುರಿ
ಮೇಣ್ ತಪಕೆ ಕೇಳ್, ತಂಗೆ, ಪರಮಪ್ರಯೋಜನಂ !"

ಹೀಗೆಂದು ಊರ್ಮಿಳೆ ಮಿಂದಳುಟ್ಟಳು ಬಿಳಿ ದಳಿಂಬಮುಂ ಮುಡಿಗೆ ನೂರ್ಮಡಿ ಮೆರೆಯೆ ಕಡುನೋಂಪಿ. ಸಿರಿಮುಡಿಗೆ ಪಣೆಗ ಮೋಣಡಿಗಳಿಗೆ ಕಟಿಯೆಡೆಗೆ ಸೌಮಿತ್ರಿಯಂ ನೆನೆದಲಂಕರಿಸಿದಳು ತನ್ನಯ್ದೆತನಮಂ.

4) ಊರ್ಮಿಳೆಯ ತಪಸ್ಸಿದ್ಧಿಯಾಯಿತು. ಇನ್ನು ಉಳಿದುಕೊಂಡವಳು ಕೈಕೆ ರಾಣಿ. ಆಕೆಯ ತಪಸ್ಸಿದ್ಧಿಯಾಗಬೇಕು. ಊರ್ಮಿಳೆ, ಮಾಂಡವಿಯನ್ನು ಕರೆದು ಕೊಂಡು ತನ್ನಾಣ್ಮ ನಂಬಿಕೆಯ ಅರಮನೆಗೆ ಹೋಗುತ್ತಾಳೆ. ತನ್ನಡಿಗೆ ಮಣಿದಳಂ ಪಿಡಿದೆತ್ತಿ ಬಿಗಿದಪ್ಪಿದಳ್ ಸುಮಿತ್ರಾದೇವಿ. ಸುಮಿತ್ರಾದೇವಿ, ಸೊಸೆಗೆ ಆಡುವ ಮಾತುಗಳಿವು :—

"ನಿನ್ನ ತಾಳಿಯ ಪುಣ್ಯಮೈಸಲೆ, ಮಗಳೆ ಮರಳ್ದುದು
ಕಾಡು ಪಾಲಾದೆಮ್ಮ ಕುಲದೇಳ್ಗೆ ! ಪಿರಿಯತ್ತೆಯರ್
ಕಾದಿಹರೆಮಗೆ ದೇವಿ ಕೌಸಲ್ಯೆ. ಕಿರಿಯತ್ತೆಯಂ
ಕಂಡು, ತನ್ನೊಡನೆ ನಂದೀಗ್ರಾಮುಕಾಕೆಯಂ
ಕರೆದೊಯ್ವ ಕರ್ತವ್ಯದಲಿ ತೊಡಗಿಪಳ್ ಪಿರಿಯ
ರಾಣಿ. ಊರ್ಮಿಳೆ ನಮ್ಮ ಸಂಕಟಕಿಂದು ಬಂದುದು
ವಿರಾಮಮಾ ಕೈಕೆಯ ಮನೋವ್ಯಥೆಗೆ ಪೇಳೆಂದು
ಬರ್ಪುದೊ ಪರಿಸಮಾಪ್ತಿ ?"

ಮೂವರೂ ಹಿರಿಯ ರಾಣಿ ಕೌಸಲ್ಯೆಯ ಮನೆಗೆ ನಡೆದರು.

ಈ ಭಾಗದಲ್ಲಿ ಮಾಂಡವಿಯ ಅವಸರ, ಊರ್ಮಿಳೆಯ ಸಾವಧಾನ ಮತ್ತು ಇವರಿಬ್ಬರಿಗೂ ಹಿರಿಯಳಾದ ಸುಮಿತ್ರಾ ದೇವಿಯ ಶಾಂತಭಾವಗಳು ಅಭಿವ್ಯಕ್ತವಾಗಿದೆ. ಈ ಮೂರು ಭಾವನೆಗಳನ್ನು ರಾಗವೈವಿಧ್ಯದಿಂದ ಹೊಮ್ಮಿಸಿ ಪ್ರದರ್ಶಿಸಬೇಕು. ಮಾಂಡವಿಯ ಕಂಠಕ್ಕೆ ಸಿಂಹೇಂದ್ರಮಧ್ಯಮ ಊರ್ಮಿಳೆಗೆ ಬಿಲಹರಿ ಮತ್ತು ಸುಮಿತ್ರಾದೇವಿಗೆ ಕಾನಡ ರಾಗಗಳನ್ನು ಬಳಸಿತ್ತು.

"ನಡೆದರನಿಬರುಂ ಕೈಕೆಯರಮನೆಗೆ. ಕಂಡರವಳಂ
ರಾಮಜನನಿಯ ತೋಳತಳ್ಕೆಯೊಳಳುತ್ತಿರ್ದಳಂ
ಕೃಶ ಮುಲಿನ ಮೂಕ ಶೋಕದ ಶಿಲಾಪ್ರತಿಮಳಂ.
ಪಾಳ್ವಿಳ ಪೂಜಾರಹಿತ ದೇವಮಂದಿರದ
ವಿಗ್ರಹಂಬೋಲ್ ಮ್ಲಾನೆಯಂ, ಸಂಸ್ಕಾರಹೀನೆಯಂ
ಗುರುದುರಿತ ದುಃಖಭಾರದಿ ಕುಸಿದ ಕಡುದೀನೆಯಂ.
ತನಗೆ ಮಣಿದೂರ್ಮಿಳೆಯನೆತ್ತಿ ಮುತ್ತೊತ್ತಿದಳ್
ಕೈಕೆ."

ಕೈಕೆಯ ದುಃಖದ ಮೋರೆಯನ್ನು ತಾನಳೆಯಲಾರೆ, ಚಿಕ್ಕವಳು, ಎಂದು ವಿನೀತಳಾಗಿ ಊರ್ಮಿಳೆ ತನ್ನ ಚಿಕ್ಕತ್ತೆಯನ್ನು ಸಾಂತ್ವನಗೊಳಿಸುವ ನುಡಿಗಳಿಗೆ ಸಾವೇರಿ ರಾಗ ಬಳಸಿತ್ತು.

"......... ತಾಯಿ, ನಿನಗಲ್ಲದಿನ್ನಾರ್ಗೆ, ಪೇಳ್
ಸಂಮಥಿತ ದಶರಥ ತನೂಜ ಜೀವಿತ ಕಥಾ
ಸಾಗರೋತ್ಥಿತ ಘೋರ ಗರಳಮಂ ಧರಿಸುವ
ಶಿವಾ ಶಿವ ಶ್ರೀಕಂಠ ಶಕ್ತಿ ? ಆಶೀರ್ವದಿಸು,
ಏಳ್, ಬಾರಮ್ಮ, ನೇಸರ್ ಬಳೆಯ ಬಾಳ್ ತುಂಬಿ
ಪರಿವುದಾನಂದ ಭಾಗೀರಥಿಯುಪೋಲ್ !"

ಕೈಕೆಯ ತಪಸ್ಸಿದ್ಧಿಯಾಯಿತು ಶ್ರೀರಾಮನಾಗಮನದಿಂದ. ಶ್ರೀ ರಾಮದರ್ಶನವಾದುದೇ ತಡ, ಕೈಕೆ,

"ಮುನ್ನಮಿರ್ದೆಡೆಯ
ಪಾಪ ಧ್ಯಾನದ ಭಾರಮನಿತುಂ ಕಳಲವೋಲ್
ತನ್ನಾತ್ಮಕೊಯ್ಕನೆಯೆ ನವಪುಣ್ಯಚೇತನಂ
ಕಾಂತಿ ಬುಗ್ಗೆಯ ತೆರದಿ ಚಿಮ್ಮಿ ಭರತನ ತಾಯಿ,
ಕೈಕೆ, ರಾಮನ ಮಹಾ ಮಹಿಮೆಯ ವಿಕಾಸನಕೆ
ತಾನೇ ಕಾರಣಳೆಂಬ ಜನಮನಭ್ರಾಂತಿಯಿಂ
ಬಿಡುತೆಗೊಂಡಾ ಕೈಕೆ ನಡೆದಳತಿಶಾಂತಿಯಿಂ
ಶ್ರೀ ರಾಮನೆಡೆಗೆ !"

ಶ್ರೀರಾಮ ಕೂಡಲೆ ಕೈಕೆಯ ಪಾದಗಳಿಗೆ ಮಣಿದ.

"ಪಿಡಿದೆತ್ತಿದಳು ತನ್ನಡಿಗೆ
ಮಣಿದಾತನಂ ! ನಿನ್ನ ಮೆಯ್ಯಂ ಪೆತ್ತ ತಾಯಲ್ತು,
ನಿನ್ನಾತ್ಮಮಂ ಪೆತ್ತಳಾನೆಂಬ ಪೆರ್ಮೆಯಂ
ಸುಡಿಯಿಲ್ಲದಯೆ ಮಡಿವಳೆಂಬಂತೆ ಪರಸಿದಳ್
ಚಿನ್ಮಯ ಮಹಾಮೌನದಿಂ !

ಶಕುಂತಲಾಬಾಯಿ ಕೈಕೆಯ ಶಾಂತಭಾವವನ್ನು ಅಭಿವ್ಯಕ್ತಪಡಿಸುವುದಕ್ಕೆ ಮೇಲಿನ ಸಾಲುಗಳಿಗೆ **ಶಂಕರಾಭರಣ** ರಾಗವನ್ನು ಬಳಸಿದ್ದರು. "ತಪಸ್ಸಿದ್ಧಿ" ಕಾವ ವಾಚನ ಒಂದೂವರೆ ಗಂಟೆಯ ಕಾಲ ತೆಗೆದುಕೊಂಡಿತು. ಆ ದಿನ ಆಕೆಯ ಕಾವ ವಾಚನಕ್ಕೆ ಕಾರ್ಯಕರ್ತರು ಕಾಲಮಿತಿಯನ್ನು ಹಾಕಿರಲಿಲ್ಲ. ಶ್ರೋತೃಗಳು ಮೂಕ ವಿಸ್ಮಯದಿಂದ ಕಥೆಯನ್ನು, ವಾಚನವೈಖರಿಯನ್ನು ಕೇಳುತ್ತಿದ್ದರು. ಕಾವ್ಯವಾಚನ ಮುಗಿದಾಗ ತಮ್ಮ ಮೆಚ್ಚುಗೆಯನ್ನು ದೀರ್ಘ ಕರತಾಡನದಿಂದ ವ್ಯಕ್ತಗೊಳಿಸಿದರು ಆಗಲೆ ಕುವೆಂಪು ಮುಚ್ಚಿದ್ದ ಕಣ್ಣು ತೆರೆದು ಸಭೆಯನ್ನು ನೋಡಿದ್ದು.

ಅತಿಥಿಭಾಷಣ ಮಾಡಬೇಕೆಂದು ಕಾರ್ಯಕರ್ತರು ಕುವೆಂಪುರವರನ್ನು ಪ್ರಾರ್ಥಿಸಿಕೊಂಡರು. ಕವಿವರ್ಯರು "ನಾನು ರಸಲೋಕದಲ್ಲಿ ವಿಹರಿಸುತ್ತಿದ್ದೇನೆ" ಇಷ್ಟು ಹೇಳಿ ಮೌನಿಯಾದರು. ಹೊಂಬೇಗೌಡರು ಕೆಲವೇ ನಿಮಿಷಗಳು ಮಾತನಾಡಿ ಕಾರ್ಯಕ್ರಮ ಮುಗಿಸಿದರು.

ಈ ಸಭೆಯಾದ ಮೇಲೆ ಇಂಥ ಸಭೆಗಳು ಅನೇಕವಾಗಿವೆ. ಆ ದಿವಸದ "ತಪಸ್ಸಿದ್ಧಿ" ಯಂತಹ ಕಾವ್ಯವಾಚನವನ್ನು ಶಕುಂತಲಾಬಾಯಿ ಈವರೆಗೆ ಬೇರೆಲ್ಲೂ ಮಾಡಲ ಸಾಧ್ಯವಾಗಿಲ್ಲ. ಹೊಂಬೇಗೌಡರು ಶಕುಂತಲಾಬಾಯಿಯ ಕಾವ್ಯವಾಚನಗಳನ್ನು ಕೇಳಿ

ದಾಗಲೆಲ್ಲ ಅವೊತ್ತಿನ ತಪಸ್ಸಿದ್ಧಿ ವಾಚನವನ್ನು ನೆನೆಸಿಕೊಳ್ಳುತ್ತಲೇ ಇದ್ದರು. ಕುವೆಂಪು ಅವರು ಕೂಡ ಹೊಂಬೇಗೌಡರ ಅಭಿಪ್ರಾಯವನ್ನೆ ತಳೆದಿದ್ದಾರೆ. ನಾನು, ಶಕುಂತಲಾ ಬಾಯಿ "ಉದಯರವಿ"ಗೆ ಹೋದಾಗಲೆಲ್ಲ ಮಂಡ್ಯದ ಸನ್ಮಾನ ಸಭೆಯ "ತಪಸ್ಸಿದ್ಧಿ" ವಾಚನದ ಪ್ರಸ್ತಾಪ ಬರುತ್ತದೆ. ವಿಷಯ ಮೆಲುಕು ಹಾಕುತ್ತೇವೆ. ಕುವೆಂಪು ತಮ್ಮ ಸ್ವಂತಕ್ಕೆ "ತಪಸ್ಸಿದ್ಧಿ"ಯನ್ನು ಶಕುಂತಲಾಬಾಯಿಯಿಂದ ಧ್ವನಿಮುದ್ರಿಸಿಕೊಂಡಿದ್ದಾರೆ. "ಚೆನ್ನಾಗಿದೆ" ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆದರೆ ಅದು ಮಂಡ್ಯದ ವಾಚನದ ಮೇಲ್ಮೆ ಗರಿಮೆಗಳನ್ನು ಮುಟ್ಟಲಿಲ್ಲವೆಂಬ ಭಾವನೆ ನಮ್ಮ ಮನಸ್ಸುಗಳಲ್ಲಿ ಇನ್ನೂ ಅಳಿಸಿಲ್ಲ. ಮೈಸೂರು ವಯಸ್ಕರ ಶಿಕ್ಷಣ ಪ್ರಚಾರ ಸಮಿತಿಯ ಅಧ್ಯಕ್ಷ ನ. ಭದ್ರಯ್ಯನವರು ಮಂಡ್ಯದ ಕುವೆಂಪು ಸತ್ಕಾರ ಸಮಾರಂಭದ ಅಧ್ಯಕ್ಷರಾಗಿದ್ದರು. ಅವರು ಶಕುಂತಲಾಬಾಯಿ ನಮಗೋಸ್ಕರ ದೀರ್ಘಾಯುವಾಗಿರಬೇಕು" ಎಂದರು. ಆಕಾಶ ಗುಡುಗಿದಂತೆ ಕರತಾಡನವಾಯಿತು.

* * *

ಮೈಸೂರು ಮುಖ್ಯಮಂತ್ರಿಗಳಾಗಿದ್ದ ಕೆಂಗಲ್ ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಅಧ್ಯಾಪಕರು, ವಿದ್ಯಾರ್ಥಿಗಳು ಕುವೆಂಪುಅವರಿಗೆ ಸನ್ಮಾನ ಸಭೆ ಏರ್ಪಡಿಸಿದ್ದರು. ಆಗ ಎಸ್. ಡಿ. ಡಿಸೌಜ ಅವರು ಮೈಸೂರು ವಿಶ್ವ ವಿದ್ಯಾನಿಲಯದ ಉಪಕುಲಪತಿಗಳಾಗಿದ್ದರು. ಶಕುಂತಲಾಬಾಯಿ ಶ್ರೀ ರಾಮಾಯಣ ದರ್ಶನಂ ಕಾವ್ಯದಿಂದ "ಫೈರ್‌ಗೆ ಕರೆವೊಯ್ ಓ ಅಗ್ನಿ" ಭಾಗದಿಂದ ಸ್ವಲ್ಪಭಾಗವನ್ನು ಕೆಲವು ನಿಮಿಷಗಳ ಕಾಲ ವಾಚನ ಮಾಡಿದರು. ಅಂದಿನ ವಾಚನವೂ ಹೃದಯಂಗಮ ವಾಗಿ ಸಭೆ ಮೆಚ್ಚುಗೆಗೆ ಪಾತ್ರವಾಯಿತು.

ಕುವೆಂಪು ಅವರ ಪರಮಮಿತ್ರ "ಆನಂದ" ಕಾವ್ಯನಾಮದಿಂದ ಪ್ರಖ್ಯಾತರಾಗಿದ್ದ ಅಜ್ಜಮ್‌ಪುರದ ಸೀತಾರಾಂ ಶಕುಂತಲಾಬಾಯಿಯ ಕಾವ್ಯವಾಚನ ಮುಗಿದ ಕೂಡಲೆ ಹತ್ತಿರಬಂದು "ಶಕುಂತಲಾಬಾಯಿ ನಮ್ಮ ಪುಟ್ಟಪ್ಪನ ಕಾವ್ಯಕ್ಕೆ ಗಮಕದ ಇಂಬು ಗೊಟ್ಟರಿ" ಎಂದು ಮನಸಾರ ಹೊಗಳಿದರು. ಆನಂದರೂ ನಮ್ಮ ಅಭಿಮಾನಿಗಳ ಪಂಕ್ತಿ ಯಲ್ಲಿ ಗಣ್ಯರು.

ಮೈಸೂರು ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ಕೆ. ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ಕುವೆಂಪು ಸನ್ಮಾನಸಭೆ ನಡೆದು ಹತ್ತಿರಹತ್ತಿರ ಒಂದು ವರ್ಷ ಕಳೆದಿತ್ತು. ಒಂದು ದಿನ ದಿಢೀರನೆ ಮೂವತ್ತು ರೂಪಾಯಿಗಳ ಮನಿಯಾರ್ಡರ್ ಶಕುಂತಲಾ ಬಾಯಿಯ ಹೆಸರಿಗೆ ಬಂತು. ಹಣ ತೆಗೆದುಕೊಂಡುದೇನೋ ಆಯಿತು. ಶಕುಂತಲಾ ಬಾಯಿಗೆ ಪರಮಾಶ್ಚರ್ಯ ! ಕಾರಣ, ಹಿಂದೆಯೇ ರೈಲ್ವೆ ಪ್ರವಾಸದ ವೆಚ್ಚ, ಪ್ರವಾಸದ ಭತ್ಯ ಇತ್ಯಾದಿ ಇತ್ಯಾದಿ ಪಡೆದು ಆ ವ್ಯವಹಾರ ಮುಗಿದಿತ್ತು. ಈಗ ಅದೇ ಬಾಬ್ತು ಮೂವತ್ತು ರೂಪಾಯಿ ಇನ್ನೊಮ್ಮೆ ಪಡೆಯುವುದೆಂದರೆ ಯಾವ ನ್ಯಾಯ, ಯಾವ ಕಾರಣಕ್ಕಾಗಿ ? ಇದು ಸರಿಯೇ ? ನಮ್ಮಿಬ್ಬರಿಗೂ ಮನಸ್ಸು ಒಪ್ಪಿರಲಿಲ್ಲ.

ಕೆಲವು ದಿವಸಗಳ ಮೇಲೆ ಯಾವುದೋ ಸಂದರ್ಭದಲ್ಲಿ ಜೇ. ಜವರೇಗೌಡರನ್ನು ಭೇಟಿಯಾದೆವು. "ಉ. ಕಾ. ಸುಬ್ರಾಯಾಚಾರ್ ಮೂವತ್ತು ರೂಪಾಯಿಗಳ ಮನಿ ಯಾರ್ಡರು ಕಳಿಸಿದ್ದಾರೆ. ಕಾರಣ ತಿಳಿಯಲಿಲ್ಲ" ಎಂದೆ ನಾನು. ಜವರೇಗೌಡರು ಕೂಡಲೆ "ಕುವೆಂಪು ಸನ್ಮಾನ ಸಭೆಗೆಂದು ಸಂಗ್ರಹಿಸಿದ ಹಣದಲ್ಲಿ ಮೂವ್ವತ್ತು ರೂಪಾಯಿಗಳ ಉಳಿಕೆಯಾಗಿತ್ತು. ಅದನ್ನು ಹೇಗೆ ವಿನಿಯೋಗಿಸಬೇಕೆಂದು ತಿಳಿಯಲಿಲ್ಲ. ಕುವೆಂಪು ನೇರವಾಗಿ "ಶಕುಂತಲಾಬಾಯಿಯವರಿಗೆ ಕಳಿಸಿ" ಎಂದು ಸಲಹೆಯಿತ್ತರು. ಆ ಹಣವೇ ನಿಮಗೆ ಸಂದುದು" ಎಂದರು.

ಕುವೆಂಪು ಅವರು ನಮ್ಮ ಬಗೆಗೆ ತಳೆದಿದ್ದ ಪ್ರೀತಿ ವಿಶ್ವಾಸಗಳಿಗೆ ಕೃತಜ್ಞರಾಗಿ ಕವಿವರ್ಯರಿಗೆ ಮನದಲ್ಲಿಯೇ "ನಮನ"ವೆಂದೆವು.

"ಉದಯರವಿ"ಗೆ ಹೋದಾಗಲೆಲ್ಲ ಕುವೆಂಪು, ಅವರ ಸಹಧರ್ಮಿಣಿ ಹೇಮಾವತಿ ತಾಯಿ, ಮಕ್ಕಳು ಇಂದುಕಲ, ತಾರಿಣಿಯರು ತೋರಿರುವ ಪ್ರೀತಿ ವಿಶ್ವಾಸಗಳು ಅಸದೃಶವಾದುದು.

"ಸಂಗೀತರತ್ನ" ಟಿ. ಚೌಡಯ್ಯನವರ ಹೃದಯ ಶ್ರೀಮಂತಿಕೆ

ಕುವೆಂಪು "ಶ್ರೀರಾಮಾಯಣ ದರ್ಶನಂ" ಕಾವ್ಯಕ್ಕೆ ರಾಷ್ಟ್ರಪ್ರಶಸ್ತಿ ದೊರೆತುದಕ್ಕೆ ಗೌರವ ಸಲ್ಲಿಸುವುದಾಗಿ ಕುವೆಂಪು ಅವರಿಗೆ ಏರ್ಪಡಿಸಿದ್ದ ಸನ್ಮಾನ ಸಭೆಗಳಲ್ಲಿ ನೀಲಗಿರಿಯ ಕರ್ಣಾಟಕ ಸಂಘದ ಸನ್ಮಾನ ಸಭೆ ಕಳಶಪ್ರಾಯವಾದುದು. ಜತೆಯಲ್ಲಿ ಹೊಂಬೇಗೌಡರಿಗೂ ಅವರು ಶ್ರೇಷ್ಠ ನ್ಯಾಯಾಲಯದ ನ್ಯಾಯಮೂರ್ತಿಗಳಾದುದಕ್ಕಾಗಿ ಸನ್ಮಾನವೇರ್ಪಟ್ಟಿತ್ತು.

ಬೆಳಗ್ಗೆ ಅಷ್ಟು ಹೊತ್ತಿಗೇ ಹೊಂಬೇಗೌಡರು ನಮ್ಮ ಮನೆಗೆ ದಯಮಾಡಿಸಿದರು. ನಾನು, ಶಕುಂತಲಾಬಾಯಿ, ನಮ್ಮ ಮೂವರು ಮಕ್ಕಳು ಚಿ|| ವನಜ, ಮೋಹನ, ವತ್ಸಲ, ಇವರನ್ನೂ ತಮ್ಮ ಕಾರಿನಲ್ಲಿ ಕೂಡಿಸಿಕೊಂಡು ನೀಲಗಿರಿಯತ್ತ ಹೊರಟರು.

ನಿಯಮಿತ ಕಾಲದಲ್ಲಿ ಸುಮಾರು ಒಂಬತ್ತೂವರೆ ಗಂಟೆಯ ಎಳೆಬಿಸಲಲ್ಲಿ ಮೈಸೂರು ಸೇರಿದೆವು. ಮೈಸೂರು ವಯಸ್ಕರ ಶಿಕ್ಷಣ ಸಮಿತಿಯ ಅಧ್ಯಕ್ಷರಾಗಿದ್ದ ನ. ಭದ್ರಯ್ಯನವರ ಮನೆಯಲ್ಲಿ ಆತಿಥ್ಯ. ಅನಂತರ ಅವರು, ಜೇ. ಜವರೇಗೌಡರು, ಇನ್ನೂ ಕೆಲವರು ನಮ್ಮ ಜೊತೆ ಬೇರೆ ಕಾರಿನಲ್ಲಿ ಹೊರಟರು.

ಮಧ್ಯಾಹ್ನ ಒಂದು ಒಂದೂವರೆ ಗಂಟೆಗೆ ನೀಲಗಿರಿ ಸೇರಿ ಅಲ್ಲಿದ್ದ ಪ್ರಸಿದ್ಧ ಶ್ರೀಮಂತ ಗಿರಿಯಪ್ಪಗೌಡರ ಅತಿಥಿಗಳಾದೆವು. ಅವರು ಮಂಡ್ಯದ ವಕೀಲ ರಾಮೇಗೌಡರ ಮಾವಂದಿರು.

27–5–1957ರ ಸಂಜೆ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರ್ ಅವರ ಅಧ್ಯಕ್ಷತೆಯಲ್ಲಿ ನಗರಭವನದಲ್ಲಿ ಕುವೆಂಪು ಅವರಿಗೆ ಮತ್ತು ಹೊಂಬೇಗೌಡರಿಗೆ ವಿಜೃಂಭಣೆಯ ಸನ್ಮಾನ. "ಸಂಗೀತ ರತ್ನ" ಮೈಸೂರು ಟಿ. ಚೌಡಯ್ಯನವರ ಪಿಟೀಲು ವಾದನ-

ಅನಂತರ ಶಕುಂತಲಾಬಾಯಿಯ "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನ. ಶಕುಂತಲಾಬಾಯಿಗೆ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರ್ ಮತ್ತು ಚೌಡಯ್ಯನವರ ಎದುರಿಗೆ ಕಾವ್ಯವಾಚನವನ್ನು ಮಾಡಿ ಹೇಗೆ ನಿಭಾಯಿಸಿಕೊಳ್ಳುವುದೆಂದು ಮನಸ್ಸಿನಲ್ಲಿ ಅಳುಕು. ಏಕೆಂದರೆ ಸರ್. ಸಿ. ಪಿ. ರಾಮಸ್ವಾಮಿ ಅಯ್ಯರ್ ಕರ್ಣಾಟಕ ಸಂಗೀತದಲ್ಲಿ ಘನವಿದ್ವಾಂಸರು. ವಿಮರ್ಶಕರು, ಮಹಾರಸಿಕರು. ನಮ್ಮ ಮೈಸೂರು ಚೌಡಯ್ಯನವರಾದರೋ ಅನಭಿಷಕ್ತ ಸಂಗೀತ ಸಾರ್ವಭೌಮ. ಭಾರತ ರಾಷ್ಟ್ರದಲ್ಲೇ ಪ್ರಖ್ಯಾತರಾಗಿ ಪಿಟೀಲು ವಾದನದಲ್ಲಿ ಸಾಟಿಯಿಲ್ಲದ ಮಹಾಗಾರುಡಿಗ. ಇಂಥ ಘಟಾನುಘಟಿ ಪ್ರಸಿದ್ಧರ ಮುಂದೆ ತನ್ನ ಕಾವ್ಯವಾಚನ ಕಳೆಗಟ್ಟೀತೆ ? ಎಂಬ ಅಳುಕು ಶಕುಂತಲಾಬಾಯಿಯನ್ನು ಬಾಧಿಸಿದುದು ಸಹಜವಾಗಿತ್ತು.

ಪ್ರಾರ್ಥನೆ, ಸ್ವಾಗತ ಕಾರ್ಯಕಲಾಪಗಳಾದ ಮೇಲೆ ಚೌಡಯ್ಯನವರು, ಟಿ. ಗುರುರಾಜಪ್ಪನವರ ಸಹಾಯ ಪಿಟೀಲು, ಟಿ. ಮೂಗಯ್ಯನವರ ಮೃದಂಗ ಪಕ್ಕ ವಾದ್ಯದೊಡನೆ ಸುಮಾರು ಒಂದು ಗಂಟೆಯಕಾಲ ಭರ್ಜರಿಯಾಗಿ ತನಿವಾದ್ಯ ಪಿಟೀಲು ಕಚೇರಿ ನಡೆಸಿ ಶ್ರೋತೃಗಳ ಮನಸ್ಸನ್ನು ಸೂರೆಗೊಂಡರು. ಅನಂತರ ಶಕುಂತಲಾ ಬಾಯಿ ವೇದಿಕೆಯೇರಿ ಒಂದು ಗಂಟೆಯಷ್ಟು ಕಾಲ "ಶ್ರೀ ರಾಮಾಯಣ ದರ್ಶನಂ" ಕಾವ್ಯದಿಂದ "ಶಬರಿಗಾದನು ಅತಿಥಿ ದಾಶರಥಿ" ಕಥಾಭಾಗವನ್ನು ವಾಚಿಸಿದರು. ಶ್ರೋತೃಗಳು ಕಿವಿಗೊಟ್ಟು ಕೇಳಿದರು.

ಅಧ್ಯಕ್ಷತೆ ವಹಿಸಿದ್ದ ಸರ್. ಸಿ. ಪಿ. ರಾಮಸ್ವಾಮಿ ಅಯ್ಯರ್, ಟಿ. ಚೌಡಯ್ಯನವರ ಮತ್ತು ಶಕುಂತಲಾಬಾಯಿಯ ಕಲಾಭಿಜ್ಞತೆಯನ್ನು ಶ್ಲಾಘಿಸಿದರು.

ಸನ್ಮಾನ ಸಭೆ ಮುಗಿಯಿತು. ರಾತ್ರಿ ಸುಮಾರು ಒಂಬತ್ತು ಒಂಬತ್ತೂವರೆ ಗಂಟೆಯ ಸಮಯ. ಊಟ ಮುಗಿಸಿ ಕುವೆಂಪು, ಚೌಡಯ್ಯ, ನ. ಭದ್ರಯ್ಯ, ಜವರೇಗೌಡರು, ನಾನು ಮತ್ತು ಶಕುಂತಲಾಬಾಯಿ ಒಂದು ಕಡೆ ಕುಳಿತು ಲೋಕಾಭಿರಾಮವಾಗಿ ಮಾತಾಡುತ್ತಿದ್ದೇವೆ. ಅಂದಿನ ಕಾವ್ಯವಾಚನದ ಪ್ರಸ್ತಾಪ ಬಂದು, ಚೌಡಯ್ಯನವರು "ನನಗೆ **ನವರಸ ಕನ್ನಡ** ರಾಗ ಬಹಳ ಪ್ರಿಯವಾದುದು. ಶಕುಂತಲಾಬಾಯಿ ಸಂದರ್ಭಕ್ಕೆ ಉಚಿತವಾಗಿ ನನ್ನ ಪ್ರಿಯವಾದ ರಾಗವನ್ನು ಸಂಯೋಜಿಸಿ ಕಾವ್ಯವಾಚನ ಮಾಡಿದರು. ನನಗೆ ಕೇಳಿ ಬಹಳ ಸಂತೋಷವಾಯಿತು" ಎಂದರು. ಕುವೆಂಪು ತಟ್ಟನೆ "ಹೌದು ಹೌದು, ನನ್ನ ಕಾವ್ಯವನ್ನು ಜನಪ್ರಿಯಮಾಡುವುದಕ್ಕೆ ಶಕುಂತಲಾಬಾಯಿ, ಪಾಂಡುರಂಗರಾವ್ ದಂಪತಿ ತುಂಬ ಶ್ರಮಿಸಿದ್ದಾರೆ"ಎಂದು ವಿಶ್ವಾಸದ ಮಾತಾಡಿದರು. ಹೊಂಬೇಗೌಡರು "ಇಂದಿನ ಕಾವ್ಯವಾಚನ ಅದ್ಭುತವಾಗಿತ್ತು" ಎಂದರು. ಅದನ್ನು ಅವರು ಧ್ವನಿಮುದ್ರಿಕೆ ಮಾಡಿಕೊಂಡರು. ನೀಲಗಿರಿಯ ಕಾರ್ಯಕ್ರಮವಾದಮೇಲೆ ಹೊಂಬೇಗೌಡರು "ಶಬರಿಗಾದನು ಅತಿಥಿ ದಾಶರಥಿ" ವಾಚನವನ್ನು ಅನೇಕ ಸಲ ಅನೇಕ ಸಭೆಗಳಲ್ಲಿ ಕೇಳಿದ್ದಾರೆ. ಆದರೆ ನೀಲಗಿರಿಯ ಕಾವ್ಯವಾಚನ ನಭೂತೋ ನಭವಿಷ್ಯತಿಯಾಗಿ ಉಳಿದಿದೆ.

“ಶಬರಿಗಾದನು ಅತಿಥಿ ದಾಶರಥಿ” ಕಥಾಭಾಗದಲ್ಲಿ ಶಬರಜ್ಜಿ ಮಿಂದು ಬಂದ ರಾಮಸೌಮಿತ್ರಿಗಳಿಗೆ ಆತಿಥ್ಯ ನೀಡುತ್ತಾಳಲ್ಲ, ಆ ಹದಿನೆಂಟು ಸಾಲುಗಳಿಗೆ ಶಕುಂತಲಾ ಬಾಯಿ **ನವರಸ ಕನ್ನಡ** ರಾಗವನ್ನು ಸಂಯೋಜಿಸಿದ್ದರು.

“ಅನಿತರೊಳ್
ಮಿಂದು ಬಂದರು ರಾಮ ಸೌಮಿತ್ರಿ, ಕಪ್ಪಿರ್ದ
ಕನಕಮುಂ ಕೂರ್ಜಿಸಿದವೋಲಾಗೆ, ಸೋಜಿಗದ
ಸೂಜಿಮೊನೆ ಏರಿದತ್ತಜ್ಜಿಯ ಕುತೂಹಲಂ
ಬೇಡರದೆತ್ತಣಿಂದಾ ತೇಜಮಾಳ್ತನಂ ಮೇಣ್
ಸುಣ್ಪುಸುಡಿ, ನಯದ ನಡೆ ? ದೊರೆಮಕ್ಕಳಿರವೇಳ್ಕುಮ್
ಎಂದು ಮತಂಗ ಮುನಿ ಶಿಷ್ಯೆ (ಸೀತೆಯನುಳಿದು
ಬಂದನೀತಂ ರಾಮನಲ್ಲೆಂದು ತರಿಸಂದು)
ನಳನಳಿಪ ಸುಳಿದಳಿರ ಕುಡಿವಾಳೆಯುಂ ಪಾಸಿ;
ಗೀಕುಚಾಪೆಯ ಮಣೆಗಳಂ ಕುಳಿತುಕೊಳಲಿಕ್ಕಿ;
ಪಸುರ್ದೊನ್ನೆಗಳಲಿ ತಿಳಿನೀರ್ಗಳಂ, ಸಸಿಯಡಕೆ
ಹೊಂಬಾಳೆಗಳಲಿ ಕೆನೆವಾಲ್ಗಳಂ ಜೇನುತುಪ್ಪಮುಂ
ತಂದಿಟ್ಟು; ನೂಲಗೆಣಸಂ, ಬಾಳೆವಣ್ಗಳಂ
ಕಂದಮೂಲಂಗಳಂ, ಹಣ್ಣು ಹಂಪಲ್ಗಳಂ
ಸೌತೆ ಪಚ್ಚಡಿಗಳಂ, ಮಣಿಹೆಂಬೆಯುಂ, ಮತ್ತೆ
ಹಚ್ಚನಕ್ಕಿಯ ಬೆಚ್ಚನನ್ನಮುಂ ಮೊಸರುಮುಂ
ಬೆಲ್ಲಮುಂ ಬೆಣ್ಣೆಯುಂ ಬಡಸಿ, ಸವಿ ನುಡಿ ನುಡಿಸಿ
ಮುಗುಳುನಗುತೆಂದಳಿಂತು :

ಮಲೆನಾಡ ಸಿರಿಯುಣಿಸನ್ನು ಕುವೆಂಪು ಈ ಸಾಲುಗಳಲ್ಲಿ ತುಂಬಿ ಶ್ರೀಮಂತಗೊಳಿಸಿದ್ದಾರೆ. ಶಕುಂತಲಾಬಾಯಿ ಈ ಸಾಲುಗಳನ್ನು ವಾಚಿಸಿದಾಗಲೆಲ್ಲ ಶ್ರೋತೃಗಳು ಶಬರಜ್ಜಿ ಶ್ರೀರಾಮಸೌಮಿತ್ರಿಗಳಿಗೆ ಆತಿಥ್ಯ ನೀಡುತ್ತಿರುವ ಚಿತ್ರವನ್ನು ಕಲ್ಪಿಸಿಕೊಂಡು “ನಾವು ಪ್ರತ್ಯಕ್ಷವಾಗಿಯೇ ಶಬರಜ್ಜಿ ರಾಮಲಕ್ಷ್ಮಣರನ್ನು ಕಂಡ ಸುಖ ಅನುಭವಿಸಿದಂತಾಯಿತು” ಎಂದು ಆನಂದಪರವಶರಾಗಿ ಸ್ತುತಿಮಾಡಿದ್ದಾರೆ. ಮೈಸೂರು ವಯಸ್ಕರ ಶಿಕ್ಷಣ ಸಮಿತಿಯ ಮುಂದೆ, 1958ರಲ್ಲಿ ಶಕುಂತಲಾಬಾಯಿಯ ಕಂಠದಾನ ಪಡೆದು “ಶಬರಿಗಾದನು ಅತಿಥಿ ದಾಶರಥಿ” ಭಾಗವನ್ನು ವಾಕ್ಚಿತ್ರವನ್ನಾಗಿ ತಯಾರಿಸಿದುದು ಈಗ ಬಹಳ ಹಳೆಯ ಸಂಗತಿಯಾಗಿದೆ.

ನೀಲಗಿರಿಯ ಸನ್ಮಾನ ಸಮಾರಂಭ ನಡೆಯುವುದಕ್ಕೆ ಮೂರು ನಾಲ್ಕು ವರ್ಷಗಳ ಹಿಂದೆ ಮೈಸೂರಿನಲ್ಲಿ ಸಾಧ್ವಿ ದಿನಪತ್ರಿಕೆಯ ಕಚೇರಿಯಟ್ಟದ ಮೇಲೆ ಶಕುಂತಲಾ ಬಾಯಿಯ “ಶಬರಿಗಾದನು ಅತಿಥಿ ದಾಶರಥಿ”ಕಾವ್ಯವಾಚನವೇರ್ಪಟ್ಟಿತ್ತು. ಮೈಸೂರಿನ ಅನೇಕ ಕಾವ್ಯಾಭಿಮಾನಿಗಳು ಅಲ್ಲಿ ಆಗಮಿಸಿದ್ದರು. ಅಗರಂ ರಂಗಯ್ಯ, ನ. ಭದ್ರಯ್ಯ, ಜವರೇಗೌಡರು ಪರಮೇಶ್ವರಭಟ್ಟ ಹೀಗೆ. ಕಾವ್ಯವಾಚನವಾದಮೇಲೆ ನ. ಭದ್ರಯ್ಯನವರಿದ್ದರು ವಂದನಾರ್ಪಣೆ ಮಾಡುವುದಕ್ಕೆ. “ನಾನೇ ಏಕಾಂತವಾಗಿ ಕುಳಿತು

ಕುವೆಂಪು "ಶ್ರೀ ರಾಮಾಯಣ ದರ್ಶನಂ" ಕಾವ್ಯ ಓದಿಕೊಂಡು ಸುಖಪಟ್ಟಿದ್ದೇನೆ. ಆದರೆ ಈ ದಿನ ಶಕುಂತಲಾಬಾಯಿ ವಾಚನಮಾಡಿದಾಗ, ನಾನು ಓದಿದಾಗ ಭಾವಾರ್ಥ ಗ್ರಹಿಸಿ ಪಡುವ ರಸಾನುಭವಕ್ಕೆ ಹತ್ತುಪಟ್ಟು ರಸಾನುಭವ ಪಡೆದೆ. ನಾನು ಓದಿದಾಗ ಗೋಚರಿಸದ ಅನೇಕ ಅರ್ಥಭಾವಗಳು ಶ್ರೀಮತಿಯವರ ವಾಚನದಿಂದ ಗೋಚರಿಸಿದವು" ಎಂದರು. ಗಮಕಿಯು **ಕವಿಗೆ ಕಂಠ** ಮಾತ್ರವಲ್ಲ **ಭಾಷ್ಯಕಾರನೂ** ಆಗಬಲ್ಲ ಎಂಬ ಧ್ವನಿ ನ. ಭದ್ರಯ್ಯನವರ ಅಭಿಪ್ರಾಯದಲ್ಲಿ ಸೂಚ್ಯವಾಗಿತ್ತು.

ನೀಲಗಿರಿಯ ಸನ್ಮಾನ ಸಭೆ ಮುಗಿದ ಮಾರನೆಯ ದಿನ ನಮ್ಮನ್ನು ಬೆಂಗಳೂರಿಗೆ ಕಳಿಸುವ ಏರ್ಪಾಡಾಯಿತು. ಆ ಸಮಯದಲ್ಲಿ ಚೌಡಯ್ಯ, ಕುವೆಂಪು, ಹೊಂಜೇಗೌಡರು ಮತ್ತು ಶಕುಂತಲಾಬಾಯಿಯಿರುವ ಛಾಯಾಚಿತ್ರವನ್ನು ತೆಗೆದರು. ನ. ಭದ್ರಯ್ಯ, ದೇ. ಜವರೇಗೌಡರೂ ಈ ಛಾಯಾಚಿತ್ರದಲ್ಲಿದ್ದಾರೆ. ಇದೊಂದು ಅಪೂರ್ವವಾದ, ಇನ್ನಾರಲ್ಲಿಯೂ ಇರದ ನಮ್ಮ ಛಾಯಾಚಿತ್ರ ಸಂಗ್ರಹದಲ್ಲಿರುವ ಛಾಯಾಚಿತ್ರವಾಗಿದೆ.

ಮಾರನೆ ದಿನ ಜೀಪಿನಲ್ಲಿ, ಚೌಡಯ್ಯ, ಗುರುರಾಜಪ್ಪ, ಮೂಗಯ್ಯನವರುಗಳು ನಮ್ಮ ಜೊತೆಯಲ್ಲಿದ್ದರು. ಚೌಡಯ್ಯನವರ ಜೊತೆಯಲ್ಲಿ ನಾವುಗಳು ಇದ್ದುದು ನಮ್ಮ ಜೀವನವಲ್ಲಿ ಒಂದು ಚಿರಸ್ಮರಣೀಯ ರಸಘಳಿಗೆ. ಮಾರ್ಗಮಧ್ಯದಲ್ಲಿ ನಮ್ಮ ತಿಂಡಿ ಊಟಗಳ ವ್ಯವಸ್ಥೆಯನ್ನೆಲ್ಲ ಚೌಡಯ್ಯನವರೇ ನೋಡಿಕೊಂಡರು. ನನ್ನ ಎರಡನೇ ಮಗಳು ವತ್ಸಲ ಐದು ವರ್ಷಗಳ ಮುದ್ದು ಕಂದ. ಮುದ್ದು ಮುದ್ದು ಮಾತುಗಳಿಂದ ಪ್ರಯಾಣದ ಆಯಾಸವನ್ನು ಪರಿಹಾರಮಾಡುತ್ತಿದ್ದಳು. ಚೌಡಯ್ಯನವರಿಗೆ ಮಗುವಿನ ತೊದಲು ಮುದ್ದು ಮಾತುಗಳನ್ನು ಕೇಳಿ ಖುಷಿಯೋ ಖುಷಿ. ಆಕೆಗೆ ಪಾಟಿ ಎಂದು ನಾಮಕರಣ ಮಾಡಿದರು. "ಪಾಟಿ" ಅರ್ಥ ತಿಳಿಯದು ಮಗುವಿಗೆ. "ಪಾಟಿ" ಎಂದು ಕರೆದಾಗಲೆಲ್ಲ ಆಕೆಯ ಮುಖ ಹಿರಿಹಿರಿ ಹಿಗ್ಗಿ ಆಗತಾನೆ ಎಸಳುಬಿರಿದ ತಾವರೆಯಂತೆ ಅರಳುತ್ತಿತ್ತು.

ನಂಜನಗೂಡಿಗೆ ಜೀಪು ರಾತ್ರಿ ಸುಮಾರು ಏಳು ಗಂಟೆಗೆ ತಲುಪಿತು. ಚೌಡಯ್ಯನವರು ನಮ್ಮನ್ನು ಇಳಿಸಿದರು. ದೇವಸ್ಥಾನಕ್ಕೆ ಕರೆದೊಯ್ದು ನಂಜುಂಡೇಶ್ವರನ ದರ್ಶನ ಮಾಡಿಸಿದರು. ಜೀಪು ಮೈಸೂರ ಕಡೆ ಹೊರಟಿತು.

ಮೈಸೂರಿನಲ್ಲಿ ಜೀಪು ನೇರವಾಗಿ ಕೃಷ್ಣಮೂರ್ತಿಪುರದಲ್ಲಿದ್ದ ಚೌಡಯ್ಯನವರ ಮನೆಯ ಮುಂದೆ ನಿಂತಿತು. ಚೌಡಯ್ಯನವರು "ತಾಯಿ ಇಳಿಯಿರಿ. ಈ ದಿನ ನಮ್ಮ ಅತಿಥಿಗಳಾಗಿದ್ದು ನಾಳೆ ಬೆಳಗ್ಗೆ ಬೆಂಗಳೂರಿಗೆ ಪ್ರಯಾಣ ಬೆಳೆಸಿ" ಎಂದರು. ಅವರು ಮಾರ್ಗ ಮಧ್ಯದಲ್ಲಿ ನಮಗೆ ಸುಳಿವೇ ಕೊಟ್ಟಿರಲಿಲ್ಲ. ನಾವು ಆ ರಾತ್ರಿಯೇ ಬೆಂಗಳೂರಿಗೆ ಹೊರಡಬೇಕಾಗಿತ್ತು. ಶಕುಂತಲಾಬಾಯಿಯ ಕಿರಿಯ ತಮ್ಮ ಸತ್ಯನಾರಾಯಣನ ಉಪನಯನದ ನಿಮಿತ್ತ ಮಾರನೇದಿನ ದೇವರ ಸಮಾರಾಧನೆ. ನಮ್ಮ ತಾಪತ್ರಯವನ್ನು ಚೌಡಯ್ಯನವರು ಕಿವಿಯ ಮೇಲೆ ಹಾಕಿಕೊಳ್ಳಲೇ ಇಲ್ಲ. "ನಾಳೆ ಬೆಳಗ್ಗೆ

ಅಷ್ಟು ಹೊತ್ತಿಗೇ ಕಳಿಸಿಕೊಡುತ್ತೇನೆ. ಈಗ ಇಳಿದು ಬಿಡಿ" ಎಂದು ನಮ್ಮನ್ನು ಇಳಿಸೇ ಬಿಟ್ಟರು. ಬಿಡದಿ ಕೊಠಡಿಯಲ್ಲಿ ನಮ್ಮ ಬಿಡಾರವಾಯಿತು. ಚೌಡಯ್ಯ ಒಳಗಿನಿಂದ ಟಿಫನ್ ಕ್ಯಾರಿಯರು ತಂದರು, ನನ್ನನ್ನು ಕೂಡಿಸಿಕೊಂಡು ತಮ್ಮ ಕಾರನ್ನು ತಾವೇ ನಡೆಸಿಕೊಂಡು ಮಾಡರ್ನ್ ಹಿಂದೂ ಹೋಟಲಿಗೆ ಹೋದರು. ಟಿಫನ್ ಕ್ಯಾರಿಯರಿ ನಲ್ಲಿ ನಮ್ಮ ಊಟ ತುಂಬಿಸಿದರು. "ನೀವು ಹಿಡಿದುಕೊಳ್ಳಿ" ಎಂದರು ಊಟದ ವೆಚ್ಚ ತಾವೇ ತುಂಬಿದರು.

ನಾವು ಆ ರಾತ್ರಿ ಚೌಡಯ್ಯನವರ ಅತಿಥಿಗಳಾಗಿ ಉಳಿದೆವು. ಬೆಳಗಾಯಿತು. ಸ್ನಾನದ ಏರ್ಪಾಡಾಗಿತ್ತು ಮನೆಯಲ್ಲೇ. ನಾವು ಸ್ನಾನ ತೀರಿಸಿ ಪ್ರಯಾಣಕ್ಕೆ ಸಿದ್ಧ ವಾದೆವು. ಒಬ್ಬ ಬ್ರಾಹ್ಮಣ ಹುಡುಗ ಮಾಣಿಯ ಕೈಯಲ್ಲಿ ಕಾಫಿ ಉಪಹಾರದ ತಟ್ಟೆ ಹೊರಿಸಿಕೊಂಡು ಚೌಡಯ್ಯ ದಂಪತಿ ನಮ್ಮ ಬಿಡದಿ ಕೋಣೆ ಹೊಕ್ಕರು. ಎದುರಿಗೇ ಕೂತು ನಮಗೆ ಉಪಹಾರ ಮಾಡಿಸಿ ಕಾಫಿ ಕುಡಿಸಿದರು.

ಚೌಡಯ್ಯನವರಿಂದ ಬೀಳ್ಕೊಳ್ಳಬೇಕು. ಶಕುಂತಲಾಬಾಯಿ ಸಂಗೀತರತ್ನರಿಗೆ ನಮಸ್ಕಾರ ಮಾಡಹೋದಳು. "ಉಂಟೇ ! ಉಂಟೇ !" ಎಂದು ದೂರ ಸರಿದರು. "ಚೌಡಯ್ಯನವರೇ, ನಾವು ನಿಮಗೆ ಕೃತಜ್ಞರಾಗಿದ್ದೇವೆ. "ಬಿನ್ನಹಕೆ ಬಾಯಿಲ್ಲವಯ್ಯ" ಎಂಬ ಪುರಂದರದಾಸರ ದೇವರನಾಮ ಜ್ಞಾಪಕಕ್ಕೆ ಬರುತ್ತಿದೆ" ಎಂದೆ.

ಚೌಡಯ್ಯನವರು ನನ್ನ ಕೃತಜ್ಞತೆಗೆ ಏನು ಹೇಳಿದರು ಗೊತ್ತೇ—

"ಸ್ವಾಮಿ ರಾಮೋತ್ಸವದಲ್ಲಿ ಸಂಗೀತ ವಿದ್ವಾಂಸರುಗಳು ಬಂದು ಇಳಿದು ಕೊಳ್ಳುವ ಬಿಡದಿ ಕೊಠಡಿಯಿದು, ನೀವುಗಳು ಬಂದು ನಮ್ಮ ಮನೆಗೆ ಪಾದ ಧೂಳಿ ಸೋಕಿಸಿದಿರಿ. ನನ್ನ ಮನೆ ಪಾವನವಾಯಿತು". ನಮ್ಮ ಕಣ್ಣುಗಳು ಹನಿಗೂಡಿ ದವು ಚೌಡಯ್ಯನವರ ಹೃದಯಶ್ರೀಮಂತಿಕೆಗೆ. ಈ ಸಂದರ್ಭದಲ್ಲಿ ನನಗೆ "ಗಾನ ವಿಶಾರದ" ದೇವೇಂದ್ರಪ್ಪನವರ ಹೃದಯಶ್ರೀಮಂತಿಕೆ ನೆನಪಿಗೆ ಬರುತ್ತದೆ. ಡಾ|| ಮೋದಿಯವರ ಉಚಿತ ನೇತ್ರಚಿಕಿತ್ಸಾ ಶಿಬಿರ ಬೆಂಗಳೂರಿನ ಇಂಟರ್ ಮೀಡಿಯಟ್ ಕಾಲೇಜಿನಲ್ಲಿ ನಡೆದಿತ್ತು. ವರ್ಷ ನೆನಪಿಲ್ಲ. ನೇತ್ರರೋಗಿಗಳ ಮನೋಲ್ಲಾಸಕ್ಕಾಗಿ ದೇವೇಂದ್ರಪ್ಪನವರ ಸಂಗೀತ ಕಚೇರಿ. ಅನಂತರ ಶಕುಂತಲಾಬಾಯಿಯ ಕಾವ್ಯವಾಚನ. ಶ್ರೀಮತಿಯವರಿಗೆ ತಂಬೂರಿ ಶ್ರುತಿಹಾಕಬೇಕು. ಯಾರೂ ಇಲ್ಲ. "ಗಾನವಿಶಾರದ"ರು "ನಾನು ತಂಬೂರಿ ಶ್ರುತಿ ಹಾಕಲೇತಾಯಿ" ಎಂದರು. ಶಕುಂತಲಾಬಾಯಿ ಕೃತಜ್ಞತೆ ಅರ್ಪಿಸಿ ತಂಬೂರಿ ಶೃತಿ ತಾವೇ ಹಾಕಿಕೊಂಡು ಕಾವ್ಯವಾಚನ ಮುಗಿಸಿದರು. ಭಾರತದ ಶ್ರೇಷ್ಠ ಗಾಯನಾಚಾರ್ಯ ದೇವೇಂದ್ರಪ್ಪನವರ ಹೃದಯ ಶ್ರೀಮಂತಿಕೆ ಏನು ಕಡಿಮೆ.

ಶ್ರೇಷ್ಠ ನ್ಯಾಯಮೂರ್ತಿಗಳ ಅಧ್ಯಕ್ಷತೆಯಲ್ಲಿ ಸನ್ಮಾನದ ಗೌರವ

1953ರಲ್ಲಿ ಶಕುಂತಲಾಬಾಯಿ ಕನ್ನಡ ಸಾಹಿತ್ಯ ಪರಿಷತ್ತಿನ ಗಮಕ ಪ್ರಚಾರ ಕಾರ್ಯಕ್ರಮದಲ್ಲಿ "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನವನ್ನು 12 ವಾರಗಳ

ಕಾಲ ಮಾಡಿದಂತೆ 13 ದಿವಸಗಳು ವಾಚನ ಮಾಡುವ ಪ್ರಮೇಯ ಒದಗಿದುದು 1966ರಲ್ಲಿ. ಆದರೆ ಈ ಸಲದ ಕಾವ್ಯವಾಚನ ವಾರದಕಾರ್ಯಕ್ರಮವಲ್ಲ, ನಿತ್ಯದ ಕಾರ್ಯಕ್ರಮ. ಬೆಂಗಳೂರು ಅರಮನೆ ರಸ್ತೆಯಲ್ಲಿರುವ ಶ್ರೀ ಓಣಿ ಆಂಜನೇಯಸ್ವಾಮಿ ದೇವಸ್ಥಾನದ ಟ್ರಸ್ಟ್ ಆಶ್ರಯದಲ್ಲಿ "ಸಮಾಜಸೇವಾ ಧುರೀಣ" ಶ್ರೀ ವೈ. ಹೆಚ್. ವೆಂಕಟರಮಣಪ್ಪನವರ ಕಲ್ಯಾಣ ಮಂದಿರದಲ್ಲಿ. 7-1-1966 ರಿಂದ 19-1-1966ರ ವರೆಗೆ 13 ದಿವಸಗಳ ಸಂಜೆ ಕ್ರಮತಪ್ಪದೆ "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನದ ಏರ್ಪಾಡಾಯಿತು.

7-1-1966ರ ಸಂಜೆ ಓಣಿ ಆಂಜನೇಯಸ್ವಾಮಿ ದೇವಸ್ಥಾನದ ಕಲ್ಯಾಣ ಮಂಟಪ ವಿವಾಹ ಸಂಭ್ರಮದ ವೈಖರಿಯಿಂದ ತಳಿರು ತೋರಣಗಳಿಂದ ಅಲಂಕರಿಸಲ್ಪಟ್ಟಿತ್ತು. "ಕೀರ್ತನ ಕೇಸರಿ", "ಪಂಡಿತ ರತ್ನ", "ಪದ್ಮಶ್ರೀ" ಬಿ. ಶಿವಮೂರ್ತಿ ಶಾಸ್ತ್ರಿಗಳು ಕಾವ್ಯವಾಚನ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಶಕುಂತಲಾಬಾಯಿಯ ಕಾವ್ಯವಾಚನ ನನ್ನ ಪ್ರಾಸಂಗಿಕ ನಿರೂಪಣೆಯೊಡನೆ ಮುಕ್ತಾಯ ಘಟ್ಟವನ್ನು ಮುಟ್ಟಿತು. ಮುಕ್ತಾಯ ಸಮಾರಂಭವನ್ನು ವಿಜೃಂಭಣೆಯಿಂದ ನಡೆಯಿಸಬೇಕೆಂದು ಅದಕ್ಕಾಗಿಯೇ ಒಂದು ಸಮಿತಿ ಏರ್ಪಾಡಾಯಿತು. "ಸಮಾಜಸೇವಾ ಧುರೀಣ" ವೈ. ಹೆಚ್. ವೆಂಕಟರಮಣಪ್ಪ, ಕೀರ್ತನಕೇಸರಿ ಬಿ. ಶಿವಮೂರ್ತಿಶಾಸ್ತ್ರಿ, "ದೀನಬಂಧು" ವಿ.ಆರ್. ನಾಯಿಡು, ವೆಂಕಟರಮಣಯ್ಯ, ರಾಯಲ್ ಬೇಕರಿಯ ರಾಮಚಂದ್ರಪ್ಪ ಹೀಗೆ ನಗರದ ಪ್ರಮುಖರು ಸಮಿತಿಯ ಸದಸ್ಯರಾಗಿದ್ದರು. ಮುಕ್ತಾಯ ಸಮಾರಂಭಕ್ಕೆ ಶ್ರೇಷ್ಠ ನ್ಯಾಯಮೂರ್ತಿ ಹೆಚ್. ಹೊಂಬೇಗೌಡರನ್ನು ಕರೆಯಬೇಕೆಂದು ನಿಷ್ಕರ್ಷೆಯಾಯಿತು.

ವೈ. ಹೆಚ್. ವೆಂಕಟರಮಣಪ್ಪನವರು ನನ್ನನ್ನು ಬಾಲಕನಾಗಿದ್ದಾಗಿನಿಂದಲೂ ಚೆನ್ನಾಗಿ ಬಲ್ಲರು. ಕಬ್ಬನ್ ಪೇಟೆ, ಹಲಸೂರು ಪೇಟೆ, ನಗರ್ತರ ಪೇಟೆ ಭಾಗಗಳಿಂದ ನಗರ ಸಭೆಯ ಸದಸ್ಯ ಚುನಾವಣೆಗೆ ಅವರು ಹುರಿಯಾಳಾಗಿ ನಿಂತಾಗ, ನಾವು ಅವರಿಗೇ ನಮ್ಮ ಮತವನ್ನು ಕೊಟ್ಟು ಪ್ರತಿಸಲವೂ ಗೆಲ್ಲುವಂತೆ ಮಾಡುತ್ತಿದ್ದೆವು. ಅವರಿಗೆ ತಮ್ಮ ನೇತೃತ್ವದಲ್ಲಿ ನಮ್ಮಿಬ್ಬರಿಗೂ ಅಭಿನಂದನ ಪತ್ರಿಕೆಯನ್ನು ಒಪ್ಪಿಸಿ ಶಾಲು ಹೊದಿಸಿ ಗೌರವಿಸಬೇಕೆಂದು ಮನಸ್ಸಾಯಿತು. ತಮ್ಮ ಕಣ್ಣ ಮುಂದೆ ಬೆಳೆದು ಅಭಿವೃದ್ಧಿಗೆ ಬರುತ್ತಿರುವ ಹುಡುಗನಿಗೆ, ಆತನ ಧರ್ಮಪತ್ನಿಗೆ ತಾವು ಸನ್ಮಾನ ಮಾಡುವುದು ಪರಮ ಸಂತೋಷಕರವೆಂದು ವಯೋವೃದ್ಧರು ಹಿರಿಹಿರಿ ಹಿಗ್ಗಿಹೋದರು. "ಪಾಂಡುರಂಗರಾವ್, ಬನ್ನಿ. ನಮ್ಮ ರಾಜ್ಯದ ಶ್ರೇಷ್ಠ ನ್ಯಾಯಮೂರ್ತಿಗಳನ್ನು "ಶ್ರೀ ರಾಮಾಯಣ ದರ್ಶನಂ" ಮಹಾಕಾವ್ಯವಾಚನದ ಮುಕ್ತಾಯ ಸಮಾರಂಭಕ್ಕೆ ಕರೆದುಬರೋಣ" ಎಂದರು. ಹಿರಿಯರ ಜೊತೆಯಲ್ಲಿ ನಾನು ಶ್ರೇಷ್ಠ ನ್ಯಾಯಮೂರ್ತಿಗಳ ಮನೆಗೆ ಒಂದು ಬೆಳಗ್ಗೆ ಹೊರಟೆ.

ವೆಂಕಟರಮಣಪ್ಪನವರು ನಿಯಮಿತ ವೇಳೆಗೆ ಶ್ರೇಷ್ಠ ನ್ಯಾಯಮೂರ್ತಿಗಳ

ದರ್ಶನ ಪಡೆದರು. ಮೈಸೂರು ಪದ್ಧತಿಯಂತೆ ಹೊಂಬೇಗೌಡರಿಗೆ ಗಜನಿಂಬೆ ಹಣ್ಣನ್ನು ಕೈಗಿತ್ತು ಹಾರವನ್ನು ಕೊರಳಿಗೆ ಹಾಕಿ ನಮಸ್ಕಾರ ಮಾಡಿದರು ಕೈಜೋಡಿಸಿ. ಕ್ಷೇಮ ಸಮಾಚಾರಗಳ ವಿನಿಮಯವಾಯಿತು. ತಾವು ದಯಮಾಡಿಸಿ "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನ ಮಂಗಳ ಸಮಾರಂಭವನ್ನು ನಡೆಸಿಕೊಡಬೇಕೆಂದು ಪ್ರಾರ್ಥಿಸಿದರು. ಹೊಂಬೇಗೌಡರು ನಗುತ್ತ, "ವೆಂಕಟರಮಣಪ್ಪನವರೆ, ನೀವು ಜೊತೆಗೆ ಪಾಂಡುರಂಗರಾಯರನ್ನು ಕರೆದುಕೊಂಡು ಬಂದಿದ್ದೀರಿ. ನಾನು ಹೇಗೆ "ಒಲ್ಲೆ" ಎನ್ನಲಿ ? ನಾನು ನಾಳೆ ಕರೆದರೆ ದಂಪತಿಗಳು ಬರಬೇಕಲ್ಲ ! ನಾನು ಈಗ "ಆಗುವುದಿಲ್ಲ"ವೆಂದರೆ, ನಾಳೆ ಅವರುಗಳೂ "ಆಗುವುದಿಲ್ಲ"ವೆನ್ನಬಹುದು. ಬರುತ್ತೇನೆ" ಎಂದು ನನ್ನ ಮುಖ ನೋಡಿ ಸಂತೋಷದಿಂದ ಒಪ್ಪಿಕೊಂಡರು. ನಾವು ಶ್ರೇಷ್ಠ ನ್ಯಾಯಮೂರ್ತಿಗಳಿಗೆ ಕೈಮುಗಿದು, ಕೃತಜ್ಞತೆ ಸಲ್ಲಿಸಿ ಹೊರಟೆವು. ವೆಂಕಟರಮಣಪ್ಪನವರು, ನಾನು ಕಾರಿನಲ್ಲಿ ಕೂಡುತ್ತಿರುವಾಗ "ಏನಪ್ಪ ಪಾಂಡುರಂಗರಾವ್, ಹೊಂಬೇಗೌಡರಿಗೆ ನಿಮ್ಮ ಮೇಲೆ ಅದೆಷ್ಟು ಅಂತಃಕರಣ! ಕೂಡಲೆ ಒಪ್ಪಿಕೊಂಡುಬಿಟ್ಟರು. ನೀವು ದಂಪತಿಗಳು ಧನ್ಯರು" ಎಂದು ಆತ್ಮೀಯತೆಯಿಂದ ಬೆನ್ನುತಟ್ಟಿದರು.

19–1–1966ರಂದು ಓಣಿ ಆಂಜನೇಯಸ್ವಾಮಿ ದೇವಸ್ಥಾನದ ವೆಂಕಟರಮಣಪ್ಪ ಕಲ್ಯಾಣಮಂಟಪ ಇನ್ನೊಮ್ಮೆ ತಳಿರುತೋರಣ, ಬಾಳೆಕಂಬಗಳಿಂದ ಅಲಂಕಾರಗೊಂಡು ಮದುವೆ ಮಂಟಪದಂತೆ ಶೋಭಾಯಮಾನವಾಯಿತು. ಸುಶ್ರಾವ್ಯವಾಗಿ ನಾಗಸ್ವರ ಮೊಳಗುತ್ತಿತ್ತು. ಪೂರ್ಣಕುಂಭ ಮರ್ಯಾದೆಯೊಡನೆ, ವೇದಘೋಷದೊಡನೆ ಹೊಂಬೇಗೌಡರನ್ನು ಸ್ವಾಗತಿಸಿದರು. ರಾಜ್ಯದ ಸಚಿವರುಗಳು, ಪುರಪ್ರಮುಖರುಗಳು, ಸಾಹಿತಿಗಳು, ನಾನಾ ರಂಗಗಳ ಕಲಾವಿದರುಗಳು, ಆಗಮಿಸಿ ಸಭೆಯ ಗೌರವ ಹೆಚ್ಚಿತ್ತು.

ಶ್ರೇಷ್ಠನ್ಯಾಯಮೂರ್ತಿ ಹೊಂಬೇಗೌಡರು, ನ್ಯಾಯಮೂರ್ತಿ ಕೆ.ಆರ್. ಗೋಪಿವಲ್ಲಭ ಅಯ್ಯಂಗಾರ್ಯರೊಡನೆ ಉನ್ನತ ವೇದಿಕೆಯ ಮೇಲೆ ಆಸನಾರೂಢರಾಗಿದ್ದರು.

ಶಕುಂತಲಾಬಾಯಿಯ ಸಹೋದರಿಯೂ ಗಮಕ ಶಿಷ್ಯೆಯೂ ಆದ ಸುಶೀಲ ವಾಮನರಾವ್ ಅವರ ಸುಶ್ರಾವ್ಯ ಪ್ರಾರ್ಥನೆಯಿಂದ ಮಂಗಳ ಸಮಾರಂಭ ಪ್ರಾರಂಭವಾಯಿತು. ವಿಧಾನ ಪರಿಷತ್ತಿನ ಸದಸ್ಯರೂ ಉತ್ಸವ ಸಮಿತಿಯ ಕಾರ್ಯಕಾರಿ ಸದಸ್ಯರೂ ಆದ "ದೀನಬಂಧು" ವಿ. ಆರ್. ನಾಯಿಡು ಅತಿಥಿಗಳನ್ನು ಸ್ವಾಗತಿಸಿದರು. ವೆಂಕಟರಮಣಪ್ಪನವರ ಅಳಿಯ ವೆಂಕಟರಮಣಯ್ಯ ಬಿನ್ನವತ್ತಳೆಯನ್ನು ಓದಿ ಗಮಕ ದಂಪತಿಗಳಿಗೆ ಅರ್ಪಿಸಿದರು. ಶಕುಂತಲಾಬಾಯಿಗೆ ಸಂಬಂಧಪಟ್ಟ ಅಭಿನಂದನ ಪತ್ರದ ಮುಖ್ಯಾಂಶಗಳು ಹೀಗಿವೆ—

"ಶ್ರೀಮತಿ ಶಕುಂತಲಾಬಾಯಿಯವರೆ,

ಕನ್ನಡ ನಾಡಿನ ಸುಪ್ರಸಿದ್ಧ ಗಮಕ ವಿದುಷಿಯರಾದ ನೀವು ನಾರಾಯಣಕೆರೆ ಶ್ರೀ ಎನ್. ವೆಂಕೋಬರಾವ್ ಮತ್ತು ಶ್ರೀಮತಿ ಸುಂದರಾಬಾಯಿಯವರ ಸುಪುತ್ರಿಯಾಗಿ ಜನಿಸಿ ಬಾಲ್ಯದಿಂದಲೆ ಸಂಗೀತ

ಸಾಹಿತ್ಯ ಕಲೆಗಳನ್ನು ಚೆನ್ನಾಗಿ ಅಳವಡಿಸಿಕೊಂಡಿರುವಿರಿ. ನಿಮಗೆ ಜನ್ಮದತ್ತವಾಗಿರುವ ಸುಮಧುರ ಕಂಠವೂ ತಮ್ಮ ಮನೆತನದ ಸಾಹಿತ್ಯ ಸಂಸ್ಕೃತಿಯೂ ನಿಮ್ಮ ಅಭ್ಯುದಯಕ್ಕೆ ಸಾಧಕವೆನಿಸಿದೆ. ನೀವು ಗೃಹಸ್ಥಾಶ್ರಮವನ್ನು ಕೈಗೊಂಡಮೇಲೆ ಕನ್ನಡ ನಾಡಿನಲ್ಲಿ ಪ್ರಖ್ಯಾತರಾಗಿರುವ "ಭಾರತವಾಚನ ಪ್ರವೀಣ" ಶ್ರೀ ಸಂ. ಗೋ. ಬಿಂದೂರಾಯರಲ್ಲಿ ಗಮಕ ಕಲೆಯನ್ನು ಅಭ್ಯಾಸಮಾಡಿ ವಿಖ್ಯಾತರಾಗಿರುವಿರಿ. ಕನ್ನಡ ಸಾಹಿತ್ಯ ಪರಿಷತ್ತು, ಸಾಹಿತ್ಯ ಸಮ್ಮೇಳನಗಳು, ವಿಖ್ಯಾತ ಮಠಾಧಿಪತಿಗಳು, ಸಹೃದಯರಾದ ವಿದ್ವಾಂಸ ಗೋಷ್ಠಿಗಳು ಮೊದಲಾದ ಕಡೆಗಳಲ್ಲೆಲ್ಲ ನಿಮ್ಮ ಕಾವ್ಯವಾಚನ ನಡೆದಿದೆ. ಪಂಪಭಾರತ, ರನ್ನನ ಗದಾಯುದ್ಧ, ಚಾಮರಸನ ಪ್ರಭುಲಿಂಗಲೀಲೆ, ಕುಮಾರವ್ಯಾಸ ಭಾರತ, ಲಕ್ಷ್ಮೀಶನ ಜೈಮಿನೀ ಭಾರತ, ಹರಿಹರನ ಗಿರಿಜಾಕಲ್ಯಾಣ, ರಾಘವಾಂಕನ ಹರಿಶ್ಚಂದ್ರಕಾವ್ಯ, ಷಡಕ್ಷರದೇವನ ರಾಜಶೇಖರ ವಿಲಾಸ, ಮೊದಲಾದ ವಸ್ತುಕ–ವರ್ಣಕ ಕಾವ್ಯಗಳನ್ನು, ನೀವು ರಾಗ–ರಸ–ಭಾವ ಪೂರ್ಣವಾಗಿ ಶ್ರೋತೃಗಳ ಮನಮುಟ್ಟುವಂತೆ ವಾಚನ ಮಾಡುವ ಪಾಂಡಿತ್ಯವನ್ನು ಪಡೆದಿರುವಿರಿ. ಅಷ್ಟೇ ಅಲ್ಲ, ಶಿವಶರಣರ ವಚನಗಳು, ದಾಸರ ಪದಗಳು, ಆಧುನಿಕ ಕವಿಗಳ ಭಾವಗೀತಗಳು ಮೊದಲಾದವುಗಳನ್ನೂ ಅತ್ಯಂತ ಮನೋಹರವಾಗಿ ಭಾವಪೂರ್ಣವಾಗಿ, ಹಾಡಿ ಜನಪ್ರಿಯರಾಗಿರುವಿರಿ. ಮೈಸೂರು ಆಕಾಶವಾಣಿಯ ಮೂಲಕವೂ ನಿಮ್ಮ ಹೆಸರು ಮೇಲಿಂದ ಮೇಲೆ ಕೇಳಿಬರುತ್ತಿದೆ. ದೆಹಲಿಯ ಕೇಂದ್ರದಿಂದ ಆಕಾಶವಾಣಿಯ ರಾಷ್ಟ್ರೀಯ ಕಾರ್ಯಕ್ರಮದಲ್ಲಿ ಗಮಕದ ಪ್ರಾತಿನಿಧ್ಯವಹಿಸಿ ಸೇವೆ ಸಲ್ಲಿಸಿದ್ದೀರಿ. ಇವೆಲ್ಲಕ್ಕೂ ಮಿಗಿಲಾಗಿ ರಾಷ್ಟ್ರಕವಿ 'ಕುವೆಂಪು' ವಿರಚಿತ "ಶ್ರೀ ರಾಮಾಯಣ ದರ್ಶನಂ" ಮಹಾಕಾವ್ಯ ವಾಚನದಲ್ಲಿ ನೀವು ಹೆಚ್ಚಿನ ಪ್ರಾವೀಣ್ಯವನ್ನು ಗಳಿಸಿರುತ್ತೀರಿ. ಇದಕ್ಕೆ ಈ ಸ್ಥಳದಲ್ಲಿಯೇ ಹದಿಮೂರು ದಿವಸಗಳು ಕ್ರಮವಾಗಿ ನಡೆಸಿದ ನಿಮ್ಮ ಕಾವ್ಯವಾಚನವು ನಿದರ್ಶನವಾಗಿದೆ. ರಾಗ–ರಸ, ಶಬ್ದ–ಅರ್ಥ, ಶ್ರುತಿ–ಯತಿ, ಗತಿ–ಗಮಕ, ಹಾವ–ಭಾವಗಳಿಂದಕೂಡಿದ ನಿಮ್ಮ ಕಾವ್ಯವಾಚನವು ಶ್ರೋತೃಗಳಿಗೆ ನಿಜವಾದ ಕಾವ್ಯಾನಂದವನ್ನು ಉಂಟುಮಾಡುತ್ತದೆಂಬುದನ್ನು ನಾವು ಸ್ವಂತ ಮನಗಂಡಿದ್ದೇವೆ. ಹೀಗೆ ನೀವು ನಾಡು–ನುಡಿಗಳ ಸೇವೆಯನ್ನು ಮಾಡುತ್ತಿರುವುದಲ್ಲದೆ, ನಿಮ್ಮ ಪತಿಯೊಂದಿಗೆಕೂಡಿ ಮಕ್ಕಳ ಮಂಟಪವನ್ನು ಕಟ್ಟಿ, ಶಿಶು ಶಿಕ್ಷಣದಲ್ಲಿಯೂ ಭಾಗಿಗಳಾಗಿ, ಜನಿಸಿದಮನೆಗೂ ಸೇರಿದಮನೆಗೂ ಕೀರ್ತಿ ತಂದಿರುವಿರೆಂದು ನಾವುಗಳು ಸಂತೋಷದಿಂದ ಹೇಳಬಯಸುತ್ತೇವೆ.*

*ಈ ಅಭಿನಂದನಾ ಪತ್ರದಲ್ಲಿ ನನ್ನನ್ನೂ ಸೇರಿಸಿ ಅಭಿನಂದಿಸಲಾಗಿದೆ. ಇಲ್ಲಿ ಅಪ್ರಕೃತವೆಂಬ ಕಾರಣ ಆ ವಿಷಯ ಪ್ರಸ್ತಾಪಿಸಿಲ್ಲ.

ಬಿ. ಶಿವಮೂರ್ತಿ ಶಾಸ್ತ್ರಿಗಳು ಮತ್ತು ಕೊ. ಚೆನ್ನಬಸಪ್ಪನವರು ರಾಮಾಯಣ ಮತ್ತು "ರಾಮಾಯಣ ದರ್ಶನಂ" ಕಾವ್ಯಗಳ ಇಂಪುಸೊಂಪುಗಳನ್ನು ಪರಿಚಯ ಮಾಡಿ ಕೊಟ್ಟು ಕೃತಿರಚನೆಯಷ್ಟೇ ಅದನ್ನು ಜನಸಾಮಾನ್ಯರಿಗೆ ಮುಟ್ಟಿಸುವ ಗಮಕಿಗಳ ಪಾತ್ರವೂ ಮುಖ್ಯವೆಂದು ಹೇಳಿ ಪಾಂಡುರಂಗರಾವ್ ದಂಪತಿಗಳನ್ನು ಅಭಿನಂದಿಸಿದರು.

ಹೊಂಬೇಗೌಡರು, ರಾಷ್ಟ್ರಕವಿ ಮಹಾಕೃತಿ "ರಾಮಾಯಣ ದರ್ಶನಂ" ರಚಿಸುವಾಗ ಅವರ ಮನಸ್ಸಿನಲ್ಲಿ ಎದ್ದ ಭಾವಗಳನ್ನು ವಿವರಿಸಿ, ಮಹಾಮೇರುಕೃತಿ ವಿನೋಬಾಜಿಯನ್ನು ಆಕರ್ಷಿಸಿದ ಪರಿಯನ್ನು ಸ್ಮರಿಸಿ, ಶ್ರೇಷ್ಠ ಕಾವ್ಯಗಳನ್ನು ಜನತೆಗೆ ಪರಿಚಯ ಮಾಡಿಕೊಡಲು ವಾಚನಗೋಷ್ಠಿಗಳು, ಸಪ್ತಾಹಗಳು ಅಗತ್ಯವೆಂದು ಒತ್ತಿಹೇಳಿ, ಕಾವ್ಯವಾಚನ ಕಲೆಯನ್ನು ಬೆಳಗಿಸುತ್ತಿರುವ ಗಮಕ ದಂಪತಿಗಳನ್ನು ಹೃತ್ಪೂರ್ವಕ ವಂದಿಸಿದರು.

ಗಾಂಧೀ ನಗರದ ರಾಯಲ್ ಬೇಕರಿಯ ಎನ್. ರಾಮಚಂದ್ರಪ್ಪನವರು ವಂದನಾರ್ಪಣೆ ಸಲ್ಲಿಸಿದರು.

ನಗರದ ಪತ್ರಿಕೆಗಳು "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನಕ್ಕೆ ವಿಶೇಷ ಗಮನಕೊಟ್ಟು, ದೀರ್ಘವಾಗಿ ಲೇಖನ ಬರೆದು ನಮಗೆ ತುಂಬ ಉಪಕಾರ ಮಾಡಿದವು.

"ವೆಂಕಟರಮಣಪ್ಪನವರು, ಮದುಮಕ್ಕಳು ತಮ್ಮ ವಿವಾಹ ಸಂಭ್ರಮದಲ್ಲಿ ಹೂಮಾಲೆಗಳನ್ನು ಒಬ್ಬರಿಗೊಬ್ಬರು ವಿನಿಮಯ ಮಾಡಿಕೊಂಡು ನಲಿಯುವ ಮೋಜ ಸಂಭ್ರಮವನ್ನು ನೋಡಬೇಕೆಂದು ತುಂಬಿದ ಸಭೆಯಲ್ಲಿ ಆಶಿಸಿದರು. ನಾವು ಹಿರಿಯರ ಕೋರಿಕೆಯಂತೆ ಒಬ್ಬರಿಗೊಬ್ಬರು ಹೂಮಾಲಿಕೆಗಳನ್ನು ವಿನಿಮಯ ಮಾಡಿಕೊಂಡು ನಗೆಗಡಲಿನ ಅಲೆಗಳನ್ನು ಎಬ್ಬಿಸಿದೆವು.

ಮುಕ್ತಾಯ ಸಮಾರಂಭದ ವಾಚನ "ರಯ್‌ಗೆ ಕರೆದೊಯ್ ಓ ಅಗ್ನಿ" ನನ್ನ ಪ್ರಾಸಂಗಿಕ ನಿರೂಪಣೆ ಕಾವ್ಯವಾಚನದ ಘನತೆಗೆ ತಕ್ಕಂತಿತ್ತು. ವಾಚನ, ನಿರೂಪಣೆಗಳು ಶ್ರೋತೃಗಳ ಮೇಲೆ ಮಹತ್ತಾದ ಪರಿಣಾಮವೆಸಗಿತ್ತು. ಮೈಸೂರು ರಾಜ್ಯದ ಶಿಕ್ಷಣ ಸಚಿವರಾಗಿದ್ದ ಎಂ. ಮಲ್ಲಿಕಾರ್ಜುನಸ್ವಾಮಿಗಳಂತೂ ತುಂಬ ಭಾವಪರವಶರಾಗಿ ಹೋದರು. ಸಮಾರಂಭ ಮುಗಿದ ಮೇಲೆ ನಮ್ಮ ಸನಿಹಕ್ಕೆ ಬಂದು "ಪಾಂಡುರಂಗ ರಾವ್, ಅಮ್ಮಾವರು ಸೀತಾದೇವಿಯ ಹಾಗೂ ರಾಮಚಂದ್ರನ ಅಗ್ನಿಪ್ರವೇಶ ಭಾಗವನ್ನು ವಾಚಿಸಿದಾಗ ಭಾವಪರವಶನಾಗಿಹೋದೆ. ಆ ಭಾಗಗಳಿಗೆ ನೀವಿತ್ತ ಪ್ರಾಸಂಗಿಕ ನಿರೂಪಣೆಯೂ ಗಂಭೀರವಾಗಿ ಅರ್ಥವತ್ತಾಗಿತ್ತು. ಅನಲೆ ರಾಮಪದತಲದಿ ದಿಂಡುರುಳಿ ತನ್ನ ಮನೋಭಿಪ್ರಾಯವನ್ನು ಪ್ರಕಟಿಸಿದ ಸಾಲುಗಳನ್ನು ಕೇಳಿ ನಾನು ಮಂತ್ರಮುಗ್ಧನಾಗಿ ಹೋದೆ" ಎಂದು ನುಡಿದರು. "ನಾವೆಲ್ಲ ನಮ್ಮ ಹೃದಯಗಳನ್ನು ಪರೀಕ್ಷಿಸಿಕೊಳ್ಳುವಂತಾಯಿತು" ಎಂದುಹೇಳಿ ಕೃತಜ್ಞತೆಯರ್ಪಿಸಿದರು. ನಾವು ಶಿಕ್ಷಣ ಸಚಿವರಿಗೆ ವಿನಯದಿಂದ ಕೈಮುಗಿದೆವು.

ಸೀತಾದೇವಿಯು ತನ್ನ ಪಾತಿವ್ರತ್ಯವನ್ನು ಬಹಿರಂಗವಾಗಿ ಅಗ್ನಿಪರೀಕ್ಷೆ ಕೊಟ್ಟು

ಸ್ಥಾಪಿಸಿಕೊಳ್ಳುವ ಸನ್ನಿವೇಶ ಮಹಾ ಗೋಪುರವನ್ನು ಮುಟ್ಟಿದೆ ಕೃತಿಯಲ್ಲಿ. ಅಷ್ಟೇ ಎತ್ತರದ ನಿಲುವನ್ನು ಮುಟ್ಟುತ್ತಾರೆ ವಾಚನದಲ್ಲಿ ಶಕುಂತಲಾಬಾಯಿ. ಸೀತಾದೇವಿಯ ನೆಪದಿಂದ ರಾಮಚಂದ್ರನೂ ಅಗ್ನಿಪ್ರವೇಶಮಾಡಿ ತಾನು ಏಕಪತ್ನೀವ್ರತಸ್ಥನೆಂದು ಸ್ಥಾಪಿಸಿ, ಇಬ್ಬರೂ ತಾವು ಪರಿಶುದ್ಧರೆಂದು ನಡವಳಿಕೆಗಳಿಂದ ಜಗತ್ತಿಗೆ ತೋರಿಸುತ್ತಾರೆ. ಸೀತಾರಾಮರು ಅಗ್ನಿಚಿತೆಯಿಂದ ಹೊರಬಂದಾಗ ಏನಾಯಿತು ?

. . . . ಶ್ರೀಮದ್ ದಿವ್ಯ ದೇಹದಿಂ
ದಿವ್ಯ ಮಾಲಾಂಬರಗಳಿಂ ದಿವ್ಯ ತೇಜದಿಂ
ಶೋಭಿಸುತಿರ್ದ ಆ ಸೀತಾ ಸಹಿತ ರಾಮನಂ
ಕಂಡು ಹರ್ಷೋನ್ಮತ್ತಮಾದಕದ್ದುದು ಕಪಿಧ್ವಜಿನಿ;
ಘೇ ಘೇ ಜಯಧ್ವನಿಗೈವ ರಾಕ್ಷಸ ಧ್ವಜನಿಯಂ
ಕೂಡಿ, ಪಯೋನಿಧಿಯಪ್ಪವೊಲ್ ಪಾಥೋಧಿಯೋಲ್ ! ॥

ಆ ಸಮಯದಲ್ಲಿ

ಬಂದನಲೆ ದಿಂಡುಗೆಡೆದಳು ರಾಮಪದತಲದಿ
ಸಂತೋಷಮೂರ್ಛಿತೆಯವೋಲ್ ; "ಮನ್ನಿಸೈ, ಸ್ವಾಮಿ
ದೇವಿಯಂ ನಿಂದಿಸಿದ ನಿನ್ನನೆನಿತೊ ನಾಂ
ಬಯ್ದೆನೆಯ್. 'ಹದಿಬದೆಯನಗ್ನಿವುಗಿಸುವುದಿರಲಿ,
ತನ್ನಂ ಪರೀಕ್ಷಿಸುವರಾರೋ ? ತಾನೇಂ ಪೊರತೊ
ದುರಿತ ದೋಷಕೆ?' ಎನುತೆ ಶಂಕಿಸಿದೆನಾ ನಿಂದೆ
ಭಸ್ಮವಾಯಿತು. ತಂದೆ, ನೀನೊಡ್ಡಿದೀ ಚಿತೆಯ
ಲೋಕಪಾವಕ ಪವನಸುಖನಿಂದೆ : ಪೂಜ್ಯೆಯಂ
ಪಾಲಿಸುವ ನೆವದಿ ನೀನುಂ ಪರೀಕ್ಷಿತನಲಾ !
ಲೋಕತೃಪ್ತಿಗೆ ಲೋಕಮರ್ಯಾದೆಗೊಳಗಾದೆ ;
ಸರ್ವಲೋಕಪ್ರಭುವೆ, ಲೋಕಗುರು ನೀಂ ದಿಟಂ!"

"ಶ್ರೀ ರಾಮಾಯಣ ದರ್ಶನಂ" ಕಾವ್ಯದಲ್ಲಿ ಈ ತಿರುವು ನವನವೀನವಾಗಿದೆ. ಹಿಂದೂಧರ್ಮದ ಪುರುಷ ಸಮಾಜ ಸತಿ ಸಮಾಜಕ್ಕೆ "ಏಕಪತಿ"ವ್ರತವನ್ನು ಕಡ್ಡಾಯಿಸಿದೆ. ಅಂತೆಯೇ ಪುರುಷನಿಗೇಕೆ 'ಏಕಪತ್ನಿ' ವ್ರತವನ್ನು ಕಡ್ಡಾಯಿಸಬಾರದು ? ಈ ಸರ್ವನ್ಯಾಯ ಪ್ರಜ್ಞೆ ಅನಿಲೆಯಲ್ಲಿ ಅಭಿವ್ಯಕ್ತವಾಗಿದೆ. ಆಧುನಿಕ ಸಮಾಜ ಈ ತಿರುವನ್ನು ಸ್ವಾಗತಿಸುತ್ತದೆ ಬಹುತೇಕವಾಗಿ. ಕಲ್ಕತ್ತೆಯ ಮೈಸೂರು ಅಸೋಸಿಯೇಷನ್ನಿನಲ್ಲಿ 'ರಯ್‌ಗೆ ಕರೆಪೊಯ್ ಓ ಅಗ್ನಿ' ಭಾಗದಲ್ಲಿ ಅಗ್ನಿಪ್ರವೇಶ ಸನ್ನಿವೇಶವನ್ನು ವಾಚಿಸಿ ನಿರೂಪಣೆ ನೀಡಿದಾಗ ಶ್ರೋತೃಗಳಿಗೆ ಆದ ಸಂತೋಷ ಸಮಾಧಾನ ಹೃದಯಸ್ಪರ್ಶಿಯಾಗಿತ್ತು. ಒಬ್ಬ ಮಾಧ್ವ ಪ್ರಕಾಂಡ ಪಂಡಿತರು ಈ ತಿರುವನ್ನು ತುಂಬ ಹೃದಯ ವೈಶಾಲ್ಯದಿಂದ ಸ್ವೀಕರಿಸಿದರು. ಅವರು ಸಂಸ್ಕೃತ ಸಾಹಿತ್ಯದ ಜೊತೆಗೆ ಆಂಗ್ಲ ಸಾಹಿತ್ಯವನ್ನೂ ಚೆನ್ನಾಗಿ ಅಧ್ಯಯನ ಮಾಡಿದ್ದ ವಿದ್ವನ್ಮಣಿಗಳು. ನಾನು ಈ ಹಿರಿಯರ ಹೆಸರನ್ನು ಮರೆತಿರುವೆನಲ್ಲ ಎಂದು ಪಶ್ಚಾತ್ತಾಪಪಡುತ್ತಿದ್ದೇನೆ.

ದೀರ್ಘಾವಧಿ ಕಾಲದ ಪೂರ್ತಿ ಮಹಾಕಾವ್ಯವಾಚನ

"ಶ್ರೀ ರಾಮಾಯಣ ದರ್ಶನಂ" ಮಹಾಕಾವ್ಯವಾಚನವನ್ನು ಸುಮಾರು ಎರಡೂವರೆ ತಿಂಗಳುಗಳಷ್ಟು ದೀರ್ಘಕಾಲ ಪೂರ್ತಿಯಾಗಿ 1977ರಲ್ಲಿ ನನ್ನ ಪ್ರಾಸಂಗಿಕ ನಿರೂಪಣೆಯೊಡನೆ ಬೆಂಗಳೂರು ರಾಜಾಜಿನಗರದ ಮೂರನೆ ಬಡಾವಣೆಯ ಶ್ರೀ ರಾಮಸೇವಾ ಮಂಡಲಿಯ ಆಶ್ರಯದಲ್ಲಿ ಶಕುಂತಲಾಬಾಯಿ ನಡೆಸಿದುದು "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನ ಕಾರ್ಯಕ್ರಮಗಳಲ್ಲಿಯೇ ಮುಗಿಲೇರಿದ ಅತಿ ಮುಖ್ಯವಾದ ಘಟ್ಟ. ಶ್ರೀ ರಾಮಸೇವಾ ಮಂಡಲಿಯ ಪರಿಸರದಲ್ಲಿ ಮಧ್ವ ಸಂಘವಿದೆ, ಕುಮಾರವ್ಯಾಸ ಮಂಟಪವಿದೆ. ಈ ಮೂರು ಸಂಘಗಳೂ ಪ್ರತಿನಿತ್ಯವೂ ತಮ್ಮ ಸಂಘಗಳಧ್ಯೇಯಗಳಿಗೆ ಅನುಗುಣವಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ. ಈ ಕಾರಣ ಶ್ರೋತೃಗಳು ಮೂರು ಕಡೆಗಳಿಗೂ ಹಂಚಿಹೋಗಿದ್ದಾರೆ. ಆದರೂ ನಮಗೂ ಸಾಕಷ್ಟು ಶ್ರೋತೃಗಳು ಒದಗಿ ಬಂದು ನಮ್ಮ ಉತ್ಸಾಹಭಂಗ ಮಾಡದೆ "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಶ್ರೀ ರಾಮಸೇವಾ ಮಂಡಲಿಯ ಅಧ್ಯಕ್ಷರಾದ ಜಿ.ಕೆ. ಸಂಪಂಗಿರಾಮ್ ಮತ್ತು ಗೌ||ಕಾರ್ಯದರ್ಶಿ ಭಾರತಿ ಶ್ರೀನಿವಾಸಮೂರ್ತಿಗಳು ಕುವೆಂಪು ಶ್ರೀ ರಾಮಾಯಣ ದರ್ಶನಂ ಕಾವ್ಯವಾಚನ ಇಡಿಸಿ ಒಂದು ಮಹತ್ಕಾರ್ಯವನ್ನು ತಮ್ಮ ಸಂಘ ಕೈಗೊಂಡು ಕೃತಾರ್ಥವಾಯಿತೆಂದು ಸಂತೃಪ್ತಿಪಟ್ಟುಕೊಂಡರು.

ಚಿಂತಾಮಣಿಯಲ್ಲಿ ಕನ್ನಡ ಮಹಾಕಾವ್ಯದ ಜಯಭೇರಿ

ಶ್ರೀ ರಾಮಾಯಣ ದರ್ಶನಂ ಕಾವ್ಯವಾಚನ ಬೆಂಗಳೂರು ಬಿಟ್ಟು ಹೊರಗೆ ಸಪ್ತಾಹವನ್ನು ನಡೆಸಿಕೊಂಡುದು ಮೊಟ್ಟಮೊದಲು ಚಿಂತಾಮಣಿಯಲ್ಲಿ. ಕರ್ಣಾಟಕದ ಜಿಲ್ಲೆಗಳಲ್ಲಿ ಕೋಲಾರ ಜಿಲ್ಲೆ ತೆಲುಗು ಭಾಷೆಯ ಪ್ರಭಾವಕ್ಕೆ ಬಹಳವಾಗಿ ಒಳಗಾಗಿದೆ. ಚಿಂತಾಮಣಿ ಊರೂ ಬಹುವಾಗಿ ತೆಲುಗು ಭಾಷಾಮಯವೆಂದರೆ ತಪ್ಪಲ್ಲ. ತೆಲುಗು ಪ್ರಾಧಾನ್ಯವಾದ ಯಾವ ಕಾರ್ಯಕ್ರಮವಾದರೂ ಸರಿಯೆ ಚಿಂತಾಮಣಿ ಜನ ಸಾವಿರ ಸಂಖ್ಯೆಯವರೆಗೂ ಮುಕ್ಕರಿಸಿ ಕೇಳುತ್ತಾರಂತೆ. ಚಿಂತಾಮಣಿಯ ಸಮರ್ಥ ಶ್ರೀ ಬ್ರಹ್ಮಚೈತನ್ಯ ಶ್ರೀ ರಾಮಮಂದಿರದ ಜಿ. ಹೆಚ್. ವೆಂಕಟೇಶ್‌ಮೂರ್ತಿ ಸಹೋದರರು ಶ್ರೀ ರಾಮ ಸಮರ್ಥ ಶ್ರೀ ಬ್ರಹ್ಮಚೈತನ್ಯ ಮಹಾರಾಜರ ಜಯಂತಿ ಸಪ್ತಾಹದಲ್ಲಿ ಪ್ರತಿದಿನವೂ "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನ ನಡೆಸಿಕೊಡಬೇಕೆಂದು 1978ರಲ್ಲಿ ಶಕುಂತಲಾಬಾಯಿಯನ್ನು ಆಹ್ವಾನಿಸಿದರು. ಚಿಂತಾಮಣಿಗೆ ಶ್ರೀ ಬ್ರಹ್ಮಚೈತನ್ಯ ಮಹಾರಾಜರ ಜಯಂತಿ ಪ್ರತಿವರ್ಷವೂ ಒಂದು ಅಭೂತಪೂರ್ಣ ಸಂಭ್ರಮ. ಎಲ್ಲ ಕೋಮಿನವರೂ ಏಕೀಭವಿಸಿ ಈ ಜಯಂತಿಯನ್ನು ಬಹಳ ಯಶಸ್ವಿಯಾಗಿ ಆಚರಿಸುತ್ತಾರೆ. ಮಾಘ ಮಾಸದ ಶುದ್ಧ ಸಪ್ತಮಿಯಿಂದ ಪ್ರಾರಂಭ

ವಾಗಿ ದ್ವಾದಶಿ ಪೂರ್ತಿ ಜಯಂತಿ ಸಾಂಗವಾಗಿ ನಡೆಯುತ್ತದೆ. ಸಂಜೆ ಸಾಹಿತ್ಯ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಟ್ಟಿರುತ್ತದೆ. ನಾವು ಆಹ್ವಾನವನ್ನು ಸ್ವೀಕರಿಸಿದೆವು.

ಶ್ರೀ ಬ್ರಹ್ಮಚೈತನ್ಯ ಶ್ರೀ ರಾಮ ಮಂದಿರದ ವಾತಾವರಣ ಬಹು ಪ್ರಶಾಂತ ವಾಗಿದೆ. ನಾವು ಸಭಾಂಗಣವನ್ನು ಪ್ರವೇಶಿಸುತ್ತಲೆ, ಎತ್ತರದ ಪಾಣಿ ಪೀಠದ ಮೇಲೆ, ಸುಮಾರು ಮೂರಡಿ ಎತ್ತರದ ಭವ್ಯ ಸುಂದರ ಅಮೃತಶಿಲಾ ಶ್ರೀ ರಾಮ ಸೀತಾ ಲಕ್ಷ್ಮಣಾಂಜನೇಯ ವಿಗ್ರಹಗಳನ್ನು ಸಂದರ್ಶಿಸುತ್ತೇವೆ. ಪಾಣಿಪೀಠದ ಕೆಳಗೆ ಥಾಳಾಗಿ ಕಂಗೊಳಿಸುವ ಪದ್ಮಾಸನ ಹಾಕಿ ಕುಳಿತಿರುವ ಬ್ರಹ್ಮಚೈತನ್ಯರ ಅಮೃತಶಿಲಾ ವಿಗ್ರಹವು ನಮ್ಮನ್ನು ಅನುಗ್ರಹ ಮುಖದಿಂದ ಸ್ವಾಗತಿಸುತ್ತದೆ. ಶಾಂತವಾದ ವಾತಾವರಣ ನಮ್ಮನ್ನು ಭಕ್ತಿಭಾವೋದ್ರೇಕದಿಂದ ಪುಳಕಿಸಿತು. "ಇಡೀ ಶ್ರೀರಾಮಾಯಣ ದರ್ಶನಂ" ಕಾವ್ಯವನ್ನು ಆರು ವಾಚನಗಳಿಗೆ ಅಳವಡಿಸಿಕೊಂಡೆವು. 1) ಶಿಲಾ ತಪಸ್ವಿನೀ, 2) ಮಮತೆಯ ಸುಳಿ ಮಂಥರೆ, 3) ಪಾದುಕಾಕಿರೀಟ, 4) ಓ ಲಕ್ಷ್ಮಣ, 5) ಶಬರಿ ಗಾದನು ಅತಿಥಿ ದಾಶರಥಿ ಮತ್ತು 6) ರಯ್‍ಗೆ ಕರೆದೊಯ್ ಓ ಅಗ್ನಿ. ಕಾಲಾವಧಿ 2 ಗಂಟೆಗಳ ವ್ಯಾಪ್ತಿ.

ಚಿಂತಾಮಣಿ ನಮಗೆ ಹೊಸದಲ್ಲ. ನಮ್ಮ ದೊಡ್ಡಮ್ಮ ಗಂಗಾಬಾಯಿಯ ದ್ವಿತೀಯ ಪುತ್ರ ಬಿ. ಎಸ್. ಮಾಧವರಾವ್ ಕಾಮರ್ಸ್ ಉಪಾಧ್ಯಾಯರಾಗಿ ಚಿಂತಾ ಮಣಿ ಮುನ್ಸಿಪಲ್ ಪ್ರೌಢಶಾಲೆಯಲ್ಲಿ ಸುಮಾರು ಮೂವತ್ತು ವರ್ಷಗಳಿಗೂ ಮೇಲ್ಪಟ್ಟು ಶಿಕ್ಷಕವೃತ್ತಿ ಮಾಡಿ ಸಹಸ್ರ ಸಹಸ್ರ ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡಿ ಅಷ್ಟೇ ಸಂಖ್ಯೆಯ ಶಿಷ್ಯರನ್ನು ಸಂಪಾದಿಸಿದ್ದಾರೆ. ಮಾಧವರಾವ್ ಚಿಂತಾಮಣಿಯಲ್ಲಿ ಜನಪ್ರಿಯ ವ್ಯಕ್ತಿ. ಅವರ ಹೆಸರು ಮನೆಮಾತು ಸುಚರಿತ್ರದಿಂದ. 1938 ರಿಂದ 1978ರ ವರೆಗೆ ಹಲವಾರು ಸಲ ನಾವು ಚಿಂತಾಮಣಿಗೆ ಹೋಗಿದ್ದೇವೆ. ಕಾವ್ಯವಾಚನ ಕಾರ್ಯಕ್ರಮ ಕೊಟ್ಟಿದ್ದೇವೆ. ಸಾರ್ವಜನಿಕ ಕಾರ್ಯಕ್ರಮಗಳೂ ಒಂದೆರಡು ಆಗಿವೆ. ಗೋಷ್ಠಿಗಳಿದ್ದಂತೆ ಎನ್ನಬಹುದು. ಒಂದು ಕಾರ್ಯಕ್ರಮ ನೂರಾರು ಶ್ರೋತೃಗಳನ್ನು ಆಕರ್ಷಿಸಿತ್ತು. ನಮಗೂ ಉತ್ಸಾಹ ತುಂಬಿ ತುಳುಕುತ್ತಿತ್ತು. ಶಕುಂತಲಾಬಾಯಿಯ ಮೇಲಿನ ಅತಿ ಪ್ರೇಮದಿಂದ ಒಬ್ಬ ಬ್ರಾಹ್ಮಣ ವೃದ್ಧೆ ಮಡಿ ಹೆಂಗಸು ಕಾರ್ಯಕ್ರಮಕ್ಕೆ ಪ್ರಾರಂಭದ ಮುಂಚೆ ಕರೆದ ಹಾಲು ಹೇಗಿತ್ತೋ ಹಾಗೆ, ಗಟ್ಟಿಹಾಲನ್ನು ಕಾಯಿಸಿ, ಕುಡಿಯಲು ಕೊಟ್ಟುಬಿಟ್ಟರು. ಶಕುಂತಲಾಬಾಯಿಯೂ ಹಿಂದು ಮುಂದು ನೋಡದೆ ಕುಡಿದೇಬಿಟ್ಟರು. ಕೆಲವೇ ನಿಮಿಷಗಳಲ್ಲಿ ವೇದಿಕೆಹತ್ತಿದರು. ತಂಬೂರಿಶ್ರುತಿ ಝೇಂಕರಿ ಸುತ್ತಿತ್ತು. ನಾನು ಪ್ರಸ್ತಾವಿಕ ಭಾಷಣ ಮುಗಿಸಿ ಶಕುಂತಲಾಬಾಯಿಯನ್ನು ಕಾವ್ಯ ವಾಚನ ಪ್ರಾರಂಭಿಸಲು ಮುಖ ನೋಡಿದೆ. ಕುಮಾರವ್ಯಾಸ ಭಾರತದ "ಶ್ರೀವನಿತೆ ಯರಸನೆ" ಪದ್ಯವನ್ನು ಹಾಡಲು ಪ್ರಾರಂಭಿಸಿದರು. ಸ್ವರ ಹೊರಟರೆ ತಾನೆ! ಗಮಗಮಿ ಸುವ ಬಿಸಿ ಹಾಲಿನ ಕೆನೆ ತೆಂಡೆ ಶ್ರೀಮತಿಯ ಗಂಟಲ ನಾಳವನ್ನು ಬಂಕೆಯಂತೆ ಅಂಟಿ ಕೊಂಡಿರಬೇಕು. ಗಂಟಲು ಕಟ್ಟಿಕೊಂಡಿತು. ಏನು ಮಾಡಿದರೂ ಸ್ವರವೇ ಹೊರಡದು.

ಮಾತಾಡಿದರೆ ಪಕ್ಕದವರಿಗೆ ಕೇಳಿಸದು. ಕೈಬಾಯಿ ಸನ್ನೆಗೆ ಪ್ರಾರಂಭವಾಯಿತು. ಬಾಯಿ ಸಂಪೂರ್ಣವಾಗಿ ಮುಚ್ಚಿ ಹೋಯಿತು. ಅತಿಯುತ್ಸಾಹದಿಂದ ಕರೆಸಿಕೊಂಡಿದ್ದ ವಿದ್ಯಾರ್ಥಿನಿಲಯದ ಕಾರ್ಯಕ್ರಮ ಹೀಗೆ ನಿರಾಶಾದಾಯಕವಾಗಿ ವಿಫಲವಾಗಿ ಹೋಯಿತು. ನಿಮಿಷಮಾತ್ರದಲ್ಲಿ ಭಾರಿ ಜನಸಂದಣಿಯ ಸಭೆ ಶಕುಂತಲಾಬಾಯಿಯ ತೇಜೋವಧೆ ಸಭೆಯಾಗಿ ಪರಿಣಮಿಸಿತು. ಶ್ರೋತೃಗಳನ್ನು ಕ್ಷಮಿಸುವಂತೆ ನಾನು ಕಂಗೆಟ್ಟ ಮುಖದಿಂದ ಪ್ರಾರ್ಥಿಸಿಕೊಂಡೆ. ಸಭೆ ನಿಮಿಷಮಾತ್ರದಲ್ಲಿ ಬರಕಾಸ್ತಾಯಿತು ಮೂರನೇ ದಿವಸದ ಹೊತ್ತಿಗೆ ಗಂಟಲು ಸರಿಹೋಯಿತು. ಅದೇ ಸಂಜೆ ನಮ್ಮಣ್ಣನ ಮನೆಯಲ್ಲಿ ಇನ್ನೊಂದು ಕಾರ್ಯಕ್ರಮ. ಚೆನ್ನಾಯಿತು. ಈ ಕಾರ್ಯಕ್ರಮವಾದ ಮೇಲೆ ಎಷ್ಟೋ ವರ್ಷಗಳ ಮಾತು ಚಿಂತಾಮಣಿ ಮಾಧ್ಯಮಿಕ ಶಾಲಾ ವಾತಾವರಣ ದಲ್ಲಿ ವಿನಾಯಕ ಪ್ರತಿಷ್ಠೆಯಾಯಿತು: 1959ರಲ್ಲಿ. ಶಾಲೆಯ ಮುಖ್ಯೋಪಾಧ್ಯಾಯ ರಾದ ಟಿ. ಬಿ. ಗೋವಿಂದರಾಯರು ಈ ಪವಿತ್ರ ಪ್ರತಿಷ್ಠ ಕಾರ್ಯಕ್ರಮಕ್ಕೆ ನೇತಾರ ರಾಗಿದ್ದರು. ಅವರು ನಮಗೆ ಚಿರಪರಿಚಿತರು. ಅವರ ಮೂಲಕ ಚಿಂತಾಮಣಿಯ ಸುಪ್ರ ಸಿದ್ಧ ಸಮಾಜ ಸೇವಕ, ಕಾಂಗ್ರೆಸ್ ಅಧ್ವರ್ಯು ಆಂಜನೇಯರೆಡ್ಡಿ ಅವರ ಮಗ ಶ್ರೀರಾಮಾರೆಡ್ಡಿಯವರನ್ನು ಖುದ್ದಾಗಿ ನಮ್ಮ ಬಳಿ ಕಳಿಸಿದ್ದರು. ‘‘ಶ್ರೀ ರಾಮಾಯಣ ದರ್ಶನಂ’’ ಕಾವ್ಯವಾಚನಕ್ಕೆ. ಗಾಂಧೀ ಸಾಹಿತ್ಯ ಸಂಘದ ಗಿರಿಜಾಕಲ್ಯಾಣದ ರೂಪಕ ಕಾರ್ಯಕ್ರಮವೂ ಇತ್ತು. ನಮ್ಮದು ಒಂದು ದಿನ, ಗಾಂಧೀ ಸಾಹಿತ್ಯ ಸಂಘದ್ದು ಇನ್ನೊಂದು ದಿನ. ನಮ್ಮ ಕಾರ್ಯಕ್ರಮವಿದ್ದ ದಿನ ಘುರೋ ಅನೆಕಲ್ಲು ಮಳೆ ಭೋರ್ಗರೆದು ಮಾಧ್ಯಮಿಕ ಶಾಲೆ ಆವರಣದಲ್ಲಿ ಹಾಕಿದ್ದ ಚಪ್ಪರ ತೂತು ಬಿದ್ದು ತೊಯಿದು, ನೆಲವೆಲ್ಲ ಕೆಸರು ರಾಡಿಯಲ್ಲಿ ಗಬ್ಬೆದ್ದುಹೋಯಿತು. ಪೌರಸಭಾಂಗಣದಲ್ಲಿ ಎಷ್ಟೋ ಹೊತ್ತಿನ ಮೇಲೆ ಕಾವ್ಯವಾಚನದ ಏರ್ಪಾಡು. ಎಣಿಸುವಷ್ಟು ಶ್ರೋತೃಗಳು. ನೂರಾರು ಜನರು ಕೇಳಿ ಆನಂದಿಸಬೇಕಾಗಿದ್ದ ಎರಡು ಸಾರ್ವಜನಿಕ ಸಭೆಗಳು ಶಕುಂತಲಾಬಾಯಿಗೆ ಚಿಂತಾಮಣಿಯಲ್ಲಿ ನಿರಾಶೆಯ ಉತ್ಸಾಹಭಂಗದ ತಣ್ಣೀರೆರಚಿ ದ್ದವು. ಈಗ ಅದೇ ಚಿಂತಾಮಣಿಯಲ್ಲಿ ‘‘ಶ್ರೀ ರಾಮಾಯಣ ದರ್ಶನಂ’’ ಮಹಾಕಾವ್ಯದ ಆರು ವಾಚನಗಳು ಶ್ರೀ ರಾಮ ಸಮರ್ಥ ಶ್ರೀ ಬ್ರಹ್ಮ ಚೈತನ್ಯ ಶ್ರೀರಾಮ ಮಂದಿರದಲ್ಲಿ.

ತೆಲುಗು ಭಾಷಾ ಪ್ರೇಮದ ಶ್ರೋತೃಗಳು ಬಹಳ ಸಂಖ್ಯೆಯಲ್ಲಿ ‘‘ಶ್ರೀ ರಾಮಾ ಯಣ ದರ್ಶನಂ’’ ಕಾವ್ಯವಾಚನಕ್ಕೆ ಬರದಿರಬಹುದೆಂದು ಕಾರ್ಯಕರ್ತರುಗಳಿಗೇ ಶಂಕೆ. ನಮಗೆ ಯಾವ ಶಂಕೆಯೂ ಇಲ್ಲ. 1938ರಿಂದ ಈವರೆಗೆ ನೂರಾರು ಸಭೆಗಳನ್ನು ಕಂಡಿ ರುವ ನಮಗೆ ನಮ್ಮ ಜನದ ಜೀವನಾಡಿ ಚೆನ್ನಾಗಿ ಅರ್ಥವಾಗಿದೆ. ಐದು ಹತ್ತು ಮಂದಿ ಗಳ ಸಭೆಗಳಿಂದ ಹಿಡಿದು ಸಾವಿರಾರು ಜನಸ್ತೋಮದ ಸಭೆಗಳನ್ನು ಕಂಡಿರುವ ನಾವು ನಿರಾಶೆಗೂ ಅತಿ ಉತ್ಸಾಹಕ್ಕೂ ಒಂದೇ ಮಣೆಯ ಸ್ಥಾನ ಕೊಟ್ಟಿದ್ದೇವೆ. ಕರೆದರು, ಹೋಗಿ ಕಾವ್ಯವಾಚನ ಕೊಡುವುದು. ಜನ ಬಂದು ಕೇಳಿತು, ಸಂತೋಷ. ಬರಲಿಲ್ಲ, ಕೇಳಲಿಲ್ಲ, ಸಂತೋಷ. ನಾವೇನು ಚಲನಚಿತ್ರ ತಾರೆಗಳೇ ಜನ ಬಂದು ಕರಗಧ ಪರಿಷೆ

ನೆರೆಯುವುದಕ್ಕೆ. ಮದ್ರಾಸ್ ಸಂಗೀತ ವಿದ್ವಾಂಸರೇ ಜನವನ್ನು ಆಕರ್ಷಿಸುವುದಕ್ಕೆ? ಥಳಕು ಪಳಕು, ಬೆಡಗು ಬಿನ್ನಾಣವರಿಯದ, ಎಳೆತನ ಹೋಗಿ ಮುಪ್ಪಿನ ಮನೆಯನ್ನು ಪ್ರವೇಶಿಸಿರುವ ದಂಪತಿಗಳು. ಶಕುಂತಲಾಬಾಯಿಯ ಕಲಕಂಠವೊಂದೇ ಜನಾಕರ್ಷಣೀಯ ನೋಡಿ. ಬ್ರಹ್ಮ ಚೈತನ್ಯರ ಅನುಗ್ರಹ, ಸಭಾಂಗಣ ನಿತ್ಯವೂ ಭರ್ತಿಯಾಗುತ್ತಿತ್ತು. ಜನಕ್ಕೆ "ಶ್ರೀ ರಾಮಾಯಣ ದರ್ಶನಂ" ಕಾವ್ಯ ಹಿಡಿಸಿತು. ಪಂಡಿತಪಾಮರರಾದಿಯಾಗಿ ಜನ ಕೂತು ಕೇಳಿತು. ಗಮಕ ವಿದುಷಿ ಪರಿಮಳ ಗೋವಿಂದರಾಜ್ ತಪ್ಪದೆ ಐದು ದಿನವೂ ಬಂದು ತಂಬೂರಿ ಶ್ರುತಿಯಿಂದ ಸಹಕರಿಸಿ ಕಾವ್ಯವಾಚನಕ್ಕೆ ಯಶಸ್ಸು ತಂದರು. ಕಾರ್ಯಕರ್ತ ವೆಂಕಟೇಶಮೂರ್ತಿ ತಮ್ಮನ್ನು "ಧನ್ಯೋಸ್ಮಿ" ಯೆಂದುಕೊಂಡು ಆನಂದತುಂದಿಲರಾದರು "ಶ್ರೀ ರಾಮಾಯಣ ದರ್ಶನಂ" ಕಾವ್ಯ ವಾಚನ ಯಶಸ್ವಿಯಾದದಕ್ಕೆ.

ಚಿಂತಾಮಣಿಯ ಪ್ರಥಮ ದರ್ಜೆ ಕಾಲೇಜು ಶಕುಂತಲಾಬಾಯಿಯನ್ನು ಆಹ್ವಾನಿಸಿತು. "ಕರ್ಣಾಟಕ ಕವಿ ಕಾವ್ಯ ಪರಂಪರೆ" ಕಾವ್ಯ ವಾಚನ ವಿದ್ಯಾರ್ಥಿಗಳನ್ನು ಆಕರ್ಷಿತು.

ಚಿಂತಾಮಣಿಯ "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನ ಶಕುಂತಲಾಬಾಯಿಯ ಗಮಕವಾಚನ ಜೀವನದಲ್ಲಿ ಇನ್ನೊಂದು ಹೊಸ ಮೈಲಿಗಲ್ಲನ್ನು ಸ್ಥಾಪಿಸಿತೆಂದರೆ ಸೋಜಿಗವಲ್ಲ.

ಶಕುಂತಲಾಬಾಯಿಯ ಗಮಕವಾಚನ ಜೀವನದಲ್ಲೇ ಕುವೆಂಪು "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನದ ಪಾತ್ರ ಮಹತ್ತರವಾಗಿದೆ. ಕುಮಾರವ್ಯಾಸ ಭಾರತ ಆಕೆಗೆ ಗಮಕ ಸಿದ್ಧಿಯನ್ನು ದಯಪಾಲಿಸಿದೆಯೆಂದು ಆಕೆಯನ್ನು ಕೇಳಿದ ಶ್ರೋತೃಗಳ ಏಕಾಭಿಪ್ರಾಯವಾಗಿದೆ. ಅಷ್ಟೇ ಪ್ರಮಾಣದ ಗಮಕ ಕಲಾಸಿದ್ಧಿಯನ್ನು "ಶ್ರೀ ರಾಮಾಯಣ ದರ್ಶನಂ"ಕಾವ್ಯವಾಚನವೂ ಶಕುಂತಲಾಬಾಯಿಗೆ ಅನುಗ್ರಹಿಸಿದೆಯೆಂದು ಶ್ರೋತೃಗಳ ಮುಕ್ತಕಂಠಾಭಿಪ್ರಾಯವಾಗಿದೆ.

1955–56ರ "ಪ್ರಬುದ್ಧ ಕರ್ಣಾಟಕ"ದ ಸಂಚಿಕೆಗಳೊಂದರಲ್ಲಿ ಶಕುಂತಲಾಬಾಯಿ ತಪಸ್ಸಿದ್ಧಿಯಿಂದ "ಶ್ರೀ ರಾಮಾಯಣ ದರ್ಶನಂ" ಕಾವ್ಯದಂಥ ಕ್ಲಿಷ್ಟ ಕಾವ್ಯ ವಾಚನವನ್ನು ಕರಗತಮಾಡಿಕೊಂಡಿದ್ದಾರೆಂಬ ಅರ್ಥಬರುವ ಹಾಗೆ ಸಂಪಾದಕೀಯ ಬರೆದಿದೆ.

ಐಬಿಎಚ್ "ಅನುರನಾದ" ಧ್ವನಿಮುದ್ರಿಕೆಯಲ್ಲಿ "ಶ್ರೀ ರಾಮಾಯಣ ದರ್ಶನಂ"

ಕುವೆಂಪು ಕವಿವರ್ಯರ ಸ್ವಸಂತೋಷಕ್ಕಾಗಿ ಶಕುಂತಲಾಬಾಯಿ "ಶ್ರೀ ರಾಮಾಯಣ ದರ್ಶನಂ" ಕಾವ್ಯದಿಂದ—ಶಿಲಾತಪಸ್ವಿನಿ, ಮಮತೆಯ ಸುಳಿ ಮಂಥರೆ, ಪಾದುಕಾಕಿರೀಟಿ, ಓ ಲಕ್ಷ್ಮಣಾ, ಶಬರಿಗಾದನು ಅತಿಥಿ ದಾಶರಥಿ, ಸಾಗರೋಲ್ಲಂಘನಂ,

ದಶಶಿರ ಕನಕಲಕ್ಷ್ಮಿ, ಅಶ್ರುಗಂಗೋತ್ರಿ, ಸಫಲಮಾಯ್ತಾ ರಾಯಭಾರಂ, ರಸಮುಲ್ತೆ ರುದ್ರದೃಷ್ಟಿಗೆ ರೌದ್ರಮುಂ, ಮಡಿದನಿಂದ್ರಜಿತು ಐಂದ್ರಾಸ್ತ್ರದಿಂ ! ನೀಂ ಮಹಚ್ಛಿಲ್ಪಿ ದಿಟಂ ! ದಶಾನನ ಸ್ವಪ್ನಸಿದ್ಧಿ, ರರ್ಯ್‌ಗೆ ಕರೆದೊಯ್ ಓ ಅಗ್ನಿ, ತಪಸ್ಸಿದ್ಧಿ ಹೀಗೆ ಅನೇಕ ಸಂಚಿಕೆಗಳನ್ನು 90 ನಿಮಿಷಗಳ ಕ್ಯಾಸೆಟ್ಟುಗಳಲ್ಲಿ ಧ್ವನಿಮುದ್ರಿಕೆ ಮಾಡಿಕೊಟ್ಟಿದ್ದಾರೆ. ಕಥಾಭಾಗಗಳನ್ನು ಬಿಟ್ಟು ಪ್ರಾರ್ಥನೆಗಳು, ಪ್ರಕೃತಿ ವರ್ಣನೆಗಳು ಹೀಗೆ ಗಣನೀಯವಾದ "ಶ್ರೀ ರಾಮಾಯಣ ದರ್ಶನಂ"ಕಾವ್ಯದ ವೈಶಿಷ್ಟ್ಯದ ಬಿಡಿಭಾಗಗಳನ್ನು ಕ್ರೋಢೀಕರಿಸಿ ಕ್ಯಾಸೆಟ್ಟುಗಳಲ್ಲಿ ಧ್ವನಿಮುದ್ರಿಸಿಕೊಡುವ ಪ್ರಯತ್ನವನ್ನು ಇತ್ತೀಚೆಗೆ ಕೈಗೊಂಡಿದ್ದಾರೆ. ಕವಿವರ್ಯರಿಗೆ ಶಕುಂತಲಾಬಾಯಿಯ "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನದ ಪರಿಚಾರಿಕೆ ಸಾಕಷ್ಟು ಮನಸ್‌ತೃಪ್ತಿ ಕೊಟ್ಟಿದೆ. ಅವರು ತಮ್ಮ ಅಭಿಪ್ರಾಯವನ್ನು ಮನಬಿಚ್ಚಿ ಕೈಹಿಡಿಯದೆ ವ್ಯಕ್ತಗೊಳಿಸಿದ್ದಾರೆ. "ರಸಮುಲ್ತೆ ರೌದ್ರ ದೃಷ್ಟಿಗೆ ರುದ್ರಮುಂ"ತುಂಬ ಅದ್ಭುತವಾಗಿದೆ ಎಂದಿದ್ದಾರೆ. 31–12–1979ರ ಪತ್ರದಲ್ಲಿ. ಅದೇಕೋ "ಓ ಲಕ್ಷ್ಮಣ!" ಶಕುಂತಲಾಬಾಯಿಗೆ, ಸಾರ್ವಜನಿಕರಿಗೆ ಕೊಟ್ಟಷ್ಟು ತೃಪ್ತಿಯನ್ನು ಕವಿವರ್ಯರಿಗೆ ಕೊಟ್ಟಿಲ್ಲ. ಅವರು ತಮ್ಮ ಅಭಿಪ್ರಾಯವನ್ನು ನಿಸ್ಸಂಕೋಚವಾಗಿ ವ್ಯಕ್ತಪಡಿಸಿದ್ದಾರೆ ಅದೇ ಪತ್ರದಲ್ಲಿ. "ಆದರೆ 'ಓ ಲಕ್ಷ್ಮಣಾ' ಅಷ್ಟು ಚೆನ್ನಾಗಿ ಬಂದಿಲ್ಲ. ಇದನ್ನೂ 'ರಸಮುಲ್ತೆ........ಅಂತೆಯೇ ಚೆನ್ನಾಗಿ ಬರುವಂತೆ ಮಾಡಿಕೊಡಬೇಕೆಂದು ಕೋರುತ್ತೇನೆ" ಎಂದಿದ್ದಾರೆ. ಶಕುಂತಲಾಬಾಯಿ ಕುವೆಂಪು ಅವರ ಕೋರಿಕೆಯಂತೆ "ಓ ಲಕ್ಷ್ಮಣಾ !"ವನ್ನು ಇನ್ನೊಮ್ಮೆ ಕ್ಯಾಸೆಟ್ಟಿನಲ್ಲಿ ಮೂಡಿಸಿದ್ದಾರೆ. ಅದು ಕವಿವರ್ಯರಿಗೆ ತೃಪ್ತಿ ಕೊಟ್ಟಿರಬೇಕು.

31–12–1980 ಪತ್ರದಲ್ಲಿ ಕುವೆಂಪು "ಶ್ರೀ ರಾಮಾಯಣ ದರ್ಶನಂ" ಧ್ವನಿಮುದ್ರಿಕೆಗಳನ್ನು ಕೇಳಿ ತಮಗಾದ ಸಂತೋಷವನ್ನು ಹೀಗೆ ವ್ಯಕ್ತಪಡಿಸಿದ್ದಾರೆ. "ಪದೇ ಪದೇ ನೀವು ಮಾಡಿಕೊಟ್ಟಿರುವ ಶ್ರೀ ರಾ. ದರ್ಶನದ ರಿಕಾರ್ಡುಗಳನ್ನು ಹಾಕಿ ಆನಂದಿಸುತ್ತಿದ್ದೇವೆ ನಾವೆಲ್ಲ....ನಿಮ್ಮ ಶ್ರೀ ರಾ.ದ—"ನೀಂ ಮಹಚ್ಛಿಲ್ಪಿ ದಿಟಂ" "ದಶಾನನ ಸ್ವಪ್ನಸಿದ್ಧಿ" ಗಳನ್ನು ಎಷ್ಟು ಕೇಳಿದರೂ ತೃಪ್ತಿಯಾಗದಷ್ಟು ಬಹಳ ಸೊಗಸಾಗಿವೆ........."

25–8–1981ರಲ್ಲಿ ಕುವೆಂಪು ಬರೆದ ಪತ್ರದಲ್ಲಿ ಎಸ್. ವಿ. ಪರಮೇಶ್ವರಭಟ್ಟರು "ದಶಾನನ ಸ್ವಪ್ನ ಸಿದ್ಧಿ"ಯನ್ನು ಕೇಳಿ ಆನಂದಪಟ್ಟುದನ್ನು ಕುರಿತು ಬರೆಯುತ್ತ— "ಮೊನ್ನೆ ತಾವು ಈಗ ತಾನೆ ಬರೆದುಪೂರೆಯಿಸಿರುವ "ಮಹಾಕವಿ ಕುವೆಂಪು : ಒಂದು ಅಧ್ಯಯನ" ಎಂಬ ತಮ್ಮ ಥೀಸೀಸ್ (ಮಹಾ ಪ್ರಬಂಧ)ಅನ್ನು ತೋರಿಸಲು ಬಂದಾಗ ಅವರಿಗೆ "ದಶಾನನ ಸ್ವಪ್ನಸಿದ್ಧಿ"ಯನ್ನು ಹಾಕಿ ಕೇಳಿಸಿದೆ. ತದೇಕಚಿತ್ತರಾಗಿ ಆಲಿಸಿ ಅದ್ಭುತ ಅದ್ಭುತ ಎಂದರು. ಕವಿಗೂ ಗಮಕಿಗೂ ಒಪ್ಪಿಗೆ ! ನಿನ್ನೆ ನಾನು ಮತ್ತೊಮ್ಮೆ "ರಸಮುಲ್ತೆ ರುದ್ರ ದೃಷ್ಟಿಗೆ ರೌದ್ರಮುಂ" ಹಾಕಿ ಕೇಳಿದೆ. ಎಷ್ಟು ಅದ್ಭುತವಾಗಿ ಗಮಕಿಸಿದ್ದಾರೆ ಶಕುಂತಲಾಬಾಯಿಯವರು ! ನೀವಿಬ್ಬರೂ ನಮ್ಮ ಮನೆಗೆ ಬಂದು ಆ

ಟೇಪನ್ನು ಕೇಳಲೇಬೇಕು. ನೀವೇ ಹಾಡಿದ್ದರೂ ಈಗ ಅದನ್ನು ಕೇಳಿದರೆ ನೀವೇ ಬೆರಗಾಗುವುದರಲ್ಲಿ ಸಂದೇಹವಿಲ್ಲ. ಅಷ್ಟು ಅದ್ಭುತವಾಗಿ ಬಂದಿದೆ, ಆ ಸಂಚಿಕೆ!—" ಎಂದಿದ್ದಾರೆ.

ಏನು ! ಶಕುಂತಲಾಬಾಯಿಯ ಕಾವ್ಯವಾಚನದಲ್ಲಿ ನ್ಯೂನತೆಯೇ ಇಲ್ಲವೇ ಹಾಗಾದರೆ ? ಆಕೆಯೂ ಮನುಷ್ಯಳು. ಆರೋಗ್ಯ ಹದವಿಲ್ಲದಾಗ, ದಣಿದು ಆಯಾಸ ಗೊಂಡಾಗ, ಮನೋಧರ್ಮ ಕುದುರದೆ ಭೀಕರಕ್ಕೆ ಬಲಿಬಿದ್ದಾಗ, ಆಕೆಯ ಕಾವ್ಯ ವಾಚನ ಎಡವಿ ಮುಗ್ಗರಿಸುತ್ತದೆ. ಶ್ರೋತೃಗಳಿಗೆ ರಸಲೋಕ ಲಭ್ಯವಾಗುವುದಿಲ್ಲ. ಕಾವ್ಯವಾಚನ ಎಡೆತಡೆಯಿಲ್ಲದೆ ಮಹಾಪೂರದಂತೆ ಪ್ರವಹಿಸಿರುವಾಗ ಕಣ್ಣುತಪ್ಪಿ ಒಂದೊಂದು ಸಣ್ಣ ಪ್ರಮಾದ ಆವಿರ್ಭವಿಸುತ್ತದೆ, ಅಂಥ ಸಮಯದಲ್ಲಿ ನಾಲಗೆಯಿಂದ ತುಟಿ ಹಾಯ್ದು ಬಂದ ತಪ್ಪನ್ನು ಕೂಡಲೇ ಚಚ್ಚರವಹಿಸಿ ತಿದ್ದಿಕೊಂಡು ಪುನರುಕ್ತಿ ಯಲ್ಲಿ ಸರಿಪಡಿಸಿಕೊಳ್ಳುವ ಜಾಣ್ಮೆ ಶಕುಂತಲಾಬಾಯಿಗುಂಟು. ಆದರೂ ಆ ಚಚ್ಚರ ದಲ್ಲೂ ನಾಲಗೆ ಹತೋಟಿ ತಪ್ಪಿ ಹಿಂದಿನ ತಪ್ಪನ್ನೇ ಉಚ್ಚರಿಸುತ್ತದೆ. ಅಂಥ ತಪ್ಪುಗಳು ಎಚ್ಚರದಿಂದ ಕೇಳುವ ಕಿವಿಗಳಿಗೆ ಮಾತ್ರ ಗೊತ್ತಾಗುತ್ತದೆ. ಗಮಕಿಗೂ ತಿಳಿದಿರುತ್ತದೆ. ಕೈಮೀರಿ ಹೋದ ಪ್ರಸಂಗ. ಇಂಥ ಸಂದರ್ಭಗಳಲ್ಲಿ ಶಕುಂತಲಾಬಾಯಿ "**ನಡೆವರಲ್ಲದೆ ಕುಳಿತರೆಡಹುವರೆ**" ಎಂಬ ರಾಘವಾಂಕನ ಉಕ್ತಿಗೆ ಮರೆಹೋಗುತ್ತಾರೆ.

ಕುವೆಂಪು"ಶ್ರೀ ರಾಮಾಯಣ ದರ್ಶನಂ"ಮಹಾಕಾವ್ಯ ಸಹೃದಯ ಗೋಷ್ಠಿಗಳು, ಸಾರ್ವಜನಿಕ ವೇದಿಕೆಗಳನ್ನು ಮುಟ್ಟಿ ಈಗ ಶ್ರೋತೃಗಳು, ಸಹಸ್ರ ಸಹಸ್ರ ಸಂಖ್ಯೆಗಳಲ್ಲಿ ತಮ್ಮ ತಮ್ಮ ಸ್ಥಳಗಳಲ್ಲಿ ತಮ್ಮ ತಮ್ಮ ಮನೆಗಳಲ್ಲಿ ಕೂತು ಕೇಳುವ ಮಜಲುಮುಟ್ಟಿದೆ. ಹಾಗೆಂದರೆ "ಆಕಾಶವಾಣಿಯೇ?" ಎಂದು ಕೇಳಬಹುದು. ಆದರಲ್ಲಿ ಶಕುಂತಲಾಬಾಯಿ "ಶ್ರೀ ರಾಮಾಯಣ ದರ್ಶನಂ" ಪ್ರಸಾರಪಡಿಸಿಯೇ ಇಲ್ಲ ಈವರೆಗೆ. ಆದರೆ ಐಬಿಎಚ್ "ಅಮರನಾದ್" ಕೊಡುಗೆಯಾಗಿ ಶಿಲಾತಪಸ್ವಿನಿಯ "ಅಹಲ್ಯೋದ್ಧಾರ" ಮತ್ತು "ಸೀತಾಕಲ್ಯಾಣ" ಭಾಗಗಳು ಕ್ಯಾಸೆಟ್ಟುಗಳಲ್ಲಿ ಧ್ವನಿಮುದ್ರಿಕೆಯಾಗಿ ಮೂಡಿಬಂದಿವೆ. ಡಾ|| ಎಚ್. ಕೆ. ರಂಗನಾಥ್ ಅವರ ಪ್ರಯತ್ನದ ಫಲ, ಹಾಗೂ ಚೆಚ್ಚರದ ಉಸ್ತುವಾರಿ, "ಪಾರ್ವತೀ ಸುತ"ರ ಶ್ರದ್ಧೆಯ ನಿರ್ದೇಶನ, ಐಬಿಎಚ್ 'ಅಮರನಾದ'ದ ಬೆಂಗಳೂರು ವಿಭಾಗದ ಎ. ಸತ್ಯನಾರಾಯಣ ಅಯ್ಯರ್ ಅವರ ಮುತುವರ್ಜಿ, ಬೆಂಗಳೂರಿನ ಜಯಚಾಮರಾಜೇಂದ್ರ ಪಾಲಿಟೆಕ್ನಿಕ್ ಇನ್ಸ್‌ಟಿಟ್ಯೂಟಿನ ಸ್ಟುಡಿಯೊ ನಿವೃತ್ತ ತಂತ್ರಜ್ಞ ಟಿ. ಕೆ. ಕೇಶವಮೂರ್ತಿ, ಮತ್ತು ಈಗಿರುವ ತಂತ್ರಜ್ಞ ರಮೇಶ್ ಇವರುಗಳ ಸಹಕಾರ "ಅಮರನಾದ"ದ ಯಶಸ್ಸಿಗೆ ಕಾರಣವಾಗಿದೆ.

"ಶ್ರೀ ರಾಮಾಯಣ ದರ್ಶನಂ ಕಾವ್ಯದ ಧ್ವನಿಮುದ್ರಿಕೆಯನ್ನು ಐಬಿಎಚ್ ಸಂಸ್ಥೆಯವರು ಸಾರ್ವಜನಿಕ ಸಾನಿಧ್ಯಕ್ಕೆ ಕೊಂಡೊಯ್ಯುತ್ತಿರುವುದು ಸ್ತುತ್ಯರ್ಹ ವಾದ ವಿಷಯ" ಎಂದು ಹೇಳಿ 4ನೇ ಡಿಸೆಂಬರ್ 1981ರ ಪತ್ರದಲ್ಲಿ ಕುವೆಂಪು ಕವಿ ವರ್ಯರು ಸಂದೇಶ ಕೊಟ್ಟಿದ್ದಾರೆ.

"ಕವಿ ವಿಭೂತಿಗೆ ನಮೋ ! ಕೃತಿ ವಿಭೂತಿಗೆ ನಮೋ ।
ದರ್ಶನಧ್ವನಿರಸಾಮೃತ ಪಾನದಾನಂದದಿಂ
ಲೋಕಶೋಕವನಳಿಸಿ ಭುವನತ್ರಯಂಗಳಂ
ತಣಿಪ ನಂದನ ತಪೋದೀಕ್ಷೆಯಂ ಕೊಂಡೆಸಪ
ರಸಋಷಿಗೆ ಯೋಗಮತಿ ಸಹೃದಯ ವಿಭೂತಿಗೆ ನಮೋ ।"

ಓಂ ಶಾಂತಿ ಶಾಂತಿ ಶಾಂತಿಃ

೭. ಸಾಹಿತ್ಯ ಸಂಸ್ಕೃತಿ ಪ್ರಸಾರ ಮುಂಚೂಣಿಯಲ್ಲಿ

ಸಾಹಿತ್ಯ ಸಂಸ್ಕೃತಿಗಳ ಪ್ರೇಮಿ ಕೆಂಗಲ್ ಹನುಮಂತಯ್ಯನವರು 1953ರಲ್ಲಿ ಮೈಸೂರು ರಾಜ್ಯದ ಮುಖ್ಯಮಂತ್ರಿಯಾಗುತ್ತಲೇ ಜನಪ್ರಿಯವಾದ ಸಾಹಿತ್ಯ ಸಂಸ್ಕೃತಿಗಳ ಪ್ರಸಾರ ಕಾರ್ಯವನ್ನು ಪ್ರಾರಂಭಿಸಿದರು. ಅದಕ್ಕಾಗಿ ಸಾಹಿತ್ಯ ಸಂಸ್ಕೃತಿ ಪ್ರಸಾರ ಇಲಾಖೆಯೇ ಸೃಷ್ಟಿಗೊಂಡಿತು. ಸಿ. ಕೆ. ವೆಂಕಟರಾಮಯ್ಯ ಪ್ರಪ್ರಥಮ ನಿರ್ದೇಶಕರು. ಅನಂತರ ಕ್ರಮವಾಗಿ ಎ. ಎನ್. ಮೂರ್ತಿರಾಯರು, ಕ. ಸು. ಧರಣೇಂದ್ರಯ್ಯನವರು ಸಿ. ಕೆ. ವಿ. ಅವರನ್ನು ಹಿಂಬಾಲಿಸಿ ಬಹು ನೇರ್ಪಿನಿಂದ ಸಾಹಿತ್ಯ ಸಂಸ್ಕೃತಿ ಇಲಾಖೆಯನ್ನು ನಿರ್ವಹಿಸಿದರು. ಹನುಮಂತಯ್ಯನವರು ಮುಖ್ಯಮಂತ್ರಿ ಪದವಿಯಿಂದ ನಿವೃತ್ತರಾದರು. ಸಾಹಿತ್ಯ ಸಂಸ್ಕೃತಿ ಇಲಾಖೆಯೂ ತನ್ನ ಪ್ರಸಾರ ಕಾರ್ಯದಿಂದ ತಟಸ್ಥವಾಯಿತು.

ಹನುಮಂತಯ್ಯನವರು ಜೇಲೂರು ಸಾಹಿತ್ಯ ಸಮ್ಮೇಳನವನ್ನು ಉದ್ಘಾಟಿಸಿದ ತರುಣದಲ್ಲಿಯೇ ಕನ್ನಡ ಸಾಹಿತ್ಯ ಪರಿಷತ್ತಿಗೆ ಎರಡು ಸಾವಿರ ರೂಪಾಯಿಗಳ ದತ್ತಿಯನ್ನು ಸರಕಾರದಿಂದ ಕೊಡಿಸಿ ವಾರವಾರವೂ ಗಮಕ ವಾಚನವನ್ನು ಪರಿಷತ್ತಿನ ಆಶ್ರಯದಲ್ಲಿ ನಡೆಯುವಂತೆ ಏರ್ಪಾಡು ಮಾಡಿದರು. ವಾರದ ಕಾರ್ಯಕ್ರಮ ಎರಡು ಮೂರು ವರುಷಗಳು ತಪ್ಪದೆ ನಡೆದುಕೊಂಡು ಹೋಯಿತು. ಹನುಮಂತಯ್ಯ ಮುಖ್ಯಮಂತ್ರಿ ಪದವಿಯಿಂದ ನಿವೃತ್ತರಾದರು. ಪರಿಷತ್ತಿನ ವಾರದ ಗಮುಕವಾಚನ ಕಾರ್ಯಕ್ರಮವೂ ತಟಸ್ಥವಾಯಿತು. ಆದರೆ ಕನ್ನಡ ಸಾಹಿತ್ಯ ಪರಿಷತ್ತು ಎರಡು ಮೂರು ವರುಷಗಳ ಕಾಲ ನಿರ್ವಹಿಸಿದ ಗಮುಕವಾಚನ ಕಾರ್ಯಕ್ರಮಗಳು ಸಾಧಾರಣವಲ್ಲ. ''ಶ್ರೀ ರಾಮಾಯಣ ದರ್ಶನಂ'', ''ತೊರವೆಯ ರಾಮಾಯಣ'' ಪಂಪನ ''ಆದಿ ಪುರಾಣ'', ಚಾಮರಸನ ''ಪ್ರಭುಲಿಂಗಲೀಲೆ'', ಷಡಕ್ಷರಿಯ "ರಾಜಶೇಖರ ವಿಲಾಸ," ರನ್ನನ "ಗದಾಯುದ್ಧ" ಮೊದಲಾದ ಕಾವ್ಯವಾಚನಗಳು ನಡೆದು ಜನಮೆಚ್ಚುಗೆಗೆ ಪಾತ್ರವಾದವು. ಶಕುಂತಲಾಬಾಯಿ, ಭಾರತದ ಕೃಷ್ಣಗಿರಿ ಕೃಷ್ಣರಾಯರು, ಗಮುಕಿ ಗುಂಡುರಾಮಯ್ಯ, ಗಮುಕ ರೂಪಕಗಳ ರಾಮಾರಾಧ್ಯ, ಗಮುಕಿ ಎಂ. ಎಸ್. ಚಂದ್ರಶೇಖರಯ್ಯ, ಟಿ. ಎನ್. ಚೆನ್ನಪ್ಪ ಮೊದಲಾದ ಪ್ರಖ್ಯಾತ ಗಮುಕಿಗಳು ಗಮುಕವಾಚನ ಸಾಂಸ್ಕೃತಿಕ ಯಜ್ಞದೀಕ್ಷಿತರಾಗಿ ಪಾಲುಗೊಂಡರು.

ಸಾಹಿತ್ಯ ಸಾಂಸ್ಕೃತಿಕ ಪ್ರಸಾರಕ್ಕಾಗಿ ಗಮುಕಿ–ವ್ಯಾಖ್ಯಾನಕಾರ–ಸಾಹಿತಿ–ಹರಿಕಥೆ ವಿದ್ವಾಂಸರುಗಳ ಪಡೆಯೇ ಸಿದ್ಧವಾಯಿತು. ಕುಗ್ರಾಮದಿಂದ ನಗರಗಳವರೆಗೂ ಸಾಹಿತ್ಯ ಸಂಸ್ಕೃತಿ ಪ್ರಚಾರ ವ್ಯಾಪಿಸಿತು. ಗಮಕ ವಿದುಷಿ ಶಕುಂತಲಾಬಾಯಿ, ಪ್ರಾಸಂಗಿಕ ನಿರೂಪಕನಾದ ನಾನು, ಗಮುಕ ಪರಿಚಾರಿಕೆಯಲ್ಲಿ ಪಾಲುಗೊಂಡೆವು.

* * *

ನಮ್ಮ ಮೊದಲ ಗಮಕ ವಾಚನ ಕಾರ್ಯಕ್ರಮ ಹಾಸನ ಜಿಲ್ಲೆಯಿಂದ ಪ್ರಾರಂಭ ವಾಯಿತು. ಹಾಸನದಿಂದ ಬೇಲೂರಿಗೆ ಹೋಗುವ ಮಾರ್ಗದಲ್ಲಿ ಒಂದು ಗ್ರಾಮ. ಹೆಸರು ಮರೆತಿದ್ದೇನೆ. ಅಲ್ಲಿ ಭಾರತವಾಚನ ಏರ್ಪಾಡಾಯಿತು. ಬೆಳಗ್ಗೆ ಬಸ್ಸಿನಲ್ಲಿ ಬೆಂಗಳೂರು ಬಿಟ್ಟು ಮಧ್ಯಾಹ್ನ ಹಾಸನ ತಲುಪಿದೆವು. ಇನ್ನೊಂದು ಬಸ್ಸು ಹಿಡಿದು ಸಂಜೆ ಐದಕ್ಕೆ ಗ್ರಾಮದ ಸರಹದ್ದು ಸೇರಿದೆವು. ಮಾರ್ಗದಿಗ್ದರ್ಶನದಿಂದ ಒಳದಾರಿಯಲ್ಲಿ ಪಾದಯಾತ್ರೆ ಮಾಡಿ ಹತ್ತು ಹದಿನೈದು ನಿಮಿಷಗಳಲ್ಲಿ ಗ್ರಾಮ ಸೇರಿದೆವು. ಗ್ರಾಮದ ಶಾನುಭೋಗರು, ಪಟೇಲರು ಸಂಭ್ರಮದಿಂದ ಸ್ವಾಗತಿಸಿದರು. ಸುತ್ತ ಮುತ್ತಲ ಹಳ್ಳಿಗಳಿಂದ ಜನ ಬಂದಿದ್ದರು. ಸಂಜೆ ಮುಗಿದು ರಾತ್ರಿ ಮೂಡಿತು. ತಹಸೀಲ್ದಾರರು ಸಭಾಧ್ಯಕ್ಷರು. ಕುಮಾರ ವ್ಯಾಸ ಭಾರತ ವಾಚನ ಪ್ರಾರಂಭವಾಯಿತು. ಪ್ರಾರಂಭದಲ್ಲಿ ಒಬ್ಬ ಜೈನ ಹೆಣ್ಣುಮಗಳು ಬಾಹುಬಲಿ ಸ್ವಾಮಿಯ ಮೇಲೆ ಕಟ್ಟಿದ ಒಂದು ಜಾನಪದ ವನ್ನು ಪ್ರಾರ್ಥನೆಗೆ ಉಪಯೋಗಿಸಿಕೊಂಡು ಸುಶ್ರಾವ್ಯವಾಗಿ ಹಾಡಿದಳು. ಸಾಹಿತ್ಯ ಬಹು ಮನೋಜ್ಞವಾಗಿತ್ತು. ಗ್ರಾಮಸ್ಥರು ಬಹುತೇಕ ಜೈನ ಬಾಂಧವರು. ಅವರ ಸಹಕಾರ ಶ್ಲಾಘ್ಯವಾಗಿತ್ತು. ನಮ್ಮ ಕಾರ್ಯಕ್ರಮ ಗ್ರಾಮೀಣರಿಗೆ ಪಸಂದಾಗಿತ್ತು.

ಮಳೆಗಾಲ. ಕಾರ್ಯಕ್ರಮ ಮುಗಿದ ತುಸು ಹೊತ್ತಿಗೆ ಆಕಾಶದಲ್ಲಿ ಮೋಡ ಕವಿದು ಗುಡುಗು ಗುಡುಗಿ ಮಿಂಚು ಮಿಂಚಿ ದುಭುದುಭು ಮಳೆ ದುಮ್ಮಿಕ್ಕಿತು. ಹೊರ ಗಿಂದ ಬಂದವರಿಗೆ ಮುಜಗರ. ಅತಿಥಿಗಳಿಗೆಲ್ಲ ರಸಗವಳ ಔತಣ.

''ಏನು ಗಮಕಿಗಳೋ! ಏನು ಗಮಕವಾಚನಗಳೋ!''

ನಮ್ಮ ಗಮಕ ಕಾರ್ಯಕ್ರಮದಲ್ಲಿ ಮುಗಿಲೆತ್ತರ ಮಟ್ಟದ ಕಾವ್ಯವಾಚನಗಳು ಹೊಳೆನರಸೀಪುರದ್ದು. ಅದರಲ್ಲಿ ಮೊದಲ ಸಲದ ಅನುಭವ ತುಂಬ ಸ್ವಾರಸ್ಯವಾದದ್ದು.

ಬೆಂಗಳೂರಿಂದ ರೈಲಿನಲ್ಲಿ ಹೊರಟು ಅರಸೀಕೆರೆ ಸೇರಿ, ಅಲ್ಲಿಂದ ಮೈಸೂರು ರೈಲು ಹಿಡಿದು ಬೆಳಗಿನ ಜಾವ ಹೊಳೆನರಸೀಪುರ ಸೇರಿದೆವು. ಪ್ರವಾಸಿ ಬಂಗಲೆಗೆ ಹೋಗಿ ಗಂಟುಗದಡಿ ಒಗೆದು, ಮುಖ ತೊಳೆದು, ನಾನು ಶಿರಸ್ತೇದಾರರ ಮನೆಗೆ ಹೊರಟೆ, ನಾವು ಬಂದಿದ್ದೇವೆ ಎಂದು ತಿಳಿಸಬೇಕಾಗಿತ್ತಲ್ಲ! ಶಿರಸ್ತೇದಾರರು ಶ್ರೀವೈಷ್ಣವ ಬ್ರಾಹ್ಮಣರು. ಸದ್ಗೃಹಸ್ಥರು. ಹಾರ್ದಿಕವಾಗಿ ಸ್ವಾಗತಿಸಿದರು, "ಪ್ರವಾಸಿ ಬಂಗಲೆ ಯಲ್ಲಿ ಬೇಡ. ನಮ್ಮ ಮನೆಯಲ್ಲೆ ಇಳಿದುಕೊಳ್ಳಿ" ಎಂದರು. ಆಳನ್ನು ಕಳಿಸಿ ಸಾಮಾ ನನ್ನು ತರಿಸಿಕೊಂಡರು. ನಾವು ಶಿರಸ್ತೇದಾರರ ಅತಿಥಿಗಳಾದೆವು. ಸ್ನಾನ, ತಿಂಡಿ, ಕಾಫಿ ಗಳ ಉಪಚಾರವಾಯಿತು. ಶಿರಸ್ತೇದಾರರು ಮಧ್ಯಾಹ್ನ ನಮಗೆ ಸಹಪಂಕ್ತಿಕೊಟ್ಟು ಭೋಜನಕ್ಕೆ ಕುಳಿತರು. ಗಮಕ ಸಾಹಿತ್ಯ ಸಂಸ್ಕೃತಿಗಳ ವಿಚಾರದ ಬಗೆಗೆ ಲೋಕಾಭಿ ರಾಮವಾಗಿ ಮಾತಿಗೆ ಪ್ರಾರಂಭವಾಯಿತು. "ಆಹಾ ಏನು ಗಮಕಿಗಳೊ! ಏನು ಗಮಕ ವಾಚನಗಳೋ ? ಪಡಿಪಾವುಗಳೆಲ್ಲ ಸಾಹಿತ್ಯ ಸಂಸ್ಕೃತಿ ಪ್ರಚಾರಕ್ಕೆ ದುಮುಕಿಬಿಟ್ಟವೆ. ನಾನೇ ಭಾರತವಾಚನ ಮಾಡಿ, ಅವರ ಸಂಭಾವನೆ ಹಣವನ್ನು ಕೊಟ್ಟು ಕಳಿಸಿ

ಬಿಡೋಣ ಎನ್ನಿಸಿದೆ." ಎಂದರು ಜಿಗುಪ್ಸೆಯಿಂದ. ನನಗೆ ಶಕುಂತಲಾಬಾಯಿಗೆ, ಉಣ್ಣುತ್ತಿದ್ದ ತುತ್ತು ಗಂಟಲಿಗೆ ಸಿಕ್ಕಿಕೊಂಡಿತು. ಶಿರಸ್ತೇದಾರರ ಕೂರಂಬು ಟೀಕೆಯ ಮಾತು ಗೋಣು ಹಿಡಿಯಿತು. ನುಂಗಬಾರದ ತುತ್ತು ನುಂಗಿದೆವು. "ಶಿರಸ್ತೇದಾರ್ ಸ್ವಾಮಿ, ಈ ದಿನದ ಕಾರ್ಯಕ್ರಮ ಕೇಳಿ 100 ಅಂಕಗಳಿಗೆ ಪ್ರಥಮ ದರ್ಜೆಯ 60 ಅಂಕಗಳನ್ನು ಪಡೆಯದಿದ್ದರೂ ನಿಕೃಷ್ಟ 35 ಅಂಕಗಳನ್ನು ಗಿಟ್ಟಿಸಿ ತೇರ್ಗಡೆಯಾಗುವ ತ್ರಾಣವಿದೆ. ರಾತ್ರಿ ನೀವು ನಮ್ಮ ಗಮಕ ಪರಿಚಾರಿಕೆಯನ್ನು ಪರಾಂಬರಿಸಿ" ಎಂದೆ.

ಹೊಳೇನರಸೀಪುರದ ಒಂದು ಗ್ರಾಮದಲ್ಲಿ ರಾತ್ರಿ ಕಾವ್ಯವಾಚನ ಏರ್ಪಾಡಾಗಿತ್ತು. ಪೂರ್ವಕಾಲದ ವಿಶಾಲವಾದ ನೂರನೂರೈವತ್ತು ಜನ ಜಮಾಯಿಸುವ ತೊಟ್ಟಿ ಮನೆ. ವಿದ್ಯುಚ್ಛಕ್ತಿ ದೀಪ. ತಹಸೀಲ್ದಾರರು ಅಧ್ಯಕ್ಷರು. ಅವರು ನಮ್ಮನ್ನು ಮಂಡ್ಯದಲ್ಲಿ ಕೇಳಿದ್ದರಂತೆ : ತುಂಬ ವಿಶ್ವಾಸದಿಂದ ಮಾತನಾಡಿಸಿದರು. ಹಿಂದೆ ಕೇಳಿದ್ದ ಕಾವ್ಯವಾಚನವನ್ನು ಪ್ರಸ್ತಾಪಿಸಿ ಮೆಚ್ಚುಗೆ ವ್ಯಕ್ತಪಡಿಸಿದರು. ತೃಪ್ತಿಭಾವ ಅಭಿವ್ಯಕ್ತವಾಗಿತ್ತು ಶಿರಸ್ತೇದಾರರ ಮುಖದಲ್ಲಿ. "ಕೃಷ್ಣರಾಯಭಾರ"ಭಾಗವನ್ನು ಸುಮಾರು ಒಂದು ಗಂಟೆಕಾಲ ನನ್ನ ಪ್ರಾಸಂಗಿಕ ನಿರೂಪಣೆಯೊಡನೆ ಶಕುಂತಲಾಬಾಯಿ ವಾಚನ ಮಾಡಿದರು. ಬೀಗರ ಔತಣಕ್ಕೂ ಮಿಗಿಲಾಗಿ ನಮಗೆ ಭಾರಿ ಔತಣವೇ ಏರ್ಪಟ್ಟಿತ್ತು. ಸುಮಾರು ನೂರು ನೂರೈವತ್ತು ಮಂದಿಗೆ ನಮ್ಮೊಡನೆ ಸಹಪಂಕ್ತಿ ಭೋಜನ.

ರಾತ್ರಿಯೇ ಜೋಡೆತ್ತಿನ ಬಂಡಿಯಲ್ಲಿ ಶಿರಸ್ತೇದಾರರೊಡನೆ ಹೊಳೇನರಸೀಪುರಕ್ಕೆ ಬಂದೆವು. ಮಾರ್ಗಮಧ್ಯದಲ್ಲಿ ನಾನು ಶಿರಸ್ತೇದಾರರನ್ನು ಪ್ರಶ್ನಿಸಿದೆ. "ಶಿರಸ್ತೇದಾರ್ ಸ್ವಾಮಿ, ನಮ್ಮನ್ನು "ಪಾಸ್" ಮಾಡಿಸಿದ್ದೀರೋ ?" ಶಿರಸ್ತೇದಾರ್ ನಗುತ್ತ, "80 ಅಂಕಗಳನ್ನು ಕೊಟ್ಟಿದ್ದೇನೆ ; ಸಾಕೋ ?" ಎಂದರು.

ಹೊಳೇನರಸೀಪುರದಲ್ಲೇ ನಮ್ಮ ಇನ್ನೊಂದು ಕಾವ್ಯವಾಚನ ಕಾರ್ಯಕ್ರಮ ಏರ್ಪಾಟಾಯಿತು. ಕುಮಾರವ್ಯಾಸನೋ ಲಕ್ಷ್ಮೀಶನೋ ನೆನಪಿಲ್ಲ, ಅಂತೂ ಸಾಹಿತ್ಯ ಸಂಸ್ಕೃತಿ ಇಲಾಖೆಯ ಕಾರ್ಯಕ್ರಮ. ಮಾರನೆಯ ದಿನ ಹೊಳೇನರಸೀಪುರದಿಂದ ಇಪ್ಪತ್ತು ಇಪ್ಪತ್ತೈದು ಮೈಲಿಗಳ ದೂರದಲ್ಲಿರುವ ಹಾರನಹಳ್ಳಿಯಲ್ಲಿ ಇನ್ನೊಂದು ಕಾವ್ಯವಾಚನ ಕಾರ್ಯಕ್ರಮ. ಹೊಳೇನರಸೀಪುರದ ಕಾರ್ಯಕ್ರಮ ಸಂಜೆ ಚೆನ್ನಾಗಿಯೇ ಆಯಿತು. ಸುಮಾರು ನೂರೈವತ್ತು ಇನ್ನೂರು ಮಂದಿ ಸೇರಿತ್ತು. ಕಾರ್ಯಕ್ರಮವೆಲ್ಲ ಮುಗಿದ ನಂತರ ಹೊಳೇನರಸೀಪುರದ ಕರ್ಣಾಟಕ ಸಂಘದ ಗೌ|| ಕಾರ್ಯದರ್ಶಿ ಎನ್. ಎಸ್. ರಾಮಪ್ರಸಾದರು, ಸಂಘದ ಅಧ್ಯಕ್ಷ ಸತ್ಯನಾರಾಯಣ ಸೆಟ್ಟರೊಡನೆ ಬಂದು ನಮ್ಮನ್ನು ಕಂಡರು. "ನಾಳೆ ಸಂಜೆ ಕರ್ಣಾಟಕ ಸಂಘದ ಆಶ್ರಯದಲ್ಲಿ "ಕುವೆಂಪು ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನ ಕೊಡಿ. ಹೊಸ ಕಾವ್ಯ, ನಮ್ಮ ಜನ ಕೇಳಲಿ" ಎಂದು ಪ್ರಾರ್ಥಿಸಿದರು. "ನಾಳೆ ಹಾರನಹಳ್ಳಿಯ ಕಾರ್ಯಕ್ರಮವಿದೆ, ಸಾಧ್ಯವಿಲ್ಲ. ಕ್ಷಮಿಸಿ" ಎಂದೆ. "ನಮ್ಮದು ಬಡ ಸಂಘ ಹೇಗೋ ತೂಗಿಸಿಕೊಂಡು ಹೋಗುತ್ತಿದ್ದೇವೆ. ಹೊಳೇನರಸೀಪುರಕ್ಕೆ ಬಂದಿದ್ದೀರಿ. ಕರ್ಣಾಟಕ ಸಂಘಕ್ಕೂ ಒಂದು

ಕಾರ್ಯಕ್ರಮ ಕೊಟ್ಟಿದ್ದರೆ ಚೆನ್ನಾಗಿತ್ತು"ಎಂದು ಪೇಚಾಡಿಕೊಂಡರು. "ನಾಳೆ ಹಾರನ ಹಳ್ಳಿಯ ಕಾರ್ಯಕ್ರಮ. ಮುಗಿಸಿಕೊಂಡು ನಾಡದ್ದು ಹೊಳೇನರಸೀಪುರಕ್ಕೆ ಒರುತ್ತೇವೆ. ಕಾರ್ಯಕ್ರಮ ಕೊಡುತ್ತೇವೆ. ಆಗಬಹುದಲ್ಲ ?" ಎಂದೆ. ರಾಮಪ್ರಸಾದರಿಗೆ ಅನುಮಾನ, ಮುಖ ನೋಡಿದರು. "ನಮ್ಮಲ್ಲಿ ನಂಬಿಕೆಯಿಲ್ಲವೆ ? ಸಾಹಿತ್ಯ ಸಂಸ್ಕೃತಿ ಇಲಾಖೆ ನಮಗೆ ಬೆಂಗಳೂರಿಂದ ಹೊಳೇನರಸೀಪುರಕ್ಕೆ, ಹಾರನಹಳ್ಳಿಗೆ ಹೋಗಿಬರುವ ಪ್ರವಾಸದ ವೆಚ್ಚ ಒಂದೂವರೆಯಷ್ಟು ಕೊಡುತ್ತದೆ. ಪ್ರವಾಸ ಭತ್ಯ, ಸಂಭಾವನೆ, ಕೊಡುತ್ತವೆ. ನಿಮ್ಮ ಕರ್ಣಾಟಕ ಸಂಘಕ್ಕಾಗಿ ನಾವು ಒಂದು ಹತ್ತು ರೂಪಾಯಿ ವೆಚ್ಚ ಮಾಡಲಾರೆವೇ? ನಮ್ಮಿಂದ ಇಷ್ಟೂ ತ್ಯಾಗ ಕನ್ನಡದ ಸೇವೆಗಾಗದಿದ್ದರೆ ನಾವೆಂಥ ಕನ್ನಡಿಗರು ? ಬರುತ್ತೇವೆ, ಅನುಮಾನ ಬೇಡ. ಸಿದ್ಧಮಾಡಿಕೊಳ್ಳಿ"ಎಂದು ನಂಬಿಸಿದೆ. ರಾಮಪ್ರಸಾದ್, ಸತ್ಯನಾರಾಯಣಸೆಟ್ಟರು ಸಂತೋಷದಿಂದ ಬೀಳ್ಕೊಂಡರು.

"ಹರಹರ ಶ್ರೀ ಚನ್ನ ಸೋಮೇಶ್ವರ"

ಹಾರನಹಳ್ಳಿಗೆ ಬೆಳಗ್ಗೆ ಬಸ್ಸಿನಲ್ಲಿ ಹೊಳೇನರಸೀಪುರದಿಂದ ಹೊರಟೆವು. ಹಾರನ ಹಳ್ಳಿ ರಾಮಸ್ವಾಮಿಯವರಿಂದ ನಮಗೆ ಹಾರನಹಳ್ಳಿ ಬಹು ಪ್ರಿಯವಾದ ಊರು. ಸೋಮೇಶ್ವರರಾಯ ಕ್ರಿಸ್ತಶಕ 1070ರಲ್ಲಿ ಊನಸುತ್ತ ಎಬ್ಬಿಸಿದ ಕೋಟೆ ಇನ್ನೂ ಇದೆ. ಊರೊಳಗೆ ಚನ್ನಕೇಶವಸ್ವಾಮಿ, ಸೋಮೇಶ್ವರಸ್ವಾಮಿ ದೇವಾಲಯಗಳಿವೆ. ಹೊಯಿ ಸಳ ಶಿಲ್ಪದ ಕಲಾವೈಭವವನ್ನು ಅದ್ದೂರಿಯಿಂದ ಮೆರೆಯುತ್ತಿವೆ. ನಾವು ಸೋಮೇಶ್ವರ ಸ್ವಾಮಿಯ ದೇವಸ್ಥಾನವನ್ನು ಹೊಕ್ಕೆವು. ದೇವಸ್ಥಾನದ ಶೋಚನೀಯ ಸ್ಥಿತಿಯನ್ನು ನೋಡಿ ಹೌಹಾರಿದೆವು. ಬಾನಲಿಗಳು ತಲೆಕೆಳಗುಮಾಡಿ ದೇವಸ್ಥಾನದ ಚಾವಣಿಗೆ ಜೋತುಬಿದ್ದಿದ್ದವು. ಕಣ್ಣಿಕಪಟಗಳು, ನಾವು ಒಳಗೆ ಪ್ರವೇಶಿಸಿದುದೇ ತಡ, ಒಳಾಂಗಣ ದಲ್ಲಿ ಹಾರಾಡತೊಡಗಿದವು. ನಮ್ಮ ಕಣ್ಣುಗಳನ್ನು ಎಲ್ಲಿ ಬಡಿಯುವುವೋ ಎಂಬ ಹೆದರಿಕೆಯಿಂದ ಕೂಡಲೆ ಸ್ಥಾನಬಿಟ್ಟು ಹೊರನಡೆದೆವು. ಪ್ರಾಕಾರದ ಹೊರಾಂಗಣವೂ ದುರ್ನಾತದಿಂದ ಇಡಿಗಿತ್ತು. "ಹರಹರಾ ಶ್ರೀಚನ್ನ ಸೋಮೇಶ್ವರ!"ಎಂದು ನಿಟ್ಟುಸಿರು ಗರೆದೆ.

ಚೆನ್ನಕೇಶವಸ್ವಾಮಿ ದೇವಸ್ಥಾನದ ಶಿಲ್ಪ ಬೇಲೂರು ದೇವಾಲಯದ ತದ್ರೂಪು. ಬೇಲೂರು ದೇವಸ್ಥಾನವನ್ನೇ ಎತ್ತಿ ತಂದು ಇಲ್ಲಿ ಪ್ರತಿಷ್ಠಾಪಿಸಿದ್ದಾರೊ ಎನ್ನುವಷ್ಟು ಭ್ರಮೆ ಹುಟ್ಟಿಸುತ್ತದೆ. ಮದನಿಕೆ ವಿಗ್ರಹಗಳು ಅತಿ ಸುಂದರವಾಗಿವೆ. ಮಲ್ಲೋಜ, ದಾಸೋಜ, ಹೀಗೆ ಹೊಯಿಸಳ ಶಿಲ್ಪ ಪ್ರಸಿದ್ಧದ ರೂವಾರಿ ಕಲ್ಲೋಜರುಗಳ ಹೆಸರು ಗಳು ಮದನಿಕೆ ವಿಗ್ರಹಗಳ ಪಾಣಿಪೀಠಗಳ ಮೇಲೆ ಇನ್ನೂ ಮಾಸದೆ ಉಳಿದಿವೆ. ದೇವಸ್ಥಾನವನ್ನು ನೋಡಿ ತುಂಬ ಸಂತಸಗೊಂಡೆವು.

ರಾತ್ರಿ ಹಾರನಹಳ್ಳಿ ಕಾರ್ಯಕ್ರಮ ಚೆನ್ನಾಯಿತು. ಅರಸೀಕೆರೆಯಿಂದ ಶ್ರೀರಂಗ ಶರ್ಮ ಬಂದಿದ್ದರು.

ಸಾಹಿತ್ಯ ಸಂಸ್ಕೃತಿ ಕೂಟವೊ ಅಥವಾ ಕಾಂಗ್ರೆಸ್ ಸಭೆಯೋ ?

ಹೊಳೇನರಸೀಪುರದ ಕರ್ನಾಟಕ ಸಂಘ "ಶ್ರೀ ರಾಮಾಯಣ ದರ್ಶನಂ" ಕಾವ್ಯ ವಾಚನಕ್ಕೆ ಚೆನ್ನಾಗಿಯೇ ಪ್ರಸಾರಕೊಟ್ಟಿತ್ತು. ಹೊಳೇನರಸೀಪುರದ ಗಾಂಧೀ ವೃತ್ತದಲ್ಲಿರುವ ನಗರ ಭವನದಲ್ಲಿ ಕಾರ್ಯಕ್ರಮ ಏರ್ಪಾಡಾಗಿತ್ತು. ಸುಮಾರು ನೂರು ನೂರೈವತ್ತು ಮಂದಿ ಧಾರಾಳವಾಗಿ ಕೂಡುವಂಥ ಸಭಾಂಗಣ. ಸೂಜಿಮೊನೆಯಷ್ಟು ಸ್ಥಳಾವಕಾಶವಿಲ್ಲವೆ ನಿಬಿಡವಾಗಿ ಜನ ಭರ್ತಿಯಾಗಿತ್ತು. ಹೊರಗೆ ವೃತ್ತದ ಪ್ರದೇಶವೆಲ್ಲ ಜನಸ್ತೋಮದಿಂದ ಗಿಜಿಗಿಜಿಸುತ್ತಿತ್ತು. ನಾವು ಒಳಹೋಗುವುದೇ ಮಹಾಪ್ರಯಾಸವಾಯಿತು. ಸ್ವಾತಂತ್ರ್ಯ ಸಂಗ್ರಾಮ ಸಮಯದಲ್ಲಿ ನಮ್ಮ ಕಾಂಗ್ರೆಸ್ ನಾಯಕರ ಸಭೆಗಳಿಗೆ ನೆರೆಯುತ್ತಿದ್ದಹಾಗೆ ಜನ ಕಾವ್ಯವಾಚನ ಕೇಳಲು ನೆರೆದಿತ್ತೆಂದು ಜನ ಮಾತಾಡಿಕೊಳ್ಳುತ್ತಿದ್ದರು. ಧ್ವನಿವರ್ಧಕದ ವ್ಯವಸ್ಥೆಯಾಗಿತ್ತಾಗಿ ಜನ ನಮ್ಮ ಕಾವ್ಯವಾಚನವನ್ನು ನಿಶಬ್ದವಾಗಿ ಕೇಳಿತು. "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನ ಹೊಳೇನರಸೀಪುರದಲ್ಲಿ ಜಯಭೇರಿ ಹೊಡೆಯಿತು. ಈ ಕಾರ್ಯಕ್ರಮದಿಂದ ನಮಗೆ ಲಭಿಸಿದ ಲಾಭ, ಎನ್. ಎಸ್. ರಾಮಪ್ರಸಾದರ ಸ್ನೇಹ. ಅವರು ಈಗ "ಕನ್ನಡಪ್ರಭ" ದಿನ ಪತ್ರಿಕೆಯಲ್ಲಿ ಸುದ್ದಿಗಾರರಾಗಿದ್ದಾರೆ. ಬಡವರ ಸಂಘವೆಂದು ಹೇಳಿಕೊಂಡು ನಮ್ಮ ಊಟ ವಸತಿಯನ್ನು ನೋಡಿಕೊಂಡಿತು ಸಂಘ. ನಾವು ಬೇಡವೆಂದರೂ ಕೇಳದೆ ಪ್ರವಾಸದ ವೆಚ್ಚವನ್ನು ಕೊಟ್ಟಿತು.

"ಬಿಲ್ ಸರಿಯಾಗಿಲ್ಲವೇ ?"

ಹಾರನಹಳ್ಳಿಯ ಕಾರ್ಯಕ್ರಮದ ಬಿಲ್ ಅರಸೀಕೆರೆ ತಾಲ್ಲೂಕು ಕಚೇರಿಯಿಂದ ವಿಲೇವಾರಿಯಾಗಬೇಕಾಗಿತ್ತು. ಶಿರಸ್ತೇದಾರರು ಸೆಟ್ಟರು. ಶ್ರೀ ರಾಮಕೃಷ್ಣ ಪರಮಹಂಸರ ಅವಿಚ್ಛಿನ್ನ ಭಕ್ತರು, ಪ್ರಾಮಾಣಿಕರು. ನಾವು ಹಾರನಹಳ್ಳಿಯ ಕಾರ್ಯಕ್ರಮದ "ಬಿಲ್ಲು" ಕೊಟ್ಟ ಕೂಡಲೆ ಸೂಕ್ಷ್ಮವಾಗಿ ಅದರ ಮೇಲೆ ಕಣ್ಣು ಹಾಯಿಸಿದರು. ಅವರ ಮುಖದಲ್ಲಿ ಆಶ್ಚರ್ಯ ಛಾಯೆ ಮೂಡಿತು. "ಬಿಲ್ಲು ಸರಿಯಾಗಿ ಮಾಡಿದ್ದೀರ ?"ಎಂದು ಪ್ರಶ್ನಿಸಿದರು. ನನಗೆ ಗಾಬರಿ "ಏನು ಅವಿವೇಕ ಮಾಡಿದ್ದೇನೊ ?" ಎಂದು. "ಯಾಕೆ ಸ್ವಾಮಿ ಈ ಪ್ರಶ್ನೆ ? ಹೊಳೇನರಸೀಪುರದಿಂದ ಹಾರನಹಳ್ಳಿಗೆ ಪ್ರವಾಸದ ವೆಚ್ಚ, ದಿನದ ಭತ್ಯ, ಸಂಭಾವನೆ, ಇಬ್ಬರಿಗೆ ಸರಿಯಾಗಿಲ್ಲವೇ ಬಿಲ್ ?" "ಅದೇ ಆಶ್ಚರ್ಯಕ್ಕೆ ಕಾರಣವಾಯಿತು" ಎಂದರು ಶಿರಸ್ತೇದಾರ್. ಆಮೇಲೆ ಆತ ವಿವರಣೆಕೊಟ್ಟರು. "ನೀವು ಹೊಳೆನರಸೀಪುರದಿಂದ ಹಾರನಹಳ್ಳಿಗೆ ತಗುಲಿದ ಪ್ರವಾಸದ ವೆಚ್ಚವನ್ನು ಮಾತ್ರ ತೋರಿಸಿದ್ದೀರಿ. ಬೆಂಗಳೂರಿಂದ ಹಾರನಹಳ್ಳಿಗೆ ವೆಚ್ಚವನ್ನು ತೋರಿಸುತ್ತಿದ್ದರು ಬೇರೆಯವರು. ಬೆಂಗಳೂರಿಂದ ಹಾರನಹಳ್ಳಿಗೆ–ಬೆಂಗಳೂರಿಂದ ಹೊಳೇನರಸೀಪುರಕ್ಕೆ ಹೀಗೆ ಬಿಲ್ಲು ಮಾಡಿ ದುಪ್ಪಟ್ಟೇ ಹಣ ಪಡೆಯುತ್ತಿದ್ದರು." ನಾವು ಮೌನಗಾಂಭೀರ್ಯದಿಂದ ಶಿರಸ್ತೇದಾರರ ಮಾತು ಕೇಳುತ್ತಿದ್ದೆವು.

ಬೇಲೂರು ಶಿಲ್ಪದಲ್ಲಿ ಕುಮಾರವ್ಯಾಸನ ನೆನಪು

ಬೇಲೂರು ಹಳೇಬೀಡುಗಳಲ್ಲೂ ನಮ್ಮ ಸಾಹಿತ್ಯ ಸಾಂಸ್ಕೃತಿಕ ಕಾರ್ಯಕ್ರಮಗಳು ಏರ್ಪಾಡಾದುವು. ಬೇಲೂರು ಸಾಹಿತ್ಯ ಸಮ್ಮೇಳನದಲ್ಲಿ ಶಕುಂತಲಾಬಾಯಿ "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನವನ್ನು ಕೆಲವು ನಿಮಿಷಗಳ ಕಾಲಮಾತ್ರ ಗಮಕಗೋಷ್ಠಿಯಲ್ಲಿ ಮಾಡಿದ್ದರು. ಆದರೆ ಈಗ ಬೇಲೂರಲ್ಲಿ ನಮ್ಮ ಇಡೀ ಕಾರ್ಯಕ್ರಮ ಏರ್ಪಟ್ಟಿತು. ಬೇಲೂರು ದೇವಸ್ಥಾನಕ್ಕೆ ಬಲಭಾಗದಲ್ಲಿ ಎತ್ತರವಾಗಿ ಅಸ್ತಿಭಾರ ಹಾಕಿ ಎಬ್ಬಿಸಿರುವ ಕಟ್ಟಡವಿದೆ. ಅಲ್ಲಿ ನಮ್ಮ ಕಾರ್ಯಕ್ರಮ. ನಮ್ಮ ಎದುರಿಗೆ ಬೇಲೂರು ದೇವಸ್ಥಾನದ ಮುಂಭಾಗದಲ್ಲಿ ನಮ್ಮ ಕಣ್ಣು ನೋಟ ಹಾಯುವವರೆಗೂ ಜನ, ಜನ. ನಮ್ಮ ಕಾರ್ಯಕ್ರಮ ಒಂದೂವರೆ ಗಂಟೆಕಾಲ ತೆಗೆದುಕೊಂಡಿತು. ಶ್ರೋತೃಗಳು ಅಷ್ಟು ದೀರ್ಘಕಾಲ ಮೈಯೆಲ್ಲ ಕಿವಿಯಾಗಿ ನಮ್ಮ ಕಾರ್ಯಕ್ರಮವನ್ನು ತಾಳ್ಮೆ ಸಂಯಮಗಳಿಂದ ಕೇಳಿ ಆನಂದಪಟ್ಟರು. ಕುಮಾರವ್ಯಾಸ ಭಾರತದ "ಕೃಷ್ಣರಾಯಭಾರ" ಮುಗಿಯುತ್ತಲೆ ಶ್ರೋತೃಗಳ ಕಡೆಯಿಂದ ''ಶ್ರೀ ರಾಮಾಯಣ ದರ್ಶನಂ'' ಕಾವ್ಯದಿಂದಲೂ ವಾಚನವಾಗಬೇಕೆಂದು ಚೀಟಿಗಳು ಬರತೊಡಗಿದವು. ಶ್ರೀ ರಾಮಾಯಣದರ್ಶಂ ಕಾವ್ಯದಿಂದ "ಶ್ರೀ ವೆಂಕಣ್ಣಯ್ಯ"ನವರಿಗೆ ಮತ್ತು ''ಕವಿಕ್ರತು ದರ್ಶನಂ'' ಸಂಚಿಕೆಯಿಂದ **''ಏರುವೆನು ವಾಗ್ದೇವಿಯಮೃತರಸನೆಯ ಲಸನ್ ನಾವೆಯಂ'' "ಬಾಳು ವೀಣಾಪಾಣಿ, ಬಾಳು ಬ್ರಹ್ಮನರಾಣಿ" ಮತ್ತು "ಹೋಮರಗೆ ವರ್ಜಿಲಗೆ ಡಾಂಟೆ ಮೋಣ್ ಮಿಲ್ಟನಗೆ"**ಸಾಲುಗಳನ್ನು ವಾಚನಮಾಡಿ ಶ್ರೋತೃಗಳನ್ನು ತೃಪ್ತಿಪಡಿಸಿದೆವು.

''ಕುಮಾರವ್ಯಾಸ ಭಾರತ'', ''ಶ್ರೀ ರಾಮಾಯಣ ದರ್ಶನಂ'' ಕಾವ್ಯಗಳಿಗೆ ಛಂದಸ್ಸು,ನಡಗೆ–ಓಟ, ಕಾವ್ಯರಚನೆಗಳಲ್ಲಿ ಬಹಳ ಅಂತರವಿದೆ. ಅಂತೆಯೇ ವಾಚನದಲ್ಲೂ ಅಷ್ಟೇ ಅಂತರವಿದೆ. ಪ್ರಾಚೀನಕಾವ್ಯವಾಚನಮಾಡಿ ಗರಕ್ಕನೆ ಆಧುನಿಕಕಾವ್ಯವಾಚನಕ್ಕೆ ತೊಡಗುವುದೆಂದರೆ ಸರ್ರನೆ ಕಾರಿನ ಅಥವಾ ಬಸ್ಸಿನ ಗೇರು ಬದಲಾಯಿಸಿದ ಹಾಗೆ.

ಮೂರನೆಯ ದಿನ ಬೇಲೂರು ದೇವಸ್ಥಾನದ ಶಿಲ್ಪವೈಭವದ ಅವಲೋಕನ. ಬೇಲೂರು ಸಾಹಿತ್ಯ ಸಮ್ಮೇಳನವು ಚೆನ್ನಕೇಶವ ದೇವಾಲಯದ ಒಳ ಆವರಣದಲ್ಲೇ ಮೂರು ದಿವಸ ನಡೆದರೂ ನನಗೆ ಸ್ನೇಹಿತರ, ಅಭಿಮಾನಿಗಳ ಜೊತೆ ಹರಟೆಕೊಚ್ಚುವುದಕ್ಕೆ ಸಮಯ ಸಾಲದಾಗಿ ದೇವಸ್ಥಾನದ ಶಿಲ್ಪಕಲಾವೈಭವವನ್ನು ಈಕ್ಷಿಸಿ ತೃಪ್ತಿ ಪಡೆಯುವ ಅವಕಾಶವಾಗಿರಲಿಲ್ಲ. ಅದು ಈಗ ದೊರೆಯಿತು. ನಾನು ಕಣ್ಣಾರೆ ಕಂಡು ಮನಸಾರೆ ಅನುಭವಿಸಿದ ರಸಲೋಕದ ಅನುಭವವನ್ನು ಮಾತಿಂದ ವರ್ಣಿಸಲಾರೆ. ಡಿ. ವಿ. ಜಿ.ಯವರ ಅಂತಃಪುರ ಗೀತೆಗಳನ್ನು ಓದಿ ರಸಲೋಕದನುಭವ ಪಡೆಯಲಿ ರಸಿಕಶಿಖಾಮಣಿಗಳು. ಆದುದರಿಂದ ನಾನು ಆ ವಿವರಗಳಿಗೆ ಕೈ ಹಾಕದೆ ನಾ ಕಂಡ ಒಂದು ವಿಶೇಷವನ್ನು ಮಾತ್ರ ಇಲ್ಲಿ ವಿವರಿಸುತ್ತೇನೆ.

ಬೇಲೂರು ದೇವಾಲಯವನ್ನು ನಾಲ್ಕಡಿ ಎತ್ತರದ ನಕ್ಷತ್ರಾಕಾರದ ಜಗುಲಿಯ ಮೇಲೆ ಅದೇ ಆಕಾರದಲ್ಲಿ ಕಟ್ಟಲಾಗಿದೆ. ಪಂಚತಂತ್ರ, ರಾಮಾಯಣ, ಭಾರತ, ಭಾಗ

ವತಗಳ ಮುಖ್ಯ ಮುಖ್ಯ ಅಧ್ಯಾಯನಗಳನ್ನು ಉಬ್ಬು ಶಿಲ್ಪದಲ್ಲಿ ಬಹಳ ನಾಜೂಕಾಗಿ ಅಂದವಾಗಿ ನಮ್ಮ ಶಿಲ್ಪ ಕಲಾಬ್ರಹ್ಮರು ಕೆತ್ತಿರುವ ಪಟ್ಟಿಕೆಗಳನ್ನು ಸೂಕ್ಷ್ಮ ಮತಿಗಳ ಚಾಣಾಕ್ಷ ಕಣ್ಣುಗಳ ರಸಿಕರು ನೋಡಿ ಆನಂದಿಸಬಹುದು. ನಾವು ಶಿಲಾ ಬಾಲಿಕೆಯರ ಒನಪು ವೈಯ್ಯಾರಗಳನ್ನು, ಬಿಗುವು ಬಿನ್ನಾಣಗಳನ್ನು ನೋಡಿ ಆನಂದಿಸಿ, ಚಾವಣಿಯ ಮೇಲಿಂದ ಕೆಳಗಿನ ಉಬ್ಬು ಶಿಲ್ಪದ ಕಡೆಗೆ ಕಣ್ಣಾಡಿಸಿದೆವು. ಕೆಳಭಾಗದಲ್ಲಿ ಮಹಾಭಾರತದ ಉಬ್ಬು ಶಿಲ್ಪದ ಪಟ್ಟಿಕೆಗಳ ಮೇಲೆ ನಮ್ಮ ಕಣ್ಣು ನಾಟಿತು. ಮಹಾಭಾರತ ಕಾವ್ಯದ ಒಂದೊಂದೇ ಸಂದರ್ಭವನ್ನು ಎಚ್ಚರೆಚ್ಚರಗಳಿಂದ ನೋಡುತ್ತ ಬರುತ್ತಿರುವಾಗ ಕೃಷ್ಣರಾಯಭಾರದ ಕೆತ್ತನೆಯ ಸ್ಥಾನಕ್ಕೆ ಬಂದೆವು. ಅಲ್ಲಿನ ವೈಶಿಷ್ಟ್ಯ ನಮ್ಮ ಅಂತಃಚಕ್ಷುವನ್ನು ಸೂರೆಗೊಂಡಿತು. ತಟ್ಟನೆ ಕುಮಾರವ್ಯಾಸ ನಮ್ಮ ಸ್ಮೃತಿಗೆ ಬಂದ.

"ಸಮರ ಸರ್ವಜ್ಞರುಗಳಂಘ್ರಿಗೆ
ನಮಿಸಿದರು ಬಹಳೋಲಗದ ಸಂ
ಭ್ರಮದ ಸಿರಿ ತಲೆವಾಗುತಿರ್ದುದು ನೊಸಲ ಕೈಗಳಲಿ
ಕಮಲನಯನದ ದೇವನೇ ಸಾ
ಕೆಮಗೆ ಮಾಡುವುದೇನೆನುತ ತ
ತ್ಕುಮತಿ ಕೌರವನಿಳಿಯದಿರ್ದನು ಸಿಂಹವಿಷ್ಟರವ ||

ಸೆಣಸು ಸೇರದ ದೇವನಿದಿರಲಿ
ಮಣಿಯದಾತನ ಕಾಣುತವೆ ಧಾ
ರುಣಿಯನೊತ್ತಿದನುಂಗುಟದ ತುದಿಯಿಂದ ನಸುನಗುತ
ಮಣಿಖಚಿತ ಕಾಂಚನದ ಪೀಠದ
ಗೊಣಸು ಮುರಿದುದು ಮೇಲೆ ಸುರ ಸಂ
ದಣಿಗಳಾ ಎನೆ ಕವಿದು ಬಿದ್ದನು ಹರಿಯ ಚರಣದಲಿ

ಹಿಂದಿನ ರಾತ್ರಿ ತಾನೆ ಕೃಷ್ಣರಾಯಭಾರ ಕಥಾಭಾಗದಲ್ಲಿ ಈ ಭಾಗವನ್ನು ಅರ್ಥ ಭಾವಗಳೆಸಕದಲ್ಲಿ ಅಠಾಣ ರಾಗ ಸಂಚಾರದಲ್ಲಿ ಶಕುಂತಲಾಬಾಯಿ ಗಮಕ ಮಾಡಿ ಶ್ರೋತೃಗಳ ಮುಂದೆ ಶಬ್ದಚಿತ್ರ ಮೂಡಿಸಿದ್ದರು. ಈಗ ನಮಗೆ ಅದೇ ಶಬ್ದಚಿತ್ರ ಶಿಲ್ಪದಲ್ಲಿ ಮೂಡಿ ಬಂದಿತು. ಕುಮಾರವ್ಯಾಸನ ಕಾವ್ಯದಲ್ಲಿ ಈ ಸನ್ನಿವೇಶವನ್ನು ಓದಿದ್ದ ನಮಗೆ ಅಚ್ಚರಿಯೋ ಅಚ್ಚರಿ! ಶಿಲ್ಪಬ್ರಹ್ಮರಿಗೆ, ಕವಿಬ್ರಹ್ಮರಿಗೆ, ಸಂಸ್ಕೃತ ನಾಟಕದ ಭಾಸ ಮಹಾಕವಿ ತನ್ನ "ದೂತವಾಕ್ಯ" ನಾಟಕದ ಪ್ರೇರೇಪಣೆ ಕರುಣಿಸಿರಬಹುದೆ?

ಹಳೇಬೀಡಿನಲ್ಲಿ ನಾವು ಮುಂದಣಿಗರಾದೆವು

ನಮ್ಮ ಸಾಹಿತ್ಯ ಸಂಸ್ಕೃತಿ ಕಾರ್ಯಕ್ರಮಗಳಲ್ಲಿ ನಿತ್ಯ ಹಸಿರಾಗಿ ಉಳಿದಿರುವದು ಹಳೇಬೀಡಿನ ಕಾವ್ಯವಾಚನಗಳು. ನಮಗೆ ಹಳೇಬೀಡಿನಲ್ಲಿ ಕಾರ್ಯಕ್ರಮ ಕೊಡಬೇಕೆಂದು ಬೇಲೂರು ತಾಲ್ಲೂಕಿನ ಕಚೇರಿಯಿಂದ ಪತ್ರ ಬಂದಿತ್ತು. ಅಂತೆಯೇ ಬೆಂಗಳೂರಿಂದ ಬಸ್ಸಿನಲ್ಲಿ ಹೊರಟು ಸಂಜೆಯ ಹೊತ್ತಿಗೆ ಹಳೇಬೀಡು ತಲುಪಿದೆವು.

ಬಸ್ಸಿನಿಂದಿಳಿದು ಪ್ರವಾಸ ಬಂಗಲೆ (?)ಗೆ ನೇರ ಹೋದೆವು. ನಮ್ಮ ಅದೃಷ್ಟಕ್ಕೆ ರೆವಿನ್ಯೂ ಇನ್ಸ್‌ಪೆಕ್ಟರ್ ಅಲ್ಲಿಯೇ ಸಿಕ್ಕರು. ಇಸ್ಪೇಟು ಆಟ ನಡೆದಿತ್ತು. ನಾವು ಬಂದಿರುವ ವಿಷಯವನ್ನು ಅವರಿಗೆ ಮನಗಾಣಿಸಿದೆ. ಅವರು "ಹರ ಶಿವ" ಎನ್ನಲಿಲ್ಲ. ಉಪೇಕ್ಷೆ ಯಿಂದಲೇ ನನ್ನ ಮಾತುಗಳನ್ನು ಕಿವಿಯ ಮೇಲೆ ಹಾಕಿಕೊಂಡರು.

ಸಂಜೆ ನಾವು ಇಳಿದಿದ್ದ ಮುಸಾಫರ ಖಾನೆಯ ಕೊಠಡಿಯೇ ಸಾಹಿತ್ಯ ಸಂಸ್ಕೃತಿ ಇಲಾಖೆಯ ಸಭಾಂಗಣವಾಯಿತು. ಶೇಕದಾರರೇ ಅಧ್ಯಕ್ಷರು, ಶಾನುಭಾಗ ಪಟೇಲರಾದಿ ಯಾಗಿ ಎಂಟು ಹತ್ತು ಮಂದಿ "ಮಹಾಸಭೆ". ಊರಿನವರು ಒಬ್ಬರೂ ನೆಪಕ್ಕಾದರೂ ಮುಖ ತೋರಿಸಲಿಲ್ಲ. ಒಂದು ಲ್ಯಾಂಟರ್ನ್ ಉರಿಯಲೋ ಬೇಡವೊ ಎಂದು ಬೆಳಕು ಹಣಕಿಸುತ್ತಿತ್ತು. ಬೇರೆ ಕಡೆಗಳಲ್ಲಿ ತಂಬೂರಿಯಲ್ಲದಿದ್ದರೂ ಹಾರ್ಮೋನಿಯಂ ಶ್ರುತಿಗೆ ದೊರಕುತ್ತಿತ್ತು. ಇಲ್ಲಿ ಶ್ರುತಿಪೆಟ್ಟಿಗೆಯೂ ದೊರೆಯದಾಯಿತು. ಬಂದತಪ್ಪಿಗೆ ಶಕುಂತಲಾ ಬಾಯಿ ಕಾವ್ಯವಾಚನ ಮಾಡಿದರು. ನಾನು ಪ್ರಾಸಂಗಿಕ ನಿರೂಪಣೆ ನೀಡಿದೆ. ಬೇಕಾ ಬಿಟ್ಟಿಯಾಗಿ ಕೇಳಲು ಕೂಡಿದ್ದ ಶ್ರೋತೃಗಳಲ್ಲಿ ಕೆಲವರಿಗೆ ಕಾವ್ಯವಾಚನ, ಪ್ರಾಸಂಗಿಕ ನಿರೂಪಣೆ ಅಸಮಾಧಾನವಾಗಿ ತೋರಿತು. ಊರಲ್ಲಿ ಪ್ರಸಾರವಾಗಿದ್ದರೆ ತುಂಬ ಜನ ಬರುತ್ತಿದ್ದರೆಂದು ಅವರೇ ಗುಸುಗುಸು ಮಾತಾಡಿಕೊಂಡರು. ಶೇಕ್ದಾರರು ಕುಂಟು ನೆಪ ಹೇಳಿ ಜಾರಿಕೊಂಡರು, ಕೋಟೆಯನ್ನು ದೋಚಿದ ಮೇಲೆ ಕೋಟೆ ಬಾಗಿಲು ಹಾಕಿದ ರಂತೆ. ಹಾಗಿತ್ತು ನಮ್ಮ ಪರಿಸ್ಥಿತಿ. ನಮ್ಮಲ್ಲಿ ತೋರಿದ್ದ ಉಪೇಕ್ಷೆ ಮಾಯವಾಗಿತ್ತು. ಅತಿ ಉಪಚಾರಕ್ಕೆ ಪ್ರಾರಂಭವಾಯಿತು. ರಾತ್ರಿಯೂಟ ಬಿಡಾರಕ್ಕೇ ಬಂದಿತು. ಮುಸಾಫರ ಖಾನೆಯಲ್ಲೇ ರಾತ್ರಿ ನೂಕಿದೆವು, ಸೊಳ್ಳೆ ತಿಗಣೆಗಳಿಗೆ ಉಣಿಸಾಗಿ.

ಬೆಳಗಾಯಿತು. ಮತಿಘಟ್ಟ ಕೃಷ್ಣಮೂರ್ತಿ ಹಾಜರಾದರು ಮುಸಾಫರ ಖಾನೆಗೆ. ಅವರಿಗೆ ನಾವು ಹಳೇಬೀಡಿಗೆ ಬಂದು ಕಾರ್ಯಕ್ರಮ ಕೊಟ್ಟುದು. ಹೇಗೋ ತಿಳಿದಿತ್ತು. "ಪಾಂಡುರಂಗರಾವ್, ನೀವು ಬೆಳಗ್ಗೆ ಹೋಗಬೇಡಿ. ಊರಲ್ಲಿ ಒಂದು ಕಾರ್ಯಕ್ರಮ ಏರ್ಪಾಡಾಗಿದೆ. ಜನ ಕೇಳಬಯಸಿದ್ದಾರೆ." ಎಂದರು. ಮತಿಘಟ್ಟರು ನಮಗೆ 1937–38 ರಿಂದ ಮಿತ್ರರು. ಸ್ವಲ್ಪ ಹೆಚ್ಚು ಕಡಮೆ ಮನೆಯವರಂತೆಯೇ, ಹೇಗೆ "ಒಲ್ಲೆ" ಎನ್ನುವುದು ಶಕುಂತಲಾಬಾಯಿಗೆ ಇಷ್ಟವಿಲ್ಲ. ರಾತ್ರಿಯ ಉತ್ಸಾಹ ಭಂಗ ಇನ್ನೂ ಇರಿಯುತ್ತಲೇ ಇತ್ತು. ಆದರೆ ನಾನು ಒಪ್ಪಿಕೊಂಡುಬಿಟ್ಟಿದ್ದೆ.

ಊರೊಳಗೆ ರಂಗನಾಥಸ್ವಾಮಿ ದೇವಸ್ಥಾನ(?)ದಲ್ಲಿ ಬೆಳಗ್ಗೆ 9 ಗಂಟೆಯಹೊತ್ತಿಗೆ ಮಹನೀಯರು–ಮಹಿಳೆಯರು–ಮಕ್ಕಳು ಕಿಕ್ಕಿರಿದು ತುಂಬಿದ್ದರು. ಮತಿಘಟ್ಟ ಕೃಷ್ಣ ಮೂರ್ತಿಯೇ ಅತ್ಯುತ್ಸಾಹ ಶ್ರದ್ಧೆಗಳಿಂದ ಜನಕೂಡಿಸಿದ್ದರು. ಅವರೇ ನಮಗೆ ಸ್ವಾಗತ ಕೋರಿದರು. ಶಕುಂತಲಾಬಾಯಿ ಕುಮಾರವ್ಯಾಸ ಭಾರತ ಜೈಮಿನೀ ಭಾರತಗಳಿಂದ ವಾಚನ ಮಾಡಿದರು. ವಂದನಾರ್ಪಣೆಯಸಮಯದಲ್ಲಿ ಸರಭರ ಮುತ್ತೈದೆಯರೆದ್ದರು. ನಮ್ಮನ್ನು ಮದುವಣಿಗರನ್ನಾಗಿ ಮಾಡಿ ಆರತಿಯೆತ್ತಿದರು. ಹಸೆಮಣೆಯ ಮೇಲೆ ಕುಳಿತ ನವ ದಂಪತಿಗಳನ್ನು ಆರತಿಯಕ್ಷತೆಗಳಿಂದ ಉಡುಗೊರೆಗಳಿಂದ ಪುರಸ್ಕರಿಸುವಂತೆ

ಆದರಿಸಿದರು. ಹಿಂದಿನರಾತ್ರಿ ಕೇಳುವವರೇಗತಿಯಿಲ್ಲದಂತೆ ಉಪೇಕ್ಷೆ ತಿರಸ್ಕಾರಗಳ ಬವಣೆಯೂಟ ಉಂಡಿದ್ದವರಿಗೆ ಬೆಳಗಾಗುತ್ತಲೇ ಆದರಕ್ಕರೆಯ ಆರತಕ್ಷತೆ ಉಡುಗೊರೆಗಳ ಸಂಭ್ರಮವೋ ಸಂಭ್ರಮ. ಮಧ್ಯಾಹ್ನ ಪಾಯಸದೂಟ. ಮತಿಘಟ್ಟ ಕೃಷ್ಣಮೂರ್ತಿ ಸ್ನೇಹದ ಸೀಮೋಲ್ಲಂಘನಮಾಡಿದರು ಅಪಾರಾನಂದದಲ್ಲಿ. ಅವರು ಜಾನಪದ ಸಾಹಿತ್ಯ ಸಂಗ್ರಹದಲ್ಲಿ ಸಲ್ಲಿಸಿರುವ ಸೇವೆ ಅಪಾರವಾಗಿದೆ.

ಮತಿಘಟ್ಟ ಕೃಷ್ಣಮೂರ್ತಿ ನಮ್ಮನ್ನು ಊರ ಪ್ರದಕ್ಷಿಣೆ ಮಾಡಿಸಿದರು. ಗತವೈಭವವನ್ನು ಕಂಡ ನಾಡು ಹಳೇಬೀಡು. ಹೊಯ್ಸಳರ ರಾಜಧಾನಿಯಾಗಿದ್ದ ಸಿರಿವಂತ ಬೀಡು. ಕ್ರಿ. ಶ. 1326ರಲ್ಲಿ ಮಲ್ಲಿಕಾಫರನ ಉರವಣಿಗೆಗೆ ಸಿಕ್ಕಿ ಹಾಳುಬಿದ್ದು ಹಳೇಬೀಡಾಯಿತು. ಆದರೂ ಅದರ ಉಸಿರು ಅಳಿದಿಲ್ಲ. ಜಗತ್ಪ್ರಸಿದ್ಧವಾದ ಹೊಯ್ಸಳೇಶ್ವರ ಕೇದಾರೇಶ್ವರ ದೇವಾಲಯಗಳ ಶಿಲ್ಪದಿಂದ ಜೀವಂತವಾಗಿದೆ.

ಹೊಯಿಸಳೇಶ್ವರ ದೇವಸ್ಥಾನದಲ್ಲಿ ಅಜಾನುಬಾಹು ಬಸವಗಳೆರಡು ಭೀಮಾಕಾರವಾಗಿ ದಿವ್ಯಭವ್ಯ ಗಾಂಭೀರ್ಯದಿಂದ ಮಂಡಿಯೂರಿ ಕುಳಿತಿವೆ. ಅವುಗಳನ್ನು ನೋಡುವುದೇ ಒಂದು ಚೆಂದ, ಆದರೆ ನಮ್ಮ ಬಸವಣ್ಣಗಳು ಪಾಪ, ಬೆನ್ನುಗಳ ಮೇಲೆ ಅಪ್ರಸಿದ್ಧರ ಹೆಸರುಗಳನ್ನು ಕೆತ್ತಿಸಿಕೊಂಡು ನೋಡಬರುವ ರಸಿಕರುಗಳ ಕಣ್ಣುಗಳಲ್ಲಿ ನೆತ್ತರು ಕಾರಿಸುತ್ತಿದ್ದವು. 'ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ' ವೆಂಬಂತೆ, ಮನದ ಮರ್ಕಟ ಆಟವಾಡಿಸಿದಂತೆ ಅರಸಿಕ ಶಿಖಾಮಣಿಗಳು ತಮ್ಮ ಹೆಸರುಗಳನ್ನು ಬಸವಣ್ಣಗಳ ಬೆನ್ನುಗಳ ಮೇಲೆ ಕೆತ್ತಿ ಸುಂದರ ಶಿಲ್ಪಗಳ ನಯಗಾರಿಕೆಗಳನ್ನೇ ನಾಶಮಾಡಿದ್ದನ್ನು ಕುರಿತು ನಮ್ಮ ಮನಸ್ಸು ತುಂಬ ನೊಂದಿತು. ಸಾಹಿತ್ಯ ಸಂಸ್ಕೃತಿಗಳ ಪ್ರಚಾರಕ್ಕೆಂದು ಹೋದಕಡೆಗಳಲ್ಲೆಲ್ಲ ಅರಸಿಕತೆ ಸಂಸ್ಕೃತಿಗಳ ವಿಚಾರ ಪ್ರಸ್ತಾಪಿಸಿ, ಕಳಕಳಿಯಿಂದ ಪೂರ್ವಿಕರು ಸೌಂದರ್ಯೋಪಾಸನೆಯಿಂದ ನಿರ್ಮಿಸಿದ ಶಿಲ್ಪಗಳನ್ನು ಭಗ್ನಗೊಳಿಸದೆ ನಮ್ಮ ಜನ ಕಾಪಾಡಿಕೊಂಡು ಬರಬೇಕೆಂದು ವಿನಂತಿಸಿಕೊಳ್ಳತೊಡಗಿದೆವು.

ಮತಿಘಟ್ಟ ಕೃಷ್ಣಮೂರ್ತಿ ಹಳೇಬೀಡಿಗೆ ಅತಿ ಸಮೀಪದಲ್ಲಿರುವ ಬಸದಿಹಳ್ಳಿಗೂ ನಮ್ಮನ್ನು ಕರೆದೊಯ್ದರು. ಪಾರ್ಶ್ವನಾಥ ಬಸದಿಯಲ್ಲಿ ಕನ್ನಡಿಯಂತೆ ನುಣುಪಾಗಿರುವ ಕಂಬಗಳು ನಮ್ಮ ಮನ ಸೆಳೆದವು. ನಮ್ಮ ಬಿಂಬಗಳನ್ನು ವಿವಿಧಾಕೃತಿಗಳಲ್ಲಿ ವಿವಿಧ ರೀತಿಗಳಲ್ಲಿ ವಿವಿಧ ರೂಪಗಳಲ್ಲಿ ನೋಡಿಕೊಂಡು ನಕ್ಕೆವು. **"ಕಲೆಯನಲ್ಲದೆ ಶಿಲ್ಪಿ ಶಿಲೆಯನೇಂ ಸೃಷ್ಟಿಪನೆ"**

ಏಳು ಹೆಡೆಗಳನ್ನು ಬಿಚ್ಚಿ ಕೊಡೆಯಂತೆ ನೆರಳು ನೀಡಿರುವ ಸರ್ಪನ ಆಸರೆಯಲ್ಲಿ 14 ಅಡಿ ಎತ್ತರದ ಪಾರ್ಶ್ವನಾಥ ಯತಿ ಧ್ಯಾನಮಗ್ನನಾಗಿ ಮಂಡಿಸಿದ್ದಾನೆ. ವೈರಾಗ್ಯ ನಿಧಿಗೆ ನಮನ ಮಾಡಿದೆವು. ಆದಿನಾಥ, ಶಾಂತಿನಾಥ, ಯತಿಪುಂಗವರ ಬಸದಿಗಳನ್ನು ಸಂದರ್ಶಿಸಿದೆವು.

ಸರ್ವಧರ್ಮ ಸಮನ್ವಯ ಮನೋಭಾವ ತಳೆದಿದ್ದ ವಿಷ್ಣುವರ್ಧನ ಚಕ್ರೇಶ್ವರ ಈ ಬಸದಿಗಳನ್ನು ಕಟ್ಟಿಸಿದನಂತೆ.

ಈಗಿನ ನಾವು ನಮ್ಮ ಪೂರ್ವಿಕರ ವಿಶಾಲ ಮನೋಧರ್ಮ ಭಾವನೆಗಳನ್ನು ಗಾಳಿಗೆ ತೂರಿದ್ದೇವೆ. ಜಾತಿ ಭೇದ ಮತಾಂಧರಾಗಿ ನಮ್ಮ ನಾಡ ಸಹೋದರರನ್ನೇ ದಾಯಾದಿ ಮತ್ಸರಗಳಿಂದ ಕಾಣುತ್ತಿದ್ದೇವೆ. ಸ್ವಾರ್ಥ ತುಂಬಿದ ನಾಡು ಮುಂದುವರಿ ದೀತೇ ಎಂದು ನೊಂದುಕೊಂಡೆ. ಭಾರವಾದ ಹೃದಯದಿಂದ ಬಸದಿ ಗ್ರಾಮದಿಂದ ಕಾಲೆಳೆದುಕೊಂಡು ಹಳೇಬೀಡಿಗೆ ಹಿಂತಿರುಗಿದೆವು. ಸಂಜೆಯ ಬಸ್ಸು ಹತ್ತಿ ಅರಸೀಕೆರೆಗೆ ಬಂದಾಗ ರಾತ್ರಿ. ಅರಸೀಕೆರೆಯಲ್ಲಿ ಶ್ರೀರಂಗಶರ್ಮರ ಅತಿಥಿಗಳಾಗಿದ್ದು ಮಾರನೇದಿನ ಬೆಳಗ್ಗೆ ಬೆಂಗಳೂರಿಗೆ ಪ್ರಯಾಣ ಮಾಡಿದೆವು.

ಅರಸೀಕೆರೆಯಲ್ಲಿ ಶ್ರೀರಂಗಶರ್ಮ ಚಟುವಟಿಕೆಯ ಬುಗ್ಗೆ. ಸಾಹಿತ್ಯ ಸಂಸ್ಕೃತಿಗಳ ಅಭಿಮಾನಿ. ನಮಗೆ ಸಾಹಿತ್ಯ ಸಂಸ್ಕೃತಿಗಳ ಪ್ರಸಾರಕಾಲದಲ್ಲಿ, ಸುಮಾರು 1953ರಲ್ಲಿ ಪರಿಚಯವಾದರು. ಹಾಸನ ಜಿಲ್ಲೆಯ ಕಾರ್ಯಕ್ರಮಗಳಿಗೆ ಹೋದಾಗಲೆಲ್ಲ ಅರಸೀಕೆರೆ ಯಲ್ಲಿ ಶ್ರೀರಂಗ ಶರ್ಮರ ಮನೆಯೇ ನಮಗೆ ಊಟ ವಸತಿಗಳ ನಿಲ್ದಾಣವಾಯಿತು. ಅವರ ತಾಯಿ ನಮಗೂ ಮಮತಾಮಯಿಯಾಗಿ ಊಟ ಉಪಚಾರಗಳಿಂದ ತಣಿಸು ತ್ತಿದ್ದರು. ಈಗ ಆ ತಾಯಿ ಕಣ್ಮರೆಯಾಗಿದ್ದೂ ನೆನಪಿನಲ್ಲಿ ಉಳಿದಿದ್ದಾರೆ. ಶ್ರೀರಂಗ ಶರ್ಮರ ಸ್ನೇಹ ಬಾಂಧವ್ಯ ಉಳಿದು ಬಂದಿದೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಗಮಕ ಪ್ರಚಾರ

ನಮ್ಮ ಸಾಹಿತ್ಯ ಸಂಸ್ಕೃತಿ ಪ್ರಸಾರ ಕಾಲದಲ್ಲಿ ಚಿತ್ರದುರ್ಗ ಪ್ರವಾಸದ ಸವಿ ನೆನಪು ಅನೇಕ ಕಾರಣಗಳಿಂದ ಹಚ್ಚ ಹಸುರಾಗಿರುವ ಪ್ರಾಮುಖ್ಯ ಪಡೆದಿದೆ.

ಚಿತ್ರದುರ್ಗ ನನಗೆ ಹೊಸದಲ್ಲ. ನಾನು ಬಾಲಕನಾಗಿದ್ದಾಗಲೇ ಅಂದರೆ ನನ್ನ 10–11ನೆಯ ವರ್ಷದಲ್ಲಿಯೇ ಚಿತ್ರದುರ್ಗ ನೋಡಿದ್ದೆ. ನಮ್ಮ ದೊಡ್ಡಮ್ಮ ಗಂಗಾ ಬಾಯಿ, ನಮ್ಮ ದೊಡ್ಡಪ್ಪ ಬಂಗ್ಲೆ ಶ್ರೀನಿವಾಸಮೂರ್ತಿಗಳು ಚಿತ್ರದುರ್ಗದವರೇ ಬಹು ತೇಕ. ಅವರುಗಳೇಅಲ್ಲವೇ ಶಕುಂತಲಾಬಾಯಿಯನ್ನು ಧಾರೆಯೆರೆಸಿಕೊಂಡು ನನ್ನ ಮನೆ ತುಂಬಿಸಿದ್ದು. ಬಂಗ್ಲೆ ಶ್ರೀನಿವಾಸಮೂರ್ತಿ ಚಿತ್ರದುರ್ಗದಲ್ಲಿ ಬಹಳ ವರ್ಷ ಪೋಲೀಸು ಹೆಡ್ ಮುನ್ಷಿಯಾಗಿದ್ದರು. ಚಿಕ್ಕಂದಿನಲ್ಲಿ ಬೇಸಿಗೆ ರಜ ದಿನಗಳಲ್ಲಿ ಚಿತ್ರದುರ್ಗಕ್ಕೆ ಹೋಗುತ್ತಿದ್ದೆ. ಆ ಕಾಲದಲ್ಲಿ ಚಿತ್ರದುರ್ಗದ ಕೋಟೆ ಏರಿ ಇಳಿದಿದ್ದೇನೆ. ಗೋಪಾಲ ಕೃಷ್ಣಸ್ವಾಮಿ ಬೆಟ್ಟ ಹತ್ತಿದ್ದೇನೆ. ಹಿಡಿಂಬಾಸುರನ ದೇವಸ್ಥಾನದಲ್ಲಿ ಅವನ ಹಲ್ಲು ನೋಡಿದ್ದೇನೆ. ಅಕ್ಕತಂಗಿಯರ ಹೊಂಡ, ಎಣ್ಣೆತುಪ್ಪದಕೊಳ, ಸಂಪಿಗೆ ಸಿದ್ದೇಶ್ವರಕ್ಷೇತ್ರ ಎಲ್ಲವನ್ನೂ ಚಿಕ್ಕಂದಿನಲ್ಲಿಯೇ ನೋಡಿ ಖುಷಿಪಟ್ಟಿದ್ದೇನೆ. ಬೆಟ್ಟದ ಮೇಲಿರುವ ಬತೇರಿ ನೋಡಿದ್ದೇನೆ. ಧವಳಪ್ಪನ ಗುಡ್ಡದೊಳಗೆ ನುಸುಳಿ, ತುದಿ ಮುಟ್ಟಿದ ಚಿಕ್ಕಂದಿನ ಅನು ಭಾವ ಹಳಸದೆ ಹಸಿಹಸಿಯಾಗೇ ಇದೆ. ವಾರವಾರವೂ ಸಂತೆಹೊಂಡದ ಬಳಿಯಿದ್ದ ಅಖಾಡದಲ್ಲಿ ನಡೆಯುತ್ತಿದ್ದ ಕುಸ್ತಿಪಂದ್ಯಗಳನ್ನು ತಪ್ಪದೆ ನೋಡಿ ನನ್ನ ರಟ್ಟೆ ತೊಡೆ ಗಳನ್ನು ತಟ್ಟಿಕೊಂಡುದೂ ಉಂಟು. ಹುಚ್ಚಂಗಿಯಮ್ಮನ ದೇವಸ್ಥಾನದ ಎದುರಿಗೆ ಸಿಡಿ

ಮರವೇರಿ, ಬೆನ್ನಿಗೆ ಚೂರಿ ಸಿಕ್ಕಿಸಿಕೊಂಡು ಆಕಾಶದಲ್ಲಿ ಸಿಡಿಯಾಡುತ್ತಿದ್ದ ನಾಯಕ ವಂಶದ ವೀರರನ್ನುನೋಡಿ ಭಯವಿಸ್ಮಯಗಳಿಂದ ತುಟಿಕಚ್ಚಿಕೊಂಡು ಅವರ ಗಂಡಾಂತರ ಸಾಹಸಕ್ಕೆ ತಲೆದೂಗಿದ್ದೇನೆ. ಹೀಗೆ ನನ್ನ ಬಾಲ್ಯ ಜೀವನದ ಅಚ್ಚುಮೆಚ್ಚಿನ ಚಿತ್ರ ದುರ್ಗ ಜಿಲ್ಲೆಯ ಸಾಹಿತ್ಯ ಸಂಸ್ಕೃತಿಗಳ ಪ್ರಸಾರ ನಮಗೆ ಲಭ್ಯವಾದಾಗ ನಮಗಾದ ಆನಂದಪರಮಾವಧಿ ಶಿಖರಕ್ಕೆ ಏರಿತು.

"ಕಟ್ಟಿ ಬಸವೇಶ್ವರ" ಅಂಕಿತದಲ್ಲಿ ವಚನ ರಚಿಸಿದ ಜೀರಗೆಕಟ್ಟಿ ಬಸಪ್ಪನವರು ಸ್ನೇಹ ವಿಶ್ವಾಸಗಳಿಂದ ಸಿರಿಗೆರೆಯಲ್ಲಿ ವರ್ಷವರ್ಷವೂ ನಡೆಯುತ್ತಿದ್ದ ತರಳಬಾಳು ಹುಣ್ಣಿಮೆಯ ಉತ್ಸವದಲ್ಲಿ ಭಾಗಿಗಳಾಗುವಂತೆ ಮಾಡಿದರು. ವರ್ಷ ಮರೆತಿದ್ದೇನೆ. ಹಿಂದೆ ನಮ್ಮ ರಾಜ್ಯ ಸಚಿವರೂ ಆಗಿದ್ದ ಜಗಳೂರಿನ ಇಮಾಮ್ ಸಾಹೇಬರೂ ತರಳ ಬಾಳು ಹುಣ್ಣಿಮೆ ಉತ್ಸವದಲ್ಲಿ ಪಾಲುಗೊಂಡಿದ್ದರು. ಅವರು ಸಿರಿಗೆರೆ ಮಠಕ್ಕೆ ಭಕ್ತ ರಂತೆ. ಅವರ ಕನ್ನಡ ಪ್ರೇಮ, ಹಿಂದೂಧರ್ಮ ಸಹಿಷ್ಣುತೆ, ನಮ್ಮ ಸಂತೋಷವನ್ನು ಉಕ್ಕಿಸಿತು. ಅವರಲ್ಲಿ ಗೌರವ ಹೆಚ್ಚಿಸಿತು. ಶಕುಂತಲಾಬಾಯಿ "ಪ್ರಭುಲೀಗಲಿಂಲೆ" ಯಿಂದ ಅಕ್ಕಮಹಾದೇವಿ ವಿರಕ್ತಿ ಕಥಾಭಾಗವನ್ನು ನನ್ನ ಪ್ರಾಸಂಗಿಕ ನಿರೂಪಣೆ ಯೊಡನೆ ವಾಚಿಸಿದರು. ಜಗದ್ಗುರು ಶಿವಕುಮಾರ ಶಿವಾಚಾರ್ಯಸ್ವಾಮಿಗಳು ನಮ್ಮನ್ನು ತುಂಬ ವಿಶ್ವಾಸದಿಂದ ಕಂಡರು. ಅನಂತರ ದಾವಣಗೆರೆಯಲ್ಲಿ ಸಿರಿಗೆರೆಯ ಜಗದ್ಗುರುಗಳು ನಡೆಸಿದ ತರಳಬಾಳು ಹುಣ್ಣಿಮೆಯ ಉತ್ಸವದಲ್ಲೂ ನಾವು ಭಾಗವಹಿಸಿದೆವು. ಅಲ್ಲೂ "ಪ್ರಭುಲಿಂಗಲೀಲೆ"ಯ ಕಾವ್ಯದಿಂದಲೇ ಕಾರ್ಯಕ್ರಮಕೊಟ್ಟೆವು. ಸೈನ್ಯ ಇಲಾಖೆ ಯಲ್ಲಿ ಮೇಜರ್ ಆಗಿದ್ದು ನಿವೃತ್ತರಾಗಿ ಈಗ **ಓಂ ಸ್ವಾಮಿ** ಯೆಂಬ ನಾಮಧೇಯ ದಿಂದ ಪರಿವ್ರಾಜಕರಾಗಿ ಸದ್ಧರ್ಮ ಸಾಂಸ್ಕೃತಿಕ ಯಜ್ಞದಲ್ಲಿ ಅಧ್ವರ್ಯರಾಗಿರುವ ಮೇಜರ್ ಅಬ್ದುಲ್ ಗಫಾರ್ ಅವರ ಸ್ನೇಹ ದೊರೆಯಿತು ದಾವಣಗೆರೆಯಲ್ಲಿ.

ಅನಾಥಸೇವಾಶ್ರಮದ "ತಿರುಕ" ರಾಘವೇಂದ್ರಸ್ವಾಮಿಗಳು

ನಮ್ಮ ಸಾಹಿತ್ಯ ಸಂಸ್ಕೃತಿಯ ಪ್ರಸಾರ ಕಾರ್ಯಕ್ರಮ ಹೊಳಲ್ಕೆರೆಯ ಸನಿಹ ದಲ್ಲಿರುವ ಮಲ್ಲಾಡಿಹಳ್ಳಿ ಅನಾಥಸೇವಾಶ್ರಮದಲ್ಲೂ ಮೂರು ನಾಲ್ಕುಬಾರಿ ನಡೆಯಿತು. ಸಾಹಿತ್ಯ ಸಂಸ್ಕೃತಿ ಪ್ರಸಾರ ಪ್ರಾರಂಭವಾಗುವುದಕ್ಕೆ ಕೆಲವು ತಿಂಗಳುಗಳ ಹಿಂದೋ ಮುಂದೋ 1953 ಇರಬಹುದು. ನೆನಪು ಮಾಸಿದೆ. ಎಂ.ಆರ್.ಶ್ರೀ. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಕಾಲ. ನಾನು ಉಪನ್ಯಾಸ–ಉತ್ಸವ ಸಮಿತಿಯ ವ್ಯವ ಸ್ಥಾಪಕ. ಮಲ್ಲಾಡಿ ಹಳ್ಳಿಯ ರಾಘವೇಂದ್ರಸ್ವಾಮಿಗಳ ಯೋಗಾಸನ ಪ್ರದರ್ಶನವನ್ನು ಏರ್ಪಡಿಸಿದೆ. ಅವರ ಅನುಗ್ರಹ ನನ್ನಮೇಲಾಯಿತು "ಮಲ್ಲಾಡಿಹಳ್ಳಿಗೆ ಬನ್ನಿ" ಎಂದು ಕರೆಯಿತ್ತರು. ನಾನು "ಸ್ವಾಮೀಜಿ, ನೀವು ಮಹಾ ಪರಿವ್ರಾಜಕರು, ಮಹಾಸಂಸ್ಥಾನ ವನ್ನೇ ನಿರ್ಮಿಸುತ್ತಿದ್ದೀರಿ, **ಅನಾಥ ಸೇವಾಶ್ರಮ.** ನಾನೂ ಒಂದು ವಿಧದಲ್ಲಿ ಪರಿ ವ್ರಾಜಕನೇ. "ಮಕ್ಕಳ ಮಂಟಪ" ಕಟ್ಟಿಕೊಂಡು ಏಗುತ್ತಿದ್ದೇನೆ. ಭಿಕ್ಷೆ ನೀಡಿದರೆ

ಬರಬಹುದು". ಎಂದೆ. ಸ್ವಾಮೀಜಿ ನಕ್ಕರು. ಹೊಳಲ್ಕೆರೆಯ ಸ್ಟೇಷನ್ ಮಾಸ್ಟರ್ ಆರ್. ವಿ. ಸದಾಶಿವಮೂರ್ತಿ, ಸ್ವಾಮಿಗಳ ಅವಿಚ್ಛಿನ್ನ ಭಕ್ತರು. ಅವರ ಮೂಲಕ ನಾನೊಬ್ಬನೇ ಮಲ್ಲಾಡಿಹಳ್ಳಿಯ ಅನಾಥಸೇವಾಶ್ರಮದ ಶಿವರಾತ್ರಿ ಉತ್ಸವದಲ್ಲಿ ಭಾಗ ವಹಿಸಿದೆ. ಸದಾಶಿವಮೂರ್ತಿ ಮಲ್ಲಾಡಿಹಳ್ಳಿಯ ಆಶ್ರಮಕ್ಕೆ ಸಲ್ಲಿಸಿರುವಸೇವೆ ಸುತ್ಯಾರ್ಹ ವಾಗಿದೆ. ಈಗ ಸಾಹಿತ್ಯ ಸಂಸ್ಕೃತಿ ಪ್ರಸಾರ ನಮ್ಮ ರಾಜ್ಯಾದ್ಯಂತ ಮುಖ್ಯಮಂತ್ರಿ ಹನುಮಂತಯ್ಯನವರ ನೇತೃತ್ವದಲ್ಲಿ ಹಮ್ಮಿದುದರಿಂದ ಮಲ್ಲಾಡಿಹಳ್ಳಿಯ ಅನಾಥ ಸೇವಾಶ್ರಮದ ಸೇವೆ ಇನ್ನೊಮ್ಮೆ ಲಭ್ಯವಾಯಿತು. ದಂಪತಿಗಳು ಇಬ್ಬರೂ ಮಲ್ಲಾಡಿ ಹಳ್ಳಿಯಶಿವರಾತ್ರಿ ಕಾರ್ಯಕ್ರಮದಲ್ಲಿ ಭಾಗವಹಿಸಿದೆವು.

"ಜಗನ್ನಾಥ ದಾಸರು" ಎಂಬ ವಿದ್ವತ್ಪೂರ್ಣ ಗ್ರಂಥಬರೆದು ಡಾ|| ಪ್ರಶಸ್ತಿಪಡೆದ ಡಾ|| ಕೆ. ಎಂ. ಕೃಷ್ಣರಾಯರು ಆ ವರ್ಷ ಮಲ್ಲಾಡಿಹಳ್ಳಿಗೆ ಆಗಮಿಸಿದ್ದರು. ಅವರದೂ ಉಪನ್ಯಾಸ ಶಿವರಾತ್ರಿ ಉತ್ಸವದಲ್ಲಿ. ಶಕುಂತಲಾಬಾಯಿ ನನ್ನ ಪ್ರಾಸಂಗಿಕ ನಿರೂಪಣೆ ಯೊಡನೆ "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನ ಮಾಡಿದರು.

ಇನ್ನೊಂದು ಶಿವರಾತ್ರಿ ಉತ್ಸವ. ಸಿ. ಕೆ. ವೆಂಕಟರಾಮಯ್ಯ ದಯಮಾಡಿಸಿ ದ್ದರು. ನಾವೂ ಅವರೊಡನೆ ಸಾಹಿತ್ಯ ಸಂಸ್ಕೃತಿ ಕಾರ್ಯಕ್ರಮಗಳಲ್ಲಿ ಭಾಗಿಗಳಾ ಗಿದ್ದೆವು. ವಿ. ಸೀ., ಅರ್ಚಕ ವೆಂಕಟೇಶರು ಭಾಗವಹಿಸಿದ್ದಾಗಲೂ ನಾವು ಅವರುಗಳ ಜೊತೆಯಲ್ಲಿ ಗಮಕ ಕಾರ್ಯಕ್ರಮ ನಡೆಸಿಕೊಟ್ಟಿದ್ದೇವೆ.

ಹೀಗೆ ನಮ್ಮ ಮತ್ತು ಮಲ್ಲಾಡಿಹಳ್ಳಿಯ ನಂಟು ತುಂಬ. ಅನಾಥಸೇವಾಶ್ರಮದ ನೇತಾರರಾದ ಶ್ರೀ ರಾಘವೇಂದ್ರಸ್ವಾಮಿಗಳು ಚಿರಪರಿಚಿತರಾದುದು ಸಾಹಿತ್ಯ ಸಂಸ್ಕೃತಿ ಪ್ರಸಾರದ ದೆಸೆಯಿಂದ. ಆ ಸಮಯದಲ್ಲಿ ನಾವು ಸ್ವಾಮೀಜಿಯ ದೀನದಲಿತರ ಸೇವೆ ಯನ್ನು ಕಣ್ಣಾರ ಕಂಡು ವಿಸ್ಮಯಗೊಂಡೆವು. ಅನಾಥಸೇವಾಶ್ರಮವನ್ನು ಅವರು ಕಟ್ಟಿ ರುವ ರೀತಿ ಅತ್ಯದ್ಭುತವಾಗಿದೆ. ಆಯುರ್ವೇದ, ವ್ಯಾಯಾಮ, ಯೋಗಾಭ್ಯಾಸ, ಶಿಕ್ಷಣ ಯಾವುದಲ್ಲಿಲ್ಲ ? ಮಾನವನ ಜೀವನದ ವಿಕಾಸಕ್ಕೆ ಬೇಕಾದುದೆಲ್ಲ ಮಲ್ಲಾಡಿಹಳ್ಳಿಯ ಅನಾಥಸೇವಾಶ್ರಮದಲ್ಲುಂಟು. ಭಾರತವರ್ಷದಲ್ಲಿ ನಾನು ಕಂಡು ಕೇಳಿ ನೋಡಿರುವ ಮಹಾನ್ ಮಹಾನ್ ಪುರುಷರುಗಳಲ್ಲಿ ಒಬ್ಬರು **ಮಹಾಭಿಕ್ಷುಕರು,** ಪಂಡಿತ ಮದನ ಮೋಹನ ಮಾಲವೀಯ. ಇನ್ನೊಬ್ಬರು **ಮಹಾ ತಿರುಕ**ರೆನ್ನಿಸಿಕೊಂಡ ನಮ್ಮ ರಾಘ ವೇಂದ್ರಸ್ವಾಮಿಗಳು. ಗಾಂಧೀಜಿ ಪಂಡಿತ ಮದನಮೋಹನ ಮಾಲವೀಯರನ್ನು ಮಹಾ ಭಿಕ್ಷುಕರೆಂದು ಕರೆದರು.ಪಂಡಿತಮಾಲವೀಯರು ಮಹಾಜನರಿಂದ ದೀನದರಿದ್ರ ಭಿಕ್ಷುಕರ ರನ್ನೂ ಬಿಡದೆ ಭಿಕ್ಷೆ ಬೇಡಿ ಬೆನಾರಸ್ ಹಿಂದೂ ಯೂನಿವರ್ಸಿಟಿಯನ್ನು ಸ್ಥಾಪಿಸಿದರು. ಮಲ್ಲಾಡಿಹಳ್ಳಿಯ ರಾಘವೇಂದ್ರಸ್ವಾಮಿಗಳೂ ಪರಿವ್ರಾಜಕರಾಗಿ ಹಳ್ಳಿಯಿಂದ ದಿಲ್ಲಿಯ ವರೆಗೂ ಯಾತ್ರೆಮಾಡಿ ಶ್ರೀಮಂತರಿಂದ ದೀನದಲಿತರವರೆಗೆ ಯಾರನ್ನೂ ಬಿಡದೆ ಬೇಡಿ ಸಂಗ್ರಹಿಸಿದ ಹಣದಿಂದ, ಒಂದು ಜೀವನವಿಕಾಸ ಪ್ರಪಂಚವೆನ್ನಬಹುದಾದ ಅನಾಥ ಸೇವಾಶ್ರಮವನ್ನು ಸ್ಥಾಪಿಸಿದ್ದಾರೆ. ಅಂಥ ಆಶ್ರಮದಲ್ಲಿ ನಾನು, ಶಕುಂತಲಾಬಾಯಿ,

ಪಾಲುಗೊಂಡು ನಮ್ಮ ಗಮಕಕಲಾ ಪರಿಚಾರಿಕೆಯನ್ನು ನೆರವೇರಿಸಿ, ಸ್ವಾಮೀಜಿಯ ಅನುಗ್ರಹಕ್ಕೆ ಪಾತ್ರರಾಗಿರುವ ಸಾಫಲ್ಯ ಪಡೆದಿದ್ದೇವೆ.

"ವಿದ್ಯಾ ದದಾತಿ ವಿನಯಂ"

1955ರಲ್ಲಿ ವೆಂಕಟಶಿವರೆಡ್ಡಿಯವರು ಚಿತ್ರದುರ್ಗದ ಜಿಲ್ಲಾಧಿಕಾರಿಗಳಾಗಿದ್ದ ಕಾಲ. ಅವರು ಬೆಂಗಳೂರು ಮೈಸೂರು ಬ್ಯಾಂಕಿನ ಮ್ಯಾನೇಜರ್ ಜಿ. ವಿ. ನಾರಾಯಣರೆಡ್ಡಿಯವರ ಅಳಿಯಂದಿರು, ಸಮಾಜ ಸೇವಾ ಧುರೀಣೆ ಸುಧಾರೆಡ್ಡಿಯವರ ಪತಿವರ್ಯರು. ದಂಪತಿಗಳು ಸುಸಂಸ್ಕೃತರು. ಚಿತ್ರದುರ್ಗದಲ್ಲಿ ಯುವಜನ ಸಮ್ಮೇಳನ ನಡೆಯಬೇಕೆಂದು ನಿರ್ಧಾರವಾಯಿತು. ಡಾ|| ಬಿ. ಕೆ. ನಾಗರಾಜರಾಯರು ಯುವಜನ ಸಂಘದ ಗೌ|| ಕಾರ್ಯದರ್ಶಿಗಳು. ಯುವಜನ ಮೇಳವನ್ನು ಚಿತ್ರದುರ್ಗದವರೇ ಆದ ಸುಪ್ರಸಿದ್ಧ ಸಾಹಿತಿ ತ. ರಾ. ಸು. ಮುಖ್ಯ ಅತಿಥಿಯಾಗಿ ನೆರವೇರಿಸಬೇಕಾಗಿತ್ತು. ನಿಶ್ಚಯವೂ ಆಗಿತ್ತು. ಅವರು ಕೊನೆಯಘಳಿಗೆಯಲ್ಲಿ ಅನಿವಾರ್ಯದಿಂದ ಬರಲಾಗಲಿಲ್ಲ. ಚಿತ್ರದುರ್ಗದ ಪ್ರಥಮ ದರ್ಜೆಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿದ್ದ ನನ್ನ ಆಪ್ತಗೆಳೆಯ ಡಾ|| ಜಿ. ವರದರಾಜರಾಯರು ಯುವಜನ ಸಮ್ಮೇಳನದ ಮುಖ್ಯ ಅತಿಥಿಯಾಗಬೇಕೆಂದು ಕೊನೆಯ ಘಳಿಗೆಯಲ್ಲಿ ನನಗೆ ಪತ್ರ ಬರೆದರು. ಶಕುಂತಲಾಬಾಯಿಗೂ "ಶ್ರೀರಾಮಾಯಣ ದರ್ಶನಂ" ಕಾವ್ಯವಾಚನ ಮಾಡಬೇಕೆಂದು ಕರೆಕೊಟ್ಟರು. ಇಬ್ಬರೂ ಒಪ್ಪಿಕೊಂಡೆವು. ಯುವಜನ ಸಮ್ಮೇಳನ ಎರಡು ದಿವಸ ಸಮಾವೇಶವಾಯಿತು.

ಸಿದ್ಧವ್ವನಹಳ್ಳಿ ನಿಜಲಿಂಗಪ್ಪನವರು ಯುವಜನ ಮೇಳವನ್ನು ಉದ್ಘಾಟಿಸಿದರು. ಜಿಲ್ಲಾಧಿಕಾರಿ ವೆಂಕಟಶಿವ ರೆಡ್ಡಿಯವರು ಅತಿಥಿಗಳನ್ನು ಸ್ವಾಗತಿಸಿದರು. ನಾನು ಮುಖ್ಯ ಅತಿಥಿಯಾಗಿ ಯುವಜನ ಕರ್ತವ್ಯವನ್ನು ಕುರಿತು ಭಾಷಣ ಮಾಡಿದೆ.

ಎರಡನೆಯದಿವಸ ವೆಂಕಟಶಿವರೆಡ್ಡಿಯವರು ಮುಖ್ಯ ಅತಿಥಿಯಾಗಿದ್ದರು. ಚಿತ್ರದುರ್ಗದ ಕಾಟನ್ ಮಿಲ್ಲಿನ ಅಧಿಕಾರಿಯಾಗಿದ್ದ ಪ್ರಭಾಕರರಾವ್ ಸಿರೂರು ಅಧ್ಯಕ್ಷರು. ಅವರು ರಾಮಾಯಣದ ಮೇಲೆ ಅಧಿಕಾರವಾಣಿಯಿಂದ ನುಡಿಯಬಲ್ಲ ಮಹಾ ವಿದ್ವಾಂಸರು. ಸಿತಾರ್ ವಾದನ ವಿದ್ವಾಂಸರು. ಸುಧಾರೆಡ್ಡಿಯವರು ವೀಣಾವಾದನ ವಿದುಷಿ. ಇಂಥ ಘನ ವಿದ್ವಾಂಸರುಗಳ ಜೊತೆಯಲ್ಲಿ ಶಕುಂತಲಾಬಾಯಿಯ "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನ ಕಾರ್ಯಕ್ರಮ ಚೆನ್ನಾಗಿತ್ತೆಂದು ಶ್ರೋತೃಗಳು ಅಭಿಪ್ರಾಯಪಟ್ಟರು.

ಮೂರನೆಯದಿನ ಸುಧಾರೆಡ್ಡಿಯವರು ನಮ್ಮನ್ನು ತಮ್ಮ ಮನೆಗೆ ಆಹ್ವಾನಿಸಿದರು. ವರದರಾಜರಾಯರು, ಅವರ ಪತ್ನಿ ಸಾವಿತ್ರಮ್ಮ, ನಾನು, ಶಕುಂತಲಾಬಾಯಿ ಕಾಲಕ್ಕೆ ಸರಿಯಾಗಿ ಸುಧಾರೆಡ್ಡಿಯವರ ಮನೆಗೆ ಹೋದೆವು. ವೆಂಕಟಶಿವರೆಡ್ಡಿಯವರು ಕಾರ್ಯ ಗೌರವದಿಂದ ಮನೆಯಲ್ಲಿರಲಿಲ್ಲ. ಸುಧಾರೆಡ್ಡಿಯವರು ವೀಣಾವಾದನ ವಿದುಷಿಯೆಂದು ಕೇಳಿದ್ದೆವಲ್ಲ! ಶಕುಂತಲಾಬಾಯಿ ಅವರನ್ನು ಪ್ರಾರ್ಥಿಸಿಕೊಂಡರು. ವೀಣೆ ನುಡಿಸುವುದಕ್ಕೆ

ಸುಧಾರೆಡ್ಡಿಯವರು ವಿನಯಪರರು ಸರಳರು. ಕೂಡಲೆ ವೀಣೆಯನ್ನು ತರಿಸಿಕೊಂಡು, ಭಗವದ್ಗೀತೆಯನ್ನು ನುಡಿಸಿ ನಮ್ಮನ್ನು ರಸಲೋಕಕ್ಕೆ ಕೊಂಡೊಯ್ದರು. ಪ್ರಭಾಕರ ರಾವ್ ಕಮಲಾಬಾಯಿ ಸಿರೂರ್ ದಂಪತಿಗಳು, ನಮ್ಮನ್ನು ತಮ್ಮ ಮನೆಗೆ ಆಹ್ವಾನಿಸಿದ್ದರು. ಡಾ|| ವರದರಾಜರಾವ್ ದಂಪತಿಗಳು ಮತ್ತು ನಾವು ಅವರ ಮನೆಗೆ ಹೋದೆವು. ತಿಂಡಿತೀರ್ಥಗಳ ಉಪಚಾರವಾಯಿತು. ಶಕುಂತಲಾಬಾಯಿ ಅವರ ಸಿತಾರು ವಾದನವನ್ನು ಕೇಳಲಪೇಕ್ಷಿಸಿದರು. ಸಿರೂರರು ಕೂಡಲೆ ಕೋಣೆಗೆ ಹೋಗಿ ಸಿತಾರು ವಾದ್ಯವನ್ನು ತಂದು ವಾದ್ಯದ ಗೌಸು ತೆಗೆದು ಶ್ರುತಿಮಾಡಿಕೊಂಡು ನುಡಿಸಲು ಕುಳಿತರು. "ಚಿತ್ರದುರ್ಗದಲ್ಲಿ, ನಾನು ಸಿತಾರು ಕೇಳಿಸೋಣವೆಂದರೆ ಕೇಳುವ ಕಿವಿಗಳೇ ಇಲ್ಲವಲ್ಲ ! ಸಂಗೀತಪ್ರಿಯರ ಮುಂದೆ ನುಡಿಸಿ ವರ್ಷಗಳೇ ಉರುಳಿವೆ. ನೀವು ಕೇಳ ಬಯಸಿದಿರಿ. ನನ್ನ ಮೈಯುಬ್ಬಿದೆ ಆನಂದದಿಂದ" ಎಂದು ನುಡಿಸತೊಡಗಿದರು. ಸುಮಾರು ಎರಡು ಗಂಟೆಗಳವರೆಗೆ ಸಂಗೀತರಸಲೋಕದಲ್ಲಿ ತನ್ಮಯರಾಗಿದ್ದೆವು.

ಸಾಹಿತ್ಯ–ಇತಿಹಾಸ ಸಂಶೋಧನ ಕ್ಷೇತ್ರದಲ್ಲಿ ಪ್ರಸಿದ್ಧರಾಗಿ, ದೇಶಭಕ್ತರಾಗಿ "ವಿದ್ಯಾ ದದಾತಿ ವಿನಯಂ" ಗುಣಕ್ಕೆ ಹೆಸರಾಗಿ, ಸರಳಜೀವನ ನಡೆಸುತ್ತಿದ್ದ ಹುಲ್ಲೂರು ಶ್ರೀನಿವಾಸ ಜೋಯಿಸರು ನಮಗೆ ಹಲವಾರು ವರ್ಷಗಳಿಂದಲೂ ಸುಪರಿಚಿತರು, ಆತ್ಮೀಯರು. ಅವರು ನಮ್ಮನ್ನು ತಮ್ಮ ಮನೆಗೆ ಕರೆದರು. ತಮ್ಮ ಕಾರ್ಯಕ್ಷೇತ್ರದ ಸುಖ ದುಃಖಗಳನ್ನು ತೋಡಿಕೊಂಡರು. ಕೋಟೆಯ ರಂಗಯ್ಯನ ಬಾಗಿಲಲ್ಲಿ ಒಂದು ಕೊಠಡಿಯಲ್ಲಿ ಖಾಸಗಿಯಾಗಿ ಸ್ಥಾಪಿಸಿದ್ದ ಪ್ರಾಚೀನ ವಸ್ತುಸಂಗ್ರಹಾಲಯಕ್ಕೆ ಕರೆದೊಯ್ದರು. ಚಿತ್ರದುರ್ಗ ಜಿಲ್ಲೆಯ ಇತಿಹಾಸಕ್ಕೆ ಸಂಬಂಧಿಸಿದ್ದಂತೆ ಸಂಗ್ರಹಿಸಿದ್ದ ಪ್ರಾಚೀನ ವಸ್ತುಗಳನ್ನು, ಇತಿಹಾಸ ಮಾಹಿತಿಯನ್ನು ವಿವರವಿವರವಾಗಿ ಪದರಪದರವಾಗಿ ವಿವರಿಸಿದರು ತುಂಬಾ ಆಸಕ್ತಿಯಿಂದ. ನಾವೂ ಅಷ್ಟೇ ಆಸಕ್ತಿಯಿಂದ ಕೇಳಿಕೊಂಡೆವು. ಕಡೆಗೆ, ಜೋಯಿಸರು ನಿರಾಶೆಯ ಉಸಿರುಬಿಟ್ಟು ಅಂದರು. "ಯಾರಿಗೂ ಬೇಡದ ಕೆಲಸವನ್ನು ಮಾಡುತ್ತಿದ್ದೇನೆ. ಜನಕ್ಕೆ ಈ ಸಂಗ್ರಹಾಲಯದಲ್ಲಿ ಆಸಕ್ತಿ ಇಲ್ಲ. ಸರಕಾರವೂ ನಿರಾಸಕ್ತಿಯಿಂದಲೇ ಕಾಣುತ್ತಿದೆ ಈ ಸಂಗ್ರಹಾಲಯವನ್ನು. ಹೊರಗಿನಿಂದ ಬರುವವರಿಗೊ ಈ ಸಂಗ್ರಹಾಲಯದ ಬಗೆಗೆ ಆಸಕ್ತಿ ಕಡಮೆ. ನಿಮ್ಮಂಥವರು ಬಂದರೆ ನಾನೇ ಅವರುಗಳನ್ನು ಬಲವಂತವಾಗಿ ಕರೆದೊಯ್ದು ತೋರಿಸುತ್ತೇನೆ. ನೀವು ತಾಳ್ಮೆಯಿಂದ ದೀರ್ಘ ಕಾಲ ನನ್ನೊಡನೆ ಇದ್ದು ಸಂಗ್ರಹಾಲಯದ ಬಗೆಗೆ ಮಾಹಿತಿ ಪಡೆದುಕೊಂಡಿರಿ. ನನಗೆ ಆಗಿರುವ ಸಂತೋಷ ಹೇಳತೀರದು"

ಅನಪೇಕ್ಷಾ ಮನೋಭಾವದಿಂದ ಗಮಕಕಲಾ ಸೇವೆ

ಶ್ರೀನಿವಾಸ ಜೋಯಿಸರಿಗೆ ಶಕುಂತಲಾಬಾಯಿಯನ್ನು ತಮ್ಮ ಹುಟ್ಟೂರು ಹುಲ್ಲೂರು ಹಳ್ಳಿಗೆ ಕರೆದೊಯ್ದು ಆ ಜನಕ್ಕೆ ಭಾರತವಾಚನ ಕೇಳಿಸಬೇಕೆನ್ನಿಸಿತು. "ಭಾರತದ ಬಿಂದೂರಾಯರು ನನಗೆ ಪರಮಮಿತ್ರರು, ಚಿತ್ರದುರ್ಗದವರು. ಹುಲ್ಲೂರಿನಲ್ಲಿ

ಭಾರತ ಓದಿದ್ದಾರೆ. ಅವರ ಶಿಷ್ಯೆ ನೀವು ಶಕುಂತಲಾಬಾಯಿ, ನಮ್ಮ ಹಳ್ಳಿಗೆ ಬಂದು ಭಾರತವಾಚನ ಮಾಡಬೇಕು "ಒಲ್ಲೆ" ಎನ್ನಬೇಡಿ, ಒಪ್ಪಿಕೊಳ್ಳಿ "ಎಂದು ಕೇಳಿ ಕೊಂಡರು. 'ಅಸ್ತು' ಎಂದೆವು.

ಪ್ರಥಮ ದರ್ಜೆ ಕಾಲೇಜಿನಲ್ಲಿ ಶಕುಂತಲಾಬಾಯಿಯ ಕಾರ್ಯಕ್ರಮವೇರ್ಪ ಟ್ಟಿತ್ತು. ಅಂತೇ ಹುಲ್ಲೂರಿನಲ್ಲಿ ನಡೆಯುತ್ತಿದ್ದ ಸ್ಕ್ಯಾಟು ಶಿಬಿರದ ಮುಕ್ತಾಯ ಸಮಾ ರಂಭ. ಹುಲ್ಲೂರು ಶ್ರೀನಿವಾಸ ಜೋಯಿಸರು, "ವರದರಾಜರಾವ್ ನಿಮ್ಮ ಕಾಲೇಜಿನ ಕಾರ್ಯಕ್ರಮವನ್ನು ಮುಂದಕ್ಕೆ ಇಟ್ಟುಕೊಳ್ಳಿ. ಶಕುಂತಲಾಬಾಯಿಯನ್ನು ನಮ್ಮೂರಿನ ಕಾರ್ಯಕ್ರಮಕ್ಕೆ ಬಿಟ್ಟುಕೊಡಿ" ಎಂದು ಬಲವಂತಪಡಿಸಿ, ಕಾಲೇಜಿನ ಕಾರ್ಯಕ್ರಮ ವನ್ನು ಮುಂದೂಡಿಸಿ, ಹುಲ್ಲೂರಿಗೆ ನಮ್ಮನ್ನೆಲ್ಲ ಕರೆದೊಯ್ದರು ಸಂಜೆಯ ಕಾರ್ಯ ಕ್ರಮಕ್ಕೆ.

ಸ್ಕ್ಯಾಟ್ ಶಿಬಿರವನ್ನು ಕೊಂಡಜ್ಜಿ ಬಸಪ್ಪನವರು ನಡೆಸುತ್ತಿದ್ದರು. ಅವರು ಕಾಂಗ್ರೆಸ್ ದೇಶಭಕ್ತ, ಚಿತ್ರದುರ್ಗದಲ್ಲಿ ಪ್ರಸಿದ್ಧ ವಕೀಲರು, ರಾಜಕೀಯದಲ್ಲಿ ಹುರಿ ಯಾಳು ಅವರು. ಮುಂದೆ ನಮ್ಮ ರಾಜ್ಯದ ಸಚಿವ ಸಂಪುಟದಲ್ಲಿ ಸಚಿವರಾದರು. ಕೇಂದ್ರದ ಸಚಿವ ಸಂಪುಟದಲ್ಲೂ ಸಹಾಯ ಸಚಿವರಾಗಿ ನಮ್ಮ ರಾಷ್ಟ್ರಕ್ಕೆ ಸೇವೆ ಸಲ್ಲಿ ಸಿದರು. ಅವರಿಗೆ ಶಕುಂತಲಾಬಾಯಿ ಮುಕ್ತಾಯ ಸಮಾರಂಭದಲ್ಲಿ ಭಾಗವಹಿಸುತ್ತಿರು ವುದು ತುಂಬ ಹರ್ಷಕೊಟ್ಟಿತು. ಶಕುಂತಲಾಬಾಯಿ ಅರ್ಧಗಂಟೆ ಕಾಲ ಕುಮಾರ ವ್ಯಾಸ ಭಾರತದಿಂದ ಕೃಷ್ಣಸಾರಥ್ಯ ಭಾಗವನ್ನು ನನ್ನ ಪ್ರಾಸಂಗಿಕ ನಿರೂಪಣೆಯೊಡನೆ ವಾಚನ ಮಾಡಿದರು. ಸುತ್ತಮುತ್ತಲ ಹಳ್ಳಿಗಳಿಂದಲೂ ಜನಬಂದು ಸಭೆ ಜೇನುಗೂಡಿ ನಂತೆ ಗಿಜಿಗಿಜಿಸುತ್ತಿತ್ತು. ಬಿಂದೂರಾಯರು ಚಿತ್ರದುರ್ಗದ ಹಳ್ಳಿಹಳ್ಳಿಗೂ ಹೋಗಿ ಕುಮಾರವ್ಯಾಸ ಭಾರತವನ್ನು ಓದಿ ಜನವನ್ನು ಭಾರತವಾಚನಕ್ಕೆ ಒಗ್ಗಿಸಿದ್ದರು. ಆ ಕಾರಣ, ಸಭೆಗೆ ಬಂದಿದ್ದ ಜನ, ಶಕುಂತಲಾಬಾಯಿಯನ್ನು ತುಂಬ ಆಸಕ್ತಿಯಿಂದ ಕೇಳಿತು. ಶಾನುಭಾಗರ ಮನೆಯ ಮುಂದೆಯೇ ವಿಶಾಲವಾದ ಶಾಮಿಯಾನ ಚಪ್ಪರ ಎಬ್ಬಿಸಿ, ಧ್ವನಿವರ್ಧಕ ಏರ್ಪಡಿಸಿದ್ದುದರಿಂದ, ಶಾನುಭಾಗರ ಮನೆಯ ಒಬ್ಬ ವೃದ್ಧೆ ಮನೆಯಲ್ಲಿಯೇ ಶಕುಂತಲಾಬಾಯಿಯ ಭಾರತವಾಚನ ಕೇಳಿ ಖುಷಿಪಟ್ಟರು. ಕಾರ್ಯ ಕ್ರಮ ಮುಗಿದ ಮೇಲೆ ಶಾನುಭಾಗರ ಮನೆಯಲ್ಲಿ ನಮಗೆಲ್ಲ ಊಟದ ಉಪಚಾರ. ಆ ಸಮಯದಲ್ಲಿ ಅಜ್ಜಮ್ಮ ಶಕುಂತಲಾಬಾಯಿಯನ್ನು ಕರೆದು ಹತ್ತಿರ ಕೂಡಿಸಿಕೊಂಡರು. ಆಕೆಯ ತಲೆ ಸವರಿದರು. "ತಾಯಿ, ನಾನು ಮುಪ್ಪಿನ ಮುದುಕಿ, ಮನೆ ಬಿಟ್ಟು ಎಲ್ಲೂ ಕದಲಲಿಲ್ಲ. ನಿತ್ರಾಣದಿಂದ ಸೊರಗಿ ಹೋಗಿದ್ದೇನೆ. ನೀನು ನನಗೆ ಮನೆಯಲ್ಲೇ ಭಾರತ ಕೇಳಿಸಿಬಿಟ್ಟೆ. ಭಾರತ ಕೇಳಿ ಎಷ್ಟೋ ವರ್ಷಗಳಾಗಿತ್ತು. ಈವೊತ್ತು ಕೇಳಿ ಧನ್ಯಳಾದೆ. ನಾಳೆಯೇ ಕಣ್ಣುಮುಚ್ಚಿಕೊಂಡರೂ ಆಯಿತು ನನ್ನ ಬಾಳು, ಪುಣ್ಯ ಬರುತ್ತದೆ" ಎಂದು ಗಳಗಳ ಅತ್ತರು. ಶಕುಂತಲಾಬಾಯಿ ಆ ವೃದ್ಧೆಯ ಪಾದಮುಟ್ಟಿ "ಅಜ್ಜಿ, ನಾನೂ ಭಾರತ ಓದಲು ಕಲಿತುದಕ್ಕೆ ಸಾರ್ಥಕವಾಯಿತು. ನಮ್ಮ ಗುರುಗಳು

ನನಗೆ ಹೇಳಿದ್ದಾರೆ, ಯಾರು ಬಂದು ಕೇಳಿದರೂ ಇಲ್ಲವೆನ್ನಬೇಡಿ. ಅದರಲ್ಲೂ ಮಹಿಳೆಯರು ಕೇಳಬಯಸಿದರೆ ಓದಿಕೇಳಿಸಿ, ಭಾರತವಾಚನಕ್ಕೆ ಬೆಲೆಕಟ್ಟಿ ವ್ಯಾಪಾರದ ಸರಕು ಮಾಡಬೇಡಿ. ಅನಪೇಕ್ಷೆಯಿಂದ ಸೇವೆ ಸಲ್ಲಿಸಿ" ಎಂದು ವೃದ್ಧೆಗೆ ಕಿವಿಮಾತು ಹೇಳಿದರು. ಶಕುಂತಲಾಬಾಯಿಯ ಈ ಅನಪೇಕ್ಷಾ ಮನೋಭಾವವನ್ನು ಕೆಲವು ಗಮಕಿಗಳು ತಪ್ಪಾಗಿ ಗ್ರಹಿಸಿದ್ದಾರೆ. ಒಬ್ಬ ಗಮಕವರ್ಯರು ಒಮ್ಮೆ ನಮ್ಮಿಬ್ಬರನ್ನೂ ಟೀಕಿಸಿದರು, "ಪಾಂಡುರಂಗರಾವ್, ನೀವು ಶಕುಂತಲಾಬಾಯಿ,ಕರೆದಲ್ಲಿಗೆ ಸುಲಭವಾಗಿ ಒಪ್ಪಿಕೊಂಡು ಬಿಡುತ್ತೀರಿ. ಗಮಕಿಗಳು ಗಮ್ಮತ್ತನ್ನು ಉಳಿಸಿಕೊಳ್ಳಬೇಕು. ಬಿಗಿಯಾಗಿ ಇರಬೇಕು." ತಪ್ಪಲ್ಲ, ಅದು ಅವರ ಅಭಿಪ್ರಾಯ. ಅವರಿಗೆ ಶಕುಂತಲಾಬಾಯಿ ಉತ್ತರಿಸಿದರು— "ನಮ್ಮ ಗುರುಗಳು ನನಗೆ ಒಂದು ಕಿವಿಮಾತು ಹೇಳಿದ್ದಾರೆ. ಕರೆದರೆ "ಒಲ್ಲೆ" ಎನ್ನಬೇಡಿ. ನೀವಾಗಿ ನೀವು ಮೇಲೆಬಿದ್ದು ಕಾರ್ಯಕ್ರಮ ಕೇಳಬೇಡಿ, ಸಂಭಾವನೆಕೊಟ್ಟರೆ ತೆಗೆದುಕೊಳ್ಳಿ, ಹಲ್ಲುಗಿಂಜಬೇಡಿ". ಇನ್ನೊಂದು ಮಾತು. ವೀಣೆ ಶೇಷಣ್ಣನವರು ಎಂಥ ಶ್ರೇಷ್ಠ ವೈಣಿಕ ವಿದ್ವಾಂಸರು, ಎಂಥ ಮಹಾ ಕಲಾವಿದರು ! ಅವರನ್ನು ಕೇಳಬಯಸಿದವರಿಗೆ "ಇಲ್ಲ" ಎನ್ನುತ್ತಿರಲಿಲ್ಲವಂತೆ. ಕರೆದಲ್ಲಿಗೆ ಹೋಗಿ ವೀಣಾ ವಿತಾನ ಮಾಡಿ ಬರುತ್ತಿದ್ದರಂತೆ. ನಾನೆಷ್ಟರವಳು ? ಎಂಥ ಘನ ವಿದ್ವಾಂಸಳು ! ಕರೆದರೆ ಹೋಗುತ್ತೇವೆ. ಸಂಭಾವನೆಕೊಟ್ಟರೆ ತೆಗೆದುಕೊಳ್ಳುತ್ತೇವೆ. ಕೊಡಲಿಲ್ಲ ಚಿಂತೆಯಿಲ್ಲ. ಸಂತೋಷದಿಂದ ಬರುತ್ತೇವೆ ಮನೆಗೆ". ಶಕುಂತಲಾಬಾಯಿ ವಿನಯ ಸೌಜನ್ಯಗಳನ್ನು ಬಿಟ್ಟು ಹೋಗುವುದಿಲ್ಲ. ಆದರೆ ಸಮಯಗಳಲ್ಲಿ ತಮ್ಮ ಆತ್ಮ ಘನತೆಗೆ ಕುಂದು ಬಂದಾಗ ದಿಟ್ಟತನದಿಂದ ನಿಷ್ಠುರವಾಗಿ ಎದುರಿಸಲೂ ಹಿಂಜರಿಯುವುದಿಲ್ಲ.

ಚಿತ್ರದುರ್ಗದ ಕಾಲೇಜು ಕಾರ್ಯಕ್ರಮವೂ ಚೆನ್ನಾಗಿ ನಡೆಯಿತು. "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನ. ಊರ ಪ್ರಮುಖರು, ಕಾಲೇಜು ವಿದ್ಯಾರ್ಥಿಗಳು ಆಸ್ಥೆಯಿಂದ ಕೇಳಿದರು. ಜಿ. ವರದರಾಜರಾಯರು, "ನಿಮ್ಮನ್ನು ಕರೆಸಿಕೊಂಡುದಕ್ಕೆ ಸಾರ್ಥಕವಾಯಿತು" ಎಂದು ಹಿರಿಹಿರಿ ಹಿಗ್ಗಿದರು. ಅವರ ಪತ್ನಿ ಸಾವಿತ್ರಮ್ಮ ನಮ್ಮನ್ನು ತುಂಬ ಅಕ್ಕರೆಯಿಂದ ಆದರಿಸಿದರು. ನಮಗೆ ವತ್ಸಲಾ ಕುಮಾರಿ ಆಗ ಸುಮಾರು ಎರಡು ವರ್ಷದ ಕೂಸು. ಆಕೆಯೂ ನಮ್ಮೊಡನೆ ಗಮಕಯಾತ್ರೆ ಮಾಡುತ್ತಿದ್ದಳು. ಪ್ರವಾಸದ ಕಷ್ಟಸುಖಗಳನ್ನು ಅನುಭವಿಸುತ್ತಿದ್ದಳು.

ಚಿತ್ರದುರ್ಗದಲ್ಲಿ ನನಗೆ ಇನ್ನೊಬ್ಬ ಗೆಳೆಯರು ಪರಿಚಯವಾದರು. ಅವರೇ ಎನ್ ಸೂರಪ್ಪ. ಸೂರಪ್ಪ ಒಳ್ಳೆಯ ಕಥೆಗಾರರು. "ರಾಯರಕಥೆಗಳು" ಎಂಬ ಒಂದು ಅಮೂಲ ಕಥಾಸಂಗ್ರಹವನ್ನು ಪ್ರಕಟಿಸಿದ್ದಾರೆ. ಅದರಲ್ಲಿ ವ್ಯಕ್ತಿಚಿತ್ರ ಬಹಳ ಚೆನ್ನಾಗಿ ನಿರೂಪಣೆಯಾಗಿದೆ. ಎನ್. ಸೂರಪ್ಪ ಈಗಿಲ್ಲ. ದಿವಂಗತರಾಗಿ ಕೆಲವು ವರ್ಷಗಳು ಸಂದಿವೆ. ಅವರ ಹೆಸರೂ ಕತೆಗಾರ ಪ್ರಪಂಚದಲ್ಲಿ ಮಾಸಿದೆ.

ಕಲಾವಿದರ ಜೀವನ ಸುಗಮವಲ್ಲ

ಹನುಮಂತಯ್ಯನವರ ಮುಖ್ಯಮಂತ್ರಿ ಪದವಿಯ ಕಾಲದಲ್ಲಿ ನ್ಯಾಷನಲ್ ಇಂಡಿಯನ್ ಕಾಂಗ್ರೆಸ್ ಅಧ್ಯಕ್ಷರಾದ ಉಚ್ಚರಂಗ ರಾಯ್ ನವಲ್ ಶಂಕರ್ ಧೇಬರ್ (ಯು. ಎನ್. ಧೇಬರ) ಮಹಾಶಯರು ಬೆಂಗಳೂರಿಗೆ ಆಗಮಿಸಿದರು. 1955 ಇರ ಬಹುದು. ಅವರಿಗಾಗಿ ಪಿ. ಶಿವಶಂಕರ್ ವೃತ್ತದಲ್ಲಿರುವ ಸ್ಕೌಟ್ ಹೆಡ್ ಕ್ವಾರ್ಟರ್ಸ್ ಕಟ್ಟಡವಿರುವ ಎದುರು ಬೈಲಲ್ಲಿ ಶಾಮಿಯಾನ ಭವ್ಯ ಚಪ್ಪರ ಹಾಕಿ ಒಂದು ಮಹಾಸಭೆ ಏರ್ಪಟ್ಟಿತು. ಅದರ ನಾಯಕತ್ವವನ್ನು ಜೆ. ಬಿ. ಮಲ್ಲಾರಾಧ್ಯರು ನಿರ್ವಹಿಸಿದ್ದರು. ಅವರು ಉಜ್ವಲ ಸಾಹಿತ್ಯಪ್ರೇಮಿ. ಮಹಾ ಸ್ಕೌಟ್ ನಾಯಕ ದಿಟ್ಟತನದ ಅಧ್ವರ್ಯು. ಮಲ್ಲಾರಾಧ್ಯರು ಕಾಂಗ್ರೆಸ್ ಅಧ್ಯಕ್ಷರಿಗೆ ಕನ್ನಡ ಭಾರತವಾಚನ ಕೇಳಿಸಬೇಕೆಂದು ನಿರ್ಧರಿಸಿದರು. ಶಕುಂತಲಾಬಾಯಿಗೆ ಕರೆ ಬಂತು. **ಕುಮಾರವ್ಯಾಸಭಾರತವನ್ನೇ** ವಾಚಿಸಬೇಕೆಂದು ಜೊತೆಬ್ಬ ವ್ಯವಸ್ಥಾಪಕರು ಪತ್ರದಲ್ಲಿ 10 ನಿಮಿಷ ಸೂಚಿಸಿದ್ದರು. ಶಕುಂತಲಾಬಾಯಿ ಹತ್ತು ನಿಮಿಷಕ್ಕೇ ಸಿದ್ಧವಾದರು. ಆಕೆ ವೇದಿಕೆಯೇರುವ ಸಮಯ ದಲ್ಲಿ ವ್ಯವಸ್ಥಾಪಕರು ಧಡಧಡ ಬಂದು "5 ನಿಮಿಷದಲ್ಲಿ ಕಾವ್ಯವಾಚನ ಮುಗಿಸಿ" ಎಂದು ಎಚ್ಚರಿಸಿದರು. ಶಕುಂತಲಾಬಾಯಿ ತುಟಿಬಿಚ್ಚದೆ, ವ್ಯವಸ್ಥಾಪಕರ ಎಚ್ಚರಿಕೆಯನ್ನು ಕಿವುಡುಗೇಳಿ ವೇದಿಕೆ ಹತ್ತಿದರು. ಕಾವ್ಯವಾಚನ ಪ್ರಾರಂಭವಾಗುವ ಮೊದಲು ಸಭೆ ಯನ್ನು ಉದ್ದೇಶಿಸಿ, ಧೇಬರ್ ಮಹಾಶಯರನ್ನು ಹೆಸರಿಸಿ, "ನನಗೆ ವೇದಿಕೆಯೇರುವಾಗ ಐದುನಿಮಿಷಗಳೆಂದು ತಿಳಿಸಿದ್ದಾರೆ. ಅದಕ್ಕೆ ಮೊದಲು ಹತ್ತು ನಿಮಿಷಗಳೆಂದು ತಿಳಿಸಿ ದ್ದರು. ನಾನು 7 ನಿಮಿಷಗಳಲ್ಲಿ ಮುಗಿಸುತ್ತೇನೆ. ಧೇಬರ್‌ಜೀ ಕ್ಷಮಿಸಬೇಕು" ಎಂದರು. ಸಭೆ ಶಕುಂತಲಾಬಾಯಿಯ ಉದ್ದೇಶವನ್ನು ಸ್ವಾಗತಿಸಿ ಚಪ್ಪಾಳೆಯ ಸುರಿಮಳೆ ಸುರಿಸಿತು. ಧೇಬರ್ ಮಹಾಶಯರು "ನಿಮಗೆ ಕೊಟ್ಟಿರುವ 10 ನಿಮಿಷಗಳನ್ನು ತೆಗೆದುಕೊಳ್ಳಿ. ನಾನು ಸಂತೋಷವಾಗಿ ಕೇಳುತ್ತೇನೆ" ಎಂದರು. ಇನ್ನೊಮ್ಮೆ ಚಪ್ಪಾಳೆಯ ಸುರಿಮಳೆ ಯಾಯಿತು. ವ್ಯವಸ್ಥಾಪಕರು ಉರಿಮುಖರಾಗಿ ನೆಲ ನೋಡುತ್ತಿದ್ದರು. ಆದರೆ ಶಕುಂತಲಾಬಾಯಿ 10 ನಿಮಿಷ ತೆಗೆದುಕೊಳ್ಳಲಿಲ್ಲ. 5 ನಿಮಿಷಕ್ಕೆ ಮುಗಿಸಲಿಲ್ಲ. 7 ನಿಮಿಷಗಳಲ್ಲಿ "ಕೃಷ್ಣ ಸಾರಥ್ಯ"ಭಾಗದಿಂದ ಕೌರವೇಶ್ವರ ಕೇಳು....(28) ನಾಡಿಗೋಸುಗ ಸೋದರರು....(29) ಅವಧರಿಸು ಮುರವೈರಿ....(30) ಆಡೊಡಾವಿಹವೊಂದು ಕಡೆಯಲ್ಲಿ ....(32)ಮುರಮಥನ ಚಿತ್ತೈಸು....(34)ಐದು ಪದ್ಯಗಳನ್ನು ವಾಚಿಸಿದರು.ಪ್ರಾರ್ಥನೆಗೆ ಶ್ರೀವನಿತೆಯರಸನೆ....ಮುಕ್ತಾಯಕ್ಕೆ "ವೇದಪುರುಷನ .... " ಆರಿಸಿಕೊಂಡಿದ್ದರು. "ಶ್ರೀ ಕೃಷ್ಣ ಸಾರಥ್ಯ ಭಾಗ ಆರಿಸಿಕೊಂಡಿದ್ದಕ್ಕೆ ಕಾರಣಕೊಟ್ಟು ವೇದಿಕೆ ಇಳಿದರು. ಪಾರ್ಥನಿಗೆ ಸಾರಥಿಯಾಗಿ ಧರ್ಮಜ್ಞರಾದ ಪಾಂಡವರನ್ನು ಕಾಪಾಡಿದಂತೆ ಕಾಂಗ್ರೆಸ್ ಅಧ್ಯಕ್ಷರು ದೇಶವನ್ನು ಧರ್ಮಮಾರ್ಗದಲ್ಲಿ ನಡೆಸಬೇಕೆಂದು ಬಿನ್ನಹ" ಎಂದು ಬಿನ್ನವಿಸಿದರು. ಸಭೆ ಆನಂದತುಂದಿಲವಾಗಿ ಚಪ್ಪಾಳೆಯ ಸುರಿಮಳೆ ಸುರಿಸಿತು.

ವಿ. ಎಸ್. ನಾರಾಯಣರಾಯರು ಶಕುಂತಲಾಬಾಯಿಯ ದಿಟ್ಟತನವನ್ನು ತುಂಬ

ತುಂಬ ಮೆಚ್ಚಿಕೊಂಡರು. ಶಕುಂತಲಾಬಾಯಿ ತಮ್ಮ ಅನಿಸಿಕೆಯನ್ನು ತಿಳಿಸಿ ಧೈರ್ಯತನ ತೋರಿದ್ದಕ್ಕೆ ಶಹಬಾಸ್‌ಗಿರಿ ಕೊಟ್ಟರು.

ಗಮಕಿಗಳ ಕಷ್ಟ ಕಾರ್ಯಕರ್ತರಿಗೆ ಅರ್ಥವಾಗುವುದಿಲ್ಲ. ಸಂಗೀತಕ್ಕೆ, ಭಾವಗೀತೆಗಳಿಗೆ ಕಾಲಕ್ಕೆ ಸರಿಯಾಗಿ ಅಳವಡಿಸಿಕೊಳ್ಳುವ ಅನುಕೂಲವಿದೆ. ಕಾವ್ಯವಾಚನಕ್ಕೆ ಈ ಅನುಕೂಲವಿಲ್ಲ. ಕಾವ್ಯದ ಪದ್ಯಗಳನ್ನು ಕಥಾಸರಣಿಗೆ ಲೋಪಬರದಂತೆ ಅಳವಡಿಸಿಕೊಳ್ಳಬೇಕು. ಕಥೆಯ ಸ್ವಾರಸ್ಯ ಪ್ರಾರಂಭದಲ್ಲಿ ಸಿಗುವುದೇ ಅಪರೂಪ. ನಾಲ್ಕೈದು ಪದ್ಯಗಳಲ್ಲಿ ಗಮಕಿಯ ಕಲಾವಂತಿಕೆ ಸಭೆಗೆ ವೇದ್ಯ ಪಡಿಸಲು ಅಸಾಧ್ಯ. ಗಮಕಿಗಳು ಸಭೆಗೆ ಬರುವ ಮೊದಲು ಹೇಗೆ ವಾಚನ ಮಾಡಬೇಕು, ಎಷ್ಟು ಪದ್ಯಗಳನ್ನು ಒಂದು ಅಂಕಣದಲ್ಲಿ ಅಳವಡಿಸಿಕೊಂಡು ವಾಚನ ಮಾಡಬೇಕು ಎಂದು ಚಿಂತಿಸಿ, ನಿರ್ಧರಿಸಿ ಸಭೆಯನ್ನು ಪ್ರವೇಶಿಸುತ್ತಾರೆ. ವೇದಿಕೆಯನ್ನು ಹತ್ತುವ ಕ್ಷಣದಲ್ಲಿ ಅವರಿಗೆ ಮೊದಲೇ ಕೊಟ್ಟಿರುವ ಕಾಲದಲ್ಲೂ ಇನ್ನೂ ಕೆಲವು ನಿಮಿಷಗಳನ್ನು ಮೊಟಕುಮಾಡಿದರೆ ಕಲಾವಿದರ ಅವಸ್ಥೆ ಏನಾಗಬೇಡ ? ಶಕುಂತಲಾಬಾಯಿಗೆ ಇಂಥ ಸಭೆಗಳನ್ನು ಕಂಡರೆ ಮುಜಗರ. ಆಕೆ, ಮೊದಲೇ ಕಾರ್ಯಕ್ರಮದ ಅವಧಿಯನ್ನು ಕಾರ್ಯಕರ್ತರನ್ನೂ ಕೇಳಿ ನಿರ್ಣಯಿಸಿಕೊಳ್ಳುತ್ತಾರೆ. ಅದರಂತೆ ಸಿದ್ಧವಾಗುತ್ತಾರೆ. ಸಭೆಗೆ ಈ ಕಷ್ಟ ಸುಖ ತಿಳಿದಿರುವುದಿಲ್ಲ. ಕಾವ್ಯವಾಚನ ಹದಗೆಟ್ಟರೆ, ಆ ಪದ್ಯ ಬಿಟ್ಟಿತು, ಈ ಪದ್ಯ ಬೇಕಿರಲಿಲ್ಲ ಎಂಬ ವಿಮರ್ಶೆಗೆ ತೊಡಗುತ್ತದೆ. ಕಲಾವಿದರು ಎಕ್ಕಹುಟ್ಟಿಹೋಗುತ್ತಾರೆ. ಈ ಕಾರಣ ಶಕುಂತಲಾಬಾಯಿ ತುಂಬ ಹುಷಾರಿಂದ ವರ್ತಿಸುವುದನ್ನು ಕಲಿತುಕೊಂಡಿದ್ದಾರೆ. ವೇದಿಕೆ ಏರುತ್ತಲೇ "ಕಾರ್ಯಕರ್ತರು ಇಂಥ ಭಾಗವನ್ನು ವಾಚನ ಮಾಡಬೇಕೆಂದು ಅಪೇಕ್ಷಿಸಿದ್ದಾರೆ. ಇಷ್ಟೇ ಕಾಲದಲ್ಲಿ ಮುಗಿಸಬೇಕೆಂದು ತಿಳಿಸಿದ್ದಾರೆ. ಈ ಆಣತಿಯಂತೆ ಇವೊತ್ತಿನ ಕಾವ್ಯವಾಚನ" ಎಂದು ಪ್ರಾರಂಭದಲ್ಲಿ ಶ್ರೋತೃಗಳಿಗೆ ಶ್ರುತಪಡಿಸಿ ಕಾವ್ಯವಾಚನವನ್ನು ಪ್ರಾರಂಭಿಸುತ್ತಾರೆ. "ತಾವು ನಿರ್ಲಿಪ್ತರು" ಎಂಬ ಭಾವವನ್ನು ಸಭೆಗೆ ಮೂಡಿಸುತ್ತಾರೆ. ಕಾಯಿ ಕುಡುಗೋಲು ಎರಡೂ ಕಾರ್ಯಕರ್ತರದೇ.

* * *

ಬೆಂಗಳೂರಿನ ಕಾರ್ಪೊರೇಷನ್, ದಂಡು ಪ್ರದೇಶದ ಮೆಯೋಹಾಲ್ ಬಯಲಿನಲ್ಲಿ ಶಾಸ್ತ್ರಿ ವೆಂಕಟೇಶ ಅಯ್ಯಂಗಾರ್ ಅಧ್ಯಕ್ಷತೆಯಲ್ಲಿ ಒಂದು ಸಾಹಿತ್ಯ ಸಾಂಸ್ಕೃತಿಕ ಕಾರ್ಯಕ್ರಮವನ್ನು ಏರ್ಪಡಿಸಿತು. 1955–56ನೆಯ ವರ್ಷವಿರಬಹುದು. ಶಕುಂತಲಾಬಾಯಿಯ ಕಾವ್ಯವಾಚನವೂ ಸಭೆಯ ಒಂದು ಆಕರ್ಷಣೆ, ದಂಡಿನ ವಾತಾವರಣ. ತಮಿಳು ಪ್ರಾಧಾನ್ಯ. ಉರ್ದು ಕೂಡ ಕನ್ನಡವನ್ನು ಮೆಟ್ಟಿನಿಂತಿದೆ. ಕನ್ನಡ ಸಾಧಾರಣ. ಸಾಲದುದಕ್ಕೆ, ಪಡಿಪಾವು ಮಕ್ಕಳಿಂದ 10–15 ವರ್ಷಗಳ ಶಾಲಾಬಾಲಕರು ಮುಂದೆ ಘೇರಾಯಿಸಿ ಕುಳಿತಿದ್ದಾರೆ. ಇಂಥ ನಾನಾ ಗೋತ್ರದ ಸಮ್ಮಿಶ್ರಣ ಸಭೆಯಲ್ಲಿ ಶಕುಂತಲಾಬಾಯಿಯ ಕಾವ್ಯವಾಚನ ಕನ್ನಡದಲ್ಲಿ. ಶಕುಂತಲಾಬಾಯಿ ವೇದಿಕೆ

ಯೇರಿದರು. ಂಜೂರಿ ನಾದದ ಶ್ರುತಿ ಗಾಳಿಯಲ್ಲಿ ಎಲ್ಲೋ ತೇಲಿಹೋಗಿತ್ತು. ಶ್ರುತಿ ಹಿಡಿದು "ಶ್ರೀವನಿತೆಯರಸನೆ" ಪ್ರಾರಂಭಿಸಿದರು. ಗುಜು ಗುಂಜಲು ಮಾತು ಅಲ್ಲಲ್ಲಿ ನಡೆಯುತ್ತಲೇ ಇತ್ತು. ಅದೇ ಸಮಯದಲ್ಲಿ ಸಾಲದುದಕ್ಕೆ ಎರಡು ಮೂರು ಮರ್ಕಟಗಳು ಮೇಯೋಹಾಲ್ ಹೊರಾಂಗಣ ಕಟ್ಟಡದಮೇಲೆ ಜಿಗಿದವು. ನಮ್ಮ ಎಳೆಯ ಬಾಲವಿಲ್ಲದ ನರ ಮರ್ಕಟಮರಿಗಳು ತಮ್ಮ ಗಮನಗಳನ್ನು ಪ್ರಾಣಿಮರ್ಕಟಗಳ ಕಡೆಗೆ ಹರಿಸಿದರು. ಶಕುಂತಲಾಬಾಯಿಯ ಒರಲನ್ನು ಕೇಳುವವರು ಯಾರು ? ಶಕುಂತಲಾಬಾಯಿ ತಟ್ಟನೆ ಕಾವ್ಯವಾಚನವನ್ನು ನಿಲ್ಲಿಸಿಬಿಟ್ಟರು. "ನನಗೆ ಅರ್ಥವಾಗುತ್ತಿದೆ. ಗುಜುಗುಜು ಏಕಾಗುತ್ತಿದೆಯೆಂದು. ಮರ್ಕಟಗಳು ಅವುಗಳ ಪಾಡಿಗೆ ಅವುಗಳು ಇವೆ. ಮಕ್ಕಳಿಗೆ ಸ್ವಾಭಾವಿಕ ಚಂಚಲ ಚಿತ್ತ. ಅವರ ವಯೋಧರ್ಮಕ್ಕೆ ಮನೋಧರ್ಮಕ್ಕೆ ಹಿಡಿಸದ ಸಭೆಯಿದು. ಆದುದರಿಂದ ಅವರು ಆ ಕಡೆ ಗಮನ ಕೊಡುವುದು ಸಹಜ ಆದರೆ ಹಿರಿಯರು" ಎಂದರು ಸಭೆ ನಿಶಬ್ದವಾಯಿತು. ಕಾವ್ಯವಾಚನ ಮುಂದುವರಿಯಿತು ಮಾಸ್ತಿಯವರಿಗೆ ಶಕುಂತಲಾಬಾಯಿಯ ಎದೆಗಾರಿಕೆ ತುಂಬಹಿಡಿಸಿತು. "ತಾಯಿ, ಸರಿಯಾಗಿ ಹೇಳಿದಿರಿ...." ಎಂದು ಕಿವಿಮಾತಿನಲ್ಲಿ ಪಿಸುಗುಟ್ಟಿದರು.

"ನೀವು ರಾಷ್ಟ್ರಗೀತೆಯನ್ನು ಏಕೆ ಹಾಡಲಿಲ್ಲ"

ಇನ್ನೊಂದು ಸಂದರ್ಭ. ನಮ್ಮ ರಾಷ್ಟ್ರ ಸ್ವತಂತ್ರವಾಗಿ ಮೂರು ವರ್ಷ ಕೂಡ ತುಂಬಿರಲಿಲ್ಲವೇನೋ. ವರ್ಷ ಮುಗಿತಿದ್ದೇನೆ ಬೆಂಗಳೂರಿನ ಪೋರ್ಸಲೇನ್ ಫ್ಯಾಕ್ಟರಿಯ ಒಂದು ಭಾಗ ಹೊಸದಾಗಿ ಪ್ರಾರಂಭವಾಯಿತು. ನಮ್ಮ ಸ್ವಾತಂತ್ರ್ಯ ಪುರೋಹಿತರಲ್ಲಿ ಒಬ್ಬರಾಗಿ, ಅಪ್ರತಿಮ ವೀರದಿಂದ ಹೋರಾಡಿ, ನಮ್ಮ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಮಹಾಧಿಟ್ಟನಾಯಕರಲ್ಲಿ ಅಗ್ರಗಣ್ಯರಾದ ಪಂಡಿತ ಜವಾಹರಲಾಲ್ ನೆಹರೂ ಪ್ರಧಾನಿಯಾಗಿ ರಾಷ್ಟ್ರದ ರಾಜ್ಯಭಾರ ನಿರ್ವಹಿಸುತ್ತಿದ್ದ ಕಾಲ. ಅವರನ್ನು ಹೊಸ ವಿಭಾಗದ ಆಸ್ತಿಭಾರ ಶಿಲೆಯನ್ನು ನೆಡುವುದಕ್ಕೆ ಸರಕಾರ ಆಹ್ವಾನಿಸಿತು. ಪ್ರಧಾನಿಯವರು ಒಪ್ಪಿಕೊಂಡರು. ಶಕುಂತಲಾಬಾಯಿ ಆ ಸಮಯದಲ್ಲಿ ಊರಲ್ಲಿ ಇರಲಿಲ್ಲ. ಚಿತ್ರದುರ್ಗದ ಪ್ರವಾಸದಲ್ಲಿದ್ದೆವೆಂದು ನೆನಪು. ತಂತಿಯ ಮೇಲೆ ತಂತಿ ಕೊಟ್ಟು ನಮ್ಮನ್ನು ಬೆಂಗಳೂರಿಗೆ ಕರೆಸಿಕೊಂಡರು ಫ್ಯಾಕ್ಟರಿಯ ಅಧಿಕಾರಿಗಳು. ಫ್ಯಾಕ್ಟರಿಯಲ್ಲಿ ಅಧಿಕಾರಿಗಳನ್ನು ಕಂಡೆವು. "ಶಕುಂತಲಾಬಾಯಿ, ನೀವು "ಶ್ರೀ ರಾಮಾಯಣ ದರ್ಶನಂ" ಕಾವ್ಯದಿಂದಲೇ ಪ್ರಾರ್ಥನೆ ನಡೆಸಿಕೊಡಬೇಕು. ಪ್ರಧಾನಿಯವರು ಸುಬ್ಬುಲಕ್ಷ್ಮಿಯವರನ್ನು ಕೇಳಿದ್ದಾರೆ. ಅವರಿಗೆ ನಾವು ಕರ್ನಾಟಕ ಸಂಗೀತವನ್ನು ಕೇಳಿಸಬೇಕೆಂದು ಇದ್ದೇವೆ. ಹಾಗೆ ನೀವು ಕೇವಲ ಮೂರು ನಾಲ್ಕು ನಿಮಿಷಗಳಲ್ಲಿ ಪ್ರಾರ್ಥನೆ ಮಾಡಬೇಕು" ಎಂದು ಆದೇಶ ನೀಡಿದರು. "ಆಯಿತು" ಎಂದೆವು. "ಶ್ರೀ ರಾಮಾಯಣ ದರ್ಶನಂ" ಕಾವ್ಯದಿಂದ "ರಯ್‌ಗೆ ಕರೆದೊಯ್ ಓ ಅಗ್ನಿ" ಭಾಗದಲ್ಲಿ "ಓಂ ನಮೋ ಸಚ್ಚಿದಾನಂದನೆ ನಮೋ ನಮೋ !" ಸಾಲುಗಳನ್ನು ಸಂಗ್ರಹಿಸಿ ಪ್ರಾರ್ಥನೆ ಮಾಡಲು

ನಿರ್ಧರಿಸಿದೆವು. ಪ್ರಾರ್ಥನೆಯ ಸಾಲುಗಳನ್ನು ಮುಂಚಿತವಾಗಿ ಅಧಿಕಾರಿಗಳ ಮುಂದೆ ಓದಿ ಅವರನ್ನು ತೃಪ್ತಿಪಡಿಸಿಯೂ ಆಯಿತು.

ಸಂಜೆ ಪೋರ್ಸಲೇನ್ ಫ್ಯಾಕ್ಟರಿಯ ಪಶ್ಚಿಮ ಭಾಗದಲ್ಲಿ ಸಾವಿರಾರು ನಾಗರಿಕರು ಕುರ್ಚಿಯಲ್ಲಿ ಕೂಡುವಂತೆ ಸಜ್ಜಾದ ಶಾಮಿಯಾನ ಚಪ್ಪರ ಉತ್ತರ ದಕ್ಷಿಣಾಭಿಮುಖ ವಾಗಿ ಭವ್ಯವಾಗಿ ಎದ್ದು ತಳಿರು ತೋರಣಗಳಿಂದ ಅಲಂಕೃತವಾಗಿ ನೇತ್ರಾನಂದಕರ ವಾಗಿತ್ತು. ಮುಖ್ಯ ಅತಿಥಿ, ಪ್ರಾಮುಖ್ಯ ಪ್ರತಿಷ್ಠಿತ ನಾಗರಿಕರು, ಮಂಡಿಸುವುದ ಕ್ಕೆಂಪೇ ಐದಾರಡಿ ಎತ್ತರದ ಒಂದು ಪ್ರಾಮುಖ್ಯ ವೇದಿಕೆ ಸಿದ್ಧವಾಗಿತ್ತು. ಧಾರಾಳ ವಾಗಿ ಐವತ್ತು ಮಂದಿ ಆ ವೇದಿಕೆಯ ಮೇಲೆ ಕೂಡಬಹುದಾಗಿತ್ತು. ವಿಶಾಲವಾದ ವೇದಿಕೆಗೆ ಎಡಭಾಗದಲ್ಲಿ ಇನ್ನೊಂದು ಸಣ್ಣ ವೇದಿಕೆ ನಮಗೆ. ಎರಡು ವೇದಿಕೆಗಳಿಗೂ ಧ್ವನಿವರ್ಧಕದ ಏರ್ಪಾಡು. ನಮ್ಮ ವೇದಿಕೆಯ ಮೇಲೆ ವಾದ್ಯವೃಂದ ಕೂತು ಗಾನ ಪ್ರಾರಂಭಿಸಿತ್ತು. **ನಮಗೆ ಪ್ರಾರ್ಥನೆ ಮಾಡಬೇಕೆಂದು ಮಾತ್ರ ಆದೇಶ ವಿತ್ತು.**

ಕಾಲಕ್ಕೆ ಸರಿಯಾಗಿ ಪ್ರಧಾನಿ ನೆಹರೂಜಿ ದಯಮಾಡಿಸಿದರು. ನನ್ನ ಹಿರಿಯ ಮಗಳು ಚಿ|| ವನಜ ತಂಬೂರಿ ಶ್ರುತಿ ಕೊಡುತ್ತಿದ್ದಳು. ಶಕುಂತಲಾಬಾಯಿ ರಾಗಾ ಲಾಪನೆಮಾಡಿ "ಓಂ ನಮೋ ಸಚ್ಚಿದಾನಂದನೇ ನಮೋ" ಸಾಲುಗಳನ್ನು ತಮ್ಮ ನಾಲ್ಕು ನಿಮಿಷಗಳ ಅವಧಿಯಲ್ಲಿ ಕರಾರುವಾಕ್ಕಾಗಿ ಮುಗಿಸಿದರು. ಶಾಮಿಯಾನ ಚಪ್ಪರದ ಮೇಲು ಹೊದಿಕೆ ಹಾರುವಹಾಗೆ ಚಪ್ಪಾಳೆಯಿಕ್ಕಿ ಶ್ರೋತೃಗಳು ಶಕುಂತಲಾಬಾಯಿಯ ಗಮಕಕಲಾವಂತಿಕೆಯನ್ನು ಮೆಚ್ಚಿಕೊಂಡರು. "ಕರ್ಣಾಟಕ ಸಂಗೀತಾವಧಾರಯ" ವಾಯಿತು ಪ್ರಧಾನಿ ನೆಹರೂಜಿಗೆ.

ನೆಹರೂಜೀ ಶಿಲಾಸ್ಥಾಪನೆ ನೆರವೇರಿಸಿ ತಮ್ಮ ಉದ್ಘಾಟನೆಯ ಭಾಷಣವನ್ನು ಮುಗಿಸಿ, ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ವಂದನಾರ್ಪಣೆ ಆಯಿತು. ರಾಷ್ಟ್ರಗೀತೆಯಾಗಬೇಕಲ್ಲ ? ವಾದ್ಯವೃಂದ ರಾಷ್ಟ್ರಗೀತೆಯನ್ನು ನುಡಿಸಲು ಸಿದ್ಧ ವಾಯಿತು. ಶಕುಂತಲಾಬಾಯಿ ಎದ್ದು ನಿಂತರು ರಾಷ್ಟ್ರಗೀತೆಗೆ ಗೌರವ ಸಲ್ಲಿಸುವುದಕ್ಕೆ. ಶಕುಂತಲಾಬಾಯಿಯು ಎದ್ದು ನಿಂತೊಡನೆ ಪ್ರಧಾನಿ ಎದ್ದು ನಿಂತರು. ವೇದಿಕೆಯ ಮೇಲಿದ್ದವರು ಎದ್ದುನಿಂತರು. ಇಷ್ಟರೊಳಗೆ ವಾದ್ಯವೃಂದ ಅವಸರದಲ್ಲಿ ರಾಷ್ಟ್ರ ಗೀತೆಯನ್ನು ಮುಗಿಸೇಬಿಟ್ಟಿತ್ತು, ಧ್ವನಿವರ್ಧಕ ಆ ವೇಳೆಯಲ್ಲಿ ಕೈಕೊಟ್ಟಿತು.

ಒಂದು ನಿಮಿಷವಾಯಿತು, ಎರಡು ನಿಮಿಷಗಳಾಯಿತು. ಶಕುಂತಲಾಬಾಯಿ ಮೌನಗಂಭೀರೆಯಾಗಿ ತಮ್ಮ ಕುಮಾರಿಯೊಡನೆ ನಿಂತಿದ್ದಾರೆ ಶಿಸ್ತಿನಿಂದ. ಸಭೆಯೆಲ್ಲ ನಿಂತಿದೆ ಮೌನವಾಗಿ. ನೆಹರೂಜಿಗೆ ಮುಖ ಕೆಂಪಾಯಿತು. ಕೋಪದಿಂದ ದುಮು ದುಮು ಉರಿಮುಖರಾಗಿ ಪಕ್ಕದಲ್ಲಿದ್ದವರನ್ನುಕೇಳಿದರು "ರಾಷ್ಟ್ರಗೀತೆ ಯಾಕೆ ಪ್ರಾರಂಭ ವಾಗಿಲ್ಲ ?" "ರಾಷ್ಟ್ರಗೀತೆ ಮುಗಿದು ಹೋಯಿತು." ಪ್ರಧಾನಿ ಉರಿಗಣ್ಣಾಗಿ, ಕೆಂಡ ಕಾರುತ್ತ ಧಡಧಡ ವೇದಿಕೆಯಿಂದ ಇಳಿದು ನೇರವಾಗಿ ಶಕುಂತಲಾಬಾಯಿಯೆಡೆಗೆ ಧಾವಿ

ಸಿದರು. "ನೀವು ರಾಷ್ಟ್ರಗೀತೆಯನ್ನು ಹಾಡದೆ ಸುಮ್ಮನೆ ಏಕೆ ನಿಂತಿರಿ ?" ಮಾತಿನ ಸಿಡಿ ಬಾಣ ಎರಿಸಿದರು ಶಕುಂತಲಾಬಾಯಿಯ ಮೇಲೆ. ಶಕುಂತಲಾಬಾಯಿ ಹಿಂದೀ ಭಾಷೆ ಯಲ್ಲಿ ಧೈರ್ಯವಾಗಿ ಪರಿಸ್ಥಿತಿಯನ್ನು ಎದುರಿಸಿದರು. "ನನಗೆ ಆದೇಶ ನೀಡಿರಲಿಲ್ಲ! ನೆಹರೂಜಿ ನಿರುಪಾಯರಾದರು. ಉರಿಗಣ್ಣಿಂದ ವಾದ್ಯವೃಂದದ ಕಡೆ ನೋಡಿ ಮುಖ ಸಿಂಡರಿಸಿದರು. "ರಾಷ್ಟ್ರಗೀತೆಯನ್ನು ಇವರಕೈಯಲ್ಲೇ ಹಾಡಿಸಬೇಕಾಗಿತ್ತು" ಎಂದು ಗೊಣಗಿಕೊಳ್ಳುತ್ತ ಗುಂಪನ್ನು ದಬ್ಬಿಕೊಂಡು ಬಿರುಗಾಳಿಯಂತೆ ಹೊರಟುಬಿಟ್ಟರು.

ಶಕುಂತಲಾಬಾಯಿ ನೆಹರೂಜಿಯ ಕೆಂಡದಂಥ ಕೋಪವೆದುರಿಗೆ ಅಂಜುಕುಳಿ ಯಾಗಿ ನಡುಗಿ, "ಬೆಬ್ಬೆಬ್ಬೆ" ಎಂದಿದ್ದರಂತೆ, ಯಾರತಲೆಯ ಮೇಲೋ ಕೂಡಬೇಕಾ ಗಿದ್ದ ಗೂಬೆ ಇವರ ತಲೆಯ ಮೇಲೆ ಕೂಡುತ್ತಿತ್ತು. ಬೀಸುವ ದೊಣ್ಣೆಯ ಏಟು ತಪ್ಪಿತು.

ಗಂಡಾಂತರದ ಸಂಜೆ ಕಳೆದು ಬೆಳಗಾಯಿತು. ನಗರದ ಪತ್ರಿಕೆಗಳೆಲ್ಲ ಕಣ್ಣಿಗೆ ರಾಹು ಬಡಿಯುವಂತೆ ದಪ್ಪದಪ್ಪಕ್ಷರಗಳಲ್ಲಿ ಮುಖಪುಟದಲ್ಲಿ ರಾಷ್ಟ್ರಗೀತೆಯ ಸುದ್ದಿ ಯನ್ನು ವಿಶೇಷ ಸುದ್ದಿಮಾಡಿ ಪ್ರಕಟಿಸಿದ್ದವು. ಪಂಡಿತಜಿ, ಶಕುಂತಲಾಬಾಯಿ ಸುದ್ದಿಯ ಮುಂಚೂಣಿಯಲ್ಲಿದ್ದರು.

ಒಂದು ಪತ್ರಿಕೆ ವಾದ್ಯವೃಂದವನ್ನು ತರಾಟೆಗೆ ತೆಗೆದುಕೊಂಡಿತ್ತು. ಇನ್ನೊಂದು ಪತ್ರಿಕೆ ವಾದ್ಯವೃಂದದಲ್ಲಿದ್ದ ಹಾರ್ಮೋನಿಯಂ ವಾದ್ಯವನ್ನು ಬಳಸಿಕೊಂಡು ವಿನೋ ದದ ಹಾಸ್ಯ ಚಟಿಕೆ ಹಾರಿಸಿ "ನೆಹ್ರೂಜಿಗೆ ಹಾರ್ಮೋನಿಯಂ ವಾದ್ಯ ಕಂಡರೆ ಆಗದು. ಹಾರ್ಮೋನಿಯಂ ಕಂಡವರೆ ಸಿಡಿಮಿದ್ದರು" ಎಂದಿತ್ತು. ಮತ್ತೊಂದು ಪತ್ರಿಕೆ ಶಕುಂತಲಾಬಾಯಿ ತಮ್ಮ ಮೇಲೆ ಬಂದೆರಗುತ್ತಿದ್ದ ಅಪವಾದವನ್ನು ದಿಟ್ಟತನದಿಂದ ಎದುರಿಸಿ ಪಾರಾದರು ಎಂದು ಆಕೆಯ ತಲೆಗಾದಿತ್ತು. ವಾಸ್ತವ ಸಂಗತಿಗಿಂತ ಉತ್ಪ್ರೇಕ್ಷೆಯೇ ಒಂದು ಕೈ ಮೇಲಾಗಿತ್ತು ಸುದ್ದಿಗಳಲ್ಲಿ.

ರಾಷ್ಟ್ರಪ್ರೇಮವೆಲ್ಲಿದೆ ?

ಬೆಂಗಳೂರಿನಲ್ಲಿ ಪ್ರಧಾನಿ ನೆಹ್ರೂಜಿಯ ಸಮ್ಮುಖದಲ್ಲಿ ರಾಷ್ಟ್ರಗೀತೆ ಎಬ್ಬಿಸಿದ ಬಿರುಗಾಳಿ ಕೇಂದ್ರ ಸರಕಾರದ ಆಡಳಿತ ವರ್ಗದಲ್ಲಿ ಜೊಬ್ಬೆಯೆಬ್ಬಿಸಿ ಕುತೂಹಲ ಕೆರಳಿ ಸಿತು. ರಾಷ್ಟ್ರಗೀತೆಯನ್ನು ಪಾಠ ಹೇಳುವುದಕ್ಕೆ ರಾಷ್ಟ್ರಗೀತೆ ಹಾಡುವ ಸಿದ್ಧಹಸ್ತರ ತಂಡ ವೊಂದನ್ನು ದೇಶಾದ್ಯಂತ ಯಾಕೆ ಕಳಿಸಬಾರದೆಂದು ಹಲವಾರು ಸಲಹೆಗಳು ಪ್ರಾರಂಭ ವಾದುವು. ನಮಗೆ ಈ ವದಂತಿ ಕೇಳಿ ಆಶ್ಚರ್ಯವೋ ಆಶ್ಚರ್ಯ, ನಮಗೆ ಶಂಖದ ತೀರ್ಥ ಉತ್ತರಭಾರತದಿಂದಲೇ ಬರಬೇಕೆ ? ನಮ್ಮಲ್ಲಿ ರಾಷ್ಟ್ರಗೀತೆ ಹಾಡುವ ತಜ್ಞರೇ ಇಲ್ಲವೇ? ಸ್ವಾತಂತ್ರ್ಯ ನಮ್ಮ ರಾಷ್ಟ್ರಕ್ಕೆ ಬಂದಾಗಲಿಂದ 'ಮಕ್ಕಳ ಮಂಟಪ'ದ ಮಕ್ಕಳಿಗೆ ರಾಷ್ಟ್ರ ಗೀತೆಯನ್ನು ವಿಧಿವತ್ತಾಗಿ ಕಲಿಸುವ ಪಾಠ ದಿನಚರಿಯಾಯಿತು. ಶಾಲೆ ಮುಗಿಯುವ ಮುನ್ನ ಪ್ರತಿ ಸಂಜೆಯೂ 'ಮಕ್ಕಳ ಮಂಟಪ'ದ ಮಕ್ಕಳು ರಾಷ್ಟ್ರಗೀತೆಯನ್ನು ಸಾಮೂ

ಹಿಕವಾಗಿ ಶಿಸ್ತಿನಿಂದ ನಿಂತು ಹಾಡಿ ಹೋಗಬೇಕೆಂದು ಕಡ್ಡಾಯವಾಗಿತ್ತು. ಶಕುಂತಲಾ ಬಾಯಿಯೇ ಶಾಸ್ತ್ರೋಕ್ತವಾಗಿ ಶ್ರದ್ಧೆಯಿಂದ ಮಕ್ಕಳಿಗೆ ಕಲಿಸುತ್ತಿದ್ದರು. ಆಕೆಯನು "ನೀವೇ ರಾಷ್ಟ್ರಗೀತೆಯನ್ನು ಹಾಡಿ" ಎಂದಿದ್ದರೆ ಕಾರ್ಯಕರ್ತರು, ಇಷ್ಟು ಹಗರಣ ವಾಗುತ್ತಿರಲಿಲ್ಲ.

"ರಾಷ್ಟ್ರಕನೆನ್ನಿಸಿದ ಪ್ರಜೆಗೆ ಇನ್ನೂ ರಾಷ್ಟ್ರಪ್ರೇಮ ಪ್ರಜ್ಞೆಯೇ ಜಾಗೃತವಾಗಿಲ್ಲ. ಸ್ವತಂತ್ರ ಭಾರತದಲ್ಲಿ ಸಾಮೂಹಿಕವಾಗಿ ಒಕ್ಕೊರಲಲ್ಲಿ ರಾಷ್ಟ್ರಗೀತೆ ಹಾಡಬೇಕು ಎಂಬ ಮನೋಧರ್ಮ ನಮ್ಮ ನಾಗರಿಕರಲ್ಲಿ ಬೆಳೆದಿಲ್ಲ. ರಾಷ್ಟ್ರಗೀತೆ ಹಾಡುತ್ತಿರುವಾಗ ಶಿಸ್ತಿನಿಂದ ಹೇಗೆ ನಿಲ್ಲಬೇಕು ಎಂಬ ಅರಿವಿಲ್ಲ. ಶಿಶುವಿಹಾರಗಳಿಂದ ಹಿಡಿದು ವಿಶ್ವವಿದ್ಯಾ ನಿಲಯಗಳ ವರೆಗೆ ಕೆಲವು ವರ್ಷಗಳ ವರೆಗೆ ರಾಷ್ಟ್ರಗೀತೆಯ ಪಾಠ ಕಡ್ಡಾಯವಾಗಿ ಕಲಿಸಿದರೆ ಮುಂದೆ ಸರಿಹೋದೀತೇನೊ ಪರಿಸ್ಥಿತಿ ?" ಎಂದೆನಿಸಿತು ನನಗೆ.

ರಾಷ್ಟ್ರನಾಯಕರ ಸಮ್ಮುಖದಲ್ಲಿ

ಶಕುಂತಲಾಬಾಯಿಗೆ ಸಾಹಿತ್ಯ ಸಂಸ್ಕೃತಿ ಪ್ರಸಾರ ಕಾಲದಲ್ಲಿ ಬೆಂಗಳೂರಲ್ಲಿ ಅನೇಕ ವೇಳೆ ಬಹುಮುಖ್ಯ ಮಹಾಸಭೆ, ಸಮ್ಮೇಳನಗಳಲ್ಲಿ ಪ್ರಾರ್ಥನೆ ಮಾಡುವುದಕ್ಕೆ ಕರೆ ಬರತೊಡಗಿತು. ಸಾಹಿತ್ಯ ಸಂಸ್ಕೃತಿ ಪ್ರಸಾರ ಪ್ರಾರಂಭವಾಗುವುದಕ್ಕೆ ಮುಂಚೆಯೂ ಆಕೆಗೆ ಪ್ರಾರ್ಥನೆ ಮಾಡುವುದಕ್ಕೆ ಅನೇಕ ಸಂದರ್ಭಗಳಲ್ಲಿ ಕರೆ ಬಂದದುಂಟು. ಶಕುಂತಲಾಬಾಯಿ ಈ ಸಂದರ್ಭಗಳಲ್ಲಿ ಕುಮಾರವ್ಯಾಸ, ಲಕ್ಷ್ಮೀಶ, ರಾಘವಾಂಕ, ಹರಿಹರ ಮಹಾಕವಿಗಳ ಕಾವ್ಯಗಳಿಂದ ಧಾರಾಳವಾಗಿ ಆಯಾ ಕಾವ್ಯಗಳ ಪ್ರಾರಂಭದ ಪದ್ಯಗಳನ್ನು ಪ್ರಾರ್ಥನೆಗೆ ಉಪಯೋಗಿಸಿಕೊಳ್ಳತೊಡಗಿದರು. ಇದಕ್ಕೆ ಮುಂಚೆ ಪ್ರಾರ್ಥನೆಗೆ ತ್ಯಾಗರಾಜ ಕೃತಿಗಳನ್ನು ಹಾಡುವುದು ಪದ್ಧತಿಯಾಗಿತ್ತು. ದಿ|| ಶ್ಲೋಕ ಸಂಗೀತ ಕಳಲೆ ಸಂಪತ್ಕುಮಾರಾಚಾರ್ಯರು, ಅವರ ಕಾಲದಲ್ಲಿ ಪ್ರಾರ್ಥನೆಗೆ ತ್ಯಾಗರಾಜ ಕೃತಿಗಳಿಗೆ ಪ್ರತಿಯಾಗಿ ಪುರಂದರದಾಸರ ದೇವರನಾಮಗಳನ್ನು ಬಳಸಿಕೊಂಡುದುಂಟು. ಸಂಪತ್ಕುಮಾರಾಚಾರ್ಯರ ಅನಂತರ ಶಕುಂತಲಾಬಾಯಿ ಕನ್ನಡ ಪ್ರಾಚೀನ ಕಾವ್ಯ ಸಾಹಿತ್ಯವನ್ನೂ ಪ್ರಾರ್ಥನೆಗೆ ಬಳಸಿಕೊಳ್ಳುವ ಸಂಪ್ರದಾಯವನ್ನು ವಿಪುಲವಾಗಿ ಬಳಕೆಗೆ ತಂದರು.

ಸ್ವಾತಂತ್ರ್ಯ ನಮ್ಮ ರಾಷ್ಟ್ರಕ್ಕೆ ಬಂದು ಎರಡು ಮೂರು ವರ್ಷಗಳಾಗಿತ್ತು. ಆಚಾರ್ಯ ಜೀವತ್‌ರಾಮ್ ಭಗವಾನ್‌ದಾಸ್ ಕೃಪಲಾನಿ (ಜೆ. ಬಿ. ಕೃಪಲಾನಿ) ತಮ್ಮ ಪತ್ನಿ ಸುಚೇತ ಕೃಪಲಾನಿಯವರೊಡನೆ ಬೆಂಗಳೂರಿಗೆ ದಯಮಾಡಿಸಿದರು. ಬೆಂಗಳೂರು ಪೌರಸಭೆ ಕೃಪಲಾನಿ ದಂಪತಿಗಳಿಗೆ ಸನ್ಮಾನಸಭೆ ಕೂಡಿಸಿ ಮಾನಪತ್ರ ಅರ್ಪಿಸಿದ ಸಂದರ್ಭ. ಶಕುಂತಲಾಬಾಯಿಗೆ ಸನ್ಮಾನ ಸಭೆಯಲ್ಲಿ ಪ್ರಾರ್ಥನೆ ಮಾಡಬೇಕೆಂದು ಪೌರಸಭೆಯಿಂದ ಕರೆ ಬಂತು. ಆಹ್ವಾನವನ್ನು ಸ್ವೀಕರಿಸಿದರು. ನನಗಂತೂ ಶಕುಂತಲಾಬಾಯಿ ಕೃಪಲಾನಿ ದಂಪತಿಗಳ ಸನ್ಮಾನ ಸಭೆಯಲ್ಲಿ ಭಾಗವಹಿಸುತ್ತಿರುವುದು

ತುಂಬ ಹೆಮ್ಮೆಯ ವಿಷಯವಾಗಿತ್ತು. ಕಾರಣ, ನಾನು ಜೆ. ಬಿ. ಕೃಪಲಾನಿಯವರನ್ನು 1938ರಿಂದಲೂ ಬಹುವಾಗಿ ಮೆಚ್ಚಿಕೊಂಡಿದ್ದೆ. ಮೈಸೂರು ಕಾಂಗ್ರೆಸ್ 1938ರಲ್ಲಿ ತೀವ್ರವಾಗಿ ಜವಾಬ್ದಾರಿ ಸರಕಾರದ ಆಂದೋಲನವನ್ನು ಪ್ರಾರಂಭಿಸಿತು. ಭಾರತ ರಾಷ್ಟ್ರೀಯ ಮಹಾಸಭೆ (ನ್ಯಾಷನಲ್ ಇಂಡಿಯನ್ ಕಾಂಗ್ರೆಸ್) ತನ್ನ ಕಾರ್ಯದರ್ಶಿ ಯಾಗಿದ್ದ ಜೆ. ಬಿ. ಕೃಪಲಾನಿ ಮತ್ತು ಸಂಸ್ಥಾನಗಳ ವಿಷಯವಾಗಿ ತುಂಬ ಮಾಹಿತಿ ಯುಳ್ಳ ಪಟ್ಟಾಭಿ ಸೀತಾರಾಮಯ್ಯನವರನ್ನು ದಿವಾನ್ ಸರ್ ಎಂ. ಮಿರ್ಜಾ ಇಸ್ಮಾಯಿಲ್ ಸಾಹೇಬರ ಜೊತೆಗೆ ಮೈಸೂರು ರಾಜ್ಯದ ಜವಾಬ್ದಾರಿ ಚಳವಳಿ ವಿಷಯ ಚರ್ಚಿಸುವುದಕ್ಕಾಗಿ ಕಳಿಸಿಕೊಟ್ಟಿತು. ಆ ಸಮಯದಲ್ಲಿ ಬೆಂಗಳೂರಿನ ಚಿಕ್ಕಲಾಲ್ ಬಾಗ್ ಉದ್ಯಾನ ಪ್ರದೇಶದಲ್ಲಿ ಮೈಸೂರು ಕಾಂಗ್ರೆಸ್ ಕೃಪಲಾನಿ ಮತ್ತು ಪಟ್ಟಾಭಿ ಸೀತಾರಾಮಯ್ಯನವರನ್ನು ಸೇರಿಸಿ ಒಂದು ಬೃಹತ್ಸಭೆ ಕರೆಯಿತು. ಸುಮಾರು 7 ಗಂಟೆಯ ಸಂಜೆಯಲ್ಲಿ ಪ್ರಾರಂಭವಾಗಬೇಕಾಗಿದ್ದ ಸಭೆ ಪ್ರಾರಂಭವಾದದ್ದು 9 ಗಂಟೆ ರಾತ್ರಿ ಯಲ್ಲಿ. ಮುಗಿದದ್ದು ಸರಿರಾತ್ರಿಯಲ್ಲಿ. ಜನ ಮಹಾಸಾಗರದಂತೆ ಉದ್ಯಾನ ಪ್ರದೇಶವನ್ನು ಆಕ್ರಮಿಸಿತ್ತು. ಉದ್ಯಾನದ ದಂಡೆಯ ಮೇಲೂ ಜನ, ಜನ, ಜನ, ಜನಸಾಗರ.

ಮೈಸೂರು ಸರಕಾರದೊಡನೆ ಮಾತುಕಥೆ ಮುಗಿಸಿ ಬರುವುದಕ್ಕೆ ನಮ್ಮ ಈ ಇಬ್ಬರು ಮಹಾನಾಯಕರುಗಳಿಗೆ ಬಹಳ ಹೊತ್ತು ಬೇಕಾಯಿತು. ಪಟ್ಟಾಭಿ ಸೀತಾರಾಮಯ್ಯ ಬ್ರಿಟಿಷ್ ಸರಕಾರ ಸಾಕಿ ಸಲಹಿದ ಪಟ್ಟ ಶಿಶುಗಳಾದ ದೇಶೀಯ ಸಂಸ್ಥಾನಗಳ ಬೆಳವ ಣಿಗೆಯನ್ನು ಬಹು ದೀರ್ಘವಾಗಿ ಪ್ರಸ್ತಾಪಿಸಿದರು. “ಕಾಂಗ್ರೆಸ್ ಇತಿಹಾಸ”ವೆಂಬ ಬೃಹದ್ಗ್ರಂಥವನ್ನು ಬರೆದ ಮಹಾಇತಿಹಾಸಕಾರ ಪಟ್ಟಾಭಿ ಸೀತಾರಾಮಯ್ಯನವರ ದೇಶೀಯ ಸಂಸ್ಥಾನಗಳ ಇತಿಹಾಸ ಪ್ರಜ್ಞೆ ನಮ್ಮಲ್ಲಿ ರೋಮಾಂಚನವನ್ನುಂಟು ಮಾಡಿತು. ಅನಂತರ ಜೆ. ಬಿ. ಕೃಪಲಾನಿಯವರೆದ್ದರು. ಅವರು ಇತಿಹಾಸ ಮತ್ತು ಅರ್ಥಶಾಸ್ತ್ರ ಪಾರಂಗತರು. ಮುಂಬಯಿ, ಕರಾಚಿ ಮತ್ತು ಪುಣೆಗಳ ಕಾಲೇಜುಗಳಲ್ಲಿ ಅಧ್ಯಾಪಕರಾಗಿದ್ದು ಗಾಂಧಿ ಚಳುವಳಿಯಲ್ಲಿ ದುಮುಕಿದವರು. ತರ್ಕಬದ್ಧವಾಗಿ ಮೈಸೂರು ಚಳವಳಿಯ ಆಗುಹೋಗುಗಳನ್ನು ಒಂದು ಗಂಟೆಯ ಕಾಲ ದೀರ್ಘವಾಗಿ ವಿವರಿಸಿದರು. ನಾನು ಇವರಿಬ್ಬರುಗಳ ವಿಚಾರ ಸರಣಿಗಳಿಗೆ ಮಾರುಹೋದೆ. ಇವರುಗಳ ಮಹಾಭಿಮಾನಿಯಾದೆ. ಸಭೆ ಮುಗಿದು ನಾನು ಮನೆಗೆ ಹೋದಾಗ ಸರಿರಾತ್ರಿ 12 ಗಂಟೆ ಮೀರಿ ಮಾರನೆಯ ದಿನದ ಉದಯವಾಗಿತ್ತು.

ಶಕುಂತಲಾಬಾಯಿ ಸಭೆಗೆ, ಶ್ರೋತೃಗಳಿಗೆ, ಹೊಂದುವಂತೆ ಪ್ರಾರ್ಥನೆಯ ವಿಷಯವನ್ನು ಆರಿಸಿಕೊಳ್ಳುತ್ತಿದ್ದರು. ಸಾಹಿತ್ಯ ಸಂಸ್ಕೃತಿ ವೈಶಿಷ್ಟ್ಯದ ಸಭೆ ಸಮ್ಮೇಳನ ಗಳಾದರೆ ಕಾವ್ಯಗಳಿಂದ ರಾಜಕೀಯ ಧುರೀಣರುಗಳ ಸಭೆ ಸಮ್ಮೇಳನಗಳಾದರೆ, ದೇಶಭಕ್ತಿಯ ಕನ್ನಡಭಾವಗೀತೆಗಳಿಂದ ಸಾಹಿತ್ಯ ಆರಿಸಿಕೊಂಡು ಪ್ರಾರ್ಥನೆ ಮಾಡು ತ್ತಿದ್ದರು. ಪ್ರಚಾರಭಾವವೂ ಅವುಗಳಲ್ಲಿ ಇರುತ್ತಿತ್ತು. ಜಾಣ ಚಾಣಾಕ್ಷಬುದ್ಧಿಯ ಶ್ರೋತೃಗಳು ಶಕುಂತಲಾಬಾಯಿಯ ಜಾಣನ್ನು ಅರ್ಥಮಾಡಿಕೊಳ್ಳುತ್ತಿದ್ದರು.

ಕೃಪಲಾನಿ ದಂಪತಿಗಳ ಸನ್ಮಾನ ಸಭೆಯಲ್ಲಿ ಶಕುಂತಲಾಬಾಯಿ ದೇಶಭಕ್ತಿಯ ಒಂದು ಕನ್ನಡ ಭಾವಗೀತೆಯನ್ನು ಆರಿಸಿಕೊಂಡಿದ್ದರು. ಯಾರದೆಂದು ಮರೆತಿದ್ದೇನೆ.

ವಿನೋಬಾಜಿ, ಗಾಂಧೀಜಿ ಬಯಸಿದ್ದ ಸರ್ವೋದಯ ಚಳವಳಿಯ ಯಜ್ಞ ದೀಕ್ಷಿತರಾದರು. ಜಯಪ್ರಕಾಶನಾರಾಯಣರು ವಿನೋಬಾಜಿಯ ಚಳವಳಿ ಸೇರಿಕೊಂಡರು. 1959ರಲ್ಲಿ ಪ್ರಚಾರಕ್ಕಾಗಿ ಅವರು ತಮ್ಮ ಪತ್ನಿ ಪ್ರಭಾವತಿಯೊಡನೆ ಕರ್ಣಾಟಕ ಯಾತ್ರೆ ಕೈಗೊಂಡರು. ಬೆಂಗಳೂರಿಗೆ ಬಂದರು. ಅವರ ಸಮ್ಮುಖದಲ್ಲೂ ಶಕುಂತಲಾಬಾಯಿ ಪ್ರಾರ್ಥನೆ ಮಾಡಿ, ಜಯಪ್ರಕಾಶ್ ನಾರಾಯಣ್ ದಂಪತಿಗಳಿಗೆ ತಮ್ಮ ಭಕ್ತಿ ಕಾಣಿಕೆ ಅರ್ಪಿಸಿದರು. ಜಯಪ್ರಕಾಶ ನಾರಾಯಣರು, ಮುಂದೆ ಲೋಕನಾಯಕರಾಗಿ **"ಸಂಪೂರ್ಣ ಕ್ರಾಂತಿಯಜ್ಞ"** ಅಧ್ವರ್ಯುವಾಗಿ, ರಾಷ್ಟ್ರಕ್ಕೆ ಬಲಿದಾನ ಅರ್ಪಿಸಿದ್ದು ಯಾರಿಗೆ ಗೊತ್ತಿಲ್ಲ. ?

ಸಾಹಿತ್ಯ ಸಂಸ್ಕೃತಿ ಪ್ರಸಾರ ಕಾಲದಲ್ಲಂತೂ ಪ್ರಾರ್ಥನೆಗೆ ಶಕುಂತಲಾಬಾಯಿ ಕುವೆಂಪು, ಮಾಸ್ತಿ, ಬೇಂದ್ರೆ ಮೊದಲಾದ ಪ್ರಖ್ಯಾತ ಕವಿವರ್ಯರ ಭಾವಗೀತೆಗಳನ್ನು ಧಾರಾಳವಾಗಿ ಉಪಯೋಗಿಸಿಕೊಂಡರು. ಜನಕ್ಕೆ ಆ ಭಾವಗೀತೆಗಳು ಹೊಸದು. ಅಪರೂಪವಾದವುಗಳು ಆ ಕಾರಣ, ಕಿವಿಗಳನ್ನು ತೆರೆದು, ಮನವಿಟ್ಟು ಕೇಳುತ್ತಿದ್ದರು. ಜನವನ್ನು ನಿಶ್ಯಬ್ದ ಗೊಳಿಸುವುದಕ್ಕಾಗಿ ಪ್ರಾರ್ಥನೆಯ ಸಾಹಿತ್ಯಕ್ಕೆ ಬಳಸಿಕೊಳ್ಳುವ ರಾಗದಲ್ಲಿ ಒಂದೆರಡು ನಿಮಿಷ ಆಲಾಪನೆ ಮಾಡಿ ಅನಂತರ ಸಾಹಿತ್ಯವನ್ನು ಹಾಡುವುದಕ್ಕೆ ತೊಡಗುತ್ತಿದ್ದರು.

1954–55 ಇರಬಹುದು, ಬೆಂಗಳೂರಿನಲ್ಲಿ ಈಗ ಕಾವೇರಿ ಕಾಂಪ್ಲೆಕ್ಸ್ ಭವ್ಯ ಕಟ್ಟಡವಿದ್ದೆಡೆಯಲ್ಲಿ ಬೆಂಗಳೂರು ಜಿಲ್ಲಾ ಕಛೇರಿಗಳ ಕಟ್ಟಡದ ಆವರಣದಲ್ಲಿ, ಅಲ್ಲಿ ಒಂದು ಸುಂದರ ಶಾಮಿಯಾನ ಚಪ್ಪರದಲ್ಲಿ, ಮೈಸೂರು ರಾಜ್ಯಪಾಲರಾಗಿದ್ದ ಶ್ರೀ ಜಯಚಾಮರಾಜಒಡೆಯರ್ ಬಹದ್ದೂರ್ ಅವರ ಅಧ್ಯಕ್ಷತೆಯಲ್ಲಿ ಸಾಹಿತ್ಯ ಸಂಸ್ಕೃತಿ ಪ್ರಸಾರ ಸಭೆ ನಡೆಯಿತು. ಶಕುಂತಲಾಬಾಯಿಯನ್ನು ಪ್ರಾರ್ಥನೆಗೂ, ಗಮಕಿ ಎಂ. ಎಸ್. ಚಂದ್ರಶೇಖರಯ್ಯನವರನ್ನು ಕಾವ್ಯವಾಚನಕ್ಕೂ ಕರೆದಿದರು. ಈ ವಿದ್ವತ್ಪೂರ್ಣವಾದ ಸಭೆಯಘನತೆಗೆ ತಕ್ಕಂತೆ ಬೇಲೂರು ಶಾಸನದ ಲೋಕ ಪ್ರಸಿದ್ಧ ಸಂಸ್ಕೃತ ಶ್ಲೋಕವನ್ನು ಆರಿಸಿಕೊಂಡಿದ್ದರು ಪ್ರಾರ್ಥನೆಗೆ.

ಯಂ ಶೈವಾಸ್ಸಮುಪಾಸತೇ ಶಿವ ಇತಿ
ಬ್ರಹ್ಮೇತಿ ವೇದಾಂತಿನೋ ।
ಬೌದ್ಧಾ ಬುದ್ಧ ಇತಿ ಪ್ರಮಾಣ ಪಟವಃ
ಕರ್ತೇತಿ ನೈಯ್ಯಾಯಿಕಾಃ ॥
ಅರ್ಹನ್ನಿತ್ಯಥ ಜೈನ ಶಾಸನ ರತಾಃ
ಕರ್ಮೇತಿ ಮೀಮಾಂಸಕಾಃ ।
ಸೋಯಂವೋ ವಿದಧಾತು ವಾಂಛಿತ
ಫಲಂ ತ್ರೈಲೋಕ್ಯ ನಾಥೋ ಹರಿಃ ॥

ಈ ಸುಪ್ರಸಿದ್ಧ ಶಾಸನದ ಶ್ಲೋಕದ ಜೊತೆಗೆ, ಇದೇ ಭಾವಾರ್ಥ ಕೊಡುವ "ಶ್ರೀನಿವಾಸ" (ಮಾಸ್ತಿ) ರ "ಯಾವ ರೂಪದೊಳು ನಿನ್ನನು ಪೂಜಿಸಿದೊಡೇನು" ಎಂಬ ಭಾವಗೀತವನ್ನೂ ಸೇರಿಸಿಕೊಂಡಿತ್ತು.

ಯಾವ ರೂಪದೊಳು ನಿನ್ನನು
ಪೂಜಿಸಿದೊಡೇನು ॥ಪ॥
ಯಾವನಾಮದಿ ನಿನ್ನ ಕರೆದೊಡೇನು ॥ಅನು॥

ಚೆನ್ನಕೇಶವ ನೀನು ಶ್ರೀನಿವಾಸನು ನೀನು ।
ಸನ್ನುತ ಪಿತಾಮಹಮಹೇಶ್ವರನು ನೀನು ।
ಪೊನ್ನವೆಟ್ಟನ ಮೇಲೆ ವಿಹರಿಸುವರೆಂದೆನುವ ।
ಮುನ್ನೂರ ಮೂವ್ವತ್ತುಕೋಟಿ ದೇವರು ನೀನು॥೧॥

ದೇಶಾಂತರಂಗಳಲಿ ನೂರಾರು ಕಾಲದಲಿ
ಸಾಸಿರಾರು ಹೆಸರನ್ನಿಟ್ಟು ಕರೆದು
ದೇಶದೇಶದ ಜನರು ಗೆಯ್ದ ಪೂಜೆಗಳು
ಜಗದೀಶ ನಿನ್ನಡಿಗಳನು ಸೇರಿದವಲೆ ॥೨॥

ಜೀವಕೋಟಿಗಳ ಮನದಾಸೆಗಳನನುಕರಿಸಿ
ಭಾವ ಭೇದಕೆ ತಕ್ಕ ರೂಪಗಳ ತಳೆದು
ಸಾಸಿರಾರು ನಾಮಗಳನು ಪೊತ್ತು
ಎಲ್ಲರ ಸೇವೆಯನು ಕೊಳುವವನು ಓರ್ವ ನೀನು ॥೩॥

ನಮ್ಮ ರಾಜ್ಯದ ರಾಜ್ಯಪಾಲ ಶ್ರೀಮದ್ ಜಯಚಾಮರಾಜ ಒಡೆಯರ ಅಧ್ಯಕ್ಷತೆಯಲ್ಲಿ ಮಾಡಿದ ಪ್ರಾರ್ಥನೆ ತುಂಬ ಯಶಸ್ವಿಯಾಯಿತು. ರಾಜ್ಯಪಾಲರು ತುಂಬ ಮೆಚ್ಚಿಕೊಂಡರು. ಶ್ರೋತೃಗಳು ಹರ್ಷಿತರಾದರು. ಜನ ಈ ಪ್ರಾರ್ಥನೆಯನ್ನು ಜ್ಞಾಪಕದಲ್ಲಿಟ್ಟುಕೊಂಡಿದ್ದಾರೆಂಬುದಕ್ಕೆ ಸಾಕ್ಷಿಯೋ ಎಂಬಂತೆ 1959ರಲ್ಲಿ ಇನ್ನೊಮ್ಮೆ ಶಕುಂತಲಾಬಾಯಿ "ಯಂಶೈವಾಸ್ಸಮುಪಾಸತೆ" ಮತ್ತು "ಯಾವ ರೂಪದೊಳು ನಿನ್ನನ್ನು ಪೂಜಿಸಿದೊಡೇನು" ಕೃತಿಗಳನ್ನೇ ಬಳಸಿ ಪ್ರಾರ್ಥನೆ ಮಾಡಬೇಕೆಂದು ಕರೆಬಂತು.

ನಮ್ಮ ರಾಷ್ಟ್ರದ ಪ್ರಧಾನಿಯಾಗಿರುವ ಇಂದಿರಾಗಾಂಧಿ 1959ರಲ್ಲಿ ನ್ಯಾಷನಲ್ ಇಂಡಿಯನ್ ಕಾಂಗ್ರೆಸ್ ಅಧ್ಯಕ್ಷಿಣಿಯಾದರು. ಆ ವರ್ಷ ಅವರು ಬೆಂಗಳೂರಿಗೆ ದಯಮಾಡಿಸಿದರು. ನಮ್ಮ ರಾಜ್ಯದ ರಾಜಧಾನಿಯ ಮಹಿಳಾ ಮಣಿಗಳು ಇಂದಿರಾಗಾಂಧಿಯವರಿಗೆ ಒಂದು ಸನ್ಮಾನ ಸಮಾರಂಭವನ್ನೇರ್ಪಡಿಸಿದರು. ಸರ್ ಕೆ. ಪಿ. ಪುಟ್ಟಣ್ಣಶೆಟ್ಟಿ ಟೌನ್‌ಹಾಲ್ ಸಭಾಂಗಣದಲ್ಲಿ ಭರ್ಜರಿ ಸಮಾರಂಭ. ಶಕುಂತಲಾಬಾಯಿಗೆ ಪ್ರಾರ್ಥನೆ ಮಾಡಬೇಕೆಂದು ಕರೆ. ರಾಜ್ಯಪಾಲ ಶ್ರೀ ಜಯಚಾಮರಾಜ ಒಡೆಯರ್ ಅವರ ಘನ ಅಧ್ಯಕ್ಷತೆಯಲ್ಲಿ ನಡೆದ ಸಾಹಿತ್ಯ ಸಂಸ್ಕೃತಿ ಸಭೆಯಲ್ಲಿ ಮಾಡಿದ್ದ ಪ್ರಾರ್ಥನೆಯನ್ನೇ ಇಲ್ಲೂ ಮಾಡಬೇಕೆಂದು ಒತ್ತಾಯ. ಶಕುಂತಲಾಬಾಯಿ ಸಮಾರಂಭದಲ್ಲಿ ಭಾಗವಹಿಸಿ ಪ್ರಾರ್ಥನೆ ಕಾರ್ಯಕ್ರಮ ನಡೆಸಿಕೊಟ್ಟರು. ಇಂದಿರಾಗಾಂಧಿಯವರಿಗೆ

ಪ್ರಾರ್ಥನೆ ಕೃತಿಗಳ ಸಾರಾಂಶವನ್ನು ಕಾರ್ಯಕರ್ತರು ವಿವರಿಸುತ್ತಿದ್ದರು. ನಮಗೆ ಸಂತೋಷ, ನಮ್ಮ ರಾಜ್ಯದ ಸಂಸ್ಕೃತಿ ವೈಶಾಲ್ಯ ಮನೋಭಾವ ರಾಷ್ಟ್ರ ಮಟ್ಟದ ಕಿವಿಗೆ ಮುಟ್ಟಿತಲ್ಲ, ಎಂದು. "ಯಂಶೈವಾಸ್ಸಮುಪಾಸತೆ" ಹಾಗೂ "ಯಾವ ರೂಪದೊಳು" ರಾಷ್ಟ್ರಮಟ್ಟದಿಂದ ಅಂತರರಾಷ್ಟ್ರೀಯ ಮಟ್ಟಕ್ಕೂ ಮುಟ್ಟುವ ಸದವಕಾಶ ಒಂದೆರಡು ವರ್ಷಗಳಲ್ಲಿಯೇ ಪ್ರಾಪ್ತಯಾಯಿತು.

ನಮ್ಮ ರಾಷ್ಟ್ರದ ನೆರೆಯ ಖಂಡವಾದ ಆಫ್ರಿಕಾದಲ್ಲಿ ಪ್ರಾಚೀನ ಸಂಸ್ಕೃತಿಯನ್ನು ಮಹಾ ಅಟ್ಟಹಾಸದಿಂದ ಮೆರೆದ ಈಜಿಪ್ಟ್ ಪ್ರಭುತ್ವಾಧ್ಯಕ್ಷ, ನಾಸರ್ ಅವರು, 1970ರಲ್ಲಿ ಭಾರತಕ್ಕೆ ದಯಮಾಡಿಸಿದರು. ನಮ್ಮ ರಾಜ್ಯಕ್ಕೂ ಆಗಮಿಸಿದರು. ಬೆಂಗಳೂರಿನಲ್ಲಿ ವಿಧಾನಸೌಧದ ವೈಭವಪೂರಿತ ಸತ್ಕಾರದ ಸಭಾಂಗಣದಲ್ಲಿ ಅವರಿಗೆ ಅಭೂತಪೂರ್ವ ಸನ್ಮಾನ ಸಮಾರಂಭ. ನಮ್ಮ ನಗರ ಸಭೆಯ ಪ್ರಪ್ರಥಮ ಮಹಿಳಾ ನಗರಪಿತೃ (ಮೇಯರ್) ಆದ ಇಂದಿರಮ್ಮನವರೇ ಮುಂಚೂಣಿಯ ಮಹಾ ನಾಯಕಿ. ಆಕೆ ನಮ್ಮ ರಾಜ್ಯದ ಶಿಕ್ಷಣ ಇಲಾಖೆಯಲ್ಲಿ ಸಹಾಯಕ ನಿರ್ದೇಶಕರಾಗಿ, ದಕ್ಷರಾದ ಆಡಳಿತಾಧಿಕಾರಿಯೆಂದು ಹೆಸರು ಗಳಿಸಿ ನಿವೃತ್ತರಾದವರು. ಅನಂತರ ಪೌರಸಭಾಡಳಿತ ಚುನಾವಣೆಗೆ ಹುರಿಯಾಳಾಗಿ ನಿಂತು ವಿಜಯಗಳಿಸಿ, ಮೇಯರ್ ಸ್ಥಾನಕ್ಕೂ ಸ್ಪರ್ಧಿಸಿ ಅದರಲ್ಲೂ ಜಯಗಳಿಸಿದ, ಪ್ರತಿಷ್ಠಿತ ಮಹಿಳೆ. ನಮ್ಮ ಮೇಲೆ ಅವರಿಗೆ ಪ್ರೀತಿ. ಶಕುಂತಲಾಬಾಯಿಗೆ ಪ್ರಾರ್ಥನೆಮಾಡಬೇಕೆಂದು ಹೇಳಿಕಳಿಸಿದರು. ಸರ್ವಧರ್ಮ ಸಮನ್ವಯವನ್ನು ಬೋಧಿಸುವ "ಯಂಶೈವಾಸ್ಸಮುಪಾಸತೆ" ಮತ್ತು "ಯಾವ ರೂಪದೊಳು" ಕೃತಿಗಳನ್ನೇ ಪ್ರಾರ್ಥನೆಗೆ ಉಪಯೋಗಿಸಿಕೊಳ್ಳ ಬೇಕೆಂದೂ ಸೂಚಿಸಿದ್ದರು. ಶಕುಂತಲಾಬಾಯಿ ಈಜಿಪ್ಟ್ ಅಧ್ಯಕ್ಷರ ಸತ್ಕಾರ ಸಮಾರಂಭದಲ್ಲಿ ಭಾಗವಹಿಸಿ ಪ್ರಾರ್ಥನೆ ಮಾಡಿದರು.

ಮಾಸ್ತಿಯವರ ''ಅರ್ಪಣ'' ಭಾವಗೀತೆಯ ಪ್ರಭಾವ

1960ರಲ್ಲಿ ನೀಲಂ ಸಂಜೀವರೆಡ್ಡಿ ನ್ಯಾಷನಲ್ ಕಾಂಗ್ರೆಸ್ ಅಧ್ಯಕ್ಷರಾದರು. ಬೆಂಗಳೂರಲ್ಲಿ ಸದಾಶಿವ ನಗರದಲ್ಲಿ ಅಖಿಲಭಾರತ ಕಾಂಗ್ರೆಸ್ ಸಮ್ಮೇಳನ ನಡೆಯಿತು. ಆ ಸಮಯದಲ್ಲಿ ಅಖಿಲಭಾರತ ವಸ್ತುಪ್ರದರ್ಶನ ವೇರ್ಪಟ್ಟಿತು. ಅದರ ಮುಕ್ತಾಯ ಸಮಾರಂಭದ ಅಧ್ಯಕ್ಷತೆಯನ್ನು ವಿಶಾಲ ಮೈಸೂರು ರಾಜ್ಯದ ರಾಜ್ಯಪಾಲರಾದ ಶ್ರೀಮದ್ ಜಯಚಾಮರಾಜಒಡೆಯರು ವಹಿಸಿದ್ದರು. ಈಗಲೂ ಶಕುಂತಲಾಬಾಯಿಗೆ ಪ್ರಾರ್ಥನೆ ಮಾಡಬೇಕೆಂದು ಕರೆಬಂತು. ನಮ್ಮ ರಾಜ್ಯಪಾಲರು ವೇದಾಂತದಲ್ಲಿ ವಿಶೇಷಾಸಕ್ತಿಯುಳ್ಳವರು, ಸನಾತನ ಧರ್ಮಪ್ರಿಯರು, ವಿದ್ವಾಂಸರೆಂದು ನಮಗೆ ಚೆನ್ನಾಗಿ ಮನದಟ್ಟಾಗಿತ್ತು. ಆದುದರಿಂದ ಕಾಂಗ್ರೆಸ್ ವಸ್ತುಪ್ರದರ್ಶನ ಮುಕ್ತಾಯ ಸಮಾರಂಭದಲ್ಲಿ ರಾಜ್ಯಪಾಲರಿಗೆ ಇಷ್ಟವಾಗುವಂಥ ಕನ್ನಡ ಭಾವಗೀತೆಯನ್ನೆ ಆರಿಸಿಕೊಳ್ಳಬೇಕೆಂದು ಶಕುಂತಲಾಬಾಯಿ ಮನಸ್ಸುಮಾಡಿದರು. ಮಾಸ್ತಿ ವೆಂಕಟೇಶ ಅಯ್ಯಂಗಾರ್ ತಮಗೆ ಅರವತ್ತು ವರ್ಷ ತುಂಬಿದ ನೆನಪಿಗಾಗಿ "ಮನವಿ" ಯೆಂಬ

ಒಂದು ತಮ್ಮ ಭಾವಗೀತೆಗಳ ಸಂಗ್ರಹವನ್ನು ಪ್ರಕಟಿಸಿದರು. ಅದರಲ್ಲಿ "ಅರ್ಪಣ" ಎಂಬ ಭಾವಗೀತೆ ನಮ್ಮಿಬ್ಬರ ಮನಸ್ಸುಗಳನ್ನು ಆಕರ್ಷಿಸಿತು. ಅಧ್ಯಕ್ಷರ ಘನತೆಗೆ, ಸಭಾ ಘನತೆಗೆ, ತಕ್ಕ ಜೊಕ್ಕ ಭಾವಗೀತೆ, ಪ್ರಾರ್ಥನೆಗೂ ಬಹುಯೋಗ್ಯವಾಗಿದೆ ಯೆಂದು ಇಬ್ಬರಿಗೂ ತೃಪ್ತಿ.

ಶಕುಂತಲಾಬಾಯಿ "ಅರ್ಪಣ" ಭಾವಗೀತೆಯನ್ನು "ಶಂಕರಾಭರಣ" ರಾಗದಲ್ಲಿ ಹಾಡಿದರು. ಪ್ರಾರಂಭದಲ್ಲಿ ರಾಗಛಾಯೆ ಹಿಡಿದು ಆಲಾಪನೆ ಮಾಡಿ, ಸಾಹಿತ್ಯವನ್ನು ಮನೋಜ್ಞವಾಗಿ ತಾಳ ಲಯ ಗತಿ ಹಿಡಿದು, ಗಮಕದ ಬಿಗುವುಗತ್ತುಗಳನ್ನು ಮೂಡಿಸಿ ದರು.

ನೀನೇ ಗತಿ ನೀನೇ ದಾರಿ ನೀನೇ ಗಮನದ ಕೊನೆಯು
ನೀನೇ ಗಮನದ ಮೊದಲು ನೀನೇ ಗಮನೋದ್ಯಮಿಯು
ನೀನೇ ಗಮನದೊಳೆಲ್ಲವ ಪ್ರೇಮಿಸಿವಾ ಆದಿ ಚೇತನ
ನೀನೇ ಸರ್ವವು ಎಂಬುದನರಿಯಲಿ ಈ ಆತ್ಮ ಹರಿಯೆ.

ನೀನೇ ಈ ಅಖಿಲ ಜಗದಿ ಜೀವಿಸುತಿಹ ಜೀವಕೋಟಿ
ನೀನೇ ಜೀವಿಗಳ ಜೀವದಾಂತರ್ಯದ ಜೀವತತ್ವ
ನೀನೇ ಜೀವನು ಜೀವಿಪ ಜೀವನವೂ ಅದರ ಫಲವು
ನೀನೇ ಸಕಲವು ಎಂಬುದನರಿಯಲಿ ಈ ಆತ್ಮ ಹರಿಯೆ

ನೀನೇ ಲೋಕದಿ ತೋರುವ ಸಕಲ ರೂಪರಸಗಂಧವು
ನೀನೇ ಈ ಗಂಧರೂಪರಸಗಳನರಿಯುವ ಮನವು
ನೀನೇ ರಸಗಂಧ ರೂಪದನುಭವದಂತ್ಯದ ಫಲವು
ನೀನೇ ಸಕಲವು ಎಂಬುದನರಿಯಲಿ ಈ ಆತ್ಮ ಹರಿಯೆ

ನಿನ್ನೊಳೆಲ್ಲ ಮೊದಲಾದುದು ನಿನ್ನೊಳೆಲ್ಲ ನಿಂದಿಹುದು
ನಿನ್ನೊಳಯಸ್ಕಾಂತದಲ್ಲಿ ರೇಣು ರೇಣು ಎಂತು ಅಂತೆ
ನಿನ್ನ ಕಳೆಯನೊಂದಿ ಎಲ್ಲ ಅಮರವಾಗಿ ಇರುವ ಹದನ
ಚೆನ್ನಕೇಶವಾ ಅರಿಯುತೆ ನೆಮ್ಮದಿಯನು ಕಾಣಲಾತ್ಮ

ರಾಜ್ಯಪಾಲರಿಗೆ ಹೃದಯವರಳಿತ್ತು. ಭಾವಗೀತದ ರಚನೆ ಮಾಸ್ತಿ ವೆಂಕಟೇಶ ಅಯ್ಯಂ ಗಾರ್ಯರೆಂದು ಕೇಳಿತಿಳಿದುಕೊಂಡ ಮೇಲಂತೂ ಅವರ ಸಂತೋಷ ಇಮ್ಮಡಿಸಿತು. ಸಭೆ ಮುಗಿದ ಮೇಲೆ ಅವರ ಸಮೀಪದಲ್ಲಿದ್ದವರು ನಮ್ಮೆಡೆಗೆ ಬಂದು, ರಾಜ್ಯಪಾಲರು ತುಂಬ ಸಂತೋಷಪಟ್ಟರೆಂದು ತಿಳಿಸಿದರು.

ಒಂದೆರಡು ತಿಂಗಳು ಕಳೆದಿರಬಹುದು. ಕರ್ನಾಟಕ ಕಾಂಗ್ರೆಸ್ ಧುರೀಣ ಹಳ್ಳೀ ಕೇರಿಯವರು ಗ್ರಾಮೋದ್ಯೋಗಿಗಳ ಒಂದು ಸಭೆಯನ್ನು ಕರೆದಿದ್ದರು. ಅವರು ಶಕುಂತಲಾ ಬಾಯಿಗೆ ಪ್ರಾರ್ಥನೆ ಮಾಡಬೇಕೆಂದು ಹೇಳಿಕಳಿಸಿದರು. ಅಖಿಲ ಭಾರತ ಕಾಂಗ್ರೆಸ್

ವಸ್ತು ಪ್ರದರ್ಶನದ ಮುಕ್ತಾಯ ಸಮಾರಂಭದಲ್ಲಿ ಮಾಡಿದ ಪ್ರಾರ್ಥನೆಯನ್ನೇ ಇಲ್ಲೂ ಮಾಡಬೇಕೆಂದು ಒತ್ತಾಯಿಸಿದ್ದರು.

21-5-1964ರಲ್ಲಿ ಬೆಂಗಳೂರುನಗರ ಕಾವೇರಿ ನೀರು ಪೂರೈಕೆ ಮತ್ತು ನೈರ್ಮಲ್ಯಗಳ ಕಾರ್ಯಾರಂಭ ಮಹೋತ್ಸವ. ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷರಾಗಿದ ಕುಮಾರ ಸ್ವಾಮಿ (ಕೆ.) ಕಾಮರಾಜ್ ಅವರು ಸಭಾಧ್ಯಕ್ಷರಾಗಿದ್ದರು. ಪ್ರಧಾನಿ ಜವಾಹರಲಾಲ್ ನೆಹ್ರೂ ಮಂತ್ರಿಮಂಡಲದಲ್ಲಿ ಗೃಹ ಸಚಿವರಾಗಿದ್ದ ಲಾಲ್‌ಬಹದ್ದೂರ್ ಶಾಸ್ತ್ರಿಯವರು ಅಸ್ತಿಭಾರ ಶಿಲೆಯದ್ನು ಸ್ಥಾಪಿಸಿದರು. ಈ ಸಮಯದಲ್ಲೂ ಶಕುಂತಲಾಬಾಯಿಯೇ ಪ್ರಾರ್ಥನೆ ಮಾಡುವುವಕ್ಕೆ ಆಹ್ವಾನಿತರಾಗಿದ್ದರು.

ಸಮಾರಂಭದ ಅಧ್ಯಕ್ಷರು ಅಪ್ರತಿಮ ರಾಷ್ಟ್ರೀಯವಾದಿ. ಲಾಲ್‌ಬಹದ್ದೂರ್‌ಶಾಸ್ತ್ರಿ ಮಹಾ ಪ್ರಾಮಾಣಿಕರು. ಅಂತಃಶುದ್ಧಿಯುಳ್ಳ ವ್ಯಕ್ತಿ. ರೈಲ್ವೆ ಅಪಘಾತವಾಯಿತೆಂದು ಕೇಳಿ ತಮ್ಮ ರೈಲು ಮಂತ್ರಿತ್ವಕ್ಕೆ ರಾಜೀನಾಮೆ ಕೊಟ್ಟಂಥ ನಿಸ್ವಾರ್ಥ ಧ್ಯೇಯವಾದಿ. ಈ ದೇಶಪ್ರೇಮಿ ರಾಷ್ಟ್ರೀಯ ಮಹಾಪುರುಷರ ಸಭೆಯಲ್ಲಿ ಅಂಥದೇ ಮಹತ್ವವುಳ್ಳ ದೇಶ ಭಕ್ತಿಯ ಗೀತಗಳನ್ನು ಪ್ರಾರ್ಥನೆಗೆ ಆರಿಸಿಕೊಳ್ಳಬೇಕೆಂದು ಶಕುಂತಲಾಬಾಯಿ ಆಶಿಸಿದರು. ನಾನು ಹಿರಿಯ ಸಾಹಿತಿ ಪೂಜ್ಯ ಡಿ. ವಿ. ಜಿ. ಅವರು ರಚಿಸಿದ್ದ "ಸ್ವತಂತ್ರ ಭಾರತದ ಅಭಿನಂದನಸ್ತವ" ವೃತ್ತಪದ್ಯ ಪ್ರಬಂಧದ ಮೇಲೆ ಕಣ್ಣಾಡಿಸಿದೆ. ಸಭೆಯ ಘನತೆಗೆ ಸರಿಯಾಗಿದೆ ನನ್ನ ಆಯ್ಕೆ ಎಂದು ನನಗೆ ತೃಪ್ತಿಯಾಯಿತು. ಶಕುಂತಲಾ ಬಾಯಿಗೂ ಸಂತೋಷವಾಯಿತು ನನ್ನ ಆಯ್ಕೆ.

ಶ್ರೀರಸ್ತು ಸ್ವಸ್ತಿಮಾತೇ ಜಗದಖಿಲಹಿತೇ ದಿವ್ಯತೇಜೋವಿಭೂತೇ ।
ಪೌರಾಣೀ ಪುಣ್ಯವಾಣೀ ಬಹುಕುಲಜನನೀ ಬ್ರಹ್ಮವಿಜ್ಞಾನದಾನೀ ॥
ಪೌರಕ್ರಾಂತಿಯೇಗಳ್ ಪರಿದುದು ಗೆಲಿದಾ ಭಾರತೀ ರಾಜ್ಞಿಯಾಗೀ ।
ಸ್ವೈರಾಧೀಶತ್ವಸಿಂಹಾಸನದಿ ವಿಜಯಿಸಾ ಧರ್ಮದೀಕ್ಷಾಪ್ರಶಸ್ತೇ ॥

ಮನು ಮಾಂಧಾತ ಭಗೀರಥಾದಿ ನೃಪರಿಂ ಸಂಸೇವ್ಯಳಾದಂಬೆ ನೀಂ ।
ತನಯರ್ ಸಂಸ್ಕೃತರಾಗಲೆಂದೆ ಬಹುಕಾಲಂ ದಾಸ್ಯಮಂ ಪೊತ್ತೆಯೇಂ ॥
ಜನತಾರಾಜ್ಯಮಭೂತಪೂರ್ವ ಸುಕೃತಂ ತಾನಿಂದು ಸಂದಿರ್ಪುದಾ ।
ಜನನೀ ನೀನದು ನಿಲ್ವವೊಲ್ ಕುರುಣಿಸಾ ಚೈತನ್ಯನೈರ್ಮಲ್ಯಮಂ ॥

ಧನಧಾನ್ಯಂ ನೆರೆದಿರ್ಕೆ ನಾಡೊಳ್ ಅದರೊಳ್ ಪಾಲೆಲ್ಲರಿಂಗೀವ ಶಾ ।
ಸನದಿಂದಾರಕರುಂಬುಮುಬ್ಬರಿಸದಂತಿರ್ಕೊರ್ವನಿನ್ನೊರ್ವನೊಳ್ ॥
ಗುಣಮುಂ ಕಾಣ್ಬವನಕ್ಕೆ ಸಾತ್ವಿಕಬಲಂ ನ್ಯಾಯಂಗಳಂ ಕಾಯಲೀ ।
ಜನರಾಜ್ಯಂ ದೃಢಮಿರ್ಕೆ ದೇಶವಿಭವಂ ಸರ್ವೋತ್ಸವಂ ಮಂಗಳಂ ॥

ವಂದೇಮಾತರಮೆಂದು ಪಾಡುಗೆ ಜನಂ ಬಾಯಿಂದಮೇಂ ಬಾಯೊಡಂ
ಸಂದಿರ್ಕಾವಗಮೆಲ್ಲ ಜೀವಕರಣಂ ಪಾಡಕ್ಕೆ ಕಾರ್ಯಸ್ಫುಟಂ ॥
ಮಾಂದ್ಯಂ ಪೋಗುಗೆ ಬುದ್ಧಿಯಂತ್ರಗಳಿನ್ ಅಂಧ್ಯ ನೀತಿನೇತ್ರಂಗಳಿಂ ।
ವಂದೇಮಾತರಮಸ್ತು ಭಾರತಿ ಶಿವಂ ಸರ್ವೋತ್ಸವಂ ಮಂಗಳಂ ॥

ಪ್ರಾರ್ಥನೆ ತುಂಬ ಹೃದಯಸ್ಪರ್ಶಿಯಾಗಿತ್ತು ಸಭೆಗೆ. ರಾಗಮಾಲಿಕೆ ವೈವಿಧ್ಯ ವಲ್ಲಿ ನಿರ್ವಹಿಸಿದ್ದರು ಪ್ರಾರ್ಥನೆಯನ್ನು ಶಕುಂತಲಾಬಾಯಿ. ಸಂಸ್ಕೃತಪದಪುಂಜ ಗಳಿಂದ ವೃತ್ತಪದ್ಯಗಳು ರಚಿತವಾಗಿದ್ದುದರಿಂದ, ಕಾಶೀ ವಿದ್ಯಾಪೀಠದಲ್ಲಿ ವ್ಯಾಸಂಗ ಮಾಡಿದ್ದ ಲಾಲ್‌ಬಹದ್ದೂರ್ ಶಾಸ್ತ್ರಿಯವರಿಗೆ ಪ್ರಾರ್ಥನೆ ಕನ್ನಡದಲ್ಲಾದರೂ ಭಾವಾರ್ಥ ಗ್ರಹಿಸಲು ಕಷ್ಟವಾಗಿರಲಿಲ್ಲ. ಡಿ. ವಿ. ಜಿ. ರಚನಾಬಂಧ ನಾರಿಕೇಳಾಪಾಕ. ಕದಳೀ ಪಾಕವಲ್ಲ. ಆದರೆ ಶಕುಂತಲಾಬಾಯಿ, ಪದಗಳನ್ನು ಬಿಡಿಸಿ ಬಿಡಿಸಿ, ಅರ್ಥ ಬರುವಂತೆ ಹೊರಳಿಸಿ ಹೊರಳಿಸಿ ಒತ್ತುಕೊಟ್ಟು ಶ್ರೋತೃಗಳ ಮೇಲೆ ಪರಿಣಾಮ ಬೀರು ವಂತೆ ವಾಚಿಸುವ ಕಲಾವಂತೆಯಾದುದರಿಂದ ಸಾಮಾನ್ಯರೂ ಅರ್ಥಮಾಡಿಕೊಂಡು ರಸಸ್ವಾದಮಾಡಬಲ್ಲರು. ಇದು ಸಾಮಾನ್ಯವಾಗಿ ಶಕುಂತಲಾಬಾಯಿಯ ಕಾವ್ಯ ವಾಚನವನ್ನುಕೇಳಿರುವ ರಸಿಕರ ಅಭಿಪ್ರಾಯ. ಆದುದರಿಂದ ಡಿ. ವಿ. ಜಿ. ಅವರ ವೃತ್ತ ಪದ್ಯಗಳನ್ನು ಈ ಸಭೆ ಸಂತೋಷದಿಂದೆಲೇ ಕೇಳಿ ನಲಿಯಿತು.

ಕೋದಂಡರಾವ್ ದಂಪತಿಗಳ ಕಲಾರಸಿಕತೆ

1971ರ ಫೆಬ್ರವರಿ 12ರ ದಿನಾಂಕದಂದು ದೀನಬಂಧು ಚಾರ್ಲ್ಸ್ ಫ್ರೆಯರ್ (ಸಿ. ಎಫ್.) ಆಂಡ್ರೂಸ್ ಅವರ ಶತಮಾನೋತ್ಸವ ಬೆಂಗಳೂರು ನಗರದ ಪೂರ್ವ ಕುಮಾರಾಪಾರ್ಕ್ ಬಡಾವಣೆಯ ಗಾಂಧಿ ಸ್ಮಾರಕ ನಿಧಿ ಸಭಾಂಗಣದಲ್ಲಿ ನಡೆಯಿತು. ಇಲ್ಲೂ ಶಕುಂತಲಾಬಾಯಿಗೆ ಪ್ರಾರ್ಥನೆ ಮಾಡಬೇಕೆಂದು ಕರೆಬಂದಿತ್ತು. ಶ್ರೀಮತಿ ಮಾರ್ಜೋರಿ ಸ್ಟೈಕ್ಸ್ ಇಂಗ್ಲಿಷಿನಲ್ಲಿ ಬರೆದಿದ್ದ "ಚಾರ್ಲ್ಸ್ ಫ್ರೆಯರ್ ಆಂಡ್ರೂಸ್" ಎಂಬ ಸಂಕ್ಷಿಪ್ತ ಜೀವನ ಚರಿತ್ರೆಯನ್ನು ನಾನು ಕನ್ನಡಕ್ಕೆ ಅನುವಾದ ಮಾಡಿದ್ದೆ. ಅದರ ಬಿಡುಗಡೆಯೂ ಇತ್ತು ಕಾರ್ಯಕ್ರಮದಲ್ಲಿ. ಸಿ. ಎಫ್. ಆಂಡ್ರೂಸ್ ಮಹಾ ಕ್ರೈಸ್ತ ಸಂತ. ಭಾರತದ ಭೂಮಿಯಲ್ಲಿ ಮೂವತ್ತು ವರ್ಷಗಳು ಬಾಳಿ ಬದುಕಿದ ಜೀವ. ಅಭಿನವ ಕ್ರಿಸ್ತನೆಂದೇ ಭಾರತೀಯ ಜನ ಆತನನ್ನು ತಿಳಿದಿದ್ದರು. ಗುರುದೇವ ರವೀಂದ್ರರ ಶಾಂತಿ ನಿಕೇತನದಲ್ಲಿ ಉಸಿರಾಡಿದ ಜೀವವದು. ಗಾಂಧೀಜಿಯ ನೆರಳಲ್ಲಿ ಆಸರೆ ಪಡೆದು ದೀನ ದಲಿತರ ಪುರೋಭಿವೃದ್ಧಿಗಾಗಿ ಶ್ರಮಿಸಿದ ಪುಣ್ಯ ಚೇತನವದು. ನಾನು ಚಿಕ್ಕಂದಿನಲ್ಲಿ ಆಂಡ್ರೂಸ್‌ರನ್ನು ನೋಡಿದ್ದೆ, ಕೇಳಿದ್ದೆ, ಅಭಿಮಾನ ತಳೆದಿದ್ದೆ. ಆದುದರಿಂದ ಅವರ ಶತಮಾನೋತ್ಸವದಲ್ಲಿ ಭಾಗಿಯಾಗುವುದು ನನಗೆ ಶ್ರೇಯಸ್ಕರವಾಗಿತ್ತು, ನನ್ನ ಸಹ ಧರ್ಮಿಣಿ ಈ ಉತ್ಸವದಲ್ಲಿ ಪಾಲುಗೊಳ್ಳುವುದು ನನಗೆ ತುಂಬ ಹಿಡಿಸಿತ್ತು, ಇಂಗ್ಲೀಷ್ ಭಾಷೆ "ಲೀಡ್ ಕೈಂಡ್ಲಿ ಲೈಟ್" ಬಹಳ ಪ್ರಸಿದ್ಧ ಗೀತೆ. ಅಮೆರಿಕದ ನ್ಯೂಮನ್ ಕವಿ ಬರೆದು ನಮ್ಮನ್ನು ಉದ್ಧಾರ ಮಾಡಿದ್ದಾನೆ. ಕ್ರಿಸ್ತ ಹೃದಯರಾಗಿದ್ದ ಗಾಂಧೀಜಿಗಂತೂ "ಲೀಡ್ ಕೈಂಡ್ಲಿ ಲೈಟ್" ಗೀತೆ ಹೃದಯಸ್ಪರ್ಶಿಯಾದದ್ದು. ಕನ್ನಡಿಗರ ಪುಣ್ಯದಿಂದ ಪೂಜ್ಯ ಬಿ. ಎಂ. ಶ್ರೀಕಂಠಯ್ಯನವರು "ಲೀಡ್ ಕೈಂಡ್ಲಿ ಲೈಟ್"ಕವನವನ್ನು ಬಹಳ

ಚೆನ್ನಾಗಿ ಕನ್ನಡಕ್ಕೆ "ಕರುಣಾಳು ಬಾ ಬೆಳಕೆ" ಎಂಬ ಹೆಸರಿನಲ್ಲಿ ತಂದಿದ್ದಾರೆ. ಅದನ್ನು ಪ್ರಾರ್ಥನೆಗೆ ಉಪಯೋಗಿಸಿಕೊಳ್ಳುವುದು ಉಚಿತವೆಂದು ಸಲಹೆಕೊಟ್ಟೆ. "ದೀನ ಬಂಧು"ವಿಗೆ ತಕ್ಕ ಪ್ರಾರ್ಥನೆ—

ಕರುಣಾಳು ಬಾ ಬೆಳಕೆ, ಮುಸುಗಿದೀ ಮಬ್ಬಿನಲಿ
ಕೈಹಿಡಿದು ನಡೆಸೆನ್ನನು
ಇರುಳು ಕತ್ತಲೆಯ ಗವಿ, ಮನೆದೂರ ಕನಿಕರಿಸಿ
ಕೈಹಿಡಿದು ನಡೆಸೆನ್ನನು
ಹೇಳಿ ನನ್ನಡಿಯಿಡಿಸು, ಬಲುದೂರ ನೋಟವನು
ಕೇಳಿದೊಡನೆಯೆ—ಸಾಕು ನನಗೊಂದು ಹೆಜ್ಜೆ

ಮುನ್ನೆ ಇಂತಿರದಾದೆ, ನಿನ್ನ ಬೇಡದೆ ಹೋದೆ,
ಕೈಹಿಡಿದು ನಡೆಸು ಎನುತ
ನನ್ನ ದಾರಿಯ ನಾನೆ ನೋಡಿ ಹಿಡಿದೆನು—ಇನ್ನು
ಕೈಹಿಡಿದು ನಡೆಸು ನೀನು
ಮಿರುಗುಬಣ್ಣಕೆ ಬೆರೆತು, ಭಯಮರೆದು ಕೊಬ್ಬಿದೆನು
ಮರೆದಾಯ್ತು, ನೆನೆಯದಿರು ಹಿಂದನದನೆಲ್ಲ

ಇಷ್ಟು ದಿನ ಸಲಹಿರುವೆ ಮೂರ್ಖನನು, ಮುಂದೆಯೂ
ಕೈಹಿಡಿದು ನಡೆಸದಿಹೆಯಾ ?
ಕಷ್ಟದಡವಿಯ ಕಳೆದು, ಬೆಟ್ಟ ಹೊಳೆಗಳಹಾದು,
ಇರುಳನ್ನು ನೂಕದಿಹೆಯಾ ?
ಬೆಳಗಾಗ ಹೊಳೆಯದೇ ಹಿಂದೊಮ್ಮೆ ನಾನೊಲಿದು
ಈ ನಡುವೆ ಕಳೆಕೊಂಡ ದಿವ್ಯಮುಖ ನಗುತ ?

ಪ್ರಾರ್ಥನೆ ತುಂಬ ಮನೋಜ್ಞವಾಗಿತ್ತು. ಅಂದಿನ ಸಭೆಗೆ ಬಂದಿದ್ದವರು ಬಹುವಾಗಿ ನಮ್ಮ ಕ್ರಿಸ್ತಬಾಂಧವರು. ಶ್ರೋತೃಗಳಲ್ಲಿ ಎದ್ದು ಕಾಣುತ್ತಿದ್ದವರು ಪಿ. ಕೋದಂಡರಾವ್ ದಂಪತಿಗಳು. ಪತಿಪತ್ನಿಯರಿಗೆ ಶಕುಂತಲಾಬಾಯಿ ತುಂಬ ಅಚ್ಚುಮೆಚ್ಚು. ಕೋದಂಡರಾವ್ ಸರ್ವೆಂಟ್ಸ್ ಅಫ್ ಇಂಡಿಯಾ ಸೊಸೈಟಿಯಲ್ಲಿ ಹತ್ತಾರು ವರ್ಷ ಪ್ರಮುಖಪಾತ್ರ ವಹಿಸಿದ್ದರು. ಅಮೆರಿಕ ಮಹಿಳೆಯನ್ನು ಮದುವೆಯಾದರು. ದೇಶಾಭ್ಯುದಯ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ಭಾರತೀಯ ಪತ್ರಿಕೆಗಳಲ್ಲಿ ಮಿಂಚಿಸುತ್ತಿದ್ದರು. ಶ್ರೀಮತಿ ಕೋದಂಡರಾಯರಿಗೆ ಶಕುಂತಲಾಬಾಯಿಯ ಗಮಕದಲ್ಲಿ ಬಹು ಪ್ರೀತಿ. ಭಾರತರತ್ನ ಸರ್ ಎಂ. ವಿಶ್ವೇಶ್ವರಯ್ಯ ಶತಮಾನೋತ್ಸವ ಲಾಲ್ ಬಾಗಿನ ಗಾಜಿನ ಮನೆಯಲ್ಲಿ ನಡೆಯಿತು. ಒಬ್ಬ ಸಂಗೀತ ವಿದುಷಿಯಿಂದ ಪ್ರಾರ್ಥನೆ ನಡೆಯಿತಂತೆ. ಅನಂತರ ಶೇಷಾದ್ರಿ ಅಯ್ಯರ್ ಮೆಮೋರಿಯಲ್ ಹಾಲಿನಲ್ಲಿರುವ ಪಬ್ಲಿಕ್ ಲೈಬ್ರರಿ ಸಂಸ್ಥೆ ಸರ್. ಎಂ.ವಿ. ಶತಮಾನೋತ್ಸವ ನಡೆಸಿತು. ಶಕುಂತಲಾ

ಬಾಯಿಯನ್ನು ಪ್ರಾರ್ಥನೆಗೆ ಕರೆದಿತ್ತು. ಶಕುಂತಲಾಬಾಯಿ ಪ್ರಾರ್ಥನೆಮಾಡಿ ಬರುತ್ತಲೆ ಶ್ರೀಮತಿ ಕೋದಂಡರಾಯರು ಹತ್ತಿರ ಕರೆದು ಕೂಡಿಸಿಕೊಂಡರು. ಮೃದುವಾಗಿ ಕೈ ಹಿಡಿದು, "ನಿನ್ನ ಪ್ರಾರ್ಥನೆ ತುಂಬ ಚೆನ್ನಾಗಿತ್ತು. ಲಾಲ್‌ಬಾಗಿನ ಗಾಜಿನ ಮನೆಯಲ್ಲಿ ಆದ ಸರ್. ಎಂ. ವಿ. ಶತಮಾನೋತ್ಸವದಲ್ಲಿ ನಡೆದ ಪ್ರಾರ್ಥನೆ ಅಷ್ಟಕಷ್ಟೆ" ಎಂದರಂತೆ. ಈಗ ದೀನಬಂಧು ಸಿ. ಎಫ್. ಆಂಡ್ರೂಸ್ ಶತಮಾನೋತ್ಸವದಲ್ಲಿ ಭಾಗವಹಿಸಿದ ಕೋದಂಡರಾವ್ ದಂಪತಿಗಳು ಶಕುಂತಲಾಬಾಯಿಯನ್ನು ಹತ್ತಿರ ಕರೆದು ಕೂಡಿಸಿಕೊಂಡರು. ರಾಯರು ಶಕುಂತಲಾಬಾಯಿಯ ಕೈಯನ್ನು ಮೃದುವಾಗಿ ತಟ್ಟಿ "ಕರುಣಾಳು ಬಾ ಬೆಳಕೆ" ಪ್ರಾರ್ಥನೆ ತುಂಬ ಚೆನ್ನಾಗಿತ್ತು ಎಂದು ಪಿಸುಗುಟ್ಟಿದರು. ಶ್ರೀಮತಿ ಕೋದಂಡರಾಯರು ತಮ್ಮ ಕೂರ್ತಾಣ್ಣನ ದನಿಗೆ ತಮ್ಮ ದನಿಗೂಡಿಸಿದರು. ಕೋದಂಡರಾವ್ ದಂಪತಿಗಳು ಬೆಂಗಳೂರಲ್ಲಿ ನಡೆಯುತ್ತಿದ್ದ ಪ್ರತಿಯೊಂದು ಕಾರ್ಯಕ್ರಮಕ್ಕೂ ತಪ್ಪದೆ ಬರುತ್ತಿದ್ದರು. ಆ ಸಮಯಗಳಲ್ಲಿ, ಶಕುಂತಲಾಬಾಯಿಯ ಕಾವ್ಯ ವಾಚನವನ್ನು ಕುರಿತು ಪ್ರಶಂಸೆಮಾಡುವುದಕ್ಕೆ ತಪ್ಪುತ್ತಿರಲಿಲ್ಲ.

* * *

ಶಕುಂತಲಾಬಾಯಿ ನೂರಾರು ಸಭೆಗಳಲ್ಲಿ, ಪ್ರಾರ್ಥನೆ ಕಾರ್ಯಕ್ರಮ ಕೊಟ್ಟಿದ್ದಾರೆ. ಕುಮಾರವ್ಯಾಸ, ಲಕ್ಷ್ಮೀಶ, ರಾಘವಾಂಕ, ಹರಿಹರ ಮಹಾಕವಿಗಳನು ಪ್ರಾರ್ಥನೆಗೆ ಬಹಳವಾಗಿ ಬಳಸಿಕೊಂಡಿದ್ದಾರೆ. ಅಷ್ಟೇ ಸಂಖ್ಯೆಯಲ್ಲಿ ಕುವೆಂಪು, ಬೇಂದ್ರೆ ಮಾಸ್ತಿ ಮೊದಲಾದ ಆಧುನಿಕ ಮಹಾಕವಿಗಳನ್ನು ತಮ್ಮ ಪ್ರಾರ್ಥನಾ ಕಾರ್ಯಕ್ರಮಕ್ಕೆ ಬಳಸಿಕೊಂಡಿದ್ದಾರೆ. ಬೇಂದ್ರೆಯವರ "ಶ್ರೀನೃಸಿಂಹಸ್ತೋತ್ರ"ವನ್ನು ಪ್ರಾರ್ಥನೆಗೆ ಬಳಸಿಕೊಂಡು ಮೊಟ್ಟಮೊದಲು ಪ್ರಸಾರಕೊಟ್ಟ ಯಶಸ್ಸು ಶಕುಂತಲಾಬಾಯಿಗೇ ಸಲ್ಲಬೇಕು. ಈಗ ಅದು ಸಾಕಷ್ಟು ಪ್ರಸಾರ ಪಡೆದಿದೆ ಆಕಾಶವಾಣಿಯ ಮೂಲಕ. ಬೇಂದ್ರೆಯವರ ಶ್ರೀ ನೃಸಿಂಹ ಸ್ತೋತ್ರದ ಕೆಲವು ಸಾಲುಗಳು ಹೀಗಿವೆ :—

"ಡಿಂಭದ ಈ ಕಂಭದೊಳಗೆ ತಾವು ಅಡಗಿರುವಿರಿ ।
ನಂಬಿರುವೀ ಎದೆಹೂವನೆ ಆಸನ ಮಾಡಿರುವಿರಿ ।
ವೈರಿಯಿಂದ ಕಾಯಬೇಕೊ ಕರುಣಿಸುತ್ತ ಸದಾ ರೋ
ನಾರಾಯಣ ನಾರಾಯಣ ಹೇ ನೃಸಿಂಹ ಪಾಹಿಮಾಮ್ ॥

ದೋಷವನ್ನು ನಾಶಗೈದು ಭಕ್ತಿಯನ್ನು ಪೋಷಿಸೆ
ಭಕ್ತಹೃದಯದಲ್ಲಿ ಸದಯನಾಗಿ ನಿಂತದೇವನೇ
ಏನು ಬಂದರೇನು ತಾವೆ ಕಾವಿರೆಂಬ ಭಾವನೆ
ನಾರಾಯಣ ನಾರಾಯಣ ಹೇ ನೃಸಿಂಹಪಾಹಿಮಾಮ್ ॥

ನಾನು ಕಾಲು ಮಣೆಯು ನಿಮ್ಮ ಮಹಾಪಾದ ಪೀಠಕೆ
ತಮ್ಮಡಿಗಳನು ಮುಟ್ಟಿದೊಡನೆ ಅರಳಿ ಕಮಲವಾದೆನು
ಆ ಕಮಲದಲ್ಲೆ ತಾವು ಕಮಲೆಯೊಡನೆ ವಾಸಿಸಿ
ನಾರಾಯಣ ನಾರಾಯಣ ಹೇ ನೃಸಿಂಹಪಾಹಿಮಾಮ್ ॥

ಅಣುರೇಣುವು ತಮ್ಮಿದಿಹದು ನಾನು ಎಂಬುದಾಟವು
ತಾವೆ ಜೀವನಾವೆಯಲ್ಲಿ ಕ್ರೀಡೆಯಾಡುತಿರುವಿರಿ
ತಾವು ನಮ್ಮರೇವು ನಾವು ಎತ್ತ ಹೋಗಿ ಬಂದರು
ನಾರಾಯಣ ನಾರಾಯಣ ಶ್ರೀ ನೃಸಿಂಹಪಾಹಿಮಾಮ್ ॥

ಶ್ರೀಗುರುಪ್ರಸಾದೋಸ್ತು । ಶ್ರೀಮಾತೃಪ್ರಸಾದೋಸ್ತು
ಭದ್ರಂ ಶುಭಂ ಮಂಗಳಂ

ಶಕುಂತಲಾಬಾಯಿ ಸಭೆಗಳಲ್ಲಿ ಪ್ರಾರ್ಥನೆ ಮಾಡುವ ಮುಂಚೆಯೋ ಅಥವಾ ಅದಾದಮೇಲೊ, ತಾವು ಪ್ರಾರ್ಥನೆಗೆ ಬಳಸಿಕೊಂಡ ಗೀತೆಗಳ ಕವಿಗಳ ಹೆಸರುಗಳನ್ನು ಹೇಳುವುದಕ್ಕೆ ಮರೆಯುತ್ತಿರಲಿಲ್ಲ. ಕಾರಣ, ಶ್ರೋತೃಗಳಿಗೆ ನಮ್ಮ ಕವಿಗಳ ಹೆಸರುಗಳು ಪುರಂದರ ತ್ಯಾಗರಾಜರುಗಳಷ್ಟೇ ಮಟ್ಟಿಗೆ ತಿಳಿದಿರಬೇಕೆಂದು ಆಕೆಯ ಉದ್ದೇಶವಾಗಿರುತ್ತಿತ್ತು.

ಹನುಮಂತಯ್ಯನವರ ಕಾಲಪ್ರಜ್ಞೆ

ಸಾಹಿತ್ಯ ಸಂಸ್ಕೃತಿ ಪ್ರಸಾರ ಹನುಮಂತಯ್ಯನವರ ಕಾಲದಲ್ಲಿ ಚೆನ್ನಾಗಿಯೇ ನಡೆಯಿತು. ಅವರೂ ಕೆಲವು ಸಭೆಗಳಿಗೆ ಬಂದು ಶ್ರದ್ಧೆಯಿಂದ ಕೇಳಿ ಆನಂದಿಸಿದ್ದಾರೆ. ನಮ್ಮ ಸಾಹಿತ್ಯ ಸಂಸ್ಕೃತಿ ಕಾರ್ಯಕ್ರಮಗಳಲ್ಲಿ ಕೆಲವು ಅವರ ನೇತೃತ್ವದಲ್ಲಿ ನಡೆದಿವೆ. ಅಂಥವುಗಳಲ್ಲಿ ಒಂದೆರಡು ಸಂದರ್ಭಗಳು ನನ್ನ ನೆನಪನ್ನು ಕೆದಕುತ್ತಿವೆ.

ಚಿತ್ರದುರ್ಗ ಜಿಲ್ಲೆಯ ಹೊಸದುರ್ಗದಲ್ಲಿ ಒಂದು ಸಹಕಾರ ಸಂಘದ ರಜತ ಉತ್ಸವವೋ ಅಥವಾ ಪ್ರಾರಂಭೋತ್ಸವವೋ ನೆನಪಿನಿಂದ ಮಸಳಿದೆ; ಆದರೆ ಆ ಸಂಘದ ಉತ್ಸವದಲ್ಲಿ ಮುಖ್ಯಮಂತ್ರಿ ಮುಖ್ಯಪಾತ್ರ ವಹಿಸಿದ್ದುದು ನನ್ನ ನೆನಪಿನಲ್ಲಿ ಚಿರಸ್ಥಾಯಿಯಾಗಿದೆ. ಚಿತ್ರದುರ್ಗದ ಜಿಲ್ಲಾಧಿಕಾರಿಗಳಾಗಿದ್ದ ವೆಂಕಟಶಿವರೆಡ್ಡಿ ಬಹು ದಕ್ಷತೆಯಿಂದ ಏರ್ಪಡಿಸಿದ್ದ ಕಾರ್ಯಕ್ರಮವದು. ಶಕುಂತಲಾಬಾಯಿಯ "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನ ನನ್ನ ಪ್ರಾಸಂಗಿಕ ನಿರೂಪಣೆಯೂ ಹೊಂದಾಣಿಕೆಯಾಗಿತ್ತು.

ಸಹಕಾರ ಸಂಘದ ಕಾರ್ಯಕ್ರಮ ಸಂಜೆ 5 ಗಂಟೆಗೆ ಪ್ರಾರಂಭವಾಗಿ 6 ಗಂಟೆಗೆಲ್ಲ ಮುಗಿದುಹೋಯಿತು. ಹನುಮಂತಯ್ಯನವರು ಕಾರ್ಯಕ್ರಮವನ್ನು ಕಾಲಾವಧಿಯಲ್ಲಿ ಸಾಧಿಸುವುದರಲ್ಲಿ ನಿಸ್ಸೀಮರು.

ಇನ್ನು ಉಳಿದಿದ್ದುದು ಸಹಕಾರ ಸಂಘದ ಕಾರ್ಯಕ್ರಮಕ್ಕೆ ಹೊಂದಿಕೊಂಡಿರುವಂತೆ ತನಿಯಾಗಿ ಸಾಹಿತ್ಯ ಸಂಸ್ಕೃತಿಗಳ ಕಾರ್ಯಕ್ರಮ. ಅದು ಕರಾರುವಾಕ್ಕಾಗಿ 8 ಗಂಟೆಗೆಂದು ಪ್ರಕಟವಾಗಿದ್ದಿತು. ಅತಿಥಿಗಳಿಗೆಲ್ಲ ಭರ್ಜರಿ ಊಟದ ಏರ್ಪಾಟಿತ್ತು ರಾತ್ರಿ. ಸಾಧಾರಣವಾಗಿ ಜನಕ್ಕೆ ಮೊದಲಿಂದಲೂ ಒಂದಭಿಪ್ರಾಯ ಬೇರೂರಿದೆ; ಮನರಂಜನೆ ಕಾರ್ಯಕ್ರಮಗಳು ಕಾಲಕ್ಕೆ ಸರಿಯಾಗಿ ಪ್ರಾರಂಭವಾಗುವುದು ಅಪರೂಪವೆಂದು. ಆ ಕಾರಣ, ಉಂಡು ತಿಂದು ಆರಾಮವಾಗಿ ಹೋದರಾಯಿತೆಂದು ಅಧಿಕಾರಿವರ್ಗ ಮನೋ

ಭಿಪ್ರಾಯ ತಳೆಯಿತು. ಊಟಕ್ಕೆ ಸಿದ್ಧವಾಗಿ ಕುಳಿತರು. ನಮಗೂ ಕರೆಬಂತು. ಶಕುಂತಲಾಬಾಯಿಗೆ ಹೊಟ್ಟೆ ತುಂಬ ಉಂಡು ಕಾರ್ಯಕ್ರಮ ಕೊಡುವುದು ಯಾವಾಗಲೂ ಸಾಧ್ಯವಿಲ್ಲದ ಮಾತು. ಆಕೆ "ಒಲ್ಲೆ"ನೆಂದರು. ಕರೆ ಯಾವಾಗ ಬರುವುದೋ ಎಂದು ಕಾರ್ಯಕ್ರಮಕ್ಕೆ ಸಿದ್ಧವಾಗಿ ಕುಳಿತರು.

ದಿಢೀರನೆ ಆಳು ಬಂದು "ಮುಖ್ಯ ಮಂತ್ರಿಗಳು ದಯಮಾಡಿಸಿದ್ದಾರೆ. ಬರಬೇಕಂತೆ" ಎಂದು ನಮ್ಮ ತಂಬೂರಿಯನ್ನು ಸಭೆಗೆ ಹೊತ್ತು ನಡೆದ. ನಾವು ಹಿಂಬಾಲಿಸಿದೆವು. ಮುಖ್ಯಮಂತ್ರಿಗಳು ಸಜ್ಜಾಗಿ ಕುಳಿತಿದ್ದರು ಕಾವ್ಯವಾಚನ ಕೇಳುವುದಕ್ಕೆ.

ಶಕುಂತಲಾಬಾಯಿ "ಶ್ರೀ ರಾಮಾಯಣ ದರ್ಶನಂ" ಕಾವ್ಯದಿಂದ "ಶಬರಿಗಾದನು ಅತಿಥಿ ದಾಶರಥಿ" ಕಥಾಭಾಗವನ್ನು ವಾಚನ ಮಾಡಿದರು. ಊಟಕ್ಕೆ ಕುಳಿತಿದ್ದ ಅಧಿಕಾರಿ ವರ್ಗ ಅರ್ಧಂಬರ್ಧದಲ್ಲೇ ಊಟಬಿಟ್ಟಿದ್ದು, ಅವಸರವಸರವಾಗಿ ಪ್ಯಾಂಟು ಕೋಟು ಮೈಮೇಲೇರಿಸಿಕೊಂಡು ಸಭೆಗೆ ಬಂದು ಸೇರಿದರು. ನಾವು ಹನುಮಂತಯ್ಯನವರ ಕಾಲಪ್ರಜ್ಞೆಗೆ ಬೆರಗಾದೆವು.

ಹೊಸದುರ್ಗದ ಈ ಕಾರ್ಯಕ್ರಮವನ್ನು ನೆನಸಿಕೊಂಡಾಗಲೆಲ್ಲ ನನಗೆ, ನಮಗೆ ಕೊಟ್ಟಿದ್ದ ಆಳಿನ ಕಲಾಭಿಜ್ಞತೆಯ ನೆನಪು ಮಿಂಚುತ್ತದೆ. ಆತನಿಗೆ ನಾವಿಬ್ಬರೇ ಪಕ್ಕವಾದ್ಯಗಳ ವಿದ್ವಾಂಸರ ಜೊತೆಯಿಲ್ಲದೆ ಒಬ್ಬಂಟಿಯವರಾಗಿ ಹೋಗಿದ್ದುದು ಆಶ್ಚರ್ಯವೋ ಆಶ್ಚರ್ಯ. ಶ್ರುತಿಪೆಟ್ಟಿಗೆಯೂ ಇಲ್ಲ, ತಂಬೂರಿಯೂ ಇಲ್ಲ. ಇವರೆಂಥ ಸಂಗೀತ ವಿದ್ವಾಂಸರೆಂದು ಅವನಿಗೆ ಮೂಕ ವಿಸ್ಮಯ. ನಾವು ಕಾರ್ಯಕ್ರಮಕ್ಕೆ ಹೋಗುವ ಸ್ವಲ್ಪ ಹೊತ್ತಿಗೆ ಮುಂಚೆ ಕುತೂಹಲಾವಿಷ್ಟನಾಗಿ ಕೇಳಿಯೂಬಿಟ್ಟ, "ತಾಯಿ ಪಕ್ಕವಾದ್ಯಗಳು ಬೇಡವೆ ಸಹಾಯಕ್ಕೆ?" ಶಕುಂತಲಾಬಾಯಿ ನಕ್ಕು "ಕಾವ್ಯವಾಚನಕ್ಕೆ ಪಕ್ಕವಾದ್ಯಗಳ ನೆರವು ಬೇಡ. ನಮ್ಮ ಕಾರ್ಯಕ್ರಮ ಅರ್ಥಭಾವಪ್ರಧಾನವಾದದ್ದು. ಸಾಹಿತ್ಯ ಮುಖ್ಯ, ಸಂಗೀತ ನಿಮಿತ್ತ, ತಂಬೂರಿ ಶ್ರುತಿ ಪ್ರಾಮುಖ್ಯ" ಆಗ ಆತ ಬಾಯಿಬಿಟ್ಟ ತಾಯಿ, "ನನಗೆ ಮೃದಂಗ ನುಡಿಸಲು ಚೆನ್ನಾಗಿ ಬರುತ್ತದೆ. ಈ ಊರಲ್ಲಿ ನನ್ನನ್ನು ಸಹಾಯಕ್ಕೆ ಯಾರೂ ಕರೆಯುವುದಿಲ್ಲ. ನನಗೆ ಅವಕಾಶವೇ ಇಲ್ಲ ಮೃದಂಗ ನುಡಿಸುವುದಕ್ಕೆ" ಆತನ ಮಾತು ಕೇಳಿ ನಮಗೆ ಕಣ್ಣುಗಳಲ್ಲಿ ನೀರಾಡಿತು.

ಕಾರ್ಯಕ್ರಮ ಮುಗಿದು ಮಾರನೆಯ ದಿವಸ ಬೆಂಗಳೂರಿಗೆ ಬಸ್ಸು ಹತ್ತುವ ಸಮಯ. ಆಳು ಕಾಲಕ್ಕೆ ಸರಿಯಾಗಿ ಬಂದ. ಶಕುಂತಲಾಬಾಯಿಯ ಪಾದ ಮುಟ್ಟಿ ನಮಸ್ಕಾರ ಮಾಡಿದ. ಚಿರಸ್ಮರಣೀಯವಾದ ರಸಾನುಭವ. ಅನಂತರ ನಾವು ಹೊಸದುರ್ಗದ ಗಣೇಶೋತ್ಸವದಲ್ಲಿ ಎರಡು ಮೂರು ಸಲ ಭಾಗವಹಿಸಿದೆವು. ನಮ್ಮ ಗೆಳೆಯ ಕಲಾರಸಿಕ ಮೃದಂಗ ವಾದ್ಯಗಾರ ಬೇರೆ ಊರಿಗೆ ವರ್ಗವಾಗಿ ಹೋಗಿದ್ದನಂತೆ, ಕಾಣಲಿಲ್ಲ.

* ೦ *

ಮುಖ್ಯ ಮಂತ್ರಿ ಹನುಮಂತಯ್ಯನವರ ಕಾಲಪ್ರಜ್ಞೆಯನ್ನು ಕುರಿತು ನನು ಸ್ವಂತ ಅನುಭವವನ್ನು ಪ್ರಸ್ತಾಪಿಸಿವೆನಲ್ಲವೇ. ನನಗೆ ಇನ್ನೊಂದು ಸಂದರ್ಭ ಬಿಚ್ಚಿಕೊಳ್ಳುತ್ತದೆನೆನಪಿನ ಸುರುಳಿಯಿಂದ. ಅದನ್ನೂ ಇಲ್ಲಿಯೇ ಹೇಳಬಯಸುತ್ತೇನೆ.

ಕನ್ನಡ ಸಾಹಿತ್ಯ ಪರಿಷತ್ತು, ಬೇಲೂರು ಸಾಹಿತ್ಯ ಸಮ್ಮೇಳನವಾದ ಕೂಡಲೆ ಎರಡುಸಾವಿರ ರೂಪಾಯಿಗಳ ದತ್ತಿ ಪಡೆಯಿತು. ವಾರ ವಾರದ ಗಮಕ ಪ್ರಚಾರದ ಸಲುವಾಗಿ. ಮೈಸೂರು ಮಹಾರಾಜರ ಕೃಪಾ ಛತ್ರದಲ್ಲೇ ಬೆಳೆದು ಬಂದ ಕೂಸು ಕನ್ನಡ ಸಾಹಿತ್ಯ ಪರಿಷತ್ತು. ಮೈಸೂರು ದಿವಾನರಾಗಿದ್ದ ಸರ್. ಎಂ. ಮಿರ್ಜಾ ಇಸ್ಮಾಯಿಲ್ ಸಾಹೇಬರು ಮನಸ್ಸು ಮಾಡಿ ಪರಿಷತ್ತಿಗೆ ಒಂದು ಸ್ವಂತ ಕಟ್ಟಡ ಮಾಡಿಕೊಟ್ಟರು. ವಾರ್ಷಿಕ ಸಹಾಯ ಧನವನ್ನು ಮೂರು ಸಾವಿರ ರೂಪಾಯಿಗಳಿಗೆ ತಂದುನಿಲ್ಲಿಸಿದರು. ಅರಸರ ರಾಜ್ಯಭಾರ ಹೋಗಿ ಪ್ರಜಾಡಳಿತ ಬಂದು, ಹನುಮಂತಯ್ಯ ಮುಖ್ಯ ಮಂತ್ರಿಯಾಗಿ ಬರುತ್ತಲೆ ಕನ್ನಡ ಸಾಹಿತ್ಯ ಪರಿಷತ್ತಿನ ಭಾಗ್ಯದ ಬಾಗಿಲು ತೆರೆಯಿತು. ಮೂರು ಸಾವಿರರೂಪಾಯಿಗಳ ವಾರ್ಷಿಕ ಜೀವದಾನ ಹನ್ನೆರಡು ಸಾವಿರ ರೂಪಾಯಿಗಳಿಗೇರಿತು. ಆದಕಾರಣ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಎಂ. ಆರ್. ಶ್ರೀ. ಅವರು ಹನುಮಂತಯ್ಯನವರಿಗೆ ಕೃತಜ್ಞತೆಯನ್ನರ್ಪಿಸುವುದಕ್ಕಾಗಿ ಒಂದು ಸಂತೋಷ ಸಭೆಯನ್ನೇರ್ಪಡಿಸಿದರು ಪರಿಷತ್ತಿನ ಶ್ರೀ ಕೃಷ್ಣರಾಜ ಸಭಾಂಗಣದಲ್ಲಿ.

ಶಕುಂತಲಾಬಾಯಿಗೆ ರಾಘವಾಂಕನ ಹರಿಶ್ಚಂದ್ರ ಕಾವ್ಯದಿಂದ, ಹರಿಶ್ಚಂದ್ರ ಭೂಪಾಲ ವೀರಬಾಹುವಿಗೆ ತನ್ನನ್ನು ಮಾರಿಕೊಂಡ ಪ್ರಸಂಗವನ್ನು ವಾಚನ ಮಾಡಬೇಕೆಂದು ಕರೆ ಬಂದಿತು. ಒಪ್ಪಿಕೊಂಡರು. ವಾಚನವನ್ನೂ ಮಾಡಿದರು.

ಎಂ. ಆರ್. ಶ್ರೀ ಕೃತಜ್ಞತಾ ಭಾಷಣಕ್ಕೆ ತೊಡಗಿದರು. ದೀರ್ಘವೇ ಆಯಿತು ಅವರ ಭಾಷಣ. ಹನುಮಂತಯ್ಯ ತಮ್ಮ ಕೈಗಡಿಯಾರವನ್ನು ನೋಡಿಕೊಂಡರು. ಅವರು ಪರಿಷತ್ತಿನ ಕಾರ್ಯಕ್ರಮ ಮುಗಿಸಿ ಬೇರೆ ಕಾರ್ಯಕ್ರಮಕ್ಕೆ ಹೋಗಬೇಕಾಗಿತ್ತು. ಕೇವಲ ಹದಿನೈದು ಇಪ್ಪತ್ತು ನಿಮಿಷಗಳಿತ್ತು ಅಲ್ಲಿಗೆ ಹೋಗುವುದಕ್ಕೆ. ವಿನಯದಿಂದ ಎಂ. ಆರ್. ಶ್ರೀ ಗಳಿಗೆ ತಮ್ಮ ಕಾಲಪ್ರಜ್ಞೆಯನ್ನೂ ತಿಳಿಸಿ, ತಮ್ಮ ಕೃತಜ್ಞತೆ ಸಂತೋಷವನ್ನು ಸಭೆಗೆ ವ್ಯಕ್ತಪಡಿಸಿ ಬೇರೆ ಕಾರ್ಯಕ್ರಮಕ್ಕೆ ನಡೆದು ಬಿಟ್ಟರು ಕೆಲವ್ಮೆ ನಿಮಿಷಗಳಲ್ಲಿ. ನಾವು ಅನಂತರದಲ್ಲಿ ನಮ್ಮ ರಾಜ್ಯದ ಮುಖ್ಯ ಮಂತ್ರಿಗಳ, ಮಂತ್ರಿಗಳ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದೇವೆ. ಹನುಮಂತಯ್ಯನವರ ಕಾಲ ಪ್ರಜ್ಞೆಯನ್ನು ಬೇರೆಯವರಲ್ಲಿ ಕಾಣಲಿಲ್ಲ.

ಶಕುಂತಲಾಬಾಯಿ ವೀರಬಾಹು ಹರಿಶ್ಚಂದ್ರ ಪ್ರಕರಣವನ್ನು ವಾಚನ ಮಾಡಿದುದನ್ನು ದೇವುಡು ನರಸಿಂಹ ಶಾಸ್ತ್ರಿಗಳು ಒಪ್ಪಲಿಲ್ಲ. "ಕಾರ್ಯಕ್ರಮಕ್ಕೆ ಸಮಂಜಸವಾಗಿರಲಿಲ್ಲವೆಂದರು. ವಿ ಸೀ. "ಕಾವ್ಯವಾಚನ ತುಂಬಾ ಚೆನ್ನಾಗಿತ್ತು, ರಾಗ ಭಾವಗಳು ಸಮಂಜಸವಾಗಿತ್ತು"ಎಂದು ಕಾವ್ಯ ವಾಚನವನ್ನು ಒಪ್ಪಿಕೊಂಡರು. ಆದರೆ ಶಕುಂತಲಾ

ಬಾಯಿ ಇಲ್ಲಿ ಒಂದು ಪಾಠ ಕಲಿತರು. ಮುಂದೆ ಅವರು ಭಾಗವಹಿಸಿದ ಕಾರ್ಯಕ್ರ ಮಗಳಲ್ಲಿ **"ಕಾರ್ಯಕರ್ತರು ನನಗೆ ಈ ಭಾಗವನ್ನು ವಾಚನ ಮಾಡಲು ಹೇಳಿದ್ದಾರೆ"** ಎಂದು ವಿಜ್ಞಾಪಿಸಿಕೊಂಡು ತಮ್ಮ ಜವಾಬ್ದಾರಿಯನ್ನು ಬೇರೆಯವರ ಹೆಗಲಿಗೆ ರವಾನಿಸ ತೊಡಗಿದರು.

ಹನುಮಂತಯ್ಯನವರ ದೈವ ಭಕ್ತಿ

ಮುಖ್ಯ ಮಂತ್ರಿ ಹನುಮಂತಯ್ಯನವರಲ್ಲಿ ನಾವು ಅತಿಶಯವಾಗಿ ಕಂಡು ಕೊಂಡುದು ದೈವ ಭಕ್ತಿ. ಅವರು ಹನುಮದ್ಭಕ್ತರು. ಅವರ ಕಾಲದಲ್ಲಿ ಒಂದು ಸಲ ಬೆಂಗಳೂರು ಪೌರಸಭೆಯ ವಾರ್ಷಿಕೋತ್ಸವದಲ್ಲಿ ಅವರು ಮುಖ್ಯಾತಿಥಿಗಳಾಗಿ ಭಾಗ ವಹಿಸಿದ್ದರು. ಆ ಹಿಂದಲ ದಿನ, ಪಕ್ಷದ ಸಭೆಯಲ್ಲಿ ಅವರಿಗೆ ವಿರೋಧವಾಗಿ ಒಂದು ನಿರ್ಣಯ ಚರ್ಚೆಗೆ ಬಂದಿತ್ತಂತೆ. ಹನುಮಂತಯ್ಯನವರಿಗೆ ವಿರೋಧವಾಗಿ ಮಂಜೂ ರಾಗುವ ಹಂತವನ್ನು ಮುಟ್ಟಿತ್ತಂತೆ. ಹೇಗೋ ಆ ಕುತ್ತಿಂದ ಹನುಮಂತಯ್ಯನವರು ಪಾರಾಗಿದ್ದರು. ಗೆಲುವು ಅವರದಾಗಿತ್ತು. ಪೌರಸಭಾ ಕಾರ್ಯಕ್ರಮದಲ್ಲಿ ಶಕುಂತಲಾ ಬಾಯಿ ಕಾವ್ಯವಾಚನ ಮಾಡುವುದಿತ್ತು. ಬೆಳಗಾಗುತ್ತಲೆ ಪೌರಸಭಾ ಅಧಿಕಾರಿಗಳ ಲ್ಲೊಬ್ಬರು "ಮಕ್ಕಳ ಮಂಟಪದ" ಮನೆಗೆ ಆಗಮಿಸಿದರು. "ಶಕುಂತಲಾಬಾಯಿ, ಯಾವ ಕಾವ್ಯವಾಚನ ಮಾಡುವಿರಿ" ಎಂದು ವಿಚಾರಿಸಿದರು. "ತೊರವೆಯ ರಾಮಾ ಯಣದಿಂದ "ಸುಗ್ರೀವ ಸಖ್ಯ" ಕಥಾ ಭಾಗ ವಾಚನ ಮಾಡಬೇಕೆಂದು ಮುಖ್ಯ ಮಂತ್ರಿಗಳಿಂದ ಸೂಚನೆ ಬಂದಿದೆ. ಈ ದಿನ ನೀವು ಅದನ್ನೇ ವಾಚನ ಮಾಡಿ" ಎಂದರು. "ಆಯಿತು" ಎಂದು ಶಕುಂತಲಾಬಾಯಿ "ಸುಗ್ರೀವ ಸಖ್ಯ" ವನ್ನೇ ವಾಚನ ಮಾಡಲು ಸಿದ್ಧರಾದರು.

"ಸುಗ್ರೀವ ಸಖ್ಯ" ವಾಚನವಾಯಿತು. ಹನುಮಂತಯ್ಯನವರು ಅಷ್ಟು ಹೊತ್ತು ಕಣ್ಣು ಮುಚ್ಚಿ, ಕೈ ಮುಗಿದುಕೊಂಡೇ ಕುಳಿತು ತನ್ಮಯರಾಗಿ ವಾಚನ ಕೇಳುತ್ತಿದ್ದರು ಆ ಚಿತ್ರ ಹನುಮಂತಯ್ಯನವರನ್ನು ನೆನೆದಾಗಲೆಲ್ಲ ಕಣ್ಣು ಮುಂದೆ ಬಂದು ನಿಲ್ಲುತ್ತದೆ.

ವಿಧಾನ ಸೌಧದ ಮೇಲೆ "ಸರ್ಕಾರದ ಕೆಲಸ ದೇವರ ಕೆಲಸ" ಎಂದು ಸುವರ್ಣಾಕ್ಷರಗಳಲ್ಲಿ ಕೆತ್ತಿಸಿದ ಮಹಾನುಭಾವರಲ್ಲವೇ ಹನುಮಂತಯ್ಯ.

ಹನುಮಂತಯ್ಯ ಸಾಹಿತ್ಯಾಭಿಮಾನಿ

ಇದೇ ಸಂದರ್ಭದಲ್ಲಿ ನನ್ನ ನೆನಪು ಇನ್ನೊಂದು ಸಂದರ್ಭಕ್ಕೆ ಜಿಗಿಯುತ್ತಿದೆ. ಹನುಮಂತಯ್ಯ ಕ್ಯಾಸೆಂಬಳ್ಳಿ ಚಂಗಲರಾಯ (ಕೆ. ಸಿ.) ರೆಡ್ಡಿಯವರಿಂದ 1952–53 ರಲ್ಲಿ ಮುಖ್ಯ ಮಂತ್ರಿ ಅಧಿಕಾರ ಸೂತ್ರವನ್ನು ವಹಿಸಿಕೊಂಡರು. ಆ ದಿನವೇ ಹನುಮಂ ತಯ್ಯನವರ ಸಹಪಾಠಿ ಗೆಳೆಯ ಭೂಪಾಲಂ ಪುಟ್ಟ ನಂಜಪ್ಪನವರು, ನೆಹರೂ ನಗರದ ತಮ್ಮ ಅಳಿಯ ತಲ್ಲಮಂ ನಂಜುಂಡಯ್ಯ ಶೆಟ್ಟಿ, ಮಗಳು ಸುಭದ್ರಮ್ಮ, ಇವರ ಮನೆ

ಯಲ್ಲಿ ಒಂದು ಆತ್ಮೀಯ ಔತಣವನ್ನು ಏರ್ಪಡಿಸಿದರು. ಸಂಜೆಯ ಕಾರ್ಯಕ್ರಮ ಶಕುಂತಲಾಬಾಯಿ ಕುಮಾರ ವ್ಯಾಸ ಭಾರತದಿಂದ ಸ್ವಲ್ಪ ಕಾಲ ವಾಚನ ಮಾಡಬೇಕೆಂದು ನಿಗದಿಯಾಗಿತ್ತು. ವಾಚನ ಪ್ರಾರಂಭವಾಗುವ ಕಾಲದಲ್ಲಿ "ಯಾವ ಭಾಗ ವಾಚನ ಮಾಡುವಿರಿ ?" ಎಂದು ಹನುಮಂತಯ್ಯ ಪ್ರಶ್ನಿಸಿದರು. ಶಕುಂತಲಾಬಾಯಿ "ಕೃಷ್ಣ ಸಾರಥ್ಯ ಭಾಗ" ಎಂದು ಉತ್ತರಿಸಿದರು. "ಅದು ಬೇಡ, ಊರ್ವಶಿಯ ಶಾಪ ಪ್ರಸಂಗ ಓದಿ" ಎಂದರು. ಅದೇ ಕಥಾಭಾಗವನ್ನು ಶಕುಂತಲಾಬಾಯಿ ವಾಚನ ಮಾಡಿದರು.

ಹನುಮಂತಯ್ಯನವರು ಮುಖ್ಯ ಮಂತ್ರಿ ಪದವಿ ಸೂತ್ರ ಹಿಡಿದ ದಿವಸ ಶಕುಂತಲಾಬಾಯಿ, ಅವರ ಸಂತೋಷಕ್ಕಾಗಿ ಕುಮಾರ ವ್ಯಾಸ ಭಾರತ ವಾಚನ ಮಾಡಿದರು. ಹನುಮಂತಯ್ಯ ಮುಖ್ಯ ಮಂತ್ರಿ ಪದವಿಯ ಅಧಿಕಾರ ಸೂತ್ರವನ್ನು ಬಿಟ್ಟು ಕೊಡುವ ಕಡೆಯ ದಿವಸ ಸಂಜೆಯೂ, ಹನುಮಂತಯ್ಯ ಮುಖ್ಯ ಅತಿಥಿಯಾಗಿದ್ದ ಸಭೆಯಲ್ಲಿ ಕುಮಾರ ವ್ಯಾಸ ಭಾರತ ವಾಚನ ಮಾಡಿದರು. ಬೆಂಗಳೂರು ನಗರದ ಹೃದಯದಲ್ಲಿರುವ ಗೊಲ್ಲರ ಪೇಟೆಯಲ್ಲಿ ಒಂದು ಸಮಾರಂಭ, ಹನುಮಂತಯ್ಯ ದಯಮಾಡಿಸಿದ್ದರು. ಸ್ಥಿತಪ್ರಜ್ಞರಂತೆ ಕೂತಿದ್ದರು. ಕಾವ್ಯ ವಾಚನದಲ್ಲಿ ತಲ್ಲೀನರಾಗಿದ್ದರು, ಅನಂತರ ಭಾಷಣ ಮಾಡಿದರು. ಉದ್ವೇಗಕ್ಕೆ ಎಡೆಯೇ ಇರಲಿಲ್ಲ.

ಮುಖ್ಯ ಮಂತ್ರಿ ಪದವಿಯಿಂದ ಹೊರಬಂದ ಮೇಲೆ ಹನುಮಂತಯ್ಯ ಕೇಂದ್ರ ಸರ್ಕಾರದಲ್ಲಿ ರೈಲು ಮಂತ್ರಿಯಾದರು. ಆಮೇಲೆ ಇನ್ನೇನೋ ಮಂತ್ರಿಯಾದರು. ಅಲ್ಲಿಂದ ನಿವೃತ್ತರಾದರು. ಆಮೇಲೂ ಆಗಾಗ ನಡೆಯುತ್ತಿದ್ದ ಶಕುಂತಲಾಬಾಯಿಯ ಕಾವ್ಯವಾಚನಗಳನ್ನು ಕೇಳಿ ಸಂತೋಷಪಡುತ್ತಿದ್ದರು. ನನ್ನನ್ನು ಕಂಡಾಗಲೆಲ್ಲ ಆತ್ಮೀಯವಾಗಿಮಾತಾಡಿಸುತ್ತಿದ್ದರು,

ಕನ್ನಡ ಸಾಹಿತ್ಯ ಪರಿಷತ್ತಿನ ಶಾಖೆ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಸಮಿತಿ 1979 ರಲ್ಲಿ ಜುಲೈ 8 – 9 ಎರಡು ದಿವಸಗಳು ಶಕುಂತಲಾಬಾಯಿಯ ಅಧ್ಯಕ್ಷತೆಯಲ್ಲಿ ಅಖಿಲ ಕರ್ನಾಟಕ ಎರಡನೆಯ ಗಮಕ ಸಮ್ಮೇಳನವನ್ನು ದಿವಾನ್ ರಂಗಾಚಾರ್ಲು ಮೆಮೋರಿಯಲ್ ಹಾಲ್ ಸಭಾಂಗಣದಲ್ಲಿ ನಡೆಸಿತು. ಹನುಮಂತಯ್ಯ ಮುಕ್ತಾಯ ಸಮಾರಂಭಕ್ಕೆ ದಯಮಾಡಿಸಿದ್ದರು. "ಗಮಕ ಗಂಗಾ" ಎಂಬ ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಿದರು. ಗಮಕ ಕಲಾಭಿವೃದ್ಧಿಗಾಗಿ ತಾವು ಶ್ರಮಿಸಿದ ಬಗೆಯನ್ನು ವಿವರಿಸಿದರು. ನಾವು, ಅನಂತರ ಹನುಮಂತಯ್ಯನವರನ್ನು ಕಾಣಲಿಲ್ಲ ಕೇಳಲಿಲ್ಲ.

ಹನುಮಂತಯ್ಯನವರು 1981 ರಲ್ಲಿ ಇಹಲೋಕ ತ್ಯಜಿಸಿದರು. ಅವರು ನಮ್ಮನ್ನಗಲಿದುದು ಕನ್ನಡ ನಾಡಿಗೆ ಅಪಾರ ನಷ್ಟ. ದೇಹ ನಶ್ವರವಾದ್ದರಿಂದ ಅವರ ಕಾಯ ನಮ್ಮ ಕಣ್ಮುಂದಿಲ್ಲ. ಆದರೆ ಹನುಮಂತಯ್ಯನವರು ಮಾಡಿದ ಶಾಶ್ವತ ಕೆಲಸಗಳು ನಮ್ಮ

ಕಣ್ಣು ಮುಂದೆ ಇವೆಯಲ್ಲ ! ಕುಮಾರ ವ್ಯಾಸ ಭಾರತವನ್ನು ಅತಿ ಅಗ್ಗವಾಗಿ 2 ರೂ ಪಾಯಿಗಳಿಗೆ ಕೊಡುವಂತೆ ಮಾಡಿ ಕನ್ನಡಿಗರ ಮನೆ ಮನೆಯಲ್ಲೂ ಕುಮಾರವ್ಯಾಸ ನೆಲೆಸುವಂತೆ ಮಾಡಿದರಲ್ಲ ! ಇದು ಸಾಮಾನ್ಯ ಕೆಲಸವೇ ? ಜಗದ್ಭವ್ಯ ಸೌಂದರ್ಯ ದಾಗರ ವಿಧಾನ ಸೌಧವನ್ನು ಕಟ್ಟಿದರಲ್ಲ ! ಇದು ಸಾಮಾನ್ಯ ಕೆಲಸವೇ ? ಬೆಂಗಳೂರು ಬಡಾವಣೆಯ ಹನುಮಂತನಗರದ ಗುಡ್ಡದ ಮೇಲಿದ್ದ ಹನುಮಂತರಾಯರ ಗುಡಿಯನ್ನು ಕಲಾ ಸೌಂದರ್ಯದ ಬೀಡನ್ನಾಗಿ ಜೀರ್ಣೋದ್ಧಾರ ಮಾಡಿಸಿದರಲ್ಲ! ಇದು ಸಾಮಾನ್ಯ ಕೆಲಸವೇ ? ಮದ್ದೂರಿನ ಬಳಿ ಶಿವಪುರದಲ್ಲಿ 1938 ರಲ್ಲಿ ಟಿ. ಸಿದ್ಧಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ನಡೆದ ಧ್ವಜ ಸತ್ಯಾಗ್ರಹದಲ್ಲಿ ಹೋರಾಡಿ ಹೋರಾಟವೆಸಗಿದ ಯೋಧರ ನೆನಪಿಗಾಗಿ ಸ್ಮಾರಕ ಸ್ತೂಪವನ್ನು ಎತ್ತಿಸಿದರಲ್ಲ, ಇದು ಸಾಮಾನ್ಯ ಕೆಲಸವೇ ?.

ರಾಜಕೀಯದ ಹನುಮಂತಯ್ಯನವರನ್ನು ನಮ್ಮ ಜನ ಮರೆಯಬಹುದು. ಸಾಹಿತ್ಯ ಪ್ರೇಮಿ, ಸೌಂದರ್ಯೋಪಾಸಕ, ಹನುಮಂತಯ್ಯನವರು ವಿಧಾನ ಸೌಧ ಹನುಮಂತರಾಯನ ಗುಡ್ಡದ ಹನುಮಂತರಾಯ ದೇವಸ್ಥಾನಗಳು ಇರುವಷ್ಟು ಕಾಲವೂ, ನಮ್ಮ ಜನರ ಹೃನ್ಮನಗಳಲ್ಲಿ ಉಳಿದಿರುತ್ತಾರೆ ಎಂಬುದರಲ್ಲಿ ಸಂಶಯವಿಲ್ಲ.

ಶಕುಂತಲಾಬಾಯಿ ಮೈಸೂರು ರಾಜ್ಯದ (ಈಗ ಕರ್ನಾಟಕ) ಎಲ್ಲ ರಾಜ್ಯಪಾಲರ, ಎಲ್ಲ ಮುಖ್ಯ ಮಂತ್ರಿಗಳ ಸಮ್ಮುಖದಲ್ಲಿ ಒಂದಲ್ಲ ಒಂದು ಸಂದರ್ಭದಲ್ಲಿ ಕಾರ್ಯ ಕ್ರಮದಲ್ಲಿ ಭಾಗವಹಿಸಿದ್ದಾರೆ. ಸಾಹಿತ್ಯ–ಸಾಂಸ್ಕೃತಿಕ ಸೇವೆ ಸಲ್ಲಿಸಿ ಧನ್ಯರಾಗಿದ್ದಾರೆ.

ಕರ್ಣಾಟಕದಲ್ಲಿ ಗಮಕ ಯಾತ್ರೆ

೧. ಉತ್ತರ ಕರ್ಣಾಟಕ ಪ್ರವಾಸ

"ಬಳಸಿ ಬಂದೆನು ಸುತ್ತ ಕನ್ನಡದ ನಾಡುಗಳ ಸಿರಿಯನೋಡುತ್ತ
ತಾಯಡಿಯ ಹುಡಿಯ ತಲೆಗಾನುತ್ತ, ಹರಕೆಯ ಪವಿತ್ರ ಯಾತ್ರೆಯಲಿ,
ಏನು ಚೆಲುವಿನ ನಾಡು ! ಚೆಲುವ ಚೆಲ್ಲುವ ನಾಡು ಕನ್ನಡದ ನಾಡು" ಶ್ರೀ

ನಾರಾಯಣ ದೇವರ ಕೆರೆಯಲ್ಲಿ ಮೊಟ್ಟಮೊದಲ ಕಾವ್ಯವಾಚನ

ಈಗ ತುಂಗಭದ್ರ ಜಲಾಶಯದಲ್ಲಿ ಮುಳುಗಡೆಯಾಗಿರುವ ಬಳ್ಳಾರಿ ಜಿಲ್ಲೆಯ ಹೊಸಪೇಟೆಯ ನಾರಾಯಣದೇವರಕೆರೆ ಗ್ರಾಮದ ನಾಡಹಬ್ಬ, ಕರ್ಣಾಟಕದಲ್ಲಿ ಶಕುಂತಲಾಬಾಯಿಯ ಗಮಕವಾಚನ ಪ್ರಚಾರಕ್ಕೆ ಪಾಣಿಪೀಠವಾಯಿತು. ಹರಪನಹಳ್ಳಿಯ ಕಡೆ ಜನಪ್ರಿಯರಾಗಿರುವ ಚಿಕ್ಕೇರೂರು ಭೀಮಸೇನಾಚಾರ್ಯರು, ಅವರ ಮಿತ್ರ ಹೊಸಪೇಟೆಯ ವಕೀಲರಾಗಿದ್ದ ಹುಬ್ಬಳ್ಳಿಯ ಗೋವಿಂದಾಚಾರ್ಯರು, 1947 ರಲ್ಲಿ ನಮ್ಮ ಕಾವ್ಯವಾಚನವನ್ನು ನಾರಾಯಣದೇವರಕೆರೆಯ ನಾಡಹಬ್ಬದಲ್ಲಿ ಏರ್ಪಡಿಸುವುದಕ್ಕೆ ಕಾರಣರಾಗಿದ್ದರು. ಭೀಮಸೇನಾಚಾರ್ಯರು ಸಾಹಿತ್ಯಾಭಿಮಾನಿ, ಗಮಕ ಪ್ರೇಮಿ, ನಾಟಕ ಕಲಾವಿದ. ಗೋವಿಂದಾಚಾರ್ಯರು, ಸಾಹಿತ್ಯ ಗಮಕಗಳಲ್ಲಿ ಆಸಕ್ತರು. ಇಬ್ಬರೂ ಆಪ್ತ ಗೆಳೆಯರು. ಕನ್ನಡ ಸಾಹಿತ್ಯ ಪರಿಷತ್ತಿನ ಸಮ್ಮೇಳನಗಳಿಗೆ, ಬೆಂಗಳೂರಿನಲ್ಲಿ ನಡೆಯುತ್ತಿದ್ದ ವಸಂತ ಸಾಹಿತ್ಯೋತ್ಸವಗಳಿಗೆ ತಪ್ಪದೆ ಬರುತ್ತಿದ್ದರು ಕನ್ನಡಸಾಹಿತ್ಯ ಪರಿಷತ್ತಿನ ಕಾರ್ಯಗಳಲ್ಲಿ ಭಾಗವಹಿಸುತ್ತಿದ್ದು ನನಗೂ ಪರಿಚಿತರಾಗಿ ಗೆಳೆಯರಾಗಿದ್ದರು.

ನಾಡಹಬ್ಬದ ಕರೆಬಂದಾಗ, ನಮ್ಮ ಮೂರನೆಯ ಗಂಡುಮಗು ಮೆದುಳಿನ ದುರ್ಬಲರೋಗಕ್ಕೆ ತುತ್ತಾಗಿ ಹಾಸಿಗೆ ಕಚ್ಚಿತ್ತು. ಶಕುಂತಲಾಬಾಯಿ ಇಪ್ಪತ್ನಾಲ್ಕು ಗಂಟೆಗಳೂ ತನ್ನ ಪರಾವಲಂಬಿ ಶಿಶುವಿನ ಶುಶ್ರೂಷೆಯಲ್ಲಿ ತೊಡಗಿದ್ದರು. ಹಗಲಲ್ಲಿ ಮನೆಯ ಕೆಲಸಗಳ ದುಡಿತ, ರಾತ್ರಿಯೆಲ್ಲಾ ನಿದ್ದೆಗೆಟ್ಟು ಮಗುವನ್ನು ನೋಡಿಕೊಳ್ಳೋಣ, ಈ ದೇಹಶ್ರಮ ಮನೋಚಿಂತೆಗಳಲ್ಲಿ ಆಕೆ ಹಣ್ಣಾಗಿ ಹೋದರು. ತಮ್ಮ 26ನೇ ವಯಸ್ಸಿನ ಯೌವನದಲ್ಲಿ ಆರೋಗ್ಯ ಕೆಡಿಸಿಕೊಂಡು, ತಲೆಗೂದಲು ನರೆತ ಅಜ್ಜಿಯಾಗಿಬಿಟ್ಟರು. ಇಂಥ ಸಮಯದಲ್ಲಿ ನಾರಾಯಣದೇವರ ಕೆರೆಯಿಂದ ಆಹ್ವಾನ. ನಾವು ಬರಲು ಸಾಧ್ಯವಿಲ್ಲವೆಂದು ಪತ್ರ ಬರೆದುಹಾಕಿದೆ. ಭೀಮಸೇನಾಚಾರ್ಯರೆ ಪ್ರತ್ಯಕ್ಷವಾದರು. "ನಿಮ್ಮ ಮಗುವಿನ ಔಷಧ, ಪಥ್ಯ, ಶುಶ್ರೂಷೆ, ಎಲ್ಲ ನಮ್ಮ ಭಾರ. ನಾಡಹಬ್ಬದ ಆಹ್ವಾನ ಒಪ್ಪಿಕೊಳ್ಳಲೇಬೇಕು" ಎಂದು ಬಲವಂತಪಡಿಸಿದರು. ನಾವು ಒಪ್ಪಿಕೊಳ್ಳಲೇಬೇಕಾಯಿತು.

ನಾರಾಯಣದೇವರಕೆರೆಯ ನಾಡಹಬ್ಬ ವಿಜೃಂಭಣೆಯಿಂದ ನಡೆಯಿತು. ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯಾಗಿದ್ದ, ಗ್ರೀಕ್ ದುರಂತ ನಾಟಕ ಸಫೋಕ್ಲಿಯಸನ ಭಾಷಾಂತರಕಾರ "ಆಂತಿಗೊನೆ" ಖ್ಯಾತ ಕ. ವೆಂ. ರಾಘವಾಚಾರ್ಯರು, ಕೊಪ್ಪಳದ ಹರಿಕಥಾ ವಿದ್ವಾಂಸ ಪಾಂಡುರಂಗಾಚಾರ್ಯ, ನಾವು, ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳು. ನಾನು ಕುಮಾರವ್ಯಾಸನನ್ನು ಕುರಿತು ಉಪನ್ಯಾಸವಿತ್ತೆ. ಶಕುಂತಲಾಬಾಯಿ "ದ್ರೌಪದೀ ಮಾನಸಂರಕ್ಷಣ" ಕಥಾಭಾಗವನ್ನು ಗಮಕ ಮಾಡಿದರು. ನಮ್ಮ ಕಾರ್ಯಕ್ರಮಗಳು ಜನಪ್ರಿಯವಾಯಿತು.

ನಾರಾಯಣದೇವರ ಕೆರೆಯ ನಾಡಹಬ್ಬಕ್ಕೆ ಭೀಮಸೇನಾಚಾರ್ಯರ ಕಿರಿಯಣ್ಣ ಸ್ವಾಮಿರಾಯಾಚಾರ್ಯರು ಬಂದಿದ್ದರು. ಅವರು ಹೊಸಪೇಟೆಯ ಟೌನ್‌ಬ್ಯಾಂಕಿನ ಕಾರ್ಯನಿರ್ವಾಹಕರು, ತಮ್ಮ ತಮ್ಮನಂತೆಯೇ ಅವರೂ ಸಾಹಿತ್ಯಪ್ರೇಮಿ, ಗಮಕ ಕಲಾಭಿಮಾನಿ, ನಾಟಕ ಕಲಾವಿದ. ಶಕುಂತಲಾಬಾಯಿಯ ಗಮಕ ಪ್ರೌಢಿಮೆಯನ್ನು ತುಂಬ ಮೆಚ್ಚಿಕೊಂಡರು. ಹೊಸಪೇಟೆಗೆ ನಮ್ಮನ್ನು ಕರೆದುಕೊಂಡು ಹೋದರು. ಹಂಪೆಯ ದರ್ಶನ ಮಾಡಿಸಿದರು. ಅವರ ಔದಾರ್ಯವೇನು ? ದಾರಿಯ ಬುತ್ತಿಗೆ–ಬೆಣ್ಣೆ ಕಾಸಿದ ತುಪ್ಪದಲ್ಲಿ ಅದ್ದಿ ಮುಳುಗಿಸಿದ 50–60 ಇಡ್ಲಿಗಳು, ಕರಂಕರಂ ಅವಲಕ್ಕಿ, ಎರಡು ಮೂರು ತಿರುಪಿನ ತಂಬಿಗೆಗಳಲ್ಲಿ ಗಟ್ಟಿಹಾಲಿನಲ್ಲಿ ತಯಾರಿಸಿದ ಒಳ್ಳೆ ಕಾಫಿ.

ಪಂಪಾಕ್ಷೇತ್ರದ ಆರಾಧ್ಯ ದೈವ ವಿರೂಪಾಕ್ಷಸ್ವಾಮಿಯ ದರ್ಶನದಿಂದ ನಮ್ಮ ಪಂಪಾಯಾತ್ರೆ ಪ್ರಾರಂಭವಾಯಿತು. ಹರಿಹರ ರಾಘವಾಂಕರ ಪರಮಪ್ರಿಯ ಆರಾಧ್ಯ ಸ್ವಾಮಿ ಪಂಪಾ ವಿರೂಪಾಕ್ಷ ಲಿಂಗದರ್ಶನದಿಂದ ಪುಳಕಿತಗೊಂಡ ಶಕುಂತಲಾಬಾಯಿ ಹರಿಹರನ ಪಂಪಾಶತಕದಿಂದ ಸ್ತೋತ್ರ ಪ್ರಾರಂಭಿಸಿದರು.

ಕರೆವುದದೆಂದು ಕಾಲ್ನಡಿಸಿಕೊಳ್ವುದದೆಂದು ದಯಾಕಟಾಕ್ಷದಿಂ
ಪೊರೆವುದದೆಂದು ಮೆಲ್ನುಡಿಗಳಿಂ ಮುದವೀವುದದೆಂದು ಸೋಂಕಿನಿಂ
ಹರಿವುದದೆಂದು ಸಂತಸದೆ ಪೆರ್ಚಿಪುದೆಂದು ಮನಸ್ವಿ ನೀಂ ಕರಂ
ಕರಗಿಪುದೆನ್ನನೆಂದೊಸೆದು ಪೇಳೆನಗಿಂದೆಲೆ ಹಂಪೆಯಾಳ್ದನೇ

ನೋಡದ ಕಣ್ಗಳೇಕೆ ಸಲೆ ಕೇಳದ ಕರ್ಣಮದೇಕೆ ಭಕ್ತಿಯಿಂ
ಪಾಡದ ಬಾಯದೇಕೆ ಪೆಸರ್ಗೊಳ್ಳದ ಜಿಹ್ವೆಯದೇಕೆ ಪೂಜೆಯಂ
ಮಾಡದ ಕೈಗಳೇಕೆ ನೆರೆ ಸೋಂಕದ ದೇಹವದೇಕೆ ಕೂಡಿಯು
ಳ್ಳಾಡದ ಚಿತ್ತವೇಕೆನಗೆ ಹಂಪೆಯ ಲಿಂಗವೆ ನಿಮ್ಮೊಳಿಳ್ಕೆಯಿಂ

ನವನಿಧಿ ಬಾರ ಪುಣ್ಯನಿಧಿ ಬಾರ ಮಹಾನಿಧಿ ಬಾರ ಭಕ್ತರು–
ತ್ಸವನಿಧಿ ಬಾರ ಭಾಗ್ಯನಿಧಿ ಬಾರ ಕೃಪಾನಿಧಿ ಬಾರ ಕಾಂತಿಯು–
ದ್ಭವನಿಧಿ ಬಾರ ನಿತ್ಯನಿಧಿ ಬಾರ ಕೃಪಾನಿಧಿ ಬಾರ ಸತ್ಯಸಂ
ಭವನಿಧಿ ಬಾರ ತತ್ವನಿಧಿ ಬಾರ ಬಾರೆಲೆ ಬಾರೆಲೆ ಪಂಪೆಯಾಳ್ದನೇ

ಹರನಂ ಶಂಕರನಂ ಶಶಾಂಕಧರನಂ ಕಾಪಾಲಿಯಂ ಕಾಲಸಂ
ಹರನಂ ಶೂಲಿಯನೀಶನಂ ಗಿರೀಶನಂ ಭಾಳಾಕ್ಷನಂ ನೀಲಕಂ
ಧರನಂ ಭರ್ಗನನುಗ್ರನಂ ಪರಮನಂ ಸರ್ವಜ್ಞನಂ ಶಂಭುವಂ
ಗಿರಿಜಾವಲ್ಲಭನಂ ಮನೋಹರನಂ ಕಂಡೆಂ ವಿರೂಪಾಕ್ಷನಂ

ಈಗ ಹಾಳುಹಂಪೆಯಾಗಿ ಪಾಳುಗೊಂಪೆಯಾಗಿರುವ ಹಂಪೆ, ಹಿಂದೊಮ್ಮೆ ವಿಜಯನಗರ ಸಾಮ್ರಾಜ್ಯದ ಮಹಾಪ್ರಸಿದ್ಧ ರಾಜಧಾನಿ ನಗರವಾಗಿದ್ದು, ಈಗ ಹಾಳು ಹಾಳು ಸುರಿಯುತ್ತಿವೆ. ಆದರೂ "ಶ್ರೀ" ಅವರು ತಮ್ಮ "ಕನ್ನಡತಾಯ ನೋಟದಲ್ಲಿ" ಹೇಳಿಕೊಂಡಂತೆ . . . . ಒಳಗಿರ್ಪುದಿನ್ನುಂ—

ಒಳಗಿದ್ದು ಹೊರಗಣ್ಗೆ ಕಾಣಿಪುದು ಮತ್ತೊಮ್ಮೆ ಆ ತಾಯ ನೋಟಂ. ನಾವು ಪಂಪಾಕ್ಷೇತ್ರವನ್ನೆಲ್ಲ ಸುತ್ತಾಡಿದೆವು. ಹಂಪೆಯ ಬಜಾರು, ಚಕ್ರತೀರ್ಥ, ಕೋದಂಡರಾಮ ದೇವಸ್ಥಾನ, ಸೂಳೆಬಜಾರು, ಅಚ್ಯುತ ರಾಮಸ್ವಾಮಿ ದೇವಸ್ಥಾನ, ಸೀತೆಯ ಸೆರಗು, ವಿಜಯವಿಠಲ ದೇವಸ್ಥಾನ, ಪುರಂದರ ದಾಸರ ಮಂಟಪ, ಸಾಸಿವೆ ಕಾಳು ಗಣಪ, ಕೈಕಾಲು ಮುರಿದುಕೊಂಡಿರುವ ಉಗ್ರ ನರಸಿಂಹ, ಬಡವಿಲಿಂಗ, ಹಜಾರ ರಾಮಸ್ವಾಮಿ ದೇವಸ್ಥಾನ, ರಾಣಿಯರ ನಿವಾಸಗಳು, ಕಮಲಾ ಮಹಲ್, ಗಜಶಾಲೆ, ಆಸ್ಥಾನ ಮಂದಿರ, ಮಹಾನವಮಿ ದಿಬ್ಬ, ಎಲ್ಲ ಎಲ್ಲ ವಿಜಯನಗರ ಸಾಮ್ರಾಜ್ಯದ ಗತವೈಭವ ನಾಮಾವಶೇಷಗಳನ್ನು ಒಂದೂ ಬಿಡದೆ ನೋಡಿದೆವು.

"ನಿದ್ದೆ ಬಾರದು ಇನ್ನು ಈ ಜನ್ಮಕೆ
ಬಿದ್ದ ಹಂಪೆಯ ಕಂಡು ಕಂಗೆಟ್ಟೆನು"

ಎಂಬ "ಹೊಯಿಸಳ"ರ ಪದ್ಯ "ಹಂಪೆಗೆ" ನನ್ನ ನೆನಪನ್ನು ತಿವಿಯಿತು.

"ಶತಮಾನ ನಾಲ್ಕಾಯ್ತು ವಿಜಯನಗರಿ
ಅತಿನಿದ್ದೆ ಗತಿಹೊಂದಿ ಅಸುರ ನಗರಿ
ಮತಿಯಿತ್ತು ಧೃತಿಯಿತ್ತು ಕನ್ನಡಿಗರೆ
ಗತಿಸಿರುವ ಕೀರ್ತಿಪದ ಗಳಿಸಿಕೊಳಿರಿ"

ಸಾಲುಗಳನ್ನು ನೆಲುಕಾಡಿದೆ. ಕನ್ನಡಿಗರಲ್ಲಿ ಕನ್ನಡತನವನ್ನು ಮರುವುಟ್ಟುಬಡೆದಂತೆ ಗಮಕದಲ್ಲಿ ಏಕೆ ತೊಡಗಬಾರದೆಂದು ಒಳದನಿ ನುಡಿಯಿತು. "ಕರ್ಣಾಟಕ ದರ್ಶನ"ವೆಂಬ ಗಮಕ ರೂಪಕ ರಚಿಸುವ ಪ್ರೇರೇಪಣೆಯಾಯಿತು.

ಸ್ವಾಮಿರಾಯಾಚಾರ್ಯರು ಹೊಸಪೇಟೆಯಲ್ಲಿ ನಮಗೆ ತೋರಿಸಿದ ಪ್ರೀತಿ ವಿಶ್ವಾಸಗಳು ವರ್ಣನಾತೀತ. ಶಕುಂತಲಾಬಾಯಿಯನ್ನು ತಮ್ಮ ಸಹೋದರಿಯಂತೆ ಆದರಿಸಿದರು. ನಾವು ಅವರಿಂದ ಬೀಳ್ಕೊಂಡು ಬೆಂಗಳೂರು ಸೇರುವ ಸಮಯದಲ್ಲಿ ನಮ್ಮೆಲ್ಲರ ಕಣ್ಣುಗಳಲ್ಲಿ ಅಗಲಿಕೆಯ ನೀರಿನ ಕೋಡಿಯೇ ಹರಿಯಿತು.

ಹೊಸಪೇಟೆಯಿಂದ ಬೆಂಗಳೂರಿಗೆ ಬಂದೆವು. ಮಾರನೆಯ ದಿನ ಬೆಳಗೆದ್ದು ನೋಡಿಕೊಂಡರೆ ನನ್ನ ಕೈಮೈಮೇಲೆಲ್ಲ ಕಜ್ಜಿಹುಣ್ಣುಗಳು ದುಬುದುಬು ಎದ್ದು ಕಾಣುತ್ತಿದ್ದವು. ಬಿಳಿಮುತ್ತುಗಳೋ ಎಂಬಂತೆ ಕೀವುಗಟ್ಟಿದ್ದವು. ಎಂಟು ಹತ್ತು ತಿಂಗಳು ನರಳಿದೆ. ನಾರಾಯಣದೇವರ ಕೆರೆ–ಹೊಸಪೇಟೆ–ತುಂಗಭದ್ರೆ ನದಿಗಳ ನೀರು ಉಪ್ಪು ಅದರ ಫಲವೆಂದರು ಜನ. ಕೈಗೆ ಬಿಳಿಬಟ್ಟೆ ಕಟ್ಟಿ ಓಡಾಡುತ್ತಿದ್ದೆ. ನಾನು

ಸಂಪಾದಕನಾಗಿ ಆದರ್ಶ ಮಾಸಪತ್ರಿಕೆಯೆಂದು ಜನಪ್ರಿಯವಾಗಿದ್ದ "ವಾಣಿ" ಮಾಸಪತ್ರಿಕೆ ನನ್ನ ತಾಪತ್ರಯದಲ್ಲಿ ಅರೆಜೀವವಾಗಿ ಹೋಯಿತು.

ಶಕುಂತಲಾಬಾಯಿ ಕಜ್ಜಿಬುರುಕ ಗಂಡನನ್ನು ನೋಡಿಕೊಳ್ಳಬೇಕು. ನಿತ್ಯ ಗಂಡಾಂತರದಲ್ಲಿರುವ ಮಗುವನ್ನು ಸಂಭಾಳಿಸಬೇಕು. ಕನ್ನಡ ಸಾಹಿತ್ಯ ಪರಿಷತ್ತಿನ ಗಮಕ ತರಗತಿಯನ್ನು ಮನೆಯಲ್ಲಿ ನಡೆಸಬೇಕು. ಇಷ್ಟರ ಮಧ್ಯೆ ಬಂದು ಹೋಗುವ ಸಾಹಿತಿ ಬಳಗ, ಬಂಧುಮಿತ್ರವರ್ಗವನ್ನು ಆದರಿಸಬೇಕು. ಮಹರಾಯತಿ ತುಟಿಎರಡು ಮಾಡದೆ ಸಂಸಾರವನ್ನು ಏಗಿಸಿದ ರೀತಿ ನೆನೆಸಿಕೊಂಡರೆ, ನನಗೆ, "ಸುಖೇದುಃಖೇ ಸಮೇಕೃತ್ವ ಲಾಭಾಲಾಭೌ ಜಯಾಜಯೌ" ಗೀತಾವಚನ ಸ್ಮರಣೆಗೆ ಬರುತ್ತದೆ.

"ಕೀರ್ತನಕೇಸರಿ" ಬಿ. ಶಿವಮೂರ್ತಿ ಶಾಸ್ತ್ರಿಗಳು ಕಾರಣಾಂತರಗಳಿಂದ ನಿಲ್ಲಿಸಿದ್ದ "ಸ್ವತಂತ್ರ ಕರ್ಣಾಟಕ" ವಾರಪತ್ರಿಕೆಯನ್ನು ಮತ್ತೆ ಪ್ರಕಟಿಸಲು ನಿಶ್ಚಯಿಸಿ ನನ್ನನ್ನು ಸಹಸಂಪಾದಕನಾಗುವಂತೆ ಕರೆದರು. ಒಂಟಿ ಸಲಗನಂತೆ ಯಾರ ಹಂಗೂ ಬೇಡದೆ ಬೆಳೆದಿದ್ದ ನಾನು "ಒಲ್ಲೆ" ಎಂದೆ. "ನಿಮ್ಮ ಸ್ವತಂತ್ರ ಪ್ರವೃತ್ತಿಗೆ ಧಕ್ಕೆ ತರುವುದಿಲ್ಲ. ನಂಬಿಕೆಗೆ ಅರ್ಹರಲ್ಲದವರನ್ನು ನಂಬಿ ನನ್ನ ಪತ್ರಿಕೆ ನಿಂತಿತು. ಪ್ರಾಮಾಣಿಕರು ಬೇಕು. ನೀವು ಬನ್ನಿ" ಎಂದು ಒತ್ತಾಯಿಸಿದರು. ಒಪ್ಪಿಕೊಂಡು "ಸ್ವತಂತ್ರ ಕರ್ಣಾಟಕ" ವಾರಪತ್ರಿಕೆಗೆ ಸಹಸಂಪಾದಕನಾದೆ. ಶಾಸ್ತ್ರಿಗಳು ತಮ್ಮ ಮಾತಿನಂತೆ ನಡೆದುಕೊಂಡರು. ನಾನು ಮನೆಯವನೆ ಆಗಿಹೋದೆ. ಶಿವಮೂರ್ತಿ ಶಾಸ್ತ್ರಿಗಳ ಮಗ ಚಿರಂಜೀವಿ ರೇಣುಕಪ್ರಸಾದನನ್ನು ನಾನು ನಾಲ್ಕೈದು ವರ್ಷಗಳ ಮಗುವಾಗಿದ್ದಾಗಿನಿಂದಾಗಲೂ ಬಲ್ಲವನಾಗಿದ್ದೆ. ಈಗ ಆತ ಹದಿನೆಂಟರ ಯುವಕ. ನನ್ನ ಮೇಲೆ ತುಂಬ ವಾತ್ಸಲ್ಯ. ಆತನನ್ನು 'ಅಪ್ಪಾಜಿ' ಯೆಂದೇ ಕರೆಯುತ್ತಿದ್ದೆ. ನಮ್ಮ "ಅಪ್ಪಾಜಿ" ಆತನ ಪತ್ನಿ "ಲೀಲಾವತಿ ಪ್ರಸಾದ್" ಈಗಲೂ ನಮಗೆ ಮನೆಯವರಂತೆಯೇ ನಡೆದುಕೊಳ್ಳುತ್ತಾರೆ

"ಸ್ವತಂತ್ರ ಕರ್ಣಾಟಕ" 16 ಪುಟಗಳ ಪತ್ರಿಕೆ. ಶಾಸ್ತ್ರಿಗಳು ಸಂಪಾದಕೀಯ ಪುಟವನ್ನು ಮಾತ್ರ ಬರೆಯುತ್ತಿದ್ದರು. ಅವರು ಸದಾ ಸಂಚಾರಿಗಳು. ಆದುದರಿಂದ ನಾನೇ ಮಿಕ್ಕ 15 ಪುಟಗಳನ್ನೂ ತುಂಬುತ್ತಿದ್ದೆ. ನಿಯಮಿತ ವೇಳೆಗೆ ಪತ್ರಿಕೆ ಪ್ರಕಟವಾಗುತ್ತಿತ್ತು. ಈ ಸಮಯದಲ್ಲಿ "ಯುಗಾದಿ ವಿಶೇಷ ಸಂಚಿಕೆ"ಯನ್ನು ತರಬೇಕೆಂದು ಆಲೋಚಿಸಿದೆ. ಕಡೆ ಘಳಿಗೆಯಲ್ಲಿ ರಾತ್ರಿ ಹಗಲೆನ್ನದೆ ಎರಡು ಮೂರು ದಿವಸ ದುಡಿಯಬೇಕಾಯಿತು.

ನಾಳೆ ಯುಗಾದಿ. ಹಿಂದಿನ ದಿನ ಬೆಳಗ್ಗೆ ಮನೆಬಿಟ್ಟೆ. "ರಾತ್ರಿ ಹೊತ್ತಾಗಬಹುದು ಮನೆಗೆ ಬರುವುದಕ್ಕೆ" ಎಂದೆ. ಹಾಸಿಗೆ ಹಿಡಿದಿದ್ದ ನನ್ನ ಕಂದನ ಮುಖ ನೋಡಿದೆ. ಅದಕ್ಕೆ ವಿಷಮಶೀತ ಜ್ವರ ಬೇರೆ ಕಾಲು ಹಾಕಿಕೊಂಡಿತ್ತು. ತುಂಬ ನಿತ್ರಾಣವಾಗಿತ್ತು ಸಾವಿನೊಡನೆ ಸರಸವಾಡುತ್ತಿತ್ತು ಜೀವ. ಆದರೆ ನನ್ನ ಕರ್ತವ್ಯ ? "ಸ್ಲತಂತ್ರ ಕರ್ಣಾ

ಟಕ"ದ ಯುಗಾದಿ ಸಂಚಿಕೆ ಕಾಲಕ್ಕೆ ಸರಿಯಾಗಿ ಮಾರುಕಟ್ಟೆ ಸೇರದಿದ್ದರೆ ನನ್ನ ಶ್ರಮವೆಲ್ಲ ವ್ಯರ್ಥ. ಆದುದರಿಂದ ನನ್ನ ಕಂದನ ಮುಖ ನೋಡಿ, ಅದರ ದುಃಖವನ್ನು ನನ್ನ ಕಣ್ಣಲ್ಲಿ ಹೀರಿಕೊಂಡು ಮನೆಬಿಟ್ಟೆ. ನನ್ನ ಕರ್ತವ್ಯ ಪೂರಯಿಸಿ ಅವೇಳೆ ರಾತ್ರಿ ಮನೆಗೆ ಬಂದೆ. ಮನೆಯಲ್ಲಿ ಶ್ಮಶಾನ ಮೌನ. ಹೊಸಲು ದಾಟಿ ಮನೆಯೊಳಗೆ ಕಾಲಿಟ್ಟೆನೋ ಇಲ್ಲವೋ ನನ್ನ ತಾಯಿ "ಪಾಂಡಣ್ಣ, ಮಗು ಹರಿಪಾದ ಸೇರಿಬಿಟ್ಟನಪ್ಪ" ಎಂದರು. ಸತ್ತಮಗು ಶಕುಂತಲಾಬಾಯಿಯ ತೊಡೆಯ ಮೇಲೆ ಮಲಗಿತ್ತು. ಆಕೆಯ ಕಣ್ಣಲ್ಲಿ ನೀರಿಲ್ಲ. ಬಾಯಲ್ಲಿ ಮಾತಿಲ್ಲ. ನಾನು? ನನ್ನೆದೆ ಕಲ್ಲಾಗಿತ್ತು. ಜನಪ್ರಿಯ ಡಾ|| ಎಂ. ಶಿವರಾಂ, ಕೊರವಂಜಿಯ ಸಂಪಾದಕ, ಅವರನ್ನು ಈ ಸಂದರ್ಭದಲ್ಲಿ ನೆನೆಸಿಕೊಳ್ಳುವುದು ನನ್ನ ಕರ್ತವ್ಯ. ಅವರು ತಮ್ಮ ವಿದ್ಯಾರ್ಥಿ ದೆಸೆಯಲ್ಲಿ ಡಾ|| ಗೋವಿಂದ ಸ್ವಾಮಿಯವರ ಜೊತೆಯಲ್ಲಿ ಬೆಂಗಳೂರಿನ ಅರಳೇಪೇಟೆಯ ಕೊಟ್ಟಿಗೆಗಲ್ಲಿಯಲ್ಲಿ ಒಂದು ಕೊಠಡಿ ಹಿಡಿದು ವಾಸವಾಗಿದ್ದರಂತೆ. ಆ ಕೊಠಡಿಯಿದ್ದ ಮನೆಯಲ್ಲಿ ನನ್ನ ಅತ್ತೆ ಮಾವಂದಿರ ಸಂಸಾರವಿತ್ತಂತೆ. ಶಕುಂತಲಾಬಾಯಿ ಆಗ ನಾಲ್ಕೈದು ವರ್ಷಗಳ ಕೂಸಂತೆ ಶಿವರಾಂ ಅವರ ಕೊಠಡಿಗೆ ಹೋಗಿ ಬರುವುದು ನಿತ್ಯ ವಾಡಿಕೆಯಾಗಿತ್ತಂತೆ. ಹೀಗೆ ಶಕುಂತಲಾಬಾಯಿಯನ್ನು ಚಿಕ್ಕಂದಿನಿಂದಲೂ ಬಲ್ಲರು. ಈಗ ನಮ್ಮ ಕಂದನಿಗೆ ಅವರೇ ವೈದ್ಯದನೆರವು ನೀಡುತ್ತಿದ್ದರು. ಒಂದು ಕಾಸೂ ತೆಗೆದುಕೊಳ್ಳಲಿಲ್ಲ. ಅವರು ಒಂದು ದಿವಸ "ಪಾಂಡುರಂಗರಾವ್, ಈಮಗು ಗಂಟಲ್ಲಪ್ಪ, ಎಂದಾದರೊಂದು ದಿನ ಕೈ ಕೊಡುತ್ತದೆ. ಬದುಕಿದರೋ? ದೀರ್ಘಕಾಲ ಹಾಸಿಗೆಯಲ್ಲಿ ನರಳುತ್ತದೆ." ಎಂದರು. ನಾನು "ಸಾರ್ ಈಕೂಸು ನಮ್ಮ ಕರುಳುಬಳ್ಳಿ. ಬದುಕಿರುವಷ್ಟು ದಿವಸ ಈ ಕೂಸನ್ನು ಶುಶ್ರೂಷೆ ಮಾಡುವುದು ನಮ್ಮ ಕರ್ತವ್ಯ. ನಮ್ಮನಂತರ ಈ ಕೂಸಿನ ಪಾಡೇನು? ಅಕ್ಕ ಅಣ್ಣ ಪರಾವಲಂಬಿ ಅನಾಥ ಶಿಶುವನ್ನು ತಂದೆತಾಯಿಗಳಂತೆ ನೋಡಿಕೊಳ್ಳುವರೆಂಬ ಭರವಸೆಯೇನು? ತಾವು ಈ ಕೂಸಿಗೆ ಈಗಲೇ ಏನಾದರೂ ಮುಕ್ತಿ ತೋರಿಸಿದರೆ. . . . . ." ಎಂದೆ ಹೃದಯವನ್ನು ಪಾಷಾಣ ಮಾಡಿಕೊಂಡು.

ಡಾ|| ಶಿವರಾಂ, "ಹುಚ್ಚಪ್ಪ, ಈಗೇಕೆ ಭವಿಷ್ಯದ ಚಿಂತೆ. ಮುಂದಿನ ಆಗುಹೋಗುಗಳನ್ನು ಯೋಚಿಸುತ್ತ ತಲೆಕೆಡಿಸಿಕೊಳ್ಳಬೇಡ." ಎಂದರು.

ಡಾ|| ಶಿವರಾಂ ಕರ್ಣಾಟಕ ರಾಜ್ಯದ ಸಾಹಿತ್ಯ ಅಕಾಡೆಮಿಯ ಗೌ|| ಅಧ್ಯಕ್ಷರಾಗಿದ್ದ ಕಾಲದಲ್ಲಿ ಶಕುಂತಲಾಬಾಯಿಗೆ ನಾಡು ನುಡಿಗಳಿಗೆ ಸಲ್ಲಿಸಿದ ಗಮಕಕಲಾ ಸೇವೆಗಾಗಿ ನಮ್ಮ ಸರಕಾರದಿಂದ 500 ರೂಪಾಯಿಗಳ ಗೌರವಧನದ ಮಾಸಾಶನ ದಯಪಾಲಿಸಿತು.

ನಮ್ಮ ಕೂಸು ಪರಾವಲಂಬಿಯಾಗಿ ದೀರ್ಘಕಾಲ ಬದುಕಲಿಲ್ಲ. ಯುಗಾದಿ ಹಬ್ಬದ ಹಿಂದಿನ ದಿನವೇ ಸ್ವಾಮಿ ಪಾದ ಸೇರಿತು. ಬೆಳಗಾಗಿತ್ತು. ನಾನೇ ನನ್ನ ಕಂದನ ಶವವನ್ನು ರುದ್ರ ಭೂಮಿಗೆ ಹೊತ್ತೆ. ಎರಡು ಅಡಿಗಳಷ್ಟು ಆಳ ಅಗೆದಿದ್ದ ಮಣ್ಣುಗುಳಿ

ಯಲ್ಲಿ ಇಳಿಸಿವೆ. ಎರಡು ವರ್ಷಗಳಷ್ಟು ಕಾಲ ತಾಯಿಯ ತೊಡೆಗಳ ಮೇಲೆ ಮಲಗಿದ್ದ ನಮ್ಮ ಕಂದಮ್ಮ ಈಗ ಮಣ್ಣಿನ ಹುಡಿಗಳ ಅಂಕದಲ್ಲಿ ಮಲಗಿತ್ತು. ಅದರ ಮೇಲೆ ಮೂರು ಹಿಡಿ ಮಣ್ಣು ತೂರಿವೆ. ಶಾಸ್ತ್ರವಂತೆ, ಶಾಸ್ತ್ರ! ಹಾಳು ಶಾಸ್ತ್ರ. ಮೂರು ಹಿಡಿ ಮಣ್ಣು ತೂರಿದೆ. ಋಣ ತೀರಿತ್ತು. ತುಟಿ ಬಿರಿಯಲಿಲ್ಲ, ಕಣ್ಣು ನೀರು ಹಣಕಿಸಲಿಲ್ಲ. ವಜ್ರ ಕಠೋರ ಹೃದಯನಾಗಿ ನನ್ನ ಕಂದನನ್ನು ಎವೆಯಿಕ್ಕದೆ ನೋಡುತ್ತಿದ್ದೆ. ಶ್ಮಶಾನ ದೂಳಿಗದಾಳಿನ ಕೈಸನಕೆ ನಿರ್ಲಿಪ್ತತೆಯಿಂದ ದಿಣ್ಣೆಯ ಮೇಲಿದ್ದ ಮಣ್ಣಿನ ರಾಶಿ ಯನ್ನು ರಪರಪ ಗುಳಿಗೆ ಎಳೆದು ನನ್ನ ಕಂದನನ್ನು ಮುಚ್ಚುತ್ತಿತ್ತು.

'ಮಕ್ಕಳ ಮಂಟಪದ' ಉದಯ

ನಮ್ಮ ಮಗು ಸತ್ತ ಕೆಲವೇ ತಿಂಗಳುಗಳಲ್ಲಿ 1948 ರ ಜೂನ್ 15 ನೆಯ ದಿನಾಂಕ ಸಂಜೆ ಮಗುವಿನ ಸ್ಮಾರಕವಾಗಿ, ಬೆಂಗಳೂರಿನ ನೆಹರೂ ನಗರ ಬಡಾವಣೆ ಯಲ್ಲಿ "ಮಕ್ಕಳ ಮಂಟಪ" ಎದ್ದಿತು. ಶಿಶುಶಿಕ್ಷಣ, ಶಿಶುಸಾಹಿತ್ಯ ನಿರ್ಮಾಣ, ಮಕ್ಕಳ ರಂಗಭೂಮಿ, ಏನೇನೋ ಆದರ್ಶಗಳ ಮುದ್ದೆ. ಲಂಡನ್ ಮಿಷನ್ ಸ್ಕೂಲಿನಲ್ಲಿ ನಾನು ವಿದ್ಯಾರ್ಥಿಯಾಗಿದ್ದಾಗ ನನಗೆ ಗುರುಗಳಾಗಿದ್ದು, ಮುಂದೆ ವಕೀಲರಾಗಿ, ಕಾಂಗ್ರೆಸ್ ಹುರಿಯಾಳಾಗಿ, ಬೆಂಗಳೂರು ಮುನಿಸಿಪಾಲಿಟಿಯ ಅಧ್ಯಕ್ಷರಾಗಿ (ಆಗ ಬೆಂಗಳೂರು ನಗರ ಸಭೆ ಕಾರ್ಪೊರೇಷನ್ ಆಗಿರಲಿಲ್ಲ) ಹೆಸರು ಗಳಿಸಿದ್ದ ಕೆ. ಶಾಮರಾಜ ಅಯ್ಯಂಗಾ ರ್ ಮಕ್ಕಳ ಮಂಟಪ ಪ್ರಾರಂಭೋತ್ಸವದ ಅಧ್ಯಕ್ಷತೆ ವಹಿಸಿದ್ದರು. ಮೈಸೂರು ಮಹಾ ರಾಜ ಕಾಲೇಜಿನಲ್ಲಿ ಇತಿಹಾಸದ ಅಧ್ಯಾಪಕರಾಗಿ ಮೈಸೂರು ಆಕಾಶವಾಣಿಯ ನಿರ್ದೇ ಶಕರಾಗಿ, ಇಂಟರ್‌ಮೀಡಿಯೇಟ್ ಕಾಲೇಜಿನ ಇತಿಹಾಸ ಅಧ್ಯಾಪಕರಾಗಿ, ಬೆಂಗಳೂರಿಗೆ ಬಂದಿದ್ದ ಸುಪ್ರಸಿದ್ಧ ಹಾಸ್ಯಸಾಹಿತಿ ನಾ. ಕಸ್ತೂರಿಯವರು ಮುಖ್ಯಾತಿಥಿಯಾಗಿದ್ದರು. ನಮ್ಮ ಕಿರಿಯಮಗ ಐದುವರ್ಷದ ಬಿ. ಪಿ. ಮೋಹನ್ ಮಕ್ಕಳ ಮಂಟಪದ ಮೊಟ್ಟ ಮೊದಲನೆ ವಿದ್ಯಾರ್ಥಿ. ನಾನು ಶಕುಂತಲಾಬಾಯಿ ಉಪಾಧ್ಯಾಯರು. ಸಂಪ್ರದಾಯ ಶೀಲೆಯಾದರೂ ಜಾತಿಭೇದವೆಣಿಸದೆ ಮಕ್ಕಳಸೇವೆ ಮಾಡುವುದಕ್ಕೆ ಸಿದ್ಧರಾಗಿದ್ದ ನಮ್ಮ ತಾಯಿ ಆಯಾ. ಪೋಷಕರನ್ನೂ ಆ ಸಹಾಯಧನ, ಈ ತಿಂಗಳ ಚಂದಾ ಎಂದು ಶೋಷಿಸದೆ ಮಧ್ಯಮ ವರ್ಗದ ಮಕ್ಕಳಿಗಾಗಿ ಎಂಬ ನಿಷ್ಠೆಯಿಂದ ಪ್ರಾರಂಭವಾದ ಮಕ್ಕಳ ಮಂಟಪ 'ಕನ್ನಡ ಮಾಧ್ಯಮದಿಂದಲೇ ಕನ್ನಡಮಕ್ಕಳಿಗೆ ಮೋಕ್ಷ ವೆಂಬ **ಪರಮೋಚ್ಚ ಶಿಶು ಶಿಕ್ಷಣ ಧ್ಯೇಯ** ದಿಂದ ಬಾಲಾರಿಷ್ಟ ರೋಗಕ್ಕೆ ಗುರಿಯಾಯಿತು. ಹಾಗೆಯೇ ನರಳುತ್ತ ರಜತ ವರ್ಷವನ್ನೂ ಕಂಡಿತು. ಸಾಯದೆಯೂ ಬದುಕದೆಯೂ ಜೀವ ಹಿಡಿದಿದೆ. ತುಳಸಿ ದಳವಿಟ್ಟು ದಾನ ಮಾಡಿದಂತೆ ನಮ್ಮ ಮಕ್ಕಳ ಮಂಟಪವನ್ನು ಬೇರೆ ಕಾರ್ಯ ದರ್ಶಿಗೆ ಒಪ್ಪಿಸಿ ಈಗ ನಾವು ನಿರ್ಲಿಪ್ತರಾಗಿದ್ದೇವೆ. ಹೇಗೊ ಮಕ್ಕಳ ಮಂಟಪ ಬದುಕಿ ದರೆ ಸರಿ ಎಂಬ ಹೆಬ್ಬಯಕೆ ನಮ್ಮದು.

1949ರಲ್ಲಿ ಕರ್ಣಾಟಕದ ಎರಡನೆಯ ಗಮಕ ಪ್ರವಾಸ ಬಳ್ಳಾರಿ ಜಿಲ್ಲೆಯ

ಹರಪನಹಳ್ಳಿಗೆ ಮುಂದುವರಿಯಿತು "ಬಳ್ಳಾರಿಯ ಬೀಚಿ" ಎಂದು ಪ್ರಸಿದ್ಧರಾದ ಹಾಸ್ಯ ಸಾಹಿತಿ ಭೀಮಸೇನರಾಯರ ಅಣ್ಣಂದಿರಾದ ರಾಯಸಂ ಹಯವದನರಾಯರು ಹರಪನಹಳ್ಳಿಯಲ್ಲಿ ಸಾಹಿತ್ಯೋತ್ಸವವನ್ನು ನೆಗಳಿಕೊಂಡು ನನ್ನನ್ನು ಶಕುಂತಲಾಬಾಯಿ ಯನ್ನೂ ಮುಖ್ಯಾಥಿತಿಗಳಾಗಿ ಭಾಗವಹಿಸಬೇಕೆಂದು ಆಹ್ವಾನಿಸಿದರು. ಚಿಕ್ಕೇರೂರು ಭೀಮಸೇನಾಚಾರ್ಯರಿಂದ ಪರಿಚಯರಾಗಿದ್ದ ಹರಪನಹಳ್ಳಿಯ ಕೇರಂ ರಾಮರಾಯರು ಸಾಹಿತ್ಯೋತ್ಸವಕ್ಕೆ ನಮ್ಮ ಹೆಸರುಗಳನ್ನ ಸೂಚಿಸುವುದಕ್ಕೆ ಕಾರಣರಾಗಿದ್ದರು. ರನ್ನನ ಸಹಸ್ರಾಬ್ದಿ ಉತ್ಸವ, ಭಾರತವಾಚನ, 'ಭೈರಾಂಖಾನ್' ನಾಟಕಾಭಿನಯ. ಈ ಮೂರು ಕಾರ್ಯಕ್ರಮಗಳು ಮೂರು ದಿವಸಗಳಿಗೆ ಹಂಚಿದ್ದವು.

ಮೊದಲದಿವಸ ರನ್ನನ ಸಹಸ್ರಾಬ್ದಿಯುತ್ಸವದಲ್ಲಿ ನಾನು ರನ್ನಕವಿಯ ವಿಷಯ ಉಪನ್ಯಾಸವಿತ್ತೆ. ಶಕುಂತಲಾಬಾಯಿ ರನ್ನನ ಗದಾಯುದ್ಧ ಕಾವ್ಯದಿಂದ "ದುರ್ಯೋಧನನ ವಿಲಾಪ" ಭಾಗವನ್ನು ಸುಶ್ರಾವ್ಯವಾಗಿ ಹೃದಯಸಂಗಮವಾಗಿ ವಾಚಿಸಿದರು.

ಎರಡನೆಯ ದಿನ ಶಕುಂತಲಾಬಾಯಿಯ ಕುಮಾರವ್ಯಾಸ ಭಾರತ ವಾಚನಕ್ಕೆ ಮೀಸಲಾಗಿತ್ತು. "ದ್ರೌಪದಿ ಮಾನ ಸಂರಕ್ಷಣ" ಕಥಾ ಭಾಗ. "ಭಾರತವಾಚನ ಪ್ರವೀಣ" ಬಿಂದೂರಾಯರು ಹರಪನಹಳ್ಳಿಯ ಜನಕ್ಕೆ ಚಿರಪರಿಚಿತರು. ಆದ್ದರಿಂದ ಬಿಂದೂರಾಯರ ಶಿಷ್ಯೆ ಶಕುಂತಲಾಬಾಯಿಯ ಭಾರತ ವಾಚನವೆಂದು ಹಪನಹಳ್ಳಿಗೆ ಹರಪನಹಳ್ಳಿಯೇ ಕಿಕ್ಕಿರಿದಿತ್ತು. ಹರಸನಹಳ್ಳಿಯ ಮಹಿಳೆಯರಂತೂ ಶಕುಂತಲಾಬಾಯಿಯನ್ನು ಸಾಕ್ಷಾತ್ ದ್ರೌಪದಿಯೇ ಎಂದು ಭಕ್ತಿಭಾವದಿಂದ ಕಂಡರು. ಬಿಂದೂರಾವ್ ಅಭಿಮಾನಿಗಳು ಶಕುಂತಲಾಬಾಯಿಯ ಭಾರತವಾಚನದಲ್ಲಿ ಬಿಂದೂರಾವ್ ಭಾವವನ್ನು ಗುರುತಿಸಿ ತುಂಬಾ ಸಂತೋಷ ತಳೆದರು. ಹರಪನಹಳ್ಳಿಗೆ ಶಕುಂತಲಾಬಾಯಿ ಮನೆಮಗಳಾಗಿ ಹೋದರು.

ಮೂರನೆಯ ದಿನ "ಭೈರಾಂಖಾನ್" ನಾಟಕಾಭಿನಯ. ರಾಯಸಂ ಹಯವದನ ರಾಯರೇ ನಾಟಕ ಬರೆದವರು. ಹರಪನಹಳ್ಳಿಯ ಪ್ರೌಢಶಾಲೆಯ ವಿದ್ಯಾರ್ಥಿ ಕೇರಂ ರಾಮರಾಯರ ಹಿರಿಯಮಗ ಎಸ್. ಎನ್. ಮೂರ್ತಿ "ಭೈರಾಂಖಾನ್" ಪಾತ್ರದಾರಿ. ನಾಟಕ ಬಹಳ ಯಶಸ್ವಿಯಾಯಿತು. ಎಸ್. ಎನ್. ಮೂರ್ತಿ ಶ್ರೇಷ್ಠ ನಟನೆಂದು ತನ್ನ ಪ್ರಪ್ರಥಮ ರಂಗ ಪ್ರವೇಶದಲ್ಲಿಯೇ ಕೀರ್ತಿಗಳಿಸಿದ. ಆತ ಗಣಿತದಲ್ಲಿ ನೂರಕ್ಕೆ ನೂರು ಅಂಕ ಪಡೆದು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದು ಪ್ರತಿಭಾವಂತ ವಿದ್ಯಾರ್ಥಿ ಎನ್ನಿಸಿಕೊಂಡ. ಕಾಲೇಜು ವ್ಯಾಸಂಗಕ್ಕಾಗಿ ಹರಪನಹಳ್ಳಿ ಯಿಂದ ಬೆಂಗಳೂರಿಗೆ ಬಂದ. ತನ್ನ ಕಾಲೇಜು ವಿದ್ಯಾರ್ಥಿ ದೆಸೆಯಲ್ಲಿಯೇ ಮಕ್ಕಳ ಮಂಟಪದಲ್ಲಿ ವಿದ್ಯಾರ್ಥಿ ಉಪಾಧ್ಯಾಯನಾಗಿ ಸೇವೆ ಸಲ್ಲಿಸಿದ. ಕಾಲಕ್ರಮದಲ್ಲಿ ಮನೆಯವನಾಗಿ ಹೋದ. ನಮ್ಮ ಮಕ್ಕಳಲ್ಲಿ ಒಬ್ಬನೋ ಎಂಬಂತೆ ನಡೆಯತೊಡಗಿದ.

ಹರಪನಹಳ್ಳಿಯ ಗಮಕ ಪ್ರವಾಸ ನನಗೆ ಕೊಟ್ಟ ಕೊಡುಗೆ ಯೆಂದರೆ ಅದು ಎಸ್. ಎಸ್. ಮೂರ್ತಿ-ಅಪರಂಜಿ ಚಿನ್ನ.

ಚಿತ್ತವಾಡಗಿ ಕಲ್ಮೇಶ್ವರ ಜಾತ್ರೆ

ಬಳ್ಳಾರಿ ಜಿಲ್ಲೆಯ ಹೊಸಪೇಟೆಯ ಚಿತ್ತವಾಡಗಿ ಕಲ್ಮೇಶ್ವರ ಜಾತ್ರೆ ಶಕುಂತಲಾ ಬಾಯಿಯ ಗಮಕ ಜೀವನಯಾತ್ರೆಯಲ್ಲಿ ಒಂದು ಮೈಲಿಗಲ್ಲು. ಚಿತ್ತವಾಡಗಿ ಹೊಸ ಪೇಟೆಗೆ ಐದಾರು ಕಿಲೋಮೀಟರುಗಳ ಫಾಸಲೆಯಲ್ಲಿದೆ. ಬೆಲ್ಲದ ಚೆನ್ನಪ್ಪ, ಉಳ್ಳಾಗಡ್ಡೆ ಮಹಂತಪ್ಪ ಎಂಬ ವೀರಶೈವ ಶ್ರೀಮಂತ ಬಂಧುಗಳು ವರ್ಷವರ್ಷವೂ ಈ ಜಾತ್ರೆಯನ್ನು ನಡೆಸುತ್ತಿದ್ದರು. ಸಂಜೆಗಳಲ್ಲಿ ಸಾಹಿತ್ಯ ಸಾಂಸ್ಕೃತಿಕ ಕಾರ್ಯಕ್ರಮಗಳು ಇರುತ್ತಿತ್ತು.

ಕೀರ್ತನ ಕೇಸರಿ ಶಿವಮೂರ್ತಿಶಾಸ್ತ್ರಿಗಳು ಕಲ್ಮೇಶ್ವರ ಜಾತ್ರೆಯ ಸಾಹಿತ್ಯ ಸಂಸ್ಕೃತಿ ಕಾರ್ಯಕ್ರಮಗಳಿಗೆ ನಮ್ಮ ಹೆಸರುಗಳನ್ನೂ ಸೂಚಿಸಿದರು. 1953ರಲ್ಲಿ ನಾವು ಭಾಗವಹಿಸಿದೆವು. ನಮ್ಮದು ಎರಡು ದಿವಸಗಳ ಕಾರ್ಯಕ್ರಮ,

ಮೊದಲ ದಿವಸ ಶಕುಂತಲಾಬಾಯಿ ಚಾಮರಸನ ಪ್ರಭುಲಿಂಗಲೀಲೆಯಿಂದ ಅಕ್ಕಮಹಾದೇವಿಯ ವಿರಕ್ತಿ ಭಾಗವನ್ನು ವಾಚಿಸಿದರು. ಗಮಕ ಕಲಾನಿಧಿ ಜೋಳದ ರಾಶಿ ದೊಡ್ಡನಗೌಡರು ಕುಮಾರಸ್ವಾಮಿಯವರ ಹಾರ್ಮೋನಿಯಂ ವಾದ್ಯದ ಸಹಾಯ ದೊಂದಿಗೆ ಹರಿಶ್ಚಂದ್ರ ಕಾವ್ಯ ವಾಚಿಸಿದರು. ರನ್ನ ಮಹಾಕವಿಯ ಜನ್ಮಸ್ಥಳ ಮುದಹಾಳಿನ ಮೃತ್ಯುಂಜಯ ಸ್ವಾಮಿಗಳು ಪ್ರಭುಲಿಂಗಲೀಲೆಯ ಮೇಲೆ ವಿದ್ವತ್ಪೂರ್ಣವಾದ ಉಪನ್ಯಾಸ ಮಾಡಿದರು.

ಎರಡನೆಯ ದಿವಸ ಸುಪ್ರಸಿದ್ಧ ಸಾಹಿತಿಗಳೂ ಮಹಾವಾಗ್ಮಿಯೂ ಎನ್ನಿಸಿ ಕೊಂಡ ಸಿ. ಕೆ. ವೆಂಕಟರಾಮಯ್ಯ ದಯಮಾಡಿಸಿದರು. ಅವರು ಮಂಡೋದರಿ, ನಚಿಕೇತ, ಬ್ರಹ್ಮವಾದಿನಿ ಮೊದಲಾದ ನಾಟಕಗಳನ್ನು ರಾಮಾಯಣದಿಂದ, ಉಪನಿಷತ್ತು ಗಳಿಂದ ಹೊಸ ತಿರುವು ಕೊಟ್ಟು ಬರೆದಿದ್ದರು. ಭಾಸ ಕಾಳಿದಾಸಾದಿಗಳ ಮೇಲೆ ಅತ್ಯುಜ್ವಲವಾಗಿ ಗಂಟೆಗಟ್ಟಲೆ ನಿರರ್ಗಳವಾಗಿ ಗಂಗಾಪ್ರವಾಹದಂತೆ ಉಪನ್ಯಾಸ ಮಾಡ ಬಲ್ಲ ಸಂಸ್ಕೃತ ಕನ್ನಡ ಭಾಷೆಗಳ ಮಹಾವಿದ್ವಾಂಸರು. ಅವರು ಬರುವಾಗಲೆ ಜೊತೆಯಲ್ಲಿ ಜ್ವರವನ್ನೂ ಕಟ್ಟಿಕೊಂಡು ಬಂದರು. ಸಿ. ಕೆ. ವಿ. ಆರೋಗ್ಯ ಯಾವಾಗಲೂ ಅಷ್ಟ ಕಷ್ಟೆ. ಔಷಧಿ ಗುಳಿಗೆಗಳೂ ಸದಾ ಅವರ ಜೇಬಿನಲ್ಲಿ ಇದ್ದೇಯಿರಬೇಕು. ಶಕುಂತಲಾ ಬಾಯಿ ಹರಿಶ್ಚಂದ್ರಕಾವ್ಯದಿಂದ ವಿಶ್ವೇಶ್ವರ ಸಾಕ್ಷಾತ್ಕಾರ ಭಾಗವನ್ನು ವಾಚನ ಮಾಡಿದರು. ಸಿ. ಕೆ. ವಿ ಎರಡು ಗಂಟೆಗಳಷ್ಟು ದೀರ್ಘಕಾಲ ಉಪನ್ಯಾಸ ಮಾಡಿದರು. ಸಂಜೆಯ ಕಾರ್ಯಕ್ರಮ ಮುಗಿದಾಗ ರಾತ್ರಿ 10 ಗಂಟೆಯಾಗಿತ್ತು.

ಸಿ. ಕೆ. ವಿ. ನಾವು ಬಿಡದಿ ಮನೆ ಸೇರಿದುವೆ ತಡ, ಅವರು ಹಾಸಿಗೆ ಹಿಡಿದರು ಬೆಂಕಿ ನಿಗಿನಿಗಿಸುವ ಹಾಗೆ ಜ್ವರ. ನಾನು ಮತ್ತು ಶಕುಂತಲಾಬಾಯಿ ಸಿ. ಕೆ. ವಿ.

ಅವರಿಗೆ ರಾತ್ರಿಯೆಲ್ಲ ಶುಶ್ರೂಷೆ ಮಾಡಿದೆವು. ನಲಸಲವೂ ಅವರು ಕೃತಜ್ಞತೆ ಅರ್ಪಿಸಿದ್ದು ಆರ್ಶಿಸಿದ್ದೆ.

ಸಿ. ಕೆ. ವಿ. ಜತೆ ನಾವು ಅನೇಕಸಲ ಒಂದೇ ವೇದಿಕೆಯ ಮೇಲೆ ಕಾರ್ಯಕ್ರಮ ಕೊಟ್ಟಿದ್ದೇವೆ. ಆನೆಕಲ್ಲು, ಮಲ್ಲಾಡಿಹಳ್ಳಿ, ಶಿಕಾರಿಪುರ ಹೀಗೆ ಅನೇಕ. ಅವರು ಹೋದಲ್ಲೆಲ್ಲ ಆರೋಗ್ಯವಂತರಾಗಿದ್ದುದು ಅಪರೂಪ. ಶಿಕಾರಿಪುರಕ್ಕೆ ಒಂದು ಕಾರ್ಯಕ್ರಮಕ್ಕೆ ಬಂದರು, ಜೊತೆಯಲ್ಲೆ ಜ್ವರವನ್ನೂ ತಂದರು. "ಶಕುಂತಲಾಬಾಯಿ, ಪಾಂಡುರಂಗ ರಾವ್, ನಿಮಗೆ ತೊಂದರೆ ಕೊಡಲೆಂದೆ ಜ್ವರಸಹಿತ ಬಂದಿದ್ದೇನೆ" ಎಂದರು. ಶಕುಂತಲಾಬಾಯಿ, "ನಾನು ನಿಮ್ಮ ಮಗಳಹಾಗೆ ಸಂಕೋಚಬೇಡ" ಎಂದರು. ಶಿಕಾರಿಪುರದ ಕಾರ್ಯಕ್ರಮ ಸಾಹಿತ್ಯ ಸಂಸ್ಕೃತಿ ಪ್ರಚಾರ ಇಲಾಖೆಯ ಆಶ್ರಯದಲ್ಲಿ ಏರ್ಪಾಡಾಗಿತ್ತು. ಸಿ. ಕೆ. ವಿ. ಅವರೇ ನಿರ್ದೇಶಕರಾಗಿದ್ದರು. ಶಕುಂತಲಾಬಾಯಿ ನನ್ನ ಪ್ರಾಸಂಗಿಕ ನಿರೂಪಣೆಯೊಡನೆ "ಶ್ರೀ ರಾಮಾಯಣ ದರ್ಶನಂ" ಕಾವ್ಯದಿಂದ ಅರ್ಧಗಂಟೆ ಕಾಲ ವಾಚನ ಕೊಟ್ಟರು. ಸಿ. ಕೆ. ವಿ. ಉಪನ್ಯಾಸ ಕೊಡಲು ಎದ್ದರು. "ಪಾಂಡುರಂಗರಾವ್, ಮೈಯಲ್ಲಿ ಸ್ವಸ್ಥವಿಲ್ಲ, ಜ್ವರವಿದೆ. ಅರ್ಧಗಂಟೆ ಮಾತಾಡುತ್ತೇನೆ. ಕಾಲ ಮೀರಿದರೆ ನನ್ನ ಅಂಗಿ ಎಳೆಯಿರಿ, ಮುಗಿಸಿಕೊಟ್ಟುಬಿಡುತ್ತೇನೆ." ಎಂದು ಕಿವಿಮಾತು ಹೇಳಿದರು. ನಾನು, "ನೀವು ದೊಡ್ಡವರು. ನಾನು ನಿಮಗೆ ಮಗನ ಸಮಾನ" ಎಂದೆ ಸಿ. ಕೆ. ವಿ. ಅವರು ಕಾಲದ ಗಡಿ ಮೀರಿದರು. ಅರ್ಧ ಗಂಟೆಯಾಯಿತು, ಒಂದು ಗಂಟೆಯಾಯಿತು. ಎರಡು ಗಂಟೆಯಾಯಿತು. ಉಪನ್ಯಾಸ ಓತಪ್ರೋತವಾಗಿ ಸಾಗಿತ್ತು. ಶ್ರೋತೃಗಳು ಮಂತ್ರಮುಗ್ಧರಾಗಿ ಕೇಳಿದರು. ನಾವು ಬಿಡದಿ ಮನೆ ಸೇರಿದಾಗ ರಾತ್ರಿ 11 ಗಂಟೆ. ನಿಗಿನಿಗಿ ಕೆಂಡದ ಹಾಗೆ ಜ್ವರ. ರಾತ್ರಿಯೆಲ್ಲ ಜ್ವರದ ತಾಪದಿಂದ ನರಳಿದರು.

ಸಿ. ಕೆ. ವಿ. ಬಹಳ ಮೃದುಸ್ವಭಾವದವರು. ಯಾರ ಮನಸ್ಸನ್ನೂ ನೋಯಿಸಿ ಅರಿಯರು. ಅಜಾತಶತ್ರು. ಔದಾರ್ಯದಲ್ಲಿ ಮಿತಿ ಕಾಣರು. ಅವರ ಕಚೇರಿಗೆ ಯಾರು ಹೋದರೂ ಬೋಂಡ, ಜಿಲೇಬಿ, ಕಾಫಿ ಆತಿಥ್ಯ ಪಡೆಯದೆ ಹಿಂದಿರುಗಿದವರಿಲ್ಲ. ಮನೆಯಲ್ಲೂ ಅಷ್ಟೆ. ಅತಿಥಿಯನ್ನು ತಿಂಡಿತೀರ್ಥದ ಉಪಚಾರದಿಂದ ತಣಿಸಿ ಕಳಿಸದಿದ್ದರೆ, ಸಿ. ಕೆ. ವಿ. ಅವರಿಗೆ ತೃಪ್ತಿಯೇ ಇಲ್ಲ.

ಸಿ. ಕೆ. ವಿ. ಸರಕಾರದ ಕೆಲಸದಿಂದ ನಿವೃತ್ತರಾದ ಮೇಲೆ ಚೆನ್ನಪಟ್ಟಣ ಸೇರಿದರು, ಹಾಸಿಗೆ ಹಿಡಿದರು. ನಾವು ಚೆನ್ನಪಟ್ಟಣಕ್ಕೆ ಗಣೇಶೋತ್ಸವ ರಾಮೋತ್ಸವಗಳ ಕಾರ್ಯಕ್ರಮಕ್ಕೆ ವರ್ಷಕ್ಕೆ ಎರಡುಸಲ ಹೋಗುತ್ತಿದ್ದೆವು. ಆ ಸಮಯದಲ್ಲಿ ತಪ್ಪದೆ ಮೊದಲು ಸಿ. ಕೆ. ವಿ. ಅವರ ಮನೆಗೆ ಹೋಗಿ ಅವರ ದರ್ಶನ ಪಡೆಯುತ್ತಿದ್ದೆವು. ಸಿ. ಕೆ. ವಿ. ಅವರ ಪತ್ನಿಯೂ ಅಷ್ಟೆ. ಆರೋಗ್ಯವಂತರಲ್ಲ. ಗಂಡ ಹೆಂಡತಿ ಇಬ್ಬರಿಗೂ ಮನಸ್ಸಿಗೆ ಕಸಿವಿಸಿ. "ಶಕುಂತಲಾಬಾಯಿ, ಪಾಂಡುರಂಗರಾವ್, ಒಂದು ಲೋಟ ಕಾಫಿ ಕೊಡುವುದಕ್ಕೂ ನಮ್ಮ ಅನಾರೋಗ್ಯದಿಂದ ಆಗುತ್ತಿಲ್ಲವಲ್ಲ" ಎಂದು ದಂಪತಿ ಕೈಕೈ

ಹಿಂಡಿಕೊಳ್ಳುತ್ತಿದ್ದರು. ನಾವು "ಸಾರ್, ನಿಮ್ಮನ್ನು ನಾವು ಅರಿಯೆವೆ ? ಬೆಂಗಳೂರಲ್ಲಿ ನಾವು ಎಷ್ಟೋಸಲ ನಿಮ್ಮ ಔದಾರ್ಯಕ್ಕೆ ಪಾತ್ರರಾಗಿಲ್ಲವೆ" ಎಂದು ಸಮಾಧಾನ ಹೇಳುತ್ತಿದ್ದೆವು.

ಸಿ. ಕೆ. ವಿ. ತಮ್ಮ ಕಡೆಗಾಲದಲ್ಲಿ ಬೆಂಗಳೂರು ಸೇರಿದರು. ಸೇಂಟ್ ಮಾರ್ಥ ಆಸ್ಪತ್ರೆಯಲ್ಲಿ ಇದ್ದರು. ಅವರು ಅಲ್ಲಿಯೇ ಅಸುನೀಗಿದರು. ಅಂದು ಯುಗಾದಿ ಹಬ್ಬ. ಸಂಜೆ ರವೀಂದ್ರ ಕಲಾಕ್ಷೇತ್ರದಲ್ಲಿ, ಡಾ|| ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ಅಚಾರ್ಯಕುಲದ ಹಿರಿಯರಾದ, ಕೋಲಾರದ ಸಂಪದ್ಗಿರಿರಾಯರಿಗೆ ಎಪ್ಪತ್ತು ವರ್ಷದ ಹುಟ್ಟಿದ ಹಬ್ಬದ ಸಂಭ್ರಮ. ಬೆಂಗಳೂರಿನ ಪ್ರತಿಷ್ಠಿತ ಸಾಹಿತಿಗಳು, ಪುರಪ್ರಮುಖರು, ಎಲ್ಲ ರವೀಂದ್ರ ಕಲಾಕ್ಷೇತ್ರದಲ್ಲಿ ಸೇರಿದ್ದರು. ಸಿ. ಕೆ. ವಿ. ಸತ್ತಾಗ ಹತ್ತಿರವಿದ್ದವರು ಅವರ ಮನೆಯ ಜನ ಕೇವಲ ಆರೇಳು ಮಂದಿ. ಚೆನ್ನಪಟ್ಟಣದಿಂದ ಕೆ. ವೆಂಕಟಪ್ಪ, ಸಿ. ಕೆ. ವಿ. ಮನೆ ಡಾಕ್ಟರ್ ನಾಗರಾಜ್ ಬಂದರಂತೆ. ಯುಗಾದಿ ಹಬ್ಬದ ಪ್ರಯುಕ್ತ ಅಂದು ಪುರೋಹಿತರು ಕಾಲಕ್ಕೆ ಸರಿಯಾಗಿ ಸಿಗುವುದೂ ಕಷ್ಟವಾಯಿತಂತೆ. ಅಂತೂ ಶವ ಸಂಸ್ಕಾರವಾಯಿತು.

ಬೆಳಗಾಯಿತು. ಬೆಂಗಳೂರಿನ ಪತ್ರಿಕೆಗಳೆಲ್ಲ ಸಿ. ಕೆ. ವಿ. ಮರಣದ ಸುದ್ದಿ ಪ್ರಕಟಿಸಿದ್ದವು. ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯಾಗಿ ಕನ್ನಡ ನಾಡಿನ ಪ್ರಸಿದ್ಧ ಸಾಹಿತಿಯೆನ್ನಿಸಿಕೊಂಡು, ನಮ್ಮ ರಾಜ್ಯದಲ್ಲಿ ಶ್ರೇಷ್ಠ ಅಧಿಕಾರಿಯಾಗಿ, ಸಹಸ್ರಾರು ಮಂದಿಗೆ ಬೇಕಾದವರಾಗಿ, ಸಜ್ಜನ ಎನಿಸಿಕೊಂಡಿದ್ದ ಸಿ. ಕೆ. ವಿ. ಶವ ಸಂಸ್ಕಾರದಲ್ಲಿ ಭಾಗವಹಿಸಿದ್ದವರು ಕೇವಲ ಏಳೆಂಟು ಮಂದಿಯಂತೆ. ಸಿ. ಕೆ. ವಿ. ಅವರೊಂದಿಗೆ ಅನೇಕ ಕಾರ್ಯಕ್ರಮಗಳಲ್ಲಿ ಒಂದೇ ವೇದಿಕೆಯ ಮೇಲೆ ಭಾಗವಹಿಸಿ, ಅವರೊಂದಿಗೆ ಜೊತೆಗಿದ್ದು, ಅವರೊಂದಿಗಿದ್ದು ಅವರ ಪಿತೃವಾತ್ಸಲ್ಯಕ್ಕೆ ಪಾತ್ರರಾಗಿದ್ದ ನಾನು, ಶಕುಂತಲಾಬಾಯಿ ಅವರ ಮರಣವಾರ್ತೆ ಕೇಳಿ ಪಟ್ಟ ದುಃಖ ಅಪಾರ.

ಬೆಂಗಳೂರಿಂದ ಮೈಸೂರಿಗೆ ನಾವು ಕಾರ್ಯಕ್ರಮಕ್ಕಾಗಿ ಬಸ್ಸಿನಲ್ಲಿ ಹೋಗುತ್ತಿರುವಾಗ, ನಮ್ಮ ಬಸ್ಸು ಚೆನ್ನಪಟ್ಟಣದ ಹೆದ್ದಾರಿಯಲ್ಲಿ ಸಿ. ಕೆ. ವಿ. ಅವರ ಮನೆಯನ್ನು ಹಾದು ಹೋಗುವಾಗಲೆಲ್ಲ, ನಾವು ಸಿ. ಕೆ. ವಿ. ಅವರನ್ನು ಜ್ಞಾಪಿಸಿ ಕೊಂಡು ಅವರಿಗೆ ಮನಸ್ಸಿನಲ್ಲಿಯೇ ನಮನ ಸಲ್ಲಿಸುವುದಕ್ಕೆ ಮರೆಯುವುದಿಲ್ಲ.

"ಕರ್ಣಾಟಕ ದರ್ಶನ" ಗಮಕ ರೂಪಕ ಪ್ರಜ್ಞೆ

ಹೊಸಪೇಟೆಯ ಚಿತ್ರವಾಡಿಗಿ ಕಲ್ಮಠೇಶ್ವರ ಜಾತ್ರೆ ನಮಗೆ ಜಯಭೇರಿ ಹೊಡೆಯಿತು. ಮಾರನೆಯ ದಿವಸ ನಾವು ಹೊಸಪೇಟೆಯ ರಸ್ತೆಗಳಲ್ಲಿ ಹೋಗುತ್ತಿದ್ದರೆ, ಜನ, ಚಲನಚಿತ್ರ ತಾರೆಗಳನ್ನು ನೋಡುವಂತೆ ನಮ್ಮನ್ನು ಕುತೂಹಲದಿಂದ ನೋಡುತ್ತಿದ್ದರು.

ಚೆನ್ನಪ್ಪ ಮಹಂತಪ್ಪ ಬಂಧುಗಳು ನಮಗಾಗಿ ಹಂಪೆಯ ಯಾತ್ರೆಯ ಏರ್ಪಾಟು ಮಾಡಿದ್ದರು. ಅನಾರೋಗ್ಯದ ದೆಸೆಯಿಂದ ಸಿ. ಕೆ. ವಿ. ನಮ್ಮ ಜೊತೆ ಹಂಪೆಯ

ದರ್ಶನಕ್ಕೆ ಸೇರಲಿಲ್ಲ. ನಾವಿಬ್ಬರೇ ಎರಡನೆಯ ಸಲದ ಹಂಪಾಯಾತ್ರೆಯನ್ನು ಕೈಗೊಂಡೆವು.

ಮೊದಲಸಲ ಪಂಪಾಯಾತ್ರೆ ಮಾಡಿದಾಗ ನನಗೆ "ಕರ್ಣಾಟಕ ದರ್ಶನ" ರೂಪಕವನ್ನು ರಚಿಸಬೇಕೆಂಬ ಸ್ಫೂರ್ತಿಯುಕ್ಕಿತು. ಅದು ಮನಸ್ಸಿನಲ್ಲಿ ಮೆಲುಕು ಹಾಕಿತೆ ಹೊರತು ಕಾರ್ಯಗತವಾಗಿರಲಿಲ್ಲ. ನನ್ನ ಅನಾರೋಗ್ಯ, ನಮ್ಮ ಕೂಸಿನ ಮರಣ, ಆರ್ಥಿಕ ಜೀವನದ ಏರುಪೇರು ಮುಪ್ಪುರಿಗೊಂಡು ನಾನು ನೀರಸದ ಜೀವನ ಕಳೆಯುತ್ತಿದ್ದೆ. ಈಗ ಪಂಪಾಕ್ಷೇತ್ರದ ಪವಿತ್ರ ನೆಲದಲ್ಲಿ ನಿಂದ ಗುಣದಿಂದ ನನ್ನ ಅಂತಃ ಚಕ್ಷು ಕರ್ಣಾಟಕ ದರ್ಶನವನ್ನು ಗಮಕ ರೂಪದಲ್ಲಿ ಕಂಡಿತು. ಚಿತ್ತವಾಡಗಿ ಕಲ್ಮೇಶ್ವರ ಜಾತ್ರೆಯ ಪ್ರವಾಸವನ್ನು ಮುಗಿಸಿ ಬಂದವನೇ ಕರ್ಣಾಟಕ ದರ್ಶನವನ್ನು ಗಮಕ ರೂಪಕಕ್ಕೆ ಇಳಿಸಿದೆ.

ಕರ್ಣಾಟಕ ಗಮಕ ರೂಪಕದ ಹರವು ಮತ್ತು ಬಿತ್ತರ ದೇಶೋವಿಶಾಲವಾಗಿದೆ. ಪಂಪಯುಗದಿಂದ ಆಧುನಿಕ ಕಾವ್ಯಯುಗದವರೆಗೆ ವ್ಯಾಪಿಸಿದೆ. ಈ ಕಾರ್ಯಕ್ರಮ ಇಲಾಸ್ಟಿಕ್ ರಬ್ಬರಿನಂತೆ ಎಳೆದರೆ ಹಿಗ್ಗುತ್ತದೆ, ಬಿಟ್ಟರೆ ಕುಗ್ಗುತ್ತದೆ, ಅರ್ಧಗಂಟೆಯಿಂದ ಎರಡುಗಂಟೆಗಳಷ್ಟು ದೀರ್ಘಕಾಲ ಇದರ ವ್ಯಾಪ್ತಿ. ಸಪ್ತಾಹಕ್ಕೆಕೂಡ ಅಳವಡುತ್ತದೆ. ಕೇಳುವವರಿಗೆ ತಾಳ್ಮೆಬೇಕಷ್ಟೆ.

"ಕರ್ಣಾಟಕ ದರ್ಶನ"ವನ್ನು ನಮ್ಮ ಅನುಕೂಲಕ್ಕಾಗಿ ಎಂಟು ಭಾಗಗಳಾಗಿ ವಿಂಗಡಿಸಿಕೊಂಡಿದ್ದೇವೆ. ಅವು ಸ್ಥೂಲವಾಗಿ ಹೀಗಿವೆ.

ಪ್ರಾರ್ಥನೆ — ರಕ್ಷಿಸು ಕರ್ಣಾಟಕ ದೇವಿ — ಶಾಂತಕವಿಗಳು

೧) **ಕನ್ನಡ ನಾಡಿನ ವರ್ಣನೆ**—ಪಂಪನ ವಿಕ್ರಮಾರ್ಜುನ ವಿಜಯ ಕಾವ್ಯದಿಂದ ಆಯ್ದ ಬನವಾಸಿಯ ವರ್ಣನೆ. ಬಹು ಪ್ರಸಿದ್ಧವಾಗಿ ಜನಪ್ರಿಯವಾಗಿರುವ ಮೂರು

1 ಸೊಗಯಿಸಿ ಬಂದ ಮಾಮರನೆ–ಬನವಾಸಿದೇಶದೊಳ್

2 ಚಾಗದ ಭೋಗದಕ್ಕರದ–

3 ತೆಂಕಣ ಗಾಳಿ ಸೋಂಕಿದೊಡಮ್–ಬನವಾಸಿ ದೇಶಮಂ

ಆಂಡಯ್ಯ ಕವಿಯ ಕಬ್ಬಿಗರ ಕಾವ್ಯದಿಂದ–ಕನ್ನಡನಾಡ ವರ್ಣನೆ–

1 ಪಲವುಂ ನಾಲಗೆಯುಳ್ಳವಂ– ಕಯ್ಗಳಿಂ

2 ಇವು ಪಳ್ಳಿಗಳಿವು– ಪೇಟ್ಟುವದರಿದಾ ನಾಡೊಳ್

3 ಮಲ್ಲಿಗೆಯಲ್ಲದೆ– ನಾಡೊಳ್

4 ಅಡರ್ದೇಱಿ– ಬನಮಂ

5 ಉಱಿಕಾಯ್ಪ್– ಸೊಗಯಿಸುಗುಂ

6 ನೆಯ್ದಿಲ್ಗೊಳಂಗಳೆಡೆಯೊಳ್– ತೀಡುತ್ತಿರ್ಪಂ

ಪಂಪನ ಮತ್ತು ಅಂಡಯ್ಯನ ಪದ್ಯಗಳು ಕನ್ನಡ ನಾಡಿನ ಬಣ್ಣನೆಯನ್ನು ಎಷ್ಟು ಹೃದಯ ಸ್ಪರ್ಶಿಯಾಗಿಸುತ್ತವೆ; ಈ ಕಾರಣದಿಂದ ಈ ಪದ್ಯಗಳನ್ನು ಆರಿಸಿಕೊಂಡಿತ್ತು.

೨) ಕರ್ಣಾಟಕದ ಹಿರಿಮೆ—

ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು — ಹುಯಿಲಗೋಳ ನಾರಾಯಣ ರಾಯರು.

ಕನ್ನಡಿಗರ ತಾಯಿ— ರಾಷ್ಟ್ರಕವಿ ಗೋವಿಂದ ಪೈ.

"ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು" ಕರ್ಣಾಟಕದ ರಾಷ್ಟ್ರಗೀತೆ. 1924 ರಲ್ಲಿ ಬೆಳಗಾಂ ಕಾಂಗ್ರೆಸ್ ಮಹಾಧಿವೇಶನ ಪೂಜ್ಯ ಬಾಪೂಜಿಯವರ ಅಧ್ಯಕ್ಷತೆಯಲ್ಲಿ ನಡೆದಾಗ ರಚಿತವಾದ ಐತಿಹಾಸಿಕ ಹಿನ್ನೆಲೆ ಈ ಗೀತೆಗಿದೆ.

ಗೋವಿಂದ ಪೈಗಳ "ಕನ್ನಡಿಗರ ತಾಯಿ" ಗೀತೆಯನ್ನೂ ನಮ್ಮ ಕನ್ನಡತಾಯ ಪುರಾತನ ಹಿರಿಮೆಯನ್ನು, ಆಕೆಯ ಶಿಲ್ಪ ವೈಭವವನ್ನೂ, ರಸಋಷಿಗಳ ಕಾವ್ಯ ವೈಶಿಷ್ಟ್ಯವನ್ನು, ಭಾಷಾ ವೈಖರಿಯನ್ನು, ರಾಜ್ಯ ಸಾಮ್ರಾಜ್ಯಗಳವೈಭವವನ್ನೂ, ರೋಮಾಂಚಗೊಳಿಸುವ ದೇಶಭಕ್ತಿಯನ್ನು ಸಾರುವ ಮಹತ್ವ ಸತ್ವಉಳ್ಳದ್ದಾಗಿದೆ. ಆದುದರಿಂದ ಈ ಎರಡು ಗೀತೆಯನ್ನೂ ಆಯ್ದುಕೊಂಡಿದ್ದೆವು.

೩) ಕರ್ಣಾಟಕದ ಅವನತಿ —

ವಿಜಯನಗರದ ಪತನವಾದ ಮೇಲೆ ಮೈಸೂರು ರಾಜ್ಯ ಎದ್ದು ವಿಜಯನಗರ ಸಾಮ್ರಾಜ್ಯದ ವೈಭವವನ್ನು ಒಂದೆರಡು ಶತಮಾನಗಳವರೆಗೆ ವಿಜೃಂಭಿಸಿತು. ನಾಲ್ಕನೆಯ ಮೈಸೂರು ಯುದ್ಧದಲ್ಲಿ ಬ್ರಿಟಿಷರಿಗೆ ಮೈಸೂರುರಾಜ್ಯ ಸೋಲು ಒಪ್ಪಿಕೊಂಡಿತಲ್ಲ! ಅಗ ನಮ್ಮ ಕನ್ನಡ ರಾಜ್ಯ ಹರಿದುಹಂಚಿಹೋಯಿತು. ಕನ್ನಡಿಗರ ದುಸ್ಥಿತಿ ಭಾಷಾಭಿಮಾನ ಶೂನ್ಯತೆಗಳನ್ನು ಅರಿವು ಮಾಡಿಕೊಡುವುವೇ ಈ ಭಾಗದ ಜೀವಾಳ.

"ಹಂಪೆಗೆ" — "ಹೊಯ್ಸಳ" (ಅರಗಂ ಲಕ್ಷ್ಮಣರಾವ್)

"ಎಂಥ ನಾಡಿದು" —ರಂ. ಶ್ರೀ ಮುಗಳಿ.

"ಕನ್ನಡಿಗನ ಕೊರಗು" — ತೀ. ನಂ. ಶ್ರೀ.

"ಕನ್ನಡ ನಾಡಿನ ಸ್ಥಿತಿಯನ್ನು ನೆನೆದು" —ಶ್ರೀನಿವಾಸ

೪) ಕರ್ಣಾಟಕಜಾಗೃತಿ —

ಕನ್ನಡ ತಾಯಿ ನೋಟ — ಬಿ. ಎಂ. ಶ್ರೀ.

ಕನ್ನಡ ದೈವವ್ಕೆ — ಸಾಲಿ ರಾಮಚಂದ್ರರಾಯರು

ಹುತ್ತರಿ ಹಾಡು — "ಕವಿಶಿಷ್ಯ" (ಪಂಜೆಮಂಗೇಶರಾವ್)

1936ರಲ್ಲಿ ವಿಜಯನಗರ ಸಾಮ್ರಾಜ್ಯದ ಆರನೆಯ ಶತಮಾನೋತ್ಸವವನ್ನು ಆಚರಿಸಿದಾಗ ಕನ್ನಡಿಗರನ್ನು ಎಚ್ಚರಗೊಳಿಸುವುದಕ್ಕಾಗಿ ರಚಿಸಿದ ಪ್ರಗಾಥ "ಕನ್ನಡ ತಾಯ ನೋಟ." "ಕನ್ನಡ ದೈವವ್ಮೆ" ಎಂದುಕನ್ನಡದ ಪಾವಿತ್ರ್ಯತೆಯನ್ನು ಪ್ರಸ್ತಾಪಿಸಿ ನಮ್ಮನ್ನು ಪುಳಕಿಸುವ ಷಟ್ಪದಿ ಪದ್ಯ ಸಾಲಿಮಾಸ್ತರದು. "ಹುತ್ತರಿ ಹಾಡು" ಕನ್ನಡ ಕಡುಗಲಿಗಳಾದ ವೀರಶೂರ ಯೋಧರ ನಾಡಾದ ಕೊಡವರದು ಈ ಮೂರು ಕೃತಿಗಳದೂ ಒಂದೊಂದು ವೈಶಿಷ್ಟ. ಕವಿಗಳು ಮೂವರೂ ಹಿರಿಯರು. ಈ ಮಹತ್ವಕ್ಕಾಗಿ ಬಿ. ಎಂ. ಶ್ರೀ, ಸಾಲಿ ರಾಮಚಂದ್ರರಾಯರು, ಪಂಜೆ ಮಂಗೇಶರಾಯರ ಕೃತಿಗಳನ್ನು ಆರಿಸಿಕೊಂಡಿದ್ದೆವು.

೫) ಕರ್ಣಾಟಕದ ಅರುಣೋದಯ—

"ಅರುಣೋದಯ" —ಆನಂದ ಕಂದ. (ಬೆಟಗೇರಿ ಕೃಷ್ಣಶರ್ಮರವರು)
"ಸ್ವಾಗತ ಗೀತ" — ತೀ. ನಂ. ಶ್ರೀ.
"ಸ್ವಾಗತ" — ಜಿ. ಕೆ. ಪ್ರಾಣೇಶಾಚಾರ್ಯ.

ಕನ್ನಡಿಗರಲ್ಲಿ ಜಾಗೃತಿಯಾಗಿ ತಾವು ಒಕ್ಕೂಟವಾಗಿ ಬಾಳಬೇಕೆಂಬ ಮಹದಾಸೆ ಉದಯಿಸಿತು. ಆ ಚಿತ್ರವಮೂಡಿಸುವುದೇ "ಅರುಣೋದಯ" ಕವನದ ಗುರಿ. ಕನ್ನಡಿಗರನ್ನು ಸ್ವಾಗತಿಸುವುದಕ್ಕೆ ಮೈಸೂರು ಸಿದ್ಧವಾಗಿದೆ ಎಂಬ ಭಾವನೆ "ಸ್ವಾಗತ ಗೀತ"ದ ಒಳಗುಟ್ಟು. "ಸ್ವಾಗತ" ಪ್ಯದದಲ್ಲಾದರೋ ಕನ್ನಡಿಗರು "ಹೃದಯ ವೈಶಾಲ್ಯದಲ್ಲಿ ನಾವೆಲ್ಲರೊಂದೆ" ಎಂಬಭಾವನೆಯಿದೆ. ಈ ಕವನಗಳನ್ನು ಆರಿಸಿಕೊಳ್ಳಲಿಕ್ಕೆ ಕಾರಣ ಕನ್ನಡಿಗರು ಎಚ್ಚೆತ್ತುಕೊಂಡಿದ್ದಾರೆ ಎಂಬುದನ್ನು ತೋರಿಸಲು.

೬) ಕನ್ನಡಕ್ಕೊಂದು ಬಾವುಟ—

ಒಕ್ಕೂಟವಾದ ಕನ್ನಡ ನಾಡಿಗೆ ಸಾಂಸ್ಕೃತಿಕವಾಗಿ ಒಂದುಬಾವುಟ ಬೇಕಲ್ಲ! ಧ್ವಜವಂದನೆಗೆ ಧ್ವಜವಂದನ ಗೀತೆಬೇಕಲ್ಲಾ! ಅದಕ್ಕಾಗಿ ಬಿ. ಎಂ. ಶ್ರೀ. ನಮಗೆ ಒಂದು ಬಾವುಟ ಕೊಟ್ಟರು. ಅದೇ "ಕನ್ನಡ ಬಾವುಟ" –"ಶ್ರೀ"

೭) ಕನ್ನಡಿಗರ ಸ್ಫೂರ್ತಿ—

ಕನ್ನಡ ಡಿಂಡಿಮ –ಕುವೆಂಪು. ಸತ್ತಂತೆಇರುವ ಕನ್ನಡ ಜನವನ್ನು ಎಚ್ಚರಿಸುವ ರಣಭೇರಿ "ಬಾರಿಸು ಕನ್ನಡ ಡಿಂಡಿಮವ"

೮) ಈಶ್ವರನಿರ್ಮಿಸಿದೀಸೃಷ್ಟಿಯನು ಪಾರ್ವತಿ ನೀನೆಸಲಹೌ—

ದ.ರಾ. ಬೇಂದ್ರೆ. ಕರ್ಣಾಟಕ ಏಕೀಕರಣವಾಯಿತು. ಈ ಕನ್ನಡನಾಡಿನ ಸಂರಕ್ಷಣೆ ಯಾರದು? ತಮ್ಮ ಸ್ವಾರ್ಥ ಸಾಧಿಸಿಕೊಳ್ಳಲು ಕಚ್ಚಾಡುತ್ತಿರುವ ರಾಜಕೀಯ ಪುಡಾರಿಗಳಿಂದಲೇ ?ಯಾರು ನಿಜವಾಗಿಯೂ ಕರ್ಣಾಟಕ ಏಕೀಕರಣವನ್ನು ಸಾಧಿಸಿದವರು ?

ಬೇಂದ್ರೆಯವರು, ನಾನು, ನಾನು, ಎಂದು ತಮ್ಮ ಬೆನ್ನುಗಳನ್ನು ತಾವೇ ತಟ್ಟಿಕೊಳ್ಳುವ ಹುರಿಯಾಳುಗಳಿಗೆ ಅನ್ನುತ್ತಾರೆ "ಹುಚ್ಚಪ್ಪಗಳಿರಾ, ನೀವಾರೂ ಅಲ್ಲ. ಈಶ್ವರ "ಅಸ್ತು" ಎಂದ. ಏಕೀಕರಣವಾಯಿತು." "ಈಶ್ವರ ನಿರ್ಮಿಸಿದೀ ಸೃಷ್ಟಿಯನು ಪಾರ್ವತಿ ನೀನೇ ಸಲಹೌ."

ನಾವು ರೂಪಿಸಿಕೊಂಡ "ಕರ್ಣಾಟಕ ದರ್ಶನ" ರೂಪಕದ ಸ್ಥೂಲ ಚಿತ್ರವಿದು. ನಮ್ಮ ಉದ್ದೇಶ ಪಂಪನಿಂದ ಪ್ರಾರಂಭವಾಗಿ ಆಧುನಿಕ ಕವಿಗಳ ಮತ್ತು ಅವರ ಕೃತಿಗಳನ್ನು ಪರಿಚಯ ಮಾಡಿಕೊಟ್ಟು ಕನ್ನಡಿಗರಲ್ಲಿ ಕನ್ನಡ ಪ್ರಜ್ಞೆಯನ್ನು ಬೆಳೆಸುವುದು. ಹೋದಕಡೆಗಳಲ್ಲೆಲ್ಲ ನಾವೇ "ಕರ್ಣಾಟಕ ದರ್ಶನ" ಗಮಕ ರೂಪಕ ವಾಚನದ ವಿಷಯವನ್ನು ಡಂಗುರ ಹೊಡೆಯುತ್ತಿದ್ದೆವು. ರಾಯಚೂರು ನಾಡಹಬ್ಬದಲ್ಲಿ ಮಾಮೂಲಿನಂತೆ ಕುಮಾರವ್ಯಾಸ ಭಾರತ ವಾಚನವಾಯಿತು. ಅಲ್ಲಿಯ ಜನ ಕೂತು ಕೇಳುತ್ತಿರಲಿಲ್ಲ. ಅಲೆಸಮುದ್ರದಂತೆ ಬರುವವರು ಬರುತ್ತಿದ್ದರು, ಹೋಗುವವರು ಹೋಗುತ್ತಿದ್ದರು. ಅದು ಸಂಚಾರಿ ಸಾಗರ. ಸಂತೆಯ ಕಾರ್ಯಕ್ರಮವನ್ನು ಮುಗಿಸಿದೆವು. ರಾತ್ರಿ ಹತ್ತು ಗಂಟೆಯ ಮೇಲೆ "ಕನ್ನಡ ತಾಯ ನೋಟ" ಎಂಬ ವಿಶೇಷ ಗಮಕ ಕಾರ್ಯಕ್ರಮವಿದೆಯೆಂದು ಪ್ರಕಟವಾಯಿತು. ಜಾತ್ರೆಯ ಶ್ರೋತೃವರ್ಗ ಇರಲಿಲ್ಲ. ಕಾವ್ಯವಾಚನ ಕೇಳಲು ಬಂದ ಶ್ರೋತೃಗಳೆಲ್ಲ ಸಾಹಿತ್ಯ ಭಕ್ತರು. ಸುಮಾರು ನಾನೂರು ಐನೂರು ಜನದ ಸಭೆ. ಕನ್ನಡನಾಡಿನ ಗೆಲುವು ನಲಿವು ನೋವು ಕನ್ನಡಿಗರ ಹೀನಾಯ ಬಾಳು "ಎಲ್ಲರೂ ಬಾಳುವಡೆ ನಮಗೆ ಸಾವೆ? ಎಲ್ಲರೂ ನಲಿವ ಕಡೆ ನಮಗೆ ನೋವೆ ?" ಎಂದು ಕೊರಗುವ ಕನ್ನಡತಾಯ ಹತಾಶೆ, ಪ್ರವಾದಿಯಂತೆ ತನ್ನ ತಾಯಿಗೆ ಆಶ್ವಾಸನೆ ನುಡಿಯುವ ಕವಿಪ್ರಸ್ಥಾನ ಆವೇಶದ ಮೊಳಗು, ಕನ್ನಡ ತಾಯಿ ಭುವನೇಶ್ವರಿಯ ವಿಜೃಂಭಣೆಯ ಸಡಗರದ ಮಹಾಮೆರವಣಿಗೆ. ಈ ವಿಷಯ ಹರವುಳ್ಳ "ಕನ್ನಡತಾಯ ನೋಟ" ಗಮಕವಾಚನವನ್ನು ಶಕುಂತಲಾಬಾಯಿ ನನ್ನ ಪ್ರಾಸಂಗಿಕ ನಿರೂಪಣೆಯೊಂದಿಗೆ ಭಾವೋದ್ರೇಕದಿಂದ ಮಾಡಿದರು. ಸಭೆ ಸುಮಾರು ಎರಡು ಗಂಟೆಗಳಕಾಲ ತನ್ಮಯವಾಗಿ ಕೇಳಿತು. ಈಗ ಪಾರ್ಲಿಮೆಂಟ್ ಸದಸ್ಯರಾಗಿರುವ ಬಿ. ವಿ. ದೇಸಾಯಿ, ರಾ. ಗು. ಜೋಷಿ, ಮಾಣಿಕರಾವ್, ಮೊದಲಾದವರು ತೆಗೆದ ಹರ್ಷದುದ್ಗಾರ ಕಾರ್ಯಕ್ರಮದ ಯಶಸ್ಸಿಗೆ ಸಾಕ್ಷ್ಯವಾಗಿತ್ತು.

ಬೇಂದ್ರೆಯವರ "ಈಶ್ವರ ನಿರ್ಮಿಸಿದೀ ಸೃಷ್ಟಿಯನು ಪಾರ್ವತಿ ನೀನೇ ಸಲಹೌ" ಎಂಬ ಗೀತೆಯನ್ನು ಗಮಕಕ್ಕೆ ಒಗ್ಗಿಸಿದ್ದು 1956ರಲ್ಲಿ. ಆಗತಾನೆ ಕರ್ಣಾಟಕದ ಚದರಿ ಹೋಗಿದ್ದ ಭಾಗಗಳೆಲ್ಲ ಒಂದುಗೂಡಿ 1956ರಲ್ಲಿ ನವಂಬರ್ 1ರಂದು ವಿಶಾಲ ಮೈಸೂರು ರಾಜ್ಯವಾಯಿತು. ಕರ್ಣಾಟಕ ಏಕೀಕರಣ ಧುರೀಣರೆನ್ನಿಸಿಕೊಂಡ ಸಿದ್ದವನಹಳ್ಳಿ ನಿಜಲಿಂಗಪ್ಪನವರು ವಿಶಾಲ ಮೈಸೂರು ರಾಜ್ಯ (ಈಗ ಕರ್ಣಾಟಕ)ದ ಪ್ರಥಮ ಮಂತ್ರಿಗಳಾದರು. ಈ ತರುಣದಲ್ಲಿ ಸರ್. ಎಂ. ವಿಶ್ವೇಶ್ವರಯ್ಯ ಮ್ಯೂಸಿಯಂ ಸಭಾಂಗಣದಲ್ಲಿ ಕುಂಬಾರರ ಒಂದು ಸಮ್ಮೇಳನ ನಿಜಲಿಂಗಪ್ಪನವರ ನೇತೃತ್ವದಲ್ಲಿ ನಡೆಯಿತು. ಶಕುಂತಲಾ

ಬಾಯಿ ಪ್ರಾರ್ಥನೆ ಮಾಡಿದರು. "ಈಶ್ವರ ನಿರ್ಮಿಸಿದೀ ಸೃಷ್ಟಿಯನು ಪಾರ್ವತಿ ನೀನೇ ಸಲಹೌ" ಕವನ ಪ್ರಾರ್ಥನಾ ಗೀತ. ಪ್ರಾರ್ಥನೆಯ ಕವನ ಆ ಸಮಯಕ್ಕೆ ಹೊಚ್ಚ ಹೊಸದು. ಬೆಂಗಳೂರಿನ ಶ್ರೋತೃಗಳು ಈ ಕವನವನ್ನು ಕೇಳಿದ್ದು ಅದೇ ಮೊಟ್ಟ ಮೊದಲು. ಸಹೃದಯಮತಿ ನಿಜಲಿಂಗಪ್ಪನವರು ತಮ್ಮ ಭಾಷಣದ ಪ್ರಾರಂಭದಲ್ಲಿಯೇ ಬೇಂದ್ರೆಯವರ ಗೀತದ ಪ್ರಸ್ತಾಪವನ್ನು ಎತ್ತಿಕೊಂಡರು. "ನಾವು ಕರ್ಣಾಟಕದ ಏಕೀಕರಣವನ್ನು ಸಾಧಿಸಿದವರು ಎಂಬ ಭ್ರಮೆಯಲ್ಲಿದ್ದೆವು. ಶಕುಂತಲಾಬಾಯಿ ಮಾರ್ಮಿಕವಾಗಿ ಕವಿಗಳ ಆವೇಶವನ್ನು ನಮ್ಮ ಮನಮುಟ್ಟಿಸಿದ್ದಾರೆ." ಎಂದರು.

"ಕರ್ಣಾಟಕ ದರ್ಶನ" ವೆಂಬ ಗಮಕ ರೂಪಕವನ್ನು ನಾವು ಪ್ರಚಾರಕ್ಕೆ ತಂದುದು ವ್ಯರ್ಥವಾಗಲಿಲ್ಲ. ಕರ್ಣಾಟಕ ಏಕೀಕರಣ ಪ್ರಚಾರದಲ್ಲಿ ಗಮಕಿಗಳೂ ಹಿಂದೆ ಬಿದ್ದಿಲ್ಲವೆಂಬ ತೃಪ್ತಿ ನಮಗಾಗಿದೆ.

1953ರ ಹೊಸಪೇಟೆಯ ಗಮಕ ಪ್ರವಾಸ ಯಾತ್ರೆ ಚಿತ್ತವಾಡಿಗೇ ಮುಗಿಯಲಿಲ್ಲ. ನಾವು ಕಲ್ಮಠೇಶ್ವರದ ಜಾತ್ರೆಯ ಕಾರ್ಯಕ್ರಮವನ್ನು ಮುಗಿಸಿಕೊಂಡು ಹಂಪೆಯ ದರ್ಶನ ಮಾಡಿ ಮಾರನೆಯ ದಿವಸವೇ ಮಧ್ಯಾಹ್ನ ರೈಲುಗಾಡಿ ಹಿಡಿದೆವು ಗದಗಿಗೆ. ಗದಗಿನಲ್ಲಿ ಇಳಿದವರೇ ನೇರವಾಗಿ ಒಂದು ಟಾಂಗಾದಲ್ಲಿ ಕುಮಾರವ್ಯಾಸನ ಆರಾಧ್ಯದೈವ ಗದಗಿನ ವೀರನಾರಾಯಣ ಸ್ವಾಮಿ ದೇವಸ್ಥಾನಕ್ಕೆ ಧಾವಿಸಿದೆವು. ನಮಗೆ ವೀರನಾರಾಯಣಸ್ವಾಮಿಯ ದರ್ಶನ ಮಾಡಿ ಮುಂದಿನ ರೈಲುಗಾಡಿಯಲ್ಲಿ ಹುಬ್ಬಳ್ಳಿಗೆ ಹೋಗುವುದಕ್ಕೆ ಒಂದು ಗಂಟೆಯ ಕಾಲಾವಧಿ ಮಾತ್ರವಿತ್ತು. ದೇವಸ್ಥಾನಕ್ಕೆ ಮುಟ್ಟಿಸಿ ದೇವರ ದರ್ಶನ ಮಾಡಿಸಿ ಮತ್ತೆ ರೈಲ್ವೆನಿಲ್ದಾಣಕ್ಕೆ ನಮ್ಮನ್ನು ಬಿಡಬೇಕೆಂದು ಟಾಂಗದವನನ್ನು ಗೊತ್ತು ಮಾಡಿಕೊಂಡಿದ್ದೆವು. ದೇವಸ್ಥಾನವನ್ನು ತಲುಪಿದೆವು, ದೈವ ಸಾನಿಧ್ಯದ ಬಾಗಿಲು ಬೀಗ ಬಡಿದಿತ್ತು. ಒಂದೇಗಳಿಗೆಯಲ್ಲಿ ನಮ್ಮ ಉತ್ಸಾಹವೆಲ್ಲ ಇಳಿದು ಹೋಯಿತು. "ಕುಮಾರವ್ಯಾಸನಿಗೆ ಒಲಿದ ವೀರನಾರಾಯಣ ಸ್ವಾಮಿಯ ದರ್ಶನ ನಮಗಿಲ್ಲವಾಯಿತಲ್ಲ" ಎಂದು. ದೇವಸ್ಥಾನದ ಪ್ರಾಕಾರದಲ್ಲಿ ಗುಡಿ ಆಚಾರ್ರ ಮನೆಯಿತ್ತು. ನೇರವಾಗಿ ಅವರಲ್ಲಿಗೆ ಹೋದೆ. "ಸ್ವಾಮಿ, ನಾವು ಭಾರತವಾಚನ ಬಿಂದೂರಾಯರ ಶಿಷ್ಯರು. ಬೆಂಗಳೂರಿಂದ ಬಂದಿದ್ದೇವೆ. ವೀರನಾರಾಯಣಸ್ವಾಮಿಯ ದರ್ಶನಾಪೇಕ್ಷೆಯಿಂದ ಹುಬ್ಬಳಿಗೆ ಹೋಗುತ್ತಿದ್ದವರು ತಟ್ಟನೆ ಗದುಗಿನಲ್ಲಿ ಇಳಿದೆವು, ಈ ರಾತ್ರಿಯೇ ನಾವು ಹುಬ್ಬಳ್ಳಿಯನ್ನು ಸೇರಬೇಕಾಗಿದೆ. ದಯಮಾಡಿ ವೀರನಾರಾಯಣಸ್ವಾಮಿ ದರ್ಶನ ಮಾಡಿಸಬೇಕು" ಎಂದು ಪ್ರಾರ್ಥಿಸಿದೆ. "ಭಾರತದ ಬಿಂದೂರಾಯರ ಶಿಷ್ಯರೆನ್ನುತ್ತೀರಿ. ನಿಮಗಿಷ್ಟು ಜನಕ್ಕೇ ಈಗ ಬಾಗಿಲುತೆಗೆದು ಸ್ವಾಮಿಯ ದರ್ಶನ ಮಾಡಿಸುತ್ತೇನೆ" ಎಂದು ಬೀಗದ ಎಸಲು ಗೊಂಚಲು ತೆಗೆದುಕೊಂಡು ನಡೆದರು. ನಾವು ಹಿಂಬಾಲಿಸಿದೆವು. ಕುಮಾರವ್ಯಾಸ ಒಡ್ಡೆಒಟ್ಟೆಯಲ್ಲಿ ಯಾವ ಕಂಬದ ಮುಂದೆ ನಿಂತು ಭಗವದ್ಭಕ್ತಿಯಾವೇಶದಲ್ಲಿ ಮಹಾಮೇರು ಸದೃಶ ಚಿರಂತನವಾದ ಕರ್ಣಾಟಕ ಭಾರತ ಕಥಾ ಮಂಜರಿಯನ್ನು ರಚಿಸಿದನೋ ಅದೇ ಕಂಬದ ಮುಂದೆ ನಿಂತು

ಶಕುಂತಲಾಬಾಯಿ ಕಣ್ಮುಚ್ಚಿ ಭಾರತದ ಮಂಗಳ ಪದ್ಯಗಳನ್ನು "ಶ್ರೀವನಿತೆಯರಸನೆ" ಪದ್ಯದಿಂದ "ವೇದಪುರುಷನ ಸುತನ ಸುತನ" ಪದ್ಯಗಳವರೆಗೆ ಹೇಳಿದರು. ಆಚಾರ್ಯ ರಿಗೆ ಶಕುಂತಲಾಬಾಯಿ ಕಂಠಶ್ರೀಯಿಂದ ಹೊಮ್ಮುತ್ತಿದ್ದ ಮಂಗಳ ಪದ್ಯಗಳನ್ನು ಕೇಳಿ ಮೈಮರೆಯಿತು. ವೀರನಾರಾಯಣಸ್ವಾಮಿಯ ಪವಿತ್ರ ದಿವ್ಯ ಸನ್ನಿಧಿಯಲ್ಲಿ ಶಕುಂತಲಾ ಬಾಯಿಯ ಕುಮಾರವ್ಯಾಸ ಕಾವ್ಯವಾಚನ ಪರಿಚಾರಿಕೆ ಅರ್ಪಣವಾಯಿತು.

ಗದಗು ರೈಲ್ವೆನಿಲ್ದಾಣಕ್ಕೆ ಬಂದೆವು. ಆಗತಾನೆ ರೈಲುಗಾಡಿ ಬಂದಿತ್ತು. ಹತ್ತಿ ಹುಬ್ಬಳ್ಳಿ ಸೇರಿದಾಗ ರಾತ್ರಿ ಎಂಟುಗಂಟೆ. ಸ್ಟೇಷನ್ನಿನಲ್ಲಿ ನಮ್ಮನ್ನು ಕರೆದೊಯ್ಯು ವುದಕ್ಕೆ ಪಂಚಾಂಗಂ ವೆಂಕೋಬಾಚಾರ್ಯ ಬಂದೇ ಇರಲಿಲ್ಲ. ನಾನು ಮುಂಚಿತ ವಾಗಿಯೇ ಪತ್ರಹಾಕಿದ್ದೆ. ಹೊಸದೊಂದು ಧೈರ್ಯಮಾಡಿ ಮನೆ ಹುಡುಕಿಕೊಂಡು ಟಾಂಗದಲ್ಲಿ ಹೊರೆಟೆವು. ನಮ್ಮನ್ನು ನೋಡಿ ಪಂಚಾಗಂ ವೆಂಕೋಬಾಚಾರ್ಯರಿಗೆ ಆಶ್ಚರ್ಯವೋ ಆಶ್ಚರ್ಯ.

ಹುಬ್ಬಳ್ಳಿಯಲ್ಲಿ ನಮ್ಮ ಕಾರ್ಯಕ್ರಮವನ್ನು ಏರ್ಪಡಿಸುವುದರಲ್ಲಿ ವೆಂಕೋಬಾ ಚಾರ್ಯರು ತೆಗೆದುಕೊಂಡ ಶ್ರದ್ಧೆ ಚಿರಸ್ಮರಣೀಯ. ಮಾರನೆ ಬೆಳಿಗ್ಗೆ ಹುಬ್ಬಳ್ಳಿಯ "ಸಂಯುಕ್ತ ಕರ್ಣಾಟಕ" ಕಚೇರಿಗೆ ಕರೆದೊಯ್ದರು ನನ್ನನ್ನು. ಆ ಸಮಯದಲ್ಲಿ ಆದ್ಯ ರಂಗಾಚಾರ್ಯ (ಶ್ರೀರಂಗ)ರು ಬಂದಿದ್ದರು "ಸಂಯಕ್ತ ಕರ್ಣಾಟಕ"ದ ಸಂಪಾದಕ ವಿ. ಬಿ. ನಾಯಕರನ್ನು ನೋಡುವುದಕ್ಕೆ. "ನಮ್ಮ ಮನೆಯಲ್ಲಿ ಈ ಸಂಜೆ ಶಕುಂತಲಾ ಬಾಯಿಯವರ ಭಾರತವಾಚನ. ನೀವು ದಯಮಾಡಿಸಬೇಕು" ಎಂದು ವೆಂಕೋಬಾ ಚಾರ್ಯರು ಆದ್ಯರನ್ನು ಆಹ್ವಾನಿಸಿದರು. ಅದಕ್ಕೆ ಅವರು "ಶಕುಂತಲಾಬಾಯಿ, ಪಾಂಡುರಂಗರಾಯರನ್ನು ಧಾರವಾಡಕ್ಕೆ ಕರೆದುಕೊಂಡು ಬನ್ನಿ. ವಿದ್ಯಾವರ್ಧಕ ಸಂಘ ದಲ್ಲಿ ಇಬ್ಬರ ಕಾರ್ಯಕ್ರಮಗಳನ್ನು ಏರ್ಪಡಿಸೋಣ." ಎಂದು ಆಗಲೆ "ಸಂಯುಕ್ತ ಕರ್ಣಾಟಕಕ್ಕೆ" ಧಾರವಾಡದ ಕಾರ್ಯಕ್ರಮವನ್ನು ಪ್ರಕಟಣೆಗೆ ಕೊಟ್ಟುಬಿಟ್ಟರು.

ವೆಂಕೋಬಾಚಾರ್ಯರ ಮನೆಯಲ್ಲಿ ಶಕುಂತಲಾಬಾಯಿಯ ಕುಮಾರವ್ಯಾಸ ಭಾರತವಾಚನ ಒಂದು ಗಂಟೆಯಷ್ಟು ಕಾಲ ನಡೆಯಿತು. ಕಥಾಭಾಗ "ದ್ರೌಪದಿ ಮಾನ ಸಂರಕ್ಷಣ". ವಿ. ಬಿ. ನಾಯಕರು, ಹ. ರಾ. ಪುರೋಹಿತರು, ಕಲಮಥಾನಿ ಗುರುರಾಯರು ಹಿರೇಮಲ್ಲೂರ ಈಶ್ವರನ್ ಮೊದಲಾದವರು ಆಗಮಿಸಿದ್ದರು.

"ಕರ್ಣಾಟಕ ಕವಿ ಕಾವ್ಯ ಪರಂಪರೆ" ರೂಪಕದ ಉದಯ

ಮಾರನೆಯ ದಿವಸ ಹುಬ್ಬಳ್ಳಿಯ ಕರ್ಣಾಟಕ ಲಿಂಗಾಯಿತ (ಈಗ ಲಿಬರಲ್) ಸೊಸೈಟಿಯ ಕಾಮರ್ಸ್‌ಕಾಲೇಜು ಕರ್ಣಾಟಕ ಸಂಘದ ಆಶ್ರಯದಲ್ಲಿ ಕಾವ್ಯವಾಚನ. ನಾನು "ಕರ್ಣಾಟಕ ಕವಿಕಾವ್ಯ ಪರಂಪರೆ" ಎಂಬ ಹೆಸರಿನಲ್ಲಿ ಪಂಪನಿಂದ ಹಿಡಿದು ಆಧುನಿಕ ಕವಿಗಳವರೆಗೆ ಕಾಲೇಜು ವಿದ್ಯಾರ್ಥಿಗಳಿಗೆ ಏಕೆ ಪರಿಚಯ ಮಾಡಿಕೊಡಬಾರ ದೆಂದು ಚಿಂತಿಸಿದೆ. ಅದು ಮುಂದೆ ಕರ್ಣಾಟಕದಲ್ಲೆಲ್ಲ ಪ್ರಸಾರವಾಯಿತು.

ನಾವು "ಕರ್ಣಾಟಕ ಕವಿ ಕಾವ್ಯ ಪರಂಪರೆ" ಗಮಕ ರೂಪಕಕ್ಕೆ ಅಳವಡಿಸಿ ಕೊಂಡ ವಿಷಯಗಳು ಸ್ಥೂಲವಾಗಿ ಹೀಗಿದ್ದವು :—

ಪ್ರಾರ್ಥನೆ – "ರಕ್ಷಿಸು ಕರ್ಣಾಟಕ ದೇವಿ" - ಶಾಂತಕವಿಗಳು

ಪಂಪ – ಬನವಾಸಿ ವರ್ಣನೆ.

ಬಸವಣ್ಣ–ಅಕ್ಕಮಹಾದೇವಿ – ಇವರ ನಾಲ್ಕೈದು ವಚನಗಳು

ಹರಿಹರ – ಪಂಪಾಶತಕದಿಂದ ಆಯ್ದ ನಾಲ್ಕೈದು ಪದ್ಯಗಳು

ರಾಘವಾಂಕ – ಹರಿಶ್ಚಂದ್ರ ಕಾವ್ಯದಿಂದ ವಶಿಷ್ಠ-ವಿಶ್ವಾಮಿತ್ರ ಸಂವಾದ, ಹೊಲತಿಯರಸಂವಾದ, ರಾಜ್ಯದಾನ (ಇವುಗಳಲ್ಲಿ ಒಂದುಭಾಗ)

ಕುಮಾರವ್ಯಾಸ – ಮಂಗಳ ಪದ್ಯಗಳು-"ಶ್ರೀವನಿತೆಯರಸನೆ" "ಗಜ ಮುಖನೆ" "ವಾರಿ ಜಾಕ್ಷನೆ" "ಅರಸುಗಳಿಗಿದು ವೀರ" ಮತ್ತು "ವೇದ ಪುರುಷನೆ"

ಲಕ್ಷ್ಮೀಶ–"ಸುಧನ್ವ" ಅಥವಾ "ಮಯೂರಧ್ವಜ" **ಕಥೆ, ಜೈಮಿನೀ** ಭಾರತದಿಂದ (ಎಲ್ಲ ಪದ್ಯಗಳಲ್ಲ, ಏಳೆಂಟು ಪದ್ಯಗಳು ಮಾತ್ರ)

ದಾಸಸಾಹಿತ್ಯ – ಪುರಂದರದಾಸರು, ಕನಕದಾಸರು, ಹೀಗೆ ದಾಸರುಗಳ ದೇವರನಾಮಗಳು. "ಹರಿಭಕ್ತಿಸಾರ", "ಹರಿಕಥಾಮೃತ ಸಾರ" ಕಾವ್ಯ ಗಳಪದ್ಯಗಳು.

ಆಧುನಿಕ ಕವಿತೆಗಳು – ಮಾಸ್ತಿ, ವಿ. ಸೀ., ಬೇಂದ್ರೆ, ಕುವೆಂಪು ಇತ್ಯಾದಿ ಕವಿಗಳ ಭಾವಗೀತೆಗಳು

ಕನ್ನಡ ತಾಯಿನೋಟ – "ಶ್ರೀ"

ವೆಂಕೋಬಾಚಾರ್ಯರು ಪರಿಚಯ ಭಾಷಣ ಮಾಡಿದರು. ಹಿರೇಮಲ್ಲೂರ ಈಶ್ವರನ್ ವಂದನಾರ್ಪಣೆ ಮಾಡಿದರು. ಅವರು ಮುಂದೆ ಕೆಲವೇ ತಿಂಗಳಲ್ಲಿ ಬೆಂಗ ಳೂರಿನ "ಉಷಾ" ಮಾಸಪತ್ರಿಕೆಗೆ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಸೇವೆ ಸಲ್ಲಿಸುತ್ತಿರುವ ದಂಪತಿಗಳ ವಿಷಯವಾಗಿ ಮಹತ್ತರವಾದ ಒಂದು ಲೇಖನವನ್ನೇ ಬರೆದರು. ಅದರಲ್ಲಿ ತಿರುಮಲೆ ತಾತಾಚಾರ್ಯ ದಂಪತಿಗಳು, ಮಾಳವಾಡ ದಂಪತಿಗಳು, ಚೆನ್ನವೀರಕಣವಿ ದಂಪತಿಗಳು, ಬಿ. ಶ್ರೀ. ಪಾಂಡುರಂಗರಾವ್ ದಂಪತಿಗಳನ್ನು ಉಲ್ಲೇಖಿಸಿದ್ದರು.

ವೆಂಕೋಬಾಚಾರ್ಯರು ನಮ್ಮನ್ನು ಧಾರವಾಡಕ್ಕೆ ಕರೆದುಕೊಂಡು ಹೋದರು. ನಾವು ಶೇಷೋಕುಲಕರ್ಣಿ ದಂಪತಿಗಳ ಅತಿಥಿಗಳಾದೆವು. ಗೀತಾಕುಲಕರ್ಣಿ, ನಾವು ಮೊದಲ ಭೇಟಿಕೊಟ್ಟಾಗ ಕತೆ ಕಾದಂಬರಿ ಬರೆಯಲು ಪ್ರಾರಂಭಿಸಿದ್ದರೋ ಇಲ್ಲವೊ ತಿಳಿಯದು. ಅನಂತರ ಅವರ ಹೆಸರು ಸಾಹಿತ್ಯ ಪ್ರಪಂಚದಲ್ಲಿ ಕೇಳಿಬರತೊಡಗಿತು. ಕ್ರಮೇಣ ಪ್ರಸಿದ್ಧಿಗೂ ಬಂತು. ಅವರು ಕರ್ಣಾಟಕ ರಾಜ್ಯದ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ವಿಜೇತರೂ ಆದರು.

ಧಾರವಾಡದ ವಿದ್ಯಾವರ್ಧಕ ಸಂಘದಲ್ಲೂ "ಕರ್ನಾಟಕ ಕವಿ ಕಾವ್ಯ ಪರಂಪರೆ" ಕಾರ್ಯಕ್ರಮವನ್ನೇ ಕೊಟ್ಟೆವು. ಸಂಘದ ಅಧ್ಯಕ್ಷರಾದ ಆದ್ಯ ರಂಗಾಚಾರ್ಯರು ಸ್ವಾಗತ ಬಯಸಿದರು.

ಶಕುಂತಲಾಬಾಯಿ ತಮ್ಮ ಕಾರ್ಯಕ್ರಮದಲ್ಲಿ "ಪ್ರಭುಲಿಂಗಲೀಲೆ" ಯಿಂದ ಮಹಾದೇವಿ ವಿರಕ್ತಿ ಭಾಗವನ್ನು ಅಕ್ಕನ ಹಾಗೂ ಅಣ್ಣನವರ ವಚನಗಳನ್ನು ಸೇರಿಸಿ ವಾಚಿಸಿದ ವೈಶಿಷ್ಟ್ಯವನ್ನು ಆದ್ಯರು ಬಹಳವಾಗಿ ಮೆಚ್ಚಿಕೊಂಡರು. ಗೌ|| ಕಾರ್ಯ ದರ್ಶಿನೆಗಳೂರು ರಂಗನಾಥರು ವಂದಿಸಿದರು.

ವಿದ್ಯಾಗಿರಿಯ ಕಾಲೇಜಿನಲ್ಲೂ ಶಕುಂತಲಾಬಾಯಿಯ ಕಾವ್ಯವಾಚನ ಕಾರ್ಯ ಕ್ರಮ ಏರ್ಪಟ್ಟಿತು. ಅಲ್ಲೂ "ಕರ್ನಾಟಕ ಕವಿ ಕಾವ್ಯ ಪರಂಪರೆ" ಕಾವ್ಯವಾಚನ. ಕಳೆಗಟ್ಟಿತು. ಕಾಲೇಜಿನ ಅಧಿಪತಿಗಳಾಗಿದ್ದ ಧಾರವಾಡಕರ ಅವರು ಸ್ವಾಗತಿಸಿದರು.

ಧಾರವಾಡದ ಸತ್ತಾಪುರದಲ್ಲಿ ಸಾಲಿರಾಮಚಂದ್ರರಾಯರನ್ನು ಸಂದರ್ಶಿಸಿದೆವು. ಸಾಧನಕೇರಿಗೆ ಹೋಗಿ ಶಂಬಾಜೋಶಿಯವರನ್ನು ಸಂದರ್ಶನ ಮಾಡಿದೆವು. ಶಂಬಾ ನಾವು ಹೋದಾಗ ಚರಖ ನೂಲುತ್ತಿದ್ದರು. ತುಂಬ ಹಾರ್ದಿಕ ಮಮತೆಯಿಂದ ದಂಪತಿಗಳು ಸ್ವಾಗತಿಸಿದರು.

"ಆನಂದಕಂದ" (ಬೆಟಗೇರಿ ಕೃಷ್ಣಶರ್ಮ)ರ ಸಂದರ್ಶನ

ವೆಂಕೋಬಾಚಾರ್ಯರು ನಮ್ಮನ್ನು ಬೆಟಗೇರಿ ಕೃಷ್ಣಶರ್ಮರಿಗೆ ದರ್ಶನ ಮಾಡಿ ಸುವುದಕ್ಕೆ ಮರೆಯಲಿಲ್ಲ. ಬೆಟಗೇರಿಯವರು ನನಗೆ ಹೊಸಬರಾಗಿರಲಿಲ್ಲ. 1928–29ರ ವರ್ಷಗಳಲ್ಲಿ ಅವರು ಬೆಂಗಳೂರಿನ ಆರ್ಯವಿದ್ಯಾಶಾಲೆಯಲ್ಲಿ ದೇವುಡು ನರಸಿಂಹಶಾಸ್ತ್ರಿ ಗಳು ಮುಖ್ಯೋಪಾಧ್ಯಾಯರಾಗಿದ್ದ ಕಾಲದಲ್ಲಿ ಕನ್ನಡ ಅಧ್ಯಾಪಕರಾಗಿದ್ದರು. ಆಗಲೆ "ಆನಂದಕಂದ" ಎಂಬ ಹೆಸರಿನಲ್ಲಿ ಕತೆ, ಕವನಗಳನ್ನು ರಚಿಸಿ ಪ್ರಸಿದ್ಧರಾಗಿದ್ದರು. ಅವರ "ಅರುಣೋದಯ" ವೆಂಬ ಕವನ ಸಂಗ್ರಹ ಪ್ರಕಟವಾಗಿ ಸಾಹಿತ್ಯದಲ್ಲಿ ಹೆಸರು ಮಾಡಿತ್ತು. ಆ ಪುಸ್ತಕದ ಮುನ್ನುಡಿಯ ಗದ್ಯ, ಒಳಗಿನ ಪದ್ಯಗಳು ತುಂಬ ಹೃದ್ಯ ವಾಗಿದ್ದವು. ರವೀಂದ್ರನಾಥ ಠಾಕೂರರ "ಕ್ರೆಸೆಂಟ್ ಮೂನ್" ಶಿಶು ಮನೋ ಭಾವದ ಕಾವ್ಯದಂತೆ ಕನ್ನಡದಲ್ಲಿ ಶ್ರೀನಿವಾಸರ ಮುನ್ನುಡಿಯನ್ನು ಒಳಗೊಂಡು ಪ್ರಕಟ ವಾದ "ಮುದ್ದಿನ ಮಾತು" ಶಿಶುಮನೋಧರ್ಮದ ಕವನ ಸಂಗ್ರಹ ನನ್ನ ಮನಸ್ಸನ್ನು ಸೂರೆಗೊಂಡಿತ್ತು. ಅಂದಿನ ಮಿಷನ್ ಸ್ಕೂಲಿನ ಕರ್ನಾಟಕ ವಾಙ್ಮಯ ಸಂಘಕ್ಕೆ ಬೆಟಗೇರಿಯವರನ್ನು ಕರೆಸಿಕೊಂಡು ಭಾಷಣಮಾಡಿಸಿ ಕೇಳಿ ನಾವು ವಿದ್ಯಾರ್ಥಿ ಗಳು ಹರ್ಷಪಟ್ಟಿದ್ದೆವು.

ತರುವಾಯ 1946ರಲ್ಲಿ ಬೆಂಗಳೂರಿನ ಸಾಹಿತಿಗಳ ಸಂಘ ಅಖಿಲ ಕರ್ನಾಟಕ ಸಣ್ಣ ಕತೆಗಾರರ-ಕಾದಂಬರಿಕಾರರ ಸಮ್ಮೇಳನವನ್ನು ನಡೆಸಿತು. ಬೆಟಗೇರಿ ಕೃಷ್ಣಶರ್ಮರು ಸಣ್ಣಕತೆಗಾರರ ಸಮ್ಮೇಳನಕ್ಕೂ, ದೇವುಡು ನರಸಿಂಹಶಾಸ್ತ್ರಿಗಳು ಕಾದಂಬರಿಕಾರರ

ಸಮ್ಮೇಳನಕ್ಕೂ ಅಧ್ಯಕ್ಷರುಗಳಾಗಿ ಸಮ್ಮೇಳನದಲ್ಲಿ ಭಾಗವಹಿಸಿದರು. ಈ ಸಮಯದಲ್ಲಿ ನಾನು "ವಿಶ್ವಕರ್ಣಾಟಕ" ದಿನ ಪತ್ರಿಕೆಗೆ ಸುದ್ದಿಗಾರನಾಗಿದ್ದೆ. "ಆನಂದಕಂದರ ಸಣ್ಣ ಕತೆಗಳು" ಎಂಬ ಪರಿಚಯಾತ್ಮಕ ಲೇಖನ ಬರೆದು ಬೆಟಗೇರಿ ಕೃಷ್ಣಶರ್ಮರಿಗೆ ಪ್ರಸಾರ ಕೊಟ್ಟಿದ್ದೆ. ಸಮ್ಮೇಳನದಲ್ಲಿ ಶಕುಂತಲಾಬಾಯಿ ಮಾಸ್ತಿ ವೆಂಕಟೇಶಅಯ್ಯಂಗಾರ್ಯರ ಲೇಪಾಕ್ಷಿ ಕಥನ ಕವನವನ್ನು ಗಮಕಮಾಡಿ ವಾಚನ ಕೊಟ್ಟರು. ಸಮ್ಮೇಳನ ಮುಗಿದ ಮೇಲೆ ಬೆಟಗೇರಿ ಕೃಷ್ಣಶರ್ಮರು, ಲಾ ಕಾಲೇಜಿನ ಕಾರ್ಯದರ್ಶಿಯಾಗಿದ್ದ ರೇಣುಕಾ ಪ್ರಸಾದ್ ಅವರೊಡಗೂಡಿ ನಮ್ಮ ಮಕ್ಕಳ ಮಂಟಪಕ್ಕೆ ದಯಮಾಡಿಸಿ ಸತ್ಕಾರಕೂಟ ದಲ್ಲಿ ಭಾಗಗೊಂಡರು. ಶಕುಂತಲಾಬಾಯಿ "ನನ್ನದುಕನ್ನಡ ನಾಡು" "ಅರುಣೋದಯ" "ಎನಿತು ಇನಿದು ಕನ್ನಡ ನುಡಿಯು" ಕವನಗಳನ್ನು ಓದಿ ಬೆಟಗೇರಿಯವರನ್ನು ತಣಿ ಸಿದರು. ಅಂದೇ ಸಂಜೆ ಬೆಟಗೇರಿಯವರಿಗೆ ಲಾ ಕಾಲೇಜಿನಲ್ಲಿ ಒಂದು ಸತ್ಕಾರಕೂಟ. ಅಲ್ಲೂ ಶಕುಂತಲಾಬಾಯಿ ಭಾಗವಹಿಸಿ ಬೆಟಗೇರಿಯವರ ಕನ್ನಡ ಭಕ್ತಿ ಕವನಗಳನ್ನೆ ಗಮಕರೀತಿಯಲ್ಲಿ ಹಾಡಿದರು. ಹೀಗೆ ಬೆಟಗೇರಿಯವರು, ನಾವು ಧಾರವಾಡಕ್ಕೆ ಹೋಗುವ ಮೊದಲೇ ಬೆಂಗಳೂರಲ್ಲಿ ನಮಗೆ ಸಾಕಷ್ಟು ಪರಿಚಯವಾಗಿದ್ದರು.

ವೆಂಕೋಬಾಚಾರ್ಯರು ನಮ್ಮನ್ನು "ಜಯಂತಿ" ಮಾಸಪತ್ರಿಕೆಯ ಕಚೇರಿಗೆ ಕರೆದುಕೊಂಡು ಹೋದರು. ಬೆಟಗೇರಿಯವರು ನಮ್ಮನ್ನು ನಗುಮೊಗದಿಂದ ಸ್ವಾಗತಿಸಿ ದರು. ತಮ್ಮ ಮನೆಗೂ ಕರೆದೊಯ್ದರು. ಹೋಗುತ್ತಲೇ ನಮಗೆ ಕಾಣಿಸಿದುದು ಎರಡುವರ್ಷಗಳಿಂದ ಹಾಸಿಗೆ ಹಿಡಿದು ಮಲಗಿದ್ದ ಬೆಟಗೇರಿಯವರ ಧರ್ಮಪತ್ನಿ. ನಮಗೆ ಬೆಟಗೇರಿ ಕೃಷ್ಣಶರ್ಮರ ಧರ್ಮಪತ್ನಿಯವರನ್ನು ನೋಡಿ ಕರುಳು ಮಮ್ಮಲ ಮರುಗಿತು. ಆದರೆ ಬೆಟಗೇರಿಯವರು ನಿಷ್ಕಾಮ ಕರ್ಮಯೋಗಿಗಳಂತೆ ಇದ್ದರು.

ಒಂದೆರಡೇ ದಿವಸಗಳಲ್ಲಿ ಬೆಟಗೇರಿಯವರು ಡಾ|| ಕಾಂತ ಶ್ರೀನಿವಾಸರಾವ್ (ಕೆ. ಎಸ್.) ಕಮಲಾಪುರ ಅವರ ಮನೆಯ ಅಟ್ಟದ ಮೇಲೆ ಶಕುಂತಲಾಬಾಯಿಯ "ಕುಮಾರವ್ಯಾಸ ಭಾರತ" ವಾಚನ ಏರ್ಪಡಿಸಿದರು. "ಭಾರತ ವಾಚನ ಪ್ರವೀಣ" ಬಿಂದೂರಾಯರಲ್ಲಿ ಪಾಠ ಮಾಡಿದ ಸುಪ್ರಸಿದ್ಧ ಗವಾಯಿ ಗುರುರಾವ್ ದೇಶಪಾಂಡೆ ಕೆ. ಜಿ. ಹಲಸಗಿ, ಸಾಹಿತಿಗಳಾದ ದ. ಬ. ಕುಲಕರ್ಣಿ, ಮುಳಿಯ ಗೋಪಾಲಕೃಷ್ಣ ರಾವ್ ಮೊದಲಾದವರು ಆಗಮಿಸಿದ್ದರು. ಹತ್ತಾರು ಮಹಿಳೆಯರು ಸೇರಿದ್ದರು. ವಿದ್ವತ್ ಗೋಷ್ಠಿಯ ಕಳೆ ತಳೆದಿತ್ತು ಸಭೆ. ಶಕುಂತಲಾಬಾಯಿ "ದ್ರೌಪದೀ ಮಾನ ಸಂರಕ್ಷಣ" ಭಾಗವನ್ನು ಒಂದು ಗಂಟೆಯ ಕಾಲ ವಾಚನ ಮಾಡಿದರು.

ನನ್ನ ಸಾಹಿತಿ ಮಿತ್ರ ಆಕಾಶವಾಣಿಯ ಎಂ. ಶಂಕರ್ ನಾವು ಧಾರವಾಡಕ್ಕೆ ಬಂದಿರುವುದನ್ನು ತಿಳಿದು ಧಾರವಾಡ ಕೇಂದ್ರದಿಂದ ಶಕುಂತಲಾಬಾಯಿಯ ಕಾವ್ಯವಾಚನ ವನ್ನು ಆಕಾಶವಾಣಿಯ ಮೂಲಕ ಪ್ರಸಾರಮಾಡಬಯಸಿದರು. ಶಕುಂತಲಾಬಾಯಿ "ಪ್ರಭುಲಿಂಗಲೀಲೆ"ಯಿಂದ "ಅಕ್ಕಮಹಾದೇವಿ ವಿರಕ್ತಿ" ಕಥಾಭಾಗವನ್ನು ಪ್ರಸಾರ ಮಾಡಿದರು. ಉತ್ತರ ಕರ್ಣಾಟಕದ ಸಹಸ್ರಾರು ಸಹಸ್ರಾರು ಗಮಕ ಕಲಾಭಿಮಾನಿ

ಗಳಿಗೆ ಧಾರವಾಡದ ಆಕಾಶವಾಣಿಯ ಮೂಲಕ ಶಕುಂತಲಾಬಾಯಿಯನ್ನು ಪರಿಚಯಿಸಿದ ಯಶಸ್ಸು ಎಂ. ಶಂಕರ್ ಅವರಿಗೆ ಸಲ್ಲುತ್ತದೆ.

ಇನ್ನಿಲ್ಲದ ಸಹೃದಯಿ ವೆಂಕೋಬಾಚಾರ್ಯ

ಹುಬ್ಬಳ್ಳಿಯಲ್ಲಿ ವೆಂಕೋಬಾಚಾರ್ಯರ ಮನೆ ಕರ್ಣಾಟಕದ ಸಾಹಿತಿಗಳಿಗೆಲ್ಲ ತೆರೆದ ಬಾಗಿಲು. ಅವರೂ ಅವರ ಧರ್ಮಪತ್ನಿ ಪದ್ಮಾವತಿ ಊಟ ಉಪಚಾರ ನೀಡುವುದರಲ್ಲಿ ಎತ್ತಿದ ಕೈ. ಪ್ರವಾಸದಲ್ಲಿ ನನ್ನ ಹಿರಿಮಗಳು ಚಿ|| ವನಜ, ನನ್ನ ಮಗ ಚಿ|| ಮೋಹನ ನಮ್ಮನ್ನು ಹಿಂಬತ್ತಿದ್ದರು. ಬೆಂಗಳೂರಿನ ಮಕ್ಕಳಿಗೆ, ಹೆಪ್ಪುಗಟ್ಟಿದ ಗಡ್ಡೆ ಮೊಸರು ಅಪರೂಪ. ನಮ್ಮ ಮಕ್ಕಳು ಹರಪನಹಳ್ಳಿಯಲ್ಲಿ ಹೆತ್ತ ಮೊಸರವಲಕ್ಕಿ, ಗಡ್ಡೆ ಮೊಸರು ರುಚಿ ಕಂಡಿದ್ದರು. ಹುಬ್ಬಳ್ಳಿಯಲ್ಲೂ ವೆಂಕೋಬಾಚಾರ್ಯರ ಮನೆಯಲ್ಲಿ ಗಡ್ಡೆ ಮೊಸರಿನ ಸವಿ ಕಂಡರು. ಅಕ್ಕ ತಮ್ಮ ಕೇಳಿದಷ್ಟು ಗಡ್ಡೆಮೊಸರು ಬಡಿಸುತ್ತಿದ್ದರು ಪದ್ಮಾವತಿ ತಾಯಿ. ವೆಂಕೋಬಾಚಾರ್ಯರು ವನಜ ಮೋಹನರನ್ನು ಪಕ್ಕದಲ್ಲಿ ಕೂಡಿಸಿಕೊಂಡು ಉಪಚಾರಮಾಡಿ ಮೊಸರನ್ನ ಉಣಿಸಿದ್ದೇ ಉಣಿಸಿದ್ದು.

ವೆಂಕೋಬಾಚಾರ್ಯರು ಸಾಹಿತಿ. ತೆಲುಗಿಂದ ಕನ್ನಡಕ್ಕೆ, ಕನ್ನಡದಿಂದ ತೆಲುಗಿಗೆ ಸಾಹಿತ್ಯವನ್ನು ವಿನಿಮಯ ಮಾಡಿದ ಅನುವಾದಕ. "ಆನಂದ ಗ್ರಂಥಮಾಲೆ"ಯ ಸಂಪಾದಕ. ಉದರ ಪೋಷಣೆಗಾಗಿ ಯಾವುದೋ ಒಂದು ಇನ್ಶೂರೆನ್ಸ್ ಕಂಪನಿಯ ಪ್ರತಿನಿಧಿ. ಕಪಟವರಿಯದ ಸಹೃದಯಿ. ಸ್ನೇಹಮಯಿ. ಬಲುಬೇಗ ಎಲ್ಲರಲ್ಲೂ ಹೊಂದಿಕೊಳ್ಳುವ ಸ್ವಭಾವ. ಅತಿಥಿ ಸತ್ಕಾರದಲ್ಲಿ ನಿಸ್ಸೀಮ. ಕೆಲವೇ ವರ್ಷಗಳಲ್ಲಿ ಒಬ್ಬ ಮಗಳನ್ನು ಕಳೆದುಕೊಂಡರು. ತಮ್ಮ ನೆರಳಾಗಿ ಬಾಳಿದ ಸದ್ಗೃಹಿಣಿ ಪದ್ಮಾವತಿಯನ್ನು ನೀಗಿಕೊಂಡರು. ತಮ್ಮ ದುಃಖವನ್ನು ತೋಡಿಕೊಂಡು ದೀರ್ಘವಾದ ಶೋಕಪತ್ರ ಬರೆದರು. ಕಾಲಕ್ರಮದಲ್ಲಿ ತಾವಿದ್ದ ಇನ್ಶೂರೆನ್ಸ್ ಕಂಪನಿಯ ಕೆಲಸ ತ್ಯಜಿಸಿ ಬೆಂಗಳೂರು ಸೇರಿದರು. ಖಾದಿ ಬೋರ್ಡಿನಲ್ಲಿ ಉದ್ಯೋಗಿಯಾದರು. ಈ ಸಮಯದಲ್ಲಿ ಒಂದೆರಡು ತಿಂಗಳು ನಮ್ಮ ಅತಿಥಿಯಾದರು. ನನ್ನಮ್ಮ, ಚಿಕ್ಕಮ್ಮ, ವೆಂಕೋಬಾಚಾರ್ಯರಿಗೂ ಅಮ್ಮ ಚಿಕ್ಕಮ್ಮರಾಗಿಹೋದರು. ನನ್ನ ಮಕ್ಕಳಿಗೆ ಅವರು ಒಬ್ಬ ದೊಡ್ಡಪ್ಪ. ಅವರು ಹಿರಿಯಮಗ ಪಿ. ವೇಣುಗೋಪಾಲ್ ಬೆಂಗಳೂರಿಗೆ ಬಂದು ಆಕಾಶವಾಣಿಯಲ್ಲಿ ಸೇರಿಕೊಂಡಮೇಲೆ ರಾಜಾಜಿನಗರದಲ್ಲಿ ಮನೆ ಮಾಡಿದರು. ನೆಹರೂ ನಗರಕ್ಕೆ ರಾಜಾಜಿನಗರಕ್ಕೆ ಗಾವುದ ಗಾವುದಗಳಷ್ಟು ದೂರವಾಯಿತು. ಒಬ್ಬರನ್ನೊಬ್ಬರು ನೋಡುವುದು ಅಪರೂಪವಾಯಿತು. 1974ರಲ್ಲಿ ದಿವಂಗತರಾದ ಸುದ್ದಿ ಪತ್ರಿಕೆಯಲ್ಲಿ ಬಂದು ನಮ್ಮ ಕರುಳು ಹಿಂಡಿತು. ಸಾಯುವಾಗ ವೆಂಕೋಬಾಚಾರ್ಯರಿಗೆ 64 ವರ್ಷಗಳಾಗಿತ್ತು.

ಪುರಂದರದಾಸರ ಆರಾಧನೆಗಾಗಿ ಹುಬ್ಬಳ್ಳಿಯ ಆಹ್ವಾನ

ವೆಂಕೋಬಾಚಾರ್ಯರೊಡನೆ ಹುಬ್ಬಳ್ಳಿಗೆ ನಾವು ಕಾವ್ಯವಾಚನ ಕಾರ್ಯನಿಮಿತ್ತವಾಗಿ ಪ್ರವಾಸವನ್ನು 1975 ರಲ್ಲಿ ಕೈಗೊಳ್ಳುವೆವೆಂದು ಕನಸು ಮನಸುಗಳಲ್ಲೂ ನೆನೆಸಿರ

ಲಿಲ್ಲ. 20–11–1978ರ ದಿನದಂದು ಮಹಾವೀರ ಮಿಷನ್ ಆಶ್ರಯದಲ್ಲಿ ಬೆಂಗಳೂರಿನ ಗಾಯನ ಸಮಾಜದ ಸಭಾಂಗಣದಲ್ಲಿ ನಡೆದ ವರ್ಧಮಾನ ಮಹಾವೀರನ 25ನೆಯ ಶತಮಾನೋತ್ಸವದಲ್ಲಿ ಶಕುಂತಲಾಬಾಯಿ ಜೈನಮಹಾ ಕಾವ್ಯಗಳಿಂದ ಆಯ್ದ ವರ್ಧಮಾನಪ್ರಾರ್ಥನಾ ಪದ್ಯಗಳನ್ನು ವಾಚನ ಮಾಡಿದರು. 24ನೆಯ ತೀರ್ಥಂಕರನಾದ ವರ್ಧಮಾನ ಮಹಾವೀರ ಸ್ವಾಮಿಯನ್ನು ಕುರಿತು ಕಾವ್ಯರಚನೆ ಮಾಡಿದ ಜೈನ ಕನ್ನಡ ಕವಿಗಳಲ್ಲಿ ಕ್ರಿ. ಶ. 1042ರಲ್ಲಿ ಬಾಳಿದ ಎರಡನೆಯ ನಾಗವರ್ಮ, ಇನ್ನೊಬ್ಬನು 1189ರಲ್ಲಿ ಬಾಳಿದ ಅಚ್ಚಣ್ಣಕವಿ, ಈ ಕವಿದ್ವಯರ "ವರ್ಧಮಾನ ಪುರಾಣ" ಗಳಿಂದ ಪದ್ಯಗಳನ್ನು ಆರಿಸಿಕೊಳ್ಳಲಾಗಿತ್ತು. ಸಮಾರಂಭಕ್ಕೆ ಸರ್ದಾರ್ ವೆಂಕಟರಾಮಯ್ಯನವರು, ಹುಬ್ಬಳ್ಳಿಯ ರಾಮಚಂದ್ರರಾವ್ ಪದಕಿಯವರೊಡನೆ ಆಗಮಿಸಿದ್ದರು. ಸರ್ದಾರ್ ವೆಂಕಟರಾಮಯ್ಯ ಸಿರಸಿ ಸಿದ್ದಾಪುರ ಅಂಕೋಲ ಕಾರವಾರ ಗಳಲ್ಲಿ 1930ರಲ್ಲಿ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿ ನಡೆಸಿದ ಸ್ವಾತಂತ್ರ್ಯ ಆಂದೋಲನ ನಮ್ಮ ಭಾರತ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸ ಪುಟಗಳಲ್ಲಿ ಸ್ವರ್ಣಾಕ್ಷರಉಲ್ಲೇಖಾರ್ಹವಾಗಿರುವುದು ನಮ್ಮ ಜನ ಬಲ್ಲ ವಿಷಯ. ಅವರ ಜೊತೆಯಲ್ಲಿ ಬಂದಿದ್ದ ರಾಮಚಂದ್ರ ಪದಕಿಯವರೂ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಒಬ್ಬರು. ಹುಬ್ಬಳ್ಳಿಯಲ್ಲಿ ಪತ್ರಿಕೋದ್ಯೋಗಿಗಳು ಮತ್ತು ಕ್ರೀಡೋಪಕರಣಗಳ ಮಾರಾಟಗಾರರು. ಅವರು ಶಕುಂತಲಾಬಾಯಿಯ ಕಾವ್ಯವಾಚನಕ್ಕೆ ಮಾರು ಹೋದರು. ಸಭಾಮಂದಿರದಲ್ಲಿ ನಮ್ಮ ಪರಿಚಯ ಮಾಡಿಕೊಂಡರು. ಮಾರನೆಯ ದಿನ ಬೆಳಗ್ಗೆ ನಮ್ಮ ಮನೆಗೂ ದಯಮಾಡಿಸಿದರು. "ಹುಬ್ಬಳ್ಳಿಯಲ್ಲಿ ಪುಷ್ಯ ಮಾಸದ ಅಮಾವಾಸ್ಯೆಯ ದಿನದವರೆಗೆ ಪುರಂದರದಾಸರ ಪುಣ್ಯದಿನಾಚರಣೆ ಸಪ್ತಾಹ ನಡೆಯುತ್ತದೆ. ನೀವು ಒಂದು ದಿವಸ ಭಾಗವಹಿಸಬೇಕು" ಎಂದು ಶಕುಂತಲಾಬಾಯಿ ಯನ್ನು ಪ್ರಾರ್ಥಿಸಿಕೊಂಡರು. ಹುಬ್ಬಳ್ಳಿಯಿಂದ ಆಮಂತ್ರಣ ಬಂತು. ಸಕಾಲದಲ್ಲಿ ಹೋಗಿ ಭಾಗವಹಿಸಿದೆವು.

ಹುಬ್ಬಳ್ಳಿಯಲ್ಲಿ ನಡೆದ ಪುರಂದರದಾಸವರೇಣ್ಯರ ಪುಣ್ಯ ದಿನಾಚರಣೆ ಸಪ್ತಾಹದಲ್ಲಿ **ಪುರಂದರದಾಸರು ಕಂಡ ಸಮಾಜ** ಎಂಬ ಗಮಕ ರೂಪಕ ನಮ್ಮ ಕಾರ್ಯಕ್ರಮ. ಶಕುಂತಲಾಬಾಯಿ ದಾಸರು ಸಮಾಜವನ್ನು ಕಂಡ ಬಗೆಯನ್ನು ಚಿತ್ರಿಸಿ ರಚಿಸಿದ ದೇವರ ನಾಮಗಳನ್ನು ತಂಬೂರಿ ಶ್ರುತಿ ಮಾತ್ರ ಇಟ್ಟುಕೊಂಡು ಹಾಡು ವುದು. ನಾನು ಸೌಭಾಗ್ಯವತಿ ಹಾಡಿದ ದೇವರ ನಾಮಗಳಿಗೆ ಪ್ರಾಸಂಗಿಕ ನಿರೂಪಣೆ ನೀಡುವುದು ಈರೀತಿ ಗಮಕ ರೂಪಕ ಪ್ರಸಾರ ಮಾಡಬೇಕೆಂದು ನಿರ್ಧರಿಸಿದೆವು.

ನರಗಲ್ಲ ಪ್ರಹ್ಲಾದರಾಯರ ಅನಿರೀಕ್ಷಿತ ದರ್ಶನ

ನಾವು ಸಭಾಂಗಣದ ಒಳ ಹೋಗಿ ವೇದಿಕೆ ಹತ್ತಬೇಕು, ಅಷ್ಟರಲ್ಲಿ ನರಗಲ್ಲ ಪ್ರಹ್ಲಾದರಾಯರು ದಯಮಾಡಿಸಿದರು. ನನಗೆ ನಮಸ್ಕಾರ ಮಾಡಿ "ನಾನು ನರಗಲ್ಲ

ಪ್ರಹ್ಲಾದರಾಯು" ಎಂದರು. ಕೂಡಲೆ ನನಗೆ 1928-29 ನೆಯ ಇಸವಿಯ ನೆನಪಾಯಿತು. ನಾವು ಲಂಡನ್ ಮಿಷನ್ ಹೈಸ್ಕೂಲಿನ ಕರ್ನಾಟಕ ವಾಙ್ಮಯ ಸಂಘದಲ್ಲಿ ನರಗಲ್ಲ ಪ್ರಹ್ಲಾದರಾಯರ ಉಪನ್ಯಾಸವನ್ನು ಏರ್ಪಡಿಸಿದ್ದೆವು. ನಾನು ಸಂಘದ ಕಾರ್ಯ ನಿರ್ವಾಹಕರುಗಳಲ್ಲಿ ಒಬ್ಬ ಮುಖ್ಯಸ್ಥನಾಗಿದ್ದುದರಿಂದ ನನಗೆ ಅವರ ಪರಿಚಯವಾಗಿತ್ತು. ನಾನು ಪ್ರಹ್ಲಾದ ನರಗಲ್ಲರಿಗೆ "ನಮ್ಮದು ದೇಶಬಂಧು ಕರ್ನಾಟಕ ಸಂಘ ಎಂಬ ಇನ್ನೊಂದು ಸಂಘವಿದೆ. ಅದರ ಅಧ್ಯಕ್ಷರು ಇ. ಎ. ಭಾಸ್ಕರರಾಯರು. ನೀವು ಆ ಸಂಘಕ್ಕೆ ದಯಮಾಡಿಸಬೇಕು" ಎಂದು ಕರೆದೆ. ನರಗಲ್ಲರು ಇ. ಎ. ಭಾಸ್ಕರರಾಯರ ಹೆಸರು ಕೇಳಿದ ಕೂಡಲೆ "ಪಾಂಡುರಂಗರಾವ್, ಭಾಸ್ಕರ ರಾಯರ ತಾಯಿ ಶೇಷಮ್ಮ ಅಪ್ಪೂರಾಯರನ್ನು ನೋಡಬೇಕಲ್ಲ!" ಎಂದರು. "ನಾನು ಕರೆದುಕೊಂಡು ಹೋಗುತ್ತೇನೆ" ಎಂದೆ. ಶೇಷಮ್ಮನವರ ಮನೆಗೆ ಇಬ್ಬರೂ ಹೋದೆವು. ಅನಂತರ ಒಂದೆರಡು ದಿವಸಗಳಲ್ಲಿ ಪ್ರಹ್ಲಾದರಾವ್ ನರಗಲ್ಲ ಮತ್ತು ಶೇಷೋ ಕುಲಕರ್ಣಿ ಇಬ್ಬರನ್ನೂ ಕಲಾಸಿ ಪಾಳ್ಯದಲ್ಲಿದ್ದ ವರದಾಚಾರ್ಯರ ರತ್ನಾವಳಿ ಥಿಯೇಟರಿನಲ್ಲಿ ಭೇಟಿಯಾದೆ. ಇಬ್ಬರು ಗೆಳೆಯರೂ "ಅಭಿನವ ಭಕ್ತ ಶಿರೋಮಣಿ" ಸಿ. ಬಿ. ಮಲ್ಲಪ್ಪನವರಿಂದ "ಗೋಸ್ವಾಮಿ ತುಳಸೀದಾಸ" ನಾಟಕವನ್ನು "ಜಯ ಕರ್ಣಾಟಕ" ಮತ್ತು "ಗೆಳೆಯರ ಗುಂಪಿನ ಸಾಹಿತ್ಯ ಮಾಲೆ"ಯ ಸಹಾಯಾರ್ಥ ಆಡಿಸಿದ ಸಂದರ್ಭ. ನನಗೂ ಮಾರಲು ಟಿಕೆಟ್ ಗಂಟು ಹಾಕಿದ್ದರು. ಆ ಕಾರಣ ನಾನು ಗೆಳೆಯರೊಡನೆ ನಾಟಕ ನೋಡಲು ಹೋಗಿದ್ದೆ. ನಾನು ನೋಡಿದಾಗ ಪ್ರಹ್ಲಾದರಾವ್ ನರಗಲ್ಲರು ಕಟ್ಟುಮಸ್ತಾದ ಯುವಕ. ಈಗ ನಾನು 1975 ರ ವರ್ಷದಲ್ಲಿ ಪ್ರಹ್ಲಾದರಾವ್ ನರಗಲ್ಲರನ್ನು ಮುಪ್ಪಿನಲ್ಲಿ ನೋಡುತ್ತಿದ್ದೇನೆ. ಜೀವನ ಹೋರಾಟದಲ್ಲಿ ಹೋರಾಡಿ ದೇಹ ತೇದು ಹೋಗಿದೆ. ಅವರು "ನಾನು ನರಗಲ್ಲ ಪ್ರಹ್ಲಾದರಾವ್" ಎಂದು ಹೇಳಿಕೊಳ್ಳದಿದ್ದರೆ ನನಗೆ ಅವರ ಗುರುತೇ ಹತ್ತುತ್ತಿರಲಿಲ್ಲ. ಕೂಡಲೆ ಅವರಿಗೆ ನಮಸ್ಕರಿಸಿದೆವು. ಅವರು ಜೇಬಿನಿಂದ ಒಂದು ಕಾಗದವನ್ನು ತೆಗೆದು ನನ್ನ ಕೈಗಿತ್ತರು. ಅದರಲ್ಲಿ ಪರಮ ಪೂಜ್ಯರಾದ ಸಾಲಿ ರಾಮಚಂದ್ರರಾಯರ "ಜಂಜರ" ಪದ್ಯದ ಪ್ರತಿಮಾಡಿದ್ದರು. "ಇದು ನಿಮ್ಮಿಬ್ಬರು ದಂಪತಿಗಳಿಗೆ ತುಂಬ ಹೊಂದಿಕೊಳ್ಳುತ್ತದೆ" ಎಂದರು. "ಮನೆ ಇಲ್ಲೆ ಇದೆ. ಬರಬೇಕು" ಎಂದರು. "ಬರುತ್ತೇವೆ" ಎಂದು ಒಳ ನಡೆದೆವು. ಮುಂದೆ ಏನಾಯಿತು? ನಮಗೆ ಹುಬ್ಬಳ್ಳಿ ಧಾರವಾಡಗಳಲ್ಲಿ ಬಿಡುವಿಲ್ಲದ ಕಾರ್ಯಕ್ರಮಗಳು. ಪ್ರಹ್ಲಾದರಾಯರ ಮನೆಗೆ ಹೋಗಲು ಸಾಧ್ಯವಾಗಲೇಯಿಲ್ಲ. ಮುಂದೆ ಕೆಲವೇ ತಿಂಗಳುಗಳಲ್ಲಿ ಕಾಲ ಅವರನ್ನು ನುಂಗಿ ನೊಣೆದಿತ್ತು. ಗುರುದೇವ ರವೀಂದ್ರರ ಶಾಂತಿ ನಿಕೇತನದಲ್ಲಿ ಉಸಿರಾಡಿ, ಕರ್ನಾಟಕ ದೇವಿಯ ನಲ್ಮೆಯ ಮಗುವಾಗಿ, ರವೀಂದ್ರರ ಸಾಹಿತ್ಯವನ್ನು ಅದರಲ್ಲೂ ನನ್ನ ಕಾರ್ಯಕ್ಷೇತ್ರಕ್ಕೆ ಹತ್ತಿರವಾದ ಗುರುದೇವರ "ಕ್ರೆಸೆಂಟ್ ಮೂನ್" ಎಂಬ ಇಂಗ್ಲಿಷ್ ಕವನ ಸಂಗ್ರವನ್ನು ಕನ್ನಡಕ್ಕೆ "ಮಿಂಚಿನ ಒಳ್ಳಿ" ಯಲ್ಲಿ ಪ್ರಕಟಿಸಿದ ನರಗಲ್ಲ ಪ್ರಹ್ಲಾದರಾಯರು ಬಡತನದ ಬೇಗೆಯಲ್ಲಿ ನೊಂದು ನವೆದು ಮರಳಿ ಬಾರದ ಮನೆಗೆ ಹೊರಟು ಹೋಗಿದ್ದರು.

"ಇಂಚರ" ದ ಸಾಲಿ ರಾಮಚಂದ್ರರಾಯರ ನೆನಪು

ನರಗಲ್ಲ ಪ್ರಹ್ಲಾದರು ನಮ್ಮ ಕೈಗಿತ್ತ "ಇಂಚರ" ಕವನವನ್ನು ನಾವಿಬ್ಬರೂ ಓದುತ್ತ ಓದುತ್ತ ಅದರಲ್ಲಿ ನಮ್ಮನ್ನು ನಾವೇ ಕಂಡುಕೊಳ್ಳುವಂತಾಯಿತು. ಇದೋ ಸಾಲಿ ಮಾಸ್ತರರ "ಇಂಚರ"–

ಇದು ಕಿವಿಗೆ ಸೂದೆ ! ಮನಕೆ ಸಂತರ್ಪಣಂ ! ಪೇಳ
ಇದು ನಿನಗೆ ಸಮನಿಸಿದುದೆಂತಮ್ಮ ? ನೋಂಪಿಯಾ
ವುದನೆಸಗಿ ಪಡೆದೆಯೀ ಸವಿಗೊರಲನೆನಿತೊಂದು ಮೋಹನವೊ ಈ ದಿಶೆಯೊಳು!
ಮುದ ವಿಲ್ಲಿ ! ಮುದಮಲ್ಲಿ ! ಮುದಮೆತ್ತಲುಂ ನಾದ
ವಿದು ತುಂಬಿದೆಡೆಯುಲ್ಲಿ ! ನವ ಸುಮಂಗಳ ಮೆಲ್ಪು !
ಮೃದು ಸಮೀರದ ತಣ್ಪು ! ಬೆಳ್ದಿಂಗಳೊಳ್ಪಿಲ್ಲಿ ಸೊಗಸಾಗಿ ಕೂಡಿದಪುವು ॥೧॥
ಬಗೆಯಂಚೆಯಿಂಚರದ ತಿಳಿಗೊಳದ ತೆರೆಗಳೊಳ್
ಪುಗುತಂದು ತಲ್ಲೀನವಾದಪುದು ! ಸಂಸ್ಕೃತಿಯು
ಬಿಗಿವು ಸಡಿಲಾದ ಪುದು ! ಸಂತತದೊಳಿಂತಿರಲ್ಬೇಕಲೇ ! ಹಾ ತಾಯಿ ॥೨॥

ತಂಗಿ, ನೀ ನಡೆಸಿದಾ ಗೀತದಿಂದೆನ್ನಂತೆ—
ರಂಗಮುಂ ! ನಿನ್ನ ನಾನೇನಂದು ಪರಸುವೆಂ ?
ಹೆಂಗಸಿಗೆ ಕೂರ್ಪ ನಲ್ಲನೆ ಸಕಲ ಸಂಪತ್ತು ! ಪೂರ್ವ ಸುಕೃತದಿಂದೆ
ತಂಗದಿರನಂ ಪೋಲ್ವ ಮೃದುಲ ಸ್ವಭಾವನಂ
ನೀಂ ಗಡ ಪಡೆದೆಯಯ್ ಇನಿಯನಂ ! ನಿನಗಿನ್ನು
ಮಂಗಳಮೆ ! "ಈಪ್ಸಿತಂ ಸಾಂಪ್ರಾಪ್ತಮಸ್ತು.

"ಇಂಚರ" ಕವನದ ಒಂದೊಂದು ಸಾಲನ್ನೂ ಮೆಲುಕು ಹಾಕುತ್ತ ಹಾಕುತ್ತ ನಮ್ಮಿಬ್ಬರ ನೆನಪು 1950-51 ರ ವರ್ಷಕ್ಕೆ ಜಿಗಿಯಿತು. ಕವಿ, ಸಾಹಿತಿಗಳಾದ ಅರ್ಚಕ ವೆಂಕಟೇಶ್ವರು ಮತ್ತು "ಧನ್ವಂತ" (ಎಚ್. ಎನ್. ದಾಸೂರಾವ್–ಎಚ್. ಎನ್. ರಾವ್ ಬ್ರದರ್ಸ್) ಇಬ್ಬರೂ ಸಾಲಿ ರಾಮಚಂದ್ರ ರಾಯರನ್ನು ಕರೆದುಕೊಂಡು ಒಂದು ಮಧ್ಯಾಹ್ನ ನಮ್ಮ ಮನೆಗೆ ಬಂದರು. ಸಾಲಿ ರಾಮಚಂದ್ರ ರಾಯರ "ದಶರಥನ ಶಾಪ" ಬಾಲಕಾಂಡ ರಾಮಾಯಣದ ಕಥಾ ಭಾಗವನ್ನು ನಾನು 1937–38ರಲ್ಲಿ ಆರ್ಯ ವಿದ್ಯಾ ಮಾಧ್ಯಮಿಕ ಶಾಲೆಯ ಪ್ರಾಥಮಿಕ ತರಗತಿಯ ಬಾಲಕರಿಗೆ ಪಾಠ ಹೇಳಿದ್ದೆ. ...."ನವನೀತ ರಾಮಾಯಣ"ದ ಪದ್ಯಗಳು ಬಹಳ ಸರಳ. ನನ್ನ ನೆನಪಿನಲ್ಲಿ ಇನ್ನೂ ಉಳಿದಿವೆ. ನಾನು ಪಾಠ ಹೇಳಿದ ಪದ್ಯಗಳ ಪ್ರಾರಂಭದ ಪದ್ಯವೊಂದು. ಅದನ್ನೇ ಇಲ್ಲಿ ಎತ್ತಿ ಕೊಟ್ಟಿದ್ದೇನೆ.

"ಶ್ರೀ ರಘುಕುಲ ಮಣಿ
ವೀರ ಶಿರೋಮಣಿ
ಕಾರುಣಿಕಾಗ್ರಣಿ
ತಾರಕ ಶರಣು"

ಈಗಂತೂ ನನಗೆ ಸಾಲಿ ರಾಮಚಂದ್ರರಾಯರನ್ನು ಪ್ರತ್ಯಕ್ಷ ನೋಡಿ ಹರ್ಷದ ಬುಗ್ಗೆ ಚಿಮ್ಮಿತು. ನಾನು ಶಕುಂತಲಾಬಾಯಿ ಕವಿವರ್ಯರ ಪಾದ ಮುಟ್ಟಿ

ನಮಸ್ಕರಿಸಿದೆವು. ಅವರು ಶಕುಂತಲಾಬಾಯಿಯಿಂದ ಕುಮಾರವ್ಯಾಸ ಭಾರತ ಕೇಳಬಯಸಿದರು. "ವಿದುರಾತಿಥ್ಯ" ಭಾಗದ ವಾಚನವಾಯಿತು. ನಾನು "ವಿದುರನ ಮನೆಗೆ ಕೃಷ್ಣ ಬಂದಂತಾಯಿತು. ಅದಕ್ಕೇ ಶಕುಂತಲಾಬಾಯಿ "ವಿದುರಾತಿಥ್ಯ" ಭಾಗ ವಾಚನ ಮಾಡಿದರು" ಎಂದೆ.

ಸಾಲಿ ರಾಮಚಂದ್ರರಾಯರು "ಒಂದೆರಡು ದೇವರ ನಾಮುಗಳನ್ನು ಹಾಡಮ್ಮಾ" ಎಂದು ಕೇಳಿದರು. ಶಕುಂತಲಾಬಾಯಿ "ಮಂದಗಮನೆ ಇವನಾರೆ ಪೇಳಮ್ಮಾ ಮಂದರೋದ್ಧಾರ ಗೋವಿಂದ ಕಾಣಮ್ಮ" ಎಂಬ ಪುರಂದರ ದಾಸರ ದೇವರ ನಾಮ ವನ್ನು "ಮಾಂಡ್" ರಾಗದಲ್ಲಿ ಹಾಡಿದರು. ತರುವಾಯ

ಒಂದೇ ಕೂಗಳತೇ ವೈಕುಂಠ ॥ಪ॥
ಸಂದೇಹವಿಲ್ಲವೊ ಸಾಧು ಸಜ್ಜನರಿಗೆ ॥ಅನು॥

ಸರಸಿಯಲಿ ಆನೆ ಮೊರೆಯೆಂದು ಕರೆಯಲು ।
ತ್ವರಿತದಿ ಬಂದು ಕಾಯ್ದಾ ॥
ನರಹರಿ ಕೃಷ್ಣಾ ಸಲಹೆಂದು ಚೀರಲು ।
ತರಳ ಪ್ರಹ್ಲಾದಗೆ ಕಂಭದಿಂದಲಿ ಬಂದ॥೧॥

ಅಂಬರೀಷ ದ್ವಾದಶಿ ವ್ರತಮಾಡಲು ।
ದೊಂಬಿ ಮಾಡಿದ ದೂರ್ವಾಸಮುನಿ ॥
ಕುಂಭಿಣಿಪತಿ ಕೃಷ್ಣಾ ಕಾಯೆಂದು ಮೊರೆಯಿಡೆ ।
ಬೆಂಬತ್ತಿ ಚಕ್ರದಿಂ ಮುನಿಶಾಪವ ಕಳೆದ ॥೨॥

ದ್ರುಪದರಾಯನ ಪುತ್ರಿಯಾಪತ್ತ ಕಳೆಯನೆ ।
ಕೃಪೆಯಿಂದ ಅಕ್ಷಯವಿತ್ತಾತನು ॥
ಕಪಟನಾಟಕ ಸ್ವಾಮಿ ಪುರಂದರ ವಿಠಲನ ।
ಗುಪಿತದಿ ನೆನೆವರವದನ ವೈಕುಂಠ ॥

ಎಂಬ ಪುರಂದರದಾಸರ ದೇವರ ನಾಮುವನ್ನು ರಾಗಮಾಲಿಕೆಯಲ್ಲಿ ಮಧ್ಯಮ ಶೃತಿಯಲ್ಲಿ ನಿರ್ವಹಿಸಿದರು.

ಸಾಲಿ ರಾಮಚಂದ್ರರಾಯರು ಭಾವಪರವಶತೆಯಲ್ಲಿ ಅದ್ದಿಹೋಗಿ ಕಣ್ಣು ಮುಚ್ಚಿ ಕುಳಿತಿದ್ದರು. ದೇವರ ನಾಮ ಮುಗಿದ ಕೆಲವು ನಿಮಿಷಗಳಲ್ಲಿ ತಮ್ಮ ಪೂರ್ವಸ್ಥಿತಿಗೆ ಬಂದರು. "ನೀನು ನನ್ನನ್ನು ವೈಕುಂಠಕ್ಕೇ ಒಯ್ದಿದ್ದೆಯಮ್ಮ" ಎಂದು ಗದ್ಗದಿಸಿದರು.

ಸಾಲಿ ರಾಮಚಂದ್ರರಾಯರನ್ನು ನಾವು ಇನ್ನೊಮ್ಮೆ ಕಂಡದ್ದು 1953ರಲ್ಲಿ ಸಪ್ತಾಪುರದ ಅವರ ಮನೆಯಲ್ಲಿ. ಚಿತ್ತವಾಡಗಿಯ ಕಲ್ಮೇಶ್ವರ ಜಾತ್ರೆಯ ಗಮಕ ಪ್ರವಾಸ ಕೈಗೊಂಡೆವಲ್ಲ, ಆ ಸಮಯದಲ್ಲಿ. ಸಾಲಿಮಾಸ್ತರರು ತುಂಬ ಆತ್ಮೀಯತೆ ಯಿಂದ ನಮ್ಮನ್ನು ಸ್ವಾಗತಿಸಿದರು.

1967ರಲ್ಲಿ ಸಾಲಿ ರಾಮಚಂದ್ರರಾಯರು ಕರ್ನಾಟಕ ಸಾಹಿತ್ಯ ಅಕಾಡಮಿಯ ಪ್ರಶಸ್ತಿ ವಿಜೇತರಾದರು. ಪ್ರಶಸ್ತಿ ಸ್ವೀಕರಿಸಲು ಕರ್ನಾಟಕದ ರಾಜಧಾನಿ ಬೆಂಗ ಳೂರಿಗೆ ಬಂದರು. ಆಗ ಬೆಂಗಳೂರು ವಿಶ್ವವಿದ್ಯಾನಿಲಯದ ಉಪಕುಲಪತಿಯಾಗಿದ್ದ

ಡಾ|| ವಿ. ಕೃ. ಗೋಕಾಕರು ಪ್ರಶಸ್ತಿ ವರ ಪ್ರದಾನ ಸಮಾರಂಭದ ಅಧ್ಯಕ್ಷರು. ಸಾಲಿಯವರು ಪ್ರಶಸ್ತಿ ಸ್ವೀಕರಿಸುವ ಸರದಿ ಬಂದಾಗ ಗೋಕಾಕರೇ ಅವರ ಬಳಿಗೈದಿ ಪಾದಮುಟ್ಟಿ ನಮಸ್ಕರಿಸಿ ಶಾಲು ಹೊದಿಸಿ, ಶ್ರೀ ಗಂಧದ ಮಾಲೆ ಕೊರಳಿಗೆ ಹಾಕಿ ಪ್ರಶಸ್ತಿ ನೀಡಿ ಗೌರವಿಸಿದರು.

ಮೂರನೆಯ ದಿವಸ ಸಂಜೆ ನಮ್ಮ "ಮಕ್ಕಳ ಮಂಟಪ"ದ ಮನೆಯಲ್ಲಿ ಸಹೃದಯರ ಸಮಕ್ಷಮದಲ್ಲಿ ಸಾಲಿ ರಾಮಚಂದ್ರರಾಯರಿಗೆ ಸತ್ಕಾರ ಕೂಟ. ತಾತಾಚಾರ್ಯ ಶರ್ಮ ದಂಪತಿಗಳು, "ಮಿಂಚಿನ ಬಳ್ಳಿ"ಯ ಬರ್ಲಿ ಬಿಂದು ಮಾಧವಾಚಾರ್, ಬಿಜಾಪುರದ "ಸಂದರ್ಶನ" ವಾರಪತ್ರಿಕೆಯ ವಿ. ಬಿ. ನಾಯಕರು, "ವಿಚಾರ ಸಾಹಿತ್ಯ" ಲೇಖಕರಾದ ವಿ. ಎಸ್. ನಾರಾಯಣರಾವ್, ಅರ್ಚಕ ವೆಂಕಟೇಶ, ಹೀಗೆ ಗಣ್ಯರ ವಿದ್ವತ್ ಗೋಷ್ಠಿ ಎಂದರೂ ಸರಿಯೆ, ಹತ್ತಿಪ್ಪತ್ತು ಮಂದಿಯ ಒಂದು ಪುಟ್ಟ ಚೊಕ್ಕ ಸಭೆ. ಶಕುಂತಲಾಬಾಯಿ ಸಾಲಿ ರಾಮಚಂದ್ರರಾಯರ "ಚಿತ್ರ ಸೃಷ್ಟಿ" ಕವನ ಸಂಕಲನದಿಂದ ಆರಿಸಿದ ಕೆಲವು ಕವನಗಳನ್ನು ಹಾಡಿದರು. ಸಾಲಿ ರಾಮಚಂದ್ರರಾಯರು ಅರೆಮುಚ್ಚಿದ ಕಣ್ಣುಗಳಿಂದ, ತದೇಕಚಿತ್ತದಿಂದ ಆಲಿಸಿದರು. ಕವನ ವಾಚನ ಮುಗಿಯುತ್ತಲೇ ವಿ. ಎಸ್. ನಾರಾಯಣರಾಯರು ಸಾಲಿಯವರನ್ನು ಪ್ರಶ್ನಿಸಿದರು. "ಶಕುಂತಲಾಬಾಯಿಯ ಕವನ ವಾಚನ ನಿಮ್ಮ ಮನಸ್ಸಿಗೆ ತೃಪ್ತಿ ಕೊಟ್ಟಿತೇ." ಸಾಲಿಯವರು ತಟ್ಟನೆ "ನನ್ನನ್ನು ಭಾವಲೋಕಕ್ಕೆ ಒಯ್ದಿದ್ದರು" ಎಂದು ಒಂದೇಮಾತಿನಲ್ಲಿ ತಮ್ಮ ಹೃದಯ ಬಿಚ್ಚಿ ತೋರಿಸಿದರು.

1975ರಲ್ಲಿ ಪುರಂದರದಾಸರ ಆರಾಧನೋತ್ಸವಕ್ಕಾಗಿ ಹುಬ್ಬಳ್ಳಿಗೆ ಹೋದಾಗ, ಧಾರವಾಡಕ್ಕೂ ಹೋಗಿ ಸಾಲಿ ರಾಮಚಂದ್ರರಾಯರನ್ನು ನೋಡುವ ಸದವಕಾಶ ಉಂಟಾಯಿತು. ಆದರೆ ಈ ಸಲದ ಭೇಟಿ ಯಾರಿಗೂ ಸಂತೋಷದಾಯಕವಾಗಿರಲಿಲ್ಲ. ಸಾಲಿ ಮಾಸ್ತರರು ಯೌವನದಲ್ಲಿರುವಾಗಲೇ ಕೂರ್ತ ಮಡದಿಯನ್ನು ಕಳೆದುಕೊಂಡು, ಕೈಗೊದವಿದ ಪ್ರಾಯದ ಮಗನನ್ನು ಕಳೆದುಕೊಂಡು ಮೊದಲೇ ನೊಂದಿದ್ದ ಅವರು ಈ ಹೊತ್ತಿಗೆ ಪ್ರಸಿದ್ಧ ಸಂಶೋಧಕರೂ, ಸುಪ್ರಸಿದ್ಧ ಲೇಖಕ ವಿದ್ವಾಂಸರೂ, ಸದ್ವಿನಯ ಸಂಪನ್ನರೂ ಆಗಿದ್ದ ಅಳಿಯ ಪಾಂಡುರಂಗರಾವ್ ದೇಶಾಯರನ್ನೂ ಅಗಲಿ ಬಹಳ ಸೊರಗಿದ್ದರು. ನಮ್ಮನ್ನು ನೋಡಿದವರೆ ತಾರಿಹೋದ ಉಸಿರಿನಿಂದ ಗದ್ಗದಿತ ಕಂಠದಿಂದ, ಅಳಿಯನ ಸಾವನ್ನು ನೆನೆಸಿಕೊಂಡರು. 1957ರಲ್ಲಿ ನಾನು, ಶಕುಂತಲಾಬಾಯಿ, ಕುವೆಂಪು–ಹೊಂಬೇಗೌಡ ಸನ್ಮಾನ ಸಮಾರಂಭಕ್ಕೆಂದು ನೀಲಗಿರಿಗೆ ಹೋಗಿದ್ದಾಗ ಪಾಂಡುರಂಗರಾವ್ ದೇಶಾಯಿ ದಂಪತಿಗಳಲ್ಲಿಗೆ ಹೋಗಿ ಅವರುಗಳೊಡನೆ ಸಂತೋಷದಿಂದ ಕಾಲಕಳೆದಿದ್ದ ಸ್ಮೃತಿ ಈಗ ಮರುಕಳಿಸಿತು. ಆಗ ಮುತ್ತೈದೆಯಾಗಿದ್ದ ಶ್ರೀಮತಿ ದೇಶಾಯರು ಈಗ ವಿಧವೆ. ಅವರನ್ನು ನೋಡಿದೊಡನೆ ನಮ್ಮ ಕಣ್ಣುಗಳಲ್ಲಿ ನೀರೊಡೆಯಿತು.

1978ರಲ್ಲಿ ಸಾಲಿ ರಾಮಚಂದ್ರರಾಯರನ್ನು ಧಾರವಾಡದಲ್ಲಿ ಇನ್ನೊಮ್ಮೆ ದರ್ಶನ ಮಾಡುವ ಯೋಗ ಒದಗಿತು. ಹುಬ್ಬಳ್ಳಿ ಕುಮಾರವ್ಯಾಸ ಸ್ಮಾರಕ ಗಮಕ-ಸಂಗೀತ ಸಮ್ಮೇಳನದಲ್ಲಿ ಭಾಗವಹಿಸಿದಾಗ ಧಾರವಾಡಕ್ಕೆ ಹೋಗಿ ರಾಮಚಂದ್ರರಾಯರನ್ನು ಕಂಡೆವು. ಈ ವೇಳೆಗೆ ವಿಪರೀತ ಸೊರಗಿದ್ದರು. ನಮ್ಮನ್ನು ಗುರುತು ಹಿಡಿದು ವಿಶ್ವಾಸ ದಿಂದ ಉಪಚಾರಮಾಡಿಕೊಂಡರು. "ಚಾ" ಕುಡಿಸಿದರು. ಇದು ನಲಿವು ಸಂತೋಷಗಳ ಅಭಾವದ ಭೇಟಿಯಾಗಿತ್ತು.

1979 ಕರ್ನಾಟಕದ ರಾಜ್ಯೋತ್ಸವದ ಸಂದರ್ಭದಲ್ಲಿ ಸಾಲಿ ರಾಮಚಂದ್ರ ರಾಯರಿಗೆ, ಶಕುಂತಲಾಬಾಯಿಗೂ ಜೊತೆಯಲ್ಲಿ ೫೦೦ ರೂಪಾಯಿಗಳ ಗೌರವಧನದ ಮಾಸಾಶನ ಪ್ರಕಟವಾಯಿತು. ಆದರೆ ಸಾಲಿ ರಾಮಚಂದ್ರರಾಯರು ಒಂದು ತಿಂಗಳ ಗೌರವ ಧನವನ್ನೂ ಪಡೆಯದೆ ವೈಕುಂಠ ನಾರಾಯಣನ ಪಾದಾರವಿಂದಗಳಲ್ಲಿ ಐಕ್ಯ ವಾಗಿ ಹೋದರು. ಅನಂತರ ಕೆಲವೇ ತಿಂಗಳುಗಳಲ್ಲಿ ನಾವು ಕುಮಾರವ್ಯಾಸ ಸ್ಮಾರಕ ಗಮಕ ಸಂಗೀತ ಸಮ್ಮೇಳನದಲ್ಲಿ ಭಾಗವಹಿಸಲು ಹುಬ್ಬಳ್ಳಿಗೆ ಹೋದೆವು. ಸಾಲಿಯವರು ತೀರಿಕೊಂಡಿದ್ದರು. ಬೇಂದ್ರೆಯವರು ಊರಲ್ಲಿರಲಿಲ್ಲ. ಶಂ. ಬಾ. ಜೋಶಿಯವರು ಪರ ದೇಶದ ಪ್ರವಾಸದಲ್ಲಿದ್ದರು. ಇನ್ನು ಯಾರಿಗಾಗಿ ಧಾರವಾಡ ಊರೊಳಗೆ ಹೋಗು ವುದು ? ಊರ ಹೊರಗಿನ ವಿದ್ಯಾಗಿರಿಗೆ ಬೀಣ ಕೋಟೀಶ್ವರ-ಆರ್. ಕೆ. ಕೋಟೀಶ್ವರ ದಂಪತಿಗಳನ್ನು ನೋಡಿಕೊಂಡು ಹುಬ್ಬಳ್ಳಿಗೆ ಹೋಗಿ ಬೆಂಗಳೂರಿಗೆ ರೈಲು ಹತ್ತಿದೆವು.

"ಪುರಂದರ ದಾಸರು ಕಂಡ ಸಮಾಜ" ಗಮಕರೂಪಕ

1975ರಲ್ಲಿ ಹುಬ್ಬಳ್ಳಿಯಲ್ಲಿ ನಡೆದ ಪುರಂದರಾರಾಧನೋತ್ಸವದ ಪ್ರಸ್ತಾಪಕ್ಕೆ ಹಿಂದಿರುಗೋಣ. "ಪುರಂದರದಾಸರು ಕಂಡ ಸಮಾಜ" ರೂಪಕ ನನಗೆ ಶಕುಂತಲಾ ಬಾಯಿಗೆ ಹೊಳೆದು ಎರಡು ವರ್ಷಗಳ ಮೇಲಾಗಿತ್ತು ; ಅಥವಾ ಇನ್ನೂ ಹೆಚ್ಚು ಕಾಲ ವಾಗಿರಬಹುದು. ಮಳವಳ್ಳಿಯಲ್ಲಿ ಪಂಡಿತ ನಾಗರಾಜಶರ್ಮ ಮತ್ತು "ಪಾಪಚ್ಚಿ ಪಬ್ಲಿ ಕೇಷನ್ಸ್" ಎಂ. ಎಸ್. ನಾಗರಾಜರ ತಂದೆ ಎಂ. ಶ್ರೀನಿವಾಸಯ್ಯ, ರಾಘವೇಂದ್ರ ಗುರು, ತ್ಯಾಗರಾಜಸ್ವಾಮಿ ಮತ್ತು ಪುರಂದರದಾಸರ ಆರಾಧನೆಗಳನ್ನು ಒಟ್ಟುಗೂಡಿಸಿ ವರ್ಷವರ್ಷವೂ ಗುರುತ್ರಯ ಆರಾಧನೋತ್ಸವವನ್ನು ಪುಷ್ಯಮಾಸದಲ್ಲಿ ಮಾಡುತ್ತಿ ದ್ದರು. ಶಕುಂತಲಾಬಾಯಿಗೆ ಪುರಂದರದಾಸರ ದೇವರನಾಮಗಳನ್ನು ಹಾಡಬೇಕೆಂದು ಮಳವಳ್ಳಿಯಿಂದ ಕರೆಬಂತು. ಆ ಸಮಯದಲ್ಲಿ "ಪುರಂದರದಾಸರು ಕಂಡ ಸಮಾಜ" ರೂಪುಗೊಂಡಿತು. ಅದು ಹುಬ್ಬಳ್ಳಿಯಲ್ಲಿ ಪ್ರಶಸ್ತವಾಗಿ ಪುಷ್ಟಿ ಪಡೆಯಿತು.

ವ್ಯಾಸರಾಯ ಸ್ವಾಮಿಗಳು ಪುರಂದರದಾಸರ ಮೇಲೆ ರಚಿಸಿರುವ ಗೀತೆಯಿಂದ "ಪುರಂದರದಾಸರು ಕಂಡ ಸಮಾಜ" ಗಮಕ ರೂಪಕ ಪ್ರಾರಂಭವಾಗುತ್ತದೆ—

ದಾಸರೆಂದರೆ ಪುರಂದರದಾಸರಯ್ಯಾ ॥ಪ॥
ವಾಸುದೇವ ಕೃಷ್ಣನ್ನ ಸೂಸಿ ಪೂಜಿಸುವ ॥ಅನು॥

ಹರಿಬಿಟ್ಟ ನಾಲಗೆಯ ಜೊಗಳಿ ಕೆಂಚರುಯಾವಕಾಲದಲ್ಲೂ ಇದ್ದವರೆ. ಅವರುಗಳಿಗೆ ಇಲ್ಲದ್ದು ಉಂಟಾದದ್ದು ತಮ್ಮ ಮನಸ್ಸಿಗೆ ತೋರಿದಂತೆ ಸೃಷ್ಟಿ ಮಾಡಿ ಪರನಿಂದೆ ಮಾಡದಿದ್ದರೆ, ಉಂಡನ್ನ ಜೀರ್ಣವಾಗುವುದಿಲ್ಲ. ಅಂಥವರ ಸಮಾಜಕ್ಕೆ ರಾಮಬಾಣ ಪುರಂದರದಾಸರ ಈ ದೇವರ ನಾಮ—

"ಆಚಾರವಿಲ್ಲದ ನಾಲಗೆ, ನಿನ್ನ, ನೀಚಬುದ್ಧಿಯ ಬಿಡು ನಾಲಗೆ ॥ಪ॥
ವಿಚಾರವಿಲ್ಲದೆ ಪರರ ದೂಷಿಸುವುದಕ್ಕೆ, ಚಾಚಿಕೊಂಡಿರುವಂಥ ನಾಲಗೆ ॥ಅ॥

(ಚಲಚಿನತ್ರದ ರಾಗಬಳಸದೆ ಶುದ್ಧ ಕರ್ಣಾಟಕ ಪದ್ಧತಿಯ ಮೋಹನ ರಾಗ ಅಟ್ಟ ತಾಳದಲ್ಲಿಯೇ ಹಾಡಿತ್ತು.)

ಆಷಾಡಭೂತಿ ಸಮಾಜವನ್ನು ಕಂಡು ಮರುಗಿದ ದಾಸರು ಪರಿತಪಿಸಿ ರಚಿಸಿರಬೇಕುಕೆಳಗಿನ ಈ ಪದ—

ಎಲ್ಲಾನು ಬಲ್ಲೆನೆಂಬುವಿರಲ್ಲ, ಅವಗುಣ ಬಿಡಲಿಲ್ಲ ॥ಪ॥
ಸೊಲ್ಲಿಗೆ ಶರಣರ ಕಥೆಗಳ ಪೇಳುತ
ಅಲ್ಲದ ನುಡಿಯನು ನುಡಿಯುವಿರಲ್ಲ ॥ಅನು॥

ಸ್ವಾರ್ಥಲಾಲಸೆಯಲ್ಲಿ ಅದ್ದಿ ಮುಳುಗಿ ಪರೋಪಕಾರ ಬುದ್ಧಿಯಿಲ್ಲದ ಸಮಾಜಕ್ಕೆ "ಸಂಸಾರದಲ್ಲಿ ಹೇಗಿರಬೇಕು ?" ಎಂಬುದನ್ನು ತಮ್ಮ ನಿಸ್ವಾರ್ಥ ಜೀವನದಿಂದ ಮಾರ್ಗದರ್ಶನ ಮಾಡಿದ ದಾಸವರೇಣ್ಯ ಪುರಂದರರ ಅಮೋಘ ಸಂದೇಶ ಈ ಕೆಳಗಿನ ಪದದಲ್ಲಿದೆ.

"ಈಸಬೇಕು ಇದ್ದು ಜೈಸಬೇಕು ॥ಪ॥
ಹೇಸಿಗೆ ಸಂಸಾರದಲ್ಲಿ ಆಶಾ ಲೇಶ ಮಾಡದ್ಹಾಂಗೆ ॥ಅನು॥

ಸಮಾಜ ಸುಧಾರಕರ ಕಣ್ಣು ಬಹಳ ತೀಕ್ಷ್ಣ. ಪುರಂದರದಾಸರು ಮುಪ್ಪಿನ ಗಂಡನ ಕೈ ಹಿಡಿದ ಯೌವನದ ಹೆಂಡತಿಯ ಬವಣೆ ನೋಡಿ ಮಮ್ಮಲ ಮರುಗಿ ನಮ್ಮ ಸಮಾಜವನ್ನು ವಿಡಂಬನೆ ಮಾಡಿದ ರಚನೆ ಈ ಪದ—

"ಮುಪ್ಪಿನ ಗಂಡನ ಒಲ್ಲೆನು ನಾನು ॥ ಪ॥
ತಪ್ಪದೆ ಪರಿಪಾಟ ಪಡಲಾರೆನಕ್ಕ ॥ಅನು।

(ಆನಂದ ಭೈರವಿ ಅಟ್ಟತಾಳದಲ್ಲಿ ಹಾಡಿತ್ತು.)

ಮುಪ್ಪಿನ ಗಂಡನನ್ನು ಕಟ್ಟಿಕೊಂಡ ಜವ್ವನೆಯ ಪಾಡು ಇಂತಾದರೆ ವೈದಿಕ ಗಂಡನನ್ನು ಕಟ್ಟಿಕೊಂಡು ಬಾಳುವ ಗರತಿಯ ಬೇಗೆ ಇನ್ನೊಂದು ಪರಿ—

ಒಲ್ಲೆನೆ ವೈದಿಕ ಗಂಡನ-ನಾ
ನೆಲ್ಲಾದರು-ಕಲ್ಲ ಹಾಯುವೆನಮ್ಮಾ (ನೀರು ಧುಮುಕುವೆನಮ್ಮಾ) ॥ಪ॥

(ಪಂತುವರಾಳಿ ರಾಗದಲ್ಲಿ ಅಟ್ಟ ತಾಳದಲ್ಲಿ ಹಾಡಿತ್ತು.)

ದಾಸವರ್ಯ ಪುರಂದರರು ನಮ್ಮ ಸಮಾಜದ ಜಿಪುಣಾಗ್ರೇಸರ ಚಕ್ರವರ್ತಿಯನ್ನು ಕಂಡಾಗ ಈ ದೇವರ ನಾಮ ಅವರ ಹೃದಯದ ಬುಗ್ಗೆಯಿಂದ ಹೀಗೆ ಚಿಮ್ಮಿರಬೇಕು—

ಹರಿ ಕೊಟ್ಟ ಕಾಲಕ್ಕೆ ಉಣಲಿಲ್ಲ ||ಪ||
ಹರಿ ಕೊಡದ ಕಾಲಕ್ಕೆ ಬಾಯಬಿಡುವೆಯಲ್ಲೋ ಪ್ರಾಣಿ |ಅನು|

(ಈ ದೇವರ ನಾಮವನ್ನು ಅಟ್ಟ ತಾಳದಲ್ಲಿ ಪೂರ್ವ ಕಲ್ಯಾಣಿಯಲ್ಲಿ ಹಾಡಿತ್ತು.)
ಹೀಗೆ

ಮಡಿ ಮಡಿ ಮಡಿಯೆಂದಡಿಗಡಿಗ್ಹಾರುತಿ
ಮಡಿ ಮಾಡುವ ಬಗೆ ಬೇರುಂಟು ||ಪ||

(ರಾಗ ಬೇಹಾಗ್—ಆದಿ ತಾಳ)

ಜಾಲಿಯ ಮರದಂತೆ ಧರೆಯೊಳು |
ದುರ್ಜನರು ಜಾಲಿಯ ಮರದಂತೆ || ||ಪ||

(ರಾಗ ಮೋಹನ—ಅಟ ತಾಳ)

"ಬೇವು ಬೆಲ್ಲದೊಳಿಡಲೇನು ಫಲ ಹಾವಿಗೆ ಹಾಲೆರೆದೇನು ಫಲ"—"ಮಾನ ಭಂಗವ ಮಾಡಿ ಮತ್ತೆ ಉಪಚಾರಗಳ | ಏನುಮಾಡಿದರಲ್ಲಿ ಇರಬಾರದಯ್ಯ ||" —

ಹೀಗೆ ಸಮಾಜದ ರೀತಿ ನೀತಿ ಎತ್ತಾಡಿ, ಕೆಲವು ವೇಳೆ ನಯವಾಗಿ, ಕೆಲವು ವೇಳೆ ತೀಕ್ಷ್ಣವಾಗಿ, ಕೆಲವು ವೇಳೆ ಲೇವಡಿ, ಕಟಕಿ, ಉಪಯೋಗಿಸಿ "ಸಮಾಜವನ್ನು ಕಂಡ ಪುರಂದರದಾಸರು" ಗಮಕ ರೂಪಕವನ್ನು ಸಾದರ ಪಡಿಸಿದೆವು. ಒಂದೂವರೆ ಎರಡು ಗಂಟೆಗಳ ಕಾರ್ಯಕ್ರಮ. ದೇವರ ನಾಮಗಳ ಸಂಗೀತ ಕಛೇರಿಗಳನ್ನು ಕೇಳಿದ್ದ ಕಿವಿಗಳಿಗೆ ಈ ಕಾರ್ಯಕ್ರಮ ನವನವೀನವಾಗಿತ್ತು.

ರಾಮಚಂದ್ರರಾವ್ ಪದಕಿ ಮಾರನೆಯ ದಿವಸ ಸಂಜೆ ಹುಬ್ಬಳ್ಳಿಯ ಸರಸ್ವತಿ ವಿದ್ಯಾರಣ್ಯ ವಾಚನಾಲಯದ ಅಟ್ಟದ ಮೇಲೆ ಸರ್ವಜ್ಞ ಕವಿಯ ಚತಃಶತ ಮಾನೋತ್ಸವವನ್ನು ಶಕುಂತಲಾಬಾಯಿಯ ಸರ್ವಜ್ಞ ವಚನಗಳ ಹಾಡುಗಾರಿಕೆ ಯೊಂದಿಗೆ ನನ್ನ ಅಧ್ಯಕ್ಷತೆಯಲ್ಲಿ ಏರ್ಪಾಡು ಮಾಡಿದ್ದರು. ಹುಬ್ಬಳ್ಳಿಯ ಜನಪ್ರಿಯ ಡಾಕ್ಟರ್ ಹಾಗೂ ಸುಪ್ರಸಿದ್ಧ ಚಲನ ಚಿತ್ರ ನಟರಾದ ಡಾ|| ಗೋವಿಂದ ಮಣ್ಣೂರರು ನಮಗಿಬ್ಬರಿಗೂ ಮಾಲಾರ್ಪಣೆ ಮಾಡಿ ಗೌರವಿಸಿದರು.

ಧಾರವಾಡದಲ್ಲೂ ಶಕುಂತಲಾಬಾಯಿಯ ಗಮಕ ವಾಚನಗಳು ನಡೆದವು. ವನಿತಾ ಸೇವಾ ಸಮಾಜ ವಿದ್ಯಾ ಸಂಸ್ಥೆಯಲ್ಲಿ "ಕರ್ಣಾಟಕ ದರ್ಶನ" ಗಮಕ ರೂಪಕವನ್ನು ಸಾದರ ಪಡಿಸಿದೆವು. ಡಾ|| ಚಿದಂಬರ ಮೂರ್ತಿಗಳ ಅಧ್ಯಕ್ಷತೆ. ಅವರು ಮಿಂಚಿನ ಬಳ್ಳಿಗೆ ವಿದ್ವತ್ ಪೂರ್ಣವಾದ "ಶ್ರೀ ಶಂಕರಾಚಾರ್ಯರು" ಉದ್ಗ್ರಂಥ ಬರೆದ ವಿದ್ವಾಂಸರು.

ಎನ್ಕೆ ಕುಮಾರವ್ಯಾಸ ಭಕ್ತರು. ಕುಮಾರವ್ಯಾಸನನ್ನು ವಿಶೇಷವಾಗಿ ವ್ಯಾಸಂಗ ಮಾಡಿದ ವಿದ್ವಾಂಸರು. "ಗದುಗಿನ ಗಂಡು ಕವಿ ಕುಮಾರವ್ಯಾಸ", "ಕನ್ನಡ ವ್ಯಾಸ ಭಾರತ", "ಕುಮಾರ ವ್ಯಾಸ ಮತ್ತು ಕೃಷ್ಣ ಕಥೆ" ಮತ್ತು "ಕುಮಾರವ್ಯಾಸ ಕೋಶ" ರಚಿಸಿದ ಧೀಮಂತ ಲೇಖಕ, "ಎರಡನೆಯ ಸಂಬಂಧ" ಮತ್ತು "ನೈನಿ" ಕಾದಂಬರಿ

ಗಳನ್ನು ರಚಿಸಿದ ಕಾದಂಬರಿಕಾರ. ಏಕಾಂಕ ನಾಟಕಕಾರ. ನಮಗೆ ಆಪ್ತ ಮಿತ್ರ. ಈ ಹಲವಾರು ಕಾರಣಗಳಿಂದ ಬೆಂಗಳೂರು ಮನೆಯಿಂದ ತಮ್ಮ ಧಾರವಾಡದ ಮನೆಗೆ ಬಂದ ಸಹೋದರಿ ಶಕುಂತಲಾಬಾಯಿಯ ಕುಮಾರ ವ್ಯಾಸ ಭಾರತ ವಾಚನವನ್ನು ತಮ್ಮ ಧಾರವಾಡದಲ್ಲಿ ಇಡಿಸದಿದ್ದರೆ "ಎನ್ಕೆ" ಯವರಿಗೆ ಮನಸ್ಸಮಾಧಾನವಾದೀತೆ? ಅವರ ಕೃಪೆಯಿಂದ ಬನವಾಸಿ ರಾಮಮಂದಿರದಲ್ಲಿ ಕುಮಾರವ್ಯಾಸನ ಭಾರತದಿಂದ "ದ್ರೌಪದೀ ಮಾನ ಸಂರಕ್ಷಣ" ಕಥಾಭಾಗದ ಗಮಕ ವಾಚನದ ಏರ್ಪಾಡಾಯಿತು. ಕುಮಾರವ್ಯಾಸನ ಮೇಲೆ ಅಧಿಕಾರಯುತವಾಗಿ ಮಾತನಾಡಬಲ್ಲ ಹಿರಿಯರು, ಬೆಟಗೇರಿ ಕೃಷ್ಣಶರ್ಮರು, ಅಧ್ಯಕ್ಷರಾಗಿ ಕಾರ್ಯಕ್ರಮದ ಗೌರವ ಹೆಚ್ಚಿಸಿದರು.

ಎನ್ಕೆ ಧಾರವಾಡದ ಆಕಾಶವಾಣಿಯಲ್ಲಿ ಶಕುಂತಲಾಬಾಯಿಯ ಗಮಕ ವಾಚನದ ಏರ್ಪಾಡಿಗೂ ಮುಂದಾದರು. ಈಗ ಬೆಂಗಳೂರು ಆಕಾಶವಾಣಿಯ "ಟಾಕ್ಸ್" ವಿಭಾಗದ ನಿರ್ಮಾಪಕರಾಗಿರುವ ಶ್ರೀನಿವಾಸ ಕುಲಕರ್ಣಿ ಧ್ವನಿ ಮುದ್ರಿಸಿ ಕೊಂಡರು. ಪ್ರಶಂಸನೀಯ ಸುಗಮ ಸಂಗೀತ ಮತ್ತು ಭಾವಗೀತೆಗಳನ್ನು ಹಾಡುವ ಕರ್ನಾಟಕದ ಕಲಾವಿದರಲ್ಲಿ ಗಣ್ಯ ಸ್ಥಾನ ಪಡೆದಿರುವ ಧಾರವಾಡದ ಆಕಾಶವಾಣಿಯ ಅನುರಾಧಧಾರೇಶ್ವರ ಶಕುಂತಲಾಬಾಯಿಯ ಕಾರ್ಯಕ್ರಮದಲ್ಲಿ ಅಪಾರವಾದ ಶ್ರದ್ಧೆ ವಹಿಸಿದ್ದರು.

ಹುಬ್ಬಳ್ಳಿಯಲ್ಲಿ ಕುಮಾರವ್ಯಾಸ ಸ್ಮಾರಕ ಗಮಕ ಸಂಗೀತ ಸಮ್ಮೇಳನ

1978 ಮತ್ತು 1979 ರಲ್ಲಿ ಹುಬ್ಬಳ್ಳಿಯಲ್ಲಿ ಕುಮಾರವ್ಯಾಸ ಸ್ಮಾರಕ ಗಮಕ ಮತ್ತು ಸಂಗೀತ ಸಮ್ಮೇಳನಗಳನ್ನು ಕುಮಾರವ್ಯಾಸ ಸ್ಮಾರಕ ಮಂಡಲಿ ನಡೆಸಿತು. ನಾವು ಈ ಉತ್ಸವ ಸಮಾರಂಭಗಳಲ್ಲಿ ಪಾಲುಗೊಂಡೆವು. ಬಿಂದೂರಾವ್ ದೇಸಾಯರು ಸಂಘದ ಅಧ್ಯಕ್ಷರು, "ಸಂಯುಕ್ತ ಕರ್ನಾಟಕ" ದೈನಂದಿನ ಪತ್ರಿಕೆಯ ಉಪ ಸಂಪಾದಕ ಸುರೇಂದ್ರದಾನಿ ಗೌ|| ಕಾರ್ಯದರ್ಶಿಗಳು.

ಮೈಸೂರು ಕಡೆಯ ಗಮಕಿಗಳಿಗೆ ಉತ್ತರ ಕರ್ನಾಟಕ ಕಡೆಯ ಗಮಕಿಗಳ ಪರಿಚಯವಾಯಿತು. ನಮ್ಮ ಕಡೆಯ ಗಮಕಿಗಳು ಆಕಡೆ, ಆಕಡೆ ಗಮಕಿಗಳು ಈಕಡೆಗೆ ಸಂಪರ್ಕ ಬೆಳೆಸಿಕೊಳ್ಳುವ ಅವಶ್ಯಕತೆಗಳಿಗೆ ಒಂದು ಸೇತುವೆ ಅವಶ್ಯಕ ವೆಂದು ನಮಗೆ ಕಂಡಿತು. ಮುನಿರಾಬಾದಿನ ಗಮಕ ವಿದ್ವಾನ್ ಜಹಗೀರ್ ದಾರ್ ಅವರ ಆತ್ಮೀಯತೆ ನಮ್ಮನ್ನು ಮುಗ್ಧಗೊಳಿಸಿತು. ಶಕುಂತಲಾಬಾಯಿಯ ಗಮಕ ವಾಚನ "ಧರ್ಮಾದಿಗಳ ಜನನ ಕಥಾ ಸಂದರ್ಭ" ನನ್ನ ಪ್ರಾಸಂಗಿಕ ನಿರೂಪಣೆ ಯೊಡನೆ ನಡೆಯಿತು.

1978 ರ ಸಮಾರಂಭದ ಏರ್ಪಾಡು ಹುಮ್ಮಸ್ಸಿನಿಂದಲೇ ನಡೆದಿತ್ತು. ಗಮಕಿಗಳ ವಾಚನ ಬೆಳಗ್ಗೆ ಮತ್ತು ಮಧ್ಯಾಹ್ನ. ವಿಶಾಲವಾದ ಸವಾಯಿ ಗಂಧರ್ವ ಸಭಾಂಗಣ

ಜನಸ್ತೋಮವಿಲ್ಲದೆ ಬಿಕೊ ಬಿಕೊ. ಸಮ್ಮೇಳನದಲ್ಲಿ ಭಾಗವಹಿಸುತ್ತಿದ್ದ 40–50 ಗಮಕಿಗಳೇ ಮಹಾ ಶ್ರೋತೃಗಳು. ಸಂಜೆಯ ಮನರಂಜನೆಯ ಕಾರ್ಯಕ್ರಮಕ್ಕೆ ಜನ ಮರುಳೋ ಜಾತ್ರೆ ಮರುಳೋ. ಗಂಡುಮೆಟ್ಟು ನಾಡಿನ ಮಹಕವಿ ಕುಮಾರ ವ್ಯಾಸನಿಗೆ ಮನ್ನಣೆ ಇಷ್ಟು ಮಟ್ಟಿಗೆ ಹುಬ್ಬಳ್ಳಿಯ ನಾಗರಿಕರಿಂದ.

ಸುರೇಂದ್ರದಾನಿ ಸಮ್ಮೇಳನಕ್ಕೆ ಬಂದ ಗಮಕಿಗಳನ್ನು ಕುಮಾರವ್ಯಾಸನ ಜನ್ಮ ಸ್ಥಳ ಕೋಳಿವಾಡಕ್ಕೆ ಕಳಿಸುವ ಏರ್ಪಾಡು ಮಾಡಿದ್ದರು.

ನಾವು ಎರಡನೆಯ ದಿವಸ ಬೆಳಗ್ಗೆ ಕೋಳಿವಾಡದ ಯಾತ್ರೆ ಹೊರಟೆವು. ಗಮಕ ವಿದ್ವಾನ್ ಮೈ. ಶೇ. ಅನಂತ ಪದ್ಮನಾಭ ರಾವ್, ಅವರ ಮಗ ಗಮಕಿ ಜಯರಾಮರಾವ್, ಗಮಕ ವಿದುಷಿ ಗೌರಮ್ಮ ನಾಗರಾಜ್ ನಮ್ಮ ಜೊತೆಗೆ ಬಂದಿದ್ದರು. ವೀರನಾರಾಯಣ ಸ್ವಾಮಿಯ ಸನ್ನಿಧಿಯಲ್ಲಿ ಗಮಕಿಗಳ ಭಾರತ ವಾಚನ. ನಾನು ಗಮಕಿಗಳನ್ನು ಸಭೆಗೆ ಪರಿಚಯ ಮಾಡಿಕೊಟ್ಟೆ.

ಸಭೆ ಪ್ರಾರಂಭವಾಗುವುದಕ್ಕೆ ಮುಂಚೆ ಕೋಳಿವಾಡ ಗ್ರಾಮದ ಪ್ರದಕ್ಷಿಣೆ ಮಾಡಿದ್ದೆವಲ್ಲ; ಅಲ್ಲಿ ಕುಮಾರವ್ಯಾಸನಿದ್ದ ಗೃಹವನ್ನು ನೋಡಿದ್ದೆವು. ವಿಶ್ವ ಮಾನ್ಯ ಕವಿಗಳ ಪಂಕ್ತಿಯಲ್ಲಿ ಸಮ ಸಮವಾಗಿ ಕೂಡಬಲ್ಲ ಕುಮಾರವ್ಯಾಸನ ಜೋಪಡಿ ನೆಲಸಮವಾಗಿದ್ದುದನ್ನು ಕಂಡು ಮನ ನೊಂದಿದ್ದೆ. ಅದನ್ನು ನೆನೆದು ಕಳಕಳಿಯಿಂದ ಹೀಗೆ ಬಿನ್ನವಿಸಿಕೊಂಡೆ ಸಭೆಗೆ—

"ಕುಮಾರವ್ಯಾಸನ ಹೆಸರಲ್ಲಿ ಆದಷ್ಟು ಬೇಗ ನೆಲಸಮವಾಗಿರುವ ಅವನ ಜನ್ಮಸ್ಥಳದಲ್ಲಿ ಒಂದು ಸ್ಮಾರಕ ಮಂದಿರವೇಳಬೇಕು. ಮಂದಿರದೊಳಗೆ ಭಾರತ ಕಾವ್ಯವನ್ನು ಮರುಗೊಳಿಸುವ ಆಳೆತ್ತರ ಪ್ರಮಾಣದ ಭಾರತದ ತೈಲವರ್ಣ ಚಿತ್ರಗಳು ಕುಮಾರವ್ಯಾಸ ಸೂಕ್ತಿಗಳೊಂದಿಗೆ ನಾಲ್ಕೂಕಡೆಯ ಗೋಡೆಗಳ ಮೇಲೆ ಕಂಗೊಳಿಸಬೇಕು. ಕುಮಾರವ್ಯಾಸ ಸಂಬಂಧಪಟ್ಟ ಸಮಸ್ತ ಗ್ರಂಥ ರಾಶಿಯ ಒಂದು ಸರಸ್ವತೀ ಭಂಡಾರ ಈ ಮಂದಿರಕ್ಕೆ ಸೇರ್ಪಡೆಯಾಗಬೇಕು. ಗಮಕಿಗಳನ್ನು ವರ್ಷಕ್ಕೆ ಒಂದುಸಲವಾದರೂ ಮಹಾ ಮೇರು ಸದೃಶನಾದ ಕವಿ ಸಾರ್ವಭೌಮ ಕುಮಾರ ವ್ಯಾಸನ ಜನ್ಮ ದಿನದಂದು ಜಾತ್ರೆ ಸೇರಿಸಿ ಭಾರತ ವಾಚನ ಮಾಡಿಸಬೇಕು. ಕನ್ನಡಾಭಿಮಾನ ಜನ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಬಂದು ಕುಮಾರವ್ಯಾಸ ನಿಗೆ ನಮನ ಸಲ್ಲಿಸಬೇಕು. ಆ ಮಹಾ ದಿನವನ್ನು ನಾನು ಎದುರು ನೋಡುತ್ತಿದ್ದೇನೆ"

ಕೋಳಿವಾಡದ ಕುಮಾರವ್ಯಾಸ ಮನೆತನದ ಎಂಬತ್ತೈದು ವರ್ಷದ ವೃದ್ಧೆ ತುಂಗಾಬಾಯಿಯವರನ್ನು ಅವರ ಮನೆಯಲ್ಲಿ ಕಂಡೆವು. ಅವರು ಆಶುಕವಯಿತ್ರಿ. ಅಸ್ಖಲಿತವಾಗಿ ಕುಮಾರವ್ಯಾಸನ ಜೀವನ ಚರಿತ್ರೆಯನ್ನು ಸಾಂಗತ್ಯ ಧಾಟಿಯಲ್ಲಿ ಹಾಡಿದರು. ನಮಗೆ ಕೇಳಿ ಮೈಯುಬ್ಬಿತು.

ಊರದೇವತೆಯ ಉತ್ಸವದ ಸಮಾರಂಭದಂದು ಕೋಳಿವಾಡದಲ್ಲಿ ನಮ್ಮನ್ನು

ಸಂತರ್ಪಣೆಯ ಭೋಜನ ಮಾಡಿಕೊಂಡೇ ಹೋಗಬೇಕೆಂದು ಬಲವಂತಮಾಡಿದರು. ಗ್ರಾಮದ ಬ್ರಾಹ್ಮಣ ವಠಾರಗಳೆಲ್ಲ ಅತಿಥಿಗಳ ಭೋಜನಗೃಹಗಳಾಗಿ ಹೋದವು ನಿಮಿಷ ಮಾತ್ರದಲ್ಲಿ. ಉತ್ತರ ಕರ್ಣಾಟಕದ ಸಂತರ್ಪಣೆಯ ಭೋಜನದ ಸವಿ ರುಚಿ ನೋಡಿ ನಾಲಗೆ ಚಪ್ಪರಿಸಿದೆವು. "ಭಿಡೆ ಬೇಡ" ಎಂಬ ಗ್ರಾಮೀಣರ ವಿಶಾಲ ಹೃದಯದ ಉಪಚಾರದ ಶ್ರೀಮಂತಿಕೆ ಮಾತುಮಾತುಗಳಲ್ಲಿ ವ್ಯಕ್ತಪಡುತ್ತಿತ್ತು.

ಊಟ ತೀರಿಸಿಕೊಂಡು, ಬಿಸಿಲಲ್ಲೇ ನಮ್ಮ ಟ್ಯಾಕ್ಸಿಯಲ್ಲಿ ಕುಳಿತು ಹುಬ್ಬಳ್ಳಿಯ ಮಧ್ಯಾಹ್ನದ ಸಮಾರಂಭಕ್ಕೆ ಹಾಜರಾದೆವು. ಬಿಂದೂರಾವ್ ದೇಶಾಯರ ಗೃಹದಲ್ಲಿ ಕುಮಾರವ್ಯಾಸ ಭಾರತ ವಾಚನ ಮಾಡಿದ್ದ ಹಿರಿಯ ಗಮಕಿ, ಸುಪ್ರಸಿದ್ಧ ಗವಾಯಿ ಗುರುರಾವ್ ದೇಶಪಾಂಡೆ, ವ್ಯಾಖ್ಯಾನಕಾರ ಕುಮಾರವ್ಯಾಸ ಭಾರತತಜ್ಞ ಎನ್ಕೆ ಅವರಿಗೆ ಸನ್ಮಾನವಾಯಿತು.

1978ರಲ್ಲಿ ಕುಮಾರವ್ಯಾಸ ಸ್ಮಾರಕ ಗಮಕಸಂಗೀತ ಸಮ್ಮೇಳನದಲ್ಲಿ ಶಕುಂತಲಾ ಬಾಯಿ ಭಾಗವಹಿಸುವರೆಂದು ಕೇಳಿ ಧಾರವಾಡದ ಆಕಾಶವಾಣಿ ನಿರ್ದೇಶಕ ಎಸ್. ಕೃಷ್ಣಮೂರ್ತಿ ಶಕುಂತಲಾಬಾಯಿಗೆ ಒಂದು ವಿಶೇಷ ಕಾರ್ಯಕ್ರಮ ಕೊಟ್ಟರು. "ಕಾಂಚನ ಮೃಗ" ವೆಂಬ ರೂಪಕ ರಾಮಾಯಣದ ಆಧಾರದ ಮೇಲೆ; ಅದೂ ಕನ್ನಡ ರಾಮಾಯಣಗಳ ಆಧಾರದ ಮೇಲೆ ಸಾದರ ಪಡಿಸುವ ವಿಶೇಷ ರೂಪಕ. ಶಕುಂತಲಾ ಬಾಯಿ ಈ ರೂಪಕಕ್ಕೆ ತೊರವೆಯ ನರಹರಿಯ ರಾಮಾಯಣದ ಅರಣ್ಯಕಾಂಡದಿಂದ "ಸ್ವರ್ಣಮೃಗ"ದ ಬೇಟೆಯ ಸಂದರ್ಭವನ್ನು ಆರಿಸಿಕೊಂಡು ಐದಾರು ಪದ್ಯಗಳನ್ನು ವಾಚಿಸಿದರು.

1953ರಲ್ಲಿ ಎಂ. ಶಂಕರ್ ಅವರ ಮೂಲಕ ಧಾರವಾಡದ ಆಕಾಶವಾಣಿ ಶ್ರೋತೃಗಳಿಗೆ ಪರಿಚಯವಾಗಿದ್ದ ಶಕುಂತಲಾಬಾಯಿ, 1975ರಲ್ಲಿ ಎನ್ಕೆ ಅವರ ವಿಶ್ವಾಸದಿಂದ, 1978ರಲ್ಲಿ ಎಸ್. ಕೃಷ್ಣಮೂರ್ತಿಯವರ ಸೌಜನ್ಯದಿಂದ ಧಾರವಾಡದ ಆಕಾಶವಾಣಿಯ ಕಲಾವಿದೆಯಾಗಿ ಉತ್ತರ ಕರ್ಣಾಟಕಕ್ಕೆ ಇನ್ನೊಮ್ಮೆ ಪರಿಚಯವಾದರು.

1979ರಲ್ಲಿ ಇನ್ನೊಮ್ಮೆ ಕುಮಾರವ್ಯಾಸ ಸ್ಮಾರಕ ಗಮಕ ಮತ್ತು ಸಂಗೀತ ಸಮ್ಮೇಳನದಲ್ಲಿ ಭಾಗವಹಿಸಲು ಹುಬ್ಬಳ್ಳಿಗೆ ಹೋದೆವು.

1979ರ ಸಮ್ಮೇಳನದಲ್ಲಿ ಭಾಗವಹಿಸುವ ಗಮಕಿಗಳಿಗೆ ಊಟ ವಸತಿ ಏರ್ಪಾಡು ಶ್ರೀ ಕೃಷ್ಣ ಕಲ್ಯಾಣ ಮಂದಿರದಲ್ಲಿ. ಕಾರ್ಯಕ್ರಮಗಳೂ ಅಲ್ಲೇ ನಡೆದವು.. ಗಮಕ ವಾಚನಗಳು ಹಿಂದಿನ ವರ್ಷದಂತೆ ಬೆಳಗ್ಗೆ ಮಧ್ಯಾಹ್ನ. 40-50 ಮಂದಿ ಗಮಕಿಗಳೇ ಮಹಾ ಶ್ರೋತೃಗಳು ಈಗಲೂ. ಸಂಜೆಯ ಮನರಂಜನೆಗೆ ಕಿಕ್ಕಿರಿದ ಜನಸ್ತೋಮ ಬಹಳ ವರ್ಷಗಳ ಹಿಂದೆ ಎ. ಆರ್. ಕೃಷ್ಣಶಾಸ್ತ್ರಿಗಳು ಬೆಂಗಳೂರಿನ ಕನ್ನಡ ಸಾಹಿತ. ಪರಿಷತ್ತಿನ ವಸಂತ ಸಾಹಿತ್ಯೋತ್ಸವದಲ್ಲಿ ನಮ್ಮ ಜನವನ್ನು ನೋಡಿ ಅಂದಿದ್ದರು "ಈ ನಡುವೆ ಪರಿಷತ್ತಿನಲ್ಲಿ ಹಸು ತಲೆಯಾಡಿಸುವ ಬದಲು ಬಾಲ ಅಲ್ಲಾಡಿಸುತ್ತದೆ" ಎಂದು, ಅದು ದಿಟ. ಇಲ್ಲಿಯೂ ಕುಮಾರವ್ಯಾಸ ಭಾರತ ವಾಚನ ಶ್ರವಣಕ್ಕೆ

ಜನವಿಲ್ಲ. ಕಾವ್ಯಕ್ಕೆ ಸಂಬಂಧ ಪಡದ ಮನರಂಜನೆಗೆ ಜನನಿಬಿಡ. ಕುಮಾರವ್ಯಾಸ ಪಂಡಿತ, ಪ್ರಸಿದ್ಧ ವಿಮರ್ಶಕ, ಡಾ|| ಕೀರ್ತಿನಾಥ ಕುರ್ತಕೋಟಿ ಅವರ "ಕುಮಾರ ವ್ಯಾಸ" ಉಪನ್ಯಾಸ ನಮಗೆಲ್ಲ ಹೊಸ ಬೆಳಕು ಕಾಣಿಸಿತು. ಅವರಿಗೆ ಸನ್ಮಾನವಾಯಿತು. ಜೊತೆಯಲ್ಲೇ ಗಮಕ ಶಾಸ್ತ್ರ ಬರೆದ ಗಮಕವಿದ್ವಾಂಸ ಕೆ. ಟಿ. ರಾಮಸ್ವಾಮಿ ಅಯ್ಯಂಗಾರ್ಯರಿಗೆ ರಾಜ್ಯದ ಸಾಹಿತ್ಯ ಅಕಾಡೆಮಿಯಿಂದ ಆ ವರ್ಷ ಗಮಕ ಪ್ರಶಸ್ತಿ ಸಂದುದಕ್ಕೆ ಗೌರವಿಸಲಾಯಿತು.

೨. ಹೈದರಾಬಾದು ಕರ್ನಾಟಕ ಪ್ರವಾಸ

1946ರ ಹರಪನಹಳ್ಳಿ ಸಾಹಿತ್ಯ ಸಮ್ಮೇಳನದಲ್ಲಿ ಕಾರ್ಯಕಾರಿ ಸಮಿತಿಯ ಚುನಾವಣೆ ನಡೆಯಿತು. ಬೆಂಗಳೂರು ಜಿಲ್ಲೆಯ ಪ್ರತಿನಿಧಿಯಾಗಿ ಕಾರ್ಯಕಾರಿ ಸಮಿತಿಗೆ ನಾನು ಚುನಾಯಿತನಾದೆ. ಹೈದರಾಬಾದು ಕರ್ನಾಟಕದ ಕಡೆಯಿಂದ ರಾಯಚೂರಿನ ರಾ. ಗು. ಜೋಷಿಯವರು, ಗುಲ್ಬರ್ಗದ ತವಗ ಭೀಮಸೇನರಾಯರು ಬಿಜಾಪುರದ ವಿ. ಬಿ. ನಾಯಕರು ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಆಯ್ಕೆ ಯಾದರು. ನನಗೆ ಇವರೆಲ್ಲರ ಸ್ನೇಹ ಪ್ರಾಪ್ತವಾಯಿತು. ಹೈದರಾಬಾದ್ ಕರ್ನಾಟ ಕದ ಸಾಹಿತ್ಯಾಭಿಮಾನಿಗಳ ಸಂಪರ್ಕ ಬೆಳೆಯುವುದಕ್ಕೆ ಈ ಮೂವರು ಹಿರಿಯರು ಕಾರಣರಾದರು.

1953ರಲ್ಲಿ ರಾಯಚೂರಿನಲ್ಲಿ ಕರ್ನಾಟಕ ಸಂಘದ ಆಶ್ರಯದಲ್ಲಿ ನಡೆದ ನಾಡ ಹಬ್ಬದಲ್ಲಿ ಶಕುಂತಲಾಬಾಯಿ ಮತ್ತು ನಾನು ಭಾಗವಹಿಸಬೇಕೆಂದು ಕರೆ ಬಂತು. ನಾವು ಆಹ್ವಾನವನ್ನು ಸ್ವೀಕರಿಸಿದೆವು.

ಈಗ ಭಾರತ ಕೇಂದ್ರದ ಪಾರ್ಲಿಮೆಂಟ್ ಸದಸ್ಯರಾಗಿರುವ ನಮ್ಮ ರಾಜ್ಯದ ಪ್ರತಿನಿಧಿ ಬಿ. ವಿ. ದೇಶಾಯರು ಆ ವರ್ಷ ರಾಯಚೂರು ಕರ್ನಾಟಕ ಸಂಘದ ಕಾರ್ಯದರ್ಶಿಯಾಗಿದ್ದರು. ಧಾರವಾಡ, ಮಂಗಳೂರು, ಮೈಸೂರು, ಹೈದರಾಬಾದು ಕರ್ನಾಟಕದ ಪ್ರಸಿದ್ಧ ಸಾಹಿತಿಗಳು, ಪ್ರಖ್ಯಾತ ಗಮಕಿಗಳು, ಹೆಸರಾಂತ ಸಂಗೀತ ವಿದ್ವಾಂಸರುಗಳು ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಹೋಗಿ ನಾಡಹಬ್ಬದಲ್ಲಿ ಭಾಗವಹಿಸಿ "ರಾಜಕೀಯವಾಗಿಯಲ್ಲದಿದ್ದರೂ ಸಾಂಸ್ಕೃತಿಕವಾಗಿ ತಾವೆಲ್ಲ ಕನ್ನಡತಾಯ ಮಕ್ಕಳು, ಸಹೋದರರು" ಎಂಬುದನ್ನು ನಿಷ್ಕಾಪಟ್ಯದ ಹೃದಯಾಂತರಾಳದಿಂದ ತೋರಿಸುತ್ತಿದ್ದ ಕಾಲವದು.

ರಾ. ಗು. ಜೋಷಿ, ಬಿ. ವಿ. ದೇಶಾಯಿ ರೈಲ್ವೆ ನಿಲ್ದಾಣಕ್ಕೆ ಬಂದು ನಮ್ಮನ್ನು ಎದುರುಗೊಂಡರು. ದೇಶಾಯರು ತಮ್ಮ ಕಾರಿನಲ್ಲಿ ಕೂಡಿಸಿಕೊಂಡು ತಮ್ಮ ಮನೆಗೆ ಕರೆದೊಯ್ದರು. ರಾಯಚೂರು, ಕೋಟೆಯೊಳಗೆ ಹುದುಗಿದೆ. ನಾವು ಒಳಹೋಗುತ್ತಿ ರುವಾಗ ನಮಗೆ ಅಲ್ಲಾವುದ್ದೀನನ ಅದ್ಭುತದೀಪದ ಭ್ರಮೆ ಹುಟ್ಟಿಸಿತು.

ರಾಯಚೂರು ನಾಡಹಬ್ಬ ಕರ್ನಾಟಕ ಸಂಘದ ಆವರಣದಲ್ಲಿ ನಡೆಯಿತು. ಜನ ಪ್ರವಾಹದಂತೆ ನುಗ್ಗುತ್ತಿದ್ದರು. ಸಂಚಾರಿ ಸಭೆಯೋ ಎನ್ನುವ ಭ್ರಮೆ ನಮಗೆ. ಕ. ವೆಂ. ರಾಘವಾಚಾರ್ಯರೂ ಭಾಗವಹಿಸಿದ್ದರು. ನನ್ನ ಪ್ರಾಸಂಗಿಕ ನಿರೂಪಣೆ, ಶಕುಂತಲಾಬಾಯಿಯ ಕಾವ್ಯವಾಚನ. ಜನ ಪ್ರವಾಹದಲ್ಲಿ ಯಾರಿಗೆ ಕೇಳಿಸಿತೋ ದೇವರೇ ಬಲ್ಲ. ಸಂತೆ, ಪರಿಷೆಯ ನಾಡಹಬ್ಬದ ಕಾರ್ಯಕ್ರಮ ಮುಗಿದಮೇಲೆ ರಾತ್ರಿ ಹತ್ತುಗಂಟೆಯ ಮೇಲೆ ಶಕುಂತಲಾಬಾಯಿಯದು ಇನ್ನೊಂದು ಕಾರ್ಯಕ್ರಮ. "ಶ್ರೀ" ಯವರ "ಕನ್ನಡ ತಾಯಿ" ನೋಟ. ಅದು ಚೆನ್ನಾಯಿತು.

ಮಂತ್ರಾಲಯ ಪ್ರಭು ದರ್ಶನ, ಪ್ರತಿವರ್ಷದಲ್ಲೂ ಮಹಾನವಮಿ, ವಿಜಯ ದಶಮಿ ಈ ಎರಡು ದಿವಸಗಳೂ ಬೆಂಗಳೂರಿನಲ್ಲಿ ಹನಪನಹಳ್ಳಿಯ ಕೇಶಂ ರಾಮ ರಾಯರ ಮನೆಯಲ್ಲಿ ನಾವು ದಂಪತಿಗಳು ಬ್ರಾಹ್ಮಣ ಮುತ್ತೈದೆಯರಾಗಿ ಭಾಗವಹಿಸು ತ್ತಿದ್ದೆವು. ಈ ಆಮಂತ್ರಣವನ್ನು ಕಟ್ಟು ನಿಟ್ಟಾಗಿ ಪಾಲಿಸಲೇಬೇಕಾಗಿತ್ತು. ಆದುದ ರಿಂದ ದುರ್ಗಾಷ್ಟಮಿಯ ದಿವಸ ಬೆಳಗ್ಗೆ ರಾಯಚೂರಿಂದ ಬೆಂಗಳೂರಿಗೆ ಹೊರಟು ಬಿಟ್ಟೆವು. ರಾಯಚೂರಿಂದ ಮಂತ್ರಾಲಯವನ್ನು ಸೇರಿ, ಗುರುರಾಯರ ದರ್ಶನ ಪಡೆದು ತೀರ್ಥಪ್ರಸಾದ ಸ್ವೀಕರಿಸಿ ಮತ್ತೆ ಅಲ್ಲಿಂದ ಆದವಾನಿಯ ಮೂಲಕ ರೈಲು ಪ್ರಯಾಣದಲ್ಲಿ ಬೆಂಗಳೂರು ಸೇರಲು ಅವಕಾಶವಿತ್ತು. ಆ ಕಾರಣ ಬೆಳಗ್ಗೆ ಅಷ್ಟು ಹೊತ್ತಿಗೇ ಹೊರಟು ರಾಯಚೂರಿನಿಂದ ರೈಲಿನಲ್ಲಿ ಒಂಬತ್ತು ಮೈಲಿ ದೂರದಲ್ಲಿದ್ದ ಮಂತ್ರಾಲಯ ರೋಡ್ ನಿಲ್ದಾಣಕ್ಕೆ ಬಂದು ತಲುಪಿದೆವು. ಅಲ್ಲಿಂದ ಒಂಬತ್ತು ಮೈಲು ಬಸ್ ಪ್ರಯಾಣ ಮಂತ್ರಾ ಲಯಕ್ಕೆ. ರೈಲು ಗಾಡಿಯಿಳಿದು ಹೊರಬಂದವರೇ ಕೇಳಿದೆವು ಬಸ್ ಎಷ್ಟು ಹೊತ್ತಿಗೆ ಹೊರಡುವುದೆಂದು. “ಬಸ್ ಕೆಟ್ಟು ಹೋಗಿದೆ.” “ಒಂದು ವಾರ ಬಸ್ ಇಲ್ಲ” “ಜಟಕಾ ಮಾಡಿಕೊಳ್ಳಿ.” ಹೀಗೆ ತಲಾತಟ್ಟೆ ಉತ್ತರ. ಜಟಕಾಗಾಡಿ ಬಾಡಿಗೆಗೆ ಗೊತ್ತು ಮಾಡಿ ಕೊಳ್ಳಲಿಕ್ಕೆ ದುಬಾರಿ. ಮಧ್ಯಾಹ್ನ ನಾಲ್ಕುಗಂಟೆಯವರೆಗೆ ಬೆಂಗಳೂರುಕಡೆಗೆ ಬೇರೆ ರೈಲು ಗಾಡಿಯಿಲ್ಲ. ಗುರುರಾಯರ ದರ್ಶನ ತಪ್ಪಿತು. ನಾಳೆ ಬೆಳಗ್ಗೆ ಬೆಂಗಳೂರಿನಲ್ಲಿರಬೇಕಾದರೆ ಮಧ್ಯಾಹ್ನ ರೈಲುಗಾಡಿ ಹತ್ತಬೇಕು. ರಾಯರ ದರ್ಶನ ಬೇಕಾದರೆ ಕೂಡಲೇ ಜಟಕಾ ಗಾಡಿಯ ಸೌಕರ್ಯ ಒದಗಿಸಿಕೊಳ್ಳಬೇಕು. ಎಂಬ ತೊಳಲಾಟದಲ್ಲಿ ನಾವು ಸುಸ್ತೋ ಸುಸ್ತು. ನಮ್ಮ ಹಾಗೆಯೇ ಅವಸರದ ಯಾತ್ರೆ ಪೂರಯಿಸಿ ತಮ್ಮ ಸ್ಥಳಕ್ಕೆ ಹೋಗ ಬೇಕೆಂದು ಇನ್ನೊಬ್ಬ ಯಾತ್ರಿಕರು. ಅವರಿಗೂ ನಮ್ಮ ಹಾಗೆಯೇ ಒಳಗುದಿ. ಅಷ್ಟರಲ್ಲಿ ಒಬ್ಬ ಜಟಕಾಸಾಬಿ ನಮ್ಮೆಡೆಗೆ ಬಂದ. ಆರು ರೂಪಾಯಿಗಳು ಕೊಟ್ಟರೆ ಗಾಡಿ ಕಟ್ಟುವೆನೆಂದ. ಮೂವರಿಗೂ ಆಕಾಶ ಕೈಗೆ ಎಟುಕಿದಷ್ಟು ಸಂತೋಷವಾಯಿತು.

. ಜಟಕಾಗಾಡಿ ಗಾಳಿ ವೇಗದಲ್ಲಿ ಓಡಿತು ಮಂತ್ರಾಲಯಕ್ಕೆ. ಕೇವಲ ಒಂದೆರಡು ಮೈಲಿಗಳು ತಲುಪಿದರೆ ರಾಯರ ಸನ್ನಿಧಿ. ನಮ್ಮ ಜಟಕಾಗಾಡಿಯ ಚಕ್ರಗಳು ಕಟಕಟ ಶಬ್ದ ಪಾರಂಭಿಸಿದವು. “ಸಾಬಣ್ಣ, ನಿಲ್ಲಿಸಪ್ಪ. ಚಕ್ರಗಳ ಕಟಕಟ ಶಬ್ದ ಕೇಳಿದರೆ ಬಂಡಿ ಮುರಿದು ಬೀಳುವ ಹಾಗಿದೆ.” ಎಂದೆ ನಾನು. ಸಾಬಿ ಗಾಡಿ ನಿಲ್ಲಿಸಿದ. ನಾವು ಮೂವರೂ ಗಾಡಿಯಿಂದ ದುಮುಕಿದೆವು. ಅಷ್ಟರೊಳಗೆ ಚಕ್ರಗಳಲ್ಲಿ ಒಂದು ಲಟಲಟ ಮುರಿದು ನಮ್ಮ ಸೂಟುಕೇಸು, ಹಾಸಿಗೆ ಸುರುಳಿ ಗಾಡಿಯಿಂದ ಬಿದ್ದು ನೆಲದಲ್ಲಿ ಉರುಳಾಡಿದವು. ನಾವು ಮೂವರು ಅಪಾಯದಿಂದ ಪಾರಾಗಿದ್ದೆವು. ಮಂತ್ರಾಲಯದ ರಾಯರ ಸನ್ನಿಧಿ ಕಣ್ಣಿಗೆ ಗೋಚರಿಸುತ್ತಿದೆ ಕೂಗಳತೆಯಲ್ಲಿ; ನಗಾರಿಯ ಧಳಂಧಳಂ ಧಳಂಧಳಧ್ವನ ಕಿವಿಸೋಕುತ್ತಿದೆ ಸನಿಹದಲ್ಲಿ. ಮಟಮಟ ಮಧ್ಯಾಹ್ನದ ಬಿಸಲು ನಮ್ಮ ತಲೆಸುಡಿಸುತ್ತಿದೆ, ಮೈ ಬೆವರು ಸುರಿಸುತ್ತಿದೆ. ಸುಸ್ತಿನಿಂದ ಹೋಗುವುದಕ್ಕೆ ಕಾಲಿಲ್ಲವಲ್ಲ.

ಜಟಕಾಸಾಬಿ ತಲೆಯಮೇಲೆ ಕೈ ಹೊತ್ತು ಕುಳಿತ. "ಸಾಮಿ, ನಾನು ಒಂದು ಮೈಲಿ ದೂರ ಹೋದರೆ ಜಟಕ ರಿಪೇರಿಯಾಗುತ್ತದೆ. ಈ ಮಧ್ಯಾಹ್ನವೆಲ್ಲಾ ಬೇಕು ರಿಪೇರಿಗೆ" ಎಂದ. ನಮ್ಮ ಪ್ರವಾಸದ ಸಾಮಾನುಗಳನ್ನು ತಲೆಯ ಮೇಲೆ ಹೊತ್ತು ನಡೆದೇವೇ ನರಪೇತಲ ನಿತ್ರಾಣದ ಹಾರವರು. ಈ ಉರಿಬಿಸಿಲಲ್ಲಿ ಮಂತ್ರಾಲಯಕ್ಕೆ ಹೋದಹಾಗೆ! ಎಂದು ನಿಸ್ಸಹಾಯಕರಾಗಿ ನಿಟ್ಟುಸಿರು ಸೇದುತ್ತ ನಿಂತೆವು.

ಆ ಸಮಯಕ್ಕೆ ಮಂತ್ರಾಲಯದ ಕಡೆಯಿಂದ ನಮ್ಮ ಕಡೆಗೆ ಒಂದು ಜಟಕಾ ಬರುತ್ತಿದೆ. ನಮ್ಮ ಜಟಕಾಸಾಬಿ ಆ ಬಂಡಿಯನ್ನು ನೋಡಿದವನೇ "ಸಾಮಿ, ನಿಮ್ಮನ್ನು ಮಂತ್ರಾಲಯಕ್ಕೆ ಆ ಗಾಡಿಯನ್ನು ಗೊತ್ತುಮಾಡಿ ಕಳಿಸುತ್ತೇನೆ ಚಿಂತೆ ಮಾಡಬೇಡಿ. ರಾಯರ ಅನುಗ್ರಹ" ಎಂದ. ಪುಣ್ಯಾತ್ಮ ಗಾಡಿಯನ್ನು ಗೊತ್ತುಮಾಡಿ ಕೊಟ್ಟ. ನಮ್ಮಿಂದ ಒಂದು ಕಾಸೂ ಮುಟ್ಟಲಿಲ್ಲ. ಸಕಾಲದಲ್ಲಿ ಮಂತ್ರಾಲಯ ಸೇರಿದೆವು. ತುಂಗಭದ್ರೆಯ ದಂಡೆಗೆ ನಡೆದೆವು ಸ್ನಾನಕ್ಕೆ. ಸ್ನಾನಮಾಡಿ ಮಡಿಯಲ್ಲಿ ರಾಯರ ಬೃಂದಾವನ ಸಾನಿಧ್ಯ ಸೇರಿದೆವು. ಶಕುಂತಲಾಬಾಯಿ ಭಾವಪರವಶರಾದರು. ಕುಮಾರ ವ್ಯಾಸ ಭಾರತದಿಂದ ಮಂಗಳ ಶ್ಲೋಕ ಪದ್ಯಗಳನ್ನು ಕಣ್ಮುಚ್ಚಿ ಕೈಮುಗಿದು ಗುರು ರಾಯರಿಗೆ ಒಪ್ಪಿಸಿದರು. ರಾಯರ ಸನ್ನಿಧಿಯಲ್ಲಿದ್ದ ಹಿರಿಯರ್ಚಕರು ತನ್ಮಯಚಿತ್ತರಾಗಿ ಮೈಮರೆತು ನಿಂತುಬಿಟ್ಟರು. "ನಾವೂ ಮಂತ್ರಾಲಯದಲ್ಲಿ ನಾಡಹಬ್ಬ ಮಾಡುತ್ತಿದ್ದೇವೆ. ನೀವು ಕಾವ್ಯವಾಚನ ಮಾಡಿ ಈ ಸಂಜೆ. ನಾಳೆ ಬೆಳಗ್ಗೆ ಬೆಂಗಳೂರಿಗೆ ಹೋಗಬಹುದು" ಎಂದರು. ನಾನು "ರಾಯರ ಅನುಗ್ರಹವಾದರೆ ಬಂದು ಕಾವ್ಯವಾಚನ ಸೇವೆ ಸಲ್ಲಿಸುತ್ತೇವೆ; ಈ ದಿವಸವೇ ತೀರ್ಥ ಪ್ರಸಾದ ಸ್ವೀಕರಿಸಿ ಆದವಾನಿ ಬಸ್ಸಿನಲ್ಲಿ ಬೆಂಗಳೂರಿಗೆ ತುರ್ತಾಗಿ ಹೋಗಬೇಕಾಗಿದೆ" ಎಂದೆ. ಹಿರಿಯ ಅರ್ಚಕರು ಗುರುಗಳಿಗೆ ಮಂಗಳಾರತಿ ಮಾಡಿ ತೀರ್ಥ ಮಂತ್ರಾಕ್ಷತೆಯಿತ್ತು ಆಶೀರ್ವಾದ ಮಾಡಿದರು.

ತೀರ್ಥ ಪ್ರಸಾದ ಸ್ವೀಕರಿಸಿ ಮಧ್ಯಾಹ್ನದ ಬಸ್ ಹತ್ತಿದೆವು ಆದವಾನಿಗೆ. ಆದವಾನಿ ರೈಲ್ವೆನಿಲ್ದಾಣದ ಹತ್ತಿರ ನಮ್ಮ ಬಸ್ಸು ನಿಲ್ಲಬೇಕು. ರೈಲುಗೇಟು ಹಾಕಿದೆ. ಅದು ತೆಗೆಯದೆ ನಾವು ರೈಲ್ವೆ ನಿಲ್ದಾಣಕ್ಕೆ ಹೋಗುವಂತಿಲ್ಲ. ಈ ರೈಲು ಸಿಗದಿದ್ದರೆ, ರಾತ್ರಿಯೆಲ್ಲ ಆದವಾನಿ ಸ್ಟೇಷನ್ನಿನಲ್ಲಿ ಕೊಳೆಯಬೇಕಲ್ಲ! ಎಂದು ನಿಟ್ಟುಸಿರು ಬಿಡುತ್ತಾ ಕೈ ಕೈ ಹಿಸುಕಿಕೊಂಡೆವು. ಇದ್ದಕ್ಕಿದ್ದಹಾಗೆ ರೈಲುಗೇಟು ತೆಗೆಯಿತು. ಕೇಳಿದರೆ "ರೈಲುಗಾಡಿ ಬರುವುದು ಅರ್ಧ ಗಂಟೆ ಹೊತ್ತು" ಎಂದು ಉತ್ತರ ಬಂತು. ಆದವಾನಿ ಬಸ್ಸು ನಮ್ಮನ್ನು ರೈಲ್ವೆ ಸ್ಟೇಷನ್ನಿನಲ್ಲಿ ಇಳಿಸಿ ಊರೊಳಕ್ಕೆ ಹೋಯಿತು.

ನಮಗೆ ರೈಲುಗಾಡಿ ಸಿಕ್ಕಿತು. ಕಾತರ ತಪ್ಪಿತು. ಮೂರನೆ ದಿನ ಬೆಂಗಳೂರಿನಲ್ಲಿದ್ದೆವು. ಮಾತು ಕೊಟ್ಟಿದ್ದಂತೆ ಹರಪನಹಳ್ಳಿ ರಾಮರಾಯರ ಮಹಾ ನವಮಿ ವಿಜಯ ದಶಮಿ ಔತಣವನ್ನು ತಪ್ಪಿಸಿಕೊಳ್ಳಲಿಲ್ಲ.

ಅನಂತರ ನಾವು ಎರಡು ಮೂರುಸಲ ರಾಯಚೂರಿನ ನಾಡ ಹಬ್ಬಗಳಲ್ಲಿ ಭಾಗವಹಿಸಿದ್ದೇವೆ. ರಾಯಚೂರಿನ ಗಮಕ ತರಗತಿಯ ಪರೀಕ್ಷಕರಾಗಿ ಹೋಗಿದ್ದೆವು. ಗಮಕ ಪ್ರಚಾರಕ್ಕಾಗಿ ರಾಯಚೂರು ಜಿಲ್ಲೆಯನ್ನು ಸಂಚರಿಸುವ ಕಾಲದಲ್ಲೂ ರಾಯಚೂರಿಗೆ ಹೋಗುವ ಸಂದರ್ಭ ಒದಗಿತು. ಆ ಸಮಯಗಳಲ್ಲೆಲ್ಲಾ ಮಂತ್ರಾಲಯಕ್ಕೆ ಹೋಗಿ ಗುರುರಾಯ ರಾಘವೇಂದ್ರರ ಸೇವೆ ಸಲ್ಲಿಸಿದ್ದೇವೆ. ಹೀಗಾಗಿ ರಾಯಚೂರು ನಮ್ಮ ಗಮಕ ಜೀವನದಲ್ಲಿ ಚಿರಸ್ಥಾಯಿಯಾದ ಸ್ಥಾನ ಪಡೆದಿದೆ.

ಗೋ ಹಟ್ಟಿಯೇ ಮುಸಾಫರಖಾನೆಯಾಯಿತು

ಹೈದರಾಬಾದು ಸಂಸ್ಥಾನಕ್ಕೇ ಯಾದಗಿರಿ, ಶಹಾಪುರ, ಗುಲ್ಬರ್ಗಗಳು ಸೇರಿದ್ದ ಕಾಲದಲ್ಲಿ ನಾವು ಆ ಸ್ಥಳಗಳ ನಾಡಹಬ್ಬಗಳಲ್ಲಿ ಭಾಗವಹಿಸುವ ಅವಕಾಶಗಳು ವಿಪುಲವಾಗಿ ಒದಗಿದವು. ಈ ಪ್ರವಾಸಗಳಲ್ಲಿ ನೋವೂ, ನಲಿವುಗಳು ಎರಡೂ ಇದ್ದವು.

ಯಾದಗಿರಿಯ ನಾಡಹಬ್ಬ ಸಮಿತಿಯಿಂದ ಕರೆ ಬಂತು, ಒಪ್ಪಿಕೊಂಡೆವು. ಕಾಲಕ್ಕೆ ಸರಿಯಾಗಿ ನಾಡಹಬ್ಬದ ಕಾರ್ಯಕ್ರಮದಲ್ಲಿ ಭಾಗವಹಿಸಿದೆವು. ಹಿರಿಯರಾದ ತಿರುಮಲೆ ತಾತಾಚಾರ್ಯ ಶರ್ಮರೂ ನಮ್ಮೊಡನೆ ನಾಡಹಬ್ಬದಲ್ಲಿ ಪಾಲುಗೊಂಡರು. ಭಾರತ ಪಾರ್ಲಿಮೆಂಟ್ ಸದಸ್ಯರಾಗಿದ್ದ ಕೊಂಡಾ ನಾರಣಪ್ಪನವರ ಸ್ನೇಹವಾಯಿತು. ಅವರು ಸಾಯುವವರೆಗೂ ನಮಗೆ ಪರಮ ಮಿತ್ರರಾಗಿದ್ದರು. ಉದಾರಚರಿತರೂ ನಿಷ್ಕಪಟ ಪ್ರೇಮಿಗಳೂ ಆದ ಕೊಂಡಾ ನಾರಣಪ್ಪನಂಥ ಮನುಷ್ಯರು ಅಪರೂಪ.

ಯಾದಗಿರಿಯ ನಾಡಹಬ್ಬಕ್ಕೆ ನಾವು ಬಂದಿರುವುದು ಶಹಾಪುರದ ಹೋಳಿ ಶೇಷಗಿರಿರಾಯಕಟ್ಟಿಯವರಿಗೆ ತಿಳಿಯಿತು. ಅವರು ಆಕಡೆ ಒಳ್ಳೆಯ ವರ್ಚಸ್ವಿ ಕಾರ್ಯಕರ್ತರು ; ಲೇಖಕರು ಬೇರೆ. ಶಹಾಪುರದಿಂದ ಯಾದಗಿರಿಗೆ ಧಾವಿಸಿ ಬಂದರು. “ನೀವು ಬರಬೇಕು. ಶಕುಂತಲಾಬಾಯರ ಕಾವ್ಯವಾಚನವನ್ನು ಜನ ಅಪೇಕ್ಷಿಸು ತ್ತಿದ್ದಾರೆ” ಎಂದು ಬಿನ್ನಹ ಮಾಡಿಕೊಂಡರು. ಒಪ್ಪಿಕೊಂಡೆವು. ಸಕಾಲದಲ್ಲಿ ತಲುಪಿದೆವು. ಮುಸಾಫರ ಖಾನೆಗೆ ನಮ್ಮನ್ನು ಕರೆದುಕೊಂಡು ಹೋದರು. ನಿಜಾಮ ಸರ್ಕಾರದ ಅಧಿಕಾರಿಯೊಬ್ಬ ಮುಸಾಫರ ಖಾನೆಯ ಎಲ್ಲ ಕೊಠಡಿಗಳನ್ನು ಆಕ್ರಮಿಸಿದ್ದ. ನಮಗೆ ಇಳಿದುಕೊಳ್ಳಲು ಸ್ಥಳವಿಲ್ಲ. ಶೇಷಗಿರಿರಾಯರು ಧಸಕ್ಕನೆ ಇಳಿದು ಹೋದರು. ನೇರವಾಗಿ ತಮ್ಮ ಮನೆಗೆ ಕರೆದೊಯ್ದರು. ಮನೆ ತೀರಾ ಸಣ್ಣದು. ಮನೆಯಲ್ಲಿ ಎರಡು ಮೂರು ಮಕ್ಕಳು ಕಜ್ಜಿಯಿಂದ ಹಾಸಿಗೆ ಹಿಡಿದು ಮಲಗಿವೆ. ಶೇಷಗಿರಿರಾಯರ ಸೌಭಾಗ್ಯವತಿ ಮಕ್ಕಳನ್ನು ಸಂಬಾಳಿಸುವುದರಲ್ಲಿ ಸುಸ್ತಾಗಿದ್ದಾರೆ. ನಮ್ಮನ್ನು ನೋಡುತ್ತಲೆ ಚಡಪಡಿಸಹತ್ತಿದರು. ತಾಪತ್ರಯದಲ್ಲೆ ನಮಗೆ ಅವಲಕ್ಕಿ ಚಾ ತಂದಿತ್ತರು. ಸಂಜೆ ಕಾರ್ಯಕ್ರಮ ಪ್ರಾರಂಭವಾಯಿತು. ಮುಗಿಯುವ ಹೊತ್ತಿಗೆ ರಾತ್ರಿ ಹತ್ತು ಗಂಟೆ ರಾತ್ರಿಯೂಟಕ್ಕೆ ಮನೆಗೆ

ಕರೆದೊಯ್ದರು ಶೇಷಗಿರಿರಾವ್. ಅವರ ಸೌಭಾಗ್ಯವತಿ ತಮ್ಮ ತಾಪತ್ರಯದಲ್ಲಿ ಅಡಿಗೆ ಮಾಡಿ ಬಿಸಿ ಬಿಸಿ ಅನ್ನ ಸಾರು ಬಡಿಸಿ ಉಪಚರಿಸಿದರು. ಆ ತಾಯಿಗೆ ನಮ್ಮನ್ನು ಸರಿಯಾಗಿ ನೋಡಿಕೊಳ್ಳುತ್ತಲಿಲ್ಲವಲ್ಲ ಎಂಬ ನೋವು ಹೇಳತೀರದು. ಇನ್ನು ನಮಗೆ ಮಲಗುವ ಏರ್ಪಾಡಾಗಬೇಕಲ್ಲ! ಸ್ಥಳ ಸಂಕೋಚದಿಂದ ದಂಪತಿಗಳು ಒದ್ದಾಡುತ್ತಿದ್ದಾರೆ. ಸಂಸಾರ ನಿರ್ವಹಿಸಿ ಜನದ ಕಷ್ಟ ಸುಖಗಳನ್ನು ಅರಿತುಕೊಂಡಿದ್ದ ಶಕುಂತಲಾಬಾಯಿ ಈ ದಂಪತಿಗಳ ಒದ್ದಾಟವನ್ನು ಮನಗಂಡರು. ಅವರ ಕಣ್ಣು ದನದ ಕೊಟ್ಟಿಗೆಯ ಕಡೆ ಹಾಯಿತು. "ಶೇಷಗಿರಿರಾವ್, ಸ್ವಲ್ಪ ಲಾಂಟ್ರೀನ್ ಕೊಡಿ" ಎಂದರು. ಸೀದ ದನದ ಕೊಟ್ಟಿಗೆಗೆ ಹೋದರು. ಅಲ್ಲಿ ವಿಸ್ತಾರವಾದ ಸ್ಥಳವಿತ್ತು. ಒರಚ್ಚಾಗಿ ಒಂದು ಕಡೆ ಒಂದು ಗೋವನ್ನು ಕಟ್ಟಿದ್ದರು. ಶಕುಂತಲಾಬಾಯಿ ನೇರವಾಗಿ ಆ ಸ್ಥಳವನ್ನು ಬಿಟ್ಟು ಕಸಬಳೆದು ಮಿಕ್ಕ ಸ್ಥಳವನ್ನು ಸ್ವಚ್ಛಮಾಡಿದರು. "ಸಂಕೋಚ ಪಟ್ಟುಕೊಳ್ಳಬೇಡಿ. ನಾವೂ ಸಂಸಾರವಂದಿಗರೇ!" ಎಂದು ದಂಪತಿಗಳನ್ನು ಸಮಾಧಾನ ಪಡಿಸಿದರು. ಸೊಳ್ಳೆಗಳ ಕಾಟ ಬಹು ಹಿತವಾಗಿತ್ತು! ಗಂಜಳ ಮೂಗಿಗೆ ಸುವಾಸನೆ ಬೀರುತ್ತಿತ್ತು! ಆ ರಾತ್ರಿ ನಾವು ದನದ ಕೊಟ್ಟಿಗೆಯಲ್ಲಿ ಮಲಗಿದ್ದೆವು.

ನಮ್ಮ ಜೀವನ ಸ್ಮೃತಿಯಲ್ಲಿ ಶಹಾಪುರದ ಅನುಭವ ಚಿರಂತನವಾಗಿದೆ. ಸಮಾಜ ಸೇವಕ ಕನ್ನಡ ಕಾರ್ಯಕರ್ತ ಹೋಳಿ ಶೇಷಗಿರಿರಾವ್ ಕಟ್ಟಿ ನಮ್ಮನ್ನಗಲಿ ದೈವಾಧೀನರಾಗಿದ್ದಾರೆ. ಯಾದಗಿರಿ ನಾಡಹಬ್ಬವನ್ನು ನೆನೆಸಿಕೊಂಡಾಗಲೆಲ್ಲ ಶೇಷಗಿರಿರಾವ್ ದಂಪತಿಗಳು ನಮಗಾಗಿ ಒದ್ದಾಡಿದ ಚಿತ್ರ ಕಣ್ಣುಮುಂದೆ ಬಂದು ನಿಲ್ಲುತ್ತದೆ. ಅವರು ನಮಗಾಗಿ ಪಟ್ಟಪಾಡು ನೆನೆದು ಸಂಸಾರ ಸಾಗರದ ಕಷ್ಟ ಸುಖಗಳಲ್ಲಿ ಎದ್ದು ಮುಳುಗುತ್ತಿರುವ ನಮ್ಮ ಮನ ಮರುಗುತ್ತದೆ.

ಯಾದಗಿರಿಯಲ್ಲಿ ವಿಜಯ ದಶಮಿ ಮುಗಿಸಿಕೊಂಡು ಆ ಮಧ್ಯಾಹ್ನವೇ ರೈಲಿನಲ್ಲಿ ಹೋಗಿ ಮಂತ್ರಾಲಯ ರೋಡಿನಲ್ಲಿ ಇಳಿದೆವು. ನಮ್ಮ ಪುಣ್ಯ, ಮಂತ್ರಾಲಯಕ್ಕೆ ಹೋಗುವ ಬಸ್ಸು ಸಿದ್ಧವಾಗಿ ನಿಂತಿತ್ತು. ಬಸ್ ಹತ್ತಿದೆವು. ಸಂಜೆಗೆಲ್ಲ ಗುರುರಾಯರ ಸನ್ನಿಧಿಯಲ್ಲಿದ್ದೆವು.

ಮಾರನೆಯ ದಿವಸ ರಾಯರ ಬೃಂದಾವನ ಮುಂದೆ ಕುಮಾರವ್ಯಾಸ ಭಾರತ ವಾಚನ ಸೇವೆ ಸಲ್ಲಿಸಲು ನಮಗೆ ಬೇಕಾದ ಏರ್ಪಾಡಾಯಿತು. ಪಂಚಮುಖಿ ದಾಸರು ತಂಬೂರಿಯನ್ನು ಒದಗಿಸಿಕೊಟ್ಟರು. ಡಾ|| ಆರ್. ಎಸ್. ಪಂಚಮುಖಿ ಅಧ್ಯಕ್ಷತೆ ವಹಿಸಿದ್ದರು. ಶಕುಂತಲಾಬಾಯಿ ಕುಮಾರವ್ಯಾಸ ಭಾರತದಿಂದ "ದೂರ್ವಾಸಾತಿಥ್ಯ" ಭಾಗವನ್ನು ವಾಚನ ಮಾಡಿದರು. ಭಕ್ತಾದಿಗಳು ಕೇಳಿ ಸಂತೋಷಪಟ್ಟರು. ಆದರೆ ಆದಿವಸ ಕಾವ್ಯವಾಚನ ಮಾಡುವಾಗ ಶಕುಂತಲಾಬಾಯಿ ಜ್ವರದಿಂದ ನರಳುತ್ತಿದ್ದರು.

ಪ್ರಾಚೀನ ಕೋಪಣ ನಗರದಲ್ಲಿ

ಹೈದರಾಬಾದ್ ಕರ್ಣಾಟಕ ಮೈಸೂರು ರಾಜ್ಯಕ್ಕೆ ಸೇರುವುದಕ್ಕೆ ಇನ್ನೂ ಎರಡು ತಿಂಗಳ ಅವಧಿಯಿತ್ತು ಎನ್ನುವಾಗ 1956ನೆಯ ಸೆಪ್ಟಂಬರ್ ಕಡೆಯವಾರದಲ್ಲಿ ನಾವು ಕೊಪ್ಪಳದ ಗಣೇಶೋತ್ಸವದಲ್ಲಿ ಭಾಗವಹಿಸಿದೆವು. ಇದಕ್ಕೆ ಕಾರಣ, ಆಗ ಬೆಂಗಳೂರು ಆಕಾಶವಾಣಿಯಲ್ಲಿದ್ದ ರಾಘವೇಂದ್ರ ಇಟಗಿಯವರು. ಅವರು "ವಸುಂಧರಾ ಗೀತ" ಎಂಬ ಕವನಸಂಗ್ರಹ ಪ್ರಕಟಿಸಿ ಹೈದರಾಬಾದು ಕಡೆ ಪ್ರಸಿದ್ಧರಾಗಿದ್ದರು. ನನಗೆ ಮಿತ್ರರು. ಅವರು ಕೊಪ್ಪಳದ ಹಿರಿಯರೂ ಆ ಕಡೆಯಲ್ಲಿ ಹೆಸರಾದ ಕನ್ನಡ ಕಾರ್ಯಕರ್ತರೂ ಆದ ನಾರಾಯಣ ಶಾಸ್ತ್ರಿಗಳಿಗೆ ಪತ್ರ ಬರೆದು ನಮ್ಮ ಕಾರ್ಯಕ್ರಮವನ್ನು ಗೊತ್ತು ಪಡಿಸಿದರು.

ನಮ್ಮನ್ನು ಉಡುಪಿ ಆಚಾರ್ಯರೆಂದು ಜನಪ್ರಿಯರಾದ ಡಾ|| ನಾರಾಯಣಾಚಾರ್ಯರ ಮನೆಯಲ್ಲಿ ಇಳಿಸಿತ್ತು. ಅವರು ವೃತ್ತಿಯಲ್ಲಿ ವೈದ್ಯರಾದರೂ ಸಾಹಿತ್ಯಾಭಿಮಾನಿಗಳು. ಅವರ ಮನೆಯಲ್ಲೂ ಕುಮಾರವ್ಯಾಸ ಭಾರತವಾಚನದ ಏರ್ಪಾಡಾಗಿತ್ತು. ಅದೂ ಚೆನ್ನಾಗಿಯೇ ನಡೆಯಿತು. ಕೊಪ್ಪಳದಲ್ಲಿ ಇದ್ದಷ್ಟು ದಿವಸಗಳೂ ಶಕುಂತಲಾಬಾಯಿಗೆ ಮೈ ಅಸ್ವಸ್ಥ. ಉಡುಪಿ ಡಾಕ್ಟರೇ ಶಕುಂತಲಾಬಾಯಿಗೆ ಔಷಧೋಪಚಾರ ನಡೆಸಿದರು. ಆಕೆಯನ್ನು ತಮ್ಮ ಮಗಳಂತೆ ಆದರಿಸಿದರು.

ನೃಪತುಂಗನ ಕಾಲದಲ್ಲಿಯೇ ಆತನ 'ಕವಿರಾಜ ಮಾರ್ಗ'ದಲ್ಲಿ ಉಲ್ಲೇಖಗೊಂಡು ಪ್ರಸಿದ್ಧವಾಗಿದ್ದ **"ವಿದಿತ ಮಹಾ ಕೊಪಣ ನಗರ"**ವೇ ಈಗಿನ ಕೊಪ್ಪಳ. ತಿರುಳ್ಗನ್ನಡದಾಗರವಾದ ಕೋಪಣ ನಗರದಲ್ಲಿ ತಿರುಗಾಡೋಣವೆಂದು ನನಗೆ ಬಲವಾದ ಆಸೆ. ಆದರೆ ಮಹರಾಯಿತಿ ಶಕುಂತಲಾಬಾಯಿ ತನ್ನ ದೇಹಾಸ್ವಸ್ಥತೆಯಿಂದ "ಒಲ್ಲೆ" ನೆಂದರು. ಆಕೆಯ ಆರೋಗ್ಯ ಬಹು ಸೂಕ್ಷ್ಮ. "ಮಂಗಳಾರತಿ ತೆಗೆದುಕೊಂಡರೆ ಉಷ್ಣ, ತೀರ್ಥ ತೆಗೆದುಕೊಂಡರೆ ಶೀತ" ಎಂದ ಹಾಗೆ. ಒಂದು ತುತ್ತು ಅನ್ನ ಹೆಚ್ಚಾದರೆ ಹೊಟ್ಟೆ ಭಾರವಾಗುತ್ತದೆ. ಕಾವ್ಯವಾಚನ ಕೆಡುತ್ತದೆ. ಒಂದು ಘಳಿಗೆ ನಿದ್ದೆ ಹೆಚ್ಚುಕಡಮೆಯಾದರೆ ದೇಹಾಲಸ್ಯವಾಗುತ್ತದೆ. ಕಾವ್ಯವಾಚನ ಚೆನ್ನಾಗುವುದಿಲ್ಲ. ಹೆಚ್ಚು ಓಡಾಟವಾದರೆ ಕಾವ್ಯವಾಚನ ಅಧ್ವಾನ. ಆದುದರಿಂದ ಆಕೆ ಪರಸ್ಥಳದಲ್ಲಿ ಬಿಡಾರ ಸೇರಿದರೆ ಮತ್ತೆ ಅಲ್ಲಿಂದ ಕದಲುವುದು ಆ ಸ್ಥಳ ಬಿಡುವಾಗಲೆ. ಆದರೆ ನಾನು ಶಕುಂತಲಾಬಾಯಿಗೆ ತದ್ವಿರುದ್ಧ, ಪ್ರೇಕ್ಷಣೀಯ ಸ್ಥಳ ನೋಡಬೇಕೆಂದರೆ ನಿದ್ದೆ ಕೆಡುತ್ತೇನೆ, ಊಟ ಬಿಡುತ್ತೇನೆ, ಮೈಲುಗಳ ದೂರ ನಡೆಯುತ್ತೇನೆ. ಆರೋಗ್ಯ ಸ್ಥಿತಿಯನ್ನು ಲೆಕ್ಕಿಸುವುದೇ ಇಲ್ಲ. ಸರಿ, ನಾನೊಬ್ಬನೇ ಕೊಪ್ಪಳ ನಗರ ಪ್ರದಕ್ಷಿಣೆ ಹೊರಟೆ. ಕೊಪ್ಪಳದಲ್ಲಿರುವ ಪುರಾತನ ಜೈನ ಬಸದಿಗಳನ್ನು-ವೀರಶೈವಗವಿ ಮಠವನ್ನೂ ಸಂದರ್ಶಿಸಿದೆ. ಗವಿಗಳಲ್ಲಿ ಇಣಕಿದೆ. ಗುಡ್ಡಹತ್ತಿ ಅಶೋಕನ ಶಿಲಾ ಶಾಸನಗಳನ್ನು ನೋಡಿದೆ.

ಕೊಪ್ಪಳದ ಗಣೇಶೋತ್ಸವ ಕಾರ್ಯಕ್ರಮವನ್ನು ಮುಗಿಸಿಕೊಂಡು ಮುನಿರಾಬಾದಿಗೆ ಮಧ್ಯಾಹ್ನದ ರೈಲುಗಾಡಿ ಹಿಡಿದೆವು. ನಾರಾಯಣ ಶಾಸ್ತ್ರಿಗಳು, ತಮ್ಮ ತಮ್ಮನನ್ನು ನಮ್ಮ ಜೊತೆಗೆ ಕಳಿಸಿದ್ದರು ತುಂಗಭದ್ರಾ ಅಣೆಕಟ್ಟು ತೋರಿಸುವುದಕ್ಕೆ. ಮುನಿರಾಬಾದಿನಲ್ಲಿ ಊಟ ಉಪಚಾರವಾಯಿತು. ಜೀಪು ಸಿದ್ಧವಾಗಿತ್ತು. ಪೂರ್ವದ ಗುಡ್ಡದಿಂದ ಪಶ್ಚಿಮದ ಗುಡ್ಡದವರೆಗೆ ಸೇತುವೆಯ ಮೇಲೇ ನಡೆದೆವು. ಉತ್ತರದ ಕಡೆ ಕಣ್ಣು ನೋಟ ಓಡುವವರೆಗೂ ಅಗಾಧ ಜಲಾಶಯ. ದಕ್ಷಿಣದಲ್ಲಾದರೋ ಕಣ್ಣಿಗೆ ಹಬ್ಬದೂಟವನ್ನೀಡುವಂಥ ಜಪಾನು ಮಾದರಿಯಲ್ಲಿ ಸೃಷ್ಟಿಸಿರುವ ಸುಂದರ ವನ. ವೈಕುಂಠ–ಕೈಲಾಸ ಬಂಗಲೆಗಳನ್ನು ಹತ್ತಿ ಇಳಿದೆವು. ನಮ್ಮ ಜೀಪು ತುಂಗಭದ್ರ ಅಣೆಕಟ್ಟಿನಿಂದ ಮತ್ತೆ ಮುನಿರಾಬಾದಿಗೆ ಓಡಿತು. ಮುನಿರಾಬಾದಿಗೆ ಬೆಂಗಳೂರು ಕಡೆಯಿಂದ ರೈಲು ಮಧ್ಯಾಹ್ನ 3 ಗಂಟೆಗೆ ಬಂದಿತ್ತು. ಅದನ್ನು ಹತ್ತಿ ಸಂಜೆ 5 ಗಂಟೆಗೆ ಗದಗದಲ್ಲಿ ಇಳಿದೆವು.

ಹುಯಿಲಗೋಳ ನಾರಾಯಣರಾಯರ ಕೃಪಾಛತ್ರದಲ್ಲಿ

ಶಕುಂತಲಾಬಾಯಿಗೆ ಕೊಪ್ಪಳದಿಂದ ಗದಗಿಗೆ ಹೋಗಿ ಕುಮಾರವ್ಯಾಸನ ಆರಾಧ್ಯದೈವ ವೀರನಾರಾಯಣ ಸ್ವಾಮಿಯ ಸನ್ನಿಧಿಯಲ್ಲಿ ನಾರಣಪ್ಪನ ಭಾರತವಾಚನ ಮಾಡಬೇಕೆಂದು ಅಪೇಕ್ಷೆಯಾಗಿತ್ತು. ಕೊಪ್ಪಳಕ್ಕೆ ಹೋದ ದಿನವೇ ನಾನು "ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು" ಕರ್ಣಾಟಕ ರಾಷ್ಟ್ರಗೀತೆ ಕೊಟ್ಟ ಹುಯಿಲಗೋಳ ನಾರಾಯಣರಾಯರಿಗೆ ಒಂದು ಪತ್ರ ಬರೆದೆ. ಅವರು ನನಗೆ ಅಪರಿಚಿತರು; ಶಕುಂತಲಾಬಾಯಿಯ ಗುರುಗಳಾದ ಬಿಂದೂರಾಯರನ್ನು ಪತ್ರದಲ್ಲಿ ಸ್ಮರಿಸಿ, ಅವರ ಶಿಷ್ಯಳು ಶಕುಂತಲಾಬಾಯಿ; ವೀರನಾರಾಯಣಸ್ವಾಮಿಯ ಪವಿತ್ರ ಸನ್ನಿಧಿಯಲ್ಲಿ ಕುಮಾರವ್ಯಾಸ ಭಾರತವನ್ನು ಓದಬೇಕೆಂದು ಆಕೆಗೆ ಕಡು ಅಪೇಕ್ಷೆ; ಹಿರಿಯರು ಅಗ ಮಾಡಿಸಿಕೊಡಬೇಕು; ಎಂದು ಪತ್ರ ಬರೆದಿದ್ದೆ. ಮರು ಟಪಾಲಿನಲ್ಲಿ ಅವರಿಂದ ಪತ್ರ ಬಂತು. ಪತ್ರದಲ್ಲಿ ಒಂದೇ ಒಂದು ಪದ **"ಸುಸ್ವಾಗತ"**. "ಹುಯಿಲಗೋಳ ನಾರಾಯಣ ರಾವ್" ಅಷ್ಟೆ.

ನಾವು ರೈಲುಗಾಡಿಯಿಂದ ಇಳಿದ ಕೆಲವೇ ಕ್ಷಣಗಳಲ್ಲಿ ಹುಯಿಲಗೋಳರು ನಮ್ಮನ್ನು ಎದುರುಗೊಂಡರು. ನಾವು ಹಿರಿಯರ ಪಾದಗಳಿಗೆ ತಲೆ ಸೋಕಿಸಿ ನಮಸ್ಕಾರ ಮಾಡಿದೆವು.

ಹುಯಿಲಗೋಳ ನಾರಾಯಣರಾಯರು ಮಾರನೆಯ ದಿವಸ ಜನವನ್ನು ಕಲೆಹಾಕಿ ವೀರನಾರಾಯಣಸ್ವಾಮಿ ಸನ್ನಿಧಿಯಲ್ಲಿ ಶಕುಂತಲಾಬಾಯಿಯಿಂದ ಕುಮಾರವ್ಯಾಸ ಭಾರತವಾಚನ ಏರ್ಪಡಿಸಿದರು. ಗಮಕ ವಿದುಷಿ ಕುಮಾರವ್ಯಾಸ ಕಂಬದ ಮುಂದೆ ಕುಳಿತು "ಯಕ್ಷ ಪ್ರಶ್ನೆ" ಕಥಾಭಾಗ ವಾಚನ ಮಾಡಿದರು.

ಹುಯಿಲಗೋಳ ನಾರಾಯಣರಾಯರು ಆನಂದಪರವಶರಾಗಿ ಹೋದರು. ಅಂದಿನಿಂದ ಮುಂದೆ, ಹುಯಿಲಗೋಳ ನಾರಾಯಣರಾಯರು ನಮ್ಮ ಆತ್ಮೀಯ ಬಳಗದಲ್ಲಿ ಒಬ್ಬ ಹಿರಿಯರಂತೆ ನಡೆದುಕೊಂಡರು. ಆಕಾಶವಾಣಿಯಲ್ಲಿ ಶಕುಂತಲಾಬಾಯಿಯ ಕಾರ್ಯಕ್ರಮವಿದ್ದಾಗ ತಪ್ಪದೆ ಕೇಳುತ್ತಿದ್ದರು. ಕೇಳಿ ಕೂಡಲೇ ಮೆಚ್ಚಿಕೆಯ ಪತ್ರ ಬರೆಯುತ್ತಿದ್ದರು. ಬೆಂಗಳೂರಿಗೆ ಬಂದಾಗ ನಮ್ಮ ಮನೆಯಲ್ಲಿ ಇಳಿದುಕೊಳ್ಳುತ್ತಿದ್ದರು. ಅವರಿಗೆ ನಾವು "ಮಕ್ಕಳ ಮಂಟಪ"ದ ಗಮಕ ತರಗತಿಯ ಆಶ್ರಯದಲ್ಲಿ ಒಂದು ಸತ್ಕಾರಕೂಟ ಏರ್ಪಡಿಸಿದ್ದೆವು. ನಮ್ಮ ಮನೆಯಲ್ಲಿ ನಡೆಯುತ್ತಿದ್ದ ಸತ್ಕಾರಕೂಟಗಳು ಶ್ರೀಮಂತಿಕೆಯಿಂದ ದೂರವಾಗಿ ಸರಳ ಸುಂದರವಾಗಿರುತ್ತಿದ್ದವು. ಹೃದಯ ಶ್ರೀಮಂತಿಕೆಗೆ ಕೊರತೆಯಿರುತ್ತಲೇ ಇರಲಿಲ್ಲ. ನಾವು ಹಿರಿಯರಿಗೆ ಕೊಟ್ಟ ಸಂತೋಷ ಎಲ್ಲೆ ಮೀರಿತ್ತು. ಅಲ್ಪನನ್ನು ಅನಂತಮಾಡಿ ಕೊಂಡಾಡಿದರು.

ಹುಯಿಲಗೋಳ ನಾರಾಯಣರಾಯರನ್ನು ನೆನೆದಾಗಲೆಲ್ಲ ನನಗೆ 1961 ರಲ್ಲಿ ಮಹಾ ವಿದ್ವಾಂಸ ಕೆ. ಜಿ. ಕುಂದಣಗಾರರ ಅಧ್ಯಕ್ಷತೆಯಲ್ಲಿ ನಡೆದ ಗದಗಿನ 43ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ನೆನಪು ಮರುಕಳಿಸುತ್ತದೆ. ಆ ಸಮಯದಲ್ಲಿ ನಾರಾಯಣರಾಯರು ಗಮಕಿಗಳನ್ನೂ ತಮ್ಮ ಮನೆಯ ಅತಿಥಿಗಳನ್ನಾಗಿ ಸ್ವಾಗತಿಸಿ ಸತ್ಕರಿಸಿದ ಸಂದರ್ಭದ ಜ್ಞಾಪಕವಾಗುತ್ತದೆ. ಏನು ಔದಾರ್ಯ ಅವರದು !

ಸಮ್ಮೇಳನ ಸಮಾರಂಭಗಳ ಅನುಭವ

ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಭಾಗವಹಿಸಿ ಕಾವ್ಯವಾಚನ ಮಾಡುವ ಸದವಕಾಶ ಶಕುಂತಲಾಬಾಯಿಗೆ 1952ರಲ್ಲಿ ನಡೆದ 35ನೇ ಬೇಲೂರು ಸಾಹಿತ್ಯ ಸಮ್ಮೇಳನದಿಂದ ಪ್ರಾರಂಭವಾಯಿತು. ಮೈಸೂರು ರಾಜ್ಯದ ಮುಖ್ಯಮಂತ್ರಿಯಾಗಿದ್ದ ಸಾಹಿತ್ಯಾಭಿಮಾನಿ ಕೆಂಗಲ್ ಹನುಮಂತಯ್ಯ ಸಮಾರಂಭದ ಉದ್ಘಾಟಕರು. ಎನ್. ಸಿ. ನಂದೀಮಠ ಅವರು ಸಮ್ಮೇಳನಾಧ್ಯಕ್ಷರು. ಕೃಷ್ಣಗಿರಿ ಕೃಷ್ಣರಾಯರು ಗಮಕ ಗೋಷ್ಠಿಯ ಅಧ್ಯಕ್ಷರು. ಶಕುಂತಲಾಬಾಯಿ ಗೋಷ್ಠಿಯಲ್ಲಿ "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನ ಮಾಡಿದರು. ಊಟ ಉಪಚಾರ, ವಸತಿ ಸೌಕರ್ಯಗಳ ವಿಷಯದಲ್ಲಿ ಅತೃಪ್ತಿಯಿರಲಿಲ್ಲ. ಕೇರಿಕೇರಿಗಳ ಸಾಲುಮನೆಗಳನ್ನೇ ಹಿಡಿದಿದ್ದರು ಅತಿಥಿಗಳ ಬಿಡಾರಕ್ಕೆ.

ಮೈಸೂರಿನಲ್ಲಿ 1955ರಲ್ಲಿ ಡಾ|| ಶಿವರಾಮಕಾರಂತರ ಅಧ್ಯಕ್ಷತೆಯಲ್ಲಿ ಸಾಹಿತ್ಯ ಸಮ್ಮೇಳನ ಮೈಸೂರು ರಾಜ್ಯದ ರಾಜಧಾನಿಯ ಶ್ರೀಮಂತಿಕೆಗೆ ತಕ್ಕಂತೆ ನೇರ್ಪಿನಿಂದ ನಡೆಯಿತು. ಮೈಸೂರು ರಾಜ್ಯದ ರಾಜ್ಯಪಾಲರಾಗಿದ್ದ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಅವರು ಉದ್ಘಾಟನೆ ನಡೆಸಿಕೊಟ್ಟರು.

ಶಕುಂತಲಾಬಾಯಿ "ಶ್ರೀ ರಾಮಾಯಣ ದರ್ಶನಂ" ಕಾವ್ಯದ "ಓಂ ನಮೋ ಸಚ್ಚಿದಾನಂದನೆ ನಮೋ" ಪ್ರಾರ್ಥನೆಯಿಂದ ಸಮ್ಮೇಳನವನ್ನು ಪ್ರಾರಂಭಿಸಿದರು.

ಎರಡನೆಯ ದಿವಸ "ಶ್ರೀ ರಾಮಾಯಣ ದರ್ಶನಂ" ಕಾವ್ಯದ "ಕವಿ ಕೃತು ದರ್ಶನಂ" ಸಂಚಿಕೆಯ ಕೆಲವು ಭಾಗಗಳನ್ನು ವಾಚಿಸಿದರು.

ಕಾಲೇಜಿನ ವಿದ್ಯಾರ್ಥಿನಿಲಯದಲ್ಲಿ ಅತಿಥಿಗಳಿಗೆ ಬಿಡಾರ. ನಾವಿದ್ದ ಪಕ್ಕದಲ್ಲಿ ಶಿವರಾಮ ಕಾರಂತರಿಗೆ ಬಿಡಾರ. ಶ್ರೀಮತಿ ಲೀಲಾಕಾರಂತರು ಅತಿಥಿಗಳನ್ನು ಮಾತಾಡಿಸಿಕೊಂಡು ಸ್ನೇಹಪರರಾಗಿ ನಡೆದುಕೊಂಡ ನಡವಳಿಕೆ ಈಗಲೂ ಕಣ್ಣಿಗೆ ಕಟ್ಟಿದಂತಿದೆ.

1960ರಲ್ಲಿ 42ನೆಯ ಸಾಹಿತ್ಯ ಸಮ್ಮೇಳನ ಡಾ|| ಅ. ನ. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಮಣಿಪಾಲದಲ್ಲಿ ನಡೆಯಿತು. ಶಕುಂತಲಾಬಾಯಿ ಈ ಸಮ್ಮೇಳನದಲ್ಲಿ ರಾಘವಾಂಕನ "ಹರಿಶ್ಚಂದ್ರ ಕಾವ್ಯ" ದಿಂದ ರಾಜ್ಯ ಸಮರ್ಪಣ ಭಾಗ ವಾಚನ ಮಾಡಿದರು.

ಮಣಿಪಾಲ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸುವ ಅತಿಥಿಗಳಿಗೆಲ್ಲ ಮಣಿಪಾಲ್ ಮೆಡಿಕಲ್ ಕಾಲೇಜಿನಲ್ಲಿ ಊಟ ವಸತಿಯ ಏರ್ಪಾಡು ಮಾಡಿತ್ತು. ದ. ರಾ. ಬೇಂದ್ರೆ ದಂಪತಿಗಳ ಕೊಠಡಿ. ಆ ಪಕ್ಕದಲ್ಲಿ ನಮ್ಮ ಕೊಠಡಿ. ನಮ್ಮ ಕೊಠಡಿಯ ಇನ್ನೊಂದು ಬಾಜಿಗೆ ಕೃಷ್ಣಮೂರ್ತಿ ಪುರಾಣಿಕ ದಂಪತಿಗಳ ಕೊಠಡಿ. ಅತಿಥಿಗಳ ಕೊಠಡಿಗಳೆಲ್ಲ ಮಂಚಗಳಿಂದ, ಮೇಜುಕುರ್ಚಿಗಳಿಂದ ಸಜ್ಜಾಗಿದ್ದವು. ಸ್ನಾನ, ಉಪಹಾರ, ಊಟ ಎಲ್ಲ ಮೆಡಿಕಲ್ ಕಾಲೇಜಿನಲ್ಲಿ ಬಹಳ ವಿಚಕ್ಷಣೆಯಿಂದ ನಡೆಯುತ್ತಿತ್ತು. ಶ್ರೀಮಂತಿಕೆಯ ಏರ್ಪಾಡು. ಮೈಸೂರು ಸಾಹಿತ್ಯ ಸಮ್ಮೇಳನವನ್ನು ಮರೆಸಲಿಲ್ಲ.

ದ. ರಾ. ಬೇಂದ್ರೆಯವರು ಶಕುಂತಲಾಬಾಯಿಯನ್ನು ಕರೆದು "ನನ್ನ ಸೌಭಾಗ್ಯವತಿಯನ್ನು ನಿಮ್ಮ ಕೈಗೆ ಒಪ್ಪಿಸಿದ್ದೇನೆ. ಅವರನ್ನು ನೋಡಿಕೊಳ್ಳುವುದು ನಿಮ್ಮ ಭಾರ. ಸಮ್ಮೇಳನ ನಡೆದಷ್ಟು ದಿವಸಗಳೂ ನನ್ನಾಕೆಯ ರಕ್ಷಣೆ ನಿಮಗೆ ಸೇರಿದ್ದು" ಎಂದರು. ಶಕುಂತಲಾಬಾಯಿ ಸಂತೋಷದಿಂದ "ಲಕ್ಷ್ಮೀಬಾಯಿ ನನಗೆ ತಾಯಿ ಸಮಾನ. ಅವರನ್ನು ನೋಡಿಕೊಳ್ಳುವುದು ನನ್ನ ಭಾರ." ಎಂದು ಜವಾಬ್ದಾರಿ ವಹಿಸಿಕೊಂಡರು. ಕೃಷ್ಣಮೂರ್ತಿ ಪುರಾಣಿಕರೂ ಅಷ್ಟೆ ; ತಮ್ಮ ಸೌಭಾಗ್ಯವತಿ ಗಂಗಾತಾಯಿಯನ್ನು ಶಕುಂತಲಾಬಾಯಿಯ ಸಂರಕ್ಷಣೆಗೆ ಒಪ್ಪಿಸಿದರು.

ಮೈಸೂರು ಸಮ್ಮೇಳನದಂತೆ ಪ್ರವಾಸದ ವೆಚ್ಚ, ವಾಹನ ಸೌಕರ್ಯದ ಖರ್ಚು ಎಲ್ಲಾ ವ್ಯವಸ್ಥಿತವಾಗಿ ಲೆಕ್ಕ ಹಾಕಿ ಸ್ವಾಗತ ಸಮಿತಿಯ ಸ್ವಯಂಸೇವಕರು ನಾವು ಇದ್ದ ಕಡೆಯೇ ಬಂದು, ಹಣದ ಲಕೋಟೆ ಕೊಟ್ಟು, ರಶೀದಿ ಪಡೆದು ಹೋದರು. ಸ್ವಲ್ಪ ಹೆಚ್ಚೇ ಹಣ ಪಾವತಿ ಮಾಡಿತ್ತು ಸ್ವಾಗತ ಸಮಿತಿ.

ಮಣಿಪಾಲ ಸಾಹಿತ್ಯಸಮ್ಮೇಳನಕ್ಕೆ ತದ್ವಿರುದ್ಧವಾಗಿತ್ತು. 1961ರಲ್ಲಿನಡೆದ 43ನೇ ಗದಗಿನ ಸಾಹಿತ್ಯ ಸಮ್ಮೇಳನ. ಡಿಸೆಂಬರ್ ಕಡೆಯವಾರದಲ್ಲಿ ಕೊರೆಯುವ ಚಳಿಗಾಲದಲ್ಲಿ ಸಮಾವೇಶವಾಗಿತ್ತು. ನಾವು ಸಮ್ಮೇಳನಕ್ಕೆ ಹಿಂದಿನ ದಿವಸವೆ ಸಂಜೆ ಗದಗನ್ನು ತಲುಪಿದೆವು.

ನಾವು, ಅಖಿಲ ಕರ್ಣಾಟಕ ಮಕ್ಕಳಕೂಟದ ಕೆ. ಟಿ. ಬನಶಂಕರಮ್ಮ, ನನ್ನ ಕಾದಂಬರಿ ಸಾಹಿತಿ ಮಿತ್ರ ಕೊರಟಿ ಶ್ರೀನಿವಾಸರಾವ್ ಮುಖಾಮುಖಿ ಭೇಟಿಯಾಗುತ್ತಲೇ ಒಂದೇ ಕಡೆ ಇರುವುದೆಂದು ರೈಲ್ವೇ ನಿಲ್ದಾಣದಲ್ಲೇ ನಿರ್ಧಾರಕ್ಕೆ ಬಂದೆವು. ನಾವು ಬಿಡಾರ ತಲುಪಿದ ಕೂಡಲೇ ಹದಿನೈದು ಇಪ್ಪತ್ತು ಮಂದಿಗೆಂದು ಒಂದು ಕೋಣೆ ಕೊಟ್ಟರು. ಆ ದಿವಸ ಕಾಫಿ ತಿಂಡಿ ಊಟದ ಹೊಣೆ ನಮ್ಮದೆ. ರಾತ್ರಿ ಹತ್ತು ಗಂಟೆಯಿರಬಹುದು. ನಾವೆಲ್ಲ ಹಾಸಿಗೆ ಬಿಡಿಸಿ ಕಾಲುಚಾಚಿ ನಿದ್ದೆಗೆ ಸಿದ್ಧರಾಗುತ್ತಿದ್ದೇವೆ. ಸ್ವಾಗತ ಸಮಿತಿಯ ಹಿರಿಯರೊಬ್ಬರು ನಮ್ಮ ಕೋಣೆಗೆ ಬಂದರು. "ನೀವಾರು? ಯಾರು ನಿಮ್ಮನ್ನು ಈ ಕೋಣೆಯಲ್ಲಿ ಇಳಿಸಿದವರು? ಈ ಕೋಣೆಯನ್ನು ಕೂಡಲೆ ಖಾಲಿಮಾಡಿ" ಎಂದು ನಿರ್ದಾಕ್ಷಿಣ್ಯವಾಗಿ ಜಬರಿದರು ಕೊರಟಿಯವರು ಬಹು ವಿನಯದಿಂದ "ನಾವು ಆಹ್ವಾನಿತ ಸದಸ್ಯರು. ಈ ದಂಪತಿಗಳು ಸಮ್ಮೇಳನದ ಕಾರ್ಯಕ್ರಮದಲ್ಲಿ ಭಾಗವಹಿಸುವ ಸ್ವಾಗತ ಸಮಿತಿಯ ಅತಿಥಿಗಳು" ಎಂದು ತಮ್ಮ ಮನೋಭಿಪ್ರಾಯಸ್ಪಷ್ಟ ಪಡಿಸಿದರು. "ಇದು ನಿಮಗಲ್ಲ, ಕೂಡಲೇ ಖಾಲಿ ಮಾಡಿ" ಹಿರಿಯರು ಗೂಳಿಯಂತೆ ಹೂಂಕರಿಸಿದರು. ಕೊರಟಿಯವರಿಗೆ ಕೋಪ ನೆತ್ತಿಗೇರಿತು "ಹೆಣ್ಣು ಮಕ್ಕಳಿದ್ದಾರೆ, ಪ್ರವಾಸದಿಂದ ದಣಿದು ಬಂದಿದ್ದಾರೆ. ನೀವು ಏನು ಬೇಕಾದರೂ ಮಾಡಿಕೊಳ್ಳಿ. ನಾವು ದಬ್ಬಿಸಿಕೊಂಡರೂ ಈ ಕೋಣೆ ಬಿಡುವುದಿಲ್ಲ" ಎಂದು ಕೂಗಾಡಿದರು. ಸ್ವಾಗತ ಸಮಿತಿಯ ಹಿರಿಯರು ಕೋಪಿಸಿಕೊಂಡು ಬಿರಬಿರನೆ ಹೊರಟು ಹೋದರು.

ಬೆಳಗಾದ ಕೂಡಲೇ ಪ್ರಾತರ್ವಿಧಿಗೆ ಎಲ್ಲಿ ಹೋಗುವುದೆಂದು ತಾಪತ್ರಯಕ್ಕೆ ಪ್ರಾರಂಭವಾಯಿತು. ಸ್ನಾನವೆಲ್ಲಿ? ಎಂಬ ಸಮಸ್ಯೆ. ದೇಹ ಬಾಧೆ ತೀರಿಸಿಕೊಳ್ಳುವುದಕ್ಕೆ ಏರ್ಪಾಟು ಸಾಲದೇ ಸಾಲದು ಸಾಹಿತ್ಯ ಜಾತ್ರೆಗೆ. ಶೌಚಸ್ಥಳವನ್ನು ಹುಡುಕುತ್ತ ನಡೆದು ಒಂದು ಕೆರೆಯಂಗಳವನ್ನು ಕಂಡೆವು. ದೇಹಬಾಧೆ ತೀರಿಸಿಕೊಂಡು ಕೆರೆಗೆ ನಡೆದು ನೀರಲ್ಲಿ ಕೈಯಿಟ್ಟೆವು. ಓ, ನಮ್ಮ ಕೈ ಕಾಲುಗಳು ಕೊರೆತದ ನೀರಲ್ಲಿ ನಿಟಮ್ಮನೆ ನಿಗರಿಕೊಂಡುಬಿಟ್ಟವು. ಶೌಚ, ಸ್ನಾನ, ತಿಂಡಿ ತೀರ್ಥ, ಊಟ ವಸತಿಗಳ ಏರ್ಪಾಟು ಅಧ್ವಾನವೆಂದರೆ ಅಧ್ವಾನ. ಮುಖ್ಯಾತಿಥಿಗಳೆಲ್ಲ ಹೋಟೆಲು ಏರ್ಪಾಡು ಮಾಡಿಕೊಂಡರು. ಹೆಣ್ಣು ಮಕ್ಕಳ ಪಾಡು "ಉಧೋ ಉಧೋ" ಗೊಂದಲ ಸ್ನಾನದ ಮನೆಯಲ್ಲಿ.

ಹುಯಿಲುಗೋಳ ನಾರಾಯಣರಾಯರು ನನ್ನನ್ನೂ, ಶಕುಂತಲಾಬಾಯಿಯನ್ನೂ ಜಾತ್ರೆಯ ಉದ್ಘಾಟನ ಸಮಾರಂಭದಲ್ಲಿ ಕಂಡರು. "ಪಾಂಡುರಂಗರಾವ್, ನಿಮಗೆ ಇಲ್ಲಿ ಸರಿಬರುವುದಿಲ್ಲ. ಉದ್ಘಾಟನ ಸಮಾರಂಭ ಮುಗಿದಕೂಡಲೆ ನಮ್ಮ ಮನೆಗೆ ಬಂದು ಬಿಡಿ" ಎಂದು ಆಜ್ಞಾಪಿಸಿದರು. ಸಮಾರಂಭ ಮುಗಿದ ಕೂಡಲೆ ತಮ್ಮ ಗೆಳೆಯರ ಕಾರಿನಲ್ಲಿ ನಮ್ಮನ್ನು ತಮ್ಮ ಮನೆಗೆ ಕರೆದೊಯ್ದರು. ಕಾರ್ಯಕ್ರಮದ ಸಮಯಕ್ಕೆ ಬರುವುದು, ಮುಗಿದ ಕೂಡಲೆ ಹುಯಿಲಗೋಳರ ಮನೆಗೆ ಹೋಗುವುದು. "ಈ ಹೋಗಿ ಬರೋಣ" ಮೂರು ದಿವಸಗಳೂ ನಡೆಯಿತು. ಸ್ನಾನ ತಿಂಡಿ ಊಟಗಳೆಲ್ಲವೂ ಅಲ್ಲೇ.

ಮಧ್ಯಾಹ್ನ ಗಮಕ ವಿದ್ವಾನ್ ಬಿ. ಎಸ್. ಎಸ್. ಕೌಶಿಕರು ರುದ್ರ ಪಟ್ಟಣದಿಂದ ಒಂದು ಹವನ ಮುಗಿಸಿಕೊಂಡು ಗದಗಿನ ವೀರನಾರಾಯಣನ ಗಮಕಾರಾಧನೆಗೆಂದು ಸಾಹಿತ್ಯ ಸಮ್ಮೇಳನಕ್ಕೆ ಆಗಮಿಸಿದರು. ಆಹ್ವಾನಿತರೆಂದು ಕರೆಸಿಕೊಂಡು ಬಂದವರು ನಾವೇ ಅಬ್ಬಾ ಪ್ಯಾರಿಗಳು ಸಮ್ಮೇಳನದಲ್ಲಿ. ಪಾಪ! ಕೌಶಿಕರನ್ನು ಕೇಳುವವರ್ರು ಯಾರು? ಬಿಸಲಲ್ಲಿ ಬಂದವರೇ ನನ್ನನ್ನು ಕಂಡರು. "ಕುಡಿಯಲು ನೀರು ಬೇಕಲ್ಲ?" ಎಂದರು. ನಾನು ಅಡುಗೆಯ ಶಾಲೆಗೆ ನುಗ್ಗಿ ಗೋಗರೆದು ಒಂದು ಲೋಟ ಹಾಲು ತಂದು ಕೌಶಿಕರಿಗೆ ಕೊಟ್ಟೆ. "ಕೌಶಿಕರೇ ಸ್ನಾನ, ತಿಂಡಿ ತೀರ್ಥ, ಊಟದ ವ್ಯವಸ್ಥೆ ನೀವೇ ಬೇರೆ ಕಡೆ ಮಾಡಿಕೊಳ್ಳುವುದು ಮೇಲು" ಎಂದು ಸೂಕ್ಷ್ಮವಾಗಿ ಎಚ್ಚರಿಕೆ ಕೊಟ್ಟೆ. "ನೀವು ಏನು ಮಾಡಿಕೊಂಡಿದ್ದೀರ?" ಎಂದರು. ನಾನು, ಹುಯಿಲಗೋಳ ನಾರಾಯಣರಾಯರ ಹೆಸರು ಸ್ಮರಿಸಿದೆ. ಉದಾರ ಚರಿತರಾದ ಹುಯಿಲುಗೋಳ ನಾರಾಯಣರಾಯರು ಹದಿನೈದು ಇಪ್ಪತ್ತು ಗಮಕಿಗಳನ್ನು ತಮ್ಮ ಮನೆಯಲ್ಲಿ ಸಮ್ಮೆಳನ ನಡೆದಷ್ಟು ದಿವಸಗಳೂ ಇಟ್ಟುಕೊಂಡು ಊಟ ಉಪಚಾರಗಳಿಂದ ಸಂತೋಷಗೊಳಿಸಿ ಅಥಿತಿಗಳೆಲ್ಲರನ್ನೂ ತಮ್ಮ ಕೃಪಾರಸ ಸಾಗರದಲ್ಲಿ ಅದ್ದಿದರು. ನಮ್ಮ ಗಮಕ ವಿದ್ವಾನ್ ಕೌಶಿಕರೂ ಅವರುಗಳಲ್ಲಿ ಒಬ್ಬರು.

ಗದಗಿನ ವೀರನಾರಾಯಣ ಸ್ವಾಮಿಯ ಸನ್ನಿಧಿಯಲ್ಲಿ ಮೂರು ರಾತ್ರಿಗಳೂ ಪುಟ್ಟ ಗಮಕ ಸಮ್ಮೇಳನ ನಡೆಯುತ್ತಿತ್ತು.

ಮೂರು ದಿವಸ ಪೂರ್ತಿಯಾಗಿ ನಡೆಯಬೇಕಾಗಿದ್ದ ಸಾಹಿತ್ಯ ಸಮ್ಮೇಳನ ಎರಡೂವರೆ ದಿವಸಗಳಿಗೇ ಇದ್ದಕ್ಕಿದ್ದಹಾಗೆ ಯಾರಿಗೂ ತಿಳಿಯದ ಹಾಗೆ ಸಮಾಪ್ತಿಗೊಂಡಿತು.

ನಾವು ಸಮ್ಮೇಳನದ ಅತಿಥಿಗಳಾಗಿ ಬಂದತಪ್ಪಿಗೆ ನಮ್ಮ ಪ್ರವಾಸದ ವೆಚ್ಚ ಪಡೆಯಲಿಕ್ಕೆ ಸ್ವಾಗತ ಕಛೇರಿಗೆ ಹೋದೆವು. "ನೀವು ನಿಮ್ಮ ನಿಮ್ಮ ಕೊಠಡಿಗಳಲ್ಲಿ ಇರಿ; ನಾವೇ ಬರುತ್ತೇವೆ; ಬಟವಾಡೆ ಮಾಡುತ್ತೇವೆ" ಎಂದರು ಸ್ವಯಂ ಸೇವಕರು. ಸ್ವಾಗತ ಸಮಿತಿಯ ಆಹ್ವಾನ ಸ್ವೀಕರಿಸಿ ಬಂದವರೆಲ್ಲ ಅವರವರ ಕೊಠಡಿಗಳಲ್ಲಿ ಚಾತಕ ಪಕ್ಷಿಗಳಂತೆ ಕಾದಿದ್ದರು. ಎಲ್ಲರೂ ರಾತ್ರಿ ಪ್ರಯಾಣ ಮಾಡುವವರೆ. ಸ್ವಯಂ ಸೇವಕರು ರಸೀದಿ ಪುಸ್ತಕ ಹಿಡಿದು ಎಷ್ಟೋ ಹೊತ್ತಿನ ಮೇಲೆ ನಮಗೆಲ್ಲರಿಗೂ ಮಹಾದರ್ಶನ ದಯಪಾಲಿಸಿದರು. ಶಕುಂತಲಾಬಾಯಿಯ ಲೆಖ್ಖಕ್ಕೆ ಐದು ರೂಪಾಯಿಗಳು ಬಟವಾಡೆಯಾಗಿತ್ತು. ಬೆಂಗಳೂರಿನಿಂದ ಗದಗಿಗೆ ಹೋಗಿ ಬರುವ ರೈಲು ವೆಚ್ಚ ಮಾತ್ರ ಒಬ್ಬೊಬ್ಬರಿಗೆ ಮೂವತ್ತೈದು ರೂಪಾಯಿ ತಗಲಿತ್ತು. ವಾಹನ ಸೌಕರ್ಯ ಪ್ರವಾಸಿ ಭತ್ಯ ಸೇರಿರಲಿಲ್ಲ. ನಾನು ವಿಡಂಬನೆಯ ವಿನಯದಿಂದ "ಕೃತಜ್ಞತಾಪೂರ್ವಕ ನಿಮ್ಮ ಐದು ರೂಪಾಯಿಗಳನ್ನು ಹಿಂದಿರುಗಿಸಿದ್ದೇವೆ" ಎಂದು ಸ್ವಾಗತ ಸಮಿತಿಯ ಅಧ್ಯಕ್ಷರಿಗೆ ಬರೆದು ಐದು ರೂಪಾಯಿ ನೋಟಿನ ಥೂಳೂ ನನ್ನ

ಕೈಗಳಿಗೆ ಅಂಟಬಾರದೆಂದು ಒರಿಗ್ಗೈಯನ್ನು ಕೊಡವಿಕೊಂಡೆ. ನನ್ನ ಸಮೂಹ ಗೊಳ್ಳೆಂದಿತು.

ಕೆಲವೇ ದಿವಸಗಳು ಕಳೆದ ಮೇಲೆ ಕೊರಟಿ ಶ್ರೀನಿವಾಸರಾವ್ ಗದಗು ಸಾಹಿತ್ಯ ಸಮ್ಮೇಳನದ ಇತಿಹಾಸ ಪ್ರಸಿದ್ಧ ವೈಖರಿಯನ್ನು ಬಣ್ಣಿಸಿ, ಕುಮಾರವ್ಯಾಸ ಮಂಟಪದ ಪಾನ್ ಬೀಡ ಹೊಸದ್ವಾರದ ದಾಖಲೆ ಭಾವಚಿತ್ರ ಸಹಿತ ಮಹಾ ಲೇಖನವನ್ನೇ ಬರೆದರು "ಪ್ರಜಾಮತ" ಪತ್ರಿಕೆಯಲ್ಲಿ.

ಇದೇ ಸಂದರ್ಭದಲ್ಲಿ ಇಂಥದೇ ಇನ್ನೊಂದು ಅನುಭವ ನೆನಪಿಗೆ ಬರುತ್ತದೆ. ಸಬ್ ರಿಜಿಸ್ಟ್ರಾರ್ ಎಚ್. ಬಿ. ನಂಜಯ್ಯನವರು ತಾವು ವರ್ಗವಾದ ಕಡೆಗಳಲ್ಲೆಲ್ಲ ಒಂದೊಂದು ಕರ್ಣಾಟಕ ಸಂಘ ಕಟ್ಟುತ್ತಿದ್ದರು. ಕನಕಪುರದಿಂದ ವರ್ಗವಾಗಿ ಮದ್ದೂರಿಗೆ ಬಂದು ಅಲ್ಲೂ ಒಂದು ಕರ್ಣಾಟಕ ಸಂಘ ಪ್ರಾರಂಭಿಸಿದರು. ಮದ್ದೂರಿನ ಸಮೀಪದ ಒಂದು ಹಳ್ಳಿ. ಆಗತಾನೆ ಕರ್ಣಾಟಕ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿ ಚುನಾಯಿತರಾಗಿದ್ದ ಎಚ್. ವೀರಣ್ಣ ಗೌಡರಿಗೆ ಆ ಹಳ್ಳಿಯಲ್ಲಿ ಸಿದ್ಧಗಂಗಾ ಮಠದ ಶ್ರೀ ಶಿವಕುಮಾರ ಸ್ವಾಮಿಗಳ ಅಧ್ಯಕ್ಷತೆಯಲ್ಲಿ ಸತ್ಕಾರ ಸಮಾರಂಭ. ಕರ್ಣಾಟಕ ಸಂಘದ ಸ್ಥಾಪನೆ ಸಮಾರಂಭ ಇವುಗಳು ಏರ್ಪಾಡುಗಳು ಜೊತೆಗೂಡಿದವು. ಇವುಗಳಿಗೆ ನಂಜಯ್ಯನವರೇ ಕಂಡೂಕಾಣದಂತೆ ಪ್ರಚೋದಕರು—ಮಾರ್ಗದರ್ಶಕರು.

ಸತ್ಕಾರ ಸಮಾರಂಭ ಪ್ರಾರಂಭವಾದದ್ದು ರಾತ್ರಿ ಒಂಬತ್ತು ಗಂಟೆಗೆ. ಮುಗಿಯುವಾಗ ಸರಿ ರಾತ್ರಿ. ಆಮೇಲೆ ಊಟ ಉಪಚಾರ ಸುಮಾರು ಒಂದು ಗಂಟೆ ತೆಗೆದುಕೊಂಡಿತು. ನಂಜಯ್ಯ, "ಪಾಂಡುರಂಗರಾವ್, ನೀವು ಶಕುಂತಲಾಬಾಯಿ ಯೊಡನೆ ಸರಿರಾತ್ರಿ ಮದ್ದೂರಿಗೆ ಬರುವುದು ಬೇಡ. ಹಳ್ಳಿಯಲ್ಲೇ ಉಳಿದುಕೊಳ್ಳಿ. ಬೆಳಗ್ಗೆ ಮದ್ದೂರಿಗೆ ಬಂದು ನನ್ನನ್ನು ನೋಡಿ ಬೆಂಗಳೂರಿಗೆ ಪ್ರಯಾಣ ಬೆಳೆಸಿ— ಈ ದಿನ ತಂಗುವುದಕ್ಕೆ ಪಟೇಲರು ಏರ್ಪಾಡು ಮಾಡಿದ್ದಾರೆ. ನಾನು ಹೇಳಿದ್ದೇನೆ." ಎಂದರು. ನಾವು ನಮ್ಮ ಮಕ್ಕಳು ಚಿ|| ವನಜಾ, ಮೋಹನರೊಡನೆ ಹೋಗಿದ್ದೆವು. ಆದುದರಿಂದ ಆ ರಾತ್ರಿ ಹಳ್ಳಿಯಲ್ಲಿ ಟಿಕಾಣಿ ಹಾಕಿದೆವು.

ಬೆಳಗಾಯಿತು. ನಮ್ಮನ್ನು ಬೆಂಗಳೂರಿಗೆ ಕಳಿಸಿಕೊಡುವ ಏರ್ಪಾಡಿನ ಸುಳಿವೇ ಇಲ್ಲ. ಕೇಳುವವರು ಹೇಳುವವರು ಇಲ್ಲವೇ ಇಲ್ಲ. ಪ್ರಾತಃ ಕಾಲದ ದೇಹ ಬಾಧೆ ಮುಗಿಸಬೇಕು, ಮುಖ ತೊಳೆಯಬೇಕು ನಾವು ಇಳಿದಿದ್ದ ಮನೆಯ ಕೊಠಡಿಯ ಮುಂದೆ ಯಾರೂ ದಿಕ್ಕಿಲ್ಲ. ಬಟ್ಟ ಬಯಲು. ಎಲ್ಲಿ ಹೋಗಬೇಕು ? ಚಾವಣಿಯಿಲ್ಲದ ಜೋಡೆತ್ತಿನ ಬಂಡಿ ನಿಂತಿತ್ತು ನಮ್ಮ ಬಿಡಾರದ ಮುಂದೆ. ಎತ್ತುಗಳೆರಡೂ ಮೇದ ಹುಲ್ಲು ಮೆಲುಕು ಹಾಕುತ್ತಾ ವಿರಾಮವಾಗಿ ಪವಡಿಸಿವೆ. ಬಂಡಿಯ ನೊಗದ ಮೇಲೆ ಕಾಲುಚಾಚಿ ಸಾರಥಿ ತೂಕಡಿಸುತ್ತ ಕೂತಿದ್ದಾನೆ. ನಾನು ಅವನನ್ನೇ ಕೇಳಿದೆ. "ಪಟೇಲರು ಎಲ್ಲಪ್ಪ ?" "ಅವರು ಇನ್ನೂ ಎದ್ದಿಲ್ಲ, ಬುದ್ಧಿ" "ಅವರಿಗೆ ಹೇಳು ನನ್ನನ್ನು ನೋಡಬೇಕೆಂದು" "ಅಪ್ಪಣೆ ಕೊಡಿಸ್ತೀನಿ ಬುದ್ಧಿ

ನಿಮ್ಮನ್ನು ಮದ್ದೂರಿಗೆ ತಲುಪಿಸಬೇಕೆಂದು. ಇಕೋ ತಾಂಬೂಲ." ನಾನು ದಿಗ್ಮೂಢ ನಾದೆ. ಸಾವು ಕೈಕಾಲು ತೊಳೆದಿಲ್ಲ. ಮುಖ ವರಸಿಕೊಂಡಿಲ್ಲ. ದಿಡೀರನೆ ಗಂಟುಮೂಟೆ ಕಟ್ಟಬೇಕು ಬೆಂಗಳೂರಿಗೆ. ಎಂಥ ನಾಚಿಕೆಗೇಡು? ನಾನು ನೋವನ್ನು ಮನಸ್ಸಿನಲ್ಲಿಯೇ ನುಂಗಿಕೊಂಡೆ. "ಸರಿಯಪ್ಪ ಬಂಡಿಕಟ್ಟು" ಎಂದೆ. ಬಂಡಿಯಾಳು ಶ್ರೀರಾಮಚಂದ್ರನ ಬಂಟ ಹನುಮಂತನಂತೆ ಅಪ್ಪಣೆಯನ್ನುಜಾರಿಗೆ ತಂದೇಬಿಟ್ಟ. ಕೆಲವೇ ನಿಮಿಷಗಳಲ್ಲಿ ಎತ್ತುಗಳನ್ನು ಬಂಡಿಗೆಹೂಡಿ, ನಮ್ಮನ್ನು ಕೂಡಿಸಿಕೊಂಡು ಮದ್ದೂರಿಗೆ ಓಡಿಸೇಬಿಟ್ಟ.

ನಂಜಯ್ಯ ಮದ್ದೂರಿಗೆ ಹೊಸದಾಗಿ ಬಂದಿದ್ದರು. ಸಬ್‌ರಿಜಿಸ್ಟ್ರಾರ್ ಆಪೀಸು ಆಗತಾನೆ ಹೊಸಕಟ್ಟಡದಲ್ಲಿ ಒಂದು ಕೋಣೆಯಲ್ಲಿ ಪ್ರಾರಂಭವಾಗಿತ್ತು. ಅಲ್ಲಿಯೇ ತತ್ಕಾಲಕ್ಕೆ ಅವರು ತಂಗಿದ್ದರು. ನಮ್ಮ ಬಂಡಿ ಅವರ ಕಚೇರಿಯ ಮುಂದೆ ಹೋಗಿ ನಿಂತಿತು. ಕಿಟಕಿಯಿಂದಲೇ ನಮ್ಮ ಬಂಡಿ ತನ್ನಕಡೆಗೆ ಬರುತ್ತಿರುವುದನ್ನು ನೋಡು ತ್ತಿದ್ದರು. ನಮ್ಮ ಆಕರಾಳು ವಿಕರಾಳು ಸ್ವರೂಪಗಳನ್ನು ಕಂಡವರೇ ಹೌಹಾರಿದರು. ನಾನು ಕೈಮುಗಿದು ಹೇಳಿದೆ. "ನಾವು ಬೆಂಗಳೂರಿಗೆ ಹೊರಟಿದ್ದೇವೆ. ಅಪ್ಪಣೆ ಕೊಡಬೇಕು." ಅವರು ನೇರವಾಗಿ ಬಂಡಿಯಾಳಿಗೆ ಆಜ್ಞಾಪಿಸಿದರು. "ಇನ್ಸೂರೆನ್ಸ್ ಏಜೆಂಟು ಶಾಸ್ತ್ರಿಗಳ ಮನೆಗೆ ಕರೆದುಕೊಂಡುಹೋಗು. ಇವರಿಗೆ ಸ್ನಾನ, ತಿಂಡಿ, ತೀರ್ಥಕ್ಕೆ ಏರ್ಪಾಡು ಮಾಡುವಂತೆ ಶಾಸ್ತ್ರಿಗಳಿಗೆ ಹೇಳು."

ನಮ್ಮಬಂಡಿ ಇನ್ಸೂರೆನ್ಸ್ ಏಜೆಂಟ್ ಶಾಸ್ತ್ರಿಗಳಮನೆ ಮುಂದೆ ನಿಂತಿತು. ಬಲವಂತ ಮಾಘಸ್ನಾನವೆಂದುಕೊಂಡು ಶಾಸ್ತ್ರಿಗಳ ಅತಿಥಿಗಳಾದೆವು. ನಮಗೆ ರಾಜೋಪಚಾರವಾಯಿತು. ಮದ್ದೂರು ನರಸಿಂಹಸ್ವಾಮಿಯ ದರ್ಶನವಾಯಿತು. ಬಯಲಲ್ಲಿ ಆಜಾನುಬಾಹುವಾಗಿ ನಿಂತಿರುವ ಅತಿ ಸುಂದರಮೂರ್ತಿ ಕಂಚಿವರದರಾಜ ಸ್ವಾಮಿಯ ದರ್ಶನವಾಯಿತು. ರಾತ್ರಿ ನರಸಿಂಹಸ್ವಾಮಿ ದೇವಸ್ಥಾನದಲ್ಲಿ ಸ್ವಾಮಿಯ ಮುಂದೆ ಜೈಮಿನಿಭಾರತದಲ್ಲಿ "ಮಯೂರಧ್ವಜನ ಆಸ್ಥಾನ"ದ ವಾಚನ. ನಂಜಯ್ಯ ನವರಿಂದ ವಂದನಾರ್ಪಣೆ. ಜನನಿಬಿಡವಾದ ಸಭೆ. ಕಾರ್ಯಕ್ರಮ ಯಶಸ್ವಿಯಾಯಿತು.

ಬೆಳಗಾಯಿತು. ನಂಜಯ್ಯನವರೇ ನಮ್ಮನ್ನು ರೈಲ್ವೆ ನಿಲ್ದಾಣಕ್ಕೆ ಕರೆತಂದು ಬಿಟ್ಟರು. ಮೊದಲ ದರ್ಜೆ ಗಾಡಿಯಲ್ಲಿ ನಮ್ಮನ್ನು ಕೂಡಿಸಿ ನನ್ನ ಜೇಬಿನಲ್ಲಿ ಒಂದು ಲಕೋಟೆ ಮತ್ತು ಟಿಕೆಟ್ಟುಗಳನ್ನು ತುರುಕಿದರು. ನಮ್ಮ ಗಾಡಿ ಬೆಂಗಳೂರಿಗೆ ಹೊರ ಟಿತು. ನಂಜಯ್ಯ ನಿಂತೇಯಿದ್ದರು ನಾವು ಕಣ್ಮರೆಯಾಗುವವರೆಗೂ.

ಹಳ್ಳಿಯ ಪಟೇಲರು ತಾಂಬೂಲದ ತಟ್ಟೆಯಲ್ಲಿ ಅಡಕೆಯೆಲೆ, ಒಂದು ಮೊಳ ದುದ್ದ ಹೂವು, ಎಣಿಸಿದಹಾಗೆ ನಾಲ್ಕು ಬಾಳೆಹಣ್ಣು, ಒಂದು ತೆಂಗಿನಕಾಯಿ, ಹನ್ನೆ ರಡು ರೂಪಾಯಿಗಳು ಇಟ್ಟಿದ್ದರು. ನಾನು ಆಕಡೆ ಮೂಸಿಯೂ ನೋಡಲಿಲ್ಲ. ಈ ಸುಳಿವು ತಿಳಿದ ಸೂಕ್ಷ್ಮಗ್ರಾಹಿ ನಂಜಯ್ಯ ಮದ್ದೂರಿನಲ್ಲಿ ನಮಗೆ ರಾಜೋಪಚಾರ ಮಾಡಿಸಿ ದರು. ನರಸಿಂಹಸ್ವಾಮಿಯ ಸನ್ನಿಧಿಯಲ್ಲಿ ಶಕುಂತಲಾಬಾಯಿಯಿಂದ ಗಮಕ ಸೇವೆ

ಮಾಡಿಸಿದರು. ಬೆಂಗಳೂರಿಗೆ ಮೊದಲ ತರಗತಿಯಲ್ಲಿ ನಮ್ಮನ್ನೆಲ್ಲ ಕೂಡಿಸಿ ಸುಖ ಪ್ರಯಾಣ ಮಾಡಿಸಿದರು. ನಾನು ಬೆಂಗಳೂರು ತಲಪಿ ನಮ್ಮ ಮನೆಯಲ್ಲಿ ಲಕೋಟೆಯನ್ನು ಒಡೆದು ನೋಡಿದರೆ ಹತ್ತು ರೂಪಾಯಿಗಳ ಐದು ನೋಟುಗಳು. ನನ್ನ ಕಣ್ಣುಗಳಲ್ಲಿ ನೀರು ತುಂಬಿಕೊಂಡಿತು ನಂಜಯ್ಯನವರ ವಿಶ್ವಾಸಕ್ಕೆ, ಔದಾರ್ಯಕ್ಕೆ.

ಬೆಂಗಳೂರಿನಿಂದ ಮೈಸೂರಿಗೆ ನಾನು ಶಕುಂತಲಾಬಾಯಿ, ಬಸ್ ಪ್ರಯಾಣ ಮಾಡುವಾಗಲೆಲ್ಲ ಮೈಸೂರು ಹೆದ್ದಾರಿಯಲ್ಲಿರುವ ಮದ್ದೂರು ಸಬ್ ರಿಜಿಸ್ಟ್ರಾರ್ ಕಟ್ಟಡ, ನಾವು ಸ್ಥಾಪಿಸಿದ ಕರ್ಣಾಟಕ ಸಂಘದ ಮನೆ, ಗೋಚರವಾಗುತ್ತವೆ. ಆತ್ಮೀಯ ಬಂಧು ನಂಜಯ್ಯನವರು ಕಣ್ಣು ಮುಂದೆ ಬಂದು ನಿಂತಂತಾಗುತ್ತದೆ. ನಾವು ಅವರಿಗೆ ಬಾಷ್ಪಾಂಜಲಿಯ ತರ್ಪಣ ಅರ್ಪಿಸುವಂತೆ ಕಣ್ಣುಗಳು ಹನಿಗೂಡುತ್ತವೆ. ನಮ್ಮ ನಾನ್ ಸ್ಟಾಪ್ ಬಸ್ಸು ಮೈಸೂರು ಹೆದ್ದಾರಿಯಲ್ಲಿ ವೇಗವಾಗಿ ಓಡುತ್ತಿರುತ್ತದೆ.

1966ರಲ್ಲಿ ನಾಳೆ ಬೇಂದ್ರೆ ಕವಿವರ್ಯರ 70ವರ್ಷಗಳ ಸಮಾರಂಭವೆಂದಾಗ ನಾವು ಇಂದೇ ಬೆಳಗ್ಗೆ ಬೆಂಗಳೂರು—ಮೀರಜ್ ರೈಲುಗಾಡಿಯಲ್ಲಿ ಸುಮಾರು 10 ಗಂಟೆಗೆ ಶಿರಹಟ್ಟಿಗೆ ಹೊರಟೆವು. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಬಿ. ಶಿವಮೂರ್ತಿ ಶಾಸ್ತ್ರಿಗಳು, ಕಾರ್ಯದರ್ಶಿ ಕೆ. ಗೋಪಾಲಕೃಷ್ಣರಾವ್ ನಮ್ಮ ಜೊತೆಗಿದ್ದರು. ಅವರುಗಳೂ ನಮ್ಮೊಡನೆ ಕವಿವರ್ಯರ ಹುಟ್ಟುಹಬ್ಬದುತ್ಸವದಲ್ಲಿ ಭಾಗಿಗಳಾಗುವರಾಗಿದ್ದರು. ನಾವುಗಳೆಲ್ಲ ರಾತ್ರಿ ಹತ್ತು ಗಂಟೆಗೆ ಗುಡಗೇರಿ ಸೇರಿದೆವು. ಆ ರಾತ್ರಿ ಸಿರಿಗೆರೆ ಜಗದ್ಗುರುಗಳು ತರಳ ಬಾಳು ಹುಣ್ಣಿಮೆಯನ್ನು ಆ ಊರಲ್ಲಿ ಆಚರಿಸುತ್ತಿದ್ದರು. ಆ ಸಮಾರಂಭದಲ್ಲಿ ನಾವೂ ಭಾಗಿಗಳಾದೆವು. ಆ ರಾತ್ರಿ ಸಿರಿಗೆರೆ ಮಠದ ಆಶ್ರಮದಲ್ಲಿ ಆತಿಥ್ಯ ಸ್ವೀಕರಿಸಿದೆವು.

ಬೆಳಗ್ಗೆ ಹತ್ತು ಗಂಟೆಗೆ ಶಿರಹಟ್ಟಿಯಲ್ಲಿ ಕಾರ್ಯಕ್ರಮ ಪ್ರಾರಂಭ. ಆದರೆ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪನವರು ಮತ್ತು ರಕ್ಷಣ ಇಲಾಖೆಯ ಮಂತ್ರಿ ಆರ್. ಎಂ. ಪಾಟೀಲರು ಹನ್ನೆರಡು ಗಂಟೆಗೆ ಕಾರ್ಯಕ್ರಮಕ್ಕೆ ಬರುವರೆಂದು ಬೆಳಗಾಗುತ್ತಲೇ ಗುಜುಗುಜು ಮಾತು ಪ್ರಾರಂಭವಾಯಿತು. ನಾವಂತೂ ಕಾಲಕ್ಕೆ ಸರಿಯಾಗಿ ಶಿರಹಟ್ಟಿ ಮುಟ್ಟಿದೆವು.

ಆಹ್ವಾನ ಪತ್ರಿಕೆಯಲ್ಲಿ ಶಕುಂತಲಾಬಾಯಿ ಬೇಂದ್ರೆ ಕವನಗಳನ್ನು ಹಾಡುವರೆಂದು ಪ್ರಕಟವಾಗಿತ್ತು. ಕಾರ್ಯಕ್ರಮದ ಮಧ್ಯದಲ್ಲಿ ನಡೆಯುವ ಕಾರ್ಯಕ್ರಮ. ಆದರೆ ಈಗ ಮಂತ್ರಿವರ್ಯರುಗಳು ಬರುವ ವೇಳೆಯೇ ಖಚಿತವಾಗಿಲ್ಲ. ಜನ "ಜನ ಮರುಳೋ ಜಾತ್ರೆ ಮರುಳೋ" ಎಂಬಂತೆ ಘೇರಾಯಿಸಿದೆ. ಅವರಿಗೆ ಮನರಂಜನೆ ನೀಡಬೇಕಲ್ಲ ? ಶಕುಂತಲಾಬಾಯಿಯನ್ನು ಕಾರ್ಯಕರ್ತರು ಬಲವಂತವಾಗಿ ವೇದಿಕೆಯ ಮೇಲೆ ಹತ್ತಿಸಿದರು. ಇಂಥ ಸಮಯದಲ್ಲಿ ಆಕೆಗೆ ಮನೋಧರ್ಮ ಕುದುರುವುದಿಲ್ಲ. ಮನಸ್ಸಿಲ್ಲದ ಮನಸ್ಸಿನಿಂದ ಕುಮಾರವ್ಯಾಸ ಭಾರತದಿಂದ ಮಂಗಳ ಶ್ಲೋಕಗಳನ್ನು ಹಾಡಲು ಪ್ರಾರಂಭಿಸಿದರು. ಏಳೆಂಟು ಪದ್ಯಗಳನ್ನು ಹಾಡಿರಬೇಕು. ಮಂತ್ರಿದ್ವಯರು ದಯಮಾಡಿಸಿದರು. ಅಂಬಾಭವಾನಿ ಗೊಂದಲದಂತೆ ಜನ "ಉಘೋ ಉಘೋ" ಎದ್ದರು.

ಮಂತ್ರಿದ್ವಯರು ಹೊತ್ತಾಗಿ ಬಂದದ್ದರಿಂದ ಬೇಂದ್ರೆ ಭಾವಗೀತ ಕಾರ್ಯಕ್ರಮ ಕ್ಕೆ ಕತ್ತರಿ ಪ್ರಯೋಗ ಅನಿವಾರ್ಯವಾಗಿತ್ತು. ಮುಖ್ಯಮಂತ್ರಿ ನಿಜಲಿಂಗಪ್ಪನವರು ಶಿರ ಹಟ್ಟಿಯ ಕಾರ್ಯಕ್ರಮವನ್ನು ಮುಗಿಸಿ ಬೇರೆಡೆಗೆ ಹೋಗಬೇಕಾಗಿದ್ದುದರಿಂದ ಶಕುಂತ ಲಾಬಾಯಿಯ ಕವಿತಾ ವಾಚನವನ್ನು ಮಧ್ಯಾಹ್ನದ ಸಭೆಗೆ ಮುಂದೆ ದಬ್ಬಿದರು. ಬೆಂಗ ಳೂರಿನ ತಂಪು ಹವದಲ್ಲಿ ಬೆಳೆದ ನಮಗೆ ಶಿರಹಟ್ಟಿಯ ಬಿಸಿಲು ರಣರಣ ; ಸಭೆ ಮುಗಿ ದಾಗ ಎರಡು ಗಂಟೆ ; ಲಗಲಗ ಊಟ ತೀರಿಸಿಕೊಂಡು ಮಧ್ಯಾಹ್ನದ ಸಭೆ ಆತುರಾತುರ ವಾಗಿ ಪ್ರಾರಂಭ. ವಿಶ್ರಾಂತಿಯಿಲ್ಲದೆ ಶಕುಂತಲಾಬಾಯಿಗೆ ತಲೆ ನೋವು ಪ್ರಾರಂಭವಾ ಯಿತು. ಕಾರ್ಯಕ್ರಮದಲ್ಲಿ ತಲೆ ಚಿಟ್ಟು ಹಿಡಿಯುವಷ್ಟು ಭಾಷಣಗಳು. ಧಾರವಾಡ ದಿಂದ ಬಂದಿದ್ದ ಭಾಷಣಕಾರರುಗಳಿಗೆ ತಮ್ಮ ಭಾಷಣಗಳನ್ನು ಒಪ್ಪಿಸಿ ಧಾರವಾಡಕ್ಕೆ ರೈಲುಹಿಡಿಯುವ ಆತುರ. ಶಕುಂತಲಾಬಾಯಿಯನ್ನು ಕೇಳುವವರೇ ಇಲ್ಲ. ಆಕೆಗೆ ತನ್ನ ಸರದಿ "ಇದೋ ಈಗ, ಅದೋ ಆಗ" ಎಂದು ನಿರೀಕ್ಷಿಸಿ ಮನೋಧರ್ಮ ಹಾಳಾಗಿ ಹೋಯಿತು. **ಕೋಪವೆಂಬುದಂತೂ ಅನರ್ಥ ಸಾಧನ ಇಂಥ ಸಭೆಗಳಲ್ಲಿ.** ಅಧ್ಯಕ್ಷತೆ ವಹಿಸಿದ್ದ ಸೌಜನ್ಯ ಮೂರ್ತಿ ಆರ್. ಎಂ. ಪಾಟೀಲರು ಶಕುಂತಲಾ ಬಾಯಿಯ ಕಾವ್ಯ ವಾಚನವಾಗಲೆಂದು ವ್ಯವಸ್ಥಾಪಕರಿಗೆ ಎರಡು ಮೂರುಸಲ ಸೂಚಿಸಿ ತೆಪ್ಪಗಾದರು. ಏಳು ಗಂಟೆಯಾಯಿತು. ನಮಗೆ ಆ ರಾತ್ರಿಯೇ ಬೆಂಗಳೂರಿಗೆ ಹೋಗುವ ಆತುರ. ಪ್ರವಾಸ ವೆಚ್ಚವನ್ನು ಗಿಟ್ಟಿಸಬೇಕಲ್ಲ! ಗದಗಿನ ಅನುಭವದಿಂದ ನಾನು ನನ್ನ ಸಂಕೋಚ ಸ್ವಭಾವವನ್ನೂ ಶ್ರೀಮದ್ಗಾಂಭೀರ್ಯವನ್ನೂ ವರ್ಜಿಸಿದ್ದೆ. ನಿರ್ವಾಹವಿಲ್ಲದೆ ಸ್ವಾಗತ ಸಮಿತಿಯ ಅಧ್ಯಕ್ಷರನ್ನು ಕಂಡೆ. ಏನೋ ಲೆಕ್ಕ ಹಾಕಿ ಪ್ರವಾಸ ವೆಚ್ಚ ಕವರಿ ನಲ್ಲಿ ತುರುಕಿ ಕೊಟ್ಟರು. ಶಿವಮೂರ್ತಿಶಾಸ್ತ್ರಿಗಳೂ ಗೋಪಾಲಕೃಷ್ಣರಾಯರೂ ದುಮು ದುಮು ಮುಖಗಳಿಂದಲೇ ನಮ್ಮ ಜೊತೆಯಲ್ಲಿ ಹೊರಟರು. ರೈಲು ಸ್ಟೇಷನ್ನಿನಲ್ಲಿ ಕವರು ತೆಗೆದು ನೋಡಿದೆ. ನಮ್ಮಿಬ್ಬರ ಹೋಗಿಬರುವ ರೈಲ್ವೆ ಪ್ರಯಾಣ ವೆಚ್ಚದಲ್ಲೆ ಹತ್ತು ರೂಪಾಯಿಗಳು ಖೋತ ಬಿದ್ದಿತ್ತು.

ಕವಿವರ್ಯ ದಂಪತಿಗಳನ್ನು ಮಣಿಪಾಲದಲ್ಲಿ ನೋಡಿದ್ದೆವು. ಶಕುಂತಲಾಬಾಯಿ, ಲಕ್ಷ್ಮೀಬಾಯಿಬೇಂದ್ರೆಯವರೊಡನೆ ಮಣಿಪಾಲದಲ್ಲಿ ಮೂರು ದಿವಸ ಒಡನಾಡಿದ್ದರು. ಅನಂತರದ ಆರು ವರ್ಷಗಳ ಮೇಲೆ ಬೇಂದ್ರೆ ದಂಪತಿಗಳ ದರ್ಶನವಾಗಿತ್ತು ಶಿರ ಹಟ್ಟಿಯಲ್ಲಿ.

ಶಿರಹಟ್ಟಿಯ ಎಪ್ಪತ್ತು ವರ್ಷಗಳ ಬೇಂದ್ರೆ ಹುಟ್ಟು ಹಬ್ಬ ಸಮಾರಂಭ ನಡೆದ ಒಂದೆರಡು ತಿಂಗಳಲ್ಲಿ ಬಳ್ಳಾರಿಯಲ್ಲಿ ಇನ್ನೊಂದು ಬೇಂದ್ರೆ ಸಮಾರಂಭ. ಶಕುಂತಲಾ ಬಾಯಿಗೆ ಬೇಂದ್ರೆ ಕವನಗಳನ್ನು ಓದಬೇಕೆಂದು ಆಹ್ವಾನ. ಆಹ್ವಾನ ಪತ್ರಿಕೆಯೂ ಅಚ್ಚಾಗಿ ಹಂಚಿದ್ದಾಗಿತ್ತು. ವಿಧಿವಿಲಾಸ, ಕವಿವರ್ಯ ಬೇಂದ್ರೆಯವರ ಎಪ್ಪತ್ತು ವರ್ಷ ಗಳ ಬಳ್ಳಾರಿ ಸಮಾರಂಭ ಒಂದೆರಡು ದಿವಸಗಳಲ್ಲಿ ನಡೆಯಬೇಕೆಂದಿರುವಾಗ ಲಕ್ಷ್ಮೀ ಬಾಯಿ ಬೇಂದ್ರೆ ದಿವಂಗತರಾದರು ; ಬಳ್ಳಾರಿಯ ಸಮಾರಂಭ ನಿಂತುಹೋಯಿತು.

"ಕನ್ನಡಕ್ಕೆ ಮುಡಿಪಿಟ್ಟ ದೇಹ ಕನ್ನಡಕ್ಕೇ ಅಳಿಯಲಿ"

1956ರಲ್ಲಿ ಕರ್ಣಾಟಕದ ಹರಿದು ಹಂಚಿಹೋಗಿದ್ದ ಭಾಗಗಳು ಮೈಸೂರು ರಾಜ್ಯಕ್ಕೆ ಸೇರಿ ವಿಶಾಲ ಮೈಸೂರು ರಾಜ್ಯವಾಗಲು ಕೇವಲ ಹದಿನೈದು ದಿವಸಗಳಿವೆಯೆನ್ನುವಾಗ ಹೈದರಾಬಾದು ಕರ್ಣಾಟಕದ ಗುಲ್ಬರ್ಗದಿಂದ ನಮಗೆ ನಾಡಹಬ್ಬಕ್ಕೆ ಬರಬೇಕೆಂದು ಕರೆ ಬಂತು. ಆ ಸಮಯದಲ್ಲಿ ಶಕುಂತಲಾಬಾಯಿ ಚೆನ್ನಾಗಿಯೇ ಇದ್ದರು. ಗುಲ್ಬರ್ಗಾಕ್ಕೆ ರೈಲು ಪ್ರವಾಸ ನಿಶ್ಚಯವಾದೊಡನೆಯೇ ನಮ್ಮ ಎರಡು ಸ್ಥಳಗಳನ್ನು ಹದಿನೈದು ದಿವಸಗಳ ಮುಂಚೆಯೇ ಕಾದಿರಿಸಿದ್ದೆವು. ರಾತ್ರಿ ರೈಲಿಗೆ ಹೊರಡಬೇಕು. ಆ ಘಳಿಗೆಯಲ್ಲಿ ಹಣೆಯ ಮೇಲೆ ವೀಪಿಂಗ್ ಎಕ್ಸಿಮ ದುಮುದುಮು ಹರಡಿತು. ಪ್ರವಾಸ ಕೈಗೊಳ್ಳುವುದೆ, ನಿಲ್ಲಿಸುವುದೇ, ಎಂದು. ಒಂದು ಘಳಿಗೆ ಚರ್ಚೆ ಮಾಡಿದೆವು. "ನಾವು ಇದ್ದಕ್ಕಿದ್ದಹಾಗೆ ನಿಂತುಬಿಟ್ಟರೆ ಗುಲ್ಬರ್ಗಾದ ಕಾರ್ಯಕ್ರಮದ ಗತಿ ಏನಾಗಬೇಕು ? ಹಿರಿಯರಾದ ತವಗ ಭೀಮಸೇನರಾಯರೇ ಆಮಂತ್ರಣ ಕೊಟ್ಟಿದ್ದಾರೆ." ಎಂದು ದೈವದ ಮೇಲೆ ಭಾರ ಹಾಕಿ ಕನ್ನಡಮ್ಮನ ಪರಿಚಾರಿಕೆಗೆ ಹೊರಟೇಬಿಟ್ಟೆವು. ಮಾರನೆ ದಿನ ಮಧ್ಯಾಹ್ನ ಸುಮಾರು ಎರಡು ಗಂಟೆಗೆ ಗುಲ್ಬರ್ಗ ಮುಟ್ಟಿದೆವು. ಅಷ್ಟು ಹೊತ್ತಿಗೆ ಎಕ್ಸಿಮಾ ಅರ್ಧ ಹಣೆಯಷ್ಟು ವ್ಯಾಪಿಸಿತ್ತು. ಕೆಂಡ ಕಾಯಿಸಿದಷ್ಟು ಜ್ವರ. ತವಗ ಭೀಮಸೇನರಾಯ ದಂಪತಿಗಳು ಶಕುಂತಲಾಬಾಯಿಯ ಸ್ಥಿತಿಯನ್ನು ನೋಡಿ ಮಮ್ಮಲ ಮರುಗಿದರು. ಶಕುಂತಲಾಬಾಯಿ ಸ್ನಾನವಿಲ್ಲ, ಊಟವಿಲ್ಲ, ಹಾಸಿಗೆ ಹಾಸಿ ಸಂಜೆ ಆರೂವರೆ ಗಂಟೆಯವರೆಗೆ ಮಲಗಿಬಿಟ್ಟರು. ತವಗರು ತುಂಬ ಸಜ್ಜನ. ತುಂಬು ಸಂಸ್ಕೃತಿಯ ಹಿರಿಜೀವ. ಅವರ ಸೌಭಾಗ್ಯವತಿಯವರೂ ಅಷ್ಟೆ. ಅವರಿಬ್ಬರ ಅಂತಃಕರಣದ ಬಗೆಗೆ ನಾವು ಮನಸ್ಸಿನಲ್ಲಿಯೇ "ಬಿನ್ನಹಕೆ ಬಾಯಿಲ್ಲವಯ್ಯ" ಎಂದು ಕೊಂಡೆವು.

ಸಂಜೆ 7 ಗಂಟೆಗೆ ಕಾರ್ಯಕ್ರಮ ಪ್ರಾರಂಭವಾಯಿತು. "ಕರ್ಣಾಟಕ ಕವಿಕಾವ್ಯ ಪರಂಪರೆ" ಮೊದಲ ದಿನದ ಕಾವ್ಯ ವಾಚನ. ರಾಯಚೂರು ಶ್ರೋತೃಗಳು ಪ್ರವಾಹದಂತೆ ಬಂದು ಹೋಗುತ್ತಿದ್ದರೆ, ಗುಲ್ಬರ್ಗದ ಶ್ರೋತೃಗಳು ತಾಳ್ಮೆಯಿಂದ ಕೂತು ಕೇಳಿದರು. ಶಕುಂತಲಾಬಾಯಿ ಕಾರ್ಯಕ್ರಮ ಮುಗಿಸಿ ಬಂದವರೇ ಹಾಸಿಗೆ ಕಚ್ಚಿದರು.

ಬೆಳಗಾಯಿತು. ಹಣೆಯ ಸಿಂಹಾಸನದ ಮೇಲೆ ಪಟ್ಟವೇರಿ ಕುಳಿತ ಎಕ್ಸಿಮ ಇಳಿಯಲೇಇಲ್ಲ. ಜ್ವರ ಬಿಡಲಿಲ್ಲ. ಶಕುಂತಲಾಬಾಯಿ ಹಾಸಿಗೆ ಬಿಟ್ಟು ಮೇಲೇಳಲಿಲ್ಲ.

ಗುಲ್ಬರ್ಗದಲ್ಲಿ ಮಹರಾಷ್ಟ್ರ ಮಹಿಳಾ ಮಂಡಲಿಯ ಕನ್ನಡ ಪ್ರೇಮಿ ಹೆಣ್ಣುಮಕ್ಕಳು ಶಕುಂತಲಾಬಾಯಿಯ ಹಿಂದಿನ ದಿನದ ಕಾರ್ಯಕ್ರಮ ಕೇಳಿ ಸಂತೋಷಪಟ್ಟು ದಿಢೀರನೆ ಮಧ್ಯಾಹ್ನ ತಮ್ಮ ಮಂಡಲಿಯಲ್ಲಿ ಕಾರ್ಯಕ್ರಮ ಏರ್ಪಡಿಸಿಬಿಟ್ಟರು.

ನೂತನ ವಿದ್ಯಾಲಯದ ಅಧ್ಯಾಪಕ ಸುಬ್ಬಣ್ಣಾಚಾರ್—ಕರ್ಣಾಟಕ ಸಾಹಿತಿಗಳಿಗೆಲ್ಲ ಚಿರ ಪರಿಚಿತರಾದ "ಸುಬ್ಬಣ್ಣ" ನನ್ನ ಹತ್ತಿರ ಓಡಿಬಂದರು. "ಅಕ್ಕಾವರನ್ನು ನೋಡಿದರೆ 'ಕಾರ್ಯಕ್ರಮಕ್ಕೆ ಒಪ್ಪಿಕೊಳ್ಳಿ' ಎಂದು ಕೇಳಲಿಕ್ಕೆ ಬಾಯಿ ಬರುವುದಿಲ್ಲ.

ನಮ್ಮ ಗುಲ್ಬರ್ಗದಲ್ಲಿ ಮಹಾರಾಷ್ಟ್ರದ ಪ್ರಾಬಲ್ಯವೇ ಕೈ ಮೇಲಾಗಿದೆ. ಮಹಾರಾಷ್ಟ್ರ ಮಹಿಳಾಮಂಡಲಿಯಲ್ಲಿ ಕನ್ನಡ ಕಾರ್ಯಕ್ರಮ ಏರ್ಪಟ್ಟಿರುವುದೇ ನಮಗೆ ಮಹಾಭಾಗ್ಯ ವಾಗಿದೆ. ಶಕುಂತಲಕ್ಕ ಒಪ್ಪಿಕೊಳ್ಳಬೇಕು" ಎಂದು ಅಂಗಲಾಚಿದರು. ಶಕುಂತಲಾ ಬಾಯಿ ಕೂಡಲೆ "ಆಯಿತು" ಎಂದು ಬಿಟ್ಟರು.

ಸುಬ್ಬಣ್ಣ ಅವರ ಶಾಲೆಯಲ್ಲಿಯೂ ಒಂದು ಅರ್ಧ ಗಂಟೆಯ ಕಾರ್ಯಕ್ರಮ ಏರ್ಪಡಿಸಿದ್ದರು. ಅವರ ಶಾಲೆಗೆ ಹೋದೆವು. ಶಾಲೆಯ ವೈಶಿಷ್ಟ್ಯವೆಂದರೆ ಶಾಲಾಸಭಾಂ ಗಣದಲ್ಲಿ ತುಂಬ ಚೆನ್ನಾದ ಚೊಕ್ಕವಾದ ಸ್ಥಿರಾಂತರ ಕಲಾ ಚಿತ್ರ ಪ್ರದರ್ಶನ. ಲಲಿತ ಕಲಾ ಪ್ರೇಮಿಯಾದ ನಾನು ಚಿತ್ರ ಪ್ರದರ್ಶನವನ್ನು ತುಂಬ ಮೆಚ್ಚಿಕೊಂಡೆ. ಶಕುಂತಲಾಬಾಯಿ ಅರ್ಧ ಗಂಟೆಯವರೆಗೆ "ಶ್ರೀ" ಯವರ "ಕನ್ನಡ ತಾಯ ನೋಟ"ದ ವಾಚನ ಮಾಡಿದರು. ನಾನು ಪ್ರಾಸಂಗಿಕ ನಿರೂಪಣೆ ಕೊಟ್ಟೆ. ಶಾಲೆಯ ಕಾರ್ಯ ಕ್ರಮ ಮುಗಿಸಿ ಮಹಾರಾಷ್ಟ್ರ ಮಹಿಳಾ ಮಂಡಲಿಯ ಕಾರ್ಯಕ್ರಮಕ್ಕೆ ಧಾವಿಸಿದೆವು.

ಮಹಾರಾಷ್ಟ್ರ ಮಹಿಳಾ ಮಂಡಲಿಯಲ್ಲಿ ಮಹಿಳೆಯರೇ ಭರ್ತಿಯಾಗಿದ್ದರು. ಶಕುಂತಲಾಬಾಯಿ ಕುಮಾರವ್ಯಾಸ ಭಾರತದಿಂದ "ದ್ರೌಪದೀ ಮಾನಸಂರಕ್ಷಣ" ಭಾಗವನ್ನು ಅರ್ಧಗಂಟೆ ಓದಿದರು. ನಾನು ಕಾವ್ಯದ ಪ್ರಾಸ್ತಾವಿಕ ಭಾಷಣ ಮಾಡಿದೆ. ಕಾರ್ಯಕ್ರಮ ತುಂಬ ಯಶಸ್ವಿಯಾಯಿತು. ಸುಬ್ಬಣ್ಣ ಕುಣಿದಾಡಿಬಿಟ್ಟರು. "ಕನ್ನಡದ ಬಾವುಟವನ್ನು ಹಾರಿಸಿಬಿಟ್ಟರು ಮಹಾರಾಷ್ಟ್ರ ಮಹಿಳಾ ಮಂಡಳಿಯಲ್ಲಿ ಶಕುಂತಲಕ್ಕ" ಎಂದು ಉಬ್ಬಿಹೋದರು.

ಸಂಜೆ ಏಳು ಗಂಟೆಗೆ ಮಾಮೂಲಿನಂತೆ ನಾಡಹಬ್ಬ ಪ್ರಾರಂಭವಾಯಿತು, ಕುಮಾರವ್ಯಾಸ ಭಾರತ—ಲಕ್ಷ್ಮೀಶನ ಜೈಮಿನಿ ಭಾರತ ಕಾವ್ಯಗಳಿಂದ ಒಂದೊಂದು ರಸಘಟ್ಟವನ್ನು ಕಾಲುಕಾಲು ಗಂಟೆಯ ಕಾರ್ಯಕ್ರಮಕ್ಕೆ ಅಳವಡಿಸಿಕೊಂಡಿದ್ದೆವು. ಪಾಶುಪತಾಸ್ತ್ರ ತರಲು ಅರ್ಜುನ ಇಂದ್ರಕೀಲ ಪರ್ವತಕ್ಕೆ ನಡೆದಾಗ ತಪಸ್ಸಿಗೆಂದು ಯುಧಿಷ್ಠಿರ ತಮ್ಮನಿಗೆ ಉಪದೇಶ ಮಾಡುವ ಭಾಗ ಕುಮಾರವ್ಯಾಸ ಭಾರತದಿಂದ, ಸುಧನ್ವ ಯುದ್ಧಕ್ಕೆ ಹೊರಡಲು ವೇಳೆ ತಪ್ಪಿದನೆಂದು ಮರಾಳಕೇತು ಮಗನನ್ನು ಕುದಿಕುದಿವ ಎಣ್ಣೆ ಕೊಪ್ಪರಿಗೆಯಲ್ಲಿ ಹಾಕಿಸುವ ಮರಣ ದಂಡನೆ ಭಾಗ ಲಕ್ಷ್ಮೀಶನ ಜೈಮಿನಿ ಭಾರತದಿಂದ, ಆರಿಸಿಕೊಂಡಿದ್ದೆವು. ಕಾರ್ಯಕ್ರಮ ಚೆನ್ನಾಗಿ ಮೂಡಿಬಂತು.

ನಮ್ಮ ಕಾರ್ಯಕ್ರಮ ಮುಗಿಯುವುದಕ್ಕೂ ಮಳೆ ಬರುವುದಕ್ಕೂ ಸರಿಹೋಯಿತು. ನಾಡಹಬ್ಬದ ಮಿಕ್ಕ ಕಾರ್ಯಕ್ರಮವೆಲ್ಲ ಅಲ್ಲಿಗೇ ಸಮಾಪ್ತವಾದವು.

ರಂಗಮ್‌ಪೇಟೆಯಿಂದ ಸಗರ ಕೃಷ್ಣಾಚಾರ್ಯರು ನಾಡಹಬ್ಬದ ಆಮಂತ್ರಣ ಕೊಡಲು ಗುಲ್ಬರ್ಗಾ ನಾಡಹಬ್ಬಕ್ಕೆ ಬಂದಿದ್ದರು. ಸಭಾ ಮಂಟಪದಲ್ಲೇ ಭೇಟಿ ಯಾದರು. "ನಾಡದ್ದು ನಿಮ್ಮಿಬ್ಬರ ಕಾರ್ಯಕ್ರಮ ಏರ್ಪಡಿಸಿದ್ದೇವೆ, ಬರಬೇಕು" ಎಂದು ಪ್ರಾರ್ಥಿಸಿದರು. ನಾನು "ಶಕುಂತಲಾಬಾಯಿಯ ದೇಹಸ್ಥಿತಿ ನೆಟ್ಟಗಿಲ್ಲ. ತುಂಬ ಸುಸ್ತಾಗಿದ್ದಾರೆ. ದಯವಿಟ್ಟು ಕ್ಷಮಿಸಿ. ನಾಳೆ ಬೇರೆ ಸೇಡಂ ಕಾರ್ಯಕ್ರಮವಿದೆ.

ಅದನ್ನು ಮುಗಿಸಿ ಅಲ್ಲಿಂದಲೇ ಬೆಂಗಳೂರಿಗೆ ಪ್ರಯಾಣ ಮಾಡುತ್ತೇವೆ" ಎಂದು ನನ್ನ ಕಷ್ಟ ಹೇಳಿಕೊಂಡೆ. ಸಗರ ಕೃಷ್ಣಾಚಾರ್ಯರು "ಒಲ್ಲೆ ಎನ್ನಬೇಡಿ, ನಮ್ಮ ರಂಗಮ್ ಪೇಟೆಯ ಕರ್ಣಾಟಕ ಸಂಘ ಆರ್ಥಿಕವಾಗಿ ದುರ್ಬಲ ಸಂಘ. ನಿಮ್ಮನ್ನು ಪ್ರತ್ಯೇಕವಾಗಿ ಕರೆಸಿಕೊಳ್ಳಲು ಶಕ್ಯವಿಲ್ಲ" ಎಂದು ತಮ್ಮ ಸಂಘದ ಅಶಕ್ತತೆಯನ್ನು ಮುಂದಿಟ್ಟರು. ಅವರ ಸಂಘದ ಅರ್ಥಿಕ ದುರ್ಬಲತೆ, ಸಗರ ಕೃಷ್ಣಾಚಾರ್ಯರ ವಿನಯ –ಕನ್ನಡ ಭಕ್ತಿಯ ಕಳಕಳಿ, ಶಕುಂತಲಾಬಾಯಿಯ ಮೇಲೆ ಪರಿಣಾಮವೆಸಗಿತು. "ಆಗಲಿ" ಎಂದು ಒಪ್ಪಿಕೊಳ್ಳಬೇಕಾಯಿತು.

ಮಾರನೇ ದಿನ ಬೆಳಿಗ್ಗೆ ಭುವನೇಶ್ವರಿಯ ಅಪಾರಕರುಣೆ, ಶಕುಂತಲಾ ಬಾಯಿಯ ದೇಹಸ್ಥಿತಿ ಸುಧಾರಿಸಿತ್ತು. ತವಗರು ಗುಲ್ಬರ್ಗ ನಗರ ಪ್ರದಕ್ಷಿಣೆ ಮಾಡಿಸಿದರು. ಹಿಂದಿನ ದಿವಸ ಭರಮಳೆ ಭೋರ್ಗರೆದು ಎಲ್ಲ ರಸ್ತೆಗಳೂ ಕೆಸರು. ರಸ್ತೆಗಳು ದುರಸ್ತಾಗಿ ಎಷ್ಟು ವರ್ಷಗಳಾಗಿದ್ದವೋ? ಜಲ್ಲಿಗಲ್ಲುಗಳು ಮಣ್ಣುಕಾಣದೆ ಬೋಳು ಬಾಯಲ್ಲಿ ಅಲ್ಲೊಂದು ಇಲ್ಲೊಂದು ಉಳಿದ ಹಲ್ಲುಗಳಂತೆ ಕಾಣುತ್ತಿದ್ದವು. ಶರಣ ಬಸವೇಶ್ವರ ದೇವಾಲಯ, ಸ್ಪೇಯಿನ್ ದೇಶದ ರೀತಿಯ ಪ್ರಸಿದ್ಧ ಕಾರ್ಡೋವ ಮಸೀದಿಯನ್ನು ಹೋಲುವ ಜುಮ್ಮ ಮಸೀದಿ, ಹಿಂದೂ ಮುಸಲಮಾನರ ಹೃದಯ ಬೆಸೆಯುವ ಬಂದೇ ನವಾಜದ ದರಗಾಹ, ಆ ವಾತಾವರಣದಲ್ಲೇ ಉರ್ದು, ಪಾರಶಿ ಮತ್ತು ಅರಬ್ಬಿ ಭಾಷೆಗಳಲ್ಲಿ ಬರೆದು ಶೇಖರಿಸಿದ ಹತ್ತು ಸಾವಿರ ಪುಸ್ತಕಗಳ ಸರಸ್ವತೀ ಭಂಡಾರವನ್ನು ನೋಡಿದೆವು.

ತವಗ ದಂಪತಿಗಳ ಆದರಾತಿಥ್ಯದ ಊಟ ಉಪಚಾರ ಪಡೆದು ಮಧ್ಯಾಹ್ನದ ರೈಲುಗಾಡಿ ಹಿಡಿದು ಹೈದರಾಬಾದು ಕರ್ಣಾಟಕ ಗಡಿಯ ಸೇಡಂ ಊರು ಸೇರಿದೆವು. ಅದೇ ಸಮಯದಲ್ಲಿ ನಾಡಹಬ್ಬಕ್ಕೆ ಹೈದರಾಬಾದಿನಿಂದ ಬಂದಿದ್ದ ಪ್ರಸಿದ್ಧ ಸಾಹಿತಿ ಮಾನ್ವಿ ನರಸಿಂಗರಾಯರು ಗುಲ್ಬರ್ಗದ ನಾಡಹಬ್ಬಕ್ಕೆ ಹೋಗಲು ಸಿದ್ಧರಾಗುತ್ತಿದ್ದರು. ಆ ಹಿರಿಯರ ಪರಿಚಯವಾಯಿತು. ಸೇಡಂ ಕಾರ್ಯಕ್ರಮ ಸಂಜೆ ಏಳುಗಂಟೆಗೆ ಪ್ರಾರಂಭವಾಗಿ ರಾತ್ರಿ ಹತ್ತು ಗಂಟೆಗೆ ಮುಗಿಯಿತು. ಮಾಮೂಲು "ಕರ್ಣಾಟಕ ಕವಿ ಕಾವ್ಯ ಪರಂಪರೆ" ಗಮಕವಾಚನ ನನ್ನ ಪ್ರಾಸಂಗಿಕ ನಿರೂಪಣೆಯೊಡನೆ ಅರ್ಧಗಂಟೆ ನಡೆಯಿತು. ಸಗರ ಕೃಷ್ಣಾಚಾರ್ಯರು ನಮ್ಮನ್ನು ಗುಲ್ಬರ್ಗದಿಂದ ಯಾದಗಿರಿಯವರೆಗೂ ಅನುಸರಿಸಿದರು. ಹೈದರಾಬಾದ್‌ನಿಂದ ಯಾದಗಿರಿ ಮಾರ್ಗವಾಗಿ ಹೋಗುವ ರೈಲುಗಾಡಿ ಹತ್ತುವಾಗ ರಾತ್ರಿ ಸುಮಾರು ಹನ್ನೊಂದುವರೆಯಾಗಿತ್ತು. ಯಾದಗಿರಿ ಮುಟ್ಟಿದಾಗ ಬೆಳಗಿನ ಜಾವ ಸುಮಾರು ನಾಲ್ಕು ಗಂಟೆಯಾಗಿತ್ತು.

ಯಾದಗಿರಿಯಲ್ಲಿ ರೈಲುಗಾಡಿಯಿಳಿದು ನೇರ ಬಸ್‌ನಿಲ್ದಾಣಕ್ಕೆ ಹೋದೆವು. ರಾತ್ರಿಯ ಚಳಿ ಮೈ ಜುಮ್ಮೆನಿಸುತ್ತಿತ್ತು. ಬಸ್ ನಿಲ್ದಾಣಕ್ಕೆ ನಡೆಯಲು ತ್ರಾಣವಿಲ್ಲ ಶಕುಂತಲಾಬಾಯಿಗೆ, ವಾಹನ ಸೌಕರ್ಯವಿಲ್ಲ. ಆಳೊಬ್ಬ ನಮ್ಮ ಪ್ರವಾಸದ ಸಾಮಾನು

ಹೊತ್ತು ನಡೆದ ಬಸ್ ನಿಲ್ದಾಣಕ್ಕೆ. ರಸ್ತೆಗಳಲ್ಲಿ ಕೆಸರೋಕೆಸರು. ರಾತ್ರಿ ಮಳೆಬಿದ್ದು ದಾರಿದೀಪಗಳು ಅಲ್ಲಲ್ಲಿ ಮಿಣುಕು ಮಿಣುಕು ಉರಿಯುತಿದ್ದವು. ನೀರು ತುಂಬಿದ ಹಳ್ಳ ಕೊಳ್ಳಗಳು. ಹಳ್ಳಕೊಳ್ಳಗಳಲ್ಲಿ ಕಪ್ಪೆಗಳು ವಟಗುಟ್ಟುತ್ತಿದ್ದವು. ಶಕುಂತಲಾ ಬಾಯಿ ಎಡವಿ ಮುಗ್ಗರಿಸುತ್ತ "ಸಾಕಪ್ಪ ಸಾಕು" ಎಂದುಕೊಂಡು ಕೈಯಲ್ಲಿ ಜೀವ ಹಿಡಿದುಕೊಂಡು ಬಸ್‌ನಿಲ್ದಾಣ ಸೇರಿದರು. ಬಸ್ ಯಾದಗಿರಿಯಿಂದ ರಂಗಮ್‌ಪೇಟೆಗೆ ಹೊರಡುವುದು ಬೆಳಗ್ಗೆ ಎಂಟುಗಂಟೆಗೆಂದು ತಿಳಿದಾಗ ಬಸ್‌ನಿಲ್ದಾಣ ದಲ್ಲಿ ಹೇಗಪ್ಪ ನಾಲ್ಕುಗಂಟೆವರೆಗೆ ಕಾಲ ದಬ್ಬುವುದೆಂದು ನಮ್ಮ ಜೀವ ಹೌಹಾರಿತು. ಗಲೀಜು ಸ್ಥಳದಲ್ಲಿ ದುರ್ನಾತ ಕುಡಿಯುತ್ತ ಗದಗದ ನಡುಗುತ್ತ ಕುಳಿತೆವು.

ಬಸ್ ಯಾದಗಿರಿಯಿಂದ ರಂಗಂಪೇಟೆಗೆ ಬೆಳಗ್ಗೆ ಎಂಟೂವರೆಗೆ ಹೊರಟಿತು ಮಹಿಳೆಯರಿಗಾಗಿ ಕಟ್ಟಕಡೆಯಲ್ಲಿ ಸ್ಥಳ ಕಾದಿರಿಸಿತ್ತು. ಶಕುಂತಲಾಬಾಯಿಗೆ ಆ ಸ್ಥಳದಲ್ಲಿ ಕೂತುಕೊಳ್ಳಲು ಸ್ಥಳ ಸಿಕ್ಕಿತು. ಬೇರೆ ಕಡೆ ಕೂಡುವಂತೆಯೇ ಇಲ್ಲ. ಬಸ್ ಆಕೆಯನ್ನು ಮೇಲೆ ಕೆಳಗೆ ಎತ್ತಿ ಹಾಕುತ್ತಿತ್ತು. ಟಾರ್ ಹಾಕದೆ, ಮಣ್ಣು ಮುಚ್ಚದೆ, ಹಳ್ಳಕೊಳ್ಳಗಳು ದುರಸ್ತಾಗದೆ, ಜಲ್ಲಿಕಲ್ಲುಗಳು ಎದ್ದಿರುವ ರಸ್ತೆ ನಿಜಾಮ ಸರಕಾರದ ಸ್ವಾತಂತ್ರ್ಯ ಪೂರ್ವದ ಪೌರಾಡಳಿತ ವೈಖರಿಯ ನಗ್ನ ಸತ್ಯವನ್ನು ನಮಗೆ ಪ್ರದರ್ಶಿಸುತ್ತಿತ್ತು.

ಸ್ವಾತಂತ್ರ್ಯ ಬಂದು ಪೋಲೀಸ್ ಆ್ಯಕ್ಷನ್ನಾಗಿ ಭಾರತಕ್ಕೆ ಸೇರಿದಮೇಲೂ ಹೈದರಾಬಾದ್ ಕರ್ನಾಟಕ ಸುಧಾರಿಸಿರಲಿಲ್ಲವೆಂಬುದಕ್ಕೆ ನಮ್ಮ ಯಾದಗಿರಿ ರಂಗಂ ಪೇಟೆಗಳ ರಾಜಮಾರ್ಗ ನಿದರ್ಶನವಾಗಿತ್ತು. ರಂಗಂಪೇಟೆ ಸೇರಿದಾಗ ಸುಮಾರು ಉರಿಬಿಸಲ ಮಧ್ಯಾಹ್ನ ಸ್ವಲ್ಪ ತಗ್ಗಿದಂತೆ ತೋರುತ್ತಿದ್ದು ಎಕ್ಸಿಮಾ ಮತ್ತೆ ತನ್ನ ಪ್ರಭಾವ ಬೀರಿತ್ತು. ಹಣೆ ಊದಿ ದುರ್ವಾಸನೆಯ ನೀರಿನಿಂದ ಹೆಪ್ಪುಗಟ್ಟಿತ್ತು. ಮೈಯ್ಯಲ್ಲಿ ಜ್ವರ. ರಂಗಂ ಪೇಟೆ ಸೇರಿದುದೆ ತಡ ಹಾಸಿಗೆ ಬಿಚ್ಚಿ ಶಕುಂತಲಾಬಾಯಿ "ಪವಡಿಸು ಜೀವಾತ್ಮನೆ" ಹಾಡಿದರು.

ರಂಗಂ ಪೇಟೆಯ ಕಾರ್ಯಕ್ರಮ ನೆಟ್ಟಗಾಯಿತು. ಸಗರ ಕೃಷ್ಣಾಚಾರ್ಯರು ಕವಿಗಳು. ಹೈದರಾಬಾದ್ ಕರ್ನಾಟಕದ ಕಡೆ ಕಾರ್ಯಕರ್ತರು, ಸಜ್ಜನರು. ಪ್ರೌಢ ಶಾಲೆಯಲ್ಲೊ ಮಾಧ್ಯಮಿಕ ಶಾಲೆಯಲ್ಲೋ ಮುಖ್ಯೋಪಾಧ್ಯಾಯರಾಗಿದ್ದರೆಂದು ನನಗೆ ನೆನಪು. ಅವರಿಗೆ ತಮ್ಮ ಸನಿಹದಲ್ಲೇ ಇದ್ದ ಸುರಪುರದವರು ಬೆನ್ನು ಹತ್ತಿದರು. "ಬೆಂಗಳೂರಿಂದ ಬಂದ ಸುಪ್ರಸಿದ್ಧ ಗಮಕಿಗಳ ಕಾರ್ಯಕ್ರಮ ರಂಗಂ ಪೇಟೆಯವರಿಗೇ ಮೀಸಲಾಗಬಾರದು. ಅವರ ಕಾರ್ಯಕ್ರಮ ಸುರಪುರದವರೆಗೂ ವಿಸ್ತರಿಸಿ." ಎಂದುಬಲ ವಂತಪಡಿಸಿದರು. ನಮಗೆ ಕೃಷ್ಣಾಚಾರ್ಯರ ಪೇಚಾಟ ನೋಡಲಾರದ ಸಂಕಟವಾಗಿತ್ತು. ಸಗರರು "ಶಕುಂತಲಾಬಾಯಿಯ ದೇಹಸ್ಥಿತಿ ನೆಟ್ಟಗಿಲ್ಲ" ಎಂದರೂ ಅವರ ಮಾತುಗಳು ಸುರಪುರದವರಿಗೆ ಕಿವುಡಾಯಿತು. "ಪಾಂಡುರಂಗರಾವ್, ನಾನು ನಿಮ್ಮ ಕಾರ್ಯ ಕ್ರಮವನ್ನು ಸುರಪುರದಲ್ಲಿ ಮಾಡಿಸದಿದ್ದರೆ ರಂಗಂ ಪೇಟೆಯಲ್ಲಿ ಉಳಿಯುವುದೇ ಕಷ್ಟ.

ಸ್ವಾರ್ಥಿ, ಕಾರ್ಯಕ್ರಮವನ್ನು ರಂಗಂಪೇಟೆಯಲ್ಲಿ ಏರ್ಪಡಿಸಿದವರಿಗೆ ಸುರಪುರದಲ್ಲಿ ಏರ್ಪಡಿಸಲು ಆಗುತ್ತಿರಲಿಲ್ಲವೇ? ಕೇವಲ ಎರಡು ಮೂರು ಮೈಲಿಯ ಅಂತರವಿದೆ ಸುರಪುರ" ಎನ್ನುತ್ತಾರೆ ಎಂದು ತಮ್ಮ ಸಂಕಟವನ್ನು ಮುಂದಿಟ್ಟರು. ಶಕುಂತಲಾ ಬಾಯಿ ಕೃಷ್ಣಾಚಾರ್ಯರ ತಾಪತ್ರಯವನ್ನು ಕೇಳಲಾರದೆ "ಕಾವ್ಯವಾಚನ ಮಾಡುತ್ತೇನೆ ಒಪ್ಪಿಕೊಳ್ಳಿ" ಎಂದರು.

ನಾಡಹಬ್ಬದ ವಿಜಯದಶಮಿ ಕಾರ್ಯಕ್ರಮ ಸುರಪುರದಲ್ಲಿ ಗೋಪಾಲಸ್ವಾಮಿ ದೇವಸ್ಥಾನದಲ್ಲಿ ಏರ್ಪಟ್ಟಿತು. ಮಧ್ಯಾಹ್ನವೇ ಬಸ್ಸಿನಲ್ಲಿ ಸಗರ ಕೃಷ್ಣಾಚಾರ್ಯ ದಂಪತಿಗಳು ನಮ್ಮನ್ನು ಸುರಪುರಕ್ಕೆ ಕರೆದುಕೊಂಡು ಹೋದರು. ಪ್ರಸಿದ್ಧ ಇತಿಹಾಸ ಸಂಶೋಧಕರಾದ ಕಪಟರಾಳ ಕೃಷ್ಣರಾಯರ ದರ್ಶನವಾಯಿತು. ಊರಿನ ಬ್ರಾಹ್ಮಣರಿಗೆ ವಿಜಯದಶಮಿಯ ಭಾರಿ ಸಂತರ್ಪಣೆ ಗೋಪಾಲಸ್ವಾಮಿ ದೇವಸ್ಥಾನದ ಆವರಣದಲ್ಲಿ. ಸಂಜೆಯ ನಾಡಹಬ್ಬದಲ್ಲಿ ಶಕುಂತಲಾಬಾಯಿ ಲಕ್ಷ್ಮೀಶನ ಜೈಮಿನಿ ಭಾರತದಿಂದ ಒಂದು ಕಥಾಭಾಗ ವಾಚನ ಮಾಡಿದರು ಗೋಪಾಲಸ್ವಾಮಿ ದೇವರ ಸನ್ನಿಧಿಯಲ್ಲಿ. ಆಕೆಗೆ ಸಂತೋಷ "ಲಕ್ಷ್ಮೀಶನ ಊರಾದ ಸುರಪುರದಲ್ಲಿ ತನ್ನ ಕಾವ್ಯ ವಾಚನವಾಯಿತಲ್ಲ." ಎಂದು. ನನ್ನ ಅಭಿಪ್ರಾಯದಲ್ಲಿ ಕಡೂರು ಜಿಲ್ಲೆಯ ದೇವನೂರೇ ಲಕ್ಷ್ಮೀಶನ ಹುಟ್ಟು ಸ್ಥಳವೆಂದು ಖಚಿತವಾಗಿದೆ.

ನಮ್ಮ ನಾಡಹಬ್ಬದ ಗುಲ್ಬರ್ಗಾ ಜಿಲ್ಲಾ ಪ್ರವಾಸ ಹೀಗೆ ಒಂದು ಘಟ್ಟಕ್ಕೆ ಬಂತು. ಮಧ್ಯಾಹ್ನ ರಂಗಂ ಪೇಟೆಯಿಂದ ಬಸ್ಸು ಹತ್ತಿ ಯಾದಗಿರಿಗೆ ಬಂದೆವು. ಯಾದಗಿರಿ ರೈಲ್ವೆ ನಿಲ್ದಾಣ ಮುಟ್ಟಬೇಕು. ಮಾರ್ಗ ಮಧ್ಯೆ ರೈಲುಗೇಟು ಹಾಕಿದೆ. "ಈ ರೈಲುಗಾಡಿ ಸಂಜೆ ಆರುಗಂಟೆಗೆ ಗುಂತಕಲ್ಲು ಮುಟ್ಟಿಸುತ್ತದೆ. ಆನಂತರ ಬೆಂಗಳೂರಿಗೆ ಇನ್ನೊಂದು ರೈಲು ಹತ್ತಬೇಕು. ಈ ರೈಲು ತಪ್ಪಿದರೆ ಯಾದಗಿರಿ ರೈಲ್ವೆ ನಿಲ್ದಾಣದಲ್ಲಿ ಸರಿರಾತ್ರಿಯೆಲ್ಲ ಕೊಳೆಬೀಳಬೇಕು. ಶಕುಂತಲಾಬಾಯಿಯ ಗತಿಯೇನು?" ಎಂದು ನಾನು ಹೌಹಾರಿದೆ. "**ಕನ್ನಡ ಸೇನೆಗೆ ಮುಡಿಪಿಟ್ಟ ದೇಹ ಕನ್ನಡಕ್ಕಾಗಿಯೇ ಅಳಿಯಿತು ಎಂದುಕೊಳ್ಳಿ**" ಸುಸ್ತಾದ ಶಕುಂತಲಾಬಾಯಿ ಅಂದರು. ಅಷ್ಟರೊಳಗೆ ರೈಲುಗೇಟು ತೆರೆಯಿತು. ರೈಲು ಅರ್ಧಗಂಟೆ ಹೊತ್ತಾಗಿ ಬರುವುದೆಂದು ತಿಳಿದು ಸಮಾಧಾನದ ನಿಟ್ಟುಸಿರು ಬಿಟ್ಟೆ.

ಒಂದೇ ಮಾತಿನಲ್ಲಿ ಮುಗಿಸುತ್ತೇನೆ—ಯಾದಗಿರಿಯಲ್ಲಿ ನಮ್ಮ ರೈಲುಗಾಡಿಯಲ್ಲಿ ಸ್ಥಳ ಸಿಕ್ಕಿತು ನೂಕುನುಗ್ಗಲಲ್ಲಿ. ಅರ್ಧಗಂಟೆ ಹೊತ್ತಾಗಿ ಸಂಜೆ ಗುಂತಕಲ್ಲು ಸೇರಿದೆವು. ಬೇರೆ ರೈಲುಗಾಡಿ ಹಿಡಿದು ಮಾರನೆಯ ದಿನ ಬೆಳಗ್ಗೆ ಬೆಂಗಳೂರು ಸೇರಿ ನಮ್ಮ ಮನೆ ಮುಟ್ಟುವ ಹೊತ್ತಿಗೆ ಎಂಟುಗಂಟೆಯಾಗಿತ್ತು.

ಶಕುಂತಲಾಬಾಯಿ ಬೆಂಗಳೂರು ಮುಟ್ಟಿದ್ದೆ ಹಾಸಿಗೆ ಹಿಡಿದರು. ಚೇತರಿಸಿಕೊಳ್ಳುವುದಕ್ಕೆ ಒಂದು ತಿಂಗಳು ಹಿಡಿಯಿತು.

ದಾಸ ಸಾಹಿತ್ಯ ಪಿತಾಮಹರ ಲಿಂಗಸೂಗೂರಲ್ಲಿ

ಹೈದರಾಬಾದು ಕರ್ಣಾಟಕದ, ರಾಯಚೂರು ಜಿಲ್ಲೆಯ ಲಿಂಗಸೂಗೂರು 1959-60ರಲ್ಲಿ ನಾಡಹಬ್ಬದ ಸಲುವಾಗಿ ನಮ್ಮನ್ನು ಬರಮಾಡಿಕೊಂಡಿತು. ಬಿಜಾಪುರದ ರಾವ್ ಸಾಹೇಬ ಹಳಕಟ್ಟಿಯವರು ಯಾವ ಶ್ರದ್ಧೆಯಿಂದ ವಚನ ವಾಙ್ಮಯವನ್ನು ಶೇಖರಿಸಿ ವಚನ ಸಾಹಿತ್ಯ ಪಿತಾಮಹರೆನಿಸಿಕೊಂಡರೋ ಅಷ್ಟೇ ಶ್ರದ್ಧೆಯಿಂದ ದಾಸಸಾಹಿತ್ಯ ವನ್ನು ಶೇಖರಿಸಿ, ವರದ ಸಾಹಿತ್ಯ ಮಂಡಲವನ್ನು ಕಟ್ಟಿ ತಮ್ಮ ತನುಮನಧನಗಳನ್ನು ದಾಸಸಾಹಿತ್ಯ ಪ್ರಚಾರಕ್ಕೆ ಅರ್ಪಿಸಿ ಕೃತಕೃತ್ಯರಾದ ದಾಸಸಾಹಿತ್ಯ ಪಿತಾಮಹ ಪರಮ ಪೂಜ್ಯ ಗೋರೇಬಾಳ ಹನುಮಂತರಾಯರ ಛಾವಣಿಲಿಂಗಸೂಗೂರಿಗೆ ಗಮಕಯಾತ್ರೆ ಹೋಗುತ್ತಿರುವೆವಲ್ಲ ! ಎಂಬ ಹಿಗ್ಗು ನನಗೂ ಶಕುಂತಲಾಬಾಯಿಗೂ. ರಾಯಚೂರಿಗೆ ಮಟಮಟ ಮಧ್ಯಾಹ್ನ 12-30 ಗಂಟೆಗೆ ತಲುಪಿದೆವು ರೈಲುಗಾಡಿಯಲ್ಲಿ. ನಮ್ಮ ಪ್ರಾರಬ್ಧ ಗಾಡಿ ಅರ್ಧಗಂಟೆ ಹೊತ್ತಾಗಿ ತಲುಪಿತು. 12ಗಂಟೆಗೆ ರಾಯಚೂರಿನಿಂದ ಒಂದು ಬಸ್ಸು ಹೊರಡುವುದಿತ್ತು ಛಾವಣಿ ಲಿಂಗಸೂಗೂರಿಗೆ. ನಾವು ರೈಲುಗಾಡಿಯಿಂದ ಇಳಿಯುವು ದಕ್ಕೂ ಆ ಬಸ್ಸು ಬುಸ್‌ಯೆಂದು ಗಾಡಿ ಬಿಡುವುದಕ್ಕೂ ಸರಿಹೋಯಿತು. ನಾಲ್ಕುವರೆ ಗಂಟೆಯ ಬಸ್ಸಿನಲ್ಲಿ ದೊಡ್ಡಲಿಂಗಸೂಗೂರಿಗೆ ಹೊರಟೆವು.ದಾರಿಯಲ್ಲಿ ನಮ್ಮಬಸ್ಸು ಕೆಟ್ಟಿತು. ರಿಪೇರಿಯಾಗಿ ಛಾವಣಿ ಲಿಂಗಸೂಗೂರು ಸೇರುವಹೊತ್ತಿಗೆ ರಾತ್ರಿ ಹತ್ತು ಗಂಟೆ. ನಾಡಹಬ್ಬದ ಮಂಟಪದಲ್ಲಿ ಶ್ರೋತೃಗಳು ನಮಗಾಗಿ ಸುಮಾರು ಮೂರು ನಾಲ್ಕು ಗಂಟೆಕಾಲ ಸಹನೆ ಸಂಯಮಗಳಿಂದ ಕಾದು ಕೂತಿದ್ದರು. ಲಿಂಗಸೂಗೂರಿಗೆ ಎರಡು ಮೂರು ಮೈಲಿ ದೂರದಲ್ಲಿರುವ ವರದೇಂದ್ರ ಕ್ಷೇತ್ರವೆನ್ನಿಸಿದ ಸಣ್ಣ ಲಿಂಗ ಸೂಗೂರಿನಿಂದ ವಯೋವೃದ್ಧರೂ ಜ್ಞಾನವೃದ್ಧರೂ ಆದ ಗೋರೇಬಾಳ ಹನುಮಂತ ರಾಯರು ಬಂದು ನಮಗಾಗಿ ಕಾದಿದ್ದರು. ನಾವು ಬಸ್ಸು ಇಳಿದವರೇ ದಡಬಡ.... ಪ್ರಾಣೇಶರಾವ್ ವಕೀಲರ ಮನೆಯಲ್ಲಿ ಮುಖ ಕೈಕಾಲು ತೊಳೆದು, ಅವರು ಕೊಟ್ಟ ಚಾ ಕುಡಿದು ವೇದಿಕೆಯೇರಿದೆವು. ಶಕುಂತಲಾಬಾಯಿ, ಶರಣರ ವಚನಗಳು, ದಾಸರ ದೇವರ ನಾಮಗಳು, ಕುಮಾರವ್ಯಾಸ ಭಾರತದ "ದ್ರೌಪದೀ ಮಾನಸಂರಕ್ಷಣ" ಭಾಗದಿಂದ ದ್ರೌಪದಿಯ ಕೃಷ್ಣಸ್ತೋತ್ರ ಪದ್ಯಗಳನ್ನು ಹೇಳಿದರು. ನನ್ನ ಹಿತಮಿತವಾದ ಪ್ರಾಸಂಗಿಕ ನಿರೂಪಣೆಯಿತ್ತೆಂದು ಹೇಳಬೇಕಾಗಿಲ್ಲ. ಗೋರೇಬಾಳರು ತಮ್ಮ ಛಾವಣಿ ಲಿಂಗಸೂಗೂರಿಗೆ ಬೆಳಗ್ಗೆಯೇ ಬರಬೇಕೆಂದು ಆಹ್ವಾನವಿತ್ತು ರಾತ್ರೋರಾತ್ರಿ ನಡೆದು ಬಿಟ್ಟರು.

ನಾವು ಆಮೇಲೆ ರಾತ್ರಿ ಹನ್ನೆರಡುಗಂಟೆಯ ಹೊತ್ತಿನಲ್ಲಿ ಊಟದ ಶಾಸ್ತ್ರ ಮಾಡಿ ಹಾಸಿಗೆ ಸುರುಳಿ ಬಿಚ್ಚಿ ಕಾಲು ಚಾಚಿದೆವು.

ಬೆಳಗಾಯಿತು. ಪ್ರಾಣೇಶರಾವ್ ವಕೀಲರು ನಮಗೆ ರಾಜೋಪಚಾರ ಮಾಡಿ ಗೋರೇಬಾಳರ ಲಿಂಗಸೂಗೂರಿಗೆ ಕಳಿಸಿಕೊಟ್ಟರು.

ನಿಸ್ಪೃಹರೂ ಮಹಾ ವಾತ್ಸಲ್ಯಮಯಿಯೂ ಆದ ಗೋರೇಬಾಳರು ವಿಜಯ ದಶಮಿಯ ಬೆಳಗ್ಗೆ ನಮ್ಮನ್ನು ತಮ್ಮ ಮನೆಯಲ್ಲಿ 'ಬನ್ನಿ ಬನ್ನಿ' ಎಂದು ಹಸನ್ಮುಖ ದಿಂದ ಸ್ವಾಗತಿಸಿದರು. ದಾಸಸಾಹಿತ್ಯವನ್ನು ಕಲೆಹಾಕಿ, ಪರಿಷ್ಕರಿಸಿ, ಪ್ರಕಟಿಸಿದ ತಮ್ಮ ಕಡುಕಷ್ಟದ ಸಾಹಸದ ಇತಿಹಾಸವನ್ನು ವಿವರಿಸಿದರು. ಗೋಪಾಲದಾಸರು ರಚಿಸಿದ ವರ್ಣಚಿತ್ರಗಳನ್ನು ತೋರಿಸಿದರು. ಶಕುಂತಲಾಬಾಯಿಯನ್ನು ಮಗಳಂತೆ ಆದರಿಸಿದರು.

ವಿಜಯದಶಮಿಯ ಮಧ್ಯಾಹ್ನ ಶ್ರೀ ವರದೇಂದ್ರ ತೀರ್ಥರ ಬೃಂದಾವನದ ಪವಿತ್ರ ಸಾನಿಧ್ಯದಲ್ಲಿ ಶಕುಂತಲಾಬಾಯಿಯಿಂದ ಶ್ರೀ ಮನೋಹರ ವಿಠಲ ವಿರಚಿತ "ಅನಂತ ಪದ್ಮನಾಭನ ಕಥೆ" ಕಾವ್ಯವಾಚನ. ಶಕುಂತಲಾಬಾಯಿಗೆ ಕಾವ್ಯ ಹೊಸದು. ಹೆಸರನ್ನು ಕೂಡ ಕೇಳಿರಲಿಲ್ಲ. ಮನೋಹರ ವಿಠಲ ಕವಿ "ಶ್ರೀ ಅನಂತನಾಥನ ಕಥಾ" ಕಾವ್ಯವನ್ನು ಭಾಮಿನಿ ಷಟ್ಪದಿ ಛಂದಸ್ಸಿನಲ್ಲಿ 1760ರಲ್ಲಿ ರಚಿಸಿರಬೇಕು. ಶಕುಂತಲಾಬಾಯಿಗೆ ಕುಮಾರವ್ಯಾಸನೇ ಮರುವುಟ್ಟು ಪಡೆದ ಕಾವ್ಯವೋ ಎನ್ನುವಂತಿತ್ತು "ಅನಂತಪದ್ಮ ನಾಭನ ಕಥೆ." ನಾನು ಪ್ರಾಸಂಗಿಕ ನಿರೂಪಣೆ ಕೊಟ್ಟೆ. ಕಾವ್ಯವಾಚನ ಒಂದು ಗಂಟೆ ಯಾಯಿತು. ವರದೇಂದ್ರರ ಬೃಂದಾವನದ ಮೇಲೆ ತುಳಸೀ ಗಿಡ ಬೆಳೆದಿರುವುದು ವರ ದೇಂದ್ರ ಕ್ಷೇತ್ರದ ವೈಶಿಷ್ಟ್ಯ. ಮಾಧ್ವ ಯತಿವರ್ಯರ ಬೃಂದಾವನಗಳಲ್ಲಿ ಇದು ಅಪರೂಪ.

ಗೋರೇಬಾಳರು ನಮ್ಮನ್ನು ಊರಿನ ವಿಜಯದಶಮಿಯ ಸಂಭ್ರಮದಲ್ಲಿ ಪಾಲು ಗೊಳ್ಳುವಂತೆ ಮಾಡಿದರು.

ಸುಮಾರು ಒಂದು ನೂರು ರೂಪಾಯಿಗಳಷ್ಟು ಬೆಲೆಯ ವರದೇಂದ್ರ ಸಾಹಿತ್ಯ ಮಂಡಲದ ದಾಸಸಾಹಿತ್ಯ ನಿಧಿಯನ್ನು ನಮಗೆ ಕೊಟ್ಟು "ನಾನು ಬಡವ, ನಿಮಗೆ ಇನ್ನೇನು ಕೊಡಲಿ ?" ಎಂದು ಕೈಮುಗಿದರು. "ನೀವು ಹಿರಿಯರು, ದಾಸಸಾಹಿತ್ಯಕ್ಕೆ ನಿಮ್ಮನ್ನೆ ಅರ್ಪಿಸಿಕೊಂಡ ಮಹಾಪುರುಷರು. ನಮಗೆ ದಾಸಸಾಹಿತ್ಯ ನಿಧಿಯನ್ನೇ ಕೊಟ್ಟಿದ್ದೀರಿ. ಇನ್ನೇನು ಬೇಕು ? ನಿಮ್ಮ ಆಶೀರ್ವಾದವಿದ್ದರೆ ಸಾಕು. ಗಮಕ ಯಾತ್ರೆ ಯಲ್ಲಿ ನಿಮ್ಮ ದಾಸಸಾಹಿತ್ಯವನ್ನು ಪ್ರಚಾರ ಮಾಡುತ್ತೇನೆ. ನಾನು ದಾಸಸಾಹಿತ್ಯಕ್ಕೆ ಯಥಾಮತಿ ಬರಹಗಳ ಮೂಲಕ ಸೇವೆಸಲ್ಲಿಸುತ್ತೇನೆ. ದಾಸಸಾಹಿತ್ಯವನ್ನು ಅಧ್ಯಯನ ಮಾಡುವುದಕ್ಕೆ ನೀವು ಪ್ರೇರಕರಾದಿರಿ." ಎಂದೆ.

ಪೂಜ್ಯ ಗೋರೇಬಾಳ ಹನುಮಂತರಾಯರು ಬೆಂಗಳೂರಿಗೆ ಬರುತ್ತಿದ್ದರು ತಮ್ಮ ದಾಸಸಾಹಿತ್ಯ ಪ್ರಕಟಣೆಗಾಗಿ. ಜಗನ್ನಾಥದಾಸರ "ಹರಿಕಥಾಮೃತ ಸಾರ"ಕ್ಕೆ ವಿಪುಲ ವಾದ ಟೀಕೆ ಟಿಪ್ಪಣಿಗಳನ್ನು ಬರೆದು ಆರು ಭಾಗಗಳ ಬೃಹತ್ಪ್ರಮಾಣ ಗ್ರಂಥವಾಗಿ ಪ್ರಕಟಿಸಿದ ಕೀರ್ತಿ ಅವರದು. ಅದರ ಒಂದೆರಡು ಭಾಗಗಳು ಬೆಂಗಳೂರಲ್ಲೂ ಮುದ್ರಣ ಕಂಡಿತು. ಆ ಸಮಯದಲ್ಲಿ ನಮ್ಮ ನೆಹರು ನಗರದ "ಮಕ್ಕಳ ಮಂಟಪ"ದ ಮನೆಗೂ ಒಂದೆರಡು ಸಲ ಬಂದು ಹೋದರು. ತರುವಾಯ ಅವರಿಗೆ ವಯೋಧರ್ಮದಿಂದ ನಮ್ಮ

ಮನೆಗೆ ಬಂದು ಹೋಗುವುದು ಅಸಾಧ್ಯವಾಯಿತು. "ಶಂಕರಪುರದಲ್ಲಿ ಆದ್ಯ ಸೀತಾ ರಾಮಾಚಾರ್ಯರ ಮನೆಯಲ್ಲಿ ಇಳಿದುಕೊಳ್ಳುತ್ತೇನೆ. ತಾವು ಅಲ್ಲಿಗೆ ದಯಮಾಡಿಸ ಬೇಕು" ಎಂದು ಪತ್ರಹಾಕುತ್ತಿದ್ದರು. ಬೆಂಗಳೂರಿಗೆ ಬಂದಾಗಲೆಲ್ಲ ನಾನು ಹೋಗಿ ಕಾಣುತ್ತಿದ್ದೆ.

ಕೀರ್ತನ ಕೇಸರಿ ಬಿ. ಶಿವಮೂರ್ತಿಶಾಸ್ತ್ರಿಗಳು ತಮ್ಮ ಅಧ್ಯಕ್ಷ ಕಾಲದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಗೋರೇಬಾಳ ಹನುಮಂತರಾಯರಿಗೆ ಒಂದು ಸನ್ಮಾನ ಸಭೆ ಕೂಡಿಸಿದರು. ಆಗ ಗೋರೇಬಾಳರ ದರ್ಶನವಾಯಿತು ; ಅದೇ ಕಡೆ. ಸಹೃದಯರೂ, ಸ್ವತಃ ಸಾಹಿತಿಗಳೂ ಆದ ಡಾ|| ಸಿದ್ಧಯ್ಯಪುರಾಣಿಕರು ತಮ್ಮ ಡೆಪ್ಯೂಟಿ ಸೆಕ್ರೆಟರಿ ಆಫ್ ಎಜುಕೇಷನ್ ಅಧಿಕಾರಾವಧಿಯಲ್ಲಿ ಗೋರೇಬಾಳರ ಸಾಹಿತ್ಯ ಸೇವೆ ಸ್ಮರಿಸಿ, ಸರಕಾರದಿಂದ ಧನ ಸಹಾಯ ಕೊಡಿಸಿದ ವಿಷಯವನ್ನು ಗೋರೇಬಾಳರು ನನ್ನಲ್ಲಿ ಪ್ರಸ್ತಾಪಿಸಿದ ವಿಷಯವನ್ನು ಇಲ್ಲಿ ನೆನೆಯುವುದು ನನ್ನ ಕರ್ತವ್ಯವಾಗಿದೆ.

ಆಂಧ್ರರಾಜ್ಯದ ಹೈದರಾಬಾದಿನಲ್ಲಿ

ಭಾರತ ರಾಷ್ಟ್ರ ಸ್ವತಂತ್ರವಾದ ಮೇಲೆ ಭಾಷಾವಾರು ಪ್ರಾಂತ್ಯಗಳು ವಿಂಗಡ ವಾಗುವುದಕ್ಕೆ ಪ್ರಾರಂಭವಾಯಿತು. ನೈಜಾಮ ರಾಜ್ಯದ ರಾಜಧಾನಿಯಾಗಿದ್ದ ಹೈದರಾ ಬಾದು ಆಂಧ್ರ ರಾಜ್ಯದ ರಾಜಧಾನಿಯಾಯಿತು. ಮಾನ್ವಿ ನರಸಿಂಗರಾಯರ ಪ್ರೇರಣೆ ಯಿಂದ 1957ರಲ್ಲಿ ನಡೆದ ಹೈದರಾಬಾದಿನ ನಾಡಹಬ್ಬದಲ್ಲಿ ಕಾವ್ಯವಾಚನ ಮಾಡ ಬೇಕೆಂದು ಶಕುಂತಲಾಬಾಯಿಗೆ ಆಹ್ವಾನ ಬಂತು. ಶಕುಂತಲಾಬಾಯಿಯ ದೇಹಸ್ಥಿತಿ ಸಾಧಾರಣವಾಗಿ ಯಾವಾಗಲೂ ಅಷ್ಟಕ್ಕಷ್ಟೆ. ಆದುದರಿಂದ, ಅವರು "ನನ್ನ ದೇಹಸ್ಥಿತಿ ಚೆನ್ನಾಗಿಲ್ಲ. ಹೈದರಾಬಾದಿಗೆ ಹೋಗಲು ಸಾಧ್ಯವಿಲ್ಲ." ಎಂದು ಮೂಗೆಳೆದರು. ನಾನು ಅನಾನುಕೂಲಗಳನ್ನು ತಿಳಿಸಿ ಕೈತೊಳೆದುಕೊಂಡೆ. ಮಾನ್ವಿಯವರು ರಾಘವೇಂದ್ರ ಇಟಗಿಯವರಿಗೆ "ಶಕುಂತಲಾಬಾಯಿ ದೇಹಸ್ಥಿತಿ ಹೇಗಿದೆ? ತಿಳಿಸಿ" ಎಂದು ಪತ್ರ ಬರೆ ದರು. ನಮ್ಮ ನೆಹರೂನಗರದ "ಮಕ್ಕಳ ಮಂಟಪ" ಮನೆಯ ಸನಿಹದಲ್ಲೇಇದ್ದ ರಾಘವೇಂದ್ರ ಇಟಗಿಯವರು ಶಕುಂತಲಾಬಾಯಿಯನ್ನು ಕಂಡರು. "ಶಕುಂತಲಾಬಾಯಿ ಈಗ ನಿಮ್ಮ ಆರೋಗ್ಯ ಸುಧಾರಿಸಿದೆಯಲ್ಲ ; ಹೈದರಾಬಾದಿನ ನಾಡಹಬ್ಬದ ಕಾರ್ಯ ಕ್ರಮ ಒಪ್ಪಿಕೊಳ್ಳಿ" ಎಂದು ಒತ್ತಾಯಿಸಿದರು. ಕರ್ಣಾಟಕ ಸಂಘದ ಹಾಗೂ ನಾಡ ಹಬ್ಬದ ಉಪಾಧ್ಯಕ್ಷರಾಗಿದ್ದ ಇಂಜಿನಿಯರ್ ಜಿ. ವಿ. ಸೂಳೀಭಾವಿಯವರೂ ಒತ್ತಾಯದ ಪತ್ರ ಬರೆದು "ಹೈದರಾಬಾದಿನಲ್ಲಿ ಪ್ರಸಿದ್ಧ ಡಾಕ್ಟರುಗಳಿಗೆ ಕೊರತೆಯಿಲ್ಲ. ಶಕುಂತಲಾ ಬಾಯಿಯವರಿಗೆ ಉತ್ತಮ ವೈದ್ಯ ಸಹಾಯ ನೀಡೋಣ, ದಯಮಾಡಿ ಆಮಂತ್ರಣ ಒಪ್ಪಿಕೊಳ್ಳಿ" ಎಂದು ವಿನಂತಿಸಿದರು. ಇನ್ನು ನಾವು ನಿರಾಕರಿಸಬಾರದೆಂದು ಆಹ್ವಾನ ಸ್ವೀಕರಿಸಿದೆವು.

ಹೈದರಾಬಾದ್ ರೈಲ್ವೆಸ್ಟೇಷನ್ ತಲುಪಿ ಗಾಡಿಯಿಂದ ಇಳಿಯುತ್ತಲೆ ಜಿ. ವಿ. ಸೂಳೀಭಾವಿ, ಮಾಸ್ವಿ ನರಸಿಂಗರಾಯರು, ಜೆ. ಕೆ. ಪ್ರಾಣೇಶಾಚಾರ್ಯರು, ನಮಗೆ ಸುಸ್ವಾಗತ ಬಯಸಿದರು. ಹೂ ಹಾರ ಹಾಕಿದರು. ನಾವು ಜೆ. ಕೆ. ಪ್ರಾಣೇಶಾಚಾರ್ಯರ ಅತಿಥಿಗಳಾದೆವು.

ಹೈದರಾಬಾದಿನ ನಾಡಹಬ್ಬ ಕನ್ನಡಿಗರೇ ಬಹುತೇಕ ವಾಸಿಸುವ ಬಾಗ್‌ಲಿಂಗಂ ಪಲ್ಲಿಯಲ್ಲಿರುವ ನೃಪತುಂಗ ವಿದ್ಯಾಲಯದ ಬಯಲಲ್ಲಿ ನಿರ್ಮಿಸಿದ ಭವ್ಯ ಮಂಟಪದಲ್ಲಿ ಏರ್ಪಾಡಾಗಿತ್ತು. ನಾವು ಎರಡು ದಿವಸಗಳ ಕಾರ್ಯಕ್ರಮಗಳಲ್ಲಿ ಭಾಗವಹಿಸಿದೆವು.

ನಮ್ಮನ್ನಗಲಿದ ಇಬ್ಬರು ಹೈದರಾಬಾದು ಕರ್ಣಾಟಕದ ಗೆಳೆಯರು

ಜೆ. ಕೆ. ಪ್ರಾಣೇಶಾಚಾರ್ಯರು ಸರಳರು, ಸಜ್ಜನರು, ಹೈದರಾಬಾದಿನಲ್ಲಿ ಪ್ರತಿಷ್ಠಿತವ್ಯಕ್ತಿ. ಉತ್ಕಟ ಕನ್ನಡಾಭಿಮಾನಿ, ಕವಿ. ಸಾಧನಾ ಅಚ್ಚುಕೂಟ ನಡೆಸುತ್ತಿದ್ದರು. ಕನ್ನಡ ಲೇಖಕರಿಗೆ ಆಶ್ರಯದಾತರಾಗಿದ್ದರು. ಅವರ ಪತ್ನಿ ಲೀಲಾವತಿಬಾಯಿ ವಿಶ್ವವಿದ್ಯಾನಿಲಯದ ಪದವೀಧರೆ. ಪತಿಯ ಕಾರ್ಯದಲ್ಲಿ ಒತ್ತಾಸೆಯಾಗಿದ್ದರು. ಪ್ರಾಣೇಶಾಚಾರ್ಯರು ರಾಘವೇಂದ್ರ ಇಟಗಿಯವರ ಸೌಭಾಗ್ಯವತಿ ಶೋಭಾಬಾಯಿಗೆ ಚಿಕ್ಕಪ್ಪ. ಪ್ರಾಣೇಶಾಚಾರ್ಯ ದಂಪತಿಗಳು ನಮಗೆ ಅವರ ಮನೆಯಲ್ಲಿ ಪ್ರೀತಿ ವಿಶ್ವಾಸಗಳಿಂದ ನೀಡಿದ ಆತಿಥ್ಯ ಎಷ್ಟು ಹೊಗಳಿದರೂ ಕಡಮೆಯೆ. ಪ್ರಾಣೇಶಾಚಾರ್ಯರು ನಮ್ಮ ಹೈದರಾಬಾದು ಪ್ರವಾಸವಾದ ಒಂದೆರಡು ವರ್ಷಗಳಲ್ಲಿ ದಿವಂಗತರಾದರು. ಆಗ ಅವರಿಗೆ 59 ಅಥವಾ 60 ವರ್ಷಗಳಾಗಿದ್ದರೆ ಹೆಚ್ಚು. ಪ್ರಾಣೇಶಾಚಾರ್ಯರ ನೆನಪಿಗೆ ನಮ್ಮಲ್ಲಿ ಅವರ "ಸ್ವಾಗತ" ಕವನವನ್ನು "ಕರ್ಣಾಟಕ ದರ್ಶನ" ಕಾವ್ಯರೂಪಕ ಕಾರ್ಯಕ್ರಮ ಕೊಡುವಾಗ ಮರೆಯದೆ ಉಪಯೋಗಿಸಿಕೊಳ್ಳುತ್ತಾರೆ ಶಕುಂತಲಾಬಾಯಿ.

ನಮ್ಮ ಹೈದರಾಬಾದಿನ ಪ್ರವಾಸದಲ್ಲಿ ನಮಗೆ ದೊರಕಿದ ಇನ್ನೊಂದು ಅತ್ಯಮೂಲ್ಯ ಸ್ನೇಹ ಮಾಸ್ವಿನರಸಿಂಗರಾಯರದು. ಅವರು ಹೈದರಾಬಾದು ಸಂಸ್ಥಾನದಲ್ಲೇ ವರ್ಚಸ್ವಿ ವ್ಯಕ್ತಿಯಾಗಿದ್ದರು. ಹೈದರಾಬಾದು ಆಂಧ್ರಕ್ಕೆ ಸೇರಿದ ಮೇಲೆ ಆ ರಾಜ್ಯದ ಸರಕಾರದಲ್ಲಿ ಇನ್‌ಫರ್‌ಮೇಷನ್ ಅಂಡ್ ಪಬ್ಲಿಸಿಟಿ ಇಲಾಖೆಯಲ್ಲಿ ಅಧಿಕಾರಿಗಳಾಗಿದ್ದರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಬಿ. ಎಂ. ಶ್ರೀ., ಟಿ. ಎಸ್. ವೆಂಕಣ್ಣಯ್ಯ, ಎ. ಆರ್. ಕೃಷ್ಣಶಾಸ್ತ್ರಿಗಳ ಶಿಷ್ಯರಾಗಿದ್ದರು. ಮೈಸೂರು ಕಡೆಯ ಸಾಹಿತಿಗಳೆಲ್ಲ ಅವರ ವಿಶ್ವಾಸಕ್ಕೆ ಪಾತ್ರರಾಗಿದ್ದರು. ಮಾಸ್ವಿಯವರು ಪ್ರತಿಷ್ಠಿತ ಕನ್ನಡ ವಿದ್ವಾಂಸರು. ಸುಪ್ರಸಿದ್ಧ ಸಾಹಿತಿ. ಹೈದರಾಬಾದು ಕರ್ಣಾಟಕದ ಕನ್ನಡ ಚಳುವಳಿಗೆಲ್ಲ ಜೀವದುಸಿರು. ಅವರ "ನಡುಗನ್ನಡ" ಭಾಷಾಶಾಸ್ತ್ರ ಗ್ರಂಥ ಅವರ ಉಜ್ವಲ ಪಾಂಡಿತ್ಯಕ್ಕೆ ಸಾಕ್ಷಿ. ನಮಗೆ ಅವರ ಸಹಿಹಾಕಿ ನೆನಪಿನ ಕಾಣಿಕೆಯಾಗಿ ಕೊಟ್ಟ "ನಡುಗನ್ನಡ" ಗ್ರಂಥವನ್ನು ನಾನು ಜೋಪಾನವಾಗಿ ಇಟ್ಟುಕೊಂಡಿದ್ದೇನೆ. ನನ್ನ ಸರಸ್ವತೀ ಭಂಡಾರದ ಬೀರುವಿನ ಬಾಗಿಲು

ತೆಗೆದು ನನಗೆ ಬೇಕಾದ ಪುಸ್ತಕವನ್ನು ಬೆದಕಿದಾಗ "ನಡುಗನ್ನಡ" ಪುಸ್ತಕ ಕೈಗೆ ಸಿಗುತ್ತದೆ. ಮಾನ್ವಿ ನರಸಿಂಗರಾಯರು ನನ್ನ ಕಣ್ಣು ಮುಂದೆ ಬಂದು ನಿಲ್ಲುತ್ತಾರೆ. ಮಹಾಪಂಡಿತರಾದರೂ ವಿನಯಪರರಾಗಿ, ಅಧಿಕಾರಿಯಾದರೂ ಸರಳರಾಗಿ ನಡೆದು ಕೊಳ್ಳುತಿದ್ದ ಸ್ನೇಹಮಯಿಯಾದ ಮಾನ್ವಿ ನರಸಿಂಗರಾಯರು ಬೆಂಗಳೂರಿಗೆ ಬಂದಾಗ ನಮ್ಮ ಮನೆಗೆ ಬಂದು ಹೋಗುತಿದ್ದ ವಾತ್ಸಲ್ಯವನ್ನು ನಾವು ಹೇಗೆ ಮರೆಯೋಣ? ನಮಗೆ ಪರಿಚಯವಾದ ಒಂದೆರಡು ವರ್ಷಗಳಲ್ಲೆ ಅವರು ತೀರಿಕೊಂಡು ನಮಗೆ ತುಂಬಲಾರದ ಸ್ನೇಹ ನಷ್ಟವನ್ನುಂಟು ಮಾಡಿದರು.

"ಶಕುಂತಲಾ ಬಾಯಿಗೆ ಸಂಗೀತ ಜ್ಞಾನವಿಲ್ಲ"

ಹೈದರಾಬಾದಿನಲ್ಲಿ ಇಳಿದ ಮೂರನೆಯ ದಿವಸವೇ ನಮಗೆ ಮಾನ್ವಿ ನರಸಿಂಗರಾಯರಿಂದ ಊಟಕ್ಕೆ ಬರಬೇಕೆಂದು ಆಹ್ವಾನ. ಬೆಳಿಗ್ಗೆ ಸಕಾಲದಲ್ಲಿ ಅವರ ಮನೆಗೆ ಹೋದೆವು. ಊಟಕ್ಕೆ ಕುಳಿತಿದ್ದೇವೆ; ಮಾನ್ವಿಯವರು ನಗುತ್ತ, "ಶಕುಂತಲಾ ಬಾಯರೆ, ನಿಮಗೆ ಸಂಗೀತಾಭ್ಯಾಸ ಸಾಲದು. ಸಂಗೀತ ಪ್ರೌಢಿಮೆಯಿಲ್ಲದಿರುವುದರಿಂದಲೇ ನಿಮ್ಮ ಭಾರತ ವಾಚನದಲ್ಲಾಗಲೀ, ಬೇರೆ ಕಾವ್ಯವಾಚನದಲ್ಲಾಗಲೀ ಸಂಗೀತ ಮೊಟಕಾಗಿರುತ್ತದೆ ಎಂದು ಬೆಂಗಳೂರಿನಿಂದ ಬಂದ ಒಬ್ಬ ಗಮಕಿ ನಿಮ್ಮ ಬಗೆಗೆ ಸಾಕಷ್ಟು ಪ್ರಚಾರ ಮಾಡಿದ್ದಾನೆ. ಆದುದರಿಂದಲೇ ನಿಮ್ಮನ್ನು ಕರೆಸಿಕೊಂಡು ನಿಮ್ಮ ಭಾರತವಾಚನ ಕೇಳಲು ನಾವು ಹೆಚ್ಚು ಆಸಕ್ತಿ ವಹಿಸಬೇಕಾಯಿತು" ಎಂದರು. ಶಕುಂತಲಾಬಾಯಿ ನಿರ್ಲಿಪ್ತಭಾವದಿಂದ ಮುಗುಳುನಗೆಯನ್ನು ಸೂಸಿದರು ಮಾತ್ರ.

ಶಕುಂತಲಾಬಾಯಿ ಮೊದಲ ದಿನ "ಕರ್ಣಾಟಕ ಕವಿ ಕಾವ್ಯ ಪರಂಪರೆ" ಕಾವ್ಯ ವಾಚನ ಕೊಟ್ಟರು. ಎರಡನೆಯ ದಿವಸ ಕುಮಾರವ್ಯಾಸ ಭಾರತ ವಾಚನ ಮಾಡಿದರು. "ಭಾರತ ವಾಚನ ಪ್ರವೀಣ" ಬಿಂದೂರಾಯರು ಹೈದರಾಬಾದು ಕರ್ಣಾಟಕಕ್ಕೆ ಚಿರಪರಿಚಿತರು. ಅವರ ವಾಚನವನ್ನು ಕೇಳಿದ ಬಹಳ ಮಂದಿ ಹಿರಿಯರು ಶಕುಂತಲಾ ಬಾಯಿಯ ಭಾರತವಾಚನದಲ್ಲಿ ಬಿಂದೂರಾಯರ ಭಾವವನ್ನು ಗುರುತಿಸಿದರು. ಹಿತಮಿತವಾಗಿ ಕರ್ಣಾಟಕ ಸಂಗೀತವನ್ನು ಬಳಸಿಕೊಳ್ಳುವ ಜ್ಞಾನವನ್ನು ಮೆಚ್ಚಿಕೊಂಡರು. ಗುರುವಿಗೆ ತಕ್ಕ ಶಿಷ್ಯೆಯೆಂದು ಪ್ರಶಂಸಿಸಿದರು.

ನಾಡಹಬ್ಬ ಮುಕ್ತಾಯ ಸಮಾರಂಭದ ಬೆಳಗ್ಗೆ, ಅಷ್ಟು ಹೊತ್ತಿಗೇ ನಾವು ಸೂಳೀಬಾವಿ ಸಿ. ರಂಗಾಚಾರ್ಲು ಅವರ ಮನೆಗೆ ಹೋದೆವು. ರಂಗಾಚಾರ್ಲು ಕರ್ಣಾಟಕ ಸಂಘದ ಮತ್ತು ನಾಡಹಬ್ಬದ ಅಧ್ಯಕ್ಷರು. ಹೈದರಾಬಾದಿನಲ್ಲಿ ಸುಪ್ರಸಿದ್ಧ ವಕೀಲರು, ರಾಜಕೀಯದಲ್ಲೂ ಪ್ರತಿಷ್ಠರು. ಕನ್ನಡ ಚಳುವಳಿಯಲ್ಲಿ ಮುಂಚೂಣಿಯ ಅಗ್ರಗಣ್ಯ ನಾಯಕರು. ಹಾಸ್ಯಪ್ರಿಯರು. "ಶಕುಂತಲಾಬಾಯಿ, ಬೆಂಗಳೂರಿನ ಗಮಕಿ ನಮ್ಮ ನರಸಿಂಗರಾಯನನ್ನು ಪಟ್ಟಾಗಿ ಹಿಡಿದು ಗೋಳಾಡಿಸುತ್ತಿದ್ದಾನೆ. ನರಸಿಂಗರಾಯನಿಗೆ

ಪೇಚಾಟವಾಗಿವೆ. ನಾಡಹಬ್ಬದಲ್ಲಿ ಗಮಕಿಯ ವಾಚನ ಆಗಿಯೇ ತೀರಬೇಕಂತೆ. ನಿಮ್ಮ ಅಭಿಪ್ರಾಯವೇನು ?" ಎಂದು ನಕ್ಕರು. ಶಕುಂತಲಾಬಾಯಿ, "ನಾನು ಗಾಜಿನ ಮನೆಯಲ್ಲಿದ್ದೇನೆ. ನಮ್ಮ ನೆರೆಹೊರೆಯವರ ಮನೆಗಳ ಮೇಲೆ ನಾನು ಕಲ್ಲೆಸೆದರೆ ಅವರೂ ಪ್ರತಿಯಾಗಿ ನನ್ನ ಮನೆಯ ಮೇಲೆ ಕಲ್ಲೆಸೆಯುತ್ತಾರೆ. ಎರಡು ಮನೆಗಳೂ ಪುಡಿಪುಡಿಯಾಗುತ್ತವೆ" ಎಂದರು. ಎಲ್ಲರೂ ನಕ್ಕೆವು. ರಂಗಾಚಾರ್ಲು ನಮ್ಮನ್ನು ಬೀಳ್ಕೊಡುವಾಗ ಸೂಳೀಭಾವಿಯವರಿಗೆ "ಪಾಪ ಬಡಪಾಯಿ ಬ್ರಾಹ್ಮಣನಿಂದ ಹತ್ತು ನಿಮಿಷಗಳ ಭಾರತ ವಾಚನ ಮಾಡಿಸಿ ಬಿಡಿ." ಎಂದರು.

ಆದರೆ ನಾಡಹಬ್ಬದ ಮುಕ್ತಾಯ ಸಮಾರಂಭವಾಗಲೇ ಇಲ್ಲ. ತಮಿಳುನಾಡಿನ ರಾಜ್ಯಪಾಲರು ಕಾಲವಾದರೆಂಬ ವರ್ತಮಾನ ಬಂದು ಆಂಧ್ರರಾಜ್ಯದ ರಾಜಧಾನಿ ಆ ದಿನವನ್ನು ಶೋಕದಿನವನ್ನಾಗಿ ಆಚರಿಸಿತು. ಸಾರ್ವಜನಿಕ ಕಾರ್ಯಕ್ರಮಗಳೆಲ್ಲ ನಿಂತು ಹೋದವು.

ಹೈದರಾಬಾದಿನಲ್ಲಿ ನೋಡಬೇಕಾದ ಸ್ಥಳಗಳನ್ನು ನಮಗೆ ತೋರಿಸಲು ಏರ್ಪಾಡಾಗಿತ್ತು. ಉಸ್ಮೇನಿಯಾ ಯುನಿವರ್ಸಿಟಿ, ಸಾಲರ್‌ಜಂಗ್ ಮ್ಯೂಸಿಯಂ, ಚಾರ್‌ಮೀನಾರ್ ಚೌಕ, ನೋಡಿ ಬಂದೆವು. ನಗರ ಪ್ರದಕ್ಷಿಣೆಯಾಯಿತು.

ಹೀಗೆ ರಾಯಚೂರಿನಿಂದ ಪ್ರಾರಂಭಿಸಿದ ಹೈದರಾಬಾದ್ ಕರ್ಣಾಟಕದ ಕಾವ್ಯ ವಾಚನ ಚಕ್ರ ತಾತ್ಕಾಲಿಕವಾಗಿ ಹೈದರಾಬಾದಿನಲ್ಲಿ ನಿಂತಿತು.

"ಇಲ್ಲಿ ನೋಳ್ಪುದು ಪದುಮನಾಭನ ಮಹಿಮೆ"

ಬಿಜಾಪುರದಲ್ಲಿ ವಿ. ಬಿ. ನಾಯಕರು 1961ರಲ್ಲಿ ಶಕುಂತಲಾಬಾಯಿಯನ್ನು ಕುಮಾರವ್ಯಾಸ ಭಾರತ ವಾಚನ—ಪ್ರವಚನ ಮಂಗಳೋತ್ಸವಕ್ಕೆ ಕರೆಸಿಕೊಂಡರು. ಭಾರತ ವಾಚನ ಪ್ರವೀಣ ಬಿಂದೂರಾಯರು ಕುಮಾರವ್ಯಾಸ ಭಾರತ ವಾಚನ ಪ್ರವಚನವನ್ನು ಸುಮಾರು ಎರಡು ಮೂರು ತಿಂಗಳ ಕಾಲ ಒಂದು ದಿನವೂ ಬಿಡದಂತೆ ನಡೆಸಿ ಮಂಗಳ ಘಟ್ಟಕ್ಕೆ ತಂದಿದ್ದರು. ಮಂಗಳ ಮಹೋತ್ಸವಕ್ಕೆ ಬಿಂದೂರಾಯರ ಪ್ರಮುಖ ಶಿಷ್ಯೆ ಶಕುಂತಲಾಬಾಯಿಯೇ ಬರಬೇಕೆಂದು ಬಿಜಾಪುರದ ಗಮಕ ಕಲಾಭಿಮಾನಿಗಳು ಅಪೇಕ್ಷಿಸಿದರು. ವಿ. ಬಿ. ನಾಯಕರು ಜನಾಪೇಕ್ಷೆಯನ್ನು ಕಾರ್ಯರೂಪಕ್ಕೆ ತಂದರು.

ಬಿಜಾಪುರದ ಮಹಾಲಕ್ಷ್ಮಿ ದೇವಸ್ಥಾನದಲ್ಲಿ ಪ್ರಾತಃಕಾಲ ಆರು ಗಂಟೆಗೆ ಮಂಗಳ. ಕುಮಾರವ್ಯಾಸ ಭಾರತ ವಾಚನಕ್ಕೆ ಸರಿಯಾಗಿ ಶಕುಂತಲಾಬಾಯಿಯ ಪ್ರಾರ್ಥನೆ "ಶ್ರೀ ವನಿತೆಯರಸನೆ" ಪದ್ಯದಿಂದ. ಅನಂತರ ಬಿಂದೂರಾಯರು ತಮ್ಮ ಭಾರತ ವಾಚನ—ಪ್ರವಚನ ಕಾರ್ಯಕ್ರಮವನ್ನು ಮುಂದುವರಿಸಿ ಮಂಗಳ ಘಟ್ಟಕ್ಕೆ ತಂದರು. ಶಕುಂತಲಾಬಾಯಿ "ವೇದ ಪುರುಷನ"ಪದ್ಯದಿಂದ ಸಮಾರಂಭವನ್ನು ಮುಕ್ತಾಯ ಮಾಡಿದರು. ಅನಂತರ ಬಿಜಾಪುರದ ಮುಖ್ಯ ರಸ್ತೆಗಳಲ್ಲಿ ಕುಮಾರವ್ಯಾಸ

ಭಾರತದ ಮೆರವಣಿಗೆ. ಭಾಜ ಭಜಂತ್ರಿ ಮೊಳಗುತ್ತಿತ್ತು. ಆ ತಂಡದ ಹಿಂದೆ ಬಿಜಾಪುರದ ಪ್ರಮುಖರ ಸಾಲು. ಪಲ್ಲಕ್ಕಿಯ ಮುಂದೆ ಮಡಿಯುಟ್ಟ ನೇಮನಿಷ್ಠ ಆಚಾರಶೀಲ ಬಿಂದೂರಾಯರು. ಅವರ ಪಕ್ಕದಲ್ಲಿ ಅವರ ಪಟ್ಟ ಶಿಷ್ಯೆ ಶಕುಂತಲಾಬಾಯಿ. ಇವರಿಬ್ಬರ ಪಕ್ಕಗಳಲ್ಲಿ ಒಂದು ಕಡೆ ನಾನು ಇನ್ನೊಂದು ಕಡೆ ವಿ. ಬಿ. ನಾಯಕರು. ನಮಗೆ ಎಡ ಬಲಗಳಲ್ಲಿ ತಂಬೂರಿಗಳನ್ನು ಹೊತ್ತ ಕುಮಾರವ್ಯಾಸ ಭಕ್ತರು. ನೂರಾರು ಜನದ ಸಂಭ್ರಮದಲ್ಲಿ ಕುಮಾರವ್ಯಾಸ ಗ್ರಂಥಕ್ಕೆ ಪಲ್ಲಕ್ಕಿಯುತ್ಸವ. ಏನು ಸಂಭ್ರಮ ! ಏನು ಸಂಭ್ರಮ ! ಅಭಿನವ ಕುಮಾರವ್ಯಾಸನೆನ್ನಿಸಿಕೊಂಡ ಬಿಂದೂರಾಯರಿಗೆ, ಶಕುಂತಲಾಬಾಯಿಗೆ, ಗಮಕ ಕಲಾಭಿಮಾನಿಗಳಿಂದ ಹಜ್ಜೆ ಹಜ್ಜೆ ನಮಸ್ಕಾರ. ವರುಣದೇವರಿಂದ ಪುಷ್ಪವೃಷ್ಟಿಯಂತೆ ತುಂತುರು ಮಳೆ. ಆದರೂ ಜನ ಮಳೆಗೆ ಬೆದರದೆ ಕುಮಾರವ್ಯಾಸ ಗ್ರಂಥೋತ್ಸವ ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ಯುವ ಜನ ಸುಮಂಗಲಿಯರು, ವೃದ್ಧ ಮುತ್ತೈದೆಯರು, ಅಡಿಗೆ ಕೆಲಸ ಒತ್ತರಿಸಿ ಮಂಗಳದಲ್ಲಿ, ಮೆರವಣಿಗೆಯಲ್ಲಿ ಭಾಗಿಗಳಾಗಿದ್ದರು. ಬಿಜಾಪುರದ ಜನ ಸುತ್ತಮುತ್ತಲ ಜನ ಮೂರು ತಿಂಗಳೂ ಸತತವಾಗಿ ಪ್ರಾತಃಕಾಲ ಆರುಗಂಟೆಗೆಲ್ಲ ಒಂದು ಮಹಾಲಕ್ಷ್ಮಿ ದೇವಸ್ಥಾನದಲ್ಲಿ ಸೇರಿ ಕುಮಾರವ್ಯಾಸ ಭಾರತ ವಾಚನ ಪ್ರವಚನ ಕೇಳಿ ಆನಂದಿಸುತ್ತಿದ್ದರಂತೆ.

ಅದೇನು ಪ್ರೀತಿ ವಿಶ್ವಾಸವೋ ಹಾಲು ಹಸುಳೆಗಳಿಗೆ ಕೂಡ ಬಿಂದೂರಾಯರಲ್ಲಿ. ಅವರೂ ಪ್ರಾತಃಕಾಲದಲ್ಲಿ ಎದ್ದು ಶುಚಿರ್ಭೂತರಾಗಿ ಬಂದು ಬಿಂದೂರಾಯರ ಕುಮಾರವ್ಯಾಸ ಭಾರತ ಯಜ್ಞದಲ್ಲಿ ಪಾಲುಗೊಳ್ಳುತ್ತಿದ್ದರು ತಮ್ಮ ತಂದೆ ತಾಯಿಗಳ ಕೂಡ. ಭಾರತ ಪ್ರವಚನದಲ್ಲಿ ಪ್ರತಿದಿನವೂ ಒಂದಲ್ಲ ಒಂದು ಸಂದರ್ಭದಲ್ಲಿ **"ಇಲ್ಲಿ ನೋಳ್ಪುದು ಪದುಮನಾಭನ ಮಹಿಮೆ"** ಬಿಂದೂರಾಯರು ಸ್ಮರಿಸದೇ ಇದ್ದುದೇ ಇಲ್ಲ. ಬಿಂದೂರಾಯರು ಬಿಜಾಪುರದ ಹಾದಿಬೀದಿಗಳಲ್ಲಿ ಹೋಗುತ್ತಿದ್ದರೆ ಮಕ್ಕಳು ಮನೆ ಜಗಲಿಗಳ ಮೇಲೆ ನಿಂತು "ಇಲ್ಲಿ ನೋಳ್ಪುದು ಪದುಮನಾಭನ ಮಹಿಮೆ" ಎಂದು ಘೋಷಿಸುತ್ತಿದ್ದರು.

ಬಿಜಾಪುರದಲ್ಲಿ ಶಕುಂತಲಾಬಾಯಿಯ ಕಾರ್ಯಕ್ರಮ ಒಂದು ವಾರ ನಡೆಯಿತು. ಬಿಂದೂರಾಯರು ಶಿಷ್ಯೆಯ ಯಶಸ್ವಿ ಕಾಯಕ್ರಮಗಳನ್ನು ಕಂಡು ಹಿಗ್ಗಿದರು. ಜನ ಒಂದು ಕಾರ್ಯಕ್ರಮವನ್ನೂ ಬಿಡದೆ ಕೇಳಿ ಸಂತೃಪ್ತಿಪಟ್ಟರು.

ಕುಲಕರ್ಣಿ ಬಿಜಾಪುರದಲ್ಲಿ "ಕಲಾ ನಿಧಿ" ಎಂಬ ವಸ್ತು ಸಂಗ್ರಹಾಲಯವನ್ನು ನಡೆಸುತ್ತಿದ್ದರು. ಅವರದು ಅಪರೂಪ ಸಂಗ್ರಹ. ಅದನ್ನು ನೋಡಿ ತಣಿದೆವು. ಕುಲಕರ್ಣಿ ಕಲಾವಿದ ಛಾಯಾ ಚಿತ್ರ ಗ್ರಾಹಕ. ರಾಷ್ಟ್ರೀಯ ನಾಯಕರುಗಳನ್ನು ವೈಶಿಷ್ಟ್ಯ ಭಂಗಿಗಳಲ್ಲಿ ಅವರ ಕ್ಯಾಮರ ಸೆರೆ ಹಿಡಿದಿತ್ತು. ಅವುಗಳನ್ನು ನೋಡಿ ಸಂತೋಷಪಟ್ಟೆವು.

ಬಿಜಾಪುರದಿಂದ ಜಗತ್ಪ್ರಸಿದ್ಧ ಗೋಲ್ ಗುಂಬಜ್ ಗೋಲ ಗುಮ್ಮಟವನ್ನು ನೋಡಿ ಮೂಕ ವಿಸ್ಮಯ ಪಟ್ಟೆವು.

ಬಿಜಾಪುರದ ಸನಿಹದಲ್ಲಿಯೇ ಇರುವ ತೊರವೆಗೆ ಹೋಗಿ ಕುಮಾರ ವಾಲ್ಮೀಕಿ ಯೆನ್ನಿಸಿಕೊಂಡ ತೊರವೆಯ ನರಹರಿಕವಿಯ ಆರಾಧ್ಯ ದೈವ ನರಸಿಂಹಸ್ವಾಮಿಯ ದರ್ಶನ ಪಡೆದೆವು. ಇಲ್ಲಿ ಸೋಜಿಗ ಹಾಗೂ ದುಃಖ ಸಂಗತಿಯೆಂದರೆ ಊರಲ್ಲಿ ಒಂದು ತೊರವೆರಾಮಾಯಣದ ಪ್ರತಿಯೂ ಇಲ್ಲ. ಕನ್ನಡಾಭಿಮಾನ ಶೂನ್ಯತೆಗೆ ಇದೊಂದು ಉದಾಹರಣೆ.

ವಿ. ಬಿ. ನಾಯಕರು ತಮ್ಮ "ಸಂದರ್ಶನ" ವಾರ ಪತ್ರಿಕೆಯಲ್ಲಿ ಬಿಂದೂರಾಯರ ಶಕುಂತಲಾಬಾಯಿಯ ಬಿಜಾಪುರದ ಕಾರ್ಯಕ್ರಮಗಳನ್ನು ಸ್ವಾರಸ್ಯಸುದ್ದಿ ಮಾಡಿದ್ದರು.

ಹೀಗೆ ರಾಯಚೂರಿನಲ್ಲಿ 1953ರಲ್ಲಿ ಪ್ರಾರಂಭವಾದ ಹೈದರಾಬಾದು ಕರ್ಣಾಟಕದ ಗಮಕ ಯಾತ್ರೆ 1961ರಲ್ಲಿ ಬಿಜಾಪುರದಲ್ಲಿ ತಾತ್ಕಾಲಿಕವಾಗಿ ನಿಂತಿತ್ತು. ಅದು ಮತ್ತೆ ಪ್ರಾರಂಭವಾದದ್ದು 1977-78ರಲ್ಲಿ. ಅದರ ವಿಷಯವನ್ನು ಸ್ಥೂಲವಾಗಿ ಈಗ ಪ್ರಸ್ತಾಪಿಸ ಬಯಸುತ್ತೇನೆ.

ಜಿ. ನಾರಾಯಣ 1969 ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಮೇಲೆ ಗಮಕ ಕಲಾ ಪುರೋಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ಕೈಗೊಂಡರಷ್ಟೆ. ಅವುಗಳಲ್ಲಿ ಕರ್ಣಾಟಕದಲ್ಲಿ ಗಮಕ ಕಲಾ ಪ್ರಚಾರವೂ ಒಂದು ಅತಿ ಮುಖ್ಯ ಯೋಜನೆ. ಈ ಹಿಂದೆ ಕನ್ನಡ ಸಾಹಿತ್ಯ ಪರಿಷತ್ತು ಗಮಕ ಕಲಾ ಪ್ರಚಾರಕ್ಕಾಗಿ ಹಿರಿಯ ಪ್ರಖ್ಯಾತ ಗಮಕಿಗಳಾದ "ಭಾರತ ವಾಚನ ಪ್ರವೀಣ" ಬಿಂದೂರಾಯರು ಭಾರತದ ಕೃಷ್ಣಗಿರಿ ಕೃಷ್ಣರಾಯರು ಮತ್ತು "ಶ್ಲೋಕ ಸಂಗೀತ" ಸಂಪತ್ಕುಮಾರಾಚಾರ್ಯರನ್ನು ಕರ್ಣಾಟಕದಲ್ಲಿ ಗಮಕ ಕಲಾ ಪ್ರಚಾರಕ್ಕಾಗಿ ಕಳಿಸಿದ್ದರ ಬಹುದು. ಆ ಪದ್ಧತಿ ಕಾರಣಾಂತರ ನಿಂತು ಹೋಗಿತ್ತು. ಜಿ. ನಾರಾಯಣ ಕರ್ಣಾಟಕಾದ್ಯಂತ ಗಮಕ ಕಲಾ ಪ್ರಚಾರಕ್ಕೆ ಮತ್ತೆ ಕೈಹಾಕಿದರು.

1977-78ರ ಸುಮಾರು ಏಕಕಾಲದಲ್ಲಿ ಜಿ. ನಾರಾಯಣ ಕರ್ಣಾಟಕಾದ್ಯಂತ ಪ್ರಸಿದ್ಧಗಮಕಿಗಳನ್ನು-ವ್ಯಾಖ್ಯಾನ ಕಾರರನ್ನು ಗಮಕ ಕಲಾ ಪ್ರಚಾರಕ್ಕಾಗಿ ಕಳಿಸಿ ಕೊಟ್ಟರು. ನಮಗೆ ಇನ್ನೊಮ್ಮೆ ಹಿಂದೆ ಹೈದರಾಬಾದು ಕರ್ಣಾಟಕವಾಗಿದ್ದ ರಾಯಚೂರು ಜಿಲ್ಲೆಯಲ್ಲಿ ಗಮಕ ಕಲಾ ಪ್ರಚಾರ ಪ್ರವಾಸ ಲಭ್ಯವಾಯಿತು. ಬಿಜಾಪುರದಲ್ಲಿ 1961ರಲ್ಲಿ ತಾತ್ಕಾಲಿಕವಾಗಿ ನಿಂತಿದ್ದ ಗಮಕ ಚಕ್ರ ಇನ್ನೊಮ್ಮೆ ಉರುಳಿತು.

ನಾವು ಈ ಸಲದ ಪ್ರವಾಸವನ್ನು ರಾಯಚೂರಿಗೆ ಅತಿ ಸಮೀಪದಲ್ಲಿರುವ ಮಂತ್ರಾಲಯದಿಂದ ಪ್ರಾರಂಭಿಸಿದೆವು. ಮಂತ್ರಾಲಯದಲ್ಲಿ ಹೊಸದಾಗಿ ನಿರ್ಮಿಸಿದ್ದ ಸಭಾ ಮಂಟಪದಲ್ಲಿ ಲಕ್ಷ್ಮೀಶನ ಜೈಮಿನಿ ಭಾರತದಿಂದ ಮಯೂರಧ್ವಜ ಪ್ರಕರಣವನ್ನು

ಶಕುಂತಲಾಬಾಯಿ ನನ್ನ ಪ್ರಾಸಂಗಿಕ ನಿರೂಪಣೆಯೊಡನೆ ಸುಶ್ರಾವ್ಯವಾಗಿ ವಾಚನ ಮಾಡಿದರು. ನಿತ್ಯವೂ ಕರ್ಣಾಟಕದ ಬಹು ಭಾಗಗಳಿಂದ ರಾಘವೇಂದ್ರ ಗುರುಗಳ ಭಕ್ತರು ಅಧಿಕ ಸಂಖ್ಯೆಯಲ್ಲಿ ಬರುತ್ತಾರೆ. ಅಷ್ಟೇಅಲ್ಲ ತಮಿಳುನಾಡು, ಆಂಧ್ರರಾಜ್ಯ, ಮಹಾರಾಷ್ಟ್ರ ಭಾಗ ಇತ್ಯಾದಿಗಳ ಕನ್ನಡಿಗ ಭಕ್ತಾದಿಗಳೂ ಗುರುಗಳ ಸೇವೆಗೆಂದು ಬಂದಿರುತ್ತಾರೆ. ಅವರೆಲ್ಲರೂ ಸಮಾವೇಶರಾಗಿ ಲಕ್ಷ್ಮೀಶನ ಜೈಮಿನಿ ಭಾರತ ವಾಚನ ಕೇಳಿ ಆನಂದ ಪಟ್ಟರು.

ಮಾರನೆಯ ದಿನ ಬೆಳಗ್ಗೆ ರಾಯಚೂರಿಗೆ ಹೊರಟೆವು. ಕರ್ಣಾಟಕದ ಸುಪ್ರಸಿದ್ಧ ಗಮಕಿಗಳಾಗಿದ್ದ ಭಾರತದ ಕೃಷ್ಣಗಿರಿ ಕೃಷ್ಣರಾಯರ ಚಿರಂಜೀವಿ ಇಂಜನಿಯರ್ ಗಮಕಿ ಕೃಷ್ಣಗಿರಿ ರಾಮಚಂದ್ರ ಸಂತೋಷದಿಂದ ನಮ್ಮನ್ನು ಬರಮಾಡಿಕೊಂಡರು. ಅವರು ಆಗ ರಾಯಚೂರಿನಲ್ಲಿ ಇಂಜನಿಯರಿಂಗ್ ಶಾಖೆಯಲ್ಲಿ ಸಹಾಯಕ ಇಂಜನಿಯರ್, ಹವ್ಯಾಸಿ ಗಮಕಿ. ರಾಯಚೂರಿನಲ್ಲಿ ಗಮಕ ತರಗತಿಗಳನ್ನು ಪ್ರಾರಂಭಿಸಿ ಗಮಕ ಪ್ರಚಾರಮಾಡಿದ ನಿಸ್ವಾರ್ಥಿ. ಸಂಜೆ, ರಾಯಚೂರು ಜಿಲ್ಲಾ ಕನ್ನಡ ಸಾಹಿತ್ಯಪರಿಷತ್ತು ಸಮಿತಿಯ ಆಶ್ರಯದಲ್ಲಿ ಅಲ್ಲಿನ ಕರ್ಣಾಟಕ ಸಂಘದ ಕಟ್ಟಡದಲ್ಲಿ "ಕರ್ಣಾಟಕ ಕವಿಕಾವ್ಯ ಪರಂಪರೆ" ಕಾವ್ಯವಾಚನ. ಜಿಲ್ಲಾಸಮಿತಿಯ ಡಾ|| ರಾಮಕೃಷ್ಣ ಕಾರ್ಯಕ್ರಮವನ್ನು ಏರ್ಪಡಿಸಿದ್ದರು ತವಗ ಭೀಮಸೇನರಾಯರು ಕಾರ್ಯಕ್ರಮಕ್ಕೆ ಬಂದಿದ್ದುದು ನಮಗೆ ಹುರುಪುಕೊಟ್ಟು ಹರ್ಷತಂದಿತು.

ಮಾರನೆಯ ದಿನ ಹನುಮಸಾಗರಕ್ಕೆ ಪ್ರಯಾಣ. ಇದೊಂದು ಸಣ್ಣಗ್ರಾಮ, ಇಲ್ಲಿಗೆ ಬರಬೇಕಾದರೆ ಎರಡು ಬಸ್ಸುಗಳನ್ನು ಬದಲಾಯಿಸಬೇಕು. ಡಾ|| ನಾರಾಯಣಾಚಾರ್ಯ ತುಂಬ ಉತ್ಸಾಹದಿಂದ ನಮ್ಮನ್ನು ಬರಮಾಡಿಕೊಂಡರು. ಹನುಮಸಾಗರ ರಾಘವೇಂದ್ರಇಟಗಿಯವರ ಪತ್ನಿ ಶೋಭಾ ಬಾಯಿಯ ತೌರೂರು. ದಿಣ್ಣೆಯ ಮೇಲಿರುವ ದೇವಸ್ಥಾನದಲ್ಲಿ ಸಂಜೆ ಕುಮಾರವ್ಯಾಸಭಾರತ ಕಾವ್ಯವಾಚನ. ಗ್ರಾಮದ ಜನವೆಲ್ಲಾ ಸೇರಿತ್ತು. ಕಾರ್ಯಕ್ರಮದ ಮಧ್ಯದಲ್ಲಿ ಇದ್ದಕ್ಕಿದ್ದ ಹಾಗೆ ಆಕಾಶದಲ್ಲಿ ಮೋಡ ಕವಿಯಿತು. ಮಳೆ ಭೋರ್ಗರೆಯಿತು. ಕಾವ್ಯವಾಚನ ಅರ್ಧಕ್ಕೆ ನಿಂತುಹೋಯಿತು, ಜನಕ್ಕೆ ತೃಪ್ತಿಯಿಲ್ಲ. ಹನುಮಸಾಗರದ ಗಮಕಕಲಾ ರಸಿಕರು ಮಾರನೆ ದಿನ ಬೆಳಗ್ಗೆ ನಮ್ಮ ಪ್ರಯಾಣವನ್ನು ನಿಲ್ಲಿಸಿ, ಬೆಳಗ್ಗೆಯೇ ಇನ್ನೊಂದು ಕಾವ್ಯವಾಚನದ ಏರ್ಪಾಡು ಮಾಡಿದರು, ಬಿಡುವು ಮಾಡಿಕೊಂಡು ಊರ ಜನ ಸೇರಿತು. ಕುಮಾರವ್ಯಾಸ ಭಾರತದ ವಾಚನ ಅಡ್ಡಿಯಾತಂಕವಿಲ್ಲದೆ ಒಂದುಗಂಟೆಯಕಾಲ ನಡೆಯಿತು. ಹನುಮಸಾಗರದ ಜನ, ಗಮಕ ವಾಚನ ಕೇಳಿದ್ದು ಇದೇ ಮೊದಲೆಂದು ಹೇಳಿ ಕನ್ನಡ ಸಾಹಿತ್ಯಪರಿಷತ್ತನ್ನು ಕೃತಜ್ಞತೆಯಿಂದ ನೆನೆಸಿಕೊಂಡರು. ಕಾವ್ಯವಾಚನ ಮುಗಿಸಿ ಊಟ ತೀರಿಸಿಕೊಂಡು ಮಧ್ಯಾಹ್ನ ಸಿಂಧನೂರಿಗೆ ನಡೆದೆವು.

ಸಿಂಧನೂರಿನಲ್ಲಿ ರಾತ್ರಿ ಒಂದು ದೇವಸ್ಥಾನದಲ್ಲಿ ಕಾವ್ಯವಾಚನದ ಏರ್ಪಾಡು. "ಕರ್ಣಾಟಕದ ಕವಿ ಕಾವ್ಯ ಪರಂಪರೆ" ವಾಚನ. ಪಂಪನಿಂದ ಹಿಡಿದು, ಶರಣರು,

ದಾಸರ, ಆಧುನಿಕ ಕವಿಗಳು ಸಾಲುಸಾಲಾಗಿ ಮೆರವಣಿಗೆ ಒಂದರು ಕಾವ್ಯವಾಚನ ರೂಪಕದಲ್ಲಿ. ಪ್ರಥಮ ದರ್ಜೆ ಕಾಲೇಜಿನ ಕನ್ನಡ ಅಧ್ಯಾಪಕರು ಕಿಷನ್‌ರಾವ್ ಮುತ ವರ್ಜಿ ವಹಿಸಿದ್ದರು. ಕಾರ್ಯಕ್ರಮ ವ್ಯವಸ್ಥೆಯಲ್ಲಿ ಮಾರನೆಯದಿನ ಬೆಳಗ್ಗೆ ಸಿಂಧ ನೂರು ಪ್ರಥಮದರ್ಜೆ ಕಾಲೇಜಿನಲ್ಲಿ "ಕರ್ಣಾಟಕ ದರ್ಶನ" ರೂಪಕ ವಾಚನ.

ಊಟ ತೀರಿಸಿಕೊಂಡು ಮಧ್ಯಾಹ್ನವೇ ಸಿಂಧನೂರಿಗೆ ಒಹಳ ಹತ್ತಿರವಿರುವ ಮಾನ್ವಿಗೆ ಹೊರಟು ಬಿಟ್ಟೆವು. ದಾಸಚತುಷ್ಟಯರಲ್ಲಿ ಒಬ್ಬರಾದ ಜಗನ್ನಾಥದಾಸರ ಸಾನ್ನಿಧ್ಯವಿರುವುದು ಮಾನ್ವಿಯಲ್ಲಿ. "ಹರಿಕಥಾಮೃತ ಸಾರ" ರಚಿಸಿ ದಾಸವಾಙ್ಮಯ ವನ್ನು ಶ್ರೀಮಂತಗೊಳಿಸಿದ ಜಗನ್ನಾಥದಾಸರ ಬೃಂದಾವನ ಸಾನ್ನಿಧ್ಯವನ್ನು ಸೇರಿದೆವು. ಮಠದಾಚಾರ್ಯರು ಪ್ರೀತಿ ವಿಶ್ವಾಸಗಳಿಂದ ನಮ್ಮನ್ನು ಬರಮಾಡಿಕೊಂಡರು. ಬೃಂದಾ ವನಕ್ಕೆ ಪ್ರದಕ್ಷಿಣೆಹಾಕಿ ಮಂಗಳಾರತಿ ಮಾಡಿಸಿದೆವು. ಶಕುಂತಲಾಬಾಯಿ ಜಗನ್ನಾಥ ದಾಸರ ಹರಿಕಥಾಮೃತ ಸಾರದ ಮಂಗಳ ಪದ್ಯಗಳನ್ನು ವಾಚನ ಮಾಡಿದರು. ಬಹು ಜೋಪಾನವಾಗಿ ಕಾಪಾಡಿಕೊಂಡು ಬಂದಿರುವ ಜಗನ್ನಾಥದಾಸರ ತಂಬೂರಿಯನ್ನು ನೋಡಿದೆವು.

ಮಾನ್ವಿಗೆ 5 ಮೈಲಿಗಳ ಸಮೀಪದಲ್ಲಿ ಚೀಕಲಪರಿವೆಯಲ್ಲಿರುವ ವಿಜಯದಾಸರ ಸಾನ್ನಿಧ್ಯಕ್ಕೆ ಹೋಗಲು ಕಾಲಾವಕಾಶವಾಗಲಿಲ್ಲ. ಅಂದಿನ ಸಂಜೆ ಧಾವಂತದಿಂದ ಮಾನ್ವಿಯಲ್ಲೇ ಬಸ್ಸು ಹತ್ತಿ ಬೆಂಗಳೂರು ಸೇರಿದೆವು.

ಮರೆಯಲಾರದ ಜಮಖಂಡಿ ಅನುಭವ

ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯನವರ ಕಾಲದಲ್ಲಿ ಅತ್ಯಂತ ಹುರುಪು ಉತ್ಸಾಹಗಳಿಂದ ಪ್ರಾರಂಭವಾದ ಸಾಹಿತ್ಯ ಸಂಸ್ಕೃತಿ ಪ್ರಸಾರ ಕೆಲವು ವರ್ಷಗಳು ರಾಹು ಗ್ರಸ್ತವಾಗಿ ನಿಂತಿತ್ತು. ಅದು ಮತ್ತೆ ಪುನರುಜ್ಜೀವನವಾಗಿ ಕೆಲವು ವರ್ಷ ನಡೆಯಿತು. ಆ ಕಾಲದಲ್ಲಿ ಜಮಖಂಡಿಯಲ್ಲಿ ನಮ್ಮ ರಾಜ್ಯದ ಸಾಹಿತ್ಯ ಮತ್ತು ಸಾಂಸ್ಕೃತಿಕ ಕಾರ್ಯ ಕ್ರಮದಲ್ಲಿ ನಾವಿಬ್ಬರೂ ಭಾಗವಹಿಸಿದುದು ಎಂದೆಂದಿಗೂ ಮರೆಯದಂಥ ಅನುಭವವನ್ನು ಕೊಟ್ಟಿದೆ. ಟಿ. ವಿ. ತಿಮ್ಮೇಗೌಡರು ಶಿಕ್ಷಣ ಶಾಖೆಯ ಜೊತೆಗೆ ಸಾಹಿತ್ಯ ಸಾಂಸ್ಕೃತಿಕ ಇಲಾಖೆಯನ್ನೂ ನಡೆಸುತ್ತಿದ್ದರು. ಅವರು ಶಿಕ್ಷಣದಲ್ಲಿ ಪ್ರಗತಿಯನ್ನು ನಿರೀಕ್ಷಿಸುತ್ತಿದ್ದಂ ತೆಯೇ ಸಾಹಿತ್ಯ ಸಂಸ್ಕೃತಿಗಳಲ್ಲೂ ಪ್ರಗತಿಯನ್ನು ಅಪೇಕ್ಷಿಸುವ ನಿಷ್ಠಾವಂತರೂ ಯೋಗ್ಯತೆಯಿದ್ದವರನ್ನು ಪುರಸ್ಕರಿಸುವ ವಿಶಾಲ ಮನೋಭಾವದವರೂ ಆಗಿದ್ದ ಅಧಿ ಕಾರಿ. ಅವರು ಗಮಕ ಕಲಾಭಿಮಾನಿ. ಶಿಕ್ಷಕರನ್ನು ಸೇರಿಸಿ ಅವರಿಗೆ ಒಂದು ಗಮಕ ಶಿಕ್ಷಣ ಶಿಬಿರವನ್ನು ಸಹಾ ಏರ್ಪಡಿಸುವಷ್ಟು ಮುಂದುವರಿದರು. ಗಮಕ ಶಾಸ್ತ್ರ ವಿದ್ವಾಂ ಸರೂ ಶಿಕ್ಷಣವೇತ್ತರೂ ಆದ ಕೆ. ಟಿ. ರಾಮಸ್ವಾಮಿ ಅಯ್ಯಂಗಾರ್ ಮತ್ತು ಗಮಕ ವಿದ್ವಾನ್ ಪಿ. ಎಚ್. ಸೇತೂರಾಯರು ಗಮಕ ಶಿಕ್ಷಣ ಶಿಬಿರವನ್ನು ಸುಮಾರು ಒಂದು ತಿಂಗಳು ನಡೆಸಿದರು. ಶಕುಂತಲಾಬಾಯಿ ಕುವೆಂಪು ಅವರ "ಶ್ರೀ ರಾಮಾಯಣ ದರ್ಶನಂ"

ಕಾವ್ಯವಾಚನ ಮಾಡಿ ಶಿಕ್ಷಕ–ಗಮಕ ಅಭ್ಯರ್ಥಿಗಳಿಗೆ ಗಮಕ ಕಲೆಯ ಪರಿಚಯ ಮಾಡಿಕೊಟ್ಟರು. ಈಗ ಟಿ. ವಿ. ತಿಮ್ಮೇಗೌಡರ ಆದೇಶದಂತೆ ನಾನು ಮತ್ತು ಶಕುಂತಲಾಬಾಯಿ ಜಮಖಂಡಿಗೆ ಹೋಗಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಇಲಾಖೆಯ ಪರವಾಗಿ ಕಾವ್ಯವಾಚನ ಮಾಡುವ ಪ್ರಮೇಯ ಒದಗಿತು.

ಸರಕಾರಿ ಹೈಸ್ಕೂಲಿನಲ್ಲಿ ಸಂಜೆ ಗಮಕವಾಚನದ ಏರ್ಪಾಡಾಯಿತು. ವಿದ್ಯಾರ್ಥಿ ಮತ್ತು ನಾಗರಿಕರ ಸಮ್ಮಿಶ್ರ ಸಭೆ. ಆದುದರಿಂದ ನಾವು ಒಂದು ಕಾವ್ಯಕ್ಕೆ ಜೋತು ಬೀಳದೆ "ಕರ್ಣಾಟಕ ಕವಿ ಕಾವ್ಯ ಪರಂಪರೆ" ಕಾರ್ಯಕ್ರಮವನ್ನೇ ಕೊಟ್ಟೆವು. ಚೆನ್ನಾಗಿಯೇ ನಡೆಯಿತು.

ಮಾರನೆಯ ದಿನ ಮಧ್ಯಾಹ್ನ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗಾಗಿಯೇ ಇನ್ನೊಂದು ಕಾರ್ಯಕ್ರಮ. ಅವರಿಗೆ "ಕರ್ಣಾಟಕ ದರ್ಶನ" ಕಾರ್ಯಕ್ರಮ. ಅದೂ ಯಶಸ್ವಿಯಾಯಿತು. ಸುಪ್ರಸಿದ್ಧ ಕಾದಂಬರಿಕಾರ "ರಾವ್‌ಬಹದ್ದೂರ್" ಅಧ್ಯಕ್ಷರಾಗಿದ್ದರು.

ಜಮಖಂಡಿಗೆ ಸುಮಾರು 20–30 ಮೈಲಿಗಳಷ್ಟು ಹತ್ತಿರ ಬಿಜಾಪುರ. ನಾವು ವಿ. ಬಿ. ನಾಯಕರಿಗೆ, ಕೃಷ್ಣನಿಗೆ, ತಂಗಿ ಮೈದುನ ಸುಭದ್ರೆ ಅರ್ಜುನರಂತೆ ದತ್ತು ಪ್ರೀತಿ ವಿಶ್ವಾಸಿಗಳು. ಆದುದರಿಂದ ವಿ. ಬಿ. ನಾಯಕರನ್ನು ಬಿಜಾಪುರದಲ್ಲಿ ನೋಡದೆ ಹೋಗುವುದು ಅಪರಾಧವೆನ್ನಿಸಿತು. ಕಾಲೇಜಿನ ಕಾರ್ಯಕ್ರಮ ಮುಗಿಸಿಕೊಂಡು ಬಿಜಾಪುರಕ್ಕೆ ಬಸ್ಸು ಹಿಡಿದೆವು. ನಮ್ಮದು ಅರ್ಧ ದಿವಸದ ಅಲ್ಪಾವಧಿಯ ಅವಸರದ ಭೇಟಿಯಾಗಿತ್ತು. ಏಕೆಂದರೆ ಮಾರನೆಯ ದಿವಸ ನಾವು ಮಹಾ ಜನದ ಅಪೇಕ್ಷೆಯಂತೆ ಜಮಖಂಡಿಯಲ್ಲಿ ಒಂದು ಭಾರತ ವಾಚನ ಕಾರ್ಯಕ್ರಮವನ್ನು ಒಪ್ಪಿಕೊಂಡಿದ್ದೆವು.

ವಿ ಬಿ. ನಾಯಕರು ದಿಢೀರನೆ ಪ್ರತ್ಯಕ್ಷರಾದ ನಮ್ಮನ್ನು ನೋಡಿ ಆಶ್ಚರ್ಯಪಟ್ಟರು. ಅಮಿತಾನಂದ ಹೊಂದಿದರು. ಆ ದಿನ ರಾತ್ರಿ ಅವಸರದ ಕುಮಾರವ್ಯಾಸ ಭಾರತ ವಾಚನ ಕಾರ್ಯಕ್ರಮವೇರ್ಪಡಿಸಿದರು. ಸಾಕಷ್ಟು ಜನ ಬಂದಿದ್ದರು. ಕುಮಾರವ್ಯಾಸ ಭಾರತ ವಾಚನ ಯಶಸ್ವಿಯಾಯಿತು.

ನಾಯಕರೂ ಅವರ ಪತ್ನಿ ಲಕ್ಷ್ಮೀಬಾಯಿ ನಮಗೆ ಮಾಡಿದ ಆದರೋಪಚಾರ ಅಪರಿಮಿತವಾಗಿತ್ತು. ಮಧ್ಯಾಹ್ನ ಊಟ ತೀರಿಸಿಕೊಂಡು ಸಂಜೆ ಜಮಖಂಡಿಗೆ ಕಾರ್ಯಕ್ರಮ ಕೊಡುವುದಕ್ಕೆ ಹಾಜರಾದೆವು.

ಸಂಜೆ . . . . ದೇವಸ್ಥಾನದಲ್ಲಿ ಕುಮಾರವ್ಯಾಸ ಭಾರತದಿಂದ "ಶ್ರೀ ಕೃಷ್ಣ ರಾಯಭಾರ" ಕಥಾ ಭಾಗ ವಾಚನ. ನನ್ನ ಪ್ರಾಸಂಗಿಕ ನಿರೂಪಣೆ. ಮಹನೀಯರು ಮಹಿಳೆಯರು ತುಂಬ ಆಸಕ್ತಿಯಿಂದ ಬಂದಿದ್ದರು. ಪ್ರತಿಯೊಬ್ಬ ಮಹಿಳೆಯ ಕೈಯಲ್ಲಿ ಅರಿಶಿನ ಕುಂಕುಮಗಳ ಪ್ಯಾಲ—ಕುಪ್ಪಸದ ಖಣಗಳು. "ರಾವ್‌ಬಹದ್ದೂರ್" ಆಗಮಿಸಿದ್ದರು. ನಮ್ಮ ಸಾಹಿತ್ಯ—ಸಾಂಸ್ಕೃತಿಕ ಕಾರ್ಯಕ್ರಮವನ್ನು ಸಂಸ್ಕೃತ ಇಲಾ

ಖೆಯ ಪರವಾಗಿ ಹಿಂದಿನ ದಿವಸ ಏರ್ಪಡಿಸಿದ್ದ ಸರ್ಕಾರಿ ಶಾಲೆಯ ಮುಖ್ಯೋಪಾಧ್ಯಾಯರೂ ಬಂದಿದ್ದರು.

"ಕೃಷ್ಣ ರಾಯಭಾರ" ಗಮಕ ವಾಚನ ಚೆನ್ನಾಗಿಯೇ ನಡೆಯಿತು. ಪ್ರಾಸಂಗಿಕ ನಿರೂಪಣೆಯಲ್ಲಿ ನಾನು ಭಗವಂತನ ಪೂರ್ಣಾವತಾರದ ಮಾತೆತ್ತಿ "ರಾಮಾವತಾರ ಪೂರ್ಣಾವತಾರನಲ್ಲ, ಕೃಷ್ಣಾವತಾರ ಪೂರ್ಣಾವತಾರವೆಂದು ವಿದ್ವಾಂಸರುಗಳ ಮತವೆಂದು ಅಭಿಪ್ರಾಯಪಡಿದೆ" ಎಂದೆ. ನನಗೆ ಆಧಾರ ಬಂಕಿಮ ಚಂದ್ರಚಟ್ಟೋಪಾಧ್ಯಾಯರ "ಕೃಷ್ಣ ಚರಿತೆ"ಯ ಅನುವಾದ ಆರ್. ವ್ಯಾಸರಾಯರ ಕನ್ನಡ "ಕೃಷ್ಣ ಚರಿತೆ" ಅದಕ್ಕೆ ಡಿ. ವಿ. ಜಿ. ಅವರ ವಿಚಾರ ಪೂರ್ಣವಾದ ಮುನ್ನುಡಿ. ಅದರಲ್ಲೂ ಈ ಕೆಳಗಿನ ಡಿ. ವಿ. ಜಿ. ಅಭಿಪ್ರಾಯ.

"ಈ ದೃಷ್ಟಿಯಿಂದ ಕೃಷ್ಣಸ್ವರೂಪವನ್ನು ನೋಡಬಹುದೆಂದು ನನಗನ್ನಿಸುತ್ತದೆ. ಶ್ರೀ ಕೃಷ್ಣಾವತಾರವು ಮನಸ್ಸಿನ ದೃಷ್ಟಿಯಿಂದ ಸರ್ವಾಂಗ ಸಂಪೂರ್ಣವಾದ ಅವತಾರ. ಶ್ರೀ ರಾಮಾವತಾರವೂ **ಒಂದು ಅಂಶದ ವಿನಾ** ಪೂರ್ಣಾವತಾರವೇ. ರಾಮಾವತಾರದಲ್ಲಿ ಕಾಮ ಲೋಭಗಳ ಪ್ರಸಕ್ತಿಯಿಲ್ಲ. ಕಾಮ ಲೋಭಗಳೆರಡೂ ದೋಷ ಬೀಜಗಳೇ : ಎರಡೂ ಮನುಷ್ಯ ಸ್ವಭಾವಕ್ಕೆ ಪೂರ್ವ ಜನ್ಮಗಳಿಂದ ಬಂದ ದುರ್ವಾಸನೆಗಳೇ. ಅವುಗಳ ಪ್ರಶ್ನೆಗೆ ರಾಮಚರಿತ್ರೆಯಲ್ಲಿ ಸ್ಥಾನವಿಲ್ಲದೆ ಹೋಯಿತು. ಭಾಗವತಕಾರನು ಈ ಎರಡು ದೋಷ ಬೀಜಗಳ ಸಮಕ್ಷಮದಲ್ಲಿ ಅವತಾರ ಪುರುಷನೊಬ್ಬನು ಹೇಗೆ ನಡೆದುಕೊಂಡಾನು ಎಂಬುದನ್ನು ಚಿತ್ರಿಸಲು ಪ್ರಯತ್ನಿಸಿದ್ದಾನೆ. ಹೀಗೆ ಶ್ರೀ ಕೃಷ್ಣ ಕಥೆಯು ವಿಷ್ಣುವಿನ ಮಿಕ್ಕ ಒಂಬತ್ತು ಅವತಾರಗಳಿಂದ ವಿಲಕ್ಷಣವಾಗಿದೆ. ಮೊದಲೇ ಹೇಳಿದಂತೆ ಮತ್ಸ್ಯ, ಕೂರ್ಮ, ವರಾಹ—ಈ ಮೂರು ಅವತಾರಗಳಲ್ಲಿ ಮಾನುಷ ಪ್ರಸಂಗವೇ ಇಲ್ಲ. ನಾರಸಿಂಹ ವಾಮನಗಳಲ್ಲಿ ಮಾನುಷ ಪ್ರಸಕ್ತಿಯು ಸ್ವಲ್ಪಾಂಶವಾಗಿದೆ. ಪರಶುರಾಮನಲ್ಲಿ ಮಾನುಷವು ಏಕದೇಶೀಯವಾಗಿದೆ. **ಶ್ರೀ ರಾಮನಲ್ಲಿ ಕಿಂಚಿನ್ನ್ಯೂನವಾಗಿದೆ. ಶ್ರೀ ಕೃಷ್ಣ ಸಂದರ್ಭದಲ್ಲಿ ಮಾನುಷದ ಗುಣದೋಷಗಳೆರಡೂ ಪರಾಕಾಷ್ಠೆಗೆ ಬಂದು ಉಭಯಾತೀತವಾದ ಅಧಿಧರ್ಮ ದಶೆಯು ಪ್ರತ್ಯಕ್ಷೀಕೃತವಾಗಿದೆ.** ಇನ್ನುಳಿದ ಬುದ್ಧ, ಕಲ್ಕಿ, ಅವತಾರಗಳಲ್ಲಿ ಮಾನುಷಾಂಶವು ಮತ್ತೆ ಸ್ವಲ್ಪಸ್ವಲ್ಪವಾಗುತ್ತದೆ. ಮಾನುಷದ ಪ್ರಶ್ನೆಗಳನ್ನು ಮೇಲಕ್ಕೆತ್ತಿ ತೋರಿಸುವುದು ಕೃಷ್ಣ ಕಥೆಯಿಂದ ನಮಗಾಗುವ ವಿಶೇಷ ಉಪಕಾರ. *

* ಶ್ರೀ ಕೃಷ್ಣ ಚರಿತ್ರೆ—ಆರ್. ವ್ಯಾಸರಾವ್—ನಾಲ್ಕನೇ ಮುದ್ರಣ 1965. ಮುನ್ನುಡಿ ಪುಟ xxi —ಡಿ. ವಿ. ಜಿ. ಒತ್ತುಗೆರೆ ನನ್ನದು. ಆಸಕ್ತ ಓದುಗರು ಪೂರ್ತಿಯಾಗಿ ಮುನ್ನುಡಿ ಓದಬೇಕಾಗಿ ವಿನಂತಿ.

ಸಾಹಿತ್ಯ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ನಮ್ಮ ಆತಿಥೇಯರಾಗಿದ್ದ ಶಾಲಾ ಮುಖ್ಯೋಪಾಧ್ಯಾಯರು ನಮ್ಮ ಭಾರತ ವಾಚನ ಮುಗಿದ ಕೂಡಲೆ ಎದ್ದು ನಿಂತರು. ವಂದನಾರ್ಪಣೆ ಮಾಡುವುದಕ್ಕೆ ಎದ್ದು ನಿಂತರೆಂದು ಸಭೆ ಭಾವಿಸಿತು. ಅಲ್ಲ, ಅಲ್ಲ, ಅದಲ್ಲ ; "ಪ್ರಾಸಂಗಿಕ ನಿರೂಪಣೆಯಲ್ಲಿ ಶ್ರೀ ರಾಮಾವತಾರವಲ್ಲ, ಶ್ರೀ ಕೃಷ್ಣಾವತಾರ ಪೂರ್ಣಾವತಾರ, ಎಂದಿದ್ದಾರೆ. ಇದು ತಪ್ಪಭಿಪ್ರಾಯ. ಶ್ರೀಮದಾಚಾರ್ಯರು ಶ್ರೀ ರಾಮಾವತಾರವನ್ನು ಪೂರ್ಣಾವತಾರವೆಂದು ಒಪ್ಪಿಕೊಂಡಿದ್ದಾರೆ" ಎಂದು ಚರ್ಚೆಗೆ ಆರಂಭಿಸಿಬಿಟ್ಟರು.

ಈ ವಾದದ ತಿರುಗು ನನಗೆ ಅನಿರೀಕ್ಷಿತವಾಗಿತ್ತು. ಸಭೆ ಈ ವಾದವಿವಾದಗಳ ಗೊಂದಲಕ್ಕೆ ಸಿದ್ಧವಾಗಿರಲಿಲ್ಲ. ಸಭೆಗೆ ಮುಜಗರ. ನಮ್ಮನ್ನು ಕುಮಾರವ್ಯಾಸ ಭಾರತ ವಾಚನ ಮಾಡಬೇಕೆಂದು ಕೇಳಿಕೊಂಡು ಕಾರ್ಯಕ್ರಮವೇರ್ಪಡಿಸಿದ್ದ ಕಾರ್ಯಕರ್ತ ರುಗಳಿಗೆ ಮನಸ್ಸಿಗೆ ಕಸಿವಿಸಿ. "ನಿಮ್ಮ ವಾದ ವಿವಾದ ಇಲ್ಲಿ ಬೇಡ. ನಿಧಾನವಾಗಿ ಬೇರೆ ಕಡೆ ಕೂತು ವಿಚಾರ ವಿನಿಮಯ ಮಾಡಿಕೊಳ್ಳೋಣ." ಎಂದು ಕಾರ್ಯಕರ್ತರು ವಾದಿ ಭಯಂಕರರನ್ನು ಪ್ರಾರ್ಥಿಸಿಕೊಂಡರೂ ಅವರು ತಮ್ಮ ಪಾಂಡಿತ್ಯ ಪ್ರದರ್ಶನ ವನ್ನು ನಿಲ್ಲಿಸಲೇಯಿಲ್ಲ. ಮಹಿಳೆಯರೆಲ್ಲರೂ ತಮ್ಮ ಪಾಡಿಗೆ ತಾವು ಹೊರಟುಹೋದರು. ಬಹಳ ಮಂದಿಗೆ ವಾದ ವಿವಾದ ಅನವಶ್ಯಕವೆಂದು ಕಂಡುಬಂತು. ಹೊರಗಡೆಯಿಂದ ಬಂದ ಅತಿಥಿಗಳ ವಿಚಾರದಲ್ಲಿ ಶಾಲಾಮುಖ್ಯೋಪಾಧ್ಯಾಯರು ನಡೆದುಕೊಂಡ ರೀತಿ ಸರಿಯಾದುದಲ್ಲವೆಂದು ಬಹುಜನಾಭಿಪ್ರಾಯವಾಗಿತ್ತು.

ಮೂರನೇ ದಿನ ಬೆಳಗ್ಗೆ "ರಾವ್‌ಬಹದ್ದೂರ್" ಅವರ ಮನೆಯಲ್ಲಿ ನಮಗೆ ಹೋಳಿ ಹಬ್ಬದ ಸವಿಯೂಟ. ಕರಿದ ಸೇವಗೆಯ ಪಾಯಸ, ರೇಷ್ಮೆ ಕುಚ್ಚಿನಷ್ಟು ಹಗುರ ವಾದ ಕಡಲೆ ಬೇಳೆ ಹೂರಣದ ಹೋಳಿಗೆ, ಅದಕ್ಕೆ ಅಭಿಷೇಕವಾಗುವಷ್ಟು ಬೆಣ್ಣೆ ಕಾಸಿ ಕರಗಿಸಿದ ಗಮಗಮಿಸುವ ತುಪ್ಪ ಒಂದು ಬೆಳ್ಳಿಯ ದೊನ್ನೆ ತುಂಬ, ಬಾಳೆಯೆಲೆ ತುಂಬ ಕೋಸಂಬರಿ, ಪಲ್ಯ. ಬಾಳೆಯೆಲೆಗೆ ಹೂಬಳ್ಳಿ ಬಿಡಿಸಿದ ರಂಗೋಲಿ. "ರಾವ್‌ಬಹ ದ್ದೂರ್" ಪಕ್ಕದಲ್ಲಿ ಕೂಡಿಸಿಕೊಂಡು, ಅವರ ಶ್ರೀಮತಿಯವರು ಸರಸ ಸಲ್ಲಾಪ ನಡೆಸುತ್ತಾ ಉಪಚಾರ ಮಾಡೋಣ. ಅಷ್ಟೇ ಉಪಚಾರ ಮಾಡಿ ಅವರ ಧರ್ಮಪತ್ನಿ ಬಡಿಸೋಣ. ನಾನು, ಶಕುಂತಲಾಬಾಯಿ ಪುಷ್ಕಳವಾಗಿಯೇ ಉಂಡು ತಣಿದೆವು.

ಆ ಸಂಜೆಯೇ ಜಮಖಂಡಿಯಿಂದ ಬೆಂಗಳೂರಿಗೆ ಬಸ್ ಹತ್ತಿದೆವು. ನಮ್ಮ ವಾದಿ ಭಯಂಕರ ಮುಖ್ಯೋಪಾಧ್ಯಾಯರೂ ಸಂಸಾರ ಸಮೇತ ನಮ್ಮ ಬಸ್ಸು ಹತ್ತಿದರು. ನಾವು ಅವರಿಗೆ ಕೈ ಮುಗಿದು ಮುಗುಳು ನಗೆ ಸೂಸಿ ಸ್ವಾಗತಿಸಿದೆವು. ಅವರೂ ನಮ್ಮಷ್ಟೇ ಸೌಜನ್ಯದಿಂದ ವಿನಿಮಯ ಸ್ವಾಗತ ಕೊಟ್ಟರು.

೩. ಜೈನ ಕಾವ್ಯಗಳ ಗಮಕ ವಾಚನ

ಮಹಾವೀರ ವರ್ಧಮಾನ ಸ್ವಾಮಿಗೆ ಗಮಕ ಕೈಂಕರ್ಯ.

1974 ರಲ್ಲಿ 24 ನೆಯ ತೀರ್ಥಂಕರನಾದ ಮಹಾವೀರ ವರ್ಧಮಾನ ಸ್ವಾಮಿಯ ಎರಡು ಸಹಸ್ರದೈನೂರು (2,500) ವರ್ಷಗಳ ಜಯಂತ್ಯುತ್ಸವ ನಮ್ಮ ರಾಷ್ಟ್ರಾದ್ಯಂತ ಮಹಾನ್ವೈಭವದಿಂದ ನಡೆಯಿತು. ಅದರ ಆಚರಣೆ ಕರ್ಣಾಟಕದಲ್ಲೂ ವಿಜೃಂಭಣೆಯಿಂದಲೇ ನಡೆಯಿತು. ಶಕುಂತಲಾಬಾಯಿಯೂ ಈ ಉತ್ಸವದಲ್ಲಿ ಭಾಗವಹಿಸಿದರು. ಬೆಂಗಳೂರು ಮಹಾವೀರ ಮಿಷನ್ ಆಚರಿಸಿದ ಉತ್ಸವದಲ್ಲಿ 20 ನೆ ನವಂಬರ್ 1974 ರಂದು ಎರಡನೇ ನಾಗವರ್ಮ ವಿರಚಿತ "ವರ್ಧಮಾನ ಪುರಾಣಂ" ಮತ್ತು ಅಚ್ಚಣ್ಣ ಕವಿಯ "ವರ್ಧಮಾನ ಪುರಾಣ" ಗಳಿಂದ ಮಹಾವೀರ ವರ್ಧಮಾನ ಸ್ವಾಮಿಯ ಪ್ರಾರ್ಥನಾ ಪದ್ಯಗಳನ್ನು ಇತರ ಜೈನ ಕವಿಗಳ ಕಾವ್ಯಗಳಿಂದ ಆರಿಸಿಕೊಂಡ ವರ್ಧಮಾನಸ್ವಾಮಿಯ ಪ್ರಾರ್ಥನಾ ಪದ್ಯಗಳ ಜೊತೆಗೆ ವಾಚನ ಮಾಡಿದರು. ಶಕುಂತಲಾಬಾಯಿಯನ್ನು ಜೈನ ಬಾಂಧವರು ಬಹಳವಾಗಿ ಮೆಚ್ಚಿಕೊಂಡರು. ಇದರ ಫಲಿತಾಂಶ, ಶಕುಂತಲಾಬಾಯಿ ಒಂದೆರಡು ದಿವಸಗಳ ಅವಧಿಯಲ್ಲಿ ಮಂಡ್ಯ ಜಿಲ್ಲೆಯಲ್ಲಿರುವ ಸಾಲಿಗ್ರಾಮಕ್ಕೆ ಹೋಗಿ ವರ್ಧಮಾನ ಸ್ವಾಮಿಯ ಜಯಂತ್ಯುತ್ಸವದಲ್ಲಿ ಜೈನ ಕಾವ್ಯಗಳ ವಾಚನ ಮಾಡಿದುದು. ನಮ್ಮ ರಾಜ್ಯದ ಶಿಕ್ಷಣ ಇಲಾಖೆಯಲ್ಲಿ ಬೆಂಗಳೂರು ನಗರದ ಉತ್ತರ ರೇಂಜಿನ ಸಹಾಯಕ ಶಿಕ್ಷಣಾಧಿಕಾರಿ (ಅಸಿಸ್ಟೆಂಟ್ ಎಜುಕೇಷನಲ್ ಆಫೀಸರ್) ಆಗಿದ್ದು ನಿವೃತ್ತರಾದ ದಿ|| ಧನ್ಯಕುಮಾರಯ್ಯ ಸಾಲಿಗ್ರಾಮದ ಕಾರ್ಯಕ್ರಮಕ್ಕೆ ಮುಖ್ಯ ಕಾರಣರಾಗಿದ್ದರು.

ಸಾಲಿಗ್ರಾಮಕ್ಕೆ ಸಕಾಲದಲ್ಲಿ ಮಧ್ಯಾಹ್ನ ಪ್ರಯಾಣ ಮಾಡಿದೆವು. ನಾವು ಮಿರ್ಲೆ ಗ್ರಾಮವನ್ನು ದಾಟಿ ಸಾಲಿಗ್ರಾಮಕ್ಕೆ ಹೋಗಬೇಕು. ಸಂಜೆ 5 ಗಂಟೆಗೆ ಸೇರುತ್ತೇವೆ. ಕಾರ್ಯಕ್ರಮ ಸಂಜೆ 7 ಗಂಟೆಗೆಲ್ಲ ಪ್ರಾರಂಭ. ಅಷ್ಟರೊಳಗೆ ಶ್ರೀ ವೈಷ್ಣವರ ಗುರುಗಳಾದ ರಾಮಾನುಜಾಚಾರ್ಯರ ಪಾದಗಳಿರುವ ಸ್ಥಳವನ್ನು ಹಾಗೂ ಅವರಿಗೆ ಸಂಬಂಧಪಟ್ಟ ಪವಿತ್ರ ಸ್ಥಳಗಳನ್ನು ದರ್ಶನ ಮಾಡಬಹುದೆಂದು ನಾನು ಬಹಳ ಆಸೆಯಿಂದಿದ್ದೆ. ಆದರೆ ಏನಾಯಿತು ? "ಮಾನವ ಬಯಸುವುದೇ ಒಂದು, ದೈವ ನಡೆಸುವುದೇ ಇನ್ನೊಂದು" ಎಂಬಂತೆ ನಮ್ಮ ಬಸ್ಸು ಮಿರ್ಲೆಗೆ ಒಂದು ಮೈಲಿಯಿದೆ ಎನ್ನುವಾಗ ಕೈ ಕೊಟ್ಟಿತು. ಏನಾಯಿತೋ ? ಕೆಟ್ಟುಹೋಯಿತು. "ರಿಪೇರಿಯ ದುರಸ್ತಿನಿಂದ ಹಿಂದಿನ ಸ್ಥಿತಿಗೆ ಬಂದು ಚಲಿಸಬೇಕಾದರೆ ಎರಡು ಗಂಟೆಗಳಾಗುತ್ತದೆ" ಎಂದು ಡ್ರೈವರ್ ಮಹಾಶಯ ಬೆದರಿಕೆ ಹಾಕಿದ. ನಾವು ಸಾಲಿಗ್ರಾಮ ಸೇರಬೇಕಾದರೆ ನಮ್ಮೆಣಿಕೆಯ ಪ್ರಕಾರ ರಾತ್ರಿ 9 ಗಂಟೆಯಾಗುತ್ತದೆ. ಕಾಯುವಹಾಗಿಲ್ಲ. ಬಾನಿನ ನಡುನೆತ್ತಿ

ಯನ್ನು ದಾಟಿ ಸೂರ್ಯ ಪಶ್ಚಿಮ ದಿಸೆಗೆ ವಾಲಿದ್ದ. ಅವನ ತೀಕ್ಷ್ಣ ಕಿರಣಗಳು ನಮ್ಮ ಮುಖಗಳ ಮೇಲೆ ಚೆಲ್ಲಿ ಅವುಗಳ ತೀಕ್ಷ್ಣತೆಯನ್ನು ಎದುರಿಸಲು ನಮ್ಮ ಕಣ್ಣುಗಳು ಸೋತುಹೋದವು. ಆದರೂ ನಮ್ಮ ಸಾಮಾನುಗಳನ್ನು ಹೊತ್ತು ಮಿರ್ಜೆ ಗ್ರಾಮದ ಕಡೆ ಪಾದಯಾತ್ರೆ ಪ್ರಾರಂಭಿಸಿದೆವು. ಮಿರ್ಜೆ ಸೇರಬೇಕು. ಅಲ್ಲಿಂದ ಇನ್ನೊಂದು ಬಸ್ ಹಿಡಿದು ಸಾಲಿಗ್ರಾಮ ಸೇರಬೇಕು. ವಿಧಿಯೇ ಇಲ್ಲ. ಮುಖ ಮೈಯೆಲ್ಲ ಬಿಸಿಲಿನ ತಾಪಕ್ಕೆ ಬೆವತು ನಮ್ಮ ಬಟ್ಟೆಯೆಲ್ಲ ಒದ್ದೆ ಮುದ್ದೆ. ಸಾಮಾನುಗಳ ಹೊರುವಿಕೆಯಿಂದ ತೋಳುಗಳಲ್ಲಿ ಕಸುವಿರಲಿಲ್ಲ. ಕಾಲುಗಳು ಜೋರಾಗಿ ನಡೆಯಲೇ ಒಲ್ಲವು. ಆದರೂ ನಾವು ಪಾದಯಾತ್ರೆ ಮಾಡಲೇಬೇಕಾಗಿತ್ತು. ಇನ್ನೇನು ಮಿರ್ಜೆ ಗ್ರಾಮದ ಬಸ್ ಸ್ಟಾಂಡ್ ಒಂದು ನೂರು ಗಜ ಇದೆ ಎನ್ನುವಾಗ ನಮ್ಮ ಬಸ್ ರಿಪೇರಿಯಾಗಿ ನಮ್ಮ ಮುಂದೆಯೇ ಭರ್ ಎಂದು ಧೂಳೆಬ್ಬಿಸುತ್ತಾ ನಮ್ಮನ್ನು ನೋಡಿಯೂ ನೋಡದ ಹಾಗೆ ಹಾದು ಹೋಯಿತು. ಸಾಕಪ್ಪ ಸಾಕು. ನಾಲಗೆ ಒಣಗಿಸಿಕೊಂಡು, ಮುಖ, ಮೈ ಬೆವರು ಸುರಿಸಿಕೊಂಡು, ಗಡ ಗಡ ನಡುಗುತ್ತ ಹೆಜ್ಜೆಯ ಮೇಲೆ ಹೆಜ್ಜೆಹಾಕುತ್ತ ಮಿರ್ಜೆಯಲ್ಲಿ ಬಸ್ ಹತ್ತಿ ಸಾಲಿಗ್ರಾಮ ಸೇರಬೇಕಾದರೆ ರಾತ್ರಿ 7–30 ಗಂಟೆಯಾಗಿತ್ತು. ಜನಸ್ತೋಮ ಬಸದಿಯ ಮುಂದೆ ಹಾಕಿದ್ದ ಚಪ್ಪರದಲ್ಲಿ ನಮಗಾಗಿ ಕಾದಿತ್ತು.

ನಮ್ಮನ್ನು ಧನ್ಯಕುಮಾರಯ್ಯನವರ ಭಾವ ಪ್ರಿದುನನವರ ಮನೆಯಲ್ಲಿ ಇಳಿಸಿದರು. ಮುಖ ತೊಳೆದು, ಬೆವರಿಂದ ಒದ್ದೆಮುದ್ದೆಯಾದ ಬಟ್ಟೆಗಳನ್ನು ಕಳಚಿ ಶುಭ್ರವಸ್ತ್ರ ಧಾರಿಗಳಾಗಿ ಕಾರ್ಯಕ್ರಮದ ಸ್ಥಳವನ್ನು ಸೇರ ಬೇಕಾದರೆ 8 ಗಂಟೆ.

ನಮ್ಮ ಗ್ರಹಚಾರ ಪರಿಹಾರವಾಗಿರಲಿಲ್ಲವಿನ್ನೂ. ಸಭಾ ಮಂಟಪವನ್ನು ಸೇರ ಬೇಕು. ದಿವ್ಯಾಲಂಕಾರ ಭೂಷಿತವಾದ ನಾಲ್ಕಾರು ಎತ್ತುಗಳು ಆ ಸಮಯಕ್ಕೆ ಬಿರ ಗಾಳಿಯಂತೆ ನುಗ್ಗಿ ಬಂದವು ನಮ್ಮಮೇಲೆ. ಜಿಂಕಿದಾಟಿ ಬರುವ ಯಾವುದೋ ಒಂದು ಹಬ್ಬ ಅನತಿ ದೂರದಲ್ಲಿ ಏರ್ಪಾಡಾಗಿತ್ತು. ಒಡಪಾಯಿ ಮೂಕ ಪ್ರಾಣಿಗಳು ಅಂಜಿ ಬಿಟ್ಟವು. ಭರ ರಭಸದಲ್ಲಿ ಏದುಸಿರಿನಲ್ಲಿ ಓಟಕಿತ್ತವು. ನಮ್ಮ ಮೇಲೆ ಹಾಯ್ದವು. ನಾವೂ ಮಿಂಚು ವೇಗದಲ್ಲಿ ಆಸ್ಥಳದಿಂದ ಹಾರಿದೆವು ಪಕ್ಕಕ್ಕೆ. ಜಾರಿ ಬೀಳಬೇಕು, ಪಕ್ಕದಲ್ಲಿದ್ದವರು ಹಿಡಿದುಕೊಂಡರು. ಬಚಾವಾಯಿತು ನಮ್ಮ ಜೀವ. ವೇದಿಕೆಹತ್ತಿ ಕಾರ್ಯಕ್ರಮ ಪ್ರಾರಂಭಿಸಿದೆವು—ಪಂಪ, ನಾಗಚಂದ್ರ, ಬೊಪ್ಪಣ್ಣ ಪಂಡಿತ, ನಾಗವರ್ಮ, ಅಚ್ಚಣ್ಣ ಕವಿಗಳಿಂದ ಜಿನ ಸ್ತುತಿಗಳನ್ನು ಆರಿಸಿ ಕೊಂಡಿತ್ತು.

ಪಂಪ— ತ್ರಿದಶೇಂದ್ರ ಮೌಳಿ ಮಣಿ ಶೋ
ಣ ದೀಪ್ತಿಗಳ್ ಪುದಿದು ಪೊಳೆದಲಕ್ತಕ ರಸದಿಂ
ಪುದಿದಂತೊಪ್ಪಿರ್ಪರ್ಹ
ತ್ಪದಂಗಳೆಮಗೀಗೆ ತಡೆಯದರ್ಹತ್ಪದಮಂ ॥

ಭುವನೇಶ್ವರ ನಿಜರೂಪ
ಸ್ತವ ವಸ್ತುಸ್ತವ ಗುಣಸ್ತವಂಗಳನವಱಂ

ತವರಂ ಬಣ್ಣಿಸಮರೇಂ
ದ್ರ ವಾಸುಕಿ ಪ್ರಭುಗರಾರ್ತರಿನ್ನಳವೇ ॥

ಖೇಚರೇಂದ್ರವಿಭವಂ ಭೋಗೀಂದ್ರ ಭೋಗಂ ಮಹೇಂ
ದ್ರ ಮಹೈಶ್ವರ್ಯಮಿವೆಲ್ಲಮುಪ್ಪುವನಿವಂ ಬೇಟ್ಟಂತು ಬೆಳ್ಳಿನ್ಸು
ತ್ತಮ ದೀಕ್ಷಾವಿಧಿಯುಂ ಸಮಾಧಿ ಮರಣಂ ಕರ್ಮಕ್ಷಯಂ ಬೋಧಿಲಾ
ಭಮುಮೋಕ್ಷಂ ದೊರೆಕೊಳ್ವುದಕ್ಕೆಮಗೆ ಮುಕ್ತಿಶ್ರೀ ಮನೋವಲ್ಲಭಾ

ನಾಗಚಂದ್ರ–ಜಯ ಜಿತವೃಜನ ಜಿನೇಶ್ವರ
ದಯಾನದೀ ಪುಳಿನ ರಾಜಹಂಸ ಭವಾಂಭೋ
ಧಿಯ ತಡಿಯುನೆಯ್ದಿ ಸೆಮ್ಮಂ
ನಯ ನಿಕ್ಷೇಪ ಪ್ರಮಾಣ ಪಾತ್ರದಿನರುಹಾ ॥

ನಿನಗೆ ರಸಮೊಂದೆ ಶಾಂತಮೆ
ಜಿನೇಂದ್ರ ಮನಮಾರಸಾಂಬುನಿಧಿಯೊಳಗವಗಾ
ಹನಮಿರ್ದು ಮಿಕ್ಕ ರಸಮಂ
ಕನಸಿನೊಳಂ ನೆನೆಯದಂತು ಮಾಡೆಮಗರುಹಾ ॥

ನಿತ್ಯಸುಖಮಾತ್ಮರೂಪಮ
ನಿತ್ಯಮೋಹರೂಪಮೆಂಬ ವಿವೇಕಂ
ಸತ್ಯಸ್ವರೂಪಮುದಜಿಕೊಳ
ಗತ್ಯಂತಾನುಭವ ವಿಭವಕ್ಕೆಮಗರುಹಾ ॥

ಬೊಪ್ಪಣ್ಣ– ಶ್ರೀ ಗೊಮ್ಮಟ ಜಿನನಂ ನರ
ನಾಗಾಮರ ದಿತಿಜ ಖಚರಪತಿ ಪೂಜಿತನಂ
ಯೋಗಾಗ್ನಿಹತಸ್ಮರನಂ
ಯೋಗಿಧ್ಯೇಯನನಮೇಯನಂ ಸ್ತುತಿಯಿಸುವೆಂ

ಅನುಪಮರೂಪನೆ ಸ್ಮರನುದಗ್ರಜನೆ ನಿರ್ಜಿತ ಚಕ್ರಿ ಮತ್ತುದಾ
ರ ನೆ ನೆ ಜಿಃ ಗೆಲ್ದು ಮಿತ್ತಸಖಿಳೋರ್ವಿಯನತ್ಯಭಿಮಾನಿಯೋ ತಪ
ಸ್ಥನುಮೆರಸಂ ಕ್ರಿಯಿತ್ತೆಳೆಯೊಳಿರ್ಪುದೆಂಬನನೂನ ಬೋಧನೇ
ವಿನಿಹತ ಕರ್ಮಬಂಧನೆನೆ ಬಾಹುಬಲೀಶನಿದೇನುದಾತ್ತನೋ

ನಾಗವರ್ಮ–ಶ್ರೀಮದ್ಭವ್ಯಾಳಿ ಚಕ್ರಪ್ರಕರ ಸುಖಕರಂ ಸರ್ವಮಿಥ್ಯಾಂಧಕಾರ
ಸ್ತೋಮ ಪ್ರಧ್ವಂಸಿ ಬೋಧಾಮಳಕಿರಣ ಗಣೋದ್ಭಾಸಿ ಮೋಕ್ಷಾಬ್ಜಿನೀಶಂ
ಪ್ರೇಮಂ ಸ್ಯಾದ್ವಾದ ಪೂರ್ವಾಚಳ ಸಮುದಿತನಾಶ್ಚರ್ಯವೃತ್ತಾಭಿರಾಮಂ
ಹೇಮಾಂಗಂ ವರ್ಧಮಾನಾಹ್ವಮುಕರನತಿ ನಿರ್ದೋಷಮಂ ಮಾಳ್ಕೆ ಸನ್ಮೋಳ್

ಅಚ್ಚಣ್ಣಕವಿ–ಶ್ರೀಮಚ್ಚಾಮರ ಸಿಂಹವಿಷ್ಟರ ವರಚ್ಛತ್ರತ್ರಯಾಶೋಕ ದಿ
ವ್ಯಾಮೇಯ ಧ್ವನಿ ಪುಷ್ಪವೃಷ್ಟಿ ಸುರಭೇರಿ ಭೂರಿ ಭಾಮಂಡಳ
ಸ್ತೋಮಂ ಭಾಸ್ವದನಂತಬೋಧ ಬಳ ದೃಕ್ಸೌಖ್ಯತ್ವ ಲಕ್ಷ್ಮೀಶನು
ದ್ದಾಮಂ ಮಾಜ್ಕೆಮಗಳ್ಕ ಜುಂದೆ ಶುಭಮಂ ಶ್ರೀ ವರ್ಧಮಾನಂ ಜಿನಂ॥

ಪಂಪನಿಗೆ ''ಆದಿಪುರಾಣ'' ವಾಚನದಿಂದ ನಮನ

ಶಕುಂತಲಾಬಾಯಿಯ ಜೈನಕಾವ್ಯಗಳ ವಾಚನ ಸುಮಾಸು 1950ಕ್ಕೆ ಹಿಂದೆಯೇ ಪ್ರಾರಂಭವಾಯಿತೆನ್ನಬಹುದು. ಅದೂ ಪಂಪನ "ಆದಿಪುರಾಣ" ಕಾವ್ಯದಿಂದಲೇ ಎನ್ನುವುದು ಸಂತೋಷದ ಸಂಗತಿ. ಅದಕ್ಕೆ ಕಾರಣ ದಿ|| ಕಾ. ಸು. ಧರಣೇಂದ್ರಯ್ಯನವರು. ಹಿಂದೂಸ್ಥಾನ ಏರ್‌ಕ್ರಾಫ್ಟ್ ಫ್ಯಾಕ್ಟರಿ ಬಡಾವಣೆಯಲ್ಲಿ ಜೈನ ಬಾಂಧವರು ಆದಿತೀರ್ಥಂಕರನ ಜಯಂತಿ ಆಚರಿಸಿ ಸಂದರ್ಭ. ಧರಣೇಂದ್ರಯ್ಯನವರು ಪಂಪನ "ಆದಿ ಪುರಾಣ" ದಿಂದ "ನೀಲಾಂಜನೆಯ ನೃತ್ಯ" ಕಥಾ ಭಾಗವನ್ನು ಶಕುಂತಲಾಬಾಯಿ ವಾಚನ ಮಾಡಬೇಕೆಂದು ಅಪೇಕ್ಷಿಸಿದರು. ಅವರ ಅಪೇಕ್ಷೆಯಂತೆ ವಾಚನವಾಯಿತು. ಸಂಪ್ರದಾಯದಂತೆ ಜಿನೇಂದ್ರನ ಪ್ರಾರ್ಥನೆಯಿಂದ ವಾಚನ ಪ್ರಾರಂಭವಾಗಿತ್ತು—

ಶ್ರೀ ದೇವೇಂದ್ರ ಮುನೀಂದ್ರವಂದಿತ ಗುಣವ್ರಾತಂ ಜಗತ್ಸ್ವಾಮಿ ಸಂ
ದಾದಿ ಬ್ರಹ್ಮಸಗಾಧ ಬೋಧನಿಳಯಂ ದುರ್ವಾರ ಸಂಸಾರ ವಿ
ಚ್ಛೇದೋಪಾಯನಿಯುಕ್ತ ಸೂಕ್ತಿ ವೃಷಮಾರ್ಗಾಗ್ರೇಸರಂ ಪಾಪಹೃ
ತ್ಪಾದಾಬ್ಜಂ ದಯೆಗೆಯ್ಕೆನಕ್ಕೆಮಗೆ ಮುಕ್ತಿಶ್ರೀ ಸುಖಾವಾಪ್ತಿಯಂ ॥

ಇದುವೆ ಸುಕವಿ ಪ್ರಮೋದ
ಪ್ರದಮಿದುವೆ ಸಮುಸ್ತಭವ್ಯಲೋಕ ಪ್ರಮುದ
ಪ್ರದಮೆನೆ ನೆಗಳ್ದಾದಿ ಪುರಾ
ಣದೊಳಱಿವುದು ಕಾವ್ಯಧರ್ಮಮಂ ಧರ್ಮಮುಮಂ

ಪಂಪಕವಿಯ ನೀಲಾಂಜನೆಯ ನೃತ್ಯ ವರ್ಣನೆ ಹೇಗಿದೆಯೆಂಬುದಕ್ಕೆ ಉದಾಹರಣೆಯಾಗಿ ಎರಡು ಕಂದ ಪದ್ಯಗಳನ್ನು ಈ ಕೆಳಗೆ ಕೊಟ್ಟಿದ್ದೇನೆ.

"ಅಂಬರಭೂಷಣ ಮಾಲಾ
ಡಂಬರ ಬೆಡಂಗನಮರನರ್ತಕಿ ಗಡಮೇ ।
ನೆಂಬುದೊ ಧರಣೀಂದ್ರಂಗಮ
ಳುಂಬಂ ಪೊಗಳ್ಗೆ ರೂಪು ನೀಲಾಂಜನೆಯಾ ॥

ನಿಲ್ತುವು ಮಡಲ್ತೆನೆ ಭಂಗಿ
ಯೊಳನಂಗಜಂಗಮಲತೆವೊಲ್
ನಿಲ್ತು ಜವನಿಕೆಯ ಮಱೆಯೊಳ್
ಪೋಲ್ತಳವಳ್ ಮುಗಿಲ ಮಱೆಯ ವಿದ್ಯುಲ್ಲತೆಯಂ

ಮುಂದೆ ಶಕುಂತಲಾಬಾಯಿ ಪಂಪನ ಆದಿ ಪುರಾಣದಿಂದ ಭರತ ಬಾಹುಬಲಿಗಳ ಸಂಘರ್ಷ, ಭರತ ಬಾಹುಬಲಿಗಳ ಧರ್ಮಯುದ್ಧ, ಭರತನ ಪರಾಜಯ, ಬಾಹುಬಲಿಯ ವೈರಾಗ್ಯ, ಈ ಭಾಗವನ್ನು ವಾಚನ ಮಾಡಿದ್ದಾರೆ. 1981ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ನಡೆಸಿದ ಚಂಪೂಕಾವ್ಯ ಸಪ್ತಾಹದಲ್ಲಿ ಶಕುಂತಲಾಬಾಯಿ ಸಪ್ತಾಹ ಕಾರ್ಯಕ್ರಮವನ್ನು ಪ್ರಾರಂಭಿಸಿದ್ದೇ ಪಂಪನ ಆದಿ ಪುರಾಣ ಕಾವ್ಯದಿಂದ.

ರನ್ನ ಮಹಾಕವಿಯ "ಸಾಹಸ ಭೀಮ ವಿಜಯಂ" ಕಾವ್ಯವಾಚನವನ್ನು ಕನ್ನಡ ಸಾಹಿತ್ಯ ಪರಿಷತ್ತು 1954 ರಲ್ಲಿ 5ವಾಚನಗಳಲ್ಲಿ ಏರ್ಪಡಿಸಿತು. ಆಗ ಎ. ಎನ್. ಮೂರ್ತಿ

ರಾಯರು ಪರಿಷತ್ತಿನ ಅಧ್ಯಕ್ಷರು; ಜಿ. ವೆಂಕಟಸುಬ್ಬಯ್ಯನವರು ಗೌ|| ಕಾರ್ಯದರ್ಶಿಗಳು. ಎಂ. ಆರ್. ಶ್ರೀ. ಪ್ರಾರಂಭಿಸಿದ ಗಮಕ ಪ್ರಚಾರದ ವಾರವಾರಗಳ ಮುಂದುವರಿಕೆ ಕಾರ್ಯಕ್ರಮವಿದು. ಶಕುಂತಲಾಬಾಯಿ ಕಾವ್ಯವಾಚನಕಾರರು. ಐದುವಾರಗಳ ಕಾವ್ಯವಾಚನಗಳ ವಿವರ ಇಂತಿತ್ತು—

1 ಭೀಮಸೇನ ಪ್ರತಿಜ್ಞೆ
2 ದುರ್ಯೋಧನ ವಿಲಾಪಂ
3 ಭೀಷ್ಮ ವಚನಂ
4 ಭೀಮಸೇನಾಡಂಬರಂ
5 ಗದಾಯುದ್ಧಂ

ಜಿ. ವೆಂಕಟಸುಬ್ಬಯ್ಯನವರು ಶಕುಂತಲಾಬಾಯಿಯ ಕಂಠಶ್ರೀಗೆ ಮಾರುಹೋದರು. "ಪಾಂಡುರಂಗರಾವ್ ಶಕುಂತಲಾಬಾಯಿಯ ಕಂಠಶ್ರೀಯನ್ನು ಮದುವೆಯಾಗಿದ್ದಾರೆ" ಎಂದು ಉದ್ಗಾರ ತೆಗೆದರು.

ಸುಬೋಧ ರಾಮರಾಯರು ಒಂದು ವಾರವೂ ತಪ್ಪದೆ ಬರುತ್ತಿದ್ದರು ಕಾವ್ಯವಾಚನ ಕೇಳಲು. "ಭೀಮಸೇನಾಡಂಬರಂ" ಕಥಾಭಾಗ ವಾಚನ ಪ್ರಾರಂಭವಾಯಿತು—

ನೆಲಕಿೞಿವೆನೆಂದು ಬಗೆವಿರೆ
ಛಲಕಿೞಿವೆಂ ಪಾಂಡುಸುತರೊಳೇ ನೆಲನಿದು ಪಾ
ಙ್ಕಲನೆನಗೆ ದಿನಪಸುತನಂ
ಕೊಲಿಸಿದ ನೆಲನೊಡನೆ ಮತ್ತೆ ಪುದುವಾೞ್ವೆನೇ

ಎಂದು ದುರ್ಯೋಧನ ಭೀಷ್ಮರಿಂದ ಬೀಳ್ಕೊಂಡು ವೈಶಂಪಾಯನ ಸರೋವರದ ಬಳಿಗೈದಿದ

"ಕುರುಕುಳ ಸರೋಜಹಂಸಂ ಮುನ್ನಂ ತನ್ನ ಮೈಯೊಳ್
ಕೆನ್ನೈಸಿದ ಕೆನ್ನೆತ್ತರಂ ಕರ್ಚಿ ಕಳೆದು ಕರಚರಣವದನ
ಪ್ರಕ್ಷಾಳನಂಗೆಯ್ದು ಮುಕ್ಕುಳಿಸಿಯುಗುೞ್ದಾಚಮನಕ್ರಿಯೆ
ಗಳಂ ಮಾಡಿ ಜಲದೇವತಾನಮಸ್ಕಾರಮಂ ಗೆಯ್ದು
ಜಲಮಂತ್ರೋಪದೇಶದಿಂ ಜಲಜಾಕರಮನಭಿಮಂತ್ರಿಸಿ
ಜಲನಿಲಯನಾಗಿ ಪರಮಯೋಗಿಯವೊಲ್ ಮಂತ್ರಪದಾಕ್ಷ
ರಂಗಳಂ ಮಿಸುಗುತಮಿರ್ದಂ"

ಬೇಹುಗಾರರಿಂದ ಪಾಂಡವರಿಗೆ ದುರ್ಯೋಧನನು ವೈಶಂಪಾಯನ ಸರೋವರದಲ್ಲಿ ಅಡಗಿಕೊಂಡಿರುವುದು ತಿಳಿಯುತ್ತದೆ. ಕೃಷ್ಣನನ್ನು ಮುಂದಿಟ್ಟುಕೊಂಡು ಪಾಂಡವರು ವೈಶಂಪಾಯನ ಸರೋವರಕ್ಕೆ ಬರುತ್ತಾರೆ. ಸರೋವರದಲ್ಲಿ ಮುಳುಗಿ ಕುಳಿತಿರುವ ದುರ್ಯೋಧನನನ್ನು ಮೇಲೆಬ್ಬಿಸಬೇಕಲ್ಲ! ಈ ಸಮಯದಲ್ಲಿ ಮೆರೆದಿರುವ ಭೀಮಸೇನಾಡಂಬರಂ ರನ್ನನ ಸಿದ್ಧಹಸ್ತದಲ್ಲಿ ಅದ್ಭುತವಾಗಿದೆ.

ಭೀಮಸೇನನುದ್ದಾಮ ಕೋಪಾಟೋಪವಿರಚಿತ ಬದ್ಧಭ್ರುಕುಟಿಯಾಗಿ.

ಜಲದೊಳ್ ಮೀನಿರ್ಪವೊಲ್ ನೀಂ ಕೊಳದೊಳೆ ಮುಳುಗಿರ್ದಕ್ಕಟಾ ಕೋಡಸೇಡಿಂ
ಗೊಳಗಾದಯ್ ನಿನ್ನ ದುರ್ಯೋಧನವೆಸರ್ಗಿದು ಲಜ್ಜಾಕರಂ ತೋಱಿದಪ್ಪ್ ನಿ-
ನ್ನಳವಂ ಚೀ ಸತ್ತರೇಂಪುಟ್ಟರೆ ಪೊಱಮಡು ನೀಂ ಕಂದುಗೊಳ್ ಕೌರವೇಂದ್ರಾ
ಚಳವಜ್ರಂ ಬಂದನೀತಂ ಕುರುಕುಲಮಥನೋದ್ಭೀಕರಂ ಭೀಮಸೇನಂ ॥

ಹರಿ ಸಂಧಾನಕ್ಕೆ ವಂದಂದವಗಡಿಸಿದಹಂಕಾರಮೆಲ್ಲಿತ್ತೊ ಕೃಷ್ಣಾಂ
ಬರ ಕೇಶಾಕೃಷ್ಟಿಯಂ ಮಾಡಿಸಿದ ಮದಮೆಲ್ಲಿತ್ತೊ ಕೌಂತೇಯರಂ ಮ-
ಚ್ಚರದಿಂ ಕಾಂತಾರದೊಳ್ ತಿಱ್ರಿಸೆ ತಿರುಪಿದ ಸೊರ್ಕಿಂಗಳೇನಾದುದೆಂದಾ
ಕುರುವಂಶಾಧೀಶನಂ ಮೂದಲಿಸಿದನದಟಂ ಭೀಮನುದ್ದಾಮ ಭೀಮಂ

ಭೀಮನಾರ್ಭಟವನ್ನು ತಾರಸ್ಥಾಯಿಯಲ್ಲಿ ಮೋಹನರಾಗ ಸಂಚಾರದಲ್ಲಿ ಗಮಕ ಕ್ರಿಯೆಯಲ್ಲಿ ಪ್ರದರ್ಶಿಸಿದಾಗ ಶ್ರೋತೃಗಳು ರೋಮಾಂಚನಗೊಂಡರು. ಭೀಮಗರ್ಜನೆಯನ್ನು ಕೇಳಿ ದುರ್ಯೋಧನನ ಮನಸ್ಸು ಹದಗೆಟ್ಟಿತು

ಆ ರವಮಂ ನಿರ್ಜಿತ ಕಂ
ಠೀರವರವಮಂ ನಿರಸ್ತ ಘನರವಮಂ ಕೋ
ಪಾರುಣ ನೇತ್ರಂ ಕೇಳ್ದಾ
ನೀರೊಳಗಿರ್ದುಂ ಬೆಮರ್ತನುರಗಪತಾಕಂ

ಅಂತುಂ ಬೆಮರ್ತುಮಳ್ಕಿಸಿ ಸೈರಿಸಲಾರದೆ ಜಲಮಂತ್ರಮನೇನುಮಂ
ಬಗೆಯದೆ ಕೋಪೋದ್ರೇಕಮನೆ ಬಗೆದು

ರಸೆಯಿಂ ಕಾಲಾಗ್ನಿ ರುದ್ರಂ ಪೊಱಮಡುವವೊಲಂತಾಸರೋಮಧ್ಯದಿಂ ಸಾ
ಹಸಗರ್ವಾಲಂಕೃತಂ ತೊಟ್ಟನೆ ಕೊಳೆ ಪೊಱಮಟ್ಟೆಲ್ಲಿಪಂ ಭೀಮನೆಂದೆ-
ಣ್ದೆಸೆಯಂ ನೋಡುತ್ತೆ ಮತ್ತದ್ಭುತನಟನಿಟಿಲಾಲೋಲಕೀಲಾಕ್ಷಿವೊಲ್ ದ
ಳ್ಳಿಸೆ ಕೋಪಾರಕ್ತನೇತ್ರಂ ನಿಜಭುಜಗದೆಯಂ ತೂಗಿದಂ ಧಾರ್ತರಾಷ್ಟ್ರಂ

ಭೀಮದುರ್ಯೋಧನರ ಮೂದಲಿಕೆಗಳು ತೆಗಳಿಕೆಗಳು ಮುಗಿಲು ಮುಟ್ಟುತ್ತದೆ. ವೀರರೌದ್ರ ರಸಗಳು ಮಾತುಮಾತುಗಳಲ್ಲಿ ಅಭಿವ್ಯಕ್ತವಾಗುತ್ತವೆ. ಶಕುಂತಲಾಬಾಯಿ ಕಂಠಪಲ್ಲಟದಲ್ಲಿ ಈ ರಸಗಳನ್ನು ಅಭಿವ್ಯಕ್ತಗೊಳಿಸಿದ್ದರು. ಸುಬೋಧ ರಾಮರಾಯರು ಅಂದಿನ ಕಾವ್ಯವಾಚನವಾದ ಮೇಲೆ ನಮ್ಮಲ್ಲಿಗೆ ಬಂದು 'ಭೀಮಸೇನಾಡಂಬರ ನಮ್ಮ ಕಣ್ಣ ಮುಂದೆ ಬಂದು ನಿಂತಿತು. ಭೀಮಸೇನಾಡಂಬರವನ್ನು ಶಕುಂತಲಾಬಾಯಾಡಂಬರವೆನ್ನಬಹುದು. ತುಂಬ ಚೆನ್ನಾಗಿ ರನ್ನಕವಿಯ ಆಶಯವನ್ನು ಅದ್ಭುತವಾಗಿ ಹೊರಹೊಮ್ಮಿದರು,ಎಂದು ಮುಕ್ತಕಂಠದಿಂದ ಹೊಗಳಿದರು.

ಮುಂದಿನವಾರ ಗದಾಯುದ್ಧ ಪ್ರಸಂಗದ ಕಾವ್ಯವಾಚನ. ಅದೂ ಬಹು ಅದ್ಭುತವಾದ ಒಂದು ವೀರ ರೌದ್ರರಸಘಟ್ಟ. ಶಕುಂತಲಾಬಾಯಿ

ಗದೆಗದೆಯಂ ಘಟ್ಟಿಸೆ ಪು
ಟ್ಟಿದ ಕೆಂಡದ ಕಿಡಿಯ ತಂಡವೆಂಟುಂ ದೆಸೆಯಂ
ಪುದಿಯೆ ಪದಧೂಳಿ ಗಗನದೊ
ಳೊದವೆ ಸುರರ್ ಬೆದಱಿ ಕಾದಿದರ್ ಕಡುಗಲಿಗಳ್

ಈ ಪದ್ಯದಲ್ಲಿ "ಗದೆಗದೆಯಿಂ ಘಟ್ಟಿಸೆ" ಪದಗಳನ್ನು ಗಮಕದಲ್ಲಿ ಇಟ್ಟ ರೀತಿ, "ಘಟ್ಟಿಸೆ ಗದೆಗದೆಗಳು" ರಾಗಸಂಚಾರದಲ್ಲಿ ಪ್ರದರ್ಶಿಸಿದ ರೀತಿ, ಕಡುಗಲಿಗಳಾದ ಭೀಮ ದುರ್ಯೋಧನರು ಒಬ್ಬರಿಗೊಬ್ಬರು ಎದುರಿಗೆ ನಿಂತು ಗದೆಗದೆಗಳನ್ನು ಅಪ್ಪಳಿಸಿ ಸೆಣಸಾಟ ಮಾಡುತ್ತಿರುವರೋ ಎಂಬಂತೆ ಶ್ರೋತೃಗಳಿಗೆ ಭಾಸವಾಗುತ್ತಿತ್ತು. ಸುಬೋಧ ರಾಮ ರಾಯರು ಈ ಸನ್ನಿವೇಶವನ್ನು ಬಹುವಾಗಿ ಮೆಚ್ಚಿಕೊಂಡರು. ಭೀಮ ದುರ್ಯೋಧನರ ಗದೆಗದೆಗಳ ಘಟ್ಟಿಸಿ ಸೆಣಿಸಿದ ಪ್ರತ್ಯಕ್ಷದರ್ಶನವನ್ನು ನಮಗೆ ಕಾಣಿಸಿದರು ಶಕುಂತಲಾ ಬಾಯಿ ಎಂದು ಶ್ಲಾಘಿಸಿದರು.

ಪಂಕಜಮುಂ ಸುಹೃದ್ವದನಪಂಕಜಮುಂ ಮುಗಿವನ್ನಮುಗ್ರತೇ:
ಜಂ ಕಿಡುತಿರ್ಪಿನಂ ನಿಜಕರಂಗಳನಂದುಡುಗುತ್ತು ಮಿರ್ಪಜ
ಕ್ರಾಂಕಾಮುಗಲ್ಸಿನಂ ಕ್ರಮದಿನಂಬರಂ ಬಿಸುಟುರ್ವಿಗಂಧಕಾ
ರಂ ಕವಿತರ್ಪಿನಂ ಕುರುಕುಲಾರ್ಕನುಮರ್ಕನುಮಸ್ತಮೆಯ್ದಿದರ್ ॥

ವೃತ್ತ ಪದ್ಯವನ್ನು ಹೊಂದಿಸಿಕೊಂಡು "ಗದಾಯುದ್ಧಂ" ಪ್ರಸಂಗವನ್ನು ಮುಗಿಸಿ ಕವಿ ಚಕ್ರವರ್ತಿ ರನ್ನ ಮಹಾಕವಿಯ "ಸಾಹಸಭೀಮವಿಜಯಂ" ಮಹಾ ಕಾವ್ಯವಾಚನ ಮುಕ್ತಾಯ ಮಾಡಿದರು.

ಜೈನ ಕವಿಗಳ ಪರಂಪರೆಯಲ್ಲಿ ರತ್ನಾಕರವರ್ಣಿಯ ನಿಲುವು ಒಂದು ವಿಶಿಷ್ಟ. ಅವನು "ಭರತೇಶ ವೈಭವ" ಎಂಬ ಜೈನ ಕಾವ್ಯವನ್ನು ಸಾಂಗತ್ಯದಲ್ಲಿ ಬರೆದಿದ್ದಾನೆ. ಶಕುಂತಲಾಬಾಯಿ ಈ ಕಾವ್ಯದ ಮೇಲೂ ಕಣ್ಣಾಡಿಸಿದ್ದಾರೆ. ಸಾರ್ವಜನಿಕ ವೇದಿಕೆ ಯಿಂದ ರತ್ನಾಕರವರ್ಣಿಯನ್ನು ಮೆರಿಸುವ ಅವಕಾಶ ಈವರೆಗೆ ದೊರೆತಿಲ್ಲ. ಆದರೆ ಆಕಾಶ ವಾಣಿಯ ಬೆಂಗಳೂರು ಕೇಂದ್ರದಿಂದ ರತ್ನಾಕರವರ್ಣಿಯನ್ನು ಬಿತ್ತರಿಸುವ ಅವಕಾಶ ಒಂದೆರಡು ಸಲ ದೊರಕಿದೆ. 1981ರಲ್ಲಿ ನಡೆದ ಶ್ರವಣಬೆಳಗೊಳದ ಗೋಮಟೇಶ್ವರನ ಸಹ ಸ್ರಾಬ್ದಿ ಮಹಾಪಟ್ಟಾಭಿಷೇಕ ಸಮಯದಲ್ಲಿ ಬೆಂಗಳೂರು ಆಕಾಶವಾಣಿ ಹಮ್ಮಿಕೊಂಡ ಜೈನ ಕಾವ್ಯಗಳ ವಿಶೇಷ ಕಾರ್ಯಕ್ರಮಗಳಲ್ಲಿ ಶಕುಂತಲಾಬಾಯಿ ಭರತ–ಬಾಹುಬಲಿ ಪ್ರಕರಣವನ್ನು ವಾಚಿಸಿ ಸಾಂಗತ್ಯ ಛಂದಸ್ಸನ್ನು ಶ್ರೋತೃಗಳಿಗೆ ಪರಿಚಯ ಮಾಡಿ ಕೊಟ್ಟರು. ಚಂಪೂ, ಷಟ್ಪದಿ, ಕಾವ್ಯಗಳಿಂದ ಬೇರೆ ಜಾಡನ್ನೇ ಹಿಡಿಯಬೇಕಾಯಿತು.

೪. ಧರ್ಮಸ್ಥಳದಿಂದ ಚಿಕ್ಕಮಗಳೂರಿಗೆ ಗಮಕ ಯಾತ್ರೆ

ಧರ್ಮಸ್ಥಳದ ಮಂಜುನಾಥ ಸ್ವಾಮಿಗೆ ಗಮಕ ಸೇವೆ.

ಶಕುಂತಲಾಬಾಯಿಯ ಉತ್ತರ ದಕ್ಷಿಣ ಕನ್ನಡ ಜಿಲ್ಲೆಗಳ ಕಾವ್ಯವಾಚನ ಪ್ರವಾಸಕ್ಕೆ ದಕ್ಷಿಣ ಕನ್ನಡ ಜಿಲ್ಲೆಯ ಧರ್ಮಸ್ಥಳ ನಾಂದಿಯಾಯಿತು. 1953 ರಲ್ಲಿ ಡಿಸೆಂಬರ್ ಮೊದಲ ವಾರದಲ್ಲಿ ನಡೆದ ಧರ್ಮಸ್ಥಳದ ಕಾರ್ತಿಕಲಕ್ಷ ದೀಪೋತ್ಸವದ ಸಾಹಿತ್ಯ ಸಾಂಸ್ಕೃತಿಕ ಸಮ್ಮೇಳನದಲ್ಲಿ ಕಾವ್ಯವಾಚನ ಮಾಡಬೇಕೆಂದು ಶಕುಂತಲಾ ಬಾಯಿಗೂ ರನ್ನನ ಗದಾಯುದ್ಧ ನಾಟಕವನ್ನು ಅಭಿನಯಿಸಬೇಕೆಂದು ಬೆಂಗಳೂರಿನ ಹವ್ಯಾಸಿ ತಂಡ "ಯುನೈಟೆಡ್ ಆರ್ಟಿಸ್ಟ್" ಸಂಘಕ್ಕೂ ಕ. ನು. ಧರಣೇಂದ್ರಯ್ಯನವರು ಆಮಂತ್ರಣವಿತ್ತರು. ಅವರು ಧರ್ಮಸ್ಥಳದ ಸಾಹಿತ್ಯ ಸಂಸ್ಕೃತಿ ಕಾರ್ಯಕ್ರಮವನ್ನು ನಡೆಸುವ ವ್ಯವಸ್ಥಾಪಕರಾಗಿದ್ದರು.

ರನ್ನನ ಸಾಹಸ ಭೀಮ ವಿಜಯ ಚಂಪೂಕಾವ್ಯವನ್ನು ಗದಾಯುದ್ಧವೆಂಬ ಹೆಸರಿನಲ್ಲಿ ಆಚಾರ್ಯ ಬಿ. ಎಂ. ಶ್ರೀ ನಾಟಕಕ್ಕೆ ತಿರುಗಿಸಿದ್ದರು. ಶ್ರೀ ಯವರ ಗದಾಯುದ್ಧ ನಾಟಕವನ್ನು ಮೈಸೂರು ಮಹಾರಾಜ ಕಾಲೇಜಿನ ಕರ್ಣಾಟಕ ಸಂಘದ ವಿದ್ಯಾರ್ಥಿಗೆಳೆಯರು 1927-28ರ ಸುಮಾರು ಜಯಪ್ರದವಾಗಿ ಅಭಿನಯಿಸಿದ್ದರು. ಈಗ ಅದೇ ಗದಾಯುದ್ಧ ನಾಟಕವನ್ನು "ಯುನೈಟೆಡ್ ಆರ್ಟಿಸ್ಟ್" ಹವ್ಯಾಸಿ ತಂಡ ರಂಗಭೂಮಿಯ ಮೇಲೆ 1949ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ರನ್ನನ ಸಹಸ್ರಾಬ್ದಿ ವರ್ಷೋತ್ಸವದ ಪ್ರಯುಕ್ತ ಅಭಿನಯಿಸುವ ಸಾಹಸ ಮಾಡಿತ್ತು. ಹವ್ಯಾಸಿ ತಂಡದ ನಟ-ಸಾಹಿತಿ ಸಿ. ಕೆ. ನಾಗರಾಜರಾವ್ ದುರ್ಯೋಧನನಾಗಿ, ವೈಣಿಕ ವಿದ್ವಾನ್ ಎಲ್. ರಾಜಾರಾವ್ ಭೀಮಸೇನನಾಗಿ, ಗಮಕಿ-ನಟ ಎಸ್. ನಾಗೇಶರಾವ್ ದ್ರೌಪದಿಯಾಗಿ, ಸಾಹಿತಿ-ಕವಿ ಎಂ. ವಿ. ಸೀತಾರಾಮಯ್ಯ ಸಂಜಯನಾಗಿ, ಗಮಕಿ-ನಟ ಸಿ. ಆರ್. ಸುಂದರರಾವ್ ಕೃಷ್ಣನಾಗಿ, ವೈಣಿಕ ವಿದ್ವಾನ್ ಎಲ್. ಶೇಷಗಿರಿರಾವ್ ಧರ್ಮನಂದನನಾಗಿ, ಸಂಪತ್ ಅಯ್ಯಂಗಾರ್-ನಾನು ಧೃತರಾಷ್ಟ್ರ ಗಾಂಧಾರಿಯರಾಗಿ, ಪಿ. ಕೇಶವಮೂರ್ತಿ ಅಶ್ವತ್ಥಾಮನಾಗಿ, ಅನಂತಪದ್ಮನಾಭರಾವ್ ಲಕ್ಷ್ಮಿಯಾಗಿ, ಸಾಹಿತಿ ಆರ್. ಎಸ್. ರಾಮರಾವ್, ನಾಟಕ ಪ್ರಸಾದನ ಚತುರ ಎಚ್. ನಾರಾಯಣರಾವ್ ಮದುಮಗಳಾಗಿ ಪಾತ್ರಧಾರಿಗಳಾಗಿದ್ದರು. ಸಂಸ್ಕೃತ ಕರ್ಣಾಟಕ ಭಾಷಾ ಪಂಡಿತರೂ ಸುಪ್ರಸಿದ್ಧ ನಟರೂ ಗಮಕ ವಿದ್ವಾಂಸರೂ ಆದ ಮೋಟಗಾನಹಳ್ಳಿ ಸುಬ್ರಹ್ಮಣ್ಯ ಶಾಸ್ತ್ರಿಗಳು ನಮಗೆಲ್ಲ ರಂಗ ತಾಲೀಮು ಕೊಟ್ಟಿದ್ದರು. ವೃತ್ತಿ ನಾಟಕ ರಂಗದಲ್ಲಿ ನಾಟಕ ಪರದೆ, ರಂಗ ವೇಷ ಭೂಷಣ ತೊಡವುಗಳ ನಿರ್ಮಾಣದಲ್ಲಿ ಪರಿಣತರಾದ ಎಚ್. ನಾರಾಯಣರಾವ್, ಪುರಾಣ ಯುಗದ ವಸ್ತ್ರಾಲಂಕಾರ, ವೇಷಭೂಷಣಗಳನ್ನು ತಯಾರಿಸಿ, ದ್ವಾಪರ ಯುಗದ ಭೀಕರ ಕುರುಕ್ಷೇತ್ರ ಸ್ಮಶಾನ ರಂಗ ನಿರ್ಮಾಣ ಮಾಡಿದರು.

ಈಗ ಅವೇ "ಯುನೈಟೆಡ್ ಆರ್ಟಿಸ್ಟ್" ತಂಡ ಧರ್ಮಸ್ಥಳದ ಸಾಹಿತ್ಯ ಸಂಸ್ಕೃತಿ ಸಮ್ಮೇಳನದಲ್ಲಿ ಗದಾಯುದ್ಧ ನಾಟಕ ಪ್ರದರ್ಶನವಿತ್ತು. ವಿಜಯ ದಾಖಲೆ ಸ್ಥಾಪಿಸಲು ಹೊರಟಿತ್ತು. ಆದರೆ ಈಗಿನ ಹವ್ಯಾಸಿ ತಂಡದಲ್ಲಿ ರಂಗಭೂಮಿ ಚಲನ ಚಿತ್ರ ನಟ ವಾಸುದೇವ ಗಿರಿಮಾಜಿ ಭೀಮಸೇನನಾಗಿ, ನಾನು ಧರ್ಮನಂದನನಾಗಿ, ಹರಪನಹಳ್ಳಿಯ ನಮ್ಮ ಕಿರಿ ಗೆಳೆಯ "ಭೈರಾಂಖಾನ್" ಖ್ಯಾತಿ ಎಸ್. ಎನ್. ಮೂರ್ತಿ ಗಾಂಧಾರಿಯಾಗಿ, ಗಮಕ ವಿದ್ವಾನ್ ಎಂ. ಎಸ್. ಚಂದ್ರಶೇಖರಯ್ಯ ಸಂಜಯನಾಗಿ ಬದಲಾವಣೆಯಾಗಿತ್ತು.

ಸಿದ್ಧಗಂಗಾ ಮಠಾಧೀಶ್ವರರಾದ ಡಾ॥ ಶಿವಕುಮಾರ ಸ್ವಾಮಿಗಳು ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿ ಆಹ್ವಾನಿತರಾಗಿದ್ದರು. ಅವರು ಕಾಲಕ್ಕೆ ಸರಿಯಾಗಿ ದಯ ಮಾಡಿಸಿದರು. ಧರಣೇಂದ್ರಯ್ಯ ಅವರು ಬೆಂಗಳೂರಿನಿಂದ ಸಾಹಿತ್ಯ ತಂಡವನ್ನು ಕರೆ ತರುವ ಹೊಣೆ ಹೊತ್ತಿದ್ದರು. ಅವರ ಸಾಹಿತಿಗಳ ತಂಡ ಕಾಲಕ್ಕೆ ಸರಿಯಾಗಿ ಬಂದಿರಲಿಲ್ಲ. ಪೂಜ್ಯರಾದ ಮಂಜಯ್ಯ ಹೆಗ್ಗಡೆಯವರು ನಾಟಕ ತಂಡದಲ್ಲಿದ್ದ ಸಾಹಿತಿಗಳಿಗೆ ಹೇಳಿ ಕಳಿಸಿದರು. ಸಿ. ಕೆ. ನಾಗರಾಜರಾವ್, ಆರ್. ಎಸ್. ರಾಮರಾವ್, ನಾನು, ಭಾಷಣಕಾರರಾಗಿ ಸಮ್ಮೇಳನದಲ್ಲಿ ಭಾಗವಹಿಸಿದೆವು. ಡಾ॥ ಶಿವಕುಮಾರ ಸ್ವಾಮಿಗಳ ಅಧ್ಯಕ್ಷತೆಯಲ್ಲಿ ನಾನು ಮತ್ತು ಶಕುಂತಲಾಬಾಯಿ ಸಾಹಿತ್ಯ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡುದು ಇದೇ ಮೊದಲು. ಅನಂತರ ಪೂಜ್ಯ ಪಾದರಾದ ಶಿವಕುಮಾರ ಸ್ವಾಮಿಗಳ ಸನ್ನಿಧಿಯಲ್ಲಿ ನಮ್ಮ ಕಾರ್ಯಕ್ರಮಗಳು ಲೆಕ್ಕವಿಲ್ಲದಷ್ಟು ನಡೆದಿವೆ.

ಸಾಹಿತ್ಯ ಸಮ್ಮೇಳನ ಪ್ರಾರಂಭವಾಗಿ ನಮ್ಮ ಉಪನ್ಯಾಸಗಳು ಮುಗಿದಿದ್ದವು. ಅಷ್ಟರೊಳಗೆ ಧರಣೇಂದ್ರಯ್ಯನವರ ಸಾಹಿತಿ ತಂಡ ಹಾಜರಾಯಿತು. ಅ. ನ. ಕೃ., ಎ. ಎನ್. ಮೂರ್ತಿರಾಯರು ಪ್ರಮುಖರು. ಉಪನ್ಯಾಸಗಳ ಮಧ್ಯೆ ಸಂಗೀತ ಕಾವ್ಯ ವಾಚನಗಳ ಏರ್ಪಾಡು, ಕರ್ನಾಟಕ-ಭಾರತಗಳ ಖ್ಯಾತ ಸಂಗೀತ ವಿದ್ವಾಂಸ ಬಿ. ಎಸ್. ರಾಜಯ್ಯಂಗಾರ್ ತಮ್ಮ ಪ್ರಸಿದ್ಧ 'ಆಡಿಸಿದಳೆಶೋದ ಜಗದೋದ್ಧಾರನ' ಮತ್ತು ಇನ್ನೂ ಕೆಲವು ದೇವರ ನಾಮಗಳನ್ನು ಹಾಡಿದನಂತರ ಶಕುಂತಲಾಬಾಯಿಯ ಕುಮಾರವ್ಯಾಸ ಭಾರತ ವಾಚನ ನಡೆಯಿತು. ಯಕ್ಷಗಾನ ಪ್ರಿಯರಿಗೆ ಕಾವ್ಯವಾಚನವೂ ಮೆಚ್ಚಿಗೆಗೆ ಪಾತ್ರವಾಯಿತು. ಅ. ನ. ಕೃ., ಮೂರ್ತಿರಾಯರು ಬಹಳ ಉತ್ತಮವಾದ ಭಾಷಣಗಳನ್ನು ಮಾಡಿದರು.

ಮೂರನೆಯ ದಿವಸ ಧರಣೇಂದ್ರಯ್ಯನವರು ನಮ್ಮನ್ನೆಲ್ಲಾ ಶ್ರೀ ಚಂದ್ರನಾಥ ಸ್ವಾಮಿ ಬಸದಿಗೆ ಕರೆದೊಯ್ದರು. ಅಲ್ಲಿ ಅ. ನ. ಕೃ., ಎ. ಎನ್. ಮೂರ್ತಿರಾಯರು ಜೊತೆಯಾಗಿ ಕುಳಿತು ಮಾತನಾಡುತ್ತಿದ್ದರು. ಆ ಸಮಯದಲ್ಲಿ ನಾವು ದಂಪತಿಗಳು ಇಬ್ಬರಿಗೂ ಕೈಮುಗಿದೆವು. ಮೂರ್ತಿರಾಯರು "ನಿಮ್ಮ ಕಾವ್ಯವಾಚನವನ್ನು ಸರಿಯಾಗಿ ಕೂತು ಕೇಳಿದುದು ಇದೇ ಮೊದಲು. ಬಹಳ ಶ್ರೇಷ್ಠವಾಗಿತ್ತು" ಎಂದರು ಶಕುಂತಲಾ

ಬಾಯಿಗೆ. ಕೂಡಲೇ ಅ. ನ. ಕೃ. "ಶಕುಂತಲಾಬಾಯಿಯ ಕಾವ್ಯವಾಚನ ಯಾವಾಗಲೂ ವೈವಿಧ್ಯಮಯವಾಗಿರುತ್ತದೆ. ಪ್ರತಿ ಕಾವ್ಯವಾಚನದಲ್ಲೂ ನವೀನತೆ ಎದ್ದು ಕಾಣುತ್ತದೆ. ತುಂಬ ಮುಂದುವರಿದಿದ್ದಾರೆ." ಎಂದು ದನಿಗೂಡಿಸಿದರು.

"ಯುನೈಟೆಡ್ ಆರ್ಟಿಸ್ಟ್" ನಾಟಕ ತಂಡ ಮಾರನೇ ದಿವಸವೇ ಚಿಕ್ಕಮಗಳೂರಿನಲ್ಲಿ "ಗದಾಯುದ್ಧ" ನಾಟಕ ಪ್ರದರ್ಶನ ಕೊಡಬೇಕಾಗಿತ್ತು. ಮಧ್ಯಾಹ್ನವೇ ನಾಟಕ ತಂಡವನ್ನು ಚಿಕ್ಕಮಗಳೂರಿಗೆ ಕಳಿಸಬೇಕೆಂದು ಮೊದಲೇ ಧರಣೇಂದ್ರಯ್ಯನವರಿಗೆ ತಿಳಿಸಿತ್ತು. ಆದುದರಿಂದ ಧರಣೇಂದ್ರಯ್ಯನವರು ಚಂದ್ರನಾಥ ಬಸದಿಯಿಂದ ನಮ್ಮನ್ನು ನೇರವಾಗಿ ಮಂಜುನಾಥ ಸ್ವಾಮಿ ದೇವಸ್ಥಾನಕ್ಕೆ ಕರೆದೊಯ್ದರು. ಸ್ವಾಮಿಯ ದರ್ಶನ ನಮಗೆ ಪ್ರತ್ಯೇಕವಾಗಿ ಆಯಿತು. "ಮಾತಾಡುವ ಮಂಜುನಾಥಸ್ವಾಮಿ, ನಡೆವ ಮಂಜುನಾಥ ಸ್ವಾಮಿ" ಎಂದು ಕನ್ನಡ ನಾಡಿನಲ್ಲಿ ಮನೆಮಾತಾಗಿದ್ದ ಪರಮ ಪೂಜ್ಯ ಮಂಜಯ್ಯ ಹೆಗ್ಗಡೆ ಅವರು "ಯುನೈಟೆಡ್ ಆರ್ಟಿಸ್ಟ್" ತಂಡದ ಗೆಳೆಯರನ್ನು ತುಂಬ ಪ್ರೀತಿ ವಿಶ್ವಾಸಗಳಿಂದ ಸ್ವಾಗತಿಸಿದರು ತಮ್ಮ ಅರಮನೆಯಲ್ಲಿ. ನಾಲ್ಕೂಕಡೆ ಗೋಡೆಗಳ ಮೇಲೆ ಮಂಜಯ್ಯ ಹೆಗ್ಗಡೆಯವರೇ ರಚಿಸಿದ್ದ ಸುಪ್ರಸಿದ್ಧ ತೈಲ ಚಿತ್ರಗಳು ತೂಗುತ್ತಿದ್ದವು. ಮಹಾಕವಿ ಪಂಪ, ಸಮವಸರಣ, ಬುದ್ಧನ ವಿರಕ್ತಿ ದರ್ಶನ, ನನ್ನ ಮನ ಸೆಳೆದವು. ಪೂಜ್ಯ ಹೆಗ್ಗಡೆಯವರು ಸಿ. ಕೆ. ನಾಗರಾಜ್ ರಾವ್, ಆರ್. ಎಸ್. ರಾಮರಾವ್ ಮತ್ತು ನನಗೆ ರೇಷ್ಮೆಯ ಜರತಾರಿ ಶಲ್ಯ, ಐವತ್ತು ರೂಪಾಯಿಗಳ ಸಂಭಾವನೆ, ಫಲ ತಾಂಬೂಲ, ಇಷ್ಟನ್ನೂ ಸ್ವಹಸ್ತದಿಂದ ದಯಪಾಲಿಸಿದರು. ಶಕುಂತಲಾಬಾಯಿಗೂ ಕುಪ್ಪಸದ ಖಣದೊಡನೆ ಫಲ ತಾಂಬೂಲದ ಜೊತೆ ಐವತ್ತು ರೂಪಾಯಿ ಸಂಭಾವನೆಯನ್ನು ಸ್ವಹಸ್ತದಿಂದ ದಯಪಾಲಿಸಿದರು. ಉಪನ್ಯಾಸಕ್ಕೆ ಸಂಭಾವನೆ ! ನನಗೆ ಆಶ್ಚರ್ಯವೋ ಆಶ್ಚರ್ಯ ! ಕಾವ್ಯವಾಚನಕ್ಕೂ ಐವತ್ತು ರೂಪಾಯಿಗಳ ಸಂಭಾವನೆ ಪಡೆದುದು ಶಕುಂತಲಾಬಾಯಿಗೂ ಪರಮಚ್ಚರಿ. ಕಾವ್ಯವಾಚನಕ್ಕೆ ಐದು, ಹತ್ತು, ಹದಿನೈದು ರೂಪಾಯಿ ಸಂಭಾವನೆ ಕೊಡುತ್ತಿದ್ದ ಕಾಲ. ಸಂಭಾವನೆ ಕೊಡದೆಯೂ ಇದ್ದ ಕಾಲ. ಶಕುಂತಲಾಬಾಯಿ ಆಶ್ಚರ್ಯಪಡದೆ ಇನ್ನೇನು ಮಾಡಿಯಾರು ?

ಮಿನಿ ಬಸ್ ಆಗಲಿ, ವ್ಯಾನಾಗಲೀ ನಮ್ಮ ಹೊತ್ತಿಗೆ ಸಿಗಲಿಲ್ಲ. ಮೇಲು ಚಪ್ಪರವಿಲ್ಲದ ಒಂದು ಲಾರಿ ಬಂದು ನಿಂತಿತು. ಅದರಲ್ಲೇ "ಯುನೈಟೆಡ್ ಆರ್ಟಿಸ್ಟ್" ತಂಡ ಚಿಕ್ಕಮಗಳೂರಿಗೆ ಮಧ್ಯಾಹ್ನ ಮೂರು ಗಂಟೆಗೆ ಪ್ರಯಾಣ ಬೆಳೆಸಿತು. "ಧರ್ಮಸ್ಥಳಕ್ಕೆ ಜೈ" "ಮಂಜಯ್ಯ ಹೆಗ್ಗಡೆಯವರಿಗೆ ಜೈ" "ಮಂಜುನಾಥ ಸ್ವಾಮಿಗೆ ಜೈ" ಜಯಕಾರ ಹಾಕಿ ನಮ್ಮ ಲಾರಿ ಬುಸುಗುಟ್ಟುತ್ತ ಧರ್ಮಸ್ಥಳ ಬಿಟ್ಟಿತು. ಬಿರುಗಾಳಿಯಲ್ಲಿ ಧರ್ಮಸ್ಥಳದಿಂದ ಚಿಕ್ಕಮಗಳೂರಿಗೆ ಬಸ್ಸಿನಲ್ಲಿ ಹೋಗುತ್ತಿರುವಾಗ ನನಗೆ ಪಂಜೆ ಮಂಗೇಶರಾಯರ ಬಹು ಪ್ರಸಿದ್ಧ ಕವನ "ತೆಂಕಣ ಗಾಳಿಯಾಟ" ನೆನಪಿಗೆ ಬರುತ್ತಿತ್ತು.

"ಬಂತೈ ! ಬಂತೈ ! ಇದೆ ! ಇದೆ ! ಬಂತೈ !–
ಗಿಡ ಗಿಡದಿಂ–ಚೆಲುಗೊಂಚಲು ಮಿಂಚಲು–

ಮಿಡಿಯನು ಹಣ್ಣನು, ಉದುರಿಸಿ ಕೆದರಿಸಿ
ಎಡದಲಿ ಬಲದಲಿ ಕೆಲದಲಿ ನೆಲದಲಿ
ಪಡುವಣ ಮೋಡದ ಬೆಟ್ಟಕೆ ಗಟ್ಟಕೆ
ಹೊಡೆದಟ್ಟುತ, ಕೋಲ್ ಮಿಂಚನು ಮಿರುಗಿಸಿ
ಗುಡುಗನು ಗುಡುಗಿಸಿ, ನೆಲವನು ನಡುಗಿಸಿ
ಸಿಡಿಲನು ತಾಳೆಗೆ ಬಾಳೆಗೆ ಎರಗಿಸಿ
ಜಡಿಮಳೆ ಸುರಿವೋಲ್, ಬಿರುಮಳೆ ಬರುವೋಲ್
ಕುಡಿ ನೀರನು ಒಣಗಿದ ನೆಲ ಕೆರೆವೋಲ್
ಬಂತೈ ಬೀಸುತ ! ಬೀಸುತ ಬಂತೈ !
ತೆಂಕಣ ಗಾಳಿಯು ಕೊಂಕಣ ನಾಡಿಗೆ
ಬಂತೈ ! ಬಂತೈ ! ಬಂತೈ ! ಬಂತೈ.

"ಓ ಚಳಿಯಪ್ಪ ಚಳಿಯೋ" ಎಂದು ಲಾರಿಯ ಸಮಸ್ತರೂ ಕೈಗಳಿಂದ ಮೈಯಪ್ಪಿ ಕೊಂಡು ಕುಳಿತೆವು. ಸೂರ್ಯನೂ ಬಹಳ ಬೇಗ ಮುಳುಗಿಬಿಟ್ಟ. ಘಾಟಿನ ಡಿಸೆಂಬರ್ ಚಳಿ–ಕೊರೆತ ಜ್ಞಾಪಿಸಿಕೊಳ್ಳಿ ! ಆದರೆ ನಮ್ಮ ಎಸ್. ನಾಗೇಶರಾಯರು ಧರ್ಮಸ್ಥಳ ದಿಂದ ಚಿಕ್ಕಮಗಳೂರನ್ನು ತಲಪುವವರೆಗೂ ತಮ್ಮಲ್ಲಿದ್ದ ಹಾಸ್ಯದ ಸರಕಿನ ಸುರುಳಿ ಬಿಚ್ಚಿ ನಗಿಸಿ ನಮ್ಮ ಮೈಗಳಲ್ಲಿ ಕಾವು ಹುಟ್ಟಿಸದಿದ್ದರೆ, ನಮ್ಮ ಪಾಡು ಏನಾಗುತ್ತಿತ್ತು ? ಮೈಸೂರು ಸರಕಾರದ ಅಧಿಕಾರಿಗಳು, ಸಾಹಿತಿಗಳು, ರಾಜಕೀಯ ವ್ಯಕ್ತಿಗಳು, ನಟರು, ಸಂಗೀತಗಾರರು, ಸಮಸ್ತರೂ ನಾಗೇಶರಾಯರಿಗೆ ಹಾಸ್ಯ ಲೇವಡಿಗಳಿಗೆ ಸರಕಾಗಿದ್ದರು. ಎಲ್ಲರನ್ನು ತಮ್ಮ ಧ್ವನಿ ಪಲ್ಲಟದಿಂದ ಅಣಕಿಸಿ, "ಕರ್ಣ ದರ್ಶನ" ಮಾಡಿಸಿದರು. ನಮ ಗೆಲ್ಲ ನಕ್ಕುನಕ್ಕು ಹೊಟ್ಟೆ ಹುಣ್ಣಾಯಿತು. ಚಳಿ, ಹಸಿವುಗಳಿಂದ ಕಂಗಾಲಾಗಿದ್ದ ಎಳೆ ಕಂದಮ್ಮಗಳು ಕೂಡ ಹೊಟ್ಟೆ ಬಿರಿಯುವಂತೆ ನಗುತ್ತಿದ್ದವು. ಅನ್ನ ಬ್ರಹ್ಮದ ಪೇಗುಲ ದಲ್ಲಿ ಛಿಳಿ ಛಿಟ ಜಿಂಕಿ ; ನಾಗೇಶರಾಯರ ನಕಲಿ ಬ್ರಹ್ಮದಲ್ಲಿ ಹಾಸ್ಯರಸದ ಸುರಿಮಳೆ. ರಾತ್ರಿ ಹತ್ತು ಗಂಟೆಗೆ ನಮ್ಮ ಲಾರಿ ಚಿಕ್ಕಮಗಳೂರಿನ ಬಿಡದಿ ಮನೆ ಸೇರಿತು. ಹಾಸಿಗೆ ಉರುಳಿಸಿ, ಕಾಲುಚಾಚಿ ದಿವ್ಯಾಮ್ಯಾಲೆ ರಂಗನಂತೆ ಮಲಗುವುದಕ್ಕೆ ಸ್ಥಳ ಸಿಕ್ಕಿತು. ಆದರೆ ಹೊಟ್ಟೆಗೆ ? ಹೋಟಿಲು, "ಊಟ ಮುಗಿದಿದೆ" ಎಂಬ ಹಲಗೆ ತೋರಿಸಿ ಹೊಟ್ಟೆಯುರಿ ಸಿತು. ಸನಿಹದಲ್ಲಿದ್ದ ಪಾನ್ ಬೀಡ ಅಂಗಡಿ, ಬಹಳ ಕನಿಕರದಿಂದ "ಡಬಲ್" ದರ ಏರಿಸಿ ಅಷ್ಟಿಷ್ಟು ಬಾಳೆಹಣ್ಣು ಕೊಟ್ಟು ಸಾಗಹಾಕಿತು. ರಾವಣನ ಹೊಟ್ಟೆಗೆ ಅರಕಾಸಿನ ಶುಂಟಿ ನುಂಗಿ, ಹಸಿವಿನ ಹೊಟ್ಟೆ ಸವರಿಕೊಳ್ಳುತ್ತ ಮಲಗಿದೆವು, ಮಲಗಿದೆವಷ್ಟೆ. ಆ ಪ್ರವಾಸದ ಆಯಾಸದಲ್ಲಿ ನಿದ್ದೆ ಎಲ್ಲಿ ?

ಮರೆಯಲಾರದ ಚಿಕ್ಕಮಗಳೂರು

ಬೆಳಗಾಯಿತು. ಹೋಟಿಲು ನಮಗೆ ಬೀಗರ ಉಪಚಾರಮಾಡಿ ತಿಂಡಿ ತೀರ್ಥ ಊಟ ಒದಗಿಸಿ ಖುಷಿಪಡಿಸಿತು. ಮಧ್ಯಾಹ್ನ ಗಮಕ ವಿದ್ವಾಂಸ ಎಂ. ಎಸ್. ಚಂದ್ರ ಶೇಖರಯ್ಯ, ತಮ್ಮ ಪಟ್ಟಶಿಷ್ಯ ಗಮಕ ವಿದ್ವಾನ್ ಎಚ್. ಪಿ. ರಾಮಸ್ವಾಮಿಯವರ ಮನೆಗೆ ನಮ್ಮನ್ನು ಕರೆದೊಯ್ದರು. ರಾಮಸ್ವಾಮಿ, ಸುಪ್ರಸಿದ್ಧ ಸಂಗೀತ ವಿದುಷಿ

ರಾಜಮ್ಮ ಕೇಶವಮೂರ್ತಿ ಮತ್ತು ಅವರ ಪತಿ ಕೇಶವಮೂರ್ತಿಗಳಿಗೆ ನಮ್ಮನ್ನು ಪರಿಚಯ ಮಾಡಿಕೊಟ್ಟರು. ಅವರ ಮನೆಯಲ್ಲೇ ಒಂದು ಸಣ್ಣ ಗಮಕ ಗೋಷ್ಠಿಯಾಯಿತು. ಚಂದ್ರಶೇಖರಯ್ಯ, ರಾಮಸ್ವಾಮಿ, ರಾಜಾಮಣಿ, ನಾಗರಾಜರಾವ್, ಶಕುಂತಲಾ ಬಾಯಿ ಕುಮಾರವ್ಯಾಸ ಭಾರತ ವಾಚನ ಮಾಡಿದರು. ರಾಜಮ್ಮ ಕೇಶವ ಮೂರ್ತಿ ಡಿ. ವಿ. ಜಿ. ಅವರ ಅಂತಃಪುರ ಗೀತೆಗಳನ್ನು ಸುಶ್ರಾವ್ಯವಾಗಿ ಹಾಡಿದರು. ಮುಂದೆ ಅವರು ಅಂತಃಪುರ ಗೀತೆಗಳಲ್ಲಿ ಹೆಸರುಮಾಡಿ, ಡಿ. ವಿ. ಜಿ. ಅವರಿಂದಲೇ "ಭಲೆ" ಎನ್ನಿಸಿಕೊಂಡರು. ಈಗ ಪ್ರಸಿದ್ಧ ಸಂಗೀತ ವಿದುಷಿಯಾಗಿ ಕರ್ಣಾಟಕದಲ್ಲಿ ಜನಪ್ರಿಯ ರಾಗಿದ್ದಾರೆ. ನಮ್ಮ ಆಪ್ತ ಮಿತ್ರವರ್ಗದಲ್ಲಿ ಕೇಶವ ಮೂರ್ತಿ ದಂಪತಿಗಳು ಸೇರಿದ್ದಾರೆ.

ಅಕ್ಕಿ ಮಾಡುವ ಕಾರ್ಖಾನೆಯ ಒಂದು ಬಹುದೊಡ್ಡ ದಾಸ್ತಾನು ಮಳಿಗೆ ಯನ್ನು ತಾತ್ಕಾಲಿಕವಾಗಿ ರಂಗ ಮಂದಿರವಾಗಿ ಮಾರ್ಪಡಿಸಿದ್ದರು. "ಯುನೈಟೆಡ್ ಆರ್ಟಿಸ್ಟ್" ಸಂಘ ಒಂದು ಸಂಸ್ಥೆಗಾಗಿ "ಗದಾಯುದ್ಧ" ವನ್ನು ಸಹಾಯಾರ್ಥವಾಗಿ ಅಭಿನಯಿಸಿತು. ಚಿಕ್ಕಮಗಳೂರಿನ ರಂಗಭೂಮಿಗೂ ಧರ್ಮಸ್ಥಳದ ರಂಗಭೂಮಿಗೂ ಬಹಳ ವ್ಯತ್ಯಾಸ. ಧರ್ಮಸ್ಥಳದ ರಂಗಭೂಮಿ ಕಿರಿದಾಗಿತ್ತು. ಚಿಕ್ಕಮಗಳೂರಿನ ರಂಗ ಭೂಮಿ ವಿಶಾಲವಾಗಿತ್ತು. ಶ್ರೋತೃಗಳಲ್ಲೂ ವೈವಿಧ್ಯ. ಧರ್ಮಸ್ಥಳದ ಶ್ರೋತೃಗಳು ಯಕ್ಷಗಾನ ಪ್ರಿಯರು, ಜಾತ್ರೆಯ ಶ್ರೋತೃಗಳು. ಚಿಕ್ಕಮಗಳೂರಿನ ಶ್ರೋತೃ ನಗರದ ನಾಗರಿಕತೆಯ ರಸಿಕರು. "ಗದಾಯುದ್ಧ"ದ ಪ್ರಯೋಗ ಉನ್ನತ ಶಿಖರ ಮುಟ್ಟಿತ್ತು. "ಯುನೈಟೆಡ್ ಆರ್ಟಿಸ್ಟ್" ಜಯ ದುಂದುಭಿ ಮೊಳಗಿಸಿತು.

ಚಿಕ್ಕಮಗಳೂರಿಗೆ ನಮ್ಮ ಎರಡನೇ ಕಾವ್ಯವಾಚನದ ಪ್ರವಾಸ ನಿಶ್ಚಯವಾದುದು 1967 ರಲ್ಲಿ. ಇದು ಚಿಕ್ಕಮಗಳೂರಿನ ಸುಪ್ರಸಿದ್ಧ ವಕೀಲರೂ ಹೆಸರಾಂತ ದಾನಿಗಳೂ ಆದ ಶ್ರೀನಿವಾಸರಾಯರು ಸ್ಥಾಪಿಸಿದ್ದ ರಾಘವೇಂದ್ರ ಸ್ವಾಮಿಗಳ ಮಠದ ಕಾರ್ಯ ಕ್ರಮ. ಶಕುಂತಲಾಬಾಯಿಯನ್ನು ಕರೆಸಿಕೊಂಡು ಸತತವಾಗಿ ಒಂಬತ್ತು ದಿವಸಗಳ ಕಾರ್ಯಕ್ರಮವಿಟ್ಟು ಕುಮಾರವ್ಯಾಸ ಭಾರತವನ್ನು ಸಾರ್ವಜನಿಕ ವೇದಿಕೆಯ ಮೇಲೆ ಮೆರೆಸಿದ ಪುಣ್ಯ ಚಿಕ್ಕಮಗಳೂರಿನ ಶ್ರೀನಿವಾಸರಾಯರಿಗೆ ಸಲ್ಲಬೇಕು. ಆಕೆಗೆ ಕುಮಾರ ವ್ಯಾಸನನ್ನು ಸಾರ್ವಜನಿಕ ವೇದಿಕೆಯಿಂದ ಒಂದು ಸಪ್ತಾಹವಾಗಿ ಎಲ್ಲಿಯಾದರೂ ಓದೋಣವೆಂದರೆ ಈವರೆಗೆ ಅವಕಾಶವಿರಲಿಲ್ಲ. "ಕಾವ್ಯಕೆ ಗುರು, ಗಮಕಿಗಳ ಕುಲ ದೈವ, ನಮಗೆ ಒಲಿಯಲೇ ಇಲ್ಲವಲ್ಲ !" ಎಂಬ ಚಿಂತೆ ನಮ್ಮ ಮನಸ್ಸಿನಲ್ಲಿ ಮಂಥನ ಮಾಡು ತ್ತಲೇ ಇತ್ತು. ಈಗ ಅದು ನೆರವೇರಿತು. ಮಠದಲ್ಲಿ ನವರಾತ್ರಿಯ ಪ್ರಾರಂಭ ದಿನದಿಂದ ವಿಜಯ ದಶಮಿಯವರೆಗೆ ಕುಮಾರವ್ಯಾಸ ಭಾರತ ವಾಚನವಾಯಿತು. ವಿಜಯ ದಶಮಿಯ ರಾತ್ರಿ ಮಹಾ ಮಂಗಳ ಕುಮಾರವ್ಯಾಸ ಭಾರತಕ್ಕೆ. ಪಲ್ಲಕ್ಕಿಯಲ್ಲಿ ಕುಮಾರ ವ್ಯಾಸ ಭಾರತದ ಹೊತ್ತಿಗೆಯನ್ನು ಇಟ್ಟು ಪ್ರಾಕಾರೋತ್ಸವ. ನಾನು, ಶಕುಂತಲಾ ಬಾಯಿ ಪಲ್ಲಕ್ಕಿಯ ಎರಡೂ ಕಡೆ ನಿಂತು ಚಾಮರ ಬೀಸಿದೆವು. ಹೀಗೆ ವಿಜೃಂಭಿಸಿತು ಶಕುಂತಲಾಬಾಯಿಯ ಕುಮಾರವ್ಯಾಸ ಭಾರತ ವಾಚನ ಸಪ್ತಾಹ.

ಈ ವೇಳೆಗಾಗಲೇ ನಾನು ಮಕ್ಕಳ ಭಾರತದರ್ಶನ ಮಾಲೆ ಪ್ರಾರಂಭಿಸುವ ಯೋಜನೆಯಲ್ಲಿದ್ದೆ. ಮೂಲಾ ನಕ್ಷತ್ರದ ದಿನ ಚಿಕ್ಕಮಗಳೂರಿನ ಚಲನಚಿತ್ರೋದ್ಯಮಿ ನಾಗರಾಜಸೆಟ್ಟರು ಜಯಂತಿ ಕಾಫಿ ವರ್ಕ್ಸ್‌ನ ಶ್ರೀನಿವಾಸ ಸೆಟ್ಟರ ಮನೆಗೆ ಕರೆದೊಯ್ದರು. ಶ್ರೀನಿವಾಸ ಸೆಟ್ಟರ ಮಗನಿಗೆ ಅಕ್ಷರಾಭ್ಯಾಸದ ಉತ್ಸವ ನಡೆಯುತ್ತಿತ್ತು. ಮಕ್ಕಳ ಮಂಟಪ ಹಾಗೂ ಮಕ್ಕಳ ಭಾರತ ದರ್ಶನ ಮಾಲೆಯ ವಿಷಯ ಕೇಳಿ ತಾವಾಗಿ ಇನ್ನೂ ರೈವತ್ತು ರೂಪಾಯಿಗಳನ್ನು "ಮಾಲೆಗೆ" ಕಾಣಿಕೆ ಕೊಟ್ಟರು. 'ನಾನು ವಿದ್ಯೆಗೆ ಹಂಬಲಿಸಿದ ಬಾಲಕ' ಪ್ರಕಟಿಸಿ, ಶ್ರೀನಿವಾಸ ಸೆಟ್ಟರ ಮಗನಿಗೆ ಅರ್ಪಿಸಿದೆ.

ವಿಜಯದಶಮಿಯ ಬೆಳಗ್ಗೆ ಶ್ರೀನಿವಾಸರಾಯರು ನಮ್ಮನ್ನು ತಮ್ಮ ಕಾರಿನಲ್ಲಿ ಶೃಂಗೇರಿಗೆ ಕಳಿಸಿಕೊಟ್ಟರು. ನಾವು ಶೃಂಗೇರಿಗೆ ಯಾತ್ರೆ ಹೋಗುತ್ತಿದ್ದುದು ಇದೇ ಮೊಟ್ಟ ಮೊದಲು. ಕಾಫಿ ಬೋರ್ಡಿನಲ್ಲಿರುವ ಕನ್ನಡಸಂಘದ ನನ್ನ ಸಾಹಿತಿ ಮಿತ್ರ ರಾ. ಭೀಮು ದಂಪತಿಗಳೂ ನಮ್ಮೊಡನೆ ದಯಮಾಡಿಸಿದ್ದರು. ಶೃಂಗೇರಿಗೆ ಹೋಗುತ್ತಲೇ ತುಂಗಭದ್ರಾ ನದಿಯಲ್ಲಿ ಸ್ನಾನಮಾಡಿದೆವು. ಕಾಶ್ಮೀರಪುರವಾಸಿನಿಯಾಗಿ ಆದಿ ಶಂಕರಾಚಾರ್ಯರ ಜೊತೆಗೆ ಶೃಂಗೇರಿಗೆ ಬಂದು ಪ್ರತಿಷ್ಠೆಗೊಂಡಳೆಂದು ಪ್ರಸಿದ್ಧಳಾದ ಶಾರದಾಂಬೆಯ ದರ್ಶನ ಮಾಡಿದೆವು. ಶಕುಂತಲಾಬಾಯಿ ಕಣ್ಮುಚ್ಚಿ ಕೈಮುಗಿದುಕೊಂಡು,

"ವಾರಿಜಾಸನೆ ಸಕಲಶಾಸ್ತ್ರ ವಿ
ಚಾರದುದ್ಭವೆ ವಚನರಚನೋ
ದ್ಧಾರೆ ಶ್ರುತಿ ಪೌರಾಣದಾಗಮ ಸಿದ್ಧಿದಾಯಕಿಯೆ
ಶೌರಿ ಸುರಪತಿ ಸಕಲ ಮುನಿಜನ
ಸೂರಿಗಳಿಗನುಪಮದ ಮುಕುತಿಯೆ
ಶಾರದೆಯೆ ನರ್ತಿಸುಗೆ ನಲಿದೊಲಿದೆನ್ನ ಜಿಹ್ವೆಯಲಿ

ಎಂದು ಬೇಡಿಕೊಂಡರು. ಆಕೆಯ ಅನುಗ್ರಹವೋ ಎಂಬಂತೆ ಮುಂದಿನ ವರ್ಷ 1968ರ ಅವಧಿಯಲ್ಲಿಯೇ ಶಕುಂತಲಾಬಾಯಿ ಹಾಸನದಲ್ಲಿ ಲಕ್ಷ್ಮೀಶನ ಜೈಮಿನಿ ಭಾರತವನ್ನು ಶರನ್ನವರಾತ್ರಿಯಲ್ಲಿ ಲಕ್ಷ್ಮೀ ಸೌಮ್ಯಕೇಶವಸ್ವಾಮಿ ದೇವಸ್ಥಾನದಲ್ಲಿ ವಾಚನ ಮಾಡುವ ಶುಭ ಘಳಿಗೆ ಒದಗಿಬಂತು. ಡಾ|| ಬಿ. ಎಸ್. ಜಗನ್ನಾಥ್ ದೇವಸ್ಥಾನದ ಮುಖ್ಯ ಧರ್ಮದರ್ಶಿ. ಸಾಹಿತ್ಯ ಸಾಂಸ್ಕೃತಿಕ ಕಾರ್ಯಕ್ರಮವನ್ನು ಅವರು ಆ ವರ್ಷವೇ ಪ್ರಾರಂಭಿಸಿದ್ದರು. "ನೀವೇ ದಂಪತಿಗಳು ಬಂದು ಪ್ರಾರಂಭಿಸಬೇಕು" ಎಂದು ಒತ್ತಾಯದ ಆಹ್ವಾನವನ್ನೂ ಕಳಿಸಿದರು. ಸ್ನೇಹಮಯಿಯಾದ ಡಾ|| ಜಗನ್ನಾಥರ ಆಹ್ವಾನವನ್ನು ನಿರಾಕರಿಸುವಂತಿಲ್ಲ. ಹಾಸನದ ಲಕ್ಷ್ಮೀಸೌಮ್ಯ ಕೇಶವಸ್ವಾಮಿ ದೇವಸ್ಥಾನದ ಎರಡು ಕಾರ್ಯಕ್ರಮಗಳೂ ಶಕುಂತಲಾಬಾಯಿಯ ಕಾವ್ಯಜೀವನದಲ್ಲಿ ಕಳಶಪ್ರಾಯವಾಗಿವೆ.

ಜೈಮಿನಿಭಾರತವಾಚನ ತುಂಬ ಜಯಪ್ರದವಾಯಿತು. ವಿಜಯದಶಮಿಯ ಬೆಳಗ್ಗೆ ಜೈಮಿನಿಭಾರತ ಕಾವ್ಯವಾಚನದ ಮಂಗಳಮಹೋತ್ಸವ. ಹಾಸನದ ಮಹಾಜನವೆಲ್ಲ ದೇವಸ್ಥಾನದಲ್ಲಿ ತುಂಬಿತ್ತು. ನಗರದ "ಜನಮಿತ್ರ" ಪತ್ರಿಕೆಯ ಸಂಪಾದಕ ಕೃ. ನ. ಮೂರ್ತಿ ನಮ್ಮ ಮೇಲೆ ವಿಶ್ವಾಸವಿಟ್ಟು ಬರೆದ ವರದಿ ಹೀಗಿದೆ—

"ಸಾಂಸ್ಕೃತಿಕ ಯಜ್ಞದ ಮಂಗಳಾಚರಣೆ"

ಕಳೆದ ಹತ್ತು ದಿವಸಗಳಿಂದಲೂ ಸ್ಥಳೀಯ ಶ್ರೀ ಲಕ್ಷ್ಮೀಸೌಮ್ಯ ಕೇಶವಸ್ವಾಮಿ ದೇವಾಲಯದಲ್ಲಿ ಏರ್ಪಟ್ಟಿದ್ದ ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾಯರಿಂದ ಜೈಮಿನಿ ಭಾರತ ಕಾವ್ಯವಾಚನದ ಮಂಗಳಾಚರಣೆಯು ಇಂದು ನೆರವೇರಿತು.

ಜಿಲ್ಲಾ ವಿದ್ಯಾಧಿಕಾರಿ ಶ್ರೀ ಗುರುರಾವ್ ಅವರ ಅಧ್ಯಕ್ಷತೆಯಲ್ಲಿ ದೇವಾಲಯದ ಆವರಣದಲ್ಲಿ ಏರ್ಪಟ್ಟಿದ್ದ ಈ ಮಂಗಳಾಚರಣೆ ಸಮಾರಂಭದಲ್ಲಿ ಸ್ವಾಗತಾನಂತರ ಶ್ರೀ ಕೃ. ನ. ಮೂರ್ತಿ ಮತ್ತು ಪಂಡಿತ ನಾಗರಾಜಯ್ಯ ಇವರುಗಳು ಶ್ರೋತೃಗಳ ಪರವಾಗಿ ಮಾತಾಡಿ ಶ್ರೀಮತಿ ಮತ್ತು ಶ್ರೀ ಪಾಂಡುರಂಗರಾಯರು ಸಲ್ಲಿಸುತ್ತಿರುವ ಸೇವೆಯನ್ನು ಪ್ರಶಂಸಿದರು.

ದೇವಾಲಯದ ಧರ್ಮದರ್ಶಿಗಳ ಸಭೆಯ ಸಂಚಾಲಕರಾದ ಡಾ|| ಬಿ. ಎಸ್. ಜಗನ್ನಾಥ್ ಅವರು ಶ್ರೀ ಮತ್ತು ಶ್ರೀಮತಿ ಪಾಂಡುರಂಗರಾಯರ ಸಾರಸ್ವತ ತಪಸ್ಸನ್ನೂ ಅವರು ಅವ್ಯಾಹತವಾಗಿ ನಡೆಸಿಕೊಂಡು ಬಂದಿರುವ ಜ್ಞಾನಯಜ್ಞವನ್ನೂ ತಿಳಿಸಿದರಲ್ಲದೇ ಕಡೆಯಲ್ಲಿ ವಂದನೆ ಸಲ್ಲಿಸಿದರು. ಶ್ರೀ ಪಾಂಡುರಂಗರಾಯರಿಗೆ ಶಾಲು ಮತ್ತು ಶ್ರೀಮತಿ ಶಕುಂತಲಾಬಾಯಿ ಅವರಿಗೆ ದೀಪದ ಕಂಬ ಹಾಗೂ 125 ರೂಪಾಯಗಳ ನಿಧಿಯನ್ನು ಅಧ್ಯಕ್ಷರ ಹಸ್ತ ಸಮರ್ಪಿಸಿದರು.

ಅಧ್ಯಕ್ಷರು ಮಾತನಾಡಿ ಇಂಥ ಪ್ರಾಚೀನಕಾವ್ಯಗಳು ಇಂದಿನ ಜನರಿಗೆ ಸ್ಫೂರ್ತಿಯ ಸೆಲೆಯಾಗಿ ಜನಸಾಮಾನ್ಯರ ಉದ್ಧಾರವಾಗಬೇಕಾಗಿದೆ ಎಂದು ಆಶಿಸಿದರು.

2–10–1968

ಗೊರೂರಿನಲ್ಲಿ ಕಾವ್ಯವಾಚನ

ನಮ್ಮ ಬಾಳಿನಲ್ಲಿ ಆತ್ಮೀಯ ಸಹೋದರರಂತಿರುವ ಗೊರೂರು ರಾಮಸ್ವಾಮಿ ಅಯ್ಯಂಗಾರ್ಯರು ಹಾಸನದ ದೇವಸ್ಥಾನದಲ್ಲಿ ನಡೆದ ಜೈಮಿನಿ ಭಾರತ ವಾಚನ ಕೇಳುವುದಕ್ಕೆ ಒಂದೆರಡು ದಿವಸ ಬಂದಿದ್ದರು. ಶಕುಂತಲಾಬಾಯಿಯನ್ನು ತಮ್ಮ ಗೊರೂರಿಗೆ ಬರಬೇಕೆಂದು ಆಹ್ವಾನಿಸಿದರು. ವಿಜಯದಶಮಿಯ ಮಾರನೇ ದಿವಸ ಬೆಳಗ್ಗೆ ಗೊರೂರಿಗೆ ಒಂದು ಜೀಪಿನಲ್ಲಿ ಹೋದೆವು. ಸಕಾಲದಲ್ಲೇ ಜೀಪು ಗೊರೂರರ ಮನೆಯ ಮುಂದೆ ನಿಂತಿತು. ಗೊರೂರಿನ ಭೂ ಸ್ಪರ್ಶವಾಗುತ್ತಲೇ ನನ್ನ ಚಿತ್ತಭಿತ್ತಿಯಲ್ಲಿ "ನಮ್ಮೂರ ರಸಿಕರು" "ಮೆರವಣಿಗೆ" ಬಂದು ನಿಂತಂತೆ ಭಾಸವಾಯಿತು "ಹಳ್ಳಿಯ ಚಿತ್ರಗಳು" "ಗರುಡಗಂಬದ ದಾಸಯ್ಯ" ಹೀಗೆ ಗೊರೂರರ ಸಾಹಿತ್ಯವೆಲ್ಲ ನೆನಪಿನ ಕನ್ನಡಿಯಲ್ಲಿ ಮಿಂಚಿಹೋದವು. ಗೊರೂರು ದಂಪತಿಗಳು ಹಾರ್ದಿಕವಾದ ಸ್ವಾಗತ ನೀಡಿದರು. ಕಾಫಿ ತಿಂಡಿಯ ಉಪಚಾರವಾಯಿತು. ಹೇಮಾವತಿ ನದಿ ದಡದ ಮೇಲಿರುವ ನರಸಿಂಹಸ್ವಾಮಿ ದೇವಸ್ಥಾನದಲ್ಲಿ ಸ್ವಾಮಿಯ ದರ್ಶನ ಮಾಡಿಸಿದರು. ಊಟದ ವೇಳೆಯಲ್ಲಿ ಭರ್ಜರಿ ಭೋಜನ, ಸ್ವಲ್ಪ ಕಾಲ ವಿಶ್ರಾಂತಿ. ಆಮೇಲೆ ಗೊರೂರರ ಮನೆಯ ಎದುರಿಗೇ ಇದ್ದ

ವೇದಾಂತ ಸಭಾ ಮಂದಿರದಲ್ಲಿ ಶಕುಂತಲಾಬಾಯಿಯಿಂದ "ಕುಮಾರವ್ಯಾಸ ಭಾರತ" ಮತ್ತು "ಜೈಮಿನಿ ಭಾರತ"ಗಳಿಂದ ವಾಚನ.

ಊರಿಗೆಲ್ಲ ನಮ್ಮ ಕಾರ್ಯಕ್ರಮ ತಿಳಿಯಬೇಕಲ್ಲ! ಗೊರೂರರು ಒಬ್ಬ ಬಾಲಕನ ಕೈಗೆ ಝಾಂಕಟೆ ಕೊಟ್ಟು "ಹೀಗೆ ಹೇಳೆಂದು" ತಿಳಿವಳಿಕೆ ಕೊಟ್ಟು ಊರ ಪ್ರದಕ್ಷಿಣೆಗೆ ಕಳಿಸಿದರು. ಅವನು ತನ್ನ ಕರ್ತವ್ಯ ಮುಗಿಸಿ ಬರುತ್ತಲೇ "ಏನು ಹೇಳಿದೆ?" ಎಂದು ಕೇಳಿದರು. ಅವನು ಪೆಚ್ಚುಪೆಚ್ಚಾಗಿ ಏನೋ ಹೇಳಿದ. ಗೊರೂರರು ತಾವೇ ಕೈಯ್ಯಲ್ಲಿ ಝಾಂಕಟೆ ಹಿಡಿದು ಪ್ರಚಾರದ ಊರು ಪ್ರದಕ್ಷಿಣೆ ಮಾಡಿ ಬಂದರು. ಗೊರೂರರ ಪ್ರಚಾರ ಚೆನ್ನಾಗಿತ್ತೆಂಬುದಕ್ಕೆ ಜನ ಸಂದಣಿಯೇ ಸಾಕ್ಷಿಯಾಗಿತ್ತು. ನಮ್ಮ ಕಿರಿಯ ಮಗಳು ಬಿ. ಪಿ. ವಸಂತ ಹಾಸನದ ಪ್ರವಾಸದಲ್ಲಿ ನಮ್ಮ ಬೆನ್ನು ಬಿದ್ದಿದ್ದಳು. ಅವಳು ಗೊರೂರರಿಗೆ ಒಂದು ಬಿರುದು ಕೊಟ್ಟು ಹಾಸ್ಯದ ಚಟಾಕಿ ಹಾರಿಸಿದಳು. ಗೊರೂರರಿಗೆ ಡಾ|| ಪ್ರಶಸ್ತಿ ಸಿಕ್ಕಿದೆ ಇನ್ನೂ ಏನೇನೋ ಪ್ರಶಸ್ತಿಗಳು ಸಿಕ್ಕಿವೆ. ಅವು ಏನು ಮಹಾ ಕುಮಾರಿ ವಸಂತ ಕೊಟ್ಟ ಪ್ರಶಸ್ತಿಯ ಮುಂದೆ! ಆ ಪ್ರಶಸ್ತಿ ಏನು ಗೊತ್ತೆ? "ಝಾಂಕಟೆ ಮಾವಯ್ಯ."

ಕುಮಾರವ್ಯಾಸ ಲಕ್ಷ್ಮೀಶರ ಜನಪ್ರಿಯ ಕಾವ್ಯಗಳನ್ನು ಹುಟ್ಟಿದೂರು ಕಲಿತೂರು ಆದ ಬೆಂಗಳೂರಿನಲ್ಲಿಯೇ ಸತತವಾಗಿ ಒಂದು ದಿನವೂ ಬಿಡದೆ ಸಾರ್ವಜನಿಕ ವೇದಿಕೆಯಿಂದ ವಾಚನ ಮಾಡಲಿಲ್ಲವೆಂಬ ಕೊರಗು ನಮಗಿಬ್ಬರಿಗೂ ಮನಸ್ಸಿನಲ್ಲಿಯೇ ಕೊರೆಯುತ್ತಿತ್ತು. ಮನೆಯಲ್ಲಿ ನಾವೇ ಓದಿಕೊಂಡು ಸಂತೋಷ ಪಟ್ಟಿದ್ದೆವು. ಮನೆಗೆ ಒಂದು ಕೇಳುವ ಕುಮಾರವ್ಯಾಸ, ಲಕ್ಷ್ಮೀಶರ ಭಕ್ತರಿಗೆ ಯಾವ ಘಳಿಗೆಯಲ್ಲಾದರೂ "ಇಲ್ಲ" ವೆನ್ನದೆ ಕಾವ್ಯವಾಚನ ಮಾಡಿ ತಣಿಸಿದ್ದರು ಶಕುಂತಲಾಬಾಯಿ. ಆ ಮಾತುಗಳು ಬೇರೆ. ಆದರೆ "ಸಾರ್ವಜನಿಕ ವೇದಿಕೆಯಿಂದ ಈ ಎರಡು ಮಹಾಕಾವ್ಯಗಳ ವಾಚನ ಮಾಡಿ ಮಹಾಜನರ ಹೃದಯಕ್ಕೆ ಮುಟ್ಟಿಸುವ ಸದವಕಾಶ ದೊರೆಯಲಿಲ್ಲವಲ್ಲ." ಎಂಬ ಕಲೋಪಾಸನೆಯ ಕೊರಗನ್ನು ನಿವಾರಣೆ ಮಾಡಿದ ಯಶಸ್ಸು ಮಲ್ಲೇಶ್ವರಂ ಶ್ರೀರಾಮ ಮಂದಿರದ ಶ್ರೀರಾಮ ಸೇವಾ ಮಂಡಲಿ ಸಮಿತಿಗೂ ರಾಜಾಜಿನಗರದ ಪುಣ್ಯಧಾಮದಲ್ಲಿ ನೆಲೆಸಿರುವ ಮಾರುತಿ ಮತ್ತು ಮಹಾಗಣಪತಿ ದೇವಸ್ಥಾನದ ಸೇವಾ ಸಮಿತಿಗೂ ಸಲ್ಲಬೇಕು.

ಮಲ್ಲೇಶ್ವರಂ ಶ್ರೀರಾಮಮಂದಿರದ ಶ್ರೀರಾಮ ಸೇವಾ ಮಂಡಲಿಯ ಅಧ್ಯಕ್ಷರಾಗಿದ್ದ ಎಸ್. ಕೆ. ರಾಮಾನುಜಯ್ಯಂಗಾರ್ಯರು 1969ರಲ್ಲಿ ಇದ್ದಕ್ಕಿದ್ದ ಹಾಗೆ ನಮ್ಮ ಮನೆಗೆ ದಯಮಾಡಿಸಿದರು. "ಶಕುಂತಲಾಬಾಯಿ, ನೀವು ಸುಮಾರು ಒಂದು ತಿಂಗಳ ಕಾಲ ಕುಮಾರವ್ಯಾಸ ಭಾರತ ವಾಚನ ನಡೆಸಿಕೊಡಬೇಕು" ಎಂದು ತಮ್ಮ ಅಪೇಕ್ಷೆಯನ್ನು ವ್ಯಕ್ತಪಡಿಸಿದರು. "ರೋಗಿ ಬಯಸಿದ್ದು ಹಾಲನ್ನ. ವೈದ್ಯ ಹೇಳಿದ್ದು ಹಾಲನ್ನ" ಎಂಬಂತಾಯಿತು ನಮ್ಮ ಸ್ಥಿತಿ. ನಮಗಾದ ಹರ್ಷ ಅಪಾರ. ಕುಮಾರವ್ಯಾಸ ಭಾರತ ಕಾವ್ಯ ಪ್ರಸಾರ ಯಜ್ಞ ಒಂದು ತಿಂಗಳಕಾಲ ನಿರ್ವಿಘ್ನವಾಗಿ ನಡೆಯಿತು.

ನಿತ್ಯವೂ ಒಂದೂವರೆಗಂಟೆಕಾಲ ಒಂದೂ ಸಂಜೆಯನ್ನು ತಪ್ಪಿಸದೆ ಶಕುಂತಲಾ ಬಾಯಿ ಕುಮಾರವ್ಯಾಸಭಾರತ ವಾಚನ ಮಾಡಿದರು. ನಾನು ಪ್ರಾಸಂಗಿಕ ನಿರೂಪಣೆ ನೀಡಿದೆ. ದಶಪರ್ವಗಳ ಮುಖ್ಯ ಕಥಾಭಾಗಗಳನ್ನು ಮೂಲಕಥೆ ಕೆಡದಹಾಗೆ ಅಳವಡಿಸಿ ಕೊಂಡಿತ್ತು. ಕವಿಹೃದಯವನ್ನು ಬಿಟ್ಟು ಒಂದು ಹಂಚಿಕಡ್ಡಿಯಷ್ಟು ಅನ್ಯವಿಷಯವನ್ನು ಪ್ರಸ್ತಾಪಿಸುವ ವಿಷಯಗಳಿಗೆ ನನ್ನ ಪ್ರಾಸಂಗಿಕ ನಿರೂಪಣೆಯಲ್ಲಿ ಎಡೆಯಿರಲಿಲ್ಲ. ಪಾತ್ರ ಗಳ ಮಾನವ ಸಹಜ ಧರ್ಮ ವಿಶೇಷಗಳನ್ನು ಸಮಕಾಲೀನ ಪ್ರಜ್ಞೆಗಳನ್ನು ಗುರುತಿಸಿ ಅವುಗಳಷ್ಟನ್ನು ವಿಶ್ಲೇಷಿಸಿ ಪ್ರಾಸಂಗಿಕ ನಿರೂಪಣೆ ನೀಡುತ್ತಿದ್ದೆ. ಮಲ್ಲೇಶ್ವರದ ಶ್ರೋತೃ ಗಳು ನನ್ನ ಧೋರಣೆಯನ್ನು ಒಪ್ಪಿಕೊಂಡರು. ಶಕುಂತಲಾಬಾಯಿಯ ಕೋಕಿಲಕಂಠ ಮಾಧುರ್ಯದ ಅರ್ಥಗರ್ಭಿತ ಭಾವಪೂರಿತ ವಾಚನ ಧೋರಣೆಗಂತೂ ವಿಶೇಷವಾಗಿ ಮಾರು ಹೋದರು.

ನಮ್ಮ ಕಾವ್ಯವಾಚನ ಮಂಗಳ ಘಟ್ಟ ಮುಟ್ಟಿತು. ಕುಮಾರವ್ಯಾಸ ವಾಚನ ವೇದಿಕೆಯ ಮಂಟಪ ಮಂಗಳದಿನದಂದು ಬಾಳೆಯ ಕಂಬ ತಳಿರು ತೋರಣದಿಂದ ಶೋಭಾಯಮಾನವಾಗಿತ್ತು. ವಂದನಾರ್ಪಣೆ ಮಾಡಲು ರಾಮಾನುಜಯ್ಯಂಗಾರ್ಯರ ಎದ್ದು ನಿಂತರು. ಅವರ ಹೃದಯ ಮಹಾ ಸಂತೋಷದಿಂದ ತುಂಬಿಹೋಗಿತ್ತು. "ಸುಪ್ರಸಿದ್ಧ ವ್ಯಾಖ್ಯಾನಕಾರರಾದ ವೇದಬ್ರಹ್ಮಶ್ರೀ ಮತ್ತೂರು ಲಕ್ಷ್ಮೀ ಕೇಶವ ಶಾಸ್ತ್ರಿ ಗಳ ವ್ಯಾಖ್ಯಾನಸೊಡನೆ ಕುಮಾರವ್ಯಾಸ ಭಾರತ ಕಾವ್ಯವಾಚನಗಳು ಈ ವೇದಿಕೆಯ ಮೇಲೆ ಅನೇಕಸಲ ತಿಂಗಳಾನುಗಟ್ಟಲೆ ನಡೆದಿವೆ. ಒಳ್ಳೆಯ ವಾಙ್ಮಿಗಳೂ ಅಭಿನಯ ಚತುರರೂ ಆದ ಮತ್ತೂರು ಕೃಷ್ಣಮೂರ್ತಿಗಳೂ ಗಮಕಿಗಳ ಸಹಕಾರವೊಂದಿಗೆ ಕುಮಾರವ್ಯಾಸ ಭಾರತಕ್ಕೆ ವ್ಯಾಖ್ಯಾನಕೊಟ್ಟು ಅನೇಕ ಕಾರ್ಯಕ್ರಮಗಳನ್ನು ನಡೆಸಿ ಕೊಟ್ಟಿದ್ದಾರೆ. ಸಿದ್ಧವನಹಳ್ಳಿ ಕೃಷ್ಣಶರ್ಮರ ಮಲ್ಲೇಶ್ವರಂ ಗಾಂಧೀ ಸಾಹಿತ್ಯ ಸಂಘ, ರಾಮಾರಾಧ್ಯರ ಗಮಕ ರೂಪಕಗಳ ಕಾರ್ಯಕ್ರಮ ಕೊಟ್ಟು ಜನಮನವನ್ನು ರಂಜಿಸಿವೆ. ಹೆಸರಾಂತ ಗಮಕವಿದುಷಿ ಶಕುಂತಲಾಬಾಯಿ, ಅವರ ಪತಿ ಸಾಹಿತಿ ಪಾಂಡುರಂಗರಾಯ ರನ್ನು ಕರೆಸುತ್ತಿದ್ದೇವೆ. ಲಕ್ಷ್ಮೀ ಕೇಶವಶಾಸ್ತ್ರಿಗಳು ಮತ್ತೂರು ಕೃಷ್ಣಮೂರ್ತಿಗಳು ಈ ಉಭಯರ ವ್ಯಾಖ್ಯಾನಗಳನ್ನು ಕೇಳಿದ ಕಿವಿಗಳಿಗೆ ಪಾಂಡುರಂಗರಾವ್ ದಂಪತಿಗಳ ಕಾರ್‍ಯಕ್ರಮ ಒಗ್ಗುವುದೇ ? ಎಂಬ ಭಯವಿತ್ತು. ಆ ಭಯ ನಿವಾರಣೆಯಾಯಿತು. ಮಲ್ಲೇಶ್ವರದ ಶ್ರೋತೃಗಳು ಬಹುಹೆಚ್ಚು ಸಂಖ್ಯೆಯಲ್ಲಿ ಪಾಂಡುರಂಗರಾವ್ ದಂಪತಿಗಳ ಕುಮಾರವ್ಯಾಸ ಭಾರತ ವಾಚನ ವ್ಯಾಖ್ಯಾನ ಕೇಳಿ ಸಂತೋಷ ಪಟ್ಟಿದ್ದಾರೆ. ನಾವು ಕೃತಜ್ಞರಾಗಿದ್ದೇವೆ" ಎಂದರು.

1978ರಲ್ಲಿ ರಾಜಾಜಿನಗರದ ಮಾರುತಿ-ಮಹಾಗಣಪತಿ ದೇವಸ್ಥಾನದ ಸೇವಾ ಸಮಿತಿ ಶಕುಂತಲಾಬಾಯಿಯ ಕಾವ್ಯವಾಚನ ಸೇವೆಯನ್ನಪೇಕ್ಷಿಸಿತು. ವರ್ಷಾನುಗಟ್ಟಲೆ ಕುಮಾರವ್ಯಾಸ ಭಾರತ ಕಾವ್ಯವಾಚನ ನಡೆದು ಶ್ರೋತೃಗಳ ಕಿವಿಗಳು ಕುಮಾರವ್ಯಾಸ

ನನ್ನು ಬಹುವಾಗಿ ಒಗ್ಗಿಸಿಕೊಂಡಿತ್ತು. ಗೌ|| ಕಾರ್ಯದರ್ಶಿ ಕೆ. ಎಸ್. ಶ್ರೀಹರಿ, ಶಕುಂತಲಾಬಾಯಿಯನ್ನು ಕುಮಾರವ್ಯಾಸಭಾರತ ವಾಚನ ಮಾಡಲು ಆಹ್ವಾನಿಸಿದರು. ಆಕೆ ಲಕ್ಷ್ಮೀಶನ ಜೈಮಿನಿಭಾರತ ವಾಚನ ಮಾಡುವ ತಮ್ಮ ಅಪೇಕ್ಷೆಯನ್ನು ವ್ಯಕ್ತ ಪಡಿಸಿದರು. ಶ್ರೀಹರಿ ಸಂತೋಷದಿಂದ ಒಪ್ಪಿಕೊಂಡರು. ಒಂದು ತಿಂಗಳು ಒಂದು ಸಂಜೆಯೂ ಬಿಡದೆ ಲಕ್ಷ್ಮೀಶನ "ಜೈಮಿನಿ ಭಾರತ" ವಾಚನ ನಡೆಯಿತು. ಶಕುಂತಲಾ ಬಾಯಿಯ ಕೋಕಿಲ ಕಂಠಮಾಧುರ್ಯ, ಗಮಕ ವಾಚನ ವೈಶಿಷ್ಟ್ಯ, ಶ್ರೋತೃಗಳ ಮನ ಗಳನ್ನು ಸೆರೆ ಹಿಡಿಯಿತು. ನನ್ನ ಪ್ರಾಸಂಗಿಕ ನಿರೂಪಣೆ ಹಿತಮಿತವಾಗಿ ಕಾವ್ಯಪೋಷಣೆ ಮಾಡಿತು. ನನ್ನ ನಿಲುವು ಧರ್ಮ ಗ್ರಂಥವೆನ್ನುವುದಕ್ಕಿಂತ ಕಾವ್ಯವೆನ್ನುವುದು. ನಮ್ಮ ಶ್ರೋತೃಗಳನ್ನು ಕವಿಪಾತ್ರಗಳ ಸೃಷ್ಟಿಯ ಕಡೆಗೆ ಒಲಿಸಿಕೊಂಡು ಅವರಲ್ಲಿ ಕಾವ್ಯಪ್ರಜ್ಞೆ ಯನ್ನು ಮೂಡಿಸುವುದು.

ಲಕ್ಷ್ಮೀಶನ ಕಾವ್ಯ ಮಂಗಳೋತ್ಸವ ವಿಜೃಂಭಣೆಯಿಂದ ನಡೆಯಿತು. ಪಲ್ಲಕ್ಕಿ ಯಲ್ಲಿ ಜೈಮಿನಿ ಭಾರತವನ್ನಿಟ್ಟು ಎಡಬೀದಿಗಳಲ್ಲಿ ಚಾಮರ ಸೇವೆ ಸಲ್ಲಿಸಿ ಪ್ರಾಕಾರೋ ತ್ಸವ ನಡೆಯಿತು. ಕಾರ್ಯದರ್ಶಿ ಶ್ರೀಹರಿ ಅವರದೇ ಶೈಲಿಯಲ್ಲಿ ವಂದನಾರ್ಪಣೆ ಮಾಡಿ ದರು. ಅಧ್ಯಕ್ಷರಾದ ಪಿ. ಆರ್. ಮುಂಡೇವಾಡಿಯವರು ನನಗೂ, ಅವರ ಪತ್ನಿ ಪರಿಮಳಾ ಬಾಯಿ ಶಕುಂತಲಾಬಾಯಿಗೂ ಹಾರಹಾಕಿ ಫಲತಾಂಬೂಲಗಳನ್ನಿತ್ತು ಗೌರವಿಸಿದರು.

ಕುಮಾರವ್ಯಾಸ ಲಕ್ಷ್ಮೀಶರಿಗೆ ನಮ್ಮ ಪರಿಚಾರಿಕೆ ತೃಪ್ತಿಕರವಾಗೇ ಸಂದಿತು. ಹೀಗೆ ಶಕುಂತಲಾಬಾಯಿಗೂ ನನಗೂ ಬಹಳ ವರ್ಷಗಳಿಂದ ಕೊರೆಯುತ್ತಿದ್ದ ಕೊರಗು ಮುಗಿ ಯಿತು. ಕುಮಾರವ್ಯಾಸನ ಹುಟ್ಟೂರು ಕೋಳೀವಾಡಕ್ಕೆ ಹೋಗಿ ಶಕುಂತಲಾಬಾಯಿ ಕಾವ್ಯವಾಚನ ಸೇವೆ ಸಲ್ಲಿಸಿದ್ದಾರೆ. ಲಕ್ಷ್ಮೀಶನ ದೇವನೂರಿಗೆ ಯಾತ್ರೆ ಲಭ್ಯವಾಗಿಲ್ಲ. ಜಾತಕಪಕ್ಷಿಗಳಂತೆ ನಿರೀಕ್ಷಣೆಯಲ್ಲಿದ್ದೇವೆ.

ಶಕುಂತಲಾಬಾಯಿಯ ಆಧುನಿಕ ಕಾವ್ಯವಾಚನ ಗಮಕಕ್ಕೆ ಗಂಡಾಂತರವೇ ?

ಕೆಲಕಾಲದ ಹಿಂದೆ, ತಮ್ಮನ್ನು ಗಮಕಿಯೆಂದು ಕರೆದುಕೊಳ್ಳುವ ಆಧುನಿಕ ಭಾವಗೀತ ಗಾಯಕ ಮಿತ್ರರೊಬ್ಬರು "ನಿಂದಕರಿರಬೇಕು" ಎಂಬ ಪುರಂದರ ದಾಸ ವರೇಣ್ಯರ ಕೀರ್ತನಾಮವನ್ನು ಉದಾಹರಿಸಿ ನನಗೆ ಒಂದು ಪತ್ರ ಬರೆದಿದ್ದರು; ಶಕುಂತಲಾ ಬಾಯಿ, ಕುಮಾರವ್ಯಾಸನನ್ನು ಕೈಬಿಟ್ಟು "ಗಮಕಕ್ಕೆ ಗಂಡಾಂತರ" ತಂದಿದ್ದಾರೆಂದು. **ಶಕುಂತಲಾಬಾಯಿ ಕುಮಾರವ್ಯಾಸ-ಲಕ್ಷ್ಮೀಶರನ್ನು ಮರೆತಿಲ್ಲ. ಮರೆಯು ವಂತೆಯೂ ಇಲ್ಲ.** ಅದರೆ, ಸಾವಿರ ವರುಷಗಳಿಂದ ಬೆಳೆದು ಬಂದ ನಮ್ಮ ಕನ್ನಡ ಸಾಹಿತ್ಯ ಕಾವ್ಯ ರಾಶಿಯಲ್ಲಿ ಅನೇಕ ಅಮೋಘ ರತ್ನಗಳಿವೆಯಲ್ಲ! ಅವುಗಳನ್ನು ವಾಚನಮಾಡಿ ಪ್ರಚಾರ ಮಾಡುವುದು ಗಮಕಿಗಳ ಕರ್ತವ್ಯವಲ್ಲವೇ ? ಅದು ಮಹಾಪ ರಾಧವೇ ? ನಮಗೆ ಪರಮ ಪೂಜ್ಯರಾದ ಜಿ. ಪಿ. ರಾಜರತ್ನಂ ತಮ್ಮನ್ನು ಸಾಹಿತ್ಯ

ಪರಿಚಾರಕರೆಂದು ಕರೆದುಕೊಂಡರು. ಅವರು ತಮ್ಮ ಕೃತಿಗಳ ಪ್ರಚಾರದ ತಮ್ಮಟೆಯ ಗದ್ದಲ ಕಡವೆ ಮಾಡಿಕೊಂಡು ತಮ್ಮ ಸಮಕಾಲೀನ ಕವಿ–ಕೃತಿಗಳ ಪ್ರಚಾರದ ತಮ್ಮಟೆಯ ಮೊಳಗನ್ನು ಎಲ್ಲೆಲ್ಲಿಯೂ ಕೇಳಿಸಿದರು. ನನಗೂ ಶಕುಂತಲಾಬಾಯಿಗೂ **ರಾಜರತ್ನಂ** ಮಾರ್ಗದರ್ಶಕರು. ಶಕುಂತಲಾಬಾಯಿ ಕುಮಾರವ್ಯಾಸ ಲಕ್ಷ್ಮೀಶರಿಗೇ ಮೀಸಲಾಗಿಲ್ಲ. ಕನ್ನಡ ಸಾರಸ್ವತ ರಸ ಸರಸ್ವತಿಯ ಆರಾಧಕರು. ಕವಿವರೇಣ್ಯರ ಕಾವ್ಯಗಳು, ಅವು ಪ್ರಾಚೀನವಿರಲಿ ಅರ್ವಾಚೀನವಿರಲಿ ಅವುಗಳಲ್ಲಿ ಮಾನವೋದ್ಧಾರ ಮಾಡುವ ಸತ್ವವಿದ್ದರೆ, ಕಾವ್ಯವಾಚನದಿಂದ ಗಮಕ ಕಲಾ ಪರಿಚಾರಿಕೆ ಮಾಡುವುದು ತಮ್ಮ ಕರ್ತವ್ಯವೆಂದು ತಿಳಿದಿದ್ದಾರೆ. "ಕವಿಚೂತವನ ಚೈತ್ರ" ನಮ್ಮ ಲಕ್ಷ್ಮೀಶನೆನ್ನುತ್ತಾನೆ–

"ಕೆನೆವಾಲ ಕಡೆದು ನವನೀತಮಂ ತೆಗೆದು ಬಾ
ಯಿ ನಿದಾಗಿ ಸವಿಯದದರೊಳಗೆ ಪುಳಿವಿಡಿದು ರಸ
ವನೆ ಕೆಡಿಸಿದೊಡೆ ಕಡೆದ ಸುರಭಿಗಪ್ಪುದೆ ಕೊರತೆ ಕಾವ್ಯಮುಂ ಕೇಳ್ದು ಮಥಿಸಿ
ಜನಿಸಿದ ಪದಾರ್ಥಮಂ ತಿಳಿದು ನೋಡದೆ ವಿನೂ
ತನ ಕವಿತೆಯೆಂದು ಕುಂದಿಟ್ಟು ಜರೆದೊಡೆ ಪೇಳ
ವನೊಳಾವಡೂಣೆಯಂ ಜಾಣರಿದನರಿದು ಮತ್ಸರವನುಳಿದಾಲಿಸುವುದು

"ಲಕ್ಷ್ಮೀಶನ ಸಂದೇಶ ಗಮಕಿಗಳಿಗೆ ಅನ್ವಯಿಸುತ್ತದೆ. ಹಂಸಕ್ಷೀರ ನ್ಯಾಯದಂತೆ ಗಮಕಿಗಳು ಪ್ರಾಚೀನ ಅರ್ವಾಚೀನ ಭೇದಭಾವವಳಿಸಿಕೊಂಡು ವರ್ತಿಸಬೇಕು" ಇದು ಶಕುಂತಲಾಬಾಯಿ ತಳೆದಿರುವ ದೀಕ್ಷೆ.

ಕವಿ ಚಕ್ರವರ್ತಿ ಜನ್ನನೆನ್ನುತ್ತಾನೆ :–

"ಎನಿತನೊ ಜಿಲುದ್ದ ಪೇಳ್ವ ಕವಿಯೇವನದನ್ ಪೆಸರಿಟ್ಟು ಮೆಚ್ಚಬ
ಲ್ಲನನ ಅಸಲ್ಕೆ ವೇಳ್ಪುವದನಂ ಜಗದೊಳ್ ಪಡೆಯಲ್ಕೆ ಬಾರದಾ ||
ತನ ಮುಖದಿಂದಮಿಂತಿಪಲ್ಲಿದದು ಕಟ್ಟಿಯವೋನೋ ಮಾಲೆಗಾ ।
ಣಿನ ಪೊಸಬಾಸಿಗಂ ಮುಡಿವ ಭೋಗಿಗಳಿಲ್ಲದೆ ಬಾಡಿಪೋಗದೇ

ಶಕುಂತಲಾಬಾಯಿ ನಮ್ಮ ಜನ್ನ ಕವಿಚಕ್ರವರ್ತಿಯ ಮಾರ್ಗಾನುಯಾಯಿ. ಅವರು ಪ್ರಾಚೀನ ಕಾವ್ಯಗಳ ಜೊತೆಗೆ ಆಧುನಿಕ ಕಾವ್ಯಗಳನ್ನೂ ತಮ್ಮ ಕಾವ್ಯವಾಚನಕ್ಕೆ ಸೇರ್ಪಡೆ ಮಾಡಿಕೊಂಡಿರುವ ಉದ್ದೇಶ ಜನ್ನನ ಧ್ವನಿಯನ್ನು ಪ್ರತಿನಿಧಿಸುತ್ತದೆ.

ಶಕುಂತಲಾಬಾಯಿಯ **ಕಾವ್ಯವಾಚನ ಕಡುನೋಂಪಿ** ಕವಿಕುಲ ಗುರು, ಗಮಕಿಗಳ ಆರಾಧ್ಯದೈವ ಕುಮಾರವ್ಯಾಸನೆಂದಂತೆ,

"ಕೃತಿಯನವಧರಿಸುವುದು ಸುಕವಿಯ
ಮತಿಗೆ ಮಂಗಳವೀವುದಧಿಕರು
ಮಥಿಸುವುದು ತಿದ್ದುವುದು ಮೆರೆವುದು ಲೇಸ ಸಂಚಿಪುದು ।
ಸುತಗುಣರು ಭಾವುಕರು ವರಪಂ
ಡಿತರು ಸುಜನರು ಸೂಕ್ತಿಕಾರರು
ಮತಿಯನೀವುದು.............."

ಯಾರಿಗೆ? ಯಾರಿಗೆ? ಯಾರಿಗೆ?
ಗಮಕಿಗೆ! ಗಮಕಿಗೆ! ಗಮಕಿಗೆ!

ನನ್ನ ಚಿಕ್ಕಮ್ಮ ಇನ್ನಿಲ್ಲ

ಮಹಾಕಾರಣಿಕ ಬಸವೇಶ್ವರರ ಎಂಟನೆಯ ಶತಮಾನೋತ್ಸವ 1968ರಲ್ಲಿ ಮೇ 29ರಂದು ಚಿಕ್ಕಮಗಳೂರಿನಲ್ಲಿ ನಡೆಯಿತು. ಶಕುಂತಲಾಬಾಯಿಗೆ ಕರೆಬಂತು. ಕಾರ್ಯಕ್ರಮದಲ್ಲಿ ಭಾಗವಹಿಸಿ ಹರಿಹರನ ಬಸವರಾಜದೇವರ ರಗಳೆ ಕಾವ್ಯದಿಂದ ಬಸವಣ್ಣನವರ ಸ್ತೋತ್ರ ಭಾಗದ ದೀರ್ಘವಚನವನ್ನು ಹಾಡಿದರು. ಜನಸ್ತೋಮಕ್ಕೆ ವಚನ ಹೊಸದು. ಮುಗ್ಧವಾಗಿ ಕೇಳಿ ಹರ್ಷಿಸಿತು.

ಆ ಸಮಯದಲ್ಲಿ ನಮ್ಮ ರಾಜ್ಯದ ಶ್ರೇಷ್ಠ ನ್ಯಾಯಾಲಯದ ಶ್ರೇಷ್ಠ ನ್ಯಾಯಮೂರ್ತಿ ಎಚ್. ಹೊಂಬೇಗೌಡರು ಕೆಮ್ಮಣ್ಣುಗುಂಡಿಯಲ್ಲಿ ಬೇಸಗೆಯ ವಿಶ್ರಾಂತಿ ರಜದ ಪ್ರಯುಕ್ತ ಬಿಡಾರ ಮಾಡಿದ್ದರು. ನಾವು ಬಸವ ಜಯಂತಿಯ ಕಾರ್ಯಕ್ರಮದಲ್ಲಿರುವುದು ಅವರಿಗೆ ತಿಳಿಯಿತು. ಸಭಾಂಗಣಕ್ಕೆ ನೇರವಾಗಿ ಎಕ್ಸಿಕ್ಯುಟಿವ್ ಇಂಜಿನಿಯರಾಗಿದ್ದ ಸುಬ್ಬಯ್ಯನವರು ಬಂದು, "ಕೆಮ್ಮಣ್ಣುಗುಂಡಿಗೆ ಶ್ರೇಷ್ಠ ನ್ಯಾಯಮೂರ್ತಿ ಶ್ರೀ ಹೊಂಬೇಗೌಡರು ನಿಮ್ಮನ್ನು ಆಹ್ವಾನಿಸಿದ್ದಾರೆ. ಅಲ್ಲಿ ರಾಮೋತ್ಸವ ಏರ್ಪಾಡಾಗಿದೆ. ಕರೆದುಕೊಂಡು ಬನ್ನಿ ಎಂದಿದ್ದಾರೆ, ಬನ್ನಿ" ಎಂದರು. ಹೊಂಬೇಗೌಡರ ವಿಶ್ವಾಸವನ್ನು ನಾವು ಕಳೆದುಕೊಳ್ಳುವಂತಿಲ್ಲ. ಒಪ್ಪಿಕೊಂಡೆವು. 30-4-1968ರಲ್ಲಿ ಕೆಮ್ಮಣ್ಣುಗುಂಡಿಯಲ್ಲಿ ರಾಮೋತ್ಸವ.

ಸುಬ್ಬಯ್ಯನವರು ನಮ್ಮನ್ನು ತಮ್ಮ ಕಾರಿನಲ್ಲಿ ಕೆಮ್ಮಣ್ಣುಗುಂಡಿಗೆ ಕರೆದುಕೊಂಡು ಹೋದರು. ಶ್ರೀಮನ್ನಾಲ್ವಡಿ ಕೃಷ್ಣರಾಜ ಒಡೆಯರು ಇಳಿದುಕೊಳ್ಳುತ್ತಿದ್ದ ಕೊಠಡಿಯಂತೆ. ಅದು ನಮಗೆ ಮೀಸಲಾಗಿತ್ತು. ರಾಜರ್ಷಿಯಾಗಿ, ಗಾಂಧೀಜಿಯವರಿಂದ ತಮ್ಮ ರಾಜ್ಯಭಾರ ರಾಮರಾಜ್ಯಭಾರವೆಂದು ಮೆಚ್ಚುಗೆ ಪಡೆದು ತಮ್ಮ ರಾಜ್ಯಕ್ಕೆ ವಿಶ್ವದಾದ್ಯಂತ ಮಾದರಿ ಮೈಸೂರೆಂಬ ಕೀರ್ತಿ ತಂದುಕೊಟ್ಟ ನಮ್ಮ ಮಹಾರಾಜರು ನಾಲ್ವಡಿ ಕೃಷ್ಣರಾಜ ಒಡೆಯರು ತಂಗಿ ಪವಿತ್ರವಾಗಿದ್ದ ಕೊಠಡಿಯಲ್ಲಿ ಇರುವ ಪುಣ್ಯ ನಮ್ಮದಲ್ಲ ಎಂಬ ಭಾವೋದ್ರೇಕದಿಂದ ನಾವು ಪುಳಕಿತರಾದೆವು.

ಮಧ್ಯಾಹ್ನ ನಮ್ಮ ಬಂಗಲೆಯ ಸಭಾಂಗಣದಲ್ಲಿ ಶಕುಂತಲಾಬಾಯಿ "ಶ್ರೀ ರಾಮಾಯಣ ದರ್ಶನಂ" ಕಾವ್ಯದಿಂದ "ತಪಸ್ಸಿದ್ಧಿ" ಭಾಗವನ್ನು ಎರಡು ಗಂಟೆಗಳ ಕಾಲ ಶ್ರೋತೃಗಳ ಹೃದಯಗಳು ಭಾವೋದ್ರೇಕಗೊಳ್ಳುವಂತೆ ವಾಚನ ಮಾಡಿದರು. ಹೊಂಬೇಗೌಡರ ಆನಂದಕ್ಕಂತೂ ಪಾರವೇ ಇಲ್ಲ.

ಅಂದೇ ರಾತ್ರಿ ಚಿಕ್ಕಮಗಳೂರಿಗೆ ಬಂದೆವು. "ಅಗ್ರಿಕಲ್ಚರಲ್ ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ಸ್" ಮಾಲೀಕರಾದ ಶ್ರೀ ವಾಸುದೇವರಾವ್ ದಂಪತಿಗಳ ಅತಿಥಿಗಳಾಗಿದ್ದು ಬೆಂಗಳೂರಿಗೆ ಮಾರನೇ ದಿನಬೆಳಗ್ಗೆಯೇ ಹೊರಟುಬಿಟ್ಟೆವು.

ನಾವು ಕೆಮ್ಮಣ್ಣುಗುಂಡಿಯಲ್ಲಿ "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನ ಮಂಗಳ ಕಾರ್ಯಕ್ರಮದಲ್ಲಿ ತಲ್ಲೀನರಾಗಿದ್ದ ಘಳಿಗೆಯಲ್ಲೇ ನನ್ನ ಚಿಕ್ಕಮ್ಮ ಅಂಬೂಬಾಯಿಗೆ ಹೃದಯಾಘಾತವಾಯಿತಂತೆ. ನನ್ನ ದೊಡ್ಡಮ್ಮನ ಮಗ ಚಿಂತಾಮಣಿಂತು ಬಿ. ಮಾಧವರಾವ್, ಚಿಕ್ಕಮ್ಮನ ಶುಶ್ರೂಷೆ ಮಾಡುತ್ತಿದ್ದರು. ಶಿಕ್ಷಣಾಧಿಕಾರಿ ಜಿ. ಪಿ. ಶಿವರಾವ್ ಅವರ ಮಗ "ಪೂತ್ಯಕ್ಲಿನಿಕ್"ನ ಡಾ|| ಜಿ. ಎಸ್. ಶ್ರೀನಿವಾಸ್ ಬಂದು ವೈದ್ಯ ಚಿಕಿತ್ಸೆ ಕೊಟ್ಟರು. ಅವರು, "ಪಾಂಡುರಂಗರಾವ್ ದಂಪತಿಗಳನ್ನು ಕರೆಸಿಕೊಳ್ಳಿ. ಜೀವ ಅವರಿಗಾಗಿ ಕಾಯುತ್ತಿದೆ" ಎಂದು ಕಿವಿಮಾತು ಹೇಳಿದರು ನಮ್ಮಣ್ಣನಿಗೆ. ಹಾಗೆ ಆಯಿತು. ನಾನು, ಶಕುಂತಲಾಬಾಯಿ ಹೋಗಿ ಚಿಕ್ಕಮ್ಮನ ತಲೆದೆಸೆಯಲ್ಲಿ ಕುಳಿತೆವು. ಕಣ್ಣುತುಂಬ ನೋಡಿದರು. "ಬಂದಿರಾ" ಎಂದರು ಬಹು ಕಷ್ಟದಿಂದ. ಡಾ|| ಶ್ರೀನಿವಾಸರನ್ನು ಕೂಡಲೆ ಹೋಗಿ ನೋಡಿದೆ. "ಪಾಂಡುರಂಗರಾವ್, ಆಮ್ಲಜನಕ ಕೊಡಬೇಕು ಮನೆಯಲ್ಲಿ ಸಾಧ್ಯವಿಲ್ಲ ಆಸ್ಪತ್ರೆಗೆ ಸೇರಿಸಿ" ಎಂದು ಸಲಹೆ ಮಾಡಿದರು. ಆದರೆ ಆಗ ನನ್ನ ಸ್ಥಿತಿ ಅಡಕೊತ್ತಿನಲ್ಲಿ ಸಿಕ್ಕ ಅಡಕೆಯ ಹಾಗಾಗಿತ್ತು. ನಾನು, ನನ್ನ ಮನೆಮಠ, ಜೋಡಿಗ್ರಾಮ ಸಮಸ್ತವನ್ನು ಕಳೆದುಕೊಂಡು ಚಿಕ್ಕಮ್ಮನ ಆಸ್ತಿಯನ್ನು ದಾನವಾಗಿ ಪಡೆದು ಆಕೆಯ ಕರುಣೆಯ ಕೂಸಾಗಿ ಬದುಕಿದ್ದೆ. ಈಗ ಆಕೆಯ ಅಂತ್ಯಕಾಲದಲ್ಲಿ, ವೈದ್ಯಸಲಹೆಯಂತೆ ಆಸ್ಪತ್ರೆಗೆ ಸೇರಿಸಿದರೆ ಆಕೆಯ ಬಂಧು ವರ್ಗ ತಪ್ಪಾಗಿ ಭಾವಿಸಿ ಏನೆನ್ನುವರೋ ಎಂಬ ಮನಸ್ಸಿನಲ್ಲಿ ಅಳುಕು. ಇನ್ನೂ ಜ್ಞಾನದಲ್ಲಿದ್ದ ನನ್ನ ಚಿಕ್ಕಮ್ಮನೇ "ನನ್ನ ಕಡೆಗಾಲದಲ್ಲಿ ಆಸ್ಪತ್ರೆಗೆ ಸೇರಿಸಿ ಅನಾಥ ಪ್ರೇತ ಮಾಡಿದರು" ಎಂದು ಎಲ್ಲಿ ನೊಂದುಕೊಳ್ಳುವರೋ ಎಂಬ ಮನೋವ್ಯಥೆ. ಚಿಕ್ಕಮ್ಮನ ತಲೆದೆಸೆಗೆ ಹೋಗಿ ಆಕೆಯ ಕಿವಿಯಲ್ಲಿ ವೈದ್ಯರ ಸಲಹೆ ಹೇಳಿದೆ "ನಿನ್ನ ಮನಸ್ಸಿಗೆ ನೋವು ಬೇಡ ಕಡೆಗಾಲದಲ್ಲಿ ಆಸ್ಪತ್ರೆಗೆ ಸೇರಿಸಿದರೂಂತ. ಆಸ್ಪತ್ರೆಯಲ್ಲಿ ಇರುವ ವೈದ್ಯ ಸಹಾಯ ಮನೆಯಲ್ಲಿ ಆಸಾಧ್ಯ. ನೀನು ಹೇಳಿದಂತೆ ನಡೆಯುತ್ತೇನೆ" ಎಂದೆ. ತಿಳಿವಳಿಕಸ್ತೆಯಾದ ನನ್ನ ಚಿಕ್ಕಮ್ಮ ತಕ್ಷಣವೇ ಸೇರಿಸಿ ಎಂದರು. ಆಕೆಯ ಲೋಕ ವ್ಯವಹಾರ ಜ್ಞಾನ ನನ್ನನ್ನು ಆಶ್ಚರ್ಯ ಚಕಿತನನ್ನಾಗಿ ಮಾಡಿತು. ಮಧ್ಯಾಹ್ನ ನಾಲ್ಕು ಗಂಟೆಗೆ ಸೇಂಟ್ ಮಾರ್ಥಾ ಆಸ್ಪತ್ರೆಗೆ ಸೇರಿಸಿದೆವು. ಶಕುಂತಲಾಬಾಯಿ ಆಸ್ಪತ್ರೆಯಲ್ಲೇ ಉಳಿದರು.

ಡಾಕ್ಟರ್ ಹೇಳಿದ್ದ ಗಡುವು ಸನ್ನಿಹಿತವಾಗುತ್ತಿತ್ತು. ಬರಬೇಕಾಗಿದ್ದವರೆಲ್ಲ ಬಂದು ನೋಡಿಕೊಂಡು ಹೋಗುತ್ತಿದ್ದರು. ಜ್ಞಾನ ಪಲ್ಲಟಕ್ಕೆ ಪ್ರಾರಂಭವಾಯಿತು. ಜ್ಞಾನಾಜ್ಞಾನ ಮಾತು ಕಥೆಗಳಿಗೆ ಮೊದಲಾಯಿತು. ನನ್ನ ಚಿಕ್ಕಮ್ಮ ಆರೋಗ್ಯವಾಗಿದ್ದಾಗ ಒಂದು ದಿನವೂ ಪತ್ರಿಕೆ ಓದದೆ ಬಿಟ್ಟವರಲ್ಲ. ಅಕ್ಕನನ್ನು ಕೂಡಿಸಿಕೊಂಡು ಒಂದಕ್ಷರವನ್ನೂ ಬಿಡದೆ ಓದಿ, ವಿಷಯ ವಿಶ್ಲೇಷಿಸಿ, ವಿಮರ್ಶಿಸಿ, ತಮ್ಮ ಅಭಿಪ್ರಾಯ ಕೊಟ್ಟು ಪತ್ರಿಕೆಯ ಓದನ್ನು ಮುಗಿಸುವರು. ಅಜ್ಞಾನದಲ್ಲೂ ಹಾಗೇ ಮಾಡಿದರು. ಪತ್ರಿಕೆ ಹಿಡಿದಂತೆ ಕೈಗಳನ್ನು ಮೇಲೆತ್ತಿ ಓದುವಂತೆ ಶೂನ್ಯದಲ್ಲಿ ಕಣ್ಣಾಡಿಸಿ, ಸುದ್ದಿಗಳ ಕಲ್ಪನಾ ಪ್ರಪಂಚದಲ್ಲಿ ವಿಹರಿಸಿದರು. ನನಗೆ ಮತ್ತು ಶಕುಂತಲಾಬಾಯಿಗೆ ಸರಕಾರ

ಸರಿಯಾಗಿ ಗೌರವ ತೋರಿಸಿಲ್ಲವೆಂದು ಟೀಕಿಸಿದರು. "ಮೈಸೂರು ಸರಕಾರ ನಮ್ಮಿಬ್ಬರಿಗೂ ರಾಜ್ಯಪ್ರಶಸ್ತಿಗಳನ್ನು ಕೊಡಲು ತಡಮಾಡುತ್ತಿರುವುದು ಸರಿಯಲ್ಲ." ಎಂದರು. ಪಕ್ಕದಲ್ಲಿದ್ದ ದಾದಿ, ನನ್ನ ಚಿಕ್ಕಮ್ಮನು ಓದಿ ಸೂಚಿಸುತ್ತಿರುವ ಅಭಿಪ್ರಾಯಗಳನ್ನು ಕೇಳಿ ಆಶ್ಚರ್ಯ ಪಟ್ಟರು. "ಇವರು ಸರಕಾರದ ಅಧಿಕಾರದಲ್ಲಿದ್ದರೋ" ಎಂದು ಶಕುಂತಲಾಬಾಯಿಯನ್ನು ಪ್ರಶ್ನಿಸಿದರು. "ಮನೆಯಲ್ಲೇ ಇದ್ದರು. ನಿತ್ಯವೂ ತಪ್ಪದೆ ಪೇಪರ್ ಓದುತ್ತಿದ್ದರು." ಎಂದರು ನನ್ನಾಕೆ.

ನಾನು, ಸಂಜೆ ಮನೆಯಲ್ಲಿ ಶಕುಂತಲಾಬಾಯಿಗೆ ರಾತ್ರಿಯೂಟವನ್ನು ತೆಗೆದುಕೊಂಡು ಹೋಗಲು ಸಿದ್ಧನಾಗುತ್ತಿದ್ದೆ. ಪಕ್ಕದ ಮನೆಯವರು ಬಂದು "ಆಸ್ಪತ್ರೆಯಿಂದ ಫೋನ್ ಬಂದಿದೆ." ಎಂದರು. ಶಕುಂತಲಾಬಾಯಿ ಧೃತಿಗೆಡದೆ ಫೋನಿನಲ್ಲಿ "ಬೇಗ ಬನ್ನಿ" ಎಂದರು. ನಾನು, ಮಾಧವರಾವ್, ಧಾವಿಸಿದೆವು ಆಸ್ಪತ್ರೆಗೆ. 15 ನೆಯ ವರ್ಷದಲ್ಲಿ ಗಂಡನನ್ನು ಕಳೆದುಕೊಂಡು, ಅಂದಿನಿಂದ 55 ವರ್ಷಗಳಷ್ಟೂ ದೀರ್ಘಕಾಲ ನನ್ನ ತಾಯಿಯೊಡನೆ ತಪಸ್ವಿನಿಯತೆ ಶುದ್ಧ ಜೀವನ ನಡೆಸಿದ ನನ್ನ ಚಿಕ್ಕಮ್ಮ ನಮ್ಮನ್ನೆಲ್ಲ ಬಿಟ್ಟು, 2-5-1968ರ ರಾತ್ರಿ ಸ್ವಾಮಿಪಾದ ಸೇರಿದರು.

ದಾದಿಯೂ ಕಣ್ಣೀರು ಹಾಕಿದರು. ದೇಹವನ್ನು ಶುಚಿಗೊಳಿಸಿದರು. ಡೆಡ್ ವಾರ್ಡಿಗೆ ಸಾಗಿತು ನನ್ನ ಚಿಕ್ಕಮ್ಮನ ಶವ. ನಾನು ಭಗವದ್ಗೀತೆಯಿಂದ ಸ್ಥಿತಪ್ರಜ್ಞನ ನಿಷ್ಕಾಮ ಭಾವದ ಭಾಗವನ್ನು ಪಠಿಸುತ್ತ ಶವವನ್ನು ಹಿಂಬಾಲಿಸಿದೆ. ನನ್ನ ಸೌಭಾಗ್ಯವತಿ ನಿದ್ದೆಯಾಹಾರಗಳಿಲ್ಲದೆ ಚಿಕ್ಕತ್ತೆಯನ್ನು ಆಸ್ಪತ್ರೆಯಲ್ಲಿ ಮೂವತ್ತು ಗಂಟೆಗಳ ಕಾಲ ಶುಶ್ರೂಷೆ ಮಾಡಿ ಬರಿಗೈಯವರಾಗಿ ಹಿಂಬಾಲಿಸಿದರು.

ನನ್ನ ಚಿಕ್ಕಮ್ಮ ಪೂರ್ವಕಾಲದವರಾದರೂ ಆಧುನಿಕ ಪ್ರಜ್ಞೆಯುಳ್ಳವರಾಗಿದ್ದರು. ಅವರು "ಸ್ವರ್ಗನರಕಗಳು ಇಹದಲ್ಲೇಇವೆ. ಪರದಲ್ಲಿ ಇಲ್ಲ" ವೆನ್ನುತ್ತಿದ್ದರು. "ನನಗೆ ತಿಥಿ ಬೇಡ. ನನಗಾಗಿ ಹಣ ದುರ್ವ್ಯಯ ಮಾಡಬೇಡಿ. ನೀವು ಕಾರ್ಪಣ್ಯಪಟ್ಟು ಕಾಣದ ಜೀವದ ಹೆಸರಿನಲ್ಲಿ ಮಾಡುವ ಕರ್ಮದಲ್ಲಿ ನನಗೆ ನಂಬಿಕೆಯಿಲ್ಲ. ಆದಷ್ಟು ಶೀಘ್ರವಾಗಿ ಗತಿ ಕಾಣಿಸಿ. ನನ್ನನ್ನು ತಂಗಳು ಹೆಣವಾಗಿ ಇಡಬೇಡಿ." ಎನ್ನುತ್ತಿದ್ದರು.

ನನ್ನ ಚಿಕ್ಕಮ್ಮ ಸತ್ತ ಕ್ಷಣದಲ್ಲೇ ನಾನು ಅತಂತ್ರನಾದೆ. ಆರುವರ್ಷದ ಬಾಲಕನಾಗಿದ್ದಾಗ ತಂದೆಯನ್ನು ಕಳೆದುಕೊಂಡ ನನ್ನನ್ನು ನನ್ನ ಚಿಕ್ಕಮ್ಮ-ನನ್ನ ಹಡೆದಮ್ಮ ಜೊತೆಗೂಡಿ ಪ್ರವರ್ಧಮಾನಕ್ಕೆ ತಂದರು. ಸ್ವಂತ ಮಕ್ಕಳಿಲ್ಲದ ಚಿಕ್ಕಮ್ಮನಿಗೆ ನಾನೇ ವಾರಸುದಾರ. ಹೀಗಿದ್ದರೂ ಆಕೆ ಸತ್ತಕೂಡಲೆ ನನ್ನ ಸ್ವತಂತ್ರ್ಯ ಹೋಯಿತು. ಚಿಕ್ಕಮ್ಮನ ಆಧುನಿಕ ಪ್ರಜ್ಞೆಯನ್ನು ಗಾಳಿಗೆ ತೂರಿದೆ. ರಾತ್ರಿ ಎಂಟು ಗಂಟೆಗೆ ಜೀವ ಹೋದ ಶವಕ್ಕೆ ಸಂಸ್ಕಾರ ಮಾರನೆಯ ದಿನ ಮಧ್ಯಾಹ್ನ ಎರಡು ಗಂಟೆಗಾಯಿತು. ತಂಗಳು ಹೆಣವೇ ಆಗಿತ್ತು ಅಷ್ಟು ಹೊತ್ತಿಗೆ. ಬ್ರಾಹ್ಮಣ ಸಮಾಜದಲ್ಲಿ ಅದಷ್ಟು ಬೇಗನೆ ಶವ ಸಂಸ್ಕಾರ ನಡೆಸುತ್ತಾರೆ. ತಂಗಳು ಹೆಣವಾಗಿ ಕೊಳೆಸುವುದಿಲ್ಲ. ವಿದ್ಯುಚ್ಛಕ್ತಿ ದಹನ ಸೌಕರ್ಯವಿದ್ದರೂ ಮಣಗಟ್ಟಲೆ ಸೌದೆಯುರಿಸಿ ಶವ ಸಂಸ್ಕಾರ ಮಾಡಿದೆ. ಅಪರ ಕರ್ಮಗಳನ್ನು

ಶ್ರದ್ಧೆಯಿಂದ ನೆರವೇರಿಸಿದೆ. ವೈಕುಂಠ ಸಮಾರಾಧನೆಯ ಸಂಜೆ ನನ್ನ ಚಿಕ್ಕಮ್ಮನಿಗೂ ಹಿಡಿಸಿದ್ದ ಕುಮಾರವ್ಯಾಸ ಭಾರತ ವಾಚನ ಮಾಡಿಸಿದೆ ಗಮಕ ವಿದ್ವಾನ್ ಎಂ. ರಾಘವೇಂದ್ರರಾಯರ ಸೊಸೆ ಗಮಕ ವಿದುಷಿ ಸೌ|| ಕಮಲ ರಾಮಕೃಷ್ಣ ಅವರಿಂದ. ಈ ಹೊಸ ತಿರುವು ನನ್ನ ಚಿಕ್ಕಮ್ಮನಿಗೆ ಅಪೇಕ್ಷಣೀಯವೇ ಆಗಿತ್ತೆಂದು ಭಾವಿಸಿದೆ. ಚಿಕ್ಕಮ್ಮ ಅಂಬೂಬಾಯಿಯ ಹೆಸರಿನಲ್ಲಿ "ಆರ್ಯಮಾತೆಯರು" ಎಂಬ ಪುಟ್ಟ ಪುಸ್ತಕ ಬರೆದು, ನನ್ನ ಹಿತಚಿಂತಕರುಗಳಲ್ಲೊಬ್ಬರಾದ ಹಿರಿಯರು ಸಿದ್ಧವನ ಹಳ್ಳಿಯ ಕೃಷ್ಣ ಶರ್ಮರ ಗಾಂಧೀ ಸಾಹಿತ್ಯ ಸಂಘಕ್ಕೆ ದಾನ ಕೊಟ್ಟೆ. ಕೃಷ್ಣಶರ್ಮರು ನನ್ನ ಆಧುನಿಕ ಪ್ರಜ್ಞೆಯನ್ನು ಮೆಚ್ಚಿ "ಆರ್ಯಮಾತೆಯರು" ಪುಸ್ತಕಕ್ಕೆ ಪುಟ್ಟದಾದರೂ ಚೊಕ್ಕವಾದ ಮುನ್ನುಡಿ ಬರೆದು ಹೀಗೆ ಹೇಳಿದ್ದಾರೆ—

> "ಶ್ರೀಮತಿ ಅಂಬೂಬಾಯಿ ಅವರು ಮೊನ್ನೆ 2ನೇ ತಾ|| ತೀರಿಕೊಂಡರು. ಪಾಂಡುರಂಗರಾಯರಿಗೆ ಅವರ ಚಿಕ್ಕಮ್ಮನ ಋಣ ತೀರಿಸುವ ಯೋಚನೆ ಬಂದು, ಒಂದು ಸ್ಮಾರಕ ಮಾಲೆಯನ್ನು ಪ್ರಾರಂಭಿಸಬೇಕು ಎನ್ನಿಸಿತು. ವರುಷಕ್ಕೆ ಒಂದು ಪುಸ್ತಕ, ಆಕೆಯ ಶ್ರಾದ್ಧದ ಹಿಂದು ಮುಂದೆ, ಹೀಗೆ ತಮ್ಮ ಶ್ರದ್ಧೆಯನ್ನು ತೋರಿಸಬಯಸಿ ಈಗಿನ ಸಮಾಜಕ್ಕೆ ಒಂದು ಮೇಲ್ಪಂಕ್ತಿ ಹಾಕ ಬಯಸಿರುವರು. ಇಷ್ಟೇ ಅಲ್ಲ, ಆ ಪ್ರಕಟಣೆಯನ್ನು ಯಾವುದಾದರೂ ಸಂಘ ಸಂಸ್ಥೆಗೆ ದಾನ ಮಾಡಿ ಅರ್ಪಿಸಬೇಕೆಂದು ಯೋಚಿಸಿರುವರು. . . . . . . ಹಿರಿಯರ ಶ್ರಾದ್ಧ ಕರ್ಮಕ್ಕೆ ಶ್ರೀ ಪಾಂಡುರಂಗರಾಯರು ಕೊಟ್ಟ ಈ ತಿರುವು ಅನುಕರಣೀಯ."

ನಮ್ಮ ಚಿಕ್ಕಮ್ಮ ಸತ್ತ ವರ್ಷದಲ್ಲೇ ಸೆಪ್ಟೆಂಬರ್ 5 ರಂದು ಭಾರತ ಕೇಂದ್ರದಿಂದ ಆದರ್ಶ ಶಿಕ್ಷಕನೆಂದು ನನಗೆ ರಾಷ್ಟ್ರಪ್ರಶಸ್ತಿ ದೊರೆಯಿತು. ಶಕುಂತಲಾಬಾಯಿಗೆ ಮೈಸೂರು ರಾಜ್ಯ ಸಾಹಿತ್ಯ ಅಕಾಡೆಮಿಯಿಂದ, ಗಮಕ ಕಲಾ ಪರಿಚಾರಿಕೆ ಸಲ್ಲಿಸಿದುದಕ್ಕಾಗಿ, ಮುಂದಿನ ವರ್ಷವೇ 1979ರ ನವಂಬರ್ 1 ರಂದು ರಾಜ್ಯ ಪ್ರಶಸ್ತಿ ದೊರೆಯಿತು. "ಮೈಸೂರು ರಾಜ್ಯ ಸರಕಾರ ಪ್ರಶಸ್ತಿಗಳನ್ನು ಕೊಡಲು ತಡಮಾಡುತ್ತಿರುವುದು ಸರಿಯಲ್ಲ." ಎಂದು ಸಾಯುವ ಕಾಲದಲ್ಲಿ ನನ್ನ ಚಿಕ್ಕಮ್ಮ ನುಡಿದ ಒಳಗುದಿ ಮಾತುಗಳು ಎಷ್ಟು ಸತ್ಯವಾಯಿತು ! ಕೇಳಿ, ನೋಡಿ ಸಂತೋಷ ಪಡುವ ದಿವ್ಯ ಚೇತನ ಇಲ್ಲವಾಗಿತ್ತು. ಆದರೆ ಆ ಪುಣ್ಯ ಜೇತನದ ತಪಸ್ಸಿದ್ಧಿಯ ಫಲ ಮಗ ಸೊಸೆಗೆ ಲಭಿಸಿತ್ತು.

ಸಹೃದಯ ವಿಭೂತಿ ಹೊಂಬೇಗೌಡರು ನಮ್ಮನ್ನಗಲಿದರು.

ನಮಗೆ ಆತ್ಮೀಯರಾಗಿದ್ದ, ನಮ್ಮ ಅಪಾರ ಗೌರವ ವಿಶ್ವಾಸಗಳಿಗೆ ಪಾತ್ರರಾಗಿದ್ದ ಹೊಂಬೇಗೌಡರ ದರ್ಶನ ಲಾಭವೂ ನಮಗೆ ಚಿಕ್ಕಮಗಳೂರು ಕೆಮ್ಮಣ್ಣುಗುಂಡಿ ಪ್ರವಾಸದಲ್ಲೇ ಕಡೆಯದಾಯಿತು.

ಕೆಮ್ಮಣ್ಣು ಗುಂಡಿ—ಚಿಕ್ಕಮಗಳೂರು ಪ್ರವಾಸ ಮುಗಿಸಿ ಬಂದು ಏಳೆಂಟು ತಿಂಗಳು ಕಳೆದಿರಬಹುದು. ಒಂದು ಬೆಳಗ್ಗೆ ಅಷ್ಟು ಹೊತ್ತಿಗೇ ಬಂದಿದ್ದ "ಪ್ರಜಾವಾಣಿ" ದಿನ ಪತ್ರಿಕೆಯ ಮುಖಪುಟವನ್ನು ಓದಲು ಹಿಡಿದುವೇ ತಡ ಕಪ್ಪು ಚೌಕಟ್ಟಿನ ಮಧ್ಯೆ ಹೊಂಬೇಗೌಡರ ಭಾವಚಿತ್ರ ಕಣ್ಣಿಗೆ ಕಂಡಿತು. ಪೂಜ್ಯರು ಸತ್ತು ಸುದ್ದಿಮಾಡಿದ್ದರು. ಅವರ ನಿಧನದ ಸುದ್ದಿ ನನ್ನನ್ನು ದಿಗ್ಭ್ರಾಂತನನ್ನಾಗಿ ಮಾಡಿತು. ನನ್ನ ಕಣ್ಣು ಒವಳಿ ಬಂತು. ಚೇತರಿಸಿಕೊಂಡು ಶಕುಂತಲಾಬಾಯಿಗೆ ಸುದ್ದಿ ಮುಟ್ಟಿಸಿ, ಕೂಡಲೆ ವಿಲ್ಸನ್ ಗಾರ್ಡನ್ಸ್ ಬಡಾವಣೆಗೆ ಧಾವಿಸಿದೆ. ನೆನಪುಗಳು ಸುರುಳಿ ಸುರುಳಿಯಾಗಿ ಬಿಚ್ಚಿಕೊಂಡವು. ಮಾರ್ಗ ಮಧ್ಯದಲ್ಲಿ—

ನಿಟ್ಟೂರು ಶ್ರೀನಿವಾಸರಾಯರು ಮೈಸೂರು ರಾಜ್ಯದ ಮುಖ್ಯ ಶ್ರೇಷ್ಠ ನ್ಯಾಯ ಮೂರ್ತಿ ಪದವಿಯಿಂದ ನಿವೃತ್ತರಾದ ಬಳಿಕ ಹೊಂಬೇಗೌಡರು ಅವರ ಸ್ಥಾನದಲ್ಲಿ ಮುಖ್ಯ ಶ್ರೇಷ್ಠ ನ್ಯಾಯಮೂರ್ತಿಗಳಾಗಿ ನೇಮಕಕೊಂಡರು. ವಿಲ್ಸನ್ ಗಾರ್ಡನ್ ಬಡಾವಣೆಯ ಮಹಾಜನರು ಕೂಡಲೆ ಮುಖ್ಯ ಶ್ರೇಷ್ಠ ನ್ಯಾಯ ಮೂರ್ತಿ ಹೊಂಬೇಗೌಡರಿಗೆ ಮುನಿಸ್ವಾಮಪ್ಪನವರ ಕಲ್ಯಾಣ ಮಂಟಪದಲ್ಲಿ ಸನ್ಮಾನ ಸಮಾರಂಭವೇರ್ಪಡಿಸಿದರು. ಸಮಾರಂಭದಲ್ಲಿ ಶಕುಂತಲಾಬಾಯಿಯವರ ಮುಖ್ಯ ಕಾರ್ಯಕ್ರಮ "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನ. ವಂದನಾರ್ಪಣೆಯಾದೊಡನೆ ಶಕುಂತಲಾಬಾಯಿಗೆ ಕಾರ್ಯಕರ್ತರು ಫಲ ತಾಂಬೂಲದ ತಟ್ಟೆಯಲ್ಲಿ ನೂರೊಂದು ರೂಪಾಯಿಗಳ ಒಂದು ಕಟ್ಟಿಟ್ಟು, ಹಾರ ಹಾಕಿ ಸಂಭಾವನೆ ಅರ್ಪಿಸಿದರು. ಶಕುಂತಲಾಬಾಯಿ ನೋಡಿದ ಕೂಡಲೆ ನಾಗಸರ್ಪವನ್ನು ಕಂಡಂತೆ ಹೌಹಾರಿದರು. ಸಮಾರಂಭ ಮುಗಿದ ಕೂಡಲೆ ಕಾರ್ಯಕರ್ತರನ್ನು ಕರೆದು ನೋಟುಗಳ ಕಟ್ಟನ್ನು ಅವರ ಕೈಯಲ್ಲಿಟ್ಟರು. "ಪೂಜ್ಯರಾದ ಹೊಂಬೇಗೌಡರ ಸಮಾರಂಭದಲ್ಲಿ ನನಗೆ ಸಂಭಾವನೆ ಬೇಡ" ಎಂದರು. ಕಾರ್ಯಕರ್ತರು ಹೊಂಬೇಗೌಡರ ಕಡೆಗೆ ಧಾವಿಸಿದರು. "ನಾನು ಕೈಯಿಂದ ಕೊಡುತ್ತಿಲ್ಲ. ತೆಗೆದುಕೊಳ್ಳಿ. ಇಲ್ಲದಿದ್ದರೆ ನನಗೆ ಸಮಾಧಾನವಾಗುವುದಿಲ್ಲ." ಎಂದರು.

ಮೈಸೂರಲ್ಲಿ ವಯಸ್ಕರ ಶಿಕ್ಷಣ ಸಮಿತಿಯ ಆಶ್ರಯದಲ್ಲಿ ಶಕುಂತಲಾಬಾಯಿಗೆ ನಡೆದ ಸನ್ಮಾನದಲ್ಲೂ ಹೊಂಬೇಗೌಡರು ಕಾಣದ ಕೈಯಾಗಿ ಪಾತ್ರವಹಿಸಿದ್ದರೆಂದು ನನ್ನ ನೆನಪಿನ ಸುರುಳಿ ಜ್ಞಾಪಿಸಿದೆ.

ವಿಲ್ಸನ್ ಗಾರ್ಡನ್ಸ್ ಶ್ರೀರಾಮ ಮಂದಿರದ ಕಲ್ಯಾಣ ಮಂಟಪದಲ್ಲಿ ಶಕುಂತಲಾಬಾಯಿಯ "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನ ಕಾರ್ಯಕ್ರಮಗಳೆಲ್ಲ ನೆನಪಿಗೆ ಬಂದವು. ಪ್ರತಿ ಕಾರ್ಯಕ್ರಮದಲ್ಲೂ ಹೊಂಬೇಗೌಡರು ಇರುತ್ತಿದ್ದುದು ನೆನಪಿಗೆ ಬಂತು.

ಹೊಂಬೇಗೌಡರ ಮನೆಗೆ ಹೋದೆ. ಜನ ಪ್ರವಾಹ ಮಹಾಪೂರವಾಗಿತ್ತು. ಜನಸಂದಣಿಯಲ್ಲಿ ನುಗ್ಗಿಕೊಂಡು ವರಾಂಡಕ್ಕೆ ಹೋದೆ. ಗೌಡರ ದೇಹ ಮಂಚದ ಮೇಲೆ ನಿದ್ದೆಮಾಡುತ್ತಿದೆಯೋ ಎನ್ನುವ ಹಾಗೆ ಮಲಗಿತ್ತು. ಚೆಲುವು ಚೆಲ್ಲುವ ನಗು ಮುಖದ

ತಲೆಯ ಮೇಲೆ ಹೆಬ್ಬೆಟ್ಟಗಲದ ಜರಿ ಪೇಟ. ನನ್ನನ್ನು ಸ್ವಾಗತಿಸುತ್ತಿದೆಯೋ ಎಂದು ಭ್ರಮೆ ಪಟ್ಟೆ. ಕಂದಿರಲಿಲ್ಲ, ಕುಂದಿರಲಿಲ್ಲ. ದೇಹದ ಮೇಲೆ ಅಪಾರವಾಗಿ ಹೂ ಹಾರಗಳ ರಾಶಿ. ತಲೆ ದೆಸೆಯಲ್ಲಿ ಕೆ. ಸಿ. ಚೌಡಪ್ಪರೆಡ್ಡಿಯವರ ನೇತೃತ್ವದಲ್ಲಿ ಯುವಕ ಸಮೂಹ ಭಗವದ್ಗೀತೆಯಿಂದ ಸ್ಥಿತಪ್ರಜ್ಞ ಲಕ್ಷಣಗಳ ಶ್ಲೋಕಗಳನ್ನು ಪಠಿಸುತ್ತಿತ್ತು. ನಾನು ಹೋಗುತ್ತಲೆ ದುಃಖತಪ್ತರಾದ ರೆಡ್ಡಿಯವರು ಎದ್ದರು. ನನ್ನ ಕಿವಿಯಲ್ಲಿ "ಶಕುಂತಲಾ ಬಾಯಿಯವರನ್ನು ಕರೆದುಕೊಂಡು ಬನ್ನಿ" ಎಂದರು. ಗೆಳೆಯರ ಕಾರಿನಲ್ಲಿ ಮನೆಗೆ ಧಾವಿಸಿದೆ. ಕಾಲಾವಕಾಶವನ್ನು ಪೋಲುಮಾಡದೆ ಶಕುಂತಲಾಬಾಯಿಯೊಡನೆ ಹೊಂಬೇ ಗೌಡರ ಮನೆ ತಲುಪಿದೆ. ಶಕುಂತಲಾಬಾಯಿ, ಶವದ ತಲೆದೆಸೆಯಲ್ಲಿ ಕುಳಿತು "ಶ್ರೀ ರಾಮಾಯಣ ದರ್ಶನಂ" ಕಾವ್ಯದಿಂದ "ಶಬರಿಗಾದನು ಅತಿಥಿ ದಾಶರಥಿ" ಭಾಗದಿಂದ "ತನ್ನ ಮೋಕ್ಷಕ್ಕೆ ತನ್ನ ದೇವತೆಯುಂ ಪ್ರದಕ್ಷಿಣಾ ಪೂರ್ವಕಂ ಪ್ರಾರ್ಥಿಸುವಳೆಂಬಂತೆ ಮಂತ್ರ ಘೋಷಂ ಗೈದು" ಸಾಲುಗಳಿಂದ "ಕಣ್ಮುಚ್ಚಿದಳ್ ಆ ಅಮರ ಸನ್ನ್ಯಾಸ್ಯೆ" ಸಾಲುಗಳನ್ನು ಪೂರ್ತಿ ಓದಿದರು. ಶವಕ್ಕೆ ಕೈಮುಗಿದರು. ಹೊಂಬೇಗೌಡರಿಗೆ ಶಕುಂತಲಾ ಬಾಯಿಯಿಂದ ಅಂತ್ಯ ಗೌರವ ಸಂದುದು ಹೀಗೆ. ನಾನು ಶವ ಸಂಸ್ಕಾರವನ್ನು ಪೂರಯಿಸಿಕೊಂಡು ಶೋಕತಪ್ತನಾಗಿ ಸಂಜೆ ಮನೆ ಸೇರಿದೆ.

ಹೊಂಬೇಗೌಡರ ವೈಕುಂಠ ಸಮಾರಾಧನೆಯಾದ ಸಂಜೆ ಸರ್ ಪುಟ್ಟಣ್ಣ ಚೆಟ್ಟಿ ನಗರ ಭವನದಲ್ಲಿ ದಿವಂಗತರಿಗೆ ಕಂಬನಿ ತರ್ಪಣ ಕೊಡುವ ಭಾರಿ ಸಂತಾಪ ಸೂಚಕ ಸಭೆ. ನಗರದ ಪ್ರಮುಖರೆಲ್ಲ ಆಗಮಿಸಿದ್ದರು. ಸಕಲ ಜಾತಿಕೋಮುಗಳ ಮುಂದಾಳುಗಳು ಪ್ರತಿನಿಧಿಸಿದ್ದರು. ಇಲ್ಲಿಯೂ ಶಕುಂತಲಾಬಾಯಿ ಹೊಂಬೇಗೌಡರ ಆತ್ಮಶಾಂತಿಗಾಗಿ "ಶ್ರೀ ರಾಮಾಯಣ ದರ್ಶನಂ" ವಾಚನ ಮಾಡಿದರು.

ಹೊಂಬೇಗೌಡರ ಧರ್ಮಪತ್ನಿ ದಿವಂಗತರಾದಾಗ, ಆಕೆಯ ವೈಕುಂಠ ಸಮಾ ರಾಧನೆಯ ದಿನ ಮಧ್ಯಾಹ್ನ ಶಕುಂತಲಾಬಾಯಿ "ಶ್ರೀ ರಾಮಾಯಣ ದರ್ಶನಂ" ವಾಚನ ಮಾಡಿದ್ದರು. ಈಗ ಅವರ ಪತಿಗಾಗಿ "ಶ್ರೀ ರಾಮಾಯಣ ದರ್ಶನಂ" ವಾಚನ ಮಾಡಿದರು.

ಹೊಂಬೇಗೌಡರು ಜೀವಂತರಾಗಿದ್ದಾಗ ಅವರ ವಿಲ್ಸನ್ ಗಾರ್ಡನ್ಸ್ ಮನೆ ನಮಗೆ ನಮ್ಮ ಮನೆಯ ಹಿತ್ತಲ ಬಾಗಿಲಷ್ಟು ಹತ್ತಿರವಾಗಿತ್ತು. ವಿಲ್ಸನ್ ಗಾರ್ಡನ್ಸ್ ಬಡಾವಣೆ ನಮ್ಮ ಮನೆಗೆ ಹತ್ತಿಪ್ಪತ್ತು ಹೆಜ್ಜೆಗಳಷ್ಟು ಸಮೀಪವಾಗಿತ್ತು. ಆದರೆ ಈಗ . . . . ?. ವಿಲ್ಸನ್ ಗಾರ್ಡನ್ಸ್ ಬಡಾವಣೆ ಈಗ ಹೊಂಬೇಗೌಡ ನಗರವಾಗಿದೆ. "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನಕ್ಕೆ ತೊಡಗುತ್ತಲೆ ಅವರ ಜರಿ ಪೇಟದ, ಸ್ಮಿತವದನದ ಮುಖ ಕಣ್ಣುಮುಂದೆ ನಿಲ್ಲುತ್ತದೆ. ಸಹೃದಯ ವಿಭೂತಿ ಹೊಂಬೇಗೌಡ ರಿಗೆ ನಮ್ಮ ನಮನ ತಪ್ಪಿಲ್ಲ.

೫. ಕೊಡವರ ನಾಡಿನಲ್ಲಿ ಗಮಕ ಪ್ರಚಾರ

"ಎಲ್ಲಿ ಭೂರಮೆ ದೇವಸನ್ನಿಧಿ ಬಯಸಿ ಬಿಮ್ಮನೆ ಬಂದಳೋ ?
ಎಲ್ಲಿ ಮೋಹನ ಗಿರಿಯ ಬೆಸಗಿನ ರೂಪಿನಿಂದಲಿ ನಿಂದಳೋ ?
ಎಲ್ಲಿ ಮುಗಿಲಲಿ ನಿಂಚಿನೋಲ್ ಕಾವೇರಿ ಪೊಳೆ ಹೊಳೆ ಹೊಳೆವಳೋ ?
ಎಲ್ಲಿ ನೆಲವನು ತಣಿಸಿ ಜನಮನ ಹೊಲವ ಕಳೆಕಳೆ ಕಳೆವಳೋ ?

ಅಲ್ಲೆ ಆ ಕಡೆ ನೋಡಲಾ !
ಅಲ್ಲೆ ಕೊಡವರ ನಾಡಲಾ !
ಅಲ್ಲೆ ಕೊಡವರ ಬೀಡಲಾ !

"ಕವಿಶಿಷ್ಯ" ಹಿರಿಯರು ಪಂಜೆ ಮಂಗೇಶರಾಯ "ಹುತ್ತರಿ ಹಾಡು" ಓದಿದಾಗೆಲ್ಲ ಕೇಳಿದಾಗೆಲ್ಲ ನನ್ನ ಕಿವಿ ನಿಮಿರುತ್ತಿತ್ತು. ಹೃದಯ ಪುಳುಕಿತವಾಗುತ್ತಿತ್ತು. ವೈರೋಮಾಂಚನ ಗೊಳುತ್ತಿತ್ತು ಮನಃಚಕ್ಷು ನಮ್ಮ ಕೊಡಗಿದು "ಜಮ್ಮದು" ಕಡೆ ಹೋಗುತ್ತಿತ್ತು.

"ನಡೆದು ನೋಡು ಕೊಡಗಿನ ಬೆಡಗಂ"

ಪೂಜ್ಯ ಡಿ. ವಿ. ಜಿ. ನಡೆದು ನೋಡಿ 'ಅಗಸ್ತ್ಯನ ತಪದ ಮಣೆ, ಕಾವೇರಿತಾಯ ತವರ್ಮನೆ' ಕೊಡಗನ್ನು ವರ್ಣಿಸಿರುವ ಬಗೆ. ನನಗೆ ಕೊಡಗನ್ನು ನೋಡಬೇಕೆಂಬ ಬಯಕೆ ಬಹಳವಾಗಿತ್ತು ಚಿಕ್ಕಂದಿನಿಂದಲು.

1956 ಇರಬಹುದು. ನನ್ನ ನೆನಪು ತಬ್ಬಿಬ್ಬಾಗಿದೆ. ಕೊಡಗಿನ ವೀರರಾಜಪೇಟೆಯ ಡಾ|| ಅಪ್ಪಣ್ಣ ತಮ್ಮೂರಿನ ಕರ್ಣಾಟಕ ಸಂಘಕ್ಕೆ ಬರಬೇಕೆಂದು ದಿಸೆಂಬರ್ ಕಡೆಯ ವಾರದಲ್ಲಿ ಆಹ್ವಾನಕೊಟ್ಟರು. ನನ್ನ ಕನಸು ನನಸಾಯಿತು. ನಾನು ಶಕುಂತಲಾಬಾಯಿ ಕರ್ಣಾಟಕ ಸಂಘದ ಆಹ್ವಾನವನ್ನು ಸ್ವೀಕರಿಸಿ ವೀರರಾಜಪೇಟೆಗೆ ಹೋದೆವು. ನನಗೆ 1946ರ ಕಾಲದಿಂದಲೂ ಚಿರಪರಿಚಿತರಾದ ಮಕ್ಕಳ ಸಾಹಿತ್ಯದಲ್ಲಿ ನನ್ನ ಸಹೋದ್ಯೋಗಿಯಾದ "ಕನ್ನಡ ಪ್ರಪಂಚ ಪ್ರಕಾಶನ"ದ ಬೋಳಂತಕೋಡಿ ಶಂಕರಭಟ್ಟರು ಅಲ್ಲಿಗೆ ಬಂದಿದ್ದರು.

ಡಾ|| ಅಪ್ಪಣ್ಣ ವೀರರಾಜಪೇಟೆಯಲ್ಲಿ ಬಹು ಪ್ರಭಾವದ ವ್ಯಕ್ತಿ. ನಮ್ಮನ್ನು ತಮ್ಮ ಮನೆಯಲ್ಲೇ ಇಳಿಸಿಕೊಂಡರು. ರಾತ್ರಿ ತಮ್ಮ ಅಟ್ಟದಲ್ಲಿ ಒಂದು ಪುಟ್ಟ ಸಭೆ ಸೇರಿಸಿದರು. ವೀರರಾಜಪೇಟೆಯ ಪ್ರಭಾವದ ಜನದ ಪುಟ್ಟ ಸಭೆಯದು. 'ಭಾರತೀಸುತ' ರೆಂದು ಮುಂದೆ ಬಹು ಪ್ರಸಿದ್ಧ ಕಾದಂಬರಿಕಾರರೆನ್ನಿಸಿಕೊಂಡ ಎಸ್. ಆರ್. ನಾರಾಯಣ ರಾಯರು ನನಗೆ ಪರಿಚಿತರಾದದ್ದು ಡಾ|| ಅಪ್ಪಣ್ಣನವರ ಮನೆಯಲ್ಲಿ. ಮುಂದೆ ಭಾರತೀಸುತರು ನನಗೆ ಆಪ್ತಮಿತ್ರರಾಗಿ ಪರಿಣಮಿಸಿದರು.

ವೀರರಾಜಪೇಟೆಯ ಕರ್ಣಾಟಕ ಸಂಘದ ಆಶ್ರಯದಲ್ಲಿ ನಡೆದ ಕಾರ್ಯಕ್ರಮ ತುಂಬಾ ಯಶಸ್ವಿಯಾಗಿತ್ತು. ಬಿ. ಶಂಕರಭಟ್ಟರು ಕನ್ನಡದ ಆಗು ಹೋಗುಗಳನ್ನು ಕುರಿತು ವಿದ್ವತ್ಪೂರ್ಣವಾದ ಉಪನ್ಯಾಸ ಕೊಟ್ಟರು. ಶಕುಂತಲಾಬಾಯಿ "ಕರ್ಣಾಟಕ

ಕವಿಕಾವ್ಯ ಪರಂಪರೆ" ಕಾವ್ಯವಾಚನ ಮಾಡಿದರು. ನನ್ನ ಪ್ರಾಸಂಗಿಕ ನಿರೂಪಣೆ ಕಾವ್ಯವಾಚನಕ್ಕೆ ಪುಷ್ಟಿಕೊಟ್ಟಿತ್ತು. ಡಾ|| ಆಸ್ರಣ್ಣ ತಮ್ಮ ವಂದನಾರ್ಪಣೆಯಲ್ಲಿ "ಗಮಕ ವಿದುಷಿ ಶಕುಂತಲಾಬಾಯಿ ಅತ್ಯಂತ ಶ್ರೇಷ್ಠ ವರ್ಗದ ಗಮಕಕಲಾವಿದೆಯೆಂದು ನಮಗೆ ತಿಳಿದೇ ಇರಲಿಲ್ಲ. ಇಲ್ಲಿಗೆ ಬಂದು ಹೋಗಿರುವ ಗಮಕ ಕಲಾವಿದರೂ ನಮಗೆ ಗಮಕ ವಿದುಷಿಯ ಹೆಸರನ್ನು ತಿಳಿಸಿಯೂ ಇರಲಿಲ್ಲ. ನಾವಾಗಿ ಇನ್ನೂ ಯಾರು ಯಾರು ಗಮಕಿಗಳು ಇರುವರೆಂದು ಕೇಳಿದರೂ ತಿಳಿಸಲಿಲ್ಲ." ಎಂದು ಕಳಕಳಿಯಿಂದ ನುಡಿದರು.

ಕಾರ್ಯಕ್ರಮವಾದ ಮೇಲೆ ನಾವು ವೀರರಾಜಪೇಟೆಯಲ್ಲೆಲ್ಲ ಅಡ್ಡಾಡಿದೆವು. ಡಿಸೆಂಬರ್ ತಿಂಗಳಾದರೂ, ಚಳಿ ನಡುಕವಿರಲಿಲ್ಲ.

ವೀರರಾಜಪೇಟೆಯಿಂದ ಕಾರ್ಯಕ್ರಮವಾದ ಎರಡನೇ ದಿನ ಕೊಡಗಿನ ರಾಜಧಾನಿ ಎನ್ನಿಸಿಕೊಂಡಿದ್ದ ಮಡಕೇರಿಗೆ ಪ್ರಯಾಣ ಬೆಳೆಸಿದೆವು. ಅಲ್ಲಿ ನನ್ನ ಅಣ್ಣ ಚಿಂತಾಮಣಿಯ ಬಿ. ಮಾಧವರಾಯರ ಹಿರಿಯ ಮಗಳು ಶಾಂತಮ್ಮ ಮತ್ತು ಆಕೆಯ ಪತಿ ಪ್ರೊ|| ಎಲ್. ಎಸ್. ಶೇಷಗಿರಿರಾಯರು ನಮ್ಮನ್ನು ತುಂಬ ವಿಶ್ವಾಸದಿಂದ ಸ್ವಾಗತಿಸಿದರು. ಹಿರಿಯ ಗಮಕ ವಿದ್ವಾಂಸ ಎಂ. ಎಸ್. ಅನಂತಪದ್ಮನಾಭರಾಯರು ಹಾರ್ದಿಕವಾದ ಸ್ವಾಗತ ನೀಡಿದರು. ತಮ್ಮ ಮನೆಯ ಸನಿಹದಲ್ಲಿದ್ದ ಪ್ರಾಣದೇವರ ಗುಡಿಯಲ್ಲಿ ಶಕುಂತಲಾಬಾಯಿಯ ಕುಮಾರವ್ಯಾಸ ಭಾರತ ವಾಚನ ಏರ್ಪಡಿಸಿದರು. ಅನಂತಪದ್ಮನಾಭರಾಯರ ಮನೆ ಕನ್ನಡನಾಡಿನ ಸಾಹಿತಿಗಳಿಗೆಲ್ಲ ತೆರೆದ ಬಾಗಿಲು. ಗಮಕಿಯೂ ಸಾಹಿತಿಯೂ ಆದ ಅನಂತಪದ್ಮನಾಭರಾಯರು ಶ್ರೇಷ್ಠ ವರ್ಗದ ನಿಸ್ವಾರ್ಥಿ ಆತಿಥೇಯರೆಂದು ಪ್ರಸಿದ್ಧಿ. ನಮಗೂ ಅವರ ಆತಿಥ್ಯದ ಪರಿಚಯವಾಯಿತು.

1963ರಲ್ಲಿ ಬೆಂಗಳೂರಿನಲ್ಲಿ ನಮ್ಮ ರಾಜ್ಯದ ಶಿಕ್ಷಣ ಇಲಾಖೆಯ ಸಂಶೋಧನ ಶಾಖೆ ಮಕ್ಕಳ ಸಾಹಿತ್ಯ ನಿರ್ಮಾಣ ಕಮ್ಮಟವನ್ನು ಏರ್ಪಡಿಸಿತು. ರಾಜ್ಯದ ಸರಕಾರಿ ಹಾಗೂ ಖಾಸಗಿ ಶಿಕ್ಷಣ ಶಾಲೆಗಳ ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲೆಗಳ ಸಾಹಿತಿ ಶಿಕ್ಷಕರು ಸುಮಾರು 40–50 ಮಂದಿ ಕಮ್ಮಟದಲ್ಲಿ ಭಾಗವಹಿಸಿದ್ದರು. ಮಕ್ಕಳ ಮಂಟಪದಿಂದ ನಾನು ಭಾಗವಹಿಸಿದ್ದೆ. ಭಾರತೀಸುತ, ಮಿರ್ಜಿ ಅಣ್ಣಾರಾಯ, "ಚಿರಂತನ"ರೆಂದು ಸಾಹಿತ್ಯ ಪ್ರಪಂಚದಲ್ಲಿ ಪರಿಚಿತರಾಗಿರುವ ಕೆ. ಸಚ್ಚಿದಾನಂದಯ್ಯನವರೂ ನಮ್ಮ ಮಕ್ಕಳ ಸಾಹಿತ್ಯ ನಿರ್ಮಾಣ ಕಮ್ಮಟದಲ್ಲಿದ್ದರು. ನನಗೆ ಈ ಮೂವರು ಸಮಾನ ವೃತ್ತಿ ಬಾಂಧವರಿಗೆ ಗಳಸ್ಯ ಕಂಠಸ್ಯ ಸ್ನೇಹವುಂಟಾಯಿತು. ನಮ್ಮ ಮಕ್ಕಳ ಮಂಟಪದ ಮನೆಗೆ ಆಹ್ವಾನಿಸಿದೆ. ಕಮ್ಮಟದ ಕೆಲಸ ಪೂರ್ತಿಯಾಗುವವರೆಗೂ ಈ ಮೂವರು ಮಿತ್ರರೂ ನಮ್ಮ ಮನೆಯಲ್ಲಿ ನಮ್ಮ ಸ್ವಜನ ಬಂಧುಗಳೋ ಎನ್ನುವಂತೆ ಇದ್ದರು. ಸ್ನೇಹದ ಬೆಸುಗೆ ಬೆಸೆಯಿತು. ಮಿರ್ಜಿ ಅಣ್ಣಾರಾಯರು, ಭಾರತೀಸುತರು ಅನಂತರ ಬೆಂಗಳೂರಿಗೆ ಬಂದಾಗಲೆಲ್ಲ ನಮ್ಮಲ್ಲೇ ಇಳಿದುಕೊಳ್ಳುತ್ತಿದ್ದರು. ಸಾಹಿತ್ಯ ನಿರ್ಮಾಣವೂ ನಮ್ಮ ಮನೆಯಲ್ಲೇ ನಡೆಯುತ್ತಿತ್ತು. ಚಿರಂತನರೂ ಅಷ್ಟೆ. ಅವರೂ ನಮ್ಮ ಮನೆಯವರೇ ಆಗಿ ಹೋದರು.

ಈ ಸಮಯದಲ್ಲಿ ಮಕ್ಕಳ ಸಾಹಿತಿ ಪಳಕಳ ಸೀತಾರಾಮ ಭಟ್ಟರೂ ನಮ್ಮ ಮನೆ ಬಳಗದಲ್ಲಿ ಒಬ್ಬರಾಗಿ ಸೇರಿಕೊಂಡರು.

'ಚಿರಂತನ'ರು 1971ರ ಸುಮಾರು ಸೋಮವಾರಪೇಟೆಯ ಪ್ರೌಢಶಾಲೆಯಲ್ಲಿ ಕನ್ನಡ ಮಾಸ್ತರರಾಗಿ ಕೆಲಸ ಮಾಡುತ್ತಿದ್ದವರು ತಮ್ಮ ಶಾಲಾ ವಾರ್ಷಿಕೋತ್ಸವಕ್ಕೆ ನನ್ನನ್ನೂ ಶಕುಂತಲಾಬಾಯನ್ನೂ ಆಹ್ವಾನಿಸಿದರು. ಡಾ|| ಚಿದಾನಂದ ಮೂರ್ತಿ ಮುಖ್ಯ ಅತಿಥಿಯಾಗಿ ಆಗಮಿಸಿದ್ದರು. ನಾವು ಚಿರಂತನರ ಮನೆಯ ಅತಿಥಿಗಳಾದೆವು.

ನಾವು ಚಿರಂತನರ ಮನೆಯ ಅತಿಥಿಗಳೇನೋ ಆದೆವು. ಆದರೆ ಆ ಸಮಯದಲ್ಲಿ ಅವರ ಹಿರಿಯ ಮಗು ಚಂದ್ರಶ್ರೀ ಶೀತಾಳ ಶಿಡಬಿಗೆ ಪಕ್ಕಾಗಿ ಹಾಸಿಗೆ ಹಿಡಿದಿತ್ತು. ನಮಗೆ ಮಗುವಿನ ಒದ್ದಾಟ ನೋಡಿ ತುಂಬ ನೋವಾಗಿತ್ತು. 'ಚಿರಂತನ'ರೋ ಶಾಲಾ ವಾರ್ಷಿಕೋತ್ಸವ ವ್ಯವಸ್ಥೆಯ ನೇತಾರರಾಗಿ, ಮನೆಯ ಕೆಲಸ ಕಾರ್ಯಗಳಲ್ಲಿ ನಿರ್ಲಿಪ್ತರಾಗಿ, ಕರ್ಮಯೋಗಿಯಾಗಿದ್ದರು.

ಸೋಮವಾರಪೇಟೆ ಪ್ರೌಢಶಾಲೆಯ ವಾರ್ಷಿಕೋತ್ಸವದಲ್ಲಿ ಶಕುಂತಲಾಬಾಯಿಯ ಕಾವ್ಯವಾಚನ. ಕರ್ಣಾಟಕ ದರ್ಶನವೋ, ಕರ್ಣಾಟಕ ಕವಿಕಾವ್ಯ ಪರಂಪರೆಯೋ ನಡೆಯಿತು. ಅನಂತರ ಒಂದೆರಡು ಕಡೆ ಶಕುಂತಲಾಬಾಯಿಯ ಕುಮಾರ ವ್ಯಾಸಭಾರತ ವಾಚನ ನಡೆಯಿತು.

ಸೋಮವಾರಪೇಟೆಯಲ್ಲಿ 'ಚಿರಂತನ'ರ ಶ್ರದ್ಧೆ ವಿಶ್ವಾಸಗಳಿಂದ ನಾವು ಎರಡು ಮೂರು ಸಲ ಕಾವ್ಯವಾಚನ ಕಾರ್ಯಕ್ರಮವನ್ನು ಕೊಟ್ಟಿದ್ದೇವೆ. ವರ್ಷಗಳ ನೆನಪು ಅಳಿಸಿದೆ. ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ದೇ. ಜವರೇಗೌಡರು ಸೋಮವಾರ ಪೇಟೆಗೆ ದಯಮಾಡಿಸಿದರು. ಯಾವುದೋ ಸಂಘದ್ದೊ ಸಂಸ್ಥೆಯದೋ ಕಾರ್ಯಕ್ರಮ. ಶಕುಂತಲಾಬಾಯಿಯೂ ದೇ. ಜವರೇಗೌಡರ ಜೊತೆ ಈ ಕಾರ್ಯಕ್ರಮದಲ್ಲಿ ಭಾಗಿಗಳಾಗಿದ್ದರು. ಕುವೆಂಪು "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನ ನಡೆಯಿತು. ಸೋಮವಾರಪೇಟೆಯ ಜನ ತುಂಬ ಶ್ರದ್ಧೆಯಿಂದ ಕೇಳಿದರು.

ಅಂದೇ ರಾತ್ರಿ, ಶಿವರಾತ್ರಿ ಪ್ರಯುಕ್ತ ಸೋಮವಾರಪೇಟೆಯ ಈಶ್ವರ ದೇವಸ್ಥಾನದಲ್ಲಿ ಶಕುಂತಲಾಬಾಯಿಯ ಕಾವ್ಯವಾಚನ. ರಾಘವಾಂಕನ ಹರಿಶ್ಚಂದ್ರ ಕಾವ್ಯದಿಂದ ವಿಶ್ವೇಶ್ವರ ಸಾಕ್ಷಾತ್ಕಾರ ಕಥಾಭಾಗ. ಕಾರ್ಯಕ್ರಮ ಚೆನ್ನಾಯಿತು.

ಸೋಮವಾರಪೇಟೆಯ ಕಾರ್ಯಕ್ರಮ ಇನ್ನೊಂದು ಸಲ ನಡೆಯಿತೆಂದು ತೆರೆಮರೆ ನೆನಪು. ರಾಮೋತ್ಸವದಲ್ಲಿ ಭಾಗವಹಿಸಿರಬೇಕು.

ಸೋಮವಾರಪೇಟೆಯಿಂದ ಕಾರ್ಯಕ್ರಮ ಮುಗಿಸಿಕೊಂಡು ಮಡಕೇರಿಗೆ ಹೋದೆವು. ಭಾರತೀಸುತರು ತಮ್ಮ ಸರಕಾರಿ ಪ್ರೌಢಶಾಲೆಯಲ್ಲಿ ಶಕುಂತಲಾಬಾಯಿಯ ಕಾವ್ಯವಾಚನ ಏರ್ಪಾಡು ಮಾಡಿದ್ದರು. ನಮ್ಮ ಶಿಕ್ಷಣ ಇಲಾಖೆಯಲ್ಲಿ ಅತ್ಯಂತ ನಿಷ್ಠ

ಅಧಿಕಾರಿಯಾಗಿ, ಜನಪ್ರಿಯ ಶಿಕ್ಷಣಾಧಿಕಾರಿಯಾಗಿರುವ ಕೆ. ಎಂ. ಪೊನ್ನಪ್ಪನವರು ಆಗ ಪ್ರೌಢಶಾಲೆಯ ಪ್ರಾಧ್ಯಾಪಕರಾಗಿದ್ದರು. ಶಕುಂತಲಾಬಾಯಿ ಆಧುನಿಕ ಕನ್ನಡ ಕವನಗಳನ್ನು ಹಾಡಿ, ವಿದ್ಯಾರ್ಥಿವೃಂದವನ್ನು ತಣಿಸಿದರು.

ಕರ್ಣಾಟಕ ಸಂಘದ ಆಶ್ರಯದಲ್ಲಿ ಮಡಕೇರಿಯ ನಗರ ಭವನದಲ್ಲೂ ಒಂದು ನಮ್ಮ ಕಾವ್ಯವಾಚನದ ಏರ್ಪಾಡಾಗಿತ್ತು. ಭಾರತೀಸುತರು ಸಂಘದ ಕಾರ್ಯಕ್ರಮಕ್ಕೆ ನೇತಾರರಾಗಿದ್ದರು. ಆದರೆ ಜನಕ್ಕೆ ಕಾವ್ಯವಾಚನ ಬೇಡವಾಗಿತ್ತೇನೋ ? ನಾನೂರು ಐನೂರು ಜನದಿಂದ ದಟ್ಟವಾಗಿರಬೇಕಾದ ಸಭೆ ವಿರಳವಾಗಿತ್ತು.

ಗೋಣಿಕೊಪ್ಪಲಲ್ಲಿಯೂ ಒಂದು ಕಾವ್ಯವಾಚನ ನಡೆಯಿತು. ಪುರಸಭಾ ಮಂದಿರದಲ್ಲಿ ಜನ ತುಂಬಿತ್ತು. ಮಡಕೇರಿಯ ಕಾರ್ಯಕ್ರಮದ ಬೇಸರವನ್ನು ಗೋಣಿಕೊಪ್ಪಲಿನ ಕಾರ್ಯಕ್ರಮ ಹೋಗಲಾಡಿಸಿತು. ಕುವೆಂಪು "ಶ್ರೀ ರಾಮಾಯಣ ದರ್ಶನಂ" ಕಾವ್ಯ ವಾಚನವನ್ನು ಜನ ಅಪೇಕ್ಷಿಸಿತು. "ಶಬರಿಗಾದನು ಅತಿಥಿ ದಾಶರಥಿ"ಯೋ ಇನ್ನಾವುದೊ ಕಥಾಭಾಗ. ನೆನಪು ಮಾಸಿದೆ. ಸುಮಾರು ಒಂದು ಗಂಟೆಯ ಕಾರ್ಯಕ್ರಮ. ತುಂಬ ಚೆನ್ನಾಯಿತು. ಜನ ಮುಗ್ಧವಾಯಿತು ಶಕುಂತಲಾಬಾಯಿಯ ಗಮಕ ವಿನ್ಯಾಸಕ್ಕೆ.

ಕೊಡಗಿನ ಗಮಕಯಾತ್ರೆ ನಮ್ಮ ಮನಸ್ಸಿಗೆ ತುಂಬ ಹರ್ಷಕೊಟ್ಟಿದೆ. ಕೊಡಗಿನ ಬೆಡಗನ್ನು ನಡೆದು ನೋಡಿ ತಣಿದಿದ್ದೇವೆ. ಮಡಕೇರಿಯ ಅರಮನೆ, ಕೋಟೆ, ಗಾರೆ ಆನೆಗಳು, ಓಂಕಾರೇಶ್ವರ ದೇವಸ್ಥಾನ, ರಾಜಾಪೀಠ ಮಡಕೇರಿಯ ವೈಶಿಷ್ಟ್ಯವನ್ನು ನೋಡಿ ಆನಂದಿಸಿದೆವು.

ಭಾಗಮಂಡಲಕ್ಕೆ ಯಾತ್ರೆ ತಪ್ಪಿಸಿಕೊಳ್ಳಲಿಲ್ಲ. ಕಾವೇರಿ ಮತ್ತು ಕನ್ನಿಕಾ ನದಿಗಳು ಕೂಡುತ್ತವೆ. ಸುಜ್ಯೋತಿಯೆಂಬ ನದಿ ಗುಪ್ತವಾಗಿ ಸೇರಿ ತ್ರಿವೇಣಿ ಸಂಗಮವೆನ್ನಿಸಿಕೊಂಡಿದೆ ಭಾಗಮಂಡಲ. ಭಗಂಡೇಶ್ವರ ದೇವಾಲಯ ಬಹು ಪ್ರಸಿದ್ಧ. ಇವೆಲ್ಲವನ್ನು ನೋಡಿ ಸಂತೋಷಪಟ್ಟೆವು.

ಭಾಗಮಂಡಲದಿಂದ ತಲಕಾವೇರಿಗೆ ನಡೆದೆವು ಪಾದಯಾತ್ರೆ ಮಾಡಿ. ಕಾವೇರಿ ತಾಯಿಯ ಉಗಮ ಸ್ಥಳ ಬ್ರಹ್ಮಗಿರಿಯ ಕೆಳಗೆ ಇದೆ. ಕೊಳದಲ್ಲಿ ಅದ್ದಿ ಕಾವೇರಮ್ಮನ ನೀರನ್ನು ತಲೆಯಮೇಲೆ ಪ್ರೋಕ್ಷಿಸಿಕೊಂಡೆವು. ಬ್ರಹ್ಮಗಿರಿ ಹತ್ತಿದೆವು. ಅರಬ್ಬಿ ಸಮುದ್ರ ಕಂಡೂ ಕಾಣದ ಹಾಗೆ ಕಾಣುತ್ತಿತ್ತು. ನೋಡಿ ಖುಷಿಪಟ್ಟೆವು. ಭಾರತೀಸುತರ ಹಿರಿಯ ಮಗಳು ನಳಿನಿ, ಕಿರಿಯ ಮಗಳು ಶ್ಯಾಮಲ ನಮ್ಮ ಜೊತೆಗೇ ಇದ್ದು ನಮ್ಮ ಪ್ರವಾಸವನ್ನು ಜಯಪ್ರದ ಮಾಡಿದರು.

ಭಾರತೀಸುತರಿಗೆ ಕಣ್ಣೀರಿನ ಕಾಣಿಕೆ

ಕೊಡಗಿನ ಪ್ರವಾಸದಲ್ಲಿ ನನಗೆ ಹುರುಪು ಕೊಡುತ್ತಿದ್ದ ಆತ್ಮೀಯ ಗೆಳೆಯ ಭಾರತೀಸುತರು ಈಗ ಇಲ್ಲವಾಗಿದ್ದಾರೆ. ನನ್ನ ಮಕ್ಕಳು ವನಜ, ಮೋಹನ, ವತ್ಸಲ, ವಸಂತ, ಎಲ್ಲರಿಗೂ ಭಾರತೀಸುತರು ಎಂದರೆ ಜೀವಪ್ರಾಣ. ನಮ್ಮ ತಾಯಿ ಚಿಕ್ಕಮ್ಮನಿಗೂ

ಭಾರತೀಸುತರೆಂದರೆ ಬಲುಪ್ರೀತಿ. ನಮ್ಮ ತಾಯಿ ಭಾರತೀಸುತರ ಕಾದಂಬರಿಗಳೆಲ್ಲವನ್ನೂ ಓದಿ ಸಂತೋಷಪಡುತ್ತಿದ್ದರು. ಭಾರತೀಸುತರಿಗೆ ಊಟದಲ್ಲಿ ಸಪ್ಪೆ ಬಹಳ ಹಿತ. ನಮ್ಮ ಮನೆಯ ಅಡಿಗೆ ಸಮಾಧಾನ. ಕಾರವೂಅಲ್ಲ, ಸಪ್ಪೆಯೂ ಅಲ್ಲ. ಆದರೂ ನಮ್ಮ ಸಾರು ಹುಳಿ ಭಾರತೀಸುತರಿಗೆ ಕಣ್ಣುಗಳಲ್ಲಿ ಕಾವೇರಿ ಗಂಗಾ ಪ್ರವಾಹಗಳನ್ನೇ ಬರಿಸುತ್ತಿತ್ತು. ಮನೆಯ ಊಟದಲ್ಲಿ ತುಸು ಕಾರ ಕಂಡರೂ ತಟ್ಟನೆ ಭಾರತೀಸುತರ ನೆನಪಾಗುತ್ತದೆ. ನಿತ್ಯವೂ ಅವರು ಇಂತಿಷ್ಟು ಬರೆಯಬೇಕೆಂದು ವ್ರತ ತೊಟ್ಟಿದ್ದರು. ಬೆಳಗಿನ ಜಾವ ಐದು ಗಂಟೆಗೆಲ್ಲ ಎದ್ದು ಮೇಜಿನ ಮುಂದೆ ಕುಳಿತು ಬೆಳಗ್ಗೆ ಏಳು ಗಂಟೆಯುವರೆಗೂ ಕಾದಂಬರಿ ಬರೆಯುತ್ತಾ ಇದ್ದರು. ನಮ್ಮ ಮನೆಯಲ್ಲಿ ಕೂಡ. ಅದು ನನಗೆ ಚಿತ್ರಕಟ್ಟುತ್ತದೆ. ಭಾರತೀಸುತರು ಸಂಪ್ರದಾಯವನ್ನು ಎದುರಿಸುತ್ತಿದ್ದರು. ನಮ್ಮ ಮನೆಯಲ್ಲಿ ನಾವು ಸರಿ ರಾತ್ರಿಗಳನ್ನು ಚರ್ಚೆಯಲ್ಲಿ ಕಳೆದಿದ್ದೇವೆ.

ಭಾರತೀಸುತರು ಸಾಯುವುದಕ್ಕೆ ಹದಿನೈದು ದಿವಸಗಳ ಮುಂಚೆ ನಮ್ಮ ಮನೆಗೆ ಬಂದಿದ್ದರು. ಅವರೂ ನಾನೂ ಕೂಡಿ ಬಸವನಗುಡಿಯಲ್ಲಿದ್ದ ಅವರ ಮಗಳ ಮನೆಗೆ ಹೋದೆವು. ಅನಂತರ ನಾನು ಭಾರತೀಸುತರಿಂದ ಬೀಳ್ಕೊಂಡೆ. ಅದೇ ಕಡೆಯ ದರ್ಶನ. 1976ರ ಏಪ್ರಿಲ್ 4ರಂದು ಅವರು ಪಾರ್ಶ್ವವಾಯುವಿಗೆ ತುತ್ತಾಗಿ ಕಡೆಯುಸಿರು ಎಳೆದರು.

ಭಾರತೀಸುತರಿಗೆ ನನ್ನ ಕಣ್ಣೀರ ಕಾಣಿಕೆ.

೬ ದಕ್ಷಿಣ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಗಮಕ ಪ್ರಚಾರ

ಶಿವಮೊಗ್ಗ ಸಾಗರಗಳ ಗಮಕಾಭಿಮಾನಿಗಳಿಗೆ ಗಮಕವಾಚನ ರಸದೂಟ

1953ರಲ್ಲಿ ಧರ್ಮಸ್ಥಳದಲ್ಲಿ ಪ್ರಾರಂಭವಾದ ಶಕುಂತಲಾಬಾಯಿಯ ಕಾವ್ಯ ವಾಚನ ಕಾರ್ಯಕ್ರಮ ಉತ್ತರ ದಕ್ಷಿಣ ಕನ್ನಡ ಜಿಲ್ಲೆಗಳ ಪ್ರವಾಸಕ್ಕೆ ನಾಂದಿ ಹಾಡಿದಂತಾಯಿತು. ಅನಂತರ 1957ರಲ್ಲಿ ಸಿರಸಿಯಲ್ಲಿ ಮಾರಿಕಾಂಬ ದೇವಸ್ಥಾನದ ಧರ್ಮ ದರ್ಶಿಗಳು ಪ್ರಾರಂಭಿಸಿದ ಸಾಹಿತ್ಯ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಶಕುಂತಲಾಬಾಯಿ ಅಲ್ಲಿಯ ಜನಕ್ಕೆ ಗಮಕ ಕಲೆಯ ಪರಿಚಯ ಮಾಡಿಕೊಟ್ಟರು. 1960ರಲ್ಲಿ ಮಣಿಪಾಲದ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಿದರು. ಇನ್ನೊಮ್ಮೆ ಡಿ|| ರತ್ನವರ್ಮ ಹೆಗ್ಗಡೆಯವರ ಆಡಳಿತದವಧಿಯಲ್ಲಿ, ರಜತ ರಥದ ಬಿಡುಗಡೆಯಾದ ವರ್ಷದಲ್ಲಿ (?) ಕಾರ್ತಿಕ ದೀಪೋತ್ಸವದ ಸಂಭ್ರಮದಲ್ಲಿ, ಸಾಹಿತ್ಯ-ಸಾಂಸ್ಕೃತಿಕ ಸಮ್ಮೇಳನದಲ್ಲಿ ಭಾಗವಹಿಸಿದರು.

1969ರಲ್ಲಿ ಶಿವಮೊಗ್ಗದ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಹೆಬ್ಬಾಗಿಲ ಮಹಾಗೋಪುರ ಪ್ರತಿಷ್ಠಾಪನೆಯಾಯಿತು. ಆ ಸಮಯದಲ್ಲಿ ಗಮಕ ವಿದ್ವಾಂಸರೂ ಪ್ರಾಚೀನಕಾವ್ಯರಚನೆ ಪರಂಪರೆಯಲ್ಲಿ ಭಾಮಿನಿ ವಾರ್ಧಕ ಷಟ್ಪದಿ ಛಂದಸ್ಸುಗಳಲ್ಲಿ ಕಾವ್ಯ ರಚಿಸಿ ಆ ಪುರಾತನ ಕಾವ್ಯ ಪದ್ಧತಿಯನ್ನು ಕಾಪಾಡಿಕೊಂಡು ಬಂದಿರುವ ಕವಿ ಪಂಕ್ತಿಯಲ್ಲಿ ಶ್ರೇಷ್ಠರೂ ಆದ ಪ್ರೊ. ಶೇ. ಅನಂತಪದ್ಮನಾಭರಾಯರಶ್ರದ್ಧೆ ವಿಶ್ವಾಸ ಗಳಿಂದ ದೇವಸ್ಥಾನದ ಸಾಹಿತ್ಯ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಶಕುಂತಲಾಬಾಯಿ ಭಾಗವಹಿಸಿದರು. ಭೂಪಾಳಂ ಚಂದ್ರಶೇಖರಯ್ಯನವರು ಶಿವಮೊಗ್ಗದ ಕರ್ಣಾಟಕ ಸಂಘದಆಶ್ರಯದಲ್ಲಿ ಆಗ ಅಲ್ಲಿ ಜಿಲ್ಲಾ ನ್ಯಾಯಾಧೀಶರಾಗಿದ್ದ ಕೋ. ಚೆನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನ ಮಾಡಿಸಿದರು. ಶಿವಮೊಗ್ಗದ ವೀರಶೈವ ಸಮಾಜದ ಆಶ್ರಯದಲ್ಲಿ ಪ್ರಭುಲಿಂಗಲೀಲೆ ಕಾವ್ಯವಾಚನ ನಡೆಯಿತು. ಕರ್ಣಾಟಕ ಸಂಘದ ಸ್ಥಾಪಕ ದಿ|| ಹೊಸೂಡಿ ವೆಂಕಟರಾಮಾಶಾಸ್ತ್ರಿಗಳ ಮಕ್ಕಳಾದ ದತ್ತಾತ್ರೇಯ ಶಾಸ್ತ್ರಿಗಳ ಮನೆಯಲ್ಲಿ ಆಹ್ವಾನಿತ ಶ್ರೋತೃಗಳ ಸಭೆಯಲ್ಲಿ ಕುಮಾರವ್ಯಾಸ ಭಾರತ ವಾಚನವಾಯಿತು. ಹೀಗೆ ಒಂದುವಾರ ಕಾಲಶಿವಮೊಗ್ಗದಲ್ಲಿ ಬಿಡುವಿಲ್ಲದ ಕಾರ್ಯಕ್ರಮಗಳು ನಡೆದವು. ಶಿವಮೊಗ್ಗ ನಮಗೆ ಹೊಸದಲ್ಲ. ಕುವೆಂಪು ಅವರಿಗೆ "ಶ್ರೀ ರಾಮಾಯಣ ದರ್ಶನಂ" ಕಾವ್ಯಕ್ಕೆ ರಾಷ್ಟ್ರಪ್ರಶಸ್ತಿ ಸಂದುದಕ್ಕೆ ಸನ್ಮಾನ ಸಭೆ ಶಿವಮೊಗ್ಗದಲ್ಲಿ ಏರ್ಪಟ್ಟಾಗ ಶಕುಂತಲಾಬಾಯಿ ಭಾಗವಹಿಸಿದ್ದರು. ಆಮೇಲೆ ಗಣೇಶೋತ್ಸವದಲ್ಲಿ, ಅನಂತರ ಪರಿಷತ್ತಿನ ಆಶ್ರಯದಲ್ಲಿ ಗಮಕ ತರಗತಿಗಳ ವಾಚನ ಪರೀಕ್ಷಕರಾಗಿ ಹೀಗೆ ನಾನಾ ಸಂದರ್ಭಗಳಲ್ಲಿ ಶಿವಮೊಗ್ಗಕ್ಕೆ ಹೋಗಿದ್ದುಂಟು. ಆ ಸಮಯಗಳಲ್ಲಿ ಅಲ್ಲಿನ ದೇಶೀಯ ವಿದ್ಯಾಶಾಲೆ, ಇನ್ನೂ ಕೆಲವು ಸಂಸ್ಥೆಗಳು ಆಹ್ವಾನಿಸಿ ಶಕುಂತಲಾಬಾಯಿಯ ಕಾವ್ಯವಾಚನ ಕಾರ್ಯಕ್ರಮಗಳನ್ನು ಏರ್ಪಡಿಸಿದುದುಂಟು.

ಆದರೆ 1969ರ ಶಿವಮೊಗ್ಗೆಯ ಕಾರ್ಯಕ್ರಮ ಸಾಗರಕ್ಕೆ, ಹೊಸಬಾಳೆಗೆ ಮತ್ತು ದಕ್ಷಿಣ ಕನ್ನಡದ ಪವಿತ್ರ ಕ್ಷೇತ್ರ ಉಡುಪಿಗೆ ನಮ್ಮನ್ನು ಪರಿಚಯಿಸುವುದಕ್ಕೆ ಪೀಠಿಕೆ ಹಾಕಿತು.

ನಾವು ಶಿವಮೊಗ್ಗಕ್ಕೆ ಬಂದಿರುವುದನ್ನು ತಿಳಿದಿದ್ದ ಸಾಗರದ ಕನ್ನಡ ಸೇವಾ ಕಾರ್ಯಕರ್ತ, ಸಾಹಿತಿ, ಟಿ. ಮಹಾಬಲೇಶ್ವರ ಭಟ್ಟರು ಕರ್ಣಾಟಕ ಸಂಘದಲ್ಲಿ ಶಕುಂತಲಾಬಾಯಿಯವರ "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನವೇರ್ಪಡಿಸಿದರು. ನಾವು ಸಾಗರದ ತಹಸಿಲ್ದಾರರೂ ನಮ್ಮ ಬಂಧುಗಳೂ ಆಗಿದ್ದ ಜೆ. ಪಿ. ನಾರಾಯಣರಾಯರ ಅತಿಥಿಗಳಾದೆವು. ಕರ್ಣಾಟಕ ಸಂಘದ "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನ ಕಾರ್ಯಕ್ರಮ ಯಶಸ್ವಿಯಾಯಿತು. ತಹಸಿಲ್ದಾರ ಜೆ. ಬಿ. ನಾರಾಯಣರಾಯರ ಸೌಜನ್ಯದಿಂದ ಇಕ್ಕೇರಿಗೆ ಭೇಟಿಯಿತ್ತು, ಅಘೋರೇಶ್ವರ ದೇವಸ್ಥಾನದ ದರ್ಶನ ಪಡೆದೆವು. ದೇವಸ್ಥಾನದ ಕೆತ್ತನೆ ಕೆಲಸ ನಮ್ಮನ್ನು ದಂಗುಪಡಿಸಿತು, ಸೊರಬ ಸಾಗರಗಳ ಗುಡಿಗಾರರ ಅದ್ಭುತ ಕಲಾ ವೈಭವ ಇಕ್ಕೇರಿಯ ದೇವಸ್ಥಾನದ ಮರಗೆಲಸದಲ್ಲಿ ಎದ್ದು ಕಾಣುವಷ್ಟು ಶ್ರೀಮಂತವಾಗಿದೆ. ಸಾಗರಕ್ಕೆ ನಾವು ಹೋದ ಘಳಿಗೆ ರಸ ಘಳಿಗೆ. ಗೇರುಸೊಪ್ಪೆಯ ಜಲಪಾತಕ್ಕೆ ರಾತ್ರಿ ಪಂಜು ಜ್ವಾಲೆ, ಹೂಬಾಣ ಇತ್ಯಾದಿಗಳ ಪ್ರವಾಹ ಹರಿಸಿ ಮನರಂಜನೆಯೀಯುವ ಕಾರ್ಯಕ್ರಮ ಏರ್ಪಾಡಾಗಿತ್ತು. ತಹಸಿಲ್ದಾರ್ ನಾರಾಯಣರಾವ್ ದಂಪತಿಗಳು ನಮ್ಮೊಡನೆ ದಯಮಾಡಿಸಿ ಅಪರೂಪವಾದ ಈ ಅವರ್ಣನೀಯ ಸ್ವರ್ಗೀಯ ದೃಶ್ಯವನ್ನು ನಮಗೆ ಕಾಣಿಸಿದರು. ಬೆಂಕಿಯ ಉಂಡೆಗಳನ್ನು ಉಗುಳುತ್ತ, ಆಗಾಗ ಇಂದ್ರಚಾಪಗಳಂತೆ ಪುಂಖಪುಂಖವಾಗಿ ಬರುವ ಹೂ ಬಾಣಗಳ ಪ್ರವಾಹ, ರಸ ಲೋಕವನ್ನೆ ಸೃಷ್ಟಿಸಿತ್ತು. ಜಗದ್ಭವ್ಯ ಗೇರುಸೊಪ್ಪೆ ಜಲಪಾತದ ಶ್ರೀಮಂತಿಕೆಯ ರುದ್ರ ಭವ್ಯ ದೃಶ್ಯ ತಾಂಡವವಾಡುತ್ತಿತ್ತು.

ಹೊಸ ಬಾಳೆಯಲ್ಲಿ ಗಮಕ ವಾಚನ.

ಗಮಕ ವಿದ್ವಾಂಸ ಹೊಸಬಾಳೆ ಸೀತಾರಾಮರಾಯರು, ಸಾಗರದ ಕರ್ಣಾಟಕ ಸಂಘದ ಕಾರ್ಯಕ್ರಮಕ್ಕೆ ಬಂದಿದ್ದರು. ಅವರು ನಮ್ಮನ್ನು ಸಾಗರಕ್ಕೆ ಕೇವಲ ಏಳೆಂಟು ಕಿಲೋ ಮೀಟರುಗಳ ಸನಿಹದಲ್ಲಿರುವ ತಮ್ಮೂರು ಹೊಸಬಾಳೆಗೆ ಆಹ್ವಾನಿಸಿ ಕಾರ್ಯಕ್ರಮವನ್ನು ಏರ್ಪಡಿಸಿದರು. ಸೀತಾರಾಮರಾಯರ ತೀರ್ಥರೂಪರು ಅನಂತಪ್ಪ. ಆಜಾನುಬಾಹು, ಸ್ಫುರದ್ರೂಪಿ, ರಸಋಷಿ ಸಹೃದರು ; ಸಂಸ್ಕೃತ ಸಂಗೀತಗಳಲ್ಲಿ ಬಲ್ಲಿದರು. ತಂದೆಯ ಈ ಗುಣಗಳೆಲ್ಲ ಸೀತಾರಾಮರಾಯರಲ್ಲಿ ಅಭಿವ್ಯಕ್ತವಾಗಿವೆ. ಅವರು ಸ್ವತಃ ಗಮಕ ಕಲೆಯನ್ನು ಮನೆಯ ವಾತಾವರಣದಿಂದ ರೂಢಿಸಿಕೊಂಡು ಬಂದಿದ್ದಾರೆ. ರಾಜ್ಯ ಗಮಕ ಪ್ರಶಸ್ತಿ ವಿಜೇತ, ಗಮಕ ವಿದ್ವಾನ್ ಕೆ. ಎಸ್. ವೆಂಕಟೇಶಯ್ಯನವರಲ್ಲಿ ಗಮಕಾಭ್ಯಾಸ ಮಾಡಿ, ಕನ್ನಡ ಸಾಹಿತ್ಯ ಪರಿಷತ್ತಿನ ಗಮಕ ಪರೀಕ್ಷೆಯಲ್ಲಿ ರಾಜ್ಯಕ್ಕೆ ದ್ವಿತೀಯ ಸ್ಥಾನ ಪಡೆದಿದ್ದಾರೆ. ಡಿ. ವಿ. ಜಿ. ಅವರ "ಮಂಕುತಿಮ್ಮನ ಕಗ್ಗ" ಕುವೆಂಪು ಅವರ "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನಗಳಲ್ಲಿ ಅವರ ಅಗ್ಗಳಿಕೆಯನ್ನು ಗುರುತಿಸ

ಬಹುದು. "ಸ್ವಾಗತ ಪ್ರಾರ್ಥನಾ ಮಾಲೆ" ಎಂಬ ಶೀರ್ಷಿಕೆಯಲ್ಲಿ ತಮ್ಮ ಮೂವತ್ತು ಸ್ವಾಗತ ಗೀತೆಗಳನ್ನು ಸಂಕಲಿಸಿ ಪ್ರಕಟಿಸಿದ್ದಾರೆ. ಗುಣಗ್ರಾಹಿಯಾದ ಅವರು ಶಕುಂತಲಾ ಬಾಯಿಯಲ್ಲಿ ತೋರಿಸಿದ ಸಹೋದರ ಪ್ರೀತಿ ವಿಶ್ವಾಸಗಳು ಅನುಪಮವಾಗಿದ್ದವು. ರಾಯರ ತಂಪೆ ನಮ್ಮನ್ನು ಪ್ರೀತಿ ವಿಶ್ವಾಸಗಳಿಂದ ಸ್ವಾಗತಿಸಿದರು. ನಮಗಾಗಿ ಏರ್ಪಾಟಾಗಿದ್ದ ಔತಣದೂಟ ಭರ್ಜರಿಯಾಗಿತ್ತು. ಮಲೆನಾಡಿನ ಹೃದಯ ವೈಶಾಲ್ಯವೇ ಔತಣದೂಟದಲ್ಲಿ ಕಾಣುತ್ತಿತ್ತು. ಅಡುಗೆಯ ಮನೆಯಲ್ಲಿ ಆಗತಾನೆ ಕಾವಲಿಯಿಂದ ತೆಗೆ ತೆಗೆದು ಪೇರಿಸುತ್ತಿದ್ದ ಬಿಸಿಬಿಸಿ ಹೋಳಿಗೆ ರಾಶಿ ಒಂದು ಕಡೆ. ಅಂಬೋಡೆಯ ರಾಶಿ ಗುಪ್ಪೆಗುಪ್ಪೆಯ ರಾಶಿಯಾಗಿ ಮೇಲೇರುತ್ತಿತ್ತು. ಇನ್ನೊಂದು ಕಡೆ ಕುಡಿ ಬಾಳೆಯೆಲೆಗಳನ್ನು ಹಾಕಿ, ಅದಕ್ಕೆ ರಂಗೋಲಿಯ ಸುತ್ತುಗಟ್ಟಿ ಬೀಗರ ಔತಣವೋ ಎಂಬಂತೆ ಸಡಗರ ಹೆಚ್ಚಿಸಿದ್ದರು ಮನೆಯ ಮಹಿಳೆಯರು. ನಮ್ಮ ಜತೆಗೆ ಸುಮಾರು ಐವತ್ತು ಅರವತ್ತು ಮಂದಿ ಅತಿಥಿಗಳು ಸಹ—ಪಂಕ್ತಿಯಲ್ಲಿ ಸಹಕರಿಸಿದರು. ಪುಷ್ಕಳ ಭೋಜನವಾಯಿತು. ಸ್ವಲ್ಪ ಕಾಲ ವಿಶ್ರಾಂತಿ. ಅನಂತರ ಅನಂತಪ್ಪನವರು. "ಶಕುಂತಲಾಬಾಯಿ, ನಮ್ಮ ಮನೆಯ ಕೆಲವು ಮಹಿಳೆಯರು ಕಾರ್ಯಕ್ರಮಕ್ಕೆ ಬರುವ ಹಾಗಿಲ್ಲ. ಇಲ್ಲಿಯೇ ಕುಮಾರವ್ಯಾಸ ಭಾರತದಿಂದ ಕೆಲವು ಪದ್ಯಗಳನ್ನು ಓದಿಬಿಡಿ" ಎಂದು ಅಪ್ಪಣೆ ಕೊಡಿಸಿದರು. ಸಿಹಿಯೂಟ ಉಂಡು ಹಾಡುವುದೆಂದರೆ ಶಕುಂತಲಾಬಾಯಿಗೆ ಹೊಟ್ಟೆ ಭಾರದಿಂದ ಕಷ್ಟದ ಸಾಹಸ. ಆದರೂ ಹಿರಿಯರ ಮನದಿಚ್ಛೆಯನ್ನು ಪಾಲಿಸಲೋಸುಗ ಕುಮಾರವ್ಯಾಸನಿಗೆ ಸೇವೆ ಸಲ್ಲಿಸಿದರು.

ಹೊಸಬಾಳೆಯ ಪ್ರೌಢಶಾಲಾ ಸಭಾಂಗಣದಲ್ಲಿ ಮಧ್ಯಾಹ್ನ 4 ಗಂಟೆಗೆ ಕಾರ್ಯಕ್ರಮ ಪ್ರಾರಂಭವಾಯಿತು. "ಕುಮಾರವ್ಯಾಸ", "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನ. ನನ್ನ ಪ್ರಾಸಂಗಿಕ ನಿರೂಪಣೆ. ಸೀತಾರಾಮರಾಯರ ಸ್ವಾಗತ. ಕಾವ್ಯವಾಚನ ಮುಗಿದ ಮೇಲೆ ಅಧ್ಯಕ್ಷತೆ ವಹಿಸಿದ್ದ ಅನಂತಪ್ಪನವರು ಎದ್ದರು. ತಮ್ಮ ಅಧ್ಯಕ್ಷ ಭಾಷಣದ ಪ್ರಾರಂಭದಲ್ಲಿಯೇ ಹೀಗೆಂದರು—

> ನಾನು ಶಕುಂತಲಾಬಾಯಿಯ ಕಾವ್ಯವಾಚನ್ನ ಕೇಳಿರಲಿಲ್ಲ. ಅವರ ಕಾವ್ಯವಾಚನ ಯಾವ ಮಟ್ಟದ್ದೋ ಎಂದು ಅರಿತುಕೊಳ್ಳುವ ಕುತೂಹಲ ನನಗೆ. ಕಾರಣ, ನಾನೇ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಬೇಕಾಗಿತ್ತಲ್ಲ! ಅದಕ್ಕೆ ನಾನು ಒಂದು ಹವಣು ಯೋಚಿಸಿದೆ. "ನಮ್ಮಲ್ಲಿ ಕೆಲವು ಮಹಿಳೆಯರು ಸಭೆಗೆ ಬರುವಹಾಗಿಲ್ಲ. ಆದುದರಿಂದ ನೀವು ಮನೆಯಲ್ಲೇ ಕುಮಾರವ್ಯಾಸ ಭಾರತವನ್ನು ನಮ್ಮವರಿಗೆ ಕೇಳಿಸಿಬಿಡಿ" ಎಂದೆ. ಶಕುಂತಲಾಬಾಯಿ ಕೆಲವು ಪದ್ಯಗಳನ್ನು ಓದಿದರು. ನನಗೆ ತೃಪ್ತಿಯಾಯಿತು. ಸಂತೋಷದಿಂದ ಅಧ್ಯಕ್ಷತೆ ವಹಿಸಿದ್ದೇನೆ. ಕಾವ್ಯವಾಚನ ಅಮೋಘವಾಗಿತ್ತು. ಪ್ರಾಸಂಗಿಕ ನಿರೂಪಣೆ ಚೆನ್ನಾಗಿತ್ತು. ದಂಪತಿಗಳಿಗೆ ಸಕಲ ಶ್ರೇಯಸ್ಸನ್ನೂ ಕೋರುತ್ತೇನೆ."

ಅನಂತಪ್ಪನವರ ಅಧ್ಯಕ್ಷ ಭಾಷಣ ಪಾಂಡಿತ್ಯಪೂರ್ಣವಾಗಿತ್ತು.

ಕಾರ್ಕಳದ ರಾಮಚಂದ್ರರ ಸಹೃದಯತೆ

ಉಡುಪಿಗೆ ಹೋಗುವ ಪ್ರಮೇಯ ಒದಗಿ ಬಂದಿತ್ತು ನಮ್ಮ ಸುಕೃತ ವಿಶೇಷದಿಂದ. ಮಣಿಪಾಲ ಸಾಹಿತ್ಯ ಸಮ್ಮೇಳನದ ಸಮಯದಲ್ಲಿ ಉಡುಪಿಯ ಶ್ರೀ ಕೃಷ್ಣನ ದರ್ಶನ ಲಭಿಸಿತ್ತು. ಆದರೆ ಆ ದಿವ್ಯಮೂರ್ತಿಯ ಸನ್ನಿಧಿಯಲ್ಲಿ, ಪರ್ಯಾಯ ಪೀಠದ ಕೃಪಾಕಟಾಕ್ಷದಲ್ಲಿ ಶಕುಂತಲಾಬಾಯಿಯ ಕಾವ್ಯವಾಚನ ನಡೆದಿರಲಿಲ್ಲ. ಆ ಕಾರಣ ಈಸಲ ಶಿವಮೊಗ್ಗದ ಕಾರ್ಯಕ್ರಮವನ್ನು ಕಾರ್ಕಳ ಉಡುಪಿಯವರೆಗೆ ಚಾಚಿಕೊಂಡಿದ್ದೆವು. ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯಾಗಿದ್ದ ಸನ್ಮಾನ್ಯ ಮಿತ್ರ ಹಂ.ಪ. ನಾಗರಾಜಯ್ಯ ಕಾರ್ಕಳದಲ್ಲಿ ನಮ್ಮ ಕಾವ್ಯವಾಚನವನ್ನು ಏರ್ಪಡಿಸಬೇಕೆಂದು ಕಾರ್ಕಳದ ಭುವನೇಂದ್ರ ಕಾಲೇಜಿನ ಕನ್ನಡ ಉಪನ್ಯಾಸಕರಾದ ಎಂ. ರಾಮಚಂದ್ರ ಅವರಿಗೆ ಒಂದು ವಿಶ್ವಾಸದ ಪತ್ರ ಬರೆದಿದ್ದರು. ನಾನು ಪ್ರವಾಸ ಪ್ರೇಮಿ ಕಲಾಭಿಮಾನಿ. ಕಾರ್ಕಳದ ಗೋಮಟೇಶ್ವರ ಸ್ವಾಮಿಯನ್ನು ದರ್ಶನ ಮಾಡಬೇಕು, ಶಿಲ್ಪಕಲಾ ವೈಭವವನ್ನು ಕಣ್ಣಾರೆ ನೋಡಿ ತೃಪ್ತಿಗೊಳ್ಳಬೇಕು. ಅಷ್ಟೇ ಸಾಲದು, ಆಧುನಿಕ "ಜಕಣಾಚಾರ್ಯ" ರೆನ್ನಿಸಿಕೊಂಡ ಮಹಾನ್ ಶಿಲ್ಪಿವರೇಣ್ಯ ರಂಜಾಳ ಗೋಪಾಲ ಶೆಣ್ಯೆಯವರು ಸೃಷ್ಟಿಸುತ್ತಿದ್ದ ಧರ್ಮಸ್ಥಳದ ಬಾಹುಬಲಿಯ ಮೂರ್ತಿಯನ್ನು ಅವಲೋಕಿಸಬೇಕು, ಈ ಮಹದಾಸೆಗಳು, ನಮ್ಮನ್ನು ಕಾರ್ಕಳಕ್ಕೆ ಹೋಗಲು ಪ್ರೇರೇಪಿಸಿದ್ದವು.

ನಾವು ಕಾರ್ಕಳಕ್ಕೆ ಹೋಗಬೇಕಾದ ದಿನವನ್ನು ತಿಳಿಸಿ ಸಾಗರದಿಂದಲೇ ಎಂ.ರಾಮಚಂದ್ರ ಅವರಿಗೆ ತಂತಿವರ್ತಮಾನ ಕಳಿಸಿದ್ದೆವು. ಕಾರ್ಕಳಕ್ಕೆ ಮಟಮಟ ಮಧ್ಯಾಹ್ನ ಎರಡುಗಂಟೆಗೆ ತಲುಪಿತು ಸಾಗರದ ಬಸ್ಸು. ಬಸ್‌ನಿಂತ ಸ್ಥಳದಲ್ಲಿಯೇ ಒಂದು ಊಟ ವಸತಿಯ ಹೋಟೆಲು ಕಂಡಿತು. ಅಲ್ಲಿಗೆ ನಮ್ಮ ಪ್ರವಾಸದ ಸಾಮಾನನ್ನು ಸಾಗಿಸಿ, ಅಲ್ಲಿಂದಲೇ ರಾಮಚಂದ್ರರಿಗೆ ಫೋನ್ ಮಾಡಿಸಿದೆವು. ಅವರು ಕೂಡಲೆ ಬರುವುದಾಗಿ ಸುದ್ದಿ ಕೊಡಲ್ಪಟ್ಟು ಕಾಲು ಗಂಟೆಯೊಳಗೆ ನಮ್ಮ ನಿವಾಸಕ್ಕೆ ಬಂದರು. ಊಟ ಉಪಚಾರಗಳೆಲ್ಲ ಅಲ್ಲೇ ಆಯಿತು. ಕಾರ್ಕಳದ ಪ್ರದಕ್ಷಿಣೆಯನ್ನು ಟ್ಯಾಕ್ಸಿಯಲ್ಲಿ ಪ್ರಾರಂಭಿಸಿದೆವು.

ಶ್ರವಣ ಬೆಳಗೊಳದ ಗೋಮಟೇಶ್ವರ 57 ಅಡಿ ಎತ್ತರ, ಕಾರ್ಕಳದ ಗೋಮಟೇಶ್ವರ 41 ಅಡಿಯೆತ್ತರ. ಶ್ರವಣಬೆಳಗೊಳದ ಸ್ವಾಮಿ ಸ್ಮಿತವದನ, ಕಾರ್ಕಳದ ಸ್ವಾಮಿ ಮೌನ ಗಾಂಭೀರ್ಯ ಮೂರ್ತಿ. ಭವ್ಯ ಮೂರ್ತಿಯನ್ನು ನೋಡಿ ನೋಡಿ ನಯನಾನಂದ ಭಾವ ಪರವಶರಾದೆವು. ಕಾರ್ಕಳದಿಂದ ನಮ್ಮ ಟ್ಯಾಕ್ಸಿ ಧರ್ಮಸ್ಥಳಕ್ಕಾಗಿ ನಿರ್ಮಾಣವಾಗುತ್ತಿದ್ದ ಬಾಹುಬಲಿಯ ಸ್ಥಳ "ಮಂಗಲಪಾದೆ" ಗೋಡಿತು. ಚಪ್ಪರದೊಳಗೆ ಸುಮಾರು 48 ಅಡಿಗಳುದ್ದದ ಬೃಹನ್ಮೂರ್ತಿ ಭೂಮಿತಾಯಿಯ ತೊಡೆಯಂಕಗಳ ಮೇಲೆ ಶಯನನಾಗಿದ್ದ ಬಾಹ್ಯಾಕೃತಿ ಸ್ಫುಟಗೊಂಡಿತ್ತು. ತಿದ್ದಿ ನೇವರಿಸುವ ಕುಶಲ ಕೈಚಳಕ ಪ್ರಾರಂಭವಾಗಿತ್ತು. ನಾಲ್ಕೈದು ಮಂದಿ ಶಿಲ್ಪೋಜರು ತಮ್ಮ ಶಿಲ್ಪಕರ್ಮದಲ್ಲಿ ಏಕಚಿತ್ತರಾಗಿದ್ದರು. ಮಹಾಶಿಲ್ಪಾಚಾರ್ಯ ರಂಜಾಳ ಗೋಪಾಲ ಶೆಣ್ಯೆ

ಅವರ ದರ್ಶನವಾಗಲಿಲ್ಲ. ಈ ಕೊರತೆಯುಳಿದು ಬಯಸಿದ ಇನ್ನೆಲ್ಲ ಭಾಗ್ಯ ನಮಗೆ ದೊರಕಿತ್ತು.

ನಮ್ಮ ಟ್ಯಾಕ್ಸಿ ಮತ್ತೆ ಕಾರ್ಕಳವನ್ನು ಪ್ರವೇಶಿಸಿತು. ಊರೊಳಗಿರುವ ಜೈನ ಬಸದಿಗಳು, ಚಿತ್ತಾಕರ್ಷಕವಾದ ಅತಿ ಸುಂದರ ಕೆತ್ತನೆಯ ದೀಪ ಸ್ತಂಭ, ಪುರಾತನ ದೇವಸ್ಥಾನಗಳೆನಿಸಿದ ವೆಂಕಟರಮಣ, ಅನಂತೇಶ್ವರ ದೇವಸ್ಥಾನಗಳನ್ನು ನೋಡಿ ಬಂದೆವು. ವಿದ್ಯಾರ್ಥಿಗಳಿಗೆ ಪರೀಕ್ಷೆಗಳಿಗೆ ತಯಾರಾಗುವ ಸಲುವಾಗಿ ಶಿಕ್ಷಣ ಶಾಲೆಗಳಿಗೆ, ಭುವನೇಂದ್ರ ಕಾಲೇಜಿಗೆ ಬಿಡುವು. ಖಾಸಗಿಯಾಗಿ ಕಾವ್ಯವಾಚನ ಕಾರ್ಯಕ್ರಮ ವೇರ್ಪಡಿಸುವುದಕ್ಕೆ ಕಾಲದ ಅಭಾವ. ಹೀಗಾಗಿ ನಾವು ಕಾರ್ಕಳದಿಂದ ಉಡುಪಿಗೆ ಸಂಜೆಯ ಬಸ್ ಹತ್ತಿದೆವು.

ಸಹೃದಯರಾದ ಸ್ನೇಹಮಯಿ ರಾಮಚಂದ್ರ ನಮ್ಮ ಕಾರ್ಕಳದ ವೆಚ್ಚವನ್ನು ಸಂಪೂರ್ಣವಾಗಿ ತಾವೇ ವಹಿಸಿಕೊಂಡರು. ಹಂ. ಪ. ನಾಗರಾಜಯ್ಯನವರ ಸೌಜನ್ಯ ದಿಂದ ಒಬ್ಬ ಸುಸಂಸ್ಕೃತ ಸಹೃದಯದ ತರುಣ ಮಿತ್ರರ ಸ್ನೇಹ ಸಂಪಾದನೆಯಾಯಿತು. ಧರ್ಮಸ್ಥಳದ ಸಾಹಿತ್ಯ ಸಮ್ಮೇಳನದಲ್ಲಿ ನಮಗೆ ಅವರ ಸೇವೆ ಮೂರು ದಿವಸ ದೊರೆ ಯಿತು. ಅವರನ್ನು ನಮ್ಮ ಮನೆಗೆ ಬರಮಾಡಿಕೊಂಡು ಸತ್ಕರಿಸುವ ಸುಕೃತವೆಂದೋ ?

ಪೇಜಾವರ ಮಠಾಧೀಶ ಶ್ರೀ ಶ್ರೀ ಶ್ರೀ ವಿಶ್ವೇಶ ತೀರ್ಥ ಪಾದಂಗಳ ಸನ್ನಿಧಿಯಲ್ಲಿ

ಉಡುಪಿಯಲ್ಲಿ ನಮಗೆ ಸರಸ್ವತೀಬಾಯಿ ರಾಜವಾಡೆ ಸುಪರಿಚಿತರು. ಒಳ್ಳೆಯ ಕತೆಗಾರ್ತಿ. ಒಂದು ಕಾಲಕ್ಕೆ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ತುಂಬ ಹೆಸರು. ಕನ್ನಡದ ಪ್ರಸಿದ್ಧ ಪತ್ರಿಕೆಗಳಲ್ಲೆಲ್ಲ ಅವರ ಕತೆಗಳು ಇದ್ದೇ ಇರುತ್ತಿದ್ದವು. "ಗಿರಿಬಾಲೆ" ಅವರ ಕಾವ್ಯನಾಮ. ಬೇಲೂರು ಸಾಹಿತ್ಯ ಸಮ್ಮೇಳನದಲ್ಲಿ ಅವರ ಪರಿಚಯವಾಗಿತ್ತು. ಕಾಲ ಕ್ರಮದಲ್ಲಿ ಅವರು ವಾದಿರಾಜರ ಅನುಗ್ರಹಕ್ಕೆ ಪಾತ್ರರಾಗಿ ದೇವರ ನಾಮಗಳನ್ನು ರಚಿ ಸಲು ಪ್ರಾರಂಭಿಸಿದರು. 1966 ರಲ್ಲಿ "ಶ್ರೀ ವಾದಿರಾಜ ಗುರುವರ ಕೃಪಾತರಂಗ" ವೆಂಬ ಭಕ್ತಿಗೀತಗಳ ಸಂಗ್ರಹ ಪ್ರಕಟವಾಯಿತು. ಆ ಸಮಯದಲ್ಲಿ ಸರಸ್ವತೀಬಾಯಿ ರಾಜವಾಡೆ ಬೆಂಗಳೂರಿಗೆ ಬಂದಿದ್ದರು. ನಮ್ಮ ಮಕ್ಕಳ ಮಂಟಪದ ಮನೆಗೂ ಬಂದು ತಮ್ಮ ವಿಶ್ವಾಸವನ್ನು ಪ್ರಕಟಿಸಿದರು. ಅವರೇ ಈಗ ನಮ್ಮ ಉಡುಪಿಯ ಕಾವ್ಯವಾಚನದ ಏರ್ಪಾಟಿಗೆ ಮೂಲಸ್ತಂಭವಾಗಿದ್ದರು.

ಉಡುಪಿಯನ್ನು ಸೇರಿದಾಗ ರಾತ್ರಿ ಎಂಟುಗಂಟೆಯಾಗಿತ್ತು. ಸಕಲರಶ್ರೇಯಸ್ಸನ್ನು ಬಯಸುವ ಪ್ರಗತಿಶೀಲ ಮನೋಭಾವದ, ಪೇಜಾವರ ಮಠಾಧೀಶ ಶ್ರೀಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರು ಉಡುಪಿಯ ಶ್ರೀಕೃಷ್ಣಮಂದಿರದ ಪರ್ಯಾಯ ಪೀಠವೇರಿ ಒಂದೆರಡು ತಿಂಗಳುಗಳು ಕಳೆದಿದ್ದವು. ನಾವು ಶ್ರೀಕೃಷ್ಣದೇವಸ್ಥಾನವನ್ನು ಸೇರಿದೊಡನೆಯೇ ಅಲ್ಲಿಯೇ ಇರುವುದಕ್ಕೆ ಬಿಡಾರದ ಸೌಕರ್ಯದ ಏರ್ಪಾಡಾಗಿತ್ತು. ಮಧ್ವಸರೋವರದಲ್ಲಿ ಮಿಂದು

ಶುದ್ಧ ವಸ್ತ್ರಗಳನ್ನುಟ್ಟು ಶ್ರೀಕೃಷ್ಣನ ಸಂದರ್ಶನ ಮಾಡಿದೆವು. ರಾತ್ರಿನಡೆಯುವ ಶ್ರೀಕೃಷ್ಣ ಸೇವೆಯನ್ನು ಮನಃತೃಪ್ತಿ ಹೊಂದುವವರೆಗೂ ನೋಡಿ ತಣಿದೆವು. ರಾತ್ರಿಯೇ ಶ್ರೀಪಾದಂಗಳವರ ದರ್ಶನ ತೆಗೆದುಕೊಂಡೆವು. ಮಾರನೆಯ ದಿನ ರಾತ್ರಿ ಪರ್ಯಾಯ ಪಟ್ಟಮಹೋತ್ಸವ ನಡೆಯುವ ಸಭಾಂಗಣದಲ್ಲಿ ಕುಮಾರವ್ಯಾಸ ಭಾರತದಿಂದ "ಶ್ರೀ ಕೃಷ್ಣ ರಾಯಭಾರ ಕಥಾ" ಭಾಗವನ್ನು ವಾಚನ ಮಾಡಬಹುದೆಂದು ಪೂಜ್ಯಪಾದಂಗಳವರು ನಿರೂಪ ಕೊಟ್ಟರು.

ಮಾರನೆಯ ದಿನ ರಾತ್ರಿ ನಿಯಮಿತ ವೇಳೆಗೆ "ಶ್ರೀ ಕೃಷ್ಣರಾಯಭಾರ" ಕಥಾ ಪ್ರಸಂಗ ಕಾವ್ಯವಾಚನ ಪ್ರಾರಂಭವಾಯಿತು. ಭಾರತ ಕಾವ್ಯ ಪ್ರಾರಂಭದ

"ಶ್ರೀ ವನಿತೆಯರಸನೆ ವಿಮಲ ರಾ
ಜೀವ ಪೀಠನ ಪಿತನೆ ಜಗಕತಿ
ಪಾವನನೆ ಸನಕಾದಿ ಸಜ್ಜನನಿಕರ ದಾತಾರ
ರಾವಣಾಸುರ ಮಥನ ಶ್ರವಣ ಸು
ಧಾ ವಿನೂತನ ಕಥನ ಕಾರಣ
ಕಾವುದಾನತ ಜಗವ ಗದುಗಿನ ವೀರನಾರಾಯಣ"

ಪದ್ಯದಿಂದ ಪ್ರಾರಂಭಿಸಿ "ಶರಧಿ ಸುತೆ ಸನಕಾದಿ ವಂದಿತೆ", "ಶರಣ ಸಂಗವ್ಯಸನ ಭುಜಂಗಾಭರಣ" "ಗಜಮುಖನೆ ಮೆರೆವೇಕ ದಂತನೆ", "ಸಕಲ ಶಾಸ್ತ್ರ ವಿಚಾರದುಪ್ಪವೆ", "ವಂದಿತಾಮಳ ಚರಿತ" ಪದ್ಯಗಳನ್ನು ವಾಚಿಸಿ ಶಕುಂತಲಾಬಾಯಿ

"ತಿಳಿಯ ಹೇಳುವೆ ಕೃಷ್ಣಕಥೆಯನು
ಇಳೆಯ ಜಾಣರು ಮೆಚ್ಚುವಂತಿದೆ
ನೆಳೆಗೆ ಪಂಚಮಶ್ರುತಿಯನೊರೆವೆನು ಕೃಷ್ಣ ಮೆಚ್ಚಲಿಕೆ ॥
ಹಲವು ಜನ್ಮದ ಪಾಪ ರಾಶಿಯ
ತೊಳೆವ ಜಲವಿದು ಶ್ರೀಮದಾಗಮ
ಕುಲಕೆ ನಾಯಕ ಭಾರತಕೃತಿ ಪಂಚಮ ಶ್ರುತಿಯು
ಅರಸುಗಳಿಗಿದು ವೀರ ದ್ವಿಜರಿಗೆ
ಪರಮ ವೇದದ ಸಾರ ಯೋಗೀ
ಶ್ವರರ ತತ್ವವಿಚಾರ ಮಂತ್ರಿಜನಕ್ಕೆ ಬುದ್ಧಿಗುಣ
ವಿರಹಿಗಳ ಶೃಂಗಾರ ವಿದ್ಯಾ
ಪರಿಣತರಲಂಕಾರ ಕಾವ್ಯಕೆ
ಗುರುವೆನಲು ರಚಿಸಿದ ಕುಮಾರವ್ಯಾಸ ಭಾರತವ ॥

ಈ ಪದ್ಯಗಳನ್ನು ವಾಚಿಸಿ, ಕಥಾ ಪ್ರಸಂಗಕ್ಕೆ ಬಂದರು. ಈ ವೇಳೆಗೆ ಶ್ರೀ ವಿಶ್ವೇಶ ತೀರ್ಥ ಪಾದಂಗಳವರು ತಮ್ಮ ಪೂಜ್ಯಗುರುಗಳಾದ ಶ್ರೀ ಪಲಿಮಾರು ಮಠ ಮತ್ತು ಭಂಡಾರಕೇರಿ ಮಠಾಧೀಶ ಶ್ರೀ ವಿದ್ಯಾಮಾನ್ಯ ತೀರ್ಥ ಶ್ರೀ ಪಾದಂಗಳವರೊಡನೆ ಬಿಜಯಮಾಡಿದರು.

ಕಂಜಸಂಭವ ಪಿತನು ಬಂದನು
ನಂಜಿನಲಿ ಪವಡಿಸುವ ಬಂದನು
ಕುಂಜರನ ಮೊರೆಗೇಳಿ ಸಲಹಿದ ದೇವನಿದೆ ಬಂದ
ಅಂಜನಾಸುತನೊಡೆಯ ಬಂದನು
ಅಂಜಿದಸುರನಿಗಭಯವಿತ್ತವ
ಭಂಜನೆಗೆ ಬಲುದೈವ ಬಂದನು ನೃಪತಿಯೋಲಗಕೆ

ಪದ್ಯದಿಂದ ಕೃಷ್ಣರಾಯಭಾರದ ಕಥೆ ಮುಂದುವರೆಯಿತು.

ಶಕುಂತಲಾಬಾಯಿ ವಿಶ್ವರೂಪದರ್ಶನದ ಘಟ್ಟಕ್ಕೆ ಬಂದರು. ವಿಶ್ವರೂಪದರ್ಶನದ ಪದ್ಯಗಳನ್ನು ಮನಮುಟ್ಟುವಂತೆ ವಾಚಿಸಿದರು.

ಒಳಗೆ ಹೊಳೆದನು ಬಾಹ್ಯದಲಿ ಪ್ರ
ಜ್ವಲಿಸಿದನು ತಾನಲ್ಲದನ್ಯರ
ಬಳಿಕೆ ಬೇರೊಂದಿಲ್ಲದಂತಿದೆ ಕೂಡೆ ತೋರಿದನು
ಒಳಗೆ ಬಿಗಿವೆವೊ ಹೊರಗೆ ಕೃಷ್ಣನ
ಸಿಲುಕಿಸುವೆವೊ ತಿಳಿಯೆ ಕೃಷ್ಣರು
ಹಲಬರಿಹರಾರಾರ ಕಟ್ಟುವೆವೆಂದರಾ ಖಳರು

ಧೃತರಾಷ್ಟ್ರ ಗಾಂಧಾರಿ ಭಾನುಮತಿಯಾದಿಯಾಗಿ ಸಮಸ್ತರ ಸಭೆ ವಿಶ್ವರೂಪಿ ಶ್ರೀಕೃಷ್ಣನಿಗೆ ಮೊರೆಹೊಕ್ಕುದು ಶರಣಾರ್ಥಿ ಭಾವದಿಂದ. ಶ್ರೀಕೃಷ್ಣ ಕಂಗಳನು ಕರುಣಿಸಿ ತನ್ನ ವಿಶ್ವರೂಪವನ್ನು ತೋರಿದ ಧೃತರಾಷ್ಟ್ರನಿಗೆ. ಧೃತರಾಷ್ಟ್ರನೆನ್ನುತ್ತಾನೆ–"ಕಂಗಳಡಗಲಿ ದೇವನಿಮ್ಮೀಯಂಗವಟ್ಟವ ಕಂಡು ಬಳಿಕೀ ಕಂಗಳಿತರವ ಕಾಣಲಾಗದುಕೃಪೆಯಮಾಡು."

ಇಷ್ಟೆಲ್ಲ ಅದ್ಭುತಪವಾಡ ಕೌರವನೃಪಾಲನ ಒಡ್ಡೋಲಗದಲ್ಲಿ ನಡೆದುಹೋದರೂ ದುರ್ಯೋಧನನಲ್ಲಿ ಏನೂ ಪರಿಣಾಮವಾಗಲೇ ಇಲ್ಲ. **"ಚಲದೊಳ್ ದುರ್ಯೋಧನಂ"** ಪಂಪನ ಮಾತಿದು. ಕುಮಾರವ್ಯಾಸನು ಅದನ್ನು ಚೆನ್ನಾಗಿ ಸ್ಪಷ್ಟಪಡಿಸಿದ್ದಾನೆ.

ಮಣಿದು ಬದುಕುವನಲ್ಲ ಹಗೆಯಲಿ
ಸೆಣಸಿ ಬಿಡುವವನಲ್ಲ ದಿಟ ಧಾ
ರುಣಿಯ ಸಿರಿಗಳಪುವವನಲ್ಲಳುಕಿಲ್ಲ ಕಾಯದಲಿ
ರಣ ಮಹೋತ್ಸವವೆಮ್ಮ ಮತ ಕೈ
ದಣಿಯೆ ಹೊಯ್ದಾಡುವೆನು ಕೃಷ್ಣನ
ಕೆಣಕಿದಲ್ಲದೆ ಸಹಿಲದಲಿ ಕೈವಲ್ಯವಿಲ್ಲೆಂದ.

ಕೃಷ್ಣ ಬಯಸಿದ್ದುದೂ ಇದೇ. ದ್ರೌಪದಿಗೆ ಅಭಯವಿತ್ತು ಬಂದಿದ್ದಾನೆ–

ಏಳು ತಾಯೆ ಸರೋಜಮುಖಿ ವಿಪಿ
ನಾಲಯದೊಳತಿ ನವೆದೆ ನಿನ್ನವ
ರಾಳಿಗೊಂಡಂದವನು ಬಲ್ಲೆನು ನಿನ್ನ ಹರಿಬದಲಿ
ಕಾಳಗವನೇ ಬಲಿದು ತಹೆನಿವ
ರೊಳಿಲವ ಮಾಡಿದೊಡೆ ರಿಪುಗಳ
ಸೀಳಿ ಕರುಳನು ಮುಡಿಸದಿಹೆನೇ ನಿನ್ನ ಕಬರಿಯಲಿ

ಆದುದರಿಂದ ಕೃಷ್ಣನಿಗೆ ದುರ್ಯೋಧನನ ಛಲದಂಕಮಲ್ಲತನವನ್ನು ಕಂಡು ಕೇಳಿ ಸಂತೋಷವೇ ಆಗಿದ್ದಿತು ಮನದಲ್ಲಿ. "ಕೃಷ್ಣನ ಕೆಣಕಿದಲ್ಲದೆ ವಹಿಲದಲಿ ಕೈವಲ್ಯವಿಲ್ಲ" ವೆಂದೆನಲು ದುರ್ಯೋಧನನು

ನಸುನಗುತ ಸುರರಿಪು ಮು
ನ್ನಿನ ದೂಷ ಮನುಷ್ಯಾಕಾರವನು ಮಗು
ಳನುಕರಿಸಿ ಧೃತರಾಷ್ಟ್ರ ಭೀಷ್ಮರಿಗೆಂದ ನೀ ಹದನ
ಘನ ಸುಯೋಧನ ಪಾಂಡುವಿನ ನಂ
ದನರೊಳಾದ ವಿವಾದ ನಮಗೇ
ಕೆನುತ ರಾಜಾಲಯವನಸುರಧ್ವಂಸಿ ಹೊರವಂಟ

ಕಥೆ ಮುಗಿಸಿ, ಪ್ರಾರಂಭದ "ಶ್ರೀ ವನಿತೆಯರಸನೆ" ಪದ್ಯ ವಾಚಿಸಿ

ವೇದ ಪುರುಷನ ಸುತನ ಸುತನ ಸ
ಹೋದರನ ಮೊಮ್ಮಗನ ಮಗನ ತ
ಳೋದರಿಯ ಮಾತುಳನ ಮಾವನನತುಳ ಭುಜಬಲದಿ
ಕಾದಿ ಗೆಲಿದನನಣ್ಣನವ್ವೆಯ
ನಾದಿನಿಯ ಜಠರದಲಿ ಜನಿಸಿದ
ನಾದಿ ಮೂರುತಿ ಸಲಹೊ ಗದುಗಿನ ವೀರನಾರಯಣ

[ವೇದಪುರುಷನ (ನಾರಾಯಣನ) ಸುತನ (ಬ್ರಹ್ಮನ) ಸುತನ (ನಾರದನ) ಸಹೋದರನ (ಮರೀಚಿಯ) ಮೊಮ್ಮಗನ (ಇಂದ್ರನ) ಮಗನ (ಅರ್ಜುನನ) ತಳೋದರಿಯ (ಸುಭದ್ರೆಯ) ಮಾತುಳನ (ಜರಾಸಂಧನ) ಅತುಳ ಭುಜಬಲದಿ ಕಾದಿ ಗೆಲಿದನ (ಭೀಮನ) ಅಣ್ಣನ (ಧರ್ಮನ) ಅವ್ವೆಯ (ಕುಂತಿಯ) ನಾದಿನಿಯ (ದೇವಕಿಯ) ಜಠರ ದಲಿ ಜನಿಸಿದ ಅನಾದಿಮೂರುತಿ (ಕೃಷ್ಣ) ಸಲಹೊ ಗದುಗಿನ ವೀರನಾರಯಣ.]

ಪದ್ಯ ಹಾಡಿ, ಕುಮಾರವ್ಯಾಸ ಪ್ರಯೋಗದ ಪದಗಳಿಗೆ ಅಂತರಾರ್ಥವನ್ನು ಜೋಡಿಸಿ ಪುನರಾವರ್ತಿಸಿ ಹೇಳಿ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಿದರು. ನಾನು ಪ್ರಾಸಂಗಿಕ ನಿರೂಪಣೆ ನೀಡಿದ್ದೆ. "ಕೃಷ್ಣ ರಾಯಭಾರ" ಕಥಾ ಪ್ರಸಂಗವನ್ನು ನಾವು ಒಂದೇ ದಿನದಲ್ಲಿ ವಾಚನ ಮಾಡಬೇಕೆಂದು ವೇದಿಕೆಯೇರುವಾಗ ಅಂದುಕೊಂಡಿದ್ದೆವು. ಆದರೆ ವೇದಿಕೆಯೇರಿದ ಮೇಲೆ ನಮ್ಮ ಸಂಕಲ್ಪ ಗಾಳಿಯಲ್ಲಿ ತೂರಿ ಹೋಯಿತು. ಕೃಷ್ಣ ಒಡ್ಡೋಲಗವನ್ನು ಪ್ರವೇಶಿಸಿದ್ದು, ದುರ್ಯೋಧನ **"ತೊತ್ತಿನ ಮಗನ ಮನೆಯಲ್ಲಿ ಉಂಡಿರಿ, ಗೋವಳಿಗತನ ನಿಮ್ಮ ಮೈಸಿರಿ"** ಎಂದು ನಗುತ ನುಡಿದದ್ದು, ವಿದುರ ಕೆರಳಿ ದುರ್ಯೋಧನನನ್ನು ಆಪತ್ಕಾಲದಲ್ಲಿ ಉಳಿಸಬೇಕೆಂದು ಮೀಸಲಾಗಿಟ್ಟುಕೊಂಡಿದ್ದ ಧನುವನ್ನು ಮುರಿದು ಬಿಸಾಡಿದ್ದು, ಕೃಷ್ಣ ವಿದುರನ ಮನೆಯಲ್ಲಿ ಉಂಡುದಕ್ಕೆ ರಾಜ ನೀತಿಯ ಸಮಂಜಸ ಉತ್ತರ ಕೊಟ್ಟದ್ದು. ಅನಂತರ–

ಬಿಡುನೆಲನ ಕೇಡಿಗರ ಮಾತಿಂ
ಗೊಡಬಡದಿರಂತಕನ ನಗರಿಗೆ
ನಡೆಯಬೇಡ...........

ಎಂದು ಕೃಷ್ಣನೇ ತನ್ನ ರಾಯಭಾರತನವನ್ನು ಪ್ರಾರಂಭಿಸಿದ್ದು, ಈ ಘಟ್ಟಕ್ಕೆ ಬರುವ ವೇಳೆಗೆ ಕೇವಲ ಇಪ್ಪತ್ತೆರಡು ಪದ್ಯಗಳನ್ನು ಮಾತ್ರ ವಾಚನಮಾಡಿಯಾಗಿತ್ತು. ರಾತ್ರಿ ಎಂಟುಗಂಟೆಗೆ ಪ್ರಾರಂಭವಾದ ವಾಚನ ಒಂಬತ್ತು ಗಂಟೆ ಬಡಿವ ವೇಳೆಗೆ ಅರ್ಧ ಭಾಗವನ್ನು ಕೂಡ ಮುಟ್ಟಿರಲಿಲ್ಲ. ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರು ನಮಗೆ ಮಾರನೇ ದಿವಸ ಮುಂದುವರಿಸಬಹುದೆಂದು ನಿರೂಪಕೊಟ್ಟರು. ಮಾರನೇ ದಿವಸ ರಾತ್ರಿ ಎಂಟು ಗಂಟೆಗೆ ಪ್ರಾರಂಭವಾಯಿತು. ಕೃಷ್ಣ, ದುರ್ಯೋಧನ, ಭೀಷ್ಮ, ದ್ರೋಣ, ವಿದುರರ ಸಂಭಾಷಣೆ ಪದ್ಯಗಳನ್ನು ಮೊಟಕುಮಾಡಿತ್ತು. ನಾನು ವಿಶ್ವರೂಪದರ್ಶನ ಭಾಗದಲ್ಲಿ ಪ್ರಾಸಂಗಿಕ ನಿರೂಪಣೆ ಕೈಬಿಟ್ಟೆ. ಇಷ್ಟೆಲ್ಲ ಪಾಡುಪಟ್ಟರೂ ನಮ್ಮ ಕಾಲದ ಮಿತಿ ಮೀರಿತು. ಪೂಜ್ಯ ಶ್ರೀಪಾದಂಗಳವರ ಕರುಣದ ಶಿಶುಗಳಾಗಿ ಇನ್ನರ್ಧಗಂಟೆಯ ಕಾಲಾವಕಾಶ ಬೇಡಿ ಕೃಷ್ಣರಾಯಭಾರ ಕಥಾಪ್ರಸಂಗವನ್ನು ಮುಗಿಸಿದೆವು.

ಶ್ರೀ ಶ್ರೀ ವಿಶ್ವೇಶತೀರ್ಥ ಪಾದಂಗಳವರು ನಮ್ಮ ಕಾರ್ಯಕ್ರಮವನ್ನು ತುಂಬ ಮೆಚ್ಚಿಕೊಂಡರು. ಬೆಂಗಳೂರಿನಲ್ಲಿ ಹಿರಣ್ಣಯ್ಯ ಮಿತ್ರ ಮಂಡಲಿ ನಾಟಕ ಸಭಾಮಂದಿರ ದಲ್ಲಿ ಪೋತನ ಭಾಗವತದ ಲಕ್ಷ್ಮೀಕಾಂತ ಕವಿ ಸನ್ಮಾನದಲ್ಲಿ ಪೂಜ್ಯಪಾದರು ಅಧ್ಯಕ್ಷತೆ ವಹಿಸಿದ್ದ ಸಮಯದಲ್ಲಿ ಶಕುಂತಲಾಬಾಯಿ ಕೇವಲ ಹತ್ತು ನಿಮಿಷಗಳ ವಾಚನ ಮಾಡಿದ್ದರು. ಅನಂತರ ವಿಜಯವಾಡದಲ್ಲಿ ನಡೆದ ಅಖಿಲಭಾರತಮಾಧ್ವ ಸಮ್ಮೇಳನದಲ್ಲಿ ಶ್ರೀ ಪಾದಂಗಳವರು ಒಂದರ್ಧಗಂಟೆ ಕುಮಾರವ್ಯಾಸ ಭಾರತ ವಾಚನ ಕೇಳಿದ್ದರು. ಈಗಲೇ ಅವರು ಎರಡು ದಿವಸಗಳ ಕಾಲ ಸುದೀರ್ಘವಾದ ಕಾವ್ಯವಾಚನ ಕೇಳಿದ್ದು ಫಲಮಂತ್ರಾಕ್ಷತೆ ಸಹಿತ ನನಗೆ ರೇಷ್ಮೆಯ ಅಂಗವಸ್ತ್ರ, ಶಕುಂತಲಾಬಾಯಿಗೆ ರಜತ ಕರಂಡ, ಜೊತೆಗೆ ಇಬ್ಬರಿಗೂ ತಲಾ ಐವತ್ತು ರೂಪಾಯಿನ ಸಂಭಾವನೆಯಿತ್ತು ಅನುಗ್ರಹಿಸಿದರು. ನಾನು ವಿಶ್ವಹಿಂದೂ ಪರಿಷತ್ತಿಗಾಗಿ ಬರೆದ "ಎಳೆಯರ ಭಾರತ" ಕುಮಾರ ಸಾಹಿತ್ಯ ಕೃತಿ ಬಿಡುಗಡೆ ಸಮಾರಂಭದಲ್ಲಿ ಶ್ರೀ ವಿಶ್ವೇಶ ತೀರ್ಥ ಪಾದಂಗಳು ಅಧ್ಯಕ್ಷತೆ ವಹಿಸಿದ್ದರು. ಆಗ ಶಕುಂತಲಾಬಾಯಿಯೇ ಕುಮಾರವ್ಯಾಸ ಭಾರತದಿಂದ ಪ್ರಾರ್ಥನಾ ಪದ್ಯಗಳನ್ನು ವಾಚನಮಾಡಿ ಪ್ರಾರ್ಥನೆ ನಡೆಸಿಕೊಟ್ಟರು.

ಬೆಂಗಳೂರು ನಗರದ ರಾಜಾಜಿನಗರದ ಬಡಾವಣೆಯಲ್ಲಿರುವ ವಿದ್ಯಾವರ್ಧಕ ಸಂಘ 1978ರಲ್ಲಿ ಏರ್ಪಡಿಸಿದ್ದ ವಾಲ್ಮೀಕಿ ರಾಮಾಯಣ ವಾಚನ ಪ್ರವಚನಗಳನ್ನು ಸುಬ್ರಹ್ಮಣ್ಯ ಮಠದ ಶ್ರೀಪಾದಂಗಳವರೂ ಪೇಜಾವರಮಠದ ಶ್ರೀ ಶ್ರೀ ಶ್ರೀ ವಿಶ್ವೇಶ ತೀರ್ಥ ಪಾದಂಗಳವರೂ ನಡೆಸಿ ಕೊಟ್ಟಾಗ ಮುಕ್ತಾಯ ಸಮಾರಂಭದ ದಿನ ಶಕುಂತಲಾಬಾಯಿ ಕುವೆಂಪು "ಶ್ರೀ ರಾಮಾಯಣ ದರ್ಶನಂ" ಕಾವ್ಯದಿಂದ

ಓಂ ನಮೋ ಸಚ್ಚಿದಾನಂದನೆ ನಮೋ ನಮೋ
ಓಂ ನಮೋ ಸರ್ವಸ್ವತಂತ್ರನೆ ನಮೋ ನಮೋ
. . . .
ಪ್ರಭು, ನಮೋ ! ವಿಭು ನಮೋ ! ಜಗದ್ಗುರು ನಮೋನಮಃ
ನಮೋ ನಮೋ, ನಮೋ ನಮೋ, ನಮೋ ನಮೋ ನಮೋ !

ಪ್ರಾರ್ಥನೆ ಮಾಡಿದರು. ಶ್ರೀ ವಿಶ್ವೇಶ ತೀರ್ಥ ಪಾದಂಗಳವರು ಹೀಗೆ ಅನೇಕ ಸಂದರ್ಭಗಳಲ್ಲಿ ಶಕುಂತಲಾಬಾಯಿಯ ಕಾವ್ಯವಾಚನವನ್ನು ಕೇಳಿ ಮೆಚ್ಚಿಕೊಂಡು ಅನುಗ್ರಹ ತೋರಿದ್ದಾರೆ.

ಪೇಜಾವರ ಮಠಾಧೀಶರ ಅಧ್ಯಕ್ಷತೆಯಲ್ಲಿ ಶ್ರೀ ಕೃಷ್ಣ ಸಾನ್ನಿಧ್ಯದಲ್ಲಿ ಕುಮಾರ ವ್ಯಾಸ ಭಾರತ ವಾಚನ ಯಶಸ್ವಿಯಾಯಿತು. ಧ್ವನಿವರ್ಧಕದ ಏರ್ಪಾಟು ದೇವಸ್ಥಾನದ ಹೊರಗೂ ಕೇಳುವಂತೆ ಏರ್ಪಾಡಾಗಿತ್ತು. ಆದುದರಿಂದ ಊರಲ್ಲೆಲ್ಲ ಶಕುಂತಲಾ ಬಾಯಿಯ ವಾಚನ ಕೇಳುವಂತಾಯಿತು ಧ್ವನಿವರ್ಧಕದ ನೆರವಿನಿಂದ.

ಮಾರನೆಯ ದಿನ ಸರಸ್ವತೀಬಾಯಿ ರಾಜವಾಡೆ ನಮ್ಮನ್ನು ಶ್ರೀ ಕಾಣಿಯೂರು ಮಠಾಧೀಶರಾದ ಶ್ರೀ ಶ್ರೀ ವಿದ್ಯಾವಾರಿನಿಧಿ ತೀರ್ಥ ಪಾದಂಗಳವರ ದರ್ಶನ ಮಾಡಿಸಿದರು. ಅವರು "ಸಂಜೆ ಕೃಷ್ಣ ಪೂಜೆಗೆ ಬನ್ನಿ. ದೇವರ ಸನ್ನಿಧಿಯಲ್ಲಿ ಕುಮಾರವ್ಯಾಸ ಭಾರತ ವಾಚನ ಸೇವೆ ಮಾಡಿ" ಎಂದು ನಿರೂಪ ಕೊಟ್ಟರು. ಒಪ್ಪಿಕೊಂಡೆವು. ಆ ಸಂಜೆ ಕುಮಾರವ್ಯಾಸ ಭಾರತದಿಂದ ಭೀಷ್ಮರು ರಾಜಸೂಯಯಾಗದಲ್ಲಿ ಶ್ರೀ ಕೃಷ್ಣನೇ ಅಗ್ರಪೂಜೆಗೆ ಅರ್ಹನೆಂದು ಆತನ ಮಹಾತ್ಮೆಯನ್ನು ಸಭೆಗೆ ನಿರೂಪಿಸುವ ಪದ್ಯಗಳನ್ನು ಓದಿದರು.

ಶ್ರೀ ಪೂಜ್ಯ ಪಾದಂಗಳವರು ವಾಚನದ ವೈಖರಿಯನ್ನು ಶ್ಲಾಘಿಸಿದರು. ಸಂಭಾವನೆ ಸಹಿತ ಫಲ ಮಂತ್ರಾಕ್ಷತೆಯಿತ್ತು ಅನುಗ್ರಹ ತೋರಿದರು.

ನವೋದಯ ಕವಿಗಳ ಅಧ್ವರ್ಯುವಾದ ಮಾನ್ಯ ಮಿತ್ರ ಕವಿ ಎಂ. ಗೋಪಾಲ ಕೃಷ್ಣ ಅಡಿಗರು ಅದಮಾರು ಮಠಾಧೀಶರು ನಡೆಸುತ್ತಿರುವ ಪೂರ್ಣಪ್ರಜ್ಞ ಪ್ರಥಮ ದರ್ಜೆ ಕಾಲೇಜಿನ ಪ್ರಿನ್ಸಿಪಾಲರಾಗಿ ಉಡುಪಿಯಲ್ಲಿರುವುದು ತಿಳಿದಿತ್ತು. ಆದುದರಿಂದ ನಾವು ಅವರನ್ನು ಕಂಡೆವು. ಆಗ ಅವರ ಶ್ರೀಮತಿಯವರು ಊರಲ್ಲಿರಲಿಲ್ಲ. ಅಡಿಗರು, ಮಕ್ಕಳು ಮಾತ್ರ ಊರಲ್ಲಿದ್ದರು. "ನಮ್ಮಲ್ಲಿ ನಾಳೆ ಊಟಕ್ಕೆ ಬರಬೇಕು." ಎಂದರು. "ಯಾಕೆ ಶ್ರಮ ? ನಿಮ್ಮ ಶ್ರೀಮತಿಯವರು ಊರಲ್ಲಿಲ್ಲ" ಎಂದರು ಶಕುಂತಲಾಬಾಯಿ. ಅಡಿಗರು ಒತ್ತಾಯಿಸಿದರು. ಮಾರನೆಯದಿನ ಮಧ್ಯಾಹ್ನ ಅಡಿಗರ ಮನೆಗೆಹೋದರೆ ಪಾಕಗೃಹದಿಂದ ನಳಪಾಕದ ಘಮಘಮವಾಸನೆ ಮೂಗುಗಳಿಗೆ ಇಡಗಿತ್ತು. ಉಡುಪಿಯ ಬ್ರಾಹ್ಮಣ ಬಾಣಸಿಗ ಪಾಕ ಗೃಹದಲ್ಲಿ ಮೈಸೂರು ಪಾಕು, ಬೊಂಬಾಯಿ ಜೋಂಡ, ಎರಡು ಮೂರು ಪಲ್ಯ, ಕೋಸಂಬರಿ ಸಮಸ್ತವನ್ನೂ ಪಾಕಯಿಳಿಸಿ ಬಡಿಸಲು ಸಿದ್ಧನಾಗಿದ್ದ. ಅಡಿಗರು ಪುಷ್ಕಳವಾಗಿ ರಸಗವಳ ಉಣಿಸಿದರು. ಔತಣ ಮಾಡಿಸಿಕೊಂಡು, ಉಡುಪಿ ಬಿಟ್ಟು ಬೆಂಗಳೂರಿಗೆ ಬಂದೆವು.

ಶ್ರೀ ವಿದ್ಯಾ ಮಾನ್ಯ ತೀರ್ಥ ಪಾದಂಗಳವರ ಸಮ್ಮುಖದಲ್ಲಿ

ಉಡುಪಿಗೆ ಇನ್ನೊಮ್ಮೆ ಹೋಗುವ ಸಂದರ್ಭ ಒದಗಿತು. ಶ್ರೀ ಪಲಿಮಾರು— ಶ್ರೀ ಭಂಡಾರಕೇರಿ ಉಭಯ ಮಠಾಧೀಶರಾದ ಶ್ರೀ ವಿದ್ಯಾ ಮಾನ್ಯ ತೀರ್ಥ ಪಾದಂ

ಗಳವರು ಪರ್ಯಾಯ ಪೀಠದಲ್ಲಿದ್ದ ಕಾಲ-ಶಕುಂತಲಾಬಾಯಿಯು ಶ್ರೀ ಕೃಷ್ಣ ಸನ್ನಿಧಿಯಲ್ಲಿ ಶ್ರೀ ಪಾದಂಗಳವರ ಸಮ್ಮುಖದಲ್ಲಿ ಕುಮಾರವ್ಯಾಸನ ಭಾರತದಿಂದ ಯಕ್ಷಪ್ರಶ್ನೆಯೋ (?) ಇನ್ನಾವುದೋ ಭಾಗವನ್ನು ವಾಚನ ಮಾಡಿದರು. ನೆನಪು ಅಳಿಸಿದೆ. ಪೂಜ್ಯ ಪಾದಂಗಳವರು ಸಂತುಷ್ಟರಾಗಿ ಫಲಮಂತ್ರಾಕ್ಷತೆಯೊಡನೆ ಉಚಿತ ಸಂಭಾವನೆಯಿತ್ತು ನಮ್ಮನ್ನು ಅನುಗ್ರಹಿಸಿದರು.

ಹೀಗೆ ನಮ್ಮ ಉತ್ತರ ದಕ್ಷಿಣ ಕನ್ನಡ ಜಿಲ್ಲೆಗಳ ಗಮಕ ಕಲಾ ಪ್ರಚಾರ ಪ್ರವಾಸದಲ್ಲಿ ಉಡುಪಿ ಮಹತ್ವದ ಸ್ಥಾನ ಪಡೆದಿದೆ.

ವಿಟ್ಲದಲ್ಲಿ ಗಮಕದ ಅಗ್ನಿ ಪರೀಕ್ಷೆ

ದಕ್ಷಿಣ ಕನ್ನಡ ಜಿಲ್ಲೆಯ ನಮ್ಮ ಕಾವ್ಯವಾಚನ ಪ್ರವಾಸದಲ್ಲಿ ಹಚ್ಚ ಹಸುರಾಗಿ ನೆನಪಿನಲ್ಲಿ ಉಳಿದಿರುವ ಅನುಭವ ವಿಟ್ಲದ್ದು. ವಿಟ್ಲ ಕೇರಳಗಡಿಯ ಪ್ರಾರಂಭದ ಕರ್ಣಾಟಕ ರಾಜ್ಯದ ಕಡೆಯ ಗಡಿಯ, ಮಧ್ಯದೂರು. ವಿಟ್ಲವನ್ನು ಹಾದು ಹೋದರೆ ಮುಂದಿನದು ಕೇರಳದಲ್ಲಿ ಸಿಕ್ಕಿಕೊಂಡು ನುಲಿಯುತ್ತಿರುವ ಅಚ್ಚಗನ್ನಡದೂರು ಕಾಸರಗೋಡು. ಕನ್ನಡಿಗರ ರಾಜಕೀಯ ದೌರ್ಬಲ್ಯದಿಂದ ಕೇರಳಕ್ಕೆ ಸೇರಿಹೋಗಿದೆ. ವಿಟ್ಲಕ್ಕೆ ಹೋದರೆ ಕಾಸರಗೋಡಿಗೂ ಹೋಗಿ ನಮ್ಮ ಕನ್ನಡ ಕವಿ ಮಿತ್ರ ಕಯ್ಯಾರ ಕಿಞ್ಞಣ್ಣ ರೈಅವರನ್ನು ನೋಡಬಹುದೆಂದು ನನ್ನ ಎಣಿಕೆ. ರೈಯವರನ್ನು ನೋಡಲಾಗಲಿಲ್ಲ. ವಿಟ್ಲದಲ್ಲಿ 1971ರಲ್ಲಿ ಕಾವ್ಯವಾಚನ. ಈ ಕಾರ್ಯಕ್ರಮ ನಡೆಯಿತು.

ವಿಟ್ಲದಲ್ಲಿ ಬಹು ಪ್ರಸಿದ್ಧವಾದದ್ದು ಪಂಚಲಿಂಗೇಶ್ವರ ದೇವಸ್ಥಾನ. ಕರ್ಣಾಟಕದ ನಾನಾ ಭಾಗಗಳಿಂದ ಜನಾಕರ್ಷಣೆ ಮಾಡುತ್ತದೆ. ಪಾಂಡವರ ಪ್ರತಿಷ್ಠೆಯ ಪಂಚಲಿಂಗಗಳೆಂದು ಸ್ಥಳ ಪುರಾಣ ತಿಳಿಸುತ್ತದೆ. ಭೀಮಸೇನ ಪಂಚಲಿಂಗಗಳನ್ನು ಹೊರಗಿನಿಂದ ತಂದು ವಿಟ್ಲದಲ್ಲಿ ಪ್ರತಿಷ್ಠಿಸಿದನಂತೆ ತಮ್ಮ ಪೂಜೆಗಾಗಿ. ನಾವು ಪಂಚಲಿಂಗೇಶ್ವರ ಜಾತ್ರೆಯಲ್ಲಿ ಕುಮಾರವ್ಯಾಸ ಭಾರತ ವಾಚನ ಮಾಡಬೇಕೆಂದು ಆದೇಶ ಹೊತ್ತು ಬಂದರು ರಮಾನಂದ ಶೆಟ್ಟಿ. ಅವರು ವಿಟ್ಲದಲ್ಲಿ ಜನಪ್ರಿಯ ವ್ಯಕ್ತಿ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶಿಕ್ಷಕರ ಹಿರಿ ಪೀಳಿಗೆಯಲ್ಲಿ ಹೆಸರಾದವರೂ ಪಠ್ಯ ಪುಸ್ತಕ ಗ್ರಂಥ ಕರ್ತರೂ ಆದ ಬಾಬು ಶೆಟ್ಟರ ಮಗ. "ಬೆಂಗಳೂರು "ಆಕಾಶವಾಣಿ" ಯಲ್ಲಿಗೆ ಹೋಗಿದ್ದೆ. ಗಮಕ ಕಲಾವಿದರಲ್ಲಿ ಮುಂಚೂಣಿಯಲ್ಲಿರುವ ಶಕುಂತಲಾಬಾಯಿ ಪಾಂಡುರಂಗರಾವ್ ಹೆಸರನ್ನು ಸೂಚಿಸಿದರು. ನಿಮ್ಮಲ್ಲಿಗೆ ಬಂದೆ, ಕಾರ್ಯಕ್ರಮವನ್ನು ಒಪ್ಪಿಕೊಳ್ಳಬೇಕು." ಎಂದರು. "ವಿಟ್ಲದಲ್ಲಿ, ಅದರ ಆಜುಬಾಜಿನಲ್ಲಿ ಗಮಕವೆಂದರೆ ಏನೆಂದು ಗೊತ್ತಿಲ್ಲ. ನಿಮ್ಮದೇ ಪ್ರಪ್ರಥಮ ಗಮಕ ವಾಚನ ನಮ್ಮ ಕಡೆ, ನಾವು ನಿಮ್ಮ ಕಡೆಯ ಗಮಕವನ್ನು ನಮ್ಮವರಿಗೆ ಕೇಳಿಸಬೇಕೆಂದು ಸಾಹಸಮಾಡಿದ್ದೇವೆ." ಈ ಮಾತುಗಳನ್ನು ಕೇಳಿ ನಾವು ಬೆಚ್ಚಿದೆವು. ಶಿರಸಿ ಸಿದ್ದಾಪುರಗಳಲ್ಲೂ ಗಮಕ ವಾಚನಗಳು ಹೊಸದೇ, ಅಪರೂಪದ್ದೆ. ಎರಡು ಸ್ಥಳಗಳಲ್ಲೂ ನಮ್ಮ ಕಾರ್ಯಕ್ರಮ ಜನಕ್ಕೆ ನವನವೀನವೇ. ಸಿದ್ದಾಪುರದಲ್ಲಿ ನಾಡಹಬ್ಬವಾದ ಮೇಲೆ

ಬಿ. ಎಚ್. ಶ್ರೀಧರರು ಪ್ರತ್ಯೇಕವಾಗಿ ಒಂದು ಬೆಳಿಗ್ಗೆ ವಿಶೇಷ ಕಾರ್ಯಕ್ರಮ ಏರ್ಪಡಿಸಿದ್ದರು. ಸಾಹಿತ್ಯ ಪ್ರೇಮಿಗಳು ಮಾತ್ರ ಬಂದಿದ್ದರು. 70–80 ರಿಂದ 100 ರೊಳಗೆ. ಅವರಿಗೆ ಹಿಡಿಸಿತು ಗಮಕ. ಬಹಳ ಶ್ರದ್ಧೆಯಿಂದ ಕೇಳಿದರು. ಶ್ರೀಧರರ ಸಂತೋಷ ಸೀಮೋಲ್ಲಂಘನ ಮಾಡಿತು. ಈಗ ವಿಟ್ಲದಲ್ಲಿ ನಮಗೆ ಅಂಥವೇ ಇನ್ನೊಂದು ಪರೀಕ್ಷೆ. ರಮಾನಂದ ಶೆಟ್ಟರಿಗೆ ನಾನೆಂದೆ, "ಶೆಟ್ಟರೇ ಜನಕ್ಕೆ ಬೇಡದ್ದನ್ನು ನಾವೇಕೆ ಬಲವಂತವಾಗಿ ತುರುಕಬೇಕು. ಬಿಟ್ಟು ಬಿಡಿ." "ಹಾಗುಂಟೆ ? ಕಾರ್ಯಕ್ರಮ ಹಿಡಿಸದಿದ್ದರೂ ಚಿಂತೆಯಿಲ್ಲ. ಹೊಸತು ಮಾಡಿ ನೋಡಿಯೇ ಬಿಡೋಣವೆಂದು ನಮ್ಮ ಸಮಿತಿ ನಿರ್ಧರಿಸಿಯಾಗಿದೆ. ನೀವು ಒಪ್ಪಿಕೊಳ್ಳಬೇಕು." ಒತ್ತಾಯಿಸಿದರು ರಮಾನಂದ ಶೆಟ್ಟರು. ಅವರು ಸಂಭಾವನೆಯ ಪ್ರಸ್ತಾಪವೆತ್ತಿದರು. ಈ ಪ್ರಶ್ನೆ ಬಂದಾಗ ನನಗೆ ಶಕುಂತಲಾಬಾಯಿಗೆ ಗಂಟಲು ಹಿಸುಕಿದಂತಾಗುತ್ತದೆ. ನಮ್ಮದು ರಸ ಪ್ರಪಂಚ, ನಮ್ಮಲ್ಲಿ ಕಲಾ ಮಾರಾಟಿಕೆಯ ವ್ಯಾಪಾರ ಬುದ್ಧಿ ಬೆಳೆದೇಯಿಲ್ಲ. ಊಟ ವಸತಿ ಪ್ರವಾಸಗಳ ಅಗತ್ಯಗಳಲ್ಲಿ ನಮ್ಮ ಕೇಳಿಕೆ ಮುಗಿದು ಹೋಗುತ್ತದೆ. "ನೀವೇ ತೀರ್ಮಾನಿಸಿಕೊಳ್ಳಿ" ಎಂದು ಶಕುಂತಲಾಬಾಯಿ ತಮಗೆ ಸಂಬಂಧವಿಲ್ಲದಂತೆ ನಡೆದುಬಿಟ್ಟರು ಅನ್ನಪೂರ್ಣಾ ಪಾಕಶಾಲೆಗೆ. ನಾನು, "ಶೆಟ್ಟರೆ, ಇದು ರಸಲೋಕದ ವ್ಯವಹಾರ. ವ್ಯಾಪಾರವಲ್ಲ. ಕಲೆಗೆ ಯಾವ ಬೆಲೆ ನಿಷ್ಕರ್ಷಿಸೋಣ." ಎಂದೆ. ಶೆಟ್ಟರು ಬಿಡಲಿಲ್ಲ. "ಸಮಿತಿಯಲ್ಲಿ ನಾವು ಸಂಭಾವನೆಯನ್ನು ತೀರ್ಮಾನಿಸಬೇಕಲ್ಲ, ನೀವು ಹೇಳಲೇಬೇಕು." ಎಂದು ಒತ್ತಾಯಿಸಿದರು. ನಾನು ನಗುತ್ತ "ಒಂದು ರೂಪಾಯಿಂದ ಇನ್ನೂರು ರೂಪಾಯಿಗಳವರೆಗೆ, ಆಗಬಹುದೋ ?" ಎಂದೆ. ಅವರು "ಚಿಂತೆಯಿಲ್ಲ, ಆಯಿತು." ಎಂದು ಎದ್ದರು. "ಕಾರ್ಯಕ್ರಮ ನಿಶ್ಚಯವಾಗಿದೆ ತಪ್ಪಿಸಬೇಡಿ" ಎಂದು ಎಚ್ಚರಿಕೆ ಕೊಟ್ಟು ನಡೆದರು.

ವಿಟ್ಲದಲ್ಲಿ ಹರಪನಹಳ್ಳಿಯ ಕೇಶಂ ರಾಮರಾಯರ ಮೂರನೇ ಮಗ ಎಸ್. ಆರ್. ರಾಘವೇಂದ್ರರಾವ್—ಉಮಾ ದಂಪತಿಗಳ ಅತಿಥಿಗಳಾದೆವು. ಮೊದಲೇ ನಿರ್ಧಾರವಾಗಿದ್ದಂತೆ ಪಂಚಲಿಂಗೇಶ್ವರ ಜಾತ್ರೆಯಲ್ಲಿ ಕುಮಾರವ್ಯಾಸ ಭಾರತದಿಂದ "ಪಾಶುಪತಾಸ್ತ್ರ ವರ ಪ್ರದಾನ" ಕಥಾ ಭಾಗ. ರಾತ್ರಿ ಎಂಟು ಗಂಟೆಗೆ ಕಾರ್ಯಕ್ರಮ ಪ್ರಾರಂಭವಾಗಬೇಕು ಶೆಟ್ಟರು ಒಂದು ಕಿವಿ ಮಾತು ಹೇಳಿದರು, "ನಮ್ಮ ಜನ ಯಕ್ಷಗಾನ ಪ್ರಿಯರು. ಗಂಟೆ ಗಟ್ಟಲೆ ಕೂತು ಕೂತು ಕೇಳಿ ಅವರಿಗೆ ಅಭ್ಯಾಸವಾಗಿದೆ. ನೀವು ಕನಿಷ್ಟ ಪಕ್ಷ ಎರಡು ಗಂಟೆಗಳಷ್ಟರವರೆಗೆ ಕಾವ್ಯವಾಚನ ಮಾಡಬೇಕು. ನಮ್ಮ ಜನ ಹಿಡಿಸಿತೋ ಕೂತು ಕೇಳುತ್ತಾರೆ ; ಹಿಡಿಸಲಿಲ್ಲ, ತಮ್ಮ ಪಾಡಿಗೆ ತಾವು ಎದ್ದು ಹೋಗುತ್ತಾರೆ. ಆ ಜನಕ್ಕಾಗಿ ನೀವು ಕಾವ್ಯವಾಚನ ಮೊಟಕು ಮಾಡಬೇಕಾದ್ದಿಲ್ಲ. ಕುಮಾರವ್ಯಾಸ ಭಾರತ ಕೇಳುವ ಜನ ಸಾಕಷ್ಟಿದ್ದಾರೆ."

ಪಂಚಲಿಂಗೇಶ್ವರ ದೇವಸ್ಥಾನದ ಒಳಗೆ ಹೊರಗೆ, ಬಯಲಲ್ಲಿ ಎತ್ತೆತ್ತ ನೋಡಿದರೂ ಜನ ಮುಕ್ಕುರಿದಿತ್ತು. ವೇದಿಕೆಯ ಮುಂದೆ ನೂರಾರು ತಲೆಗಳು ಕಾಣುತ್ತಿದ್ದವು. ಆ ಜನದ ಹಿಂದೆ ನೂರಾರು ತಲೆಗಳು ನಿಂತಿದ್ದುದು ಕಾಣುತ್ತಿತ್ತು. ಶೆಟ್ಟರು, ಉತ್ಸಾಹ

ದಿಂದ ಬಂದು "ಭಾರಿ ಸಭೆ ಸೇರಿದೆ. ನಾಲ್ಕೈದು ಸಾವಿರಕ್ಕೆ ಕಡಮೆಯಿಲ್ಲ." ಎಂದರು ಸರಿಯೆ, ಸಂಖ್ಯೆ ನೋಡಿ ನಾವು ಹಿಗ್ಗುವಂತಿಲ್ಲವಲ್ಲ ! ಬಾಯಿ ಬಿಟ್ಟ ಮೇಲೆ ತಾನೆ ನಮ್ಮ ಮಾನ ಪರೀಕ್ಷೆ ? "ಅರ್ಜುನನನ್ನು ಬೆನ್ನಿಗೆಹಾಕಿಕೊಂಡ ಪರಮೇಶ್ವರ ನಮ್ಮನ್ನು ಕಾಪಾಡಿಕೊಳ್ಳಲಾರನೆ" ಎಂಬ ನಂಬಿಕೆಯಿಂದ ಗಿರಿಜಾ ರಮಣ ಶಂಭುವಿಗೆ ಶರಣಾಗಿ ಕಾವ್ಯವಾಚನ—ಪ್ರಾಸಂಗಿಕ ನಿರೂಪಣೆ ಪ್ರಾರಂಭಿಸಿದೆವು. ಕೂತ ಜನ ಕೂತು ಕೇಳಿದರು, ನಿಂತ ಜನ ನಿಂತು ಕೇಳಿದರು. ಧ್ವನಿವರ್ಧಕ ನಮ್ಮ ಕಾವ್ಯವಾಚನವನ್ನು ಬಹಳ ದೂರದವರೆಗೆ ದಾಟಿಸಿ ವಿಟ್ಲದ ಸುತ್ತಮುತ್ತ ಪ್ರದೇಶಗಳ ಜನದ ಕಿವಿ ಮುಟ್ಟಿಸಿತ್ತು. ಗಮಕ ವಾಚನದ ವಿಜಯ ಪತಾಕೆ ವಿಟ್ಲದಲ್ಲಿ ಬಹು ಎತ್ತರ ಏರಿತ್ತು.

ವಿಟ್ಲದಲ್ಲಿ ನೋಡಬೇಕಾಗಿದ್ದ ಒಬ್ಬಿಬ್ಬರು ಪ್ರಮುಖರುಗಳನ್ನು ನೋಡಿದೆವು. ಹಿರಿಯ ಶಿಕ್ಷಕ–ಪಠ್ಯಪುಸ್ತಕ ಲೇಖಕ ಬಾಬುಸೆಟ್ಟರನ್ನು ಕಂಡೆವು. ಪಡಕೋಣೆ ರಮಾನಂದರಾಯರ ಮಾವಂದಿರೂ, ಕೋಟ ಶಿವರಾಮಕಾರಂತರ ಶಿಕ್ಷಣ ಪ್ರಾಯೋಗದ ಸೆಲೆಯೂ ಆಗಿದ್ದ ಶಿವರಾಯರ ಪ್ರಸ್ತಾಪ ಬಂತು. ಪಂಜೆಯವರು, ಎಂ. ಎನ್. ಕಾಮತರು, ಉಳ್ಳಾಳ, ಉಗ್ರಾಣ ಮಂಗೇಶರಾಯರುಗಳು ಎಲ್ಲ ಹಿರಿ ಪೀಳಿಗೆಯವರ ನೆನಪು ಮಾಡಿಕೊಂಡೆವು. ವಿಟ್ಲದಲ್ಲಿ ಈಶ್ವರ ಭಟ್ಟರು ವಕೀಲರು, ವಿದ್ವಾಂಸರು. ಅವರ ಮನೆಯಲ್ಲಿ ಎಲ್ಲರೂ ಸಂಗೀತ ಪ್ರಿಯರು. ಶಕುಂತಲಾಬಾಯಿಯ ಕಾವ್ಯವಾಚನವನ್ನು ತುಂಬ ಮೆಚ್ಚಿಕೊಂಡರು ಈಶ್ವರ ಭಟ್ಟರ ಸೊಸೆ ಸಂಗೀತ ವಿದುಷಿ. ಆದುದರಿಂದ ಮಾತುಕತೆಗಳಲ್ಲಿ ಸ್ವಾರಸ್ಯ ಹೆಚ್ಚಿತು. ಭರ್ಜರಿ ಔತಣದೂಟವಾಯಿತು. ವಿಟ್ಲದ ಪಾಳೈಗಾರರನ್ನು ಸಂದರ್ಶಿಸಿದೆವು. ವಲ್ಲಭಬಾಯೀ ಪಟೇಲರು ಕೇಂದ್ರದ ಗೃಹಸಚಿವರಾಗಿದ್ದಾಗ ಭಾರತೀಯ ಸಂಸ್ಥಾನಗಳನ್ನು ಕೇಂದ್ರ ಸರಕಾರಕ್ಕೆ ಸೇರ್ಪಡೆ ಮಾಡಿಕೊಂಡಾಗ, ವಿಟ್ಲದ ಪಾಳೆಗಾರಿಕೆಯೂ ಹೋಯಿತು. ಮುಂದೆ ಕೇಂದ್ರ ಸರಕಾರ. ರಾಜ ಮಹಾರಾಜ, ಜಹಗೀರುದಾರ—ಪಾಳೈಗಾರರಿಗೆ ವಾಗ್ದಾನ ಮಾಡಿದ್ದ ಸವಲತ್ತು ಸೌಲಭ್ಯಗಳನ್ನು ತಪ್ಪಿಸಿಬಿಟ್ಟಿತು. ಆ ಕಾರಣ ತಮಗೆ ಒದಗಿದ ದುರ್ವಿಧಿಯನ್ನು ಪಾಳೈಗಾರರು ವಿವರಿಸಿದರು. ಅವರ ಬಗೆಗೆ ಕನಿಕರವಾಯಿತು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಾಡ ಹಬ್ಬ ಪ್ರವಾಸ.

1974 ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕೋಟೇಶ್ವರ, ಹಂಗಾರಕಟ್ಟೆ, ಬ್ರಹ್ಮಾವರ, ಮೂಡಬಿದರೆ ಮತ್ತು ಮಂಗಳೂರುಗಳಲ್ಲಿ ನಾಡಹಬ್ಬದ ಕಾರ್ಯಕ್ರಮಗಳಲ್ಲಿ ಭಾಗ ವಹಿಸುವ ಸಂದರ್ಭಗಳು, ನನ್ನ ಗೆಳೆಯ ಬೈಕಾಡಿ ವೆಂಕಟಕೃಷ್ಣರಾಯರ ಪ್ರೀತಿ ವಿಶ್ವಾಸ ಗಳಿಂದ ಉಂಟಾದವು. ಬೈಕಾಡಿಯವರು ಕನ್ನಡ ಸಾಹಿತ್ಯ ಪರಿಷತ್ತಿಗೆ ಹಲವಾರು ವರ್ಷಗಳು ಸೇವೆ ಸಲ್ಲಿಸಿದ್ದಾರೆ. ಆ ಸಮಯದಲ್ಲಿ ಅವರಿಗೆ ಕನ್ನಡ ನಾಡಿನ ಹಿರಿಯ ಕಿರಿಯ ಸಾಹಿತಿಗಳನ್ನು ಕನ್ನಡದ ಸಂಗೀತ–ಗಮಕ ವಿದ್ವಾಂಸರುಗಳನ್ನು ಪರಿಚಯ ಮಾಡಿಕೊಂಡು ಅವರುಗಳ ಸ್ನೇಹ ಸಂಪಾದಿಸುವ ಅವಕಾಶವುಂಟಾಯಿತು. ಬೈಕಾಡಿ

ಯವರಲ್ಲಿ ಸ್ನೇಹ ವಿಶ್ವಾಸಗಳಿಗೆ ಕೊರತೆ ಇರಲಿಲ್ಲ. ಸ್ವಚ್ಛ ನೀತಿ ನಡತೆಗಳನ್ನೂ ಕಾಣಬಹುದು. ಮನಸ್ಸಿನಲ್ಲಿ ಯಾವುದನ್ನೂ ಮರೆಮಾಚುವವರಲ್ಲ. ಕಂಡಿತವಾದಿ ಲೋಕ ವಿರೋಧಿ ವ್ಯಕ್ತಿತ್ವ ಅವರಲ್ಲಿ ಧಾರಾಳವಾಗಿದೆ. ಬೈಕಾಡಿಯವರು ಕನ್ನಡ ಸಾಹಿತ್ಯ ಪರಿಷತ್ತನ್ನು ಬಿಟ್ಟ ಮೇಲೆ ತಮ್ಮೂರಾದ ಬ್ರಹ್ಮಾವರಕ್ಕೆ ಹೋದರು. ಅಲ್ಲಿ ಮಾಧ್ಯಮಿಕ ಶಾಲೆಯಲ್ಲಿ ಉಪಾಧ್ಯಾಯರಾಗಿ ಸೇರಿ ಬಾಲ ಗೋಪಾಲರ ಸೇವೆ ಮಾಡಿ ಈಗ ನಿವೃತ್ತರಾಗಿ ತಮ್ಮೂರಲ್ಲಿ ನೆಲೆಸಿದ್ದಾರೆ. ಅವರ ಸಾಹಿತ್ಯ ರಚನೆ ನಾನರಿಯೆ. ಆದರೆ ಆಗಾಗ ಅವರ ಹೆಸರು ಕನ್ನಡ ನಾಡಿನ ಪತ್ರಿಕೆಗಳಲ್ಲಿ ಕಾಣಿಸಿಕೊಳ್ಳುತ್ತದೆ. ಜನಾಭಿಪ್ರಾಯವನ್ನು ತಮ್ಮ ಲೇಖನಿಯ ಹರಿತದಿಂದ ಅಭಿವ್ಯಕ್ತಗೊಳಿಸುತ್ತಾರೆ. ಯಕ್ಷಗಾನ ಪ್ರಿಯರು, ಗಮಕಾಭಿಮಾನಿ, ಸಾಹಿತ್ಯ ಪ್ರೇಮಿ. ಇನ್ನೇನು ಬೇಕು ಒಬ್ಬ ವ್ಯಕ್ತಿ ಸುಸಂಸ್ಕೃತನೆನ್ನಿಸಿಕೊಳ್ಳಲಿಕ್ಕೆ !

ನಾವು ಕೋಟೇಶ್ವರಕ್ಕೆ ಬೆಳಗಿನ ಜಾವ ಹೋಗಿ ತಲುಪಿದೆವು. ನನ್ನ ಅಳಿಯ ಡಾ|| ಎಸ್. ಕೆ. ಕೋಟೇಶ್ವರರ ಸಮೀಪ ಬಂಧುಗಳಾದ ಕೊಳಕನ ಕಟ್ಟೆ ಶ್ರೀನಿವಾಸ ರಾವ್ ಅವರ ಅತಿಥಿಗಳಾದೆವು. ಕೋಟೇಶ್ವರ ನಮಗೆ ಸುತ್ತಮುತ್ತಲ ಊರುಗಳ ತಿರುಗಾಟಕ್ಕೆ ಕೇಂದ್ರವಾಯಿತು.

ಹಂಗಾರ ಕಟ್ಟೆಯಲ್ಲಿ ನಾಡಹಬ್ಬದ ಕಾರ್ಯಕ್ರಮವನ್ನು ಅಲ್ಲಿಯ ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯ ಸದಾನಂದ ಹೆಬ್ಬಾರರು ಏರ್ಪಾಡು ಮಾಡಿದ್ದರು. ಅವರು ಶಿಕ್ಷಣದಲ್ಲಿರುವಷ್ಟೇ ಆಸಕ್ತಿಯನ್ನು ಯಕ್ಷಗಾನದಲ್ಲಿ ವಹಿಸಿದ್ದಾರೆ. ಯಕ್ಷಗಾನದಲ್ಲಿ ತಾವೂ ವೇಷ ಹಾಕಿ ಕುಣಿಯಬಲ್ಲರು. ನಾವು ಅವರ ಶಾಲೆಯಲ್ಲಿ "ಕರ್ಣಾಟಕ ಕವಿ ಕಾವ್ಯ ಪರಂಪರೆ" ಕಾರ್ಯಕ್ರಮ ಕೊಟ್ಟೆವು. ಕುಮಾರವ್ಯಾಸ ಭಾರತ ವಾಚನವನ್ನೂ ಸೇರಿಸಿಕೊಂಡಿದ್ದೆವು. ಈ ಕಾರ್ಯಕ್ರಮದಲ್ಲಿ ಒಂದು ವಿಶೇಷವೆಂದರೆ ಲಕ್ವ ಹೊಡೆದು ಹಾಸಿಗೆ ಹಿಡಿದಿದ್ದ ತಮ್ಮ ತಂದೆಯನ್ನು ಸದಾನಂದ ಹೆಬ್ಬಾರರು ಕುರ್ಚಿಯಲ್ಲಿ ಕೂಡಿಸಿ ತಮ್ಮ ಮನೆಯಿಂದ ಶಾಲೆಗೆ ಕರೆತಂದು ಗಮಕವಾಚನ ಕೇಳಿಸಿದ್ದು.

ನಮ್ಮ ನಾಡಹಬ್ಬದ ಎರಡನೆಯ ಕಾರ್ಯಕ್ರಮ ಬ್ರಹ್ಮಾವರದಲ್ಲಾಯಿತು. ಇಲ್ಲಿ ಬೈಕಾಡಿಯವರೇ ಮುಂದಾಳು. ಪುತ್ತೂರಿನ ವಕೀಲರೂ ಕನ್ನಡ ಕಾದಂಬರಿಕಾರರೂ ಆದ ಬೆಳ್ಳೆ ರಾಮಚಂದ್ರರಾಯರ ಅಳಿಯ ಮಗಳು ನಮ್ಮನ್ನು ಸ್ವಾಗತಿಸಿ, ಆತಿಥ್ಯ ನೀಡಿದರು. ಬ್ರಹ್ಮಾವರದ ಮಾಧ್ಯಮಿಕ ಶಾಲೆಯಲ್ಲಿ ನಮ್ಮ ಕಾರ್ಯಕ್ರಮ ಏರ್ಪಾಡಾಗಿತ್ತು. ವರ್ಷವರ್ಷವೂ ಒಬ್ಬ ಸುಪ್ರಸಿದ್ಧ ಯಕ್ಷಗಾನ ವೇಷಧಾರಿಗೆ ಸನ್ಮಾನ ಮಾಡುವ ಸತ್ಸಂಪ್ರದಾಯವನ್ನು ಬ್ರಹ್ಮಾವರದ ಜನ ಅನುಸರಿಸಿಕೊಂಡು ಬರುತ್ತಿದ್ದಾರೆ. ನಡೆಯುತ್ತಿದೆ ರಾಷ್ಟ್ರ ಶಿಕ್ಷಕ ಪ್ರಶಸ್ತಿ ವಿಜೇತರಾಗಿದ್ದ ಯಕ್ಷಗಾನ ಕಲಾವಿದ ಕಾಂತಪ್ಪನವರಿಗೆ ಸನ್ಮಾನ ಆ ವರ್ಷದ ನಾಡಹಬ್ಬದ ಹೆಚ್ಚಳವಾಗಿತ್ತು. ನಾನು ಕಾಂತಪ್ಪನವರನ್ನು ಶಿಕ್ಷಕ ರಾಷ್ಟ್ರ ಪ್ರಶಸ್ತಿ ವಿಜೇತರಾದುದಕ್ಕಾಗಿ ವಂದಿಸಿದೆ. ಶಕುಂತಲಾಬಾಯಿ ಕುಮಾರವ್ಯಾಸ ಭಾರತ ವಾಚನ ಮಾಡಿದರು.

ಮೂಡಬಿದರೆಯಲ್ಲಿ ಸಂಚಾರಿ ಕನ್ನಡ ಬರಹಗಾರರ ಬಳಗ

ಮಾರನೆ ದಿನ ಊಟ ತೀರಿಸಿ ಮೂಡಬಿದರೆ ಕಾರ್ಯಕ್ರಮಕ್ಕೆ ಬಸ್ಸು ಹತ್ತಿದೆವು. ಜೈನಧರ್ಮದ ಒಂದು ಮುಖ್ಯ ಪೀಠವಾಗಿ ದಕ್ಷಿಣ ಜೈನ ಕಾಶಿಯೆನ್ನಿಸಿಕೊಂಡು ರತ್ನಾಕರವರ್ಣಿಯ ಜನ್ಮಸ್ಥಾನವಾಗಿ ನಮ್ಮ ಮನಸ್ಸನ್ನು ಸೆರೆ ಹಿಡಿದಿದ್ದ ಮೂಡಬಿದರೆಯನ್ನು ನೋಡುವ ಸದವಕಾಶವಾಯಿತಲ್ಲ ಎಂದು ನಮಗೆ ಹಿಗ್ಗೋ ಹಿಗ್ಗು.

ಮೂಡಬಿದರೆಯನ್ನು ತಲಪಿ ಬಸ್ಸಿನಿಂದ ಇಳಿಯುವುದಕ್ಕಿಲ್ಲ, ಟಿ. ಚಂದ್ರರಾಜ ಶೆಟ್ಟರು ಎದುರುಗೊಂಡರು. ಅವರೇ ನಮ್ಮನ್ನು ಕಾರ್ಯಕ್ರಮವಿದ್ದ ಸ್ಥಳಕ್ಕೆ ಕರೆದೊಯ್ದರು. ಅವರು **"ಕನ್ನಡ ಬರಹಗಾರ ಬಳಗ"**ವಲ್ಲವೆ! "ಕನ್ನಡ ಬರಹಗಾರ ಬಳಗ" ಸಂಘವೇ, ಸಂಸ್ಥೆಯೇ? ಎಂದು ಕೇಳಬೇಡಿ. ಸುಮಾರು ಮೂರು ನಾಲ್ಕು ಸಾವಿರ ಕನ್ನಡ ಬರಹಗಾರರುಗಳನ್ನೂ ಅವರುಗಳ ಭಾವಚಿತ್ರಗಳೊಂದಿಗೆ ಮಣಗಾತ್ರದ ನಾಲ್ಕು ಭಾರಿ ಗ್ರಂಥಗಳಲ್ಲಿ ಶೇಖರಿಸಿರುವ ಚಂದ್ರರಾಜ ಶೆಟ್ಟರೇ "ಸಂಚಾರಿ ಕನ್ನಡ ಬರಹಗಾರರ ಬಳಗ." ಅರ್ಥವಾಯಿತು ತಾನೆ? ಅವರು ನಾಲ್ಕು ಹೆಬ್ಬೊತ್ತಿಗೆಗಳನ್ನು ತೋರಿಸಿದರು; ಸಂಪಾದನೆ ಮಾಡುವುದಕ್ಕೆ ಪಟ್ಟ ಪಾಡನ್ನು ತೋಡಿಕೊಂಡರು; ಕಷ್ಟನಷ್ಟ ಪಟ್ಟರೂ ತಮ್ಮ ಗುರಿಯನ್ನು ಸಾಧಿಸುವಲ್ಲಿರುವ ತಮ್ಮ ದೃಢತೆಯನ್ನು ಅಭಿವ್ಯಕ್ತಪಡಿಸಿಕೊಂಡರು. ಮಣ ಭಾರದ ಹೆಬ್ಬೊತ್ತಿಗೆಗಳ ಚೀಲಗಳನ್ನು ಹೆಗಲ ಮೇಲೆ ಹೊತ್ತು ಸದಾ ಪಾದಯಾತ್ರೆ ಮಾಡುವ ಏಕಲು ವ್ಯಕ್ತಿ ಮಹಾರಾಯ ಚಂದ್ರಕಾಂತ ಶೆಟ್ಟರಿಗೆ ಅದೇನು ತಾಳ್ಮೆ, ಸಂಯಮ? ಎಂಥ ಅದ್ಭುತ ವ್ಯಕ್ತಿ!

"ಕರ್ಣಾಟಕ ಕವಿ ಕಾವ್ಯ ಪರಂಪರೆ" ಯೇ ಮೂಡಬಿದರೆಯ ನಾಡಹಬ್ಬದ ಕಾವ್ಯವಾಚನದ ವಿಷಯ. ಸರಸ್ವತೀ ಮಂದಿರದಲ್ಲಿ ನಡೆಯಿತು. ಜನ ತುಂಬಿತ್ತು. ಬೇಲೂರು ಸಾಹಿತ್ಯ ಸಮ್ಮೇಳನದಲ್ಲಿ ಪರಿಚಯವಾಗಿದ್ದ, ಮೂಡಬಿದರೆಯ ಸಮಸ್ತ ಕನ್ನಡ ಕಾರ್ಯಕ್ರಮಗಳಿಗೂ ಮೂಲಾಧಾರವಾಗಿದ್ದ ಗೋಪಾಲಕೃಷ್ಣ ಬಾಳಿಗರು ನಾಡಹಬ್ಬಕ್ಕೆ ಕೆಲವೇ ದಿವಸಗಳ ಹಿಂದೆ ದೈವಾಧೀನರಾಗಿದ್ದರು. ನಮ್ಮನ್ನು ಮೂಡಬಿದರೆಗೆ ಬರಮಾಡಿಕೊಳ್ಳುವುದರಲ್ಲಿ ಆಸಕ್ತರಾಗಿದ್ದ ಮುಖ್ಯ ಗೆಳೆಯರೇ ನಮ್ಮನ್ನು ಸ್ವಾಗತಿಸುವುದಕ್ಕೆ ಇರಲಿಲ್ಲವಲ್ಲ! ಆ ನೋವಿನ ಆಳ ನಮಗೆಷ್ಟೆಂದು ಯಾರು ಅಳೆಯ ಬಲ್ಲರು?

ಆ ರಾತ್ರಿ ಸರಸ್ವತೀ ಮಂದಿರದಲ್ಲಿ ನಮ್ಮ ಬಿಡಾರ. ಬೆಳಗ್ಗೆ ಎದ್ದು ಸ್ನಾನ ಮುಗಿಸಿದ್ದೆವು. ನಮ್ಮ ಚಂದ್ರರಾಜ ಶೆಟ್ಟರು ಪ್ರತ್ಯಕ್ಷವಾದರು. ಮಾರ್ಗದರ್ಶಕರಾಗಿ ನಮ್ಮನ್ನು ಮೂಡಬಿದರೆ ಪ್ರದಕ್ಷಿಣೆ ಮಾಡಿಸಿದರು.

ಮೂಡಬಿದರೆ ಜೈನರಿಗೆ ದಕ್ಷಿಣ ಕಾಶಿಯೆಂದು ಪವಿತ್ರ ಸ್ಥಳ; ಜೈನೇತರ ಬಂಧುಗಳಿಗೆ, ಸಂಚಾರ ಪ್ರಿಯರಿಗೆ ನೋಟಕ್ಕೆ ಆಕರ್ಷಕ. ಕನ್ನಡ ಸಾಹಿತ್ಯ ಪ್ರಿಯರಿಗೆ, ಗಮಕಿಗಳಿಗೆ, ಸಾಂಗತ್ಯ ಕಾವ್ಯ "ಭರತೇಶ ವೈಭವ" ವನ್ನು ರಚಿಸಿದ ರತ್ನಾಕರವರ್ಣಿಯ ಜನ್ಮ

ಷ್ಥಳವೆಂಬ ಕಾರಣದಿಂದ ಪವಿತ್ರ ಯಾತ್ರಾ ಸ್ಥಳ. ಸಾವಿರ ಕಂಬಗಳ ಬಸದಿಯೆಂದು ಪ್ರಸಿದ್ಧವಾದ ತ್ರಿಭುವನ ತಿಲಕ ಚೂಡಾಮಣಿ ಬಸದಿಯನ್ನು ನೋಡಿದ ಕೂಡಲೆ ನಮ್ಮ ಕಣ್ಣ ಮುಂಪೆ ಜಾನಪದ ಮಹಾಕವಿ ರತ್ನಾಕರವರ್ಣಿಯೇ ಪ್ರತ್ಯಕ್ಷವಾದಂತಾಯಿತು. ನಾವು ಮೂವರೂ ಪಾದ ತೊಳೆದು ಒಳ ಹೊಕ್ಕು ನೇಮಿನಾಥ ತೀರ್ಥಂಕರ ಸ್ವಾಮಿಯ ಮುಂಪೆ ಕುಳಿತೆವು. ಶಕುಂತಲಾಬಾಯಿ, ರತ್ನಾಕರವರ್ಣಿ ಆತ್ಮ—ಕರ್ಮ—ಮುಕ್ತಿಯನ್ನು ಕುರಿತು ವರ್ಣಿಸಿರುವ ಕೆಲವು ಸಾಂಗತ್ಯ ಪದ್ಯಗಳನ್ನು ವಾಚಿಸಿದರು. ಅವುಗಳನ್ನು ಇಲ್ಲಿ ಕಾಣಿಸಿದೆ—

ತಿಳಿವೆಳಗಿನ ತೀರ್ಥರೂಪವೆ ತಿಂಗಳ
ಬೆಳಗಿನೊಳಾದ ಪುತ್ತಳಿಯೆ
ತಳುವಾಡದೆನಗೆ ಸನ್ಮತಿಯದೋರು ಸುಜ್ಞಾನ
ನಿಳಯ ನಿರಂಜನ ಸಿದ್ಧ

ಉಸಿರೆಂಬ ಕರಗಸದಿಂದ ದೇಹಾತ್ಮರ
ಬೆಸುಗೆಯ ಬಿಡಿಸಿ ನೋಡಿದರೆ
ಮಸುಳದೆ ತೋರ್ಪ ಮಹಾತ್ಮ ನೀನೆನಗೊಳ್ಪ
ನೆಸಗು ನಿರಂಜನ ಸಿದ್ಧ

ತೆರೆಯ ಮೇಲ್ ತೆರೆಗಳ ತೋರುವಿಂಗಡಲಂತೆ
ಸಿರಿಯ ಮೇಲ್ ಸಿರಿಯ ಸೂಚಿಸುವ
ಚರಿತಾರ್ಥ ನನ್ನಂತರಂಗದೊಳಿರು ಮನೋ
ಹರನೆ ಚಿದಂಬರ ಪುರುಷಾ

ಕಾಣದರ್ಥವ ಕಾಣಿಸುವ ಪರಂಜ್ಯೋತಿ ನೀ
ಮಾಣದೆ ನನ್ನೆದೆಯೆಂಬ
ಕೋಣೆಯೊಳಿರು ಹೋದೆಯಾದರೆ ನಿನಗೆ ನಿ
ನ್ನಾಣೆ ಚಿದಂಬರ ಪುರುಷಾ

ಚಂದ್ರರಾಜ ಶೆಟ್ಟರು ಸಾವಿರ ಕಂಬದ ಬಸದಿಯ ಸಂದುಮೂಲೆಗಳನ್ನೂ ಬಿಡದೆ ಎಲ್ಲವನ್ನೂ ತೋರಿಸಿದರು. ಮೂರು ಅಂತಸ್ತುಗಳು. ಮೂರು ಅಂತಸ್ತುಗಳಿಗೂ ಮೂರು ಚಾವಣಿಗಳು. ಕಡೆಯದಕ್ಕೆ ತಾಮ್ರದ ತಗಡನ್ನು ಹೊದಿಸಿದೆ. ನೇಪಾಳಿ ಶೈಲಿಯಲ್ಲಿಪೆ ತ್ರಿಭುವನ ತಿಲಕ ಚೂಡಾಮಣಿ ಸಾವಿರ ಕಂಬಗಳ ಬಸದಿ ಎಂದು ವಾಸ್ತುಶಿಲ್ಪ ತಜ್ಞರ ಮತ. ಪಡಿ, ಪಾವು, ಸೇರು, ಕೊಳಗಗಳನ್ನೆಲ್ಲ ಸೇರಿಸಿ ಸಾವಿರವೆಂದು ಕಂಬಗಳನ್ನು ಲೆಕ್ಕ ಎಣಿಸಿದ್ದಾರೆ. ಕಂಬಗಳ ಕೆತ್ತನೆ, ಒಳ ಹೊರಗಣ ಕೆತ್ತನೆ ಸುಂದರವಾಗಿಪೆ. ಊರೊಳಗಿರುವ ಇತರ ಬಸದಿಗಳನ್ನೂ ನೋಡಿಯಾಯಿತು.

ಚಂದ್ರರಾಜ ಶೆಟ್ಟರು ನಮ್ಮನ್ನು ಬಸ್ಸು ಹತ್ತಿಸಿ ಕೋಟೇಶ್ವರಕ್ಕೆ ಕಳಿಸುವವರೆಗೂ ನಮ್ಮೊಡನೆಯೇ ಇದ್ದರು. ತಮಗೆ ಬೇಕಾದ ವಿಷಯಗಳ ಬಗೆಗೆ ಪತ್ರ ಬರೆಯುತ್ತಿದ್ದರು. ಶಕುಂತಲಾಬಾಯಿ ಮತ್ತು ನನ್ನನ್ನು ಸೇರಿಸಿಕೊಂಡಿದ್ದಾರೆ ಅವರ ಹೆಬ್ಬೊತ್ತಿಗೆಗಳಲ್ಲಿ.

1979ರಲ್ಲಿ ನಡೆದ 51ನೆಯ ಧರ್ಮಸ್ಥಳದ ಸಾಹಿತ್ಯ ಸಮ್ಮೇಳನದ ಶಿಶು ಸಾಹಿತ್ಯ ಗೋಷ್ಠಿಯಲ್ಲಿ ನನ್ನ ಪಕ್ಕದಲ್ಲೆ ಕುಳಿತು ಪಾಲುಗೊಂಡರು. ರಾಜರತ್ನಂ ತೀರಿಕೊಂಡ ರಲ್ಲ ! ಅವರ ಸ್ಮರಣಾರ್ಥ ದಕ್ಷಿಣ ಕನ್ನಡ ಜಿಲ್ಲೆಯ ಬರಹಗಾರರ ಸ್ಪರ್ಧೆಯಲ್ಲಿ ತಮ್ಮ ಮಕ್ಕಳ ಸಾಹಿತ್ಯಕ್ಕೆ ಬಹುಮಾನ ಪಡೆದುಕೊಂಡರು, ಆದರೆ ಅದನ್ನು ಸ್ವೀಕರಿಸುವ ಮೊದಲೆ ಜಿನಲೋಕವನ್ನು ಸೇರಿಬಿಟ್ಟರಲ್ಲ ನಮ್ಮ ಚಂದ್ರರಾಜ ಶೆಟ್ಟಿ ! ಎಂಥ ವಿಧಿ ವಿಲಾಸ !

ನಾನು "ಮಕ್ಕಳ ಸಾಹಿತ್ಯಕ್ಕೆ ಕಳಸವಿಟ್ಟರು" ಶೀರ್ಷಿಕೆಯಲ್ಲಿ "ಪಾಪಚ್ಚಿ" ಮಾಸ ಪತ್ರಿಕೆಯಲ್ಲಿ ಚಂದ್ರರಾಜ ಶೆಟ್ಟರು ಬದುಕಿರುವಾಗಲೇ ಅವರ ವ್ಯಕ್ತಿ ಚಿತ್ರ ಬರೆದು ಅವರ ಜೀವಕ್ಕೆ ಖುಷಿಕೊಟ್ಟೆ.

ನಮ್ಮ ಅಳಿಯಂದಿರ ಊರು ಕೋಟೇಶ್ವರದಲ್ಲಿ ಕಾವ್ಯವಾಚನ.

ನಮಗೆ ಕೋಟೇಶ್ವರದಲ್ಲಿ ನಮ್ಮ ಅಳಿಯ ಡಾ|| ಎಸ್. ಕೆ. ಕೋಟೇಶ್ವರರ ಸಂಬಂಧದಿಂದ ತುಂಬ ಬಳಗವಿದೆ. ಅದುದರಿಂದ ನನ್ನ ಬಂಧುಗಳು ಕೋಟೇಶ್ವರ ದೇವಸ್ಥಾನದಲ್ಲಿ ಒಂದು ಕಾರ್ಯಕ್ರಮವನ್ನು ಏರ್ಪಾಟು ಮಾಡಿದರು. ಮುಂದಾಳು ತನವನ್ನು ಕುಪ್ಪಯ್ಯ ಭಟ್ಟರು ವಹಿಸಿದ್ದರು. ಅವರಿಗೆ ಬೆಂಬಲವಾಗಿ, ಕೊಳನ ಕಟ್ಟೆಯ ಶ್ರೀನಿವಾಸರಾವ್, ಬಿಜಾಡಿಯ ನಾರಾಯಣರಾವ್ ಅವರ ತಮ್ಮ ರಾಮಚಂದ್ರರಾವ್ ತೊಳವರು ಕುಮ್ಮಕ್ಕು ಕೊಟ್ಟಿದ್ದರು.

ಕೋಟೇಶ್ವರ ದೇವಸ್ಥಾನದಲ್ಲಿ ಕೋಟಿ ಲಿಂಗಗಳಿವೆಯೆಂದು ಪ್ರತೀತಿ. ಬಹಳ ಪುರಾತನವಾದ ದೇವಸ್ಥಾನ. ನಾವು ಕ್ಷೇತ್ರದೇವತೆಗೆ ಸರಿಹೊಂದುವಂತೆ ಕುಮಾರವ್ಯಾಸ ಭಾರತದಿಂದ "ಪಾಶುಪತಾಸ್ತ್ರ ವರ ಪ್ರದಾನ" ಕಥಾ ಭಾಗವನ್ನೆ ಆರಿಸಿಕೊಂಡಿದ್ದೆವು. ಕಾವ್ಯವಾಚನ ಕೇಳಿ ಕೋಟೇಶ್ವರದ ನನ್ನ ಬೀಗರುಬಂಧುಗಳು ಪಟ್ಟುಕೊಂಡ ಹೆಮ್ಮೆಗೆ ಅಳತೆಯೇಯಿರಲಿಲ್ಲ.

ಕೋಟೇಶ್ವರದ ಸುತ್ತಮುತ್ತಲೂ ಅಡ್ಡಾಡಿದೆವು. ಡಾ|| ಶಿವರಾಮ ಕಾರಂತರ ಜನ್ಮ ಸ್ಥಳ ಕೋಟ, ಕೋಟೇಶ್ವರಕ್ಕೆ ಕೇವಲ ಎರಡು ಮೂರು ಕಿಲೋ ಮೀಟರು ಫಾಸಲೆಯಲ್ಲಿದೆ. ಆ ಪ್ರದೇಶವನ್ನು ಹೆಮ್ಮೆಯಿಂದ ಹೊಕ್ಕೆವು. ಕೋಟದ ದೇವಸ್ಥಾನ ವನ್ನು ನೋಡಿ ಹಿಗ್ಗಿದೆವು. ಕಾರಂತರು ತಮ್ಮ ಕಾದಂಬರಿಗಳಲ್ಲಿ ಸೆರೆಹಿಡಿದಿರುವ ಜನ ಜಂಗುಳಿ ನಮ್ಮ ಕಣ್ಣ ಮುಂದೆಯೇ ಓಡಾಡುತ್ತಿತ್ತು. ಕಾರಂತರ ಕಾದಂಬರಿಗಳು ಎಷ್ಟು ವಾಸ್ತವವಾಗಿವೆ ಜನ ಜೀವನಕ್ಕೆ ! ಎಂಥ ಅಭಿಜ್ಞಾನ ಲೇಖನಿ ಬ್ರಹ್ಮ ನಮ್ಮ ಕಾರಂತರು! ನಾವು ಹೋಗಿದ್ದ ಸಮಯದಲ್ಲಿ ಕಾರಂತರು ಸಾಲಿಗ್ರಾಮದಲ್ಲಿ ನೆಲಸಿರಲಿಲ್ಲ.

ಕುಂಭಾಸಿ—ಇದು ಒಂದು ಪವಿತ್ರ ಕ್ಷೇತ್ರ. ಭಾರತದ ನಂಟನ್ನು ಪಡೆದಿದೆ. ಭೀಮ ಗಣಪತಿಯಿಂದ ಪಡೆದುಕೊಂಡ ಕತ್ತಿಯಿಂದ ಕುಂಭನೆಂಬ ರಾಕ್ಷಸನನ್ನು ಸಂಹಾರ ಮಾಡಿದನಂತೆ. ಅದರಿಂದ ಕುಂಭ+ಅಸಿ= ಕುಂಭಾಸಿ ಯೆಂದು ಹೆಸರು ಪಡೆ

ಯಿತು ಈ ಕ್ಷೇತ್ರ. ಸಣ್ಣ ಬೆಟ್ಟದ ಮೇಲೆ ನಮ್ಮ ಮುಂಡೋದರ ಗಣಪತಿ ನೆಲೆಸಿದ್ದಾನೆ. ಅವನ ದರ್ಶನವನ್ನು ಪಡೆದಾಯಿತು.

ಕೋಟೇಶ್ವರ ಬೀಳ್ಕೊಟ್ಟಿತ್ತು. ಉಡುಪಿ ಕ್ಷೇತ್ರ "ಬಾ" ಎಂದು ಕರೆಯುತ್ತಿತ್ತು. ಉಡುಪಿಗೆ ಹೋಗಿ ಮಧ್ವಸರೋವರದಲ್ಲಿ ಮುಳುಗು ಹಾಕಿದೆವು. ಶುಭ್ರವಸ್ತ್ರಗಳನ್ನುಟ್ಟು ಶ್ರೀ ಕೃಷ್ಣ ಸನ್ನಿಧಿಯಲ್ಲಿ ಕಡೆಗೋಲು ಕೃಷ್ಣನ ದರ್ಶನ ಪಡೆದೆವು. ರಾತ್ರಿಯ ಕಲಾಪ ಗಳನ್ನು ನೋಡಿ ಮಾರನೆಯ ದಿವಸ ಬೆಳಗ್ಗೆ ಮಂಗಳೂರಿಗೆ ಬಸ್ಸು ಹಿಡಿದೆವು.

ಮಂಗಳ ಗಂಗೋತ್ರಿಯಲ್ಲಿ "ಶ್ರೀ ರಾಮಾಯಣ ದರ್ಶನಂ" ವಾಚನ

ಕೋಟೇಶ್ವರದಿಂದ ಮಂಗಳೂರು ತಲಪಿದ ಕೂಡಲೆ ಒಂದು ಆಟೋರಿಕ್ಷದಲ್ಲಿ ಮಂಗಳ ಗಂಗೋತ್ರಿಯನ್ನು ತಲಪಿ, ಅಲ್ಲಿಯ ಬಿಡಾರದಲ್ಲಿ ನಮ್ಮ ಸಾಮಾನುಗಳನ್ನು ಇಳಿಸಿ, ನೇರವಾಗಿ ಸಂತ ಎಲೋಷಿಯಸ್ ಚರ್ಚನ್ನು ನೋಡಲು ಆಟೋರಿಕ್ಷದಲ್ಲಿ ಧಾವಿಸಿದೆವು. ಚರ್ಚನ್ನು ಪ್ರಶಾಂತವಾದ ಒಂದು ದಿಣ್ಣೆಯ ಮೇಲೆ ಕಟ್ಟಿದ್ದಾರೆ. ಅದರ ಚಾವಣಿಯೊಳಗೆ ಏಸು ಕ್ರಿಸ್ತನ ಜೀವನಕ್ಕೆ ಸಂಬಂಧಪಟ್ಟ ಬೃಹದ್ಪ್ರಮಾಣದ ವರ್ಣ ಚಿತ್ರಗಳನ್ನು ಬಿಡಿಸಿದ್ದಾರೆ. ತುಂಬ ಕಲಾತ್ಮಕವಾಗಿದೆ. ಚರ್ಚಿನ ಸನಿಹದಲ್ಲೆ ಬಾವುಟ ಗುಡ್ಡ. ಬಾವುಟ ಗುಡ್ಡದಿಂದ ಪಶ್ಚಿಮ ದಿಸೆಯಲ್ಲಿನೋಡಿದರೆ ಕಣ್ಣು ನೋಟ ಹೋಗುವ ವರೆಗೂ ಸಮುದ್ರ, ಮಧ್ಯಾಹ್ನ ಸೂರ್ಯನ ಬೆಂಗಿರಣಗಳಿಂದ ಪಸರಿಸಿ ಏರು ಬೀಳು ಬೆಳ್ಳಿ ತೆರೆಗಳಿಂದ ಝಗ ಝಗ ಕಣ್ಣು ಕೋರೈಯಿಸುತ್ತಿತ್ತು. ಮೊಗವೀರರ ಹಾಯಿ ದೋಣಿಗಳು ಬಿಳಿ ಬಟ್ಟೆ ಪಟಗಳನ್ನು ತ್ರಿಕೋಣಾಕಾರದಲ್ಲಿ ಕಟ್ಟಿಕೊಂಡು ಬೆಳ್ಳಕ್ಕಿ ಗಳಂತೆ ಮಧ್ಯಾಹ್ನದ ರಜತ ವರ್ಣ ಜಲರಾಶಿಯ ಮೇಲೆ ತೇಲುತ್ತಿದ್ದವು.

ಬಾವುಟ ಗುಡ್ಡ ಇಳಿದು ಆಟೋರಿಕ್ಷ ಏರಿ ನೇರವಾಗಿ ಸಮುದ್ರದತ್ತ ಧಾವಿಸಿದೆವು. ನೇತ್ರಾವತಿ ಮತ್ತು ಗುರುಪುರ ನದಿಗಳು ಸೇರಿ ಸಮುದ್ರವನ್ನು ಕೂಡುತ್ತವೆ. ಉಗಿನಾವೆ ಯಲ್ಲಿ ನೀಲ ನೀರಿನ ಮೇಲೆ ಹಾಯ್ದು ಸಮುದ್ರ ತೀರವನ್ನು ಸೇರುವ ಅನುಭವ ಬಹಳ ಮೋಜಿನದಾಗಿತ್ತು. ನದೀ ತೀರದ ಮೇಲೆ ಕಂಗುತೆಂಗುಗಳ ಹಸಿರಿನ ಹಿನ್ನಲೆಯಲ್ಲೆದ್ದು ಕಾಣುತ್ತಿದ್ದ ಭವ್ಯ ಕಟ್ಟಡಗಳ ಸುಂದರ ಮಂಗಳೂರು ನಗರದೃಶ್ಯ ರಮಣೀಯ ವಾಗಿತ್ತು. ಸಮುದ್ರ ತೀರ ಸಮೀಪಿಸಿತು. ಉಗಿ ನಾವೆಯಿಂದಿಳಿದು ಸಮುದ್ರದ ಸನಿಹ ವನ್ನು ಸೇರಿದೆವು. ಕಣ್ಣು ದಣಿಯುವಷ್ಟು ಸಮಯ ಭೋರ್ಗರೆವ ತೆರೆಗಳಬ್ಬರಗಬ್ಬರದ ಸಮುದ್ರವನ್ನು ಮನಸಾರ ನೋಡಿ ತಣಿದು ಹಿಂದಿರುಗಿ ಮಂಗಳ ಗಂಗೋತ್ರಿಯನ್ನು ತಲಪುವ ಹೊತ್ತಿಗೆ ಮಧ್ಯಾಹ್ನದ ಬಾನಿನ ಮಧ್ಯೆ ನೇಸರು ಏರಿತ್ತು. ಪರಮೇಶ್ವರ ಭಟ್ಟರು ತರಗತಿಗಳ ಪಾಠ ಪ್ರವಚನ ಮುಗಿಸಿ ತಮ್ಮ ಬಿಡಾರದಲ್ಲಿ ನಮಗಾಗಿ ಕಾದಿದ್ದರು.

ಸಂಜೆ ಮಂಗಳ ಗಂಗೋತ್ರಿಯಲ್ಲಿ ಶಕುಂತಲಾಬಾಯಿಯ "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನ ನಡೆಯಿತು. ಪರಮೇಶ್ವರ ಭಟ್ಟರೇ ಸಭೆಗೆ ನಮ್ಮನ್ನು ಪರಿ ಚಯ ಮಾಡಿಕೊಟ್ಟಿದ್ದರು.

ಕುಮಟೆಯಲ್ಲಿ ಸಾಹಿತ್ಯ ಸಾಂಸ್ಕೃತಿಕ ಕಾರ್ಯಕ್ರಮ

ದಕ್ಷಿಣ ಕನ್ನಡ ಜಿಲ್ಲೆಯಲ್ಲಾದಷ್ಟು ಗಮಕ ಪ್ರವಾಸ ಉತ್ತರ ಕನ್ನಡ ಜಿಲ್ಲೆಯಲ್ಲಿ ಸಾಧಿಸಲಾಗಲಿಲ್ಲ. ಕುಮಟೆಯಲ್ಲಿರುವ ಸಾರಸ್ವತ ಬಾಂಧವರ ಬಹು ಪ್ರಸಿದ್ಧ ಶ್ರೀ ಶಾಂತೇರಿ ಕಾಮಾಕ್ಷಿ ರಾಮನಾಥ ಲಕ್ಷ್ಮೀನಾರಾಯಣ ದೇವಸ್ಥಾನದ ಪೂರ್ಣ ಪ್ರತಿಷ್ಠ ರೌಪ್ಯ ಮಹೋತ್ಸವದ ಸಾಹಿತ್ಯ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಐದು ದಿವಸಗಳ ವರೆಗೆ ಕುಮಾರವ್ಯಾಸ ಭಾರತ ಮತ್ತು ಜೈಮಿನಿ ಭಾರತ ವಾಚನ ಮಾಡಬೇಕೆಂದು 1980ರಲ್ಲಿ ಶಕುಂತಲಾಬಾಯಿಗೆ ಕರೆ ಬಂತು. ಕುಮಟೆಯ ಕಾಲೇಜಿನ ಇಂಗ್ಲಿಷ್ ಪ್ರಾಧ್ಯಾಪಕರಾಗಿರುವ ಕೇರಂ ರಾಮರಾಯರ ದ್ವಿತೀಯ ಪುತ್ರ ಪ್ರೊ|| ಎಸ್. ಆರ್. ನಾರಾಯಣರಾಯರು ಈ ಕಾರ್ಯಕ್ರಮಕ್ಕೆ ಕಾರಣ. ಅವರಿಗೆ ನಮ್ಮ ಗಮಕ ವಾಚನ ಕಾರ್ಯಕ್ರಮವನ್ನು ಕುಮಟೆಗೇ ಸೀಮಿತಗೊಳಿಸದೆ ಹೊನ್ನಾವರ—ಅಂಕೋಲ —ಕಾರವಾರಗಳವರೆಗೆ ಹಮ್ಮಿಸಬೇಕೆಂದು ತುಂಬಾಸೆಯಿತ್ತು. ಆದರೆ ನಾವು ಕುಮಟೆಗೆ ಹೋದ ಕಾಲ ಏಪ್ರಿಲ್. ಶಾಲಾ ಕಾಲೇಜುಗಳಿಗೆ ಪರೀಕ್ಷಾಕಾಲ. ಸಾಧಾರಣವಾಗಿ ಕರ್ಣಾಟಕ ಸಾಹಿತ್ಯ ಸಂಸ್ಕೃತಿ ಚಟುವಟಿಕೆಗಳ ಅಧ್ವರ್ಯುಗಳು ಶಿಕ್ಷಕರೇ. ಅವರುಗಳೆಲ್ಲ ಸ್ವಸ್ಥಳದಲ್ಲಿ ಇರಲಿಲ್ಲ. ಹೀಗಾಗಿ ಹೊನ್ನಾವರ, ಅಂಕೋಲ, ಕಾರವಾರಗಳಲ್ಲಿ ಕಾವ್ಯ ವಾಚನ ಕಾರ್ಯಕ್ರಮವಾಗಲಿಲ್ಲ. ಶ್ರೀ ಶ್ರೀ ಪೇಜಾವರ ಮಠಾಧೀಶರಾದ ಶ್ರೀ ವಿಶ್ವೇಶ ತೀರ್ಥ ಪಾದಂಗಳವರು ಶ್ರೀ ಶಾಂತೇರಿ ಕಾಮಾಕ್ಷಿ ರಾಮನಾಥ ಲಕ್ಷ್ಮೀ ನಾರಾಯಣ ದೇವಸ್ಥಾನದ ರೌಪ್ಯ ಮಹೋತ್ಸವವನ್ನು ಉದ್ಘಾಟಿಸಿದರು. ಗೋಕರ್ಣ ಮಠದ ಶ್ರೀ ಪಾದಂಗಳವರು ಉಪಸ್ಥಿತರಾಗಿದ್ದರು. ಈ ಸಮಾರಂಭ ಮುಕ್ತಾಯ ವಾದ ಮೇಲೆ ನಮ್ಮ ಕಾವ್ಯವಾಚನ ಪ್ರಾರಂಭವಾಗುವುದಿತ್ತು. ಕುಮಟೆಯ ಬಹು ಮಂದಿಗೆ ತಾಯಿ ನುಡಿ ಕನ್ನಡವಲ್ಲ. ಕನ್ನಡ ಆಡುಭಾಷೆ. ಕನ್ನಡ ಸಾಹಿತ್ಯದಲ್ಲಿ ಆಸಕ್ತಿ ಇಲ್ಲ. ಉಪೇಕ್ಷೆಯೂ ಇಲ್ಲ. ಕೊಂಕಣಿ ಮರಾಠಿ ಭಾಷೆಗಳಾದರೆ ಸವಿ ಹೆಚ್ಚು. ಕರ್ಣಾಟಕ ಸಂಗೀತಕ್ಕಿಂತ ಉತ್ತರಾದಿ ಸಂಗೀತಕ್ಕೆ ಕಿವಿಗಳು ಹೆಚ್ಚು ಜೋತು ಬಿದ್ದಿವೆ. ನಾವು ಇಷ್ಟೆಲ್ಲ ತೊಡಕುಗಳನ್ನು ಎದುರಿಸಿ ಕನ್ನಡ ಕಾವ್ಯಗಳನ್ನು ಕುಮಟೆಯ ಬಾಂಧವರಿಗೆ ಮುಟ್ಟಿಸಬೇಕಾಗಿತ್ತು. ಹೀಗೆಂದರೆ ಕನ್ನಡ ಕಾವ್ಯಗಳನ್ನು ಕೇಳುವವರೇ ಇಲ್ಲವೆಂದರ್ಥ ವಲ್ಲ. ಕೇಳುವ ಜನರಿದ್ದರು ತಕ್ಕಮಟ್ಟಿಗೆ.

ಕುಮಾರವ್ಯಾಸ ಕಾವ್ಯದಲ್ಲಿ "ಕೃಷ್ಣರಾಯಭಾರ" ಕಥಾ ಪ್ರಸಂಗಕ್ಕೆ ಎರಡು ದಿವಸಗಳು ಮೀಸಲಾದವು. ಜೈಮಿನಿ ಭಾರತದಲ್ಲಿ "ಸುಧನ್ವ" "ಸೀತಾಪರಿತ್ಯಾಗ" ಕಥಾ ಭಾಗಕ್ಕೆ ಎರಡು ದಿವಸಗಳು ಮೀಸಲಾದವು

ಇಡುಗುಂಜಿಯ ಗಣಪ ದರ್ಶನ ಕರುಣಿಸಿದ.

ಕುಮಟೆಯ ಪ್ರವಾಸದಿಂದ ನಮಗೆ ಇಡುಗುಂಜಿಯ ಗಣಪನ ದರ್ಶನ ಲಭ್ಯ ವಾಯಿತು. ಎಲ್ಲಕಡೆಗಳಲ್ಲಿ ಗಣಪತಿ ಚತುರ್ಭುಜನಾಗಿದ್ದರೆ ಇಡುಗುಂಜಿಯಲ್ಲಿ ದ್ವಿಭುಜ

ನಾಗಿದ್ದಾನೆ. ಇಲ್ಲಿಯೂ ಗಣಪ ಒಬ್ಬ ಬಾಲಕನ ಎತ್ತರ. ಮೂರು ಮೂರೂವರೆ ಅಡಿ ಎತ್ತರದವನೆನ್ನೋಣವೇ ? ಹೌದು ಅಷ್ಟೇ ಪ್ರಮಾಣದವನು. ಬಾಲಕ ರೂಪಿನ ಇಡುಗುಂಜಿಯ ಗಣಪ, ಗೋಕರ್ಣದ ಗಣಪನಿಗೆ ಸಮನಾದವನು. ಬೇಡಿದವರ ಇಷ್ಟಾರ್ಥಗಳನ್ನು ಪೂರಯಿಸುವ ಇಡುಗುಂಜಿಯ ಗಣಪನಿಗೆ ಭಕ್ತಾದಿಗಳು ಅಪಾರ ವಾಗಿದ್ದಾರೆಂದು ಪ್ರತೀತಿ.

ಕುಮಟೆಯಿಂದ ಹೊನ್ನಾವರದ ಮಾರ್ಗವಾಗಿ ಬಸ್ಸು ಇಡುಗುಂಜಿಯನ್ನು ತಲ ಪುತ್ತದೆ. ಇಕ್ಕೆಲಗಳಲ್ಲಿ ಗಗನ ಚುಂಬಿ ಹೆಮ್ಮರಗಳು ಬೆಳೆದು ವಾಹನಮಾರ್ಗ ಮನೋ ಲ್ಲಾಸವನ್ನೀಯುತ್ತದೆ. ಬಸ್ಸಿನಲ್ಲಿ ಕೂತು ಹೋಗುವ ಪ್ರವಾಸಿಗರಿಗೆ ಸುಂದರ ನೋಟ ಲಭ್ಯ. ನಮಗೆ ನುಗ್ಗಾಟದಲ್ಲಿ ನಿಲ್ಲಲು ಸ್ಥಳ ಸಿಕ್ಕಿತು. ಚೈತ್ರ ವೈಶಾಖಗಳ ಬಿಸಲು ದಗೆ ಯಲ್ಲಿ ಏಸು ತಗ್ಗುಗಳು ಒಂದಾಗ ವಾಲುತ್ತಿದ್ದ ಪ್ರಯಾಣಿಕರ ಮಧ್ಯೆನಿಂತ ನಮ್ಮ ಪಾಡು ಏನಾಗಿರಬೇಕು ? ನೆನೆಸಿಕೊಂಡರೆ, ಅಬ್ಬಾ, ಸಾಕಪ್ಪ ಸಾಕು ಪ್ರವಾಸದ ಸುಖ ಎನ್ನಿಸುತ್ತದೆ. ಜಿವತು ಒಪ್ಪೆ ಮುಪ್ಪೆಯಾದ ದುರ್ವಾಸನೆಯ ಜನರ ಮಧ್ಯೆ ನಿಂತ ನಾವು ಹೊನ್ನಾವರದ ಸುಂದರ ನೋಟದ ಸೌಖ್ಯವನ್ನು ಕಳೆದುಕೊಂಡೆವು. ಇಡುಗುಂಜಿ ಯಿಂದ ಕುಮಟೆಗೆ ಹಿಂದಿರುಗುವಾಗ ಸಂಜೆ ಟ್ಯಾಕ್ಸಿಯಲ್ಲಿ ಬರೋಣವಾಯಿತು. ಹೊನ್ನಾವರದ ಇಕ್ಕೆಲಗಳ ಸುಂದರ ನೋಟ ಲಭಿಸಿ ನಮ್ಮ ಮನೋಲ್ಲಾಸ ಪೂರ್ಣವಾಯಿತು.

ನಾರಾಯಣರಾಯರ ಮನೆಯಲ್ಲಿ ಕುಮಾರವ್ಯಾಸ ಭಾರತ ವಾಚನವಾಯಿತು. ಅವರು ಆಗತಾನೆ ಮನೆಕಟ್ಟಿಸಿ ಮುಗಿಸಿದ್ದರು. ಮನೆಗೆ ನಾಮಕರಣ "ನಚಿಕೇತ." ನಾರಾಯಣರಾವ್ ಸುಶೀಲ ದಂಪತಿಗಳಿಗೆ ಶ್ರೇಯಸ್ಸು ಕೋರುವುದಕ್ಕೆ ಸರಿಯಾದ ಭಾಗವಾವುದು ಎಂದು ಯೋಚಿಸಿ ವಿದುರಾತಿಥ್ಯದ ಭಾಗವನ್ನು ಆರಿಸಿಕೊಂಡೆವು. ವಿದುರನ ಮನೆಗೆ ಬಂದು ಶ್ರೀ ಕೃಷ್ಣ ಹಾಲಿನ ಹೊಳೆಯನ್ನೇ ಹರಿಸಲಿಲ್ಲವೇ, ಹಾಗೆ ನಮ್ಮ ಮಿತ್ರ ನಾರಾಯಣರಾಯರ ಮನೆಯಲ್ಲಿ ಸದಾ ಹಾಲುಕ್ಕುತ್ತಿರಲಿ ಎಂಬ ಹಂಬಲ ನಮ್ಮದು.

"ಒಲವರವೆ ಕೌತುಕವು ಪಾಲ ಡ
ಲೊಳಗೆ ಮಲಗುವ ವಿಷ್ಣು ವಿದುರನ
ನಿಲಯದೊಳಗೊಕ್ಕುಡಿತೆ ಹಾಲಲಿ ಹಸಿವ ನೂಕಿದನು
ಹೊಲಬುಗೆಡಿಸಿದನಖಿಳ ನಿಗಮಂ
ಗಳನು ತನ್ನರಿಕೆಯಲಿ ಭಜಕಂ
ಗೊಲಿದು ತಾನೈತರಲು ಕರುಣದ ಘನತೆಯನೆ ಲೋಕ ॥

ಹರಿಯ ಪದಕಮಲಾಭಿಷೇಕದ
ವರ ಪಯೋ ಬಿಂದುಗಳು ಕೌರವ
ನರಮನೆಯ ನೊಳಕೊಂಬವೋಲ್ ಕಡಲಾಗಿ ಕೈಗೊಳಲು

ಅರರೆ ಮುರಹರನೊಡನೆ ಹಾಲಿನ
ಶರಧಿ ಮೇರೆಯನೊಡೆದುದಿಳೆಗ
ಚ್ಚರಿಯೆನುತ ಭೀಷ್ಮಾದಿಗಳು ಹೊಗಳಿದರು ಮುರಹರನ ॥

ಕುಮಟೆಯ ಪ್ರವಾಸ ಮುಗಿಯಿತು. ಎಸ್. ಆರ್. ನಾರಾಯಣರಾವ್ ದಂಪತಿಗಳು ಸಿಹಿಯೂಟ ಉಣಿಸಿ, ಬೇಡಬೇಡವೆಂದರೂ ಕುಮಟೆಯಿಂದ ಬೆಂಗಳೂರಿಗೆ ತಗಲುವ ಬಸ್ ದರ ಕೊಟ್ಟು, ಜ್ಞಾಪಕ ಚಿಹ್ನೆಯಾಗಿ ಕುಮಟೆಯ ಕುಶಲ ಗುಡಿಗಾರರು ಬಿಡಿಸಿದ ಗಂಧದ ಮರದ ಕೆತ್ತನೆ ಆಂಜನೇಯನ ವಿಗ್ರಹ ಹಾಗೂ ಗಂಧದ ಮರದ ಸುಂದರ ಕರಂಡವನ್ನು ಉಡುಗರೆಯಾಗಿತ್ತು ಬಸ್ಸು ಹತ್ತಿಸಿದರು. ನಮಗೆ ನಾರಾಯಣ ರಾವ್ ದಂಪತಿಗಳು ತೋರಿಸಿದ ಒಲವು ನಲವುಗಳು ಮದರಾಸಿನಲ್ಲಿ ನಮ್ಮ ಗೋಪೀನಾಥ್ ಸುಂದರಾಬಾಯಿ ದಂಪತಿಗಳು ತೋರಿಸಿದ ಪ್ರೀತಿ ವಿಶ್ವಾಸಗಳನ್ನು ಮರುಕಳಿಸಿ ಭಾವಪರವಶರನ್ನಾಗಿಸಿದವು.

೭. ಅರವತ್ತರ ವಸಂತದಲ್ಲಿ "ಚಿತ್ರಾಂಗದ" ಕಾವ್ಯವಾಚನ

ಶಕುಂತಲಾಬಾಯಿಗೆ ಅರವತ್ತು ವರ್ಷ ತುಂಬಿದ ವರ್ಷದಲ್ಲಿ ಆಕೆಯ ನಲವತ್ತ ನಾಲ್ಕನೆಯ ವರ್ಷದ ಗಮಕ ಜೀವನಯಾತ್ರೆಯಲ್ಲಿ ಚಿರಸ್ಮರಣೀಯವಾಗಿ ನಡೆದ ಗಮಕ ವಾಚನ 1981ರ ಜುಲೈ ತಿಂಗಳ 25-26ನೇ ದಿನಾಂಕಗಳಲ್ಲಿ ದಾವಣಗೆರೆಯ "ಕಲಾರಂಗ"ದ ಆಶ್ರಯದಲ್ಲಿ ಕನ್ನಡ ನಾಡಿನ ಸುಪ್ರಸಿದ್ಧ ಕಾದಂಬರಿಗಾರ್ತಿ ಎಂ. ಕೆ. ಇಂದಿರಾ ಅವರ ಅಧ್ಯಕ್ಷತೆಯಲ್ಲಿ ಸಮಾವೇಶವಾದ ಅಖಿಲ ಕರ್ಣಾಟಕ ಲೇಖಕಿಯರ ಸಮ್ಮೇಳನದಲ್ಲಿ. ಕುವೆಂಪು ಅವರ "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನಕ್ಕಾಗಿಯೇ ವಿಶೇಷಾಹ್ವಾನವಿತ್ತು "ಕಲಾರಂಗ" ಶಕುಂತಲಾಬಾಯಿಯನ್ನು ಕರೆಸಿಕೊಂಡಿತ್ತು. ಶಕುಂತಲಾಬಾಯಿಯೇ ತಮ್ಮ ಪ್ರಾರ್ಥನೆಯಿಂದ ಲೇಖಕಿಯರ ಸಮ್ಮೇಳನವನ್ನು ಪ್ರಾರಂಭಿಸಿದರು—ಅವರು ಪ್ರಾರ್ಥನೆಗೆ ಕುವೆಂಪುರವರ "ಚಿತ್ರಾಂಗದ" ಮಹಾಛಂದಸ್ಸಿನ ಕಾವ್ಯದಿಂದ ಸರಸ್ವತಿಯ ಪ್ರಾರ್ಥನೆಯನ್ನು ಆರಿಸಿಕೊಂಡಿದ್ದರು. ಕುವೆಂಪು ಚಿತ್ರಾಂಗದಾ ಕಾವ್ಯವನ್ನು ರಚಿಸಿದ್ದು 1936ರಲ್ಲಿ. ಭಾರತದ ಕೃಷ್ಣಗಿರಿ ಕೃಷ್ಣರಾಯರು ಕವಿಗಳ ಸಮ್ಮುಖದಲ್ಲಿ "ಚಿತ್ರಾಂಗದ" ಹಸ್ತಪ್ರತಿಯಲ್ಲಿದ್ದಾಗಲೇ ಕಾವ್ಯವಾಚನ ಮಾಡಿದ್ದರಂತೆ. ಆ ವಿಷಯ ಕುರಿತು ಕುವೆಂಪು ಹೀಗೆ ಹೇಳುತ್ತಾರೆ—

> "ರಾಗ ರಹಿತವಾದ ಧೀರ ಶೈಲಿಯಿಂದ ಓದುವುದಕ್ಕೆ ಸಾಧ್ಯವಾಗುವಂತೆಯೆ ರಾಗ ಸಹಿತವಾಗಿ ಭಾರತವೋದಿದಂತೆ ಓದಲೂ ಸಾಧ್ಯ ಎಂಬುದನ್ನು ಗಮಕಿವರ್ಯರಲ್ಲೊಬ್ಬರಾಗಿರುವ ಶ್ರೀಮಾನ್ ಕೆ. ಕೃಷ್ಣರಾಯರು ಮನೋಹರವಾಗಿ ನಿರ್ದೇಶಿಸಿದ್ದಾರೆ ಎಂದು ಹೇಳಲು ಹೆಮ್ಮೆಯಾಗುತ್ತದೆ." *

ಆದರೆ "ಚಿತ್ರಾಂಗದ" ಕಾವ್ಯವಾಚನ ಕವಿವರ್ಯರ "ಉದಯ ರವಿ" ಮನೆಯ ಹೊಸ್ತಿಲನ್ನು ದಾಟಿ ಗಮಕ ಮಾರ್ಗದಲ್ಲಿ ಸಾರ್ವಜನಿಕರ ಕಿವಿಗಳನ್ನು ಹೊಕ್ಕಿದ್ದು 1981ರಲ್ಲೇ ಎಂದರೆ ಯಾರೂ ತಪ್ಪಾಗಿ ಗ್ರಹಿಸಬಾರದು. 1972ರಲ್ಲಿ ನಾವು ಕುವೆಂಪು ಅವರನ್ನು ಮೈಸೂರಲ್ಲಿ ಅವರ ಮನೆಯಲ್ಲಿ ಸಂದರ್ಶಿಸಿದಾಗ "ಚಿತ್ರಾಂಗದ" ಕಾವ್ಯದ ಪ್ರಸ್ತಾಪ ಬಂತು. ಶಕುಂತಲಾಬಾಯಿ ಕಾವ್ಯದ ಹೆಸರು ಕೇಳಿದ್ದರು. ನಾನು ಓದಿದ್ದೆ. ಈ ಕಾವ್ಯವನ್ನು ಗಮಕಕ್ಕೆ ತರಬಹುದೆ ಎಂಬ ವಿಷಯ ಮಂಥನವಾಯಿತು. ಕವಿವರ್ಯರು "ಚಿತ್ರಾಂಗದ" ಕಾವ್ಯವನ್ನು ಕೊಟ್ಟು "ಪ್ರಯತ್ನಿಸಿ" ಎಂದರು. ಮಾತು ಅಷ್ಟಕ್ಕೇ ನಿಂತಿತು. 3-1-1972ರಲ್ಲಿ ನಮ್ಮ ಕೈ ಸೇರಿದ "ಚಿತ್ರಾಂಗದ" ಸಾರ್ವಜನಿಕ

---

* "ಚಿತ್ರಾಂಗದ"—ಐದನೇ ಮುದ್ರಣ—1969 ಉದಯ ರವಿ ಪ್ರಕಾಶನ. ಅರಿಕೆ. ಕುವೆಂಪು (6-10-1936) ಪುಟ vvi

ವೇದಿಕೆಯ ಮೇಲೆ ದಾವಣಗೆರೆಯ ಅಖಿಲ ಕರ್ಣಾಟಕ ಲೇಖಕಿಯರ ಸಮ್ಮೇಳನದಲ್ಲೇ ಗಮಕ ಪ್ರಸಾರ ಕಂಡುದು. 25–7–1981ರ ದಿವಸ ; ಎಷ್ಟು ವರ್ಷಗಳು ?

ಶಕುಂತಲಾಬಾಯಿ ಗಮಕದ ಶೈಲಿಯಲ್ಲಿ ಮಾಡಿದ "ಚಿತ್ರಾಂಗದ" ಕಾವ್ಯದ ಸರಸ್ವತೀ ಪ್ರಾರ್ಥನೆ ಇಂತಿದೆ—

ಬ್ರಹ್ಮ ಮಾನಸ ಮಹದ್‌ಗರ್ಭ ಸಂಭವೆ, ವಿರಾಟ್
ಪ್ರಭವೆ, ಭವ್ಯಾನಂದ ವಿಭವೆ, ಶಾರದೆ, ವರದೆ,
ಭಾವ ಚಿಂತಾಖನಿಯೆ, ಶಿಖಿವಾಹನೆಯೆ, ವಾಣಿ,
ಭುವನ ಮೋಹನ ಮಧುರ ದಿವ್ಯ ವೀಣಾ ಪಾಣಿ.
ವಾಗ್ದೇವಿ, ಸರಸ ಕವಿತಾ ಕಲಾ ಕಲ್ಯಾಣಿ,
ತುಂಬುವೆನು ನಿನ್ನಮಲ ಪಾದಪಂಕೇಜದಲಿ
ಮುಂಗುರುಳು ದುಂಬಿಗಳನೆಲೆ ತಾಯೆ, ಕೃಪೆಗೈದು
ಕಂದನಂ ಕಾರುಣ್ಯದಿಂ ಕಂಡು ಜಡಮತಿಗೆ
ದಿವ್ಯವೈದ್ಯುತಚೇತನವನಿತ್ತು ನಲಿದೊಲಿದು
ನರ್ತಸಂಗೈಯೆನ್ನ ಜಿಹ್ವೆಯಲಿ. ನಿನ್ನಿಂದೆ,
ಹೇ ಕಾವ್ಯಕಾಮಿನಿಯೆ, ಭುವನ ಸ್ವರ ಮೇಲನದಿ
ನಿಯಮ ಸಂಯಮ ಪೂರ್ಣ ಮಾಧುರ್ಯವುಕ್ಕುತಿದೆ
ಸ್ವಚ್ಛಂದಮಾನಂದ ಶೀಲಂ ! ಆ ಸ್ಫೂರ್ತಿಯಂ
ದಯಪಾಲಿಸೆನಗೆ ನಾನುಲಿಯಲಿಹ ಗಾನದಲಿ
ಸ್ವಾತಂತ್ರ್ಯ ಮಾಧುರ್ಯ ಸಂಯಮಂಗಳ್ ಪೂಣ್ಕೆ,
ನನ್ನ ಕನ್ನಡನಾಡಿನೆರ್ದೆಪೂವರಳ್ವವೋಲ್.
ಓ ಕಲ್ಪನಾ ಸುಂದರಿಯೆ, ನಿನ್ನ ಮಹಿಮೆಯೊಳೆ
ವ್ಯಾಧನಾದನಾ ಪ್ರಥಮಕವಿ ! ಪಸುಳೆ ನಾಂ, ತಾಯೆ,
ನೀನೊಮ್ಮೆ ಚುಂಬಿಸಲ್ಕೆನ್ನೀ ತೊದಲ್ವ ತುಟಿ
ಗಾನಗೈಯದೆ ಪೇಳ್ ಬೃಹತ್ ಕಾವ್ಯ ಸಂಗೀತೆಯಂ ?
ಮಲಿನ ಮುಕುರಂ ಮಹಾಸೂರ್ಯನಂ ಕನ್ನಡಿಸಿ
ತಿರೆಗೆ ಕಾಂತಿಯನೀಯಲೆಳಸಿ ಹಿಗ್ಗುವ ತೆರದಿ,
ಪಸುಳೆ ತಾನಾ ದೂರದರಿಲಂ ಪಿಡಿದು ತನ್ನ
ಕೈ ದೀವಿಗೆಯ ರಚಿಸಲಾಟಿಪೋಲ್, ಉನ್ಮತ್ತ
ಸಾಹಸಿ ದಿಗಂತಮಂ ಬೆಂಬತ್ತಿ ತುಡುಕುವೋಲ್,
ವಾಲ್ಮೀಕಿ ವ್ಯಾಸಾದಿ ಪಂಪ ರನ್ನರ ದಿವ್ಯ
ಕೀರ್ತಿಕಾಮಿನಿಯಡಿಗಳಮಲತರ ಧೂಳಿಯಂ
ಶಿರದೊಳಾನುವ ಪುಣ್ಯಮಂ ಬಯಸಿ, ಹೇ ದೇವಿ
ನಿನ್ನೆದೆ ತುಂಬಿ ಪ್ರಾರ್ಥಿಸುವೆ : ಕೃಪೆದೋರ್ದೆನಗೆ
ನಿನ್ನ ವೀಣಾಪಾಣಿಯಂ ನೀಡು, ಓ ತಾಯೆ !

ಸಂಪ್ರದಾಯ ಬದ್ಧರಿಗೆ ''ಗಣೇಶ ದರ್ಶನ'' ಮತ್ತು ''ಗಣೇಶ ಗಾಥೆ.''

ಹಿರಿಯೂರು ವರ್ಷವರ್ಷವೂ ಗಣಪತಿ ಉತ್ಸವವನ್ನು ವಿಜೃಂಭಣೆಯಿಂದ ಆಚರಿಸುವ ಪದ್ಧತಿಯನ್ನು ನಡೆಸಿಕೊಂಡು ಬಂದಿದೆ. ಅ. ನ. ಕೃ. ಮಿತ್ರ ವೃಂದ ಆ

ಊರಲ್ಲಿ ಸಾಕ್ಷಿದೆ. ಅವರ ಬೆಂಬಲಿಗರು ಕನ್ನಡ ಚಳವಳಿಗೆ ಬೇಕಾದಷ್ಟು ಪುಷ್ಟಿ ಕೊಟ್ಟಿದ್ದಾರೆ. ಕೆಲವು ವರ್ಷಗಳು ನಾಟಕೋತ್ಸವಗಳನ್ನು ನಡೆಸಿರಬೇಕು. ಅಖಿಲ ಕರ್ನಾಟಕ ವ್ಯಾಪ್ತಿಯ ವರ್ಚಸ್ಸನ್ನು ಹಿರಿಯೂರು ನಾಟಕೋತ್ಸವ ಪಡೆದಿತ್ತೆಂದು ನನ್ನ ನೆನಪು. ಅ. ನ. ಕೃ. ಮಿತ್ರರಾದ ಶ್ರೀಕಂಠಾವಧಾನಿಗಳ ಹೆಸರ ಹಿರಿಯೂರಿನಲ್ಲಿ ಮನೆ ಮಾತು. ಅವರು ಹಿರಿಯೂರಿನ ಉತ್ಸವಗಳಿಗೆ ನಾಯಕ ಮಣಿ

1966ರಲ್ಲಿ ನಾವು ಮೊದಲ ಬಾರಿ ಗಣೇಶೋತ್ಸವಕ್ಕೆ ಆಹ್ವಾನಿತರಾಗಿ ಹೋದೆವು. ಕುಮಾರವ್ಯಾಸ ಭಾರತ ವಾಚನವೋ: ಅಥವಾ "ಕರ್ನಾಟಕ ಕವಿ ಕಾವ್ಯ ಪರಂಪರೆ" ಗಮಕ ರೂಪಕ ವಾಚನವೋ, ಮರೆತಿದ್ದೇನೆ ; ಅಂತೂ ಒಂದು ಕಾವ್ಯವಾಚನ ಕಾರ್ಯಕ್ರಮ ನಡೆಯಿತು. ಜನ ಚಪ್ಪರದಲ್ಲಿ ನೆರೆದಿತ್ತು. ಕಾವ್ಯವಾಚನ ಯಶಸ್ವಿಯಾಗಿ ಮುಂದಿನ ವರ್ಷ ರಾಮೋತ್ಸವದಲ್ಲಿ "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನ ಮಾಡುವುದಕ್ಕೆ ಪೀಠಿಕೆಯಾಯಿತು. 1968ರಲ್ಲೂ ಗಣೇಶೋತ್ಸವದಲ್ಲಿ ಭಾಗವಹಿಸಬೇಕೆಂದು ಶ್ರೀಕಂಠಾವಧಾನಿಗಳು ಕರೆ ಕಳಿಸಿದರು. ಸೆಪ್ಟೆಂಬರ್ 5 ನೆಯ ದಿನಾಂಕ. ಆ ದಿನದ "ಪ್ರಜಾವಾಣಿ" ದಿನ ಪತ್ರಿಕೆಯಲ್ಲಿ ನಾನು ಮೊದಲ ಪುಟದಲ್ಲಿ ಮೊದಲ ಅಂಕಣದಲ್ಲಿ ನನ್ನ ಭಾವಚಿತ್ರ ಸಹಿತ ಭಾರತ ಕೇಂದ್ರದಿಂದ ಶಿಕ್ಷಕರ ರಾಷ್ಟ್ರಪ್ರಶಸ್ತಿ ಪಡೆದು ಸುದ್ದಿ ಮಾಡಿದ್ದೆ. ಅದು ಹಿರಿಯೂರಿಗೆಲ್ಲ ಸಾಕಷ್ಟು ಪ್ರಚಾರ ಕೊಟ್ಟಿತ್ತು. ಶ್ರೀಕಂಠಾವಧಾನಿಗಳಿಗಂತು ತುಂಬ ಆನಂದವಾಗಿತ್ತು. ಬಸ್ಸಿನಿಂದ ಇಳಿಯುತ್ತಲೆ ನಮಗೆ ಹಿರಿಯೂರಿನ ಸಾಹಿತ್ಯಾಭಿಮಾನಿಗಳಿಂದ ಸುಸ್ವಾಗತ ದೊರೆಯಿತು.

ಈ ಸಲದ ಕಾವ್ಯವಾಚನದಲ್ಲಿ ನಾವೊಂದು ತಿರುವು ಕೊಟ್ಟೆವು. ಪು. ತಿ. ನರಸಿಂಹಾಚಾರ್ಯರ "ಗಣೇಶ ದರ್ಶನ" ಕವನ ವಾಚನವೇ ಆ ತಿರುವು. "ಗಣೇಶ ದರ್ಶನ" ನೀಳ್ಗವನವನ್ನು ಪು. ತಿ. ನ. ರಚಿಸಿರುವುದು ನನಗೆ ತಿಳಿದಿತ್ತು. ಇನ್ನೂ ಓದಿರಲಿಲ್ಲ. 1964 ಕ್ಕೋ 65 ಕ್ಕೋ ಇರಬಹುದು. ಬೆಂಗಳೂರಿನ ನೆಹರೂ ನಗರದ ಬಡಾವಣೆಯಲ್ಲಿರುವ ಬ್ರಾಹ್ಮಣ ಭಿಕ್ಷಾನ್ನ ನಿಲಯ ತಾನಾಚರಿಸುವ ವರ್ಷವರ್ಷದ ಒಂದು ಗಣೇಶೋತ್ಸವದಲ್ಲಿ ಪ್ರೊ|| ಡಿ. ಎಲ್. ನರಸಿಂಹಾಚಾರ್ಯರನ್ನು ಕರೆಸಿಕೊಂಡು ಅವರ ಉಪನ್ಯಾಸವನ್ನೇರ್ಪಡಿಸಿತು. ನರಸಿಂಹಾಚಾರ್ಯರು ಹಳೆಯ ಜಾಡು ಬಿಟ್ಟು ಪು. ತಿ. ನ. ಅವರ "ಗಣೇಶ ದರ್ಶನ" ನೀಳ್ಗವನ ವಾಚನವನ್ನು ಬಹಳ ಸ್ವಾರಸ್ಯವಾಗಿ ಕೊಟ್ಟರು. ಪು. ತಿ. ನ. ರ ನವಿರು ಹಾಸ್ಯವನ್ನು ವಿವರಿಸಿ ಸಭೆಯನ್ನು ನಗೆಗಡಲಲ್ಲಿ ಮುಳುಗಿಸಿದರು. ಆಗ ನನಗನ್ನಿಸಿತು, ಪು. ತಿ ನ. ರ "ಗಣೇಶ ದರ್ಶನ" ಕವನದ ಗಮಕ ವಾಚನವನ್ನು ಯಾವುದಾದರೂ ಸರಿಯಾದ ಸಂದರ್ಭದಲ್ಲಿ ನಾವೇಕೆ ಮಾಡಬಾರದೆಂದು? ಅದಕ್ಕೆ ಸರಿಯಾದ ಅವಕಾಶ ಹಿರಿಯೂರಿನ ಗಣೇಶೋತ್ಸವದಲ್ಲಿ ದೊರೆಯಿತು. ಸಭೆಗೆ "ಗಣೇಶ ದರ್ಶನ" ಹೊಸದು. ಆದುದರಿಂದ ಪ್ರಾರಂಭದ ಅರ್ಧ ಗಂಟೆ ಮಾತ್ರ ಗಣೇಶ ದರ್ಶನಕ್ಕೆ ಉಪಯೋಗಿಸಿಕೊಂಡೆವು—

ದೇವರನೆರೆಯುದೆ ಕಾವ್ಯದ ರಚನೆಯೆ
ನುತಿಯುರಿ ಇಲ್ಲದೆ ಭಾವದ ಪಚನೆಯೆ ?
ತಪ್ಪಿದೆನಾದೊಡೆ ತಿದು ವೆನೀಗ
ದೇವತೆಯೊಂದನು ನೆನೆ ಮನ ಬೇಗ—
ಎನಲೀ ನಗೆಬಗೆಗಿಂಬಾಗುತ್ತ
ಬಂದಿತು ಬೆನಕನ ಭಾವನೆಯಿತ್ತ.
ಬುದ್ಧಿಯ ನೀಡೈ ಗಣಾಧಿನಾಯಕ
ಸಿದ್ಧಿಯ ತೋರೈ ಗಣಾಧಿನಾಯಕ
ವಿಘ್ನನಿವಾರಕ ಗಣಾಧಿನಾಯಕ
ಹೆಗ್ಗಣವೇರುವ ಗಣಾಧಿನಾಯಕ
ಆನೆಯ ಮೊಗವಾಡವ ಧರಿಸಿದನೇ
ಡೊಳ್ಳು ಹೊಟ್ಟೆಗೆ ನಾಗರ ಬಿಗಿದವನೇ
ಶಶಿಪೋರನ ನಗೆಗಿಂಬಾದವನೇ
ದಯ ಮಾಡಯ್ಯಾ ದಂತಾಯುಧನೇ—

ಇಂತಾಚಾರ್ಯರ ಅನುಮತಿ ಇಲ್ಲದೆ
ಸಮ್ಮತ ವಿಷ್ವಕ್ಸೇನರನೊಲ್ಲದೆ
ಚೌತಿಯ ದಿನದೊಳು ಬೆನಕನ ಭಾವಿಸೆ
ನನ್ನ ಬಳಿಗೊಂದು ಮೂಷಕ ಧಾವಿಸೆ
ಗಜ ಮುಖನೈತಂದನೋ ಎನ್ನುತ ನಾ
ಸಂಭ್ರಮಿಸುತ ಕಂಡೆನು ಸನ್ನುತನ.

ಮನಸೊಳಗೆ ಕವಿ ನೆನೆದುದೆ ತಡ, ಗಣಪ, "ಎನ್ನಾರಾಧಿಸ ಮೋಹವ ಬಿಟ್ಟಿಹೆ ಆದೊಡೆ ನನ್ನೊಳು ನೇಹವನಿಟ್ಟಿಹೆ" ಎನ್ನುತ್ತ, "ಕಡುಬಿಲ್ಲವೊ ಕಡುಬಿಲ್ಲವೊ ನನಗೆ ಏಕೆ, ವಾಹನಕೂ ಇಲ್ಲ." ಎನ್ನುತ್ತ, "ಪಕ್ಕದ ಕುರ್ಚಿಯ ಪೀಠದಿ . . . . ದುಂಡನೆ ಕಾಲ್ಗಳ ಮೇಲೆತ್ತಿಟ್ಟು ಹೊಟ್ಟೆಯ ಮೇಗಡೆ ಸೊಂಡಿಲನಿಟ್ಟು"ಕುಳಿತೇಬಿಟ್ಟ. "ಗಣೇಶ ದರ್ಶನ" ಕವನದ ಒಳ ತಿರುಳು ಇಲ್ಲಿಂದ ಮುಂದುವರಿಯುತ್ತದೆ. ಗಣಪನಿಗೂ ಕವಿಗೂ ಆಗುವ ವಿನೋದ ಸಂಭಾಷಣೆ ಓದುಗ ಕೇಳುಗ ಇಬ್ಬರನ್ನೂ ಸ್ವಾರಸ್ಯದ ಮಡಿಲಲ್ಲಿ ಕೆಡವುತ್ತದೆ. ಗಣಪ ತನ್ನ ಹುಟ್ಟನ್ನು, ಕೈಲಾಸದಲ್ಲಿರುವ ತನ್ನ ಸ್ಥಾನವನ್ನು ಮನೋಜ್ಞವಾಗಿ ಚಿತ್ರಿಸುತ್ತಾನೆ. ಕೈಲಾಸ ದರ್ಶನ ಕಣ್ಣು ಮುಂದೆ ಬಂದು ನಿಲ್ಲುತ್ತನೆ. ತಾಂಡವ ನೃತ್ಯ ಕಣ್ಣಿಗೆ ಚಿತ್ರ ಕಟ್ಟುತ್ತದೆ.

ನಮಶ್ಶಂಕರ ತಾಂಡವೇಶ್ವರ ಭೋ
ನಮಶ್ಶಿವ ಶಿವ ಸುಂದರೇಶ್ವರ ಭೋ
ಅಷ್ಟಮೂರ್ತಿಗಳೆತ್ತಿ ಕುಣಿಪನೆ ಭೋ
ಸಕಲ ಸೃಷ್ಟಿಯನೊತ್ತಿ ಕುಣಿಪನೆ ಭೋ
ನಮೋ ವಿಷಧರ ವಿಷಮನಯನ ವಿಭೋ
ನಮಶ್ಚಿನ್ಮಯ ಸದಾನಂದ ಪ್ರಭೋ
ಎಲ್ಲ ಕರಗುವ ಪರಮ ಸಮುದ್ರವೇ

ಎಲ್ಲ ರುಚಿಗಳ ಕೊಳ್ಳ ರಸಪದವೇ
ಭಾನುಬುದ್ಬುದ ತೇಜದಾಗರವೇ
ಶ್ರುತಿಯೆ ದೆಸೆಗೆಡೆ ಜ್ಞಾನಸಾಗರವೇ
ಎಲ್ಲರಹವನು ಹೀರುವನೆ ಹರನೇ
ಎಲ್ಲರಲಿವನು ಮೀರುವನೆ ಪರನೇ
ಭೋ ಮಹಾನಾಟ್ಯಾಟ್ಟಹಾಸನೆ ಓಂ
ಲೀಜಾಯೂ ಮಂದಹಾಸನೆ ಓಂ
ಏಕಮೇವಾದ್ವಿತೀಯಾ ವಂದೇ
ಶರಣು ಕರುಣಿಸು ಕರುಣಿಸೈ ತಂದೆ."

ಪು. ತಿ. ನ ಕವನಗಳನ್ನು ಓದುವ ಅವಕಾಶ, ಅವರ ಷಷ್ಟಿ ಪೂರ್ತಿ ಸಮಾರಂಭದಲ್ಲಿ ಶಕುಂತಲಾಬಾಯಿಗೆ ಗಾಂಧೀ ಸಾಹಿತ್ಯ ಸಂಘದ ಕೃಪೆಯಿಂದ ದೊರೆಯಿತು. ಆದ್ಯ ರಂಗಾಚಾರ್ಯರು ಅಧ್ಯಕ್ಷತೆ ವಹಿಸಿದ್ದರು. "ಮಲೆ ದೇಗುಲ" ದಿಂದ ಒಂದೆರಡು ಕವನಗಳನ್ನು, "ರಸ ಸರಸ್ವತಿ" ಕವನ ಸಂಗ್ರಹದಿಂದ ಚತುಷ್ಪಾದಗಳ 11 ಪದ್ಯಗಳ "ಚೆಲುವ ನಾರಾಯಣ" ಕವನವನ್ನು ಹಾಡಿದರು.

ಪು. ತಿ. ನ ಅವರಿಗೆ ಶಕುಂತಲಾಬಾಯಿಯ ಗಮಕ ಅಚ್ಚು ಮೆಚ್ಚು. ಕೆಲವು ವರ್ಷಗಳ ಕೆಳಗೆ ಡಾ|| ವಿ. ಕೃ ಗೋಕಾಕರಿಗೆ "ಮಕ್ಕಳ ಮಂಟಪ"ದ ಮನೆಯಲ್ಲಿ ಒಂದು ಸಂತೋಷ ಕೂಟ. ಪು. ತಿ. ನ ರ ಅಧ್ಯಕ್ಷತೆ. ಗೋಕಾಕರು ಶಕುಂತಲಾಬಾಯಿಯ ಭಾರತ ವಾಚನ ಕೇಳಬಯಸಿದರು. ಶಕುಂತಲಾಬಾಯಿ "ಕರ್ಣ ಕುಂತೀ ಸಮಾಗಮ" ಭಾಗದಲ್ಲಿ "ವೀರ ರವಿಸುತನೊಂದು ದಿನ" ಪದ್ಯದಿಂದ "ಆದೊಡೈವರು ಮಕ್ಕಳನು" ಹತ್ತು ಪದ್ಯಗಳನ್ನು ವಾಚಿಸಿದರು. ಆ ಸಂದರ್ಭದಲ್ಲಿ "ಶಂಕರಾಭರಣ" ರಾಗ ಬಳಸಿದ್ದರು. ಪು. ತಿ. ನ. ತಮ್ಮ ಅಧ್ಯಕ್ಷ ಭಾಷಣದಲ್ಲಿ ಶಕುಂತಲಾಬಾಯಿ ಬಳಸಿದ ಶಂಕರಾಭರಣ ರಾಗವನ್ನು ಪ್ರಸ್ತಾಪಿಸಿದರು. "ಮದರಾಸು ಕಡೆಯ ಸಂಗೀತ ವಿದ್ವಾಂಸರಿಗೆ ಕಡಮೆಯಿಲ್ಲದಂತೆ ಶಕುಂತಲಾಬಾಯಿ ಶಂಕರಾಭರಣ ರಾಗ ಸಂಚಾರವನ್ನು ನಿರ್ವಹಿಸಿದರು ಗಮಕದಲ್ಲಿ" ಎಂದು ಮೆಚ್ಚುನುಡಿ ನುಡಿದರು.

ಪು. ತಿ. ನ. ನಮ್ಮನ್ನು ವಿಶ್ವಾಸದಿಂದ ನಡೆಸಿಕೊಳ್ಳುವ ರೀತಿ ಯಾವ ಜನ್ಮದ ಪುಣ್ಯವೋ ನಮ್ಮದೆಂದು ನಮ್ಮ ಮನಸ್ಸು ಕಳಕಳಿಯಿಂದ ಕೇಳಿಕೊಳ್ಳುತ್ತದೆ

ಸಂಪ್ರದಾಯಸ್ಥ ಮಹಿಳೆಯರಿಗೆ ನವ್ಯ ಧಾಟಿಯ "ಗಣೇಶ ಗಾಥ"

ದಾವಣಗೆರೆಯ ಲೇಖಿಕೆಯರ ಸಮ್ಮೇಳನವಾದ ಮಾರನೆಯ ದಿನವೇ ಶಕುಂತಲಾಬಾಯಿಗೆ ಹರಿಹರದ ಗಮಕ ಕಲಾಭಿಮಾನಿಗಳಿಂದ ಕರೆ ಬಂತು. ಅಲ್ಲೊಂದು ಗಮಕ ತರಗತಿಯನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಗಂಗಮ್ಮ ಕೇಶವ ಮೂರ್ತಿ ಅತ್ಯುತ್ಸಾಹ ಶ್ರದ್ಧೆಗಳಿಂದ ನಡೆಸುತ್ತಿದ್ದಾರೆ ; ಅಷ್ಟೇ ಅಲ್ಲ, ಅವರು ಸ್ವತಃ ಉತ್ತಮ ಗಮಕ ವಿದುಷಿಯಾಗಿ ಪ್ರತಿ ವಾರವೂ ತಪ್ಪದೆ ಹರಿಹರೇಶ್ವರನ ಸನ್ನಿಧಿಯಲ್ಲಿ ಲಕ್ಷ್ಮೀ

ದೇವಸ್ಥಾನದ ಮಂಟಪದಲ್ಲಿ ಕುಮಾರವ್ಯಾಸ ಭಾರತ ವಾಚನ ಮಾಡುತ್ತಿದ್ದಾರೆ. ಅವರೇ ಕಾರಣ, ಶಕುಂತಲಾಬಾಯಿಯ ಕಾವ್ಯವಾಚನದ ಏರ್ಪಾಡಿಗೆ.

ಶಕುಂತಲಾಬಾಯಿ ಹರಿಹರದ ಲಕ್ಷ್ಮೀ ದೇವಸ್ಥಾನ ಮಂಟಪದ ವೇದಿಕೆಯಿಂದ "ಅಗ್ನಿ ಹಂಸ" ಕವನ ಸಂಗ್ರಹದಲ್ಲಿ ಪ್ರಾಮುಖ್ಯವಾಗಿರುವ "ಗಣೇಶ ಗಾಥ" ಕಾವ್ಯ ಪ್ರಬಂಧವನ್ನು ವಾಚಿಸಲು ಇಷ್ಟಪಟ್ಟರು. ಸಭೆಯೂ ಆಗಬಹುದೆಂದಿತು. ಹಿರಿಯೂರಿನಲ್ಲಿ 1968 ರಲ್ಲಿ ಗಣೇಶೋತ್ಸವದಲ್ಲಿ ಶಕುಂತಲಾಬಾಯಿ ಪು. ತಿ. ನರಸಿಂಹಾಚಾರ್ಯರ "ಗಣೇಶ ದರ್ಶನ" ಕಾವ್ಯ ಪ್ರಬಂಧವನ್ನು ಪ್ರಯೋಗಾರ್ಥವಾಗಿ ವಾಚನ ಮಾಡಿದ್ದರು. ಈಗಲೂ ಅದೇ ಮನೋಭಾವದಿಂದ ಇಲ್ಲಿ ಕುವೆಂಪು ಅವರ "ಗಣೇಶ ಗಾಥ" ವಾಚಿಸುವ ಇಚ್ಛೆಯಿಂದ ಕೂಡಿದ್ದರು. ಹರಿಹರದ ಶ್ರೋತೃಗಳು ಕುಮಾರವ್ಯಾಸನಿಗೆ ಪಳಗಿದವರು. ಬಹುತೇಕವಾಗಿ ಮಹಿಳೆಯರೇ ಹೆಚ್ಚು. ಅವರಿಗೆ "ಗಣೇಶ ಗಾಥ" ಹೊಚ್ಚ ಹೊಸದು.

"ಗಣೇಶ ಗಾಥ" ಇನ್ನೂರೈವತ್ತು ಸಾಲುಗಳಲ್ಲಿ ಹರಡಿಕೊಂಡಿರುವ ಸುದೀರ್ಘ ಕವನ ಪ್ರಬಂಧ. **ಆಗಮನ, ಆತಿಥ್ಯ** ಮತ್ತು **ಪ್ರಯಾಣ,** ಹೀಗೆ ಮೂರು ಭಾಗಗಳಲ್ಲಿ ವಿಸ್ತಾರಗೊಂಡಿದೆ.

೧–ಆಗಮನ—

"ನೀಲವ್ಯೋಮ ವಿಶಾಲ ಪಥದಲಿ
ಶ್ರಾವಣ ನೀರದ ನೀಲ ರಥದಲಿ
ಗೌರಿ ಗಣೇಶರು ಬರುವರದೊ।

ಭಾದ್ರಪದಾದಿಯ ಶಾದ್ವಲ ವೇದಿಯ
ಶ್ಯಾಮಲ ಪೃಥಿವಿಯ ಕೋಮಲ ವಕ್ಷಕೆ
ಶ್ರೀ ಕೈಲಾಸವ ತರುವರದೊ !"

ಎಂದು ಪ್ರಾರಂಭವಾಗುತ್ತದೆ. ಮುಗಿಲಿನ ತೇರಿನ ವರ್ಣನೆ ಬಹು ಭವ್ಯವಾಗಿದೆ. ಕವಿಯ ಭಾವ ಮುಗಿಲು ಮುಟ್ಟಿದೆ. ಭೂ ದೇವಿಯ ಐಸಿರಿ ಪ್ರಕೃತಿಯೇ ಮಲೆನಾಡಿನ ಸಿರಿಯಾಗಿ ಕೈಲಾಸದ ಗೌರಿ ಗಣೇಶರ ಮುಗಿಲ ತೇರನ್ನು ಸಿಂಗರಿಸಿದ ಮೇಲೆ ಕೇಳಬೇಕೇನು ತೇರಿನ ಅಂದ ಚೆಂದಗಳನ್ನು ! "ಬೃಂದಾವನ ಸಾರಂಗ"ದಿಂದ ಪ್ರಾರಂಭಿಸಿದರು.

ಸುತ್ತುತ್ತಿಳಿವಾ ಮುತ್ತಿನ ತೇರ್
ಬಂತದೊ, ಬಂತದೊ, ಬಂತದೊ ಪಾರ್ !
. . . .
ಪೋ, ಬಳಿ ಸಾರ್ ; ಬಾ, ಬಾ, ಬಾ ಬಳಿಸಾರ್ ;
ಇಳಿಯಿತು, ನೆಲ ಮುಟ್ಟಿತು ದೇವರ ತೇರ್ !
. . . .
. . . . . . , ...
ಎಲ್ಲರು ಬನ್ನಿ ; ಎಲ್ಲರು ಬನ್ನಿ
ಹಿರಿಯರು ಬನ್ನಿ ; ಕಿರಿಯರು ಬನ್ನಿ

ಸರುವರು ಐತನ್ನಿ
"ನಮುಸ್ಕಾರ ! ನಮುಸ್ಕಾರ !
"ನಮುಸ್ಕಾರ!" ಎನ್ನಿ
. . . .
. . . . , .
"ನಮುಸ್ಕಾರ ದೇವಿ !"

ಈ ಸಾಲುಗಳಲ್ಲಿ ಗೌರಿ ಗಣೇಶ ಭಕ್ತರ ಭಕ್ತಿಪರವಶತೆ ಬಾನೆತ್ತರ ಮುಟ್ಟುತ್ತದೆ. ಗಮಕ ವಿನ್ಯಾಸವೂ ಅಷ್ಟೇ ಎತ್ತರದ ನಿಲುವು ಮುಟ್ಟಿತು.

೨–ಆತಿಥ್ಯ—

"ಓಂ ಮಂಗಳ, ಹ್ರೀಂ ಮಂಗಳ, ಓಂ ಹ್ರೀಂ ಓಂ !
ಓಂ ಸತ್ಯಕೆ, ಹ್ರೀಂ ಧರ್ಮಕೆ, ಓಂ ಹ್ರೀಂ ಓಂ !
ಒಲವಿಗೆ ಓಂ, ಓಂ, ಓಂ, ಓಂ, ಓಂ !
ಶಾಂತಿಗೆ ಓಂ, ಸತ್ವಕೆ ಓಂ, ಓಂ, ಓಂ, ಓಂ !

ಎಂಬ ಸಾಲುಗಳಿಂದ ಪ್ರಾರಂಭ. ಇಲ್ಲಿ ಗಮಕ ವಿನ್ಯಾಸವು ವೇದ ಮಂತ್ರ ಘೋಷದಂತೆಯೇ ನಡೆಯಿತು. ಆತಿಥ್ಯದ ವರ್ಣನೆ ಕವಿ ಕಲ್ಪನೆಯಲ್ಲಿ ಮೇರು ಶಿಖರ ಮುಟ್ಟಿದೆ. ಗಮಕ ವಿನ್ಯಾಸವೂ ಅದಕ್ಕೆ ಸರಿಸಮಾನವಾಗಿತ್ತು. ಸುಮಾರು ಒಂದು ನೂರ ಹನ್ನೊಂದು ಪಂಕ್ತಿಗಳು. ಗಣೇಶನನ್ನು ಉಪಚಾರಗಳಿಂದ ಸತ್ಕರಿಸುವ ಬಗೆ ಮನೋಹರವಾಗಿದೆ. ಸಂಗೀತದಿಂದ, ಅರ್ಘ್ಯ ಪಾದ್ಯಗಳಿಂದ, ನಾನಾಬಗೆಯ ಹಣ್ಣು ಹಂಪಲುಗಳು, ಪಾನೀಯಗಳು, ತಿಂಡಿ ತಿನಿಸುಗಳು "ಯಾವುದು ಬೇಕೋ ? ಯಾವುದು ಸಾಕೋ ?" "ಕೋ" ಎಂದು ವಿನೀತರಾಗಿ ಕೇಳಿಕೊಳ್ಳುವುದಂತೂ ಹೃದಯಂಗಮ. ಅಷ್ಟೇ ಹೃದಯಂಗಮವಾಗಿ ನಡೆಯಿತು ಗಮಕ ವಿನ್ಯಾಸ.

೩–ಪ್ರಯಾಣ—

ಪ್ರಯಾಣದ ಘಟ್ಟವಂತೂ ಹೃದಯ ಕಲಕುವ ಸನ್ನಿವೇಶ. "ನೀವ್ ಬಂದೆಲ್ಲಾ ವಾರವೂ ಮುಗಿದಿಲ್ಲ" ಕಳಿಸಿಕೊಡಬೇಕೆ ಇಷ್ಟು ಬೇಗ ಎಂದು ಗೌರಿ ಗಣೇಶರ ಭಕ್ತರಿಗೆ ವರ್ಣಿಸಲಾರದ ಸಂಕಟ. ಅಂಥದರಲ್ಲೂ ಅವರು ಪರಶಿವನನ್ನು ಲೇವಡಿ ಮಾಡುವುದಕ್ಕೆ ಹಿಂದೆಗೆಯುವುದಿಲ್ಲ.

"ಐತರ ವೈರಾಗಿಯೋ ಅವನು !
ನೀವು ಬಂದೆಲ್ಲಾ
ವಾರವು ಮುಗಿದಿಲ್ಲ
ದೂತರ ಹಿಂಗಡೆ ದೂತರನಟ್ಟಿ
ಅಲ್ಲಿಗೆ ಇಲ್ಲಿಗೆ ಸೇತುವೆ ಕಟ್ಟಿ
ಕಾತರನಾದನೆ ಪರಶಿವನು ?
. . . .

. . . .

ನಿಮ್ಮೊ ಸಂಗದ ಪುಣ್ಯಸ್ಮರಣೆಯ ಜೊತೆ ಬಂದು
ಸವಿ ಸೂದೆಯಲಿ ಈ ವಿಷು ಸಂವತ್ಸರವೊಂದು.

"ಏತರ ವೈರಾಗಿಯೊ ಅವನು !" ಈ ಸಾಲು ಬಹು ಮುಖ್ಯ. ಹತ್ತು ಸಾಲುಗಳ ಅಂಕಣದಲ್ಲಿ ಗಮಕ ವಿನ್ಯಾಸದ ದೃಷ್ಟಿಯಿಂದ ಈ ಸಾಲನ್ನು ಹಲವಾರು ಸಲ ಹೊರಳಿಸಿ ಹೊರಳಿಸಿ ಉಳಿದ ಸಾಲುಗಳನ್ನೂ ಅರ್ಥ ಭಾವ ಕೆಡದಂತೆ ಈ ಸಾಲಿನ ಮಧ್ಯೆ ಪುನರಾವರ್ತಿಗೊಳಿಸಿ, ಸಂದರ್ಭಾನುಸಾರ ಒತ್ತಿಯೊತ್ತಿ ಹಾಸ್ಯ ರಸ ಸ್ಫುರಿಸುವಂತೆ ಮಾಡಿದ ಗಮಕ ವಿನ್ಯಾಸ ಶ್ರೋತೃಗಳನ್ನು ನಗುವಂತೆ ಮಾಡಿತು. "ಗಣೇಶ ಗಾಥ" ನಮ್ಮ ಮತ್ತು ಕವಿವರ್ಯರ ಸ್ವಸಂತೋಷಗಳಿಗಾಗಿ ಧ್ವನಿಮುದ್ರಿಕೆಯ ಕ್ಯಾಸೆಟ್ಟಲ್ಲಿ ಮೂಡಿಬಂದಿದೆ. ಕುವೆಂಪು ತನ್ಮಯರಾಗಿ ಕೇಳುತ್ತಿದ್ದಾಗ "ಏತರ ವೈರಾಗಿಯೋ ಅವನು !" ಗಮಕ ವಿನ್ಯಾಸವನ್ನು ಕೇಳಿ ಮುಗುಳು ನಗು ಸೂಸಿದ ಸಂದರ್ಭ ಮರೆಯಲಾರದ ರಸ ನಿಮಿಷ.

ಇಂದೇ ಬೀಳ್ಕೊಳ್ಳುವಿರೇನ್ ತಾಯಿ ?
ಬೀಳ್ಕೊಳ್ಳಿ ಎನ್ನಲ್ ಬರುವುದೆ ಬಾಯಿ ?

. . . .

ಈ ಸಾಲುಗಳು ಅಂತಃಕರಣದ ಕರುಳುಗಳನ್ನು ಕೀಳುವ ಸಂದರ್ಭ. ಇಲ್ಲಿಯ ಗಮಕ ವಿನ್ಯಾಸ ಶ್ರೋತೃಗಳ ಹೃದಯ ಕಲಕಿ ಕಂಬನಿಯ ತೊಟ್ಟುಗಳನ್ನು ಮಿಡಿಸಿತು.

ಸುಖವಾಗಲಿ ಗಾಳಿಯ ಬಟ್ಟೆಯ ಪಯಣಂ ;
ಸುಖವಾಗಲಿ ಮೋಡದ ನಾಡಿನ ಪಯಣಂ ;
ಸುಖವಾಗಲಿ ರವಿ ಶಶಿ ತಾರೆಯ ಪಯಣಂ ;
ಸುಖವಾಗಲಿ ಕೈಲಾಸಕೆ ಶ್ರೀ ಪಯಣಂ !

. . . .

ಈ ಸಾಲುಗಳು ಗೌರಿ ಗಣೇಶರನ್ನು ಸಂತೋಷದಿಂದ ಕೈಲಾಸಕ್ಕೆ ಬೀಳ್ಕೊಡುವ ಸಂದರ್ಭ. ಮುಗಿಲಿನಿಂದ ಇಳಿದು ಬಂದ ತೇರ್ ಮುಗಿಲಿಗೇ ಮುಟ್ಟಬೇಕಲ್ಲ !.

ಏರಿತು ತೇರ್ ಮೋಡದ ತೇರ್
ನೋಡದೊ ದೂರ, ದೂರ, ದೂರ.
ನಮುಸ್ಕಾರ, ನಮುಸ್ಕಾರ
ಶಿವಕುಮಾರ !
ನಮುಸ್ಕಾರ, ನಮುಸ್ಕಾರ
ನಮುಸ್ಕಾರ !

ಶಕುಂತಲಾಬಾಯಿ 1947ರಲ್ಲಿ ಪ್ರಾರಂಭಿಸಿದ ಕರ್ನಾಟಕ ಗಮಕ ಯಾತ್ರೆ 1981ರಲ್ಲಿ ತಮ್ಮ ಅರವತ್ತನೆಯ ವರ್ಷದ ವಸಂತದಲ್ಲಿ ಒಂದು ಗುರಿ ಮುಟ್ಟಿತು ಕರ್ನಾಟಕದಲ್ಲಿ.

೮. ದೆಹಲಿ ಕೇಂದ್ರದಲ್ಲಿ ಗಮಕ ವಾಚನ ಪ್ರಸಾರ

ನಾವು ಆಕಾಶವಾಣಿ ಕಲಾವಿದರಾದೆವು

1942ರ ಸುಮಾರು ಜುಲೈ, ಆಗಸ್ಟ್ ತಿಂಗಳಿನಲ್ಲಿರಬಹುದು, ನಾನು ಮತ್ತು ಶಕುಂತಲಾಬಾಯಿ ಮೈಸೂರು ರಾಜಧಾನಿಯಲ್ಲಿ ಡಾ|| ಎಂ. ವಿ. ಗೋಪಾಲಸ್ವಾಮಿಯವರ ನೇತೃತ್ವದಲ್ಲಿ ನಡೆಯುತ್ತಿದ್ದ ಆಕಾಶವಾಣಿ ಕ್ಷೇತ್ರವನ್ನು ಪ್ರವೇಶ ಮಾಡಿದೆವು. ಆ ಸಮಯದಲ್ಲಿ ನಾನು ಸಂಸಾರವನ್ನು ಮೈಸೂರಿನಲ್ಲಿ ನಡೆಸುತ್ತಿದ್ದೆ. ಮೈಸೂರಿನ ಹಳ್ಳದ ಕೇರಿಯ ಸನಿಹದಲ್ಲಿದ್ದ ಬಹಳ ಹಳೆಯ ಯು. ಜಿ. ಟಿ. (ಅಂಡರ್ ಗ್ರ್ಯಾಜುಯೇಟ್ಸ್ ಟ್ರೇನಿಂಗ್) ಕಾಲೇಜಿನ ಶಿಕ್ಷಕ ವಿದ್ಯಾರ್ಥಿಯಾಗಿ ನಾನು ಮೈಸೂರಿಗೆ ಹೋಗಿದ್ದುದೇ ನನ್ನ ಸಂಸಾರ ಸ್ಥಾನಪಲ್ಲಟಕ್ಕೆ ಕಾರಣವಾಗಿತ್ತು. ನಮ್ಮಲ್ಲಿ ತುಂಬ ಪ್ರೀತಿ ವಿಶ್ವಾಸ ಗೌರವಗಳನ್ನು ತಳೆದಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ ಗೌ|| ಕಾರ್ಯದರ್ಶಿ ಕ. ವೆಂ. ರಾಘವಾಚಾರ್ಯರು ಆಕಾಶವಾಣಿಯ ನಿರ್ದೇಶಕರಾಗಿದ್ದ ಸುಪ್ರಸಿದ್ಧ ನಗೆಬರಹ ಸಾಹಿತಿ ನಾ. ಕಸ್ತೂರಿ ಅವರಿಗೆ ಗಮಕ ವಿದುಷಿ ಶಕುಂತಲಾಬಾಯಿ ಪಾಂಡುರಂಗರಾವ್ ಮತ್ತು ಸಾಹಿತಿ ಪಾಂಡುರಂಗರಾವ್ ದಂಪತಿಗಳನ್ನು ಮೈಸೂರು ಆಕಾಶವಾಣಿ ತನ್ನ ಕಾರ್ಯಕ್ರಮಗಳಿಗೆ ಉಪಯೋಗಿಸಿಕೊಳ್ಳಬಹುದೆಂದು ಶಿಫಾರಸು ಪತ್ರ ಬರೆದಿದ್ದರು. ನಮ್ಮ ಅಭಿಮಾನಿಗಳಾದ ಕಸ್ತೂರಿಯವರು ತಕ್ಷಣವೇ ನನ್ನನ್ನು ಪತ್ರ ಬರೆದು ಕರೆಸಿಕೊಂಡು ಆಕಾಶವಾಣಿ ಕಾರ್ಯಕ್ರಮಗಳನ್ನು ಕೊಟ್ಟರು.

ಶಕುಂತಲಾಬಾಯಿ ಮೈಸೂರು ಆಕಾಶವಾಣಿಯಿಂದ ಮೊದಲಸಲ ಶ್ರೀನಿವಾಸರ "ಅಭಿಮನ್ಯು" ಕಥನ ಕವನವನ್ನು ಗಮಕವಾಚನದಲ್ಲಿ ಪ್ರಸಾರ ಮಾಡಿದರು. ನಾನೂ ಮೈಸೂರು ಆಕಾಶವಾಣಿಯನ್ನು ಉಪಯೋಗಿಸಿಕೊಂಡೆ. ಮೊದಲ ಸಲ "ಕನ್ನಡ ಸಣ್ಣ ಕಥೆಗಳು" ಎಂಬ ಕಾರ್ಯಕ್ರಮದಲ್ಲಿ ಭಾಗವಹಿಸಿದೆ. ಮೈಸೂರು ಮಹಾರಾಜ ಕಾಲೇಜಿನಲ್ಲಿ ಇಂಗ್ಲಿಷ್ ಭಾಷಾ ಉಪನ್ಯಾಸಕರಾಗಿದ್ದ ಕೆ. ನರಸಿಂಹಮೂರ್ತಿಯವರು "ಕನ್ನಡ ಸಣ್ಣ ಕಥೆಗಳು", ನಾನು "ಶ್ರೀನಿವಾಸರ ಸಣ್ಣ ಕಥೆಗಳು", ಸೋದರ ಸಂಘದ "ಶೇಷು" (ಎಸ್. ಶೇಷಾದ್ರಿ) "ಆನಂದರ ಸಣ್ಣ ಕಥೆಗಳು" ಎಂಬ ಪ್ರಬಂಧಗಳನ್ನು ಓದಿದೆವು. ಸಂಭಾವನೆ ಒಟ್ಟು ಹತ್ತು ರೂಪಾಯಿಗಳು. ನರಸಿಂಹಮೂರ್ತಿ ಮತ್ತು ಎಸ್. ಶೇಷಾದ್ರಿ ಸರಕಾರಿ ನೌಕರರಾಗಿದ್ದ ಪ್ರಯುಕ್ತ ಸಂಭಾವನೆಯನ್ನು ಪೂರ್ತಿ ನನ್ನ ಹೆಸರಿನಲ್ಲಿ ಪಡೆದೆ. ಮೂವರೂ ಹಂಚಿಕೊಂಡೆವು. ಈ ಮೊದಲ ಆಕಾಶವಾಣಿ ಕಾರ್ಯಕ್ರಮದ ಪ್ರಯೋಜನವೆಂದರೆ ಕೆ. ನರಸಿಂಹಮೂರ್ತಿಯವರ ಸ್ನೇಹ ಸಂಪಾದನೆ. ಇಂಗ್ಲಿಷ್ ಮತ್ತು ಕನ್ನಡ ಸಾಹಿತ್ಯಗಳಲ್ಲಿ ವಿದ್ವಾಂಸರಾದ ನರಸಿಂಹಮೂರ್ತಿ ಶ್ರೇಷ್ಠ ವರ್ಗದ ವಿಮರ್ಶಕರು. ಕನ್ನಡ ಸಾಹಿತ್ಯ ಪರಿಷತ್ತಿಗೆ "ಅತ್ಯುತ್ತಮ ಕನ್ನಡ ಸಣ್ಣ ಕಥೆಗಳು" ಎಂಬ ಸಣ್ಣ ಕಥೆಗಳ ಸಂಕಲನವನ್ನು ಸಂಪಾದಿಸಿಕೊಟ್ಟಿದ್ದಾರೆ. ಕಾಲಕ್ರಮದಲ್ಲಿ ಮೈಸೂರು ಮಹಾರಾಜ

ಕಾಲೇಜಿನ ಶಿಕ್ಷಕವೃತ್ತಿಯನ್ನು ಬಿಟ್ಟು ನಮ್ಮ ರಾಜ್ಯ ಸರಕಾರದಲ್ಲಿ ಉನ್ನತ ಮಟ್ಟದ ಅಧಿಕಾರಿಗಳಾಗಿ, ಡಿವಿಜನಲ್ ಕಮೀಷನರಾಗಿದ್ದು ಈಗ ನಿವೃತ್ತರಾಗಿದ್ದಾರೆ. ನಮ್ಮ "ಶೇಷು" ಅವರೂ ಅಷ್ಟೆ. 1942–43ರವರೆಗೆ ನಮ್ಮ ಸಣ್ಣ ಕತೆ ನಡೆದು ಬಂದ ದಾರಿಯಲ್ಲಿ 'ಉತ್ತಮ' ಸಣ್ಣ ಕತೆಗಾರರಾಗಿ ಜನಪ್ರಿಯರಾಗಿದ್ದರು. ಅವರ ಸಣ್ಣ ಕತೆಗಳು "ಕತೆಗಾರ" "ಜಯ ಕರ್ಣಾಟಕ" ಮೊದಲಾದ ಕನ್ನಡ ಮಾಸ ಪತ್ರಿಕೆಗಳಲ್ಲಿ ವಿಪುಲವಾಗಿ ಪ್ರಕಟ ವಾಗುತ್ತಿದ್ದವು. "ಆಲದ ಹೂ" ಎಂಬ ಸಣ್ಣ ಕತೆ "ಪ್ರಬುದ್ಧ ಕರ್ಣಾಟಕ"ದಲ್ಲೂ ಕಾಣಿಸಿ ಕೊಂಡಿತು. ಸಂಸಾರ ಚಿತ್ರಗಳನ್ನು ತಮ್ಮ ಲೇಖನಿ ಕುಂಚದಿಂದ ಬಿಡಿಸುವುದರಲ್ಲಿ ಸಿದ್ಧ ಹಸ್ತರಾದ ಅವರ ಸಣ್ಣ ಕತೆಗಳ ಸಂಗ್ರಹ "ಅನುರಾಗ" ಕಥಾ ಸಂಕಲನ ಪ್ರಕಟವಾಗಿ ಅವರ ಹೆಸರನ್ನು ನೆನಪಿಗೆ ಉಳಿಸಿವೆ. ನಮ್ಮ ರಾಜ್ಯದ ವಿದ್ಯಾ ಇಲಾಖೆಯಲ್ಲಿ ಪ್ರೌಢ ಶಾಲಾ ಮುಖ್ಯೋಪಾಧ್ಯಾಯರಾಗಿ, ಸೇವೆ ಸಲ್ಲಿಸಿ ನಿವೃತ್ತರಾಗಿ ವಿಶ್ರಾಂತರಾಗಿದ್ದಾರೆ.

1943ರ ಏಪ್ರಿಲ್ ತಿಂಗಳ ಹೊತ್ತಿಗೆ ನನ್ನ ಮೈಸೂರು ಶಿಕ್ಷಕ ವಿದ್ಯಾರ್ಥಿ ಜೀವನ ಮುಗಿಯಿತು. ಸಂಸಾರ ಸಮೇತ ಬೆಂಗಳೂರಿಗೆ ಹಿಂದಿರುಗಿದೆ. ನಾನು ಹಿಂದೆ ಎಲ್ಲಿ ಮುಖ್ಯೋಪಾಧ್ಯಾಯನಾಗಿದ್ದೆನೋ ಆ ಮಾಡೆಲ್ ಇನ್‌ಫೆಂಟ್ ಸ್ಕೂಲಲ್ಲಿ ಮುಖ್ಯೋ ಪಾಧ್ಯಾಯನಾಗಿ ನನ್ನ ಅಧಿಕಾರ ವಹಿಸಿಕೊಂಡೆ. ಮೈಸೂರು ಆಕಾಶವಾಣಿಯ ಸಂಪ ರ್ಕವೂ ಆ ವರ್ಷಕ್ಕೇ ನಿಂತುಹೋಯಿತು.

1943ರ ಡಿಸೆಂಬರ್ 12ರಂದು ನನಗೆ ಎರಡನೆಯ ಮಗುವಿನ ಜನನವಾಯಿತು. ಆ ಮಗುವೇ ಬಿ. ಪಿ. ಮೋಹನ್ ಕುಮಾರ.

ಶಕುಂತಲಾಬಾಯಿ ಎ. ಐ. ಆರ್. ಕಲಾವಿದೆಯಾದರು

ಮೈಸೂರು ಆಕಾಶವಾಣಿ 1950ರ ಹೊತ್ತಿಗೆ ಭಾರತ ಕೇಂದ್ರಕ್ಕೆ ಹೊಂದಾಣಿಕೆ ಯಾಗಿ ಆಲ್ ಇಂಡಿಯಾ ರೇಡಿಯೋ (ಎ. ಐ. ಆರ್.) ಎನ್ನಿಸಿಕೊಂಡಿತ್ತು. **ಆಡಿ ಷನ್**ಗೆ ಕರೆಯಿತು ಶಕುಂತಲಾಬಾಯಿಯನ್ನು. ಈ ಕರೆ ಅನಿರೀಕ್ಷಿತವಾಗಿತ್ತು. ಕಾರಣ ಮೈಸೂರು ಬಿಟ್ಟಮೇಲೆ ಆಕಾಶವಾಣಿಯ ಕಾರ್ಯಕ್ರಮಕ್ಕೆ ಆಸೆಪಟ್ಟು ಆಕೆ ತಾನಾಗಿ ಅರ್ಜಿ ಗುಜರಾಯಿಸಿಕೊಂಡಿರಲಿಲ್ಲ. ಅದು ಆಕೆಯ ಸ್ವಭಾವವೂ ಅಲ್ಲ. "ನಿಮ್ಮ ಸ್ವಂತ ಖರ್ಚಿನಲ್ಲಿ ಬಂದು 'ಆಡಿಷನ್' ಕೊಡಬೇಕೆಂದು" ಕರೆಯಲ್ಲಿ ತಿಳಿಸಿತ್ತು. ಶಕುಂತಲಾ ಬಾಯಿ, "ನಾನು 1942–43ರ ಸಾಲಿನಲ್ಲಿ ಮೈಸೂರು ಆಕಾಶವಾಣಿಯಲ್ಲಿ ಕಾವ್ಯವಾಚನ ಮಾಡಿದ್ದೇನೆ. ನಾನು ಬೆಂಗಳೂರಿನಲ್ಲಿ–ಪರಸ್ಥಳಗಳಲ್ಲಿ ಕಾವ್ಯವಾಚನ ಮಾಡಿ ಜನಪ್ರಿ ಯಳಾಗಿದ್ದೇನೆ. ಕನ್ನಡ ಸಾಹಿತ್ಯ ಪರಿಷತ್ತಿನ ಗಮಕ ತರಗತಿಗಳಿಗೆ ಪಾಠ ಹೇಳಿದ್ದೇನೆ. ಗಮಕ ಪರೀಕ್ಷೆಗಳಿಗೆ ಪರೀಕ್ಷಕಳಾಗಿದ್ದೇನೆ. "ಆಡಿಷನ್" ಕೊಡಲು ಸಿದ್ಧಳಾಗಿಲ್ಲ" ಎಂದು ತನ್ನ ಅಭಿಪ್ರಾಯವನ್ನು ಸ್ಪಷ್ಟಪಡಿಸಿ ಕೈತೊಳೆದುಕೊಂಡರು. ಆಕಾಶವಾಣಿ 'ಆಡಿಷನ್' ಮನ್ನಾಮಾಡಿ ನೇರವಾಗಿ ಕಾರ್ಯಕ್ರಮದ ಕರಾರು ಪತ್ರವನ್ನು ಹತ್ತು ಹದಿನೈದು ದಿವಸಗಳ ಮೇಲೆ ಕಳಿಸಿತು. ಹೀಗೆ ಶಕುಂತಲಾಬಾಯಿ 1950ರಿಂದ ಆಕಾಶ

ವಾಣಿಯು ಗಮಕ ಕಲಾವಿದೆಯಾಗಿ ಪ್ರಾರಂಭಿಸಿದ ಗಮಕವಾಚನ ಯಾಗ ಅವ್ಯವಚ್ಛಿನ್ನ ವಾಗಿ ಈವರೆಗೆ ನಡೆಯುತ್ತಿದೆ.

ಆಕಾಶವಾಣಿಯಲ್ಲಿ ಪ್ರಾಚೀನ ಕಾವ್ಯವಾಚನಗಳು

ಕೆಲವು ವರ್ಷಗಳಲ್ಲೇ ಮೈಸೂರು ಆಕಾಶವಾಣಿ ಬೆಂಗಳೂರಿಗೆ ವರ್ಗವಾಯಿತು. ಅದರ ವ್ಯಾಪ್ತಿ ವಿಸ್ತರಿಸಿತು. ಕಾವ್ಯವಾಚನದ ಅವಧಿ 15 ನಿಮಿಷಗಳು. ಸಂಭಾವನೆ 15 ರೂಪಾಯಿಗಳು. ಕ್ರಮೇಣ ಸಂಭಾವನೆ 30 ರೂಪಾಯಿಗಳಿಗೆ ಹೆಚ್ಚಿತು. 45 ರೂಪಾಯಿ ತುದಿ ಮುಟ್ಟಿತು. 75 ರೂಪಾಯಿಗಳಿಗೆ ಏರಿತು. ಈಗ 100 ರೂಪಾಯಿಗಳ ಗುರಿ ಮುಟ್ಟಿದೆ. 15 ನಿಮಿಷಗಳ ಕಾರ್ಯಕ್ರಮ 9 ನಿಮಿಷಗಳಿಗೆ ಇಳಿದಿವೆ. 9 ನಿಮಿಷಗಳಲ್ಲಿ ಶ್ರೋತೃಗಳ ಮನಮುಟ್ಟುವಂತೆ ಸ್ವಾರಸ್ಯ, ರಸಭಾವ ಕೆಡದಂತೆ ಕಥಾಭಾಗವನ್ನು ಗಮಕಮಾಡುವುದು ಗಮಕಿಗಳಿಗೆ ಕಷ್ಟವಾಗಿದೆ. ಗಂಟಲು ಒತ್ತುತ್ತಿದೆ ಕಾಲ ಪರಿಮಿತಿ.

1950ರಿಂದ ಸುಮಾರು ನಾಲ್ಕು ವರುಷಗಳವರೆಗೆ ಶಕುಂತಲಾಬಾಯಿ ತಮ್ಮ ಆಕಾಶವಾಣಿಯ ಕಾವ್ಯವಾಚನಗಳನ್ನು ಕುಮಾರವ್ಯಾಸನಿಗೇ ಮೀಸಲಾಗಿಟ್ಟರು. ದಶ ಪರ್ವಗಳ ಮುಖ್ಯ ಕಥಾಭಾಗಗಳನ್ನು ಆಕಾಶವಾಣಿಯ ಶ್ರೋತೃಗಳಿಗೆ ಸಾಕಷ್ಟು ವಾಚನಗಳಲ್ಲಿ ಕೇಳಿಸಿಯಾದ ಮೇಲೆ ಶಕುಂತಲಾಬಾಯಿಯ ದೃಷ್ಟಿ ಬೇರೆ ಕಾವ್ಯಗಳತ್ತ ಹೊರಳಿತು. ಪಂಪ, ರನ್ನ, ಹರಿಹರ, ರಾಘವಾಂಕ, ಚಾಮರಸ, ಲಕ್ಷ್ಮೀಶ, ರತ್ನಾಕರ ವರ್ಣಿ ಮೊದಲಾದ ಪ್ರಾಚೀನಕವಿಗಳ ವಿವಿಧ ಛಂದಸ್ಸುಗಳ ಮಹಾಕಾವ್ಯಗಳನ್ನು ಆಕಾಶವಾಣಿಯ ಶ್ರೋತೃವೃಂದಕ್ಕೆ ಪರಿಚಯ ಮಾಡಿಕೊಡಲು ಪ್ರಾರಂಭಿಸಿದರು. ಶಕುಂತಲಾಬಾಯಿಯ ಕಂಠಶ್ರೀಯನ್ನು ಬಹುಬೇಗ ಗುರುತಿಸುವಷ್ಟು ಮಟ್ಟಿಗೆ ಆಕಾಶ ವಾಣಿ ಶ್ರೋತೃವೃಂದದ ಕಿವಿಗಳು ಪಳಗಿದವು.

ರಾಷ್ಟ್ರಮಟ್ಟದ ಗಮಕ ಕಲಾವಿದೆಯಾಗಿ ದೆಹಲಿಗೆ ಯಾತ್ರೆ

1957ರ ಹೊತ್ತಿಗೆ ದೆಹಲಿಯ ಆಕಾಶವಾಣಿ ಕೇಂದ್ರ ರಾಷ್ಟ್ರಮಟ್ಟದಲ್ಲಿ ವಾರ ವಾರವೂ ಶನಿವಾರ ರಾತ್ರಿ 9-30 ರಿಂದ 11ರವರೆಗೆ ಒಂದು ಗಂಟೆಯ ಕಾಲ ದೇಶೀ ಭಾಷೆಗಳ ಸಾಹಿತ್ಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಕಾಶವಾಣಿ ಶ್ರೋತೃವೃಂದಕ್ಕೆ ಪರಿಚಯ ಮಾಡಿಕೊಡುವ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತ್ತು. ಆಗಲೇ ಬಂಗಾಳಿ, ಪಂಜಾಬಿ, ಗುಜರಾತಿ, ಮಹಾರಾಷ್ಟ್ರ, ತಮಿಳು, ಆಂಧ್ರ, ಹೀಗೆ ನಾನಾಭಾಷೆ ಗಳಿಗೆ ಪ್ರಾತಿನಿಧ್ಯ ಸಂದು ಕರ್ಣಾಟಕ ಭಾಷೆಯ ಸರದಿ ಬಂದಿತ್ತು. ಜುಲೈ 17ರಂದು ಶನಿವಾರ ಪ್ರಸಾರವಾಗಲಿದ್ದ ದೆಹಲಿಯ ರಾಷ್ಟ್ರೀಯ ಸಾಹಿತ್ಯ ಸಂಸ್ಕೃತಿಗಳ ಕಾರ್ಯ ಕ್ರಮಕ್ಕೆ ಬೆಂಗಳೂರಿನ ಆಕಾಶವಾಣಿ, ಧಾರವಾಡದ ಆಕಾಶವಾಣಿಗಳೊಂದಿಗೆ ಸಮಾ ಲೋಚಿಸಿ ಕರ್ಣಾಟಕ ಪ್ರಾತಿನಿಧ್ಯದ ಕಲಾವಿದ ತಂಡವನ್ನು ದೆಹಲಿಗೆ ಕಳಿಸಿಕೊಟ್ಟಿತು. ಬೆಂಗಳೂರು ಆಕಾಶವಾಣಿಯಲ್ಲಿ ಕರ್ಣಾಟಕದ ಶ್ರೇಷ್ಠ ವೈಣಿಕವಿದ್ವಾಂಸರಾಗಿದ್ದ

ಮೈಸೂರಿನ ವೀಣೆ ದೊರೆಸ್ವಾಮಿಅಯ್ಯಂಗಾರ್, ಕಲಾವಿದ ತಂಡದ ನೇತಾರರಾಗಿದ್ದರು. ಕರ್ಣಾಟಕ ಸಂಗೀತಕ್ಕೆ ವಿದ್ವಾಂಸರಾದ ಬೆಳಕವಾಡಿ ವರದರಾಜಅಯ್ಯಂಗಾರ್, ದೇವರ ನಾಮಗಳ ಹಾಡುಗಾರಿಕೆಗೆ ಹೆಸರಾಗಿದ್ದ ನಾಟಕ ಚಲನಚಿತ್ರ ಕಲಾವಿದ ಎಂ. ಶ್ರೀನಿವಾಸಮೂರ್ತಿ, "ಗಾನವಿಶಾರದ" ದೇವೇಂದ್ರಪ್ಪನವರ ಗರಡಿಯಲ್ಲಿ ತಯಾರಾದ ಧಾರವಾಡ ಆಕಾಶವಾಣಿಯ ಕಲಾವಿದ ಕುರಡಿ ನಾರಾಯಣ ಶಾಸ್ತ್ರಿ ಬಸವಣ್ಣ ಅಕ್ಕ ಮಹಾದೇವಿಯರ ವಚನಗಳಿಗೆ, ಕಂಚುಕಂಠದ ಪಿ. ಕಾಳಿಂಗರಾವ್-ಸೋಹನ ಕುಮಾರಿ-ಮೋಹನ ಕುಮಾರಿ ಮೇಳ ಕನ್ನಡ ಜಾನಪದ ಭಾವಗೀತೆಗಳಿಗೆ, "ಸಂಗೀತ ರತ್ನ" ಪಿಟೀಲು ವಿದ್ವಾಂಸ ಟಿ. ಚೌಡಯ್ಯನವರ ಸಹೋದರಿ ಟ. ನಾಗಮ್ಮ ಜಾವಳಿ ಹಾಡಿಗೆ, ಉತ್ತರ ಕರ್ಣಾಟಕದ ವೃತ್ತಿನಾಟಕ ರಂಗ ಅಭಿನೇತ್ರಿ ಸೋನಾಬಾಯಿ ದೊಡ್ಡಮನಿ ರಂಗಗೀತೆಗಳಿಗೆ, ಧರ್ಮಸ್ಥಳದ ಕುರಿಯ ವಿಠಲಶಾಸ್ತ್ರಿಗಳ ನಾಯಕತ್ವದಲ್ಲಿ ಮಂಜುನಾಥ ಸ್ವಾಮಿ ಕೃಪಾಪೋಷಿತ ಯಕ್ಷಗಾನ ಮೇಳ "ಪಂಚವಟಿ" ಯಕ್ಷಗಾನ ಪ್ರದರ್ಶನಕ್ಕೆ, ಶಕುಂತಲಾಬಾಯಿ ಪಾಂಡುರಂಗರಾವ್ ಕುಮಾರವ್ಯಾಸ ಭಾರತ ಗಮಕ ವಾಚನಕ್ಕೆ, ರಾಷ್ಟ್ರಮಟ್ಟದ ಕಲಾವಿದ ಕಲಾವಿದೆಯರಾಗಿ ಆಯ್ಕೆಯಾಗಿದ್ದರು. ಗಮಕಕಲಾ ಗುಣಮಟ್ಟದ ದೃಷ್ಟಿಯಿಂದ, ದೆಹಲಿಗೆ ಶಕುಂತಲಾಬಾಯಿಯೇ ಹೋಗಬೇಕೆಂದು ರಾಜಮ್ಮ ಕಲ್ಲೋಲಿ ಮರರು ವಿಶೇಷಾಸಕ್ತಿ ವಹಿಸಿ ಆಯ್ಕೆ ಮಾಡಿದ್ದರು.

ಜುಲೈ 12ರಂದು ಬೆಳಗ್ಗೆ ದೆಹಲಿ ಆಕಾಶವಾಣಿ ಕಲಾರಾಧನೆಯಾತ್ರೆಗೆ ಹೋಗುವುದಕ್ಕೆ ಬೆಂಗಳೂರಿನಿಂದ ಮದರಾಸು ಎಕ್ಸ್‌ಪ್ರೆಸ್ ಗಾಡಿ ಹತ್ತಿದೆವು. ನಮ್ಮನ್ನು ಬೀಳ್ಕೊಡುವುದಕ್ಕೆ ಒಂದು ಪುಟ್ಟ ಜಾತ್ರೆ ನೆರೆದಿತ್ತು. ನನ್ನ ಕೊನೆಯ ನಾದಿನಿ ಸುಶೀಲ ವಾಮನರಾವ್-ಆಕೆಯ ಪತಿ ವಾಮನರಾವ್, ಶಕುಂತಲಾಬಾಯಿಯ ತಮ್ಮ ಎನ್. ಸತ್ಯನಾರಾಯಣರಾವ್, ಹರಪನ ಹಳ್ಳಿಯ ಗೆಳೆಯ ಎಸ್. ಎಸ್. ಮೂರ್ತಿ, "ಮಕ್ಕಳ ಮಂಟಪ"ದ ಒಬ್ಬಿಬ್ಬ ಅಧ್ಯಾಪಕರು, ಶಕುಂತಲಾಬಾಯಿಯ ಶಿಷ್ಯವರ್ಗ, ಅಭಿಮಾನಿಗಳು, ಹೀಗೆ ನಾನಾಗೋತ್ರಗಳ ಪ್ರಾತಿನಿಧ್ಯ ರೈಲ್ವೆ ಸ್ಟೇಷನ್ನಿನಲ್ಲಿ ಹಾಜರಾಗಿತ್ತು.

ನಾವು ಮದರಾಸಿನಲ್ಲಿ ರೈಲು ಇಳಿದು, ಮಾರನೆಯ ದಿನ ದೆಹಲಿಗೆ ಹೋಗುವ ರೈಲು ಹಿಡಿಯಬೇಕಾಗಿತ್ತು. ನಾವು ಮದರಾಸಿನಲ್ಲಿ ಇಳಿಯುತ್ತಲೆ ಬೀಚಿಗೆ ಹೋಗಿ ಮಹಾಸಾಗರದ ದರ್ಶನ ಮಾಡಬಯಸಿದೆವು. ಪ್ರಕೃತಿಯ ಮಹಾದ್ಭುತ ಸೃಷ್ಟಿಗಳಲ್ಲಿ ಒಂದಾದ ಸಾಗರವನ್ನು ನಮ್ಮ ಜೀವಮಾನದಲ್ಲಿ ಒಂದುಸಲವಾದರೂ ಸಂದರ್ಶಿಸದಿದ್ದರೆ ನಾವು ಹುಟ್ಟಿದುದಕ್ಕೆ ಸಾರ್ಥಕತೆ ಎಲ್ಲಿ? ನಾವಿಬ್ಬರೇ ಬಸ್ಸು ಹಿಡಿದು ಬೀಚಿಗೆ ಹೋಗಿ ಸಾಗರನ ದರ್ಶನ ಪಡೆದೆವು. ಉಬ್ಬರವಿಳಿತಗಳಿಂದ ಉಲ್ಲೋಲಕಲ್ಲೋಲಗೊಳ್ಳುತ್ತಿರುವ ನೀಲಿ ವರ್ಣದ ಅಗಾಧ ಜಲರಾಶಿ. ಕಣ್ಣುನೋಟ ಚಾಚುವವರೆಗೆ ಕಿವಿಗಳನ್ನು ಅಪ್ಪಳಿಸುವ ಘೋರ್ಗರೆತದ ಮಹಾರ್ಭಟ. ನಮ್ಮ ಕಲ್ಪನಾಭಾವನೆ ಹುಚ್ಚೆದ್ದು ಕುಣಿಯಿತು. ಮಹಾಕವಿ ಕುಮಾರವ್ಯಾಸನು ಸಾಗರನನ್ನು ವರ್ಣಿಸಿರುವ ನೆನಪು ಮೊಟ್ಟೆಯಿಟ್ಟಿತು.

ಮೆರೆದು ಏಂಗೆ ತಲೆಯೊತ್ತಿತೆರೆ ನ್ಯೆ
ಮುರಿದು ಘುಳುಘುಳು ಘುಳಿತ ಘನ ನಿ
ಷ್ಠುರ ನಿನಾದದ ಗಜರು ಗಾಢಿಸಿ ಬಹಳ ಲಹರಿಯಲಿ
ತೆರೆ ತೆರೆಯ ತಿವಿದೆದ್ದು ಗಗನವ
ನಿರದೊರೆದು ವಿತಳಕ್ಕೆ ಸುಳಿ ಭೋಂ
ಕರಿಸಿ ಸಾಗರನುಬ್ಬುಗವಳವ ಕೊಂಡವೊಲು ಕುಣಿದ.

ಬೆಳಗಾಯಿತು. ಡೆಹಲಿ ರೈಲು ಹಿಡಿದು ಮದರಾಸು ಬಿಟ್ಟೆವು. ಮದರಾಸಿನಿಂದ ಡೆಹಲಿಗೆ ಎರಡೂವರೆ ದಿವಸಗಳ ಪ್ರಯಾಣ ರೈಲಿನಲ್ಲಿ. 14ನೇ ದಿನಾಂಕ ಬೆಳಗಿನ ಜಾವ ವಾಗುತ್ತಿದ್ದ ಹಾಗೆ ನಮ್ಮ ರೈಲು ಆಂಧ್ರ ಪ್ರದೇಶದ ಕಾಗಜ್ ನಗರವನ್ನು ಮುಟ್ಟಿತು. ಕಿಟಕಿಯಿಂದ ಹಣಕಿ ನೋಡಿದರೆ ಪ್ಲಾಟ್‌ಫಾರಮ್ಮಿನ ಮೇಲೆ ನನ್ನ ಚಿಕ್ಕಮ್ಮ-ರತ್ನಾ ಬಾಯಿಯ ಹಿರಿಯ ಮಗ ಎಸ್. ಆರ್. ನಾಗರಾಜರಾವ್ ಥರ್ಮಾಫ್ಲಾಸ್ಕಿನಲ್ಲಿ ತಾನೇ ತಯಾರಿಸಿದ ಬಿಸಿಬಿಸಿ ಕಾಫಿ ತುಂಬಿಕೊಂಡು ಹಾಜರಾಗಿದ್ದ. ನಮ್ಮ ಮನೆಯಲ್ಲಿ ಮಗುವಿಂದ ಬಹಳವರ್ಷ ಬೆಳೆದ ಹುಡುಗ ನಾಗರಾಜರಾವ್, ಬಿಟ್ಟಾನೇ ಅಣ್ಣ-ಅತ್ತಿಗೆಗೆ ಕಾಫಿ ಸತ್ಕಾರ ಮಾಡುವುದನ್ನು ! ನನ್ನ ತಮ್ಮ ಪ್ರೀತಿಯಿಂದ ತಯಾರಿಸಿ ತಂದಿದ್ದ ಬಿಸಿ ಕಾಫಿ, ನಾಲಗೆ ಸೋಕಿದುದೇ ತಡ ಅಮೃತಾಪ್ಯಾಯಮಾನದ ರುಚಿ ಹುಟ್ಟಿಸಿತು. ನಮ್ಮ ರೈಲುಗಾಡಿ ತಮಿಳು ನಾಡನ್ನು ದಾಟಿ, ಆಂಧ್ರ ಪ್ರದೇಶದ ನೆಲದಲ್ಲಿ ನಿಂತಿರುವ ಅರಿವಾಯಿತು.

ರೈಲುಗಾಡಿ ಭುಗುಭುಗು ಹೊಗೆಯನ್ನು ಆಕಾಶದಲ್ಲಿ ಉಗುಳುತ್ತ, ಕಾಗಜನಗರ ವನ್ನು ದಾಟಿ ಮುಂದೆ ತೆರಳಿತು. ಅದು ಬಿಡುತ್ತಿದ್ದ ಹೊಗೆ, ತಮ್ಮ ಸುತ್ತಮುತ್ತಲೂ ಇರುವ ಹೆಂಗಸರು ಮಕ್ಕಳು, ಸಿಗರೇಟು ಸೇದದ ಸಭ್ಯರುಗಳು, ಯಾರನ್ನೂ ಲೆಕ್ಕಿಸದೆ, ಅವರುಗಳ ಕಣ್ಣುಮೂಗು ಬಾಯಿಗಳಿಗೆ, ಬಲವಂತವಾಗಿ ತಾವು ಸೇದಿಬಿಟ್ಟ ಸಿಗರೇಟಿನ ಹೊಗೆಯನ್ನು ಅಡರಿಸುವ ಸ್ವಾರ್ಥಿ ಸಿಗರೇಟು ಭೋಗವಿಲಾಸಿಗಳ ಅಸಭ್ಯ ಅನಾಗರಿಕ ವರ್ತನೆಗಳನ್ನು ನೆನಪಿಗೆ ತರುತ್ತಿತ್ತು.

ನಾವು ವಿಜಯವಾಡವನ್ನು ಸುಮಾರು 12 ಗಂಟೆಯ ಹೊತ್ತಿಗೆ ಸೇರಿದೆವು. ಈ ಮಧ್ಯೆ ಅನೇಕ ರೈಲ್ವೆಸ್ಟೇಷನ್ನುಗಳನ್ನು ದಾಟಿದ್ದೆವು. ಅವುಗಳಲ್ಲಿ ನನ್ನ ಭಾವಲೋಕವನ್ನು ಚೇತನಗೊಳಿಸಿದ್ದು ತೆನಾಲಿ ಸ್ಟೇಷನ್. ಸ್ಟೇಷನ್ನಿನಲ್ಲಿ ನಮ್ಮ ರೈಲುಗಾಡಿ ನಿಂತೊಡನೆ ನನ್ನ ನೆನಪಿನ ಗಣಿಯಿಂದ ಬೆಂಗಳೂರು "ಅಮೆಚೂರ್ ಡ್ರಮಾಟಿಕ್ ಅಸೋಸಿ ಯೇಷನ್ಸ್" ಸವಿನೆನಪು ಹೊಮ್ಮಿತು. ಸಿ. ಕೆ. ವೆಂಕಟರಾಮಯ್ಯನವರ "ಮಂಡೋದರಿ" "ನಚಿಕೇತ" ಮತ್ತು "ತೆನಾಲಿ ರಾಮಕೃಷ್ಣ" ನಾಟಕಗಳ ರಂಗಪ್ರದರ್ಶನಗಳು ಮತ್ತು ನಾಟಕಗಳಲ್ಲಿ ಪಾತ್ರವಹಿಸಿದ ಮಹಾನಟರುಗಳು ಮಿಂಚಿದರು. ಕರ್ಣಾಟಕಾಂಧ್ರ ರಂಗ ಭೂಮಿಯ ಮಹಾದ್ಭುತ ನಟರಾಗಿ ಮೆರೆದ ಬಳ್ಳಾರಿಯ ತಾಡಪತ್ರಿ ರಾಘವಾಚಾರ್ಯರು "ಮಂಡೋದರಿ" ನಾಟಕದ ಮಹಾಪ್ರತಾಪಿ ರಾವಣನ ಭೂಮಿಕೆಯಲ್ಲಿ ನನ್ನ ಕಣ್ಣು ಮುಂದೆ ಬಂದು ನಿಂತರು. "ಮಹಾಬ್ರಾಹ್ಮಣ" "ಮಹಾಕ್ಷತ್ರಿಯ" "ಮಹಾದರ್ಶನ"

ಗಳಂಥ ಮಹಾ ಕಾದಂಬರಿಗಳನ್ನು ಬರೆದ ದೇವುಡು ನರಸಿಂಹ ಶಾಸ್ತ್ರಿಗಳು "ನಚಿಕೇತ" ನಾಟಕದಲ್ಲಿ ವಾಜಶ್ರವಸ್ ಪಾತ್ರದಲ್ಲಿ ನನ್ನ ಕಣ್ಣಮುಂದೆ ಸುಳಿದರು. ನಮಗೆ ಆತ್ಮೀಯ ಬಂಧುವಿನಂತೆ ಇದ್ದ ಸಂಸ್ಕೃತ-ಕನ್ನಡ ಉಭಯ ಭಾಷಾ ಮಹಾ ವಿದ್ವಾಂಸ ನಟ ಮೋಟಗಾನ ಹಳ್ಳಿ ಸುಬ್ರಹ್ಮಣ್ಯ ಶಾಸ್ತ್ರಿಗಳು, ವಿಜಯನಗರ ಸಾಮ್ರಾಜ್ಯದ ಮಹಾ ಸಾಮ್ರಾಟ್ ಕರ್ಣಾಟಕದ ರಮಾರಮಣ ಕೃಷ್ಣದೇವರಾಯ ಮಹಾರಾಯರ ಮಹಾ ಸ್ಥಾನವನ್ನು ಪ್ರವೇಶಿಸುತ್ತಿರುವ ಮಹಾ ಪ್ರಕಾಂಡಪಂಡಿತ, ಮಹಾಕವಿ, ಮಹಾನರ್ಮ ಸಚಿವ ತೆನಾಲಿ ರಾಮಕೃಷ್ಣನಾಗಿ ಗೋಚರಿಸಿದರು. ಮಕ್ಕಳ ನಾಟಕಕಾರ, ರಂಗಭೂಮಿ ನಟ, ಕನ್ನಡ ಚಲನಚಿತ್ರ ಸಂಭಾಷಣೆ-ಗೀತ ರಚನಕಾರರಾದ ಚಿ. ಸದಾಶಿವಯ್ಯ ಕೃಷ್ಣ ರಾಯ ಭೂಮಿಕೆಯಲ್ಲಿ ಪ್ರತ್ಯಕ್ಷರಾದರು. ಶಕುಂತಲಾಬಾಯಿಯ ಸಹಪಾಠಿ ಆಕಾಶ ವಾಣಿಯ ಕಲಾವಿದೆ ಎಸ್. ಕೆ. ಪದ್ಮಾದೇವಿ ಬಾಲಕಿ ನಟಿಯಾಗಿ ನಚಿಕೇತನ ಸಹೋದರಿ ಯಾಗಿ ಪಾತ್ರದಲ್ಲಿ ತಮ್ಮ ಮಿಂಚುವೇಗದ ಚಾಕಚಕ್ಯತೆಯಿಂದ ರಂಗಭೂಮಿಯನ್ನು ಚಟುವಟಿಕೆಯಿಂದಿಡುತ್ತಿದ್ದ ಕಾಲದ ಸ್ಮರಣೆಯಾಯಿತು.

ನಮ್ಮ ರೈಲು ಕೃಷ್ಣಗೋದಾವರಿ ನದಿಗಳ ಸೇತುವೆಗಳ ಮೇಲೆ ಹಾದು ಹೋಯಿತು. ಕಾಂಗ್ರೆಸ್ ಮಹಾಧಿವೇಶನ ಬೆಳಗಾಂನಲ್ಲಿ ಮಹಾತ್ಮಾಜಿಯವರ ಅಧ್ಯಕ್ಷತೆ ಯಲ್ಲಿ 1924ರಲ್ಲಿ ಸಮಾವೇಶವಾದಾಗ ಹುಯಿಲಗೋಳ ನಾರಾಯಣರಾಯರು ಕರ್ಣಾ ಟಕಕ್ಕೆ "ಉದಯವಾಗಲಿನಮ್ಮ ಚೆಲುವ ಕನ್ನಡನಾಡು" ಎಂಬ ರಾಷ್ಟ್ರಗೀತೆಯನ್ನು ರಚಿಸಿಕೊಟ್ಟು ಅದರಲ್ಲಿ ಹೃದಯ ತುಂಬಿ ಸಿರಿಗೊರಳೆತ್ತಿ ಸ್ಪಷ್ಟವಾಗಿ "ಪಾವನೆಯರಾ ಕೃಷ್ಣೆ ಭೀಮೆಯರ ತಾಯ್ನಾಡು, ಕಾವೇರಿ ಗೋದೆಯರು ಮೈದೊಳೆವ ನಲುನಾಡು" ಎಂದು ನಮ್ಮ ಕನ್ನಡ ನಾಡಿನ ಗಡಿಯನ್ನು ಸೂಚಿಸಿದ್ದರಲ್ಲ ! "ಕವಿರಾಜಮಾರ್ಗ"ದ ರಾಷ್ಟ್ರಕೂಟ ಚಕ್ರವರ್ತಿ ನೃಪತುಂಗನು "ಕಾವೇರಿಯಿಂದಮಾ ಗೋದಾವರಿವರಮಿರ್ದ ನಾಡದಾ ಕನ್ನಡದೊಳ್ ಭಾವಿಸಿದ ಜನಪದಂ...." ಎಂದಿದ್ದಾನಲ್ಲ ! ಆ ಪ್ರಾತಃ ಸ್ಮರಣೀಯವಾದ ಕೃಷ್ಣ ಗೋದಾವರಿ ಪುಣ್ಯನದಿಗಳನ್ನು ನೋಡಿದಾಗ ನನ್ನ ಕನ್ನಡನಾಡು ಕೃಷ್ಣಾನದಿಯವರೆಗೆ ಮಾತ್ರ ಚಾಚಿಕೊಂಡಿದೆಯಲ್ಲ, ಗೋದಾವರಿಯವರೆಗಿದ್ದ ನಾಡು ಏನಾಯಿತು ? **ಕಾವೇರಿಯಿಂದಮಾ ಗೋದಾವರಿವರಮಿರ್ದ** ಎಂಬ ಕವಿಯ ಹೆಗ್ಗಳಿಕೆಯ ಉದ್ಗಾರ ಹುಸಿಯಾಯಿತಲ್ಲ, ಎಂದು ಸಂಕಟವಾಗದೆಯಿರಲಿಲ್ಲ.

ನಮ್ಮ ರೈಲುಗಾಡಿ ವಿಜಯವಾಡವನ್ನು ಹಿಂದೆ ಹಾಕಿ ಮಹಾರಾಷ್ಟ್ರ ನೆಲದ ನಾಗಪುರದ ಕಡೆ ಧಾವಿಸಿತು. ನಾಗಪುರದ ಮಾರ್ಗಮಧ್ಯೆ ಗುಡ್ಡಗಾಡು ಪ್ರದೇಶ ಬರು ತ್ತದೆ. ಗುಹಾಂತರ್ಗತ ರೈಲುಮಾರ್ಗ ಸಿಗುತ್ತದೆ. ನಮ್ಮ ಗಾಡಿ, ಗುಡ್ಡದಲ್ಲಿ ಕೊರೆದು ಮಾಡಿರುವ ಗುಹಾಮಾರ್ಗವಾಗಿ ಹಾದು ಹೋಗುತ್ತಿರುವಾಗ, ಆ ಕಾಳಕತ್ತಲನ್ನು ನೋಡಿ ಎದೆ ಝಲ್ಲೆಂದಿತು.

15ನೇ ದಿನಾಂಕದ ಬೆಳಗಾಗಿತ್ತು ನಮ್ಮ ರೈಲುಗಾಡಿ ಗುಜರಾತ್ ಗಡಿ ಮೆಟ್ಟಿತ್ತು. ವಾರ್ಧ ನಿಲ್ದಾಣ ಸಿಕ್ಕಿತು. ಗಾಂಧಿ ಸಾಹಿತಿ ಸಿದ್ಧವನಹಳ್ಳಿ ಕೃಷ್ಣಶರ್ಮರ "ಪರ್ಣಕುಟಿ"

"ಮಾರ್ಗಯಾತ್ರೆ" ಸಾಹಿತ್ಯಕೃತಿಗಳನ್ನು ಮೆಲುಕಾಡಿದೆ ಮನಸಿನಲ್ಲಿ. ನಮ್ಮ ಸ್ವಾತಂತ್ರ್ಯ ಪುರೋಹಿತ ಬಾಪೂಜಿಯನ್ನು ನಾನು ಸಣ್ಣವನಾಗಿದ್ದಾಗ 1927-28ರಲ್ಲಿ ಬೆಂಗಳೂರಿನಲ್ಲಿ ದರ್ಶನ ಮಾಡಿದ್ದೆ ಅನಂತರ ಹರಿಜನ ಪ್ರಚಾರಕ್ಕಾಗಿ 1934ರಲ್ಲಿ ಬೆಂಗಳೂರಿಗೆ ಬಂದಾಗ ಇನ್ನೊಮ್ಮೆ ಸಂದರ್ಶಿಸಿದ್ದೆ, ಅವೆಲ್ಲ ನೆನಪಾಯಿತು. 1948ರಲ್ಲಿ ಅವರು ವಿನಾಯಕ ಗೋಡ್ಸೆಯ ಗುಂಡಿಗೆ ಬಲಿಯಾಗಿ ಹುತಾತ್ಮರಾದದ್ದು ನೆನಪಾಗಿ ಭಾವುಕತೆಯ ಆವೇಶಕ್ಕೆ ವಶವಾದೆ. ಮಾರ್ಗವನ್ನು ಹಿಂದಿಕ್ಕಿ ನಮ್ಮಗಾಡಿ ಮುಂದೆ ಸಾಗಿತ್ತು. ನಾನು ಪುನಃ ಭಾವಪರವಶತೆಗೆ ತುತ್ತಾದದ್ದು ಝಾನ್ಸಿ ರೈಲ್ವೆ ಸ್ಟೇಷನ್ನಿನಲ್ಲಿ. ನಮ್ಮ ಗಾಡಿ ಕುಸುಹೊತ್ತು ನಿಂತು ಮುಂದೆ ಸಾಗಿದಾಗ ದೂರದಲ್ಲಿ ಝಾನ್ಸಿಕೋಟೆ ಒಂದು ಎತ್ತರದ ಗುಡ್ಡದ ಮೇಲೆ ಕಾಣುತ್ತಿತ್ತು. ಸಹಪ್ರಯಾಣಿಕರಲ್ಲಿ ಒಬ್ಬರು "ಅದೊ ಝಾನ್ಸಿ ಕೋಟೆ" ಎಂದರು. ನನ್ನ ಮನೋಭೂಮಿಯಲ್ಲಿ 1857ರಲ್ಲಿ ನಡೆದ ಸ್ವಾತಂತ್ರ್ಯ ಮಾರಣಹೋಮದ ಪ್ರಕರಣ ಎದ್ದು ನಿಂತಿತು. ಝಾನ್ಸಿರಾಣಿಯ ಸಾಹಸದ ಬಲಿದಾನ ವನ್ನು ನೆನೆದೆ. ಆಕೆಗೆ ಯಾವ ಸಾಹಸತ್ಯಾಗಗಳಲ್ಲೂ ಕಡಮೆಯಿಲ್ಲದ ಕಿತ್ತೂರು ರಾಣಿ ಕನ್ನಡದ ಚೆನ್ನಮ್ಮಾಜಿಯನ್ನು ನೆನೆದೆ. ನಮ್ಮ ರೈಲುಗಾಡಿ ಗಡಗಡ ಶಬ್ದಮಾಡುತ್ತ ವಾಯುವೇಗದಲ್ಲಿ ಚಲಿಸುತ್ತಿತ್ತು. ನನ್ನ ಮನಸ್ಸು ಅಷ್ಟೇವೇಗದಲ್ಲಿ ಭಾರತದ ಸ್ವಾತಂತ್ರ್ಯದ ಮೊಟ್ಟಮೊದಲ ಹೋರಾಟದ ಇತಿಹಾಸವನ್ನು ಮೆಲುಕುಹಾಕುತ್ತಿತ್ತು. ಆ ಚಿಂತನೆಯ ಫಲ ಹದಿನೈದು ವರ್ಷಗಳ ಮೇಲೆ ಫಲಕೊಟ್ಟಿತು. 1975ರಲ್ಲಿ ಮೇ ತಿಂಗಳಲ್ಲಿ ನನ್ನ ಕಿರಿಗೆಳೆಯ ಎಂ. ಎಸ್. ನಾಗರಾಜ್ "ಪಾಪಚ್ಚಿ" ಮಕ್ಕಳ ಮಾಸ ಪತ್ರಿಕೆಯನ್ನು ಪ್ರಾರಂಭಿಸಿದರು. ನನ್ನ ಮಿತ್ರ ಕುಮಾರ ವೆಂಕಣ್ಣ ಸಂಪಾದಕರಾದರು. ನಾನು "ಮೆದುಳಿಗೆ ಮೃಷ್ಟಾನ್ನ" ಶೀರ್ಷಿಕೆಯಲ್ಲಿ ಎರಡುವರ್ಷಗಳಷ್ಟು ದೀರ್ಘಕಾಲ ಧಾರಾ ವಾಹಿಯಾಗಿ 1857ರಲ್ಲಿ ಪ್ರಾರಂಭವಾಗಿ 1947ರವರೆಗೆ ನಡೆದ ಸ್ವಾತಂತ್ರ್ಯ ಹೋರಾಟದ ಕಥೆಯನ್ನು ವಿಪುಲವಾಗಿ ಬರೆದು, ಹಳೆಯ ಹಳಸಿದ ಕಲುಷಿತ ಮನೋವೃತ್ತಿಯ ವಿಷಯಗಳಿಗೆ ಹೊಸಲೇಪಕೊಟ್ಟು ದೇಶಭಕ್ತಿಯ ಕಾವುಹುಟ್ಟಿಸಿ ನನ್ನ ಮನಸ್ಸಿಗೆ ಶಾಂತಿ ಸಮಾಧಾನ ಪಡೆದುಕೊಂಡೆ. ಮಕ್ಕಳ ಸಾಹಿತ್ಯಕ್ಕೆ ಪ್ರೋತ್ಸಾಹ ಸಾಲದು. ಚಾತಕಪಕ್ಷಿ ಮಳೆಯ ಹನಿಗಾಗಿ ಕಾಯುವಂತೆ ನಾವು ಸರಕಾರದ ಸಹಾಯಕ್ಕಾಗಿ, ಬಾಯಿ ಬಿಡ ಬೇಕು. ಈ ಕಾರಣ, ನನ್ನ ಸ್ವಾತಂತ್ರ್ಯ ಹೋರಾಟದ ಕಥೆ ನಮ್ಮ ಎಲ್ಲಾ ಮಕ್ಕಳಿಗೆ ದಕ್ಕದೆ ಮಾಸ ಪತ್ರಿಕೆಯಲ್ಲೇ ಕೊಳೆಯುತ್ತಿದೆ.

ದೆಹಲಿ ಆಕಾಶವಾಣಿ ಕೇಂದ್ರದ ಕರ್ಣಾಟಕ ಸಾಹಿತ್ಯ ಸಂಸ್ಕೃತಿ ಕಾರ್ಯಕ್ರಮದ ಕಲಾವಿದರ ಯಾತ್ರೆ ಜುಲೈ 12ರ ಬೆಳಗ್ಗೆ ಬೆಂಗಳೂರಿನಿಂದ ಪ್ರಾರಂಭವಾಗಿ ಆಗ್ರಸ್ಟೇಷನ್ ಮುಟ್ಟುವ ಹೊತ್ತಿಗೆ 15ರ ದಿನಾಂಕ ಮಧ್ಯಾಹ್ನ 11 ಗಂಟೆಯಾಗಿತ್ತು. ಆಗ್ರ ರೈಲ್ವೆ ಸ್ಟೇಷನ್ನನ್ನು ನಮ್ಮ ರೈಲುಗಾಡಿ ತಲಪಿ ಪ್ಲಾಟ್‌ಫಾರಂನ ಮೇಲೆ ನಿಂತಿತೋ ಇಲ್ಲವೋ ಅಷ್ಟರೊಳಗೆ ನನ್ನ ನಾದಿನಿ ಸರಸ್ವತೀಬಾಯಿ ಆಕೆಯ ಗಂಡ ಲಕ್ಷ್ಮೀನರಸಿಂಹರಾವ್,

ಇವರ ಭಾವ ಕೃಷ್ಣಮೂರ್ತಿ ಕಾಣಿಸಿಕೊಂಡರು. ಅವರು ನಮ್ಮನ್ನು ಶ್ರಾವಣಮಾಸದ ನೋಂಪಿಗೆ ಬ್ರಾಹ್ಮಣ ಮುತ್ತೈದೆಯನ್ನಾಗಿ ಔತಣವೀಯುವುದಕ್ಕೆ ಅಕ್ಷತೆ ಒಟ್ಟಲು ಹಿಡಿದೇ ಬಂದಿದ್ದರು. ಅವರು, "ಗಾಡಿಯಿಂದ ಇಳಿಯರಿ, ಮನೆಗೆ ಹೋಗೋಣ, ಸಂಜೆಯ 5 ಗಂಟೆಯ ರೈಲಿಗೆ ನಿಮ್ಮನ್ನು ಡೆಲ್ಲಿಗೆ ಕಳಿಸಿಕೊಡುತ್ತೇನೆ." ಎಂದರು. ನಾನು "ಮಧ್ಯಾಹ್ನ 2-30ರ ರೈಲಿನಲ್ಲಿ ಬರುತ್ತೇವೆ ಎಂದು ನನ್ನ ಸ್ನೇಹಿತರಿಗೆಲ್ಲ ತಿಳಿಸಿದ್ದೇನೆ. ಅವರೆಲ್ಲ ರೈಲುಸ್ಟೇಷನ್ನಿಗೆ ಬಂದಿರುತ್ತಾರೆ" ಎಂದು ವಿನಂತಿಸಿಕೊಂಡೆ. ಕೃಷ್ಣಮೂರ್ತಿ, "ಟೆಲಿಗ್ರಾಂ ಕೊಟ್ಟುಬಿಡಿ ರಾತ್ರಿ ರೈಲಿಗೆ ಬರುತ್ತೇವೆಂದು" ಎಂದು, ಹಮಾಲಿಯನ್ನು ನಮ್ಮ ಬೋಗಿಗೆ ನುಗ್ಗಿಸಿ ನಮ್ಮ ಹಾಸಿಗೆ, ಟ್ರಂಕ್ ಇಳಿಸೇಬಿಟ್ಟರು.

ಕೃಷ್ಣಮೂರ್ತಿಯವರ ಪತ್ನಿ ಕಮಲಾಬಾಯಿಗೆ ನಮ್ಮನ್ನು ನೋಡಿ ಹಿಗ್ಗೋ ಹಿಗ್ಗು. ದಂಪತಿಗಳು ಬಂಧುಬಳಗಗಳನ್ನು ಬಿಟ್ಟು ಬಂದು ಎರಡು ವರ್ಷಗಳಾಗಿತ್ತು. ಕರಿದ ಸೇವಿಗೆ ಪಾಯಸ, ಬೋಂಡ, ಬದನೆಕಾಯಿಪಲ್ಯ ಕಲಿಸಿದಅನ್ನ, ಹೋಳಿಗೆ ತುಪ್ಪ ಭೋಜನದ ಔತಣವಾಯಿತು. ವಿಶ್ರಾಂತಿ. ಸಂಜೆ ಐದು ಗಂಟೆಗೆ ಮತ್ತೆ ದೆಹಲಿಗೆ ರೈಲು ಪ್ರಯಾಣ.

ದೆಹಲಿಯಲ್ಲಿ ಪರದಾಟ

ಆಗ್ರಾದಿಂದ ದೆಹಲಿಗೆ ಹೊರಟದ್ದ 5 ಗಂಟೆಯ ಸಂಜೆಯ ರೈಲಿನಲ್ಲಿ ಒಂದು ಬೋಗಿ ಹಿಡಿದು ಕೂತದ್ದಾಯಿತು. ಸಕಾಲದಲ್ಲಿ ನಮ್ಮ ಗಾಡಿಯೂ ಭುಗುಭುಗು ಹೊಗೆಯುಗುಳುತ್ತಾ ನಾಗಾಲೋಟದಲ್ಲಿ ಹೊರಟಿತು. ತುಸು ಹೊತ್ತಿನಲ್ಲೇ ಕೃಷ್ಣನ ಬಾಲಲೀಲಾಗರವಾದ ಗೋಕುಲ ಬೃಂದಾವನಗಳನ್ನು ಬಳಸಿ ಹರಿಯುತಿದ್ದ ಯಮುನಾ ನದಿಯನ್ನುದಾಟಿ ರೈಲುಗಾಡಿ ಓಡುತ್ತಿತ್ತು. ಯಮುನೆಯೇ ಮಹಾಪೂರದಂತೆ ತುಂಬಿ ಹರಿಯುತ್ತಿದ್ದಳು. ಪವಿತ್ರ ಪಾದಗಳಿಂದ ಪಾವನಗೊಳಿಸಿದ ಮಥುರ-ಬೃಂದಾವನ ರೈಲ್ವೆ ಸ್ಟೇಷನ್ನುಗಳು ಹಾಯ್ದುಹೋದವು. ಪುರಂದರ ದಾಸವರೇಣ್ಯರು ಬಾಲ ಗೋಪಾಲನ ಮುರಳಿಯ ಮೋಡಿಗೆ ಪ್ರಕೃತಿಯೇ ಮುಗ್ಧವಾಗಿ ಮಂತ್ರ ಸ್ತಬ್ಧವಾಗಿ ವೇಣುನಾದವನ್ನು ಆಲಿಸಿದಬಗೆಯನ್ನು "ಕೊಳಲನೂದುವ ಚದುರನಾರೆ ಪೇಳಮ್ಮಯ್ಯ" ಎಂಬ ದೇವರನಾಮದಲ್ಲಿ ಬಹಳ ಚೆನ್ನಾಗಿ ವರ್ಣಿಸಿದ್ದಾರೆ. ಪು. ತಿ. ನ. ಕವಿವರೇಣ್ಯರು "ಗೋಕುಲ ನಿರ್ಗಮನ" ಎಂಬ ಕಾವ್ಯದಲ್ಲಿ "ಕೊಳಲಿನಾ ಕರೆ" ಎಂಬ ಪ್ರಸಿದ್ಧ ಕವನ ದಲ್ಲಿ ಕೃಷ್ಣನ ವೇಣು ನಾದದ ಇಂದ್ರಜಾಲವನ್ನು ಕಣ್ಣಿಗೆ ಕಟ್ಟುವ ಹಾಗೆ ವರ್ಣಿಸಿ ದ್ದಾರೆ. ನಾವು ಈ ಸಾಹಿತ್ಯಗಳನ್ನು ಜ್ಞಾಪಿಸಿಕೊಂಡು ಮೆಲುಕಾಡಿದೆವು.

ನಾವು ರಾತ್ರಿ 8 ಗಂಟೆಯ ಹೊತ್ತಿಗೆ ದೆಹಲಿ ನಗರವನ್ನು ಸೇರಿದೆವು. ಕಿಟಕಿಯ ಮೂಲಕ ನಾನು ಕಣ್ಣುನೋಟ ಹರಿಸಿದೆ. ನನ್ನ ಪರಿಚಿತ ಮುಖಗಳ ಸುಳಿವೇ ಇಲ್ಲ. ನನಗೆ ಸುಪರಿಚಿತರಾಗಿದ್ದ ಎಂ. ಪಿ. ಮಿತ್ರರಿಗೆ ತಂತಿ ಕಳಿಸಿದ್ದೆ. ಅವರು ಬೆಂಗಳೂರಿ ನಲ್ಲಿಯೇ ನನಗೆ "ದೆಹಲಿಗೆ ಬಂದಾಗ ನಮ್ಮಲ್ಲೇ ಇಳಿದುಕೊಳ್ಳಿ" ಎಂದು ಪ್ರಾರ್ಥಿಸಿ

ಕೊಂಡಿದ್ದರು ; ಬಂದಿರಲಿಲ್ಲ. ನಮ್ಮ ದೆಹಲಿ ಪ್ರವಾಸದ ಸುದ್ದಿ ಕೇಳಿ ನಮ್ಮ ಹಿತಚಿಂತಕರಾದ ಹಿರಿಯರು ವಿ. ಸೀತಾರಾಮಯ್ಯ (ವಿ. ಸೀ.) ನನಗೆ ಬೆಂಗಳೂರಿನಲ್ಲಿ ಒಂದು ಕಿವಿಮಾತು ಹೇಳಿದ್ದರು. "ಪಾಂಡುರಂಗರಾವ್, ನಾವು ಯಾವಾಗಲೂ ನಮ್ಮ ತೋಳನ್ನು ಸರಿಸಮಾನಸ್ಕಂಧರ ಹೆಗಲ ಮೇಲೆ ಚಾಚಬೇಕು. ನಿಮಗೆ ಆತಿಥ್ಯ ನೀಡಿರುವ ಎಂ. ಪಿ. ಸದ್ಗೃಹಸ್ಥ. ಆದರೆ ಅವರ ಕಾರ್ಯಗಳ ಒತ್ತಡದಿಂದ ನಿಮಗೆ ಅನಾನುಕೂಲವಾಗಬಹುದು. ದೆಹಲಿಯಲ್ಲಿ ನಮ್ಮ ಎಚ್. ಎಸ್. ಪಾಟೀಲರಿದ್ದಾರೆ. ಅವರಲ್ಲಿ ಇಳಿದುಕೊಳ್ಳಿ" ಈಗ ವಿ. ಸೀ. ಅವರ ಹಿತವಚನ ಅನುಭವಕ್ಕೆ ಬಂತು. ಬೋಗಿಯಿಂದ ಸಾಮಾನು ಇಳಿಸಿಕೊಂಡಾಯಿತು. ನಾನು ಕಟ್ಟಾ ಕನ್ನಡಾಭಿಮಾನಿಯಾಗಿದ್ದರಿಂದ ಹಿಂದಿಭಾಷೆ ಕಲಿತಿರಲಿಲ್ಲ. ನನಗೆ ತದ್ವಿರುದ್ಧ ನನ್ನ ಸೌಭಾಗ್ಯವತಿ. ಹಿಂದೀ ಮಾಧ್ಯಮದವರೆಗೆ ಓದಿ ಹಿಂದೀ ಭಾಷಾ ಮಹಾಪಂಡಿತೆಯಾಗಿದ್ದರು (?) ಆಕೆ ನನಗೆ ದುಭಾಷಿಯಾದರು. ಟಪ್‌ಟಪ್ ವಾಹನದ ಸರ್ದಾರ್ಜಿಗೆ ಹೇಳಿ ಅವನ ವಾಹನದಲ್ಲಿ ಕುಳಿತು ಎಂ. ಪಿ. ಅವರ ಬಂಗಲೆಯ ಕಡೆಗೆ ಧಾವಿಸಿದೆವು. ಸರ್ದಾರ್ಜಿ ನಿಸ್ಪೃಹನಾಗಿದ್ದ. ಎಂ. ಪಿ. ಯವರ ಬಂಗಲೆಗೆ ಕರೆದೊಯ್ದ. ಆದರೆ ನಮ್ಮ ವಿಧಿ ಕೈಕೊಟ್ಟಿತ್ತು. ಬಂಗಲೆಯ ಬಾಗಿಲು ಬೀಗ ಜಡಿದಿತ್ತು. ಯಾರ ಸುಳಿವೂ ಇಲ್ಲ. ಈಗಂತೂ ನಾವು ಇಂಗುತಿಂದ ಮಂಗಗಳಂತೆ ಮುಖ ಹಿಂಡಿಕೊಂಡೆವು. ಕರೋಲ್‌ಬಾಗಿನಲ್ಲಿ ರಹತಕ್ ರಸ್ತೆಯಲ್ಲಿ ನಮ್ಮ ಬಂಧುಗಳಾದ "ಯೂತ್ ಇಂಟರ್‌ನ್ಯಾಷನಲ್ ಹಾಸ್ಟೆಲ್" ಎಂಬ ಅಂತರರಾಷ್ಟ್ರೀಯ ಸಂಸ್ಥೆ ನಡೆಸುತ್ತಿದ್ದ ರಾಮಚಂದ್ರರಾವ್ ಪದಕಿಯವರ ಮನೆಗೆ ಹೋಗಲು ನಿರ್ಧರಿಸಿದೆವು. ಸರ್ದಾರ್ಜಿ ಟಪ್‌ಟಪ್ ವಾಹನವನ್ನು ಆ ಕಡೆ ಓಡಿಸಿದ. ಮನೆಯ ಕ್ರಮಸಂಖ್ಯೆಯನ್ನೇ ಮರೆತು ಬಿಟ್ಟಿದ್ದ. ತುಳಿದ ರಸ್ತೆಗಳನ್ನೇ ಟಪ್‌ಟಪ್ ವಾಹನ ತುಳಿಯುತ್ತಿತ್ತು. ಕರೋಲ್‌ಬಾಗ್ ಪ್ರದಕ್ಷಿಣೆ ಹತ್ತೆಂಟುಸಲ ಆಯಿತು. ಕೈಗಡಿಯಾರ 11 ಗಂಟೆ ತೋರಿಸುತ್ತಿತ್ತು. ರಹತಕ್ ರಸ್ತೆಯಲ್ಲಿ ಒಂದು ಬಂಗಲೆಗೆ ನುಗ್ಗಿದೆವು. ಅಂಗಳದಲ್ಲಿ ಒಬ್ಬ ಪಂಜಾಬಿ ವೃದ್ಧ ಗೃಹಸ್ಥರು ಚಾರ್‌ಪಾಯಿಮೇಲೆ ಕುಳಿತಿದ್ದರು. ನಾವು ಗೇಟು ತೆರೆದು ಅಂಗಳವನ್ನು ನುಗ್ಗುತ್ತಲೆ ಆತ ಬೇಟೆಯನ್ನು ಕಂಡ ಸೀಳು ನಾಯಂತೆ ನಮ್ಮ ಮೇಲೆ ಜಿಗಿದರು. ದುಭಾಷಿಯಾಗಿದ್ದ ಶಕುಂತಲಾಬಾಯಿ ತನ್ನ ಹರುಕುಮುರುಕು ಹಿಂದೀ ಭಾಷೆಯಲ್ಲಿ ತಮ್ಮ ಪರದಾಟವನ್ನು ವಿನಂತಿಸಿಕೊಂಡರು. ಆತ ಪಾಕೀಸ್ಥಾನದಿಂದ ಜೀವವುಳಿಸಿಕೊಂಡು ಭಾರತಕ್ಕೆ ಬಂದ 'ರೆಫ್ಯೂಜಿ' ಯಾಗಿದ್ದರು. ಮಗನನ್ನು ಕರೆದು ನಮಗೆ ರಾಮಚಂದ್ರ ಪದಕಿಯ ಮನೆ ತೋರಿಸುವಂತೆ ತಿಳಿಸಿದರು. ಆತ ನಮ್ಮ ಟಪ್‌ಟಪ್‌ನಲ್ಲಿ ಕುಳಿತು ಸುಮಾರು ಅರ್ಧ ಫರ್ಲಾಂಗ್ ಹೋದರೆ ಅಲ್ಲೆ ರಾಮಚಂದ್ರ ಪದಕಿಯವರ ಬಂಗಲೆ ಸಿಗಬೇಕೆ ! ನಾವು ಆ ಬಂಗಲೆಯನ್ನು ಏಳೆಂಟು ಸಲ ಪ್ರದಕ್ಷಿಣೆ ಮಾಡಿದ್ದೆವು. ಬಾಗಿಲು ತಟ್ಟಿದೆವು. ರಾಮಚಂದ್ರ ಪದಕಿ ದಂಪತಿಗಳು ಬಾಗಿಲು ತೆರೆದು ಎದುರುಗೊಂಡರು. "ಮಧ್ಯಾಹ್ನ ರೈಲ್ವೆ ಸ್ಟೇಷನ್ನಿಗೆ ಬಂದಿದ್ದೆವು, ನೀವು ಕಾಣಲಿಲ್ಲ."

ಎಂದು ಪೇಚಾಡಿದರು. ಶ್ರೀಮದ್ಗಾಂಭೀರ್ಯದಿಂದ "ಹಸಿವಿಲ್ಲ" ಎಂದು ಹೇಳಿ ನಮಗಾಗಿ ಕಾದಿಟ್ಟದ್ದ ಕೋಣೆ ಸೇರಿದೆವು.

ಆಕಾಶವಾಣಿಯ ರಾಷ್ಟ್ರೀಯ ಕಾರ್ಯಕ್ರಮ ಪ್ರಸಾರ

16ನೇ ದಿನಾಂಕ ಸೂರ್ಯೋದಯದಲ್ಲಿ ರಾಮಚಂದ್ರ ಪದಕಿ ನಮ್ಮನ್ನು ದೆಹಲಿ ಆಕಾಶವಾಣಿ ಇದ್ದೆಡೆಗೆ ಕರೆದೊಯ್ದರು. ಕರ್ನಾಟಕದ ಕಲಾವಿದರೆಲ್ಲರೂ ಬಂದಿದ್ದರು. ಪರಿಚಿತ ಅಪರಿಚಿತರೆಲ್ಲರ ಪರಿಚಯವಾಯಿತು. "ಆಹ್ವಾನಿತ ಶ್ರೋತೃಗಳ ಸಮ್ಮುಖದಲ್ಲಿ ಆಕಾಶವಾಣಿ ಕಾರ್ಯಕ್ರಮವಿಲ್ಲ, ರದ್ದಾಗಿದೆ. ಸ್ಟುಡಿಯೋ ಒಳಗಿನಿಂದಲೇ ಪ್ರಸಾರ" ಎಂದು ತಿಳಿಯಿತು. ಕಾರಣ, 1918ರಲ್ಲಿ ಇನ್ಫ್ಲುಯಂಜಾ ಎಂಬ ಹೆಸರಿನಲ್ಲಿ ತನ್ನ ಕಬಂಧ ಬಾಹುಗಳನ್ನು ಚಾಚಿ ಸಾವಿರಾರು ಜನದ ಗೋಣು ಮುರಿದಿದ್ದ ಮಾರಿ ಬೇನೆ 1957ರಲ್ಲಿ "ಫ್ಲು" ಹೆಸರಿನಲ್ಲಿ ಮರುಕಳಿಸಿ ತನ್ನ ಕಬಂಧ ಬಾಹುಗಳನ್ನು ಚಾಚಿ ಸಾವಿರಾರು ಜನದ ಗೋಣು ಮುರಿದಿತ್ತು ; ಅದರಿಂದ ಕಾರ್ಯಕ್ರಮ ಸ್ಟುಡಿಯೋ ಒಳಗೇ ಏರ್ಪಾಡಾಗಿತ್ತು.

16ರ ಬೆಳಗ್ಗೆಯೇ ಒಂದು "ರಿಹರ್ಸಲ್" ನಡೆಯಿತು. ನಿರ್ದಾಕ್ಷಿಣ್ಯವಾಗಿ ಪ್ರತಿ ಕಾರ್ಯಕ್ರಮಕ್ಕೂ ಐದು ನಿಮಿಷ ಕತ್ತರಿ ಬಿತ್ತು. ಮೊದಲು ಶಕುಂತಲಾಬಾಯಿಗೆ ಹತ್ತು ನಿಮಿಷ ಕೊಟ್ಟಿದ್ದರು. ಈಗ ಐದು ನಿಮಿಷ ಖೋತವಾಗಿಹೋಯಿತು. ಐದು ನಿಮಿಷದಲ್ಲಿ ಭಾರತ ವಾಚನ. ಆರಿಸಿಕೊಂಡಿದ್ದ ಕಥಾ ಭಾಗ **ಕೃಷ್ಣ ಸಾರಥ್ಯ**. ದೆಹಲಿ ಆಕಾಶವಾಣಿಯಲ್ಲಿದ್ದ ದಾಕ್ಷಿಣಾತ್ಯ ಪಿಟೀಲು ವಿದ್ವಾಂಸರು, ಕರ್ನಾಟಕ ಕಲಾವಿದರನ್ನು ನೋಡಿ ಹುಸಿನಕ್ಕು ತಮ್ಮವರಲ್ಲೊಬ್ಬರಲ್ಲಿ "ಇವರನ್ನೆಲ್ಲ ಪಿಟೀಲಿನ ಬಂಪೇ ಕಮಾನಿನಲ್ಲಿ ಆಪೋಶನ ತೆಗೆದುಕೊಳ್ಳಬಲ್ಲೆ" ಎಂದು ಗಳಹಿಕೊಂಡರು. ರಿಹರ್ಸಲ್ ಮುಗಿಸಿ ಪದಕಿಯವರ ಮನೆ ಸೇರಿದಾಗ ಮಧ್ಯಾಹ್ನ 12 ಗಂಟೆ. ಆ ವೇಳೆಗೆ ಎಚ್. ಎಸ್. ಪಾಟೀಲರು ಬಂದು ಕುಳಿತಿದ್ದರು. ಅವರಿಗೂ ನಾನು ಬೆಂಗಳೂರಿಂದ ಒಂದು ಪತ್ರ ಬರೆದಿದ್ದೆ. ದೆಹಲಿಯಲ್ಲಿ ಹಿಂದಿನ ರಾತ್ರಿ ಪರದಾಡಿದ ಕಥೆ ಕೇಳಿ ಮುಗುಳು ನಕ್ಕರು. ವಿ.ಸೀ ಅವರ ಕಿವಿಮಾತುಗಳನ್ನು ಪಾಟೀಲರಿಗೆ ತಿಳಿಸುವುದಕ್ಕೆ ಮರೆಯಲಿಲ್ಲ.

17ನೆಯ ದಿನಾಂಕ ಕರ್ನಾಟಕ ರಾಷ್ಟ್ರೀಯ ಸಾಹಿತ್ಯ ಸಾಂಸ್ಕೃತಿಕ ಕಾರ್ಯಕ್ರಮ ರಾತ್ರಿ 9–30 ಗಂಟೆಗೆ ಸರಿಯಾಗಿ ಪ್ರಸಾರವಾಯಿತು. ನಮ್ಮ ಕಲಾವಿದರು ಪ್ರಯಾಣದಲ್ಲಿ ಸೊರಗಿದ್ದರು. ದೆಹಲಿಯ ಹವಾಮಾನ ಒಗ್ಗಿರಲಿಲ್ಲ. ಆದುದರಿಂದ ನಮ್ಮ ಕಲಾವಿದರ ಕಾರ್ಯಕ್ರಮ ಸಾಧಾರಣವಾಗಿತ್ತು. ಕಳಪೆಯಾಗಿರಲಿಲ್ಲ.

ಶಕುಂತಲಾಬಾಯಿಯ ಭಾರತವಾಚನದ ಸರದಿ ಬಂದಾಗ ನಿರ್ದಾಕ್ಷಿಣ್ಯವಾಗಿ 5 ನಿಮಿಷಗಳಲ್ಲಿ ಇನ್ನೂ ಅರ್ಧ ನಿಮಿಷ ಕಡಮೆ ಮಾಡಬೇಕೆಂದು ಸೂಚನೆ ಬಂತು. ಆಕೆ ಉತ್ತರಿಸಲಿಲ್ಲ. ಸ್ಟುಡಿಯೋ ಒಳಗೆ ಹೋಗಿ ಧ್ವನಿವರ್ಧಕದ ಮುಂದೆ ಕುಳಿತು ಭಾರತವಾಚನವನ್ನು ಪ್ರಾರಂಭಿಸಿದರು—

ಶ್ರೀ ವನಿತೆಯರಸನೆ ವಿಮಲ ರಾ
ಜೀವ ಪೀಠನ ಪಿತನೆ ಜಗಕತಿ
ಪಾವನನೆ ಸನಕಾದಿ ಸಜ್ಜನ ನಿಕರ ದಾತಾರ ॥
ರಾವಣಾಸುರ ಮಥನ ಶ್ರವಣ ಸು
ಧಾವಿನೂತನ ಕಥನ ಕಾರಣ
ಕಾವುದಾನತ ಜಗವ ಗದುಗಿನ ವೀರನಾರಯಣ ॥

ಕೌರವೇಶ್ವರ ಕೇಳು ಧರಣೀ
ನಾರಿಯಾರಿಗೋಸ್ಕರ ಒಕ್ಕತನವಿ
ದ್ದಾರ ಮೆಚ್ಚಿದಳಾರ ಸಂಗಡವುರಿಯ ಹಾಯಿದಳು ॥
ಭೂರಿನುಮಕಾರದಲಿ ನೃಪರು ವಿ
ಚಾರಿಸದೆ ಧರೆಯೆಮ್ಮದೆಂದೇ
ನಾರಕದ ಸಾಮ್ರಾಜ್ಯಕೈದುವರೆಂದು ಹರಿ ನುಡಿದ ॥

ಅವಧರಿಸು ಮುರವೈರಿ ಧರ್ಮ
ಶ್ರವಣಕೋಸುಗ ಬಾರೆವೊ ನಾವ್ ಪಾ
ರ್ಥಿವರ ಪಂಥದ ಕದನ ವಿದ್ಯಾ ಕಾಮವೆಮಗಾಯ್ತು ॥
ನಿಮಗೆ ನಾವಿತ್ತಂಡ ಸರಿ ಪಾಂ
ಡವರಿಗೆಯು ಮನದೊಲವಿನಲಿ ಕೌ
ರವರಿಗೆಯು ಬಲವಾಗಬೇಕೆಂದನು ಸುಯೋಧನನು ॥

ಆದೊಡಾವಿಹೆವೊಂದು ಕಡೆಯಲಿ
ಕಾದುವವರಾವಲ್ಲ ಬಲದೊಳು
ಯಾದವರು ಕೃತವರ್ಮ ನಾರಾಯಣ ಮಹಾಸೇನೆ ॥
ಕಾದುವವರಿಹರೊಂದು ದೆಸೆಯೊರ
ಡಾದುದಿವರೊಳು ಮೆಚ್ಚಿದುದ ನೀ
ನಾದರಿಸಿ ವರಿಸೆಂದು ಪಾರ್ಥಂಗಸುರರಿಪು ನುಡಿದ ॥

ಮುರಮಥನ ಚಿತ್ತೈಸು ಕೌರವ
ರರಸನತಿ ಸಿರಿವಂತನಿದ ಸಂ
ತರಿಸಲಾಪನು ಬಹಳ ಯಾದವ ಸೈನ್ಯ ಸಾಗರವ ॥
ಧರೆಯ ಸಂಪದವಿಲ್ಲದಡವಿಯ
ತಿರುಕರೋ ನಾವಿನಿಬರನು ಸಲೆ ಸಂ
ತರಿಸಲಾಪೆವೆ ಕೃಷ್ಣ ನೀನೇ ಸಾಕು ನಮಗೆಂದ ॥

ನಾಲ್ಕು ನಿಮಿಷಗಳಾಗುತ್ತಿರುವಾಗಲೇ ಶಕುಂತಲಾಬಾಯಿಗೆ ಸೂಚನೆ ಕೈ ಸನ್ನೆಯಲ್ಲಿ ನಿಲ್ಲಿಸುವುದಕ್ಕೆ. ಶಕುಂತಲಾಬಾಯಿಯೂ “ತಡೆಯಿರಿ” ಎಂದು ಕೈಸನ್ನೆ ಮಾಡಿ, ಖೋತವಾಗಿದ್ದ ಅರ್ಧ ನಿಮಿಷವನ್ನು ಹಟವಾರಿತನದಿಂದ ತೆಗೆದುಕೊಂಡು ಕೃಷ್ಣ ಸಾರಥ್ಯ ಭಾಗವನ್ನು ಐದು ನಿಮಿಷಗಳಲ್ಲಿ ಪರಿಸಮಾಪ್ತಗೊಳಿಸಿದರು. ಗಮಕ ಕಲಾವಂತಿಕೆಯನ್ನು ಮೆರೆಸುವುದಕ್ಕೆ ಅವಕಾಶವೇ ಇರಲಿಲ್ಲ.

ಆಕಾಶವಾಣಿ ಕಾರ್ಯಕ್ರಮಕ್ಕೆ ಮಂಗಳಾರತಿ

ಮಾರನೆಯ ದಿನದ ದೆಹಲಿಯ ದಿನಪತ್ರಿಕೆಗಳೆಲ್ಲ ಕರ್ಣಾಟಕದ ರಾಷ್ಟ್ರೀಯ ಕಾರ್ಯಕ್ರಮವನ್ನು ಅಲ್ಲಗಳೆದು ಕಲಾವಿದರಿಗೆಲ್ಲ ಮಂಗಳಾರತಿ ಎತ್ತಿದ್ದವು. "ಸ್ಟೇಟ್ಸ್ ಮನ್" ಪತ್ರಿಕೆ ತೆಗಳುವುದರಲ್ಲಿ ಅಗ್ರ ತಾಂಬೂಲ ಪಡೆದಿತ್ತು. ಪಿ. ಕಾಳಿಂಗರಾಯರಂತೂ ಕಾಳಿಂಗ ಸರ್ಪವೇ ಆಗಿದ್ದರು ಗರಳ ಕಾರುತ್ತ. ಅವರು ಸ್ಟೇಟ್ಸ್‌ಮನ್ ಪತ್ರಿಕೆಯ ಸಂಪಾದಕರನ್ನು ಕಂಡು ಅವರಿಗೂ ಅವರ ವಿಮರ್ಶಕರಿಗೂ ಮಂಗಳಾರತಿ ಎತ್ತಿ ಬಂದರು. "ಸ್ಟೇಟ್ಸ್ ಮನ್" ಪತ್ರಿಕೆ ಶಕುಂತಲಾಬಾಯಿಗೆ ಸಂಗೀತದ ಗಂಧವೇ ಇಲ್ಲವೆಂದು ಟೀಕಿಸಿತ್ತು. ಶಕುಂತಲಾಬಾಯಿಯ ಗಮಕ ಕಲಾಭಿಮಾನಿ ಎಸ್. ಎನ್. ಮೂರ್ತಿ ಬೆಂಗಳೂರಿಂದ ಸ್ಟೇಟ್ಸ್‌ಮನ್ ಪತ್ರಿಕೆಗೆ ಪ್ರತ್ಯುತ್ತರವಿತ್ತು, ಕರ್ಣಾಟಕ ಸಾಹಿತ್ಯ ಸಂಸ್ಕೃತಿಯ ಅ. ಆ. ಇ. ಈ. ಅಕ್ಷರಗಳ ಗಂಧವಿಲ್ಲದವರಿಂದ ವಿಮರ್ಶೆ ಮಾಡಿಸಿದುದು ಹೆಡ್ಡತನವೆಂದು ಟೀಕಿಸಿದ್ದರಂತೆ. ಅದು ಕಸದ ಬುಟ್ಟಿ ಸೇರಿತ್ತು. ಕರ್ಣಾಟಕ ಪತ್ರಿಕೆಗಳೂ ಸದಭಿಪ್ರಾಯ ವ್ಯಕ್ತಪಡಿಸಿರಲಿಲ್ಲ. "ಪ್ರಜಾವಾಣಿ" ಪತ್ರಿಕೆಯಲ್ಲಿ ಬಿ. ವಿ. ಕೆ. ಶಾಸ್ತ್ರಿ ಶಕುಂತಲಾಬಾಯಿ ಉತ್ತಮ ಕಲಾವಿದೆ, ಆದರೂ ಅವರ ಭಾರತವಾಚನ ಕಳೆಕಟ್ಟಲಿಲ್ಲವೆಂದು ಕನಿಕರ ಪಟ್ಟಿದ್ದರು. "ಡೆಕನ್ ಹೆರಾಲ್ಡ್" ಇಂಗ್ಲಿಷ್ ಪತ್ರಿಕೆ ಶಕುಂತಲಾಬಾಯಿಯ ಭಾರತವಾಚನವನ್ನು ಮೆಚ್ಚಿಕೊಂಡಿತ್ತು. ವಿಶೇಷವೆಂದರೆ ರೆಫ್ಯೂಜಿ ವೃದ್ಧರ ಮಗ ಶಕುಂತಲಾಬಾಯಿಯ ಭಾರತವಾಚನ ಕೇಳಿ ಮಾರನೆಯ ದಿವಸ ಬಂದು "ನನಗೆ ಭಾಷೆ ತಿಳಿಯಲಿಲ್ಲ. ಕೋಕಿಲ ಕಂಠವನ್ನು ಮೆಚ್ಚಿಕೊಂಡೆ" ಎಂದು ಅಭಿನಂದಿಸಿದರು.

ದೆಹಲಿಯಲ್ಲಿ ಗಮಕ ಕಾರ್ಯಕ್ರಮಗಳು

ನಾವು ದೆಹಲಿಯಲ್ಲಿ ಎರಡು ವಾರಗಳವರೆಗೆ ಇದ್ದೆವು. ಕನ್ನಡಾಭಿಮಾನಿಗಳು ಅಲ್ಲಲ್ಲಿ ಶಕುಂತಲಾಬಾಯಿಯ ಕಾವ್ಯವಾಚನಗಳನ್ನು ಸಂಘಗಳಲ್ಲಿಯೂ ಮತ್ತು ತಮ್ಮ ಮನೆಗಳಲ್ಲಿಯೂ ಏರ್ಪಡಿಸಿ, ಕನ್ನಡ ಸಹೃದಯ ಶ್ರೋತೃಗಳಿಗೆ ಕನ್ನಡ ನಾಡಿನ ಪ್ರಾಚೀನ ಗಮಕ ಕಲೆಯ ಪರಿಚಯ ಮಾಡಿಕೊಟ್ಟರು. ಕ. ವೆಂ. ರಾಘವಾಚಾರ್ಯರು ವಿಶ್ವ ವಿದ್ಯಾನಿಲಯದ ಕನ್ನಡ ಸಾಹಿತ್ಯ ಸಮಿತಿಯ ಆಶ್ರಯದಲ್ಲಿ ಕುಮಾರವ್ಯಾಸ ಭಾರತ ವಾಚನವನ್ನು ಏರ್ಪಡಿಸಿದ್ದರು. ರಾಘವಾಚಾರ್ಯರ ಸಾಕುಮಗಳು ಕನ್ನಡ ವಿಭಾಗದ ಡಾ|| ವಿನೋದಾಬಾಯಿ ಈ ಕಾರ್ಯಕ್ರಮದಲ್ಲಿ ಮುಖ್ಯ ಪಾತ್ರ ವಹಿಸಿದ್ದರು. ಅವರಿಬ್ಬರೂ ರೂಪ ನಗರದಲ್ಲಿರುವ ತಮ್ಮ ಮನೆಗೆ ಆಹ್ವಾನಿಸಿ ನಮ್ಮನ್ನು ಆದರದಿಂದ ಸತ್ಕರಿಸಿದರು. ಎಚ್. ಎಸ್. ಪಾಟೀಲರು ಹಳೆ ದಿಲ್ಲಿಯಲ್ಲಿದ್ದ ತಮ್ಮ ಮನೆಗೆ ಆಹ್ವಾನಿಸಿದರು. ಒಂದು ಇಡೀ ದಿನ ಪೂರ್ತಿ ಅವರ ಮನೆಯಲ್ಲಿದ್ದೆವು. ಕೃಪಾಪೂರ್ಣೆಯೂ ಅನ್ನಪೂರ್ಣೆಯೂ ಆದ ಪಾಟೀಲರ ಪತ್ನಿ ಸುಮಿತ್ರಾಬಾಯಿ ಮಾಮಿ ಶಕುಂತಲಾಬಾಯಿಯನ್ನು ಕಂಡ ಘಳಿಗೆಯಲ್ಲೇ ಎಷ್ಟೋ ವರ್ಷಗಳ ಪರಿಚಯಸ್ಥರಂತೆ ನಡೆದುಕೊಂಡರು.

ಆ ರಾತ್ರಿ ಪಬ್ಲಿಕೇಷನ್ ಡಿವಿಷನ್ನಿನ ಅಧಿಕಾರಿಯಾಗಿದ್ದ ಕೃಷ್ಣ ಮಲ್ಯರ ಮನೆಯಲ್ಲಿ ಭಾರತ ವಾಚನದ ಏರ್ಪಾಡು. ಹಿಂದೀ ತುಳಸೀದಾಸ ರಾಮಾಯಣವನ್ನು ಕನ್ನಡಿಗರಿಗೆ ಪರಿಚಯ ಮಾಡಿಕೊಟ್ಟ ಮಂಗಳೂರಿನ ಶಂಭು ಶರ್ಮ, ಶಾರದಾಪ್ರಸಾದ್ ದಂಪತಿಗಳು, ಅವರ ಸಹೋದರ ದಂಪತಿಗಳು, ಎಚ್. ಎಸ್. ಪಾಟೀಲ ದಂಪತಿಗಳು, ಇನ್ನೂ ಕೆಲವು ಮಂದಿ ಕನ್ನಡ ಸಹೃದಯರು ಬಂದಿದ್ದರು.

ದೆಹಲಿಯ ಕರ್ಣಾಟಕ ಸಂಘ, ಆಕಾಶವಾಣಿಯ ಕಾರ್ಯಕ್ರಮಕ್ಕೆ ಬಂದಿದ್ದ ಕರ್ಣಾಟಕದ ಕಲಾವಿದರನ್ನೆಲ್ಲ ಕಲೆ ಹಾಕಿ ದಿವಾನ್ ಚಂದ್ ಪುರಭವನದಲ್ಲಿ ಕರ್ಣಾಟಕ ಸಾಹಿತ್ಯ ಸಂಸ್ಕೃತಿ ಕಾರ್ಯಕ್ರಮವನ್ನು ಕೇಂದ್ರದ ಸಚಿವರಾಗಿದ್ದ ಕೆ. ಸಿ. ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಏರ್ಪಡಿಸಿತು. ದೆಹಲಿಯಲ್ಲಿದ್ದ ಕನ್ನಡ ಪ್ರತಿಷ್ಠಿತ ಅಧಿಕಾರಿಗಳು, ಕನ್ನಡ ಎಂ. ಪಿ. ಗಳು, ಬೇರೆಬೇರೆ ಉದ್ಯೋಗಗಳಲ್ಲಿದ್ದ ಕನ್ನಡಿಗರು ಪುರುಷ ಮಹಿಳೆಯರಾದಿಯಾಗಿ ಆಗಮಿಸಿದ್ದರು. ಆಶ್ಚರ್ಯವೆಂದರೆ 5-10 ರೂಪಾಯಿಗಳ ಟಿಕೆಟ್ಟು ಕೊಂಡು ಬಂದಿದ್ದರು. ಕರ್ಣಾಟಕ ಕಲಾವಿದರು ಕರ್ಣಾಟಕ ಸಂಘದ ಆಶ್ರಯದಲ್ಲಿ ಕೊಟ್ಟ ಕಾರ್ಯಕ್ರಮ ಸ್ವಲ್ಪ ಹೆಚ್ಚು ಕಡಮೆ ಬಾನುಲಿಯ ಕಾರ್ಯಕ್ರಮದಂತೆಯೇ ಇತ್ತು. ಬಾನುಲಿಯಲ್ಲಿ ಕಳೆ ಕಟ್ಟದ ಕಾರ್ಯಕ್ರಮ ಇಲ್ಲಿ ಯಶಸ್ವಿಯಾಯಿತು. ಶ್ರೋತೃಗಳ ಅದೃಷ್ಟವೋ ಅಥವಾ ನಮ್ಮ ಕಲಾವಿದರು ನಿಂದ ಘಳಿಗೆಯ ನೆಲದ ಗುಣವೋ ಅಂತೂ ಕರ್ಣಾಟಕದ ಕಾರ್ಯಕ್ರಮದ ವಿಜಯ ಪತಾಕೆ ಮೇಲೇರಿತು. ಆದರೆ ಈ ಕಾರ್ಯಕ್ರಮದ ವರದಿ ಯಾವ ಪತ್ರಿಕೆಗಳಲ್ಲೂ ಬರಲಿಲ್ಲ. "ಇರಿಗೇಷನ್ ಅಂಡ್ ಪವರ್" ಆಶ್ರಯದಲ್ಲಿ ಪ್ರಕಟವಾಗುತ್ತಿದ್ದ "ಭಗೀರಥ" ಇಂಗ್ಲಿಷ್ ಪತ್ರಿಕೆಯ ಸಂಪಾದಕರಾಗಿದ್ದ ಕೆ. ಎಸ್. ರಂಗಪ್ಪನವರು ಕರ್ಣಾಟಕ ಸಂಘದ ಕಾರ್ಯಕ್ರಮಕ್ಕೆ ಬಂದಿದ್ದರು. ಅವರಿಗೆ ಶಕುಂತಲಾಬಾಯಿಯ ಭಾರತ ವಾಚನ ಬಹು ಪ್ರಿಯವಾಯಿತು. ಕಾರ್ಯಕ್ರಮ ಮುಗಿದ ಕೂಡಲೆ ರಂಗಪ್ಪ ನಮ್ಮೊಡೆಗೆ ಬಂದು ತಮ್ಮ ಪರಿಚಯ ಮಾಡಿಕೊಂಡರು. ಅವರು ಡಾ|| ಬಿ. ಕೆ. ನಾರಾಯಣ ರಾಯರ ಅಳಿಯಂದಿರು ಮತ್ತು ಡಾ|| ಕೆ. ಕೃಷ್ಣ ಮೂರ್ತಿಯವರ ಷಡ್ಡಕಂದಿರು ಎಂದು ತಿಳಿದ ಮೇಲಂತೂ ನಮ್ಮ ಪ್ರೀತಿ ವಿಶ್ವಾಸಗಳು ರಂಗಪ್ಪನವರ ವಿಷಯದಲ್ಲಿ ಹೆಚ್ಚಾಯಿತು. ಡಾ|| ನಾರಾಯಣರಾಯರು ಮತ್ತು ಡಾ|| ಕೃಷ್ಣಮೂರ್ತಿಯವರು ಇಬ್ಬರೂ ನೇತ್ರ ವೈದ್ಯರು ; ಬೆಂಗಳೂರಿನವರಿಗೆ ಸುಪರಿಚಿತರು; ರೋಗಿಗಳ ವಿಷಯದಲ್ಲಿ ತುಂಬ ಅನುಕಂಪವುಳ್ಳವರು ; ಉದಾರ ಮನೋಭಾವದಿಂದ ಪ್ರತಿಫಲಾಪೇಕ್ಷೆಯಿಲ್ಲದೆ ಮಧ್ಯಮ ವರ್ಗದ ರೋಗಿಗಳ ಚಿಕಿತ್ಸೆ ನಡೆಸಿ ಅವರುಗಳ ಗೌರವ ಕೃತಜ್ಞತೆಗಳಿಗೆ ಪಾತ್ರರಾದವರು. ಉಜ್ವಲ ಸಾಹಿತ್ಯಾಭಿಮಾನಿಗಳು ಎಂದಮೇಲೆ ನಾವು ರಂಗಪ್ಪನವರ ವಿಷಯದಲ್ಲಿ ಅತಿಶಯ ಪ್ರೀತಿ ವಿಶ್ವಾಸಗಳನ್ನು ತಳೆಯುದರಲ್ಲಿ ಮಹತ್ವವಿರಲಿಲ್ಲ. ರಂಗಪ್ಪನವರು ತಮ್ಮ ಮನೆಯಲ್ಲಿ ಶಕುಂತಲಾಬಾಯಿ ಕಾವ್ಯವಾಚನ ಮಾಡಬೇಕೆಂದು ಆಹ್ವಾನವಿತ್ತರು. ಒಪ್ಪಿಕೊಂಡೆವು.

ಕರ್ಣಾಟಕ ಸಂಘದ ಕಾರ್ಯಕ್ರಮ ಸಂಜೆಯೆಂದರೆ ಬೆಳಗ್ಗೆ ಕುತುಬ್‌ಮಿನಾರು ನೋಡಲು ಹೋಗಿದ್ದೆವು. ನಮ್ಮ ಬಸ್ಸಿನಲ್ಲಿ ಒಬ್ಬ ಅಪರಿಚಿತ ಹಿಂದೀ ಭಾಷಾ ಮಹಿಳೆ ಪಕ್ಕದಲ್ಲಿ ಕೂತಿದ್ದರು. "ನೀವು ಯಾರು? ಏಕೆ ಬಂದಿದ್ದೀರಿ?" ಹೀಗೆ ಶಕುಂತಲಾ ಬಾಯಿಯನ್ನು ವಿಚಾರಿಸಿದರು. "ಆಕಾಶವಾಣಿ ಕಾರ್ಯಕ್ರಮಕ್ಕೆ ಬಂದಿದ್ದೆವು. ಈ ಸಂಜೆ ದಿವಾನ್ ಚಂದ್ ಪುರಭವನದಲ್ಲಿ ಕಾರ್ಯಕ್ರಮವಿವೆ" ಎಂದು ತಿಳಿಸಿದರು ನನ್ನ ಸೌಭಾಗ್ಯವತಿ. ಆಶ್ಚರ್ಯ! ಹಿಂದಿ ಭಾಷಾ ಮಹಿಳೆ ಕಾರ್ಯಕ್ರಮಕ್ಕೆ ಟಿಕೇಟು ಕೊಂಡು ಬಂದರು. ಪೂರ್ತಿ ಕಾರ್ಯಕ್ರಮಕ್ಕೆ ಇದ್ದು, ಶಕುಂತಲಾಬಾಯಿಯನ್ನು ಕಂಡು, ಆಕೆಯ ಕಂಠ ಮಾಧುರ್ಯವನ್ನು ಹೊಗಳಿ, ಕೈಕುಲುಕಿ ನಗುಮೊಗದಿಂದ ಹೊರನಡೆದರು. ಯಾವ ಋಣ, ಯಾವ ಬಾಂಧವ್ಯ? ಭಾರತೀಯ ಸತ್ಸಂಪ್ರದಾಯ ಸಂಸ್ಕೃತಿ ಲಕ್ಷಣವೆನ್ನಲೇ!

ಕಾರ್ಯಕ್ರಮ ಮುಗಿಯುತ್ತಿದ್ದಂತೆಯೇ ನನ್ನ ಶಿಷ್ಯವೃಂದ ನಮ್ಮನ್ನು ಘೇರಾಯಿಸಿತು. ನಾನು 1937ರಿಂದ 1940ರ ವರೆಗೆ ಬೆಂಗಳೂರಿನ ಆರ್ಯ ವಿದ್ಯಾಶಾಲೆಯ ಶೇಷಾದ್ರಿಪುರಂ ಶಾಖೆಯಲ್ಲಿ ಮೇಷ್ಟ್ರಾಗಿದ್ದಾಗ ನನ್ನಲ್ಲಿ ಪಾಠ ಹೇಳಿಸಿಕೊಂಡ ಗುಂಪು, ಈಗ ತರುಣರು, ಅಧಿಕಾರಿಗಳು ಸಹ. ಬಲವಂತವಾಗಿ ಪೌರಭವನದ ಸನಿಹದಲ್ಲಿದ್ದ ಹೋಟೆಲಿಗೆ ಕರೆದೊಯ್ದರು. ದಂಪತಿಗಳಿಗೆ ಚಾ ಉಪಾಹಾರ ಕೊಡಿಸಿದರು. ಆರ್ಯವಿದ್ಯಾಶಾಲೆಯಲ್ಲಿ ನಡೆಸುತ್ತಿದ್ದ ಕರ್ಣಾಟಕ ಸಂಘದ ಚಟುವಟಿಕೆಗಳನ್ನು ನೆನೆದು ಮೆಲುಕುಹಾಕಿದರು. ಆ ಸಮಯದಲ್ಲಿ ಕರೆಸಿದ್ದ ದಿ|| ಶ್ಲೋಕ ಸಂಗೀತ ಕಳಲೆ ಸಂಪತ್ಕುಮಾರಾಚಾರ್ಯರ ಭಾರತವಾಚನವನ್ನು ನೆನೆದರು. ನಾನು ತರಗತಿಯಲ್ಲಿ ಪರಿಚಯ ಮಾಡಿಕೊಟ್ಟಿದ್ದ ದೇವುಡು, ಹೊಯಿಸಳ, ಪಂಜೆ, ರಾಜರತ್ನಂ, ಮಾಸ್ತಿ, ಕುವೆಂಪು ಇವರುಗಳ ಸಾಹಿತ್ಯವನ್ನು ನೆನೆಸಿಕೊಂಡರು. ನಾನು ನನ್ನ ಶಿಷ್ಯ ಪರಂಪರೆಯ ನೆನಪಿನಲ್ಲಿ ಜೀವಂತನಾಗಿರುವೆನಲ್ಲ ಎಂದು ನನಗೆ ಹಿಗ್ಗು. ಶಕುಂತಲಾಬಾಯಿಯ ಭಾರತ ವಾಚನವನ್ನು ಕೇಳಿ ಸಂತೋಷಪಟ್ಟುದಕ್ಕೆ ಕೃತಜ್ಞತೆ ಅರ್ಪಿಸಿ, ನಮ್ಮಿಂದ ಬೀಳ್ಕೊಂಡರು.

ಅಪರೂಪದ ಡಾ|| ಕೃಷ್ಣಮೂರ್ತಿ

ಕೆ. ಎಸ್. ರಂಗಪ್ಪನವರ ಮನೆಯ ಕಾವ್ಯವಾಚನವನ್ನು ಶಕುಂತಲಾಬಾಯಿ ಒಪ್ಪಿಕೊಂಡ ಸಮಯದಲ್ಲಿ ಅವರ ಮಾವ ಡಾ|| ಬಿ. ಕೆ. ನಾರಾಯಣರಾವ್ ಮತ್ತು ಅವರ ಶಡ್ಡಕ ಡಾ|| ಕೃಷ್ಣಮೂರ್ತಿಯವರು, ಭಾರತವಾಚನ ಪ್ರವೀಣ ಬಿಂದೂರಾಯರು ಮತ್ತು ನಮ್ಮ ವಿಷಯದಲ್ಲಿ ನಡೆದುಕೊಂಡ ಔದಾರ್ಯಚಾರಿತ್ರ್ಯದ ವಿಷಯವನ್ನು ಪ್ರಸ್ತಾಪಿಸದಿದ್ದರೆ ನಾನು ಕೃತಘ್ನನಾಗುತ್ತೇನೆ. ಭಾರತದ ಬಿಂದೂರಾಯರಿಗೆ ವಯೋಧರ್ಮದಿಂದ ಕಣ್ಣು ಪರೆ ಬಂತು. ಶಸ್ತ್ರ ಚಿಕಿತ್ಸೆಯಾಗಬೇಕು. ಆಗದಿದ್ದರೆ, ಕುಮಾರವ್ಯಾಸನಿಗೆ ತಮ್ಮ ಜೀವನವನ್ನೇ ತೆತ್ತುಕೊಂಡ ಜೀವ ವ್ಯರ್ಥವಲ್ಲ! ಬದುಕೇ ಅಸಾರ್ಥಕವಲ್ಲವೇ! ಡಾ|| ಬಿ. ಕೆ. ನಾರಾಯಣರಾಯರು ಶಸ್ತ್ರ ಚಿಕಿತ್ಸೆ ನಡೆಸಿ ಬಿಂದೂರಾಯರಿಗೆ ಕಣ್ಣು ಕೊಟ್ಟರು.

ಬಿಂದೂರಾಯರು ವೈದ್ಯ ಕಾಣಿಕೆ ಅರ್ಪಿಸಹೋದರು. ಬಿ. ಕೆ. ನಾರಾಯಣರಾಯರು ನಮ್ರತೆಯಿಂದ ಹಿಂದಿರುಗಿಸಿದರು. ನಗುತ್ತ "ರಾಯರೆ, ಒಂದುದಿವಸ ನಮ್ಮ ಮನೆಯಲ್ಲಿ ಆಪ್ತ ಮಿತ್ರರ, ಬಂಧುಗಳ ಮುಂದೆ, ಭರ್ಜರಿಯಾಗಿ ಭಾರತವಾಚನ ಮಾಡಿಬಿಡಿ. ನಿಮ್ಮ ವೈದ್ಯ ಕಾಣಿಕೆ ನನಗೆ ಸಂದಂತೆ." ಎಂದರು. ಭಾರತವಾಚನ ಪ್ರವೀಣರು ಭಾರತವಾಚನ ಮಾಡಿ ನಾರಾಯಣರಾಯರಿಗೆ ತಮ್ಮ ಕೃತಜ್ಞತೆಯನ್ನು ಅರ್ಪಿಸಿದರು. ಬಿಂದೂರಾಯರೆ ಒಂದು ಸಂದರ್ಭದಲ್ಲಿ ನನಗೆ ನಾರಾಯಣರಾಯರ ಹೃದಯ ವೈಶಾಲ್ಯವನ್ನು ಕುರಿತು ಹೇಳಿದ್ದ ಸಂಗತಿಯಿದು. ಡಾ|| ಕೃಷ್ಣಮೂರ್ತಿ ನನ್ನಲ್ಲಿ ತಮ್ಮ ಮಾವಂದಿರ ಕಲಾಭಿಮಾನ ಔದಾರ್ಯವನ್ನೇ ತೋರಿಸಿ ತಮ್ಮ ಹೃದಯ ಶ್ರೀಮಂತಿಕೆಯನ್ನು ಮೆರೆದಿದ್ದಾರೆ. ಡಾ|| ಕೃಷ್ಣಮೂರ್ತಿ, ಅವರ ಬಹು ಹತ್ತಿರದ ಬಂಧುವೂ ಪತ್ರಿಕೋದ್ಯಮಿಯೂ ಆಗಿದ್ದ ಎಚ್. ಸುಬ್ಬರಾಯರ ಮೂಲಕ ನನಗೆ ಪರಿಚಯವಾದರು. ಅವರಿಗೆ, ನಾನು, ಶಿಕ್ಷಕ—ಸಾಹಿತಿ, ನನ್ನ ಸೌಭಾಗ್ಯವತಿ ಗಮಕ ವಿದುಷಿ, ಎಂದು ಚೆನ್ನಾಗಿ ಗೊತ್ತಿತ್ತು. ನನ್ನ ಚಿಕ್ಕಮ್ಮ ಅಂಬೂಬಾಯಿಗೆ ಒಂದು ಸಂದರ್ಭದಲ್ಲಿ ಕಣ್ಣುಬೇನೆ ಉಲ್ಬಣಿಸಿತು. ಡಾ|| ಕೃಷ್ಣ ಮೂರ್ತಿಯವರಲ್ಲಿ ಹೋದೆವು. ವೈದ್ಯ ಚಿಕಿತ್ಸೆ ನೀಡಿದರು. ವೈದ್ಯ ಕಾಣಿಕೆ ನೀಡಿದರೆ ಹಿಂದಿರುಗಿಸಿದರು. ಬಲವಂತ ಮಾಡಿದೆ. "ಈ ಸಲ ತೆಗೆದುಕೊಂಡಿದ್ದೇನೆ. ಮುಂದಿನಸಲ ದಿಂದ ತೆಗೆದುಕೊಳ್ಳುವುದಿಲ್ಲ. ನನ್ನ ತಂದೆಯೂ ಉಪಾಧ್ಯಾಯರಾಗಿದ್ದರು" ಎಂದರು. ಮುಂದೆ, ನನ್ನ ತಾಯಿಗೆ ಪರೆ ಬಂತು ಕಣ್ಣಿಗೆ. ಅದು ಬಲಿಯುವವರೆಗೂ ಶಸ್ತ್ರ ಚಿಕಿತ್ಸೆ ಮಾಡುವಹಾಗಿಲ್ಲ. ಒಂದುದಿನ ಅದು ತಾನಾಗಿ ಒಡೆದು ಛಿದ್ರಛಿದ್ರವಾಗಿ ಹೋಯಿತು. ಆದರೆ ಚಳುಕು ಪೋಟುಗಳು ಸಹಿಸಲಸಾಧ್ಯವಾಯಿತು. ಡಾ|| ಕೃಷ್ಣಮೂರ್ತಿಯವರಲ್ಲಿಗೆ ಕರೆದುಕೊಂಡು ಹೋದೆ. ತಿಂಗಳಾನುಗಟ್ಟಲೆ ವೈದ್ಯ ನೆರವು ನೀಡಿದರು. ವೈದ್ಯ ಕಾಣಿಕೆ ಒಂದು ಬಿಡಿಗಾಸೂ ಮುಟ್ಟಲಿಲ್ಲ. ಶಕುಂತಲಾಬಾಯಿಯ ತಾಯಿಗೆ ಕಣ್ಣು ಪೊರೆ ಬಂತು. ಈ ವೇಳೆಗೆ ಡಾ|| ಕೃಷ್ಣಮೂರ್ತಿ ನಮ್ಮ ನೆಹರೂ ನಗರದಲ್ಲಿ ನಡೆಸುತ್ತಿದ್ದ "ಕ್ರಿಸ್ಟಲ್ ಐ ಕ್ಲಿನಿಕ್" ಮುಚ್ಚಿ ತಮ್ಮ ಮಾವಂದಿರು ಡಾ|| ಬಿ ಕೆ. ನಾರಾಯಣರಾಯರು ಬಸವ ನಗುಡಿಯಲ್ಲಿ ತೆರೆದಿದ್ದ "ಪ್ರಭಾತ್ ಐ ಕ್ಲಿನಿಕ್" ನೋಡಿಕೊಳ್ಳುತ್ತಿದ್ದರು. ಅಲ್ಲಿ ದಿವಸ—ವಾರಗಟ್ಟಲೆ ನೇತ್ರ ರೋಗಿಗಳು ಇರುವುದಕ್ಕೂ ಹಾಸಿಗೆಗಳ ಏರ್ಪಾಡು ಉಂಟು. ನನ್ನತ್ತೆ (ಅಕ್ಕ) ಒಂದು ವಾರವಿದ್ದರು. ಶಸ್ತ್ರ ಚಿಕಿತ್ಸೆ ನಡೆಸಿ ಪೊರೆ ತೆಗೆದು ಕಣ್ಣು ಕೊಟ್ಟರು. ಒಂದು ವಾರದ ವೈದ್ಯ ಸಹಾಯ ನೆರವುಗಳಿಗೆ ಏನಿಲ್ಲವೆಂದರೂ ಒಂದು ಸಾವಿರ ರೂಪಾಯಿಗಳವರೆಗೂ ಬಿಲ್ಲಾಗಿರಬಹುದು. ಬಿಲ್ಲೂ ಕೇಳಲಿಲ್ಲ. ಎಷ್ಟಾಯಿತೆಂದು ಸುಳಿವೂ ಕೊಡಲಿಲ್ಲ. ನಾನು ಕೇಳಿದರೆ ಮುಗುಳು ನಗು ಸೂಸಿ ಬೆನ್ನು ತಟ್ಟಿ, ರೋಗಿ ಯನ್ನೂ ನನ್ನನ್ನೂ ಸಂತೋಷದಿಂದ ಕಳಿಸಿಕೊಟ್ಟರು. ಪ್ರಸಿದ್ಧ ಕಾದಂಬರಿಕಾರ ಭಾರತೀಸುತರು ನನ್ನ ಮಿತ್ರರು. ಅವರ ಪತ್ನಿ ಕಣ್ಣು ಪರೀಕ್ಷೆ ಮಾಡಿಸಬೇಕಾಯಿತು. ಭಾರತೀಸುತ ದಂಪತಿಗಳನ್ನು ಡಾ|| ಕೃಷ್ಣಮೂರ್ತಿ ಅವರಲ್ಲಿಗೆ ಕರೆದೊಯ್ದೆ. ವೈದ್ಯ ನೆರವು ನೀಡಿದರು. ಭಾರತೀಸುತರು ವೈದ್ಯ ಕಾಣಿಕೆ ನೀಡಹೋದರೆ ಮುಟ್ಟಲಿಲ್ಲ. ಭಾರತೀ

ಸುತರು ತಮ್ಮ ಕೃತಜ್ಞತೆಯನ್ನು ತಮ್ಮ ಕೃತಿಗಳನ್ನು ಅರ್ಪಿಸುವ ಮೂಲಕ ಸಲ್ಲಿಸಿದರು. ನನ್ನ ಹೆಸರು ಹೇಳಿಕೊಂಡು ಒಬ್ಬ ಮಿತ್ರರು ಪುಕಸಟ್ಟೆ ವೈದ್ಯ ಚಿಕಿತ್ಸೆ ಪಡೆದು ಬಂದರು. ಆ ಸಮಯದಲ್ಲಿ ಡಾಕ್ಟರನ್ನು ಕೇಳಿದೆ. "ನನಗಂತೂ ನೀವು ಉಚಿತ ವೈದ್ಯ ಚಿಕಿತ್ಸೆ ನೀಡು ತ್ತಿದ್ದೀರಿ, ನನ್ನ ಸ್ನೇಹವನ್ನು ಉಪಯೋಗಿಸಿಕೊಂಡು ಬಂದ ಆತನಿಗೂ ಪುಕಸಟ್ಟೆ ವೈದ್ಯ ಚಿಕಿತ್ಸೆ ನೀಡಿದಿರಲ್ಲ; ಇದು ಸರಿಯೆ?" ಡಾ|| ಕೃಷ್ಣಮೂರ್ತಿ ಅದಕ್ಕೆ ಕೊಟ್ಟ ಉತ್ತರ ನಗೆಯ ಅಲೆ ತೇಲಿಸಿ, **ಪೀಟರನನ್ನು ಸುಲಿ, ಪಾಲ್‌ಗೆ ತೆರು** (Rob Peter, Pay Paal) ಶಕುಂತಲಾಬಾಯಿಗೆ 60 ವರ್ಷಗಳು ತುಂಬಿದವಲ್ಲ; ಆ ಸಮಯದಲ್ಲಿ ಆಕೆಯ ಮಕ್ಕಳು ಪ್ರಕಾಶ್ ಕೆಫೆಯಲ್ಲಿ ಒಂದು ಸಂತೋಷ ಕೂಟವನ್ನು ಏರ್ಪಡಿಸಿದ್ದರು. ನಾನು ಹಾಗೂ ನನ್ನ ಕಿರಿಯ ಮಗಳು ಚಿ|| ವಸಂತ ಜಯನಗರ ಬಡಾವಣೆಯಲ್ಲಿರುವ ಪ್ರಭಾ ಐ ಕ್ಲಿನಿಕ್ಕಿಗೆ ಹೋಗಿ ಕರೆಯೋಲೆ ಕೊಟ್ಟು ಬಂದೆವು. ಸಂತೋಷದಿಂದ ಬಂದು ಸಂತೋಷ ಕೂಟದಲ್ಲಿ ಭಾಗಿಗಳಾಗಿ ನಮ್ಮ ಸಂತೋಷವನ್ನು ಉಕ್ಕಿಸಿದರು ಡಾ|| ಕೃಷ್ಣಮೂರ್ತಿ.

ಕಾಕಾ ನಗರದಲ್ಲಿರುವ ರಂಗಪ್ಪನವರ ನಿವಾಸದಲ್ಲಿ ಒಂದು ಸಂಜೆ ಶಕುಂತಲಾ ಬಾಯಿಯ ಕಾವ್ಯವಾಚನ ಏರ್ಪಾಡಾಯಿತು. ಕಬೋಲ್‌ಬಾಗಿನ ರಾಮಚಂದ್ರ ಪದಕಿ ಯವರ ಮನೆಯಿಂದ ರಂಗಪ್ಪನವರ ಮನೆಗೆ ಸುಮಾರು ಏಳೆಂಟು ಮೈಲಿಗಳು. ಬಸ್ಸು ಹತ್ತಿ ಕಾಲಕ್ಕೆ ಸರಿಯಾಗಿ ಕಾಕಾನಗರದ ಮನೆ ಸೇರಿದೆವು. ಎಚ್. ಎಸ್. ಪಾಟೀಲರು ಕಾರ್ಯಕ್ರಮದ ವೇಳೆಗೆ ಸರಿಯಾಗಿ ತಮ್ಮ ಕೆಲಸ ಮುಗಿಸಿಕೊಂಡು ಬಂದಿದ್ದರು. ಉಪಾಹಾರ–ಚಾ–ಶಿಷ್ಟಾಚಾರ ನಡೆಯಿತು. ಶಕುಂತಲಾಬಾಯಿ ಸುಮಾರು ಎರಡುಗಂಟೆ ಗಳ ಕಾಲ ಕುಮಾರವ್ಯಾಸ ಭಾರತ ಮತ್ತು "ಶ್ರೀ ರಾಮಾಯಣ ದರ್ಶನಂ" ಕಾವ್ಯಗಳಿಂದ ವಾಚನ ಮಾಡಿದರು. ಕಾರ್ಯಕ್ರಮ ಮುಗಿದು ರಂಗಪ್ಪನವರ ಮನೆ ಬಿಡುವ ಹೊತ್ತಿಗೆ 9–30 ಗಂಟೆಯಾಗಿತ್ತು.

ದೆಹಲಿಯ ಹಣಕು ನೋಟ

ಮಹಾಭಾರತದಲ್ಲಿ ಬರುವ ಪಾಂಡವರ ರಾಜಧಾನಿ ಇಂದ್ರಪ್ರಸ್ಥ ನಗರವೇ ಇಂದಿನ ದೆಹಲಿ ನಗರವೆಂದು ಪ್ರತೀತಿ. ಮಹಾಕಾವ್ಯ ಕಾಲದ ಪ್ರಸಿದ್ಧಿಯಿಂದ ಇತಿಹಾಸಕಾಲದ ಪ್ರಸಿದ್ಧಿಯವರೆಗೂ ದೆಹಲಿ ನಗರ ತನ್ನ ಉಜ್ವಲ ಚರಿತ್ರೆಯನ್ನು ಕಾಪಾಡಿಕೊಂಡು ಬಂದಿದೆ. ರಜಪೂತ ಮಹಾಪರಾಕ್ರಮಿ ಪೃಥ್ವೀರಾಜನಿಂದ ಪ್ರಾರಂಭವಾಗಿ, ಸುಲ್ತಾನ ಶಾಹಿ,ಮೊಘಲಶಾಹಿ, ಆಂಗ್ಲಶಾಹಿ ಗಾದಿಗಳು ದೆಹಲಿಯಲ್ಲಿ ಮೆರೆದು ಮಣ್ಣುಮುಕ್ಕಿ ಈಗ ನಮ್ಮ ಸ್ವತಂತ್ರ ಭಾರತ ಪ್ರಜಾಪ್ರಭುತ್ವಶಾಹಿ ದೆಹಲಿಯ ಗಾದಿಗೇರಿದೆ. ಪೌರಾಣಿಕ ಐತಿಹಾಸಿಕ, ವೈಜ್ಞಾನಿಕ ದೃಷ್ಟಿಗಳಿಂದ ನೋಡತಕ್ಕ ಸ್ಥಳಗಳು ಕೆಲವಾರು ದೆಹಲಿಯ ಪರಿಸರದಲ್ಲಿವೆ. ಪಾಂಡವರಿಂದ ಸ್ಥಾಪನೆಯಾಯಿತೆಂದು ಸ್ಥಳದ ಪರಿಸರವನ್ನು ಇಂದ್ರ ಪ್ರಸ್ಥವೆಂಬ ಹೆಸರಿನಿಂದ ಇನ್ನೂ ಉಳಿಸಿಕೊಂಡಿದ್ದಾರೆ. ಆ ಸ್ಥಳಕ್ಕೆ ಹೋಗಿದ್ದೆವು.

ಅಟ್ಟಹಾಸವನ್ನು ಮೆರೆದ ಕೆಂಪುಕೋಟೆಯನ್ನು ನೋಡುವಾಗ ಅದರ ಪಸಿಹದಲ್ಲಿಯೇ ಹರಿಯುತ್ತಿರುವ ಯಮುನಾ ನದಿಯು ಪೌರಾಣಿಕ ಹಿನ್ನೆಲೆ ಕೃಷ್ಣನ ಬಾಲಲೀಲಾ ವೈಭವದ ಸ್ಮೃತಿಯನ್ನು ಕೆರಳಿಸಿತು. ಕೆಂಪುಕೋಟೆಯ ಒಳಾಂಗಣದಲ್ಲಿರುವ ದಿವಾನ್-ಎ-ಆಮ್ ಹಾಗೂ ದಿವಾನ್-ಎ-ಖಾಸ್ ಮೊದಲಾದ ಐತಿಹಾಸಿಕ ಸ್ಥಳಗಳನ್ನು ನೋಡಿದೆವು. ಮಯೂರಾಸನದಲ್ಲಿ ಕುಳಿತು ದರ್ಬಾರು ನಡೆಸುತ್ತಿದ್ದ ಷಾಜಹಾನ ಬಾದಶಹನ ಗತವೈಭವದ ದಿವಸಗಳು ಕಣ್ಣಿಗೆ ಚಿತ್ರ ಕಟ್ಟಿದವು. ಮೊಘಲ ಬಾದಶಹರುಗಳಲ್ಲೆಲ್ಲ ಮಹಾಸೌಂದರ್ಯೋಪಾಸಕನಾಗಿದ್ದ ಷಾಜಹಾನ್ ಬಾದಶಹನೆತಾನೆ ಆಗ್ರದಲ್ಲಿ ಲೋಕವಿಖ್ಯಾತವಾದ ತಾಜಮಹಲ್ ಎಂಬ ಪ್ರೇಮಸ್ಮಾರಕಮಂದಿರವನ್ನು ನಿರ್ಮಿಸಿದ್ದು. ಅವನೇ ಕೆಂಪುಕೋಟೆಯನ್ನು ಕಟ್ಟಿಸಿದವನು. ಮೊಘಲ ಚಕ್ರಾಧಿಪತ್ಯದ ಪತನದ ನಂತರ ಕೆಂಪುಕೋಟೆ ಬ್ರಿಟಿಷ್ ಚಕ್ರಾಧಿಪತ್ಯದ ಸಿರಿನೆಲೆಯಾಯಿತು. ಮೊಘಲ ಸಾಮ್ರಾಜ್ಯದ ನಿಶಾನೆ ಕೆಳಗಿಳಿದು ಕೆಂಪುಕೋಟೆಯ ಮೇಲೆ ಬ್ರಿಟಿಷ್ ಯೂನಿಯನ್ ಜಾಕ್ ನಿಶಾನೆ ಮೇಲೇರಿತು. 1947ರ ಆಗಸ್ಟ್ 14ರ ನಡುರಾತ್ರಿ ನಮ್ಮ ಸ್ವತಂತ್ರ ರಾಷ್ಟ್ರದ ಪ್ರಪ್ರಥಮ ಪ್ರಧಾನಿ ಪಂಡಿತ ಜವಾಹರಲಾಲ್ ನೆಹ್ರೂಜಿ ಯೂನಿಯನ್ ಜಾಕ್ ನಿಶಾನೆಯನ್ನು ಕೆಳಗಿಳಿಸಿ, ಕೇಸರಿ ಬಿಳುಪು ಹಸಿರು ಮಧ್ಯೆ ಧರ್ಮಚಕ್ರದ ಬಾವುಟವನ್ನು ಏರಿಸಿದರು. ಆ ಮಹಾದಿನದ ನೆನಪಾಯಿತು. ನಾನು, ನನ್ನ ಸೌಭಾಗ್ಯವತಿಗೆ, ನಮ್ಮ ಜನ ಸಂಘಟಿತವಾಗಿ, ಮದ್ದುಗುಂಡು, ಆಧುನಿಕ ಮಾರಕಾಸ್ತ್ರಗಳಿಂದ ಸಜ್ಜಾಗಿದ್ದು, ಸೂರ್ಯನು ಮುಳುಗದ ಸಾಮ್ರಾಜ್ಯವೆಂದು ಅಹಂಕಾರದಿಂದ ಬೀಗುತ್ತಿದ್ದ, ಪ್ರಪಂಚದಲ್ಲೇ ಅತ್ಯಂತ ಪ್ರಬಲವಾಗಿ ಮೆರೆಯುತ್ತಿದ್ದ ಬ್ರಿಟಿಷ್ ಮಹಾಸಾಮ್ರಾಜ್ಯವನ್ನು, ಬಾಪೂಜಿಯ ನೇತೃತ್ವದಲ್ಲಿ ಅಹಿಂಸಾದೀಕ್ಷೆಯಿಂದಲೇ ಹೇಗೆ ಬಗ್ಗು ಬಡಿದು ಸ್ವಾತಂತ್ರ್ಯ ಪಡೆಯಿತೆಂದು ವಿವರಿಸಿದೆ. “ನಮ್ಮ ಪ್ರಾಚೀನ ಕಾವ್ಯಗಳನ್ನೆ ನಮ್ಮ ಜನಕ್ಕೆ ಓದಿ ಹೇಳುತ್ತಿದ್ದೇವೆ. ರಾಮಾಯಣ ಭಾರತಗಳ ಮಹಾವೀರರ ಕತೆ ಓದಿ ಓದಿ ಕೇಳಿ ಕೇಳಿ ನಮ್ಮ ಜನಕ್ಕೆ ರಕ್ತಗತವಾಗಿದೆ. ಅವರಿಗೆ ನಮ್ಮ ರಾಷ್ಟ್ರ ಸ್ವಾತಂತ್ರ್ಯ ಗಳಿಸಿದ ಕತೆಯನ್ನು ಗಮಕದಲ್ಲಿ ಓದಿ ಹೇಳಬಹುದಲ್ಲ, ದೇಶಭಕ್ತಿ ಕೆರಳಿಸಬಹುದಲ್ಲ ಎಂಬ ಸೂಚನೆ ಕೊಟ್ಟೆ. ಸೂಚನೆಯೇನೋ ಕೊಟ್ಟೆ. ಆದರೆ ಆ ಸಾಹಿತ್ಯ ಒದಗಿಸಿದರೆ ತಾನೆ ಶಕುಂತಲಾಬಾಯಿ ಅದನ್ನು ಗಮಕದಲ್ಲಿ ತಂದಾರು. ಕುವೆಂಪು ಕವಿವರ್ಯರು 1947ರ ಆಗಸ್ಟ್ 15ರ ಮಹಾದಿನವನ್ನು ನೆನೆದು ರಚಿಸಿದ್ದ “ಸ್ವಾತಂತ್ರ್ಯೋದಯ ಮಹಾಪ್ರಗಾಥ” ಮತ್ತು ಮಹಾದಾರ್ಶನಿಕ ಕವಿ ಡಿ. ವಿ. ಜಿ. ಅವರು ರಚಿಸಿದ್ದ “ಸ್ವತಂತ್ರಭಾರತ ಅಭಿನಂದನ ಸ್ತವ” ಪದ್ಯ ಪ್ರಬಂಧಗಳು ನನ್ನ ಚಿತ್ತಭಿತ್ತಿಯಲ್ಲಿ ಸುಳಿದವು. ಕೂಡಲೇ ಶಕುಂತಲಾಬಾಯಿಗೆ ಅವುಗಳನ್ನು ಜ್ಞಾಪಿಸಿದೆ. ಬೆಂಗಳೂರಿಗೆ ಹೋದ ಮೇಲೆ ನಾವು “ಸ್ವಾತಂತ್ರ್ಯೋದಯ ಮಹಾಪ್ರಗಾಥ”ವನ್ನು “ಸ್ವತಂತ್ರ ಭಾರತ ಅಭಿನಂದನ ಸ್ತವ”ವನ್ನು ಮಲ್ಲೇಶ್ವರದ ಗಾಂಧಿ ಸಾಹಿತ್ಯ ಸಂಘದಲ್ಲಿ ಆಗಸ್ಟ್ 15 ಮತ್ತು ಜನವರಿ “ರಿಪಬ್ಲಿಕ್ ಡೇ 26” ದಿವಸಗಳಲ್ಲಿ ಗಮಕಕ್ಕೆ ಅಳವಡಿಸಿ ಪ್ರಾಸಂಗಿಕ ನಿರೂಪಣೆಯೊಡನೆ ಕಾವ್ಯವಾಚನ ಕಾರ್ಯಕ್ರಮ

ಕೊಟ್ಟೆವು. ಶಕುಂತಲಾಬಾಯಿ ನರಸಿಂಹರಾಜಾ ಕಾಲೊನಿಯ ಗೋಖಲೆ ಸಾರ್ವಜನಿಕ ಸಂಸ್ಥೆಯ ಆಶ್ರಯದಲ್ಲಿ "ಸ್ವತಂತ್ರ ಭಾರತ ಅಭಿನಂದನ ಸ್ತವ" ಪದ್ಯ ಪ್ರಬಂಧವನ್ನು ನನ್ನ ಪ್ರಾಸಂಗಿಕ ನಿರೂಪಣೆಯೊಡನೆ ವಾಚನ ಮಾಡಿದರು. ನಾವಾಗಿ ಈ ಕೃತಿಗಳನ್ನು ಓದಿ ಸುಖಿಸುವುದೇ ಒಂದು ರೀತಿ; ಅದನ್ನೇ ಶಕುಂತಲಾಬಾಯಿಯ ಗಮಕದಲ್ಲಿ ಕೇಳಿ ರಸಾಸ್ವಾದನ ಮಾಡುವುದೇ ಒಂದು ರೀತಿ. ಈ ಎರಡು ಕಾವ್ಯ ಪ್ರಬಂಧಗಳು ವಿವಿಧ ಗತಿಯ ಛಂದಸ್ಸಿಗೆ ಅನುಗುಣವಾಗಿ ಗಮಕದ ನಡಿಗೆಯಲ್ಲಿ ನಡೆಸಿದಾಗ ಶ್ರೋತೃಗಳು ರೋಮಾಂಚನಗೊಳ್ಳುತ್ತಾರೆ. ಭಾವ ಪರವಶರಾಗುತ್ತಾರೆ. ಕುವೆಂಪು, ಡಿ. ವಿ. ಜಿ., ಅವರ ಕೃತಿ ನಿರ್ಮಾಣದಲ್ಲಿ ಆ ಕಸುವಿದೆ, ಧೃತಿಯಿದೆ; ಓಜಸ್ಸು ತೇಜಸ್ಸು ಶಕ್ತಿಗಳಿವೆ.

ಹಳೇ ದಿಲ್ಲಿಯಲ್ಲಿರುವ ಭಾರತದ ಅತ್ಯಂತ ದೊಡ್ಡ ಮಸೀದಿಯೆನ್ನಿಸಿಕೊಂಡ ಜುಮ್ಮಾ ಮಸೀದಿ, ನವದೆಹಲಿಯಲ್ಲಿರುವ ವೈಜ್ಞಾನಿಕ ಹಿನ್ನೆಲೆಯುಳ್ಳ 1710ರಷ್ಟು ಪ್ರಾಚೀನವಾದ ಜಂತರ್ ಮಂತರ್ ಎಂಬ ಖಗೋಲ ವೀಕ್ಷಣಾಲಯ, ರಾಷ್ಟ್ರಪತಿ ಭವನ, ಸಂಸತ್ ಭವನ, ಸೆಕ್ರೆಟರಿಯೇಟ್ ಭವನಗಳನ್ನು ನೋಡಿದೆವು. ಬಿರ್ಲ ಬಂಧು ಗಳು ನಿರ್ಮಿಸಿದ ಭವ್ಯ ಹಿಂದೂ ದೇವಾಲಯದ ದರ್ಶನ ಮಾಡಿದೆವು. ಸುಲ್ತಾನ ಶಾಹಿಯ ಸ್ಮಾರಕವಾಗಿ ಉಳಿದಿರುವ ಕುತಬ್ ಮೀನಾರನ್ನು ಹತ್ತಿದೆವು. ಆ ಪರಿಸರದಲ್ಲಿಯೆ ಇರುವ ನಮ್ಮ ಪ್ರಾಚೀನ ವೈಜ್ಞಾನಿಕ ಪ್ರಜ್ಞೆಯನ್ನು ನೆನಪಿಗೆ ತರುವ, ಶತಶತಮಾನಗಳು ಉರುಳಿದ್ದರೂ ತುಕ್ಕು ಹಿಡಿಯದೆ ನಿಂತಿರುವ ಪ್ರಾಚೀನ ಗುಪ್ತ ಕಾಲದ ಕಬ್ಬಿಣದ ಕಂಬ ವನ್ನು ನೋಡಿ ಆಶ್ಚರ್ಯ ಪಟ್ಟೆವು. ಅದೇಕೋ, ರಾಷ್ಟ್ರಪಿತ ಬಾಪೂಜಿಯ ರಾಜಘಾಟ್ ಸಮಾಧಿಯ ಸಂದರ್ಶನ ನಮ್ಮ ಅಲೆತದ ಗೊಂದಲದಲ್ಲಿ ಬಿಟ್ಟು ಹೋಯಿತು.

ನಾಳೆ ನಮ್ಮ ಕನ್ನಡ ನೆಲವನ್ನು ಸೇರಲು ಹೋಗುತ್ತಿದ್ದೇವೆ ಎನ್ನುವಾಗ ಇನ್ನೊಮ್ಮೆ ಎಚ್. ಎಸ್. ಪಾಟೀಲ ದಂಪತಿಗಳ ದರ್ಶನವಾಯಿತು. ಆ ದಂಪತಿಗಳ ಸ್ನೇಹ ಬೆಸುಗೆ ಭದ್ರವಾಯಿತು.

ಬೆಳಗಾಗಿತ್ತು. ಸುಮಾರು ಹತ್ತು ಹದಿನೈದು ದಿವಸಗಳಿಂದ ತಮ್ಮ ಪ್ರೀತಿ ವಿಶ್ವಾಸಗಳ ಆಸರೆಯಲ್ಲಿ ನಮ್ಮನ್ನು ಹೂವಿನ ಹಾಗೆ ಕಾಪಾಡಿಕೊಂಡಿದ್ದ ಪದಕಿ ದಂಪತಿಗಳು ನಮಗೆ ರಸದೌತಣ ಕೊಟ್ಟು ಆಗ್ರಾಕ್ಕೆ ರೈಲು ಹತ್ತಿಸಿದರು.

ಆಗ್ರದಲ್ಲಿ ಇಳಿದು ಕೃಷ್ಣಮೂರ್ತಿಯವರ ಮನೆಗೆ ಹೋದೆವು. ಅವರು ನಮ್ಮನ್ನು ಆಗ್ರಾದಲ್ಲೆಲ್ಲ ಸುತ್ತಿಸಿದರು. ಆಗ್ರ ಪ್ರಾಚೀನ ಪಟ್ಟಣ. ಸಿಕಂದರ್ ಲೋಧಿ ಯಿಂದ ಪ್ರಾರಂಭವಾದ ಪಟ್ಟಣ ಮೊಘಲರ ಕಾಲದಲ್ಲಿ ಅಭಿವೃದ್ಧಿಗೆ ಬಂದಿತು. ಷಾಜ ಹಾನ್ ಚಕ್ರವರ್ತಿ ಜಗದ್ವಿಖ್ಯಾತವಾದ ಅಮೃತ ಶಿಲೆಯ ಬಹು ಸುಂದರ ಸ್ಮಾರಕ ಮಂದಿರ ತಾಜಮಹಲನ್ನು ಕಟ್ಟಿಸಿದ ಮೇಲಂತು ಆಗ್ರಾಪಟ್ಟಣ ಅಮರಕೀರ್ತಿ ಪಡೆಯಿತು. ನಾವು ತಾಜಮಹಲನ್ನು ನೋಡಿ ಆನಂದ ಪುಳಕಿತರಾದೆವು. ಅಕ್ಬರನ ಸಮಾಧಿಗೆ ಹೋಗಿ ಆತನ ಸರ್ವಧರ್ಮಪ್ರಜ್ಞೆಯನ್ನು, ಹಿಂದೂ ಮುಸಲ್ಮಾನ ಮೈತ್ರಿಯ ಹೃದಯ ವೈಶಾಲ್ಯ ವನ್ನು ನೆನೆದು ಗೌರವ ಸಲ್ಲಿಸಿದೆವು. ದಯಾಲ್‌ಬಾಗ್‌ನಲ್ಲಿ ನಿರ್ಮಿತವಾಗುತ್ತಿರುವ

ಅಮೃತಶಿಲೆಯ ಹಿಂದೂ ದೇವಾಲಯವನ್ನು ಅರ್ಧಂಬರ್ಧ ಅವಸ್ಥೆಯಲ್ಲಿಯೇ ನೋಡಿ ಬೆರಗಾದೆವು. ಮೊಘಲಕಾಲದ ಕುಶಲ ಕಲೆಗಳನ್ನು ಇನ್ನೂ ಉಳಿಸಿಕೊಂಡು ಬಂದಿರುವ ಕುಶಲ ಕಲಾವಿದರುಗಳು ನಾನಾ ಕುಶಲಕಲೆಗಳಲ್ಲಿ ತೊಡಗಿರುವುದನ್ನು ಪ್ರತ್ಯಕ್ಷ ನೋಡಿ ಖುಷಿಪಟ್ಟೆವು. ಅಮೃತಶಿಲಾ ಕಲಾಕೃತಿಗಳು, ಬೆಳ್ಳಿಯ ಎಳೆಗಳಿಂದ ರಚಿತವಾದ ಕಲಾ ಕೃತಿಗಳು ನಮ್ಮನ್ನು ಬೆರಗುಗೊಳಿಸಿದವು.

ಆಕಾಶವಾಣಿ ಕಾವ್ಯವಾಚನ ಕಾರ್ಯಕ್ರಮಗಳಲ್ಲಿ ದೆಹಲಿ ಕೇಂದ್ರದಿಂದ ಪ್ರಸಾರ ವಾದ ಶಕುಂತಲಾಬಾಯಿಯ ಭಾರತವಾಚನ ಒಂದು ಮೈಲಿಗಲ್ಲಾಯಿತು. ಆಕಾಶ ವಾಣಿಯ ಮಾಮೂಲು ಕಾರ್ಯಕ್ರಮಗಳಲ್ಲದೆ ಆಗಾಗ ಆಕಾಶವಾಣಿ ಹಮ್ಮಿಕೊಳ್ಳು ತ್ತಿದ್ದ ರೂಪಕಗಳಲ್ಲೂ ಶಕುಂತಲಾಬಾಯಿ ಪ್ರಮುಖ ಪಾತ್ರ ವಹಿಸುವಂತಾಯಿತು. ನಮ್ಮ ನಾಡಿನ ಹಿರಿಯ ಸಾಹಿತಿಗಳೂ ಕವಿ-ವಿಮರ್ಶಕರೂ ಆದ ವಿ. ಸೀ ಅವರು ಮತ್ತು ಸುಪ್ರಸಿದ್ಧ ಸಾಹಿತಿ ಎನ್ಕೆ ಅವರು ಆಕಾಶವಾಣಿಯಲ್ಲಿ ಆಗಿದ್ದ ಕಾಲ. ಗಮಕ ವಾಚನಕ್ಕೆ ವಿಶೇಷ ಪ್ರೋತ್ಸಾಹ ದೊರೆಯಿತು. "ಪ್ರಾಚೀನ ಕವಿ ವಾಣಿ" ಎಂಬ ಶೀರ್ಷಿಕೆಯಲ್ಲಿ ಎನ್ಕೆ ಅವರು ಕುಮಾರವ್ಯಾಸನ ಮಹಾಮೇರುಕೃತಿ ಭಾರತದ ದಶಪರ್ವಗಳಿಂದ ನಾಟ್ಯ ಪೂರ್ಣ ಸನ್ನಿವೇಶಗಳನ್ನು ಆರಿಸಿಕೊಂಡು ನವ್ಯಭವ್ಯ ಕಾರ್ಯಕ್ರಮಗಳನ್ನು ಸಾದರ ಪಡಿಸಿದರು. ಸುಪ್ರಸಿದ್ಧ ಗಮಕಿಗಳೂ, ಶ್ರೇಷ್ಠ ಗಾಯಕರೂ, ಪ್ರಸಿದ್ಧ ನಟರೂ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಬಿ. ಎಸ್. ಎಸ್. ಕೌಶಿಕ್, ಎಸ್. ಶ್ರೀಕಂಠ ಮೂರ್ತಿ, "ಅರುಣ ಕುಮಾರ್" ಎಂದು ಚಲನಚಿತ್ರದಲ್ಲಿ ಹೆಸರಾದ ಹರಿಕಥಾವಿದ್ವಾನ್ ಗುರುರಾಜುಲು ನಾಯಿಡು, ಮೂಕನಹಳ್ಳಿ ಸುಬ್ಬರಾವ್, ಅನೂರು ಸೂರ್ಯ ನಾರಾಯಣ, ಗೌರಮ್ಮ ಸಾಗರರಾಜ್, ಅನ್ನಪೂರ್ಣಮ್ಮ ರಘುಪತಿಶಾಸ್ತ್ರಿ, ಮಳವಳ್ಳಿ ಸುಂದರಮ್ಮ ಮತ್ತು ಶಕುಂತಲಾಬಾಯಿ ಪಾಂಡುರಂಗರಾವ್, ಕುಮಾರವ್ಯಾಸ ಕಾರ್ಯ ಕ್ರಮದಲ್ಲಿ ಭಾಗವಹಿಸಿದರು. ಶಕುಂತಲಾಬಾಯಿಯೇ ದ್ರೌಪದೀ ಪಾತ್ರಕ್ಕೆ ಕಂಠದಾನ ಮಾಡಿದರು. "ಕೀಚಕ ವಧಾ" ಕಥಾಭಾಗದ ಪ್ರಸಾರದಲ್ಲಿ ಮೂಕನಹಳ್ಳಿ ಸುಬ್ಬರಾಯರು ಭೀಮನಾಗಿ, ಶ್ರೀಕಂಠಮೂರ್ತಿ ಕೀಚಕನಾಗಿ, ಮಳವಳ್ಳಿ ಸುಂದರಮ್ಮ ಸುಧೇಷ್ಣೆಯಾಗಿ ಶಕುಂತಲಾಬಾಯಿ ಸೈರೇಂಧ್ರೀ (ದ್ರೌಪದಿ)ಯಾಗಿ ಭಾಗವಹಿಸಿದ ಸಂದರ್ಭ ಉತ್ತುಂಗ ಶಿಖರ ಮುಟ್ಟಿತು. ಗಮಕ ಕಲಾಭಿಮಾನಿ ರಸಿಕರಿಗೆ ಅದೊಂದು ರಸದೂಟವಾಗಿತ್ತು. ವಿ. ಸೀ ನಿರ್ವಹಿಸಿದ "ಪ್ರಾಚೀನ ಕವಿವಾಣಿ" ರಾಘವಾಂಕನ "ಹರಿಶ್ಚಂದ್ರ ಕಾವ್ಯ" ಪ್ರಸಾರದಲ್ಲೂ ಶ್ರೀಕಂಠಮೂರ್ತಿ ಮತ್ತು ಶಕುಂತಲಾಬಾಯಿ ಕಂಠದಾನ ಮಾಡಿ ದ್ದುಂಟು. ನಮ್ಮ ರಾಷ್ಟ್ರಪತಿ ಫಕ್ರುದ್ದೀನ್ ಅಹಮದರು ಕಾಲವಾದಾಗ ಆಕಾಶವಾಣಿ ಶೋಕಗೀತೆಗಳ ಕಾರ್ಯಕ್ರಮವನ್ನು ಹಮ್ಮಿಕೊಂಡಿತು. ಶಕುಂತಲಾಬಾಯಿ ಕುಮಾರ ವ್ಯಾಸಭಾರತದಿಂದ **ಕರ್ಣಾವಸಾನ** ಹರಿಶ್ಚಂದ್ರ ಕಾವ್ಯದಿಂದ **ಚಂದ್ರಮತಿ ಪ್ರಲಾಪ** ರಾಜಶೇಖರ ವಿಳಾಸ ಕಾವ್ಯದಿಂದ **ತಿರುಕೊಳವಿನಾಚಿಯ ಪ್ರಲಾಪ** ಭಾಗಗಳನ್ನು ವಾಚನ ಮಾಡಿದ ವಿಶೇಷ ಸಂದರ್ಭಗಳು ಜ್ಞಾಪಕಕ್ಕೆ ಬರುತ್ತವೆ.

"ಶಕುಂತಲಾಬಾಯಿಯ ಆಕಾಶವಾಣಿ ಕಾರ್ಯಕ್ರಮ ಅಪರೂಪವಾಗಿದೆಯಲ್ಲಾ ಇತ್ತೀಚೆಗೆ" ಎಂದು ಆಕಾಶವಾಣಿ ಅಭಿಮಾನಿಗಳು ಆಕೆಯನ್ನು ಮತ್ತು ನನ್ನನ್ನು ಕಂಡಾಗಲೆಲ್ಲ ಪ್ರಶ್ನಿಸುತ್ತಾರೆ. ಅದಕ್ಕೆ ನಮ್ಮ ಉತ್ತರ "ಕನ್ನಡ ಸಾಹಿತ್ಯ ಪರಿಷತ್ತು 1935ರಲ್ಲಿ ಗಮಕ ತರಗತಿಯನ್ನು ಪ್ರಾರಂಭಿಸಿದಾಗ ಇದ್ದ ಗಮಕಿಗಳೆಷ್ಟು; ತರಗತಿಗಳೆಷ್ಟು? ಗಮಕ ವ್ಯಾಸಂಗಿಗಳು ಎಂಟೋ ಹತ್ತೋ ಮಂದಿ. ತರಗತಿ ಇಡೀ ಕನ್ನಡ ನಾಡಿಗೆ ಒಂದೇಒಂದು. ಒಂದು ಕಿರುಬೆರಳಿನಷ್ಟು ತೊರೆಯಂತೆ 1935ರಲ್ಲಿ ಆರಂಭವಾದ ಗಮಕ ವಾಹಿನಿ 1975ರ ಕಾಲಕ್ಕೆ ನಲವತ್ತು ವರ್ಷಗಳಲ್ಲಿ ಒಂದು ಮಹಾನದಿಯಂತೆ ಇಡೀ ಕರ್ನಾಟಕವನ್ನು ವ್ಯಾಪಿಸಿಕೊಂಡಿತು. ಬೆಂಗಳೂರಿನಲ್ಲಿ 11 ತರಗತಿಗಳು. ಗಮಕಕಲೆಯ ತೌರೂರಾದ ಮೈಸೂರಿನಲ್ಲಿ 3 ತರಗತಿಗಳು. ತುಮಕೂರಿನಲ್ಲಿ 2. ಹೊಳೆನರಸೀಪುರ, ಕನಕಪುರ, ಮಾಗಡಿ, ಆನೆಕಲ್ಲು, ಅರಸೀಕೆರೆ. ಚಿಕ್ಕಮಗಳೂರು, ರಾಯಚೂರು, ಕೊಕರ್ಣೆ ಹೀಗೆ. 1937ರವರೆಗೆ ಗಮಕ ತರಗತಿಗೆ ಮಹಿಳೆಯರು ಕಲಿಯುವುದಕ್ಕೆ ಬಂದದ್ದೇ ಇಲ್ಲ. ಶಕುಂತಲಾಬಾಯಿ ಮೊದಲಿಗರಾದರು ಕಲಿಯುವುದಕ್ಕೆ. ಈ ಹೆಸರು ಮುಂದೆ ಬಂದ ಮಹಿಳಾ ಅಭ್ಯರ್ಥಿಗಳಿಗೆ ಸ್ಫೂರ್ತಿಯ ಸೆಲೆಯಾಯಿತು. 1975ರ ಹೊತ್ತಿಗೆ ಗಮಕ ಪಾಠ ಹೇಳುವ ಶಿಕ್ಷಕಿಯರ ಸಂಖ್ಯೆ ಸುಮಾರು 28-30. ಪುರುಷರ ಸಂಖ್ಯೆ ಹುಡುಕ ಬೇಕಾದಷ್ಟು (?) ಡಿ. ವಿ. ಜಿ. ಯವರ ಕಾಲದಿಂದ ಜಿ. ನಾರಾಯಣ ಅವರ ಕಾಲದವರೆಗಾದ ಗಮಕ ತರಗತಿಯ ಪ್ರಗತಿಯಿದು.

ನಮ್ಮ ಪ್ರವಾಸ ದೆಹಲಿ ಮತ್ತು ಆಗ್ರ ಈ ಎರಡು ಪ್ರದೇಶಗಳಿಗೇ ಸೀಮಿತ ವಾಗಿತ್ತು. ಆಗ್ರದ ಗತವೈಭವವನ್ನು ನೋಡಿಕೊಂಡು ರೈಲು ಹತ್ತಿ ಮದರಾಸು ತಲಪಿ ದೆವು. ಮದರಾಸಿನಲ್ಲಿ ರೈಲು ಬದಲಾಯಿಸಿ ಬೆಂಗಳೂರು ಗಾಡಿ ಹತ್ತಿ ನೆಮ್ಮದಿಯ ನಾಡಾದ ಕನ್ನಡದ ನೆಲವನ್ನು ಸೋಕುವ ಹೊತ್ತಿಗೆ ನಾವು ಪ್ರವಾಸದ ಆಯಾಸದಿಂದ ಸೊರಗಿ ಹೋಗಿದ್ದೆವು.

ದೆಹಲಿಯ ಯಾತ್ರಾ ಫಲವೆಂದರೆ, ಮುಂದೆ ಹತ್ತು ತಿಂಗಳುಗಳಲ್ಲಿ ನಮಗೆ ಕನ್ಯಾ ಶಿಶು ಪ್ರಾಪ್ತವಾಯಿತು. ವಸಂತಕುಮಾರಿ 9-4-1958ರಲ್ಲಿ ಜನಿಸಿ ದೆಹಲಿಯ ಆಕಾಶ ವಾಣಿ ಕಾವ್ಯವಾಚನದ ನೆನಪು ಅಳಿಯದಂತೆ ಸ್ಥಿರಗೊಳಿಸಿದಳು.

೯. ಇನ್ನೊಮ್ಮೆ ದೆಹಲಿ ಯಾತ್ರೆ

ಕಾಶ್ಮೀರದ ಯಾತ್ರೆ

1963ರಲ್ಲಿ ನನಗೆ ಇನ್ನೊಮ್ಮೆ ದೆಹಲಿಯ ಪ್ರವಾಸ ಮೈಸೂರು (ಈಗ ಕರ್ಣಾಟಕ) ರಾಜ್ಯದ ಶಿಕ್ಷಣ ಇಲಾಖೆಯ ಶಿಕ್ಷಣ ಸಂಶೋಧನ ಶಾಖೆಯ ಔದಾರ್ಯದಿಂದ ಲಭ್ಯವಾಯಿತು. ಶಿಶು ಶಿಕ್ಷಣಾಭಿವೃದ್ಧಿಯಲ್ಲಿ ಆಸಕ್ತರೂ ಮಕ್ಕಳಸಾಹಿತ್ಯಪುರೋಭಿವೃದ್ಧಿಯಲ್ಲಿ ವಿಶೇಷಾಸಕ್ತರೂ ಪ್ರಾಜ್ಞ ಶಿಕ್ಷಣವೇತ್ತರೂ ಆದ ಟಿ. ವಿ. ತಿಮ್ಮೇಗೌಡರು ಶಿಕ್ಷಣ ಸಂಶೋಧನ ಶಾಖೆಯ ಆಡಳಿತಾಧಿಕಾರಿಯಾಗಿದ್ದರು. ಅವರು, ನಮ್ಮ ನಾಡಿನ ಮಕ್ಕಳಿಗೆ ಸಮಗ್ರ ಭಾರತ ದರ್ಶನ ಮಾಡಿಸುವ ಒಂದು ಮಹಾಯೋಜನೆಯನ್ನು ಹಮ್ಮಿಕೊಂಡರು. "ನನ್ನ ಮನೆ" ಶೀರ್ಷಿಕೆಯಲ್ಲಿ ಭಾರತದ 15 ರಾಜ್ಯಗಳು (ಆಗ 15ೇ ರಾಜ್ಯ ವಿಭಾಗಗಳು.) ದೆಹಲಿ, ಕಲ್ಕತ್ತ, ಬೊಂಬಾಯಿ, ಮದರಾಸು ಮತ್ತು ಬೆಂಗಳೂರು, 5 ಮಹಾ ಪಟ್ಟಣಗಳು, ಕೂಡಿ ಒಟ್ಟು 20 ಪುಸ್ತಕಗಳನ್ನು ಸರಳ ಸುಂದರ ಶೈಲಿಯಲ್ಲಿ ತರುವ ಉದ್ದೇಶ. ಅದಕ್ಕೊಂದು ಮಕ್ಕಳ ಸಾಹಿತ್ಯ ರಚನಾಲಯ ಪ್ರಾರಂಭವಾಯಿತು. ಮಕ್ಕಳ ಸಾಹಿತ್ಯ ರಚಕ–ಶಿಕ್ಷಕ ಅನುಭಾವಿಗಳನ್ನು ರಚನಾಲಯಕ್ಕೆ ಆರಿಸಿಕೊಂಡರು. ರಾಜ್ಯದ ಎಲ್ಲ ಭಾಗಗಳಿಗೂ ಪ್ರಾತಿನಿಧ್ಯ ಕೊಟ್ಟಿತ್ತು. ಮಿರ್ಜಿ ಅಣ್ಣಾರಾಯ, ಈಶ್ವರಚಂದ್ರ ಚಿಂತಾಮಣಿ, ಕೆ. ಸಚ್ಚಿದಾನಂದಯ್ಯ (ಚಿರಂತನ) ಹೀಗೆ ಅರಿತ ನುರಿತ ಅಧ್ಯಾಪಕ ಲೇಖಕರು ರಚನಾಲಯದಲ್ಲಿ ಭಾಗಗೊಂಡಿದ್ದರು. ನಾನೂ ಒಬ್ಬನಾಗಿದ್ದೆ. ನಾನು ಕಾಶ್ಮೀರಕ್ಕೆ ಹೋಗಿ ಸ್ವಾನುಭಾವದಿಂದ ಗಳಿಸಿದ ಜ್ಞಾನದಿಂದ "ನನ್ನ ಮನೆ–ಕಾಶ್ಮೀರ" ಪುಸ್ತಕ ರಚಿಸಬೇಕಾಗಿತ್ತು.

ಆ ವರ್ಷದ ನಿಯೋಜಿತ ಯೋಜನೆ ಮಾರ್ಚಿ ತಿಂಗಳಲ್ಲೇ ಮುಗಿದು, ನಿಯೋಜನೆಗೆ ಮೀಸಲಾಗಿಟ್ಟ ಹಣ ಆಗಲೇ ಖರ್ಚಾಗಬೇಕಾಗಿದ್ದುದರಿಂದ ನಾನು 1964ರ ಚಳಿಗಾಲದ ಜನವರಿ ತಿಂಗಳಲ್ಲೇ ಕಾಶ್ಮೀರ ಪ್ರವಾಸ ಕೈಗೊಳ್ಳುವುದು ಅನಿವಾರ್ಯವಾಯಿತು. ಹಿಂದೀ ಮತ್ತು ಕನ್ನಡ ಭಾಷೆಗಳನ್ನು ಬಲ್ಲ ದುಭಾಷಿಯ ನೆರವಿಲ್ಲದೆ ನನ್ನ ಕೆಲಸ ನಡೆಯುವಂತೆಯೇ ಇಲ್ಲ. ಆದುದರಿಂದ ಶಕುಂತಲಾಬಾಯಿಯನ್ನು ಕಾಶ್ಮೀರ ಪ್ರವಾಸಕ್ಕೆ ಜೊತೆ ಕರೆದುಕೊಂಡೆ. ಸ್ವಾಮಿಕಾರ್ಯದ ಜೊತೆಗೆ ಸ್ವಕಾರ್ಯ ಸಾಧನೆ ಪರಮೋದ್ದೇಶ. ನನ್ನ ಸಾಹಿತ್ಯ ರಚನೆಯ ಜೊತೆಗೆ ಗಮಕ ಪ್ರಚಾರವೂ ಆಯಿತು ಎನ್ನುವುದು ಒಳಮರ್ಮ.

26–1–1964ರಂದು ಬೆಂಗಳೂರಿನ ರಾತ್ರಿ ರೈಲುಗಾಡಿ ಹಿಡಿದು ಮದ್ರಾಸು ಮಾರ್ಗವಾಗಿ ನೇರ ದೆಹಲಿಯನ್ನು ಯಾವ ಎಡರು ತೊಡರುಗಳಿಲ್ಲದೆ ಸುಖವಾಗಿ ಮೂರು ದಿವಸಗಳಲ್ಲಿ ತಲಪಿದೆವು. ಈ ಸಲ ನಮ್ಮ ಆತಿಥೇಯರು ರೂಪನಗರ ಬಡಾವಣೆಯಲ್ಲಿದ್ದ ಕ. ವೆಂ. ರಾಘವಾಚಾರ್, ಅವರ ಸಾಕುಮಗಳು ವಿನೋದಾಬಾಯಿ. ಅವರುಗಳ

ಆತಿಥ್ಯದಲ್ಲಿ ಒಂದು ದಿವಸವಿದ್ದು ಮಾರನೇ ದಿನ ರಾಮಚಂದ್ರ ಪದಕಿಯವರ ನೆರವಿನಿಂದ ರೈಲು ಟಿಕೆಟ್ಟು ಪಡೆದು ಆ ರಾತ್ರಿಯೆ ಹರಿದ್ವಾರಕ್ಕೆ ಹೃಷೀಕೇಶ ಮಾರ್ಗದ ರೈಲು ಗಾಡಿ ಹಿಡಿದೆವು. ಶಕುಂತಲಾಬಾಯಿಗೆ, ಹಿಮಾಲಯ ಪರ್ವತಗಳ ಗಂಗೋತ್ರಿ ಮೂಲದಿಂದ ಶುಚಿರ್ಭೂತಳಾಗಿ ಭೂಸ್ಪರ್ಶ ಮಾಡುವ ಪುಣ್ಯಮಯಿ ಗಂಗೆಯಲ್ಲಿ ಹರಿದ್ವಾರದಲ್ಲಿಯೆ ಮೀಯಬೇಕೆಂಬ ಹೆಬ್ಬಯಕೆ. ನನೆಗಾದರೋ ಮಹಾಮಹಿಮನಾದ ಹಿಮವಂತನನ್ನು ಹೃಷೀಕೇಶದಲ್ಲಿ ದರ್ಶನ ಮಾಡುವ ಮಹಾಬಯಕೆ. ಕಾರಣ, ಕಾಳಿದಾಸನ ಸಂಸ್ಕೃತ ಕಾವ್ಯ "ಕುಮಾರ ಸಂಭವ"ದ 5 ಸರ್ಗಗಳನ್ನು ಅರ್ಥಂಬರ್ಥ ಅಭ್ಯಾಸ ಮಾಡಿ ಮಣ್ಣು ಮುಕ್ಕಿದ್ದೆ. ಮೊದಲನೇ ಸರ್ಗದಲ್ಲಿ ಬರುವ ಹಿಮವಂತನ ವರ್ಣನೆ ಓದಿ ಮುಗ್ಧನಾಗಿದ್ದೆ. ಆದುದರಿಂದ ಹಿಮವಂತನ ದರ್ಶನ ಪಡೆಯುವ ಹುಚ್ಚಾಸೆ ಬಹಳ ವರ್ಷಗಳಿಂದ ಕಾಡುತ್ತಿತ್ತು. ರಾತ್ರಿಯ ಪ್ರಯಾಣ ಮಾಡಿ ಬೆಳಗಿನ ಜಾವ ನಾಲ್ಕುಗಂಟೆಯ ವೇಳೆಗೆ ಹರಿದ್ವಾರ ತಲಪಿದೆವು. ಇಳಿದುದೇ ತಡ, ನಾವು ಗಡಗಡ ನಡುಗತೊಡಗಿದೆವು. ಉತ್ತರ ಭಾರತದ ಚಳಿಗಾಲದ ಪರಿಚಯ ಚೆನ್ನಾಗಾಯಿತು. ಟಾಂಗಾ ಮಾಡಿಕೊಂಡು ನೇರ ಮದರಾಸು ಛತ್ರಕ್ಕೆ ಹೋದೆವು, ಒಂದು ಕೊಠಡಿ ಹಿಡಿದು "ಉಸ್ಸಪ್ಪ" ಎಂದು ನಮ್ಮ ಸಾಮಾನು ಹೊರೆಯೊಂದಿಗೆ ಕುಕ್ಕರಿಸಿಕೊಂಡೆವು. ಅನಂತರ ಹಾಸಿಗೆ ಬಿಚ್ಚಿ ರಗ್ಗು ಹೊದೆದು ಒಂದೆರಡು ಗಂಟೆಗಳ ಕಾಲ ಪ್ರಪಂಚವನ್ನೇ ಮರೆತ ನಿರ್ಲಿಪ್ತರಂತೆ ನಿದ್ದೆ ಹೋದೆವು. ಏಳುವಾಗ ಬೆಳಗಾಗಿತ್ತು. ಆಕಾಶ ಮಂಜುಕವಿದಿತ್ತು. ಸೂರ್ಯನ ದರ್ಶನವೇ ಇಲ್ಲ. ಕೊಠಡಿಯಿಂದ ಕೆಳಗಿಳಿದು ಬಂದರೆ ಅನಿರೀಕ್ಷಿತವಾಗಿ ಗಂಗಾಮಾಯಿಯ ದರ್ಶನವಾಯಿತು. ಕಾರಣ, ಮದರಾಸು ಛತ್ರ ಗಂಗಾನದಿಯ ದಡದ ಮೇಲಿದೆ. ಪಕ್ಕದಲ್ಲಿಯೇ ಗಂಗಾತಾಯಿ ನಿರಾಳವಾಗಿ ನಿಧಾನವಾಗಿ ಏರಿಳಿತವಿಲ್ಲದೆ ಝುಳುಝುಳು ಮಂಜುಳ ರವದಿಂದ ಹರಿದು ಹೋಗುತ್ತಿದ್ದಳು.

ವಿ. ಸೀ ಅವರ ಭಾವ ನಂಜುಂಡ ಶಾಸ್ತ್ರಿಗಳು ನಮ್ಮನ್ನು ಹುಡುಕಿಕೊಂಡು ಮದರಾಸು ಛತ್ರಕ್ಕೆ ದಯಮಾಡಿಸಿದರು. ಅವರಿಗೆ ಬೆಂಗಳೂರಿನಿಂದ ಪತ್ರ ಬರೆದಿದ್ದೆ. ಪುಣ್ಯಕ್ಷೇತ್ರದಲ್ಲಿ ನಡೆಸಬೇಕಾದ ಕರ್ಮಗಳ ವಿಷಯ ಪ್ರಸ್ತಾಪಿಸಿ ಅದರ ವೆಚ್ಚಕ್ಕಾಗಿ ಹಣ ಕೊಟ್ಟು ಅವರನ್ನು ಹಿಂಬಾಲಿಸಿದೆವು. ಅವರ ಮನೆಯಲ್ಲಿ ಸ್ನಾನ, ತಿಂಡಿ ತೀರ್ಥ ಮುಗಿಸಿ ನಮ್ಮ ಬಿಡದಿಗೆ ಹಿಂದಿರುಗಿದೆವು. ಶಕುಂತಲಾಬಾಯಿ ಮೈಲಿಗೆಯೆಂದು ಹೊರ ಕೂತರು. ಮೂರು ದಿವಸಗಳು ಹಾಸಿಗೆ ಬಟ್ಟೆ ಮುಟ್ಟಿಕೊಂಡು ಮೈಲಿಗೆಯಲ್ಲಿ ಹೇಗೆ ಕಳೆಯುವುದು? ಪರಸ್ಥಳ. ಮೂರು ದಿವಸಗಳೂ ರೈಲ್ವೆ ಪ್ರಯಾಣದಲ್ಲಿ ಕಾಲದಬ್ಬಿ ಜಮ್ಮು ಪಟ್ಟಣ ಸೇರುವುದೆಂದು ನಿರ್ಧರಿಸಿದೆವು. ಶಾಸ್ತ್ರಿಗಳಿಗೆ ನಮ್ಮ ಸಂಕಟವನ್ನು ತಿಳಿಸಿ, ಅಂದು ಮಧ್ಯಾಹ್ನವೇ ನಾಲ್ಕು ಗಂಟೆಗೆ ಮದ್ರಾಸ್ ಛತ್ರದಿಂದ ರೈಲ್ವೇ ಸ್ಟೇಷನ್ ದಾರಿ ಹಿಡಿದೆವು. ಟಾಂಗ ಊರು ಬಳಸಿ ಹೋಗುವಾಗ ಹರಿದ್ವಾರ ಏನು ಕಂಡಿತೋ ಅಷ್ಟೇ ನಮಗೆ ಪ್ರಾಪ್ತಿಯಾಯಿತು. ಪುರೋಹಿತರು ಮಬ್ಬು ಸಂಜೆಯ ಆಕಾಶ ತೋರಿಸಿ ನಮ್ಮ ಬಾಲ್ಯ ವಿವಾಹದಲ್ಲಿ, 'ಅರುಂಧತಿ' ನಕ್ಷತ್ರವನ್ನು "ನೋಡಿದಿರಾ" ಎಂದು ಕೇಳಿದ

ಹಾಗಿತ್ತು ನಮ್ಮ ಸ್ಥಿತಿ. ಅರುಂಧತಿ ನಕ್ಷತ್ರ ನೋಡಿರಲಿಲ್ಲ. "ನೋಡಿದೆವು" ಎಂದು ಪುರೋಹಿತರಿಗೆ ಹೂಗುಟ್ಟಿದೆವು. ಹರಿದ್ವಾರ ಪೂರ್ತಿ ನೋಡಲಿಲ್ಲ. ಸಂಜೆಯ ಗಂಗಾ ಪೂಜೆ ನೋಡಲು ಅವಕಾಶವಾಗಲಿಲ್ಲ. ನನಗಂತೂ ಹೃಷೀಕೇಶ ದರ್ಶನ, ಶಿವಾಲಯ ದರ್ಶನ, ಶಿವಾನಂದಾಶ್ರಮ ದರ್ಶನ, ಇವೆಲ್ಲವೂ ಕನಸಿನ ಗಂಟಾಯಿತು.

ಮಧ್ಯಾಹ್ನ ನಾಲ್ಕು ಗಂಟೆಗೆ ಡೆಹರಾಡೂನಿನಿಂದ ಅಮೃತಸರ ಮಾರ್ಗವಾಗಿ ಡೆಹಲಿಗೆ ಹೋಗುತ್ತಿದ್ದ ರೈಲುಗಾಡಿ ಬಂದಿತು. ಅಮೃತಸರಕ್ಕೆ ಟಿಕೆಟ್ಟುಕೊಂಡು ಗಾಡಿ ಹತ್ತಿದೆವು. ಆದರೂ ಹರಿದ್ವಾರಕ್ಕೆ ಬಂದಿದ್ದೆವು. ನೋಡಿದ್ದೆವು. ಅಲ್ಲಿಂದ ಹೊರಟಿದ್ದೆವು.

ಅಮೃತ ಸರ ರೈಲ್ವೆ ಸ್ಟೇಷನ್ನು ಸೇರಿದಾಗ ಬೆಳಗ್ಗೆ ಆರೇಳು ಗಂಟೆಯ ಸಮಯ. ನಮ ಸಾಮಾನನ್ನು ಲಾಗ್ ರೂಮಿನಲ್ಲಿ ಒಗೆದೆವು. ಗಡಗಡ ಚಳಿಯಲ್ಲಿ ಸರ್ದಾರ್ಜಿಯ ಟಾಂಗ ಹಿಡಿದು ಸಿಖ್ಖರ ಪವಿತ್ರ ಸ್ಥಳವಾದ ಸ್ವರ್ಣ ಮಂದಿರಕ್ಕೆ ಬಂದೆವು. ದೇವಾಲಯ ಸರೋವರದ ಮಧ್ಯೆ ಸ್ವರ್ಣಕಮಲದಂತೆ ಭವ್ಯವಾಗಿ ಎದ್ದಿದೆ. ಅದರ ಬಂಗಾರದ ಗೋಪುರ, ನೀರಲ್ಲಿ ಪ್ರತಿ ಬಿಂಬ ಮೂಡಿಸಿದ್ದ ನೋಟ ನಯನಾನಂದಕರವಾಗಿತ್ತು. ಒಬ್ಬ ಸರ್ದಾರ್ಜಿ ಗ್ರಂಥ ಸಾಹೆಬ್ ಓದುತ್ತಿದ್ದರು. ಅಲ್ಲಿಂದ ಸನಿಹದಲ್ಲಿದ್ದ ಜಲಿಯನ್ ವಾಲಾ ಬಾಗಿಗೆ ಹೊರಟೆವು ಜಲಿಯನ್ ವಾಲಾ ಬಾಗ್ ಮಾರಣ ಹೋಮ 1919ರಲ್ಲಿ ನಡೆದಾಗ ನಾನು ತಂದೆಯನ್ನು ಕಳೆದುಕೊಂಡು ಆರು ವರ್ಷದ ತಬ್ಬಲಿಯಾಗಿದ್ದೆ. ನನ್ನ ಸೌಭಾಗ್ಯವತಿ ಹುಟ್ಟುವುದಕ್ಕೆ ಇನ್ನೂ ಎರಡು ವರ್ಷ ಕಾಲ ಬೇಕಿತ್ತು. ನಿರ್ದಯಿ ನರ ರಾಕ್ಷಸ ಪಂಜಾಬಿನ ಲೆಫ್ಟಿನೆಂಟ್ ಗವರ್ನರ್ ಮೈಕೆಲ್ ಒಡ್ವಯರ್ ರೌಲೆಟ್ ಶಾಸನ ವನ್ನು ವಿರೋಧಿಸಲು ಸೇರಿದ್ದ ಜಲಿಯನ್ ವಾಲಾಬಾಗ್ ಜನವನ್ನು ಚದುರಿಸಲು 1650 ಸುತ್ತು ಗುಂಡುಗಳನ್ನು ಹಾರಿಸಿ 270 ಮಂದಿ ನಿರಪರಾಧಿಗಳನ್ನು ಆಹುತಿ ತೆಗೆದು ಕೊಂಡಿದ್ದ. 1200 ಮಂದಿಯನ್ನು ತೀವ್ರವಾಗಿ ಗಾಯಗೊಳಿಸಿದ್ದ. ಅಂದಿನಿಂದ ಹುತಾತ್ಮ ರಾದವರ ಪವಿತ್ರ ಕ್ಷೇತ್ರವಾಯಿತು ಜಲಿಯನ್ ವಾಲಾ ಬಾಗ್.

ಅಮೃತಸರದಲ್ಲಿ ಸರ್ದಾರ್ಜಿ ದಯೆಯಿಂದ ಒಂದು ಹಾಲಂಗಡಿಯ ಮುಂದೆ ನಿಂತು ಬಾಂಡಲೆಯಲ್ಲಿ ಕತಕತ ಕುದಿಯುತ್ತಿದ್ದ ಅಂಗೈ ದಪ್ಪ ಕೆನೆಗಟ್ಟಿದ ಗಟ್ಟಿ ಹಾಲು ಹೀರಿ ಚಾಕುವಿಂದ ಕೊಯ್ಯುವಷ್ಟು ಗಟ್ಟಿಯಾಗಿ ಹೆತ್ತುಕೊಂಡಿದ್ದ ಗಡ್ಡೆ ಮೊಸರನ್ನು ದೊನ್ನೆ ಯಲ್ಲಿ ಕಟ್ಟಿಸಿಕೊಂಡು ಹಸಿವಾದಾಗ ತಿಂದು, ಮಧ್ಯಾಹ್ನ 12 ಗಂಟೆಯ ವರೆಗೆ ಕಾಲ ದೂಡಿದೆವು. ಪಠಾನ್ ಕೋಟೆಗೆ ಹೋಗುತ್ತಿದ್ದ ರೈಲು ಬಂದ ಕೂಡಲೆ ಅದನ್ನು ಹಿಡಿದು ಕಾಶ್ಮೀರದ ಚಳಿಗಾಲದ ರಾಜಧಾನಿ ಜಮ್ಮು ನಗರಕ್ಕೆ ಹೊರಟೆವು. ಪಠಾನ್ ಕೋಟೆ ಯನ್ನು ಸೇರಿದಾಗ ಸುಮಾರು 4-15 ಗಂಟೆಯಾಗಿತ್ತು. ರೈಲ್ವೆ ಸ್ಟೇಷನ್ನಿನಿಂದ ಸಾಮಾ ನನ್ನು ಹಮಾಲಿಯ ತಲೆಯ ಮೇಲೆ ಹೇರಿಸಿಕೊಂಡು ಬಸ್ ಸ್ಟಾಂಡಿಗೆ ಬಂದೆವು. ನಮ್ಮ ಅದೃಷ್ಟ, ಜಮ್ಮುಗೆ ಒಂದು ಬಸ್ ಕಾದು ನಿಂತಿತ್ತು. ಅದನ್ನು ಹತ್ತಿ ಜಮ್ಮು ಸೇರಿದಾಗ ರಾತ್ರಿ 8 ಗಂಟೆ.

ಜಮ್ಮು ಕಾಶ್ಮೀರದ ಚಳಿಗಾಲದ ರಾಜಧಾನಿ. ರಾವಿ ನದಿಯ ಎಡ ದಂಡೆಯ ಮೇಲಿದೆ. ದೂರದಿಂದ ಕಾಣುವ ಪರ್ವತಗಳಿಂದ ಆವೃತವಾಗಿದೆ. ಕಾಶ್ಮೀರವೆಂದ ಕೂಡಲೆ ಜಮ್ಮು ಕೂಡ ಪ್ರಕೃತಿ ಸೌಂದರ್ಯಮಯ ನಗರವೆಂದು ಮಾಡಿಕೊಂಡಿದ್ದ ಕಲ್ಪನೆ ಜಮ್ಮು ನಗರದ ನೆಲವನ್ನು ಮೆಟ್ಟಿದೊಡನೆ ಅಳಿಸಿಹೋಯಿತು.

ಕೆನಾಲ್ ರಸ್ತೆಯಲ್ಲಿರುವ ರೀಜಿನಲ್ ರಿಸರ್ಚ್ ಲ್ಯಾಬೊರೆಟರಿಯಲ್ಲಿ ರಿಸರ್ಚ್ ಶಾಖೆಯಲ್ಲಿ ಉದ್ಯೋಗಸ್ಥರಾಗಿದ್ದ ಬಾಲಮಣಿಯವರ ಅತಿಥಿಗಳಾದೆವು. ಅವರ ನಿವಾಸ ಲ್ಯಾಬೊರೆಟರಿಗೆ ಸನಿಹದಲ್ಲೆ ಇತ್ತು. ನಾವು ಒಂದು ವಾರ ಜಮ್ಮು ನಗರದಲ್ಲಿದ್ದು ನಮಗೆ ಬೇಕಾದ ವಿಷಯವನ್ನು ಸಂಗ್ರಹಿಸಿದೆವು. ಕಾಶ್ಮೀರದ ಬೇಸಗೆ ರಾಜಧಾನಿ ಲೋಕ ವಿಖ್ಯಾತ ಶ್ರೀನಗರವನ್ನು ಸಂದರ್ಶಿಸಿ ನಮಗೆ ಬೇಕಾದ ವಿಷಯಗಳನ್ನು ಸಂಗ್ರಹಿಸುವುದಕ್ಕೆ ಆಗಲೇ ಇಲ್ಲ. ಕಾರಣ, ಶ್ರೀನಗರಕ್ಕೆ ಜನವರಿ ತಿಂಗಳಿನಲ್ಲಿ ಹೋಗುವುದು ಅಸಾಧ್ಯ, ವಿಪರೀತ ಚಳಿ. "ಈ ಸಲ ದಲ್ ಸರೋವರ ಹೆಪ್ಪುಗಟ್ಟಿ ಹಿಮದ ಒಂದೇ ಹಾಳೆಯಂತಾದುದು ಪತ್ರಿಕೆಗಳಲ್ಲಿ ಕೂಡ ಓದಿರಲಿಲ್ಲವೇ ನೀವು ? ನಾವು ನಿಮ್ಮನ್ನು ಕಳಿಸುವುದಕ್ಕೆ ಒಪ್ಪಿಗೆ ಕೊಡುವುದಿಲ್ಲ"ವೆಂದು ಜಮ್ಮು ಕಾಶ್ಮೀರ ವಿದ್ಯಾ ಇಲಾಖೆಯ ಅಧಿಕಾರಿಗಳು ನಮ್ಮ ಪ್ರವಾಸವನ್ನು ತಡೆದುಬಿಟ್ಟರು. ಹರಿದ್ವಾರ ಹೃಷಿಕೇಶಗಳ ದರ್ಶನ ಹಾಗಾಯಿತು. ಕಾಶ್ಮೀರ ಶ್ರೀನಗರದ ಪ್ರವಾಸ ಹೀಗಾಯಿತು. ಮೈಸೂರು ರಾಜ್ಯ ಸರಕಾರ ನಮ್ಮನ್ನು ಕಳಿಸಿದ ಘಳಿಗೆಯೇ ವಿಷ ಘಳಿಗೆಯೆಂದು ಮನಸ್ಸಿನಲ್ಲಿ ಜಿಗುಪ್ಸೆ ಪಟ್ಟುಕೊಂಡು ತೆಪ್ಪಗಾದೆವು.

ಒಂದು ಭಾನುವಾರ ಸಂಜೆ ಜಮ್ಮು ಮತ್ತು ಕಾಶ್ಮೀರ ರಾಜ್ಯದ ಸಾಹಿತ್ಯ ಮತ್ತು ಸಂಸ್ಕೃತಿ ಅಕಾಡೆಮಿಯ ಕಾರ್ಯದರ್ಶಿ ಪ್ರೊ|| ನೀಲಾಂಬರ್ ಅವರ ಮನೆಯಲ್ಲಿ ನಮಗೆ ಟೀ ಪಾರ್ಟಿ ಏರ್ಪಾಡಾಯಿತು. ನಗರದ ಸಾಹಿತಿಗಳು ಹತ್ತೆಂಟು ಮಂದಿ ಬಂದಿದ್ದರು. ಅವರೆಲ್ಲ ಡೋಗ್ರಿ ಹಾಗೂ ಕಾಶ್ಮೀರಿ ಭಾಷಾ ಸಾಹಿತಿಗಳು. ಕನ್ನಡ ಸಾಹಿತ್ಯದ ವಿಷಯ ಕೇಳಿ ತಿಳಿದುಕೊಂಡರು. ನಾನು ಪಂಪನಿಂದ ಪ್ರಾರಂಭಿಸಿ ಆಧುನಿಕ ಸಾಹಿತ್ಯದ ವರೆಗೆ ಇಂಗ್ಲೀಷಿನಲ್ಲಿ ಸ್ಥೂಲ ಪರಿಚಯ ಮಾಡಿಕೊಟ್ಟೆ. ಶಕುಂತಲಾಬಾಯಿ ಕುವೆಂಪು "ಶ್ರೀ ರಾಮಾಯಣ ದರ್ಶನಂ" ಕಾವ್ಯದಿಂದ "ಕವಿಕ್ರಮ" ದರ್ಶನ ಸಂಚಿಕೆಯಲ್ಲಿ–

"ಹೋಮರಗೆ ವರ್ಜಿಗೆಲ ದಾಂಟೆ ಮಿಲ್ಟನಗೆ
. . . .
. . . .
ದೆರೆಕೊಳುಗೆ ಚಿರಶಾಂತಿ ; ಸಿರಿಗನ್ನಡಂ ಗೆಲ್ಗೆ

ಹದಿನೈದು ಸಾಲುಗಳನ್ನು ವಾಚನ ಮಾಡಿದರು. ನಾನು ಈ ಸಾಲುಗಳ ಅರ್ಥವನ್ನು ಇಂಗ್ಲಿಷ್ ಭಾಷೆಯಲ್ಲಿ ವಿವರಿಸಿದೆ. ಕಾವ್ಯದ ಸಾರ್ವಕಾಲಿಕ ಪ್ರಜ್ಞೆಯನ್ನು ಪ್ರಸ್ತಾಪಿಸಿದೆ. ಕಾವ್ಯಕ್ಕೆ ದೊರೆತಿರುವ ರಾಷ್ಟ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯ ವಿಷಯ ಜ್ಞಾಪಿಸಿದೆ. ಪ್ರೊ|| ನೀಲಾಂಬರ್ ಕಾವ್ಯದ ಹಿರಿಮೆಯನ್ನು ಮೆಚ್ಚಿಕೊಂಡರು. "ಶ್ರೀ ರಾಮಾಯಣ ದರ್ಶನಂ" ಕಾವ್ಯ ಭಾರತೀಯ ಭಾಷೆಗಳಲ್ಲಿ ಬರಬೇಕೆಂದು ಅಭಿಪ್ರಾಯ

ಪಟ್ಟರು. ಶಕುಂತಲಾಬಾಯಿಯ ಸಿರಿಕಂಠವನ್ನು ಅತಿಶಯವಾಗಿ ಹೊಗಳಿ ಶ್ಲಾಘಿಸಿದರು. ಬೆಂಗಳೂರಿನಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ವಜ್ರ ಮಹೋತ್ಸವಕ್ಕೆ ಪ್ರೊ|| ನೀಲಕಂಠರ್ 1971ರಲ್ಲಿ ಆಗಮಿಸಿದ್ದರು. ನಾನು ಅವರನ್ನು ಭೇಟಿ ಮಾಡಿ ನಮ್ಮ ಹಿಂದಿನ ಪರಿಚಯವನ್ನು ನೆನಪಿಗೆ ತಂದೆ.

ನಾವು ಒಂದೆರಡು ಪ್ರಾಥಮಿಕ ಶಾಲೆಗಳನ್ನು ಭೇಟಿ ಮಾಡಿದೆವು. ನಮ್ಮ ಶಾಲೆಗಳಂತೆಯೇ ಅಲ್ಲಿನ ಶಾಲೆಗಳು, ನಮ್ಮ ಉಪಾಧ್ಯಾಯರುಗಳಂತೆಯೇ ಅಲ್ಲೂ. ಜಮ್ಮು ಮತ್ತು ಕಾಶ್ಮೀರ ರಾಜ್ಯದ ಶಿಕ್ಷಣ ಇಲಾಖೆ ನಮಗೆ ಮಾರ್ಗದರ್ಶನಕ್ಕೆ ಇಬ್ಬರು ಇನ್ಸ್ಪೆಕ್ಟರ್‌ಗಳನ್ನು ಕಳಿಸಿಕೊಟ್ಟಿದ್ದರು. ಅವರು ತುಂಬ ವಿನಯದಿಂದ ವರ್ತಿಸುತ್ತಿದ್ದರು. "ನಿಮ್ಮ ಸೇವಕರು" ಅನ್ನುವಷ್ಟು ಅತಿ ವಿನಯ ನಮಗೆ ತಡೆದುಕೊಳ್ಳುವುದಕ್ಕೆ ದುಸ್ಸಾಧ್ಯವಾಗಿತ್ತು.

ಜಮ್ಮು ನಗರದಲ್ಲಿ ಪ್ರೇಕ್ಷಣೀಯವಾದ ದೇವಾಲಯ ರಘುನಾಥ್ ಮಂದಿರ್. ಸಾಕಷ್ಟು ವಿಸ್ತಾರವಾಗಿದೆ. ಸುತ್ತಲೂ ದಶಾವತಾರಗಳ ಆಳೆತ್ತರದ ಅಮೃತ ಶಿಲಾ ವಿಗ್ರಹಗಳು. ಮಧ್ಯೆ ಸೀತಾಲಕ್ಷ್ಮಣ ಸಮೇತನಾದ ರಘುನಾಥ ಸ್ವಾಮಿ. ಅವೂ ಅಮೃತ ಶಿಲೆಯ ಆಳೆತ್ತರ ಪ್ರಮಾಣದ ವಿಗ್ರಹಗಳು. ಮುದ್ದಾಗಿವೆ. ಸರಕಾರ ಅಧಿಕಾರ ನಡೆಸುವ ಸೆಕ್ರೆಟರಿಯೇಟ್ ಕಟ್ಟಡ ಇನ್ನೊಂದು ಪ್ರೇಕ್ಷಣೀಯ ಸ್ಥಳ. ಅದರ ಸನಿಹದಲ್ಲಿಯೇ ಡೋಗ್ರ ಕಲಾ ಶಾಲೆಯಿದೆ. ರಾಮಾಯಣ, ಭಾರತ, ಭಾಗವತ, ಕೃಷ್ಣ ಲೀಲೆಗಳಿಗೆ ಸಂಬಂಧಪಟ್ಟ ಜಲ ವರ್ಣ ಚಿತ್ರಗಳು ನಮ್ಮ ಮನಸೆಳೆದವು. ಮೊಘಲ, ರಜಪೂತ ಡೋಗ್ರ, ಸಿಕ್ ಅರಸರ ಚಿತ್ರಗಳ ಸಂಗ್ರಹ ಇತಿಹಾಸ ಪ್ರಜ್ಞೆಯನ್ನು ಮರುಕಳಿಸುತ್ತವೆ. ಭಾರತೀಯ ಚಿತ್ರ ಕಲಾ ಸಂಪ್ರದಾಯದಲ್ಲಿ ತನ್ನದೇ ವೈಶಿಷ್ಟ್ಯವನ್ನು ಕಾಪಾಡಿಕೊಂಡು ಬಂದಿರುವ ಕಾಂಗ್ರ ಮತ್ತು ಭಸೋಲಿ ಸಂಪ್ರದಾಯದ ವರ್ಣ ಚಿತ್ರಗಳೂ ಕಲಾ ಶಾಲೆಯಲ್ಲಿ ನಿಬಿಡವಾಗಿದ್ದವು. ಬಹಳ ಹೊತ್ತು ಕಳೆದೆವು ಚಿತ್ರ ಸಂಗ್ರಹಾಲಯದಲ್ಲಿ.

"ನನ ಮನೆ—ಕಾಶ್ಮೀರ" ಮಕ್ಕಳ ಸಾಹಿತ್ಯಕ್ಕೆ ಬೇಕಾದ ವಿಷಯಗಳನ್ನು ಸಂಗ್ರಹಿಸಿ ಜಮ್ಮು ನಗರದಿಂದ ದೆಹಲಿಗೆ ಹಿಂದಿರುಗಿ ಮತ್ತೆ ರೂಪನಗರ ಬಡಾವಣೆಯಲ್ಲಿದ್ದ ಕ. ವೆಂ. ರಾಘವಾಚಾರ್ಯರ ಅತಿಥಿಗಳಾದೆವು. ದೆಹಲಿಯ ಸಹೃದಯ ಸಾಹಿತ್ಯಾಭಿಮಾನಿಗಳಿಗೆ ಶಕುಂತಲಾಬಾಯಿ ಸಾಕಷ್ಟು ಪರಿಚಯವಾಗಿದ್ದರು. ಈ ಕಾರಣದಿಂದ ದೆಹಲಿಯಲ್ಲಿ ಒಂದು ಕಾವ್ಯವಾಚನವಾಯಿತು ಒಂದು ಸಂಘದ ಆಶ್ರಯದಲ್ಲಿ. ವಿವರದ ನೆನಪು ಮಾಸಿದೆ.

ದೆಹಲಿಯನ್ನು ಬಿಟ್ಟು ಗುಜರಾತಿನ ಪೆಟ್ಲಾಡ್ ಕಡೆಗೆ ನಮ್ಮ ಪ್ರಯಾಣ ಸಾಗಿತು. ಪೆಟ್ಲಾಡಿನಲ್ಲಿ ನನ್ನ ಹಿರಿಯಳಿಯ ಡಾ|| ಕೆ. ಎಸ್. ಕೋಟೀಶ್ವರ-ಹಿರಿ ಮಗಳು ವನಜಾ ಕೋಟೀಶ್ವರ ನೆಲೆಸಿದ್ದರು. ನನ್ನ ಅಳಿಯ ಪೆಟ್ಲಾಡ್ ಕಾಲೇಜಿನಲ್ಲಿ ಇಂಗ್ಲಿಷ್ ಭಾಷಾಧ್ಯಾಪಕರಾಗಿದ್ದರು. ದೆಹಲಿಯ ಗಾಡಿಯನ್ನು ನಾವು ಬರೋಡದಲ್ಲಿ ಬದಲಿಸಿ ಪೆಟ್ಲಾಡ್ ಗಾಡಿಯನ್ನು ಹಿಡಿಯಬೇಕಾಗಿತ್ತು. ನಮ್ಮ ಗಾಡಿ ಬರೋಡವನ್ನು ಬೇಗನೆ ಸೇರಿತು.

ಮಧ್ಯಾಹ್ನ 12 ಗಂಟೆಗೆ ಪೆಟ್ಲಾಡ್ ಕಡೆಯ ಗಾಡಿ ಹೊರಡುವುದಿತ್ತು. ಆದುದರಿಂದ ಬರೋಡ ಮ್ಯೂಸಿಯಂ ನೋಡುವುದು, ಅನಂತರ ಪೆಟ್ಲಾಡಿಗೆ ಗಾಡಿ ಬಿಡುವುದು ಎಂದು ನಿರ್ಧರಿಸಿದೆವು. ರೈಲ್ವೆ ಸ್ಟೇಷನ್ನಿನಲ್ಲಿ ಮುಖ ತೊಳೆದು, ಫಲಾಹಾರ ಮಂದಿರದಲ್ಲಿ ತಿಂಡಿ ತೀರ್ಥ ಮುಗಿಸಿ ಹೊರಗೆ ಬಂದು ಒಂದು ಟಾಂಗ ಹಿಡಿದು ಮ್ಯೂಸಿಯಂ ಕಡೆ ಹೊರಟೆವು. ಮೈಸೂರು ಜಗನ್ಮೋಹನ ಅರಮನೆಯ ಸಂಗ್ರಹದಲ್ಲಿಲ್ಲದ ರಾಜ ರವಿವರ್ಮನ ಇನ್ನೂ ಕೆಲವು ತೈಲ ವರ್ಣ ಚಿತ್ರಗಳು ಬರೋಡ ಮ್ಯೂಸಿಯಂನಲ್ಲಿದ್ದುವು. ಕಣ್ಮನಗಳು ತಣಿಯುವವರೆಗೂ ಅವುಗಳನ್ನೇ ನೋಡುತ್ತಿದ್ದು ರೈಲ್ವೆ ಸ್ಟೇಷನ್ನಿಗೆ ಸಕಾಲದಲ್ಲಿ ಒಂದು ಪೆಟ್ಲಾಡಿನ ರೈಲುಗಾಡಿ ಹಿಡಿದು ಕೂತೆವು. ಸಂಜೆ 5 ಗಂಟೆಗೆಲ್ಲ ಪೆಟ್ಲಾಡು ಸೇರಿದ್ದೆವು.

ನಾನು ಪೆಟ್ಲಾಡಿನಲ್ಲಿ ಒಂದು ವಾರವಿದ್ದೆ. ಶಕುಂತಲಾಬಾಯಿಯನ್ನು ಮಗಳು ಅಳಿಯಂದಿರ ಹತ್ತಿರ ಬಿಟ್ಟು ಬೆಂಗಳೂರಿಗೆ ಹಿಂದಿರುಗಿದೆ. 1937ರಲ್ಲಿ ದಾಂಪತ್ಯ ಜೀವನವನ್ನು ಪ್ರಾರಂಭಿಸಿದ ನಾವು 1968ರ ವರೆಗೆ ಒಬ್ಬರನ್ನು ಬಿಟ್ಟು ಒಬ್ಬರು ಇದ್ದುದೇ ಇಲ್ಲ ಒಂದು ದಿನವೂ. ಈಗ ಅಗಲಿದ್ದೆವು. ಮೇ ತಿಂಗಳಲ್ಲಿ ಶಕುಂತಲಾಬಾಯಿ ಮಗಳು ಅಳಿಯರೊಂದಿಗೆ ಪೆಟ್ಲಾಡಿನಿಂದ ಬೆಂಗಳೂರಿಗೆ ಬರುವ ವರೆಗೆ ನಾನು ಹೇಗೆ ಕಾಲದಬ್ಬಿದೆನೋ ಅದನ್ನು ವರ್ಣಿಸಿ ಫಲವಿಲ್ಲ. ನಾನು ಬಾಲ್ಯದಿಂದಲೂ ಯಾವ ಜವಾಬ್ದಾರಿಯನ್ನೂ ವಹಿಸದೆ ಬೆಳೆದು ಬಂದಿದ್ದೇನೆ. ಬಾಲ್ಯದಿಂದ ಯೌವನಕ್ಕೆ ಬರುವವರೆಗೆ ನನ್ನ ಚಿಕ್ಕಮ್ಮ ಸಾಕಿದರು. ಯೌವನದಲ್ಲಿ ನನ್ನನ್ನು ನನ್ನ ಸೌಭಾಗ್ಯವತಿಯ ಕೈಗೆ ಒಪ್ಪಿಸಿದರು. ದಾಂಪತ್ಯ ಜೀವನವನ್ನು ಪ್ರಾರಂಭಿಸುವವರೆಗೂ ಋಷ್ಯಶೃಂಗನಂತೆ ಬೆಳೆದೆನೆಂದರೂ ತಪ್ಪಲ್ಲ. ನಾನಾಯಿತು. ನನ್ನ ಸಾಹಿತ್ಯವಾಯಿತು. ನನ್ನ ಗೆಳೆಯರ ಗುಂಪಾಯಿತು. ಹೀಗೆ ಆರು ದಶಕಗಳನ್ನು ದಾಟಿ ಏಳನೆಯ ದಶಕದ ಹತ್ತಿರದಲ್ಲಿದ್ದೇನೆ. ನಾನು ಬರಹ ಚತುರನೇ ಹೊರತು ಲೋಕವ್ಯವಹಾರ ಚತುರನಲ್ಲ. ಇಂಥ ನಾನು ನನ್ನ ಸೌಭಾಗ್ಯವತಿಯನ್ನು ಅಗಲಿ ಒಬ್ಬಂಟಿಗನಾಗಿ ಮೂರು ತಿಂಗಳು ಕಳೆದುದು ಒಂದು ಯುಗದಂತೆ ತೋರುತ್ತಿತ್ತು. ಮನೆಯ ನಿರ್ವಹಣೆ, ನನ್ನಮ್ಮ ಚಿಕ್ಕಮ್ಮ ನಿಭಾಯಿಸಿದರು. ತರೋಣ ಕೊಡೋಣ, ವರ್ತನೆಯಂಗಡಿಯ ಮಿತ್ರರು ಸುಧಾರಿಸಿಕೊಂಡರು. ನಾನು, ನನ್ನ ಸಾಹಿತ್ಯ, ನನ್ನ ಮಿತ್ರ ಕೂಟಗಳಲ್ಲೇ ತನ್ಮಯನಾಗಿದ್ದೆ ಮೂರು ತಿಂಗಳೂ.

೧೦. ಮತ್ತೆ ಮೂರನೆಯ ಆವೃತ್ತಿ ದೆಹಲಿಗೆ

ನನಗೆ ಆದರ್ಶ ಶಿಕ್ಷಕ ಪ್ರಶಸ್ತಿ

ಭಾರತ ಕೇಂದ್ರ ಸರಕಾರ ನನಗೆ 1968ರಲ್ಲಿ ಆದರ್ಶ ಶಿಕ್ಷಕನೆಂದು ರಾಷ್ಟ್ರ ಪ್ರಶಸ್ತಿ ದಯಪಾಲಿಸಿತು. ಪ್ರಶಸ್ತಿ ವರಪ್ರದಾನ ಸಮಾರಂಭ 1968ರ ಡಿಸೆಂಬರ್ 18ರಂದು ದೆಹಲಿರಾಜಧಾನಿಯಲ್ಲಿ ಸಮಾವೇಶವಾಯಿತು. ಪ್ರಶಸ್ತಿಪತ್ರ ಸ್ವೀಕರಿಸಿಲು ದೆಹಲಿಯಾತ್ರೆ ಕೈಗೊಂಡೆ. ಹಿಂದೀ ಕನ್ನಡ ದುಭಾಷಿಯಾದ ನನ್ನ ಸೌಭಾಗ್ಯವತಿಯ ಸಹಕಾರವಿಲ್ಲದೆ ನಾನು ಉತ್ತರ ದೇಶದ ಪ್ರವಾಸದಲ್ಲಿ ಬಚಾವಾಗುವಂತೆಯೇ ಇಲ್ಲ. ಈ ಕಾರಣ ಶಕುಂತಲಾಬಾಯಿಯೂ ನನ್ನ ಜೊತೆ ಪ್ರವಾಸ ಮಾಡುವುದು ಅನಿವಾರ್ಯವಾಯಿತು. ನನ್ನ ಸ್ನೇಹಿತರಿಗೆ, ಅಭಿಮಾನಿಗಳಿಗೆ ಈ ವಿಷಯ ತಿಳಿಯುತ್ತಲೆ ಅವರುಗಳು ಈ ಸಲದ ಉತ್ತರ ಭಾರತ ಪ್ರವಾಸದಲ್ಲಿ ಕಲ್ಕತ್ತಾ ಸೇರಿಸಿಕೊಳ್ಳಿ ಎಂದು ತಿಳಿಸಿದರು. ಆದುದರಿಂದ ನಾವು ದೆಹಲಿ ಅಲಹಾಬಾದು–ಪ್ರಯಾಗ, ವಾರಣಾಸಿ, ವಿಷ್ಣುಗಯ, ಕಲ್ಕತ್ತಾ, ತಾತಾ ನಗರ ಮತ್ತು ಮದರಾಸು ನಗರಗಳನ್ನು ಸೇರಿಸಿಕೊಂಡೆವು. ನಮ್ಮ ದೆಹಲಿ ಯಾತ್ರೆ ಈ ಸಲ ದೀರ್ಘಕಾಲದ್ದಾಗಿತ್ತು. ನಮ್ಮ ಪ್ರವಾಸದಲ್ಲಿ ಗಮಕ ಕಲಾ ಪ್ರಚಾರ ಪ್ರಮುಖ ಸ್ಥಾನ ಪಡೆದಿತ್ತೆಂದು ಹೇಳಬೇಕಾಗಿಲ್ಲ.

ನಾವು ಬೆಂಗಳೂರಿಂದ ಡಿಸೆಂಬರ್ 12ರಂದು ಮದರಾಸಿನ ರೈಲು ಹಿಡಿದು ಮಧ್ಯಾಹ್ನ ಮದರಾಸು ಸೇರಿದೆವು. ಶಕುಂತಲಾಬಾಯಿಯ ಮಲಅಕ್ಕ ದಿ|| ಕಮಲಾ ಬಾಯಿಯ ಮಗಳು ಸುಂದರಾಬಾಯಿ, ಅಳಿಯ ಗೋಪೀನಾಥ್ ಬಹು ಸಡಗರದಿಂದ ನಮ್ಮನ್ನು ಮನೆಗೆ ಕರೆದುಕೊಂಡು ಹೋಗಿ ಆದರಿಸಿದರು. ಆ ದಿನ ಮದರಾಸಿನಲ್ಲಿದ್ದು ಮಾರನೇ ದಿನ ಅಲ್ಲಿಂದ ರೈಲಿನಲ್ಲಿ ಹೊರಟು 15ರಂದು ಬೆಳಗ್ಗೆ ದೆಹಲಿ ಸೇರಿದ್ದೆವು.

16-18ರ ವರೆಗೆ ನಾವು ಭಾರತ ಸರಕಾರದ ಅತಿಥಿಗಳು. ರಾಷ್ಟ್ರಪ್ರಶಸ್ತಿ ವಿಜೇತರು 95 ಮಂದಿ. ಪ್ರೌಢಶಾಲೆಯ ಶಿಕ್ಷಕರಿಂದ ಪ್ರಾಥಮಿಕ ಶಾಲಾ ಶಿಕ್ಷಕರು ಭಾರತದ ಎಲ್ಲ ರಾಜ್ಯಗಳಿಂದ ಬಂದು ಶಿಬಿರದ ಏಕ ಚಾವಣಿಯಲ್ಲಿ ತಂಗಿ ಭಾರತೀಯ ಐಕ್ಯಭಾವವನ್ನು ಹೊರಹೊಮ್ಮಿಸಿದರು. ಟೇಬಲ್ ಡಿನ್ನರು. ಮಾಂಸಾಹಾರ–ಸಸ್ಯಾಹಾರ ಪ್ರತ್ಯೇಕ ವಾಗಿದ್ದವು. ನಮ್ಮನ್ನು ಚೆನ್ನಾಗಿಯೇ ನೋಡಿಕೊಳ್ಳುತ್ತಿದ್ದರು. ಉನ್ನತ ಮಟ್ಟದ ಅಧಿಕಾರಿಗಳೇ ಆತಿಥೇಯರು. ಸರಳ, ವಿನಯ, ಗಂಭೀರ ಭಾವಗಳಿಂದ ಸ್ನೇಹಪರರಾಗಿ ನಮ್ಮೊಡನೆ ಮಿಳಿತವಾಗುತ್ತಿದ್ದರು. ನಮ್ಮ ಕಡೆಯ ಅಧಿಕಾರಿಗಳ ಶ್ರೀಮದ್ಗಾಂಭೀರ್ಯಕ್ಕೂ ಆ ಕಡೆಯ ಅಧಿಕಾರಿಗಳ ಸರಳತೆಗೂ ಅಜಗಜಾಂತರವಿತ್ತು.

“ಗಾಂಧೀ ದರ್ಶನ” ಗಮಕ ರೂಪಕಕ್ಕೆ ಸ್ಫೂರ್ತಿ

18–12–1968ರಂದು ವಿಜ್ಞಾನಭವನದಲ್ಲಿ ಪ್ರಶಸ್ತಿ ವರಪ್ರದಾನ. ಆ ವರೆಗೆ ಮಿಕ್ಕ ದಿನಗಳಲ್ಲಿ ನಮ್ಮನ್ನು ದೆಹಲಿಯಲ್ಲೆಲ್ಲ ಬಸ್ಸಿನಲ್ಲಿ ತಿರುಗಾಡಿಸಿ ನೋಡಬೇಕಾದ ಸ್ಥಳ

ಗಳನ್ನೆಲ್ಲ ತೋರಿಸಿದರು. ನಾವು ಹಿಂದೆ ದಹಲಿಗೆ ಎರಡುಸಲ ಹೋಗಿದ್ದರೂ ಗಾಂಧೀಜಿ ಹುತಾತ್ಮರಾಗಿದ್ದ ಬಿರ್ಲಾ ಭವನವನ್ನೂ, ರಾಜಘಾಟನ್ನೂ ನೋಡಿರಲಿಲ್ಲ. ನನಗೆ ರಾಷ್ಟ್ರ ಪ್ರಶಸ್ತಿ ಬಂದು, ಆ ನೆಪದಲ್ಲಿ ಜೆಹಲಿಯ ಪಕ್ಷಿನೋಟದ ಸಂಚಾರವನ್ನು ಕೈಗೊಂಡಾಗ ರಾಜಘಾಟ್ ಸಂದರ್ಶನವಾಗಬೇಕೆಂದು ವಿಧಿ ನಿಶ್ಚಯಿಸಿತ್ತೇನೊ? ಅಂತೂ ರಾಜ ಘಾಟಗೆ ಹೋಗಿ ರಾಷ್ಟ್ರಪಿತ ಬಾಪೂಜಿಗೆ ನಮನ ಸಲ್ಲಿಸಲಿಲ್ಲವೆಂಬ ವ್ಯಾಕುಲತೆ ಈ ಸಲ ತಪ್ಪಿತು.

ಬಿರ್ಲಾ ಭವನ....ಗಾಂಧೀಜಿ ಸಂಜೆ ಪ್ರಾರ್ಥನೆ ಮಾಡುತ್ತಿದ್ದ ಸ್ಥಳ....30ನೇ ಜನವರಿ 1947ರ ಸಂಜೆ 5 ಗಂಟೆ........ತಟ್ಟನೆ ನೆನಪಾಯಿತು, ಬಿರ್ಲಾಭವನವನ್ನು ಮೆಟ್ಟುತ್ತಲೆ. ಬಾಪೂಜಿ ವಿನಾಯಕ ಗೋಡ್ಸೆಯ ಗುಂಡಿಗೆ ಬಲಿಯಾಗಿ ದಿಢೀರನೆ "ಹಾ ರಾಮ್" ಎಂದು ನೆಲಕಚ್ಚಿದ ಸ್ಥಳವನ್ನು ನೋಡುತ್ತಲೆ ನನ್ನ ಭಾವನಾಲೋಕದ ಪಕ್ಷಿ 1948ರ ಜನವರಿ 30ರ ಶುಕ್ರವಾರದ ಸಂಜೆಯ ಬೆಂಗಳೂರಿನ ಬಾಂದಳಕ್ಕೆ ಹಾರಿತು. ಆ ದಿನ ಸಂಜೆ ನಾನು ಯುನೈಟೆಡ್ ಮಿಷನ್ ಹೈಸ್ಕೂಲಿನ ಹಿರಿಯ ವಿದ್ಯಾರ್ಥಿಗಳ ಸಭೆ ಯಲ್ಲಿ ಸಂಘದ ಉಪಾಧ್ಯಕ್ಷನಾಗಿ ಕಾರ್ಯ ನಿರ್ವಹಿಸುತ್ತಿದ್ದೆ. ಸಂಘದ ಸಭೆ ಗರಿಗಟ್ಟಿ ವಿಷಯುಗಳನ್ನು ಚರ್ಚಿಸುತ್ತಿದ್ದ ಸಮಯ, ಒಬ್ಬಾತ ಧಾವಿಸಿ ಬಂದು "ಬಾಪೂಜಿ ಗುಂಡಿಗೆ ಬಲಿಯಾಗಿ ಹುತಾತ್ಮರಾದರಂತೆ, ಸಭೆ ನಿಲ್ಲಿಸಿ, ಸಭೆ ನಿಲ್ಲಿಸಿ" ಎಂದು ಉದ್ವೇಗ ಗದ್ಗದಿತ ಕಂಠದಿಂದ ಕಂಬನಿ ಮಿಡಿಯುತ್ತ ತೊದಲಿದ. ನಾವೆಲ್ಲ ದಿಗ್ಭ್ರಮೆಯಿಂದ ಚಿಂತಾಕ್ರಾಂತರಾದೆವು. ಸಭೆ ನಿಂತಿತು. ನಾನು ಒಂದೇ ಉಸಿರು ಮನೆಗೋಡಿದೆ ಬುದ್ಧಿ ಭ್ರಮಣೆಗೊಂಡವನಂತೆ. ಬೆಂಗಳೂರು ನಗರದ ಮನೆಗಳೆಲ್ಲ ಹಾಳು ಸುರಿಯುತ್ತಿದ್ದವು. ಬೀದಿಗಳಲ್ಲಿ ಜನ ಸಂದಣಿ. ರೇಡಿಯೋ ಸುದ್ದಿ ನಿಮಿಷ ನಿಮಿಷಕ್ಕೂ ಗೋಳನ್ನು ಬಿತ್ತರಿ ಸುತ್ತಿತ್ತು. ರೇಡಿಯೋ ಇದ್ದ ಅಂಗಡಿ, ಮನೆಗಳಲ್ಲೆಲ್ಲ ಜನ ಪರಿಶೆಗೂಡಿತ್ತು. ಎಲ್ಲ ನೆನಪಾಯಿತು. "ಮೈಸೂರು ಮಲ್ಲಿಗೆ"ಯ ರಸಕವಿ ನಮ್ಮ ಮಿತ್ರವರ್ಯ ಕೆ. ಎಸ್. ನರ ಸಿಂಹಸ್ವಾಮಿಯವರ "ಗಾಂಧೀಜಿಯ ಪಾದಕ್ಕೆ" ಕವನದ ಸಾಲುಗಳಿಂದ "ನಮನ" ಸಲ್ಲಿಸಿದೆವು.

ಕಂಬನಿಯ ಅರ್ಘ್ಯದಲಿ ನಾಡೆಲ್ಲ ತಲೆಬಾಗಿ
ಕಲ್ಲಾಯ್ತು ; ಸದ್ಗತಿಯ ತೋರು, ತಂದೆ !
ಕಡಲು, ಕತ್ತಲೆ, ಹಡಗು ಒಡೆದೀತು ! ಬೆಳಕಾಗಿ
ಭಾರತವ ಕೈಹಿಡಿದು ನಡೆಸು ಬಾ, ತಂದೆ.

ನಮ್ಮ ಬಸ್ಸು ನೇರ ಯಮುನಾ ತಡಿಯಲ್ಲಿರುವ ರಾಜಾಘಾಟಿಗೆ ಓಡಿತು. ಸಮಾಧಿಯ ಪ್ರದೇಶವನ್ನು ಪ್ರವೇಶಿಸುತ್ತಿದ್ದ ಹಾಗೆ ಅಲ್ಲಲ್ಲಿ ಹೂ ಮಾರುವವರ ತಂಡ, ಅವರನ್ನು ಹೂ ಕೊಳ್ಳುವ ತಂಡ ಮುತ್ತಿತ್ತು. ನೆರೆಯವರಂತೆ ನಾವೂ ಬಾಳಬೇಕಲ್ಲ ! ಹೂಮಾಲೆ ಕೊಂಡಾಯಿತು. ಸಮಾಧಿಯನ್ನು ಸಮೀಪಿಸಿದೆವು. ಸಮಾಧಿಯ ಮೇಲೆ ಹೂಮಾಲೆಯಿಟ್ಟೆವು. ಸ್ವಾತಂತ್ರ್ಯ ದ್ರಷ್ಟಾರನ, ಮಹಾಭಾರತ ಕಾರಣಪುರುಷನ

ಸಮಾಧಿಯನ್ನು ಭಾವಪರವಶನಾಗಿ ನೋಡುತ್ತ ಕಾವ್ಯಾನಂದರ "ಶ್ರೀ ಶರಣ" ಕವನ ವನ್ನು ಮೆಲುಕು ಹಾಕಿದೆವು.

ಅದೊ ಯಮುನಾ ತಟ
ಇದೊ ರಾಜಘಾಟ

ಕೆಂಪು ಕೋಟೆಯ ಪೆಂಪು ಕಾಣಲಿಲ್ಲಿಲ್ಲ
ತಾಜಮಹಲಿನ ಸಿರಿಯುಂ ನೆನೆಯುಲಿಲ್ಲಿಲ್ಲ
'ಮೀನಾರ' ದೆತ್ತರವು ಪಿರಮಿಡಿನ ಬಿತ್ತರವು
ಆ ಅಜಂತೆಯ ಚಿತ್ರ ಮೊದಲೆ ಇಲ್ಲ ।
ಗರ್ಭಗುಡಿಗೋಪುರವು
ರಂಗಮಂಟಪದ ಹರಹು
ಗಂಟೆ ಜಾಗಟೆ ಪೂಜೆ ಇಲ್ಲವೇಇಲ್ಲ ।
. . . .
. . . .
ಇಂಥ ಸಂತರಸಂತ ಮಲಗಿರುವ ತಾಣದಲಿ
ಈ ನಿಜದ ನೆಲೆಯಲ್ಲಿ ಒಲವಿನ ನಿಧಾನದಲಿ
ಕರಗುವುದು ಮೋಡದೊಲು ಆಡಂಬರ
ಇಳೆಯ ಗುಡಿ, ಗೋಪುರವು ನೀಲಾಂಬರ ।

ಇದೊ ಯಮುನಾ ತಟ
ಅದೊ ರಾಜಘಾಟ ।

"ಗಾಂಧೀ ದರ್ಶನ" ಗಮುಕ ರೂಪಕ ಕಾರಂಜಿ

"ಶ್ರೀ ಶರಣ" ಕವನದ ಮೆಲುಕು ಹಾಕುತ್ತಿದ್ದಂತೆಯೇ ನನ್ನ ಮನಸ್ಸು ನಮ್ಮ ರಾಷ್ಟ್ರಪಿತನಿಗೆ ರಾಷ್ಟ್ರಋಣವನ್ನು ಗಮುಕ ವಾಚನ ರೂಪದಲ್ಲಿ ಸಲ್ಲಿಸಲು ಸಾಧ್ಯವಿಲ್ಲವೇ ಎಂದು ಪ್ರಶ್ನೆ ಕೇಳಿಕೊಂಡಿತು. ಮರುಕ್ಷಣದಲ್ಲಿಯೇ "ಏಕೆ ಸಾಧ್ಯವಿಲ್ಲ" ವೆಂದು ಮರುತ್ತರ ಪುಟಿಯಿತು. ನನ್ನ ಮನೋಲೋಕದ ಕಾರಂಜಿ "ಗಾಂಧೀ ದರ್ಶನ" ಗಮುಕ ರೂಪಕದ ಬುಗ್ಗೆಯನ್ನು ಚಿಮ್ಮಿಸಿತು. ದೆಹಲಿಯಿಂದ ಪ್ರವಾಸ ಮುಗಿಸಿಕೊಂಡು ಬೆಂಗಳೂರು ಸೇರಿದ ಒಂದೆರಡು ತಿಂಗಳುಗಳಲ್ಲಿಯೇ ಶಕುಂತಲಾಬಾಯಿ "ಗಾಂಧೀ ದರ್ಶನ" ಗಮುಕ ರೂಪಕವನ್ನು ಜನಪ್ರಿಯಗೊಳಿಸುವ ಹವನದಲ್ಲಿ ತನ್ಮಯರಾದರು. ನಾನು **"ಗಾಂಧೀ ದರ್ಶನ" ಗಮುಕ ರೂಪಕ ಕಾರಂಜಿಯ** ಜೀವಾಧಾರವಾಗಿದ್ದೆ.

"ಗಾಂಧೀ ದರ್ಶನ" ಗಮುಕರೂಪಕ ಕಾರಂಜಿಯ ಚಿಮ್ಮು 1915ರಿಂದ ಪ್ರಾರಂಭಿಸಿ ಗಾಂಧೀಜಿಯ ಮಹಾ ನಿರ್ವಾಣದವರೆಗೆ ಮುಗಿಲು ಮುಟ್ಟುತ್ತದೆ. 1915ರ ಹೊತ್ತಿಗೇ ಗಾಂಧೀಜಿ ಭಾರತ ಜನಮನದ ಆರಾಧ್ಯ ದೇವತೆಯಾಗಿದ್ದರು. ಅವರು ಬೆಂಗಳೂರಿಗೆ ಆ ವರ್ಷ ದಯಮಾಡಿಸಿದರು. ಪೂಜ್ಯರಾದ ಡಿ. ವಿ. ಜಿ. ಪ್ರಾರಂಭಿಸಿದ್ದ ಗೋಖಲೆ ಸಾರ್ವಜನಿಕ ಸಂಸ್ಥೆಗೆ ದಯಮಾಡಿಸಿದ ನೆನಪಿಗಾಗಿ ಗಾಂಧೀಜಿ ಗೋಪಾಲ ಕೃಷ್ಣ ಗೋಖಲೆ

ಯವರ ಭಾವಚಿತ್ರವನ್ನು ಅನಾವರಣ ಮಾಡಿದರು. ಅದು ಈ ಘಳಿಗೆಗೂ ಗೋಖಲೆ ಮಂದಿರದ ಸಭಾಂಗಣದಲ್ಲಿ ಥಾಲಾಗಿ ರಾರಾಜಿಸುತ್ತಿದೆ. ಡಿ. ವಿ. ಜಿ. ಗಾಂಧೀಜಿಯವರ ದರ್ಶನದಿಂದ ಆನಂದ ಪುಳಕಿತರಾಗಿ "ಮಹಾತ್ಮ ಗಾಂಧಿ" "ಸಾಧುಗಾಂಧಿ" ಎಂಬ ಎರಡು ಕವನ ಸ್ತವಗಳನ್ನು ಆ ಸಮಯದಲ್ಲಿ ರಚಿಸಿರಬೇಕು. ಅವುಗಳಲ್ಲಿ **"ಸಾಧು ಗಾಂಧಿ"** ನನ್ನ ಮನ ಸೆಳೆಯಿತು.

"ಗಾಂಧೀ ದರ್ಶನ" ಗಮಕ ರೂಪಕ ಪ್ರಾರಂಭವಾಗುವುದು "ಸಾಧುಗಾಂಧಿ" ಯಿಂದ—

"ಇಂದ್ರಿಯಂಗಳ ಜಯಿಸಿ ಚಿತ್ತಶುದ್ಧಿಯ ಬಯಸಿ
ಲೋಭಮಂ ತ್ಯಜಿಸಿ ರೋಷವ ವರ್ಜಿಸಿ ।
. . . .
. . . .
ಪಾಶ್ಚಾತ್ಯ ಜನಕು ಮತಿ ವಿಮಲ ನೀತಿಯ ಪೇಳ್ವ
ದೈವ ಸಂಪನ್ಮಾರ್ಗದರ್ಶಕಂ ಗಾಂಧಿಯಲ್ತೆ ॥

"ಸಾಧು ಗಾಂಧಿ" ಶಬ್ದ ಶಿಲ್ಪದಲ್ಲಿ ಗಾಂಧೀಜಿಯ ಜೀವನ ದರ್ಶನ ಪೂರ್ತಿಯಾಗಿ ವ್ಯೈವೆತ್ತಿದೆ. ಈ ಕವನವನ್ನು ಹಿಂಬಾಲಿಸಿ ಬರುವುದು "ಶ್ರೀನಿವಾಸ"ರ "ಗಾಂಧೀಯವರ ದರ್ಶನ" ಎಂಬ ಕವನ. ಶ್ರೀನಿವಾಸರು ತಮ್ಮ ಶಬ್ದಜಾಲದಿಂದ ಗಾಂಧಿಯ ಆತ್ಮ ಸೌಂದರ್ಯವನ್ನು ಪ್ರಸಾರ ಪಡಿಸಿದ್ದಾರೆ. ಆ ಕವನದಲ್ಲಿ ವಾಚಿಸುವ ಸಾಲುಗಳನ್ನು ಇಲ್ಲಿ ಎತ್ತಿ ತೋರಿಸಿದೆ—

ಇಂದು ನಮ್ಮ ಮಹಾತ್ಮ
ಗಾಂಧಿಯನು ನೋಡಲಿಕೆ
ಬಂದೆವಿಲ್ಲಿಗೆ ಲೋಕ
ಬಾಂಧವನ ದರುಶನಕೆ
. . . .
. . . .
ಇವನ ಧರಿಸಿದ ಭೂಮಿ
ಪುಣ್ಯಭೂಮಿ ಇದು ;
ಇವನ ನೋಡಿದ ನಾವು
ಧನ್ಯರಾಮಿಂದು

ಶ್ರೀನಿವಾಸರು ಈ ಕವನವನ್ನು ಗಾಂಧೀಜಿ ತಮ್ಮ ಆರೋಗ್ಯ ಸುಧಾರಣೆಗಾಗಿ ಮೈಸೂರು ರಾಜ್ಯದ ಅತಿಥಿಗಳಾಗಿ 1928ರಲ್ಲಿ ನಮ್ಮ ರಾಜ್ಯಕ್ಕೆ ಬಂದು ನಂದಿಬೆಟ್ಟದಲ್ಲಿ ತಂಗಿದ್ದ ಸಂದರ್ಭದಲ್ಲಿ ರಚಿಸಿರಬೇಕು.

"ಶ್ರೀನಿವಾಸ"ರ "ಗಾಂಧಿಯವರ ದರ್ಶನ" ಕವನದ ಹಿಂಬದಿಯಲ್ಲಿ ವಾಚಿಸುವ ಕವನ ಕುವೆಂಪು ಅವರ "ಸಭ್ಯತಾ ದೇವತೆ." ಶ್ರೀನಿವಾಸರ ಕವನದಲ್ಲಿ ಗಾಂಧೀಜಿಯ ಆತ್ಮ ತೇಜದ ನಿಗಿನಿಗಿ ಕೆಂಡವಿದೆ. "ಸಭ್ಯತಾ ದೇವತೆ"ಯಲ್ಲಿ ಅತಿ ಸಾಮಾನ್ಯ ಗುಣಗಳು

ಗಾಂಧೀಜಿಯ ವ್ಯಕ್ತಿತ್ವವಾದರೂ, ಆತ ದಶದಶ ಸಹಸ್ರ ಜನ ಕಿಕ್ಕಿರಿದು ನೆರೆಯುವಂತೆ ಮಹಾಸಭೆ ಕೂಡಿಸುತ್ತಾನಲ್ಲ, ಆ ಇಂದ್ರಜಾಲ ಮಹಿಮೆಯ ಬಣ್ಣನೆಯಿದೆ. ಈ ಕವನ ಗಾಂಧೀಜಿ ಹರಿಜನೋದ್ಧಾರ ಕಾರ್ಯಕ್ಕಾಗಿ 1934ರಲ್ಲಿ ಮೈಸೂರಿಗೆ ಬಂದಾಗ ರಚಿತವಾಯಿತು. "ಸಭ್ಯತಾ ದೇವತೆ" ಕವನದ ಸಾಲುಗಳು ಪ್ರಾರಂಭವಾಗುವುದು ಹೀಗೆ—

"ಮನುಜರಲಿ ದೇವತ್ವದಾಕಾಂಕ್ಷೆಯುಳಿದಿಲ್ಲ ;
ಉಳಿದಿಹುದು ; ದಿನದಿನಕೆ ಬೆಳೆಯುತಿದೆ ; ಎಂಬುದಕೆ
ಸಾಕ್ಷಿಯಿದು : ದಶದಶ ಸಹಸ್ರ ಜನ ಕಿಕ್ಕಿರಿದು
ನೆರೆದಿಹುದು ಬಿಸಿಲಿನಲಿ ಮಾನವ ಮಹಾತ್ಮನಿಗೆ
ಗೌರವಾರಾಧನೆಯ ನೈವೇದ್ಯವನು ಸಲಿಸೆ।"
ಕಾವ್ಯಋಷಿಯವನಲ್ಲ. ಇವನು ಹೇಳುವ ವಿಷಯ
ಇವನ ಮೇಣ್ ಇವನ ಮಾತಿನ ತೆರೆದಿ, ದಿನದಿನದ
ಸರಳ ಸಾಧಾರಣದ ಬಡಹೊಟ್ಟೆ ಪಾಡಿನದು।
"ಆದರೂ ದರ್ಶನಕೆ ಮುತ್ತಿಹರು ಮಾನವರು,
ಜೇನುಹಟ್ಟಿಗೆ ಜೇನುಹುಳು ಕವಿಯುವಂದದಲಿ
ಐಸಿರಿ ಪವಾಡ ವಾಗ್ಮಿತೆಗಳನು ಲೆಕ್ಕಿಸದೆ
ಪ್ರೇಮ ಸತ್ಯಾಹಿಂಸೆ ಸಮತೆಗಳನಾಚರಿಸಿ
ಬೋಧಿಸುವ, ಸಾಧಿಸುವ, ಜನರನೆಚ್ಚರಗೊಳಿಪ
ಸರಳ ಜೀವನದ ದೇವತ್ವದಾರಾಧನೆಗೆ"

ಕುವೆಂಪು ಕವನದ ಅನಂತರ ಆರಿಸಿಕೊಂಡಿರುವ ಕವನ ಗೋವಿಂದ ಪೈಗಳದು— "ಮಹಾತ್ಮನ ಆತ್ಮಕ್ಕೆ" ಈ ಕವನದಲ್ಲಿ ಕವಿ ಗಾಂಧೀಜಿ ನಿಲುವನ್ನು ಕೃಷ್ಣ, ಮಾವೀರ (ಮಹಾವೀರ), ಗೌತಮ, ಯೇಸುವಿನ ಎತ್ತರಕ್ಕೆ ನಿಲ್ಲಿಸಿದ್ದಾರೆ.

"ನಿನ್ನ ಮಮತೆಯೊ ಮಹಾತ್ಮಾ, ಸನಾತನ ಧರ್ಮ—
ಕನಿತೆ, ಭಾರತಕನಿತೆ ಅಲ್ಲ, ಜಗಕೆಲ್ಲ।
. . . .
. . . .
ಮೋಹನಾ, ಮರೆಯದೀ ಭಾರತವು ನಿನ್ನ
ಧ್ರುವತಾರೆಯಂತೆ ನೀ ಮುನ್ನಡೆಸಿದನ್ನ।

ಇಂಥ ಪರಮಪಾವನ ಚರಿತನನ್ನು ವಿನಾಯಕ ಗೋಡ್ಸೆ ಗುಂಡಿಕ್ಕಿ ಕೊಂದನಲ್ಲ! ಆ ಹೃದಯ ಬಿರಿಯುವ, ಕರುಳಿರಿಯುವ ಘಟನೆಯನ್ನು ನೆನೆಸಿಕೊಂಡು "ಕೈ ಮುಗಿವ ಗಾಂಧಿ" ಎಂಬ ಕವನದಲ್ಲಿ ಎಂದೆಂದಿಗೂ ಮರೆಯದಂಥ ಮಹತ್ತಾದ ಶಬ್ದಚಿತ್ರ ಮೂಡಿಸಿದ್ದಾರೆ ವಿ. ಸೀ. ಶಕುಂತಲಾಬಾಯಿಯ ಗಮಕದಲ್ಲಿ "ಕೈ ಮುಗಿವ ಗಾಂಧಿ" ಹೃದಯ ಮಿಡಿಯುವ ಕಣ್ಣೀರಿಡುವ ಸನ್ನಿವೇಶ. ಈ ಕವನದ ಪ್ರಾರಂಭವೇ ಕಣ್ಣಿಗೆ ಚಿತ್ರ ಕಟ್ಟುವ ರೀತಿಯದು—

"ಗುಂಡಿಟ್ಟು ಗೋಡ್ಸೆ ಸುಡುತಿರಲು ಅವನಿಗೆ ಕೈಮುಗಿದಿಯೋ ಗಾಂಧಿ!
ಕಾಲದಪ್ಪಣೆ ಕಡೆಗೆ ಬಂದಿತೆಂದರಿತು
ಮುಗಿದ ಕೈ ಮುಗಿದಂತೆ ಮೇಲೆತ್ತಿ ಹಿಡಿದಿರಲು

ಅಂತೆ ತೆರೆಯಿತು ನಿಮಗೆ ಜವರಾಯನೊಲವು
ಇಳೆಯ ಹೊರೆಗಳು ಇಳಿದು ಋಣ ಮುಗಿದು ಬಾಳು ಹಗುರಾಯ್ತು

"ಕೈ ಮುಗಿವ ಗಾಂಧಿ" ಬಹು ದೀರ್ಘಕವನ. "ಗಾಂಧೀ ದರ್ಶನ" ಪಕ್ಷಿನೋಟದಲ್ಲಿ ನಮ್ಮ ದೃಷ್ಟಿಗೆ ಕಂಡಷ್ಟೆ ದೃಶ್ಯ ನಮ್ಮ ಲಭ್ಯ. ನಮಗೆ ಅತ್ಯಾವಶ್ಯಕವೆಂದು ತೋರಿದಷ್ಟು ಸಾಲುಗಳನ್ನು ಎತ್ತಿಕೊಂಡಿತ್ತು.

"ಅಂಬಿಕಾ ತನಯ ದತ್ತ" ಬೇಂದ್ರೆಯವರ ಕವನ "ಮರಣ"ದಲ್ಲಿ ಗುಡುಗು ಮಿಂಚು ಸಿಡಿಲುಗಳ ಆಕರ್ಷಣೆಯಿನೆ. ಶ್ರೋತೃಗಳನ್ನು ಭಾವಚಿಂತನೆಗೊಯ್ಯುವ ಗಾರುಡಿಗ ಮಂತ್ರಶಕ್ತಿಯಿದೆ. ವಿ. ಸೀ. ಅವರ "ಕೈ ಮುಗಿವ ಗಾಂಧಿ"ಗೆ ಪೂರಕವಾಗಿ ಬೇಂದ್ರೆ ಕವನ "ಮರಣ." ಶಕುಂತಲಾಬಾಯಿಯ ಗಮಕದಲ್ಲಿ "ಗಾಂಧೀ ದರ್ಶನ" ರೂಪಕಕ್ಕೆ ಈ ಕವನದ ಒತ್ತು ಮಹಾಪುಷ್ಟಿ ನೀಡುತ್ತದೆ.

ಅದ್ಭುತವು ಅದ್ಭುತವು ವಿಶ್ವಕದ್ಭುತವು
ಸತ್ಯಶರಣರ ಸಂದ ಮರಣದದ್ಭುತವು
ಮಣಿಹ ಸಂದಿತು ; ದೇಹ ಕೆಳಗೆ ಇಟ್ಟ ;
ಧ್ಯೇಯವನೆ ನಕ್ಷತ್ರ ಮಾಡಿಬಿಟ್ಟ
ಎಂಥ ನಗು ! ಎಂಥ ಮಗು ! ಎಂಥ ಮನುಜ !
ನಮ್ಮಂತೆ ಕಂಡರೂ ದೇವತನುಜ
ಗಾಂಧಿ ಎಂಬುದು ಹೆಸರೆ? ಮುಪ್ಪಿನಾಕೃತಿಯೆ ?
ಗಾಂಧಿಯೆಂಬುದು ನಿಖರ ದಿವ್ಯ ಕೃತಿಯೆ !
ಕಡಿಯಲುಗದು ಅಕಸ್ಮಾತ್ತಿನಿಂದ
ಗುಡ್ಡ ಉರುಳೀತೇನು ಗುಂಡಿನಿಂದ ?

ಇದು ಗಾಂಧೀ "ಮರಣ"ದಲ್ಲಿ ಬೇಂದ್ರೆ ಕವಿಯ ದರ್ಶನ. ಮುಂದೆ ವಾಚನಕ್ಕೆ ಆಯ್ದುಕೊಳ್ಳುವ ಕವನ ಕಾವ್ಯಾನಂದರ "ಶರಣ" ಕವನ. ಅದಾದ ಮೇಲೆ ಮುಕ್ತಾಯ ಕವನಗಳ ವಾಚನಕ್ಕೆ ಬರೋಣ. ಅದು ದಿನಕರ ದೇಸಾಯಿಯವರ "ಗಾಂಧಿಯವರ ಸ್ಮಾರಕ" ಎಂಬ ಕವನ ಇನ್ನೊಂದು ಕಯ್ಯಾರ ಕಿಞ್ಞಣ್ಣ ರೈ ಅವರ "ಹೇ ರಾಮ"

ಕಾವ್ಯಾನಂದರು,

"ಈ ಯುಗದ ಪರಮೋಚ್ಚ
ಪರಮಪಾವನ ಚರಿತ
ಆ ಮಹಾ ಪುರುಷ ಮಲಗಿರುವನಿಲ್ಲಿ
ಸುಭಗ ನಿರ್ಮಲವಹ ಸಮಾಧಿಯಲ್ಲಿ"

ಎಂದು ಹಾಡಿದ್ದರೆ, ದಿನಕರ ದೇಸಾಯರು "ಗಾಂಧಿಯವರ ಸ್ಮಾರಕ" ಕವನದಲ್ಲಿ ಅರ್ಪಿಸಿರುವ ಕರುಳು ಹಿಚುಕುವ, ಹೃದಯ ಚುಚ್ಚುವ ಮಾರ್ಮಿಕ ಸ್ಮಾರಕ ನುಡಿಶಿಲ್ಪ ಇಂತಿದೆ.

ನಿನ್ನ ಪ್ರತಿಮೆಯ ನಿಲಿಸಿ
ನಾವು ಮೆರೆವುದುಮ್ವ್ಯರ್ಥ

ನಮ್ಮ ಹೃದಯದೊಳಿರಲಿ
ನಿನ್ನ ಮರಣದ ಅರ್ಥ
. . . . .
. . . . .
ನಿನಗೇಕೆ ಸ್ಮಾರಕವು
ಶಿಲ್ಪಕೃತಿ, ಹೂಮಾಲೆ ?
ಲೋಕವನೆ ಬೆಳಗುತಿದೆ
ನಿನ್ನ ಎಲುಬಿನ ಮಾಲೆ

ಕಯ್ಯಾರ ಕಿಞ್ಞಣ್ಣ ರೈ ತಮ್ಮ "ಹೇರಾಮ" ಕವನದಲ್ಲಿ ತಮ್ಮ ಹೃದಯವನ್ನೇ ಹುತಾತ್ಮ ಗಾಂಧಿಗೆ ಸ್ಮಾರಕ ಸೋಪಾನ ಮಾಡಿದ್ದಾರೆ. ಶಕುಂತಲಾಬಾಯಿ ಈ ಕವನ ವನ್ನು ಹಾಡಿ ಗಾಂಧೀದರ್ಶನ ಗಮಕ ರೂಪಕಕ್ಕೆ ಮಂಗಳ ಮಾಡುವುದು ಸಂಪ್ರದಾಯ

ಇಂದ್ರಪ್ರಸ್ಥದಿ ಯಮುನಾತಟದಿ,
ಶಾದ್ವಲ ನಿರ್ಮಲ ರಾಜಘಾಟದಿ
ಮಲಗಿಹ ಭಾರತ ಭಾಗ್ಯವಿಧಾತ
ಮರಣದಿ ಮರೆಯಾದ ಗಾಂಧೀತಾತ
ವಂದಿಸಿ ನಿಂದೆನು ತಲೆವಾಗಿ
ಹೇ ರಾಮ್ ಎಂದಿತು ಶಿಲೆಕೂಗಿ
. . . .
. . . .
ಹೇ ರಾಮ್ ಕೈ ಮುಗಿಯುತ ನಿಂತೆ !
ಹೇ ರಾಮ್ ಮೈ ನಡುಗುವುದಂತೆ !
ಹೇ ರಾಮ್ ಕಂಬನಿಯೊಸರಿತ್ತೆ ;
ಹೇ ರಾಮ್ ನಮಗಾಗಿಯೆ ಸತ್ತೆ !
ಹೇ ರಾಮ್ ನಿನಗಾಗಿಯೆ ಅತ್ತೆ ।

"ಗಾಂಧೀ ದರ್ಶನ" ಗಮಕ ರೂಪಕವೇನೋ ನಮ್ಮ ಭಾವನೆ ಕಲ್ಪನ ವಿಕಾಸ ದಿಂದ ಸಿದ್ಧವಾಯಿತು. ಅದನ್ನು ಕೇಳಿ ಭಾವರಸಲೋಕದಲ್ಲಿ ವಿಹರಿಸುವ ಸಹೃದಯ ಮತಿ ವಿಭೂತಿಗಳು ಬೇಕಲ್ಲ! ಒಂದೆರಡು ತಿಂಗಳು ತಳ್ಳಿದೆವು. ಮಲ್ಲೇಶ್ವರದ ಗಾಂಧೀ ಸಾಹಿತ್ಯ ಸಂಘವೇ ಶಕುಂತಲಾಬಾಯಿಗೆ ಈಗಲೂ ವೇದಿಕೆ ಕಲ್ಪಿಸಿತು. ನಮ್ಮ ಆಪದ್ಬಂಧು ಸಂಘದ ಆಶ್ರಯದಲ್ಲಿ "ಗಾಂಧೀ ದರ್ಶನ" ಗಮಕ ವಾಚನ ರೂಪಕದ ಕಾರಂಜಿಯ ಬುಗ್ಗೆ ಚಿಮ್ಮಿತು. ಈಗ ಜನತಾ ಪಕ್ಷವಾಗಿರುವ, ಹಿಂದೆ ಕಾಂಗ್ರೆಸ್ ಪಕ್ಷವಾಗಿದ್ದ ದೇಶ ಪ್ರೇಮಿಗಳ ಸಂಸ್ಥೆಯಲ್ಲೂ ಈಗ ನಮ್ಮ ರಾಜ್ಯದ ಉಪಸಭಾಪತಿಯಾಗಿರುವ ಶ್ರೀ ವಿ. ಎಸ್. ಕೃಷ್ಣಯ್ಯರ್ ಅವರ ವಿಶ್ವಾಸದಿಂದ ಗಾಂಧೀಜಯಂತಿ ಮತ್ತು ಸರ್ವೋದಯ–ಹುತಾತ್ಮರ ದಿನಾಚರಣೆಯಲ್ಲಿ "ಗಾಂಧೀ ದರ್ಶನ" ರೂಪಕ ವಾಚನ ನಡೆಯಿತು. ಕುಮಾರ ಪಾರ್ಕಿನ ಬಡಾವಣೆ ಗಾಂಧೀ ಸ್ಮಾರಕ ನಿಧಿ ಭವನದಲ್ಲೂ ಸರ್ದಾರ್ ಕಾನ ಕಾನಹಳ್ಳಿ ವೆಂಕಟರಾಮಯ್ಯನವರ ಕೃಪೆಯಿಂದ "ಗಾಂಧೀ ದರ್ಶನ" ವಾಚನ ನಡೆದಿದೆ.

ರಾಷ್ಟ್ರದುಸಿರಾಗಿ, ರಾಷ್ಟ್ರಪಿತನಾಗಿ ನಮ್ಮ ರಾಷ್ಟ್ರೋದ್ಧಾರಕ್ಕಾಗಿ ರಕ್ತ ಚೆಲ್ಲಿದ ಬಾಪುವಿಗೆ "ಉಂಡ ಮನೆಯ ಕರು ಸಾಯಲಿ" ಎಂಬ ಹಾಗೆ ವರ್ತಿಸುತ್ತಿರುವ ಗಾಂಧಿ ದೇಶದ ಜನ "ಗಾಂಧಿ ದರ್ಶನ" ದಂಥ ಹಳಸಿದ ಪುರಾಣವನ್ನು ಕೇಳಿ ಏನು ಮಾಡಿ ಯಾರು? ಸತ್ತ ಗಾಂಧಿಯ ಅಡಗೂಲಜ್ಜಿ ಕಥೆ ಯಾರಿಗೆ ಬೇಕಾಗಿದೆ? ಯಾರಿಗೂ ಬೇಡದ ಗಾಂಧಿ ಪುರಾಣ ನಮಗೆ ಬೇಕಾಗಿದೆ. ಅದಕ್ಕಾಗಿಯೇ ನಮಗಾಗಿ, ನಮ್ಮಂತೆ ಬೇಕೆಂದು ಅಪೇಕ್ಷಿಸುವವರಿಗೆ ಕೇಳಿಸುವುದಕ್ಕಾಗಿ "ಗಾಂಧಿ ದರ್ಶನ" ಗಮಕ ರೂಪಕ ವನ್ನು ಧ್ವನಿ ಮುದ್ರಿಕೆಯಲ್ಲಿ ಮೂಡಿಸಿಕೊಂಡಿದ್ದೇವೆ.

ಉಪರಾಷ್ಟ್ರಪತಿಯ ಪತ್ನಿ ಸರಸ್ವತೀಬಾಯಿ ಗಿರಿಯವರ ತಾಯಿ ವಾತ್ಸಲ್ಯ

1968ರ ಡಿಸೆಂಬರ್ 18ರ ಸಂಜೆ 5 ಗಂಟೆ ಭಾರತ ರಾಜಧಾನಿ ದೆಹಲಿಯ ವಿಜ್ಞಾನ ಭವನದಲ್ಲಿ ಭಾರತ ರಾಷ್ಟ್ರದ ಎಲ್ಲ ಭಾಗಗಳಿಂದ ರಾಷ್ಟ್ರಶಿಕ್ಷಕ ವಿಜೇತ ಶಿಕ್ಷಕರಿಗೆ ಉಪ ರಾಷ್ಟ್ರಪತಿ ವಿ. ವಿ. ಗಿರಿಯವರ ಹಸ್ತದಿಂದ ಪ್ರಶಸ್ತಿ ಪತ್ರ ವಿತರಣೆ. ನನ್ನ ಸರದಿ ಬಂದಾಗ ಉಪರಾಷ್ಟ್ರಪತಿಯ ಬಳಿ ಸಾರಿದೆ. ನನ್ನನ್ನು ಗುರುತಿಸಿದರು. ಮುಗುಳು ನಕ್ಕರು. ನಾನು ಪ್ರಶಸ್ತಿ ಪತ್ರವನ್ನು ಸ್ವೀಕರಿಸುವ ಅವಧಿಯಲ್ಲಿಯೇ ಮಿಂಚುವೇಗದಲ್ಲಿ "ನೀವು ಮೈಸೂರು ರಾಜ್ಯಪಾಲರಾಗಿದ್ದಾಗ ನಾನು, ಶಕುಂತಲಾಬಾಯಿ, ಗಮಕ ವಾಚನದಲ್ಲಿ ಭಾಗಿಯಾಗಿ ದ್ದೇವೆ. ರಾಜಭವನದಲ್ಲೂ ನೀವು ಶಕುಂತಲಾಬಾಯಿಯ ಕಾವ್ಯವಾಚನ ಕೇಳುವ ಅವ ಕಾಶವನ್ನು ದಯಪಾಲಿಸಿದ್ದೀರಿ" ಎಂದು ಜ್ಞಾಪಿಸಿದೆ. ಅವರು ಇನ್ನೊಮ್ಮೆ ಮುಗುಳು ನಕ್ಕರು. ಕೈ ಮುಗಿದು ನನ್ನ ಸ್ಥಳಕ್ಕೆ ಬಂದೆ.

ವಿ. ವಿ. ಗಿರಿಯವರು ಮೈಸೂರು ರಾಜ್ಯಪಾಲರಾಗಿದ್ದ ಕಾಲದಲ್ಲಿ ಅವರ ಧರ್ಮ ಪತ್ನಿ ಸರಸ್ವತೀಬಾಯಿ ಗಿರಿಯವರು, ಒಂದು ಸಂದರ್ಭದಲ್ಲಿ ಶಕುಂತಲಾಬಾಯಿಗೆ ರಾಜ ಭವನಕ್ಕೆ ಬರಬೇಕೆಂದು ಹೇಳಿ ಕಳಿಸಿದರು. ಆ ದಿನ ವರಮಹಾಲಕ್ಷ್ಮಿ ಹಬ್ಬ. ನಾನು ಮತ್ತು ಶಕುಂತಲಾಬಾಯಿ ಆ ದಿವಸಗಳಲ್ಲಿ ಅಷ್ಟೇನೂ ಸುಖಿಗಳಾಗಿರಲಿಲ್ಲ. ನನ್ನ ಆಸ್ತಿ ಪಾಸ್ತಿ ಸೀರುಂಡೆಯಾಗಿ ಪರಹಸ್ತವಾಗಿತ್ತು. ವರಲಕ್ಷ್ಮಿ ಹಬ್ಬದ ದಿವಸ ರಾಜ್ಯಪಾಲರ ರಾಜ ಭವನದಿಂದ ಕರೆ ಬಂದಿದೆ. ಏನೋ ವಿಶೇಷವಿರಬೇಕೆಂದು ಊಹಿಸಿಕೊಂಡೆವು. ರಾಜಭವನಕ್ಕೆ ತೆರಳಿದೆವು. ಸರಸ್ವತೀಬಾಯಿ ಗಿರಿ ಶಕುಂತಲಾಬಾಯಿಯನ್ನು ನಗು ಮುಖ ದಿಂದ ಸ್ವಾಗತಿಸಿದರು. ಆಕೆಯನ್ನು ತಮ್ಮ ಪಕ್ಕದಲ್ಲಿ ಕೂಡಿಸಿಕೊಂಡರು. "ನೀವು ಭಾರತ ವಾಚನವನ್ನು ಚೆನ್ನಾಗಿ ಮಾಡುತ್ತೀರಿ. ನೋಡಿ, ನನ್ನ ಸೊಸೆಯಾಗುತ್ತಾಳೆ ಈಕೆ ಕೆಲವು ತಿಂಗಳುಗಳಲ್ಲೇ. ಈಕೆಗೆ ಸ್ವಲ್ಪ ಭಾರತ ಓದುವುದನ್ನು ಹೇಳಿಕೊಡುತ್ತೀರಾ?" ಎಂದು ಅವರ ಮನೆಯನ್ನು ಗೃಹಲಕ್ಷ್ಮಿಯಾಗಿ ತುಂಬಲಿದ್ದ ಹೆಣ್ಣು ಮಗಳನ್ನು ಪರಿಚಯ ಮಾಡಿ ಕೊಟ್ಟರು. ಶಕುಂತಲಾಬಾಯಿ ವಿನಯದಿಂದ "ನನ್ನ ಹಿರಿ ಮಗಳು ಬಾಣಂತನಕ್ಕೆ ಮನೆಗೆ ಬಂದಿದ್ದಾಳೆ. ಆಕೆ ಹಡೆದನಂತರ ಪಾಠ ಹೇಳಬಹುದು" ಎಂದರು. ಸರಸ್ವತೀ ಬಾಯಿ ಗಿರಿ, "ಆಯಿತು, ಮುತ್ತೈದೆ ಬಂದಿದ್ದೀರಿ. ಭಾರತ ವಾಚನ ಮಾಡಿ" ಎಂದರು. "ನನಗೆ

ಭಾರತವೆಲ್ಲಾ ಬಾಯಿಗೆ ಬರುವುದಿಲ್ಲ. ಭಾರತದ ಮಂಗಳಾಚರಣ ಪದ್ಯಗಳು ಆಗ ಬಹುದೇ ?" ಶಕುಂತಲಾಬಾಯಿ ಕೇಳಿದರು. ಶ್ರೀಮತಿ ಗಿರಿಯವರು "ಅದೇ ಹೇಳಿ" ಎಂದರು. ಎಂಬತ್ತು ಎಂಬತ್ತೈದು ವರ್ಷಗಳ ಮುದುಕಿಯಾಗಿದ್ದ ಅತ್ತೆಯನ್ನು ಒಳಗಿನಿಂದ ಕೈ ಹಿಡಿದು ಕರೆದುಕೊಂಡು ಬಂದು ಕೂಡಿಸಿದರು. ರಾಜ್ಯಪಾಲರು ಅವಸರದಲ್ಲಿ ಹೊರಗೆಹೊರಟಿದ್ದರು. ಅವರನ್ನು ಕರೆದು ತಮ್ಮ ಪಕ್ಕದ ಕುರ್ಚಿಯಲ್ಲಿ ಕೂಡಿಸಿಕೊಂಡರು. ಶ್ರುತಿಗೆ ತಂಬೂರಿಯಿಲ್ಲ. ಶಕುಂತಲಾಬಾಯಿಗೆ ತಾನು ಕೂತಿದ್ದ ಕುರ್ಚಿಯೇ ವೇದಿಕೆಯಾಯಿತು. ಜ್ಞಾಪಕಶಕ್ತಿಯೇ ಪುಸ್ತಕವಾಯಿತು. ಕುಮಾರವ್ಯಾಸ ಭಾರತದ ಮಂಗಳಾಚರಣ ಪದ್ಯಗಳಷ್ಟನ್ನೂ ಸುಮಾರು ಹತ್ತು ಹದಿನೈದು ನಿಮಿಷಗಳ ಕಾಲ ಸುಶ್ರಾವ್ಯವಾಗಿ ಹೇಳಿದರು. ರಾಜ್ಯಪಾಲರು ಕೇಳಿ ಅನಂತರ ತಮ್ಮ ಕಾರ್ಯದ ನಿಮಿತ್ತ ಎದ್ದು ಹೋದರು. ಶ್ರೀಮತಿ ಗಿರಿಯವರು ಒಳಗೆ ಹೋಗಿ ಫಲ ತಾಂಬೂಲ ತಂದು ಶಕುಂತಲಾಬಾಯಿಗೆ ಕುಂಕುಮ ಹಚ್ಚಿ ಕೊಟ್ಟರು. ತಟ್ಟೆಯಲ್ಲಿ ಫಲ ತಾಂಬೂಲದೊಡನೆ ಹತ್ತು ರೂಪಾಯಿಗಳ ಎರಡು ನೋಟು ಇಟ್ಟಿತ್ತು. ಅವುಗಳು ನನ್ನ ಕಣ್ಣಿಗೆ ಕಾಣಿಸಿದೊಡನೆ ಶ್ರೀಮತಿ ಗಿರಿಯವರಿಗೆ ಹೀಗೆ ನುಡಿದೆ. "ಶಕುಂತಲಾಬಾಯಿ, ನಿಮ್ಮಿಂದ ಹಣ ಸ್ವೀಕರಿಸಬೇಕೆ ? ಅದು ಬೇಡ. ಫಲ ತಾಂಬೂಲ ಸಾಕು. ನಿಮ್ಮ ವಿಶ್ವಾಸ ಅನುಗ್ರಹ ಸದಾ ಇರಬೇಕು." ಶ್ರೀಮತಿ ಗಿರಿಯವರಿಂದ ತಟ್ಟನೆ ಬಂತು ಎದುರು ಬಾಣದಹಾಗೆ ಉತ್ತರ, "ಶಕುಂತಲಾಬಾಯಿ ನನಗೆ ಮಗಳಿದ್ದಂತೆ. ಮಗಳು ಮನೆಗೆ ಬಂದರೆ ತಾಯಿ ಬರಿಗೈಯ್ಯಲ್ಲಿ ಕಳಿಸುವುದೆ ?" ನಾನು ನಿರುತ್ತರನಾದೆ. 1966ರ ವರಮಹಾಲಕ್ಷ್ಮಿ ಹಬ್ಬದ ದಿವಸ ನಮ್ಮ ಮನೆಗೆ ಲಕ್ಷ್ಮಿ ಬಂದದ್ದು ಹೀಗೆ. ಉಪರಾಷ್ಟ್ರಪತಿಯವರ ಹಸ್ತದಿಂದ ನಾನು ಪ್ರಶಸ್ತಿ ಪತ್ರ ಸ್ವೀಕರಿಸಿ ವೇದಿಕೆಯಿಂದ ಇಳಿದು ಬರುವಾಗ 1966ರ ರಾಜಭವನದ ಆ ದಿನದ ನೆನಪು ಮರು ಚಿಗುರಿತ್ತು.

ಮೂಗಿಲ್ಲದ ಮುಖದಿಂದ ರಾಷ್ಟ್ರಕವಿ ಕುವೆಂಪು ಸಮಾರಂಭಗಳಲ್ಲಿ

ರಾಷ್ಟ್ರಕವಿಯಾಗಿದ್ದ ಕುವೆಂಪು 1968ರಲ್ಲಿ ಜ್ಞಾನಪೀಠ ಪ್ರಶಸ್ತಿ ವಿಜೇತರಾದರು. ಆವರೆಗೆ ದೆಹಲಿಯಲ್ಲಿ ದೆಹಲಿಯ ರಾಜ್ಯಪಾಲರಾಗಿದ್ದ ಗೋಪಾಲ ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಡಿಸೆಂಬರ್ 20ರ ಸಂಜೆ ವಿಜ್ಞಾನ ಭವನದಲ್ಲಿ ಉಮಾಶಂಕರ ಜೋಷಿ ಅವರ ಜೊತೆಯಲ್ಲಿ ಜ್ಞಾನಪೀಠ ಪ್ರಶಸ್ತಿ ಪ್ರದಾನವಾಯಿತು. ನಾನು ಶಕುಂತಲಾಬಾಯಿ ಆ ಸಮಾರಂಭಕ್ಕೆ ಆಹ್ವಾನಿತರಾಗಿದ್ದೆವು. ನಾವು ಬೆಂಗಳೂರಿನಲ್ಲಿದ್ದಾಗಲೇ ಜ್ಞಾನಪೀಠ ಪ್ರಶಸ್ತಿ ವಿತರಣ ಸಮಾರಂಭದ ಆಹ್ವಾನ ಪತ್ರಿಕೆ ಅಂಚೆಯ ಮೂಲಕ ತಲಪಿತ್ತು. ನಮ್ಮನ್ನು ವಿಜ್ಞಾನ ಭವನದಲ್ಲಿ ಕಂಡೊಡನೆ ಜ್ಞಾನಪೀಠ ಸಮಾರಂಭದ ಕಾರ್ಯಕರ್ತರುಗಳಲ್ಲಿ ಪ್ರಧಾನರಾಗಿ ಪಾಲ್ಗೊಂಡು ನಮ್ಮೊಡನೆ ಪತ್ರ ವ್ಯವಹಾರ ಮಾಡಿದ್ದ ಕಾರ್ಯಮುಖ್ಯರಿಗೆ ಪರಮ ಆಶ್ಚರ್ಯ; ಏಕೆಂದರೆ ಬೆಂಗಳೂರಿಂದ ದೆಹಲಿಗೆ ದಂಪತಿಗಳು ಬಂದಿದ್ದವಲ್ಲ ಸಮಾರಂಭಕ್ಕೆ; ದೂರ, ಬಹು ದೂರದಿಂದ ಸ್ವಂತ ಖರ್ಚಿನಲ್ಲಿ ; ಅದಕ್ಕೆ. ನಮ್ಮನ್ನು

ವಿಜ್ಞಾನ ಭವನದಲ್ಲಿ ಕಂಡೊಡನೆಯೇ ಕನ್ನಡಿಗರಿಗೆಲ್ಲ ಮಹದಾಶ್ಚರ್ಯ. ಶಕುಂತಲಾ ಬಾಯಿಯು ಸಂದರ್ಭಕ್ಕೆ ಅನುಗುಣವಾಗಿ "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನ ಮಾಡುವರೇನೋ ಎಂದು ನಿರೀಕ್ಷೆ. ಆ ನಿರೀಕ್ಷೆ ಬಿಸಲುಗುದುರೆಯಾಯಿತು. ಕುವೆಂಪು "ಶ್ರೀ ರಾಮಾಯಣ ದರ್ಶನಂ" ಕಾವ್ಯದ "ಮಮತೆಯ ಸುಳಿ ಮಂಥರೆ" ಕವಿಗೆ ಕಂಠವಾಗಿ ವೇದಿಕೆಯ ಮೇಲೆ ಸಂಭ್ರಮಿಸುವುದರ ಬದಲು ಮಾಯಾರಾವ್ ನಿರ್ದೇಶನದಲ್ಲಿ ಹಿನ್ನಲೆ ವಾದ್ಯ ವೃಂದದ ಆಸರೆಯಲ್ಲಿ **ಮಮತೆಯ ಸುಳಿ ಮಂಥರೆ** ನಾಟ್ಯವಾಡಿ ವಿಜೃಂಭಿಸಿದಳು. ಕುವೆಂಪು ಅವರ ಮಹಾ ಮೇರು ಕೃತಿ ಜಗದ್ಭವ್ಯ ರಾಮಾಯಣ "ಶ್ರೀ ರಾಮಾಯಣ ದರ್ಶನಂ" ಸಾಹಿತ್ಯ ಪ್ರೇಮಿಗಳಿಗೆ ಪರಿಚಯವಾದದ್ದು ಹೀಗೆ. ವಿತರಣಾ ಸಮಾರಂಭ ಮುಗಿದ ಮೇಲೆ ನಾನು, ಶಕುಂತಲಾಬಾಯಿ, ಇಬ್ಬರೂ ಕವಿಗಳ ಸನಿಹಕ್ಕೆ ಹೋಗಿ ಕೈಮುಗಿದೆವು. "ಓ ನೀವು !" ಎಂದು ಕುವೆಂಪು ಅಚ್ಚರಿ ಪಟ್ಟರು.

ಶಕುಂತಲಾಬಾಯಿ ದೆಹಲಿಯಲ್ಲಿದ್ದೂ ಜ್ಞಾನಪೀಠ ಪ್ರಶಸ್ತಿ ವಿತರಣ ಸಮಾರಂಭದಲ್ಲಿ "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನ ಹತ್ತು ನಿಮಿಷಗಳಷ್ಟಾದರೂ ಮಾಡಬಹುದಾಗಿತ್ತಲ್ಲ? ಏಕೆ ಮಾಡಲಿಲ್ಲ? ಅದನ್ನು ಪ್ರಸ್ತಾಪಿಸುವುದೇ ಒಂದು ರಾಮಾಯಣ ಭಾರತದಷ್ಟು ಪುರಾಣವಾದೀತು. ಸಂಕ್ಷೇಪವಾಗಿ ಕೆಲವು ಮಾತುಗಳಲ್ಲಿ ಹೇಳಿ ಮುಗಿಸುತ್ತೇನೆ. ಕುವೆಂಪು ಅವರಿಗೆ ಜ್ಞಾನಪೀಠ ಪ್ರಶಸ್ತಿ ಘೋಷಿಸಿದ ಪ್ರಾರಂಭದಿಂದಲೇ ಶಕುಂತಲಾಬಾಯಿಗೂ ಜ್ಞಾನಪೀಠ ಪ್ರಶಸ್ತಿ ವಿತರಣ ಮಾಡುವ ಕಾರ್ಯಕರ್ತರ ಪರವಾಗಿ ವ್ಯವಸ್ಥಾಪಕರಿಗೂ ಪತ್ರ ವ್ಯವಹಾರ ಮೊದಲಾಯಿತು. "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನದಲ್ಲಿ ಬಹು ಸ್ವಾರಸ್ಯ ರಸ ಘಟ್ಟಗಳಾವುವು ? ಯಾವುದನ್ನು ದೆಹಲಿಯ ವಿತರಣ ಸಮಾರಂಭದಲ್ಲಿ ಮಾಡಿದರೆ ಚೆನ್ನು? ನೀವು ದೆಹಲಿಯ ಸಮಾರಂಭದಲ್ಲಿ "ಶ್ರೀ ರಾಮಾಯಣ ದರ್ಶನಂ" ವಾಚನ ಮಾಡಬೇಕು. ಹೀಗೆ ಪತ್ರ ವ್ಯವಹಾರ ತಿಂಗಳುಗಟ್ಟಲೆ ನಡೆಯಿತು. ಈ ಮಧ್ಯೆ ಕಾರ್ಯಕರ್ತರ ಪರವಾಗಿ ಪ್ರಮುಖರು ಆಗಾಗ ನಮ್ಮ ಮನೆಗೂ ದಯಮಾಡಿಸಿ ವಿಚಾರ ವಿನಿಮಯ ನಡೆಸಿದ್ದರು. ಶಕುಂತಲಾಬಾಯಿ ಕಾವ್ಯದಲ್ಲಿ ಬಹಳ ಸ್ವಾರಸ್ಯವಾದ ಕಥಾ ಸಂದರ್ಭಗಳಲ್ಲಿ ಹಲವನ್ನು ಸೂಚಿಸಿ ಅವುಗಳಲ್ಲಿ "ಮಮತೆಯ ಸುಳಿ ಮಂಥರೆ"ಯೂ ಒಂದು ಅತಿ ಮನೋಹರವಾದ ಸ್ವಾರಸ್ಯ ಘಟ್ಟವೆಂದು ತಿಳಿಸಿದ್ದರು. ಪತ್ರ ವ್ಯವಹಾರ ನಡೆಯುತ್ತಿದ್ದ ಕಾಲದಲ್ಲಿ ನನಗೆ ಶಿಕ್ಷಕರ ರಾಷ್ಟ್ರಪ್ರಶಸ್ತಿ ಬರುತ್ತದೆ; ನಾನು ದೆಹಲಿಗೆ ಹೋಗುತ್ತೇನೆಂದು ಕನಸು ನನಸುಗಳಲ್ಲಿಯೂ ತಿಳಿದಿರಲಿಲ್ಲ. ಶಕುಂತಲಾಬಾಯಿಗೆ ಹೋಗುವ ಭರವಸೆಯಿತ್ತು ಆ ಹೊತ್ತಿಗೆ ದೆಹಲಿಯ ಕೇಂದ್ರದಲ್ಲಿ ಉಪ ಸಚಿವೆಯಾಗಿದ್ದ ಸರೋಜಿನಿ ಮಹಿಷಿಯವರ "ಹಿಂದೀ ಶ್ರೀ ರಾಮಾಯಣ ದರ್ಶನಂ" ಬರುವುದೆಂಬ ಸುದ್ದಿ ಕಿವಿ ಮುಟ್ಟಿತ್ತು. ಸಚಿವೆ ಮತ್ತು ಕಾರ್ಯಕರ್ತ ಪ್ರಮುಖರು ನಮ್ಮ ಮನೆಗೂ ದಯಮಾಡಿಸಿದರು. ಶಕುಂತಲಾಬಾಯಿ ಹಿಂದೀ ಅನುವಾದದ ಕೆಲವು ಸಾಲುಗಳನ್ನು ಅತಿಥಿಗಳ ಮುಂದೆ ವಾಚಿಸಿಯೂ ಆಯಿತು.

ಅನಂತರ ಪತ್ರವ್ಯವಹಾರ ತಟಸ್ಥವಾಯಿತು. ನಾನು ಶಿಕ್ಷಕ ರಾಷ್ಟ್ರಪ್ರಶಸ್ತಿ ವಿಜೇತನಾಗಿ ಪ್ರಶಸ್ತಿ ಪಡೆಯಲು ದೆಹಲಿಗೆ ಹೋಗುವುದು ನಿಶ್ಚಯವಾಯಿತು. ದೆಹಲಿಯಲ್ಲಿ ಜ್ಞಾನ ಪೀಠ ವಿತರಣ ಸಮಾರಂಭವೂ ಅದೇ ಕಾಲದಲ್ಲಿ ಒಂದೆರಡು ದಿವಸಗಳ ಹಿಂದು ಮುಂದು ಸಮಾವೇಶವಾಗುವುದು ದೃಢಪಟ್ಟಿತ್ತು. ಆಹ್ವಾನ ಪತ್ರಿಕೆ ಸಕಾಲದಲ್ಲಿ ತಲಪಿತ್ತಲ್ಲ! ಶಕುಂತಲಾಬಾಯಿ ಮತ್ತು ನಾನು ದೆಹಲಿಯ ಜ್ಞಾನಪೀಠ ಪ್ರಶಸ್ತಿ ವಿತರಣ ಸಮಾರಂಭ ದಲ್ಲಿ ಪಾಲುಗೊಳ್ಳಲು ಅನುಕೂಲವಾಯಿತು ; ಪ್ರೇಕ್ಷಕರಾಗಿ ಕೂತೆವು ಸಭೆಯಲ್ಲಿ.

ಇನ್ನೊಂದು ಇಂಥದೇ ಸಂದರ್ಭ. ಕುವೆಂಪು, ಕುವೆಂಪು "ಶ್ರೀ ರಾಮಾಯಣ ದರ್ಶನಂ" ಮತ್ತು ನಮಗೆ ಸಂಬಂಧಪಟ್ಟ ಆತ್ಮೀಯತೆಯ ಕಾವ್ಯವಾಚನ ಸಂದರ್ಭ ಹೇಗೆ ಬಿಟ್ಟು ಹೋಯಿತು ಎಂಬ ವಿಷಯ ಜ್ಞಾಪಕಕ್ಕೆ ಬರುತ್ತದೆ. 1967ರ ಮೇ 7ರಿಂದ 9ರ ವರೆಗೆ, ಧಾರವಾಡದಲ್ಲಿ 39ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಕೆ. ವಿ. ಪುಟ್ಟಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಆ ಸಮಯದಲ್ಲಿ ನಾವು ಸಿರಸಿಯ ಮಾರಿಕಾಂಬ ದೇವ ಸ್ಥಾನದ ಆಶ್ರಯದಲ್ಲಿ ನೆರವೇರಿದ 3 ದಿವಸಗಳ ಸಾಹಿತ್ಯ ಸಾಂಸ್ಕೃತಿಕ ಕಾರ್ಯಕ್ರಮ ದಲ್ಲಿ ಮುಖ್ಯ ಭಾಗಿಗಳಾಗಿದ್ದೆವು. ನಮ್ಮ ಸಾಹಿತ್ಯ ಜೀವನದಲ್ಲಿ ಬಹು ಪೂಜ್ಯ ಸ್ಥಾನ ಗಳಿಸಿರುವ ಜಿ. ಪಿ. ರಾಜರತ್ನಂ ಸಿರಸಿಯಿಂದ ತಮಗೆ ಬಂದಿದ್ದ ಆಹ್ವಾನವನ್ನು ನಮಗೆ ಬಿಟ್ಟುಕೊಟ್ಟು, ಸಿರಸಿಯ ಮಾರಿಕಾಂಬ ದೇವಸ್ಥಾನದ ಸಾಹಿತ್ಯ ಸಾಂಸ್ಕೃತಿಕ ಕಾರ್ಯ ಕ್ರಮಕ್ಕೆ ನಮ್ಮನ್ನು ಕರೆಸಿಕೊಳ್ಳುವಂತೆ ಧರ್ಮದರ್ಶಿಗಳಿಗೆ ತಿಳುವಳಿಕೆ ಕೊಟ್ಟು ನಮಗೆ ಪರಮ ಉಪಕಾರ ಮಾಡಿದ್ದರು. ನಾವು ಮೇ 3ರಿಂದ 5ರವರೆಗೆ ಮಾರಿಕಾಂಬ ದೇವ ಸ್ಥಾನದ ಕಾರ್ಯಕ್ರಮದಲ್ಲಿ ಭಾಗವಹಿಸಿದೆವು. ಕೈಲಾಸಂ ನಾಟಕಗಳಿಗೆ ಕಂಠ ಕೊಟ್ಟು ಜನಪ್ರಿಯಗೊಳಿಸಿದ್ದ ಹಿರಿಯ ಕಲಾವಿದ ಬಿ. ಎಸ್. ರಾಮರಾವ್ ಕೈಲಾಸಂ ನಾಟಕ ವಾಚನ ಕೊಡುವುದಕ್ಕೆ ಬಂದಿದ್ದರು. ನನ್ನ ಸಾಹಿತಿ ಮಿತ್ರರಾದ ಶ್ರೀ ಬಿ. ಎಚ್. ಶ್ರೀಧರ, ಎನ್. ಎಸ್. ನೆಜ್ಜೂರ್ ಮೂರು ದಿವಸಗಳ ಕಾರ್ಯಕ್ರಮಗಳಿಗೂ ಬಂದಿರುತ್ತಿದ್ದರು. "ಕರ್ಣಾಟಕ ಕವಿ ಕಾವ್ಯ ಪರಂಪರೆ" ಕುಮಾರವ್ಯಾಸ—ಲಕ್ಷ್ಮೀಶರ ಭಾರತಗಳು ಹೀಗೆ ಮೂರು ದಿವಸಗಳ ಗಮಕ ವಾಚನ ಕಾರ್ಯಕ್ರಮ. ಸಿರಸಿಯ ಜನಕ್ಕೆ ಗಮಕ-ವಾಚನ ಹೊಸದು. ಸಾಹಿತ್ಯಾಭಿಮಾನಿಗಳು ಸಾಹಿತ್ಯ ರಸಿಕರು ಬಿಟ್ಟು ಅನ್ಯ ಜನಕ್ಕೆ ಗಮಕ ಎಂಬ ಪದವೂ ಹೊಚ್ಚ ಹೊಸತೆಂದರೆ ಆಶ್ಚರ್ಯವಲ್ಲ. ಜನ ಕೇಳಿತು. ಹಿಂದೂಸ್ಥಾನಿ ಸಂಗೀತ ಕೇಳಿದ್ದ ಕಿವಿಗಳು ದಕ್ಷಿಣ ಸಂಗೀತ ಪದ್ಧತಿಯಲ್ಲಿ ಕಾವ್ಯವಾಚನ ಮಾಡಿದ ಶಕುಂತಲಾಬಾಯಿಯನ್ನು ಒಗ್ಗಿಸಿಕೊಂಡದ್ದು ಆಶ್ಚರ್ಯವೇ? ಅಂತೂ ಮೂರು ದಿವಸ ಗಳೂ ನಾವು ಏಗಿ, ಜನವನ್ನೂ ಏಗಿಸಿ ಗಮಕ ಕಲಾ ಪರಿಚಯ ಮಾಡಿಕೊಟ್ಟೆವು.

ಎನ್. ಎಸ್. ನೆಜ್ಜೂರರು ಶಿರಸಿಯ ಮುನಸಿಪಾಲಟಿಯ ಗೌರವ ಅಧ್ಯಕ್ಷರಾಗಿ ದ್ದಂತೆ ನನ್ನ ನೆನಪು. ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿಯಲ್ಲಿ ಬಹಳ ವರ್ಷ ಸದಸ್ಯರಾಗಿ ಸೇವೆ ಸಲ್ಲಿಸಿದ ಕನ್ನಡ ಪ್ರೇಮಿ. ನಾನು 1946ರಲ್ಲಿ ಕಾರ್ಯ ಕಾರಿ ಸಮಿತಿಯಲ್ಲಿದ್ದಾಗ ಪರಿಚಯವಾದರು. ನಮ್ಮ ಬಗೆಗೆ ತೋರಿದ ವಿಶ್ವಾಸ

ಅನುಪಮ. ಒಂದು ಬೆಳಗ್ಗೆ ನಮ್ಮನ್ನು ಬನವಾಸಿಗೆ ಕಳಿಸಿಕೊಟ್ಟರು. ಅದು ಸಿರಸಿಗೆ 14 ಮೈಲಿಗಳಷ್ಟು ಸನಿಹದಲ್ಲಿದೆ. ನಮಗೆ ಬನವಾಸಿ ಪರಮ ಪವಿತ್ರ ಸಾಹಿತ್ಯ ಯಾತ್ರಾ ಕ್ಷೇತ್ರ. ನಮಗೆ ಪಂಪನ ಬನವಾಸಿ-ಅಲ್ಲಮ ಪ್ರಭು ದೇವರ ಬನವಾಸಿ ಕ್ಷೇತ್ರ ಸಂದರ್ಶನ ಲಭ್ಯವಾದುದು ಖುಷಿಯೋ ಖುಷಿ. ಬನವಾಸಿಯನ್ನು ಬೆಳಗ್ಗೆ ತಂಪು ಹೊತ್ತಿನಲ್ಲಿ ತಲಪಿದೆವು.

ಬನವಾಸಿಯ ನೆಲವನ್ನು ಮೆಟ್ಟುತ್ತಲೆ ನಮಗಿಬ್ಬರಿಗೂ ಪಂಪ, ಚಾಮರಸರುಗಳ ದಿವ್ಯ ನೆನಹು ಜಾಗೃತವಾಯಿತು.

ಸೊಗಯಿಸಿ ಬಂದ ಮಾಮರನೆ ತಳ್ತೆಲೆವಳ್ಳಿಯೆ ಪೂತ ಜಾತಿ ಸಂ
ಪಗೆಯೆ ಕುಕಿಲ್ವ ಕೋಗಿಲೆಯೆ ಪಾಡುವ ತುಂಬಿಯೆ ನಲ್ಲರೊಳ್ಮೊಗಂ
ನಗೆ ಮೊಗದೊಳ್ ಪಳಂಚಲೆಯೆ ಕೂಡುವಸಲ್ಲರೆ ನೋಟಿಕ್ಕೆವಡಾವ ಬೆ
ಟ್ಟುಗಳೊಳಮಾವ ನಂದನವನಂಗಳೊಳಂ ಬನವಾಸಿ ದೇಶದೊಳ್

ಚಾಗದ ಭೋಗದಕ್ಕರದ ಗೇಯದ ಗೊಟ್ಟಿಯಲಂಪಿನಿಂಪುಗ
ಳ್ಗಾಗರವಾದ ಮಾನಿಸರೆ ಮಾನಿಸರಂತವರಾಗಿ ಪುಟ್ಟಲೇ
ನಾಗಿಯುಮೇನೊ ತೀರ್ದಪುದೆ ತೀರದೊಡಂ ಮಱಿದುಂಬಿಯಾಗಿ ಮೇಣ್
ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ಬನವಾಸಿ ದೇಶದೊಳ್

ತೆಂಕಣ ಗಾಳಿ ಸೋಂಕಿದೊಡಮೊಳ್ನುಡಿಗೇಳ್ದೊಡಮಿಂಪನಾಳ್ದ ಗೇ
ಯಂ ಕಿವಿವೊಕ್ಕಡಂ ಬಿರಿದ ಮಲ್ಲಿಗೆಗಂಡೊಡಮಾದ ಕೆಂದಲಂ
ಪಂ ಗೆಡೆಗೊಂಡಡಂ ಮಧು ಮಹೋತ್ಸವಮಾದೊಡಮೇನನೆಂಬೆನಾ
ರಂಕುಸವಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ."

ಆದಿ ಕವಿ ನಾಡೋಜ ಪಂಪನ ಜಗತ್ಪ್ರಸಿದ್ಧ ದೇಶ ಭಕ್ತಿಯ ಈ ಮೂರು ವೃತ್ತ ಪದ್ಯಗಳನ್ನು ಸ್ಮರಿಸಿಕೊಳ್ಳುತ್ತ ಬನವಾಸಿ ನೆಲದಲ್ಲಿ ಅಡ್ಡಾಡಿದೆವು.

ಇನ್ನು ನಮ್ಮ ಹೃದಯ ಸ್ಪರ್ಶಿಯಾದ ಚಾಮರಸನ ಕಾವ್ಯ ಸ್ಫೂರ್ತಿ ಚಿಲುಮೆ ಯಾದ, ಅಲ್ಲಮ ಪ್ರಭುವಿನ ಪರಮ ಪವಿತ್ರ ಜೀವನದಲ್ಲಿ ಅತ್ಯಂತ ಮಹತ್ವಸ್ಥಾನ ಪಡೆದ ಮಧುಕೇಶ್ವರಸ್ವಾಮಿಯ ಸಂದರ್ಶನ ಪಡೆಯುವ ಅಮೃತಘಳಿಗೆ ಬಂತು. ಮಧುಕೇಶ್ವರ ದೇವಾಲಯವನ್ನು ಪ್ರವೇಶಿಸಿದೆವು. ಪರಮೇಶ್ವರಿಯ ತಾಮಸಗುಣದ ಮೂರ್ತಿಯಾದ ಮಾಯೆ, ಮಧುಕೇಶ್ವರ ದೇವಾಲಯದಲ್ಲಿ ಮಧುಕೇಶ್ವರ ಲಿಂಗದ ಪೂಜಾರ್ಚನೆಯಲ್ಲಿ ಮಗ್ನಳಾಗಿದ್ದಾಳೆ—'ಸ್ವರೂಪ ಸನಾಮವನು ಮರೆ ಮಾಡಿ'ದ ಅಲ್ಲಮ ಪ್ರಭು ಹದಿನಾರು ಹದಿನೆಂಟು ವರ್ಷ ವಯಸ್ಸಿನ ವಿಟನ ರೂಪವನ್ನು ಧರಿಸಿ "ಬೆನ್ನೊಳು ಮೆಱೆವ ಮದ್ದಳೆ ಸಹಿತ" ಮಧುಕೇಶ್ವರ ದೇವಾಲಯದ ಮುಂದೆ ಸುಳಿದಿದ್ದಾನೆ—ಮದ್ದಳೆ ಬಾರಿಸ ತೊಡಗಿದ್ದಾನೆ—"ಕಾರ ಮುಗಿಲಿನ ಗರ್ಜನೆಯ ಕಿವಿಯಾರೆ ಕೇಳಿದ ಸೋಗೆ ಯಂತಿಗೆ ಹಾರವಿಸುತಲಿ" ಮಾಯೆ ಅಲ್ಲಮನನ್ನು ಒಳಗೆ ಕರೆಯಿಸುತ್ತಾಳೆ. ನೋಡಿದ ಕೂಡಲೆ "ಚಿತ್ತಜನಳವಿಯಲಿ ಬೆಂಬಿದ್ದು ಮೌನದೊಳಿರ್ದಳಾ" ಮಾಯೆ· ಮಾಯೆಯ ಸಖಿಯರು ಅಲ್ಲಮನನ್ನು ಸುತ್ತು ಬಳಸಿ "ಆವ ದೇಶದ ಪುರುಷನೈ, ನಿನಗಾವ

ದೇಸಸ್ಥ್ನ, ನೀನು ನೆಲೆಗೊಂಡಾವ ತಾವಿನಲಿಪ್ಪೆಯಪ್ಪ"ಎಂದು ವಿನಯದಿಂದ ಪ್ರಶ್ನಿಸುತ್ತಾಳೆ. ಅಲ್ಲಮ ನಸುನಗುತ "ನೀನರಿಯದು ಕೇಳುವರೆ ಪರದೇಶ, ಬಿರುದಿನ ಬೆಂಕಕಾಜಿ ವಾಸಿಗರ ನಲ್ಲೆನಿಸುವಲ್ಲಮನೆಂಬ ಹೆಸರೆನಗೆ : ಲೇಸು ಮಾಡುವ ತಾವುಗಳಭಿಲಾಷೆ ಯಿಲ್ಲದೆ ಹೊದ್ದು ಪೆವು ಸುಖವಾಸಿಗಳು ನಾವು." ಎಂದು ಉತ್ತರಿಸುತ್ತಾನೆ. ಸಖಿಯರು "ಒಳ್ಳಿತಾಯಿತು ಕಾರ್ಯ, ನೀನಿನ್ನೆಲ್ಲಿಗಲ್ಲಿಗೆ ಹೋಹ ಬುದ್ಧಿಯ ಸಲ್ಲದಿದು ; ಸುಖದಿಂದ ಲೆಮ್ಮೊಡತಿಯ ಸಮೀಪದಲಿ ಒಲ್ಲ ವಿದ್ಯಾವಸ್ತುಗಳೊಳೆನ್ನೆಲ್ಲಗೋಪಾದಿಯಲಿ ಮನ ಬಂದಲ್ಲಿ ನೀನಿರುವುದು" ಎನ್ನುತ್ತಾರೆ—ಬಳಿಕ ಮಾಯಾದೇವಿ ಅಲ್ಲಮನನ್ನು ಕರೆಸಿ ಕೊಂಡು, ಅಲ್ಲಿಂದ ಅರಮನೆಗೆ ಬಂದು ತಂದೆಗೆ ಪರಿಚಯಿಸಿ, ಆತನ ಅನುಮತಿಯಿಂದ ನಾಟ್ಯಾಚಾರ್ಯನನ್ನಾಗಿ ಮಾಡಿಕೊಳ್ಳುತ್ತಾಳೆ. ಇಷ್ಟೂ ಜಾಪಕವಾಯಿತು. ಮಧುಕೇಶ್ವರ ಲಿಂಗ, ಪಾರ್ವತಿ ಅಮ್ಮನವರು, ನಂದಿ, ದೀಪಸ್ತಂಭ ನೋಡಿ ತಣಿದೆವು. ನುಣುಪಾದ ಶಿಲೆಯಿಂದ, ಮನೋಹರ್ಷಕ ಕುಸುರಿ ಕಲೆಯಿಂದ ನಿರ್ಮಿಸಿರುವ ಮಂಚ ನೋಡಿ ಬೆಕ್ಕಸ ಬೆರಗಾದೆವು. ಬನವಾಸಿ ಸಾಹಿತ್ಯ ಯಾತ್ರೆ ಮುಗಿಸಿ ಆ ಸಂಜೆಯ ಹೊತ್ತಿಗೆ ಸಿರಸಿಯ ಕಾರ್ಯಕ್ರಮಕ್ಕೆ ಹಾಜರಾಗಿದ್ದೆವು.

ನೆಜ್ಜೂರರು "ಸಿರಸಿಗೆ ಬಂದವರು ಗೋಕರ್ಣ ಯಾತ್ರೆ ಮಾಡಬೇಡವೇ" ಎಂದು ಗೋಕರ್ಣ ಯಾತ್ರೆಗೂ ಏರ್ಪಾಡು ಮಾಡಿದರು. ಸಿರಸಿಯ ಮಾರಿಕಾಂಬೆಯ ದರ್ಶನ ಪಡೆದು, ದೇವಾಲಯದ ಸುತ್ತಲೂ ಇರುವ ಗೋಡೆಗಳ ಮೇಲೆ ರಾರಾಜಿಸುತ್ತಿದ್ದ ಚಿತ್ರಗಳನ್ನು ಅವುಗಳ ಕಲೆಯನ್ನು ಅವಲೋಕಿಸಿ ಗೋಕರ್ಣಕ್ಕೆ ಮಾರನೆಯ ದಿನ ಬೆಳಗ್ಗೆ ಹೊರಟೆವು.

ಗೋಕರ್ಣದಲ್ಲಿ ಒಂದು ದಿವಸ ಮಾತ್ರ ಇದ್ದು ಮಾರನೆಯ ದಿವಸ ಬೆಳಗ್ಗೆ ಧಾರವಾಡಕ್ಕೆ ಹೊರಟು ಸಾಹಿತ್ಯ ಸಮ್ಮೇಳನದಲ್ಲಿ ಸೇರಿಕೊಳ್ಳಬೇಕೆಂದು ನಮ್ಮ ನಿರ್ಧಾರವಾಗಿತ್ತು. ಗೋಕರ್ಣದಲ್ಲಿ ಪ್ರಸಿದ್ಧರಾಗಿ ಸಜ್ಜನರಾಗಿ, ಪ್ರಮುಖ ಪಂಡಿತರಾಗಿದ್ದ ಭಟ್ಟರಲ್ಲಿಗೆ ನಾವು ಹೋಗಬೇಕೆಂದು ನೆಜ್ಜೂರರು ನಮಗೆ ತಿಳಿಸಿ ಭಟ್ಟರಿಗೆ ಪರಿಚಯ ಪತ್ರ ಕೊಟ್ಟಿದ್ದರು. ಶಿರಸಿಯ ಮಾರಿಕಾಂಬ ದೇವಸ್ಥಾನದ ಧರ್ಮದರ್ಶಿಗಳು ನಮ್ಮನ್ನು ಮುಂಜಾವದಲ್ಲಿಯೇ ಎಬ್ಬಿಸಿ, ಮೀಯಿಸಿ, ಕಾಫಿ ಇಡ್ಲಿಗಳಿಂದ ತಣಿಸಿ, ಬಸ್ಸು ಹತ್ತಿಸಿ ಗೋಕರ್ಣಕ್ಕೆ ಬೀಳ್ಕೊಟ್ಟರು. ಧರ್ಮದರ್ಶಿ ಅತಿಥಿಗಳ ವಿಷಯದಲ್ಲಿ ವಹಿಸಿದ್ದ ಶ್ರದ್ಧೆ ನಿಷ್ಠೆಗಳು ನಮ್ಮನ್ನು ಮಂತ್ರಮುಗ್ಧರನ್ನಾಗಿ ಮಾಡಿದವು. ನಮ್ಮ ಅನುಭವದಲ್ಲಿ, ನಾವು ದಂಪತಿಗಳು ಉತ್ತರ, ದಕ್ಷಿಣ ಕನ್ನಡ ಜಿಲ್ಲೆಗಳ ಆತಿಥೇಯರಿಗೆ ಪ್ರಥಮ ಸ್ಥಾನ ಕೊಟ್ಟಿದ್ದೇವೆ. ಬಸ್ಸಿನಿಂದ ಇಳಿದು ಮತ್ತೆ ಬಸ್ಸು ಹತ್ತಿ ನಮ್ಮೂರಿಗೆ ತಲುಪುವವರೆಗೆ ಈ ಜನ ಅತಿಥಿಗಳ ವಿಷಯದಲ್ಲಿ ನಡೆದುಕೊಳ್ಳುವ ವಿನಯ ಸೌಜನ್ಯಗಳು ತುಂಬ ಮೇಲ್ಮಟ್ಟದ್ದು. ಪಡಪೋಸಿ, ತಾತ್ಸಾರ. ಹುಡುಕಬೇಕೆಂದರೂ ಸಿಗದು. ನಾವು ಗೋಕರ್ಣವನ್ನು ಮಧ್ಯಾಹ್ನ 11 ಗಂಟೆ ಸುಮಾರು ಸೇರಿದೆವು. ಭಟ್ಟರನ್ನು ಕಂಡೆವು. ನೆಜ್ಜೂರರ ಪತ್ರವೋ,

ವರ್ತಮಾನವೋ ಮುಂಚಿತವಾಗಿಯೇ ತಲಪಿತ್ತೆಂದು ತೋರುತ್ತೆ. ನಮಗೆ ಬಿಡಾರ ಸಿದ್ಧವಾಗಿತ್ತು. ನಮ್ಮ ಬಿಡಾರದಿಂದ ನೋಡಿದರೆ ಸಮುದ್ರರಾಜ ಮಧ್ಯಾಹ್ನದ ಸೂರ್ಯ ಭಗವಾನನ ಕೃಪಾಕಟಾಕ್ಷದ ಬಿಸಲ ಪ್ರಖರ ಕಿರಣಗಳಿಂದ ಅಚ್ಛಾದಿತನಾಗಿ ತನ್ನ ಮೈಯನ್ನು ಬೆಳ್ಳಿ ತಗಡು ಹೊದ್ದಿವೆಯೋ ಎನ್ನುವಹಾಗೆ ನಮಗೆ ಅನುಪಮವಾದ ಅಪ ರೂಪವಾದ ಎಂದೆಂದಿಗೂ ಮರೆಯದ ದಿವ್ಯ ಭವ್ಯವಾದ ಮನೋಹರ ನೋಟ ಕಲ್ಪಿಸಿದ್ದ. ಕಣ್ಣು ನೋಟ ಹಾಯುವವರೆಗೂ ಬೆಳ್ಳಿ ಬೆಳ್ಳಿ ಬೆಳ್ಳಿ. ಅಲೆಗಳೋ? ಬೆಳ್ಳಿ ಕವಚಗಳನ್ನು ತೊಟ್ಟು ಏರಿಳಿತಗಳಿಂದ ಸಮುದ್ರದಲ್ಲಿ ಸಣ್ಣ ಪುಟ್ಟ ರಜತಾದ್ರಿಗಳು ತೇಲಿ ಮುಳುಗಿ, ಮುಳುಗಿ ತೇಲುತ್ತಿರುವವೋ ಎಂಬ ಭ್ರಮೆಯನ್ನು ತರುತ್ತಿದ್ದವು. ಪರಮೇಶ್ವರನ ಮಹಾ ಭಕ್ತ, ಮಹಾ ಬ್ರಾಹ್ಮಣ ರಾವಣೇಶ್ವರ ಪ್ರತಿಷ್ಠಾಪಿಸಿದ ಆತ್ಮಲಿಂಗ, ಆತ್ಮಲಿಂಗವನ್ನು ಲಂಕೆಗೆ ಕೊಂಡೊಯ್ಯಲಿದ್ದ ರಾವಣನನ್ನು ತಡೆದು ನಿಲ್ಲಿಸಿದ ತುಡುಗ ತುಂಡಾಂಡಿಗ ಬಾಲ ಗಣಪತಿಯ ದರ್ಶನಗಳಾದವು. ಸಮುದ್ರ ಸ್ನಾನ ಮಾಡಿ ಬರುತ್ತಲೆ ಮಧ್ಯಾಹ್ನ ಚೊಕ್ಕ ಭೋಜನವಾಯಿತು. ಭಟ್ಟರು ನಮ್ಮನ್ನಿಳಿಸಿದ ಪ್ರವಾಸಿ ಮನೆ ಮೈಸೂರು ಅರಸರ ಬಿಡದಿ ಮನೆಯಾಗಿತ್ತಂತೆ ಮಹಾರಾಜರು—ರಾಜ ಪರಿವಾರ ಬಂದಾಗ ಗೋಕರ್ಣಕ್ಕೆ. ಅದೇ ನಮಗೂ ಈಗ ಬಿಡದಿ ಅರಮನೆಯಾಗಿತ್ತು. ಆದರೆ ನಾವು ಅರಸ ರಲ್ಲ ಸಾಮಾನ್ಯರಲ್ಲಿ ಸಾಮಾನ್ಯರು. ನಮ್ಮ ಪಕ್ಕದಲ್ಲಿಯೇ ಸುಪ್ರಸಿದ್ಧ ವಿಚಾರವಾದಿ ವಿದ್ವಾಂಸ ಲೇಖಕ ಗೌರೀಶ ಕಾಯ್ಕಿಣಿಯವರನ್ನು ನೋಡಿ ಅವರ ಪರಿಚಯ ಮಾಡಿ ಕೊಳ್ಳಬೇಕೆಂದು ನನಗೆ ಆಸೆ. ಕಾಸರಗೋಡೋ ಕುಮಟವೋ, ಯಾವುದೋ ಒಂದು ಸ್ಥಳದಲ್ಲಿ ನಡೆದ ಸಮ್ಮೇಳನದಲ್ಲಿ ಗೌರೀಶರನ್ನು ದೂರದಿಂದ ನೋಡಿದ್ದೆ. ಪರಿಚಯ ವಾಗಿರಲಿಲ್ಲ. ಅವರ ಸಾಹಿತ್ಯವನ್ನು ಓದಿ ಅವರ ಬಗೆಗೆ ವಿಶ್ವಾಸ ತಳೆದಿದ್ದೆ. ಭಟ್ಟರಿಗೆ ವಿಜ್ಞಾಪಿಸಿಕೊಂಡೆ ಗೌರೀಶರನ್ನು ಭೇಟಿ ಮಾಡಿಸಿ ಎಂದು. ಹೇಳಿ ಕಳಿಸಿದರು. ಆದರೆ ಗೌರೀಶ ಕಾಯ್ಕಿಣಿ ಯಕ್ಷಗಾನ ಆಟಕ್ಕೆ ಊರು ಬಿಟ್ಟು ಬೇರೂರಿಗೆ ಹೋಗಿದ್ದರೆಂದು ತಿಳಿದು ಖಿನ್ನನಾದೆ. ಈವರೆಗೆ ನಾವು ಅಪರಿಚಯಸ್ಥರಾಗೇ ಉಳಿದಿದ್ದೇವೆ. ನಾನು ಅವರನ್ನು ಅವರ ಕೃತಿಗಳಿಂದ ಚೆನ್ನಾಗಿ ಬಲ್ಲೆ. ಆದರೆ ಅವರು ?

ಗೋಕರ್ಣವನ್ನು ಬಿಟ್ಟು ಮಾರನೆಯ ದಿನ ಬೆಳಗ್ಗೆ ಬಸ್ ಸ್ಟ್ಯಾಂಡಿಗೆ ಬಂದೆವು. ಗೋಕರ್ಣದಿಂದ ಬೆಂಗಳೂರಿಗೆ, ಹುಬ್ಬಳ್ಳಿಗೆ ಹೋಗುವ ಬಸ್ಸುಗಳು ಎರಡೂ ಪಕ್ಕಪಕ್ಕ ಗಳಲ್ಲಿ ನಿಂತಿದ್ದವು. ನಮ್ಮ ಮನಸ್ಸು ಡೋಲಾಯಮಾನವಾಯಿತು ; ಯಾವ ಬಸ್ಸು ಹತ್ತೋಣ? ಬೆಂಗಳೂರಿಗೋ? ಹುಬ್ಬಳ್ಳಿಗೋ? ಧಾರವಾಡದ ಸಾಹಿತ್ಯ ಸಮ್ಮೇಳನಕ್ಕೆ ಹೋದರೆ ಮೂಗಿಲ್ಲದ ಮುಖದಿಂದ ಹೋಗಬೇಕು. ತಮ್ಮ ತಪಸ್ಸಿದ್ಧಿಯಿಂದ ಮಹ ಮೇರುಕೃತಿ ಜಗದ್ಭವ್ಯ ರಾಮಾಯಣ "ಶ್ರೀ ರಾಮಾಯಣ ದರ್ಶನಂ" ಕಾವ್ಯ ರಚಿಸಿದ ಕಾವ್ಯರ್ಷಿ ಕುವೆಂಪು ಸಮ್ಮೇಳನಾಧ್ಯಕ್ಷರು. ಅವರ ಅಧ್ಯಕ್ಷತೆಯಲ್ಲಿ ನಡೆಯುವ ಸಮ್ಮೇಳನದಲ್ಲಿ "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನದಿಂದ ಜನಪ್ರಿಯರಾಗಿದ್ದ ಶಕುಂತಲಾಬಾಯಿಗೆ ಆಹ್ವಾನವಿಲ್ಲ. ಕವಿಗೋಸ್ಕರ, ಅವರ ಕಾವ್ಯದೊಲವಿನಿಂದ ಅವರ

ಪ್ರೀತಿ ವಿಶ್ವಾಸಗಳನ್ನು ಗಳಿಸಿರುವುದಕ್ಕೋಸ್ಕರ, ಧಾರವಾಡದ ಸಾಹಿತ್ಯ ಸಮ್ಮೇಳನಕ್ಕೆ ಹೋಗಬೇಕು. ಹೋದೆವೋ? ಶಕುಂತಲಾಬಾಯಿಯನ್ನು ಚೆನ್ನಾಗಿ ಬಲ್ಲ "ಶ್ರೀ ರಾಮಾಯಣದರ್ಶನಂ" ಕಾವ್ಯಾಭಿಮಾನಿಗಳು "ನಿಮ್ಮ ವಾಚನವಿಲ್ಲವೇ ?" ಎಂದು ಘೇರಾಯಿಸಿ ಪ್ರಶ್ನಿಸುತ್ತಾರೆ. ಕಾವ್ಯ ಕೇಳುಗ ಸಹೃದಯ ಮತಿ ವಿಭೂತಿಗಳಿಗೆ ಏನು ಉತ್ತರಕೊಡುವುದು ? ಶಕುಂತಲಾಬಾಯಿ "ಹುಬ್ಬಳ್ಳಿಗೆ ಬೇಡ, ಬೆಂಗಳೂರಿಗೆ ನಡೆಯಿರಿ" ಎಂದರು ಕೊನೆ ಘಳಿಗೆಯಲ್ಲಿ. ಧಾರವಾಡದ ಸಾಹಿತ್ಯ ಸಮ್ಮೇಳನದ ಸಡಗರ ಸಂಭ್ರಮಗಳನ್ನು ಮನೋಭೂಮಿಕೆಯಲ್ಲಿ ನಿರ್ಮಿಸಿಕೊಳ್ಳುತ್ತ ಬೆಂಗಳೂರು ಕಡೆಯ ಬಸ್ಸಿನಲ್ಲಿ ಕುಳಿತು ಗೋಕರ್ಣವನ್ನು ಹಿಂದುಳಿದು ಮುಂದೆ ನಡೆದೆವು.

ದೆಹಲಿಯ ಪ್ರಸ್ತಾಪಕ್ಕೆ ಧಾರವಾಡದ ಸಮ್ಮೇಳನದ ವಿಷಯಾಂತರದಿಂದ ಹಿಂದಿರುಗೋಣ. ಜ್ಞಾನಪೀಠ ಪ್ರಶಸ್ತಿ ವಿತರಣ ಸಮಾರಂಭವಾದ ಒಂದೆರಡು ದಿವಸಗಳಲ್ಲಿ ಸರೋಜಿನಿ ಮಹಿಷಿಯವರು ಅಧ್ಯಕ್ಷಿಣಿಯಾಗಿದ್ದ ಕರ್ನಾಟಕ ಸಂಘವು ಕುವೆಂಪು ಅವರಿಗೆ ಸನ್ಮಾನ ಸಮಾರಂಭವನ್ನು ಏರ್ಪಡಿಸಿತು. ನಾನು ರಾಷ್ಟ್ರಮಟ್ಟದಲ್ಲಿ ಶಿಕ್ಷಕ ರಾಷ್ಟ್ರಪ್ರಶಸ್ತಿ ವಿಜೇತನಾಗಿದ್ದ ಪ್ರಯುಕ್ತ ನನ್ನನ್ನು ಕುವೆಂಪು ಅವರ ಜೊತೆಯಲ್ಲಿ ಒಂದೇ ವೇದಿಕೆಯ ಮೇಲೆ ಕೂಡಿಸಿದರು. ನಾನು ರಾಷ್ಟ್ರಕವಿಯೂ, ಜ್ಞಾನಪೀಠ ಪ್ರಶಸ್ತಿ ವಿಜೇತರೂ ಆದ ಕುವೆಂಪು ಅವರ ಪಕ್ಕದಲ್ಲಿ ಬಹುಸಂಕೋಚದಿಂದ ಹುದುಗಿ ಕುಳಿತುಕೊಂಡಿದ್ದೆ. ಶಕುಂತಲಾಬಾಯಿ ಈ ಸಂದರ್ಭದಲ್ಲಿ "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನ ಮಾಡಬೇಕೆಂದು ಅಲ್ಲಿಯೇ ನಮ್ಮಿಬ್ಬರ ಮುಖದರ್ಶನವಾದಾಗ ಕಾರ್ಯಕರ್ತರು ಶಕುಂತಲಾಬಾಯಿಯೆಡೆ ಧಾವಿಸಿ ಕೇಳಿಕೊಂಡಿದ್ದರು. ಶಕುಂತಲಾಬಾಯಿಗೆ ಯಾವ ಕಾವ್ಯವೂ ಕಂಠಪಾಠವಾಗಿಲ್ಲ. ಆಕೆ ಪುಸ್ತಕಬದನೆಕಾಯಿ. ಮನಸ್ಸಿನಲ್ಲಿಯೇ ಹೃದಯ ಹಿಚುಕಿಕೊಂಡು, ಸಭೆಗೆ ಆಗಮಿಸಿದ್ದ ಶ್ರೋತೃಗಳೊಬ್ಬರ ಕೈಯಲ್ಲಿ "ಶ್ರೀ ರಾಮಾಯಣ ದರ್ಶನಂ" ಕಾವ್ಯಕಂಡು, ಆ ಆಪದ್ಬಾಂಧುವಿನ ಬಳಿಗ್ಹೋಗಿ, ಪುಸ್ತಕ ಪಡೆದು ದಿಢೀರನೆ ಒದಗಿದ್ದ ಗಂಡಾಂತರದಿಂದ ಪಾರಾದರು. ಕುವೆಂಪು ತಮ್ಮ ಕೃತಜ್ಞತಾರ್ಪಣೆಯಲ್ಲಿ ನಮ್ಮನ್ನು ಸ್ಮರಿಸಿದರು. "ಶ್ರೀ ಪಾಂಡುರಂಗರಾವ್ ದಂಪತಿಗಳು ನನ್ನ ಮಹಾಕಾವ್ಯ "ಶ್ರೀರಾಮಾಯಣ ದರ್ಶನಂ" ಜನಪ್ರಿಯವಾಗುವುದಕ್ಕೆ ತುಂಬ ವಿಶ್ವಾಸದಿಂದ ಶ್ರಮಿಸಿದ್ದಾರೆ. ನನಗೆ ಅವರುಗಳನ್ನು ಸಾರ್ವಜನಿಕ ವೇದಿಕೆಯಿಂದ ಅಭಿನಂದಿಸುವುದಕ್ಕೆ ಸರಿಯಾದ ಸಮಯ ದೊರೆತಿರಲಿಲ್ಲ. ದೆಹಲಿ ವೇದಿಕೆಯಿಂದ ಅಭಿನಂದನೆ ಸಲ್ಲಿಸುತ್ತೇನೆ" ಎಂದರು. ದೆಹಲಿಯಲ್ಲೂ ಕವಿವರ್ಯರ ಸಮುಖದಲ್ಲಿ ಶಕುಂತಲಾಬಾಯಿ "ಶ್ರೀ ರಾಮಾಯಣ ದರ್ಶನಂ" ಮಹಾಕಾವ್ಯ ವಾಚನ ಮಾಡಿದಂತಾಯಿತು.

ಕನ್ನಡ ಭಾರತಿ ಸಂಘದಲ್ಲಿ

ದೆಹಲಿಯಲ್ಲಿರುವ ಕನ್ನಡಿಗ ಯುವಜನ ಬಹು ನೇರ್ಪಿನಿಂದ "ಕನ್ನಡ ಭಾರತಿ" ಎಂಬ ಸಂಘವನ್ನು ಬಹಳ ವರ್ಷಗಳಿಂದ ನಡೆಸಿಕೊಂಡು ಬರುತ್ತಿದ್ದಾರೆ. "ಕರ್ನಾಟಕ

ಸಂಘ"ದ ನಿಲುವಿಗೂ "ಕನ್ನಡ ಭಾರತಿ" ಸಂಘದ ನಿಲುವಿಗೂ ಒಂದು ಮುಟ್ಟಿದ ಅಂತರ ವಿದೆಯೆಂದು ನನ್ನ ಅಭಿಪ್ರಾಯ. ಕರ್ಣಾಟಕ ಸಂಘ ಶ್ರೀಮಂತ ಧೋರಣೆಯ ಬಹು ಬಿಂಕಬಿನ್ನಾಣದ ಒಬ್ಬ ಮಹಿಳೆಯೆನ್ನೋಣವೇ !? "ಕನ್ನಡ ಭಾರತಿ" ಯಾದರೋ ಸರ್ವಮಾನ್ಯ ಮಧ್ಯಮವರ್ಗದ ಮಹಿಳೆಯಿದ್ದಂತೆ. ಈ ಮಹಿಳೆಯರಿಬ್ಬರ ಕಾರ್ಯ ಕ್ಷೇತ್ರದ ಧ್ಯೇಯ ಕನ್ನಡಮ್ಮನ ಸೇವೆಯೇ ಅದರೂ ಸೇವೆ ಕೈಂಕರ್ಯಗಳಲ್ಲಿ ವ್ಯತ್ಯಾಸ ವುಂಟು. ನಾನು ಶಕುಂತಲಾಬಾಯಿಯೊಡನೆ ದೆಹಲಿಗೆ ನನ್ನ ಶಿಕ್ಷಕ ರಾಷ್ಟ್ರಪ್ರಶಸ್ತಿ ಯನ್ನು ಸ್ವೀಕರಿಸುವುದಕ್ಕೆ ಬರುತ್ತಿರುವೆನೆಂದು ನನ್ನ ದೆಹಲಿ ಮಿತ್ರರಾದ ರಾಮಚಂದ್ರ ಪದಕಿಯವರಿಗೆ ತಿಳಿಯಿತು. ನಾನು ಇದೇ ಸಮಯದಲ್ಲಿ "ಮಕ್ಕಳ ಮಂಟಪ ಪ್ರಕಾಶನ" ಆಶ್ರಯದಲ್ಲಿ "ಮಕ್ಕಳ ಭಾರತ ದರ್ಶನ ಮಾಲೆ" ಲಾಂಛನದಲ್ಲಿ "ಧೀರಮಗ ಮತ್ತು ಇತರ ಕಥೆಗಳು" ಎಂಬ ಜ್ಯೋತ್ಸ್ನಲು ಕೃತಿಯನ್ನು ದೆಹಲಿಯಿಂದಲೇ ಬಿಡುಗಡೆ ಮಾಡಬೇಕೆಂದು ಆಲೋಚಿಸಿದೆ. "ಕನ್ನಡ ಭಾರತಿ" ಬಹಳ ಸಂತೋಷದಿಂದ ನನ್ನ ಪುಸ್ತಕವನ್ನು ಬಿಡುಗಡೆ ಮಾಡಲು ಒಪ್ಪಿಕೊಂಡಿತು. ಶಕುಂತಲಾಬಾಯಿಯ "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನದ ಏರ್ಪಾಡನ್ನು ಕೈಗೊಂಡಿತು. ಕರ್ಣಾಟಕದ ಮಹಾ ಮೇಧಾವಿ ವಿಚಾರವಾದಿ ಕಾದಂಬರಿಗಾರರಾದ ಎಸ್. ಎಲ್. ಭೈರಪ್ಪನವರು ನನ್ನ "ಧೀರಮಗ ಮತ್ತು ಇತರ ಕಥೆಗಳು" ಮಕ್ಕಳ ಪುಸ್ತಕವನ್ನು ಬಿಡುಗಡೆ ಮಾಡಲು ದಯೆಮಾಡಿ ಒಪ್ಪಿಕೊಂಡಿದ್ದರು. ಶಕುಂತಲಾಬಾಯಿಗೂ ನನಗೂ ಸನ್ಮಾನವೂ ಕಾರ್ಯಕ್ರಮದಲ್ಲಿಇತ್ತು. 21–12–1968 ಸಭೆ ತುಂಬಿಬಂದಿತ್ತು. ಶಕುಂತಲಾಬಾಯಿಯ "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನದ ಧ್ವನಿಮುದ್ರಿಕೆಯೂ ಆಯಿತು. ಕನ್ನಡ ಭಾರತಿಯು ನೆನಪಿನ ಕಾಣಿಕೆಯಾಗಿ ಜಗದ್ವಿಖ್ಯಾತ ಮಹಾನಾಟಕಕಾರನಾಗಿ ಮೆರೆದ ಷೇಕ್ಸ್‌ಪಿಯರ್ ಶತಮಾನೋತ್ಸವದ ಜ್ಞಾಪಕಾರ್ಥವಾಗಿ ಪ್ರಕಟಿಸಿದ "ಷೇಕ್ಸ್‌ಪಿಯರ ನಿಗೆ ನಮಸ್ಕಾರ" ಎಂಬ ಸುಂದರ ಕೃತಿಯನ್ನು ನಮಗೆ ದಂಪತಿಗಳಿಗೆ ಮೆಚ್ಚುಡುಗೊರೆ ಯಾಗಿಕೊಟ್ಟು ನಮ್ಮನ್ನು ತನಗೆ ಚಿರಋಣಿಯಾಗಿ ಮಾಡಿಕೊಂಡಿತು.

"ಎಚ್. ಎಸ್. ಪಾಟೀಲರು ಬಹು ದೊಡ್ಡ ಮನುಷ್ಯ" ವಿ. ಸೀ.

ನಾನು ಶಿಕ್ಷಕ ರಾಷ್ಟ್ರಪ್ರಶಸ್ತಿ ವಿಜೇತನಾಗಿ ಭಾರತ ಸರಕಾರದ ಅತಿಥಿಯಾಗಿ ಡಿಸೆಂಬರ್ 16ರಿಂದ 18ನೆಯ ದಿನಾಂಕದ ವರೆಗೆ ನಿಜಾಮುದ್ದೀನ್ ಸ್ಕೌಟ್ ಶಿಬಿರದಲ್ಲಿ ನನ್ನ ಸಹೋದ್ಯೋಗಿ ಶಿಕ್ಷಕ ರಾಷ್ಟ್ರಪ್ರಶಸ್ತಿ ವಿಜೇತರೊಂದಿಗೆ ಇದ್ದು ಭಾವೈಕ್ಯದಿಂದ "ನಾವೆಲ್ಲರೂ ಒಂದೇ ಭಾರತ ರಾಷ್ಟ್ರ ಅವಿಭಾಜಕ ಕುಟುಂಬ" ಎಂಬುದನ್ನು ತೋರಿಸಿ ಕೊಂಡೆ. ಮೂರು ದಿವಸಗಳಾದ ಮೇಲೆ ಭಾವೈಕ್ಯ ಭಾರತೀಯ ಶಿಕ್ಷಕರೆಲ್ಲ ತಮ್ಮತಮ್ಮ ಸ್ವಸ್ಥಳಗಳಿಗೆ ತೆರಳಿದರು. ನಾನು ಮತ್ತು ನನ್ನ ಸೌಭಾಗ್ಯವತಿ ಶಕುಂತಲಾಬಾಯಿ ಎಚ್. ಎಸ್. ಪಾಟೀಲರ ಅತಿಥಿಗಳಾಗಿ ಅವರ ಮನೆಗೆ ಹೋದೆವು. ಪಾಟೀಲರ ಸೌಭಾಗ್ಯವತಿ ಸುಮಿತ್ರಾಬಾಯಿ ನಾಮಿ, ತಮ್ಮ ತೌರೂರಿಗೆ ಹೋಗಿದ್ದ ಪ್ರಯುಕ್ತ

ಶಕುಂತಲಾಬಾಯಿಯೇ ಪಾಟೀಲರ ಅಡುಗೆಮನೆಯ ಅಧಿಕಾರವನ್ನು ಪಡೆದು ಸರ್ವ. ಸ್ವತಂತ್ರ ಅನ್ನಪೂರ್ಣೆಯಾದರು. ನಾವು ಪಾಟೀಲರ ಮನೆಗೆ ಹೋದ ರಾತ್ರಿಯೇ ವಿ. ಸೀ. ಅವರು ಪಾಟೀಲರ ಅತಿಥಿಗಳಾಗಿ ಆಗಮಿಸಿದರು. ಜ್ಞಾನಪೀಠದ ಪ್ರಶಸ್ತಿ ವಿತರಣ ಸಮಿತಿಯ ಸದಸ್ಯರಾಗಿದ್ದ ಕಾರಣ ಅವರು ಕುವೆಂಪು–ಉಮಾಶಂಕರ ಜೋಷಿ ಜ್ಞಾನ ಪೀಠ ಪ್ರಶಸ್ತಿ ವಿತರಣ ಸಮಾರಂಭದಲ್ಲಿ ಭಾಗವಹಿಸಲು ದೆಹಲಿಗೆ ಬಂದಿದ್ದರು. ನಮ್ಮಿಬ್ಬರಿಗೂ ಪಿತೃಸಮಾನರಾಗಿದ್ದ ವಿ. ಸೀ. ಅವರಿಗೆ ಸೇವೆ ಮಾಡುವ ಸದವಕಾಶವನ್ನು ಪಾಟೀಲರು ಕಲ್ಪಿಸಿಕೊಟ್ಟರಲ್ಲ ಎಂದು ಶಕುಂತಲಾಬಾಯಿ ಸಂತೋಷ ಹುರುಪಿನ ಗೆಜ್ಜೆಗಳನ್ನು ಕಾಲಿಗೆ ಕಟ್ಟಿಕೊಂಡರು. ವಿ. ಸೀ. ಅವರಿಗೆ, ಹಿತವಾದ, ಬೇಕಾದ ಅಡಿಗೆ ಮಾಡಿ ಬಡಿಸುವ ಉತ್ಸಾಹ ಆಕೆಗೆ. ಅಡಿಗೆ ಮನೆಯೋ, ಸಂಪೂರ್ಣವಾಗಿ ಆಕೆಯ ಅಧೀನಕ್ಕೆ ಒಪ್ಪಿಸಿದ್ದರು ಪಾಟೀಲರು. ಹಾಲು, ಬೆಣ್ಣೆ, ತುಪ್ಪ ಬಳಸುವುದಕ್ಕೆ ಯಾವ ಹಿಡಿತಡೆಯೂ ಇಲ್ಲ. ಆದರೆ ವಿ. ಸೀ. ತಿಂಡಿಯೂಟಗಳಲ್ಲಿ ಬಹುಮಿತ ; ಬಹುಸೂಕ್ಷ್ಮ: ಎಲ್ಲ ಒಂದೊಂದು ಹಿಡಿಯಷ್ಟು ಸ್ವೀಕರಿಸೋಣ. ಅವರು ಟೀ ಪ್ರಿಯರೆಂದು ಶಕುಂತಲಾ ಬಾಯಿಯೂ ಕೇಳಿ ಬಲ್ಲರು. ಮನೆಗೆ ಬಂದ ಗೆಳೆಯರಿಗೆ ವಿ. ಸೀ. ತಾವೇ "ಟೀ" ಮಾಡಿ ಕೊಡೋಣ, ಅವರನ್ನು ಬಲ್ಲವರಿಗೆಲ್ಲ ಕಿವಿಮಾತು, ಮನೆ ಮಾತು. ಶಕುಂತಲಾಬಾಯಿ ಆದಷ್ಟು ಒಪ್ಪವಾಗೇ ವಿ. ಸೀ. ಅವರು ಖುಷಿಪಡುವ ಹಾಗೆ, ತಾನೇ ಅತಿಥಿಯಾಗಿದ್ದ ಮನೆಯಲ್ಲಿ ಅತಿಥಿ ಸತ್ಕಾರ ಮಾಡಿದರು, ನನ್ನನ್ನು, ಎಚ್. ಎಸ್. ಪಾಟೀಲರನ್ನು ಅತಿಥಿ ವರ್ಗದಲ್ಲಿ ಸೇರಿಸಿಕೊಂಡು. ವಿ. ಸೀ. ದೆಹಲಿಯಲ್ಲಿ ಮೂರು ದಿವಸಗಳಿದ್ದು ಜ್ಞಾನಪೀಠ ಪ್ರಶಸ್ತಿ ವಿತರಣ ಸಮಾರಂಭವನ್ನು ಮುಗಿಸಿಕೊಂಡು ಹರಿದ್ವಾರದತ್ತ ತಮ್ಮ ಹಿರಿತಂಗಿ ಹಿರಿಭಾವನವರ ಅತಿಥಿಯಾಗಲು ಪಯಣ ಬೆಳೆಸಿದರು ; ನಾವು ಎಚ್. ಎಸ್. ಪಾಟೀಲರ ಅತಿಥಿಗಳಾಗಿ ಒಂದು ವಾರ ಇದ್ದೆವು.

ಎಚ್. ಎಸ್. ಪಾಟೀಲರು ವಿ. ಸೀ. ಅವರ ಅಭಿಪ್ರಾಯದಲ್ಲಿ ಬಹು ದೊಡ್ಡ ಮನುಷ್ಯ. ಋಷಿ ಸದೃಷ ಕವಿ ವಾಣಿ ಎಂದೂ ಹುಸಿ ನುಡಿಯುವುದಿಲ್ಲ. ಎಚ್. ಎಸ್. ಪಾಟೀಲರು ಬಹು ದೊಡ್ಡಮನುಷ್ಯನೇ. ನನಗೆ ಎಚ್. ಎಸ್. ಪಾಟೀಲರು ಮದರಾಸು ಸಾಹಿತ್ಯ ಸಮ್ಮೇಳನದಲ್ಲಿ 1945ರ 16ನೆಯ ದಿನಾಂಕ ಪರಿಚಯವಾದರು. ರಂಗಮಂಗ ಪ್ರಕಾಶನದ ಗೆಳೆಯರು ಎನ್ಕೆ, ನೆಗಳೂರ ರಂಗನಾಥ, ಎಚ್. ಎಸ್. ಪಾಟೀಲ ಮತ್ತು ಮಲ್ಲಸಿದ್ಧ ವ್ಯಾಯಾಮ ಶಾಲೆಯ ಕೃಷ್ಣರಾವ್ ನಾಡಿಗೇರ ಈ ಚತುಷ್ಟಯಸೊಡನೆ ಸಿ. ಕೆ. ನಾಗರಾಜರಾಯ, ನಾನು ಸಾಹಿತ್ಯ ಸಮ್ಮೇಳನ ನಡೆದಷ್ಟು ದಿವಸಗಳೂ ಎಡಬಿಡದೆ ಇರುವ ಸದವಕಾಶ ಒದಗಿ ಬಂತು. ಆ ಸಮಯದಲ್ಲಿ ನನಗೆ ಎಂದೆಂದಿಗೂ ಮರೆಯದಂಥ ಮೈತ್ರಿ ಎನ್ಕೆ ಮತ್ತು ಪಾಟೀಲರೊಂದಿಗೆ ಒದಗಿ ಬಂತು. ಆ ಸ್ನೇಹ ಬೆಸುಗೆ ಸಡಿಲ ವಾಗದಷ್ಟು ಬಲವಾಗಿದೆ. ನೆಗಳೂರ ರಂಗನಾಥರು ಈಗಿಲ್ಲ. ನಾಡಿಗೇರರನ್ನು ಮದರಾಸಿ ನಲ್ಲಿ ನೋಡಿದ ಮೇಲೆ ನೋಡಲು ಆಗಲೇ ಇಲ್ಲ.

ಎಚ್. ಎಸ್. ಪಾಟೀಲರು ಕನ್ನಡದಲ್ಲಿ "ತಕ್ಕಡಿ", "ಸಂಯುಕ್ತರಾಷ್ಟ್ರ ಸಂಘ", "ಗ್ರಂಥಾಲಯ" ಮತ್ತು "ಶ್ರೀಮತಿ ಇಂದಿರಾ ಗಾಂಧಿ ಮತ್ತು ಅವರ ಟೀಕಾಕಾರರು" ಹೀಗೆ ಅಮೋಘವಾದ ಪುಸ್ತಕಗಳನ್ನು ಬರೆದಿದ್ದಾರೆ. ಹಿಂದೆ, ಜಯಕರ್ಣಾಟಕ, ಜಯಂತಿ, "ವಾಣಿ" ಮೊದಲಾದ ಮಾಸ ಪತ್ರಿಕೆಗಳಲ್ಲಿ ಸ್ವಾರಸ್ಯವಾದ ಪ್ರಚಲಿತ ವಿಷಯ ಗಳನ್ನು ಕುರಿತು ಲೇಖನಗಳನ್ನು ಬರೆದು ಜನಪ್ರಿಯತೆ ಗಳಿಸಿದ್ದುದೂ ಉಂಟು. ಬೊಂಬಾಯಿಯಲ್ಲಿದ್ದಾಗ ಹೊರನಾಡ ಕನ್ನಡಿಗರನ್ನು ಒಂದು ಕಡೆ ಕಲೆಹಾಕಿ ಅವರ ಕನ್ನಡ ಪ್ರೇಮವನ್ನು ಸ್ನೇಹ ಸಂಬಂಧವನ್ನು ಬೆಳೆಸುವ ಗುಂಗು ತಲೆಹೊಕ್ಕಿತು. ಕಾರ್ಯ ಕ್ಷೇತ್ರಕ್ಕೆ ಇಳಿದೇಬಿಟ್ಟರು. 1942ರಿಂದ 1967ರವರೆಗೆ ಹೊರನಾಡ ಕನ್ನಡಿಗರ ಸಮ್ಮೇಳನ ಗಳನ್ನು ಮುಂಬಯಿ, ದೆಹಲಿ, ಹೈದರಾಬಾದ್, ವಾರಣಾಸಿ, ಜಮಷಡಪುರ ಇತ್ಯಾದಿ ಭಾರತದ ಮಹಾ ಪಟ್ಟಣಗಳಲ್ಲಿ ನಡೆಸಿದರು. ತಮ್ಮ ಕಿಸೆಯಿಂದ ಸುಮಾರು ಇಪ್ಪತ್ತೈದು ಸಾವಿರ ರೂಪಾಯಿಗಳಷ್ಟು ಹಣ ವ್ಯಯಿಸಿದರು. "ಕನ್ನಡ ಗುಡಿ" ಎಂಬ ತ್ರೈಮಾಸಿಕ ಪತ್ರಿಕೆಯನ್ನು ಹೊರಡಿಸಿದರು. ಭಾರತಾದ್ಯಂತ ಅವರಿಗೆ ಸ್ನೇಹಿತ ಮಂದಿ ಸಾಕಾದಷ್ಟಿ ದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿಯಲ್ಲಿ 1944 ರಿಂದ 1946ರ ವರೆಗೆ ಸದಸ್ಯರಾಗಿದ್ದರು. ನಾನೂ ಅವರೂ ಕಾರ್ಯಕಾರಿ ಸಮಿತಿಯಲ್ಲಿ 1946ರಲ್ಲಿ ಜತೆ ಗೂಡಿ ಕೂತು ಕೆಲಸ ಮಾಡಿದೆವಲ್ಲ ಎಂಬ ಹಿಗ್ಗು ನಮಗಿಬ್ಬರಿಗೂ ಇದೆ. ದೆಹಲಿಯಲ್ಲಿ ಸಾಂಸ್ಕೃತಿಕ ಸಂಬಂಧಗಳ ಭಾರತೀಯ ಸಂಸ್ಥೆಗೆ ಸೇವೆಸಲ್ಲಿಸಿ ನಿವೃತ್ತರಾಗಿ ಈಗ ಬೆಂಗ ಳೂರು ಸೇರಿದ್ದಾರೆ. ಅವರು ಸಲ್ಲಿಸಿದ ಹೊರನಾಡ ಕನ್ನಡಿಗರ ಸೇವೆಯನ್ನು ಹಳೆ ಪೀಳಿಗೆಯ ಕನ್ನಡ ಜನ ಮರೆತಿಲ್ಲ. ಆದರೆ ಹೊಸಪೀಳಿಗೆಯ ಕನ್ನಡ ಮಂದಿಗೆ ತಮ್ಮ ಪೀಳಿಗೆಯ ಹಿಂದಿನ ಹಿರಿಯರು ಕನ್ನಡ ನುಡಿಗೆ, ಕನ್ನಡ ನಾಡಿಗೆ ಏನು ಸೇವೆ ಸಲ್ಲಿಸಿದರು ಎಂಬ ಮಾಹಿತಿಯೇ ಇಲ್ಲವಲ್ಲ ! ಅದನ್ನು ಒದಗಿಸುವ ಬಂಟರೂ ಇಲ್ಲವಲ್ಲ !! ಹೊಸ ನೀರು ಬಂದು ಹಳೆಯ ನೀರನ್ನು ಕೊಚ್ಚಿಕೊಂಡು ಹೋಯಿತು ಎಂಬ ನಾಮಿತಿ ಎಷ್ಟು ಸತ್ಯ !

ಪ್ರಯಾಗದ ಕರ್ಣಾಟಕ ಸಂಘದಲ್ಲಿ ಕಾವ್ಯ ವಾಚನ

ಶಕುಂತಲಾಬಾಯಿ ಪ್ರಯಾಗಕ್ಕೆ ಹೋಗಿ ತ್ರಿವೇಣಿ ಸಂಗಮದಲ್ಲಿ ವೇಣಿದಾನ ನೋಂಪಿ ಆಚರಿಸೋಣ ಎಂದರು. "ಆಯಿತು" ಎಂದೆ. ಹಿಂದಿನ ಪ್ರಯಾಗವೇ ಇಂದಿನ ಅಲಹಾಬಾದು. ಸಂಜೆಯ ರೈಲಿನಲ್ಲಿ ಕುಳಿತು ಮಾರನೆದಿನ ಬೆಳಗ್ಗೆ ಸುಮಾರು ಎಂಟೋ ಹತ್ತೋ ಗಂಟೆಯ ಹೊತ್ತಿಗೆ ಅಲಹಾಬಾದು ಸೇರಿದೆವು. ಈ ಮಧ್ಯೆ ನನ್ನ ಮನಸ್ಸಿನ ಶಾಂತಿಯನ್ನು ಕಲಕಿದ್ದು ಕಾನ್ಪುರ ರೈಲ್ವೆ ಸ್ಟೇಶನ್ನು. 1857ರಲ್ಲಿ "ಸಿಪಾಯಿದಂಗೆ" "ನಾನಾರಾಯನ ದಂಗೆ" ಯೆಂದು ಆಂಗ್ಲ ಆಳರಸರಿಂದ ಕುಪ್ರಸಿದ್ಧಿ ಹೊಂದಿದ ಪ್ರಥಮ ಸ್ವಾತಂತ್ರ್ಯ ಹೋರಾಟದ ಐತಿಹಾಸಿಕ ಕಾನ್ಪುರದ ಚಿತ್ರ ನನ್ನ ಮನೋಭೂಮಿಕೆಯಲ್ಲಿ ಮೂಡಿತು.

ಅಲಹಾಬಾದಿನಲ್ಲಿ ಜನಪ್ರಿಯರಾಗಿದ್ದಾರೆ ಶ್ರೀನಿವಾಸಾಚಾರ್. ಅವರು ಪ್ರಯಾಗದಲ್ಲಿ ಒಬ್ಬ ಪಂಡಾಜಿ. ಯಾತ್ರಿಕರನ್ನು ಸುಲಿಗೆ ಮಾಡುವ ಭಂಡ ಪಂಡರಲ್ಲ. ಸಜ್ಜನ. ಬಿ.ಕಾಮ್. ಪದವೀಧರ. ನನ್ನ ಕಿರಿಗೆಳೆಯ ಎಸ್. ಎನ್. ಮೂರ್ತಿ ಕಲ್ಕತ್ತಾದಿಂದ ನಾವು ಬರುವ ವಿಷಯ ಅವರಿಗೆ ಮುಂಚೆಯೇ ಪತ್ರಮುಖೇನ ತಿಳಿಸಿದ್ದರು. ಅಲಹಾಬಾದಿನ ಕರ್ಣಾಟಕ ಸಂಘ ಶಕುಂತಲಾಬಾಯಿಯ ಕಾವ್ಯವಾಚನದ ಏರ್ಪಾಡು ಮಾಡಿತ್ತು. ಅದಕ್ಕೂ ಕಾರಣ ಶ್ರೀನಿವಾಸಾಚಾರ್. ನಾವು ಒಂದು ಟ್ಯಾಕ್ಸಿ ಮಾಡಿಕೊಂಡು ಕಾಲಕ್ಕೆ ಸರಿಯಾಗಿ ಶ್ರೀನಿವಾಸಾಚಾರ್ ಮನೆಯನ್ನು ತಲುಪಿದೆವು. ಟ್ಯಾಕ್ಸಿ ಸುಸೂತ್ರವಾಗಿ ನಮ್ಮನ್ನು ತಲುಪಿಸಿತ್ತು ಸರಿಯಾದ ನೆಲೆಗೇ. ನಾವು ಹೋದ ದಿನ ಬಾನೆಲ್ಲ ಮೋಡ ಕವಿದಿತ್ತು. ಟ್ಯಾಕ್ಸಿಯಿಂದ ಇಳಿದು ಪರಿಚಯ ಹೇಳಿಕೊಳ್ಳುತ್ತಲೆ ಶ್ರೀನಿವಾಸಾಚಾರ್ ಬಹುದಿನದ ಮಿತ್ರರಂತೆ ನಡೆದುಕೊಂಡರು. ಬಿಸಿಬಿಸಿ ಸ್ನಾನ, ಅದನ್ನು ಅನುಸರಿಸಿ ಬಿಸಿಬಿಸಿ ಕಾಫಿ, ವಿಶ್ರಾಂತಿ, ಮಧ್ಯಾಹ್ನ ಒಂದು ಗಂಟೆಗೆ ಊಟ. ನಾಲ್ಕು ಗಂಟೆಯವರೆಗೆ ನಿದ್ರೆ. ಕರ್ಣಾಟಕಸಂಘದ ಕಾರ್ಯಕ್ರಮವೇರ್ಪಡಿಸಿದ್ದ ಮಿತ್ರರು ನಾಲ್ಕುವರೆ ಗಂಟೆಗೆ ಆಗಮಿಸಿ, ಕರ್ಣಾಟಕ ಸಂಘದ ಕಾರ್ಯಕ್ರಮ ಒಬ್ಬ ಮಿತ್ರರ ಮನೆಯಲ್ಲಿ ಏರ್ಪಾಡಾಗಿದೆಯೆಂದು ತಿಳಿಸಿದರು. ಶ್ರೀನಿವಾಸಾಚಾರ್ ನಮ್ಮನ್ನು ಅಲ್ಲಿಗೆ ಕರೆದುಕೊಂಡು ಹೋಗುವ ಭಾರ ವಹಿಸಿಕೊಂಡರು.

ಸಂಜೆ ಇದ್ದಕ್ಕಿದ್ದಹಾಗೆ ಮಳೆ ಪ್ರಾರಂಭವಾಯಿತು. ಬಿಡಲೇ ಇಲ್ಲ. ಟಾಂಗದಲ್ಲಿ ಹೊರಟೆವು. ಮಾರ್ಗಮಧ್ಯದಲ್ಲಿ ಒಂದು ಉದ್ಯಾನ. ಅದಕ್ಕೆ ಆಜಾದ್ ಪಾರ್ಕೆಂದು ನಾಮಕರಣವಾಗಿದೆ. ಶ್ರೀನಿವಾಸಾಚಾರ್, ಚಂದ್ರಶೇಖರ್ ಆಜಾದನ ಹೆಸರಲ್ಲಿ ಈ ಪಾರ್ಕ್‌ಗೆ ನಾಮಕರಣವಾಗಿದೆಯೆಂದು ತಿಳಿಸಿದರು. ಚಂದ್ರಶೇಖರ್ ಆಜಾದ್ 14 ವರ್ಷದ ಪೋರನಾಗಿದ್ದಾಗಲೇ 'ಪಿಕೆಟಿಂಗ್' ನಡೆಸಿದ ಅಪರಾಧಕ್ಕಾಗಿ 15 ಛಡಿ ಏಟು ತಿಂದ. ರಕ್ತಸೋರುತ್ತಿದ್ದರೂ "ಭಾರತಮಾತಾಕಿ ಜೈ" ಘೋಷ ಮಾಡುತ್ತಲೆ ಇದ್ದ. 16 ವರ್ಷದವನಾಗಿದ್ದಾಗಲೆ ಕ್ರಾಂತಿಕಾರಿಯಾದ. 1931ರ ಫೆಬ್ರವರಿ 27ರಂದು ಅಲಹಾಬಾದಿನ ಆಲ್‌ಫ್ರೆಡ್ ಪಾರ್ಕಿನಲ್ಲಿದ್ದಾಗ ಒಬ್ಬ ಮಿತ್ರನ ದ್ರೋಹದಿಂದ ಪೋಲೀಸರ ಗುಂಡಿಗೆ ಆಹುತಿಯಾದ. ಸುತ್ತಲು ಪೋಲೀಸರು ಪಾರ್ಕ್‌ಮುತ್ತಿ ಗುಂಡು ಹಾರಿಸಿದರು. ಪಾರ್ಕಿನಲ್ಲಿ ಆಜಾದ್ ಚಂದ್ರಶೇಖರನ ಪ್ರತಿಮೆಯಿದೆ. ನಮ್ಮ ಟಾಂಗ ಆಜಾದ್ ಉದ್ಯಾನವನ್ನು ಹಾದು ಹೋಗುತ್ತಿದ್ದಾಗ ನನಗೆ ಚಂದ್ರಶೇಖರ ಆಜಾದನ ವೀರ ಮರಣ ಭಾರತದ ಕುರುಕ್ಷೇತ್ರ ಯುದ್ಧದಲ್ಲಿ ದ್ರೋಣರು ರಚಿಸಿದ ಚಕ್ರವ್ಯೂಹದಲ್ಲಿ ಶತ್ರುಗಳಿಂದ ಆವೃತನಾಗಿ ವೀರ ಮರಣ ಹೊಂದಿದ ಅಭಿಮನ್ಯು ಕುಮಾರನನ್ನು ನೆನಪಿಗೆ ತರುತ್ತಿತ್ತು.

ಒಬ್ಬ ಕನ್ನಡ ಮಿತ್ರರ ಮನೆಯಲ್ಲಿ ಕರ್ಣಾಟಕ ಸಂಘದ ಇಪ್ಪತ್ತು ಇಪ್ಪತ್ತೈದು ಮಂದಿ ಸದಸ್ಯರು, ಅವರ ಮಡದಿ ಮಕ್ಕಳು ಸೇರಿದ್ದರು. ಮಳೆ ಬಿಡದೆ ಸುರಿಯುತ್ತಿದ್ದುದರಿಂದ ಬರಬೇಕಾದವರು ಬರಲಿಲ್ಲವೆಂದು ಕಾರ್ಯಕರ್ತರು ಖಿನ್ನರಾಗಿದ್ದರು. ಪಂಪನಿಂದ

ಪ್ರಾರಂಭವಾಗಿ ಕವಿಕಾವ್ಯ ಪರಂಪರೆ ಬಿ. ಎಂ ಶ್ರೀ. ಬೇಂದ್ರೆ ಕುವೆಂಪುರನ್ನು ಮುಟ್ಟಿತು. "ಶ್ರೀ ರಾಮಾಯಣ ದರ್ಶನಂ" ಕಾವ್ಯದ ಮಾದರಿಯನ್ನು ತೋರಿಸಿದ್ದಾಯಿತು. ಶಕುಂತಲಾಬಾಯಿಯ ಕಾವ್ಯವಾಚನ ಪ್ರಯೋಗದಲ್ಲೂ ಯಶಸ್ವಿಯಾಯಿತು. ಕಾಫಿ, ತಿಂಡಿ ಸಮಾರಾಧನೆ ನಡೆಯಿತು. ರಾತ್ರಿಯೇ ಶ್ರೀನಿವಾಸಾಚಾರ್ ಜೊತೆಗೆ ಅವರ ನಿವಾಸಕ್ಕೆ ಹಿಂದಿರುಗಿದೆವು.

೧೯೩೦ರ ಮೇ ೫ರ ನೆನಪು ಮರುಕಳಿಸಿತು

ಬೆಳಗಾಯಿತು. ವೇಣೀದಾನ ನೋಂಪಿಯ ಕಲಾಪಗಳ ಪ್ರಾರಂಭ. ಎಣ್ಣೆ ನೀರಿನ ಶಾಸ್ತ್ರ, ಹಸೆಮಣೆಯ ಮೇಲೆ ಕೂಡಿಸಿ ಆರತಿ. ನಮ್ಮ ಧರ್ಮದಲ್ಲಿ ಹುಟ್ಟನಿಂದ ಸಾವಿನ ವರೆಗೆ ಅಗ್ನಿದೇವನ ಪ್ರಾಧಾನ್ಯತೆಯಿಲ್ಲದೆ ಕರ್ಮ ಕಲಾಪಗಳು ನಡೆಯುವಂತೆಯೇ ಇಲ್ಲ ವಲ್ಲ! ಸರಿ, ಅಗ್ನಿ ಪ್ರತಿಷ್ಠೆಯಾಯಿತು. ಸಮಿತ್ತು ಇಟ್ಟು ಆಜ್ಯ ಹೊಯಿದು, ಹೊಗೆ ಎಬ್ಬಿಸಿ ಅಗ್ನಿಯನ್ನು ಪ್ರಜ್ವಲಿಸಿ ಭುಗಿಲುಭುಗಿಲು ಎನ್ನಿಸಿದರು ಜ್ವಾಲೆಯನ್ನು. ಮಂತ್ರ ಘೋಷ, ಅಗ್ನಿಗೆ ಹೋಮ, ಹಸೆಮಣೆಯ ಮೇಲೆ ಏಳು ಕೂಡು, ಅಗ್ನಿಗೆ ಪ್ರದಕ್ಷಿಣೆ, ಹಲವಾರು ಬಾರಿ ನಡೆಯಿತು. ನನ್ನ ಮನೋಭೂಮಿಕೆಯಲ್ಲಿ 1930ರ ಮೇ 5ರ ದಿನಾಂಕದ ನೆನಹು ಮರುಕಳಿಸಿತು. ವ್ಯತ್ಯಾಸ ಇಷ್ಟೆ. 9 ವರ್ಷದ ಮುಗ್ಧ ಬಾಲೆ ಈಗ 48 ವರ್ಷಗಳ ಪ್ರಬುದ್ಧ ಮಹಿಳೆ, ಕರ್ನಾಟಕದಾದ್ಯಂತ—ಭಾರತಾದ್ಯಂತ, ಗಮಕ ಕಲಾವಿದೆಯೆಂದು ಹೆಸರುಗಳಿಸಿದ ಕೀರ್ತಿವಂತ ಮಹಿಳೆ. 17 ವರ್ಷದ ಯುವಕನಾಗಿದ್ದ ಆಕೆಯ ಸಹ ಧರ್ಮಚಾರಿ, ಈಗ, ನಡು ವಯಸ್ಸಿನ ಎಲ್ಲೆ ದಾಟಿ ತನ್ನ ಶಿಕ್ಷಣ ಮತ್ತು ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲಿ ಸಾಕಷ್ಟು ಸೇವೆ ಸಲ್ಲಿಸಿ ಕರ್ನಾಟಕ ಹಾಗೂ ಭಾರತದಲ್ಲಿ ಮಹಾ ಹೆಸರಲ್ಲದಿದ್ದರೂ ಜನಪ್ರಿಯನಾಗಿರುವ ಒಬ್ಬ ವ್ಯಕ್ತಿ. ಮದುವಳಿಗೆ ಮುಗ್ಧ ಬಾಲಿಕೆ. ಹೆಣ್ಣುಮಕ್ಕಳ ಮಾಟದ ಕೋಟಲೆಗೆ ಸಿಲುಕಿ ನನ್ನನ್ನು ಒತ್ತಿಯೊತ್ತಿ ಕೂಡುತ್ತಿದ್ದವಳು ಈಗ ನನ್ನ ಪಕ್ಕದಲ್ಲಿ ಕುಳಿತಿದ್ದರು ಸ್ವಲ್ಪ ಅರಗಾಗಿ. ನಗು ಬಂತು. "ಯಾಕೆ ನಕ್ಕಿರಿ ?" ಪ್ರಶ್ನಿಸಿದರು. ನನ್ನ ಸೌಭಾಗ್ಯವತಿ. ಕಿವಿಯಲ್ಲಿ 1930ರ ವಿಷಯ ಪಿಸುಗುಟ್ಟಿದೆ. ಆಕೆಯ ಮುಖವೂ ಸ್ಮಿತವದನವಾಯಿತು. ನನ್ನ ಸೌಭಾಗ್ಯವತಿ ಹಣೆಗೆ ಬಾಸಿಂಗ ಕಟ್ಟಿದ್ದರು. ಕೈಯ್ಯಲ್ಲಿ ಆರತಕ್ಷತೆ ತಟ್ಟೆ ಹಿಡಿದಿದ್ದರು. ಮದು ಮಗಳಂತೆ ಇದ್ದ ಶಕುಂತಲಾಬಾಯಿ ಇಬ್ಬರು ಮೊಮ್ಮಕ್ಕಳ ಅಜ್ಜಿ. ಆದರೂ, ಆದರೂ, ನನಗೆ 1930ರ ಕಾಲದ 9 ವರ್ಷದ ಮುಗ್ಧ ಬಾಲೆಯಾಗೇ ಕಂಡರು. ನಾನು 17 ವರ್ಷದ ಹರೆಯದವನಾಗೇ ಕಂಡು ಕೊಂಡೆ ನನ್ನನ್ನು.

ಶ್ರೀನಿವಾಸಾಚಾರ್ ತಮ್ಮ ನಿವಾಸದಲ್ಲಿ ನೆರವೇರಿಸಬೇಕಾದ ಶುಭ ಕರ್ಮಗಳನ್ನು ನೆರವೇರಿಸಿಯಾದ ಮೇಲೆ ಒಂದು ಟಾಂಗದಲ್ಲಿ ನಮ್ಮಿಬ್ಬರನ್ನು ಗಂಗಾತಟಿಗೆ ಕರೆದೊಯ್ದರು. ಒಂದು ಕಮಾನು ದೋಣಿಯಲ್ಲಿ ಕೂಡಿಸಿ ನದಿಯ ಮೇಲೆ ಹಾಯಿಸಿದರು. ಯಮುನೆಯು ಬಂದು ಸೇರುವ ಸಂಗಮಕ್ಕೆ ಹೋಯಿತು ನಮ್ಮ ದೋಣಿ. ಗುಪ್ತ

ಗಾಮಿನಿಯಾಗಿ ಸರಸ್ವತಿಯೂ ಬಂದು ಸೇರುತ್ತಾಳೆ. ಆದುದರಿಂದ ತ್ರಿವೇಣಿ ಸಂಗಮವಂತೆ ಪ್ರಯಾಗದಲ್ಲಿ. ಸ್ನಾನಮಾಡಿ ಶುಚಿ ವಸ್ತ್ರಗಳನ್ನು ಧಾರಣೆ ಮಾಡಿದೆವು. ಶಾಸ್ತ್ರೋಕ್ತವಾಗಿ ವೇಣೀದಾನವಾಯಿತು. ಅಂದರೆ ಒಂದು ಬೆರಳಷ್ಟು ಕೂದಲನ್ನು ಕತ್ತರಿಸಿ ಸಂಗಮದಲ್ಲಿ ತೇಲಿಬಿಟ್ಟಾಯಿತು. ವೇಣೀದಾನ ನೋಂಪಿ ಹೀಗೆ ಶುಭಪರಿಸರದಲ್ಲಿ ಮುಗಿಯಿತು. ಆದರೆ ನನ್ನ ಗಮನದ ಲೋಕ ಬೇರೆಯಾಗಿತ್ತು. ನದಿಯ ಮೇಲೆ ಚಿತ್ರ ವಿಚಿತ್ರ ವೇಷಧಾರಿಗಳನ್ನೊತ್ತ ದೋಣಿಗಳು ಬರುತ್ತಿದ್ದವು ಹೋಗುತ್ತಿದ್ದವು. ಬೊಮ್ಮನ ಹಳ್ಳಿಯ ಕಿಂದರಿ ಜೋಗಿಯನ್ನು ಹೋಲುವ ಅನೇಕಾನೇಕ ಜೋಗಿಗಳು ದೋಣಿಗಳಲ್ಲಿ ಉಪಸ್ಥಿತರಾಗಿದ್ದರು. ಅವರುಗಳ ಮುಂದೆ ಮುವ್ವತ್ತು ಮೂರು ಕೋಟಿ ದೇವರುಗಳ ಪಟಗಳು. ಅವುಗಳಿಗೆ ಬಗೆಬಗೆಯ ಹೂ ಹಾರಗಳು. ಸುಮಂಗಲಿಯರುಗಳು ನನ್ನ ಸೌಭಾಗ್ಯವತಿಯಂತೆಯೇ ಹಣೆಗೆ ಬಾಸಿಂಗಕಟ್ಟಿ, ತಮ್ಮ ಆಣ್ಮರುಗಳ ಸನಿಹದಲ್ಲಿ ಕುಳಿತು ಬರುತ್ತಿದ್ದ ಹೋಗುತ್ತಿದ್ದ ದೋಣಿಗಳು. ನೋಡಿದೆ, ನೋಡಿದೆ. ನನ್ನ ದೋಣಿ ಸಂಗಮವನ್ನು ಸೇರಿದಾಗ, ಅಲ್ಲಿಂದ ಬೀಳ್ಕೊಳ್ಳುವಾಗ ಇವೆಲ್ಲ ಪಕ್ಕಪಕ್ಕದಲ್ಲಿ ಹಾದು ಹೋಗಿ ನನ್ನ ಮನೋಲೋಕ ಸ್ವಾಸ್ಥ್ಯ ಚಿತ್ತವನ್ನು ಕಳೆದುಕೊಂಡು ಕಿನ್ನರ ಲೋಕದಲ್ಲಿ ಓಲಾಡುತ್ತಿತ್ತು.

ಸಂಗಮದಿಂದ ನಾವು ಶ್ರೀನಿವಾಸಾಚಾರ್ಯರ ಮನೆಗೆ ಬಂದೆವು. ಮಧ್ಯಾಹ್ನ 1 ಗಂಟೆ. ಸಿಹಿಯೂಟವಾಯಿತು. ಸ್ವಲ್ಪಕಾಲ ವಿಶ್ರಾಂತಿ. ಪವಿತ್ರ ಗಂಗಾ ಜಲವನ್ನು ಪುಟ್ಟಪುಟ್ಟ ಗಿಂಡಿಗಳಲ್ಲಿ ತುಂಬಿ ಅರಗಿನಿಂದ ಅವುಗಳ ಬಾಯಿಮುಚ್ಚಿ ಕೊಟ್ಟರು ನಮಗೆ. ಬೆಂಗಳೂರಿಗೆ ಹೋದಮೇಲೆ ಗಂಗಾಜಲ ತುಂಬಿದ ಗಿಂಡಿಗಳನ್ನು ಬ್ರಾಹ್ಮಣ ಮುತ್ತೈದೆಯರಿಗೆ ದಾನಮಾಡಿ ಅವರುಗಳಾಶೀರ್ವಾದ ಪಡೆಯದಿದ್ದರೆ ಪ್ರಯಾಗ ಯಾತ್ರೆ ಮಾಡಿದ್ದಕ್ಕೆ ಫಲವೇನು ? ಶಕುಂತಲಾಬಾಯಿ ಸುಮಾರು 20-24 ಗಿಂಡಿಗಳನ್ನು ಕೊಂಡರು. ಸಂಜೆ 5 ಗಂಟೆಗೆ ವಾರಣಾಸಿಗೆ ಒಂದು ರೈಲುಗಾಡಿ ಹೋಗುವುದಿತ್ತು. ಆ ಕಾರಣ 4 ಗಂಟೆಗೇ ಶ್ರೀನಿವಾಸಾಚಾರ್ಯರನ್ನು ಬಿಳ್ಕೊಂಡು ಟಾಂಗಾದಲ್ಲಿ ಕುಳಿತು ರೈಲ್ವೆ ಸ್ಟೇಷನ್ನಿಗೆ ಹೊರಟೆವು. ಮಾರ್ಗಮಧ್ಯದಲ್ಲಿ ನೆಹರೂ ಭವನ "ಆನಂದ ಭವನ"ವನ್ನು ನೋಡಲು ಮರೆಯಲಿಲ್ಲ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ರಾಷ್ಟ್ರೀಯ ಚಳವಳಿಯ ಜೀವದುಸಿರಾಗಿ ಭಾರತದ-ವಿಶ್ವಾಸದ ಮಹಾನ್ ಮಹಾನ್ ವ್ಯಕ್ತಿಗಳನ್ನು ಆಕರ್ಷಿಸಿದ ಆನಂದ ಭವನ ದೇಶಭಕ್ತರ ಪಾಲಿಗೆ ಮಹಾ ಪುಣ್ಯಕ್ಷೇತ್ರವಲ್ಲವೆ ? ಆನಂದ ಭವನವನ್ನು ಒಂದು ಪ್ರದಕ್ಷಿಣೆ ಹಾಕಿ ಟಾಂಗಾ ಹತ್ತಿದೆವು. ನನ್ನ ಗಡಿಯಾರವನ್ನು ನೋಡಿಕೊಂಡರೆ ಕಾಲುಗಂಟೆಯಿತ್ತು 5 ಗಂಟೆಗೆ. ಆನಂದ ಭವನದ ಸನಿಹದಲ್ಲೇ ರಾಮಾಯಣಕಾಲದ ಭಾರದ್ವಾಜಾಶ್ರಮವಿದ್ದರೂ, ಆ ಪವಿತ್ರಾಶ್ರಮದ ಸಂದರ್ಶನ ಲಭ್ಯವಾಗಲಿಲ್ಲ. ರೈಲ್ವೆ ಸ್ಟೇಷನ್ ತಲಪಿ ವಾರಣಾಸಿಯ ಗಾಡಿ ಹಿಡಿದು ಕೂತೆವು. ರಾತ್ರಿ ಎಂಟುಗಂಟೆಗೆ ವಾರಣಾಸಿಯನ್ನು ತಲಪಿದ್ದೆವು.

ವಾರಣಾಸಿಯ ವಿಶ್ವೇಶ್ವರಸ್ವಾಮಿಯ ಸನ್ನಿಧಿಯಲ್ಲಿ

ಕಾಶಿಯಲ್ಲಿ ಗೋಪಾಲಾಚಾರ್ ಬಹುಪ್ರತಿಷ್ಠಿತವ್ಯಕ್ತಿ. ಅವರು ಪಂಡವೃತ್ತಿಯನ್ನು ಕೈಗೊಂಡಿದ್ದಾರೆ. ರಾಜಕೀಯದಲ್ಲೂ ಇದ್ದಾರೆ. ಜನಸಂಘದ ಸದಸ್ಯರಾಗಿ ವರ್ಚಸ್ವಿ ಕಾರ್ಯಕರ್ತರಾಗಿದ್ದಾರೆ. ನಮ್ಮನ್ನು ತುಂಬ ಹಾರ್ದಿಕವಾಗಿ ಸ್ವಾಗತಿಸಿದರು. "ಪ್ರವಾಸ ದಿಂದ ದಣಿದುಬಂದಿದ್ದೀರಿ. ಸುಧಾರಿಸಿಕೊಳ್ಳಿ. ಬೆಳಗ್ಗೆ ಎದ್ದು ಮಾತಾಡೋಣ" ಇಷ್ಟು ಹೇಳಿ ನಮ್ಮನ್ನು ಬಿಡಾರದ ಕೋಣೆಯಲ್ಲಿ ಬಿಟ್ಟು ತಮ್ಮ ಕಾರ್ಯದ ಸಲುವಾಗಿ ನಡೆದು ಬಿಟ್ಟರು.

ಬೆಳಗಾಯಿತು. ಗೋಪಾಲಾಚಾರ್ಯರು ಭೇಟಿಯಾದರು. "ರಾಮ್‌ಜಿ ಭಯ್ಯ ನಿಮಗೆ ಈಹೊತ್ತು ಕಾಶಿ ದರ್ಶನ ಮಾಡಿಸುತ್ತಾನೆ. ನಾಳೆ ಕಾಶಿಯಲ್ಲಿ ಕರ್ಮ ಕಲಾಪ. ಮುಗಿಸಿಕೊಳ್ಳಿ. ಕಾಶಿಯಲ್ಲಿರುವ ಕನ್ನಡಿಗರು ಶಕುಂತಲಾಬಾಯಿಯ ಕಾವ್ಯವಾಚನ ವನ್ನು ಕೇಳಲು ಕುತೂಹಲದಿಂದಿದ್ದಾರೆ. ಆದರೆ ಭಾನುವಾರದವರೆಗೆ ಅವರುಗಳಿಗೆ ಬಿಡುವಿಲ್ಲ. ಏನು ಹೇಳುವಿರಿ?" ಎಂದರು. ನಮಗೆ ಭಾನುವಾರದವರೆಗೆ ಕಾಶಿಯಲ್ಲಿರಲು ಅವಕಾಶವಿರಲಿಲ್ಲ. "ಗಯಾಕ್ಕೆ ನಾಳೆ ಸಂಜೆ ಹೋಗಲೇಬೇಕಾಗಿದೆ. ಅಲ್ಲಿ ನಾಡದ್ದು ಮುಗಿಸಬೇಕಾದ ಶ್ರಾದ್ಧ ಕರ್ಮ ಮುಗಿಸಿ, ಮಾರನೆಯ ದಿನ ರಾತ್ರಿ ಕಲ್ಕತ್ತೆಗೆ ಹೋಗಿಯೇ ತೀರಬೇಕು." ಎಂದು ನನ್ನ ಗೊತ್ತಾಗಿದ್ದ ದಿನಚರಿ ಪಟ್ಟಿ ತೋರಿಸಿದೆ. ಕಾಶೀ ಕಾರ್ಯಕ್ರಮ ತಪ್ಪಿತು.

ರಾಮ್‌ಜಿ ಭಯ್ಯ ನಿಧಾನದ ಸಾಚಾ ಮನುಷ್ಯ. ಒಂದು ಟಾಂಗತಂದ. ನಮ್ಮನ್ನು ಕೂಡಿಸಿ ತಾನೂ ಏರಿದ. ನಮ್ಮ ಟಾಂಗ ಸಾರನಾಥಕ್ಕೆ ಓಡಿತು.

ಸಾರನಾಥ ಬುದ್ಧಭಗವಂತನ ಜೀವನದಲ್ಲಿ ಅತಿ ಮಹತ್ವದ ಸ್ಥಾನ ಪಡೆದಿದೆ. ಸಿದ್ಧಾರ್ಥನಾಗಿದ್ದವನು ಬುದ್ಧನಾದಮೇಲೆ ತನ್ನ ಮೊಟ್ಟಮೊದಲ ಧರ್ಮೋಪದೇಶವನ್ನು ಮಾಡಿದ್ದು ಇಲ್ಲೆ. ಸಾರನಾಥದಲ್ಲಿ ಅನೇಕ ಸ್ತೂಪಗಳು, ಬೌದ್ಧವಿಹಾರಗಳಿವೆ. ನಮ್ಮ ರಾಷ್ಟ್ರ ಲಾಂಛನವಾದ ಸಿಂಹ ಶೀರ್ಷ ಧರ್ಮಚಕ್ರವಿರುವ ಅಶೋಕಸ್ತಂಭವಿರುವುದೂ ಇಲ್ಲೆ. ಜಪಾನು, ಚೀನಪೇಶೀಯರು ಬೌದ್ಧಮಂದಿರಗಳನ್ನು ನಿರ್ಮಿಸಿದ್ದಾರೆ. ನಾವು ಇವೆಲ್ಲವನ್ನೂ ನೋಡಿದೆವು. ಬುದ್ಧ ಭಗವಂತನಿಗೆ ನಮನ ಮಾಡಿದೆವು. ಪ್ರಾಚೀನ ಬೌದ್ಧ ಅವಶೇಷಗಳನ್ನು ಒಳಗೊಂಡ ವಸ್ತು ಸಂಗ್ರಹಾಲಯವನ್ನು ಹೊಕ್ಕೆವು. ಸಾರನಾಥದ ಪ್ರಾಚೀನ ಅವಶೇಷಗಳನ್ನು ನೋಡಿ ವಿಸ್ಮಯಗೊಂಡೆವು. ನನ್ನ ಮನಸ್ಸನ್ನು ವಿಶೇಷ ವಾಗಿ ಆಕರ್ಷಿಸುದುದು ಪ್ರಾಚೀನ ಅವಶೇಷ ಸ್ತೂಪ. ಇಟ್ಟಿಗೆಯಿಂದ ನಿರ್ಮಿತವಾಗಿದೆ. ಈಗೀಗ ಶಿಥಿಲವಾಗುತ್ತಿದೆ. ಗುಮ್ಮಟಾಕಾರದಲ್ಲಿದೆ. ಸುತ್ತಲ ವಾತಾವರಣವೂ ಪ್ರಾಚೀನ ಅವಶೇಷಗಳಿಂದ ಕೂಡಿದೆ. ನಮ್ಮ ಪ್ರಾಚೀನ ಹಿರಿಯರ ಸಾಂಸ್ಕೃತಿಕ ಎತ್ತರದ ನಿಲುವನ್ನು ನಾವು ಅವರು ನಿರ್ಮಿಸಿದ ಸ್ಮಾರಕಗಳಿಂದ ಅಳೆಯಬಹುದು. ಅದರಲ್ಲೂ ಅಶೋಕ, ಶೋಕಾತೀತ ಅಶೋಕ. "ಯಾವ ಸ್ಥಳದಲ್ಲೆ ಆಗಲಿ, ಯಾವ ಘಳಿಗೆಯಲ್ಲೆ ಆಗಲಿ, ಊಟಮಾಡುತ್ತಿರಲಿ, ಅಂತಃಪುರದಲ್ಲಿರಲಿ, ಶಯ್ಯಾಗೃಹದಲ್ಲಿರಲಿ, ವಾಹನಾರೂಢ

ನಾಗಿರಲಿ, ಅರಮನೆಯ ಉದ್ಯಾನದಲ್ಲಿ ವಿಹರಿಸುತ್ತಿರಲಿ, ಆಳಿತವರ್ಗ ತನ್ನ ಜನದ ಕ್ಷೇಮ ಚಿಂತನೆ ಮಾಡುತ್ತಿರಬೇಕು, ಅವರ ಯೋಗಕ್ಷೇಮದ ವರದಿ ಒಪ್ಪಿಸುತ್ತಿರಬೇಕು" ಎಂದ ಮಹಾನುಭಾವ ಅಶೋಕನಿಗೆ ಮಣಿದೆ. ನಮ್ಮ ಜನದ ಯೋಗಕ್ಷೇಮವನ್ನು ಆಕಾಶಕ್ಕೆ ತೂರಿ ಸ್ವಾರ್ಥ, ಸ್ವಜನ, ಲೋಲುಪ್ತಿಯಲ್ಲಿ ಅದ್ದಿ ತೇಲುತ್ತಿರುವ ನಮ್ಮ ರಾಜ್ಯಭಾರ ದುರಂಧರರನ್ನು ನೆನೆದು "ನಮ್ಮ ಜನವನ್ನು ಈ ಪಿಡುಗು ಜನದ ಕ್ಷೈಯಿಂದ ಬಿಡಿಸುವುದಕ್ಕೆ ಇನ್ನೊಮ್ಮೆ ನೀನು ಅವತರಿಸಿ ಬಾ" ಎಂದು ಆರ್ತನಾಗಿ ಮನದಲ್ಲಿ ಚಿಂತಿಸಿದೆ.

ಬೆಳಗ್ಗೆ ಸಾರನಾಥ ಯಾತ್ರೆ ಮುಗಿಸಿದೆವು. ನನಗೂ ಶಕುಂತಲಾಬಾಯಿಗೂ ಮಹಾಬುದ್ಧ ಭಗವಾನನೇ ಆ ದಿನವೆಲ್ಲ ತಲೆಯಲ್ಲಿ ತುಂಬಿಕೊಂಡಿದ್ದ. ಶಕುಂತಲಾಬಾಯಿಗೆ ಗೋವಿಂದಪೈ ರಚಿಸಿದ್ದ "ವೈಶಾಖಿ" ಕಾವ್ಯ ಮನಸ್ಸಿನಲ್ಲಿ ಮೆಲುಕಾಡುತ್ತಿತ್ತು.

ಊಟ, ವಿಶ್ರಾಂತಿ, ಮತ್ತೆ ಕಾಶೀನಗರದ ನೋಟ ಪ್ರಾರಂಭಿಸಿದೆವು. ಮಧ್ಯಾಹ್ನ ನಾಲ್ಕುಗಂಟೆಗೆ ರಾಮ್‌ಜಿ ಭಯ್ಯ ಟಾಂಗಾ ತಂದ. ಮಹಾ ಶ್ರೀಮಂತ ಭಿಕ್ಷುಕನೆಂದು ಗಾಂಧೀಜಿಯಿಂದ ಬಿರುದು ಪಡೆದು, ಮಹಾಹಿಂದುವಾಗಿ ಮೆರೆದು, ದೇಶಭಕ್ತನಾಗಿ ಖ್ಯಾತಿಪಡೆದು ಭಾರತಕ್ಕೆ ಮಹಾ ಶಿಕ್ಷಣ ಕೊಡುಗೆಯಾಗಿ ಸ್ಥಾಪಿಸಿದ ಪಂಡಿತ ಮದನ ಮೋಹನ ಮಾಲವೀಯರ ಬನಾರಸ್ ಹಿಂದೂ ವಿಶ್ವವಿದ್ಯಾನಿಲಯ ನೋಡಲು ಟಾಂಗ ಹತ್ತಿದೆವು.

ಬನಾರಸ್ ಹಿಂದೂ ವಿಶ್ವವಿದ್ಯಾನಿಲಯ ಮದನಮೋಹನ ಮಾಲವೀಯರ ಮನೋಭೂಮಿಕೆಯಿಂದ ಜಿಗಿದೆದ್ದು ನಿಂತಿರುವ ಮಹಾದರ್ಶನದ ಭವ್ಯಶಿಕ್ಷಣ ಸಾಂಸ್ಕೃತಿಕ ಕೇಂದ್ರ. ಶಿಕ್ಷಣಾರ್ಥಿಗಳಿಗೆ ಪರಮಪವಿತ್ರ ಪುಣ್ಯ ಯಾತ್ರಾ ಮಹಾಕ್ಷೇತ್ರ. ಶ್ರೀ ಗಂಧದ ಕೊರಡು ತನ್ನನ್ನು ತಾನೆ ತೇದುಕೊಂಡು ಕೃಶವಾಗುವಂತೆ ಶಿಕ್ಷಣ ಪ್ರಿಯನಾಗಿರುವ ನನಗೆ ಬಹಳ ಹಿಡಿಸಿತು. ಬನಾರಸ್ ಹಿಂದೂ ವಿಶ್ವವಿದ್ಯಾನಿಲಯದ ಪ್ರದಕ್ಷಿಣೆ ಯಾಯಿತು. ಬಿರ್ಲಾ ಮಂದಿರವನ್ನು ಪ್ರವೇಶಿಸಿದೆವು. ಚೊಕ್ಕವಾಗಿ ಚೆನ್ನಾಗಿ ನಿರ್ಮಾಣವಾದ ಭವ್ಯ ದಿವ್ಯ ಮಂದಿರ. ಮಹಾ ಶ್ರೀಮಂತಿಕೆಯನ್ನೇ ಹಣದ ರೂಪದಲ್ಲಿ ಚೆಲ್ಲಿ ನಿರ್ಮಿಸಿರುವ ಕೀರ್ತಿ ಶಿಖರ ಬಿರ್ಲಾ ಮಂದಿರಗಳು ಉತ್ತರ ಭಾರತದ ನಾನಾ ಪ್ರಸಿದ್ಧ ಪಟ್ಟಣಗಳಲ್ಲಿ ಎದ್ದಿವೆ.

ನಮ್ಮ ಟಾಂಗಾ ಓಡಿತು "ಶ್ರೀ ರಾಮಚರಿತಮಾನಸ" ಮಹಾಕಾವ್ಯವನ್ನು ರಚಿಸಿ ಉತ್ತರ ಭಾರತೀಯರ ಮನ್ಮಂದಿರಗಳಲ್ಲಿ ಶಾಶ್ವತ ಸ್ಥಾನ ಗಳಿಸಿರುವ ಗೋಸ್ವಾಮಿ ತುಳಸೀದಾಸ ಸ್ಮಾರಕ ಮಂದಿರವನ್ನು ನೋಡಲು. ಪ್ರವೇಶ ಮಾಡುತ್ತಲೆ "ಶ್ರೀ ರಾಮ ಚರಿತ ಮಾನಸ" ರಚಿಸುತ್ತಿರುವ ಗೋಸ್ವಾಮಿ ತುಳಸೀದಾಸ ಮೂರ್ತಿ ನಮ್ಮ ಮನ ಸೆಳೆಯುತ್ತದೆ. ಮೂರ್ತಿಯ ದರ್ಶನ ಪಡೆದು ಒಳಹೊಕ್ಕರೆ ಸುತ್ತು ಗೋಡೆಗಳ ಮೇಲೆ ಇಡೀ ರಾಮಾಯಣವನ್ನು ಭವ್ಯ ಚಿತ್ರಕಲೆಯಲ್ಲಿ ಸೆರೆಹಿಡಿಯುವ ಮಾನವ ನಿಲುವಿನೆತ್ತರದ ಸುಂದರ ಪಟಗಳು ಕಣ್ಮನಗಳನ್ನು ಸೆಳೆಯುತ್ತವೆ. ಶ್ರೀರಾಮಸೀತಾಲಕ್ಷ್ಮಣ ಸಮೇತ ಆಂಜನೇಯನೊಡಗೂಡಿ, ಆಳೆತ್ತರ ಅಮೃತಶಿಲೆಯಲ್ಲಿ ರೂಪುಗೊಂಡಿರುವ

ಭವ್ಯ ಮೂರ್ತಿಗಳು ಯಾತ್ರಿಕರನ್ನು ಆಕರ್ಷಿಸುತ್ತವೆ. ಗೋಸ್ವಾಮಿ ತುಳಸೀದಾಸರನ್ನು ನೆನೆಯುತಿದ್ದ ಹಾಗೆ ಕುಮಾರವ್ಯಾಸನ ನೆನಪಾಯಿತು ಇಬ್ಬರಿಗೂ. ತುಳಿಸೀದಾಸರ ಜನ ಸ್ಥಳದಲ್ಲಿ ತುಳಿಸೀದಾಸರ ಕಾವ್ಯಭಕ್ತರು ತಮ್ಮ ಮಹಾಕವಿಗೆ ಎಂಥ ಸ್ಮಾರಕ ಎತ್ತಿದ್ದಾರೆ? ನಾವು ಕನ್ನಡಿಗರು ನಮ್ಮ ಮಹೋನ್ನತ ಮಹಾಕವಿಗೆ-ಕವಿಗಳಿಗೆ ಏನು ಸ್ಮಾರಕ ಎತ್ತಿದ್ದೇವೆ ? ನೆನೆಸಿಕೊಂಡಾಗ ನಮಗಿಬ್ಬರಿಗೂ ಮುಖ ಭಂಗವಾಯಿತು. ನಮ್ಮ ಮಹಾನ್ ಕವಿಗಳ ಜನ್ಮಸ್ಥಳಗಳು, ಅವರುಗಳು ಇದ್ದು ಮಹಾಕಾವ್ಯರಚಿಸಿದರೆಂದು ಹೇಳಿಕೊಳ್ಳುವ ಮನೆಗಳು ಹಾಳು ಹಾಳು. ಕೆಂಗಲ್ ಹನುಮಂತಯ್ಯನವರು ಮುಖ್ಯಮಂತ್ರಿಯಾಗದಿದ್ದರೆ, ಸಾಹಿತ್ಯ ಸಂಸ್ಕೃತಿ ಪ್ರಸಾರವನ್ನು ಕೈಗೊಂಡು "ಕರ್ಣಾಟಕ ಭಾರತ ಕಥಾಮಂಜರಿ"ಯನ್ನು ಎರಡು ರೂಪಾಯಿಗಳಿಗೆ ಕೊಡಬೆ ಹೋಗಿದ್ದರೆ, ಕುಮಾರ ವ್ಯಾಸ ಮನೆಮನೆಗಳಲ್ಲಿ ಉಳಿದುಕೊಳ್ಳುತ್ತಿದ್ದನೆ ? ಕರ್ಣಾಟಕದ ಮನೆಮಾತಾಗುತ್ತಿದ್ದನೆ ? ಎರಡು ರೂಪಾಯಿ (ಈಗ ಆರು ರೂಪಾಯಿ, ಆದರೂ ಅಗ್ಗ)ಗಳ ಕುಮಾರ ವ್ಯಾಸ ಭಾರತದ "ತೋರಣ ನಾಂದಿ" ಜ್ಞಾಪಕಕ್ಕೆ ಬಂತು.

> "ನಮ್ಮ ಕನ್ನಡನಾಡಿಗೆ ದೇವರು ಸಹ್ಯಾದ್ರಿಯನ್ನು ದಯಪಾಲಿಸಿದ್ದಾನೆ. ತುಂಗಾಕಾವೇರಿಯರನ್ನು ದಯಪಾಲಿಸಿದ್ದಾನೆ. ಪಶ್ಚಿಮ ಸಮುದ್ರದ ಸಂಗ ಸಾನ್ನಿಧ್ಯಗಳನ್ನು ಕೃಪೆಮಾಡಿದ್ದಾನೆ. ಜೊತೆಗೆ, ಅವೆಲ್ಲಕ್ಕೂ ಹೆಗಲೆಣೆಯಾಗಿ ನಿರಂತರ ನಮಗೆ ಒಡನಾಡಿಗಳಾಗಿರುವಂತೆ ಪಂಪನಾರಣಪ್ಪರನ್ನು ಅನುಗ್ರಹಿಸಿದ್ದಾನೆ. ಅವರ ಬೆಳೆಯರಿತು ಬಾಳು ಅರಳಲಿ. ಆ ವಿಶ್ವಕವಿಗಳಿಬ್ಬರನ್ನೂ ನಮ್ಮವರೆಂದು ಹೇಳಿಕೊಳ್ಳುವ ಹೆಮ್ಮೆಯ ನೆತ್ತಿ ಮುಗಿಲಿಗೆ ತಾಗುತ್ತಿರಲಿ."

ಕುಮಾರವ್ಯಾಸ 1423 ಕಿಂತ ಮುಂಚೆಯೇ ಪ್ರಸಿದ್ಧನಾಗಿರಬೇಕು. 1982ರ ಹೊತ್ತಿಗೆ 550 ವರ್ಷಗಳು ಸಂದಿವೆ ಜನ್ಮಧಾರಣೆಮಾಡಿ ಎಂದಾಯಿತಲ್ಲವೆ ? ಆತನಿಗೆ ಅರ್ಧಶತಮಾನೋತ್ಸವ ಜರಗಿತೆ ? ನನಗಂತೂ ತಿಳಿಯದು. ಆತನ ಜನ್ಮಸ್ಥಳವಿಲ್ಲಿ ಎಂದು ಕೋಳಿವಾಡದ ಜನ ತೋರಿಸುವ ನಾರಣಪ್ಪನ ವಾಸಗೃಹ ಏಕೆ ಇನ್ನೂ ಹರಕು ಮುರುಕಾಗಿ ಉಳಿದಿದೆ ? ನಾಡಜನಜಾಗೃತಿ ಎಲ್ಲಿ ಹೋಗಿದೆ ? ಕಾರ್ಲೈ, ಮಹಾ ಪ್ರಾಜ್ಞ ಸಾಹಿತಿ ತನ್ನ "ಹಿರೋಸ್ ಅಂಡ್ ಹಿರೋ ವರ್ಷಿಪ್"ಎಂಬ ಉದ್ಗ್ರಂಥದಲ್ಲಿ ಒಂದು ಸಂದರ್ಭದಲ್ಲಿ ಉದ್ಗಾರ ತೆಗೆದ "ನಮ್ಮನ್ನು ಪ್ರಶ್ನಿಸಿದರೆ 'ನಿಮಗೆ ಷೇಕ್ಸ್‌ಪಿಯರು ಬೇಕೇ ಭಾರತಬೇಕೇ'ಎಂದು. ಅದಕ್ಕೆ ನಾನು ಹೀಗೆ ಉತ್ತರಿಸುತ್ತೇನೆ, ನಾವು ಭಾರತವನ್ನು ಬಿಟ್ಟುಕೊಟ್ಟೇವು. ಷೇಕ್ಸ್‌ಪಿಯರನ್ನು ಉಳಿಸಿ ಕೊಳ್ಳುತ್ತೇವೆ." ಈ ಸ್ವಾಭಿಮಾನ ನಮಗೆ ಬೇಡವೆ ? ಕೋಳಿವಾಡದ ನಾರಣಪ್ಪ ಜನ್ಮತಾಳಿ "ಕರ್ಣಾಟಕ ಭಾರತ ಕಥಾ ಮಂಜರಿ" ಎಂಬ ಮಹಾ ವಿಶ್ವಕಾವ್ಯ ರಚಿಸಿ ನಮ್ಮ ಜನ ಬದುಕ ಬೇಕೆಂದು ನಮಗೆ ಉಳಿಸಿ ಹೋದ. ನಾರಣಪ್ಪನ ನೆನಪಿನ ಹರಕು ಮುರುಕು ಮನೆ ಎಂದು ಜೀರ್ಣೋದ್ಧಾರವಾದೀತು ? ಸಹಸ್ರಸಹಸ್ರ ಸಂಖ್ಯೆಯಲ್ಲಿ ಸಾಹಿತ್ಯ ಭಕ್ತರನ್ನು ಆಕರ್ಷಿಸುವ ಪರಮ ಪವಿತ್ರ ಕ್ಷೇತ್ರವೆಂದಾದೀತು ? ಒಂದು ಸಂತೋಷವೆಂದರೆ, ಗದಗಿನ ಭಾರತಾವತಾರ

ವಾದಾಗಲಿಂದ ಈವರೆಗೆ ಉಳಿಸಿಕೊಂಡು ಕುಮಾರವ್ಯಾಸನನ್ನು ಮೆರೆಸುತ್ತಿರುವವರು ಗಮಕಿಗಳು. ಅವರುಗಳನ್ನು "ನೀವು ಧನ್ಯರೆಂದು" ಸ್ಮರಿಸಿ ನಾವು ಧನ್ಯರಾಗೋಣ.

ತುಳಸೀದಾಸ ಸ್ಮಾರಕ ಮಂದಿರವನ್ನು ಹಿಂದಿಕ್ಕಿ ನಮ್ಮ ಟಾಂಗ ಕಬೀರದಾಸನಿದ್ದ ತಾಣಕ್ಕೆ ಓಡಿತು. ಆ ಸ್ಥಳದ ದರ್ಶನವಾಯಿತು. ಗೋಪಾಲಾಚಾರ್ಯರ ನಿವಾಸ ಸೇರಿದಾಗ ರಾತ್ರಿ 9 ಗಂಟೆ. ಭೋಜನ ಮುಗಿಸಿ ಹಾಸಿಗೆ ಬಿಡಿಸಿ, ತಲೆಗೆ ಕೈಕೊಟ್ಟು, ಕಾಲು ಚಾಚಿ ಹಾಯಾಗಿ ಮಲಗಿ ನಿರಾತಂಕವಾಗಿ ನಿದ್ದೆ ಹೋದೆವು.

ವಿ. ಸೀ. ಅವರು ನಾವು ದೆಹಲಿ ಬಿಟ್ಟ ಮಾರನೇ ದಿವಸ ಹರಿದ್ವಾರಕ್ಕೆ ತೆರಳಿದ್ದರು. ಹೋಗುವಾಗ ಮುಂದಿನ ವಾರ ಕಾಶಿಯಲ್ಲಿ ಇರುವುದಾಗಿ ತಿಳಿಸಿದ್ದರು. ಕಾಶಿಯಲ್ಲಿ ಅವರ ಇನ್ನೊಬ್ಬ ತಂಗಿ, ಭಾವ, ಅಳಿಯ ಮಗಳು ಇದ್ದಾರೆ. ವಿ. ಸೀ. ತಮ್ಮ ಎರಡನೆಯ ಮಗಳು ಸೌ|| ಸುನಂದಳನ್ನು ವಿಶ್ವನಾಥರಿಗೆ ಕೊಟ್ಟು ಲಗ್ನ ಮಾಡಿದ್ದಾರೆ. ಗೋಪಾಲಾಚಾರ್ಯರಿಗೆ ನಾನು ವಿ. ಸೀ. ಅವರನ್ನು ಕಾಣಬೇಕೆಂದು ತಿಳಿಸಿದ್ದೆ.

ಬೆಳಗಾಗುತ್ತಲೆ ಗೋಪಾಲಾಚಾರ್ಯರು ರಾಮ್‌ಜಿ ಭಯ್ಯನನ್ನು ಗೊತ್ತು ಮಾಡಿ ಕೃಷ್ಣ ಶಾಸ್ತ್ರಿ ಅವರ ಮನೆಗೆ ಕಳಿಸಿಕೊಟ್ಟರು. ವಿ. ಸೀ ಅವರ ತಂಗಿ, ಭಾವ, ಅಳಿಯ ನಮ್ಮನ್ನೆಲ್ಲ ತಮ್ಮ ಸ್ವಕೀಯರಂತೆಯೇ ಆದರಿಸಿ, ಬಾಯಿ ತುಂಬ ಮಾತಾಡಿ ಕಾಫಿ ಕುಡಿಸಿ ಕಳಿಸಿಕೊಟ್ಟರು.

ಆವೊತ್ತಿನ ಕಾರ್ಯಕ್ರಮ ಬಹಳ ಕ್ಲುಪ್ತವಾಗಿತ್ತು. ಬೆಳಗಿನಲ್ಲಿ ಗಂಗಾ ಪೂಜೆ, ವಿಶ್ವೇಶ್ವರ ದರ್ಶನ, ಮಧ್ಯಾಹ್ನ ಗೋಪಾಲಾಚಾರ್ಯರ ಅಧ್ವರ್ಯುತೆಯಲ್ಲಿ ಪಿತೃದೇವತೆ ತರ್ಪಣ ಪಿಂಡ ಪ್ರದಾನ. ಊಟ, ವಿಶ್ರಾಂತಿ ಸಂಜೆ 5 ಘಂಟೆಗೆ ಗಯಾ ಪುಣ್ಯಕ್ಷೇತ್ರಕ್ಕೆ ರೈಲಿನಲ್ಲಿ ಪ್ರಯಾಣ.

ರಾಮ್‌ಜಿ ಭಯ್ಯ ಕಾಲಕ್ಕೆಸರಿಯಾಗಿ ಬಂದ. ಗೋಪಾಲಾಚಾರ್ಯರ ಉತ್ತರಾದಿ ಮಠದ ಮನೆಯ ಸನಿಹದಲ್ಲಿದೆ ಹನುಮಾನ್ ಘಾಟ್. ಅಲ್ಲಿ ದೋಣಿಯೇರಿ ಗಂಗಾ ನದಿಯ ಮೇಲೆ ನಮ್ಮ ಗಂಗಾ ಪೂಜೆಯ ಯಾತ್ರೆ ಪ್ರಾರಂಭವಾಯಿತು.

ರಾಮ್‌ಜಿ ಭಯ್ಯ ಗಂಗಾ ಯಾತ್ರೆಯ ಮಾರ್ಗದಲ್ಲಿ ಹಿಂದೀ ಭಾಷೆಯಲ್ಲಿ ನಮಗೆ ವಿವರಿಸಬೇಕಾದ ವಿಷಯಗಳನ್ನು ವಿವರಿಸುತ್ತಿದ್ದ. ತೋರಿಸಬೇಕಾದ ಸ್ಥಳಗಳನ್ನು ತೋರಿಸುತ್ತಿದ್ದ. ನನ್ನ ದುಭಾಷಿ ಸೌಭಾಗ್ಯವತಿ ತಾನು ಗ್ರಹಿಸುತ್ತಿದ್ದ ವಿಷಯಗಳನ್ನು ಸಂಗ್ರಹಿಸಿ ಅರಿಕೆ ಮಾಡುತ್ತಿದ್ದರು.

ಗಂಗಾ ನದಿಯ ದಡದ ಮೇಲೆ ಪ್ರಾಚೀನ ಅರ್ವಾಚೀನ ಉಪ್ಪರಿಗೆಯ ಶ್ರೀಮಂತ ಭವನಗಳು ಸಾಲುಗಟ್ಟಿ ಮುಗಿಲು ಮುಟ್ಟಿವೆ. ಗಂಗಾನದಿಯಲ್ಲಿ ದೋಣಿಯಲ್ಲಿ ವಿಹರಿಸುತ್ತ ಕಣ್ಣಿನ ದಣಿಯುವವರೆಗೂ ನಾವು ಆ ಸುಂದರ ನೋಟವನ್ನು ನೋಡುತ್ತಲೇ ಇದ್ದೆವು. ಕಾಶೀರಾಜನ ಅರಮನೆ, ಮೈಸೂರು ಒಡೆಯರ ಅರಮನೆಗಳನ್ನು ಕುತೂಹಲದಿಂದ ಗಮನಿಸಿದೆವು. ರಾಮ್‌ಜಿ ಭಯ್ಯ "ಇದೋ ಹರಿಶ್ಚಂದ್ರ ಘಾಟ್" ಎಂದ. ನಮ್ಮ ಕಿವಿ

ಗಳು ಚುರುಕಾದವು. ಅಷ್ಟರಲ್ಲಿ ನಮ್ಮ ದೋಣಿ ಹರಿಶ್ಚಂದ್ರ ಘಾಟನ್ನು ಹಾದು ಹೋಗುವುದರಲ್ಲಿತ್ತು. ದಡದ ಮಳಲ ಹಾಸಿಗೆಯ ಮೇಲೆ ಒಂದು ಚಿತೆ ಎದ್ದಿತ್ತು. ಚಿತೆಯ ಹಾಸಗೆಯ ಮೇಲೆ ಒಂದು ಶವ ಶಯನಿಸಿತ್ತು. ಪಕ್ಕದಲ್ಲೇ ಮಳಲ ಹಾಸಗೆಯ ಮೇಲೆ ಇನ್ನೊಂದು ಶವ ಸಿದ್ಧವಾಗಿತ್ತು ಚಿತೆಯ ವೇದಿಕೆಯೇರಲು. ಶಕುಂತಲಾಬಾಯಿಯ ಒಳಗಣ್ಣುಗಳು ರಾಘವಾಂಕನ ಹರಿಶ್ಚಂದ್ರ ಕಾವ್ಯದಲ್ಲಿನ ಹರಿಶ್ಚಂದ್ರ ಚಂದ್ರಮತಿಯರ ಸತ್ವ ಪರೀಕ್ಷಾ ಘಟ್ಟವನ್ನು ನೆನೆಯುತ್ತಿದ್ದವು.

ಬಲಿದ ಪದ್ಮಾಸನಂ ಮುಗಿದಕ್ಷಿ ಮುಚ್ಚಿದಂ
ಜಲಿವೆರಸಿ ಗುರುವಶಿಷ್ಠಂಗೆರಗಿ ಶಿವನ ನಿ
ರ್ಮಲರೂಪ ನೆನೆದು ಮೇಲಂ ತಿರುಗಿ ನೋಡಿ ಭೂ
ಚಂದ್ರಾರ್ಕತಾರಂಬರಂ !

ಕಲಿ ಹರಿಶ್ಚಂದ್ರರಾಯಂ ಸತ್ಯವೆರಸಿ ಬಾ
ಳಲಿ ಮಗಂ ಮುಕ್ತನಾಗಲಿ ಮಂತ್ರಿ ನೆನೆದುದಾ
ಗಲಿ ರಾಜ್ಯದೊಡೆಯ ವಿಶ್ವಾಮಿತ್ರ ನಿತ್ಯನಾ
ಗಲಿ ಹರಕೆ ಹೊಡೆಯೆಂದಳು ॥

ಹರಕೆಯಂ ಕೇಳಿ ಹವ್ವನೆ ಹಾಱಿ ಬೆಱಗಾಗಿ
ಮರವಟ್ಟು ನಿಂದು ಭಾಪುರೆ ವಿಧಿಯ ಮುಳಿಸೆ ಹೋ
ದಿರುಳೆನ್ನ ಸುತನ ದುರ್ಮರಣಮಂ ತೋಱಿ ಕೈ
ಯೊಡನೆ ಮತ್ತೀಗಳೆನ್ನ !

ವರಸತಿಯ ತಲೆಯನಾನೆನ್ನ ಕೈಯಾರೆ ಪಿಡಿ
ದರಿವಂತೆ ಮಾಡಿದೆಯಿದಕ್ಕೆ ನಾನಿನಿತು ಹೇ
ವರಿಸುವವನಲ್ಲ ಪತಿಯಾಜ್ಞೆಯುಳಿದೊಡೆ ಸಾಕೆ
ನುತ್ತ ಕೊಲಲನುವಾದನು ॥

ನಮ್ಮ ದೋಣಿ ಹರಿಶ್ಚಂದ್ರ ಘಾಟನ್ನು ದಾಟಿ ಮುಂದುವರಿಯಿತು. ಒಂದೆರಡು ಮೈಲಿ ಹಾಯ್ದ ಮೇಲೆ ಪಂಚಗಂಗ ಮಂಟಪವಿರುವ ಸೋಪಾನ ಘಟ್ಟ ಪ್ರತ್ಯಕ್ಷವಾಯಿತು. ನಮ್ಮ ದೋಣಿ ಸೋಪಾನದ ಮೆಟ್ಟಿಲುಗಳನ್ನು ಆಶ್ರಯಿಸಿ ನಿಂತಿತ್ತು. ನಾವು ದೋಣಿಯಿಂದ ಇಳಿದು ಸೋಪಾನ ಘಟ್ಟದಲ್ಲಿ ಗಂಗೆಯ ಜಲದಲ್ಲಿ ಮಿಂದು ಶುದ್ಧ ವಸ್ತ್ರ ಉಟ್ಟು ಪಂಚಗಂಗ ಮಂಟಪವನ್ನು ಸೇರಿದೆವು. ಶಕುಂತಲಾಬಾಯಿ ಅರಿಶಿನ ಕುಂಕುಮ ಪುಷ್ಪಗಳಿಂದ ಪೂಜೆ ಮಾಡಿ ಹಣ್ಣು ಅರ್ಪಿಸಿ ಕಾಯಿ ಒಡೆದು ಕರ್ಪೂರದಾರತಿ ಬೆಳಗಿ ಗಂಗಾಮಾಯಿಗೆ ಭಕ್ತಿ ನೈವೇದ್ಯ ಅರ್ಪಿಸಿ ಧನ್ಯರಾದರು.

ನಮ್ಮ ದೋಣಿ ಪಂಚಗಂಗಾ ಘಟ್ಟದಿಂದ ಹನುಮಾನ್ ಘಾಟಿಗೆ ಹಿಂದಿರುಗಿದಾಗ 12 ಘಂಟೆ. ಗಗನಮಣಿ ಬಾನಂಗಳದಲ್ಲಿ ನೆತ್ತಿಗೇರಿದ್ದ. ಸುಡು ಸುಡು ಸುಡುತ್ತಿರಲಿಲ್ಲ. ಮೋಡಗಳೊಡನೆ ಚೆಲ್ಲಾಟವಾಡುತ್ತಿದ್ದ.

ನಾನು ಹನುಮಾನ್ ಘಾಟಿನಲ್ಲಿ ಇನ್ನೊಮ್ಮೆ ತಲೆಮುಳುಗಿ ಸ್ನಾನ ಮಾಡಿದೆ. ಗೋಪಾಲಾಚಾರ್ಯರು ಅಧ್ವರ್ಯುವಾಗಿ ಮಂತ್ರಹೇಳಿ ತರ್ಪಣ ಬಿಡಿಸಿ, ಪಿಂಡ ಪ್ರದಾನ

ಮಾಡಿಸಿ, ನನ್ನ ಗೋತ್ರದ, ಪರಗೋತ್ರದ ಬಂಧುಗಳು, ಸಮಸ್ತರಿಗೂ ನನ್ನಿಂದ ತರ್ಪಣಕೊಡಿಸಿ, ಪಿಂಡವಿರಿಸಿ ಸ್ವರ್ಗಕಾಣಿಸಿದರು. ಗೋಪಾಲಾಚಾರ್ಯರ ಗೃಹಿಣಿ ಪಾಯಸದ ಅಡಿಗೆ ಮಾಡಿದ್ದರು. ನಮಗೆಲ್ಲ ಚೊಕ್ಕಭೋಜನವಾಯಿತು. ನಾವು ಇಲ್ಲಿ ಕಂಡ ಹೆಚ್ಚಳವೆಂದರೆ ಗೋಪಾಲಾಚಾರ್ಯರ ಸಹಧರ್ಮಿಣಿಯಲ್ಲಿಯ ಸರಳತನ. ಆಕೆ ಹಿಂದೀ ಭಾಷಾ ಪ್ರವೀಣೆ. ಎಂ. ಎ. ಪದವೀಧರೆ, ಬೆನಾರಸ್ ಹಿಂದೂ ವಿಶ್ವವಿದ್ಯಾನಿಲಯದಲ್ಲಿ ಹಿಂದೀ ಭಾಷೆ ಕಲಿಸುವ ಅಧ್ಯಾಪಿಕೆ. ಇಷ್ಟಾದರೂ ಆಕೆ ಮುಂದುಗಚ್ಚೆ ಕಟ್ಟಿ, ಟೊಂಕಕ್ಕೆ ಸೆರಗು ಸಿಕ್ಕಿಸಿ, ನಗುಮೊಗದಿಂದ ಅತಿಥಿಗಳಿಗೆ ಮಾಡುತ್ತಿದ್ದ ಶಿಷ್ಟೋಪಚಾರ.

ಕಾಶಿಯ ಕನ್ನಡ ಮಹಾ ಜನಕ್ಕೆ ಗಮಕ ಕಲಾ ಪರಿಚಾರಿಕೆ ತಪ್ಪಿದರೂ ಗೋಪಾಲಾಚಾರ್ಯರ ನಿವಾಸ ಉತ್ತರಾದಿಮಠದಲ್ಲಿ ಮಧ್ಯಾಹ್ನ ಊಟವಾದ ಎರಡು ಗಂಟೆಗಳ ಮೇಲೆ ಮುಖ್ಯಪ್ರಾಣದೇವರ ಮುಂದೆ ಶಕುಂತಲಾಬಾಯಿ ಕುಮಾರವ್ಯಾಸ ಭಾರತ ವಾಚನ ಮಾಡಿದರು. ಗೋಪಾಲಾಚಾರ್ಯರಲ್ಲಿಗೆ ದಕ್ಷಿಣ ಭಾರತದ ನಾನಾ ಕಡೆಗಳಿಂದ ಅತಿಥಿಗಳಾಗಿ ಬಂದಿದ್ದ ಕನ್ನಡ ಜನ ಭಾರತ ವಾಚನ ಕೇಳಿ ಆನಂದಿಸಿದರು. ಗಮಕ ವಾಚನ ವಾರಣಾಸಿಯಲ್ಲೂ ಆದಹಾಗಾಯಿತಲ್ಲವೆ !

ರಾಮ್‌ಜಿ ಭಯ್ಯ ಮಧ್ಯಾಹ್ನ 4-30 ಗಂಟೆಗೆ ಟಾಂಗ ತಂದು ನಿಲ್ಲಿಸಿದ. ಗೋಪಾಲಾಚಾರ್ ಗಯಾದಲ್ಲಿದ್ದ ನಾರಾಯಣಾಚಾರ್ ಬಂಧುಗಳಿಗೆ ಒಂದು ಪರಿಚಯ ಪತ್ರ ಕೊಟ್ಟರು. ನಾವು ಗೋಪಾಲಾಚಾರ್ಯರಿಗೆ ಕಾಣಿಕೆ ಅರ್ಪಿಸಿದೆವು. ಅದನ್ನು ನೋಡಿದವರೇ "ಬಹಳ ಹೆಚ್ಚು ಬಹಳ ಹೆಚ್ಚು. ಇಷ್ಟು ಬೇಡ" ಎಂದರು. ತಮಗೆ ಸರಿಯೆಂದು ತೋರಿದಷ್ಟು ಇಟ್ಟುಕೊಂಡು ಉಳಿದ ಹಣವನ್ನು ಹಿಂದಿರುಗಿ ತೆಗೆದುಕೊಳ್ಳಬೇಕೆಂದು ಒತ್ತಾಯಿಸಿದರು. ನಾನು ನಗುತ್ತ "ನಮ್ಮ ಸಮಸ್ತ ಪಿತೃಗಳು ನಿಮ್ಮ ದಯದಿಂದ ಪರವಾನಿಗೆ ಪಡೆದು ಸ್ವರ್ಗಕ್ಕೇರಿದ್ದಾರೆ. ಇಷ್ಟು ವರ್ಷಗಳು ಎಲ್ಲಿದ್ದರೋ ತಿಳಿಯದು. ಅವರೆಲ್ಲರ ಭಾಗಗಳಿಗೆ ನನ್ನ ಕಾಣಿಕೆ ಸಮನಾಗಿ ತೃಪ್ತಿಕರವಾಗಿ ಹಂಚಿಕೆಯಾಗಬೇಡವೇ?"ಎಂದು ಹಾಸ್ಯದಚಟಾಕಿ ಹಾರಿಸಿದೆ. ಗೋಪಾಲಾಚಾರ್ ಮುಸಿಮುಸಿ ನಕ್ಕು "ನೀವು ಸಾಹಿತಿಗಳು" ಎಂದು ಹಣ ತೆಗೆದುಕೊಂಡರು. ನನಗೆ ಗೋಪಾಲಾಚಾರ್ ಹಣ ಸುಲಿಯುವ ಪಂಡರಲ್ಲ, ಸುಸಂಸ್ಕೃತಜೀವಿ ಎಂಬ ಅಭಿಪ್ರಾಯ ಖಚಿತವಾಯಿತು.

ರಾಮ್‌ಜಿ ಭಯ್ಯ ನಮ್ಮನ್ನು ಕಲ್ಕತ್ತಕ್ಕೆ ಹೋಗುತ್ತಿದ್ದ ರೈಲುಗಾಡಿ ಹತ್ತಿಸಿ ಗಯಾದಲ್ಲಿ ಇಳಿಯುವುದಕ್ಕೆ ಬೇಕಾದ ಸೂಚನೆಗಳನ್ನು ಕೊಟ್ಟು ನಾವು ಕೊಟ್ಟ ಸಂತೋಷದ ಅಲ್ಪ ಕಾಣಿಕೆ ಸ್ವೀಕರಿಸಿ ಹೋದ. ನಮ್ಮ ಗಾಡಿ ಕಾಶಿ ಬಿಟ್ಟು ಗಯಾದ ಕಡೆ ಓಡಿತು

ಗಯೆಯಲ್ಲಿ ನಾವು "ಹರಹರ"

ಗಯೆ ಬಿಹಾರ್ ರಾಜ್ಯದಲ್ಲಿರುವ ಪ್ರಸಿದ್ಧ ಯಾತ್ರಾಸ್ಥಳ. ಭಾರತವರ್ಷದ ಸಮಸ್ತ ಹಿಂದೂ ಧರ್ಮಿಗಳು ಗಯೆಗೆ ಬಂದು ತಮ್ಮ ಸಮಸ್ತ ಪಿತೃಗಳಿಗೂ ಶ್ರಾದ್ಧ ಕರ್ಮಮಾಡಿ ಪಿಂಡವಿಟ್ಟು ತಮ್ಮ ಪಿತೃಗಳೆಲ್ಲ ಸ್ವರ್ಗಸುಖವನ್ನು ಶಾಶ್ವತವಾಗಿ ಅನು

ಭವಿಸುವ ಏರ್ಪಾಡುಮಾಡಿ, ತಾವು ಕೃತಾರ್ಥರಾಜೆವೆಂದು ನಂಬಿ ಸಂತೋಷಚಿತ್ತರಾಗು ತ್ತಾರೆ. ನನ್ನ ಚಿಕ್ಕಮ್ಮ ಅಂಬೂಬಾಯಿ ಸತ್ತು ಕೇವಲ ಆರು ತಿಂಗಳು ಕಳೆದಿತ್ತು. ಅವರಿಗೆ ಪಿಂಡೋದಕ ಕಾಣಿಸುವುದು, ಜೊತೆಯಲ್ಲಿ ನನ್ನ ಸಮಸ್ತ ಬಂಧುಗಳಿಗೂ ಸ್ವರ್ಗದ ಗತಿ ಕಾಣಿಸುವುದು, ಇವೆಲ್ಲಕ್ಕೂ ಹೆಚ್ಚಾಗಿ ಸಿದ್ಧಾರ್ಥ ಯಾವ ಮಹಾನ್ ವೃಕ್ಷದ ಕೆಳಗೆ ಕುಳಿತು ಧ್ಯಾನಮಗ್ನನಾಗಿ ಜ್ಞಾನೋದಯವನ್ನು ಪಡೆದು ಬುದ್ಧ ನಾದನೋ ಆ ಮಹಾಬೋಧಿ ವೃಕ್ಷವನ್ನು ಸಂದರ್ಶಿಸುವುದು ನನ್ನ ಮುಖ್ಯೋದ್ದೇಶ ವಾಗಿತ್ತು. ಗಯೆ, ವಿಷ್ಣುಗಯೆ–ಬುದ್ಧಗಯೆಗಳೆಂದು 2 ಭಾಗಗಳಾಗಿವೆ. ವಿಷ್ಣುಗಯೆ ಯಿಂದ ಬುದ್ಧ ಗಯೆಗೆ ಏಳು ಮೈಲಿಗಳ ಅಂತರ.

ನಮ್ಮ ಗಾಡಿ ಗಯೆಯ ರೈಲ್ವೆ ಸ್ಟೇಷನನ್ನು ತಲಪಿದಾಗ 8 ಗಂಟೆ ರಾತ್ರಿ. ರೈಲು ನಿಂತಿತೋ ಇಲ್ಲವೋ ಪ್ರಯಾಣಿಕರು ನಮ್ಮನ್ನು ಇಳಿಯುವುದಕ್ಕೆ ಬಿಡದೆ ಬಿರುಗಾಳಿಯಂತೆ ಒಳನುಗ್ಗತೊಡಗಿದರು. ಶಕುಂತಲಾಬಾಯಿ ಮುಂದಿನವ ರಿಂದ ನುಗ್ಗಿಸಿಕೊಂಡು ಹಿಂದಿನವರಿಂದ ತಳ್ಳಿಸಿಕೊಂಡು ನೂಕುನುಗ್ಗಲಿನಲ್ಲಿ ನುಗ್ಗಿ ಕೊಂಡು ಕೆಳಗೆಇಳಿಯಬೇಕಾದರೆ ಸಾಕುಸಾಕಾಯಿತು. ನಾನು ಕಿಟಕಿಯಿಂದ ಮರದಿಂದ ದುಪುದುಪು ಹಣ್ಣು ಉದುರಿಸುವಂತೆ ಪ್ಲಾಟಫಾರಮ್ಮಿನ ಮೇಲೆ ಸಾಮಾನುಗಳನ್ನು ಎಸೆದೆ. ನೂಕುನುಗ್ಗಲಿನಿಂದ ಬಚಾವಾಗಿ ಇಳಿಯಬೇಕು. ನನ್ನ ರೈಲು ಗಾಡಿ ಕದಲಿತು. ಅಲ್ಲ ಅಲ್ಲ, ಹಾಗೆ ನನಗೆ ಭ್ರಮೆಯಾಯಿತು. ಏಕೆಂದರೆ, ನಮ್ಮಗಾಡಿಯ ಪ್ಲಾಟ್ ಫಾರಂ ಆಕಡೆ ನಿಂತಿದ್ದ ರೈಲುಗಾಡಿ ಆಗತಾನೆ ರೈಲ್ವೆ ಸ್ಟೇಷನ್ ಬಿಟ್ಟು ಹೊರಟಿತ್ತು; ನನಗೆ ನನ್ನಗಾಡಿಯೇ ಚಲಿಸಿತೆಂಬ ಭ್ರಮೆ ಹುಟ್ಟಿಸಿತು. ನನ್ನ ಪಾದ ನೆಲ ಊರಲಿಲ್ಲ ದೇಹ ಪೂರ್ತಿ ರೈಲು ಬೋಗಿಯಲ್ಲೂ ಇರಲಿಲ್ಲ. ಭೂಮಿಯನ್ನೂ ಸೋಕದೆ ಆಕಾಶಕ್ಕೂ ಮುಟ್ಟದೆ ಮಧ್ಯೆ ಜೋತಾಡಿದ ತ್ರಿಶಂಕುವಿನಂತೆ ನನ್ನ ಪಾಡಾಯಿತು. ಶಿಕ್ಷಕರಾಷ್ಟ್ರ ಪ್ರಶಸ್ತಿಯನ್ನು ಪಡೆದುಕೊಳ್ಳುವ ಸಲುವಾಗಿಯೇ ಉದ್ದನೆಯ ನೆಹರೂ ಅಂಗಿಯನ್ನು ಹೊಲಿಸಿದ್ದೆ ಪವಿತ್ರ ಖಾದಿಉಣ್ಣೆಯಲ್ಲಿ. ಅದರ ಹಿಂಭಾಗದ ಕೊನೆ ಗಾಡಿಯೊಳಗೆ ಸಿಕ್ಕಿ ಕೊಂಡಿತ್ತು. "ಆಯಿತು. ಪ್ಲಾಟ್‌ಫಾರಂ ಮೇಲೆ ದಂಡೆಯೊತ್ತುತ್ತೇನೆ ಮುಖ ಮೂಗು ಹಣೆಯೊಡೆದು ಕೊಂಡು ರಕ್ತದ ಮಡುವಿನಲ್ಲಿ" ಎಂದು ತೀರ್ಮಾನಿಸಿದೆ. ಆದರೆ ಗಾಡಿ ಯಲ್ಲಿದ್ದ ಪುಣ್ಯಾತ್ಮನೊಬ್ಬ ನನ್ನನ್ನು ಪಿರ್ರಿ ಹಿಡಿದು ಹೊರದೂಡಿದ. ಪ್ಲಾಟ್‌ಫಾರಂ ನಲ್ಲಿ ನಿಂತಿದ್ದವನೊಬ್ಬ ಹಿಡಿದುಕೊಂಡ. ನನ್ನ ಅವಸ್ಥೆಯನ್ನು ಕಂಡು ನೋಡಿ ಜನ ನಕ್ಕರು. ಶಕುಂತಲಾಬಾಯಿ ನನ್ನ ಅವಸ್ಥೆಯನ್ನು ಕಂಡು ಹೌಹಾರಿದ್ದರು. ನಾನು ಚೇತರಿಸಿಕೊಂಡು ನೋಡಿದರೆ ನನ್ನ ಹಾಳು ರೈಲುಗಾಡಿ ಭೂತಾಕಾರವಾಗಿ ಗರಹೊಡೆದ ಹಾಗೆ ಇನ್ನೂ ನಿಂತೆಯಿತ್ತು ಪ್ಲಾಟ್‌ಫಾರಂನಲ್ಲಿ.

ರೈಲುಗಾಡಿಯಿಂದ ಇಳಿದು ಚೇತರಿಸಿಕೊಳ್ಳುವುದಕ್ಕಿಲ್ಲ ಗಯಾಪಾಳರೆಂದು ಸುಪ್ರಸಿದ್ಧರಾದ ಕುಪ್ರಸಿದ್ಧ ಪಂಡರ ಒಂದು ದಂಡು ನಮ್ಮನ್ನು ಮುತ್ತಿತ್ತು. ಉತ್ತರಾದಿ ಮಠ ವಿಷ್ಣುಪಾದ ರೋಡ್, ನಾರಾಯಣಾಚಾರ್, ಎಂದು ವಿಳಾಸ ತೋರಿಸಿದೆವು.

"ಹೌದು. ಹೌದು. ವಿಷ್ಣುಪಾದ ರೋಡ್, ನಾರಾಯಣಾಚಾರ್, ಉತ್ತರಾದಿಮಠ. ನಾನು ಅವರ ಕಡೆಯವನು" ಎಂದು ಹತ್ತಾರು ಕೈಗಳು ಒಂದೇ ವಿಳಾಸದ 'ಡೂಪ್ಲಿಕೇಟ್' ನಮ್ಮ ಮುಖದತ್ತ ತಿವಿದವು. ನಮ್ಮ ಜೀವ ಕಕ್ಕಾಬಿಕ್ಕಿಯಾಯಿತು. ಅಷ್ಟರಲ್ಲಿ ಒಬ್ಬ ಸಾಚಾವ್ಯಕ್ತಿ "ನಾನೇ ನಾರಾಯಣಾಚಾರ್ ಪ್ರತಿನಿಧಿ" ಯೆಂದು ಪಂಡಗುಂಪನ್ನು ನೂಕಿಕೊಂಡು ಮುಂದೆ ಬಂದ. ಅಷ್ಟರಲ್ಲಿ ಇನ್ನೊಬ್ಬ ಧಾಂಡಿಗ "ನಾನೇ ನಾರಾಯಣಾಚಾರ್ ಪ್ರತಿನಿಧಿ"ಯೆಂದು ಹೇಳಿಕೊಂಡು ಮುಂದೆ ಬಂದವನೇ ಸಾಚಾಮನುಷ್ಯ ನನ್ನು ನೂಕಿಬಿಟ್ಟ. ನಮ್ಮ ಸಾಮಾನುಗಳನ್ನು ಹಮಾಲಿಯ ಕೈಯಲ್ಲಿ ಹೊರಿಸಿಕೊಂಡು ಹೊರಗೆ ನಡೆದೇಬಿಟ್ಟ. ನಾವು ಮತಿ ಭ್ರಾಂತರಾಗಿ ಆ ಧಾಂಡಿಗ ಪಂಡ ಪ್ರತಿನಿಧಿಯನ್ನು ಸಾಚಾ ಮನುಷ್ಯನೆಂದು ನಂಬಿ ಹಿಂಬಾಲಿಸಿದೆವು. ಸೈಕಲ್ ರಿಕ್ಷಾದಮೇಲೆ ಹೇರಿಸಿ ರಿಕ್ಷಾವಾಲನ ಕಿವಿಯಲ್ಲಿ ಏನೋ ಪಿಸುಗುಟ್ಟಿದ ಧಾಂಡಿಗ. ಅಷ್ಟರೊಳಗೆ ಸಾಚಾ ಮನುಷ್ಯ ರಿಕ್ಷದ ಹತ್ತಿರ ಬಂದು "ಇವನು ಝೂಟ, ನಾನು ಸಾಚಾ" ಎಂದು ಒದರಿದ. ನಿರುಪಾಯರಾಗಿದ್ದೆವು. ಅಸಹಾಯಕರಾಗಿದ್ದೆವು. ಸೈಕಲ್ ರಿಕ್ಷಾವಾಲಾಗೆ "ವಿಷ್ಣು ಪಾದ್ ರೋಡ್" ಎಂದು ಒದರಿದೆವು. ಅವನು ಕೋಲೆಬಸವನಂತೆ ಸರಿಯೆಂದು ತಲೆ ಯಾಡಿಸಿ ಸೈಕಲ್ ರಿಕ್ಷಾ ಏರಿದ. ನಾವು ನಮ್ಮ ಸಾಮಾನುಗಳ ಮೇಲೆ ಏರಿ ಕುಳಿತು ಮಾರ್ಗದುದ್ದಕ್ಕೂ ಮೆರವಣಿಗೆ ಮಾಡಿಕೊಂಡು ಸೈಕಲ್‌ರಿಕ್ಷ ಹೋಗುತ್ತಿದ್ದತ್ತ ಕಮುಂಗಿಗಳಂತೆ ಆಕಡೆ ಈಕಡೆ ಕಣ್ಣುಕಣ್ಣುಬಿಟ್ಟು ನೋಡುತ್ತ ಹೊರಟಿದ್ದೆವು. ಸಂಜೆ ಮಳೆಬಿದ್ದಿರ ಬೇಕು. ರಸ್ತೆಗಳೆಲ್ಲ ಕೆಸರು. ಕೆಸರು ರಸ್ತೆಗಳಲ್ಲೆಲ್ಲ ಸಂದು ಗೊಂದುಗಳಲ್ಲೆಲ್ಲ ಸುತ್ತಾಡಿ ನಮ್ಮ ಸೈಕಲ್‌ರಿಕ್ಷ ಒಂದು ಪಾಳು ಗೋಡೆಯುದ್ದ ಬಂಗಲೆಯ ಗೇಟಿನ ಒಳ ಹೋಗಿ ನಿಂತಿತು. ಉತ್ತರಾದಿ ಮಠದ ನಾರಾಯಣಾಚಾರ್ ಎಂದು ಗೋಪಾಲಾಚಾರ್ಯರು ಸ್ಪಷ್ಟ ಪಡಿಸಿದ್ದರು. ಅವರಿಲ್ಲ. ನಮ್ಮನ್ನು ಎದುರುಗೊಂಡ ವ್ಯಕ್ತಿ ಸಭ್ಯ ನಂತೆ ಕಾಣಲಿಲ್ಲ. "ನಾರಾಯಣಾಚಾರ್ ಎಲ್ಲಿ ?" ಎಂದರೆ "ಅವರು ಊರಲ್ಲಿ ಇಲ್ಲ. ಬೆಳಗ್ಗೆ ಬರುವರು" ಎಂದ. ಬಂಗಲೆಯೇ ಸಭ್ಯರ ಮನೆಯಂತೆ ತೋರಲಿಲ್ಲ. ಶಕುಂತಲಾ ಬಾಯಿ "ನಾವು ಇಲ್ಲಿ ತಂಗುವುದಿಲ್ಲ. ಸ್ಟೇಷನ್ನಿಗೆ ಹೋಗಿ ಅಲ್ಲೆ ಇರುತ್ತೇವೆ ರಾತ್ರಿ" ಎಂದು ಸೈಕಲ್ ರಿಕ್ಷಾವಾಲಾಗೆ ರೈಲ್ವೆಸ್ಟೇಷನ್ನಿಗೆ ಹಿಂದಿರುಗಿಸುವಂತೆ ಹೇಳಿದರು. ರಿಕ್ಷಾ ವಾಲ, "ನಾನು ನಿಮ್ಮ ಸಾಮಾನುಗಳನ್ನು ಇಲ್ಲಿಯೇ ಇಳಿಸಿ ಹೋಗುತ್ತೇನೆ. ರೈಲ್ವೆ ಸ್ಟೇಷನ್ನಿಗೆ ಹೋಗುವುದಿಲ್ಲ" ಎಂದು ನಮ್ಮನ್ನು ಕೇಳದೆ ಸಾಮಾನುಗಳನ್ನು ನಾವು ಕೂತಿದ್ದಹಾಗೆಯೇ ಎಳೆದು ಬಿಟ್ಟ. ನಾಲ್ಕೈದು ರೂಪಾಯಿಗಳನ್ನು ಸುಲಿದುಕೊಂಡು ಹೋಗಿಬಿಟ್ಟ. "ನಾವು ನಿಮ್ಮಲ್ಲಿ ಉಳಿದುಕೊಳ್ಳುವುದಿಲ್ಲ. ಈ ರಸ್ತೆಯಲ್ಲಿಯೇ ಹಾಸಿಗೆ ಸಾಮಾನುಗಳ ಮೇಲೆ ಕೂತಿರುತ್ತೇವೆ. ಎಷ್ಟು ಹೊತ್ತಾದರೂ" ಎಂದು ಸತ್ಯಾಗ್ರಹ ಹೂಡಿ ಬೀದಿಯಲ್ಲಿ ನಮ್ಮ ಸಾಮಾನುಗಳ ಮೇಲೆ ಕೂತೇಬಿಟ್ಟೆವು. 10-15 ನಿಮಿಷಗಳು ಕಳೆಯಿತು. ಹಿಂದೀ ಭಾಷೆಯಲ್ಲಿ ನಮಗೆ ಸಹಸ್ರನಾಮಾರ್ಚನೆಯಾಯಿತು. ಬೇರೆ ಸೈಕಲ್ ರಿಕ್ಷಾ ಗೊತ್ತು ಮಾಡಿ ನಮ್ಮ ಸಾಮಾನುಗಳನ್ನು ಅದರಲ್ಲಿ ಹೇರಿಸಿದರು.

ನಾವು ರಿಕ್ಷಾ ಏರಿ ಸಾಮಾನುಗಳ ಮೇಲೆ ಕುಕ್ಕರಿಸಿದೆವು. ಸೈಕಲ್‌ರಿಕ್ಷಾವಾಲನಿಗೆ ಕಿವಿ ಮಾತಲ್ಲಿ ಉಪದೇಶ ಮಾಡಿದರು. ಇಷ್ಟು ಹಗರಣ ಮಾಡಿಕೊಂಡು ಸೈಕಲ್‌ರಿಕ್ಷ ವಿಷ್ಣು ಪಾದ ರೋಡ್ ಕಡೆ ಓಡಿತು ನಮ್ಮನ್ನು ಕೂರಿಸಿಕೊಂಡು. ನಮ್ಮ ಗಡಿಯಾರ 10 ಗಂಟೆ ತೋರಿಸುತ್ತಿತ್ತು.

ನಮ್ಮ ಸೈಕಲ್ ರಿಕ್ಷ ಒಂದು ಮೈಲಿಯಷ್ಟು ಹೋಗಿತ್ತು. ರಿಕ್ಷಾವಾಲ ತಟ್ಟನೆ ನಿಲ್ಲಿಸಿಬಿಟ್ಟ ರಿಕ್ಷಾನ.

"ಇಳಿದುಬಿಡಿ. ಬೇರೆ ರಿಕ್ಷಾ ಮಾಡಿಕೊಳ್ಳಿ."ಎಂದು ಅಲ್ಟಿಮೇಟಂ ಕೊಟ್ಟ

"ಏಕೆ ?"

"ಇಷ್ಟೇ ದೂರಕ್ಕೆ ಕರೆದುಕೊಂಡು ಹೋಗಿ ಬಿಡಬೇಕೆಂದು ಹೇಳಿದ್ದಾರೆ."

"ವಿಷ್ಣುಪಾದ್ ರೋಡಿಗೆ ಕರೆದುಕೊಂಡು ಹೋಗಿ ನಾರಾಯಣಾಚಾರ್ ಮನೆಗೆ ಮುಟ್ಟಸಬೇಕೆಂದು ನಿನಗೆ ಹೇಳಲಿಲ್ಲವೆ ?"

"ನನಗೆ ಅದೆಲ್ಲ ತಿಳಿಯದು ಇಳಿದು ಬಿಡಿ."

"ನಾವು ಇಳಿಯುವುದಿಲ್ಲ."

"ದಬ್ಬಿಬಿಡುತ್ತೇನೆ."

ದಾರಿಹೋಕರು ಘೇರಾಯಿಸಿದರು. ಒಬ್ಬ ಪೋಲೀಸಿನವನು ಸಂಧಿಸಿದ. ಆತನ ಮುಂದೆ ನನ್ನ ಸೌಭಾಗ್ಯವತಿ ಗೋಳುಕರೆ ತೋಡಿಕೊಂಡರು. ಅವನು ನಕ್ಕು ಸುಮ್ಮನೆ ಹೊರಟು ಹೋದ. ಬೇಲಿಯೆ ಹೊಲ ಮೇದಂತಾಯಿತು. ನಾವು ನಿಸ್ಸಹಾಯಕರಾದೆವು.

ದಾರಿಹೋಕರಲ್ಲಿ ಒಬ್ಬ ಸಭ್ಯ ಮುಂದೆ ಬಂದ. ನಮ್ಮನ್ನು ರಿಕ್ಷದಿಂದ ಇಳಿಸಿದ. ಇನ್ನೊಂದು ಸೈಕಲ್ ರಿಕ್ಷಾ ಹಿಡಿದು ಆತನಿಗೆ ಸರಿಯಾದ ತಿಳಿವಳಿಕೆ ಕೊಟ್ಟು ನಮ್ಮನ್ನು ವಿಷ್ಣುಪಾದ್ ರೋಡಿಗೆ ಕಳಿಸಿಕೊಟ್ಟ.

ನಾವು ಹೋಗುತ್ತಿದ್ದ ಹಾದಿಯೋ ? ಕತ್ತಲೋ ಕತ್ತಲು. ಅಲ್ಲೊಂದು ಇಲ್ಲೊಂದು ಹಾದಿ ದೀಪ. ಇಕ್ಕೆಲಗಳಲ್ಲಿ ಮರಗಳು. ಮಧ್ಯೆ ಮನೆಗಳು ಅಲ್ಲೊಂದು ಇಲ್ಲೊಂದು. ಇಲ್ಲವೇ ಇಲ್ಲವೆಂದರೂ ಸರಿಯೆ. ರಸ್ತೆಯೊ ಕಸರು, ಕೆಸರು. "ಪಾಂಡು ರಂಗರಾವ್ ದಂಪತಿಗಳು ಮರ್ಗಯು" ಎಂದುಕೊಂಡು, ನಮ್ಮ ಪ್ರಾಣಗಳನ್ನು ಸೈಕಲ್ ರಿಕ್ಷಾವಾಲನ ಕೈಗೊಪ್ಪಿಸಿ ಕುಳಿತಿದ್ದೆವು.

ಅದೃಷ್ಟ ಚೆನ್ನಾಗಿತ್ತು. ಸೈಕಲ್ ರಿಕ್ಷಾ ಹಗರಣವಾಗಲಿಲ್ಲ. ವಿಷ್ಣುಪಾದ್ ರೋಡಿಗೆ ಹೋಗಿ, ನಾರಾಯಣಾಚಾರ್ ಯಾವ ಪಂಡನ ಪ್ರತಿನಿಧಿಯೋ ಆ ನಿವಾಸದ ಮುಂದೆ ನಮ್ಮ ಸೈಕಲ್‌ರಿಕ್ಷ ನಿಂತಿತು. ರಿಕ್ಷಾದಿಂದ ಇಳಿದೆವು. ಪಂಡನ ನಿವಾಸದ ಕಿಟಕಿ ಉತ್ತರಾದಿ ಮಠಾಧೀಶರಾದ ಸತ್ಯಧ್ಯಾನ ತೀರ್ಥರ, ರಾಘವೇಂದ್ರ ಸ್ವಾಮಿಗಳ ಭಾವಚಿತ್ರಗಳನ್ನು ನಮಗೆ ದರ್ಶನ ಮಾಡಿಸಿತು. "ಧನ್ಯರಾದೆವು, ಗೋಪಾಲಾಚಾರ್ ಪರಿಚಯಿಸಿದ್ದ ನಾರಾಯಣಾಚಾರ್ ಅವರಲ್ಲಿಗೇ ಬಂದು ಮುಟ್ಟಿದ್ದೇವೆ"ಎಂದು ಮನಸ್ಸಿನಲ್ಲಿ ಸಮಾಧಾನ ತಳೆದೆವು. ಸೈಕಲ್ ರಿಕ್ಷ ನಮ್ಮನ್ನು ಬಿಟ್ಟು ಹೋಗುವುದಕ್ಕೂ ಸಾಚಾ ಮನುಷ್ಯ ಬಂದು

ಮುಟ್ಟುವುದಕ್ಕೂ ಸರಿಹೋಯಿತು. ಪಂಡಾ ಹೆಸರು ಮರೆತಿದ್ದೇನೆ. ದಿನಚರಿ ಇಟ್ಟಿಲ್ಲ. ಆತನ ಹೆಸರು ಗುರುತಿಸಿಲ್ಲ. ಆದರೆ ಬದುಕಿನಲ್ಲಿ ನಾನು ಕಂಡ ಸಜ್ಜನರಲ್ಲಿ ಆತನೊಬ ಎಂಬುದರಲ್ಲಿ ಸಂದೇಹವಿಲ್ಲ. ಆತ ಹಾಗೆ ನಡೆದುಕೊಂಡ.

ನಮ್ಮ ಬಿಡಾರ ಪಂಡನ ನಿವಾಸದಲ್ಲಾಯಿತು. ಅದು ದೇಶೋವಿಶಾಲವೆಂಬಹಾಗೆ ಹತ್ತಾರು ಕೋಣೆಗಳನ್ನು ಒಳಗೊಂಡ ದೊಡ್ಡ ವಠಾರ. ಆ ದೇಗುಲದಂಥ ವಠಾರಕ್ಕೆ ನಾವು ಇಬ್ಬರೇ ಇಬ್ಬರು. ಹೊಟ್ಟೆ "ಚುರ್ ಚುರ್" ಎನ್ನುತ್ತಿತ್ತು. ಹಸಿವೋ ಹಸಿವು. ಹೃದಯ "ಈ ದೆವ್ವ ವಠಾರಕ್ಕೆಲ್ಲ ನಾವಿಬ್ಬರೇ ಅಲ್ಲ!" ಎಂಬ ಭೀತಿಯಿಂದ "ಡಬ ಡಬ" ಗುಟ್ಟುತ್ತಿತ್ತು. ಸರಿರಾತ್ರಿಯಿಂದ ಬೆಳಗಾಗುವವರೆಗೂ ತೂಕಡಿಸುತ್ತ ಜಾಗರಣೆ ಮಾಡಿದೆವು. ಬೆಳಗಾಯಿತು. ಕತ್ತಲನ್ನು ಕಳೆದು ರವಿ ಬಾನಿನಲ್ಲಿ ಮೂಡಿದ್ದ.

. . . . ನಮೋ
ಹೇ ಜಗಚ್ಚಕ್ಷು, ವಂಶದ ಮುಗಳ್ ಪ್ರಾರ್ಥಿಪಳ್
ಕೇಳ್, ಕರುಣೆ, ನೀಂ ವಿಶ್ವಶಕ್ತಿಪ್ರತೀಕನಯ್ ;
ಮೇಣ್ ಋತಪ್ರತಿಮಾ ಸ್ವರೂಪನಯ್ ; ಪ್ರತಿದಿನಂ
ಪ್ರತ್ಯಕ್ಷಮಪ್ಪ ಪರಮಾತ್ಮನಯ್ ನೀಂ ನಿಖಿಲ
ಜಲ ಸಸ್ಯ ಮೃಗ ಮನುಜ ಜೀವರಿಗೆ, ನಿನ್ನಿಂದೆ
ಲೋಕಂ ನವೀನಂ ನಿರಂತರಂ. ನಿನ್ನಿಂದೆ
ಸೃಷ್ಟಿಗುತ್ಸಾಹಂ ; ಲಯಂ ಸೃಷ್ಟಿಮುಖಿ ನಿನ್ನ
ಚೈತನ್ಯದಿಂ ; ಸ್ಥಿತಿಗೆ ನೀನೇ ಗತಿ, ಮತಿ, ಶಕ್ತಿ,
ಮೇಣಕ್ಷರ ಜ್ಯೋತಿ . . ."

ಎಂದು ನಾವು ಕೈಮುಗಿದೆವು. ನಾರಾಯಣಾಚಾರ್ಯರೇ ಬಂದಿದ್ದರು. ನಾವು ಇಳಿದಿದ್ದ ನಿವಾಸಕ್ಕೆ ಸನಿಹದಲ್ಲಿಯೇ ಉತ್ತರಾದಿ ಮಠ. ನಾರಾಯಣಾಚಾರ್ ವಾಸ ಅಲ್ಲಿಯೇ. ನಮ್ಮನ್ನು ಅವರಲ್ಲಿಗೆ ಕರೆದೊಯ್ದರು. ಅಲ್ಲಿ ಸ್ನಾನ ಉಪಾಹಾರ ಕಾಫಿ ಎಲ್ಲ ಸಾಂಗೋಪಾಂಗವಾಗಿ ನಡೆಯಿತು. ಅನಂತರ ಒಂದು ಗಂಟೆ ವಿಶ್ರಾಂತಿ. ಮುಂದೆ ಕ್ಷೇತ್ರದಲ್ಲಿ ನಡೆಸಬೇಕಾದ ಪಿತೃ ಶ್ರಾದ್ಧ ಕರ್ಮಗಳ ಆಚರಣೆಗಾಗಿ ನಾರಾಯಣಾಚಾರ್ ವಿಷ್ಣುಪಾದವಿರುವ ದೇವಸ್ಥಾನಕ್ಕೆ ಕರೆದೊಯ್ದರು.

ಗಯೆಯ ಲೋಕಪ್ರಸಿದ್ಧ ವಿಷ್ಣು ದೇವಾಲಯ ಫಲ್ಗು ನದಿಯ ದಂಡೆಯ ಮೇಲಿದೆ. ವಿಷ್ಣು ದೇವಾಲಯವಿರುವ ಪ್ರಯುಕ್ತ ಗಯೆಯನ್ನು ವಿಷ್ಣುಗಯೆಯೆಂದು ಕರೆಯುವುದು ರೂಢಿಯಾಗಿದೆ. ನಾವು ಹೋದಾಗ ಫಲ್ಗು ನದಿಯಲ್ಲಿ ನೀರು ಹುಡುಕಿದರೂ ಒಂದು ತೊಟ್ಟೂ ಕಾಣಲಿಲ್ಲ. ನಮ್ಮ ಕಣ್ಣು ನೋಟ ಹಾಯ್ದುದಷ್ಟೂ ಉಸಬು, ಉಸಬು, ಉಸಬು. ಒಂದು ಮೊಳಕ್ಕೆ ಅದ್ದುವಷ್ಟು ಒಂದು ಗುಂಡಿ. ಅದರಲ್ಲಿ ನೀರು ತುಂಬಿತ್ತು. ಅದರಿಂದಲೇ ನೀರು ತಂದು ಒಂದು ಹೊಸ ಮಡಕೆಯಲ್ಲಿ ಸುರಿದು, ಒಲೆಯ ಮೇಲಿಟ್ಟು, ನೀರು ಮರಳ ಮರಳ ಕುದಿಸಿ, ಅಕ್ಕಹಾ ! ಪಿತೃಗಳಿಗೆ ಅರ್ಪಿಸಬೇಕಾದ ಪಿಂಡಕ್ಕೆ ಅನ್ನ ಬೇಯಿಸಿದೆ. ನನ್ನ ಇಷ್ಟ ಬಂಧುಗಳು, ಅನಿಷ್ಟ ಬಂಧುಗಳು ಯಾರಲ್ಲೂ ಗುಣಾವಗುಣ

ಗಳನ್ನೂ ಗಣಿಸದೆ ನಿರ್ಲಿಪ್ತ ಭಾವನೆಯಿಂದ ನೆನೆದು ಎಲ್ಲರಿಗೂ ಒಂದೊಂದರಂತೆ ಬೇಯಿಸಿದ ಅನ್ನದಿಂದ ನಿಂಬೆಹಣ್ಣಿನ ಗಾತ್ರದ ಪಿಂಡದುಂಡೆ ಕಟ್ಟಿದೆ. ನಾರಾಯಣಾಚಾರ್ ಶ್ರಾದ್ಧ ಮಂತ್ರಗಳನ್ನು ಹೇಳಿ ತರ್ಪಣ ಬಿಡಿಸಿ, ಪಿಂಡ ಇಕ್ಕಿಸಿ ಒಬ್ಬೊಬ್ಬ ಪಿತೃ ಋಣವನ್ನು ನನ್ನಿಂದ ತೀರಿಸಿದರು. ಇನ್ನು ಈ ಪಿಂಡದುಂಡೆಗಳನ್ನು ಅರ್ಪಿಸಬೇಕಲ್ಲ ವಿಷ್ಣು ಪಾದಕ್ಕೆ. ಈಗ ನಾನು ವಿಷ್ಣು ದೇವಾಲಯವನ್ನು ಪ್ರವೇಶಿಸಿದೆ ನಾರಾಯಣಾಚಾರ್ ಒಡಗೂಡಿ. ವಿಷ್ಣು ಪಾದಪೆಡೆ ಸೇರಿದೆವು. ವಿಷ್ಣು ಪಾದಗಳೆರಡೂ ಒಂದು ಗುಂಡಿಯಲ್ಲಿವೆ. ಗುಂಡಿ ಸುಮಾರು ಮೂರು ನಾಲ್ಕು ಅಡಿಗಳಷ್ಟು ವ್ಯಾಸವುಳ್ಳ ವೃತ್ತಾಕಾರದಲ್ಲಿದೆ. ಪಿತೃಗಳಿಗೆ ಅರ್ಪಿಸಿದ ಪಿಂಡದುಂಡೆಗಳನ್ನು ಈ ಗುಂಡಿಯಲ್ಲಿರುವ ವಿಷ್ಣು ಪಾದಗಳ ಮೇಲೆ ಸುರಿಯಬೇಕು. ನಾನು ಇನ್ನೇನು ಪಿಂಡದುಂಡೆಗಳನ್ನು ಅರ್ಪಿಸಿಯಾಯಿತು ಎನ್ನುವ ವೇಳೆಗೆ ಎಲ್ಲಿಂದಲೋ ಒಂದು ಗುಂಪು "ಉಥೊ ಉಥೊ" ಬಂದದ್ದೇ ನನ್ನನ್ನು ದಬ್ಬಿಕೊಂಡು ವಿಷ್ಣು ಪಾದಗಳ ಮೇಲೆ ಅಕ್ಕಿಯ, ಅನ್ನದ, ಪಿಂಡದುಂಡೆಗಳನ್ನು ಜೊತೆಗೆ ಬೋಳಿಸಿದ ತಲೆ ಗೂದಲುಗಳನ್ನು ಸುರಿದೇಬಿಟ್ಟಿತು. ನಾನು ಗುಂಡಿಯಲ್ಲಿ ಮುಗುಚಿಕೊಳ್ಳದೆ ವಿಷ್ಣು ಪಾದಗಳಿಗೆ ಹಣೆ ಚಚ್ಚಿಕೊಂಡು ಘಾಯಗೊಳ್ಳದೆ ಹೇಗೆ ಪಾರಾದೆನೋ ನನಗೇ ತಿಳಿಯದು. ಸ್ವಲ್ಪ ಮೈಮೂಲಿದ್ದರೆ, ವಿಷ್ಣು ಗಯಾ ರಾಕ್ಷಸನ ತಲೆಯ ಮೇಲೆ ವಿಷ್ಣು ತನ್ನ ಪಾದಗಳನ್ನಿಟ್ಟನೋ ಇಲ್ಲವೊ ನನ್ನ ತಲೆಯ ಮೇಲಂತೂ ಹಲವಾರು ನರ ಪಾದಗಳು ಮೆಟ್ಟಿರುತ್ತಿದ್ದವು ಎಂಬುದರಲ್ಲಿ ಸಂದೇಹವಿಲ್ಲ.

ನಾನು ಪಿತೃಗಳಿಗೆ ಅನ್ನ ಬೇಯಿಸಿ ಪಿಂಡದುಂಡೆಗಳನ್ನು ಕಟ್ಟಿದೆನಲ್ಲ, ತರ್ಪಣ ಕೊಟ್ಟು ಪಿಂಡ ನಿವೇದನೆ ಮಾಡಿದೆನಲ್ಲ, ಆ ವಾತಾವರಣವನ್ನು ನೆನೆಸಿಕೊಂಡರೆ ಮೈರೋಮವೆಲ್ಲ ನಿಟಮ್ಮನೆ ಎದ್ದು ನಿಲ್ಲುತ್ತದೆ. ಅಷ್ಟು ಅಸಹ್ಯವಾಗಿತ್ತು ಸ್ಥಳ. ಒಣಗಿ ಒಳಗಾರೆಯಾದ ಮನುಷ್ಯರ ಹೇಸಿಗೆ ಎಲ್ಲಿ ಕಾಲಿಟ್ಟರೆ ಅಲ್ಲಿ ಕಾಲಿಗೆ ಸಿಗುತ್ತಿತ್ತು. ಕಾಲಿಗೆ ಹೇಸಿಗೆ ಮುಟ್ಟಿಸಿಕೊಳ್ಳದೆ ನಾನು ಅಡ್ಡಾಡಬೇಕಾದರೆ ಸ್ಥಳ ಹುಡುಕಬೇಕಾಯಿತು.

ಅನಂತರ ನಾರಾಯಣಾಚಾರ್ಯರು ನನ್ನನ್ನು ಗಯಾ ಕ್ಷೇತ್ರಾಧಿಕಾರಿಯಾದ ಮಹಾ ಪಂಡನಲ್ಲಿಗೆ ಕರೆದೊಯ್ದರು. ಆ ಸ್ಥಳ ಒಂದು ಅಶ್ವತ್ಥ ವೃಕ್ಷದ ಕ್ಷೇತ್ರ. ಅಶ್ವತ್ಥ ವೃಕ್ಷದ ಕೆಳಗೆ ಒಬ್ಬ ಪಂಡ. ಆತನಿಗೆ ದಕ್ಷಿಣೆ ಕಾಣಿಕೆ ಒಪ್ಪಿಸಿದರೆ ಆತ ಸುಪ್ರೀತನಾಗಿ "ನಿಮ್ಮ ಪಿತೃಗಳೆಲ್ಲ ಸ್ವರ್ಗಕ್ಕೆ ಹೋದರು" ಎನ್ನುತ್ತಾನೆ. ಅಲ್ಲಿಗೆ ನಮ್ಮ ಪಿತೃ ಋಣದ ಶ್ರಾದ್ಧ ಕರ್ಮ ಕಲಾಪ ವಿಷ್ಣು ಗಯೆಯಲ್ಲಿ ಮುಗಿದಂತೆ. ನನ್ನನ್ನು "ಈ ಪುಣ್ಯ ಕ್ಷೇತ್ರದಲ್ಲಿ ಏನು ವರ್ಜ್ಯ ಮಾಡುತ್ತೀಯ ?" ಎಂದು ಕೇಳಿದರು ಪಂಡ ಮಹಾಶಯ. ನಾನು ನಕ್ಕೆ. "ಯಾಕೆ ನಗುತ್ತೀಯ?" ಎಂದರು ಪಂಡಜೀ. "ನನಗೆ ಹೆಂಡತಿ ಬಿಡುವುದಷ್ಟಿಷ್ಟವಿಲ್ಲ. ಬಿಡಲಾರೆ. ನಾಲಗೆ ರುಚಿ ಬಿಡುವುದು ಅಸಾಧ್ಯ. ಕಹಿ, ಸಿಹಿ, ಒಗರು, ಖಾರ, ಯಾವುದನ್ನೂ ಬಿಡಬೇಡ. ಒಂದಲ್ಲ ಒಂದು ವಿಧದಲ್ಲಿ ಅವೆಲ್ಲ ಸೇರಿಯೇ ಸೇರಿರುತ್ತವೆ ನಿನ್ನ ಆಹಾರದಲ್ಲಿ ಎಂದು ಎಚ್ಚರಿಸುತ್ತಿದೆ ಹಾಳು ನಾಲಗೆ. ಏನು ಮಾಡಲಿ ? ಇನ್ನು

ಮನೆ ಮಠ, ಹಣಕಾಸು ! ನಾನು ಬದುಕಿರುವ ವರೆಗೆ ಒಂದು ಸೂರು ನೆತ್ತಿಯ ಮೇಲೆ ಬೇಕಲ್ಲ. ಆದುದರಿಂದ ಅದನ್ನು ಬಿಡಲಾರೆ. ಹಣಕಾಸು ಬಿಡುಯೆನ್ನುವಿರಾ? ಹೇಗೆಬಿಡಲಿ? ನನ್ನಲ್ಲಿ ಹಣಕಾಸು ಇಲ್ಲವೆ ಹೋದರೆ ಈ ಪ್ರಪಂಚದಲ್ಲಿ ಬಚಾವಾಗುವುದು ಹೇಗೆ ? ಆದುದರಿಂದ ನಾನು ಏನನ್ನೂ ಬಿಡಲಾರೆ. ನನಗೆ ಬದುಕಿರುವವರೆಗೂ ಎಲ್ಲ ಬೇಕು ?" ಎಂದೆ. ನನ್ನ ಸುತ್ತಲಿದ್ದವರೆಲ್ಲ ಘೊಳ್ಳೆಂದು ನಕ್ಕರು. ಪಂಡಜಿಗೂ ನಗು ಬಂತು. "ತೊಲಗಲಿ ಶನಿ" ಎಂದುಕೊಂಡಿರಬೇಕು. ಪುಟ್ಟ ಭಾಷಣ ಬಿಗಿದು ಅಲ್ಲಿಂದ ಹೊರಟೆ. ಟಾಂಗ ಏರಿ ನಾರಾಯಣಾಚಾರ್ ನಿವಾಸಕ್ಕೆ ಬಂದೆವು. ಮಧ್ಯಾಹ್ನ ಎರಡು ಗಂಟೆಯಾಗಿತ್ತು. ಹೊಟ್ಟೆ ಹಸಿದಿತ್ತು. ಸಿಹಿಯೂಟ. ಹಸಿವಾಗಿದ್ದರಿಂದ ಊಟವೂ ಚೆನ್ನಾಗಿಯೇ ಸೇರಿತು. ಅಲ್ಲೆ ನಾಲ್ಕು ಗಂಟೆಯವರೆಗೆ ವಿಶ್ರಾಂತಿ. ಅನಂತರ ಬುದ್ಧ ಗಯೆಗೆ ಯಾತ್ರೆ.

ಒಂದು ಟಾಂಗ ಗೊತ್ತುಮಾಡಿಕೊಟ್ಟಿದ್ದರು ನಾರಾಯಣಾಚಾರ್. 5-30 ಗಂಟೆಗೆಲ್ಲ ಬುದ್ಧ ಗಯೆಯಲ್ಲಿದ್ದೆವು. ಚೀನಾ ಜಪಾನೀಯರುಗಳು ತಮ್ಮತಮ್ಮ ಕಡೆಯ ಶಿಲ್ಪಗಳಲ್ಲಿ ಬುದ್ಧ ಮಂದಿರಗಳನ್ನು ನಿರ್ಮಿಸಿಕೊಂಡಿದ್ದಾರೆ. ನಾವು ಮೊದಲು ಅವುಗಳನ್ನು ಸಂದರ್ಶಿಸಿ ಕಡೆಯಲ್ಲಿ ಸಿದ್ಧಾರ್ಥ ಕುಮಾರ ಬುದ್ಧನಾದ ನೆಲೆಗೆ ಬಂದೆವು. ಜ್ಞಾನೋದಯ ಪಡೆದು ಬುದ್ಧನಾದ ಪವಿತ್ರ ಸ್ಥಳದಲ್ಲಿ ಬುದ್ಧ ಗುರುವಿಗೆ ಅತಿ ಸುಂದರವಾದ ಮಂದಿರವನ್ನು ಎತ್ತಿದ್ದಾರೆ. ಬುದ್ಧ ವಿಗ್ರಹ ಭವ್ಯವಾಗಿದೆ. ದೇವಾಲಯದ ಹಿಂದೆ ಆತನಿಗೆ ಜ್ಞಾನೋದಯ ನೀಡಿದ ಅರಳೀ ಮರವಿದೆ. ಬೋಧಿವೃಕ್ಷವೆಂದು ಹೆಸರಾಂತ ಈ ಅರಳೀ ಮರ ಅತಿ ಪುರಾತನವಾದುದೆಂದು ಹೇಳುತ್ತಾರೆ. ನಾವು ಬೋಧೀವೃಕ್ಷಕ್ಕೆ ಪ್ರದಕ್ಷಿಣೆ ಹಾಕಿದೆವು. ಪರಮ ಪವಿತ್ರವಾದ ಬೋಧಿವೃಕ್ಷದ ಕೆಳಗೆ ನಿಂತು ಭಾವ ಚಿತ್ರ ತೆಗೆಸಿಕೊಂಡೆವು.

ಸ್ವಂತ ಸುಖದ ಸುಳಿಯೆಳೆತಕೆ ಸಿಕ್ಕದೆ,
ಜಗದ ದುಃಖಗಳಿಗೆದೆ ಕರಗಿ,
ದುಃಖ ನಿರೋಧದ ಮಾರ್ಗವಾವುದೆಂ—
ದಾರುವರುಷವಲೆದಲೆದೆ ಗುರು !
ಶರಣು ಶರಣು ಸಂಬುದ್ಧ ಗುರು !
ಆರು ವರುಷದಲೆದಾಟವ ಘೋರ !
ಕಡೆಗು ಗೆದ್ದೆ ನೀ ! ಜಿತಮಾರ !
ಬೋಧಿವೃಕ್ಷದಡಿ ಪ್ರಾಜ್ಞಾಯುಧದಲಿ
ಮಾರಸೇನೆಯನು ಮುರಿದೆ ಗುರು !
ಶರಣು ಶರಣು ಸಂಬುದ್ಧ ಗುರು !

ಜಿ. ಪಿ. ರಾಜರತ್ನಂ ಅವರ "ಶರಣು ಶರಣು ಸಂಬುದ್ಧ ಗುರು" ಕವನ ಜಪಿಸುತ್ತ ವಿಷ್ಣು ಗಯೆಗೆ ಹಿಂದಿರುಗಿದೆವು. ಕಲ್ಕತ್ತೆಗೆ ನಮ್ಮ ಸ್ಥಳಗಳನ್ನು ರೈಲು ಗಾಡಿಯಲ್ಲಿ ಕಾದಿರಿಸಿತ್ತು. ಆ ರಾತ್ರಿಯೇ 8 ಗಂಟೆ ಗಾಡಿಯಲ್ಲಿ ಕುಳಿತು ಬೆಳಗ್ಗೆ 8 ಗಂಟೆಯ ಹೊತ್ತಿಗೆ ಕಲ್ಕತ್ತೆಯಲ್ಲಿದ್ದೆವು.

ಶ್ರೀ ರಾಮಕೃಷ್ಣಪರಮಹಂಸ, ವಿವೇಕಾನಂದರ ತಾಯ್ನಾಡಿನಲ್ಲಿ

ಕಲ್ಕತ್ತೆಯಲ್ಲಿ ಇಳಿದಾಗ ಹೊಸವರ್ಷ 1969ರ ಜನವರಿ 1ನೆಯ ದಿನಾಂಕ ಪ್ರಾರಂಭವಾಗಿತ್ತು. ಅಶೋಕ ಮಾರ್ಕೆಟಿಂಗ್ ಕಂಪೆನಿಯ ಒಂದು ಶಾಖೆಯ ಮ್ಯಾನೆಜರ್ ಆಗಿದ್ದ ನಮ್ಮ ಹರಪನಹಳ್ಳಿಯ ಗೆಳೆಯ ಎಸ್. ಎನ್. ಮೂರ್ತಿಯ ಅತಿಥಿಗಳಾದೆವು. ಸ್ಟೇಷನ್‌ನಲ್ಲಿ ಇಳಿದು ಟ್ಯಾಕ್ಸಿ ಹಿಡಿದು ಮೂರ್ತಿಯ ಮನೆಗೆ ಹೊರಟಾಗ ನಮ್ಮ ಟ್ಯಾಕ್ಸಿ ಹೌರಾ ಸೇತುವೆಯ ಮೇಲೆ ಓಡಿತು. ಈ ಸೇತುವೆ ಕಲ್ಕತ್ತಾ-ಹೌರಾಗಳಿಗೆ ಸೇತುಬಂಧವಾಗಿದೆ. 407 ಮೀಟರಿನ ಏಷ್ಯಾದಲ್ಲೆ ಅಪೂರ್ವವಾದ ಚಾಚು ತೊಲೆಗಳ ಸೇತುವೆಯಿದು. ಕೆಳಗೆ ಅಗಾಧವಾದ ನೀಲಜಲರಾಶಿ, ಮೇಲೆ ಅಗಾಧವಾದ ನೀಲಾಕಾಶ. ಮಧ್ಯೆ ಸೇತುವೆಯ ಮೇಲೆ ನಮ್ಮ ಟ್ಯಾಕ್ಸಿಯ ಓಡೋಣ. ಭೀಕರ ಸುಂದರ ನೋಟದ ಅನುಭವ.

ಮೂರ್ತಿ, ಆತನ ಸೌಭಾಗ್ಯವತಿ ಇಂದಿರಾ, ಮಕ್ಕಳು ಶ್ರೀನಿವಾಸ, ಶ್ರೀಧರ (ಮುನ್ನಿ) ಅವರೊಡನೆ ಒಂದುವಾರ ಕಳೆದ ವೇಳೆ ಆತ್ಮೀಯವಾಗಿತ್ತು. ಹೊತ್ತು ಹೊತ್ತಿಗೆ ರಸಗವಳ. ದಿನವೂ ಕಲ್ಕತ್ತೆಯ ನಗರದ ನೋಟ; ಒಂದು ವಾರವೂ ಬಿಡುವಿಲ್ಲದೆ ನಡೆಯಿತು. ಕಲ್ಕತ್ತೆಯ ರಾಜ ಬೀದಿಗಳನ್ನು ಅಡ್ಡಾಡಿದೆವು. ನಾನು ಬಂಕಿಮ ಚಂದ್ರರ, ಶರತಚಂದ್ರರ ಕಾದಂಬರಿಗಳನ್ನು ಸಾಕಷ್ಟು ಓದಿಕೊಂಡಿದ್ದರಿಂದ ಕಲ್ಕತ್ತೆಯ ಬೀದಿಗಳನ್ನು, ಬಂಗಾಳಿ ಬಾಬುಗಳನ್ನು, ದೀದಿಗಳನ್ನು ನೋಡಿದಾಗ ಕಾದಂಬರಿಗಳ ವ್ಯಕ್ತಿಗಳು ನನ್ನ ಕಣ್ಣ ಮುಂದೆ ಸುಳಿಯುತ್ತಿರುವರೋ ಎಂಬ ಭ್ರಮೆ ಹುಟ್ಟಿಸುತ್ತಿತ್ತು. ನನ್ನ ಗಮನವೆಲ್ಲ ರಾಮಕೃಷ್ಣ ಪರಮಹಂಸರ ಲೀಲಾ ಭೂಮಿಯಾದ ದಕ್ಷಿಣೇಶ್ವರ ಮತ್ತು ವಿವೇಕಾನಂದ ಸ್ವಾಮಿ ನವಚೇತನ ಕೊಟ್ಟ ಗಂಗಾನದಿಯ ದಡದ ಮೇಲಿದ್ದ ಬೇಲೂರು ಮಠದ ಕಡೆಗೆ ಕೇಂದ್ರೀಕೃತವಾಗಿತ್ತು. ಆದುದರಿಂದ ನನ್ನ ಮನಸ್ಸನ್ನು ತಿಳಿದಿದ್ದ ಮೂರ್ತಿ, ತನ್ನ ಸಂಸಾರ ಸಮೇತ ನನ್ನನ್ನು ಮತ್ತು ಶಕುಂತಲಾಬಾಯಿಯನ್ನು ದಕ್ಷಿಣೇಶ್ವರ ಮತ್ತು ಬೇಲೂರು ಮಠದ ಯಾತ್ರೆ ಮಾಡಿಸಿದರು.

ದಕ್ಷಿಣೇಶ್ವರ ಮತ್ತು ಬೇಲೂರು ಮಠಗಳ ಯಾತ್ರೆ ಹಾಗೂ ದಿವ್ಯ ದರ್ಶನಗಳ ಫಲ ಪ್ರಾಪ್ತಿ— ಕುವೆಂಪು ಅವರ "ಅಗ್ನಿಹಂಸ" ಕವನ ಸಂಗ್ರಹದಿಂದ ಶ್ರೀ ರಾಮಕೃಷ್ಣ ಪರಮ ಹಂಸ, ಶಾರದಾ ಮಣಿ ದೇವಿ, ಸ್ವಾಮಿ ವಿವೇಕಾನಂದ ಮತ್ತು ಜಗನ್ಮಾತೆಗೆ ರಚಿತವಾದ ಕವನಗಳನ್ನು ಸಮಯ ಸಂದರ್ಭಗಳಲ್ಲಿ ಶಕುಂತಲಾಬಾಯಿ ಹಾಡತೊಡಗಿದ್ದು ಗಮಕ ಪದ್ಧತಿಯಲ್ಲಿ. ಭಾವಗೀತಗಳ ಜಾಡಾದರೂ ಈ ಕವನಗಳಿಗೆ ರಾಗ ಸಂಯೋಜನೆ ಶುದ್ಧ ಕರ್ಣಾಟಕ ಸಂಗೀತ ಪದ್ಧತಿಯಲ್ಲಿ. ತಂಬೂರಿ ಶ್ರುತಿಯೊಂದೇ ವಾದ್ಯ ಬಳಕೆ. ಬೇರೆ ವಾದ್ಯಗಳ ಬಳಕೆಯಾದರೆ ಅವುಗಳ ಮೇಲುಗೈಯ್ಯಲ್ಲಿ ಸಾಹಿತ್ಯ ಎಲ್ಲಿ ಅದುಮಿಹೋಗುವುದೊ ಎಂಬ ಅಳುಕಿನಿಂದ ಶಕುಂತಲಾಬಾಯಿ ವಾದ್ಯ ಬಳಕೆಗೆ

ಹಿಂಜರಿಯುತ್ತಾರೆ. ಶ್ರೀ ರಾಮಕೃಷ್ಣ ಪರಮಹಂಸರನ್ನು ಕುರಿತು ಕುವೆಂಪು ಕವಿತೆ "ಶ್ರೀ ಗುರು" ಹೀಗೆ ಪ್ರಾರಂಭವಾಗುತ್ತದೆ—

ಭರತ ಖಂಡದ ನೀಲಗಗನನ ತಿಮಿರ ಮುಸಗಿರಲು,
ಭಾರತೀಯರು ತಮ್ಮ ಧ್ಯೇಯವ ಮರೆತು ಮಲಗಿರಲು
ಪರಮ ಹಂಸನೆ, ಉದಯ ಸೂರ್ಯನ ತೆರದಿ ರಂಜಿಸಿದೆ ;
ಹೃದಯ ನಭದಜ್ಞಾನ ತಿಮಿರವನಿರದೆ ಭಂಜಿಸಿದೆ.

ಈ ಕವನ ನಾಲ್ಕು ಪಾದಗಳ ಆರು ಪದ್ಯಗಳಿಂದ ಮುಗಿಯುತ್ತದೆ. ಕಡೆಯ ನಾಲ್ಕು ಪಾದಗಳ ಪದ್ಯ ಇಂತಿದೆ.

ದಕ್ಷಿಣೇಶ್ವರ ದೇವನಿಲಯದ ಪರಮ ಯೋಗೀಂದ್ರ,
ಶ್ರೀ ವಿವೇಕಾನಂದ ಪೂಜಿತನಾತ್ಮ ಭಾವಿತನೆ,
ಲೋಕಜೀವರಿಗಾತ್ಮಶಕ್ತಿಯ ನೀಡಿ ಕಾಪಾಡು ;
ನೆನೆವರೆಲ್ಲರ ಹೃದಯವಾಗಲಿ ನಿನ್ನ ನೆಲೆವೀಡು !

ಶಕುಂತಲಾಬಾಯಿ 'ಅಗ್ನಿಹಂಸ' ದಿಂದ ಆರಿಸಿಕೊಂಡ ಇನ್ನೊಂದು ಕವನ 'ಮಹಾ ಮಾತೆ' ಶ್ರೀ ರಾಮಕೃಷ್ಣ ಪರಮ ಹಂಸ ದೇವರ ಸಹ ಧರ್ಮ ವ್ರತ ದೀಕ್ಷಿತೆ ಪತ್ನಿ ಶಾರದಾ ಮಣಿ ದೇವಿ. ಅದರ ಪ್ರಾರಂಭ ಹೀಗೆ—

ಶ್ರೀ ಶಾರದಾದೇವಿ, ಹೇ ಮಹಾಮಾತೆ,
ಶ್ರೀ ರಾಮಕೃಷ್ಣ ಗುರುದೇವ ಸಂಪ್ರೀತೆ,
ಪರಮ ಪಾವನ ಹೃದಯೆ, ಕಲಿಯುಗದ ಸೀತೆ,
ಭಕ್ತಿಯಿಂದಾರಾಧಿಪೆವು ನಿನ್ನನಮ್ಮಾ !

"ಮಹಾ ಮಾತೆ" ಕವನವೂ ನಾಲ್ಕು ಪಾದಗಳುಳ್ಳ ನಾಲ್ಕು ಪದ್ಯಗಳಿಂದ ಕೂಡಿದೆ.

"ಶ್ರೀ ಗುರು" ಕವನಕ್ಕೆ ಪೂರಕ "ಮಹಾ ಮಾತೆ" ಕವನ. ಅನಂತರದಲ್ಲಿ ಆರಿಸಿಕೊಂಡಿರುವ ಕವನ "ಸ್ವಾಮಿ ವಿವೇಕಾನಂದ". ಈ ಕವನದ ಪದ್ಯಗಳೂ ಆರು ಒಂದೊಂದು ಪದ್ಯವೂ ನಾಲ್ಕು ಪಾದಗಳು ಉಳ್ಳದ್ದು.

ಶ್ರೀ ವಿವೇಕಾನಂದ ಗುರುವರ, ನವಯುಗಾಚಾರ್ಯ,
ರಾಮಕೃಷ್ಣರ ಧೀಮಶಿಷ್ಯನೆ ವೀರ ವೇದಾಂತಿ,
ಭಾರತಾಂಬೆಯ ಧೀರ ಪುತ್ರನೆ ಸಾಧು ಭೈರವನೆ,
ಸ್ಥೈರ್ಯದಚಲವೆ, ಧೈರ್ಯದಂಬುಧಿ, ಜಯತು ! ಜಯತು.

ಹೀಗೆ ಪ್ರಾರಂಭವಾಗುತ್ತದೆ "ಸ್ವಾಮಿ ವಿವೇಕಾನಂದ" ಕವನ. ವಿವೇಕಾನಂದ ಸ್ವಾಮಿಗಳ ಮಹಿಮೆಗಳು ಪ್ರತಿಯೊಂದು ಸಾಲಿನಲ್ಲೂ ವಿದ್ಯುತ್ಷಾಕ್ ಕೊಡುವ ಪ್ರಭಾವವಿದೆ.

ಮುಂದಿನ ಹಾಗೂ "ಶ್ರೀ ರಾಮಕೃಷ್ಣ ಪರಮ ಹಂಸ" ಕಾವ್ಯವಾಚನ ಚಕ್ರದ ಮುಕ್ತಾಯ ಕವನ "ಋತ ಚಿನ್ಮಯೀ ಜಗನ್ಮಾತೆಗೆ."

ಓಂ ಸಚ್ಚಿದಾನಂದ ತ್ರಿತ್ವಮುಖವಾದ ಪರಬ್ರಹ್ಮದಲ್ಲಿ
ಅಭವದೊತ್ತಾದೆ, ಭವದ ಬಿತ್ತಾದೆ, ಋತದ ಚಿತ್ತಾದೆ ನೀ ;

ಇಳಿದು ಬಾ ಇಳೆಗೆ, ತುಂಬಿ ತಾ ಬೆಳಗೆ ಜೀವಕೇಂದ್ರದಲ್ಲಿ;
ಮತ್ತೆ ಮೂಡಿ ಬಾ ಒತ್ತಿ ನೀನೆನ್ನ ಚಿತ್ತ ಪೃಥವಿಯಲ್ಲಿ.

ಹೀಗೆ ಪ್ರಾರಂಭವಾದ "ಋತ ಚಿನ್ಮಯೀ ಜಗನ್ಮಾತೆಗೆ" ಕವನ ನಾಲ್ಕು ಪದ್ಯಗಳೂ ಉತ್ತುಂಗ ಶಿಖರಕ್ಕೇರಿವೆ, ಭಾವ ಪರಾಕಾಷ್ಟತೆಯಲ್ಲಿ. ಈ ಕವನದ ಮುಕ್ತಾಯ ಪದ್ಯ ಹೀಗಿದೆ—

ಹೃದಯಪದ್ಮ ತಾನರಳಿ ಕರೆವೆ ಬಾರಮ್ಮ ಬಾ, ಇಳಿದು ಬಾ!
ಮನೋದ್ವಾರ ತಾ ಬಿರಿಯೆ ಕರೆವೆ, ಜಗದಂಬೆ, ಬಾ ಇಳಿದು ಬಾ!
ಅಗ್ನಿಹಂಸ ಗರಿಗೆದರೆ ಕರೆವೆ, ಬಾ ತಾಯಿ, ಬಾ, ಇಳಿದು ಬಾ!
ಚೈತ್ಯ ಪುರುಷ ಯಜ್ಞಕ್ಕೆ ನೀನೆ ಅಧ್ವರ್ಯು, ಬಾ, ಇಳಿದು ಬಾ।

ಶ್ರೀ ರಾಮಕೃಷ್ಣ ಪರಮ ಹಂಸ ಕಾವ್ಯವಾಚನ ಚಕ್ರ ಗಮಕದಲ್ಲಿ ಹೀಗೆ ಮೂಡಿ ಬಂದಿದೆ. ಅದು ಗಮಕ ವೇದಿಕೆಯನ್ನು ಇನ್ನೂ ಏರಿಲ್ಲ. ದಿವ್ಯ ಘಳಿಗೆಗೆ ಕಾದು ಕೂತಿದೆ. ಆದರೆ ಈ ಕಾವ್ಯವಾಚನ ಚಕ್ರದ ಕವನಗಳು ಧ್ವನಿ ಮುದ್ರಿಕೆಯಲ್ಲಿ ಮೂಡಿ ಬಂದಿದೆ; ಅದು ಖಾಸಗಿ ಉಪಯೋಗಕ್ಕೆ ನಮಗೆ ಮತ್ತು ಶ್ರೀ ಕುವೆಂಪು ಅವರಿಗಾಗಿ. ಕುವೆಂಪು ಅವರಿಗೆ ಒಂದು ಧ್ವನಿಮುದ್ರಿಕೆಯನ್ನು ಶಕುಂತಲಾಬಾಯಿ ಕಾಣಿಕೆಯಾಗಿ ಅರ್ಪಿಸಿದ್ದಾರೆ.

ಎಸ್. ಎನ್. ಮೂರ್ತಿ "ಬೆಂಗಳೂರಿಗೆ ನೀವು ಹೋಗುವಾಗ ಕಲ್ಕತ್ತಾದಿಂದಲೇ ಹೋಗಬೇಕು. ಮತ್ತೆ ಬನ್ನಿ ಕಲ್ಕತ್ತೆಗೆ. ಒಂದು ವಾರವಿದ್ದು ಮಧ್ವ ಸಂಘದಲ್ಲಿ, ಮೈಸೂರು ಅಸೋಸಿಯೇಷನ್ನಿನಲ್ಲಿ ಕಾರ್ಯಕ್ರಮ ಕೊಟ್ಟು ಕಲ್ಕತ್ತಾ ಬಿಡಬೇಕು." ಎಂದು ವಿನಂತಿಸಿಕೊಂಡಿದ್ದರು. ಆದುದರಿಂದ ನಾವು ನಮ್ಮ ಅಳಿಯಂದಿರಾದ ಡಾ|| ಎಸ್. ಕೆ. ಕೋಟೀಶ್ವರ, ಮಗಳು ವನಜ ಕೋಟೀಶ್ವರ ಅವರ ಜಮಷಡಪುರದಲ್ಲಿ ಎರಡು ವಾರಗಳಿದ್ದೆವು.

ಬಿಹಾರದ ಕಬ್ಬಿಣ ಉಕ್ಕಿನ ನಗರ ತಾತಾ ನಗರ. ಜೆಮ್ ಸೇಟ್ ಜಿ ತಾತಾ ತಮ್ಮ ಮುಂದಾಲೋಚನೆಯಿಂದ ಯಾರ ಗಮನವನ್ನೂ ಸೆಳೆಯದಿದ್ದ ಸಾಕ್ಚಿಹಳ್ಳಿಯನ್ನು ಭಾರತದ ಬೃಹದ್ ಕೈಗಾರಿಕಾ ಕ್ಷೇತ್ರವನ್ನಾಗಿ ಪರಿವರ್ತಿಸಿ ಜಮ್‌ಷೆಡ್ ಪುರವನ್ನಾಗಿ ಮಾಡಿದರು. ತಾತಾ ಅಯರ್ನ್ ಅಂಡ್ ಸ್ಟೀಲ್ ಕಂಪನಿಯಿಂದ ಜಮ್‌ಷೆಡ್ ಪುರ ಬಿಹಾರ್ ರಾಜ್ಯದಲ್ಲಿ ಎರಡನೆಯ ಮಹಾ ಪಟ್ಟಣವಾಗಿ ಪರಿಣಮಿಸಿದೆ. ನನ್ನ ಅಳಿಯ ಡಾ|| ಎಸ್. ಕೆ. ಕೋಟೀಶ್ವರ ರೀಜನಲ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಸಂಸ್ಥೆಯಲ್ಲಿ ಇಂಗ್ಲಿಷ್ ಭಾಷಾ ಪ್ರಾಧ್ಯಾಪಕರಾಗಿದ್ದಾರೆ. ಕನ್ನಡ ಇಂಗ್ಲಿಷ್ ಭಾಷೆಗಳಲ್ಲಿ ಆಗಾಗ ಕತೆ–ಪ್ರಬಂಧಗಳನ್ನು ಬರೆಯುತ್ತಿದ್ದುದುಂಟು. ಅವರ ಲೇಖನಗಳಲ್ಲಿ ನವಿರು ಹಾಸ್ಯ ಓದುಗರನ್ನು ಚಕ್ಕಲಗುಲಿ ಇಟ್ಟು ನಗಿಸುತ್ತವೆ. ವನಜಾ ಕೋಟೀಶ್ವರ ಕೂಡ ಸಣ್ಣಕತೆಗಾರ್ತಿ. ಕನ್ನಡದಲ್ಲಿ ಹಾಸ್ಯ ವಿಡಂಬನ ಲೇಖನಗಳನ್ನು ಬರೆಯಬಲ್ಲಳು. ಗೋಕುಲ, ಕೈಲಾಸ ಪತ್ರಿಕೆಗಳಲ್ಲಿ ಹಲವಾರು ಲೇಖನಗಳು ಪ್ರಸಿದ್ಧವಾಗಿದ್ದವು. ಸುಪ್ರಸಿದ್ಧ ಕತೆಗಾರರೂ "ಮೋಚಿ" ಕತೆಯ ಕೀರ್ತಿ ಶಾಲಿಗಳೂ ಆಗಿದ್ದ ನನ್ನ ಮಿತ್ರ

ದಿ|| ಭಾರತೀಪ್ರಿಯರು ವನಜಾ ಕೋಟೀಶ್ವರರ ಹಾಸ್ಯ ಲೇಖನಗಳಿಗೆ ಹೊಳಪು ಕೊಟ್ಟು ತುಂಬ ಮೆಚ್ಚುಗೆ ತೋರ್ಪಡಿಸಿದ್ದರು. ದಂಪತಿಗಳು ಕನ್ನಡದಲ್ಲಿ ಹೆಸರು ಗಳಿಸುವ ಪ್ರತಿಭೆಯುಳ್ಳವರು. ಆದರೆ ಯಾಕೋ ಅವರುಗಳು ಮನಸು ಮಾಡಿಲ್ಲ.

ನಾನು ಕಲಾ ಸೌಂದರ್ಯಪ್ರಿಯ. ನನ್ನ ಸೌಭಾಗ್ಯವತಿ ಆರೋಗ್ಯಭಾಗ್ಯವಿಲ್ಲದ ಮಹಿಳೆ. ಆದುದರಿಂದ ನಮ್ಮಿಬ್ಬರಿಗೂ ತಾತಾ ಸ್ಟೀಲ್ ಅಂಡ್ ಐರನ್ ವರ್ಕ್ಸ್‌ನ ನೋಡುವ ಭ್ರಮೆಯಿರಲಿಲ್ಲ. ಆದರೆ ನಮ್ಮ ಮೈಸೂರು ಪ್ರಸಿದ್ಧಿಯ ಬೃಂದಾವನ ತೋಟವನ್ನು ಸೂಕ್ಷ್ಮಾಕೃತಿ ಸೂಕ್ಷ್ಮದಲ್ಲಿ ಹೋಲುವ ತಾತಾ ಉದ್ಯಾನವನವನು ನೋಡಲು ಮರೆಯಲಿಲ್ಲ. ಅದಕ್ಕೆ ಸನಿಹದಲ್ಲಿದ್ದ ಜಲಾಶಯ ದಂಡೆಯ ಮೇಲಿದ ಉಪಾಹಾರ ಮಂದಿರದಲ್ಲಿ ಮಸಾಲೆ ದೋಸೆಯನ್ನು ತಿನ್ನುವ ನಾಲಗೆ ರುಚಿಯನು ಮರೆಯಲಿಲ್ಲ. ನನ್ನ ಅಳಿಯಂದಿರಿದ್ದ ನಿವಾಸಕ್ಕೆ ಹತ್ತೆಂಟು ನಿಮಿಷಗಳ ಹತ್ತಿರದಲ್ಲಿ ಪ್ರತಿ ಸಂಜೆಯೂ ಸುವರ್ಣರೇಖ ನದಿಯ ದಂಡೆಯ ಬಳಿ ನಮ್ಮ ಮೊಮ್ಮಕ್ಕಳು ಚಿ|| ಮೀರ ಮತ್ತು ಚಿ|| ಗೌತಮರೊಡನೆ ಸಂಚಾರ ಹೋಗುವುದನ್ನು ಎರಡು ವಾರಗಳಲ್ಲೂ ತಪ್ಪಿಸಲಿಲ್ಲ. ಜಮ್‌ಷಡ್ ಪುರದಲ್ಲಿ ಕರ್ಣಾಟಕ ಸಂಘವಿತ್ತು. ನಾವಾಗಿ ನಾವು ಕೇಳಲಿಲ್ಲ; ಕಾರ್ಯಕರ್ತರು ಅವರಾಗಿ ಅವರು ಬರಲಿಲ್ಲ. ಆದುದರಿಂದ ಶಕುಂತಲಾಬಾಯಿಗೆ ಕಂಠದ ದಣಿವು ತಪ್ಪಿತು. ಜಮ್‌ಷಡ್‌ಪುರದಲ್ಲಿ ಆಂಧ್ರ ತಮಿಳು ಬಂಧುಗಳು ತಮ್ಮ ತಮ್ಮ ಸಂಘಗಳಿಗೆ ಸ್ವಂತ ಕಟ್ಟಡಗಳನ್ನು ಹೊಂದಿರುವರೆಂದು ಕೆಲವದಂತಿ. ಆದರೆ ನಮ್ಮ ಕನ್ನಡ ಬಂಧುಗಳಿಗೆ 1968ರಲ್ಲಿ ತಮ್ಮ ಸಂಘಕ್ಕೆಂದು ಒಂದು ಸೂರು ಸ್ವಂತದ್ದಾಗಿ ಇರಲಿಲ್ಲ. ಈಗ ಏನಾಗಿದೆಯೋ, ನಾನು ವಿಚಾರಿಸುವ ಗೋಜಿಗೆ ಹೋಗಿಲ್ಲ. ತಮ್ಮತನವನ್ನು ಕರ್ಣಾಟಕದಲ್ಲೆ ಉಳಿಸಿಕೊಳ್ಳದ ಕನ್ನಡಿಗರು ಬೇರೆಲ್ಲಿ ಉಳಿಸಿಕೊಂಡಾರು !

ಕಲ್ಕತ್ತಾದಲ್ಲಿ ಗಮಕ ವಾಚನ

ಎರಡು ವಾರಗಳು ಜಮ್‌ಷೆಡ್‌ಪುರದಲ್ಲಿದ್ದು, ಅಳಿಯ, ಮೊಮ್ಮಗಳು, ಮೊಮ್ಮಕ್ಕಳ ಲಾಲನೆ ಪಾಲನೆಗಳಲ್ಲಿ ಅದ್ದಿ ಮುಳುಗಿ ಕಲ್ಕತ್ತೆಗೆ ಹಿಂದಿರುಗಿದೆವು. ಮತ್ತೆ ಎಸ್. ಎನ್. ಮೂರ್ತಿ ದಂಪತಿಗಳ ಅತಿಥಿಗಳಾದೆವು.

ಎಸ್. ಎನ್. ಮೂರ್ತಿ ದಂಪತಿಗಳು ತಮ್ಮ ಹಿರಿಯ ಮಗ ಚಿ|| ಶ್ರೀನಿವಾಸನ ಉಪನಯವಾದ ಸಲುವಾಗಿ ಕಲ್ಕತ್ತಾದ ಕನ್ನಡಿಗ ಮಿತ್ರರನ್ನೂ, ಬಂಗಾಳಿ ಬಂಧುಗಳನ್ನು ಸೇರಿಸಿ ಒಂದು ಸಂತೋಷಕೂಟವೇರ್ಪಡಿಸಿದರು. ಶಕುಂತಲಾಬಾಯಿ ಕಾಮವಾಚನ ಮಾಡಿದರು. ಭಾರವಾದ ಕಾರ್ಯಕ್ರಮವಲ್ಲ. ಲಘುವಾಗಿ ಸುಗಮ ಸಂಗೀತದಂತೆ ತೋರುವ ಕಾರ್ಯಕ್ರಮ. ಹೇಳಿದ್ದೇ ಹೇಳೋ ಕಿಸಬಾಯಿದಾಸ ಎಂಬಂತೆ ನಮ್ಮ "ಕರ್ಣಾಟಕ ಕವಿ ಕಾವ್ಯ ಪರಂಪರೆ" ಇಲ್ಲಿಯೂ. ಆದರೆ, ಇಲ್ಲಿನ ಕಾರ್ಯಕ್ರಮದಲ್ಲಿ ಕರ್ಣಾಟಕ ಸಂಗೀತಸಾಹಿತ್ಯದೊಡನೆ ಸಮಾನ ಸ್ಥಾನ ಪಡೆದಿತ್ತು. ಆದರೆ

ಸಾಹಿತ್ಯದ ಘನತೆಗೆ ಕುಂದಿರಲಿಲ್ಲ. ಬಂಗಾಳಿ ಬಂಧುಗಳಿಗಾಗಿ ನಾನು ಇಂಗ್ಲೀಷಿನಲ್ಲಿ ಪ್ರಾಸಂಗಿಕ ನಿರೂಪಣೆ ನೀಡುತ್ತಿದ್ದೆ. ಬಂಗಾಳಿ ಬಾಬುಗಳು ನನ್ನ ಸೌಭಾಗ್ಯವತಿಯ ಕಂಠವನ್ನು ಮೆಚ್ಚಿಕೊಂಡರು. ಕನ್ನಡ ಬಂಧುಗಳು ಕಂಠಮಾಧುರ್ಯ, ಸಾಹಿತ್ಯ ಬಂಧುರ ಎರಡನ್ನೂ ಮೆಚ್ಚಿಕೊಂಡರು.

ಮಾಧ್ವ ಸಂಘ ಮಧ್ವನವಮಿಯನ್ನು ವಿಜೃಂಭಣೆಯಿಂದ ಆಚರಿಸಿತು. ಕಲ್ಕತ್ತೆಯಲ್ಲಿದ್ದ ಸಮಸ್ತ ಮಾಧ್ವ ಬಂಧುಗಳೂ ಸೇರಿದ್ದರು. ಬೆಳಗ್ಗೆ ಒಂದು ಗಂಟೆಯ ಕಾವ್ಯವಾಚನ ಕುಮಾರವ್ಯಾಸ ಭಾರತದಿಂದ "ಭೀಮಾಂಜನೇಯ ಸಮಾಗಮ" ಅರಣ್ಯ ಪರ್ವದಿಂದ ವಾಚನಕ್ಕೆ ಆರಿಸಿಕೊಂಡಿತ್ತು. ಸೌಗಂಧಿಕಾ ಪುಷ್ಪವನ್ನು ದ್ರೌಪದಿ ಅಪೇಕ್ಷಿಸುತ್ತಾಳೆ. ಭೀಮಸೇನ ತಂದುಕೊಡುವೆನೆಂದು ಸೌಗಂಧಿಕಾ ಪುಷ್ಪಾನ್ವೇಷಣಕ್ಕಾಗಿ ಹೊರಡುತ್ತಾನೆ. ಮಧ್ಯೆ ಆಂಜನೇಯನ ಬಾಲ ಅಡ್ಡಾಗುತ್ತದೆ. ಅದನ್ನು ಗದೆಯಿಂದನೂಕಿ ಮಾರ್ಗವನ್ನು ಸುಗಮ ಮಾಡಿಕೊಂಡು ಮುಂದುವರಿಯಲು ಪ್ರಯತ್ನಿಸಿದ ಭೀಮ. ಸಾಧ್ಯವಾಗಲಿಲ್ಲ. ಅವನ ಹಮ್ಮು ಬಿಮ್ಮು ಮಣ್ಣು ಮುಕ್ಕಿತು. ಜ್ಞಾನೋದಯವಾಯಿತು——"ನೀನಸ್ಖಲಿತ ಬಲ-ನೀನಾರು-ತನ್ನನು ತಿಳಿಯ ಹೇಳು ಮಹಾತ್ಮ ಕಪಿ-ನೀನೆನುತ ಕೈ ಮುಗಿದ". ಆಂಜನೇಯ ಭೀಮನಿಗೆ ತಾನಾರೆಂಬುದನ್ನು ಶ್ರುತಪಡಿಸುತ್ತಾನೆ. ಆಗ ಭೀಮ "ನಿಮ್ಮ ಕಾರುಣ್ಯೋದಯವುಭಯಮುಗಾಯ್ತುಲಾ ಚರಿತಾರ್ಥರಾವೆಂದ." ಭೀಮ ಅಲ್ಲಿಗೆ ನಿಲ್ಲಲಿಲ್ಲ

"ಹಿರಿಯರೆನಗಿಬ್ಬರು ಯುಧಿಷ್ಠಿರ
ಧರಣಿಪತಿ ನೀನೊಬ್ಬನಯ್ಯಂ
ದಿರುಗಳಿಬ್ಬರು ಮಾರುತನು ನೀನೊಬ್ಬನಿಂದೆನಗೆ ॥
ಗುರುಗಳಿಬ್ಬರು ಬಾದರಾಯಣ
ಪರಮ ಋಷಿ ನೀನೊಜ್ಜನೆಂದುಪ
ಚರಿಸಿದನು ಪವಮಾನನಂದನನಂಜನಾಸುತನ,

ಮಹಾಮಹಿಮನೂ ಗುಣಗ್ರಾಹಿಯೂ ಆದ ಆಂಜನೇಯ ಭೀಮನ ವಚನಗಳಿಗೆ ಸುಪ್ರೀತನಾಗಿದ್ದಾನೆ.

ಭೀಮ, "ಅಂಜುವೆನು ಬಿನ್ನಹಕೆ....ದನುಜ ಪುರಕೆ ಧನಂಜಯನ ಹೊತ್ತಿಸಿದ ಖಳರನು ಭಂಜಿಸಿದ ಸಾಗರವ ದಾಂಟಿದ ರೂಪನ್ನು ತೋರಬೇಕೆ"ಂದು ಪ್ರಾರ್ಥಿಸುತ್ತಾನೆ. ಆಗ ಹನುಮಂತ

ಕೃತಯುಗದವರು ತ್ರೇತೆಯವರಿಂ
ದತಿ ಪರಾಕ್ರಮ ಯುಕ್ತರವರದು
ಭುತದ ಬಲವೀ ತ್ರೇತೆಯವರಲಿ ದ್ವಾಪರ ಸ್ಥಿತಿಗೆ
ವಿತತಸತ್ವರು ಕಲಿಯುಗದ ದು
ರ್ಮತಿ ಮನುಷ್ಯವ್ರಾತ ಹೀನಾ
ಕೃತಿ ಕಣಾ ಯುಗಧರ್ಮ ಕೃತ ಮೊದಲಾಗಿ ಕಲಿಯುಗಕೆ ॥
ಹೀನ ಸತ್ವರು ಸತ್ಯ ಧರ್ಮ ವಿ
ಹೀನರರ್ಥ ಪರಾಯಣರು ಕುಜ
ನಾನುರಕ್ತರು ವರ್ಣ ಧರ್ಮಾಶ್ರಮ ವಿದೂಷಕರು

ದಾನಿಗಳು ದುಷ್ಪಾತ್ರದಲಿ ಗುಣ
ಮಾನಿಗಳು ಗರ್ವಿತರು ಮಿಥ್ಯಾ
ಜ್ಞಾನಿಗಳು ಕಲಿಯುಗದ ಮನುಜರು ಭೀಮ ಕೇಳೆಂದ ॥

ಆದರಿನೀ ದ್ವಾಪರದ ಕಡೆಯಲಿಯುದಿತ ಮಾನುಷ ಕರ್ಮ ಸಂಶಯವಿದರೊಳೆಮ್ಮಯ ರೂಪು ಗೋಚರವಲ್ಲ ಮರ್ತ್ಯರಿಗೆ ಇದು ನಿಧಾನವು" ಎನ್ನುತ್ತಾನೆ. ಭೀಮ ಒತ್ತಾಯಿಸುತ್ತಾನೆ

ಆಗ ಹನುಮಂತ—ಅದಡಿನ್ನು ನಿರೀಕ್ಷಿಸೆನುತ

"ಮೇರುವಿನ ತಪ್ಪಲಲಿ ಬೆಳೆದ ಬ
ಲಾರಿ ಚಾಪವೊ ಮೇಣ್ ತ್ರಿವಿಕ್ರಮ
ನಾರುಭಟೆಯಲಿ ಜಡಿವ ಜ್ಯೋತಿರ್ಗಣದ ಬಲು ಮಿಳಿಯೊ
ಚೂರಿಸುವ ಬಲು ಚಾಲವೋ ಜಂ
ಭಾರಿ ಭವನವನಳ್ಳಿರಿಯೆ ತ್ರಿಪು
ರಾರಿಯೊಡ್ಡಿಸ ಹೊಳಹಿನಲಿ ಹೊಳ ಹೊಳೆದನಾ ಹನುಮ ॥

ಭೀಮ ನೋಡಿದ. ನಮಗಿದು ಸಾಕು. ಹನುಮದ ರೂಢಿಯಲಿ ಕಂಗಳ ಕೋಡಿಯಲಿ ನೀರೊರೆಯಿತು. ಭೀತಿಯೂ ಉಂಟಾಯಿತು.

ಸಾಕು ಸಾಕಂಜಿದೆನು ಮನುಜರು
ಕಾಕುಬಲರು ನಿಜ ಸ್ವಭಾವವ
ನೇಕೆ ಬಿಸುವೆವು ತಿಳಿದು ತಿಳಿಯೆವು ಕಂಡೊಡಂಜುವೆವು
ಸಾಕು ಪೂರ್ವದ ರೂಪಿನಲಿ ನಿ
ವ್ಯಾಕುಲನ ಮಾಡೆನಲು ಪವನಜ
ನಾ ಕಪೀಶ್ವರ ನಗುತ ಮುನ್ನಿನ ರೂಪ ಕೈಗೊಂಡ

ಅಂಜದಿರು ನೀನಿನ್ನು ಮೆಚ್ಚಿದೆ
ನಂಜಲಿಸು ನಾ ಸಲಿಸುವೆನು ನ
ಮ್ಮಂಜನಾದೇವಿಯರು ಕುಂತೀದೇವಿಯೊದರಲೆ
ರಂಜಕರು ನಾವೆಲ್ಲ ಹೇಳು ಸ
ಮಂಜಸದಲೆನೆ ಭೀಮ ನಗುತ ಧ
ನಂಜಯನ ಟೆಕ್ಕೆಯಕೆ ಬಿಜಯಂಗೈಯಬೇಕೆಂದ ॥

ಕಲ್ಕತ್ತೆಯ ಕನ್ನಡ ಮಾಧ್ವ ಬಂಧುಗಳು ಶಕುಂತಲಾಬಾಯಿಯ ಕಾವ್ಯ ವಾಚನವನ್ನು ಬಹಳವಾಗಿ ಮೆಚ್ಚಿಕೊಂಡರು. "ನಮಗೆ ಅಪರೂಪ ಇಂಥ ಕಾರ್ಯಕ್ರಮಗಳು. ನಮ್ಮ ಕನ್ನಡ ನೆಲಕ್ಕೆ ಬಂದಾಗ ಕೇಳಬೇಕಷ್ಟೆ. ಅದೂ ನಾವು ಬಂದಾಗ ಇಂಥ ಕಾರ್ಯಕ್ರಮ ಗಳಿದ್ದಾಗ ಮಾತ್ರ" ಎಂದು ಅಲವತ್ತು ಕೊಂಡರು. ನಮ್ಮವರಿಗೆ ಬೇಕಾದ ಒಂದು ಸಾರ್ಥಕ ಕಾರ್ಯಕ್ರಮವನ್ನು ಕೊಟ್ಟೆವಲ್ಲ ಎಂದು ನಮಗೂ ಸಂತೋಷ. ಎಸ್. ಎನ್. ಮೂರ್ತಿ ದಂಪತಿಗಳ ಹಿಗ್ಗು ಮಿತಿ ಮೀರಿತ್ತು.

ಎಸ್. ಎನ್. ಮೂರ್ತಿ ಕಲ್ಕತ್ತೆ ಬಿಟ್ಟು ದೆಹಲಿಗೆ ವರ್ಗವಾಗಿ ಹೋದ ಮೇಲೆ ಅಲ್ಲಿ ಶ್ರೀ ಕೃಷ್ಣಮಂದಿರವನ್ನು ನಿರ್ಮಿಸಿ ಅದನ್ನು ದೆಹಲಿಯಲ್ಲಿರುವ ಕನ್ನಡಿಗರಿಗೆ ಜನ ಪ್ರಿಯಗೊಳಿಸುವ ಕಾರ್ಯದಲ್ಲಿ ಪ್ರಮುಖಪಾತ್ರ ವಹಿಸಿದುದು ನಮ್ಮ ದೆಹಲಿಯ ಕನ್ನಡ ಜನ ಬಲ್ಲ ಸಂಗತಿಯೇ ಆಗಿದೆ. ಕನ್ನಡ ಸಾಹಿತ್ಯ ಪರಿಷತ್ತು ದೆಹಲಿಯಲ್ಲಿ 1978ರಲ್ಲಿ ಆಚರಿಸಿದ

ಅಖಿಲ ಭಾರತ 50ನೆಯ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿಯ ಸದಸ್ಯರಾಗಿಯೂ ಇದ್ದುಕೊಂಡು ಎಸ್. ಎನ್. ಮೂರ್ತಿ ನಮ್ಮ ಕನ್ನಡ ಭಾಷೆಗೆ ಸಲ್ಲಿಸಿದ ಸೇವೆಯೂ ಅವರ ಕನ್ನಡ ಭಕ್ತಿಗೆ ಕಳಶಪ್ರಾಯವಾಗಿದೆ.

ಕಲ್ಕತ್ತೆಯ ಮೈಸೂರು ಅಸೋಸಿಯೇಷನ್ ಒಂದು ಭಾನುವಾರ ಸಂಜೆ ಶಕುಂತಲಾಬಾಯಿಯ ಕಾವ್ಯವಾಚನ ಕಾರ್ಯಕ್ರಮವನ್ನು ಸಂಘಟಿಸಿತು. ಕಲ್ಕತ್ತೆಯ ಕನ್ನಡ ಬಾಂಧವರೆಲ್ಲ ಬಂದಿದ್ದರು. ಕುಮಾರವ್ಯಾಸ ಭಾರತದಿಂದ "ಯಕ್ಷಪ್ರಶ್ನೆಯು" ಮುಖ್ಯ ಭಾಗ, ಲಕ್ಷ್ಮೀಶನಿಂದ "ಸುಧನ್ವ" ಮುಖ್ಯಭಾಗ, ಕುವೆಂಪು "ಶ್ರೀರಾಮಾಯಣ ದರ್ಶನಂ" ಕಾವ್ಯದಿಂದ "ರಯ್‌ಗೆ ಕರೆದೊಯ್ ಓ ಅಗ್ನಿ" ಯಲ್ಲಿ ಮುಖ್ಯಭಾಗ ಆರಿಸಿ ಕೊಂಡಿತ್ತು. ನನ್ನ ನಿರೂಪಣೆಯೂ ಇತ್ತು. ಸಭೆ ಕಿವಿಗೊಟ್ಟು ಆಲಿಸಿತು. ಕಾರ್ಯ ಕ್ರಮದ ಧ್ವನಿಮುದ್ರಿಕೆಯೂ ಆಯಿತು. ಕಲ್ಕತ್ತೆಯ ಮೈಸೂರು ಅಸೋಸಿಯೇಷನ್ ಇನ್ನೂ ಒಂದೆರಡು ಕಾರ್ಯಕ್ರಮಗಳನ್ನು ಅಪೇಕ್ಷಿಸಿತು. ಆದರೆ ನಮಗೆ ಬೇಗ ಊರಿಗೆ ಹೋಗುವ ಧಾವಂತ ಜೆನ್ನುಹತ್ತಿತ್ತು. ಎರಡು ತಿಂಗಳುಗಳಷ್ಟು ದೀರ್ಘಪ್ರವಾಸ ಮಾಡಿದ್ದೆವಲ್ಲ! ಆದುದರಿಂದ "ನಮ್ಮ ಬೆಂಗಳೂರನ್ನು ಯಾವಾಗ ನೋಡೇವು" ಎಂದು ಜೀವ ತುಡುಕುತ್ತಿತ್ತು. ಕಲ್ಕತ್ತ ಬಿಟ್ಟು ಹೌರ–ಮದ್ರಾಸ್ ರೈಲು ಹತ್ತಿದೆವು.

ಮದರಾಸಿನ ಅಯ್ಯನಾರ್ ಕರ್ಣಾಟಕ ಸಂಘದಲ್ಲಿ ನಾವು

ಮದರಾಸಿನಲ್ಲಿ ನಾವು ಒಂದುವಾರ ಅನುರಾಧಾ ಎಂಟರ್‌ಪ್ರೈಸಸಿನ ಒಡೆಯರಾದ ಎಂ. ಕೆ. ಗೋಪೀನಾಥ್ ದಂಪತಿಗಳ ಅತಿಥಿಗಳಾದೆವು. ಚಿಕ್ಕಮ್ಮ ಚಿಕ್ಕಪ್ಪನವರು ಗಳನ್ನು ತನ್ನ ಸ್ವಂತ ತಾಯಿತಂದೆಯರಂತೆ ಭಾವಿಸಿ ಆದರೋಪಚಾರಗಳಿಂದ ನಮ್ಮನ್ನು ತಣಿಸಿ ಸಂತೋಷಪಟ್ಟಳು ಸುಂದರಾಬಾಯಿ. ಗೋಪೀನಾಥರೂ ಅಷ್ಟೆ. ತಮ್ಮ ಸ್ವಂತ ಅತ್ತೆ ಮಾವಂದಿರಂತೆಯೇ ನಮ್ಮನ್ನು ಭಾವಿಸಿ ಆದರಿಸಿ ಸಂತೃಪ್ತಿಪಟ್ಟರು. ಈ ದಂಪತಿ ಗಳ ಪ್ರೀತಿ ವಿಶ್ವಾಸಗಳು ಯಾವ ಎಲ್ಲೆ ಮುಟ್ಟಿದೆಯೆಂದರೆ ನಾವು ಮದರಾಸಿಗೆ ಹೋದಾಗಲೆಲ್ಲ ಹೋಗುವ ರೈಲು ಛಾರ್ಜು ನಮ್ಮದಾದರೆ ಹಿಂದಿರುಗುವ ಪ್ರಯಾಣದ ವೆಚ್ಚ ಈ ದಂಪತಿಗಳದು. ಈ ದಂಪತಿಗಳು ಮದರಾಸಿಗೆ ಹೊಂದಿಕೊಂಡು ತಮಿಳು ಬಾಂಧವರ ಜನಪ್ರಿಯತೆಯನ್ನು ಗಳಿಸಿದ್ದಾರೆ. ಕನ್ನಡತನವನ್ನು ಬಿಟ್ಟುಕೊಡದೆ ತಮ್ಮ ನೆರೆಹೊರೆಯವರನ್ನು ಸೇರಿಸಿಕೊಂಡು ಒಂದು ಕನ್ನಡ ಸಂಘವನ್ನು ಕಟ್ಟಿಕೊಂಡಿದ್ದಾರೆ.

ದೆಹಲಿಯಿಂದ ಕ. ವೆಂ. ರಾಘವಾಚಾರ್ ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದ ಪ್ರೊ|| ಎಂ. ಮರಿಯಪ್ಪಭಟ್ಟರಿಗೆ ನಾವು ದೆಹಲಿಯಿಂದ ಮದ್ರಾಸಿಗೆ ಬರುವ ವಿಷಯವನ್ನು ಮುಂಗಡವಾಗಿ ತಿಳಿಸಿ ಮದರಾಸ್ ಕರ್ಣಾಟಕ ಸಂಘ ನಮ್ಮಿಬ್ಬರ ಕಾರ್ಯಕ್ರಮವನ್ನು ಏರ್ಪಡಿಸಬೇಕೆಂದು ಬರೆದಿದ್ದರು. ಮರಿಯಪ್ಪ ಭಟ್ಟರು ಮಹಾ ವಿದ್ವಾಂಸರು. ಕಿಟಲ್ ನಿಘಂಟನ್ನು ಮದರಾಸ್ ವಿಶ್ವವಿದ್ಯಾನಿಲಯದ ವತಿಯಿಂದ ಪರಿಷ್ಕರಿಸಿ ಮೂರು ಭಾಗಗಳಾಗಿ ಪ್ರಕಟಿಸಿದ ಧೀಮಂತರು. ಕನ್ನಡ

ನಿಘಂಟನ್ನು ಕೂಡ ಸಂಪಾದಿಸುವಲ್ಲಿ ಮರಿಯಪ್ಪ ಭಟ್ಟರು ಕೆಲವು ಕಾಲ ಪ್ರಧಾನ ಸಂಪಾದಕರಾಗಿದ್ದರು. ಅವರು ಮದರಾಸಿನಲ್ಲಿ ಅಯ್ಯನಾರ್ ಕರ್ಣಾಟಕ ಸಂಘವನ್ನು ಕಟ್ಟಿ ನೇರ್ಪಿನಿಂದ ಕನ್ನಡ ಸೇವೆ ಸಲ್ಲಿಸುತ್ತಿದ್ದರು. ನಮ್ಮ ಕಾವ್ಯವಾಚನವನ್ನು ಏರ್ಪಾಡು ಮಾಡಿದರು. ಎಂ. ಕೆ. ಗೋಪೀನಾಥ್ ದಂಪತಿಗಳು ನಮ್ಮನ್ನು ಅಲ್ಲಿಗೆ ಕರೆದುಕೊಂಡು ಹೋದರು. ಭಾನುವಾರ ಸಂಜೆ, ಆದುದರಿಂದ ತುಂಬ ಕನ್ನಡಿಗರು ಸೇರಿದ್ದರು. "ಕರ್ಣಾಟಕ ಕವಿ ಕಾವ್ಯ ಪರಂಪರೆ" ಕಾವ್ಯವಾಚನ, ಚೆನ್ನಾಗಿತ್ತೆಂದು ಶ್ರೋತೃಗಳು ಶ್ಲಾಘಿಸಿದರು. ಮರಿಯಪ್ಪ ಭಟ್ಟರು ನಮಗೆ ತೋರಿದ ಪ್ರೀತಿ ವಿಶ್ವಾಸ ಹಾರ್ದಿಕವಾಗಿತ್ತು. ಮರಿಯಪ್ಪ ಭಟ್ಟರನ್ನು ಸಮೀಪದಿಂದ ನೋಡಿರುವ ಕನ್ನಡ ಜನಕ್ಕೆಲ್ಲ ಅವರು ಎಂಥ ದೊಡ್ಡ ಮನುಷ್ಯ, ಸಜ್ಜನ ಎಂಬುದು ತಿಳಿದೇ ಇದೆ.

ಸುಂದರಬಾಯಿ, ಗೋಪೀನಾಥ್ ದಂಪತಿಗಳು ನಮ್ಮನ್ನು ಬಡಪೆಟ್ಟಿಗೆ ಬೆಂಗಳೂರಿಗೆ ಹೋಗುವುದಕ್ಕೆ ಬಿಡಲಿಲ್ಲ. ಮದರಾಸಿನ ಸಮುದ್ರ, ಪ್ರಾಚೀನ ಅರ್ವಾಚೀನ ವಸ್ತುಗಳನ್ನೊಳಗೊಂಡು, ಸತ್ತ ಪ್ರಾಣಿಗಳ ಅವಶೇಷಗಳನ್ನು ಹೊಂದಿ, ಭಾರತದ ಪ್ರಸಿದ್ಧ ಕಲಾವಿದರ ವರ್ಣಚಿತ್ರ ಸಂಗ್ರಹಗಳಿಂದ ಕಳಕಳಿಸುತ್ತಿದ್ದ ಮ್ಯೂಸಿಯಂ, ಪ್ರಸಿದ್ಧ ಪಾರ್ಥಸಾರಥಿ ದೇವಸ್ಥಾನ, ಹೈಕೋರ್ಟಿನ ಎತ್ತರದ ಗೋಪುರ, ಹೀಗೆ ನೋಡಬೇಕಾದುದೆಲ್ಲವನ್ನು ಅಕ್ಕರೆಯ ಮುಚ್ಚಟೆಯಿಂದ ತೋರಿಸಿದರು.

ಮದರಾಸಿಗೆ ಹೋದವರು ಸುಮಾರು 30-40 ಮೈಲಿಗಳ ಸನಿಹದಲ್ಲಿರುವ ಮಹಾಬಲಿಪುರಂ ನೋಡದೆ ಬೆಂಗಳೂರಿಗೆ ಹಿಂದಿರುಗುವುದು ಉಚಿತವೇ ? ಆದುದರಿಂದ ಗೋಪೀನಾಥ್ ದಂಪತಿಗಳು ನಮ್ಮನ್ನು ಮಹಾಬಲಿಪುರದ ಯಾತ್ರೆ ಮಾಡಿಸಿದರು. ಮಹಾಬಲಿಪುರದ ದೃಶ್ಯ ತುಂಬ ಮನೋಹರವಾಗಿದೆ. ಪೂರ್ವದಿಗಂತವನ್ನು ವ್ಯಾಪಿಸಿರುವ ಸಮುದ್ರ. ತೆರೆಗಳ ಬೀಸು ಏರಿಳಿತಗಳ ಹೊಯ್ದಾಟ. ಎಷ್ಟು ನೋಡಿದರೂ ತೀರದು. ಸಮುದ್ರ ದಂಡೆಯಲ್ಲೇ ಅತಿಸುಂದರ ಪಲ್ಲವ ವಾಸ್ತುಶಿಲ್ಪದ ವೈಭವದ ದಿವ್ಯ ಭವ್ಯ ದೇವಾಲಯ, ಅಲ್ಲಿಂದ ಮುಂದೆ ಹೊರಟರೆ ಪಾಂಡವರ ರಥಗಳು, ಕಲ್ಲಿನ ಆನೆ, ವರಾಹ, ಮಹಿಷಾಸುರ ಮರ್ದನಿ ಶಿಲ್ಪಗಳು, ಅತ್ಯದ್ಭುತವಾದ ಗಂಗಾವತರಣ ಬಂಡೆ ಸಮಸ್ತವನ್ನು ಎವೆಯಿಕ್ಕದೆ ನೋಡಿ ಆನಂದತುಂದಿಲರಾದೆವು.

ದ್ರಾವಿಡ ಮುನ್ನೇತ್ರ ಕಜಗಂ ಮಹಾ ನಾಯಕ ಅಣ್ಣಾದೊರೆಗೆ ಶ್ರದ್ಧಾಂಜಲಿ

ಮಹಾಬಲಿಪುರದ ಯಾತ್ರೆ ಮನಸ್ಸಿಗೆ ಹರ್ಷದಾಯಕವಾಗಿತ್ತು. ಬೆಳಗೆ ಹೊರಟವರು ಸಂಜೆ ಮದರಾಸಿಗೆ ಹಿಂದಿರುಗಿದೆವು. ಮದರಾಸನ್ನು ಒಳಹೊಕ್ಕೆವೋ ಇಲ್ಲವೊ ರಸ್ತೆಗಳಲ್ಲೆಲ್ಲ ಜನ ದಟ್ಟವಾಗಿ ಘೇರಾಯಿಸಿತ್ತು. ಎಲ್ಲೆಲ್ಲೂ ಜನಜಂಗುಳಿ. ದ್ರಾವಿಡ ಮುನ್ನೇತ್ರ ಕಜಗಂ ಮಹಾ ನಾಯಕ ಅಣ್ಣಾದೊರೈ 1962ರ ಮಹಾ ಚುನಾ

ವಣೆಯಲ್ಲಿ ಪ್ರಚಂಡ ವಿಜಯ ಗಳಿಸಿ ಮದರಾಸ್ ರಾಜ್ಯದ ಮುಖ್ಯಮಂತ್ರಿಗಳಾಗಿದ್ದರಲ್ಲ, ಅವರು ತೀವ್ರ ಖಾಯಿಲೆಯಿಂದ ಆಸ್ಪತ್ರೆ ಸೇರಿ ಈಗಲೋ ಆಗಲೋ ಮರಣಾವಸ್ಥೆಯಲ್ಲಿ ಇರುವರೆಂಬ ಕಾತರದಿಂದ ಜನ ಅವರ ಸಾವಿನ ಸುದ್ದಿ ನಿರೀಕ್ಷಣೆಯಲ್ಲಿದ್ದರು. ನಮ್ಮ ಬಸ್ಸು ಆನೆಯ ಹೆಜ್ಜೆಯಲ್ಲಿ ತನ್ನ ನಿಲ್ದಾಣವನ್ನು ಸೇರುವುದು ದುಸ್ಸಾಧ್ಯವಾಯಿತು. ಅಂತೂ ನಮ್ಮ ಸ್ವಸ್ಥಾನ ಸೇರುವ ಹೊತ್ತಿಗೆ ಸಾಕುಸಾಕಾಗಿ ಹೋಯಿತು.

ಬೆಳಗ್ಗೆ ಎದ್ದಕೂಡಲೆ ಅಣ್ಣಾದೊರೈ ಸಾವಿನ ಸುದ್ದಿ ಪತ್ರಿಕೆಗಳ ಮುಖ ಪುಟದಲ್ಲಿ ಭಾವಚಿತ್ರ ಸಹಿತ ಪ್ರಕಟವಾಗಿತ್ತು. ಶವ ಮೆರವಣಿಗೆ ಬರುವ ಮುಖ್ಯ ರಸ್ತೆಗಳು, ಪ್ರಮುಖ ವೃತ್ತಗಳು ಎಲ್ಲಾ ಜನಮಯ. ಒಂದು ಸೂಜಿಗೂ ಆಸ್ಪದವಿಲ್ಲದಂತೆ ಜನ ದಟ್ಟಸಂದಣಿ. ನಾನು ಆ ಜನಸಾಗರದಲ್ಲಿ ಒಂದು ನೊರಜಾಗಿ ಸೇರಿ ಅಣ್ಣಾದೊರೈ ಪಾರ್ಥಿವ ಶರೀರದ ದರ್ಶನಕ್ಕಾಗಿ ಒಂದು ಸ್ಥಳದಲ್ಲಿ ನೂಕುನುಗ್ಗಲು ಇರದಂಥ ಸ್ಥಳದಲ್ಲಿ ನಿಂತಿದ್ದೆ. ಅಣ್ಣಾದೊರೈ ಶವ ಮೆರವಣಿಗೆ ಬಂದಾಗ ದೂರದಿಂದಲೇ ನೋಡಿ ಮನೆಗೆ ಹಿಂದಿರುಗಿದೆ. ಬೆಂಗಳೂರಿಗೆ ಬೇಗ ಹೊರಡುವ ಎಂದರೆ ಎರಡು ಮೂರು ದಿವಸ ಬಸ್ಸಾಗಲಿ, ರೈಲಾಗಲಿ ಸ್ಥಳಾಭಾವದಿಂದ ನಮಗೆ ಅನುಕೂಲವಾಗಲಿಲ್ಲ. 5-2-1969ರಲ್ಲಿ ಹೇಗೋ ನಮ್ಮ ಸ್ಥಳಗಳನ್ನು ಕಾದಿರಿಸಿಕೊಂಡು ಅಂದೇ ರೈಲುಗಾಡಿಯಲ್ಲಿ ಬೆಂಗಳೂರು ಮುಟ್ಟಿ ನಮ್ಮ ಮೂರನೇ ದೆಹಲಿ ಯಾತ್ರೆ ಮುಗಿಸಿದೆವು.

1957ರ ದೆಹಲಿ ಯಾತ್ರೆ ದೆಹಲಿಗೆ ಮಾತ್ರ ಮೀಸಲಾಗಿತ್ತು. 1963ರ ದೆಹಲಿ ಯಾತ್ರೆ, ಕಾಶ್ಮೀರದ ಅಂಚು ಮುಟ್ಟಿತು. 1968ರ ದೆಹಲಿ ಯಾತ್ರೆ, ಪ್ರಯಾಗ, ವಾರಣಾಸಿ, ಕಲ್ಕತ್ತಾ, ಮದ್ರಾಸು ಪಟ್ಟಣಗಳನ್ನೂ ಒಳಗೊಂಡು ದೀರ್ಘ ಪ್ರವಾಸವೇ ಆಯಿತು. ಶಕುಂತಲಾಬಾಯಿಯ ಗಮಕ ಕಲಾರಾಧನೆ ಈ ಕಾಲಗಳಲ್ಲಿ ತೃಪ್ತಿಯಾಗಿಯೇ ನಡೆಯಿತು. ನಮ್ಮ ಹೊರನಾಡ ಕನ್ನಡಿಗ ಬಂಧುಗಳು ಗಮಕ ಕಲೋಪಾಸಕಿಯನ್ನು ಹಾರ್ದಿಕವಾಗಿ ಸ್ವಾಗತಿಸಿ, ಆಕೆಯ ಕಾವ್ಯವಾಚನಗಳನ್ನು ಮನಸಾರೆ ಕೇಳಿ ಸಂತೋಷಿಸಿ, ಆಕೆಯ ಕಲಾಭಿಜ್ಞತೆಗೆ ಯಶಸ್ಸು ಶ್ರೇಯಸ್ಸುಗಳನ್ನು ಕೋರಿದರು.

೧೧. ತಿಮ್ಮಪ್ಪನಿಗೆ ಗಮಕ ಸೇವೆ

ಶಕುಂತಲಾಬಾಯಿಯ ಕರ್ಣಾಟಕದ ಹೊರನಾಡ ಗಮಕ ವಾಚನ ಯಜ್ಞ ಜೀವನ ವನ್ನು ಕುರಿತು ಪ್ರಸ್ತಾಪಿಸುವಾಗ ನನಗೆ ತಟ್ಟನೆ ನೆನಪಾಗುವುದು 1975ರ ಫೆಬ್ರವರಿ ತಿಂಗಳಲ್ಲಿ ತಿರುಪತಿ ಮಹಾಕ್ಷೇತ್ರದಲ್ಲಿ ಶಕುಂತಲಾಬಾಯಿ ನಡೆಸಿದ "ಕುಮಾರವ್ಯಾಸ ಭಾರತ" ಕಾವ್ಯವಾಚನ. ಶ್ರೀನಿವಾಸ ತನ್ನ ಕ್ಷೇತ್ರದಲ್ಲಿ ಆಕೆಯ ಯಶೋ ದುಂದುಭಿಯನ್ನು ಮೊಳಗಿಸಿ, ಆಕೆಯಿಂದ ಗಮಕ ಕಲಾ ಸೇವೆಯನ್ನು ತನಗೆ ಅರ್ಪಿಸಿಕೊಂಡ.

ತಿರುಪತಿಯ ಗೋವಿಂದರಾಜ ಪಟ್ಟಣದಲ್ಲಿ

ನಾವು ತಿರುಪತಿ ತಿಮ್ಮಪ್ಪನ ಒಕ್ಕಲು. ಆತ ನಮ್ಮ ಮನೆದೇವರು. ಆದುದರಿಂದ ತಿರುಪತಿ ಯಾತ್ರೆ ನಮ್ಮ ಜೀವನದಲ್ಲಿ ಒಂದು ಮಹಾ ನೋಂಪಿಯಂತೆಯೇ ಸರಿ. 1939ರಲ್ಲಿ ನನ್ನ ಮಾವನವರ ದಯೆಯಿಂದ ತಿರುಪತಿ ಯಾತ್ರೆ ಲಭ್ಯವಾಯಿತು. ಬೆಟ್ಟದ ಕೆಳಗೆ ಗೋವಿಂದರಾಜ ಪಟ್ಟಣದಲ್ಲಿ ಕಪಿಲ ತೀರ್ಥಕ್ಕೆ ಹೋಗುವ ದಾರಿಯಲ್ಲಿ ರಾಘವೇಂದ್ರ ಸ್ವಾಮಿಗಳ ಮಠವೊಂದಿದೆ. ಆ ಮಠದ ಮುಖ್ಯಸ್ಥರು ನಾರಾಯಣ ದಾಸರು. (ಹೆಸರು ನನ್ನ ನೆನಪಿನಲ್ಲಿ ಅಸ್ಪಷ್ಟವಾಗಿದೆ) ಅವರು ದಾಸಸಾಹಿತ್ಯದಲ್ಲಿ ಸುಳಾದಿ ಉಗಾಭೋಗಗಳನ್ನು ಹಾಡುವುದರಲ್ಲಿ "ಅಧಿಕಾರವಾಣಿ" ಎಂದು ಹೆಸರಾಗಿದ್ದವರು. ಅವರ ಆಶ್ರಯದಲ್ಲಿ ನಾವು ಒಂದು ದಿವಸ ತಂಗಿದೆವು. ರಾಯರ ಸನ್ನಿಧಿ. ಶಕುಂತಲಾಬಾಯಿ ಕುಮಾರವ್ಯಾಸಭಾರತ ವಾಚನ ಸೇವೆಯನ್ನು ಆ ಸಂಜೆ ಅಲ್ಲೇಕೆ ನಡೆಸಬಾರದೆಂದು, ಆಕೆಯ ತಂದೆ ಆಲೋಚಿಸಿದರು. ನಾರಾಯಣ ದಾಸರನ್ನೂ ಕೇಳಿ ಅವರ ಅಪ್ಪಣೆಯಂತೆ ಕಾರ್ಯಕ್ರಮ ಸಂಜೆ ಏರ್ಪಾಡಾಯಿತು. "ದೂರ್ವಾಸಾತಿಥ್ಯ" ಕಥಾಭಾಗದ ವಾಚನವಾಯಿತು. ದಾಸರು ಸುತ್ತಮುತ್ತಲ ಜನವನ್ನು ನೆರೆಸಿದ್ದರು. ಶ್ರೋತೃಗಳು ಕನ್ನಡ ತೆಲುಗು ಸಮ್ಮಿಶ್ರ ಭಾಷೆಗಳನ್ನು ಬಲ್ಲವರು. ಭಾರತ ವಾಚನವನ್ನು ಕೇಳಿ ಆನಂದಿಸಿದರು.

1972ರ ಫೆಬ್ರವರಿ ಮೊದಲ ವಾರದಲ್ಲಿ ನಮಗೆ ಇನ್ನೊಂದು ಚಿರಸ್ಮರಣೀಯವಾದ ತಿರುಪತಿ ಯಾತ್ರೆ ಪ್ರಾಪ್ತವಾಯಿತು. ನನ್ನ ಎರಡನೆಯ ನಾದಿನಿ, ಶಕುಂತಲಾಬಾಯಿಯ ಎರಡನೆಯ ತಂಗಿ ಇಂದಿರಾಬಾಯಿ ತನ್ನ ಮೂರನೆಯ ಮತ್ತು ನಾಲ್ಕನೆಯ ಚಿರಂಜೀವಿಗಳಿಗೆ ಉಪನಯನಗಳನ್ನು ತಿರುಪತಿಯ ಶ್ರೀನಿವಾಸನ ಸನ್ನಿಧಿಯಲ್ಲಿ ನೆಗಳಿಕೊಂಡುದೇ ನಮ್ಮ ಯಾತ್ರೆಗೆ ಕಾರಣ.

1939ರ ತಿರುಪತಿ ಯಾತ್ರೆಗೂ 1972ರ ಯಾತ್ರೆಗೂ ಅಜಗಜಾಂತರ. ಹಿಂದಿನ ಕಾಲದ ಯಾತ್ರೆ ಕಷ್ಟಪಡದೆ ಆಗುತ್ತಿರಲಿಲ್ಲ. ಈಗಾದರೊ ಸುಲಭಾತಿ ಸುಲಭ. ನಮ್ಮ ಅತ್ತೆ ಮಾವನವರ ಜೊತೆಯಲ್ಲಿ ಮಾಡಿದ ತಿರುಪತಿ ಯಾತ್ರೆ ಇನ್ನೂ

ಹೊಚ್ಚ ಹಸುರಾಗಿದೆ ನನ್ನ ನೆನಪಿನಲ್ಲಿ. ಆಗ ಈಗಿನ ಕಾಲದಂತೆ ಗೋವಿಂದರಾಜ ಪಟ್ಟಣವಾಗಲಿ, ತಿರುಮಲೆ ಬೆಟ್ಟವಾಗಲಿ ಆಧುನಿಕ ವ್ಯವಸ್ಥೆಗಳಿಂದ ಸಜ್ಜಾಗಿರಲಿಲ್ಲ. ಬೆಟ್ಟದ ಕೆಳಗೆ-ಗೋವಿಂದರಾಜಪಟ್ಟಣದಲ್ಲಿ, ಬೆಟ್ಟದ ಮೇಲೆ ತಿರುಮಲೆಯಲ್ಲಿ ನಮಗೆಲ್ಲ ಮೈಸೂರು ಮಹಾರಾಜರು ಕಟ್ಟಿಸಿದ ಛತ್ರಗಳು ಮಹಾ ಅದ್ದೂರಿಯ ಬಂಗಲೆಗಳು. ಸೀಮೆಎಣ್ಣೆಯ ದೀಪ, ಬಾವಿ ನೀರು ಮಹಾ ಸೌಕರ್ಯ ಸಾಧನಗಳು. ಬೆಟ್ಟದ ಕೆಳಗಿನ ಸತ್ರ ತಂಗುವುದಕ್ಕೆ ಮಾತ್ರ. ಬೆಟ್ಟದ ಮೇಲಿನ ಸತ್ರದಲ್ಲಿ ಮೂರು ದಿವಸ ಬ್ರಾಹ್ಮಣರಿಗೆ ಊಟ ವಸತಿ ಸೌಕರ್ಯ. ಆದುದರಿಂದ ನಾವು ಅಡಿಗೆ ಬೇಯಿಸಲು ಪಾತ್ರೆ ಪರಡಿಗಳು, ಮಲಗಲು ಹಾಸಿಗೆ ಹೊದ್ದಿಕೆಗಳು ಸಜ್ಜಾಗಿಸಿ ಯಾತ್ರೆ ಹೋದದ್ದೇ ಇಲ್ಲ. ಆದರೆ ಈಗ ಕಿಸೆಯ ಕಾಸು ಬಿಚ್ಚಿದರೆ ಮಾವನ ಉಪಚಾರಕ್ಕೆ ಮಿಗಿಲಾಗಿ ಉಪಚಾರ ಪಡೆಯುವ ರಾಜಭೋಗದ ಇಂದ್ರಭವನ ಚಂದ್ರಭವನಗಳು ವಿಪುಲವಾಗಿವೆ. ಹಿಂದಿನ ಕಾಲದಲ್ಲಿ ಕಾಲುನಡಿಗೆಯಲ್ಲಿ ಬೆಟ್ಟವೇರಬೇಕಾಗಿತ್ತು. ಕೈಲಾಗದ ಮಕ್ಕಳು, ವೃದ್ಧರುಗಳಿಗೆ ಡೋಲಿ ಸೇವೆ. ಈಗ ಬೆಟ್ಟದ ತುದಿಯನ್ನು ತಿರುಪತಿ ಸೇವಾರ್ಥದ ಬಸ್ಸುಗಳು ಮುಟ್ಟುತ್ತವೆ. ಕೆಲವು ಕಾಲ ವಿಮಾನ ಯಾನವೂ ಇದ್ದ ಹಾಗೆ ನನ್ನ ನೆನಪು.

1939ರ ತಿರುಪತಿ ಯಾತ್ರೆಯನ್ನು ನೆನೆಸಿಕೊಂಡಾಗ ನನಗೆ ಇನ್ನೂ ನಾಲಿಗೆಯಲ್ಲಿ ನೀರೂರಿಸುವುದು ಬೆಟ್ಟದ ಕೆಳಗೆ ಕಪಿಲ ತೀರ್ಥದ ದಂಡೆಯ ಮೇಲೆ ಮರಗಳ ಕೆಳಗೆ ಉಂಡ ಮಾವಿನಕಾಯಿ ಚಟ್ನಿಯ ಊಟ. ಬೆಟ್ಟದ ಮೇಲೆ ಆಗತಾನೆ ಪ್ರಾರಂಭವಾಗಿದ್ದ ಹೋಟೆಲೊಂದರಲ್ಲಿ ಕೊಂಡು ತಿಂದ ಮಸಾಲೆ ದೋಸೆಯ ರುಚಿ. ತಿರುಪತಿ ಯಾತ್ರೆ ಹೊರಟವರು ಬೆಟ್ಟದ ಕೆಳಗೆ ಒಂದು ದಿವಸ ಇರುತ್ತಾರೆ. ಕಪಿಲ ತೀರ್ಥದ ಸ್ನಾನ, ಗೋವಿಂದರಾಜ ದೇವರ ದರ್ಶನ ಯಾತ್ರೆಯ ವಿಧಿಗಳಲ್ಲಿ ನಿಷ್ಠಾಚರಣೆ. ನಮ್ಮ ಪಾತ್ರೆ ಪರಟೆಗಳು, ಹಾಸಿಹೊದೆಯುವ ಗಂಟುಮೂಟೆಗಳನ್ನು ಮೈಸೂರು ಸತ್ರದಲ್ಲಿ ಒಗೆದು, ಎತ್ತಿನ ಗಾಡಿಯಲ್ಲಿ ಕಪಿಲ ತೀರ್ಥಕ್ಕೆ ಹೊರಟೆವು ಬೆಳಗ್ಗೆಯೆ. ಒಂದು ಮಧ್ಯಾಹ್ನದ ಊಟ ಬೇಯಿಸಿಕೊಳ್ಳಲು ಎಷ್ಟು ಬೇಕೋ ಅಷ್ಟೇ ಪಾತ್ರೆಗಳನ್ನು ಹೊತ್ತೆವು. ಸ್ನಾನ ಮಾಡಿ ಕಪಿಲ ತೀರ್ಥದಲ್ಲಿ ಕಪಿಲೇಶ್ವರನ ದರ್ಶನ ಪೂರೈಸಿ ಮಧ್ಯಾಹ್ನದ ಕವಳ ಕುದಿಸಲು ಒಲೆ ಹೊತ್ತಿಸಿದರು ನಮ್ಮತ್ತೆ. ಒಲೆಯೆಂದರೆ ಮೂರು ಕಲ್ಲುಗುಂಡುಗಳು. ಸೌದೆಯೆಂದರೆ ಕಪಿಲ ತೀರ್ಥದ ಸುತ್ತ ನಾವು ಹೆಕ್ಕಿತಂದ ಒಣಗು ಪುರಲೆಗಳು. ಇದ್ದಕ್ಕಿದ್ದ ಹಾಗೆ ನಮ್ಮ ಮಾವನವರಿಗೆ ಮಾವಿನಕಾಯಿ ಚಟ್ನಿಯಿದ್ದರೆ ಊಟ ಚೆನ್ನಲ್ಲವೇ ಅನ್ನಿಸಿತು. ವಸಂತ ಋತು. ಚೂತವನ ಚೈತ್ರಮಾಸ. ಆಗಾಗ ಕೋಕಿಲ ಪಂಚಮ ಸ್ವರದ ಕಂಠಶ್ರೀ. ಮಾವುಫಲ ಕಾಲವೇ. ಎಲ್ಲಾ ಸರಿ, ಆದರೆ ಕಪಿಲ ತೀರ್ಥದ ದಂಡೆಯಲ್ಲಿ ಮಾವಿನಕಾಯಿ ಸಿಗಬೇಕಲ್ಲ! ನಮ್ಮ ಮಾವನವರು ಮಾವಿನಕಾಯಿ ಚಟ್ನಿ ಅರೆಯಿಸುವ ಸಂಕಲ್ಪ ಜಪ್ಪಯ್ಯ ಎಂದರೂ ಬಿಡಲೇಯಿಲ್ಲ ನಾನು, ನನ್ನ ಷಡ್ಡಕ ಎಂ. ಜಿ. ಕೃಷ್ಣಸ್ವಾಮಿ, ನನ್ನ ಭಾವಮೈದುನ ಬಾಳಾಜಿರಾಯ ಮಾವಿನಕಾಯಿಯನ್ನು ಅರಸುತ್ತಾ ಕಪಿಲ ತೀರ್ಥದ ದಂಡೆಯ ಆಜುಬಾಜುಗಳನ್ನೆಲ್ಲ

ಶೋಧಿಸಿದೆವು. ಕಾಲುದಾರಿಗಳನ್ನೂ ಸವೆಸಿದೆವು. ಸೂರ್ಯನ ತೀಕ್ಷ್ಣ ಕಿರಣಗಳ ಬಿಸಿಲ ಝಳದಲ್ಲಿ ಮಿಂದು ಬೆವರು ಒಸ್ಸಿ ಮುಸ್ಸಿಯಾದೆವು. ಅಲ್ಲಲ್ಲಿ ಪೊದರು ಗಿಡಗೆಂಟೆಗಳ ಕೊಂಬೆಗಳಿಗೆ ಮೈಸಿಕ್ಕಿ ಪರಚಿಸಿಕೊಂಡೆವು. ಆದರೂ ಒಂದು ಮಾವಿನ ಮಿಡಿಯೂ ಸಿಗದೆ ಹೋಯಿತು, ಬೆವರು ಸುರಿಸುತ್ತ ಬರಿಗೈಯಲ್ಲಿ ಹಿಂದಿರುಗಿದೆವು. ಹೊಟ್ಟೆ ಚುರುಚುರುಗುಟ್ಟುತ್ತಿತ್ತು ಹಸಿವಿನ ಜೊಂಪರಲಾಗದಲ್ಲಿ. ಭೂಪತಿ ಗಂಡು ನಮ್ಮ ಮಾವ, ಯಾರೋ ಕೈಗೆ ಸಿಕ್ಕ ಹುಡುಗರನ್ನು ಊರಿಗೆ ಅಟ್ಟಿ ಮಾವಿನಕಾಯಿ ತರಿಸಿದ್ದರು. ಸನಿಹದಲ್ಲಿದ್ದ ಕಲ್ಲುಗುಂಡನ್ನು ರುಬ್ಬುವ ಗುಂಡನ್ನಾಗಿ ಅಣಿ ಮಾಡಿಸಿ, ಮಾವಿನಕಾಯಿ ಅರೆಸಿ ಮಾವಿನಕಾಯಿ ಚಟ್ನಿ ಮಾಡಿಸಿದ್ದರು ನಮ್ಮತ್ತೆಯನ್ನು ಸುಸ್ತಿನ ಚಟ್ನಿಯಾಗಿ ಮಾಡಿ. ನಮ್ಮ ಹಸಿದ ಹೊಟ್ಟೆ, ಸುಸ್ವಾದ ಲೇಹ. ಕೇಳಬೇಕೆ ಆಗಿನ ಹಸಿದ ತೋಳಗಳನ್ನು. ಮಾವಿನಕಾಯಿ ಚಟ್ನಿ ಕಲಸಿ ಉಂಡ ಮಾವಿನಕಾಯಿ ಚಟ್ನಿಯನ್ನದ ತುತ್ತುಗಳು ಥಟ್ಟನೆ ತೇಗುಬರಿಸಿದವು. "ಅನ್ನದಾತೋಸುಖೀಭವ" ಎಂದು ಎದ್ದೆವು. ಇದು ಬೆಟ್ಟದ ಕೆಳಗಾದರೆ, ಬೆಟ್ಟದ ಮೇಲೆ ಮಸಾಲೆ ದೋಸೆ ತರಿಸಿಕೊಂಡು ತಿಂದು ತೇಗಿದೆವಲ್ಲ, ಅದು ಇನ್ನೊಂದು ಅನುಭವ. ಎಂ. ಜಿ. ಕೃಷ್ಣಸ್ವಾಮಿ ಬಹಳ ಸರಸಿ ಪ್ರೊನದಸ್ತು ತಿಂಡಿಪೋತ. ಆತ ಪೇಟೆಯ ವಿದ್ಯಾಶಾಲೆಯಲ್ಲಿ ಕೆಲವು ಕಾಲ ಗುಮಾಸ್ತೆಯಾಗಿದ್ದು ಸಂಪದ್ಗಿರಿರಾವ್, ಕಂದಾಡೆ ಕೃಷ್ಣಯ್ಯಂಗಾರ್, ಕೆ. ಎಸ್. ಕೃಷ್ಣಯ್ಯರ್ ಮೊದಲಾದ ಅಧ್ಯಾಪಕ ವರ್ಗಕ್ಕೆ ಅಚ್ಚುಮೆಚ್ಚು. ವಿದ್ಯಾರ್ಥಿಗಳಿಗೆ ತುಂಬ ಬೇಕಾದ ಗುಮಾಸ್ತೆ. ಮಸಾಲೆ ದೋಸೆ ತಿನ್ನುವುದಕ್ಕೆ ಬಸವನಗುಡಿಯಿಂದ ಬಳೇಪೇಟೆಯ ಉಡುಪಿ ಕೃಷ್ಣಭವನಕ್ಕೆ ಪ್ರತಿದಿನ ಸಂಜೆಯೂ ನಡೆದು ಬರುತ್ತಿದ್ದ ಭೂಪತಿ. ಆತನಿಗೆ ತಿರುಪತಿಯಲ್ಲೂ ಮಸಾಲೆ ದೋಸೆ ತಿನ್ನುವ ಚಪಲ ಬಿಡಲಿಲ್ಲ. ಬೆಳಗಾದುದೇ ತಡ ನನ್ನನ್ನೂ, ಭಾವಮೈದುನನನ್ನು ಕರೆದುಕೊಂಡು ಹೊರಟ ಮಸಾಲೆ ದೋಸೆ ತಲಾಸೆಗೆ. ಒಂದು ಮದರಾಸ್ ಅಯ್ಯಂಗಾರ್ಯರ ಫಲಾಹಾರ ಮಂದಿರ ಸಿಕ್ಕಿತು. ಮೂವರೂ ಒಳ ಹೊಕ್ಕು ಒಂದೊಂದು ಮಸಾಲೆ ದೋಸೆ ಕಾವಲಿಯ ಮೇಲೆ ಹುಯ್ಯಿಸಿ, ಅದು ಬಿಸಿ ಬಿಸಿಯಾಗಿ ಬರುತ್ತಿದ್ದ ಹಾಗೆಯೇ ಸಪ್ಪಗುಟ್ಟಿಕೊಂಡು ತಿಂದುಹಾಕಿದೆವು. ಸ್ಪೆಷಲ್ ಕಾಫಿ ಮಾಡಿಸಿ ಗಟಗಟ ಕುಡಿದೆವು. ಅತ್ತೆ ಮಾವ, ತನ್ನ ಹೆಂಡತಿ, ನಾದಿನಿ, ತನಗೆ, ನಮಗೆ, ಎರಡೆರಡು ಮಸಾಲೆ ದೋಸೆಗಳನ್ನು "ಪಾರ್ಸಲ್" ಮಾಡಿಸಿದ ಕೃಷ್ಣಸ್ವಾಮಿ. ಬೆಟ್ಟದ ಮೇಲೆ ಇಳಿದುಕೊಂಡಿದ್ದ ಮೈಸೂರು ಸತ್ರದ ಕಡೆ ಧಾವಿಸಿದವು ಮೂವರ ಪಾದಗಳು. ಇನ್ನೂ ನಮ್ಮ ಬಿಡದಿ ಕೊಠಡಿಗೆ ಕಾಲಿಟ್ಟೆವೋ ಇಲ್ಲವೋ ಕಂಗಾಲಾಗಿ ಹುಡುಕುತ್ತಿದ್ದರು ತಮ್ಮ ನಶ್ಯದ ಡಬ್ಬಿಯನ್ನು ನಮ್ಮ ಮಾವ. "ಏನು ಏನು? ನಶ್ಯದ ಡಬ್ಬಿ ಹೋಯಿತೆ? ಅಯ್ಯೋ ಪಾಪ? ನಾನು ಹುಡುಕಿ ಕೊಟ್ಟರೆ ಏನು ಕೊಡುತ್ತೀರಿ!" ಎಂದು ಹಲ್ಲುಕಿರಿದ ನನ್ನ ಷಡ್ಡಕ ಭೂಪತಿಕೊಮ್ಮ. "ನೀವು ಕೇಳಿದಷ್ಟು ಮಸಾಲೆ ದೋಸೆ ತಿನ್ನಿಸುತ್ತೇನೆ" ಎಂದರು ನಮ್ಮ ಮಾವ. ಕೃಷ್ಣಸ್ವಾಮಿ ಜೇಬಿಗೆ ಕೈಹಾಕಿದ. ನಶ್ಯದ ಡಬ್ಬಿ ಜಂಗನೆ ಹಾರಿತ್ತು ಅವನ ಕೈಯಿಂದ. ನನ್ನ ಷಡ್ಡಕ

ಮಸಾಲೆ ದೋಸೆಯ ಸವಿ ಹತ್ತಿಸಿದ್ದ ನಾಲಿಗೆಗೆ. ನಶ್ಯದ ಘಾಟಿನ ತಿಕ್ಕಲು ಹತ್ತಿಸಿದ್ದ ಮೂಗಿಗೆ. ಈ ಚಪಲಗಳನ್ನು ತೀರಿಸಿಕೊಳ್ಳುವ ಆತುರದಲ್ಲಿ ಆತ ಮಾವನ ನಶ್ಯದ ಡಬ್ಬಿಯನ್ನು ಲಪಟಾಯಿಸಿದ್ದ. ಮಾವನಿಗೆ ಹಿಂದಿರುಗಿಸದೆ ಮಸಾಲೆ ದೋಸೆ ತಿನ್ನುವ ಕಾತರದಲ್ಲಿ ಜೇಬಿಗೆ ಸೇರಿಸಿದ್ದ ನಶ್ಯದ ಡಬ್ಬಿಯನ್ನು. ಮಸಾಲೆ ದೋಸೆ ತಿಂದು ಥರ್ರನೆ ತೇಗಿದೆವು ಎಲ್ಲ. ನಮ್ಮ ಮಾವನವರು ಮಸಾಲೆ ದೋಸೆಯ ಖರ್ಚು ಕೊಡಹೋದರು, "ಬೇಡಬೇಡ ನಾಳೆ ಕೊಡುವಿರಂತೆ" ಎಂದು "ಪಾಂಡು, ತೆಗೆದುಕೊಳ್ಳಪ್ಪ ನಿನ್ನ ಪರ್ಸು". ಎಂದು ನನ್ನ ಪರ್ಸನ್ನೂ ಜೇಬಿನಿಂದ ಹೊರಗೆಳೆದ. ಷಡ್ಡಕ ಭಾವನೆನ್ನುವವನೆಂದರು ಮಸ ಲತ್ತು ಮಾಡಿ ನನ್ನ ಪರ್ಸನ್ನು ಲಪಟಾಯಿಸಿ ನನ್ನ ಖರ್ಚಿನಿಂದ ಧಾರಾಳವಾಗಿ ಮಸಾಲೆ ದೋಸೆ ಸಮಾರಾಧನೆ ನಡೆಸಿ, ನನ್ನ ಖರ್ಚಿನಲ್ಲಿ ಖುಷಿಪಟ್ಟರು ಎಲ್ಲರೂ. ಆ ನನ್ನ ಹಿರಿಯ ಷಡ್ಡಕ ಇಲ್ಲವಾಗಿದ್ದಾನೆ. ಅವನಿಗೆ ಶಕುಂತಲಾಬಾಯಿ ಅಚ್ಚುಮೆಚ್ಚಿನ ನಾದಿನಿ. "ಅಮ್ಮಣ್ಣಿ" "ಅಮ್ಮಣ್ಣಿ" ಎಂದು ಪ್ರಾಣ ಬಿಡುತ್ತಿದ್ದ ನಾದಿನಿಗೆ, ನನ್ನನ್ನು ಕಂಡರೆ ಪಂಚ ಪ್ರಾಣ. ನನ್ನ ಹಿರಿ ನಾದಿನಿ ಕಮಲಾಬಾಯಿ, ಕೃಷ್ಣಸ್ವಾಮಿಯ ಪತ್ನಿ, ಆಕೆಯೂ ಅಷ್ಟೆ. ನನ್ನನ್ನೂ ಶಕುಂತಲಾಬಾಯಿಯನ್ನೂ ತುಂಬ ಪ್ರೀತಿ ವಿಶ್ವಾಸಗಳಿಂದ ಆದರಿಸುತ್ತಿದ್ದರು. ಆಕೆಯೂ ಕಾಲವಾಗಿದ್ದಾರೆ. ಈ ನಿಷ್ಕಲ್ಮಷ ಹೃದಯದ ದಂಪತಿ ಗಳ ಪ್ರೀತಿ ವಿಶ್ವಾಸಗಳ ಪಡಿಯಚ್ಚು ಮದರಾಸಿನಲ್ಲಿರುವ ಹಿರಿ ಮಗಳು ಸುಂದರಾಬಾಯಿ, ಬಂಗಾರದ ಗಣಿಯಲ್ಲಿ ಕೆಲಸ ಮಾಡುತ್ತಿರುವ ತಮ್ಮ (ಪಿಂಚಿ) ರಾಘವೇಂದ್ರರಾವ್. ಈ ಇಬ್ಬರು ಸಹೋದರಿ ಸಹೋದರರು ನನ್ನನ್ನು "ಮಾವ" ಎಂದು ಶಕುಂತಲಾಬಾಯಿ ಯನ್ನು "ಅಮ್ಮಣ್ಣಿ" ಎಂದು ಬಾಯಿ ತುಂಬ, ಹೃದಯ ತುಂಬಿ ಕರೆದಾಗ ನಮಗೆ ನನ್ನ ಷಡ್ಡಕ, ಅವನ ಹೆಂಡತಿ ಕಣ್ಣಮುಂದೆ ಬಂದಂತೆ ಭಾಸವಾಗುತ್ತದೆ. 1939ರ ಆ ತಿರುಪತಿಯ ದಿವ್ಯ ದಿನದ ನೆನಪು ಮೂಡುತ್ತದೆ.

1972ರ ತಿರುಪತಿ ಯಾತ್ರೆಯ ಪ್ರಸ್ತಾಪಕ್ಕೆ ಬರೋಣ. ಬೆಂಗಳೂರಿಂದ ತಿರು ಪತಿಗೇ ಮೀಸಲಾಗಿದ್ದ ಬಸ್ಸಿನಲ್ಲಿ 1972ರ ಫೆಬ್ರವರಿಯಲ್ಲೊಂದು ದಿನ ಬೆಳಗ್ಗೆ ಕುಳಿತೆವು. ಅದು ನಮ್ಮನ್ನು ಮಧ್ಯಾಹ್ನ ಸುಮಾರು 2-30 ಗಂಟೆಯ ಹೊತ್ತಿಗೆ ಗೋವಿಂದರಾಜ ಪಟ್ಟಣದ ಬಸ್ ನಿಲ್ದಾಣಕ್ಕೆ ಕೊಂಡೊಯ್ದು ಮುಟ್ಟಿಸಿತು. ಅಲ್ಲಿಂದ ಬೆಟ್ಟಕ್ಕೆ ಬೇರೆ ಬಸ್. ಇದನ್ನು ತಿರುಪತಿ ದೇವಸ್ಥಾನದ ವ್ಯವಸ್ಥೆಯೇ ಅದಷ್ಟು ನೇರ್ಪಿನಿಂದಲೇ ನಡೆಸು ತ್ತಿದೆ. ಕ್ಯೂ ಪದ್ಧತಿಯಲ್ಲಿ ಟಿಕೆಟ್ ವಿಲೇವಾರಿ. ಕ್ಯೂ ನಿಂತವರು ಕೂಡುವುದಕ್ಕೂ ವ್ಯವಸ್ಥೆಯಿದೆ. ಬಸ್ ಹತ್ತು ಹತ್ತು ನಿಮಿಷಗಳಿಗೆ ಬಂದು ಟಿಕೇಟು ಪಡೆದವರನ್ನು ಬೆಟ್ಟಕ್ಕೆ ಹತ್ತಿಸಿಕೊಂಡು ಹೋಗುತ್ತದೆ. ನಮ್ಮ ಸರದಿಯ ಬಸ್ಸು ನಮ್ಮನ್ನು 5 ಗಂಟೆ ಸಂಜೆಯಲ್ಲಿ ತಿರುಪತಿ ಬೆಟ್ಟವನ್ನು ಸೇರಿಸಿತು. ಶಕುಂತಲಾಬಾಯಿಗೆ 19 ವರ್ಷವಾಗಿದ್ದಾಗ 1939ರಲ್ಲಿ ಆಗಿದ್ದ ತಿರುಪತಿ ಯಾತ್ರೆಯ ಅನುಭವಕ್ಕೂ 1972ರಲ್ಲಿ ಆದ ಅನುಭವಕ್ಕೂ "ಕ್ಯಾ ಅಜ ಕ್ಯಾ ಗಜ" ಎನ್ನುವಷ್ಟು ಅಂತರವಿತ್ತು. ಮೊದಲೇ ಎರಡು ದಿವಸಗಳಿಗೆ ಮುಂಚೆ ನನ್ನ ನಾದಿನಿ ಇಂದಿರಾಬಾಯಿಯ ಮಗ ನಮ್ಮ ಪ್ರೀತಿಯ 'ರಾಜು' (ನಾಗರಾಜ(

ತಿರುಪತಿಗೆ ಹೋಗಿ ಬಿಡದಿಯ ವ್ಯವಸ್ಥೆ ಮಾಡಿ ಬಂದಿದ್ದ. ಆ ಕಾರಣ, ನಮಗಾರಿಗೂ ಪ್ರವಾಸದ ಆಯಾಸವೇ ಕಾಣಲಿಲ್ಲ. ಬಿಡದಿಗೆ ಹೋದ ಕೂಡಲೇ ಮುಖ ಕೈ ಕಾಲುಗಳನ್ನು ತೊಳೆದುಕೊಂಡ ಕೂಡಲೇ, ಬಿಸಿಬಿಸಿ ಕಾಫಿ ಉಪ್ಪಿಟ್ಟು, ಸಮಾರಾಧನೆ ನಡೆಸಿದರು. ತೃಪ್ತಿ ಕರವಾಗೇ ಇತ್ತು ಉಪಾಹಾರ. ಸ್ವಲ್ಪ ಕಾಲ ವಿಶ್ರಾಂತಿ ಪಡೆದು ಸಂಜೆಯ ತಂಪಿನಲ್ಲಿ ಅಡ್ಡಾಡ ಹೊರಟೆವು. ನಮ್ಮ ಪ್ರಜಾಧಿಕಾರದ ಮೈಸೂರು ರಾಜ್ಯ ಮೈಸೂರು ರಾಜರುಗಳನ್ನು ಒತ್ತರಿಸಿ ರಾಜ್ಯಭಾರ ವಹಿಸಿಕೊಂಡ ಮೇಲೆ ಹೊಸದಾಗಿ ದೇವಸ್ಥಾನದ ಹಿಂಬದಿಯಲ್ಲಿ ಹಳೆ ಮೈಸೂರು ಸತ್ರಕ್ಕೆ ಹಿಂದೆಡೆ ದಿಣ್ಣೆಯ ಮೇಲೆ ನವನವೀನವಾಗಿ ಕಟ್ಟಿಸಿರುವ ಆಧುನಿಕ ವ್ಯವಸ್ಥೆಯ ಮೈಸೂರು ಪ್ರವಾಸ ಮಂದಿರವನ್ನು ನೋಡಬೇಕೆಂದು ಆ ಕಡೆ ನುಗ್ಗಿದೆವು. ಪ್ರವಾಸ ಮಂದಿರದ ಹೊಸ್ತಿಲು ತುಳಿಯುತ್ತಿದ್ದಂತೆಯೇ ನಮಗೆಲ್ಲ ಮಹದಾಶ್ಚರ್ಯ ಕಾದಿತ್ತು. ಬೆಂಗಳೂರಿನ ತಿರುಮಲೆ-ತಿರುಪತಿ ದೇವಸ್ಥಾನದ ವಾರ್ತಾಕೇಂದ್ರದ ಅಧ್ಯಕ್ಷರಾದ "ದೀನಬಂಧು" ಎ. ಆರ್. ನಾಯಿಡು ಕಾಣಿಸಿಕೊಂಡರು. ಅವರಿಗೆ ನಾನು, ಶಕುಂತಲಾಬಾಯಿ ಚಿರಪರಿಚಿತರು. ಓಣಿ ಆಂಜನೇಯ ದೇವಸ್ಥಾನದ "ಶ್ರೀ ರಾಮಾಯಣ ದರ್ಶನಂ" ಪಕ್ಷದ ಕಾವ್ಯವಾಚನ ಸಮಾರಂಭದಲ್ಲಿ ಶ್ರೀನಾಯಿಡು ಅವರು ನಮ್ಮ ಸನ್ಮಾನದಲ್ಲಿ ವಹಿಸಿದ್ದ ಆಸಕ್ತಿ, ದಕ್ಷತೆ ಅಗಾಧವಾಗಿತ್ತು. ಅವರು "ಓ, ಪಾಂಡುರಂಗರಾವ್, ಶಕುಂತಲಾಬಾಯಿ, ಬನ್ನಿ ಬನ್ನಿ" ಎಂದು ತುಂಬುಹೃದಯದಿಂದ ಸ್ವಾಗತಿಸಿದರು. ನಮ್ಮ ಪರಿವಾರವೂ ಅವರಿಗೆ ಪರಿಚಿತರೆ· ಶ್ರೀರಾಮಪುರದಲ್ಲಿ ಅವರ ಪಕ್ಕದ ಮನೆಯಲ್ಲೇ ಇದ್ದವರು. ಕ್ಷೇಮಸಮಾಚಾರ ವಿನಿಮಯವಾದ ಮೇಲೆ ಶ್ರೀನಿವಾಸನ ದರ್ಶನದ ಪ್ರಸ್ತಾಪ ಬಂತು. "ಕ್ಯೂನಿಂತು ಸ್ವಾಮಿಯ ದರ್ಶನ ಪಡೆಯಲು ಅಸಾಧ್ಯ ಈ ಸಂಜೆ. ಧರ್ಮದರ್ಶನಕ್ಕೆ ಬಿಟ್ಟಿದ್ದೇವೆ ಇವೊತ್ತು" ಎಂದೆ. "ಯೋಚಿಸಬೇಡಿ, ಸ್ವಾಮಿಯು ಈ ದಿನವೇ ನಿಮಗೆ ದರ್ಶನ ಕೊಡುತ್ತಾನೆ. ರಾತ್ರಿ 9 ಗಂಟೆಗೆ ಮಹಾದ್ವಾರದ ಹತ್ತಿರ ಎಲ್ಲರೂ ಬಂದಿರಿ" ಎಂದರು. "ಕೃತಜ್ಞರಾಗಿದ್ದೇವೆ" ಎಂದು ಅವರಿಂದ ಬೀಳ್ಕೊಂಡೆವು. ರಾತ್ರಿ 9 ಗಂಟೆಗೆ ಸರಿಯಾಗಿ ದೇವಸ್ಥಾನದ ಮಹಾದ್ವಾರದೆಡೆ ಹೋದೆವು. ನಾಯಿಡು ನಮಗಿಂತ ಮೊದಲೆ ಬಂದು ನಮಗಾಗಿ ಕಾದಿದ್ದರು. ಅವರ ನಿಷ್ಠೆ ನಮ್ಮನ್ನು ಬೆರಗುಗೊಳಿಸಿದವು. "ದೀನಬಂಧುವೇ ನೀವೆ"ಂದು ನನ್ನ ದೊಡ್ಡಮ್ಮನ ಮಗ-ಷಡ್ಡಕ ವಾಮನರಾವ್ ಉದ್ಗಾರ ತೆಗೆದರು· ಅಂದು ನಾಯಿಡು ತಾವೇ ಮುಂದಾಳಾಗಿ ನಮ್ಮನ್ನು ಒಳಗೆ ಕರೆದೊಯ್ದು ಸ್ವಾಮಿಯ ದರ್ಶನ ಮಾಡಿಸಿದರು. ಅದೂ ಸಾಲದೆಂಬಂತೆ "ಪಾಂಡುರಂಗರಾವ್, ನಾಳೆ ಬೆಳಗ್ಗೆ ಅಷ್ಟು ಹೊತ್ತಿಗೇ 3-45 ಗಂಟೆಗೆಲ್ಲ ಬಂದುಬಿಡಿ. ಸ್ವಾಮಿಯು ವಿಶ್ವರೂಪದರ್ಶನ ದಯಪಾಲಿಸುತ್ತಾನೆ. ಏರ್ಪಾಡು ಮಾಡಿದ್ದೇನೆ ಇಗೋ ಪ್ರವೇಶ ಚೀಟಿ," ಎಂದು ಅಪ್ಪಣೆ ಚೀಟಿ ಕೊಟ್ಟು ನಮ್ಮ ವಂದನೆಗೂ ಕಾಯದೆ ನಡೆದು ಬಿಟ್ಟರು. ಶಕುಂತಲಾಬಾಯಿಗೆ, ನನಗೆ, "ದೀನಬಂಧು"ನಾಯಿಡು ಅವರು ನಡೆದುಕೊಂಡ ಸರಳ ವಿನಯಸಂಪನ್ನತೆ ತುಂಬ ಹಿಡಿಸಿತು.

ಶಕುಂತಲಾಬಾಯಿ ಸಾಹಿತ್ಯಯಾತ್ರೆ ಕೈಗೊಂಡಾಗಲೆಲ್ಲ ಕ್ಷೇತ್ರ ದೇವತಾ ಸಮ್ಮುಖಗಳಲ್ಲಿ ಗಮಕ ಕಲಾ ಸೇವೆ ಸಲ್ಲಿಸದೆ ಬಂದಿಲ್ಲ. ಆದುದರಿಂದ ತಿರುಪತಿಯ ತಿಮ್ಮಪ್ಪನ ಸಮ್ಮುಖದಲ್ಲೂ ತನ್ನ ಕಾವ್ಯವಾಚನ ಕೈಂಕರ್ಯ ಸಲ್ಲಿಸಬೇಕೆಂದು ಮನಸ್ಸಾಯಿತು. ಯಾರನ್ನು ಆಶ್ರಯಿಸುವುದು ? ಈಗಲೂ ನಮ್ಮ ನೆರವಿಗೆ ಬಂದವರು "ದೀನ ಬಂಧು" ಎ. ಆರ್. ನಾಯಿಡು. ನಾನು ಅವರಿಗೆ ಶಕುಂತಲಾಬಾಯಿಯ ಆಶಯವನ್ನು ಶ್ರುತಪಡಿಸಿಕೊಂಡೆ. "ಓ ಇಷ್ಟೇತಾನೆ. ನಾನು ಏರ್ಪಾಡು ಮಾಡಿಸುತ್ತೇನೆ". ಎಂದರು ಸರಾಗವಾಗಿ. ಕೂಡಲೆ ಒಂದು ಹಾಳೆಯ ಮೇಲೆ "ಸಾಹಿತ್ಯ, ಸಂಸ್ಕೃತಿ, ಸದಸ್ಸ್"ನ ಮುಖ್ಯ ಕಾರ್ಯಕರ್ತರಿಗೆ ನಮ್ಮ ಮನೋಗತ ತಿಳಿಸಿ, ಗಮಕ ಸೇವೆ ಸಲ್ಲಿಸುವುದಕ್ಕೆ ಅವಕಾಶ ಕಲ್ಪಿಸಿಕೊಡಬೇಕೆಂದು ನಿವೇದಿಸಿಕೊಂಡಿದ್ದರು. ಸದಸ್ಸಿನ ಅಧಿಕಾರಿಗಳು "ನಾಳೆ ಸಂಜೆ ಅವಕಾಶ ಕಲ್ಪಿಸಿಕೊಟ್ಟಿದೆ. 7 ಗಂಟೆಗೆ ಬನ್ನಿ" ಎಂದು ತತ್‌ಕ್ಷಣವೇ ನುಡಿದು ವಿಜ್ಞಾಪನ ಪತ್ರದ ಮೇಲೂ ವಿಷಯ ಗುರುತಿಸಿಕೊಂಡರು. ಹೂವಿನ ಸರ ಎತ್ತಿದಷ್ಟು ಹಗುರವಾಗಿ ಶಕುಂತಲಾಬಾಯಿಯ ಗಮಕ ವಾಚನ ಸೇವೆ ನಿಶ್ಚಯವಾಗಿ ಹೋಯಿತು.

ನಮ್ಮ ಪುಣ್ಯ, ತೇರಕೋಟೆ ರಾಮನಾಮ ಯಜ್ಞದ, ಕರ್ಣಾಟಕ ಹರಿಕಥಾ-ಸಂಗೀತ ವಿದ್ವಾಂಸರಾದ "ತೇರಾಕೋಟ" ಚಂದ್ರಶೇಖರಯ್ಯ ಹಿಂದಿನ ದಿವಸವಷ್ಟೇ ಸದಸ್ಸಿನ ಆಶ್ರಯದಲ್ಲಿ ಭಕ್ತಿಗೀತೆಗಳ ಕಾರ್ಯಕ್ರಮ ಕೊಟ್ಟಿದ್ದರು ; ಅವರ ನೆರವಿನಿಂದ ಶಕುಂತಲಾಬಾಯಿಗೆ ತಂಬೂರಿ ಶ್ರುತಿ ದೊರೆಯಿತು. ಅವರಿಗೆ ಶಕುಂತಲಾಬಾಯಿ ಆರ್ಯಬಾಲಿಕಾ ಪಾಠಶಾಲೆಯಲ್ಲಿ ಸಂಗೀತ ಪಾಠದ ಶಿಷ್ಯೆಯಾಗಿದ್ದರೆಂದು ಹೆಮ್ಮೆ. ಚಂದ್ರಶೇಖರಯ್ಯ, ತಮ್ಮ ಪರಿಚಿತ ಜನಕ್ಕೆಲ್ಲ ಹೇಳಿ ಶ್ರೋತೃವೃಂದವನ್ನು ಜಮಾಯಿಸಿದರು. ಆಕಾಶವಾಣಿ ಕಲಾವಿದ ಘಟಂ ಸೀತಾರಾಮ ಶಾಸ್ತ್ರಿ ಶ್ರೋತೃ ವರ್ಗದಲ್ಲಿ ಪ್ರಮುಖರಾಗಿ ಶಕುಂತಲಾಬಾಯಿಯ ಮುಂದೆ ಕುಳಿತರು. 7 ಗಂಟೆಯಿಂದ 8 ಗಂಟೆಯವರೆಗೆ ಒಂದು ಗಂಟೆಕಾಲ ಶಕುಂತಲಾಬಾಯಿ ಕುಮಾರವ್ಯಾಸ ಕಾವ್ಯದಲ್ಲಿ ತನ್ಮಯರಾಗಿ "ಶ್ರೀಕೃಷ್ಣರಾಯಭಾರ" ಕಥಾಭಾಗ ವಾಚನ ಮಾಡಿದರು. ಸದಸ್ಸಿನ ಸಭಾಂಗಣ ತುಂಬಿ ಬಂದಿತ್ತು. ಸಭಾಂಗಣದ ಹೊರಗೂ ಜನ ನಿಂತು ತನ್ಮಯವಾಗಿ ಕೇಳಿತು. ಸದಸ್ಸು ಧ್ವನಿವರ್ಧಕದಿಂದ ಏರ್ಪಾಟಾಗಿದೆ. ಆ ಕಾರಣ, ತಿರುಪತಿ ದೇವಸ್ಥಾನ ಅದರ ಸುತ್ತಮುತ್ತ ವಾತಾವರಣವೆಲ್ಲ ಸದಸ್ಸಿನ ಮುಖ್ಯ ಕಾರ್ಯಕ್ರಮಗಳನ್ನು ಕೇಳುವ ಅನುಕೂಲವಿದೆ, ಸ್ವಾಮಿ ಪುಷ್ಕರಣಿಯಲ್ಲಿ ಮುಳುಗು ಹಾಕುತ್ತಿದ್ದವರು, ಧರ್ಮದರ್ಶನಕ್ಕಾಗಿ ಕ್ಯೂ ನಿಂತವರು, ದೇವಸ್ಥಾನದ ಸನಿಹದಲ್ಲಿ ಹಾದುಹೋಗುತ್ತಿದ್ದವರು, ತಿರುಮಲೆ ವಿಸ್ತರಣಗಳಲ್ಲಿ ಬಿಡಾರ ಮಾಡಿದ್ದವರು ಹೀಗೆ ಸಕಲರೂ ಕೇಳಿದರು. ಭಾಷೆ ತಿಳಿಯದವರಿಗೆ ಶಕುಂತಲಾಬಾಯಿಯ ಕಲಕಂಠಶ್ರೀ ಸಂಗೀತ ಸುಶ್ರಾವ್ಯವಾಗಿತ್ತು. ಕನ್ನಡ ಬಾಂಧವರಿಗೆ ಕಥೆ, ಕಂಠ ಎರಡೂ ಅಮೋಘವಾಗಿತ್ತು. ಕುಮಾರವ್ಯಾಸನ

ಕಾವ್ಯ ಪ್ರೌಢಿಮೆಯನ್ನು ತಿರುಪತಿ ಮಹಾ ಕ್ಷೇತ್ರದಲ್ಲೂ ಕನ್ನಡ ನಾಡಿನ ವಿಶಿಷ್ಟ ಕಲೆ ಎನ್ನಿಸಿದ ಗಮಕದಿಂದ ಮೆರೆದಂತಾಯಿತು.

ಶಕುಂತಲಾಬಾಯಿಗೆ ಮನೆದೈವದ ಸನ್ನಿಧಿಯಲ್ಲಿ ತನ್ನ ಸೇವೆ ಸಂದಂತಾಗಲಿಲ್ಲ ವಲ್ಲ ಎಂಬ ಕೊರಗು. ಅದನ್ನು ಸದಸ್ಸಿನ ಮುಖ್ಯ ಕಾರ್ಯಕರ್ತರಿಗೆ ನಿವೇದನೆ ಮಾಡಿ ಕೊಂಡರು. ಮುಖ್ಯ ಕಾರ್ಯಕರ್ತರು ಶಕುಂತಲಾಬಾಯಿಯ ಗಮಕ ಸೇವೆಯನ್ನು ಬಹಳವಾಗಿ ಮೆಚ್ಚಿಕೊಂಡು ತಮ್ಮ ಪಾಂಡಿತ್ಯಪೂರ್ಣ ಶೈಲಿಯಲ್ಲಿ ವಂದನೆ ಸಲ್ಲಿಸಿದ್ದರು. ಅವರು ಶಂಕುತಲಾಬಾಯಿಯ ಇಷ್ಟಾರ್ಥವನ್ನು ಶ್ರೀನಿವಾಸ ದೈವದ ಮುಂದೆ ನಡೆಸಿ ಕೊಡಲು ಕೂಡಲೆ ಕಾರ್ಯ ತತ್ಪರರಾದರು. ನಮ್ಮ ಪರಿವಾರವನ್ನೆಲ್ಲ ದೇವಸ್ಥಾನಕ್ಕೆ ಕರೆದುಕೊಂಡು ಹೋದರು. ಧರ್ಮದರ್ಶನ ಮುಕ್ತಾಯವಾದ ಸ್ವಲ್ಪ ಹೊತ್ತಿನ ಮೇಲೆ ಶ್ರೀನಿವಾಸನ ಸನ್ನಿಧಿಯಲ್ಲಿ ಕುಮಾರವ್ಯಾಸ ಭಾರತದ 15 ನಿಮಿಷಗಳ ಕಾವ್ಯವಾಚನ ಏರ್ಪಾಡಾಯಿತು.

ಶ್ರೀನಿವಾಸ ದೈವದ ಮುಖ್ಯ ಗುಡಿಯ ಒಳಭಾಗವನ್ನು ತಿರುಮಾಮಣಿ ಮಂಟಪ, ಉತ್ಸವ ಮಂಟಪ, ಶಯ್ಯಾ ಮಂಟಪ, ಗರ್ಭಗುಡಿ ಎಂದು ವಿಭಾಗಿಸಿದ್ದಾರೆ. ತಿರುಮಾಮಣಿ ಮಂಟಪವನ್ನು ಪ್ರವೇಶಿಸಿದರೆ ದ್ವಾರಪಾಲಕರಿರುವ ಗರ್ಭಗುಡಿ ಪ್ರವೇಶ ಪರಿಚಯವಾಗುತ್ತದೆ, ಗರ್ಭಗುಡಿ ಪ್ರವೇಶವನ್ನು ಹೊಕ್ಕು, ಶಯ್ಯಾ ಮಂಟಪ ವನ್ನು ದಾಟ ಮುಂದೆ ಹೋದರೆ ಸ್ವಾಮಿಯ ದರ್ಶನವಾಗುತ್ತದೆ. ಸ್ವಾಮಿಗೂ ದ್ವಾರ ಪಾಲಕರಿಗೂ ಎದುರಾಗಿ ಪೂರ್ವ ಪಶ್ಚಿಮವಾಗಿ ವಿಶಾಲವಾಗಿರುವುದೆ ತಿರುಮಾಮಣಿ ಮಂಟಪ. ಸಂಗೀತ, ಕಾವ್ಯವಾಚನ, ಮುಖ್ಯ ಸೇವೆ ಸ್ವಾಮಿಗೆ ಏನು ಸಲ್ಲಬೇಕಾದರೂ ತಿರುಮಾಮಣಿ ಮಂಟಪದಲ್ಲೆ. ಶಕುಂತಲಾಬಾಯಿ ಇಲ್ಲಿಯೇ ಸಲ್ಲಿಸಿದ್ದು ಕುಮಾರ ವ್ಯಾಸಭಾರತವಾಚನ ಸೇವೆಯನ್ನು. "ಶ್ರೀವನಿತೆಯರಸನೆ"ನಾಂದಿ ಪದ್ಯದಿಂದ ಪ್ರಾರಂಭ ಮಾಡಿ "ವೇದಪುರುಷನ ಸುತನ ಸುತನ" ಪದ್ಯದವರೆಗೆ ಪೀಠಿಕಾ ಸಂಧಿ 23 ಪದ್ಯ ಗಳನ್ನು ಒಳಗೊಂಡಿವೆ. ಹದಿನೈದು ನಿಮಿಷಗಳ ಕ್ಲುಪ್ತಕಾಲಕ್ಕೆ ಬೇಕಾಗುವಷ್ಟು ಪದ್ಯ ಗಳನ್ನು ಆರಿಸಿಕೊಂಡಿತ್ತು. ಶಕುಂತಲಾಬಾಯಿಯ ಕೊನೆಯ ತಮ್ಮ ಸತ್ಯನಾರಾಯಣ ರಾಯನೂ ತನ್ನ ದೈವದತ್ತವಾದ ಇಂಚರದಿಂದ ಶ್ರೀನಿವಾಸನಿಗೆ ಸೇವೆಸಲ್ಲಿಸಿದ ದೇವರ ನಾಮಗಳನ್ನು ಹಾಡಿ.

ತಿರುಪತಿಯಾತ್ರೆ ಮುಗಿಯಿತು. ದೈವದ ಅನುಗ್ರಹ, 28-2-1971ರಂದು, ಬೆಂಗಳೂರು ನಗರದ ಸರ್ ಪುಟ್ಟಣ ಶೆಟ್ಟರ ನಗರ ಭವನದಲ್ಲಿ ಮೈಸೂರು ರಾಜ್ಯಪಾಲ ರಾಗಿದ್ದ ಧರ್ಮವೀರರ ಅಧ್ಯಕ್ಷತೆಯಲ್ಲಿ ಬೆಂಗಳೂರಿನ ತಿರುಮಲೆ ತಿರುಪತಿ ದೇವಸ್ಥಾನದ ವಾರ್ತಾಕೇಂದ್ರ ತನ್ನ 13ನೆಯ ವಾರ್ಷಿಕೋತ್ಸವವನ್ನು ನಡೆಸಿದ ಸಂದರ್ಭದಲ್ಲಿ ಶಕುಂತಲಾಬಾಯಿಗೆ "ಕಾವ್ಯವಾಚನ ಪ್ರವೀಣೆ"ಯೆಂಬ ಪ್ರಶಸ್ತಿಯಿತ್ತು ಶಾಲು ಹೊದಿಸಿ, ಶ್ರೀನಿವಾಸನ ದೊಡ್ಡ ಪಟವನ್ನು ಕೊಟ್ಟು ಗೌರವ ಸಲ್ಲಿಸಿತ್ತು. ದೀನಬಂಧು ಎ. ಆರ್. ನಾಯಿಡು ಮುಖ್ಯ ನೇತಾರರಾಗಿ ಕಾರ್ಯ ನಿರ್ವಹಿಸಿದ್ದರು.

ಇನ್ನೊನ್ನೆ ತಿರುಪತಿಯಲ್ಲಿ

ತಿರುಪತಿ ಯಾತ್ರೆ ನಮಗೆ ದಂಪತಿಗಳಿಗೆ ಇನ್ನೊಮ್ಮೆ ಪ್ರಾಪ್ತವಾಯಿತು. ನಮ್ಮ ಎರಡನೆಯ ಬೀಗರು ಬೀಗಿತ್ತಿ ಬಿ. ನಾಗರಾಜರಾಯರು, ಅವರ ಸಹಧರ್ಮಿಣಿ ಪದ್ಮಮ್ಮ ತಮ್ಮ ದ್ವಿತೀಯ ಪುತ್ರ ಚಿ|| ರಾಜಣ್ಣ ಮತ್ತು ಮೊಮ್ಮಗ ಚಿ|| ವಿಕಾಸ್ ಇಬ್ಬರಿಗೂ ಕ್ರಮವಾಗಿ ಉಪನಯನ ಮತ್ತು ಚೌಲ ವಿಧಿಗಳ ಕಾರ್ಯಕ್ರಮವನ್ನು ಶ್ರೀನಿವಾಸನ ಸನ್ನಿಧಿಯಲ್ಲಿ ನೆಗಳಿಕೊಂಡಿದ್ದರು. ನಾವು ಅತಿಥಿಗಳಾಗಿದ್ದೆವು.

ಈ ತಿರುಪತಿ ಯಾತ್ರೆಯಲ್ಲಿ ಶ್ರೀನಿವಾಸನಿಗೆ ನಮ್ಮ ಗಮಕಕಲಾ ಪರಿಚಾರಿಕೆ ಲಭ್ಯವಾಗಲಿಲ್ಲ; ನಮಗೆ ಸೇವೆ ನಡೆಸುವುದಕ್ಕೆ ಲವಲವಿಕೆಯೂ ಇರಲಿಲ್ಲ. ಹಿಂದಿನ ನೆನಪು ಕೊಟ್ಟು, ಸಾಹಿತ್ಯ ಸಂಸ್ಕೃತಿ ಸದಸ್ಸಿನ ಕಾರ್ಯಕರ್ತರಿಗೆ ಅಪೇಕ್ಷಾ ಪತ್ರ ಸಲ್ಲಿಸಿದ್ದರೆ ಅದು ನೆರವೇರುತಿತ್ತೋ ಏನೋ ? ಆ ಕಡೆ ನಾವು ಗಮನವನ್ನೇ ಹರಿಸಲಿಲ್ಲ. ಹಿಂದಿನ ಸಲ ನಾವು ತಿರುಪತಿಯಾತ್ರೆ ಮಾಡಿದಾಗ ನಮ್ಮ ದೊಡ್ಡಮ್ಮನ ಮಗ– ಶಕುಂತಲಾಬಾಯಿಯ ಕೊನೆಯ ತಂಗಿ ಸುಶೀಲಾಬಾಯಿಯ ಗಂಡ ವಾಮನರಾವ್ ಯಾತ್ರೆಯ ನೇತಾರ ಪಟ್ಟವನ್ನು ಕಟ್ಟಿಕೊಂಡು ನಮಗೆಲ್ಲ ಬೇಕು ಬೇಕಾದ ಸಕಲ ಸೌಕರ್ಯಗಳನ್ನು ಒದಗಿಸಿ "ಭಲೆ, ಭೇಷ್" ಎನ್ನಿಸಿಕೊಂಡಿದ್ದ. ವಾಮನನೆಂದರೆ ವಾಮನನಲ್ಲ ತ್ರಿವಿಕ್ರಮನೆನ್ನಬಹುದಾದ 5 ಅಡಿ 4 ಅಂಗುಲದ ಆಜಾನುಬಾಹು. ಎತ್ತರಕ್ಕೆ ತಕ್ಕ ಸುತ್ತಳತೆಯ ಮೈ. ಗೌರವರ್ಣ, ನಗುಮುಖ. ಮಾತಿನಲ್ಲಿ ಯಾವಾಗಲೂ ನಗೆಮುತ್ತು. ಚಿಕ್ಕವರಿಗೆಲ್ಲ "ವಾಮೂಕಕ್ಕ". ಸದಾ ಕೈಯಲ್ಲೊಂದು ಚಾಕು, ಕಂಡ ಕಂಡ ಹಣ್ಣು ಹಂಪಲು ಕೊಂಡು ಚಾಕುವಿನಿಂದ ಸೀಳಿ ಹೋಳು ಮಾಡಿ ಚಿಕ್ಕವರಿಗೆಲ್ಲ ಹಂಚಿ ತಾನು ತಿನ್ನೋಣ. ಆರ್. ನರಸಿಂಹಾಚಾರ್ಯರ "ನಗೆಗಡಲು" ವೈಶಿಷ್ಟ್ಯವನ್ನು ಮೀರಿಸಿ ಗಾಂಪರೊಡೆಯರು ಅವರ ಪಂಚ ಶಿಷ್ಯರು, ಮಂಕ, ಮಡ್ಡಿ ಮೂರ್ಖ, ಮಡಮ, ಮುಟ್ಠಾಳರುಗಳನ್ನು ಮಂಕುದಿಣ್ಣೆಯ ಮೇಲೇರಿಸಿ ಉಪ್ಪುಕಾರ ಹಚ್ಚಿ ಹೆಜ್ಜೆ ಹೆಜ್ಜೆಗೂ ಹೊಟ್ಟೆ ಹುಣ್ಣಾಗಿಸುವಂತೆ ಮಾಡಿ ಎಳೆಯರನ್ನು ಆಕರ್ಷಿಸುವ ಚಮತ್ಕಾರ. ಈ ವಿಶಿಷ್ಟ ಗುಣಗಳುಳ್ಳ ವಾಮನರಾಯ ನಮ್ಮನೆಲ್ಲ ತಬ್ಬಲಿಗಳನ್ನಾಗಿ ಮಾಡಿ 1974ರಲ್ಲಿ ಶ್ರೀನಿವಾಸನ ಪಾದ ಸೇರಿದ್ದ. ಆ ನೆನಪು ಮರುಕಳಿಸುತ್ತಿತ್ತು. ನೋವು ಇನ್ನೂ ಹಸಿಹಸಿ. ವಾಮನರಾವ್ ರಸಿಕ. ಕಲೆ ಸಂಗೀತಗಳಲ್ಲಿ ಆಸಕ್ತ. ಸುಪ್ರಸಿದ್ಧ ಪಿಟೀಲು ವಿದ್ವಾಂಸ, ಸಂಗೀತ ವಿದ್ಯಾಸಾಗರ ಆರ್. ಆರ್. ಕೇಶವಮೂರ್ತಿಗಳಿಂದ ಸುಶೀಲಾಬಾಯಿಗೆ ಪಿಟೀಲು ವಾದ್ಯ ಸಂಗೀತ ಪಾಠವನ್ನು ನಾಲ್ಕೈದು ವರ್ಷ ಕೊಡಿಸಿದ್ದ. ಅಕ್ಕನಂತೆ ಸುಮಧುರ ಕಂಠ ತಂಗಿಗೂ ದೈವದತ್ತವಾಗಿದ್ದುದರಿಂದ, ತನ್ನ ಅತ್ತಿಗೆ ಶಕುಂತಲಾಬಾಯಿಯಿಂದ ಗಮಕಪಾಠ ಹೇಳಿಸಿದ್ದ. ಹಿರಿ ಮಗಳು ವನಜಾ ಕೋಟೇಶ್ವರ ಗಂಡನ ಮನೆಗೆ ಹೋದ ಮೇಲೆ ಶಕುಂತಲಾಬಾಯಿಗೆ, ಊರಿನ, ಹೊರ ಊರಿನ ಕಾರ್ಯಕ್ರಮಗಳಿಗೆ ತಂಬೂರಿ ಶ್ರುತಿ ಕೊಡುವುದಕ್ಕೆ ಸುಶೀಲಾಬಾಯಿಯ

ಸಹಾಯವನ್ನು ಒದಗಿಸುತ್ತಿದ್ದ. ನಮ್ಮ ಮಕ್ಕಳು ವನಜ ಕೋಟೀಶ್ವರ, ಬಿ. ಪಿ. ಮೋಹನ, ಇವರುಗಳ ಮದುವೆಯಲ್ಲಿ ಓಡಾಡಿ, ಮುಖ್ಯ ಪಾರುಪತ್ಯ ವಹಿಸಿ ನಮಗೆ ಒಳ್ಳೆಯ ಹೆಸರು ಬರುವಂತೆ ಮಾಡಿದ್ದವನು ವಾಮನರಾಯನೆ. ನನಗೆ "ವಾಮಣ್ಣ", ಅತ್ತಿಗೆ "ವೈನಿ"ಗೂ "ವಾಮಣ್ಣ". ಇಂಥ ಸರಸಿ, ಸರ್ವ ಜನಪ್ರಿಯ ವಾಮನರಾಯ ನಡೆದುಹೋಗುತ್ತಿದ್ದಾಗ ದೊಡ್ಡ ಮಾರ್ಕೆಟ್ಟಿನ ಬಳಿ ಒಂದು ಬಾಳೆಯಕಾಯಿ ಹೊತ್ತ ಕೈಗಾಡಿಯೊಂದು ಕಾಲಮೇಲೆ ಹರಿಯಿತು. ಕಿರುಬೆರಳು ಕತ್ತರಿಸಿತು. ಕೂಡಲೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಪ್ರಥಮಚಿಕಿತ್ಸೆ, ಇಂಜಕ್ಷನ್ ಏನೇನು ಆಗಬೇಕೋ ಎಲ್ಲ ಆಯಿತು. ಕುಂಟುತ್ತ ಮನೆಗೆ ಬಂದ. ಖಾಸಗಿ ವೈದ್ಯರಲ್ಲಿ ವೈದ್ಯಿಕೆ ಪ್ರಾರಂಭ ವಾಯಿತು. ಪೆನ್ಸಿಲಿನ್ ಡೋಸೇಜು ಕೊಡಲಾಯಿತು. ಆತನ ಮೈಗೆ ಬಂದಿಲ್ಲವೇನೋ ಒಂದು ವಾರದೊಳಗೆ ಧನುರ್ವಾಯು ಉಲ್ಬಣಗೊಂಡು ಸ್ವಾಮಿ ಪಾದ ಸೇರಿ ನಮಗೆಲ್ಲ ಅಪಾರವಾದ ಶಾಶ್ವತ ಸಂಕಟವನ್ನು ಉಳಿಸಿಬಿಟ್ಟ. ವಾಮಣ್ಣನ ನೆನಪು ತಿರುಪತಿಯಲ್ಲಿ ಎಲ್ಲೆಲ್ಲಿ ಹೋದರೂ ಮರುಕಳಿಸುತ್ತಲೇ ಇತ್ತು. ಸದಸ್ಸು ಸಭಾ ಮಂಟಪದ ರಸ್ತೆ ಯನ್ನು ಹಾದು ಹೋದಾಗಲಂತೂ ಆತನ ನೆನಪೇ ನೆನಪು. ಸುಶೀಲಾಬಾಯಿ ವಾಮನ ರಾವ್ ತಂಬೂರಿ ಶ್ರುತಿ ಕೊಟ್ಟ ನೆರವಿನ ನೆನಪು. ಮೂಕ ಸಂಕಟವನ್ನು ಯಾರಿಗೂ ತಿಳಿಸದೆ ದುಃಖವನ್ನು ಒಳಗೇ ನುಂಗಿಕೊಂಡೆವು. ತಿರುಪತಿ ಯಾತ್ರೆ ಮುಗಿಸಿ ಬೀಗರ ಜೊತೆಯಲ್ಲಿ ಬೆಂಗಳೂರಿಗೆ ಬಂದೆವು.

ಧ್ವನಿಮುದ್ರಿಕೆ ಪ್ರಪಂಚದಲ್ಲಿ

ಶಕುಂತಲಾಬಾಯಿಗೆ ದಿಢೀರನೆ ಧ್ವನಿಮುದ್ರಿಕೆ ಪ್ರಪಂಚದ ಪ್ರವೇಶ ಪ್ರಾಪ್ತ ವಾಯಿತು. ಆಕೆಯ ಗಮಕ ಜೀವನ ಯಾತ್ರೆಯಲ್ಲಿ ಕೆಲವು ಸಂಘಟನೆಗಳು ತಾನಾಗೇ ಪ್ರಾಪ್ತವಾಗಿವೆ. ಅವುಗಳಲ್ಲಿ ಮದರಾಸಿನ ಕೊಲಂಬಿಯಾ ಗ್ರಾಮೋಫೋನ್ ಕಂಪೆನಿಗೆ "ರಾಘವೇಂದ್ರ ಗುರೂಜಿ" ಎಂಬ "ಭೀಮಕವಿ" ಎಂದು ಪ್ರಸಿದ್ಧರಾದ ಜಿ. ಬಿ. ಆಚಾರ್ಯರ ಸಾಹಿತ್ಯಕ್ಕೆ ಕಂಠದಾನ ಮಾಡಿದುದು ಒಂದು ಅತಿ ಮುಖ್ಯ ಘಟನೆ. "ರಾಘವೇಂದ್ರ ಗುರೂಜಿ" ಧ್ವನಿಮುದ್ರಿಕೆ ಕಾರ್ಯ ಯೋಜನೆಯ ನಿಮಿತ್ತ ಮದರಾಸಿಗೆ ನಾವು ದಂಪತಿಗಳು ಪ್ರಯಾಣ ಬೆಳೆಸಿದೆವು.

ನಮ್ಮ ಆತ್ಮೀಯ ಬಂಧುಗಳಾದ ಅನಿರುದ್ಧ ಎಂಟರ್‌ಪ್ರೈಸಿನ ದಂಪತಿಗಳು ಎಂ. ಕೆ. ಗೋಪೀನಾಥ ಮತ್ತು ಸುಂದರಾಬಾಯಿ ನಮ್ಮನ್ನು ಅತ್ಯಾದರದಿಂದ ಬರ ಮಾಡಿಕೊಂಡರು. ಜಿ. ಬಿ. ಆಚಾರ್ಯ ನಮ್ಮನ್ನು ಒಂದು ಮಧ್ಯಾಹ್ನ "ತ್ರಿಭಾಷಾ ಹಿನ್ನೆಲೆ ಗಾಯಕಿ"ಯೆನ್ನಿಸಿಕೊಂಡು ದಕ್ಷಿಣ ಭಾರತದಲ್ಲೆಲ್ಲ ಮನೆಮಾತಾಗಿರುವ ಚಲನ ಚಿತ್ರ ಪ್ರಪಂಚದ ಸಂಗೀತ ವಿದುಷಿ ಎಸ್. ಜಾನಕಿಯವರ ಮಾವ ಚಂದ್ರಶೇಖರ್ ನಮಗೆ ಪರಿಚಿತವಾಗಿದ್ದ ಹೆಸರು. ನಾನು ಚಿಕ್ಕವನಾಗಿ ವಿದ್ಯಾರ್ಥಿ ದೆಸೆಯಲ್ಲಿರುವಾಗಲೇ ಅವರು ಯುವಕರು. ಭಾರತ ರಾಷ್ಟ್ರದ ಪ್ರಖ್ಯಾತ ಪುರುಷರುಗಳನ್ನು ತಮ್ಮ ವ್ಯಕ್ತಿತ್ವ

ದಲ್ಲಿ ಮುಖ ಬದಲಾವಣೆ ಮಾಡಿ, ಅವರುಗಳ ಧ್ವನಿಗಳನ್ನು ಅನುಕರಿಸಿ ಸಾರ್ವಜನಿಕ ವೇದಿಕೆಗಳ ಮೇಲೆ ಪ್ರದರ್ಶನ ಕೊಟ್ಟು ಜನಪ್ರಿಯರಾಗಿದ್ದರು. ನಾನು ಅವರ ಪ್ರದರ್ಶನ ಗಳನ್ನು ಬೆಂಗಳೂರಲ್ಲಿ ನೋಡಿ ಖುಷಿ ಪಟ್ಟಿದ್ದೆ. ಅವರು ನಮ್ಮನ್ನು ಸ್ವಾಗತಿಸಿದರು. ಅವರು ತಮ್ಮನ್ನು ಪರಿಚಯಿಸಿಕೊಂಡ ಘಳಿಗೆಯಲ್ಲೇ ನಾನು ಅವರ ಹಿಂದಿನ ದಿನಗಳ ಪ್ರಖ್ಯಾತಿಯನ್ನು ಅವರಿಗೇ ಮರುಕಳಿಸಿ ಋಣುತಪಡಿಸಿದೆ. ಸ್ವಲ್ಪ ಹೊತ್ತಿಗೆ ಕೊಲಂಬಿಯಾ ಕಂಪನಿಯ ಸಂಗೀತ ನಿರ್ದೇಶಕ ಹನುಮಂತರಾವ್ ನಾಯಿಡು ಬಂದರು. ಕೆಲವು ನಿಮಿಷಗಳಲ್ಲಿ ಜಾನಕಿ ಒಳಗಿಂದ ಬಂದು ನಮ್ಮನ್ನು ಸೇರಿಕೊಂಡರು. ಬಹು ಪ್ರಸಿದ್ಧ ಕಲೆಗಾರ್ತಿಯೆಂಬ ಗಮ್ಮತ್ತು, ಬಿಗುಮಾನ, ಆಕೆಯಲ್ಲಿ ಕಿಂಚಿತ್ತೂ ಕಂಡುಬರಲಿಲ್ಲ. ಆಕೆಗೆ ಕನ್ನಡ ಬರುತ್ತಿದ್ದುದರಿಂದ ಭಾಷಾ ವಿನಿಮಯದ ತೊಡಕು ಏಳಲಿಲ್ಲ. ಕನ್ನಡ ದಲ್ಲೇ ಸರಸವಾಗಿ ಸಂಭಾಷಣೆ ಜರುಗಿತು. ಬೆಂಗಳೂರಲ್ಲಿ "ರಾಘವೇಂದ್ರ ಗುರೂಜಿ"ಯ ಧ್ವನಿಮುದ್ರಿಕೆ ಕ್ಯಾಸೆಟ್ ಒಂದು ಸಿದ್ಧವಾಗಿತ್ತು ಕೊಲಂಬಿಯಾ ಕಂಪನಿ ತಜ್ಞರ ಅವ ಲೋಕನಕ್ಕೆ. ಹನುಮಂತರಾವ್ ನಾಯಿಡು, ಜಾನಕಿ, ಅದನ್ನು ಆಲಿಸಿದರು. ಹನುಮಂತರಾವ್ ನಾಯಿಡು ಶಕುಂತಲಾಬಾಯಿಯ ಶ್ರೀಮಂತ ಕಂಠಕ್ಕೆ ಮಾರ್ರು ಹೋದರು. "ಎಂಥ ಕಂಠ ಎಂಥ ಕಂಠ" ಎಂದು ಎರಡು ಮೂರು ಸಲ ತಮ್ಮಲ್ಲೇ ಅಂದುಕೊಂಡರು. ಈ ಸಿರಿಕಂಠ ನಮ್ಮ ದಕ್ಷಿಣದಲ್ಲಿ ಸುಪ್ರಸಿದ್ಧ ಸಂಗೀತ ವಿದುಷಿ ....ಅವರಿಗಿದೆ. ಅಪರೂಪ ಕಂಠ ನಿಮ್ಮದು"ಎಂದು ನಿರ್ಮಲಾಂತಃಕರಣದಿಂದ ನುಡಿದರು. "ಶ್ರೀಮತಿಯವರು ಸರಿಯಾದ ರಾಗಗಳನ್ನೇ ಸಾಹಿತ್ಯಕ್ಕೆ ಸಂಯೋಜಿಸಿದ್ದಾರೆ. ನಾನು ತಿದ್ದಬೇಕಾಗಿಲ್ಲ", ಎಂದರು. "ಈ ದಿವ್ಯ ಕಲಕಂಠವನ್ನು ಕನ್ನಡನಾಡು ಸರಿಯಾಗಿ ಉಪಯೋಗಿಸಿಕೊಂಡಿಲ್ಲವಲ್ಲ!" ಎಂದು ಪಶ್ಚಾತ್ತಾಪ ವ್ಯಕ್ತಪಡಿಸಿದರು. "ನಾಳೆ ಸ್ಟುಡಿಯೋಗೆ ಬನ್ನಿ ನಾಡದ್ದು ನಿಮ್ಮ ಧ್ವನಿಯನ್ನು ಮುದ್ರಿಸಿಕೊಳ್ಳೋಣ" ಎಂದು ಕರೆಕೊಟ್ಟರು. ಜಾನಕಿಯವರ ಅತ್ತೆ ಕಾಫಿ ತಂದುಕೊಟ್ಟರು. ಜಾನಕಿಯವರ ಅತ್ತೆ ಮಾವನವರು ಮುಪ್ಪಿನ ಮನೆಯನ್ನು ಪ್ರವೇಶಿಸಿದ್ದರು. ಸಂಪ್ರದಾಯದ ದಂಪತಿಗಳು, ಸರಳ ವಿನಯಗಳ ಜನ.

ಬೆಳಗಾಯಿತು, ತ್ಯಾಗರಾಜನಗರದಿಂದ ಜಮುನೀ ಸ್ಟುಡಿಯೋಕ್ಕೆ ಜಿ. ಬಿ. ಆಚಾರ್ಯರೊಡನೆ ಬೆಳಗ್ಗೆ ಅಷ್ಟು ಹೊತ್ತಿಗೇ ಹೋಗಿ ತಲುಪಿದೆವು. ಕಂಪನಿಯ ಕನ್ನಡ ವಿಭಾಗದ ಎಂ.ಪಿ. ಮಹೇಶ್ ಬಂದರು. ಪರಿಚಯವಾಯಿತು. ಆ ದಿನ ತೆಲುಗು ಚಿತ್ರವೊಂದಕ್ಕೆ ತ್ರಿಭಾಷಾ ಹಿನ್ನೆಲೆ ಗಾಯಕಿಯೆನ್ನಿಸಿಕೊಂಡು ದಕ್ಷಿಣ ಭಾರತದಲ್ಲಿ ಸುಪ್ರಸಿದ್ಧರಾಗಿದ್ದ ಪಿ. ಸುಶೀಲ ಅವರ ಕಂಠದಾನ ನಡೆಯುತ್ತಿತ್ತು. ಗಮಕ ವಿನ್ಯಾಸಕ್ಕೂ, ಚಲನಚಿತ್ರ ಗೀತೆಗಳ ವಿನ್ಯಾಸಕ್ಕೂ ಇರುವ ಅಂತರ ಸ್ಪಷ್ಟವಾಯಿತು. ಮನಬಿಚ್ಚಿ ತುಂಬು ಕಂಠದಲ್ಲಿ ಹಾಡದಿದ್ದರೆ ಕಾವ್ಯ ಸಾಹಿತ್ಯದ ಅರ್ಥಭಾವಗಳು ಸ್ಫುರಿಸುವುದು ದುಸ್ಸಾಧ್ಯ ಗಮಕಿಗೆ. "ರಾಘವೇಂದ್ರ ಗುರೂಜಿ"ಯ ಧ್ವನಿಮುದ್ರಿಕೆಗೆ

ಶಕುಂತಲಾಬಾಯಿ ತಮ್ಮ ಕಂಠವನ್ನು ಎಲ್ಲೂ ಹಿಡಿಯದೆ ಬಿಡು ಬೀಸಾಗಿ ಉಪಯೋಗಿಸಿ ಕೊಂಡಿದ್ದಾರೆ.

ನಿರ್ಧರಿಸಿದ್ದ ದಿನ ಬೆಳಗ್ಗೆ ಧ್ವನಿಮುದ್ರಿಕೆಯ ಕಾರ್ಯ ಪ್ರಾರಂಭವಾಯಿತು. ಚರ್ಮವಾದ್ಯದ ಬಳಕೆಯಿರಲಿಲ್ಲ. ಪಿಟೀಲು, ವೀಣೆ ಮತ್ತು ಹಾರ್ಪ್ ವಾದ್ಯಗಳು ಹಿಮ್ಮೇಳಕ್ಕೆ. ಪಿಟೀಲು ವೀಣೆ ವಿದ್ವಾಂಸರುಗಳು ತಮ್ಮ ಪ್ರಪಂಚದಲ್ಲಿ ಸುಪ್ರಸಿದ್ಧರು, ನೂರಾರು ಸಂಗೀತ ವಿದ್ವಾಂಸರುಗಳಿಗೆ ಪಕ್ಕವಾದ್ಯ ನುಡಿಸಿದವರು. ಚಲನಚಿತ್ರಗಳ ಹಿನ್ನೆಲೆ ಗಾಯಕ ಗಾಯಕಿಯರುಗಳಿಗೂ ವಾದ್ಯ ನೆರವು ನೀಡಿದ ಪ್ರಸಿದ್ಧರು. ಅವರು ಗಳ ಜೊತೆ ಹೊಂದಿಕೊಳ್ಳುವುದಕ್ಕೆ ಶಕುಂತಲಾಬಾಯಿಗೆ ಕಷ್ಟವಾಗಲಿಲ್ಲ. "ಶಬರಿ ಗಾದನು ಅತಿಥಿ ದಾಶರಥಿ"ಗೆ ಕಂಠದಾನ ಮಾಡಿದಾಗ ಸ್ಟುಡಿಯೋಗೆ ಒಗ್ಗಿಕೊಂಡ ಅನುಭವ "ರಾಘವೇಂದ್ರ ಗುರೂಜಿ"ಗೆ ಸಾಹಿತ್ಯ ಒದಗಿಸುವಾಗ ಸಹಾಯಕ್ಕೆ ಬಂದಿತು. ಗರಿಹಗುರದಷ್ಟು ಹಗುರವಾಗಿ ಧ್ವನಿ ಮಧ್ಯಾಹ್ನದೊಳಗಾಗಿ ಮುದ್ರಿತವಾಗಿ ಹೋಯಿತು. ವೀಣಾ ವಿತಾನ ವಿದುಷಿ ದೇಶ ವಿದೇಶಗಳನ್ನು ನೋಡಿ ಬಂದ ಕಲಾವಿದೆ, ಆಕೆ, ಶಕುಂತಲಾಬಾಯಿಗೆ ಪಾದಮುಟ್ಟಿ ನಮಸ್ಕರಿಸಿ "ನಿಮ್ಮ ಆಶೀರ್ವಾದ ನನಗೆ ಬೇಕು"ಎಂದು ವಿನಯವನ್ನು ಮೆರೆದರು.

ಶ್ರೀ ರಾಮ ಪಟ್ಟಾಭಿಷೇಕ ಕಾವ್ಯಕ್ಕೆ ಷಷ್ಟಿ ಶಮಾಬ್ದ ನಮನ

೧೨. ಶ್ರೀ ರಾಮ ಪಟ್ಟಾಭಿಷೇಕ ಕಾವ್ಯವಾಚನ

"\. . . . . ಕನ್ನಡ ತಾಯೆ
ಈ ನಾಲಗೆಯೊಳಿರ್ದು ನಿನ್ನ ಕಂದನ ಹರಸು.
ರಾಮಚರಿತವನೊರೆವ ಪಟ್ಟಾಭಿಷೇಕ ಕೃತಿ
ಸಿರಿಗನ್ನಡದ ನುಡಿಗೆ ತೊಡವಾಗಿ ಸಂಚರಿಸು.

—ಶ್ರೀನಿವಾಸ

1921ರ ಏಪ್ರಿಲ್ 25ನೆಯ ದಿನಾಂಕದಂದು ಜನಿಸಿದ ಶಕುಂತಲಾಬಾಯಿಗೆ 1981ರ ಏಪ್ರಿಲ್25ನೆಯ ದಿನಾಂಕಕ್ಕೆ ಸರಿಯಾಗಿ ಅರವತ್ತು ವರ್ಷ ಪೂರ್ತಿಯಾಯಿತು. ನಾನು ಆಕೆಯ ಷಷ್ಟಿ ಪೂರ್ತಿ ವರ್ಷವನ್ನು ಸಾರ್ಥಕ ರೀತಿಯಲ್ಲಿ ಆಚರಿಸಬೇಕೆಂದು ಸಂಕಲ್ಪಿಸಿದೆ. ನನಗೆ 1973ರ ಮೇ 5ನೆಯ ದಿನಾಂಕದಂದು ಅರವತ್ತು ವರ್ಷ ತುಂಬಿದಾಗ ನಾನು ವ್ಯಾಸ ಭಾರತವನ್ನು ಸರಳವಾಗಿ ಮನೋಜ್ಞವಾಗಿ ಕಿಶೋರ ವಯಸ್ಸಿನ ನಮ್ಮ ನಾಡ ಬಾಲಕ ಬಾಲಕಿಯರಿಗೆ ಬರೆದು ಅವರಿಗೇ ಅದನ್ನು ಕಾಣಿಕೆಯಾಗಿ ಅರ್ಪಿಸುವ ನಿಶ್ಚಯಮಾಡಿದೆ.ಅದು ನನ್ನ ಅರವತ್ತೆರಡನೆಯ ವಯಸ್ಸಿನಲ್ಲಿ ಸಫಲವಾಯಿತು. ಕರ್ನಾಟಕದ ವಿಶ್ವ ಹಿಂದೂ ಪರಿಷತ್, ತಾನು ವರ್ಷವರ್ಷವೂ ನಡೆಸುವ ಭಾರತ ಸಂಸ್ಕೃತಿ ಪರಿಕ್ಷೆಗೆ ತಕ್ಕ ಒಂದು ಸುಮಾರು 200-250 ಪುಟಗಳ ಚೊಕ್ಕ ಪುಸ್ತಕವನ್ನು ವ್ಯಾಸ ಭಾರತದಿಂದ ಸಂಗ್ರಹಿಸಿ ಬರೆದುಕೊಡಬೇಕೆಂದು ನನ್ನನ್ನು ಕೇಳಿತು. ಹಿಂದೂ ಸಂಸ್ಕೃತಿಯ ಸರಿಯಾದ ಮೌಲ್ಯಗಳನ್ನು ಎಳೆಯರ ಮನಸ್ಸಿನಲ್ಲಿ ಬಿಂಬಿಸುವುದಕ್ಕೆ ಭಾರತ ಸಂಸ್ಕೃತಿ ಪರಿಚಯ ಪರೀಕ್ಷೆಗಳನ್ನು ಏರ್ಪಡಿಸುವುದು ವಿಶ್ವ ಹಿಂದೂ ಪರಿಷತ್ತಿನ ಉದ್ದೇಶವಾಗಿತ್ತು ಭಾರತ ಸಂಸ್ಕೃತಿ ಪರೀಕ್ಷೆಗಳ ಸಂಯೋಜಕ "ಎಳೆಯರ ರಾಮಾಯಣ" ಕರ್ತೃ ಚಿ||ಎಂ. ಎನ್. ನಾಗರಾಜ್ "ಎಳೆಯರ ಭಾರತ" ಬರೆಯಲು ಪ್ರಾರ್ಥಿಸಿಕೊಂಡರು. "ವೈದ್ಯ ಹೇಳಿದ್ದೂ ಹಾಲನ್ನ ; ರೋಗಿ ಬಯಸಿದ್ದೂ ಹಾಲನ್ನ"ಎಂಬಂತೆ ನನಗೆ ಅತ್ಯಾನಂದವಾಯಿತು. ದಿನವೂ ಪ್ರಾತಃ ಕಾಲ ಅಷ್ಟುಹೊತ್ತಿಗೇ ಎದ್ದು ನಿಷ್ಠೆಯಿಂದ ಸ್ನಾನ ಸಂಧ್ಯಾವಂದನೆ ಮಾಡಿ ಸುಮಾರು ನಾಲ್ಕುಗಂಟೆಗಳಕಾಲ ಪಟ್ಟಾಗಿ ಕುಳಿತು ವ್ಯಾಸಭಾರತವನ್ನು ಅವಲೋಕಿಸಿ ಅಷ್ಟೇಕಾಲ ಕುಳಿತು ಬರೆದೆ. ಹೀಗೆ ಒಂದು ವರ್ಷ ಮುಡಿಪಾಗಿಟ್ಟು ಬರೆದಿದ್ದ ಸಂಗ್ರಹ ಭಾರತವನ್ನು ವಿಶ್ವ ಹಿಂದೂ ಪರಿಷತ್ತಿಗೆ ಒಪ್ಪಿಸಿದೆ. ಸಂಸ್ಥೆ ನನ್ನ ಕೃತಿಯನ್ನು **ಎಳೆಯರ ಭಾರತ** ಎಂಬ ಹೆಸರಿನಲ್ಲಿ ಪ್ರಸಿದ್ಧಿಸುವ ಕೃಪೆ ಮಾಡಿತು. ಆನಂದ ಸಂವತ್ಸರದ ಭಾದ್ರಪದ ಕೃಷ್ಣ ಅಷ್ಟಮಿ 9-10-74ರಂದು ಪೇಜಾವರ ಮಠಾಧೀಶರಾದ ಶ್ರೀ ಶ್ರೀ ಶ್ರೀ ವಿಶ್ವೇಶತೀರ್ಥ ಪಾದಂಗಳವರು ಅಧ್ಯಕ್ಷತೆ ವಹಿಸಿ "ಎಳೆಯರ ಭಾರತ" ಬಿಡುಗಡೆಯ ಸಮಾರಂಭದ ಅನುಗ್ರಹ ಭಾಷಣ ಮಾಡಿದರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ, ಬೆಂಗಳೂರು ಪುರಸಭೆಯ ಮಾಜಿ ಮೇಯರ್, ನಮ್ಮ ಮೆಚ್ಚಿನ ಕನ್ನಡ ಗಣನಾಯಕ ಜಿ. ನಾರಾಯಣ ಅವರು ನನ್ನ ಪುಸ್ತಕದ ಬಿಡುಗಡೆ ಮಾಡಿದರು.

ನಾನು ಯಾವ ತಾಯಿಯ ಸೇವೆಯನ್ನು ಅನನ್ಯ ಭಕ್ತಿಯಿಂದ ಮಾಡುತ್ತಿರುವೆನೋ ಆ ಸರ್ವಭಾಷಾಮಯಿ ವಾಗ್ದೇವಿಯ ಪವಿತ್ರ ದೇಗುಲ ಶ್ರೀ ಕೃಷ್ಣರಾಜ ಪರಿಷನ್ಮಂದಿರದಲ್ಲಿ ನನಗೆ ಕರ್ಣಾಟಕ ವಿಶ್ವ ಹಿಂದೂ ಪರಿಷತ್ತಿನ ಅಧ್ಯಕ್ಷರಾದ ಟಿ. ಎಸ್. ರಾಜಮ್ ಅವರು ಶಾಲು ಹೊದಿಸಿ ಮುಸಿಗಾಣಿಕೆ ಗೌರವ ಧನವಿತ್ತು ಹರಸಿದರು. ನಾನು ನಿರಾಡಂಬರ ಪ್ರಿಯನಾದರೂ ದೈವ ನನ್ನ ಮೇಲೆ ಕೃಪಾರಸವರ್ಷ ಸುರಿಸಿ, ಷಷ್ಟಿಪೂರ್ತಿ ನೋಂಪಿಯನ್ನು ಈ ರೀತಿಯಲ್ಲಿ ಸಾರ್ಥಕ ಪಡಿಸಿತು.

ಈಗ ನಾನು ಶಕುಂತಲಾಬಾಯಿ ತನ್ನ ಷಷ್ಟಿ ಶತಾಬ್ದಿ ನೋಂಪಿಯನ್ನು ಇಡೀ ವರ್ಷ ಒಂದು ಕಾವ್ಯವಾಚನಕ್ಕೆ ಮೀಸಲಾಗಿಡಬೇಕೆಂದು ಆಶಿಸಿದೆ. ಕವಿ ಪೂಜೆ, ಕಾವ್ಯವಾಚನ ನೋಂಪಿ ಮತ್ತು ಜನತಾ ಜನಾರ್ದನ ಸಾಂಸ್ಕೃತಿಕ ಯಜ್ಞ, ಹೀಗೆ ಮುಪ್ಪುರಿಗೊಂಡಿತು ನನ್ನ ಯೋಜನೆ. ಕವಿ ಪೂಜೆ ಆಧುನಿಕ ಕನ್ನಡ ಸಾಹಿತ್ಯಾಚಾರ್ಯರಾದ ಪೂಜ್ಯ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರಿಗೆ. ಕಾವ್ಯವಾಚನ ಕೈಂಕರ್ಯ ಅವರ ಶ್ರೀ ರಾಮ ಪಟ್ಟಾಭಿಷೇಕ ಕಾವ್ಯಕ್ಕೆ. ಜನತಾ ಜನಾರ್ದನ ಸಾಸ್ಕೃತಿಕ ಯಜ್ಞ ಫಲ, ಯಾವ ಸಂಘ ಸಂಸ್ಥೆಗಳು ನಮ್ಮಿಂದ ಶ್ರೀರಾಮ ಪಟ್ಟಾಭಿಷೇಕ ಕಾವ್ಯವಾಚನ ಕೈಂಕರ್ಯ ಮಾಡಿಸಿಕೊಳ್ಳುವವೋ ಅವುಗಳಿಗೆ. ನಮಗೋ ? ರಾಘವಾಂಕ ಕವಿ ತನ್ನ ಹರಿಶ್ಚಂದ್ರ ಕಾವ್ಯದಲ್ಲಿ ಹೇಳಿಕೊಂಡ ಹಾಗೆ "ನಮ್ಮ ಜನ ಬದುಕಬೇಕೆಂದು" ಅಪೇಕ್ಷೆ. ಶಕುಂತಲಾಬಾಯಿ 1981-1982 ಇಡೀ ವರ್ಷವನ್ನು ಮಾಸ್ತಿಯವರ ಶ್ರೀ ರಾಮ ಪಟ್ಟಾಭಿಷೇಕ ಕಾವ್ಯವಾಚನ ನೋಂಪಿಗೇ ಮೀಸಲಾಗಿಟ್ಟರು.

ಪೂಜ್ಯ ಮಾಸ್ತಿಯವರು ಶ್ರೀರಾಮ ಪಟ್ಟಾಭಿಷೇಕ ಕಾವ್ಯವನ್ನು 1972ರ ಜನವರಿ 15ನೆಯ ದಿನಾಂಕದ ವಿರೋಧಿಕೃತ್ ಸಂಕ್ರಾಂತಿ ಶುಭದಿನದಂದು ಪ್ರಕಟಿಸಿದರು. ನಮಗೆ ಅದೇ ವರ್ಷದ ನವಂಬರ್ 25ನೆಯ ದಿನಾಂಕದಂದು ಮಾಸ್ತಿಯವರನ್ನು ಅವರ ಮನೆಯಲ್ಲಿ ದರ್ಶನಮಾಡುವ ಭಾಗ್ಯ ಲಭಿಸಿತು. ಶಕುಂತಲಾಬಾಯಿ ಹಿರಿಯರ ಪಾದ ಮುಟ್ಟಿ ನಮಸ್ಕಾರ ಮಾಡಿದರು. ಮಾಸ್ತಿಯವರು "ನನ್ನಮ್ಮ ಚೆನ್ನಾಗಿ ಬಾಳು" ಎಂದು ಹರಸಿದರು ; ತಮ್ಮ ಮಗಳು ವಿಜಯವಲ್ಲಿಯನ್ನು ಕರೆದು "ಶ್ರೀರಾಮ ಪಟ್ಟಾಭಿಷೇಕ"ದ ಒಂದು ಪ್ರತಿ ತರಿಸಿ, "ಶ್ರೀ ಬಿ. ಶ್ರೀ. ಪಾಂಡುರಂಗರಾವ್, ಸೌಭಾಗ್ಯವತಿ ಶಕುಂತಲಾಬಾಯಿ ದಂಪತಿಗಳಿಗೆ ಪ್ರೀತಿಯಿಂದ, ಶ್ರೀನಿವಾಸ, ಬೆಂಗಳೂರು" ಎಂದು ಬರೆದು, ದಿನಾಂಕವನ್ನು ಗುರುತಿಸಿ ಉಪಾಯನ ಕೊಟ್ಟರು ಶಕುಂತಲಾಬಾಯಿ ಪುಸ್ತಕವನ್ನು ಕಣ್ಣಿಗೊತ್ತಿಕೊಂಡು "ನಾನು ಈ ಕಾವ್ಯವನ್ನು ಗಮಕಕ್ಕೆ ತರಬಹುದೆ ?" ಎಂದು ಕೇಳಿದರು. ಪಕ್ಕದಲ್ಲಿಯೇ ಇದ್ದ ವಿಜಯವಲ್ಲಿ, "ಕಾವ್ಯ ರಚನೆಯಾಗಿರುವುದೇ ಜನದ ಉಪಯೋಗಕ್ಕಾಗಿ" ಅಂದರು. "ಶ್ರೀರಾಮ ಪಟ್ಟಾಭಿಷೇಕ ಕಾವ್ಯವಾಚನ ಮಾಡುತ್ತೇನೆ" ಎಂದು ಅಲ್ಲಿಯೇ ಸಂಕಲ್ಪಿಸಿದರು ಶಕುಂತಲಾಬಾಯಿ. ವರ್ಷದ ಮೇಲೆ ವರ್ಷ ಉರುಳಿತು.

"ಶ್ರೀರಾಮ ಪಟ್ಟಾಭಿಷೇಕ ಕಾವ್ಯವಾಚನವೂ ವರ್ಷವರ್ಷವೂ ಮುಂದುವರಿಯುತ್ತಲೇ ಹೋಯಿತು. ಈ ಮಧ್ಯೆ ನಮಗೆ ತಾಯಿ ಸಮಾನರಾಗಿದ್ದ ಮಾಸ್ತಿಯವರ ಧರ್ಮಪತ್ನಿ ಪಂಕಜಮ್ಮನವರು ದೈವಾಧೀನರಾದರು. ಅವರು ಕಾಲವಾದ ಕೆಲವೇ ವರ್ಷಗಳಲ್ಲಿ ನಮಗೆ ಸಹೋದರಿ ಸಮಾನರಾಗಿದ್ದ ವಿಜಯವಲ್ಲಿ ಕಾಲವಾದರು. ಎಂಥ ದೈವ ದುರ್ವಿಪಾಕ !

1981ನೆಯ ವರ್ಷ ಪೂಜ್ಯರಾದ ಮಾಸ್ತಿಯವರಿಗೆ ತೊಂಬತ್ತು ವರ್ಷ ಪೂರ್ತಿಯಾಯಿತು. ಶಕುಂತಲಾಬಾಯಿಗೆ ಅರವತ್ತು ವರ್ಷ ಪೂರ್ತಿಯಾಯಿತು. ಕುಮಾರ ವ್ಯಾಸೋಕ್ತಿಯಂತೆ ಲೇಸಿನ ಮೇಲೆ ಲೇಸುಗಳು ಒದಗುವ ಶುಭ ಘಳಿಗೆಗೆ ಶ್ರೀರಾಮ ಪಟ್ಟಾಭಿಷೇಕ ಕಾವ್ಯವಾಚನ ಕಾಯುತ್ತಿತ್ತೇನೋ ? ಜೂನ್ 6 ನೆಯ ದಿನಾಂಕಕ್ಕೆ ಮಾಸ್ತಿಯವರಿಗೆ ತೊಂಬತ್ತು ವರ್ಷ ತುಂಬುವುದೆಂದು ತಿಳಿದು, ಅವರ ಭಾವಗೀತೆಗಳನ್ನು ಹಾಡಿ ಧ್ವನಿ ಮುದ್ರಿಸಿ, ಅದನ್ನೆ ಪೂಜ್ಯರಿಗೆ ತಮ್ಮ "ಷಷ್ಟಿ ಪೂರ್ತಿ ನಮನ"ವೆಂದು ಕಾಣಿಕೆಯಾಗಿ ಅರ್ಪಿಸುವುದೆಂದು ಶಕುಂತಲಾಬಾಯಿ ಆಶಿಸಿದರು ; "ಬಿನ್ನಹ" ಭಾವಗೀತ ಸಂಗ್ರಹದಿಂದ "ಯಾವರೂಪದೊಳು ನಿನ್ನನು ಪೂಜಿಸಿಪೊಡೇನು" ಆರಿಸಿಕೊಂಡರು; ಮಾಸ್ತಿಯವರು ತಮಗೆ ಅರವತ್ತು ವರ್ಷ ತುಂಬಿದಾಗ, ರಚಿಸಿ ಪ್ರಕಟಿಸಿದ್ದ "ಮನವಿ" ಭಾವಗೀತೆ ಸಂಗ್ರಹದಿಂದ "ಸಂಗಾತಿ", "ನೇತಾ", "ಕೃಪಾರಸ" ಮತ್ತು "ಅರ್ಪಣ" ಭಾವಗೀತೆಗಳನ್ನು ಆಯ್ದುಕೊಂಡರು ; ಶ್ರೀರಾಮ ಪಟ್ಟಾಭಿಷೇಕ ಕಾವ್ಯದಿಂದ "ಮಂಗಳ"ದ ಪೂರ್ತಿ ಸಾಲುಗಳನ್ನು ಸೇರಿಸಿಕೊಂಡರು ; ಇಷ್ಟೂ ಮಾಸ್ತಿ ಸಾಹಿತ್ಯವನ್ನು ಒಂದು ಗಂಟೆಗೆ ಅಳವಡಿಸಿ ಹಾಡಿ ಧ್ವನಿಮುದ್ರಿಕೆಯನ್ನು ಸಿದ್ಧಪಡಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಶ್ರೀ ರಾಮ ಪಟ್ಟಾಭಿಷೇಕ ವಾಚನ ಪ್ರಾರಂಭ

ಮಾಸ್ತಿಯವರ ತೊಂಬತ್ತು ವರ್ಷದ ಶುಭ ದಿನಾಚರಣೆಯನ್ನು 1981ನೇ ಜೂನ್ 8ನೆಯ ದಿನಾಂಕ ಸಂಜೆ ಶ್ರೀ ಕೃಷ್ಣರಾಜ ಪರಿಷನ್ಮಂದಿರದ ಸಭಾಂಗಣದಲ್ಲಿ ಸರಳ ಸುಂದರ ರೀತಿಯಲ್ಲಿ ನಡೆಸಲು ಕನ್ನಡ ಸಾಹಿತ್ಯ ಪರಿಷತ್ತು ಸಂಭ್ರಮ ಗೊಂಡಿತು. ನನ್ನ ವಿದ್ವಾಂಸ ಮಿತ್ರ ಪರಿಷತ್ತಿನ ಅಧ್ಯಕ್ಷ ಹಂಪ ನಾಗರಾಜಯ್ಯ ಶಕುಂತಲಾಬಾಯಿಯನ್ನು ಮಾಸ್ತಿ ಕೃತಿಗಳನ್ನು ಹಾಡಬೇಕೆಂದು ಪ್ರಾರ್ಥಿಸಿದರು. ಎಂಥ ಸದವಕಾಶದ ಸುಯೋಗ ಶಕುಂತಲಾಬಾಯಿಗೆ ! ಆ ಸಂಜೆ ಪರಿಷತ್ತಿನಲ್ಲಿ ಸಮಾರಂಭ ಪ್ರಾರಂಭವಾಗುವುದಕ್ಕೆ ಕೆಲವು ಗಂಟೆಗಳ ಮುಂಚೆ ನಾವು ಮಾಸ್ತಿಯವರ ಮನೆಗೆ ಹೋದೆವು. ಶಕುಂತಲಾಬಾಯಿ ಅವರ ಪಾದಮುಟ್ಟಿ ನಮಸ್ಕರಿಸಿ ಧ್ವನಿಮುದ್ರಿಕೆಯನ್ನು ಒಪ್ಪಿಸಿದರು. ಪೂಜ್ಯರು ಕಿರುಗಾಣಿಕೆಯನ್ನು ವಿಶ್ವಾಸದಿಂದ ಸ್ವೀಕರಿಸಿದರು ; ನಮ್ಮಿಬ್ಬರನ್ನು ಹತ್ತಿರ ಕೂಡಿಸಿಕೊಂಡು, ಹಿರಿಯಳಿಯ ಶೇಷಾದ್ರಿಯವರಿಂದ ಧ್ವನಿಮುದ್ರಿಕೆಯನ್ನು ಚಾಲನೆ ಮಾಡಿಸಿ ಕೇಳಿ ಸಂತೋಷಪಟ್ಟರು ; ತಿಂಡಿ ಕಾಫಿ ತರಿಸಿಕೊಟ್ಟು ಆದರಿಸಿದರು. ಹಿರಿಯ ಮಗಳು

ಇಂದಿರಮ್ಮ ಶಕುಂತಲಾಬಾಯಿಗೆ ಕುಂಕುಮಪಿಟ್ಟು ಬಾಗಿನಕೊಟ್ಟು ಸತ್ಕರಿಸಿದರು. ನಾವು ಮಾಸ್ತಿಯವರಿಂದ ಬೀಳ್ಕೊಂಡು ಸಕಾಲದಲ್ಲಿ ಪಂಪಮಹಾಕವಿ ರಸ್ತೆಗೆ ಬಂದು ಕನ್ನಡ ಸಾಹಿತ್ಯ ಪರಿಷತ್ತನ್ನು ಸೇರಿದೆವು.

ಕನ್ನಡ ಸಾಹಿತ್ಯ ಪರಿಷತ್ತಿನ ಶ್ರೀ ಕೃಷ್ಣರಾಜ ಪರಿಷನ್ಮಂದಿರದ ಸಭಾಂಗಣ ಮಾಸ್ತಿಯವರ ಅಭಿಮಾನಿಗಳಿಂದ ಜೇನುಹುಟ್ಟಿನಂತೆ ಗಿಜಿಗಿಜಿಸುತ್ತಿತ್ತು. ಕನ್ನಡದ ಹಿರಿಯ ಸಾಹಿತಿ, "ದ್ಯಾವ ಪೃಥವಿ" ಕವನ ಸಂಗ್ರಹದ ರಾಷ್ಟ್ರ ಸಾಹಿತ್ಯ ಅಕಾದೆಮಿಯ ಪ್ರಶಸ್ತಿ ವಿಜೇತ, "ಭಾರತ ಸಿಂಧು ರಶ್ಮಿ" ಮಹಾ ಕಾವ್ಯದ ವರ ಕವಿ, ಡಾ|| ವಿ. ಕೃ. ಗೋಕಾಕ್ ಅವರ ಅಧ್ಯಕ್ಷತೆಯಲ್ಲಿ ಮಾಸ್ತಿ ಸಮಾರಂಭ. ಶಕುಂತಲಾಬಾಯಿಯ ಪ್ರಾರ್ಥನೆಯಿಂದ ಸಮಾರಂಭದ ಆರಂಭ.

ಶಕುಂತಲಾಬಾಯಿ ಮಾಸ್ತಿಯವರಿಗೆ ನುಡಿಗಾಣಿಕೆಯಾಗಿ ಅರ್ಪಿಸಿದ್ದ ಧ್ವನಿ ಮುದ್ರಿಕೆಯ ಕೊನೆಯ ಭಾಗದ "ಶ್ರೀ ರಾಮ ಪಟ್ಟಾಭಿಷೇಕ" ಕಾವ್ಯದ ಮಂಗಳ ಭಾಗವನ್ನೇ ಇಲ್ಲೂ ಪ್ರಾರ್ಥನೆಗೆ ಬಳಸಿಕೊಂಡರು—

"ಶ್ರೀ ರಾಮಚಂದ್ರ ಸೀತಾದೇವಿ ಕೋಸಲದ
ದೊರೆತನವ ಕೈಕೊಂಡ ಅಭಿಷೇಚನೋತ್ಸವದ
ಕಥನವಿದು ಇದೆ ಇಂತು ಮಂಗಳವ ಮುಟ್ಟಿಹುದು.
ಶ್ರೀ ರಾಮ ಜಾನಕೀದೇವಿ ಬಾಳಲಿ ನಡೆದ
ತೆರನಿನಿತು ಚೆಲುವಾಯ್ತು, ಅವರ ಗುರು, ಮಂತ್ರಿ ಜನ,
ಪ್ರಜೆಯೆಲ್ಲ, ಅವರನು ಜಗನ್ನಾಥ ಜಗನ್ಮಾತೆಯರ
ಅವತಾರವೆಂದೆ ಭಾವಿಸಿ, ಪೂಜೆ ಸಲಿಸಿದರು.
ರಾಮಚಂದ್ರನ ಸತ್ಯ, ದೇವಿ ಸೀತೆಯ ಶೀಲ,
ಜನಮನದಲಿಂತು ಬೇರೂರಿ ನಿಂತವು, ಅವರು
ಬಾಳಿದನಿತೂ ಕಾಲ, ಯಾವನೇ ಅವಿವೇಕಿ
ಅವರ ಕುರಿತೊಂದು ಕೆಡುನುಡಿಯ ನುಡಿದುದು ಇಲ್ಲ.
ಇಹದ ಬಾಳನು ಮುಗಿಸಿ ದಿವವ ಸಾರುವ ದಿನಕೆ
ದಂಪತಿಗಳಿವರ ಕೀರುತಿ ಇವರ ತಾಣದಲಿ
ತಾನೆ ನೆಲೆಯಾಗಿ ನಿಂತಿತು. ಬಂದ ದಿನಗಳಲಿ
ಲೋಕ ವಿಸ್ತರವಾಗಿ ರಾಮ ಸೀತಾ ನಾಮ
ದೇವರವು ನಾಮ ಆದವು. ಜನರ ಹೃದಯದಲಿ
ಪ್ರೇಮ ಭಕ್ತಿಯ ವಸ್ತುವಾಗಿ ನೆಟ್ಟವು. ಇಂತು
ಇರ್ವರಿವರೀಗಳೂ ಜಗವನಾಳುತಲಿಹರು.
ಯುಗ ಕಲ್ಪ ಮನ್ವಂತರಗಳು ಹರಿಯುತಲಿರಲು
ಲೋಕವನು ಕಾರುಣ್ಯ ವಾತ್ಸಲ್ಯ ಭಾವದಲಿ
ಕಾಪಿಡುತ ಬಂದಿಹರು, ಮುಂದೆ ಕಾಪಾಡುವರು.
ಒಮ್ಮೆ ಶರಣೆಂದವರ ಯಾರಿಂದಲೇ ಇರಲಿ
ಕೇಡಡಸದಂದ ಕಾವುದು ನನ್ನ ವ್ರತ ಎಂದ
ತಂದೆ, ಈ ಲೋಕದಲಿ ತಪ್ಪು ಮಾಡದ ಮನುಜ

ಒಬ್ಬನೂ ಇಲ್ಲ, ಎಲ್ಲರ ಕುರಿತು ಕರುಣೆಯೇ
ಯುಕ್ತ ವರ್ತನ ಎಂದ ತಾಯಿ ಜಾನಕಿ ದೇವಿ,
ನಿಮ್ಮ ಕನಿಕರದ ನುಡಿ ಜಗಕೆ ಅಕ್ಷಯ ಭಾಗ್ಯ.
ಯುಗ ಕಲ್ಪ ಮನ್ವಂತರಗಳು ಹರಿದಿರೆ ನಿಮ್ಮ
ಈ ಅಭಯ ಸಕಲ ಲೋಕಗಳ ಕಲ್ಯಾಣವನು
ಸಾಧಿಸುವ ನಿತ್ಯ ಶಿವ ಸತ್ಯ ಸೌಂದರ್ಯಗಳ
ಭವ್ಯ ತಾರಕ ಮಂತ್ರದಾಂತರ್ಯವಾಗಿರಲಿ.
ನಿಮ್ಮ ನೆನೆಯುತ ಲೋಕ ಸುಖವಾಗಿ ಬಾಳಲಿ.
ಅಂತೆ ನೀವೇ ನಿರ್ಮಿಸಿದ ನನ್ನ ಅಲ್ಪಜ್ಞ
ಚೇತನಕೆ ನಿರ್ವ್ಯಾಜ ವಾತ್ಸಲ್ಯವನು ಊಡಿ
ನಿಮ್ಮ ತುತಿಸುವರೆ ಪ್ರೇರಿಸಿ ನೀವೆ ಗೆಯಿಸಿರುವ
ಕೃತಿ ಇದಕೆ ಕಂದ ಭಕ್ತಿಯಲಿ ತಂದೊಪ್ಪಿಸಿದ
ಒಂದು ಕಾಣಿಕೆ ಎಂದು ನಿಮ್ಮಡಿಯಲೆಡೆ ನೀಡಿ
ನೀವಿತ್ತ ನರ ಜನ್ಮ ಇದನು ಸಾರ್ಥಕಗೊಳಿಸಿ.
ಜಯ ಜಯ ಶ್ರೀರಾಮ, ಜಯ ರಾಮಚಂದ್ರ ;
ಜಯ ಜಗನ್ಮಾತೆ ಸೀತಾದೇವಿ, ಜಯ ಜಯ ;
ಜಯತು ಲಕ್ಷ್ಮಣ, ಭರತ, ಶತ್ರುಘ್ನ, ಜಯ ಜಯ.
ಜಯತು ಸೀತಾರಾಮದಾಸ ಹನುಮಂತ, ಜಯ.
ಜಯ ಜಯ ಜಯ ಜಯ ಜಯ ಜಯ ಜಯ ಜಯ
ಜಯ ಜಯ ಜಯ ಜಯ ಜಯ ಜಯ ಜಯ ಜಯ.

ಶ್ರೀ ರಾಮ ಪಟ್ಟಾಭಿಷೇಕ ಕಾವ್ಯವಾಚನಕ್ಕೆ ಲೇಸಿನ ಮೇಲೆ ಲೇಸು ಒದಗಿಬಂತು

ಇನ್ನೊಮ್ಮೆ ಕುಮಾರವ್ಯಾಸನ ವಾಣಿ ದಿಟವಾಯಿತು. ಅತಿ ಶೀಘ್ರದಲ್ಲೇ ಮತ್ತೆ ಲೇಸಿನ ಮೇಲೆ ಲೇಸುಗಳು ಒದಗಿ ಬಂದವು. ಬೆಂಗಳೂರು ರಾಜಾಜಿ ನಗರದ ಬಡಾವಣೆಯ ಮೊದಲ ಹಂತದಲ್ಲಿರುವ ವಿದ್ಯಾವರ್ಧಕ ಸಂಘದ ಮತ್ತು ಶ್ರೀ ಮಾರುತಿ ಮಹಾ ಗಣಪತಿ ಸೇವಾ ಸಂಘದ ಗೌ|| ಕಾರ್ಯದರ್ಶಿ ಕೆ. ಎನ್. ಶ್ರೀಹರಿ ಶಕುಂತಲಾಬಾಯಿಯನ್ನು ತಮ್ಮ ಸಂಘಕ್ಕೆ ಬಂದು 'ಭಾರತ' ಕಾವ್ಯವಾಚನ ಮಾಡಬೇಕೆಂದು ಪ್ರಾರ್ಥಿಸಿದರು. ಹಿಂದೆ, ಶಕುಂತಲಾಬಾಯಿ ಶ್ರೀ ಮಾರುತಿ ಮಹಾ ಗಣಪತಿ ಸೇವಾ ಸಂಘದ ಆಶ್ರಯದಲ್ಲಿ ಲಕ್ಷ್ಮೀಶನ ಜೈಮಿನಿ ಭಾರತ ಕಾವ್ಯವಾಚನ ಮಾಡಿ ತಮ್ಮ ಗಮಕ ಪರಿಚಾರಿಕೆ ಸಲ್ಲಿಸಿದ್ದರು. ಈಗ ಅವರಿಗೆ ಗಮಕ ಪರಿಚಾರಿಕೆ ಸಲ್ಲಿಸುವುದಕ್ಕೆ ಇನ್ನೊಂದು ಸದವಕಾಶ ದೊರೆಯಿತು. ಶ್ರೀಹರಿಯವರನ್ನು "ಮಾಸ್ತಿಯವರ "ಶ್ರೀ ರಾಮ ಪಟ್ಟಾಭಿಷೇಕ" ಕಾವ್ಯವಾಚನವಾಗಬಹುದೆ ?" ಎಂದು ಕೇಳಿದರು. "ಆಧುನಿಕ ಕಾವ್ಯ, ಚೆನ್ನಾಗಿದೆ. ಪ್ರಕಟವಾಗಿ ಸುಮಾರು ಒಂಬತ್ತು ವರ್ಷವಾಯಿತು. ನಮ್ಮ ಜನಕ್ಕೆ ಹೆಚ್ಚು ಪರಿಚಯವಾಗಿಲ್ಲ. ಒಂದು ಚೆನ್ನಾದ ಆಧುನಿಕ ಕಾವ್ಯವನ್ನು ನಮ್ಮ ಜನಕ್ಕೆ ಪರಿಚಯ ಮಾಡಿಕೊಡುವುದು ನಮ್ಮ ನಾಡಿನ ಕರ್ನಾಟಕ ಸಂಘಗಳ ಹಾಗೂ ನಿಮ್ಮಂಥ ಸಾಹಿತ್ಯ

ಸಾಂಸ್ಕೃತಿಕ ಧರ್ಮ ಸಂಸ್ಥೆಗಳ ಕರ್ತವ್ಯ. ನೀವು ಶ್ರೀ ರಾಮ ಪಟ್ಟಾಭಿಷೇಕ ಕಾವ್ಯ ವಾಚನದ ಕಾರ್ಯಕ್ರಮವನ್ನು ಒಪ್ಪಿಕೊಂಡು ನಡೆಸಿಕೊಡಬೇಕು." ಎಂದು ನಾನು ವಿನಂತಿಸಿಕೊಂಡೆ. ಶ್ರೀಹರಿ ಸಹೃದಯತೆಯಿಂದ ಒಪ್ಪಿಕೊಂಡರು. ಶ್ರೀ ರಾಮ ಪಟ್ಟಾಭಿಷೇಕ ಕಾವ್ಯ ವಾಚನ ಅಕ್ಟೋಬರ್ 18ನೆಯ ದಿನಾಂಕ ಪ್ರಾರಂಭವಾಯಿತು.

ಶ್ರೀರಾಮ ಪಟ್ಟಾಭಿಷೇಕ ಕಾವ್ಯದ ಛಂದಸ್ಸು ಎಂಥದು ?

ಶ್ರೀರಾಮ ಪಟ್ಟಾಭಿಷೇಕ ಕಾವ್ಯ ಸರಳ ರಗಳೆ ಛಂದಸ್ಸಿನಲ್ಲಿ ರಚಿತವಾಗಿರುವ ಕಾವ್ಯ. ಸರಳ ರಗಳೆ ಕನ್ನಡ ಕಾವ್ಯ ಪ್ರಪಂಚವನ್ನು ಹೊಕ್ಕದ್ದು ಆಂಗ್ಲ ಕಾವ್ಯ ಪರಿಚಯ ಪ್ರಭಾವದಿಂದ. ಸರಳ ರಗಳೆಯನ್ನು ತಮ್ಮ ಕಾವ್ಯಗಳಿಗೆ ಬಳಸಿಕೊಳ್ಳಲು ಮೊದಲ ಪ್ರಾರಂಭಿಸಿದವರು ಮಾಸ್ತಿಯವರೇ ಎಂದು ನನ್ನ ನಂಬಿಕೆ. ವೀರಶೈವ ಸಾಹಿತ್ಯ ಪ್ರಪಂಚದಲ್ಲಿ ಪ್ರಯೋಗಶೀಲ ಕವಿಯೆಂದು ಪ್ರಸಿದ್ಧನಾದ ಬಸವ ಸಾಹಿತ್ಯಯುಗದ 12–13ನೆಯ ಶತಮಾನದ ಹಂಪೆಯ ಹರೀಶ್ವರ ಕವಿ ರಗಳೆಯೆಂಬ ಕನ್ನಡ ಸ್ವಚ್ಛ ಛಂದಸ್ಸನ್ನು ರೂಢಿಸಿ "ಬಸವರಾಜ ದೇವರ ರಗಳೆ," "ಅಕ್ಕಮಹಾದೇವಿಯ ರಗಳೆ," "ನಂಬಿಯಣ್ಣನ ರಗಳೆ", ಮೊದಲಾದ ರಗಳೆ ಕಾವ್ಯಗಳನ್ನು ವಿಪುಲವಾಗಿ ರಚಿಸಿ **ರಗಳೆ ಕವಿಯೆಂದೇ** ಹೆಸರಾಂತ. ಆ ವಿಚಾರ ಬೇರೆ. ಮಾಸ್ತಿಯವರು "ಅರುಣ" ಎಂಬ ಆಧುನಿಕ ಸಂಪ್ರದಾಯದ ಪದ್ಯ ಸಂಗ್ರಹದಲ್ಲಿ "ಲೇಪಾಕ್ಷಿ" ಮತ್ತು "ಮಡಲಿಂಗನ ಕಣಿವೆ" ಎಂಬ ಕಥನ ಕವನಗಳನ್ನು ಸರಳ ರಗಳೆ ಛಂದಸ್ಸಿನಲ್ಲಿ ಪ್ರಯೋಗಕ್ಕಿಟ್ಟರು ; "ತಾವರೆ" ಕವನ ಸಂಗ್ರಹದಲ್ಲಿ "ಕನಕದಾಸರ ಕತೆಗಳು" ಎಂಬ ಕಥನ ಕವನದಲ್ಲಿ ಇನ್ನೊಮ್ಮೆ ಸರಳ ರಗಳೆ ಛಂದಸ್ಸನ್ನು ಧಾರಾಳವಾಗಿ ದುಡಿಸಿದರು. ಮುಂದೆ, ಅವರು ರಚಿಸಿದ "ನವರಾತ್ರಿ"ಯೆಂಬ ಕಥನ ಕಾವ್ಯದಲ್ಲಿ ಸರಳ ರಗಳೆಯ ಛಂದಸ್ಸು ಮಹಾ ಶ್ರೀಮಂತಿಕೆಯಿಂದ ಮೆರೆಯಿತು. 1972ರಲ್ಲಿ ಪ್ರಕಟವಾದ ಶ್ರೀರಾಮ ಪಟ್ಟಾಭಿಷೇಕ ಕಾವ್ಯದಲ್ಲಿ, ಸರಳ ರಗಳೆ ಇನ್ನಷ್ಟು ಶ್ರೀಮಂತಿಕೆಯಿಂದ ವಿಜೃಂಭಿಸಿದೆ.

ಗಮಕ ಚೌಕಟ್ಟಿನಲ್ಲಿ ಶ್ರೀರಾಮ ಪಟ್ಟಾಭಿಷೇಕ ಕಾವ್ಯ

ಶ್ರೀರಾಮ ಪಟ್ಟಾಭಿಷೇಕ ಕಾವ್ಯ "ಪ್ರಸ್ತಾವನೆ," "ಶ್ರೀರಾಮ ಪಟ್ಟಾಭಿಷೇಕ" ಮತ್ತು "ಮಂಗಳ," ಹೀಗೆ ಮೂರು ಭಾಗಗಳಾಗಿ ವಿಂಗಡವಾಗಿದೆ. ಪ್ರಸ್ತಾವನೆ ಹತ್ತೆಂಟು ಸಾಲುಗಳ ಸಣ್ಣ ಸಣ್ಣ 10 ಭಾಗಗಳಾಗಿ ಒಡೆದು 161 ಸಾಲುಗಳಲ್ಲಿ ವಾಲ್ಮೀಕಿ ರಾಮಾಯಣ ರಚನೆಯ ವಿಷಯವನ್ನು ಹೇಳುತ್ತದೆ. ಇಲ್ಲಿ ಮಾಸ್ತಿಯವರು ಆ ಮಹರ್ಷಿಯ ಕಾವ್ಯದ ವಿಷಯದಲ್ಲಿ ತಮ್ಮ ನಿಲುವನ್ನು ಪ್ರತಿಪಾದಿಸುತ್ತಾರೆ. ಶಕುಂತಲಾ ಬಾಯಿ ಮೊದಲ ದಿವಸ ಪೂರ್ತಿಯಾಗಿ ಪ್ರಸ್ತಾವನೆಯನ್ನು ವಾಚನ ಮಾಡಿದರು. ಅನಂತರದ ದಿವಸಗಳಲ್ಲಿ ಪ್ರಸ್ತಾವನೆಯ 10ನೆಯ ಭಾಗದ ಸಾಲುಗಳನ್ನು ನಿತ್ಯವೂ ಪ್ರಾರ್ಥನೆಗೆ ಉಪಯೋಗಿಸಿಕೊಳ್ಳುತ್ತಿದ್ದರು—

"ಎಲ್ಲ ಜೀವಕೆ ಆದಿಯಾಗಿ, ಸತ್ಕರ್ಮಗಳ
ಪ್ರೇರಣೆಯ ಬೇರಾಗಿ, ನಡೆಯಿಸುವ ಬಲವಾಗಿ,
ದಾರಿ ತೋರುವ ದೀಪವಾಗಿ, ಮನುಜನ ಕಾವ,
ನನ್ನ ಕಾಯುತಲಿರುವ ತಂದೆ ತಾಯ್ ಗುರು ದೈವ,
ಶ್ರೀನಿವಾಸಾ, ಕೃಪಾಕರ, ನನ್ನ ಕೈಯಿಂದ
ಈ ಸೇವೆಯನು ನಡೆಸು, ಸ್ವೀಕರಿಸು. ಕವಿಗುರುವೆ,
ದೈವ ಸಾನಿಧ್ಯದಲಿ ಸುಖದೊಳಿಹ ವಾಲ್ಮೀಕಿ,
ಎಳವೆಯಿಂದಲು ನಿನ್ನ ನುಡಿ ಕೇಳಿ ಸುಖಕಂಡ
ಅಣುಗನೆಂದೆನ್ನ ವಾತ್ಸಲ್ಯಭಾವದಿ ನೋಡಿ
ನಿನ್ನ ಭಾವನೆ ವಿವರ ವಿವರ ಎನ್ನೀ ಮನದಿ
ಸ್ಫುಟವಾಗಿ ಮೂಡುವಂದವನು, ಮೂಡಿಸ ಭಾವ
ನಿನ್ನ ನುಡಿಗಳನೆ ಬಹುತೇಕ ಬಳಸಿದ ಒಂದು
ಸರಳ ಸುಂದರ ವಾಣಿಯಿಂದ ಕನ್ನಡವಾಗಿ
ಹರಿಯುವಂದವನನುಗ್ರಹಿಸು. ಕನ್ನಡ ತಾಯೆ
ಈ ನಾಲಗೆಯೊಳಿರ್ದು ನಿನ್ನ ಕಂದನ ಹರಸು.
ರಾಮಚರಿತವನೊರೆವ ಪಟ್ಟಾಭಿಷೇಕಕೃತಿ
ಸಿರಿಗನ್ನಡದ ನುಡಿಗೆ ತೊಡವಾಗಿ ಸಂಚರಿಸು."

ಶಕುಂತಲಾಬಾಯಿ ಶ್ರೀರಾಮ ಪಟ್ಟಾಭಿಷೇಕದ ಕಥೆಯನ್ನು ಪ್ರಾರಂಭಿಸುವಾಗ ಈ ಪ್ರಾರ್ಥನೆಯನ್ನು ನಾಟ ರಾಗದಲ್ಲಿ ಹಾಡಿದರು. ಅದು ಸಂಪ್ರದಾಯ. ಅನಂತರದ ದಿವಸಗಳಲ್ಲಿ ಕಾವ್ಯವಾಚನ ಮಂಗಳದಿನವನ್ನು ಮುಟ್ಟುವವರೆಗೆ ಪ್ರಾರ್ಥನೆಗೆ ಸೂಕ್ತವಾದ ಕರ್ಣಾಟಕ ರಾಗಗಳನ್ನು ಬಳಸುತ್ತಿದ್ದರು. ಶ್ರೋತೃಗಳಿಗೆ ಪ್ರಾರ್ಥನೆ ಪ್ರತಿದಿನವೂ ನವನವೀನವಾಗಿರುತ್ತಿದ್ದಿತು.

ಶ್ರೀರಾಮ ಪಟ್ಟಾಭಿಷೇಕ ಕಾವ್ಯದಲ್ಲಿ ಶ್ರೀರಾಮ ಪಟ್ಟಾಭಿಷೇಕದ ವಸ್ತು ಮುಖ್ಯ ಕಥಾಭಾಗ. ಅದು ಪ್ರಾರಂಭವಾಗುವುದು ಹೀಗೆ—

"ಶ್ರೀ ರಾಮಚಂದ್ರ ಸೀತಾದೇವಿ ಲಕ್ಷ್ಮಣರ
ವನವಾಸದವಧಿ ಹದಿನಾಲ್ಕು ವರ್ಷದ ಕಾಲ
ಮುಗಿದ ದಿವಸದ ಸುಪ್ರಭಾತ ಬೆಳಗಿರೆ, ಭರತ
ಅನುಜ ಶತ್ರುಘ್ನನನು ಕುರಿತು, "ತಮ್ಮಾಜಿ, ಇಕೊ
ಈ ಪುಷ್ಪ ಕೊನೆಯ ತಿಂಗಳ ದಿನದ ಹೂ.
ನಾಳೆ ಲೆಕ್ಕಕೆ ಪುಷ್ಪವಿಲ್ಲ. ಅಣ್ಣನ ಅಡಿಯ
ತಾವರೆಯೆ ನಾಳೆ ದೇಹಲಿಯಾಗಿ ಕಣ್ಣು ಇವ
ತಣಿಸಿದುವೆ ಸಮ; ತಣಿಸಲಿಲ್ಲ, ಒಡಲಿದು ಉಸಿರ
ಧರಿಸಿ ನಿಲ್ಲದು ಐದು ಸಾವಿರದ ಇನಿತು ದಿನ
ಅವರ ಕೋಮಲಪಾದ, ಅತ್ತಿಗೆಯ ಪದಕಮಲ,
ಕಿರಿಯಣ್ಣ ಲಕ್ಷ್ಮಣನ ಪಾದ, ಕಾಡಿನ ಕಲ್ಲ
ಮುಳ್ಳನೆಲದಲಿ ನಡೆಯುತಿಹವೆಂದು ನೆನೆನೆನೆದು
ಬೆಂದುದಾಯಿತು, ಬಂದೆ ಬರುವೆನೆಂದರು ಅಣ್ಣ.

ಬಂದಿಲ್ಲ. ಬಹರೆಂಬ ಸಂದೇಶವನೆ ಇರಲಿ
ಯಾರೆ ಸರಿ ತಂದಿಲ್ಲ. ನಾಳೆಯುದಯವು ಇಂತೆ
ಬರಿದಾಗಿ ಬೆಳಗಿರಲು, ನಾನು ಅಗ್ನಿಯ ಹೊಕ್ಕು,
ನನ್ನಿಂದ ಅಣ್ಣನಿಗೆ ವನವಾಸ ಆಯಿತೇ
ಆ ಪಾತಕದ ಹೊರೆಯ ಕಳೆದುಕೊಂಬೆನು, ಕಣಾ."

ಶ್ರೀರಾಮ ಪಟ್ಟಾಭಿಷೇಕದ ಕಥೆಯಲ್ಲಿ ಇಡೀ ರಾಮಾಯಣವೇ ಕಥಾವಸ್ತುವಾಗಿ ಹಾಸುಹೊಕ್ಕಾಗಿ ಸೇರಿಕೊಂಡಿದೆ.

ಭರತನು ಶ್ರೀರಾಮಾಗಮನದ ವಾರ್ತೆ ಬರಲಿಲ್ಲವೆಂಬ ಕಡು ದುಃಖದಿಂದ ನೊಂದುಬೆಂದು, ತನ್ನಳಲನ್ನು ತಮ್ಮಾಜಿ ಶತ್ರುಘ್ನನಲ್ಲಿ ಹೇಳಿಕೊಳ್ಳುವ ಪ್ರಸಂಗದಿಂದ "ಶ್ರೀರಾಮ ಪಟ್ಟಾಭಿಷೇಕ" ಕಾವ್ಯದ ಕಥೆ ಮುಂದುವರಿಯುತ್ತದೆ. ಕಾವ್ಯದ ಕಥಾವಸ್ತು ಶ್ರೀರಾಮ ಪಟ್ಟಾಭಿಷೇಕ. ಆದರೆ ಕಾವ್ಯದ ಜೀವಕಥೆ ಇಡೀ ರಾಮಾಯಣ ಪ್ರಸಂಗ. ಶ್ರೀರಾಮಸೀತಾಲಕ್ಷ್ಮಣರ ಮಹಾಜೀವನ ಪ್ರವಾಹದ ಸುಳಿಯಲ್ಲಿ ಹೇಗೆ ತಾವು ಮುಖ್ಯ ಘಟಕವಾಗಿ ಪಾತ್ರವಹಿಸಿದರು ಎಂದು ರಾಮಾಯಣದ ಪಾತ್ರಗಳು ತಮ್ಮತಮ್ಮ ಅನುಭವಗಳನ್ನು ಒಬ್ಬರೊಂದಿಗೊಬ್ಬರು ಹೇಳಿಕೊಳ್ಳುವುದು ಕಾವ್ಯದ ಜೀವಾಳ. ಕವಿವರ್ಯ ಮಾಸ್ತಿಯವರು ಆ ವಿಷಯವನ್ನು ಕುರಿತು ವಿಶದವಾಗಿ ತಮ್ಮ ಮುನ್ನುಡಿಯಲ್ಲಿ ಹೀಗೆ ಪ್ರಸ್ತಾಪಿಸಿದ್ದಾರೆ—

ಪಟ್ಟಾಭಿಷೇಕವನ್ನು ವರ್ಣಿಸುತ್ತ ಕಾವ್ಯದಲ್ಲಿ ಹನುಮಂತ ಭರತನಿಗೆ ವರದಿ ಮಾಡುವಲ್ಲಿ, ಗುಹ ಸುಮಂತ್ರ, ಗುಹ ಶತ್ರುಘ್ನ, ಸಂಭಾಷಣೆ ನಡೆಸುವಲ್ಲಿ, ಅಂಗದ ಶತ್ರುಘ್ನನಿಗೆ ಯುದ್ಧವನ್ನು ವರ್ಣಿಸಿದನೆಂಬಲ್ಲಿ, ತಾರಾದೇವಿ, ಅನಿಲಾ ಕುಮಾರಿ ಕೌಸಲ್ಯಾದೇವಿಗೆ ತಮ್ಮ ತಮ್ಮ ಕಥೆಗಳನ್ನು ಹೇಳಿದರು ಎಂಬಲ್ಲಿ, ಶತ್ರುಘ್ನ, ಕೈಕಯಿ, ಸುಮಿತ್ರ, ಊರ್ಮಿಳಾದೇವಿಯರು, ಮಂಥರೆ, ಏನೇನೋ ಯೋಚನೆ ಮಾಡಿಕೊಂಡರು, ಎಂಬಲ್ಲಿ ಸೌಮಿತ್ರಿ ಊರ್ಮಿಳಾ, ಊರ್ಮಿಳಾ ಸೀತಾದೇವಿಯರ ಸಂಭಾಷಣೆಗಳಲ್ಲಿ, ರಾಮಾಯಣದ ಕಥೆಯ ಮುಖ್ಯ ಭಾಗವನ್ನು ಸಂಗ್ರಹಿಸಿದೆ."

ಶ್ರೀರಾಮಸೀತಾಲಕ್ಷ್ಮಣರು ಹದಿನಾಲ್ಕು ವರ್ಷಗಳ ವನವಾಸವನ್ನು ಮುಗಿಸಿ ಹಿಂದಿರುಗಿದುದು, ಪಟ್ಟಾಭಿಷೇಕ ಸಂಭ್ರಮ, ವಸಿಷ್ಠ ಗುರುವಿನ ಉಪದೇಶ, ಶ್ರೀ ರಾಮ ರಾಜ್ಯಭಾರ ವೈಭವಗಳ ಈ ವಿವರಗಳಲ್ಲಿ ಕಾವ್ಯ ಸಮಾಪ್ತಿಗೊಳ್ಳುತ್ತದೆ.

"ಪಟ್ಟಾಭಿಷೇಕದುತ್ಸವ ಇಂತು ಮುಗಿದಿರಲು
ಶ್ರೀರಾಮಚಂದ್ರ ಸೋದರರೊಡನೆ ರಾಜ್ಯವನು
ಆಳತೊಡಗಿದರು. ಪ್ರಭು ಧರ್ಮಿಷ್ಠ ಎಂಬುದೇ
ನಾಡನೆಲ್ಲಾ ತೆರನ ಸಿರಿಯ ನೆಲೆಮನೆಮಾಡಿ
ಕಾಪಿಟ್ಟು ನೋಡಿಕೊಂಡಿತು. ರಾಮನಾಳುತಿರೆ

ನಾಡಿನಲಿ ವಿಧವೆಯರು ಅಳಲಿಲ್ಲ. ವ್ಯಾಳಗಳ
ಭಯವಿಲ್ಲ. ರೋಗರುಜಿನದ ಭೀತಿ ಇರಲಿಲ್ಲ.
ಯಾರದೇ ಬಾನಿರಲಿ ಅನರ್ಥ ಸೋಕದು.
ಹಿರಿಯ ವಯಸಿನ ಮಂದಿ ತಮ್ಮ ಕಿರಿಯರಿಗೆಂದು
ಪ್ರೇತ ಕಾರ‍್ಯವಗೆಯ್ವ ಕಡು ದುಃಖ ಇರಲಿಲ್ಲ.
ಹೇರಾಳ ಆರೋಗ್ಯ, ಆಯುಷ್ಯ ಐಶ್ವರ‍್ಯ,
ನಾಡ ತುಂಬಿರೆ ಜನತೆ ಸಂತಸದಿ ಬೆಳೆಯಿತು.
ತಪ್ಪಿ ನಡೆದೆವೊ ನಮ್ಮ ದೊರೆ ಬೇಸರುವರೆಂದು
ಜಗಳಗಂಟರು ಕೂಡ ಮೈತ್ರಿಯಲಿ ನಡೆವರು.
ದೊರೆಯ ಸಜ್ಜನಿಕೆಯನು ಮೆಚ್ಚಿ ಜನ ಎಲ್ಲೆಡೆಯು
ಎಲ್ಲ ಮಾತಿಗು ರಾಮ ರಾಮ ರಾಮ ಎನುತ
ರಾಮಚಂದ್ರನ ಹೆಸರ ನೆನೆದು ಸುಖ ಕಾಣುವರು
ಇಂತು ರಾಜ್ಯದಲಿ ರಾಮನ ನಾಮ ಗಾಳಿಯಲಿ
ಒಂದು ಸೌರಭವಾಗಿ ಹರಡಿಹುದು. ಜನಮನಕೆ
ಸುಖದೊಂದು ಸಂಕೇತವಾಗಿಹುದು ರಾಮನಿಗೆ
ಅಂಜಿಯೋ ಎಂಬಂದ ಋತುಮಾನ ತಂತಮ್ಮ
ಧರ‍್ಮದಲಿ ಲೋಪವಿಲ್ಲದೆ ನಡೆದುಕೊಳುತಿಹವು.
ಗಾಳಿ ಮೆದುವಾಗಿ ಬೀಸುವುದು, ತಂಪಾಗಿಹುದು.
ಕಾಲಕಾಲಕೆ ಎಲ್ಲ ಮಳೆಗಳೂ ಕರೆಯುವುವು.
ನೆಲ ಹುಲುಸು ಬೆಳೆ ಬೆಳೆದು ಜನತೆಯನು ಸಾಕುವುದು.
ಗಿಡ ಬಳ್ಳಿ ಮರ ತಮ್ಮ ಕಾಲದಲಿ ಹೇರಾಳ
ಹೂ ಹಣ್ಣ ಹೊತ್ತು ಬಾಳ ಸಮೃದ್ಧ ಮಾಡಿಹವು.
ಬ್ರಾಹ್ಮಣ ಕ್ಷತ್ರಿಯರು ಧನ ಕಾಮನೆಗೆ ಸೋತು
ತಮ್ಮ ವೃತ್ತಿಯನು ತೊರೆಯರು. ಶೂದ್ರವೈಶ್ಯರು
ಬ್ರಹ್ಮರಾಜನ್ಯ ವೃತ್ತಿಯ ಪ್ರತಿಷ್ಠೆಯ ಬಯಸಿ
ತಮ್ಮ ವೃತ್ತಿ ಜಘನ್ಯ ಎಂಬುದನು ತೊರೆಯರು.
ಎಲ್ಲರೂ ಲೋಭವರ್ಜಿತರಾಗಿ ತಂತಮ್ಮ
ಕರ‍್ಮ ಪನದನಡೆಸಿ ತೃಪ್ತಿಯನು ಕಂಡರು.
ಧರ‍್ಮರತ ಅನೃತ ವರ್ಜಿತರಾಗಿ ನಾಡ ಪ್ರಜೆ
ಎಲ್ಲ ಲಕ್ಷಣವಂತರಾಗಿ ಧರ‍್ಮದಿ ನಡೆದು
ಜೊತೆಯ ಪ್ರಜೆಗಳ ಸುಖವೆ ತಮ್ಮ ಸುಖ ಎಂದರಿತು
ತಾವು ಸುಖ ಕಂಡು ರಾಜನ ಮನವ ತಣಿಸಿದರು.

ಶ್ರೀ ರಾಮ ಪಟ್ಟಾಭಿಷೇಕದ ಪಾತ್ರಗಳು ನಿರೂಪಿಸುವ ಕಥೆ ಬಹಳ ಸ್ವಾರಸ್ಯವಾಗಿದೆ. ಆ ಸಮಯದಲ್ಲಿ ಅವರು ಭಾವಾವೇಶಕ್ಕೆ ಒಳಗಾಗುತ್ತಾರೆ. ಶೋಕ, ಅನುಕಂಪ, ವೀರ, ರೌದ್ರರಸ ಗಂಗೆ ಹರಿಸುತ್ತಾರೆ. ಅಂಗದನ ಕಡೆಯಲ್ಲಿ ನಗೆಯ ಮಿನುಗೂ ಇದೆ. ಶಕುಂತಲಾಬಾಯಿ ಸನ್ನಿವೇಶಗಳಿಗೆ ತಕ್ಕಹಾಗೆ ಸಮಯ ಸ್ಫೂರ್ತಿಯಿಂದ ಕರ್ಣಾಟಕೀ ರಾಗಗಳನ್ನು ಬಳಸುತ್ತಿದ್ದರು. "ಭಾರತ ವಾಚನ ಪ್ರವೀಣ" ಬಿಂದೂರಾಯರು ವೇದಿಕೆಯೇರಿ ಭಾರತ ವಾಚನಕ್ಕೆ ಕುಳಿತಾಗ, ಆ ಸಮಯ ಸ್ಫೂರ್ತಿಯಲ್ಲಿ

ಯಾವ ರಾಗ ಮಿಂಚಿದರೆ ಅದನ್ನು ಎತ್ತಿಕೊಂಡು ಕಾವ್ಯವಾಚನ ನಡೆಸುತ್ತಿದ್ದರು. ತಮ್ಮ ಕಂಠ ಶಕ್ತಿಯಿಂದ ಭಾವಗಳನ್ನು ತುಂಬಿ ಮಿಂಚಿಸುತ್ತಿದ್ದರು. "ಈ ಪದ್ಯಕ್ಕೆ ಈ ರಾಗ" ವೆಂದು ಅವರು ಎಂದೂ ರಾಗಗಳನ್ನು ತಡಕುತ್ತಿದ್ದುದನ್ನು ಶ್ರೋತೃಗಳು ಕಾಣರು. ಶಕುಂತಲಾಬಾಯಿಗೂ ರಾಯರಿಂದ ಅದೇ ಪಾಠವಾಗಿದೆ. ಆದುದರಿಂದ ಆಕೆ ವೇದಿಕೆಯೇರಿ ಕಾವ್ಯವಾಚನಕ್ಕೆ ತೊಡಗಿದಾಗ, ಸಮಯ ಸ್ಫೂರ್ತಿಗೆ ಪಕ್ಕಾಗಿ, ಮನೋ ಧರ್ಮಕ್ಕೆ ಶರಣಾಗಿ, ತಮ್ಮ ಕಂಠಶ್ರೀ ಶಕ್ತಿಯಿಂದ ಆ ಹೊತ್ತಿನಲ್ಲಿ ಸುಳಿದ ರಾಗವನ್ನು ಕಥಾ ಸಂದರ್ಭಕ್ಕೆ ಹೊಂದಿಸಿ, ಭಾವಗಳನ್ನು ದುಡಿಸುತ್ತಾರೆ. ಅವರು ಕರುಣ–ಶೋಕ, ರೌದ್ರ–ವೀರ ರಸಗಳನ್ನು ಹೊಮ್ಮಿಸುವಾಗ ತಟ್ಟನೆ ಎತ್ತಿಕೊಳ್ಳುತ್ತಿದ್ದ ರಾಗ ಕೌಶಲ್ಯ ಭಾವೋದ್ರೇಕಕ್ಕೆ ಸಮಂಜಸ ಪುಷ್ಟಿ ಕೊಡುತ್ತಿತ್ತು. ಗಮಕ ವಿದುಷಿಯ ಜೊತೆಗೆ ಶ್ರೋತೃಗಳೂ ರಸಭಾವ ಗಂಗೆಯಲ್ಲಿ ಮೀಯುತ್ತಿದ್ದರು.

ಶಕುಂತಲಾಬಾಯಿ ಪ್ರತಿ ದಿನವೂ ಕಾವ್ಯ ವಾಚನದ ಮುಕ್ತಾಯವನ್ನು 'ಮಂಗಳ'ದ ಕೊನೆಯ 6 ಸಾಲುಗಳಿಂದ ಮುಗಿಸುತ್ತಿದ್ದರು.

"ಜಯ ಜಯ ಶ್ರೀರಾಮ, ಜಯ ರಾಮಚಂದ್ರ ;
ಜಯ ಜಗನ್ಮಾತೆ ಸೀತಾದೇವಿ, ಜಯ ಜಯ ;
ಜಯತು ಲಕ್ಷ್ಮಣ, ಭರತ, ಶತ್ರುಘ್ನ, ಜಯ ಜಯ.
ಜಯತು ಸೀತಾರಾಮದಾಸ ಹನುಮಂತ, ಜಯ.
ಜಯ ಜಯ ಜಯಜಯ ಜಯ ಜಯಜಯ ಜಯ
ಜಯ ಜಯ ಜಯಜಯ ಜಯ ಜಯಜಯ ಜಯ

ಮುಕ್ತಾಯವನ್ನು ಪ್ರಾರಂಭದ ದಿನ ಸಂಪ್ರದಾಯದಂತೆ ಸೌರಾಷ್ಟ್ರ ರಾಗದಲ್ಲಿ ಮುಗಿಸಿದರು. ಮುಂದಿನ ದಿವಸಗಳಲ್ಲಿ ಮಧ್ಯಮಾವತಿ, ಸುರಟಿ, ಹೀಗೆ ಸೂಕ್ತವಾದ ರಾಗಗಳನ್ನು ಎತ್ತಿಕೊಳ್ಳುತ್ತಿದ್ದರು. ಮಂಗಳದಲ್ಲೂ ನಿತ್ಯ ನವೀನತೆಯನ್ನು ತರುತ್ತಿದ್ದರು.

ಶ್ರೀರಾಮ ಪಟ್ಟಾಭಿಷೇಕ ಕಾವ್ಯದಲ್ಲಿ ಕವಿ ಮನೋಧರ್ಮ

ಮಾಸ್ತಿಯವರ ಹೃದಯ ರಸಪಾಕ ಶ್ರೀ ರಾಮ ಪಟ್ಟಾಭಿಷೇಕ ಕಾವ್ಯದಲ್ಲಿ ಹಾಸುಹೊಕ್ಕಾಗಿದೆ. ಮಾಸ್ತಿಯವರು ಹೆಸರಾಂತ ಕುಶಲ ಕಥೆಗಾರರು, ಕವಿಗಳು ಶ್ರೇಷ್ಠ ವಿಮರ್ಶಕರು, ಮಹಾನುಭಾವಿಗಳು. ಆದುದರಿಂದ ಅವರು ತಮ್ಮ ಲೋಕಾನುಭವವನ್ನು ತಮ್ಮ ಪಾತ್ರಗಳ ಮುಖದಿಂದ ಶ್ರೀರಾಮ ಪಟ್ಟಾಭಿಷೇಕ ಕಥೆಯಲ್ಲಿ ಹೇಳಿಸಿರುವ ತಂತ್ರ ಕಾವ್ಯದ ಹೃದಯವಾಗಿದೆ ; ಅವರ ಜ್ಞಾನಾನುಭವ, ವಯೋಧರ್ಮದ ಪರಿಪಕ್ವ ಜೀವನಾನುಭವ, ಕಾವ್ಯದಲ್ಲಿ ಮುಗಿಲು ಮುಟ್ಟಿದೆ. ಉದಾಹರಣೆಗೆ ಸೀತಾರಾಮ ಪಾತ್ರಗಳನ್ನು ಮಾತ್ರ ಆರಿಸಿಕೊಂಡಿದೆ.

ಶ್ರೀರಾಮಚಂದ್ರನ ಪಾತ್ರದ ಹೃದಯ ಪರಿಪಾಕ ಕಾವ್ಯದಲ್ಲಿ ಅತ್ಯುನ್ನತ ಶಿಖರವನ್ನು ಮುಟ್ಟುತ್ತದೆ. ಆತನಿಗೆ ಹೆಗಲೆಣೆಯಾಗಿನಿಲ್ಲುವ ಇನ್ನೊಂದು ಪಾತ್ರ ಸೀತಾದೇವಿ.

ಸೀತಾರಾಮಲಕ್ಷ್ಮಣರು ಅಯೋಧ್ಯೆಯನ್ನು ಸೇರಿದ ಮೇಲೆ, ಶ್ರೀರಾಮ ಪಟ್ಟಾಭಿಷೇಕದದಿನದ ಹಿಂದಿನಸಂಜೆ ಸುಗ್ರೀವನರಸಿಯರಾದ ತಾರಾ ರುಮೆಯರ ಜೊತೆ ಸೀತಾ ತಾಯಿ ನಗರ ಪ್ರದಕ್ಷಿಣೆ ಹೊರಟರು. ಆ ಸಮಯದಲ್ಲಿ

"ಮನೆಮನೆಯ ಮುಂದೆಯೂ ಚೌಕಗಳ ಬದಿಯಲೂ
ಪುರಜನರು ನಾಲ್ಕು ಜನ, ಆರು ಜನ, ಹತ್ತು ಜನ,
ಜೊತೆಯಾಗಿ ನಿಂತು ಪಟ್ಟಾಭಿಷೇಕದ ಮಾತ
ಆಡಿ ಸಂತೋಷ ಪಡುತ್ತಿಹರು ಮೆಲ್ಲನೆ ತೇರು
ಸಾಗುತಿರೆ ದೇವಿಯರಿಗೆ ಜನರು ರಾಮನನು
ಇಂತು ಹೊಗಳುತಲಿಹುದು ಕೇಳಿಸಿತು.

ದೇವಿಯರೆಂದರೆ ಸೀತಾದೇವಿ. ಅವರು ಶ್ರೀರಾಮನ ಗುಣಗಾನವನ್ನು ಇಂತು ಕೇಳಿದರು—

". . . . . ಶ್ರೀರಾಮ
ಎಂತಪ್ಪ ಗುಣವಂತ! ಸುಗುಣ ಅವು ಅಗಣಿತ.
ಶ್ರೀರಾಮ ಧೀಮಂತ; ದೇವರಂತಹ ಪುರುಷ.
ಶ್ರೀರಾಮ ಸತ್ಯಾತ್ಮ; ದಿವ್ಯಗುಣಭೂಷಿತ.
ದೇವೇಂದ್ರಸಂಥವನು; ಸತ್ಕೀರ್ತಿ ಸಂಪನ್ನ.
ಜನದ ಮನವನು ಚಂದ್ರನಂದ ಒಲಿಸುವವನು.
ತಾಳ್ಮೆಯಲಿ ಅವನು ಭೂದೇವಿಗೆ ಸಮಾನನು.
ಬುದ್ಧಿಯಲಿ ದೇವಗುರು; ಶೌರ್ಯದಲಿ ದೇವೇಂದ್ರ.
ರಾಮಶೀಲದ ತೌರು. ಅವನಸೂಯೆಯ ತಾಣ.
ಸೌಮ್ಯ ಸ್ವಭಾವದಲಿ ಅವನಿಗೆಣೆಯೇ ಇಲ್ಲ
ಶ್ರೀರಾಮ ಗುಣ ಪಕ್ಷಪಾತಿ; ಪ್ರಿಯ ನುಡಿವವನು.
ಶ್ರೀರಾಮ ವಿಪ್ರರನು, ವಿದ್ವಾಂಸ ಜನರನು,
ವೃದ್ಧರನು, ಗುರುಭಾವದಿಂದ ಪೂಜಿಸುವನು.
ಶ್ರೀರಾಮ ವಿದ್ಯೆಯಲಿ ಪಾರವನು ಸಾರಿಹನು.
ವೇದದಲಿ ಶಾಸ್ತ್ರದಲಿ ಶಸ್ತ್ರಾಸ್ತ್ರ ವಿದ್ಯೆಯಲಿ
ಅವನು ಕಾಣದ ವಿವರ ಇಲ್ಲ. ಸಂಗೀತದಲಿ
ಶ್ರೀರಾಮ ವಿದ್ವಾಂಸ. ದಸ್ಯುಜನ ವಿಷಯದಲಿ
ಜನವ ಕಾಡುವರೆಂದು ಕೇಳಿದನೆ ಒಡೆಯನೆಯೇ
ಸೋದರರ ಸಹಿತ ಹೊರಟವನು ದುಷ್ಟಾತ್ಮರನು
ನಿಗ್ರಹಿಸಿ ಜನವ ಕಾಪಾಡುವನು ನಾಗರಿಕ
ಜನ ನಮ್ಮ ವಿಷಯದಲಿ ಮನೆಯ ತಂದೆಯ ತೆರನ
ಅರಿದು ಅಕ್ಕರೆಯಿಂದ ನಡೆಯುವನು. ಕಷ್ಟದಲಿ
ಸಿಲುಕಿರುವೆವೇ ನಮ್ಮ ಕನಿಕರಿಸಿ ನೋಡುವನು.
ದೊರೆ ಮಗನೆ ದಿಟ; ಇರುತ ತಾನು ದೊರೆಮಗನೆಂದು
ಬೀಗಿ ನಿಲುವವನಲ್ಲ. ಎದುರಿಗೈತಂದವರ
ಮೆಲುನಗೆಯ ಪ್ರಿಯ ವಚನದಿಂದ ತಾನೇ ಮೊದಲು
ನುಡಿಸುವನು ಅಪರಾಧ ಗೆಯ್ದರವರ ತಪ್ಪದೆ

ದಂಡನೆಗೆ ಗುರಿ ಮಾಡುವನು. ನಿರಪರಾಧಿಗಳ
ತರ್ಜಿಸದೆ ಸೌಮ್ಯ ಮುಖವನು ತೋರಿ ಪೊರೆಯುವನು

ಸೀತಾದೇವಿ ತನ್ನ ಮನದಿನಿಯನನ್ನು ಕುರಿತು ನಗರವಾಸಿಗಳು ಮಾಡುತ್ತಿದ್ದ ಗುಣಗಾನವನ್ನು ಕೇಳಿ ಮನಹಿಗ್ಗಿ, ತನ್ನೊಳಗೆ ಹೀಗೆಂದು ಕೊಂಡರು—

. . . . ಧರ್ಮಿಷ್ಠ
ನನ್ನರಸ ಬಹುವೆಲ್ಲ ಕಾಲವೂ ಸೌಖ್ಯವನೆ
ಅನುಭವಿಸಿ ಬಾಳಲಿ, ಕೀರ್ತಿಯನು ಗಳಿಸಲಿ,
ಪೌರಜನ ಜಾನಪದ ಜನ ಎಲ್ಲರನು ಎಲ್ಲ
ಕಾಲ ಸೌಖ್ಯದಿ ನಡೆಸಿ ಹೊರೆಯುವಂತಾಗಲಿ,"

ಶಕುಂತಲಾಬಾಯಿ ನಗರವಾಸಿಗಳು ಮಾಡಿದ ಶ್ರೀರಾಮ ಗುಣಗಾನಕ್ಕೆ ಆರಭಿ ರಾಗವನ್ನು ಬಳಸಿದ್ದರು. ಅದು ಆಗ ಮಿಂಚಿದ ಸ್ಫೂರ್ತಿ.

ಸೀತಾದೇವಿ ಸಾಮಾನ್ಯರೇ ? ಶ್ರೀರಾಮಚಂದ್ರನೆಂತಪ್ಪ ಗುಣವಂತನೋ ಅಂತಪ್ಪ ಗುಣವಂತೆ ತಾಯಿ ಸೀತಾದೇವಿಯೂ. ಸಾತ್ವಿಕ ಗುಣ ಸಂಪನ್ನನಾದ ರಾಕ್ಷಸ ರಾಜ ವಿಭೀಷಣನ ಮಗಳು ಅನಿಲೆ, ಕೌಸಲ್ಯಾದೇವಿಗೆ ಲಂಕೆಯ ಭೀಕರ ದಿನಗಳ ಕತೆಯನ್ನು ವಿವರಿಸುವಾಗ ಸೀತಾದೇವಿಯನ್ನು ಕುರಿತು ಆಡುವ ಮಾತುಗಳು ಮನೋಜ್ಞವಾಗಿವೆ. ಕೌಸಲ್ಯಾದೇವಿ ಅನಿಲೆಯನ್ನು ಕೇಳಿದರು—

"ತಂಗಿ ಅನಿಲಾದೇವಿ, ನಮ್ಮ ರಾಮನ ರಾಣಿ
ಸೆರೆಯಲಿರುವಂದು ಮೂವರು ನೀವು ಆಕೆಗೆ
ಕೆಳೆ ತೋರಿ ಒಲವಿಂದ ಬಹು ಸೇವೆ ಸಲಿಸಿದಿರಿ
ಎಂದವರು ತಿಳಿಸಿದರು ಇದರ ಪರಿಯೇನೆಂದು.
ಹೇಳುವಿರ ? ಉಪಕಾರ ಆಗುವುದು," . . .

ಅನಿಲೆ, ತಾನು ತ್ರಿಜಟೆ ಸರಮೆಯರೊಡನೆ ಕಾವಲಿದ್ದಾಗ ನಡೆದುದನ್ನು ವಿವರಿಸಿ, ಸೀತಾದೇವಿಯು ಆಗ ನಡೆದುಕೊಂಡ ಪರಿಯನ್ನು ವಿವರ ವಿವರ ಪದರ ಪದರಗಳಾಗಿ ಬಿತ್ತರಿಸಿ

" . . . . ಮಹಾತಾಯಿ ಸೇವೆಗೆಯ್ದವರೆಂದ
ನಮ್ಮನಿನಿತೇ ಅಲ್ಲ, ತನಗೆ ಕೇಡೆಸಗಿದ್ದ
ತಮ್ಮ ಕಾವಲ ಮಂದಿಯನು ಕೂಡ ಮನ್ನಿಸಿ
ಕೃಪೆಯಿಂದ ಕಾಪಾಡಿಕೊಂಡರು, ಮಹಾತಾಯಿ
ಬರಿಯ ಮಾನವಿಯಲ್ಲ ; ಒಬ್ಬ ದೇವತೆ ಇವರ
ರೂಪದಲಿ ಇಳೆಗಿಳಿದು ಬಂದಿಹರು, ಎಂದರು
ನನ್ನಕ್ಕದಿರು ಸರಮೆ ತ್ರಿಜಟೆ. ನಾನೂ ಅಂತೆ
ನಂಬಿಹೆನು.'

ಎನ್ನುತ್ತಾಳೆ. ನಗರದ ಜನರಿಗೆ ಶ್ರೀರಾಮ "ದೇವರಂತಹ ಪುರುಷ". ಅನಿಲೆ ಸರಮೆ ತ್ರಿಜಟೆಯರಿಗೆ, ಸೀತಾದೇವಿ **ಮಹಾತಾಯಿ ಬರಿಯ ಮಾನವಿಯಲ್ಲ ; ಒಬ್ಬ ದೇವತೆ ಇವರ ರೂಪದಲ್ಲಿ ಇಳೆಗಿಳಿದು ಬಂದಿಹರು.**

ಶಕುಂತಲಾಬಾಯಿ ಇಂತಹ ಸನ್ನಿವೇಶಗಳನ್ನು ಗಮಕದಲ್ಲಿ ತರುತ್ತಿದ್ದಾಗ ಶ್ರೋತೃಗಳು ಭಾವಪರವಶರಾಗಿ ಕಣ್ಣು ಹನಿಮಿಡಿಯುತ್ತಿದ್ದರು.

ಮಾಸ್ತಿಯವರು ವಾಲ್ಮೀಕಿ ರಾಮಾಯಣದ ವಿಷಯದಲ್ಲಿ ತಳೆದಿರುವ ತಮ್ಮ ನಿಲುವನ್ನು ಶ್ರೀರಾಮ ಪಟ್ಟಾಭಿಷೇಕದ ಮುನ್ನುಡಿಯಲ್ಲಿ ಸ್ಪಷ್ಟಪಡಿಸಿದ್ದಾರೆ.

> "ಶ್ರೀರಾಮ ಪಟ್ಟಾಭಿಷೇಕ ನಾನು ಹರೆಯದಲ್ಲಿ ಸಂಕಲ್ಪಿಸಿ ಇಳಿವಯಸ್ಸಿನಲ್ಲಿ ಆರಂಭಿಸಿ ಮುಪ್ಪಿನಲ್ಲಿ ತಂದಿರುವ ಕಾವ್ಯ. ಸಂಕಲ್ಪದ ವೇಳೆಯಿಂದ ಈ ವೇಳೆಗೆ ಅದರ ರೂಪ ತಕ್ಕ ಮಟ್ಟಿಗೆ ಬೇರೆಯಾಗಿದೆ. ದಿನ ಕಳೆದಂತೆ ಈ ರೂಪ ಅಷ್ಟು ಇಷ್ಟು ಮಾರ್ಪಟ್ಟು ಬೇರೆ ಆದಾಗ ನಾನು ಮಾರ್ಪಾಡನ್ನು ಒಪ್ಪಿಕೊಂಡು ಮುಂದುವರಿದೆನು. ಕಾವ್ಯದ ಯಾವ ಭಾಗವನ್ನು ಬರೆಯುವುದರಲ್ಲಾಗಲಿ ನಾನು ಪ್ರೇರಣೆಯನ್ನು ವಿರೋಧಿಸಿಲ್ಲ. ಸಹಜವಾಗಿ ಬಂದ ಮಾರ್ಪಾಡನ್ನು ಸಹಜವೆಂದು ಒಪ್ಪಿಕೊಂಡು ನಡೆದಿದ್ದೇನೆ. ಹೀಗಾಗಿ ಕಾವ್ಯ ರಾಮಾಯಣವನ್ನು ಕುರಿತ ನನ್ನ ನಿಲುವನ್ನು ಪ್ರಕಟಿಸುವ ಕೃತಿಯಾಗಿದೆ.
>
> "ಈ ನಿಲುವಿನ ರೂಪರೇಖೆ ನನ್ನ "ಆದಿಕವಿ ವಾಲ್ಮೀಕಿ" ಗ್ರಂಥದಲ್ಲಿ ಪ್ರಕಟವಾಗಿದೆ. ಅದರ ಮುಖ್ಯಭಾಗ ಶ್ರೀರಾಮ ಶ್ರೇಷ್ಠ ಮಾನವನಾದ್ದರಿಂದ ದೇವರಾದನು ಎನ್ನುವುದು."

ಮಾಸ್ತಿಯವರ ಈ ನಿಲುವನ್ನು ಈಗಾಗಲೇ ನಗರವಾಸಿಗಳ ಹಾಗೂ ಅನಿಲೆಯ ಮಾತುಗಳಿಂದ ಗ್ರಹಿಸಿದ್ದೇವೆ. ಲೋಕಾನುಭಾವಿಗಳಾದ ಶ್ರೋತೃಗಳು ಶಕುಂತಲಾಬಾಯಿಯ ಭಾವಪೂರ್ಣ ವಾಚನ ವೈಖರಿಯನ್ನು, ಅದಕ್ಕೆ ಪುಷ್ಟಿಕೊಟ್ಟು ನೀಡುತ್ತಿದ್ದ ನನ್ನ ಪ್ರಾಸಂಗಿಕ ನಿರೂಪಣೆಯನ್ನು ಕೇಳಿ, ಮಾಸ್ತಿಯವರ ಹೃದಯ ರಸಪಾಕಕ್ಕೆ ಮಾರುಹೋಗುತ್ತಿದ್ದರು. ಶತ್ರುಘ್ನ ಕೈಕೆಯ ಬಗೆಗೆ, ಕೌಸಲ್ಯಾದೇವಿ ತನ್ನ ಒಡನಾಡಿ ಸುಮಿತ್ರ ಕೈಕೇಯೀ ರಾಣಿಯರ ಬಗೆಗೆ, ಶ್ರೀರಾಮಚಂದ್ರಪ್ರಭು, ಭರತಶತ್ರುಘ್ನರ, ತನ್ನ ತಾಯಿಯರ, ಹಾಗೂ ಪ್ರಜೆಗಳ ಬಗೆಗೆ ನಡೆದುಕೊಂಡ ಆದರ್ಶ ನಡವಳಿಕೆ ಮಾಸ್ತಿಯವರ ಮನೋಧರ್ಮವನ್ನು ಬಹು ಎತ್ತರಕ್ಕೆ ನಿಲ್ಲಿಸುವ ನಿಶಾನೆಗಳು. ಸುಮಂತ್ರ, ದಾಶರಾಜ ಗುಹ, ಹನುಮಂತ, ಸುಗ್ರೀವ, ಅಂಗದ, ತಾರೆ ರುಮೆ ಅನಿಲೆ ಮೊದಲಾದವರ ಜೀವನಗಳಲ್ಲೂ ಮಾಸ್ತಿಯವರ ಸುಸಂಸ್ಕೃತ ಜೀವನ ಧರ್ಮ ಎದ್ದು ಕಾಣುತ್ತದೆ. ಮಾಸ್ತಿಯವರನ್ನು ಬಲ್ಲ ಜನ, ಅವರ ನಡೆನುಡಿಗಳಲ್ಲಿ ಕಂಡರಿತಿರುವ ನಿತ್ಯ ಸತ್ಯವಿದು. ಹೀಗೆನ್ನುವಾಗ ನನ್ನ ನೆನಪಿನ ಪುಟಗಳು ಐದು ದಶಕಗಳಷ್ಟು ಹಿಂದಕ್ಕೆ ಬಿಚ್ಚಿಕೊಳ್ಳುತ್ತವೆ. ಅಂದಿನಿಂದ ಈವರೆಗೆ ಮಾಸ್ತಿಯವರ ಸಜ್ಜನಿಕೆಯ ಬಗೆಗೆ ನನ್ನ ಅನುಭವಗಳಲ್ಲಿ ಬಂದ ಕೆಲವು ವಿಷಯಗಳನ್ನು ಇಲ್ಲಿ ಪ್ರಸ್ತಾಪಿಸುವುದು ಅಸಂಗತವಾಗಲಾರದೆಂದು ಎಣಿಸಿದ್ದೇನೆ.

ನಮ್ಮ ಬಗೆಗೆ ಮಾಸ್ತಿಯವರ ಹೃದಯ ವಾತ್ಸಲ್ಯ

1932-33 ಆಗತಾನೆ ನಾನು "ಸಹಕಾರ ಸೌಖ್ಯ"ವೆಂಬ ನಾಟಕವನ್ನು ಬರೆದ ತರುಣ. ನನ್ನ ಕೃತಿಯ ಒಂದು ಪ್ರತಿಯನ್ನು ಮಾಸ್ತಿಯವರಿಗೆ ಅರ್ಪಿಸೋಣವೆಂದು ಒಂದು ಬೆಳಗ್ಗೆ ಹಲಸೂರು ಪೇಟೆಯ ದಾಸೋಪಂತಗಲ್ಲಿ ನಮ್ಮ ಮನೆಯಿಂದ ಆರೇಳು ಮೈಲಿ ನಡೆದು, ಗವೀಪುರ ವಿಸ್ತರಣದಲ್ಲಿದ್ದ ಅವರ ಮನೆಗೆ ಹೋದೆ. ಮನೆ ಸೇವಕನ ಕೈಯ್ಯಲ್ಲಿ ನನ್ನ ಹೆಸರು ಬರೆದು ಕಳಿಸಿದೆ. ಮಾಸ್ತಿಯವರು ಕಚೇರಿಯಲ್ಲಿ ಕಾಣುವಂತೆ ಹೇಳಿ ಕಳಿಸಿದರು. ನಾನು ಸೇವಕನ ಕೈಯ್ಯಲ್ಲಿ ಪುಸ್ತಕ ಕೊಟ್ಟು "ಸಾಹೇಬರಿಗೆ ಕೊಡು." ಎಂದು ಹೇಳಿ, ಹೆಬ್ಬಾಗಿಲು ದಾಟಿ, ರಸ್ತೆಗಿಳಿದು, ಪಕ್ಕದ ರಸ್ತೆಗೆ ತಿರುಗಿದೆ. ಅಷ್ಟ ರೊಳಗೆ ಸೇವಕ ನನ್ನನ್ನು ಹಿಂಬಾಲಿಸಿ ಬಂದು, "ಸಾಹೇಬರು ನಿಮ್ಮನ್ನು ಬರಹೇಳಿದ್ದಾರೆ" ಎಂದ. ಆತನನ್ನು ಹಿಂಬಾಲಿಸಿ ಹೋಗಿ ಹೊರಾಂಗಣದಲ್ಲಿ ಕುಳಿತೆ. ಮಾಸ್ತಿಯವರು ನನ್ನ ಪುಸ್ತಕ ಹಿಡಿದು ಮೇಲಿಂದ ಇಳಿದು ಬಂದರು. ಸೋಫಾದಲ್ಲಿ ಕುಳಿತು, ನನ್ನನ್ನೂ ಪಕ್ಕದಲ್ಲಿ ಕೂಡಿಸಿಕೊಂಡು ಸವಿ ಮಾತನಾಡಿದರು. "ನೀವು ಕೆಲಸ ಕೇಳಲು ಬಂದಿ ರೇನೊ ಎಂದು 'ಕಚೇರಿಗೆ ಬನ್ನಿ' ಎಂದೆ. ಕನ್ನಡದ ಕೆಲಸಕ್ಕಾಗಿ ಬಂದವರು ನನ್ನನ್ನು ಧಾರಾಳವಾಗಿ ನೋಡಬಹುದು" ಎಂದರು. ಕಾಫಿ ತರಿಸಿ ಉಪಚಾರ ಮಾಡಿದರು. ಪುಸ್ತಕದ ಒಳಗೆ ಕಣ್ಣಾಡಿಸಿ ಸೂಕ್ತ ಸಲಹೆ ನೀಡಿದರು. ಮಾಸ್ತಿಯವರ ಸರಳ ಸಂಪನ್ನತೆಗೆ ನಾನು ಮಾರುಹೋದೆ.

ಅನಂತರ ಕೆಲವು ವರ್ಷಗಳ ಮೇಲೆ ನನಗೆ ಮಾಸ್ತಿಯವರ ಅಳಿಯ ಎನ್. ರಂಗ ಸ್ವಾಮಿ ಅಯ್ಯಂಗಾರ್‍ಯರ ಸ್ನೇಹವಾಯಿತು. ನಾನು ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ನಾರಿಗೇನ ಹಳ್ಳಿಯ ಜೋಡಿದಾರ. ರಂಗಸ್ವಾಮಿ ಅಯ್ಯಂಗಾರ್ ನನ್ನ ಹಳ್ಳಿಗೆ ಕೇವಲ ನಾಲ್ಕು ಮೈಲಿ ಫಾಸಲೆಯಲ್ಲಿರುವ ಮಾಸ್ತಿ ಗ್ರಾಮದವರು. ಸಣ್ಣ ಕತೆಗಾರರು. "ಶ್ರೀ ಸ್ವಾಮಿ"ಯೆಂಬ ಕಾವ್ಯನಾಮದಿಂದ ಕನ್ನಡ ಸಾಹಿತ್ಯ ಲೋಕಕ್ಕೆ ಪರಿಚಿತರು. "ಬೀಬಿ ನಾಚ್ಚಿಯಾರ್" ಸಣ್ಣ ಕತೆ ಬರೆದು ಸೆಂಟ್ರಲ್ ಕಾಲೇಜು ಕರ್ನಾ ಟಕ ಸಂಘದ ಮುದ್ದಣ ಸ್ವರ್ಣಪದಕ ಪಡೆದ ಕೀರ್ತಿಶಾಲಿ. ನನಗೂ ಅವರಿಗೂ ಸ್ನೇಹ ಬಾಂಧವ್ಯ ಬೆಳೆಯುವುದಕ್ಕೆ ಈ ಸಾಹಿತಿ ಸ್ವಜಾತಿ ಪ್ರೇಮ, ನನ್ನ ನೆರೆಗ್ರಾಮದವರೆಂಬ ವಿಶ್ವಾಸ, ಕಾರಣಗಳಾಗಿದ್ದುವು. ರಂಗಸ್ವಾಮಿಯವರ ಗೆಳೆತನದಿಂದ ನಾನು ಮಾಸ್ತಿ ಯವರ ಮನೆಗೆ ಹೋಗಿ ಬರುವ ಪರಿಪಾಟವಾಗಿ ಮಾಸ್ತಿಯವರಲ್ಲೂ ನನಗೆ ಗೌರವ ಪೂಜ್ಯಭಾವಗಳ ನಂಟು ಬೆಳೆಯಿತು.

1938, ಕನ್ನಡ ಸಾಹಿತ್ಯ ಪರಿಷತ್ತಿಗೆ ಈಗಾಗಲೇ ನಾನು ಸಾಕಷ್ಟು ಪರಿಚಯ ವಾಗಿದ್ದೆ. 1937ರಲ್ಲಿ ಶಕುಂತಲಾಬಾಯಿ ಕನ್ನಡ ಸಾಹಿತ್ಯ ಪರಿಷತ್ತಿನ ಗಮಕ ತರ ಗತಿಯ ವಿದ್ಯಾರ್ಥಿನಿಯಾಗಿ ಸೇರಿಕೊಂಡ ಕಾರಣದಿಂದ ನನ್ನ ಮತ್ತು ಸಾಹಿತ್ಯ ಪರಿ ಷತ್ತಿನ ಸಂಬಂಧ ನಿಕಟವಾಗಿತ್ತು. ಮಾಸ್ತಿಯವರ ಉಪನ್ಯಾಸ ಮುದ್ದಣನ ಮೇಲೆ ಒಂದು ಸಂಜೆ ಉಪನ್ಯಾಸ ಕೇಳಲು ಪರಿಷತ್ತಿಗೆ ಹೋಗಿ ಹೊರಾಂಗಣದಲ್ಲಿ ಗೆಳೆಯರ

ಕೂಡ ಸಂಭಾಷಣೆಯಲ್ಲಿ ತೊಡಗಿದ್ದೆ. ಮಾಸ್ತಿಯವರು ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರೊಡನೆ ದಯಮಾಡಿಸಿದರು. ನಾನು ಹಿರಿಯರಿಬ್ಬರಿಗೂ ಕೈಮುಗಿದೆ. ಮಾಸ್ತಿಯವರು ನನ್ನನ್ನು ಬೇಂದ್ರೆಯವರಿಗೆ ಪರಿಚಯ ಮಾಡಿಕೊಟ್ಟರು. ಬೇಂದ್ರೆಯವರು ಶಕುಂತಲಾಬಾಯಿಯ ಕ್ಷೇಮ ಸಮಾಚಾರ ವಿಚಾರಿಸಿದರು. ಆಕೆಯ ಗಮಕಾಭ್ಯಾಸದ ವಿಷಯ ಕೇಳಿದರು. ನಾನು "ಆರೋಗ್ಯವಾಗಿದ್ದಾಳೆ. ಅಭ್ಯಾಸ ನಡೆಸುತ್ತಿದ್ದಾಳೆ" ಎಂದೆ. ಕೂಡಲೆ ಮಾಸ್ತಿಯವರು ನನ್ನನ್ನು ತಿದ್ದಿದರು. "ಪಾಂಡುರಂಗರಾವ್, ಶಕುಂತಲಾಬಾಯಿ ನಿಮಗೆ ಪತ್ನಿಯಾಗಿರಬಹುದು, ಆದರೆ ಆಕೆ ಸಮಾಜದಲ್ಲಿ ಒಬ್ಬ ಗೌರವಸ್ಥ ಹೆಣ್ಣುಮಗಳಲ್ಲ! ಹೊರಗಿನವರಿಗೆ ಪರಿಚಯಿಸುವಾಗ ಏಕವಚನ ಕೂಡದು. ಬಹುವಚನದಲ್ಲೇ ನುಡಿಯಬೇಕು". ಕೂಡಲೇ ನನ್ನ ಮಾತಾಮಹರು ನೆನಪಾದರು. ನನ್ನಜ್ಜ ಅಣ್ಣಿಗೇರಿ ರಾಮರಾಯರು ತಮ್ಮ ಪತ್ನಿ—ನನ್ನ ಮಾತಾಮಹಿ ಸೀತಾಬಾಯಿಯನ್ನು "ಬನ್ನಿ, ಹೋಗಿ" ಎಂಬೇ ಗೌರವದಿಂದ ಮಾತಾಡಿಸುತ್ತಿದ್ದರು. "ಏನೇ, ಬಾರೆ, ಹೋಗೇ" ಇಂಥ ಪ್ರಾಕೃತ ಅಸಂಸ್ಕೃತ ಪ್ರಯೋಗ ನನ್ನ ಅಜ್ಜನ ಬಾಯಿಂದ ಬಂದುದನ್ನು ಕಾಣೆ. ಈಗ ನನಗೆ ಮಾಸ್ತಿಯವರು ಎಂಥ ಸುಸಂಸ್ಕೃತ ಹಿರಿಯ ಜೀವ ಎನ್ನಿಸಿತು. ಅವರಿಗೆ ಮನಸ್ಸಿನಲ್ಲಿಯೇ ನಮನ ಸಲ್ಲಿಸಿದೆ.

1949ನೆಯ ವರ್ಷ ಕನ್ನಡ ಸಾಹಿತ್ಯ ಪರಿಷತ್ತು ಕವಿಚಕ್ರವರ್ತಿ ರನ್ನ ಮಹಾಕವಿಯ ಸಹಸ್ರಾಬ್ದಿ ಮಹೋತ್ಸವವನ್ನು ವಿಜೃಂಭಣೆಯಿಂದ ನಡೆಸಿತು. ವೀರಶೈವ ಸಾಹಿತ್ಯದ ಮಹಾ ವಿದ್ವಾಂಸರೂ ಹಿರಿಯ ಸಾಹಿತಿಗಳೂ ಆದ ಎಂ. ಆರ್. ಶ್ರೀಗಳು ರನ್ನ ಕವಿಯ ವಿಷಯವಾಗಿ ಅಮೋಘವಾದ ಉಪನ್ಯಾಸವಿತ್ತರು. ಶಕುಂತಲಾಬಾಯಿ ರನ್ನನ ಸಾಹಸಭೀಮ ವಿಜಯ ಕಾವ್ಯದಿಂದ "ದುರ್ಯೋಧನನ ಪ್ರಲಾಪ" ಸಂದರ್ಭವನ್ನು ವಾಚನ ಮಾಡಿದರು.

ದುರ್ಯೋಧನ ಸ್ಮಶಾನ ಕುರುಕ್ಷೇತ್ರದಲ್ಲಿ ದುಶ್ಶಾಸನನ ಶವವನ್ನು ಕಂಡು ಹೀಗೆ ಪ್ರಲಾಪಿಸಿದ.

"ನಿಜಜೀವಂ ಪರಲೋಕದೊಳ್ ನಿಜಮಹಾಮಾಂಸಂ ಪಿಶಾಚಾಸ್ಯದೊಳ್
ನಿಜರಕ್ತಂ ರಿಪುಕುಕ್ಷಿಯೊಳ್ ನಿಜಶಿರಂ ನಕ್ತಂಚರೀಹಸ್ತದೊಳ್
ನಿಜಕಾಯಂ ಕುರುಭೂಮಿಯೊಳ್ ನೆಲಸೆ ಗಾಂಧಾರೀಜ ದುರ್ಯೋಧನಾ
ನುಜ ದುಶ್ಶಾಸನ ಭೀಮಭೀಮಗದೆಯಿಂ ಪಂಚತ್ವಮಂ ಪೊರ್ದಿದಯ್ ॥

ಜನನೀಸ್ತನ್ಯಮನುಂಡೆನಾಂ ಬಳಿಕೆ ನೀಂ ಸೋಮಾಮೃತಂ ದಿವ್ಯಭೋ
ಜನಮೆಂಬಿಂತಿವನುಂಡೆನಾಂ ಬಳಿಕೆ ನೀಂ ಬಾಲತ್ವದಿಂದೆಲ್ಲಿಯುಂ
ವಿನಯೋಲ್ಲಂಘನಮಾದುದಿಲ್ಲ ಮರಣಕ್ಕೆನ್ನಿಂದೆ ನೀಂ ಮುಂಚಿದಯ್
ಮೊನೆಯೊಳ್ ಸೋಲ್ ತಡಮಾಯ್ತು ದೊಂದೆಡೆಯೊಳಂ ಹಾ ವತ್ಸ
ದುಶ್ಶಾಸನಾ ॥

ಅನುಜನ ನೆತ್ತರ ನೀಂಟಿದ
ನನೆತ್ತರಂ ಜೀವ ಸಹಿತವೀಂಟದೆ ದುರ್ಯೋ

ಧನನೆಂಬ ಪೆಸರ್ಗೆ ಮುಯ್ಯಾಂ
ಪೆನೆ ದುಶ್ಯಾಸನನ ಬನ್ನಮುಂ ನೀಗುವೆನೇ ॥

ವೃತ್ತಪದ್ಯಗಳಲ್ಲಿ ಶೋಕವೂ ಕಂದಪದ್ಯದಲ್ಲಿ ಶೋಕ ಮಿಶ್ರಿತ ಆಕ್ರೋಶ ವೀರ ರೌದ್ರ ರಸಗಳು ಪ್ರಧಾನವಾಗಿವೆ.

ದುರ್ಯೋಧನನು ತನ್ನ ಒಡಹುಟ್ಟಿದ ತಮ್ಮನ ಶವವನ್ನು ಕಂಡು ಆತ್ಮಾಲಾಪ ವೆಸಗಿ ಮುಂಪೆ ನಡೆದು ಅಂಗಾಧಿಪತಿ ಕರ್ಣನ ಶವವನ್ನು ನೋಡಿದ. ಅವನ ಹೃದಯವೇ ಬಾಯಿಗೆ ಬಂದಂತಾಯಿತು. ಕರುಳು ಕಿತ್ತು ಹೊರಚೆಲ್ಲಿದಂತಾಯಿತು. ದುಶ್ಯಾಸನನಿಗಿಂತಲೂ ಒಂದು ಕೈ ಮಿಗಿಲಾಗಿ ಕರ್ಣನನ್ನು ಪ್ರೀತಿಯಕ್ಕರೆಯಿಂದ ಬಾಳಿಸಿದ್ದ ದುರ್ಯೋಧನ ಶೋಕರಸ ಉಕ್ಕಿ ಹೀಗೆ ಪ್ರಲಾಪಿಸಿದ ಅಂಗಾಧಿಪತಿಯ ಶವದ ಮುಂದೆ—

ಆನುಂ ದುಶ್ಶಾಸನನುಂ
ನೀನುಂ ಮೂವರೆ ದಲಾತನುಂ ಕೞಿದ ಬೞಿ
ಕ್ಕಾನುಂ ನೀನೆ ದಲೀಗಳ್
ನೀನುಮಗಲ್ದೆತ್ತವೋದೆಯಂಗಾಧಿಪತೀ ॥

ಅಱಿಯೆನಿದಂ ನಿನ್ನಿಂದಿನ
ತೆಱನಂ ನೀನೆನಗೆಯೇಕೆ ಮುಳಿದಿರ್ದೆಯೊ ಮೇಣ್
ಮಱುಮಾತುಗುಡದೆ ರವಿಸುತ
ಮಱವಿಂದಿರ್ದಪೆಯೊ ಮೇಣ್ ಬೞಲ್ದಿರ್ದಪೆಯೋ ॥

ನಿನ್ನ ಕೆಳೆಯಂ ಸುಯೋಧನ
ನಂ ನೋಡದೆ ನುಡಿಯದಪ್ಪಿಕೊಳ್ಳದೆ ಬೆಸನೇ
ನೆನ್ನದೆ ಜೀಯೆನ್ನದೆ ದೇ
ವೆನ್ನದೆಯೇಕು ಸಿರದಿರ್ದೆಯಂಗಾಧಿಪತೀ ॥

ಅನೃತಂ ಲೋಭಂ ಭಯಮೆಂ
ಬಿನಿತುಂ ನೀನಿರ್ದ ನಾಡೊಳಿರ್ಕುಮೆ ರವಿನಂ
ದನ ನನ್ನಿ ಚಾಗಮೞ್ಕೆಂ
ಬಿನಿತರ್ಕಂ ನೀನೆ ಮೊತ್ತಮೊದಲಿಗನಾದಯ್ ॥

ಅನುಜನೆಂ ಪೃಥೆಯಜನಳ್
ದಾನವರಿಪುವಱಿವನರ್ಕನಱಿವಂ ದಿವ್ಯ
ಜ್ಞಾನಿ ಸಹದೇವನಱಿವಂ
ನೀನಾರ್ಗೆಂದಾರುಮಱಿಯರಂಗಾಧಿಪತೀ ॥

ಒಡವುಟ್ಟಿದನೆಂದಱಿದೊಡೆ
ಕುಡುಗುಂ ರಾಜ್ಯಮನೆ ಧರ್ಮತನಯಂ ನಿನಗಾಂ
ಕುಡಲಾರ್ತೆನಿಲ್ಲ ರಾಜ್ಯ
ಕ್ಕೊಡೆಯನನಱಿಯುತ್ತುಮಿರ್ದೆನಂಗಾಧಿಪತೀ ॥

ನೀನುಳ್ಳೊಡುಂಟು ರಾಜ್ಯಂ
ನೀನುಳ್ಳೊಡೆ ಪಟ್ಟಮುಂಟು ಬೆಳ್ಗೊಡೆಯುಂಟಯ್

ನೀನುಳ್ಳೊಡುಂಟು ಪೀಟಿಂಗೆ
ನೀನಿಲ್ಲದಿಲ್ಲವೆಲ್ಲವೊಳವೆ ಅಂಗಾಧಿಪತೀ ||
ನಯನದೊಳಮೆರ್ದೆಯೊಳಂ ನಿ
ನ್ನಯ ರೂಪಿರ್ದಪುದು ನಿನ್ನ ಮಾತಿರ್ದಪುದೆ
ನ್ನಯ ಕಿವಿಯೊಳಮಿನನಂದನ
ವಿಯೋಗಮೆಂತಾದುದಱಿಯೆನಂಗಾಧಿಪತೀ ||

ಶಕುಂತಲಾಬಾಯಿ, ದುಶ್ಯಾಸನನ ಪ್ರಲಾಪಕ್ಕೆ ನೀಲಾಂಬರಿ, ಕರ್ಣನ ಪ್ರಲಾಪಕ್ಕೆ ಭೈರವಿ, ಕಾನಡ ರಾಗಗಳನ್ನು ಬಳಸಿದ್ದರು. ಪದ್ಯಗಳನ್ನು ವಿಳಂಬ ಗತಿಯಲ್ಲಿ ನಡೆಸಿದರು.

ದುರ್ಯೋಧನನ ಶೋಕ ತರ್ಪಣವನ್ನು ಮುಗಿಸಿ ಶಕುಂತಲಾಬಾಯಿ ವೇದಿಕೆಯಿಂದ ಕೆಳಗಿಳಿಯಬೇಕು. ಮಾಸ್ತಿಯವರು ಶಕುಂತಲಾಬಾಯಿಯನ್ನು ತಮ್ಮ ಹತ್ತಿರ ಕರೆದು ಕೂಡಿಸಿಕೊಂಡರು. "ನನ್ನಮ್ಮ ಎಷ್ಟು ಚೆನ್ನಾಗಿ ಓದಿಬಿಟ್ಟೆ, ಶ್ರಮವಾಗಿರಬೇಕಲ್ಲ!" ಎಂದು ಉಪಚಾರದ ಮಾತಾಡಿದರು. ಪರಿಷತ್ತಿನ ಸಿಬ್ಬಂದಿಯನ್ನು ಕರೆದು ಕೂಡಲೇ ಬಿಸಿ ಹಾಲು ತರಿಸಿದರು. ಶಕುಂತಲಾಬಾಯಿ ಸಭೆಯ ಮುಂದೆ ಕುಡಿಯಬೇಕಲ್ಲ ಎಂದು ಸಂಕೋಚಪಟ್ಟುಕೊಂಡರೂ, ಉಪಚಾರದ ಮಾತು ಹೇಳಿ ಹಾಲು ಕುಡಿಸಿದರು. ಮಮತೆಯ ತಂದೆಯ ಹೃದಯ ಮಾಸ್ತಿಯವರದು.

1951ಕ್ಕೆ ಮಾಸ್ತಿಯವರಿಗೆ ಅರವತ್ತು ವರ್ಷ ತುಂಬಿತ್ತು. ಅವರ ಅಭಿಮಾನಿಗಳೆಲ್ಲ ಸೇರಿ ವಿಜೃಂಭಣೆಯಿಂದ ಮಾಸ್ತಿಯವರ ಷಷ್ಠಿಪೂರ್ತಿ ಉತ್ಸವವನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ಆಚರಿಸಿದರು. ಮಾಸ್ತಿಯವರ ಸಾಹಿತ್ಯದ ನಾನಾ ಪ್ರಕಾರಗಳನ್ನು ಕುರಿತು ವಿದ್ವತ್ಪೂರ್ಣವಾದ ಉಪನ್ಯಾಸಗಳಾದವು. ಮನರಂಜನೆ ಕಾರ್ಯಕ್ರಮದಲ್ಲಿ ಮಾಸ್ತಿಯವರ ಭಾವಗೀತೆಗಳ ಹಾಡುಗಾರಿಕೆ, "ಕಾಕನ ಕೋಟೆ" ನಾಟಕ ಹೆಸರಿಸುವಂಥವು. ಶಕುಂತಲಾಬಾಯಿ "ಬಿನ್ನಹ" ಗೀತ ಸಂಕಲನದಿಂದ "ಯಾವ ರೂಪದೊಳು" "ಸುನೀತ"ದಿಂದ "ಭಕ್ತಿ ಮೀರ" ಕಥನ ಕವನವನ್ನು ಆರಿಸಿಕೊಂಡಿದ್ದರು. "ಸಂಗಾತಿ" ಎಂಬ ಭಾವಗೀತೆಯೂ ಸೇರ್ಪಡೆಯಾಗಿತ್ತು. ಮಾಸ್ತಿಯವರ ಸಾಹಿತ್ಯವನ್ನು ಓದಿಕೊಂಡಿದ್ದವರಿಗೆ ಈ ಮೂರು ಗೀತೆಗಳು ಅಪರೂಪವೇನಲ್ಲ. ಆದರೆ ಅವುಗಳ ವಾಚನ ಸಾರ್ವಜನಿಕ ವೇದಿಕೆಯಿಂದ ಪ್ರಸಾರವಾಗಿರಲಿಲ್ಲ ಈವರೆಗೆ.

ಶಕುಂತಲಾಬಾಯಿ ಅಂದು ಹಾಡಿದ ಮಾಸ್ತಿಯವರ ಕವನಗಳಲ್ಲಿ "ಸಂಗಾತಿ" ಎಂಬ ಭಾವಗೀತೆ ಬಹು ಹೆಚ್ಚು ಮನ್ನಣೆಗೆ ಪಾತ್ರವಾಯಿತು. "ಸಂಗಾತಿ" ಮಧ್ಯಮಾವತಿ ರಾಗದಲ್ಲಿದೆ.

ನೀನೆನ್ನ ಜೊತೆಯಲೇ ಎಡಬಿಡದೆ ನಡೆದುದನು
ನಾನಿನ್ನೆವರೆಮರಿಯೆನಯ್ಯ
ನಿದ್ದೆಯಲಿ ನಡೆವಂತೆ ಮೆಯ್ಮರೆದು ನಡೆದೆನೋ
ಮೊದ್ದುತನದಲಿ ನಿನ್ನ ಅರಿಯದೋ ಮನವು

ಸದು ಮಾಡದ ನಿನ್ನ ನಯದ ನಡೆಯೋ ಮಾಯೇ
ಹೊದ್ದು ಎನ್ನನು ನಿನ್ನ ಮುರುಗಳಿಸಿತೋ
ಮುರುಭೂಮಿಯಲಿ ನಾನು ಒರುವನಾದೆನೆ ಎಂದು
ಮುರುರುರುಗಿ ಮನದಲೇ ಕರಗಿದೆನು ದೊರೆಯೆ
ಅರಿಯೆನಾ ದಾರಿಯನು ತೋರುವರು ಇಲ್ಲೆಂದೆ
ಅರಿಯೆ ನೀ ಕೈಹಿಡಿದು ನಡೆಯಿಸಿದುದ
ತಿರುಗಿ ನೋಡಲು ಮಳಲ ಮೇಲೆ ನಾ ನಡೆದಡಿಯ
ಗುರುತಿನೊಡದಿಹುದು ನಿನ್ನಡಿಯ ಗುರುತು
ಹರಿದಾರಿಗಳನು ಕಾಡಿನಲಿ ಬೇಸರಪಡದೆ
ಕರುಣಾಳು ಎನ್ನೊಡನೆ ನಡೆದೆ ನೀನು

ಶಕುಂತಲಾಬಾಯಿಯ ಭಾವಗೀತೆಗಳ ಹಾಡಿಕೆ ಕೇಳಿ ಮಾಸ್ತಿಯವರ ಮನವರಳಿತು. ತುಂಬಾ ಸಂತೋಷಪಟ್ಟುಕೊಂಡರು. "ಕವಿ ಕವನ ಕಟ್ಟಬಹುದು, ಅವುಗಳನ್ನು ಹಾಡುವವರು ಬೇಕಲ್ಲ! ಹಾಡಿದರೆ ಕೇಳುವವರು ಬೇಕಲ್ಲ! ತಾಯಿ ಶಕುಂತಲಾಬಾಯಿ ನನ್ನ ಕವನಗಳನ್ನು ಹಾಡಿ ಜನ ಕೇಳುವಂತೆ ಮಾಡಿದರು. ದೊಡ್ಡ ಕೆಲಸ"ವೆಂದು ಶ್ಲಾಘಿಸಿದರು. ಮಾಸ್ತಿಯವರು ಗುಣಗ್ರಾಹಿಯಾದ ಸಹೃದಯ ವಿಭೂತಿ.

ಕೋಲಾರದ ಕಾಲೇಜಿನಲ್ಲಿ "ಕವಿ ವಂದನೆ"

ನಮ್ಮ ಬಂಧು ಪ್ರೊ|| ಎಲ್. ಎಸ್. ಶೇಷಗಿರಿರಾಯರು ಒಂದೂವರೆ ದಶಕದಷ್ಟು ಹಿಂದೆ ಕೋಲಾರದ ಸರ್ಕಾರಿ ಕಾಲೇಜಿನಲ್ಲಿ ಇಂಗ್ಲಿಷ್ ಭಾಷಾಧ್ಯಾಪಕರಾಗಿದ್ದ ಕಾಲ. ಅವರು ವಿದ್ಯಾರ್ಥಿ ಸಂಘದ ಅಧ್ಯಕ್ಷ. ಸಂಘದ ಕಾರ್ಯಚಟುವಟಿಕೆಗಳಿಗೆ ಒಂದು ಹೊಸ ತಿರುವು ಕೊಟ್ಟರು; ಕನ್ನಡದ ಹಿರಿಯ ಸಾಹಿತಿಗಳನ್ನು ಕರೆಸಿಕೊಂಡು **ಕವಿ ವಂದನೆ** ಸಲ್ಲಿಸುವುದು. ಘನ ಗಾಂಭೀರ್ಯ ಸ್ವರೂಪದ ಕಾರ್ಯಕ್ರಮಗಳಲ್ಲಿ ಮನರಂಜನೆಯೂ ಅಷ್ಟೇ ಘನ ಗಾಂಭೀರ್ಯ ಸ್ವರೂಪದ್ದಾಗಿರಬೇಕೆಂದು ಶೇಷಗಿರಿರಾಯರ ಆಶಯ. ಚಲನ ಚಿತ್ರಗಳ ಲಘು ಸಂಗೀತ, ಫ್ಯಾನ್ಸಿಡ್ರೆಸ್ ಸ್ಪರ್ಧೆ, ಹೀಗೆ ಏನೇನೋ ಸಲಹೆಗಳು ಬಂದವು ವಿದ್ಯಾರ್ಥಿ ಸದಸ್ಯರುಗಳಿಂದ. ಕವಿ ವಂದನೆಗೆ ಸಂಬಂಧಪಟ್ಟ ಹಾಗೇ ಆ ಕವಿಯ ಕವನ ವಾಚನಗಳನ್ನು ಇಟ್ಟುಕೊಳ್ಳುವ ಸಲಹೆ ಶೇಷಗಿರಿರಾಯರದು. ವಿದ್ಯಾರ್ಥಿ ಸದಸ್ಯರು ಅರೆತೊರೆ ಮನಸ್ಸಿನಿಂದ ರಾಯರ ಪ್ರಯೋಗವನ್ನು ಒಪ್ಪಿಕೊಂಡರು. ವಿ. ಸೀ. ಅವರಿಗೆ "ಕವಿ ವಂದನೆ" ಏರ್ಪಟ್ಟಿತು ಆ ವರ್ಷ. ಶಕುಂತಲಾಬಾಯಿಗೆ ವಿ. ಸೀ. ಕವನಗಳನ್ನು ಹಾಡಬೇಕೆಂದು ಕರೆ ಬಂತು. ಶಕುಂತಲಾಬಾಯಿ ಕರೆಗೆ ಓಗೊಟ್ಟು ಕಾರ್ಯಕ್ರಮದಲ್ಲಿ ವಿ. ಸೀ. ಭಾವಗೀತೆಗಳನ್ನು ಹಾಡಿದರು. ಶೇಷಗಿರಿರಾಯರ ಪ್ರಯೋಗ ಯಶಸ್ವಿಯಾಯಿತು.

ಮೂರನೆಯ ವರ್ಷ ಮಾಸ್ತಿಯವರ ಕವಿ ವಂದನೆ ಕಾರ್ಯಕ್ರಮ. ಶೇಷಗಿರಿ ರಾಯರು ಹಿಂದಿನ ವರ್ಷ ನಡೆಸಿದ್ದ ಪ್ರಯೋಗ ಯಶಸ್ವಿಯಾಗಿದ್ದುದರಿಂದ ಈ ಸಲದ ಕವಿ ವಂದನೆ ಕಾರ್ಯಕ್ರಮದಲ್ಲಿ ಮಾಸ್ತಿಯವರ ಕವನಗಳನ್ನೇ ಓದಿಸುವುದಕ್ಕೆ ವಿದ್ಯಾರ್ಥಿ ಸದಸ್ಯರು ಸಂತೋಷದಿಂದ ಒಪ್ಪಿಗೆಯಿತ್ತರು. ಶಕುಂತಲಾಬಾಯಿಗೆ ಇನ್ನೊಮ್ಮೆ ವಿದ್ಯಾರ್ಥಿ ಸಂಘದಿಂದ ಆಹ್ವಾನ ಬಂತು. ಶಕುಂತಲಾಬಾಯಿ ಸಂತೋಷ ದಿಂದ ಒಪ್ಪಿಕೊಂಡರು.

ಕೋಲಾರದ ಕಾಲೇಜಿನ ಕಾರ್ಯಕ್ರಮಗಳು ವಿದ್ಯಾರ್ಥಿಗಳಿಗೇ ಮೀಸಲಾಗಿರ ಲಿಲ್ಲ. ನಗರದ ಪ್ರಮುಖರು, ಹಿರಿಯರು, ಮಹಿಳೆಯರು, ಸಾವಿರಾರು ಸಂಖ್ಯೆಯಲ್ಲಿ ಬರುತ್ತಿದ್ದರು. ವಿ. ಸೀ. ಕವಿ ವಂದನೆಗೆ ಹಿಂದಿನ ವರ್ಷ ಸೇರಿದ್ದಂತೆ ಈಗಲೂ ಮಾಸ್ತಿ ಕವಿ ವಂದನೆಗೆ ಅಷ್ಟೇ ಜನ ಬಂದಿದ್ದರು. ಸಾವಿರದ ಎಲ್ಲೆ ಮೀರಿತ್ತು ಜನಸ್ತೋಮ.

ಶಕುಂತಲಾಬಾಯಿ ಮಾಸ್ತಿಯವರ ಭಾವಗೀತೆಗಳಿಂದ ಯಾವ ರೂಪದೊಳು, ಮೀರ, ಅರ್ಪಣ, ಕೃಪಾರಸ, ಸಂಗಾತಿ, ಇತ್ಯಾದಿ ಭಾವಗೀತೆಗಳನ್ನು ಹಾಡಿದರು. ಸುಮಾರು ಒಂದು ಗಂಟೆಯ ಕಾರ್ಯಕ್ರಮ ಯಶಸ್ವಿಯಾಯಿತು. ಸಭೆ ತುಂಬ ಸಂತೋಷದಿಂದ ಕೇಳಿತು. ಪೂಜ್ಯ ಮಾಸ್ತಿಯವರು ಶಕುಂತಲಾಬಾಯಿಯನ್ನು ತಂದೆಯ ಒಲವಿಂದ ಮೆಚ್ಚಿಕೊಂಡರು. "ತುಂಬ ಚೆನ್ನಾಗಿ ಹಾಡಿದೆ ನನ್ನಮ್ಮ" ಎಂದರು ಹೃದಯ ತುಂಬಿ.

ಆ ರಾತ್ರಿ ಶೇಷಗಿರಿರಾಯರ ಮನೆಯಲ್ಲಿ ಭರ್ಜರಿ ಔತಣ. ಮಾಸ್ತಿಯವರು, ಸಣ್ಣಕತೆಗಾರ ಕೆ. ಗೋಪಾಲಕೃಷ್ಣ ರಾವ್, ಕೋಲಾರದ ಕೆಲವು ಗಣ್ಯರು, ನಾವು ದಂಪತಿಗಳು, ಔತಣದಲ್ಲಿ ಭಾಗಿಗಳು. ನಮ್ಮ ದೊಡ್ಡಮ್ಮ ಗಂಗಾಬಾಯಿಯ ಮಗ ಬಿ. ಎಸ್. ಮಾಧವರಾಯರ ಪುತ್ರಿ, ಶೇಷಗಿರಿರಾಯರ ಪತ್ನಿ ಶಾಂತಮ್ಮ ಮುಚ್ಚಟೆ ಯಿಂದ ಬಡಿಸೋಣ. ಶೇಷಗಿರಿರಾಯರ ಆದರದ ಉಪಚಾರ. ಅದೊಂದು ರಸ ಘಳಿಗೆ ನಮ್ಮ ಜೀವನದಲ್ಲಿ.

ಈ ವಿಷಯ ಪ್ರಸ್ತಾಪಿಸುತ್ತಿರುವಾಗ ನನ್ನ ಕಣ್ಣು ದುಃಖದಿಂದ ಹನಿಗೂಡಿದೆ. "ಕಕ್ಕ" "ಕಕ್ಕಿ" ಎಂಬ ತುಂಬು ವಾತ್ಸಲ್ಯದ ನಗುಮೊಗದಿಂದ ಸದಾ ನಮ್ಮನ್ನು ಸ್ವಾಗತಿಸುತ್ತಿದ್ದ, ಇನ್ನೂ ಸಿರಿ ಬಾಳು ಬಾಳಬೇಕಾಗಿದ್ದ ನಮ್ಮ ಶಾಂತಮ್ಮ, ತುಂಬು ಸಂಸಾರವನ್ನು ನಡುನೀರಿನಲ್ಲಿ ಬಿಟ್ಟು ಇದ್ದಕ್ಕಿದ್ದ ಹಾಗೆ ಸ್ವಾಮಿ ಪಾದ ಸೇರಿಬಿಟ್ಟಳು. ಆಕೆ ಗತಿಸಿ ಬಹು ಸಂಖ್ಯೆಯಲ್ಲಿರುವ ಬಂಧುಗಳಿಗೆ ನಿರಂತರ ಶೋಕದ ಬಳುವಳಿ ದಯ ಪಾಲಿಸಿದ್ದಾಳೆ. ನಮ್ಮ ಮಕ್ಕಳ ಮಂಟಪದಲ್ಲಿ ಯಾವ ಸಂತೋಷದ ಸಮಾರಂಭ ಸೇರುತ್ತಿದ್ದರೂ ಅಲ್ಲಿ ನಮ್ಮ ಶೇಷಗಿರಿರಾವ್, ಶಾಂತಮ್ಮ, ದಂಪತಿ ಬಹು ವಿಶ್ವಾಸದಿಂದ ಬಂದು ಭಾಗಗೊಳ್ಳುತ್ತಿದ್ದರು. ಆ ಸುಖವನ್ನು ಕಳೆದುಕೊಂಡು ಈಗ ನಾನು, ಶಕುಂತಲಾಬಾಯಿ ನಿರ್ಭಾಗ್ಯರಾಗಿದ್ದೇವೆ. ಶೇಷಗಿರಿರಾವ್ ಸ್ನೇಹ ಸೇತುವೆಯೊಂದೇ ಈಗ ನಮ್ಮ ಪಾಲಿನ ಸೌಭಾಗ್ಯ.

ಕವಿ ವಿಭೂತಿಗೆ, ಗಮಕ ಕಲೋಪಾಸಿನಿಗೆ ಸನ್ಮಾನ

ಶ್ರೀ ಮಾರುತಿ ಮಹಾಗಣಪತಿ ಸೇವಾ ಸಂಘದಲ್ಲಿ ಪ್ರಾರಂಭವಾದ ಶ್ರೀರಾಮ ಪಟ್ಟಾಭಿಷೇಕ ಕಾವ್ಯ ವಾಚನ ಸತತವಾಗಿ ಐವತ್ತೈದು ದಿವಸಗಳು ನಡೆಯಿತು. ಶ್ರೀರಾಮ ಪಟ್ಟಾಭಿಷೇಕದ ಕಥಾವಸ್ತು ಪ್ರಸ್ತಾವನೆ ಭಾಗದ 161 ಸಾಲುಗಳನ್ನು ಬಿಟ್ಟು ದೀರ್ಘವಾದ 10 ಭಾಗಗಳ 9053 ಸಾಲುಗಳಲ್ಲಿ ವಿಸ್ತರಿಸಿದೆ. ಮಂಗಳ 44 ಸಾಲುಗಳಷ್ಟಿದೆ. ಪ್ರತಿದಿನವೂ ಸಂಜೆ 7ರಿಂದ 8–30ವರೆಗೆ ಒಂದೂವರೆ ಗಂಟೆಯ ಕಾಲದ ಕಾರ್ಯಕ್ರಮ. ಶ್ರೀರಾಮ ಪಟ್ಟಾಭಿಷೇಕ ಕಾವ್ಯದಲ್ಲಿ ಬರುವ ವ್ಯಕ್ತಿಗಳು ತಮ್ಮ ಹೇಳಿಕೆಗಳನ್ನು ಬಹುತೇಕವಾಗಿ ಸಂಭಾಷಣೆಗಿಂತ ನಿರೂಪಣೆಯಲ್ಲಿ ವಿವರಿಸುತ್ತಾರೆ. ನಿರೂಪಣೆಯಲ್ಲಿ ಒಂದಲ್ಲ ಎರಡಲ್ಲ ಹಲವಾರು ಹೇಳಿಕೆಗಳಿರುತ್ತವೆ. ಅವು ಹತ್ತಾರು ಸಾಲುಗಳಲ್ಲಿ ಮುಂದುವರೆಯುತ್ತವೆ. ಶಕುಂತಲಾಬಾಯಿ ತಮ್ಮ ಅನುಕೂಲಕ್ಕಾಗಿ ಅವುಗಳನ್ನು ಹಲವು ವಿಷಯ ಕೇಂದ್ರ ಬಿಂದುಗಳನ್ನಾಗಿ ಮಾಡಿಕೊಂಡು ಕಾವ್ಯವಾಚನವನ್ನು ಸಾಗಿಸುತ್ತಿದ್ದರು. ನಾನು ಅಷ್ಟಕ್ಕೇ ಪ್ರಾಸಂಗಿಕ ನಿರೂಪಣೆ ನೀಡುತ್ತಿದ್ದೆ. ದಿನಕ್ಕೆ 200–250 ಸಾಲುಗಳಿಗಿಂತ ಹೆಚ್ಚಾಗಿ ವಾಚನ ಸಾಗುತ್ತಿರಲಿಲ್ಲ.

ಶ್ರೀರಾಮ ಪಟ್ಟಾಭಿಷೇಕದ ಕಥಾವಸ್ತು ಮೂರು ದಿವಸಗಳ ವ್ಯಾಪ್ತಿಯಲ್ಲಿ ಹರವಿಗೊಂಡಿದೆ. ಮೊದಲ ದಿವಸ ಶ್ರೀ ಸೀತಾಲಕ್ಷ್ಮಣರು ವನವಾಸದಿಂದ ಅಯೋಧ್ಯಾಗಾಮಿಗಳಾಗಿ ಬರುವ ಸುದ್ದಿಗಾಗಿ ನಿರೀಕ್ಷಣೆ; ಎರಡನೆಯ ದಿವಸ ಸೀತಾರಾಮ ಲಕ್ಷ್ಮಣರ ಆಗಮನ. ಮತ್ತು ಭರತಾದಿ ಬಂಧುಗಳ ಸಮಾಗಮ, ಮೂರನೆಯ ದಿನ ಪಟ್ಟಾಭಿಷೇಕ ಮಹೋತ್ಸವ. ನಾವು ನವಂಬರ್ 29ನೆಯ ದಿನಾಂಕದಂದು ಸೀತಾರಾಮಲಕ್ಷ್ಮಣರ ಅಯೋಧ್ಯಾಪುರಪ್ರವೇಶಾಗಮನ ಘಟ್ಟಕ್ಕೆ ಬಂದು ನಿಂತಿದ್ದೆವು. ಆ ದಿವಸ 91 ವರ್ಷದ ವಯೋವೃದ್ಧ ಜ್ಞಾನವೃದ್ಧ ಕವಿವರ್ಯ ಪೂಜ್ಯ ಮಾಸ್ತಿಯವರಿಗೆ, ಅರವತ್ತೊಂದು ವರ್ಷತುಂಬಿದ ಗಮಕ ಕಲೋಪಾಸಕಿ ಶಕುಂತಲಾಬಾಯಿಗೆ, ಒಂದು ಸನ್ಮಾನ ಸಮಾರಂಭವನ್ನು ಏರ್ಪಡಿಸಿತು ಶ್ರೀ ಮಾರುತಿ ಮಹಾಗಣಪತಿ ಸೇವಾ ಸಂಘ.

ಆ ದಿನದ ಪ್ರಾತಃಕಾಲ ಶ್ರೀರಾಮ ಪಟ್ಟಾಭಿಷೇಕ ಕಾವ್ಯವಾಚನ ಮಂಗಳದ ಒಂದು ಘಟ್ಟ ಮುಟ್ಟಿತೆಂಬ ಸಂತೋಷಕ್ಕೋ ಎನ್ನುವಂತೆ ಎಸ್. ಸುಬ್ಬರಾಯನ್, ಜಯಲಕ್ಷ್ಮಿ, ದಂಪತಿಗಳು ಸತ್ಯನಾರಾಯಣ ಮಹಾವ್ರತ ಪೂಜೆಯನ್ನು ಶ್ರೀ ಮಾರುತಿ ಮಹಾಗಣಪತಿ ಸೇವಾಸಂಘದಲ್ಲಿ ನಡೆಸಿದರು. ಶ್ರೀ ಸತ್ಯನಾರಾಯಣ ನೋಂಪಿಯ ಅರ್ಚನೆಯ ಪ್ರಯುಕ್ತ ಮಧ್ಯಾಹ್ನ ಅತಿಥಿ ಅಭ್ಯಾಗತರಿಗೆ ದಿವ್ಯ ಮೃಷ್ಟಾನ್ನ ಭೋಜನ. ಸುಬ್ಬರಾಯನ್ ದಂಪತಿಗಳ ಸರಳ ಮನಸ್ಸಿನ ಸ್ನೇಹ ಹೃದಯ ಶ್ರೀಮಂತಿಕೆ ಅತಿಥಿಗಳನ್ನು ಉಪಚರಿಸುವುದರಲ್ಲಿ ತುಂಬಿತುಳುಕುತಿದ್ದಿತು. ಸುಬ್ಬರಾಯನ್ ಹಳೇ ಮೈಸೂರಿನವರು. ಬೊಂಬಾಯಿಗೆ ಹೋಗಿ ಅಲ್ಲಿ ವಾಣಿಜ್ಯ ವ್ಯವಹಾರದಲ್ಲಿ ತೊಡಗಿ ಲಕ್ಷ್ಮೀಪುತ್ರರಾದರು. ಅಲ್ಲಿನ ಸಮಾಜ ಸೇವೆಯಲ್ಲಿ ಪಾಲ್ಗೊಂಡು ಜನಪ್ರಿಯರಾದರು. ಈಗ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತು,

ವಿದ್ಯಾವರ್ಧಕ ಸಂಘ, ಗಾಂಧೀ ಸಾಹಿತ್ಯ ಸಂಘ, ಮೊದಲಾದುವುಗಳಿಗೆ ದತ್ತಿ ನೀಡಿದ್ದಾರೆ. ಅಷ್ಟೆ ಅಲ್ಲವೆ ಗಾಂಧೀ ಸಾಹಿತ್ಯ ಸಂಘದಲ್ಲಿ ಹಿಂದೀ ಭಾಷಾ ಪಾಠ ನಡೆಸುತ್ತಿದ್ದಾರೆ ಸೇವಾ ಮನೋಭಾವದಿಂದ.

ಶ್ರೀರಾಮ ಪಟ್ಟಾಭಿಷೇಕ ಕಾವ್ಯವಾಚನ ಮಂಗಳೋತ್ಸವಕ್ಕೆ ಮಧ್ಯಾಹ್ನ ಸಂತರ್ಪಣೆಯ ಇಂಬು ಬಂದರೆ, ಸಂಜೆ ಶ್ರೀರಾಮ ಪಟ್ಟಾಭಿಷೇಕ ಕಾವ್ಯದ ರಸಋಷಿ ಮಾಸ್ತಿಯವರಿಗೆ, ಅವರ ಕಾವ್ಯವಾಚನ ಮಾಡಿದ ಗಮಕ ತಪಸ್ವಿನಿ ಶಕುಂತಲಾ ಬಾಯಿಗೆ ಸನ್ಮಾನ ಸಮಾರಂಭ. ಶ್ರೀ ಮಾರುತಿ ಮಹಾಗಣಪತಿ ಸೇವಾ ಸಂಘದ ಸಭಾಂಗಣ ತಳಿರು ತೋರಣಗಳಿಂದ ಅಲಂಕೃತವಾಗಿತ್ತು. ಮಾಸ್ತಿಯವರ ಮಹಾಭಿಮಾನಿಗಳು ಬೆಂಗಳೂರು ಹೊರಹಿನ ನಾನಾ ಕಡೆಗಳಿಂದ ಆಗಮಿಸಿದ್ದರು. ಪೂಜ್ಯ ಮಾಸ್ತಿಯವರನ್ನು ಬ್ರಾಹ್ಮಣ ವೃಂದ ಪೂರ್ಣ ಕುಂಭ ಮರ್ಯಾದೆಯೊಂದಿಗೆ ಸ್ವಾಗತಿಸಿತು.

ಶ್ರೀ ಕೃಷ್ಣಗಾನ ನಿಲಯದ ಸಂಗೀತ ವಿದುಷಿ ಉಮಾ ಶ್ಯಾಮ್‌ಭೋಜ್ ಮತ್ತು ಅವರ ಶಿಷ್ಯೆಯರ ತಂಡ ಮಾಸ್ತಿಯವರ ಕೃತಿ "ಸಂಗತಿ" ಕವನದಿಂದ ಪ್ರಾರ್ಥನೆ ಮಾಡಿದರು. ಸಂಘದ ಕಾರ್ಯದರ್ಶಿ ಕೆ. ಎನ್. ಶ್ರೀಹರಿ ಸ್ವಾಗತಿಸಿದರು. ವಿದ್ಯಾವರ್ಧಕ ಸಂಘದ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯರಾದ ಡಾ|| ಟಿ. ಎಸ್. ಕೃಷ್ಣಮೂರ್ತಿ ರಾಜಾಜಿನಗರದ ವಿದ್ಯಾವರ್ಧಕ ಸಂಘ ಮತ್ತು ಶ್ರೀ ಮಾರುತಿ ಮಹಾಗಣಪತಿ ಸಂಘಗಳ ಪರವಾಗಿ ಮಾಸ್ತಿಯವರಿಗೆ ಸನ್ಮಾನ ಪತ್ರ ಒಪ್ಪಿಸಿದರು. ಅದರಲ್ಲಿ ಮಾಸ್ತಿಯರ ಹಿರಿಮೆ ಗರಿಮೆಗಳನ್ನು ವಿಪುಲವಾಗಿ ಪ್ರಶಂಸಿಸಲಾಗಿದೆ. ಕಾವ್ಯ ಮತ್ತು ಕಾವ್ಯವಾಚನದ ವೈಶಿಷ್ಟ್ಯವನ್ನು ಕುರಿತು ಕೆಲವು ಶ್ಲಾಘ್ಯ ವಾಕ್ಯಗಳಿವೆ—

"ಆಸ್ತಿಕ ಮಹಾಶಯರೆ,

ತಾವು ಪರಮ ಆಸ್ತಿಕರು; ದೈವಭಕ್ತರು; ಸಮ್ಯಗ್ಜೀವನದಲ್ಲಿ ಅಚಲವೂ ಗಾಢವೂ ಆದ ಮಮತೆಯುಳ್ಳವರು. ಸಕಲ ಕಲ್ಯಾಣ ಗುಣಾಭಿರಾಮ ಮಂಗಳನಾಮ ಶ್ರೀರಾಮಚಂದ್ರ ಪ್ರಭುವಿನ ಪಟ್ಟಾಭಿಷೇಕವನ್ನು ಕುರಿತ ತಮ್ಮ ಕಾವ್ಯ ರತ್ನದಲ್ಲಿ ಕಾಣುವ ತಮ್ಮ ಕಾವ್ಯ ಯೋಗ ತಮ್ಮ ಆತ್ಮಸಾಧನೆಗೂ ಮಣಿಮುಕುಟವಾಗಿದೆ. ರಸ ತಪಸ್ಸಿನ ಅಖಂಡ ಫಲವಾಗಿದೆ; ಈ ಕಾವ್ಯದ ವಾಚನ ಹಾಗೂ ಪ್ರವಚನ ಇಲ್ಲಿ ಕೆಲವು ದಿನಗಳಿಂದ ಅವ್ಯಾಹತವಾಗಿ ಸಾಗಿದೆ. ತಮ್ಮ ವಿದ್ವತ್ತಿನಿಂದಲೂ, ಕಂಠ ಮಾಧುರ್ಯದಿಂದಲೂ ಕನ್ನಡ ನಾಡಿನ ಸುಪ್ರಸಿದ್ಧ ಗಮಕ ದಂಪತಿಗಳಾದ ಶ್ರೀಮತಿ ಶಕುಂತಲಾಬಾಯಿಯವರೂ ಅವರ ಪತಿ ಶ್ರೀಯುತ ಪಾಂಡುರಂಗರಾಯರವರೂ ಈ ಪಾವನ ಕಾವ್ಯ ಕುಸುಮದ ಸೌರಭವನ್ನು ಹಂಚಿದ್ದಾರೆ. ಶ್ರೀಮತಿ ಶಕುಂತಲಾಬಾಯಿಯವರಂತೂ ತಮ್ಮ

ವಿಶೇಷ ಕಂಠ ಮಾಧುರ್ಯದಿಂದ "ಹ್ಲಾದಮೂತ್ಸರ್ವಗಾತ್ರಾಣಿ ಮನಾ ರಸಿ ಹೃದಯಾಸಿಚ" ಎಂಬಂತೆ ಕಾವ್ಯವನ್ನು ವಾಚೋವಿಧೇಯವನ್ನಾಗಿ ಮಾಡಿಕೊಂಡು ಶ್ರೋತೃ ವೃಂದವನ್ನು ಆನಂದ ತುಂದಿಲವಾಗುವಂತೆ ಮಾಡಿ ಧನ್ಯೆಯಾಗಿದ್ದಾರೆ. ಅವರ ಮಧುರ ವಾಚನವನ್ನು ಕೇಳಿದಾಗ ಹೃದಯ ತಂತಿಗೆ ಭಗವಂತನ ಬೆರಳೇ ಸ್ಪರ್ಶಗೊಂಡು ಭಾವ ಮಾಧುರ್ಯ ಹೊರಹೊಮ್ಮುತ್ತಿದೆಯೋ ಎಂಬ ಆನಂದ ಶ್ರೋತೃಗಳಿಗೆ ದೊರೆತಿದೆ. ಸಾತ್ವಿಕರೂ, ಜನಪ್ರಿಯರೂ ಆದ ಈ ಗಮಕ ದಂಪತಿಗಳಿಗೆ ನಾವು ಕೃತಜ್ಞರು".

ನಮ್ಮ ನಾಡಿನ ವಾಙ್ಮಯ ತಪಸ್ವಿಗಳಲ್ಲಿ ಒಬ್ಬರಾದ ಹಿರಿಯ ಸಾಹಿತಿ ಡಾ|| ರಂ. ಶ್ರೀ. ಮುಗಳಿಯವರು ಮಾಸ್ತಿಯವರನ್ನೂ, ಶಕುಂತಲಾಬಾಯಿ ಮತ್ತು ಪಾಂಡುರಂಗ ರಾಯರ ಸಾಹಿತ್ಯ ಸಾಂಸ್ಕೃತಿಕ ಸೇವೆಯನ್ನು ಕುರಿತು ಅಭಿನಂದನ ಭಾಷಣ ಮಾಡಿದರು.

ಮಾಸ್ತಿಯವರು ಸೂಕ್ತ ರೀತಿಯಲ್ಲಿ ತಮ್ಮನ್ನು ಅಭಿನಂದಿಸಿದ ಅಭಿಮಾನಿಗಳನ್ನು ವಂದಿಸಿದರು. ತಮ್ಮ ಕಾವ್ಯಕ್ಕೆ ವಾಚನದ ಸೇವೆ ಸಲ್ಲಿಸಿದ ಶಕುಂತಲಾಬಾಯಿಯನ್ನು ಕುರಿತು—

"ಈ ಮಗು ಬಹಳ ವರ್ಷಗಳಿಂದ ನಮ್ಮ ನಾಡಿನ ಕಾವ್ಯಗಳಿಗೆ ವಾಚನ ಸೇವೆ ಸಲ್ಲಿಸುತ್ತಾ ನಾಡಿನಾದ್ಯಂತ ಪ್ರಸಿದ್ಧಿ ಪಡೆದಿದ್ದಾಳೆ. ಶಕುಂತಲಾಬಾಯಿ 61ನೆಯ ವರ್ಷಕ್ಕೆ ಮುನ್ನಡೆದಿದ್ದರೂ ಆಕೆ ನನಗೆ 16 ವರ್ಷದ ಮಗುವೇ ಆಗಿದ್ದಾಳೆ. ನನ್ನ ಕಾವ್ಯಕ್ಕೂ ಈಗ ವಾಚನ ಕೊಡುತ್ತಿರುವುದು ವಿಶಿಷ್ಟ ಸೇವೆಯಾಗಿದೆ. ಆಧುನಿಕ ಕಾವ್ಯಗಳನ್ನು ಕವಿಗಳು ರಚಿಸಬಹುದು ಆದರೆ ಅವು ಜನರಿಗೆ ಪ್ರಿಯವಾಗಿ ತಮ್ಮ ಸಾರ್ಥಕ್ಯವನ್ನು ಪಡೆಯಬೇಕಾದರೆ ಗಮಕಿಯಂತಹ ಸಹೃದಯಿಯ ಅವಶ್ಯಕತೆ ಹೆಚ್ಚಾಗಿ ಬೇಕಾಗುತ್ತದೆ. ಶ್ರೀಮತಿ ಶಕುಂತಲಾಬಾಯಿ ಪ್ರಾಚೀನ ಕಾವ್ಯಗಳನ್ನೇನೋ ತುಂಬ ಶ್ರದ್ಧೆ ಮತ್ತು ಉತ್ಸಾಹಗಳಿಂದ ಗಮಕಿಸಿ ಅವುಗಳನ್ನು ನಮ್ಮ ನಾಡಿನ ತುಂಬೆಲ್ಲ ಮನೆಮನೆಯಲ್ಲಿ ಲೋಕ ಪ್ರಿಯಗೊಳಿಸಿದ್ದಾರೆ. ನನ್ನ "ಶ್ರೀರಾಮ ಪಟ್ಟಾಭಿಷೇಕ"ದ ವಾಚನದ ಪ್ರಯೋಗವು ಜರಗುತ್ತಿರುವುದು ಇದೇ ಮೊದಲ ಬಾರಿ. ಅದನ್ನು ಸಕಲ ರಿಗೂ ಮನಮುಟ್ಟುವಂತೆ ಹೀಗೆ ಅರ್ಥವತ್ತಾಗಿ ಮತ್ತು ಸುಶ್ರಾವ್ಯವಾಗಿ ಹಾಡಿ ತೋರಿಸಿದ್ದಾರೆಯೆಂಬುದು ಈ ಒಂದೂವರೆ ತಿಂಗಳ ಕಾಲ ನಿಮ್ಮ ಅವಗಾಹನೆಗೆ ಬಂದಿದೆ. ನೀವು ಪಟ್ಟ ಸಂತೋಷದಿಂದ ನನಗೂ ಅತ್ಯಂತ ಸಂತೋಷವಾಗಿದೆ. ಇಂತಹ ಕಾರ್ಯದಲ್ಲಿ ತನ್ಮಯನಾಗಿರುವ ಈ ದಂಪತಿಗಳಿಗೆ ಆ ದಯಾಮಯನಾದ ಭಗವಂತನು ಸಕಲ ಸೌಭಾಗ್ಯ

ಗಳನ್ನು ದಯಪಾಲಿಸಿ ಅವರನ್ನು ಸದಾಕಾಲ ರಕ್ಷಿಸಲೆಂದು ನಾನು ಕೋರುತ್ತೇನೆ".

ಸಂಸ್ಥೆಯ ಅಧ್ಯಕ್ಷ ಪಿ. ಆರ್. ಮುಂಡೇವಾಡಿಯವರು ಮಾಸ್ತಿಯವರಿಗೆ, ಅವರ ಪತ್ನಿ ಪರಿಮಳಾಬಾಯಿ ಶಕುಂತಲಾಬಾಯಿಗೆ, ಶಾಲು ಹೊದಿಸಿ ಫಲಪುಷ್ಪ ತಾಂಬೂಲ ನೀಡಿ ಗೌರವಿಸಿದರು.

ಕರ್ನಾಟಕ ರಾಜ್ಯದ ನಿವೃತ್ತ ಶಿಕ್ಷಣಾಧಿಕಾರಿಯೂ, ಸಾಹಿತ್ಯ ಸಂಸ್ಕೃತಿಗಳಶ್ರೇಷ್ಠ ವಿದ್ವಾಂಸರೂ ಆದ ಕೆ. ಗುರುದತ್, ಸುಪ್ರಸಿದ್ಧ ಕಾದಂಬರಿಕಾರ 'ರಾವ್‌ಬಹದ್ದೂರ್', ಬೆಂಗಳೂರು ವಿಶ್ವವಿದ್ಯಾನಿಲಯದ ನಿವೃತ್ತ ಕನ್ನಡ ಅಧ್ಯಾಪಕ ಸಾಹಿತಿ ಎಸ್. ಆರ್. ಮಳಗಿ, ಸುಪ್ರಸಿದ್ಧ ಪ್ರಬಂಧಕಾರ ರಾ.ಕು, ಅಂಕಣ ಲೇಖಕ ಸುಪ್ರಸಿದ್ಧ ಹರಿಹರ ಪ್ರಿಯ, ಶಕುಂತಲಾಬಾಯಿಯ ಗಮಕ ಸಹಪಾಠಿ ಬಿಂದೂರಾವ್ ಶಿಷ್ಯ ಎಸ್. ನಾಗೇಶ ರಾವ್, ಗಮಕ ವಿದುಷಿ ಅನ್ನಪೂರ್ಣಮ್ಮ ರಘುಪತಿಶಾಸ್ತ್ರಿ, ಹೊರನಾಡ ಸಂಘಟನಕಾರ ಮತ್ತು ಸಾಹಿತಿ ಎಚ್. ಎಸ್. ಪಾಟೀಲ್, ಸಾಹಿತ್ಯ ಸಾಂಸ್ಕೃತಿಗಳ ಗಮಕಾಭಿಮಾನಿ ಎಸ್. ಸುಬ್ಬರಾಯನ್ ದಂಪತಿ, ಇತ್ಯಾದಿ ಸಹೃದಯ ರಸಿಕವೃಂದ ಆಗಮಿಸಿ, ಮಾಸ್ತಿ ಮತ್ತು ಶಕುಂತಲಾಬಾಯಿ ಸನ್ಮಾನ ಸಮಾರಂಭವನ್ನು ವಿದ್ವತ್ಸಭೆಯ ಕಳೆಗೇರಿಸಿದರು.

ಡಿ.ವಿ.ಜಿ. ಅವರ "ಮಾರುತಿ" ಪದ್ಯಮಾಲಿಕೆಗೂ ಷಷ್ಟ್ಯಬ್ದಿ ನಮನ.

ಮಾಸ್ತಿ ಕಾವ್ಯ ಶ್ರೀರಾಮ ಪಟ್ಟಾಭಿಷೇಕ ಕಾವ್ಯವಾಚನ ಇನ್ನೊಂದೂವರೆ ವಾರ ಮುಂದುವರಿಯಿತು. ಮಹಾ ಮಂಗಳ ಘಟ್ಟ ಮುಟ್ಟುವುದಕ್ಕೆ ಇನ್ನೆರಡು ಮೂರು ದಿವಸಗಳಿವೆಯೆನ್ನುವಾಗ 9ನೇ ದಿನಾಂಕ ಡಿಸೆಂಬರ್ ತಿಂಗಳಂದು ಹನುಮಜಯಂತಿ ಪ್ರಾಪ್ತವಾಯಿತು. ಶ್ರೀ ಮಾರುತಿ ಮಹಾ ಗಣಪತಿ ಸೇವಾಸಂಘ ಹನುಮಜಯಂತಿಯನ್ನು ಆಚರಿಸಬೇಕೆಂದು ನಿಶ್ಚಯಿಸಿತು. ಶ್ರೀಹರಿ, ಶಕುಂತಲಾಬಾಯಿಯನ್ನು ಹನುಮಜಯಂತಿಯ ಕಾರ್ಯಕ್ರಮಕ್ಕೆ ಸರಿಹೊಂದುವಂತೆ ಕಾವ್ಯ ವಾಚನ ಮಾಡಬೇಕೆಂದು ಪ್ರಾರ್ಥಿಸಿದರು. ಶಕುಂತಲಾಬಾಯಿ ಆಗಬಹುದೆಂದರು. ನಾನು, ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ ಡಿ. ಆರ್. ವೆಂಕಟರಮಣನ್, ಡಿ.ವಿ.ಜಿ ಅವರು "ಕೇತಕೀವನ" ಎಂಬ ಪದ್ಯ ಸಂಕಲನದಲ್ಲಿ ಸೇರಿಸಿದ್ದ "ಮಾರುತಿ" ಎಂಬ ಪದ್ಯಮಾಲಿಕೆಗೆ ಅರ್ಥವಿವರಣೆ ನೀಡಿ ಪ್ರಕಟಿಸಿದ್ದ "ಶ್ರೀಮಾನ್ ಡಿ.ವಿ.ಜಿ ಅವರು ಚಿತ್ರಿಸಿರುವ ಶ್ರೀಮದಾಂಜನೇಯ ಸ್ವಾಮಿ" ಎಂಬ ಪದ್ಯಮಾಲಿಕೆಯ ಕಡೆಗೆ ಕಣ್ಣಾಡಿಸಿದೆ. ಈ ಪ್ರಕಟನೆ, ಬಿ.ಬಿ.ಡಿ ಪ್ರೆಸ್ಸಿನ ಮಲ್ಯ ಸಹೋದರರು ತಮ್ಮ ತಂದೆಯವರಾದ ದಿವಂಗತ "ಯು. ನರಸಿಂಹ ಮಲ್ಯ ಸ್ಮಾರಕ ಪುಸ್ತಕ ಮಾಲೆ" ಹೆಸರಿನಲ್ಲಿ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ ವ್ಯಾಸಂಗ ಗೋಷ್ಠಿಗೆ ದತ್ತಿ ನೀಡಿರುವುದರಲ್ಲಿ ಮೂರನೆಯದು. ಜಿ.ಪಿ. ರಾಜರತ್ನಂ ಈ ಸ್ಮಾರಕ ಪುಸ್ತಕ ಮಾಲೆಯನ್ನು ತಮ್ಮ ಸಾಹಿತ್ಯ ಪರಿಚಾರಿಕೆಯಿಂದ ಪ್ರಾರಂಭಿಸಿದರು. ಡಿ.ವಿ.ಜಿ ಅವರ

"ಶ್ರೀರಾಮ ಪರೀಕ್ಷಣಂ" ಕಾವ್ಯಕ್ಕೆ ಅರ್ಥವಿವರಣೆ ನೀಡಿ "ಶ್ರೀ ರಾಮಚಂದ್ರ ಪ್ರಭೆ" ಎಂಬ ಪ್ರಕಟನೆಯನ್ನು ಪ್ರಪ್ರಥಮವಾಗಿ ಹೊರತಂದರು. ಆನಂತರ ಈ ಪುಸ್ತಕ ಸ್ಮಾರಕ ಮಾಲೆಯ ದ್ವಿತೀಯ ಪ್ರಕಟನೆಯಾಗಿ ಡಿ.ವಿ.ಜಿಯವರ "ಸ್ವತಂತ್ರಭಾರತ ಅಭಿನಂದನ ಸ್ತವ" ರಾಜರತ್ನಂ ಅವರ ಅರ್ಥವಿವರಣೆಗಳಿಂದ ಶೋಭಿಸಿ "ಶ್ರೀ ಡಿ.ವಿ.ಜಿ. ಅವರ ಭಾರತ ಭೂ ವಂದನಂ" ಎಂಬ ಹೆಸರಿನಲ್ಲಿ ಪ್ರಸಿದ್ಧವಾಯಿತು. ಮುಂದೆ, ರಾಜರತ್ನಂ ಅವರೇ ಈ ಪುಸ್ತಕ ಸ್ಮಾರಕ ಮಾಲೆಯಲ್ಲಿ ಮಾರುತಿ ಪದ್ಯ ಮಾಲಿಕೆಗೆ ಅರ್ಥವಿವರಣೆ ನೀಡಿ "ಶ್ರೀಮಾನ್ ಡಿ.ವಿ.ಜಿ. ಚಿತ್ರಿಸಿರುವ ಶ್ರೀಮದಾಂಜನೇಯಸ್ವಾಮಿ" ಪುಸ್ತಕವನ್ನು ಪ್ರಕಟಿಸಬೇಕಾಗಿತ್ತು. ಆದರೆ ಕನ್ನಡ ಸಾರಸತ್ವ ಲೋಕದ ದುರ್ದೈವ. ರಾಜರತ್ನಂ 1978ರಲ್ಲಿ ಧರ್ಮಸ್ಥಳದ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಮುಗಿಸಿಕೊಂಡು ಬಂದ ಎರಡನೆಯ ದಿವಸದಲ್ಲೇ ಭಕ್ತಸೂರಿಗಳಾಗಿ ಶ್ರೀ ವಿಷ್ಣುವಿನ ಕೌಸ್ತುಭ ಮಾಲೆಯಲ್ಲಿ ಸೇರಿಹೋದರು. ಅವರು ಮಾಡಬೇಕಾಗಿದ್ದ ಕೆಲಸವನ್ನು ಡಿ. ಆರ್. ವೆಂಕಟರಮಣನ್ ರಾಜರತ್ನಂ ಶ್ರದ್ಧೆಯಿಂದಲೇ ವಿದ್ವತ್ಪೂರ್ಣವಾಗಿ ನಿರ್ವಹಿಸಿದರು. ರಾಜರತ್ನಂ ಅವರ ಪ್ರಕಟನೆಗಳಲ್ಲೆಲ್ಲ ಶಕುಂತಲಾಬಾಯಿ ಭಾಗವಹಿಸಿ ಪ್ರಾರ್ಥನೆ ಮಾಡಿಯೋ, ಕಾವ್ಯವಾಚನ ಮಾಡಿಯೋ, ತಮ್ಮ ಗಮಕ ಪರಿಚಾರಿಕೆ ಮಾಡಿದ್ದಾರೆ. ಆದುದರಿಂದ ಈಗ "ಶ್ರೀಮಾನ್ ಡಿ. ವಿ. ಜಿ. ಅವರು ಚಿತ್ರಿಸಿರುವ ಶ್ರೀಮದಾಂಜನೇಯಸ್ವಾಮಿ" ಪದ್ಯ ಮಾಲಿಕೆ ಬಿಡುಗಡೆಯಾಗುವ ದಿನದಂದೂ ಗಮಕ ಮಾಡುವ ಯೋಗಾಯೋಗ ಶಕುಂತಲಾಬಾಯಿಗೇ ಲಭ್ಯವಾಯಿತು.

1981ರ ಆಗಸ್ಟ್ 15ನೆಯ ದಿನಾಂಕ ಸ್ವಾತಂತ್ರ್ಯ ದಿನಾಚರಣೆಯಂದು ಶ್ರೀಮಾನ್ ಡಿ. ವಿ. ಜಿ. ಅವರು ಚಿತ್ರಿಸಿರುವ "ಶ್ರೀಮದಾಂಜನೇಯಸ್ವಾಮಿ" ಪುಸ್ತಕ ಬಿಡುಗಡೆ ಸಮಾರಂಭ ನಮ್ಮ ನಾಡಿನ ಸುಪ್ರಸಿದ್ಧ ಹಿರಿಯ ಸಾಹಿತಿ ಡಾ|| ಗೊರೂರು ರಾಮಸ್ವಾಮಿ ಅಯ್ಯಂಗಾರರ ಅಧ್ಯಕ್ಷತೆಯಲ್ಲಿ ನೆರವೇರಿತು. ಗೋಖಲೆ ಸಾರ್ವಜನಿಕ ಸಂಸ್ಥೆಯ ಸಭಾಂಗಣ ಡಿ. ವಿ. ಜಿ. ಅಭಿಮಾನಿಗಳಿಂದ ತುಂಬಿ ಹೊರಾಂಗಣದ ಬಯಲಲ್ಲೂ ಶ್ರೋತೃಗಳು ನೆರದಿದ್ದರು.

ಶಕುಂತಲಾಬಾಯಿ ಶ್ರೀಮದಾಂಜನೇಯಸ್ವಾಮಿ ಪದ್ಯಮಾಲಿಕೆಯನ್ನು ಸುಮಾರು ಅರ್ಧಗಂಟೆಯ ಕಾಲ ಗಮಕ ಮಾಡಿದರು. ಶ್ರೀಮದಾಂಜನೇಯಸ್ವಾಮಿ ಪದ್ಯಮಾಲಿಕೆ ಕಂದವೃತ್ತ ಸಮ್ಮಿಶ್ರ ಹಳೆಗನ್ನಡ ಪದ್ಯಗಳಲ್ಲಿದೆ. ಹನುಮಂತನ ಜೀವನ ಸಫಲತೆಯನ್ನು "ಮಾರುತಿ ಮಹಿಮೆ"ಯೆಂಬ ಹೆಸರಿನಿಂದ ಡಿ. ವಿ. ಜಿ. ಮೊದಲು 12 ಪದ್ಯಗಳಲ್ಲಿ ರಚಿಸಿದರು. ಅದು ಮೊಟ್ಟಮೊದಲು "ಪ್ರಜಾಮತ" ವಾರ ಪತ್ರಿಕೆಯ ದೀಪಾವಳಿ ಸಂಚಿಕೆಯಲ್ಲಿ ಬೆಳಕು ಕಂಡಿತು. ಕೆಲವು ಕಾಲದ ನಂತರ ಇನ್ನೂ 8 ಪದ್ಯಗಳನ್ನು ಮೈಗೂಡಿಸಿಕೊಂಡು "ಮಾರುತಿ" ಎಂಬ ನಾಮಕರಣ ಹೊಂದಿ "ಕೇತಕೀ ವನ" ಪದ್ಯ ಸಂಕಲನದಲ್ಲಿ ಸೇರ್ಪಡೆಯಾಯಿತು. ಈಗ ನಮ್ಮ ಕೈಯಲ್ಲಿರುವುದು ಶ್ರೀಮದಾಂಜನೇಯಸ್ವಾಮಿ ಪದ್ಯಮಾಲಿಕೆ 20 ಕಂದವೃತ್ತ ಪದ್ಯಗಳಲ್ಲಿ ಅರ್ಥ ವಿವ

ರಣೆಗಳೊಡನೆ ನರಸಿಂಹ ಮಲ್ಯ ಸ್ಮಾರಕಮಾಲೆಯ ಪ್ರಕಟಣೆಯಾಗಿ. ಶಕುಂತಲಾ ಬಾಯಿ ಪುಸ್ತಕದ ಬಿಡುಗಡೆಯ ದಿನದಂದು ಗಮಕ ಮಾಡಿದ ಪದ್ಯಗಳಲ್ಲಿ ಕೆಲವನ್ನು ಮಾದರಿಗಾಗಿ ಈ ಕೆಳಗೆ ಕಾಣಿಸಿದ್ದೇನೆ—

ಶ್ರೀ ಹನುಮಂತಂ ನಿರವಧಿ–।
ಸಾಹಸರತನಂತು ಸೂನೃತಶ್ರೀಮಂತಂ ॥
ಮೋಹವಿದೂರ ಸ್ವಾಂತಂ ।
ಸ್ವಾಹಂವರ್ಜಿತ ಮಹಾತ್ಮಸೇವೈಕಾಂತಂ ॥

ಯೋಗಿಯವಂ ಸರ್ವಸ್ವ-।
ತ್ಯಾಗಿಯವಂ ಧರ್ಮಪುಣ್ಯಸತ್ಕೈಂಕರ್ಯೈಕೋ-।
ದ್ಯೋಗಿಯವಂ ಸ್ವಾತ್ಮಾರ್ಪಣ-।
ಭೋಗಿಯವಂ ವಾಯುಸೂನು ಸಾರ್ಥಕಜೀವನ್ ॥

ಮಱೆತಂ ತನ್ನನೆ ತಾನಾ ।
ಮರುತ್ಸುತಂ ರಾಮದಾಸ್ಯಸಂರಂಭಗಳೊಳ್ ।
ಪರಿದುದು ಬಾಳ್ವೆಯ ಭಾರಂ ।
ಶಿರಕಾಯ್ತುದವಂಗೆ ದೇವಪದ ವರಕುಸುಮಂ ॥

ಈಗ ನಾವು ಡಿ. ವಿ. ಜಿ. ಅವರ ಶ್ರೀಮದಾಂಜನೇಯಸ್ವಾಮಿ ಪದಮಾಲಿಕೆಯ ಬಂಧದಲ್ಲಿ ಕಂದ ಪದ್ಯಗಳ ರಚನೆಯ ಪರಿಚಯವನ್ನು ಮಾಡಿ ಕೊಂಡಾಯಿತಲ್ಲವೇ ? ಈಗ ನಾವು ಡಿ. ವಿ. ಜಿ. ಆಂಜನೇಯಸ್ವಾಮಿ ಪದ್ಯಮಾಲಿಕೆಯಲ್ಲಿ ರಚಿಸಿರುವ ವೃತ್ತ ಪದ್ಯಗಳಲ್ಲಿ ಒಂದೆರಡನ್ನು ಪರಿಚಯ ಮಾಡಿಕೊಳ್ಳೋಣ.

ದಾಸತ್ವಂ ದಾಸ್ಯಮಲ್ತಾ ರಘುವರಪದದೊಳ್ ತಾಂ ಸ್ವತಂತ್ರಾತ್ಮತೋಷಂ ।
ಪಾಶಂ ಲೋಕಸ್ಥಿಯಲ್ಲಂ ಸುಮುಸರಮುದು ಧರ್ಮಾತ್ಮ ಪೂಜಾಪ್ರಸಾದಂ ॥
ರೋಷಂ ದೋಷಾಂಕಮಲ್ಲಂ ಗುರು ಸಮುಸುಸರ ನ್ಯಾಯ ಸಂತ್ರಾಣ ಶೌರ್ಯಂ।
ಶ್ರೀ ಸೀತಾರಾಮ ಸಾನ್ನಿಧ್ಯದಿ ಭವಭರಣಂ ಮೋಕ್ಷಮೆಂದಂ ಕಪೀಂದ್ರಂ ॥

ರಾಮ ಸೀತೆಯರಂತೆ ದಂಪತಿಯೋಗಮಿರೆ ಭವ ಚಿಂತೆಯೇಂ ।
ರಾಮ ಲಕ್ಷ್ಮಣರಂತೆ ಸೋದರ ಯೋಗಮಿರೆ ವಿಧಿಭೀತಿಯೇಂ ॥
ರಾಮಭರತರ ಪೋಲ್ತು ರಾಜಕಯೋಗಮಿರೆ ಜನ ಭಾರವೇಂ ।
ರಾಮಹನುಮರ ಪೋಲ್ತು ವಿಭುಭಟಯೋಗಮಿರೆ ಜಯ ದೂರವೇಂ ॥

ಧನ್ಯ ನೀಂ ಧನ್ಯ ನೀನೋ ಪವನಜ ನಿನಗಾಯ್ತತ್ತಲಾ ರಾಮಹಸ್ತಾ-।
ಬ್ಜನ್ಯಸ್ತಾಂಗುಲ್ಯ ಸಂಸ್ಪರ್ಶನ ಸುಖಮದರಿಂದಿತ್ತ ಸೀತಾ ಕರಾಂಭೋ- ॥
ಜನ್ಯಸ್ತ ಸ್ಮಾರ ರತ್ನ ಸ್ವರುಶನಮದರಿಂ ಮತ್ತೆ ರಾಮಾಂಘ್ರಿಸಂಗಂ ।
ಅನ್ಯಂಗಾರ್ಗಾಯಿತೀ ಸುಂದರ ಸತಿಪತಿ ಸಂಧಾನ ಸೌಭಾಗ್ಯಯೋಗಂ ॥

"ಶ್ರೀಮದಾಂಜನೇಯಸ್ವಾಮಿ" ಪದ್ಯಮಾಲಿಕೆಯ ಮುಕ್ತಾಯದ ಕಂದ ಪದ್ಯ ವಿದು—

ಪ್ರಾರಂಭದ ಭಕ್ತಿರಸಂ ।
ವೀರಾದ್ಭುತ ಕರುಣ ಹಾಸ್ಯ ಸತ್ಪ್ರಿಯ ದೌತ್ಯಾ ॥

ಕಾರದೆ ರಸನದಿಯಾಯ್ತುದು ।
ಮಾರುತಿಕಾವ್ಯದಲಿ ಶಾಂತಿರಸ ಜಲಧಿಗತಂ ॥

ಶಕುಂತಲಾಬಾಯಿ 1957ರಲ್ಲಿ ಗಮಕಪಾಠಮಾಡಲು ಕನ್ನಡ ಸಾಹಿತ್ಯ ಪರಿಷತ್ತನ್ನು ಪ್ರವೇಶಿಸಿದಾಗ ನಮ್ಮ ಮೇಲೆ ಪ್ರಾರಂಭವಾದ ಡಿ. ವಿ. ಜಿ. ಅವರ ಪಿತೃವಾತ್ಸಲ್ಯ, ಅವರು ಬದುಕಿರುವವರೆಗೂ ಅಚ್ಚಳಿಯದೆ ಸ್ಥಿರವಾಗಿತ್ತು. ಶಕುಂತಲಾಬಾಯಿಯ ಗಮಕವನ್ನು ಕೇಳುವುದರಲ್ಲಿ ಅವರಿಗಿದ್ದ ಆಸಕ್ತಿ ಅನುಪಮ ಅದನ್ನು ಅವರು ತಾವು ರಚಿಸಿರುವ "ಜ್ಞಾಪಕ ಚಿತ್ರಶಾಲೆ-ಕಲೋಪಾಸಕರು" ಎಂಬ ಮಾಲೆಯಲ್ಲಿ ಭಾರತವಾಚನ ಪ್ರವೀಣ ಬಿಂದೂರಾಯರ ವ್ಯಕ್ತಿ ಚಿತ್ರವನ್ನು ಚಿತ್ರಿಸುವಾಗ ಶಕುಂತಲಾಬಾಯಿಯನ್ನು ಕುರಿತು ಪ್ರಶಂಸೆಯವಾಗಿ ಹೀಗೆ ಹೇಳಿದ್ದಾರೆ-

"ಬಿಂದೂರಾಯರಿಗೆ ಒಳ್ಳೊಳ್ಳೆಯ ಶಿಷ್ಯ ಶಿಷ್ಯೆಯರು ದೊರೆತದ್ದೂ ಒಂದು ಭಾಗ್ಯ. ಅವರಲ್ಲಿ ಮೊಟ್ಟಮೊದಲನೆಯ ಸಾರಿ ಶಿಷ್ಯೆಯಾಗಿದ್ದವರಲ್ಲಿ ಶ್ರೀಮತಿ ಶಕುಂತಲಾಬಾಯಿಪಾಂಡುರಂಗರಾವ್ ಅವರು ಈಗಲೂ ತಮ್ಮ ಕಾವ್ಯವಾಚನದಿಂದ ಸಭಿಕರನ್ನು ಸಂತೋಷಪಡಿಸುತ್ತಿದ್ದಾರೆ."

ಡಿ. ವಿ. ಜಿ. ಅವರಿಗೆ ಶಕುಂತಲಾಬಾಯಿ ಕನ್ನಡದಲ್ಲಿ ಗಮಕ ಮಾಡಿದರೆ ಸಾಲದು ; ಸಂಸ್ಕೃತದಲ್ಲೂ ಗಮಕಮಾಡಬೇಕೆಂದು ಅಪೇಕ್ಷೆ. ಅದನ್ನು ವ್ಯಕ್ತಪಡಿಸಲೂ ಅವರು ಹಿಂಜರಿಯಲಿಲ್ಲ. ಡಿ. ವಿ. ಜಿ. ಮಲ್ಲೇಶ್ವರದಲ್ಲಿರುವ ಸಿದ್ಧವನಹಳ್ಳಿ ಕೃಷ್ಣಶರ್ಮರ ಗಾಂಧೀ ಸಾಹಿತ್ಯ ಸಂಘದ ಒಂದು ಕಾರ್ಯಕ್ರಮಕ್ಕೆ ದಯಮಾಡಿಸಿದರು. ಶಕುಂತಲಾಬಾಯಿ ಆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಆ ಸಮಯದಲ್ಲಿ ಡಿ. ವಿ. ಜಿ. "ಶಕುಂತಲಾಬಾಯಿ ಈಗಾಗಲೆ ಸಾಕಷ್ಟು ಕಾವ್ಯವಾಚನಗಳನ್ನು ಕನ್ನಡದಲ್ಲಿ ಮಾಡಿದ್ದಾರೆ. ಅದು ಸಾಲದು. ಅವರು ಸಂಸ್ಕೃತ ಕಾವ್ಯಗಳಿಗೂ ಗಮನ ಕೊಟ್ಟು ಗಮಕ ಸೇವೆ ಮಾಡಬೇಕೆಂದು ನನ್ನ ಅಪೇಕ್ಷೆ. ವಾಲ್ಮೀಕಿ ರಾಮಾಯಣವನ್ನು ಅಭ್ಯಾಸ ಮಾಡಬೇಕೆಂದು ನನ್ನ ವಿನಂತಿ" ಎಂದರು. ಈ ಸಂದರ್ಭದಲ್ಲಿ ಶಕುಂತಲಾಬಾಯಿ ಗಾಂಧೀನಗರ ಹೈಸ್ಕೂಲಿನಲ್ಲಿ ಒಂದು ಕಾರ್ಯಕ್ರಮದಲ್ಲಿ ಕಾಳಿದಾಸ ಮಹಾಕವಿಯ "ಕುಮಾರ ಸಂಭವ" ಕಾವ್ಯದಿಂದ ಸಂಸ್ಕೃತದಲ್ಲಿ ಕಾವ್ಯವಾಚನ ಮಾಡಿದುದು ನನ್ನ ನೆನಪಿಗೆ ಬರುತ್ತದೆ. ನಮ್ಮ ರಾಜ್ಯದ ಶಿಕ್ಷಣ ಇಲಾಖೆಯ ನಿರ್ದೇಶಕರಾಗಿದ್ದ ಎನ್. ಸಿ. ಹಿರಣ್ಣಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಸಂಸ್ಕೃತ ಕನ್ನಡ ಉಭಯ ಭಾಷಾ ವಿದ್ವಾಂಸ ಎಂ. ವಿ. ಚಕ್ರವರ್ತಿ ಶಕುಂತಲಾಬಾಯಿಗೆ ಪಾಠ ಹೇಳಿದ್ದರು.

ನಾನು, ಗಮಕ ಕಲೆಗೆ ಆಜೀವ ಪರ್ಯಂತ ಅನರ್ಘ್ಯ ಸೇವೆ ಸಲ್ಲಿಸಿದ "ಭಾರತ ವಾಚನ ಪ್ರವೀಣ" ಬಿಂದೂರಾಯರು, ಭಾರತದ ಕೃಷ್ಣಗಿರಿ ಕೃಷ್ಣರಾಯರು ಮತ್ತು ಶ್ಲೋಕ ಸಂಗೀತ ಕಲೆ ಸಂಪತ್ಕುಮಾರಾಚಾರ್ಯರು, ಈ ಮೂವರು ಗಮಕ ವಿದ್ವನ್ಮಣಿಗಳ ವ್ಯಕ್ತಿ ಚಿತ್ರಣವನ್ನು "ಗಮಕ ಭಗೀರಥರು" ಎಂಬ ಕೃತಿಯಲ್ಲಿ ಅಭಿವ್ಯಕ್ತಪಡಿಸಿದೆ. ನನ್ನ ಕೃತಿಯನ್ನು ಗಮಕಕಲೋದ್ಧಾರಕರಾದ ಡಿ. ವಿ. ಜಿ. ಅವರಿಗೆ

ಅರ್ಪಿಸಲು ಸಂಕಲ್ಪಿಪಿಸಿದೆ. ಪೂಜ್ಯರು ನನ್ನ ಅಭೀಷ್ಟವನ್ನು ತುಂಬಡೊಲವಿನಿಂದ ಒಪ್ಪಿಕೊಂಡರು. "ಗಮಕ ಭಗೀರಥರು" ಡಿ. ವಿ. ಜಿ. ಅವರಿಗೆ ಅರ್ಪಿತವಾಯಿತು ; ನನ್ನ ಸುಕೃತ. 1972ನೇ ಫೆಬ್ರುವರಿ 19ನೆಯ ದಿನಾಂಕ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಜಿ. ನಾರಾಯಣ ಅವರ ಗಮಕಕಲಾಭಿಮಾನದ ದ್ಯೋತಕವಾಗಿ 'ಗಮಕಕಲಾ ನಿಧಿ' ಜೋಳದ ರಾಶಿ ದೊಡ್ಡನ ಗೌಡರ ಅಧ್ಯಕ್ಷತೆಯಲ್ಲಿ ಅಖಿಲ ಕರ್ಣಾಟಕ ಪ್ರಥಮ ಗಮಕ ಸಮ್ಮೇಳನ ನಡೆಯಿತು. ಡಿ. ವಿ. ಜಿ. ಯವರೇ ಸಮ್ಮೇಳನದ ಉದ್ಘಾಟಕರು. ಅವರೇ ನನ್ನ "ಗಮಕ ಭಗೀರಥರು" ಕೃತಿಯನ್ನು ತಮ್ಮ ದಿವ್ಯ ಹಸ್ತದಿಂದ ಬಿಡುಗಡೆ ಮಾಡಿದರು. ನಾನು ವೇದಿಕೆಯ ಮೇಲೆ ಮಂಡಿಸಿರಲಿಲ್ಲ. ಅವರ ಸೂಕ್ಷ್ಮಮತಿ ಇದನ್ನು ಗಮನಿಸಿತು. ನನ್ನನ್ನು ವೇದಿಕೆಯ ಮೇಲೆ ಕರೆದರು. ಬಿಡುಗಡೆ ಮಾಡಿದ ನನ್ನದೇ ಕೃತಿಯನ್ನು ನನಗೇ ಕೊಟ್ಟರು. ಅದೇ ಸಂದರ್ಭ. "ಗಮಕ–ಗಮಕಿ" ಎಂಬ ಕಿರು ಹೊತ್ತಿಗೆಯೂ ಅವರಿಂದ ಬಿಡುಗಡೆಯಾಯಿತು. ಆ ಕೃತಿಯ ರಕ್ಷಾಪತ್ರದ ಮೇಲೆ "ಶ್ರೀಮತಿ ಶಕುಂತಲಾಬಾಯಿ ಶ್ರೀಮಾನ್ ಪಾಂಡುರಂಗರಾವ್ ಇವರಿಗೆ ಭಗವಂತನು ಸಮಸ್ತ ಸನ್ಮಂಗಳಗಳನ್ನು ಅನುಗ್ರಹಿಸಲಿ–ಡಿ. ವಿ. ಜಿ. 19–2–1972" ಎಂದು ಸ್ವಹಸ್ತ ದಿಂದ ಲಿಖಿಸಿ, ಶಕುಂತಲಾಬಾಯಿಯನ್ನು ಕರೆದು ಆಕೆಗೆ ದಯಪಾಲಿಸಿದರು.

ನಾನು ಪೂಜ್ಯ ಬಿಂದೂರಾಯರ ಜೊತೆಯಲ್ಲಿ ಡಿ. ವಿ. ಜಿ. ಅವರನ್ನು ಅವರ ಮನೆಯಲ್ಲಿ ಎಷ್ಟೋ ಸಲ ಸಂದರ್ಶಿಸಿದ್ದೇನೆ. 'ಗಮಕ ಕಲಾನಿಧಿ' ಜೋಳದ ರಾಶಿ ದೊಡ್ಡನ ಗೌಡರ ಜೊತೆಯಲ್ಲೂ ಡಿ. ವಿ. ಜಿ. ಅವರನ್ನು ಸಂದರ್ಶಿಸುವ ಯೋಗ ವಿತ್ತು. ಆ ಸಮಯಗಳಲ್ಲಿ ಡಿ. ವಿ. ಜಿ. ಎಸಗುತ್ತಿದ್ದ ಸಂಭಾಷಣೆಯ ಪ್ರತಿಯೊಂದು ಮಾತೂ ಅಣಿಮುತ್ತಾಗಿತ್ತು. ವಿದ್ವತ್ಪ್ರತಿಭೆ, ಲೋಕಾನುಭವ, ಸರಸ ಸರಳ ನವಿರು ತಿಳಿಹಾಸ್ಯ ಎಲ್ಲಕ್ಕಿಂತ ಮಿಗಿಲಾಗಿ ತುಂಬು ಹೃದಯದ ಪ್ರೀತಿ ವಾತ್ಸಲ್ಯ ಮಿಂಚು ತ್ತಿತ್ತು. ನನ್ನ ಜೀವನದಲ್ಲಿ ಡಿ. ವಿ. ಜಿ. ಸಂದರ್ಶನ ಚಿರಂತನ ರಸ ನಿಮಿಷಗಳು, ಇಂಥ ಶ್ರೇಷ್ಠಮಾನವ ಡಿ. ವಿ. ಜಿ. ಅವರ ಅಮೂಲ್ಯಕೃತಿ ಮಾರುತಿ ಪದ್ಯ ಮಾಲಿಕೆ ಯನ್ನು ಶಕುಂತಲಾಬಾಯಿ ತಮ್ಮ ಷಷ್ಟ್ಯಬ್ದಿ ವರ್ಷದಲ್ಲಿ ಶ್ರೀರಾಮ ಪಟ್ಟಾಭಿಷೇಕ ಕಾವ್ಯವಾಚನನೊಡನೆ ವಾಚನ ಮಾಡುವ ಸದವಕಾಶ ಶ್ರೀ ಮಾರುತಿ ಮಹಾಗಣಪತಿ ಸಾನಿಧ್ಯದಲ್ಲಿ ಲಭಿಸಿದುದು ಆಕೆಯ ಗಮಕ ಜೀವನದ ನಿಷ್ಠೆ ತಪಸ್ಸಿನ ಫಲವೆಂದೇ ಹೇಳಬೇಕು.

ಶ್ರೀ ರಾಮ ಪಟ್ಟಾಭಿಷೇಕಕ್ಕೆ ಮಹಾ ಮಂಗಳ

ಅವ್ಯವಚ್ಛಿನ್ನವಾಗಿ 55 ದಿವಸಗಳು ನಡೆದ ಶ್ರೀರಾಮ ಪಟ್ಟಾಭಿಷೇಕ ಕಾವ್ಯ ವಾಚನದ ಮಹಾಮಂಗಳ ದಿನ ಪ್ರಾಪ್ತವಾಯಿತು. ಡಿಸೆಂಬರ್ 13ನೆ ದಿನಾಂಕದ ಸಂಜೆ ಇನ್ನೊಮ್ಮೆ ಶ್ರೀ ಮಾರುತಿ ಮಹಾಗಪಣತಿ ಪುಣ್ಯ ಧಾಮ ತಳಿರು ತೋರಣಗಳಿಂದ, ಅಲಂಕೃತವಾಗಿ "ಇದು ಶುಭೌಘದ ಗರುಡಿ, ಬಹು ಸಂಪದದ ನೆಲೆಮನೆ, ಸೊಂಪಿನಾಗರರ

ಪರಮಾನಂದ ಪ್ರವಾಹದ ಜನ್ಮಭೂಮಿ"ಯೆಂಬಂತೆ ಶೋಭಿಸಿತು. ರಾವ್‌ಬಹದ್ದೂರ್, ಹರಿಹರಪ್ರಿಯ, ಎಸ್. ನಾಗೇಶರಾವ್, ವಾಸುದೇವರಾವ್, ದಿಬ್ಬೂರು ಶ್ರೀನಿವಾಸ ರಾವ್, ಎಚ್. ಎಸ್. ಪಾಟೀಲ್ ಮೊದಲಾದ ಸಾಹಿತಿ ಗಮಕಿಗಳೊಡನೆ ಶ್ರೋತೃ ವೃಂದ ತುಂಬಿತ್ತು. ನಮ್ಮಲ್ಲಿ ಸದಾ ಸಹೋದರ ವಾತ್ಸಲ್ಯವಿಟ್ಟಿರುವ ಡಾ|| ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅಧ್ಯಕ್ಷತೆ ವಹಿಸಿದ್ದರು. ಅವರ ಸೌಭಾಗ್ಯವತಿ ಶೇಷಮ್ಮ ಮಾಮಿ ದಯಮಾಡಿಸಿದ್ದು ನಮ್ಮ ಭಾಗ್ಯ. ಶ್ರೀ ಮಾರುತಿ ಮಹಾಗಣಪತಿ ಸೇವಾ ಸಂಘದ ಶ್ರದ್ಧಾಳುಗಳಾದ ವಿದ್ಯಾವರ್ಧಕ ಸಂಘದ ಹಿರಿಯ ಕನ್ನಡ ಪ್ರಾಥಮಿಕ ಶಾಲೆಯ ಪ್ರಾಧ್ಯಾಪಕಿ ಪಿ. ಕೆ. ಸುಬ್ಬಲಕ್ಷ್ಮಿ, ಸಹ ಪ್ರಾಧ್ಯಾಪಕ ಸಗರ ರಾಮಾಚಾರ್ಯ, ರಮಾನಂದ, ಮುರಳೀಧರ, ಶ್ರೀ ಕೃಷ್ಣಗಾನ ನಿಲಯದ ಸಂಗೀತ ವಿದುಷಿ ಉಮಾ ಶ್ಯಾಮ್‌ಭೋಜ್ ಮೊದಲಾದವರ ಲವಲವಿಕೆಯ ಕಾರ್ಯಶ್ರದ್ಧೆ ಎದ್ದು ಕಾಣುತ್ತಿತ್ತು.

ಉಮಾ ಶ್ಯಾಮ್‌ಭೋಜ್ ಮತ್ತು ಆಕೆಯ ಶಿಷ್ಯೆಯರು ಕೋಕಿಲ ಕಂಠದಿಂದ ಒಕ್ಕೊರಲಿನಲ್ಲಿ ಪ್ರಾರ್ಥನೆ ಮಾಡಿದರು. ಸಂಘದ ನೇತಾರರಾದ ಕೆ. ಎನ್. ಶ್ರೀಹರಿ ಅವರದೇ ವಿಶಿಷ್ಟ ರೀತಿಯಲ್ಲಿ ಅತಿಥಿ ಅಭ್ಯಾಗತರನ್ನು ಸ್ವಾಗತಿಸಿದರು. ಆನಂತರ **ವೈವಸ್ವತಾನ್ವಯದ ಮನು ಮಹಾರಾಜರಲಿ ಮೊದಲಾದ ಕೋಸಲ ರಾಜ ವಂಶದಿ ಆಳಿದ ಇಕ್ಷ್ವಾಕು ನೃಪನಿಂದ ಪ್ರಾರಂಭಿಸಿ ಶ್ರೀರಾಮಚಂದ್ರ ಪ್ರಭುವಿನವರೆಗೆ** ಆಳಿದ ಪ್ರಭುವರೇಣ್ಯರುಗಳನ್ನು ಸ್ಮರಿಸಿ ಕುಲ ಪುರೋಹಿತರೂ ರಾಜಗುರುವೂ ಆದ ವಸಿಷ್ಠರು ಶ್ರೀ ರಾಮಚಂದ್ರ ಪ್ರಭುವಿನ ಒಡ್ಡೋಲಗದಲ್ಲಿ ಗೈದ ಉಪದೇಶದಿಂದ ಪ್ರಾರಂಭವಾಯಿತು ಕಾವ್ಯವಾಚನ.

"ಅಭಿಷಿಕ್ತರಾದ ದಿನ
ಅಂತೆ ವರ್ಷಕ್ಕೆ ಒಮ್ಮೆ ಉತ್ಸವದ ಅದೆ ದಿನ,
ನೃಪ ಪದವ ಪಡೆದವರು ರಾಜ ಧರ್ಮವ ಕುರಿತು
ತಮ್ಮ ಪೂರ್ವಿಕರು ನಡೆಸುತ ಬೆಳೆದು ತಂದಿರುವ
ಸಂಪ್ರದಾಯದ ಸೂತ್ರಗಳನು ಅನ್ವಯದ ಹಿರಿ
ಗುರುವಿಂದ ಕೇಳಿ ನೆನೆಯುವುದು ಈ ಮನೆತನದ
ಒಂದು ಪದ್ಧತಿ. ಅದನು ಶ್ರೀರಾಮಚಂದ್ರ ಪ್ರಭು
ನಡೆಸ ಬಯಸಿಹರು. ಇದು ಮನೆತನದ ಗುರು ಆದ
ನನಗೆ ಬಹು ಸಂತೋಷ. ಪ್ರಭುಗಳಪ್ಪಣೆಯಂತೆ
ಸಂಪ್ರದಾಯ ಸೂತ್ರಗಳನೀಗ ಸನ್ನಿಧಿಗೆ
ಬಿನ್ನವಿಸುವೆನು.

ಎಂದು ವಸಿಷ್ಠ ಗುರು ಪ್ರಾರಂಭಿಸಿದರು ರಾಜ ಧರ್ಮದ ಪ್ರವಚನವನ್ನು. ಅವರು ತಮ್ಮ ಪ್ರವಚನದಲ್ಲಿ ಪ್ರಜೆಗಳನ್ನು ಆಳುವ ರಾಜಾರ್ಹತೆ ಎಂತಿರಬೇಕು ಎಂಬು ದನ್ನು ಕುರಿತು ಹೇಳುವ ಉಪದೇಶದ ಮಾತುಗಳಿವು—

ಒಳ್ಳೆಯ ಪ್ರಭು ಎಂಬ ಕೀರ್ತಿಯನು ಬಯಸುವವನು
ಕಾಮವನು ಮನ್ಯುವನು ಜಯಿಸಿ, ಲೋಭವ ತೊರೆದು,

ಮೋಹ ಮತ್ಸರಗಳಿಗೆ ಎಡೆಗೊಡದೆ ಮುದವುಳಿದು,
ಸತ್ಯವನು ಧರ್ಮವನು ನಿಷ್ಠೆಯಲಿ ಪಾಲಿಸುತ
ವಶಿಯಾಗಿ ಪ್ರಜೆಗಳಿಗೆ ಆದರ್ಶವಪ್ಪಂದ
ದಿನದ ಬಾಳನು ನಡೆಸಬೇಕು. ಇಂತೆ ಅವನು
ರಾಜನಾಗಿರಲರ್ಹನಾಗುವನು . . . .

ಹೀಗೆ ಸದ್ಗುಣಗಳ ಖನಿಯಾದ ಪ್ರಜಾವಾತ್ಸಲ್ಯ ಪ್ರಭುವಿಗೆ ಮಂತ್ರಾಲೋಚನೆಯಲ್ಲಿ ಸಹಕರಿಸುವ ಮಂತ್ರಿ ಜನ ಹೇಗಿರಬೇಕು ? ವಸಿಷ್ಠ ಗುರು ಅವರ ಬಗೆಗೆ ತಮ್ಮ ಪ್ರವಚನದಲ್ಲಿ ನುಡಿದಿರುವ ನುಡಿಗಳಿವು—

". . . . . . . ಆ ಕಾರ್ಯದಲಿ ತನಗೆ
ನೆರವಾಗಲವನು ಪ್ರಜೆಗಳಿ ಬಲ್ಲವರೆಂಬ
ಹಿರಿಯರನು ಸಚಿವರಾಗಿರಲು ನೇಮಿಸಬೇಕು.
ಪ್ರಭು ಭಕ್ತಿ, ಸತ್ಯ ಸಂಧತೆ, ಪೂರ್ಣ ನಿಸ್ವಾರ್ಥ,
ಧರ್ಮೈಕ ಪಕ್ಷಪಾತಗಳು ಸಚಿವರ ನಾಲ್ಕು
ಮುಖ್ಯ ಲಕ್ಷಣ. ತನ್ನ ಸೌಖ್ಯ, ಪ್ರಯೋಜನ,
ಪ್ರಾಮುಖ್ಯ ಲಾಭ ಪ್ರತಿಷ್ಠೆ ಶಾಂತಿಗೆ ಎಂದು
ಇವರು ಕರ್ತವ್ಯ ಲೇಶದಿ ಲೋಪಕೆಡೆಗೊಡರು.
ತಪ್ಪಗೆಯ್ದಿರುವವನು ತಮ್ಮ ಮಗನಾಗಿರಲಿ
ತಪ್ಪಿಗೊಪ್ಪುವ ಶಿಕ್ಷೆಯನು ಅವನಿಗೀಯುವರು.
ತಪ್ಪ ಮಾಡದೆ ತಪ್ಪ ದೂರ ಹೊತ್ತವನೊಬ್ಬ
ತಮ್ಮ ಹಗೆಯೇ ತಮ್ಮ ಎದುರಿನಲಿ ನಿಂತನೆನೆ,
ಇವನು ತಪ್ಪಿದನಿಲ್ಲ ಎಂದವನ ಲೇಶವೂ
ಕಷ್ಟಪಡಿಸದೆ ಬಿಟ್ಟು ಕಳುಹುವರು. ಧರ್ಮಜ್ಞ
ಸತ್ಯಪರ ಅರ್ಥ ವಿಮುಖ ಅಮಾತ್ಯರಿಂಥವರು
ತಮ್ಮ ದೊರೆಯಾಳ್ವಿಕೆಯ ಕೀರ್ತಿಯನು ಬೆಳೆಸುವರು.
ಪ್ರಭು ಕಾರ್ಯದಲಿ ಮಂತ್ರವೇ ಕ್ಷೇಮ ಸಾಧನ.

ವಸಿಷ್ಠ ಗುರು ಪ್ರಭು ಸಚಿವ ಬಾಂಧವ್ಯವನ್ನು ಕುರಿತು ಪ್ರವಚನ ನಡೆಸಿ ರಾಜ್ಯದಲ್ಲಿ ಪ್ರಜೆಗಳು ಸತ್ಪ್ರಜೆಗಳಾಗಿ ಬಾಳಬೇಕಾದರೆ ರಾಜ್ಯಭಾರದ ಹೊಣೆ ಹೊತ್ತವರ ನಿಷ್ಠೆಯುತ ಕರ್ತವ್ಯಗಳೇನು ? ಎಂಬ ಬಗೆಗೆ ಕೊಡುವ ತಿಳುವಳಿಕೆಯ ಅಣಿಮುತ್ತುಗಳಿವು.

. . . . ರಾಷ್ಟ್ರದಿ ದೈವ
ಧರ್ಮಗಳ ಭಾವ ಜನರಲಿ ಹರಡಿ ಸುಳಿವಂತೆ
ನಗರದಲಿ ಕೇರಿಕೇರಿಗೆ, ಅಂತೆ ವಿಷಯದ
ಊರು ಊರಿಗೆ, ಎಲ್ಲ ಕಡೆ ಬಲ್ಲ ಜನರು ಹಿತ
ಯುಕ್ತ ಕಾಲದಲಿ ಪಾಠ ಪ್ರಸಂಗಗಳಿಂದ
ಜನತೆಯಲಿ ತಿಳಿವ ಹರಡಲು ಏರ್ಪಡಿಸಬೇಕು.
ರಾಷ್ಟ್ರದಲಿ ವಿಪ್ರಜನ ಈ ಸೇವೆಯನು ಸಲಿಸೆ
ಇಂಥ ಜನರಿಗೆ ಅನ್ನ ವಸ್ತ್ರ ವಸತಿಯ ನೀಡಿ

ಕಾಪಾಡಬೇಕು. ಕಥೆ ನಾಟಕ ವಿನೋದಗಳ
ಆಟಗಾರರನು, ಗಾಯನಕಾರರನು, ಅಂತೆ
ಯಕ್ಷಿಣಿ ಚಮತ್ಕಾರ ಗ್ರಾಮಗಾಯಕ ವೃಂದ
ಇಂಥ ಜನರಿಗೆ ಜೀವನವನು ಒದಗಿಸಬೇಕು.

ಈ ವಿಷಯದಲ್ಲಿ ವಸಿಷ್ಠ ಗುರುವಿನ ಉಪದೇಶವನ್ನು ಕುರಿತು ನಾನು ಪ್ರಾಸಂಗಿಕ ನಿರೂಪಣೆ ನೀಡಿದಾಗ, ನಮ್ಮ ರಾಜ್ಯದ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ನವರು, ರಾಜ್ಯದಲ್ಲಿ ನಮ್ಮ ಜನ ಪ್ರಾಮಾಣಿಕವಾಗಿ, ಧರ್ಮನಿಷ್ಠರಾಗಿ, ಸುಸಂಸ್ಕೃತ ರಾಗಿ ಬದುಕಬೇಕೆಂಬ ದೃಷ್ಟಿಯಿಂದ, ಸಾಹಿತ್ಯ ಸಂಸ್ಕೃತಿ ಇಲಾಖೆಯನ್ನು ಪ್ರಾರಂಭಿಸಿದ ಪ್ರಸಂಗವನ್ನು ಶ್ರೋತೃಗಳ ಗಮನಕ್ಕೆ ತರುವುದನ್ನು ಹಿಂಜರಿಯಲಿಲ್ಲ. ಆಗ ಸಾಹಿತ್ಯ ಸಂಸ್ಕೃತಿಗಳ ರಾಯಭಾರಿಗಳಾಗಿ, ಸಾಹಿತಿಗಳು, ಗಮಕಿಗಳು, ಹರಿಕಥಾ ದಾಸರು, ಜಾನ ಪದ ಕಲಾವಿದರು, ಮೈಸೂರು ರಾಜ್ಯದ ಮಹಾ ಪಟ್ಟಣಗಳಿಂದ ಹಿಡಿದು ಮೂಲೆ ಗುಂಪಾಗಿರುವ ಕುಗ್ರಾಮಗಳವರೆಗೆ ಹೋಗಿ, ನಮ್ಮ ಸಾಹಿತ್ಯ ಸಂಸ್ಕೃತಿ ಪ್ರಚಾರವನ್ನು ಕೈಗೊಂಡ ಬಗೆಯನ್ನು, ಅದರಿಂದ ಆದ ಪ್ರಯೋಜನಗಳನ್ನು ಒತ್ತುಕೊಟ್ಟು ಪ್ರಸ್ತಾ ಪಿಸುವುದನ್ನು ಮರೆಯಲಿಲ್ಲ.

ವಸಿಷ್ಠ ಗುರು ತಮ್ಮ ಪ್ರವಚನದಲ್ಲಿ ರಾಜಾದಾಯ, ತೆರಿಗೆ ಸುಂಕ ವಸೂಲಿ ಹಾಗೂ ಅದರ ವಿತರಣೆಯನ್ನು ಕುರಿತು ನುಡಿದಿರುವ ಮುಕ್ತಾಫಲ ಇಂತಿದೆ—

"ಜನದುಡಿದು ಭಾಗ್ಯವನು ಬೆಳೆಸುವಂತೆಸಗುವುದು
ದೊರೆಯಾದವನ ಮುಖ್ಯ ಕರ್ತವ್ಯ. ವರ್ಣಗಳು
ತಮ್ಮದೆನ್ನುವ ಕಾರ್ಯದಲಿ ತೊಡಗುವುದು ಭಾಗ್ಯ
ಬೆಳೆವುದಕೆ ಮುಖ್ಯ ಸಾಧನ. ತಮ್ಮ ವೃತ್ತಿಯಲಿ
ಜನತೆ ಗಳಿಸುವ ಅರ್ಥದತ್ಯಧಿಕ ಭಾಗವನು
ಜನದ ಕೈಯಲಿ ಬಿಟ್ಟು ದೊರೆ ತನ್ನ ಬೊಕ್ಕಸಕೆ
ಉಳಿದ ಅತ್ಯಲ್ಪ ಭಾಗವ ತರಿಸಿಕೊಳಬೇಕು.
ಇದ ಗೈವುದರಲಿ ಮಧುವನು ಸೇವಿಸುವ ತುಂಬಿ
ಎಂತಂತು ನಡೆಯುವುದು ಜಾಣು. ಯಾವುದೆ ಹೂವ
ಎಲ್ಲ ರಸವನು ಹೀರಿ ತುಂಬಿ ಆದ ಬರಿದಾಗಿ
ಬಿಟ್ಟು ತೊಲಗುವುದಿಲ್ಲ. ರಸದಿನಿಸು ಹೋದುದನೆ
ಹೂವು ಕಾಣದ ರೀತಿ ಸವಿಯುವುದು. ದೊರೆ ಇಂತು
ತಾ ಕೊಂಬ ಕರ ಜನಕೆ ಹಗುರವೆನಿಸಿರುವಂತೆ
ಮಿತವಾಗಿ ಕೊಳಬೇಕು. ತನ್ನ ಸೇವಕ ಮಂದಿ
ರಾಯ ಪಾಲನು ಪಡೆದು ತರುವ ಬೇಹಾರದಲಿ
ಪ್ರಜೆಯು ಹಿಂಸಿಸದಂತೆ ಎಚ್ಚರದಿ ನಡೆಯುವುದು.

ವಸಿಷ್ಠ ಗುರು ತಮ್ಮ ಪ್ರವಚನವನ್ನು ಮುಂದುವರಿಸಿ ಸಾರ್ವಭೌಮ ಪ್ರಭುತ್ವ ತನ್ನ ಆಶ್ರಿತ ರಾಜರುಗಳನ್ನು ಹೇಗೆ ಕಾಣಬೇಕು ? ಈ ವಿಷಯದಲ್ಲಿ ಇಕ್ಷ್ವಾಕು ವಂಶದ ಅರಸರು ಹೇಗೆ ನಡೆದುಕೊಳ್ಳುತ್ತಿದ್ದರು ಎಂಬುದರ ಬಗೆಗೆ ಮಾಡಿರುವ ಉಪದೇಶ ಸರ್ವ ಕಾಲಿಕ ಪ್ರಜ್ಞೆಯಂತಿದೆ—

ಮೊದಲಿಂದಲೂ ನಮ್ಮ ಕೋಸಲದ ಭೂಮಿಪರು
ಅಧಿರಾಜ ಪದವ ಹಿಡಿದರು. ತಮ್ಮ ರಾಜ್ಯವನು
ಪಾಲಿಸುತ ಇರುವರು ಬೇರೆಯ ರಾಜ್ಯಗಳ ಪೊರೆವ
ರಾಜನ್ಯರನು ತಮಗೆ ಒಂದು ತೆರದಿ ಅಧೀನ
ಎಂಬಂದ ನಡೆಸಿಕೊಂಡಿಹರು. ಆ ಉಳಿದವರು
ಇವರ ಉತ್ಕರ್ಷವನು ಒಪ್ಪಿ ಇವರೆದುರಿನಲಿ
ವಿನಯದಲಿ ನಡೆದಿಹರು. ಕಪ್ಪವನು ಕೊಡಿ ಎಂದು
ಇವರು ಕೇಳುವರಲ್ಲ ; ಅಧಿರಾಜರಾಗಿಹೆವು
ನಮಗೆ ತಲೆಬಾಗಿ ನಮಿಸಿರಿ ಎನ್ನುವವರಲ್ಲ.
ಸಂಧಿಸಿದ ಹೊತ್ತಿನಲಿ, ಇವರು ಹಿರಿಯರು ಅಹುದು,
ಎಂಬ ತೆರ ನಡೆದುಕೊಂಡರೆ ಸಾಕು. ಸಾಮಂತ
ಎಂಬ ಹೀನಾಯವನು ಇವರು ಹೊರಿಸುವುದಿಲ್ಲ.
ನೂರು ತಲೆಯಿಂದ ಈ ಸಂಬಂಧ ಇದೆ ರೀತಿ
ಬೆಳೆದು ಬಂದಿದೆ. ನಾವು ನಿಮಗೆ ಹಿರಿಯರು ಎಂದು
ಇವರು ತೋರುವುದಿಲ್ಲ ; ನಾವು ನಿಮಗೆ ಸಮಾನ
ಎಂದುಇತರರು ನಡೆವುದಿಲ್ಲ. ಎಂದೂ ಇಂತೆ
ನಡೆಯಬೇಕೆನ್ನುವುದು ಕುಲದ ಗೌರವ ಸೂತ್ರ.

ವಸಿಷ್ಠ ಗುರು ಉಪದೇಶಿಸಿರುವ ರಾಮರಾಜ್ಯದ ಈ ರಾಜ ಸೂತ್ರ ಸರ್ವಕಾಲಿಕ ಪ್ರಜ್ಞೆಗೆ ಮಹಾ ದಿವ್ಯ ಔಷಧಿಯಂತಿದೆ. ಈ ರಾಜ ಸೂತ್ರವನ್ನು ವಿಶ್ವದ ಮಹಾ ರಾಷ್ಟ್ರಗಳು ಅನುಸರಿಸಿದರೆ, ವಿಶ್ವ ವಿಪ್ಲವದ ರಾಕ್ಷಸೀ ಮನೋಭಾವ ಅಳಿಸಿಹೋಗಿ 'ಸರ್ವಜನೋ ಸುಖಿನೋಭವಂತು' ಎಂಬ ಮಾನವ ರಕ್ಷಾ ಕರುಣೆ, ಸರ್ವೋದಯ ಭಾವನೆ ಆವಿರ್ಭವಿಸುತ್ತದೆ.

ಶ್ರೀ ರಾಮಚಂದ್ರ ಪ್ರಭು ಪಟ್ಟಾಭಿಷೇಕ ನಡೆಸಿಕೊಂಡ ಸಂಜೆ ಕರೆದಿದ್ದ ಮಹಾ ಸಭೆಯಲ್ಲಿ ವಸಿಷ್ಠಗುರು ಆದರ್ಶ ರಾಜ್ಯ ಸಂಪ್ರದಾಯದ ಸೂತ್ರವನ್ನು ಇಕ್ಷ್ವಾಕು ರಾಜ ವಂಶ ಹೇಗೆ ನಡಿಸಿಕೊಂಡು ಬಂದಿತೆಂದು ಉಪದೇಶಗೈದರು. ಅನಂತರದಲ್ಲಿ ತಮ್ಮ ಪ್ರವಚನ ಉಪದೇಶವನ್ನು ಹೀಗೆ ಉಪಸಂಹಾರ ಮಾಡಿದರು—

ಇಕ್ಷ್ವಾಕು ವಂಶದರಸರು ನಡೆಸಿ ತಂದಿರುವ
ಬಾಳ್ವೆ ಆಳ್ವಿಕೆಯ ಗುರಿ ಇವು. ಇವನು ಈ ಮುನ್ನ
ಕೋಸಲೇಶ್ವರ ನಮ್ಮ ಚಕ್ರೇಶ ದಶರಥರ
ಸನ್ನಿಧಿಯಲರಿಕೆ ಮಾಡಿದುದುಂಟು. ಈ ದಿವಸ
ಆ ನೃಪಾಲರ ಜ್ಯೇಷ್ಠಪುತ್ರ ಪಿತೃಸದೃಶರಹ
ಶ್ರೀರಾಮಚಂದ್ರ ಪ್ರಭುಗಳ ಸನ್ನಿಧಿಯಲಿಂತು
ಬಿನ್ನವಿಸಿ ಕೃತಕೃತ್ಯನಾಗಿಹೆನು. ಪ್ರಭುಗಳು
ತಮ್ಮ ಪೂರ್ವಿಕರು ನಿಷ್ಠೆಯಲಿ ದಡೆಸಿದರೆಂಬ
ಈ ರಾಜ ಧರ್ಮವನು ಅಂಥದೇ ನಿಷ್ಠೆಯಲಿ
ನಡೆಸುವರು ; ಲೋಕವನು ಸಲಹುವರು ; ಕೀರ್ತಿಯನು
ಗಳಿಸುವರು. ಇಂತಿರುತ ಬಹುಕಾಲ ರಾಷ್ಟವನು

ಪಾಲಿಸುವ ಭಾಗ್ಯವನು ಮನೆದೈವ ಕರುಣಿಸಲಿ.
ಇವರ ಆಳ್ವಿಕೆಯ ಅನುಪಮ ಭಾಗ್ಯದಲಿ ರಾಷ್ಟ್ರ
ಸೌಖ್ಯ ಸಂಪದ ಸಮೃದ್ಧಿಯ ಬಾಳ ಬಾಳಲಿ.
ಸ್ವಸ್ತ್ಯಸ್ತು ಶುಭಮಸ್ತು ನಿತ್ಯಮಂಗಲಮಸ್ತು.

ಶಕುಂತಲಾಬಾಯಿ ಶ್ರೀರಾಮ ಪಟ್ಟಾಭಿಷೇಕ ಕಾವ್ಯವಾಚನವನ್ನು "ಮಂಗಳ" ಸಾಲುಗಳಿಂದ ಮುಗಿಸಿದರು.

ವಿದ್ಯಾವರ್ಧಕ ಸಂಘದ ಮತ್ತು ಶ್ರೀ ಮಾರುತಿ ಮಹಾಗಣಪತಿ ದೇವಸ್ಥಾನದ ಸೇವಾಸಮಿತಿಯ ಅಧ್ಯಕ್ಷ ಪಿ. ಆರ್. ಮುಂಡೇವಾಡಿ ನನಗೂ ಅವರ ಪತ್ನಿ ಪರಿಮಳಾ ಬಾಯಿ ಶಕುಂತಲಾಬಾಯಿಗೂ ಹೂಮಾಲೆ ಹಾಕಿ ಫಲತಾಂಬೂಲ ಕೊಟ್ಟು ತಮ್ಮ ಗೌರವ ತೋರಿದರು. ಸುಮಂಗಲಿಯರು ಶಕುಂಲಾಬಾಯಿಯನ್ನು ಗೌರವಿಸಿದ ರೀತಿ ಮಹಾ ಮೇರು ಶಿಖರ ಮುಟ್ಟಿತ್ತು. ಮಾರುತಿ ಮತ್ತು ಮಹಾಗಣಪತಿ ದೇವಸ್ಥಾನದ ಪ್ರಧಾನಾರ್ಚಕರುಗಳಾದ ವೇದಬ್ರಹ್ಮ ಶ್ರೀ "ಸರಸ್ವತ ಕಲಾವತಂಸ" ಆರ್. ಕೆ. ವೆಂಕಣ್ಣಾಚಾರ್ ಮತ್ತು ಸೌಜನ್ಯ ಮೂರ್ತಿಯೂ ವೇದವಿದ್ಯಾಸಂಪನ್ನರೂ ಆದ ವೇದ ಬ್ರಹ್ಮಶ್ರೀ ಎ. ಎಸ್. ಕೃಷ್ಣಮೂರ್ತಿಗಳು ಉಭಯತ್ರರಾಗಿ ನಮಗೆ ವೇದಾಶಂಸನ ಮಾಡಿದರು.

"ಶ್ರೀರಾಮ ಪಟ್ಟಾಭಿಷೇಕ" ಕಾವ್ಯಕ್ಕೆ ಇನ್ನೊಮ್ಮೆ ನಮನ

ರಾಜಾಜಿ ನಗರದ 3ನೇ ಬ್ಲಾಕಿನಲ್ಲಿರುವ ಶ್ರೀರಾಮ ದೇವಸ್ಥಾನದ ಶ್ರೀರಾಮ ಸೇವಾಮಂಡಲಿ ಶಕುಂತಲಾಬಾಯಿ ಕಾವ್ಯವಾಚನ ಕೈಂಕರ್ಯವನ್ನು ನಡೆಸಬೇಕೆಂದು ಅಪೇಕ್ಷಿಸಿತು. ನಾನು ಶ್ರೀರಾಮ ಪಟ್ಟಾಭಿಷೇಕ ಕಾವ್ಯವಾಚನ ಮಾಡುವ ನಮ್ಮ ದೀಕ್ಷಾಬದ್ಧ ಅಪೇಕ್ಷೆಯನ್ನು ಸೇವಾಸಮಿತಿಯ ಕಾರ್ಯದರ್ಶಿಗಳಾದ ಕೆ. ವಿ. ಸುಬ್ಬರಾಯರಿಗೆ ಅರಿಕೆ ಮಾಡಿದೆ. ಅವರು "ಅಸ್ತು" ಎಂದರು. ಸೀತಾರಾಮಲಕ್ಷ್ಮಣ ಆಂಜನೇಯರ ಸನ್ನಿಧಿಯಲ್ಲಿ "ಶ್ರೀರಾಮಪಟ್ಟಾಭಿಷೇಕ" ಕಾವ್ಯದ ದ್ವಿತೀಯ ಕಾವ್ಯ ವಾಚನ ಸೇವಾ ಕೈಂಕರ್ಯ 1982ರ ಜೂನ್ 25ನೇ ದಿನಾಂಕದ ಶುಕ್ರವಾರ ಸಂಜೆ ಪ್ರಾರಂಭವಾಯಿತು. ಪೂಜ್ಯರಾದ ಮಾಸ್ತಿ ವೆಂಕಟೇಶ ಅಯ್ಯಂಗಾರ್, ವಯೋಧರ್ಮ ದಿಂದ ಅಶಕ್ತರಾಗಿದ್ದರೂ, ಶ್ರೀರಾಮ ಸೇವಾ ಮಂಡಲಿ ಹಾಗೂ ನಾವು ದಂಪತಿಗಳ ಮೇಲಿನ ವಿಶ್ವಾಸದಿಂದ ದಯಮಾಡಿಸಿ "ಶ್ರೀರಾಮ ಪಟ್ಟಾಭಿಷೇಕ" ಕಾವ್ಯವಾಚನದ ಪ್ರಾರಂಭೋತ್ಸವವನ್ನು ಉದ್ಘಾಟಿಸಿದರು. ಶ್ರೀರಾಮ ಸೇವಾ ಮಂಡಲಿಯ ಅಧ್ಯಕ್ಷ ಬಿ. ಪಿ. ಸಂಪಂಗಿರಾಮ್ ಸ್ವಾಗತಿಸಿದರು. ಶಕುಂತಲಾಬಾಯಿ ಕವಿವರ್ಯರಿಗೆ ನಮಿಸಿ ಶ್ರೀರಾಮ ಪಟ್ಟಾಭಿಷೇಕ ಕಾವ್ಯದ ಪ್ರಸ್ತಾವನೆ ಭಾಗವನ್ನು ವಾಚನ ಮಾಡಿದರು. ಕೆ. ವಿ. ಸುಬ್ಬರಾಯರು ಪೂಜ್ಯ ಮಾಸ್ತಿಯವರಿಗೆ ಹೂಮಾಲೆ ಹಾಕಿ, ಫಲತಾಂಬೂಲ ವನ್ನರ್ಪಿಸಿ ಪಾದಮುಟ್ಟಿ ನಮಸ್ಕರಿಸಿ ತಮ್ಮ ವಂದನೆಯ ಭಕ್ತಿ ಕಾಣಿಕೆ ಅರ್ಪಿಸಿದರು.

ಶ್ರೀರಾಮ ಪಟ್ಟಾಭಿಷೇಕ ಕಾವ್ಯವಾಚನದ ಅಮೃತಘಳಿಗೆ ಪೂಜ್ಯ ಮಾಸ್ತಿಯವರಿಂದ ಪ್ರಾರಂಭವಾಯಿತು; ಯಾವ ಅಡೆತಡೆಗಳೂ ಇಲ್ಲವೆ ಸತತವಾಗಿ ಆಗಸ್ಟ್ 15ನೆಯ ದಿನಾಂಕದವರೆಗೂ ಅವ್ಯವಚ್ಛಿನ್ನವಾಗಿ ನಡೆಯಿತು. ಸ್ವಾತಂತ್ರ್ಯೋತ್ಸವದ ಪರವುದಿನ, ಆ ದಿನಕ್ಕೆ ಸರಿಯಾಗಿ ಶ್ರೀರಾಮ ರಾಜ್ಯ ವೈಭವದ ಕಥಾಭಾಗ "ಮಂಗಳ" ಸಾಲುಗಳ ವಾಚನದೊಂದಿಗೆ ಶ್ರೀರಾಮ ಪಟ್ಟಾಭಿಷೇಕ ಕಾವ್ಯವಾಚನ ಜಯಪ್ರದವಾಗಿ ಮುಕ್ತಾಯಗೊಂಡಿತು. ಶ್ರೀರಾಮ ಸೇವಾ ಮಂಡಲಿಯ ಉಪಾಧ್ಯಕ್ಷರಾದ ಭಾರತಿ ಶ್ರೀನಿವಾಸಮೂರ್ತಿ ಶಕುಂತಲಾಬಾಯಿಗೂ ನನಗೂ ಫಲ ತಾಂಬೂಲಗಳೊಡನೆ ಕಾವ್ಯ ವಾಚನ ಕಾಣಿಕೆ ಒಪ್ಪಿಸಿದರು. ಕಾರ್ಯದರ್ಶಿ ಕೆ. ವಿ. ಸುಬ್ಬರಾಯರು ವಂದನಾರ್ಪಣೆ ಮಾಡಿದರು.

ಶ್ರೀರಾಮಪಟ್ಟಾಭಿಷೇಕ ಕಾವ್ಯವಾಚನ ಮಾರುತಿ ಮಹಾ ಗಣಪತಿ ಸೇವಾ ಸಂಘದಲ್ಲಿ 55 ದಿವಸಗಳು ನಡೆದಿದ್ದರೆ, ಇಲ್ಲಿ ಶ್ರೀರಾಮ ದೇವಸ್ಥಾನದ ಸೇವಾ ಮಂಡಲಿಯ ಆಶ್ರಯದಲ್ಲಿ 52 ದಿವಸ ನಡೆಯಿತು.

ಮಲ್ಲೇಶ್ವರದ ಚಿತ್ರಾಪುರ ಮಠದಲ್ಲಿ ಶ್ರೀರಾಮ ಪಟ್ಟಾಭಿಷೇಕಕ್ಕೆ ನಮನ

ಮಲ್ಲೇಶ್ವರದ 15ನೇ ಅಡ್ಡರಸ್ತೆಯಲ್ಲಿ ಚಿತ್ರಾಪುರ ಮಠವಿದೆ. ಸಾರಸ್ವತ ಜನಾಂಗದ ಗುರುವರ್ಯರುಗಳ ಮಹಾ ಪವಿತ್ರ ಸನ್ನಿಧಿಯದು. ಸಾರಸ್ವತ ಮಹಿಳೆಯರು ಮತ್ತು ಮಹನೀಯರು ಒಂದಲ್ಲ ಒಂದು ಸಾಂಸ್ಕೃತಿಕ ಕಾರ್ಯಕ್ರಮವನ್ನು ಪ್ರತಿ ದಿನ ಸಂಜೆ ಶಿಸ್ತು ಸಂಯಮಗಳಿಂದ ನಡೆಸುತ್ತಿರುತ್ತಾರೆ. 1981ರಲ್ಲಿ ನಮಗೆ ಚಿತ್ರಾಪುರ ಮಠದ ಪರಿಚಯ ಲಭಿಸಿತು. ಮುಲ್ಲರ್ ಪೇಟನ್ ಸೀತಾರಾಮರಾಯರ ಹಾಗೂ ಅವರ ಸುಪುತ್ರ ಮುಲ್ಲರ್ ಪೇಟನ್ ರತ್ನಾಕರ ಅವರ ವಿಶ್ವಾಸಗಳಿಂದ. ಚಿತ್ರಾಪುರ ಮಠದ ಚಾತುರ್ಮಾಸದ ಕಾರ್ಯಕ್ರಮಗಳಲ್ಲಿ ನಾವು ಭಾಗವಹಿಸಿ ಕುಮಾರವ್ಯಾಸ ಭಾರತದಿಂದ "ಶ್ರೀಕೃಷ್ಣ ರಾಯಭಾರ" ಕಥಾ ಸಂದರ್ಭವನ್ನು ಎರಡು ದಿವಸ ವಾಚನ ಮಾಡಿದೆವು. ಸಾರಸ್ವತ ಬಾಂಧವರ ಮನೆ ಮಾತು ಕೊಂಕಣಿ. ದೇಶಭಾಷೆ ಕನ್ನಡ. ಕನ್ನಡ ಕಾವ್ಯಗಳ ಪರಿಚಯ ಬಹುಮಂದಿಗೆ ಸಾಕಷ್ಟು ಇಲ್ಲ. ಆದರೂ ನಮ್ಮ ಭಾಗ್ಯ, "ಶ್ರೀಕೃಷ್ಣರಾಯಭಾರ"ದ ಗಮಕವಾಚನ ಕೇಳಿ ಸಂತೋಷಪಟ್ಟರು. ನನ್ನ ಪ್ರಾಸಂಗಿಕ ನಿರೂಪಣೆಯ ಹಿತಮಿತವನ್ನು ಸ್ವೀಕರಿಸಿ ಸುಖಿಸಿದರು. 1982ರ ಚಾತುರ್ಮಾಸ ಕಾರ್ಯಕ್ರಮ ಸನ್ನಿಹಿತವಾಯಿತು. ಹಿಂದಿನ ವರ್ಷದ ಗಮಕ ಮತ್ತು ಪ್ರಾಸಂಗಿಕ ಕಾರ್ಯಕ್ರಮದ ಕೇಳ್ಮೆ ನಮ್ಮ ಸಾರಸ್ವತ ಬಾಂಧವರಲ್ಲಿ ಒಳ್ಳೆಯ ಪರಿಣಾಮವೆಸಗಿತ್ತು. ಆ ಕಾರಣ "ಈ ವರ್ಷದ ಚಾತುರ್ಮಾಸ ಕಾರ್ಯಕ್ರಮದಲ್ಲಿ ನೀವು ಕಾವ್ಯವಾಚನ ನಡೆಸಿಕೊಡಬೇಕು" ಎಂದು ರತ್ನಾಕರ ಅವರ ಮಾತೋಶ್ರೀ ಸೀತಾಬಾಯಿ ಶಕುಂತಲಾಬಾಯಿಯನ್ನು ಚಿತ್ರಾಪುರ ಮಠದ ಸಮಿತಿಯ ಪರವಾಗಿ ಪ್ರಾರ್ಥಿಸಿಕೊಂಡರು. ಈ ಸಲ ನಮ್ಮ ಕಾವ್ಯವಾಚನ ಐದು ದಿವಸಗಳು ನಡೆಯಿತು. ಆಗಸ್ಟ್ 23ನೆಯ ದಿನಾಂಕ

ಸೋಮವಾರದಿಂದ 26ನೆಯ ದಿನಾಂಕ ಬಿಟ್ಟು 28ನೆಯ ದಿನಾಂಕ ಭಾನುವಾರದವರೆಗೆ ಕಾವ್ಯವಾಚನವಾಯಿತು.

ನಾವು ಈ ಸಲದ ಕಾವ್ಯವಾಚನವನ್ನು ಪ್ರಾಚೀನ ಮತ್ತು ಅರ್ವಾಚೀನ ಕಾವ್ಯಗಳಿಗೆ ಮೀಸಲಾಗಿಟ್ಟು, ನಮ್ಮ ಸಾರಸ್ವತ ಬಂಧುಗಳಿಗೆ ರಾಘವಾಂಕ, ಕುಮಾರವ್ಯಾಸ, ಲಕ್ಷ್ಮೀಶ, ಕುವೆಂಪು ಮತ್ತು ಮಾಸ್ತಿ ಕಾವ್ಯಗಳ ಪರಿಚಯವನ್ನು ಮಾಡಿಸುವ ಸಂಕಲ್ಪ ಮಾಡಿದೆವು. ಕನ್ನಡ ಕಾವ್ಯ ಪರಂಪರೆ ನಡೆದುಬಂದ ದಾರಿಯನ್ನು ಸ್ಥೂಲವಾಗಿ ಪರಿಚಯ ಮಾಡಿಕೊಡುವುದು ನಮ್ಮ ಉದ್ದೇಶ. ಸಂದರ್ಭೋಚಿತವಾಗಿ ಸಾವಿರ ವರ್ಷದ ಕನ್ನಡ ಸಾಹಿತ್ಯ ಚರಿತ್ರೆಯನ್ನು ನಮ್ಮ ಸಾರಸ್ವತ ಬಂಧುಗಳಿಗೆ ಪರಿಚಯಮಾಡಿಕೊಟ್ಟೆವು. ಪಂಪ, ರನ್ನ, ಹರಿಹರ, ರಾಘವಾಂಕ, ಶಿವಶರಣರು, ದಾಸರು ಆಧುನಿಕ ಕವಿಗಳು ಎಲ್ಲರ ಮೆರವಣಿಗೆ ಮಾಡಿಸಿದೆ ಪ್ರಾಸಂಗಿಕ ನಿರೂಪಣೆಯಲ್ಲಿ.

ಪ್ರಾರಂಭದ ದಿನ ಕುಮಾರವ್ಯಾಸ ಭಾರತದಿಂದ "ಯಕ್ಷಪ್ರಶ್ನೆ", ಎರಡನೆಯ ದಿವಸ ಲಕ್ಷ್ಮೀಶನ ಜೈಮಿನಿಭಾರತದಿಂದ "ಸುಧನ್ವ", ಮೂರನೆಯ ದಿವಸ ರಾಘವಾಂಕನ ಹರಿಶ್ಚಂದ್ರ ಕಾವ್ಯದಿಂದ "ವಿಶ್ವೇಶ್ವರ ಸಾಕ್ಷಾತ್ಕಾರ", ನಾಲ್ಕನೆಯ ದಿವಸ ಕುವೆಂಪು "ಶ್ರೀರಾಮಾಯಣ ದರ್ಶನಂ" ಕಾವ್ಯದಿಂದ "ಶಬರಿಗಾದನು ಅತಿಥಿ ದಾಶರಥಿ", ಐದನೆಯ ದಿನ ಮಾಸ್ತಿಯವರ "ಶ್ರೀರಾಮ ಪಟ್ಟಾಭಿಷೇಕ" ಕಾವ್ಯದಿಂದ "ವಸಿಷ್ಠಗುರುವಿನ ರಾಜ್ಯಭಾರ ನಿರ್ವಹಣ ಸೂತ್ರದ ಉಪದೇಶ" ಭಾಗಗಳನ್ನು ಗಮಕಕ್ಕೆ ಪ್ರಾಧಾನ್ಯ ಕೊಟ್ಟು ಶಕುಂತಲಾಬಾಯಿ ವಾಚಿಸಿದರು. ನಾನು ಪ್ರಾಸಂಗಿಕ ನಿರೂಪಣೆಯನ್ನು ಹಿತಮಿತವಾಗಿ ನಿರ್ವಹಿಸಿದೆ. ಆಧುನಿಕ ಪ್ರಜ್ಞೆಯನ್ನು ಶ್ರೋತೃಗಳ ಗಮನಕ್ಕೆ ತಂದೆವು. ಚಾತುರ್ಮಾಸದ ನಮ್ಮ ಕಾವ್ಯವಾಚನ ಕಾರ್ಯಕ್ರಮ ತುಂಬ ಯಶಸ್ವಿಯಾಯಿತು. ಮೊದಲ ದಿನ ರಾಜಾಜಿನಗರದ ಲಯನ್ಸ್ ಕ್ಲಬ್ಬಿನ ಅಧ್ಯಕ್ಷರೂ, ಚಿತ್ರಾಪುರದ ಮಹಾಭಕ್ತಾಭಿಮಾನಿಗಳೂ ಆದ ಮುಲ್ಲರ್ ಪೇಟಕರ್ ರತ್ನಾಕರ ಅವರು ಸ್ವಾಗತ ಕೋರಿ ಸಭೆಗೆ ನಮ್ಮ ಪರಿಚಯ ಮಾಡಿಕೊಟ್ಟರು. ಮಂಗಳದ ದಿನ ನಮ್ಮ ಪರಮ ಮಿತ್ರರೂ ದಿ|| ಶ್ಲೋಕ ಸಂಗೀತ ಕಳಲೆ ಸಂಪತ್ಕುಮಾರಾಚಾರ್ಯರ ಶಿಷ್ಯರೂ ಗಮಕಿಯೂ ಆದ ಬಿ. ಭವಾನಿ ಶಂಕರರಾಯರು, ಶ್ರೀಮತಿ ಶಕುಂತಲಾಬಾಯಿ ಭಾರತ ವಾಚನ ಪ್ರವೀಣ ಬಿಂದೂರಾಯರ ಪೀಳಿಗೆಯ ಗಮಕ ತಂಡದಲ್ಲಿ ಪ್ರಾಮುಖ್ಯ ಶಿಷ್ಯೆಯಾಗಿ ಗುರುವಿನ ಹೆಸರನ್ನು ಉಳಿಸಿಕೊಂಡು ಬರುತ್ತಿರುವರೆಂದು ಹೇಳಿ, ಗಮಕ ವಿದುಷಿಯನ್ನು ವಂದಿಸಿದರು ; ನನ್ನ ಸಾಹಿತ್ಯ ಸೇವೆಯನ್ನೂ ಸ್ಮರಿಸಿದರು.

ವಸಿಷ್ಠಗುರು ಇಕ್ಷ್ವಾಕು ವಂಶದ ಅರಸರು ವಂಶಪಾರಂಪರ್ಯವಾಗಿ ನಡೆಸಿಕೊಂಡು ಬಂದ ರಾಜ್ಯಭಾರ ಸೂತ್ರದ ಪ್ರವಚನ ಭಾಗವನ್ನು ಕೇಳಿದ ಶ್ರೋತೃಗಳು ಗಾಂಧೀಜಿ ಬಯಸಿದ್ದ ರಾಮರಾಜ್ಯದ ಕನಸನ್ನು ನೆನಸಿಕೊಂಡು, "ವಸಿಷ್ಠ ಗುರುಗಳು ಶ್ರೀರಾಮ ಪಟ್ಟಾಭಿಷೇಕದ ಹಿಂದೆ ಮಾಡಿದ ರಾಜ್ಯಭಾರ ಕ್ರಮದ ಪ್ರವಚನವನ್ನು ನೀವು ನಮ್ಮ ರಾಜಕಾರಣಿಗಳಿಗೆ ಕೇಳಿಸಬೇಕು. ರಾಜಕಾರಣಿಗಳು ನಿಮ್ಮನ್ನು ಕರೆಸಿ

ಕೊಂಡು ಕೇಳಬೇಕು." ಎಂದು ನನಗೆ ಕಿವಿ ಮಾತು ಹೇಳಿದರು. "ಗಾಳಿಯ ಜೊತೆ ಗುದ್ದಾಡಿದಂತೆ" ಎಂದು ನಾನು ಅವರುಗಳಲ್ಲಿ ಬಿನ್ನವಿಸಿಕೊಂಡೆ.

ಶಕುಂತಲಾಬಾಯಿ ತನ್ನ ಷಷ್ಟಿ ಸಮಾಬ್ದ ವರುಷದಲ್ಲಿ ಕೈಗೊಂಡ ಶ್ರೀರಾಮ ಪಟ್ಟಾಭಿಷೇಕ ಕಾವ್ಯವಾಚನ ನೋಂಪಿ ಸಹೃದಯ ವಿಭೂತಿಗಳಿಂದ ಮಂಗಳಪ್ರದವಾಗಿ ಯಶಸ್ವಿಯಾಯಿತು.

ನಮ್ಮ ಕಾಲದಲ್ಲಿ ವಾಲ್ಮೀಕಿ ರಾಮಾಯಣವನ್ನು ಆಧರಿಸಿ 1949-51ರ ಸಾಲಿನಲ್ಲಿ ಕುವೆಂಪು "ಶ್ರೀ ರಾಮಾಯಣ ದರ್ಶನಂ" ಮಹಾಕಾವ್ಯ ಪ್ರಕಟವಾದ ಮೇಲೆ 1972ರಲ್ಲಿ ವಾಲ್ಮೀಕಿಯನ್ನು ಆಧರಿಸಿ ಪ್ರಕಟವಾದ "ಶ್ರೀರಾಮ ಪಟ್ಟಾಭಿಷೇಕ" ಮಹಾಕಾವ್ಯ ಮಾಸ್ತಿಯವರದು. ಅದೇಕೋ ನಮ್ಮ ಸಾಹಿತ್ಯ ಸಾರಸ್ವತ ಲೋಕದಲ್ಲಿ ಈ ಕಾವ್ಯ ಸಾಕಷ್ಟು ಪ್ರಚಾರವಾಗಲಿಲ್ಲ. ಈ ಸಂದರ್ಭದಲ್ಲಿ ನಮ್ಮ ರಾಜ್ಯದ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಡಾ|| ಹಾ. ಮಾ. ನಾಯಕರು ಇತ್ತೀಚೆಗೆ ಶ್ರೀರಾಮ ಪಟ್ಟಾಭಿಷೇಕ ಕಾವ್ಯದ ಒಗೆಗೆ ಸಾಹಿತ್ಯಾಸಕ್ತರ ಗಮನ ಸೆಳೆದ ಕೆಲವು ಮಾತುಗಳನ್ನು ಇಲ್ಲಿ ಪ್ರಸ್ತಾಪಿಸುವುದು ಅಪ್ರಕೃತವಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಡಾ|| ನಾಯಕರು ಶ್ರೀರಾಮ ಪಟ್ಟಾಭಿಷೇಕವನ್ನು ಕುರಿತು ಆಡಿರುವ ಮಾತುಗಳು ಹೀಗಿವೆ—

> "ಶ್ರೀರಾಮ ಪಟ್ಟಾಭಿಷೇಕ" ನಮ್ಮ ಈಚಿನ ಮಹತ್ವ ಕೃತಿಗಳಲ್ಲಿ ಒಂದಾಗಿದೆ. ಚಂಡೆ ಮದ್ದಳೆಗಳ ಅರ್ಭಟದಲ್ಲಿ ವೀಣೆಯ ನಾದ ಕೇಳಿಸುವುದಿಲ್ಲ. ಒಂದು ಕಾದಂಬರಿಯನ್ನೋ, ಎರಡು ಕಥೆಗಳನ್ನೋ ಬರೆದು ಸಾಹಿತ್ಯ ಸಿಂಹಾಸನಕ್ಕೆ ಹೋರಾಟ ನಡೆಸಿರುವವರೇ ತುಂಬಿದ ಇಂದಿನ ದಿನಗಳಲ್ಲಿ ಇಂಥದೊಂದು ಪರಿಣತ ಕೃತಿ ನಮ್ಮ ಜನದ ಗಮನಕ್ಕೆ ಅಷ್ಟಾಗಿ ಬರದಿರುವುದು, ವಿಷಾದನೀಯವಾಗಿದ್ದರೂ ಆಶ್ಚರ್ಯವಲ್ಲ; ಯಾವ ಯಾವುದೋ ಒಗೆಯ ಕೃತಿಗಳನ್ನು ಕುರಿತು ವಿಮರ್ಶೆ ವಿಶ್ಲೇಷಣೆ ಸಂಕಿರಣಗಳು ನಡೆಯುತ್ತಿರುವಾಗ "ಶ್ರೀರಾಮ ಪಟ್ಟಾಭಿಷೇಕ"ದಂಥ ಕೃತಿಗಳನ್ನು ನಾವು ಗಮನಿಸದಿರುವುದು ನಮ್ಮ ಸಾಹಿತ್ಯಕ್ಷೇತ್ರದ ದುರವಸ್ಥೆಯ ಸಂಕೇತ. "ಶ್ರೀರಾಮ ಪಟ್ಟಾಭಿಷೇಕ" ವ್ಯಾಪಕವಾದ ವಿಮರ್ಶೆ, ಆಳವಾದ ಅಧ್ಯಯನಗಳಿಗೆ ನಮ್ಮನ್ನು ಆಹ್ವಾನಿಸುತ್ತದೆ. ಈ ಕಾವ್ಯದ ನಿರೂಪಣೆಯ ತಂತ್ರ, ಸ್ವಂತಿಕೆ, ಮಾರ್ಪಾಡುಗಳು, ಹೊಸ ಸೇರಿಕೆಗಳು, ತಾಲಸಿಕ ದೃಷ್ಟಿ ಜೀವನ ಧೋರಣೆ, ಮಾನವೀಯ ಸಂಬಂಧಗಳು—ಒಂದೊಂದೂ ವಿವರವಾಗಿ ಅಭ್ಯಾಸಕ್ಕೆ ಸಾಕಷ್ಟು ಅವಕಾಶ ಮಾಡಿಕೊಡುತ್ತವೆ. 'ನವರಾತ್ರಿ'ಯಲ್ಲಿ ಮಾಸ್ತಿಯವರು ಆರಂಭಿಸಿದ ಸರಳ ರಗಳೆಯ ಕಥನ ಕಾವ್ಯ ವಿಧಾನ "ಶ್ರೀರಾಮ ಪಟ್ಟಾಭಿಷೇಕ"ದಲ್ಲಿ ಉನ್ನತ ಹಂತವನ್ನು ಮುಟ್ಟಿದೆ. ಈ ಕಾವ್ಯದ ಛಂದಸ್ಸನ್ನೂ ಅಭ್ಯಾಸ ಮಾಡಬೇಕಾದ ಅಗತ್ಯವಿದೆ."

ಡಾ|| ನಾಯಕರು ಸಾಹಿತ್ಯ ಉಪಾಸಕರನ್ನು ಕುರಿತು ಆಡಿರುವ ಮಾತುಗಳು ಗಮಕಿಗಳಿಗೂ ಅನ್ವಯಿಸುತ್ತದೆ. "ಶ್ರೀನಿವಾಸರ ಶ್ರೀರಾಮಪಟ್ಟಾಭಿಷೇಕ" (ಒಂದು ಸಮಾವಲೋಕನ) ಎಂಬ ಒಂದು ವಿಚಾರ ಪ್ರಚೋದಿತ ಗ್ರಂಥ, ನಮ್ಮ ಸುಪ್ರಸಿದ್ಧ ಕಾದಂಬರಿಕಾರರೂ ವಿಮರ್ಶಕರೂ ಆದ ವಿ. ಎಂ. ಇನಾಂದಾರರಿಂದ ರಚಿತವಾಗಿರುವುದು ಕನ್ನಡ ಸಾಹಿತ್ಯದ ಭಾಗ್ಯ. ಮಾಸ್ತಿಯವರ ಶ್ರೀರಾಮಪಟ್ಟಾಭಿಷೇಕ ಕಾವ್ಯವನ್ನು ನಮ್ಮ ಗಮಕಿಗಳು ಗಮಕಾಭ್ಯಾಸಕ್ಕೆ ತೆಗೆದುಕೊಳ್ಳುವಾಗ ಇನಾಂದಾರರ ಕೃತಿಯನ್ನು ಅವಲೋಕಿಸುವುದು ಉಚಿತವೆಂದು ನನ್ನ ಪ್ರಾರ್ಥನೆ.

ಸಾಹಿತಿಗಳ–ಗಮಕಿಗಳ ಕಣ್ಣಿಗೆ ಬೀಳದಿರುವ "ಶಾಕುಂತಲ"

ಡಾ|| ನಾಯಕರು ಪೂಜ್ಯ ಮಾಸ್ತಿಯವರ ಶ್ರೀರಾಮ ಪಟ್ಟಾಭಿಷೇಕ ಕಾವ್ಯವನ್ನು ಕುರಿತು ಆಡಿರುವ ಮಾತುಗಳನ್ನು ನಾನು ಮೆಲಕು ಹಾಕುತ್ತಿರುವಾಗ ಇನ್ನೊಂದೆರಡು ಕಾವ್ಯಗಳ ವಿಷಯಗಳನ್ನು ಕುರಿತು ಎರಡು ಮಾತು ಹೇಳುವುದು ಇಲ್ಲಿ ಅಪ್ರಕೃತವಾಗಲಾರದು-1971ರಲ್ಲಿ ಸಮೇತನಹಳ್ಳಿ ರಾಮರಾಯರು "ಶಾಕುಂತಲ" ಎಂಬ ಮಹಾಕಾವ್ಯವನ್ನು ರಚಿಸಿದರು. ಆ ಕಾವ್ಯವನ್ನು ಕುರಿತು ನಮ್ಮ ಸಾಹಿತಿ ಬಾಂಧವರು ಉದಾಸೀನ ಚಿತ್ತರಾಗಿಯೇ ಇದ್ದಾರೆಂದು ನಾನು ಭಾವಿಸಿದ್ದೇನೆ. ಸಾಹಿತ್ಯ ಲೋಕದಲ್ಲಿ "ಶಾಕುಂತಲ" ಕಾವ್ಯದ ಬಗೆಗೆ ಕುರುಡುಗಣ್ಣಿರುವಾಗ, ಪಾಪ, ಗಮಕಿಗಳಿಗೆ "ಶಾಕುಂತಲ" ಕಾವ್ಯ ಹೇಗೆ ಗೋಚರವಾಗಬೇಕು ? ಶಕುಂತಲಾಬಾಯಿ ಸಮೇತನ ಹಳ್ಳಿಯವರ "ಶಾಕುಂತಲ" ಕಾವ್ಯದ ಮೇಲೆ ದೃಷ್ಟಿ ಹರಿಸಿದ್ದಾರೆ. ಶೃಂಗೇರಿಯಲ್ಲಿ ದಿ|| ಚಿ. ನ. ವಿಶ್ವನಾಥ ಶಾಸ್ತ್ರಿಗಳು ನಡೆಸುತ್ತಿದ್ದ ಸಹೃದಯಗೋಷ್ಠಿಯೊಂದರಲ್ಲಿ "ಶಾಕುಂತಲ" ಕಾವ್ಯದ "ನಿವೇದನಂ" ಭಾಗದಿಂದ ಕೆಲವು ಸಾಲುಗಳನ್ನು ವಾಚಿಸಿದ್ದೂ ಉಂಟು. ಕಾವ್ಯದ ಮೇಲಿನ ಮಮತೆಯಿಂದ ಸಮೇತನಹಳ್ಳಿಯವರ ಉಪಯೋಗಕ್ಕಾಗಿ ಶಕುಂತಲಾಬಾಯಿ "ಶಾಕುಂತಲಾ" ಇಡೀ ಕಾವ್ಯವನ್ನು ಸಂಗ್ರಹಣ ರೂಪದಲ್ಲಿ ಧ್ವನಿಮುದ್ರಿಕೆಯಲ್ಲಿ ಮೂಡಿಸುವುದರಲ್ಲಿ ಆಸಕ್ತಿ ವಹಿಸಿದ್ದಾರೆ. ಈಗಾಗಲೆ ನಾಲ್ಕೈದು ಕ್ಯಾಸಟ್ಟುಗಳಲ್ಲಿ "ಶಾಕುಂತಲಾ" ಧ್ವನಿಮುದ್ರಿಕೆಯ ಪರಕಾಯ ಪ್ರವೇಶ ಮಾಡಿದ್ದಾಳೆ. ಗಮಕಿಗಳು, "ಶಾಕುಂತಲಾ" ಎಂಬ ಮಹಾಕಾವ್ಯವೊಂದಿದೆ ಆಧುನಿಕ ಕಾವ್ಯ ಪ್ರಪಂಚದಲ್ಲಿ ಎಂಬುದನ್ನು ಮರೆಯಬಾರದು.

"ಶಾಕುಂತಲಾ" ಕಾವ್ಯ ಹೇಗೆ ಓಡುತ್ತದೆ ಛಂದಸ್ಸಿನಲ್ಲಿ ಎಂಬುದನ್ನು ನಮ್ಮ ಗಮಕಿಗಳ ಅವಗಾಹನೆಗೆ ತರುವುದಕ್ಕಾಗಿ ಆ ಕಾವ್ಯದಿಂದ ಕೆಲವು ಸಾಲುಗಳನ್ನು ಇಲ್ಲಿ ಎತ್ತಿಕೊಡುವುದು ನನ್ನ ಕರ್ತವ್ಯವಾಗಿದೆ. ಕಾವ್ಯದ ಪ್ರಾರಂಭ ಹೀಗಿದೆ—

> "ಶ್ರೀ ಸೃಷ್ಟಿ ಚೇತನವೆ ಪ್ರಜ್ಞಾನ ಘನ ರೂಪ
> ಹೇ ಪರಾತ್ಪರ ಶಕ್ತಿ, ಇದೊ ವಂದನಂ ನಿನಗೆ !
> ಮರುವಂದನಂ ! ಅಂತವಿಲ್ಲದೀ ನಭದೆಲ್ಲ
> ಸೂರ್ಯರ್ಗೆ ಮೂಲ ನೀಂ. ತಾರು

ನೀಂ ಸರ್ವ ಲೋಕಕ್ಕೆ. ಓ ಇದೋ ಪ್ರಾರ್ಥಿಪೆಂ
ನೊಸಲಿನೊಳಗಳವಡಿಸುತೆನ್ನ ಕೆಂದಳಗಳಂ
ಸರ್ವಾರ್ಪಣದ ನಿರ್ಮಲಾಂತಃಕರಣದಿಂದೆ."

ಸಮೇತನ ಹಳ್ಳಿಯವರು ಸರಸ್ವತಿಯನ್ನು ಕುರಿತು ಪ್ರಾರ್ಥಿಸಿರುವ ಸಾಲುಗಳು ಇಂತಿವೆ—

"ಓ ತಾಯಿ, ಸರಸ್ವತಿಯೆ ಮನುಚೋಚ್ಚ ಗುಣಗಳಂ
ಪೊರೆವ ರಸ ನಿರರ್ಝರಣಿ ಕಾರಿಣಿಯೇ ನೀಂ ವಾಣಿ.
ಕಾವ್ಯ ರಚನೋದ್ಯೋಗ ನಿರತರ ನಿರಂತರಂ,
ಭಾವ ಸಂಪನ್ನರಂ, ಚಿದ್ರೂಪ ದರ್ಶನಕೆ
ಅಣಿಮಾಳ್ಪ ಗೀರ್ವಾಣಿ, ನೀಂ ಪರಮ ಕಲ್ಯಾಣಿ;
ಶುಭ್ರದಮೃತಾಂಶು ಸಂಭ್ರಮ ಭ್ರಮಣ ಕಾರಿಣಿ !
ವೀಣಾ ವಿನೋದಿನಿಯೆ, ಅಜನ ವಿಜಯೀ ಜಾಯೆ
ಪೊಡೆಮಡುವೆನಿದೊ ನಿನ್ನ ಪದ್ಮಪದದನುಲತೆಯ
ಸಂದರ್ಶನಾಕಾಂಕ್ಷಿ ಕಾವ್ಯಾನುರಾಗದಿಂ !"

"ಶಾಕುಂತಲಾ" ಕಾವ್ಯದಂತೆಯೇ ಅಜ್ಞಾತವಾಸದಲ್ಲಿರುವ ಇನ್ನೊಂದು ಕಾವ್ಯ "ಬಸವ ದರ್ಶನಂ"

ಸಮೇತನಹಳ್ಳಿ ರಾಮರಾಯರ 'ಶಾಕುಂತಲ' ಕಾವ್ಯದಂತೆಯೇ ಹೆಚ್ಚು ಜನದ ಕಿವಿಗೆ ಬೀಳದೆ ಅಜ್ಞಾತವಾಗಿರುವ ಇನ್ನೊಂದು ಕಾವ್ಯ "ಬಸವ ದರ್ಶನಂ". ಕವಿ ಬಸವೇಶ್ವರ ಶಿವಪ್ಪ ತುಪ್ಪದ ಗದಗ. ಕಾವ್ಯ 1978ರಲ್ಲಿ ರಚಿತವಾಗಿರಬೇಕು. ಅದೇ ವರ್ಷದ ಮೇ ತಿಂಗಳಲ್ಲಿ ಕಲಬುರುಗಿಯಲ್ಲಿ ಶರಣಪ್ಪ ಅಪ್ಪ ಅವರ ಸನ್ನಿಧಿಯಲ್ಲಿ ಉಪ ರಾಷ್ಟ್ರಪತಿಯಾಗಿದ್ದ ಸನ್ಮಾನ್ಯ ಬಿ. ಡಿ. ಜತ್ತಿಯವರು "ಬಸವ ದರ್ಶನಂ" ಕಾವ್ಯವನ್ನು ಬಿಡುಗಡೆ ಮಾಡಿದರು ಆ ಸಮಯದಲ್ಲಿ ಗಮಕಿಗಳ ಹಿರಿಯಣ್ಣ "ಗಮಕ ಕಲಾನಿಧಿ" ಜೋಳದ ರಾಶಿ ದೊಡ್ಡನ ಗೌಡರು, "ಬಸವ ದರ್ಶನಂ" ಕಾವ್ಯವಾಚನ ಮಾಡಿದ್ದರು. ಈ ವಿಷಯ ಕರ್ನಾಟಕದ ಇತರ ಭಾಗಗಳಿಗೆ ಅರಿವೇ ಆಗಿರಲಿಲ್ಲ. ಶಕುಂತಲಾಬಾಯಿಯ ಯಾವ ಸುಕೃತವೋ ! ಜೋಳದ ರಾಶಿಯವರು ಶಕುಂತಲಾಬಾಯಿಗೆ ಬಸವೇಶ್ವರ ಶಿವಪ್ಪ ತುಪ್ಪದ ಅವರ ಕಾವ್ಯವನ್ನು ವಾಚನ ಮಾಡುವ ಸುಸಂದರ್ಭವನ್ನು ಒದಗಿಸಿ ಕೊಟ್ಟರು. "ಗಮಕ ಕಲಾನಿಧಿ"ಯವರ ಅನಾರೋಗ್ಯ ದೆಸೆಯಿಂದ ಅವರಿಗೆ ಬೆಂಗಳೂರಿನಲ್ಲಿ ಸರ್ಪಭೂಷಣ ಮಠದಲ್ಲಿ 1981ರ ಯುಗಾದಿಯ ಸಂದರ್ಭದಲ್ಲಿ "ಬಸವ ದರ್ಶನಂ" ಕಾವ್ಯವಾಚನ ಮಾಡುವುದು ತಪ್ಪಿತು. ಆಗ ಜೋಳದ ರಾಶಿಯವರು ಶಕುಂತಲಾ ಬಾಯಿಯ ಹೆಸರನ್ನು ಸೂಚಿಸಿದರು. ಶಕುಂತಲಾಬಾಯಿಯನ್ನು ಸರ್ಪಭೂಷಣ ಮಠದ ಸೇವಾ ಕಾರ್ಯಕರ್ತರು "ಬಸವ ದರ್ಶನಂ" ಕಾವ್ಯವಾಚನ ಮಾಡಲು ಆಹ್ವಾನಿಸಿದರು. ಅದೇ ಸಂದರ್ಭದಲ್ಲಿ ಕವಿವರ್ಯ ಬಸವೇಶ್ವರ ಶಿವಪ್ಪ ತುಪ್ಪದರಿಗೆ ಸನ್ಮಾನವಿತ್ತು. ಡಾ|| ಸಿದ್ಧಯ್ಯ ಪುರಾಣಿಕರು ಸಮಾರಂಭದ ಮುಖ್ಯಅತಿಥಿ. ಶಕುಂತಲಾ

ಬಾಯಿ "ಬಸವ ದರ್ಶನಂ" ಕಾವ್ಯದಿಂದ ಕೆಲವು ಭಾಗಗಳನ್ನು ನನ್ನ ಪ್ರಾಸಂಗಿಕ ನಿರೂಪಣೆಯೊಡನೆ ವಾಚನ ಮಾಡಿದರು. ಬಸವೇಶ್ವರ ಶಿವಪ್ಪ ತುಪ್ಪದರ ಮಾತುಗಳಿಂದಲೇ ಅಂದಿನ ಕಾವ್ಯವಾಚನದ ವೈಖರಿಯನ್ನು ಕೇಳೋಣ—

"ಕವಿಗಳ ಪರೋಕ್ಷದಲ್ಲಿ ಕಾವ್ಯವನ್ನು ಓದುವುದಕ್ಕಿಂತಲೂ ಕವಿಗಳ ಪ್ರತ್ಯಕ್ಷದಲ್ಲಿ ಅವರದೇ ಕೃತಿಗಳನ್ನು ಪರಕಾಯ ಪ್ರವೇಶದಂತೆ ತಮ್ಮ ಭಾವೈಕ್ಯತಂದು, ರಾಗಕ್ಕೆ ಅಳವಡಿಸಿಕೊಂಡು ವಾಚನ ಮಾಡಿದ್ದನ್ನು ಈ ಬಸವ ದರ್ಶನದ ಮುಖಾಂತರ ಕೇಳಿ ಮುಗ್ಧನಾದೆನು. ನನಗೆ ನಾನೆ ತಿಳಿಯದಷ್ಟು ವಿಸ್ಮಿತನಾದೆ. ಸಾಹಿತ್ಯ ಸಂಗೀತ ಕಲೋಪಾಸಕರಿಗೆ ಜಾತಿ ಮತ ಪಂಥಗಳು ಕೀಳೆಂಬ ಅನುಭವವು ದಿಟವಾಯಿತು. ಗಮಕವೆಂದರೇನೆಂಬುದನ್ನು ಅರಿಯದ ವಯಸ್ಸಿನಲ್ಲಿ ಭಾರತ ಬಿಂದೂರಾಯರ ವಾಚನವನ್ನು ಕೇಳಿದ್ದೆ. ಈಗ ಅವರ ಶಿಷ್ಯೆಯರಾದ ಶ್ರೀಮತಿ ಶಕುಂತಲಾ ಬಾಯಿಯವರಿಂದ ಕಾವ್ಯವಾಚನವನ್ನು ಕೇಳಿ ಆನಂದಿಸುತ್ತಿದ್ದೇನೆ."

ಬಸವೇಶ್ವರ ಶಿವಪ್ಪ ತುಪ್ಪದ ಅವರು ಶಕುಂತಲಾಬಾಯಿಯ "ಬಸವ ದರ್ಶನಂ" ಕಾವ್ಯವಾಚನವನ್ನು ಧ್ವನಿಮುದ್ರಿಕೆಯಲ್ಲಿ ಮಾಡಿಸಿಕೊಂಡಿದ್ದಾರೆ.*

"ಭಾರತ ಸಿಂಧು ರಶ್ಮಿ" ಕಾವ್ಯವಾಚನ

ಇಷ್ಟರಲ್ಲಿಯೇ ಡಾ|| ವಿನಾಯಕ ಕೃಷ್ಣ ಗೋಕಾಕ್ ಅವರ "ಭಾರತ ಸಿಂಧು ರಶ್ಮಿ" ಎಂಬ ಸಂಕೀರ್ಣ (ಸರಳ ರಗಳೆಯ ಛಂದಸ್ಸಿನಿಂದ ಹದಗೊಳಿಸಿಕೊಂಡ ಒಂದು ವಿಧಾನ) ಛಂದಸ್ಸಿನಲ್ಲಿ ಮಹಾಕಾವ್ಯ ಪ್ರಕಟವಾಗಲಿದೆ. ಈ ಮಹಾ ಕಾವ್ಯ ಹಸ್ತಪ್ರತಿಯಲ್ಲಿದ್ದಾಗ ಕವಿವರ್ಯರ ದಯೆಯಿಂದ ಪೀಠಿಕಾ ಸಂಧಿಯಿಂದ ಆರಿಸಿದ ಕೆಲವು ಭಾಗಗಳನ್ನು ಅವರ ಸಮ್ಮುಖದಲ್ಲಿಯೇ ವಾಚನ ಮಾಡುವ ಸುಕೃತ ಶಕುಂತಲಾಬಾಯಿಗೆ ಪ್ರಾಪ್ತವಾಗಿತ್ತು. ಸುಮಾರು 150 ಸಾಲುಗಳನ್ನು ಪೀಠಿಕಾ ಸಂಧಿಯಿಂದ ಆರಿಸಿಕೊಂಡಿತ್ತು. ನಿಸ್ಸಾರ್ ಅಹಮದ್. ಸಿಕ್ಕಣ್ಣ, ರಂಗನಾಥ ಎಕ್ಕುಂಡಿ, ಎನ್. ಡಿ. ಕುಲಕರ್ಣಿ, ಕೊರಟಿ ಶ್ರೀನಿವಾಸರಾವ್ ಮೊದಲಾದ ಸಾಹಿತಿಗಳ ಪುಟ್ಟ ಸಭೆ ಸೇರಿತ್ತು. ಶಕುಂತಲಾಬಾಯಿಯ ವಾಚನ ಮುಗಿದ ಕೂಡಲೆ ಗೋಕಾಕರು ShakuntalaBai gave rebrith to my epic (ಶಕುಂತಲಾಬಾಯಿ ನನ್ನ ಕಾವ್ಯಕ್ಕೆ ಪುನರ್ಜನ್ಮವಿತ್ತರು) ಎಂದರು. ಶಕುಂತಲಾಬಾಯಿ ವಾಚಿಸಿದ ಭಾಗದಲ್ಲಿ ಕೆಲವು ಸಾಲುಗಳನ್ನು "ಭಾರತ ಸಿಂಧು ರಶ್ಮಿ" ಕಾವ್ಯದ ಹಸ್ತಪ್ರತಿಯಿಂದ ಇಲ್ಲಿ ಉದ್ಧರಿಸಿದೆ—

"ಮೊದಲು ನೆನೆವೆನು ನಾನು ದತ್ತಾತ್ರೇಯನನು.
ಯಾರ ಸ್ಮರಣೆಯು ನನ್ನ ಶೈಶವವ ಬೆಳಗಿತ್ತು ;

---

*ನಮ್ಮಲ್ಲಿ "ಬಸವ ದರ್ಶನಂ" ಕಾವ್ಯದ ಪ್ರತಿಯಿಲ್ಲವಾಗಿ ಆ ಕಾವ್ಯದ ಶೈಲಿಯ ಪರಿಚಯ ಮಾಡಿಕೊಡಲು ಸಾಧ್ಯವಾಗಿಲ್ಲ.

ಯಾರ ಧ್ವನಿ ಮೊಳಗಿತ್ತು ಕಾಂತರಗಳ ಮಧ್ಯೆ
ಅಭಯವಾಣಿಯು ; ದಾರಿ ತೋರಿಸಿತು ಯಾರ ಕೈ,
ಸ್ವರ್ಗ-ನರಕದ ನಡುವೆ ಬೆಸಿಬೊಪೆವಿರಲು ಮಾರ್ಗ.
ದತ್ತ ಪೂಜನದಲ್ಲಿ ಮತ್ತ ಮಾನಸನಾದೆ.
ಬೆರೆತಿತ್ತು ರಕ್ತದಲಿ ದೈವಭಕ್ತಿಯ ಕಾಣ್ಕೆ.
ತ್ರಿಮೂರ್ತಿಗಳು ನನ್ನ ಕಂದರೆಂಪಸೂಯೆ
ಭುವನದಲಿ ಮೆರೆಸಿಪಳು ತನ್ನ ತಾಯ್ತನ ; ಅವಳ
ಅಕ್ಕರೆಯ ನಂದನ ನೀನು ; ಸಂತತ ನಿನ್ನ ಅವತರಣ !
ಮುಡಿಪಿಡುವೆ ಬದುಕಿಪನು ; ಕರುಣಿಸು ನಿನ್ನ ಕಾಣ್ಕೆಯನು."

ಭಾರತ-ಸಿಂಧುರಶ್ಮಿ ಕಾವ್ಯದ ಪೀಠಿಕಾ ಸಂಧಿಯು ಮಂಗಲಾಚರಣ ಹೀಗಿದೆ—

"ಪಂಚ ದೈವತಕಿರುವ ಏಕತ್ವವನು ಕಂಡೆ.
ನನ್ನ ತ್ರಿತ್ವಕೆ, ಏಕರೊಪತೆ ಇಲ್ಲ.
ಮೂರು ದಿಕ್ಕಿಗೆ ಮೂವರೆಳೆಯುತಿಹರೀ ಬಾಳು !
ತಾನು ತಿಳಿದಂತೆ ತಾನಿಹೆನೆಂಬ ಗೋಕಾಕು ;
ಉಳಿದವರು ಕಂಡಂತೆ ತಾನಿಹೆನೆಂಬ ಗೋಕಾಕು ;
ಒಳಗೊಳಗೆ ತಾನೆ ತಾನಾಗಿರುವ ಗೋಕಾಕು !
ತಾನೆ ತಾನಾದ ಗೋಕಾಕು ಉಳಿದಿಬ್ಬರನು
ಜೀರ್ಣಿಸುವೊಲು ಹರಸು, ವೈರಾಗ್ಯಸುಂದರನೆ !
ಅಂದಾಗುವುದು ನನ್ನ ಬಾಳ್ಮೆಯು ಮಹಾಕಾವ್ಯ."

ಕುವೆಂಪು ಪ್ರಾರಂಭಿಸಿದ ಆಧುನಿಕ ಮಹಾಕಾವ್ಯ ಯುಗ ಗರ್ಭದಲ್ಲಿ ಇನ್ನೂ ಒಂದೆರಡು ಮಹಾಕಾವ್ಯಗಳು ಕೆಲವು ವರ್ಷಗಳಲ್ಲಿ ನಮಗೆ ಲಭಿಸಬಹುದು. ಪೂಜ್ಯರಾದ ಪು. ತಿ. ನ. "ಶ್ರೀ ಕೃಷ್ಣ ಚರಿತ ಮಾನಸ" ಎಂಬ ಮಹಾ ಕಾವ್ಯರಚನೆಯಲ್ಲಿ ಇದ್ದಾರೆಂದು ಕಿವಿಮಾತು ಕೇಳಿ ಬರುತ್ತಿದೆ. ಯುವಜನ ಸಾಹಿತಿ-ಕವಿಗಳಲ್ಲಿ ಜನಪ್ರಿಯರಾಗಿರುವ ಹಿ. ಮ. ನಾಗಯ್ಯನವರು ಭಾರತ ಸ್ವಾತಂತ್ರ್ಯ ಸಂಗ್ರಾಮವನ್ನು ಕುರಿತು ಈಗಾಗಲೇ ಮಹಾಕಾವ್ಯ ರಚನೆಯಲ್ಲಿ ತೊಡಗಿ ಎರಡು ಮೂರು ಸಾವಿರ ಸಾಲುಗಳಷ್ಟು ರಚನೆ ಮಾಡಿದ್ದಾರೆ. ನಮ್ಮ ಮಿತ್ರ ಗಮಕಿ ಎಸ್. ನಾಗೇಶರಾಯರು ಮುಂಬಯಿಲಿರುವ ನಾಗಯ್ಯನವರ ಮಹಾ ಕಾವ್ಯದ ಸವಿಯನ್ನು ಮಿತ್ರಗೋಷ್ಠಿಯಲ್ಲಿ ಗಮಕ ಮಾಡಿ ಸಹೃದಯರಿಗೆ ತೋರಿಸಿದ್ದಾರೆ. ಶಕುಂತಲಾಬಾಯಿಯವರೂ ನಾಗಯ್ಯನವರ **"ಗಾಂಧಿಯುವತಾರ"** ವೆಂಬ ಕವನವನ್ನು ಗಾಂಧೀ ಜಯಂತಿ, ಸರ್ವ ದಿನಾಚರಣೆಯಲ್ಲಿ ಓದಿದ್ದಾರೆ. ಬಾಹುಬಲಿಯನ್ನು ಕುರಿತು ನಾಗಯ್ಯನವರು ರಚಿಸಿರುವ **"ಶಾಂತಿ ಸಂಪದ ಸಿಂಧು"** ಎಂಬ ಕವನಕ್ಕೆ ಕಂಠದಾನ ಮಾಡಿ ಧ್ವನಿಮುದ್ರಿಕೆಯಲ್ಲಿ ಮಾಡಿಸಿದ್ದಾರೆ. ನಾಗಯ್ಯನವರ ಮಹಾ ಕಾವ್ಯಕ್ಕೆ ಕಂಠದಾನ ಮಾಡುವ ಪ್ರಸಂಗವೂ ಇದೆ.

ಇದೇ 1982ರ ಅಕ್ಟೋಬರ್ 2ನೆಯ ದಿನಾಂಕ ಗಾಂಧೀ ಜಯಂತಿಯ ಪವಿತ್ರ ಪುಣ್ಯದಿನದಂದು ಕರ್ಣಾಟಕ ಗಮಕ ಕಲಾ ಪರಿಷತ್ತು ಗಮಕ ಕಲಾ ಮಹಾಭಿಮಾನಿ ಜಿ. ನಾರಾಯಣ ಅವರ ಅಧ್ಯಕ್ಷತೆಯಲ್ಲಿ ರೂಪುಗೊಂಡಿತು. ಅದರ ಉದ್ಘಾಟನಾ

ಸಮಾರಂಭಕ್ಕೆ ಸಂದೇಶಗಳು ಹಲವಾರು ಬಂದಿದ್ದವು. ಅವುಗಳಲ್ಲಿ ಪೂಜ್ಯ ಮಾಸ್ತಿಯವರ ಸಂದೇಶವು ಮಹತ್ವಪೂರ್ಣವಾಗಿತ್ತು. ಹಿರಿಯರಾದ ಮಾಸ್ತಿಯವರು ಕರ್ಣಾಟಕ ಗಮಕ ಕಲಾಪರಿಷತ್ತಿಗೆ ಶುಭ ಕೋರುತ್ತ ತಮ್ಮ ಸಂದೇಶದಲ್ಲಿ "ಗಮಕಿಗಳು ಪ್ರಾಚೀನ ಕಾವ್ಯಗಳ ಜೊತೆಗೆ ಆಧುನಿಕ ಕಾವ್ಯಗಳ ವಾಚನಗಳನ್ನೂ ಮಾಡತೊಡಗಬೇಕು" ಎಂದು ನುಡಿದಿದ್ದಾರೆ. ನಮ್ಮ ಗಮಕಿಗಳು ಮಾಸ್ತಿಯವರ ಸಂದೇಶವನ್ನು ಆಗ ಮಾಡಿಸಬೇಕೆಂದು ನಾನೂ ಮಾಸ್ತಿಯವರ ಜೊತೆ ದನಿಗೂಡಿಸಿ ನಮ್ಮ ಗಮಕಿಗಳನ್ನು ಪ್ರಾರ್ಥಿಸಿಕೊಳ್ಳುತ್ತೇನೆ.

ಮಾಸ್ತಿಯವರ ಶ್ರೀರಾಮ ಪಟ್ಟಾಭಿಷೇಕ ಕಾವ್ಯವಾಚನದ ಬಗೆಗೆ ಪ್ರಸ್ತಾಪಿಸುತ್ತಿರುವ ಸಂದರ್ಭದಲ್ಲಿ ನಾನು ವಿಷಯಾಂತರಿಸಿ ಇತರ ಸಮಕಾಲೀನ ಕಾವ್ಯಗಳನ್ನು ಕುರಿತು ಬರೆಯುತ್ತಿರುವುದಕ್ಕೆ ಮುಖ್ಯ ಕಾರಣವೆಂದರೆ, ನಮ್ಮ ಸಾಹಿತಿಗಳು, ವಿಮರ್ಶಕರು ಹಾಗೂ ಗಮಕಿಗಳು, ಪ್ರಚಲಿತ ಕಾಲದಲ್ಲಿ ನಮ್ಮ ಕಾವ್ಯಪ್ರಪಂಚದಲ್ಲಿ ಪ್ರಕಟವಾಗುತ್ತಿರುವ ಕೃತಿಗಳ ಬಗೆಗೂ ಕಣ್ಣಾಡಿಸಬೇಕು; ಪರಿಚಯಿಸುವುದಕ್ಕೆ ತೊಡಗಬೇಕು; ನಿಷ್ಪಕ್ಷಪಾತದಿಂದ ಆಧುನಿಕ ಕಾವ್ಯಗಳನ್ನೂ ಬರಮಾಡಿಕೊಳ್ಳಬೇಕೆಂಬ ಕಳಕಳಿ.

ಶಕುಂತಲಾಬಾಯಿ ಶ್ರೀರಾಮ ಪಟ್ಟಾಭಿಷೇಕಕ್ಕೆ ಕಾವ್ಯ ವಾಚನದಿಂದ ನಮನ ಸಲ್ಲಿಸಿ ತಮ್ಮ ಷಷ್ಟಿಪೂರ್ತಿ ನೋಂಪಿಯನ್ನು ಮುಗಿಸಿ ಸಂತೃಪ್ತಿ ಹೊಂದಿದರು. ಶ್ರೋತೃಗಳೂ ಕೇಳಿ ಮಹದಾನಂದ ಹೊಂದಿದರು. ಶ್ರೀರಾಮ ಪಟ್ಟಾಭಿಷೇಕ ಕಾವ್ಯಕ್ಕೆ ನಮೋ, ಪುನರ್ನಮೋ, ಮುಹುರ್ನಮೋ—

"ಜಯ ಜಯ ಶ್ರೀರಾಮ, ಜಯ ರಾಮಚಂದ್ರ ;
ಜಯ ಜಗನ್ಮಾತೆ ಸೀತಾದೇವಿ, ಜಯ ಜಯ ;
ಜಯತು ಲಕ್ಷ್ಮಣ, ಭರತ, ಶತ್ರುಘ್ನ, ಜಯ ಜಯ.
ಜಯತು ಸೀತಾರಾಮದಾಸ ಹನುಮಂತ, ಜಯ.
ಜಯ ಜಯ ಜಯ ಜಯ ಜಯ ಜಯ ಜಯ ಜಯ
ಜಯ ಜಯ ಜಯ ಜಯ ಜಯ ಜಯ ಜಯ ಜಯ

೧೩. ಷಷ್ಟಿ ಶಮಾಬ್ದ ಫಲಶ್ರುತಿ

ಶ್ರೀ

ಪರಮ ಜೀನೇಂದ್ರ ವಾಣಿಯೆ ಸರಸ್ವತಿ, ಬೇರದು ಪೆಣ್ಣ ರೂಪಮಂ।
ಧರಿಯಿಸಿ ನಿಂದುದಲ್ತು; ಅದುವೆ ಭಾವಿಸಿಯೋದುವ, ಕೇಳ್ವ, ಪೂಜಿಪಾ
ಧರಿಸುವ, ಭವ್ಯಕೋಟಿಗೆ ನಿರಂತರ ಸೌಖ್ಯಮನೀವುದಾನದ
ರ್ಕೆರೆದಪೆನ್, ಆ ಸರಸ್ವತಿಯೆ ಮಾಳ್ಕೆ ಮಗಿಲ್ಲಿಯೆ, ವಾಗ್ವಿಳಾಸಮಂ ॥

—ಪಂಪ (ಆದಿ ಪುರಾಣ)

ಕಾವ್ಯವನ್ನು "ಓದುವಗಾ೯ಲಿಪಗೊ೯ಲಿದೀಯೆ" ಚಿತ್ಕಾಂತಿ, ಚಿತ್ಕಾಂತಿ

ಭಾರತೀಯರಲ್ಲಿ ಸನಾತನ ಧರ್ಮಿಗಳು ಪುರಾಣ ಪ್ರವಚನ, ಕಾವ್ಯ ವಾಚನಗಳನ್ನು ಕೇಳುವುದರ ಮೂಲಕ ತಮಗೆ ಯಶಸ್ಸು, ಶ್ರೇಯಸ್ಸು ಪ್ರಾಪ್ತವಾಗುವುದೆಂದು ಅನೂಚಾನವಾಗಿ ನಂಬಿಕೊಂಡು, ಪುರಾಣ ಪ್ರವಚನ, ಕಾವ್ಯ ವಾಚನಗಳಲ್ಲಿ ಅಪಾರ ಭಕ್ತಿ ಶ್ರದ್ಧೆಗಳನ್ನಿಟ್ಟಿದ್ದಾರೆ. ಪುರಾಣ ಪ್ರವಚನಕಾರರು, ಕಾವ್ಯವಾಚನಕಾರರು ಕೂಡ ತಾವು ಪುರಾಣ ಪ್ರವಚನ ಮಾಡುವುದರಿಂದ, ಕಾವ್ಯವಾಚನ ಮಾಡುವುದರಿಂದ, ತಮಗೂ ಸತ್ಫಲ ಪ್ರಾಪ್ತವಾಗಿ, ಮತ್ತು ಕೇಳುವವರಿಗೂ ಸತ್ಫಲ ಪ್ರಾಪ್ತವಾಗುವುದೆಂದು ನಂಬಿದ್ದಾರೆ. ಇಲ್ಲಿ ಗಮಕಿಗಳ ಕಾರ್ಯಭಾರ ಮಹತ್ವಪೂರ್ಣವಾದುದು. ಕವಿಗೂ ಶ್ರೋತೃಗಳಿಗೂ ಗಮಕಿಗಳು ಸೇತುವೆಯಂತೆ. ಕಾವ್ಯವಾಚನ ವ್ಯವಹಾರ ರಸಲೋಕದ ವ್ಯವಹಾರ, ವ್ಯಾಪಾರ ವ್ಯವಹಾರವಲ್ಲ. ಮಹಾಕವಿ ರಾಘವಾಂಕ ಅಂದದ್ದು ತನ್ನ ಹರಿಶ್ಚಂದ್ರ ಕಾವ್ಯವನ್ನು ರಚನೆ ಮಾಡುವಾಗ **ನಮ್ಮ ಜನ ಬದುಕಬೇಕೆಂಬ** ಈ ಘನೋದ್ದೇಶವಿಟ್ಟುಕೊಂಡೆ ಎನ್ನಬಹುದು. ಆತ ತನ್ನ ಹರಿಶ್ಚಂದ್ರ ಕಾವ್ಯವನ್ನು ಅನಪೇಕ್ಷೆಯಿಂದ ನಮ್ಮ ಜನ ಬದುಕಬೇಕೆಂಬೇ ರಚಿಸಿದ.

"ಧರೆಯೊಳು ಹರಿಶ್ಚಂದ್ರ ಚಾರಿತ್ರಮಂ ಕೇಳ್ದ
ನರರೇಳು ಜನ್ಮದಿಂ ಮಾಡಿರ್ದ ಪಾತಕವು
ತರಣಿಯುದಯದ ಮುಂದೆ ನಿಂದ ತಿಮಿರದ ತೆರದೆ
ಹರಿಯುತಿಹುದೇಕೆಂದೊಡೆ ॥

ಹರನೆಂಬುದೇ ಸತ್ಯ ಸತ್ಯವೆಂಬುದು ಹರನು
ಎರಡಿಲ್ಲವೆಂದು ಶ್ರುತಿ ಸಾರುತಿರಲಾ ವಾಕ್ಯ
ವರರೆ ನಿರುತವ ಮಾಡಿ ಮೂಜಗಕೆ ತೋಱದ
ಹರಿಶ್ಚಂದ್ರ ಕಥೆ ಕೇಳ್ದೊಡೆ"

ಕುಮಾರವ್ಯಾಸನಾದರೂ ನಮ್ಮ ರಾಘವಾಂಕನ ಪೀಳಿಗೆಗೆ ಸೇರಿದ ಮಹಾನುಭಾವ ಕವಿ. ತನ್ನ ಭಾರತವನ್ನು ಓದಿದವರಿಗೆ, ಕೇಳುವವರಿಗೆ ಲಭಿಸುವ ಫಲಪ್ರಾಪ್ತಿಯನ್ನು ಹೀಗೆ ವಿವರಿಸಿದ್ದಾನೆ—

"ವೇದ ಪಾರಾಯಣದ ಫಲ ಗಂ
ಗಾದಿ ತೀರ್ಥಸ್ನಾನ ಫಲ ಕೃ
ಚ್ಛಾದಿ ತಪಸಿನ ಫಲವು ಜ್ಯೋತಿಷ್ಟೋಮಯಾಗ ಫಲ
ಮೇದಿನಿಯ ನೊಲಿದಿತ್ತ ಫಲ ವ
ಸ್ತ್ವಾದಿ ಕನ್ಯಾದಾನ ಫಲವಹು
ದಾವರಿಸಿ ಭಾರತದೊಳೊಂದಕ್ಷರವ ಕೇಳ್ದರಿಗೆ."

ಜೈಮಿನಿ ಭಾರತದ ಮಹಕವಿ ಲಕ್ಷ್ಮೀಶನು ತನ್ನ ಕಾವ್ಯವನ್ನು ಓದಿದವರಿಗೆ, ಕೇಳಿದವರಿಗೆ ಆಶಿಸುವ ಫಲಶ್ರುತಿ ಇಂತಿದೆ—

"ಲೋಕದೊಳಖಿಳ ಪುಣ್ಯ ಕರ್ಮದಿಂ ಧರ್ಮದಿಂ।
ಭೂ ಕನಕಮಣಿ ಧೇನು ದಾನದಿಂ ಧ್ಯಾನದಿಂ ಪಡೆವ
ಸದ್ಗತಿಯನೀವ॥

ಈ ಕಥೆಯನೊಲವಿಂದ ಕೇಳ್ದರ್ಗೆ ಪೇಳ್ದರ್ಗೆ।
ಶೋಕ ಭಯ ದುಃಖ ಸಂತಾಪಮಂ ಪಾಪಮಂ।
ನೂಕಿ ನಿರ್ಮಲತರ ಸುಬುದ್ಧಿಯಂ ಸಿದ್ಧಿಯಂ ಹರಿ
ಕೂಡುತಿಹಂ ಕೃಪೆಯೊಳು॥"

ರಾಷ್ಟ್ರಕವಿ ಕುವೆಂಪು ತಮ್ಮ "ಶ್ರೀ ರಾಮಾಯಣ ದರ್ಶನಂ" ಆಧುನಿಕ ಮಹಾ ಕಾವ್ಯವನ್ನು ಓದುವರ್ಗಾಲಿಪರ್ಗೆ ಬಯಸುವ ಫಲಶ್ರುತಿಯಾದರೂ ಎಂಥದು? ಕೇಳಿ—

"ಬನ್ನಿಮಾಶೀರ್ವಾದಮಂ ತನ್ನಿಮಾವಿರ್ಭವಿಸಿ
ಅವತರಿಸಿಮಾ ಪುಣ್ಯಕೃತಿಯ ರಸಲೋಕಕ್ಕೆ,
ನಿತ್ಯ ರಾಮಾಯಣದ ಹೇ ದಿವ್ಯ ಚೇತನಗಳಿರ!
ವಾಗಾರ್ಥ ರಥವೇರಿ, ಭಾವ ದನ್ನಿಯ ಪಥಂ
ಬಿಡಿದು ಬನ್ನಿಂ, ಸಚ್ಚಿದಾನಂದ ಪೂಜೆಯಂ
ಸಹೃದಯ ಹೃದಯ ಭಕ್ತಿ ನೈವೇದ್ಯಮಂ ಕೊಂಡು
ಓದುವರ್ಗಾಲಿಪರ್ಗೊಲಿದೀಯೆ ಚಿತ್ಕಾಂತಿಯಂ!"

ಶಕುಂತಲಾಬಾಯಿ ನಿಚ್ಚಳ ಮನಸ್ಸಿನಿಂದ, ಅನಪೇಕ್ಷವಾಭಾವದಿಂದ 1937ರಿಂದ 1982ರ ವರೆಗೆ ನಲವತ್ತೈದುವರ್ಷಗಳು ತನ್ನ ಕಾವ್ಯವಾಚನ ಪರಿಚಾರಿಕೆಯಿಂದ ನಮ್ಮ ಕನ್ನಡ ಜನಪದವ ಸಾಹಿತ್ಯ ಸಾಂಸ್ಕೃತಿಕ ಸೇವೆ ಮಾಡುತ್ತ ಬಂದಿದ್ದಾರೆ. ಕಾವ್ಯ ವಾಚನವನ್ನು ಒಂದು ಮಹಾ ಯಜ್ಞದಂತೆ ಆಚರಿಸುವಾಗ ತಾವಾಗಿ ಬಯಸದಿದ್ದರೂ ತಾನಾಗಿ ಕೆಲವು ಫಲಗಳು ಪ್ರಾಪ್ತವಾಗುತ್ತವೆ. ಶಕುಂತಲಾಬಾಯಿಗೆ ಕಾವ್ಯ ವಾಚನ ದಿಂದ ತಾನೇ ತಾನಾಗಿ ಲಭಿಸಿದ ಫಲಶ್ರುತಿಯಿದು.

ಶಕುಂತಲಾಬಾಯಿಯು ಗಮಕವನ್ನು ಮಹಾಜನ ಮೆಚ್ಚಿಕೊಂಡ ದ್ಯೋತಕವಾಗಿ ಆಕೆಗೆ ಕರ್ನಾಟಕ ಸಂಚಾರ ಪ್ರಾಪ್ತವಾಯಿತು. ಪುಣ್ಯಕ್ಷೇತ್ರ ಯಾತ್ರೆ ಲಭ್ಯ ವಾಯಿತು. ಕರ್ನಾಟಕದ ಧೀಮಂತ ಸಮಾಜದ ಸಂಪರ್ಕ ಉಂಟಾಯಿತು. ಭಾರತ ದಾದ್ಯಂತ ಸೌಹಾರ್ದ ಪ್ರಿಯರ ವಿಶ್ವಾಸ ಸ್ನೇಹಗಳು ಬೆಳೆದವು.

ಆಕಾಶವಾಣಿಯ ಗಮಕ ಕಲಾವಿದೆಯಾಗುವ ಸುಯೋಗ ಶಕುಂತಲಾಬಾಯಿಗೆ 1943ರಲ್ಲಿ ಬಹು ಬೇಗ ಲಭಿಸಿತು. ಅದರ ದ್ಯೋತಕವಾಗಿ ದೆಹಲಿಯ ಕೇಂದ್ರ ವಾರ ವಾರವೂ ಪ್ರಸಾರ ಮಾಡುತ್ತಿದ್ದ ರಾಷ್ಟ್ರೀಯ ಕಾರ್ಯಕ್ರಮದಲ್ಲಿ ಗಮಕ ಕಲೋಪಾಸಕಿ ಯಾಗಿ ಕರ್ಣಾಟಕದ ಪ್ರಾಚೀನ ಗಮಕ ಕಲೆಯನ್ನು ಪ್ರತಿನಿಧಿಸುವ ಮೊಟ್ಟ ಮೊದಲ ಅವಕಾಶ ಶಕುಂತಲಾಬಾಯಿಗೆ 1957ರಲ್ಲಿ ದೊರಕಿತು. ಶಕುಂತಲಾಬಾಯಿ ಅರವ ತ್ತೊಂದರ ವಯಸ್ಸು ದಾಟಿದ್ದರೂ, ತಮ್ಮ ದೈವದತ್ತವಾದ ಕಂಠಶ್ರೀಯಿಂದ, ಸತತ ಶ್ರಮದ ಸಿದ್ಧಿಯಿಂದ ಆಕಾಶವಾಣಿಯ ಗಮಕ ಕಲಾವಿದರ ಶ್ರೇಣಿಯಲ್ಲಿ ಮುಂಚೂಣಿ ಯಲ್ಲಿದ್ದಾರೆ.

ಕುವೆಂಪು "ಶ್ರೀ ರಾಮಾಯಣ ದರ್ಶನಂ" ಮಹಾಕಾವ್ಯ ಕಬ್ಬಿಣದ ಕಡಲೆಯೆಂಬ ಕಾಲದಲ್ಲಿ 1951ರಲ್ಲೇ ಅದನ್ನು ವಾಚನ ಮಾಡುವ ಸಾಹಸಕ್ಕೆ ಕೈಹಾಕಿದರು ಶಕುಂತಲಾ ಬಾಯಿ. ಕರ್ಣಾಟಕದ ಪ್ರಾಜ್ಞಮತಿಯಿಂದ ಮೊದಲಾಗಿ ನಮ್ಮ ಶ್ರೀ ಸಾಮಾನ್ಯನಾದ ಬೋರೇಗೌಡನು ಕೂಡ ಶಕುಂತಲಾಬಾಯಿಯ "ಶ್ರೀ ರಾಮಾಯಣ ದರ್ಶನಂ" ಕಾವ್ಯ ವಾಚನವನ್ನು ಮೆಚ್ಚಿಕೊಂಡರು. ಕನ್ನಡ ಜನ "ಕೃತಿತೋದದೆಯುಂ ಮಹಾ ಪರಿಣತ ಮತಿ"ಗಳಲ್ಲವೆ? ಗಮಕಿಗಳಲ್ಲಿ "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನ ಮಾಡುವ ಕುತೂಹಲ ಕೆರಳಿತು. ಶಕುಂತಲಾಬಾಯಿಯ "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನವನ್ನು ಮೆಚ್ಚಿಕೊಂಡ ಮಹಾ ಜನ ಸಂಗೀತ ಪ್ರಾಧಾನ್ಯ ವಾಗಿದ್ದ ಗಣೇಶ ರಾಮೋತ್ಸವಗಳಲ್ಲಿ "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನ ಮಾಡಿಸಿ ಆಕೆಗೆ ಸನ್ಮಾನ ಮಾಡುವುದಕ್ಕೆ ತೊಡಗಿದರು. ಬೆಂಗಳೂರು ನಗರದ ಅರಮನೆ ರಸ್ತೆಯಲ್ಲಿರುವ ಓಣಿ ಆಂಜನೇಯ ಸ್ವಾಮಿ ದೇವಸ್ಥಾನದ ಧರ್ಮದರ್ಶಿಗಳ ಕೃಪೆಯಿಂದ ಮೊಟ್ಟ ಮೊದಲಿಗೆ "ಶ್ರೀ ರಾಮಾಯಣ ದರ್ಶನಂ" ಕಾವ್ಯವಾಚನ ಹತ್ತೆಂಟು ದಿವಸಗಳ ವರೆಗೆ ನಡೆಯಿತು. ಶಕುಂತಲಾಬಾಯಿಗೂ ನನಗೂ 19-1-66 ರಂದು ಧರ್ಮದರ್ಶಿಗಳು ಶ್ರೇಷ್ಠ ನ್ಯಾಯಮೂರ್ತಿ ಎಚ್. ಹೊಂಬೇಗೌಡರ ಅಧ್ಯಕ್ಷತೆ ಯಲ್ಲಿ ಕಾವ್ಯವಾಚನ ಕಾಣಿಕೆ ಕೊಟ್ಟು ಅಭಿನಂದನ ಪತ್ರಿಕೆಯನ್ನರ್ಪಿಸಿ, ತಮ್ಮ ಕೃತಜ್ಞತೆಯನ್ನರ್ಪಿಸಿದರು. ಅದರ ಪ್ರಸ್ತಾಪ ಈಗಾಗಲೇ ಬೇರೆ ಕಡೆ ಬಂದಿರುವ ಪ್ರಯುಕ್ತ ಇಲ್ಲಿ ಚರ್ವಿತ ಚರ್ವಣ ಮಾಡಿಲ್ಲ.

ಕುವೆಂಪು ವಿದ್ಯಾವರ್ಧಕ ಸಂಸ್ಥೆ ಶಕುಂತಲಾಬಾಯಿಗೆ ಷಷ್ಟಿ ಪೂರ್ತಿಯಾದ ವಿಷಯವನ್ನು ಗಮನಿಸಿ ಕುವೆಂಪು ಅವರ 78ರ ವರ್ಷಾಬ್ದಿ ಸಮಯದಲ್ಲಿ 1981ರ ಡಿಸೆಂಬರ್ 28ರಂದು ಗಮಕ ವಿದುಷಿಗೆ ಶಾಲು ಹೊದಿಸಿ 1001 ರೂಪಾಯಿಗಳ ನಿಧಿ ಅರ್ಪಿಸಿ ತನ್ನ ಗೌರವ ವ್ಯಕ್ತಪಡಿಸಿದೆ.

ಶಕುಂತಲಾಬಾಯಿ, ಪಂಪ, ರನ್ನ, ಹರಿಹರ, ರಾಘವಾಂಕ, ಕುಮಾರ ವ್ಯಾಸ, ಕುಮಾರ ವಾಲ್ಮೀಕಿ, ಲಕ್ಷ್ಮೀಶ, ರತ್ನಾಕರವರ್ಣಿ ಮೊದಲಾದ ಪ್ರಾಚೀನ ಮಹಾಕವಿ ಗಳನ್ನು ಮಾತ್ರ ವಾಚನ ಮಾಡದೆ ಸುಜ್ಞಾನ ಮತಿಯಿಂದ ಅರ್ವಾಚೀನ ಕವಿಗಳಾದ

ಬಿ. ಎಂ. ಶ್ರೀ, ಗೋವಿಂದಪೈ, ಮಾಸ್ತಿ, ಕುವೆಂಪು, ಡಾ|| ವಿ. ಕೃ. ಗೋಕಾಕ್, ವೈ. ಶೇ. ಅನಂತಪದ್ಮನಾಭರಾವ್, ಸಮೇತನಹಳ್ಳಿ ರಾಮರಾವ್, ಎಂ. ರಾಘವೇಂದ್ರ ರಾವ್, ಹಿ. ಮ. ನಾಗಯ್ಯ ಮೊದಲಾದವರ ಕಾವ್ಯಗಳನ್ನೂ ಶ್ರದ್ಧೆ ವಿಶ್ವಾಸಗಳಿಂದ ಅತ್ಯಗತ್ಯವಾಗಿ ವಾಚದ ಮಾಡಬೇಕೆಂದು ಅರಿತುಕೊಂಡರು. ತುಂಬಿ ಹಾರಾಡಿ ತನಗೆ ಬೇಕಾದಷ್ಟೆ ಮಧುವನ್ನು ಪುಷ್ಪಗಳಿಂದ ಶೇಖರಿಸುವಂತೆ, ಕಾವ್ಯಸಾರವನ್ನು ಹಿರಿದರು. ಕವಿಗಮಕಿಗಳಾದ ಪೂಜ್ಯ ವೈ. ಶೇ. ಅನಂತಪದ್ಮನಾಭರಾಯರ ಶ್ರೇಷ್ಠ ಕೃತಿ ತುಳಸೀದಾಸ ಅನುವಾದ, "ಶ್ರೀರಾಮ ಚರಿತ ಮಾನಸ" ಕಾವ್ಯವನ್ನು ಬೆಂಗಳೂರು ಬಡಾವಣೆ ಬಸವನಗುಡಿಯಲ್ಲಿರುವ ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ವಾಚನ ಮಾಡಿದರು. ಸುಪ್ರಸಿದ್ಧ ಸಾಹಿತಿಗಳಾದ ಸಿದ್ಧವನಹಳ್ಳಿ ಕೃಷ್ಣಶರ್ಮ, ಮಹಾ ಪ್ರಕಾರ ಪಂಡಿತ ಕಾಶಿ ಶ್ರೀಪಾದಾಚಾರ್ಯ, "ಸಂದರ್ಶನ" ಪತ್ರಿಕಾ ಸಂಪಾದಕ ವಿ. ಬಿ. ನಾಯಕ್ ಮೊದಲಾದ ವಿದ್ವನ್ಮಣಿಗಳ ಸಮ್ಮುಖದಲ್ಲಿ, ಬಸವನಗುಡಿಯ ಸಹೃದಯ ಮಹಾಜನಗಳು ಶಕುಂತಲಾಬಾಯಿಗೂ ನನಗೂ ತುಳಸೀದಾಸ ಶ್ರೀರಾಮ ಚರಿತ ಮಾನಸ ಮಹಾ ಮಂಗಳೋತ್ಸವ ದಿನದಂದು ಅಭಿನಂದನ ಪತ್ರಿಕೆ ಅರ್ಪಿಸಿ ಹಮ್ಮಣಿ ಒಪ್ಪಿಸಿದರು. ಶಕುಂತಲಾಬಾಯಿಯ ವಿಷಯವಾಗಿ ಅಭಿನಂದನಾ ಪತ್ರಿಕೆಯಲ್ಲಿ ವ್ಯಕ್ತ ಪಡಿಸಿರುವ ಪ್ರಶಸ್ತಿ ವಚನಗಳು ಇಂತಿವೆ—

ಶ್ರೀಮತಿ ಶಕುಂತಲಾಬಾಯಿಯವರೆ,

ಕನ್ನಡ ನಾಡಿನ ಸುಪ್ರಸಿದ್ಧ ಗಮಕ ವಿದುಷಿಯರಾದ ನಿಮಗೆ ಭಗವಂತನು ಸುಮಧುರ ಕಂಠವನ್ನು ದಯಪಾಲಿಸಿರಲು ನಿಮ್ಮ ಬಾಲ್ಯ ದಲ್ಲಿಯೇ ನಿಮಗೆ ಸಾಹಿತ್ಯ ಸಂಗೀತಗಳ ಕಡೆಗೆ ಒಲವು ಹರಿದಿರಲು ಶ್ರೀ ಹರಿಯ ಕೃಪೆಯಿಂದ ಅನುಕೂಲವಾದ ದಾಂಪತ್ಯ ದೊರೆತ ಮೇಲೆ ನಿಮ್ಮ ಗೃಹಸ್ಥಾಶ್ರಮದಲ್ಲಿ ಭಗವದನುಗ್ರಹದಿಂದ ಕನ್ನಡ ನಾಡಿನಲ್ಲಿ ಪ್ರಖ್ಯಾತ ರಾದ ಭಾರತ ವಾಚನ ಪ್ರವೀಣ ಶ್ರೀ ಸಂ. ಗೋ. ಬಿಂದೂರಾಯರು ಗುರುವಾಗಿ ದೊರೆತು ನಿಮ್ಮಲ್ಲಿದ್ದ ಗಮಕ ಕಲಾ ಪ್ರೌಢಿಮೆ ಪ್ರಚುರ ಗೊಂಡಿತು. ನೀವು ಕನ್ನಡ ನಾಡಿನ ಪ್ರಮುಖ ನಗರಗಳಿಗೆ ದಯಮಾಡಿಸಿ ವಾಚನ ನಡೆಸಿರುವಿರಿ. ನಿಮ್ಮ ಹೆಸರು ಕನ್ನಡ ನಾಡಿನ ಮೂಲೆ ಮೂಲೆ ಗಳಲ್ಲೆಲ್ಲಾ ಮೊಳಗುತ್ತಿದೆ. ನೀವು ಬರೇ ಷಟ್ಪದಿ ಗ್ರಂಥಗಳನ್ನೇ ಅಲ್ಲದೆ, ಚಂಪು, ಸಾಂಗತ್ಯ, ಸರಳ ರಗಳೆ ಗ್ರಂಥಗಳನ್ನು ಅತ್ಯಂತ ಮನೋಹರ ವಾಗಿ ವಾಚನ ಮಾಡಿರುವಿರಿ. ನಿಮ್ಮ ವಾಚನದಿಂದ ಕುವೆಂಪು ಅವರ ರಾಮಾಯಣಕ್ಕೆ ಕೀರ್ತಿ ಬಂದಿತೋ ಕುವೆಂಪು ಅವರ ಗ್ರಂಥವಾಚನದಿಂದ ನಿಮ್ಮ ಖ್ಯಾತಿ ಬೆಳಗಿತೋ ನಿಷ್ಕರ್ಷಿಸಲು ಕಷ್ಟವಾಗಿದೆ. ಗ್ರಂಥವಾಚನ ಕ್ಕಿಂತಲೂ ಅತಿಶಯವಾಗಿದೆ ನಿಮ್ಮ ಗೀತೆಗಳ ಹಾಡುಗಾರಿಕೆ. ಸಂಗೀತ ವನ್ನು ಹಿತಮಿತವಾಗಿ ಸಾಹಿತ್ಯಕ್ಕೆ ಅಳವಡಿಸಿಕೊಂಡು ಕವಿಯ ಭಾವ

ಗಳನ್ನು ಸ್ಫುಟವಾಗಿ ಪ್ರದರ್ಶಿಸುವವರಲ್ಲಿ ನಿಮ್ಮನ್ನು ಬಿಟ್ಟರೆ ಬೇರೆ ಇಲ್ಲ ಎಂಬ ಖ್ಯಾತಿ ಪಡೆದಿರುವಿರಿ. ಸಂಗೀತ ನಿರೂಪಣೆಯಲ್ಲಿ ಶ್ರೀಮತಿ ಎಂ. ಎಸ್. ಸುಬ್ಬಲಕ್ಷ್ಮಿಯವರು, ಗಮಕವಾಚನದಲ್ಲಿ ಶ್ರೀಮತಿ ಶಕುಂತಲಾಬಾಯಿಯವರು ಎಂದು ಅನ್ನಿಸಿಕೊಂಡಿದ್ದೀರಿ, ಅರಮನೆ ಗುರುಮನೆಗಳಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ, ಸಂಗೀತ ಸಮ್ಮೇಳನ, ಗಮಕ ಸಮ್ಮೇಳನಗಳಲ್ಲಿ ವಾಚನ ನಡೆಸಿ 'ಗಾನ ಸರಸ್ವತಿ' ಎನ್ನಿಸಿಕೊಂಡಿದ್ದೀರಿ. ದೆಹಲಿಯ ಆಕಾಶವಾಣಿ ಕೇಂದ್ರದಿಂದ ರಾಷ್ಟ್ರೀಯ ಕಾರ್ಯಕ್ರಮದಲ್ಲಿ ಗಮಕದ ಪ್ರಾತಿನಿಧ್ಯ ವಹಿಸಿ ನೀವು ಹೆಚ್ಚಿನ ಪ್ರಾವೀಣ್ಯವನ್ನು ಗಳಿಸಿದ್ದೀರಿ. ಕಳೆದ ವರ್ಷ ರಾಷ್ಟ್ರಕವಿ ಕುವೆಂಪು ಅವರ 'ರಾಮಾಯಣ ದರ್ಶನಂ' ಗ್ರಂಥವನ್ನು ಬೆಂಗಳೂರು ನಗರದಲ್ಲಿ ಮೈಸೂರು ಹೈಕೋರ್ಟು ಶ್ರೇಷ್ಠನ್ಯಾಯಾಧೀಶರಾದ ಶ್ರೀ ಹೊಂಬೇಗೌಡರ ಅಧ್ಯಕ್ಷತೆಯಲ್ಲಿ ಆದ್ಯಂತ ವಾಚನ ನಡೆಸಿ, ಸನ್ಮಾನಗೊಂಡು ಅಭಿನಂದನ ಪತ್ರಿಕೆಯನ್ನು ಸ್ವೀಕರಿಸಿದ್ದೀರಿ. ರಾಗ-ರಸ, ಶಬ್ದ-ಅರ್ಥ, ಶೃತಿ-ಯತಿ, ಗತಿ-ಗಮಕಗಳಿಂದ ಕೂಡಿದ ನಿಮ್ಮ ಕಾವ್ಯ ವಾಚನವು ಶ್ರೋತೃಗಳಿಗೆ ನಿಜವಾದ ಕಾವ್ಯಾನಂದವನ್ನು ಉಂಟುಮಾಡುತ್ತದೆ ಎಂಬುದನ್ನು ನಾವು ಸ್ವತಃ ಮನಗಂಡಿದ್ದೇವೆ. ಹೀಗೆ ನೀವು ನಾಡು-ನುಡಿಗಳ ಸೇವೆಯನ್ನು ಮಾಡುತ್ತಿರುವುದಲ್ಲದೆ, ಸದ್ಗೃಹಿಣಿಯಾಗಿ ಸಂಸಾರ ನಡೆಸುವುದರ ಜೊತೆಗೆ ನಿಮ್ಮ ಪತಿಯೊಂದಿಗೆ ಕೂಡಿ ಮಕ್ಕಳ ಮಂಟಪವನ್ನು ಕಟ್ಟಿ ಶಿಶು ಶಿಕ್ಷಣದಲ್ಲಿಯೂ ಭಾಗವಹಿಸಿ, ನಿಮ್ಮ ತವರಿಗೂ, ನೀವು ಸೇರಿದ ಅತ್ತೆಯ ಮನೆಗೂ ಕೀರ್ತಿ ತಂದಿರುವಿರೆಂದು ನಾವುಗಳು ಸಂತೋಷದಿಂದ ಹೇಳಬಯಸುತ್ತೇವೆ.

ಶಕುಂತಲಾಬಾಯಿಯ ಗಮಕ ಪರಿಚಾರಿಕೆ, ಆಕೆಯ ಗಮಕ ಕಲಾಭಿವ್ಯಕ್ತಿಯನ್ನು ನಮ್ಮ ರಾಜ್ಯದ ಸಾಹಿತ್ಯ ಅಕಾಡೆಮಿ ಗಮನಿಸಿ 1969ರಲ್ಲಿ ಆಕೆಗೆ ಗಮಕ ಸೇವೆಗಾಗಿ ರಾಜ್ಯ ಪ್ರಶಸ್ತಿ ನೀಡಿತು. ಆ ಸಮಯದಲ್ಲಿ ರಾಜ್ಯಪಾಲರಾಗಿದ್ದ ಧರ್ಮವೀರರು 1970ರಲ್ಲಿ ಶಾಲು ಹೊದಿಸಿ, ಶ್ರೀ ನಟರಾಜ ವಿಗ್ರಹವನ್ನಿತ್ತು, ಪ್ರಶಸ್ತಿ ಪತ್ರ ದಯಪಾಲಿಸಿ ತಮ್ಮ ಹರ್ಷ ವ್ಯಕ್ತಪಡಿಸಿದರು. ಡಾ|| ಅ. ನ. ಕೃ., ಶಿಕ್ಷಣ ಸಚಿವ ಕೆ. ವಿ. ಶಂಕರ ಗೌಡರು, ಪ್ರಶಸ್ತಿ ವಿತರಣ ನಿರ್ದೇಶಕರಾಗಿ 'ಪರ್ವತವಾಣಿ' ಸಮಾರಂಭದಲ್ಲಿ ಮುಖ್ಯಪಾತ್ರ ವಹಿಸಿದ್ದರು.

ಬೆಂಗಳೂರಿನಲ್ಲಿ ಸಾಹಿತ್ಯ, ಸಂಗೀತ, ಕಲೆ, ಸಂಸ್ಕೃತಿಗಾಗಿ ಶ್ರಮಿಸುತ್ತಿರುವ ಯಂಗ್‌ರೈಟರ್ಸ್ ಅಂಡ್ ಆರ್ಟಿಸ್ಟ್ ಗಿಲ್ಡ್ 1976ರಲ್ಲಿ ತನ್ನ ವಾರ್ಷಿಕೋತ್ಸವದಲ್ಲಿ, ಕಲಾವಿದರು, ಸಂಗೀತ ವಿದ್ವಾಂಸರು, ಗಮಕಿಗಳನ್ನು ಸೇರಿಸಿ ಅಂತರರಾಷ್ಟ್ರೀಯ ಪ್ರಖ್ಯಾತ ಶ್ರೀಮತಿ ರುಕ್ಮಿಣಿ ಅರುಂಡೆಲ್ ಅವರ ಅಧ್ಯಕ್ಷತೆಯಲ್ಲಿ ಶಾಲು ಹೊದಿಸಿ, ಪ್ರಶಸ್ತಿ ಫಲಕವಿತ್ತು ತನ್ನ ಗೌರವವನ್ನು ವ್ಯಕ್ತಪಡಿಸಿತು. ಗಮಕ ವಿದುಷಿಯ ಜೊತೆ

ಯಲ್ಲಿ ನಮ್ಮ ನಾಡಿನಾದ್ಯಂತ ಪ್ರಸಿದ್ಧರಾದ "ಸಂಗೀತ ಕಲಾನಿಧಿ" ಬಿ. ಎಸ್. ರಾಜಅಯ್ಯಂಗಾರ್, ನೃತ್ಯಕಲಾ ವಿಶಾರದೆ ಡಾ|| ವೆಂಕಟಲಕ್ಷಮ್ಮ, ಚಿತ್ರಕಲಾವಿದ ಸುಬ್ರಹ್ಮಣ್ಯರಾಜು, ಪತ್ರಿಕೋದ್ಯಮಿ ಚಂದ್ರಶೇಖರ್ ಇವರುಗಳೂ ಪ್ರಶಸ್ತಿ ವಿಜೇತರಾದರು.

ಬೆಂಗಳೂರಿನಲ್ಲಿರುವ ತಿರುಪತಿ ದೇವಸ್ಥಾನದ ವಾರ್ತಾಕೇಂದ್ರ ಸಂಘ ತನ್ನ ವಾರ್ಷಿಕೋತ್ಸವದಲ್ಲಿ ಸಾಹಿತಿಗಳನ್ನು, ಕಲಾವಿದರನ್ನು, ಸಮಾಜ ಸೇವಕರನ್ನು ಗೌರವಿಸುವ ಪರಿಪಾಟವನ್ನು ಇಟ್ಟುಕೊಂಡಿದೆ. 'ದೀನಬಂಧು' ವಿ. ಆರ್. ನಾಯುಡು ಆ ಸಂಸ್ಥೆಯ ಅಧ್ಯಕ್ಷರು. ಅವರು ಗುಣಗ್ರಾಹಿಗಳು. ಶಕುಂತಲಾಬಾಯಿಯ ಗಮಕ ಕಲಾ ಸೇವೆ ಅವರ ಸೂಕ್ಷ್ಮಮತಿಯನ್ನು ಆಕರ್ಷಿಸಿತು. ಅವರು 1971ರಲ್ಲಿ ನಡೆಸಿದ ತಮ್ಮ ಸಂಸ್ಥೆಯ 13ನೆಯ ವಾರ್ಷಿಕೋತ್ಸವದಲ್ಲಿ, ಆಗ ನಮ್ಮ ರಾಜ್ಯದ ರಾಜ್ಯಪಾಲರಾಗಿದ್ದ ಧರ್ಮವೀರರ ಹಸ್ತದಿಂದ "ಕಾವ್ಯವಾಚನ ಪ್ರವೀಣೆ" ಎಂಬ ಬಿರುದಾಂಕಿತ ಪ್ರಶಸ್ತಿಪತ್ರ ಕೊಡಿಸಿ, ಶಾಲು ಹೊದಿಸಿ, ತಿರುಪತಿಯ ಆರಾಧ್ಯದೈವ ಶ್ರೀ ವೆಂಕಟೇಶ್ವರ ಸ್ವಾಮಿಯ ಸುಂದರ ಪಟವನ್ನಿತ್ತು ಗೌರವಿಸಿದರು.

ಹೀಗೆ ಶಕುಂತಲಾಬಾಯಿಗೆ ತಮ್ಮ ಗಮಕ ಪರಿಚಾರಿಕೆಯಿಂದ ದೊರೆತಿರುವ ಮಹಾಜನ ಮನ್ನಣೆ, ರಾಜ್ಯದ ಗೌರವಗಳು ಅಪಾರವಾಗಿವೆ. ಅವುಗಳ ಪಟ್ಟಿಯನ್ನು ಬೇಕಾದಷ್ಟು ಬೆಳೆಸಬಹುದು. ಬಹು ಮುಖ್ಯವಾದ, ಗೌರವ ಭೂಷಣವಾದ ಒಂದೆರಡು ಇತ್ತೀಚಿನ ಗೌರವ ಸಮಾರಂಭಗಳ ವಿಷಯವಾಗಿ ಕೆಲವು ಮಾತುಗಳನ್ನು ಹೇಳ ಬಯಸುತ್ತೇನೆ.

ಕನ್ನಡ ಸಾಹಿತ್ಯ ಪರಿಷತ್ತು, ಪರಿಷತ್ತಿನ ಅಧ್ಯಕ್ಷರಾಗಿದ್ದ ಶ್ರೀ ಜಿ. ನಾರಾಯಣ ಅವರ ಕಾಲದಲ್ಲಿ ಗಮಕ ಸಮ್ಮೇಳನವನ್ನು ಅಖಿಲ ಕರ್ನಾಟಕ ವ್ಯಾಪ್ತಿಯಲ್ಲಿ ಹಮ್ಮಿಕೊಂಡಿತು. ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಗಮಕ ಗೋಷ್ಠಿಗಳನ್ನು ಮಾತ್ರ ಹಮ್ಮಿಕೊಂಡಿದ್ದ ಕನ್ನಡ ಸಾಹಿತ್ಯ ಪರಿಷತ್ತು ಈಗ ಗಮಕ ಸಮ್ಮೇಳವವನ್ನು ನಡೆಯಿಸುವ ಪ್ರಜ್ಞೆಯನ್ನು ಬೆಳೆಸಿಕೊಂಡಿದ್ದು ಶ್ರೀ ಜಿ. ನಾರಾಯಣ ಅವರ ಅಧ್ಯಕ್ಷ ಪಟ್ಟದಲ್ಲಿ. ವಯೋವೃದ್ಧರೂ ಜ್ಞಾನವೃದ್ಧರೂ ಆದ "ಗಮಕ ಕಲಾನಿಧಿ" ಜೋಳದ ರಾಶಿ ದೊಡ್ಡನಗೌಡರು ಪ್ರಥಮ ಅಖಿಲ ಕರ್ನಾಟಕ ಗಮಕ ಸಮ್ಮೇಳನದ ಅಧ್ಯಕ್ಷ ಗದ್ದುಗೆಯನ್ನು ಸ್ವೀಕರಿಸಿದರು 1972ರಲ್ಲಿ. ಹಂ. ಪ. ನಾಗರಾಜಯ್ಯ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಜಿ. ನಾರಾಯಣ ಅವರ ಸತ್ಸಂಪ್ರದಾಯವನ್ನು ಮುಂದುವರಿಸಿದರು. ಕನ್ನಡ ಸಾಹಿತ್ಯ ಪರಿಷತ್ತಿನ, ಮೈಸೂರು ಜಿಲ್ಲಾ ಸಮಿತಿಯ ಅಧ್ಯಕ್ಷ ವಿ.ಎಚ್. ಗೌಡರು ಅಖಿಲ ಕರ್ನಾಟಕ ದ್ವಿತೀಯ ಗಮಕ ಸಮ್ಮೇಳನದ ಅಧ್ವರ್ಯುವಾದರು. 1979ರಲ್ಲಿ ಶಕುಂತಲಾಬಾಯಿ ಗಮಕ ಸಮ್ಮೇಳನದ ಅಧ್ಯಕ್ಷಿಣಿಯ ಗದ್ದುಗೆಯನ್ನೇರಿದರು. ಗಮಕ ಸಮ್ಮೇಳನದ ವಿತರಣೆ ಏನು ? ಗಮಕ ಸಮ್ಮೇಳನಾಧ್ಯಕ್ಷಿಣಿಯ ಮೆರವಣಿಗೆ ಮೈಸೂರು ನಗರದ ರಾಜಬೀದಿಗಳಲ್ಲಿ ವಿಜೃಂಭಿಸಿತು. ಶ್ರೀರಂಗಾ

ಚಾರ್ಲ್ಸ್ ಸ್ಮಾರಕ ಭವನವೆನಿಸಿದ ನಗರ ಪುರಭವನದಲ್ಲಿ ಮಹಾವೈಭವದ ಸಮ್ಮೇಳನ. ಕವಿ ಗಮಕಿ ವಾದಿ ವಾಗ್ಮಿಗಳು ಸಭಾಂಗಣವನ್ನು ತುಂಬಿ ಸಮ್ಮೇಳನಕ್ಕೆ ಶಿಖರವೇರಿಸಿದ್ದರು. ರಾಜ್ಯದ ಪೋಲೀಸ್ ಮುಖ್ಯಾಧಿಕಾರಿ ಶ್ರೀ ವೀರಭದ್ರಯ್ಯ, ಪರಿಷತ್ತಿನ ಅಧ್ಯಕ್ಷ ಹಂ. ಪ. ನಾಗರಾಜಯ್ಯ, ಜಿಲ್ಲಾ ಸಾಹಿತ್ಯ ಸಮ್ಮೇಳನಾ ಸಮಿತಿಯಧ್ಯಕ್ಷ ವಿ. ಎಚ್. ಗೌಡ, ಮೊದಲಾದವರು ವೇದಿಕೆಯ ಮೇಲೆ ಮಂಡಿಸಿದ್ದರು. ಶಕುಂತಲಾಬಾಯಿ ತಮ್ಮ ಅಧ್ಯಕ್ಷ ಭಾಷಣವನ್ನು ಒಂದು ಗಂಟೆಯಷ್ಟು ದೀರ್ಘಕಾಲ ಬೆಳೆಸಿದರು. ತಮ್ಮ ಭಾಷಣದಲ್ಲಿ ಉದಾಹರಿಸಿದ ಪದ್ಯಗಳನ್ನು ಗಮಕ ವೈಶಿಷ್ಟ್ಯದಲ್ಲಿ ಗಮಕ ಮಾಡಿ ಶ್ರೋತೃ ವಿಭೂತಿಗಳ ಮನಸ್ಸನ್ನು ಸೂರೆಗೊಂಡರು. ಗಮಕ ಸಮ್ಮೇಳನಾಧ್ಯಕ್ಷ ಭಾಷಣ ವಿದ್ವತ್ಪೂರ್ಣವಾಗಿತ್ತೆಂದು ಮಹಾಸಭೆ ಗುಣಗ್ರಾಹಿ ದೃಷ್ಟಿಯಿಂದ ಮೆಚ್ಚಿಕೊಂಡಿತು. *

ಗಮಕ ಸಮ್ಮೇಳನದ ಅಧ್ಯಕ್ಷ ಪದವಿ ಶಕುಂತಲಾಬಾಯಿಗೆ ಶುಕ್ರದೆಸೆ. ಬೆಂಗಳೂರಿನ ಗಾಯನ ಸಮಾಜ, ಸಂಗೀತ ಗಾಯನಾಚಾರ್ಯ ಶ್ರೀ ಮಲ್ಲಿಕಾರ್ಜುನ ಮನ್ಸೂರ್ ಅವರ ಅಧ್ಯಕ್ಷತೆಯಲ್ಲಿ 11ನೆಯ ಸಂಗೀತ ಸಮ್ಮೇಳನವನ್ನು ಅತಿ ವೈಭವದಿಂದ ನಡೆಸಿತು. ಒಂದು ವಾರ ಪರ್ಯಂತ ಸಂಗೀತ ವಿದ್ವನ್ಮಣಿಗಳು ಸಭೆ ಸೇರಿ ಸಮ್ಮೇಳನ ಮಹಾ ಯಶಸ್ಸಿನ ಗಗನಕ್ಕೇರಿತು. 1979ರ ನವಂಬರ್ 4ನೆಯ ದಿನಾಂಕ ಮಹಾ ವಿದ್ವತ್ಸಭೆ. ಸಿದ್ಧಗಂಗಾ ಮಠಾಧೀಶರಾದ ಪರಮಪೂಜ್ಯ ಮಹಾವಿದ್ಯಸಂಪನ್ನ ಸರಳ ವಿನಯ ಔದಾರ್ಯಮೂರ್ತಿ, ಶ್ರೀ ಶ್ರೀ ಶ್ರೀ ಡಾ|| ಶಿವಕುಮಾರ ಸ್ವಾಮಿಯವರು ದಯಮಾಡಿಸಿ ಮಹಾವಿದ್ವತ್ಸಭೆಗೆ ಪವಿತ್ರ ಸಾನಿಧ್ಯವನ್ನು ಕರುಣಿಸಿದ್ದರು. ಗಾಯನಾಚಾರ್ಯ ಮಲ್ಲಿಕಾರ್ಜುನ ಮನ್ಸೂರರವರು ಅಧ್ಯಕ್ಷ ಪೀಠವನ್ನಲಂಕರಿಸಿದ್ದರು. ಮಹಾ ಸಂಗೀತ ವಿದ್ವನ್ಮಣಿಗಳು ಗಾಯನ ಸಮಾಜದ ಸಭಾಂಗಣವನ್ನು ಭರ್ತಿ ತುಂಬಿ, ಸಂಗೀತ ಸಮ್ಮೇಳನ ವಿದ್ವತ್ ಸದಸ್ಸಿನ ಘನತೆಗೇರಿತ್ತು. ಶ್ರೀ ಶ್ರೀ ಶ್ರೀ ಡಾ|| ಶಿವ ಕುಮಾರ ಸ್ವಾಮಿಗಳು ತಮ್ಮ ಪವಿತ್ರ ಹಸ್ತದಿಂದ ಪ್ರಶಸ್ತಿ ಪತ್ರ ನೀಡಿ ಶಾಲು ಗೌರವದಿಂದ ಶಕುಂತಲಾಬಾಯಿಯನ್ನು ಅನುಗ್ರಹಿಸಿದರು. ಅವರ ಜೊತೆಯಲ್ಲಿ ನೃತ್ಯಕಲಾ ವಿಶಾರದೆ ಡಾ|| ವೆಂಕಟಲಕ್ಷಮ್ಮ, ಮೃದಂಗ ವಿದ್ವಾನ್ ಶೇಷಪ್ಪ ಅವರಿಗೂ ಸನ್ಮಾನವಾಯಿತು.

ನನ್ನ ಮಾನ್ಯ ಮಿತ್ರ ಕೆ. ಪಿ. ಶಿವಲಿಂಗಯ್ಯ ತಮ್ಮ 50 ವರ್ಷಗಳ ಹುಟ್ಟುಹಬ್ಬವನ್ನು ವಿಜೃಂಭಣೆಯಿಂದ ಸಾರ್ವಜನಿಕ ಪ್ರಾತಿನಿಧ್ಯದಲ್ಲಿ ನೆರವೇರಿಸಿಕೊಂಡಾಗ ಗಮಕಿಗಳನ್ನೂ ಪ್ರವಚನಕಾರರನ್ನೂ ಸನ್ಮಾನಿಸುವ ಹೊಸ ತಿರುವು ಕೊಟ್ಟರು. ಮಲೆನಾಡು ಮಾಸಪತ್ರಿಕೆಯ ಸಂಪಾದಕ ಗುರುಬಸಪ್ಪ ಶೆಟ್ಟರ ಅಧ್ಯಕ್ಷತೆಯಲ್ಲಿ ಶಕುಂತಲಾಬಾಯಿಗೂ ಪಂಡಿತ ನಂಜುಂಡಾರಾಧ್ಯರಿಗೂ ಸನ್ಮಾನವಾಯಿತು.

---

*ಗಮಕ ಸಮ್ಮೇಳನದ ಅಧ್ಯಕ್ಷ ಭಾಷಣವನ್ನು ಅನುಬಂಧದಲ್ಲಿ ಪ್ರಕಟಿಸಿದೆ.

ಶಕುಂತಲಾಬಾಯಿ ತನ್ನ ಅರವತ್ತು ವರ್ಷಗಳ ಆಯಸ್ಸನ್ನು 1981ರ ಏಪ್ರಿಲ್ 2ರಂದು ತುಂಬಿದರು. ತಮ್ಮ ಶ್ರೇಯೋಭಿವೃದ್ಧಿಗಾಗಿ ಪೂಜ್ಯ ಮಾಸ್ತಿಯವರ "ಶ್ರೀರಾಮಪಟ್ಟಾಭಿಷೇಕ" ಕಾವ್ಯವಾಚನ ನೋಂಪಿಯನ್ನು ಸಾಂಸ್ಕೃತಿಕ ಯಜ್ಞದಂತೆ ನಿರ್ಮಲ ಚಿತ್ತದಿಂದ ಕೈಗೊಂಡರು. ಗಮಕಕಲಾಭಿಮಾನಿಗಳಿಗೆ ಶಕುಂತಲಾಬಾಯಿ ಅರವತ್ತು ವರ್ಷದ ಸಾರ್ಥಕ ಜೀವನವನ್ನು ಮುಗಿಸಿದುದು ಒಬ್ಬರ ಕಿವಿಯಿಂದ ಒಬ್ಬರಿಗೆ ಮುಟ್ಟಿತು. ಬೆಂಗಳೂರು ನಗರದ ಪಶ್ಚಿಮ ವಿಭಾಗದ ರೋಟರಿ ಕ್ಲಬ್ ಶಕುಂತಲಾಬಾಯಿಗೆ ಷಷ್ಟಿಪೂರ್ತಿಯ ಶುಭ ಕೋಜನೆಗಾಗಿ ಒಂದು ಗೌರವ ಸಮಾರಂಭವನ್ನು ತಮ್ಮ ತಿಂಗಳ ಸಭೆಯ ಆಶ್ರಯದಲ್ಲಿ ರಾಜಾಜಿನಗರದ ಧೃವಧಾಮ ಸಭಾಂಗಣದಲ್ಲಿ ಏರ್ಪಡಿಸಿತು. ನಾಟಕ ಚಲಚಿತ್ರ ಅಭಿನಯ ಸಂಪನ್ನೆ ಬಿ. ಜಯಮ್ಮ, ಸಮಾಜ ಸೇವಿಕೆ ಡಾ|| ಕಸ್ತೂರಿ ರಂಗನ್, ವಿದ್ಯಾವರ್ಧಕ ಸಂಘ, ಶ್ರೀ ಮಾರುತಿ ಮಹಾ ಗಣಪತಿ ಸೇವಾ ಸಂಘಗಳ ಕಾರ್ಯದರ್ಶಿ ಕೆ. ಎಸ್. ಶ್ರೀ ಹರಿ, ಗಮಕ ಕೋವಿದೆ ಶಕುಂತಲಾಬಾಯಿ ಮೊದಲಾದವರಿಗೆ ಶಾಲು ಹೊದಿಸಿ ಪ್ರಶಸ್ತಿಪತ್ರವಿತ್ತು ಗೌರವಿಸಿತು.

ಚಿರಂಜೀವಿ ರೇಣುಕಾ ಪ್ರಸಾದ್ ಲೀಲಾವತಿ ಪ್ರಸಾದ್ ಸಮಾಜ ಸೇವಾ ಧುರೀಣ ದಂಪತಿಗಳು ತಮ್ಮ ಗೃಹದಲ್ಲಿ ಆತ್ಮೀಯ ಭಾವದಿಂದ ಸರಳ ಸುಂದರ ಸನ್ಮಾನ ಸಮಾರಂಭವನ್ನು ಮುಂಬಾಯಿಯ ಸದಾನಂದ ಸ್ವಾಮಿಗಳ ಪವಿತ್ರ ಸನ್ನಿಧಿಯಲ್ಲಿ ಶಕುಂತಲಾಬಾಯಿಗೆ ಏರ್ಪಡಿಸಿದ್ದರು. ತಿಂಡಿತೀರ್ಥ ಸಮಾರಾಧನೆ ನಡೆಯಿತು. ಕನ್ನಡ ನಾಡಿನ ಸುಪ್ರಸಿದ್ಧ ಪತ್ರಿಕೋದ್ಯಮಿ, "ಕನ್ನಡ ಪ್ರಭ" ದಿನಪತ್ರಿಕೆಯ ಖಾದ್ರಿ ಶಾಮಣ್ಣನವರ ಅಧ್ಯಕ್ಷತೆಯಲ್ಲಿ ಸೌಜನ್ಯಶೀಲರಾದ ಸುಪ್ರಸಿದ್ಧ ಸಾಹಿತಿ ಡಾ|| ಸಿದ್ಧಯ್ಯ ಪುರಾಣಿಕರು ಶುಭ ಹಾರೈಕೆ ಕೋರಿದರು. ಸುಪ್ರಸಿದ್ಧ ಮಹಿಳಾ ಸಾಹಿತಿಗಳಾದ ಟಿ. ಸುನಂದಮ್ಮ. ಸುಶೀಲ ಕೊಪ್ಪರ ಮೊದಲಾದವರು ಸಭಾಸದರಲ್ಲಿ ಪ್ರಮುಖರಾಗಿದ್ದರು.

"ಶ್ರೀ ರಾಮ ಪಟ್ಟಾಷೇಭಿಕ" ಕಾವ್ಯವಾಚನ ರಾಜಾಜಿನಗರದ ಪುಣ್ಯಧಾಮದ ಶ್ರೀ ಮಾರುತಿ ಮಹಾಗಣಪತಿ ಸೇವಾ ಸಂಘದಲ್ಲಿ ಯಶಸ್ವಿಯಾಗಿ ಮಂಗಳ ಮಹಾ ಸಂಭ್ರಮ ಘಟ್ಟ ಮುಟ್ಟಿತು. ಪೂಜ್ಯ ಮಾಸ್ತಿಯವರಿಗೆ 90 ವರ್ಷ, ಶಕುಂತಲಾಬಾಯಿಗೆ 60 ವರ್ಷ ತುಂಬಿದ ವರ್ಷ 1981. ಆ ಕಾರಣ ಕವಿ ಗಮಕಿಗಳಿಬ್ಬರಿಗೂ ಮಹಾ ಸಂಭ್ರಮದ ಸನ್ಮಾನವಾಯಿತು. (ವಿವರ ಬೇರೆ ಪ್ರಕಟವಾಗಿರುವುದರಿಂದ ಇಲ್ಲಿ ಚರ್ವಿತ ಚರ್ವಣವಾಗಿಲ್ಲ)

ಶಕುಂತಲಾಬಾಯಿಯ ಷಷ್ಟಿ ಶಮಾಬ್ದ ವರ್ಷ ಇಂತು ನಿರ್ವಿಘ್ನವಾಗಿ ಗಮಕ ತಪಶ್ಚರ್ಯೆಯಲ್ಲಿ ಒಂದು ಶುಭಘಟ್ಟ ಮುಟ್ಟಿದೆ ಅದರ ಫಲಶ್ರುತಿ "ಭಾರತವಾಚನ ಪ್ರವೀಣ" ಸಂ. ಗೋ. ಬಿಂದೂರಾಯರ ಕುಮಾರವ್ಯಾಸ ಭಾರತ ವಾಚನ ಸಂಪ್ರದಾಯದರೀತಿ ಪ್ರಾರಂಭವಾಗಿ ಮುಕ್ತಾಯದಲ್ಲಿ ಹೀಗಿರುತ್ತದೆ. ಶಕುಂತಲಾಬಾಯಿ ಪಾಂಡುರಂಗರಾವ್ ಗುರು ಸಂಪ್ರದಾಯದವರು. ಗುರುವರ್ಯರಿಗೆ ಪ್ರಮುಖ ಶಿಷ್ಯೆ.

ಆದುದರಿಂದ ಆ ಸಂಪ್ರದಾಯದಲ್ಲಿಯೇ ಷಷ್ಟಿ ಶಮಾಬ್ದ ಫಲಶ್ರುತಿಗೆ ಮಂಗಳ ಕೋರುತ್ತೇವೆ.

ಶ್ರೀವನಿತೆಯರಸನೆ ವಿಮಲ ರಾ
ಜೀವ ಪೀಠನ ಪಿತನೆ ವಿಮಲ ಜಗಕತಿ
ಪಾವನನೆ ಸನಕಾದಿ ಸಜ್ಜನನಿಕಾರ ದಾತಾರ ॥
ರಾವಣಾಸುರ ಮಥನ ಶ್ರವಣಸು
ಧಾವಿನೂತನ ಕಥನ ಕಾರಣ
ಕಾವುದಾನತ ಜಗವ ಗದುಗಿನ ವೀರನಾರಯಣ ॥

ವೇದ ಪುರುಷನ ಸುತನ ಸುತನ ಸ
ಹೋದರನ ಮೊಮ್ಮಗನ ಮಗನ ತ
ಳೋದರಿಯ ಮಾತುಳನ ಮಾವನ ಅತುಳ ಭುಜಬಲದಿ ॥
ಕಾದಿ ಗೆಲಿದಣ್ಣನ್ವೇಯ
ನಾದಿನಿಯ ಜಠರದಲಿ ಜನಿಸಿದ
ನಾದಿಮೂರುತಿ ಸಲಹೊ ಗದುಗಿನ ವೀರನಾರಾಯಣ ॥

ಸ್ವಸ್ತ್ಯಸ್ತು ಶುಭಮಸ್ತು ನಿತ್ಯಮಂಗಲಮಸ್ತು.

ಅನುಬಂಧ

ಗಮಕ ಸಂದರ್ಶನ

ಆರ್. ಎಸ್. ರಾಮರಾವ್

ನಮ್ಮ ಕಾವ್ಯ ಪ್ರಪಂಚದಲ್ಲಿ ಗಮಕಿಗಳ ಸ್ಥಾನ ಹಿರಿದು. ಹಿಂದೆ ರಾಜರ ಸಭೆಯಲ್ಲಿ 'ಕವಿ ಗಮಕಿ ವಾದಿ ವಾಗ್ಮಿ'ಗಳು ಭೂಷಣಪ್ರಾಯರಾಗಿದ್ದರು. ರಾಜನ ಸಾಂಸ್ಕೃತಿಕ ಔನ್ನತ್ಯವನ್ನು ಸಾರುವ ಮಹಾಪಂಡಿತರಾಗಿದ್ದರು. ರಾಜನನ್ನೇ ಕಾವ್ಯ ನಾಯಕನನ್ನಾಗಿ ಸಂಕೇತಿಸಿ ಕಾವ್ಯರಚಿಸುವ ಕವಿಗಳು ಅವನನ್ನು ಹೊಗಳಿ ಹಾಡಿ ಆ ಮೂಲಕ ಕಾವ್ಯ ಸೌಂದರ್ಯವನ್ನು ಪ್ರಚುರ ಪಡಿಸುವ ಗಮಕಿಗಳು ಆಸ್ಥಾನದ ದ್ವಿತೀಯ ಸ್ಥಾನವನ್ನಾಕ್ರಮಿಸಿಕೊಂಡಿರುತ್ತಿದ್ದರು. ಅಂಥವರಲ್ಲಿ ಸ್ತ್ರೀ ಗಮಕಿಗಳೂ ಇದ್ದರೆಂಬುದು ಚರಿತ್ರೆಯಿಂದ ತಿಳಿದು ಬರುತ್ತದೆ. ಆದರೆ ಅವರು ರಾಜಸಭೆಯಲ್ಲಿ ಮಾತ್ರವೋ, ತಮ್ಮ ಆಪ್ತವರ್ಗದಲ್ಲಿ ಮಾತ್ರವೋ ಗಮಕವಾಚನ ಮಾಡುತ್ತಿದ್ದಿರಬಹುದು. ಅವರು ಗಮಕ ಕಲೆಯನ್ನು ಪೂರ್ಣವಾಗಿ ಸಾಧಿಸದೆ ಇರುತ್ತಿರಲಿಲ್ಲ. ಸ್ತ್ರೀ ಗಮಕಿಗಳ ಸಾಮಾಜಿಕ ಸ್ಥಾನವಂತೂ ಒಂದು ಪರಿಮಿತಿಗೊಳಪಟ್ಟಿದ್ದಿರಬೇಕು.

ಗಮಕಿಗಳು ರಾಜಸಭಾ ಭೂಷಣರಾದಂತೆ ಕವಿಮಿತ್ರರೂ ಆಗಿದ್ದರು. ಅವರು ಕವಿಕರ್ಮದ ಪ್ರಸಾರಕರು. ಸಹೃದಯಿಗಳು, ಆಪ್ತರು. ಆ ಕಾವ್ಯ ಕರ್ಮದ ಪಾಲುದಾರರು. ಕವಿಯಿಂದ ಸಾಧ್ಯವಾಗದ ಕಾವ್ಯರಸಾಸ್ವಾದನೆಯ ಚಮತ್ಕಾರವನ್ನು ಹೃದಯಂಗಮವಾಗಿ ವಿವರಿಸುವ ಕೆಲಸವನ್ನು ಈ ಗಮಕಿಗಳು ಮಾಡುತ್ತಿದ್ದರು. ಕಾವ್ಯರಚನೆ ಮತ್ತೆ ಕಾವ್ಯವಾಚನ ಶಕ್ತಿಗಳು ಒಬ್ಬರಲ್ಲೇ ಇರುವುದು ತುಂಬ ದುರ್ಲಭ. ಅಂಥದ್ದರಲ್ಲಿ ಕೃತಿರಚನೆ, ಕೃತಿವಾಚನಗಳಿಗೆ ಇಬ್ಬರು ಕವಿಗಳ ಆವಶ್ಯಕತೆ ಅನಿವಾರ್ಯವಾಗಿತ್ತು. ಈ ಉದ್ದೇಶದ ಸಾರ್ಥಕತೆಗೆ ಗಮಕಿಗೆ ಉನ್ನತ ಸ್ಥಾನವನ್ನು ರಾಜರು ನೀಡಿದ್ದರು. ಕಾವ್ಯ ಜೀವಾಳವನ್ನೇ ಬಲ್ಲ ಗುಣಗ್ರಾಹಿಯೂ, ಸಹೃದಯಿಯೂ ಆದ ಗಮಕಿ ತನ್ನ ವಾಚನವನ್ನು ಕಲೆಯ ಮಟ್ಟಕ್ಕೆ ಬೆಳಸಿದನು. ಶ್ರವಣ ಸುಧಾಕರವಾದ ಸಂಗೀತವನ್ನು ಅದಕ್ಕೆ ಬೆರೆಸಿದನು. ಆದರೂ ಗಮಕಕಲೆ ಸಂಗೀತ ಕಲೆಯಂತೆ ಆಬಾಧಿತನಾಗಿ ಪ್ರತ್ಯೇಕವಾಗಿ ಕಲೆಯಾಗಿ ಬೆಳೆಯಿತು.

ಇಂದು ಈ ಕಲೆಯಲ್ಲಿ ಹೆಚ್ಚಿನ ಪ್ರವೀಣ, ಖ್ಯಾತಿ ಪಡೆದಿರುವ ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾಯರು ಕಳೆದ ನಲವತ್ತೈದು ವರ್ಷಗಳಿಂದ ತಮ್ಮ ಬದುಕನ್ನು ಕಲೆಯ ಪ್ರಚಾರಕ್ಕಾಗಿ ದುಡಿಸಿದ್ದಾರೆ. ಆ ಮೂಲಕ ನಮ್ಮ ಕಾವ್ಯಗಳನ್ನು ಕನ್ನಡ ಶ್ರೋತೃಗಳಿಗೆ ಮನದಟ್ಟು ಮಾಡಿಕೊಟ್ಟಿದ್ದಾರೆ. ಹಲವಾರು ಕನ್ನಡ ಪ್ರಾಚೀನ ಅರ್ವಾಚೀನ ಕವಿಗಳನ್ನು ಅವರ ಪ್ರತಿಭೆಗಳನ್ನು ಜನಕ್ಕೆ ಪ್ರಿಯವಾಗಿ ಪರಿಚಯ ಮಾಡಿಕೊಟ್ಟಿದ್ದಾರೆ. ಗಮಕ ಎಂದರೆ ಏನು ? ಅದರ ಸತ್ವ ಏನು ? ಅದರ

ಉಪಯೋಗ ಹೇಗೆ, ತಾವು ಅದಕಾಗಿ ಪಟ್ಟ ತಪಸ್ಸಿನಂಥ ಶ್ರಮ ಏನು ಎಂಬುದನ್ನು ಅವರ ಮಾತಿನಿಂದ ಇಲ್ಲಿ ಸಂಗ್ರಹಿಸಲಾಗಿದೆ.

ನೀವು ಗಮಕ ಅಭ್ಯಾಸ ಆರಂಭಿಸಿದ್ದು ಯಾವಾಗ ?

1935ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಗಮಕ ಬೋಧನೆಗಾಗಿ ತರಗತಿ ತೆರೆಯಿತು. 1037ರಲ್ಲಿ ನಾನು ಗಮಕವನ್ನು ಕಲಿಯಲು ಆರಂಭಿಸಿದೆ. ನನಗೆ ಅದರಲ್ಲಿ ಆಸಕ್ತಿ ಬೆಳೆಯಿತು. ಅಭ್ಯಾಸವನ್ನು ಮುಂದುವರಿಸಿದೆ.

ನಿಮ್ಮ ಗುರುಗಳು ಯಾರು ?

ಕರ್ನಾಟಕದ ಸುಪ್ರಸಿದ್ಧ ಗಮಕ ವಿದ್ವಾಂಸರಾದ "ಭಾರತ ವಾಚನ ಪ್ರವೀಣ" ರೆನ್ನಿಸಿಕೊಂಡ ಪೂಜ್ಯ ಬಿಂದೂರಾಯರು ; ತಮ್ಮ ಇಡೀ ಆಯಸ್ಸನ್ನೆ ಕುಮಾರವ್ಯಾಸನಿಗೆ ಮುಡುಪಾಗಿಟ್ಟವರು.

ನಿಮ್ಮ ಸಹಾಧ್ಯಾಯಿಗಳಾಗಿ ಎಷ್ಟು ಜನ ವಿದ್ಯಾರ್ಥಿಗಳಿದ್ದರು ?

ನಾವು ಹೆಚ್ಚು ಜನ ಇರಲಿಲ್ಲ. ಲೆಕ್ಕಕ್ಕೆ ಹತ್ತು ಜನ. ಆದರೆ ಕ್ರಮವಾಗಿ ಅಭ್ಯಾಸಕ್ಕೆ ಬರುತ್ತಿದ್ದವರು ಕೆಲವರೇ ಮಾತ್ರ. ಆದರೆ ಉಪಾಧ್ಯಾಯರು ಪಾಠ ಹೇಳುವಾಗ ವಿಧ್ಯಾರ್ಥಿಗಳ ಹಾಜರಾತಿಯನ್ನೆ ಗಮನಿಸುತ್ತಿರಲಿಲ್ಲ. ಬಂದವರಿಗೇ ಪಾಠ ಹೇಳುತ್ತಿದ್ದರು. ನನಗೆ ನೆನಪಿರುವ ಮಟ್ಟಿಗೆ ನನ್ನ ಸಹಾಧ್ಯಾಯಿಗಳೆಂದರೆ ಶ್ರೀ ಎಸ್. ನಾಗೇಶರಾಯರು, ಶ್ರೀ ಹರಿನಾರಾಯಣ, ಶ್ರೀ ಬಾಳಗುಂಜಿ ನಂಜುಂಡಯ್ಯ, ಶ್ರೀ ಶಿವಸ್ವಾಮಿ, ಶ್ರೀಮತಿ ರಾಜಾಮಣಿ ನಾಗರಾಜರಾಯರು.

ಗುರುಗಳಿಂದ ಅಭ್ಯಾಸ ಆದಮೇಲೆ ನೀವು ಸ್ವಂತ ಅಭ್ಯಾಸ ಮಾಡಿದಿರಾ ? ಎಷ್ಟು ಕಾಲ ಹಾಗೆ ಅಭ್ಯಾಸ ಮಾಡಿದಿರಿ ?

ಎರಡು ವರ್ಷಗಳ ಕಾಲ ಸ್ವಂತವಾಗಿ ಅಭ್ಯಾಸ ಮಾಡಿದೆ. ಬೇರೆ ಬೇರೆ ಕಾವ್ಯಗಳ ಪದ್ಯಗಳನ್ನು ಹಾಡುವುದು. ಅದಕ್ಕೆ ರಾಗ ಸಂಯೋಜನೆ ಮಾಡಿಕೊಳ್ಳುವುದು. ಮನೆಯಲ್ಲೇ ಕೆಲವು ಗಂಟೆಗಳು ಹಾಡಿಕೊಳ್ಳುವುದು. ಹೀಗಾಗಿ 'ಗಮಕ ವಾಚನ'ಕ್ಕೆ ಸಿದ್ಧತೆ ಮಾಡಿಕೊಳ್ಳುತ್ತಿದ್ದೆ.

ನಿಮಗೆ ಪಾಠವಾದ ಕಾವ್ಯಗಳಾವುವು ?

ನಮಗೆ ಯಾವೊಂದು ಕಾವ್ಯವೂ ಪೂರ್ಣವಾಗಿ ಪಾಠವಾಗಿರಲಿಲ್ಲ. ಕುಮಾರವ್ಯಾಸ ಭಾರತದಲ್ಲಿ ಕೃಷ್ಣ ಸಾರಥ್ಯದ ಪ್ರಸಂಗದಲ್ಲಿನ ಪದ್ಯಗಳ ವಾಚನವನ್ನೆ ಗುರುಗಳು ಹೇಳಿಕೊಟ್ಟರು. ಜೈಮಿನಿ ಭಾರತದಲ್ಲಿ, ಹರಿಶ್ಚಂದ್ರ ಕಾವ್ಯದಲ್ಲಿ ಕೆಲವು ಪದ್ಯಗಳು ನಮಗೆ ಅಭ್ಯಾಸವಾದವು. ಈ ಕಲಿಕೆಯಲ್ಲಿ ಶಾಸ್ತ್ರದ ವಿಷಯವೇನೂ ಇದ್ದಿರಲಿಲ್ಲ. ಬರಿಯ ಓದುವುದು. ನಾಲ್ಕು ಪದ್ಯ ದಿನಕ್ಕೆ ಓದಿದರೆ, ಓದಿತೋರಿಸಿದರೆ, ಓದಿಸಿದರೆ ಅಂದಿನ ಪಾಠ ಮುಗಿಯುತ್ತಿತ್ತು. ಪಾಠಕ್ಕೆ ವೇಳಾಪಟ್ಟಿಯೇನೂ ಇರಲಿಲ್ಲ. ಅಲ್ಲದೆ ಗುರುಗಳು ಪ್ರತಿ ವಿದ್ಯಾರ್ಥಿಗೂ ವೈಯಕ್ತಿಕವಾಗಿ ಆಸಕ್ತಿಯಿಂದ ಪಾಠ ಹೇಳುತ್ತಿದ್ದರು. ಪಾಠಕ್ಕೆ ಹೋದಾಗ ಯಾರು ಮೊದಲು

ಹೋದರೆ ಅವರಿಗೆ ಕಲಿಸಲು ಪ್ರಾರಂಭಿಸುತ್ತಿದ್ದರು. ಸುಮಾರು ಮೂರು ತಿಂಗಳ ಕಾಲ ಒಂದು ಅಭ್ಯಾಸದ ಅವಧಿ. ಆಗ 'ಗಮಕ' ಅಭ್ಯಾಸಕ್ಕೆ ಪಠ್ಯ ಪುಸ್ತಕವಾಗಲಿ, ನಿಬದ್ಧ ಪಠ್ಯ ಭಾಗಗಳಾಗಲಿ, ಸಂಬಂಧಿಸಿದ ವಿಷಯಗಳ್ಯ ಬೋಧನೆಯಾಗಲಿ ಇರಲಿಲ್ಲ. ತರಗತಿಯಲ್ಲಿ ಕಲಿತದ್ದನ್ನು ಮನೆಯಲ್ಲಿ ಅಭ್ಯಸಿಸುವುದು, ಮತ್ತೆ ಬೇರೆ ಕಾವ್ಯಗಳ ಓದನ್ನು ಪ್ರಯತ್ನಿಸುವುದು ನಮ್ಮ ಕಾರ್ಯ' ವಾಗಿತ್ತು. ನಮ್ಮದು ಮೂರನೆಯ 'ಬ್ಯಾಚ್' ಆಗಿದ್ದರೂ ಈಗಿನಂತೆ ಬೋಧನೆಗೆ ಒಂದು ಕ್ರಮವನ್ನೇನೂ ಏರ್ಪಡಿಸಿರಲಿಲ್ಲ. ನಾನು 'ಪ್ರಭುಲಿಂಗಲೀಲೆ ಯಿಂದ ಕೆಲವು ಪದ್ಯಗಳನ್ನು ಸ್ವಂತವಾಗಿ ಓದಿಕೊಳ್ಳಲು ಅಭ್ಯಾಸ ಮಾಡಿಕೊಳ್ಳುತ್ತಿದ್ದೆ.

ನೀವು ಸಾರ್ವಜನಿಕವಾಗಿ ಗಮಕವಾಚನ ಮಾಡಲು ಆರಂಭಿಸಿದ್ದು ಯಾವಾಗ ? ಯಾವ ಕಾವ್ಯಗಳನ್ನು ವಾಚಿಸುತ್ತಿದ್ದಿರಿ ?

1938ರಿಂದ ಜನಸಮೂಹಕ್ಕೆ, ಸಾಮಾನ್ಯವಾಗಿ ಸಾಹಿತಿಗಳ ಸಮ್ಮುಖದಲ್ಲಿ ಕಾವ್ಯವಾಚನ ಮಾಡಲು ಆರಂಭಿಸಿದೆ.ನಾನು ಮೊದಲು ಓದಿದ ಕಾವ್ಯ "ಪ್ರಭುಲಿಂಗಲೀಲೆ." 'ಅಕ್ಕ ಮಹಾದೇವಿಯ ವಿರಕ್ತಿ' ಭಾಗ ಮುಖ್ಯವಾದುದು. ಆಚಾರ್ಯ ಬಿ. ಎಂ. ಶ್ರೀ ಅವರ 'ಕನ್ನಡ ತಾಯ್ ನೋಟ' ಜನದ ಅಪೇಕ್ಷೆ ಯಂತೆ ಅವರು ಆಶಿಸಿದ ಕಾವ್ಯ ಭಾಗಗಳನ್ನು ಸ್ವಂತವಾಗಿ ಅಭ್ಯಾಸ ಮಾಡಿ ವಾಚಿಸುತ್ತಿದ್ದೆ, ಅನಂತರ ಕಾಲದಲ್ಲಿ.

ಇದುವರೆಗೆ ನೀವು ಎಷ್ಟು ವಾಚನಗಳನ್ನು ನೀಡಿದ್ದೀರಿ ?

ನಾನು ಲೆಕ್ಕ ಇಟ್ಟಿಲ್ಲ, ನೂರಾರು ಸಾವಿರದ ಎಲ್ಲೆ ದಾಟಿದ್ದೇನೆ.

ನೀವು ಯಾವ ಯಾವ ಕಾವ್ಯಗಳಿಂದ ವಾಚನ ಮಾಡಿದ್ದೀರಿ ?

ಪಂಪನ ಆದಿ ಪುರಾಣ, ರನ್ನನ ಗದಾಯುದ್ಧ, ಹರಿಹರನ ಗಿರಿಜಾ ಕಲ್ಯಾಣ, ಬಸವರಾಜದೇವರ ರಗಳೆ, ರಾಘವಾಂಕನ ಹರಿಶ್ಚಂದ್ರ ಕಾವ್ಯ, ಅಯ್ಯಾಶಾಸ್ತ್ರಿಗಳ ಶೇಷ ರಾಮಾಯಣ, ತುಳಸೀದಾಸ ರಾಮಾಯಣ, ಬಸವ ಪುರಾಣ, ರಾಜಶೇಖರ ವಿಳಾಸ, ಕುಮಾರವ್ಯಾಸ ಭಾರತ ಮತ್ತು ಶ್ರೀರಾಮಾಯಣ ದರ್ಶನಂ' ಶಾಕುಂತಲ, ಶ್ರೀರಾಮ ಪಟ್ಟಾಭಿಷೇಕ, ಭಾರತ ಸಿಂಧು ರಶ್ಮಿ ಇವುಗಳಲ್ಲದೆ ಭಾವಗೀತೆಗಳನ್ನು ಅನೇಕ ಆಧುನಿಕ ಕವಿಗಳ ಕವಿತೆಗಳನ್ನು ವಾಚಿಸಿದ್ದೇನೆ.

ಹಳೆಯ ಕಾಲದ ಪುರಾಣ ಪ್ರವಚನ ಪದ್ಧತಿಯಂತೆ ಒಂದು ಇಡೀ ಕಾವ್ಯವನ್ನು ಸತತವಾಗಿ ವಾಚನ ಮಾಡಿದ್ದುಂಟೆ ?

ಹಾಗೇನೂ ಇಲ್ಲ ಆಯ್ದ ಭಾಗಗಳನ್ನು ಕೆಲವೊಮ್ಮೆ ಸತತವಾಗಿ, ವಾರಕ್ಕೊಮ್ಮೆ, ಎರಡುಸಲದಂತೆ ಓದಿರುವುದುಂಟು. ಈಚೆಗೆ ಕುಮಾರವ್ಯಾಸ ಭಾರತ, ಜೈಮಿನಿ ಭಾರತ, ರಾಮಾಯಣ ದರ್ಶನ, ಶ್ರೀರಾಮ ಪಟ್ಟಾಭಿಷೇಕ ಕಾವ್ಯಗಳನ್ನು ಪೂರ್ಣವಾಗಿ ಓದಿದ್ದೇನೆ.

ನಿಮ್ಮ ವಾಚನ ಗ್ರಂಥಗಳಲ್ಲಿ ಹಳಗನ್ನಡ ಕಾವ್ಯಗಳೂ ಸೇರಿವೆಯೇ ?

ಹೌದು ಸೇರಿವೆ. ಪಂಪ ರನ್ನರ ಕಾವ್ಯಗಳು. ಗಿರಿಜಾ ಕಲ್ಯಾಣದ ಆಯ್ದ ಭಾಗಗಳು ತೋಂಟದಾರ್ಯರ–ಶ್ರೀ ಸಿದ್ಧಲಿಂಗೇಶ್ವರ ಪುರಾಣ, ಶಬರ ಶಂಕರ ವಿಲಾಸದಿಂದ ಕೆಲವು ಪ್ರಸಂಗಗಳು.

ನೀವು ಕಾವ್ಯವಾಚನಕ್ಕೆ ಆರಿಸಿಕೊಂಡ ಗ್ರಂಥಗಳ ಸಾಹಿತ್ಯವನ್ನು ಸ್ವಂತವಾಗಿ ಅಭ್ಯಾಸ ಮಾಡಿದಿರಾ ? ಯಾರಾದರೂ ಗುರುಗಳಿಂದ ಪಾಠ ಹೇಳಿಸಿಕೊಂಡರಾ ?

ಸಾಮಾನ್ಯವಾಗಿ ಸ್ವಂತ ಅಭ್ಯಾಸವೇ. ವಿಶೇಷವಾಗಿ ನಮ್ಮ ಪತಿವರ್ಯರ ಸಹಾಯವಿರುತ್ತಿತ್ತು. ತುಂಬ ಕ್ಲಿಷ್ಟವಾದಾಗ ವಿದ್ವಾನ್ ಎಂ. ವಿ. ಚಕ್ರವರ್ತಿಯವರಂಥ ವಿದ್ವಾಂಸರಿಂದ ವಿವರಣೆ ಅರ್ಥ ಸೌಂದರ್ಯವನ್ನು ಕೇಳಿ ತಿಳಿದುಕೊಂಡಿದ್ದುಂಟು.

ಗಮಕ ಕಲಿಯುವುದಕ್ಕೆ ಮುಂಚೆ ಸಂಗೀತವನ್ನು ಪ್ರತ್ಯೇಕವಾಗಿ ಕಲಿತಿದ್ದಿರಾ ?

ನನಗೆ ಸಂಗೀತದ ಮೇಲೆ ಬಾಲ್ಯದಿಂದಲೂ ಆಸಕ್ತಿ. ಮನೆಯ ವಾತಾವರಣದಿಂದ ಹಾಡುಗಳನ್ನು ಕಲಿತುಕೊಂಡಿದ್ದೆ. ಶಾಸ್ತ್ರೀಯವಾಗಿ ಸ್ವಲ್ಪ ಸಂಗೀತವೂ ಬರುತ್ತಿತ್ತು. ಗಮಕವಾಚನ ಕಲಿತ ಮೇಲೆ ಸಂಗೀತದ ಜ್ಯೂನಿಯರ್ ಪರೀಕ್ಷೆಗೆ ಮತ್ತು ಸೀನಿಯರ್ ಪರೀಕ್ಷೆಗಳಿಗೆ ಕುಳಿತು ತೇರ್ಗಡೆ ಹೊಂದಿದೆ, ವಿದ್ವತ್‌ಗೆ ಕುಳಿತುಕೊಳ್ಳಲು ನಾನೇ ಕೇಳ್ಮೆಯಿಂದ ನನ್ನ ಸಂಗೀತ ಜ್ಞಾನವನ್ನು ಅಭಿವೃದ್ಧಿ ಪಡಿಸಿಕೊಂಡೆ. ಸಂಗೀತಕ್ಕೆ ಅವಶ್ಯಕವಾದ ಕಂಠವೂ ಇತ್ತು. ಅಭ್ಯಾಸದಿಂದ ಪ್ರಯೋಜನ ಪಡೆದೆ. ಸಂಗೀತದಗುರುಗಳು ಚಿಂತಲಪಲ್ಲಿ ಕೃಷ್ಣಮೂರ್ತಿ

ಸಂಗೀತ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಅದರಲ್ಲಿ ವಿದ್ವತ್ತು ಸಂಪಾದಿಸಿದ ಮೇಲೆ ಶಾಸ್ತ್ರೀಯ ಸಂಗೀತದ ಕಡೆ ಗಮನ ಹರಿಸದೆ ಗಮಕಕ್ಕೆ ಅಂಟಿಕೊಳ್ಳಲು ಕಾರಣವೇನು?

ನಾನು ಸಂಗೀತ ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವುದಕ್ಕಿಂತ ಮುಂಚಿನಿಂದಲೂ ಗಮಕವನ್ನೇ ಅಭ್ಯಾಸ ಮಾಡಿಕೊಂಡು ಬಂದೆ. ಸಂಗೀತವನ್ನು ಕಲಿತದ್ದು ಗಮಕಕ್ಕೆ ಸಹಾಯವಾಗಲೆಂದೇ ಹೊರತು ಅದನ್ನೇ ಪ್ರತ್ಯೇಕವಾಗಿ ಬೆಳಸಬೇಕೆಂಬ ಗುರಿಯಿರಲಿಲ್ಲ. ಸಂಗೀತ ಸೇವೆಗೆ ಅನೇಕ ವಿದ್ವಾಂಸರುಗಳಿದ್ದಾರೆ. ಪ್ರಾಚೀನ ಕಲೆಯಾದ ಗಮಕಕ್ಕೆ ಮೀಸಲಾದ ಕಲಾವಿದರೆಷ್ಟು ಮಂದಿ? ಆ ಕಾರಣ ನಾನು ಸಂಗೀತ ವಿದುಷಿಯಾಗಬಹುದಾಗಿದ್ದರೂ ಗಮಕ ಕಲಾ ಪರಿಚಾರಿಕೆಯಾದೆ. ನನ್ನ ಮನಸ್ಸು ಸಾಹಿತ್ಯಕ್ಕೆ ಒಲಿದಿತ್ತು. ನಮ್ಮ ಪೂರ್ವ ಕವಿಗಳ ಕಾವ್ಯರಚನೆ ನನ್ನ ಸಂಗೀತಕ್ಕೆ ಅಳಪಟ್ಟದ್ದು ಆ ಸಾಹಿತ್ಯವನ್ನು ರಾಗರೂಪದಲ್ಲಿ ಆನಂದಿಸುವ ಇತರರಿಗೆ ಅಭಿರುಚಿ, ಆಸಕ್ತಿ ಹುಟ್ಟಿಸುವ ಅಪೇಕ್ಷೆಯೇ ನನ್ನಲ್ಲಿ ಪ್ರಮುಖವಾಗಿ ಬೆಳೆದು ಬಂದಿತ್ತು. ನಮ್ಮವರು ಸಾಹಿತ್ಯವನ್ನು ಬಲ್ಲವರಾಗಿರಾಗಿದ್ದರು ಅವರ ಅಭಿರುಚಿ, ಆಸಕ್ತಿ ನನ್ನಲ್ಲೂ ನೆಲೆಮಾಡಿಕೊಂಡಿತು

ನೀವು ಗಮಕ ಅಭ್ಯಾಸ ಮಾಡುತ್ತಿದ್ದಾಗ ಜನಪ್ರಿಯವಾಗಿ ವಾಚನ ಮಾಡುತ್ತಿದ್ದ, ನಿಮ್ಮ ಯಜಮಾನರು ವರ್ಣಿಸಿರುವ ಗಮಕ ಭಗೀರಥರ ವಾಚನಗಳು ಕೇಳಿದ್ದೀರಾ ?

ನಾನು ಅವರಲ್ಲಿ ಇಬ್ಬರ ಎಂದರೆ ಬಿಂದೂರಾಯರ ಮತ್ತು ಕೃಷ್ಣರಾಯರ ವಾಚನವನ್ನು-ವಿಶೇಷವಾಗಿ ಬಿಂದೂರಾಯರ ವಾಚನವನ್ನು ಕೇಳಿದ್ದೇನೆ. ಸಂಪತ್ಕುಮಾರಾಚಾರ್ಯರ ವಾಚನವನ್ನು ಕೇಳಿದ್ದು ಒಂದೇ ಒಂದು. ಭಾರತದ ಲಲಿತಮ್ಮ, ಹಾಡಿನ ನಾಗಮ್ಮನವರ ವಾಚನಗಳನ್ನು ಕೇಳಿದ್ದೇನೆ.

ನೀವು ಕೇಳಿದ ಆ ಹಿರಿಯ ವಿದ್ವಾಂಸರ ವಾಚನದ ಬಗ್ಗೆ ನಿಮ್ಮ ಅನಿಸಿಕೆ ಏನು ?

ಕೃಷ್ಣರಾಯರ ಗಮಕದಲ್ಲಿ ಸಂಗೀತ ಹೆಚ್ಚು ಎಂದು ನನ್ನ ಭಾವನೆ. ಅವರು ಸಾಹಿತ್ಯವನ್ನು ವಿಶೇಷವಾಗಿ ಪ್ರತಿಪಾದಿಸುತ್ತಿದ್ದರೂ ರಾಗದ ಮಾಧುರ್ಯವನ್ನು ಹೆಚ್ಚು ತುಂಬಲು ಯತ್ನಿಸುತ್ತಿದ್ದರು. ಅವರಕಂಠ ಬಿಂದೂರಾಯರ ಅಥವಾ ನಾನು ಅವರಿಂದ ಕೇಳಿದ ಸಂಪತ್‌ಕುಮಾರಾಚಾರ್ಯರ ಕಂಠಗಳಿಂದ ಭಿನ್ನವಾಗಿತ್ತು. ಕೃಷ್ಣರಾಯರದು ಸ್ವಲ್ಪ ಮೆಲುದನಿಯೇ. ಅವರ ವಾಚನ ಜನಜಂಗುಳಿಗಲ್ಲ. ಆಯ್ದ ಸಹೃದಯ ರಸಿಕರಿಗೆ. ಆದರೆ ಅವರ ವಾಚನದಲ್ಲಿ ಮಾಧುರ್ಯವಿದ್ದು ರಸಾಸ್ವಾದನೆಗೆ ಹೆಚ್ಚು ಅವಕಾಶವಿತ್ತು. ಬಿಂದೂರಾಯರ ವಾಚನವೆಂದರೆ ಒಂದು ರೀತಿಯ ವರ್ಣಚಿತ್ರ. ಕವಿಯ ಕಲ್ಪನೆಯನ್ನು ಕಣ್ಣಿಗೆ ಕಟ್ಟುವಂತೆ ಹೇಳುವ ಪ್ರತಿಭೆ ಅವರಲ್ಲಿ ತುಂಬಿ ಬಂದಿತ್ತು. ಕಡೆಕಡೆಗಂತೂ ಅವರು ಕುಮಾರವ್ಯಾಸನ ಭಾರತದಲ್ಲಿ ಆವರ ಮತದ ಅರ್ಥವನ್ನು ಮಾಧ್ವಮತ ತತ್ತ್ವವನ್ನು ವ್ಯಾಖ್ಯಾನಿಸುವ ವಿದ್ವತ್ತು ಕಂಡು ಬರುತ್ತಿತ್ತು. ಅವರು ಕವಿಯನ್ನು ಹಾಗೆ ಅರ್ಥ ಮಾಡಿಕೊಂಡಿದ್ದರು. ಕುವೆಂಪುರವರ ಹೇಳಿರುವ "ಭಾರತ ಕಣ್ಣಲಿ ಕುಣಿವುದು" ಎಂಬ ಭಾವನೆಯನ್ನು ತದ್ವತ್ತಾಗಿ ತಮ್ಮ ವಾಚನದಿಂದ ತೋರಿಸಿಕೊಡುತ್ತಿದ್ದರು. ಹಾಡಿನ ನಾಗಮ್ಮ ಭಾರತದ ಲಲಿತಮ್ಮ ಅವರುಗಳ ವಾಚನಗಳನ್ನು ಕೇಳಿದಾಗ ನಾನು ಬಾಲಿಕೆ. ಅವರ ಬಗೆಗೆ ಏನು ಅಭಿಪ್ರಾಯ ಕೊಡಲಿ ?

ಧ್ವನಿವರ್ಧಕದ ನೆರವಿಲ್ಲದಾಗ, ಗಮಕ ಭಗೀರಥರ ವಾಚನವನ್ನು ಜನ ಸಮೂಹ ಯಾವ ರೀತಿಯಲ್ಲಿ ಸ್ವಾಗತಿಸುತ್ತಿತ್ತು. ಎತ್ತರದ ಧ್ವನಿಯಲ್ಲಿವಾಚಿಸುತ್ತಿದ್ದಾಗ, ರಾಗ ಸೌಂದರ್ಯಕ್ಕೆ ಅಡಚಣೆಯಾಗುತ್ತಿರಲಿಲ್ಲವೆ ?

ಬಿಂದೂರಾಯರ ಕಂಠ ಎಂಥ ಸಭೆಯನ್ನೂ ಆಕರ್ಷಿಸುತ್ತಿತ್ತು. ಸಂಪತ್ ಕುಮಾರಾಚಾರ್ಯರ ಕಂಠವಂತೂ ದೊಡ್ಡ ಸಭೆಗೆ ಹೇಳಿಮಾಡಿಸಿದಂತಿತ್ತು ಎಂದು ಕೇಳಿದ್ದೆ. ಅಲ್ಲದೆ ಶ್ರೋತೃಗಳು ಆಸಕ್ತರಾಗಿರುತ್ತಿದ್ದರಿಂದ ಅವರು ನಿಶ್ಶಬ್ದತೆಯಿಂದ ಏಕಾಗ್ರಚಿತ್ತರಾಗಿ ಆಲಿಸುತ್ತಿದ್ದರು.

ನೀವು ಕಲಿತ ಗಮಕವನ್ನು ಯಾವುದಾದರೂ ವಿದ್ವಾಂಸರ ಅನುಭವ ಮಾರ್ಗವನ್ನು

ಅನುಸರಿಸುತ್ತೀರಾ ? ಅಥವಾ ನಿಮ್ಮದೇ ವಿಶಿಷ್ಟಪೂರ್ಣ ಮಾರ್ಗವನ್ನು ರೂಢಿಗೆ ತಂದಿದ್ದೀರಾ ?

ನನ್ನ ಓದುಗಾರಿಕೆಯಲ್ಲಿ ಹೆಚ್ಚಿನ ಕೌತೂಹಲಿಕ ಕ್ರಮವಿದ್ದರೆ ಅದು ನಮ್ಮ ಗುರುಗಳ ಮಾರ್ಗ. ನಾನು ಸ್ವಂತ ಮಾರ್ಗವನ್ನಾಗಲಿ, ಮತ್ತಾರ ಮೇಲ್ಪಂಕ್ತಿಯನ್ನಾಗಲಿ ಅನುಸರಿಸುತ್ತಿಲ್ಲ. ಗುರುಗಳ ಮಾರ್ಗವನ್ನು ಮಾತ್ರ ರೂಢಿಸಿ ಬೆಳಸುತ್ತಿದ್ದೇನೆ ಎಂದು ತಿಳಿದುಕೊಂಡಿದ್ದೇನೆ. ಜೊತೆಗೆ ನನ್ನ ಮನೋಧರ್ಮವೂ ಒಂದುಂಟಲ್ಲ ? ನನ್ನ ಅಭಿಮಾನಿ ಶ್ರೋತೃಗಳು ಅದನ್ನು ಗುರುತಿಸಿ ಮೆಚ್ಚಿದ್ದಾರೆ.

ಕಳೆದ ನಲವತ್ತೈದು ವರ್ಷಗಳಿಂದ ಗಮಕ ಕಲೆಯಲ್ಲಿ ಸಾಧನೆ ನಡೆಸಿರುವ ನೀವು ಆ ಕಲೆಯನ್ನೇ ಕರತಲಾಮಲಕ ಮಾಡಿಕೊಂಡಿದ್ದೀರಿ ಎಂದು ತಿಳಿದುಕೊಂಡಿದ್ದೇನೆ. ಆದ್ದರಿಂದ ನೀವು ಯಾವ ಕಾವ್ಯವನ್ನಾದರೂ, ಅದು, ಷಗಳೆ, ಸಾಂಗತ್ಯ, ಷಟ್ಪದಿ, ಚಂಪೂ ಆಗಿರಲಿ ಲೀಲಾಜಾಲವಾಗಿ ವಿವಿಧ ರಾಗಗಳನ್ನು ಹಾಕಿಕೊಂಡು ಓದಬಲ್ಲಿರಾ ?

ಓದಬಲ್ಲೆ ಎಂದು ಹೆಮ್ಮೆಯಿಂದ ಹೇಳಲಾರೆ. ಆ ಆತ್ಮ ಪ್ರಶಂಸೆಯಿಲ್ಲ ನನಗೆ. ಓದಲು ಪ್ರಯತ್ನಿಸಿದ್ದೇನೆ. ತಕ್ಕಮಟ್ಟಿಗೆ ಯಶಸ್ಸನ್ನು ಗಳಿಸಿದ್ದೇನೆ. ನನ್ನ ವಾಚನವನ್ನು ಕೇಳಿದ ಜನ ಅದನ್ನು ಮೆಚ್ಚಿಕೊಂಡಿದ್ದಾರೆ. ನಾನು ಸದಾ ಗಮಕ ಕಲಾಭ್ಯಾಸಿಯೇ. ಕಲಿಯತಕ್ಕದ್ದು ಬಹಳವಿದೆ.

ನಿಮ್ಮ ವಾಚನಕ್ಕೆ ಹಳಗನ್ನಡ, ನಡುಗನ್ನಡ, ಹೊಸಗನ್ನಡ ಕಾವ್ಯಗಳನ್ನು ಆರಿಸಿಕೊಳ್ಳುತ್ತೀರಿ. ಈ ಭಿನ್ನ ಭಿನ್ನ ಶೈಲಿಯ ಕಾವ್ಯಗಳು ಗಮಕವಾಚನಕ್ಕೆ ಹೇಗೆ ಹೊಂದಿಕೊಳ್ಳುತ್ತವೆ ? ಅಲ್ಲಿನ ವೈವಿಧ್ಯಗಳನ್ನು ತಿಳಿಸಬಲ್ಲಿರಾ ?

ನಾನು ಓದುವ ಭಾಗವನ್ನು ಮೊದಲು ಸಂಗೀತಕ್ಕೆ ಅಳವಡುವುದೇ ಎಂದು ತಿಳಿದುಕೊಳ್ಳುತ್ತೇನೆ. ಕಾವ್ಯವನ್ನು ಸಂಗೀತದ ಮೂಲಕ ತಿಳಿಯ ಹೇಳುವುದು ಇಲ್ಲಿನ ಮುಖ್ಯ ಉದ್ದೇಶ. ಆದ್ದರಿಂದ ಹಳಗನ್ನಡ, ನಡುಗನ್ನಡ ಕಾವ್ಯಗಳು ಛಂದೋಬದ್ಧವಾಗಿ ರಚಿತವಾಗಿರುವುದರಿಂದ ಅವುಗಳನ್ನು ಸಂಗೀತಕ್ಕೆ ಅವಡಿಸಿಕೊಳ್ಳುವುದರಲ್ಲಿ ಅಷ್ಟು ಕಷ್ಟವಾಗುವುದಿಲ್ಲ. ಆ ಕಾವ್ಯಗಳಲ್ಲಿನ ಪ್ರಸಂಗಗಳನ್ನು ವಾಚನಕ್ಕೆ ತೆಗೆದುಕೊಂಡಾಗ, ನವರಸಗಳಲ್ಲಿನ ಭಾವಗಳನ್ನು ಗಮನಿಸಿ ಅದಕ್ಕೆ ಸೂಕ್ತ ರಾಗವನ್ನು ಹೊಂದಿಸಿಕೊಳ್ಳಬೇಕಾಗುತ್ತದೆ. ಶೃಂಗಾರ, ಕರುಣ, ವೀರ, ಹಾಸ್ಯ ಪ್ರಸಂಗಗಳಿಗೂ ರಾಗಗಳ ಅನ್ವಯವುಂಟು. ಮಂಗಳ ಪದ್ಯವನ್ನು ಓದುವಾಗ ಒಂದು ನಿರ್ದಿಷ್ಟ ರಾಗವಿದ್ದಂತೆ, ಆಯಾ ಭಾವಗಳನ್ನು ಪರಿಪುಷ್ಟಗೊಳಿಸಲು ಸೂಕ್ತವಾದ ರಾಗಗಳನ್ನು ಹಾಕಿ ಕೊಳ್ಳುವುದು ಅನಿವಾರ್ಯ. ಕಾವ್ಯರಚನೆ ಸಂಗೀತಕ್ಕೆ ಅಳವಟ್ಟಿರುವುದರಿಂದ ರಾಗ ಸಂಯೋಜನೆ ಕಷ್ಟವಾಗುವುದಿಲ್ಲ. ಹೊಸಗನ್ನಡ ಕಾವ್ಯಗಳಲ್ಲೂ ಕೂಡ. ವಿಶೇಷವಾಗಿ ನವೋದಯಕಾಲದ ಕಾವ್ಯ

ಗಳಲ್ಲಿ ಎಂದರೆ ಭಾವಗೀತೆಗಳಲ್ಲಿನ ರಚನೆಗಳೂ ಕೂಡ ಸಂಗೀತಕ್ಕೆ ಸುಲಭವಾಗಿ ಹೊಂದಿಕೊಳ್ಳುತ್ತದೆ.

ವಿವಿಧ ವೃತ್ತ, ಷಟ್ಪದಿಗಳಿಗೆ ರಾಗ ಸಂಯೋಜಿಸುವಾಗ ನೀವು ಅನುಭವಿಸಿದ ಅನುಭವಕ್ಕೂ ಸಾಂಗತ್ಯ, ದ್ವಿಪದಿ ತ್ರಿಪದಿಗಳಿಗೆ ರಾಗ ಅಳವಡಿಸುವಾಗ ಕಂಡುಕೊಂಡು ಅನುಭವಕ್ಕೂ ವ್ಯತ್ಯಾಸವುಂಟೆ ?

ಷಟ್ಪದಿ ನಮ್ಮ ಸಂಗೀತಕ್ಕೆ ಅನುಕೂಲವಾಗಿ ಅಳವಡುವ ಛಂದಸ್ಸು ಅದರಲ್ಲೂ ಭಾಮಿನಿ, ವಾರ್ಧಕ ಷಟ್ಪದಿಗಳಂತೂ ಅತ್ಯಂತ ಮನೋಹರವಾದದ್ದು. ಉಳಿದ ಷಟ್ಪದಿಗಳಲ್ಲಿ ಮತ್ತು ದ್ವಿಪದಿ, ತ್ರಿಪದಿಗಳಲ್ಲಿ ರಾಗ ವೈವಿಧ್ಯಕ್ಕೆ ಹೆಚ್ಚಿನ ಆಸ್ಪದ ವಿಲ್ಲ. ಎರಡೇ ಕಂಬಿಯ ಮೇಲೆ ಓಡುವ ರೈಲಿನಂತೆ ಅಲ್ಲಿನ ಓಟ. ಅಲ್ಲದೆ ಸರ್ವಜ್ಞನ ವಚನ, ದ್ವಿಪದಿಗಳಲ್ಲಿ ಸಾಲುಗಳು ಅಲ್ಲಲ್ಲಿ ತಟಸ್ಥವಾಗಿ ನಿಂತುಬಿಡುವುದರಿಂದ ಸಂಗೀತವನ್ನು ಮೊಟಕು ಮಾಡಬೇಕಾಗುತ್ತದೆ. ಉದಾಹರಣೆಗೆ ಸಾಂಗತ್ಯ ಒಂದು ರೀತಿಯ ಹಾಡುವ ಛಂದಸ್ಸಿನಿಂದ ಕೂಡಿದ್ದು. ಅಲ್ಲಿನ ಪ್ರತಿ ರೊಂದು ಪದ್ಯವೂ ಒಂದೊಂದು ಘಟಕ. ಅಲ್ಲದೆ ಸ್ವಯಂಪೂರ್ಣ. ಭಾಮಿನಿ ವಾರ್ಧಕದಲ್ಲಿ ಕಥೆಯ ಓಟ ಪದ್ಯದಿಂದ ಪದ್ಯಕ್ಕೆ ಮುಂದುವರಿಯುವಂತೆ, ಸಾಂಗತ್ಯದ ಪದ್ಯಗಳಲ್ಲಿ ಮುಂದುವರಿದರೂ, ಒಂದು ಭಾವ, ಒಂದು ಮಾತು, ಒಂದು ವರ್ಣನೆ ಚಕ್ಕನೆ ಛಂದಸ್ಸಿನ ಕ್ರಮಕ್ಕೆ ಒಳಪಟ್ಟು ನಿಂತುಬಿಡುತ್ತದೆ. ಈ ರಚನೆಗಳು ಏಕತಾನದ ಶ್ರುತಿಗೆ ಅಳವಡುವಂಥವು. ಆದ್ದರಿಂದ ಮೇಲಿನ ಛಂದಸ್ಸಿನ ಬೀಸು, ಹರಹು ಇದರಲ್ಲಿ ಬರುವುದಿಲ್ಲ. ಆದ್ದರಿಂದ ಅವುಗಳ ವಾಚನ ಒಂದು ರೀತಿಯ, ಅಥವ ಒಂದೇ ನಮೂನೆಯ ಧಾಟಿಯಲ್ಲಿ ಮುಂದುವರಿದು ಕೇಳುವವರಿಗೆ ಮತ್ತು ಹೇಳುವವರಿಗೂ ಕೂಡ ಬೇಸರ ತರಿಸುತ್ತದೆ. ಕಾರಣ ಅಲ್ಲಿ ವೈವಿಧ್ಯಕ್ಕೆ ಅವಕಾಶವಿಲ್ಲ. ಆದರೆ ಶರಣರ ವಚನಗಳು ಹಾಗಲ್ಲ. ಅಲ್ಲಿ ಒಂದು ವಚನದ ವಿಸ್ತಾರ ಸಂಗೀತದ ಸೊಗಸನ್ನು ತರಲು ಅವಕಾಶ ಕೊಡುತ್ತದೆ. ಬಲ್ಲ ಸಂಗೀತಗಾರ ಯಾವ ಸಾಹಿತ್ಯ ರಚನೆಯನ್ನೂ ತನ್ನ ಮಾಧ್ಯಮಕ್ಕೆ ಅಳವಡಿಸಿಕೊಂಡು ಹಾಡಬಲ್ಲ. ಅವನಿಗೆ ರಾಗಗಳು ಹಿಡಿತದಲ್ಲಿರುತ್ತವೆ. ಅವನು ಕಾವ್ಯದ ಭಾವವನ್ನು ಮನಗಂಡಿರುತ್ತಾನೆ ತನ್ನ ಎದುರಿಗಿರುವ ಕಾವ್ಯ ಅವನಿಗೆ ಬಂದ ಆಸರೆ ಅಷ್ಟೆ. ಆದರೆ ಅದರ ಮೂಲಭಾವವನ್ನು ವ್ಯಂಜಕವಾಗಿ ಸಂಗೀತದ ಮೂಲಕ ಪ್ರದರ್ಶಿಸುವ ಶಕ್ತಿ ಅವನಲ್ಲಿ ಬೆಳೆದಿದ್ದರೆ ಅತನೇ ನಿಜವಾದ ಗಮಕಿ. ಶ್ರೀರಾಮಾಯಣದರ್ಶನಂ, ರಾಮಪಟ್ಟಾಭಿಷೇಕ ಕಾವ್ಯಗಳಲ್ಲಿ ಭಾವ ಪ್ರದರ್ಶನಕ್ಕೆ ಹೆಚ್ಚಿನ ಅವಕಾಶಗಳಿವೆ. ಗಮಕಗಳಿಗೆ ಇಂಥ ಕಾವ್ಯ ಹಬ್ಬವಿದ್ದಂತೆ. ಸಂಗೀತಜ್ಞಾನ ಮೈಗೂಡಿದ್ದರೆ, ಸಾಹಿತ್ಯವನ್ನು ಕವಿಯ ಮನಸ್ಸನ್ನು ಗಮಕದಲ್ಲಿ ಪ್ರತಿಬಿಂಬಿಸುವುದು ಕಷ್ಟವಾಗಲಾರದು.

ಸಂಗೀತ ವಿದ್ವಾಂಸರು ಸಂಗೀತಶಾಸ್ತ್ರಕ್ಕೆ ಹೆಚ್ಚು ಗಮನ ಕೊಡುವುದರಿಂದ ಅಲ್ಲಿ ಸಾಹಿತ್ಯ ತುಂಬ ಗೌಣವಾಗಿ ರಾಗಸಂಚಾರವೇ ಪ್ರಧಾನವಾಗಿರುತ್ತದೆ. ಅಲ್ಲದೆ ಅವರು ಆರಿಸಿಕೊಳ್ಳುವ ಗೀತೆಗಳು ವಾಗ್ಗೇಯಕಾರರಿಂದ ಸಂಗೀತಕ್ಕಾಗಿಯೇ ರಚಿತವಾದ ಕೃತಿಗಳು. ಆದರೆ ಗಮಕ ವಾಚನದಲ್ಲಿ ಸಾಹಿತ್ಯ ಪ್ರಧಾನವಾಗಿದ್ದು, ಸಂಗೀತ ಅನಿವಾರ್ಯವಾದರೂ ಗೌಣವಾಗಿರುವುದರಿಂದ ಸಂಗೀತ ವಿದ್ವತ್ತು ಹೆಚ್ಚಾಗಿ ಅವಶ್ಯಕವೆ ?

ಗಮಕ ಶೋಭಿಸಬೇಕಾದರೆ ಶಾಸ್ತ್ರೀಯ ದೃಷ್ಟಿಯಿಂದ ಸಂಗೀತಜ್ಞಾನ ಸಂಪೂರ್ಣ ಅವಶ್ಯಕ. ಕೆಲವರು ತಾವು ಓದುವ ಕಾವ್ಯದ ರಸ ಸ್ಥಾನಗಳನ್ನು ತಮ್ಮ ಒಂದು ಮಾತಿನ, ಕಂಠದ, ನಟನೆಯ ಸಾಮರ್ಥ್ಯದಿಂದ ರಂಜನೀಯವಾಗಿ ಮಾಡಬಹುದು. ಆದರೆ, ಸಂಗೀತಜ್ಞಾನವಿಲ್ಲದೆ ಗಮಕ ಶೋಭಿಸಲಾರದು. ಗಮಕಿಗೆ ಸಂಗೀತವಿದ್ಯೆ ಹಿಡಿತದಲ್ಲಿದ್ದರೆ ಅದನ್ನು ಅವನು ತನ್ನ ವಾಚನ ಭಾಗಕ್ಕೆ ಅತಿ ಸುಂದರವಾಗಿ, ಅರ್ಥವತ್ತಾಗಿ ಅಳವಡಿಸಿಕೊಳ್ಳಬಲ್ಲನು. ರಾಮಾಯಣ ದರ್ಶನ, ಕುಮಾರವ್ಯಾಸ ಭಾರತಗಳು ಸಂಗೀತ ಮಿಂಚಿನಂತೆ ಹೊಳೆದು ಪ್ರಕಾಶಿಸುತ್ತವೆ. ಆಗ ಸಾಹಿತ್ಯ ಸಂಗೀತಗಳ ಅವಿನಾಭಾವ ಮುಂದಟ್ಟಾಗುತ್ತದೆ. ಸಂಗೀತವಿಲ್ಲದೆ ಗಮಕವಿಲ್ಲ. ಸಾಹಿತ್ಯವಿಲ್ಲದೆ ಗಮಕವಿಲ್ಲ. ಸಾಹಿತ್ಯ ಸವಾರ, ಸಂಗೀತ ಅಶ್ವ.

ಸಂಗೀತದ ದಶವಿಧ ಗಮಕಗಳಿಗೂ ಕಾವ್ಯವಾಚನದ ಗಮಕಕ್ಕೂ ಇರುವ ವ್ಯತ್ಯಾಸ ಅಥವಾ ಅಂತರ, ಇಲ್ಲವೇ ; ಸಂಬಂಧ ಹೇಗೆ ?

ಶಬ್ದದಿಂದ ಸಂಬಂಧವೇ ಹೊರತು ಮತ್ತೆ ಬೇರೆ ಇಲ್ಲ. 'ಗಮಕ' ಅನ್ನುವ ಮಾತನ್ನೂ 'ದಶವಿಧ ಗಮಕ' ಎಂಬಲ್ಲಿ ಬರುವ ಅರ್ಥ ವಿಶೇಷದಿಂದ ಗುರುತಿಸಬಹುದೊ ಏನೋ ? ಸಂಗೀತದಲ್ಲಿ 'ದಶವಿಧಗಮಕ' ಸ್ವರ ವಿನ್ಯಾಸದಲ್ಲಿ ವಿವರಿಸುವ ವೈವಿಧ್ಯವಿರುವಂತೆ ಕಾಣುತ್ತದೆ. ಆದರೆ ಆ ವೈವಿಧ್ಯವನ್ನು ಗಮಕವಾಚನದಲ್ಲೂ ತರಬಹುದು. ಅದಕ್ಕೆ ವಿಶೇಷ ಪ್ರಜ್ಞೆ, ಅನುಭವ ಬೇಕು. ಸಾಧನೆ ಅತ್ಯವಶ್ಯಕ.

ಗಮಕಕ್ಕೆ ಸಂಗೀತ ಅನಿವಾರ್ಯ ಎಂದಿರಿ. ಆದರೆ ಅದನ್ನು ಗಮಕಕ್ಕೆ ಬಳಸಿಕೊಳ್ಳುವ ನೈಪುಣ್ಯ, ಚಾತುರ್ಯ, ಹೆಚ್ಚು ಸೂಕ್ಷ್ಮವೂ ಜಾಣ್ಮೆಯಿಂದ ಕೂಡಿದ್ದು ಶ್ರೋತೃಗಳ ಮನಸ್ಸನ್ನು ಆಕರ್ಷಿಸುವ ಶಕ್ತಿಯನ್ನು ಹೊಂದಿರಬೇಕಲ್ಲವೆ ?

ದಿ|| ಡಿ. ವಿ. ಜಿ. ಅವರು 'ಸಂಸ್ಕೃತಿ'ಯನ್ನು ಕುರಿತು ವಿಶ್ಲೇಷಿಸುವಾಗ ಒಂದು ಮಾತು ಹೇಳುತ್ತಾರೆ. 'ಪರೇಂಗಿತಜ್ಞಾನ' ಎಂಬುದೇ ಆ ಶಬ್ದ. ಪರರ ಮನಸ್ಸನ್ನು ಅರಿತು ಅದರ ಜಾಡನ್ನು ಹಿಡಿದು ಆ ಎದುರು ವ್ಯಕ್ತಿಯ ನಡವಳಿಕೆಗೆ ಅಥವಾ ಭಾವನೆಗೆ ತಕ್ಕಂತೆ ನಡೆದುಕೊಳ್ಳುವ ಸಂಸ್ಕಾರ ವಿಶೇಷವೂ ಸಂಸ್ಕೃತಿಯ ಒಂದು ಲಕ್ಷಣ ಎಂದು ಅವರ ವಿವರಣೆ. ಹಾಗೆಯೇ ಗಮಕಿಯಾದವನು ತನ್ನ

ವಿದ್ಯೆಯನ್ನು, ಪರರಿಗೆ ನಿರ್ವೇದಿಸುವಾಗ ಅವರ ಮನೋಭಾವವನ್ನು ಅರಿತು ಅದಕ್ಕೆ ಹೊಂದುವಂತೆ, ಎಂದರೆ ಶ್ರೋತೃಗಳ ಮನಸ್ಸಿಗೆ ಹಿಡಿಯುವಂತೆ ಪ್ರಸ್ತಾಪ ಮಾಡುವುದು ಮುಖ್ಯ. ಎಂದರೆ ತನ್ನ ಸಾಮರ್ಥ್ಯವನ್ನು ಹೇಗೆ ಅರಿತುಕೊಂಡಿರುತ್ತಾನೋ, ಹಾಗೆಯೇ ಶ್ರೋತೃಗಳ ಮನಸ್ಸನ್ನು ತಕ್ಕಮಟ್ಟಿಗೆ ಅರಿತಿರುವುದು ಅವಶ್ಯಕ.

ಸಂಗೀತಕ್ಕೆ ಕೃತಿ ಇದ್ದಂತೆ ಗಮಕಕ್ಕೆ ಕಾವ್ಯ ಹೌದು ತಾನೆ ?

ಹೌದು. ಕೃತಿಯನ್ನು ಒಂದು ರಾಗದಲ್ಲಿ ಹಾಡುತ್ತಾನೆ ಸಂಗೀತಗಾರ. ಅಲ್ಲಿ ಒಂದು ಕೃತಿ ಒಂದು ಘಟಕ. ಗಮಕದಲ್ಲಿ ಒಂದು ಕಾವ್ಯ ಪ್ರಸಂಗ ಒಂದು ಘಟಕ. ಈ ಒಂದು ಘಟಕದಲ್ಲಿ ಅನೇಕ ರಾಗಗಳನ್ನು ತರಬೇಕಾಗುತ್ತದೆ. ಆಗ ವಿವಿಧರಾಗಗಳನ್ನ ಸಮನ್ವಯಗೊಳಿಸಿಕೊಳ್ಳುವುದು ತೀರ ಅಗತ್ಯ. ಆದ್ದರಿಂದ ಗಮಕಿಯಾದವನು ಕಾವ್ಯರಸವನ್ನು ಒಂದೇ ಗುಟಕಾಗಿ ಕುಡಿಯುವಂತೆ ಮಾಡ ಬಾರದು. ಆಹಾರವನ್ನೆ ತುತ್ತು ತುತ್ತಾಗಿ ಬಡಿಸಿ ತಿನ್ನಿಸುವಂತೆ, ರಸಾಸ್ವಾದನೆ ಯನ್ನು ಕೂಡ, ಸ್ವಲ್ಪ ಸ್ವಲ್ಪವಾಗಿ ಕುಡಿಸಬೇಕು.

ಗಮಕಕ್ಕೆ ವ್ಯಾಖ್ಯಾನ ಅವಶ್ಯಕವೆ ?

ವ್ಯಾಖ್ಯಾನ ಗಮಕಕ್ಕಲ್ಲ. ಕಾವ್ಯಕ್ಕೆ ಸರಿಯಾದ ಗಮಕಿಯಾದವನು ಕಾವ್ಯಾರ್ಥ ವನ್ನು ತನ್ನ ಗಮಕದಲ್ಲಿಯೇ ಸ್ಪಷ್ಟಪಡಿಸುತ್ತೇನೆ. ಆಗಲೇ ಅವನು ಸಾರ್ಥಕ ನಾದ ಗಮಕಿ. ಆದರೆ ಈಚೆಗೆ ಗಮಕಿಗಳ ಜೊತೆಯಲ್ಲಿ ವ್ಯಾಖ್ಯಾನಕಾರರೂ ತೂರಿಕೊಂಡಿದ್ದಾರೆ. ಇದಕ್ಕೆ ವಿಶೇಷವಾದ ಕಾರಣ ಕೇಳುಗರು ಕಾವ್ಯವನ್ನು ಗಮಕದ ಮೂಲಕ ಅರ್ಥಮಾಡಿಕೊಳ್ಳಲಾರರು ಎಂಬ ಕಲ್ಪನೆ. ಆದರೆ ವ್ಯಾಖ್ಯಾನದಿಂದ ಬಹುವೇಳೆ ಗಮಕಕ್ಕೆ ಅಡ್ಡಿಯೇ ಹೊರತು ಪೂರಕವಾಗವು ದಿಲ್ಲ. ವ್ಯಾಖ್ಯಾನಕಾರರು ತಮ್ಮ ಸ್ಥಾನವನ್ನು ವಿಶೇಶವಾಗಿ ದುರುಪಯೋಗಪಡಿ ಸಿಕೊಳ್ಳುವುದೇ ಹೆಚ್ಚು. ಅಲ್ಲಿ ತಮ್ಮ ಪಾಂಡಿತ್ಯವನ್ನು, ತಮ್ಮ ತಿಳಿವಿನ ಅಹಮ್ಮನ್ನು ಪ್ರದರ್ಶಿಸುವುದಕ್ಕೆ ಈ ಅವಕಾಶದ ನೆರವನ್ನು ತಮ್ಮದೇ ಮೂಲ ಕಾರ್ಯಕ್ರಮ ಎಂಬಂತೆ ಅರಿತು ನಡೆದುಕೊಂಡಿರುವುದುಂಟು. ಗಮಕಿಗೆ, ಗಮಕ ಪ್ರದರ್ಶನಕ್ಕೆ ಅವಕಾಶವೇ ಇಲ್ಲ. ಒಂದು ಪದ್ಯ ಹೇಳಿಸಿ ಅದಕ್ಕೆ ವ್ಯಾಖ್ಯಾನ ಅತಿಯಾಗಿ ಬೆಳೆಸಿ ಗಮಕಿಯ ಪ್ರತಿಭೆಗೆ ಅವಕಾಶವನ್ನೇ ಕೊಡುವುದಿಲ್ಲ. ಕಾವ್ಯ ವಿವರಣೆಗೆ ಗಮಕವೊಂದೇ ಮಾಧ್ಯಮವಾದರೆ ಹಾಲು ಸಕ್ಕರೆ ಬೆರೆತಂತೆ.

ಪದ್ಯವನ್ನು ವಾಚಿಸುವಾಗ ಮಿಶ್ರರಾಗಗಳನ್ನು ಬಳಸುತ್ತಾರಲ್ಲ, ಅದರ ವಿಷಯ ಏನು ?

ಒಂದು ಪದ್ಯದಲ್ಲಿ ಕರುಣ, ವೀರ, ಹಾಸ್ಯ–ಶೃಂಗಾರ, ವೀರ-ಅದ್ಭುತ, ಶೋಕ-ವೀರ ರಸಗಳ ಭಾವ ಸಂದರ್ಭಗಳು ಬರುತ್ತವೆ. ಅಂಥಲ್ಲಿ ಬೇರೆಬೇರೆ ರಾಗಗಳನ್ನು ಒಂದಾದಮೇಲೆ ಒಂದನ್ನು ತರಬೇಕಾಗುತ್ತದೆ. ಆಗ ಒಂದು ರಾಗದಲ್ಲಿ ಹಾಡು

ತ್ತಿದ್ದು, ಬೇರೆ ರಸ ಪ್ರತಿಪಾದನೆ ಮಾಡುವಾಗ ಬೇರೆ ರಾಗವನ್ನು ಅಳವಡಿಸ ಬೇಕಾಗುತ್ತದೆ. ಈ ರಾಗ ಬದಲಾವಣೆಗೆ ಗಮಕಿಯಲ್ಲಿ ಶಕ್ತಿಯಿರಬೇಕು. ಇಲ್ಲ ದಿದ್ದರೆ ಈ ಮಿಶ್ರ ಭಾಗವನ್ನು ಧ್ವನಿಯ ಹಿಡಿತದಲ್ಲಿ ತರಬಹುದು. ಮೋಟಾರಿನ ಗೇರು ಬದಲಾಯಿಸುತ್ತಾರಲ್ಲ, ಹಾಗೆ.

ನೀವು ಗುರುಗಳಿಂದ ಯಾವಯಾವ ರಾಗಗಳನ್ನು ಕಲಿತಿರಿ ?

ಗುರುಗಳು ನನಗೆ ರಾಗಗಳನ್ನು ಹೇಳಿಕೊಟ್ಟಿರಲಿಲ್ಲ. ಅವರು ಬೇರೆ ಬೇರೆ ಪದ್ಯ ಗಳನ್ನು ಬೇರೆ ಬೇರೆ ರಾಗಗಳಲ್ಲಿ ಓದುತ್ತಿದ್ದರು. ಅವರು ಒದುವ ರೀತಿಯನ್ನು ಮಾತ್ರ ನಾವು ಅಭ್ಯಾಸ ಮಾಡಿವೆವು. ಗುರುಗಳು ಪ್ರಾರ್ಥನಾ ಪದ್ಯವನ್ನು ಶಂಕರಾಭರಣದಿಂದಲೇ ಆರಂಭಿಸುತ್ತಿದ್ದರು. ಅದು ಅವರ ಪದ್ಧತಿ. ಆದರೆ ಶಾಸ್ತ್ರದ ಪ್ರಕಾರ ಪ್ರಾರ್ಥನಾ ಪದ್ಯ ನಾಟಿ ರಾಗದಿಂದ ಆರಂಭವಾಗಿ ಮಂಗಳ ಪದ್ಯ ಮಧ್ಯಮಾವತಿಯಿಂದ ಮುಗಿಯಬೇಕು ಎಂಬುದು ಒಂದು ಶಾಸ್ತ್ರ ಸಂಪ್ರ ದಾಯ. ಆದರೆ ಈಗ ಆ ಸಂಪ್ರದಾಯದ ಅನುಕರಣೆಯಿಲ್ಲ. ಯಾವ ರಾಗದಿಂದ ಲಾದರೂ ಆರಂಭಿಸಬಹುದು. ಗುರುಗಳೇ ಹಾಗೆ ಮಾಡಿ ತೋರಿಸಿದ್ದರಲ್ಲ.

ಕಾವ್ಯವಾಚನದಿಂದ ಆಗುವ ಪ್ರಯೋಜನ ಏನು ? ನಿಮ್ಮ ಅಭಿಪ್ರಾಯ ಏನು ?

ಜನಕ್ಕೆ ಸಂತೋಷವನ್ನು ಉಂಟುಮಾಡುವುದು ಆತ್ಮ ಸಂತೋಷವನ್ನು ಹಂಚಿ ಕೊಳ್ಳುವುದು 'ಶ್ರವಣ ಮನಕಾನಂದವೀವುದು' ಎಂಬುದು 'ಹರಿಕಥಾಮೃತ ಸಾರ' ಗ್ರಂಥದ ಪದ್ಯವೊಂದರಲ್ಲಿ ಬರುವ ಮಾತು. ಕಾವ್ಯ ಸೌಂದರ್ಯವನ್ನೂ ತತ್ವವನ್ನು ಸಂಗೀತದ ಮೂಲಕ ಶ್ರವಣ ಮಾಡಿಸಿ ಅದರ ಸಹೃದಯರ ಮನ ಸ್ಸಿಗೆ ಆನಂದವನ್ನುಂಟುಮಾಡುವುದು ಈ ಆನಂದದ ಮೂಲಕ ಅಗೋಚರ ವಾಗಿ ಅವರ ಮನಸ್ಸನ್ನು ತಿದ್ದುವುದು. ನನ್ನ ವಾಚನದಿಂದ ಜನರ ಮನಸ್ಸಿನ ಮೇಲೆ ಏನು ಪರಿಣಾಮವುಂಟುಮಾಡಿದೆ ಎಂದು ತಿಳಿಯಲು ಅಪೇಕ್ಷಿಸಿದಾಗ, ನಾನು ಭರಮ ಸಾಗರದಲ್ಲಿ ಮಾಡಿದ ವಾಚನ ಕುಮಾರವ್ಯಾಸ ಭಾರತ ವಾಚನ ಕೇಳಿದ ಜನ, ತಮ್ಮ ಸಂತೃಪ್ತಿಯನ್ನು ಆತ್ಮೀಯವಾಗಿ ನನಗೆ ವಿವರಿಸಿ ಹೇಳಿದಾಗ ಆದ ಸಂತೋಷ ನನಗೆ ಕೃತಕೃತ್ಯತೆಯನ್ನು ತಂದುಕೊಟ್ಟಿದೆ. ಕುವೆಂಪು ಶ್ರೀ ರಾಮಯಣ "ದರ್ಶನಂ", ಇತ್ತೀಚೆಗೆ ಗಮಕದ ಮೂಲಕ ಜನಪ್ರಿಯಗೊಳಿಸು ತ್ತಿರುವ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯ "ಶ್ರೀನಿವಾಸ"ರ ಶ್ರೀರಾಮ ಪಟ್ಟಾ ಭಿಷೇಕ ಕಾವ್ಯವಾಚನಗಳು ತುಂಬ ಯಶಸ್ವಿಯಾಗಿ ನನ್ನ ಗಮಕ ಪರಿಚಾರಿಕೆ ಸಾರ್ಥಕವಾಯಿತು ಎಂಬ ತೃಪ್ತಿಯನ್ನು ನನಗೆ ತಂದಿವೆ. ಇದು ನನ್ನ ಗುರು ವರ್ಯ 'ಭಾರತವಾಚನ ಪ್ರವೀಣ' ಬಿಂದೂರಾಯರ ಅನುಗ್ರಹ ನನ್ನ ಮೇಲೆ ದೈವ ಸುರಿಸುತ್ತಿರುವ ಅಪಾರ ಕೃಪಾರಸ.

ಗಮಕ ಸಮ್ಮೇಳನಾಧ್ಯಕ್ಷರ ಭಾಷಣ

ಶಕುಂತಲಾಬಾಯಿ ಪಾಂಡುರಂಗರಾವ್

ಶ್ರೀವನಿತೆಯರಸನೆ ವಿಮಲ ರಾ
ಜೀವ ಪೀಠನ ಪಿತನೆ ಜಗಕತಿ
ಪಾವನನೆ ಸನಕಾದಿ ಸಜ್ಜನನಿಕರ ದಾತಾರ :
ರಾವಣಾಸುರ ಮಥನ ಶ್ರವಣಸು
ಧಾವಿನೂತನ ಕಥನ ಕಾರಣ
ಕಾವುದಾನತ ಜಗವ ಗದುಗಿನ ವೀರನಾರಯಣ :

ವರಮಣಿಗಳಿಂದೆಸೆವ ಮೌಳಿಯ
ಸರಸಿಜಾರಿಯ ಕಿರಣದೋಳಿಯ
ವಿರಚಿಸಿದ ಸಿಂಧೂರಭಾಳದಿ ಕುಣಿವ ಕುಂತಳದ :
ಕರಿ ನಿಭಾಕೃತಿಯೆನಿಪ ವದನದ
ಕರದ ಪಾಶದ ಮೋದಕದ ವಿ
ಸ್ತರದ ಗಣಪತಿ ಮಾಡೆಮಗೆ ನಿರ್ವಿಘ್ನದಾಯಕವ :

ವಾರಿಜಾಸನೆ ಸಕಲ ಶಾಸ್ತ್ರ ವಿ
ಚಾರದುದ್ಭವೆ ವಚನರಚನೋ
ದ್ಧಾರೆ ಶ್ರುತಿ ಪೌರಾಣದಾಗಮ ಸಿದ್ಧಿದಾಯಕಿಯೆ :
ಶೌರಿ ಸುರಪತಿ ಸಕಲ ಮುನಿಜನ
ಸೂರಿಗಳಿಗನುಪಮದ ಯುಕುತಿಯೆ
ಶಾರದೆಯ ನರ್ತಿಸುಗೆ ಸಲಿದೊಲಿನ್ನ ಜಿಹ್ವೆಯಲಿ :

* * *

ಸಹೃದಯ ವಿಭೂತಿಗಳೆ,

ನಮ್ಮ ಸಂಸ್ಕೃತಿಯ ರಾಯಭಾರಿಗಳು ಕವಿ ಗಮಕಿವಾದಿವಾಗ್ಮಿಗಳು. ಅವರೆಲ್ಲರ ವಿದ್ವನ್ ಮಹಾ ಸಮ್ಮೇಳನವಿದು. ಈ ಮಹಾ ಗಮಕಸಮ್ಮೇಳನದಲ್ಲಿ ಉಪಸ್ಥಿತರಾಗಿರುವ ನಿಮಗೆಲ್ಲ ನನ್ನ ಶ್ರದ್ಧಾಭಕ್ತಿ ಪುರಸ್ಸರವಾದ ನಮಸ್ಕಾರಗಳು.

ನಾನು ಗಮಕಕಲಾಕೋವಿದಳಲ್ಲ. ಗಮಕಕಲಾವಿಶಾರದಳಲ್ಲ. ಗಮಕ ಕಲಾ, ದೇವಿಗೆ ಸೇವೆ ಸಲ್ಲಿಸುತ್ತಿರುವ ಅತಿ ಸಾಮಾನ್ಯರಲ್ಲಿ ಸಾಮಾನ್ಯಳಾದ ಒಬ್ಬ ಪರಿಚಾರಿಕೆ. ನನ್ನ ಗಮಕ ಕಲಾ ಪರಿಚಾರಿಕೆಯನ್ನು ಗಮನಿಸಿ, ಅಖಿಲ ಕರ್ನಾಟಕ ಗಮಕ ಸಮ್ಮೇಳನದ ಅಧ್ಯಕ್ಷಿಣಿಯ ಪೀಠದಲ್ಲಿ ಕೂಡಿಸಿ ನನ್ನನ್ನು ತುಂಬ ವಾತ್ಸಲ್ಯಪೂರ್ಣ-ಅಭಿಮಾನದಿಂದ ಗೌರವಿಸುತ್ತಿದ್ದೀರಿ. ನಾನು ಈ ಗೌರವಕ್ಕೆ ಪಾತ್ರಳೇ ಎಂಬ ತುಂಬ

ಶಂಕಿಸಿದೆ. ನನ್ನ ಗಮಕ ಕಲಾಭ್ಯಾಸಕ್ಕೆ ಅವಕಾಶವಿತ್ತು ನನ್ನನ್ನು ಗಮಕಕಲಾ ಪರಿಚಾರಿಕೆಯನ್ನಾಗಿ ಮಾಡಿದ್ದು ಕನ್ನಡಸಾಹಿತ್ಯಪರಿಷತ್ತು. ಅದು ನನ್ನನ್ನು ತನ್ನ ಅತಿಮೆಚ್ಚಿನ ಒಬ್ಬ ಮಗಳನ್ನಾಗಿ ಈವರೆಗೆ ಕಾಪಾಡಿಕೊಂಡು ಬಂದಿದೆ. ತಾಯಿ ತನ್ನ ಮಗಳನ್ನು ಪ್ರೀತಿಯಿಂದ ತನ್ನ ಮನೆಗೆ ಕರೆದು 'ಈ ಕೆಲಸ ಮಾಡು, ಈ ಕೆಲಸ ಮಾಡು' ಎಂದಾಗ 'ನಾನು ಒಲ್ಲೆ' ಎನ್ನುವ ಮಗಳು ಲೋಕದಲ್ಲಿ ಉಂಟೆ? ಈ ಕಾರಣ ದಿಂದ ನಾನು ಈ ಮಹಾಗಮಕ ಸಮ್ಮೇಳನದ ಅಧ್ಯಕ್ಷಿಣಿಯ ಪಟ್ಟಕ್ಕೆ ಅನರ್ಹಳಾದರೂ ತಾಯಿ ಮನೆಯ ಆಜ್ಞೆಯನ್ನು ತಲೆಯ ಮೇಲೆ ಹೊತ್ತು ನಿಮ್ಮ ಮುಂದೆ ನಿಂತಿದ್ದೇನೆ.

ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿದ್ದ ಪರಮ ಪೂಜ್ಯ ಶ್ರೀ ಡಿ. ವಿ. ಗುಂಡಪ್ಪನವರು ಗಮಕ ಕಲೆಯಲ್ಲಿ ವಿಶೇಷವಾದ ಅಭಿಮಾನ ಉಳ್ಳವರು. ಅವರು ಗಮಕ ಕಲೆಯ ವಿಷಯದಲ್ಲಿ ಬಾಲ್ಯದಿಂದಲೂ ತಮಗಿದ್ದ ಅಭಿರುಚಿಯನ್ನು 'ಜ್ಞಾಪಕ ಚಿತ್ರಶಾಲೆ' ಯ ಮೂರನೆಯ ಸಂಪುಟದ 'ಕಲೋಪಾಸಕರು' ಎಂಬ ಗ್ರಂಥದಲ್ಲಿ ಹೀಗೆ ವ್ಯಕ್ತಪಡಿಸಿದ್ದಾರೆ

'ಗಮಕಕಲೆ ನನಗೆ ಬಾಲ್ಯದಿಂದಲೂ ಪ್ರಿಯವಾದದ್ದು. ಮುಳಬಾಗಿಲು, ಶ್ರೀನಿವಾಸಪುರ, ಚಿಂತಾಮಣಿ ಮೊದಲಾದ ಊರುಗಳಲ್ಲಿ ಸಾಮಾನ್ಯವಾಗಿ ತೆಲುಗರಾದ ವೈಶ್ಯರು 'ವಾಚಕ' ಅಭ್ಯಾಸವನ್ನು ನಡೆಸುತ್ತಿದ್ದು ದನ್ನು ಕಂಡಿದ್ದೆ. ಆಂಧ್ರ ಭಾಗವತ, ಮನುಚರಿತ್ರೆ ಮೊದಲಾದ ಕಾವ್ಯಗಳನ್ನು ಒಬ್ಬ ವಿದ್ವಾಂಸನು ಹೇಳಿಕೊಡುತ್ತಿದ್ದ. ಯಾವ ಯಾವ ಕಥಾ ಸನ್ನಿವೇಶಕ್ಕೆ ಯಾವ ಯಾವ ರಾಗ ಉಚಿತವಾದದ್ದು ಎಲ್ಲೆಲ್ಲಿ ರಾಗವನ್ನು ಹೇಗೆ ವಿನ್ಯಾಸ ಮಾಡತಕ್ಕದ್ದು ಉಚ್ಚಾರಣೆ ಯಾವ ಮಟ್ಟದಲ್ಲಿರಬೇಕಾ ದದ್ದು, ಪದಗಳನ್ನು ಬಿಡಿಸುವುದು ಹೇಗೆ, ಅವುಗಳ ಮೇಲೆ ಸ್ವರಭಾರವನ್ನು ಹಾಕು ವುದು ಹೇಗೆ-ಇದನ್ನೆಲ್ಲ ಪಂಡಿತನು ಕಲಿಸುತ್ತಿದ್ದನು. ನನ್ನ ತಂದೆ ಒಳ್ಳೆಯ ವಾಚಕ ನೆಂದೆನಿಸಿಕೊಂಡಿದ್ದರು. ಹೀಗೆ ನನಗೆ ಒಳ್ಳೆಯ ಕಾವ್ಯ ವಾಚನದ ವಿಷಯದಲ್ಲಿ ಉತ್ಸಾಹ' ಎಂದು ಗಮಕದ ಬಗೆಗೆ ಇರುವ ತಮ್ಮ ಒಲವನ್ನು ವ್ಯಕ್ತಪಡಿಸಿದ್ದಾರೆ. ಕಾವ್ಯವಾಚನದ ಲಕ್ಷಣಗಳು ಏನೆಂಬುದು ಅವರ ಅಭಿಪ್ರಾಯದಲ್ಲಿ ಸ್ಪಷ್ಟವಾಗಿ ವ್ಯಕ್ತ ವಾಗಿದೆ.

ಡಿ.ವಿ.ಜಿ. ಯವರು 1933-34ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷ ರಾದರು. ಆಗ ಅವರು ಗಮಕ ತರಗತಿಯನ್ನು ಪ್ರಾರಂಭಿಸಿದರು. ಆ ಸಂದರ್ಭದಲ್ಲಿ ಅವರು ಹೇಳಿರುವ ಮಾತುಗಳು ಹೀಗಿವೆ:

'1933-34ರಲ್ಲಿ ಕರ್ನಾಟಕ ಸಾಹಿತ್ಯ ಪರಿಷತ್ತಿಗೆ ಉಪಾಧ್ಯಕ್ಷನಾಗುವ ಜವಾಬ್ದಾರಿ ನನ್ನ ಪಾಲಿಗೆ ಬಂತು. ಆಗ ಪರಿಷತ್ತಿನಲ್ಲಿ ಭಾರತವಾಚನದ ಅಭ್ಯಾಸವನ್ನು ಪ್ರೋತ್ಸಾಹಿಸಬೇಕೆಂದು ವೆಂಕಣ್ಣಯ್ಯ, ಕೃಷ್ಣಶಾಸ್ತ್ರಿ, ಶ್ರೀನಿವಾಸಮೂರ್ತಿ ಮೊದಲಾದ

ವರಿಗೂ ತೋರಿತು. ಅವರೆಲ್ಲರ ಪ್ರಯತ್ನ ಅನುಮೋದನೆಗಳಿಂದ ಪರಿಷತ್ತಿನ ಕಾವ್ಯ ವಾಚನದ ಅಥವಾ ಗಮಕ ಕಲೆಯ ಕ್ಲಾಸುಗಳನ್ನು ನಡೆಸತಕ್ಕದೆಂದು ಆ ಕೆಲಸವನ್ನು ಬಿಂದೂರಾಯರು ನಡೆಸಿಕೊಡಬೇಕೆಂದು ತೀರ್ಮಾನವಾಯಿತು'.

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಗಮಕ ತರಗತಿ 1934ರಲ್ಲಿ ಪ್ರಾರಂಭವಾಯಿತು. ನಾನು 1937ರಲ್ಲಿ ವಿದ್ಯಾರ್ಥಿನಿಯಾಗಿ ಸೇರಿಕೊಂಡೆ. ಆಗಲೂ ಡಿ. ವಿ. ಜಿ. ಅವರೇ ಪರಿಷತ್ತಿನ ಉಪಾಧ್ಯಕ್ಷರು 'ಭಾರತ ವಾಚನ ಪ್ರವೀಣ' ಸಂ. ಗೋ ಬಿಂದೂರಾಯರೇ ಗಮಕ ತರಗತಿಯ ಗುರುಗಳು, 1937ರವರೆಗೆ ಗಮಕ ತರಗತಿಗೆ ಯಾವ ಮಹಿಳೆಯೂ ವಿದ್ಯಾರ್ಥಿನಿಯಾಗಿ ಸೇರಿರಲಿಲ್ಲ 1937ರಲ್ಲಿ ನಾನು ಪ್ರಪ್ರಥಮ ವಿದ್ಯಾರ್ಥಿನಿಯಾಗಿ ಪರಿಷತ್ತನ್ನು ಪ್ರವೇಶಿಸಿದೆ. ನನ್ನ ಜೊತೆಗೆ ಇದ್ದ ಗಮಕ ವಿದ್ಯಾರ್ಥಿಗಳು ಬಿ. ಎ., ಎಂ. ಎ., ಪದವೀಧರರು. ಸಂಗೀತ ಸಾಹಿತ್ಯಗಳಲ್ಲಿ ನಿಷ್ಣಾತರು. ವಯಸ್ಸಿನಲ್ಲಿ ನನಗಿಂತ ಎಂಟು ವರ್ಷ ಹಿರಿಯರು. ಆಗ ನನಗೆ ಕೇವಲ 16 ವರ್ಷ. ನನ್ನ ಓದು ಈಗಿನ ಪ್ರಾಥಮಿಕ ಏಳನೆಯ ತರಗತಿಯವರೆಗೆ ಮಾತ್ರ. ಕನ್ನಡ ಸಾಹಿತ್ಯಾಭ್ಯಾಸ ಸೊನ್ನೆ. ಆದರೆ ಸಂಗೀತದಲ್ಲಿ ಹತ್ತಾರು ವರ್ಣಗಳನ್ನು ಸುಮಾರು ಮೂವತ್ತು ನಲವತ್ತು ಕೀರ್ತನೆಗಳನ್ನು ಕಲಿತಿದ್ದೆ. ನನ್ನ ಕಂಠಶ್ರೀಯೊಂದೆ ಗಮಕ ಕಲಿಯುವುದಕ್ಕೆ ನನ್ನ ಆಸ್ತಿಯಾಗಿತ್ತು. ನನ್ನ ಗುರುಗಳಾದ ಬಿಂದೂರಾಯರು ನನ್ನನ್ನು ನೋಡಿದ ಕೂಡಲೇ ಡಿ. ವಿ. ಜಿ. ಯವರಿಗೆ ಕಿವಿ ಮಾತಿನಲ್ಲಿ 'ಈ ಹೆಣ್ಣು ಮಗುವಿಗೆ ಏನು ಗಮಕ ಕಲಿಸುವುದಪ್ಪ?' ಎಂದು ಪಿಸುಗುಟ್ಟಿದರಂತೆ. ಆದರೂ ಶ್ರೀ ಡಿ.ವಿ.ಜಿ. ಯವರು ಪಿತೃ ವಾತ್ಸಲ್ಯದಿಂದ ನನ್ನನ್ನು ಗಮಕ ತರಗತಿಗೆ ಸೇರಿಸಿಕೊಂಡರು. ನನ್ನ ಪರಮಗುರುಗಳಾದ ಶ್ರೀ ಬಿಂದೂರಾಯರು ನಿರ್ವಂಚನೆಯಿಂದ ಗಮಕ ಪಾಠ ಮಾಡಿಸಿದ್ದರು. ಅವರ ಪಾಠವನ್ನು ಅವರಿಗೆ ನಾನು ಧ್ವನಿಮುದ್ರಿಕೆ ಒಪ್ಪಿಸುವಂತೆ ಚಾಚೂತಪ್ಪದೆ ಒಪ್ಪಿಸಿ ಬಿಡುತ್ತಿದ್ದೆ. ಗುರುಗಳಿಗೆ ತರಗತಿಯನ್ನು ಸಮೀಕ್ಷಿಸಲು ಬರುತ್ತಿದ್ದ ಹಿರಿಯ ಸಾಹಿತಿಗಳಿಗೆ ಇದು ಪರಮಾಶ್ಚರ್ಯವನ್ನು ಉಂಟುಮಾಡುತ್ತಿತ್ತು. ಗಮಕ ತರಗತಿ ನಡೆಯುತ್ತಿದ್ದ ಸಮಯದಲ್ಲಿ ಒಂದುಸಲ ಟಿ. ಎಸ್. ವೆಂಕಣ್ಣಯ್ಯನವರು ತರಗತಿಗೆ ಬಂದರು. ನನ್ನ ಗಮಕ ಕಲೆಯನ್ನು ಗಮನಿಸಿ 'ಈ ಮಗುವಿಗೆ ಮನೋಧರ್ಮ ಬೆಳೆದರೆ ಉತ್ತಮ ಗಮಕಿಯಾಗುವ ಲಕ್ಷಣಗಳು ಇವೆ' ಎಂದು ನನ್ನ ಗುರುಗಳಿಗೆ ಭವಿಷ್ಯ ಹೇಳಿದರು. ಆಧುನಿಕ ಕನ್ನಡ ಸಾಹಿತ್ಯಾಚಾರ್ಯರಾದ ಬಿ.ಎಂ. ಶ್ರೀಕಂಠಯ್ಯನವರ 'ಕನ್ನಡ ತಾಯ ನೋಟ' ಎಂಬ ಕೃತಿಯನ್ನು ಅವರ ಸನ್ಮಾನ ಸಭೆಯಲ್ಲಿ ವಾಚನ ಮಾಡುವ ಭಾಗ್ಯ 1938ರಲ್ಲಿ ನನಗೆ ಲಭಿಸಿತ್ತು. ಅವರು ನನ್ನ ವಾಚನವನ್ನು ಕೇಳಿ ಸಂತೋಷಭರಿತರಾದರು. ಇದರ ಛಂದಸ್ಸು ಗಮಕಕ್ಕೆ ಒಗ್ಗುವುದೆಂದು ತೋರಿಸಿ ನನಗೆ ಆಶ್ಚರ್ಯವನ್ನು ಉಂಟುಮಾಡಿದ್ದೀರಿ ಎಂದು ತುಂಬು ಹೃದಯದಿಂದ ಮೆಚ್ಚುಗೆ ವ್ಯಕ್ತಪಡಿಸಿದ್ದರು. ಮುಂದೆ ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈ ಸನ್ಮಾನ ಸಭೆ

ಯಲ್ಲಿ ಅವರ 'ಗೊಲ್ಗಥಾ' ಕಾವ್ಯದಿಂದ ಕೆಲವು ಸಾಲುಗಳನ್ನು ನಾನು ವಾಚನ ಮಾಡಿದ್ದೆ. ಕವಿವರ್ಯರು 'ನೀವು ನನ್ನ ಕಾವ್ಯಕ್ಕೆ ಧ್ವನಿ ಕೊಟ್ಟಿರಿ' ಎಂದು ಆಶೀರ್ವದಿಸಿದ್ದರು. ಬಿ.ಎಂ. ಶ್ರೀ, ಗೋವಿಂದ ಪೈ ಕೊಟ್ಟ ಪ್ರೋತ್ಸಾಹ ಹಾಗೂ ಆಶೀರ್ವಾದದ ಬಲದಿಂದ ನಾನು ರಾಷ್ಟ್ರಕವಿ ಕುವೆಂಪು ಅವರ ಶ್ರೀ ರಾಮಾಯಣದರ್ಶನಂ ವಾಚನಕ್ಕೆ ಕೈ ಹಾಕಿದೆ. ಕುವೆಂಪು ಅವರ ಸಮ್ಮುಖದಲ್ಲಿ ಶ್ರೀ ರಾಮಾಯಣ ದರ್ಶನಂ ವಾಚನವಾಯಿತು. ಅವರು ನನ್ನ ವಾಚನವನ್ನು ಕೇಳಿ ಸಂತೃಪ್ತರಾದರು. ಮಹಾಸಭೆಗಳಲ್ಲಿ ತಮ್ಮ ಮಹಾಕಾವ್ಯವನ್ನು ವಾಚನ ಮಾಡಬಹುದೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದರು. ಮಾಸ್ತಿ, ವಿ. ಸೀ., ಬೇಂದ್ರೆ ಮೊದಲಾದವರ ಕಾವ್ಯ ಕವನಗಳನ್ನು ಅವರುಗಳ ಮುಂದೆ ತುಂಬಿದ ಸಭೆಗಳಲ್ಲಿ ಓದುವ ಅವಕಾಶ ನನಗೆ ದೊರೆಯಿತು. ಕುಮಾರವ್ಯಾಸ ಭಾರತ ಅಷ್ಟೆ ಅಲ್ಲದೆ ಪಂಪ, ರನ್ನ, ಹರಿಹರ, ರಾಘವಾಂಕ, ಚಾಮರಸ, ಲಕ್ಷ್ಮೀಶ ಮೊದಲಾದ ಮಹಾ ಕವಿಗಳ ಕಾವ್ಯಗಳನ್ನು ವಾಚನಮಾಡುವ ಮಹಾಭಾಗ್ಯ ನನಗೆ ಒದಗಿ ಬಂತು. ಈವರೆಗೆ ಗಮಕ ವಾಚನವೆಂದರೆ ಭಾರತ ವಾಚನವಾಗಿತ್ತು. ನಾನು ಬೇರೆ ಕಾವ್ಯಗಳನ್ನು ವಾಚನಮಾಡಲು ಪ್ರಾರಂಭಿಸಿದ ಮೇಲೆ ಭಾರತವಾಚನ ಕಾವ್ಯ ವಾಚನಕ್ಕೆ ಎಡೆಗೊಟ್ಟಿತು. ಈ ತಿರುವು ಆಗ ಹೊಸದು, ಈಗ ಅದು ಹಳೆಯ ವಿಷಯವಾಗಿದೆ. ನನಗೆ ಪ್ರೋತ್ಸಾಹ ಕೊಟ್ಟ ಹಿರಿಯರುಗಳ ರಕ್ಷಾಕವಚ ಈ ದಿನ ನನ್ನನ್ನು ಈ ಮಹಾಸಭೆಯ ಮುಂದೆ ತಂದು ನಿಲ್ಲಿಸಿದೆ. ನನ್ನ ಅಭ್ಯುದಯಕ್ಕೆ ಕಾರಣರಾದ ಹಿರಿಯರುಗಳನ್ನು ಈ ಸಮಯದಲ್ಲಿ ಸ್ಮರಿಸಿಕೊಂಡು ಅವರುಗಳಿಗೆ ನನ್ನ ಕೃತಜ್ಞತಾಪೂರ್ವಕವಾದ ನಮಸ್ಕಾರಗಳನ್ನು ಅರ್ಪಿಸದಿದ್ದರೆ ಆತ್ಮವಂಚನೆಯಾಗುತ್ತದೆ. ಗುಣಗ್ರಾಹಿಗಳಾದ ತಾವು ಈ ಕಾರಣವನ್ನು ಮನಗಂಡು ಅನಿವಾರ್ಯವಾಗಿ ಪ್ರಸ್ತಾಪಿತವಾದ ನನ್ನ ಆತ್ಮವೃತ್ತಾಂತವನ್ನು ಮನ್ನಿಸಿ, ಹಂಸಕ್ಷೀರನ್ಯಾಯದಿಂದ ನನ್ನ ಭಾಷಣವನ್ನು ತಾಳ್ಮೆಯಿಂದ ಕಿವಿಗೊಟ್ಟು ಕೇಳಬೇಕಾಗಿ ಅತ್ಯಂತ ವಿನಯದಿಂದ ಪ್ರಾರ್ಥಿಸಿಕೊಳ್ಳುತ್ತೇನೆ.

ಆದಿ ಮಹಾಕಾವ್ಯವೆಂದು ಅನಾದಿಕಾಲದಿಂದ ಜನಪ್ರಿಯವಾಗಿರುವ ಶ್ರೀಮದ್ರಾಮಾಯಣವನ್ನು ರಚಿಸಿದ ವಾಲ್ಮೀಕಿ ಮಹರ್ಷಿಗಳು ಆದಿಕವಿ ಹೇಗೋ ಹಾಗೆಯೇ ಆದಿ ಗಮಕ ಹಾಗೂ ಗಮಕಿ ಕಲಾಚಾರ್ಯರೆಂದು ನನ್ನ ನಂಬಿಕೆ. ಅವರು ಅತ್ಯಂತ ಶ್ರೇಷ್ಠಮಟ್ಟದ ಗಮಕ ಕಲೋಪಾಧ್ಯಾಯರೂ ಹೌದು. ಇದು ವಾಲ್ಮೀಕಿ ರಾಮಾಯಣದಲ್ಲಿ ಸ್ಪಷ್ಟವಾಗಿದೆ. ವಾಲ್ಮೀಕಿ ರಾಮಾಯಣದ ನಾಲ್ಕನೆಯ ಸರ್ಗದಲ್ಲಿ 1ನೆಯ ಶ್ಲೋಕದಿಂದ 13 ಶ್ಲೋಕಗಳವರೆಗೆ ಉಕ್ತವಾಗಿರುವ ಸಂಸ್ಕೃತ ಶ್ಲೋಕಗಳ ಕನ್ನಡ ಅನುವಾದವನ್ನು ವಿದ್ವಾನ್ ಶ್ರೀ ರಂಗನಾಥಶರ್ಮರ ವಾಣಿಯಲ್ಲಿ ಕೇಳಿ :

'ಶ್ರೀ ರಾಮನಿಗೆ ಅಯೋಧ್ಯೆಯಲ್ಲಿ ಪಟ್ಟಾಭಿಷೇಕವಾದ ಮೇಲೆ ವಾಲ್ಮೀಕಿ ಮುನಿ

ಗಳು ವಿಸ್ಮಯಕರವಾದ ಮಧುರ ಪದಗಳಿಂದ ಶ್ರೀರಾಮ ಚರಿತೆಯನ್ನು ವಿರಚಿಸಿದರು. (1) ಮೊದಲು (ಪಟ್ಟಾಭಿಷೇಕ ಪರ್ಯಂತವಾಗಿ ಉತ್ತರ ಕಾಂಡವನ್ನು ರಚಿಸಿದರು. (2) ಆ ಮಹಾ ಪ್ರಾಜ್ಞರು ಅಶ್ವಮೇಧಯಾಗವಾದ ಮೇಲೆ ನಡೆಯುವ ಮುಂದಿನ ವೃತ್ತಾಂತ ಸಹಿತವಾಗಿ ಉತ್ತರ ಕಾಂಡವನ್ನು ವಿರಚಿಸಿ ಈ ಕಾವ್ಯವನ್ನು ಕುರಿತು ಯಾರು ಹಾಡಬಲ್ಲರು ಎಂದು ಆಲೋಚಿಸುತ್ತಿದ್ದರು. (3) ಪರಿಶುದ್ಧಾತ್ಮರಾದ ವಾಲ್ಮೀಕಿ ಮುನಿಗಳು ಹೀಗೆ ಆಲೋಚಿಸುತ್ತಿರುವಾಗ ಮುನಿವೇಷವನ್ನು ಧರಿಸಿದ ಕುಶ ಲವ ಎಂಬ ಕುಮಾರರು ಬಂದು ಪಾದಗಳನ್ನು ಮುಟ್ಟಿ ಅಭಿವಾದನೆ ಮಾಡಿದರು. (4) ರಾಜ ಪುತ್ರರಾದ ಆ ಕುಶಲವರು ಅಣ್ಣತಮ್ಮಂದಿರು. ಅವರು ಧರ್ಮಜ್ಞರೂ ವಿದ್ಯಾರ್ಜನೆ ಮಾಡಿದ ಕೀರ್ತಿವಂತರೂ ಉತ್ತಮವಾದ ಕಂಠ ಧ್ವನಿಯುಳ್ಳವರೂ ಆಶ್ರಮವಾಸಿಗಳೂ ಆಗಿದ್ದರು. (5) ಮೇಧಾವಿಗಳೂ ವೇದಪಾರಂಗತರೂ ಆದ ಕುಮಾರರನ್ನು ನೋಡಿ ವಾಲ್ಮೀಕಿ ಮುನಿಗಳು ವೇದಾರ್ಥ ಪ್ರತಿಪಾದಕವಾದ ರಾಮಾಯಣವನ್ನು ಅವರಿಗೆ ಕಲಿಸಿದರು. (6) ಉತ್ತಮ ಗಮಕಿಯಾಗಲು ಇರಬೇಕಾದ ಆ ಗುಣಗಳು ಕುಶಲವರುಗಳಿಗೆ ವಿಶೇಷವಾಗಿದ್ದವು. ಗುರುವಾದವನು ಪಾತ್ರಾಪಾತ್ರ ವರಿತು ವಿದ್ಯಾದಾನ ಮಾಡಬೇಕು. ಮಹಾಮಹಿಮರಾದ ವಾಲ್ಮೀಕಿ ಮಹರ್ಷಿಗಳು ಈ ವಿಷಯನ್ನು ಚೆನ್ನಾಗಿ ಅರಿತವರಾಗಿದ್ದರು. ಅದ್ದರಿಂದಲೇ ಅವರು ಕುಶಲವರನ್ನು ಪಟ್ಟ ಶಿಷ್ಯರನ್ನಾಗಿ ಮಾಡಿಕೊಂಡು ಅವರಿಗೆ ಗಮಕ ಕಲಾಭ್ಯಾಸ ಮಾಡಿಸಿದರು.

ಕಾವ್ಯವಾಚನ ಪಂಡಿತ ಪಾಮರರನ್ನು ರಂಜಿಸಬೇಕಾದರೆ ಕಾವ್ಯದ ಗುಣವಿಶೇಷ ಗಳೇನು? ಕಾವ್ಯವಾಚನವನ್ನು ಮಾಡುವ ಗಮಕಿಗೆ ಅತ್ಯವಶ್ಯಕವಾಗಿ ಇರಬೇಕಾದ ಗುಣಗಳೇನು? ವಾಲ್ಮೀಕಿ ರಾಮಾಯಣದಲ್ಲಿ ಈ ವಿಷಯವನ್ನು ನಿರ್ವಿವಾದ ರೀತಿಯಲ್ಲಿ ಸ್ಪಷ್ಟವಾಗಿ ಹೇಳಿದೆ. ಗಮಕಿಗಳಾಗಬಯಸುವವರಿಗೆ ನಾನು ಈಗ ಉದಾಹರಿಸುವ ವಾಲ್ಮೀಕಿ ರಾಮಾಯಣದ ಶ್ಲೋಕಗಳು ಕೈಗನ್ನಡಿಯಂತಿವೆ.

'ಈ ರಾಮಾಯಣ ಕಾವ್ಯವಾದರೂ ಶ್ರೀರಾಮಚಂದ್ರನ ಸಮಗ್ರ ವೃತ್ತಾಂತ ದಿಂದಲೂ ಸೀತಾದೇವಿಯ ಮಹತ್ವಪೂರ್ಣವಾದ ಚರಿತ್ರದಿಂದಲೂ ರಾವಣ ವಧೆಯ ಸಂದರ್ಭದಿಂದಲೂ ಉತ್ತಮವಾದ ಕಾವ್ಯವೆನಿಸಿದೆ. ಓದುವುದಕ್ಕೂ ಹಾಡುವುದಕ್ಕೂ ಮಧುರವಾಗಿದೆ. ದ್ರುತ, ಮಧ್ಯಮ, ವಿಲಂಬಿತಗಳೆಂಬ ಮೂರು ವೃತ್ತಿಗಳಿಂದ ಷಡ್ಜಾದಿ ಸಪ್ತಸ್ವರಗಳಲ್ಲಿ ಹಾಡಲು ಯೋಗ್ಯವಾಗಿದೆ. ವೀಣೆಯಲ್ಲಿ ಲಯವಿಶಿಷ್ಟವಾಗಿ ನುಡಿಸಬಹುದಾಗಿದೆ. ಶೃಂಗಾರ ವೀರ, ಕರುಣ, ಅದ್ಭುತ, ಹಾಸ್ಯ, ಭಯಾನಕ, ಬೀಭತ್ಸರೌದ್ರ ಶಾಂತಗಳೆಂಬ ನವರಸಗಳಿಂದ ತುಂಬಿದೆ. ಇಂಥ ಈ ರಾಮಾಯಣ ಕಾವ್ಯವನ್ನು ಆ ಕುಮಾರರು ಕಲಿತು ಹಾಡುತ್ತಿದ್ದರು. (8–9).

ಕನ್ನಡಕಾವ್ಯಪ್ರಪಂಚದಲ್ಲಿ ಕವಿಸಾರ್ವಭೌಮನಾಗಿ ಮೆರೆಯುತ್ತಿರುವ ನಮ್ಮ ಗದುಗಿನ ನಾರಣಪ್ಪ ವಾಲ್ಮೀಕಿ ರಾಮಾಯಣದ ಗುಣವಿಶೇಷಗಳನ್ನು ಚೆನ್ನಾಗಿ ಮನ

ಗಂಡ ಪರಕವಿ. ಅವನ ಮಹಾಕಾವ್ಯ 'ಕರ್ನಾಟಕಭಾರತ ರಸಮಂಜರಿ' ಗಮಕಿಗಳಿಗೆ ಯಾಕೆ ಪರಮ ಶ್ರೇಷ್ಠ ಕಾವ್ಯವಾಯಿತು. ಕಾವ್ಯವಾಚನಕ್ಕೆ? ವಾಲ್ಮೀಕಿ ರಾಮಾಯಣದಲ್ಲಿ ಪಂಡಿತರಿಂದ ಹಿಡಿದು ಪಾಮರರವರೆಗೆ ಹೃದಯ ಸ್ಪರ್ಶಿಸುವ ಗುಣಗಳು ಏನು ಉಂಟೋ ಅಷ್ಟೂ ಗುಣಗಳು ನಮ್ಮ ನಾರಣಪ್ಪನ ಭಾರತದಲ್ಲಿರುವುದರಿಂದಲೇ ಅವನ ಕಾವ್ಯ ಸಹೃದಯ ರಸಿಕರನ್ನು ಆಕರ್ಷಿಸಿದೆ. ಅದನ್ನು ನಾರಣಪ್ಪನ ವಾಣಿಯಲ್ಲೇ ಹೇಳೋಣ.

ಅರಸುಗಳಿಗಿದು ವೀರ ದ್ವಿಜರಿಗೆ
ಪರಮವೇದದ ಸಾರ ಯೋಗೀ
ಶ್ವರರ ತತ್ವವಿಚಾರ ಮಂತ್ರಿಜನಕ್ಕೆ ಬುದ್ಧಿಗುಣ
ವಿರಹಿಗಳ ಶೃಂಗಾರ ವಿದ್ಯಾ
ಪರಿಣತರಲಂಕಾರ ಕಾವ್ಯಕೆ
ಗುರುವೆನಲು ರಚಿಸಿದ ಕುಮಾರವ್ಯಾಸ ಭಾರತವ

ಮಹಾಕವಿ ರಾಘವಾಂಕ ಗದುಗಿನ ನಾರಣಪ್ಪನ ಅಭಿಪ್ರಾಯವನ್ನು ಇನ್ನೊಂದು ರೀತಿಯಲ್ಲಿ ತನ್ನ 'ಹರಿಶ್ಚಂದ್ರ ಕಾವ್ಯ'ದಲ್ಲಿ ಸ್ಪಷ್ಟಪಡಿಸಿದ್ದಾನೆ. ಅದು ಹೀಗಿದೆ;

ರಸಜೀವ ಭಾವವೊಡಲರ್ಥವವಯವ ಶಬ್ದ
ವಿಸರವೇ ನುಡಿಯಲಂಕಾರವೇ ತೊಡಿಗೆಯುಂ ತ
ವೆ ಸುಲಕ್ಷಣವೆ ಲಕ್ಷಣ ವಿಮಳ ಪದನ್ಯಾಸ ನಡೆರೀತಿ ಸುಕುಮಾರತೆ
ರಸಿಕತನ ಸುಳಿ ಸುಖಂ ನಿಳಯಮೆಂತಪ್ಪ ಯೀ
ಪೊಸಕಾವ್ಯಕನ್ನಿಕೆಯ ಪಡೆದು ಪಂಪಾಂಬಿಕೆಯ
ರಸ ವಿರೂಪಾಕ್ಷಂಗೆ ಕೊಟ್ಟ ಹಂಪೆಯ ರಾಘವಾಂಕನೇಂ ಕೃತಕೃತ್ಯನೋ

ಗಮಕ ವಾಚನಕ್ಕೆ ಕೈ ಹಾಕುವವರು ಎಂಥ ಗುಣಸಂಪನ್ನರಾಗಿರಬೇಕು? ಶ್ರೀಮದ್ರಾಮಾಯಣವನ್ನು ವಾಲ್ಮೀಕಿ ಮಹರ್ಷಿಗಳ ವರಶಿಷ್ಯರಾದ ಕುಶಲವರು ಶ್ರೇಷ್ಠ ಗಮಕಿಗಳು ಸಂಪಾದಿಸಿಕೊಳ್ಳಬೇಕಾದ ಸಕಲ ಗುಣಸಂಪನ್ನರಾಗಿದ್ದರು. ವಾಲ್ಮೀಕಿ ರಾಮಾಯಣದಲ್ಲಿ ಅದರ ಸುಳಿವು ಹೀಗಿದೆ.

'ಆ ಲವಕುಶರು ಸಂಗೀತ ಶಾಸ್ತ್ರದಲ್ಲಿ ವಿಶಾರದರೂ ಸ್ವರೋತ್ಪತ್ತಿಸ್ಥಾನವನ್ನು ವೀಣಾದಿವಾದ್ಯಗಳನ್ನು ಬಲ್ಲವರೂ ಉತ್ತಮ ಶಾರೀರವುಳ್ಳವರೂ ಆಗಿದ್ದರು. ಆ ಅಣ್ಣ ತಮ್ಮಂದಿರು ಗಂಧರ್ವರಂತೆ ರೂಪವಂತರೂ ಸಾಮುದ್ರಿಕ ಶಾಸ್ತ್ರೋಕ್ತವಾದ ಲಕ್ಷಣವುಳ್ಳವರೂ ಇಂಪಾಗಿ ಮಾತನಾಡತಕ್ಕವರೂ ಶ್ರೀರಾಮನ ಪ್ರತಿಬಿಂಬಗಳಂತೆ ಇದ್ದರು. (10-11) ಬುದ್ಧಿಶಾಲಿಗಳೂ ಗೌರವಾರ್ಹರೂ ಆದ ಆ ರಾಜಪುತ್ರರು ಧರ್ಮಕಾವ್ಯವನ್ನು ಹೃದ್ಗತವಾಗಿ ಕಂಠಪಾಠಮಾಡಿ ಋಷಿಗಳು ಬ್ರಾಹ್ಮಣರು ಮಹಾಜನರು ಸೇರಿದ ಸ್ಥಳಗಳಲ್ಲಿ ಸಾವಧಾನವಾಗಿ ಗುರುಗಳು ಕಲಿಸಿದಂತೆ ಹಾಡುತ್ತಿದ್ದರು. (12-13)' ಕನ್ನಡ ಜೈಮಿನಿ ಭಾರತದ ಮಹಾಕವಿ ನಾವಲೋಲ ಲಕ್ಷ್ಮೀಶ ಕುಶಲವರ ಗಮಕ ವಾಚನ ವೈಖರಿಯನ್ನು ಹೃದಯಂಗಮವಾಗಿ ವರ್ಣಿಸಿದ್ದಾನೆ. ಅವನ ವಾಣಿಯಲ್ಲೇ ಕೇಳೋಣ.

ಸೀತೆ ನಲಿವಂತೆ ವಾಲ್ಮೀಕಿ ಮೆಚ್ಚುವ ತೆರದೊ
ಳಾ ತಪೋವನದ ಮುನಿಗಣಮೈದೆ ಕೊಂಡಾಡ
ಲಾ ತರುರಣರಿರ್ವರುಂ ಮಧುರ ವೀಣೆಗಳ ಮೇಳದಾಳಾಪಂಗಳ
ಗೀತದೊಳ್ ಸಂಕೀರ್ಣ ಶುದ್ಧ ಸಾಳಗದಿಂ ರಾ
ಗಾತಿಶಯಮೆನೆ ಪಾಡುವರ್ ದೇವನಗರೀ ನಿ
ಕೇತನ ಶ್ರೀಪತಿಯ ಚಾರಿತ್ರಮಪ್ಪ ರಾಮಾಯಣವನನು ದಿನದೊಳು.

ಕುಶಲವರ ಗಮಕ ಕಲಾಪ್ರೌಢಿಮೆ ಮೇರು ಶಿಖರಕ್ಕೇರಿದೆ. ಕವಿತಿಲಕ ಸೋಸಲೆ ಅಯ್ಯಶಾಸ್ತ್ರಿಗಳು ರಚಿಸಿದ 'ಪದ್ಯ ಮಹಾ ಕಾವ್ಯ ಶೇಷರಾಮಾಯಣ' ದಲ್ಲಿ ಗಮಕಾಚಾರ್ಯರಾದ ವಾಲ್ಮೀಕಿ ಮಹರ್ಷಿ ಕುಶಲವರನ್ನು ಶ್ರೀರಾಮಚಂದ್ರನ ಮಹಾವಿದ್ವತ್ ಸಭೆಯಲ್ಲಿ ರಾಮಾಯಣ ವಾಚನ ಮಾಡುವಂತೆ ಆಜ್ಞಾಪಿಸುತ್ತಾರೆ. ಆ ಸನ್ನಿವೇಷವನ್ನು ಸಾವಧಾನವಾಗಿ ಕೇಳಬೇಕೆಂದು ನನ್ನ ಪ್ರಾರ್ಥನೆ.

'ಶ್ರೀಮತ್ಕುಮಾರರಿರ ನೀಂಗಳಭ್ಯಸಿಸಿರ್ಪ
ರಾಮಾಯಣವನುಚಿತ ರಾಗಸ್ವರಂಗಳೊಳ
ನೀ ಮಹಾಸಭೆಯೊಳಾಲಾಪಿಸುವುದೆನೆ ವಿನಯದಿಂ ಪಟುಗಳಾಪಟುಗಳು

ರಾಮನುಂ ಸೌಮಿತ್ರಿ ಭರತರುಂ ಸುರರಾದಿ
ಭೂಮಿಪರುಮಖಿಲ ತಾಪಸರುಮಂತಃಪುರದ
ಸೀಮಂತಿನಿಯರುಮೇಕಾಗ್ರತೆಯೊಳಾಲಿಸಲ್ಕದಸೆ ತವಕಿಸುತಿರಲ್ಕೆ

ಆರಭಿ ಶ್ರೀ ಮೋಹನಂ ತೋಡಿ ಕಲ್ಯಾಣಿ
ಸೌರಾಷ್ಟ್ರ ಕಾಂಭೋಜಿ ಶಹನಂ ನಾಟಿ ಸಾ
ವೇರಿ ಭೈರವಿ ಶಂಕರಾಭರಣ ಧನ್ಯಾಸಿ ಸುರಟಿ ಬೇಗಡೆ ಮೊದಲಹ

ಚಾರುರಾಗಂಗಳಿಂದರ್ಥರಸಭಾವಾನು
ಸಾರದಿಂ ತೊಡಗಿದರ್ಪಾಡಲ್ಗಭೀರ ವಾ
ಗ್ದೋರಣೆಯೊಳಾ ಮಹಾಕಾವ್ಯಮುಂ ಚಿತ್ರಿಸಿದರೆಂಬ ವೋಲಿರೆ ಸಭ್ಯರು

ವಾಲ್ಮೀಕಿ ರಾಮಾಯಣದಂತೆ ವ್ಯಾಸಭಗವಾನರು ಸಂಸ್ಕೃತದಲ್ಲಿ ರಚಿಸಿದ ಭಾರತ ಭಾಗವತಗಳೂ ಕಾವ್ಯವಾಚನಕ್ಕೆ ಒಗ್ಗಿ ಬಂದ ವಾಚಕ ಕಾವ್ಯಗಳಾಗಿವೆ. ವ್ಯಾಸ ಭಾರತದಲ್ಲಿ ವಾಚಕರ ಒಂದು ಪಟ್ಟಿಯೇ ಸಿಗುತ್ತದೆ.

'ನಾರದರು ಭಾರತವನ್ನು ದೇವತೆಗಳಿಗೆ ಹೇಳಿದರು. ವ್ಯಾಸರ ಮಗ ಶುಕ ಭಾರತವನ್ನು ಗಂಧರ್ವರು ಯಕ್ಷರು ರಾಕ್ಷಸರು ಇವರುಗಳಿಗೆ ಹೇಳಿದ. ವ್ಯಾಸರ ಮುಖ್ಯ ಶಿಷ್ಯನಾದ ವೈಶಂಪಾಯನ ಋಷಿ ಭಾರತವನ್ನು ಮನುಷ್ಯಲೋಕಕ್ಕೆ ಹೇಳಿದನು. ಭಾರತವನ್ನು ಕೇಳಿದ ಸೂತಪುರಾಣಿಕರು ಮುಂದೆ ಅದನ್ನು ಶೌನಕರೆಂಬ ಮಹರ್ಷಿಗಳ ಅಧ್ಯಕ್ಷತೆಯಲ್ಲಿ ನೈಮಿಶಾರಣ್ಯದಲ್ಲಿ ಸೇರಿದ್ದ ಋಷಿಸಭೆಗೆ ಹೇಳಿದರು. ಹೀಗೆ ವ್ಯಾಸ ಭಾರತ ದೇವಲೋಕದಿಂದ ಹಿಡಿದು ಮಾನವ ಲೋಕದವರೆಗೆ ಒಬ್ಬರಿಂದ ಇನ್ನೊಬ್ಬರಿಗೆ ಹರಡಿ ಶಾಶ್ವತವಾಗಿ ಉಳಿದುಕೊಂಡಿದೆ. ಸಾವಿರಾರು ವರ್ಷಗಳು ಕಳೆ

ದರೂ ವ್ಯಾಸ ಭಾರತದ ಕೀರ್ತಿ ಕುಗ್ಗಿಲ್ಲ. ಇನ್ನೂ ಹೆಚ್ಚುತ್ತಲೇ ಇದೆ.'*

ರಾಷ್ಟ್ರಕವಿ ಕುವೆಂಪು ಕುಮಾರವ್ಯಾಸ ಭಾರತದ ಗಮಕದ ಮೋಡಿಗೆ ಮನಸೋತವರು. ಅವರು ಗಮಕಿಗಳ ಬಾಯಿಂದ ಕುಮಾರವ್ಯಾಸ ಭಾರತ ವಾಚನವನ್ನು ಕೇಳಿ ಹಿಗ್ಗಿ ಹೀಗೆ ವರ್ಣಿಸಿದ್ದಾರೆ:

'ಕುಮಾರವ್ಯಾಸನು ಹಾಡಿದನೆಂದರೆ
ಕಲಿಯುಗ ದ್ವಾಪರವಾಗುವುದು
ಭಾರತ ಕಣ್ಣಲಿ ಕುಣಿಯುವುದು
ಮೈಯಲಿ ಮಿಂಚಿನ ಹೊಳೆ ತುಳುಕಾಡುವುದು'

ನಾನು ಈವರೆಗೆ ಸಂಸ್ಕೃತ ಕಾವ್ಯಗಳನ್ನು ಉದಾಹರಿಸಿ ಗಮಕ ಕಲೆಯ ಬಣ್ಣನೆ ಮಾಡಿದ್ದೇನೆ ಎಂದು ನನ್ನನ್ನು ದಯವಿಟ್ಟು ಯಾರೂ ತಪ್ಪಾಗಿ ಭಾವಿಸಬೇಡಿ, ಕಾರಣ ಇಷ್ಟೆ, ಸಂಸ್ಕೃತ ಕಾವ್ಯವಾಚನಕ್ಕೆ ಅನ್ವಯಿಸುವ ಗಮಕಲಕ್ಷಣಗಳೇ ಕನ್ನಡ ಕಾವ್ಯಗಳಿಗೂ ಅನ್ವಯಿಸುತ್ತವೆ ವಾಲ್ಮೀಕಿ ರಾಮಾಯಣವನ್ನು ನಾನು ಎತ್ತಿಕೊಂಡು ದೀರ್ಘವಾಗಿ ಪ್ರಸ್ತಾಪಿಸಿದ್ದು ಈ ಕಾರಣದಿಂದಲೇ.

ಆದಿ ಕವಿ ಪಂಪನಿಗೂ ಹಿಂದಿನ ಕಾಲದಿಂದಲೂ ಗಮಕ ಕಲೆಯು ಕರ್ನಾಟಕದಲ್ಲಿ ಊರ್ಜಿತವಾಗಿತ್ತೆಂಬ ಸೊಲ್ಲು ಕೇಳಿಬರುತ್ತದೆ. ಕನ್ನಡದ ಪ್ರಾಚೀನ ಶಾಸನಗಳು ಕಾವ್ಯಗಳು ಗಮಕದ ಬಗೆಗೆ ಬೇಕಾದಷ್ಟು ಹೇಳಿವೆ. ಕನ್ನಡದ ಆದಿಕವಿ ಪಂಪನು ಗಮಕಿಗಳನ್ನು ಮರೆತಿಲ್ಲ. ಅವರುಗಳನ್ನು ತನ್ನ ಕಾವ್ಯದಲ್ಲಿ ಗುರುತಿಸಿದ್ದಾನೆ.

'ಕವಿ ಗಮಕಿವಾದಿ ವಾಗ್ಮಿ
ಪ್ರವರರ ಪಂಡಿತರ ನೆಗಳ್ದ ಮಾತಱಿವರ ಸ
ಬ್ಬವನವರೊತಸಂತೊಸೆದ
ನ್ನವಾಸದೋಲಗದೊಳಿರ್ದನಾಗಳ್ ಪರಿಗಂ

ಎಂದು ವಿದ್ವಾಂಸರುಗಳಲ್ಲಿ ನಾಲ್ಕು ವಿಧಗಳನ್ನು ಹೇಳಿ ಗಮಕಿಯನ್ನು ಸೇರಿಸಿದ್ದಾನೆ. ಪೊನ್ನನಂತೂ ಕವಿ ಗಮಕಿವಾದಿ ವಾಗ್ಮಿಗಳನ್ನು ಸ್ಮರಿಸಿ ತಾನು ನಾಲ್ಕು ಬಗೆಯ ಪಾಂಡಿತ್ಯದಲ್ಲೂ ಪರಿಣತನಾದವನು ಎನ್ನುತ್ತಾನೆ. ಅವನು ಗಮಕಿಯಾಗಿರುವುದು ನಮಗೆ ಹೆಮ್ಮೆಯ ವಿಷಯ.

'ಇದಿರ್ಗೆ ಬರೆ ಪೊನ್ನಿಗಂ ಕಿಡಿ
ಸದಿರಂ ಕವಿ ಗಮಕಿ ವಾದಿ ವಾಗ್ಮಿಗಳ ಕವಿ
ತ್ವದ ಗಮಕಿತ್ವದ ವಾದಿ
ತ್ವದ ವಾಗ್ಮಿತ್ವದ ಪ್ರೌಢಪುರ್ಣಮುಂ ದರ್ಪಮುಮಂ

ಹನ್ನೆರಡನೆಯ ಶತಮಾನದ ಹರಿಹರ ಕವಿಯು ತನ್ನ ಕೃತಿಯಲ್ಲಿ ಗಮಕಿಗಳನ್ನು ಹೊಗಳಿದ್ದಾನೆ. 'ಆಸ್ಥಾನಮಂ ಕೌತುಕ ರಸದೊಳ್ ಕರುವಿಟ್ಟಂತಿರಿಸುವ ಸಾಮರ್ಥ್ಯಮನೊಳಕೊಂಡ' ಗಮಕಿಗಳ ತಂಡವನ್ನು ಸ್ಮರಿಸಿದ್ದಾನೆ. ಆಸ್ಥಾನದಲ್ಲಿರುವ ಜನರನ್ನು

*'ಎಳೆಯರ ಭಾರತ'—ಬಿ. ಶ್ರೀ. ಪಾಂಡುರಂಗರಾವ್ .

ಕಾವ್ಯವಾಚನ ಚತುರತೆಯಿಂದ ಮೋಹಗೊಳಿಸಿ ಆದರಲ್ಲಿಯೇ ಅವರು ತಲ್ಲೀನರಾಗಿ ಚಲನವಲನವಿಲ್ಲದವರಂತೆ ಮಾಡಿದ ಜನರು ಗಮಕಿಗಳು ಎಂದು ಇದರ ಅರ್ಥವೆಂದು ಪ್ರಾಕ್ತನ ವಿಮರ್ಶನ ವಿಚಕ್ಷಣ ರಾವಬಹದ್ದೂರ್ ಆರ್. ನರಸಿಂಹಾಚಾರ್ಯರು ಹರಿಹರನ ಈ ಕಾವ್ಯ ಭಾಗಕ್ಕೆ ಅರ್ಥ ಮಾಡಿದ್ದಾರೆ.

ಎಡರದೆ ತಡೆಯದೆ ತಲೆಯಂ
ಕೊಡಹದೆ ಕಡುವಹಿಲ ಜಾಡ್ಯವೆನಿಸದೆ ರಸಮಂ
ಕೆಡಿಸದೆ ಸರ್ವರ ಚಿತ್ತ
ಕ್ಕೊಡಬಡಲೋದುವನೆ ಗಮಕಿ ಕನ್ನಡ ಜಾಣಾ

ಎನ್ನುತ್ತಾನೆ 'ನೀತಿಸಾರ'ದ ಕವಿ.

ಗಮಕಿಯನ್ನು ಕುರಿತು ನಿಜಗುಣ ಶಿವಯೋಗಿಗಳು ತಮ್ಮ 'ವಿವೇಕ ಚಿಂತಾ ಮಣಿ'ಯಲ್ಲಿ ಗಮಕದ ಅರ್ಥವನ್ನು ಪುಷ್ಟೀಕರಿಸುತ್ತಾರೆ:

ಗಾನ-ತಾನ-ಮಾನಂಗಳಂ ತೋರಿ
ಯತಿ ಬರಹಾರ್ಥೋಲ್ಲೇಖಾದಿ ಸಾಂದರ್ಭಿಕ ವಿಶ್ರಮವರಿತು
ಪದ ಸಂವ್ಯಕ್ತಿಗೈದು
ಕೇಳ್ವರಿಗಿಂಪುಗೊಳಿಸಿ
ಮೃದು ಮಧುರ ವ್ಯಕ್ತ ವರ್ಣೋಚ್ಚಾರಣದಿಂ
ಭಾವಸೂಚ್ಯದ ಗಮಕಿಗಳಿಂದುದ್ಗೀತರಾಗಿ

ಕುಮಾರ ವ್ಯಾಸನೆಂದು ಪ್ರಕೃತನಾದ ಗದುಗಿನ ನಾರಣಪ್ಪ ಗಮಕಿಗಳಿಗೆ ಕೊಟ್ಟಿರುವ ಪ್ರಾಶಸ್ತ್ಯವನ್ನು ಆತನ ಮಾತಿನಲ್ಲಿ ಕೇಳಿ ಆನಂದಿಸೋಣ:

ನುಡಿದು ತಲೆತೂಗಿಸುವ ಮರೆಗ
ನ್ನಡಕೆ ಹಾ ಹಾಯೆನಿಸಿ ಮೆಚ್ಚಿಸು
ಪಡೆವ ವಾಗ್ಮಿಗಳೋದಿ ಹೊಗಳಿಸಿಕೊಂಬ ಗಮಕಿಗಳು
ಕೊಡುವ ಪದ್ಯಕೆ ಸುಪ್ರಮೇಯದ
ಗಡಣಕಬುಜ ಭವಾದಿ ವಿಭುಗಳು
ಬಿಡಿಸಲರಿದೆನಿಪತುಳ ತಾರ್ಕಿಕ ಜನಗಳೊಪ್ಪಿದರು.

ದುರ್ಯೋಧನನ ಮಹಾಸಭೆಯಲ್ಲಿ ಮಹಾ ಮಹಾ ವಿದ್ವನ್ಮಣಿಗಳಿದ್ದರು. ಕವಿಗಳೂ, ವಾದಿಗಳೂ, ವಾಗ್ಮಿಗಳೂ ಅವರ ಸಮಸಮವಾಗಿ ಓದಿ ಹೊಗಳಿಸಿಕೊಂಬ ಗಮಕಿಗಳು ಪ್ರಮುಖರಾಗಿದ್ದರು ಎಂದು ಕುಮಾರವ್ಯಾಸ ಗಮಕಿಗಳ ಮಹತ್ವವನ್ನು ಎತ್ತಿ ತೋರಿಸಿದ್ದಾನೆ. ಕುಮಾರವ್ಯಾಸ ಭಾರತ ಇಂದಿಗೂ ಜನಪ್ರಿಯವಾಗಿ ಉಳಿದಿರುವುದು ಗಮಕಿಗಳಿಂದಲೇ.

ಗೋವಿಂದ ವೈದ್ಯ 'ಕಂಠೀರವ ನರಸರಾಜ ವಿಜಯ' ಎಂಬ ಕಾವ್ಯವನ್ನು ರಚಿಸಿದ್ದಾನೆ. ಅವನ ಕಾವ್ಯದಲ್ಲಿ ಗಮಕಿಗಳ ವಾಚನ ಪ್ರಸ್ತಾಪ ವಿಪುಲವಾಗಿದೆ.

ಭಾರತ ರಾಮಾಯಣಗಳ ಸಂಗೀತ
ಸಾರದೊಳಗೆ ನಲಿದೋದಿ

ಭೂರಿ ವೈಭವದಿಂದ ಸಭೆಗತಿ ಮುದವೀವ
ಭಾರತಿಗಳು ರಂಜಿಸಿದರು.

ಕಂಠೀರವನರಸರಾಜ ವಿಜಯವನ್ನು ಮಹಾರಾಜರ ಮುಂದೆ ವಾಚಿಸಿದವನು 'ಭಾರತಿನಂಜ' ಎಂದು ಗೋವಿಂದ ವೈದ್ಯ ಗಮಕಿ ನಂಜನ ಹೆಸರನ್ನು ಸ್ಮರಿಸುತ್ತಾನೆ. ಭಾರತಿನಂಜನೇ ನಮಗೆ ಮೊಟ್ಟಮೊದಲಿನ ಗಮಕಿಯಾಗಿ ಸಿಗುವ ಹೆಸರು ಕರ್ನಾಟಕದ ಗಮಕದ ಇತಿಹಾಸದಲ್ಲಿ.

ಗೋವಿಂದ ವೈದ್ಯ ಮಹಿಳಾ ಗಮಕಿಗಳ ಕಲಾ ನೈಪುಣ್ಯವನ್ನು ವಿವರಿಸುವುದನು ಮರೆತಿಲ್ಲ. ಅವನು ತನ್ನ ಕಾವ್ಯದಲ್ಲಿ ಮಹಿಳಾ ಗಮಕಿಗಳ ಓದಾಣಿಕೆಯನ್ನು ಹೀಗೆ ವರ್ಣಿಸುತ್ತಾನೆ.

ಆ ಸಮಯದೊಳೊರ್ವ ನಾರಿ ಭಾಗವತ ವಿ
ಲಾಸದ ಪುಣ್ಯ ಕಥೆಗಳ
ಭಾಸುರ ಗಾನರಸದೊಳೋದಿ ಬಹುಸಂ
ತೋಷವನಿತ್ತಳರಸನಿಗೆ

ಮತ್ತೊರ್ವಳು ಭಾರತದ ಕಥೆಯ ಬಲು
ಬಿತ್ತರದಲಿ ನಲವಿಂದ
ಬತ್ತೀಸ ರಾಗದೊಳೋದಿ ಭೂಪಾಲನ
ಚಿತಕ್ಕೆ ಬಂದಳೇವೇಳ್ವೆ

ಕಾಮಿನಿಯೋರ್ವಳು ನಗುತಾಗ ಹರುಷದೆ
ರಾಮಾಯಣ ಪುಣ್ಯಕಥೆಯ
ಪ್ರೇಮದಲೋದಿ ಕಂಠೀರವನರಸೇಂದ್ರ
ಭೂಪಾಲನ ಮೆಚ್ಚಿಸಿದಳು.

ರತ್ನಾಕರ ವರ್ಣಿಯ 'ಭರತೇಶ ವೈಭವ'ವೆಂಬ ಸಾಂಗತ್ಯ ಕಾವ್ಯದಲ್ಲಿ ಗಮಕ ವಿದುಷಿಗಳ ಕಲಾಪ್ರೌಢಿಮೆ ಅತ್ಯಂತ ಶ್ಲಾಘ್ಯವಾಗಿ ವರ್ಣಿತವಾಗಿದೆ. ನಾನು ಉದಾಹರಣೆಗಾಗಿ ಕೇವಲ ಎರಡು ಪದ್ಯಗಳನ್ನು ಮಾತ್ರ ನಿಮ್ಮ ಅವಗಾಹನೆಗೆ ತರ ಬಯಸುತ್ತೇನೆ.

'ಇನ್ನೋದು ಕಾವ್ಯವನೆಂದನಾ ಪಾಡುವ
ಕನ್ನೆಯಾ ಹೊತ್ತಗೆ ವಿಡಿಮ
ಕನ್ನೆಗೋಗಿಲೆ ತಾನೆ ಬಾಯ್ದೆರೆದೋದೋ ಎಂಬ
ಬಿನ್ನಾಣವೆಸೆಯಲೋದಿದಳು

ಪಡಲಿಗೆ ಹೊತ್ತಗೆಯ ದಾರವನ್ನೊತ್ತಿ
ಸಡಲಿಸಿ ಕಿರಿದೋಲೆಗಳನು
ಎಡಗೈಯೋಳಾಂತೋದಿದಳು ಬಲಗೈಯಿಂದ
ಮಿಡಿಯುತ ಭಾರಿ ದಂಡಿಗೆಯ

ರತ್ನಾಕರ ವರ್ಣಿಸಿರುವ ಗಮಕ ವಿದುಷಿ ಓಲೆಗರಿಯ ಗ್ರಂಥವನ್ನು ಮುಂದಿಟ್ಟು ಕೊಂಡು ತಂಬೂರಿಯನ್ನು ಮೀಟುತ್ತಾ ವಾಚನ ಮಾಡಿದಳು. ಇಂದಿನ ಗಮಕಿಗಳ ಓದಿನ ಬಗೆಯನ್ನು ನೋಡುತ್ತಿರುವ ನಿಮಗೆ ರತ್ನಾಕರವರ್ಣಿ ವರ್ಣಿಸುವ ಗಮಕ ವಿದುಷಿಯ ಚಿತ್ರ ಕಣ್ಣಿಗೆ ಕಟ್ಟುವುದಿಲ್ಲವೆ?

ಕರ್ನಾಟಕದಲ್ಲಿ ಗಮಕ ಕಲೆ ವಿಶಿಷ್ಟ ಕಲೆಯಾಗಿ ಉಳಿದು ಬಂದಿದೆ ಎಂಬುದನ್ನು ನಮ್ಮ ಕವಿಗಳು ವಿಪುಲವಾಗಿ ತಮ್ಮ ಕಾವ್ಯಗಳಲ್ಲಿ ವ್ಯಕ್ತಪಡಿಸಿದ್ದಾರೆ. ನಾನು ಕೆಲವು ಹೆಸರುಗಳನ್ನು ಮಾತ್ರ ನಿಮ್ಮ ಮುಂದಿಟ್ಟಿದ್ದೇನೆ. ಹೆಚ್ಚು ವಿಚಾರ ತಿಳಿಯ ಬಯಸುವ ವರು ಕನ್ನಡ ಸಾಹಿತ್ಯಪರಿಷತ್ತು 1972ನೇ ವರ್ಷದ ಫೆಬ್ರುವರಿ 19ನೇ ದಿನಾಂಕ ನಡೆಸಿದ ಅಖಿಲ ಕರ್ನಾಟಕ ಗಮಕ ಸಮ್ಮೇಳನದ ಸಂದರ್ಭದಲ್ಲಿ ಪ್ರಕಟಿಸಿದ 'ಗಮಕ, ಗಮಕಿ' ಎಂಬ ಕಿರು ಹೊತ್ತಿಗೆಯನ್ನು ಅವಲೋಕಿಸಬೇಕೆಂದು ಅಪೇಕ್ಷಿಸುತ್ತೇನೆ.

ಗಮಕಕಲೆಯನ್ನು ಉದ್ಧರಿಸಬೇಕೆಂಬ ತವಕದಿಂದ ಕನ್ನಡ ಸಾಹಿತ್ಯ ಪರಿಷತ್ತು ಸಾಧಿಸಿರುವ ಕೆಲಸ ಅಗಾಧವಾಗಿದೆ. ಕನ್ನಡ ಸಾಹಿತ್ಯ ಸಮ್ಮೇಳನಗಳು ನಡೆದಾಗಲೆಲ್ಲ ಭಾರತ ವಾಚನ ಪ್ರವೀಣ ಸಂ.ಗೋ. ಬಿಂದೂರಾಯರು ಭಾರತದ ಕೃಷ್ಣಗಿರಿ ಕೃಷ್ಣ ರಾಯರು, ಶ್ಲೋಕ ಸಂಗೀತ ಕಳಲೆ ಸಂಪತ್ಕುಮಾರಾಚಾರ್ಯರು, ತಲಕಾಡಿನ ಮಾಯಿಗೌಡರು, ಗಮಕ ಕಲಾನಿಧಿ ಜೋಳದ ರಾಶಿ ದೊಡ್ಡನ ಗೌಡರು, ಎಂ. ಎಸ್. ಅನಂತಪದ್ಮನಾಭರಾಯರು, ಭಾರತದ ಲಲಿತಮ್ಮ, ಶಕುಂತಲಾ ಬಾಯಿ ಪಾಂಡು ರಂಗರಾಗರಾವ್, ರಾಜಮ್ಮ ಕಲ್ಲೋಳಿಮಠ ಮೊದಲಾದ ಪ್ರಸಿದ್ಧ ಗಮಕಿಗಳನ್ನು ಕರೆಸಿಕೊಂಡು ಅವರುಗಳಿಂದ ಕಾವ್ಯವಾಚನ ಮಾಡಿಸಿ ಗಮಕ ಕಲೆಯನ್ನು ಉಳಿಸು ವುದರಲ್ಲಿ ಯಶಸ್ವಿಯಾಗಿದೆ. ಪೂಜ್ಯರಾದ ಡಿ. ವಿ. ಗುಂಡಪ್ಪನವರು 1935ರಲ್ಲಿ ಮುಂದಾಲೋಚನೆ ಮಾಡಿ ಗಮಕ ತರಗತಿಗಳನ್ನು ಪ್ರಾರಂಭಿಸಿದರು. ಈ ತರಗತಿಗಳು ಗಮಕಿಗಳ ಪಾಲಿಗೆ ಕಲ್ಪವೃಕ್ಷವಾಗಿದೆ. ಬೆಂಗಳೂರಿಗೆ ಮಾತ್ರ ಮೀಸಲಾಗಿದ್ದ ಗಮಕ ತರಗತಿ ಈಗ ಕನ್ನಡನಾಡಿನ ಎಲ್ಲ ಭಾಗಗಳಿಗೂ ಹರಡಿದೆ. ಡಿ.ವಿ.ಜಿ., ಬಿ.ಎಂ. ಶ್ರೀ, ಬಿ. ಶಿವಮೂರ್ತಿಶಾಸ್ತ್ರಿ, ಎ. ಎನ್. ಮೂರ್ತಿರಾವ್, ಜಿ. ವೆಂಕಟಸುಬ್ಬಯ್ಯ ಮೊದ ಲಾದ ಮಹನೀಯರು ತಮ್ಮ ಅಧಿಕಾರದವಧಿಯಲ್ಲಿ ಗಮಕ ಕಲೆಗೆ ಕೊಟ್ಟ ಪ್ರೋತ್ಸಾಹ ಅಷ್ಟಿಷ್ಟಲ್ಲ.

ಎಂ.ಆರ್. ಶ್ರೀ ಯವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಕಾಲ ಗಮಕಕಲೆಗೆ ಸುವರ್ಣಯುಗ. ಸೊಲ್ಲಾಪುರ, ಬೊಂಬಾಯಿ, ಬೇಲೂರು ಸಾಹಿತ್ಯ ಸಮ್ಮೇಳನಗಳಲ್ಲವರು ಗಮಕ ಗೋಷ್ಠಿಗಳಿಗೆ ಅಧ್ಯಕ್ಷರುಗಳಾಗಿ ಗೌರವ ಪಡೆದರು. ಆ ನಂತರ ಇಂಥ ಗಮಕಗೋಷ್ಠಿಗಳು ಸಾಹಿತ್ಯ ಸಮ್ಮೇಲನಗಳಲ್ಲಿ ನಡೆಯಲೇ ಇಲ್ಲ. ಜಿ. ನಾರಾಯಣರವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಬಂದ ಮೇಲೆ 1972 ರಲ್ಲಿ ಗಮಕ ಕಲಾನಿಧಿ ಜೋಳದರಾಶಿ ದೊಡ್ಡನಗೌಡರ ಅಧ್ಯಕ್ಷತೆಯಲ್ಲಿ ಮೊದಲನೆಯ ಅಖಿಲ ಕರ್ನಾಟಕ ಗಮಕ ಸಮ್ಮೇಳನವನ್ನು ವಿಜೃಂಭಣೆಯಿಂದ ನಡೆಸಿದರು. 1974ರಲ್ಲಿ

ತ್ರೈವಾರ್ಷಿಕ ಯೋಜನೆಯ ಪುಸ್ತಕ ಮಾಲೆಯಲ್ಲಿ ಗಮಕಕಲೆ ಎಂಬ ಅಮೂಲ್ಯ ಗ್ರಂಥವನ್ನು ಪ್ರಕಟಪಡಿಸಿದ್ದರು.

ಕರ್ನಾಟಕದ ಪ್ರಸಿದ್ಧ ವಿದ್ವಾಂಸರುಗಳು ವಿಶೇಷಶ್ರಮವಹಿಸಿ ಅಮೂಲ್ಯ ಲೇಖನಗಳನ್ನು ಬರೆದು ಈ ಗ್ರಂಥದ ಶ್ರೇಷ್ಠತೆಯನ್ನು ಹೆಚ್ಚಿಸಿದ್ದಾರೆ. 1976 ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ವಜ್ರಮಹೋತ್ಸವ ನಡೆಯಿತಷ್ಟೆ. ಆ ಸಂದರ್ಭದಲ್ಲಿ ವಜ್ರ ಮಹೋತ್ಸವದ ಸವಿನೆನಪಾಗಿ 'ಕರ್ನಾಟಕದ ಗಮಕಿಗಳು' ಎಂಬ ಗ್ರಂಥ ಪ್ರಕಟವಾಯಿತು. ಕರ್ನಾಟಕದ ಸುಪ್ರಸಿದ್ಧ ಗಮಕಿಗಳು ಇವರುಗಳ ಧ್ವನಿ ಮುದ್ರಿಕೆಗಳನ್ನು ಸಿದ್ಧಪಡಿಸಿ ಅವರುಗಳ ಧ್ವನಿಗಳ ನಮಗೆ ಕೇಳುವಂತೆ ಜಿ. ನಾರಾಯಣರವರು ಉಪಕಾರ ಮಾಡಿದ್ದಾರೆ. ಅದಕ್ಕಾಗಿ ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಶ್ರೀ ಜಿ. ನಾರಯಣರವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನದಿಂದ ವಿರಮಿಸಿ ಪರಿಷತ್ತಿನ ರಥದ ಸಾರಥ್ಯವನ್ನು ಈಗ ಶ್ರೀ ಹಂಪ ನಾಗರಾಜಯ್ಯನವರಿಗೆ ವಹಿಸಿಕೊಟ್ಟಿದ್ದಾರೆ. ಶ್ರೀ ಹಂಪ ನಾಗರಾಜಯ್ಯನವರು ಪ್ರಸಿದ್ಧ ಸಾಹಿತಿಗಳೂ, ಗಣ್ಯ ಸಂಶೋಧಕರು, ಉಜ್ವಲ ಗಮಕ ಕಲಾಭಿಮಾನಿಗಳೂ ಆಗಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಮೈಸೂರು ಜಿಲ್ಲಾ ಸಮಿತಿ ಎರಡನೆಯ ಅಖಿಲ ಕರ್ನಾಟಕ ಗಮಕ ಸಮ್ಮೇಳನವನ್ನು ಕರೆದಿರುವುದು ಶ್ರೀ ಹಂಪ ನಾಗರಾಜಯ್ಯನವರ ಮತ್ತು ಮೈಸೂರು ಜಿಲ್ಲಾ ಸಾಹಿತ್ಯ ಸಮಿತಿಯ ಅಧ್ಯಕ್ಷರಾದ ಶ್ರೀ ವಿ. ಎಚ್. ಗೌಡ ಹಾಗೂ ಅವರ ಸಮಿತಿ ಸದಸ್ಯರ ಗಮಕ ಕಲಾಭಿರುಚಿಗೆ ಸಾಕ್ಷಿಯಾಗಿದೆ.

ಈ ಸಮಯದಲ್ಲಿ ಮೈಸೂರು ಪ್ರದೇಶದ ಮುಖ್ಯ ಮಂತ್ರಿಗಳಾಗಿದ್ದು ಕೆಲವು ವರ್ಷಗಳು ಕೇಂದ್ರ ಸರಕಾರದ ರೈಲ್ವೆ ಸಚಿವರಾಗಿದ್ದು, ಈಗ ವಿಶ್ರಾಂತರಾಗಿರುವ ಶ್ರೀ ಕೆಂಗಲ್ ಹನುಮಂತಯ್ಯನವರು ಗಮಕ ಕಲಾ ಪ್ರೇಮದಿಂದ ಸಲ್ಲಿಸಿದ ಸೇವೆಯನ್ನು ಸ್ಮರಿಸಿಕೊಂಡು ಅವರನ್ನು ಕೃತಜ್ಞಯಿಂದ ವಂದಿಸಬೇಕಾದುದು ಗಮಕಿಗಳೆಲ್ಲರ ಕರ್ತವ್ಯವಾಗಿದೆ. ಎಂ. ಆರ್. ಶ್ರೀನಿವಾಸ ಮೂರ್ತಿಗಳ ಕಾಲದಲ್ಲಿ ಪರಿಷತ್ತಿಗೆ ಮೈಸೂರು ಸರಕಾರ (ಈಗ ಕರ್ನಾಟಕ) ದಿಂದ ಎರಡು ಸಾವಿರ ರೂಪಾಯಿ ಸಹಾಯ ದ್ರವ್ಯವನ್ನು ಕೊಡಿಸಿ ವಾರ ವಾರವೂ ಕಾವ್ಯವಾಚನ ಪರಿಷತ್ತಿನಲ್ಲಿ ನಡೆಯುವಂತೆ ಉಪಕಾರ ಮಾಡಿದರು. ಸಂಸ್ಕೃತಿ ಪ್ರಸಾರ ಯೋಜನೆಯನ್ನು ಪ್ರಾರಂಭಿಸಿ, ಪ್ರಸಿದ್ಧ ಗಮಕಿಗಳನ್ನು ನಾಡಿನಾದ್ಯಂತ ಕಳಿಸಿ ಗಮಕಕಲಾ ಪ್ರಚಾರ ಮಾಡಿಸಿದರು. ಕುಮಾರವ್ಯಾಸ ಭಾರತ, ಜೈಮಿನಿ ಭಾರತ, ಹರಿಶ್ಚಂದ್ರ ಕಾವ್ಯಗಳಂಥವನ್ನು ಪ್ರಕಟಪಡಿಸುವ ಯೋಜನೆಯನು, ಸಿದ್ಧಗೊಳಿಸಿದ್ದು ಶ್ರೀ ಹನುಮಂತಯ್ಯನವರು. ಸಾಹಿತ್ಯ ಸಂಸ್ಕೃತಿ ಇಲಾಖೆಯನ್ನು ಪ್ರಾರಂಭಿಸಿದ್ದೂ ಅವರೇ. ಅವರಿಗೆ ಗಮಕಿಗಳು ತುಂಬ ಋಣಿಯಾಗಿದ್ದಾರೆ.

ಶ್ರೀ ದೇ. ಜವರೇಗೌಡರು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ಪದವಿಯನ್ನು ಸ್ವೀಕರಿಸಿದ ಮೇಲೆ ಗಮಕಕಲೆಯನ್ನು ಒಂದು ಐಚ್ಛಿಕ ವಿಷಯವನ್ನಾಗಿ ಪರಿಗಣಿಸಿ ಅದಕ್ಕೊಂದು ಗೌರವ ಸ್ಥಾನ ಕಲ್ಪಿಸಿದರು. ಗಮಕ ಕಲೆಗೆ ರಾಜ್ಯ ಪ್ರಶಸ್ತಿ

ಯನ್ನು ಸಾಹಿತ್ಯ ಅಕಾಡೆಮಿಯಿಂದ ಕೊಡಿಸುವ ಸ್ತುತ್ಯಕಾರ್ಯವನ್ನು ಪ್ರಾರಂಭಿಸಿದವರು ಮೈಸೂರು ರಾಜ್ಯದ ವಿದ್ಯಾ ಸಚಿವರಾಗಿದ್ದ ಶ್ರೀ ಕೆ. ವಿ. ಶಂಕರೇಗೌಡರು. ಈ ನೀಯರುಗಳಿಗೂ ಗಮಕಿಗಳು ತಮ್ಮ ಕೃತಜ್ಞತೆಯನ್ನು ಅರ್ಪಿಸುವುದು ಕರ್ತವ್ಯವಾಗಿದೆ.

ಕನ್ನಡ ಸಾಹಿತ್ಯ ಪರಿಷತ್ತು ಗಮಕ ಕಲೆಯ ಅಭಿವೃದ್ಧಿಗಾಗಿ ಬೆನ್ನೆಲುಬಾಗಿ ನಿಲ್ಲದಿದ್ದರೆ ಗಮಕಕಲೆ ಊರ್ಜಿತವಾಗಿ ಉಳಿಯುತ್ತಿತ್ತೋ ಇಲ್ಲವೋ ಸಂದೇಹ. ಕನ್ನಡ ಸಾಹಿತ್ಯ ಪರಿಷತ್ತು ಗಮಕದ ತರಗತಿಗಳನ್ನು ಕರ್ನಾಟಕದ ನಾನಾ ಭಾಗಗಳಲ್ಲಿ ಸಾವಿರಾರು ರೂಪಾಯಿಗಳನ್ನು ವ್ಯಯಮಾಡಿ ನಡೆಸುತ್ತಿದೆ. 1934 ರಿಂದ ಈವರೆಗೆ ಸಹಸ್ರಾರು ಸಂಖ್ಯೆಯಲ್ಲಿ ಗಮಕಿಗಳು ಪರಿಷತ್ತಿನ ಆಶ್ರಯದಿಂದ ಹೊರಬಂದು ಗಮಕದ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಇದು ಸಂತೋಷದ ಸಂಗತಿ. ಆದರೆ ನನ್ನ ಅನುಭವದಲ್ಲಿ ಒಂದು ಕೊರತೆ ಎದ್ದು ಕಾಣುತ್ತಿದೆ. ಗಮಕಿಗಳ ಸಂಖ್ಯೆ ಬೆಳೆದಿದೆ. ಆದರೆ ಗುಣಮಟ್ಟ ನಿರೀಕ್ಷಿಸಿದಷ್ಟು ಏರಿಲ್ಲ. ರಸಿಕ ಸಹೃದಯರ ಮನಸ್ಸನ್ನು ಸೂರೆಗೊಳ್ಳುವಂಥ ಪ್ರತಿಭಾವಂತ ಗಮಕಿಗಳು ಕರ್ನಾಟಕದಲ್ಲಿ ಬಹಳ ಜನರಿಲ್ಲ. ಯಾಕೆ ಹೀಗಾಯಿತು? ಗಮಕವಾಚನ ಪ್ರವಚನ ರೂಪದಲ್ಲಿ ದೇವಸ್ಥಾನದಲ್ಲಿ ಮಾತ್ರ ಉಳಿದಿದೆ. ಅಷ್ಟೋ ಇಷ್ಟೋ ಜನ ಸೇರುತ್ತಾರೆ. ಮಂಗಳಾರತಿ ತಟ್ಟೆಯನ್ನ ಪ್ರದಕ್ಷಿಣೆ ಮಾಡಿಸಿ ಗಮಕಿಗಳಿಗೆ ಸಂಭಾವನೆ ಎಂಬ ಅಷ್ಟೋ ಇಷ್ಟೋ ಅವರ ಮಡಿಲಿಗೆ ಹಾಕುತ್ತಾರೆ.

ಕನ್ನಡ ಸಾಹಿತ್ಯ ಪರಿಷತ್ತು ಉತ್ತಮ ಗಮಕಿಗಳ ಶ್ರೇಣಿಯನ್ನು ಸಿದ್ಧಗೊಳಿಸಬೇಕು. ಗಮಕ ತರಗತಿಗಳನ್ನು ನಡೆಸುವುದು ಗಮಕದಲ್ಲಿ ಆಸಕ್ತಿ ಕೆರಳಿಸುವುದಕ್ಕೆ ಮೊದಲ ಹಂತ ಮಾತ್ರ. ಇದು ಅಗತ್ಯವಾಗಿ ಆಗಬೇಕಾದದ್ದೇ. ಸಂಗೀತದಲ್ಲಿ ನಿಷ್ಣಾತರನ್ನಾಗಿ ಮಾಡುವುದಕ್ಕೆ ಕೇಂದ್ರ ಸರ್ಕಾರದ ಅಕಾಡೆಮಿ ಒಂದು ಯೋಜನೆಯನ್ನು ಹಾಕಿಕೊಂಡಿದೆ. ಪಾಠ ಮಾಡುವಂತೆ ಸಂಗೀತಾಭ್ಯಾಸಿಗಳಿಗೆ ತಿಂಗಳಿಗೆ ಭತ್ಯ ಕೊಡುತ್ತದೆ. ಪಾಠ ಹೇಳುವ ಗುರುಗಳಿಗೆ ಸೂಕ್ತವಾದ ಸಂಭಾವನೆ ಕೊಡುತ್ತದೆ. ಇಂತಹ ಅವಕಾಶವನ್ನು ಕನ್ನಡ ಸಾಹಿತ್ಯ ಪರಿಷತ್ತು ಉಪಯೋಗಿಸಿಕೊಳ್ಳಬೇಕು. ಯೋಗ್ಯರಾದ ಪ್ರಸಿದ್ಧ ಗಮಕಿಗಳಲ್ಲಿ ಶಿಷ್ಯವೃತ್ತಿಮಾಡಿ ಯೋಗ್ಯ ಗಮಕಿಗಳಾಗುವಂತೆ ಒಂದು ಯೋಜನೆಯನ್ನು ಪರಿಷತ್ತು ಹಾಕಿಕೊಳ್ಳಬೇಕು.

ಗಮಕ ಕಲೆಯ ಆಧುನಿಕಾಚಾರ್ಯರಲ್ಲಿ ಅಭಿನವ ಕಾಳಿದಾಸ ಬಸವಪ್ಪಶಾಸ್ತ್ರಿಗಳು ಪ್ರಾತಃಸ್ಮರಣೀಯರು. ಭಾರತ ವಾಚನ ಪ್ರವೀಣ ಸಂ. ಗೋ. ಬಿಂದೂರಾಯರು, ಭಾರತದ ಕೃಷ್ಣಗಿರಿ ಕೃಷ್ಣರಾಯರು, ಶ್ಲೋಕ ಸಂಗೀತ ಸಂಪತ್‌ಕುಮಾರಾಚಾರ್ಯರು, ಎಂ. ಎಸ್. ಅನಂತಪದ್ಮನಾಭರಾಯರು, ತಲಕಾಡಿನ ಮಾಯೀಗೌಡರು, ಬಳ್ಳಾರಿ ಕಡೆಯ ಗಮಕ ಕಲಾನಿಧಿ ಜೋಳದರಾಶಿ ದೊಡ್ಡನಗೌಡರು, ಧಾರವಾಡದ ಗುರುರಾವ್ ದೇಶಪಾಂಡೆಯವರು ಗಮಕ ಕಲಾರಾಧಕರಾಗಿ ಗಮಕಕ್ಕೆ ಸಲ್ಲಿಸಿದ ಸೇವೆ ಅಪಾರ. ಅವರುಗಳಿಂದ ನಶಿಸಿ ಹೋಗುತ್ತಿದ್ದ ಗಮಕಕಲೆ ಈವರೆಗೆ ಉಳಿದು ಬಂದಿದೆ.

ಗಮಕ ಕಾಲಾರಾಧನೆಯಲ್ಲಿ ಮಹಿಳೆಯರ ಪಾತ್ರವೂ ಕಡಮೆಯಾದುದೇನಲ್ಲ ಆದರೆ ಅವರ ಹೆಸರುಗಳು ಅದೇಕೊ ಅಷ್ಟು ಬೆಳಕಿಗೆ ಬಂದಿಲ್ಲ.

'ಸ್ತ್ರೀಯರು ಇದನ್ನು (ಗಮಕ ಕಲೆಯನ್ನು) ಅವಶ್ಯವಾಗಿ ಕಲಿಯಬೇಕು. ಕ್ರಿ.ಶ. 1533ರಲ್ಲಿ ಹಂಪೆಯ ರಾಜನಾಗಿದ್ದ ಅಚ್ಯುತರಾಯನ ಕಾಲದ ಒಂದು ಶಾಸನ ದಿಂದ ತಿರುಮಲಮ್ಮ ಎಂಬುವಳು ಸ್ವತಃ ಕವಿಯಾಗಿ ಇದ್ದುದಲ್ಲದೆ ಪ್ರಸಿದ್ಧ ಗಮಕಿಯೂ ಆಗಿದ್ದಳೆಂದು ತಿಳಿದು ಬರುತ್ತದೆ. ಆಗಿನ ಶಾಸನದಲ್ಲಿ 'ಓದುವ ತಿರುಮಲಮ್ಮ' ಎಂದು ಬರೆದಿದೆ. ಸುಕುಮಾರ ಚರಿತೆಯಲ್ಲಿ ನಾಗಶ್ರೀ ಎಂಬುವರ ವರ್ಣನೆ ಈ ರೀತಿಯಾಗಿ ಕೊಟ್ಟಿದೆ:

'ನೆರೆದಾರಾಜ ಸಭಾಂತರಾಳದೊಳುದಾತ್ತಾರ್ಥೋಕ್ತಿಯಿಂ
ತನ್ನೊಳಾರ್ ದೊರೆಯೆಂಬನ್ನಗಮುದ್ಗತ ಪ್ರಥಿತ
ಶಬ್ದಾರ್ಥೋಕ್ತಿಯಿಂ ವ್ಯಕ್ತಮಾಗಿರೆ ವಕ್ಖಾಣಿಸಿ ತದ್ವಿದರ್
ಪೊಗಳ್ದು ಭಾಪ್ಪೆಂಬನ್ನೆಗಂ ತತ್ಪ್ರತಿಂಪರೆವೇದಾದಿ ಕಲಾಪ
ಮನಶೇಷಾಲಾಪಮಿಂದಮೋದಿದಳ್'

ನಾಗಶ್ರೀಯು ಹೇಳುವವರ ಮನಸ್ಸಿಗೆ ಒಪ್ಪುವಂತೆಯೂ ಅರ್ಥ ವಿಶದವಾಗು ವಂತೆಯೂ ರಾಗ ರಂಜನೆಯುಂಟಾಗುವ ಹಾಗೆಯೂ ಸಮಸ್ತ ಸಭಿಕರೂ 'ಭಾಪು, ಬಹಳ ಚೆನ್ನಾಗಿದೆ' ಎಂದು ಹೇಳುವ ಹಾಗೆಯೂ ಅನೇಕ ರಾಗಗಳಲ್ಲಿ ಓದಿದಳು ಎಂದು ಹೇಳಿದೆ. ಇದರಿಂದ ನಾಗಶ್ರೀಯು ಪ್ರಸಿದ್ಧ ಗಮಕಿಯಾಗಿದ್ದಳೆಂದು ತಿಳಿದು ಬರುವು ದಲ್ಲದೆ ಹಿಂದಿನ ಕಾಲದಲ್ಲಿ ಮಹಿಳೆಯರು ಕಾವ್ಯಗಳನ್ನು ಓದುತ್ತಿದ್ದರು, ಸ್ತ್ರೀ ಗಮಕಿ ಗಳು ಇದ್ದರು ಎಂದು ಗೊತ್ತಾಗುತ್ತದೆ.'—ಎಂದು ಪ್ರಾಕ್ತನ ವಿಮರ್ಶನ ವಿಚಕ್ಷಣ ರಾವ್‌ಬಹದ್ದೂರ್ ಆರ್. ನರಸಿಂಹಾಚಾರ್ಯರು ಗಮಕಕಲೆ ಎಂಬ ಪ್ರಬಂಧದಲ್ಲಿ ಬರೆದಿರುವುದನ್ನು ತಮ್ಮ ಅವಗಾಹನೆಗೆ ತರಬಯಸುತ್ತೇನೆ.

ಈ ಸಂದರ್ಭದಲ್ಲಿ ನಾವು ಹಾಡಿನ ನಾಗಮ್ಮನವರನ್ನು ಮತ್ತು ಭಾರತದ ಲಲಿ ತಮ್ಮನವರನ್ನು ಜ್ಞಾಪಿಸಿಕೊಂಡು ಅವರುಗಳಿಗೆ ನಮ್ಮ ನಮಸ್ಕಾರಗಳನ್ನು ಅರ್ಪಿಸು ವುದು ಔಚಿತ್ಯಪೂರ್ಣವಾಗಿದೆ. ಇವರುಗಳು ನಮ್ಮ ಕಾಲದಲ್ಲಿ ಭಾರತವಾಚನವನ್ನು ಪ್ರಚಾರಪಡಿಸಿದ ಮಹಿಳೆಯರಲ್ಲಿ ಆದ್ಯರು.

ಸಹೃದಯರೇ, ಇತ್ತೀಚೆಗೆ ಪ್ರಾಚೀನ ಕಾವ್ಯಗಳ ಜೊತೆಗೆ ಆಧುನಿಕ ಮಹಾಕಾವ್ಯ ಗಳೂ ಪ್ರಕಟವಾಗಿವೆ. ಕುವೆಂಪುರವರ ಶ್ರೀ ರಾಮಾಯಣದರ್ಶನಂ ಮಹಾಕಾವ್ಯ, ಸಮೇತನಹಳ್ಳಿಯ ರಾಮರಾಯರ ಶಾಕುಂತಲ, ಶಾಸ್ತ್ರಿಯವರ ಶ್ರೀರಾಮಪಟ್ಟಾಭಿ ಷೇಕ, ಎನ್. ಎಸ್. ಅನಂತಪದ್ಮನಾಭರಾಯರ ಶ್ರೀ ಕೃಷ್ಣ ಚರಿತಾಮೃತಂ ಮತ್ತು ತುಲಸಿದಾಸ ರಾಮಾಯಣ ಕಾವ್ಯಗಳು ಪ್ರಕಟವಾಗಿವೆ. ನಮ್ಮ ಗಮಕಿಗಳು ತಮ್ಮ ಕಾವ್ಯವಾಚನಗಳಲ್ಲಿ ಈ ಕಾವ್ಯಗಳಿಗೂ ಸ್ಥಾನ ಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಇತ್ತೀಚೆಗೆ 'ಗಮಕರೂಪಕ' ಎಂಬ ಒಂದು ಪದ್ಧತಿ ಕಾವ್ಯವಾಚನದಲ್ಲಿ ತಲೆ ದೋರಿದೆ. ಕನ್ನಡ ಸಾಹಿತ್ಯ ಪರಿಷತ್ತು 1940ರಲ್ಲೋ ಏನೋ ವಸಂತ ಸಾಹಿತ್ಯೋತ್ಸವ

ದಲ್ಲಿ ಕುಮಾರವ್ಯಾಸ ಭಾರತವನ್ನು ಆಶ್ರಯಿಸಿ ರೂಪಕ ಪ್ರದರ್ಶನ ಮಾಡಿತು. ಬೆಂಗಳೂರಿನ ಆಕಾಶವಾಣಿ, ವಿ.ಸೀ ಹಾಗೂ ಎನ್ಕೆ ಯವರ ನೇತೃತ್ವದಲ್ಲಿ ಗದುಗಿನ ಭಾರತವನ್ನು ಹರಿಶ್ಚಂದ್ರ ಕಾವ್ಯವನ್ನು ಗಮಕ ರೂಪಕಕ್ಕೆ ಅಳವಡಿಸಿಕೊಂಡು ಪ್ರಸಾರ ಮಾಡಿತು. ಈ ದಿಸೆಯಲ್ಲಿ ಹು. ಮ. ರಾಮಾರಾಧ್ಯ, ಬಿ. ಎಸ್. ಎಸ್ ಕೌಶಿಕ್ ಅವರು ಗಮಕರೂಪಗಳನ್ನು ರಚಿಸಿ ಗಮಕ ಕಲೆಗೆ ಒಂದು ಹೊಸ ತಿರುವು ಕೊಟ್ಟಿದ್ದಾರೆ. ಇದು ಸ್ತೋತ್ರಾರ್ಹವಾದ ಸಂಗತಿ.

ಗಮಕ ಕಲೆಗೆ ಲಕ್ಷಣ ಗ್ರಂಥಗಳಿಲ್ಲ ಎನ್ನುವ ಕೊರತೆ ಇದೆ. ಈ ಕೊರತೆಯನ್ನು ಹೋಗಲಾಡಿಸಲು ಗಮಕ ವಿದ್ವಾನ್ ಎಂ. ರಾಘವೇಂದ್ರರಾಯರು, ಶ್ರೀ ಕೆ. ಟಿ. ರಾಮಸ್ವಾಮಿ ಅಯ್ಯಂಗಾರರು, ಬಿ. ಶ್ರೀ. ಪಾಂಡುರಂಗರಾಯರು, ಸರೋಜಮ್ಮ ಅನಂತರಾಮಯ್ಯನವರು ಶ್ಲಾಘ್ಯವಾದ ಕೆಲಸವನ್ನು ಮಾಡಿದ್ದಾರೆ. ಅವರಿಗೆ ನನ್ನ ಕೃತಜ್ಞತೆ ಸಲ್ಲಬೇಕಾಗಿದೆ.

ಗಮಕ ಕಲಾ ಪ್ರಪಂಚದ ಹರವು ಬಹಳ. ನಾನು ನನ್ನ ಉಪನ್ಯಾಸದಲ್ಲಿ ಇನ್ನೂ ಅನೇಕ ವಿಷಯಗಳನ್ನು ಹೇಳುವುದಿದೆ. ಗಮಕ ವಿದ್ವಾಂಸರುಗಳು ಈ ದಿನ ಹಾಗೂ ನಾಳೆ ಅನೇಕ ಗೋಷ್ಠಿಗಳಲ್ಲಿ ಭಾಗವಹಿಸಿ ನಾನು ಬಿಟ್ಟಿರುವ ವಿಷಯಗಳನ್ನು ಚರ್ಚಿಸುವವರಾಗಿದ್ದಾರೆ. ಈ ಕಾರಣದಿಂದ ನನ್ನ ಭಾಷಣವನ್ನು ಇಷ್ಟಕ್ಕೆ ನಿಲ್ಲಿಸಲು ನಿಮ್ಮ ಅಪ್ಪಣೆಯನ್ನು ಬೇಡುತ್ತೇನೆ. ಪೂಜ್ಯರಾದ ಪಂಡಿತ ಹೆಮ್ಮಿಗೆ ದೇಶಿಕಾಚಾರ್ಯರು ಗಮಕಿಗಳನ್ನು ಅಭಿನಂದಿಸಿದ್ದಾರೆ. ಅವರ ಅಭಿನಂದನೆಗಳನ್ನು ದಯವಿಟ್ಟು ಸ್ವೀಕರಿಸಿ.

ನೈಜ ಕಲಾ ನಿಪುಣತೆಯಿಂ
ಭ್ರಾಜಿಷ್ಣುವೆನಿಪ್ಪ ಗಮಕಿಯೋ
ಪೂಜಾ ಸಮರ್ಥನವನಿಂ
ದೋಜಸ್ತೇಜಃ ಪ್ರಕಾಶನಂ ದೇವತೆಯಾ

ಅದಱಿಂದೀ ಸಾಹಿತ್ಯದ
ಸದನಂ ಕರ್ತವ್ಯನಿಷ್ಠೆಯಿಂ ಗಮಕ ಕಲಾ
ಭ್ಯುದಯಕ್ಕೆ ತುಡಿದು ಬಯಸುಗು
ಮುದಿತೋದಿತರಾಗಿ ಬಾಳ್ಗೆ ಗಮಕಿಗಳೆಂದುಂ

ಕವಿ ಗಮಕಿಯಕ್ಕೆ ಗಮಕಿಯೆ
ಕವಿಯಕ್ಕೆ ಸಂಗೀತ ನಿಪುಣನಕ್ಕೆಮ ಭಾಷಾ
ಪ್ರವಿಶಾರದ ಕಾವ್ಯಜ್ಞಂ
ಭುವಿಯೊಳ್ ಸ್ವರ್ಣಕ್ಕೆ ಸೌರಭಂ ಕೂಡುವವೋಲ್

*   *   *

ವೇದ ಪುರುಷನ ಸುತನ ಸುತನ ಸ
ಹೋದರನ ಮೊಮ್ಮಗನ ಮಗನ ತ
ಳೋದರಿಯ ಮಾತುಳನ ಮಾವನ ಅತುಳ ಭುಜಬಲದಿ

ಕಾದಿಗೆಲಿದನಣ್ಣನವ್ವೆಯ
ನಾದಿನಿಯ ಜಠರದಲ್ಲಿ ಜನಿಸಿದ
ನಾದಿ ಮೂರುತಿ ಸಲಹೊ ಗದುಗಿನ ವೀರನಾರಾಯಣ

(ಅಖಿಲ ಕರ್ನಾಟಕ ಗಮಕ ಸಮ್ಮೇಳನ ದಿನಾಂಕ 7-6-1979ರಂದು ಕನ್ನಡ ಸಾಹಿತ್ಯ ಪರಿಷತ್ತಿನ ಮೈಸೂರು ಜಿಲ್ಲಾ ಸಮಿತಿಯ ಆಶ್ರಯದಲ್ಲಿ ನಡೆಯಿತು.)

ಅಭಿನಂದನ ಗ್ರಂಥಕ್ಕೆ ದ್ರವ್ಯ ಸಹಾಯಮಾಡಿರುವ ದಾನಿಗಳು ಮತ್ತು ಸಂಸ್ಥೆಗಳು

ಪೇಜಾವರ ಮಠಾಧೀಶ ಶ್ರೀ ಶ್ರೀ ಶ್ರೀ ವಿಶ್ವೇಶತೀರ್ಥ ಪಾದಂಗಳವರು.

ಸಿದ್ಧಗಂಗೆ ಮಠಾಧೀಶರಾದ ಶ್ರೀ ಶ್ರೀ ಶ್ರೀ ಡಾ|| ಶಿವಕುಮಾರ ಸ್ವಾಮಿಗಳು

ಶ್ರೀ ಎರ್ರಿಸ್ವಾಮಿ ಜೀವಸಮಾಧಿ ಚೇಳ್ಳಗುರ್ಕಿ, ಬಳ್ಳಾರಿ ತಾಲ್ಲೂಕು.

ವಿದ್ಯಾವರ್ಧಕ ಸಂಘ, ರಾಜಾಜಿನಗರ–ಬೆಂಗಳೂರು.


ರಾಜಾಜಿನಗರದ ಲಯನ್ಸ್ ಕ್ಲಬ್.

ಡಾ|| ಗೊರೂರು ರಾಮಸ್ವಾಮಿ ಅಯ್ಯಂಗಾರ್.

ಆರ್. ಮಾಸ್ತಿ ವೀರಣ್ಣ.

ಪ್ರೊ|| ಎಲ್. ಎಸ್. ಶೇಷಗಿರಿರಾವ್.

ಬಿ. ಪಿ. ಸಂಪಂಗಿರಾವ್, ಅಧ್ಯಕ್ಷರು ಶ್ರೀರಾಮ ಸೇವಾ ಮಂಡಲಿ, ರಾಜಾಜಿನಗರ ಬೆಂಗಳೂರು.



ಗಮಕ ಸಂಸಾರ ಪಕ್ಷಿಯ ಎರಡು ರೆಕ್ಕೆಗಳು
ಶಕುಂತಲಾಬಾಯಿ ಪಾಂಡುರಂಗರಾವ್

